ವೇಮನರ ಯೋಗ ಮೀಮಾಂಸೆ

ಭಾಗ-೧



ಗ್ರಂಥಕರ್ತ : ಶ್ರೀ ಎಸ್. ಆರ್. ಪಾಟೀಲ

ಮಹಾಯೋಗಿ ವೇಮನ ಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ – ೫೮೦ ೦೦೩.
೨೦೦೫

ವೇಮನರ ಯೋಗ ಮೀಮಾಂಸೆ : ಭಾಗ-೧

ಲೇಖಕರು :
ಶ್ರೀ ಎಸ್.ಆರ್. ಪಾಟೀಲ, ಬಿ.ಇ.

ಪ್ರಕಾಶಕರು :
ಡಾ. ಕೃ. ಅನ್ಬನ್
ಸಂಯೋಜಕರು
ಮಹಾಯೋಗಿ ವೇಮನ ಪೀಠ
ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ - ೫೮೦ ೦೦೩.

© ಮಹಾಯೋಗಿ ವೇಮನ ಪೀಠ

ಪ್ರಥಮ ಮುದ್ರಣ : ಜನೆವರಿ ೨೦೦೫

ಪ್ರತಿಗಳು : ೫೦೦

ಬೆಲೆ : ರೂ. ೩೫೦/-

ಅಕ್ಷರ ಜೋಡಣೆ :
ವೇಮನ ಪ್ರಿಂಟರ್ಸ್ ಪ್ರೈ, ಲಿ.,
ಹುಲಕೋಟಿ - ೫೮೨ ೨೦೫

ಮುದ್ರಕರು :
ಡಾ. ಚಂದ್ರಮೌಳಿ ಎಸ್. ನಾಯ್ಕರ
ನಿರ್ದೇಶಕರು,
ಕರ್ನಾಟಕ ವಿಶ್ವವಿದ್ಯಾಲಯ ಮುದ್ರಣಾಲಯ,
ಧಾರವಾಡ - ೫೮೦ ೦೦೩

ಕುಲಪತಿಗಳ ನಲ್ನುಡಿ

ವಿಶ್ವವಿದ್ಯಾಲಯಗಳು ಜಾಗತಿಕ ಜ್ಞಾನದ ಗಣಿಗಳು. ಹಲವು ವಿಚಾರಧಾರೆಗಳ ಕೂಡಲಸಂಗಮಗಳು. ಇವುಗಳ ಗುರಿ, ಇರುವ ಜ್ಞಾನವನ್ನು ಹಂಚುವುದೂ ಹೊಸ ಜ್ಞಾನವನ್ನು ಬೆಳೆಸುವುದೂ ವಿಭಿನ್ನ ವಿಚಾರಗಳ ವಿನಿಮಯ ಕೇಂದ್ರಗಳಂತೆ ಕಾರ್ಯ ನಿರ್ವಹಿಸುವುದೂ ಆಗಿದೆ. ಉದ್ದೇಶ ಮನುಕುಲದ ಸರ್ವತೋಮುಖ ಏಳಿಗೆ. ಈ ಹಿನ್ನೆಲೆಯಲ್ಲಿ ಕರ್ನಾಟಕ ವಿಶ್ವವಿದ್ಯಾಲಯವೂ ಸಹ ಕಳೆದ ಅರ್ಧ ಶತಮಾನದಿಂದ ಹಲವು ನೆಲೆಗಳಲ್ಲಿ ಅಮೋಘ ಸೇವೆಯನ್ನು ಸಲ್ಲಿಸುತ್ತ ಬಂದಿದೆ.

ವಿಶ್ವವಿದ್ಯಾಲಯದಲ್ಲಿ ಎರಡು ದಶಕಗಳ ಹಿಂದೆ ಸ್ಥಾಪನೆಗೊಂಡ ಮಹಾಯೋಗಿ ವೇಮನ ಪೀಠ ತೆಲುಗು ಭಾಷೆಯ ಸಂತ ಪುರುಷ ವೇಮನರ ಸಾಹಿತ್ಯವನ್ನು ಕನ್ನಡಕ್ಕೆ ಈಗಾಗಲೇ ಸಮರ್ಪಿಸಿದೆ. ಈ ಮಹತ್ ಕಾರ್ಯವನ್ನು ಮಾಡಿದವರು ದಿವಂಗತ ಶ್ರೀ ಎಸ್.ಆರ್. ಪಾಟೀಲರು. ಶ್ರೀಯುತರು ಈ ಪೀಠದ ಬೆಳವಣಿಗೆಗೆ ಬೆನ್ನುಲುಬಾಗಿನಿಂತವರು. ವೇಮನರ ಪದ್ಯಗಳ ಕನ್ನಡ ಅನುವಾದ ಮಾತ್ರವಲ್ಲದೇ ಇವುಗಳಿಗೆ ಸಂಬಂಧಿಸಿ ನಾಲ್ಕೈದು ಉಪಕೃತ ಕೃತಿಗಳನ್ನೂ (ಹಸ್ತ ಪ್ರತಿಗಳು) ವಿಶ್ವವಿದ್ಯಾಲಯದ ವೇಮನ ಪೀಠಕ್ಕೆ ನೀಡಿ ಹೋಗಿದ್ದಾರೆ. ಈ ಗ್ರಂಥಗಳಲ್ಲಿ ಒಂದು ವೇಮನರ ಯೋಗ ಮೀಮಾಂಸೆ. ಸುಮಾರು ೧೬೦೦ ಪುಟಗಳ ಸುದೀರ್ಘ ಗ್ರಂಥವಾಗಿರುವದರಿಂದ ಇದನ್ನು ಎರಡು ಭಾಗಗಳಾಗಿ ಪ್ರಕಟಿಸಲು ನಿರ್ಧರಿಸಿ ಈಗ ಮೊದಲನೆಯ ಭಾಗವನ್ನು ಹೊರತರುತ್ತಿದ್ದೇವೆ. ಇದರ ಉಳಿದ ಭಾಗವೂ ಉಳಿದ ಗ್ರಂಥಗಳೂ ಬೇಗನೇ ಹೊರತರಲು ಪೀಠ ನಿರ್ಧರಿಸಿದೆ. ಇವುಗಳೆಲ್ಲ ಆಕರ ಗ್ರಂಥಗಳಾಗಿರುವುದರಿಂದ ಬೇಗನೆ ಹೊರಬರಬೇಕಾಗಿದೆ.

ತೆಲುಗಿನಲ್ಲಿರುವ ಪದ್ಯಗಳನ್ನು ಅರ್ಥಮಾಡಿ ಕೊಂಡದ್ದು ಮಾತ್ರವಲ್ಲದೇ ಅವುಗಳಲ್ಲಿ ಅಡಗಿರುವ ತಾತ್ವಿಕ ಚಿಂತನೆಗಳನ್ನು ಭಾರತದ ವಿಭಿನ್ನ ತತ್ವಗಳೊಡನೆ ತುಲನೆಮಾಡಿ ವೇಮನರ ನಿಲುವನ್ನು ಎತ್ತಿ ತೊರಿಸಿರುವ ಶ್ರೀ ಪಾಟೀಲರ ಶ್ರಮ ಮೆಚ್ಚುವಂತದ್ದು. ವೃತ್ತಿಯಲ್ಲಿ ಎಂಜನೀಯರರಾದರೂ ಪ್ರವೃತ್ತಿಯಲ್ಲಿ ಧಾರ್ಮಿಕ ಚಿಂತಕರಾಗಿದ್ದ ಇವರ ಸೇವೆ ನಮ್ಮ ವಿಶ್ವವಿದ್ಯಾಲಯದ ಮೂಲಕ ಆಗಿರುವುದು ಹೆಮ್ಮೆಯ ವಿಷಯವಾಗಿದೆ. ಇದಕ್ಕಾಗಿ ವಿಶ್ವವಿದ್ಯಾಲಯ ದಿ. ಶ್ರೀ ಎಸ್.ಆರ್. ಪಾಟೀಲರಿಗೆ ಮಾತ್ರವಲ್ಲದೇ ಇವರ ಕುಟುಂಬಕ್ಕೂ ಋಣಿಯಾಗಿದೆ.

ಸಾಧು ಸಂತರು ಯಾವ ಭಾಷೆಗೂ, ಪ್ರದೇಶಕ್ಕೂ ಜಾತಿ, ಧರ್ಮಗಳಿಗೂ ಬದ್ಧರಲ್ಲ. ಈ ತರದ ಸಂಬಂಧಗಳು ಆಕಸ್ಮಿಕ. ಇವರೆಲ್ಲ ವಿಶ್ವ ಮಾನವರು. ಮಹಾಯೋಗಿ ವೇಮನರೂ ಇದಕ್ಕೆ ಹೊರತಲ್ಲ. ಈ ಮನುಕುಲದ ಮಹಾತ್ಮನ ನುಡಿಗಳು ನೇರ ನುಡಿಗಳು, ಚೆನ್ನುಡಿಗಳು, ಅನುಭಾವಾಮೃತ ಬಿಂದುಗಳು. ಹೆಚ್ಚೆಚ್ಚು ಜನ ಇವುಗಳನ್ನು ಓದಬೇಕು. ಬದುಕಿನಲ್ಲಿ ತಕ್ಕ ಮಟ್ಟಿಗೆ ಅಳವಡಿಸಿಕೊಳ್ಳಬೇಕು. ಬೇರೆಯವರಿಗೂ ಪರಿಚಯಿಸಬೇಕು. ಹಾಗಾದರೆ ಮಾತ್ರ ವಿಶ್ವವಿದ್ಯಾಲಯದ

ಪ್ರಯತ್ನಕ್ಕೆ ಅರ್ಥ ಬರುತ್ತದೆ. ಮುಂದೆ ಇಂತಹ ಕಾರ್ಯಗಳನ್ನು ಇನ್ನೂ ಹೆಚ್ಚಿನ ಆಸಕ್ತಿಯಿಂದ ಮಾಡಲು ಸಾಧ್ಯವಾಗುತ್ತದೆ.

ಮಹಾಯೋಗಿ ವೇಮನ ಪೀಠ ಬೆಳ್ಳಿ ಹಬ್ಬ ಆಚರಿಸುವತ್ತ ಸಾಗುತ್ತಿದೆ. ಸುಮಾರು ಎರಡು ಎಕರೆ ಪ್ರದೇಶದಲ್ಲಿ ವಿಶ್ವವಿದ್ಯಾಲಯದ ಆವರಣದಲ್ಲಿ ಭವ್ಯವಾದ ವೇಮನ ಭವನ ನಿರ್ಮಾಣ ಆಗಲಿದೆ. ಮಹಾಯೋಗಿಯ ನೆನಪಿಗಾಗಿ ಭವನದ ಸುತ್ತಮುತ್ತ ಉಪಯುಕ್ತವಾದ ಮೂಲಿಕೆವನ-ವನ್ನು ನಿರ್ಮಿಸುವ ಯೋಜನೆ ಇದೆ. ಭವನ ನಿರ್ಮಾಣವಾದ ಕೂಡಲೆ ಕೆಲವು ಡಿಪ್ಲೊಮಾ ತರಗತಿಗಳನ್ನು ಆರಂಭಿಸುವ ಯೋಜನೆಯೂ ಸಹ ಇದೆ. ಈ ಎಲ್ಲ ಕಾರ್ಯಗಳಿಗೂ ಹಿತೈಷಿಗಳ ತನು ಮನ ಧನಗಳ ಸಹಾಯವನ್ನು ಪೀಠ ನಿರೀಕ್ಷಿಸುತ್ತದೆ. ಆದಷ್ಟು ಬೇಗ ನಿರೀಕ್ಷೆ ಈಡೇರಲಿ, ಜ್ಞಾನ ಪ್ರಸರಣ ಎಲ್ಲೆಡೆಯಾಗಲಿ ಎಂದು ಹಾರೈಸುತ್ತೇನೆ.

ಡಾ. ಎಂ. ಖಾಜಾಪೀರ್
ಕುಲಪತಿಗಳು
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಧಾರವಾಡ
ದಿನಾಂಕ : ೧೫.೧.೨೦೦೫

ಮುನ್ನುಡಿ

ಕ್ರಿ. ಶ. ಹದಿನೈದನೆಯ ಶತಮಾನದ ದ್ವಿತೀಯ ದಶಕದ ಆರಂಭದಲ್ಲಿ ಆಂಧ್ರನಾಡಿನ ಕೊಂಡವೀಡು ನಗರದಲ್ಲಿ ರಾಜವಂಶದಲ್ಲಿ ಜನಿಸಿದರೂ ವೇಮನ ರಾಜ್ಯಭಾರಕ್ಕೆ ಅಧಿಕಾರಿಯಾಗಲಿಲ್ಲ. ಏಕೆಂದರೆ ಇವರ ತಂದೆ ಕೊಮರುಗಿರಿ ರೆಡ್ಡಿಯವರು ಇವರು ಹುಟ್ಟುವ ಹದಿನಾರು ವರುಷ ಪೂರ್ವದಲ್ಲಿಯೇ ತಮ್ಮ ವಿಲಾಸ ವೃತ್ತಿಯಲ್ಲಿ ಮಗ್ನರಾಗಿ ಸಿಂಹಾಸನವನ್ನು ದಾಯಾದಿಗಳಿಗೆ ಒಪ್ಪಿಸಿದ್ದರು. ಹೀಗಾಗಿ ವೇಮನರು ಪಟ್ಟಣ ಪ್ರದೇಶದ ಬಳಿಯ ಮೂಗಚಿಂತಪಲ್ಲೆ ಎಂಬ ಗಲ್ಲಿಯಲ್ಲಿ ಜನಿಸಿದರು. ನಾವು ನಮ್ಮ ಈ ಮುಂಚಿನ ಗ್ರಂಥಗಳಲ್ಲಿ ವೇಮನರ ಜೀವನವನ್ನು ಕುರಿತು ಸಾಕಷ್ಟು ಚರ್ಚಿಸಿದ್ದೇವೆ. ಪ್ರಸ್ತುತ ಗ್ರಂಥದಲ್ಲಿ ಆ ವಿಭೂತಿ ಪುರುಷನನ್ನು ಕುರಿತು ಇಬ್ಬರು ಮೇಧಾವಿಗಳ ಲೇಖನಿಗಳನ್ನು ಭಾಷಾಂತರಿಸಿ ಒದಗಿಸಿದ್ದೇವೆ.

ಇವುಗಳಲ್ಲಿ ವೇಮನ ಜೀವನ ಚರಿತ್ರೆಯು ಶ್ರೀರಾಮ, ನರಸಿಂಹ ಮೂರ್ತಿ ಕವಿಗಳು ತಮ್ಮದೇ 'ವೇಮ ಗೀತಾ' ಎಂಬ ಸಂಸ್ಕೃತದಲ್ಲಿ ಅನುವಾದಿಸಿದ ಸಾವಿರ ಪದ್ಯಗಳ ಪುಸ್ತಕದ ಮುನ್ನುಡಿಯಿಂದ ಆಯ್ದುಕೊಂಡಿದ್ದೇವೆ. ಈ ಕವಿಯುಗಳರು ಪ್ರಸಿದ್ಧ ಸಂಸ್ಕೃತ ವಿದ್ವಾಂಸರು. ಗಂಧ ಶ್ರೀರಾಮ ಮೂರ್ತಿ ಮತ್ತು ಇರ್ರಿಂಕಿ ನರಸಿಂಹ ಮೂರ್ತಿ ಎಂಬ ಗದ್ವಾಲ ಸಂಸ್ಥಾನದ ಆಸ್ಥಾನ ಪಂಡಿತರಿವರು. ವೇಮನ ಪದ್ಯಗಳನ್ನು ಸಂಸ್ಕೃತ ಭಾಷೆಯಲ್ಲಿ ಅನುವಾದಿಸಿ ಸಾವಿರ ಸಾವಿರ ಸಂಖ್ಯೆಯಲ್ಲಿ ಗ್ರಂಥೀಕರಿಸುವ ಸ್ತುತ್ಯ ಪ್ರಯತ್ನ ಇವರದು. ಇಂಥ ಪಂಡಿತೋತ್ತಮರ ದೃಷ್ಟಿಯಲ್ಲಿ ವೇಮನರಾಗಲಿ ಅವರ ಪರಿಸರವಾಗಲಿ ಯಥಾವತ್ತಾಗಿ ಮೂಡಿ ಬಂದಿರುವುದೆಂದು 'ವೇಮನ ಜೀವನ ಚರಿತ್ರೆ' ಎಂಬ ಪ್ರಕರಣದಲ್ಲಿ ಪ್ರಸಿದ್ಧಿಸಿದ್ದೇವೆ. ಇದರಿಂದ ವೇಮನರನ್ನು ಕುರಿತು, ಅಲ್ಪಜ್ಞರಾದ ವಿದೇಶೀ ಪಂಡಿತರ ಮತ್ತು ವಿಕೃತ ಮತಿಗಳಾದ ಸ್ವದೇಶಿ ಪಂಡಿತರ ಬರಹಗಳನ್ನು ಹಂಸಕ್ಷೀರ ನ್ಯಾಯದಂತೆ, ಸತ್ಯವಾದದ್ದನ್ನಷ್ಟೇ ಸ್ವೀಕರಿಸಲು ಓದುಗರಿಗೆ ಸಹಾಯವಾದೀತೆಂದು ಆಶಿಸಿದ್ದೇವೆ.

ಇನ್ನೊಂದು ಪ್ರಕರಣದಲ್ಲಿ ದೇಶದ ಮಹಾಪ್ರತಿಭಾಶಾಲಿಗಳಾದ ಡಾ. ಸಿ. ಆರ್. ರೆಡ್ಡಿಯರು ಕ್ರಿ. ಶ. 1949 ರಲ್ಲಿ ಮದ್ರಾಸ ಬಾನುಲಿಯಲ್ಲಿ ಬಿತ್ತರಿಸಿದ 'ವೇಮನ' ಎಂಬ ಭಾಷಣದ ಕನ್ನಡಾನುವಾದವನ್ನು ನೀಡಿದ್ದೇವೆ. ವೇಮನರ ಬಗೆಗೆ ತುಂಬಾ ಅಭಿಮಾನವಿರಿಸಿದ್ದ ಈ ವಿದ್ವಾಂಸರು ಸಾಕಷ್ಟು ಪರಿಶ್ರಮ ವಹಿಸಿದ್ದಾರೆ. ಮೈಸೂರು ಸಂಸ್ಥಾನದ ಮಹಾರಾಜಾ ಕಾಲೇಜಿನ ಪ್ರಾಧ್ಯಾಪಕರಾಗಿ, ಆ ಸಂಸ್ಥಾನದ ಶಿಕ್ಷಣ ಇಲಾಖೆಯ ನಿರ್ದೇಶಕರಾಗಿ, ಮುಂದೆ ಆಂಧ್ರ ವಿಶ್ವವಿದ್ಯಾಲಯದಲ್ಲಿ ಎರಡು ಅವಧಿಯವರೆಗೆ ಉಪಕುಲಪತಿಗಳಾಗಿ ಮತ್ತು ಕೊನೆಗೆ ಮೈಸೂರು ವಿಶ್ವವಿದ್ಯಾಲಯದ ಪ್ರೊಛಾನ್ಸಲರರಾಗಿ ಅಪ್ರತಿಮ ಸೇವೆ ಸಲ್ಲಿಸಿದ ಮಹನೀಯರಿವರು. ವೇಮನರ ಅಧಿಕೃತ ಚಿತ್ರವನ್ನು ತಂಜಾವೂರಿನ ವಾಚನಾಲಯದಿಂದ ಪಡೆದು ಪ್ರಕಟಿಸಿದರು. ವೇಮನರ ಜಯಂತಿಯನ್ನು ಪ್ರತಿ ವರ್ಷ ಜನೇವರಿ 19 ರಂದು ಆಚರಿಸುವ ನಿರ್ಣಯವನ್ನು ಕೈಕೊಂಡರು. ಮದ್ರಾಸ ವಾವಿಳ್ಳಿ ಆ್ಯಂಡ ಕಂಪನಿಯವರಿಂದ ವೇಮನ ಎಂಬ 2800 ಪದ್ಯಗಳನ್ನು ಟೀಕಾರ್ಥ ಸಮೇತ ಪ್ರಕಟಗೊಳ್ಳುವಂತೆ ಪ್ರೋತ್ಸಾಹಿಸಿದರು. ದೇಶ ವಿದೇಶ ಪ್ರವಾಸದಲ್ಲಿರುವಾಗಲೂ 'ವೇಮನ' ಗ್ರಂಥವು ಇವರೊಂದಿಗೆ ಇರಲೇಬೇಕಿತ್ತು. ಅಂಥ ವೇಮನ ನಿಷ್ಠೆ ಅವರದು.

ಕರ್ನಾಟಕದಲ್ಲಂತೂ ಯೋಗಿ ವೇಮನರ ತತ್ತ್ವ ಪ್ರಸಾರದ ಸಸಿ ನೆಟ್ಟವರೇ ಅವರು. ಅಂಥ ಮಹಾಪುರುಷರ ಅಭಿಪ್ರಾಯಗಳನ್ನು ಓದುಗರಿಗೆ ಒದಗಿಸುವುದು ಮೇಲೆಂದು ಈ ಗ್ರಂಥದಲ್ಲಿ ಸೇರಿಸಲಾಗಿದೆ.

ಯೋಗಿ ವೇಮನರು ಬ್ರಾಹ್ಮಣ, ವೀರಶೈವ ಮತ ಸಂಪ್ರದಾಯಗಳಲ್ಲಿ ಒಪ್ಪಿಕೊಂಡ ಕುಲಗುರು ಪದ್ಧತಿಯನ್ನು ಒಪ್ಪಿಕೊಂಡಿಲ್ಲ. ಸದ್ಗುರುವು ಸಚ್ಛಿಷ್ಯನನ್ನು ಅರಸುತ್ತ ಬರುವಂತೆ ಸಚ್ಛಿಷ್ಯನು ಸದ್ಗುರುವನ್ನು ಅರಸುತ್ತ ಇರುತ್ತಾನೆ. ಇವರ ಸಮಾಗಮವೇ ಯೋಗಾಯೋಗ. ತನ್ನರಿವೇ ತನಗೆ ಗುರು. ಪರಮಾತ್ಮನೇ ಸರ್ವರಿಗೂ ಗುರು. 'ಅಂತರ್ ಸ್ಥಿತ್ವಾ ಯಮಯತೇ ಇತಿ'. ಅಂದರೆ ಅಂತರ್ಯದಲ್ಲಿ ಇದ್ದುಕೊಂಡು ನಿಯಂತ್ರಿಸುವ ಈಶನೇ ಸರ್ವರ ಗುರು. ಹಾಗಾದರೆ ಬಾಹ್ಯ ಗುರುವು ಬೇಡವೇ ? ಬೇಕು. ಆದರೆ ಅವರು ಅರಿವಿನ ಕಣ್ಣು ತೆರೆದವರಿರಬೇಕು. ಜನರ ಅರಿವಿನ ಕಣ್ಣು ತೆರೆಸುವವನಾಗಿರಬೇಕು. 'ಜಾತಿ ಮತವ ತೊರೆದು ಯೋಗಿ ಯಾಗೆ ಮೇಲು'. 'ಊರ್ಧ್ವ ಲೋಕದಲ್ಲಿ ಉಚಿತ ಕ್ರಮದಿಂದ, ರೂಪವೇನು ಇರದ ರೀತಿಯಲ್ಲಿ ಪರಮಯೋಗಿ ನೋಳ್ಪ ಪರಮಾತ್ಮನಿರವನು'. ಯೋಗಿಗಳ ಸ್ವಾನುಭವವಿದು. ಶಿವಯೋಗಿ ವೇಮನರ ಶಿವಾನುಭವವಿದು. ಇಂಥ ಭವಾರಣ್ಯದ ನಿಬಿಡಾಂಧಕಾರದಲ್ಲಿ ಅಂಧಕಾರ ನಿವಾರಕ ಗುರುವಿನ ಅಗತ್ಯವು ತುಂಬಾ ಹೆಚ್ಚು. ಆದರೆ ಅವನು ಕುಲಗುರುವಲ್ಲ. ಕುಲ ಜಾತಿಗಳಿಗೆ ಗುರುವು ಇರಬಹುದು. ಅವರು ಕುಲ ಜಾತಿಗಳನ್ನು ಸಂಘಟಿಸಬಹುದು. ಸಾಂಘಿಕ ಪ್ರಯತ್ನಗಳನ್ನು ಪ್ರೇರೇಪಿಸಬಹುದು. ಆಯಾ ಮಾನಸಿಕ ಜಗತ್ತಿಗೆ ಅವರು ಜಗದ್ಗುರುವಾಗಿ ಮೆರೆಯಬಹುದು. ಗುರುಶಕ್ತಿಯ ಮಹಿಮೆಯಿಂದ ಜೀವಂತ ಸಿಂಹದ ಮೇಲೆ ಆಸೀನರಾಗದಿದ್ದರೂ ಕಟ್ಟಿಗೆಯ ಸಿಂಹಾಸನವನ್ನಾದರೂ ಏರಲಿ. ಇದಕ್ಕೆ ಅಭ್ಯಂತರವೇನಿಲ್ಲ. ಆದರೆ, ಜನರನ್ನು ಸಂಘಟಿಸುವ ನೆಪದಲ್ಲಿ ಮತೀಯ ಸಂಪ್ರದಾಯಗಳಿಗೆ ದಾಸರನ್ನಾಗಿಸಿ, ಅವರ ಸ್ವತಂತ್ರ ಮತಿಯನ್ನು ಕಟ್ಟಿ ಹಾಕುವುದನ್ನು ಬ್ರಹ್ಮ ರಾಕ್ಷಸನ ಕಾರ್ಯವೆನ್ನದೆ ಗತಿಯಿಲ್ಲ. ಲಕ್ಷಕ್ಕೊಬ್ಬ ಭಕ್ತ, ಕೋಟಿಗೊಬ್ಬ ಶರಣನಿರುವಂತೆ, ತಮ್ಮ ಮೂಲ ಜಾತಿ ಮತಗಳನ್ನು ತೊರೆದು ಬಂದ, ಭಗವಾನ ರಮಣ ಮಹರ್ಷಿ, ಹುಬ್ಬಳ್ಳಿಯ ಸಿದ್ಧಾರೂಢರು, ಶಿಶುನಾಳದ ಶರೀಫರು, ಕಳಸದ ಗೋವಿಂದ ಭಟ್ಟರು, ಕಲಕತ್ತೆಯ ರಾಮಕೃಷ್ಣ ಪರಮಹಂಸರಂಥ ಮಹಾಪುರುಷರು ಅಲ್ಲಲ್ಲಿ ಅವತರಿಸುತ್ತಾರೆ. ಹೀಗೆ ಜನರ ಅಜ್ಞಾನದ ಅಂಧಕಾರವನ್ನು ನಿವಾರಿಸಲು ಅರಿವಿನ ಜ್ಯೋತಿಯನ್ನು ಹೊತ್ತಿಸಿದ ಗುರುಗಳನ್ನು ಗುರುತಿಸಿ, ಜಾತಿ ಕುಲವನ್ನು ಲೆಕ್ಕಿಸದೆ ಹೋಗುವವರಿಗೆ ಊರುಗೋಲಾಗಿ ನಿಂತಿವೆ, ಮಹಾಯೋಗಿ ವೇಮನರ ಪದ್ಯಗಳು. ಇವುಗಳ ಸಂಕಲನವನ್ನು ಟೀಕಾರ್ಥ ಸಹಿತ 'ಅಂಧಕಾರ ನಿವಾರಕ-ಗುರು' ಅಧ್ಯಾಯದಲ್ಲಿ ನೀಡಿದ್ದೇವೆ.

ತನ್ನ ಇಚ್ಛೆಗೆ ಅನುಕೂಲಿಸಿ ಏನಾದರೂ ಘಟಿಸಿದರೆ ಮಾನವನಿಗೆ ಇಷ್ಟವಾಗುತ್ತದೆ. ಅದು ತನ್ನ ಭಾಗ್ಯ ಎಂದು ಹಿಗ್ಗುತ್ತಾನೆ. ಆದರೆ ತನ್ನ ಇಚ್ಛೆಗೆ ಪ್ರತಿಕೂಲವಾಗಿ ಏನಾದರೂ ಘಟಿಸಿದರೆ ಅದು ಅನಿಷ್ಟವೆನಿಸುತ್ತದೆ. ಅದು ತನ್ನ ದುರ್ಭಾಗ್ಯ ಎಂದು ಹಳಹಳಿಸುತ್ತಾನೆ. ಅದರಿಂದ ಕುಗ್ಗುತ್ತಾನೆ. ಇಷ್ಟವೇ ಇರಲಿ; ಅನಿಷ್ಟವೇ ಇರಲಿ, ಉಭಯತಾಪಿ ತನ್ನ ಕರ್ಮ ಫಲಗಳೇ ಎಂದು ಬಹುಜನರು ನಂಬುವುದಿಲ್ಲ ಇಷ್ಟವು ಫಲಿಸಿದಾಗ ತಮ್ಮ ಬೆನ್ನು ತಾವೇ ಚಪ್ಪರಿಸಿಕೊಳ್ಳುತ್ತಾರೆ. ತಮ್ಮ ಬಗ್ಗೆ ತಾವೇ ಗರ್ವಪಡುತ್ತಾರೆ. ಎಷ್ಟೋ ಸಲ ಮದೋನ್ಮತ್ತರಾಗಿ ರಾಕ್ಷಸೀಯ ಕೃತ್ಯವೆಸಗುತ್ತಾರೆ. ಆದರೆ ಅನಿಷ್ಟ ಸಂಭವಿಸಿದಾಗ ಅದರ ಹೊಣೆಯನ್ನು ಇತರರತ್ತ

ಹೊರಿಸಲು ಹವಣಿಸುತ್ತಾರೆ. ಗ್ರಹಗಳ ಗತಿಯ ಫಲವೆನ್ನುತ್ತಾರೆ. ಮಾನವನು ನಡೆದ ಘಟನೆಗಳಲ್ಲಿ ಅಪಶಕುನ ಹುಡುಕುತ್ತಾನೆ. ಗೂಗೆಯ ಕೂಗು, ಕಾಗೆ ಮನೆ ಹೊಗುವುದು, ಬೆಕ್ಕು ಅಡ್ಡ ಬರುವುದು, ಹಲ್ಲಿ ನುಡಿತ, ಹೀಗೆ ಏನೆಲ್ಲ ಅಪಶಕುನಗಳನ್ನು ಕಲ್ಪಿಸುತ್ತಾನೆ. ಒಟ್ಟಾರೆ ತಾನು ತನಗೊದಗಿದ ಅನಿಷ್ಟಕ್ಕೆ ನೇರ ಕಾರಣನಲ್ಲವೆಂದು ತಿಳಿಸಲು ಪೂರ್ಣ ಪ್ರಯತ್ನ ಮಾಡುತ್ತಾನೆ. ಆದರೆ ಇರುವ ತಥ್ಯವೆಂದರೆ ತನ್ನ ಸುತ್ತು ನಡೆಯುವ ಘಟನೆಗಳಿಗೆ ತಾನೇ ಹೊಣೆಯಾಗಿದ್ದಾನೆ. ಪುನರ್ಜನ್ಮದಲ್ಲಿ ನಂಬುಗೆ ಇರುವವರಿಗಂತೂ ಇದು ಪೂರ್ಣ ಮನದಟ್ಟಾಗುತ್ತದೆ. ಈ ಜನ್ಮದಲ್ಲಿ ಅನುಭವಿಸಬೇಕಾದ ಭವಸಾಗರವು ಪೂರ್ವಜನ್ಮದ ಕರ್ಮಫಲವೇ ಆಗಿದೆ. ಆದರೆ ಇಲ್ಲಿ ಹಣೆ ಬರೆಹದ ಪ್ರಶ್ನೆಯೊಂದಿದೆ. ಹಣೆ ಬರೆಹವೆಂದರೆ ವಿಧಿ ಲಿಖಿತ ಫಲಗಳು. ಎಲ್ಲವೂ ವಿಧಿ ಲಿಖಿತವಾದರೆ ತನ್ನದೇನು ಪಾತ್ರ ? ಎಂದು ಪ್ರಶ್ನಿಸಬಹುದು. 'ಬ್ರಹ್ಮ ವಿಧಿಗೆ ಕರ್ತ, ಕರ್ಮಕೆ ತಾ ಕರ್ತ'. ಕರ್ಮದ ಫಲವನ್ನು ನಿರ್ಣಯಿಸುವವನು ಬ್ರಹ್ಮನೇ. ಅವನೇ ಆ ಫಲದ ವಿಧಿಯನ್ನು ನಿರ್ಣಯಿಸುತ್ತಾನೆ. ಆದರೆ ವಿಧಿಯು ಯಾವ ಕರ್ಮಫಲವನ್ನು ನಿರ್ಣಯಿಸುವುದೋ, ಆ ಕರ್ಮಕ್ಕೆ ತಾನೇ ಕರ್ತನಲ್ಲವೇ ? ಹೀಗೆ ಕರ್ಮಫಲಗಳಿಗೆ ತಾನು ಸಂಬಂಧ ಹೊಂದಿರುತ್ತಾನೆ. ಆದರೆ ಮಾನವನು ಅರಿತು ಆಚರಿಸಬೇಕಾದ ಮುಖ್ಯ ಸೂತ್ರವಿದೆ. ಬೇಕು ಎನಲು ಬರದು, ಬೇಡವೆನಲು ಬಿಡದು. ಪೂರ್ವ ಕರ್ಮಕಂಟಿ ಫಲವು ಉಂಟು. ಹೃದಯದಲ್ಲಿ ದುಃಖಿಪಡದಿರುವುದೇ ಧರ್ಮ. ಈ ವಿಧಿ ನಿಯಮವು ಸರ್ವರಿಗೂ ಅನ್ವಯಿಸುತ್ತದೆ. ದೊಡ್ಡ ದೊಡ್ಡ ಚಕ್ರವರ್ತಿಗಳೂ ಈ ನಿಯಮಕ್ಕೆ ಅಪವಾದವೇನಲ್ಲ ಎಂದು ತಿಳಿಸಲು ಅನೇಕ ದೃಷ್ಟಾಂತಗಳನ್ನು ಇತಿಹಾಸ ಪುರಾಣಗಳಿಂದ ಆಯ್ದು ವೇಮನರು ವಿವರಿಸಿದ್ದಾರೆ.

ಇನ್ನು ವಿವಿಧ ಯೋಗ ಪದ್ಧತಿಗಳ ವಿಚಾರ. ಸಾಮಾನ್ಯವಾಗಿ ತತ್ತ್ವ ವಿಶಾರದರು ಮೂರು ಯೋಗಗಳನ್ನು ಪ್ರತಿಪಾದಿಸುತ್ತಾರೆ. ಅವುಗಳೆಂದರೆ ಕರ್ಮಯೋಗ, ಜ್ಞಾನಯೋಗ ಮತ್ತು ಭಕ್ತಿಯೋಗ. ನಾಲ್ಕನೆಯದಾಗಿ ಧ್ಯಾನಯೋಗವನ್ನು ಪರಿಗಣಿಸುತ್ತಾರೆ. ಭಗವದ್ಗೀತೆಯಲ್ಲಿ ಶ್ರೀಕೃಷ್ಣನ ಅಭಿಮತಾನುಸಾರ, ಸಾಂಖ್ಯಯೋಗ, ಕರ್ಮಯೋಗ, ಜ್ಞಾನಯೋಗ, ಧ್ಯಾನಯೋಗ ಜ್ಞಾನ-ವಿಜ್ಞಾನ ಯೋಗ ರಾಜಗುಹ್ಯಯೋಗ ಮತ್ತು ಭಕ್ತಿಯೋಗ ಎಂಬೀ ಯೋಗ ಪ್ರಕಾರಗಳಿವೆ. ಯೋಗಿ ವೇಮನರು ಮೂರು ಯೋಗಗಳನ್ನು ಎತ್ತಿ ಹೇಳಿದ್ದಾರೆ.

ಕಂ. ಭುವಿ ರಾಜಯೋಗ ಮುಖ್ಯ
ವಿಮಲತರ ಸಾಂಖ್ಯಯೋಗವು ಭಾವಜ್ಞರಿಗೆ
ವಿವರಗಳಿಲ್ಲವ ತಿಳಿಯಲು
ಶಿವಯೋಗ ಮಹತ್ವವೆಲ್ಲ, ಸಿದ್ಧವು ವೇಮ.

ಹೀಗೆ ವೇಮನರ ಮೂರು ಯೋಗಗಳೊಂದಿಗೆ ನಾವು ಸ್ವಾಮಿ ವಿವೇಕಾನಂದರ ವಿಚಾರ ಪ್ರಣಾಲಿಯೊಂದಿಗೆ ಹೊಂದಿಸಿ ವೇಮನ ಪದ್ಯಗಳನ್ನು ಜೋಡಿಸಿ ಕರ್ಮಯೋಗವನ್ನು ವಿವರಿಸಿದ್ದೇವೆ. ಸಾಂಖ್ಯಯೋಗದಲ್ಲಿ ಬಹ್ಮನಿಂದ ಭುವಿಯವರೆಗಿನ ಸೂಕ್ಷ್ಮ ಮತ್ತು ಸ್ಥೂಲ ತತ್ತ್ವಗಳ ಉತ್ಪತ್ತಿಯನ್ನೂ ಮತ್ತು ಅವುಗಳ ಕ್ರಿಯೆಗಳನ್ನೂ ಸವಿವರ ಕೊಟ್ಟಿದ್ದೇವೆ. ಬ್ರಹ್ಮನಿಂದ ಜಗತ್ತು ಹೇಗೆ ಸೃಷ್ಟಿಯಾಗಿದೆ ? ಎಂಬುದನ್ನು ಬೇರೆ ಬೇರೆ ವಿದ್ವಾಂಸರು ಬೇರೆ ಬೇರೆಯಾಗಿ ವರ್ಣಿಸಿದ್ದಾರೆ. ವೀರಶೈವರು ಮತ್ತು ಮಾಧ್ವರು ಜಗತ್ತು ಅನಾದಿ ಮತ್ತ ಅನಂತ ಎನ್ನುತ್ತಾರೆ.

ಬೌದ್ಧರು ಪುನರ್ಜನ್ಮ ನಂಬಿದರೂ ಆತ್ಮದ ಅಸ್ತಿತ್ವವನ್ನು ನಂಬಿಲ್ಲ. ಅಷ್ಟೇಕೆ ? ಪ್ರತ್ಯಕ್ಷ ಪ್ರಮಾಣದ ಅಭಾವದ ಕಾರಣ ಆಕಾಶ ತತ್ತ್ವದ ಅಸ್ತಿತ್ವವನ್ನು ಒಪ್ಪಿಲ್ಲ. ಅವರ ಪ್ರಕಾರ, ಬುದ್ಧಿ ತತ್ತ್ವವೇ ಪರಮ ತತ್ತ್ವ. ಆದ್ದರಿಂದ ವೇಮನರು ಆ ನಿಲುಮೆಯನ್ನು ಟೀಕಿಸುತ್ತಾರೆ. ''ಕತ್ತೆಗೆ ಲಕ್ಷ್ಮಿಯು, ಗಕ್ಕನೇ ಒಲಿದಂತೆ'' ಎಂದವರ ಟೀಕೆ. ಬ್ರಹ್ಮನಿಂದ ಜಗತ್ತು ಕೇವಲ ಇಚ್ಛಾ ಮಾತ್ರದಿಂದ ಸೃಷ್ಟವಾಗಿಲ್ಲ. ಅವರ ಪ್ರಕಾರ ಸೃಷ್ಟಿಯು ಮಾಯಾವಾದವೂ ಅಲ್ಲ, ವಿವರ್ತವಾದವೂ ಅಲ್ಲ. ಅದು ಪ್ರಕೃತಿಯ ಗುಣಗಳ ಪ್ರಭಾವದಿಂದ ಸೃಷ್ಟಿಯಾಗಿದೆ. ಒಂದೊಂದು ತತ್ತ್ವವೂ ಪರಿಣಾಮವಾದದ ನಿದರ್ಶನ. ಭಾವಜ್ಞರು ಭಾವ ಲೋಕದಲ್ಲಿ ವಿಹರಿಸಿ ಕಂಡುಕೊಂಡ ಸತ್ಯಗಳವು. ಇಲ್ಲಿಯೂ ಸ್ವಾಮಿ ವಿವೇಕಾನಂದರ ವಿಚಾರ ಪ್ರಣಾಲಿಯಲ್ಲಿ, ಸೂಕ್ತ ಮಾರ್ಪಾಡು ಮಾಡಿ, ಯೋಗಿ ವೇಮನರ ಪದ್ಯಗಳನ್ನು ಜೋಡಿಸಿದ್ದೇವೆ.

ಯೋಗಿ ವೇಮನರು ವಿಶೇಷವಾಗಿ ಭಕ್ತಿಯೋಗವನ್ನೇನೂ ಪ್ರತಿಪಾದಿಸಿಲ್ಲ. ಆದರೆ ಅವರ ಪದ್ಯಗಳಲ್ಲಿ ಭಕ್ತಿ ಭಾವ ತುಂಬಿದುದನ್ನು ಕಾಣಬಹುದು. 'ಬೊಂಬೆಯಾಟದವನು ಬೊಂಬೆಯಾಡಿಸುತಿಹನು ಜನರ ನೋಟದೆಲ್ಲೆ ಮೀರಿ' ಎಂದು ಪರಮಾತ್ಮನ ಮಹಿಮೆಯನ್ನು ಬಣ್ಣಿಸುತ್ತಾರೆ. 'ಭಕ್ತಿ ಹೊಂದಿದವನೆ ಪರಮಾತ್ಮನಾಗುವ' ಎಂದು ಇನ್ನೊಂದೆಡೆ ಹೇಳುತ್ತಾರೆ. ಹಾಗಾದರೆ ಅವರ ದೃಷ್ಟಿಯಲ್ಲಿ ಭಕ್ತಿ ಎಂದರೇನು ? ವಿಶ್ವಕರ್ಮನ ನಿಲುವು ಏನು ? ಭಕ್ತಿಯೋಗದ ಪರಮ ಗುರಿ ಯಾವುದು ? ಗುರುವಿನ ಅವಶ್ಯಕತೆ, ಪ್ರಣವ ಮಂತ್ರದ ಮಹಿಮೆ, ಸಗುಣೋಪಾಸನೆ, ಪರಾಭಕ್ತಿ ಯಾವುದು ? ಅದರ ಸಿದ್ಧತೆಗಾಗಿ ಮಾಡಬೇಕಾದ ತ್ಯಾಗ, ಭಕ್ತಿಯೋಗದ ಸಹಜತೆ, ನಿರ್ಗುಣೀ ಭಕ್ತಿ, ಕುಟಿಲ ಭಕ್ತಿ ಇತ್ಯಾದಿ ಪರಿಚ್ಛೇದಗಳನ್ನು ಭಕ್ತಿಯೋಗವು ಒಳಗೊಂಡಿದೆ.

ವಿದ್ವಜ್ಜನರು ನಮ್ಮೀ ಪ್ರಯತ್ನವನ್ನು ಸಹೃದಯದಿಂದ ವಿಮರ್ಶಿಸಿ ಸೂಕ್ತ ಸಲಹೆಗಳನ್ನು ನೀಡುವರೆಂದು ಆಶಿಸಿದ್ದೇವೆ.

ತಮ್ಮ ವಿಶ್ವಾಸಿ,

12-1-2002 ಎಸ್. ಆರ್. ಪಾಟೀಲ

ಪರಿವಿಡಿ

ವಿಷಯ	ಪುಟ ಇಂದ	ವರೆಗೆ
ಕುಲಪತಿಗಳ ನಲ್ನುಡಿ	i	ii
ಮುನ್ನುಡಿ	iii	vi
ವೇಮನರ ಜೀವನ ಚರಿತ್ರೆ	**1**	**7**
ಜಾತ್ಯತೀತ ಸಮಾಜ	**8**	**12**
ಅಂಧಕಾರ ನಿವಾರಕ ಗುರು	**13**	**73**
ಗುರು ಸೇವೆ	19	
ಗುರು ಬೋಧೆ-1	20	
ಮಂತ್ರ ಸಾಧನೆ	22	
ಗುರುಭಕ್ತಿ	26	
ಜ್ಞಾನದೀಪ	28	
ಗುರುಬೋಧೆ-2	30	
ಗುರುವಿನ ಸತ್ಸಂಗ	33	
ನಿಷಿದ್ಧ ಗುರು	37	
ಗುರು ಪ್ರತೀಕ್ಷೆಯಲ್ಲಿ ಸಾಧನ	44	
ಜ್ಞಾನದೀಪ ಗುರು	48	
ಶಿಷ್ಯನ ನಡೆವಳಿ	59	
ಶಿಷ್ಯಧರ್ಮ	62	
ಮೋಕ್ಷ ಗುರು	65	
ಕರ್ಮಯೋಗ	**74**	**185**
ಫಲಾಸಕ್ತಿ ಬೇಡ	80	
ನೀಚ ಕಾರ್ಯ ಬೇಡ	81	
ಗೃಹಸ್ಥನ ನಡೆವಳಿ	83	
ಉತ್ತಮ ನಡೆನುಡಿ	86	
ಕರ್ಮ ರಹಸ್ಯ	88	
ನಿಷ್ಕಾಮ ಕರ್ಮ	90	
ಕರ್ತವ್ಯ ನಿಷ್ಠುರತೆ	95	
ಮಂತ್ರ, ಯಂತ್ರ, ತಂತ್ರ	98	
ಕರ್ಮ ಸಿದ್ಧಾಂತ	103	
ಜನನ ಮರಣ	106	
ಪೂರ್ವ ಕರ್ಮಫಲವೇ ಪ್ರಾಪ್ತಿ	117	
ಕರ್ಮ ಫಲದ ವಿನಿಮಯವಿಲ್ಲ	118	
ಮೂಢ ನಂಬುಗೆ	120	

ಪರಿವಿಡಿ

ವಿಷಯ	ಪುಟ ಇಂದ	ವರೆಗೆ
ಕರ್ಮ, ಅಕರ್ಮ	122	
ಕರ್ಮ ಮತ್ತು ಜ್ಞಾನ	124	
ವಿಧಿ	127	
ಕರ್ಮಫಲ ಆನುವಂಶಿಕವಲ್ಲ	134	
ಬ್ರಹ್ಮನ ಲೀಲೆ	140	
ಗಯ	144	
ಶಶಿಬಿಂದು	146	
ರುಚೀಕ	146	
ಪೃಥು ಚಕ್ರವರ್ತಿ	148	
ಮರುಧ್ವಜ	149	
ಭರತ	149	
ಸುಹೋತ್ರ	150	
ಶ್ರೀರಾಮ	150	
ದಿಲೀಪ	151	
ಸಗರ	152	
ಭಾರ್ಗವ : ಪರಶುರಾಮ	153	
ಭಗೀರಥ	155	
ಯಯಾತಿ	156	
ಮಾಂಧಾತೃ : ಯುವನಾಶ್ವ	157	
ಶಿಬಿ ಚಕ್ರವರ್ತಿ	158	
ಪುರೂರವ	159	
ನಳ ಚರಿತ್ರೆ	162	
ಹರಿಶ್ಚಂದ್ರ	166	
ಭೈರವ ಅವತಾರ	168	
ವಿಧಿಯ ಲೀಲೆ	170	
ಕಾಲ ಗತಿ	171	
ಕಿರಾತಾರ್ಜುನ ಯುದ್ಧ	172	
ಮಹಾಭಾರತ-1	173	
ರಾಮಾಯಣ	176	
ಮಹಾಭಾರತ-2	181	
ಶಿವನ ಭಿಕ್ಷೆ	185	
ಸಾಂಖ್ಯಯೋಗ	**186**	**370**
ತತ್ವಗಳ ಉತ್ಪತ್ತಿ	191	
ಅಂತಃಕರಣ ಚತುಷ್ಟಯ	194	

ಪರಿವಿಡಿ

ವಿಷಯ	ಪುಟ ಇಂದ	ವರೆಗೆ
ಪಂಚ ಮಹಾಭೂತಗಳು	195	
ಜ್ಞಾನೇಂದ್ರಿಯ ಪಂಚಕ	204	
ಕರ್ಮೇಂದ್ರಿಯ ಪಂಚಕ	205	
ಜೀವ ಸೃಷ್ಟಿ	207	
ಜೀವ	211	
ಜಗತ್ತು	219	
ಓಂಕಾರ ವರ್ಣನೆ	231	
ಪಂಚ ಕೋಶಗಳ ವಿವರ	231	
ಜೀವ ಹಂಸನ ಸಂಚಾರ	233	
ಅಷ್ಟದಳ ಪದ್ಮ	235	
ಸಾಂಖ್ಯ ಸೂತ್ರ	237	
ಯೋಗ ಪ್ರಕಾರಗಳು	238	
ಪ್ರಮಾಣಗಳು	242	
ಅಧಿಕಾರ ಲಕ್ಷಣ	243	
ಷಟ್ಕ ಸಂಪತ್ತಿ	254	
ಮುಮುಕ್ಷುತ್ವ	255	
ಧರ್ಮ ಸಾಧನೆ	264	
ಶ್ರಾದ್ಧ ಕರ್ಮ	265	
ಅತೀಂದ್ರಿಯ ಅನುಭವ	269	
ಮಾನವನ ನಿತ್ಯ ಸ್ವರೂಪ	273	
ಬ್ರಹ್ಮ ಜ್ಞಾನ	285	
ಸಾಂಖ್ಯಯೋಗ-ತತ್ತ್ವನಿರ್ಣಯ	**292**	**370**
ಸಂಖ್ಯಾ ಸೂತ್ರಗಳು	324	
ಬ್ರಹ್ಮ, ವಿಷ್ಣು, ಮಹೇಶ್ವರ (ಶಿವ)	328	
ಭಕ್ತಿಯೋಗ	**371**	**594**
ಸಾತ್ವಿಕ ಸಾಧನೆ	388	
ವೈಧೀ ಭಕ್ತಿ	396	
ಪ್ರತೀಕ ಪೂಜೆ, ಪ್ರತಿಮಾ ಪೂಜೆ	397	
ಸ್ತುತಿ ವಚನ	417	
ತೀರ್ಥಯಾತ್ರೆ	418	
ಬ್ರಹ್ಮ ಸದ್ಭಾವ	420	
ಧ್ಯಾನ ಧಾರಣ	420	

ಪರಿವಿಡಿ

ವಿಷಯ	ಪುಟ ಇಂದ	ಪುಟ ವರೆಗೆ
ಜಪಸ್ತುತಿ	420	
ಮೂರ್ತಿ ಪೂಜೆ	421	
ಇಷ್ಟ-ನಿಷ್ಠೆ	423	
ಭಕ್ತಿಯ ವಿಧಾನ ಮತ್ತು ರೀತಿ	431	
ದುಡಿದು ಉಣ್ಣಬೇಕು	433	
ಅನ್ನದಾನ	438	
ಸೂಕ್ಷ್ಮ ಉಪಾಸನೆ	439	
ಮೇಲು ಕೀಳು	440	
ಆಸೆ	444	
ಕೋಪ	445	
ಲೋಭ	447	
ಮೋಹ	449	
ಮದ	450	
ಮತ್ಸರ	481	
ಆಚಾರ	483	
ಆರ್ತರಿಗೆ ನೆರವು	494	
ಭಾವ	499	
ನಿಜದರಿವು	504	
ಪರಾಭಕ್ತಿ	**510**	
ವೈರಾಗ್ಯದ ಸಿದ್ಧತೆ	510	
ಮಿಥ್ಯಾಚಾರ	517	
ವೈರಾಗ್ಯ	519	
ಆಮುಷ್ಮಿಕ ವೈರಾಗ್ಯ	522	
ಜ್ಞಾನಮಿಶ್ರ ಭಕ್ತಿ	530	
ಕೇವಲ ಭಕ್ತಿ	533	
ರಾಗಾತ್ಮಿಕ ಭಕ್ತಿ	542	
ಅವ್ಯಕ್ತೋಪಾಸನೆ	555	
ಭಕ್ತಿಭಾವದ ಅಭಿವ್ಯಕ್ತಿ	565	
ಯೋಗಿಯ ಅಂತಿಮ ಅವಸ್ಥೆ	581	
ಕೊನೆಯ ಮಾತು	590	
ನವವಿಧ ಭಕ್ತಿ	591	
ಪದ್ಯಗಳ ಅಕಾರಾದಿ ಅನುಕ್ರಮಣಿಕೆ	**595**	**619**
ಗ್ರಂಥಋಣ	**620**	**621**

ವೇಮನರ ಜೀವನ ಚರಿತ್ರೆ

ಈ ಹಿಂದೆ ವೇಮನ ಎಂಬ ಮಹಾಯೋಗಿಯವರು ಸುಲಲಿತ ಆಂಧ್ರ ಭಾಷೆಯಲ್ಲಿ, ಪದ್ಯರೂಪದಲ್ಲಿ, ಐಹಿಕ-ಆಮುಷ್ಮಿಕ ವಿಷಯಗಳಿಲ್ಲವನ್ನು ಕುರಿತು ಮಾನವ ಕುಲಕ್ಕೆ ಚೆನ್ನಾಗಿ ಬೋಧಿಸಿದ್ದಾರೆ. ಈ ಪದ್ಯಗಳನ್ನೇ 'ವೇಮಗೀತಾ' ಎಂಬ ಶೀರ್ಷಿಕೆಯಲ್ಲಿ, ಸಂಸ್ಕೃತ ಭಾಷೆಯಲ್ಲಿ ಅನುಷ್ಟುಪ ಛಂದಸ್ಸಿನಲ್ಲಿ ನಾವು ಅನುವಾದಿಸಿದ್ದೇವೆ.

ಆಂಧ್ರ ಭಾಷೆಯಲ್ಲಿ 'ಅನ್ನ' ಶಬ್ದವು ಪ್ರೀತ್ಯಾದರ ಸೂಚಕವಾಗಿದೆ. ಹೀಗೆ ವೇಮ ಇದು ವೇಮನ್ನ ಇಲ್ಲವೆ ವೇಮನ ಎಂದು ಪ್ರತೀತವಾಗಿದೆ.

ವೇಮನ ಕವಿ ಆಂಧ್ರದಲ್ಲಿ ಕೊಂಡವೀಡು ಪಟ್ಟಣದಲ್ಲಿ ಕ್ರಿ.ಶ. ಹದಿನೈದನೆಯ ಶತಮಾನದಲ್ಲಿ ನಂದನ ಸಂವತ್ಸರದ ಕಾರ್ತಿಕ ಮಾಸದ ಪೂರ್ಣಿಮೆಯಂದು ಜನಿಸಿದರು. ಅವರ ತಾಯಿ ಮಲ್ಲಮಾಂಬೆ. ಕ್ರಿ.ಶ. ೧೩೮೬ ರಿಂದ ೧೪೯೬ರ ವರೆಗೆ ಕೊಂಡವೀಡು ಪ್ರದೇಶವನ್ನು ಆಳಿದ ಕೊಮರುಗಿರಿ ವೇಮ ಭೂಪಾಲನ ಮೂರನೆಯ ಮಗನೇ ವೇಮನ. ಸಂಪ್ರದಾಯದಿಂದ ತಿಳಿದು ಬರುವಂತೆ, ವೇಮನ ಸೋಮಶೇಖರ ಗುರುಗಳಲ್ಲಿ, ಕವಿ ಬೊಮ್ಮೇರ ಪೊತೆನನ ಸಹಪಾಠಿಯಾಗಿದ್ದರು. ಇಲ್ಲಿ ಅವರು ಸಂಸ್ಕೃತ ಮತ್ತು ತೆಲಗು ಸಾಹಿತ್ಯಗಳನ್ನು ಆಳವಾಗಿ ಅಭ್ಯಸಿಸಿದರು. ಜೀವನದ ಪ್ರಾರಂಭಿಕ ಇಪ್ಪತ್ತು ವರ್ಷಕಾಲ ರಾಜವಿಲಾಸವನ್ನು ಭೋಗಿಸಿದರು. ರೆಡ್ಡಿ ಸಾಮ್ರಾಜ್ಯದ ಏಳುಬೀಳುಗಳನ್ನು ಕಂಡು ಅವರಿಗೆ ಭ್ರಮನಿರಸನವಾಯಿತು, ಹೀಗಾಗಿ ಅವರು ತಮ್ಮ ಪ್ರಾಪಂಚಿಕ ಸಂಬಂಧಗಳನ್ನು ಕಡಿದುಕೊಂಡು ವೈರಾಗ್ಯ ತಾಳಿದರು. ಅನಂತರ ತಮ್ಮ ಶೇಷಾಯುಷ್ಯವನ್ನು ನಿಷ್ಕಳಂಕಿತ ರೀತಿಯಲ್ಲಿ ಬಾಳಿ, ತಮ್ಮ ಲೌಕಿಕ ಮತ್ತು ಆಧ್ಯಾತ್ಮಿಕ ಅನುಭವಗಳನ್ನು ಪದ್ಯರೂಪದಲ್ಲಿ ಹಾಡಿದರು. ಕೊನೆಗೆ ತಮ್ಮ ಅರವತ್ತೆಂಟನೆಯ ಇಳಿ ವಯಸ್ಸಿನಲ್ಲಿ ಶಾರ್ವರಿ ಸಂವತ್ಸರದ ಚೈತ್ರ ಮಾಸದ ಇಪ್ಪತ್ತುನಾಲ್ಕನೆಯ ದಿನ ಕಟಾರುಪಳ್ಳಿ ಗ್ರಾಮದಲ್ಲಿ ದೇಹ ತೊರೆದರು.

ಸಾಹಿತ್ಯ ಮತ್ತದರ ವ್ಯಾಪ್ತಿ :-

ಸಂಸ್ಕೃತ ಭಾಷೆಯ 'ರಾಟ್' ಮತ್ತು 'ಪಾಲಕ' ಶಬ್ದಗಳ ಅರ್ಥವನ್ನೇ ತೆಲಗಿನ 'ರೆಡ್ಡಿ' ಮತ್ತು 'ಕಾಪು' ಶಬ್ದಗಳು ಸೂಚಿಸುತ್ತವೆ. ಹೀಗೆ, ಪ್ರಭು ಕುಟುಂಬಗಳಿಗೆ ಭೂಪಾಲ ಎಂಬ ಬಿರುದನ್ನು ಹೆಸರಿನ ಮುಂದೆ ಸೇರಿಸುತ್ತಾರೆ. ಕೊಂಡವೀಡು ರಾಜ್ಯದ ವೇಮವಂಶೀಯರಿಗೆ ಭೂಪಾಲ ಬಿರುದು ಹಚ್ಚಿ ವೇಮಭೂಪಾಲ, ಕೃಷ್ಣರಾಮ ಭೂಪಾಲ ಎಂದು ವ್ಯವಹರಿಸುತ್ತಿದ್ದರು. ವೇಮನರ ಕುಟುಂಬದವರಾದ ಪೆದಕೋಮಟಿ ವೇಮ ದೊರೆಯು 'ಅಮರುಕ' ಕಾವ್ಯ ಕುರಿತು 'ಶೃಂಗಾರ ದೀಪಿಕಾ' ಎಂಬ

ಭಾಷ್ಯಗ್ರಂಥವನ್ನೂ ಮತ್ತು 'ಗಾಥಾ ಸಪ್ತ ಶತಿ' ಕಾವ್ಯ ಕುರಿತು 'ಸಪ್ತ ಶತಿ ಸಾರ' ಎಂಬ ಭಾಷ್ಯ ಗ್ರಂಥವನ್ನೂ ಸಂಸ್ಕೃತ ಭಾಷೆಯಲ್ಲಿ ರಚಿಸಿದ್ದಾನೆ. 'ಪಾರ್ವತೀ ಪರಿಣಯಂ' ನಾಟಕ ಕರ್ತೃ ವಾಮನ ಭಟ್ಟನೆಂಬ ಉದ್ದಾಮ ಸಂಸ್ಕೃತ ಪಂಡಿತನು 'ವೇಮ ಭೂಪಾಲೀಯಂ' ಎಂಬ ಪೆದಕೋಮಟಿ ವೇಮಭೂಪಾಲನ ಜೀವನ ಚರಿತ್ರೆ ಬರೆದಿದ್ದಾನೆ. ಅದೇ ರೀತಿ ಕುಮಾರಗಿರಿ ಭೂಪಾಲನು 'ವಸಂತ ರಾಜೀಯಂ' ಎಂಬ ಸಂಸ್ಕೃತ ಕಾವ್ಯವನ್ನು ರಚಿಸಿದನು. ಕುಮಾರಗಿರಿ ರೆಡ್ಡಿಯ ಮಾವನಾದ ಕಾಟಯ ವೇಮನು ಕಾಳಿದಾಸನ ಸಂಸ್ಕೃತ ನಾಟಕಗಳಿಗೆ ವ್ಯಾಖ್ಯೆ ಬರೆದನು. ಹೀಗೆ, ಕೊಂಡವೀಡು ರಾಜ್ಯದ ರೆಡ್ಡಿ ರಾಜರು ಸಂಸ್ಕೃತ ಮತ್ತು ತೆಲುಗು ಭಾಷೆಗಳ ಕೃತಿಕಾರರೂ, ಕೃತಿ ವಿಮರ್ಶಕರೂ ಆಗಿ ಖ್ಯಾತನಾಮರಾಗಿದ್ದಾರೆ. ಆದ್ದರಿಂದ ವೇಮನಯೋಗಿಗೂ ಸಹ ಸಂಸ್ಕೃತ ಆಂಧ್ರ ಭಾಷೆಗಳೆರಡರಲ್ಲಿಯೂ ಪ್ರಭುತ್ವವಿತ್ತೆಂಬ ಸಂಗತಿಯು ನಿರ್ವಿವಾದವಾಗಿದೆ. ಇದಲ್ಲದೆ ಎರ್ರಾ ಪ್ರಾಗ್ಗದ ಮತ್ತು ಶ್ರೀನಾಥ ಕವಿವರರೂ ಸಹ ಈ ರೆಡ್ಡಿರಾಜ್ಯದ ಆಶ್ರಯದಲ್ಲಿಯೇ ಇದ್ದರು.

ಸಂಸ್ಕೃತ ಕವಿಗಳಿಗೆ, ಆ ಭಾಷೆಯ ಅನುಷ್ಟುಪ ಛಂದಸ್ಸು, ತಮ್ಮ ವಿಶಾಲ ಭಾವಗಳನ್ನು ಲಲಿತ ಮತ್ತು ಸುಭಗ ಶೈಲಿಯಲ್ಲಿ ಅಭಿವ್ಯಕ್ತಪಡಿಸಲು ಉತ್ತಮ ಸಾಧನವಾಗಿರುವಂತೆ, ವೇಮನ ಯೋಗಿಗೆ ತೆಲುಗಿನ ಆಟವೆಲದಿ ಛಂದಸ್ಸು ತಮ್ಮ ಆಳವಾದ ವಿಚಾರಗಳನ್ನು, ಸಹಜ ಮತ್ತು ಸುಂದರ ಶೈಲಿಯಲ್ಲಿ ಅಭಿವ್ಯಕ್ತ ಪಡಿಸಲು ಸಹಾಯಕವಾಗಿದೆ. ಕೇವಲ ಗೂಢವಾದ ಪಾರಿಭಾಷಿಕ ಪದಗಳಲ್ಲಿದ್ದ ಉಪನಿಷತ್ ಸಾರರೂಪಿ ವೇದಾಂತ ಶಾಸ್ತ್ರವನ್ನು ವೇಮನಯೋಗಿ ಜನ ಸಾಮಾನ್ಯರ ಬಳಕೆಯ ಮಾತಿನಲ್ಲಿ ವ್ಯಕ್ತಪಡಿಸಿ, ಎಲ್ಲರಿಗೂ ತಿಳಿಯುವಂತೆ ಮಾಡಿದರು. ವೇಮನ ಕವಿಯು ಅಲ್ಲಲ್ಲಿ 'ಮಾನಿನೀ ಮನೋಜ ಮದಿರಾನಂದೈಕ ಲೋಲುಡು' 'ಊರ್ಧ್ವಲೋಕ ಸುಖಮು', 'ಅಭಿಜಾತ್ಯಮದಮು', 'ವಿಶ್ವದಾಭಿರಾಮ' ಇತ್ಯಾದಿ ಸಂಸ್ಕೃತ ಪದ ಪ್ರಯೋಗ ಮಾಡಿದ್ದಾರೆ. ಆದರೂ ಸಹ, ಸಂಸ್ಕೃತದ ಭಗವದ್ಗೀತೆಯಂತೆ ಆಂಧ್ರ ಭಾಷೆಯಲ್ಲಿ ವೇಮನ ಪದ್ಯಗಳು ಸರ್ವರಿಗೂ ಸುಬೋಧೆಯ ಅಣಿಮುತ್ತುಗಳಾಗಿ ರಾರಾಜಿಸುತ್ತವೆ. ಇದಲ್ಲದೆ ಅಲ್ಲಲ್ಲಿ ಜ-ಜ್ಯ, ಅ-ಪ್ರಾಣ, ಋಗ್ಯಜ-ಯೋಗ್ಯ ಇತ್ಯಾದಿ ಲಾಕ್ಷಣಿಕ ಯತಿವಿಶೇಷಗಳೂ ಉಂಟು. ಇತರ ತೆಲುಗು ಲೇಖಕರು ಸಂಸ್ಕೃತದ ಗೃಹ ಮತ್ತು ಗೇಹ ಪದಗಳ ತೆಲುಗು ತದ್ಭವವೆಂದು 'ಗೀಮು' ಪದ ಬಳಸಿದರೆ, ವೇಮನರು ಗುರಮು ಪದ ಬಳಸಿದ್ದಾರೆ. ಇವೇ ಮುಂತಾದ ವಿಷಯಗಳು ವಾಚಕರಿಗೆ ಎಲ್ಲೆಡೆ ಕಂಡುಬರುತ್ತವೆ.

ವೇಮನರೆಂಬ ಮಹಾಯೋಗಿ, ಎಲ್ಲಿ ಜನಿಸಿದರು? ಯಾವ ಭಾಷಾ ಶೈಲಿಯಲ್ಲಿ ಗೀತೆಗಳನ್ನು ರಚಿಸಿದರು? ಇತ್ಯಾದಿ ವಿವಾದಗಳಲ್ಲಿ ನಾವು ಅಸ್ಥೆ ಹೊಂದಿಲ್ಲ. ಆದರೆ ಆ ಪದ್ಯ ಸಾರವನ್ನು ಆಸ್ವಾದಿಸಲು ಉತ್ಸುಕರಿದ್ದೇವೆ. ವೇಮನರು, ಆಶು ಕವಿಗಳಿದ್ದರು. ಆಯಾ ಪರಿಸ್ಥಿತಿಗೆ ಅನುಗುಣವಾಗಿ, ಈಗ ಗ್ರಂಥ ರೂಪದಲ್ಲಿರುವ ಪದ್ಯಗಳನ್ನು ಹಾಡಿದರು. ಲೇಖನ ಸೌಕರ್ಯಗಳಿಲ್ಲದ ಅಂದಿನ ಕಾಲದಲ್ಲಿ, ಕೇವಲ ಭಾವ ಕುಸುಮ ಸುರಭಿಯನ್ನು

ಆಫ್ಘಾಣಿಸಬಯಸಿದ ಅವರ ಶಿಷ್ಯರು ಎನಿತೂ ದೋಷವಿಲ್ಲದೆ ಹೇಗೆ ನೆನಪಿನಲ್ಲಿ ಉಳಿಸಿಕೊಳ್ಳಬಲ್ಲರು? ಎಂಬುದು ವಿಚಾರಣೀಯವಾಗಿದೆ. ಎಷ್ಟೋ ಜನರು ಈ ನಗ್ನ ಸತ್ಯ ಕುರಿತು ವಿಚಾರಿಸದೆ 'ವೇಮನರ ಭಾವ ಭಾಷೆಗಳು ಸಮೀಚೀನವಿಲ್ಲ' ಎಂದು ಅವರನ್ನು ವ್ಯರ್ಥವಾಗಿ ನಿಂದಿಸುವುದರಲ್ಲಿ ತೃಪ್ತಿ ಪಟ್ಟುಕೊಳ್ಳುತ್ತಿರುವುದು ಕಂಡುಬರುತ್ತದೆ. ಇದೆಲ್ಲವೂ 'ನಾನು' 'ನನ್ನದು' ಎಂಬುದನ್ನು ಬೆಂಬತ್ತುವುದೇ ಆಗಿದೆ. ಅಲ್ಲಿಯಾದರೋ, ನನ್ನದು ಎನ್ನುವುದೆಲ್ಲ ಕೇವಲ ಅಸತ್ಕಾಗಿದೆ, ಜಡವಾಗಿದೆ, ದುಃಖಾತ್ಮಕವಾಗಿದೆ; ಶವ ರೂಪಿಯಾಗಿದೆ. ಅಹಂ ಎಂಬೀ ವಸ್ತುವು ಸತ್ಯ, ಜ್ಞಾನ ಮತ್ತು ಅನಂತ ರೂಪಾತ್ಮಕವಾಗಿದೆ. ಶಿವ ರೂಪವಾಗಿದೆ. ಹೀಗೆ ವೇಮನ ಯೋಗಿಯು ಪುನಃ ಪುನಃ ತಮ್ಮ ಪದ್ಯಗಳಲ್ಲಿ ಪ್ರತಿಪಾದಿಸಿದ್ದಾರೆ. ಕೇವಲ ಮಂಗಳ ಪದದ ಪರ್ಯಾಯ ಪದವೆಂದು ಶಿವ ಶಬ್ದವನ್ನು ಅವರು ಬಳಸಿದ್ದರೂ ಸಹ, ಕೆಲವರು, ಜಾತಿ ಮತಗಳನ್ನು ಮೀರಿ ನಿಂತ ವೇಮನಯೋಗಿಯನ್ನು ಶೈವ ಮತಸ್ಥ ಎಂದು ತಿಳಿದು ನಿಂದಿಸುತ್ತಿದ್ದಾರೆ. ಯಾವ ಫಲಾಪೇಕ್ಷೆ ಇಲ್ಲದೆ, ಪರಮ ಸಂತುಷ್ಟಿಯನ್ನೇ ಉದ್ದೇಶವಾಗಿರಿಸಿಕೊಂಡು, ಅನ್ಯರ ನಿಂದಾಸ್ತುತಿಗಳತ್ತ ಕಿಂಚಿತ್ ಗಮನವೀಯದೆ ಅಸ್ಥಿರ ಅಸೌಖ್ಯಗಳನ್ನು ದಾಟಿ, ಶಾಶ್ವತವಾದ ತನ್ನೊಳಗಿನ ಸೌಖ್ಯವನ್ನೇ ಇಚ್ಛಿಸುತ್ತ, ಆಧ್ಯಾತ್ಮಿಕ ಗೀತೆಗಳನ್ನು ಹಾಡುವ ಕವಿ ಕೋಕಿಲನಿಗೆ ಲೋಕದ ದೂಷಣಗಳಿಂದ ಆಗುವ ಹಾನಿಯೇನು? ಭೂಷಣಗಳಿಂದ ಬರುವ ಲಾಭವೇನು?

ಆಂಧ್ರ ದೇಶದಲ್ಲಿ, ಸಂಸ್ಕೃತ ಮತ್ತು ಆಂಧ್ರ ಭಾಷೆಗಳಲ್ಲಿ ಪರಿಣತಿ ಪಡೆದು, ಭಕ್ತಿ, ಜ್ಞಾನಗಳಲ್ಲಿ ಪ್ರಶಸ್ತ ಕವಿಶ್ರೇಷ್ಠರಾಗಿ ಸ್ವಯಂ ತೀರ್ಣಃ ಪರಾಂಸ್ತಾರಯೇ ಅಂದರೆ ತಾವು ದಾಟಿದವರು ಪರರನ್ನು ದಾಟಿಸಬಲ್ಲರು, ಎಂಬ ಉಕ್ತಿಯಂತೆ ಲೋಕದಲ್ಲಿ ಸೂಕ್ತಿ ಬೀಜಗಳನ್ನು, ಹರಡಿದ ತ್ಯಾಗಯ್ಯ, ವೇಮನರು ಸಕಲರಿಗಿಂತ ಅಧಿಕ ಚಿರಸ್ಮರಣೀಯರಾಗಿದ್ದಾರೆ. ತ್ಯಾಗಯ್ಯನು ನಾರದಾಂಶ ಸಂಭೂತನೆಂದೂ, ವೇಮನ ಸನತ್ಕುಮಾರ ಸಂಭೂತರೆಂದೂ ಪ್ರತೀತಿ ಇದೆ. ತ್ಯಾಗಯ್ಯ, ಮಹಾತ್ಮನು ಕೇವಲ ಗಾನ ಕಲಾರಸಿಕರಿಗಾಗಿ, ಗಾಯಕ ಜನರಿಗಾಗಿ ರಚಿಸಿದ ಪದ್ಯ ಸಾಹಿತ್ಯದಲ್ಲಿ ಅನೇಕ ಅಪಭ್ರಂಶಗಳು ಕಾಣಬರುತ್ತಿವೆ. ಆಧುನಿಕ ಸಂಸ್ಕೃತ-ಆಂಧ್ರ ಭಾಷಾ ಕೋವಿದರು ಆ ದೋಷಗಳನ್ನು ನಿವಾರಿಸಿ, ಸಕಲ ಉಪನಿಷತ್ಸಾರವೆಂದು ಕೊಂಡಾಡಿದ್ದಾರೆ. ಲಭ್ಯ ಪದಗಳ ಸಂಖ್ಯೆಯೂ ಸಹ ಹದಿನಾರು ಸಹಸ್ರ ತಲುಪಿದೆ. ವೇಮನ ಯೋಗಿಗಳ ಸಾಹಿತ್ಯವೂ ಸಹ, ಅದೇ ರೀತಿ, ದೋಷ ಪೂರಿತವಾಗಿದೆಯಷ್ಟೆ. ಕ್ರಿ.ಶ. ಹದಿನೆಂಟು ನೂರಾ ಇಪ್ಪತ್ತೈದರ ಸುಮಾರಿಗೆ ಮಹಾ ಜನರ ಯತ್ನದಿಂದಾಗಿ, ವೇಮನರೆಂಬ ಮಹಾಯೋಗಿ, ಕವಿ, ಪಂಡಿತರೆಂದು ಜಗತ್ತಿಗೆ ಪರಿಚಿತರಾದರು. ಶ್ರೇಯುತರಾದ ಸಿ.ಪಿ.ಬ್ರೌನ, ಕ್ಯಾಂಬೆಲ್, ಮ್ಯಾಕ್ಲಿನ್, ತ್ಯಾಗರಾಯ ಶೆಟ್ಟಿ ಕಂಪನಿ, ವಾವಿಳ್ಳ ಕಂಪನಿ, ಪಂಚಾಗ್ನುಲ ಆದಿನಾರಾಯಣ ಶಾಸ್ತ್ರೀ, ವೆಂಕಟ ಪಾರ್ವತೀಶ್ವರ ಕವಿಗಳು, ಶೇಷಾದ್ರಿ ರಮಣ ಕವಿಗಳು, ವರದಾಚಾರ್ಯರು, ವೆಂಗೂರಿ ಸುಬ್ಬರಾವ, ಕಟ್ಟಮಂಚಿ ರಾಮಲಿಂಗರೆಡ್ಡಿ, ಕೂರ್ಮಾ ವೆಂಕಟರೆಡ್ಡಿ ನಾಯ್ಡು, ರಘುಪತಿ ವೆಂಕಟ ರತ್ನಂ ನಾಯ್ಡು, ರಾಳ್ಳಪಲ್ಲಿ ಅನಂತ ಕೃಷ್ಣ ಶರ್ಮ ಇತ್ಯಾದಿ ಆಂಧ್ರ ಭಾಷಾಭಿಮಾನಿ ಮಹಾನುಭಾವರ ಮಹಾ ಪ್ರಯತ್ನಗಳಿಂದ ವೇಮನ ಕವಿಯ ಸಾಹಿತ್ಯದ ಮಹಿಮೆಯು ನಮ್ಮ ದೃಷ್ಟಿಯನ್ನು

ಜಾಗ್ರತಗೊಳಿಸುವಂತಾಗಿದೆ. ಐದು ಸಾವಿರ ವೇಮನ ಪದ್ಯಗಳು ಲಭ್ಯವಾಗಿವೆ.

ಲೋಕ ಭಾಷೆಯಲ್ಲಿ ಅಭಿವ್ಯಕ್ತವಾದ ಮಹಾತ್ಮರ ವಾಕ್ಯಗಳನ್ನು ಸಂಸ್ಕೃತ ಪದ್ಯಗಳಲ್ಲಿ ಒಂದೊಂದು ಸಾವಿರ ಪದ್ಯಗಳನ್ನು ಸಂಸ್ಕರಿಸಿ ಸಂಸ್ಕೃತ ಭಾಷೆಯ ಅನುಷ್ಟುಪ ಛಂದಸ್ಸಿನಲ್ಲಿ ಪ್ರಕಟಪಡಿಸುವ ಸಂಕಲ್ಪವು ನಮ್ಮಲ್ಲಿ ಮೂಡಿತು. ಆ ಮೇರೆಗೆ ವೇಮಗೀತೆಗಳ ಪ್ರಥಮ ಸಹಸ್ರ ಪದ್ಯಗಳನ್ನು ಪ್ರಕಟಿಸಿ, ಮಹಾ ಜನರೆದುರು ಅರ್ಪಿಸುತ್ತಿದ್ದೇವೆ. ಈ ಪ್ರಥಮ ಸಹಸ್ರ ಪದ್ಯಗಳನ್ನು ಶ್ರೀವಾವಿಳ್ಲ ಮುದ್ರಣಾಲಯದಿಂದ ಪ್ರಕಟವಾದ ಗ್ರಂಥದಿಂದ ಆಯ್ದುಕೊಳ್ಳಲಾಗಿದೆ. ಸಹೃದಯ ವಾಚಕರು ಇಲ್ಲಿಯ ಗುಣದೋಷಗಳನ್ನು ದಯವಿಟ್ಟು ಎತ್ತಿ ತೋರಿಸಿದರೆ, ದ್ವಿತೀಯ ಮುದ್ರಣ ಕಾಲಕ್ಕೆ ಇಲ್ಲವೆ ದ್ವಿತೀಯ ಸಹಸ್ರ ಪದ್ಯಗಳ ಅನುವಾದ ಕಾಲಕ್ಕೆ ಆ ಸೂಚನೆಗಳನ್ನು ಗಮನಿಸಿ ತಿದ್ದಿಕೊಳ್ಳಬಹುದಾಗಿದೆ.

ಹದಿನೈದನೆಯ ಶತಾಬ್ದಿಯ ನಂತರದ 'ಮಲ್ಲಣ ಚರಿತ್ರದ' ಕರ್ತೃ ಎಡಪತಿ ಎರ್ರಾ ಪಾಗ್ಗಡ, 'ಏಕಾಮ್ರ ಲಿಂಗ ಶತಕ, ಕವಿ ಲಕ್ಷ್ಮಣ, 'ತೋಭ್ಯ ಚರಿತ' ಕರ್ತೃವಾದ ಪಿಂಗಳಿ ಎರ್ರನಾರ್ಯ, 'ಅನ್ಯವಾದ ಕೋಲಾಹಲ' ಗ್ರಂಥಕರ್ತೃವಾದ ಶಿವಯೋಗಿಂದ್ರ, 'ನಾಗರ ಖಂಡ' ರಚಿಸಿದ ತುರಗಾ ರಾಮಕವಿ ಮುಂತಾದ ಅನೇಕ ಆಧ್ಯಾತ್ಮಿಕ ಕವಿಗಳು ತಮ್ಮ ತಮ್ಮ ಗ್ರಂಥಗಳಲ್ಲಿ ವೇಮನ ಕವಿಗಳನ್ನು ಸ್ತುತಿಸಿದ್ದಾರೆ. ಆದರೆ ಶೃಂಗಾರ ಪ್ರಬಂಧ ಕವಿಗಳು ಮಾತ್ರ ಹಾಗೆ ಮಾಡಿಲ್ಲ.

ಶೃಂಗಾರ ಕವಿಗಳು ಪಾಮರ ಜನರಿಗೆ ಹಿಡಿಸುವ ಶೃಂಗಾರ ರಸ ವರ್ಣನೆಯನ್ನೇ ಮಾಡಿ, ಆ ರಸದ ಪಿಪಾಸುಗಳಾದ ಪ್ರಭುಗಳನ್ನೂ, ಪ್ರಜರನ್ನೂ ಆಕರ್ಷಿಸಿ ಹಣ ಸೆಳೆದುಕೊಂಡು ಭೋಗ ಲಂಪಟರಾಗಿ ಕಾಲ ಕಳೆಯುತ್ತಾರೆ. ಆಧ್ಯಾತ್ಮಿಕ ಕವಿಗಳಾದರೋ, ನಿತ್ಯ ಯಾವುದು? ಅನಿತ್ಯವಾವುದು? ಸತ್ಯವಾವುದು? ಅಸತ್ಯವಾವುದು? ಎಂದು ವಿಮರ್ಶಿಸಿ ಅರಿತು ಕೊಂಡು, ಆತ್ಮರತರಾಗಿ ಲೋಕದಲ್ಲಿ ಸತ್ ರೂಪವನ್ನೂ, ನಿತ್ಯ ರೂಪವನ್ನೂ ಪ್ರಕಟ ಪಡಿಸುತ್ತಾರೆ. ಆದರೆ ಅವರು ಪ್ರಭುಗಳಿಂದಾಗಲಿ ಇಲ್ಲವೆ ಪ್ರಜಗಳಿಂದಾಗಲಿ ಧನ ಭೋಗಾದಿಗಳನ್ನು ಆಶಿಸುವದಿಲ್ಲ. ಹೀಗಾಗಿ, ಆಧ್ಯಾತ್ಮಿಕ ಕವಿಗಳನ್ನು ಗುರುತಿಸಿ ಅರಿತು ಆದರಿಸುವ ಪಾಜ್ಞ ಜನರು ತೀರ ವಿರಳ. ಅದಕ್ಕೆ ಇಲ್ಲೊಂದು ನಿದರ್ಶನವನ್ನು ಕಾಣಬಹುದು. ಆಧ್ಯಾತ್ಮಿಕ ಕವಿಗಳು, ಈ ಶರೀರದಲ್ಲಿ ಕಣ್ಣು, ಕಿವಿ, ಮೂಗು, ಎದೆ, ಕಾಲು, ಕೈ ಇತ್ಯಾದಿ ಅವಯವಗಳೆಲ್ಲವೂ ಮಾಂಸಾದಿ ವಿಕಾರಗಳೇ ಆಗಿದ್ದು, ರಕ್ತಪೂರಿತವಾಗಿ, ಮಜ್ಜ, ಮೇದಸ್ಸು, ಅಸ್ಥಿ, ಶ್ಲೇಷ್ಮ ಇತ್ಯಾದಿ ಅಸಹ್ಯ ವಸ್ತುಗಳಿಂದ ತುಂಬಿದೆ. ಆದ್ದರಿಂದ ನೀನು ಸ್ತ್ರೀಲೋಲುಪನಾಗಬೇಡ ಎಂದು ವಿರಕ್ತಿ ಮಾರ್ಗವನ್ನು ಬೋಧಿಸುತ್ತಾರೆ. ಅದೇ ಕಾಲಕ್ಕೆ ಶೃಂಗಾರ ಕವಿಗಳು ಸ್ತ್ರೀಯ ಕಣ್ಣುಗಳು ಕಮಲ ಪತ್ರದಂತಿವೆ, ಕಂಠವು ಶಂಖದಂತೆ, ನಡೆಯು ಹಂಸದಂತೆ, ನುಡಿಗಳು ಸುರಿವ ಅಮೃತ ಸ್ರೋತದಂತೆ, ಅಧರದಿಂದ ಹೊರಸೂಸುವ ಲಾಲಾಜಲವು ಅಮೃತದಂತೆ, ಅವಳೇ ನಿನ್ನ ಆರಾಧ್ಯ ದೇವತೆ ಎಂದು ಮುಂತಾಗಿ ವರ್ಣಿಸಿ

ಮೋಹಾಬ್ಧಿಯಲ್ಲಿ ಕೆಡವಿ, ಪುರುಷನನ್ನು ಪುನಃ ಪುನಃ ಮೋಹದಲ್ಲಿ ಮುಳುಗಿಸುತ್ತಾರೆ. ತಾವು ಸಹ ಅಜ್ಞಾನದಿಂದ ಪ್ರೇರಿತರಾಗಿ ಆ ಸ್ತ್ರೀಯರಿಗೆ ಬಹಳ ಹಣ ನೀಡಿ, ಸ್ವಂತ ಅಧೋಗತಿಯನ್ನು ಹೊಂದುತ್ತಾರೆ. ಕುರುಡನು ಕುರುಡನನ್ನು ಆಶ್ರಯಿಸಿ ಕೆಳಗೆ ಬೀಳನೇನು? ಗರ ಬಡಿದ ಮನುಷ್ಯನಿಗೆ ಕಹಿ ಬೇವಿನ ರಸವೇ ಮಧುರವೆನಿಸುತ್ತದೆ. ಅದೇ ರೀತಿ, ಮೋಹ ಗ್ರಸ್ತನಾದವನಿಗೆ ತುಟಿಯ ಜೊಲ್ಲು ಅಮೃತವೆನಿಸದೇನು? ಸ್ತ್ರೀಯ ಅವಯವಗಳಿಗೆ ಪದ್ಮ, ಪತ್ರ, ಶಂಖ ಇತ್ಯಾದಿ ಉಪಮಾನ ವಸ್ತುಗಳನ್ನು ಆರೋಪಿಸಿ, ಸ್ತ್ರೀ ಮೋಹದಲ್ಲಿ ಹೆಚ್ಚು ಹೆಚ್ಚು ಆಸಕ್ತರಾಗುತ್ತಾರೆ. ಆ ರಮ್ಯವಾದ ವಸ್ತುಗಳಲ್ಲಿ, ಪುನಃ ಎಷ್ಟು ಮಾತ್ರವೂ ನಿತ್ಯಾನಂದ ಪಡೆಯಲಾರರು. ಇದಲ್ಲದೆ ತಮ್ಮ ವ್ಯಾಮೋಹದಿಂದ ಕೇವಲ ಸ್ತ್ರೀಪುರುಷ ವ್ಯವಸ್ಥೆಯಲ್ಲಿ ಅತಿ ಸಂತೃಪ್ತಿ ಪಡೆಯದೆ, ಸಮುದ್ರ, ಪರ್ವತ, ಮೇಘ, ಚಂದ್ರ, ಗುರು, ಬುಧ ಇತ್ಯಾದಿಗಳಿಗೆ ಪುಂಸತ್ವವನ್ನೂ ಮತ್ತು ನದಿ, ಭೂಮಿ, ತಾರೆ ಇತ್ಯಾದಿಗಳಿಗೆ ಸ್ತ್ರೀತ್ವವನ್ನೂ ಆರೋಪಿಸಿ, ಕಥೆಗಳನ್ನು ಹೆಣೆದು ಸ್ವಯಂ ಭ್ರಾಂತರಾಗಿ ಲೋಗರನ್ನೂ ಭ್ರಮೆಗೊಳಿಸುತ್ತಾರೆ. ಪ್ರೇಮದಲ್ಲಿಯೇ ಸುಖವಿದೆಯೆಂದು ಹೇಳುತ್ತಾರೆ. ಆದರೆ, ಆ ಪ್ರೇಮವನ್ನು ಸ್ತ್ರೀಯರ ಶೃಂಗಾರ ಕ್ರೀಡೆಗಳಿಗೆ ಮಾತ್ರ ಪರಿಮಿತಗೊಳಿಸುತ್ತಾರೆ. ತಾಯಿಯ ಪ್ರೇಮ, ವಿಶ್ವ ಪ್ರೇಮ ಇತ್ಯಾದಿ ಸಹಜ ನಿಷ್ಕಲಂಕ ಪ್ರೇಮವು ಅವರ ದೃಷ್ಟಿ ಪಥದಲ್ಲಿ ಬರುವುದೇ ಇಲ್ಲ.

ವಾಸ್ತವದಲ್ಲಿ ಪ್ರಭುಗಳು ಮತ್ತು ಪಂಡಿತರು ಮಾತ್ರ ಲೋಕೋದ್ಧಾರ ಮಾಡುವಲ್ಲಿ ಸಮರ್ಥರಾಗಿದ್ದಾರೆ. ಒಂದು ವೇಳೆ, ಇವರೇ ಪತಿತರಾದರೆ, ಆಗ ಲೋಕದ ಅಧೋಗತಿಯ ಹೊರತು ಬೇರಿನ್ನೇನು ಆದೀತು? ಬುದ್ಧ ಮತ್ತು ಸಾಮ್ರಾಟ ಅಶೋಕ ಇತ್ಯಾದಿ ಇಬ್ಬರು ಮೂವರನ್ನು ಬಿಟ್ಟರೆ, ಬಹುತೇಕ ಪ್ರಭುಗಳು ದುರ್ವ್ಯಸನ-ಲೋಲುಪರೆಂಬ ಮಾತು ಸತ್ಯವಲ್ಲದೆ ಬೇರಿಲ್ಲ. ಪಾಶ್ಚಾತ್ಯರು ಭೌತಿಕ ವಿಜ್ಞಾನದಲ್ಲಿ ಮುಂದಿದ್ದಾರೆ; ಭಾರತೀಯ ಪಂಡಿತರು ತತ್ತ್ವಶಾಸ್ತ್ರದಲ್ಲಿ ಮುಂದಿದ್ದಾರೆ; ಎಂಬ ಮಾತನ್ನು, ಆಧ್ಯಾತ್ಮಿಕ ಕವಿಗಳನ್ನು ಹಿಂದಿರಿಸಿ, ಕೇವಲ ಶೃಂಗಾರ ಕವಿಗಳಾಗಲಿ ಇಲ್ಲವೆ ಪ್ರಭಾವಿಗಳೆಂದು ತಿಳಿದುಕೊಂಡ ಇತರ ಕವಿಗಳಾಗಲಿ, ಹೇಗೆ ಸಮರ್ಥಿಸಿಕೊಳ್ಳಬಲ್ಲರು?

ಆಧ್ಯಾತ್ಮಿಕ ಕವಿಗಳು ರಾಜಾಶ್ರಯವನ್ನು ಪಡೆಯಬಯಸದೆ, ಕೇವಲ ದೈವ ಬಲದಿಂದ ಪ್ರವೃತ್ತಿ ವಿರುದ್ಧ ನಡೆದು ಆತ್ಮದಿಂದ ಆತ್ಮನಲ್ಲಿಯೇ ರಮಿಸುತ್ತಾರೆ. ಸಾಮಾನ್ಯ ಲೌಕಿಕ ಜ್ಞಾನ ಹೊಂದಿದ ಪ್ರಭುಗಳಾಗಲಿ ಇಲ್ಲವೆ ಇತರ ಜನಸಾಮಾನ್ಯರಾಗಲಿ ಅವರನ್ನು ಹೇಗೆ ಆದರಿಸಬಲ್ಲರು? ಪ್ರಭುಗಳ ಮನೋಲಹರಿಯಂತೆ ಕೃತಿ ರಚಿಸುವ ಕವಿಗಳು ಅನೇಕ ಅಗ್ರಹಾರ ಇತ್ಯಾದಿ ದಾನ ಪಡೆದು, ಪ್ರಭುವಿನಿಂದ ಸತ್ಕಾರಕ್ಕೂ ಪಾತ್ರರಾಗುತ್ತಾರೆ. ಲೋಕ ಪರಿಪಾಟವೇ ಈ ರೀತಿ.

ವೇಮನ ಕವಿ ತಮ್ಮ ಕವಿತೆಗಳಲ್ಲಿ ಸಹಜ ಉಪಮಾಲಂಕಾರ ಇತ್ಯಾದಿ ಚಮತ್ಕೃತಿಗಳನ್ನು ತೋರಿದ್ದಾರೆ. ಆದರೂ ಸಹ, ಸಿ.ಪಿ.ಬ್ರೌನರಂಥ ವಿದ್ವಾಂಸರು ಆಂಗ್ಲ ಮತ್ತಿತರ ಭಾಷೆಗಳಲ್ಲಿ ಅನುವಾದಿಸಿದ ಬಳಿಕವೇ ವೇಮನ ಕವಿ, ತಮ್ಮ ಸಾಹಿತ್ಯ

ಸಮೇತ, ವಿದ್ಯಾ ಸಂಪನ್ನರ ದೃಷ್ಟಿ ಪಥದಲ್ಲಿ ಮೂಡಿ ಬಂದರು. ಇಲ್ಲವಾದರೆ, ವೇಮನ ಸಾಹಿತ್ಯದ ಗತಿ ಏನಾಗುತ್ತಿತ್ತೆಂಬುದನ್ನು ಹೇಳಲಾಸಲ್ಲ.

ವೇಮನ ಯೋಗಿ ತಾವೇ ವಕ್ತಾರರಾಗಿ, ತಾವೇ ಶ್ರೋತೃವಾಗಿ ಸರ್ವಂ ಖಲ್ವಿದಂ ಬ್ರಹ್ಮ ಎಂಬ ಸೂತ್ರಾನುಸಾರ ಜ್ಞಾನವನ್ನು ಲೋಕದಲ್ಲಿ ಎಲ್ಲೆಡೆ ಪ್ರಚುರ ಪಡಿಸಿದರು. ಆದ್ದರಿಂದಲೇ ವೇಮನ ಪದ್ಯಗಳು ಆತ್ಮಬೋಧಾಮೃತ ರೂಪಿಯಾಗಿ, ಸಕಲ ಉಪನಿಷತ್ತುಗಳ ಸಾರಭೂತವಾಗಿ, ಸದ್ಯದಲ್ಲಿಯೇ ಮೋಕ್ಷಪ್ರದವಾಗಿ ಬಳಕೆಯಲ್ಲಿವೆ.

ಇದಲ್ಲದೆ, ಪ್ರಕೃತಿ ಪರಿಶೀಲನ ಶಕ್ತಿ, ಸೃಷ್ಟಿ ತತ್ತ್ವ ವಿಜ್ಞಾನ, ಶಬ್ದ ಶಾಸ್ತ್ರ ಪರಿಜ್ಞಾನ, ಭಾವ ಸಂಶುದ್ಧಿ, ಕಲ್ಪನಾ ಪಟುತ್ವ, ವರ್ಣನಾ ಚಾತುರ್ಯ, ಉಪಮಾನ ಜೋಡಣೆಯ ಪಟುತ್ವ, ಪ್ರಭು, ಮಿತ್ರ, ಕಾಂತಾಸಮ್ಮಿತಿಗಳ ಬೋಧನೆ, ವಾಸ್ತವಿಕ ಸ್ಥಿತಿಗ್ರಹಣ, ನುಡಿಯ ಸುಭಗತೆ, ಲೋಕ ಕಲ್ಯಾಣದ ಆಶಯಗಳೇ ಮೊದಲಾದ, ಕವಿ ಜನರನ್ನು ಆಶ್ರಯಿಸಿದ ಗುಣಗಳು ವೇಮನ ಕವಿ ಪುಂಗವರಲ್ಲಿ ಬೆಳಗುತ್ತವೆ.

ಹಿಂದೊಮ್ಮೆ ವಿಶ್ವಮಾನವ ಹೃದಯ ಕುಹರದಲ್ಲಿ ವೇದಗಳ ಆನಂದ ಚಂದ್ರಿಕೆಯು ತುಂಬಿತ್ತು. ಅದರ ಪ್ರಭಾವವು ಹರಡಿತ್ತು. ಆಗ ಆರ್ಯರ ಪವಿತ್ರ ಧರ್ಮ ವಿಜಯವು ಪ್ರತಿಷ್ಠಿತವಾಗಿತ್ತು. ಅದರ ಪ್ರಭಾವವು ಕ್ರಮೇಣ ಕಾಲ ಗರ್ಭದಲ್ಲಿ ಹುದುಗಿ ಹೋಯಿತು. ಕೇವಲ ಪಾಮರರು ಗ್ರಹಿಸಬಹುದಾದ, ಪೌರಾಣಿಕ ಆಚಾರಗಳೇ ಎಲ್ಲೆಡೆಗೆ ವ್ಯಾಪಕವಾಗಿ ಹಬ್ಬಿದವು. ಆದ್ದರಿಂದ, ಆರ್ಯರ ಆಧ್ಯಾತ್ಮಿಕ ಶಕ್ತಿಯೂ ಮತ್ತು ಪುರುಷಾರ್ಥ ಪ್ರಾವೀಣ್ಯವೂ ಸಹ ನಷ್ಟವಾಗಿ ಹೋದವು. ತತ್ತ್ವಜ್ಞಾನವು ನಾಶವಾಗಿ ಮಿಥ್ಯಾಜ್ಞಾನವೇ ಬೆಳೆಯಿತು. ಪರಸ್ಪರರಲ್ಲಿ ಸಹಕಾರ ಭಾವವಿಲ್ಲವಾಗಿ, ಮೇಲು ಕೀಳಿನ ಕಲ್ಪನೆಯು ಲೋಕದಲ್ಲಿ ಹಬ್ಬಿತು. ಹಿಂದೊಮ್ಮೆ ಪ್ರಪಂಚಕ್ಕೆ ಆತ್ಮತಂತ್ರ ಅರ್ಥಾತ್ ಸ್ವಾತಂತ್ರ್ಯ ಸಂದೇಶ ಬೀರಿದ ಭಾರತೀಯ ಆರ್ಯ ಜಾತಿಯೇ, ಭಾವ ದಾಸ್ಯವಶವಾಗಿ, ನಿರ್ವೀರ್ಯವಾಯಿತು. ಎಲ್ಲೆಡೆ ಪಸರಿಸಿದ ಕಂದಾಚಾರಗಳು ಮತ್ತು ವಿವೇಚನಾ ರಹಿತ ಸೇವಾವೃತ್ತಿಗಳು ಆರ್ಯ ಜಾತಿಯನ್ನು ಕೃಪಣರನ್ನಾಗಿಸಿತು. ಮತ್ತು ಅದು ಅಪಯಶದ ರೊಜ್ಜಿನಲ್ಲಿ ಬಿದ್ದು ಸಿಲುಕಿತು. ವಾಸ್ತವಿಕ ದಿವ್ಯ ಜ್ಞಾನದಿಂದ ಬೆಳಗುವ ವರೆಗೆ ಆರ್ಯ ಜಾತಿಯು ದಾಸ್ಯದಿಂದ ಬಿಡುಗಡೆ ಹೊಂದಲಾರದು. ತತ್ತ್ವಜ್ಞಾನವೊಂದೇ ಪಾರತಂತ್ರ್ಯದ ಸಾಗರವನ್ನು ಈಜಿ ಹೊರಬರುವ ನೌಕೆಯಾಗಿದೆ. ಅದನ್ನೇ ಪ್ರಜೆಗಳು ತಮ್ಮ ಅವಲಂಬನೆಯಾಗಿ ಮಾಡಿಕೊಳ್ಳಬೇಕು.

ಈಗ, ವೇಮನ ಯೋಗಿಯ ತತ್ತ್ವ ಶಾಸ್ತ್ರದಲ್ಲಿ, ಮನಶುದ್ಧಿ ವಿಹೀನವಾದ ಮೂರ್ತಿಪೂಜೆ, ತೀರ್ಥಯಾತ್ರೆ, ಶ್ರಾದ್ಧ ಇತ್ಯಾದಿ ಆಚರಣೆಗಳಿಗೆ ಸ್ಥಾನವಿಲ್ಲವೆಂದು ಕಾಣುತ್ತದೆ. ದೈವೋಪಾಸನೆ ಇಲ್ಲದೆ, ಸತ್ಕರ್ಮದ ಆಚರಣೆ ಇಲ್ಲದೆ, ಸಾಕ್ಷಾತ್ ದೇವರೇ ಅವತರಿಸಿ ಬಂದು ಪ್ರಜೆಗಳ ಕಷ್ಟನಷ್ಟಗಳನ್ನು ತೊಡೆಯುವನೆಂಬ ಅಲಸಿಗಳ ಮಿಥ್ಯಾವಾದಕ್ಕೂ ಇಲ್ಲಿ ಇಂಬಿಲ್ಲ. ಸತ್ಯ, ಶಾಂತಿ, ಅಹಿಂಸೆ, ದಯೆ, ಶೌಚ, ದೈವ

ಚಿಂತನ ಇತ್ಯಾದಿ ಸದ್ಗುಣಗಳನ್ನು ನಿತ್ಯ ಆಚರಿಸಿದಾಗ ಯಾವ ಸ್ಥಾನವನ್ನು ಕಲ್ಪಿಸಲು ಸಾಧ್ಯವೋ ಅದೇ ಅವರ ಸಾರ್ಥಕತೆಯಾಗುವುದೆಂಬುದು ಇಲ್ಲಿ ಪರಮ ಲಕ್ಷ್ಯವಾಗಿದೆ. ನಿಖಿಲ ಪ್ರಾಣಿಕೋಟಿಗಳಲ್ಲಿ ಮಾನವನೋರ್ವನೇ ಸತ್ಯ ಮತ್ತು ಅಸತ್ಯಗಳ ವಸ್ತು ತತ್ತ್ವವನ್ನು ವಿವೇಚಿಸಿ ಅರಿಯುವ ಬುದ್ಧಿಯನ್ನು ಹೊಂದಿದ್ದಾನೆ. ತನ್ನ ಕಷ್ಟ ಕಾಲದಲ್ಲಿ ಸಹಾಯ ಮಾಡುವ ವಿಶ್ವಕರ್ಮನಾದ, ವಿಶ್ವಸಾಕ್ಷಿಯಾದ, ವಿಶ್ವೇಶ್ವರನಿಗೆ ಕೃತಜ್ಞತೆ ತೋರಿಸುವುದೇ ಮಾನವನ ನಿತ್ಯ ವ್ರತವಾಗಿದೆ. ಆತ್ಮ ಸಾಕ್ಷಿಯಾದ ಗುರುಬೋಧೆಯಿಂದ, ಅಜ್ಞಾನಾಂಧಕಾರದಿಂದ ನಿವೃತ್ತರಾದ ಸಂತರು, ಜ್ಞಾನ ಭಾಸ್ಕರನ ಉದಯದಿಂದ, ತತ್ತ್ವವನ್ನು ಗ್ರಹಿಸಿ, ಬಂಧಗಳಿಂದ, ದುಃಖಿಗಳಿಂದ ಬಿಡುಗಡೆ ಹೊಂದಿ, ಶಾಶ್ವತ ಆನಂದ ಪರಿಪೂರ್ಣರಾಗಬೇಕಾದರೆ ತಮ್ಮ ಸ್ವರೂಪದ ಅನುಸಂಧಾನ ಮಾಡಬೇಕು. ಈ ಸಾಧನವೇ ಈ ಗ್ರಂಥದ ಲಕ್ಷ್ಯವಾಗಿದೆ.

ನಿರ್ಮಲ ಚಿತ್ತದಿಂದ ಈ ಗ್ರಂಥ ವಿಷಯವನ್ನು ಸ್ವೀಕರಿಸಿ, ತಜ್ಞರು ಇದಕ್ಕಿಂತ ಅಧಿಕ ಪವಿತ್ರ ಗ್ರಂಥಗಳನ್ನು ರಚಿಸಲಿ. ನಮಗೆ ಧೃತಿ ಉತ್ಸಾಹಗಳನ್ನು ನೀಡಿ, ಆಶೀರ್ವದಿಸಿ ಅನುಗ್ರಹಿಸುವಂತೆ ಆಗಲಿ, ಎಂದು ವಿಬುಧ ಜನರಲ್ಲಿ ಪ್ರಾರ್ಥಿಸುತ್ತೇವೆ.

ಸಂಸ್ಕೃತ ಮೂಲ – ಶ್ರೀ ರಾಮ ನರಸಿಂಹಮೂರ್ತಿ ಕವಿ
(ಗಂಧ ಶ್ರೀರಾಮಮೂರ್ತಿ, ಇರ್ರಿಂಕಿ ನರಸಿಂಹ ಮೂರ್ತಿ)
ಕನ್ನಡಾನುವಾದ : ಎಸ್. ಆರ್. ಪಾಟೀಲ.

ಜಾತ್ಯತೀತ ಸಮಾಜ : ವೇಮನ

ವೇಮನರು ಪಶ್ಚಿಮ ಆಂಧ್ರದ ಕವಿ. ಉತ್ತರ ಪ್ರಭಾವಳಿಗಳಿಗೆ ಹೆಚ್ಚು ಒಳಗಾಗದ ಈ ಪರ್ವತೀಯ ಪ್ರದೇಶವು ಆರ್ಯ ಸಂಸ್ಕೃತಿಗೆ ಹೆಚ್ಚು ಮಾರು ಹೋಗಿರಲಿಲ್ಲ ಮತ್ತು ತನ್ನ ಪ್ರಬಲ ವಿಚಾರ ಸ್ವಾತಂತ್ರ್ಯವನ್ನೂ ಮತ್ತು ಚೈತನ್ಯವನ್ನೂ ಬಹುಮಟ್ಟಿಗೆ ಕಾಪಾಡಿಕೊಂಡಿದೆ. ಸರಕಾರದಲ್ಲಿ ಪಸರಿಸಿದಷ್ಟು ಸಂಸ್ಕೃತ ಸಂಸ್ಕೃತಿಯು ಅಲ್ಲಿ ನುಸುಳಿರಲಿಲ್ಲ ಮತ್ತು ಅತಿ ಕಡಿಮೆ ಭಾಷಾಂತರಗೊಂಡ ಕೃತಿಗಳಿದ್ದವಲ್ಲದೆ ಹೆಚ್ಚಾಗಿ ಮೂಲ ಸಂಸ್ಕೃತ ಕೃತಿಗಳೇ ಇದ್ದವು. ವೇಮನರು ಜನ್ಮತಃ ಹಳ್ಳಿಗರೇ. ಇನ್ನು ಜಾತಿಯನ್ನೇ ತೊರೆದ ಅವರ ಜಾತಿಯ ಬಗ್ಗೆ ಹೇಳುವುದಾದರೆ ಅವರೊಬ್ಬ ರೆಡ್ಡಿ.

ಅವರು ವಿದ್ಯಾವಂತ ಮನುಷ್ಯನಲ್ಲ. ಪಂಡಿತರಂತೂ ಅಲ್ಲವೇ ಅಲ್ಲ. ಆದರೆ ಆಳ ವಿಚಾರದ, ಅಮೋಘ ಚಿಂತನಶೀಲ ಶಕ್ತಿಯ ಮತ್ತು ಜೀವನ ಮತ್ತದರ ಧರ್ಮ ನಿರಪೇಕ್ಷ ಮತ್ತು ಆಧ್ಯಾತ್ಮಿಕ ಸಮಸ್ಯೆಗಳನ್ನು ಕುರಿತು ಗಾಢ ಅಂತಃಪ್ರಜ್ಞೆ ಹೊಂದಿದ ಮಾನವರಾಗಿದ್ದರು. ಅವರ ಕಾವ್ಯವು ಪುಟಿಯುವ ಕಾರಂಜಿಯಂತೆ ಪರಿಶುದ್ಧವೂ ನಿರ್ಮಲವೂ ಆಗಿತ್ತು. ಅದು ಚಿಂತನದಲ್ಲಿ ಮತ್ತು ಶೈಲಿಯಲ್ಲಿ ಸಂಪೂರ್ಣ ಸ್ಫುರಣಾತ್ಮಕವೂ, ಸ್ವೋಪಜ್ಞವೂ ಆಗಿತ್ತು. ಕೇವಲ ಮೂರು ಸಾಲುಗಳಲ್ಲಿ ಅವರು ಇಡೀ ಪದ್ಯವನ್ನು ನೀಡುತ್ತಾರೆ. ಸಂಕ್ಷಿಪ್ತತೆಯೇ ಚತುರೋಕ್ತಿಯ ಸಾರವಾದರೆ, ಇದಕ್ಕಿಂತ ದೊಡ್ಡ ಚತುರೋಕ್ತಿಯ ನಿದರ್ಶನವು ಈ ಜಗತ್ತಿನಲ್ಲಿಯೇ ಇರದು. ಅವರು ತಮ್ಮೆಲ್ಲ ಉಪಮೆ, ರೂಪಕಗಳನ್ನು ವನಾರಣ್ಯಗಳಿಂದ, ಹೊಲ ಗದ್ದೆಗಳಿಂದ, ಹಳ್ಳಿಗಾಡಿನ ದೃಶ್ಯಗಳಿಂದ ಮತ್ತು ಪರಿಸರದಿಂದ ಎತ್ತಿಕೊಳ್ಳುತ್ತಾರೆ. ಅವರು ನಿಸರ್ಗ ಕವಿಯೂ ಅಹುದು ; ನೈಸರ್ಗಿಕ ಕವಿಯೂ ಅಹುದು.

ಅವರ ಆಳವಾದ ಅಂತಃಪ್ರಜ್ಞೆಯು, ಧರ್ಮನಿರಪೇಕ್ಷ ಮತ್ತು ಆಧ್ಯಾತ್ಮಿಕ ಜೀವನದ ಸಮಸ್ಯೆಗಳಲ್ಲಿ ತೂರಿ ಹೋಗಿದೆ. ಉಭಯತಾಪಿ ಒಂದೇ ಆಗಿವೆ. ಐಂದ್ರಿಯ ಭೋಗಗಳಲ್ಲಿ ಹೊರಳಾಡುತ್ತ ಆಧ್ಯಾತ್ಮಿಕರಂತೆ ನಟಿಸುವ ಡಾಂಭಿಕರನ್ನು ಅವರು ತುಚ್ಛೀಕರಿಸಿದ್ದಾರೆ. ಹಿಂದು ಧರ್ಮದ ಪ್ರತಿಭಾವಂತರಂತೆ ವೇಮನರು ಸಹ ಜೀವಾತ್ಮನು ಜನನ ಮರಣ ಚಕ್ರದಿಂದ ಮುಕ್ತನಾಗಿ ಪರಮಾತ್ಮನಲ್ಲಿ ಲಯ ಹೊಂದುವುದೇ ಮಾನವನ ಎದುರಿನ ಪರಮೋಚ್ಚ ಗುರಿಯಾಗಿದೆಯೆಂದು ಗ್ರಹಿಸಿದ್ದಾರೆ. ಈ ಪರಮಾತ್ಮನೆಂದರೆ ವಿಶ್ವವನ್ನೆಲ್ಲ ವ್ಯಾಪಿಸಿದ ಪರಮ ಆತ್ಮವೇ ಆಗಿದೆ. ಮೋಕ್ಷ ಇಲ್ಲವೆ ಮುಕ್ತಿಯು, ಸಂರಕ್ಷಣೆ ಮತ್ತು ವಿಶ್ವ ಚೈತನ್ಯದಲ್ಲಿ ಐಕ್ಯಗೊಳ್ಳುವುದಲ್ಲದೆ ಬೇರೇನಲ್ಲ. ಪ್ರತಿಯೋರ್ವ ಧೀಮಂತನ ಉದ್ದೇಶವೂ ಇದೇ ಆಗಿರುತ್ತದೆ. ಆದರೆ ನೀವು ಪ್ರಾಪಂಚಿಕರಾಗಿದ್ದರೆ ಮತ್ತು ಜಗತ್ತಿಗೆ ಬಹುವಾಗಿ ಜೋತು ಬಿದ್ದಿದ್ದರೆ, ಈ ಉದ್ದೇಶವು ಈಡೇರಲಾರದು. ಈ ಪ್ರಾಪಂಚಿಕ ಆಸಕ್ತಿಯ ಮೂಲವು ಐಂದ್ರಿಯಿಕ ಭೋಗದಲ್ಲಿದೆ. ಮತ್ತು ಐಂದ್ರಿಯಿಕ ಭೋಗಲಾಲಸೆಯು ಕಾಮ ಮತ್ತು ಭೋಗಗಳಲ್ಲಿ ಮಾತ್ರವಲ್ಲ ; ಆದರೆ ಅಹಂಕಾರವನ್ನು ಹುಟ್ಟಿಸುವ ಇಲ್ಲವೆ ಹೆಚ್ಚಿಸುವ ಎಲ್ಲದರಲ್ಲಿಯೂ ತೋರ್ಪಡಿಸಿಕೊಳ್ಳುತ್ತದೆ. ಅರ್ಥಾತ್ ಗರ್ವದ ಅನಿಸಿಕೆ ಮತ್ತು ತನ್ನನ್ನು ಇತರರಿಗಿಂತ ಮೇಲಿರಿಸುವ ಎಲ್ಲದರಲ್ಲಿಯೂ ತೋರ್ಪಡಿಸಿಕೊಳ್ಳುತ್ತದೆ.

ಒಬ್ಬ ಮನುಷ್ಯನನ್ನು ಇನ್ನೊಬ್ಬನಿಂದ ಪ್ರತ್ಯೇಕಿಸುವ ಮತ್ತು ತಾನು ಮೇಲು ದರ್ಜೆಯವನೆಂದು ತಿಳಿದುಕೊಳ್ಳುವ ಪ್ರತಿಯೊಂದು ವಿಚಾರವಾಗಲಿ, ರೂಢಿ ಅಭ್ಯಾಸವಾಗಲಿ ಅಹಂಕಾರ, ಸ್ವ-ಪಕ್ಷಪಾತ ಮತ್ತು ಸ್ವಾಭಿಮಾನಗಳ ರೂಪವೇ ಆಗಿದೆ. ನೀವು ವಿಶ್ವ ಚೇತನದ ನಿತ್ಯಾನಂದದಲ್ಲಿ ಮುಳುಗುವುದನ್ನೂ, ಕರಗಿ ಹೋಗುವುದನ್ನೂ ಅದು ಅಡ್ಡಿ ಪಡಿಸುತ್ತದೆ.

ಆ ಮೇರೆಗೆ, ತಮ್ಮ ಕಾಲದ ವಿಭಿನ್ನ ಮತಧರ್ಮಗಳಾದ, ಶೈವ ಮತ, ವೈಷ್ಣವ ಮತ, ಲಿಂಗಾಯತ ಮತ, ಬೌದ್ಧ ಮತಗಳನ್ನು ನಿಷ್ಠುರ ತರ್ಕದಿಂದ ವೇಮನರು ಟೀಕಿಸಿದ್ದಾರೆ. ಏಕೆಂದರೆ ಈ ಧರ್ಮಗಳ ಪ್ರತಿಯೋರ್ವ ಅನುಯಾಯಿಯು ತಮ್ಮನ್ನು ಉಳಿದವರಿಗಿಂತ ಪ್ರತ್ಯೇಕವೆಂದು ಮತ್ತು ಅನ್ಯರಿಗಿಂತ ಶ್ರೇಷ್ಠರೆಂದೂ ಮತ್ತು ಮೇಲಿನವರೆಂದೂ ಗರ್ವದಿಂದ ಭಾವಿಸಿದ್ದರು. ಮೇಲಾಗಿ, ಅವರ ಸ್ವ-ಪ್ರತಿಷ್ಠೆಗೆ ಯಾವುದೇ ಸದ್ಗುಣವಾಗಲಿ ಇಲ್ಲವೆ ಪ್ರಶಂಸಾರ್ಹತೆಯಾಗಲಿ ಆಧಾರವಾಗಿರಲಿಲ್ಲ. ಪ್ರತಿಯಾಗಿ, ಅದು ಕೇವಲ ಬಾಹ್ಯ ವೇಷ ಭೂಷಣಗಳನ್ನು ಆಧರಿಸಿದ, ಮತ್ತು ಮೂಢ ನಂಬುಗೆಗಳನ್ನು ಪ್ರಚೋದಿಸುವಿಕೆಯ ಮೂಲಕ, ಡಾಂಭಿಕತನ ಮತ್ತು ವಂಚನೆಯ ಮೂಲಕ, ವ್ರತಾಚಾರ ಮತ್ತು ಚಿಹ್ನೆಗಳ ಮೂಲಕ ನಡೆಯುವ, ಸೋಗುಲಾಡಿತನವೇ ಆಗಿದ್ದು, ಆತ್ಮವನ್ನು ಕೀಳಾಗಿಸುತ್ತದೆಯೇ ಹೊರತು ಉದ್ದೀಪಿಸುವುದಿಲ್ಲ. ದೇವರು ಎಂದೆಂದಿಗೂ ಎಲ್ಲೆಡೆಯಲ್ಲಿಯೂ ಇರುವನಾದುದರಿಂದ ದೇವರ ಅವತಾರದ ಕಲ್ಪನೆಯೂ ಸಹ ನಿಜವಲ್ಲ. ಅವನು ನಮಗಾಗಿ ಪ್ರತ್ಯೇಕ ಜನ್ಮ ತಳೆಯುವನೆಂದು ಹೇಳುವುದರಲ್ಲಿ ಅರ್ಥವಿಲ್ಲ.

ವೇಮನರ ಶೈಲಿಯು ಕಟುವಾಗಿದೆ ; ತಿವಿಯುವಂತಿದೆ. ಅದು ಮಾರ್ದವ ವಿಡಂಬನೆ, ಮೃದು ವ್ಯಂಗ್ಯ ಮತ್ತು ಸಿಹಿ ಹಾಸ್ಯವೂ ಆಗಿರುತ್ತದೆ. ಹಾಸ್ಯವು ಅವರ ವಿಶೇಷ ಗುಣ. ಅವರು ತತ್ತ್ವ ಶಾಸ್ತ್ರಾನುಸಾರ ವಾದ ಹೂಡುವುದಿಲ್ಲ. ಆದರೆ ಮಾರಕ ನೋವನ್ನು ಉಂಟು ಮಾಡುತ್ತಾರೆ ಮತ್ತು ಈ ಸೋಗುಲಾಡಿತನವನ್ನು ಹಾಸ್ಯಾಸ್ಪದಗೊಳಿಸುತ್ತಾರೆ. ಮೂಢ ನಂಬುಗೆಗಳನ್ನು ಕುರಿತು ವಿಮರ್ಶಿಸುವಾಗ ವಾದಿಸುವುದು ನಿರರ್ಥಕವೆಂಬ ಸತ್ಯ ಸಿದ್ಧಾಂತವನ್ನು 'ವಾಲ್ಟೇರ'ನು ಪ್ರತಿಪಾದಿಸಿದ್ದಾನೆ. ಏಕೆಂದರೆ ಮೂಢನಂಬುಗೆಯು ವಿವೇಚನೆಯ ಪ್ರಭಾವಕ್ಕೆ ಒಳಪಡದು. ಅದರ ಬಗೆಗೆ ಛೀ, ಥೂ ಎನ್ನಿರಿ ಮತ್ತು ಅದನ್ನು ನಗೆಪಾಟಲು ಮಾಡಿರಿ. ಹಾಗೆ ಮಾಡುವುದು ಹೆಚ್ಚು ಪರಿಣಾಮಕಾರಿ. ಇಲ್ಲಿ ವಾಲ್ಟೇರಿಯನರ ತರಹದ ವೇಮನರ ಹಾಸ್ಯದ ನಿದರ್ಶನವಿದೆ.

ಆ. ಕನಕ ಮೃಗವು ಭುವಿಲಿ ಇಹುದೊ ಇಲ್ಲವೆನದೆ,
ತರುಣಿ ತೊರೆದು ಹೊರಟ ದಾಶರಥಿಯು.
ತಿಳಿವು ಇಲ್ಲದವನು ದೇವನೆಂತಾಗುವ ?
ವಿಶ್ವದಾಭಿರಾಮ ಕೇಳು ವೇಮ.

ಇಲ್ಲಿ ತರುಣಿ ಶಬ್ದದ ವ್ಯಂಗ್ಯಾರ್ಥವನ್ನು ಗಮನಿಸಿರಿ. ತರುಣಿಯೆಂದರೆ, ತನ್ನ ಸೌಂದರ್ಯದ ಪೂರ್ಣ ಲಜ್ಜೆಯಿಂದ ಬಳುಕುತ್ತಿರುವ ಯುವತಿ. ಅಂದಗೆಟ್ಟ ಇಳಿವಯಸ್ಸಿನವಳಾಗಿದ್ದರೆ, ಅದೇನೂ ಮಹತ್ವದ್ದಾಗುತ್ತಿರಲಿಲ್ಲ. ಆದರೆ, ದೇವನು ಯೌವನದ

ಸುಂದರ ಸ್ತ್ರೀಯನ್ನು ಹಿಂದೆ ಬಿಟ್ಟು, ಬಂಗಾರದ ಜಿಂಕೆಯ ಆಸೆಯಿಂದ ಬೆನ್ನಟ್ಟಿ ನಡೆದುದನ್ನು ಊಹಿಸಿರಿ.

ಅನೇಕ ಜನರು, ಯಜ್ಞಗಳ ಆಚರಣೆ ಮತ್ತು ತನ್ಮೂಲಕ ಉಚ್ಚ ಆಧ್ಯಾತ್ಮಿಕ ಮಟ್ಟ ಪಡೆದಿದ್ದೇವೆಂದು ಜನ ಸಮೂಹದ ಮೇಲೆ ಛಾಪ ಹಾಕುತ್ತಾರೆ. ಆದರೆ, ಯಜ್ಞಾರಂಭಕ್ಕೆ ಮುನ್ನ ಯಜಮಾನನು ಕ್ಷೌರ ಮಾಡಿಸಿಕೊಳ್ಳಬೇಕೆಂದೂ, ಸ್ನಾನ ಮಾಡಬೇಕೆಂದೂ, ರೂಢಿಯಿರುವುದು ಸರ್ವವಿದಿತ. ಇಲ್ಲಿ ವೇಮನರ ಮಿನುಗುವ ಹಾಸ್ಯವು, ಮಿಂಚಿನ ಎಳೆಯಂತೆ ತಿವಿಯುತ್ತದೆ ಮತ್ತು ಪ್ರಕಾಶಿಸುತ್ತಿದೆ.

ಆ. ಸಕಲ ಯಜ್ಞಗಳಲಿ, ಸಕಲ ತೀರ್ಥಗಳಲಿ,
ತಲೆಯ ಬೋಳಿಸದಿರೆ ಫಲವು ಇರದು.
ಮಂತ್ರ ಜಲದಕಿಂತ ಮುಂಡನ ಜಲ ಹೆಚ್ಚು.
ವಿಶ್ವದಾಭಿರಾಮ ಕೇಳು ವೇಮ.

ಜನ್ಮವನ್ನಾಧರಿಸಿದ ಸಾಮಾಜಿಕ ಅಸಮಾನತೆಗಳು, ಶ್ರೇಣಿಗಳು, ಹೀನಾಯಿಸುವಿಕೆಗಳಂಥ ಕೇಡುಗಳನ್ನು, ಸಾಮಾನ್ಯವಾಗಿ ಹೇಳುವುದಾದರೆ, ಎರಡು ಭೂಮಿಕೆಗಳ ಮೇಲೆ ಖಂಡಿಸಲಾಗುತ್ತವೆ.. ಮೊದಲನೆಯದಾಗಿ ದೋಷಗಳೆಂದು ನೈತಿಕ ಭೂಮಿಕೆಯ ಮೇಲೆ. ಎರಡನೆಯದಾಗಿ ಪ್ರಯೋಜನದ ಭೂಮಿಕೆಯ ಮೇಲೆ. ಅಂದರೆ ಸಮಾಜವನ್ನು ದುರ್ಬಲಗೊಳಿಸುವುದೆಂದೂ, ತನ್ಮೂಲಕ ಅದರ ವಿನಾಶ ಇಲ್ಲವೆ ಪ್ರಬಲ ಶಕ್ತಿಗೆ ಅಡಿಯಾಳಾಗುವಂತೆ ಮಾಡುವುದೆಂದೂ ಖಂಡಿಸಲಾಗುತ್ತದೆ. ವೇಮನರು ತಮ್ಮ ದಾಳಿಯ ಇನ್ನೂ ಒಂದು ಹೆಜ್ಜೆಯನ್ನು ಸೇರಿಸುತ್ತಾರೆ. ಇಂಥ ಭೇದಭಾವಗಳು ಮೇಲ್ವರ್ಗದವರಲ್ಲಿ ಗರ್ವವನ್ನೂ ಕೆಳವರ್ಗದವರಲ್ಲಿ ಅಧಃಪತನವನ್ನೂ ಉಂಟು ಮಾಡುತ್ತವೆ. ಇವೆರಡೂ ಜೀವಿಯ ಮುಕ್ತಿಗೆ ಮಾರಕವಾಗಿವೆ. ಸಾಮಾನ್ಯವಾಗಿ ಬಹುತೇಕ ಮತಧರ್ಮಗಳಲ್ಲಿ ಪ್ರಚಲಿತವಿರುವ ಕಲ್ಪನೆಯೆಂದರೆ, ಒಬ್ಬನು ಸಮಾಜದ ಸದಸ್ಯನಾಗಿ ಹೇಗೇ ನಡೆದುಕೊಂಡಿರಲಿ, ವೈಯಕ್ತಿಕ ಮುಕ್ತಿಯನ್ನು ಅರ್ಜಿಸಬಲ್ಲನು. ಆದರೆ ವೇಮನ ತಮ್ಮ ಅಮರ ಕೀರ್ತಿಗೆ ಕಳಸವೆಂಬಂತೆ ಅವರು ಪ್ರತಿಪಾದಿಸಿದ ಭಾವನೆಯು ಹೀಗಿದೆ : ನಿಮ್ಮ ಮರಣಾ ನಂತರ ವಿಶ್ವ ಚೈತನ್ಯದಲ್ಲಿ ಸೇರಿ ಹೋಗಬೇಕಾದರೆ, ನೀವು ಮೊದಲು ಜೀವಂತವಾಗಿರುವಾಗಲೇ ವಿಶ್ವಮಾನವತೆಯೊಂದಿಗೆ ಒಂದಾಗಬೇಕು. ಅವರು ತಮ್ಮೀ ಉದಾತ್ತ ಭಾವನೆಯನ್ನು ಈ ಮುಂದಿನ ಪದ್ಯದಲ್ಲಿ ವ್ಯಕ್ತಪಡಿಸಿದ್ದಾರೆ.

ಆ. ಉರ್ವಿವಾಸಿಗೆಲ್ಲ ಒಂದೆ ತಾಟನಿಟ್ಟು,
ಅಳಿಸಿ ಕುಲದ ಭಾವ ಬೆಳೆಸಿ ಸ್ನೇಹ.
ಶರದ ಮೇಲೆ ಕರವ ಇರಿಸಿ ಊಣಲು ಹೇಳಿ,
ವಿಶ್ವದಾಭಿರಾಮ ಕೇಳು ವೇಮ.

ಮಾನವ ಮಾನವರ ಮಧ್ಯೆ ಭೇದವೆಣಿಸದೆ ಉರ್ವಿವಾಸಿಗಳೆಲ್ಲ ಒಂದೆ ತಾಟಿನಲ್ಲಿ ಊಣ್ಣುವ ಕಲ್ಪನೆಯನ್ನು ವೇಮನರು ಇಸ್ಲಾಮಿನಿಂದ ಪಡೆದರೋ ಏನೋ ಎಂದು ನನಗೆ ಆಶ್ಚರ್ಯವಾಗುತ್ತದೆ. ಏಕೆಂದರೆ, ಅವರ ಕೃತಿಗಳಲ್ಲಿ ಇಸ್ಲಾಮಿಗೆ ಸಂಬಂಧಿಸಿದ ಒಂದು

ಉಲ್ಲೇಖದಲ್ಲಿ ಹೀಗಿದೆ.

''ಎಲ್ಲ ಪರಿಪೂರ್ಣನು, ಅಲ್ಲಾ ಮಹಾತ್ಮನು''.

ಈ ಸಾಲು ಅಧಿಕೃತವೆಂದು ತಿಳಿದರೂ ಸಹ, ವೇಮನರು, ಅದನ್ನು ಯಾರಿಂದಲಾದರೂ ಪಡೆದರೆಂದು ನಾನು ತಿಳಿಯುವದಿಲ್ಲ. ಏಕೆಂದರೆ ಅವರು ಎಲ್ಲವನ್ನೂ ತಮ್ಮಿಂದಲೇ ಪಡೆಯುತ್ತಿದ್ದರು.

ತಮ್ಮ ತೋರಿಕೆಯ ಆಚಾರಗಳು ಒಬ್ಬರಿಂದೊಬ್ಬರಿಗೆ ಭಿನ್ನವಿದ್ದು – ಉಚ್ಚ ಇಲ್ಲವೆ ನೀಚ ಸ್ತರದಲ್ಲಿದ್ದೂ ಸಹ, ತಾವೇಕೆ ಸಾದೃಶ ಸ್ವಭಾವದ, ಸಾದೃಶ ಸತ್ವದ ಮತ್ತು ಸಾದೃಶ ಗುರಿಯ ಬರೀ ಮಾನವರಾಗಿರುವುದನ್ನು ಜನರೇಕೆ ಅರಿಯುತ್ತಿಲ್ಲವೆಂಬ ಬಗೆಗೆ ಅವರಿಗೆ ಅಚ್ಚರಿಯೆನಿಸುತ್ತದೆ.

ಆ. ಬ್ರಾಹ್ಮಣನೆನಲು ಏನು ? ಭಕ್ತನೆನಲು ಏನು ?
ಜೋಗಿಯೆನಲು ಏನು ? ಸೊಂಪು ಇರದು.
ಎಷ್ಟೊ ಹೆಸರು ಇರಲು, ಎಲ್ಲ ವಿಧಿಯ ಕೆಲಸ.
ವಿಶ್ವದಾಭಿರಾಮ ಕೇಳು ವೇಮ.

ವೇಮನರ ವ್ಯಂಗ್ಯಕ್ಕೊಳಗಾಗದ ಹಿಂದೂ ಧರ್ಮಾಚರಣೆಯ ಯಾವುದೇ ಮುಖವಿಲ್ಲ. ಪದೇ ಪದೇ ಸ್ನಾನ ಮಾಡುವುದರಿಂದ ನಾವು ಮುಕ್ತಿ ಪಡೆಯಬಲ್ಲೆವೇ ? ಹಾಗಿದ್ದರೆ ಎಲ್ಲ ಮೀನುಗಳೇಕೆ ಆ ಗತಿಯಿಂದ ಹೊರಗಾಗಿವೆ ? ವಿಭೂತಿ ಬಳಿಯುವುದರಿಂದ ನಮಗೆ ಮುಕ್ತಿ ಸಿಕ್ಕುವುದೇ ? ಹಾಗಾದರೆ ಕತ್ತೆಯು ಮೇಲಿಂದ ಮೇಲೆ ಬೂದಿಯಲ್ಲಿ ಹೊರಳಾಡುವುದೇಕೆ ? ನಾವು ಮಾಂಸ ತಿನ್ನುವುದನ್ನು ಬಿಟ್ಟು ಸಸ್ಯಾಹಾರ ಸೇವಿಸುವುದರಿಂದ ಅದನ್ನೇ ಮತಧರ್ಮವೆಂದು ಬಗೆದು – ಮುಕ್ತಿ ಪಡೆಯಬಲ್ಲೆವೇ ?

ಆ. ಮೇವು ಹುಲ್ಲು ತಿನುವ ಮೇಕೆ ಹೋತಿಗೆಲ್ಲ
ದೊರೆಯದೆ ಹೋಗುವುದೆ ದೇಹಸಿದ್ಧಿ ?
ಪ್ರಜೆಗಳೆಲ್ಲ ಬರಿಯ ಪೆಚ್ಚಾಗಿ ಹೋದರು.
ವಿಶ್ವದಾಭಿರಾಮ ಕೇಳು ವೇಮ.

ಮೂಢ ನಂಬುಗೆಯವರ ಬಗೆಗೆ ನೀವೇನು ಮಾಡಬಲ್ಲಿರಿ ? ಅವರು ಸ್ವಭಾವತಃ ದುರುಳರಾಗಿರುತ್ತಾರೆ. ನೀವು ಪಡುವಲ ಕಾಯಿಗೆ ಕಲ್ಲು ಕಟ್ಟಿ ನೇರ ಮಾಡಬಲ್ಲಿರಿ. ಆದರೆ ನಾಯಿಯ ಬಾಲವನ್ನು ನೇರಗೊಳಿಸವುದು ಹೇಗೆ ?

ಆ. ಕಲ್ಲು, ಪಡುವಲಕ್ಕೆ ಕಟ್ಟಿ ದೊಡ್ಡ ದಾರ,
ಬಾಗು ತೊರೆದು ನೇರ ಬೆಳೆಯುತಿಹುದು,
ನಾಯಿ ಬಾಲ ಕಟ್ಟಿ ನೇರವಾಗಬಹುದೆ ?
ವಿಶ್ವದಾಭಿರಾಮ ಕೇಳು ವೇಮ.

ತಥ್ಯಾಂಶವೆಂದರೆ, ಶೀಲ ಮತ್ತು ಸ್ವಭಾವಗಳು ಜ್ಞಾನಕ್ಕಿಂತಲೂ ಮೇಲು. ನೀವು

ವೇದಗಳನ್ನು ಓದಬಹುದು ; ಮಂತ್ರಗಳನ್ನು ಪಠಿಸಬಹುದು. ನಿಮ್ಮ ಸ್ವಭಾವವು ಸರಿಯಾಗಿಲ್ಲದಿದ್ದರೆ, ನಿಮ್ಮ ಪುಸ್ತಕ ಜ್ಞಾನವು ನಿಮ್ಮ ಮೇಲಾವ ಪರಿಣಾಮವನ್ನೂ ಬೀರದು. ಇದು ಕ್ರಿಸ್ತನ ದೃಷ್ಟಾಂತದ ಕಥೆಯಂತಿದೆ : ಅದೆಂದರೆ, ಬೀಜವನ್ನು ಬಿತ್ತಬಹುದು. ಆದರೆ ಅದು ಉತ್ತಮ ಬೆಳೆಯನ್ನು ಕೊಡುವುದೋ ಇಲ್ಲವೋ ಎಂಬುದು, ಅದು ಎಲ್ಲಿ ಬಿದ್ದಿದೆ ಎಂಬುದನ್ನು ಅವಲಂಬಿಸಿದೆ. ಮೂಢ ನಂಬುಗೆಯ ಮನುಷ್ಯನು ಗಂಧದ ಕೊರಡಿನ ಭಾರವನ್ನು ಹೊರುವ ಕತ್ತೆಯಂತೆ ಅಷ್ಟೇ.

ಆ. ಹೀನರೆಷ್ಟು ವಿದ್ಯೆ ಹೆಚ್ಚು ಅಭ್ಯಸಿಸಲು,
ಘನರು ಅಲ್ಲ ; ಒರಟು ಜನರೆ ಹೊರತು,
ಪರಿಮಳವನು ಕತ್ತೆ ಹೊರಲು ಘನವೆನಿಪುದೆ ?
ವಿಶ್ವದಾಭಿರಾಮ ಕೇಳು ವೇಮ.

ಮೋಕ್ಷಕ್ಕಾಗಿ ಸಿದ್ಧತೆಯು, ಅಂದರೆ ಸಂಸಾರದಿಂದ ಬಿಡುಗಡೆಯಾಗುವುದು, ಅಹಂಕಾರವನ್ನು ತ್ಯಜಿಸುವಲ್ಲಿ ಮತ್ತು ನಿಮ್ಮನ್ನು ಜಗತ್ತಿಗೆ, ಇಹಕ್ಕೆ ಅಂದರೆ ಕಾಮಿನಿ ಮತ್ತು ಕಾಂಚನಕ್ಕೆ ಬದ್ಧಗೊಳಿಸುವ ಸೆಳೆತಗಳನ್ನು ತೊಡೆಯುವಲ್ಲಿ ಅಡಗಿದೆ. ಕಾಮಿನಿ ಮತ್ತು ಕಾಂಚನಗಳ ವಿರುದ್ಧ ಭಗವಾನ ರಾಮಕೃಷ್ಣರು ನೀಡಿದ ಎಚ್ಚರಿಕೆಯು ಸರ್ವವೇದ್ಯವಾಗಿದೆ. ಇದಲ್ಲದೆ ಅಹಂಕಾರದ ಸರ್ವ ರೂಪಗಳನ್ನು ಜಯಿಸಬೇಕು ಮತ್ತು ಕಿತ್ತು ಹಾಕಬೇಕು. ತಾವು ಅತ್ಯಂತ ಕೆಳ ಜಾತಿಯವರಿಗಿಂತ ಕೆಳಜಾತಿಯವರೆಂದು ಭಗವಾನ ರಾಮಕೃಷ್ಣರು ಸಾರುತ್ತಿದ್ದರು ಮತ್ತು ಜಾತಿ ವ್ಯವಸ್ಥೆಯನ್ನೂ ಮತ್ತು ಜಾತೀಯ ಭಾವನೆಯನ್ನೂ ಹೀಗಳೆದರು. ವೇಮನರು ರಾಮಕೃಷ್ಣರ ವಿಚಾರಗಳನ್ನು ಆ ಮುಂಚೆಯೇ ಕಾವ್ಯಮಯವಾಗಿ ಅಭಿವ್ಯಕ್ತಪಡಿಸಿದ್ದಾರೆ. ''ನೀವು ದೇವರೊಂದಿಗೆ ಒಂದಾಗಬೇಕಿದ್ದರೆ, ಮಾನವನೊಂದಿಗೆ ಒಂದಾಗಿರಿ''. ಜಾತಿಯು ಸಾಮಾಜಿಕ ಶಾಪವಷ್ಟೇ ಅಲ್ಲ ; ರಾಜಕೀಯ ಮಹಾಪರಾಧವಷ್ಟೇ ಅಲ್ಲ. ಆದರೆ ಅದು ಮೋಕ್ಷಕ್ಕೆ ಅತಿ ಕೆಟ್ಟ ತೊಡಕಾಗಿದೆ. ಅದು ಧರ್ಮದ ಸೋಗು ಹಾಕಿರುವ ಧರ್ಮವಿರೋಧಿ ನಿಲುಮೆಯಾಗಿದೆ. ಅದನ್ನು ಕೂಡಲೇ ತೊಡೆದು ಹಾಕಿರಿ.

(ಅಖಿಲ ಭಾರತ ಆಕಾಶವಾಣಿ ಕೇಂದ್ರ, ಮದ್ರಾಸ (ಚೆನ್ನೈ) ನಿಂದ 1949 ಅಕ್ಟೋಬರನಲ್ಲಿ ಬಿತ್ತರಗೊಂಡ ಡಾ. ಸಿ. ಆರ್. ರೆಡ್ಡಿಯವರ ಆಂಗ್ಲ ಭಾಷಣದ ಕನ್ನಡಾನುವಾದ. ಅನುವಾದಕರು : ಎಸ್. ಆರ್. ಪಾಟೀಲ.)

ಅಂಧಕಾರ ನಿವಾರಕ : ಗುರು

ಗುರು ಸಂಸ್ಕೃತ ಶಬ್ದ. 'ಗು' ಎಂದರೆ ಅಂಧಕಾರ. 'ರು' ಎಂದರೆ ನಿವಾರಕ. ಅಂಧಕಾರ ನಿವಾರಕನೇ ಗುರು.

ಗುರುರ್ಬ್ರಹ್ಮಾ ಗುರುರ್ವಿಷ್ಣುಃ
ಗುರುರ್ದೇವೋ ಮಹೇಶ್ವರಃ
ಗುರುರೇವ ಪರಬ್ರಹ್ಮ
ತಸ್ಮೈಶ್ರೀ ಗುರುವೇ ನಮಃ

ಅಂದರೆ, ಗುರುವೇ ಬ್ರಹ್ಮನು, ಗುರುವೇ ವಿಷ್ಣುವು, ಗುರುವೇ ಮಹೇಶ್ವರನು. ಗುರುವು ತಾನೇ ಪರಬ್ರಹ್ಮನು. ಆ ಶ್ರೀ ಗುರುವಿಗೆ ನಮಸ್ಕಾರ. ಪರಬ್ರಹ್ಮನು ವಿಶ್ವ ವ್ಯಾಪಾರವನ್ನು ಮೂರು ರೂಪಗಳಲ್ಲಿ ನಡೆಸುತ್ತಾನೆ. ತಮೋಗುಣ ಪ್ರತಿನಿಧಿಯಾಗಿ ಸೃಷ್ಟಿ ಕಾರ್ಯವನ್ನು ಬ್ರಹ್ಮ ರೂಪದಲ್ಲಿಯೂ, ರಜೋಗುಣ ಪ್ರತಿನಿಧಿಯಾಗಿ ಸ್ಥಿತಿ ಕಾರ್ಯವನ್ನು ವಿಷ್ಣುವೆಂದೂ, ಇನ್ನು ಸತ್ತ್ವ ಗುಣ ಪ್ರತಿನಿಧಿಯಾಗಿ ಲಯ ಕಾರ್ಯವನ್ನು ಮಹೇಶ್ವರ ರೂಪದಿಂದಲೂ ನಿರ್ವಹಿಸುತ್ತಾನೆ. ಇನ್ನು ಅವನೇ ಈ ತ್ರಿಮೂರ್ತಿಗಳಿಗಿಂತ ಪರವಾದ ಪರಬ್ರಹ್ಮನಾಗಿಯೂ ಇರುತ್ತಾನೆ.

ಕಂ. ಗುರುವೆನಲಾ ಪರಮಾತ್ಮನು,
ಪರಿಕಿಸಿ ನೋಡಲು, ಶಿಷ್ಯರೆನೆ ಸಕಲ ಜೀವರ್.
ಗುರುಶಿಷ್ಯ ಜೀವ ಸಂಪದ,
ಗುರುತರಮಾಗಿ ಬೆರೆತೊಡಾತನೆ ಗುರು ವೇಮಾ.

ಅನಾತ್ಮ ಸಂಗವೆಂಬ ಅಂಧಕಾರವನ್ನು, ತಾತ್ತ್ವಿಕವಾಗಿ ಪರಮಾತ್ಮನ ಅರಿವು ಹೊಂದಿ ಮಾತ್ರ ನಿವಾರಿಸಿಕೊಳ್ಳಬಹುದು. ಆದ್ದರಿಂದ ಪರಮಾತ್ಮನೇ ಗುರುವು. ಅವನ ಅರಿವೇ ಗುರು. ಸರಿಯಾಗಿ ನೋಡಿದರೆ, ಸಕಲ ಜೀವರೇ ಶಿಷ್ಯರು. ಶಿಷ್ಯರ ಅಂಧಕಾರವನ್ನು ನಿವಾರಿಸುವವನೇ ಗುರು. ಜೀವ ಸಂಪದದಲ್ಲಿ ಅರಿವು ಹೊಂದಿದ ಗುರುಗಳೂ ಉಂಟು. ಅರಿವಿನ ಮರೆವು ಹೊಂದಿದ ಶಿಷ್ಯರೂ ಉಂಟು. ಈ ಗುರು-ಶಿಷ್ಯ ಸಂಪದವು ಗಾಢವಾಗಿ ಬೆರೆಯುವಂತೆ ಮಾಡುವವನೇ ಮಾನವ ರೂಪದ ಗುರುವೆನಿಸುತ್ತಾನೆ.

ಆ. ಜ್ಞಾನವೆನಲು ಗುರುವು, ಜ್ಞಾನಹೀನ ಬುದ್ಧಿ,
ಉಭಯ ಸಂಧಿ, ದಿಮ್ಮು ಉಂಟು ಆಗ.
ದಿಮ್ಮನುವುದನರಿಯೆ, ತದ್ರೂಪಗಳೆರಡು.
ವಿಶ್ವದಾಭಿರಾಮ ಕೇಳು ವೇಮ.

ಅರಿವೇ ಗುರು ಅಂದರೆ ಜ್ಞಾನವೆನ್ನಲು ಗುರುವು. ಆತ್ಮಜ್ಞಾನವೇ ಗುರುವು. ಬುದ್ಧಿ ತತ್ತ್ವದಲ್ಲಿ ಆತ್ಮಜ್ಞಾನವಿಲ್ಲ. ಜ್ಞಾನವಾದಾಗ ಆತ್ಮ ಸಾಕ್ಷಾತ್ಕಾರವಾಗುತ್ತದೆ. ಬುದ್ಧಿ ಮತ್ತು ಜ್ಞಾನಗಳೆರಡರ ಸಂಧಿಯಲ್ಲಿ ದಿಮ್ಮು ಎನಿಸುತ್ತದೆ. ಈ ದಿಮ್ಮು ಎಂದರೆ

ಯೋಗ ನಿದ್ರೆ. ಇದನ್ನು ಅರಿತರೆ, ಬುದ್ಧಿ ತತ್ತ್ವ ಮತ್ತು ಆತ್ಮಜ್ಞಾನಗಳಿರಡೂ ತತ್ ರೂಪಗಳೆನಿಸುತ್ತವೆ. ಪರಮಾತ್ಮನ ರೂಪಗಳು ಎನಿಸುತ್ತವೆ.

ಕಂ. ಗುರುವೆನ್ನಲು ಆದ್ಯಂತವು
ಗುರು ಶಿಷ್ಯರೆನ್ನಲು ಸಕಲ ಕೊಂಬೆಗಳಷ್ಟೇ.
ಗುರುವನು ಅರಿಯಲು ಬಲ್ಲರು,
ಧರೆಯೊಳಗಿನ ಮನುಜರೆಲ್ಲ, ಧ್ಯಾನಿಸೆ, ವೇಮಾ.

ಸೃಷ್ಟಿಯ ಆದಿಯೂ ಗುರುವೇ, ಅದರ ಅಂತ್ಯವೂ ಗುರುವೇ. ಸೃಷ್ಟಿಯೆಂಬ ಮರಕ್ಕೆ ಗುರುವು ಬೊಡ್ಡೆಯಾದರೆ, ಸಕಲ ಶಿಷ್ಯರು ಕೊಂಬೆಗಳಷ್ಟೇ. ಧರಣಿಯೊಳಗಿನ ಸಕಲ ಮನುಜರು ಧ್ಯಾನ ಸಾಧನೆಯಿಂದ ಗುರುವನ್ನು ಅರಿಯಬಲ್ಲರು. 'ತೈಲ ಧಾರಾವತ್ ಇತಿ ಧ್ಯಾನಂ'. ಅಂದರೆ, ತೈಲ ಧಾರೆಯು ಪ್ರವಹಿಸುತ್ತಿದ್ದರೂ ಅಲುಗದ ಕಂಭದಂತೆ ಹೇಗೆ ಕಾಣುವುದೋ, ಹಾಗೆ ಮನೋಧಾರೆಯು ಚೈತನ್ಯಪೂರ್ಣವಾಗಿದ್ದರೂ ಆತ್ಮ ಚಿಂತನೆಯಲ್ಲಿ ಸ್ಥಿರವಾಗಿ ನಿಂತರೆ ಆತ್ಮಧ್ಯಾನವು ಏರ್ಪಡುತ್ತದೆ. ಹೀಗಾದರೆ, ಅವರು ಆತ್ಮರೂಪಿ ಗುರುವನ್ನು ಅರಿಯುತ್ತಾರೆ.

ಕಂ. ಜಗದಲಿ ಗುರು ಉದಯಿಸಿದರೆ,
ಜಗದೊಳಿರುವ ಜನರು ಶರಣು ಶರಣೆನ್ನುತಿಹರ್.
ಜಗವರಿತು, ಮಣಿದು, ಕಾಣಲು,
ನಿಗಮಾಗಮ ನಿರ್ವಿಕಾರ ನಿಪುಣನು ವೇಮಾ.

ಅಂಧಕಾರ ನಿವಾರಕನಾದ ಗುರುವು ಜಗತ್ತಿನಲ್ಲಿ ಉದಯಿಸಿದರೆ, ಆಗ ಜಗತ್ತಿನಲ್ಲಿರುವ ಜನರು ಶರಣು, ಶರಣು ಎಂದು ಅವನನ್ನು ಆಶ್ರಯಿಸುತ್ತಾರೆ. ಅಂಥ ಗುರುವನ್ನು ಜಗದ ಜನರು ಅರಿತು, ಅವನಿಗೆ ಮಣಿದು, ಶ್ರದ್ಧೆಯಿಂದ ಅವನನ್ನು ಕಂಡರೆ, ಅವನು ವೇದಾಗಮಗಳಲ್ಲಿ ನಿಪುಣನೆಂದೂ ಮತ್ತು ಹುಟ್ಟು, ಬಾಲ್ಯ, ಕಿಶೋರಾವಸ್ಥೆ, ಯೌವನ, ಜರಾ, ಮತ್ತು ಮರಣಗಳೆಂಬ ಷಡ್ವಿಕಾರಗಳಿಂದ ಮುಕ್ತನಾದ ನಿರ್ವಿಕಾರ ನಿಪುಣನೆಂದೂ ಅರಿವಾಗುತ್ತದೆ. ಅರ್ಥಾತ್ ಅವನು ಸದಾ ಆತ್ಮರತನಾಗಿರುವುದು ಅರಿವಾಗುತ್ತದೆ.

ಕಂ. ಗುರುವೆನೆ ಧೇನುವು ; ಚೊಕ್ಕಟ
ವರ ಶಿಷ್ಯನು ವತ್ಸನಾಗಿ ವರ್ತಿಸುತಿಪ್ಪನ್.
ಕರುಣೆಯುದಿಸಿದೊಡನೀವನು.
ನಿರುಪಮ ಲಕ್ಷ್ಯಾಮೃತವನು, ನಿಜವಿದು, ವೇಮಾ.

ಗುರು ಎಂದರೆ ಹಾಲು ಕರೆಯುವ ಹಸು, ಧೇನು. ಇನ್ನು ವರಶಿಷ್ಯನು ಕರುವಾಗಿ ಚೊಕ್ಕಟವಾಗಿ ವರ್ತಿಸುತ್ತಿರುವನು. ವರಶಿಷ್ಯನು ಗುರುವಿನ ಬಳಿ ಸಾರಿ ಸಂಪೂರ್ಣ ಶರಣಾಗಲು ಗುರು ಕರುಣೆಗೆ ಪಾತ್ರನಾಗುವನು. ಆಗ ಗುರುವು ಮಾರ್ಗದರ್ಶಿಯಾಗಿ ತಲುಪಬೇಕಾದ ಲಕ್ಷ್ಯವನ್ನು ತೋರುತ್ತಾನೆ. ಈ ಲಕ್ಷ್ಯವು ನಿಜವಾಗಿಯೂ ಅನುಪಮವಾದುದು. ಅದಕ್ಕೆ

ಹೋಲಿಸಲು ಇನ್ನೊಂದಿಲ್ಲ. ಅದು ಅದೇ ಸರಿ. ಅದು ಅನುಪಮವಾದುದು. ಅದು ಬ್ರಹ್ಮಾನಂದ ಸ್ಥಿತಿ. ಅದು ಅಮೃತ ನಿಧಿ. ಗುರುವೆಂಬ ಧೇನುವು ವರಶಿಷ್ಯನಿಗೆ ಕರುಣೆ ತೋರಿ ಅನುಪಮವಾದ ಲಕ್ಷವೆಂಬ ಅಮೃತವನ್ನು ಈಯುತ್ತದೆ. ಇದು ಸತ್ಯವಾಗಿದೆ.

ಆ. ಅಳವಿಗೆಟುಕದ ಪದ ಆ ಬ್ರಹ್ಮವೆಂದರು.
ಹೊಂದಲಾರರೆಂದು ಅಂದರಿಹದಿ .
ಗುರು ಕರುಣೆ ಹೊಂದಲು ಕೂಡಿಬಾರದೇನು ?
ವಿಶ್ವದಾಭಿರಾಮ ಕೇಳು ವೇಮ.

ಬ್ರಹ್ಮ ಪದವು ಮಾತು ಮನಂಗಳಿಂದತ್ತತ್ತ ಮೀರಿದುದಾಗಿದೆ. 'ಅಪ್ರಾಪ್ಯ ಮನಸಾ ಸಹ'. ಅಂದರೆ ಮನಸ್ಸಿನಿಂದಲೂ ಪ್ರಾಪ್ತಿ ಮಾಡಿಕೊಳ್ಳಲಾರದ್ದು ಎಂದು ಶ್ರುತಿಗಳೂ ಹೇಳುತ್ತಿವೆ. ಅಳವಿಗೆಟುಕದ ಪದವು ಆ ಬ್ರಹ್ಮ. ಆದುದರಿಂದ ಸಾಮಾನ್ಯರು ಅದನ್ನು ಹೊಂದಲಾರರು ಎನ್ನುತ್ತಾರೆ. ಹಾಗಾದರೆ ಅದನ್ನು ಹೊಂದಲು ಉಪಾಯವೇನು ? ಗುರು ಕರುಣೆ ಹೊಂದಿದರೆ ಸಾಕು. ಬ್ರಹ್ಮಪ್ರಾಪ್ತಿಯು ಕೈಗೂಡದಿರುವುದೇ ?

ಆ. ಶಾಂತ ಮನಸ್ಸಿನವ ಶೀತದಂಶವಿಹನ,
ಪರಿಯಂತಿರುವನು ಪರಮಯೋಗಿ.
ಅಂಥವನು ಮುಕ್ತಿಯ ಅತಿ ಬೇಗ ಹೊಂದುವ.
ವಿಶ್ವದಾಭಿರಾಮ ಕೇಳು ವೇಮ.

ಪರಮಯೋಗಿಯ ಮನಸ್ಸು ಸಮಾಧಾನದಿಂದ ಇರುತ್ತದೆ. ನಿಸ್ತರಂಗವಾಗಿರುತ್ತದೆ. ಶಾಂತವಿರುತ್ತದೆ. ಅವನು ತೃಪ್ತನಾಗಿರುವನು. ಉದಾಸೀನನಾಗಿರುವನು. ಚಂದ್ರನಂತೆ ಶೀತದಂಶವಾಗಿರುವನು. ಅಂಥ ಸ್ವಭಾವದವನಿಗೆ ಮುಕ್ತಿಯು ಅತಿ ಬೇಗ ಪ್ರಾಪ್ತವಾಗುವುದು. ಅವನು ಮಾತ್ರ ಇತರರ ಅಜ್ಞಾನಾಂಧಕಾರವನ್ನು ನಿವಾರಿಸುವ ಗುರುವಾಗಬಲ್ಲನು.

ಆ. ದೇಹವಾತ್ಮ ರೂಪ ತಿಳಿಸಿ ಬಿಚ್ಚಿ ಹೇಳಿ,
ಅವನಿ ನೋಟ ನೋಡಿಸುವವನೆ ಗುರು.
ಭ್ರಮರ ತನ್ನ ರೂಪ ಕೀಟಕಿತ್ತ ರೀತಿ.
ವಿಶ್ವದಾಭಿರಾಮ ಕೇಳು ವೇಮ.

ದೇಹವು ಜಡ, ಆತ್ಮವು ಚೈತನ್ಯ. ದೇಹವು ಸ್ಥೂಲ ; ಆತ್ಮವು ಸೂಕ್ಷ್ಮಾತಿ ಸೂಕ್ಷ್ಮ. ದೇಹವು ಅರುಹಿಸಿಕೊಳ್ಳುವಂಥಹುದು. ಆತ್ಮವು ಸರ್ವವನ್ನು ಅರಿಯುವಂಥಹುದು. ಹೀಗೆ ವಿವಿಧ ಬಗೆಯಿಂದ ದೇಹ ರೂಪ ಮತ್ತು ಆತ್ಮರೂಪಗಳನ್ನು ತಿಳಿಸಿ, ಬಿಚ್ಚಿ ಹೇಳಿ, ಅವನಿ ನೋಟವನ್ನು ನೋಡಿಸುವವನೇ ಗುರುವು. ಭ್ರಮರವೊಂದು ಕೀಟಕ್ಕೆ ಕಾಣಿಸಿಕೊಂಡು ಭಯ ಹುಟ್ಟಿಸುತ್ತದೆ. ಭಯಗ್ರಸ್ತ ಕೀಟದ ಗ್ರಂಥಿಗಳಿಂದ ರಸವು ಸ್ರವಿಸಿ, ಅದೂ ಸಹ ರೆಕ್ಕೆ ಮೂಡಿ ಭ್ರಮರವೇ ಆಗುತ್ತದೆ. ಅದೇ ರೀತಿ ಗುರುಮಹಿಮೆಯನ್ನು ಕಂಡು ಮೊದಮೊದಲು ಭೀತನಾದ ಶಿಷ್ಯನು ಕೊನೆಗೆ ಗುರುವಿನಲ್ಲಿ ಶರಣು ಕೋರಿ ಗುರುವಿನಂತಾಗುತ್ತಾನೆ. ಭ್ರಮರ ತನ್ನ ರೂಪವನ್ನು ಕೀಟಕ್ಕಿತ್ತ ರೀತಿಯಾಗುತ್ತದೆ.

ಆ. ಗುರುವೆ ತಾನಾಗುವ ಹರನ ತೋರುವವನು,
ಬ್ರಹ್ಮಲೋಕವನೆ ಪ್ರತ್ಯಕ್ಷಿಸುವ.
ಕಿಂಕರನ ಶೋಧಿಸಿ ಕತ್ತಲೆಯ ತೊಡೆವನು.
ವಿಶ್ವದಾಭಿರಾಮ ಕೇಳು ವೇಮ.

'ಹರತಿ ಇತಿ ಹರಃ'. ಯಾರು ಮನವನ್ನು ತನಗೆ ಅರಿವಾಗದಂತೆ ಕದ್ದೊಯ್ಯುವನೋ, ಅವನೇ ಹರನು. ಇಂಥ ಮನವನ್ನು ಕದ್ದೊಯ್ಯುವ ಸತ್ತೆಯನ್ನು ತೋರುವವನೇ ತಾನು ಗುರುವಾಗುತ್ತಾನೆ. ಲೋಕವೆಂದರೆ ಅನುಭವ ಕ್ಷೇತ್ರ. ಬ್ರಹ್ಮಲೋಕವೆಂದರೆ ಮನದ ಆಚೆಯ ಅನುಭವ ಕ್ಷೇತ್ರ. ಹರನನ್ನು ತೋರುವ ಗುರುವು ಬ್ರಹ್ಮಲೋಕವನ್ನು ಪ್ರತ್ಯಕ್ಷಿಸುವನು. ತನ್ನಲ್ಲಿ ಶರಣುಕೋರಿ ಸೇವೆ ಮಾಡುವ ಕಿಂಕರನನ್ನು ಶೋಧಿಸಿ, ಅವನಿಗೆ ಗುರುವು ಮಾರ್ಗದರ್ಶಕನಾಗುತ್ತಾನೆ. ಅವನ ಅಜ್ಞಾನದ ಕತ್ತಲೆಯನ್ನು ತೊಡೆಯುತ್ತಾನೆ.

ಆ. ಗುರುವು ಹೇಳಿದ ವಿದ್ಯೆ ಗುರುವಿಗೇ ತಿಳಿವುದು.
ಗುರುವು ಹೇಳುವ ವಿದ್ಯೆ ಗುರುವು ಅರಿವ.
ಗುರುವಿನ ಮಹಿಮೆ ಪರಮ ಗುರುವಿಗೇ ತಿಳಿವುದು.
ವಿಶ್ವದಾಭಿರಾಮ ಕೇಳು ವೇಮ.

'ಸಾ ವಿದ್ಯಾ ಯಾ ವಿಮುಕ್ತಯೇ'. ಅಂದರೆ ಯಾವುದು (ಬಂಧನದಿಂದ) ವಿಮುಕ್ತಗೊಳಿಸುವುದೋ, ಅದೇ ವಿದ್ಯೆ ಎನಿಸುತ್ತದೆ. ಅಂಧಕಾರ ನಿವಾರಕನಾದ ಗುರುವು ಹೇಳಿದ ವಿದ್ಯೆಯು ಬದ್ಧರಿಗೆ ತಿಳಿಯಲಾರದು. ಅದನ್ನು ಆ ಮಟ್ಟದವರೇ ತಿಳಿಯಬಲ್ಲರು. ಗುರುವು ಹೇಳಿದ ವಿದ್ಯೆಯು ಗುರುವಿಗೇ ತಿಳಿಯುತ್ತದೆ. ಹರನನ್ನು ತೋರುವ ಅಂದರೆ ಮನಸ್ಸನ್ನು ಲಯಗೊಳಿಸುವ ವಿದ್ಯೆಯನ್ನು ಗುರುವು ಹೇಳುವನು. ಇದನ್ನು ಅಜ್ಞಾನಾಂಧಕಾರವನ್ನು ನಿವಾರಿಸಿಕೊಂಡ ಗುರುವು ಮಾತ್ರ ಅರಿಯುತ್ತಾನೆ. ಗುರುವಿನ ನಿಲುಮೆ, ಗರಿಮೆ, ಮಹಿಮೆಗಳು ಅಪಾರ, ಅಗಾಧ. ಅವುಗಳನ್ನು ಸಾಮಾನ್ಯರು ಅರಿಯರು. ಪರಮ ಗುರುವು ಮಾತ್ರ ಅರಿಯಬಲ್ಲನು.

ಆ. ಗುರುವು ಇರದೆ ವಿದ್ಯೆ ಗುರುತಾಗಿ ದೊರಕದು,
ದೊರೆಯು ಇರದೆ ಧರೆಗೆ ತೃಪ್ತಿ ಇಲ್ಲ.
ಗುರುವು ವಿದ್ಯೆ ಇರದೆ, ಗುರುತರ ದ್ವಿಜನೆಂತು ?
ವಿಶ್ವದಾಭಿರಾಮ ಕೇಳು ವೇಮ.

ಅಂಧಕಾರ ನಿವಾರಕನಾದ ಗುರುವು ಇಲ್ಲದಿದ್ದರೆ, ವಿಮುಕ್ತಗೊಳಿಸುವ ವಿದ್ಯೆಯು ಹೆಚ್ಚಾಗಿ ಸಿಕ್ಕಲಾರದು. ಪ್ರಜೆಗಳ ಸುಖ ಸಮೃದ್ಧಿಗಳನ್ನು ಬಯಸುವ ಮತ್ತು ಅವರನ್ನು ರಕ್ಷಿಸುವ ದೊರೆಯು ಇಲ್ಲದಿದ್ದರೆ, ಹೇಗೆ ಧರೆಗೆ ತೃಪ್ತಿ ಇಲ್ಲವೋ, ಆ ರೀತಿ ಶಿಷ್ಯನ ವಿಕಾಸ, ಉನ್ನತಿಗಳನ್ನು ಬಯಸಿ ಅವನ ಹಿತ ರಕ್ಷಿಸುವ ಗುರುವು ಇಲ್ಲದೆ ತೃಪ್ತಿ ಇಲ್ಲ. 'ಜನ್ಮನಾ ಜಾಯತೇ ಶೂದ್ರಃ, ಸಂಸ್ಕಾರಾತ್ ದ್ವಿಜ ಉಚ್ಯತೇ'. ಅಂದರೆ ಎಲ್ಲರೂ ಹುಟ್ಟಿನಿಂದ ಶೂದ್ರರೇ. ಸಂಸ್ಕಾರ ಪಡೆದು ದ್ವಿಜನಾಗುತ್ತಾನೆ. ದ್ವಿಜ ಎಂದರೆ ಎರಡನೆಯ ಹುಟ್ಟು.

ಮೊದಲನೆಯದು ಲೌಕಿಕ ಕ್ಷೇತ್ರದಲ್ಲಿಯ ಹುಟ್ಟು. ಎರಡನೆಯದು ಆಧ್ಯಾತ್ಮಿಕ ಕ್ಷೇತ್ರದಲ್ಲಿಯ ಹುಟ್ಟು. ಇದಕ್ಕೆ ಸಂಸ್ಕಾರ ಬೇಕು. ಗುರುದೀಕ್ಷೆಯ ಸಂಸ್ಕಾರ ಬೇಕು. ಆದ್ದರಿಂದ ಗುರುವಿದ್ದೆ ಇರದೆ ಶ್ರೇಷ್ಠನಾದ ದ್ವಿಜನು ಹೇಗಾಗಬಲ್ಲನು ?

ಆ. ಗುರುವಿನ ಶಿಕ್ಷೆ ಇರದೆ ಗುರುತು ದೊರೆವುದೆಂತು ?
ಅಜನೆ ಇರಲಿ ; ಅವನ ಅಪ್ಪನಿರಲಿ ;
ಬೀಗದ ಕೈ ಇರದೆ ಬೀಗ ತೆರೆವುದೆಂತು ?
ವಿಶ್ವದಾಭಿರಾಮ ಕೇಳು ವೇಮ.

ಯಾರೇ ಇರಲಿ ; ಎಷ್ಟೇ ದೊಡ್ಡವರಾಗಿರಲಿ, ಅರ್ಥಾತ್ ಅಜನೇ ಇರಲಿ, ಅವನ ಅಪ್ಪನೇ ಇರಲಿ ; ದಾರಿ ಹಿಡಿಯಬೇಕಾದರೆ ಗುರುತು ಬೇಕು. ಮುಕ್ತನಾಗುವ ಮಾರ್ಗದ ಗುರುತು ಎಂದರೆ ಧ್ಯಾನ ಸಾಧನೆಗೆ ಬೇಕಾದ ಲಕ್ಷ್ಯ ವಸ್ತು. ಈ ಗುರುತು ಹಿಡಿಯಬೇಕಾದರೆ ಗುರುವಿನಿಂದ ಶಿಕ್ಷಣವು ಬೇಕೇ ಬೇಕು. ಅಜ್ಞಾನದ ಬಂದೀಖಾನೆಗೆ ಆವರಣೇ ಮಲದ ಬೀಗ ಬಿದ್ದಿದೆ. ಗುರುದೀಕ್ಷೆಯೇ ಆ ಬೀಗವನ್ನು ತೆರೆಯುವ ಕೈ. ಬೀಗದ ಕೈ ಇರದೆ ಬೀಗ ತೆರೆವುದೆಂತು ?

ಆ. ಕೇಡಿ ಗುಣಗಳೆಲ್ಲ ಕೈ ಹಿಡಿದು ಶಿಕ್ಷಿಸಿ,
ಪರಮ ಪದವಿ ಸಿದ್ಧ, ಪ್ರಾಪ್ತಿ ಕಾಣು.
ಅಂಥ ಗುರುವ ಬೇಡಿ ಅಪರೋಕ್ಷವ ಹೊಂದು,
ವಿಶ್ವದಾಭಿರಾಮ ಕೇಳು ವೇಮ.

ಕಾಮ ಕ್ರೋಧಾದಿ ಅರಿಷಡ್ವರ್ಗಗಳು, ಭಯ, ಶಂಕೆ ಮೊದಲಾದ ಸಪ್ತ ವ್ಯಸನಗಳು ಕೇಡಿ ಗುಣಗಳು. ಇವು ಮಾನವ ಮನವನ್ನು ಬಂಧಿಸುವ ಹಗ್ಗ ಅಂದರೆ ಗುಣಗಳು. ಬಂಧನದಿಂದ ಬಿಡುಗಡೆ ಇಲ್ಲವೆ ವಿಮುಕ್ತಿಯ ದಾರಿಯಲ್ಲಿ ಕಂಟಕಗಳಾಗಿರುವುದರಿಂದ ಕೇಡಿ ಗುಣಗಳು. ಈ ಅಜ್ಞಾನವೆಂಬ ಅಂಧಕಾರವನ್ನು ನಿವಾರಿಸುವ ಗುರುವು, ಇಂಥ ಕೇಡಿ ಗುಣಗಳನ್ನು ತೊರೆಯುವಂತೆ ಕೈಹಿಡಿದು ಶಿಕ್ಷಿಸುತ್ತಾನೆ. ತಿಳಿ ಹೇಳುತ್ತಾನೆ. ಆಗ ನಿರಾತಂಕವಾದ ದಾರಿಯಲ್ಲಿ ಸಾಧನ ಸಾಗಿಸಿ, ಪರಮ ಪದವಿಯಾದ ಆತ್ಮ ಸಾಕ್ಷಾತ್ಕಾರವು ಸಿದ್ಧಿಸುತ್ತದೆ. ಮುಕ್ತಿ ಸ್ಥಿತಿ ಪ್ರಾಪ್ತವಾಗುತ್ತದೆ. ಅಂಥ ಅಂಧಕಾರ ನಿವಾರಕನಾದ ಗುರುವನ್ನು ಸಂಧಿಸಿ, ಬೇಡಿಕೊಳ್ಳಬೇಕು. ಅವನ ಕರುಣೆಗೆ ಪಾತ್ರನಾಗಬೇಕು. ಮತ್ತು ಅಪರೋಕ್ಷವನ್ನು ಹೊಂದಬೇಕು. ಪರೋಕ್ಷ ಎಂದರೆ ಪ್ರತ್ಯಕ್ಷವಲ್ಲದ, ಜ್ಞಾನ. ಅಪರೋಕ್ಷ ಎಂದರೆ ಸಾಕ್ಷಾತ್‌ಕಾರ. ನೇರ ಅನುಭವ. ಸ್ವಾನುಭವ ಸಿದ್ಧಿ.

ಗುರುವಿನಲಿ ಶರಣು :

ಆ. ಎಡೆಬಿಡದೆ ಗುರುವನು ಬೇಡಿ, ಬೇಸರಿಯದೆ,
ಸ್ಥಿರತೆಯಿಂದ ಪೂಜೆ ಸಲಿಸಿ ಸಲಿಸಿ,
ಪರವ ಕಾಣುವವನು ಪರಿಪೂರ್ಣ ಯೋಗಿಯು.
ವಿಶ್ವದಾಭಿರಾಮ ಕೇಳು ವೇಮ.

ತನ್ನನ್ನು ಅರಿಷಡ್ವರ್ಗಗಳಿಂದ, ಸಪ್ತವ್ಯಸನಗಳಿಂದ, ಬಿಡುಗಡೆ ಮಾಡು ಎಂದು ಅಂಧಕಾರ ನಿವಾರಕನಾದ ಗುರುವನ್ನು ಬೇಸರಪಡದೆ, ಎಡೆಬಿಡದ, ಬೇಡಿಕೊಳ್ಳಬೇಕು. ಮತ್ತು ಸ್ಥಿರಬುದ್ಧಿಯಿಂದ ಪೂಜೆ ಅಂದರೆ ಶ್ರದ್ಧಾಭಕ್ತಿಗಳಿಂದ ಸೇವೆ ಸಲ್ಲಿಸುತ್ತಿರಬೇಕು. ಹೀಗೆ ಮಾಡುವ ಸಂಪೂರ್ಣ ಯೋಗಿಯು ಪರವನ್ನು ಕಾಣುತ್ತಾನೆ. ಇಹದ ಬಂಧನಗಳಿಂದ ಮುಕ್ತನಾಗುತ್ತಾನೆ.

ಆ. 'ತಿಳಿಸು ಅಯ್ಯ' ಎಂದು, 'ದೇವರು ನೀ' ವೆಂದು,
ಬೆನ್ನು ಬಿದ್ದ ಜನರ ಬವಣೆ ನೀಗೆ,
ಯಾವನಿರಲಿ ಹೇಳ್ವ ಏನಾದರೊಂದನು.
ವಿಶ್ವದಾಭಿರಾಮ ಕೇಳು ವೇಮ.

ಗುರು ಎಂದರೆ ಅಂಧಕಾರ ನಿವಾರಕ ತಾನೇ ? ಅವನು ಅಜ್ಞಾನವೆಂಬ ಅಂಧಕಾರವನ್ನು ನಿವಾರಿಸತ್ತಾನೆ. ಅಂಥವನಲ್ಲಿ ಶರಣು ಕೋರಿ, ಬೆನ್ನು ಹತ್ತಿ, ಅಯ್ಯಾ ನೀನೇ ದೇವರು. ನಮಗೆ ಮುಕ್ತಿಯ ಮಾರ್ಗ ತಿಳಿಸು ; ಎಂದು ಬೆನ್ನಿಗೆ ಬಿದ್ದರೆ, ಅಂಥ ಜನರ ಬವಣೆಯನ್ನು ನೀಗಲು, ಯಾವನೇ ಗುರುವಿರಲಿ ಏನಾದರೊಂದು ಉಪಾಯವನ್ನು ತಿಳಿಸಿ ಹೇಳುತ್ತಾನೆ.

ಆ. ಊಳಿಗವನು ಮಾಡಿ ಉಬ್ಬಿಸಿ ಗುರುವನ್ನು,
ಕೂಡಿ ಹೊಂದಬೇಕು, ಕೋರ್ಕೆಯಡಗಿ.
ಬೇಡಿ ಪರಮ ಪದವಿ, ಬೆಳಗುತ ನೋಡಿರೋ.
ವಿಶ್ವದಾಭಿರಾಮ ಕೇಳು ವೇಮ.

ಶ್ರದ್ಧಾಭಕ್ತಿಗಳಿಂದೊಡಗೂಡಿ ಗುರುವಿನ ಸೇವೆಯನ್ನು ಮಾಡಬೇಕು. ಗುರುವಿನಲ್ಲಿ ಹರ್ಷ ಸ್ಫುರಿಸುವಂತೆ ಸ್ತುತಿಸಿ ಉಬ್ಬಿಸಬೇಕು. ಅವನನ್ನು ಕೂಡಿಕೊಂಡು ಅವನ ರೀತಿ ನೀತಿಗಳಿಗೆ ಹೊಂದಿಕೊಳ್ಳಬೇಕು. ಮತ್ತು ಮನಸ್ಸಿನ ಕೋರಿಕೆಗಳನ್ನೆಲ್ಲ ಅಡಗಿಸಬೇಕು. ಆಗ ಪರಮ ಪದವಿಗಾಗಿ ಅಂದರೆ ಮನಸ್ಸಿನ ಕೋರಿಕೆಗಳನ್ನು ಮೀರಿದ ಆತ್ಮ ಸಾಕ್ಷಾತ್ಕಾರದ ಪದವಿಗಾಗಿ ಬೇಡಿಕೊಂಡು ಚಿಜ್ಯೋತಿಯನ್ನು ಬೆಳಗಿಸಿಕೊಂಡು ನೋಡಿರಯ್ಯ !

ಆ. ಸೋತು ಹೋಗಿ ಗುರುವ, ಸಲೆ ಹಿಡಿದು ಬಿಡದಿರೆ,
ಚಿಕ್ಕ ಬಲಗೂಡಿಸಿ, ಚಿಂತೆ ಬಿಟ್ಟು,
ಕುದುರಿದವನೆ ಮುಕ್ತಿ ಕಂಡವನು ಕಾಣಾ.
ವಿಶ್ವದಾಭಿರಾಮ ಕೇಳು ವೇಮ.

ಸಪ್ತ ವ್ಯಸನಗಳಲ್ಲಿ ಸಿಲುಕಿ, ಅರಿಷಡ್ವರ್ಗಗಳೊಡನೆ ಹೋರಿ ಸೋತು ಹೋಗಿ ಈ ಜಡದ ಬಂಧನದಿಂದ ಬಿಡಿಸಿಕೊಳ್ಳಲು ಸರಿಯಾಗಿ ಗುರುವನ್ನು ಹಿಡಿದು ಅವನನ್ನು ಬಿಡದೆ ಇರಬೇಕು. ನಂತರ ಅವನ ಉಪದೇಶಾನುಸಾರ ತನ್ನ ಆಂತರ್ಯದಲ್ಲಿರುವ ಚಿಕ್ಕ ಬಲವನ್ನು ಕೂಡಿಸಿಕೊಂಡು ಸ್ಥೈರ್ಯ ಹೊಂದಬೇಕು. ಸಹನೆಯಿಂದ ಬಾಳುತ್ತ ತನ್ನ ಮನವನ್ನು ಕೊರೆಯುವ ಪ್ರಾಪಂಚಿಕ ಚಿಂತೆಯನ್ನು ಬಿಡಬೇಕು. ಶಿವನ ಕರುಣೆಯಿರದೆ

ಮರದೆಲೆಯೂ ಅಲುಗದು ; ಎಂಬ ಸತ್ಯವರಿತು ಸರ್ವವೂ ಶಿವಮಯವಾಗಿದೆ ಎಂಬ ಅರಿವು ಕುದುರಿದವನೆ, ಪ್ರಾಪಂಚಿಕ ಚಿಂತೆಗಳಿಂದ ಮುಕ್ತಿ ಕಂಡವನು ಎಂದು ಕಾಣು.

ಗುರು ಸೇವೆ :

ಆ. ಸೇವೆ ಗೆಯ್ದು ಗುರುವ, ಸ್ಥಿರ ಭಾವ ಹೊಂದಿ,
ದಾರಿಗಂಟಿ, ಜ್ಞಪ್ತಿ ತೊಲಗದನಕ,
ಭಾವದಲಿ ಪರವ ಪರಿಕಿಸಿ ಕಾಣುವರೆ ?
ವಿಶ್ವದಾಭಿರಾಮ ಕೇಳು ವೇಮ.

ಮಾನವನು ಮನದ ಉಚ್ಚ ವಿಭಾಗದಲ್ಲಿ ಯಾವ ಸಂರಚನೆಯನ್ನು ನಿರ್ಮಿಸಿ-ಟ್ಟಿರುವನೋ, ಆ ಸಂರಚನೆಯು ಚಿಂತನದ ವ್ಯಾವಹಾರಿಕ ಅಂಶವನ್ನು ಪ್ರೇರೇಪಿಸುತ್ತದೆ. ಆ ಸಂರಚನೆಯೇ ಮಾನವನ ವ್ಯಕ್ತಿತ್ವವನ್ನು ನಿರ್ಮಿಸುತ್ತದೆ. ಆ ಸಂರಚನೆಗೆ ಭಾವ ಎನ್ನುತ್ತಾರೆ.

ಶುದ್ಧ ಸತ್ವ ವಿಶೇಷಾದ್ಯಾ ಪ್ರೇಮ ಸೂರ್ಯಾಂಶೂ ಸಾಮ್ಯಭಾಕ್ ॥
ರುಚಿಭಿಶ್ಚಿತ್ತಮಾಸೃಣ್ಯ ಕೃದಸೌ ಭಾವ ಉಚ್ಯತೇ ॥

ಅಂದರೆ, ಯಾವುದು ಒರ್ವನನ್ನು ವಿಶೇಷವಾಗಿ ಶುದ್ಧ ಸತ್ವವನ್ನಾಗಿಸುವುದೋ, ಮತ್ತು ಪ್ರೇಮ ಸೂರ್ಯನು ಬೆಳಗುವಂತೆ ಮಾಡುವುದೋ, ಯಾವುದು ಮನವನ್ನು ಭಕ್ತಿ ಕಿರಣಗಳಿಂದ ಬೆಳಗುವುದೋ, ಅದಕ್ಕೆ ಭಾವ ಎನ್ನುತ್ತಾರೆ.

ಪರಮ ತತ್ವವಾದ ಪರಮ ಪುರುಷನು ಮಾತು ಮನಗಳಿಗೆ ಅತೀತನಾಗಿದ್ದಾನೆ. ಆದ್ದರಿಂದ ಅವನು ಭಾವಾತೀತನಾಗಿದ್ದಾನೆ. ಈಗ ಭಾವ ಶಬ್ದದ ಅರ್ಥ ತಿಳಿದ ಮೇಲೆ ಪದ್ಯದ ಟೀಕಾರ್ಥದತ್ತ ಹೊರಳುವಾ:

ಗುರುವಿನ ಸೇವೆ ಮಾಡಬೇಕು. ಸೇವೆಯು ಸ್ವಾರ್ಥವಿಲ್ಲದ ಕಾರ್ಯವಾಗಿದೆ. ಇಂಥ ಕ್ರಿಯೆಯಲ್ಲಿ ಸ್ಥಿರಭಾವವನ್ನು ಹೊಂದಿ, ಮನವನ್ನು ಏಕಾಗ್ರಗೊಳಿಸುವ ದಾರಿಯಲ್ಲಿ ಮುನ್ನಡೆಯಬೇಕು. ಆಗ ಜ್ಞಪ್ತಿಯು ತೊಲಗುತ್ತದೆ. ಭಾವಾತೀತ ಅವಸ್ಥೆಯನ್ನು ತಲುಪಬಹುದು. ಸವಿಕಲ್ಪ ಸಮಾಧಿಯು ಸಹ ಭಾವಾತೀತ ಅವಸ್ಥೆಯಲ್ಲ, ನಿರ್ವಿಕಲ್ಪ ಸ್ಥಿತಿಯೇ ಭಾವಾತೀತ ಅವಸ್ಥೆಯಾಗಿದೆ. ಇದುವೇ ಅಂತಿಮ ಗುರಿಯಾಗಿರಬೇಕು. ಜ್ಞಪ್ತಿ ಇರುವ ವರೆಗೆ ಭಾವವಿರುತ್ತದೆ. ಆದ್ದರಿಂದ ಭಾವದಲ್ಲಿ ಪರವನ್ನು ಪರೀಕ್ಷಿಸಿ ಕಾಣುವರೇ? ಇಲ್ಲ. ಅದರಾಚೆಗೆ ನಿರ್ವಿಕಲ್ಪ ಅವಸ್ಥೆಗೆ ತಲುಪಬೇಕು.

ಆ. ಉಬ್ಬಿ ಗುರುವ ಬೇಡಿ, ಉಳಿಸಿ ನಂಬುಗೆಯನು,
ಮಿಥ್ಯೆ ನುಡಿಯಬೇಡ ; ತತ್ತರಿಸುತ.
ನಿಶ್ಚಯಿಸಿ ಮನದಲಿ ನಿರ್ವಿಣ್ಣತನ ಕಾಣು.
ವಿಶ್ವದಾಭಿರಾಮ ಕೇಳು ವೇಮ.

ಮುಕ್ತಿಯ ಆಕಾಂಕ್ಷೆ ಇರುವವನಿಗೆ ಸದ್ಗುರುವಿನ ಸಂಗ ಲಭಿಸುತ್ತದೆ. ಆಗ

ಅವನು ಸಂತಸಭರಿತನಾಗಿ ಉಬ್ಬುತ್ತಾನೆ. ಉಬ್ಬಿ ಗುರುವನ್ನು ಮಾರ್ಗದರ್ಶನಕ್ಕಾಗಿ ಬೇಡಿಕೊಳ್ಳಬೇಕು. ಅವನು ಕೆಲವೊಂದು ಆಚಾರ ವಿಧಿಗಳನ್ನು ಬೋಧಿಸುತ್ತಾನೆ. ಅವುಗಳನ್ನು ಶ್ರದ್ಧೆಯಿಂದ ಆಚರಿಸಬೇಕು. ಹೀಗೆ ಪ್ರಾಮಾಣಿಕ ಅನುಸರಣೆಯಲ್ಲಿ ನಂಬುಗೆಯನ್ನು ಉಳಿಸಿಕೊಳ್ಳಬೇಕು. ಈ ಕುರಿತು ಲೋಪವಾದಲ್ಲಿ, ಗುರುವು ವಿಚಾರಿಸಿದಾಗ, ತತ್ತರಿಸುತ್ತ ಮಿಥ್ಯೆ ನುಡಿಯಬೇಡ. ತಪ್ಪೊಪ್ಪಿಗೆಯನ್ನು ಮನದಲ್ಲಿ ನಿಶ್ಚಯಿಸಿ, ನಮ್ರತೆಯನ್ನು ಕಾಣು. ಗುರುವು ಕ್ಷಮಿಸುತ್ತಾನೆ.

ಗೀತ : ತಡವ ಮಾಡದೆ, ಗುರುಸೇವೆ, ದಾನ ಮಾಡಿ,
ಯೋಗ ಯೋಗಾಂಗಗಳ ಕಲಿತ ಯೋಗಿಯಾಗಿ,
ಆಶೆಗಳ ತ್ಯಜಿಸುತಿಹುದೆ ಅಚಲ ತಪವು.
ಸಿದ್ಧಿ ಹೊಂದುವವನು ಮುಕ್ತಿ ಸೇರ್ವ ವೇಮ.

ಗುರುವನ್ನು ಸಂಧಿಸಿದೊಡನೆ ಗುರು ಸೇವೆಯನ್ನು ಮಾಡುವಲ್ಲಿ ತಡ ಮಾಡಕೂಡದು. ಅವನ ಮಾರ್ಗದರ್ಶನದಲ್ಲಿ ಯೋಗ ಯೋಗಾಂಗಗಳನ್ನು ಕಲಿಯಬೇಕು. ಯಮ, ನಿಯಮ, ಆಸನ, ಪ್ರಾಣಾಯಾವ, ಪತ್ಯಾಹಾರ, ಧಾರಣ, ಧ್ಯಾನ ಮತ್ತು ಸಮಾಧಿಗಳೆಂಬ ಅಷ್ಟ ಅಂಗಗಳನ್ನು ಕ್ರಮವಾಗಿ ಅಭ್ಯಾಸ ಮಾಡಬೇಕು. ಹೀಗೆ ಅಭ್ಯಾಸಪರನಾದ ಯೋಗಿಯಾಗಬೇಕು. ಅತಿ ಮುಖ್ಯವಾಗಿ ಮನದ ಆಸೆಗಳನ್ನು ಬಿಡಬೇಕು. ಹೀಗೆ ಮಾಡುವುದೇ ಅಚಲ ತಪವಾಗಿದೆ. ಇಂಥ ತಪಸ್ಸಿನಿಂದ ಮನಸ್ಸು ಶುದ್ಧವಾಗಿ ಶಾಂತಿ ಸಮಾಧಾನಗಳನ್ನು ಹೊಂದುತ್ತಾನೆ. ಮತ್ತು ಎಲ್ಲ ಬಂಧನಗಳಿಂದ ಮುಕ್ತನಾಗುತ್ತಾನೆ.

ಗುರುಬೋಧೆ :

ಆ. ಸಾಧನಗಳಿರದೆ ಸಿದ್ಧಿಸದಾವುದು.
ಬೋಧೆ ಇರದೆ ವಿದ್ಯೆ ಬಾರದೆಂದು.
ದೃಢವಾಗಿ ಮನದೊಳು ತಾಳಿ ಭಾವ, ನೋಡು.
ವಿಶ್ವದಾಭಿರಾಮ ಕೇಳು ವೇಮ.

ಸಾಧನೆ ಮಾಡದೆ ಯಾವ ಸಿದ್ಧಿಯೂ ಆಗದು. ಯೋಗ ಸಾಧನೆ ಮಾಡಿದರೆ ಯೋಗವು ಸಿದ್ಧಿಸುತ್ತದೆ. 'ಜೀವಾತ್ಮ ಪರಮಾತ್ಮ ಸಂಯೋಗೋ ಯೋಗ ಇತ್ಯುಚ್ಯತೇ' ಎಂದರೆ ಜೀವಾತ್ಮವು ಪರಮಾತ್ಮನೊಡನೆ ಮೇಳವಿಸುವುದೇ ಯೋಗವೆನಿಸುತ್ತದೆ. ಇದು ಸಿದ್ಧಿಸಬೇಕಾದರೆ, ಜೀವ ಭಾವವನ್ನು ತೊಲಗಿಸಿ, ಸ್ಥೂಲದಿಂದ ಸೂಕ್ಷ್ಮದತ್ತ ಮುನ್ನಡೆಸುವ ಸಾಧನ ಮಾಡಬೇಕು. 'ಸಾ ವಿದ್ಯಾ ಯಾ ವಿಮುಕ್ತಯೇ'. ಯಾವುದು ಬಂಧನದಿಂದ ಮುಕ್ತ ಮಾಡುವುದೋ ಅದುವೇ ವಿದ್ಯೆ ಎನಿಸುತ್ತದೆ. ಈ ವಿದ್ಯೆ ಲಭ್ಯವಾಗಬೇಕಾದರೆ, ಅದನ್ನು ಪಡೆಯುವ ಉಪಾಯಗಳನ್ನು ಕುರಿತು ಬೋಧೆ ಬೇಕು. ಈ ಕುರಿತು ಮನದಲ್ಲಿ ದೃಢವಾಗಿ ಭಾವ ತಾಳಿ ನೋಡಬೇಕು. ಅಂದರೆ ಮನವನ್ನು ಶುದ್ಧ ಸತ್ವವಾಗಿಸುವ ಮತ್ತು ಮನದಲ್ಲಿ ಪ್ರೇಮ ಸೂರ್ಯನನ್ನು ಬೆಳಗಿಸುವ ಸಂರಚನೆಯನ್ನು ಹೊಂದಿ ನೋಡಬೇಕು.

ಗೀತ. ಗುರೂಪದೇಶ ಯುಕ್ತಿಗಳ ಕೂಡಿ ಮೀರಿ,
ಮರೆಯದಂತಿರೆ, ನಿಜವಾಗಿ ಅರಿವನಪ್ಪ.
ಸಾಧಿಸುತಿರುವನು ಶಿವಯೋಗಿ ಸಿದ್ಧಿಯಿಂದ
ಪರವ ಸಾಧಿಸುವುದಾತಗೇರ್ಪಾಟು ವೇಮ.

ಗುರುವು ಸಾಧನ ಮಾರ್ಗವನ್ನು ಉಪದೇಶಿಸುತ್ತಾನೆ. ಆ ಉಪದೇಶವನ್ನು ಯುಕ್ತಿಯ ಒರೆಗೆ ಹಚ್ಚಿ ನೋಡಿ ಸಮ್ಮತಿಸಿ, ಬಳಿಕ ಅದನ್ನೆಂದೂ ಮೀರದೆ, ಮರೆಯದೆ ಇದ್ದರೆ, ಅಂಥವನು ನಿಜವಾಗಿಯೂ ಮಹಿಮನಾಗುತ್ತಾನೆ. ಗುರೂಪದೇಶದಲ್ಲಿ ನಿರ್ದೇಶಿತವಾದ ಲಕ್ಷ್ಯವನ್ನು ಶಿವಯೋಗಿಯು ಸಾಧಿಸಿ ಸಿದ್ಧಿ ಪಡೆಯುತ್ತಾನೆ. ಇಹವನ್ನು ದಾಟಿ ಪರವನ್ನು ಸಾಧಿಸುವುದು ಅವನಿಗೆ ನೆರವೇರುತ್ತದೆ.

ಸೀಸ. ಗುರುಬೋಧೆ ತಿಳಿಯದ ಕುಟಿಲ ಶಾಸ್ತ್ರಂಗಳ
ಪರಿಕಿಸಿದೊಡೆ ಏನು ಫಲವು ಉಂಟು ?
ಆತ್ಮೈಕ್ಯವರಿಯದೆ ಅಖಿಲ ಯೋಗಗಳು
ಸಾಧಿಸುವ ಫಲವೇನು ಸತ್ಯವಾಗಿ ?
ತನ್ಮಯತ್ವವನು ತಾನರಿಯದೆ ನರನು
ಸೇವೆ ಗೆಯ್ದೊಡೆ ಏನು ಸಿದ್ಧಿಯುಂಟೆ ?
ತಮ್ಮ ಕುಂದನರಿಯದೆ ತಾನೊಂದು ಬಹಳ
ಓದಿದ ಫಲವೇನು ಒಪ್ಪವಾಗಿ ?

ತೇಟ. ನುಡಿದ ಸದ್ಗುರು ಬೋಧೆ ನಿತ್ಯವರಿತು,
ಮರೆಯದಿರುವಂಥವರು ಮಾಯಜಾಲ-
ಕಂಟರೆನ್ನುತಿಹರು, ಅಂದವಾಗಿ
ತಿಳಿಸಿ ಹೇಳಿದ ವೇಮನ ದೇಶಿಕಾರ್ಯ.

'ಶಾಸನಾತ್ಃ ಇತಿ ಶಾಸ್ತ್ರಃ'. ಪಾಲಿಸಬೇಕಾದದ್ದು ಶಾಸ್ತ್ರವೆನಿಸುತ್ತದೆ. ಆದರೆ ಕೆಲವು ಶಾಸ್ತ್ರಗಳೆಂದು ಬರೆದವುಗಳು ಅಪ್ರಾಮಾಣಿಕವಾಗಿರಬಹುದು. ಕುಟಿಲವಾಗಿರಬಹುದು. ಆದ್ದರಿಂದ ಗುರುಮುಖದಿಂದ ಶಾಸ್ತ್ರವನ್ನು ಅಭ್ಯಸಿಸಬೇಕೆಂಬ ಹಿತವಚನವಿದೆ. ಆದ್ದರಿಂದ ಗುರುಬೋಧೆ ತಿಳಿಯದೆ ಕುಟಿಲ ಶಾಸ್ತ್ರಗಳನ್ನು ಓದಿದರೆ ಏನು ಫಲ ಉಂಟಾದೀತು ? ಇನ್ನು ಜೀವಾತ್ಮ ಪರಮಾತ್ಮರು ಒಂದಾಗುವುದು ಯೋಗ ತಾನೇ? ಅಂದ ಮೇಲೆ, ಜೀವವು ಆತ್ಮನಲ್ಲಿ ಐಕ್ಯವಾಗುವುದನ್ನು ತಾನು ಅರಿಯದೆ, ಎಲ್ಲ ಯೋಗಗಳಿಂದ ಏನೂ ಫಲವಿಲ್ಲ. ಅಹಂಕಾರ, ಮಮಕಾರಗಳಿಲ್ಲದೆ ಮಾಡುವ ಕ್ರಿಯೆಯೇ ಸೇವೆ ಎನ್ನಿಸುತ್ತದೆ. ಅಂದ ಮೇಲೆ, ತತ್‌ಮಯತೆಯನ್ನು ತಾನು ಅರಿಯದೆ, ಸೇವೆ ಮಾಡುತ್ತೇನೆಂದರೆ ಫಲವೇನು? ತಮ್ಮ ಕುಂದುಗಳನ್ನು ತಾವು ಅರಿಯದಿದ್ದರೆ ಅಂಥ ಸ್ವಾಧ್ಯಾಯ ಇಲ್ಲವೆ ಓದಿನಿಂದ ಏನು ಫಲವು ದೊರಕೀತು ? ನಿತ್ಯವೂ ಸದ್ಗುರು ಬೋಧೆಯನ್ನು ಮರೆಯದೆ ಪಾಲಿಸುವವರು ಮಾಯಾಜಾಲಕ್ಕೆ ಅಂಟರು, ಎನ್ನುತ್ತಾರೆ.

3

ಅದನ್ನೇ ವೇಮನ ದೇಶಿಕಾರ್ಯರು ಅಂದವಾಗಿ ತಿಳಿಸಿ ಹೇಳಿದ್ದಾರೆ.

ಮಂತ್ರ ಸಾಧನೆ :

ಆ. ವಿಶ್ವಕರ್ಮ ಗುರುವು ವಿಶ್ವವಖಿಲಕೆಲ್ಲ.
ಪ್ರಣವ ಮಂತ್ರವೊಂದೆ ಪರಮ ಗುರುವು.
ಕರ್ಮಕಾಗ ಗುರುವು ಗಾಯತ್ರಿ ಮಂತ್ರವೆ.
ವಿಶ್ವದಾಭಿರಾಮ ಕೇಳು ವೇಮ.

ತನ್ನ ಸೃಷ್ಟಿಯ ಸಂಚರ ಮತ್ತು ಪ್ರತಿಸಂಚರ ಧಾರೆಗಳ ಮೂಲಕ ವಿಶ್ವವನ್ನೆಲ್ಲ ಸೃಜಿಸಿದ ವಿಶ್ವಕರ್ಮನೇ ವಿಶ್ವದ ಅಂಧಕಾರ ನಿವಾರಕನಾದ ಗುರು ಆಗಿದ್ದಾನೆ. ಇನ್ನು ಅಂಧಕಾರ ನಿವಾರಕಗಳಲ್ಲಿ ಅತಿ ಶ್ರೇಷ್ಠವಾದದ್ದು ಪ್ರಣವ ಮಂತ್ರವಾಗಿದೆ. 'ಮನನಾತ್ ತ್ರಾಯತೇ ಇತಿ ಮಂತ್ರಃ ಇತ್ಯುಚ್ಯತೇ'. ಅಂದರೆ ಮನನದಿಂದ ಪಾರುಗಾಣಿಸುತ್ತದೆ-ಯಾದ್ದರಿಂದ ಮಂತ್ರವೆನಿಸುತ್ತದೆ. ಪ್ರಣವ ಎಂದರೆ ಓಂಕಾರ.ಇನ್ನು ಹಲವರು ನಿತ್ಯ ನೈಮಿತ್ತಿಕ ಕರ್ಮಗಳಲ್ಲಿ ನಿರತರಾಗಿ ತ್ರಿ ಸಂಧ್ಯೆಗಳಲ್ಲಿ ವ್ರತನಿರತರಾಗಿ ಮನೋಶುದ್ಧಿಗಾಗಿ ಯತ್ನಿಸುತ್ತಾರೆ. ಅವರಿಗೆ ಋಗ್ವೇದದ ಗಾಯತ್ರಿ ಛಂದಸ್ಸಿನಲ್ಲಿ ರಚಿತವಾದ ಸವಿತೃ ದೇವತೆಯನ್ನು ಪ್ರಾರ್ಥಿಸುವ ಮಂತ್ರವು ತಾರಕವಾಗಿದೆ. 'ಓಂ ಭೂರ್ಭುವಸ್ವಃ ಓಂ ತತ್ಸವಿತುರ್ವರೇಣ್ಯಂ, ಭರ್ಗೋ ದೇವಸ್ಯ, ಧೀಮಹೀ ಧಿಯೋ ಯೋನಃ ಪ್ರಚೋದನಾತ್' ಎಂಬ ಗಾಯತ್ರಿ ಮಂತ್ರವೇ ನಿತ್ಯ ಕರ್ಮ ವ್ರತಗಳಿಗಾಗಿ ಪಠ್ಯ ಮಂತ್ರವಾಗಿದೆ.

ಆ. ತಂತ್ರ ಮಂತ್ರಗಳನು, ತಾರಕವನು ಹೊಂದಿ,
ಮಂತ್ರ ಬಲದಿ ಗುರವಿನ ಮಂತ್ರ ಗೆಯ್ದು,
ಚಿಂತನದೊಳಿರೆ, ಸತತ ಚಿನ್ಮಯ ತಲುಪುವನು.
ವಿಶ್ವದಾಭಿರಾಮ ಕೇಳು ವೇಮ.

'ತನ್ ತ್ರಾಯತೇ ಇತಿ ತಂತ್ರಃ'. ಅಂದರೆ ಯಾವುದು ಬೆಳೆದು ವಿಸ್ತರಿಸುವ ಮೂಲಕ ರಕ್ಷಿಸುವುದೋ ಅದು ತಂತ್ರವೆನಿಸುತ್ತದೆ. ತಂತ್ರ ಸಾಧನದಲ್ಲಿ ಹಲವಾರು ಮಂತ್ರಗಳಿವೆ. ಅವುಗಳನ್ನು ಹೊಂದಿ, ಜಡದ ಬಂಧನದಿಂದ ಪಾರುಗಾಣಿಸುವ ತಾರಕ ಮಂತ್ರವಾದ ಓಂಕಾರವನ್ನು ಹೊಂದಿ, ರಹಸ್ಯಪೂರ್ಣ ಅನುಭಾವದ ರೇಖಾಚಿತ್ರವಾದ ಮಂತ್ರದ ಬಲದಿಂದ ದೀಕ್ಷೆ ನೀಡಿದ ಗುರುವಿನ ಮಂತ್ರವನ್ನು ಪಠಣ ಮಾಡಿ, ಗುರೂಪದೇಶದ ಚಿಂತನದೊಳಗೇ ಸತತ ಇದ್ದರೆ, ಅವನು ಚಿನ್ಮಯತೆಯನ್ನು ಅಂದರೆ ಅರಿವಿನಲ್ಲಿ ಮುಳುಗೇಳುವ ಅವಸ್ಥೆಯನ್ನು ತಲುಪುತ್ತಾನೆ.

ಕಂ. ಮಂತ್ರವು ಸದ್ಗುರು ಚಿಂತನ,
ಮಂತ್ರಾರ್ಥವು ಅವನ ವಿನಾಶ ; ಮನ್ಮಯನಿರುತಾ
ಮಂತ್ರಾಧಿಕನಿಹ ಸದ್ಗುರು
ಮಂತ್ರದ ಮೂಲಕ ಕಂಡು ಬಯಲನರಿ ವೇಮಾ.

ತಂತ್ರ ಸಾಧನದಲ್ಲಿ ಸಹಸ್ರಾರ ಚಕ್ರದ ಕೆಳಭಾಗದಲ್ಲಿ ಗುರುಚಕ್ರವಿದೆಯೆಂದು ಗ್ರಹಿಸುತ್ತಾರೆ. ಸಾಧಕನು ಧ್ಯಾನಿಸುವಾಗ ಈ ಚಕ್ರದಲ್ಲಿ ನ್ಯಾಸ ಮಾಡಿ ಗುರುಮೂರ್ತಿಯನ್ನು ಚಿಂತಿಸುತ್ತಾನೆ. ಈ ಚಿಂತನದಿಂದ ಮನಸ್ಸು ಬಂಧನಗಳಿಂದ ಪಾರುಗಾಣುವುದರಿಂದ ಅದು ಮಂತ್ರವೆನಿಸುತ್ತದೆ. ಹೀಗೆ ಸದ್ಗುರು ಚಿಂತನವು ಮಂತ್ರವೇ ಆಗಿದೆ. ಇನ್ನು ಇಂಥ ಮನನ ಇಲ್ಲವೆ ಮಂತ್ರದ ಪ್ರಯೋಜನವೇನು ? ಧ್ಯಾನ ಮೂರ್ತಿಯ ವಿನಾಶವೇ ಆ ಮನನದ ಅರ್ಥ. ಬಳಿಕ ತನಗೆ ಎದುರು ಏನೂ ಇಲ್ಲದೆ ತಾನೇ ತಾನಾಗಿ ಅಂದರೆ ಮನ್ಮಯನಾಗಿ ಇರುತ್ತ, ಮನನದ ಆಚೆಗಿನ ಭಾವಾತೀತ ಸ್ಥಿತಿಯಲ್ಲಿ ಮಂತ್ರಾಧಿಕನಾದ ಸದ್ಗುರುವು ನೆಲೆಸಿರುತ್ತಾನೆ. ಆ ಅಜ್ಞಾನ ನಿವಾರಕನನ್ನು ಮಂತ್ರದ ಮೂಲಕ ಕಂಡು, ಬಯಲನ್ನು ಅರಿ.

ಕಂ. ನಿಜಗುರು ಲಕ್ಷ್ಯವನಿರಿಸುತ,
ಅಜಪಾದಿ ಕ್ರಿಯೆಯ ಮೀರಿ, ಅಳಲನು ಪಡದೇ,
ನಿಜ ನಿರ್ಮಲಾಂತಸ್ಸಂದಿಲಿ,
ಸುಜನನೆನಿಸೆ ತರವು, ಸರಳದಿ, ವೇಮಾ.

ಯೋಗ ಸಾಧನದಲ್ಲಿ ಗುರುಚಕ್ರದಲ್ಲಿ ನ್ಯಾಸ ಮಾಡಿ ನಿಜಗುರುವನ್ನೇ ಲಕ್ಷ್ಯವಾಗಿರಿಸಿಕೊಂಡು ಸಾಗಬೇಕು. ಮಂತ್ರ ಜಪವನ್ನು ವಾಚಿಕ, ಉಪಾಂಶು, ಮಾನಸಿಕ ಮಟ್ಟ ಮೀರಿ ಅಜಪಕ್ರಿಯೆಯನ್ನೂ ಮೀರಿ ಮಾಡಬೇಕು. ಆಗ ಯಾವ ಚಿಂತೆಯನ್ನೂ ಮಾಡದೆ, ಆವರಣೇ ಮತ್ತು ವಿಕ್ಷೇಪ ಮಲಗಳಿಲ್ಲದೆ ನಿರ್ಮಲವಾಗಿ, ಭಾವ, ಭಾವಾತೀತದ ಅಂತಃ ಸಂಧಿಯಲ್ಲಿ ಉಳಿದು ಸುಜನನೆನಿಸಲು ಉತ್ತಮತರವಾಗಿದೆ. ಸರಳ ಮಾರ್ಗವೂ ಆಗಿದೆ.

ಚಂ. ಪರಮ ಗುರುವರ ಮಂತ್ರ ಸಿದ್ಧಿಯ ಪಾಲುಗೊಳ್ಳುತ ಅಪ್ಪರೈ,
ಉರದೊಳಗೆ ಗುರಿ ಬಯಲು ತಾಕುತ, ಒಲಿದು, ಹತ್ತಿಹೊಂದುತಾ.
ಕರತಲಾಮಲಕವದು ಬ್ರಹ್ಮವು, ತೂರಿ ಬಪ್ಪುದು ಪ್ರಜ್ಞೆಯೋಳ್
ಸ್ಥಿರವು ವೇಮನ ಸೇರು ಪದವಿಯ ಸಾಹಸದಿ ಮನದಿರಿಸಿಕೋ.

ಯೋಗ ಸಾಧನೆಯಲ್ಲಿ ಮಂತ್ರ ಪಠಣದಿಂದ ಮಂತ್ರಚೈತನ್ಯವು ಉಂಟಾಗುತ್ತದೆ. ಮಂತ್ರ ಚೈತನ್ಯದಿಂದ ಏಕಾಗ್ರತೆಯು ಸಾಧ್ಯವಾಗುತ್ತದೆ. ಲಕ್ಷ್ಯ ವಸ್ತುವು ನಿಕಟವಾಗುತ್ತದೆ. ಹೀಗೆ ಮಂತ್ರ ಸಿದ್ಧಿಯಾಗುತ್ತದೆ. ಪರಮ ಗುರುವರನು ಮಂತ್ರಸಿದ್ಧಿಯಲ್ಲಿ ಪಾಲುಗೊಳ್ಳುತ್ತ ಗುರುಚಕ್ರದಲ್ಲಿ ಇರುತ್ತಾನೆ. ಸಾಧಕನು ಧ್ಯಾನದ ಗುರಿಯಾದ ಬಯಲನ್ನು ತಾಕುತ್ತ, ಸಾಧಕನ ನಮ್ರ ಭಾವಕ್ಕೆ ಒಲಿದು, ಹತ್ತಿ ಹೊಂದಿಕೊಳ್ಳುತ್ತ ಪರಮ ಗುರುವು ಇರುತ್ತಾನೆ. ಆಗ ಸಾಧಕನಿಗೆ ಬ್ರಹ್ಮವು ಕರಕಲಾಮಲಕ ಅಂದರೆ ಅಂಗೈಯಲ್ಲಿಯ ನೆಲ್ಲಿಕಾಯಿಯಂತೆ ಸ್ಪಷ್ಟವೂ, ಸುಲಭ ಸಾಧ್ಯವೂ ಆಗುತ್ತದೆ. ಮತ್ತು ಅವನ ಪ್ರಜ್ಞೆಯಲ್ಲಿ ತೂರಿ ಬರುತ್ತದೆ. ವೇಮನಾ! ಈ ಸ್ಥಿತಿಯಲ್ಲಿ ಸ್ಥಿರವಾಗಿ ಇದ್ದು, ತತ್ ಪದವಿಯನ್ನು ಸೇರು. ಮತ್ತು ಸಾಹಸದಿಂದ ಅದನ್ನು ಮನದಲ್ಲಿ ಇರಿಸಿಕೋ.

ಕಂ. ನಾಟುತ ಗುರುವರ ಮಂತ್ರವ
ನೀಟದಿ ಮನದಲಿ ಸೇರಿಸಿ ಧೀರನೆನಿಸುತಾ.
ದಾಟು ಸ್ವರೂಪ ಧಾಮಕೆ,
ಕೋಟಿಗೆ ಬೆಂಬತ್ತಲೇಸು, ಕುದುರದು, ವೇಮಾ.

ಸದ್ಗುರುವರನು ಉಪದೇಶಿಸಿದ ಮಂತ್ರವನ್ನು ಮನದಲ್ಲಿ ನೀಟಾಗಿ ನಾಟಿ ಮಾಡಿ, ಧ್ಯಾನ ಲಹರಿಗಳಲ್ಲಿ ಸೇರಿಸಿ, ಯಾವ ಭಯವೂ ಇಲ್ಲದೆ ಧೀರನಾಗಿರಬೇಕು. ಹೀಗೆ ಸಾಧನೆಯ ಬಲದಿಂದ ಚಿತ್ತ ವೃತ್ತಿಗಳನ್ನು ಮೀರಿ, ಕರ್ತೃತ್ವಾಭಿಮಾನವನ್ನು ಮೀರಿ, ಕೊನೆಗೆ ಜ್ಞಪ್ತಿಯನ್ನೂ ಮೀರಿ, ಸ್ವರೂಪ ಧಾಮಕ್ಕೆ ತಲುಪಬೇಕು. ತಾನು ಎಲ್ಲಿಂದ ಬಂದನೋ, ಅದುವೇ ಸ್ವರೂಪಧಾಮ. ಅದುವೇ ಆತ್ಮಧಾಮ. ಹೀಗೆ ಮುನ್ನುಗ್ಗದೆ, ಪ್ರಾರಂಭಿಕ ಹಂತವಾದ ಮೂಗಿನ ತುದಿಯ ಮೇಲೆ ಅಂದರೆ ಕೋಟಿಗೆ ಬೆಂಬತ್ತಿ ಲಕ್ಷವಿರಿಸಿದರೆ, ಜ್ಞಾನವು ಕುದುರದು.

ಗೀ ॥ ಹೆದೆಯೇರಿಸಿ, ರೂಪವ ಹಿಡಿದು, ಗ್ರಹಿಸಿ,
ನಿತ್ಯಬಿಡದೆ, ನಿಜವೆಂದು ನಂಬಿ, ಮುಟ್ಟಿ,
ಚೊಕ್ಕ ನಿರುಕಿಸು ಪೂರ್ಣದಲಿ, ಸಿಕ್ಕಲೆಂದು,
ಕುದುರುವುದುಪಾಯ, ಬೇಡಲು ಗುರುವ ವೇಮ.

ಮನವೆಂಬ ಬಿಲ್ಲಿಗೆ ಮಂತ್ರವೆಂಬ ಬಾಣವನ್ನು ಹೂಡಿ, ಏಕಾಗ್ರತೆಯೆಂಬ ದಾರವನ್ನು ಜಗ್ಗಬೇಕು. ಅಂದರೆ ಹೆದೆಯೇರಿಸಬೇಕು. ಆಗ ಗುರುಚಕ್ರದಲ್ಲಿ ಗುರುಮೂರ್ತಿಯ ರೂಪವನ್ನು ಹಿಡಿದು ಅರಿತುಕೊಳ್ಳಬೇಕು. ಈ ಗ್ರಹಿಕೆಯನ್ನು ನಿತ್ಯವೂ ಬಿಡದೆ ನಿಜವೆಂದು ನಂಬಬೇಕು. ಅದು ಸಿಕ್ಕಲಿ, ಎಂದು ಚೊಕ್ಕವಾಗಿ ಪೂರ್ಣದಲ್ಲಿ ಅಂದರೆ ಅನ್ಯ ಭಾವನೆಗಳಿಗೆಡೆಗೊಡದಂತೆ ನಿರುಕಿಸಬೇಕು. ಆಗ ಗುರುವನ್ನು ಮಾನಸಿಕವಾಗಿ ಬೇಡಿಕೊಂಡರೆ, ಏನಾದರೊಂದು ಉಪಾಯವು ಕುದುರುತ್ತದೆ.

ಆ. ಗುರುವಿನೊಲುಮೆ ಪಡೆದು, ಕಂಡು ನಿಟಿಲ ದುರ್ಗದಿ,
ಕಣ್ಣು ನೋಡಿ ಮರೆಗೆ ಕಡೆಯ ನೋಟ.
ತಾಕಿ ಆತ್ಮ ರೂಪ ತಟ್ಟನೆ ನೋಡಿಕೋ.
ವಿಶ್ವದಾಭಿರಾಮ ಕೇಳು ವೇಮ.

ಗುರುವಿನ ಒಲುಮೆಯನ್ನು ಪಡೆದು, ನಿಟಿಲ ದುರ್ಗದಲ್ಲಿ ಅಂದರೆ ಭ್ರೂಮಧ್ಯೆ ಅರಿವಿನ ಕಣ್ಣಿನಿಂದ ಕಂಡು, ಗುರುವಿನ ಕೃಪಾಕಟಾಕ್ಷಕ್ಕೆ ಪಾತ್ರರಾಗಿಬೇಕು. ಆ ಕೃಪೆಯ ಬಲದಿಂದ ಕೃಪಾದೃಷ್ಟಿಗೆ ತಾಕಿ, ತಟ್ಟನೇ ಆತ್ಮ ರೂಪವನ್ನು ನೋಡಿಕೋ. ಅರಿವಿನ ಕಣ್ಣಿನಿಂದ ಕಾಣುವುದೆಂದರೆ, ತಾನು ಕೃಪೆಗೆ ಪಾತ್ರನಾಗಿರುವೆನೆಂಬ ಪರಿವೆ ಇಲ್ಲದೆ ಮರೆಯಲ್ಲಿ ಕಡೆನೋಟದಿಂದ ಕಂಡುಕೊಳ್ಳುವುದಾಗಿದೆ.

ಗೀ. ಗುರು ಪರಂಪರೆಯೀ ವಿದ್ಯೆ ಗೂಢವರಿತು,
ಪರಮ ಪರಿಪೂರ್ಣತೆಯಲ್ಲಿ ಪರವಶನಿರೆ,

ನಿರುಪಮಾನಂದ ಸುಖ ಕೇಳಿ ಪಡೆಯಬೇಕು.
ಪರಶಿವನ ರೀತಿ ಭಾಸಿಸಬೇಕು ವೇಮ.

'ಸಾ ವಿದ್ಯಾ ಯಾ ವಿಮುಕ್ತಯೇ'. ಅಂದರೆ, ಯಾವುದು ವಿಮುಕ್ತಿಯನ್ನು ಉಂಟು ಮಾಡುವುದೋ, ಅದುವೇ ವಿದ್ಯೆಯಾಗಿದೆ. ಒಬ್ಬ ಗುರುವು ಉತ್ತಮ ಅಧಿಕಾರಿಯಾದ ಶಿಷ್ಯನನ್ನು ಅರಸಿ, ಅವನಿಗೆ ಮಂತ್ರ ದೀಕ್ಷೆ ನೀಡಿ, ಸೂಕ್ತ ಸಾಧನ ಮಾರ್ಗ ತೋರಿಸುತ್ತಾನೆ. ಶಿಷ್ಯನು ಸಚ್ಛಿಷ್ಯನಾಗಿದ್ದರೆ ಗುರುವು ಅವನ ಮೇಲೆ ಕೃಪಾಕಟಾಕ್ಷ ಬೀರಿ, ಅವನನ್ನೂ ಗುರುವಾಗಿ ಮಾರ್ಪಡಿಸುತ್ತಾನೆ. ಇದು ಗುರುಪರಂಪರೆಯ ವಿದ್ಯೆ. ಇದರ ಗೂಢವನ್ನು ಅರಿತು, ಸಾಧಕನು ಪರಮ ಪರಿಪೂರ್ಣತೆಯನ್ನು ಹೊಂದಿ ಪರವಶನಾಗಿದ್ದರೆ, ಆಗ ಗುರುವನ್ನು ಪ್ರಾರ್ಥಿಸಿ, ಹೋಲಿಸಲಿಕ್ಕಾಗದ ಅಂದರೆ ನಿರುಪಮವಾದ, ಆನಂದ ಸುಖವನ್ನು ಪಡೆಯಬೇಕು. ಆ ಆನಂದ ಪ್ರಾಪ್ತಿಯೇ ಪರಶಿವನ ಪ್ರಾಪ್ತಿ. ಅಂಥವನು ಪರಶಿವನಂತೆ ಹೊಳೆಯಬೇಕು.

ಕಂ. ವ್ಯಾಪಿಸಿ ಇರುತಿಹ ಲೋಕವ
ಪ್ರಾಪ್ತಿಸದೆ, ಗುರುವ ಬೇಡುತ, ಬಹು ತಂತ್ರಗಳಿಂ
ಕೃಪೆ ಹೊಂದಿ ಮನ ನಿಲಿಸುತಿರು
ರೂಪವು ಬಟ್ಟ ಬಯಲಾಯ್ತು, ರೂಢವು, ವೇಮ.

ಲೋಕವು ಎಲ್ಲೆಡೆಗೆ ವ್ಯಾಪಿಸಿದೆ. ಇಂದ್ರಿಯಾದಿಗಳಿಂದ ಪಡೆಯುವ ಅನುಭವ ಕ್ಷೇತ್ರವೇ ಭೌತಿಕ ಲೋಕ. ಮನಸ್ಸಿನಿಂದ ಪಡೆಯುವ ಅನುಭವ ಕ್ಷೇತ್ರವು ಮಾನಸಿಕ ಲೋಕ. ಈ ಐಂದ್ರಿಯಿಕ ಮತ್ತು ಮಾನಸಿಕ ಲೋಕಗಳನ್ನು ಪ್ರಾಪ್ತಿ ಮಾಡಿಕೊಳ್ಳದೆ, ಇವುಗಳ ಬಗೆಗೆ ಉದಾಸೀನನಾಗಿದ್ದು, ಪಾರಲೌಕಿಕ ಅನುಭಾವಕ್ಕಾಗಿ ಮಾರ್ಗ ತೋರಲು ಗುರುವನ್ನು ಪರಿಪರಿಯಾಗಿ ಬಹು ಉಪಾಯಗಳಿಂದ ಬೇಡಬೇಕು. ಆಗ ಅವನು ಸುಪ್ರೀತನಾಗಿ ಕೃಪೆಯನ್ನು ಸುರಿಸುತ್ತಾನೆ. ಗುರು ಕೃಪೆಯ ಬಲದಿಂದ, ಪ್ರಾಮಾಣಿಕ ಸಾಧನದಿಂದ, ಮನವನ್ನು ನಿಲ್ಲಿಸಬೇಕು. ಚಿತ್ತ ವೃತ್ತಿಗಳನ್ನು ಅಡಗಿಸಬೇಕು. ಆಗ ಲೋಕದ ನಾಮ ರೂಪಗಳು ಅಡಗುತ್ತವೆ. ಲಕ್ಷ್ಯ ವಸ್ತುವು ಬಟ್ಟ ಬಯಲಾಗುತ್ತದೆ. ಅಂದರೆ ನಿರ್ಗುಣ ಬ್ರಹ್ಮಧಾಮ ಪ್ರಾಪ್ತವಾಗುತ್ತದೆ. ಇದುವೇ ರೂಢಿಯ ದಾರಿ.

ಆ. ಒಪ್ಪ ಗಾಣು, ಮುಕ್ತಿ ಒಡನೆ ಪಡೆಯಬಹುದು.
ಯೋಗಿಯಲ್ಲವೆ ಗುರು ? ಹೋಗಿ ನಮಿಸಿ.
ನಿಖಿಲ ಬುದ್ಧಿಯದುಮಿ ವಿಲಯ ಹೊಂದೆ ಲೇಸು.
ವಿಶ್ವದಾಭಿರಾಮ ಕೇಳು ವೇಮ.

ಲೌಕಿಕ ಬಂಧನಗಳಿಂದ ಒಡನೆ ಮುಕ್ತಿಯನ್ನು ಪಡೆಯಬಹುದು ಎಂಬುದನ್ನು ಒಪ್ಪವಾಗಿ ಕಂಡರಿ. ಹೇಗೆಂದರೆ, ಯೋಗಿವರನಿಗೆ ಶರಣಾಗಿ ಅವನಲ್ಲಿ ಹೋಗಿ ನಮಿಸು. ಯೋಗಿಯು ಅಜ್ಞಾನ ನಿವಾರಕನಾದ ಗುರುವಲ್ಲವೇ ? ಸರ್ವಭಾರವನ್ನು ಅವನಿಗೊಪ್ಪಿಸಿ, ಚರ್ಚೆ ವಾದಗಳಲ್ಲಿ ತೊಡಗುವ ಬುದ್ಧಿಯನ್ನು ಅದುಮಿ, ಯೋಗಿಯ ಉಪದೇಶದಲ್ಲಿ

ಮನಸ್ಸನ್ನು ತೊಡಗಿಸಿ, ಅವನೊಡನೆ ವಿಲಯ ಹೊಂದು. ಏಕೆಂದರೆ ಯೋಗಿಯು ಉಪದೇಶಿಸುವ ಲಕ್ಷ್ಯ ವಸ್ತುವು ಮಾತು ಮನಂಗಳಿಗೆ ಮೀರಿದುದಾಗಿರುತ್ತದೆ. ಅಲ್ಲಿ ವಾದ ತರ್ಕಗಳಿಗೆ ಅಂದರೆ ಬುದ್ಧಿಯ ಕಸರತ್ತಿಗೆ ಇಂಬಿಲ್ಲ.

ಗುರುಭಕ್ತಿ :

ಗೀ. **ಗುರುಭಕ್ತಿಯೊಳು ಮುಟ್ಟಿ, ಗರ್ವ ಪಡದೆ,**
ಜಟ್ಟಿಯಂತೆ ಹೋರಿ, ಒಳ ಮರ್ಮ, ಶ್ರೇಷ್ಠವೆನುತ,
ತಟ್ಟನೆ ಕಂಡು, ಮೀರಿ ನಡೆ, ಆಣೆ ಮರೆಯೆ.
ಗಿಟ್ಟುವುದೇನು ಹರಟೆಯಿಂದ ಗಳಿಕೆ ವೇಮ ?

''ಭಕ್ತಿಃ ಭಗವದ್ ಭಾವನಾ. ನ ಅರ್ಚನಾ ನ ಸ್ತುತಿಃ'' ಭಕ್ತಿ ಎಂದರೆ ಭಗವದ್ ಭಾವನೆಯಾಗಿದೆ. ಅರ್ಚನೆಯೂ ಅಲ್ಲ ; ಸ್ತುತಿಯೂ ಅಲ್ಲ. ಭಜ್ - ಭಕ್ತಿ. ಅಂದರೆ ಸೇವಿಸು ಎಂದರ್ಥ. ಗುರುಭಕ್ತಿಯಲ್ಲಿರುವ ಗುಟ್ಟನ್ನು ತಲುಪಿ, ಗುರುಕರುಣೆಗೆ ಪಾತ್ರನಾಗಬೇಕು. ಹೀಗೆ ಮಾಡಿದೆನೆಂದು ಗರ್ವ ಪಡಬೇಡ. ಅರಿಷಡ್ವರ್ಗಗಳೊಂದಿಗೆ ಧೈರ್ಯದಿಂದ ಜಟ್ಟಿಯಂತೆ ಹೊರಾಡಿ, ಸಾಧನೆಯ ಒಳಮರ್ಮವನ್ನು ಅರಿಯಬೇಕು. ಮತ್ತು ತಟ್ಟನೇ ಇಂಥ ಅರಿವು ಶ್ರೇಷ್ಠವೆಂದು ಕಂಡುಕೊಂಡು, ಆ ಜಟ್ಟಿಪ್ತಿಯ ಸ್ಥಿತಿಯನ್ನೂ ಮೀರಿ ಮುನ್ನಡೆಯಬೇಕು. ಈ ರೀತಿಯ ಸಾಧನೆಯ ಕ್ರಮವನ್ನು ಮರೆಯಬೇಡ. ನಿನ್ನಾಣೆ. ಬರೀ ಶಾಸ್ತ್ರ ಗ್ರಂಥಗಳ ಓದಿನಿಂದ, ವಾದ-ಜಲ್ಪಗಳಿಂದ ಯಾವ ಗಳಿಕೆ ಗಿಟ್ಟೀತು ?

ಗೀ. ಉತ್ತಮ ಜ್ಞಾನ ನಿಲಯದಂತೆ ಉಪಮೆಯಿಂದ,
ಭಕ್ತಿ ಸಾಧಿಸುತ ಪೂರ್ಣತೆ ಪಡೆಯಬಹುದು.
ಮುಕ್ತಿಗನುಗುಣ ಗುರುವಾಜ್ಞೆ, ಮೊದಲಿಗಯ್ಯ.
ಅದು ಲಭಿಸಿದೊಡೆ ಲಭ್ಯ, ಅಖಿಲ ವೇಮ.

ಹಸಿವೆಯಿಂದ ಅತ್ತಿತ್ತ ಅಲೆದು ಬಳಲಿ ಬೆಂಡಾಗಿ, ವಿಶ್ರಾಂತಿಗಾಗಿ ಮನೆ ಸೇರುವಂತೆ, ಮುಕ್ತಿಯ ಆಕಾಂಕ್ಷೆಯಿಂದ ಪರ್ಯಟನ ಮಾಡುವವನಿಗೆ ಉತ್ತಮ ಜ್ಞಾನವೇ ನಿಲಯವಾಗಿದೆ. ಅಲ್ಲಿ ಗುರುವಿನ ಸೇವೆಯಿಂದ ಅಂದರೆ ಭಕ್ತಿಯಿಂದ ಸಾಧನೆ ಮಾಡಿ ಪೂರ್ಣತ್ವವನ್ನು ಪಡೆಯಬಹುದು. ತನ್ನ ಐಹಿಕ ಬಂಧನಗಳಿಂದ ಮುಕ್ತನಾಗಲು ಅನುಗುಣವಾದ ಗುರುವಿನ ಆಜ್ಞೆ ಮೊದಲು ಬೇಕು. ಕರುಣಾಮಯಿಯಾದ ಗುರುವಿನ ಅಣತಿ ಲಭಿಸಿದೊಡನೆ ಅಖಿಲವೂ ಲಭಿಸುವುದು. ಯಾವುದು ಖಿಲವಾದುದೋ, ಅಂದರೆ ವ್ಯರ್ಥವಾದುದೋ ಅದೆಲ್ಲ ಕಳಚಿ ಅಖಿಲವು ಪ್ರಾಪ್ತವಾಗುತ್ತದೆ.

ಆ. ಕಪಟವುಡಿಗಿ ಗುರುವಿಗೊಪ್ಪ ಪಥವ ಹಿಡಿದು,
ಉಪಮೆಯೊಡನೆ ಭಕ್ತಿ ಉಂಟು ಮಾಡಿ,
ತಪವರಿತೊಡಾಗ ಧನ್ಯತೆಯುಂಟಾಯ್ತು.
ವಿಶ್ವದಾಭಿರಾಮ ಕೇಳು ವೇಮ.

ಮುಕ್ತಿಯು ತನ್ನಲ್ಲಿ ಅಲ್ಲದೆ ಬೇರೆಲ್ಲಿಯೋ ಇದೆಯೆಂಬ ಕಪಟವು ಉಡುಗಿ, ಅಜ್ಞಾನ ನಿವಾರಕ ಗುರುವಿಗೆ ಒಪ್ಪಿತವಾದ ಮಾರ್ಗ ಹಿಡಿದು ಸಾಧನೆ ಮಾಡುತ್ತ, ಗುರುವೇ ಪರಮಾತ್ಮನೆಂಬ ಉಪಮೆಯಿಂದ ಅವನಲ್ಲಿ ಭಕ್ತಿ ಮಾಡಿ ಶ್ರದ್ಧೆಯಿಂದ ಸೇವಿಸಬೇಕು. ಅಂತರ್ಯದಲ್ಲಿ ಗುರುಮೂರ್ತಿಯನ್ನು ಧ್ಯಾನಿಸಬೇಕು. ಇದುವೇ ಆಚರಿಸಬೇಕಾದ ತಪಸ್ಸು. ಈ ತಪಸ್ಸನ್ನು ಅರಿತೊಡನೆ ಧನ್ಯತೆ ಉಂಟಾಗುತ್ತದೆ.

ಕಂ. ಇತರಾಪೇಕ್ಷೆಗಳಳಿದೊಡೆ,
ಸತತ ಗುರುಭಕ್ತಿ ಯುಕ್ತಿಗಳ ಸಾರ ಕಾಣಲ್,
ಗತಿಯು ಬ್ರಹ್ಮಾನಂದಕೆ,
ಮತಿಗಿಂಪಾಗಿ ದೊರೆಯುವುದು, ಮಹಿಯಲಿ, ವೇಮಾ.

ಮಾನವನಿಗೆ ಅನೇಕ ಅಪೇಕ್ಷೆಗಳುಂಟು. ದಾರೇಷಣ, ಪುತ್ರೇಷಣ ಮತ್ತು ವಿತ್ತೇಷಣಗಳೆಂಬ ಈಷಣತ್ರಯಗಳು ಅವನಿಗಂಟಿವೆ. ಅವನು ಇವುಗಳ ಬೆನ್ನು ಹತ್ತಬೇಕಿಲ್ಲ. ಏಕೆಂದರೆ ಬೃಹದೇಷಣೆಯೇ ಅವನ ಧರ್ಮವಾಗಿದೆ. ಆದ್ದರಿಂದ ಅವನು ಇತರ ಅಪೇಕ್ಷೆಗಳ ಬಂಧನದಿಂದ ಮುಕ್ತನಾಗಬೇಕು. ಇತರ ಅಪೇಕ್ಷೆಗಳು ಅಳಿದೊಡನೆ, ಮುಕ್ತಿಯ ಅಪೇಕ್ಷೆಯೊಂದೇ ಉಳಿಯುತ್ತದೆ. 'ಮುಕ್ತ್ಯಾಕಾಂಕ್ಷಯಾ ಸದ್ಗುರು ಪ್ರಾಪ್ತಿಃ'. ಅಂದರೆ ಯಾವಾಗ ಮುಕ್ತಿ ಹೊಂದುವ ಆಕಾಂಕ್ಷೆಯು ಉದಯಿಸುವುದೋ, ಆಗ ಸದ್ಗುರು ದೊರೆಯುತ್ತಾನೆ. ಆಗ ಗುರು ಭಕ್ತಿಯನ್ನು ಸತತ ಹೊಂದಬೇಕು. ಆಪ್ತವಾಕ್ಯಗಳನ್ನು ಯುಕ್ತಿ ಸಮ್ಮತವಾಗಿ ಅರಿತು, ಅವುಗಳ ಸಾರವನ್ನು ಕಾಣಬೇಕು. ಹೀಗೆ ಗುರುವಿನ ಮಾರ್ಗದರ್ಶನದಲ್ಲಿ ನಡೆದರೆ, ಅದುವೇ ಬ್ರಹ್ಮಾನಂದಕ್ಕೆ ಗತಿಯಾಗುತ್ತದೆ. ಆಗ ಮತಿಗೆ ಅಂದರೆ ಅಗ್ಯ್ರ ಬುದ್ಧಿಗೆ ಇಂಪಾಗಿ ಆತ್ಮಾನುಭವವು ದೊರಕುತ್ತದೆ.

ಆ. ತೃಪ್ತಿ ತುಂಬಿ, ಗುರುವ ಧ್ಯಾನಿಸಿ ಮನದೊಳಗೆ
ತನುವ ಮರೆತು, ಗುರುವ ತಲುಪಿದಾಗ,
ತೊಳಗುತಿಹುದು ಬ್ರಹ್ಮ; ತತ್ತ್ವವೆನುವರದನೆ.
ವಿಶ್ವದಾಭಿರಾಮ ಕೇಳು ವೇಮ.

ಅಶಾಂತಿ ಅಸಮಾಧಾನಗಳಿಂದ ದೂರವಾಗಿ ಮನದಲ್ಲಿ ತೃಪ್ತಿ ತುಂಬಿ, ಗುರುಚಕ್ರದಲ್ಲಿ ಗುರುಮೂರ್ತಿಯನ್ನು ಧ್ಯಾನಿಸಬೇಕು. ಧ್ಯಾನದಲ್ಲಿ ಮುಳುಗಿ, ತದೇಕ ಧ್ಯಾನಚಿತ್ತನಾಗಿ, ತನುವನ್ನು ಮರೆಯಬೇಕು. ದೇಹ ಭಾನವು ಅಳಿದಾಗ ಗುರುಮೂರ್ತಿಯನ್ನು ತಲುಪಿದರೆ, ಆ ರೂಪವೂ ಅಡಗುತ್ತದೆ. ಆಗ ಮನವು ಬೃಹತ್ತಿನೊಂದಿಗೆ ಸೇರಿ, ಬ್ರಹ್ಮವು ಹೊಳೆಯುತ್ತದೆ. ಇದನ್ನೇ ತತ್ತ್ವವೆನ್ನುತ್ತಾರೆ. ಇದು ತತ್ತ್ವವಾಗಿದೆ.

ಗೀ. ಜನ್ಮ ಸಾಫಲ್ಯವನು, ಕೋರಿ, ಜಯವ ಹೊಂದಿ,
ತನ್ಮಯತೆಯೊಳಿರೆ, ಗುರು ಸೇರಿ, ತಿಳಿವು ನಿಲಿಸಿ,
ಮನ್ಮಯಾನಂದ ಪರಿಪೂರ್ತಿ ಮರೆಯ ಸೇರಿ.
ಚಿನ್ಮಯಾಕೃತಿ ಕಾಣುವುದೆ ಚೊಕ್ಕ ವೇಮ.

ನಿದ್ರೆ, ಆಹಾರ, ಭಯ, ಮೈಥುನಗಳು ಮಾನವನಿಗೂ ಮತ್ತು ಇತರ ಪ್ರಾಣಿಗಳಿಗೂ ಸಮಾನ ಧರ್ಮಗಳಾಗಿವೆ. ಬೃಹದೇಷಣೆಯು ಮಾನವನ ವಿಶೇಷ ಧರ್ಮವಾಗಿದೆ. ಮನವನ್ನು ಬೃಹತ್ತಿನಲ್ಲಿ ಐಕ್ಯಗೊಳಿಸುವುದೇ ಮಾನವ ಜನ್ಮದ ಸಾಫಲ್ಯ. ಈ ಬ್ರಹ್ಮಾನುಭೂತಿಯನ್ನು ಕೋರಿ, ಸಾಧನೆಗಿಳಿದು ಜಯ ಪಡೆಯಬೇಕು. ಬಳಿಕ ತತ್ ಮಯತೆಯಲ್ಲಿ ಇರುತ್ತ ಗುರುಚಕ್ರದಲ್ಲಿ ಅಜ್ಞಾನ ನಿವಾರಕನಾದ ಗುರುವನ್ನು ಸೇರಬೇಕು. ಆಗ ಸತ್ತ್ವ ಶುದ್ಧಿ ಪಡೆಯಬೇಕು. ಅಂದರೆ ಜ್ಞಪ್ತಿಯನ್ನು ನಿಲ್ಲಿಸಬೇಕು. ಹೀಗೆ ತಿಳಿವು ನಿಂತ ಮೇಲೆ ತಾನೇ ತಾನಾಗಿ, ಎದುರು ಬೇರೊಂದು ಇಲ್ಲವಾಗಿ, ಮನ್ಮಯಾಕೃತಿ ಕಾಣುವುದು ಚೊಕ್ಕವಾಗಿದೆ.

ಜ್ಞಾನದೀಪ :

ಗೀ. ಚರ್ಚೆ ಮೀರಿದ ಜ್ಞಾನವನು ಸಂರಕ್ಷಿಸುತ,
ಮೂರ್ಛೆ ಹೊಂದಿದ ರೀತಿಯಿರೆ, ಮುಕ್ತಿಯುಂಟು.
ಕುರಿತು ಮೆಚ್ಚಲು, ಗುರಿದಾಟಿ ಕೋವಿದಾದ.
ಗುರು ದಡ ಸೇರಿಸಲು ತೀರಿತು ಕಾಣು ವೇಮ.

ಓದಿ, ಕೇಳಿ ಮಾತ್ರ ತಿಳಿದ, ಸ್ವಾನುಭೂತಿಯಿಲ್ಲದ, ಪಂಡಿತರು ಚರ್ಚೆ, ವಾದ, ಜಲ್ಪ, ವಿತಂಡಗಳಲ್ಲಿ ನಿರತರಾಗುತ್ತಾರೆ. ಆದರೆ ಸದ್ವಸ್ತುವಿನ ಜ್ಞಾನವು ಮನಂಗಳಿಗೆ ಮೀರಿದುದಾಗಿದೆ. ಅದು ಚರ್ಚೆಗೆ ಮೀರಿದುದಾಗಿದೆ. ಇಂಥ ಜ್ಞಾನವನ್ನು ಸಂರಕ್ಷಿಸಬೇಕು. ದೇಹದ ಬೋಧೆ ತಪ್ಪಿದವನಂತೆ ಅಂದರೆ ಮೂರ್ಛೆ ಹೊಂದಿದ ರೀತಿ ಇದ್ದರೆ, ಮುಕ್ತಿ ಉಂಟು. ಆಗ ಒಳ ಅರಿವು ತೋರುವ ಉಪಮೆಯನ್ನು ಕುರಿತು ಚಿಂತಿಸಿ ಮೆಚ್ಚಿಕೊಂಡು, ಮನದೆದುರು ಮೊದಲು ಇರಿಸಿಕೊಂಡ ಗುರಿಯನ್ನೂ ದಾಟಿ, ಜ್ಞಪ್ತಿಯು ಅಳಿದು ನಿಪುಣನಾಗುತ್ತಾನೆ. ಹೀಗೆ ಭವ ಸಾಗರದಲ್ಲಿ ಈಜುವ ತರಬೇತಿ ನೀಡಿ, ಗುರುವು ದಡ ಸೇರಿಸುತ್ತಾನೆ. ಆಗ ಎಲ್ಲವೂ ಮುಗಿದಂತೆ ಎಂದು ಅರಿತುಕೋ.

ಗೀತ. ಯಾರಿರಲಜ್ಞಾನ ತಿಮಿರವ ನೀಗಿಸುತ್ತ,
ಜ್ಞಾನ ಜೊನ್ನೆಯನೊಪ್ಪವಾಗಿ ಮಾಡುತಿರಲು,
ಚಂದ್ರ ತೆರ, ಗುರು ಬಳಿ, ಸಾಧನದಲಿ ತಾನು
ಕೂಡಿ ಇದ್ದೊಡೆ ತೀರುವುದು ಕೋರ್ಕೆ ವೇಮ.

ಯಾರೇ ಇರಲಿ, ಅಜ್ಞಾನವೆಂಬ ಕತ್ತಲೆಯನ್ನು ನೀಗಿಸುತ್ತ, ಜ್ಞಾನದ ಬೆಳದಿಂಗಳು ಒಪ್ಪವಾಗಿ ಮೂಡುತ್ತಿರಲು, ಗುರುವು ಚಂದ್ರನೋಪಾದಿಯಲ್ಲಿ ಭಾಸಿಸುತ್ತಾನೆ. ಅಂಥ ಜ್ಞಾನದ ಬೆಳುದಿಂಗಳನ್ನು ನೀಡುವ ಗುರುವಿನ ಬಳಿ, ತಾನು ಸಾಧನದಲ್ಲಿ ಕೂಡಿಕೊಂಡು ಇದ್ದರೆ, ಮನದ ಕೋರಿಕೆಯಾದ ಸಂತೃಪ್ತಿಯು ದೊರೆಯುತ್ತದೆ.

ಕಂ. ಸದ್ಗುರು ಸುಜ್ಞಾನದಲ್ಲಿ
ಸದ್ಗತಿ ದೀಪ್ತಿಸುವೊಡೆ, ಸಾಕಷ್ಟು ಪಠಿಸಲಾ

ಸದ್ಗತಿ ಪಡೆವಂತೆ ಮಾಳ್ಪ,
ಸದ್ಗುರುವೆ ದೇವನೆಂಬುದ ಕಾಣಾ ವೇಮಾ.

ಸುಜ್ಞಾನದಲ್ಲಿ ಸಾಕಷ್ಟು ಪರಿಸಿದರೆ ಆ ಸದ್ಗುರುವು ಸದ್ಗತಿಯನ್ನು ಬೆಳಗಿಸುತ್ತಾನೆ. ಯಾವ ಪಠಣದಿಂದ ಅಜ್ಞಾನ ತಿಮಿರವು ಅಳಿದು ಸುಜ್ಞಾನದ ದೀಪವು ಬೆಳಗುವುದೋ, ಅದೇ ಸದ್ಗತಿಯಾಗಿದೆ. ಇದನ್ನು ಸದ್ಗುರುವು ತೋರುತ್ತಾನೆ. ಯಾವ ಶ್ರುತಿ, ಆಗಮಗಳನ್ನು ಹೇಗೆ ಅರ್ಥೈಸಬೇಕು ? ಅವುಗಳ ಮರ್ಮವನ್ನು ಹೇಗೆ ಅರಿಯಬೇಕು? ಎಂಬುದನ್ನೆಲ್ಲ ಅವನು ತಿಳಿಸುತ್ತಾನೆ. ಹೀಗೆ ಸದ್ಗತಿಯನ್ನು ಪಡೆಯುವಂತೆ ಮಾಡುವ ಸದ್ಗುರುವು ದೇವರೇ, ಎಂದು ಕಾಣಬೇಕು. ದಿವ್ ಅಂದರೆ ಬೆಳಗು. ದೇವ ಎಂದರೆ ಬೆಳಗುವವ. ಮನದ ಇರುಳನ್ನು ಕಳಿಯಲು ಬೆಳಗುವ ದೀಪವೇ ಸದ್ಗುರು.

ಆ. ಉಪಮೆಯಿಂದ ಗುರುವ ತಪದಲ್ಲಿ ಕಾಣದೆ,
ಜಪವ ಗೆಯ್ಯುವವನು, ಚಪಲನಾದ.
ನೆಪ ಹೇಳದೆ ಮಿಂಚಿ ನೋಡಿರರಿತುಕೊಂಡು.
ವಿಶ್ವದಾಭಿರಾಮ ಕೇಳು ವೇಮ.

ಅಂಧಕಾರ ನಿವಾರಕನಾದ ಗುರುವು ಜೀವನ ಜಡತೆಯನ್ನು ನಿವಾರಿಸುವ ದೇವರೇ ಎಂದು ಗ್ರಹಿಸಿ, ಗುರುವನ್ನು ಉಪಮೆಯಿಂದ ಕಾಣಬೇಕು. ಗುರುಚಕ್ರದಲ್ಲಿ ಗುರುಮೂರ್ತಿಯನ್ನು ಧ್ಯಾನಿಸುತ್ತ ತಪವನ್ನು ಆಚರಿಸಬೇಕು. ಹೀಗೆ ಮಾಡದೆ, ಬರೀ ವ್ರತ ನೇಮದ ಮಣಿ ಎಣಿಸುವ ಜಪವನ್ನು ಮಾಡುವವರು ಮನಸ್ಸನ್ನು ಏಕಾಗ್ರಗೊಳಿಸದೆ ವಿಕ್ಷೇಪ ಮಲಕ್ಕೀಡಾಗಿ ಚಪಲ ವೃತ್ತಿಯವರಾಗುತ್ತಾರೆ. ಆದ್ದರಿಂದ ಯಾವುದೇ ಮಾನಸಿಕ ವ್ಯಾಪದ ನೆಪವನ್ನು ಹೇಳದೆ, ಧ್ಯಾನ ಮಾಡಿ, ರೂಪವನ್ನು ಮೀರಿ, ಬಯಲನ್ನು ಅರಿತುಕೊಂಡು ನೋಡಬೇಕು.

ಗೀ. ಚಿಮ್ಮಿ ನುಗಿಸಿ ಅರಿವ, ಅಗ್ನಿಗಿಟ್ಟು, ಚಿತ್ತವನ್ನು
ಕಣ್ಣಿಗಿಂಪಾದ, ಗುರು ಶಕ್ತಿ, ಗಗನ ಸೇರ್ಸಿ,
ದ್ವಂದ್ವ ತೊಡೆಯಲು ಘನನವನು ; ತಾನು ಜಾಣ.
ಬಂಟ ತನ ಮನದಿ, ಪರಮನಲಿ ಬಯಸು ವೇಮ.

ಬಾಹ್ಯ ವಿಷಯ ವಸ್ತುಗಳಿಂದ ತನ್ಮಾತ್ರೆಗಳ ರೂಪದಲ್ಲಿ, ಇಂದ್ರಿಯ ವೃತ್ತಿಗಳ ಮೂಲಕ ಆಹಾರ ಪಡೆಯುವ ಚಿತ್ತವನ್ನು ಅಗ್ನಿಗಿಟ್ಟು, ಅಂದರೆ ಸಾಧನೆಯ ಅಗ್ನಿಯಿಂದ ಚಿತ್ತ ಕ್ರಿಯೆಯನ್ನು ನಿಲ್ಲಿಸಿ, ಅರಿವನ್ನು ಮೇಲು ಮೇಲು ಸ್ತರಕ್ಕೆ ಚಿಮ್ಮಿ ನುಗಿಸಬೇಕು. ವಿಷಯ ದೂರವಾದ ಮನವು ಸೂಕ್ಷ್ಮ ಸ್ತರದಲ್ಲಿ ಸಾಗುವಾಗ ಒಳಗಣ್ಣಿಗೆ ಇಂಪಾಗಿರುತ್ತದೆ. ಗುರು ಚಕ್ರದಲ್ಲಿ ಗುರುಮೂರ್ತಿಯಿಂದ ಶಕ್ತಿ ಪಡೆದು, ಅರಿವನ್ನು ಚಿದಾಕಾಶದಲ್ಲಿ ಸೇರಿಸಬೇಕು. ಆಗ ರಾಗ ದ್ವೇಷ ಸುಖ ದುಃಖ ಎಂಬ ದ್ವಂದ್ವಗಳನ್ನು ತೊಡೆದು ಹಾಕಲು ಸಾಧ್ಯವಾಗುತ್ತದೆ. ಹೀಗೆ ಮಾಡಿದವನೇ ಘನವಂತನು, ಅವನೇ ಜಾಣನು.

ಗೀ. ಹಾಲು ಕುಡಿದೊಡಾಗ ಪ್ರಾಣವ ರಕ್ಷಿಸುವುದು.
ಹಾಲು ಕುಡಿಯದಿರಲು ಬಳಲಿಕಾಯ್ತು.

ಹಾಲಿನಿಂದ ಮುಕ್ತಿ ಫಲವ ಹೊಂದದಿಹರೆ ?
ಬಹಳ ರೋಗ ಪಡುವ ಭುವಿಲಿ ವೇಮ.

ಗುರು ಎಂದರೆ ಧೇನುವು. ಕರುಣೆಯೇ ಅವನು ಕರೆಯುವ ಹಾಲು. ರೋಗಿಯೊಬ್ಬನು ಹಾಲು ಕುಡಿದರೆ ಅದು ಅವನ ಪ್ರಾಣವನ್ನು ರಕ್ಷಿಸುತ್ತದೆ. ಹಾಲು ಹೀಗೆ ಮನ ಏಕಾಗ್ರತೆ ಸಾಧಿಸಿ, ಹೆಚ್ಚಾಗುತ್ತದೆ. ಗುರು ಕರುಣೆಯೆಂಬ ಹಾಲಿನಿಂದ ಭವ ಬಂಧನದಿಂದ ಮುಕ್ತಿ ಫಲವನ್ನು ಹೊಂದಬಹುದು. ಗುರು ಕರುಣೆಗೆ ಪಾತ್ರನಾಗದವನು ಭುವಿಯಲ್ಲಿ ಬಹಳವಾಗಿ ಭವರೋಗ ಪೀಡಿತನಾಗುತ್ತಾನೆ.

ಗೀ. ದುರಿತಗಳನೆಲ್ಲ ಖಂಡಿಸುತ ಗುರುವ ಸೇರಿ
ಪರಮ ನಿರ್ಗುಣ ಮನನವನು ಪೂರ್ತಿಗೊಳಿಸಿ,
ಗುರು ತರಂಗಗಳ ಗುಣಗಳ ಗಳಿಸಿಕೊಂಡು,
ಪರಶಿವನೆಂದು ಭಾಸಿಸು, ಪೊಡವಿ ವೇಮ.

ತನ್ನಲ್ಲಿರುವ ಎಲ್ಲ ದುರಿತಗಳನ್ನು ಅಂದರೆ ಪಾಪ ಪ್ರವೃತ್ತಿಯನ್ನು ಖಂಡಿಸುತ್ತ ತಮೋಗುಣವನ್ನು ಇಲ್ಲವಾಗಿಸಬೇಕು. ಮುಂದಿನ ಮಾರ್ಗದರ್ಶನಕ್ಕಾಗಿ ಗುರುವನ್ನು ಸೇರಬೇಕು. ಅಂತರಂಗದಲ್ಲಿ ಗುರು ಚಕ್ರದಲ್ಲಿ ಗುರುಮೂರ್ತಿಯನ್ನು ಧ್ಯಾನಿಸಬೇಕು. ಗುರುಮೂರ್ತಿಯನ್ನು ಉಪಾಸಿಸಬೇಕು. ಗುರುಮೂರ್ತಿಯ ಧ್ಯಾನ ಮೂಲಕ, ಭಾವದಿಂದ ಭಾವಾತೀತಕ್ಕೆ ಜಿಗಿಯಬಹುದು. ಹೀಗೆ ಪರಮ ನಿರ್ಗುಣ ಮನನವನ್ನು ಪೂರ್ತಿಗೊಳಿಸಿ, ಗುರು ತರಂಗಗಳ ಗುಣಗಳನ್ನು ಗಳಿಸಿಕೊಳ್ಳಬೇಕು. ಈ ಗುರು ತರಂಗಗಳು ಚಿಜ್ಯೋತಿಯಾಗಿ ಪ್ರವಹಿಸಿ, ಬೆಳಗುತ್ತವೆ. ಹೀಗೆ ಪರಶಿವನ ತೇಜದಿಂದ ಪೊಡವಿಯನ್ನು ಭಾಸಿಸು.

ಗುರುಬೋಧೆ :

ಗೀ. ದಿವ್ಯವಾದಂಥ ಪರಶಿವನ ತೇಜ ಹೊಂದಿ,
ಭವ್ಯವಹ ಯುಕ್ತ ಮನದಲ್ಲಿ ಭದ್ರ ಪಡಿಸಿ,
ಸೇವ್ಯನಾಗಿರುತಿರಲು ಮುಕ್ತಿ ಸ್ಥಿರವು ಕಾಣು.
ಕಾವ್ಯದಲಿ ಇರದು ಗುರುಬೋಧೆ ಕಾಣು ವೇಮ.

ಶುದ್ಧ ಸತ್ವವು ಶಿವ ಅವಸ್ಥೆಯಾದರೆ, ನಿರ್ಗುಣವು ಪರಶಿವ ಅವಸ್ಥೆಯು. ಇದು ತೇಜೋಮಯವಾಗಿದೆ. ಅದು ಅಲೌಕಿಕವಾಗಿದೆ ಅಂದರೆ ದಿವ್ಯವಾಗಿದೆ. ಇಂಥ ದಿವ್ಯವಾದ ಪರಶಿವ ತೇಜವನ್ನು ಹೊಂದಿ, ಭವ್ಯವಾದ ಅಂದರೆ ಮಂಗಳಕರವಾದ ಹೊಂದಿಕೆಯನ್ನು ಮನದಲ್ಲಿ ಭದ್ರಪಡಿಸಿಕೊಂಡು, ಪೂಜ್ಯನಾಗಿ ಇರುತ್ತಿರಲು, ಮುಕ್ತಿಯು ಸ್ಥಿರವಾಗುವುದು. ಹೀಗೆ ಮಾಡದೆ ಕಾವ್ಯ ಗ್ರಂಥಗಳಲ್ಲಿ ಗುರುಬೋಧೆಯನ್ನು ಕಾಣ ಹೋಗುವುದು ವ್ಯರ್ಥವು..

ಕಂ. ಉಚಿತಾಹಾರಗಳಿಂದಲಿ
ಉಚಿತ ಬುದ್ಧಿ ಸ್ಥಿರತೆಯ ಹೊಂದಿದ ತೆರದಿಂ.

ಉಚಿತ ಗುರುಬೋಧೆ ಪಡೆಯುತ,
ಸುಚರಿತನಾಗಿ ಪರವ ಕಾಣಬೇಕೈ ವೇಮಾ.

ಯೋಗ್ಯ ಆಹಾರ ಸೇವನೆ ಮಾಡಬೇಕು. ತಾಮಸಿಕ ಮತ್ತು ರಾಜಸಿಕ ಆಹಾರ ಪದಾರ್ಥಗಳನ್ನು ವರ್ಜಿಸಬೇಕು. ಹಾಗೆ ಮಾಡುವುದರಿಂದ ಧರ್ಮಾರ್ಥ ಬುದ್ಧಿಯು ಚಂಚಲತೆ ತೊರೆದು ಸ್ಥಿರವಾಗುತ್ತದೆ. ಅದೇ ರೀತಿ, ಮನಸ್ಸಿಗೂ ಸೂಕ್ತ ಆಹಾರವಾಗಿ ಗುರುಬೋಧೆಯನ್ನು ಪಡೆದು, ಸುಚರಿತನಾಗಿ ಅಂದರೆ ಒಳ್ಳೆಯ ನಡೆವಳಿಯನ್ನು ಹೊಂದಿ ಪರವನ್ನು ಕಾಣಬೇಕು.

ಕಂ. ಯಾವುದಿರಲಿ ಪಾಪ, ಜವದಿ
ಪೋಪುದು ಗುರು ಮರ್ಮದಿಂದ, ಬ್ರಹ್ಮ ಜನ್ಮ ತತಿಂ.
ಓವಿಯಡಗಿ ತೋರಿಕೆಗಳ್
ಕಾವನೆ, ಮನದಲಿ ಬೆಳಗುವ, ಘನವನು ವೇಮಾ.

ಬ್ರಹ್ಮನ ಸೃಷ್ಟಿಧಾರೆಯಲ್ಲಿ ಮಾನವನು ಬಹು ಜನ್ಮಗಳಲ್ಲಿ ಪಾಪ ಮಾಡಿರಬಹುದು. ಅಂಥ ಯಾವ ಪಾಪವೇ ಇರಲೊಲ್ಲದೇಕೆ ? ಗುರುವು ಬೋಧಿಸುವ ಉಪಾಯದಿಂದ ಬೇಗನೇ ಹೋಗುತ್ತದೆ. ತೋರಿಕೆಗಳೆಲ್ಲ ಅಡಗಿ, ಪರಮಾತ್ಮನನ್ನು ಕಾಯ್ದುಕೊಳ್ಳುವವನೇ ಮನದಲ್ಲಿ ಘನವನ್ನು ಬೆಳಗುವನು.

ಗುರುಭಕ್ತಿ :

ಗೀ. ಊರ್ಜಿತಾನಂದ ಪರಿಪೂರ್ಣ ಯುಕ್ತಿಯಲ್ಲಿ
ಸ್ಫಾರ್ಜಿತವಾದ ಗುರುಭಕ್ತಿ ಸಮನಿಸುತ್ತ,
ದುರ್ಜಯವಾದುದ ತೊಲಗಿಸೆ, ತೊಲಗಬಹುದೆ ?
ಅರ್ಜಿಸಬೇಕು ಮುಕ್ತಿಯ, ಅರಿಯೊ ವೇಮ.

ಶ್ರೇಷ್ಠವಾದ, ಆನಂದ ಪರಿಪೂರ್ಣವಾದ, ಹೊಂದಿಕೆಯಲ್ಲಿ, ತಾನು ಗಳಿಸಿದ ಗುರುಭಕ್ತಿಯನ್ನು ಕೂಡಿಕೊಂಡು, ಮುಕ್ತಿಯನ್ನು ಗಳಿಸಬೇಕು. ಗುರುಭಕ್ತಿ ಹೊಂದದೆ, ಗುರು ಕರುಣೆ ಪಡೆಯದೆ, ದುರ್ಜಯವಾದ ಮಲ ವಿಕ್ಷೇಪಗಳು, ಅವಿದ್ಯೆ ಅಜ್ಞಾನಗಳು ತೊಲಗಬಹುದೇ ? ನಾವು ತೊಲಗಿಸಲು ಯತ್ನಿಸಬಹುದು. ಆದರೆ ಪ್ರಯತ್ನಗಳೆಲ್ಲ ವ್ಯರ್ಥವಾಗುತ್ತವೆ. ಏನೇ ಮಾಡಿ ಮುಕ್ತಿಯನ್ನು ಸಂಪಾದಿಸಬೇಕು.

ಗೀ. ದೇಹ ಆತ್ಮಗಳು ಬೇರೆಂದು ತಿಳಿಯದಿರಲು
ಮೋಹದಲಿ ಸಿಲುಕಿ ನಿದ್ರೆಯೊಳು ಮುಳುಗದಿಹನೆ ?
ಸಾಹಸದಿಂದ ಗುರುಭಕ್ತಿ ಸಲಿಸೆ ಲೇಸು.
ಬಿಡಿಸಿ ಮಾತುಗಳ ತಿಳಿವುದು ಬೇಗ ವೇಮ.

ತಾತ್ತ್ವಿಕವಾಗಿ ದೇಹ ಮತ್ತು ಆತ್ಮಗಳು ಬೇರೆ ಬೇರೆ. ದೇಹವು ಸ್ಥೂಲ ; ಆತ್ಮವು ಸೂಕ್ಷ್ಮಾತಿಸೂಕ್ಷ್ಮ. ದೇಹವು ಜಡ ; ಆತ್ಮವು ಚೇತನ. ದೇಹವು ನಶ್ವರ, ಆತ್ಮವು

ಅಮರ. ದೇಹ ಆತ್ಮಗಳು ಬೇರೆ ಬೇರೆ ಎಂದು ತಿಳಿಯದಿರಲು, ಮಾನವನು ದೇಹವನ್ನೇ ಆತ್ಮವೆಂದು ದೇಹಾತ್ಮ ಬುದ್ಧಿ ತಳೆದು ದೇಹವನ್ನು ಮೋಹಿಸುತ್ತಾನೆ. ಅವನ ಅರಿವಿಗೆ ಮುಚ್ಚಳ ಹಾಕಿದಂತಾಗುತ್ತದೆ. ಹಾಗಾಗಿ ಅವನು ಅಜ್ಞಾನವೆಂಬ ನಿದ್ರೆಯೊಳಗೆ ಮುಳುಗುತ್ತಾನೆ. ಇಂಥ ನಿದ್ರಿತ ಮಾನವನನ್ನು ಎಚ್ಚರಿಸಲು ಅಜ್ಞಾನ ನಿವಾರಕನ ಅಗತ್ಯವಿದೆ. ಅವನು ಸಾಧನದಲ್ಲಿ ಗುರು ಚಕ್ರದಲ್ಲಿ ಗುರುಮೂರ್ತಿಯನ್ನು ಧ್ಯಾನಿಸಬೇಕು. ಸೇವಿಸಬೇಕು. ಭಕ್ತಿ ಸಲ್ಲಿಸಬೇಕು. ಹೀಗೆ ಮಾಡುವುದೇ ಲೇಸು. ಏಕೆಂದರೆ ಆಗ ಮಾತ್ರ ಗುರು ಮಹಿಮೆಯಿಂದ ಅವನು ಭಾವದಿಂದ ಭಾವಾತೀತಕ್ಕೆ ನೆಗೆಯಬಲ್ಲನು. ಈ ಮಾತುಗಳ ಅಂತರಾರ್ಥವನ್ನು ಬೇಗ ತಿಳಿಯಬೇಕು. ಮತ್ತು ದೇಹಾತ್ಮ ಬುದ್ಧಿ ತೊರೆದು ಆತ್ಮಸ್ಥನಾಗಬೇಕು.

ಗೀ. ಹರುಷ ಭೋಗವ, ಭಾಗ್ಯಗಳ ಹೊಂದಬಹುದು.
ರಾಗ-ವೈಷಮ್ಯರಡು ರಕ್ತಿ ಕಡಿದು.
ವೇಗದಿಂದ ಮನದಿ ಗುರುಭಕ್ತಿ ಬೀಗುತಿರಲು,
ಯೋಗಿವರರಿಗೆ ಸಮನಾದ ಯಶವು ವೇಮ.

ರಾಗ ಎಂದರೆ ಪ್ರೀತಿ; ವೈಷಮ್ಯ ಎಂದರೆ ಅಪ್ರೀತಿ. ಪ್ರೀತಿ ಅಪ್ರೀತಿಗಳ ಅತ್ಯಾಸೆಯನ್ನು ಅಂದರೆ ರಕ್ತಿಯನ್ನು ಕಡಿದು ಹಾಕಿ, ಅನಾಸಕ್ತನಾಗಿರುತ್ತ ಹರುಷ ಭೋಗವನ್ನೂ ಹೊಂದಬಹುದು. ಭಾಗ್ಯವನ್ನೂ ಹೊಂದಬಹುದು. ಆದರೆ ವೇಗವಾಗಿ ಮನದಲ್ಲಿ ಗುರುಭಕ್ತಿ ಬೀಗುತ್ತಿದ್ದರೆ, ಅಂದರೆ ಮಾನಸಿಕವಾಗಿ ಗುರುವಿನ ಧ್ಯಾನದಲ್ಲಿ, ಗುರು ಸೇವೆಯಲ್ಲಿ ತನ್ಮಯನಾಗಿದ್ದರೆ, ಅಂಥ ಭೋಗ ಭಾಗ್ಯಗಳಿಂದ ಸಂಪನ್ನನಾದವನು ಸಹ, ವಿರಕ್ತ ಯೋಗಿವರರಿಗೆ ಸಮನಾದ ಯಶವನ್ನು ಪಡೆಯುತ್ತಾನೆ.

ಗೀ. ದಿವ್ಯ ಪರತತ್ತ್ವದಲಿ ಜ್ಞಪ್ತಿ ಧೀಯೊಳುದಿಸಿ,
ಮರಳಿ ಪುಟ್ಟಲು ಗುರುಭಕ್ತಿ ಮಹಿಮೆಯಿಂದ
ಅಕ್ಷಯಾತ್ಮಕ ಪರನಾಗಿ ಅಮಲನಾದ.
ಯಾವ ಮಲಿನ ಮಾತಿಗಂಟನೆಂದೂ ವೇಮ.

ಸಾಧಕನಿಗೆ ಆತ್ಮ ಸಾಕ್ಷಾತ್ಕಾರವು ಹೇಗೆ ಆಗುತ್ತದೆ ? ಅವನು ಲಕ್ಷ್ಯದತ್ತ ಮನವನ್ನು ಏಕಾಗ್ರಗೊಳಿಸಿ ಧ್ಯಾನಿಸುವಾಗ ಅಗ್ರ್ಯ ಬುದ್ಧಿಯಲ್ಲಿ ಆತ್ಮವು ಪ್ರತಿಬಿಂಬಿಸುತ್ತದೆ. ಹೀಗೆ ಅಲೌಕಿಕವಾದ ಅಂದರೆ ದಿವ್ಯ ಪರತತ್ತ್ವದಲ್ಲಿ ಜ್ಞಪ್ತಿಯು ಅಂದರೆ ಅರಿವು ಅಗ್ರ್ಯ ಬುದ್ಧಿಯಲ್ಲಿ ಉದಿಸಿ, ಗುರುಭಕ್ತಿಯ ಮಹಿಮೆಯಿಂದ ಪರತತ್ತ್ವದಲ್ಲಿ ಮರಳಿ ಹುಟ್ಟಲು, ಅವನು ಕ್ಷಯವಿಲ್ಲದ, ಅಕ್ಷಯಾತ್ಮಕವಾದ ತತ್ತ್ವಪರನಾಗಿ, ಅಮರನಾಗುತ್ತಾನೆ. ಆವರಣೇ, ವಿಕ್ಷೇಪ ಮಲಗಳೂ ಉಳಿಯವು. ಬಳಿಕ ಅವನು ಮಲಿನಗೊಳಿಸುವ ಯಾವುದೇ ಮಾತಿಗೂ ಅಂಟನು.

ಗೀ. ಸಾವಿರ ಕ್ರತುಗಳ ಮಾಡೆ ಸಲ್ಲ ; ಸಂತಸ ಮೀರಿ
ಮಾಳ್ಪ ಕ್ರಿಯೆಯೆಲ್ಲ ಗುರುಭಕ್ತಿ ಮನಸಿನಲ್ಲಿ

ತಪ್ಪದಿಪ್ಪುದೆ ಮುಕ್ತಿಗೆ ಒಪ್ಪ ಹಾದಿ
ಆಯ್ತು ನ್ಯಾಯ ಮಾರ್ಗ ಇದುವೆ, ಅವನಿಲಿ ವೇಮ.

ಸಾವಿರ ಕ್ರತು ಅಂದರೆ ಯಜ್ಞ-ಯಾಗಾದಿ ಕಾಮ್ಯ ಕರ್ಮಗಳನ್ನು ಮಾಡಿದರೂ ಅದು ಸಲ್ಲದ ಕಾರ್ಯವೆನಿಸುತ್ತದೆ. ಅದು ಐಹಿಕ ಸುಖಭೋಗಕ್ಕೆ ಸೆಳೆದೊಯ್ಯುತ್ತದೆ. ಆದ್ದರಿಂದ ಸಂತಸ ಮೀರಿ ಎಲ್ಲ ಕಾರ್ಯಗಳನ್ನು ಮಾಡುವಾಗ ಮನಸ್ಸಿನಲ್ಲಿ ಗುರುಭಕ್ತಿ ಇರಬೇಕು. ಎಲ್ಲವನ್ನು ಗುರುಸೇವೆಯೆಂದೇ ಮಾಡಬೇಕು. ಮನಸ್ಸಿನಲ್ಲಿ ಗುರುಭಕ್ತಿ ತಪ್ಪದೆ ಇದ್ದರೆ, ಅದುವೇ ಐಹಿಕ ಬಂಧನಗಳಿಂದ ಮನವನ್ನು ಮುಕ್ತಗೊಳಿಸುವ ಒಪ್ಪವಾದ ಹಾದಿಯಾಯ್ತು. ಇದುವೇ ನ್ಯಾಯ ಮಾರ್ಗ.

ಗೀ. ಬಳಿ ಸಾರಿ, ಸಾಗರ ಗಮನ ಬಗೆದು ಮನದಿ
ಈಜಿ ದಾಟುತ, ಗುರುಶಕ್ತಿ ಈಕ್ಷಿಸುತ್ತ
ಜಪವ ಮಾಡುತ ತನ್ಮಯ ಜಾಡುಗಾಣು.
ಮಾನಸವ ಸ್ಥಿರಗೊಳಿಸುವುದೆ ಮೇಲು ವೇಮ.

ಧ್ಯಾನ ಸಾಧನದಲ್ಲಿ, ಗುರುಚಕ್ರದಲ್ಲಿ ಗುರುಮೂರ್ತಿಯ ಬಳಿ ಸಾರಿ, ಸುತ್ತಲೂ ಕರುಣಾ ಸಾಗರವೇ ಇದೆಯಲ್ಲದೆ ಬೇರೇನೂ ಇಲ್ಲವೆಂದು ಮನದಲ್ಲಿ ಬಗೆದು, ಈಜಿ ದಾಟುತ್ತ , ಗುರು ಶಕ್ತಿಯನ್ನು ಈಕ್ಷಿಸುತ್ತ, ಪಾರುಗಾಣಿಸು ; ಎಂದು ಜಪಿಸುತ್ತ ಅಂದರೆ ಪ್ರಾರ್ಥಿಸುತ್ತ ಅದರಲ್ಲಿಯೇ ತನ್ಮಯನಾಗಿ ಮಾರ್ಗದ ಜಾಡು ಅಂದರೆ ಸುಳಿವು ಕಾಣು. ಹೀಗೆ ಮಾಡುತ್ತ ಮನವನ್ನು ಸ್ಥಿರಗೊಳಿಸುವುದೇ ಮೇಲು. ಆವರಣೇ ವಿಕ್ಷೇಪ ಮಲಗಳಿಗೆ ಇಂಬುಗೊಡುವುದು ಬೇಡ.

ಕಂ. ನಿತ್ಯಾನಂದ ವಿವೇಕವು
ಸತ್ಯವನು ತಿಳಿಯದಿದ್ದೊಡೆ, ಶಕ್ಯವಿರುವುದೇಂ ?
ಮುಕ್ತಿಗೆ ಸಮ ಗುರು ಮರ್ಮವ
ಭೃತ್ಯನಿರುತ ಮನದರಿವುದು, ಪೆಂಪಿಲಿ ವೇಮಾ.

'ಸುಖಂ ಅನಂತಂ ಆನಂದಂ'. 'ಆನಂದಂ ಬ್ರಹ್ಮ ಇತ್ಯಾಹುಃ'. ಅಂದರೆ ಅಂತವಿಲ್ಲದ ಸುಖವೇ ಆನಂದ. ಆನಂದವೇ ಬ್ರಹ್ಮವೆನಿಸುತ್ತದೆ ಎಂಬ ಸತ್ಯವನ್ನು ತಿಳಿಯದಿದ್ದರೆ, ಆಗ ನಿತ್ಯಾನಂದವೇ ಪರಮ ಲಕ್ಷ್ಯವೆಂಬ ವಿವೇಕ ಮೂಡುವುದು ಶಕ್ಯವಿದೆಯೇ ? ಗುರುಭೋಧೆಯ ಮರ್ಮವು ಅಮೂಲ್ಯವಾದ ಮುಕ್ತಿಗೆ ಸಮವಾಗಿದೆ. ಶ್ರದ್ಧಾಭಕ್ತಿ ಹೊಂದಿದ ಭೃತ್ಯನಾಗಿ ಇದನ್ನು ಮನದಲ್ಲಿ ಅರಿಯುವುದು ತುಂಬಾ ಶೋಭಾಯಕರವಾಗಿದೆ.

ಗುರುವಿನ ಸತ್ಸಂಗ :

ಗೀ. ಶುದ್ಧ ಪರಿಪೂರ್ಣ ದೃಷ್ಟಿಯಲಿ ಸುಸ್ಥಿರಾಗಿ
ಇದ್ದು, ನಿರ್ಗುಣ ಹೊಂದುತ, ನಿರ್ಮಲಾಗಿ,

ಗದ್ದುಗೆಯನೇರಿ ಬ್ರಹ್ಮವನು ಕಾಣಬಹುದು.
ಸುದ್ದಿಯೇತಕೆ ? ಗುರು ಸೇರಿ, ಶ್ರಮಿಸು ವೇಮ.

ದೃಷ್ಟಿಯು ಶುದ್ಧವಾಗಿರಬೇಕು. ತ್ರಿಗುಣಾತ್ಮಕ ಸಂಗಗಳನ್ನು ಮೀರಿ ನಿಸ್ಸಂಗಿಯಾಗಿರಬೇಕು. ಅದು ಅಖಂಡವಾಗಿರಬೇಕು. ಅಂದರೆ ಪರಿಪೂರ್ಣವಾಗಿರಬೇಕು. ಅಂಥ ದೃಷ್ಟಿ ತಾಳಿ ಸುಸ್ಥಿರವಾಗಿ ಯಾವುದೇ ಭ್ರಮೆಗೆ ಒಳಗಾಗದೆ ಇರಬೇಕು. ಆಗ ಆವರಣೇ ಮತ್ತು ವಿಕ್ಷೇಪ ಮಲಗಳಾವವೂ ಇಲ್ಲದೆ ನಿರ್ಮಲನಾಗಿ ನಿರ್ಗುಣತ್ವವನ್ನು ಹೊಂದುತ್ತ ಉನ್ನತ ಸ್ತರವನ್ನೇರಿ, ಅಲ್ಲಿ ಬ್ರಹ್ಮವನ್ನು ಕಾಣಬಹುದು. ಹೀಗೆ ಆಂತರ್ಯದಲ್ಲಿ ಗದ್ದುಗೆ ಏರಿ ಬ್ರಹ್ಮನನ್ನು ಕಾಣಬೇಕೇ ಹೊರತು, ಬಾಹ್ಯದಲ್ಲಿ ಗದ್ದುಗೆ ಏರಿ ಸುದ್ದಿ ಮಾಡುವುದರಲ್ಲಿ ಅಲ್ಲ. ಆದ್ದರಿಂದ ಸದ್ಗುರುವನ್ನು ಸೇರಿ ಶ್ರಮಿಸು.

ಕಂ. ನಿಂದಿಸುತ ಭ್ರಮೆ ಹೊಂದದೆ,
ಅಂದದಿ ಮನದಲ್ಲಿ ಸೇರಿ, ನಯದಿಂದಲಿ ತಾ
ಚಂದದರಿತು ಗುರು ರಹಸ್ಯ
ಸಂದೇಹವಿರದೆ ಪೂರ್ಣನೆ ಆಗಿರು ವೇಮಾ.

ಸುತ್ತು ಮುತ್ತಿನ ಜನರನ್ನೂ, ಪರಿಸರವನ್ನೂ, ಸರಿಯಿಲ್ಲವೆಂದು ನಿಂದಿಸುತ್ತ, ಬೇರೆಲ್ಲಿಯೋ ಶಾಂತಿ ಇದೆ, ಎಂದು ಭ್ರಮೆ ಹೊಂದದೆ, ಅಂದದಿಂದ ಮನದಲ್ಲಿಯೇ ಸೇರಿ, ನಯದಿಂದ ಗುರು ತಿಳಿಸಿದ ಮನದ ರಹಸ್ಯವನ್ನು ಚೆಂದದಿಂದ ಅರಿತು, ಮನದ ಮೇಲು ಮೇಲು ಸ್ತರಕ್ಕೆ ಏರಬೇಕು. ಆಗ ಮನದ ಸಂದೇಹಗಳೆಲ್ಲವೂ ನಿವಾರಣೆ-ಯಾಗುತ್ತವೆ. ಆಗ ನೀನು ಖಿಲವಾದ, ಖಂಡಿತವಾದ, ವಸ್ತು, ವ್ಯಕ್ತಿ ಮತ್ತು ವಿಚಾರಗಳನ್ನು ಮೀರಿ ಪೂರ್ಣನೇ ಆಗುವೆ.

ಗೀ. ಅಂಥ ಸದ್ಬೋಧ ಮರ್ಮವ ಅರಿಯಬೇಕು.
ಮನಸಿನೊಳು ಕಲ್ಮಷಗಳನು ಮಾಣಬೇಕು.
ಶೀಘ್ರ ಕಾಲದಲ್ಲಿ ಆತ್ಮ ಸಿದ್ಧಿಯಹುದು.
ವಿಮಲ ಗುಣರಾಜೇಂದ್ರ ವೇಮನಾರ್ಯ.

ತಕ್ಕ ಶಿಷ್ಯನಿಗೆ ಅವನ ಪಾತ್ರತೆಗೆ ಅನುಸಾರ, ಸದ್ಗುರು ಸದ್ಬೋಧೆಯನ್ನು ಬೋಧಿಸುತ್ತಾನೆ. ಶಿಷ್ಯನು ಆ ಬೋಧೆಯ ಮರ್ಮವನ್ನು ಅಂದರೆ ಒಳ ಅರ್ಥವನ್ನು ಅರಿತುಕೊಳ್ಳಬೇಕು. ತನ್ನ ಮನಸ್ಸಿನಲ್ಲಿರುವ ಅಸೂಯೆ, ಮತ್ಸರ, ಗರ್ವ, ದಂಭ ಇತ್ಯಾದಿ ಕಲ್ಮಷಗಳನ್ನು ತೊರೆಯಬೇಕು. ಅಂದರೆ ಮನಸ್ಸು ಶುದ್ಧವಾಗಿ ಧ್ಯಾನದಲ್ಲಿ ಏಕಾಗ್ರತೆಯು ಸಾಧ್ಯವಾಗುತ್ತದೆ. ಹಾಗಾದರೆ ಶೀಘ್ರ ಕಾಲದಲ್ಲಿ ಆತ್ಮ ಸಿದ್ಧಿಯಾಗುತ್ತದೆ.

ಗೀ. ಬಿನ್ನವಿಸುತಲಿ ಸದ್ಗುರುವ ಬೇಡುತಿರುವ,
ಮುನ್ನ ಭ್ರಮರ ಕೀಟ ನ್ಯಾಯ, ಮತ್ತೆ ಉಂಟು.
ವರಿಸಿ ನೆನೆಯುತಿರೆ ಅವನನೀ ವಸುಧೆಯಲ್ಲಿ
ಸಾಧು ಸನ್ಮಾರ್ಗ ಅದುವಹುದು ಜಗದಿ ಹೇಮಾ.

ಭ್ರಮರವು ಕೀಟದ ಮೇಲೆ ಹಾರಾಡುತ್ತದೆ. ಆಗ ಕೀಟವು ಭಯಪಟ್ಟು ಅದರ ವಿಶೇಷ ಗ್ರಂಥಿಗಳಿಂದ ದ್ರವವು ಸ್ರವಿಸಿ ಅದಕ್ಕೆ ರೆಕ್ಕೆಗಳು ಉಂಟಾಗುತ್ತವೆ. ಕೊನೆಗೆ ರೂಪಾಂತರಗೊಂಡು ಭ್ರಮರವೇ ಆಗುತ್ತದೆ. ಇದುವೇ ಭ್ರಮರ ಕೀಟ ನ್ಯಾಯ. ಅದೇ ರೀತಿ, ಶಿಷ್ಯನು ಸದ್ಗುರುವಿನಲ್ಲಿ ಭಯಭಕ್ತಿಯಿಂದ, ಸೌಜನ್ಯದಿಂದ ಬೇಡಿಕೊಳ್ಳುತ್ತಿರುತ್ತಾನೆ. ಸದಾ ಗುರುವಿನ ಬೋಧೆಯನ್ನೇ ನೆನೆಯುತ್ತಾನೆ. 'ಯದ್ಭಾವಂ ತದ್ಭವತಿ'. ಭಾವವು ಹೇಗಿರುವುದೋ ಅಂತೆಯೇ ಆಗುತ್ತಾನೆ. ಈ ವಸುಧೆಯಲ್ಲಿ ಗುರುವನ್ನು ಮೆಚ್ಚಿ ನೆನೆಯುತ್ತಿದ್ದರೆ, ಅವನೂ ಗುರುವೇ ಆಗುತ್ತಾನೆ. ಜಗತ್ತಿನಲ್ಲಿ ಅದೇ ಸಾಧುವಾದ ಸನ್ಮಾರ್ಗವಾಗಿದೆ.

ಗೀ. ಬೂಟಕವು ಹುಟ್ಟಿ ಸಾವುದು ಭೂಮಿಯಲ್ಲಿ
ನಾಟಕವಯ್ಯ ಬದುಕುವುದು, ನಾಣ್ಯದಿಂದ.
ಕೂಟದನುವರಿವ ಗುರಿ ಸೇರಿ ಕಾಣಬೇಕು.
ದಾಟಿ ಪರದೆ ಹರಿ, ಪರ ತತ್ತ್ವದಲ್ಲಿ ವೇಮ.

ಹುಟ್ಟುವ ಮುನ್ನ ಏನಿದೆಯೋ ಗೊತ್ತಿಲ್ಲ. ಸತ್ತ ಬಳಿಕ ಏನಾಗುವುದೋ ಗೊತ್ತಿಲ್ಲ. ಹೀಗಾಗಿ ಈ ಭೂಮಿಯಲ್ಲಿ ಹುಟ್ಟಿ ಸಾಯುವುದು ಕಣ್ಣುಕಟ್ಟು ಆಟದಂತೆ. ಬರೀ ಬೂಟಕತನವಾಗಿದೆ. ದುಡ್ಡು ಗಳಿಸಿ, ದುಡ್ಡಿಗಾಗಿ ಹಲುಬಿ, ದುಡ್ಡಿನಿಂದ ಬದುಕುವುದು ನಿಜವಾದ ಬದುಕಾಗದು. ಏಕೆಂದರೆ ದುಡ್ಡು ತೋರುವ ಸುಖವು ಮರೀಚಿಕೆಯಂತೆ. ನಿಜವಾದ ಸುಖವು ಅಲ್ಲಿಲ್ಲ. ದುಡ್ಡನ್ನು ನಂಬಿ ಬಾಳುವೆ ಮಾಡುವುದೆಂದರೆ ಅದು ನಿಜವಾದ ಬಾಳಾಗದು. ಅದು ನಾಟಕದ ಪಾತ್ರಧಾರಿಯ ಬಾಳಿನಂತೆ, ತಾತ್ಕಾಲಿಕವಾದುದು. ಆದ್ದರಿಂದ, ನಿಜವಾದ ಸುಖಪಡೆಯಬೇಕಾದರೆ, ಜೀವ ಪರಮರ ಕೂಟದ ಅನುವನ್ನು ಅರಿಯುವ ಗುರಿ ಸೇರಿ, ಆನಂದದ ಅಕ್ಷಯ ಸೆಲೆಯನ್ನು ಕಾಣಬೇಕು. ವಿತ್ತೈಷಣದ ಮೋಹವನ್ನು ದಾಟಿ, ಬೃಹದೈಷಣಕ್ಕೆ ಅಡ್ಡವಾಗಿರುವ ಪರದೆಯನ್ನು ಹರಿ. ಪರತತ್ತ್ವದಲ್ಲಿ ನಿಲ್ಲು.

ಗೀ. ಕಟ್ಟಿಕೊಟ್ಟರೆ ಸಿಕ್ಕದು ಕರ್ಮ ಫಲವು.
ಮುಟ್ಟಿ ದಾಟಿದ ಮನುಜನ, ಮುಖ್ಯವಾಗಿ
ಗುಟ್ಟನು ತಿಳಿಸುವಾತನ, ಕೂಡಬೇಕು.
ರಟ್ಟು ಆದೊಡೆ ಕೇಳಿಲೊ ರಮ್ಯ ವೇಮ.

ಪೂರ್ವ ಜನ್ಮದಲ್ಲಿ ಎಷ್ಟೋ ಸತ್ಕರ್ಮಗಳನ್ನು ಮಾಡಿ ಪುಣ್ಯ ಫಲವನ್ನು ಕಟ್ಟಿಕೊಂಡು ಜನ್ಮತಾಳಿರಬಹುದು. ಅದರಿಂದ ಧನ ಧಾನ್ಯ, ಸುಖ-ಸಂಪತ್ತುಗಳನ್ನು ಪಡೆದಿರಬಹುದು. ಆದರೆ, ಅಷ್ಟರಿಂದಲೇ ಪುಣ್ಯ ಕರ್ಮದ ಗುರಿಯಾದ ಮುಕ್ತಿ ಲಾಭವು ಸಿಕ್ಕದು. ಅದಕ್ಕಾಗಿ, ಪರವನ್ನು ಮುಟ್ಟಿ ಇಹವನ್ನು ದಾಟಿದ, ಅದರಲ್ಲೂ, ಆ ಮಾರ್ಗವನ್ನು ಸರಿಯಾಗಿ ತಿಳಿಸಬಲ್ಲ, ಗುಟ್ಟನ್ನು ರಟ್ಟು ಮಾಡಬಲ್ಲ, ಗುರುವನ್ನುಕೂಡಬೇಕು. ಮುಕ್ತಿಯ ರಹಸ್ಯದ ಗುಟ್ಟು ರಟ್ಟಾದೊಡನೆ ರಮ್ಯವೆನಿಸುತ್ತದೆ.

ಕಂ. ಈ ಲೋಕ ಚಿಹ್ನೆಯೆಲ್ಲವು,
ಮೇಲ್ಮೆಯ ಗುರುಶಕ್ತಿ ಕೂಡಿ ಗಗನ ತಲುಪಲ್,
ಕಾಲನೆದುರಾಗಲು ಮತ್ತೆ,
ಸಾಲವೆ ಜನ್ಮಂಗಳೆಂದು ಘೋಷಿಸು ವೇಮಾ.

ವೇಷ ಭೂಷಣಗಳು, ತಿಲಕ ವಿಭೂತಿಗಳು, ಜಟೆ ದಂಡಗಳು ಎಲ್ಲವೂ ಈ ಲೋಕದ ಚಿಹ್ನೆಗಳಷ್ಟೇ. ಇವುಗಳೇನು ಅನಿವಾರ್ಯಗಳಲ್ಲ. ಆದರೆ, ಅನಿವಾರ್ಯ-ವಾದದ್ದೆಂದರೆ ಗುರುಶಕ್ತಿ ಕೂಡಿ ಗಗನವನ್ನು ಸೇರುವುದು. ಮೇಲ್ಮೆಯ ಗುರು ಶಕ್ತಿ ಕೂಡಿ, ಸಾಧನೆ ಮಾಡಿ, ಮನಸ್ತರವನ್ನು ಸ್ಥೂಲದಿಂದ ಸೂಕ್ಷ್ಮದಲ್ಲಿ ಉದ್ದೀಪಿಸುತ್ತ ಚಿದಾಕಾಶವನ್ನ ತಲುಪಿದರೆ, ಮಹಾ ಸಿದ್ಧಿಯುಂಟು. ಅಷ್ಟರಲ್ಲಿ ಕಾಲನು ಎದುರಾದರೆ ಅಂದರೆ ಮುಪ್ಪು ಸಾವುಗಳು ಎದುರಾದರೆ, ಭಯಪಡಬೇಡ. ಈಗಾಗಲೇ ಎತ್ತಿದ ಅನೇಕ ಜನ್ಮಗಳ ಅನುಭವವು ಸಾಲದೇ ? ಇನ್ನು ಈ ಜನನ ಮರಣಗಳ ಚಕ್ರಗಳ ಗತಿಯು ಸಾಕು ; ಎಂದು ಘೋಷಿಸು. ಚಿದಾಕಾಶದಲ್ಲಿ ಸೇರಿ ಪ್ರಲಯ ಹೊಂದು.

ಗೀ. ಶುದ್ಧ ಪರಿಪೂರ್ಣ ದೃಷ್ಟಿಯಲಿ ಸುಸ್ಥಿರಾಗಿ
ಇದ್ದು ನಿರ್ಗುಣ ಹೊಂದುತ ನಿರ್ಮಲಾಗಿ,
ಗದ್ದುಗೆಯನೇರಿ ಬ್ರಹ್ಮವನು ಕಾಣಬಹುದು.
ಸುದ್ದಿಯೇಕೆ ? ಗುರು ಸೇರಿ, ಶ್ರಮಿಸು ವೇಮ.

ಮನಸ್ಸನ್ನು ಆಣವಿಕ, ಮಾಯಿಕ, ಕಾರ್ಮಿಕ ಮಲಗಳಿಂದ ಶುದ್ಧಗೊಳಿಸಿ, ಅಖಂಡವಾದ ಪರಿಪೂರ್ಣ ದೃಷ್ಟಿಯಲ್ಲಿ ಸುಸ್ಥಿರವಾಗಿ ಇದ್ದು, ಸಗುಣ ಸ್ಥಿತಿಯನ್ನು ದಾಟಿ, ಗುಣಗಳ ಪ್ರಭಾವಕ್ಕೆ ಒಳಗಾಗದ ನಿರ್ಗುಣತ್ವವನ್ನು ಹೊಂದುತ್ತ, ಆವರಣೇ ಮತ್ತು ವಿಕ್ಷೇಪ ಮಲಗಳಿಂದ ಮಲಿನಗೊಳ್ಳದೆ ನಿರ್ಮಲನಾಗಿ, ಉನ್ನತ ಸ್ತರವನ್ನು ತಲುಪಬೇಕು. ಇಂಥ ನಿತ್ಯತ್ವದ ಗದ್ದುಗೆಯನ್ನು ಏರಿದಾಗ ಬೃಹದೇಷಣೆಯು ಫಲಿಸಿ ಬ್ರಹ್ಮವನ್ನು ಕಾಣಬಹುದು. ಬ್ರಹ್ಮವಿದನಾಗಬಹುದು. ಈ ಬಗ್ಗೆ ಗದ್ದುಗೆ, ಪಟ್ಟ, ಮಠ, ಸಂಸ್ಥಾನಗಳೆಂಬ ಸುದ್ದಿ ಏಕೆ ? ಸದ್ಗುರುವನ್ನು ಸೇರಿ ಶ್ರಮಿಸಬೇಕಷ್ಟೇ.

ಕಂ. ಗುರಿಗಾಣದಿದ್ದು ಮರ್ತ್ಯರು,
ಪರಿಚಿತ ಶಾಸ್ತ್ರಗಳ ವಾದ ಪದ್ಧತಿಗಿಳಿವರ್.
ಗುರುವು ಜ್ಯೋತಿಯನೀವನು ;
ಅರಿಯುವನವ ದಡ, ಯೋಗಿಯು, ಧರೆಯಲಿ, ವೇಮಾ.

ಮೃತ್ಯು ಜನ್ಮಗಳ ಚಕ್ರದಲ್ಲಿ ಸಿಲುಕಿದ ಮರ್ತ್ಯರು, ಮಾನವ ಜನ್ಮದ ಮುಖ್ಯ ಗುರಿಯಾದ ಆತ್ಮ ಸಾಕ್ಷಾತ್ಕಾರವನ್ನು ಓದಿ, ಪಾಠ ಮಾಡಿ, ಶಬ್ದ ಜ್ಞಾನ ಮಾಡಿಕೊಂಡು ಅದೇ ಸರಿಯೆಂದು ವಾದ, ಜಲ್ಪ, ವಿತಂಡ ಪದ್ಧತಿಗೆ ಇಳಿಯುತ್ತಾರೆ. ಮತೀಯ ಭ್ರಾಂತಿಗೀಡಾಗುತ್ತಾರೆ. ಇದನ್ನೆಲ್ಲ ಬಿಟ್ಟು ಸದ್ಗುರುವನ್ನು ಸೇರಿ ಸೇವಿಸಬೇಕು. ಆ ಅಂಧಕಾರ ನಿವಾರಕನಾದ ಗುರುವು ಅಜ್ಞಾನವನ್ನು ಕೊನೆಗೊಳಿಸುವ ಜ್ಞಾನ ಜ್ಯೋತಿಯನ್ನು

ನೀಡುತ್ತಾನೆ. ಆ ಬೆಳಕಿನಲ್ಲಿ ಯೋಗ ಸಾಧಕನು ದಡವನ್ನು ಅರಿಯುತ್ತಾನೆ. ಧರೆಯಲ್ಲಿ ಸಿದ್ಧ ಯೋಗಿಯಾಗಿ ಬೆಳಗುತ್ತಾನೆ.

ಕಂ. ಪರದೇಶಿಕ ಚರಣಂಗಳ
ಉರದಿ ಧರಿಸುತ ಮಿಗಿಲು ಉತ್ಸಾಹದೊಡಾ
ಗುರುವರನ ಬೇಡಿ, ಕೊನೆಯಲಿ,
ಪರಿಪೂರ್ಣವ ಹಲುಬಿ ಕಾಣು, ಭದ್ರತೆ, ವೇಮಾ.

ಪರದ ಹಾದಿ ತೋರುವ ಪರದೇಶಿಕನಾದ ಗುರುವಿನ ಚರಣಗಳನ್ನು ಎದೆಯಲ್ಲಿ ಭಕ್ತಿ ಭಾವದಿಂದ ಧರಿಸಬೇಕು. ಅಂದರೆ ಅವನು ಹೆಜ್ಜೆ ಇಟ್ಟಲ್ಲಿಯೇ ಹೆಜ್ಜೆ ಇಡುವ ನಿರ್ಧಾರ ಹೊಂದಿ, ಹೆಚ್ಚಿನ ಉತ್ಸಾಹದಿಂದ ಅಂಧಕಾರ ನಿವಾರಕನಾದ ಗುರುವನ್ನು ಮುಂದಿನ ಹಾದಿ ತೋರು, ಎಂದು ಪ್ರಾರ್ಥಿಸಿಕೊಳ್ಳಬೇಕು. ಮುಂದೆ ಲಕ್ಷ್ಯ ಕುರಿತು ಒಂದೇ ಸಮನೆ ಕನವರಿಸುತ್ತ ಪರಿಪೂರ್ಣವನ್ನು ಕಾಣು. ಇದರಲ್ಲಿ ಭದ್ರತೆಯುಂಟು.

ಕಂ. ನೋಡುವ ವರೆಗೇ ಸಾಧನ
ನೋಡುತ, ಮನದಲ್ಲಿ ತೋಚಿ, ಸುಲಭವೆಯಾಗಳ್,
ಗೂಢವು ತೋಚಿದ ಮರ್ಮದ
ಜಾಡರಿತು ನೀನೆಂದರಿ, ಗುರು ಸೇರಿ, ವೇಮಾ.

ಧ್ಯಾನದಲ್ಲಿ ಮನವನ್ನು ಏಕಾಗ್ರಗೊಳಿಸಿ, ಲಕ್ಷ್ಯವನ್ನೇ ಚಿಂತಿಸುತ್ತ ಇರಲು ಅಗ್ರ್ಯ ಬುದ್ಧಿಯಲ್ಲಿ ಆತ್ಮವು ಪ್ರತಿಫಲಿಸುತ್ತದೆ. ಇದನ್ನು ಒಳಗಣ್ಣಿನಿಂದ ಅಂದರೆ ಅರಿವಿನ ಕಣ್ಣಿನಿಂದ ನೋಡುವ ವರೆಗೆ ಸಾಧನವಿರುತ್ತದೆ. ಹೀಗೆ ನೋಡುತ್ತ ನೋಡುತ್ತ, ಮನದಲ್ಲಿ ತೋಚಿ ನೋಡುವಿಕೆಯು ಸುಲಭವಾಗುತ್ತದೆ. ಅದು ವರೆಗೆ ಯಾವುದು ಗುಹ್ಯವಾಗಿದ್ದಿತೋ. ಆ ಗೂಢವು ತೋಚಿದ ರೀತಿಯ ಜಾಡನ್ನು ಅಂದರೆ ಸುಳಿವನ್ನು ಅರಿತು, ಅದುವೇ ನಾನು ಎಂದು ಅರಿತುಕೋ. 'ತತ್ ತ್ವಂ ಅಸಿ'. ಗುರು ಚಕ್ರದಲ್ಲಿ ಗುರುವನ್ನು ಸೇರಿಕೋ.

ನಿಷಿದ್ಧ ಗುರು :

ಆ. ನೋಟ ದೀಪ ಮಾಡಿ, ಸೂಕ್ಷ್ಮ ಬತ್ತಿ ಮಾಡಿ,
ಚಿತ್ತವೆಂಬ ದೀಪ ಹೊತ್ತಿಸುತ್ತ,
ಪಾಪವೆಂಬ ತಿಮಿರ ಪಾರುಗಾಣಿಸದಿರೆ,
ಪಾಪ ಜಾತಿ ಗುರುವು, ಪಶುವು ವೇಮ.

ಅಂಧಕಾರ ನಿವಾರಕನು ಗುರು. ಅವನು ಸಾಧನ ಮಾರ್ಗ ಬೋಧಿಸುತ್ತಾನೆ. ಮಂತ್ರೋಪದೇಶ ಮಾಡುತ್ತಾನೆ. ಸಾಧಕನು ತನ್ನ ಒಳನೋಟವನ್ನು ದೀಪ ಮಾಡಿಕೊಂಡು, ಸೂಕ್ಷ್ಮವನ್ನೇ ಬತ್ತಿ ಮಾಡಿಕೊಂಡು, ಚಿತ್ತವೆಂಬ ದೀಪ ಹೊತ್ತಿಸಬೇಕು. ಚಿತ್ತವೆಂಬ ದೀಪ ಉರಿದುರಿದು, ಸೂಕ್ಷ್ಮವೆಂಬ ಬತ್ತಿಯ ಮೂಲಕ ಸೂಕ್ಷ್ಮಾತಿಸೂಕ್ಷ್ಮಗಳ ಸ್ತರವನ್ನು ತಲುಪಿ, ವಿಷಯಗಳ ಸಂಗದಿಂದ ದೂರಾಗುತ್ತದೆ. ಆಗ ಸಾಧಕನು ವಿಷಯ ಸಂಗದಿಂದ

ಅಂದರೆ ಪಾಪವೆಂಬ ತಿಯಿರದಿಂದ ಪಾರುಗಾಣುತ್ತಾನೆ. ಚಿಜ್ಯೋತಿಯ ಪ್ರಕಾಶದಲ್ಲಿ ತೇಲುತ್ತಾನೆ. ಹೀಗೆ ಮಾಡಿಸಲಾರದ ಗುರುವು ಮಂತ್ರ ತಂತ್ರ ಬೋಧಿಸಿ ಹಾದಿ ತಪ್ಪಿಸುತ್ತಾನೆ. ಅವನು ಪಾಪ ಜಾತಿಯ ಗುರುವು. ಅವನು ಜಡಕ್ಕೆ ಎಳೆಯುವ ಪಶುವು.

ಆ. ಉತ್ತಮೋತ್ತಮನಿಹ ತತ್ತ್ವಜ್ಞನಿಳಿಯಲ್ಲಿ,
ಮಹಿಮೆ ತೋರುವವನು ಮಧ್ಯಮನಿಹ.
ವೇಷಧಾರಿ ಉದರ ಪೋಷಕನಧಮನಲ !
ವಿಶ್ವದಾಭಿರಾಮ ಕೇಳು ವೇಮ.

ಗುರುಗಳಲ್ಲಿಯೂ ತರಗತಿಗಳುಂಟು. ಗುಣಾತೀತರಾದ ಸದ್ಗುರುಗಳಲ್ಲಿ ತರತಮ ಭೇದಗಳಿಲ್ಲ. ಬಹಳವಾದರೆ ಸಾಧನ ಪದ್ಧತಿಗಳಲ್ಲಿ ಬೇಧವಿರಬಹುದು. ಬೇರೆ ಬೇರೆ ವ್ಯಕ್ತಿಗಳಿಗೆ ಬೇರೆ ಬೇರೆ ಸಾಧನ ಪದ್ಧತಿಗಳು ಸೂಕ್ತವಾಗಬಹುದು. ಆದರೆ ಗುರುಗಳಿಂದು ತೋರಿಸಿಕೊಳ್ಳುವ ಜನರಲ್ಲಿ ಇರುವ ತರಗತಿಗಳೇ ಬೇರೆ. ಈ ಭೂಮಿಯ ಮೇಲೆ (ತತ್+ತ್ವ) ತತ್ತ್ವವನ್ನು ತಿಳಿದವನು ಉತ್ತಮೋತ್ತಮನಾಗಿದ್ದಾನೆ. ಅವನು ದೇಹ ತತ್ತ್ವವನ್ನು, ಮನಸ್ತತ್ತ್ವವನ್ನೂ, ಆತ್ಮ ತತ್ತ್ವವನ್ನೂ ಬಿಡಿಸಿ ತೋರಿಸಬಲ್ಲನು. ಇನ್ನು ಕೆಲವರು ಅಂತಿಮ ಸ್ತರ ತಲುಪದೆ, ಮಧ್ಯಂತರ ಸಾಧನೆಯ ಬಲದಿಂದ ಉನ್ನತ ಮನಸ್ತರ ತಲುಪಿ, ಐಶ್ವರ್ಯ ಸಿದ್ಧಿಯನ್ನು ಪಡೆದುಕೊಂಡು, ಆ ಸಿದ್ಧಿಯನ್ನು ತೋರುತ್ತ ಮೆರೆಯುತ್ತಾರೆ. ಅಣಿಮಾ, ಮಹಿಮಾ, ಗರಿಮಾ, ಲಘಿಮಾ, ಈಶತ್ವ, ವಶಿತ್ವ, ಪ್ರಾಪ್ಯ, ಪ್ರಕಾಮ್ಯಗಳೆಂಬ ಅಷ್ಟಐಶ್ವರ್ಯ ಸಿದ್ಧಿಗಳಲ್ಲಿ ಕೆಲವನ್ನು ಪಡೆದು ಪ್ರದರ್ಶಿಸಿ ಜನರನ್ನು ಆಕರ್ಷಿಸುತ್ತಾರೆ. ಇಂಥ ಮಹಿಮೆ ತೋರುವವರು ಮಧ್ಯಮರು. ಇನ್ನು ಕೆಲವರು ಉದರ ಪೋಷಣಕ್ಕಾಗಿ, ಜಗದ ಜನರನ್ನು ತಮ್ಮತ್ತ ಸೆಳೆಯಲು ಗುರುವಿನ ವೇಷ ಧರಿಸುತ್ತಾರೆ. ಇವರು ಕಾಷಾಯ ವಸ್ತ್ರ ಧರಿಸಬಹುದು, ಜಡೆಯನ್ನು ಬೆಳೆಸಬಹುದು. ದಂಡ ಕಮಂಡಲುಗಳನ್ನು ಹಿಡಿಯಬಹುದು. ಬಗೆ ಬಗೆಯ ಚಿಹ್ನೆಗಳನ್ನು ಧರಿಸಬಹುದು. ಆದರೆ ಇವರನ್ನು ನಂಬಕೂಡದು. ಇವರು ಅಧಮರಷ್ಟೇ.

ಆ. ಕಳ್ಳ ಗುರು ಕಟ್ಟುವನೆಲ್ಲ ಕರ್ಮಗಳನು ;
ಮಧ್ಯಮನು ಕಟ್ಟುವ ಮಂತ್ರ ಚಯವ.
ಉತ್ತಮನು ಕಟ್ಟುವ ಯೋಗ ಸಾಮ್ರಾಜ್ಯವ.
ವಿಶ್ವದಾಭಿರಾಮ ಕೇಳು ವೇಮ.

ಗುರುಗಳು ಬೋಧಿಸುವ ವಿವಿಧ ಸಾಧನ ಪದ್ಧತಿಗಳ ಮೇಲಿಂದ ಅವರನ್ನು ತರ, ತಮ ಎಂದು ವಿಂಗಡಿಸಬುಹುದು. ಕೆಲವರು ಜನರಿಗೆ ತಮ್ಮತಮ್ಮ ಮನದಿಷ್ಟಗಳನ್ನು ಪೂರೈಸಿಕೊಳ್ಳಲು ಕೆಲವು ಕರ್ಮಗಳನ್ನೂ, ವ್ರತ ನೇಮಗಳನ್ನೂ, ಕಟ್ಟುತ್ತಾರೆ. ಅಂಧಕಾರ ನಿವಾರಕ ಗುರುವಾಗಬೇಕಾದ ಇವರು, ಐಹಿಕ ವ್ಯಾಪಾರದಲ್ಲಿ ಜನರನ್ನು ನೂಕುತ್ತಾರೆ. ಆದ್ದರಿಂದ ಅವರು ಗುರುವೇಷದಲ್ಲಿ ಮೆರೆಯುವ ಕಳ್ಳರಷ್ಟೇ. ಇನ್ನು ಕೆಲವರು ಮನೋಶುದ್ಧಿಗಾಗಿ ಜಪಿಸಲು ಮಂತ್ರಗಳ ರಾಶಿಯನ್ನೇ ಬೋಧಿಸುತ್ತಾರೆ. ಮಂತ್ರ ಜಪದಿಂದ

ಮಂತ್ರ ಚೈತನ್ಯ ಉಂಟಾಗಿ ಮನಸ್ಸಿನ ಏಕಾಗ್ರತೆಗೆ ದಾರಿಯಾಗಬಹುದು. ಇಂಥ ಮಂತ್ರೋಪದೇಶ ಮಾಡುವವರು ಮಧ್ಯಮ ಗುರುಗಳು. ಇನ್ನು ಕೆಲವರು ಉತ್ತಮ ಗುರುಗಳಿರುತ್ತಾರೆ. ಅವರು ಯೋಗ ಸಾಮ್ರಾಜ್ಯವನ್ನೇ ಕಟ್ಟುವರು. 'ಜೀವಾತ್ಮ ಪರಮಾತ್ಮ ಸಂಯೋಗೋ ಯೋಗ ಇತ್ಯುಚ್ಯತೇ' ಅಂದರೆ ಜೀವಾತ್ಮ ಪರಮಾತ್ಮರ ಸಂಯೋಗವೇ ಯೋಗವೆನಿಸುತ್ತದೆ. ಇಂಥ ಯೋಗ ಸಾಮ್ರಾಜ್ಯವನ್ನು ಕಟ್ಟುವವನು ಉತ್ತಮ ಗುರುವಾಗಿದ್ದಾನೆ.

ಕಂ. ವೇದಾಂತ ಸಾರ ಗುಣ ಸಂ-
ವಾದಿತನಿಹ ಗುರುವ ಬೇಡಿ, ಪರಿಪೂರ್ಣನು ತಾ.
ಮೋದದಲಿ ಗುರಿಯನಿರಿಸುತ,
ಸಾಧನದಲಿ ಮುಕ್ತಿಯುಂಟು, ಸತ್ಯವು, ವೇಮಾ.

ವೇದಗಳು ನಾಲ್ಕು. ಋಗ್ವೇದ, ಯಜುರ್ವೇದ, ಸಾಮವೇದ ಮತ್ತು ಅಥರ್ವಣ ವೇದ. ಪ್ರತಿಯೊಂದು ವೇದದಲ್ಲಿ ನಾಲ್ಕು ಭಾಗಗಳಿವೆ : ಮಂತ್ರಸಂಹಿತೆ, ಬ್ರಾಹ್ಮಣ, ಆರಣ್ಯಕ ಮತ್ತು ಉಪನಿಷತ್ತು. ಮೊದಲಿನ ಎರಡು ಭಾಗಗಳು ಕರ್ಮಕಾಂಡಗಳಾಗಿವೆ. ಕೊನೆಯ ಎರಡು ಭಾಗಗಳು ಜ್ಞಾನಕಾಂಡಗಳೆನಿಸಿವೆ. ಅದರಲ್ಲಿಯೂ ವೇದಗಳ ಕೊನೆಯ ಭಾಗಗಳಾದ, ಆದ್ದರಿಂದ ವೇದಾಂತವೆನಿಸಿರುವ, ಉಪನಿಷತ್ತುಗಳಲ್ಲಿ ಆತ್ಮ ತತ್ತ್ವವನ್ನು ವಿವೇಚಿಸಲಾಗಿದೆ. ಇಂಥ ವೇದಾಂತ ಸಾರವನ್ನು ಸಂವಾದಿಸುವಲ್ಲಿ ಅಂದರೆ ಪರಿಪ್ರಶ್ನೆಗಳನ್ನು ಕೇಳಿ ತಿಳಿಸುವ ಗುರುವನ್ನು ಬಳಿಸಾರಿ, ಸೇವೆ ಗೆಯ್ದು, ಪರಿಪೂರ್ಣನಾಗಬೇಕು. ಖಂಡಿತ ಮತವನ್ನು ತೊರೆಯಬೇಕು. ಆಗ ಮನಸ್ಸಿಗೆ ಆನಂದವಾಗುತ್ತದೆ. ಆಮೋದದಲ್ಲಿಯೇ ಗುರಿಯನ್ನಿರಿಸಿ, ಸಾಧನ ಮಾಡಬೇಕು. 'ಆನಂದಂ ಬ್ರಹ್ಮ ಇತ್ಯಾಹುಃ' ಆನಂದವೇ ಬ್ರಹ್ಮವೆನಿಸುತ್ತದೆ. ಸತ್ಯವಾಗಿಯೂ ಇಂಥ ಸಾಧನದಲ್ಲಿ ಮುಕ್ತಿಯುಂಟು.

ಆ. ರೂಢಿಯಿಂದ ಭಕ್ತಿ ರೂಪಿಸಿ ಹೇಳುವವ
ಅವನೆ ಪರಮ ಗುರುವು ವಸುಧೆಯಲ್ಲಿ.
ಬೇಡಿ, ಪರವ ಕಂಡವ ವೇದಾಂತ ವೇದ್ಯನು.
ವಿಶ್ವದಾಭಿರಾಮ ಕೇಳು ವೇಮ.

ಭಜ ಎಂದರೆ ಸೇವಿಸು. ಇದಕ್ಕೆ ಕ್ತಿನ್ ಪ್ರತ್ಯಯ ಸೇರಿ ಭಕ್ತಿ ಪದವಾಗಿದೆ. ಗುರುಚಕ್ರದಲ್ಲಿ ಗುರುಮೂರ್ತಿಯನ್ನು ರೂಪಿಸಿ ರೂಢಿಯಿಂದ ಸೇವಿಸಲು ಉಪದೇಶಿಸುವವನು ವಸುಧೆಯಲ್ಲಿ ಪರಮ ಗುರುವೆನಿಸುತ್ತಾನೆ. ಆ ಗುರು ಮೂರ್ತಿಯನ್ನು ಪ್ರಾರ್ಥಿಸಿ, ಇಹವನ್ನು ದಾಟಿ ಪರವನ್ನು ಕಂಡವನೇ ವೇದಾಂತ ವೇದ್ಯನು. ಅವನೇ ಬ್ರಹ್ಮವಿದನು. 'ಬ್ರಹ್ಮವಿದಃ ಬ್ರಹ್ಮೈವ ಭವತಿ'. ಅಂದರೆ ಬ್ರಹ್ಮವಿದನು ಬ್ರಹ್ಮವೇ ಆಗುತ್ತಾನೆ.

ಕಂ. ಮಾಯಾ ಮೂಲದ ಕೆಲವರು
ಮಾಯೆಗಳ ತೋರಿಸಿ, ಮನವ ಮರುಳುಗೊಳಿಸುವರ್.

ಮಾಯೆಯ ಹೊರಗಿಹ ಚಿತ್ತವ,
ಕೊಯ್ಯದೆ, ಗುರುನಿಷ್ಠೆ ತಾಳಿ, ಪ್ರಬಲಿಸು, ವೇಮಾ.

ಐಂದ್ರಜಾಲಿಕ ಅರ್ಥಾತ್ ಕಣ್ಣುಕಟ್ಟಿನ ಮಾಯಾ ಮೂಲದ ಕೆಲವರು ಮಾಯೆಗಳನ್ನು ತೋರಿಸುತ್ತಾರೆ. 'ಯಾ ಮಾ ಸಾ ಮಾಯಾ'. ಅಂದರೆ ಯಾವುದು ಇಲ್ಲವೋ ಅದು ಮಾಯೆ. ಇಲ್ಲದ್ದನ್ನು ಇದ್ದಂತೆ. ತೋರಿಸುವುದು. ಹೀಗೆ ಕಣ್ಣುಕಟ್ಟಿನ ವಿದ್ಯೆಯಿಂದ ಚಿತ್ರವಿಚಿತ್ರಗಳನ್ನು ತೋರಿಸಿ, ಮನಸ್ಸನ್ನು ಮರುಳುಗೊಳಿಸುತ್ತಾರೆ. ಆದ್ದರಿಂದ, ಮಾಯೆಯ ಹೊರಗಿನ ಅಂದರೆ ಮಾಯೆಗೆ ಮರುಳಾಗದ ಚಿತ್ತವನ್ನು ನಾಶಪಡಿಸದೆ, ಗುರುವಿನಲ್ಲಿ ನಿಷ್ಠೆ ತಾಳಿ, ಪ್ರಬಲಿಸಬೇಕು. ಮನವನ್ನು ಉದ್ದೀಪಿಸಬೇಕು.

ಆ. ಅರಿಯೆ, ದೋಚುವವನು, ಗುರುವು ತಾನು ಎಂದು,
ತಿರುಗುವವನು ತನ್ನ ತಿಳಿಯಲಾರ.
ಮಾತು ಬೊಗಳೆಯಷ್ಟೆ ; ಮೂಳ ದಾಸನ ಮಗ.
ವಿಶ್ವದಾಭಿರಾಮ ಕೇಳು ವೇಮ.

ತಾನು ಗುರುವು ; ಮಂತ್ರ ದೀಕ್ಷೆ ನೀಡುತ್ತೇನೆ. ನಿಮ್ಮನ್ನು ಉದ್ಧರಿಸುತ್ತೇನೆ. ಎಂದು ಹೇಳುತ್ತ ದಕ್ಷಿಣೆಯ ರೂಪದಲ್ಲಿ ಜನರ ಹಣವನ್ನು ದೋಚುವವನು, ನಿಜವಾಗಿ ಅರಿತು ನೋಡಿದರೆ, ತನ್ನನ್ನೇ ತಾನು ತಿಳಿಯಲಾರದವನಾಗಿದ್ದಾನೆ. ಬರೀ ಅತ್ತಿತ್ತ ತಿರುಗುತ್ತಾನಷ್ಟೇ. ಅಂಥವನ ಮಾತು ಬರೀ ಬೊಗಳೆಯಷ್ಟೇ. ಹೆಚ್ಚೇನು ಹೇಳಲಿ ? ಅವನು ಮೂಳ ದಾಸನ ಮಗನಷ್ಟೇ. ಅಂದರೆ ಜನರು ಏನೆನ್ನುವರೆಂಬುದನ್ನು ಕೇಳದ ಮೂಳ ದಾಸನ ಮಗನು.

ಆ. ಮಿಥ್ಯ ತಿಳಿವಿನಿಂದ ಮೋಕ್ಷ ದೊರಕಬಹುದೆ ?
ಕೈಲಾಗದ ಕೆಲಸ ಗೆಯ್ಯಬೇಡ.
ಗುರುವು ಎನ್ನಬೇಡ, ಗುಣಹೀನನಾಗಿರೆ.
ವಿಶ್ವದಾಭಿರಾಮ ಕೇಳು ವೇಮ.

ಸತ್ಯದ ಗುರಿ ತಲುಪಲು ಸತ್ಯವೇ ಹಾದಿಯಾಗಿದೆ. ಅಂದ ಮೇಲೆ, ಮೋಕ್ಷದ ಗುರಿಯನ್ನು ತಲುಪಬೇಕಾದರೆ, ಮಿಥ್ಯದ ಅರಿವು ಪ್ರಯೋಜನಕ್ಕೆ ಬಾರದು. ಸತ್ಯದ ಅರಿವೇ ಬೇಕು. ನಿನ್ನ ಕೈಯಿಂದ ಆಗಲಾರದ ಕಾರ್ಯಕ್ಕೆ ಕೈ ಹಾಕಬೇಡ. ಹಾಗೆ ಮಾಡಿದರೆ ಮರೀಚಿಕೆಯನ್ನು ಹಿಡಿಯ ಹೊರಟಂತೆ ಆದೀತು. ಮಾರ್ಗದರ್ಶಕ. ಗುರುವು ಇಲ್ಲದೆ ಮಹಾನ್ ಗುರಿಯೆಡೆಗೆ ಧಾವಿಸಬೇಡ. ಯಾವನು ಗುಣ ಹೀನನಾಗಿರುವನೋ, ಅವನನ್ನು ಎಂದಿಗೂ ಅಂಧಕಾರ ನಿವಾರಕ ಗುರು ಎನ್ನಬೇಡ.

ಆ. ಶಿಷ್ಯ ವರ್ಗಕೆಲ್ಲ ಶಿವಪೂಜೆ ತಿಳಿಸದೆ,
ಸಲ್ಲದ ಮತವೆಲ್ಲ ಸೇರಿಸುತಿಹ.
ಗುರುವಿನ ತಿಳಿವರಿಯೆ, ಕುರುಡಾಕಳ ಕರುವಲ !
ವಿಶ್ವದಾಭಿರಾಮ ಕೇಳು ವೇಮ.

'ಸರ್ವಂ ಶಿವಮಯಂ ಜಗತ್'. ಅಂದರೆ ಈ ಜಗತ್ತೆಲ್ಲವೂ ಶಿವನಿಂದ ತುಂಬಿದೆ. 'ಶಕ್ತಿಃ ಸಾ ಶಿವಸ್ಯ ಶಕ್ತಿಃ'. ಶಕ್ತಿ ಎಲ್ಲವೂ ಶಿವನ ಶಕ್ತಿಯೇ ಆಗಿದೆ. ಈ ಶಿವನ ಪೂಜೆಯೆಂದರೆ ಸರ್ವ ಭೂತಗಳ ಪೂಜೆ ಇಲ್ಲವೆ ಸೇವೆಯೇ ಆಗಿದೆ. ಗುರುವಾದವನು ಸರ್ವ ಜಗತ್ತು ಶಿವಮಯವಾಗಿದೆಯೆಂದು ತಿಳಿದವನೇ ಸರಿ. ಅವನು ತನ್ನ ಶಿಷ್ಯ ವರ್ಗಕ್ಕೆಲ್ಲ ಶಿವಪೂಜೆಯ ಇಂಗಿತವನ್ನು ತಿಳಿಸದೆ, ಸಲ್ಲದ ಮತಗಳನ್ನು ಸೇರಿಸುತ್ತಿಹನು. ಶೈವ, ವೈಷ್ಣವ, ಶಾಕ್ತ, ಸೌರ, ಕೌಮಾರ ಮತ್ತು ಗಾಣ ಪತ್ಯಗಳೆಂಬ ಆರು ವೈದಿಕ ಮತಗಳಿವೆ. ಬೌದ್ಧ ಮತ್ತು ಜೈನ ಎಂಬೆರಡು ಅವೈದಿಕ ಮತಗಳಿವೆ. ಕ್ರೈಸ್ತ, ಇಸ್ಲಾಂ, ಝೂರತುಷ್ಟ್ರ ಎಂಬ ವಿದೇಶಿ ಮತಗಳಿವೆ. ಈ ಮತಗಳ ಸಂಖ್ಯೆಗೆ ಇನ್ನೊಂದು ಸಂಖ್ಯೆಯನ್ನು ಜೋಡಿಸುವ, ಗುರುವೆನ್ನುವವನ ತಿಳಿವು, ತನ್ನ ಕರುಗಳನ್ನೇ ಕಾಣದ ಕುರುಡು ಆಕಳು ಮತ್ತು ತಾಯಿಯನ್ನೇ ಕಾಣದ ಕುರುಡು ಕರುಗಳಂತಾಗಿದೆ.

ಆ. ಕಾಗುಣಿತ ಬೋಧಿಪ, ಗುರುವು ಅಲ್ಲವಲ್ಲ.
ಶಾಸ್ತ್ರ ಪಾಠ ಓದಿಸುವನು ಅಲ್ಲ.
ಮುಕ್ತಿ ದಾರಿ ತೋರುತಿಪ್ಪನೆ ಗುರುಮೂಲ.
ವಿಶ್ವದಾಭಿರಾಮ ಕೇಳು ವೇಮ.

ಗುರು ಎಂದರೆ ಅಂಧಕಾರ ನಿವಾರಕ. ಅಜ್ಞಾನವೇ ಅಂಧಕಾರ. ತಾನು ದೇಹ ಎಂದು ಅಭಿಮಾನಿಸುವುದು ಅಜ್ಞಾನ. ತಾನು ದೇಹವಲ್ಲ, ಆತ್ಮ ಎಂದು ಅರಿಯುವುದೇ ಜ್ಞಾನ. ಈ ಅಜ್ಞಾನವೆಂಬ ಅಂಧಕಾರವನ್ನು ಕಳೆದು ಜ್ಞಾನವನ್ನು ಬೆಳಗಿಸುವವನೇ ಗುರು. ಅಂದ ಮೇಲೆ, ಕ ಕಾ ಕಿ ಕೀ ಕಾಗುಣಿತ ಕಲಿಸುವ ಶಾಲೆಯ ಉಪಾಧ್ಯಾಯರು ಆಧ್ಯಾತ್ಮಿಕ ಗುರುವಾಗಲಾರರು. ಇನ್ನು ಶಾಸ್ತ್ರ ಪಾಠವನ್ನು ಹೇಳಿಕೊಡುವ ಉಪಾಧ್ಯಾಯನೂ ಗುರುವಾಗಲಾರನು. ಆದರೆ ಯಾರು ಐಹಿಕ ಬಂಧಗಳಿಂದ ಮುಕ್ತವಾಗುವ ಹಾದಿಯನ್ನು ತೋರಿಸುತ್ತಾನೋ ಅವನೇ ಮೂಲ ಗುರುವೆನಿಸುತ್ತಾನೆ.

ಆ. ಶಿಷ್ಯ ವರ್ಗಕೆಲ್ಲ ಶಿವರೂಪ ತಿಳಿಸದೆ,
ಸಲ್ಲದ ಮತಕಟ್ಟಿ ನೂಕುವವರೆ,
ಗುರುತರಿಯದೆ, ನಿಲುವ ಹೊಕ್ಕ ಕುರುಡೆತ್ತು !
ವಿಶ್ವದಾಭಿರಾಮ ಕೇಳು ವೇಮ.

ಸತ್ಯಂ ಶಿವಂ, ಸುಂದರಂ ; 'ಶಿವಂ ಅದ್ವೈತಂ' ಎಂದು ಪರಮ ಮಂಗಳಮಯಿಯಾದ ಶಿವತತ್ತ್ವವನ್ನು ಶಿಷ್ಯ ವರ್ಗಕ್ಕೆಲ್ಲ ತಿಳಿಸದೆ, ಯಾವುದು ಶಿವವಲ್ಲವೋ, ಅದ್ವೈತವಲ್ಲವೋ, ಅದರ ಬಗ್ಗೆ ಸಲ್ಲದ ಕಲ್ಪನೆಗಳನ್ನು ಮಾಡಿಕೊಂಡು, ಅವುಗಳನ್ನೇ ತಮ್ಮಲ್ಲಿ ಮಾರ್ಗದರ್ಶನಕ್ಕಾಗಿ ಬರುವವರಿಗೆ ಬೋಧಿಸಿ, ಮತಗಳನ್ನು ಕಟ್ಟಿ ಶಿಷ್ಯರನ್ನು ಅಧೋಗತಿಗೆ ನೂಕುವವರು ಬಹಳ ಜನ. ತಾವೇ ತಕ್ಕ ಅರಿವು ಹೊಂದದ ಜ್ಞಾನಾಂಧಕಾರದಲ್ಲಿ ಮುಳುಗಿರುವ ಇಂಥ ಗುರುವೆಂದುಕೊಳ್ಳುವವರು, ಕುರುಡು ಎತ್ತೊಂದು, ದಾರಿಗಾಣದೆ, ಬೆಳೆದು ನಿಂತ ಪೈರಿನ ನಿಲುವಿನಲ್ಲಿ ಹೊಕ್ಕು ತಬ್ಬಿಬ್ಬಾದಂತೆ ! ಇಂಥ ಮತ ಭ್ರಾಂತರು ತಾವೇ ಮೊದಲು ದಾರಿಗಾಣರು. ಇನ್ನು ಬೇರೆಯವರಿಗೆ

ಮಾರ್ಗದರ್ಶನ ಮಾಡುವುದಂತೂ ದೂರವೇ ಸರಿ.

ಆ. ಜೊಳ್ಳು ಮಾತನಾಡಿ ಜಗದಿ ತಿರುಗುವಂಥ
ಕಳ್ಳ ಗುರು ಕಟ್ಟುವ ಕರ್ಮಗಳನು.
ಹಲ್ಲೊಳು ಹುಳು ಸೇರಿ ನೋವುಂಟು ಮಾಡದೆ ?
ವಿಶ್ವದಾಭಿರಾಮ ಕೇಳು ವೇಮ.

ಸ್ವತಃ ಆತ್ಮ ಸಾಕ್ಷಾತ್ಕಾರ ಮಾಡಿಕೊಂಡು ಮುಕ್ತ ಪುರುಷನಾಗದೆ, ವೇದ ಶಾಸ್ತ್ರಗಳನ್ನು ಓದಿ, ಕರ್ಮಕಾಂಡದಲ್ಲಿ ಸಿಲುಕಿ, ಮಂತ್ರ ತಂತ್ರಗಳನ್ನೂ, ವ್ರತ ಕರ್ಮಗಳನ್ನೂ ಆರ್ತರಾದ ಜನರಿಗೆ ಗಂಟು ಹಾಕುವವನು, ನಿಜವಾಗಿ ಅಂಧಕಾರ ನಿವಾರಕನಲ್ಲ, ಗುರುವಲ್ಲ. ಅವನು ಗುರುವಿನ ವೇಷದಲ್ಲಿರುವ ಕಳ್ಳನು. ಇಂಥ ಕಳ್ಳಗುರುವು ಆರ್ತರ ಐಹಿಕ ಬಂಧನಗಳನ್ನು ಬಿಡಿಸದೆ ಮತ್ತಷ್ಟು ಬಿಗಿಗೊಳಿಸುವನು. ಹಲ್ಲಿನಲ್ಲಿ ಹುಳು ಸೇರಿದರೆ, ದವಡೆಯಲ್ಲಿ ವ್ರಣವಾಗಿ ನೋವು ಮಾಡದೇನು ? ಅದೇ ರೀತಿ ಇಂಥ ಕಳ್ಳಗುರು ಕಟ್ಟುವ ಕರ್ಮಗಳು ಜೀವನದ ತಾಪತ್ರಯಗಳನ್ನೇ ಇನ್ನಷ್ಟು ಹೆಚ್ಚಿಸಿ ಬಾಧೆಯನ್ನು ಉಂಟು ಮಾಡುತ್ತವೆ.

ಆ. ಆರ್ಯರಾದ ಜನರು ಅನುಭವವ ರೂಢಿಸಿ,
ತಿಳಿದು ಹೇಳುತಿಹರು ತೇಟವಾಗಿ.
ಗುರುತುಗಾಣದವನು ಗುರಿಯ ತಿಳಿಸಬಹುದೆ ?
ವಿಶ್ವದಾಭಿರಾಮ ಕೇಳು ವೇಮ.

ಪರಮ ಗುಹ್ಯವಾದ ಸತ್ಯವನ್ನು ಶ್ರುತಿ, ಯುಕ್ತಿ, ಅನುಭವ ಪ್ರಮಾಣಗಳಿಂದ ದೃಢಪಡಿಸಿಕೊಳ್ಳಬೇಕು. ಹೀಗೆ ಶ್ರೇಷ್ಠರಾದ ಜನರು ತಮ್ಮ ಸ್ವಂತ ಅನುಭವಕ್ಕೆ ತಂದು ರೂಢಿಸಿಕೊಂಡು, ಸರಿಯಾಗಿ ತಿಳಿದುಕೊಂಡು, ಇತರರಿಗೆ ತೇಟವಾಗಿ ಅಂದರೆ ಇದ್ದುದನ್ನು ಇದ್ದಂತೆ, ತಿಳಿಸಿ ಹೇಳುತ್ತಿರುವರು. ಆದರೆ ಗುರುತನ್ನೇ ಕಾಣದವನು, ಶಿವಾನುಭವ-ವಿಲ್ಲದವನು, ಮುಮುಕ್ಷುಗಳಿಗೆ ಶಿವರೂಪವನ್ನು ತಿಳಿಯುವ ಗುರಿಯನ್ನೂ, ಆ ಗುರಿಯನ್ನು ತಲುಪುವ ಮಾರ್ಗವನ್ನೂ ತಿಳಿಸಬಲ್ಲನೇ ?

ಆ. ಕಸ್ತುರಿಯನು ನೋಡೆ, ಕಪ್ಪು ಕಾಂತಿಯಹುದು.
ಪರಿಮಳಿಸಲೆಂಥ ಪರಿಮಳವದು !
ಗುರುವು ಆಗಿರುವನ ಗುಣಗಳಿಂತಿಹವಲ !
ವಿಶ್ವದಾಭಿರಾಮ ಕೇಳು ವೇಮ.

ಕಸ್ತೂರಿಮೃಗವೆಂಬ ಪ್ರಾಣಿಯ ನಾಭಿಯಿಂದ ಸ್ರವಿಸಿದ ಕಪ್ಪು ದ್ರವ್ಯವೇ ಕಸ್ತೂರಿ. ಕಸ್ತೂರಿಯು ನೋಡಲು ಕಪ್ಪಾಗಿರುತ್ತದೆ. ಆದರೂ ಕಾಂತಿಯುಕ್ತವಾಗಿರುತ್ತದೆ. ಆದರೆ ಅದರ ಸುರಭಿಯು ಅಂದರೆ ಪರಿಮಳವು ಎಷ್ಟೊಂದು ಪರಿಮಳ ಬೀರುತ್ತದೆ ! ಅದೇ ರೀತಿ, ಗುರುವು ನೋಡಲು ಆಕರ್ಷಕನಿಲ್ಲದಿರಬಹುದು. ಆದರೂ ಅವನ ಗುಣಗಳ ಪ್ರಭಾವ ವಲಯವು ಪರಿಮಳಿಸುವ ಕಸ್ತೂರಿಯಂತೆ ಆಕರ್ಷಕವಾಗಿರುತ್ತವೆ.

ಗುರು ಬೃಹಸ್ಪತಿಯು ಸಹಜ ಗುಣವ ಮೀರಿ
ಚಂದಮಾಮಗಿತ್ತ ಶಾಪ.
ಗುರುವು ಕೋಪ ತೋರಬಾರದಯ್ಯ ಎಂದು.
ವಿಶ್ವದಾಭಿರಾಮ ಕೇಳು ವೇಮ.

ಕಾಮ ಕ್ರೋಧಗಳನ್ನು ನಿಗ್ರಹಿಸಿದವನೇ ಗುರುವಾಗಬಲ್ಲನು. ಆದರೆ, ಪುರಾಣ ಕತೆಗಳಲ್ಲಿ ಹೇಳುವ ಮೇರೆಗೆ ದೇವತೆಗಳ ಗುರುವಾದ ಬೃಹಸ್ಪತಿಯ ಮನೆಯಲ್ಲಿ ಶಿಷ್ಯನಾಗಿ ಚಂದಮಾಮನು ಇದ್ದಾಗ, ಅವನು ಗುರುಪತ್ನಿಯನ್ನು ಮೋಹಿಸಿದನು. ಅದನ್ನರಿತ ಬೃಹಸ್ಪತಿಯು ಕಡುಕೋಪ ತಾಳಿ, ಚಂದ್ರನಿಗೆ ಶಾಪವಿತ್ತ. ನೀನು ಸೊರಗುತ್ತ ಹೋಗು ಎಂದನಂತೆ. ಕತೆಯು ಏನೇ ಇರಲಿ, ಅದು ಬಿಂಬಿಸುವ ಇಂಗಿತವು ಮುಖ್ಯವಾಗಿದೆ. ಅದೆಂದರೆ, ಗುರುವಾದವನು ಎಂದೆಂದೂ ಕೋಪವನ್ನು ತೋರಬಾರದು.

ಆ. ತಿಳಿದು ಬರದ ಮಾಯೆ, ತಿಳಿಯಬಾರದ ಮಾಯೆ,
ತಿಳಿದು ತಿಳಿಯದಿರುವ ತಿಳಿವು ಮಾಯೆ.
ಗುಣಗಳಿಲ್ಲ ಮಾಯೆ, ಗುರುವೊಬ್ಬ ಹಿರಿ ಮಾಯೆ.
ವಿಶ್ವದಾಭಿರಾಮ ಕೇಳು ವೇಮ.

'ಯಾ ಮಾ ಸಾ ಮಾಯಾ'. ಅಂದರೆ ಯಾವುದು ಇಲ್ಲವೋ ಅದುವೇ ಮಾಯೆ. ಮಾಯೆಯು ತಿಳಿದು ಬರದು. ಏಕೆಂದರೆ, ಅದು ತಿಳಿವಿನ ಆಚೆಗಿದೆ. ಮಾಯೆಯು ತಿಳಿಯಬಾರದುದಾಗಿದೆ. ಏಕೆಂದರೆ, ಅದು ಮಾತು ಮನಂಗಳ ಅಳವಿನಲ್ಲಿಲ್ಲ. ಇನ್ನು ಮಾಯೆಯು ಎಷ್ಟೊಂದು ಅಗಾಧವೂ, ಅಪಾರವೂ ಆಗಿದೆಯೆಂದರೆ ಅದನ್ನು ತಿಳಿದುಕೊಂಡಿರುವೆವೆನಿಸಿದರೂ ಅದರ ಅಗಾಧತೆಯಿಂದಾಗಿ ಅದನ್ನು ಪೂರ್ಣ ತಿಳಿಯಲಿಲ್ಲ ಎಂಬ ತಿಳಿವು ಮೂಡುತ್ತದೆ. ಈ ತಿಳಿವೂ ಕೊನೆಗೆ ಅಂದರೆ, ಸತ್ವ, ರಜಸ್ ಮತ್ತು ತಮಸ್ ಗುಣಗಳೂ ಕೊನೆಗೆ ಇಲ್ಲವಾಗುತ್ತವೆ. ಅಂದರೆ ಅವೂ ಮಾಯೆ. ನಾವು ಗುರುವೆಂದು ನಂಬಿಕೊಂಡವನು ಕೊನೆಗೆ ಇಲ್ಲವಾಗಿ, ಸಾಧಕನೇ ಗುರುವಾಗುತ್ತಾನೆ.

ಗೀ. ನರನೆನೆ ಪರಮಾತ್ಮ ಗುರುವ ಸೇರಿದಾಗ,
ಹಸ್ತದಲಿ ಮೋಕ್ಷ, ಆಗ ಮಸ್ತ ನೋಡು.
ಕಡು ಸಂಪದಗಳಲಿ ಗರ್ವಪಡುವ ಜೀವಿ,
ಪರಮನರಿಯಲಾರ ; ಯಮನ ಪಾಲು ವೇಮ.

ಸೃಷ್ಟಿಧಾರೆಯ ಅಜಸ್ರ ಜೀವಿಗಳಲ್ಲಿ ನರನು ಅತ್ಯಂತ ಅಗ್ರಸರ ಜೀವಿ-ಯಾಗಿದ್ದಾನೆ. ಅವನಲ್ಲಿ ಬುದ್ಧಿ ತತ್ತ್ವ ಮತ್ತು ಅಹಂ ತತ್ತ್ವಗಳು ಹೆಚ್ಚು ವಿಕಾಸವಾಗಿವೆ. ಇದರಿಂದಾಗಿ ಅವನಿಗೆ ದತ್ತ ಸ್ವಾತಂತ್ರ್ಯವೂ ಇದೆ. ಈ ದತ್ತ ಸ್ವಾತಂತ್ರ್ಯದಿಂದ ಅವನು ಪರಾ ವಿದ್ಯೆಯ ಮೂಲಕ ಉನ್ನತ ಸ್ತರಕ್ಕೆ ಏರಬಹುದು, ಇಲ್ಲವೆ ಅಪರಾ ವಿದ್ಯೆಯ ಮೂಲಕ ನಿಮ್ನತರ ಸ್ತರಕ್ಕೂ ಇಳಿಯಬಹುದು. ಅಂಧಕಾರ ನಿವಾರಕನಾದ ಗುರುವನ್ನು ಸೇರಿಕೊಂಡು ಅವನ ಮಾರ್ಗದರ್ಶನದಲ್ಲಿ ಪರಾ ವಿದ್ಯೆಯಲ್ಲಿ ಸಾಗಿದಾಗ ನರನು ಚಿತ್ತ

ತತ್ತ್ವ, ಬುದ್ಧಿ ತತ್ತ್ವ, ಆತ್ಮ ತತ್ತ್ವಗಳನ್ನು ಕ್ರಮವಾಗಿ ತಲುಪಿ, ಸಗುಣದಿಂದ ನಿರ್ಗುಣತ್ವ ಹೊಂದಿ ಪರಮಾತ್ಮನೇ ಆಗಬಹುದು. ಮೋಕ್ಷ ಪಡೆಯಬಹುದು. ಹೀಗೆ ಅವನ ಕೈಯಲ್ಲಿ ಆಗ ಮೋಕ್ಷವೇ ಉಂಟು. ಇದನ್ನು ಕಾಣು. ಇನ್ನು ತನ್ನ ದತ್ತ ಸ್ವಾತಂತ್ರ್ಯದಿಂದ ಅವನು ಗುರುವನ್ನು ಸೇರದೆ, ಅಪರಾ ವಿದ್ಯೆಯಲ್ಲಿ ಸಿಲುಕಿ, ಕಡು ಸಂಪತ್ತಿನ ಭೋಗಗಳಲ್ಲಿ ಗರ್ವಪಡುವ ಜೀವಿಯಾಗಿ ಮುಂದುವರಿದರೆ ಪರಮನನ್ನು ಅರಿಯಲಾರನು. ಮೋಕ್ಷ ಪಡೆಯನು. ಪ್ರತಿಯಾಗಿ ಜನನ ಮರಣ ಚಕ್ರದಲ್ಲಿ ಸಿಲುಕುತ್ತಾನೆ. ಮರ್ತ್ಯನಾಗುತ್ತಾನೆ. ಯಮನ ಪಾಲಾಗುತ್ತಾನೆ.

ಕಂ. ಈ ಕಪಟ ನಾಟಕವನ್ನು
ಈ ಕಪಟ ಓದು, ಎಲ್ಲವೂ ಇಂಪಾಗಿರಲುಂ.
ಏ ಕಪಟಾತ್ಮನು ಗೆಯ್ದನೊ ?
ಆ ಕಪಟಾತ್ಮನಿಗೆ ಮಣಿದು, ತಣಿವುದು, ವೇಮಾ.

ಜೀವನವೊಂದು ಕಪಟ ನಾಟಕವಾಗಿದೆ. ಇಲ್ಲವೆಯನ್ನು ಇದೆಯೆಂದು ಭ್ರಮಿಸಿ, ಪಡೆಯ ಹೋಗುವ ಕಪಟ ಇಲ್ಲವೆ ಮೋಸದಲ್ಲಿ ಜೀವನವು ನಡೆದಿರುತ್ತದೆ. ಇಲ್ಲಿ ಸುಖ ಶಾಂತಿ ಪಡೆಯಲೆಂದು ಏನೇನೋ ಓದುತ್ತೇವೆ. ಕೊನೆಗೆ ಓದಿನಲ್ಲಿ ಅದು ಇಲ್ಲವೆಂದು ಓದು ಶಬ್ದಾರಣ್ಯವಷ್ಟೇ ಎಂದು ಅರಿಯುತ್ತೇವೆ. ಹೀಗೆ ಓದು ಸಹ ಒಂದು ದೃಷ್ಟಿಯಲ್ಲಿ ಮೋಸವೇ ಆಗಿದೆ. ಅಂದರೆ ಕಪಟವೇ ಆಗಿದೆ. ಇದೆಲ್ಲವೂ ಮೊದಲು ಇಂಪಾಗಿ ಮನಸ್ಸಿಗೆ ತೋರುತ್ತದೆ. ಆದರೆ ಗುರಿ ತಲುಪಿದ ಬಳಿಕ ಅನವಶ್ಯಕವೆನಿಸುತ್ತದೆ. ಇದನ್ನೆಲ್ಲ ಯಾವ ಕಪಟಾತ್ಮನು ಮಾಡಿದನೋ, ಆ ಕಪಟಾತ್ಮನಿಗೆ ಅಂದರೆ ಮಾಯಾಧೀಶನಿಗೆ ಮಣಿದು, ಕಪಟದ ಹಿಂದಿನ ರಹಸ್ಯವನ್ನು ತಿಳಿಸೆಂದು ಪ್ರಾರ್ಥಿಸಿ, ಅದನ್ನು ತಿಳಿದು ತಣಿಯಬೇಕು.

ಆ. ಗುರುವು ಪರಮ ಗುರುವಿನ ಗುರುತನ್ನು ತಿಳಿಯದೆ
ಗುರುವು ತಾನು ಉಂಟು ; ಕುರುಡನಂತೆ.
ಗುರುವಿಗೂ ಗುರುವಿಹ ಗುರುವು ಪ್ರಾಣೇಶನು.
ವಿಶ್ವದಾಭಿರಾಮ ಕೇಳು ವೇಮ.

ಅಂಧಕಾರ ನಿವಾರಕನು ಗುರುವು. ಗುರುವಿಗೂ ಮೊದಲು ಒಬ್ಬ ಗುರುವಿರುತ್ತಾನೆ. ಅವನು ಗುರುವಿನ ಗುರು ; ಪರಮಗುರು. ಗುರು, ಪರಮ ಗುರುಗಳ ಗುರುತು ಯಾವುದು ? ಮಾನವನಿಗೆ ಮೋಕ್ಷ ಸಾಧನೆಯ ಮಾರ್ಗ ತೋರಿ, ಮುಕ್ತರನ್ನಾಗಿ ಮಾಡುವುದೇ ಆ ಗುರುತು. ಇದನ್ನು ತಿಳಿಯದವನು. ಗುರುತನ್ನು ಅರಿಯದ ಕುರುಡನು. ತಾನು ಗುರು ಎಂದು ಗರ್ವ ಪಡುವನಷ್ಟೇ. ಪ್ರಾಣೇಶನು ಅಂದರೆ ಪ್ರಾಣನಿಯಂತ್ರಕನಾದ ಯಮನು, ಗುರುವಿಗೂ ಗುರುವಾಗಿದ್ದಾನೆ.

ಗುರು ಪ್ರತೀಕ್ಷೆಯಲ್ಲಿ ಸಾಧನ :

ಆ. ಗುರುವು ದೊರೆಯಲಾಗ ಗುರುತನರಿವೆನೆಂದು,
ಕಾಲವೆಲ್ಲ ವ್ಯರ್ಥ ಕಳೆಯುತಿಹುದು.

ಗುರುವು ದೊರೆವ ವೇಳೆ ಗತಿಸುತಿಹುದು ದೇಹ.
ವಿಶ್ವದಾಭಿರಾಮ ಕೇಳು ವೇಮ.

ಯಾವ ಗುರುತನ್ನು ಲಕ್ಷ್ಯವಾಗಿರಿಸಿಕೊಂಡು ಸಾಧನೆ ಮಾಡಬೇಕೆಂಬುದನ್ನು ಗುರುವು ದೊರೆತ ಬಳಿಕ ನಿರ್ಧರಿಸಿದರಾಯಿತು, ಎಂದು ತನ್ನ ಸಾಧನೆಯ ಮುಹೂರ್ತವನ್ನು ಮುಂದೂಡುತ್ತ ಸಾಗುವವನು, ಕೇವಲ ಕಾಲಹರಣ ಮಾಡುತ್ತಾನಷ್ಟೇ. ಯಾವುದೇ ಪ್ರಗತಿ ಸಾಧಿಸದೆ, ಕಾಲವು ವ್ಯರ್ಥವಾಗಿ ಕಳೆಯುತ್ತದೆ. ಕೊನೆಗೆ ಒಬ್ಬ ಗುರುವು ದೊರೆಯಬಹುದು. ಆದರೆ ಅಷ್ಟರಲ್ಲಿ ದೇಹವೇ ಗತಿಸಿ ಹೋಗುತ್ತದೆ.

ಆ. ಬೆನ್ನಿಗಂಟಿ ಇರುವ ; ಕಣ್ಣು ಬಿಡುವ ದಿನವು.
ಚಿಕ್ಕ ವಯಸಿನಿಂದ ಸ್ನೇಹ ತೋರ್ಪ.
ಅಣ್ಣ ತಮ್ಮರಿಗೂ ಆಪ್ತನಾಗಿ ಇರುವ.
ವಿಶ್ವದಾಭಿರಾಮ ಕೇಳು ವೇಮ.

ಅಂಧಕಾರ ನಿವಾರಕನಾದ ಗುರುವು ನಮ್ಮ ಬೆನ್ನಿಗಂಟಿಯೇ ಇರುತ್ತಾನೆ. ನಾವು ಕಣ್ಣು ಬಿಡುವ ದಿನವೂ ನಮ್ಮ ಬೆನ್ನ ಹಿಂದೆಯೇ ಇರುತ್ತಾನೆ. ನಮ್ಮ ಚಿಕ್ಕ ವಯಸ್ಸಿನಲ್ಲಿ ಸ್ನೇಹ ತೋರುತ್ತ ಒಳ್ಳೆಯ ಸ್ನೇಹಿತನ ರೂಪದಲ್ಲಿರುತ್ತಾನೆ. ನಾವು ಬೆಳೆದು ವಯಸ್ಕರಾದಾಗ ಅಣ್ಣ ತಮ್ಮರಿಗೆಲ್ಲ ಆಪ್ತನಾಗಿ ದಾರಿ ತೋರುತ್ತಾನೆ.

ಆ. ತಾಯಿ-ತಂದೆ, ತಿಳಿಯೆ ತನಗೆ ಮೊದಲ ಗುರುವು.
ಪಾರ್ವತಿ ಭವರೆಲ್ಲ ಪರಮ ಗುರುವು.
ಕೂಲಿಕೊಳ್ಳುವವನ ಗುರುವೆನಲು ದ್ರೋಹ.
ವಿಶ್ವದಾಭಿರಾಮ ಕೇಳು ವೇಮ.

ಜನ್ಮ ಕೊಟ್ಟ ತಾಯಿ ತಂದೆಯಂದಿರು, ತನಗೆ ಅಂಧಕಾರ ನಿವಾರಿಸಿ ಮಾರ್ಗ ತೋರುವ ಮೊದಲ ಗುರುಗಳಾಗಿದ್ದಾರೆ. ಅವರ ಮಾರ್ಗದರ್ಶನದಲ್ಲಿ ಬಾಲ್ಯ ಕಿಶೋರಾವಸ್ಥೆಗಳನ್ನು ಕಳೆದು ಸಚ್ಚೀಲನಾಗಿ ಬಾಳುತ್ತ ಸಾಗಿದರೆ ಜಗದ ಜೀವಿಗಳಿಗೆಲ್ಲ ಮಾರ್ಗದರ್ಶನ ಮಾಡುವ ಪಾರ್ವತಿ ಮತ್ತು ಭವ (ಶಿವ) ರು ಪರಮ ಗುರುಗಳೆನಿಸುತ್ತಾರೆ. ಅವರ ಬಗೆಗೆ ಭಕ್ತಿ ಭಾವ ತಾಳಿ ಸಾಗಬೇಕು. ಆದರೆ ಏನೇ ಬರಲಿ, ಹಣದ ಆಸೆಗಾಗಿ, ದಕ್ಷಿಣೆಯನ್ನು ಎತ್ತುವ ಕೂಲಿಕೊಳ್ಳುವವನನ್ನು ಗುರುವೆಂದು ಗ್ರಹಿಸಿದರೆ, ಅದು ಪರಮ ಗುರುವಿಗೆ ದ್ರೋಹ ಮಾಡಿದಂತೆ. ಏಕೆಂದರೆ ಆ ಕೂಲಿಕೊಳ್ಳುವವನು ಪರಮ ಗುರುವನ್ನು ತಲುಪುವ ಮಾರ್ಗದಿಂದ ದೂರ ತಳ್ಳುತ್ತಾನೆ.

ಕಂ. ದಿನಗಳ ಸುಮ್ಮನೆ ಕಳೆಯದೆ,
ಘನಗುರು ಬೋಧಾನುಸಾರ ಆತ್ಮವ ಕಾಣಲ್ ;
ತನ ತಾನರಿಯದೆ ಇದ್ದೊಡೆ,
ಹೆಣಗಲು ಮನದಿ ನಿನಗೆ ಅತಿ, ಹಾನಿಯು, ವೇಮಾ.

ಮಾನವ ಜನ್ಮ ಪಡೆದ ಮೇಲೆ ಮಾನವ ಧರ್ಮವಾದ ಬೃಹದೇಷಣೆಯನ್ನು

ಇರಿಸಿಕೊಳ್ಳಬೇಕು. ಆ ಈಷಣೆಯ ತೃಪ್ತಿಗಾಗಿ ಸಾಧನ ಮಾಡಬೇಕು. ಹೀಗೆ ಮಾಡಲು ಅಂಧಕಾರ ನಿವಾರಕನಾದ ಗುರುವಿನ ಮಾರ್ಗದರ್ಶನ ಬೇಕು. ಆತ್ಮವನ್ನು ಕಾಣಲು ಶ್ರೇಷ್ಠ ಗುರುವಿನ ಬೋಧಾನುಸಾರ ಸಾಧನ ಮಾಡಬೇಕು. ಹೀಗೆ ಮಾಡದೆ ದಿನಗಳನ್ನು ಸುಮ್ಮನೆ ಕಳೆಯುತ್ತ ತನ್ನನ್ನು ತಾನು ಅರಿಯದಿದ್ದರೆ, ಮನವು ಅರಿಷಡ್ವರ್ಗಗಳೊಂದಿಗೆ ಹೋರಾಡಲು ಹೆಣಗುತ್ತದೆ. ಅದರಿಂದ ಆತ್ಮಜ್ಞಾನ ಪ್ರಾಪ್ತಿಯ ದಿಶೆಯಲ್ಲಿ ನಿನಗೆ ಬಹಳ ಹಾನಿಯಾಗುತ್ತದೆ.

ಆ. ಗುರುವಿನೊಡನೆ ಹೊಂದಿ ಕೂಡಿಕೊಳ್ಳುವವನು.
ಬ್ರಹ್ಮಕಂಟಿ ಬೆರೆತು ಬೆಳಗುತಿಹನು.
ಗೌಪ್ಯ ತಿಳಿದೊಡಾಗ ಗುಟ್ಟು ರಟ್ಟೆ ಆಯ್ತು.
ವಿಶ್ವದಾಭಿರಾಮ ಕೇಳು ವೇಮ.

ಅಂಧಕಾರ ನಿವಾರಕನು ಗುರು. ಅಜ್ಞಾನವೇ ಅಂಧಕಾರ. ಜ್ಞಾನವೇ ಗುರು. ಜ್ಞಾನದೊಂದಿಗೆ ಹೊಂದಿ ಕೂಡಿಕೊಳ್ಳುವವನು, ಜ್ಞಾನಯೋಗಿಯಾಗುತ್ತಾನೆ. ಅವನು ಅಜ್ಞಾನದ ಪರದೆಯನ್ನು ಸರಿಸಿ ಬ್ರಹ್ಮವನ್ನು ಕಾಣುತ್ತಾನೆ. ಬ್ರಹ್ಮಕ್ಕೆ ಅಂಟಿ, ಬ್ರಹ್ಮದೊಂದಿಗೇ ಬೆರೆತು ಬ್ರಹ್ಮತೇಜದಿಂದ ಬೆಳಗುತ್ತಾನೆ. ಮಾತು ಮನಂಗಳಿಂದ ಅತ್ತತ್ತ ಇರುವ ಬ್ರಹ್ಮವು ಅಂದರೆ ಆತ್ಮವು ಇದುವರೆಗೆ ಗೌಪ್ಯವಾಗಿತ್ತು. ಆದರೆ ಒಮ್ಮೆ ಆತ್ಮಜ್ಞಾನವಾಗಿ ಬ್ರಹ್ಮತೇಜ ಪಡೆಯುವ ಗುಟ್ಟು ತಿಳಿದೊಡನೆ, ಆ ಗುಟ್ಟು ರಟ್ಟಾಗುತ್ತದೆ.

ಆ. ಕುರಿ ಹತ್ತು ಸಾವಿರ ಕೂಡಿರುವ ಸ್ಥಳದಿ,
ಅದರ ಮರಿ ತಾಯಿಯ ಅರಿಯುತಿಹುದು.
ಪರಮ ಯೋಗಿಯರಿತು, ಭಕ್ತ ತಾನೆ ಬರುವ.
ವಿಶ್ವದಾಭಿರಾಮ ಕೇಳು ವೇಮ.

'ಮುಕ್ತ್ಯಾಕಾಂಕ್ಷಯಾ ಸದ್ಗುರು ಪ್ರಾಪ್ತಿಃ'. ಅಂದರೆ, ಮುಕ್ತಿ-ಪಡೆಯಬೇಕೆಂಬ ಆಕಾಂಕ್ಷೆಯು ತೀವ್ರವಾದೊಡನೆ ಸದ್ಗುರುವನ್ನು ಪಡೆಯುತ್ತಾನೆ. ಗುರುವು ಈದ ಕುರಿಯಂತೆ. ಅದು ತನ್ನ ಮರಿಗೆ ಉಪದೇಶವೆಂಬ ಹಾಲು ಕರೆಯುತ್ತದೆ. ಹಾಲಿಗಾಗಿ ಹಂಬಲಿಸುವ ಮರಿಯು, ಹತ್ತು ಸಾವಿರ ಕುರಿಗಳ ಹಿಂಡಿನಲ್ಲಿದ್ದರೂ ತನ್ನ ತಾಯಿಯನ್ನು ಗುರುತಿಸಿ ಅರಿಯುತ್ತದೆ. ಅದೇ ರೀತಿ, ಯೋಗದೀಕ್ಷೆಗಾಗಿ ಹಂಬಲಿಸುವ, ಮುಕ್ತಿಯ ಆಕಾಂಕ್ಷೆ ಹೊಂದಿದ ಭಕ್ತನು, ತನಗೆ ದಾರಿ ತೋರುವ ಪರಮಯೋಗಿಯನ್ನು ಹುಡುಕಿಕೊಂಡು ತಾನೇ ಬರುತ್ತಾನೆ.

ಆ. ಕೋರಿ ಮನದಿ, ಸೇವೆ ಗೆಯ್ಯೆ ಗುರುವ, ಮೇಲು;
ಕಾರಣದಲಿ ತಿಳಿವು ಗಗನ ವಿದ್ಯೆ.
ದೂರದೃಷ್ಟಿ ನಿಲಿಸಿ, ತೊಡಗುವುದೆ ಮೋಕ್ಷವು.
ವಿಶ್ವದಾಭಿರಾಮ ಕೇಳು ವೇಮ.

ಮನದಲ್ಲಿ ಗುರು ಸೇವೆಯನ್ನು ಕೋರಿ, ಆಚರಿಸುವುದೇ ಮೇಲು. ಗುರುಸೇವೆ

ಮಾಡಬೇಕಾದರೆ ಗುರುವನ್ನು ಮನದಲ್ಲಿ ತಲುಪಬೇಕು. ಗುರುವು ಗುರುಚಕ್ರದಲ್ಲಿ ನೆಲೆಸಿರುತ್ತಾನೆ. ಗುರುಚಕ್ರವು ಸಹಸ್ರಾರದ ಕೆಳಭಾಗದಲ್ಲಿದೆ. ಅಲ್ಲಿಗೆ ತಿಳಿವು ತಲುಪ-ಬೇಕಾದರೆ, ಅದು ಸ್ಥೂಲ, ಸೂಕ್ಷ್ಮ ಸ್ತರಗಳನ್ನು ದಾಟಿ ಕಾರಣ ಸ್ತರಕ್ಕೆ ನೆಗೆಯಬೇಕು. ಕಾರಣ ಸ್ತರದಲ್ಲಿ ಚಿದ್ ಬಯಲು ಉಂಟು. ಈ ಹಂತ ತಲುಪುವುದೇ ಗಗನ ವಿದ್ಯೆ. ಚಿದಾಕಾಶ ತಲುಪುವ ವಿದ್ಯೆ. ಅಲ್ಲಿ ನಿಂತು, ದೂರದೃಷ್ಟಿ ನಿಲಿಸಿ, ಸಾಧನಕ್ಕೆ ತೊಡಗುವುದೇ ಮೋಕ್ಷವಾಗಿದೆ.

ಗುರುವ ಸೇವೆ ಗೆಯ್ದು, ಗುರಿಯೊಡನೆ ಭುಜಿಸಲು,
ಅಂತೆ ನಡೆವ ಜನರು ಆಸೆ ತೀರಿ,
ಬಹಳ ನುಡಿವರಷ್ಟೆ, ಭಾವವನೆ ಕಾಣರು.
ವಿಶ್ವದಾಭಿರಾಮ ಕೇಳು ವೇಮ.

ಗುರುವಿನ ಸೇವೆ ಮಾಡಿ, ಕಾರಣ ಮನದಲ್ಲಿ ಮೋಕ್ಷದ ಗುರಿ ಹೊಂದಿ ಐಶ್ವರ್ಯ ಸಿದ್ಧಿಯನ್ನು ಗಳಿಸುತ್ತಾರೆ. ಇಂಥವರು ಗುರಿಯೊಂದಿಗೆ ಸಿದ್ಧಿಗಳ ಫಲಗಳನ್ನೂ, ಭುಜಿಸಿದರೆ, ಅಂಥ ಜನರ ಈಷಣ ತ್ರಯಗಳೇನೋ ತೀರುತ್ತವೆ. ಅಷ್ಟಕ್ಕೆ ಅವರು ಅತಿ ತೃಪ್ತರಾಗಿ ತಮ್ಮ ಸಿದ್ಧಿಯ ಕುರಿತು ಬಹಳಷ್ಟು ಮಾತನಾಡುತ್ತಾರೆ. ಆದರೆ ಅವರು ಭಾವವನ್ನು ಕಾಣರು. ಭಾವ ಎಂದರೆ, ಯಾವುದು ಮನವನ್ನು ಭಕ್ತಿ ಕಿರಣಗಳಿಂದ ಮೃದುವಾಗಿ ಮತ್ತು ಜಾಜ್ವಲ್ಯವಾಗಿ ಮಾಡುವುದೋ ಅದು. ಯಾವುದು ಭಾವ ಯುಕ್ತವಾದುದೋ, ಅದು ಸಗುಣ ಬ್ರಹ್ಮ. ಯಾವುದು ಭಾವಾತೀತವಾಗಿದೆಯೋ, ಅದು ನಿರ್ಗುಣ ಬ್ರಹ್ಮ. ನಿರ್ಗುಣವೇ ಗುರಿಯಾಗಬೇಕು. ಆ ಗುರಿಯೊಂದಿಗೆ ಸಿದ್ಧಿಗಳನ್ನು ಭುಜಿಸುವುದು ತರವಲ್ಲ.

ಆ. ಮದದೊಳಿಂದ ಉಂಟು, ಮಾತಿಗೆ ಮರುಮಾತು.
ವ್ಯರ್ಥ ಸುದ್ದಿ ಹರಡಿ, ವಂಚಿಸುತ್ತ,
ಕಾಸು ದೋಚುವವನ, ಕಷ್ಟ ಗುರುವೆನ್ನಲು.
ವಿಶ್ವದಾಭಿರಾಮ ಕೇಳು ವೇಮ.

ಅರಿಷಡ್ವರ್ಗಗಳಲ್ಲಿ ಮದವೂ ಒಂದು. ಇದು ಅಷ್ಟ ವಿಧಗಳಲ್ಲಿ ಇರುತ್ತದೆ. ಕುಲಮದ, ಶೀಲಮದ, ಧನಮದ, ರೂಪಮದ, ಯೌವನ ಮದ, ರಾಜ್ಯಮದ, ವಿದ್ಯಾಮದ ಮತ್ತು ತಪೋಮದ. ಗುರುವೆನ್ನಿಸಿಕೊಳ್ಳುವ ಕೆಲವರು ವಿದ್ಯಾಮದದಿಂದ ಮತ್ತು ತಪೋಮದದಿಂದ ಗರ್ವ ಪಡುತ್ತಿರುತ್ತಾರೆ. ಇನ್ನು ಕೆಲವರಂತೂ ಧನಮದದಿಂದಲೂ ಗರ್ವಿಷ್ಠರಾಗಿರಬಹುದು. ಇಂಥ ಹಲವು ಸೋಗಿನ ಗುರುಗಳು ಮದೋನ್ಮತ್ತರಾಗಿ ಮಾತಿಗೆ ಮರುಮಾತನಾಡುತ್ತ, ವಾದ ಜಲಲ್ಪ ವಿತಂಡಗಳಲ್ಲಿ ತೊಡಗುತ್ತಾರೆ. ಖಂಡನ ಮಂಡನಗಳ ಮೂಲಕ ವ್ಯರ್ಥ ಸುದ್ದಿ ಹಬ್ಬಿಸಿ, ಜನರನ್ನು ವಂಚಿಸುತ್ತಾರೆ. ಭಾವಾತೀತ ಸದ್ವಸ್ತುವಿನ ಕುರಿತು ವಾಗ್ಝರಿ ಹರಿಬಿಡುತ್ತಾರೆ. ಹೀಗೆ ಜನರನ್ನು ವಂಚಿಸಿ, ಕಾಸು ದೋಚುವವರನ್ನು ಗುರುವೆನ್ನುವುದು ತುಂಬಾ ಕಷ್ಟ.

ಆ. ಇಹದಲಿ ಎನಿತೆನಿತೊ ಇರುಸು ಮುರುಸು ಇರಲು,
ಪರಮ ಸಾಧನಕ್ಕೆ ಪಥವು ಅಲ್ಲ.
ಗುರುವ ಯುಕ್ತಿ ಮೀರಿ, ಗುರುತಿಸಿ ಕಾಣಿರೋ.
ವಿಶ್ವದಾಭಿರಾಮ ಕೇಳು ವೇಮ.

ಪರಮ ಸಾಧನಕ್ಕೆ ಮನವೇ ಪ್ರಥಮ ಸೋಪಾನ. ಮನವು ಶಾಂತವಿರಬೇಕು. ಶೀತದಂಶದಿಂದ ಕೂಡಿರಬೇಕು. ಅಲ್ಲಿ ಆವರಣ-ವಿಕ್ಷೇಪ ಮಲಗಳ ಪ್ರಕ್ಷುಬ್ಧತೆ ಇರಕೂಡದು. ಆದರೆ ಇಹದಲ್ಲಿಯೇ ಎನಿತೆನಿತೋ ಪ್ರಕ್ಷುಬ್ಧತೆ ಇದ್ದರೆ, ಅಂದರೆ ಮನದಲ್ಲಿ ಇರುಸು-ಮುರುಸು ಇದ್ದರೆ, ಪರಮ ಸಾಧನಕ್ಕೆ ಅಂಥ ಮನವು ಪಥವಾಗದು. ಆದ್ದರಿಂದ ಯುಕ್ತಿ ಮೀರಿ, ವಿವೇಚಿಸಿ, ಗುರುವನ್ನು ಗುರುತಿಸಿ, ಪರಮ ಸಾಧನದ ಪಥವನ್ನು ಕಾಣಿರಿ.

ಜ್ಞಾನದೀಪ ಗುರು :

ಕಂ. ಪರಮಾತ್ಮನ ವಿವರಿಸಲ್ಕೆ
ವಿರಳವು ! ಅಣುರೇಣುವಿನಲಿ ಅತಿ ಸೂಕ್ಷ್ಮ ಗತಿಂ.
ಪರಿಕಿಸುವನೆಲ್ಲ ರೂಪವ,
ಗುರುವೇ ತಾ ಬೆಳಗುತಿರುವ, ಗುರುತನು, ವೇಮಾ.

ಪರಮಾತ್ಮನು ಬ್ರಹ್ಮನಾಗಿದ್ದಾನೆ. 'ಬೃಹತ್ವಾತ್ ಬ್ರಹ್ಮ'. ಬೃಹತ್ ಎಂದರೆ ಅಳತೆ ಮಾಡಲಾಗದಷ್ಟು ದೊಡ್ಡವನು. ಇನ್ನು ಪರಮಾತ್ಮನು ಸೂಕ್ಷ್ಮಾತಿಸೂಕ್ಷ್ಮನೂ ಆಗಿದ್ದಾನೆ. ಎಷ್ಟೊಂದು ಸೂಕ್ಷ್ಮವೆಂದರೆ ಅಣುರೇಣುವಿನಲ್ಲಿ ಅತಿ ಸೂಕ್ಷ್ಮ ರೂಪದಲ್ಲಿ ಇದ್ದಾನೆ. ಸೂಕ್ಷ್ಮ ಅಣುವಿನಲ್ಲಿಯೂ ಸಹ ಇಲೆಕ್ಟ್ರಾನ, ಪ್ರೊಟಾನ, ನ್ಯೂಟ್ರಾನ ಕಣಗಳ ನಿರಂತರ ಚಲನೆ ಇದೆಯಷ್ಟೇ. ಹೀಗೆ ಬೃಹತ್ತಿಗೆ ಬೃಹತ್ತಾಗಿ, ಸೂಕ್ಷ್ಮಕ್ಕೆ ಸೂಕ್ಷ್ಮತಮವಾಗಿ ಇರುವ ಪರಮಾತ್ಮನನ್ನು ವಿವರಿಸುವುದು ವಿರಳ ಸಾಧ್ಯವಾಗಿದೆ. ಈ ಎಲ್ಲ ರೂಪಗಳನ್ನೂ ಗುರುವು ತಾನೇ ಪರಿಕಿಸುತ್ತಾನೆ. ಮತ್ತು ಪರಮಾತ್ಮನ ಗುರುತನ್ನು ಅಗ್ಯ ಬುದ್ಧಿಯಲ್ಲಿ ಬೆಳಗಿಸುತ್ತಾನೆ.

ಆ. ಮೋಹ ಜಲಧಿಯಲ್ಲಿ ಮುಳುಗಿ ಸಾವರೆ ಹೊರತು,
ಹರಿ ಪರಾಯಣತ್ವ ಹೊಂದಲಿಲ್ಲ.
ಮುಟ್ಟಿ ಗುರುಪಾದವ ಮೂಲ ಹೊಂದಬೇಕು.
ವಿಶ್ವದಾಭಿರಾಮ ಕೇಳು ವೇಮ.

ಅರಿಷಡ್ವರ್ಗಗಳಲ್ಲಿ ಮೋಹವೂ ಒಂದು. ಮುಹ್-ಮೋಹ. ಅಂದರೆ ಮುಚ್ಚಳ. ಮುಕ್ತವಾದ ಮನಸ್ಸನ್ನು ಯಾವುದೊಂದು ವಿಷಯ ವೃತ್ತಿಗಳು ಮುತ್ತಿ ಮುಚ್ಚುವುದೇ ಮೋಹ. ಹರಿದಾಡುವ ವಿಕ್ಷಿಪ್ತ ಮನಸ್ಸು ಸುತ್ತುಮುತ್ತಣ ವಸ್ತುಗಳ ವಿಷಯ ವೃತ್ತಿಯಿಂದ ಮುಚ್ಚಿಕೊಳ್ಳುತ್ತದೆ. ಮೋಹಿತವಾಗುತ್ತದೆ. ಚಂಚಲ ಮನಸ್ಸು ಸಹಜವಾಗಿ ಮೋಹ ಜಲಧಿಯಲ್ಲಿ ಮುಳುಗುತ್ತದೆ. ಆದರೆ, ಮನಸ್ಸಿನ ವೃತ್ತಿಗಳನ್ನೇ ಕೊಂಡೊಯ್ಯುವ ಹರಿಯಲ್ಲಿ

ವಿಶೇಷ ಆಸಕ್ತಿಯನ್ನು ಹೊಂದುತ್ತಿಲ್ಲ. ಆದ್ದರಿಂದ ಮಾನವರು ಗುರುವಿಗೆ ಶರಣಾಗಿ ಗುರುಪಾದವನ್ನು ಮುಟ್ಟಿ, ಗುರು ಕರುಣೆಯಿಂದ ಉನ್ನತ ಸ್ತರಕ್ಕೇರಿ, ತಾನು ಎಲ್ಲಿಂದ ಬಂದಿರುವನೋ, ಆ ಮೂಲವನ್ನು ಅಂದರೆ ಆತ್ಮ ತತ್ತ್ವವನ್ನು ಹೊಂದಬೇಕು.

ಆ. ಇಹದೊಳಗೆ ಗುರುವಿಗೆ ಈ ದೇಹವ ನೀಡೆ,
ಪರವ ನೋಡೆ ಗುರುತು ಹಿಡಿದು ಕೊಡುವ ;
ಸ್ಥಿರವಾಗಿಸಿ ಬುದ್ಧಿ ಚಲಿಸದಂತೆ ನೋಡು.
ವಿಶ್ವದಾಭಿರಾಮ ಕೇಳು ವೇಮ.

ಇಹ-ಪರಗಳು ಎರಡು ಲೋಕಗಳು. ಅಂದರೆ ಅನುಭವ ಕ್ಷೇತ್ರಗಳು. ಸ್ಥೂಲ ಇಂದ್ರಿಯಗಳಿಂದ ಅನುಭವ ಗಮ್ಯವಾದುದು ಸ್ಥೂಲ ಜಗತ್ತು. ಸೂಕ್ಷ್ಮ ಮನಸ್ಸಿನಿಂದ ಅನುಭವಗಮ್ಯವಾದುದು ಸೂಕ್ಷ್ಮ ಲೋಕ. ಈ ಸ್ಥೂಲ ಸೂಕ್ಷ್ಮಗಳ ಆಚೆ ಅಂದರೆ ಮಾತು ಮನಂಗಳಿಂದತ್ತತ್ತ ಮೀರಿದ ಕಾರಣ ಜಗತ್ತು. ಅದರಾಚೆಗೆ ಕಾರಣಾತೀತ ಜಗತ್ತೂ ಇದೆ. ಈ ಸ್ಥೂಲ-ಸೂಕ್ಷ್ಮ ಲೋಕಗಳಿಗೆ ಸಂಬಂಧಿಸಿದ ದೇಹದ ಕ್ರಿಯೆಗಳನ್ನೆಲ್ಲ ಮಾರ್ಗದರ್ಶಕ ಗುರುವಿಗೆ ನೀಡಲು, ಅವನು ಪರವನ್ನು ನೋಡಲು ಗುರುತು ಹಿಡಿದುಕೊಡುವನು. ಗುರುತಿಗಂಟಿ ಸಾಧನ ಮಾಡಲು ತಿಳಿಸುವನು. ಈಗ ಸಾಧಕನು ಗುರುಬೋಧೆ ಗ್ರಹಿಸಿ, ಬುದ್ಧಿಯನ್ನು ಆ ಗುರುತಿನತ್ತ ಸ್ಥಿರವಾಗಿರಿಸಬೇಕು. ಮನಸ್ಸು ವಿಕ್ಷೇಪ ಮಲದಿಂದಾಗಿ ಅತ್ತ ಇತ್ತ ಚಲಿಸದಂತೆ ಏಕಾಗ್ರವಾಗುವಂತೆ ನೋಡಬೇಕು.

ಆ. ಕೆಡುಕು ಗುಣಗಳೆಲ್ಲ ಕೈಹಿಡಿದು ಶಿಕ್ಷಿಸಿ,
ಪರಮ ಪದವಿಯನ್ನು ಪ್ರತ್ಯಕ್ಷಿಸುವ.
ಅಂಥ ಗುರುವ ಬೇಡಿ, ಅಪರೋಕ್ಷವ ಹೊಂದು.
ವಿಶ್ವದಾಭಿರಾಮ ಕೇಳು ವೇಮ.

ಪ್ರಕೃತಿಯ ದಾಸನಾದ ಮಾನವನಲ್ಲಿ ತಾಮಸ ಗುಣವೂ ಇದೆ, ರಾಜಸ ಗುಣವೂ ಇದೆ. ಸಾತ್ವಿಕ ಗುಣವೂ ಇದೆ. ಆದರೆ ಕೆಲವರಲ್ಲಿ ತಾಮಸ ಗುಣವು ಸತ್ತ್ವ ಮತ್ತು ರಜೋ ಗುಣಗಳಿಗಿಂತ ಪ್ರಬಲವಾಗಿರಬಹುದು. ಅಜ್ಞಾನ ಆಲಸ್ಯ ಸಂಗವೇ ತಮೋ ಗುಣದ ಚಿಹ್ನೆ. ಮನೋವಿಕಾಸದ ಹಾದಿಯನ್ನು ಕುರಿತು ಅಜ್ಞಾನ ಮತ್ತು ಆ ದಿಶೆಯಲ್ಲಿ ಮಾಡಬೇಕಾದ ಸಾಧನ ಮಾಡದಿರುವಂತೆ ತಡೆಯುವ ಆಲಸ್ಯಗಳಿಂದ ಮಾನವನು ತನ್ನ ಸ್ವಾಭಾವಿಕ ಸೆಳೆತಗಳಿಂದ ಕೇಡು ಕಾರ್ಯಗಳಲ್ಲಿ ತೊಡಗುತ್ತಾನೆ. ಕೆಡುಕು ವಿಚಾರ ಮಾಡುತ್ತಾನೆ. ಏಕೆಂದರೆ ಅವನು ಅರಿ ಷಡ್ವರ್ಗಗಳಿಗೆ ವಶವಾಗಿರುತ್ತಾನೆ. ಇಂಥವನನ್ನು ಅಂಧಕಾರ ನಿವಾರಕನಾದ ಸದ್ಗುರುವು ಕೈಹಿಡಿದು ಶಿಕ್ಷಿಸುತ್ತಾನೆ. ಸನ್ಮಾರ್ಗ ತೋರಿಸುತ್ತಾನೆ. ಸಾಧನ ಪಥದಲ್ಲಿ ಮುನ್ನಡೆಸಿ, ತಮೋ ಗುಣವನ್ನೂ, ರಜೋಗುಣವನ್ನೂ ಮತ್ತು ಕೊನೆಗೆ ಸತ್ತ್ವ ಗುಣವನ್ನೂ ಅಡಗಿಸಿ, ಮಾತುಮನಂಗಳಿಂದತ್ತ ಮೀರಿದ ಪರಮ ಪದವಿಯನ್ನು ಅಂದರೆ ಆತ್ಮ ಪದವಿಯನ್ನು ಪ್ರತ್ಯಕ್ಷಿಸುತ್ತಾನೆ. ಅಂದರೆ ಅರಿವಿನ ಕಣ್ಣಿಗೆ ನೇರವಾಗಿ ಕಾಣುವಂತೆ ಮಾಡುತ್ತಾನೆ. ಆದ್ದರಿಂದ ಅಂಥ ಗುರುವನ್ನು ಸಂಧಿಸಿ, ಸೇರಿಕೊಂಡು, ಬೇಡಿ, ಅಪರೋಕ್ಷವನ್ನು ಅಂದರೆ ನೇರ ಜ್ಞಾನವನ್ನು ಪಡೆದುಕೋ.

ಆ. ಮುಕ್ತಿಗಾಣದಂಥ ಮೂರ್ಖ ಜನರಿಗೆಲ್ಲ.
ಬಟ್ಟಬಯಲು ಮಾಡಿ ಪರಮ ತಾಣ.
ದಾರಿ ತೋರ್ಪ ಬುಧರು ದೈವ ತಾವಲ್ಲವೆ ?
ವಿಶ್ವದಾಭಿರಾಮ ಕೇಳು ವೇಮ.

ಕೆಲವರಿಗೆ ಸರಿ-ತಪ್ಪು ತಿಳಿಯುವುದಿಲ್ಲ. ಅವರು ಮೂರ್ಖರಾಗಿರುತ್ತಾರೆ. ಅವಿವೇಕಿಗಳಾಗಿರುತ್ತಾರೆ. ವಿಷಯ ಸಂಗದಿಂದ ಅವರ ಮನಸ್ಸು ಬದ್ಧವಾಗುತ್ತದೆ. ನಿರ್ವಿಷಯದಿಂದ ಮನಸ್ಸು ಮುಕ್ತವಾಗುತ್ತದೆ, ಎಂದು ವಿವೇಚಿಸಲು ಶಕ್ತರಾಗರು. ಅಂಥ ಮುಕ್ತಿಗಾಣದ ಎಲ್ಲ ಮೂರ್ಖ ಜನರಿಗೂ, ಅರಿವು ಹೊಂದಿದ ಬುಧರು ಗುಹ್ಯಾತಿಗುಹ್ಯವಾದ ಪರಮ ತಾಣವನ್ನು ತಕ್ಕ ಉಪದೇಶದಿಂದ ಸಾಧನ ವಿಧಾನಗಳಿಂದ ಬಟ್ಟಬಯಲು ಮಾಡಿ ತೋರುತ್ತಾರೆ. ಆ ಪರಮ ತಾಣದಲ್ಲಿ ಇಹದ ಎಳೆತ ಸೆಳೆತಗಳು ಇರವು. ಅವರಣೇ ವಿಕ್ಷೇಪ ಮಲಗಳಿರವು. ಹೆಚ್ಚೇನು ? ತ್ರಿಗುಣಗಳೂ ಇರವು. ಅದು ಏನೂ ಇರದ ಶೂನ್ಯದಾಚೆಯ ಇರವು. ಬಯಲು ದಾಟಿದ ಬಯಲು ; ಬಟ್ಟ ಬಯಲು. ಜ್ಞಪ್ತಿಯಾಚೆಯ ಇರವು. ಈ ತಾಣದ ದಾರಿ ತೋರಿಸುವ ಬುಧರು ದೈವ ಎನಿಸರೇನು ?

ಆ. ಧರೆಯ ಜನರಿಗೆಲ್ಲ ಸರಿಯಾಗಿ ತಿಳಿಸುವೆ.
ಒಪ್ಪುವ ಹರನನರಿವ ಉಪಾಯವನು.
ಮನಸು ಚದರದಂತೆ ಮಹಿಮೆಯಿಂದ ಕಾಣು.
ವಿಶ್ವದಾಭಿರಾಮ ಕೇಳು ವೇಮ.

'ಹರತಿ ಇತಿ ಹರಃ'. ನಮ್ಮ ಅರಿವಿಗೆ ಬಾರದಂತೆಯೇ ನಮ್ಮ ಮನೋವೃತ್ತಿಗಳನ್ನು ಕೊಂಡೊಯ್ಯುವವನೇ ಹರನು. ಸಾಧನೆಯಲ್ಲಿ ಗುರೂಪದೇಶಾನುಸಾರ ಮುಂದುವರಿದಂತೆಲ್ಲ ಮನೋವೃತ್ತಿಗಳು ಅಡಗುತ್ತವೆ. ಹೀಗೆ ಮನೋವೃತ್ತಿಗಳು ಅಡಗಿದಾಗ ಒಪ್ಪುವ ಹರನು ಅರಿವಿಗೆ ತೋರಿ ಬರುತ್ತಾನೆ. ಇದಕ್ಕೆ ಸಾಧನ ಮಾರ್ಗವೇ ಉಪಾಯ. ಧರೆಯ ಸರ್ವ ಜನರಿಗೂ, ಹರನನ್ನು ಅರಿಯುವ ಉಪಾಯವನ್ನು ಸರಿಯಾಗಿ ತಿಳಿಸುವೆ. ಇದನ್ನು ಅರಿಯಬೇಕಾದರೆ, ಮನಸ್ಸು ಚದರಬಾರದು. ವಿಕ್ಷೇಪ ಮಲದಿಂದ ದೂರವಾಗಬೇಕು. ಏಕಾಗ್ರಗೊಳ್ಳಬೇಕು. ಆಗ ಹರನ ಮಹಿಮೆಯು ಗೋಚರಿಸುತ್ತದೆ. ತನ್ಮೂಲಕ ಹರನನ್ನು ಅರಿತುಕೋ.

ಆ. ಪಿಡಿದ ಕೊಂಬೆ ಬಿಡದೆ, ಪಡದೆ ಕಳವಳವನು,
ಗುರುವನಿಂತು ಬೇಡಿ, ಗುಟ್ಟನರಿತು,
ನಿಟ್ಟ ನಿಲುವ ಕಂಡು, ನಿರ್ಗುಣತ್ವ ಹೊಂದು.
ವಿಶ್ವದಾಭಿರಾಮ ಕೇಳು ವೇಮ.

ಅಂಧಕಾರ ನಿವಾರಕನಾದ ಗುರುವು ಒಂದು ಮಾರ್ಗವನ್ನು ತೋರಿಸುತ್ತಾನೆ. ಆ ಜ್ಞಾನ ವೃಕ್ಷದ ಟೊಂಗೆಯನ್ನು ಬಿಡಬೇಡ. ಮನಸ್ಸಿನಲ್ಲಿ, ಬೊಡ್ಡೆ ಬೇರುಗಳ ವರೆಗೆ ಏರುವುದು ಹೇಗೆ ? ಎಂಬ ಕಳವಳ ಬೇಡ. ಇದು ಊರ್ಧ್ವ ಮೂಲವುಳ್ಳ ಅಶ್ವತ್ಥ ವೃಕ್ಷ

ತಾನೆ ? ಮನವನ್ನು ನಿಮ್ನ ಸ್ತರದಿಂದ ಉಚ್ಚ ಸ್ತರಕ್ಕೆ ಏರಿಸುವ ಗುಟ್ಟನ್ನು ಗುರುವನ್ನು ಬೇಡಿ ಅರಿತುಕೋ. ಅವನು ಚಿತ್ತ ತತ್ತ್ವ, ಅಹಂ ಮತ್ತು ಬುದ್ಧಿ ತತ್ತ್ವಗಳನ್ನು ಏರಿ ಹೋಗುವ ಅರ್ಥಾತ್ ತ್ರಿಗುಣ ದಾಟುವ ಗುಟ್ಟನ್ನು ತಿಳಿಸುತ್ತಾನೆ. ನಿಷ್ಠೆಯ ದೃಢವಾದ ನಿಲುವನ್ನು ಕಂಡು ಜ್ಞಪ್ತಿ ಮೀರಿ, ನಿರ್ಗುಣತ್ವ ಹೊಂದು. ಭಾವಾತೀತನಾಗು.

ಆ. ಸಾಹಸದಿಂದಿರಲಿ, ಸತ್ಯದಿಂದ ಇರಲಿ,
ಮೋಹ ಬುದ್ಧಿ ತೊರೆದು, ಮುಕ್ತಿಯರಿತು,
ಸೇರೆ ಮನದಿ ಗುರುವ, ಶೀಘ್ರವಾಗಿ ಇಹುದು.
ವಿಶ್ವದಾಭಿರಾಮ ಕೇಳು ವೇಮ.

ಜ್ಞಾನವು ಅಜ್ಞಾನದಿಂದ ಮುಚ್ಚಲ್ಪಟ್ಟಿದೆ, ಅಂದರೆ ಅರಿವು ಆವರಣೀ ಮಲದಿಂದ ಮೋಹಿತವಾಗಿರಬಹುದು. ಇಲ್ಲವೆ, ವಿದ್ಯಾಭಿಮಾನದಿಂದ ಮೋಹಿತವಾಗಿರಬಹುದು. ಹೇಗೇ ಇರಲಿ, ಮೋಹ ಬುದ್ಧಿಯನ್ನು ಸಾಹಸದಿಂದಾಗಲಿ, ಸತ್ಯದಿಂದಾಗಲಿ, ತೊರೆದು, ಮನಸ್ಸನ್ನು ಮುಕ್ತಗೊಳಿಸಬೇಕು. ಬಳಿಕ ಅರಿವೇ ಗುರು ಎಂದರಿತು ಮನದಲ್ಲಿ ಗುರುವನ್ನು ಸೇರಬೇಕು. ಆಗ ಮುಕ್ತಿಯು ಶೀಘ್ರವಾಗಿ ಇಹುದು.

ಆ. ಅತ್ತ ಇತ್ತ ನೋಡೆ ಅಂಟಿತು ಗುರುಭಕ್ತಿ.
ಪ್ರಚುರಗೊಂಡು ಆತ್ಮ ಬಯಲು ಮಾಡಿ,
ರುಚಿಕರಾಗಿ ಸುಜನರಚಲರಾಗಿ ತೋರ್ಕು.
ವಿಶ್ವದಾಭಿರಾಮ ಕೇಳು ವೇಮ.

ಮನದ ಉನ್ನತ ಸ್ತರದಲ್ಲಿ ಮಾರ್ಗದರ್ಶನಕ್ಕಾಗಿ ಅತ್ತ ಇತ್ತ ನೋಡಲಾಗಿ ಗುರುಭಕ್ತಿಯು ಅಂಟುತ್ತದೆ. ಅದೇ ಅತಶಯಿಸಿ, ಅನಾತ್ಮ ತತ್ತ್ವಗಳ ಮೋಹವನ್ನು ಕಳಚಿ, ಆತ್ಮ ತತ್ತ್ವವನ್ನು ಬಯಲು ಮಾಡುತ್ತದೆ. ಈ ಆತ್ಮದರ್ಶನದಿಂದ ಆತ್ಮಾನಂದ-ವಾಗುತ್ತದೆ. ಇದು ರುಚಿಕರವಾಗಿರುತ್ತದೆ. ಇದರಲ್ಲಿಯೇ ಆತ್ಮರತರಾದ ಸುಜನರು, ಅಚಲರಾಗಿ ನೆಲೆಗೊಂಡಂತೆ ತೋರುತ್ತಾರೆ.

ಆ. ಒಡವೆಯಿಪ್ಪ ತಾಣ ಒಪ್ಪ ಅರಸೆ ಲಭ್ಯ.
ಒಡವೆ ಇರದ ತಾಣ ಅರಸಲೇಕೆ ?
ಅಂಜನಾದಿ ಇರದೆ ಆ ಒಡವೆ ಸಿಕ್ಕದು.
ವಿಶ್ವದಾಭಿರಾಮ ಕೇಳು ವೇಮ.

ಗುಪ್ತ ನಿಧಿಯನ್ನು ಶೋಧಿಸುವಾಗ ಮುಗ್ಧ ಮಗುವಿನ ಕಣ್ಣಿಗೆ ಕಾಡಿಗೆಯನ್ನು ಲೇಪಿಸುವುದಕ್ಕೆ ಅಂಜನ ಕ್ರಿಯೆಯೆನ್ನುತ್ತಾರೆ. ಒಂದು ಒಡವೆಯನ್ನು ಅದು ಇರುವ ತಾಣದಲ್ಲಿ ಹುಡುಕಿದರೆ ಅದು ಲಭ್ಯವಾಗುತ್ತದೆ. ಆ ಒಡವೆ ಇರದ ತಾಣದಲ್ಲಿ ಎಷ್ಟು ಹುಡುಕಿದರೇನು ಫಲ ? ಮೊದಲು ಅಂಜನವನ್ನು ಕಣ್ಣಿಗೆ ಲೇಪಿಸಿಕೊಂಡು ಆ ನಿಧಿಯನ್ನು ಹುಗಿದಿಟ್ಟ ತಾಣವನ್ನು ಕಂಡುಹಿಡಿಯಬೇಕು. ನಂತರ ತಾಣವನ್ನು ಅಗೆದು ಒಡವೆಯನ್ನು ಪಡೆಯಬಹುದು. ಇದೊಂದು ಪ್ರತಿಮಾ ರೂಪಕ. ಗುಪ್ತ ನಿಧಿಯೆಂದರೆ ಗುಹ್ಯಾತ್

ಗುಹ್ಯವಾದ ಆತ್ಮ ತತ್ತ್ವ. ಅದು ಎಲ್ಲಿದೆ ? ಎಂಬುದನ್ನು ಗುರು ಕೃಪೆಯ ಅಂಜನವನ್ನು ಹಚ್ಚಿಕೊಂಡು ಅರಸಬೇಕು. ಅದರ ಗುರುತು ಹೀಗೆ ದೊರೆತ ಬಳಿಕ, ಸಾಧನದ ಸಾಹಸದಿಂದ ಅಜ್ಞಾನದ ಪರದೆಯನ್ನು ಸರಿಸಿ ಆತ್ಮಜ್ಞಾನ ಕಂಡು ಪಡೆಯಬಹುದು.

ಆ. ಬ್ರಹ್ಮನಿರುವ ತಾಣ ಪರೀಕ್ಷಿಸಿ ತಿಳಿಯದೆ,
ಎಲ್ಲೊ ಅರಸೆ ಬ್ರಹ್ಮ ಎಂತು ಸಿಗುವ ?
ಅಂಜನಿರದೆ ಯಾವ ಒಡವೆ ದೊರಕಬಹುದೆ ?
ವಿಶ್ವದಾಭಿರಾಮ ಕೇಳು ವೇಮ.

'ಬೃಹತ್ವಾತ್ ಬ್ರಹ್ಮ. ಬಂಹಣತ್ವಾತ್ ಬ್ರಹ್ಮ'. ಅಂದರೆ ಅಳತೆಗೆ ಎಟುಕದಷ್ಟು ಬೃಹತ್ ಆಗಿರುವುದರಿಂದ ಬ್ರಹ್ಮವೆನಿಸುತ್ತದೆ. ಮತ್ತು ಇನ್ನೊಂದನ್ನು ಬೃಹತ್ ಆಗಿ ಮಾಡುವುದರಿಂದ ಬ್ರಹ್ಮವೆನಿಸುತ್ತವೆ. ಈ ಬ್ರಹ್ಮವು ಎಲ್ಲೆಡೆ ಇದೆ. ಎಲ್ಲವೂ ಆಗಿದೆ. ಸರ್ವಂ ಬ್ರಹ್ಮಮಯಂ ಜಗತ್. ಅಂದರೆ ಎಲ್ಲವೂ ಬ್ರಹ್ಮಮಯವಾಗಿದೆ. 'ಶಿವ ಶಕ್ತ್ಯಾತ್ಮಕಂ ಬ್ರಹ್ಮ'. ಶಿವ ಮತ್ತು ಶಕ್ತಿಗಳೆರಡನ್ನೂ ಒಳಗೊಂಡಿರುವುದೇ ಬ್ರಹ್ಮ. ಶಿವ ಎಂದರೆ ಸಾಕ್ಷೀ ಚೈತನ್ಯ. ಆತ್ಮವೆಂದರೂ ಸಾಕ್ಷೀ ಚೈತನ್ಯವೇ. ಅಂದರೆ ಆತ್ಮವೆಂದರೆ ಶಿವ. ಆತ್ಮನಿರುವಲ್ಲಿ ಬ್ರಹ್ಮನಿದ್ದಾನೆ. ಪರೀಕ್ಷಿಸಿ ನೋಡಿದರೆ, ಅನಾತ್ಮದಾಚೆ ಆತ್ಮವಿದೆ. ಬ್ರಹ್ಮವಿದೆ. ಹೀಗೆ ಬ್ರಹ್ಮನಿರುವ ತಾಣವನ್ನು ಪರೀಕ್ಷಿಸಿ ತಿಳಿಯದೆ, ಬ್ರಹ್ಮವನ್ನು ಎಲ್ಲೆಲ್ಲಿಯೂ ಅರಸಲು ಬ್ರಹ್ಮನೆಂತು ಸಿಕ್ಕುವನು ? ತೀರ್ಥ ಕ್ಷೇತ್ರಗಳಲ್ಲಿಯೋ, ಮೂರ್ತಿ ಪೂಜೆಯಲ್ಲಿಯೋ ಬ್ರಹ್ಮನನ್ನು ಹುಡುಕಿದರೆ ಅವನೆಂತು ಸಿಕ್ಕುವನು ? ಬ್ರಹ್ಮ ಇಲ್ಲವೆ ಆತ್ಮವು ಹುಗಿದಿಟ್ಟ ನಿಧಿಯಂತೆ. ನಿಧಿಯು ಎಲ್ಲಿದೆಯೆಂದು ತಿಳಿಯಲು, ಕಣ್ಣಿಗೆ ಕಾಡಿಗೆಯನ್ನು ಲೇಪಿಸಿಕೊಂಡು ಅಂದರೆ ಅಂಜನ ಕ್ರಿಯೆಯಿಂದ ನಿಧಿಯ ತಾಣವನ್ನು ಪರೀಕ್ಷಿಸಿ ತಿಳಿಯಬೇಕು. ಬಳಿಕ ಆ ನೆಲವನ್ನು ಅಗಿದು ನಿಧಿಯನ್ನು ಪಡೆಯಬೇಕು. ಅದೇ ರೀತಿ ಬ್ರಹ್ಮವನ್ನು ಪಡೆಯಲು, ಗುರೂಪದೇಶವೆಂಬ ಅಂಜನ ಲೇಪಿಸಿಕೊಂಡು ಅನಾತ್ಮದಾಚೆ ಬ್ರಹ್ಮನಿರುವ ತಾಣವನ್ನು ಪರೀಕ್ಷಿಸಿ ಅರಿತು ಸಾಧನ ಮೂಲಕ ಹೆಣಗಿ ಬ್ರಹ್ಮ ಹೊಂದಬೇಕು.

ಆ. ನೀವು ಇರುವ ಜಾಗ ನೆಲೆಯ ತಿಳಿಯುವವನು,
ವಸುಧೆಯಲ್ಲಿ ಹಾದಿ ವಿಮುಖನಿರದೆ,
ಕಾಲು ಕದಲದಿನ್ನು ಗಕ್ಕನೆ ಸೇರಿಕೋ.
ವಿಶ್ವದಾಭಿರಾಮ ಕೇಳು ವೇಮ.

'ತತ್ ತ್ವಮ್ ಅಸಿ'. ಅದು ನೀನೇ ಇದ್ದೀ. 'ಬ್ರಹ್ಮವಿದಃ ಬ್ರಹ್ಮೈವ ಭವತಿ' ಅಂದರೆ ಬ್ರಹ್ಮ ಅರಿತವನು ಬ್ರಹ್ಮವೇ ಆಗುತ್ತಾನೆ. ಆದ್ದರಿಂದ 'ನೀವು' (ತ್ವಮ್) ಇರುವ ಜಾಗೆಯ ನೆಲೆಯನ್ನು ತಿಳಿಯುವವನು, ಅಂದರೆ ಗುರೂಪದೇಶ ಮೂಲಕ ಗುರುತನ್ನು ತಿಳಿದವನು, ವಸುಧೆಯಲ್ಲಿ ಗುರುವಿನ ಮಾರ್ಗದರ್ಶನದಲ್ಲಿ ಸಾಧನವನ್ನು ಮಾಡುತ್ತ ಸಾಗಬೇಕು. ಸಾಧನಾಪಥದಿಂದ ವಿಮುಖನಾಗಬಾರದು. ಹೀಗೆ ಏಕಾಗ್ರ ಮನದಿಂದ ಬ್ರಹ್ಮನಿಷ್ಠೆ ಹೊಂದಿ ಅಲ್ಲಿಂದ ಚಲಿಸದೆ ಅಂದರೆ ಕಾಲು ಕದಲದಿದ್ದು, ಗಕ್ಕನೆ

ಸೇರಿಕೋ. ಅಂದರೆ ಶೀಘ್ರವೇ ಬ್ರಹ್ಮವಿದನಾಗು.

ಆ. ಬ್ರಹ್ಮಾಂಡವೆನ್ನಲು ಪಟ್ಟಣವು ಒಳಗೇ.
ಬ್ರಹ್ಮವರಿಯದಿರಲು ಬ್ರಾಹ್ಮಣಂತು ?
ತನ್ನನರಿತೊಡನೇ ತಾನೆ ಹೋಗು ಬ್ರಹ್ಮ.
ವಿಶ್ವದಾಭಿರಾಮ ಕೇಳು ವೇಮ.

ಬ್ರಹ್ಮಾಂಡವೂ ಪಿಂಡಾಂಡವೂ ಏಕ ಪ್ರಕಾರವಾಗಿವೆ. ''ಶಿವ ಶಕ್ತ್ಯಾತ್ಮಕಂ ಬ್ರಹ್ಮ''. ಅಂದರೆ, ಶಿವ ಮತ್ತು ಶಕ್ತಿಗಳೆರಡನ್ನೂ ಒಳಗೊಂಡಿರುವುದೇ ಬ್ರಹ್ಮ. ಶಿವ ಶಕ್ತಿಗಳಿಂದರೆ ಪುರುಷ ಪ್ರಕೃತಿಯರು. 'ಪುರೇ ಶೇತೇ ಇತಿ ಪುರುಷಃ' ಅಂದರೆ ಪಟ್ಟಣದಲ್ಲಿ ಮಲಗಿರುವನಾದ್ದರಿಂದ ಪುರುಷನು. ಈ ಪುರವು ತ್ರಿಪುರವು. ಸತ್ತ್ವ ರಜಸ್ ಮತ್ತು ತಮಸ್‌ಗಳಿಂದಾದ ಅಂದರೆ ಪ್ರಕೃತಿಯಿಂದಾದ ಪುರವು. ಹೀಗೆ, ಬ್ರಹ್ಮಾಂಡವೆಲ್ಲ ಒಳಗೇ ಇರುವ ಪಟ್ಟಣವು. ಇಲ್ಲಿ ಬ್ರಹ್ಮವಿದೆ. ಅದನ್ನು ಅರಿಯುವ ಮಾರ್ಗವೂ ಇದೆ. ಆ ನಿರ್ದೇಶಿತ ಸಾಧನಾಪಥದಲ್ಲಿ ಮುನ್ನಡೆದು ಬ್ರಹ್ಮವನ್ನು ಅರಿಯಬೇಕು. 'ಬ್ರಹ್ಮಂ ವಿಜಾನಾತಿ ಇತಿ ಬ್ರಾಹ್ಮಣಃ' ಅಂದರೆ ಬ್ರಹ್ಮವನ್ನು ಅರಿಯುವನಾದ್ದರಿಂದ ಬ್ರಾಹ್ಮಣನೆನಿಸುತ್ತಾನೆ. ಬ್ರಹ್ಮವನ್ನು ಅರಿಯದಿದ್ದರೆ, ಬ್ರಾಹ್ಮಣನು ಹೇಗಾಗುತ್ತಾನೆ. ? ಹುಟ್ಟಿನಿಂದ ಅಂದರೆ ಜಾತಿಯಿಂದ ಯಾರೂ ಬ್ರಾಹ್ಮಣರಾಗಲಾರರು. 'ಜನ್ಮನಾ ಜಾಯತೇ ಶೂದ್ರಃ' ಹುಟ್ಟಿನಿಂದ ಎಲ್ಲರೂ ಶೂದ್ರರೇ, ಇನ್ನು ಬ್ರಹ್ಮವರಿಯಬೇಕೆಂದರೆ ಏನು ಮಾಡಬೇಕು ? ತನ್ನ ಮನಸ್ಸನ್ನು ತಾನು ಅರಿಯಬೇಕು. ಚಿತ್ತ ತತ್ತ್ವ, ಅಹಂ ತತ್ತ್ವ ಮತ್ತು ಬುದ್ಧಿ ತತ್ತ್ವಗಳ ಒಟ್ಟಾರೆ, ಹೆಸರೇ ಮನಸ್ಸು. ಈ ಮನಸ್ಸನ್ನು ಅರಿತರೆ ಅವನು ಬ್ರಹ್ಮವಿದನೆನಿಸುತ್ತಾನೆ. 'ಬ್ರಹ್ಮವಿದಃ ಬ್ರಹ್ಮೈವ ಭವತಿ'. ಅಂದರೆ ಬ್ರಹ್ಮ. ಅರಿತವನು ಬ್ರಹ್ಮವೇ ಆಗುತ್ತಾನೆ.

ಆ. ಈಜಬಹುದು ನೀರ ಏನೆ ಬಾಧೆ ಇರಲಿ,
ಆದಿ ಗುರುವು ಇರದೆ ಅಂಟರಲ್ಲ.
ಕಣಿಯ ಹೇಳಲೇನು ? ಕಾಣು ಮನದಿ ಚೊಕ್ಕ.
ವಿಶ್ವದಾಭಿರಾಮ ಕೇಳು ವೇಮ.

ಭವಸಾಗರದಲ್ಲಿ ಯಾವ ಬಾಧೆಯೂ ಇರದೆ ಈಜಬಹುದು. ದುರ್ಗುಣಗಳಿಗೆ ಬಲಿಯಾಗಿ, ದುರ್ವ್ಯಸನಗಳಿಗೆ ಇಂಬುಗೊಡದೆ, ಭವಸಾಗರದಲ್ಲಿ ವಿವೇಕದಿಂದ ಬಾಳಿ ಭವಸಾಗರದಲ್ಲಿ ಮುಳುಗದೆ ಈಜಬಹುದು. ಆದರೆ, ಮನಸ್ಸು ಎಲ್ಲಿ ಹುಟ್ಟುವುದೋ, ಅದು ಆದಿ. ಈ ಆದಿಯಲ್ಲಿ ಮಾರ್ಗ ತೋರುವವನು ಆದಿ ಗುರು. ಈ ಆದಿ ಗುರುವಿನ ಮಾರ್ಗದರ್ಶನವಿಲ್ಲದೆ, ಭವಸಾಗರದ ಆಚೆಯ ದಡವನ್ನು ಅಂಟರು. ಸಾಧನೆಯಲ್ಲಿಸ್ವಲ್ಪು ಮುಂದುವರಿದು, ಉನ್ಮನವ ಪ್ರವೇಶಿಸಿ, ಸಿದ್ಧಿಯ ಬಲದಿಂದ ಭವಿಷ್ಯ ಕಥನ, ಶುಭಾಶುಭ ಶಕುನಗಳನ್ನು ಅಂದರೆ ಕಣಿಯನ್ನು ಹೇಳಬಹುದು. ಆದರೆ ಮನದ ಆಚೆ ದಡವನ್ನು ತಲುಪಲಾರ. ಇದನ್ನು ಚೊಕ್ಕವಾಗಿ ಮನದಲ್ಲಿ ಕಂಡುಕೊಂಡು, ಆದಿ ಗುರುವಿನ ಉಪದೇಶದಂತೆ ಮುನ್ನಡೆ.

ಆ. ತಾನು ವಿಮಲನಿರಲು, ತನ್ನ ಗುಣಗಳೆಲ್ಲ
ಶಿವಗರ್ಪಿಸದ ಗುರು ಸೋಗಿನ ಗುರು.
ಕುರುಡ, ಕದುರೆಯೇರಿ, ಗುಡಿಯ ತಿರುಗಿದಂತೆ.
ವಿಶ್ವದಾಭಿರಾಮ ಕೇಳು ವೇಮ.

ಮಲಗಳು ಎರಡು ವಿಧ. ಆವರಣೇ ಮಲ ; ಮತ್ತು ನಿಕ್ಷೇಪ ಮಲ. ಮನವು ಚಂಚಲವಾಗಿ ಆಚೆ ಈಚೆ ಹೋಗಿ ಅಂಟುವ ವಿಷಯ ಸಂಗಗಳು ವಿಕ್ಷೇಪ ಮಲವಾಗಿದೆ. ಇನ್ನು ಮನವನ್ನೇ ಮುತ್ತಿದ ಅಜ್ಞಾನ ಸಂಗವು ಆವರಣೇ ಮಲವಾಗಿದೆ. ಇವಾವುಗಳೂ ಇಲ್ಲದೆ ತಾನು ವಿಮಲನಾಗಿದ್ದರೆ, ಮಲಗಳಿಗೆ ಕಾರಣವಾದ ತಮಸ್ಸು, ರಜಸ್ಸು ಮತ್ತು ಸತ್ತ್ವ ಗುಣಗಳನ್ನು ಶಿವನಿಗೆ ಅರ್ಪಿಸದ ಗುರು ಸೋಗಿನ ಗುರುವಾಗುತ್ತಾನೆ. ಅವನು ಗುಣಾಧೀಶನಾಗದೆ ಗುಣಾಧೀನನಾಗುತ್ತಾನೆ. ಆದರೆ ಗುಣಾತೀತರನ್ನಾಗಿ ಮಾಡುತ್ತೇನೆಂಬ ಗುರುವಿನ ಸೋಗು ಹಾಕಿರುತ್ತಾನೆ. ಕುರುಡನೊಬ್ಬನು ಕುದುರೆಯನ್ನೇರಿ ಗುಡಿಯ ಸುತ್ತು ತಿರುಗಬಹುದು. ಆದರೆ ಅವನಿಗೆ ಬಾಗಿಲೂ ಕಾಣದು, ಗರ್ಭಗುಡಿಯೂ ಕಾಣದು. ಅಂತೆಯೇ ಸೋಗಿನ ಗುರುವಿನ ಅವಸ್ಥೆಯಾಗುತ್ತದೆ.

ಆ. ಮಠದೊಳಿಹ ಯೋಗಿ ಮಾಯೆಯೆಲ್ಲ ಕೊಚ್ಚಿ,
ಘಟದೊಳಗೆ ಇರುವ ಘನನ ತಿಳಿದು,
ಮಾತು ಮಾತಿಗೆ ಗುರುವ ಮರೆಯದೆ ತಿಳಿಯಿರೋ.
ವಿಶ್ವದಾಭಿರಾಮ ಕೇಳು ವೇಮ.

ಒಬ್ಬ ಸಾಧಕನು ಧ್ಯಾನಕ್ಕೆ ಅನುಕೂಲವಾಗಲೆಂದು ಸಂನ್ಯಾಸಿಯಾಗಬಹುದು. ಕುಟೀರ ಕಟ್ಟಿಕೊಳ್ಳಬಹುದು. ಹೀಗೆ ಸಂನ್ಯಾಸಿ ಕುಟೀರದಲ್ಲಿ ಅಂದರೆ ಮಠದಲ್ಲಿ ವಾಸಿಸುವ ಯೋಗಿಯು ತನ್ನನ್ನು ಮುತ್ತಿದ ಸಂಸಾರ ಮಾಯೆಯನ್ನು, ಲೋಕ ಮಾಯೆಯನ್ನು ಅಂದರೆ ಹೊನ್ನು ಹೆಣ್ಣು ಮತ್ತು ಮಣ್ಣು ಎಂಬ ಮಾಯೆಯನ್ನು ಕೊಚ್ಚಿ ಹಾಕಬೇಕು. ಮಾಯಿಕ ಮಲದ ಪರದೆಯನ್ನು ಹರಿದು ಹಾಕಿದ ಬಳಿಕ ತಾನು ತಲುಪಬೇಕಾದ ಘನ ತತ್ತ್ವವು ಅಂದರೆ ಆತ್ಮ ತತ್ತ್ವವು ತನ್ನ ಘಟದಲ್ಲಿಯೇ ಅಂದರೆ ತನ್ನ ದೇಹದೊಳಗೇ ಇದೆಯೆಂದು ತಿಳಿದು, ಆತ್ಮವನ್ನು ಅರಿಯುತ್ತಾನೆ. ಅಂಧಕಾರವನ್ನು ಅಂದರೆ ಅಜ್ಞಾನವನ್ನು ತೊಡೆಯುವ ಗುರುವನ್ನು ಮಾತು ಮಾತಿಗೊಮ್ಮೆ ಮರೆಯದೆ ತಿಳಿಯಿರಿ.

ಆ. ಒಲಿಸಿ ಒಲಿಸಿ ಗುರುವ, ಒಪ್ಪವಾಗೊಪ್ಪಿಸಿ,
ಮನದಿ ನಿಲಿಸಿ, ಜಾತಿ ಮಮತೆ ತೊರೆದು,
ಸಾಗುತಿಪ್ಪ ಅವನು ಸತತ ಒಂದೇ ರೀತಿ.
ವಿಶ್ವದಾಭಿರಾಮ ಕೇಳು ವೇಮ.

ಗುರುವನ್ನು ಆಶ್ರಯಿಸಿ, ಭಕ್ತಿಪೂರ್ವಕ ಸೇವಿಸಬೇಕು. ಅವನನ್ನು ಒಲಿಸಿಕೊಳ್ಳಲು ಪುನರಪಿ ಪ್ರಯತ್ನಿಸಬೇಕು. ಕೊನೆಗೆ ಕರುಣೆ ಈಯಲು ಅವನನ್ನು ಒಪ್ಪವಾಗಿ ಒಪ್ಪಿಸಿ, ಅವನ ಉಪದೇಶವನ್ನು ಮನದಲ್ಲಿ ನಿಲ್ಲಿಸಿಕೊಂಡು, ಜಾತಿಯ ಬಗೆಗಿನ ಮಮತೆಯನ್ನು

ತೊರೆದು, ಗುರುವು ದರ್ಶಿಸುವ ಧರ್ಮವೇ ತನ್ನ ಧರ್ಮವೆಂದು ಸಾಗುವ ಸಾಧಕನು ಸತತವೂ ಒಂದೇ ರೀತಿಯಾಗಿ ಇದ್ದು ಸ್ಥಿತಪ್ರಜ್ಞನಾಗಿ ಬಾಳುತ್ತಾನೆ.

ಆ. ಓದು ಬಾರದಿರಲು ಏಕೆ ಸಾಮಾನ್ಯತೆ ?
ಬುದ್ಧಿ ಕುದುರದಿರಲು ಹೊಂದಲೇಕೆ ?
ಗುರುಸೇವಿಸೆ, ಮುಕ್ತಿ ಕರತಲಾ ಮಲಕವು.
ವಿಶ್ವದಾಭಿರಾಮ ಕೇಳು ವೇಮ.

ಒಬ್ಬನಿಗೆ ಪಾಠಶಾಲೆಯ ಶಿಕ್ಷಣದ ಅವಕಾಶಗಳು ಒದಗದಿರಬಹುದು. ಓದಿನ ಅಭ್ಯಾಸದಿಂದ ವಂಚಿತನಾಗಿರಬಹುದು. ಅವನು ಓದಿದ ಪಂಡಿತರಿಗೆ ಸಮಾನನೆಂದು ಭಾವಿಸಬೇಕಿಲ್ಲ. ಅದರಿಂದಾಗಿ ದೀನ-ನಾನು-ತಾನವೂ ಅವನಲ್ಲಿ ಮೊಳೆಯದಿರಲಿ. ಓದು ಬಾರದದ್ದರೆ ಸಾಮಾನ್ಯತೆಯ ಅಹಂಭಾವ ಬೇಡ. ಒಬ್ಬನಿಗೆ ಮಂದ ಬುದ್ಧಿ ಇರಬಹುದು. ಸೂಕ್ಷ್ಮ ವಿಷಯಗಳನ್ನು ಅರಿಯಲು ಅವನ ಬುದ್ಧಿಯು ಅರಳದಿರಬಹುದು. ಹಾಗೆ ಬುದ್ಧಿ ಕುದುರದಿದ್ದರೆ, ಆತ್ಮ ತತ್ತ್ವವನ್ನು ಹೊಂದುವುದೆಂತು ? ಎಲ್ಲರಿಗೂ ಒಂದು ಹಾದಿ ಇದೆ. ಅಂಧಕಾರ ನಿವಾರಕನಾದ ಗುರುವನ್ನು ಸಂಧಿಸಿ ಸೇವಿಸಿದರೆ, ಅವನೇ ಸೂಕ್ತ ಮಾರ್ಗದರ್ಶನ ಮಾಡಿ ಗುರಿಯತ್ತ ಮುನ್ನಡೆಸುವನು. ಆಗ ಲಕ್ಷ್ಯವು ಅಂಗೈಯಲ್ಲಿರುವ ನೆಲ್ಲಿಕಾಯಿಯಂತೆ, ಅಂದರೆ ಕರತಲದಲ್ಲಿರುವ ಆಮಲಕದಂತೆ, ಸುಲಭ ಸಾಧ್ಯವಾಗುತ್ತದೆ.

ಆ. ನೋಡಲೇಕೆ ವೇದ ? ಮಾಡಲೇಕೆ ವಾದ ?
ಅದುವೆ ತತ್ತ್ವ, ತಿರುಗಿ ಆತ್ಮದೊಳಗೆ
ಗೂಡು ಕಟ್ಟಿಯುಂಟು, ಗುರುವೊಬ್ಬನರಿವನು.
ವಿಶ್ವದಾಭಿರಾಮ ಕೇಳು ವೇಮ.

ವೇದದಲ್ಲಿ ಕರ್ಮಕಾಂಡವೂ ಇದೆ, ಜ್ಞಾನಕಾಂಡವೂ ಇದೆ. ಜ್ಞಾನಕಾಂಡವನ್ನೇ ಒಪ್ಪಿದರೂ ಬರೀ ವೇದಪಾಠದಿಂದ ವಿಪ್ರನಾಗಹುದೇ ಹೊರತು ಆತ್ಮಜ್ಞಾನಿಯಾಗಲಾರನು. ಬ್ರಹ್ಮವಿದನಾಗಲಾರನು. 'ಬ್ರಹ್ಮ ವಿಜಾನಾತ್ ಇತಿ ಬ್ರಾಹ್ಮಣಃ' ಅಂದರೆ ಬ್ರಹ್ಮವನ್ನು ಅರಿತವನೇ ಬ್ರಾಹ್ಮಣನೆನಿಸುತ್ತಾನೆ. ಹೀಗೆ ವೇದವು ನೋಡಲು, ಓದಲು ಇರುವ ಗ್ರಂಥವಲ್ಲ. ಅದು ಗುರುಮುಖದಿಂದ ಅರಿತು ಅನುಭವಿಸಬೇಕಾದ ಜ್ಞಾನ. ಗುರುವಿಲ್ಲದೆ ಅನವಶ್ಯಕವಾದದ್ದನ್ನೆಲ್ಲ ಓದಿ, ಸಂಗ್ರಹಿಸದರೆ, ಅದು ವಿದ್ಯಾಮದಕ್ಕೆ ಕಾರಣವಾಗುತ್ತದೆ. ಹೀಗಾಗಿ ವಾದ, ಜಲ್ಪ, ವಿತಂಡಗಳಿಗೆ ಸೆಳೆದೊಯ್ಯುತ್ತದೆ. ವೇದದಲ್ಲಿ ಗುಹ್ಯಾತ್ ಗುಹ್ಯವಾದ ತತ್+ತ್ವವಿದೆ. ಅದುವೇ ಆತ್ಮದಲ್ಲಿ ಗೂಡು ಗಟ್ಟಿಕೊಂಡಿದೆ. ಆತ್ಮವನ್ನು ಅರಿತರೆ ಎಲ್ಲವೂ ಬಟ್ಟ ಬಯಲಾಗುವುದು. ಇದನ್ನು ಗುರುವು ಮಾತ್ರ ಅರಿಯುತ್ತಾನೆ. ಆದ್ದರಿಂದ ಅವನನ್ನು ಆಶ್ರಯಿಸಿದರೆ ತೀರಿತು.

ಆ. ಅರಸಿನೋಡಿದೊಡನೆ ಅಖಿಲ ಲೋಕಂಗಳು,
ತನುವಿನಲ್ಲಿ ಉಂಟು, ತಿಳಿದು ಕಾಣು.

ಮನಸಿನಲ್ಲಿಹ ಗುರು ಮತ್ತೆ ಮುಟ್ಟಿ ಕಾಣು.
ವಿಶ್ವದಾಭಿರಾಮ ಕೇಳು ವೇಮ.

ಖಿಲ ಎಂದರೆ ಹರಿದ. ಅಖಿಲ ಎಂದರೆ ಅಖಂಡ, ಎಲ್ಲ ಅರಸಿ ನೋಡಿದರೆ, ಸ್ಥೂಲ ಲೋಕಗಳಾಗಲಿ, ಸೂಕ್ಷ್ಮ ಲೋಕಗಳಾಗಲಿ, ಕಾರಣ ಲೋಕಗಳಾಗಲಿ ತನುವಿನಲ್ಲಿಯೇ ಉಂಟು ; ಎಂಬುದು ಅರಿವಾಗುತ್ತದೆ. ಇಂದ್ರಿಯಗಳ ಅನುಭವ ಕ್ಷೇತ್ರವೇ ಸ್ಥೂಲ ಲೋಕ. ಮನಸ್ಸಿನ ಅನುಭವ ಕ್ಷೇತ್ರವೇ ಸೂಕ್ಷ್ಮ ಲೋಕ. ಮಹತ್ತಿನ ಅನುಭವ ಕ್ಷೇತ್ರವೇ ಕಾರಣ ಲೋಕ. ಇವುಗಳನ್ನು ಭೂಲೋಕ, ಭುವರ್ಲೋಕ, ಮಹರ್ಲೋಕ, ಜನರ್ಲೋಕ, ತಪೋಲೋಕ ಮತ್ತು ಸತ್ಯಲೋಕಗಳೆಂದೂ ಸಪ್ತ ಲೋಕಗಳಾಗಿ ವಿಂಗಡಿಸಬಹುದು. ಎಷ್ಟೇ ಲೋಕಗಳಿದ್ದರೂ ಅವುಗಳೆಲ್ಲ ತನುವಿನಲ್ಲಿಯೇ ಉಂಟು. ಇದನ್ನು ಚೆನ್ನಾಗಿ ತಿಳಿದು ಕಾಣು. ಗುರುವು ಅರಿವಾಗಿ ಮನಸ್ಸಿನಲ್ಲಿಯೇ ಇದ್ದಾನೆ. ಅವನನ್ನು ಧ್ಯಾನಿಸಿ, ಮನವನ್ನು ಉದ್ದೀಪಿಸಿ, ಮುಟ್ಟಿ ಕಾಣು. ಅವನು ಎಲ್ಲವನ್ನೂ ಅರುಹುತ್ತಾನೆ.

ಆ. ಅಕ್ಷರಾತ್ಮಕದಲಿ ಅಮೃತ ಪಾನಗಳಿಗೆ
ರಕ್ಷಕತ್ವಗಳಿಗೆ ರಾಜಹಂಸ.
ದೀಕ್ಷೆಯೊಳಗೆ ದೀಕ್ಷೆ ತಿಳಿದು ಅಂಟಿ ನೋಡು.
ವಿಶ್ವದಾಭಿರಾಮ ಕೇಳು ವೇಮ.

ಕ್ಷರ ಎಂದರೆ ನಾಶವುಳ್ಳದ್ದು. ಅಕ್ಷರ ಎಂದರೆ ಅವಿನಾಶಿ. ಅಕ್ಷರಾತ್ಮಕದಲ್ಲಿ ಅಂದರೆ ಅವಿನಾಶಿಯಾದ ಆತ್ಮ ತತ್ತ್ವದಲ್ಲಿ ನೆಲೆಸಿ, ಅಮೃತ ಅಂದರೆ ಮರಣರಾಹಿತ್ಯ ಒದಗಿಸುವ ಕೃಪಾಧಾರೆಯನ್ನು ಪಾನ ಮಾಡಬೇಕು. ಇಂಥ ಧರ್ಮ ಸಾಧನೆಯು ರಕ್ಷಣೆ ಒದಗಿಸುತ್ತದೆ. 'ಧರ್ಮೋ ರಕ್ಷತಿ ರಕ್ಷಿತಃ' ಅಂದರೆ ಧರ್ಮವನ್ನು ರಕ್ಷಿಸಿದವರನ್ನು ಧರ್ಮವೂ ರಕ್ಷಿಸುತ್ತದೆ. ಹೀಗೆ ಕ್ಷರವನ್ನು ತೊರೆದು ಅಕ್ಷರವನ್ನೂ, ಮೃತ್ಯುವನ್ನು ತೊರೆದು ಅಮೃತತ್ವವನ್ನೂ, ಅಧರ್ಮವನ್ನು ತೊರೆದು ಧರ್ಮವನ್ನೂ ಆಯ್ದುಕೊಳ್ಳುವ ಸಾಧಕನು ನೀರನ್ನು ತೊರೆದು ಹಾಲನ್ನು ಮಾತ್ರ ಸೇವಿಸುವ ರಾಜಹಂಸನಂತೆ ಆಗುತ್ತಾನೆ. ಹೀಗೆ ಮಾಡುವುದು ಬರೀ ಧಾರ್ಮಿಕ ಸಂಸ್ಕಾರವಷ್ಟೇ ಅಲ್ಲ. ಆದರೆ ದೀಕ್ಷೆಯೊಳಗಿನ ದೀಕ್ಷೆಯಾಗಿದೆ. ಇದನ್ನು ತಿಳಿದು ಅಂಟಿ, ನೋಡಿರಿ.

ಆ. ದೇಶ ವೇಷಗಳನು ಬೇಶಿ ನೋಡಿದೊಡನೆ,
ದೇಹದಾತ್ಮಗಂಟು ಅಡಗಿ, ಬೆರೆತು,
ವೇಷವರಸಿ ನೋಡೆ, ಹೊಟ್ಟೆ ಹೊರೆಯಲಷ್ಟೇ.
ವಿಶ್ವದಾಭಿರಾಮ ಕೇಳು ವೇಮ.

ಮಾನವನು ಆಯಾ ದೇಶಕ್ಕೆ ತಕ್ಕಂತೆ, ಆಯಾ ಕಾಲಕ್ಕೆ ತಕ್ಕಂತೆ, ವೇಷಗಳನ್ನು ಧರಿಸುತ್ತಾನೆ. ಈ ವೇಷಗಳನ್ನು ಸರಿಯಾಗಿ ಪರೀಕ್ಷಿಸಿ ನೋಡಿದರೆ, ವೇಷವೆಲ್ಲವೂ ಹೊಟ್ಟೆ ಹೊರೆಯಲಿಕ್ಕಾಗಿಯೇ ಇವೆ, ಎಂದು ತಿಳಿಯುತ್ತದೆ. 'ಉದರ ನಿಮಿತ್ತಂ ಬಹುಕೃತ ವೇಷಂ'. ಅಂದರೆ ಹೊಟ್ಟೆ ಹೊರೆಯಲಿಕ್ಕಾಗಿಯೇ ಬಹಳ ವಿಧವಾದ ವೇಷಗಳಿವೆ. ಆದ್ದರಿಂದ

ವೇಷ ಭೂಷಣಗಳ ಡಾಂಭಿಕತನಕ್ಕಿಳಿಯದೆ, ತತ್ತ್ವ ದೃಷ್ಟಿಯಿಂದ ನೋಡಿದರೆ ದೇಹ ಮತ್ತು ಆತ್ಮಗಳ ಗಂಟು ಅಡಗುತ್ತದೆ. ಮನವು ಆತ್ಮದಲ್ಲಿ ಬೆರೆಯುತ್ತದೆ. 'ಭಿದ್ಯತೇ ಹೃದಯ ಗ್ರಂಥಿ ಛಿದ್ಯಂತೇ ಸರ್ವ ಸಂಶಯಃ' ಅಂದರೆ ಹೃದಯದಲ್ಲಿ ದೇಹ ಆತ್ಮಗಳ ಗ್ರಂಥಿ ಅಂದರೆ ಗಂಟು ಬಿಚ್ಚಿತೆಂದರೆ ಸರ್ವ ಸಂಶಯಗಳೂ ನಿವಾರಣೆಯಾಗುತ್ತವೆ.

ಆ. ನರರು ಈ ಪೊಡವಿಯಲಿ ನಿಂದೆ ಮಾಡಲೇನು ?
ಒಳ್ಳಿಯವನ ಮೇಲ್ಮೆ ಎಣಿಸಲೇನು ?
ಗುರುವನು ಒಪ್ಪಿಸುತ ಗುರಿ ತಪ್ಪಕೂಡದು.
ವಿಶ್ವದಾಭಿರಾಮ ಕೇಳು ವೇಮ.

ಈ ಪೊಡವಿಯಲ್ಲಿ ಜನರೆಲ್ಲ ವಿವೇಕ ಮತಿಗಳೇ ಆಗಿರುವುದಿಲ್ಲ. ಅವರು ತಮ್ಮ ಮನದ ಒಲವು ನಿಲುವುಗಳಿಗೆ ತಕ್ಕಂತೆ ವರ್ತಿಸುತ್ತಾರೆ. ಶಾಂತ ಪರಿಸರ ಬಯಸಿ ಅಡವಿಗೆ ಹೋಗಿ ಕುಟೀರ ವಾಸಿಯಾದ ಯೋಗಿಯನ್ನು ನಿಂದಿಸಬಹುದು. ಇತ್ತ ದಾನ ಧರ್ಮನಿರತನಾದ ತಮಗೆ ಒಳ್ಳಿಯವನೆನಿಸುವವನನ್ನು ಮೇಲು ಎಂದು ಎಣಿಸಬಹುದು. ಜನರ ಸ್ತುತಿ ನಿಂದೆಗಳಿಗೆ ಹೆಚ್ಚು ಗಮನವೀಯದೆ ತಾನು ಏನೇ ಮಾಡಲಿ, ಗುರುವಿಗೆ ಒಪ್ಪಿಗೆಯಾಗುವಂತಿರಬೇಕು. ಹೀಗೆ ಗುರುವನ್ನು ತನ್ನ ಆಚಾರ-ವಿಚಾರಗಳಿಂದ ಒಪ್ಪಿಸುತ್ತ, ತನಗೆ ಗುರು ತೋರಿದ ಗುರಿಯನ್ನು ತಪ್ಪಕೂಡದು. ಸಾಧನವನ್ನು ತನ್ನ ಅರಿವಿಗೆ ಸಮ್ಮತವಾಗುವಂತೆ ಮುಂದುವರಿಸಿ ಗುರಿ ತಲುಪಬೇಕು.

ಕಂ. ಕಾಣದು, ಆ ಪರ ತತ್ತ್ವವು.
ಮೇಣಾಲಿಸದಿರು ಗುರು ನಿಂದೆ ; ಕೇಳಿ ಕಾಣಲ್.
ಜಾಣಗತಿಯುಲಿಯಬಾರದು.
ಕಾಣೆಲೊ, ಮನಕೊಪ್ಪದ ಮಾನಹಾನಿ ವೇಮಾ.

ಆ ಪರತತ್ತ್ವವು ಇಂದ್ರಿಯಗೋಚರವಲ್ಲ. ಅದು ಕಣ್ಣಿಗೆ ಕಾಣದು. ಕಾಣುವುದು, ಇಂದ್ರಿಯ ಅನುಭವವಷ್ಟೇ. ಹಾಗಾಗಿ ಆ ಪರತತ್ತ್ವವನ್ನು ಅರಿಯದ ಜನರು, ಗುರು ನಿಂದೆಗಿಳಿದರೆ, ಅದನ್ನು ಕಿವಿಯಿಂದ ಕೇಳಬೇಡ. ಒಂದು ವೇಳೆ, ಪರತತ್ತ್ವ ಕುರಿತು ಧ್ಯಾನಿಸುವಾಗ ಅನಾಹತ ಧ್ವನಿಯನ್ನು ಕೇಳಿ ಚಿಜ್ಯೋತಿಯನ್ನು ಕಾಣಲು, ಅದು ಜಾಣ ಗತಿಯು. ಅದನ್ನು ಜನರೆದುರು ಉಲಿಯಬಾರದು. ಹಾಗೆ ಮಾಡಿದರೆ, ಕೋಣದ ಎದುರು ಕಿನ್ನರಿ ಬಾರಿಸಿದಂತೆ, ವ್ಯರ್ಥವಷ್ಟೇ. ಅದೆಲ್ಲ ಮನಕ್ಕೊಪ್ಪದ ಮಾನಹಾನಿ. ಎಂಬುದನ್ನು ಸರಿಯಾಗಿ ಕಾಣು.

ಆ. ನಿಜವನಾಡುವವನ ನಿಂದಿಸುವುದು ಜಗವು.
ನಿಜವಾಡಬಾರದು ನೀಚರೊಡನೆ
ನಿಜ ಮಹಾತ್ಮರೊಡನೆ ನಿಜವನಾಡಬೇಕು.
ವಿಶ್ವದಾಭಿರಾಮ ಕೇಳು ವೇಮ.

ಸಾಧನದಲ್ಲಾಗುವ ದಿವ್ಯ ಅನುಭವಗಳನ್ನು ಕುರಿತು ಸಾಮಾನ್ಯ ಜನರು

ತಿಳಿಯರು. ಅವರಿಗೆ ಅದೆಲ್ಲ ಬೊಗಳೆ ಎನಿಸುತ್ತದೆ. ಹೀಗಾಗಿ ಅವರು ನಿಂದಿಸಬಹುದು. ಹುಚ್ಚು ಎನ್ನಬಹುದು. ಜಗವು ನಿಜವಾಡುವವನನ್ನು ನಿಂದಿಸುತ್ತದೆ. ಆದ್ದರಿಂದ ನೀಚರೊಡನೆ ಎಂದೆಂದೂ ನಿಜವಾಡಬಾರದು. ಆದರೆ ಯಾರಿಗೆ ಸಾಧನಾ ಮಾರ್ಗದಲ್ಲಿ ಗತಿ ಇದೆಯೋ, ಯಾರು ನಿಜವಾಗಿ ಮಹಾತ್ಮರಾಗಿರುವರೋ, ಅಂಥವರೊಡನೆ ನಿಜವನ್ನೇ ಆಡಬೇಕು. ಅವರು ನೀಡುವ ಸಲಹೆ ಸೂಚನೆಗಳನ್ನು ಮನಸಾ ಸ್ವೀಕರಿಸಬೇಕು.

ಆ. ಮೊಟ್ಟೆ ಬಂದು ಮರಿಯ ಮತ್ತೆ ಅಣಕಿಸುತಿಹ,
ಪರಿಯ ತಿಳಿಯರೇನು ಪೆಚ್ಚು ಜನರು ?
ಜ್ಞಾನಿಯಿಪ್ಪ ಬುಧರ ಜರೆಯುವರು ಸುಮ್ಮನೆ.
ವಿಶ್ವದಾಭಿರಾಮ ಕೇಳು ವೇಮ.

ಅಂಡಜ ಜೀವಿಗಳು ಮೊಟ್ಟೆ ಇಡುತ್ತವೆ. ತಾಯಿ, ಮೊಟ್ಟೆಗೆ ಕಾವು ಕೊಟ್ಟಾಗ ಮೊಟ್ಟೆಯೊಡೆದು ಮರಿಯು ಹೊರಬರುತ್ತದೆ. ಮೊಟ್ಟೆಯು ಗುಂಡಗೆ ಅಂದವಾಗಿ ಇರುತ್ತದೆ. ನೋಡಲು ಪೆಂಪಾಗಿರುತ್ತದೆ. ಮೊಟ್ಟೆಯಾಗಿರುವಾಗಿನ ಪೆಂಪು ಮರಿಯಾದಾಗ ಇರುವುದಿಲ್ಲ. ಹೀಗಾಗಿ, ಮೊಟ್ಟೆ ಬಂದು ಮರಿಯನ್ನು ಮತ್ತೆ ಅಣಕಿಸುತ್ತದೆ. ಜನರು ಎಷ್ಟೇ ಪೆಚ್ಚರಾದರೂ ಮೊಟ್ಟೆ ಮರಿಯನ್ನು ಅಣಕಿಸುವುದನ್ನು ತಿಳಿಯರೇನು ? ಅದೇ ರೀತಿ, ಪ್ರಪಂಚ ಭೋಗದಲ್ಲಿ ಮುಳುಗಿ, ಉಂಡುಟ್ಟು ಗುಂಡಗಾಗಿರುವ ಮನೋ-ವಿಕಾಸವಾಗದ ಜೀವಿಗಳು ವಿಕಸಿತ ಜ್ಞಾನಿಯಿಪ್ಪ ಜನರನ್ನು ಕಂಡು, ಐಹಿಕ ಸುಖಭೋಗದಿಂದ ವಂಚಿತರಾದ ದುರ್ದೈವಿಗಳು ಎಂದು ಸುಮ್ಮನೆ ಜರೆಯುತ್ತಾರೆ. ಏಕೆಂದರೆ ಅವರಿಗೆ ಜ್ಞಾನಿಗಳ ನಿಜಾನಂದದ ಅಗಾಧತೆ ತಿಳಿಯದು.

ಆ. ಕಾಣು ; ಇಹುದ ತಿಂದು, ಕದಲದಿರಬಾರದೆ ?
'ಮಹಾ' ಎನಿಸಹೋಹ ; ಮೂಢ ಸಾಧು.
ಬುದ್ಧಿ ಇಲ್ಲದವನ ಪಂಕ್ತಿಯಲಿ ಕರೆವರೆ ?
ವಿಶ್ವದಾಭಿರಾಮ ಕೇಳು ವೇಮ.

ಸಾಧುವು ಅಪರಿಗ್ರಹ ನಿಯಮವನ್ನು ಪಾಲಿಸಬೇಕು. ಬಾಹ್ಯದಲ್ಲಿ ಡಂಭವನ್ನು ತೊರೆಯಬೇಕು. ತನ್ನ ಕುಟೀರದಲ್ಲಿ ವಾಸವಾಗಿದ್ದು ಏನು ಲಭ್ಯವಾಗುವುದೋ, ಅಷ್ಟು ಆಹಾರ ಸೇವನೆ ಮಾಡಿ, ತನ್ನ ಧ್ಯಾನ ಸಾಧನದಲ್ಲಿಯೇ ಸದಾ ನಿರತನಾಗಬೇಕು. ತನ್ನ ಗುರಿ ಸಾಧ್ಯವಾಗುವ ವರೆಗೆ ಅಲ್ಲಿಂದ ಕದಲಬಾರದು. ಸಾಧನದಲ್ಲಿ ಸ್ವಲ್ಪ ಮುಂದುವರಿದು ಉನ್ಮನಿ ಸ್ತರದಲ್ಲಿ ಇರುವಾಗ ಮನವನ್ನು ಕೆಳಗಿನ ಸ್ತರಕ್ಕಿಳಿಸಿ ಕೋರಿದರೆ, ಈಶ್ವರ ಮಹಿಮೆಯಿಂದ ಕೆಲವು ಪವಾಡ ಸದೃಶ ಘಟನೆಗಳು ನಡೆಯಬಹುದು. ಅವುಗಳಿಂದ ಆಕರ್ಷಿತನಾಗಿ ಜನರ ಮಧ್ಯೆ ತಾನು ಮಹಾ ಸಿದ್ಧನೆನಿಸುವ ಚಪಲವುಳ್ಳ ಸಾಧುವು ಮೂಢನಷ್ಟೇ. ಇದೆಲ್ಲ ಯೋಗಭ್ರಷ್ಟತೆಗೆ ಹಾದಿಯಷ್ಟೇ. ಇಂಥವನಿಗೆ ಮರುಜನ್ಮ ತಪ್ಪದು. ಇಂಥ ಡಾಂಭಿಕನನ್ನು ತಿಳಿದ ಸಾಧುಗಳು ಬುದ್ಧಿಗೇಡಿಯೆಂದು ಪರಿಗಣಿಸುತ್ತಾರಲ್ಲದೆ ತಮ್ಮ ಪಂಕ್ತಿಯಲ್ಲಿ ಅಂದರೆ ಸಮೂಹದಲ್ಲಿ ಆದರಿಸರು.

ಆ. ಉಸಿರು ಹೋಹ ಮುನ್ನ ಉಪದೇಶವ ಹೊಂದು.
ರೂಪ ಹೋಹುದಿದುವೆ ರೂಢಿ ಸತ್ಯ.
ಭುಂಜಿಪನೆ ವಡವಾಗ್ನಿ ಬೊಮ್ಮನೇನು ಮತ್ತೆ ?
ವಿಶ್ವದಾಭಿರಾಮ ಕೇಳು ವೇಮ.

ಉಸಿರು ಹೋಗುವ ಮುನ್ನ ಸದ್ಗುರುವನ್ನು ಸಂಧಿಸಿ ಮುಕ್ತಿಮಾರ್ಗದ ಉಪದೇಶವನ್ನು ಹೊಂದು. ಅವನು ತೋರಿದ ಸಾಧನಾ ಪಥದಲ್ಲಿ ನಿಷ್ಠೆಯಿಂದ ಮುನ್ನಡೆದರೆ, ಮನಸ್ಸು ಸ್ಥೂಲದಿಂದ ಸೂಕ್ಷ್ಮ ಸ್ತರಕ್ಕೆ ಏರುತ್ತದೆ. ಉದ್ದೀಪ್ತವಾಗುತ್ತದೆ. ಆ ಮೊದಲಿನ ನಾಮರೂಪಗಳ ಅಂಟು ಕಳಚುತ್ತದೆ. ಮನವು ಶಾಂತವಾಗುತ್ತದೆ. ನಿಸ್ತರಂಗವಾಗುತ್ತದೆ. ಮನದಲ್ಲಿಯ ಧ್ಯಾನಮೂರ್ತಿಯ ರೂಪವೂ ರೂಢಿಯಿಂದ ಹೋಗುವುದು ಸತ್ಯವಾಗಿದೆ. ಮನವು ಪ್ರಶಾಂತವಾಗುತ್ತದೆ. ಪ್ರಶಾಂತ ಮನದಲ್ಲಿ ಆನಂದವು ಸ್ಫುರಿಸುತ್ತದೆ. 'ಆನಂದಂ ಬ್ರಹ್ಮ ಇತ್ಯಾಹುಃ' ಅಂದರೆ ಆನಂದವೇ ಬ್ರಹ್ಮವಾಗಿದೆ. ಹೀಗಿರುವಾಗ ಮನವು ವಿಕ್ಷುಬ್ಧವಾಗಿ ಕಾಲಗಿಚ್ಚಿನಂತೆ ಧುಮಿ ಧುಮಿಸುವಾಗ ಬ್ರಹ್ಮಾನುಭವವಾಗಬಹುದೇ? ಬ್ರಹ್ಮನೇನು ವಡವಾಗ್ನಿಯನ್ನು ಭುಂಜಿಸಿ ಶಾಂತಗೊಳಿಸುವನೇ ?

ಶಿಷ್ಯನ ನಡೆವಳಿ :

ಆ. ಛಾತ್ರ ಧರ್ಮವರಿತು ಚೊಕ್ಕ ಭಕ್ತಿಯಿಂದ,
ಗುರುವ ಸೇವೆ ಗೆಯ್ದು, ಕುದುರಿದೊಡನೆ,
ಎಲ್ಲ ಮರ್ಮಗಳನು ಎಸೆದು ಹೋಗುತಿಹನು.
ವಿಶ್ವದಾಭಿರಾಮ ಕೇಳು ವೇಮ.

ಮುಮುಕ್ಷುಗಳಾದ ಶಿಷ್ಯ ಬಳಗವನ್ನು ಗುರುವು ಒಂದೇ ಛತ್ರದಡಿ ಸೇರಿಸಿ ಛಾತ್ರಧರ್ಮವನ್ನು ಬೋಧಿಸುತ್ತಾನೆ. ಇದುವೇ ಗುರುಕುಲ ಪದ್ಧತಿ. ಇಲ್ಲಿ ವಿಧಿಸಿದ ಧರ್ಮ ವಿಧಿಗಳನ್ನು ಚೊಕ್ಕ ಭಕ್ತಿಯಿಂದ ಪಾಲಿಸುತ್ತ ಗುರುವಿನ ಸೇವೆ ಗೆಯ್ಯಬೇಕು. ಆಗ ಗುರುವಿನ ಕರುಣೆಯು ಕುದುರುತ್ತದೆ. ಅವನು ಗುಹ್ಯಾತಿಗುಹ್ಯ ಸತ್ಯಗಳನ್ನು ದರ್ಶಿಸುವನು. ಎಲ್ಲ ರಹಸ್ಯಗಳನ್ನು ಬಯಲು ಮಾಡುವನು. ಅಂತೂ ಕೃಪಾಸಿಂಧುವಾದ ಗುರುವು ಎಲ್ಲ ಮರ್ಮಗಳನ್ನು ಶಿಷ್ಯನ ಅರಿವಿನೆದುರು ಎಸೆದು ಹೋಗುತ್ತಾನೆ.

ಗುರುವು ಬರುತಲಿರಲು, ಕುಳಿತು ಏಳದಿರುವ,
ತುಂಟಗೆಂತು ದೊರೆಯುತಿಹುದು ಮುಕ್ತಿ ?
ಪತಿಯ ಲೆಕ್ಕಿಸದ ಸತಿಗೆ ಅಂಥ ಗತಿಯು.
ವಿಶ್ವದಾಭಿರಾಮ ಕೇಳು ವೇಮ.

ಶಿಷ್ಯನು ಛಾತ್ರ ಧರ್ಮ ಕುರಿತು ಗುರುವಿನಾಶ್ರಯದಲ್ಲಿ ಸಾಧಕ ಜೀವನ ನಡೆಸಬೇಕು. ಗುರುವು ಪ್ರೀತಿಯ ಸಲುಗೆಯಿಂದ ಸ್ನೇಹಪರನಾಗಿದ್ದರೆ, ಅದನ್ನು ಅಪಾರ್ಥ ಮಾಡಿಕೊಂಡ ತುಂಟ ಶಿಷ್ಯನು ಗುರುವಿನ ಆಗಮನ ಕಾಲಕ್ಕೆ ಎದ್ದು ಗೌರವ ತೋರದಿದ್ದರೆ, ಅವನ ಮನಸ್ಸಿನಲ್ಲಿ ಗುರುಭಕ್ತಿ ಕುದುರದು. ಆ ಮನಸ್ಸಿಗೆ ಗುರೂಪದೇಶ ಹಿಡಿಸದು.

ಹೀಗೆ ಗುರೂಪದೇಶ ಸ್ವೀಕರಿಸದೆ ಹಠಮಾರಿಯಾಗಿ ಉಳಿದರೆ, ಅವನು ಇಹಬಂಧನದಿಂದ ಮುಕ್ತನಾಗುವುದು ಹೇಗೆ ? ಸಂಸಾರದಲ್ಲಿ ಪತಿಯನ್ನು ಲೆಕ್ಕಿಸದೆ ಬಾಳುವ ಸತಿಗೆ ಆಗುವ ಗತಿಯೇ ಇಂಥ ತುಂಟ ಶಿಷ್ಯನಿಗೂ ಆಗುತ್ತದೆ.

ಗೀ. ತಾವು ಮಾಡಿದ ಪಾಪಗಳು ತೊಲಗಲೆಂದು,
ಹುಟ್ಟಿ ಸಾವರು ಮತ್ತಂತೆ ಹುಟ್ಟುತಿಹರು.
ಗುರುವ ಸೇರುತ ಬೇಡಿ ತಾ ಕೋರುತಿದ್ದು,
ಹುಟ್ಟು ದುಃಖವು ಕೊನೆಗಳಿದು ಹೋಯ್ತು ವೇಮ.

ಅಹಂ ವಿಕಸಿತ ಜೀವಿಯಾದ ಮಾನವನಿಗೆ ದತ್ತ ಸ್ವಾತಂತ್ರ್ಯವಿದೆ. ಅವನು ಪರಪೀಡನೆಯ ಪಾಪವನ್ನು ಆಚರಿಸಬಹುದು. ಪರೋಪಕಾರದ ಪುಣ್ಯವನ್ನಾದರೂ ಆಚರಿಸಬಹುದು. ಪಾಪ ಕರ್ಮ ಮಾಡಿದ ಜೀವಿಯು ಆ ಕರ್ಮಗಳ ಪ್ರತಿ ಕರ್ಮಗಳ ಸಂಸ್ಕಾರವನ್ನು ಪಡೆಯುತ್ತಾನೆ. ಈ ಸಂಸ್ಕಾರಗಳನ್ನು ಭೋಗಿಸಿ ಕಳೆಯಲೆಂದು ಮರುಜನ್ಮ ಪಡೆಯುತ್ತಾನೆ. ಮತ್ತು ಮತ್ತೆ ಇದೇ ರೀತಿ ಮಾಡಿ ಮತ್ತೆ ಅಂತೆಯೇ ಹುಟ್ಟುತ್ತಾರೆ. ಪುಣ್ಯ ಜೀವಿಗಳು ಈ ಸಂಸಾರ ಚಕ್ರದಿಂದ ಪಾರಾಗಲು, ಬಯಸಿ, ಮಾರ್ಗದರ್ಶಕ ಗುರುವನ್ನು ಸೇರುತ್ತಾರೆ. ತಮಗೆ ಜನನ ಮರಣದ ಚಕ್ರದಿಂದ ಬಿಡುಗಡೆಯಾಗುವ ಮಾರ್ಗ ತೋರೆಂದು ಬೇಡಿಕೊಳ್ಳುತ್ತಾರೆ ಮತ್ತು ಮುಕ್ತಿಯನ್ನು ಸದಾ ಕೋರುತ್ತಿದ್ದು ಕೊನೆಗೆ ಗುರುಕರುಣೆಯಿಂದ ಸಾಧನ ಪಥದಲ್ಲಿ ಮುಂದುವರಿದು, ಕೊನೆಗೆ ಹುಟ್ಟಿನ ದುಃಖವು ಅಳಿದು ಹೋಗುತ್ತದೆ. ಸಾಧಕನು ಸಿದ್ಧಿಯನ್ನು ಪಡೆದು ಅಮರವಾದ ಆತ್ಮ ತತ್ತ್ವದಲ್ಲಿ ಒಂದಾಗುತ್ತಾನೆ.

ಆ. ಅಹಮು ಮೀರಲಾರ ; ಅತುಲ ಜನ್ಮಗಳಲಿ.
ಅರಸಿ ಹೇಳರಯ್ಯ ಆರೆ ಇರಲಿ.
ಅಲ್ಲಿ ಇಲ್ಲಿ ಅನುವು ಅತಿಶಯಾಗಿ ಉಂಟು.
ವಿಶ್ವದಾಭಿರಾಮ ಕೇಳು ವೇಮ.

'ಅಹಂ ಕರ್ತಾ, ಫಲ ಭೋಕ್ತಾ' ಅಂದರೆ ಅಹಂ ತತ್ತ್ವವೇ ಕರ್ಮ ಮಾಡುತ್ತದೆ ಮತ್ತು ಫಲವನ್ನೂ ಭೋಗಿಸುತ್ತದೆ. ಮಾಡಿದ ಕರ್ಮಗಳ ಪ್ರತಿಕರ್ಮ ಭೋಗದ ಸಂಸ್ಕಾರಗಳನ್ನು ಕಳೆಯಲು ಮರುಜನ್ಮ ಪಡೆಯುತ್ತದೆ. ಇಂಥ ಜನ್ಮಗಳಿಗೆ ಎಣಿಕೆಯಿಲ್ಲ. ಆದರೆ ರಜೋಗುಣಿಯಾದ ಜೀವಿಯು ಅಹಮು ಮೀರಲಾರದವನಾಗುತ್ತಾನೆ. ಪುನರಪಿ ಜನ್ಮ ಪಡೆದರೂ ಅರಿಯುವುದಿಲ್ಲ. ಇಂಥ ಕರ್ಮ ಜೀವಿಗೆ ಯಾರೇ ಆಗಲಿ, ತಾರಕ ವಿದ್ಯೆಯನ್ನು ಅರಸಿ ಹೇಳರು. ಭವಸಾಗರದಿಂದ ಪಾರುಗಾಣುವ ವಿದ್ಯೆ ಅರಿಯಲು ಮೊದಲು ಅಹಮು ಅಳಿಯಬೇಕು. ಮಣಿದು ಗುರುವಿಗೆ ಶರಣಾಗಬೇಕು. ಸ್ಥೂಲ ಲೋಕದಲ್ಲಾಗಲಿ, ಸೂಕ್ಷ್ಮ ಲೋಕದಲ್ಲಾಗಲಿ, ಅಹಮು ಅಳಿಸಲು ಅನುವು ಅತಿಶಯವಾಗಿ ಉಂಟು. ಜೀವಿಯು ಸಾಧನದಲ್ಲಿ ನಿರತನಾಗಿ ಮುಂದುವರಿಯಬೇಕಷ್ಟೇ.

ಆ. ಎಷ್ಟೊ ವೇಷಗಳಿಗೆ ಅರಿವೆ ಮೂಲವಿಹುದು.
ಯಮನ ಗೆಲ್ಲಬೇಕು ಸಮಯವರಿತು.

ಕಳ್ಳವಾಸ ಹೊರತು ಕಂಡುಕೊಳನು ಸೌಖ್ಯ.
ವಿಶ್ವದಾಭಿರಾಮ ಕೇಳು ವೇಮ.

'ಉದರ ನಿಮಿತ್ತಂ ಬಹುಕೃತ ವೇಷಂ'. ಹೊಟ್ಟೆ ಹೊರೆಯಲಿಕ್ಕಾಗಿ ಹಲವು ವೇಷ ಧರಿಸುತ್ತಾನೆ. ಆದರೆ, ವೇಷ ಸಾಧು ಸಂನ್ಯಾಸಿಯದೇ ಆಗಿರಲಿ, ಭಾಗಮತ ದಾಸನದೇ ಆಗಿರಲಿ, ಪಂಡಿತೋತ್ತನದೇ ಆಗಿರಲಿ, ತಾನು ಏನಿದ್ದೇನೆ ? ಎಂಬ ಅರಿವು ತನಗಿದ್ದೇ ಇರುತ್ತದೆ. ತಾನು ಮರ್ತ್ಯನೆಂಬ ಅರಿವು ಇದೆ. ಈಗ ಜಪ ತಪಗಳನ್ನಾಚರಿಸಿ, ವ್ರತ ನೇಮಗಳನ್ನು ಪಾಲಿಸಿ ಮನೋಶುದ್ಧಿ ಪಡೆಯಬೇಕು. ಶುದ್ಧ ಮನಸ್ಸಿನಿಂದ ಗುರುಭಕ್ತಿ ಹೊಂದಿ, ಇಂದ್ರಿಯ ನಿಗ್ರಹ ಮೂಲಕ ಸಾಧನೆ ಮುಂದುವರಿಸಿ, ಮರಣ ನಿಯಾಮಕ ತತ್ತ್ವವಾದ ಯಮಧರ್ಮನನ್ನು ಸಮಯವರಿತು ಗೆಲ್ಲಬೇಕು. ಹೀಗೆ ಸೌಖ್ಯವನ್ನು ಕಂಡುಕೊಳ್ಳನು. ಮನೆಯನ್ನು ಕಳ್ಳನೊಬ್ಬನು ಹೊಕ್ಕರೆ, ಅವನು ಸುಖವಾಗಿ ನಿದ್ರಿಸನು. ತನ್ನ ಕಳವು ಕೃತ್ಯದ ಕನವರಿಕೆಯಲ್ಲಿಯೇ ಕಳೆಯುತ್ತಾನೆ.

ಆ. ಗುರುವರನ ನಿಂದಿಸುತ ಗುಟ್ಟನರಿಯದವನು,
ಯಮನ ಬಾಧೆ ಪಡುವ ಕ್ರಮದಿ ಮುಂದೆ.
ಜೇನಿನೊಳಗೆ ನೊಣವು ಸಾವ ರೀತಿಯಾಯ್ತು.
ವಿಶ್ವದಾಭಿರಾಮ ಕೇಳು ವೇಮ.

ಒಬ್ಬನು ಮಾರ್ಗದರ್ಶನ ಪಡೆಯಲು ಗುರುವನ್ನು ಆಶ್ರಯಿಸಿರಬಹುದು. ಆದರೆ ಆ ಗುರುವು ವಿಧಿಸುವ ನಿಯಮಗಳನ್ನು ಪಾಲಿಸದೆ, ಸಾಧನೆ ಮಾಡದೆ, ಮುಂದುವರಿಯದಿರಬಹುದು. ಆಗ ಗುರುವೇ ಸರಿಯಿಲ್ಲವೆಂದು ಗುರು ನಿಂದೆಗಿಳಿದು, ಗುರುವಿನ ಕರುಣೆಗೆ ಪಾತ್ರವಾಗದೆ, ಮುಕ್ತಿಯ ಹಾದಿಯ ಗುಟ್ಟನ್ನು ಅರಿಯದೆ ಹೋಗಬಹುದು. ಅಂಥವನು ತನ್ನ ಅಹಮು ಮೀರದೆ, ಮಾಡಿದ ಕರ್ಮಕ್ಕೆ ಪ್ರತಿಕರ್ಮದ ಸಂಸ್ಕಾರ ಭೋಗಿಸಲು ಮರುಜನ್ಮದ ದುಃಖದ ಬಾಧೆಯನ್ನು ಕ್ರಮದಿಂದ ಮುಂದೆ ಪಡೆಯುವನು. ಈ ಯಮನ ಬಾಧೆಗೆ ಬಲಿಯಾಗುವವ, ಜೇನು ಹುಳು ತಾನೇ ಶೇಖರಿಸಿದ ಜೇನಿನ ಹುಟ್ಟನಲ್ಲಿ ಸಿಲುಕಿ ಸಾಯುವ ರೀತಿಯಲ್ಲಿಯೇ ಈ ಅಹಂಕಾರಿಯು, ತನ್ನ ಕರ್ಮದ ಗೂಡಿನಲ್ಲಿ ಸಿಕ್ಕು ಯಮನ ಪಾಲಾಗುವನು.

ಗೀ. ತಳವಾರನೆ ಇರಲಿ ; ಎಂದಿಗೂ ಧರ್ಮ ಒಪ್ಪಿ,
ಸ್ವಾಮಿಯಾಣತಿ ಗೆಯ್ಯುತ ಸಲೆಯರಿಯುವ.
ಗುರುವಿನ ಹಿತಬೋಧೆ ಮೀರುವ ಕೇಡಿ ಶಿಷ್ಯ–
ಗಾಯ್ತು ನರಕ ಕೂಪಾಶ್ರಯ, ಕಾಣು ವೇಮ.

ತಳವಾರ ಇಲ್ಲವೆ ಸ್ಥಲವಾರನು ನಗರದ ಕಾವಲುಗಾರನು. ಅವನು ತನ್ನ ಸ್ವಾಮಿಯು ನೀಡಿದ ಅಪ್ಪಣೆಯಂತೆ, ತನಗೊಪ್ಪಿಸಿದ ಕಾವಲು ಕಾಯುವ ಧರ್ಮದಲ್ಲಿ ಒಪ್ಪಿ ನಡೆಯುತ್ತ ಚೆನ್ನಾಗಿ ಅರಿತು ಬಾಳುತ್ತಾನೆ. ಅದೇ ರೀತಿ, ಅರಿಷಡ್ವರ್ಗಗಳಿಂದ ತನ್ನನ್ನು

ರಕ್ಷಿಸುವ ಗುರುವಿನ ಹಿತ ಬೋಧೆಯನ್ನು ಮೀರುವ ಕೇಡಿ ಶಿಷ್ಯನಿಗೆ ನರಕ ಕೂಪವೇ ಆಶ್ರಯವಾಗುತ್ತದೆ. ಆದ್ದರಿಂದ ಶಿಷ್ಯನಾದವನು ಗುರೂಪದೇಶವನ್ನು ಎಂದೂ ಮೀರಕೂಡದು. ಹಾಗೆ ಮಾಡಿದರೆ ಮನಸ್ಸು ಉನ್ನತ ಸ್ತರಗಳಿಗೆ ಅಂದರೆ ಸೂಕ್ಷ್ಮ ಲೋಕಗಳನ್ನು ತಲುಪದೆ, ಆವರಣೇ ಮತ್ತು ವಿಕ್ಷೇಪ ಮಲಗಳಿಂದ ಮಲಿನವಾಗಿ ಅಧೋಲೋಕಕ್ಕೆ ಅಂದರೆ ನರಕದ ಬಾವಿಗೆ ಬೀಳುತ್ತದೆ.

ಆ. ಪರಪುಟ್ಟನು ಕಾಗೆ ಪಾಲಿಸಿದ ಪಿಕದಂತೆ.
ದಾರಿ ತೋರಬೇಕು ತತ್ತ್ವಜ್ಞನೋರ್ವ.
ಪೂರ್ವ ಜನ್ಮ ಫಲವ ಪಡೆವನಷ್ಟೆ ಕೊನೆಗೆ.
ವಿಶ್ವದಾಭಿರಾಮ ಕೇಳು ವೇಮ.

ಕೋಗಿಲೆಯು ಕಾಗೆ ಗೂಡಿನಲ್ಲಿ ತತ್ತಿ ಇಡುತ್ತದೆ. ಹೆಣ್ಣು ಕಾಗೆಯು ಆ ತತ್ತಿಗಳಿಗೆ ಕಾವುಕೊಟ್ಟು, ಜೋಪಾನವಾಗಿ ಕಾಯುತ್ತದೆ. ಮುಂದೆ ಮರಿಗಳಾದಾಗ ಆಹಾರವನ್ನು ತಂದು ಗುಟುಕು ಕೊಡುತ್ತದೆ. ಹೀಗೆ, ಕಾಗೆ ಪಾಲಿಸಿದ ಪಿಕದಂತೆ ಪರಪುಟ್ಟನ ಜೀವನವಿರುತ್ತದೆ. ಅದೇ ರೀತಿ, ಮುಮುಕ್ಷುವೊಬ್ಬನು ತನ್ನ ಆಶ್ರಯ ಕೋರಿ, ಸತ್ಪಥದಲ್ಲಿ ಸಾಗಲು ಉತ್ಸುಕನಾಗಿ ಬಂದಾಗ ತತ್ತ್ವಜ್ಞನು ಅವನನ್ನು ಪರಪುಟ್ಟ ಕಂದನೆಂದು ಪರಿಗಣಿಸಿ, ಸೂಕ್ತ ದಾರಿ ತೋರಬೇಕು. ಅವನಿಗೆ ತತ್ತ್ವಗಳನ್ನು ಚೆನ್ನಾಗಿ ಅರುಹಬೇಕು. ನಿಮ್ನ ಸ್ತರದಿಂದ ಉನ್ನತ ಸ್ತರಕ್ಕೆ ಕ್ರಮಿಸುವ ಸಾಧನ ಪದ್ಧತಿಯನ್ನು ಉಪದೇಶಿಸಬೇಕು. ಆಗ ಆ ಮುಮುಕ್ಷುವು ತಾನು ಪೂರ್ವ ಜನ್ಮದಲ್ಲಿ ಮಾಡಿದ ಕರ್ಮಗಳ ಫಲಾನುಸಾರ ಯಾವ ಗತಿ ತಲುಪಬೇಕೋ, ಅದನ್ನು ಬೇಗ ತಲುಪುತ್ತಾನೆ.

ಶಿಷ್ಯಧರ್ಮ:

ಆ. ಪಾಡಲ್ಲವೊ ಜಗದಿ ಪಂಚಾಂಗ ಹೇಳಲು,
ಇನಿತಾದರು ಬುದ್ಧಿ ದಣಿಸದನಕ,
ಬ್ರಹ್ಮವರಿಯುವನಕ ಪೌರೋಹಿತ್ಯ ಹೊಲ್ಲ.
ವಿಶ್ವದಾಭಿರಾಮ ಕೇಳು ವೇಮ.

ವಾರ, ತಿಥಿ, ಯೋಗ, ನಕ್ಷತ್ರ ಮತ್ತು ಕರಣ ಎಂಬ ಐದು ವಿಷಯಗಳನ್ನು ತಿಳಿಸುವ ಜ್ಯೋತಿಷ ಶಾಸ್ತ್ರಕ್ಕೆ ಪಂಚಾಂಗವೆನ್ನುತ್ತಾರೆ. ನಕ್ಷತ್ರ-ಗ್ರಹಗಳ ಗತಿಯನ್ನೂ ಮತ್ತು ಅವುಗಳ ಕೂಟಗಳ ಪರಿಣಾಮಗಳನ್ನೂ ಮಾನವನ ಜನ್ಮ ನಕ್ಷತ್ರಕ್ಕೆ ಜೋಡಿಸಿ, ಅವನಿಗೆ ಒದಗುವ ಶುಭಾಶುಭ ಫಲಗಳನ್ನು ಹೇಳುವುದಕ್ಕೆ ರೂಢಿಯಲ್ಲಿ ಪಂಚಾಂಗ ಹೇಳುವುದು ಎನ್ನುತ್ತಾರೆ. ಈ ಪಂಚಾಂಗ ಹೇಳಲು ಬ್ರಹ್ಮಜ್ಞಾನವಾಗಬೇಕು. ಜಗತ್ತಿನಲ್ಲಿ ಅಲ್ಪ ಸ್ವಲ್ಪ ಶಾಸ್ತ್ರ ಓದಿಕೊಂಡು, ಪಂಚಾಂಗ ಹೇಳುತ್ತ ಜನರಿಗೆ ಶುಭಾಶುಭಗಳನ್ನು ಹೇಳುವುದು ಪಾಡಲ್ಲ. ಹಾಗೆ ಹೇಳಬೇಕಾದರೆ ಬುದ್ಧಿಯನ್ನು ಪ್ರಯೋಗಿಸಬೇಕು. ನಕ್ಷತ್ರಗಳ ಕೂಲಂಕಷ ಜ್ಞಾನ ಪಡೆದಿರಬೇಕು. ಇನ್ನು ಒಬ್ಬನ

ಹಿತಾಹಿತಗಳನ್ನು ಕುರಿತು ಹೇಳುವಾಗಲಂತೂ ಬ್ರಹ್ಮವಿದನಾಗಿರಬೇಕು. 'ಪುರಾಸಿ ಹಿತಂ ಕರೋತಿ ಇತಿ ಪುರೋಹಿತಃ'. ಅಂದರೆ ಎದುರೆದುರೇ ಹಿತವಚನವನ್ನು ನುಡಿಯುವವನೇ ಪುರೋಹಿತನೆನಿಸುವನು. ಹೀಗೆ ಒಬ್ಬರ ಹಿತಾಹಿತಗಳನ್ನು ಸೂಕ್ಷ್ಮ ದೃಷ್ಟಿಯಿಂದ ಗ್ರಹಿಸಬೇಕಾದರೆ ಅವನಿಗೆ ಬ್ರಹ್ಮಜ್ಞಾನವಾಗಿರಲೇಬೇಕು.

ಗೀ. ಕಲುಷಗಳನು ಎಲ್ಲ ಖಂಡಿಸಿ, ಗತಿಯರಿತು,
ಚಿನ್ಮಯಾನಂದ ಪಟ್ಟಾಭಿಷಿಕ್ತನಿರೆ,
ಅವನ ಎಣೆಸಲಳವೆ ? ಅಬಬ ! ಅವನಿಯಲ್ಲಿ
ಪರಶಿವನವನೆಂದು ಬಣ್ಣಿಪರಲ ವೇಮ. !

ಮನುಷ್ಯನಲ್ಲಿ ಅನೇಕ ದೋಷಗಳಿವೆ. ಅವುಗಳು ಅನಿಷ್ಟಗಳೆಂದು ಖಂಡಿಸಿ, ಅವುಗಳನ್ನು ತೊರೆದು, ಸದ್ಗತಿಯನ್ನು ಅರಿಯಬೇಕು. ಈ ಸತ್ ಮಾರ್ಗದಲ್ಲಿ ಪಟ್ಟ ಪಡೆಯಬೇಕು. ಆನಂದ ಸಾಗರದಲ್ಲಿ ಅಭಿಷಿಕ್ತನಾಗಿದ್ದರೆ, ಅಂಥ ಆನಂದಮೂರ್ತಿಯನ್ನು ಅವನಿಯಲ್ಲಿ ಎಣೆಸಲು ಸಾಧ್ಯವೇ ? ನಿಜವಾಗಿ ಅವನೇ ಪರಶಿವನು ಎಂದು ಬಣ್ಣಿಸುವರಲ್ಲವೇ ?

ಆ. ಶಿಷ್ಯಧರ್ಮವರಿತು, ಚೊಕ್ಕ ಭಕ್ತಿಯಿಂದ,
ಗುರು ಸೇವೆಯ ಗೆಯ್ದು ಕುದುರಿದೊಡನೆ,
ಸರ್ವ ಕಾರ್ಯಗಳಲಿ ಚಕ್ಕನೆ ಸರಿ ಹೋಯ್ತು.
ವಿಶ್ವದಾಭಿರಾಮ ಕೇಳು ವೇಮ.

ಶಿಷ್ಯನಾಗಲು ಒಬ್ಬನು ತಕ್ಕ ಅಧಿಕಾರಿಯಾಗಿರಬೇಕು. ಶಾಂತನಾಗಿರಬೇಕು. ವಿನಮ್ರನಾಗಿರಬೇಕು. ಸತ್ಯನಿಷ್ಠನಾಗಿರಬೇಕು. ಹೀಗೆ ಶಿಷ್ಯಧರ್ಮವನ್ನು ಅರಿತು, ಚೊಕ್ಕ ಭಕ್ತಿಯಿಂದ ಗುರುವಿನ ಸೇವೆಯನ್ನು ತ್ರಿಕರಣಪೂರ್ವಕ ಮಾಡಬೇಕು. ಆಗ ಮನಸ್ಸು ಶುದ್ಧವಾಗುತ್ತದೆ. ಅರಿವಿನ ಪುಷ್ಪವು ಅರಳುತ್ತದೆ. ಅಂದರೆ ಕುದುರುತ್ತದೆ. ಆಗ ಅವನಿಂದ ಏನೇ ಕಾರ್ಯ ನಡೆಯಲಿ, ಅವನ ಸಂಕಲ್ಪವು ಗುರುವಿನ ಅರ್ಥಾತ್ ದೈವದ ಸಂಕಲ್ಪದೊಂದಿಗೆ ಮೇಳವಿಸಿರುವುದರಿಂದ, ಎಲ್ಲವೂ ಚಕ್ಕನೆ ಸರಿಹೋಗುತ್ತದೆ.

ಆ. ತಪ್ಪನೆಣಿಸುವವನು ಶಿಷ್ಯನು ತಾನಹನೆ ?
ತಪ್ಪು ಅರಿಯುವವನೆ ಶಿಷ್ಯಸಹನು.
ತಪ್ಪನರಿತುಬಿಡಲು ಭದ್ರನಾಗುತಿಹನು.
ವಿಶ್ವದಾಭಿರಾಮ ಕೇಳು ವೇಮ.

ತಪ್ಪು ಮಾಡುವುದು ಎಲ್ಲರ ಸ್ವಭಾವ. ಪರರಲ್ಲಿ ತಪ್ಪನ್ನು ಎಣಿಸುವವನು, ಗುರುಗಳಲ್ಲಿ ತಪ್ಪನ್ನೆಣಿಸುವವನು ಶಿಷ್ಯನಾಗಬಹುದೇ ? ಇಲ್ಲ ಇಲ್ಲ. ತನ್ನ ತಪ್ಪನ್ನು ತಾನು ಆತ್ಮ ವಿಮರ್ಶೆಯಿಂದ ಅರಿಯುವವನೇ ಶಿಷ್ಯನಾಗುತ್ತಾನೆ. ಅವನು ಮಾತ್ರ ಅಂಧಕಾರ ನಿವಾರಕ ಗುರುವಿನಿಂದ ಮಾರ್ಗದರ್ಶನ ಪಡೆದು ಮುಂದಾಗಬಲ್ಲನು. ಯಾರು

ತಪ್ಪನ್ನು ಅರಿತು, ತಪ್ಪು ಮಾಡುವುದನ್ನು ಬಿಡುವನೋ, ಅಂಥವನು ಮಾತ್ರ ಭದ್ರನಾಗುತ್ತಾನೆ. ಮಂಗಳಕಾರಿಯಾಗುತ್ತಾನೆ.

ಆ. ವ್ಯಾಧಿ ಬಂದ ಕಾಲ ವೈದ್ಯನಿತ್ತ ಮದ್ದು,
ತಿನ್ನದಿರಲು ವಾಸಿಯಾಗದೆಂದು.
ಅಂತೆ ದೀಪ ಉರಿಯೆ ಕತ್ತಲು ಸರಿಯದೇನು ।
ವಿಶ್ವದಾಭಿರಾಮ ಕೇಳು ವೇಮ.

ರೋಗ ಬಂದಾಗ ಚಿಕಿತ್ಸಕ ವೈದ್ಯನು ರೋಗ ನಿವಾರಕ ಮದ್ದನ್ನು ಸೇವಿಸಲು ಕೊಡುತ್ತಾನೆ. ಆ ಮದ್ದನ್ನು ಕ್ರಮಬದ್ಧವಾಗಿ ಸೇವಿಸದಿದ್ದರೆ, ಪತ್ಥೆ ಮಾಡದಿದ್ದರೆ, ಆ ರೋಗವು ಎಂದೂ ವಾಸಿಯಾಗದು. ಅದೇ ರೀತಿ ಪ್ರಾಪಂಚಿಕ ವ್ಯಾಮೋಹದಿಂದ ಪೀಡಿತನಾದ ಮಾನವನಿಗೆ ಗುರುವು ನೀಡಿದ ಉಪದೇಶವೆಂಬ ಅಮೃತವನ್ನು ಸ್ವೀಕರಿಸಿ ಆಚರಿಸದಿದ್ದರೆ, ಭವರೋಗವು ನಿವಾರಣೆಯಾಗದು. ಕತ್ತಲು ಕಳಿಯಲು ದೀಪವೇ ಮದ್ದು. ದೀಪ ಉರಿದರೆ ಕತ್ತಲು ಸರಿಯದೆ ಉಳಿಯುವುದೇನು. ಗುರುವು ಅಂಧಕಾರ ನಿವಾರಕ ತಾನೇ ?

ಆ. ಅನುತನುತಿರೆ ರಾಗ ಅತಿಶಯ ಇಂಪಾಯ್ತು.
ಬಹಳ ಬಾರಿ ತಿನಲು, ಬೇವು ಸಿಹಿಯು.
ಸಾಧನದಿಂ ಕಾರ್ಯ ಸಿದ್ಧಿಯಹುದು ಜಗದಿ.
ವಿಶ್ವದಾಭಿರಾಮ ಕೇಳು ವೇಮ.

ಗಾಯನವು ಒಂದು ಅಪರೂಪದ ವಿದ್ಯೆ. ಗಾಯಕನ ಧ್ವನಿಯ ಇಂಪು. ಅಭ್ಯಾಸ ಮಾಡಿದಂತೆಲ್ಲ ಇಂಪಾಗಿ ಮಾರ್ಪಡುತ್ತದೆ. ಅನೇಕ ಜನ ಸಂಗೀತವಿಧ್ವಾನರ ವಿಷಯದಲ್ಲಿಯೂ ಸಹ, ಅನುತನುತಿರೆ ರಾಗ ಅತಿಶಯ ಇಂಪಾಯ್ತು ಎಂದು ಅನುಭವಕ್ಕೆ ಬರುತ್ತದೆ. ಅದೇ ರೀತಿ ಮದ್ದು ರೂಪದಲ್ಲಿ ತಿನ್ನಬೇಕಾದ ಬೇವು ಮೊದಲು ಕಹಿ ಎನಿಸಿದರೂ ಸಹ, ಸೇವಿಸುತ್ತ ಹೋದಂತೆ ನಾಲಗೆಗ ರೂಢಿಯಾಗಿ ಕೊನೆಗೆ ಸ್ವಲ್ಪು ಸಿಹಿ ಎನಿಸುತ್ತದೆ. ಅದೇ ರೀತಿ, ಪ್ರಾಪಂಚಿಕ ವ್ಯಾಮೋಹದಲ್ಲಿ ಆಸಕ್ತ ಮನಸ್ಸಿಗೆ ಆಧ್ಯಾತ್ಮಿಕ ಸಾಧನವು ಮೊದಲು ಹಿಡಿಸದಿರಬಹುದು. ಆದರೆ ರೂಢಿಯಾದಂತೆ ಸಾಧನೆಯನ್ನು ಬಿಟ್ಟಿರಲಾರದ ಸ್ಥಿತಿ ಉಂಟಾಗುತ್ತದೆ. ಕೊನೆಗೆ ಸಾಧನದಿಂದ ಜಗತ್ತಿನಲ್ಲಿ ಸಿದ್ಧಿಯೂ ಪ್ರಾಪ್ತವಾಗುತ್ತದೆ.

ಆ. ತಿಳಿವಿಗಾಗಿ ತಿಳಿದು, ತಡಮಾಡದೆ ದೇಹಿ,
ತೀರಗೊಡದೆ ಪ್ರೀತಿ, ತೀರಿ ರೊಕ್ಕ,
ಮುಕ್ತಿ ಕೊಡದ ಗುರುವು ಮತ್ತೆ ಕಳ್ಳ ಮಗನು.
ವಿಶ್ವದಾಭಿರಾಮ ಕೇಳು ವೇಮ.

ಒಬ್ಬ ಜ್ಞಾನ ಪಿಪಾಸುವು ತಿಳಿವಿಗಾಗಿ ತಿಳಿಯತ್ತಾನೆ. ಗುರುವನ್ನು ಸೇರಿ 'ದೇಹಿ' ಎಂದು ಬೇಡುತ್ತಾನೆ. ಯಾವುದೇ ವಿಳಂಬ ಮಾಡುವುದಿಲ್ಲ. ಅವನಲ್ಲಿ ಮುಕ್ತಿಯ ಪ್ರೀತಿಯು

ತುಂಬಿರುತ್ತದೆ. ಅದಕ್ಕಾಗಿ ತನ್ನ ಧನ ಕನಕವನ್ನು ತ್ಯಜಿಸುತ್ತಾನೆ. ಇಷ್ಟಾದರೂ ಕಾಣಿಕೆಯೆಂದು ಧನವನ್ನು ದೋಚುವ ಗುರುವೆಂದುಕೊಳ್ಳುವವನು ಮುಕ್ತಿಯನ್ನೀಯನು. ಮುಕ್ತನಾಗುವ ಮಾರ್ಗ ತೋರಿಸನು. ಇಂಥ ಗುರುವು ಅಂಧಕಾರ ನಿವಾರಕನಲ್ಲ. ಪ್ರತಿಯಾಗಿ, ಧನ ದೋಚುವ ಕಳ್ಳ ಮಗನು.

ಆ. ಗುರುಚರಣವ ಹಿಡಿದು ನಾಯಿ ಅರಚುವುದೇ ?
ಗುರುಚರಣವ ತೊರೆದು ನಾಯಿಯರಚು.
ನಾಯಿಗಿರುವ ಗುಣವು ಗುರುವಿಗಿಲ್ಲವೇಕೊ ?
ವಿಶ್ವದಾಭಿರಾಮ ಕೇಳು ವೇಮ.

ನಾಯಿಯು ನಂಬಿಗಸ್ಥ ಪ್ರಾಣಿ. ಅದರಲ್ಲಿ ಸ್ವಾಮಿ ಭಕ್ತಿ ವಿಶೇಷ. ತನ್ನ ಸ್ವಾಮಿಯ ಪಾದವನ್ನು ಸೇವಿಸುವ ನಾಯಿಯು ಅವರಿವರನ್ನು ಕಂಡರೆ ಅರಚುವುದಿಲ್ಲ. ಸರ್ವರನ್ನು ಪ್ರೀತಿಯಿಂದ ಕಾಣುವ ಗುರುವಿನ ಬಳಿಯ ನಾಯಿಯು ತಾನೂ ಸಹ ಪರಿಸರದ ಪ್ರಭಾವದಿಂದ ಎಲ್ಲರನ್ನೂ ಪ್ರೀತಿಸುತ್ತದೆ. ಹೀಗಾಗಿ ಅರಚುವುದಿಲ್ಲ. ಆದರೆ ಗುರುವಿನ ಚರಣವನ್ನು ತೊರೆದ ನಾಯಿಯು, ಅವರಿವರನ್ನು ಕಂಡು ಅರಚುತ್ತದೆ. ನಾಯಿಗೆ ಇರುವ ಗುಣವು ಹಲವು ಗುರುಗಳಲ್ಲಿ ಕಾಣಬರುವುದಿಲ್ಲ. ಅವರು ಕೆಲವರನ್ನು ಕಂಡು ಕೋಪಿಸುತ್ತಾರೆ. ತಮ್ಮೊಂದಿಗೆ ಸೇರಿಸಿಕೊಳ್ಳುವುದಿಲ್ಲ. ನಾಯಿಗಿರುವ ಗುಣವು ಗುರುವಿಗೇಕೆ ಇಲ್ಲವೋ ?

ಆ. ಗುರುತು ಕಂಡು ಹೇಳಿ, ಗುರುವು ಯಾವನಿಲ್ಲ ?
ಗುರುತನರಿಯೆ ಶಿಷ್ಯವರನು ಇಲ್ಲ.
ಗುರುಶಿಷ್ಯರೆನಲು ಕುರುಡೆತ್ತು ಅಲ್ಲವೆ ?
ವಿಶ್ವದಾಭಿರಾಮ ಕೇಳು ವೇಮ.

ಜಗತ್ತಿನಲ್ಲಿ, ಇರುವ ಗುರುಗಳೂ, ಶಿಷ್ಯರೂ ಕುರುಡೆತ್ತುಗಳಂತೆ. ಒಂದು ಕುರುಡೆತ್ತು ಇನ್ನೊಂದಕ್ಕೆ ದಾರಿ ತೋರದು. ಆತ್ಮ ದರ್ಶನ ಮಾಡಲು ಗುರುತನ್ನು ಕಂಡು ಅರಿತು, ಹೇಳುವ ಸಿದ್ಧ ಗುರುವೂ ಸಿಕ್ಕರು. ಅದೇ ರೀತಿ, ಆ ಗುರುತನ್ನು ಅರಿಯುವ ಮುಮುಕ್ಷುಗಳಾದ ಶಿಷ್ಯರೂ ಇಲ್ಲ. ಹೀಗೆ ಪೀಠ-ಪಟ್ಟಗಳಿಗೆ ಜೋತು ಬೀಳುವ ಗುರುಗಳಿಂಬವರು ಕಾಣಿಕೆ ದೋಚುವ ಕಾಯಕನಿರತರೇ. ಒಬ್ಬ ಅಂಧನನ್ನು ಇನ್ನೊಬ್ಬ ಅಂಧನು ಹಿಂಬಾಲಿಸಿ ಬಳ್ಳಿಗುರುಡರು ಸೇರಿ, ಹಳ್ಳಕ್ಕೆ ಬಿದ್ದಂತೆ ಇವರ ಸ್ಥಿತಿಯಾಗಿದೆ.

ಆ. ಸಾದೃಶ ಪಡೆದವನು ಸುಮ್ಮನಿರಕೂಡದು.
ಗುರುವಿನೊಡನೆ ಸೇರಿ ಕೂಡಬೇಕು.
ಗುರುವು ನುಡಿದ ರೀತಿ ಗುರಿ ಮೀರಕೂಡದು.
ವಿಶ್ವದಾಭಿರಾಮ ಕೇಳು ವೇಮ.

ಶಾಂತನೂ, ದಾಂತನೂ, ಸತ್ಯನಿಷ್ಠನೂ, ಅಪರಿಗ್ರಹ ವ್ರತನಿಷ್ಠನೂ, ಆದ ಮಾನವನು ಸಚ್ಛಿಷ್ಯನ ಗುಣಗಳನ್ನು ಪಡೆದವನು. ಅವನು ಸಚ್ಛಿಷ್ಯನ ಸಾದೃಶ ಪಡೆದವನು.

ಅವನು ತನ್ನಷ್ಟಕ್ಕೆ ತಾನು ಸುಮ್ಮನಿರಕೂಡದು. ತನ್ನ ಮನೋವಿಕಾಸದ ಹಾದಿಯನ್ನು ಹುಡುಕಬೇಕು. ಅಂಧಕಾರ ನಿವಾರಕನಾದ ಗುರುವನ್ನು ಸೇರಿ ಕೂಡಬೇಕು. ಅವನ ಉಪದೇಶ ಪಡೆದು ಅದಕ್ಕನುಸರಿಸಿ ಸಾಧನೆ ಮಾಡಬೇಕು. ಅವನು ಗುರಿ ತೋರಿಸಿ ಬೋಧೆ ನೀಡುತ್ತಾನೆ. ಆ ಗುರಿಯನ್ನು ಮೀರದೆ, ಅತ್ತ ಇತ್ತ ಚಲಿಸದೆ ಮುನ್ನಡೆಯಬೇಕು.

ಮೋಕ್ಷ ಗುರು :

ಆ. ಹಾಲುಗೂಡಿ ನೀರು ಹಾಲಾಗಿ ಬೆಳಗಿತು.
ಮಹಾಗುರುವಿನಿಂದ ಮಹಾಜ್ಞಾನಿ.
ಸಾಧು ಸಜ್ಜನಾದಿ ಸಂಗವಿಂತಪ್ಪುದು.
ವಿಶ್ವದಾಭಿರಾಮ ಕೇಳು ವೇಮ.

ಹಾಲಿನಲ್ಲಿ ನೀರು ಕೂಡಿದರೆ, ಅದು ಹಾಲೇ ಎನಿಸಿ ಬೆಳಗುತ್ತದೆ. ಅದೇ ರೀತಿ, ಮುಕ್ತಪುರುಷನಾದ ಮಹಾಗುರುವನ್ನು ಆಶ್ರಯಿಸಿದ ಮುಮುಕ್ಷುವಾದ ಶಿಷ್ಯನೂ ಸಹ ಅಜ್ಞಾನವನ್ನು ನಿವಾರಿಸಿಕೊಂಡು ಮಹಾಜ್ಞಾನಿಯೇ ಆಗುತ್ತಾನೆ. ಸಾಧು ಸಜ್ಜನರ ಸಂಗ ಮಾಡಿದ ಮನುಷ್ಯನು ಸಹ ತನ್ನ ಅಸಾಧು ವೃತ್ತಿಯನ್ನೂ, ದುರ್ನಡತೆಯನ್ನೂ ಕ್ರಮೇಣ ತ್ಯಜಿಸಿ ತಾನೂ ಸಾಧು-ಸಜ್ಜನನಾಗುತ್ತಾನೆ.

ಆ. ಉಂಟು ಉಂಟು ಜ್ಞಾನಿ ಯುಗ ಯುಗಾದಿ ಕಳೆಯೆ,
ಪ್ರಾಣ ಹಾನಿಯಿಲ್ಲ ಪ್ರಳಯವಿರಲು.
ಪ್ರಳಯವಿರಲು ಮತ್ತೆ ಪರಮಾತ್ಮನ ಸೇರುವ.
ವಿಶ್ವದಾಭಿರಾಮ ಕೇಳು ವೇಮ.

ನಾಲ್ಕು ಯುಗಗಳ ಗಣನೆಯುಂಟು. ಕೃತಯುಗ, ತ್ರೇತಾಯುಗ, ದ್ವಾಪರಯುಗ ಮತ್ತು ಕಲಿಯುಗ. ಯುಗಗಳ ಕಾಲದ ಗಣನೆಯು ನಕ್ಷತ್ರ ಗ್ರಹಗಳ ಗತಿಯಿಂದ ಮಾಡಿದ (ಗಡಿಯಾರದ) ಕಾಲವಾಗಿರಬಹುದು. ಮಾನಸಿಕ ಬದಲಾವಣೆಯ ಅಳತೆಯೂ ಆಗಿರಬಹುದು.

'ಪರಿತ್ರಾಣಾಯ ಸಾಧೂನಾಂ, ವಿನಾಶಾಯ ಚ ದುಷ್ಕೃತಾಂ.
ಧರ್ಮ ಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ'.

ಎಂದು ಭಗವದ್ಗೀತೆಯಲ್ಲಿ ಜ್ಞಾನಿಗಳ ಮಹಾಸಂಭೂತಿಯನ್ನು ಕುರಿತು ಹೇಳಿದ್ದಾರೆ. ಹೀಗೆ ಯುಗ ಯುಗದಲ್ಲಿ ಜ್ಞಾನಿಗಳು ಇದ್ದೇ ಇರುತ್ತಾರೆ. ಯುಗ ಪ್ರಳಯವಾದರೂ ಪ್ರಾಣ ಹಾನಿಯೇನೂ ಆಗದು. ಜಡ ಭೂತಗಳು ಪ್ರಕೃತಿಯ ಮಹಾಭೂತಗಳೊಡನೆ ಲಯಿಸುತ್ತವೆ. ಪ್ರಾಣವು ಮುಖ್ಯ ಪ್ರಾಣದಲ್ಲಿ ಸೇರುತ್ತದೆ. ಮನವು ಆತ್ಮನಲ್ಲಿ ಲಯಿಸಿ, ಆತ್ಮವು ಪರಮಾತ್ಮನಲ್ಲಿ ಒಂದಾಗುತ್ತದೆ.

ಆ. ಗಾಳಿ ಗಾಳಿ ಬೆರೆತು, ಗಗನ ಗಗನ ಬೆರೆತು,
ಮಣ್ಣು ಮಣ್ಣು ಮತ್ತೆ ಬೆಂಕಿ ಬೆಂಕಿ.
ನೀರು ನೀರು ಬೆರೆತು ನಿರ್ಮಲವಾಗಿಹುದು.
ವಿಶ್ವದಾಭಿರಾಮ ಕೇಳು ವೇಮ.

ಈ ದೇಹವು ಪಂಚಭೂತಾತ್ಮಕವಾಗಿದೆ. ಸೃಷ್ಟಿಯ ವಿಕಾಸಧಾರೆಯಲ್ಲಿ ತಮೋಗುಣದ ಕ್ರಮಿಕ ಪ್ರಭಾವದಿಂದ ಗಗನವಾಗಿದೆ. ಕೇವಲ ಶಬ್ದತರಂಗ ಮಾಧ್ಯಮ ವಾಹಕವಾಗಿದೆ. ಮುಂದೆ ಇನ್ನಷ್ಟು ಸ್ಥೂಲವಾಗಿ ವಾಯುವಾಗಿದೆ. ಶಬ್ದ ಮತ್ತು ಸ್ಪರ್ಶ ತರಂಗಗಳಾಗಿದೆ. ಬಳಿಕ ಮತ್ತಷ್ಟು ಸ್ಥೂಲವಾಗಿ ಬೆಂಕಿಯಾಗಿದೆ. ಶಬ್ದ, ಸ್ಪರ್ಶ ಮತ್ತು ರೂಪ ತರಂಗಗಳ ವಾಹಕವಾಗಿದೆ. ಮತ್ತಷ್ಟು ಸ್ಥೂಲವಾಗಿ ನೀರಾಗಿದೆ. ಶಬ್ದ ಮತ್ತು ಸ್ಪರ್ಶ ರೂಪ ತರಂಗಗಳೊಂದಿಗೆ ರಸ ತರಂಗಂಗಗಳ ವಾಹಕವಾಗಿದೆ. ಕೊನೆಗೆ ಸ್ಥೂಲತಮವಾಗಿ, ಪೃಥಕ್ ಆಗುವ ಪೃಥಿವೀ ಇಲ್ಲವೆ ಮಣ್ಣಾಗಿದೆ. ಪ್ರಲಯವಾದಾಗ ಮನಸ್ತತ್ತ್ವವು ಆತ್ಮ ತತ್ತ್ವದಲ್ಲಿ ಲಯಿಸುತ್ತದೆ. ಆತ್ಮವು ಪರಮಾತ್ಮನಲ್ಲಿ ಸೇರಿ ಹೋಗುತ್ತದೆ. ಆಗ ದೇಹದ ಪಂಚಭೂತಗಳು ಪ್ರಕೃತಿಯ ಪಂಚ ಮಹಾಭೂತಗಳಲ್ಲಿ ಲಯಿಸುತ್ತವೆ. ಗಗನವು ಗಗನದಲ್ಲಿ ಬೆರೆಯುತ್ತದೆ. ಗಾಳಿ ಗಾಳಿಯಲ್ಲಿ ಬೆರೆಯುತ್ತದೆ. ಬೆಂಕಿ ಬೆಂಕಿಯಲ್ಲಿ ಬೆರೆಯುತ್ತದೆ. ನೀರು ನೀರಿನಲ್ಲಿ ಬೆರೆಯುತ್ತದೆ ಮತ್ತು ಮಣ್ಣು ಮಣ್ಣಿನಲ್ಲಿ ಬೆರೆಯುತ್ತದೆ. ಹೀಗೆ ಪ್ರಲಯವಾದಾಗ ಒಂದರಲ್ಲಿ ಒಂದು ಬೆರೆತು ಯಾವ ವ್ಯಷ್ಟಿಗತ ಮಲವೂ ಉಳಿಯದೆ ಎಲ್ಲವೂ ನಿರ್ಮಲವಾಗುತ್ತವೆ.

ಪಿಂಡಾಂಡದಲ್ಲಿಯ ಧಾತುಗಳನ್ನು ಹೀಗೆ ವಿಭಜಿಸಬಹುದು. ಆಕಾಶ ತತ್ತ್ವದಲ್ಲಿ (ಗಗನದಲ್ಲಿ) ಶಿರ ಆಕಾಶ, ಕಂಠಾಕಾಶ, ಹೃದಯಾಕಾಶ, ಉದರಾಕಾಶ ಮತ್ತು ಕಟ್ಯಾಕಾಶ (ಮಲ ಸಂಚಯದ ಭಾಗ) ಎಂಬ ಐದು ಭಾಗಗಳುಂಟು. ಪಿಂಡಾಂಡದ ವಾಯು ತತ್ತ್ವದಲ್ಲಿ (ಗಾಳಿಯು) ಪ್ರಸಾರಣ, ಧಾವನ (ಓಡುವಿಕೆ), ಉತ್ಕ್ಷಮಣ, ಚಲನ ಮತ್ತು ಸಂಕೋಚನಗಳೆಂಬ ಐದು ಅಂಶಗಳುಂಟು. ತೇಜ ತತ್ತ್ವದಲ್ಲಿ (ಬೆಂಕಿಯಲ್ಲಿ) ನಿದ್ರಾ, ತೃಷಾ, ಕ್ಷುಧಾ, ಕಾಂತಿ ಮತ್ತು ಆಲಸ್ಯ ಅಂಶಗಳುಂಟು. ಅಪ್ ತತ್ತ್ವದಲ್ಲಿ (ನೀರಿನಲ್ಲಿ)ಲಾಲಾ, ಸ್ವೇದ, ಮೂತ್ರ, ಶುಕ್ರ ಮತ್ತು ಶೋಣಿತ (ರಕ್ತ) ಎಂಬ ಐದು ಧಾತುಗಳುಂಟು. ಕೊನೆಯದಾಗಿ ಪೃಥ್ವೀ ತತ್ತ್ವದಲ್ಲಿ (ಮಣ್ಣಿನಲ್ಲಿ) ರೋಮ, ತ್ವಚಾ, ನಾಡಿ, ಮಾಂಸ ಮತ್ತು ಅಸ್ಥಿಗಳೆಂಬ ಐದು ಧಾತುಗಳುಂಟು. ಇವುಗಳೆಲ್ಲ ಪ್ರಾಣ ತ್ಯಾಗದ ನಂತರ, ಕಳೇವರ ದಹನ ಇಲ್ಲವೆ ದಪನ ಅಂತ್ಯ ಸಂಸ್ಕಾರಗಳ ಮೂಲಕ ಆಯಾ ತತ್ತ್ವಗಳಲ್ಲಿ ಕಾಲಕ್ರಮೇಣ ಸೇರಿಕೊಳ್ಳುತ್ತವೆ.

ಆ. ಮೋದಗಳ, ಗುರುವಿನ ಮುಖ್ಯ ಕರುಣೆಯಿಂದ,
ನವರಂಧ್ರ ಕಾಯವ ನೋಡಿ, ತ್ಯಜಿಸಿ,
ಸರ್ವ ಜೀವನಾದ ; ಸರ್ವವು ತಾನಾದ.
ವಿಶ್ವದಾಭಿರಾಮ ಕೇಳು ವೇಮ.

ಶರೀರಕ್ಕೆ ನವ ರಂಧ್ರಗಳಿವೆ. ಅಂದರೆ ಒಂಭತ್ತು ತೂತುಗಳಿವೆ. ಅವುಗಳೆಂದರೆ ಎರಡು ಕಿವಿಗಳು, ಎರಡು ಕಣ್ಣುಗಳು, ಎರಡು ಮೂಗಿನ ಹೊರಳಿಗಳು, ಒಂದು ಬಾಯಿ, ಒಂದು ಗುದ ಮತ್ತು ಒಂದು ಗುಹ್ಯ. ಈ ಒಂಭತ್ತು ತೂತುಗಳ ಕಾಯವನ್ನು ಅದರ ಮಲಿನತೆಯನ್ನು ನೋಡಿ, ಅದು ಆ ತೂತುಗಳ ಮೂಲಕ ನಡೆಸುವ ಆಮೋದ-ಪ್ರಮೋದಗಳನ್ನು ನೋಡಿ ಬೇಸರಿಸಿ, ಗುರುಕರುಣೆಯಿಂದ ಅವುಗಳನ್ನು ತ್ಯಜಿಸಿ, ಕೊನೆಗೆ ದೇಹ ಭಾವ ತೊರೆದು, ಸಕಲ ಭೂತಾಂತರಾತ್ಮನಾದ ; ಸರ್ವ ಜೀವನಾದ. ಸರ್ವವೂ ತಾನಾದ. 'ಅಹಂ ಬ್ರಹ್ಮಾಸ್ಮಿ' ಅಂದರೆ ನಾನು ಬ್ರಹ್ಮನಿದ್ದೇನೆ ಎಂದು ಕಂಡು ಅನುಭವಿಸಿದ. 'ಸರ್ವಂ ಖಲ್ವಿದಂ ಬ್ರಹ್ಮ' ಅಂದರೆ ಈ ಜಗತ್ತೆಲ್ಲವೂ ನಿಜವಾಗಿ ಬ್ರಹ್ಮವೇ ಆಗಿದೆ ; ಎಂದು ಕಂಡರಿತನು. 'ಸರ್ವಂ ಬ್ರಹ್ಮಮಯಂ ಜಗತ್' ಅಂದರೆ ಈ ಜಗತ್ತೆಲ್ಲವೂ ಬ್ರಹ್ಮನಿಂದ ತುಂಬಿದೆ ಎಂದು ಅರಿತನು.

ಆ. ಕಾಗೆ ಗೂಡಿನಲ್ಲಿ ಕೋಗಿಲೆ ಇರುವಂತೆ ;
ಭ್ರಮರವಪ್ಪ ಹುಳದ ಬದುಕಿನಂತೆ.
ಗುರುಧ್ಯಾನದ ಬಳಿಕ ಗುರುವೆ ತಾನಾಗುವ.
ವಿಶ್ವದಾಭಿರಾಮ ಕೇಳು ವೇಮ.

'ಬ್ರಹ್ಮವಿದಃ ಬ್ರಹ್ಮೈವ ಭವತಿ' ಅಂದರೆ ಬ್ರಹ್ಮವನ್ನು ತಿಳಿದವನು ಬ್ರಹ್ಮವೇ ಆಗುತ್ತಾನೆ. 'ಆತ್ಮವಿದಃ ಆತ್ಮೈವ ಭವತಿ'. ಅಂದರೆ ಆತ್ಮ ಜ್ಞಾನಿಯು ಆತ್ಮವೇ ಆಗುತ್ತಾನೆ. 'ಯದ್ಭಾವಂ ತದ್ಭವತಿ'. ಅಂದರೆ ಭಾವವು ಹೇಗಿರುವದೋ, ಅದೇ ಆಗುತ್ತಾನೆ. ಹೀಗೆ ಶ್ರುತಿಯ ನುಡಿಗಳೆಲ್ಲ ನಾಣ್ನುಡಿಗಳೇ ಆಗಿವೆ. ಈಗ ಯೋಗ ಸಾಧಕನೊಬ್ಬನು ಗುರುವಿನ ಧ್ಯಾನದಲ್ಲಿ ನಿರತನಾಗಿ, ಮನವನ್ನು ಏಕಾಗ್ರಗೊಳಿಸಿ, ಧ್ಯಾನ ನಿಷ್ಠನಾಗಿದ್ದರೆ, ಮನವು ಉದ್ದೀಪನಗೊಂಡು ಕೊನೆಗೆ ಗುರುಮೂರ್ತಿಯ ರೂಪವನ್ನು ಮೀರಿ, ಪ್ರಜ್ಞೆಯನ್ನೂ ಮೀರಿ, ಭಾವಾತೀತನಾಗುತ್ತಾನೆ. ನಿರ್ಗುಣಾವಸ್ಥೆಯನ್ನು ತಲುಪುತ್ತಾನೆ. ಹೀಗೆ ಗುರುಧ್ಯಾನದಿಂದ ಗುರುವೇ ತಾನಾಗುತ್ತಾನೆ. ಇದು ಹೇಗಾಗುವುದೆಂದರೆ, ಕಾಗೆಯ ಗೂಡಿನಲ್ಲಿ ಕೋಗಿಲೆಯು ಇರುವಂತೆ. ಕೋಗಿಲೆಯು ಕಾಗೆಯ ಗೂಡಿನಲ್ಲಿ ತತ್ತಿಗಳನ್ನಿಡುತ್ತದೆ. ಕಾಗೆಯು ತತ್ತಿಗಳ ಮೇಲೆ ಕುಳಿತು ಕಾವು ಕೊಡುತ್ತದೆ. ಮರಿಯಾದ ಮೇಲೆ ಗುಟುಕು ಹಾಕುತ್ತದೆ. ಅದು ಬೆಳೆದು ಹಾರಲು ಬರುವ ವರೆಗೆ ಪರಪುಟ್ಟನಂತೆ ಸಾಕಿ ಬೆಳೆಸುತ್ತದೆ. ಅದೇ ರೀತಿ ಇದು. ಇನ್ನೂ ಸಮರ್ಪಕವಾದ ಉಪಮೆಯೆಂದರೆ, ಕೀಟವೊಂದು ತನ್ನ ಸುತ್ತ ಗುಂಯ್ಗುಡುವ ಭ್ರಮರವನ್ನು ನೋಡುತ್ತದೆ. ಮೊದ ಮೊದಲು ಭಯಪಟ್ಟುಕೊಳ್ಳುತ್ತದೆ. ಆ ಕಾಲಕ್ಕೆ ಅದರ ಗ್ರಂಥಿಗಳಿಂದ ದ್ರವ ಸ್ರವಿಸಿ ಅದಕ್ಕೂ ರೆಕ್ಕೆಗಳು ಚಿಗಿಯುತ್ತವೆ. ಅದು ಭ್ರಮರದ ಧ್ಯಾನದಲ್ಲಿಯೇ ಇರುತ್ತದೆ. ಅದೂ ಕೊನೆಗೆ ಭ್ರಮರವಾಗಿ ರೂಪಾಂತರಗೊಳ್ಳುತ್ತದೆ. ಗುರು ಧ್ಯಾನದಿಂದ ಶಿಷ್ಯನು ಗುರುವಾದಂತೆ.

ಆ. ಕಾಗೆ ಇರುವ ಗೂಡು ಕೋಗಿಲೆ ಹೊಕ್ಕಂತೆ,
ಭ್ರಮರ ಕೈಯ ಒಳಗೆ ಕೀಟವಿಪ್ಪ ರೀತಿ.

ಕೊಡದೆ ಸತ್ಯ ಮುಕ್ತಿ, ಕೆಡಿಪನೇನು ಗುರುವು ?
ವಿಶ್ವದಾಭಿರಾಮ ಕೇಳು ವೇಮ.

ಕಾಗೆಯ ಗೂಡಿನಲ್ಲಿ ಕೋಗಿಲೆಯು ಹೊಕ್ಕು ತತ್ತಿ ಇಡುತ್ತದೆ. ಕಾಗೆಯು ತತ್ತಿಯನ್ನು ಕಾಸಿ, ಮರಿ ಮಾಡಿ, ಪೋಷಿಸಿ ಬೆಳೆಸುತ್ತದೆ. ಅದೇ ರೀತಿ, ಶಿಷ್ಯನೊಬ್ಬನು ಗುರುವಿನ ಛತ್ರ ಸೇರಿ ಬೆಳೆಯುತ್ತಾನೆ. ಗುರುವೇ ಆಗಿ ಹೊರಬರುತ್ತಾನೆ. ಕೀಟವೊಂದು ಭ್ರಮರದ ಭಯದಲ್ಲಿದ್ದು, ಭ್ರಮರವನ್ನು ಧ್ಯಾನಿಸುತ್ತ ಭ್ರಮರವೇ ಆಗಿ ಮಾರ್ಪಡುತ್ತದೆ. ಇನ್ನು ಅಜ್ಞಾನಾಂಧಕಾರ ನಿವಾರಕನಾದ ಗುರುವು ಶಿಷ್ಯನಲ್ಲಿ ಮನೆ ಮಾಡಿದ ಕೆಡುಕು ಗುಣಗಳನ್ನೆಲ್ಲ ಕೈಹಿಡಿದು ಶಿಕ್ಷಿಸಿ, ಸತ್ಪಥದ ಮಾರ್ಗದರ್ಶನ ಮಾಡಿ, ಸತ್ಯ ಮುಕ್ತಿಯನ್ನು ಕೊಡದೆ ಕೆಡಿಸುವನೇನು ? ಇಲ್ಲ ಇಲ್ಲ. ಎಂದಿಗೂ ಇಲ್ಲ.

ಆ. ತಿಳಿಸುವವರು ಯಾರೊ ? ತಿಳಿಯುವವರು ಯಾರೊ ?
ಗುಟ್ಟು ಅರಿತ ಬಳಿಕ ಬಟ್ಟ ಬಯಲು.
ಜಲದ ಭಾಂಡೆಯಲ್ಲಿ ಸೂರ್ಯ ಬಿಂಬದಂತೆ.
ವಿಶ್ವದಾಭಿರಾಮ ಕೇಳು ವೇಮ.

ಸಾಧನ ಮಾರ್ಗದಲ್ಲಿ ಸ್ಥೂಲ ದೇಹ, ಸೂಕ್ಷ್ಮ ದೇಹ, ಕಾರಣ ದೇಹಗಳ ಭಾನವಿರುವ ವರೆಗೆ ಜ್ಞಪ್ತಿ ಇರುತ್ತದೆ. ಕೊನೆಗೆ ಭಾವಾತೀತ ಅವಸ್ಥೆಯನ್ನು ತಲುಪಿದಾಗ ದೇಹದ ಭಾನವಾಗಲಿ, ಮನಸ್ಸಿನ ಭಾನವಾಗಲಿ ಉಳಿಯದು. ಅಲ್ಲಿ ಜ್ಞಪ್ತಿ ಎಂದರೆ ತಿಳಿವೇ ಇರದು. ಅದುವೇ ಗುರುವಾದುದರ ಸಂಕೇತ. ಅಲ್ಲಿ ತಿಳಿಸುವವನು ಯಾರು ? ತಿಳಿಯುವವನು ಯಾರು ? ಏಕೆಂದರೆ 'ತತ್ ತ್ವಮ್ ಅಸಿ' ಅಂದರೆ ಅದು ನೀನೇ ಆಗಿರುತ್ತೀ. ಹೀಗೆ ತಾನು ತಾನೇ ಆಗುವ ಅದ್ವೈತವನ್ನು ಅನುಭವಿಸುವ ಗುಟ್ಟು ಅರಿತ ಬಳಿಕ, ಎಲ್ಲವೂ ಬಯಲಿನಲ್ಲಿ ಬಯಲಾಗುತ್ತದೆ. ಬಟ್ಟ ಬಯಲಾಗುತ್ತದೆ. ಇದು ಹೇಗಾಗುವುದೆಂದರೆ, ನೀರಿನ ಭಾಂಡೆಯಲ್ಲಿ ನೀರು ಇರುವಾಗ ಸೂರ್ಯನ ಬಿಂಬವು ಕಾಣುತ್ತದೆ. ಆ ನೀರು ಇಲ್ಲವಾದ ಮೇಲೆ ಅಲ್ಲಿ ಸೂರ್ಯನ ಬಿಂಬವು ಎಲ್ಲೆಡೆಗೆ ಪ್ರಸರಿಸಿ, ಪ್ರತಿಬಿಂಬ ರೂಪದಲ್ಲಿ ಉಳಿಯದು.

ಆ. ಪರುಷವಿನಿತು ಸೋಂಕಿ ಬಂಗಾರವಾದಂತೆ ;
ಕಪ್ಪುರವು ಜ್ಯೋತಿ ಕೂಡಿದಂತೆ.
ಪುಷ್ಪದಲ್ಲಿ ಗಂಧ ಬೆರೆತ ಹಾಗೆ ಮುಕ್ತಿ.
ವಿಶ್ವದಾಭಿರಾಮ ಕೇಳು ವೇಮ.

ರಸ ವಿದ್ಯೆಯಲ್ಲಿ ನಿಮ್ನ ಧಾತುಗಳನ್ನು ಮೇಲು ಧಾತುಗಳಾನ್ನಾಗಿಸುವ ವಿಧಾನಗಳಿವೆ. ಎಲ್ಲೆಡೆಗೆ ದೊರೆಯುವ ಕಬ್ಬಿಣವನ್ನು ಬಹು ಮೂಲ್ಯದ ಬಂಗಾರವಾಗಿ ರೂಪಾಂತರಿಸಬಹುದು. ಕಬ್ಬಿಣಕ್ಕೆ ಸ್ಪರ್ಶ ಮಣಿ ಅರ್ಥಾತ್ ಪರುಷಮಣಿಯನ್ನು ಸ್ಪರ್ಶಿಸಿದರೆ ಅದು ಬಂಗಾರವಾಗಿ ಹೊಳೆಯುತ್ತದೆ. ಇನ್ನು ಘನ ವಸ್ತುವಾದ ಕಪ್ಪುರಕ್ಕೆ ಜ್ಯೋತಿಯ ಸ್ಪರ್ಶ ಮಾಡಿದರೆ, ಕಪ್ಪುರವೂ ಜ್ಯೋತಿಯಾಗಿ ಉರಿಯುತ್ತದೆ. ಹೀಗೆ ಜೀವನು

ಆತ್ಮನೇ ಆಗುತ್ತಾನೆ. ಮುಂದೆ ಆತ್ಮ ತತ್ತ್ವದಲ್ಲಿ ಜೀವ ಭಾವವಿರದು. ಅದು ದೇಹವನಂಗಳಿಂದತ್ತತ್ತ ಮೀರಿದ ಸ್ಥಿತಿಯು. ಹೂವಿನಲ್ಲಿ ಪರಿಮಳವು ಹೊಂದಿಕೊಂಡಿರುವಂತೆ, ಮುಕ್ತಾವಸ್ಥೆಯ ಇರವಿನಲ್ಲಿ ಅರಿವು ಇರುತ್ತದೆ.

ಇದೇ ಪದ್ಯದ ರೂಪಾಂತರವು ಹೀಗಿದೆ.

ಆ. ಸೋಂಕಿ ಪರುಷ ಸ್ವರ್ಣವಾದ ಕಬ್ಬಿಣಂತೆ.
ಕಪ್ಪುರದಿ ಜ್ಯೋತಿ ಕಲೆಯುವಂತೆ.
ಹೂವಿನೊಳು ವಾಸನೆ ಹೊಂದಿಕೊಂಡಿಹಂತೆ
ವಿಶ್ವದಾಭಿರಾಮ ಕೇಳು ವೇಮ.

ಈ ಪದ್ಯಕ್ಕೆ ಪ್ರತ್ಯೇಕ ಟೀಕಾರ್ಥದ ಅಗತ್ಯವಿಲ್ಲವಷ್ಟೇ ?

ಆ. ಗುರುವು ಕಶಕ ಬೀಜ ; ಕುಂಭದಂತೆ ದೇಹ.
ಆತ್ಮ ಕಲುಷ ರಾಡಿ ಅಳಕಿಳಿಯೆ,
ತಿಳಿದು ವಿಂಗಡಿಸಲು, ದಿವ್ಯಾಮೃತ ನೋಡು.
ವಿಶ್ವದಾಭಿರಾಮ ಕೇಳು ವೇಮ.

ಕಶಕ ಬೀಜಗಳನ್ನುರಾಡಿ ನೀರನ್ನು ತಿಳಿಗೊಳಿಸುವುದಕ್ಕೆ ಬಳಕೆ ಮಾಡುತ್ತಾರೆ. ರಾಡಿ ನೀರಿನ ಗಡಿಗೆಯಲ್ಲಿ ಕಶಕ ಬೀಜವನ್ನು ಹಾಕಿದರೆ ಜೀವ ಭಾವವೆಂಬ ಆತ್ಮಕ್ಕಂಟಿದ ಕಲುಷವು ಅಳಕ್ಕಿಳಿಯುತ್ತದೆ. ಆತ್ಮವು ಕಶ್ಮಲ ರಹಿತವಾಗುತ್ತದೆ. ಹೀಗೆ ಸರಿಯಾದ ಉಪಾಯವನ್ನು ತಿಳಿದು, ಆತ್ಮ ಅನಾತ್ಮಗಳನ್ನು ವಿಂಗಡಿಸಿ ಅರಿತರೆ ದಿವ್ಯವಾದ ಅಮೃತವಾಗುತ್ತದೆ. ಮರಣವಿಲ್ಲದಂತೆ ಮಾಡುವ ದಿವ್ಯ ಪಾನೀಯವಾಗುತ್ತದೆ. ಮೋಕ್ಷದಾಯಿನಿಯಾಗುತ್ತದೆ.

ಆ. ಲೋಕಗಳಿಗೆ ಗುರುವು ; ಲೋಗರಿಗೂ ಗುರುವು.
ಅದನೆ ತಿಳಿಯೆ ಮೋಕ್ಷ ಪ್ರಾಪ್ತಿ.
ಗುರುವನರಿಯದಿರಲು ನರಕ ಕೂಪಕಿಳಿವ.
ವಿಶ್ವದಾಭಿರಾಮ ಕೇಳು ವೇಮ.

ಅರಿವೇ ಗುರು. ತನ್ನರಿವೇ ತನಗೆ ಗುರು. ಅಂಧಕಾರ ನಿವಾರಕನೇ ಗುರು. ಲೋಕಗಳೆಂದರೆ ಅನುಭವ ಕ್ಷೇತ್ರಗಳು. ಭೂಲೋಕ, ಭುವರ್ಲೋಕ, ಸ್ವರ್ಲೋಕ, ಮಹರ್ಲೋಕ, ಜನೋಲೋಕ, ತಪೋಲೋಕ ಮತ್ತು ಸತ್ಯಲೋಕಗಳೆಂದು ಸಪ್ತ ಲೋಕಗಳಿವೆ. ಸ್ಥೂಲ, ಸೂಕ್ಷ್ಮ ಮತ್ತು ಕಾರಣ ಮನಗಳ ಅನುಭವ ಕ್ಷೇತ್ರಗಳಿವು. ಈ ಎಲ್ಲ ಲೋಕಗಳಲ್ಲಿಯೂ ಅರಿವೇ ಅಂಧಕಾರ ನಿವಾರಕವಾಗಿದೆ. ಅಂದರೆ ಗುರುವಾಗಿದೆ. ಅದೇ ರೀತಿ ಇಲ್ಲಿಯ ಲೋಗರಿಗೂ ಅರಿವೇ ಗುರುವಾಗಿದೆ. ಇದನ್ನು ಸರಿಯಾಗಿ ತಿಳಿದರೆ, ಆ ಅರಿವಿನ ಇರವು ಬಂಧಮುಕ್ತವಾಗುತ್ತದೆ. ಅವನಿಗೆ ಮೋಕ್ಷ ಪ್ರಾಪ್ತಿಯಾಗುತ್ತದೆ. ಇನ್ನು ಯಾರಿಗೆ ಈ ಅರಿವು ಇಲ್ಲವೋ, ಅಂದರೆ ಯಾವನು ಗುರುವನ್ನು

ಅರಿಯುವುದಿಲ್ಲವೋ, ಅವನು ಅಧೋ ಲೋಕಕ್ಕೆ ಅಂದರೆ ನರಕ ಕೂಪಕ್ಕೆ ಇಳಿಯುತ್ತಾನೆ.

ಆ. ವಾಕ್ಕಿನಲ್ಲಿ ಗುರುವು ; ವಾಕ್ಪತ್ವವದು ಗುರುವು.
ಕತ್ತಲಲ್ಲಿ ಗುರುವು, ಸಿಕ್ಕು ಇರುವ.
ಅಖಿಲಕೆಲ್ಲ ಗುರುವು ಆಧಾರವಾಗಿಪ್ಪ.
ವಿಶ್ವದಾಭಿರಾಮ ಕೇಳು ವೇಮ.

ಅರಿವೇ ಗುರು. ವಾಕ್ಕಿನಲ್ಲಿ ಗುರು ಇರಬೇಕು. ನುಡಿದರೆ ಮುತ್ತಿನ ಹಾರದಂತಿರಬೇಕು. ಮಾತು ಮಾಣಿಕ್ಯವಾಗಬೇಕು. ಅಂದರೆ ಮಾತು ಅಂಧಕಾರ ನಿವಾರಕವಾಗಿರಬೇಕು. ವಾಕ್ಪತ್ವವು ಗುರುವು. ಮಾತುಗಾರಿಕೆಯು ಒಂದು ಕುಶಲ ಕಲೆ. ವಾಕ್ಪತ್ವ ಎಂದರೆ ಮಾತುಗಾರಿಕೆಯಲ್ಲಿ ಅರಿವು ತುಂಬಿರಬೇಕು. ಕತ್ತಲಲ್ಲಿ ಅಂದರೆ ಅಜ್ಞಾನದ ಅಂಧಕಾರದಲ್ಲಿ ಬಾಳು ನಡೆಸುವವನಿಗೆ ಅಂಧಕಾರ ನಿವಾರಕನಾದ ಗುರುವು ಸಿಕ್ಕೇ ಸಿಗುವನು. ಖಿಲ ಎಂದರೆ ಬರಿದಾದದ್ದು ; ವ್ಯರ್ಥವಾದದ್ದು. ಅಖಿಲ ಎಂದರೆ ಪೂರ್ಣವಾದದ್ದು. ಸಾರ್ಥಕವಾದದ್ದು. ಅಖಿಲವೆಲ್ಲಕ್ಕೂ ಗುರುವು ಆಧಾರವಾಗಿ ಇರುತ್ತಾನೆ.

ಆ. ವಕ್ಷದೊಳು ಗುರುವ ವೀಕ್ಷಿಸಿ ಸರಿಯಾಗಿ,
ರಕ್ಷಕನವನೆನುವುದೆ ರಾಜ ಮಾರ್ಗ.
ಅಕ್ಷಮಾಲ ಜಪವು ಅವನಿಗಳ್ಳರ ಪರಿ.
ವಿಶ್ವದಾಭಿರಾಮ ಕೇಳು ವೇಮ.

ಗುರುವು ಎಲ್ಲಿದ್ದಾನೆ ? ದಯೆ, ಕರುಣೆ, ಕೃಪೆಗಳ ಸೆಲೆಯೇ ಗುರು. ಗುರುವನ್ನು ವಕ್ಷದೊಳು ಅಂದರೆ ಎದೆಯಲ್ಲಿ ಅರ್ಥಾತ್ ಹೃದಯದಲ್ಲಿ ಸರಿಯಾಗಿ ವೀಕ್ಷಿಸಬೇಕು. ಅವನೇ ತನ್ನ ರಕ್ಷಕನೆಂದು ಭಾವಿಸುವುದೇ ರಾಜಮಾರ್ಗ. ನೇರ ಹಾದಿ. ಹೀಗೆ ಮಾಡದೆ ಕೇವಲ ವೈಖರಿಯಿಂದಾಗಲಿ, ಉಪಾಂಶದಿಂದಾಗಲಿ, ಅಕ್ಷರಮಾಲೆ ಅಂದರೆ ಜಪಮಣಿ ಎಣಿಸುತ್ತ ಕಾಲ ತಳ್ಳಿದರೆ ಅವರು ಭೂಮಿಯಲ್ಲಿ ಕಳ್ಳರಂತೆ ಉಳಿಯುತ್ತಾರೆ. ಏಕೆಂದರೆ, ಮುಕ್ತಿ ಪಡೆಯಲು ಮನದಾಚೆಗೆ ಹೋಗುವ ಬದಲು, ಮನಸ್ಸಿಗೇ ಅಂಟಿಕೊಂಡು ಮಂತ್ರ ಜಪವನ್ನು, ಅಕ್ಷರಮಾಲೆಯನ್ನು, ಎಣಿಸುವ ಮೂಲಕ ಮಾಡುತ್ತಾರೆ.

ಆ. ನಿನ ನೀನರಿವುದಕಾಗಿಯೆ,
ಮನದಲಿ ಸಂಕಲ್ಪಗಳನು ಮಾಣಲು ಬೇಕೈ.
ಅನುಮಾನ ರಹಿತವಹ ಗುರಿ,
ವಿನಯವ ಕೂಡಿ, ಗುರು ಸೇರಿ, ಹುಡುಕೆಲೊ, ವೇಮಾ.

ನೀನು ಯಾರು ? ನೀನು ಎಲ್ಲಿಂದ ಬಂದಿರುವಿ ? ನೀನು ಜೀವನೋ ಇಲ್ಲವೆ ಚೈತನ್ಯವೋ ? ನೀನು ಅನಾತ್ಮನೋ ಇಲ್ಲವೆ ಆತ್ಮಸ್ವರೂಪನೋ ? ಎಂದು ವಿವೇಚಿಸಿ, ನಿನ್ನನ್ನು ನೀನು ಅರಿಯುವುದಕ್ಕಾಗಿಯೇ, ಮನದಲ್ಲಿ ಸಂಕಲ್ಪ-ವಿಕಲ್ಪಗಳನ್ನು ಮಾಣಬೇಕು.

ಅಂದರೆ ತ್ಯಜಿಸಬೇಕು. ಸಾಧನೆಯ ಗುರಿಯ ಬಗೆಗೆ ಅನುಮಾನವಿರಕೂಡದು. ಹೀಗಿದ್ದು ಅತಿ ವಿನಯದಿಂದ ಗುರುವನ್ನು ಸೇರಿ, ಗುರಿಯನ್ನು ಅಂದರೆ ಆತ್ಮಸ್ವರೂಪವನ್ನು ಹುಡುಕಬೇಕು.

ಆ. ಗುರುವು ಶಿಷ್ಯರೆನಲು ಕೊನೆಯ ಮೊದಲು ಎಂತು ?
ಗುರುವು ಶಿಷ್ಯರೆಂಬ ಗುರುತು ಎಂತು ?
ಗುರುವಿಗಿಪ್ಪ ತಕ್ಕ ಗೌರವವಿರದಿರಲು.
ವಿಶ್ವದಾಭಿರಾಮ ಕೇಳು ವೇಮ.

ಗುರುವು ಅಂಧಕಾರ ನಿವಾರಕನು. ಅವನಿಗೆ ಹಿರಿಮೆ ಉಂಟು ; ಘನತೆ ಉಂಟು. ಅದು ಗುರುತ್ವ, ಗೌರವ. ಗುರುವಿಗಿರಬೇಕಾದ ಗೌರವವೇ ಇಲ್ಲದಿದ್ದರೆ, ಯಾರನ್ನು ಗುರುವೆನ್ನಬೇಕು ? ಯಾರನ್ನು ಶಿಷ್ಯ ಎನ್ನಬೇಕು ? ಗುರುತ್ವಕ್ಕೆ ಯಾವ ನಿಲುಮೆಯು ಆದಿ ? ಯಾವುದು ಅಂತ್ಯ ? ಶಿಷ್ಯನ ಆದಿಯಾವುದು ? ಶಿಷ್ಯತ್ವದ ಅಂತ್ಯವಾವುದು ? ಇವನು ಗುರು ; ಇವನು ಶಿಷ್ಯ ಎಂದು ಗುರುತು ಹಿಡಿಯುವುದು ಹೇಗೆ ? ಆದ್ದರಿಂದ ಗುರವಾದವನು ಗುರುತ್ವಕ್ಕೆ ತಕ್ಕ ಘನತೆ-ಗೌರವಗಳನ್ನು ಕಾಪಾಡಿಕೊಳ್ಳಬೇಕು.

ಆ. ಊರು ಕಾಡು ತಿರುಗಿ, ಇರುವುದನು ಕಾಣದೆ,
ಹೋಗಿ ಗುರು ಕಾಣದೆ, ಹೊಂದಿಕೊಳದೆ,
ಗೊಂದಲವನು ಕಾಣು, ಗಡಬಡಿಸಲೇಕೆ ?
ವಿಶ್ವದಾಭಿರಾಮ ಕೇಳು ವೇಮ.

ಒಬ್ಬನು ಮಾರ್ಗದರ್ಶಕ ಗುರುವನ್ನು ಹುಡುಕುತ್ತ, ಊರೂರು ಅಲೆಯಬಹುದು. ಕಾಡು ಮೇಡುಗಳಲ್ಲಿ ತಿರುಗಬಹುದು. ಹೀಗೆ ಇರುವ ವಾಸ್ತವವನ್ನು ಕಂಡು ಅರಿತುಕೊಳ್ಳದೆ, ಜೀವನದೊಂದಿಗೆ ಹೊಂದಿಕೊಳ್ಳದೆ, ಹೋರಾಡುತ್ತಾನೆ. ಇತ್ತ ಗುರುವನ್ನು ಕಾಣುವದಿಲ್ಲ. ಕೊನೆಗೆ ಆಗುವ ಪರಿಣಾಮವೇನು ? ಬಾಳಿನ ಪರಿಸರವು ಗೊಂದಲಮಯವಾಗುತ್ತದೆ. ಹಾಗಾಗಿ, ಏನಾಯಿತಲ್ಲ ? ಎಂದು ಗಡಿಬಿಡಿಯಾಗುತ್ತದೆ.

ಆ. ಗುಹೆಯ ಒಳಗೆ ಸೇರಿ, ಗುರುವನರಸುವಾಗ,
ಕ್ರೂರ ಮೃಗವದೊಂದು ಕೊಸರಿ ಬರಲು,
ಮುಕ್ತಿ ದಾರಿ ತಾನೆ ಮುಂದಾಗಿ ತೋರಿತು.
ವಿಶ್ವದಾಭಿರಾಮ ಕೇಳು ವೇಮ.

ಗುರುವನ್ನು ಅರಸುತ್ತ ಕಾಡು ಮೇಡು ತಿರುಗಬೇಕಿಲ್ಲ. ಇರುವಲ್ಲಿಯೇ ಶಾಂತಿ ಸಮಾಧಾನದಿಂದಿದ್ದು ಸೇವಾಭಾವ ಬೆಳೆಸಿಕೊಳ್ಳಬೇಕು. ಹೀಗೆ ಮಾಡದೆ, ಗುರುವನ್ನು ಅರಸಿಯೇ ಮುಕ್ತಮಾರ್ಗವನ್ನು ಕಂಡುಕೊಳ್ಳುತ್ತೇನೆಂಬ ಹಠದಿಂದ ಗಿರಿ-ಗುಹೆಗಳನ್ನು ಸೇರಿ, ಗುರುವನ್ನು ಅರಸುವಾಗ, ಗುಹೆಗಳಲ್ಲಿ ವಾಸಿಸಲು ಬರುವ ಕಾಡುಮೃಗವೊಂದು ಕೊಸರಿ ಮೈಮೇಲೆ ಬಿದ್ದು, ಕೊಂದು ಹಾಕುತ್ತದೆ. ಮುಕ್ತಿಗಾಗಿ ಹಪಾಪಿಸುವ ಬಡ

ಮಾನವನು ಗುರುವಿನಿಂದ ತಿಳಿದು ದೇಹದಿಂದ ಆತ್ಮವು ಮುಕ್ತವಾಗುವ ಹಾದಿಯನ್ನು ಕಾಣದೆ, ಕ್ರೂರ ಮೃಗದಿಂದ, ದೇಹದಿಂದ ಜೀವವು ಮುಕ್ತವಾಗುವ ಹಾದಿ ಕಾಣುತ್ತಾನೆ.

ಗೀ. ಊರ್ಜಿತಾನಂದ ಪರಿಪೂರ್ಣ ಯುಕ್ತಿಯಲ್ಲಿ,
ಸ್ವಾರ್ಜಿತವಾದ ಗುರುಭಕ್ತಿ ಸಂಪಾದಿಸಿ,
ದುರ್ಜಯದಲ್ಲಿ ತೊಲಗಿಸುತ್ತ ದೂರಗೊಳಿಸೆ,
ಕರ್ಜವಹ ಮುಕ್ತಿ ಲಭಿಸುವುದು, ಕಾಣು ವೇಮ.

ಊರ್ಜಿತವಾದ ಅಂದರೆ ಘನತರ ಆನಂದಮಯವಾದ ಪರಿಪೂರ್ಣ ಯುಕ್ತಿಯಲ್ಲಿ ಅಂದರೆ ಹೊಂದಾಣಿಕೆಯಲ್ಲಿ, ಸ್ವಾರ್ಜಿತವಾದ ಅಂದರೆ ತಾನೇ ಬೇಡಿಕೊಂಡ ಗುರುಭಕ್ತಿಯನ್ನು ಸಂಪಾದಿಸಬೇಕು. ಯಾವುದನ್ನು ಜಯಿಸಲು ಅಸಾಧ್ಯವೆನಿಸುವುದೋ, ಅಂಥ ಅಹಮನ್ನು ತೊಲಗಿಸಿ ದೂರಗೊಳಿಸಬೇಕು. ಆಗ ಕರ್ಜವಹ, ಅಂದರೆ ನಮ್ಮ ಕಾರ್ಯದ ಗುರಿಯಾದ ಮುಕ್ತಿಯು ಲಭಿಸುತ್ತದೆ. ಗುರುಭಕ್ತಿ ಅರ್ಥಾತ್ ಗುರುಸೇವೆಯ ಮಹಿಮೆಯಿಂದ ಇದೆಲ್ಲವೂ ಸಾಧ್ಯವಾಗುತ್ತದೆ.

ಗೀ. ಗುಹೆಗಳ ಹದಿಸಾಸಿರ ಹೊಗಲು ಗುಣವಳಿಯದು.
ನಿಯತ ಗುರುಭಕ್ತಿಯು ಬೇಕು ; ನಿಖಿಲ ಕಲಿತು,
ಮಹಿಯಲಿ ಪರತತ್ತ್ವ ಭಾವವು ಮಧುರವಿಹುದು.
ಅದನು ಸಾಧಿಸುವುದಕೆ, ಹೆಣಗು ಅರಿತು ವೇಮ.

ಗುಣ ಎಂದರೆ ಹಗ್ಗ. ಆಧ್ಯಾತ್ಮಿಕ ಭಾಷೆಯಲ್ಲಿ ನಮ್ಮನ್ನು ಅಜ್ಞಾನ ಸಂಗದಿಂದ ಬಂಧಿಸುವ ಶಕ್ತಿಗೆ ತಾಮಸ ಗುಣ ಎನ್ನುತ್ತಾರೆ. ಕರ್ಮ ಸಂಗದಿಂದ ಬಂಧಿಸುವ ಶಕ್ತಿಗೆ ರಾಜಸ ಗುಣವೆನ್ನುತ್ತಾರೆ. ಇನ್ನು ಜ್ಞಾನಸಂಗದಿಂದ ಬಂಧಿಸುವ ಶಕ್ತಿಗೆ ಸತ್ತ್ವಗುಣ-ವೆನ್ನುತ್ತಾರೆ. ಹತ್ತಾರು ಸಾವಿರ ಗುಹೆಗಳನ್ನು ಹೊಕ್ಕು ತಪಸ್ಸು ಮಾಡಿದರೂ ಗುಣಗಳು ಅಳಿಯವು. ಹಾಗಾದರೆ ಗುಣಗಳು ಅಳಿದು ಗುಣಾತೀತನಾಗಲು ಉಪಾಯವೇನು? ಸಾಧನ ಪಥವಾವುದು ? ಅದಕ್ಕೆ ನಿಯತ ಗುರುಭಕ್ತಿಯು ಬೇಕು. ಅಂದರೆ ಆಚಾರಶೀಲ ಗುರುಸೇವೆಯು ಬೇಕು. ಎಲ್ಲವನ್ನೂ ಕಲಿಯಬೇಕು. ಆಗ ಇಹದಲ್ಲಿ ಇರುವಾಗಲೇ ಪರತತ್ತ್ವ ಭಾವವು ಮಧುರವಾಗಿ ಇರುವುದು. ಪ್ರಿಯವಾಗಿರುವುದು. ಅದನ್ನು ಸಾಧಿಸುವುದಕ್ಕೆ ಅರಿತು ಹೆಣಗಬೇಕು.

ಕರ್ಮಯೋಗ

ವೇಮನರು ರಾಜವಂಶದಲ್ಲಿ ಜನಿಸಿದರೂ ತಮ್ಮ ಪೂರ್ವ ಜನ್ಮದ ಸಂಸ್ಕಾರ ಬಲದಿಂದ ಚಿಕ್ಕಂದಿನಿಂದಲೂ ವಿವಿಧ ಪ್ರಕಾರದ ಯೋಗ ಸಾಧನೆಗಳನ್ನು ಅಭ್ಯಸಿಸುತ್ತ ಬಂದಿದ್ದಾರೆ. ಇವ್ವಟೂರಿ ಸೋಮಶೇಖರ ಗುರುಗಳಲ್ಲಿ ಪ್ರಾರಂಭಿಕ ಅಷ್ಟಾಂಗಿಕ ಯೋಗ ಸಾಧನೆಯನ್ನು ಅಭ್ಯಸಿಸಿ, ಮುಂದೆ ತಾರುಣ್ಯಾವಸ್ಥೆಯಲ್ಲಿ ರಸ ಸಿದ್ಧರ ಸಹವಾಸದಲ್ಲಿ ಹಠಯೋಗದ ಅಭ್ಯಾಸ ಮಾಡಿದರು. ಮುಂದೆ ಬಾವಾ ಬೈರಾಗಿಗಳ ಮಾರ್ಗದರ್ಶನದಲ್ಲಿ ಲಯಯೋಗ, ತಾರಕಯೋಗಗಳನ್ನು ಅಭ್ಯಸಿಸಿ ಪರಿಣಿತರಾದರು. ಕೊನೆಗೆ ಮೋಕ್ಷ ಗುರುಗಳಾದ ಲಂಬಿಕಾ ಯೋಗಿಗಳಲ್ಲಿ ರಾಜಯೋಗ ಮತ್ತು ಭಕ್ತಿಯೋಗಗಳ ದೀಕ್ಷೆ ಪಡೆದು ಅವರ ಪರೋಕ್ಷ ನೆರವಿನಿಂದ ಅವುಗಳಲ್ಲಿ ಪಾರಂಗತರಾದರು.

ಮಹಾಯೋಗಿ ವೇಮನರ ಪದ್ಯ ಸಾಹಿತ್ಯದಲ್ಲಿ ಅಡಕವಾದ ಧರ್ಮಾರ್ಥ ಕಾಮಗಳೆಂಬ ಪುರುಷಾರ್ಥಗಳಲ್ಲಿ ತ್ರಿವರ್ಗವನ್ನು ಈ ಮುನ್ನ ನಾವು ಬರೆದ ಗ್ರಂಥಗಳಲ್ಲಿ ಚರ್ಚಿಸಿದ್ದೇವೆ. ಅವುಗಳನ್ನು ನೀತಿ ಪದ್ಯಗಳೆಂದೂ ಕರೆಯಬಹುದು. ಅವು ಶಾಸ್ತ್ರ, ಸ್ಮೃತಿ ಶ್ಲೋಕಗಳಿದ್ದಂತೆ. ಇನ್ನು ಚತುರ್ಥ ಪುರುಷಾರ್ಥವಾದ ಮೋಕ್ಷ ಅಪವರ್ಗವನ್ನು ಇನ್ನು ವಿವೇಚಿಸಬೇಕಾಗಿದೆ. ಈ ಅಪವರ್ಗದಲ್ಲಿ ಯೋಗವೆಂದರೆ, 'ಜೀವಾತ್ಮ ಪರಮಾತ್ಮ ಸಂಯೋಗೋ ಯೋಗಃ ಇತ್ಯುಚ್ಯತೇ'' ಅಂದರೆ ಜೀವಾತ್ಮ ಪರಮಾತ್ಮರ ಸಂಯೋಗವೇ ಯೋಗವೆನಿಸುತ್ತದೆ. ಸಾಮಾನ್ಯವಾಗಿ ಚತುರ್ವಿಧ ಯೋಗಗಳು ಜನಪ್ರಿಯವಾಗಿವೆ. ಕರ್ಮಯೋಗ, ಭಕ್ತಿಯೋಗ, ಧ್ಯಾನಯೋಗ ಮತ್ತು ಜ್ಞಾನಯೋಗ. ನಾವಿಲ್ಲಿ ವಿವರಿಸುವ ಯೋಗಗಳು, ಈ ಪ್ರಕಾರ ಇವೆ. ಕರ್ಮಯೋಗ, ಸಾಂಖ್ಯಯೋಗ, ಭಕ್ತಿಯೋಗ, ಶಿವಯೋಗ (ಜ್ಞಾನಯೋಗ) ಮತ್ತು ರಾಜಯೋಗದ ಅಂಗವಾಗಿ ಅಷ್ಟಾಂಗಯೋಗ ತಾರಕಯೋಗ ಮತ್ತು ನಾದಯೋಗ, ಅಮನಸ್ಕಯೋಗಗಳನ್ನು ಕುರಿತು ವಿವೇಚಿಸಿದ್ದೇವೆ. ಇವುಗಳಲ್ಲಿ ಶಿವ (ಜ್ಞಾನ) ಯೋಗ ಮತ್ತು ರಾಜಯೋಗಗಳನ್ನು ಸಂಪುಟ-II ರಲ್ಲಿ ವಿವೇಚಿಸಿದ್ದೇವೆ.

ಸಂಸ್ಕೃತದ 'ಕೃ' ಧಾತುವಿನಿಂದ ಕರ್ಮ ಶಬ್ದವು ವ್ಯುತ್ಪತ್ತಿಯಾಗಿದೆ. ಕೃ ಎಂದರೆ ಮಾಡು. ತಾಂತ್ರಿಕವಾಗಿ, ಈ ಶಬ್ದವು ಕರ್ಮಗಳ ಫಲ ಎಂದೂ ಅರ್ಥವೀಯುತ್ತದೆ. ಆಧಿಭೌತಿಕವಾಗಿ, ಪೂರ್ವಜನ್ಮದಲ್ಲಿ ಮಾಡಿದ ಕರ್ಮಗಳ ಫಲವೆಂದೂ 'ಕರ್ಮ' ಶಬ್ದವನ್ನು ಬಳಸುತ್ತಾರೆ. 'ಎಲ್ಲಾ ನಮ್ಮ ಕರ್ಮ !'' ಎನ್ನುತ್ತಾರೆ. ಆದರೆ ಕರ್ಮಯೋಗದ ಚರ್ಚೆಯಲ್ಲಿ ಕರ್ಮ ಎಂದರೆ ಕ್ರಿಯೆ ಎಂದಿಷ್ಟೇ.

ಮಾನವನ ಗುರಿ ಸುಖ ಪಡುವುದು.

ಆ. ಹಾಯಾಗಿರೆ ಇಹದಿ ಹೇಮಕಾರಕ ವಿದ್ಯೆ.
ಪರದಲ್ಲಿ ಸುಖಿಸಲು ಬ್ರಹ್ಮ ವಿದ್ಯೆ.
ಅನ್ಯ ವಿದ್ಯೆಯೆಲ್ಲ ಅಂತೆ ನಿಷ್ಫಲವದು.
ವಿಶ್ವದಾಭಿರಾಮ ಕೇಳು ವೇಮ.

ಮಾನವನು ತನ್ನ ಐಹಿಕ ಸುಖಕ್ಕಾಗಿ ಹೇಮಕಾರಕ ವಿದ್ಯೆಗೆ ಮೊರೆ ಹೋಗುತ್ತಾನೆ. ಬಂಗಾರವನ್ನು ಸಿದ್ಧಪಡಿಸಬಹುದು. ಅರ್ಜಿಸಬಹುದು. ಪರದಲ್ಲಿ ಸುಖಪಡಲು ಬ್ರಹ್ಮವಿದ್ಯೆಯು ಬೇಕು. ಇತರ ವಿದ್ಯೆಗಳೆಲ್ಲ ಪ್ರಯೋಜನಹೀನವಷ್ಟೇ.

ಮಾನವನು ಸುಖಿಬಡಲು ಹಪಾಪಿಸುತ್ತಾನೆ. 'ಅನುಕೂಲ ವೇದನೀಯಂ ಸುಖಂ'. ಅನುಕೂಲಕರ ವೇದನೆಗಳಿಂದ ಸುಖ ದೊರೆಯುತ್ತದೆ. ಆದರೆ ಮಾನವನ ಸುಖದ ಆಕಾಂಕ್ಷೆ ಅಮಿತವಾದುದು ; ಅನಂತವಾದುದು.

ಕಂ. ಇದು ನನಗೆ ಸಾಲದೆನ್ನುತ
ಅದ ತಾನರಿಯುತ ಎಂದೆಂದು ಮಮತೆ ಮತಿಯಂ,
ಬದಲಿಸದದ ಬಿಡದಿರುವುದು,
ಅದುವೇ ಸಂಸಾರ ಬೀಜ, ಮನುಜಗೆ, ವೇಮಾ.

ತನಗೆ ಪ್ರಾಪ್ತವಾದಷ್ಟು ಸುಖಭೋಗ ಸಾಲದೆನ್ನುತ್ತ ಅದನ್ನು ತಾನು ಅರಿತು, ಅದನ್ನು ಕುರಿತು ತನ್ನ ಮಮತೆಯನ್ನು ಬದಲಿಸದಿರುವುದೇ ಸಂಸಾರ ಬೀಜವಾಗಿದೆ. ಇದುವೇ ಸುಖ ದುಃಖಗಳಿಗೆ ಕಾರಣವಾಗಿದೆ.

ಆ. ಪುರುಷಗೆಂಥ ಗತಿಯು ಪುಟ್ಟಿದಾಗಿನಿಂದ,
ಪಾಪ ಚಿಂತೆ ಗೆಯ್ವ ಪಾಮರನಲ !
ಮಸ್ತ ಕುರುಡು ನಾಯಿ ಮಾಂಸಕೆಳಸುವಂತೆ.
ವಿಶ್ವದಾಭಿರಾಮ ಕೇಳು ವೇಮ.

ಹುಟ್ಟಿದಾಗಿನಿಂದಲೂ ಪುರುಷನಿಗೆ ಎಂಥ ಗತಿಯು ಬಂದಿದೆ ನೋಡಿ. ಅವನು ತನ್ನ ಸುಖಿಕ್ಕಾಗಿ ಪಾಪ ಚಿಂತೆ ಮಾಡಲೂ ಹೇಸನು. ಅದರ ಫಲವು ಅವನಿಗೆ ಕ್ಲೇಶ ತಂದೊಡ್ಡುವುದನ್ನು ಅವನು ಅರಿಯನು. ಮದವೇರಿದ, ಅದೂ ಕಣ್ಣು ಕಾಣದ ನಾಯಿಯು, ಮಾಂಸವನ್ನು ಪಡೆಯಲು ಎಳಸಿದಂತೆ. ಅದಕ್ಕೆ ಮಾಂಸ ಸಿಕ್ಕದು. ಆ ಮನದ ಕ್ಲೇಶ ಕಡಿಮೆಯಾಗದು.

ಯಾವಾಗ ಮಾನವನಿಗೆ ಸುಖದ ಅನುಭವವು ಸೀಮಿತವೆಂದು ಖಚಿತವಾಗುವುದೋ ಮತ್ತು ದುಃಖದ ಅನುಭವದಿಂದ ಪಾಠ ಸಿಗುವುದೋ, ಆಗ ಅವನು ಸುಖ-ದುಃಖಗಳ ಮಾರ್ಗ ತೊರೆದು ಜ್ಞಾನ ಪಡೆಯಲು ಮುಂದಾಗುತ್ತಾನೆ.

ಆ. ಕಲುಷವೆಲ್ಲ ತಿಳಿಯೆ ತಲೆ ತಗ್ಗಲು ಮೂಲ
ಅರಿತೊಡೆಲ್ಲ ತತ್ತ್ವವಾತ್ಮ ಹುಟ್ಟು.
ತಿಳಿದುಕೊಂಡು ಮತ್ತೆ ಧೀರನಾಗಿ ಸಾಗು.
ವಿಶ್ವದಾಭಿರಾಮ ಕೇಳು ವೇಮ.

ಮಾನವನು ತನ್ನ ದುಃಖದ ಅನುಭವದಿಂದ ತನ್ನಲ್ಲಿ ಸೇರಿದ ಕಲುಷಗಳನ್ನು ಅರಿಯುತ್ತಾನೆ. ಆಗ ಅವನಿಗೆ ತನ್ನ ತಪ್ಪಿನ ಅರಿವಾಗಿ ತಲೆ ತಗ್ಗಿಸುವಂತಾಗುತ್ತಾನೆ. ಇದರಿಂದ ಅವನು ಪಾಠ ಕಲಿತು, ಸುಖ-ದುಃಖಗಳ ಆಚೆ ಹೋಗುವುದು ಹೇಗೆ ? ಎಂದು ವಿಚಾರಿಸುತ್ತಾನೆ. ಅರಿವು ಸುಃಖ-ದುಃಖಗಳಿಗೆ ಸಾಕ್ಷಿ ಆಗಿರುತ್ತದೆ. ಅವುಗಳಲ್ಲಿ ಭಾಗಿಯಾಗುವುದಿಲ್ಲ. ಎಂದು

ಅರಿಯುತ್ತಾನೆ. ಅದುವೇ ಆತ್ಮದ ಹುಟ್ಟು. ಇದನ್ನು ತಿಳಿದುಕೊಂಡು ಪ್ರಪಂಚದ ಬವಣೆಗಳಿಗೆ ಭಯ ಪಡದೆ ಧೀರನಾಗಿ ಬಾಳುತ್ತಾನೆ.

ಆ. ಸುಖಿಗಳೆಲ್ಲ ತಿಳಿದು ಸಲೆ ಕಾಣಲು ದುಃಖಿ,
ಪಾಪ ಪೂರ್ವಕವಿದೆ ಪುಣ್ಯವೆಲ್ಲ.
ಕಳ್ಳ ಕೋರಿಕೆ ವಿಧ ಕೊರತೆಗಳಿರುವವಲ !
ವಿಶ್ವದಾಭಿರಾಮ ಕೇಳು ವೇಮ.

'ಅನುಕೂಲ ವೇದನೀಯಂ ಸುಖಂ'. ಅಂದರೆ ನಮಗೆ ಅನುಕೂಲ ವೇದನೆಯನ್ನು ನೀಡುವುದು ಸುಖ. 'ಪ್ರತಿಕೂಲ ವೇದನೀಯಂ ದುಃಖ'. ಅಂದರೆ ಯಾವುದು ನಮ್ಮ ಇಚ್ಛೆಗೆ ಪ್ರತಿಕೂಲ ವೇದನೆಯನ್ನು ಉಂಟು ಮಾಡುವುದೋ ಅದು ದುಃಖ. ಈ ವೇದನೆಯು ನಮ್ಮ ಇಚ್ಛೆಗೆ ಸಂಬಂಧಿಸಿದೆ. ಏನೂ ಇಲ್ಲದಾಗ ಏನನ್ನಾದರೂ ಪಡೆಯಬೇಕೆನ್ನಿಸುತ್ತದೆ. ಅದು ದೊರೆತಾಗ ಸುಖವೆನಿಸುತ್ತದೆ. ಮಾನವನ ಆಸೆಗೆ ಮಿತಿಯಿಲ್ಲ. ಇನ್ನಷ್ಟು ಪಡೆಯುವ ಇಚ್ಛೆಯಿಂದ ಮೊದಲು ಸುಖವಾಗಿತ್ತು. ಅದೇ ಪ್ರವೃತ್ತಿಯಿಂದ ಈಗ ದುಃಖವಾಗುತ್ತದೆ. ಆದ್ದರಿಂದ ಎಲ್ಲ ಸುಖಿಗಳನ್ನು ಸರಿಯಾಗಿ ಕಂಡರೆ, ಅವೆಲ್ಲ ದುಃಖಿವೆನಿಸುತ್ತವೆ. ಅದೇ ರೀತಿ, ಒಬ್ಬನು ಪರಪೀಡಿಕನಾಗಿ ಪಾಪ ಮಾಡುತ್ತಾನೆ. ಇದರಿಂದ ತನ್ನ ಮನಸ್ಸಾಸ್ಥ್ಯವನ್ನೂ ಕೆಡಿಸಿಕೊಳ್ಳುತ್ತಾನೆ. ಆ ಬಳಿಕ ಬುದ್ಧಿಗಲಿತು ಪರೋಪಕಾರದ ಕಾಯಕಕ್ಕಿಳಿಯುತ್ತಾನೆ. ಪುಣ್ಯ ಮಾಡಲು ಉದ್ಯುಕ್ತನಾಗುತ್ತಾನೆ. ಆದ್ದರಿಂದ ಪುಣ್ಯವೆಲ್ಲವೂ ಪಾಪ ಪೂರ್ವಕವಿದೆ. ನಮಗೆ ಕೊರತೆ ಎನಿಸುವುದೇಕೆ ? ಇದ್ದುದರಲ್ಲಿ ಸಂತೃಪ್ತಿ ಏಕಿಲ್ಲ ? ಎಂದು ವಿಚಾರಿಸಿದರೆ, ನಮ್ಮೊಳಗೆ ಕಳ್ಳ ಕೋರಿಕೆಗಳಿವೆ. ಅದರಿಂದಾಗಿ ಕೊರತೆಯ ಭಾವನೆ ಮೂಡುತ್ತದೆ ಎಂದು ತಿಳಿಯುತ್ತದೆ.

ಆ. ಸುಖಾಸುಖಿಗಳಲಿ ತಾ ಸಗುಣನಾಗಿಯುಂಟು,
ಪ್ರಕೃತಿ ಲಗ್ನವಾಗಿ ಪರಮ ಕೆಡುವ,
ವಿಧಗಳ ಹುಟ್ಟಿಸುವ ವಿಧಿಯ ತಾನು ಕಾಣ.
ವಿಶ್ವದಾಭಿರಾಮ ಕೇಳು ವೇಮ.

ಎಲ್ಲಿಯವರೆಗೆ ಮಾನವನು ಪ್ರಕೃತಿಯ ಗುಣಗಳ ಪ್ರಭಾವದಲ್ಲಿ ಅಂದರೆ ಸಗುಣನಾಗಿ ಇರುವನೋ, ಅಲ್ಲಿಯವರೆಗೆ ಅವನಿಗೆ ಸುಖವೂ ಉಂಟು, ಜೊತೆಗೆ ಅಸುಖವೂ ಉಂಟು. ಏಕೆಂದರೆ ಆ ಅವಸ್ಥೆಯಲ್ಲಿ ಪರಮನು ಪ್ರಕೃತಿಯೊಂದಿಗೆ ಅಂದರೆ ತ್ರಿಗುಣಗಳೊಂದಿಗೆ ಲಗ್ನವಾಗಿ ಇರುವನು. ಹೀಗಾಗಿ ವಿಧಿಯು ಗುಣಾನುಗತವಾಗಿ ವಿಧವಿಧವಾಗಿ ವೇದನೆಗಳನ್ನು ಹುಟ್ಟಿಸುತ್ತದೆ. ಆದರೆ ಮಾನವನು ಇದನ್ನೆಲ್ಲ ಕಾಣನು, ಅರಿಯನು.

ಆದ್ದರಿಂದ ಮಾನವನು ಮಾಡಬೇಕಾದ ಕರ್ತವ್ಯ ಹೀಗಿದೆ.

ಆ. ಸಿಡಿಲನು ಅಂಗೈಲಿ ಹಿಡಿದುಕೊಂಡು ಒಳಗೆ
ಕಲ್ಮಷಗಳನೆಲ್ಲ ಕಡೆಗೆ ಹಾಕಿ,
ಉಳಿದ ಕೈಗಳಿಂದ ಕಲಿ ಜನರ ಸೇವಿಸಿ,
ಕರ್ಮ ಕರ್ತನನರಿ ; ಅಲ್ಲವೆ ವೇಮ ?

ಎಲ್ಲ ಕಲ್ಮಷಗಳನ್ನೂ ಸುಟ್ಟು ಹಾಕುವ ಜ್ಞಾನವೆಂಬ ಸಿಡಿಲನ್ನು ಒಂದು ಕೈಯಲ್ಲಿ ಹಿಡಿದು ಕೊಂಡು, ಒಳಗಿನ ಕಲ್ಮಷಗಳನ್ನೆಲ್ಲ ಹೊರಹಾಕಿ ಸಿಡಿಲಿಗೆ ಆಹುತಿ ಮಾಡು. ಉಳಿದ ಕೈಯಿಂದ ಅಂದರೆ ಶೂದ್ರೋಚಿತ ಭಾವನೆಯಿಂದ ಕಲಿಯುಗದ ಜನತೆಯನ್ನು ಸೇವಿಸು. ಹೀಗೆ ಸೇವಾ ಕಾರ್ಯದಲ್ಲಿ ನಿರತನಾಗಿ, ಕರ್ಮಕ್ಕೆ ಕರ್ತನಾರು ? ಎಂದು ಯೋಚಿಸಿ, 'ಅಹಂ ಕರ್ತಾ ಫಲ ಭೋಕ್ತಾ' ಅಂದರೆ ಅಹಂ ಮಾಡುತ್ತದೆ. ಅಹಮೇ ಫಲ ಭೋಗಿಸುತ್ತದೆ ಎಂದು ತಿಳಿ.

ಆ. ಸೋಸಿ ಸುಖದುಃಖವ, ಸೇರಿ ಒಳಗೆ, ಮೀರಿ
ತಾನು ತಾನಹ ತತ್ತ್ವ ತಾಕಿ, ತಾಕಿ,
ಇಂತಿರದೆ ಇದ್ದೊಡೆ ಎಂತು ಕಡೆಗಾಣುವ ?
ವಿಶ್ವದಾಭಿರಾಮ ಕೇಳು ವೇಮ.

ಪ್ರಪಂಚದ ಸುಖ-ದುಃಖಗಳನ್ನು ಸೋಸಿ, ಜೊಳ್ಳನ್ನು ತೆಗೆದು ಹಾಕಿ, ಒಳಗೆ ಸೇರಬೇಕು. ಆಂತರ್ಯದಲ್ಲಿ ಚಿಂತಿಸಬೇಕು. ಕೊನೆಗೆ ಒಳಗಿನ ಮನವನ್ನೂ ಮೀರಿ, ತಾನೇ ತಾನಾಗಿರುವ ಆತ್ಮ ತತ್ತ್ವವನ್ನು ತಾಕಬೇಕು. ನಿರಂತರ ತಾಕಬೇಕು. ಹೀಗೆ ಇರದಿದ್ದರೆ ಅವನು ಸುಖ ದುಃಖಗಳ ಸಾಗರವನ್ನು ಹೇಗೆ ಕಡೆಗಾಣುವನು ?

ಆ. ಕಲಕಿದಂಥ ಮನದಿ ಕುದುರಿದ ಗುಣಗಳನು,
ತೊಡೆದು ಕಡಿದು ಬೇಗ ತವಕ ಹಿಂಗಿ,
ಸತತವಾಗಿ ಬುದ್ಧಿ ಶುದ್ಧವಿಡಲು ಮುಕ್ತಿ.
ವಿಶ್ವದಾಭಿರಾಮ ಕೇಳು ವೇಮ.

ಸುಖ ದುಖಗಳಿಂದ ಮನಸ್ಸು ಕಲಕುತ್ತದೆ. ಇದರಿಂದ ಮನದಲ್ಲಿ ಸತ್ವ, ರಜಸ್ ಮತ್ತು ತಮಸ್ ಗುಣಗಳ ತರಂಗಗಳ ತಾಕಲಾಟವೇಳುತ್ತದೆ. ಈ ಗುಣಗಳನ್ನು ತೊಡೆಯಬೇಕು. ಜ್ಞಾನವೆಂಬ ಕೊಡಲಿಯಿಂದ ಕಡಿದು ಹಾಕಬೇಕು. ಹೀಗೆಲ್ಲ ಮಾಡಿ ಮನದ ತವಕವನ್ನು ಬೇಗ ಹಿಂಗಿಸಬೇಕು. ಆಗ ಮನದ ನಿಶ್ಚಯ ವೃತ್ತಿಯು ಅಂದರೆ ಬುದ್ಧಿಯು ಶುದ್ಧವಾಗುತ್ತದೆ. ಇದು ಸತತವಾಗಿ ನಡೆದರೆ ತೀರಿತು. ಅದೇ ಮುಕ್ತಿ ಎನಿಸುತ್ತದೆ.

ಆ. ಯಜ್ಞ ಕ್ರತುವ ಗೆಯ್ಯೆ ಆಗುತಿರುವುದೇನು ?
ಸಂಜ್ಞ ಮನದಿ ಹೆಣಗೆ, ಸಾಧು ವೃತ್ತಿ.
ಮನಸು ಮಗ್ನತೆಯನು ಹೊಂದೆ ಮನನ ವೃತ್ತಿ.
ವಿಶ್ವದಾಭಿರಾಮ ಕೇಳು ವೇಮ.

ಯಜ್ಞ-ಕ್ರತುಗಳು ಬರೀ ಕಾಮ್ಯಗಳೇ. ಫಲದ ಆಸೆಯನ್ನು ಮುಂದಿಟ್ಟುಕೊಂಡು ನಡೆಸುವ ಕರ್ಮಗಳು. ಅವುಗಳನ್ನು ಎಷ್ಟು ಮಾಡಿದರೇನು ? ಏನಾಗುವುದು ? ಆದರೆ ಪ್ರಜ್ಞಾವಂತ ಮನದಲ್ಲಿ ಫಲಾಸಕ್ತಿಯನ್ನು ತೊರೆದು ಕರ್ಮಾಚರಣೆಯಲ್ಲಿ ತೊಡಗುವುದೇ ಸಾಧು ವೃತ್ತಿಯೆನಿಸುತ್ತದೆ. ಮನಸ್ಸು ನಿಷ್ಕಾಮ ಕರ್ಮದಲ್ಲಿ ಮುಳುಗುವುದೇ (ಮಗ್ನವಾಗುವುದೇ) ಮನನ ವೃತ್ತಿಯಾಗಿದೆ.

ತೇಟ. ಬದ್ಧ ಮುಕ್ತರು ಉಭಯರು ಭದ್ರವಾಗಿ,
ಕೋರ್ಕೆ ಬಾರದ ಮನದಲ್ಲಿ ಕೋರ್ಕೆಯಡಗಿ,
ಮಾಳ್ಪ ಶ್ರಮವೆಲ್ಲ ಬಯಲಲ್ಲಿ ಮುಟ್ಟಿ ಮಿಂಚಿ,
ಇಷ್ಟವದನು ಕೂಡು ನಿನಗೇನು ಬೇಕು ? ವೇಮ.

ಯಾವ ಮನದಲ್ಲಿ ಕೋರಿಕೆಗಳು ಹುಟ್ಟುವುದಿಲ್ಲವೋ, ಅಂಥ ಮನದಲ್ಲಿ ಸುಪ್ತವಾಗಿರುವ ಕೋರಿಕೆಗಳೂ ಅಡಗಿ, ಬದ್ಧರೇ ಇರಲಿ, ಮುಕ್ತರೇ ಇರಲಿ, ಉಭಯತರೂ ಭದ್ರವಾಗಿ ಇರುತ್ತಾರೆ. ಅಲ್ಲಿ ಅವರು ಮಾಡುವ ಎಲ್ಲ ಶ್ರಮವೂ ಅವರನ್ನು ಬಯಲಿಗೆ ತಲುಪಿಸುತ್ತದೆ. ಬಳಿಕ ಅವರು ಅದನ್ನೂ ಮೀರಿ ಇಷ್ಟವನ್ನು ಅಂದರೆ ನಿರ್ಗುಣವನ್ನು ಅರ್ಥಾತ್ ಬಟ್ಟಬಯಲನ್ನು ಸೇರುತ್ತಾರೆ. ಅಯಿತಲ್ಲವೇ ? ನಿನಗೆ ಬೇರಿನ್ನೇನು ಬೇಕು ?

ಮಾನವನ ಸ್ವಭಾವಗಳು ಅವರವರ ಕರ್ಮಗಳನ್ನೇ ಅವಲಂಬಿಸಿರುತ್ತವೆ. ಅವು ಆನುವಂಶಿಕವಾದವುಗಳೇನಲ್ಲ. ಕೃಷ್ಣನ ದೈವೀ ಗುಣಗಳನ್ನು ನೋಡಿ ವಾಸುದೇವನೆಂದು ಸ್ತುತಿಸುವೆವೇ ಹೊರತು, ವಸುದೇವನೆಂಬ ಚಿಕ್ಕ ದೊರೆಯ ಮಗನೆಂದಲ್ಲ.

ಆ. ಓರ್ವ ತಾಯಿಯುದರ ವಸುಧೆಯಲಿ ಹತ್ತು ಜನ,
ಪುತ್ರ ಸಂತತಿಯು ಪುಟ್ಟಿ ಬಳಿಕ,
ಓರ್ವಗೀವ ಬುದ್ಧಿ ಓರ್ವಗೀಯ ಹರನು.
ವಿಶ್ವದಾಭಿರಾಮ ಕೇಳು ವೇಮ.

ಒಬ್ಬಳು ತಾಯಿಯ ಗರ್ಭದಲ್ಲಿಯೇ ಜನಿಸಿದ ಹತ್ತು ಜನ ಪುತ್ರ ಸಂತತಿಯಲ್ಲಿ ಎಲ್ಲರೂ ಒಂದೇ ಮಟ್ಟದ ಅರಿವು ಹೊಂದಿರುವುದಿಲ್ಲ. ಅವರವರ ಪೂರ್ವ ಕರ್ಮಾನುಸಾರ ಹರನು ಒಬ್ಬನಿಗೆ ಬುದ್ಧಿಯನ್ನು ಕೊಡುತ್ತಾನೆ. ಇನ್ನೊಬ್ಬನಿಗೆ ಕೊಡುವದಿಲ್ಲ. ಆನುವಂಶಿಕವಾಗಿ ಬಣ್ಣ, ಕೂದಲು, ರೂಪ ಮುಂತಾದ ಭೌತಿಕ ಲಕ್ಷಣಗಳಲ್ಲಿ ಸಾಮ್ಯವಿರಬಹುದೇ ಹೊರತು, ಅವರ ಗುಣ ಸ್ವಭಾವಗಳು ಅವರ ಸ್ವಂತ ಕರ್ಮಾನುಗುಣವಾಗಿರುತ್ತವೆ.

ಆ. ಉತ್ತಮರ ಉದರದಿ ಉಡಾಫೆ ಜನಿಸಿದೊಡೆ,
ಅವನು ಕೆಡಿಸುತಿಹನು ಅಖಿಲ ವಂಶ.
ಕಬ್ಬು ತೆನೆಯು ಹುಟ್ಟಿ ಕೆಡಿಸದೆ ಸಿಹಿಯೆಲ್ಲ ?
ವಿಶ್ವದಾಭಿರಾಮ ಕೇಳು ವೇಮ.

ತಾಯಿ-ತಂದೆ ಉತ್ತಮರೇ ಆಗಿರಬಹುದು. ಆದರೆ ಮಗನ ಸ್ವಭಾವವು ಉಡಾಳತನದ್ದಾಗಿರಬಹುದು. ಅವನೊಬ್ಬ ಸೋಮಾರಿಯಾಗಿರಬಹುದು. ಆಗ ಅವನು ತಾನು ಹುಟ್ಟಿದ ವಂಶದ ಹೆಸರನ್ನೇ ಕೆಡಿಸುತ್ತಾನೆ. ಕಬ್ಬು ಸಿಹಿಯಾಗುತ್ತದೆ. ಆದರೆ ತೆನೆ ಬಿಟ್ಟ ಮೇಲೆ, ಅದರ ಸಿಹಿಯು ನಾಶವಾಗುತ್ತದೆ. ಅಂತೆಯೇ ಉಡಾಫೆ ಪುತ್ರನ ಜನನದಿಂದ ವಂಶದ ಸತ್ಕೀರ್ತಿ ನಾಶವಾಗುತ್ತದೆ.

ಕೆಲವೊಮ್ಮೆ ತಂದೆ ಭಾಗ್ಯಹೀನನಾಗಿರಬಹುದು. ಬಡವನಾಗಿರಬಹುದು. ಕಷ್ಟಕೋಟಲೆಯಲ್ಲಿ ಬೇಯುತ್ತಿರಬಹುದು. ಆದರೆ ಅವನಿಗೆ ಉತ್ತಮ ಭಾಗ್ಯ ಹೊಂದಿದ

ಪುತ್ರನು ಹುಟ್ಟಲು ಆ ಭಾಗ್ಯವಂತನು ಬಹಳ ಹಣವನ್ನು ಹೊಂದಿ ಪರರಿಗೆ ಉಪಕರಿಸುತ್ತಾನೆ.

ದೇವರಲ್ಲಿ ಶ್ರದ್ಧೆ :

ಗೃಹಸ್ಥನಿಗೆ ದೇವರಲ್ಲಿ ನಂಬುಗೆ ಅವಶ್ಯ. ಅವನಿಗೆ ದೇವರ ಕಲ್ಪನೆ ಹೇಗಿರಬಹುದು?

ಆ. ಬ್ರಹ್ಮ ಘಟವು ದೇಹ, ಪ್ರಾಣವೆನಲು ಗಾಳಿ,
ನೇಸರ ಶಶಿ ವಹ್ನಿ, ನೇತ್ರತ್ರಯವು
ಮತ್ತೆ ಬ್ರಹ್ಮವೆನಲು ಮಹಿಯ ಮೇಲೆ ಇಹುದೆ ?
ವಿಶ್ವದಾಭಿರಾಮ ಕೇಳು ವೇಮ.

ಈ ಬ್ರಾಹ್ಮಂಡವೇ ದೇಹವಾಗಿ, ಬೀಸುವ ಗಾಳಿಯೇ ಪ್ರಾಣವಾಗಿ, ಸೂರ್ಯ, ಚಂದ್ರ ಮತ್ತು ಅಗ್ನಿಗಳೇ ಮೂರು ಕಣ್ಣುಗಳಾಗಿ ಉಳ್ಳ ಸಗುಣ ರೂಪನೇ ಆ ಬ್ರಹ್ಮನಾಗಿದ್ದಾನೆ. ಅವನನ್ನುಳಿದು ಈ ಮಹಿಯ ಮೇಲೆ ಬೇರೆ ಬ್ರಹ್ಮನಿರುವನೇ ?

ಕಂ. ವಿಶ್ವದ ಒಳ ಹೊರ ತಾನೇ;
ವಿಶ್ವಾತೀತನು ; ಮೇಣಾ ವಿಶ್ವಂಭರನೈ.
ವಿಶ್ವಗಳಿಗೆ ಬೇರಾಗುತ,
ವಿಶ್ವದೊಳಗೆ ಬೆಳಗುತಿರುವ, ಶಾಶ್ವತ, ವೇಮಾ.

ಆ ದೇವನು ವಿಶ್ವದ ಒಳಗೂ ತಾನಿದ್ದಾನೆ ; ಹೊರಗೂ ತಾನಿದ್ದಾನೆ. ಅವನು ವಿಶ್ವಕ್ಕೆ ಅತೀತನೂ ಆಗಿದ್ದಾನೆ. ಮೇಲಾಗಿ ವಿಶ್ವವನ್ನು ತುಂಬಿಕೊಂಡಿದ್ದಾನೆ. ಅವನು ವಿಶ್ವಗಳಿಂದ ಬೇರಾಗುತ್ತಾನೆ. ವಿಶ್ವದ ಒಳಗೆ ಬೆಳಗುತ್ತಾನೆ. ಅವನು ಶಾಶ್ವತನು.

ಇಲ್ಲಿ ನಮ್ಮ ವಿಶ್ವವೆಂದರೆ, ದೇಶ ಕಾಲ ನಿಮಿತ್ತಗಳಿಂದ ವಿಶಿಷ್ಟವಾಗಿರುವ ಸತ್ತೆಯೇ ಆಗಿದೆ. ಈ ವಿಶ್ವವು ಅನಂತ ಸತ್ತೆಯ ಅಂದರೆ ಅಸ್ತಿತ್ವದ ಭಾಗವಾಗಿದೆ. ದೇಶ, ಕಾಲ, ನಿಮಿತ್ತಗಳಿಂದ ಕೂಡಿದ ವಿಶಿಷ್ಟ, ಎರಕ ಹೊಯ್ದ ಆಕೃತಿಯಾಗಿದೆ. ಈ ವಿಶ್ವದಲ್ಲಿ ಕಾರ್ಯ ಕಾರಣ ನಿಯಮದ ವ್ಯಾಪ್ತಿಯುಂಟು. ಅದರ ಆಚೆಗೆ ಕಾರ್ಯ ಕಾರಣ ನಿಯಮ ಅನ್ವಯಿಸದು. ದೇವನು ಈ ವಿಶ್ವದೊಳಗೂ ಇದ್ದಾನೆ. ಇದರ ಆಚೆಗೂ ಇದ್ದಾನೆ.

ಈ ವಿಶ್ವದ ಉತ್ಪತ್ತಿ, ಸ್ಥಿತಿ ಮತ್ತು ಲಯಗಳಿಗೆ ಆ ಸಗುಣ ಬ್ರಹ್ಮನೊಬ್ಬನೇ ಕಾರಣನಾದರೂ ಅದರ ಮೂರು ಅವಸ್ಥೆಗಳಿಗೆ ಸಂಬಂಧಿಸಿದತೆ, ತತ್ತ್ವಜ್ಞರು ಅವನಿಗೆ ಮೂರು ಬೇರೆ ಬೇರೆ ಹೆಸರು ಕೊಟ್ಟಿದ್ದಾರೆ. ಹೀಗಾಗಿ, ಏಕನಾದ ದೇವನು ಅನೇಕವಾಗಿ ಅಂದರೆ ತ್ರಿಮೂರ್ತಿಯಾಗಿ ಗ್ರಹೀತನಾಗಿದ್ದಾನೆ.

ಕಂ. ವಿಶ್ವೋತ್ಪತ್ತಿಗೆ ಅಜನೆನೆ,
ವಿಶ್ವವ ರಕ್ಷಿಪನು ಚೊಕ್ಕ ವಿಷ್ಣುವಿರೆ ಮತ್ತಾ
ವಿಶ್ವವ ಅಳಿಸುವ ಹರನೆನೆ,
ವಿಶ್ವೇಶನಿಗಿಷ್ಟು ಹೆಸರು, ವಿನುತವು, ವೇಮಾ.

ವಿಶ್ವದ ಉತ್ಪತ್ತಿಗೆ ಮೂಲ ತಮಸ್ಸು ಕಾರಣವಾಗಿದೆ. ಆ ತಮೋಗುಣ ಪ್ರತೀಕವಾದ

ಅಜನು ವಿಶ್ವೋತ್ಪತ್ತಿಗೆ ಕಾರಣನು. ವಿಶ್ವದ ರಕ್ಷಣೆಗೆ, ಪಾಲನೆ ಪೋಷಣೆಗೆ ರಜೋಗುಣವು ಕಾರಣವಾಗಿದೆ. ಹಾಗಾಗಿ, ರಜೋಗುಣದ ಪ್ರತೀಕನಾದ ವಿಷ್ಣುವು ವಿಶ್ವದ ರಕ್ಷಣೆ ಮಾಡುತ್ತಾನೆ. ಇನ್ನು ವಿಶ್ವವನ್ನು ಲಯಗೊಳಿಸಲು ಅಂದರೆ ಸಕಲ ವಿಶ್ವದ ಸ್ಥೂಲ ಅಣುಗಳನ್ನು ಸೂಕ್ಷ್ಮಾತಿಸೂಕ್ಷ್ಮ. ಅವಸ್ತುವಾಗಿಸುವ ಲಯಕರ್ತನು ಹರನೇ ಆಗಿದ್ದಾನೆ. ಇದು ಸರ್ವ ವಿದಿತವಿದೆ.

ಗೀತೆ

ಊಟವನು ಮಾಡಿಸಿ, ದೇಹವನು ಒಟ್ಟು ಮರೆತು,
ನಿದ್ರೆ ಹೋಗಲು ಹಚ್ಚುವ, ನಿಖಿಲ ಗತಿಯ
ಸೂಚಿಸಿಳಿಬದ್ಧರಾಗಿಸುವ, ಸೂಕ್ಷ್ಮರೂಪ-
ನಾ ಮಹದೇವ ತಾನಿಹನಲ್ತೆ ವೇಮ ?

ದೇವರನ್ನು ಇನ್ನೂ ಹತ್ತಿರದಿಂದ ಗ್ರಹಿಸುವುದಾದರೆ ಹೀಗೂ ಹೇಳಬಹುದು :

ನಮಗೆ ಕಾಲ ಕಾಲಕ್ಕೆ ಮಳೆ ಮಳೆ ಬರಿಸಿ, ಊಟವನ್ನು ಮಾಡಿಸುತ್ತಾನೆ. ನಮ್ಮ ದೇಹವನ್ನು ಬೇನೆ ಬೇಸರಿಕೆಗಳಿಂದ ದೂರವಿರಿಸಿ, ಇಲ್ಲವೆ ಅವುಗಳನ್ನು ಮರೆತು ನಿದ್ರೆ ಹೋಗಲು ಹಚ್ಚುತ್ತಾನೆ. ನಮ್ಮ ದೇಹ ಮನಸ್ಸುಗಳಿಗೆ ಎಲ್ಲ ಬಗೆಯ ಗತಿಗಳನ್ನು ಒದಗಿಸಿ ನಮ್ಮನ್ನು ಈ ಭೂಮಿಗೆ ಬದ್ಧರಾಗುವಂತೆ ಮಾಡುವ ಆ ಸೂಕ್ಷ್ಮ ರೂಪಿಯೇ ಆ ಮಹದೇವನು ತಾನೇ ಇರುವನಲ್ಲವೇ?

ಫಲಾಸಕ್ತಿ ಬೇಡ :

ಆ.

ಪ್ರಾಪ್ತಿ ಇರುವ ತಾಣ ಫಲವೀವುದು ದೈವ.
ಪ್ರಾಪ್ತಿ ಇರದ ತಾಣ ಫಲವು ಇಲ್ಲ.
ಪ್ರಾಪ್ತಿ ಇರದೆ ಹೊನ್ನು ಪರಮಾತ್ಮನೀವನೆ ?
ವಿಶ್ವದಾಭಿರಾಮ ಕೇಳು ವೇಮ.

ಮಾನವನು ಕರ್ಮ ಮಾಡುತ್ತಿರಬೇಕು. ಏಕೆಂದರೆ ಕರ್ಮ ಮಾಡದೆ ಇರುವುದು ಅಸಾಧ್ಯ.ಆದರೆ ಫಲವು ದೊರೆಯುವುದು ದೈವೇಚ್ಛೆಯಂತೆ. ಸ್ವಂತ ಇಚ್ಛೆಯಂತೆ ಫಲ ದೊರೆಯದು. ಏಕೆಂದರೆ ಪೂರ್ವ ಕರ್ಮ ಫಲಾನುಸಾರ ಪ್ರಾಪ್ತಿಯ ಭಾಗ್ಯ ಇರುವ ತಾಣದಲ್ಲಿ ದೈವವು ವಿಧಿ ನಿಯಮಾನುಸಾರ ಫಲ ಈಯುತ್ತದೆ. ಪ್ರಾಪ್ತಿ ಇರದ ತಾಣದಲ್ಲಿ ಇಷ್ಟ ಫಲ ದೊರೆಯುವುದಿಲ್ಲ. ತನ್ನ ಪೂರ್ವ ಕರ್ಮದ ಫಲವಾಗಿ ಪ್ರಾಪ್ತಿ ಇಲ್ಲದಿದ್ದರೆ, ಹೊನ್ನನ್ನು ಪರಮಾತ್ಮನು ಕೊಡುವನೇನು?

ಪ್ರತಿಯೊಬ್ಬನೂ ತನ್ನ ಪೂರ್ವಕರ್ಮಾನುಸಾರ ನಿಗದಿಯಾದ ವಿಧಿ ನಿಯಮದಂತೆ ಫಲ ಪಡೆಯುತ್ತಾನೆ. ಅವನಿಗೆ ಒದಗುವ ಒಳಿತು ಕೆಡುಕುಗಳು, ಸುಖ-ದುಃಖಿಗಳು ಅವನ ಪಾಲಿನ ಕಟ್ಟಿಟ್ಟ ಬುತ್ತಿ.

ಕಂ.

ತನ್ನ ಪ್ರಾಪ್ತಿ ತನಗಿರಲು,
ತನ್ನಯ ದುಃಖ ತನಗೆ ಹೊರತು ಅನ್ಯರಿಗಿಹುದೇ ?
ತನ್ನೊಳಿತು ತನಗಿಹುದಲ್ತೆ ?
ಅನ್ಯವನೆಣಿಸದೆ, ಅನುವಿಲಿ, ಸೇರೆಲೊ ವೇಮಾ.

ಪ್ರಾಪ್ತಿ ಎಂದರೆ ಪೂರ್ವ ಕರ್ಮಫಲದಿಂದ ಲಭಿಸುವ ಭಾಗ್ಯ. ತನ್ನ ಪ್ರಾಪ್ತಿ ತನಗೇ ಇದೆ. ತನ್ನ ಪೂರ್ವ ಕರ್ಮ ಫಲವಾಗಿ ತನಗೆ ಒದಗಬೇಕಾದ ದುಃಖವು ತನಗೇ ಅಲ್ಲದೆ, ಅನ್ಯರಿಗೆ ಇರುವುದೇನು ? ಅದೇ ರೀತಿ ತನ್ನ ಒಳಿತಿನ ಪಾಲು ತನಗೇ ಇಹುದಲ್ಲವೇ ? ಆದ್ದರಿಂದ ಬೇರೇನನ್ನೂ ಎಣಿಕೆ ಹಾಕದೆ, ಅನುವು ಮಾಡಿಕೊಂಡು ಪರದಲ್ಲಿ ಸೇರಿಕೋ.

ಕಂ. ಧನ ದಾರಾ ಪುತ್ರೇಷಣ,
ಎನುವಂಥ ಘನವಹ ಲೋಕವಾಂಛೆಯ ತಿಳಿಯಲ್,
ಮನುಜರೊಡನೆ ಸೇರನೆಂದು
ಅನುದಿನ ಪರನನು ನೆನೆವನು, ಮಹಿಯಲಿ, ವೇಮಾ.

ಮಾನವನಿಗೆ ಮೂರು ಅದಮ್ಯ ಬಯಕೆಗಳಿವೆ. ಅಂದರೆ ಈಷಣಾಗಳಿವೆ. ಅವುಗಳೆಂದರೆ, ಹಣದ ಬಯಕೆ, ಹೆಂಡತಿಯ ಬಯಕೆ ಮತ್ತು ಮಕ್ಕಳ ಬಯಕೆ. ಈ ಮೂರು ಘನವಾದ ಲೋಕದ ವಾಂಛೆಗಳಾಗಿವೆ. ಅಂದರೆ ಹಂಬಲಗಳಾಗಿವೆ. ಇವುಗಳ ಸೆಳೆತವನ್ನು ಮಾನವನು ಒಳಹೊಕ್ಕು ಅರಿತರೆ, ಅವನು ಜನರೊಡನೆ ಅಷ್ಟಾಗಿ ಸೇರನು. ಪ್ರತಿಯಾಗಿ ಏಕಾಂತದಲ್ಲಿ ಇರುತ್ತ ದಿನಾಲು ಪರವನ್ನೇ ಕುರಿತು ಚಿಂತಿಸುತ್ತಾನೆ.

ಆ. ಭೋಗಗಳಿಗಾಸೆ ಪಡದೆ,
ರಾಗ ದ್ವೇಷಗಳು ಉಡುಗಿ, ಅಳಿಯಲು ತಮ್ಮೋಳ್
ವೇಗದಿ ಮೋಕ್ಷ ಪದಂಗಳ
ಆಗಮನ ಕಂಡ ಆತನೆ ಯೋಗಿಯು ವೇಮಾ.

ಮನುಷ್ಯ ಕರ್ಮ ಮಾಡುತ್ತಾನೆ. ಅದರಲ್ಲಿ ಅವನಿಗೆ ಅಧಿಕಾರವಿದೆ. ಆದರೆ ಅವನಿಗೆ ಫಲಭೋಗದಲ್ಲಿ ಅಧಿಕಾರವಿಲ್ಲ. ಫಲವು ಹೀಗೇ ಆಗಬೇಕೆಂದು ಅವನು ನಿರ್ಧರಿಸುವಂತಿಲ್ಲ. ಅದನ್ನು ಅವರವರ ಪೂರ್ವ ಕರ್ಮಾನುಸಾರ ಪಡೆದ ಪ್ರಾಪ್ತಿಯಂತೆ ವಿಧಿಯು ನಿರ್ಧರಿಸುತ್ತದೆ. ಆದ್ದರಿಂದ ಅವನು ಫಲಭೋಗಗಳಿಗೆ ಆಸೆ ಪಡದೆ, ಕರ್ಮ ಮಾಡಬೇಕು. ಯಾವುದೊಂದರಲ್ಲಿ ಅವನಿಗೆ ರಾಗವೂ ಬೇಡ. ಮತ್ತೊಂದರಲ್ಲಿ ದ್ವೇಷವೂ ಬೇಡ. ಅವನಲ್ಲಿ ವಸ್ತು, ವ್ಯಕ್ತಿ ವಿಷಯಗಳಲ್ಲಿ ರಾಗ ದ್ವೇಷಗಳು ಉಡುಗಿ ಅಳಿಯಬೇಕು.ಆಗ ಅವನು ಸಂಸಾರ ಬಂಧನದಿಂದ ಬಿಡುಗಡೆಯ ಹೆಜ್ಜೆಗಳನ್ನು ಕಾಣುತ್ತಾನೆ. ಅವನೇ ಕರ್ಮಯೋಗಿಯು.

ನೀಚ ಕಾರ್ಯ ಬೇಡ :

ಮಾನವನು ತನ್ನ ಉಪಜೀವನವನ್ನು ನಡೆಸಬೇಕು. ಆದರೆ ಅದಕ್ಕಾಗಿ ಮೋಸ ವಂಚನೆ ಮಾಡಕೂಡದು. ಕೊಲೆ-ಸುಲಿಗೆಗಳಿಗಿಳಿಯಕೂಡದು. ದೇವರಲ್ಲಿ ಶ್ರದ್ಧೆ ಇರಿಸಿ ಪ್ರಾಮಾಣಿಕ ಜೀವನ ನಡೆಸಬಕು.

ಆ. ಮಾತು ಎಲ್ಲ ಸುಳ್ಳು, ಮನಸು ಮತ್ತೆ ಡೊಂಕು,
ಇಂತಿಪ್ಪ ಪ್ರಾಣಿಗಳಿಗೆ ಏಕೆ ಬದುಕು ?
ಮಾತು ಸತ್ಯವಿರಲು ಮತ್ತೆ ಶತಾಯುಷಿಯು.
ವಿಶ್ವದಾಭಿರಾಮ ಕೇಳು ವೇಮ.

ಬದುಕುವುದಕ್ಕೋಸುಗ ಬದುಕು ಅಲ್ಲ. ತನ್ನ ಪುರುಷಾರ್ಥಗಳನ್ನು ಸಾಧಿಸಲೋಸುಗ ಬದುಕಬೇಕಾಗುತ್ತದೆ. ಹೀಗಿರುವಾಗ, ಬರೀ ಸುಳ್ಳು ಮಾತನಾಡುತ್ತ, ಡೊಂಕು ಮನಸ್ಸನ್ನು ಹೊಂದಿ, ವಕ್ರವಾಗಿ ನಡೆಯುತ್ತ ಇರುವವನಿಗೆ ಬದುಕಾದರೂ ಏಕೆ ಬೇಕು ? ಅವನಿಂದ ಯಾವ ಪುರುಷಾರ್ಥ ಸಾಧನೆ ಆದೀತು ? ಯಾವಾಗಲೂ ಮಾತು ಸತ್ಯವಿರಬೇಕು. ಅಂಥವನು ಪೂರ್ಣಾಯುಸ್ಸನ್ನು ಹೊಂದುತ್ತಾನೆ. ಶತಾಯುಷಿಯಾಗುತ್ತಾನೆ. 'ಸತ್ಯಂ ಭ್ರೂಯಾತ್, ಪ್ರಿಯಂ ಭ್ರೂಯಾತ್'. ಸತ್ಯವನ್ನೇ ನುಡಿಯಿರಿ. ಪ್ರಿಯವಾದುದನ್ನೇ ನುಡಿಯಿರಿ ಎಂಬ ಹಿರಿಯರ ಮಾತೂ ಇದೆ.

ಆ. ಬಹಳ ಜನರ ಇರಿದು, ಬಡವರನ್ನು ವಧಿಸಿ,
ಸುಲಿದು ಕೊಳ್ಳೆ ಹೊಡೆದು, ಹೊಟ್ಟೆ ಹೊರೆದು,
ಎತ್ತ ಕಡೆಗೆ ಹೋದರೇನು? ಯಮನು ಬೆನ್ನು ಬಿಡನು
ವಿಶ್ವದಾಭಿರಾಮ ಕೇಳು ವೇಮ.

ಕೆಲವರು ತಮ್ಮ ಉಪಜೀವನಕ್ಕಾಗಿ ಹಣವಿದ್ದವರನ್ನು ಇರಿಯುತ್ತಾರೆ, ತಮಗೆ ಅಡ್ಡಿಪಡಿಸುವ ಬಡವರನ್ನು ಕೊಂದೇ ಬಿಡುತ್ತಾರೆ. ಪಯಣಿಗರನ್ನು ಸುಲಿದು ಕೊಳ್ಳೆ ಹೊಡೆಯುತ್ತಾರೆ. ಹೀಗೆ ನಾನಾ ಬಗೆಯ ಪಾಪ ಕೃತ್ಯಗಳಲ್ಲಿ ತೊಡಗುತ್ತಾರೆ. ಆದರೆ ಇಂಥ ಪಾಪಿಗಳು ತಪ್ಪಿಸಿಕೊಳ್ಳಲು ಅತ್ತಿತ್ತ ತಲೆ ತಪ್ಪಿಸಿಕಂಡು ರಾಜದಂಡದ ಶಿಕ್ಷೆಯನ್ನು ಕೆಲ ಕಾಲ ತಪ್ಪಿಸಿಕೊಳ್ಳಬಹುದು. ಆದರೆ ಯಮ ಧರ್ಮರಾಯನು ಅವರ ಬೆನ್ನು ಬಿಡನು. ಅವರ ಮರಣ ಸನ್ನಿಹಿತವಾಗುತ್ತದೆ.

ಆ. ಮದ್ಯಮಸ್ತು ಬೇಡಿ, ಭುಜಿಸಿ ನಿಲದೆ ಮತ್ತೆ,
ನಿಂದ್ಯ ಕಾರ್ಯನಿರತವಾಗಿ ನಡೆಯೆ,
ಅಂಥ ನರನು ಪತಿತ, ಅಧಮ, ನೀಚನೆನಿಪ.
ವಿಶ್ವದಾಭಿರಾಮ ಕೇಳು ವೇಮ.

ಪಾಪ ಪ್ರವೃತ್ತಿಯುಳ್ಳ ಕೆಲವರು ತಮ್ಮ ಪಾಪ ಪ್ರಜ್ಞೆಯನ್ನು ಮರೆಯಲು, ಮದ್ಯ ಸೇವಿಸಲು ಮುಂದಾಗುತ್ತಾರೆ. ಮದ್ಯ ಸೇವಿಸಿ ಮತ್ತರಾಗುತ್ತಾರೆ. ಅಷ್ಟಕ್ಕೆ ನಿಲ್ಲದೆ, ಕಾಮೋದ್ರೇಕದಿಂದ ವ್ಯಭಿಚಾರ ಇತ್ಯಾದಿ ಹಲವು ನಿಂದ್ಯ ಕಾರ್ಯಗಳಲ್ಲಿ ತೊಡಗುತ್ತಾರೆ. ಹೀಗೆ ಅಂಥ ಪಾಪಿಯು ನೀತಿಯಿಂದ ಪತಿತನಾಗುತ್ತಾನೆ. ಅಧಮ ನೀಚನಾಗುತ್ತಾನೆ. ಆದ್ದರಿಂದ ದೇವರಲ್ಲಿ ನಂಬು. ಅವನ ಪ್ರೇರಣೆಯಂತೆ ವರ್ತಿಸು.

ಆ. ದೇವನೆನಲು ಬೇರೆ ದೇಶದಲ್ಲಿ ಇಹನೆ ?
ದೇಹಿಯೊಡನೆ ಸತತ ದೇಹದಲ್ಲಿ.
ಹತ್ತಿ ವಾಹನಗಳ ಹೊಡೆದುಕೊಂಡು ಹೋಹ.
ವಿಶ್ವದಾಭಿರಾಮ ಕೇಳು ವೇಮ.

ಮಾನವನನ ಅರಿವಿನ ಕನ್ನಡಿಯ ಮೇಲೆ ಮೋಹದ ಕತ್ತಲೆ ಮುತ್ತಿದಾಗ, ಅವನಿಗೆ ತನ್ನ ಕರ್ಮದ ಗುಣಾವಗುಣಗಳ ಸ್ಪಷ್ಟ ಚಿತ್ರ ಕಾಣದು. ಅದಕ್ಕೆ ದೇವರ ಅರಿವಿನ ಬೆಳಕು

ಬೇಕು. ಈ ದೇವರು ಬೇರೆ ದೇಶದಲ್ಲೇನೂ ಇಲ್ಲ. ಸ್ವರ್ಗದಲ್ಲಿ ಇಲ್ಲ. ದೇಹಧಾರಿ ಕರ್ಮಿಯೊಡನೆ ಸತತ ದೇಹದಲ್ಲಿ ಇರುತ್ತಾನೆ. ಅವನ ಅಣತಿಯಂತೆ ದೇಹಿಯ ವಾಹನಗಳಾದ ಇಂದ್ರಿಯಗಳು ನಡೆಯುತ್ತವೆ. ಅವನು ಆ ವಾಹನಗಳನ್ನು ತನ್ನಿಚ್ಛೆಯ ಮೇರೆಗೆ ಹೊಡೆದುಕೊಂಡು ಹೋಗುತ್ತಾನೆ. ಮಾನವನು, ದೇವನಿಗೆ ಶರಣಾಗಿ, ತನ್ನ ದತ್ತ ಸ್ವಾತಂತ್ರ್ಯವನ್ನು ದೈವೇಚ್ಛೆಗೆ ಅನುಗುಣವಾಗಿ ಬಳಸಬೇಕು.

ಗೃಹಸ್ಥನ ನಡೆವಳಿ :

ಆ. ತಾಯಿಯೆ ಪಾರ್ವತಿಯು ; ತಂದೆಯೇ ಶಂಭುವು
ಪ್ರಮಥ ಗಣವು ಅಖಿಲ ಬಂಧುಬಳಗ.
ತಾನು ಹುಟ್ಟಿದ ಮನೆ ತನಗೆ ಕೈಲಾಸವು.
ವಿಶ್ವದಾಭಿರಾಮ ಕೇಳು ವೇಮ.

ತನಗೆ ಜನ್ಮಕೊಟ್ಟ ತಾಯಿಯೇ ಪ್ರಕೃತಿ ಮಾತೆಯಾದ ಪಾರ್ವತಿಗೆ ಸಮಾನವಾಗಿದ್ದಾಳೆ. ಮಂಗಳಕರನಾದ ಶಂಭುವು ತನ್ನ ತಂದೆಗೆ ಸಮಾನವಾಗಿದ್ದಾನೆ. ತನ್ನ ಬಂಧು ಬಳಗವೆಲ್ಲ ಶಿವನ ಗಣಕ್ಕೆ ಸಮಾನವಾಗಿದೆ. ಹೆಚ್ಚೇನು ಹೇಳುವುದು ? ತಾನು ಹುಟ್ಟಿದ ಮನೆಯೇ ತನಗೆ ಕೈಲಾಸ ಪ್ರಾಯವಾಗಿದೆ.

ಆ. ತಾಯಿ ತಂದೆ ತಿಳಿಯೆ ತನಗೆ ಮೊದಲ ಗುರುವು.
ಪಾರ್ವತಿ ಭವರೆಲ್ಲ ಪರಮ ಗುರುವು.
ಕೂಲಿ ಕೊಳ್ಳುವವನ ಗುರುವೆನಲು ದ್ರೋಹ.
ವಿಶ್ವದಾಭಿರಾಮ ಕೇಳು ವೇಮ.

ಗುರು ಎಂದರೆ ಅಂಧಕಾರ ನಿವಾರಕ. ಹುಟ್ಟಿದ ಮಗುವಿಗೆ ಲೋಕದ ಪರಿಚಯವನ್ನು ಮೊದಲು ಮಾಡಿಸಿ ಅವನ ಅಂಧಕಾರವನ್ನು ನಿವಾರಿಸಿಸುವವರೇ ತಾಯಿ-ತಂದೆ. ಅವರಿಗೂ ಗುರುಗಳಾದ ಪಾರ್ವತಿ ಶಿವರು ತನಗೆ ಗುರುವಿನ ಗುರು-ಪರಮ ಗುರುಗಳಷ್ಟೇ. ಆದರೆ, ಒಂದು ಮಾತು. ಗುರು ಎಂದು ಹೇಳಿಕೊಂಡು ಹಣವನ್ನು ದೋಚುವವರು ಹೆಚ್ಚಾಗಿರುವ ಈ ಕಾಲದಲ್ಲಿ ಕೂಲಿ ಕೊಳ್ಳುವವನನ್ನು ಗುರುವೆಂದು ಮನ್ನಿಸಿದರೆ ಗುರು ತತ್ತ್ವಕ್ಕೆ ದ್ರೋಹವಾಗುತ್ತದೆ.

ಆ. ತಾಯಿ ತಂದೆಯರಲಿ, ದಾರಿದ್ರ್ಯಯುತರಲಿ,
ನಂಬಿಕೊಂಡ ಬಡವ ನರರಲ್ಲಿಯು,
ಪ್ರಭುಗಳಲಿ ಬಹಳ ಭಯಭಕ್ತಿಯಿರಿಸು.
ವಿಶ್ವದಾಭಿರಾಮ ಕೇಳು ವೇಮ.

ಜನ್ಮವಿತ್ತು, ಪಾಲಿಸಿ, ಪೋಷಿಸಿದ ತಾಯಿ ತಂದೆಯಂದಿರಲ್ಲಿ, ಧನವಿಹೀನ ದಾರಿದ್ರ್ಯಯುತರಲ್ಲಿ, ತನ್ನನ್ನೇ ನಂಬಿ ಜೀವನ ಸಾಗಿಸುವ ಬಡ ಜನರಲ್ಲಿ, ಮತ್ತು ಆಳುವ ಪ್ರಭುಗಳಲ್ಲಿ ಬಹಳ ಭಕ್ತಿ ಇರಲಿ. ಅವರ ಸೇವೆ ಮಾಡು. ಅವರು ದೈವ ಸಮಾನ. ಅವರಿಗೆ ದ್ರೋಹವಾದರೆ ಮುನಿದುಕೊಂಡಾರೆಂಬ ಭಯವೂ ಇರಲಿ.

ಆ. ಒಂದಾದ ದಂಪತಿ ಚಂದದ ಸಂಸಾರ ;
ನಂದನನ ನಡೆನುಡಿ ನಂದಿನಿಯೊಳು.
ಸತಿಗಿತ್ತ ರಕ್ಷಣೆ ಸ್ವಂತಕ್ಕೆ ರಕ್ಷಣೆ.
ವಿಶ್ವದಾಭಿರಾಮ ಕೇಳು ವೇಮ.

ಸತಿ ಪತಿಯರು ಸಮರಸದಿಂದ ಬಾಳುತ್ತಿದ್ದರೆ ಸಸಾರವು ಸಂಸಾರವಾಗುತ್ತದೆ. ಚಂದವಾಗಿರುತ್ತದೆ. ತೃಪ್ತ ಪುರುಷನ ನಡೆನುಡಿಗಳು ಸಂತುಷ್ಟ ನಂದಿನಿಯಲ್ಲಿ ಪ್ರತಿಫಲಿಸುತ್ತವೆ. ಸತಿಯು ಪತಿಯ ಅರ್ಧಾಂಗಿಯಂತೆ. ಸತಿಗಿತ್ತ ರಕ್ಷಣೆಯು ಸ್ವಂತಕ್ಕೆ ರಕ್ಷಣೆ ನೀಡಿಕೊಂಡಂತೆ ಆಗುತ್ತದೆ.

ಕಂ. ಹೆಂಡತಿಯೆನೆ ಆತ್ಮ ಕಣಾ !
ಹೆಂಡತಿಯೆನೆ ತಾಯಿ ಕಣಾ. ಅರಿತೊಡೆ ಮನದೋಳ್
ಹೆಂಡತಿ ತಾಯಿಯೆನಲಾರು
ಕಂಡರಿಯಬೇಕಿದನೆ ತಪ್ಪದಂತೆ ವೇಮಾ.

ಹೆಂಡತಿಯು ತನ್ನ ಮನದ ಒಲುಮೆಯನ್ನು ತಿಳಿಯುವವಳು. ಹೆಂಡತಿಯು ಹೃದಯದ ದೇವತೆ. ಮನದ ಆಚೆಗೆ ಹೃದಯವನ್ನು ಮಿಡಿಯುವವಳು, ಅವಳೇ. ಹಾಗಾಗಿ ಅವಳು ತನ್ನ ಆತ್ಮವಿದ್ದಂತೆ. ಹೆಂಡತಿಯು ಯೌವನದಲ್ಲಿ ಪಾಲನೆ ಪೋಷಣೆ ಮಾಡುತ್ತಾಳೆ. ಬಾಲ್ಯದಲ್ಲಿ ತಾಯಿ ವಹಿಸಿದ ಪಾತ್ರವನ್ನೇ ಯೌವನದಲ್ಲಿ ಹೆಂಡತಿಯು ವಹಿಸುತ್ತಾಳೆ. ಮೇಲಾಗಿ, ತಾನು ತನ್ನ ಮಗನೇ ಆಗಿ ಜನಿಸಿದಾಗ, ಹೆಂಡತಿಯೇ ತಾಯಿಯಾಗುತ್ತಾಳೆ. ಹೀಗೆ ಹೆಂಡತಿಯು ತಾಯಿಯೆಂಬುದನ್ನು ತಪ್ಪದಂತೆ ಅರಿಯಬೇಕು.

ಆ. ಹಡೆದ ತಾಯಿ ತಂದೆ ಹೊರೆಯುವುದನು ಬಿಡಲು,
ಹಡೆದು ಬೆಳೆಸಿದ ಋಣ ಹಿಂಗದಯ್ಯ.
ತಂದೆ ತಾಯಿ ನೋಯೆ, ತಪವು ಸಿದ್ಧಿಸುವುದೆ ?
ವಿಶ್ವದಾಭಿರಾಮ ಕೇಳು ವೇಮ.

ತಾನು ಬೆಳೆದು ಬಾಲ್ಯ, ಕಿಶೋರಾವಸ್ಥೆಗಳನ್ನು ದಾಟಿದ ಬಳಿಕ ಅವರು ತಮ್ಮ ಮಗನನ್ನು ಹೊರೆಯುವುದನ್ನು ಬಿಡಬಹುದು. ಆದರೆ, ಅವರು ತನ್ನನ್ನು ಹಡೆದು, ಬೆಳೆಸಿದ ಋಣವಂತೂ ತೀರದು. ತಾನು ತಪವನ್ನು ಆಚರಿಸುತ್ತೇನೆಂದು ಮನೆ ಮಾರು ತೊರೆದು ಅಡವಿ ಸೇರಿದರೆ, ಮುದಿ ತಾಯಿ ತಂದೆಗಳಿಗೆ ನೋವಾಗುತ್ತದೆ. ತಾಯಿ-ತಂದೆಗೆ ನೋವಾದರೆ ತಪಸ್ಸು ಹೇಗೆ ಸಿದ್ಧಿಸೀತು ? ಆದ್ದರಿಂದ ವಿರಕ್ತರಾಗುವವರು ತಾಯಿ ತಂದೆಯ ಸಮ್ಮತಿ ಪಡೆದರಲೇಬೇಕೆಂಬ ನಿಯಮವಿದೆ.

ಕಂ. ಪರನಾರೀ ದೂರನಿಹನು ,
ಪರಧನಗಳಿಗಾಸೆ ಪಡದೆ ಪರಹಿತ ರತನ್ಕೆ.
ಪರರಳುಕಲು ತಾನಳುಕದೆ,
ಪರರೆನ್ನದೆ ಬದುಕುವವ ಪ್ರಾಜ್ಞನು ವೇಮಾ.

ಅತ್ಯಂತ ಬುದ್ಧಿವಂತನಾದವನು ಪರನಾರಿಯರ ಸಂಗ ಬಯಸದೆ ಅದರಿಂದ ದೂರವೇ ಇರುವನು. ಅವನಿಗೆ ಹೆರವರ ಧನದ ಮೇಲೆ ಆಸೆಯೂ ಇರದು. ಅವನು ಯಾವಾಗಲೂ ಪರರ ಹಿತ ಗೆಯ್ಯುವಲ್ಲಿಯೇ ನಿರತನಾಗಿರುತ್ತಾನೆ. ಆದರೆ ಬೇರೆಯವರು ಹೃದಯಲ್ಲಿ ಅಳುಕಿದರೆ ತಾನೇನೂ ಅಳುಕದೆ ಧೈರ್ಯದಿಂದ ಇರುತ್ತಾನೆ. ಇತರರಿಗೂ ಧೈರ್ಯ ಹೇಳುತ್ತಾನೆ. ಇಂಥ ಪ್ರಾಜ್ಞನಿಗೆ ತಾನು, ಪರರು ಎಂಬ ಭೇದವಿರದು. ಅವನು ಸರ್ವರ ಲೇಸನ್ನು ಬಯಸುತ್ತ ಬಾಳುತ್ತಾನೆ.

ಕಂ. ಸತಿಯಾಗಿ ಪತಿಯ ಬೇಡಲು,
ಸತಿ ಮರ್ಮವ ಕಾಣಬಹುದು ಸರಸೋಕ್ತಿಗಳಿಂ
ಮತಿ ತೊಲಗಿ ಅದುಮಿ ಹಿಡಿದರೆ,
ಸತಿ ದುರ್ಗತಿ ಖಂಡಿತಾಯ್ತು, ಸತ್ಯವು ವೇಮಾ.

ಸತಿಯು ತನ್ನ ಕಾಮನೆಗಳನ್ನು ಈಡೇರಿಸಿಕೊಳ್ಳಲು ಪತಿಯನ್ನು ಬೇಡಿಕೊಳ್ಳಬಹುದು. ಆಗ ಸತಿಯು ಸರಸ ಸಂಭಾಷಣೆಯ ಮುಖಾಂತರ ಸತಿಯ ಮನದಿಂಗಿತವನ್ನು ಅರಿಯಬಹುದು. ಆದರೆ ಬುದ್ಧಿಗೇಡಿಗಳಾಗಿ, ಪರಸ್ಪರ ಅರಿಯದೆ, ಮನಬಿಚ್ಚಿ ಮಾತಾಡದೆ, ಬಿಗುಮಾನದಿಂದ ವರ್ತಿಸಿದರೆ, ಸತ್ಯವಾಗಿ ಪತಿಯ ದುರ್ಗತಿಯು ಖಂಡಿತವಾಗುತ್ತದೆ.

ಆ. ಗುಣವತಿಯಿರೆ ಯುವತಿ ಗೃಹವು ಚೊಕ್ಕಟಯ್ಯ.
ಬೀಳು ಮನೆಯ ದೀಪ ಬೆಳಗಿದಂತೆ.
ದೇವಿಯಿಪ್ಪ ಗೃಹವು ದೇವಾಲಯವಯ್ಯ.
ವಿಶ್ವದಾಭಿರಾಮ ಕೇಳು ವೇಮ.

ಯುವತಿಯು ಗುಣವತಿಯಾಗಿದ್ದರೆ, ಸದ್ಗುಣಶೀಲೆಯಾಗಿದ್ದರೆ, ಗೃಹವು ಅಚ್ಚುಕಟ್ಟಾಗಿರುತ್ತದೆ. ಆ ಗೃಹದ ನಿವಾಸಿಗಳು ನೆಮ್ಮದಿಯಿಂದ ಬಾಳುತ್ತಾರೆ. ಕತ್ತಲೆ ಮುತ್ತಿದ ಬೀಳು ಮನೆಯಲ್ಲಿ ಯಾರೋ ವಾಸಿಸಲು ಬಂದು ದೀಪ ಹೊತ್ತಿಸಿ ಬೆಳಕು ಹರಡಿದಂತೆ ಆಗುತ್ತದೆ. ಇಂಥ ಸುಗುಣೆಯು ದೇವಿಯಂತೆ ಗೌರವಾರ್ಹಳು. ಅಂಥ ಗೃಹಿಣಿಯು ವಾಸವಾಗಿರುವ ಮನೆಯು ಎಲ್ಲರಿಗೂ ಪ್ರೀತ್ಯಾದರಗಳನ್ನು ತೋರಿ ಬರಮಾಡಿಕೊಳ್ಳುವ ದೇವಾಲಯದಂತೆ.

ಆ ॥ ಸುಗುಣವಂತೆ ಕಾಂತೆ ಸುದತಿಯಾಗಿರ್ದೊಡೆ,
ಮಿಗಿಲು ಬುದ್ಧಿವಂತ ಮಕ್ಕಳಿರಲು,
ಸಗ್ಗವೇತಕಯ್ಯ ? ಸಂಸಾರ ಸಾಲದೇ ?
ವಿಶ್ವದಾಭಿರಾಮ ಕೇಳು ವೇಮ.

ಹೆಣ್ಣಿಗೆ ಗುಣ ಮತ್ತು ರೂಪ ಮುಖ್ಯ. ಒಳ್ಳೆಯ ಗುಣಗಳುಳ್ಳ ಹೆಂಡತಿಯು ಸುಂದರಿಯೂ ಆಗಿದ್ದರೆ, ಮತ್ತು ಮಕ್ಕಳು ಹೆಚ್ಚು ಬುದ್ಧಿವಂತರಿದ್ದರೆ, ಆ ಕುಟುಂಬವು ಸುಖದ ನೆಲೆವೀಡಾಗುತ್ತದೆ. ಹಾಗಿದ್ದರೆ, ಸುಖದ ಕನಸಿನ ಸ್ವರ್ಗ ಲೋಕವೇಕೆ ಬೇಕು ? ಇಹದ ವಾಸ್ತವ ಲೋಕದ ಸಂಸಾರ ಸಾಲದೇ ?

ಗೃಹಸ್ಥನಾದವನು ತಾಯಿ ತಂದೆ, ಮಕ್ಕಳು ಮತ್ತು ಸೋದರರನ್ನೂ ಸಹ ಆ ಪ್ರೀತಿ ಆದರಗಳಿಂದ ನೋಡಬೇಕು.

ಆ. ಸತಿಯ ಮಾತು ಕೇಳಿ, ಸೋದರರನೆ ತೊರೆದು,
ಬೇರೆಯಾಗುವವನು ಬುದ್ಧಿಗೇಡಿ.
ನಾಯಿ ಬಾಲ ಹಿಡಿದು ಗೋದಾವರಿ ದಾಟಿ.
ವಿಶ್ವದಾಭಿರಾಮ ಕೇಳು ವೇಮ.

ಮೊದಲು ಸೋದರರೊಡನೆ ಸಹೃದಯತೆಯಿಂದ ಬಾಳಿ, ತಾನು ಮದುವೆಯಾದ ಬಳಿಕ ಮನೆಗೆ ಬಂದ ಹೆಂಡತಿಯ ಚಾಡಿ ಮಾತು ಕೇಳಿ, ಸೋದರರನ್ನು ಬಿಟ್ಟು ಬೇರೆ ಮನೆ ಮಾಡುವವನು ಬುದ್ಧಿಗೇಡಿಯಷ್ಟೇ. ಹೆಂಡತಿಯ ಚಾಡಿ ಮಾತುಗಳು ತನ್ನ ಬಾಳಿಗೆ ಆಧಾರ ಒದಗಿಸವು. ಅವು ಹೊಳೆಯಲ್ಲಿ ಈಸುವ ನಾಯಿಯ ಬಾಲದಂತೆ. ಅಂಥದನ್ನು ಅವಲಂಬಿಸಿ ಬೇರೆ ಮನೆ ನಡೆಸುವದೆಂದರೆ, ಕಷ್ಟ ಸಾಧ್ಯ. ನಾಯಿ ಬಾಲ ಹಿಡಿದು ಗೋದಾವರಿ ದಾಟಲಾರನು.

ಉತ್ತಮ ನಡೆನುಡಿ :

ಆ. ತಾಯಿಗೆದುರಿಪ್ಪದು, ತಂದೆಗೆದುರಿಪ್ಪದು,
ಅನ್ನಕೆದುರಿಪ್ಪದು, ಅರಿಯೆ ಮೂರು,
ಅರಿತು ಪಾತಕಗಳ ವರ್ತಿಸಬೇಕಯ್ಯ.
ವಿಶ್ವದಾಭಿರಾಮ ಕೇಳು ವೇಮ.

ಹೆತ್ತು ಹೊತ್ತು, ಹೊರೆದ ತಾಯಿ-ತಂದೆಯಂದಿರಿಗೆ ಗೃಹಸ್ಥನು ವಿಧೇಯನಾಗಿರಬೇಕು. ಅವರ ಇಚ್ಛೆಗೆ, ಅವರ ಹಿತಕ್ಕೆ, ವಿರೋಧವಾಗಿ ಎಂದೂ ನಡೆದುಕೊಳ್ಳಬಾರದು. ಅದೇ ರೀತಿ ನಮಗೆ ಅನ್ನ ಹಾಕುವವರಿಗೆ ವಿರೋಧ ಮಾಡಕೂಡದು. ಏಕೆಂದರೆ ತಾಯಿ, ತಂದೆ, ಅನ್ನ ಈ ಮೂರರ ಹಿತಕ್ಕೆ ವಿರೋಧವಾಗಿರುವುದು ಮೂರು ಪಾತಕಗಳನ್ನು ಎಸಗಿದಂತೆ. ಈ ಪಾತಕಗಳು ಘಟಿಸದಂತೆ ವರ್ತಿಸಬೇಕು.

ಆ. ಒಪ್ಪು ತಪ್ಪರಿಯದ ವ್ಯರ್ಥ ಮೂಢ ಜನರು
ಇಳೆಯ ಜನರನೆಲ್ಲ ಒಳಿತೆನುವರು.
ಬಿಗರೆ ಜೊತೆಗೆ ನಾಯಿ ಮೆರೆವ ಹಾಗೆ ನೋಡು.
ವಿಶ್ವದಾಭಿರಾಮ ಕೇಳು ವೇಮ.

ಈ ಭೂಮಿಯಲ್ಲಿ ಶಿಷ್ಟರೂ ಇರುತ್ತಾರೆ, ದುಷ್ಟರೂ ಇರುತ್ತಾರೆ. ಶಿಷ್ಟರು ಒಪ್ಪು ಮಾಡಿದರೆ ದುಷ್ಟರು ತಪ್ಪು ಮಾಡುತ್ತಾರೆ. ಗೃಹಸ್ಥರು ಒಪ್ಪು-ತಪ್ಪುಗಳನ್ನು ವಿಂಗಡಿಸಿ ತಿಳಿಯುವ ವಿವೇಕ ಹೊಂದಿರಬೇಕು. ಆದರೆ ಇಳೆಯಲ್ಲಿಯ ಮೂಢ ಜನರು ಹೀಗೆ ವಿಂಗಡಿಸಿ ಅರಿಯದೆ, ಎಲ್ಲ ಜನರು ಒಳ್ಳೆಯವರೇ ಎಂದು ಗ್ರಹಿಸಿ ಮೋಸ ಹೋಗುತ್ತಾರೆ. ಇದರಿಂದ ದುಷ್ಟರಿಗೆ ಪ್ರೋತ್ಸಾಹ ಸಿಕ್ಕಂತಾಗುತ್ತದೆ. ಬಿಗರೆ ಹಿಂಡಿನಲ್ಲಿ ನಾಯಿಯೊಂದು ಸೇರಿದಂತೆ ಈ ದುಷ್ಟರು ಶಿಷ್ಟರ ಗುಂಪಿನಲ್ಲಿ ಸೇರಿರುತ್ತಾರೆ. ಇದರಿಂದ ಮುಂದೆ ಅನಾಹುತ ಸಂಭವಿಸುವುದು.

ಆ. ಠೀವಿ ಹೆಚ್ಚು ಹೊಂದಿ, ಠಬರು ಶಕ್ತನೆಂದು,
ಇಂಥದೇಕೆ ? ಮುಕ್ತ ಇಷ್ಟವಿರಲು,
ಉಚಿತ ಮಾರ್ಗ ಹಿಡಿದು ಉರ್ವಿಯಲಿ ಯತ್ನಿಸು.
ವಿಶ್ವದಾಭಿರಾಮ ಕೇಳು ವೇಮ.

ದರ್ಪ ಆಡಂಬರಗಳನ್ನು ಹೆಚ್ಚಾಗಿ ಪ್ರದರ್ಶಿಸುತ್ತ, ತಾನು ಶಕ್ತನೆಂದು ಠಬರು ತೋರಿಸುತ್ತ, ಇರುವುದೆಲ್ಲ ಏಕೆ ? ತನಗೆ ಇಹದ ಬಂಧನದಿಂದ ಮುಕ್ತ ಇಷ್ಟವಿದ್ದರೆ ತಾನು ಆಡಂಬರವನ್ನು ತೊರೆದು ಸರಳವಾಗಿ ಇರಬೇಕು. ಹಿರಿಯರು ನಡೆದ ಉಚಿತ ಮಾರ್ಗವನ್ನು ಹಿಡಿದು ಉರ್ವಿಯಲ್ಲಿ ಯತ್ನಿಸು.

ಆ. ಸುಳ್ಳು ಸತ್ಯ ಗೆಯ್ದು, ಶುಷ್ಕ ಭಾವ ಹೊಂದಿ,
ಬಯ್ದು ಬೊಗಳುತಿಹಗೆ ಭಕ್ತಿ ಇಲ್ಲ.
ಮಾಟ ಮಾಯದವನು ಮಹಿಮಾತ್ಮ ಸುಮನೇ ?
ವಿಶ್ವದಾಭಿರಾಮ ಕೇಳು ವೇಮ.

ಕರ್ಮಯೋಗ ಸಾಧಕನು ಸುಳ್ಳು ಹೇಳಕೂಡದು. ಇಲ್ಲದ್ದನ್ನು ಇದೆಯೆಂದು ತೋರಿಸಿ, ಸುಳ್ಳನ್ನು ಸತ್ಯವೆಂದು ಪ್ರತಿಪಾದಿಸಿ, ಭಾವವನ್ನು ಭಕ್ತಿ ಕಿರಣ ವರ್ಜಿತವಾಗಿಸಿ, ಅರಿವಿನ ಸ್ಫುರಣೆಯಿಂದ ವಂಚಿಸಿ ಶುಷ್ಕವಾಗಿ ಮಾಡುತ್ತಾನೆ. ಮೇಲಾಗಿ ದೈವೀ ಶಕ್ತಿಯನ್ನು ಬಯ್ದು ಬೊಗಳುತ್ತಿರುವವನಿಗೆ ಭಕ್ತಿಯು ಇರದು. ಅವನು ಮಾಟ ಮಾಯದವನು, ಯಕ್ಷಿಣಿ ವಿದ್ಯೆಯವನು. ಅವನು ಅಚ್ಚರಿಗಳನ್ನು ಪ್ರದರ್ಶಿಸಿದ ಮಾತ್ರಕ್ಕೆ ಐಶ್ವರ್ಯ ಸಿದ್ಧಿ ಹೊಂದಿದ ಮಹಿಮಾತ್ಮನಿಗೆ ಸಮನಾಗುವನೇನು ? ಯಕ್ಷಣೀ ಚಮತ್ಕಾರಗಳು ಕ್ಷಣಿಕ, ಬರೀ ಕಣ್ಣಕಟ್ಟು. ನಿಮ್ಮ ಸೂಕ್ಷ್ಮ ಅನುಭವಗಳನ್ನು ಜನರೆದುರು ಕೊಚ್ಚಬೇಡಿ. ಅದು ಕರ್ಮಯೋಗಿಯ ನಮ್ರತೆಗೆ ಒಪ್ಪವಲ್ಲ.

ಆ. ಜ್ಞಾನಿಯೆಂದು ತಿಳಿದು ಚಪಲಾತ್ಮರಾದರು.
ತಿಳಿವು ಇಲ್ಲ ; ತಮ್ಮ ತಿಳಿಯರಲ್ಲ ?
ಕಷ್ಟವೆಂಬರಣ್ಯ ಭ್ರಷ್ಟನಾಗಿ ಹೊಗುವ.
ವಿಶ್ವದಾಭಿರಾಮ ಕೇಳು ವೇಮ.

ದೈವೀ ಕೃಪೆಯಿಂದಾಗಲಿ, ಗರು ಕರುಣೆಯಿಂದಾಗಲಿ, ತನಗೆ ಏನಾದರೂ ಅರಿವಿನ ಉದಯವಾದರೆ, ತಾನು ಪೂರ್ಣ ಜ್ಞಾನಿಯಾದೆನೆಂದು ತಿಳಿದುಕೊಂಡು ಚಪಲಾತ್ಮರಾದವರು, ಎಲ್ಲರೆದುರು ತಮ್ಮ ಅನುಭವಗಳನ್ನು ಹೇಳಿಕೊಳ್ಳುತ್ತಾರೆ. ಆದರೆ ಜ್ಞಾನದ ಅಂತಿಮ ಅವಸ್ಥೆಯಲ್ಲಿ ತಿಳಿವು ಇರುವುದಿಲ್ಲ. ಹಾಗಾಗಿ ತಮ್ಮನ್ನೇ ತಿಳಿಯಲಾರರು. ಇನ್ನು ತತ್ಪೂರ್ವದ ಅವಸ್ಥೆಯಲ್ಲಿಯೂ ತಮಗೆ ತಕ್ಕ ತಿಳಿವು ಇರದ ಕಾರಣ ತಮ್ಮನ್ನು ತಾವು ಅರಿಯರು. ಹೀಗಾಗಿ, ಅಜ್ಞಾನದ ಅರಣ್ಯವನ್ನು ಚಪಲ ಬುದ್ಧಿಯಿಂದ ಭ್ರಷ್ಟರಾಗಿ ಪ್ರವೇಶಿಸುತ್ತಾರೆ. ತೊಂದರೆಗೀಡಾಗುತ್ತಾರೆ.

ಆ. ನಿಜದ ರೀತಿಯರಿತು ನಿರ್ಗುಣತ್ವ ಹೊಂದಿ
ನುಡಿಯೊಳಿರುವ ಅರ್ಥ ನೇರ ತಿಳಿದು,

ಹೇಳದಿರುವ ಅವನೆ ಪರಮಾತ್ಮನಾಗುವ.
ವಿಶ್ವದಾಭಿರಾಮ ಕೇಳು ವೇಮ.

ಆ. ತಿಳಿಯೆನೆನ್ನುವವನು ತಿರೆಯೊಳು ಕಡುಜಾಣ.
ತಿಳಿದೆನೆನ್ನುವವನು ತಿಳಿಯನೆಂದು.
ಮೌನದಿಂದಿರುವವ ಮಹಿಮೋತ್ತಮನವ.
ವಿಶ್ವದಾಭಿರಾಮ ಕೇಳು ವೇಮ.

ಈ ಪದ್ಯಗಳು ಸರಳವಾಗಿದೆ. ನೇರ ಅರ್ಥ ನೀಡುತ್ತಿವೆ. ತುಂಬಾ ಭಾವಗರ್ಭಿತವಾಗಿದೆ. ತನ್ನ ಸೂಕ್ಷ್ಮ ಅನುಭವಗಳನ್ನು ಸರಿಯಾಗಿ ತಿಳಿಇದುಕೊಳ್ಳಬೇಕು. ಸ್ಪಷ್ಟವಾಗಿ ಅರ್ಥೈಸಿಕೊಳ್ಳಬೇಕು. ಕೊನೆಗೆ ಮೌನವಾಗಿರಬೇಕು. ಮತ್ತೊಬ್ಬ ಪ್ರಾಮಾಣಿಕ ಸಾಧಕನೆದುರು ಮಾತ್ರ ಹೇಳಬಹುದು.

ಕರ್ಮರಹಸ್ಯ :

ಆ. ದಾನಧರ್ಮಗಳನು ತಾನು ಮಾಡಿ ಜನಿಸೆ,
ಕರ್ಮಗತಿಯಲಿ ಯಮ ಕಷ್ಟವೀಯ.
ಕರ್ಮ ಧರ್ಮಗಳನು ಕಡೆಗಾಣನು ಬ್ರಹ್ಮ.
ವಿಶ್ವದಾಭಿರಾಮ ಕೇಳು ವೇಮ.

ಪೂರ್ವ ಜನ್ಮದಲ್ಲಿ ದಾನ ಧರ್ಮಗಳನ್ನು ಮಾಡಿ ಜನಿಸಿದ್ದರೆ, ಅವುಗಳ ಪುಣ್ಯ ಫಲವು ಈ ಜನ್ಮದಲ್ಲಿ ಅನುಭವ ವೇದ್ಯವಾಗುವುದು. ಹಾಗಾಗಿ ಅವನ ಕರ್ಮ ಗತಿಯಲ್ಲಿ ಯಮನು ಕಷ್ಟ ನೀಡನು. ಒಬ್ಬನು ಮಾಡಿದ ಪುಣ್ಯ ಕರ್ಮಗಳನ್ನೂ, ಆಚರಿಸಿದ ಸದ್ಧರ್ಮವನ್ನೂ ವಿಧಿನಿಯಾಮಕನಾದ ಬ್ರಹ್ಮನು ಕಡೆಗಣಿಸನು. ಅವುಗಳ ಪರಿಗಣನೆ ಆಗಿಯೇ ಆಗುತ್ತದೆ.

ಆ. ಉಚಿತವಂತನಿರಲಿ, ಉದ್ಯೋಗ ಪರನಿರೆ,
ಸಂಪದ ತನಗುಂಟು, ಸಮಯದಲ್ಲಿ
ಪರರಿಗುಪಕರಿಸುತ ಪಾಲಿಸಲ್ಕೆ ಉಂಟು.
ವಿಶ್ವದಾಭಿರಾಮ ಕೇಳು ವೇಮ.

ಒಬ್ಬನು ಉದ್ಯೋಗಪರನಾಗಿದ್ದು, ಯೋಗ್ಯ ಶೀಲ ಸ್ವಭಾವಗಳನ್ನು ಹೊಂದಿದ್ದರೆ, ಅವನಿಗೆ ಸಂಪದ ಲಭಿಸುತ್ತದೆ. ಅವನದನ್ನು ಸೂಕ್ತ ಕಾಲದಲ್ಲಿ ಪರರಿಗೆ ಉಪಕರಿಸಲು, ಅವರನ್ನು ಪಾಲಿಸಲು,ಬಳಸಬಹುದು.

ಭೌತಿಕ ದ್ರವ್ಯ ನೀಡಿ ಸಹಾಯ ಸಲ್ಲಿಸುವುದು ಒಂದು ರೀತಿ. ಇದರಿಂದ ಜನರ ಬವಣೆ ತಾತ್ಪೂರ್ತಿಕವಾಗಿಯಾದರೂ ನಿವಾರಣೆಯಾಗುತ್ತದೆ. ಇದಕ್ಕಿಂತ ಉತ್ತರ ಮಾರ್ಗವೆಂದರೆ ಬೌದ್ಧಿಕ ನೆರವು ನೀಡುವುದು. ಇನ್ನು ಅಧ್ಯಾತ್ಮಿಕ ನೆರವು ನೀಡುವುದಂತೂ ಇನ್ನೂ ಉತ್ತಮ ವಿಧವಾಗಿದೆ.

ಆ. ಕಳ್ಳ ಗುರು ಕಟ್ಟುವ ಕರ್ಮಗಳನು ಎಲ್ಲ.
ಮಧ್ಯಮನು ಕಟ್ಟುವ ಮಂತ್ರ ತಂತ್ರ.

ಉತ್ತಮನು ಕಟ್ಟುವ ಯೋಗ ಸಾಮ್ರಾಜ್ಯವ.
ವಿಶ್ವದಾಭಿರಾಮ ಕೇಳು ವೇಮ.

ನೆರವು ನೀಡುವಲ್ಲಿನ ತರ ತಮಗಳನ್ನು ಹೀಗೂ ತಿಳಿಸಬಹುದು :

ದಕ್ಷಿಣೆಯ ಹೇತುವಿನಿಂದ ಸೋಗು ಹಾಕಿದ ಕಳ್ಳ ಗುರುವು ಅಂಥ ಇಂಥ ದೇವ ಪೂಜೆ, ವ್ರತ ನೇಮಗಳ ಕರ್ಮಗಳನ್ನು ಬೋಧಿಸುವನು. ಮಧ್ಯಮ ತರಗತಿಯ ಗುರುವು. ಮಂತ್ರ ಉಪದೇಶಿಸುವನು. ಇಲ್ಲವೆ ತಂತ್ರವಿಧಿಗಳನ್ನು ಕಲಿಸುತ್ತಾನೆ. ಇನ್ನು ಉತ್ತಮ ಗುರುವು ಯೋಗ ಸಾಮ್ರಾಜ್ಯವನ್ನೇ ಕಟ್ಟಿ ತನ್ನಂತೆ ಶಿಷ್ಯನನ್ನೂ ಯೋಗಿಯಾಗಿ ಮಾರ್ಪಡಿಸುತ್ತಾನೆ.

ಆ. ಪೂರ್ವ ವಾಸನೆಯಿಹ ಪುಣ್ಯಾತ್ಮನೈಸಿರಿ
ಬುಗ್ಗೆ ಪುಟಿವ ರೀತಿ ಭೂರಿಡುವುದು.
ಎಷ್ಟೊ ಜನಕೆ ಕೊಡಲು, ಎಂದಿನಂತಿರುವುದು.
ವಿಶ್ವದಾಭಿರಾಮ ಕೇಳು ವೇಮ.

ಪೂರ್ವ ಜನ್ಮದಲ್ಲಿ ಮಾಡಿದ ಕರ್ಮ ವಾಸನೆಯಿಂದ ಪುಣ್ಯಾತ್ಮನು ಐಸಿರಿಯನ್ನು ಪಡೆಯುತ್ತಾನೆ. ಅಷ್ಟೇ ಅಲ್ಲ. ಅದು ಪರರಿಗೆ ನೀಡಿದಂತೆಲ್ಲ ಬುಗ್ಗೆಯಂತೆ ಪುಟಿಯುತ್ತಲೇ ಶೇಖರಿಸಲ್ಪಡುತ್ತದೆ. ಅದನ್ನು ಸತ್ಪಾತ್ರತೆ ನೋಡಿ ಎಷ್ಟು ಜನರಿಗೆ ನೀಡಿದರೂ ಅದು ಕಡಿಮೆಯಾಗದೆ ಎಂದಿನಂತೆಯೇ ಇರುತ್ತದೆ.

ಇನ್ನು, ಬೌದ್ಧಿಕ ನೆರವು, ಇನ್ನೂ ಮೇಲು. ಅದರಿಂದ ಭವದ ಬವಣೆಯು ದೀರ್ಘ ಕಾಲ ಪರಿಹಾರಗೊಳ್ಳುತ್ತದೆ..

ಆ. ಜ್ಞಾತನಾದವನನು ನೇತೃವೆಂದು ತಿಳಿದು,
ನೀತಿಯರಿಯಬೇಕು ನಿಷ್ಠೆ ತಿಳಿದು.
ಜ್ಞಾನಿಯಿರಲು ಮತ್ತೆ ಲಾಭವೇನಿಲ್ಲವೇ ?
ವಿಶ್ವದಾಭಿರಾಮ ಕೇಳು ವೇಮ.

ತನಗೆ ಬೌದ್ಧಿಕವಾಗಿ ಮಾರ್ಗದರ್ಶನ ಮಾಡಲು ಜ್ಞಾನಿಯನ್ನು ನೇತೃವೆಂದು ತಿಳಿದು ಅವನ ಉಪದೇಶವನ್ನು ಪಡೆಯಬೇಕು. ಅವನ ಹಿತವಚನವನ್ನು ನಿಷ್ಠೆ ಹೊಂದಿ, ಅವನಿಂದ ನೀತಿಯನ್ನು ಅರಿಯಬೇಕು. ನಮ್ಮ ಪರಿಸರದಲ್ಲಿ ಅರಿತ ಜ್ಞಾನಿಯೋರ್ವನಿದ್ದರೆ, ಅವನ ಜ್ಞಾನದಿಂದ ಮಾರ್ಗದರ್ಶನದ ಲಾಭ ಪಡೆಯಬೇಡವೆ ?

ಆ. ಗುಣಿಗೆ ಜ್ಞಾನ ಮಹಿಮೆ ಕೊಂಚ ಹೇಳಿದರೂ
ಗಿರಿಯೆ ಆಯ್ತು ಅವನ ಗುಣಗಳಿಂದ.
ಗುಣವಿಹೀನಗೆಂದು ಕುದುರುವುದೆ ಆ ಪರಿ ?
ವಿಶ್ವದಾಭಿರಾಮ ಕೇಳು ವೇಮ.

ಒಳ್ಳೆಯ ಗುಣವಂತನಿಗೆ ಜ್ಞಾನದಾನ ಮಾಡಿದರೆ ಆ ಜ್ಞಾನದ ಮಹಿಮೆಯು ಅವನ

ಗುಣಗಳಿಂದಾಗಿ ಬೆಟ್ಟದಷ್ಟಾಗುತ್ತದೆ. ಆದರೆ ಗುಣ ವೀಹೀನನಿಗೆ ಜ್ಞಾನ ನೀಡಿದರೆ ಆ ರೀತಿ, ವಿಕಾಸಗೊಳ್ಳಬಹುದೇ ? ಇಲ್ಲ.

ಆ. ಸಾಧು ಜನಗಳನ್ನು ಸ್ಥಿರವಾಗಿ ಪೂಜಿಸಿ,
ಕರುಣೆ ಹೊಂದಿದಾಗ ಸರಸವಾಯ್ತು.
ಅರಿವು ತಪ್ಪದೆ ನಿಲಿಸಿ ಸದ್ಗುರುವ ಕೂಡಲೊ.
ವಿಶ್ವದಾಭಿರಾಮ ಕೇಳು ವೇಮ.

ಆಧ್ಯಾತ್ಮಿಕ ಕ್ಲಿಷ್ಟತೆಗಳನ್ನು ಪರಿಹರಿಸಿಕೊಳ್ಳಲು, ಸ್ಥಿರವಾಗಿ ಸಾಧು ಜನರನ್ನು ಪೂಜಿಸಬೇಕು. ಅವರ ಮನ ಒಲಿಸಿ ಅವರ ಕರುಣೆಯನ್ನು ಹೊಂದಬೇಕು. ಆಗ ಎಲ್ಲ ಕ್ಲಿಷ್ಟತೆಯೂ ತೊಲಗಿ ಸರಸವಾಗುತ್ತದೆ. ಆದ್ದರಿಂದ ಸದ್ಗುರುವಿನ ಉಪದೇಶದಲ್ಲಿ ತಪ್ಪದೆ ಅರಿವನ್ನು ನಿಲ್ಲಿಸಿ, ಅವನಲ್ಲಿ ಸೇರಿ ಒಂದಾಗಬೇಕು.

ನಿಷ್ಕಾಮ ಕರ್ಮ :

ಕರ್ಮವು ಕರ್ಮವೇ. ವಿಧಿ ನಿಯಮಾನುಸಾರ ಕರ್ಮಕ್ಕೆ ಪ್ರತಿಕರ್ಮವಿರಲೇಬೇಕು. ಕರ್ಮವು ಒಳ್ಳೆಯದೇ ಇರಲಿ ; ಕೆಟ್ಟದ್ದೇ ಇರಲಿ. ಆಯಾ ಕರ್ಮಕ್ಕೆ ತಕ್ಕಂತೆ ಅದರ ಪ್ರತಿಕರ್ಮವು ಒಳ್ಳೆಯ ಫಲ ನೀಡಬಹುದು. ಕೆಟ್ಟ ಫಲ ನೀಡಬಹುದು. ಬೇಡಿಯು ಬಂಗಾರದ್ದಾದರೂ ಬೇಡಿಯೇ. ಕಬ್ಬಿಣದ್ದಾದರೂ ಬೇಡಿಯೇ. ಎರಡೂ ಬಂಧನ ಕಾರಕವೇ. ಇಲ್ಲಿ ಉಪಾಯವೇನು? ಫಲ ಭೋಗಕ್ಕೆ ಬದ್ಧನಾಗದಿರುವುದು. ಅದು ಹೇಗೆ ? ಕರ್ಮ ಮಾಡುವಾಗ ಫಲದ ಆಸೆಯನ್ನು, ಆಸಕ್ತಿಯನ್ನು ತ್ಯಜಿಸಬೇಕು. ಆಗ ಕರ್ಮವು ನಿಷ್ಕಾಮ ಕರ್ಮವೆನಿಸುತ್ತದೆ. ನಿಷ್ಕಾಮ ಕರ್ಮವು ಫಲಭೋಗದಿಂದ ದೂರ ಮಾಡುತ್ತದೆ.

ಆ. ಹಂಸ ಮಾನಸ ಜಲ ಹತ್ತದಂತೆ ಚಲನೆ
ಆವ ಕರ್ಮಚಯವು ಅಂಟದಂತೆ ;
ಯೋಗಿ ಅಲೆವ ಸಕಲ ಭೋಗವೆದುರಿಗಿರಲು.
ವಿಶ್ವದಾಭಿರಾಮ ಕೇಳು ವೇಮ.

ಕರ್ಮಯೋಗಿಯ ಜೀವ ಹಂಸನು, ಮಾನಸ ಜಲವು ಹತ್ತದಂತೆ ಚಲಿಸುತ್ತಾನೆ. ಅವನಿಗೆ ಮಾನಸ ಜಲದಲ್ಲಿ ಏಳುವ ಫಲಕಾಮನೆಯ ತರಂಗಗಳು ತಾಕದಂತೆ ನಡೆಯುತ್ತಾನೆ. ಅದರಿಂದ ಯಾವ ಕರ್ಮ ಸಮೂಹವಾಗಲಿ ಅವನಿಗೆ ಅಂಟುವುದಿಲ್ಲ. ಫಲ ಭೋಗ ಅವಕಾಶಗಳು ಎದುರಿಗೇ ಇದ್ದರೂ ಕರ್ಮಯೋಗಿಯು ಫಲ ಭೋಗದ ಕಾಮನೆಗೆ ಅಂಟದಿರುತ್ತಾನೆ.

ಆ. ಆಗಬೇಕು ಯೋಗಿ ಅನಿಷ್ಟ ಮತಿ ತೊರೆದು,
ಭೋಗಕಂಟಿ ಯುಕ್ತಿ ಬಳಸಬೇಡ.
ಸದ್ಗುಣವನೆ ಮೊದಲು ಚಿನ್ನಾಗಿ ನೋಡಿರಿ.
ವಿಶ್ವದಾಭಿರಾಮ ಕೇಳು ವೇಮ.

ಫಲದ ಕಾಮನೆ ತೊರೆಯುವುದು ಇಷ್ಟ ಮತಿ. ಫಲದ ಆಸೆಗೆ ಬಿದ್ದು ಬಂಧನಕ್ಕೆ ಒಳಗಾಗುವುದು ಅನಿಷ್ಟಮತಿ. ಅನಿಷ್ಟಮತಿ ತೊರೆದು ಅಂದರೆ ಫಲಾಸಕ್ತ ತೊರೆದು ಕರ್ಮಯೋಗಿಯಾಗಬೇಕು. ಹೀಗೆ ಮಾಡದೆ ಭೋಗದ ಆಸೆಗೆ ಅಂಟಿ, ಭೋಗಾಸಕ್ತನಾಗಿ ಏನೇನೋ ಹಂಚಿಕೆ ಹೂಡಬೇಡ. ಯುಕ್ತಿ ಬಳಸಬೇಡ. ರಜೋಗುಣವು ಕರ್ಮಸಂಗಕ್ಕೆ ಎಳೆಯುತ್ತದೆ. ಆದ್ದರಿಂದ ಫಲಾಸಕ್ತಿ ತೊರೆಯುವ ಸದ್ಗುಣವನ್ನೇ ಮೊದಲು ಅಳವಡಿಸಿಕೋ. ಚೆನ್ನಾಗಿ ನೋಡಿರಿ.

ಅ. ಜನ್ಮಕಳೆದು ಬೇರೆ ಜನ್ಮವೆತ್ತಿ ಬರಲು,
ಕರ್ಮ ಧರ್ಮಗಳದು ಗಣನೆಯುಂಟು.
ಕರ್ಮ ಧರ್ಮಗಳನು ಕಡೆಗಣಿಸಲು ಬಹುದೆ ?
ವಿಶ್ವದಾಭಿರಾಮ ಕೇಳು ವೇಮ.

ಕರ್ಮಫಲಗಳ ಭೋಗವು ಪ್ರಚಲಿತ ಜನ್ಮಕ್ಕೆ ಮಾತ್ರ ಸೀಮಿತವಾಗಿಲ್ಲ. ತಾವು ಒಂದು ಜನ್ಮದಲ್ಲಿ ಮಾಡಿದ ಪಾಪ ಕರ್ಮಗಳೇ ಇರಲಿ, ಪುಣ್ಯಕರ ಧರ್ಮ ಕಾರ್ಯಗಳೇ ಇರಲಿ, ಅವುಗಳ ಫಲಗಳ ಗಣನೆಯು, ಜನ್ಮಾಂತರದಲ್ಲಿಯೂ ಉಂಟು. ಹಾಗಾಗಿ ಪಾಪ ಕರ್ಮವನ್ನೇ ಮಾಡಿರಲಿ, ಪುಣ್ಯಕರ ಧರ್ಮವನ್ನೇ ಮಾಡಿರಲಿ, ಅವುಗಳ ಫಲ ಭೋಗವನ್ನು ಅನುಭವಿಸದೆ, ಕಡೆಗಣಿಸುವಂತಿಲ್ಲ.

ಅ. ಕರ್ಮ ಗುಣಗಳೆಲ್ಲ ಕಡೆಗಣಿಸಿ ನಡೆದರೆ,
ತತ್ತ್ವವೆಂತು ತನಗೆ ತಗಲಿ ಇಹುದು ?
ಎಣ್ಣೆ ಇರದೆ ದೀಪ ಎಳ್ಳಿಂದ ಉರಿವುದೆ ?
ವಿಶ್ವದಾಭಿರಾಮ ಕೇಳು ವೇಮ.

ಕರ್ಮವು ಫಲವೀಯುತ್ತದೆ. ಕರ್ಮಕ್ಕೆ ಪ್ರತಿಕರ್ಮವಿರುವುದೇ ಪ್ರಕೃತಿ ನಿಯಮ. ಇದು ಭೌತಿಕ ಕ್ಷೇತ್ರದಲ್ಲೂ ಸರಿ ; ಮಾನಸಿಕ ಕ್ಷೇತ್ರದಲ್ಲೂ ಸರಿ. ಪುಣ್ಯ ಕರ್ಮಗಳು ಪುಣ್ಯ ಫಲವೀಯುತ್ತವೆ. ಪಾಪ ಕರ್ಮಗಳು ದುಷ್ಟ ಫಲವೀಯುತ್ತವೆ. ಹೀಗಿರುವಾಗ ಕರ್ಮಗುಣಗಳನ್ನೆಲ್ಲ ಕಡೆಗಣಿಸಿ ನಡೆದರೆ, ಕರ್ಮ ಬಂಧನ ತಪ್ಪೀತೇ ? ಆಗ ಆ ಸ್ತರದಿಂದ ಮೇಲು ಮೇಲಿನ ಸ್ತರದ ತತ್ತ್ವಗಳು ತನಗೆ ಹೇಗೆ ತಗುಲಬಹುದು ? ಎಳ್ಳನ್ನು ಗಾಣದಲ್ಲಿ ಅರೆಯುವ ಕರ್ಮದಿಂದ ಎಣ್ಣೆ ಬರುವುದು ತಾನೇ ? ಆ ಎಣ್ಣೆಯಿಂದ ಮಾತ್ರ ದೀಪ ಉರಿಯಬಹುದೇ ಹೊರತು ಎಳ್ಳಿನಿಂದಲ್ಲ.. ಅದೇ ರೀತಿ ಸತ್ಕರ್ಮದಿಂದ ಮನೋಶುದ್ಧಿ ಹೊಂದಿ ತತ್ತ್ವವನ್ನು ತಿಳಿಯಬಹುದು.

ಅ. ಧರ್ಮ ಕರ್ಮಗಳನು ತಪ್ಪದೆ ಮಾಡದಿರೆ,
ಕರ್ಮಜೀವಿ ಮೇಲು ಕಾಣಲಾರ.
ನಿರ್ಮಲ ಹೃದಯದವ ನಿನ್ನ ರೂಪದೊಳಿಹ.
ವಿಶ್ವದಾಭಿರಾಮ ಕೇಳು ವೇಮ.

''ಧಾರಣಾತ್ ಧರ್ಮ ಇತ್ಯಾಹುಃ ಧರ್ಮೋ ಧಾರಯತಿ ಪ್ರಜಾನಾಮ್'' ಕೂಡಿಸಿ

ಹಿಡಿಯುವುದರಿಂದ ಧರ್ಮವೆನಿಸುತ್ತದೆ. ಲೋಕ ಸಂಗ್ರಹದ ಕರ್ಮಗಳನ್ನು ತಪ್ಪದೆ ಮಾಡದಿದ್ದರೆ, ಕರ್ಮ ಜೀವಿಯು ಮೇಲು ಕಾಣಲಾರನು. ಆಸೆ, ಕಾಮನೆ ಇತ್ಯಾದಿ ಮಲಗಳಿಲ್ಲದ ನಿರ್ಮಲ ಹೃದಯಿಯ ಮಾತು ಬೇರೆ. ಅವನು ಯೋಗಿಯ ರೀತಿ ಇರುತ್ತಾನೆ.

ಕಂ. ಕರ್ಮಾಕರ್ಮಕ್ಕೋಸುಗ
ನರ್ಮದಿ ಓರ್ವನಿರುವ, ಒಳಗಾತ್ಮನೆ ಗುರುತ್ಯೆ.
ಧರ್ಮಾಧರ್ಮಗಳನು ಆ
ನಿರ್ಮಲಮತಿಯಾದವನೆ ನಿಲಿಸುವ ವೇಮಾ

ಕರ್ಮವಾವುದು ? ಅಕರ್ಮವಾವುದು ? ಇವುಗಳ ಲೀಲೆಯೇನು ? ಎಂಬುದನ್ನು ನಿರ್ಧರಿಸಲು ಓರ್ವನಿದ್ದಾನೆ. ಅಂತರಾತ್ಮನೇ ಅವನ ಇರವಿಗೆ ಗುರುತು. ಯಾವುದು ಧರ್ಮ ? ಇನ್ನಾವುದು ಅಧರ್ಮ ? ಎಂಬುದನ್ನು ಆ ನಿರ್ಮಲ ಮತಿಯಾದವನೇ ನಿರ್ಧರಿಸುತ್ತಾನೆ. ಆಸಕ್ತಿಯಿಂದ ಮೂಡುವುದು ಕರ್ಮ. ಕರ್ಮ ಮಾಡದಿರುವುದು. ಅಕರ್ಮವಲ್ಲ. ಏಕೆಂದರೆ ಯಾರೂ ಕರ್ಮ ಮಾಡದೆ ಇರಲಾರರು. ಆದರೆ ಫಲಾಸಕ್ತಿ ತೊರೆದು ಕರ್ಮ ಮಾಡುವುದು ಅಕರ್ಮವೆನಿಸುತ್ತದೆ. ಇದನ್ನು ಅಂತರಾತ್ಮನೇ ಗುರುತಿಸಬಲ್ಲನು.

ಕಂ. ಕರ್ಮಾಕರ್ಮಗಳಳಿಯದ
ಮರ್ಮಂಗಳು ಇಂದ್ರಜಾಲ ಮಹಿಮೆಯ ವಿದ್ಯಂ
ಕರ್ಮದ ಮರ್ಮವು ಪ್ರಣವವು
ನಿರ್ಮಲ ಮತಿಯರಿಯಬೇಕು, ನಿಜವಿದು, ವೇಮಾ.

ಕರ್ಮವು ಮನಸ್ಸು ಮತ್ತು ಇಂದ್ರಿಯಗಳ ಮೂಲಕ ನಡೆಯುತ್ತದೆ. ಯಾವನು ಕರ್ಮೇಂದ್ರಿಯಗಳನ್ನು ನಿಗ್ರಹಿಸಿ, ಇಂದ್ರಿಯ ವಿಷಯಗಳನ್ನು ಮನಸ್ಸಿನಿಂದ ಸ್ಮರಿಸುತ್ತಿರುವನೋ, ಅವನು ಅಕರ್ಮಿಯೇನಲ್ಲ. ಕರ್ಮದ ಮರ್ಮವು ಪ್ರಣವವು. ಅ-ಉ-ಮ-ಓಂ ಎಂದು ಸೃಷ್ಟಿ, ಸ್ಥಿತಿ ಮತ್ತು ಲಯಗಳೆಂಬ ಕರ್ಮದ ಸಂಕೇತವಾದ ಪ್ರಣವವು ಕರ್ಮದ ಮರ್ಮವಾಗಿದೆ. ಇದನ್ನು ಎಲ್ಲ ಮಲಗಳಿಂದ ದೂರನಾದ ನಿರ್ಮಲ ಮತಿಯು ಅರಿಯಬೇಕು.

ಕಂ. ಕರ್ಮದ ನಿವೃತ್ತಿಯಾಗಲ್
ನಿರ್ಮಲವಾದ ಭವನವನು ಚೊಕ್ಕಟವರಿಯಲ್ ;
ಕರ್ಮವು ತೀರುವ ವೇಳೆಗೆ
ಧರ್ಮವೆ ನಿಜ ದೇವರದನು, ತಿಳಿವರು ವೇಮಾ.

ಕರ್ಮ ಮಾಡುವವನಾರು ? ಫಲ ಭೋಗಿಸುವವನಾರು ? 'ಅಹಂ ಕರ್ತಾ, ಫಲ ಭೋಕ್ತಾ'. ಅಹಮೇ ಕರ್ತನಾಗಿದೆ. ಅದುವೇ ಫಲದ ಭೋಕ್ತಾ ಆಗಿದೆ. ಯಾವಾಗ ಅಹಂ ನಾಶವಾಗುವುದೋ, ಆಗ ಕರ್ಮಪ್ರವೃತ್ತಿ ಇಲ್ಲವಾಗುತ್ತದೆ. ಅಂದರೆ ಕರ್ಮದ ನಿವೃತ್ತಿಯಾಗುತ್ತದೆ. ಆಗ ಮನದಲ್ಲಿ ಆವರಣೇ ಮಲಗಳು ನಿಶ್ಶೇಷವಾಗುತ್ತವೆ. ವಿಕ್ಷೇಪ ಮಲಗಳಿಗೆ ಅವಕಾಶವಿರದು. ಹೀಗಾಗಿ ಆತ್ಮನಿಗೆ ನಿರ್ಮಲವಾದ ಭವನವು ಸಿದ್ಧವಾಗುತ್ತದೆ. ಇದನ್ನು ಚೊಕ್ಕಟವಾಗಿ ಯಾವುದೇ ಬಗೆಯ ಸಂದೇಶಕ್ಕೆ ಇಂಬುಗೊಡದೆ ಅರಿಯಬೇಕು.

ಅರಿಯಬೇಕು. ಕರ್ಮವು ತೀರುವ ವೇಳೆಗೆ, ಅಂದರೆ ಅಹಂ ಅಳಿಯುವ ವೇಳೆಗೆ, ಧರ್ಮವೇ ನಿಜ ದೇವರಾಗುತ್ತದೆ. ಲೋಕ ಸಂಗ್ರಹ ಮಾತ್ರ ಧರ್ಮವೆನಿಸುತ್ತದೆ.

ಕಂ. ನರಜನ್ಮವ ತಾನೆತ್ತಿಯು
ಪರಮಾತ್ಮನರಿಯದಿರಲು, ಪಾಪಾತ್ಮನಲಾ !
ಬರಿ ದುರಿತ ಕರ್ಮ ಗೆಯ್ದೊಡೆ,
ಮರಳಿ ಅಧೋಗತಿ ಪಡೆವನು, ಅರಿಯೈ ವೇಮಾ.

ಸ್ಥೂಲ ನಿರ್ಜೀವ ಸ್ಥಿತಿಯಿಂದ, ಇರುವೆ ಮೊದಲುಗೊಂಡು, ಎಂಭತ್ತು ನಾಲ್ಕು ಲಕ್ಷ ಯೋನಿಗಳನ್ನು ದಾಟಿ ಜೀವಿಯು ಸರ್ವಶ್ರೇಷ್ಠವಾದ ನರ ಜನ್ಮವನ್ನು ಪಡೆಯುತ್ತಾನೆ. ನಿದ್ರೆ, ಆಹಾರ, ಮೈಥುನಗಳು ನರನಿಗೂ ಪಶುಗಳಿಗೂ ಸಮಾನ ಸ್ವಭಾವಗಳಾಗಿವೆ. ಮೋಕ್ಷ ಸಂಪಾದನೆಯೇ ಮಾನವನ ವಿಶೇಷ ಧರ್ಮ. ಆದ್ದರಿಂದ ನರ ಜನ್ಮವನ್ನು ತಾನು ಪಡೆದಿದ್ದರೂ ಪರಮಾತ್ಮನನ್ನು ಅರಿಯದಿದ್ದರೆ, ಅವನು ಪಾಪಾತ್ಮನಲ್ಲವೇ ? ಬರೀ ಪಾಪ ಕರ್ಮಗಳನ್ನು ಮಾಡುತ್ತಿದ್ದರೆ, ಅವನು ಮರಳಿ ಅಧೋಗತಿಗಿಳಿದು ಹೀನ ಜನ್ಮಗಳನ್ನು ಪಡೆಯಬಹುದು. ಇದನ್ನು ಚೆನ್ನಾಗಿ ಅರಿತುಕೋ.

ಕರ್ತವ್ಯ :

ಕರ್ಮಯೋಗದ ಅಭ್ಯಾಸದಲ್ಲಿ ಕರ್ತವ್ಯವೆಂದರೇನೆಂದು ತಿಳಿಯುವುದು ತುಂಬಾ ಮುಖ್ಯವಾಗಿದೆ. ಬೇರೆ ಬೇರೆ ಜನಾಂಗಗಳಲ್ಲಿ, ಬೇರೆ ಬೇರೆ ದೇಶಗಳಲ್ಲಿ ಕರ್ತವ್ಯ ಕುರಿತು ಬೇರೆ ಬೇರೆ ಅಭಿಪ್ರಾಯಗಳಿವೆ. ಆದರೆ ಸಾಮಾನ್ಯವಾಗಿ ಸರ್ವ ಸಮ್ಮತ ಅಭಿಮತವೆಂದರೆ, ''ಯಾರನ್ನೂ ಹಿಂಸಿಸಬೇಡ, ಹಿಂಸಿಸುವುದು ಪಾಪ, ಹಿಂಸಿಸದಿರುವುದು ಪುಣ್ಯ'' ಎಂಬುದೇ ಆಗಿದೆ.

ಆ. ಹಿಂಸೆ ಗೆಯ್ಯದಿಹುದೆ ಹಿರಿಯ ಪುಣ್ಯ ಧರ್ಮ,
ಅನದೆ ಹಿಂಸೆ ಗೆಯ್ವರವನಿ ಜನರು.
ಸತ್ತ ಪಶುವ ತಿನುವ ಚಂಡಾಲನೆ ಮೇಲು.
ವಿಶ್ವದಾಭಿರಾಮ ಕೇಳು ವೇಮ.

ಹಿಂಸೆ ಮಾಡದಿರುವುದೇ ದೊಡ್ಡ ಪುಣ್ಯ ಧರ್ಮವಾಗಿದೆ. ಹಿಂಸೆ ಮಾಡುವುದು ಘೋರ ಪಾಪವಷ್ಟೇ. ಆದರೂ ಜಗತ್ತಿನ ಜನರು ಹಿಂಸೆ ಮಾಡುತ್ತಿರುತ್ತಾರೆ. ಹಾಗೆ ನೋಡಿದರೆ, ಸತ್ತ ಪಶುವನ್ನು ತಿನ್ನುವ ಚಂಡಾಲನು (ಅಂದರೆ ಬ್ರಾಹ್ಮಣಿಯಲ್ಲಿ ಶೂದ್ರನಿಂದ ಹುಟ್ಟಿದ ಸಂತತಿ) ಯಜ್ಞ ಯಾಗಗಳ ಹೆಸರಿನಲ್ಲಿ ಪ್ರಾಣಿ ಬಲಿ ಕೊಟ್ಟು, ಯಜ್ಞ ಶೇಷವೆಂದು ಮಾಂಸವನ್ನು ಭಕ್ಷಿಸುವ ಬ್ರಾಹ್ಮಣರಿಗಿಂತ ಮೇಲು.

ಆ. ಪಂಚಮ ವೇದವೆನೆ ಭಾರತವೆ ಎನ್ನುತ,
ಸ್ತುತಿಪರೇಕ ಜನ ಮತಿಯ ತೊರೆದು ?
ಹಿಂಸೆಯರಿತು ನೋಡೆ, ಇಷ್ಟವೆಂತಿನಿಸುವುದು ?
ವಿಶ್ವದಾಭಿರಾಮ ಕೇಳು ವೇಮ.

ಹಿಂಸೆಯು ಪಾಪ ಕಾರ್ಯವಾದ ಮೇಲೆ, ಪರಪೀಡೆಯನ್ನೂ, ಜನಾಂಗದ ಕಗ್ಗೊಲೆಯನ್ನೂ ವೈಭವೀಕರಿಸುವ ಮಹಾಭಾರತವನ್ನು ಪಂಚಮವೇದವೆಂದು ಸ್ತುತಿಸುತ್ತಿರುವುದೇಕೆ? ಜನರಿಗೆ ಮತಿ ಭ್ರಮಣೆಯಾಗಿದೆಯೇ ? ಅರಿತು ನೋಡಿದರೆ, ಮಹಾಭಾರತದಲ್ಲಿ ಕಾಣಬರುವ ಹಿಂಸೆಯು ಮನಸ್ಸಿಗೆ ಹೇಗೆ ಇಷ್ಟವಾದೀತು ?

ಇಂಥ ಸ್ಥಾನ ಮಾನದವರು ಇಂಥದೇ ವೇಷ ಧರಿಸಬೇಕೆಂಬ ವಿಧಿಯಿಲ್ಲ. ಮತ ಮತಗಳಿಗೊಂದೊಂದು ವೇಷ ಬೇಕಾಗಿಲ್ಲ. ಬಹು ವಿಧ ವೇಷ ಧರಿಸುವುದು ಕೂಳಿಗಾಗಿಯಷ್ಟೇ; ಇಲ್ಲವೆ ಒಣ ಪ್ರತಿಷ್ಠೆಗಾಗಿ.

ಆ. ವಿಶ್ವಾಸಕ್ಕೆ ತಕ್ಕ ವೇಷವಾವುದಿಲ್ಲ.
ಉಣುವ ತಿಂಡಿ ಇಲ್ಲ, ಉಡುವ ವಸ್ತ್ರ.
ವಿಶ್ವಮಯನಾಗಿಯು ವಿಭುವು ಹೊಳೆಯನೆಂತು ?
ವಿಶ್ವದಾಭಿರಾಮ ಕೇಳು ವೇಮ.

ಇಂಥದೊಂದು ವೇಷವು ವಿಶ್ವಾಸಕ್ಕೆ ತಕ್ಕದ್ದು ಎನ್ನಿಸುವಂತಿಲ್ಲ. ಸರ್ವರಿಗೂ ಸಮಾನ ಸಮ್ಮತವಾದ ಉಣ್ಣುವ ತಿಂಡಿಯೂ ಇಲ್ಲ. ಉಡುವ ವಸ್ತ್ರವೂ ಇಲ್ಲ. ಇನ್ನೂ ಸೋಜಿಗವೆಂದರೆ, ವಿಭುವಾದ ದೇವರು ವಿಶ್ವವನ್ನು ತುಂಬಿದ್ದರೂ ಅವನು ಜನರಿಗೆ ಹೊಳೆಯುತ್ತಿಲ್ಲ. ಜನರು ತಮ್ಮ ತಮ್ಮ ಕಲ್ಪನೆಗೆ ತಕ್ಕಂತೆ ದೇವರನ್ನು ಕಲ್ಪಿಸಿಕೊಳ್ಳುತ್ತಾರೆ.

ಆ. ಧರೆಯಲ್ಲಿ ಸಾವಿರ ಧರಿಸುತಿಹರು ವೇಷ
ಮೈಗಳ್ಳರು ತಿಂಡಿ ಫಲವ ಬಯಸಿ,
ಅಲ್ಲ ಮೇಲು, ಹೃದಯ ಆಕಾಶದಿ ಉಂಟು
ವಿಶ್ವದಾಭಿರಾಮ ಕೇಳು ವೇಮ.

ಈ ಭೂಮಿಯ ಮೇಲೆ ಹೊಟ್ಟೆ ಹೊರೆಯಲೆಂದು ಸಾವಿರ ಬಗೆಯ ವೇಷ ಧರಿಸುವರು. ಅವರೆಲ್ಲ ಸಾಧನ ಮಾಡಲಾರದ ಮೈಗಳ್ಳರು. ವೇಷ ಧರಿಸುವುದೆಲ್ಲ ತಿಂಡಿಗಾಗಿ, ಫಲಕ್ಕಾಗಿ. 'ಉದರ ನಿಮಿತ್ತಂ ಬಹು ಕೃತ ವೇಷಂ ಈ ರೀತಿಯ ವರ್ತನೆ ಮೇಲು ಅಲ್ಲ. ಪರಮನು ವೇಷದಲ್ಲಿಲ್ಲ. ಹೃದಯಾಕಾಶದಲ್ಲಿ ಇದ್ದಾನೆ. ಅವನನ್ನು ಧ್ಯಾನಿಸಿ ಆತ್ಮಿಕ ಹಸಿವು ಹಿಂಗಿಸಿಕೊಳ್ಳಬೇಕು.

ನಿಸ್ವಾರ್ಥತೆ :

ನೆರವು ನೀಡುವಾಗ ಸ್ವಾರ್ಥವಿರಕೂಡದು. ತಾನು ಯಾರಿಗೆ ಕೊಡುವನೋ, ಅವರಿಂದ ಏನನ್ನೂ ಅಪೇಕ್ಷಿಸಬಾರದು.

ಆ. ತಾವೆ ಒಲಿದು ಕೊಡಲು ತಮಗೆ ಅದುವೆ ಉಂಟು.
ಕೇಳಲೀಯೆ ತಮಗೆ ಕೇಳಿದಷ್ಟು.
ಕೇಳಲೀಯದಾತಗೆಂದು ಇಲ್ಲವೇನು.
ವಿಶ್ವದಾಭಿರಾಮ ಕೇಳು ವೇಮ.

ತಮ್ಮಲ್ಲಿ ಧನ ಸಂಪತ್ತು ಇದೆ. ಧಾನ್ಯ ಸಂಪತ್ತೂ ಇದೆ. ಹೀಗಿರುವಾಗ ಸಮಾಜದಲ್ಲಿ ಕೊರತೆಯಿಂದ ಬಳಲುವ ಜನರು ಹಲವರು ಉಂಟು. ಅವರ ಪರಿಸ್ಥಿತಿಯನ್ನು ಅರಿತರೆ ಅವರು ನೆರವು ಪಡೆಯಲು ಸತ್ಪಾತ್ರರೆಂಬುದೂ ತಿಳಿಯುತ್ತದೆ. ಅಂಥವರಿಗೆ, ಕೇಳಲಿ, ಕೇಳದಿರಲಿ, ತಾವೇ ಒಲಿದು ಕೊಡುವುದನ್ನು ಕೊಡಬೇಕು. ಹೀಗೆ ನೀಡಿದ ಕೊಡುಗೆ ತಮ್ಮ ಪುಣ್ಯವನ್ನು ವರ್ಧಿಸುತ್ತದೆ. ಎಷ್ಟೋ ಸಾರಿ , ನೆರವು ಪಡೆದವರು ತಮ್ಮ ಪರಿಸ್ಥಿತಿ ಸುಧಾರಿಸಿದಾಗ ಮರಳಿ, ಪಡೆದ ವಸ್ತುಗಳನ್ನು ಹಿಂತಿರುಗಿಸುವರು. ಇನ್ನು ಕೆಲವರು ತಮ್ಮ ಕೊರತೆಯನ್ನು ಹೇಳಿಕೊಂಡು ನೆರವು ಕೇಳುತ್ತಾರೆ. ಅವರಿಗೆ ನೆರವಾದರೆ, ತಮಗೆ ತಾವು ಕೇಳಿಕೊಂಡಷ್ಟು ಸಂಪತ್ತನ್ನು ದೈವವು ನೀಡುತ್ತದೆ. ಇನ್ನು ಕೊರತೆ ಇದ್ದವನು ಬಂದು ನೆರವು ಕೇಳಿಕೊಂಡರೂ, ತನ್ನಲ್ಲಿ ಇರುವ ಅಧಿಕ ಸಂಪತ್ತನ್ನು ನೀಡದವನಿಗೆ ಎಂದೂ ಏನೂ ಸಿಗದು.

ಕಂ. ಇದು ತನಗೆ ಸಾಕು ಎನಿಸಲ್,
ಕದಲದೆ ಮನದಿ ಸಕಲ ವಸ್ತುಗಳ ಭ್ರಮೆಯೋಳ್,
ಅದ ಮತ್ತೆ ತೊರೆಯದಿರಿಸಲ್,
ಅದುವೇ ಸಂಸಾರ ಬೀಜವಾದುದು ವೇಮಾ.

ಗೃಹಸ್ಥನು ತನ್ನ ಬೇಕು ಬೇಡಗಳನ್ನು ತಿಳಿದಿರಬೇಕು. ಯಾವುದೊಂದು ವಸ್ತುವು ತನ್ನ ಉಪಭೋಗಕ್ಕೆ ಸಾಕು ಎನ್ನಿಸಿದರೆ, ಅದನ್ನು ಅಗತ್ಯವಿರುವವರಿಗೆ ನೀಡಬೇಕು. ಮನದಲ್ಲಿ ಆ ವಸ್ತು ತನ್ನಿಂದ ಹೋಗುವುದಲ್ಲ ! ಎಂದು ಕನಲಕೂಡದು. ಸಕಲ ವಸ್ತುಗಳ ಬಗೆಗೆ ಮೋಹ ತಾಳಿ ಲೋಭದಿಂದ ಭ್ರಮಿಸಕೊಡದು. ತನ್ನ ಅಗತ್ಯಕ್ಕಿಂತ ಹೆಚ್ಚಿರುವ ವಸ್ತುವನ್ನು ತೊರೆಯಬೇಕು. ಹಾಗೆ ತೊರೆಯದಿರುವುದೇ ಸಂಸಾರ ಬೀಜವಾಗುತ್ತದೆ. ಹುಟ್ಟು ಸಾವಿನ ಚಕ್ರದಲ್ಲಿ ಸಿಲುಕಿಸುತ್ತದೆ.

ಕಂ. ಪರರನು ನೀನೆಂದರಿತೊಡೆ,
ಪರ ಬುದ್ಧಿ ಮೀರದೆ, ನೀವು ಆದರದಿ ಇರಲಾ
ಸ್ಥಿರ ವೇತ್ಯತೆಯಲಿ ತೋಚುವ,
ಪರಿಪೂರ್ಣವೆ ಬಟ್ಟಬಯಲು, ಚೊಕ್ಕಟ, ವೇಮಾ.

ಗೃಹಸ್ಥನು ಸ್ವಾರ್ಥರಹಿತನಾಗಿ ಇರಬೇಕು. ಪರರಿಗೆ ಆಪತ್ತು ಬಂದಾಗ ಅವರ ನೆರವಿಗೆ ಮುಂದಾಗಬೇಕು. ಪರರು, ತಾನು, ಬೇರೆ ಎಂದು ತಿಳಿಯದೆ, ಒಂದೇ ಎಂದು ತಿಳಿದು ಸ್ವ-ಪರ ಎಂಬ ಬುದ್ಧಿ ಅತಿಶಯಿಸದೆ, ಅವರೊಂದಿಗೆ ಮಧುರ ಪ್ರೇಮಾದರಗಳಿಂದ ಇರಲು, ತನಗೆ ಅಚಲವಾದ, ಸ್ಥಿರವಾದ ಜ್ಞಾನವು ತೋಚುತ್ತದೆ. ಆಗ ಅವನು ಪರಿಪೂರ್ಣನಾಗುತ್ತಾನೆ. ಬಟ್ಟಬಯಲು ತಲುಪುತ್ತಾನೆ.

ಕರ್ತವ್ಯ ನಿಷ್ಠುರತೆ :

ಕರ್ತವ್ಯವು ಸದಾ ಸಿಹಿಯಾಗಿರುವುದಿಲ್ಲ. ಹೆಂಡಿರು ಮಕ್ಕಳನ್ನು ಮರ್ಯಾದೆ ಮೀರದಂತೆ ಇರಿಸಲು, ಅವರೊಂದಿಗೆ ಅನೇಕ ಸಲ ನಿಷ್ಠುರವಾಗಿ ವರ್ತಿಸಬೇಕಾಗುತ್ತದೆ. ಕರ್ತವ್ಯವು ಮಾರ್ದವವಾಗಬೇಕಾದರೆ ಪ್ರೀತಿಯ ಲೇಪ ಬೇಕು. ಪ್ರೀತಿಯು ಸ್ವತಂತ್ರತೆಯಲ್ಲಿ ಮೂಡುತ್ತದೆ. ಆದರೆ ಕೋಪ, ಮತ್ಸರ ಇತ್ಯಾದಿ ವೃತ್ತಿಗಳಿಗೆ ದಾಸರಾದರೆ ಪ್ರೀತಿ ಮೊಳೆಯದು.

ಆ. ಮಡದಿಯನು ಮಣಿಸದೆ ಮೊದಲು ಅಧಮನಾಗಿ,
ಮೀರೆ ಹಣಿವೆನಲು ಮಂಕು ತನವು.
ಮರವಾಗಿ ಬೆಳೆದುದು ಚಿವುಟಲು ಅಳಿವುದೇ ?
ವಿಶ್ವದಾಭಿರಾಮ ಕೇಳು ವೇಮ.

ಹೆಂಡತಿಯನ್ನು ಕಾಯುವವನೆ ಕಾಂತನೆನಿಸುವನು. 'ಪಾಲನಾತ್ ಪತಿಃ' ಆದ್ದರಿಂದ ಸತಿಯು ಮರ್ಯಾದೆ ಮೀರದಂತೆ, ತನ್ನ ಅಂಕೆಯಲ್ಲಿ ಇರಿಸಿಕೊಳ್ಳುವುದು, ಪತಿಯಾದವನ ಕರ್ತವ್ಯವಾಗಿದೆ. ಸತಿಯ ಸ್ವಭಾವವನ್ನು ಸದಾಕಾಲ ಸಮೀಕ್ಷಿಸುತ್ತಿರಬೇಕು. ಅವಳು ಮರ್ಯಾದೆ ಮೀರುವ ಸುಳಿವು ದೊರೆತೊಡನೆ ಅವಳಿಗೆ ತಿಳಿಸಿ ಹೇಳಿ, ಛೀ ಥೂ ಎಂದು ಹಳಿದು, ಮೊದಲೇ ಮಣಿಸಬೇಕು. ಹಾಗೆ ಮಾಡದವನು ಅಧಮನಾಗುತ್ತಾನೆ. ತನ್ನ ಅಂಕೆ ಮೀರಿ ಹೋದ ಮೇಲೆ ಹಣಿವೆನೆಂದರೆ, ಅದೆಲ್ಲ ಬರೀ ಹುಚ್ಚುತನವೆನಿಸುತ್ತದೆ. ಏಕೆಂದರೆ ಸಸಿಯಿದ್ದಾಗ ಚಿವುಟಿದರೆ ಹೋಗುವಂಥದು, ಬೆಳೆದು ಮರವಾದ ಮೇಲೆ ಚಿವುಟಿದರೆ ಹೋಗಬಹುದೇ ?

ದಾಂಪತ್ಯದಲ್ಲಿ ಸರಸ ವಿರಸಗಳಿರುವುದು ಸಹಜ. ವಿರಸ ಉಂಟಾದಾಗ ಸಹನಶೀಲತೆಯಿಂದ ವರ್ತಿಸಿ ಸರಿಪಡಿಸಿಕೊಳ್ಳಬೇಕು.

ಆ. ಕೆರವಿನೊಳಗೆ ಕಲ್ಲು, ಕಿವಿಯ ಒಳಗೆ ಹುಳವು,
ಕಣ್ಣಿನೊಳಗೆ ಕೆಸರು, ಕಾಲ ಮುಳ್ಳು,
ಮನೆಯೊಳಗಿನ ಜಗಳ ಮತ್ತೆ ಹೇಳಲೇನು ?
ವಿಶ್ವದಾಭಿರಾಮಕೇಳು ವೇಮ.

ಕೆರವಿನಲ್ಲಿ ಕಲ್ಲು ಸೇರಿ ಕಾಲಿಗೆ ಒತ್ತುತ್ತದೆ. ಕಿವಿಯಲ್ಲಿ ಕಡಿಜೀರಿಗೆ ಹುಳುವು, ಸೇರಿ ಕಷ್ಟ ಕೊಡುತ್ತದೆ. ಅದೇ ರೀತಿ ಕಣ್ಣಿನಲ್ಲಿ ಕೆಸರು ಹಾರಿ ಬಂದು ಚುಚ್ಚುತ್ತದೆ. ಕಾಲಿನಲ್ಲಿ ಮುಳ್ಳು ನೆಟ್ಟಿದ್ದರೆ, ಸತತ ನೋವುಂಟು ಮಾಡುತ್ತದೆ. ಗೃಹ ಕಲಹವೂ ಸಹ ಅಲ್ಪವೆನಿಸಿದರೂ ಬಹಳ ಕ್ಲೇಶಕರವಾಗಿರುತ್ತದೆ. ಆ ಕುರಿತು ಎಲ್ಲರಿಗೂ ತಿಳಿದೇ ಇದೆ. ಹೆಚ್ಚು ಹೇಳಲೇನು ?

ಸತಿಯು ಸುಖ ಸೌಖ್ಯಗಳಿಗೆ ಆಲಯದಂತಿದ್ದರೆ, ಅವಳನ್ನು ಸತಿಯೆನ್ನಬಹುದು. ಹಾಗೆ ಇರದಿದ್ದರೆ, ಅವಳು ಯಮದೂತೆಯಂತೆ ಕಾಣುತ್ತಾಳೆ.

ಕಂ. ಸತಿಯೆನೆ ಸುಖ ಸೌಖ್ಯಗಳಿಗೆ
ಅತಿ ಪ್ರಿಯ ಆಲಯವಾಗೆ, ಸತಿಯೆನೆ ಬರ್ಕುಂ
ಅದು ವಿಧ ; ಅಂತಿರದಾಕೆಯ
ಕತೆಯೇ ? ಕಾಲನತಿ ಹಿರಿಯ ದೂತಳು ವೇಮಾ.

ಮಗನು ತಂದೆ ತಾಯಿಗಳಿಗೆ ವಿಧೇಯನಾಗಿರಬೇಕು. ಹಾಗೆ ಇರುವಂತೆ ನೋಡಿಕೊಳ್ಳುವುದು ತಂದೆಯಾದವನ ಕರ್ತವ್ಯ.

ಕಂ. ಕಂದನು ಬೆಳೆದು ಹಿರಿಯರಿಗೆ
ವಂದಿಸಿ ವಿಧೇಯನಿರಲಾನಂದವೆನಿಪುದೈ.

ಹೊಂದಿ ಕೆಡನು ಸತ್ಪುರುಷರ,
ನಿಂದೆಗಿಳಿಯೆ ಚಿಂತೆಯುಂಟು, ನಿಜವಿದು, ವೇಮಾ.

ಮಗನು ಹಡೆದ ತಾಯಿ ತಂದೆಯರಿಗೆ ವಂದಿಸಬೇಕು. ತಾನು ಬೆಳೆದು ದೊಡ್ಡವನಾದ ಬಳಿಕ ಹಿರಿಯರಿಗೆ ವಿಧೇಯನಾಗಿ ನಡೆದುಕೊಳ್ಳಬೇಕು. ಹಾಗಿದ್ದರೆ ಎಲ್ಲರಿಗೂ ಆನಂದವಾಗುತ್ತದೆ. ಅವನು ಸತ್ಪುರುಷರನ್ನು ಹೊಂದಿ ಸತ್ಸಂಗದಲ್ಲಿ ಇದ್ದರೆ, ಕೆಡಲಾರನು. ಆದರೆ, ಸತ್ಪುರುಷರ ನಿಂದೆಗಿಳಿದರೆ ಕೇಡು ಸಂಭವಿಸುವುದು. ಇದು ಚಿಂತೆಗೆ ಕಾರಣವಾಗುತ್ತದೆ. ಇದು ನಿಜವು.

ಹಡೆದ ತಾಯಿ ತಂದೆಯರ ಋಣ ಕಡೆತನಕ ತೀರದು. ಮುಪ್ಪಿನಲ್ಲಿ ತಾಯಿ ತಂದೆ ಜೀರ್ಣರಾದಾಗ ಪುತ್ರರು ಅವರ ಬಗೆಗೆ ದಯೆ ತೋರಬೇಕು.

ಆ. ತಾಯಿ ತಂದೆಯರಲಿ ದಯೆ ದೋರದ ಪುತ್ರ
ಹುಟ್ಟಲೇನು ? ಮತ್ತೆ ಸತ್ತರೇನು ?
ಹುತ್ತದಲಿ ಗೆದ್ದಲು ಹುಟ್ಟವೇ ? ಸಾಯವೆ ?
ವಿಶ್ವದಾಭಿರಾಮ ಕೇಳು ವೇಮ.

ತಾಯಿ ತಂದೆಯರು ಮುಪ್ಪಾವಸ್ಥೆಯಲ್ಲಿ ಇರುವಾಗ ಅವರ ಪರಾವಲಂಬನ ಸ್ಥಿತಿ ಕಂಡು ಮಗನು ಅವರ ಬಗ್ಗೆ ಅನುಕಂಪ ಹೊಂದಬೇಕು. ದಯೆ ತೋರಿ ಅವರ ಸೇವೆಗೆ ಅಣಿಯಾಗಬೇಕು. ಹಾಗೆ ಮಾಡದ ಮಗನು ಹುಟ್ಟಿದರೂ ಅಷ್ಟೇ; ಸತ್ತು ಹೋದರೂ ಅಷ್ಟೇ. ಹಾವು ವಾಸಿಸುವ ಹುತ್ತದಲ್ಲಿ ಮೊದಲು ಗೆದ್ದಲು ಹುಟ್ಟುತ್ತವೆ. ಹಾವಿನ ಪ್ರವೇಶವಾದ ನಂತರ ಸತ್ತು ಹೋಗುತ್ತವೆ. ಅವುಗಳ ಇರವಿಗೆ ಯಾವ ಅರ್ಥವೂ ಇಲ್ಲ.

ಸಚ್ಚಾರಿತ್ರ್ಯ :

ಆ. ಸಾಧು ಚರಿತೆಯುಳ್ಳ ಸಾಧ್ವಿ ಸದ್ವರ್ತನೆ
ಚಾರನೆಂತು ಅರಿವ ? ಸಾಧು ತಾನೆ.
ಬ್ರಹ್ಮನಿಷ್ಠನರಿವ ; ಪ್ರಾಕೃತನರಿಯುವನೆ ?
ವಿಶ್ವದಾಭಿರಾಮ ಕೇಳು ವೇಮ.

ಕುಲೀನ ಚರಿತ್ರೆಯಿರುವ ಸಾಧ್ವಿಯ ಒಳ್ಳೆಯ ನಡೆಯನ್ನು ಏಕಪತ್ನಿವ್ರತಸ್ಥನು ಅರಿಯುವನಲ್ಲದೆ ಚಾರ ಪುರುಷನು ಹೇಗೆ ಅರಿಯಬಲ್ಲನು ? ಅದೇ ರೀತಿ, ಬ್ರಹ್ಮನಿಷ್ಠನನ್ನು ಸಾಧು ಸ್ವಭಾವದವನು ಅರಿಯುವನಲ್ಲದೆ, ಅಸಂಸ್ಕೃತನಾದ ಮನುಷ್ಯನು ಅರಿಯುವನೇ ?

ಪತಿಯ ಮೇಲೆ ಭಕ್ತಿ ಕಳೆದುಕೊಳದ ಕಾಂತೆ,
ಮೂರು ಲೋಕದೊಳಗೆ ಮುಕ್ತಿಪಾತ್ರಿ.
ಸತಿಮಣಿಯರಿಗೆಲ್ಲ ಪತಿಯೆ ದೇವ ದೇವ.
ವಿಶ್ವದಾಭಿರಾಮ ಕೇಳು ವೇಮ.

ಏನೇ ಬರಲಿ, ಪತಿಯು ಪೂಜ್ಯನೆಂದು ಭಾವಿಸಿ, ಅವನ ಮೇಲಿನ ಭಕ್ತಿಭಾವವನ್ನು

ಕಳೆದುಕೊಳ್ಳದ ಸತಿಯು ಭೌತಿಕ, ಅಧಿಭೌತಿಕ ಮತ್ತು ಆಧ್ಯಾತ್ಮಿಕ ಹೀಗೆ ಮೂರು ಲೋಕಗಳಲ್ಲಿಯೂ ಮುಕ್ತಿಗೆ ಪಾತ್ರಳಾಗುತ್ತಾಳೆ. ಸತಿಮಣಿಯರಿಗೆ ಪತಿಯು ಜೀವನದಲ್ಲಿ ಬೆಳಕು ಬೀರುವ ದೇವರ ದೇವನಾಗಿದ್ದಾನೆ.

ಆ. ತನ್ನ ಹೆತ್ತು ಹೊತ್ತ ತಾಯಿಯಂತೆ ಕಾಣು.
ಅನ್ಯರ ಸತಿ, ನ್ಯಾಯ ಅರಿತು ನೋಡಿ,
ತನ್ನ ತಾಯಿಯಂತೆ ತಿಳಿಯಲಾರ ನರನು.
ವಿಶ್ವದಾಭಿರಾಮ ಕೇಳು ವೇಮ.

ಸ್ತ್ರೀಯು ತಾಯಿ ಸ್ವರೂಪಳು. ತನ್ನ ಸತಿಯನ್ನು ಹೊರತುಪಡಿಸಿ ಎಲ್ಲ ಸ್ತ್ರೀಯರನ್ನು ಮಾತೃ ರೂಪದಲ್ಲಿ ಕಾಣಬೇಕು. ಅನ್ಯರ ಸತಿಯನ್ನು ತನ್ನನ್ನು ಹೆತ್ತು, ಹೊತ್ತು, ಸಲಿಹಿದ ತಾಯಿಯಂತೆ ಕಾಣಬೇಕು. ಅರಿತು ನೋಡಿದರೆ ಇದು ನ್ಯಾಯವಾದ ಮಾರ್ಗ. ಆದರೆ ಸಾಮಾನ್ಯ ನರನು ಅನ್ಯರ ಸತಿಯರನ್ನು ತನ್ನ ತಾಯಿಯಂತೆ ಕಾಣಲಾರದಾಗಿದ್ದಾನೆ. ಅವನಲ್ಲಿ ಕಾಮುಕ ಪ್ರವೃತ್ತಿ ಮೊಳೆಯುತ್ತಿರುತ್ತದೆ.

ಆ. ಪರಸತಿ ಗಮನವು ಪ್ರತ್ಯಕ್ಷ ನರಕವು.
ಅರಿಯೆ, ನಿಂದೆಗೆಲ್ಲ, ಆಲಯವೈ.
ಪುರುಷ ಕೇಳಿ ಕೊಲುವ, ಭೂಪತಿ ಕಾಡುವನು.
ವಿಶ್ವದಾಭಿರಾಮ ಕೇಳು ವೇಮ.

ಪಾಪ ಕರ್ಮಗಳ ಕ್ಲೇಶವನ್ನು ಭೋಗಿಸುವ ಕಲ್ಪಿತ ಲೋಕವು ನರಕ ತಾನೇ ? ಪರರ ಸತಿಗಮನವು ಪ್ರತ್ಯಕ್ಷ ನರಕವಾಗಿದೆ. ತಿಳಿದು ನೋಡಿದರೆ, ಎಲ್ಲ ಬಗೆಯ ನಿಂದೆಗಳಿಗೆ ಅದು ಆಲಯವಾಗಿದೆ. ಪರಸತಿಯ ಗಂಡನು ತನ್ನ ಸತಿಯ ಶೀಲ ಭಂಗವನ್ನು ತಿಳಿದರೆ, ಕೋಪದಿಂದ ಕೊಂದೇ ಬಿಡುತ್ತಾನೆ. ಅರಸನಿಗೆ ತಿಳಿದರೆ ಅವನು ಕಠಿಣ ಶಿಕ್ಷೆ ವಿಧಿಸಿ ಕಾಡಿಸುತ್ತಾನೆ.

ಮಂತ್ರ, ಯಂತ್ರ, ತಂತ್ರ :

ಪ್ರತಿಯೊಂದು ಮತ ಧರ್ಮದಲ್ಲಿ ಮೂರು ವಿಭಾಗಗಳಿರುತ್ತವೆ. ಅವುಗಳೆಂದರೆ ತತ್ವಜ್ಞಾನ, ಪುರಾಣ ಕತೆಗಳು ಮತ್ತು ಆಚಾರ ವಿಧಿ. ತತ್ವ ಶಾಸ್ತ್ರವು ಪ್ರತಿಯೊಂದು ಧರ್ಮದ ಜೀವಾಳವೇನೋ ಸರಿ. ಪುರಾಣ ಕತೆಗಳು ಆ ತತ್ವ ಶಾಸ್ತ್ರವನ್ನು ಮಹಾತ್ಮರ ದಂತ ಕತೆಗಳ ಮೂಲಕ ಮತ್ತು ಪವಾಡ ಸದೃಶ ಘಟನೆಗಳ ಮೂಲಕ ವಿಶದೀಕರಿಸುತ್ತವೆ. ಇನ್ನು ಆಚಾರವಿಧಿಗಳು ಗೂಢ ತತ್ವಶಾಸ್ತ್ರವನ್ನು ಮೂರ್ತಗೊಳಿಸಿ ಅನುಭವ ವೇದ್ಯವಾಗಿಸುತ್ತವೆ. ಈ ಆಚಾರ ವಿಧಿಗಳಿಗೆ ಕರ್ಮವೆಂದೂ ಹೆಸರು.

ತತ್ವ ಶಾಸ್ತ್ರದಲ್ಲಿ ದೇವರು, ಜೀವ, ಜಗತ್ತು ಇವುಗಳ ಸ್ವರೂಪ ಕಲ್ಪನೆ ಮತ್ತು ಅವುಗಳ ಪರಸ್ಪರ ಸಂಬಂಧದ ವಿವೇಚನೆ ಇರುತ್ತದೆ. ಸಾಧನ ಮೂಲಕ ಆಯಾ ಗುರುಗಳು, ಋಷಿಗಳು ತಲುಪಿದ ಹಂತವನ್ನವಲಂಬಿಸಿ ಅವರ ಪರಿಕಲ್ಪನೆಯು ಭಿನ್ನವಾಗಿರುತ್ತದೆ. ಸಮಾನ ಪರಿಕಲ್ಪನೆಯ ಜನಕುಲವು ಒಂದೊಂದು ಪ್ರತ್ಯೇಕ ಮತಧರ್ಮವಾಗಿ ಸಿಡಿಯುತ್ತಿದೆ. ಅಂತಿಮ

ಅವ್ಯೆಯಲ್ಲಿ ಪಡೆಯುವ ಅನುಭವವನ್ನು ಒಬ್ಬನು ಅದ್ವೈತವೆಂದರೆ, ಇನ್ನೊಬ್ಬನು ದ್ವೈತವೆನ್ನುತ್ತಾನೆ. ಮತ್ತೊಬ್ಬನು ವಿಶಿಷ್ಟಾದ್ವೈತವೆನ್ನುತ್ತಾನೆ. ನಾಲ್ಕನೆಯವನು ಶಕ್ತಿ ವಿಶಿಷ್ಟಾದ್ವೈತವೆನ್ನುತ್ತಾನೆ. ಬೇರೊಬ್ಬನು ಈಶ್ವರನ ಇರವನ್ನೇ ಒಪ್ಪದೆ, ಆತ್ಮದ ಅಸ್ತಿತ್ವ ಕುರಿತು ಮೌನ ವಹಿಸಿ, ನೀತಿ ಬೋಧೆ ಸಾಕು, ಎನ್ನುತ್ತಾನೆ. ವೇಮನರು, ಕರ್ಮಯೋಗಿಯು ಈ ಗೊಂದಲದಲ್ಲಿ ಬೀಳುವುದು ಬೇಡವೆಂದು ಸಲಹೆ ನೀಡುತ್ತಾರೆ.

ಆ. ಜಾತಿ ಮತವ ತೊರೆದು ಯೋಗಿಯಾಗೆ ಮೇಲು.
ಜಾತಿಮುಳುಗಿ ನೀತಿ ಹೇಳಲೇನು ?
ಮತವು ತಿಳಿಯೆ ಜಾತಿ ಬಿಡಲು ಅಂಜಬೇಡ.
ವಿಶ್ವದಾಭಿರಾಮ ಕೇಳು ವೇಮ.

ಅವರು ಇನ್ನೂ ಮುಂದೆ ಈ ರೀತಿ ತಿಳಿಸುತ್ತಾರೆ.

ಕಂ. ಮೊದಲು ಬಿಡದೆ ತನ್ನ ಮತವ
ತುದಿಗಾವ ಮತವೆ ಇದ್ದರು ದೂಷಿಸದಿರುತಾ,
ಕದಲದೆ , ಕೋರಿಕೆ ಕೋರದೆ,
ಮುದದಿಂದ ಚರಿಸುತಿಪ್ಪನು, ಮುಖ್ಯನು ವೇಮಾ.

'ಪುರಾಣವು ಪುಂಡರ ಗೋಷ್ಠಿ' ಎಂದು ಕನ್ನಡದ ಶರಣ ಅಲ್ಲಮ ಪ್ರಭು ಸಾರಿದ್ದರೂ ಪುರಾಣದ ದಂತ ಕತೆಗಳಲ್ಲಿ ನೀತಿಯನ್ನು ಕಂಡು ಸಾರಿದ್ದಾರೆ ವೇಮನಯೋಗಿ.

ಆ. ಬ್ರಹ್ಮನ ತಲೆ ಕಡಿದು ಪಾರುಗಾಣಿಸಿದೊಡೆ,
ತಡೆದು ರಕ್ಷಿಸಲಿಲ್ಲ, ತಾವು ಸುರರು.
ಶಿವನ ಕರುಣೆ ಇರದೆ ಕೆಟ್ಟು ಹೋಗದಿಹರೆ ?
ವಿಶ್ವದಾಭಿರಾಮ ಕೇಳು ವೇಮ.

ಅನಾರ್ಯ ಶಿವನಿಗೆ ಅಸಡ್ಡೆ ತೋರಲೆಂದೇ ಯಜ್ಞ ಸಮಾರಂಭಕ್ಕೆ ಅವನನ್ನು ಆಹ್ವಾನಿಸದೆ ಅವಮಾನಗೊಳಿಸಿದ್ದರಿಂದ ಕ್ರುದ್ಧರಾದ ಶಿವಗಣವು ಬ್ರಹ್ಮನ ಪಂಚಮುಖಗಳಲ್ಲಿ ಒಂದನ್ನು ಕತ್ತರಿಸಿ ಅವನನ್ನು ಚತುರ್ಮುಖನನ್ನಾಗಿಸಿದರೆಂದು ಪುರಾಣ ಕತೆಯಿದೆ. ಇದೊಂದು ಹೇಳಿ ಕೇಳಿ ದಂತಕತೆ. ಆದರೆ ಇದರಲ್ಲಿ ಕಂಡು ಬರುವ ನೀತಿಯೆಂದರೆ, ''ಶಿವನ ಕರುಣೆ ಇರದೆ ಕೆಟ್ಟು ಹೋಗದಿಹರೆ ?'' ಎಂಬುದು.

ಆ. ಕಾನನವನು ಸೇರಿ ಕಡು ಶ್ರಮ ಹೊಂದಲು,
ಆ ನಳ ಪಡೆದ ರಾಜ್ಯ ಅಂತೆ ಮರಳಿ.
ಕಷ್ಟಗಳಿಗೆ ಮುನ್ನ ಕಾಣು ಸುಖಿಗಳುಂಟು.
ವಿಶ್ವದಾಭಿರಾಮ ಕೇಳು ವೇಮ.

ನಳ-ದಮಯಂತಿ ಕತೆಯನ್ನು ಯಾರು ಕೇಳಿಲ್ಲ ? ನಳನು ಮುನಿ ಶಾಪದಿಂದ ರಾಜ್ಯ ತೊರೆದು ಅರಣ್ಯ ಸೇರಿದನು. ಅಲ್ಲಿ ಪಡಬಾರದ ಕಷ್ಟ ಪಡೆದನು. ಕುರೂಪಿಯಾದನು. ಕೊನೆಗೆ

ತನ್ನ ರೂಪವನ್ನೂ ಪಡೆದು ರಾಜ್ಯವನ್ನೂ ಪಡೆದ.ಈ ಪುರಾಣ ಕತೆಯಿಂದ 'ಕಷ್ಟಗಳಿಗೆ ಮುನ್ನ ಕಾಣು ಸುಖಿಗಳುಂಟು', ಎಂಬ ನೀತಿಯನ್ನು ತಿಳಿಯಬೇಕು. ಆ ಭಾವನೆಯನ್ನು ತಾಳಿ ಕಷ್ಟಗಳನ್ನು ಎದುರಿಸುವ ಸಹನ ಶಕ್ತಿ ಪಡೆಯಬೇಕು.

ಈ ಮತಧರ್ಮದ ಆಚಾರ ವಿಧಿಗಳ ವಿಚಾರ. ಗೂಢ ತತ್ತ್ವಗಳಿಗೆ ಮೂರ್ತ ರೂಪ ಕೊಡಲು ಆಚಾರವಿಧಿಗಳು ಅಗತ್ಯ ; ಎಂಬ ಪ್ರತಿಪಾದನೆ ಇದೆ. ಈ ಕಾರಣದಿಂದ, ಭಾವಾತೀತನಾದ ಅಮೂರ್ತ ದೇವ ಪರಿಕಲ್ಪನೆಯನ್ನು ಶಿಲೆ, ಲೋಹ, ಕಟ್ಟಿಗೆಯ ಮೂರ್ತಿಗಳಲ್ಲಿ ಕಾಣುವ ಪ್ರಯತ್ನವಿದೆ. ಶಿಲಾ ಮೂರ್ತಿಯ ಪೂಜೆಯೂ ನಡೆಯುತ್ತದೆ. ಹಲವರು ತಮ್ಮ ಪೂರ್ವ ಸುಕೃತದಿಂದ ಮೂರ್ತ ರೂಪದಲ್ಲಿಯ ಪ್ರತಿಮೆ ಪ್ರತೀಕಗಳಲ್ಲಿ ಅಮೂರ್ತದ ಭಾವವನ್ನು ತಂದುಕೊಳ್ಳಬಹುದು. ಪೂಜ್ಯ ಪೂಜಕ ಭಾವದಿಂದ ಪ್ರಾರಂಭಿಸಿ, ಪೂಜ್ಯ ತಾನೆಂಬ ಭಾವ ಹೊಂದಬಹುದು. ಆದರೆ ಕರ್ಮಯೋಗಿ ಇಂಥ ಅಪವಾದಾತ್ಮಕ ನಿದರ್ಶನಗಳಿಂದ ಮೋಸ ಹೋಗಕೂಡದು. 'ಯದ್ಭಾವಂ ತದ್ಭವತಿ'. ಮನದಲ್ಲಿ ಸ್ಥೂಲ ವಸ್ತುವನ್ನು ಲಕ್ಷ್ಯವಾಗಿ ಗ್ರಹಿಸಿದರೆ ಮನದಲ್ಲಿ ಸ್ಥೂಲ ತರಂಗಗಳು ಏಳುತ್ತವೆ. ಮೂರ್ತಿ ಪೂಜೆಯಿಂದ, ಸ್ಥೂಲವಾದ ಮನಸ್ಸು ಇನ್ನಷ್ಟು ಸ್ಥೂಲವಾಗುತ್ತದೆ. ವಿರಕ್ತ ಭಾವ ತಾಳಬೇಕಾದ ಮನಸ್ಸು ಭೋಗ ಭಾಗ್ಯಗಳಲ್ಲಿ ರಮಿಸುತ್ತದೆ. ಐಹಿಕ ಭೋಗಗಳಲ್ಲಿ ಆಸಕ್ತವಾಗುತ್ತದೆ.

ಆ. ದೇವ ಪೂಜೆ ಗೆಯ್ಯೆ ದಿವ್ಯ ಭೋಗವುಂಟು.
ತತ್ತ್ವವರಿಯುವವನು ದೈವ ಸಮನು.
ಏನು ಇರದ ನರಗೆ ಯಾವ ಗತಿಯು ಇಲ್ಲ.
ವಿಶ್ವದಾಭಿರಾಮ ಕೇಳು ವೇಮ.

ದೇವಪೂಜೆ ಮಾಡಿದರೆ, ಭಕ್ತಿ ಬೆಳೆಯುತ್ತದೆ. ಮನದ ಐಹಿಕ ಇಷ್ಟಾರ್ಥಗಳು ಫಲಿಸುತ್ತವೆ. ದಿವ್ಯ ಭೋಗವು ಪ್ರಾಪ್ತವಾಗುವುದು. ಆದರೆ ಇನ್ನೂ ಉನ್ನತ ಸ್ತರದಲ್ಲಿ ನಿಂತು ಇಂದ್ರಿಯ ತತ್ತ್ವ, ಮನಸ್ತತ್ತ್ವ, ಆತ್ಮ ತತ್ತ್ವಗಳನ್ನು ಅರಿತರೆ ಅವನು ದೈವ ಸಮನೇ ಆಗುವನು. 'ಆತ್ಮ ವಿದಃ ಆತ್ಮೈವ ಭವತಿ'. ಅಂದರೆ ಆತ್ಮಜ್ಞನು ಆತ್ಮವೇ ಆಗುತ್ತಾನೆ. ಇನ್ನು ಕೆಲವರು ದೇವ ಪೂಜೆಯನ್ನು ಮಾಡುವುದಿಲ್ಲ. ತತ್ತ್ವದ ಅನುಸಂಧಾನವನ್ನೂ ಮಾಡುವುದಿಲ್ಲ ಅಂಥ ತಾಮಸಿಗಳಿಗೆ ಯಾವುದೇ ಗತಿಯು ಇರದು.

ಆ. ಗುಡಿಯ ದೇವರೆಂದು ಗುರುತು ನಿಲಿಸಿದವನು
ಹಿರಿಯ ಹಾರುವೆಂದು ಗೊಣಗಲೇಕೆ ?
ಮೂಢ ಜನಕೆ ಮೊದಲು ಮಾರ್ಗ ತೋರಿರಯ್ಯ.
ವಿಶ್ವದಾಭಿರಾಮ ಕೇಳು ವೇಮ.

ಗುಡಿಗಳಲ್ಲಿ ದೇವರಿರುವನೆಂದು ಜನರಿಗೆ ಗುರುತು ತೋರಿಸಿ ಶೋಷಣೆಗೆ ಕೈ ಹಾಕಿದವರು ಪೂಜಾರಿ ಪುರೋಹಿತರೆಂದು, ಹಿರಿಯ ಹಾರುವರೆಂದು, ಗೊಣಗುವುದೇಕೆ ? ಜನರು ಮೂಢರಾಗಿದ್ದಾರೆ. ಅವರಿಗೆ ದೇವರ ಸ್ವರೂಪವಾಗಲಿ, ದೇವತ್ವವನ್ನು ತಲುಪುವ ಮಾರ್ಗವಾಗಲಿ ತಿಳಿದಿರುವುದಿಲ್ಲ. ಹಾಗಾಗಿ ಅವರು ಪೂಜಾರಿ-ಪುರೋಹಿತರ ವಂಚಕ

ಮಾರ್ಗದರ್ಶನಕ್ಕೆ ಬಲಿಯಾಗುತ್ತಾರೆ.

ಆ. ತಂತ್ರ ಮಂತ್ರಗಳನು, ತಾರಕವನು ಹೊಂದಿ,
ಯಂತ್ರ ಬಲದಿ ಗುರುವಿನ ಮಂತ್ರ ಗೆಯ್ದು,
ಚಿಂತನದೊಳಗೆ ಸತತ ಚಿನ್ಮಯ ತಲುಪುವನು.
ವಿಶ್ವದಾಭಿರಾಮ ಕೇಳು ವೇಮ.

'ತನ್ ತ್ರಾಯತೇ ಇತಿ ತಂತ್ರಃ'. ಬೆಳೆಸುತ್ತದೆ ಮತ್ತು ರಕ್ಷಿಸುತ್ತಿದೆಯಾದ್ದರಿಂದ ತಂತ್ರವೆನ್ನುತ್ತಾರೆ. ತಂತ್ರಗಳಲ್ಲಿ ದಕ್ಷಿಣಾಚಾರ, ಮಧ್ಯಮಾಚಾರ ಮತ್ತು ವಾಮಾಚಾರ ಎಂಬ ಮೂರು ಬಗೆಯ ತಂತ್ರಗಳಿವೆ. ವೈದಿಕ ಪದ್ಧತಿಯ ಆಚಾರವು ದಕ್ಷಿಣಾಚಾರವೆನಿಸುತ್ತದೆ. ಮಧ್ಯಮಾಚಾರವು ತತ್ತ್ವಗಳನ್ನು ಅರಿಯುವುದರೊಂದಿಗೆ ಅಭ್ಯಾಸವನ್ನು ಅಳವಡಿಸಿಕೊಳ್ಳುವುದಾಗಿದೆ. ವಾಮಾಚಾರವು, ತೀವ್ರ ಪರಿಣಾಮದ ಮತ್ತು ಮದ್ಯ, ಮಾಂಸ, ಮೀನ, ಮೈಥುನ ಮತ್ತು ಮಕರ ಎಂಬ ಪಂಚ 'ಮ' ಕಾರದ ಸಾಧನದೊಂದಿಗೆ ಕೂಡಿದೆ. ದಕ್ಷಿಣೇಶ್ವರದ ರಾಮಕೃಷ್ಣ ಪರಮಹಂಸರು ಮತ್ತು ಶಿಶುನಾಳ ಶರೀಫ ಸಾಹೇಬರ ಗುರುಗಳಾದ ಕಳಸದ ಗೋವಿಂದಭಟ್ಟರು ವಾಮಾಚಾರ ತಂತ್ರ ಸಾಧಕರು. ಯೋಗ ಮತ್ತು ತಂತ್ರ ಸಾಧನಗಳನ್ನು ಬಹುವಾಗಿ ಪ್ರಚಾರ ಮಾಡುತ್ತಿರುವ ಆನಂದ ಮಾರ್ಗದ ಪ್ರವರ್ತಕ ಶ್ರೀ ಪಿ. ಆರ್. ಸರಕಾರರು ಮಧ್ಯಮಾಚಾರದ ಪ್ರತಿಪಾದಕರು.

'ಮನನಾತ್ ತ್ರಾಯತೇ ಇತಿ ಮಂತ್ರಃ' ಅಂದರೆ ಮನನ ಮಾಡುವುದರಿಂದ ರಕ್ಷಿಸುತ್ತದೆಯಾದ್ದರಿಂದ ಮಂತ್ರವೆನಿಸುತ್ತದೆ.

ತಾರಕವೆಂದರೆ ಭವತಾರಕವೂ, ಗುಣದೂರಕವೂ, ಭೂರಿ ಬ್ರಹ್ಮಾನಂದ ಸಾರವೂ ಓಂಕಾರ ಪ್ರಭೆಯೂ ಆಗಿ ನಿಟಿಲ ದುರ್ಗದಲ್ಲಿ ತೋರುವ ಜ್ಞಾನಾಂಜನವು.

ಯಂತ್ರವೆಂದರೆ, ತತ್ತ್ವಾಳಿಯನ್ನು ರೇಖಾಚಿತ್ರಗಳ ಮುಖಾಂತರ ವಿವರಿಸುವ ಪ್ರತೀಕಗಳು. ಬಹು ಜನ ಸಾಧಕರು ಆರಾಧಿಸುವ ಶ್ರೀ ಚಕ್ರವು ಯಂತ್ರದ ಉತ್ತಮ ನಿದರ್ಶನವಾಗಿದೆ.

ಈ ಶಬ್ದಗಳ ಅರ್ಥ ತಿಳಿದ ಮೇಲೆ ಉಕ್ತ ಪದ್ಯದ ಟೀಕಾರ್ಥದತ್ತ ಗಮನಿಸುವಾ :

ತಂತ್ರ ಮಂತ್ರಗಳನ್ನು ಮತ್ತು ತಾರಕವನ್ನು ಹೊಂದಿ, ಯಂತ್ರಬಲದಿಂದ ಗುರು ಉಪದೇಶಿಸಿದ ಮಂತ್ರವನ್ನು ಪಠಣ ಮಾಡಿ, ಅರ್ಥೈಸಿಕೊಂಡು, ತನ್ಮಯರಾಗಿ ಅದೇ ಚಿಂತನದಲ್ಲಿ ಸತತ ಇದ್ದರೆ, ಅಂಥವನು ಚಿನ್ಮಯ ಪದವನ್ನು ತಲುಪುತ್ತಾನೆ. ತಾನೇ ಅರಿವಿನಲ್ಲಿ ಬೆರೆತು ಅರಿವೇ ಆಗುತ್ತಾನೆ.

ಕಂ. ಮಂತ್ರವು ಸದ್ಗುರು ಚಿಂತನ,
ಮಂತ್ರಾರ್ಥವು ಅವನ ವಿನಾಶ, ಮನ್ಮಯನಿರುತಾ
ಮಂತ್ರಾಧಿಕನಿಹ ಸದ್ಗುರು
ಮಂತ್ರದ ಮೂಲಕ ಕಂಡು ಬಯಲನರಿ, ವೇಮಾ.

ತಂತ್ರದಲ್ಲಿ ಷಟ್ಚಕ್ರಗಳಿಗೆ ಊರ್ಧ್ವದಲ್ಲಿ ಮತ್ತು ಸಹಸ್ರಾರ ಚಕ್ರದ ಅಡಿಭಾಗದಲ್ಲಿ ಗುರುಚಕ್ರವನ್ನು ಕಲ್ಪಿಸುತ್ತಾರೆ. ಗುರುಮೂರ್ತಿಯ ಲಕ್ಷ್ಯವಿರಿಸಿ ಗುರುಚಕ್ರದಲ್ಲಿ ಧ್ಯಾನಿಸಬೇಕು.

ಹೀಗೆ ಸದ್ಗುರು ಚಿಂತನ ಮಾಡಿದರೆ ಅಂಥ ಮನನದಿಂದ ಪರಿತ್ರಾಣ ಲಭಿಸುತ್ತದೆ. ಆದ್ದರಿಂದ ಸದ್ಗುರು ಚಿಂತನವು ಮಂತ್ರವೆನಿಸುತ್ತದೆ. ಮಂತ್ರದ ಅರ್ಥವು ಹೊಳೆದರೆ ಅದರ ಪ್ರಯೋಜನದಿಂದ ಕಲ್ಪಿತ ಗುರುಮೂರ್ತಿಯ ವಿನಾಶವಾಗುತ್ತದೆ. ಬಳಿಕ ತನ್ನಲ್ಲಿ ತಾನೇ ಇರುತ್ತಾನೆ. ಮನನ ಕ್ರಿಯೆಯು ಅಂದರೆ ಮಂತ್ರವು ನಿಂತರೂ ಸದ್ಗುರು ಅಮೂರ್ತನಾಗಿ ಉಳಿಯುತ್ತಾನೆ. ಹೀಗೆ ಮಂತ್ರದ ಮೂಲಕ ಸದ್ಗುರುವಿನ ಧ್ಯಾನಮೂರ್ತಿಯನ್ನು ಕಂಡು, ಮಂತ್ರದ ಅರ್ಥವಾದ ಬಳಿಕ, ಆ ಮೂರ್ತಿ ನಾಶವಾದ ಬಳಿಕ, ಮಂತ್ರಾಧಿಕನಾದ ಸದ್ಗುರು ಬಯಲು ಎನಿಸುತ್ತಾನೆ. ಆ ಬಯಲನ್ನು ಕಂಡು ಅರಿ.

ಆ. ಮಂತ್ರ ವಿದ್ಯೆಯೆಲ್ಲ ಮಾಯೆಗಳ ಕೋರಿಕೆ
ಸೃಷ್ಟಿಯಲ್ಲಿ ಬ್ರಹ್ಮ ಸೃಷ್ಟಿ ಗೆಯ್ಕೆ.
ಮತ್ತರಾದ ಜನರು ಮನದಿ ನಿಲಿಸದಿಹರು.
ವಿಶ್ವದಾಭಿರಾಮ ಕೇಳು ವೇಮ.

ಮಂತ್ರಗಳನ್ನು ಕುರಿತು ಒಂದು ಎಚ್ಚರಿಕೆ. ಊರ್ಧ್ವ ಮನದ ಸ್ತರಗಳು ಹಲವಾರು. ಕೇಂದ್ರೀಕೃತ ಮನದಲ್ಲಿ ಶಕ್ತಿ ಸಂಚಯವಾಗುತ್ತದೆ. ಮತ್ತರಾದ ಜನರು ಆ ಶಕ್ತಿಯ ಪ್ರದರ್ಶನಕ್ಕಿಳಿಯುವರು. ಇಲ್ಲದುದನ್ನು ಇದ್ದಂತೆ ತೋರಿಸುತ್ತಾರೆ. ಹೀಗಾಗಿ ಮಂತ್ರವಿದ್ಯೆಗೆ ಮಾಯೆಗಳ ಕೋರಿಕೆಯೂ ಅಂಟಿರುತ್ತದೆ. ಸೃಷ್ಟಿಯಲ್ಲಿ ಸಕಲ ವಸ್ತುಗಳ ಸೃಷ್ಟಿಯನ್ನು ಸೃಷ್ಟಿಕರ್ತನಾದ ಬ್ರಹ್ಮನೇ ಮಾಡುತ್ತಾನೆ. ಆದರೆ ತಮ್ಮ ಮನಸ್ಸಿನ ಶಕ್ತಿಯ ಬಗೆಗೆ ಅಭಿಮಾನ ಪಟ್ಟುಕೊಂಡ ಜನರು ಮತ್ತರಾಗುತ್ತಾರೆ. ಹೀಗಾಗಿ ಸಿದ್ಧಿ ಪ್ರದರ್ಶನಕ್ಕಿಳಿಯುತ್ತಾರೆ. ಆದರೆ ತಮ್ಮ ಕೋರಿಕೆಗಳನ್ನು ಮನದಲ್ಲಿ ನಿಲ್ಲಿಸದವರಾಗುತ್ತಾರೆ.

ಮಂತ್ರವು ಮನನದಿಂದ ಅರ್ಥಗರ್ಭಿತವಾಗುತ್ತದೆ. ಮಂತ್ರವು ಬೀಜಾಕ್ಷರಗಳ ಪ್ರಭಾವದಿಂದ ಸ್ಪಂದನ ಉಂಟು ಮಾಡುತ್ತದೆ. ಈ ಸ್ಪಂದನೆಗಳಿಂದ ಮನಸ್ಸು ಚೈತನ್ಯಮಯವಾಗುತ್ತದೆ. ಇದು ಮಂತ್ರಚೈತನ್ಯವಾಗಿದೆ.

ಆ. ಮಾತು ಉಡುಗುವನಕ ಮಂತ್ರವು ದೊರಕದು.
ಮಂತ್ರವುಡುಗುವನಕ ಮನಸು ನಿಲದು.
ಮನಸು ನಿಲ್ಲುವನಕ ಮುಕ್ತಿ ಮತ್ತೆ ಇರದು.
ವಿಶ್ವದಾಭಿರಾಮಮ ಕೇಳು ವೇಮ.

ಮಾತು ನಾಲ್ಕು ಸ್ತರಗಳಲ್ಲಿ ಇರಬಹುದು. ಅವುಗಳೆಂದರೆ, ಪರಾ, ಪಶ್ಯಂತಿ, ಮಧ್ಯಮೀ ಮತ್ತು ವೈಖರೀ. ವೈಖರಿ ಸ್ತರಕ್ಕೆ ಮಾತು ಎನ್ನುತ್ತಾರೆ. ಆದರೆ ಮಂತ್ರದ ಸಂಬಂಧವಿರುವುದರಿಂದ ಪಶ್ಯಂತಿ, ಮಧ್ಯಮೀ ಮತ್ತು ವೈಖರೀ ಸ್ತರದ ಸ್ಪಂದನಗಳನ್ನು ಮಾತು ಎನ್ನಬಹುದು. ಮಂತ್ರ ಧ್ಯಾನದಲ್ಲಿ ಏಕಾಗ್ರತ ಸಾಧಿಸಬೇಕಾದರೆ, ಮಾತು ಉಡುಗಬೇಕು. ಅಂದರೆ ಮಾತಿನ ಸ್ಥೂಲ ಸ್ಪಂದನಗಳು ಇಲ್ಲವಾಗಬೇಕು. ಮಂತ್ರ ಧ್ಯಾನವು ಸೂಕ್ಷ್ಮತರ ಸ್ಪಂದನಗಳನ್ನು ಸೃಜಿಸುತ್ತದೆ. ಮಂತ್ರ ಚೈತನ್ಯ ಉಂಟಾಗಬೇಕಾದರೆ, ಸ್ಪಂದನಗಳು ಸೂಕ್ಷ್ಮತರವಾಗಬೇಕು. ಯಾವಾಗ ಮಂತ್ರವು ಉಡುಗುವುದೋ, ಆಗ ಮನಸ್ಸು ನಿಲ್ಲುತ್ತದೆ. ಅಂದರೆ ಮನನ ಕ್ರಿಯೆ ನಿಲ್ಲುತ್ತದೆ. ಮನಸ್ಸು

ನಿಲ್ಲದೆ ಮುಕ್ತಿ ಇರಲಾರದು.

ತಂತ್ರವಾದವೆನಿತೊ ದಟ್ಟವಾಗಿ ಇಹುದು
ಮಂತ್ರವಾದವರಿವವ ಮಹಿಯೊಳಿಲ್ಲ
ಜಂತ್ರದವನು ಬೊಂಬೆ ಚೆಂದ ನೋಡಿದಾತ.
ವಿಶ್ವದಾಭಿರಾಮ ಕೇಳು ವೇಮ.

ಶಿವ ಪ್ರಣೀತವಾದ ತಂತ್ರವಾದವು ಎಲ್ಲೆಡೆಗೂ ದಟ್ಟವಾಗಿ ಹಬ್ಬಿದೆ, ಆಚಾರದಲ್ಲಿದೆ. ಅರವತ್ತುನಾಲ್ಕು ವಿಭಿನ್ನ ತಂತ್ರ ಪ್ರಕಾರಗಳಿವೆ. ಅಥರ್ವಣ ವೇದ ರಚನೆಯಲ್ಲಿ ತಂತ್ರದ ಛಾಯೆಯು ಸ್ಫುಟವಾಗಿದೆ. ಬೌದ್ಧ ತಂತ್ರಗಳೂ ಇವೆ. ಜೈನ ತಂತ್ರಗಳೂ ಇವೆ. ಮಂತ್ರವಾದವು ಇನ್ನೂ ಗೂಢವಾಗಿದೆ. ಯಕ್ಷಿಣೀ ಮಂತ್ರವಿದ್ಯೆ ಇದೆ. ಸಮ್ಮೋಹಿನೀ ಮಂತ್ರಗಳಿವೆ. ವಶೀಕರಣ ಮಂತ್ರಗಳಿವೆ. ಭಾನುಮತಿ ಮಂತ್ರಗಳಿವೆ. ಬಹುವಿಧದ ಮಂತ್ರಗಳಿವೆ. ಕೊನೆಗೆ ತಾರಕ ಮಂತ್ರಗಳೂ ಇವೆ. ಒಟ್ಟಾರೆ ಹೇಳುವುದಾದರೆ, ಮಂತ್ರ ವಿದ್ಯೆಯು ಅಪಾರವಾಗಿದೆ. ಅದೆಲ್ಲವನ್ನೂ ತಿಳಿಯುವವರು ಈ ಭೂಮಿಯಲ್ಲಿ ಇಲ್ಲ. ಇನ್ನು ತತ್ತ್ವಗಳನ್ನು ಸಂಕೇತಿಸುವ ರೇಖೆ, ಚಿತ್ರಗಳು ಬೊಂಬೆಯಂತೆ ಇವೆ. ಜಂತ್ರದವನು ಅಂದರೆ ಯಂತ್ರದವನು, ಬೊಂಬೆ ಚೆಂದವನ್ನು ನೋಡಿದವನು.

ಆ. ಮಂತ್ರ ತಂತ್ರ ಯುಕ್ತರು ಮರುಳು ಆದರಲ್ಲ !
ವೇದ ವಿದ್ಯೆ ಯೋಗ ವಿಧವು ಅಲ್ಲ.
ನಾದ ಕಂಡು ಒಳಗೆ ಪೂರ್ಣ ಪರಿಣಮಿಸುವ.
ವಿಶ್ವದಾಭಿರಾಮ ಕೇಳು ವೇಮ.

ಮಂತ್ರ ವಿದ್ಯೆಯ ಸಾಧಕರೂ, ತಂತ್ರಯುಕ್ತರೂ ಒಳಗೆ ಅನಾಹತ ನಾದದ ಮಹಿಮೆ ತಿಳಿದು ಮರುಳು ಆದರು. ಅದು ವೇದ ವಿದ್ಯೆಯೂ ಅಲ್ಲ. ಘನ ಯೋಗ ವಿಧವೂ ಅಲ್ಲ. ಹೃದಯದಲ್ಲಿ ಅನಾಹತ, ಅಂದರೆ ಬಾರಿಸದೆ ಧ್ವನಿಸುವ, ಓಂಕಾರವನ್ನು ಕಂಡು ಪೂರ್ಣತ್ವದಲ್ಲಿ ಪರಿಣಮಿಸುವ ಕೌತುಕವು ಎಲ್ಲರನ್ನು ಬೆರಗುಗೊಳಿಸುವುದು.

ಕರ್ಮ ಸಿದ್ಧಾಂತ :

ಕರ್ಮಕ್ಕೆ ತಕ್ಕ ಪ್ರತಿಕರ್ಮವಿದ್ದೇ ಇರುತ್ತದೆ. ಇದನ್ನೇ ಕರ್ಮಫಲ ಎಂದು ಕರೆಯುತ್ತಾರೆ.

ಭವವು ಪೂರ್ವ ಕರ್ಮ ಫಲವು, ಅನುಭವಿಸಲು
ಬಂದಿತೆಂದು ಮನವ ಭದ್ರಗೊಳಿಸು.
ಕಷ್ಟ ಸುಖಗಳೆಷ್ಟೋ ಕಂಡು ತೊಲಗಬೇಡ.
ವಿಶ್ವದಾಭಿರಾಮ ಕೇಳು ವೇಮ.

ಈಗ ನಾವು ಈಜ ಬೇಕಾಗಿರುವ ಭವಸಾಗರವು ನಮ್ಮ ಪೂರ್ವ ಜನ್ಮದ ಕರ್ಮಗಳ ಫಲವಷ್ಟೇ. ಒಳ್ಳೆಯ ಕರ್ಮಕ್ಕೆ ಸುಖಪ್ರದ ಫಲವಿದ್ದರೆ, ಕೆಟ್ಟ ಕರ್ಮಕ್ಕೆ ದುಃಖಕರ ಫಲವಿರುತ್ತದೆ. ಈಗ ಪೂರ್ವ ಕರ್ಮ ಫಲವಾಗಿ ಅನಿವಾರ್ಯವಾದ ಭವವು ಬಂದಿತೆಂದು ಅಧೀರನಾಗುವುದು ಬೇಡ. ಪ್ರತಿಯಾಗಿ ಬಂದುದನ್ನು ಎದುರಿಸಲು ಮನವನ್ನು ಭದ್ರಗೊಳಿಸು. ಎಷ್ಟೋ ಕಷ್ಟಗಳುಂಟು.

ಅದೆಷ್ಟೋ ಸುಖಗಳೂ ಉಂಟು. ಅವುಗಳನ್ನು ಕಂಡು ಬೆದರಿ ಅತ್ತಿತ್ತ ತೊಲಗಬೇಡ.

ಆ. ಬೇಕು ಎನಲು ಬರದು, ಬೇಡವೆನಲು ಬಿಡದು.
ಪೂರ್ವಕರ್ಮಕಂಟಿ ಫಲವು ಉಂಟು.
ಹೃದಯದಲ್ಲಿ ದುಃಖ ಪಡದಿರುವುದೆ ಧರ್ಮ.
ವಿಶ್ವದಾಭಿರಾಮ ಕೇಳು ವೇಮ.

ಈಗ ನಾವು ಏನನ್ನೇ ಮಾಡಲಿ ಫಲವು ಮಾತ್ರ ಪೂರ್ವಕರ್ಮದ ಸಂಸ್ಕಾರದೊಂದಿಗೆ ಸೇರಿ ಉಂಟಾಗುತ್ತದೆ. ನಾವು ಬೇಕು ಎಂದ ಫಲವು ಬಾರದಿರಬಹುದು. ಬೇಡವೆಂದ ಫಲವೇ ಒಕ್ಕರಿಸಬಹುದು. ಆದ್ದರಿಂದ ಫಲದ ಕಡೆಗೆ ಲಕ್ಷವೀಯದೆ, ಪಾಲಿಗೆ ಬಂದದ್ದೇ ಪಂಚಾಮೃತವೆಂದು ಸ್ವೀಕರಿಸಿ ಹೃದಯದಲ್ಲಿ ದುಃಖ ಪಡದಿರುವುದೇ ಧರ್ಮವೆನಿಸುತ್ತದೆ.

ಕಂ. ಬರದುದ ಕೋರಲು ಬಾರದು.
ಬರುವುದ ಕೋರದಿರಲು ತಾನೇ ಬರುತಿಹುದೈ.
ಬರಿ ಚಿಂತೆಯನತಿ ಗೆಯ್ದೊಡೆ,
ಸರಿಯಾಗುವುದೇ ? ತಾನಾಗುತಿಹುದು ವೇಮಾ

ಪ್ರಾರಬ್ಧ ಕರ್ಮಕ್ಕನುಸರಿಸಿ ಎಲ್ಲವೂ ಘಟಿಸುತ್ತದೆ. ನಮ್ಮ ಸ್ವಂತ ಇಷ್ಟದಂತೆ ಘಟಿಸದು. ಯಾವುದು ಬರಬಾರದಾಗಿತ್ತೋ, ಅದನ್ನು ನಾವೀಗ ಕೋರಿದರೂ ಬಾರದು. ಯಾವ ಫಲವು ಪೂರ್ವಕರ್ಮವಶಾತ್ ಬರಬೇಕಾಗಿದೆಯೋ, ಅದನ್ನು ನಾವು ಕೋರದಿದ್ದರೂ ತಾನೇ ಬರುತ್ತದೆ. ಇದನ್ನೇ ನಾವು ಅದೃಷ್ಟ ಎನ್ನುತ್ತೇವೆ. ಕೆಟ್ಟದಿದ್ದರೆ ದುರಾದೃಷ್ಟ ಎನ್ನುತ್ತೇವೆ. ಹೀಗಿರುವಾಗ ನಾವು ನಮ್ಮ ಇಷ್ಟಗಳನ್ನು ಕೋರಿ, ಬರೀ ಚಿಂತೆ ಮಾಡಿದರೆ ಸರಿಯಾಗುವುದೇ ? ಇಲ್ಲ, ಇಲ್ಲ, ಆಗಬೇಕಾದುದು ತಾನು ಆಗಿಯೇ ಆಗುತ್ತದೆ.

ಈ ಜಗತ್ತಿನಲ್ಲಿ ಹಿಂದೆ ಆಗಿ ಹೋದದ್ದೇನು ? ಇಂದು ಆಗುತ್ತಿರುವುದೇನು ? ಮುಂದೆ ಎಂದಾದರೂ ಆಗುವುದಾದರೂ ಏನು ? ಎಂಬುದನ್ನು ವಿಚಾರಿಸಿದರೆ ಮಾನವ ಕರ್ಮಫಲವೇ ; ಎಂಬ ಸತ್ಯವು ಗೋಚರಿಸುತ್ತದೆ.

ಕಂ. ಹಿಂದಾಗಿ ಹೋದುದು ಏನು ?
ಮುಂದೊಮ್ಮೆ ಕೂಡ ಏನುಂಟು ? ಮಹಿಯಲ್ಲಿ ತಾ-
ನಿಂದಾಗುವಂತಹದೇನು ?
ಎಂದಾದರೇನು ಆಗುವುದು ? ಜಗದಿ ವೇಮಾ.

ಹಿಂದೆ ಆಗಿ ಹೋದುದು ಏನು ? ಮುಂದೊಮ್ಮೆ ಕೂಡ ಏನುಂಟು ? ಇಂದು ಆಗುವಂತಹದು ಏನು ? ಎಂದಾದರೂ ಆಗುವುದಾದರೂ ಏನು ? ಆಗುವುದೆಲ್ಲವೂ ಪೂರ್ವಕರ್ಮ ಫಲವೇ. ಆದ್ದರಿಂದ ಕರ್ಮವು ಒಳ್ಳೆಯದೇ ಇರಲಿ, ಕೆಟ್ಟದ್ದೇ ಇರಲಿ, ಆಸಕ್ತಿ ತೊರೆದು ಕರ್ಮ ಮಾಡು. ಆಗ ಕರ್ಮವು ಅಕರ್ಮವೆನಿಸಿ, ಜನನ ಮರಣ ಚಕ್ರದಿಂದ ಮುಕ್ತಿ ಪಡೆಯಬಹುದು.

ಆ. ಕರ್ಮ ಫಲಗಳೆಲ್ಲ ಕಪಟವೆಂದು ಕಂಡು,
ಧರ್ಮ ಫಲಗಳೆಲ್ಲ ತಗಲುತಿಹವು.

ಧರ್ಮ ಮರ್ಮಗಳನು ದಾಟುವುದೇ ಮುಕ್ತಿ.
ವಿಶ್ವದಾಭಿರಾಮ ಕೇಳು ವೇ.

ಸ್ವಾರ್ಥ ಹೇತುವಿನಿಂದ ಗೆಯ್ದ ಕರ್ಮಗಳು ಪೂರ್ವ ಸಂಸ್ಕಾರದ ನಿಮಿತ್ತ ಇಚ್ಛಿತ ಫಲ ನೀಡುವುದಿಲ್ಲ. ಹಾಗಾಗಿ ಎಲ್ಲ ಕರ್ಮಫಲಗಳು ಕಪಟವೆಂದು ಅನ್ನಿಸುತ್ತದೆ. ಆಗ ಮಾನವನು ಜನೋಪಕಾರಿ ಧರ್ಮಕಾರ್ಯದಲ್ಲಿ ನಿರತವಾಗುತ್ತಾನೆ. ಕರ್ಮಗಳು ಮತ್ತು ಧರ್ಮಗಳು ಬಂಧನಕಾರಕವೇ. ಒಂದು ಕಬ್ಬಿಣದ ಕೋಳವಾದರೆ, ಇನ್ನೊಂದು ಬಂಗಾರ ಕೋಳವಷ್ಟೇ. ಆದ್ದರಿಂದ ಬಂಧನದಿಂದ ಮುಕ್ತವಾಗಬೇಕಾದರೆ ಕೋಳವನ್ನು ಕಳಚಲೇಬೇಕು. ಧರ್ಮ ಮರ್ಮವನ್ನು ದಾಟುವುದೇ ಮುಕ್ತಿಯಾಗಿದೆ. ಅಂದರೆ ಕರ್ಮಗಳನ್ನು ತ್ಯಜಿಸಬೇಕು. ಧರ್ಮ ಕಾರ್ಯಗಳನ್ನು ಅಸಕ್ತನಾಗಿ ಮಾಡಬೇಕು.

ಆ. ಜೀವ ವಶದ ರೀತಿ ಚಿನ್ಮಾತ್ರ ತನು ಮಿಂಚಿ,
ಭಾವ ಮಮತೆ ಅಮರಿ ಪಟ್ಟು ಹಿಡಿದು,
ಕೂಡೆ ಹಂಸ ಮನದಿ, ಕರ್ಮ ಸನ್ಯಾಸಿಯೈ
ವಿಶ್ವದಾಭಿರಾಮ ಕೇಳು ವೇಮ.

ಜೀವಾತ್ಮನು ಪರಮನಿಗೆ ವಶವಾದ ರೀತಿಯೇ ಚಿನ್ಮಾತ್ರನು. ಅಂದರೆ ಅರಿವಿನ ಸೂಕ್ಷ್ಮರೂಪನು. ಈ ಅವಸ್ಥೆಯಲ್ಲಿ ತನು ಪ್ರಜ್ಞೆಯನ್ನು ದಾಟಿ ಹೋಗಿರುತ್ತಾನೆ. ಆತ್ಮನಿಷ್ಠ ಮನದಲ್ಲಿ ವಸ್ತುಗತ ಸಾಮಂಜಸ್ಯವನ್ನು ಉಂಟು ಮಾಡುವಾಗ ಮೊದಲು ಭಾವ ತರಂಗಗಳೇಳುತ್ತವೆ. ಅನಂತರ ನಾಮ ರೂಪ. ಈ ನಾಮ ರೂಪಕ್ಕಿಂತ ಊರ್ಧ್ವ ಭಾವ-ಮಮತೆಯು ಅಮರಿ, ಅದರಿಂದ ಕದಲದೆ ಪಟ್ಟು ಹಿಡಿದು, ಮನದಲ್ಲಿ ಜೀವ ಹಂಸವನ್ನು ಕೂಡಲು ಕರ್ಮ ಸನ್ಯಾಸವಾಗುತ್ತದೆ. ಅಲ್ಲಿ ಅಹಂ ತತ್ತ್ವ ಇರದು. ಹಾಗಾಗಿ ಕರ್ತೃತ್ವಾಭಿಮಾನವೂ ಇರದು. ಕರ್ಮವೂ ಇರದು.

ಕಂ. ತನ್ನೊಳು ಸರ್ವವಿರುತಿರೆ,
ತನ್ನೊಳು ಸಲೆಯರಸಲಿಲ್ಲ ; ಧರೆಯರಸುವ ಈ
ಮನುಜರು ಗಾಣದ ಎತ್ತು ;
ಎನಿತು ಅದನೆ ತಿಳಿಸೆ ಶಕ್ಯ ? ಧರೆಯೊಳು ವೇಮಾ.

ತನ್ನಲ್ಲಿಯೇ ಸರ್ವವೂ ಇದೆ. ತನ್ನೊಳಗೇ ಆತ್ಮವಿದೆ. ದೇವನಿದ್ದಾನೆ. ತನ್ನನ್ನು ಚಿನ್ನಾಗಿ ಅರಸದೆ, ದೇವನಿಗಾಗಿ ಧರೆಯಲ್ಲಿ ಅರಸುತ್ತಿರುವ ಈ ಮನುಷ್ಯರು ಗಾಣದ ಎತ್ತುಗಳಂತೆ. ಎಷ್ಟು ತಿರುಗಿದರೂ ಇದ್ದಲ್ಲಿಯೇ ಇರುತ್ತಾರೆ. ಧರೆಯ ಜನರಿಗೆ ಇದನ್ನು ತಿಳಿಸುವುದು ಶಕ್ಯವಾದೀತೇ ?

ಆ. ಪರರಿಗುಪಕರಿಸಲು, ಪರರ ಸೊತ್ತು ಪರಗೆ,
ಮರಳಿ ನೀಡಲಾಗ ಪರಮ ಪ್ರಾಪ್ತಿ
ಪರಮಕಿಂತ ಪಾವನವೇನು ಆ ಸೊತ್ತು ?
ವಿಶ್ವದಾಭಿರಾಮ ಕೇಳು ವೇಮ.

ಮಾನವನು ಪರರಿಗೆ ಉಪಕಾರ ಮಾಡುತ್ತೇನೆನ್ನುತ್ತಾನೆ. ಒಳಮರ್ಮವೆಂದರೆ ತನ್ನಲ್ಲಿ ಕೂಡಿಬಿದ್ದ ಸೊತ್ತು ಪರರದೇ ಆಗಿದೆ. ತನ್ನ ಉಪಭೋಗಕ್ಕಿಂತ ಅಧಿಕವಾದ ಸೊತ್ತೆಲ್ಲ ದೈವಕ್ಕೆ ಸೇರಿದ್ದು. ಆದ್ದರಿಂದ ಪರರಿಗೆ ಉಪಕರಿಸಿದರೆ, ಪರರ ಸೊತ್ತನ್ನು ಪರರಿಗೆ ನೀಡಿದಂತೆ. ಅದರಿಂದ ಪರಮನು ಪ್ರಾಪ್ತನಾಗುತ್ತಾನೆ. ಆ ಸೊತ್ತನ್ನು ಲೋಭದಿಂದ ತನ್ನಲ್ಲಿಯೇ ಇರಿಸಿಕೊಂಡರೆ ಪರಮನು ಪ್ರಾಪ್ತವಾಗುವುದಿಲ್ಲ. ಅಂದಮೇಲೆ, ಪರಮನಿಗಿಂತ ಆ ಸೊತ್ತೇ ಪಾವನವೆನಿಸುವುದೇ ? ಹೀಗೆ ಜಗತ್ತಿಗೆ ಸಹಾಯ ಮಾಡವುದೆಂದರೆ ತನಗೆ ತಾನೇ ಸಹಾಯ ಮಾಡಿಕೊಂಡಂತೆ.

ಆ. ಕೇಡು ಬಂದಿತೆಂದು ಕೆಟ್ಟದೆನುವ ದೈವ,
ಮೇಲು ಬಂದಿತೆಂಬ ಮೆಚ್ಚು ತನಗೆ
ಕೇಡು ಮೇಲು ತಿಳಿಯೆ ಗೆಯ್ದ ಕರ್ಮವಷ್ಟೆ
ವಿಶ್ವದಾಭಿರಾಮ ಕೇಳು ವೇಮ.

ತನ್ನ ಇಚ್ಛೆಗೆ ವಿರೋಧವಾದುದು ಘಟಿಸಿದಾಗ ಕೇಡು ಬಂದಿತೆಂದು ಭಾವಿಸಿ, ಏನು ಮಾಡುವುದು ? ದೈವ ಕೆಟ್ಟದಿದೆ ! ಎಂದೋ, ಗ್ರಹಗತಿಗಳು ಸರಿಯಾಗಿಲ್ಲವೆಂದೋ, ಹಳಿಯುತ್ತಾನೆ. ಅದೇ ತಾನು ಇಚ್ಛಿಸಿದ ಫಲಗಳು ಕೈಗೂಡಿದಾಗ ಆ ಫಲದ ಮೇಲ್ಮೆಯನ್ನು ತನ್ನ ಬೆನ್ನಿಗೆ ಕಟ್ಟಿಕೊಳ್ಳುತ್ತಾನೆ. ಕೇಡೇ ಆಗಲಿ, ಮೇಲೇ ಆಗಲಿ ಉಭಯತಾಪಿ ತನ್ನ ಸ್ವಂತದ ಕರ್ಮದ ಫಲಗಳೇ ಎಂದು ತಿಳಿಯಬೇಕು.

ಕಂ. ವಿಮಲಾಂತರಂಗದಲ್ಲಿಯೇ,
ಸಮಗತಿಯಲಿ ನಿಷ್ಠೆಗೂಡಿ, ಸತ್ಯವ ಕಾಣಲ್,
ಯಮ ಮೂಲ ಸಂಚಿತಗಳ
ಕ್ರಮದಿ ತೆಗೆಯೆ, ಸತ್ಯವಾಂತುವ, ಕಟ್ಟಳೆ, ವೇಮಾ.

ಅಂತರಂಗವು ಶುದ್ಧವಾಗಿರಬೇಕು. ಆಗ ಸುಮತ್ವದ ಗತಿಯಲ್ಲಿ ನಿಷ್ಠೆ ಹೊಂದಿ ಸತ್ಯವನ್ನು ಕಾಣಲು, ಕಾಲ ಕರ್ಮದಿಂದ ಕೂಡಿಬಿದ್ದ ಕರ್ಮ ಸಂಸ್ಕಾರಗಳನ್ನು ಕ್ರಮವಾಗಿ ತೆಗೆದು ಹಾಕಲು, ಸತ್ಯಲೋಕವನ್ನು ಹೊಂದುತ್ತಾನೆ. ಕರ್ಮ ಬಂಧನದಿಂದ ಮುಕ್ತನಾಗುತ್ತಾನೆ.

ಜನನ ಮರಣ :

ಆ. ಜನನ ಮರಣಗಳಲಿ, ಸ್ವಪ್ನ ಸುಷುಪ್ತಿಗಳಲಿ,
ಜಗವನೆಲ್ಲ ತುಂಬಿ ಜನರು ಉಂಟು.
ಅವನಿಯಲ್ಲಿ ಜನರು ಅರಿಯಲಾರರಯ್ಯ !
ವಿಶ್ವದಾಭಿರಾಮ ಕೇಳು ವೇಮ.

ಹುಟ್ಟು ಸಾವುಗಳ ಮಧ್ಯೆ ನಮ್ಮ ಬದುಕು ಇದೆ. ಅಭುಕ್ತ ಕರ್ಮಫಲಗಳನ್ನು ಭೋಗಿಸಲು ಆಧಾರ ಹೊಂದುವುದೇ ಜನ್ಮ. ಕಾರಣ-ಮನಸ್ಸಿನಲ್ಲಿಯ ದೀರ್ಘ ನಿದ್ರೆಯೇ ಮರಣ. ಜಾಗ್ರತಾವಸ್ಥೆಯಲ್ಲಿ ಸ್ಥೂಲ, ಸೂಕ್ಷ್ಮ ಮತ್ತು ಕಾರಣ ಎಂಬೀ ಮೂರು ಮನಗಳು ಕ್ರಿಯಾಶೀಲವಾಗಿರುತ್ತವೆ. ಸ್ವಪ್ನಾವಸ್ಥೆಯಲ್ಲಿ ಕೇವಲ ಸೂಕ್ಷ್ಮ ಮನವು ಕ್ರಿಯಾಶೀಲವಾಗಿರುತ್ತದೆ.

ಇನ್ನು ನಿದ್ರಿತಾವಸ್ಥೆಯಲ್ಲಿ ಸ್ಥೂಲ ಮತ್ತು ಸೂಕ್ಷ್ಮ ಮನಗಳೆರಡೂ ನಿಷ್ಕ್ರಿಯವಾಗಿರುತ್ತವೆ. ಕೇವಲ ಕಾರಣ ಮನ ಮಾತ್ರ ಎಚ್ಚತ್ತಿರುತ್ತದೆ. ಆದ್ದರಿಂದ ಅದೇ ಉಳಿದೆರಡೂ ಮನಗಳ ಕಾರ್ಯವನ್ನು ಮಾಡುತ್ತಿರುತ್ತದೆ. ಶರೀರ ತರಂಗದೊಡನೆ ಮಾನಸ ತರಂಗದ ಸಮಾಂತರತೆಯು ವಿಚ್ಛೇದನಗೊಂಡಾಗ, ಕಾರಣ ಮನವು ಸಹ, ನಿಷ್ಕ್ರಿಯವಾಗುತ್ತದೆ. ಈ ಅವಸ್ಥೆಗೆ ಮೃತ್ಯು ಎನ್ನುತ್ತಾರೆ. ಈ ಜಗತ್ತಿನಲ್ಲಿ ಜನರು ತುಂಬಿ ಉಂಟು. ಆದರೆ ಅವರು ಅವನಿಯಲ್ಲಿ ಇದನ್ನೆಲ್ಲ ಅರಿಯಲಾರರಲ್ಲವೇ ?

ಆ. ಜನನವೆಂತು ಆಯ್ತು ? ಜಾತಿ ಯಾವುದಾಯ್ತು ?
ಜನನ ಮರಣಗಳಿಗೆ ಜಾಡು ತಿಳಿಯೆ,
ಕೇಳಿ, ಕೇಳಿ ಇದನೆ ಹೇಳುವುದು ನೀನರಿ.
ವಿಶ್ವದಾಭಿರಾಮ ಕೇಳು ವೇಮ.

ಬಾಳ ಸಂಪುಟದ ಮೊದಲ ಪುಟಗಳೂ ಹರಿದಿವೆ. ಕೊನೆಯ ಪುಟಗಳೂ ಹರಿದಿವೆ. ಹೀಗಾಗಿ, ಹುಟ್ಟು ಸಾವುಗಳ ಗುಟ್ಟು ತಿಳಿಯದಂತಾಗಿದೆ. ಆದರೆ ಹುಟ್ಟಿದವನು ಸಾಯಲೇಬೇಕು. ಮತ್ತು ಸತ್ತವನು ಹುಟ್ಟಲೇಬೇಕು. ಜನನವು ಹೇಗೆ ಆಯಿತು ? ಜಾತಿ ಯಾವುದು ? ಜನನ ಮರಣಗಳ ಜಾಡು ಏನು ? ಎಂದು ವಿಚಾರಿಸಿದರೆ, ಒಂದು ಸಂಗತಿ ತಿಳಿದು ಬರುತ್ತದೆ. ಒಂದು ಕಾರ್ಯವಿದ್ದರೆ ಅದರ ಹಿಂದೆ ಒಂದು ಕಾರಣವಿರುತ್ತದೆ. ಈ ಕಾರಣವು ಕಾರ್ಯವೆನಿಸಿದರೆ ಅದರ ಹಿಂದೆ ಮತ್ತೊಂದು ಕಾರಣವಿರುತ್ತದೆ. ''ಕಾರಣ ಭಾವಾತ್ ಕಾರ್ಯಭಾವಃ'', ಬೆಣ್ಣೆ ಕಾರ್ಯವಾದರೆ, ಮೊಸರು ಕಾರಣ. ಮೊಸರು ಕಾರ್ಯವಾದರೆ, ಹಾಲು ಕಾರಣ. ಈ ರೀತಿ ನಮ್ಮ ಜನನ ಕಾರ್ಯವಾದರೆ, ನಮ್ಮ ಪೂರ್ವ ಜನ್ಮದ ಸಂಸ್ಕಾರಗಳು ಕಾರಣ. ಕರ್ಮವೆಂದರೆ ಮನದ ವಿಕೃತಿ. ಈ ವಿಕೃತಿಯಿಂದ ಮನವು ಸ್ವಾಭಾವಿಕ ಅವಸ್ಥೆಗೆ ಬರಲೇಬೇಕು. ಇದು ಪ್ರತಿಕರ್ಮ. ಕರ್ಮಕ್ಕೆ ತಕ್ಕ ಪ್ರತಿಕರ್ಮವಿರಲೇಬೇಕು. ಪ್ರತಿಕರ್ಮವನ್ನು ಭೋಗಿಸುವ ಮುನ್ನವೇ ಮೃತ್ಯು ಉಂಟಾದರೆ, ಪ್ರತಿಕರ್ಮದ ಸಂಭಾವ್ಯತೆ ಇರುತ್ತದೆ. ಈ ಸಂಭಾವ್ಯತೆಯನ್ನೇ ಸಂಸ್ಕಾರವೆನ್ನುತ್ತಾರೆ. ಮೃತ್ಯುವಾಗುವುದಕ್ಕಿಂತ ಮುಂಚಿನ ಕಾಲದ ವರೆಗೆ ಮಾಡಿದ ಕರ್ಮಗಳ ಕಾರಣ, ಮನವು ಈ ಅವಸ್ಥೆಯಲ್ಲಿಯೂ ಸಹ ವಿಕೃತವಿರುತ್ತದೆ. ಈ ವಿಕೃತ ಮನವನ್ನು ಸ್ವಾಭಾವಿಕ ಸ್ಥಿತಿಗೆ ತರಬೇಕಾದ ಪ್ರತಿಕರ್ಮದ ಸಂಭಾವ್ಯತೆ ಅರ್ಥಾತ್ ಸಂಸ್ಕಾರವು ಅಭುಕ್ತವಾಗಿ ಉಳಿಯುತ್ತದೆ. ಮನದ ನಿಷ್ಕ್ರಿಯತೆಯಿಂದ, ಮೃತ್ಯುವಿನ ನಂತರ, ಸಂಸ್ಕಾರದ ಸ್ಫುರಣೆಯು ತಡೆಹಿಡಿಯಲ್ಪಡುತ್ತದೆ. ಆದ್ದರಿಂದ ಮಸ್ತಿಷ್ಕದಿಂದೊಡಗೂಡಿದ ಹೊಸ ಆಧಾರದಲ್ಲಿ (ದೇಹದಲ್ಲಿ) ಪುನರ್ವಿಕಾರದ ಸುಸಂಧಿಯು ದೊರಕುವ ತನಕ, ಸಂಸ್ಕಾರವು ವಿದೇಹಿ ಆತ್ಮದೊಂದಿಗೆ ಇರುತ್ತದೆ. ಈ ಪ್ರಕಾರ, ಪ್ರತಿಕರ್ಮದ ಸಂಭಾವ್ಯತೆಯ ಪೂರ್ಣ ಸ್ಫುರಣಕ್ಕಾಗಿಯೇ ಜನ್ಮದ ಆವಶ್ಯಕತೆಯಿದೆ.

ಆ. ತನ್ನ ಕರ್ಮದಿಂದ ತಾನು ಲೋಕದೊಳಗೆ
ತಾಯಿ ಗರ್ಭದಲ್ಲಿ ತಾನು ಹುಟ್ಟಿ,
ತನ್ನ ಮರೆತು ತಾನು ತನುವ ಕೆಡಿಸುತಿಹನು.
ವಿಶ್ವದಾಭಿರಾಮ ಕೇಳು ವೇಮ.

ಲೋಕದಲ್ಲಿ ಮಾನವನು ಕರ್ಮ ಮಾಡುತ್ತಾನೆ. ಈ ಕರ್ಮವೆಂದರೆ ಮನದ ವಿಕೃತಿ.

ಪ್ರತಿಕರ್ಮ ಮೂಲಕ ಅರ್ಥಾತ್ ಕರ್ಮಫಲಭೋಗ ಮೂಲಕ ವಿಕೃತ ಮನವು ಪೂರ್ವ ಸ್ಥಿತಿಗೆ ಬರುತ್ತದೆ. ಫಲ ಭೋಗಕ್ಕೆ ಅನುಕೂಲ ದೇಶ, ಕಾಲಗಳು ಒದಗದಾಗ, ಫಲಭೋಗವು ಅಭುಕ್ತವಾಗಿಯೇ ಉಳಿಯುತ್ತದೆ. ಕೊನೆಗೊಮ್ಮೆ ಮರಣವಾಗುತ್ತದೆ. ಆಗ ಮನವು ಫಲಭೋಗಕ್ಕೆ ಆಧಾರವಾದ ಮಸ್ತಿಷ್ಕದಿಂದ, ಬೇರಾಗುತ್ತದೆ. ಹೀಗಾಗಿ ಪ್ರತಿಕರ್ಮದ ಸಂಭಾವ್ಯತೆಯು ಅಂದರೆ ಸಂಸ್ಕಾರವು ಅಭುಕ್ತವಾಗಿ ಉಳಿದು, ಮನದೊಂದಿಗೆ ಆತ್ಮದೊಡಗೂಡಿ ಬೇರಾಗುತ್ತದೆ. ಈ ಸಂಸ್ಕಾರ ಭೋಗಕ್ಕಾಗಿ ಮಾನವನು, ತನ್ನ ಕರ್ಮದಿಂದ, ತಾಯಿಯ ಗರ್ಭದಲ್ಲಿ, ತಾನು ಹುಟ್ಟುತ್ತಾನೆ. ಆಚ್ಚರಿಯೆಂದರೆ, ತನ್ನ ಹುಟ್ಟು ಏಕಾಯಿತು ? ತನ್ನ ಜನ್ಮಕ್ಕೆ ಕಾರಣವೇನು ? ಎಂಬುದನ್ನೆಲ್ಲ ಮಾನವನು ಮರೆತುಬಿಡುತ್ತಾನೆ. ಹೀಗಾಗಿ, ಏನು ಮಾಡುವುದು ಒಳ್ಳೀದು ? ತನ್ನ ತನುವನ್ನು ಯಾವುದಕ್ಕಾಗಿ ಬಳಸಿಕೊಳ್ಳಬೇಕು ? ಎಂಬುದನ್ನು ತಿಳಿಯದೆ ತನ್ನ ತನುವನ್ನು ಕೆಡಿಸಿಕೊಳ್ಳುತ್ತಾನೆ. ಸಾಧನೆ ಮಾಡಿ ಮುಕ್ತಿ ಸಂಪಾದಿಸಲು ತನುವನ್ನು ಬಳಸುವುದಿಲ್ಲ.

ಆ. ಭವವು ಪೂರ್ವಕರ್ಮ ಫಲವು ; ಅನುಭವಿಸಲು
ಬಂದಿತೆಂದು, ಮನವ ಭದ್ರಗೊಳಿಸು.
ಕಷ್ಟ ಸುಖಿಗಳೆಷ್ಟೊ ? ಕಂಡು ತೊಲಗಬೇಡ.
ವಿಶ್ವದಾಭಿರಾಮ ಕೇಳು ವೇಮ.

ಕರ್ಮಕ್ಕೆ ತಕ್ಕ ಪ್ರತಿಕರ್ಮವು ಇದ್ದೇ ಇರುತ್ತದೆ. ಹಿಂದಿನ ಜನ್ಮದಲ್ಲಿ ಮಾಡಿದ ಯಾವ ಕರ್ಮಗಳ ಪ್ರತಿಕರ್ಮ ಇಲ್ಲವೆ ಕರ್ಮಫಲಗಳನ್ನು ಭೋಗಿಸದೆ ಉಳಿದಿರುವವೋ, ಆ ಪೂರ್ವಕರ್ಮಗಳ ಫಲವೇ ಈ ಭವವು. ಇದನ್ನು ಅನುಭವಿಸಲೇಬೇಕು. ಆದ್ದರಿಂದಲೇ ಇದನ್ನು ಪ್ರಾರಬ್ಧ ಕರ್ಮವೆನ್ನುತ್ತಾರೆ. ಇದು ತನ್ನ ಪಾಲಿಗೆ ಬಂದಿತೆಂದು ಮನದಲ್ಲಿ ಕನಲಬೇಡ. ಧೈರ್ಯ ತಾಳಿ, ಭವವನ್ನು ಅನುಭವಿಸು. ಮನವನ್ನು ಭದ್ರವಾಗಿರಿಸು. ಪೂರ್ವ ಜನ್ಮದ ಕರ್ಮಗಳಿಗೆ ಅನುಸರಿಸಿ, ಸಂಸ್ಕಾರವು ಸುಖಿದಾಯಕವಾಗಿರಬಹುದು. ಇಲ್ಲವೆ ಕಷ್ಟದಾಯಕವಾಗಿರಬಹುದು. ಏನಿದ್ದರೂ ಅದರಿಂದ ಪಾರುಗಾಣುವಂತಿಲ್ಲ. ಆದ್ದರಿಂದ ಕಷ್ಟ ಸುಖಿಗಳನ್ನು ಕಂಡು ತೊಲಗಬೇಡ.

ಆ. ಪೂರ್ವಜನ್ಮದಲ್ಲಿ ಪುಣ್ಯ ಮಾಡದಿಪ್ಪ,
ಪಾಪಿ ಹೊನ್ನಿಗಾಸೆ ಪಡುವುದೆಲ್ಲ,
ಬಿತ್ತಲು ಮರೆತವನು ಬೆಳೆಯನಾಶಿಪಂತೆ.
ವಿಶ್ವದಾಭಿರಾಮ ಕೇಳು ವೇಮ.

ಮಹಾಭಾರತದಲ್ಲಿ ವ್ಯಾಸರು ಹೇಳಿದಂತೆ, ''ಪರೋಪಕಾರಾಯ ಪುಣ್ಯಃ ಪಾಪಾಯ ಪರಪೀಡನಂ''. ಮಾನವನು ಹಿಂದಿನ ಜನ್ಮದಲ್ಲಿ ಪರೋಪಕಾರ, ದಾನ ಧರ್ಮಗಳನ್ನು ಮಾಡಿದ್ದರೆ, ಅವನಲ್ಲಿ ಅಂಥ ಸಂಸ್ಕಾರಗಳು ಉಂಟಾಗುತ್ತವೆ. ಆ ಸಂಸ್ಕಾರಗಳ ಭೋಗವು ಈ ಜನ್ಮದಲ್ಲಿ ಧನ ಪ್ರಾಪ್ತಿಯ ಮೂಲಕ ಸಂಭವಿಸುತ್ತದೆ. ಆದರೆ ಪೂರ್ವಜನ್ಮದಲ್ಲಿ ಪುಣ್ಯವನ್ನು ಮಾಡದಿದ್ದರೆ, ಅವನಿಗೆ ಈ ಜನ್ಮದಲ್ಲಿ ಧನ ಪ್ರಾಪ್ತಿಯು ಆಗದು. ಹೀಗೆ ಪಾಪ ಕರ್ಮ ಮಾಡಿದವನ ಸಂಸ್ಕಾರಗಳು ಈ ಜನ್ಮದಲ್ಲಿ ಸಂಪತ್ತಿನ ಅಭಾವದಲ್ಲಿ ದುಃಖ ಭೋಗಕ್ಕೆ ಕಾರಣವಾಗುತ್ತವೆ. ಆದ್ದರಿಂದ, ಪಾಪಿಯು ಹೊನ್ನಿಗಾಸೆ ಪಡುವುದೆಲ್ಲ ಬಿತ್ತಲು ಮರೆತವನು ಬೆಳೆಯನ್ನು ಆಶಿಸಿದಂತೆ ಆಗುತ್ತದೆ. ಕಾರಣ ತನಗೆಷ್ಟೇ ಕಷ್ಟನಷ್ಟಗಳು ಎದುರಾದರೂ ಮಾನವನು, ಈ ಜನ್ಮದಲ್ಲಾದರೂ

ಧರ್ಮ ಮಾರ್ಗದಿಂದ ಜೀವಿಸಿ ಧನಾರ್ಜನೆ ಮಾಡಬೇಕು. ಪರೋಪಕಾರಾದಿ ಪುಣ್ಯ ಕರ್ಮಗಳಲ್ಲಿ ತೊಡಗಬೇಕು.

ಆ. ಬೇಕು ಎನಲು ಬರದು ; ಬೇಡವೆನಲು ಬಿಡದು.
ಪೂರ್ವ ಕರ್ಮಕಂಟಿ ಫಲವು ಉಂಟು.
ಹೃದಯದಲ್ಲಿ ದುಃಖ ಪಡದಿರುವುದೆ ಧರ್ಮ
ವಿಶ್ವದಾಭಿರಾಮ ಕೇಳು ವೇಮ.

ಮನದ ವಿಕೃತಿಯೇ ಕರ್ಮ. ವಿಕೃತ ಮನವು ಪೂರ್ವಾವಸ್ಥೆಗೆ ಮರುಳುವುದು, ಪ್ರತಿಕರ್ಮ. ಇದುವೇ ಕರ್ಮಫಲ. ಪುಣ್ಯ ಕರ್ಮದ ಫಲ ಸುಖಭೋಗ ; ಪಾಪ ಕರ್ಮದ ಫಲ ದುಃಖಭೋಗ. ಮೃತ್ಯುವಾದ ಬಳಿಕ ಮಸ್ತಿಷ್ಕದ ಅಭಾವದಲ್ಲಿ ಮನವು ನಿಷ್ಕ್ರಿಯವಾಗಿರುತ್ತದೆ. ಇದರಿಂದ ಪ್ರತಿಕರ್ಮದ ಸಂಭಾವ್ಯತೆಯಿಂದ ಕೂಡಿದ ಮನವು ತಾತ್ಕಾಲಿಕವಾಗಿ ವಿಕೃತ ಅವಸ್ಥೆಯಲ್ಲಿಯೇ ಇರಬೇಕಾಗುತ್ತದೆ. ಪ್ರತಿಕರ್ಮದ ಸಂಭಾವ್ಯತೆಯನ್ನೇ ಸಂಸ್ಕಾರವೆನ್ನುತ್ತಾರೆ. ಮನದ ನಿಷ್ಕ್ರಿಯತೆಯಿಂದ ಸಂಸ್ಕಾರದ ಸ್ಫುರಣೆಯು ತಡೆ ಹಿಡಿಯಲ್ಪಡುತ್ತದೆ. ಆದ್ದರಿಂದ ಮಸ್ತಿಷ್ಕದಿಂದೊಡಗೂಡಿದ ಹೊಸ ಆಧಾರದಲ್ಲಿ ಸ್ಫುರಣೆಯ ಸುಸಂಧಿಯು ದೊರೆಯುವ ತನಕ, ಸಂಸ್ಕಾರವು ವಿದೇಹಿ ಆತ್ಮದೊಂದಿಗೆ ಇರುತ್ತದೆ. ಮರುಜನ್ಮ ಪಡೆದಾಗ ಪೂರ್ವ ಜನ್ಮದ ಕರ್ಮ ಸಂಸ್ಕಾರಗಳು ಸ್ಫುರಿಸುತ್ತವೆ. ಹೀಗೆ ಫಲಭೋಗವು ಪೂರ್ವಕ್ಕೆ ಅಂಟಿಯೇ ಇರುತ್ತದೆ. ಹಿಂದೆ ಮಾಡಿದುದು ಪುಣ್ಯಕರ್ಮವಾಗಿದ್ದರೆ; ಫಲವು ಸುಖದಾಯಕವಿರುತ್ತದೆ, ಪಾಪ ಕರ್ಮವಾಗಿದ್ದರೆ, ಫಲವು ದುಃಖದಾಯಕವಾಗಿರುತ್ತದೆ. ಆದ್ದರಿಂದ ಸುಖವು ಬೇಕು ಎಂದರೆ, ಪಾಪಿಗೆ ಅದು ಬರದು. ಅದೇ ರೀತಿ ದುಃಖ ಬೇಡವೆಂದರೂ ಅದು ಬಿಡದು. ಆದ್ದರಿಂದ ಅನಿವಾರ್ಯವಾದ ಪೂರ್ವಕರ್ಮಗಳ ಫಲಭೋಗಗಳು ಎದುರಾದಾಗ ಹೃದಯದಲ್ಲಿ ದುಃಖ ಪಡದಿರುವುದೇ ಧರ್ಮವೆನಿಸುತ್ತದೆ.

ಕಂ. ಬರದುದ ಕೋರಲು ಬಾರದು,
ಬರುವುದ ಕೋರದಿರಲು ತಾನೇ ಬರುತಿಹುದೈ.
ಬರಿ ಚಿಂತೆಯನತಿ ಗೆಯ್ದೊಡೆ,
ಸರಿಯಾಗುವುದೇ ? ತಾನಾಗುತಿಹುದು, ವೇಮಾ.

ಹಿಂದೆ ಮಾಡಿದ ಕರ್ಮಕ್ಕನುಸಾರವಾಗಿ ಫಲಾಫಲಗಳುಂಟು. ಪೂರ್ವದಲ್ಲಿ ಪಾಪಕರ್ಮ ಮಾಡಿದ್ದರೆ, ಈ ಜನ್ಮದಲ್ಲಿ ಸುಖದ ಫಲ ಬಯಸಿದರೂ ಬಾರದು.. ಅಂದರೆ, ಬರದುದು ಕೋರಿದರೂ ಬಾರದು. ಅದೇ ರೀತಿ ಪೂರ್ವದಲ್ಲಿ ಪುಣ್ಯ ಕರ್ಮ ಮಾಡಿದ್ದರೆ, ಕೋರಲಿ, ಕೋರದಿರಲಿ ಸುಖದ ಫಲ ಬರುತ್ತದೆ. ಇದನ್ನೇ ಭಾಗ್ಯ ಇಲ್ಲವೆ ಅದೃಷ್ಟ ಎನ್ನುತ್ತಾರೆ. ಅರ್ಥಾತ್ ಬರುವುದು ಕೋರದಿದ್ದರೂ ತಾನೇ ಬರಹತ್ತಿಹುದು. ಹೀಗಿರುವಾಗ, ಹಿಂದೆ ಒಳ್ಳೆಯ ಕರ್ಮ ಮಾಡುವುದನ್ನು ಬಿಟ್ಟು, ಈಗ ಒಳ್ಳೆಯ ಫಲಕ್ಕಾಗಿ ಬರೀ ಚಿಂತೆ ಮಾಡಿದರೆ, ಸರಿಯಾಗುವುದೇ ? ಆಗುವುದೆಲ್ಲ ಸಂಸ್ಕಾರಾನುಸಾರ ಆಗುತ್ತದೆ. ಚಿಂತೆಯಿಂದ ಯಾವ ಪ್ರಯೋಜನವೂ ಇಲ್ಲ.

ಕಂ. ಹಿಂದಾಗಿ ಹೋದುದು ಏನು ?
ಮುಂದೊಮ್ಮೆ ಕೂಡ ಏನುಂಟು ? ಮಹಿಯಲ್ಲಿ ತಾ-
ನಿಂದಾಗುವಂತಹದೇನು ?
ಎಂದಾದರೇನು ಆಗುವುದು ? ಜಗದಿ ವೇಮಾ.

ಹಿಂದೆ ಆಗಿ ಹೋದದ್ದು ಏನು ? ದಾನ, ಧರ್ಮ, ಪರೋಪಕಾರದಂಥ ಪುಣ್ಯ ಕರ್ಮ ಮಾಡಿರುವನೋ ? ಇಲ್ಲವೆ ಶೋಷಣೆ, ಅಧರ್ಮ, ಪರಪೀಡನೆಯಂಥ ಪಾಪ ಕರ್ಮಗಳನ್ನು ಮಾಡಿರುವನೋ ? ಇಂದು ಅನುಭವಿಸಬೇಕಾದ ಸುಖ ಇಲ್ಲವೆ ದುಃಖಿಗಳ ಮೇಲಿಂದ ಅದನ್ನು ತಿಳಿಯಬಹುದು. ಇಂದಾದರೂ ಪಾಪ ಕರ್ಮಗಳಲ್ಲಿ ಲಿಪ್ತನಾಗದೆ ಪುಣ್ಯ ಕರ್ಮಗಳಲ್ಲಿ ತೊಡಗಬಹುದಲ್ಲವೆ ? ಏಕೆಂದರೆ ಇಂದಿನ ಪುಣ್ಯ ಕರ್ಮಗಳ ಫಲವು ಮುಂದಿನ ಜನ್ಮದಲ್ಲಿ ಸುಖದಾಯಕವಾಗುತ್ತದೆ. ಮತ್ತು ಪಾಪಕರ್ಮಗಳ ಫಲವು ದುಃಖದಾಯಕವಾಗುತ್ತದೆ.

ಆ. ಜನ್ಮಗಳೆನ್ನೆಷ್ಟೊ ? ಜನ್ಮವೆತ್ತುತಿಹರು,
ಕರ್ಮ ಧರ್ಮಗಳಿಗೆ ಗಣನೆಯೆಷ್ಟೊ ?
ಕರ್ಮಧರ್ಮಗಳನು ಕೊನೆಗಾಣಿಸರಲ್ಲ !
ವಿಶ್ವದಾಭಿರಾಮ ಕೇಳು ವೇಮ.

ಮಾನವನು ಸ್ವಾರ್ಥಪರ ಕರ್ಮಗಳನ್ನೇ ಮಾಡಲಿ ; ಇಲ್ಲವೆ ಧರ್ಮಪರ ನಿಷ್ಕಾಮ ಕರ್ಮಗಳನ್ನೇ ಮಾಡಲಿ, ಅವುಗಳ ಪ್ರತಿಕರ್ಮದ ಸಂಭಾವ್ಯತೆಯಂತೂ ಇದ್ದೇ ಇರುತ್ತದೆ. ಈ ಸಂಭಾವ್ಯತೆಯನ್ನು ಸಂಸ್ಕಾರವೆನ್ನುತ್ತಾರೆ. ಮೃತ್ಯುವಿನ ನಂತರ ಈ ಸಂಸ್ಕಾರಗಳು ಮನದೊಂದಿಗೆ ಜೀವಾತ್ಮನನ್ನು ಕೂಡುತ್ತದೆ. ಈ ಸಂಸ್ಕಾರಗಳ ಸ್ಫುರಣೆಗಾಗಿ ಮನವು ಕ್ರಿಯಾಶೀಲವಾಗಬೇಕು. ಅಂದರೆ ಮನಕ್ಕೆ ಮಸ್ತಿಷ್ಕವನ್ನು ಒದಗಿಸುವ ಆಧಾರ ಬೇಕು. ಹೀಗೆ ಹೊಸ ಜನ್ಮವಾಗುತ್ತದೆ. ಹೀಗೆ ಒಂದಾದ ಮೇಲೊಂದರಂತೆ ಅದೆಷ್ಟೊ ಜನ್ಮಗಳನ್ನು ಎತ್ತುತ್ತಾರೆ. ಈ ಜನ್ಮಗಳಿಗೆ ಕಾರಣವೇನು ? ಹಿಂದಿನ ಕರ್ಮ ಧರ್ಮಗಳು ತಾನೇ ? ಇವುಗಳೂ ಲೆಕ್ಕವಿಲ್ಲದಷ್ಟು. ಸಕಾಮದಿಂದ ಮಾಡಿದ ಪಾಪ ಕರ್ಮವಾಗಲಿ, ಪುಣ್ಯ ಕರ್ಮವಾಗಲಿ ಸಂಸ್ಕಾರವನ್ನುಂಟು ಮಾಡುತ್ತವೆ. ಆದ್ದರಿಂದ ಸಂಸ್ಕಾರವನ್ನು ಉಂಟು ಮಾಡದ ನಿಷ್ಕಾಮ ಕರ್ಮದ ಆಚರಣೆಯಷ್ಟೇ ಯೋಗ್ಯವಾಗಿದೆ. ಆಗ ಕರ್ಮ-ಧರ್ಮಗಳ ಫಲಗಳುಂಟಾಗವು. ಕರ್ಮಧರ್ಮಗಳು ಕೊನೆಗಾಣುತ್ತವೆ.

ಆ. ಜನ್ಮ ಕಳೆದು ಬೇರೆ ಜನ್ಮವೆತ್ತಿ ಬರಲು,
ಕರ್ಮ ಧರ್ಮಗಳದು ಗಣನೆಯುಂಟು.
ಕರ್ಮಧರ್ಮಗಳನು ಕಡೆಗಣಿಸಬಹುದೆ ?
ವಿಶ್ವದಾಭಿರಾಮ ಕೇಳು ವೇಮ.

ಮಾನವನು ಒಂದು ಜನ್ಮದಲ್ಲಿ ಮಾಡಿದ ಕರ್ಮಧರ್ಮಗಳ ಪ್ರಾರಬ್ಧ (ಆರಂಭಿಸಲ್ಪಟ್ಟ) ಫಲಗಳನ್ನು ಅಂದರೆ ಪ್ರತಿಕರ್ಮಗಳ ಸಂಭ್ಯಾವತೆಗಳನ್ನು ಅರ್ಥಾತ್ ಸಂಸ್ಕಾರಗಳನ್ನು ಭೋಗಿಸಲಿಕ್ಕಾಗಿಯೇ ಇನ್ನೊಂದು ಜನ್ಮವೆತ್ತಿ ಬರುತ್ತಾನೆ. ಅಂದ ಮೇಲೆ, ಅವನು ಮಾಡಿದ ಕರ್ಮಧರ್ಮಗಳ ಗಣನೆಯು ಇದ್ದೇ ಇದೆ. ಅಂದ ಮೇಲೆ, ಕರ್ಮ ಧರ್ಮಗಳನ್ನು

ಕಡೆಗಣಿಸಲಾಗದು. ಆದ್ದರಿಂದ ಪ್ರಸ್ತುತ ಜನ್ಮದಲ್ಲಿ ವಿಷಯ ಭೋಗದಲ್ಲಿ ಉದಾಸೀನರಾಗಬೇಕು. ಮತ್ತು ನಿಷ್ಕಾಮ ಕರ್ಮಗಳಲ್ಲಿ ತೊಡಗಬೇಕು.

ಆ. ಕರ್ಮ ಗುಣಗಳೆಲ್ಲ ಕಡೆಗಣಿಸಿ ನಡೆದರೆ,
ತತ್ತ್ವವೆಂತು ತನಗೆ ತಗಲಿ ಇಹುದು ?
ಎಣ್ಣೆ ಇರದೆ ದೀಪ ಎಳ್ಳಿಂದ ಉರಿವುದೆ ?
ವಿಶ್ವದಾಭಿರಾಮ ಕೇಳು ವೇಮ.

ಕೇಡಿ ಕರ್ಮ ಮಾಡಿದರೆ ಅನ್ಯರಿಗೂ ದುಃಖವಾಗುತ್ತದೆ ; ತನಗೂ ದುಃಖದಾಯಿ-ಯಾಗುತ್ತದೆ. ಅರ್ಥಾತ್ ಕೇಡಿ ಕರ್ಮದ ಪ್ರತಿಕರ್ಮವು ದುಃಖಕರವಾಗಿರುತ್ತದೆ. ಅಂದ ಮೇಲೆ, ಕರ್ಮದ ಗುಣಗಳನ್ನು ಕಡೆಗಣಿಸಿ, ಮನಸ್ಸಿನ ಇಚ್ಛೆಯಂತೆ ಕಾರ್ಯ ಮಾಡುತ್ತ ಸಾಗಿದರೆ, ಮನವು ಹೆಚ್ಚು ಹೆಚ್ಚಾಗಿ ವಿಷಯಾಸಕ್ತವಾಗುತ್ತದೆ. ಅಂದರೆ ಜಡವಾಗುತ್ತದೆ. ಹೀಗೆ ಮಾಡುತ್ತ ಸಾಗಿದರೆ, ಮನವು ಸೂಕ್ಷ್ಮವಾಗುವುದೆಂತು ? ಇನ್ನು ಪುಣ್ಯಾರ್ಜನೆಗೆಂದು ಕಾಮ್ಯ ಕರ್ಮಗಳನ್ನು ಆಚರಿಸಿದರೂ ಸಹ ಮನಸ್ಸು ವಿಷಯಾಸಕ್ತವಾಗಿ ಜಡವಾಗುತ್ತದೆ. ಇದರ ಫಲವಾಗಿ ಈ ಜನ್ಮದಲ್ಲಾಗಲಿ, ಮರುಜನ್ಮದಲ್ಲಾಗಲಿ ಸುಖ ಭೋಗಿಸಬಹುದೇ ಹೊರತು, ಮನವು ವಿರಕ್ತವಾಗದು. ವಿರಕ್ತವಾಗದ ಮನವು ಸೂಕ್ಷ್ಮದಿಶೆಯಲ್ಲಿ ಪ್ರಗತಿ ಹೊಂದದು. ಅಂದ ಮೇಲೆ ಸೂಕ್ಷ್ಮಾತಿಸೂಕ್ಷ್ಮ (ತತ್+ತ್ವ) ತತ್ತ್ವವು ತನಗೆ ಹೇಗೆ ಎಟುಕುವುದು ? ಭಕ್ತಿ ವೈರಾಗ್ಯದ ಮೂಲಕ ಸಾಧನೆ ಮಾಡದೆ ಮನವು ಸೂಕ್ಷ್ಮ ಸ್ತರಗಳಿಗೆ ಏರದು. ಭಕ್ತಿ, ವೈರಾಗ್ಯಗಳೇ ಎಣ್ಣೆ ; ಸಾಧನೆಯೇ ಬತ್ತಿ ಮನದ ಸೂಕ್ಷ್ಮ ಸ್ತರವೇ ದೀಪ. ಎಳ್ಳನ್ನು ಗಾಣಕ್ಕೆ ಹಾಕಿ ಎಣ್ಣೆ ತಯ್ಯಾರಿಸಿ ಅದರಿಂದ ದೀಪವನ್ನು ಉರಿಸಬಹುದು. ಗಾಣಕ್ಕೆ ಹಾಕಿ ಎಣ್ಣೆ ತೆಗೆಯುವುದೇ ಸಾಧನ. ಅಂದ ಮೇಲೆ ಎಣ್ಣೆ ಇರದೆ ದೀಪ ಎಳ್ಳಿಂದ ಉರಿಯುವುದೇ ?

ಆ. ಕರ್ಮಫಲಗಳೆಲ್ಲ ಕಪಟವೆಂದು ಕಂಡು,
ಧರ್ಮಫಲಗಳೆಲ್ಲ ತಗಲುತಿಹವು.
ಧರ್ಮ ಮರ್ಮಗಳನು ದಾಟುವುದೆ ಮುಕ್ತಿ.
ವಿಶ್ವದಾಭಿರಾಮ ಕೇಳು ವೇಮ.

'ಅಹಂ ಕರ್ತಾ ಫಲ ಭೋಕ್ತಾ'. ಅಂದರೆ ಅಹಂ ತತ್ತ್ವವೇ ಕರ್ಮ ಮಾಡುತ್ತದೆ. ಮತ್ತು ಕರ್ಮ ಫಲವನ್ನು ಭೋಗಿಸುತ್ತದೆ. ಈ ಅಹಂ ತತ್ತ್ವವನ್ನು ದಾಟಿ ಬುದ್ಧಿ ತತ್ತ್ವದ ಸ್ತರವನ್ನು ಮುಟ್ಟದೆ ಆತ್ಮದ ಪ್ರತಿಬಿಂಬವನ್ನು, ಅಗ್ಯಬುದ್ಧಿಯಲ್ಲಿ ಕಾಣಲಾರೆವು. ಆದ್ದರಿಂದ ಕರ್ಮಫಲಗಳು ಆತ್ಮ ಸಾಕ್ಷಾತ್ಕಾರಕ್ಕೆ ಹೋಗಗೊಡದೆ ಮನವನ್ನು ಅಹಂ ತತ್ತ್ವದ ಸ್ತರದಲ್ಲಿಯೇ ಉಳಿಸುತ್ತವೆ. ಹೀಗೆ ಮಾನವ ಜೀವನದ ಪರಮ ಗುರಿಯಾದ ಆತ್ಮ ಸಾಕ್ಷಾತ್ಕಾರ ಮಟ್ಟ ಮುಟ್ಟದಂತೆ ವಂಚಿಸುವ ಕಪಟಿಗಳೆಂದು ಕಂಡು ಬರುತ್ತದೆ. ಆಗ ಮಾನವನು ದಾನ, ಧರ್ಮ ಕಾರ್ಯಗಳಲ್ಲಿ ತೊಡಗುತ್ತಾನೆ. ಈ ಧರ್ಮ ಕಾರ್ಯಗಳೂ ಸುಖದಾಯಿಕವಾಗಿರುತ್ತವೆ. ಧರ್ಮಫಲ ಭೋಗ, ಅದರ ಸುಖಭೋಗದತ್ತ ಆಕರ್ಷಣೆ ಉಂಟಾಗುತ್ತದೆ. ಮನವನ್ನು ಮೇಲು ಸ್ತರಕ್ಕೆ ತಲುಪಿಸುವಲ್ಲಿ ಇವುಗಳೂ ಬಂಧನಕಾರಿಯೇ. ಬಂಗಾರದ ಬೇಡಿಗಳಂತೆ. ಆದರೆ ಕರ್ಮ, ಕರ್ಮಫಲ ಭೋಗಗಳ ಬಂಧನದಿಂದ ಮುಕ್ತನಾಗಬೇಕಷ್ಟೇ. ಅದಕ್ಕಾಗಿ ಧರ್ಮ ಮರ್ಮಗಳನ್ನು

ದಾಟಬೇಕು. 'ಸರ್ವಧರ್ಮಾನ್ ಪರಿತ್ಯಜ್ಯ ಮಾಮ್ ಏಕಂ ಶರಣಂ ವ್ರಜ'. ಅಂದರೆ 'ಸರ್ವ ಧರ್ಮಗಳನ್ನು ತ್ಯಜಿಸಿ, ನನ್ನೊಬ್ಬನಲ್ಲಿಯೇ ಶರಣು ಪಡೆ' ಎಂದು ಗೀತೆಯಲ್ಲಿ ಕೃಷ್ಣನೂ ಹೇಳಿದ್ದಾನೆ.

ಆ. ಕರ್ಮದಲ್ಲಿ ಹುಟ್ಟಿ, ಕರ್ಮದಲ್ಲಿ ಸಿಲುಕಿ,
ಕರ್ಮ ಸಂಚಯವನು ಕಾಣಲಾರ.
ಕರ್ಮ ಬಂಧವನ್ನು ಕೊನೆಗೊಳಿಸಲಾರ.
ವಿಶ್ವದಾಭಿರಾಮ ಕೇಳು ವೇಮ.

ಪೂರ್ವ ಜನ್ಮದಲ್ಲಿ ಮಾಡಿದ ಕರ್ಮಗಳ ಪ್ರತಿಕರ್ಮಗಳ ಸಂಭಾವ್ಯತೆ ಅಂದರೆ ಸಂಸ್ಕಾರ ಭೋಗಕ್ಕಾಗಿಯೇ ಮಾನವನು ಹುಟ್ಟುತ್ತಾನೆ. ಹೀಗೆ ಅವನು ಕರ್ಮ ನಿಮಿತ್ತ ಹುಟ್ಟು ಪಡೆಯುತ್ತಾನೆ. ಹಿಂದಿನ ಸಂಸ್ಕಾರ ಬಲದಿಂದ ಈ ಜನ್ಮದಲ್ಲಿಯೂ ಕರ್ಮ ಗೆಯ್ಯುತ್ತಾನೆ. ಹೀಗಾಗಿ ಮತ್ತೆ ಕರ್ಮದಲ್ಲಿಯೇ ಸಿಲುಕುತ್ತಾನೆ. ಇಂಥ ಮಾನವನು ಕರ್ಮ ಫಲಗಳು ಸಂಚಯಿಸುತ್ತ ಹೋಗುವುದನ್ನು ಕಾಣಲಾರನು. ಈ ಜನ್ಮದಲ್ಲಿ ಪ್ರಾರಬ್ಧ ಅಂದರೆ ಈಗಾಗಲೇ ಆರಂಭವಾದ ಕರ್ಮಫಲ ಭೋಗವನ್ನು ಮುಗಿಸಿದರೂ ಸಹ, ಮತ್ತೆ ಫಲ ಭೋಗ ಆರಂಭವಾಗದ ಪೂರ್ವ ಜನ್ಮದ ಸಂಸ್ಕಾರಗಳು ಈ ಜನ್ಮದಲ್ಲಿ ಮಾಡಿದ ಅಭುಕ್ತ ಸಂಸ್ಕಾರಗಳೊಂದಿಗೆ ಸೇರಿ, ಸಂಚಿತ ಕರ್ಮ ಧಾರೆಯು ಹೆಚ್ಚುತ್ತ ಹೋಗುತ್ತದೆ. ಇವು, ಮನವು ಉಚ್ಚ ಸ್ತರಕ್ಕೆ ಹೋಗದಂತೆ ಬಂಧಿಸುತ್ತವೆ. ಅಂದರೆ ಹೆಚ್ಚು ಹೆಚ್ಚು ಜಡವಾಗಿಸುತ್ತವೆ. ಆದ್ದರಿಂದ ಈ ಕರ್ಮ ಬಂಧವನ್ನು ಕೊನೆಗೊಳಿಸಲಾರದವನಾಗುತ್ತಾನೆ..

ಆ. ಮುಂಚಿನ ಜ್ಞಾನವೆಲ್ಲ ಮೋಸವಾಗಿ, ಶಿಶುವು
ಕರ್ಮ ಬಂಧನದಲಿ ಕಾಣಲಾರ.
ಜನನ ಮರಣಗಳಿಗೆ ಸಾದೃಶ್ಯಾಗಿ ಬಂತು.
ಇಹದಲ್ಲಿಯ ಹುಟ್ಟು ಅರಿಯೊ, ವೇಮ.

ಪೂರ್ವ ಜನ್ಮದಲ್ಲಿ ಮಾಡಿದ ಕರ್ಮ, ಅದರ ನಿಮಿತ್ತ ಒದಗಿದ ಪ್ರತಿಕರ್ಮದ ಸಂಭಾವ್ಯತೆ ಮತ್ತು ಅದರಿಂದಾಗಿ ಮರುಜನ್ಮ ಬಂದಿರುವುದೆಂಬ ಮುಂಚಿನ ಜ್ಞಾನವೆಲ್ಲವನ್ನೂ ತನ್ನ ಮರೆವಿನ ಮೋಸದಿಂದ ಶಿಶುವು ತಿಳಿಯುವುದಿಲ್ಲ. ಹೀಗಾಗಿ ತಾನು ಬೆಳೆದ ಮೇಲೆ ಮತ್ತೆ ಕರ್ಮಕ್ಕಿಳಿದು, ಮನದ ವಿಕಾಸಕ್ಕೆ ಬಂಧನಕಾರಿಯಾಗುವಂತೆ ವರ್ತಿಸುತ್ತಾನೆ. ಮತ್ತೆ ಕರ್ಮ ಮಾಡುತ್ತಾನೆ. ಪ್ರತಿಕರ್ಮದ ಸಂಭಾವ್ಯತೆಯನ್ನು ಸಂಚಯಿಸುತ್ತಾನೆ. ದೇಹವು ಮುಪ್ಪಾಗಿರುತ್ತದೆ. ಹೀಗಾಗಿ ದೇಹ ತರಂಗಗಳು ಮಾನಸ ತರಂಗಗಳೊಂದಿಗೆ ಸಮಾಂತರತೆಯು ತಪ್ಪುತ್ತದೆ. ಮರಣವು ಘಟಿಸುತ್ತದೆ. ಆತ್ಮವು ಸಂಸ್ಕಾರಯುಕ್ತ ಮನದೊಂದಿಗೆ ಬೇರಾಗುತ್ತದೆ. ಪುನರ್ಜನ್ಮವು ಘಟಿಸುತ್ತದೆ. ಹೀಗೆ ಇಹದಲ್ಲಿಯ ಹುಟ್ಟು, ಜನನ ಮರಣಗಳಿಗೆ ಸಾದೃಶ್ಯವಾಗಿರುತ್ತದೆ. ಇದನ್ನು ತಿಳಿದುಕೊಳ್ಳಬೇಕು.

ಕಂ. ಬರುವುದೆ ಹೋಗುವುದು ಮತ್ತೆ
ಮರಣಿಸುವುದ ಕಂಡರಿಯರು ಸಹಜವು ಎನಿಸಲ್.

ತಿರುಗುತ ಮನ ಬಂದಂತೆಯೆ,
ಉರಿಯಲಿ ಬಿದ್ದು ಮಿಡತೆ ಸಾಯುವ ಪರಿ ವೇಮಾ.

ಜೀವನಿಗೆ ದೇಹತ್ರಯಗಳಿವೆ. ಸ್ಥೂಲದೇಹ, ಸೂಕ್ಷ್ಮದೇಹ ಮತ್ತು ಕಾರಣದೇಹ. ಇದನ್ನೇ ದೇಹ, ಮನಸ್ಸು ಮತ್ತು ಆತ್ಮ ಎಂದೂ ಹೇಳಬಹುದು. ರೋಗರುಜಿನಗಳಿಂದಾಗಿ ಇಲ್ಲವೆ ಮುಪ್ಪಿನಿಂದಾಗಿ ಭೌತದೇಹದ ಅಂಗವಾದ ಮಸ್ತಿಷ್ಕದ ಸಾಮರ್ಥ್ಯವು ಹ್ರಾಸವಾಗುತ್ತದೆ. ಹೀಗಾಗಿ ದೈಹಿಕ ತರಂಗಗಳ, ಮಾನಸಿಕ ತರಂಗಗಳ ಸಮಾಂತರತೆಯು ತಪ್ಪುತ್ತದೆ. ಹೀಗಾಗಿ ಜೀವಾತ್ಮನು ಸಂಸ್ಕಾರಯುಕ್ತ ಮನದೊಂದಿಗೆ ಬೇರ್ಪಟ್ಟು ಹೋಗುತ್ತದೆ. ಮರಳಿ ಅನುರೂಪ ಪಿಂಡದಲ್ಲಿ ಜೀವಾತ್ಮನು ಮನಸ್ಸು ಮತ್ತು ಸಂಸ್ಕಾರಗಳೊಂದಿಗೆ ಸೇರಿಕೊಳ್ಳುತ್ತಾನೆ. ಮುಂದೆ ಈ ಜನ್ಮದಲ್ಲಿಯೂ ಬೆಳೆದು ಕರ್ಮಕ್ಕಿಳಿಯುತ್ತಾನೆ. ಮತ್ತೆ ಮುಂಚಿನಂತೆಯೇ ಮರಣಿಸುತ್ತಾನೆ. ಮರುಜನ್ಮ ಪಡೆಯುತ್ತಾನೆ. ಹೀಗೆ ಬರುವುದೇ ಹೋಗುವುದು ಮತ್ತು ಮರಣಿಸುವುದು. ಇದು ಸಹಜವೆಂದೆಣಿಸಿ, ಜನರು ಇದರ ಹಿಂದಿನ ಮರ್ಮವನ್ನು ಅರಿಯರು. ಹೀಗೆ ಮನಬಂದಂತೆ ತಮ್ಮ ಸಂಸ್ಕಾರಗಳ ಜಾಲದಲ್ಲಿ ಸಿಲುಕಿ ತಿರುಗುತ್ತಾರೆ. ಕೊನೆಗೆ ಮರಣಿಸಿ, ಜನ್ಮವನ್ನು ಹಾಳು ಮಾಡಿಕೊಳ್ಳುತ್ತಾರೆ. ಮಿಡತೆಯು ಉರಿಯಿಂದ ಆಕರ್ಷಿತವಾಗಿ ಆ ಉರಿಯಲ್ಲಿಯೇ ಬಿದ್ದು ಸಾಯುವಂತೆ, ಈ ಉಂಡಾಡಿ ಕರ್ಮಬದ್ಧ ಮಾನವನ ಗತಿಯೂ ಆಗುತ್ತದೆ.

ಆ. ಪಿಂಡವಾಗಿ, ತಾಯಿ ಪಿರಿಗರ್ಭದಿ ಉಂಟು ;
ಪೂರ್ವ ಕರ್ಮವೆಣಿಸಿ ಹೊರಳಿ ಅತ್ತು,
ಧರಣಿಲಿ ಹುಟ್ಟಿ, ಅದ ಮರೆತು ವರ್ತಿಸುವರು.
ವಿಶ್ವದಾಭಿರಾಮ ಕೇಳು ವೇಮ.

ಪೂರ್ವ ಕರ್ಮಗಳ ಪ್ರತಿಕರ್ಮಗಳ ಸಂಭಾವ್ಯತೆಯನ್ನು ಭೋಗಿಸಲು ಜೀವಿಯು ತಾಯಿಯ ಹಿರಿ ಗರ್ಭದಲ್ಲಿ ಪಿಂಡವಾಗಿ ಉಂಟು. ಆಗಿನ್ನೂ ಪೂರ್ವಜ್ಮದ ಕರ್ಮಗಳ ನೆನಪು ಇರುತ್ತದೆ. ಅದರಿಂದಾಗಿ ತನ್ನ ಅಸ್ಥೆ ಏನಾಯಿತಲ್ಲ ! ಎಂದು ಅಳು ಬರುತ್ತದೆ. ಹೊರಳಾಡಿ ಅಳುತ್ತಾನೆ ಕೂಡ. ಆ ಮೇಲೆ ಪ್ರಸೂತಿಯಾಗಿ ಧರಣಿಯ ಮೇಲೆ ಬೀಳುತ್ತಾನೆ. ಇಲ್ಲಿಯ ಹೊಸ ಸಂಸ್ಕಾರಗಳ ಪ್ರಭಾವದಲ್ಲಿ ಕಾರಣವನ್ನು ಮರೆತು ವರ್ತಿಸುತ್ತಾನೆ. ಮತ್ತೆ ಕರ್ಮಬಂಧನದಲ್ಲಿ ಸಿಲುಕುತ್ತಾನೆ.

ಆ. ಸ್ತನ ಕುಡಿವ ಶಿಶುವು ಸರಸ ನಿದ್ರಿಸುತಿರೆ,
ಸ್ವಪ್ನದಲ್ಲಿ ಸೇರಿ ಸರಕ್ಕನೇ
ನಕ್ಕು ಕಿರಿಚಿದಾಗ, ನಿಖಿಲ ಜಗದ ಜನರು
ಆಶ್ಚರಿ ಪಡುತಿಹರು, ಹುಚ್ಚು ವೇಮ.

ಮೊಲೆ ಕುಡಿಯುವ ಶಿಶುವು ಸರಸ ನಿದ್ರೆಯಲ್ಲಿರುವಾಗ, ಕೆಲವೊಮ್ಮೆ ಸುಪ್ತ ಅವಸ್ಥೆಯಿಂದ ಸ್ವಪ್ನಾವಸ್ಥೆಗೆ ಸರಿಯುತ್ತದೆ. ಆಗ ಅದಕ್ಕೆ ತನ್ನ ಪೂರ್ವ ಸಂಸ್ಕಾರಗಳ ಸ್ಮರಣೆಯಿಂದ ನಗು ಬರುತ್ತದೆ. ಇಲ್ಲವೆ ಭೀತಿಯಾಗುತ್ತದೆ. ಹೀಗಾಗಿ ಅದು ಸರಕ್ಕನೇ ನಗುತ್ತದೆ. ಇಲ್ಲವೆ ಭೀತಿಯಿಂದ ಕಿರುಚುತ್ತದೆ. ಆಗ ಜಗತ್ತಿನ ಜನರು ಕಾರಣವಿಲ್ಲದೆ ಮಗು ನಗುತ್ತದೆ ಇಲ್ಲವೆ

ಚೀರುತ್ತದೆ ಎಂದು ಅಚ್ಚರಿಪಡುತ್ತಾರೆ. ಏಕೆಂದರೆ ಜಗದ ಹುಚ್ಚು ಜನರು ನಿಜ ಕಾರಣವನ್ನು ಊಹಿಸಲಾರರು. ಜನರಿಗೆ ಹುಚ್ಚರೆನ್ನುವ ಬದಲು ವೇಮನರು ತಮ್ಮನ್ನೇ ಹುಚ್ಚು ವೇಮ ಎಂದು ಕರೆದುಕೊಂಡಿದ್ದಾರೆ.

ಆ. ಮಗುವಾಗಿರುವಾಗ ಮಾಡಿದ ಕರ್ಮಗಳು,
ಬಾಲ ಮುದಿಯರನ್ನು ಬಾಧಿಸುವವು.
ಮಹಿಯಾಗಸ ನಡುವೆ ಮತಿಯ ನಿಲಿಸಿ ನೋಡು.
ವಿಶ್ವದಾಭಿರಾಮ ಕೇಳು ವೇಮ.

ಚಿಕ್ಕ ವಯಸ್ಸಿನಲ್ಲಿ ಮಾಡಿದ ಕರ್ಮಗಳ ಪ್ರತಿಕರ್ಮಗಳ ಸಂಭಾವ್ಯತೆಯು ಇದ್ದೇ ಇರುತ್ತದೆ. ಈ ಕರ್ಮಫಲಗಳ ಭೋಗವು, ಸುಖ ಇಲ್ಲವೆ ದುಃಖದ ರೂಪದಲ್ಲಿ, ಅನುಕೂಲ ಸಮಯದಲ್ಲಿ ಘಟಿಸುತ್ತದೆ. ಪೂರ್ವಜನ್ಮದಲ್ಲಿ ಮಾಡಿದ ಪ್ರಾರಬ್ಧ ಕರ್ಮ ಸಂಸ್ಕಾರಗಳು ಪ್ರಸ್ತುತ ಜನ್ಮದಲ್ಲಿ ಸ್ಫುರಣವಾಗುವಂತೆ, ಪ್ರಸ್ತುತ ಜನ್ಮದಲ್ಲಿ ಬಾಲ್ಯಾವಸ್ಥೆಯಲ್ಲಿ ಮಾಡಿದ ಕರ್ಮಗಳೂ ಸಹ ತಮ್ಮ ಪ್ರತಿಕರ್ಮ ಸಂಭಾವ್ಯತೆಯಿಂದ ಪ್ರಸ್ತುತ ಜನ್ಮದಲ್ಲಿಯೇ ಅನುಕೂಲ ಪರಿಸ್ಥಿತಿಯಲ್ಲಿ, ಬಾಲ ಮುದಿಯರನ್ನು ಬಾಧಿಸುತ್ತವೆ. ಮಹಿ ಆಗಸದಲ್ಲಿ ಅಂದರೆ ವ್ಯಾವಹಾರಿಕ ಪ್ರಪಂಚದಲ್ಲಿ ಬುದ್ಧಿಯನ್ನು ನಿಲ್ಲಿಸಿ, ನಡೆಯುವ ಘಟನೆಗಳನ್ನೂ, ಅವುಗಳು ಉಂಟು ಮಾಡುವ ಸುಖ ಕ್ಲೇಶಗಳನ್ನೂ, ವಿವೇಚಿಸಿ ನೋಡಿದರೆ ಇದೆಲ್ಲ ತಿಳಿಯುತ್ತದೆ.

ಆ. ಎಂಥವನೋ ತಾನು ? ಅರಿಯ ಪೂರ್ವ ಜನ್ಮ.
ನೀಚ ಜೀವನದಲಿ ನೇಮವೇಕೆ ?
ಅರಿವುದಯ್ಯ ಲೋಕ ಈಶ್ವರಮಯವೆಂದು.
ವಿಶ್ವದಾಭಿರಾಮ ಕೇಳು ವೇಮ.

ಪೂರ್ವ ಜನ್ಮದಲ್ಲಿ ತಾನು ಎಂಥವನಿದ್ದನೆಂಬುದನ್ನು ಮಾನವನು ಅರಿಯನು. ಹಿಂದಿನ ಜನ್ಮದಲ್ಲಿ ಸ್ವ-ಪ್ರತಿಷ್ಠೆಯನ್ನು ಬೆಳೆಸಿಕೊಳ್ಳಲು ಮೇಲು ಕೀಳು ಭಾವನೆಯನ್ನು ಬೆಳೆಸಿದ ಕರ್ಮಫಲವಾಗಿಯೇ ಈ ಜನ್ಮದಲ್ಲಿ ಬಡವನಾಗಿ, ದಲಿತನಾಗಿ ಜನ್ಮ ತಾಳಿರುತ್ತಾನೆ. ಅಂದ ಮೇಲೆ ನೇಮ ನಿಷ್ಠೆ ಕಂದಾಚಾರಗಳನ್ನು ಪ್ರಸ್ತುತ ಜನ್ಮದಲ್ಲಿ ಆಚರಿಸುವುದೇಕೆ ? ತಾಯಿಯೇ ಪಾರ್ವತಿಯು ; ವರ ಶಂಭುವೇ ತಂದೆ. ಜಗದ ಜನರೆಲ್ಲ ಬಂಧುಬಳಗ ; ಎಂಬ ವಿಶ್ವಬಂಧುತ್ವವನ್ನು ಗ್ರಹಿಸಿ ಬಾಳಬೇಕಾದ ಉದಾತ್ತ ಜೀವನವನ್ನು ಉಪೇಕ್ಷಿಸಿ, ಮೇಲು ಕೀಳು, ಮುಟ್ಟು-ಮೈಲಿಗೆಯ ನೇಮಗಳಿಗೆ ಜೋತು ಬೀಳುವ ನೀಚ ಜೀವನವೇಕೆ ? 'ಸರ್ವಂ ಬ್ರಹ್ಮಮಯಂ ಜಗತ್', 'ಸರ್ವಂ ಶಿವಮಯಂ ಜಗತ್' ಎಂಬ ಉದಾತ್ತ ಭಾವ ತಾಳಿ ಲೋಕವು ಈಶ್ವರಮಯವೆಂದು ಅರಿಯಬೇಕಯ್ಯಾ.

ಆ. ವೀರರಾದೊಡಿಲ್ಲ, ವಿದ್ಯೆ ಕಲಿತೊಡಿಲ್ಲ,
ಸತ್ಕುಲದಲು ಇಲ್ಲ, ಸಟೆಯೊಳಿಲ್ಲ.
ಜನ್ಮಫಲವೆ ಹೊರತು, ಜಪಿಸುವುದರೊಳಿಲ್ಲ.
ವಿಶ್ವದಾಭಿರಾಮ ಕೇಳು ವೇಮ.

ಒಬ್ಬ ಮನುಷ್ಯನು ವೀರನಾಗಿ, ಕಾದಿ ಶತ್ರುಗಳನ್ನು ಜಯಿಸಬಹುದು. ಅದರಿಂದ ಮನಸ್ಸು ಸೂಕ್ಷ್ಮಸ್ತರ ತಲುಪಿ ಅವನು ಕರ್ಮಬಂಧದಿಂದ ಮುಕ್ತನಾಗಲಾರನು. ಒಬ್ಬ ವಿದ್ಯೆ ಕಲಿತು ಪಂಡಿತನೆನಿಸಬಹುದು. ತಾನು ಪಂಡಿತನೆಂಬ ಅಹಂಕಾರದಿಂದ ಬೀಗಬಹುದು. ಅದರಿಂದ ಅವನ ಮನಸ್ಸು ಸೂಕ್ಷ್ಮ ಸ್ತರಕ್ಕೇರಲಾರದು. ಅವನು ಕರ್ಮ ಬಂಧನದಿಂದ ಮುಕ್ತನಾಗಲಾರನು. ಅವನ ಮನಸ್ಸು ಸೂಕ್ಷ್ಮ ಸ್ತರಕ್ಕೇರಿರಲಾರದು. ಆದರೂ ಅವನು ಕರ್ಮ ಬಂಧನದಿಂದ ಮುಕ್ತನಾಗಲಾರನು. ಒಬ್ಬ ಸತ್ಕುಲದಲ್ಲಿ ಜನಿಸಬಹುದು. ಕುಲದ ಮೇಲ್ಮೈಯಿಂದ ಮೆರೆಯಬಹುದು. ಕುಲಮದದಿಂದ ಬೀಗಬಹುದು. ಆದರೂ ಅವನ ಮನಸ್ಸು ಸೂಕ್ಷ್ಮಸ್ತರಕ್ಕೇರಲಾರದು. ಇನ್ನು ಸತ್ಯವನ್ನು ಬಚ್ಚಿಟ್ಟು, ಒಬ್ಬನು, ಯಜ್ಞ ಯಾಗಾದಿ ಕರ್ಮಗಳನ್ನು ಮಾಡಿದರೆ ಮುಕ್ತಿಯಾಗುವುದೆಂಬ ಸಟೆಯನ್ನು ಗ್ರಹಿಸಿ ನಡೆದರೂ ಬಂಧನವು ಕಳಚದು. ಮಣಿಗಳನ್ನು ಎಣಿಸುತ್ತ ಜಪ ಮಾಡಿದರೆ ಮನಸ್ಸು ಶುದ್ಧವಾಗಬಹುದೇ ಹೊರತು ಸೂಕ್ಷ್ಮ ಅವಸ್ಥೆಗೇರದು. ಜನ್ಮ ಜನ್ಮಾಂತರದ ಸಾಧನೆಯ ಫಲದಿಂದ ಮಾತ್ರ ಮನಸ್ಸು ಸೂಕ್ಷ್ಮಾತಿಸೂಕ್ಷ್ಮ ಅವಸ್ಥೆಯನ್ನು ಹೊಂದಬಹುದು.

ಆ. ಎಷ್ಟೊ ತಪವ ಗೆಯ್ಯೆ, ಎಷ್ಟೊ ವ್ರತವ ಮಾಡೆ,
ಎಷ್ಟೊ ಕಷ್ಟ ಪಡಲು, ಏನು ಫಲವು ?
ಕರ್ಮ ಫಲವೆ ಹೊರತು ಕಾಣಲಾರ ಮುಕ್ತಿ.
ವಿಶ್ವದಾಭಿರಾಮ ಕೇಳು ವೇಮ.

ಒಬ್ಬನು ಬಹಳಷ್ಟು ದೇಹ ದಂಡಿಸಿ, ತಪವನ್ನು ಮಾಡಬಹುದು. ಇನ್ನೆಷ್ಟೋ ವಿಧದ ವ್ರತಾಚಾರಗಳನ್ನೂ ಮಾಡಬಹುದು. ಇವುಗಳ ಆಚರಣೆಗಾಗಿ ಅದೆಷ್ಟೋ ಕಷ್ಟಪಡಬಹುದು. ಆದರೆ ಅದರಿಂದ ಮನಸ್ಸು ಶುದ್ಧವಾಗಬಹುದೇ ಹೊರತು ಸೂಕ್ಷ್ಮಸ್ತರಕ್ಕೇರದು. ಇವುಗಳೆಲ್ಲ ಕರ್ಮಗಳು ತಾನೇ ? ಹಾಗಾಗಿ ಕರ್ಮ, ಫಲ ನೀಡಬಹುದು. ಪ್ರತಿಕರ್ಮ ಸಂಭಾವ್ಯತೆ ಅನಿವಾರ್ಯವಾಗುತ್ತದೆ. ಹೀಗೆ ಪೂರ್ವ ಸಂಸ್ಕಾರಗಳು ಮರುಜನ್ಮಕ್ಕೆ ದಾರಿಯಾಗುವುದೇ ಹೊರತು ಜನನ ಮರಣಗಳ ಚಕ್ರದಿಂದ ಮುಕ್ತಿ ದೊರೆಯದು. ಇದನ್ನೇ ತಂತ್ರದಲ್ಲಿ ಹೀಗೆ ಹೇಳಿದ್ದಾರೆ :

ನ ಮುಕ್ತಿರ್ತರ್ಪಣಾದ್ಧೋಮಾದುಪವಾಸ ಶತೈರಪಿ ।
ಬ್ರಹ್ಮೈವಾಹಮಿತಿ ಜ್ಞಾತ್ವಾ ಮುಕ್ತೋ ಭವತಿ ದೇಹಭೃತ್ ॥

ಅಂದರೆ, ಮುಕ್ತಿಯು ತಪಸ್ಸಿನಿಂದಾಗಲಿ, ಯಜ್ಞಾಚರಣೆಗಳಿಂದಾಗಲಿ, ಮತ್ತು ನೂರಾರು ಉಪವಾಸಗಳಿಂದಾಗಲಿ ಲಭ್ಯವಾಗದು. ದೇಹವಂತರು 'ನಾನೇ ಬ್ರಹ್ಮ' ವೆಂದು ಅರಿತಾಗ ಮಾತ್ರ ಮುಕ್ತರಾಗುತ್ತಾರೆ.

ಆ. ತಾನು ಜನ್ಮವೆತ್ತಿ ದಾನ ಧರ್ಮ ಈಯ.
ಕರ್ಮಗತಿಯಲಿ ಯಮನು ಕಷ್ಟವೀಮ.
ಕರ್ಮ ಧರ್ಮಗಳಲಿ ಕಡೆಗಾಣುವ ಬ್ರಹ್ಮ.
ವಿಶ್ವದಾಭಿರಾಮ ಕೇಳು ವೇಮ.

ತಾನು ಜನ್ಮವೆತ್ತಿದ್ದಾನೆ. ಈ ಜನ್ಮಕ್ಕೆ ಕಾರಣವಾದರೂ ಏನು ? ಇಂದಿನ ಸುಖ

ದುಃಖಿಗಳಿಗೆ ಕಾರಣವೇನು ? ತನ್ನ ಸಂಸ್ಕಾರಗಳು ತಾನೇ ? ಸಂಸ್ಕಾರವೆಂದರೇನು ? ತನ್ನ ಪೂರ್ವ ಕರ್ಮಗಳ ಪ್ರತಿಕರ್ಮಗಳ ಸಂಭಾವ್ಯತೆಯಲ್ಲವೇ ? ತಾನು ಪೂರ್ವ ಕರ್ಮರೂಪದಲ್ಲಿ ದಾನ ಧರ್ಮ ಮಾಡಿ ಜನರಿಗೆ ಸುಖ ನೀಡಿದ್ದರೆ ಆ ಕರ್ಮದ ಪ್ರತಿಕರ್ಮ ಇಲ್ಲವೆ ಕರ್ಮಫಲವು ತನಗೆ ಸುಖದಾಯಕವಾಗುತ್ತದೆ. ಹೀಗಿದ್ದರೂ ತಾನು ದಾನಧರ್ಮ ಮಾಡನು. ಲೋಭಿಯಾಗುತ್ತಾನೆ. ಮೇಲಾಗಿ ಜನರನ್ನು ಶೋಷಿಸುತ್ತಾನೆ. ಹೀಗಾಗಿ, ಜನರಿಗೆ ಕಷ್ಟ ನೀಡುತ್ತಾನೆ. ಇದರ ಲೆಕ್ಕವಿಟ್ಟ ಯಮನು ಅಂಥವನಿಗೆ ಅವನ ಕರ್ಮಗಳ ಪ್ರತಿಕರ್ಮ ರೂಪದಲ್ಲಿ ಕಷ್ಟವೀಯುತ್ತಾನೆ. ಅಂತೂ ಒಬ್ಬನು ಧರ್ಮಕಾರ್ಯ ಮಾಡಿ ಸುಖಿಭಾಜನನಾಗಲಿ ಇಲ್ಲವೆ ಕುಕರ್ಮ ಮಾಡಿ ಯಮನ ಬಾಧೆಗೆ ಗುರಿಯಾಗಲಿ, ಕರ್ಮಧರ್ಮಗಳಲ್ಲಿ ಸಿಲುಕುತ್ತಾನೆ. ಕರ್ಮ ಧರ್ಮಗಳ ಎಲ್ಲೆ ದಾಟಿದ ಬ್ರಹ್ಮ ಪ್ರಾಪ್ತಿಯನ್ನೇ ಕಡೆಗಾಣುತ್ತಾನೆ.

ಆ. ಪಾಪವೇನು ಅನ್ಯ ಲೋಕದ ಫಲವಲ್ಲ.
ತನ್ನ ಪಾಪ ಕರ್ಮಕಂಟಿ ಗೈವ,
ಕರ್ಮಶುದ್ಧಿಗಿಂತ ಪಾಪ ತೊರೆಯೆ ಲೇಸು.
ವಿಶ್ವದಾಭಿರಾಮ ಕೇಳು ವೇಮ.

'ಪರೋಪಕಾರಃ ಪುಣ್ಯಾಯ, ಪಾಪಾಯ ಪರಪೀಡನಂ' ಎಂಬ ವ್ಯಾಸೋಕ್ತಿಯಿದೆ. ಪರಪೀಡೆಯು ಪಾಪ. ಇಹದಲ್ಲಿ ಮಾಡಿದ ಪಾಪದ ಫಲವನ್ನು ಮರಣಿಸಿದ ಬಳಿಕ ಅನ್ಯ ಲೋಕಕ್ಕೆ ಹೋಗಿ, ಅಂದರೆ, ನರಕದಲ್ಲಿ ಅನುಭವಿಸಬೇಕಿಲ್ಲ. ಸ್ವರ್ಗ ನರಕಗಳು ಇಲ್ಲಿಯೇ ಉಂಟು. ಪಾಪ ಕರ್ಮದ ಪ್ರತಿಕರ್ಮವು ಪಾಪಿಗೆ ಸಂಸ್ಕಾರ ಫಲವಾಗಿ ಒದಗುವ ಮಾನಸಿಕ ಕ್ಲೇಶದ ರೂಪದಲ್ಲಿರುತ್ತದೆ. ಪಾಪ ಮಾಡಿದವನು ತನ್ನ ಪಾಪ ಕರ್ಮಕ್ಕೆ ಅಂಟಿ ತನಗೆ ಒದಗುವ ಕ್ಲೇಶಗಳನ್ನು ನಿವಾರಿಸಲು ಪಾಪಶುದ್ಧಿಯ ಕರ್ಮಗಳನ್ನು ಆಚರಿಸುತ್ತಾನೆ. ಹರಕೆ ಹೊರುತ್ತಾನೆ. ಮುಡಿಪು ಕಟ್ಟುತ್ತಾನೆ. ಆದರೆ ಮಾಡಿದ ಕರ್ಮವು ಪಾಪವಿರಲಿ, ಪುಣ್ಯವಿರಲಿ, ಅದರ ಫಲವಾದ ಸುಖ ಇಲ್ಲವೆ ಕ್ಲೇಶವನ್ನು ಅನುಭವಿಸಲೇ ಬೇಕು. ಕರ್ಮಶುದ್ಧಿಯ ಉಪಾಯಗಳಿಂದ ಕ್ಲೇಶದ ಅನುಭವ ಕಾಲವು ದೀರ್ಘವಾಗಿ, ತಾತ್ಕಾಲಿಕ ಕ್ಲೇಶದ ಪ್ರಮಾಣವು ಕಡಿಮೆಯಾಗಬಹುದೇ ಹೊರತು, ಒಟ್ಟಾರೆ ಪ್ರಮಾಣದಲ್ಲಿ ಕ್ಲೇಶವನ್ನು ಅನುಭವಿಸಲೇಬೇಕು. ಆದ್ದರಿಂದ ಕರ್ಮಶುದ್ಧಿಯ ಕ್ರಿಯೆಗಳಲ್ಲಿ ತೊಡಗುವುದಕ್ಕಿಂತ ಪಾಪ ಮಾಡದಿರುವುದೇ ಲೇಸು.

ಆ. ಶನಿಗೆ ಸಾಲದೆಂದು ಕೆಲವರು ಹೇಳುವರು.
ಶನಿಗೆ ಸಾಲದದನೆ ಕಾಣರಲ್ಲ !
ಕರ್ಮಫಲವೆ ಮಿಗಿಲು ಕಷ್ಟವೀಯುತಿಹುದು.
ವಿಶ್ವದಾಭಿರಾಮ ಕೇಳು ವೇಮ.

ತನ್ನ ಪೂರ್ವದ ಕುಕರ್ಮಗಳ ಫಲವಾಗಿ ದುಃಖದಾಯಕ ಸಂಸ್ಕಾರಗಳನ್ನು ಹೊಂದಿದ ಕೆಲವರು ತಮಗೆ ಶನಿಯ ಕಾಟವಿದೆ ; ಗ್ರಹಗತಿಗಳು ಚೆನ್ನಾಗಿಲ್ಲ. ಏನೇ ಮಾಡಿದರೂ ಶನಿಯ ಪಾಲಾಗುತ್ತದೆ. ಎಷ್ಟಾದರೂ ಶನಿಗೆ ಸಾಲದು, ಎಂದು ಹಳಹಳಿಸುತ್ತಾರೆ. ಆದರೆ ಶನಿಗೆ ಯಾವುದು ಸಾಲದೋ, ಅದನ್ನೇ ಕಾಣರಲ್ಲ ! ಶನಿಯ ಎಲ್ಲೆಗೆ ಬಾರದ ಅದುವೇ ತನ್ನ ಪೂರ್ವ ಕರ್ಮಗಳ ಫಲ. ಮಾಡಿದ್ದುಣ್ಣೋ ಮಾರಾಯ ! ಕರ್ಮಫಲವೇ ಮಿಗಿಲು ಕಷ್ಟವೀಯುತಿಹುದು. ಇದನ್ನರಿತು

ತನ್ನ ಜೀವನ ದೃಷ್ಟಿಯನ್ನು ತಿದ್ದಿಕೊಂಡು ಕುಕರ್ಮಗಳಿಂದ ಮೊದಲು ದೂರಾಗಬೇಕು.

ಆ. ಕೆಡುಕನನ್ನು ಹೆಚ್ಚು ಕೆಡಿಸುತಿಹುದು ದೈವ.
ಅಡ್ಡಿಪಡಿಸುತಿಹುದು ಆಪದಿರಲು.
ಕಡ್ಡಿ ಪೀಕು ಕಂಡು ರೆಡ್ಡಿ ತಾ ಮೆಚ್ಚುವನೆ ?
ವಿಶ್ವದಾಭಿರಾಮ ಕೇಳು ವೇಮ.

ಒಬ್ಬ ಕೆಡುಕು ಕಾರ್ಯಗಳಲ್ಲಿಯೇ ನಿರತನಾದರೆ, ಅವನ ಮನಸ್ಸು ಹೆಚ್ಚು ವಿಕೃತವಾಗುತ್ತದೆ. ಅವನ ಪ್ರತಿಕರ್ಮ ಸಂಸ್ಕಾರಗಳೂ ಸಹ ಹೆಚ್ಚು ಕ್ಲೇಶವನ್ನು ಉಂಟು ಮಾಡುತ್ತವೆ. ಆದರೂ ಅವನು ತನ್ನ ಕೇಡಿ ಸ್ವಭಾವದಿಂದ ಇನ್ನಷ್ಟು ಕೆಡುಕು ಕರ್ಮಗಳಲ್ಲಿಯೇ ತೊಡಗುತ್ತಾನೆ. ತನ್ನ ಕಲಕಿ ಹೋದ ಮನದಲ್ಲಿ ಒಳಿತು ಯಾವುದು ? ಕೇಡು ಯಾವುದು ? ಎಂದು ವಿಶ್ಲೇಷಿಸುವ ವಿವೇಕವನ್ನೇ ಕಳೆದುಕೊಳ್ಳುತ್ತಾನೆ. ಕೊನೆಗೆ ತನ್ನ ಕೇಡಿ ಕರ್ಮಗಳ ಫಲವಾಗಿ ದೊಡ್ಡ ಸಂಕಟ ಇಲ್ಲವೆ ಆಪತ್ತು ಎದುರಾದಾಗ ಅವನಿಗೆ ತನ್ನ ಅವಿವೇಕದ ಅರಿವು ಮೂಡುವುದು. ತನ್ನ ಆಪತ್ತು ತನ್ನ ಕರ್ಮಗಳ ಫಲವೆಂಬ ಅರಿವು ಮೂಡುತ್ತದೆ. ಆಗ ಅವನು ಕೆಡುಕು ಕರ್ಮಗಳಿಂದ ದೂರಾಗುತ್ತಾನೆ. ಹೀಗೆ ಆಪತ್ತು ಇರುವಾಗ ಕೆಡುಕು ಕರ್ಮಗಳಿಗೆ ಅಡ್ಡಿಯು ಉಂಟಾಗುತ್ತದೆ. ಕಾಪು (ರೈತ) ರೆಡ್ಡಿಯು ತನ್ನ ಹೊಲದಲ್ಲಿ ತನ್ನ ಜನರ ನಿರ್ಲಕ್ಷ್ಯದಿಂದಾಗಿ ಚೆನ್ನಾಗಿ ಪೀಕು ಬಾರದೆ, ಕಡ್ಡಿ ಪೀಕು ಬಂದುದನ್ನು ಕಂಡರೆ, ಮೆಚ್ಚಲಾರನು. ಕೂಡಲೇ ಎಚ್ಚತ್ತು, ಹೊಲದ ಸಾಗುವಳಿ, ಗೊಬ್ಬರ ಪೂರೈಕೆಗಳತ್ತ ಗಮನ ನೀಡಿ, ಒಳ್ಳೆಯ ಪೀಕು ತೆಗೆಯಲು ಪ್ರಯತ್ನಿಸುತ್ತಾನೆ. ಅದೇ ರೀತಿ ಆಪತ್ತು ಬಂದಾಗ ತಿಳಿವು ಬರುತ್ತದೆ.

ಪೂರ್ವ ಕರ್ಮಫಲವೇ ಪ್ರಾಪ್ತಿ :

ಆ. ಪ್ರಾಪ್ತಿ ಇರುವ ತಾಣ ಫಲವೀವುದು ದೈವ.
ಪ್ರಾಪ್ತಿ ಇರದ ತಾಣ ಫಲವು ಇಲ್ಲ.
ಪ್ರಾಪ್ತಿ ಇರದೆ ಹೊನ್ನು ಪರಮಾತ್ಮನೀವನೆ ?
ವಿಶ್ವದಾಭಿರಾಮ ಕೇಳು ವೇಮ.

ತನ್ನ ಪೂರ್ವಕರ್ಮದ ಫಲವಾಗಿ ಮಾನವನಿಗೆ ಪ್ರಸ್ತುತ ಜನ್ಮದಲ್ಲಿ ಸುಖಭೋಗದ ಭಾಗ್ಯವು ಪ್ರಾಪ್ತವಾಗುತ್ತದೆ. ಅಂದರೆ ಪ್ರಾಪ್ತಿ ಇರುವ ತಾಣದಲ್ಲಿಯೇ ದೈವವು ಫಲವನ್ನು ಈಯುತ್ತದೆ. ಪೂರ್ವ ಕರ್ಮಗಳು ಪರೋಪಕಾರ, ದಾನಧರ್ಮಾದಿ ಪುಣ್ಯ ಕಾರ್ಯಗಳಾಗಿರದಿದ್ದರೆ, ಸುಖಭೋಗದ ಪ್ರಾಪ್ತಿಯು ಈ ಜನ್ಮದಲ್ಲಿ ಆಗದು. ಅಂದರೆ ಪ್ರಾಪ್ತಿ ಇರದ ತಾಣ ಫಲವು ಇಲ್ಲ. ಹೀಗೆ ಸುಖಭೋಗ ಫಲ ಪ್ರಾಪ್ತಿಯು ಪೂರ್ವಕರ್ಮಗಳ ಫಲವೇ ಆಗಿರುವಾಗ, ಹೊನ್ನು ಬೇಕೆಂದು ಬಯಸಿದರೆ ಪರಮಾತ್ಮನು ನೀಡುವನೇ ? ತಾನೇ ವಿಧಿಸಿದ ನಿಯಮಗಳನ್ನು ಉಲ್ಲಂಘಿಸುವನೇ ?

ಕಂ. ತನ್ನ ಪ್ರಾಪ್ತಿ ತನಗಿರಲು,
ತನ್ನಯ ದುಃಖ ತನಗೆ ಹೊರತು ಅನ್ಯಗಿಹುದೇ ?

ತನ್ನೊಳಿತು ತನಗಿಹುದಲ್ತೆ ?
ಅನ್ಯವನೆಣಿಸದೆ, ಅನುವಿಲಿ, ಸೇರಿಲೊ ವೇಮಾ.

ತನ್ನ ಪೂರ್ವಕರ್ಮಗಳು ಪುಣ್ಯಕರವಾಗಿದ್ದರೆ ಅವುಗಳ ಫಲಗಳು ಸುಖದಾಯಕವಾಗಿರುತ್ತದೆ. ಏಕೆಂದರೆ, ಅವುಗಳ ಆಚರಣೆಯಿಂದ ತನಗೂ ಮತ್ತು ಇತರರಿಗೂ ಸುಖವೇ ಆಗಿರುತ್ತವೆ. ಹಾಗಾಗಿ ಪ್ರತಿಕರ್ಮಗಳೂ ಸುಖದಾಯಿಯಾಗುತ್ತವೆ. ಅದೇ ರೀತಿ, ಪೂರ್ವ ಕರ್ಮಗಳು ಪಾಪಕರವಾಗಿದ್ದರೆ, ಅವುಗಳ ಫಲಗಳು ದುಃಖದಾಯಕವಾಗಿರುತ್ತವೆ. ಏಕೆಂದರೆ ಅವುಗಳ ಆಚರಣೆಯಿಂದ ಇತರರಿಗೆ ದುಃಖವು ಉಂಟಾಗಿ ತನಗೂ ದುಃಖ ಉಂಟಾಗುತ್ತದೆ. ಹಾಗಾಗಿ ಅವುಗಳ ಪ್ರತಿಕರ್ಮಗಳು ದುಃಖದಾಯಿಯಾಗುತ್ತವೆ. ಹೀಗಾಗಿ ಸುಖ ಇಲ್ಲವೆ ದುಃಖದ ಪ್ರಾಪ್ತಿ ತನ್ನ ಕರ್ಮಫಲವಷ್ಟೇ ? ಅಂದ ಮೇಲೆ, ತನ್ನ ಪ್ರಾಪ್ತಿ ತನಗಿರಲು, ತನ್ನಯ ದುಃಖ ತನಗೆ ಹೊರತು, ಅನ್ಯಗಿಹುದೇ ? ಅದೇ ರೀತಿ, ತನ್ನ ಒಳಿತು ಸಹ ತನಗಿಹುದಲ್ಲವೇ ? ಇದನ್ನು ಹೊರತುಪಡಿಸಿ ಅನ್ಯಥಾ ಭಾವಿಸದೆ, ಇದಕ್ಕೆ ಹೊಂದಿಕೊಂಡು ವಿವೇಕದ ಹಾದಿಯಲ್ಲಿ ಸೇರಿಕೋ.

ಆ. ಫಲವಿರದ ಕಾರ್ಯ ಪ್ರಯತ್ನಿಸರು ಯಾರು.
ನುರಿತ ಬುದ್ಧಿ ಜನರು ; ನಿಜವಿದಷ್ಟೇ ?
ಫಲವು ಒಳ್ಳಿತಿರಲು ಪರದಲಿ ಮುದವುಂಟು.
ವಿಶ್ವದಾಭಿರಾಮ ಕೇಳು ವೇಮ.

ಫಲಾಸಕ್ತಿಯಿಲ್ಲದ ನಿಷ್ಕಾಮ ಕರ್ಮ ಮಾಡುವವರ ಮಾತು ಬೇರೆ. ಆದರೆ ಕರ್ಮಜೀವಿಗಳಿಲ್ಲರೂ ಫಲವಿಲ್ಲದ ಕಾರ್ಯಗಳಲ್ಲಿ ಪ್ರಯತ್ನಿಸರು. ಅದರಲ್ಲಿಯೂ ನುರಿತ ಬುದ್ಧಿವಂತ ಜನರೆಲ್ಲರೂ ಫಲದಾಯಕ ಕಾರ್ಯಗಳನ್ನೇ ಮಾಡುತ್ತಾರೆ. ಇದು ನಿಜವಷ್ಟೇ ? ಒಳ್ಳೆಯ ಫಲವಿದ್ದರೆ, ಮನಸ್ಸಿನ ಮೇಲಿನ ಸ್ತರದಲ್ಲಿಯೂ ಅಂದರೆ ಪರದಲ್ಲಿಯೂ ಮುದವುಂಟು.

ಆ. ಎಷ್ಟೊ ಫಲಗಳುಂಟು ; ನಿನ್ನ ಫಲವೆ ಮೇಲು.
ಅಖಿಲ ಸುಖಗಳಲ್ಲಿ ಅಧಿಕವಿಹುದು,
ಕಂಡು ಕಾಣನಲ್ಲ ? ಕಾಣಿಸುವುದು ಕರ್ಮ.
ವಿಶ್ವದಾಭಿರಾಮ ಕೇಳು ವೇಮ.

ಬೇರೆ ಬೇರೆ ಪ್ರತಿಕರ್ಮರೂಪಿ ಫಲಗಳು ವಿವಿಧವಾಗಿ ಉಂಟು. ಅವುಗಳ ಪ್ರಾಪ್ತಿಯೂ ಉಂಟು. ಎಲ್ಲವುಗಳಲ್ಲಿ ತನ್ನ ತಾನರಿಯುವ ಆತ್ಮ ಸಾಕ್ಷಾತ್ಕಾರದ ಪ್ರಾಪ್ತಿಯೇ ಮೇಲಾದುದು. ಇದುವೇ ಸುಖಗಳೆಲ್ಲವುಗಳಿಗಿಂತ ಅಧಿಕವಾದುದಾಗಿದೆ. 'ಸುಖಂ ಅನಂತಂ ಆನಂದಂ'. ಇದು ಆನಂದಮಯವಾಗಿದೆ. ಇದನ್ನು ಕಂಡೂ ಕಾಣದಾಗಿದ್ದಾನೆ ; ಕರ್ಮ ಜೀವಿ. ಅವನಿಗೆ ಕಣ್ಣೆದುರಿಗೆ ಕಾಣಿಸುವುದು ಕರ್ಮವೊಂದೇ.

ಕರ್ಮಫಲದ ವಿನಿಮಯವಿಲ್ಲ :

ಆ. ಒಬ್ಬನ ಕೀಳು ಬೇರೊಬ್ಬನಿಗೀಯನು.
ಒಬ್ಬನ ಮೇಲು ಬೇರೊಬ್ಬಗೀಯ.

ಕೀಳು ಮೇಲೆನುವರು ಕಾಣರಿದರ ರೀತಿ.
ವಿಶ್ವದಾಭಿರಾಮ ಕೇಳು ವೇಮ.

ತಾನು ಮಾಡಿದ ಕರ್ಮಫಲವನ್ನು ತಾನೇ ಭೋಗಿಸಬೇಕಲ್ಲದೆ, ಅದನ್ನು ಬೇರೆ ಒಬ್ಬನಿಗೆ ನೀಡಲಾರನು. ಒಬ್ಬನು ಕೀಳು ಕರ್ಮ ಮಾಡಿದ್ದರೆ ಅದರ ದುಃಖದಾಯಕ ಫಲವನ್ನು ತಾನು ಭೋಗಿಸಲೇಬೇಕು. ಈ ಭೋಗವು ಮನಸ್ಸಿನ ಕ್ಲೇಶ ರೂಪದಲ್ಲಿ ಇರುತ್ತದೆ. ತಾನು ಮೇಲು ಕರ್ಮ ಮಾಡಿದ್ದರೆ ಅದರ ಸುಖದಾಯಕ ಫಲವನ್ನು ಸಹ ಬೇರೊಬ್ಬನಿಗೆ ಈಯನು. ಅನ್ಯರನ್ನು ಕೀಳೆಂದು ಭಾವಿಸುವುದಾಗಲಿ ತಾವು ಮೇಲೆಂದು ಭಾವಿಸುವುದಾಗಲಿ ಮನಸ್ಸಿನ ಕರ್ಮಗಳೇ. ಪ್ರತಿ ಕರ್ಮ ರೂಪದಲ್ಲಿ ದುಃಖ ಇಲ್ಲವೆ ಸುಖಿಗಳ ಪ್ರಾಪ್ತಿಯುಂಟು. ಪೂರ್ವ ಜನ್ಮದಲ್ಲಿ ದಲಿತರನ್ನು ಕೀಳಾಗಿ ಕಂಡು ತನ್ನಷ್ಟಕ್ಕೆ ಗರ್ವ ಪಡುವವನು ಮರುಜನ್ಮದಲ್ಲಿ ತಾನೇ ದಲಿತ ವರ್ಗದಲ್ಲಿ ಜನಿಸಿ ಅವಮಾನ ಪಡೆಯುತ್ತಾನೆ. ಮಸ್ತು ಸ್ಥಿತಿ ಹೀಗಿರುವಾಗ, ಕೀಳು ಮತ್ತು ಮೇಲು ಎಣಿಸುವ ಜನರು ಇಂಥ ಎಣಿಕೆಯ ಮುಂದಿನ ಪರಿಣಾಮದ ರೀತಿಯನ್ನು ಅರಿಯರಷ್ಟೇ.

ಆ. ತನ್ನ ಅಣ್ಣ ತಮ್ಮ ದಾನ ಗೆಯ್ದೊಡಾಗ,
ತನಗೆ ಪುಣ್ಯವೆಂದು ತಿಳಿಯಬೇಡ.
ತನ್ನ ಕಾಲು ಕೊಯ್ಯೆ, ತಮ್ಮ ತಾನಳುವನೆ ?
ವಿಶ್ವದಾಭಿರಾಮ ಕೇಳು ವೇಮ.

ಕರ್ಮ ಮಾಡಿದವನೇ ಕರ್ಮಫಲವನ್ನು ಉಣ್ಣಬೇಕು. ಕರ್ಮವು ಮೂಲತಃ ಮನಸ್ಸಿನ ವಿಕೃತಿ ತಾನೇ ? ವಿಕೃತ ಮನಸ್ಸು ತನ್ನ ಪೂರ್ವ ಸ್ಥಿತಿಗೆ ಮರಳುವುದೇ ಪ್ರತಿಕರ್ಮ ಅರ್ಥಾತ್ ಕರ್ಮಫಲ. ಕರ್ಮ ಮಾಡಿದ ಮನಸ್ಸೇ ಈ ಕರ್ಮಫಲ ಭೋಗಕ್ಕೆ ಬಾಧ್ಯಸ್ಥವಷ್ಟೇ ? ಆದ್ದರಿಂದ ತನ್ನ ಅಣ್ಣನೊಬ್ಬನು ದಾನ ಮಾಡಿ ಪುಣ್ಯ ಕರ್ಮ ಮಾಡಿದ್ದರೆ, ವಿಕೃತಿ ಹೊಂದಿದ ಅವನ ಮನಸ್ಸು ಪೂರ್ವಾವಸ್ಥೆಗೆ ಬರುವ ಪ್ರತಿಕರ್ಮ ಕ್ರಿಯೆಯಲ್ಲಿ ಸುಖಿಭೋಗವನ್ನು ಅನುಭವಿಸುತ್ತದೆ. ಅಂದ ಮೇಲೆ ದಾನ ಮಾಡಿದ ಅಣ್ಣನ ಪುಣ್ಯದಿಂದ ತನಗೂ ಪುಣ್ಯ ಪ್ರಾಪ್ತವಾಗಬೇಕಾದರೆ ತಾನು ಪುಣ್ಯ ಕರ್ಮ ಮಾಡಬೇಕು. ಇದು ಹೇಗೆಂದರೆ, ಅಣ್ಣನ ಕಾಲನ್ನು ಕೊಯ್ದರೆ ಅಣ್ಣನೇ ಬಾಧೆಯನ್ನು ಅನುಭವಿಸುತ್ತಾನೆ, ಅಳುತ್ತಾನೆ. ಆಗ ತಮ್ಮನೇನೂ ಅಳುವುದಿಲ್ಲವಷ್ಟೇ.

ಆ. ಶುದ್ಧ ನೀರು ಸುರಿಯೆ, ಮಲ್ಲಿಗೆ ಹೂವಾಯ್ತು.
ಫಲವು ದೊರೆವುದೆಂತು ದುಡಿದ ಹೊರತು ?
ತಿಂಡಿ ತಿನಿಸು ಬಹವೆ ಅಡುಗೆ ಮಾಡದಿರಲು ?
ವಿಶ್ವದಾಭಿರಾಮ ಕೇಳು ವೇಮ.

ಒಳ್ಳೆ ನೀರು ಸುರಿದರೆ ಮಲ್ಲಿಗೆ ಬಳ್ಳಿ ಬೆಳೆದು ಮೊಗ್ಗೆ ಬಿಟ್ಟು ಹೂವು ಅರಳುತ್ತದೆ. ದುಡಿಮೆ ಇಲ್ಲದಿದ್ದರೆ ಫಲವು ಹೇಗೆ ದೊರಕುತ್ತದೆ ? ಹುಟ್ಟಿಸಿದ ದೇವರು ಹೊಟ್ಟೆಗೆ ಹಾಕುತ್ತಾನೆ ಎಂದು ತೆಪ್ಪಗೆ ಕುಳಿತರೆ ನಡೆಯದು. ಅಡುಗೆ ಮಾಡದಿದ್ದರೆ, ಹಲವಾರು ತಿಂಡಿ ತಿನಿಸುಗಳು ಹೇಗೆ ಲಭ್ಯ ?

ಮೂಢ ನಂಬುಗೆ :

ಆ. ಗೂಬೆ ಹೊಕ್ಕ ಮನೆಯ ಹಾಳುಗೆಡವಿ ಬಿಟ್ಟು,
ಹೊರಟು ಹೋಹರೆಷ್ಟು ಹುಚ್ಚರಿಹರು ?
ಗೂಬೆ ಗೃಹಗಳಲ್ಲ ; ಕೂಡಿ ಬಿದ್ದ ಕರ್ಮ.
ವಿಶ್ವದಾಭಿರಾಮ ಕೇಳು ವೇಮ.

ಗೂಬೆಯು ಮನೆಯೊಳಗೆ ಸೇರಿದರೆ, ಅಪಶಕುನವೆಂದೂ, ಅದರಿಂದ ಕೇಡು ಬರುವುದೆಂದೂ ಜನರು ತಮ್ಮ ವಾಸದ ಮನೆಯನ್ನೇ ಬಿಟ್ಟು ಹೊರಟು ಹೋಗುತ್ತಾರೆ. ಗೂಬೆಯು ಮನೆ ಸೇರುವುದು ಕೇಡಿನ ಶಕುನವೆಂದು ತಿಳಿಯುತ್ತಾರೆ. ಅಜ್ಞ ಜನರಲ್ಲಿ ತುಂಬಿರುವ ಅನೇಕ ಮೂಢ ನಂಬುಗೆಗಳಲ್ಲಿ ಇದೂ ಒಂದು. ತನ್ನ ಒಳಿತು ಕೇಡಿಗೆ ಗೂಬೆಯಾಗಲಿ, ಮನೆಯಾಗಲಿ ಕಾರಣವಲ್ಲ. ತನ್ನ ಕೂಡಿ ಬಿದ್ದ ಪೂರ್ವ ಕರ್ಮಗಳೇ ಕಾರಣ. ಆ ಕರ್ಮಗಳ ಸಂಸ್ಕಾರವೇ ಸ್ಫುರಿಸಿ ಕೇಡಿನ ಫಲ ಉಂಟು ಮಾಡುತ್ತದಷ್ಟೇ. ಮನೆ ತೊರೆದರೆ ಕರ್ಮ ಸಂಸ್ಕಾರ ತೊಲಗದು.

ಆ. ಜನ್ಮ ಪೂರ್ವದಲ್ಲಿ ಜನರ ಕೇಳಿದಾಗ,
ಕರ್ಮ ಜೀವಿಯಾದ ಕಲಿಯುಗದಲಿ.
ಇಟ್ಟವರಿಗೆ ಸತತ ಹುಟ್ಟುತಿಹುದೆ ಸಾಕ್ಷಿ.
ವಿಶ್ವದಾಭಿರಾಮ ಕೇಳು ವೇಮ.

ಪೂರ್ವ ಜನ್ಮದಲ್ಲಿ ಹೊಟ್ಟೆ ಹೊರೆಯಲು, ಕರ್ಮ ಮಾಡದೆ ಜನರನ್ನು ಕೇಳಿ ಪಡೆಯುವ ಆಲಸಿಯಾಗಿದ್ದರೆ, ಅವನ ಮನವು ವಿಕೃತವಾಗುತ್ತದೆ. ಈ ವಿಕೃತ ಮನವು ತನ್ನ ಪೂರ್ವ ಅವಸ್ಥೆಗೆ ಮರಳಬೇಕಾದರೆ ಪ್ರತಿ ಕರ್ಮ ರೂಪದಲ್ಲಿ ಕರ್ಮ ಮಾಡಿಯೇ ಆ ವಿಕೃತಿಯನ್ನು ಸರಿಪಡಿಸಬೇಕು. ಹೀಗೆ ಆಲಸ್ಯ ವ್ಯಸ್ತತೆಗಳಲ್ಲಿ ಹೊರಳುವವನು ಕಲಿಯುಗದಲ್ಲಿ ಕರ್ಮ ಜೀವಿಯಾಗುತ್ತಾನೆ. ಅಹಂ ತತ್ತ್ವದಾಚೆಗೆ ಹೋಗನು. ಸಂಪತ್ತನ್ನು ಕೂಡಿಟ್ಟು ಅದರ ವಿತರಣೆಯನ್ನು ಮಾಡದೆ, ದಾನ ಧರ್ಮ ಮಾಡದೆ, ಕರ್ಮ ಜೀವಿಯಾದವನು ತನ್ನ ಕರ್ಮಫಲದಿಂದ ಮರಳಿ ಮರಳಿ ಹುಟ್ಟುತ್ತಾನೆ. ಇದುವೇ ಲೋಭಿಗಳ ಜಡತೆಗೆ ಸಾಕ್ಷಿಯಾಗಿದೆ.

ಕಂ. ನರಜನ್ಮವ ತಾನೆತ್ತಿಯು,
ಪರಮಾತ್ಮನನರಿಯದಿರಲು ಪಾಪಾತ್ಮನಲ !
ಬರಿ ದುರಿತ ಕರ್ಮ ಗೆಯ್ದೊಡೆ,
ಮರಳಿ ಅಧೋಗತಿ ಪಡೆವನು, ಅರಿಯೈ, ವೇಮಾ.

ಇರುವೆ ಎಂಭತ್ತು ನಾಲ್ಕು ಲಕ್ಷ ಯೋನಿಗಳನ್ನು ದಾಟಿ, ಜೀವ ವಿಕಾಸ ಕ್ರಮದಲ್ಲಿ ಜೀವಿಯು ಮಾನವ ಜನ್ಮ ಪಡೆಯುತ್ತಾನೆ. ನಿದ್ರೆ, ಆಹಾರ, ಭಯ, ಮೈಥುನಗಳು ಪಶುಗಳಿಗೂ ಮಾನವನಿಗೂ ಸಮಾನವಾಗಿವೆ. ಆದರೆ ಮಾನವನ ವಿಶೇಷತೆಯೆಂದರೆ ಬೃಹದೇಷಣೆಯಾಗಿದೆ. 'ಬೃಹದೇಷಣಾ ಪ್ರಣಿಧಾನಂ ಧರ್ಮಃ'. ಜೀವ ವಿಕಾಸದಲ್ಲಿ ಮಾನವಸ್ತರದಲ್ಲಿ ಚಿತ್ತ ತತ್ತ್ವ ಮತ್ತು ಅಹಂ ತತ್ತ್ವಗಳಲ್ಲದೆ ಮಹತ್ ತತ್ತ್ವ ಅಥವಾ ಬುದ್ಧಿ ತತ್ತ್ವವೂ ವಿಕಾಸವಾಗಿದೆ.

ಇದರಿಂದ ಮಾನವನು ಊಟ, ನಿದ್ರೆ, ಮೈಥುನಗಳಂಥ ಅಲ್ಪ ಸುಖಗಳಲ್ಲಿ ತೃಪ್ತನಾಗದೆ ಅನಂತ ಸುಖದೆಡೆಗೆ ಹೋಗಲೆಳಸುತ್ತಾನೆ. ಅವನ ಈಷಣೆಯು ಬೃಹತ್ತಾಗಿದೆ, ಅನಂತವಾಗಿದೆ. ಅದೇ ಅವನ ಧರ್ಮವಾಗಿದೆ. ಸುಡುವುದೇ ಅಗ್ನಿಯ ಧರ್ಮವಾದಂತೆ. ಅಂದ ಮೇಲೆ ನರಜನ್ಮವನ್ನು ತಾಳಿದವನು ಪರಮಾತ್ಮನನ್ನು ಅರಿಯಬೇಕು. ಅದು ಅವನ ಧರ್ಮ. ಪರಮಾತ್ಮನನ್ನು ಅರಿಯದೇ ಹೋದರೆ, ಅವನು ಪಾಪಾತ್ಮನಾಗುತ್ತಾನೆ. ಪ್ರಾಣಿಗಳಲ್ಲಿ ಸೀಮಿತ ಅಹಂ ಇದ್ದು ಅವುಗಳ ವಿಕಾಸವು ನಿರಾತಂಕವಾಗಿರುತ್ತದೆ. ಆದರೆ, ನರನ ಅಹಂ ಹೆಚ್ಚು ವಿಕಸಿತವಾಗಿದ್ದು ಅದಕ್ಕೆ ದತ್ತ ಸ್ವಾತಂತ್ರ್ಯವೂ ಇದೆ. ಹೀಗಾಗಿ, ಅವನು ಪರಮಾತ್ಮನ ಸಂಕಲ್ಪಕ್ಕೆ ವಿರುದ್ಧ ದಿಶೆಯಲ್ಲಿ ಸಾಗಲೂಬಹುದು. ಹೀಗೆ ಸ್ವೇಚ್ಛೆಯಿಂದ ಬರೀ ದುರಿತ ಕರ್ಮಗಳನ್ನೇ ಮಾಡಿದರೆ, ಅವನ ಮನಸ್ಸು ಪರಾಗತಿಯತ್ತ ಸಾಗುವ ಬದಲು ಮರಳಿ ಅಧೋಗತಿಯತ್ತ ಸಾಗುವುದು. ಹೀಗಾಗಿ ಅವನು ದಾಟಿ ಬಂದ ಪ್ರಾಣಿ ಜನ್ಮಕ್ಕೆ ಮರಳಬೇಕಾಗುತ್ತದೆ. ಇದನ್ನು ಸರಿಯಾಗಿ ತಿಳಿಯಬೇಕು.

ಆ. ಪ್ರಾಣವಾತ್ಮವೆನಲು ಪ್ರಾಣಿ ಜೀವಿತಾಯ್ತು.
ಜೀವಿ ಪ್ರಾಣ ಮಾತ್ರ ಸೇರಿಯೊಂದೆ.
ಕರ್ಮ ಬಂಧನಕ್ಕೆ ಕಟ್ಟು ಬೀಳುತಿಹರು.
ವಿಶ್ವದಾಭಿರಾಮ ಕೇಳು ವೇಮ.

ಸೃಷ್ಟಿ ವಿಕಾಸಧಾರೆಯಲ್ಲಿ ಎರಡು ಹಂತಗಳುಂಟು. ಪ್ರಥಮ ಹಂತದಲ್ಲಿ ಬ್ರಹ್ಮನಿಂದ ಅಣುವಿನ ವರೆಗೆ ಸಾಗುವ ಸಂಚರ ಧಾರೆ. ದ್ವಿತೀಯ ಹಂತದಲ್ಲಿ ಜಡತಮ ಅಣುವಿನಿಂದ ಸೂಕ್ಷ್ಮತಮ ಆತ್ಮನತ್ತ ತಲುಪುವ ಪ್ರತಿಸಂಚರ ಧಾರೆ. ಪ್ರತಿ ಸಂಚರ ಧಾರೆಯಲ್ಲಿ ಭೂತ ಸಂಘರ್ಷದಿಂದ ಉಂಟಾಗುವ ಬಲವೇ ಪ್ರಾಣಾಃ ಆಗಿರುತ್ತವೆ. ಅನಂತರ ಚಿತ್ತಾಣು, ಅಹಂ ತತ್ತ್ವ ಮತ್ತು ಬುದ್ಧಿ ತತ್ತ್ವ ಮತ್ತು ಕೊನೆಗೆ ಆತ್ಮ ತತ್ತ್ವಗಳು ವಿಕಸಿಸುತ್ತವೆ. ಹೀಗಿರುವಾಗ, ಪ್ರಾಣವೇ ಆತ್ಮ ಎಂದರೆ, ಅದು ಪ್ರಾಣಿ ಜೀವಿತವಷ್ಟೇ. ಜೀವ್ ಎಂದರೆ ಉಸಿರಾಡು. ಅಂದ ಮೇಲೆ, ಪ್ರಾಣವೇ ಆತ್ಮವೆಂದರೆ ಅದು ಉಸಿರಾಡುವ ಪ್ರಾಣಿ ಮಾತ್ರರ ಧರ್ಮವಷ್ಟೇ. ಪಂಚ ಪ್ರಾಣಗಳಾದ ಪ್ರಾಣ, ಅಪಾನ, ಸಮಾನ, ವ್ಯಾನ ಮತ್ತು ಉದಾನಗಳೂ ಮತ್ತು ಈ ಪ್ರಾಣಶಕ್ತಿಯಿಂದ ಕ್ರಿಯಾಶೀಲವಾಗುವ ವಾಕ್, ಪಾದ, ಪಾಣಿ, ಗುದ ಮತ್ತು ಗುಹ್ಯಗಳೆಂಬ ಕರ್ಮೇಂದ್ರಿಯಗಳೂ ಸೇರಿ ಪಂಚಕೋಶಗಳಲ್ಲಿ ಒಂದಾದ ಪ್ರಾಣಮಯ ಕೋಶವಾಗಿದೆಯಷ್ಟೇ? ಹೀಗಾಗಿ ಜೀವಿ ಪ್ರಾಣ ಮಾತ್ರ ಸೇರಿ ಒಂದಾಗಿ ಕರ್ಮ ಬಂಧನಕ್ಕೆ ಕಟ್ಟು ಬೀಳುತ್ತಾರೆ. ಕರ್ಮ ಚಕ್ರದಿಂದ ದಾಟಿ ಮೇಲಕ್ಕೆ ಹೋಗರು. 'ಯದ್ಭಾವಂ ತದ್ಭವತಿ'.

ಆ. ಮಡದಿ ಮಕ್ಕಳು ವಿತ್ತ ಮಾತೆಗಾತು ಮನುಜ
ಕನಕ ಪಡೆಯಬಹುದೆ ? ಕಷ್ಟಪಡದೆ.
ತನಗೆ ಯಾರು ಇಲ್ಲ ; ತಾನು ಬ್ರಹ್ಮವರಿಯೆ.
ವಿಶ್ವದಾಭಿರಾಮ ಕೇಳು ವೇಮ.

ಮಾನವನ ಧರ್ಮವು ಬೃಹದೇಷಣವೇ ಆಗಿದೆ. ಬೃದೇಷಣದಿಂದ ಬ್ರಹ್ಮವನ್ನು ಅರಿಯಬಹುದು. ಆದರೆ ಅವನು ದಾರೇಷಣ, ಪುತ್ರೇಷಣ ಮತ್ತು ವಿತ್ತೇಷಣಗಳಲ್ಲಿ ಪ್ರವೃತ್ತನಾಗಿರುತ್ತಾನೆ. ಹೀಗೆ ಮಡದಿ, ಮಕ್ಕಳು, ವಿತ್ತ,ತಾಯಿಗೆ ಆತುಕೊಂಡು ಮಾನವನು ಧನ

ಸಂಪತ್ತನ್ನು ಪಡೆಯಬಹುದೇ ? ತನಗೆ ಭಾಗ್ಯ ಪ್ರಾಪ್ತಿಯಾಗಬೇಕಾದರೆ, ತಾನು ಪೂರ್ವ ಕರ್ಮ ಮಾಡಿರಬೇಕಲ್ಲವೇ ? ಮತ್ತು ಈ ಜನ್ಮದಲ್ಲಿ ಕರ್ಮನಿರತನಾಗಿ ಕಷ್ಟ ಪಡಬೇಕಲ್ಲವೇ ? ಈ ಜನ್ಮದ ಕರ್ಮ ಮತ್ತು ಹಿಂದಿನ ಜನ್ಮದ ಅಭುಕ್ತ ಸಂಸ್ಕಾರಗಳ ಫಲವಾಗಿ ತನಗೆ ಕನಕ ಪ್ರಾಪ್ತಿಯಾಗಬಹುದು. ಯಾವಾಗ ಮಾನವನು ವಿವೇಕ ವೈರಾಗ್ಯಗಳಿಂದ ಮನಶುದ್ಧಿ ಪಡೆದು, ಸಾಧನೆ ಮಾಡಿ ಬ್ರಹ್ಮವನ್ನು ಅರಿಯುವನೋ, ಆಗ ಅವನು ನಿಸ್ಸಂಗಿಯಾಗಿರುತ್ತಾನೆ. ಮಡದಿ, ಮಕ್ಕಳು, ಮಾತೆ ವಿತ್ತಗಳಲ್ಲಿ ಅನುರಕ್ತಿ ತೊರೆದು ವಿರಕ್ತನಾಗಿರುತ್ತಾನೆ.

ಧರ್ಮ ಕರ್ಮಗಳನು ತಪ್ಪದೆ ಮಾಡದಿರೆ,
ಕರ್ಮ ಜೀವಿ ಮೇಲು ಕಾಣಲಾರ.
ನಿರ್ಮಲ ಹೃದಯದವ ನಿನ್ನ ರೂಪದೊಳಿಹ.
ವಿಶ್ವದಾಭಿರಾಮ ಕೇಳು ವೇಮ.

ವ್ಯಕ್ತಿ, ವಸ್ತು ಮತ್ತು ವಿಚಾರಗಳ ಅನುರಕ್ತಿಯಿಂದ ಪಾರಾಗದ ಸಂಸಾರಿಯು ಸೂಕ್ತ ಧರ್ಮ ಕರ್ಮಗಳನ್ನು ಮಾಡಲೇಬೇಕು. ಅವನು ತನ್ನ ಅಹಂ ತತ್ತ್ವದ ಅಳವಿನಲ್ಲಿಯೇ ವ್ಯವಹರಿಸುತ್ತಾನೆ. ಅಹಂಕಾರ ಮತ್ತು ಮಮಕಾರಗಳು ಅವನ ಬೆನ್ನು ಬಿಡವು. ಅವನು ಕರ್ಮ ಜೀವಿಯಾಗಿಯೇ ಉಳಿಯುತ್ತಾನೆ. ಹೀಗಾಗಿ ಅಹಂ ತತ್ತ್ವಕ್ಕಿಂತ ಮೇಲೆ ಹೋಗಲಾರನು. ಅವನಿಗೆ ವಿಕ್ಷೇಪ ಮಲವೂ ಅಂಟಿರುತ್ತದೆ.

ಕರ್ಮ, ಅಕರ್ಮ :

ಕಂ. ಕರ್ಮಾಕರ್ಮಕ್ಕೋಸುಗ
ನರ್ಮದಿ ಓರ್ವನಿರುವ ಒಳಗಾತ್ಮನೆ ಗುರುತ್ಮ.
ಧರ್ಮಾಧರ್ಮಗಳನು ಆ
ನಿರ್ಮಲಮತಿಯಾದವನೇ ನಿಲಿಸುವ ವೇಮಾ.

ಯಾವುದು ಕರ್ಮ ? ಯಾವುದು ಅಕರ್ಮ ಇದನ್ನೆಲ್ಲ ಪರಿಹಾಸ ರೂಪದಿಂದ ತಿಳಿಸುವ ಪ್ರತ್ಯಗಾತ್ಮನು ಒಳಗಿರುವುದೇ ಗುರುತಾಗಿದೆ. ಯಾವುದರಿಂದ ಮನಸ್ಸಿನ ವಿಕೃತಿಯಾಗುವುದೋ, ಅದು ಕರ್ಮ. ವಿಕೃತ ಮನವು ಪೂರ್ವ ಸ್ಥಿತಿ ತಲುಪುವಾಗ ಪ್ರತಿಕರ್ಮ ಅಥವಾ ಕರ್ಮ ಫಲವು ಘಟಿಸುತ್ತದೆ. ಯಾವುದರ ಫಲವು ಸುಖದಾಯಿಯಾಗಿದೆಯೋ, ಅದು ಪುಣ್ಯ ಕರ್ಮ ; ಯಾವುದರ ಫಲವು ದುಃಖದಾಯಿಯಾಗಿದೆಯೋ ಅದು ಪಾಪಕರ್ಮ. ಪುಣ್ಯ ಕರ್ಮವೇ ಧರ್ಮ, ಪಾಪ ಕರ್ಮವೇ ಅಧರ್ಮ.

ಯಾವುದರಿಂದ ಮನಸ್ಸು ವಿಕೃತವಾಗುವುದಿಲ್ಲವೋ, ಅದು ಅಕರ್ಮ. ಕಾಮ, ಕ್ರೋಧ, ಲೋಭ, ಮೋಹ, ಮದ ಮತ್ತು ಮತ್ಸರಗಳೆಂಬ ಆರು, ಮನವನ್ನು ವಿಕೃತವಾಗಿಸುತ್ತವೆ. ವಿಷಯಗಳಲ್ಲಿ ಅನುರಕ್ತಿಯನ್ನು ಉಂಟು ಮಾಡುತ್ತವೆ. ನಿಷ್ಕಾಮ ಕರ್ಮವು ಅನುರಕ್ತಗೊಳಿಸುವುದಿಲ್ಲ. ಅದನ್ನು ಅನಾಸಕ್ತಗೊಳಿಸುತ್ತದೆ. ಆದ್ದರಿಂದ ನೈಷ್ಕರ್ಮ ಸಿದ್ಧಿಯು ಬೇಕು. ಅಹಂ ಮತ್ತು ಬುದ್ಧಿ ತತ್ತ್ವಗಳನ್ನು ಮೀರಿದ ಪ್ರತ್ಯಗಾತ್ಮದ ಅರಿವು ಉಂಟಾದಾಗ

ಮಾತ್ರ ಕರ್ಮ ಯಾವುದು ? ಮತ್ತು ಅಕರ್ಮ ಯಾವುದು ? ಎಂಬುದನ್ನು ನಿರ್ಧರಿಸಬಹುದು.

ಧರ್ಮ ಅಧರ್ಮಗಳು ಪುಣ್ಯ ಇಲ್ಲವೆ ಪಾಪ ಕರ್ಮಗಳ ರೂಪದಲ್ಲಿರುವುದರಿಂದ, ಮಲ-ವಿಕ್ಷೇಪ ಮಲಗಳಿಂದ ದೂರನಾದ ನಿರ್ಮಲ ಮತಿಯೇ ಧರ್ಮವೆಂಬ ಬಂಗಾರದ ಬೇಡಿಯನ್ನೂ ಮತ್ತು ಅಧರ್ಮವೆಂಬ ಕಬ್ಬಿಣದ ಬೇಡಿಯನ್ನೂ ತೊಡೆದು ಹಾಕುತ್ತಾನೆ. ಧರ್ಮಾಧರ್ಮಗಳ ಅನುರಕ್ತಿಯನ್ನು ನಿವಾರಿಸುತ್ತಾನೆ. 'ಸರ್ವ ಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ' ಅಂದರೆ, ಎಲ್ಲ ಧರ್ಮಗಳನ್ನೂ ತೊರೆದು ನನ್ನಲ್ಲಿಯೇ ಶರಣಾಗು ಎಂದು ಪುರುಷೋತ್ತಮನ ವಾಕ್ಯವು ಗೀತೆಯಲ್ಲಿದೆ.

ಕಂ. ಕರ್ಮಾಕರ್ಮಗಳಳಿಯದ
ಮರ್ಮಂಗಳು ಇಂದ್ರಜಾಲ ಮಹಿಮೆಯ ವಿದ್ಯಂ.
ಕರ್ಮದ ಮರ್ಮವು ಪ್ರಣವವು,
ನಿರ್ಮಲ ಮತಿಯರಿಯಬೇಕು, ನಿಜವಿದು, ವೇಮಾ.

ಯಾವುದು ಕರ್ಮ ? ಯಾವುದು ಅಕರ್ಮ ? ಎಂಬ ಮರ್ಮವನ್ನು ಪ್ರತ್ಯಗಾತ್ಮನ ಅರಿವಾದ ಮೇಲೆ ಮಾತ್ರ ಗುರುತಿಸಬಹುದು. ಅದುವರೆಗೆ ಅಹಂ ತತ್ತ್ವದ ಸೆಳೆತವು ಇದ್ದೇ ಇರುತ್ತದೆ. ಹೀಗಾಗಿ, ಸಾಧಕನು ಮನಸ್ಸಿನ ಉನ್ನತ ಸ್ತರ ತಲುಪಿದಾಗ ಅತಿಮಾನಸ ಕೋಶದಲ್ಲಿ, ವಿಜ್ಞಾನಮಯ ಕೋಶದಲ್ಲಿ ಮೋದ ಪ್ರಮೋದಗಳಲ್ಲಿ ನಿರತನಾಗುತ್ತಾನೆ. ಆಗ ಅವನಿಗೆ ಹಲವು ಸಿದ್ಧಿಗಳಾಗುತ್ತವೆ. ಇವನ್ನು ಈಶ್ವರ ಸಿದ್ಧಿಗಳೆಂದು ಗುರುತಿಸುತ್ತಾರೆ. ಈ ಅಷ್ಟೈಶ್ವರ್ಯಗಳೆಂದರೆ, ಅಣಿಮಾ, ಮಹಿಮಾ, ಲಘಿಮಾ, ಗರಿಮಾ, ಪ್ರಾಪ್ತಿ, ಪ್ರಕಾಮ್ಯ, ಈಶತ್ವ ಮತ್ತು ವಶಿತ್ವ. ಇವು ಸಾಧನ ಕ್ರಿಯೆಯ ಫಲಗಳೇ. ಇವು ಅಲೌಕಿಕವಾಗಿರುವುದರಿಂದ ಇಂದ್ರಜಾಲವೆನಿಸುತ್ತವೆ. ಇಂದ್ರಜಾಲವೆಂದರೇನು ? ಅದೊಂದು ಕಣ್ಣು ಕಟ್ಟುವ ವಿದ್ಯೆ. ಅಂದರೆ ಇಲ್ಲದ್ದನ್ನು ಇದ್ದಂತೆ ತೋರುವುದು ಮತ್ತು ಇದ್ದದ್ದನ್ನು ಇಲ್ಲದಂತೆ ತೋರುವುದು. ಹೀಗೆ ಕರ್ಮಾಕರ್ಮಗಳು ಅಳಿಯದಿದ್ದರೆ, ಅವುಗಳ ಮರ್ಮವು ಇಂದ್ರಜಾಲ ವಿದ್ಯೆಯಾಗುತ್ತದೆ. ಇನ್ನು ಸಾಧನ ಕರ್ಮದ ಮರ್ಮವೆಂದರೆ, ಪ್ರಣವವೇ ಆಗಿದೆ. ಸಾಧನದಲ್ಲಿ ಮನಸ್ಸು ಏಕಾಗ್ರಗೊಂಡು ಲಯ ಯೋಗದಲ್ಲಿ ಹೃದಯ ಕುಹರದಲ್ಲಿ (ಅ+ಉ+ಮ) ಓಂಕಾರ ನಾದವು ಕೇಳಿ ಬರುತ್ತದೆ. ಇದು ಅನಾಹತ ನಾದವಾಗಿದೆ. ಸೃಷ್ಟಿ, ಸ್ಥಿತಿ ಮತ್ತು ಲಯಗಳಿಗೆ ಮೂಲವಾಗಿದೆ. ಈ ಪ್ರಣವವನ್ನು ಕೇಳುವಾಗ ಮನವು ವಿಕ್ಷೇಪ ಮತ್ತು ಆವರಣ ಮಲಗಳಿಂದ ದೂರವಿರುತ್ತದೆ. ನಿರ್ಮಲವಾಗಿರುತ್ತದೆ. ಆ ನಿರ್ಮಲ ಮತಿಯನ್ನು ಅರಿಯಬೇಕು. ಐಂದ್ರಜಾಲಕ ಐಶ್ವರ್ಯ ಸಿದ್ಧಿಗಳನ್ನು ತೋರುವ ಆಟದಲ್ಲಿ ಅನುರಕ್ತನಾಗಬಾರದು.

ಕಂ. ಕರ್ಮದ ನಿವೃತ್ತಿಯಾಗಲ್
ನಿರ್ಮಲವಾದ ಭವನವನು ಚೊಕ್ಕಟವರಿಯಲ್,
ಕರ್ಮವು ತೀರುವ ವೇಳೆಗೆ,
ಧರ್ಮವೆ ನಿಜ ದೇವರದನೆ, ತಿಳಿವರು ವೇಮಾ.

ಚಿತ್ತ ತರಂಗಗಳು ಇಂದ್ರಿಯಗಳ ಮೂಲಕ ವಿಷಯ ವಸ್ತುಗಳ ಸಂಪರ್ಕ ಪಡೆದು ಅಲ್ಲಿಂದ ತನ್ಮಾತ್ರೆಗಳನ್ನು ಮರಳಿ ಚಿತ್ತಕ್ಕೆ ಒಯ್ಯುತ್ತವೆ. ಈ ತರಂಗಗಳ ಸುತ್ತಾಟವು

ವೃತ್ತಾಕಾರವಾಗುವುದರಿಂದ ಈ ಕ್ರಿಯೆಗೆ ವೃತ್ತಿ ಎನ್ನುತ್ತಾರೆ. ಈ ವೃತ್ತಿಗಳ ಹೆಚ್ಚಳವೇ ಪ್ರವೃತ್ತಿ. ಮನವು ಪ್ರವೃತ್ತವಾದಾಗ ಕರ್ಮವು ಘಟಿಸುತ್ತದೆ ಮತ್ತು ಮನವು ವಿಕೃತವಾಗುತ್ತದೆ. ಯಾವ ಅವಸ್ಥೆಯಲ್ಲಿ ವೃತ್ತಿಗಳಿರುವುದಿಲ್ಲವೋ, ಅದುವೇ ನಿವೃತ್ತಿ. ನಿವೃತ್ತಿಯಾದಾಗ ಕರ್ಮವು ಘಟಿಸದು. ಮನವು ವಿಕೃತವಾಗದು. ಆಗ ವಿಕ್ಷೇಪ ಮಲವೂ ಇರದು. ಆವರಣ ಮಲವೂ ಇರದು. ಅದುವೇ ಮನದ ನಿರ್ಮಲವಾದ ಭವನವು. ಇದನ್ನು ಚೊಕ್ಕಟವಾಗಿ ಅರಿತೊಡನೆ ಕರ್ಮಾಸಕ್ತಿಯು ತೀರತೊಡಗುತ್ತದೆ. ಆಗ ಬೃಹದೇಷಣೆಯು ಸ್ಫುರಿಸುತ್ತದೆ. ''ಬೃಹದೇಷಣಾ ಪ್ರಣಿಧಾನಂ ಚ ಧಮಃ'' ಅಂದರೆ, ಮನುಷ್ಯನು ತಿಳಿದ ನೆಡೆಯಿಂದ ಬೃಹತ್ ಪಡೆಯಲು ಯತ್ನ ಮಾಡುವಾಗ ಮತ್ತು ತಜ್ಞನ್ಯ ಈಶ್ವರ ಪ್ರಣಿಧಾನ (ಶರಣು ಕೋರು) ಮಾಡಿದಾಗ, ಇರುವ ಭಾವಕ್ಕೆ ಧರ್ಮ ಎನ್ನುತ್ತಾರೆ. ಅಂದರೆ, ಧರ್ಮವೇ ನಿಜವಾದ ದೇವರು. ನೈಷ್ಕರ್ಮ ಸಿದ್ಧಿಯಾದವನು ಇದನ್ನು ಅರಿಯುತ್ತಾನೆ.

ಕರ್ಮ ಮತ್ತು ಜ್ಞಾನ :

ಕಂ. ಕರ್ಮವು ಜ್ಞಾನಿಗೆ ದೂರವು.
ಕರ್ಮಗಳಿಗೆ ಜ್ಞಾನಿ ದೂರನಿಹ ; ನಿಜವಿದು ತಾ
ಕರ್ಮ ಜ್ಞಾನಗಳುಡುಗಿದ
ನಿರ್ಮಲನಿಗುಂಟು ಮುಕ್ತಿ, ನಿಜವಿದು, ವೇಮಾ.

ಬ್ರಹ್ಮವೊಂದೇ ಸತ್ಯ ; ಉಳಿದುದೆಲ್ಲವೂ ಮಿಥ್ಯೆ; ಎಂಬೀ ಜ್ಞಾನ ಪ್ರತಿಪಾದಕನಿಗೆ, ಯಜ್ಞ ಯಾಗ, ಜಪ ತಪಾದಿ ಕರ್ಮಗಳೆಲ್ಲ ನಿಷ್ಪ್ರಯೋಜಕ. ಅಂಥ ಜ್ಞಾನಿಗೆ ಕರ್ಮವು ದೂರವಾಗುತ್ತದೆ. ಅಂಥ ಯಜ್ಞ ಯಾಗಾದಿ ಕಾಮ್ಯ ಕರ್ಮಗಳಿಂದ ಜ್ಞಾನಿಯೂ ದೂರವಿರುತ್ತಾನೆ. ಇದು ನಿಜವಾಗಿದೆ. ಆದರೆ ಇನ್ನೊಂದು ಅವಸ್ಥೆಯಿದೆ. ಅದೇ ನಿರ್ಮಲ ಮನಸ್ಸು. ಅಲ್ಲಿ ವಿಕ್ಷೇಪದ ಕರ್ಮ ಮಲವೂ ಇಲ್ಲ ; ಮತ್ತು ಆವರಣದ ಅಜ್ಞಾನ ಮಲವೂ ಇಲ್ಲ. ಹೀಗೆ ಕರ್ಮ ಜ್ಞಾನಗಳು ಉಡುಗಿದ ನಿರ್ಮಲನಿಗೆ ಮುಕ್ತಿಯುಂಟು. ಅವನು ಮಾತ್ರ ಬಂಧನ ಮುಕ್ತನಾಗಿರುತ್ತಾನೆ. ಇದು ಸತ್ಯವಾಗಿದೆ.

ಕಂ. ಜ್ಞಾನಿಗೆ ಕರ್ಮವು ಏತಕೆ ?
ಜ್ಞಾನಿಗೆ ಕರ್ಮವು ಉಂಟಾಗದಲ್ಲ ; ಕಾಣಾ !
ಜ್ಞಾನವೆ ಕರ್ಮವು ಆದೊಡೆ,
ಮಾನವನಿಗೆ ಕರ್ಮ ಮುಕ್ತಿ, ಮಹಿಯಲಿ, ವೇಮಾ.

ವೇದದಲ್ಲಿ ನಾಲ್ಕು ಭಾಗಗಳುಂಟು. ಮಂತ್ರ, ಬ್ರಾಹ್ಮಣ, ಆರಣ್ಯಕ ಮತ್ತು ಉಪನಿಷತ್ತು. ಮಂತ್ರ, ಬ್ರಾಹ್ಮಣ ಭಾಗಗಳು ಕರ್ಮಕಾಂಡದಲ್ಲಿ ಸಮಾವೇಶವಾಗಿವೆ. ಆರಣ್ಯಕ ಉಪನಿಷತ್ತುಗಳು ಜ್ಞಾನಕಾಂಡವೆನಿಸಿವೆ. ಕರ್ಮಕಾಂಡದಲ್ಲಿ ಯಜ್ಞ-ಯಾಗಾದಿ ಉಪಾಸನಾ ಕರ್ಮಗಳ, ಜ್ಞಾನಕಾಂಡದಲ್ಲಿ ಆತ್ಮಜ್ಞಾನದ ವಿವರಣೆಯಿದೆ. ಉಪನಿಷತ್ತಿನ ಮಂತ್ರ ದ್ರಷ್ಟಾರರಾದ ಋಷಿಗಳು ಕರ್ಮಕಾಂಡದ ಯಜ್ಞಯಾಗಗಳನ್ನು ಖಂಡಿಸಿದ್ದಾರೆ. ಗೀತೆಯಲ್ಲಿ ಕೃಷ್ಣನೂ ಸಹ ಈ ಕರ್ಮಕಾಂಡವನ್ನು ಬಲವಾಗಿ ಖಂಡಿಸಿ, ಯಜ್ಞಕ್ಕೆ ಬೇರೆ ಅರ್ಥವನ್ನೇ ನೀಡಿದ್ದಾರೆ. ಅಂದ

ಮೇಲೆ, ಜ್ಞಾನಿಗೆ ಕರ್ಮವು ಏತಕ್ಕೆ ಬೇಕು ? ಬೇಡವಷ್ಟೇ. ಕರ್ಮವು ಮನಸ್ಸಿನ ವಿಕೃತಿ. ಅಹಂ ಕರ್ತಾ ; ಫಲ ಭೋಕ್ತಾ. ಜ್ಞಾನಿಯು ಈ ಅಹಂ ತತ್ತ್ವವನ್ನು ದಾಟಿ ಹೋಗುತ್ತಾನೆ. ಅಲ್ಲಿ ಮನೋವಿಕೃತಿಯುಂಟಾಗದು. ಆದ್ದರಿಂದ ಜ್ಞಾನಿಗೆ ಕರ್ಮವು ಉಂಟಾಗದು. ಜ್ಞಾನಾನುಸಂಧಾನವೇ ಕರ್ಮವೆಂದು ಒಬ್ಬನು ಗ್ರಹಿಸಿ ನಡೆದರೆ, ಆ ಅನಾಸಕ್ತ ಯೋಗಿಗೆ ಯಾವುದೇ ಬಂಧನಕಾರಕ ಕರ್ಮವು ಅಂಟದು. ಅವನು ಕರ್ಮ ಪ್ರತಿಕರ್ಮಗಳ ಸರಪಣಿಯಿಂದ ಮುಕ್ತನಾಗುವನು.

ಆ. ಆಗುವುದನರಿಯರು ಅಜ್ಞಾನಿ ಜೀವರು.
ಮೂಲವ ತಿಳಿಯದಂಥ ಮುಟ್ಟಿನಿಂದ.
ಅನುದಿನವು ಸೃಜಿಸುತ, ಆತ್ಮ ತಿಳಿಯದಿಹರು.
ಸತ್ತು ಹುಟ್ಟುತಿಹರು ಜಗದಿ ವೇಮ.

ತಾನು ಯಾರು ? ತಾನು ಎಲ್ಲಿಂದ ಬಂದೆ ? ತನ್ನ ಮೂಲ (ಬೇರು) ವಾವುದು ? ಎಂಬುದನ್ನು ಆತ್ಮಜ್ಞಾನವರಿಯದ ಅಜ್ಞಾನಿ ಜೀವರು ಅರಿಯರು. ಸಾಧಕನು ಚಿತ್ತ, ಅಹಂ ಮತ್ತು ಬುದ್ಧಿ ತತ್ತ್ವಗಳನ್ನು ದಾಟಿ ತನ್ನ ಮೂಲವಾದ ಆತ್ಮ ತತ್ತ್ವವನ್ನು ಮುಟ್ಟಬೇಕು. ಹೀಗಲ್ಲದೆ, ಏನು ಮಾಡಿದರೆ ಏನಾಗುವುದೆಂಬುದನ್ನು ಜೀವರು ಅರಿಯಲಾರರು. ಹೀಗಾಗಿ ಅವರು ಅನುದಿನವೂ ಕರ್ಮ ಮಾಡಿ ಏನನ್ನಾದಾದರೂ ಸೃಜಿಸುತ್ತಾರೆ. ಕರ್ಮ ಮಾಡಿ ಪ್ರತಿಕರ್ಮದ ಸಂಭಾವ್ಯತೆಯನ್ನು ಸೃಜಿಸುತ್ತಾರೆ. ಸಂಭೋಗ ಮಾಡಿ ಸಂತಾನವನ್ನು ಸೃಜಿಸುತ್ತಾರೆ. ದಿನದಿಂದ ದಿನಕ್ಕೆ ಜಡದತ್ತ ಸಾಗುತ್ತಾರೆ. ಹಾಗಾಗಿ, ಸೂಕ್ಷ್ಮಾತಿಸೂಕ್ಷ್ಮವಾದ ಆತ್ಮ ತತ್ತ್ವವನ್ನು ತಿಳಿಯದಾಗಿದ್ದಾರೆ. ಹೀಗೆ ಕರ್ಮ, ಪ್ರತಿಕರ್ಮ ಸಂಭಾವ್ಯತೆ ಅಂದರೆ ಸಂಸ್ಕಾರಗಳನ್ನು ಸಂಚಯಿಸಿ, ಇವುಗಳಲ್ಲಿ ಆಗಲೇ ಆರಂಭಗೊಂಡ ಅಂದರೆ ಪ್ರಾರಬ್ಧ ಕರ್ಮಗಳ ಫಲ ಭೋಗಿಸಲು, ಮರಣಾನಂತರ ಮರುಜನ್ಮ ಪಡೆಯುತ್ತಾರೆ. ಈ ಜಗತ್ತಿನಲ್ಲಿ ಜನನ ಮರಣ ಚಕ್ರದಲ್ಲಿ ಸಿಲುಕುತ್ತಾರೆ.

ಆ. ಬ್ರಾಹ್ಮಣಾದರೇನು ? ಭಕ್ತನಾದರೇನು ?
ಯತಿಯು ಆದರೇನು ? ಇತರರೇನು ?
ಯಾರಾದರೂ ಯಮ ತಾನು ಬೆನ್ನು ಬಿಡನು.
ವಿಶ್ವದಾಭಿರಾಮ ಕೇಳು ವೇಮ.

''ಬ್ರಹ್ಮಂ ವಿಜಾನಾತಿ ಇತಿ ಬ್ರಾಹ್ಮಣಃ''. ಬ್ರಹ್ಮವನ್ನು ಅರಿಯುವುದರಿಂದ ಬ್ರಾಹ್ಮಣನಾಗುತ್ತಾನೆ. ಅದೇ ರೀತಿ, 'ಭಕ್ತಿಃ ಭಗವದ್ಭಾವನಾ'. ಅಂದರೆ ಸದಾ ಭಗವಂತನ ಭಾವನೆಯಲ್ಲಿರುವುದೇ ಭಕ್ತಿಯಾಗಿದೆ. ಹೀಗೆ ಒಬ್ಬನು ಬ್ರಾಹ್ಮಣನಾಗಬಹುದು ; ಇಲ್ಲವೆ ಭಕ್ತನೇ ಆಗಿರಬಹುದು. ಇಲ್ಲವೆ ಸರ್ವ ಪರಿತ್ಯಕ್ತ ಯತಿಯೇ ಆಗಿರಬಹುದು. ಬೇರೆ ಯಾರೋ ಆಗಿರಬಹುದು. ಆದರೆ 'ಜಾತಸ್ಯ ಹಿ ಮರಣಂ ಧ್ರುವಂ'. ಹುಟ್ಟಿದವನಿಗೆ ಸಾವು ನಿಶ್ಚಯವು. ಹೀಗೆ ಯಾರಾದರೂ ಇರಲಿ ; ಯಮನು ತಾನು ಬೆನ್ನು ಬಿಡನು. ಆದ್ದರಿಂದ ಮಾನವನು ಗಮನಿಸಬೇಕಾದ ಸಂಗತಿಯಾವುದೆಂದರೆ, ಸಾವು ಯಾವುದಕ್ಕೆ ? ಎಂಬುದು. ಅನಾತ್ಮಕ್ಕೆ ಸಾವು .ಆತ್ಮಕ್ಕೆ ಸಾವಿಲ್ಲ.

ಆ. ಅಂಥ ಕಷ್ಟದ ಬದುಕು ಅಗ್ನಿ ಪಾಲೆ ಆಯ್ತು.
ನಿರ್ದಯಾತ್ಮ ಬದುಕು ನೀರು ಪಾಲು.
ಕ್ರೂರ ಕರ್ಮಿ ಬದುಕು ಚೋರರ ಪಾಲಾಯ್ತು.
ವಿಶ್ವದಾಭಿರಾಮ ಕೇಳು ವೇಮ.

ರಾಜಸ ಗುಣದಿಂದ ಕರ್ಮಸಂಗಿಯಾದ ಮಾನವನು ತನ್ನ ಇಷ್ಟ ಭೋಗ ಪಡೆಯಲು ಬಹಳ ಕಷ್ಟಪಡುತ್ತಾನೆ. ತನ್ನ ಮನಸ್ತರವನ್ನು ಉದ್ಧೀಪಿಸಲು ಉದ್ಯುಕ್ತನಾಗುವುದೇ ಇಲ್ಲ. ಕೊನೆಗೆ ಕಾಲ ನಿಯಮದಂತೆ ಮರಣವು ಬಂದೇ ಬರುತ್ತದೆ. ಆಗ ಯಾವ ಭೌತಿಕ ದೇಹದ ಇಷ್ಟ ಪೂರೈಸಲು ಕಷ್ಟ ಜೀವನವನ್ನು ನಡೆಸಿದ್ದನೋ, ಅದು ಅಗ್ನಿ ಪಾಲಾಗಿ ಭಸ್ಮೀಭೂತವಾಗುತ್ತದೆ. ಇಲ್ಲವೆ ದಯೆ ಧರ್ಮಗಳನ್ನು ಆಚರಿಸದೆ ಯಾವನು ತಾಮಸ ಗುಣದಿಂದ ಪರಪೀಡನೆ ಮಾಡುತ್ತ ನಿರ್ದಯಾತ್ಮನ ಜೀವನವನ್ನು ನಡೆಸುವನೋ, ಅವನ ದೇಹವು ನೀರು ಪಾಲಾಗುತ್ತದೆ. ಇನ್ನು ತಾಮಸ ಗುಣದಿಂದ ಬಂಧಿತನಾಗಿ, ಕ್ರೌರ್ಯ, ಹಿಂಸೆ, ಕೊಲೆ-ಸುಲಿಗೆಗಳಂಥ ಹೀನ ಕರ್ಮಗಳಲ್ಲಿ ನಿರತನಾದವನು ಜನರನ್ನು ಶೋಷಿಸಿ ಧನ ಕನಕ ಶೇಖರಿಸುತ್ತಾನೆ. ಅವನ ಬದುಕೆಲ್ಲ ಚೋರರ ಪಾಲೇ ಆಗುತ್ತದೆ. ನಿಜವೆಂದರೆ ತನ್ನ ಪಾಲಿಗೆ ಇವುಗಳೆಲ್ಲ ಬಾರವು. ತನ್ನ ಧರ್ಮವೊಂದೇ ತನ್ನೊಂದಿಗೆ ಇರುತ್ತದೆ.

ಆ. ಇದ್ದವನಂತೆ ಇರು ; ಇಲ್ಲದವನಂತಿರು.
ಮತ್ತೆ ಇಲ್ಲದಿಹುದು ಮರಳಿ ಉಂಟು.
ಆಶೆ ಕೋರಿದಷ್ಟು ಅನುಗ್ರಹಿಸುವ ಶಿವ.
ವಿಶ್ವದಾಭಿರಾಮ ಕೇಳು ವೇಮ.

ನೀನು ಎಷ್ಟೇ ಕರ್ಮ ಮಾಡು ; ಆದರೆ ಪ್ರಾಪ್ತಿಯು ಮಾತ್ರ ಪೂರ್ವಕರ್ಮ ಫಲಾನುಸಾರ ನಿರ್ಧರಿಸಲ್ಪಡುತ್ತದೆ. ಆದ್ದರಿಂದ ಯತ್ನವನ್ನು ಮುಂದುವರಿಸುವುದು ನಿನ್ನ ಕರ್ತವ್ಯವಾದರೂ ಅನಿವಾರ್ಯವಾದ ಫಲ ಪ್ರಾಪ್ತಿಯನ್ನು ಒಪ್ಪಿಕೊಳ್ಳಲೇಬೇಕು. ಹಾಗಾಗಿ ಪ್ರಾಪ್ತಿ ಇರುವಾಗ ಇದ್ದವನಂತೆ ಇರಬೇಕು. ಪ್ರಾಪ್ತಿ ಇಲ್ಲದಾಗ ಇಲ್ಲದವನಂತೆ ಇರಬೇಕು. ಈಗ ಪ್ರಾಪ್ತಿ ಇಲ್ಲವಾದರೂ ಮತ್ತೆ ಸೂಕ್ತ ಕಾಲಕ್ಕೆ ಸೇರಬಹುದು. ನೀನು ಆಶೆ ಕೋರಿ ಯತ್ನ ಮಾಡು. ಪೂರ್ವ ಕರ್ಮ ಸಂಸ್ಕಾರಗಳಿಗನುಸರಿಸಿ ಶಿವನು ಅನುಗ್ರಹಿಸುತ್ತಾನೆ. ಏನೇ ಬರಲಿ ; ನಿರಾಶನಾಗಬೇಡ.

ಆ. ಸ್ವಾತಿ ಮಿಂಚು ನೋಡಿ ಸಂತೋಷ ಪಡುವರು,
ಸ್ವಾತಿ ಮಿಂಚು ಇರದು ಸಫಲವಾಗಿ.
ಮಿಂಚು ಗುಡುಗು ಇರದೆ ಮೇಘ ಸುರಿಯದು.
ವಿಶ್ವದಾಭಿರಾಮ ಕೇಳು ವೇಮ.

ಸ್ವಾತಿ ನಕ್ಷತ್ರದಲ್ಲಿ ಮಳೆಯು ಬರಬಹುದು, ಬಾರದಿರಬಹುದು. ಆದರೆ ಆಗಸದಲ್ಲಿ ಮೋಡಗಳಂತೂ ಇರುತ್ತವೆ. ಸಾಲದೆ ಮಿಂಚು ಗುಡುಗುಗಳೂ ಕಡಿಮೆಯೇನಲ್ಲ. ಮಳೆಗಾಗಿ ಹಪಾಪಿಸುವ ಜನರು ಸ್ವಾತಿ ಋತುವಿನಲ್ಲಿ ಮಿಂಚು ನೋಡಿಯೇ ಸಂತೋಷಿಸುತ್ತಾರೆ. ಬಹಳ

ವೇಳೆ, ಸ್ವಾತಿ ಮಿಂಚು ಕಾಣಿಸಿದರೂ ಮಳೆಯು ಬೀಳುವುದಿಲ್ಲ. ಹೀಗೆ ಸ್ವಾತಿ ಮಿಂಚು ಸಫಲವಾಗಿ ಇರದಿರಬಹುದು. ಆದರೇನು ? ಮಳೆಯು ಬೀಳುವ ಮುನ್ಸೂಚನೆಯಾಗಿ ಮಿಂಚು ಗುಡುಗುಗಳು ಇದ್ದೇ ಇರುತ್ತವೆ. ಅದೇ ರೀತಿ, ಮಾಡಿದ ಕರ್ಮವು ಸ್ವಂತ ಇಚ್ಛೆಯಂತೆ ಫಲ ನೀಡಬಹುದು. ಇಲ್ಲವೆ ನೀಡದಿರಬಹುದು. ಆದರೂ ಸ್ವಂತ ಇಚ್ಛೆಯು ದೈವೇಚ್ಛೆಯಂತೆ ಇರುವಾಗ ಇಷ್ಟ ಫಲ ಪ್ರಾಪ್ತಿಯುಂಟು. ಅದಕ್ಕಾಗಿ ಕರ್ಮವನ್ನಂತೂ ತಾನು ಮಾಡಲೇ ಬೇಕಷ್ಟೇ. ಹುಳುವಿನ ಚಿಪ್ಪು ತೆರೆದಿರಬೇಕು. ಆಗ ಸ್ವಾತಿಯ ಮಳೆ ಹನಿ ಬೀಳಬೇಕು. ಆಗ ಮುತ್ತು ಆಗುತ್ತದೆ.

ಆ. ಪ್ರಳಯ ಕಾಲದಲ್ಲಿ ಪ್ರಮಥರ ಕೈಯಿಂದ,
ಅಳಿದು ಹೋದರಲ್ಲ ಅಂದಿನವರು !
ತಿಳಿಯಲಾರರಲ ! ದೇವರ, ದ್ವಿಜರೆಲ್ಲ.
ವಿಶ್ವದಾಭಿರಾಮ ಕೇಳು ವೇಮ.

ಜಗತ್ತಿನ ಸೃಷ್ಟಿ, ಸ್ಥಿತಿ ಮತ್ತು ಲಯಕರ್ತನಾಗಿ ಪರಮೇಶ್ವರನು, ಬ್ರಹ್ಮ, ವಿಷ್ಣು ಮತ್ತು ಶಿವ ಎಂಬ ತ್ರಿಮೂರ್ತಿಗಳೆಂಬ ಅಭಿದಾನದಿಂದ ಕಾರ್ಯ ಮಾಡುತ್ತಾನೆ. ಯುಗ ಯುಗಾದಿಯ ನಂತರ ಪ್ರಳಯವೂ ಉಂಟು. ಪ್ರಳಯವು ಶಿವನ ಕಾರ್ಯವಷ್ಟೇ. ಪ್ರಳಯ ಕಾಲದಲ್ಲಿ ಶಿವಗಣ ಅಂದರೆ ಪ್ರಮಥರು ಮಾತ್ರ ಉಳಿಯುವರು. 'ಪ್ರಾಣ ಹಾನಿಯಿಲ್ಲ ಪ್ರಳಯವಿರಲು ; ಪ್ರಳಯವಿರಲು (ಜ್ಞಾನಿ) ಪರಮಾತ್ಮನ ಸೇರುವ'. ಅಂದ ಮೇಲೆ, ಪ್ರಮಥರಲ್ಲದವರು ಪ್ರಳಯ ಕಾಲದಲ್ಲಿ ಅಳಿದು ಹೋಗುತ್ತಾರೆ. ದ್ವಿಜರು ಈ ದೇವರ ಮಹಿಮೆಯನ್ನು ತಿಳಿಯಲಾರರಲ್ಲ !

ವಿಧಿ :

ಮಾನವನು ಪೂರ್ಣವಾಗಿ ಪರಿಸ್ಥಿತಿಯ ದಾಸನೇನು ? ಇಲ್ಲ ; ಹಾಗೇನಿಲ್ಲ. ಅವನಲ್ಲಿ ಇತರ ಅನಗ್ರಸರ ಜೀವಿಗಳಿಗಿಂತಲೂ ಅಹಂ ತತ್ತ್ವವು ವಿಕಸಿತವಾಗಿದೆ. ಈ 'ಅಹಂ' ಕರ್ತಾ ಆಗಿದೆ. ಹಾಗಾಗಿ, ಅದು ಫಲದ ಭೋಕ್ತಾ ಸಹ ಆಗಿದೆ. ಹೀಗೆ ಕರ್ಮ ಮಾಡುವಲ್ಲಿ ಅವನು ಸ್ವತಂತ್ರನು. ಆದರೆ ಫಲದ ಪ್ರಾಪ್ತಿಯಲ್ಲಿ ಅಲ್ಲ. ಎಲ್ಲವೂ 'ಅಹಂ' ದ ಇಚ್ಛೆಯಂತಾಗುವುದೇ? ಇಲ್ಲ. 'ಹರನ ಕರುಣೆ ಇರದೆ ಮರದೆಲೆಯೂ ಅಲುಗದು'. 'ತೇನ ವಿನಾ ತೃಣಮಪಿ ನ ಚಲತಿ'. ಅಂದರೆ ಅವನ ಅಪ್ಪಣೆ ಇಲ್ಲದೆ ಒಂದು ಹುಲ್ಲು ಕಡ್ಡಿಯೂ ಚಲಿಸದು. ಈ ಕುರಿತು ಛಾಂದೋಗ್ಯ ಉಪನಿಷತ್ತಿನಲ್ಲಿ ಒಂದು ಕಥೆಯಿದೆ. ಯಕ್ಷನೊಬ್ಬನು ದೇವತೆಗಳನ್ನು ಆಹ್ವಾನಿಸುತ್ತಾನೆ. ವಾಯು ದೇವನು ಬರುತ್ತಾನೆ. 'ನೀನು ಯಾರು ?' 'ನಾನು ವಾಯು'.'ನೀನು ಏನು ಮಾಡಬಲ್ಲೆ ?' 'ನಾನು ಎಲ್ಲವನ್ನು ಹಾರಿಸಬಲ್ಲೆ, ಹೊತ್ತೊಯ್ಯ ಬಲ್ಲೆ'. 'ಹಾಗಾದರೆ ಈ ಹುಲ್ಲು ಕಡ್ಡಿಯನ್ನು ಹಾರಿಸು, ನೋಡೋಣ'. ಆಗ ವಾಯು ಪ್ರಯತ್ನಿಸಿ ಸೋತು ಹೋಗುತ್ತಾನೆ. ಇದೇ ರೀತಿ, ವರುಣ ದೇವನು ಅದನ್ನು ತೊಯ್ಯಿಸದಾದ, ಅಗ್ನಿಯು ಅದನ್ನು ಸುಡದಾದ ಮತ್ತು ಕೊನೆಗೆ ಇಂದ್ರನು ಶರಣಾಗತನಾಗಿ ಆ ಯಕ್ಷನು ಬ್ರಹ್ಮನೆಂದು ಅರಿತುಕೊಂಡ. ಹೀಗೆ ಬ್ರಹ್ಮನ ಕರುಣೆಯಿಲ್ಲದೆ ಯಾರು ಏನನ್ನೂ ಮಾಡಲಾರರು. ಪರಮೇಶ್ವರನು ವಿಧಿಸಿದಂತೆಯೇ ಸರ್ವವೂ ನಡೆಯುತ್ತದೆ. ಈ ವಿಧಿ ನಿಯಾಮಕನು ಪರಮೇಶ್ವರನೇ. ವಿಧಿ ನಿಯಮವೊಂದಿದೆ. ಏನು

ಮಾಡಿದರೆ ಏನಾಗಬೇಕು ? ಎಂದು. ಘಟನೆಗಳು ಈ ರೀತಿಯೇ ಘಟಿಸುತ್ತವೆ. ಆದರೆ ಮಾನವನಿಗೆ ಅಧಿಕ ಅಹಂ ತತ್ತ್ವ ವಿಕಾಸವಾಗಿರುವುದರಿಂದ ಅವನಿಗೆ 'ದತ್ತ ಸ್ವಾತಂತ್ರ್ಯ'ವೂ ಇದೆ. ಆದ್ದರಿಂದ ಅವನ ಸ್ವ-ಇಚ್ಛೆಯು ದೈವೇಚ್ಛೆಗನುಗುಣವಾಗಿ ಇರುವಾಗಲೆಲ್ಲ ಅವನ ಕಾರ್ಯದ ಫಲವು ಸ್ವ-ಇಚ್ಛೆಗನುಗುಣವಾಗಿ ಆಗುತ್ತದೆ. ಇಲ್ಲವಾದರೆ ಇಲ್ಲ. 'ವಿಧಿಯು ಬೆನ್ನಿಗಿರಲು ಪರವೀವುದು ದೈವ ; ಬ್ರಹ್ಮ ವಿಧಿಗೆ ಕರ್ತ, ಕರ್ಮಕೆ ತಾ ಕರ್ತ'. ಹೀಗೆ ಬಾಳಿನ ಸುಖ ದುಃಖಗಳಿಗೆ ತಾನೇ ಕಾರಣನು. ಫಲಾಸಕ್ತಿ ತೊರೆದು ಕರ್ಮ ಮಾಡುವುದೇ ತಾಪತ್ರಯಗಳಿಂದ ಪರಿಹಾರ ಪಡೆಯುವ ದಾರಿ.

ಆ. ಜನನ ಮರಣ ಕಾಲ ಸರಿ ಸ್ವತಂತ್ರನಿಹನೆ ?
ತಂದು ಕೊಡನು ; ಮುಂದೆ ತೆಗೆದುಕೊಳನು.
ನಡುವೆ ಕರ್ತನೆನಲು ನಗುಪಾಟಲಲ್ಲವೆ ?
ವಿಶ್ವದಾಭಿರಾಮ ಕೇಳು ವೇಮ.

ತನ್ನ ಕರ್ಮಫಲದ ಕಾರಣ ಮಾನವನಿಗೆ ಜನನ-ಮರಣಗಳು ಘಟಿಸುವವಾದರೂ ತಾನು ಯಾವಾಗ ಹುಟ್ಟಬೇಕು ? ಮತ್ತು ಯಾವಾಗ ಮರಣಿಸಬೇಕು ? ಎನ್ನುವುದರ ನಿರ್ಧಾರದಲ್ಲಿ ಅವನು ಪೂರ್ಣ ಸ್ವತಂತ್ರನಾಗಿರುವನೇ ? ಇಲ್ಲ. ಅದೆಲ್ಲವೂ ವಿಧಿ ನಿಯಮದಂತೆ ನಡೆಯುತ್ತದೆ. ಇದಲ್ಲದೆ ಇನ್ನೊಂದು ಸಂಗತಿಯು ಮನೋವೇಧಕವಾಗಿದೆ. ಅದೆಂದರೆ ಮಾನವನು ಬರುವಾಗ ಭೌತಿಕವಾದ ಏನನ್ನೂ ತರನು. ಮತ್ತು ಮರಣಿಸಿದಾಗ ಏನನ್ನೂ ಹೊತ್ತು ಒಯ್ಯನು. ಹೀಗಿರುವಾಗ ಈ ನಡುವಿನ ಬಾಳಿನಲ್ಲಿ ತನ್ನ ವಿಧಿಗೆ ತಾನು ಕರ್ತನೆಂದು ಗರ್ವ ಪಟ್ಟರೆ, ಅದು ನಗೆಪಾಟಲಲ್ಲವೇ?

ಅ. ವಿಧಿಯು ಬೆನ್ನಿಗಿರಲು, ವರವೀವುದು ದೈವ.
ಅದುವೆ ಕರ್ಮದಿಂದ ; ಅಲ್ಲ ವಿಧಿಯು.
ಕರ್ತ ಅಜನು ವಿಧಿಗೆ ; ಕರ್ಮಕೆ ತಾ ಕರ್ತ.
ವಿಶ್ವದಾಭಿರಾಮ ಕೇಳು ವೇಮ.

ಸದಾಕಾಲ ಸರ್ವವೂ ವಿಧಿ ನಿಯಮದಂತೆ ನಡೆಯುತ್ತದೆ. ವ್ಯಷ್ಟಿ ಜೀವನದಲ್ಲಿ ಇದನ್ನು ವಿಧಿ ಲಿಖಿತ ಇಲ್ಲವೆ ಹಣೆಯ ಬರೆಹ ಎನ್ನುತ್ತಾರೆ. ಹಾಗಾದರೆ, ಮಾನವನ ಇಚ್ಛೆ, ಕರ್ಮಗಳಿಗೆ ಬೆಲೆಯಿಲ್ಲವೇ ? ಇದೆ. ಅಹಂ ವಿಕಸಿತ ಮಾನವನಿಗೆ 'ದತ್ತ ಸ್ವಾತಂತ್ರ್ಯ'ವಿದೆ. ಆದರೆ ಈ ದತ್ತ ಸ್ವಾತಂತ್ರ್ಯವು ಕರ್ಮ ಮಾಡುವುದಕ್ಕೆ ಸೀಮಿತವಿದೆ. ಆದರೆ ಫಲಾಫಲಗಳು ವಿಧಿ ನಿಯಮದಂತೆಯೇ ನಡೆಯುತ್ತವೆ. ಹೀಗೆ, ವಿಧಿಯು ಬೆನ್ನಿಗಿರಲು, ದೈವವು ವರವೀಯುವುದು. ಈ ವರವು ಪ್ರಾಪ್ತವಾಗಲು ಕರ್ಮವೇ ಕಾರಣ ; ವಿಧಿಯಿಂದಲ್ಲ. ಮಾಡಿದ ಕರ್ಮಕ್ಕೆ ತಕ್ಕ ಫಲವನ್ನು ವಿಧಿಸುವದಷ್ಟೇ ವಿಧಿಯ ಕಾರ್ಯ. ಹೀಗೆ ಮಾನವನು ತಾನೇ ಕರ್ಮಕ್ಕೆ ಕರ್ತನಾಗಿದ್ದಾನೆ. ಆದರೆ ಫಲಾಫಲಗಳನ್ನು ವಿಧಿಸುವವನು ಬ್ರಹ್ಮನೇ ಆಗಿದ್ದಾನೆ. 'ಅಹಂ ಕರ್ತಾ ; ಫಲ ಭೋಕ್ತಾ'. ಅಂದರೆ ಕರ್ತೃತ್ವಾಭಿಮಾನವು ಅಹಂ ತತ್ತ್ವದಲ್ಲಿಯೇ ಇದೆ. ವಿಧಿ ನೀಡುವ ಫಲವನ್ನೂ ಆ ಅಹಂ ತಾನೇ ಭೋಗಿಸುತ್ತಾನೆ. ಬೃಹದೇಷಣೆಯು ಮಾನವ ಧರ್ಮವಾಗಿದೆ. ಆದರೆ ಯಾವಾಗ ಮಾನವನು ಬೃಹದೇಷಣೆಯನ್ನು ಕಡೆಗಣಿಸಿ, ದಾರಾ, ಪುತ್ರ, ವಿತ್ತ ಈಷಣೆಗಳಲ್ಲಿಯೇ ಅನುರಕ್ತನಾದರೆ ಅದು ಧರ್ಮ ದೂರವಾಗುತ್ತದೆ. ಹೀಗಾಗಿ ವಿಧಿಯ

ನಿಯಮಕ್ಕೆ ವಿರುದ್ಧವಾಗಿ, ಕಷ್ಟದ ಫಲ ಭೋಗಿಸಬೇಕಾಗುತ್ತದೆ.

ಆಗುತಿಪ್ಪ ಕಾರ್ಯ ಆಗದೆಂತು ಇಹವು ?
ಆಗದಂಥ ಕಾರ್ಯ ಆಗದೆಂದು.
ಮಹಿಮೆ ಬೇರೆಯುಂಟು ; ಮನುಜರಲ್ಲಿ ಇಹುದೆ ?
ವಿಶ್ವದಾಭಿರಾಮ ಕೇಳು ವೇಮ.

ಕೆಲವು ಕಾರ್ಯಗಳು, ಮಾನವನು ಇಚ್ಛಿಸಲಿ, ಬಿಡಲಿ ಆಗಿಯೇ ತೀರುತ್ತವೆ. ಬೇರೆ ಕೆಲವು ಕಾರ್ಯಗಳು ಮಾನವನು ಇಚ್ಛಿಸಿದರೂ ಆಗುವುದಿಲ್ಲ. ಇದೆಲ್ಲ ಹೇಗೆ ? ಕಾರ್ಯ ಘಟಿಸುವಲ್ಲಿ ಇಲ್ಲವೆ ಘಟಿಸದಿರುವಲ್ಲಿ ಮಾನವನ ಇಚ್ಛೆಯ ಪಾತ್ರವೇನು ? ಮಾನವನು ಆಸೆ ಬಟ್ಟು ಕರ್ಮ ಮಾಡುತ್ತಾನೆ. ಮತ್ತು ಆಶಾಪೂರ್ತಿಗಾಗಿ ಇಚ್ಛಿಸುತ್ತಾನೆ. ಇದು ಸಹಜ ತಾನೇ ? ಆದರೆ ಕೆಲವೊಮ್ಮೆ ಅವನ ಇಷ್ಟ ಫಲ ದೊರೆಯಬಹುದು. ಕೆಲವೊಮ್ಮೆ ದೊರೆಯದಿರಬಹುದು. ಏಕೆಂದರೆ ಕರ್ಮ ಮಾಡುವಲ್ಲಿ ಮಾನವನಿಗೆ ದತ್ತ ಸ್ವಾತಂತ್ರವೇನೋ ಇದೆ. ಆದರೆ ಅದರ ಫಲ ನಿರ್ಧಾರದಲ್ಲಿ ಅಲ್ಲ. ಫಲ ನಿರ್ಧಾರವು ವಿಧಿಯ ನಿರ್ಧಾರದಂತೆ ಆಗುತ್ತದೆ. ತಾನೊಂದು ಬಗೆದರೆ ದೈವ ಬೇರೊಂದು ಬಗೆಯುತ್ತದೆ. ಕೆಲವೊಮ್ಮೆ ಮತ್ತೊಮ್ಮೆ ದೈವ ಬೆನ್ನಿಗಿರುತ್ತದೆ. ಇಲ್ಲಿ ಅರಿತುಕೊಳ್ಳಬೇಕಾದ ಮರ್ಮವೆಂದರೆ, ಒಂದು ಕಾರ್ಯದ ಘಟನೆ ಇಲ್ಲವೆ ಅಘಟನೆಗಳ ಮಹಿಮೆಯು ಮನುಜರಲ್ಲಿ ಇಲ್ಲ ; ಬೇರೆ ಕಡೆ ಉಂಟು ಅಂದರೆ ವಿಧಿ ನಿಯಮದಲ್ಲಿ ಉಂಟು. ಆದ್ದರಿಂದ ಕರ್ಮವನ್ನು ಮಾಡಬೇಕು. ಆದರೆ, ಅನಾಸಕ್ತಿಯಿಂದ ಮಾಡಬೇಕು.

ಬೇಡವೆನಲು ಬಿಡದು ; ಬೇಕು ಎನಲು ಬರದು.
ತಾನು ಮಾಡಿದಂಥ ದಾನ ಫಲವು.
ಹೃದಯದಲ್ಲಿ ದುಃಖ ಪಡದಿರುವುದೆ ಯೋಗ.
ವಿಶ್ವದಾಭಿರಾಮ ಕೇಳು ವೇಮ.

ತಾನು ಮಾಡಿದ ದಾನ ಧರ್ಮಗಳ ಫಲವು ವಿಧಿ ನಿಯಮದಂತೆ ಸುಖದಾಯಕ ಭೋಗಕ್ಕೆ ಕಾರಣವಾಗುತ್ತದೆ. ಮಾನವನು ಯೋಗಿಯಾಗಿ ಕಾಮ್ಯ ಕರ್ಮಗಳನ್ನು ತ್ಯಜಿಸಿದ್ದರೂ ಸಹ ಪೂರ್ವ ಸಂಸ್ಕಾರಗಳಿಂದಾಗಿ ಫಲವು ಬಂದೇ ಬರುತ್ತದೆ. ಭೋಗ ವಸ್ತುವು ಸುಖಕರವಿರಲಿ, ದುಃಖಿಕರವಿರಲಿ, ಬೇಕಾಗಿರಲಿ, ಬೇಡವಾಗಿರಲಿ, ಪ್ರತಿಕರ್ಮ ರೂಪದಲ್ಲಿ ಬಂದೇ ಬರುವುದು. ಏಕೆಂದರೆ, ಕರ್ಮಕ್ಕೆ ಪ್ರತಿಕರ್ಮ ಉಂಟಾಗುವುದು, ವಿಧಿ ನಿಯಾಮಕ. ಆದ್ದರಿಂದ, ಸಾಧಕನಿಗೆ ಇರುವ ಉಪಾಯವೆಂದರೆ ಒಂದೇ ಆಗಿದೆ. ಫಲವು ಏನೇ ಬರಲಿ, ಹೃದಯದಲ್ಲಿ ದುಃಖ ಪಡಕೂಡದು. ಇದುವೇ ಯೋಗ.

ಕಂ. ವಿಧಿ ಕೃತಗಳಲ್ಲಿ ಸರ್ವವು.
ವಿಧಿಗೇ ವಿಧಿ ಲೇಸಾಯಿತು ವಿಷ್ಣುವ ಕೊಲ್ಲಲ್.
ವಿಧಿಯಭವ ರೂಪದಲ್ಲಿಹ ;
ವಿಧಿ ಬ್ರಹ್ಮವು ಕಾಣು ; ತಿಳಿದು ಕೇಳ್ಕೆ ವೇಮಾ.

ಮಾನವನ ಹುಟ್ಟು, ಸಾವು, ಬದುಕುಗಳೆಲ್ಲವೂ ವಿಧಿಕೃತವೇ ಆಗಿವೆ. ವಿಧಾತನಾದ

ಪರಮೇಶ್ವರನು, ಜಗತ್ತಿನ ಸೃಷ್ಟಿ, ಸ್ಥಿತಿ ಮತ್ತು ಲಯಗಳನ್ನು ನಿಯಂತ್ರಿಸುತ್ತಾನೆ. ಸೃಷ್ಟಿ ಮಾಡುವಾಗ ಅವನನ್ನು ಬ್ರಹ್ಮ ಎಂದು ಕರೆಯುತ್ತಾರೆ. ಲಯ ಮಾಡುವಾಗ ಅವನನ್ನು ಶಿವ ಇಲ್ಲವೆ ಅಭವ ಎನ್ನುತ್ತಾರೆ. ಇನ್ನು ಸ್ಥಿತಿ ಕಾಪಾಡುವಾಗ ಅವನನ್ನೇ ವಿಷ್ಣು ಎನ್ನುತ್ತಾರೆ. ಸೃಷ್ಟಿಗೆ ತಮೋ ಗುಣವು ಕಾರಣವಾದರೆ, ಲಯಕ್ಕೆ ಸತ್ತ್ವ ಗುಣವು ಕಾರಣವಾಗುತ್ತದೆ. ಇನ್ನು ಸ್ಥಿತಿಗೆ ರಜೋಗುಣವು ಕಾರಣವಾಗುತ್ತದೆ. ರಜೋಗುಣವನ್ನು ನಾಶಪಡಿಸಿದರೆ, ಅಂದರೆ ವಿಷ್ಣುವನ್ನು ಕೊಂದರೆ, ವಿಧಿಗೇ ವಿಧಿ ಲೇಸಾಗುತ್ತದೆ. ಹುಟ್ಟು ಸಾವುಗಳು ವಿಧಿ ಕೃತಗಳೇ. ಆದ್ದರಿಂದ ವಿಧಿಯು ಬ್ರಹ್ಮ ; ವಿಧಿಯು ಅಭವ ಇಲ್ಲವೆ ಶಿವ ರೂಪದಲ್ಲಿಯೂ ಇರುವನು. ಇದನ್ನು ಕಂಡುಕೊಳ್ಳಬೇಕು. ಅರಿತುಕೊಳ್ಳಬೇಕು. ತಿಳಿದವರಿಂದ ಕೇಳಿ ತಿಳಿಯಬೇಕು.

ಕಂ. ವಿಧಿಕೃತದೊಳಗಿದೆ ಸರ್ವವು.
ವಿಧಿಗೇ ವಿಧಿ ಲೇಸಾಗಿಹ ವಿಷ್ಣುವ ನುತಿಸಲ್.
ವಿಧಿ ಯಾರಿಗಾದರೂ ಬಹುದು.
ವಿಧಿ ಬ್ರಹ್ಮವು ; ತಿಳಿದು, ತಿಳಿದು, ಬೆಳಗೈ ವೇಮಾ.

ಪರಮೇಶ್ವರನು ವಿಧಿ ನಿಯಾಮಕನು. ಅವನು ವಿಧಾತಾ ಆಗಿದ್ದಾನೆ. ಆದ್ದರಿಂದ ಸರ್ವವೂ ವಿಧಿಕೃತದೊಳಗೆ ಅಡಗಿದೆ. ಒಬ್ಬನೇ ಮನುಷ್ಯನಿಗೆ ನರ್ತಿಸುವಾಗ ನರ್ತಕನೆಂದೂ, ಗಾಯನ ಮಾಡುವಾಗ ಗಾಯಕನೆಂದೂ, ಚಿತ್ರ ಬಿಡಿಸುವಾಗ ಚಿತ್ರಕಾರನೆಂದೂ ಕರೆಯುವಂತೆ, ಒಬ್ಬನೇ ಆದ ವಿಧಾತನಿಗೆ, ಸೃಷ್ಟಿ ಮಾಡುವಾಗ, ಬ್ರಹ್ಮನೆಂದೂ, ಸ್ಥಿತಿ ರಕ್ಷಿಸುವಾಗ ವಿಷ್ಣುವೆಂದೂ ಮತ್ತು ಲಯಗೊಳಿಸುವಾಗ ಶಿವ ಇಲ್ಲವೆ ರುದ್ರನೆಂದೂ ಕರೆಯುತ್ತಾರೆ. ಮಾನವನ ಸ್ಥಿತಿಯು ಅಂದರೆ ಬಾಳು ಲೇಸಾಗಿದ್ದರೆ, ಅವನು ವಿಷ್ಣುವನ್ನು ಸ್ತುತಿಸುತ್ತಾನೆ. ಆಗ ವಿಷ್ಣುವೇ ವಿಧಿಗೆ ವಿಧಿಯೆನಿಸುತ್ತಾನೆ. ಇದು ಕರ್ಮ ಜೀವಿಯ ಗತಿಯೇ ಆಗಿದೆ. ಆದರೂ ಕೊನೆಗೊಮ್ಮೆ ಲಯ ಇಲ್ಲವೆ ಮರಣವು ಬಂದೇ ಬರುವುದು. ಆಗ ಶಿವ, ರುದ್ರನು ವಿಧಿ ಎನಿಸುತ್ತಾನೆ. ಸತ್ತವನಿಗೆ ಜನನವೂ ಪ್ರತಿಕರ್ಮ ಭೋಗಕ್ಕಾಗಿ ಬರಲೇಬೇಕಲ್ಲವೆ. ಆಗ ವಿಧಿಯೇ ಬ್ರಹ್ಮವೆನಿಸುತ್ತಾನೆ. ಇದನ್ನು ಹೆಚ್ಚು ಹೆಚ್ಚಾಗಿ ತಿಳಿದುಕೊಂಡು ಬೆಳಗಬೇಕು.

ಕಂ. ಹರಿವಿಧಿ ಕಾಣುತ ಕೇಳಿಯ ?
ಹರನು ನಿಮಿತ್ತನಿರುವಲ್ಲಿ ನಲಿದಾಲಿಸೆಯಾ ?
ಗುರಿಯಿರಿಸಿದೋದು ಕೇಳಿಯ ?
ತರಹರಿಪ ಸಂಧಿ ಬಂದೊಡದೆ ದೈವ ; ವೇಮಾ.

ಬಾಳಿನ ಸ್ಥಿತಿ ಗತಿಗಳು ಹರಿ ವಿಧಿಯಂತೆಯೇ ನಡೆಯುತ್ತವೆ. ಆದ್ದರಿಂದ ಜೀವನ ಸಾಗಿಸುವಾಗ, ಆಗು ಹೋಗುಗಳನ್ನು ಅರಿಯುವಾಗ, ಹರಿವಿಧಿಯೇ ನಿರ್ಧಾರಕವಾಗುತ್ತದೆ. ಆದ್ದರಿಂದ ಜೀವಿಸುವವನು ಹರಿವಿಧಿಯನ್ನು ಕಂಡು, ಬಲ್ಲವರಿಂದ ಕೇಳಿಕೊಳ್ಳಬೇಕು. ಇನ್ನು ಪ್ರತಿಯೊಬ್ಬನಿಗೂ ಮರಣವಂತೂ ಸುನಿಶ್ಚಿತ. ಇನ್ನು ಯೋಗ ಸಾಧಕನಿಗೆ ಮನಸ್ಸು ಸೂಕ್ಷ್ಮತರ ತತ್ತ್ವಗಳಲ್ಲಿ ಲಯಿಸುತ್ತದೆ. ಈ ಲಯಕ್ಕೆ ಹರನೇ ನಿಮಿತ್ತನಾಗಿರುವನು. ಸತ್ತ್ವ ಗುಣದಿಂದ ಸೂಕ್ಷ್ಮ ಸ್ತರವನ್ನು ತಲುಪಿ ಲಯಿಸಬಹುದು. ಅಲ್ಲಿ ಅನಂತ ಸುಖ ಅರ್ಥಾತ್ ಆನಂದವಿದೆ. ಅಂದ ಮೇಲೆ ಹರನು ನಿಮಿತ್ತನಿರುವಲ್ಲಿ ನಲಿದು ಆಲಿಸಲಾರೆಯಾ ? ಇದಕ್ಕಾಗಿ ಗುಣ

ಬಂಧನದಿಂದ ಮುಕ್ತಿ ಪಡೆಯುವ ಗುರಿ ಇರಿಸಿಕೊಂಡು, ವೇದಾಂತ, ಯೋಗ, ತಂತ್ರಗಳನ್ನು ಕುರಿತು ಓದಬೇಕು; ಕೇಳಬೇಕು. ಹೀಗೆ ಮಾಡಲಾರೆಯಾ ? ಹೀಗೆ ಮಾಡಿ ಮನವನ್ನು ಶಾಂತಗೊಳಿಸುವ ಸುಸಂಧಿಯು ಬಂದೊಡನೆ ಅದೇ ದೈವವಾಗುತ್ತದೆ. ಹೀಗೆ ಹರಿವಿಧಿ, ಹರವಿಧಿಗಳನ್ನು ಕಂಡು, ಕೇಳಿ, ಆ ಕುರಿತು ಓದಿ, ಆಲಿಸಿ ಮನಶ್ಯಾಂತಿ ಮಾಡಿಕೊಂಡು ಮುನ್ನಡೆಸುವುದೇ ದೈವವೆನಿಸುತ್ತದೆ.

ಆ. ಸೌಖ್ಯವರಿಯುವಂತೆ ಸೌಖ್ಯವಾಗುತಿಹುದು.
ಹರನ ಕೃಪೆಯಿಂ ಸೌಖ್ಯ ಹೊಂದಿ ಉಂಟು.
ಸುಖ ಅಸುಖಗಳಿಗೆ ಶೂಲಿ ಕಾರಣನಿಹ.
ವಿಶ್ವದಾಭಿರಾಮ ಕೇಳು ವೇಮ.

ತನ್ನ ಸೌಖ್ಯವು ಎಲ್ಲಿದೆ ? ಅದನ್ನು ಹೇಗೆ ಪಡೆಯಬೇಕು ? ಯಾವುದು ವಿಧಿ ? ಯಾವುದು ನಿಷಿದ್ಧ. ಇದನ್ನೆಲ್ಲ ಅರಿಯುತ್ತ ತನ್ನ ಜೀವನವನ್ನು ಅದಕ್ಕೆ ಅನುಗುಣವಾಗಿ ನಡೆಸಿದರೆ ಸೌಖ್ಯವಾಗುತ್ತದೆ. ಧರ್ಮವನ್ನು ಆಚರಿಸಬೇಕು. ಯೋಗ ಸಾಧನೆಯನ್ನು ಮಾಡಬೇಕು. ಸತ್ತ್ವ ಗುಣವನ್ನು ಹೆಚ್ಚು ಹೆಚ್ಚು ವಿಕಾಸಗೊಳಿಸಿಕೊಳ್ಳಬೇಕು. ಇದೆಲ್ಲ ಹರನ ಕೃಪೆಯಿಂದ ಸಾಧ್ಯ. ಹೀಗೆ ಹರನ ಕೃಪೆಯಿಂದ ಸೌಖ್ಯ ಹೊಂದಬಹುದು. ಧರ್ಮಾಚರಣೆಯಿಂದ ಸುಖವುಂಟು. ಅಧರ್ಮದ ಆಚರಣೆಯಿಂದ ದುಃಖ ಒದಗುತ್ತದೆ. ಹೀಗೆ ಧರ್ಮ ಮತ್ತು ಅಧರ್ಮಗಳ ಆಚರಣೆಯಿಂದ ಬರುವ ಸುಖ ಅಸುಖಗಳಿಗೆ ವಿಧಾತನಾದ ಶೂಲಿ ಅಂದರೆ ಶಿವನೇ ಕಾರಣನಾಗಿದ್ದಾನೆ. ಆದ್ದರಿಂದ ಶಿವನ ಕರುಣೆಗೆ ಪಾತ್ರನಾಗಿ ಶಿವನ ಕೃಪೆಯನ್ನು ಪಡೆ.

ಆ. ಸುಖ, ಸುಖದಲಿ ತಾನು ಸಗುಣನಾಗುತಿರೆ,
ಪ್ರಕೃತಿ ಮದುವೆ ಗೆಯ್ದು, ಪರವ ಕೆಡಿಸಿ,
ವಿಧಿಗಳ ಹುಟ್ಟಿಸುವ ವಿಧಿಯ ತಾನು ಕಾಣ.
ವಿಶ್ವದಾಭಿರಾಮ ಕೇಳು ವೇಮ.

ಸತ್, ಚಿತ್, ಆನಂದಗಳನ್ನು ಆತ್ಮನ ಲಕ್ಷಣಗಳೆಂದು ಹೇಳುತ್ತಾರೆ. 'ಸುಖಂ ಅನುತಂ ಆನಂದಂ' ಅಂದರೆ ಆನಂತವಾದ ಸುಖವೇ ಆನಂದ. ಇದನ್ನು ಸುಖದಲ್ಲಿಯ ಸುಖ ಎಂದೂ ಹೇಳಬಹುದು.'ಆನಂದಂ ಬ್ರಹ್ಮ ಇತ್ಯಾಹುಃ' ಅಂದರೆ ಆನಂದವೇ ಬ್ರಹ್ಮವಾಗಿದೆ. ಸುಖ ಸುಖದಲ್ಲಿ ಬ್ರಹ್ಮನು ಸಗುಣನಾಗಿರುವಾಗ, ಪ್ರಕೃತಿಯೊಡಗೂಡಿದ್ದರೂ ಪುರುಷನು ಅಧೀಶನಾಗಿರುತ್ತಾನೆ. ಮುಂದೆ ಪ್ರಕೃತಿಗೆ ಹೆಚ್ಚು ಇಂಬುಗೊಟ್ಟು, ಕೊನೆಗೆ ಪ್ರಕೃತಿಗೆ ಅಧೀನನಾಗುತ್ತಾನೆ. ಹೀಗೆ ಸುಖ-ಸುಖದ ಪರವನ್ನು ಕೆಡಿಸುತ್ತಾನೆ ; ಎಂದೂ ಹೇಳಬಹುದು. ಹೀಗಾಗಿ, ಜೀವಿಗೆ ಮುಕ್ತ ಸ್ವಾತಂತ್ರ್ಯವಿರದೆ ಮೊಟಕುಗೊಂಡ ದತ್ತ ಸ್ವಾತಂತ್ರ್ಯವು ಉಳಿಯುತ್ತದೆ. ಹಾಗಾಗಿ ಅವನಿಗೆ ಕರ್ಮ ಮಾಡುವುದಕ್ಕೆ ಸ್ವಾತಂತ್ರ್ಯವು ದತ್ತವಾದರೂ, ಇಷ್ಟ ಕರ್ಮಫಲ ಪ್ರಾಪ್ತಿಗೆ ಸ್ವಾತಂತ್ರ್ಯವಿಲ್ಲ. ಅದರ ಪ್ರಾಪ್ತಿಗೆ ವಿಧಿ-ವಿಧಾನಗಳುಂಟು. ಹೀಗೆ ತನ್ನ ಮೂಲ ಸ್ಥಿತಿಯಿಂದ ಸ್ವಾತಂತ್ರ್ಯವನ್ನು ಕಸಿದುಕೊಂಡು ದತ್ತ ಸ್ವಾತಂತ್ರ್ಯದ ವಿಧಿಗಳನ್ನು ಹುಟ್ಟಿಸುವ ಆ ವಿಧಿಯನ್ನು ತಾನು ಕಾಣನು.

ಆ. ಅರಿತೊಡೆ, ಸುಖ ಹೊಂದಿ, ದುಃಖ ತಿಳಿಯದಿರಲು,
ವಿಧಿಯ ದೂರಲು ಫಲವೇನು ? ಮತ್ತೆ.

ಬುದ್ಧಿಗೆ ಹೊಳೆಯೆ, ಪರಿಪೂರ್ತಿ ಹೊಂದಿರಯ್ಯ !
ವಿಶ್ವದಾಭಿರಾಮ ಕೇಳು ವೇಮ.

ಸತ್ಕರ್ಮದ ಫಲವು ಸುಖದಾಯಕ, ದುಷ್ಕರ್ಮದ ಫಲವು ದುಃಖದಾಯಕ. ಉಭಯ ಪ್ರಸಂಗಗಳಲ್ಲಿಯೂ ತಾನು ಕರ್ಮ ಕರ್ತೃ. ವಿಧಿಯು ಫಲ ನಿರ್ಧರಿಸುವ ನಿಯಾಮಕನು. ಮರಳಿ ತಾನೇ ಫಲದ ಭೋಕ್ತೃ ಆಗುತ್ತಾನೆ. ಈ ಸತ್ಯವನ್ನು ಅರಿಯಬೇಕು. ಬಯಸಿದಾಗ, ಸುಖ ಪ್ರಾಪ್ತವಾದಾಗ, ತನ್ನ ಕರ್ಮಫಲದ ನಿರ್ಧಾರಕ್ಕೆ ತಾನೇ ಕಾರಣನೆಂದು ಗರ್ವ ಪಡುತ್ತಾನೆ. ಆದರೆ ಬಯಸದ ದುಃಖ ಫಲ ಪ್ರಾಪ್ತಿಯಾದಾಗ, ನಿರಾಶೆ ತಾಳಿ, ಏನು ಮಾಡುವುದು ? ಗ್ರಹಗಳ ಕಾಟ ! ಶನಿಯು ಬೆನ್ನು ಹತ್ತಿದ್ದಾನೆ. ವಿಧಿ ಬರೆಹ ಚೆನ್ನಾಗಿಲ್ಲ ; ಎಂದು ವಿಧಿಯನ್ನು ದೂರುತ್ತಾನೆ. ಹೀಗೆ ಭ್ರಮಿಸುವುದರಿಂದ ಪ್ರಯೋಜನವೇನು ? ಆದ್ದರಿಂದ ತನಗಿರುವ ದತ್ತ ಸ್ವಾತಂತ್ರ್ಯದ ಇತಿಮಿತಿಯನ್ನು ಅರಿತುಕೊಂಡು, 'ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು ಕದಾಚನ'. ಅಂದರೆ ಕರ್ಮ ಮಾಡುವಲ್ಲಿ ಮಾತ್ರ ನಿನಗೆ ಅಧಿಕಾರವಿದೆ. ಆದರೆ ಫಲ ನಿರ್ಧಾರದಲ್ಲಿ ಅಲ್ಲ ; ಎಂದು ಬುದ್ಧಿಗೆ ಹೊಳೆಯಲು, ವಿಧಾತನಿಗೆ ಶರಣಾಗಿ, ಫಲ ನಿರ್ಧಾರದ ಅಧಿಕಾರವನ್ನು ತ್ಯಜಿಸಿ, ನಿರಹಂಕಾರ ಭಾವ ತಾಳಿ ಪರಿಪೂರ್ತಿ ಹೊಂದಬೇಕು.

ಆ. ಲೋಭ ಮೋಹದಿಂದ ಲಾಭ ಪ್ರಾಪ್ತಿ ಇರದು ;
ನೆನೆದ ಕಾರ್ಯವೆಲ್ಲ ನೆರವೇರವು.
ತಾವೊಂದು ಬಗೆದರೆ, ದೈವದ ಬಗೆಯೊಂದು.
ವಿಶ್ವದಾಭಿರಾಮ ಕೇಳು ವೇಮ.

ಮಾನವನು ತನಗೆ ಪ್ರಿಯವಾದ ವಸ್ತುಗಳಲ್ಲಿ ಮೋಹ ತಾಳುತ್ತಾನೆ. ಅವನ ಅರಿವಿಗೆ ಮುಚ್ಚಳ ಹಾಕಿದಂತಾಗುತ್ತದೆ. (ಮುಹ್ಯತಿ ಇತಿ) ಹೊನ್ನಿನ ಬಗೆಗೆ, ಹೆಣ್ಣಿನ ಬಗೆಗೆ ಮತ್ತು ಮಣ್ಣಿನ ಬಗೆಗೆ ಮೋಹ ತಾಳುತ್ತಾನೆ. ಅದು ದೊರಕಿದಾಗ ಅದರ ಬಗ್ಗೆ ಲೋಭ ತಾಳುತ್ತಾನೆ. ಅದು ತನ್ನದು. ತನಗಲ್ಲದೆ ಬೇರಾರಿಗೂ ಅದು ದೊರೆಯಕೂಡದು ; ಎಂದು ತಾನೂ ತಿನ್ನದೆ ದನಕರುಗಳನ್ನೂ ತಿನ್ನಗೊಡದೆ ಗೋದಲೆಯಲ್ಲಿ ಕುಳಿತ ನಾಯಿಯಂತೆ ಲೋಭಿ ಇರುತ್ತಾನೆ. ಆದರೆ ಇಂಥ ಮೋಹ, ಲೋಭ ವೃತ್ತಿಗಳಿಂದ ಯಾವುದೇ ಲಾಭ ಪ್ರಾಪ್ತವಾಗದು. ಏಕೆಂದರೆ ಮಾನವನು ಇಷ್ಟಪಟ್ಟು ಯಾವುದೇ ಭೋಗ ವಸ್ತು ಪಡೆಯಲು ಧಾವಿಸಬಹುದು. ಆದರೆ ಅವನು ನೆನೆದ ಕಾರ್ಯಗಳೆಲ್ಲ ನೆರವೇರುವುದಿಲ್ಲ. ಏಕೆಂದರೆ ಎಲ್ಲವೂ ದೈವೇಚ್ಛೆಯಂತೆ ನಡೆಯುತ್ತದೆ. ಮಾನವನು ದೈವೇಚ್ಛೆಗೆ ಅನುಗುಣವಾದ ಸ್ವಇಚ್ಛೆಯನ್ನು ಹೊಂದಿರಬಹುದು. ಇಲ್ಲವೆ ತನಗೆ ದತ್ತವಾದ ಸ್ವಾತಂತ್ರ್ಯದಿಂದ ಬೇರೆ ಇಚ್ಛೆ ಹೊಂದಿರಬಹುದು. ಹೀಗಾಗಿ, ಯಾವುದೇ ವಿಷಯ ವಸ್ತುವನ್ನು ಮೋಹಿಸಿ, ಮಮತೆಯಿಂದ ಲೋಭ ಹೊಂದಿ, ತಾವು ಒಂದನ್ನು ಬಗೆದರೆ, ಫಲ ನೀಡುವ ಬಗೆಯು ಬೇರೊಂದಾಗಿರುತ್ತದೆ.

ಕಂ. ತನಗಾವಾಗ ಸುಭಿಕ್ಷವು ?
ತನಗಾವಾಗ ಸಲೆ ಭಾಗ್ಯ ವರ್ಧಿಸುತಿಹುದೋ ?
ಎನುತ ದೆಶೆಗಾಗಿ ಎಲ್ಲೆಡೆ,
ಮನದಲ್ಲಿಯೆ ಮರುಗುತಿಹರು, ಮನುಜರು, ವೇಮಾ.

ತನ್ನ ಹೊಟ್ಟೆ ಬಟ್ಟೆಯ ಚಿಂತೆ ನೀಗುವ ಸಮೃದ್ಧಿ ಅಂದರೆ ಸುಭಿಕ್ಷವು ಯಾವಾಗ ಬರುವುದೋ ಎಂದು ಮಾನವನು ಎದುರು ನೋಡುತ್ತಾನೆ. ತನ್ನ ಒಳ್ಳೆಯ ಭಾಗ್ಯವು ಯಾವಾಗ ವರ್ಧಿಸುವುದೋ ಎನ್ನುತ್ತ ಅವನು ತನ್ನ ಅದೃಷ್ಟದ ದೆಶೆಗಾಗಿ ಎಲ್ಲ ಕಡೆಗೂ ಅಲೆಯುತ್ತಾನೆ. ಆ ದೆಶೆಯು ಸಿಕ್ಕದೆಂದು ಮನಸ್ಸಿನಲ್ಲಿಯೇ ಮರುಗುತ್ತಾನೆ. ಆದರೆ ತಮ್ಮ ಇಂದಿನ ದುರ್ಭಿಕ್ಷೆಯ ಸ್ಥಿತಿಯು ತಮ್ಮ ಪೂರ್ವ ಕರ್ಮದ ಫಲವೇ ಎಂದು ಅವರು ಅರಿತುಕೊಳ್ಳರು. ತಮಗೆ ಅದೃಷ್ಟವಾದ ಪೂರ್ವಕರ್ಮಗಳ ಫಲವೇ ತಮ್ಮ ಸುಖದಾಯಿಯೆನಿಸುವ ಪೂರ್ವ ಕರ್ಮ ಫಲವೇ ಆಗಿದೆ.

ಹಣೆ ಬರೆಹ :

ಆ. ಎಲೆ ಮೇಲಿನ ಬರೆಹ ಎಲ್ಲರಿಗೂ ತಿಳಿವುದು.
ಕೈಯೊಳಗಿನ ಬರೆಹ ಕಾಣಬಹುದು.
ತೊಗಲು ಹಿಂದಿನ ಬರೆಹ ದೊಡ್ಡವನು ಅರಿವನೆ ?
ವಿಶ್ವದಾಭಿರಾಮ ಕೇಳು ವೇಮ.

ಬರೆಯುವ ಕಾಗದಗಳ ಆವಿಷ್ಕಾರ ಆಗುವವರೆಗೆ, ತಾಡ ಎಲೆಗಳ ಮೇಲೆ ಬರೆದಿಡುತ್ತಿದ್ದರು. ಭೂಜ ಪತ್ರಗಳೆಂದರೂ ಮರದ ಎಲೆಗಳೇ. ಹೀಗೆ ಬರೆದ ಬರೆಹವು ಎಲ್ಲರಿಗೂ ತಿಳಿಯುವುದು. ಹಸ್ತ ಸಾಮುದ್ರಿಕೆಯಲ್ಲಿ ಅಂಗೈಯಲ್ಲಿಯ ಗೆರೆಗಳನ್ನು ಗುರುತಿಸಿ ಕೆಲವರು ಭೂತ ಭವಿಷ್ಯದ ಘಟನೆಗಳನ್ನು ಗುರುತಿಸಿ ಹೇಳುವರು. ಆದರೆ ತೊಗಲು ಹಿಂದಿನ ಬರೆಹವೂ ಒಂದಿದೆ. ಅದನ್ನು ಎಷ್ಟೇ ದೊಡ್ಡವನಾದರೂ ಹೇಳಲಾರನು. ಅದೇ ಹಣೆಯ ಬರೆಹ ; ವಿಧಿಲಿಖಿತ.

ಆ. ನೊಸಲು ಬರೆಯುವವನು ನೊಸಲು ಕಿರಿದು ಗೆಯ್ದ.
ನೊಸಲಿಗಿಂತ ಮೇಲು, ನೊಸಲು ಬರೆಹ.
ನೊಸಲ ಮೇಲೆ ಬರೆಹ ಒರೆಸಲು ಹೋಗುವುದೇ ?
ವಿಶ್ವದಾಭಿರಾಮ ಕೇಳು ವೇಮ.

ಕರ್ಮ ಎಂದರೆ ಮನಸ್ಸಿನ ವಿಕೃತಿ. ಮನಸ್ಸಿನ ಪೀಠಸ್ಥಾನ ಮಸ್ತಿಷ್ಕ. ವಿಕೃತ ಮನಸ್ಸು ಮರಳಿ ಸ್ವಾಭಾವಿಕ ಸ್ಥಿತಿಗೆ ಮರಳಬೇಕಾದರೆ ಪ್ರತಿಕರ್ಮ ಇಲ್ಲವೆ ಕರ್ಮ ಫಲ ಭೋಗಕ್ಕೂ ಮಸ್ತಿಷ್ಕದ ಅಗತ್ಯವಿದೆ. ಹೀಗಾಗಿ ಮರಣದಿಂದ ನಿಷ್ಕ್ರಿಯವಾದ ಮಸ್ತಿಷ್ಕವು (Brain death) ಪುನರ್ಜನ್ಮ ಮೂಲಕ ಬೇರೊಂದು ದೇಹದಲ್ಲಿ ಸಕ್ರಿಯವಾಗುತ್ತದೆ. ಹೀಗಾಗಿ, ಕರ್ಮ, ಕರ್ಮಫಲಗಳ ಸಂಬಂಧ ಹೇಳುವಾಗ ಅದನ್ನು ಹಣೆಬರಹವೆನ್ನುತ್ತಾರೆ. ನೊಸಲು ಬರೆಹವೇ ವಿಧಿ ಲಿಖಿತ. ನೊಸಲು ಬರೆಯುವ ವಿಧಾತನು ವಿಪುಲವಾಗಿ ಬರೆಯದೆ, ಕರ್ಮ ಮತ್ತು ಪ್ರಾರಬ್ಧ (ಆರಂಭಿಸಲ್ಪಟ್ಟ) ಪ್ರತಿಕರ್ಮಗಳಿಗಷ್ಟೇ ಬರೆಹವನ್ನು ಮರ್ಯಾದಿತಗೊಳಿಸಿದನು. ಅರ್ಥಾತ್ ನೊಸಲನ್ನು ಕಿರಿದು ಮಾಡಿದನು. ನೊಸಲು ಎಷ್ಟೇ ಇರಲಿ ; ಹೇಗೇ ಇರಲಿ; ಅದಕ್ಕಿಂತ ನೊಸಲು ಬರೆಹವೇ ಮೇಲು. ಒಬ್ಬನು ಪಾಪ ಕರ್ಮ ಮಾಡಿದ್ದರೆ ಅವನ ನೊಸಲ ಬರೆಹದಲ್ಲಿ ದುಃಖ ಭೋಗದ ಫಲವು ದಾಖಲಾದಂತೆ. ಪುಣ್ಯ ಕರ್ಮ ಮಾಡಿದ್ದರೆ, ಸುಖಭೋಗದ ಫಲವು ದಾಖಲಾದಂತೆ. ಕೆಲವರು ನಂಬಿರುವಂತೆ ಪ್ರಾಯಶ್ಚಿತ್ತಾದಿ ಕರ್ಮಗಳನ್ನು ಮಾಡಿ ಪೂರ್ವದ ಪಾಪಕರ್ಮದ ಫಲವನ್ನು ತೊಡೆಯಲಾರರು. ಅಂದ ಮೇಲೆ, ನೊಸಲ ಮೇಲಿನ ಬರೆಹವನ್ನು

ಅಳಿಸಲು ಅದು ಹೋಗದು. ಜ್ಞಾನಿಯೂ ಸಹ ಪ್ರಾರಬ್ಧ ಕರ್ಮ ಫಲವನ್ನು ಭೋಗಿಸಲೇಬೇಕು. ಬಹಳವಾದರೆ, ಕೆಲವು ಶಾಂತಿ ಕರ್ಮಗಳಿಂದ, ತಂತ್ರಿಕ ಕ್ರಿಯೆಗಳಿಂದ, ಕ್ಲೇಶದ ಪರಿಣಾಮವನ್ನು ಕಾಲಮಾನದಲ್ಲಿ ಹಂಚಿ ಹಾಕಿ, ಅದರ ತೀವ್ರತೆಯನ್ನು ಕಡಿಮೆಗೊಳಿಸಬಹುದೇ ಹೊರತು, ಒಟ್ಟು ಕ್ಲೇಶದ ಪ್ರಮಾಣವನ್ನು ಬದಲಿಸಲಾಗದು.

ಆ. ಎದುರು ಸಿರಿಯ ಕಂಡು, ಎಷ್ಟೊ ಅಳುವವರಿಗೆ,
ಭಾಗ್ಯವೆಂತು ಕೊಡುವ ? ಪರಮ ಗುರುವು.
ತನ್ನ ಪೂರ್ವ ಕರ್ಮ ದೈವವೇನರಿಯದೆ ?
ವಿಶ್ವದಾಭಿರಾಮ ಕೇಳು ವೇಮ.

ಕೆಲವರು ಭಾಗ್ಯಹೀನರಾಗಿದ್ದು, ತಮ್ಮ ನೆರೆಹೊರೆಯವರ ಸಂಪತ್ತನ್ನು ನೋಡಿ ಕರುಬುತ್ತಾರೆ. ಸಿರಿ ಸಂಪತ್ತನ್ನು ಎದುರೆದುರೇ ಕಂಡು ತಮಗೆ ದೊರೆಯದಲ್ಲ ; ಎಂದು ಅಳುತ್ತಾರೆ. ತಮ್ಮ ಗುರುಹಿರಿಯರಲ್ಲಿ ಬೇಡಿಕೊಳ್ಳುತ್ತಾರೆ. ಆದರೆ ಪರಮ ಗುರುವು ಪರಮೇಶ್ವರ ರೂಪನು. ಅವನಿಗೆ ಮಾನವನ ಪೂರ್ವ ಕರ್ಮಗಳ ಅರಿವಿರುತ್ತದೆ. ಆ ಕರ್ಮಗಳ ಫಲಗಳನ್ನು ಭೋಗಿಸಲೇಬೇಕೆಂಬ ವಿಧಿ ನಿಯಮವೂ ಗೊತ್ತಿದೆ. ವಿಧಿ ನಿಯಮವನ್ನು ಬದಲಿಸಲಾಗದೆಂಬ ಮರ್ಮವನ್ನೂ ಅವನು ಬಲ್ಲ. ಅಂದ ಮೇಲೆ, ತನ್ನ ಪೂರ್ವ ಕರ್ಮ ಫಲಾನುಸಾರ ಭಾಗ್ಯಹೀನನಾದವನಿಗೆ ಆ ಪರಮ ಗುರುವು ಭಾಗ್ಯವನ್ನು ಕೊಡುತ್ತಾನೆ ? ತನ್ನ ಪೂರ್ವ ಕರ್ಮವನ್ನು ದೈವವು ಅರಿಯದೇನು ?

ಆ. ಭಾಗ್ಯಹೀನನಿಹಗೆ ಪರುಸವೇದಿ ದೊರೆಯೆ,
ಅದುವೆ ನಿಲ್ಲದಾಗ ಕದಲದಂತೆ.
ಮಳೆಯ ಜೊತೆಗೆ ಬರುವ ಆಲಿ ಕಲ್ಲು ನಿಲವು.
ವಿಶ್ವದಾಭಿರಾಮ ಕೇಳು ವೇಮ.

ಪರುಸ ವೇದಿ ಇಲ್ಲವೆ ಸ್ಪರ್ಶವೇದಿಯು ಒಂದು ಅಮೂಲ್ಯ ವಸ್ತು. ಅದರ ಸ್ಪರ್ಶ ಮಾತ್ರದಿಂದ ನಿಮ್ನ ಲೋಹಗಳು ಬಂಗಾರವಾಗುತ್ತವೆ. ಇಂಥ ಪರುಸ ವೇದಿ ಭಾಗ್ಯವಂತನಿಗೆ ಮಾತ್ರ ದೊರಕಬಹುದು. ಆದರೆ ತನ್ನ ಪೂರ್ವಕರ್ಮದಿಂದಾಗಿ ಇಂದು ಭಾಗ್ಯ ಹೀನನಾಗಿರುವವನಿಗೆ, ಬೇರಾವುದೇ ಕಾರಣದಿಂದ ಅರ್ಥಾತ್ ಅದೃಷ್ಟವಶಾತ್ ಪರುಸವೇದಿಯು ದೊರೆತರೆ, ಅದು ಬಹುಕಾಲ ಕದಲದೆ ನಿಲ್ಲದು. ಮಳೆಯ ಹನಿಗಳೊಂದಿಗೆ ಅಲ್ಪ ಕಾಲ ಆಲಿ ಕಲ್ಲುಗಳೂ ಸುರಿಯಬಹುದು. ಆದರೆ ಆಲಿಕಲ್ಲು ಬೀಳುವುದು ಬೇಗ ನಿಲ್ಲುತ್ತದೆ. ಅದೇ ರೀತಿ, ಭಾಗ್ಯ ಹೀನನಿಗೆ ಬಡತನದ ಮಳೆಹನಿಗಳೊಂದಿಗೆ ಕೆಲವೊಮ್ಮೆ ಭಾಗ್ಯದ ಆಲಿ ಕಲ್ಲುಗಳು ಬೀಳಬಹುದುದಾದರೂ ಬೇಗ ಕದಲಿ ಹೋಗುತ್ತವೆ.

ಕರ್ಮಫಲ ಆನುವಂಶಿಕವಲ್ಲ :

ಆ. ಧನವು ಇರದ ಬಡವ ತಂದೆ ಗರ್ಭದಲ್ಲಿ,
ಭಾಗ್ಯ ಪುರುಷನೋರ್ವ ಬೆಳೆಯೆ ಹುಟ್ಟಿ,

ಬಹಳ ಧನವಗೂಡಿ ಭದ್ರನಾಗಿ ಇಪ್ಪ.
ವಿಶ್ವದಾಭಿರಾಮ ಕೇಳು ವೇಮ.

ಒಬ್ಬ ತಂದೆಯು ಪೂರ್ವಕರ್ಮವಶಾತ್ ಧನದ ಭಾಗ್ಯ ಪಡೆಯದಿರಬಹುದು. ಆದರೆ ಅವನ ವೀರ್ಯದಿಂದ ಅವನ ಸತಿಯ ಗರ್ಭದಲ್ಲಿ ಒಂದು ಮಗು ಹುಟ್ಟಿ ಬೆಳೆಯುತ್ತದೆ. ಅದು ದೊಡ್ಡದಾಗುತ್ತದೆ. ಆ ಪುತ್ರನು ತನ್ನ ಪೂರ್ವ ಕರ್ಮಗಳ ಫಲವಾಗಿ ಭಾಗ್ಯವಂತನಾಗಿದ್ದರೆ, ತಾನು ಏನನ್ನೇ ಮಾಡಲಿ, ಅವನ ಭಾಗ್ಯ ಅವನ ಬೆನ್ನಿಗಿರುತ್ತದೆ. ಅವನು ಬಹಳ ಧನಗೂಡಿಸಿ ಭದ್ರನಾಗಿರುತ್ತಾನೆ.

ಆ. ಶೇಖರಿಸಿದ ಧನಕೆ ಸತಿಸುತಾದಿಯೆಲ್ಲ,
ಆಶೆ ಪಡುವರಷ್ಟೆ ; ಅದು ಬರಿ ಭ್ರಮೆಯು.
ಭಾಗ್ಯ ಹೀನರಿರಲು ಫಲವು ಲಭ್ಯವೆಂತು ?
ವಿಶ್ವದಾಭಿರಾಮ ಕೇಳು ವೇಮ.

ಒಂದು ಮನೆಯಲ್ಲಿ ಪಿತ್ರಾರ್ಜಿತ ಸಂಪತ್ತು ಇರಬಹುದು. ಮನೆಯ ಹಿರಿಯನು ಶೇಖರಿಸಿದ ಧನವೂ ಇರಬಹುದು. ಆದರೆ ಮನೆಯೊಡೆಯನ ಹೆಂಡತಿ ಮಕ್ಕಳು, ಶೇಖರಿಸಿದ ಪಿತ್ರಾರ್ಜಿತ ಆಸ್ತಿಯ ಭೋಗಕ್ಕೆ ಆಶೆ ಬಟ್ಟು ತಾವು ಏನನ್ನೂ ಮಾಡದೆ ಆಲಸಿಗಳಾಗಿ, ದುಂದು ಖೋರರಾಗಿ ಉಳಿಯಬಾರದು. ಏಕೆಂದರೆ, ತಮ್ಮ ಪೂರ್ವ ಕರ್ಮಫಲ ನಿಮಿತ್ತ ತಾವು ಭಾಗ್ಯಹೀನರಾಗಿದ್ದರೆ, ತಮ್ಮ ಇಚ್ಛಿತ ಫಲಗಳು ಲಭ್ಯವಾಗವು. ಆದ್ದರಿಂದ, ಈ ಜನ್ಮದಲ್ಲಂತೂ ಸರಿಯೇ-ಮುಂದಿನ ಜನ್ಮದಲ್ಲಿಯೂ ಭಾಗ್ಯದ ಫಲ ಭೋಗಿಸಬೇಕಿದ್ದರೆ, ಭಾಗ್ಯವನ್ನು ತರುವ ಪುಣ್ಯ ಕರ್ಮಗಳನ್ನು ಮಾಡುತ್ತಿರಬೇಕು. ಬರೀ ಎದುರಿನ ಸಿರಿಗೆ ಆಸೆ-ಬಟ್ಟರೆ ಭಾಗ್ಯ ಫಲ ಬರದು.

ಆ. ಕೇಡು ಬಂದಿತೆಂದು ಕೆಟ್ಟದೆನುವ ದೈವ ;
ಮೇಲು ಬಂದಿತೆಂಬ ಮೆಚ್ಚು ತನಗೆ.
ಕೇಡು ಮೇಲು, ತಿಳಿಯೆ, ಗೆಯ್ದ ಕರ್ಮವಷ್ಟೆ.
ವಿಶ್ವದಾಭಿರಾಮ ಕೇಳು ವೇಮ.

ಒಬ್ಬನ ಜೀವನದಲ್ಲಿ ಕೇಡೂ ಬರಬಹುದು. ಮೇಲೂ ಉಂಟಾಗಬಹುದು. ಮಾನವನು ತನಗೆ ಕೇಡು ಬಂದಾಗ ತನ್ನ ಗ್ರಹಗತಿಗಳೇ ಚೆನ್ನಾಗಿಲ್ಲ. ತನಗೆ ಶನಿಯು ಬೆನ್ನು ಹತ್ತಿದ್ದಾನೆ ಎಂದೂ, ದೈವವೇ ಕೆಟ್ಟದಾಗಿದೆ ಎಂದೂ ದೂರುತ್ತಾನೆ. ಇನ್ನು ಮೇಲು ಬಂದಾಗ ತನ್ನನ್ನೇ ಸ್ತುತಿ ಮಾಡಿಕೊಳ್ಳುತ್ತಾನೆ. ಎದೆಯುಬ್ಬಿಸುತ್ತಾನೆ., ಗರ್ವಪಡುತ್ತಾನೆ. ಆದರೆ ತನ್ನ ಪಾಲಿಗೆ ಭೋಗಿಸಲು ಕೇಡೇ ಬರಲಿ, ಮೇಲೇ ಬರಲಿ, ಅದೆಲ್ಲ ತಾನು ಮಾಡಿದ ಕರ್ಮದ ಫಲವಷ್ಟೇ. ಪಾಪ ಕರ್ಮ ಮಾಡಿದ್ದರೆ, ಕ್ರೂರ ಕರ್ಮ ಮಾಡಿದ್ದರೆ, ಕುಹಕ ಕರ್ಮ ಮಾಡಿದ್ದರೆ, ಆ ಕರ್ಮಗಳಿಂದ ತನಗೂ ಮತ್ತು ಪರರಿಗೂ ಕ್ಲೇಶವಾಗುತ್ತದೆ. ಅದರ ಪ್ರತಿಕರ್ಮವೂ ಕ್ಲೇಶದಾಯಕವಿರಬೇಕಷ್ಟೇ. ಇದುವೇ ಕೇಡು ಕರ್ಮದ ಫಲ. ಈ ಕ್ಲೇಶದಾಯಕ ಫಲಕ್ಕೆ ತಾನೇ ಕಾರಣವೆಂದು ಒಪ್ಪಿಕೊಳ್ಳದೆ, ದೈವವೇ ಕೆಟ್ಟದಾಗಿದೆ ಎಂದು ದೂರುವುದು ನ್ಯಾಯವೇ ? ಈ ಕಟು ಸತ್ಯವನ್ನು ಮನಗಂಡು, ಈಶ್ವರನಿಗೆ ಶರಣಾಗಿ, ಅಹಂಕಾರ, ಗರ್ವಗಳನ್ನು ತೊರೆದೆ,

ದೈವೇಚ್ಛೆಯೊಂದಿಗೆ ಸ್ವ-ಇಚ್ಛೆಯನ್ನು ಮೇಳವಿಸಿ, ಪುಣ್ಯಕಾರ್ಯಗಳನ್ನು ಮಾಡುವ ಪಾಠವನ್ನು ಕಲಿಯಬೇಕು.

ಆ. ಮುದ್ರೆ ವೇಷ ಧರಿಸಿ, ಮಧ್ಯೆ ಇರಲಿ ಕಾಂತಿ;
ಎಂಜಿಲು ತಿನುವ ಪಂಗದಾಸನಿರಲಿ ;
ಭಾಗ್ಯವಶತೆ ಇರದೆ, ಬದುಕು ಇಲ್ಲವಲ್ಲ.
ವಿಶ್ವದಾಭಿರಾಮ ಕೇಳು ವೇಮ.

ಒಬ್ಬನು, ತಾನು ಧಾರ್ಮಿಕನೆಂದು ತೋರಿಸಿಕೊಳ್ಳಲು ಮುದ್ರೆಯನ್ನು ಒತ್ತಿಸಿಕೊಳ್ಳಬಹುದು. ಹಲವು ಸನ್ಯಾಸಿ, ಜಂಗಮ, ದಾಸ ಇತ್ಯಾದಿ ಬಗೆ ಬಗೆಯ ವೇಷಗಳನ್ನು ಧರಿಸಬಹುದು. ಇವೆಲ್ಲವುಗಳ ನಡುವೆ ಆಕರ್ಷಕ ಚೆಲುವೂ ಇರಬಹುದು ; ಇಲ್ಲವೆ ಕಾಲಿಲ್ಲದ ಕುಂಟನಾಗಿ, ಭಿಕ್ಷೆ ಬೇಡುತ್ತ ಎಂಜಿಲು ಕೂಳನ್ನು ತಿನ್ನುವ ದಾಸನಾಗಿರಬಹುದು. ಏನಾದರೇನಂತೆ? ತನಗೆ ಭಾಗ್ಯವು ವಶವಾಗಿರದಿದ್ದರೆ, ತನಗೊಂದು ಬದುಕು ಇರದು. ವಟುವಾಗಿ, ಸನ್ಯಾಸಿಯಾಗಿ, ದಾಸನಾಗಿ, ಭಿಕ್ಷುಕನಾಗಿ ಧರ್ಮ ಸಾಧನೆ ಮಾಡಬೇಕಾದರೂ ತನ್ನ ಪೂರ್ವ ಕರ್ಮದ ಫಲವಾಗಿ ಭಾಗ್ಯವನ್ನು ವಶಪಡಿಸಿಕೊಳ್ಳಬೇಕು.

ಆ. ತನಗೆ ಪ್ರಾಪ್ತಿ ಇಲ್ಲ ; ದಾತರು ಕೊಡರೆಂದು,
ದೋಷ ಬುದ್ಧಿಯಿಂದ ದೂರಲೆಲ್ಲ,
ಮೂಗು ಡೊಂಕು ನೋಡಿ ಮೂಗುತಿ ದೂರುವುದೆ ?
ವಿಶ್ವದಾಭಿರಾಮ ಕೇಳು ವೇಮ.

ತನ್ನ ಪೂರ್ವಕರ್ಮದಿಂದಾಗಿ, ಧನ ಪ್ರಾಪ್ತಿಯಾಗುವ ಸಂಸ್ಕಾರವು ತನಗಿಲ್ಲ. ಇಂಥವನು ಯಾರನ್ನು ಬೇಡಿಕೊಂಡರೇನು ? ಅವರು ದಾನವೀಯರು. ಆಗ, ತನ್ನ ಕಷ್ಟ ಕಾರ್ಪಣ್ಯಗಳನ್ನು ಕೇಳಿ ತಿಳಿದರೂ, ಉದಾರ ಹಸ್ತದಿಂದ ದಾನ ನೀಡಿ ನೆರವು ಒದಗಿಸದ ಕ್ರೂರ ಮನುಷ್ಯರಿವರು ; ಎಂದು ದೋಷ ಬುದ್ಧಿಯಿಂದ, ತನಗೆ ದಾನವೀಯದ ದಾತರನ್ನು ದೂರುವುದು ಯಾವ ರೀತಿ ಆಗುವುದೆಂದರೆ, ತನ್ನ ಮೂಗು ಡೊಂಕು ಇದ್ದುದನ್ನು ಕಂಡೂ ಕಂಡು, ಆ ಮೂಗಿಗೆ ದೋಷ ಕೊಡದೆ, ಅದಕ್ಕೆ ಹೊಂದುತ್ತಿಲ್ಲ ; ಎಂದು ಮೂಗುತಿಯನ್ನು ದೂರಿದಂತೆ.

ಆ. ಕೆಡುಕನನ್ನು ಹೆಚ್ಚು ಕೆಡಿಸುತಿಹುದು ದೈವ.
ಅಡ್ಡ ಬರದು ; ಅವಗೆ ಕಷ್ಟ ಬರಲು ;
ಬೀಳು ಭೂಮಿ ಕಂಡು ಭೂಪ ಮೆಚ್ಚುತಿಹನೆ ?
ವಿಶ್ವದಾಭಿರಾಮ ಕೇಳು ವೇಮ.

ಒಬ್ಬನು ತನ್ನ ಪೂರ್ವದ ಪಾಪ ಕರ್ಮಗಳ ಸಂಸ್ಕಾರಗಳಿಂದ ಕೇಡು ಕರ್ಮಕ್ಕಿಳಿದು ಕೆಡುಕನಾಗುತ್ತಾನೆ. ಇಂಥ ಕೆಡುಕನಿಗೆ ಪೂರ್ವದ ಪಾಪದ ಫಲವಾದ ಕ್ಲೇಶವನ್ನು ದೈವವು ವಿಧಿಸುತ್ತದೆ. ತನ್ನ ಕ್ಲೇಶಗಳಿಗೆ ತನ್ನ ಪೂರ್ವದ ಪಾಪ ಕರ್ಮಗಳೇ ಕಾರಣವೆಂದು ಅವನು ಅರಿತುಕೊಂಡು, ಪಾಪ ಕರ್ಮಗಳಿಂದ ಈಗಲಾದರೂ ದೂರವಾಗಿ, ಪುಣ್ಯ ಕರ್ಮಗಳತ್ತ ಪ್ರವೃತ್ತನಾಗಬೇಕು. ಕೊನೆಗೆ ಕರ್ಮಫಲಾಪೇಕ್ಷೆ ತೊರೆದು, ಅನಾಸಕ್ತನಾಗಿರಬೇಕು. ಆದರೆ ತನ್ನ

ಕ್ಲೇಶಗಳ ಪರಿಹಾರವೆಂದು ಬಗೆದು, ಇನ್ನಷ್ಟು ಮೋಸ-ವಂಚನೆಗಳಲ್ಲಿ, ಕೊಲೆ ಸುಲಿಗೆಗಳಲ್ಲಿ ನಿರತನಾಗಿ ಕೆಡುಕನಾದರೆ, ವಿಧಿಯು ಅವನನ್ನು ಹೆಚ್ಚಾಗಿ ಕೆಡಿಸುತ್ತದೆ. ಅವನಿಗೆ ಕಷ್ಟ ಬಂದರೂ ವಿಧಿಯು ಅಡ್ಡ ಬರದು. ಅಂಥ ಕೆಡುಕನಿಗೆ ಸಂಕಟಗಳೇನು ಒಂಟಿಯಾಗಿ ಬರುವವೇ ? ಪುಣ್ಯ ಭಾಗ್ಯವಿಲ್ಲದ ಕೆಡುಕನು ಬೆಳೆ ಬಾರದ ಬೀಳು ಭೂಮಿಯಂತೆ. ದೈವವು, ಭೂಪ ಅಂದರೆ ಭೂಮಿಯ ಒಡೆಯನಂತೆ. ಬೀಳು ಭೂಮಿಯನ್ನು ಕಂಡು ಭೂಪನು ಮೆಚ್ಚುವುದಿಲ್ಲ. ಅದನ್ನು ಸಾಗುವಳಿ ಮಾಡದೆ ಇನ್ನಷ್ಟು ಬೀಳಾಗುವಂತೆ ಮಾಡುತ್ತಾನೆ.

ಆ. ಈಯದವನ ಕೈಲಿ ಈಯ ಹಚ್ಚುವುದಲ !
ಈಯುವವನ ಕೈಲಿ ಈಯಗೊಡದು.
ಕೊಡುವ ಕೊಳ್ಳುವುದಕೆ ಕರ್ತ ಈಶ್ವರಷ್ಟೆ.
ವಿಶ್ವದಾಭಿರಾಮ ಕೇಳು ವೇಮ.

ಒಬ್ಬನಲ್ಲಿ ಧನ-ಸಂಪತ್ತು ಇರಬಹುದು. ಆದರೆ ದಾನ ಮಾಡುವ ಮನಸ್ಸು ಇರುವುದಿಲ್ಲ. ಅವನು ಲೋಭಿಯಾಗಿರುತ್ತಾನೆ. ಅವನು ಧನ ಈಯುವುದರಿಂದ ಮಾನಸಿಕ ಕಷ್ಟಕ್ಕೊಳಗಾಗುತ್ತಾನೆ. ತನ್ನ ಪೂರ್ವಕರ್ಮ ಫಲವಾಗಿ ಅವನು ಕ್ಲೇಶ ಭೋಗಿಸಬೇಕಾಗಿದ್ದರೆ ಮತ್ತು ಅದೇ ಕಾಲಕ್ಕೆ ಭಾಗ್ಯ ಫಲ ಹೊಂದಿದ ಸತ್ಪಾತ್ರಿಯೊಬ್ಬನು ಧನ ಸಂಪತ್ತು ಬೇಡುತ್ತಿದ್ದರೆ, ಆಗ ವಿಧಾತನು ಈಯದವನ ಕೈಯಿಂದ ಧನ ಸಂಪತ್ತನ್ನು ಈಯ ಹಚ್ಚುವನು. ಇನ್ನು ಒಬ್ಬನು ಈಯುವ ಸಾಮರ್ಥ್ಯವನ್ನೂ ಹೊಂದಿರುತ್ತಾನೆ ; ತಕ್ಕ ಮನಸ್ಸನ್ನೂ ಹೊಂದಿರುತ್ತಾನೆ. ಆದರೆ ಬೇಡುವವನು ಸತ್ಪಾತ್ರಿಯಲ್ಲ. ಸತ್ಪಾತ್ರರಿಗೆ ನೀಡಿದ ದಾನವಷ್ಟೇ ಧರ್ಮವೆನಿಸುತ್ತದೆ. ಇಂಥ ಪ್ರಸಂಗದಲ್ಲಿ ಈಯುವವನ ಕೈಯಲ್ಲಿ ವಿಧಾತನು ಈಯಗೊಡನು. ಹೀಗೆ ಜನರಲ್ಲಿಯ ಕೊಡುಕೊಳ್ಳುವಿಕೆಯನ್ನು ವಿಧಿ ವಿಧಾನಗಳ ಮೂಲಕ ಈಶ್ವರನು ಮಾಡಿಸುತ್ತಾನೆ. ಹೀಗಾಗಿ ಮಾನವನೇ ನೈಜ ಕರ್ತೃವಾಗಿದ್ದರೂ, ಈಶ್ವರನು ವಿಧಿ ನಿಯಾಮಕನಾಗಿ ಕರ್ತನೆನಿಸುತ್ತಾನೆ.

ಆ. ವಿತ್ತ ಓರ್ವಗಿತ್ತು, ವಿತರಣ ಗುಣವಿಹ
ಚಿತ್ತ ಓರ್ವಗಿತ್ತು ಚಿಂದಗೆಡಿಪ !
ಬ್ರಹ್ಮ ಚೇಷ್ಟೆಯೆಲ್ಲ ಬರಿಯ ಹಾಳು ಕೆಲಸ.
ವಿಶ್ವದಾಭಿರಾಮ ಕೇಳು ವೇಮ.

ಹಲ್ಲು ಇದ್ದವನಿಗೆ ಕಡಲೆ ಇಲ್ಲ ; ಕಡಲೆ ಇದ್ದವನಿಗೆ ಹಲ್ಲು ಇಲ್ಲ ಎಂಬ ನಾಣ್ಣುಡಿ ಕೇಳಿರಬೇಕಷ್ಟೇ. ಆ ರೀತಿ, ಒಬ್ಬನಲ್ಲಿ ವಿತ್ತ ಅಂದರೆ ಸಂಪತ್ತು ಇರುತ್ತದೆ. ಆದರೆ ಆ ಸಂಪತ್ತನ್ನು ಇಲ್ಲದವರೊಂದಿಗೆ ಹಂಚಿಕೊಂಡು ಬಾಳಬೇಕೆಂಬ ವಿತರಣ ಗುಣವುಳ್ಳ ಚಿತ್ತವಿರುವುದಿಲ್ಲ. ಹೀಗಾಗಿ ಸಮಾಜದಲ್ಲಿ ಸಂಪತ್ತಿನ ಹಂಚಿಕೆಯು ವಿಷಮವಾಗಿರುತ್ತದೆ. ಸಮಾಜದ ಸಾಂಪತ್ತಿಕ ವ್ಯವಸ್ಥೆಯು ಅಂದಗೆಡುತ್ತದೆ. ಇದು ಸಂಬಂಧಿಸಿದ ವ್ಯಕ್ತಿಗಳ ಪೂರ್ವಕರ್ಮ ಫಲವಾದರೂ ತೋರಿಕೆಗೆ ಹಾಳು ಕೆಲಸವೆನಿಸುತ್ತದೆ. ವಿಧಾತನಾದ ಬ್ರಹ್ಮನ ಚೇಷ್ಟೆಯೇನೋ ಎನಿಸುತ್ತದೆ.

ಆ. ಚಿಪ್ಪಿನಲ್ಲಿ ಬಿದ್ದ ಚಿಮುಕು ಮುತ್ತೆ ಆಯ್ತು.
ನೀರಿನಲ್ಲಿ ಚಿಮುಕು ನೀರೆ ಆಯ್ತು.

ಪ್ರಾಪ್ತಿ ಇರುವ ತಾಣ, ಫಲವೆಂತು ದೊರೆಯದು ?
ವಿಶ್ವದಾಭಿರಾಮ ಕೇಳು ವೇಮ.

ಸ್ವಾತಿ ಮಳೆಯ ಕಾಲದಲ್ಲಿ ಒಂದು ಜಾತಿಯ ಚಿಪ್ಪು ಮೀನು ತನ್ನ ಚಿಪ್ಪಿನ ಬಾಯಿ ತೆರೆದುಕೊಂಡು ಕುಳಿತುಕೊಂಡಿರುತ್ತದೆ. ಆಗ ಮಳೆಯ ಹನಿಗಳು ಅಲ್ಲೆಲ್ಲ ಉದುರುತ್ತವೆ. ಕೆಲವು ಹನಿಗಳು ಚಿಪ್ಪಿನಲ್ಲಿಯೂ ಬೀಳುತ್ತವೆ. ಉಳಿದವುಗಳು ಸಮುದ್ರದ ನೀರಿನಲ್ಲಿ ಬೀಳುತ್ತವೆ. ಚಿಪ್ಪಿನಲ್ಲಿ ಬಿದ್ದ ನೀರ ಹನಿ ಮಾತ್ರ ಆ ಮೀನಿನ ಜೀವಕ್ರಿಯೆಯಿಂದಾಗಿ ಮುತ್ತಾಗಿ ಮಾರ್ಪಡುತ್ತದೆ. ಆದರೆ ಅದೇ ಕಾಲಕ್ಕೆ ಸುತ್ತಲೂ ನೀರಿನಲ್ಲಿ ಬಿದ್ದ ಹನಿಗಳು ನೀರೇ ಆಗುತ್ತವೆ. ಅಂದ ಮೇಲೆ, ಪ್ರಾಪ್ತಿ ಇರುವ ತಾಣದಲ್ಲಿ ಫಲವು ದೊರೆಯದೇನು ? ಅದೇ ರೀತಿ, ಈಶ್ವರನ ಕೃಪಾಧಾರೆಯು ಎಲ್ಲೆಡೆಗೆ ಸುರಿಯುತ್ತಿದ್ದರೂ ಸಹ, ಸಾಧನೆಯಿಂದ ಪಕ್ವಗೊಂಡ ಮನದಲ್ಲಿ ಮಾತ್ರ ಕೃಪೆಯ ಮಿಂಚು ತೋರಬಹುದು.

ಆ. ಕಾಲ ವಶದಿ ಸಿಲುಕಿ, ಕರ್ಮ ಜೀವಿ ಗಣವು,
ಮತ್ತರಾಗಿ ಉಂಟು, ಮರೆತು ಬಿಟ್ಟು,
ಮತ್ತರಾದ ಜನರ ಮನಸು ಎಂಥ ಮನಸು ?
ವಿಶ್ವದಾಭಿರಾಮ ಕೇಳು ವೇಮ.

ಎರಡು ಘಟನೆಗಳ ನಡುವಿನ ಮಾನಸಿಕ ಅಳತೆಯೇ ಮಾನಸಿಕ ಕಾಲವಾಗಿದೆ. ಘಟಿಸಿದ ಘಟನೆಗಳ ನಡುವಿನ ಅವಧಿಗೆ ಭೂತ ಕಾಲವೆಂದೂ, ಘಟಿಸುತ್ತಿರುವ ಘಟನೆಗಳ ನಡುವಿನ ಅವಧಿಗೆ ವರ್ತಮಾನ ಕಾಲವೆಂದೂ, ಘಟಿಸಲಿರುವ ಘಟನೆಗಳ ಅವಧಿಗೆ ಭವಿಷ್ಯತ್ ಕಾಲವೆಂದೂ ಕರೆಯುತ್ತಾರೆ. ಅಳೆಯುವ ಮನಸ್ಸು ಇರುವಲ್ಲಿ ಕಾಲವು ಇದ್ದೇ ಇರುತ್ತದೆ. ಕಾಲಾತೀತವಾದ, ಸನಾತನ ಸತ್ಯವನ್ನು ಅರಿಯುವ ವರೆಗೂ ಕಾಲದ ಗೊಡವೆ ತಪ್ಪದು. ಎರಡು ಘಟನೆಗಳ ನಡುವಿನ ಅವಧಿಯ ಅಳತೆ ತಪ್ಪದು. ಘಟನೆಗಳು ಘಟಿಸುವುದೇ ಕರ್ಮ. ಕರ್ಮವಿರುವಲ್ಲಿ ಕರ್ತೃತ್ವ ಅಭಿಮಾನವಿರುತ್ತದೆ. ಅಹಂ ತತ್ತ್ವದ ಆಟವಿರುತ್ತದೆ. ಹೀಗಾಗಿ, ಮಾನವನು ಅಹಂಕಾರದಿಂದ ಮತ್ತನಾಗಿರುತ್ತಾನೆ. ಅವರಿಗೆ ಕಾಲಾತೀತ ತತ್ತ್ವದ ಅರಿವೇ ಇರುವುದಿಲ್ಲ. ಅಂದರೆ, ಕಾಲವಶದಲ್ಲಿ ಸಿಲುಕಿದ ಕರ್ಮ ಜೀವಗಣವು, ಕಾಲಾತೀತನಾದ ಈಶ್ವರನನ್ನು ಅರಿಯದೆ ಅಹಂಕಾರದಿಂದ ಮತ್ತರಾಗಿ ಇರುತ್ತಾರೆ. ಹೀಗೆ ಮತ್ತರಾದವರ ಮನಸ್ಸು ಎಂಥ ಮನಸ್ಸು ? ನಿಮ್ಮ ಮಟ್ಟದ್ದು ತಾನೇ ? ಆತ್ಮದ ಬೆಳಕನ್ನು ಕಾಣದ ಅಂಧಕಾರದಲ್ಲಿ ಮುಳುಗಿದ ಮನಸ್ಸು ತಾನೇ ?

ಆ. ಒಂದು ತೊಗಲು ತಂದು, ಒಪ್ಪ ಗೊಂಬೆ ಗೆಯ್ದು,
ಆಡಿದಂತೆ ಮಾಡಿ ಅತ್ತ ಒಗೆಯೆ,
ತನ್ನ ತಿರುಗಿಸುವನ ತಾನೇಕೆ ಕಾಣನೊ ?
ವಿಶ್ವದಾಭಿರಾಮ ಕೇಳು ವೇಮ.

ಮಕ್ಕಳು ತಮ್ಮ ಆಟದಲ್ಲಿ ಒಂದು ಗೊಂಬೆಯನ್ನು ಮಾಡುತ್ತಾರೆ. ಅದರೊಂದಿಗೆ ಆಟವಾಡುತ್ತಾರೆ. ಬಳಿಕ ಅತ್ತ ಒಗೆದು ಬಿಡುತ್ತಾರೆ. ಅದೇ ರೀತಿ ಚೇಡಿ ಮಣ್ಣು ತಂದು

ಗಣಪತಿಯನ್ನೋ, ಕಾಮನನ್ನೋ, ಕಾಳಿಯನ್ನೋ ಮಾಡಿ, ಪೂಜೆಯೆಂಬ ಆಟವಾಡಿ ಐದೋ, ಹತ್ತೋ ದಿನಗಳ ಬಳಿಕ ಜಲಾಶಯದಲ್ಲಿ ಒಗೆಯುತ್ತಾರೆ. ಅದೇ ರೀತಿ, ಸಗುಣ ಬ್ರಹ್ಮನು ಸೃಷ್ಟಿಯ ಲೀಲೆಯಲ್ಲಿ ಒಂದು ತೊಗಲು ತಂದು, ಅದಕ್ಕೆ ಪುರುಷನ ಇಲ್ಲವೆ ಸ್ತ್ರೀಯ ಆಕಾರ ಕೊಟ್ಟು, ಉಸಿರು ತುಂಬಿ, ಆಯುಷ್ಯ ಪರ್ಯಂತ ಆಟವಾಡಿದಂತೆ ಲೀಲೆ ನಡೆಸಿ, ಕೊನೆಗೆ ಆಯುಷ್ಯ ತುಂಬಿದ ಬಳಿಕ ಮರಣ ವಿಧಿಸಿ, ಅತ್ತ ಒಗೆಯುತ್ತಾನೆ. ಹೀಗೆ ಜನನ ಮರಣಗಳ ಸುತ್ತಾಟದಲ್ಲಿ, ಕಾಲ ಚಕ್ರದಲ್ಲಿ ತನ್ನನ್ನು ತಿರುಗಿಸುವ ಸಗುಣ ಬ್ರಹ್ಮ ಸತ್ಯವನ್ನು ಮಾನವನು ತಾನೇಕೆ ಕಾಣನೋ ? ಸುಡುವುದೇ ಕಟ್ಟಿಗೆಯ ಧರ್ಮವಾದಂತೆ, ಬೃಹದೇಷಣೆಯೇ ಮಾನವ ಧರ್ಮವಾಗಿದೆ. ತನ್ನ ಧರ್ಮ ಸಾಧನೆಗಾಗಿ ಪ್ರಯತ್ನಿಸಬೇಕು. ಇದರಲ್ಲಿ ಸತ್ತರೂ ಚಿಂತೆಯಿಲ್ಲ. 'स्व-धर्मे निधनं श्रेयः परधर्मो भयावहः'. ಅನ್ಯ ಪ್ರಾಣಿಗಳ ಧರ್ಮವು ಭಯ ತರುವುದಾಗಿದೆ.

ಕಂ. ತಲೆ ತಾಕಿದೊಡನೆ ತಿಳಿವರು,
ತಲೆ ಕೆಳಗೆ ಬೀಳಲಾಗ ತಿಳಿಯರು ಶಿವನಾ.
ಹಲ ವಿಧದ ಲೀಲೆ ಸಹಜವು.
ಸಲೆ ಶೈವವೆಂಬರು ; ಏನು ಕರ್ಮವೊ ! ವೇಮಾ.

ತಲೆಗೆ ಅಂದರೆ ಬುದ್ಧಿಗೆ ವೇಧಿಸಿದಾಗ ಜನರು, ನಿಯಂತ್ರಿಸುವ ವಿಧಾತನಾದ ಶಿವನಿರುವನೆಂಬುದನ್ನು ತಿಳಿಯುತ್ತಾರೆ. ಆದರೆ ತಲೆ ಬೀಳಲು ಅಂದರೆ ಮರಣ ಕಾಲದಲ್ಲಿ ಲಯಕರ್ತನಾದ ಶಿವನನ್ನು ತಿಳಿಯುತ್ತಿಲ್ಲ. ಬಾಳಿನಲ್ಲಿ ಬಂದು ಹೋಗುವ ಹಲವಾರು ಸುಖ ದುಃಖಗಳು ಶಿವನ ಸಹಜ ಲೀಲೆಗಳು ! ಎಂದು ತಿಳಿಯುತ್ತಾರೆ. ಇಂಥ ಗ್ರಹಿಕೆಯನ್ನೇ ಶೈವವೆನ್ನುವರು. ಆದರೆ, ತಲೆ ತಾಕುವ ಸಂಕಟಕರ ಘಟನೆಗಳಿಲ್ಲ ತನ್ನ ಪೂರ್ವ ಕರ್ಮದ ಫಲಗಳೇ ಸರಿ. ಅವುಗಳನ್ನು ವಿಧಿಸುವವನು ಶಿವನು. ತನ್ನ ಕರ್ಮಗಳ ಅಭುಕ್ತ ಸಂಸ್ಕಾರಗಳ ಫಲ ಭೋಗಕ್ಕಾಗಿಯೇ ಮರಣ ಘಟಿಸಿ ಪುನರ್ಜನ್ಮ ಬರುತ್ತದೆ. ಹಾಗಾಗಿ ಕರ್ಮಫಲ ಭೋಗವೇ ಮರಣ ಮತ್ತು ಮರುಜನ್ಮಗಳ ಹಿಂದಿನ ಶಿವನ ಉದ್ದೇಶವಾಗಿದೆ. ಜನನ, ಜೀವನ, ಮರಣಗಳೆಲ್ಲ ಶಿವನ ಸಹಜ ಲೀಲೆಗಳು. ಅವುಗಳನ್ನು ಅವನು ವಿಧಿಸುವನಾದರೂ, ಅವುಗಳಲ್ಲಿ ಆಸಕ್ತನಾಗಿರುವುದಿಲ್ಲ. ಅದೆಲ್ಲ ಅವನಿಗೆ ಕೇವಲ ಆಟದತೆ, ಲೀಲೆಯಂತೆ ! ಹೀಗೆ ಸರ್ವವೂ ಶಿವಮಯವಾಗಿದೆ, ಎಂದು ಅರಿಯುವುದೇ ಶೈವವು. ಆದರೆ ಜನರ ತಿಳಿವಳಿಕೆ ಹೀಗಿರದು. ಇದನ್ನೆಲ್ಲ ನೋಡಿದರೆ, ಅವರ ಅಜ್ಞಾನಕ್ಕೆ ಯಾವ ಕರ್ಮವು ಕಾರಣವೋ ? ಎಂದು ಕನಿಕರವೆನಿಸುತ್ತದೆ.

ಆ. ತವುಡು ತರಲು ಹೋಗೆ, ದಂಟು ಬುಟ್ಟೆಯೊಳಗೆ,
ಶ್ವಾನ ಕುಳಿತುಕೊಂಡ ಸಾಮ್ಯವಾಯ್ತು.
ವೈಶ್ಯವರನ ಸೊತ್ತು ಮಸುಧೆ ನೀಚಗಾಯ್ತು.
ವಿಶ್ವದಾಭಿರಾಮ ಕೇಳು ವೇಮ.

ವೈಶ್ಯರು ಅಂದರೆ ವ್ಯಾಪಾರಿ ಕುಲದವರು ಹೆಚ್ಚಾಗಿ ಲೋಭಿಗಳೇ ಆಗಿರುತ್ತಾರೆ. ಅವರು ಸಿರಿ ಸಂಪತ್ತನ್ನು ಮೋಹಿಸಿ, ಸಂಗ್ರಹಿಸುತ್ತಾರೆ. ಲೋಭದಿಂದ, ಅದರ ವಿನಿಯೋಗವನ್ನು

ತಮಗಾಗಲಿ, ಇಲ್ಲವೆ ಇತರರಿಗಾಗಲಿ ಮಾಡುವುದಿಲ್ಲ. ಭೂಮಿಯಲ್ಲಿ ಹುಗಿದಿಡುತ್ತಾರೆ. ಅದನ್ನು ಕಳ್ಳಕಾಕರು ಅಪಹರಿಸುತ್ತಾರೆ. ದರೋಡೆ ಖೋರರು ದೋಚುತ್ತಾರೆ. ಹೀಗೆ ವೈಶ್ಯನ ಸೊತ್ತು ವಸುಧೆಯ ನೀಚರ ಪಾಲಾಗುತ್ತದೆ. ವೈಶ್ಯನು ಧನಕನಕ ಹೊಂದಿದ್ದರೂ ತನ್ನ ಪೂರ್ವ ಕರ್ಮ ಸಂಸ್ಕಾರಗಳಿಂದಾಗಿ ಅದರ ವಿನಿಯೋಗದಿಂದ ಪಡೆಯಬಹುದಾದ ಸುಖಭೋಗಕ್ಕೆ ಎರವಾಗುತ್ತಾನೆ. ಇತ್ತ ನೀಚನು ಏನಕೇನ ಪ್ರಕಾರೇಣ ಪಡೆದ ಸೊತ್ತನ್ನು ತನ್ನ ಪೂರ್ವ ಸಂಸ್ಕಾರಗಳಿಂದಾಗಿ ಕೇಡು ಕರ್ಮ ಮಾಡುವಲ್ಲಿಯೇ ವಿನಿಯೋಗಿಸುತ್ತಾನೆ. ಇದು ಹೇಗಾಗುವುದೆಂದರೆ, ತವುಡು ತರಲು ಹೋಗಿ ತವುಡು ತುಂಬಿಕೊಂಡು ಬರುವಾಗ, ನಾಯಿಯೊಂದು, ಆ ಬುಟ್ಟಿಯಲ್ಲಿ ಕುಳಿತು ತವುಡನ್ನು ತಿಂದು ಹಾಕಿದಂತೆ ಎಲ್ಲವೂ ನಾಯಿ ಪಾಲಾಗುತ್ತದೆ. ವೈಶ್ಯನ ಸೊತ್ತಿನ ಗತಿಯೂ ಈ ರೀತಿಯಾಗುತ್ತದೆ.

ಬ್ರಹ್ಮನ ಲೀಲೆ :

ಆ. ಗಂಧ ಕಡ್ಡಿಗೆಂತು ಕೂಡಿದುದು ವಾಸನೆ ?
ಕನಕವು ತನಗೇನು ಕೆಡುಕು ಗೆಯ್ತು ?
ಬ್ರಹ್ಮ ಚೇಷ್ಟೆಯೆಲ್ಲ ಬರಿಯ ಹಾಳು ಕೆಲಸ.
ವಿಶ್ವದಾಭಿರಾಮ ಕೇಳು ವೇಮ.

ಜನೋಪಯೋಗಿ ದೃಷ್ಟಿಯಿಂದ ನೋಡಿದರೆ, ಬ್ರಹ್ಮನ ಸೃಷ್ಟಿಧಾರೆಯಲ್ಲಿ ಕೆಲವು ವೈಚಿತ್ರ್ಯಗಳು ಕಂಡು ಬರುತ್ತವೆ. ಗಂಧದ ಕಡ್ಡಿಯನ್ನು ಮನುಷ್ಯನೇನೂ ತನ್ನ ಬಳಿ ಸದಾ ಇಟ್ಟುಕೊಂಡಿರುವುದಿಲ್ಲ. ಆದರೆ ಮಾನವನು ಬಹುವಾಗಿ ಇಷ್ಟಪಡುವ ಸುಗಂಧ ವಾಸನೆ ಅದಕ್ಕಿದೆ. ಅದೇ ಮನುಷ್ಯನು ತನ್ನೊಂದಿಗೆ ಆಭರಣವಾಗಿ ಧರಿಸುವ ಕನಕದಲ್ಲಿ ಆ ವಾಸನೆ ಇಲ್ಲ. ಅಂಥ ಮನ ಮೆಚ್ಚುವ ವಾಸನೆ ಪಡೆಯದಿರಲು ಕನಕವೇನು ಕೆಡುಕು ಮಾಡಿತೇ ? ಇದೆಲ್ಲ ಸೃಷ್ಟಿಕರ್ತನ ಲೀಲೆಯೆಂದೇ ಕಾಣುತ್ತದೆ. ಲೋಗರ ದೃಷ್ಟಿಯಲ್ಲಿ ಇದು ಹಾಳು ಕೆಲಸವೇ ಸರಿ.

ಆ. ಪುನುಗು ಬೆಕ್ಕಿಗೇಕೆ ಹುಟ್ಟಿಸಿದ ವಾಸನೆ ?
ಅವನ ಮಹಿಮೆ ಎಷ್ಟು ಅವನಿಯಲ್ಲಿ !
ಬ್ರಹ್ಮ ಚೇಷ್ಟೆಯೆಲ್ಲ ಹಾಳು ಕಾರ್ಯವಷ್ಟೆ.
ವಿಶ್ವದಾಭಿರಾಮ ಕೇಳು ವೇಮ.

ಬೆಕ್ಕಿನ ಜಾತಿಯ ಒಂದು ಪ್ರಾಣಿಯಿಂದ, ಹೊರಡುವ, ಅದರ ಗುದದ್ವಾರದಲ್ಲಿಯ ಕೋಶದಲ್ಲಿ ಸ್ಫುರಿಸುವ ಕಂದು ಬಣ್ಣದ, ಜೇನುತುಪ್ಪದಂಥ ಸುಗಂಧ ದ್ರವ್ಯಕ್ಕೆ ಪುನುಗು ಎನ್ನುತ್ತಾರೆ. ಮಾಂಸಾಹಾರಿಯಾದ ಇಂಥ ಪ್ರಾಣಿಗೆ ಪುನುಗು ಬೆಕ್ಕು ಎಂದು ಕರೆಯುತ್ತಾರೆ. ಕಾಡಿನಲ್ಲಿ ಅಲೆಯುವ ಈ ಪುನುಗು ಬೆಕ್ಕಿಗೆ ಇಂಥ ಸುವಾಸನೆಯನ್ನು ಸೃಷ್ಟಿಕರ್ತನು ಏಕೆ ಹುಟ್ಟಿಸಿದನು ? ಅಂಥ ಸುಗಂಧಿತ ದ್ರವ್ಯವನ್ನು ಸುರಿಸುವ ಗ್ರಂಥಿಯನ್ನು ಅದರ ಶರೀರದಲ್ಲಿ ಏಕೆ ಸೃಷ್ಟಿಸಿದನು ? ಸೃಷ್ಟಿ ಕರ್ತನಾದ ಬ್ರಹ್ಮನ ಮಹಿಮೆಯು ಅವನಿಯಲ್ಲಿ ಎಷ್ಟೊಂದಿದೆ ! ಮಾನವನಿಗೆ ಇಷ್ಟವಾದ ಸುಗಂಧದ್ರವ್ಯ ತಯ್ಯಾರಿಕೆಯಲ್ಲಿ ಬಳಸುವ ಈ ಪುನುಗು ಅಡವಿಯಲ್ಲಿ ಅಲೆಯುವ ಪ್ರಾಣಿಯಲ್ಲಿದೆ. ಇದೆಲ್ಲ ಬ್ರಹ್ಮನ ಚೇಷ್ಟೆಯಂತೆ ತೋರುತ್ತದೆ. ಈ ದ್ರವ್ಯವನ್ನು ಪಡೆಯಲು ಬಹಳ ಶ್ರಮ

ಪಡಬೇಕಾದ ಮಾನವನ ದೃಷ್ಟಿಯಲ್ಲಿ ಬ್ರಹ್ಮನ ಇಂಥ ಚೇಷ್ಟೆಯೆಲ್ಲ ಹಾಳು ಕೆಲಸವೆನಿಸುತ್ತದೆ.

ಮೂಢನಂಬುಗೆ :

ಆ. ವಿಪ್ರ ವರರು ಮುಹೂರ್ತ ವಿಭವವ ನಂಬುವರು.
ದೊಡ್ಡ ಜನರ ಸೇರ್ಸಿ ಮದುವೆ ಮಾಡಿ,
ಬಳಿಕ ಮುಂಡೆಯಾಗೆ ಮುಹೂರ್ತ ನಿಜವೆಂತು ?
ವಿಶ್ವದಾಭಿರಾಮ ಕೇಳು ವೇಮ.

ಲಗ್ನವಾಗುವ ವಧುವಿನ ಹೆಸರಿನ ಹಿಂದೆ ಕುಂಕುಮ ಸೌಭಾಗ್ಯವತಿ, ಕಾಂಕ್ಷಾಯಣಿ ಎಂಬ ಉಪಾಧಿ ಹಚ್ಚುತ್ತಾರೆ. ಭಾರತೀಯ ಸಂಸ್ಕೃತಿಯಲ್ಲಿ ಕುಂಕುಮವು ಗಂಡನ ಸಂಕೇತ. ಕುಂಕುಮ ಸೌಭಾಗ್ಯವೆಂದರೆ ಪತಿಯನ್ನು ಹೊಂದಿರುವ ಒಳ್ಳೇ ಭಾಗ್ಯ. ಈ ಭಾಗ್ಯವನ್ನು ಆಕಾಂಕ್ಷಿಸುವವಳು ಕಾಂಕ್ಷಾಯಿಣಿ. ಅಂದರೆ ತಾನು ಸಾಯುವ ವರೆಗೆ ತನ್ನ ಗಂಡನು ಸಾಯಬಾರದೆಂಬ ಕೋರಿಕೆಯುಳ್ಳವಳು. ಹೀಗಾಗಬೇಕಾದರೆ ಲಗ್ನವು ಮುಹೂರ್ತದಲ್ಲಿ ನಡೆಯಬೇಕೆಂದು ಮುಹೂರ್ತಕರು ನಿಶ್ಚಯಿಸುತ್ತಾರೆ. ವೇದ ಪಾಠ ಮಾಡಿದ ಶ್ರೇಷ್ಠ ಜನರು ಅಂದರೆ ವಿಪ್ರವರರು, ಲಗ್ನಕ್ಕಾಗಿ ಮುಹೂರ್ತದ ಶ್ರೇಷ್ಠತೆಯನ್ನು ನಂಬುತ್ತಾರೆ. ಮೇಲಾಗಿ ದೈವದ ಹರಕೆಯೂ ಇರಲೆಂದು ದೊಡ್ಡ ಜನರನ್ನು ಸೇರಿಸಿ ಮದುವೆ ಸಮಾರಂಭ ನೆರವೇರಿಸುತ್ತಾರೆ. ಕೊನೆಗೆ ಆ ಹೆಣ್ಣುಮಗಳು ಗಂಡನನ್ನು ಕಳೆದುಕೊಂಡು ವಿಧವೆಯಾಗುತ್ತಾಳೆ. ಆಗ ಮುಹೂರ್ತ ಪೂರ್ವದ ವಿಭವವು ನಿಜವೆಂತಾಯಿತು? ಸಧವೆಯಾಗಿ ಬಾಳುವುದಾಗಲಿ, ವಿಧವೆಯಾಗುವುದಾಗಲಿ ಅವರ ಕರ್ಮ ಸಂಸ್ಕಾರ ಮಾತ್ರ. ಮುಹೂರ್ತ ನಿರ್ಧಾರದಿಂದ ಅದನ್ನು ಬದಲಿಸಲಾಗದು.

ಆ. ಶುಭದ ಶಕುನ ನಂಬಿ, ಶುಭ ಲಗ್ನವೆಂಬರು.
ಒಬ್ಬರವರೊಳಿಲ್ಲ ; ಅಬ್ಬ ಜಗದಿ !
ಹಬ್ಬ ಹರುಷ ಜಗದಿ, ಶಕುನದಲ್ಲಿಹವೇ ?
ವಿಶ್ವದಾಭಿರಾಮ ಕೇಳು ವೇಮ.

ಯಾವ ಪಕ್ಷಿಯ ಹಾರುವಿಕೆ ಇಲ್ಲವೆ ಕೂಗುವಿಕೆಯಿಂದ ಶುಭಾಶುಭಗಳನ್ನು ತಿಳಿಯುವರೋ, ಆ ಪಕ್ಷಿಗೆ ಶಕುನ ಪಕ್ಷಿ ಎನ್ನುತ್ತಾರೆ. ಶುಭದ ಶಕುನ ನಂಬಿ ಶುಭ ಲಗ್ನವೆನ್ನುತ್ತಾರೆ. ಆದರೆ ಅಂಥ ಶುಭ ಲಗ್ನದಲ್ಲಿ ಮದುವೆಯಾದ ಯಾರೂ ಬದುಕಿ ಉಳಿದಿಲ್ಲ. ಸೂರ್ಯ ಚಂದ್ರರಿರುವ ಪರ್ಯಂತ ಆಯುಷ್ಮಂತರಾಗಿರಿ ; ಎಂದು ಹರಸಿದರೂ ಅವರಾರೂ ಬದುಕಿ ಉಳಿಯದಿರುವುದು ಆಶ್ಚರ್ಯವಲ್ಲವೇ ? ಹಬ್ಬ ಹರುಷಗಳೇನು ಶಕುನದಲ್ಲಿ ಇರುವವೇನು? ತನ್ನ ಸುಖ ಸಂತೋಷಗಳು ತನ್ನ ಪೂರ್ವಕರ್ಮ ಸಂಸ್ಕಾರಗಳೇ ಹೊರತು ಶಕುನ ಮುಹೂರ್ತಗಳ ಫಲವಲ್ಲ.

ಆ. ತನ್ನ ಮನಸಿನಿಂದ ತರ್ಕಿಸಿ ಜ್ಯೋತಿಷ,
ಎಷ್ಟು ಗೆಯ್ದೆನೆಂದು ಯೋಚಿಸುವುದು ;
ತನ್ನ ಅದೃಷ್ಟವನು ದೈವ ತಿಳಿಯದೇನು ?
ವಿಶ್ವದಾಭಿರಾಮ ಕೇಳು ವೇಮ.

ಸೂರ್ಯ ಮೊದಲಾದ ಗ್ರಹಗಳ ಗತಿಯನ್ನು ತನ್ನ ಮನಸ್ಸಿನಿಂದ ತರ್ಕಿಸಿ ತಾನು ಎಷ್ಟು ಗೆಯ್ದೆನೆಂದು ಯೋಚಿಸುತ್ತಾನೆ. ಯಾವ ಯಾವ ಗ್ರಹಗಳು ಯಾವ ಯಾವ ರಾಶಿಗಳಲ್ಲಿವೆ? ಎಂದು ಜನ್ಮ ಕುಂಡಲಿ ಬರೆಯುತ್ತಾನೆ. ಮತ್ತು ಅವುಗಳ ಸ್ಥಾನಬಲದಿಂದ ತನಗೆ ಅದೃಷ್ಟವಾದ ಫಲಗಳನ್ನು ಕುರಿತು ತರ್ಕಿಸುತ್ತಾನೆ. ಈ ದ್ರಾವಿಡ ಪ್ರಾಣಾಯಾಮವೆಲ್ಲ ಏಕೆ ಬೇಕು ? ತನಗೆ ಅದೃಷ್ಟವಾಗಿದ್ದರೂ ತನ್ನ ಪೂರ್ವ ಸಂಸ್ಕಾರಗಳನ್ನು ದೈವವು ತಿಳಿದೇ ತಿಳಿಯುತ್ತದೆ. ಮತ್ತು ಫಲಗಳನ್ನೂ ವಿಧಿಸುತ್ತದೆ.

ಆ. ಹಲ್ಲಿ ನುಡಿಯ ಕೇಳಿ, ಪ್ರಜರು ತಮ್ಮ ಕಾರ್ಯ
ಸಫಲವಾಗುವುದೆಂದು ಸಂತಸಿಪರು.
ಘಟಿಸದಿರಲು ಕಾರ್ಯ ; ಕರ್ಮ ತಮ್ಮದೆನುವರು.
ವಿಶ್ವದಾಭಿರಾಮ ಕೇಳು ವೇಮ.

ಹಕ್ಕಿಯ ಶಕುನದಂತೆ ಹಲ್ಲಿಯ ಶಕುನವನ್ನೂ ಜನರು ನಂಬುತ್ತಾರೆ. ಹಲ್ಲಿಯೊಂದು ನುಡಿದಾಗ ಅದು ಶುಭಗಳಿಗೆಯೆಂದು ಬಗೆದು ಆಗ ತಾವು ಯೋಚಿಸುವ ಕಾರ್ಯವು ಸಫಲವಾಗುವುದೆಂದು ಸಂತೋಷಪಡುತ್ತಾರೆ. ಆದರೆ, ಆ ಕಾರ್ಯವು ಸಫಲವಾಗದಿದ್ದರೆ, ಅಯ್ಯೋ ನಮ್ಮ ಕರ್ಮ ! ಎಂದು ಕರುಬುತ್ತಾರೆ. ತಮ್ಮ ಕಾರ್ಯ ಸಫಲವಾಗುವುದು ಇಲ್ಲವೆ ವಿಫಲವಾಗುವುದು, ತಾವು ಪೂರ್ವ ಕರ್ಮದ ಪ್ರತಿಕರ್ಮ ಮೂಲಕ ಭೋಗಿಸಬೇಕಾದ ಸುಖ ದುಃಖಗಳ ಫಲವನ್ನು ಅವಲಂಬಿಸಿದೆ, ಎಂದು ತಿಳಿದು, ಆ ಫಲದ ನಿರ್ಧಾರವು ವಿಧಿನಿಯಮವನ್ನು ಅವಲಂಬಿಸಿದೆ ಎಂದು ಅರಿಯಬೇಕು.

ಆ.. ಹಾಲಹಕ್ಕಿ ಶಕುನ ಫಲವೀವುದೆಂಬರು.
ಹಾಲಹಕ್ಕಿ ಎಷ್ಟು ಫಲವೀವುದು ?
ತನ್ನ ಮೇಲು ಕೀಳು ತನ್ನಿಂದಲಪ್ಪವು.
ವಿಶ್ವದಾಭಿರಾಮ ಕೇಳು ವೇಮ.

ಹಾಲವಕ್ಕಿ ಇಲ್ಲವೆ ಹಾಲಹಕ್ಕಿಯು ಒಂದು ಜಾತಿಯ ಪಕ್ಷಿ. ಇದನ್ನು ಉಳಿಗ ಹಕ್ಕಿ ಎಂದೂ ಕರೆಯುತ್ತಾರೆ. ಇದೂ ಒಂದು ಶಕುನದ ಹಕ್ಕಿ ಎಂದೇ ಜನರ ನಂಬುಗೆ. ಈ ಹಕ್ಕಿಯ ಉಲಿಯುವಿಕೆಯು ಶುಭಾ ಶುಭಗಳ ಫಲ ಸೂಚಕವೆಂದು ಜನರ ನಂಬುಗೆ. ಇಂಥ ಹಕ್ಕಿಯು ಎಷ್ಟು ಫಲ ನೀಡೀತು ? ನಿಜವೆಂದರೆ ತನ್ನ ಮೇಲು ಕೀಳು ತನ್ನಿಂದಲೇ ಆಗುತ್ತವೆ. ತನ್ನ ಪೂರ್ವ ಕರ್ಮವು ಪುಣ್ಯಪ್ರದವಾಗಿದ್ದರೆ ಅದರ ಫಲವು ತನ್ನ ಮೇಲಿಗೆ ಕಾರಣವಾಗುತ್ತದೆ. ಅದೇ ರೀತಿ ತನ್ನ ಪೂರ್ವ ಕರ್ಮವು ಪಾಪಪ್ರದವಿದ್ದರೆ ಅದರ ಫಲವು ತನ್ನ ಕೀಳಿಗೆ ಕಾರಣವಾಗುವುದು. ಇದನ್ನು ತಿಳಿಯುವುದನ್ನು ಬಿಟ್ಟು, ಹಾಲ ಹಕ್ಕಿಯ ಶಕುನ ನಂಬುವುದು ಮೂಢತನವಷ್ಟೇ.

ಆ. ಧರ್ಮ ಸತ್ಯಗಳನು ತಪ್ಪದೆ ಮಾಡದಿರಲು,
ಕರ್ಮ ಜೀವಿ ಮೇಲು ಕಾಣಲಾರ.
ನಿರ್ಮಲ ಹೃದಯದವ ನಿನ್ನ ರೂಪದಿರುವ.
ವಿಶ್ವದಾಭಿರಾಮ ಕೇಳು ವೇಮ.

ರಾಜಸ ಗುಣವು ಪ್ರಬಲವಾಗಿರುವ ವರೆಗೆ ನಾನು ಮಾಡಬೇಕು. ನಾನು ಪಡೆಯಬೇಕು ಎಂಬ ಕರ್ತೃತ್ವಾಭಿಮಾನವಿರುತ್ತದೆ. ಇಂಥ ಸ್ವಭಾವವಿರುವವನು ಪುಣ್ಯವನ್ನಾದರೂ ಮಾಡುತ್ತಾನೆ. ಇಲ್ಲವೆ ಪಾಪ ಕರ್ಮಕ್ಕಾದರೂ ಇಳಿಯುತ್ತಾನೆ. ಇಂಥ ಕರ್ಮಜೀವಿಯು ಬೃಹದೇಷಣೆಯಾದ ಧರ್ಮದಲ್ಲಿ ತೊಡಗಬೇಕು. ಮತ್ತು ಸತ್ಯಪನಾಗಿರಬೇಕು. ಸತ್ಯವೆಂದರೇನು ? 'ಪರಹಿತಾರ್ಥಂ ಯಥಾರ್ಥಂ ಸತ್ಯಂ'. ಅಂದರೆ ಪರಹಿತವೇ ಯಾವುದರ ಪ್ರಯೋಜನವಾಗಿದೆಯೋ, ಅದುವೇ ಸತ್ಯವಾಗಿದೆ. ಇಂಥ ಧರ್ಮ ಮತ್ತು ಸತ್ಯಗಳನ್ನು ಮಾಡದಿದ್ದರೆ ಕರ್ಮಜೀವಿಯು ಮೇಲು ಕಾಣಲಾರನು. ರಾಜಸದಿಂದ ಮೇಲೇರಿ ಸಾತ್ವಿಕನಾಗಲಾರನು. ಅನಾಸಕ್ತ ಕರ್ಮಯೋಗ-ಕ್ಕಿಳಿಯಲಾರನು. ಯಾವ ಕರ್ಮಯೋಗಿಯ ಮನಸ್ಸು ವಿಕ್ಷೇಪ ಮತ್ತು ಆವರಣೇ ಮಲಗಳಿಂದ ಮುಕ್ತವಾಗಿ ರ್ಮಲವಾಗಿರುವುದೋ, ಅಂಥ ನಿರ್ಮಲ ಹೃದಯದವನು ವೇಮನ ಯೋಗಿಯ ರೂಪದಲ್ಲಿ ಇರುತ್ತಾನೆ.

ಸುಖಿ ಸುಖದಿಂದ ನಾನು ಗುಣನಾಗಿರುವಾಗ,
ನನ್ನ ಮದುವೆಯಾಗೆ ನಯದಿ ಹೇಳಿ,
ಅದನೆ ಕೂಡಿಸಿತು ವಿಧಿಯು ಅದನೇನೆವುದು ?
ವಿಶ್ವದಾಭಿರಾಮ ಕೇಳು ವೇಮ.

'ಸುಖಂ ಅನಂತಂ ಆನಂದಂ'. ಅನಂತವಾದ ಸುಖವೇ ಆನಂದವಾಗಿದೆ. ಇಂಥ ಸುಖದಲ್ಲಿಯ ಸುಖವೆನಿಸುವ ಆನಂದಮಯನಾಗಿರುವಾಗ ಪುರುಷನು ಪ್ರಕೃತಿಯ ಜೊತೆಗಿದ್ದರೂ ಪ್ರಕೃತಿಯ ಬಂಧನವು ಶಿಥಿಲವಾಗಿರುತ್ತದೆ. ಹಾಗೆ ಹೇಳುವುದಾದರೆ ಪುರುಷನು ಸಗುಣನಾಗಿದ್ದರೂ ಗುಣಾಧೀಶನಾಗಿರುತ್ತಾನೆ. ಇದನ್ನು ಸವಿಕಲ್ಪ ಸಮಾಧಿ ಎನ್ನಬಹುದು. ಮುಂದೆ ಪುರುಷ ಪ್ರಕೃತಿಯರ ಸಂಬಂಧವು ಲೀಲೆಯಂತೆ ನಯವಾಗಿ ಇರುತ್ತದೆ. ನಂತರ ಪುರುಷನು ಸ್ವೇಚ್ಛೆಯಿಂದ ಪ್ರಕೃತಿಗೆ ಒಲಿದು ಪ್ರಕೃತಿಯನ್ನು ಮದುವೆಯಾಗುತ್ತಾನೆ. ಆಗ ಸಂಬಂಧವು ಕ್ರಮೇಣ ಗಾಢವಾಗುತ್ತದೆ. ಕೊನೆಗೆ ಪುರುಷನ ಸ್ವಾತಂತ್ರ್ಯವು ದತ್ತವಾದ ಮಿತಿಗೇ ಮರ್ಯಾದಿತವಾಗುತ್ತದೆ. ಎಲ್ಲವೂ ವಿಧಿ ನಿಯಮದಂತೆ ನಡೆಯುತ್ತದೆ. ವಿಧಿ ಸಂಕಲ್ಪಕ್ಕೆ ಮೇಳವಿಸುವ ಸ್ವಂತ ಸಂಕಲ್ಪ ಶಕ್ತಿಯು ಹ್ರಾಸವಾಗಿ, ಎಲ್ಲದಕ್ಕೂ ಅಯ್ಯೋ ವಿಧಿಯೇ ಎನ್ನುವಂತಾಗತ್ತದೆ.

ಇದನ್ನು ತೀರ ಲೌಕಿಕವಾಗಿ ಅರ್ಥೈಸುವುದಾದರೆ, ಯಾರ ಹಂಗಿಲ್ಲದೆ, ಸುಖಲೋಲುಪನಾಗಿದ್ದರೂ ಒಳ್ಳೆ ಗುಣಶೀಲನಾಗಿರುವ ಯುವಕನಿಗೆ ದೈವದವರು ಒಳ್ಳೇ ನಯವಾಗಿ ತಿಳಿ ಹೇಳಿ, ಒಂದು ಹೆಣ್ಣಿನೊಡನೆ ಮದುವೆ ಮಾಡುತ್ತಾರೆ. ಹೀಗೆ ವಿಧಿಯು ಸಂಸಾರ ಬಂಧನವನ್ನು ಉಂಟು ಮಾಡಿ ಮಡದಿಯನ್ನು ಬಾಳಿನಲ್ಲಿ ಕೂಡಿಸುತ್ತದೆ. ಇದು ಪೂರ್ವ ಕರ್ಮದ ಫಲವೇ ಸರಿ. ಇಂಥ ವಿಧಿಯ ಆಟಕ್ಕೆ ಏನೆನ್ನುವುದು ?

ವಿಧಿಯ ದೃಷ್ಟಾಂತಗಳು :

ಗಯನಂಬರೀಷ, ಘನ ಶಶಿಬಿಂದುವು,
ರುಚಿಕನು ಪೃಥುವು, ಮರುದ್ವತನು
ಭರತ, ಸುಹೋತ್ರನು ಮೆರೆದ ಶ್ರೀರಾಮ ರಾಯ
ಆ ದಿಲೀಪ, ಸಗರರು ಜಗದಿ ಮತ್ತೆ

ಭಾರ್ಗವನು, ಯಯಾತಿ, ಮೆರೆದ ಭಗೀರಥ,
ಸಲೆ ಶಿಬಿ, ಮಾಂಧಾತೃ ಎನುವರೊಪ್ಪ
ಇಂಥ ಮಹಾಧಿಪತಿಗಳೇಳ್ವರು, ಬೆಂಬತ್ತಿಹರು.
ಹದಿನಾರ್ವಧಿಪತಿಗಳು ಪ್ರಬಲರಿಹದಿ.

ತೇಟ ಇಂಥ ನೃಪವರ್ಯರೆಷ್ಟೊ ಜನ ಸತ್ತು ಹೋದರು.
ನೋಡು ! ನೋಡು ! ಮಾಯೆ. ಚೋದ್ಯವಲ್ತೆ ?
ವಿಶ್ವದಲ್ಲಿ ಸರ್ವವು ಅಶಾಶ್ವತವಲ
ತಿಳಿಸಿದರೂ ಕರ್ಮಗಳ ಕಾಣರಲ್ಲ ವೇಮ !

ಮರ್ತ್ಯ ಲೋಕದಲ್ಲಿ ಹುಟ್ಟಿದವರೆಲ್ಲರೂ ಮರಣಾಧೀನರೇ. 'ಜಾತಸ್ಯ ಹಿ ಮರಣಂ ಧ್ರುವಂ'. ಹುಟ್ಟಿದವನಿಗೆ ಮರಣವು ನಿಶ್ಚಿತ. ಭರತ ಖಂಡದಲ್ಲಿ ಆಳಿ, ಪ್ರಸಿದ್ಧರಾದ ಹದಿನಾರು ಚಕ್ರವರ್ತಿಗಳು ತಮ್ಮ ಆಯುಷ್ಯ ತೀರಿದೊಡನೆ ಸತ್ತು ಹೋಗಿದ್ದಾರೆ. ಹುಟ್ಟು ಸಾವು ಮಾಯೆಯಲ್ಲವೇ ? ಯಾವುದೂ ಸ್ಥಿರವಾಗಿ ಇರುವುದಿಲ್ಲ. ಇರುವುದು ಎಂದರೆ ಇದ್ದು ಇಲ್ಲವಾಗುವುದು. ವಿಶ್ವದಲ್ಲಿ ಎಲ್ಲವೂ ಅಶಾಶ್ವತವಾಗಿದೆ. ಪೂರ್ವ ಕರ್ಮದ ಫಲ ಭೋಗಿಸಲು ಮಾತ್ರ ಮರು ಜನ್ಮ ಬರುತ್ತದೆ. ಅದರ ಅವಧಿಯೂ ಪೂರ್ವನಿಗದಿತವಿರುತ್ತದೆ. ಇದು ಕರ್ಮಗಳ ಗತಿ. ಇದನ್ನು ಎಷ್ಟೊಂದು ತಿಳಿಸಿದರೂ, ಜನರು ತಿಳಿಯರಲ್ಲ !.

ಈ ಹದಿನಾರು ಅಧಿಪತಿಗಳೆಂದರೆ 1) ಗಯ 2) ಅಂಬರೀಷ 3) ಶಶಿಬಿಂದು 4) ರುಚೀಕ 5) ಪೃಥು 6) ಮರುದ್ವಜ 7) ಭರತ 8) ಸಹೋತ್ರ 9) ಶ್ರೀರಾಮ 10) ದಿಲೀಪ 11) ಸಗರ 12) ಭಾರ್ಗವ 13) ಯಯಾತಿ 14) ಭಗೀರಥ 15) ಶಿಬಿ 16) ಮಾಂಧಾತೃ. ಈ ಹದಿನಾರು ಅಧಿಪತಿಗಳ ಸಂಕ್ಷಿಪ್ತ ಚರಿತ್ರೆಯನ್ನು ಅರಿಯೋಣ.

ಗಯ :

ಅಮೂರ್ತ ರಯಸನ ಮಗನೇ ಗಯನು. ಇವನು ಒಂದು ನೂರು ವರುಷ ಪರಿಯಂತ ಅವಿಚ್ಛಿನ್ನವಾಗಿ ಅನೇಕ ಯಜ್ಞಗಳನ್ನು ಮಾಡಿದನು. ಅಷ್ಟು ವರ್ಷಗಳಿಂದ ಹವಿಸ್ಸಿನಿಂದ ತೃಪ್ತನಾದ ಅಗ್ನಿಯು, ಪ್ರಸನ್ನನಾಗಿ ಅವನಿಗೆ ವರ ನೀಡಲು ಸಿದ್ಧನಾದನು. ಆಗ ಗಯಾ ರಾಜನು, 'ಅಗ್ನಿದೇವಾ! ತಪಸ್ಸು, ಬ್ರಹ್ಮಚರ್ಯೆ, ವ್ರತಾನುಷ್ಠಾನ, ಗುರುಪ್ರಸಾದಗಳಿಂದ ನನಗೆ ಸಕಲ ವೇದಗಳು ವೇದ್ಯವಾಗಲಿ. ಅಹಿಂಸೆ, ಧರ್ಮ ರೀತಿಗಳಿಂದ ಗಳಿಸಿದ ನನ್ನ ಸಂಪತ್ತು ಸದಾ ಅಕ್ಷಯವಾಗಲಿ. ಕ್ಷತ್ರಿಯ ಕನ್ನೆಯರು ನನಗೆ ಪತ್ನಿಯರಾಗಿ ಮಹಾಪತಿವ್ರತೆಯರಾಗಲಿ. ದಾನ ಧರ್ಮಾದಿಗಳು ನನ್ನಿಂದ ನಿರ್ವಿಘ್ನವಾಗಿ ಸದಾ ನಡೆಯುತ್ತಿರಲಿ' ಎಂದನು. ಅದಕ್ಕೆ ಅಗ್ನಿಯು ಪ್ರೀತನಾಗಿ, 'ತಥಾಸ್ತು' ಎಂದನು. ಇಂಥ ಮಹಾ ಪುಣ್ಯವಂತನಾದ ಮಹಾರಾಜನ ಯಜ್ಞಪಂಟಪದಲ್ಲಿ ಸದಾ ದಾನ ಧರ್ಮಾದಿಗಳು ನಡೆದು ನೂರು ವರುಷ ಪರ್ಯಂತ ಸತತ ಮೃಷ್ಟಾನ್ನ ಭೋಜನ ನಡೆದರೂ, ಆಹಾರ ಪದಾರ್ಥಗಳು ಹಾಗೆಯೇ ಉಳಿದವಂತೆ. ಅಗಾಧ ಪುಣ್ಯ ಗಳಿಸಿ ಗಯ ಮಹಾರಾಜನು ಕೊನೆಗೆ ದೇಹ ತ್ಯಜಿಸಿ ಪರಲೋಕಕ್ಕೆ ಹೋಗಿ, ಈಗಲೂ ಅಲ್ಲಿ ಸುಖಿಸುತ್ತಿರುವನು. ಮರ್ತ್ಯ ಲೋಕದಲ್ಲಿ ಮರಣವು ಯಾರಿಗೂ ತಪ್ಪಿದ್ದಲ್ಲ.

ಅಂಬರೀಷ :

ಅಂಬರೀಷನು ಅಯೋಧ್ಯೆಯ ಅಧಿಪತಿ. ಅವನು ಯಾಗವನ್ನು ಆರಂಭಿಸಿದನು. ಶತ ಯಜ್ಞಗಳು ಸಾಂಗವಾಗಿ ಮುಗಿದರೆ ಎಲ್ಲಿ ತನ್ನ ಪದವಿಗೇರುವನೋ ಎಂದು ಭಯಪಟ್ಟು, ಇಂದ್ರನು ಕುಯುಕ್ತಿಯಿಂದ ಯಜ್ಞ ಪಶುವನ್ನು ಅಪಹರಿಸಿದನು. ಆಗ ಪುರೋಹಿತನು, 'ಯಜ್ಞ ಪಶುವನ್ನು ಯಾರೋ ಅಪಹರಿಸಿದರು ? ಇದು ದೊಡ್ಡ ಅಜಾಗರೂಕತೆ. ಆದ್ದರಿಂದ ಕರ್ಮ ಕಾಲಕ್ಕೆ ಸರಿಯಾಗಿ ಆ ಯಜ್ಞಪಶುವನ್ನಾಗಲಿ, ನರಪಶುವನ್ನಾಗಲಿ ನೀನು ತರಬೇಕು' ಎಂದು ಹೇಳಿದನು. ಆಗ ಅಂಬರೀಷನು ಸಾವಿರಾರು ಗೋವುಗಳನ್ನು ಕೊಟ್ಟು, ಪ್ರತಿಯಾಗಿ ಯಜ್ಞಪಶುವಾಗಲು ಒಬ್ಬ ಮನುಷ್ಯನನ್ನು ಪಡೆಯಲು ಸಾಧ್ಯವೇ ? ಎಂದು ಹುಡುಕುತ್ತ ಹೊರಟನು. ಹೀಗೆ ಭೃಗುತುಂಗವೆಂಬ ಪರ್ವತ ಶಿಖರಕ್ಕೆ ಬಂದನು. ಅಲ್ಲಿ ಋಚೀಕನೆಂಬ ಬ್ರಹ್ಮರ್ಷಿಯು ತಪಸ್ಸನ್ನಾಚರಿಸುತ್ತಿದ್ದನು. ಅಂಬರೀಷನು ಅವನನ್ನು ಭೇಟ್ಟಿಯಾಗಿ ಭೃಗುವಂಶ ಸಂಜಾತರಾದ ಭಾರ್ಗವರೇ, ನಾನು ಯಜ್ಞ ಹೂಡಿದ್ದೇನೆ. ಯಜ್ಞಾಶ್ವ ಕಳೆದು ಹೋಗಿದೆ. ಆದ್ದರಿಂದ ನರಪಶು ನೀಡಬೇಕಿದೆ. ಕಾರಣ ತಾವು ನನಗೋಸ್ಕರ ತಮ್ಮ ಒಬ್ಬ ಪುತ್ರನನ್ನು ವಿಕ್ರಯಿಸಿದರೆ, ಒಂದು ಲಕ್ಷ ಗೋವುಗಳನ್ನು ಕೊಡುತ್ತೇನೆ ಎಂದನು. ಆಗ ಋಚೀಕರು 'ಆಗಲಿ, ಆದರೆ ನಾನು ಹಿರಿಯ ಪುತ್ರನನ್ನು ವಿಕ್ರಯಿಸಲಾರೆ' ಎಂದರು. ಮೂರು ಮಕ್ಕಳ ತಾಯಿಯಾದ ಋಷಿ ಪತ್ನಿಯು ಅಂಬರೀಷನನ್ನು ಉದ್ದೇಶಿಸಿ ಮಹಾರಾಜ ! ನಾನು ಕಿರಿಯ ಪುತ್ರನನ್ನು ಬಿಟ್ಟುಕೊಡಲಾರೆ ಎಂದಳು. ಆಗ ಮಧ್ಯೆ ಪುತ್ರನಾದ ಶುನಃಶೇಫನು ತಾಯಿ ತಂದೆಯರ ಮಾತಿನ ಇಂಗಿತ ತಿಳಿದು, ಅಂಬರೀಷನನ್ನು ಉದ್ದೇಶಿಸಿ, ''ಮಹಾರಾಜ ! ತಂದೆ ಹಿರಿಯ ಪುತ್ರನನ್ನು ಮಾರುವುದಿಲ್ಲವಂತೆ, ತಾಯಿ ಕಿರಿಯವನನ್ನು ಮಾರುವುದಿಲ್ಲವಂತೆ. ಅಂದರೆ ಅವರು ನಡುವಿನ ಮಗನಾದ ನನ್ನನ್ನು ಮಾರಿದಂತೆಯೇ ಆಯಿತು. ಆಗಲಿ, ನನ್ನನ್ನು ಕರೆದುಕೊಂಡು ಹೋಗು'' ಎಂದನು. ಆಗ ಅಂಬರೀಷನು ರುಚೀಕನಿಗೆ ಒಂದು ಲಕ್ಷ ಗೋವುಗಳೊಂದಿಗೆ ಒಂದು ಕೋಟಿ ಸುವರ್ಣ ನಾಣ್ಯಗಳನ್ನೂ, ರತ್ನರಾಶಿಗಳನ್ನೂ ಸಮರ್ಪಿಸಿದನು. ಜೊತೆಗೆ ಶುನಃಶೇಫನನ್ನು ರಥದಲ್ಲಿ ಕುಳ್ಳಿರಿಸಿಕೊಂಡು ಅಲ್ಲಿಂದ ಹಿಂದಿರುಗಿದನು.

ಮಾರ್ಗದಲ್ಲಿ ಅಂಬರೀಷನು ಪುಷ್ಕರ ಕ್ಷೇತ್ರದಲ್ಲಿ ಒಂದು ಮಧ್ಯಾಹ್ನ ವಿಶ್ರಮಿಸಿದನು. ಅಲ್ಲಿ ವಿಶ್ವಾಮಿತ್ರರು ಘೋರ ತಪಸ್ಸನ್ನು ಆಚರಿಸುತ್ತಿದ್ದರು. ಶುನಃಶೇಫನಿಗೆ ವಿಶ್ವಾಮಿತ್ರರ ದರ್ಶನವಾಯಿತು. ಎಷ್ಟೇ ಆಗಲಿ, ವಿಶ್ವಾಮಿತ್ರರು ಶುನಃಶೇಫನ ತಾಯಿ ಸತ್ಯವತಿಯ ಸೋದರರಲ್ಲವೇ ? ಅವನು ಅವರಿಗೆ ತನ್ನ ಬವಣೆಯನ್ನು ನಿವೇದಿಸಿ, ಪರಿಹಾರೋಪಾಯಕ್ಕಾಗಿ ಪ್ರಾರ್ಥಿಸಿದನು. ಆಗ ವಿಶ್ವಾಮಿತ್ರರು ತಮ್ಮ ಮಕ್ಕಳನ್ನು ಕರೆದು 'ಮಕ್ಕಳೇ, ನೀವು ಧರ್ಮಪರಾಯಣರು, ಪುಣ್ಯವಂತರು, ಅಂಬರೀಷ ರಾಜನ ಯಾಗದಲ್ಲಿ ಪಶುಗಳಾಗಿ ಅಗ್ನಿ ದೇವನನ್ನು ತೃಪ್ತಿಪಡಿಸಿರಿ' ಎಂದರು. ಆದರೆ ಅವರ ಮಕ್ಕಳು ಅವರ ಅಣತಿಯನ್ನು ಗೇಲಿ ಮಾಡಿದರು. ಇದರಿಂದ ವಿಶ್ವಾಮಿತ್ರರು ಸಿಟ್ಟಿಗೆದ್ದು 'ಆ ವಸಿಷ್ಠನ ಮಕ್ಕಳಂತೆ ನೀವೂ ಶ್ವಪಚರಾಗಿ ಒಂದು ಸಾವಿರ ವರ್ಷ ನಾಯಿ ಮಾಂಸವನ್ನು ತಿನ್ನುತ್ತಿರಿ' ಎಂದು ಶಪಿಸಿದರು. ಅನಂತರ ಖಿನ್ನನಾದ ಶುನಃಶೇಫನತ್ತ ಹೊರಳಿ 'ಮಗು, ಅಂಬರೀಷನ ಯಾಗ ಕಾಲದಲ್ಲಿ ನಿನಗೆ ಕೆಂಪು ಮಾಲೆಯನ್ನು ಹಾಕಿ, ಕೆಂಪು ಗಂಧವನ್ನು ಹಚ್ಚಿ, ಪವಿತ್ರ ಪಾಶಗಳಿಂದ ನಿನ್ನನ್ನು ವೈಷ್ಣವ ಸ್ತೂಪಕ್ಕೆ

ಕಟ್ಟುತ್ತಾರೆ. ಆ ಸಮಯದಲ್ಲಿ ನೀನು ಅಗ್ನಿಗೆ ಅಭಿಮುಖನಾಗಿ, ನಿಂತು, ಈ ಎರಡು ದಿವ್ಯಮಂತ್ರಗಳನ್ನು ಪಠಿಸು. ನಿನ್ನ ಕಾರ್ಯ ಸಿದ್ಧವಾಗುವುದು' ಎಂದು ಆಶೀರ್ವದಿಸಿದರು. ಅಲ್ಲಿಂದ ಶುನಃಶೇಫನು ಅಂಬರೀಷನೊಂದಿಗೆ ಯಜ್ಞ ಶಾಲೆಗೆ ಹೋದನು. ಅಲ್ಲಿ ಋತ್ವಿಜರ ಒಪ್ಪಿಗೆಯಂತೆ ಶುನಃಶೇಫನು ಯಜ್ಞ ಪಶುವಾದನು. ಅಂಬರೀಷ ರಾಜನು ಅವನಿಗೆ ಕೆಂಪು ಬಟ್ಟೆಯನ್ನು ಉಡಿಸಿ, ಪವಿತ್ರ ದರ್ಭೆಗಳಿಂದ ಯೂಪಸ್ತಂಭಕ್ಕೆ ಕಟ್ಟಿದನು. ಆಗ ಶುನಃಶೇಫನು ವಿಶ್ವಾಮಿತ್ರರ ಆದೇಶದಂತೆ, ದಿವ್ಯಮಂತ್ರಗಳಿಂದ ಇಂದ್ರ ಉಪೇಂದ್ರರನ್ನು ಸ್ತುತಿಸಲು ಅವರು ಪ್ರಸನ್ನರಾದರು. ಇಂದ್ರನು ಶುನಃಶೇಫನಿಗೆ ದೀರ್ಘವಾದ ಆಯುಷ್ಯವನ್ನು ಅನುಗ್ರಹಿಸಿದನು. ಇಂದ್ರಾನುಗ್ರಹದಿಂದ ಅಂಬರೀಷ ರಾಜನಿಗೆ ಯಜ್ಞವನ್ನು ನೆರವೇರಿಸಿದ ಫಲವು ದೊರಕಿತು.

ಹೀಗೆ ಅಂಬರೀಷನು ಇಂದ್ರ ಪದವಿಯ ಸುಖದ ಆಸೆಯಿಂದ ಯಾಗವನ್ನು ಹಮ್ಮಿಕೊಂಡಿದ್ದರೂ, ಅವನ ಇಚ್ಛಾಪೂರ್ತಿಯು ವಿಘ್ನರಹಿತವಾಗಿರಲಿಲ್ಲ. ಯಜ್ಞಾಶ್ವವನ್ನು ಇಂದ್ರನು ಕದ್ದನು. ಅದರಿಂದಾಗಿ ನರಪಶುವಾಗಲು ರುಚಿಕ ಮುನಿಯ ಮಗನನ್ನು ಒಪ್ಪಿಸಬೇಕಾಯಿತು. ಯಜ್ಞದ ಹೆಸರಿನಲ್ಲಿ ಮನುಷ್ಯರನ್ನು ಸಹ ಬಲಿ ಕೊಡುವ ಕ್ರೂರ ಪದ್ಧತಿ ಇರುವುದನ್ನು ಅಂಬರೀಷ ರಾಜನ ಕತೆಯು ಎತ್ತಿ ತೋರಿಸುತ್ತದೆ.

ಶಶಿಬಿಂದು :

ಶಶಿಬಿಂದು ಮಹಾರಾಜನು ಮಹಾತ್ಮನೆಂದು ಆಗಿನ ಕಾಲದಲ್ಲಿ ಪ್ರಸಿದ್ಧನಾಗಿದ್ದನು. ಅವನಿಗೆ ಒಂದು ಲಕ್ಷ ಪತ್ನಿಯರಿದ್ದರು. ಒಬ್ಬೊಬ್ಬ ಪತ್ನಿಯಿಂದ ಅವನು ಒಂದೊಂದು ಸಾವಿರ ಗಂಡು ಮಕ್ಕಳನ್ನು ಪಡೆದಿದ್ದನು. ಅವನು ಅಶ್ವಮೇಧಯಾಗ ಮಾಡಿದನು.

ಆ ಯಾಗಕ್ಕೆ ಹತ್ತು ಲಕ್ಷ ಬ್ರಾಹ್ಮಣರು ಬಂದಿದ್ದರು. ಒಬ್ಬೊಬ್ಬ ಬ್ರಾಹ್ಮಣನಿಗೆ ತನ್ನ ಒಬ್ಬೊಬ್ಬ ಮಗನನ್ನೇ ದಾನವಾಗಿ ಕೊಟ್ಟನು. ಆ ಕಾಲಕ್ಕೆ ಶಶಿಬಿಂದುವಿನ ಮಕ್ಕಳೆಲ್ಲರೂ, ಬಂಗಾರದ ಕವಚ ಕುಂಡಲಗಳನ್ನೇ ಧರಿಸಿದ್ದರು. ಒಬ್ಬೊಬ್ಬ ಕುಮಾರನ ಹಿಂದೆ, ನೂರು ರಥ, ನಾಲ್ಕು ನೂರು ಕುದುರೆ, ಸಾವಿರಾರು ದಾಸಿಯರು ಇದ್ದರು. ಇವರೆಲ್ಲರನ್ನೂ ಶಶಿಬಿಂದು ಮಹಾರಾಜನು ದಾನ ಮಾಡಿ, ಅಗಣಿತ ಪುಣ್ಯ ರಾಶಿಯನ್ನೇ ಸಂಪಾದಿಸಿದನು.

ಕಟ್ಟ ಕಡೆಗೆ, ಇವನು ಸಹ ದೇಹ ತ್ಯಜಿಸಿ, ಪುಣ್ಯ ಲೋಕಕ್ಕೆ ತೆರಳಬೇಕಾಯಿತು. ಆದ್ದರಿಂದ ಸೃಂಜಯ ಮಹಾರಾಜನೇ ! ಈ ದೇಹ ಸ್ಥಿರವಲ್ಲ. ನಿನ್ನ ಮೃತನಾದ ಮಗನನ್ನು ಕುರಿತು ದುಃಖಿಸಬೇಡ. ನಿನಗೆ ಇನ್ನೂ ಕೆಲವು ರಾಜರ ಕತೆಯನ್ನು ಹೇಳಬಹುದು. ಅವರೆಂದರೆ, ಗ್ರಂತಿದೇವ, ಭರತ, ಪೃಥು ರಾಜ ಮುಂತಾದವರು. ಗಯನ ಚರಿತ್ರೆಯನ್ನು ಈಗಾಗಲೇ ಹೇಳಿದ್ದೇನೆ'' ಎಂದು ನಾರದರು ತಮ್ಮ ಗೆಳೆಯ ಸೃಂಜನನಲ್ಲಿ ಧೈರ್ಯ ತುಂಬಲು ಹೇಳಿದರು.

ರುಚೀಕ :

ರುಚೀಕನು ಭೃಗು ಋಷಿಗಳ ಮಗನು. ಭೃಗು ಶೃಂಗವೆಂಬ ಪರ್ವತ ಶಿಖರದಲ್ಲಿ ವಾಸಿಸುತ್ತಿದ್ದನು. ಅವನು ಗಾಧಿ ರಾಜನ ಮಗಳಾದ, ಲಾವಣ್ಯವತಿಯಾದ ಸತ್ಯವತಿಯನ್ನು ಮದುವೆಯಾದನು. ಅವಳಿಗಾಗಿ ಕನ್ಯಾಶುಲ್ಕವೆಂದು ಗಾಧಿ ರಾಜನಿಗೆ ಒಂದು ಕಿವಿಯು ಪರಾಗದಂತೆ

ಬಿಳಿ ವರ್ಣದ್ದಾಗಿರುವ, ಬಹು ವೇಗದ ಗತಿಯುಳ್ಳ, ಒಂದು ಸಾವಿರ ಕುದುರೆಗಳನ್ನು ನೀಡಿದ್ದನು. ಈ ಕುದುರೆಗಳನ್ನು ವರುಣ ದೇವನನ್ನು ಕುರಿತು ತಪಸ್ಸು ಮಾಡಿ, ಪಡೆದುಕೊಂಡಿದ್ದನು. ಅವು ಗಂಗಾ ನದಿಯಿಂದ ಹೊರಬಂದ ಕಾರಣ ಅಶ್ವತೀರ್ಥ ಎನಿಸಿದವು. ರುಚೀಕ ಸತ್ಯವತಿಯರ ಮದುವೆಯೂ ದೇವತೆಗಳ ಸಮ್ಮುಖದಲ್ಲಿ ನಡೆಯಿತು.

ಒಮ್ಮೆ ಭೃಗು ಮುನಿಗಳು ಸೊಸೆಯನ್ನು ನೋಡಲು ಬಂದರು. ಆಗ ಸತ್ಯವತಿಯು ಭಕ್ತಿಯಿಂದ ನಮಿಸಿ ತನಗೂ ತನ್ನ ತಾಯಿಗೂ ಸಂತಾನ ಪ್ರಾಪ್ತಿಯಾಗಲೆಂದು ವರ ಯಾಚಿಸಿದಳು. ಮುನಿ 'ತಥಾಸ್ತು' ಎಂದರು. ಮತ್ತು ಸತ್ಯವತಿಯು ಅತ್ತೀ ಮರವನ್ನೂ, ಆಕೆಯ ತಾಯಿಯು ಆಲದ ಮರವನ್ನೂ, ಆಲಂಗಿಸಿಕೊಳ್ಳಬೇಕು. ಅನಂತರ ಇಬ್ಬರೂ ಅವರವರಿಗೆ ನಿಗದಿಯಾಗಿರುವ ಚರುವನ್ನು ಅಂದರೆ ಯಜ್ಞ ಯಾಗಾದಿಗಳಲ್ಲಿ ಆಹುತಿ ಕೊಟ್ಟು ಬಲಿದಾನದ ವಸ್ತುವನ್ನು ಭಕ್ಷಿಸಬೇಕು ಎಂದು ಸೂಚಿಸಿದರು. ಆದರೆ ಸತ್ಯವತಿಯು ಋಷಿಯ ಸೂಚನೆಯ ವಿರುದ್ಧವಾಗಿ ಅಶ್ವತ್ಥ ವೃಕ್ಷವನ್ನೂ, ಅವಳ ತಾಯಿಯು ಅರಳಿ ವೃಕ್ಷವನ್ನೂ ಆಲಂಗಿಸಿಕೊಂಡರು. ಮೇಲಾಗಿ ಆ ಇಬ್ಬರೂ ತಮ ತಮಗೆ ನಿಗದಿಯಾಗಿದ್ದ ಚರುವನ್ನು ಅದಲುಬದಲು ಮಾಡಿಕೊಂಡು ಭಕ್ಷಿಸಿದರು. ಭೃಗು ಮಹರ್ಷಿಗಳಿಗೆ ಈ ವರ್ತನೆ ತಿಳಿದು ಸತ್ಯವತಿಯ ಮಗನು ಬ್ರಾಹ್ಮಣನಾದರೂ ಕ್ಷತ್ರಿಯೋಚಿತ ಕಾರ್ಯ ಮಾಡಲಿ, ಅವಳ ತಾಯಿಯ ಹೊಟ್ಟೆಯಲ್ಲಿ ಹುಟ್ಟುವವನು ಕ್ಷತ್ರಿಯನಾದರೂ ಬ್ರಾಹ್ಮಣ ಸ್ವಭಾವದವನಾಗುತ್ತಾನೆ ಎಂದರು.

ಇದನ್ನು ಕೇಳಿ ಸತ್ಯವತಿಗೆ ಸಮಾಧಾನವಾಗಲಿಲ್ಲ. ಆಕೆ ನನಗೆ ಅಂತಹ ಮಗ ಬೇಡವೇ ಬೇಡ. ಆದರೆ 'ವಿಧಿ ನಿಯಮವೇ ಹಾಗಿದ್ದರೆ, ನನ್ನ ಮೊಮ್ಮಗನು ಕ್ಷತ್ರಿಯ ವೃತ್ತಿಯವನಾಗಲಿ' ಎಂದು ಅಂಗಲಾಚಿದಳು. ಹೀಗೆ ಮಹಾ ತೇಜಸ್ವಿಯೂ, ಮಹಾವರ್ಚಸ್ವಿಯೂ, ವೇದಾಧ್ಯಯನ ಹಾಗೂ ಧನುರ್ವೇದಗಳಲ್ಲಿ ಪಾರಂಗತನೂ ಆದ, ಜಮದಗ್ನಿ ಸತ್ಯವತಿಯ ಗರ್ಭದಲ್ಲಿ ಜನಿಸಿದನು. ಮತ್ತು ಸತ್ಯವತಿಯ ಮೊಮ್ಮಗನಾಗಿ, ಜಮದಗ್ನಿಯ ಮತ್ತು ರೇಣುಕಾದೇವಿಯವರ ಪಿಂಡವಾಗಿ, ವೀರ ಕ್ಷಾತ್ರ ತೇಜಸ್ಸಿನ ಪರಶುರಾಮನು ಹುಟ್ಟಿದನು.

ಮದ ತುಂಬಿದ್ದ ಸಹಸ್ರಬಾಹು ಕಾರ್ತವೀರ್ಯನು ಒಮ್ಮೆ ಜಮದಗ್ನಿ ಮಹರ್ಷಿಯ ಆಶ್ರಮದಲ್ಲಿ ಯಥೋಚಿತ ಸತ್ಕಾರ ಸ್ವೀಕರಿಸಿ, ಆಶ್ರಮದ ಧೇನುವನ್ನು ಅಪಹರಿಸಿದನು. ಕೋಪಾವಿಷ್ಟನಾದ ಪರಶುರಾಮನು ಕಾರ್ತವೀರ್ಯನ ತಲೆಯನ್ನು ತನ್ನ ಗಂಡುಗೊಡಲಿಯಿಂದ ಹಾರಿಸಿದನು. ಆಗ ಕಾರ್ತವೀರ್ಯನ ಮಕ್ಕಳು, ಪರಶುರಾಮನು ಇಲ್ಲದಾಗ ಬಂದು, ಜಮದಗ್ನಿಯನ್ನು ಕೊಂದು ಹಾಕಿದರು. ಪರಶುರಾಮನು ಸಿಟ್ಟಿಗೆದ್ದು, ಕಾರ್ತವೀರ್ಯನ ಮಕ್ಕಳನ್ನೆಲ್ಲ ಸಂಹರಿಸಿದನಲ್ಲದೆ, ಇಪ್ಪತ್ತೊಂದು ಬಾರಿ ಭೂಪ್ರದಕ್ಷಿಣೆ ಮಾಡಿ ಕ್ಷತ್ರಿಯರನ್ನೆಲ್ಲ ಕೊಂದು ಸೇಡು ತೀರಿಸಿಕೊಂಡನು. ಅವರ ರಕ್ತದಿಂದ ಸಮಂತ ಪಂಚಕವೆಂಬಲ್ಲಿ ಐದು ರಕ್ತ ಸರೋವರಗಳನ್ನು ಪರಶುರಾಮನು ನಿರ್ಮಿಸಿದನು. ಮತ್ತು ತನ್ನ ತಾತನಾದ ರುಚೀಕರ ಮಾತಿನಂತೆ ಕ್ಷತ್ರಿಯ ವಧೆಯನ್ನು ನಿಲ್ಲಿಸಿ, ಮಹಾಯಜ್ಞವನ್ನು ಆರಂಭಿಸಿದನು.

ಹೀಗೆ ಭೃಗು ಮುನಿಯ ವರದಂತೆ ಸತ್ಯವತಿ ರುಚೀಕರ ಮೊಮ್ಮಗನು ಬ್ರಾಹ್ಮಣನಾದರೂ ವೀರ ಕ್ಷತ್ರಿಯರನ್ನು ನಾಚಿಸುವ ಕ್ಷಾತ್ರಬಲ ಹೊಂದಿದ್ದನು. ರಾಜಸೀ ಗುಣದ ಅವನಿಗೆ ಹಿಂಸೆಯಲ್ಲಿ ದೋಷ ಕಾಣಲಿಲ್ಲ. ಇಡೀ ಜೀವನವನ್ನು ಈರ್ಷ್ಯೆ,

ಸೇಡುಗಳಲ್ಲಿಯೇ ಕಳೆದನು.

ರುಚೀಕರ ಮಗನಾದ ವಿಶ್ವಾಮಿತ್ರನು ಸತ್ಯವತಿಯ ಸಹೋದರನು. ಅವನು ಕೌಶಿಕ ರಾಜನು. ಕ್ಷತ್ರ ಕುಲೋತ್ಪನ್ನನು. ಆದರೆ, ವಶಿಷ್ಠ ಮಹರ್ಷಿಗಳ ಸಂಸರ್ಗದಿಂದ ಘೋರ ತಪಸ್ಸು ಆಚರಿಸಿ ರಾಜರ್ಷಿಯೆನಿಸಿದನು. ಅಷ್ಟರಿಂದ ಅವನಿಗೆ ಸಮಾಧಾನವಾಗಲಿಲ್ಲ. ಮುಂದೆ ಘೋರ ತಪಸ್ಸನ್ನಾಚರಿಸಿ ಬ್ರಹ್ಮರ್ಷಿಯೆನಿಸಿದನು. ಹೀಗೆ ಭೃಗು ಮಹರ್ಷಿಗಳ ವರವು ಕೃತಕೃತ್ಯವಾಯಿತು.

ಪೃಥು ಚಕ್ರವರ್ತಿ :

ಅಯೋಧ್ಯೆಯ ಪ್ರಥಮ ರಾಜನಾದ ಈಕ್ಷ್ವಾಕುವಿನಿಂದ ಆರನೆಯ ತಲೆಮಾರಿನವನೇ ಪೃಥು ಚಕ್ರವರ್ತಿ. ಆ ಕಾಲದ ಅಧರ್ಮಪರನಾದ, ಪ್ರಜಾ ಹಿಂಸಕನಾದ ವೇನುನನ್ನು ಮುನಿಗಳು ಕ್ಷಮಿಸದೆ ಸಂಹರಿಸಿದರು. ಆತನ ವಂಶವು ನಿರ್ವಂಶವಾಯಿತು. ಮುನೀಶ್ವರರು ಅವನ ಬಾಹು ಬಲಕ್ಕೆ ಸರಿದೊರೆಯಾಗುವ ಓರ್ವ ಪುರುಷನು ಜನ್ಮಿಸುವ ಗಂಟೆ ಮೊಳಗಿಸಿದರು. ಅವನು ಶ್ರೀ ಹರಿಯ ಅಂಶಾವತಾರಿಯಾಗಿದ್ದ. ಶ್ರೀಲಕ್ಷ್ಮಿಯ ಅಂಶವನ್ನು ಹೊಂದಿದ್ದ. ದೇವತೆಗಳು ಪುಷ್ಪವೃಷ್ಟಿ ಸುರಿದರು. ಆ ಮಹಾಪುರುಷನ ಹೆಸರು ಪೃಥು. ಪೃಥುವಿನ ತಂದೆ ಅನರಣ್ಯ. ಅವನ ಸೋದರಿ ಹೆಸರು ಅರ್ಚಿ. ಉತ್ತಮ ಪುರುಷನು ಒಬ್ಬನು ಸಾಲದೇ ? ಎನ್ನುವಂತೆ, ಅವನಿಗೆ ವಿಷ್ಣುವು ಸುದರ್ಶನ ಚಕ್ರವನ್ನು, ಲಕ್ಷ್ಮಿದೇವಿಯು ಸಂಪತ್ತನ್ನು, ಬ್ರಹ್ಮನು ದಿವ್ಯ ರಥವನ್ನು, ವಾಣಿಯು ದಿವ್ಯ ಹಾರಗಳನ್ನು, ಈಶ್ವರನು ಖಡ್ಗವನ್ನು, ಪಾರ್ವತಿಯು ದಿವ್ಯ ಫಲಕವನ್ನು, ದೇವೇಂದ್ರನು ದಿವ್ಯ ಕಿರೀಟವನ್ನು , ಕುಬೇರನು ಸ್ವರ್ಣದ ಆಸನವನ್ನು, ವರುಣನು ಶ್ವೇತ ಛತ್ರವನ್ನು, ಪವನನು ದಿವ್ಯ ಚಾಮರವನ್ನು, ಯಮನು ದಿವ್ಯ ಪುಷ್ಪ ಮಾಲೆಯನ್ನು ಮತ್ತು ದಿವ್ಯ ದಂಡವನ್ನು, ಚಂದ್ರನು ಬಿಳಿಯ ಕುದುರೆಗಳನ್ನು, ಸೂರ್ಯನು ಕಿರಣ ಬಾಣಗಳನ್ನು, ಅಗ್ನಿಯು ದಿವ್ಯ ಧನಸ್ಸುಗಳನ್ನು, ಭೂಮಾತೆಯು ದಿವ್ಯ ಪಾದುಕೆಗಳನ್ನು ಬಹುಮಾನವಾಗಿ ನೀಡಿದರು.

ಪೃಥು ಚಕ್ರವರ್ತಿಯು ಧರ್ಮ ಪ್ರಭುವೆಂಬ ಕೀರ್ತಿಯನ್ನು ಗಳಿಸಿದನು. ಸನತ್‌ಕುಮಾರನಂಥ ಮಹಾಮುನಿಯು ಪೃಥುವಿನ ಬಳಿ ಬಂದು, ಜ್ಞಾನ ಬೋಧಿಸಿದನು. ಬೆಳಗಿನ ನಂತರ ಕತ್ತಲೆ ಬಂದೇ ಬರುವುದು. ಒಂದು ಒಳ್ಳೆಯದರ ಬೆನ್ನಿಗೆ ಕೇಡು ಇರುವಂತೆ, ಪೃಥುವಿಗೆ ಕೇಡು ಎದುರಾಯಿತು. ಘೋರ ಕ್ಷಾಮ ಉಂಟಾಗಿ, ಪ್ರಜೆಗಳು ಹಸಿವಿನ ಬಾಧೆ ತಾಳಲಾರದೆ,. ರಾಜನ ಬಳಿ ಬಂದು ಅತ್ತು ಕರೆದರು. ಆಗ ಪೃಥುವು, 'ಭೂದೇವಿ ! ಇದಕ್ಕೆ ನೀನೇ ಕಾರಣಳು. ನೀನು ಸಾರಹೀನವಾಗಿ ನನ್ನ ಪ್ರಜೆಗಳು ಬಾಧೆ ಪಡುವಂತಾಗಿದೆ' ಎಂದು ಉಗ್ರವಾಗಿ ನುಡಿದನು. ಅವನ ಕೋಪಾಗ್ನಿ ಲೆಕ್ಕಿಸದೆ, ಭೂಮಾತೆಯು ಗೋ ರೂಪವನ್ನು ಧರಿಸಿ, ಮೆದುವಾಗದೆ ತನ್ನ ಗ್ರಹಿಂಕೆಗೇ ಪಟ್ಟು ಹಿಡಿದಳು. ಗೋಮಾತೆಯು ಪೃಥುವನ್ನುದ್ದೇಶಿಸಿ, 'ಚಕ್ರವರ್ತಿ!! ನಿನ್ನ ತಂದೆಯ ದುಷ್ಟ ರೀತಿಯ ಅರಸೊತ್ತಿಗೆಯಲ್ಲಿ ಯಜ್ಞಯಾಗಾದಿ ಕ್ರತುಗಳೆಲ್ಲಿದೆ, ವರುಷಗಳೇ ಕಳೆದವು. ಅದರಿಂದಾಗಿಯೇ ನಾನು ಸಾರಹೀನಳಾದೆನು. ನನಗೆ ಒಂದು ಹಾಲು ಕುಡಿಯುವ ಕರುವನ್ನು ಕೊಡು' ಎಂದಿತು. ಆಗ ಮನುವು ಗೋವತ್ಸನಾದನು. ಪೃಥುವು ಹಾಲು ಕುಡಿವ ಕರುವಾದನು. ಆಗ ಹಾಲು ಕರೆದಂತೆ ಸಸ್ಯಾದಿಗಳು ಬೆಳೆದವು. ಆ ಪುಣ್ಯ ಗೋವಿನಿಂದ ಬುದ್ಧಿ, ಜ್ಞಾನ, ತೇಜಸ್ಸು, ಬಲ, ಶೌರ್ಯಗಳು, ಮಹಿಮೆಗಳು, ಮಾಂಸ, ರಕ್ತಗಳು, ಹುಲ್ಲು,

ವೃಕ್ಷ, ವನಸ್ಪತಿಗಳು, ಧಾತುಗಳು, ಪ್ರತಿಯೋರ್ವನಿಗೂ ಅವನವನ ಇಚ್ಛೆಯಂತೆ ಲಭ್ಯವಾದವು. ಭೂಮಿ ಫಲಪ್ರದವಾಯಿತು. ದೇಶವು ಸುಭಿಕ್ಷವಾಯಿತು. ಪೃಥುವು ಜನವಾಸಕ್ಕೆ ನಗರಗಳನ್ನು ನಿರ್ಮಿಸಿದನು. ಪ್ರಜೆಗಳ ಕ್ಷೇಮವನ್ನೇ ತನ್ನ ಕ್ಷೇಮವೆಂದು ತಿಳಿದ ಪೃಥು ಚಕ್ರವರ್ತಿಯು ಮಹನೀಯನು. ಮಾನನೀಯನು.

ಹೀಗೆ ದೇಶದಲ್ಲಿ ಕ್ಷಾಮಡಾಮರಗಳು ಕ್ರೂರ, ಅಧರ್ಮ ಪಾಲನೆಯಿಂದ ಘಟಿಸುತ್ತವೆ. ಸುಭಿಕ್ಷವು ಧರ್ಮ ಪಾಲನೆಯಿಂದ ಆಗುತ್ತದೆ. 'ಧರ್ಮೋ ರಕ್ಷತಿ, ರಕ್ಷಿತಃ ' ಪೃಥುವಿನ ತಂದೆ ಅಧರ್ಮಿ ವೇನುವಿನ ಆಡಳಿತದಿಂದ ಕ್ಷಾಮ ಡಾಮರಾದಿ ದೈವೀ ತಾಪಗಳಾದರೆ, ಪೃಥುವಿನ ಧರ್ಮ ಪಾಲನೆಯಿಂದ ಸುಭಿಕ್ಷ ಉಂಟಾಯಿತು.

ಮರುಧ್ವಜ :

ಅಂಬರೀಷನು ರಘುವಂಶದಲ್ಲಿ ಜನಿಸಿದ ಪರಮ ಭಕ್ತ ಮಹಾರಾಜನು. ಅಂಬರೀಷನ ಅಜ್ಜನು ಮರುಧ್ವಜನು.

ರಘು ವಂಶದ ಅಗ್ನಿ ವರ್ಣ ಮಹಾರಾಜನ ಮಗ, ಶೀಘ್ರಗನು. ಶೀಘ್ರಗನ ಮಗನೇ ಮರುಧ್ವಜ. ಮರುಧ್ವಜನು ತನ್ನ ಪೂರ್ವಜರ ಕೀರ್ತಿಗನುಗುಣವಾಗಿ ಒಳ್ಳೇ ದಕ್ಷತೆಯಿಂದ ಧರ್ಮಪಾಲನೆ ಮಾಡಿದನು. ಅಧಿಕ ದಾನಧರ್ಮಗಳನ್ನು ಆಚರಿಸಿದನು. ಆಗಿನ ಕಾಲದ ರಾಜರಂತೆ, ಯಜ್ಞ ಯಾಗಾದಿಗಳನ್ನು ಮಾಡಿ ಭೂಸುರರೆಂದುಕೊಳ್ಳುತ್ತಿದ್ದ ಬ್ರಾಹ್ಮಣರನ್ನು ಸಂತೃಪ್ತಗೊಳಿಸಿದನು. ಯಜ್ಞದ ದೇವತೆಗಳನ್ನೂ ಸಂತೃಪ್ತಗೊಳಿಸಿದನು.

ಅವನ ಆಡಳಿತದಲ್ಲಿ ಮಳೆ ಬೆಳೆ ಸಕಾಲಕ್ಕೆ ಆಗಿದ್ದರಿಂದ, ಇಂದ್ರ, ವರುಣ, ಮರುದ್ ಗಣಗಳು ಸಂತೃಪ್ತರಾಗಿರುವರೆಂದು ಜನ ನಂಬಿದ್ದರು.

ಇಂಥ ಧರ್ಮಾತ್ಮನೂ, ಪುಣ್ಯಶಾಲಿಯೂ ಆದ ಮರುಧ್ವಜನು ಮರಣದಿಂದ ಪಾರಾಗಲಿಲ್ಲ. ಹುಟ್ಟಿದವನು ಸಾಯಲೇಬೇಕಲ್ಲವೇ ? ಅದೇ ರೀತಿ ಸೃಂಜಯ, ನಿನ್ನ ಮಗನೂ ಮರಣವನ್ನಪ್ಪಿದನು. ಇದರಲ್ಲಿ ರೋದಿಸುವುದೇನಿದೆ ? ಎಂದು ನಾರದರು ನುಡಿದರು.

ಭರತ :

ನಾರದರು ಸೃಂಜಯ ಮಹಾರಾಜನಿಗೆ ಪುತ್ರ ಶೋಕ ಶಮನಗೊಳಿಸಲು ಭರತ ಚಕ್ರವರ್ತಿಯ ಚರಿತ್ರೆಯನ್ನು ಹೇಳತೊಡಗಿದರು. ದುಷ್ಯಂತ ಶಕುಂತಲೆಯರ ಪುತ್ರನಾದ ಭರತನು, ಬಾಲಕನಾಗಿರುವಾಗಲೇ, ಹುಲಿ ಸಿಂಹಗಳನ್ನು ಅವುಗಳ ಕಿವಿ ಹಿಡಿದು, ಎಳೆದು ತರುತ್ತಿದ್ದನು. ಇಂಥ ಬಲಾಢ್ಯನವನು. ಅರಣ್ಯದಲ್ಲಿ ಕಾಡುಕೋಣ, ಕ್ರೂರ ಮೃಗ, ವಿಷ ಜಂತುಗಳನ್ನು ಇವನು ಮರ್ದಿಸುತ್ತಿದ್ದನಾದುದರಿಂದ ಇವನನ್ನು ಸರ್ವದಮನ ಎಂಬ ಅನ್ವರ್ಥಕ ನಾಮದಿಂದ ಋಷಿಗಳು ಸಂಬೋಧಿಸುತ್ತಿದ್ದರು. ಭರತನು ತಾರುಣ್ಯಕ್ಕೆ ಬಂದು ಸಿಂಹಾಸನವನ್ನೇರಿದ ಬಳಿಕ, ಯಮುನಾ ನದೀ ತೀರದಲ್ಲಿ ನೂರು ಅಶ್ವಮೇಧಗಳನ್ನೂ, ಸರಸ್ವತೀ ನದೀ ತೀರದಲ್ಲಿ ಮೂರು ನೂರು ಅಶ್ವಮೇಧಗಳನ್ನೂ, ಗಂಗಾ ನದೀ ತೀರದಲ್ಲಿ ನಾಲ್ಕು ನೂರು ಅಶ್ವಮೇಧಗಳನ್ನೂ ಮಾಡಿದನು.

ಇದಾದ ನಂತರ ವಿಶ್ವಜಿತ್ ಯಾಗ, ವಾಜಪೇಯಿ ಯಾಗಗಳನ್ನು ಮಾಡಿ ಮುಗಿಸಿದನು. ಇವನು ಕಣ್ವ ಋಷಿಗಳಿಗೆ ಒಂದು ಸಾವಿರ ಬಂಗಾರದ ಕಮಲಗಳನ್ನು ದಾನ ಮಾಡಿದನು. ಇವನು ಅಗಣಿತ ಬ್ರಾಹ್ಮಣರಿಗೆ ಮಾಡಿದ ಅಗಣಿತ ರೂಪದ ದಾನಗಳು ಅಸಾಮಾನ್ಯವಾಗಿದ್ದವು. ಇಂಥ ಆ ಭರತನಿಗೆ ಸಹ ಮುಪ್ಪು ಆವರಿಸಿತು. ಮೃತ್ಯು ದೇವತೆಯು ಅವನನ್ನು ಸೆಳೆದೊಯ್ದಿತು.

ಆದ್ದರಿಂದ ಮರ್ತ್ಯಲೋಕದಲ್ಲಿ ಹುಟ್ಟಿದ ಯಾರಿಗೇ ಆಗಲಿ ಮರಣವು ತಪ್ಪಿದ್ದಲ್ಲ.

ಸುಹೋತ್ರ :

ನಾರದರು ತಮ್ಮ ಮಿತ್ರನಾದ, ಶಿಶ್ಯೆಬ್ಯನ ಪುತ್ರ ಸೃಂಜಯನಿಗೆ, ಪುತ್ರಶೋಕ ಕಳೆಯಲು ಹೇಳಿದ ಕಥೆಯಿದು :

''ಸುಹೋತ್ರನೆಂಬ ಓರ್ವ ರಾಜನಿದ್ದನು. ಅವನು ಅಸಾಮಾನ್ಯ ಪರಾಕ್ರಮಶಾಲಿಯಾಗಿದ್ದುದರಿಂದ ದೇವತೆಗಳು ಸಹ, ಅವನನ್ನು ಕಣ್ಣೆತ್ತಿ ನೋಡುತ್ತಿರಲಿಲ್ಲ. ಅವನು ಮಹಾಧರ್ಮಿಷ್ಠ. ಋತ್ವಿಜರನ್ನೂ, ಬ್ರಾಹ್ಮಣರನ್ನೂ, ಪುರೋಹಿತರನ್ನೂ ಅತ್ಯಂತ ಆದರದಿಂದ ಕಾಣುತ್ತಿದ್ದ, ಅವರ ಉಪದೇಶದಂತೆ ರಾಜ್ಯವಾಳುತ್ತಿದ್ದನು. ಅವನ ರಾಜ್ಯದಲ್ಲಿ ಅನ್ಯಾಯ, ಅತ್ಯಾಚಾರಗಳೆಂದೂ ಇರಲಿಲ್ಲ. ಇದರಿಂದ ಪ್ರೀತನಾದ ಪರ್ಜನ್ಯನು ಅವನ ರಾಜ್ಯದಲ್ಲಿ ಬಂಗಾರದ ಮಳೆ ಸುರಿಸುತ್ತಲೇ ಇದ್ದನು. ನದಿ, ಹಳ್ಳಗಳು ಸುವರ್ಣ ಜಲಯುತವಾಗಿದ್ದವು. ಕೆರೆ,ಬಾವಿ, ಸರೋವರಗಳಲ್ಲಿಯ ಜಲವು ಮತ್ತು ಅವುಗಳಲ್ಲಿ ವಿಹರಿಸುವ ಜಲಚರಗಳು ಬಂಗಾರದವಾಗಿದ್ದವು.

ಇದನ್ನು ಕಂಡು ಪರಮಾಶ್ಚರ್ಯ ಭರಿತನಾದ ರಾಜನು, ಕುರಜಾಂಗುಲಕ್ಕೆ ಒಂದು ಸಾವಿರ ಅಶ್ವಮೇಧ ಯಾಗಗಳನ್ನೂ, ಒಂದು ನೂರು ರಾಜಸೂಯ ಯಾಗಗಳನ್ನೂ ಮಾಡಿ, ಆಗಮಿಸಿದ ಬ್ರಾಹ್ಮಾಣಾದಿಗಳಿಗೆ ಅಪಾರ ಸುವರ್ಣ ದಾನ ಮಾಡಿ, ಮಹಾವೈರಾಗ್ಯಶಾಲಿಯಾದನು. ಕೊನೆಗೆ ಅವನೂ ಮೃತನಾಗಿ ಸದ್ಗತಿ ಹೊಂದಿದನು. ಇಂಥವನಿಗೂ ಮರಣವು ಆವರಿಸಿತು. ಅಂದ ಮೇಲೆ, ನಿನ್ನ ಮಗನು ಯಾವ ಗಿಡದ ತೊಪ್ಪಲು ? ಆದ್ದರಿಂದ ಮರಣ ಹೊಂದಿದ ಮಗನನ್ನು ಮರೆತು ಬಿಡು'' ಎಂದು ಉಪದೇಶಿಸಿದರು.

ಶ್ರೀರಾಮ :

ಶ್ರೀರಾಮನು ಅಯೋಧ್ಯೆಯ ಚಕ್ರವರ್ತಿ. ಈಕ್ಷ್ವಾಕು ವಂಶದ ಶ್ರೇಷ್ಠರಲ್ಲಿ ಶ್ರೇಷ್ಠ. ದಶರಥ ಕೌಶಲ್ಯೆಯರ ಹಿರಿಯ ಮಗ. ವಸಿಷ್ಠರು ಇವನ ಕುಲಗುರು. ವಿಶ್ವಾಮಿತ್ರರು ವಿದ್ಯಾಗುರು. ಲಕ್ಷ್ಮಣ, ಭರತ, ಶತ್ರುಘ್ನರು ತಮ್ಮಂದಿರು. ಜನಕರಾಜನ ಪುತ್ರಿ ಸೀತೆ ಇವನ ಹೆಂಡತಿ. ಬಾಲ್ಯಾವಸ್ಥೆಯಲ್ಲಿಯೇ ವಿಶ್ವಾಮಿತ್ರರು ರಾಮ ಲಕ್ಷ್ಮಣರೊಂದಿಗೆ ಅರಣ್ಯಕ್ಕೆ ಹೋಗಿ ರಕ್ಕಸಿ ತಾಟಕಿಯ ಸಂಹಾರ ಮಾಡಿಸಿದರು. ಜನಕರಾಜನಲ್ಲಿಗೆ ಹೋಗಿ ಸೀತಾ ಸ್ವಯಂವರದಲ್ಲಿ ಶಿವಧನುಸ್ಸಿಗೆ ಹೆದೆಯೇರಿಸಿದನು. ಪರಶುರಾಮನ ಧನುಸ್ಸಿಗೂ ರಾಮನು ಲೀಲಾಜಾಲವಾಗಿ ಹೆದೆಯೇರಿಸಿ ಅವನನ್ನು ಮುಖಭಂಗ ಮಾಡಿದನು.

ಬಾಲಕನಿರುವಾಗಲೇ ಮಹಾ ಪರಾಕ್ರಮಿಯಾದ ರಾಮನ ದುರ್ದಿನಗಳು

ಆರಂಭವಾದವು. ಪಟ್ಟಾಭಿಷಿಕ್ತನಾಗುವ ಅವಸರದಲ್ಲಿ ಹದಿನಾಲ್ಕು ವರ್ಷ ವನವಾಸಕ್ಕೆ ತೆರಳಬೇಕಾಯಿತು. ವಿಧಿವಿಲಾಸ ಯಾರಿಗೂ ತಪ್ಪಿದ್ದಲ್ಲ. ರಾವಣನ ತಂಗಿ ಶೂರ್ಪನಖಿ, ರಾಮನಿಗೆ ಮೋಹಿಸುತ್ತಾಳೆ. ಅವನಿಗೆ ಲಗ್ನವಾಗಿರುವುದನ್ನು ತಿಳಿದು ಲಕ್ಷ್ಮಣ ಬಳಿ ಸಾರುತ್ತಾಳೆ. ಅವನು ಅವಳ ಮೂಗು ಕೊಯ್ಯುತ್ತಾನೆ. ಇದರ ಸೇಡು ತೀರಿಸಿಕೊಳ್ಳಲು ರಾವಣನು ಸೀತೆಯನ್ನು ಅಪಹರಿಸುವ ಹೊಂಚು ಹಾಕಿ, ತನ್ನ ಮಾವ ಮಾರೀಚ ಮಹರ್ಷಿಯನ್ನು, ಹೊನ್ನು ಜಿಂಕೆಯಾಗಿ, ಸುಳಿದಾಡಿ, ರಾಮನನ್ನು ದೂರ ಕರೆದೊಯ್ಯುವಂತೆ ಮಾಡುತ್ತಾನೆ. ಕೇಡುಗಾಲು ಬರಲು ಕೆಡುಕು ಬುದ್ಧಿ ಬರುವಂತೆ, ಜಗತ್ತಿನಲ್ಲಿ ಹೊನ್ನು ಜಿಂಕೆ ಇರಬಲ್ಲದೋ ಹೇಗೆಂದು ತಿಳಿಯದೆ, ರಾಮನು ಹೆಂಡತಿಯ ಮಾತು ಕೇಳಿ ಜಿಂಕೆಯ ಬೆನ್ನಟ್ಟಿದ. ಇತ್ತ ರಾವಣನು ಕುಟೀರಕ್ಕೆ ಸನ್ಯಾಸಿ ವೇಷದಿಂದ ಬಂದು ಸೀತೆಯನ್ನು ಪುಷ್ಪಕ ವಿಮಾನದಲ್ಲಿ ಹೊತ್ತು ಲಂಕೆಗೆ ಒಯ್ದು ಅಶೋಕ ವನದಲ್ಲಿ ಇರಿಸಿದನು.

ಇತ್ತ ಕುಟೀರಕ್ಕೆ ಮರಳಿದ ರಾಮಲಕ್ಷ್ಮಣರು ಸೀತೆಯ ಅನುಪಸ್ಥಿತಿಯನ್ನು ಕಂಡು ಕಂಗಾಲಾಗಿ ಅವಳಿಗಾಗಿ ಕಣ್ಣೀರಿಡುತ್ತ ಅಡವಿ ಅಡವಿ ತಿರುಗಿದರು. ಆ ಬಳಿಕ ಹಾದಿಯಲ್ಲಿ ವಾಲಿ ಸುಗ್ರೀವರನ್ನೂ ಹನುಮಂತ ಜಾಂಬುವಂತರನ್ನೂ ಭೆಟ್ಟಿಯಾಗಿ, ಅಲ್ಲಿ ಸುಗ್ರೀವ ಹನುಮಂತರ ಸಖ್ಯ ಬೆಳೆಸಿ, ವಾಲಿಯನ್ನು ಸಂಹರಿಸಿದನು. ಮುಂದೆ ಕಪಿಸೇನೆಯೊಂದಿಗೆ, ಸೀತೆಯನ್ನು ಇರಿಸಿದ ತಾಣ ಶೋಧಿಸಿ, ಸಾಗರ ದಾಟಿ ಲಂಕಾನಗರಿಯ ಮೇಲೆ ದಾಳಿ ಮಾಡಿ ರಾವಣನ ಸಂಹಾರ ಮಾಡಿದನು.

ಅಲ್ಲಿಂದ ಸೀತೆಯೊಂದಿಗೆ ಅಯೋಧ್ಯೆಗೆ ಬಂದು ಪಟ್ಟಾಭಿಷಿಕ್ತನಾದನು. ಆದರೆ ವಿಧಿಯ ಕಾಟ ತೀರಿರಲಿಲ್ಲ. ಯಾವನೋ ಅಗಸನು, ರಾವಣನಲ್ಲಿರುವಾಗಿನ ಸೀತೆಯ ಶೀಲ ಕುರಿತು ಸಂದೇಹಿಸಿದನೆಂದು ತಿಳಿದು, ರಾಮನು ಅವಳನ್ನು ಗರ್ಭಿಣಿಯಾಗಿದ್ದರೂ ಅಡವಿಗೆ ಕಳಿಸಿದನು. ಅಲ್ಲಿ ವಾಲ್ಮೀಕಿ ಋಷಿಗಳ ಆಶ್ರಮದಲ್ಲಿ ಲವ-ಕುಶರು ಬೆಳೆದು ವಿದ್ಯಾಪಾರಂಗತರಾದರು.

ಹೀಗೆ ದೇವರ ಅವತಾರವೆಂದು ಬಣ್ಣಿಸಲ್ಪಟ್ಟಿದ್ದರೂ ಸಹ, ರಾಮನ ಜೀವನದಲ್ಲಿ ವಿಧಿಯ ಲೀಲೆಯಂತೆ ಅತ್ಯಂತ ಕಠಿಣ ಪ್ರಸಂಗಗಳೂ ಬಂದವು. ಹಲವು ಸುಖಕರ ಪ್ರಸಂಗಗಳೂ ಘಟಿಸಿದವು. ಯಾರಿಗೇ ಆಗಲಿ ವಿಧಿಯ ವಿಲಾಸವು ಅಪರಿಹಾರ್ಯ.

ದಿಲೀಪ :

ಸಗರ ಚಕ್ರವರ್ತಿಯ ಮೊಮ್ಮಗ ಅಂಶುಮಂತನ ನಂತರ ಅಯೋಧ್ಯೆಯನ್ನಾಳಿದ ಶುದ್ಧಾತ್ಮನೇ ದಿಲೀಪ ಚಕ್ರವರ್ತಿ. ಅವನು ಅಪ್ರತಿಮ ಶೂರ. ಸಕಲ ವಿದ್ಯಾ ಪಾರಂಗತ ; ಧರ್ಮರತ, ಶಕ್ತನಾಗಿದ್ದೂ ಕ್ಷಮಾನ್ವಿತ. ತ್ಯಾಗಿಯಾಗಿದ್ದೂ ಆತ್ಮ ಪ್ರಶಂಸೆಯಿಂದ ದೂರ. ರಾಜ್ಯ ಪರಿಪಾಲನೆಯ ವೈಖರಿ ಅದೆಷ್ಟು ಮೇಲ್ಪಂಕ್ತಿಯಾಗಿತ್ತೋ, ಅಷ್ಟೇ ಆಸ್ಥೆಯನ್ನೇ ದಿಲೀಪನು ತನ್ನ ಇತರ ವ್ಯವಹಾರಗಳಲ್ಲೂ ತೋರಿದನು.

ಕಳ್ಳ ಕೋರಿಕೆಗಳೇ ಕೊರತೆ ತಾನೇ ? ದಿಲೀಪನಿಗೆ ಮಕ್ಕಳಿಲ್ಲದ ಕೊರತೆ ಕಾಡಿಸುತ್ತಿತ್ತು. ತನ್ನ ಕೋರಿಕೆಯನ್ನು ಈಡೇರಿಸಿಕೊಳ್ಳಲು ದಿಲೀಪನು ರಾಣಿ ಸುದಕ್ಷಿಣಾದೇವಿಯೊಂದಿಗೆ ವಸಿಷ್ಠರ

ಆಶ್ರಮಕ್ಕೆ ಹೋಗಿ, ತನ್ನ ಕೋರಿಕೆಯನ್ನು ಮುಂದಿಟ್ಟನು. ವಸಿಷ್ಠರು ಸೂಕ್ಷ್ಮದೃಷ್ಟಿಯಿಂದ ನೋಡಿ, ದಿಲೀಪನು ಸ್ವರ್ಗಲೋಕದ ಕಲ್ಪವೃಕ್ಷದ ಪ್ರದಕ್ಷಿಣೆ ಹಾಕದ ತಪ್ಪಿಗಾಗಿ, ಈ ದುರಾದೃಷ್ಟ ಒದಗಿದೆ. ಆದ್ದರಿಂದ, ಕಲ್ಪವೃಕ್ಷದ ಮಗಳಾದ, ಆಶ್ರಮದಲ್ಲಿರುವ, ನಂದಿನಿ ಸೇವೆ ಮಾಡಲು ಸೂಚಿಸಿದರು.

ರಾಜ ದಂಪತಿ, ನಂದಿನಿಗೆ ಮನಸಾ ಸೇವೆ ಸಲ್ಲಿಸತೊಡಗಿದರು. ರಾಜನು ಗೋವಳಿಗನಾದನು. ಒಂದು ದಿನ ನಂದಿನಿಯು ಗುಡ್ಡ ತಪ್ಪಲಲ್ಲಿ ಮೇಯುತ್ತ ಗುಹೆಯೊಂದನ್ನು ಹೊಕ್ಕಿತು. ರಾಜನೂ ಹಿಂಬಾಲಿಸಿದನು. ಆದರೆ ಅಲ್ಲಿ ಭಯಾನಕ ದೃಶ್ಯ. ನಂದಿನಿಯ ಮೇಲೆ ಸಿಂಹವೊಂದು ಕುಳಿತಿದೆ ! ಸಿಂಹವನ್ನು ಕೊಲ್ಲಲು ಬಾಣದ ಬತ್ತಳಿಕೆಯೊಳಗೆ ಕೈ ಹಾಕಿದ. ಆದರೆ ಕೈ ತನ್ನ ಸ್ವಾಧೀನ ಕಳೆದುಕೊಂಡಿತು. ಆಗ ಗೊಂದಲದಲ್ಲಿ ಬಿದ್ದ. ಆಗ ಸಿಂಹಕ್ಕೆ ಮೊರೆ ಹೊಕ್ಕನು. 'ಬೇಕಾದರೆ ನನ್ನನ್ನು ಭಕ್ಷಿಸು. ಆದರೆ ನಂದಿನಿಗೆ ರಕ್ಷಣೆ ನೀಡು' ಎಂದು ಬೇಡಿಕೊಂಡನು. ದಿಲೀಪ ತಲೆ ತಗ್ಗಿಸಿ ಸಿಂಹದ ಎದುರಿಗೆ ನಿಂತು ತಲೆ ಎತ್ತಿ ನೋಡಿದಾಗ ಸಿಂಹವು ಮಾಯವಾಗಿತ್ತು.

ದಿಲೀಪನ ಕೋರಿಕೆ ಸಾಂಗವಾಯಿತು. ದಿಲೀಪನಿಗೆ ರಘು ಎಂಬ ಪುತ್ರನು ಹುಟ್ಟಿದನು. ಆಗಲೇ ತೊಂಭತ್ತೊಂಬತ್ತು ಯಜ್ಞ ಆಚರಿಸಿದ್ದ ದಿಲೀಪನು ಶತಕ್ರತು ಆಚರಿಸಿದನು. ಇದು ಇಂದ್ರ ಪದವಿಗೇರುವ ಕೊನೆಯ ಹೆಜ್ಜೆ. ಅದರಿಂದ ವಿಘ್ನಗಳು ಎದುರಾದವು. ಮಾನವನಿಗೆ ಒಂದಾದ ಮೇಲೊಂದು ಆಸೆ. ಆಸೆ ತೀರುವ ತನಕ ಪಾಶಮುಕ್ತನಲ್ಲ. ಎಂಥ ದೊಡ್ಡ ಚಕ್ರವರ್ತಿಯಾದರೂ ಅಷ್ಟೇ.

ಸಗರ :

ಆ. ಸಗರ ಮಹಾರಾಜ ಚಕ್ರವರ್ತಿಯಾಗಿ,
ಪರರು ತನ್ನ ಪೊಗಳಿ, ಬಾಳಿ ಹೋದ.
ಇಂತಿರೆ ವಿಧಿ, ಕೇಡು ಎಂತೊ ಬಗೆಯಲೇನೊ ?
ವಿಶ್ವದಾಭಿರಾಮ ಕೇಳು ವೇಮ.

ಆ. ಸಗರಯುರ್ವಿರಾಜ ಚಕ್ರವರ್ತಿಯಯ್ಯ !
ಪರರು ಹೊಗಳುವಂತೆ ಬಾಳುತಿದ್ದ.
ಇಂಥ ಘನತೆಯುಳ್ಳ ಇವನಿಗೇನು ಆಯ್ತು ?
ವಿಶ್ವದಾಭಿರಾಮ ಕೇಳು ವೇಮ.

ಅಯೋಧ್ಯೆಯ ಅಧಿಪತಿಗಳಲ್ಲಿ ಸಗರನು ಪ್ರಭಾವಶಾಲಿ. ಅವನಿಗೆ ಕೇಶಿನಿ ಮತ್ತು ಸುಮತಿಯರೆಂಬ ಇಬ್ಬರು ಪತ್ನಿಯರು. ಕೇಶಿನಿ ವಿದರ್ಭ ದೇಶದ ರಾಜಕುಮಾರಿ ; ಸುಮತಿಯು ಕಶ್ಯಪ ಋಷಿಯ ಪುತ್ರಿ. ಅವನು ಸಂತಾನ ಪ್ರಾಪ್ತಿ ಕೋರಿ ಭೃಗು ಮುನಿಗಳ ಆಶ್ರಮದ ಬಳಿ ನೂರು ವರ್ಷ ತಪಸ್ಸು ಮಾಡಿದನು. ಮುನಿಗಳು ಸಂಪ್ರೀತರಾಗಿ ನೀಡಿದ ವರದಿಂದ ಕೇಶಿನಿಯು ವಂಶವೃದ್ಧಿಗಾಗಿ ಓರ್ವ ಅಸಮಂಜ ಎಂಬ ಪುತ್ರನನ್ನು ಹಡೆದಳು. ಸುಮತಿಯು ಸೋರೆಕಾಯಿಯಂತಹ ಪಿಂಡವನ್ನು ಹೆತ್ತಳು. ಅದು ಒಡೆದು ಅರುವತ್ತು ಸಾವಿರ ಶಿಶುಗಳು ಹೊರಬಂದವು. ಕೇಶಿನಿಯ ಮಗ ಅಸಮಂಜನು ದುರ್ಗುಣಿಯಾದ. ಕಂಡ ಕಂಡ ಬಾಲಕರನ್ನು ಸರಯೂ ನದಿಯಲ್ಲಿ ಮುಳುಗಿಸತೊಡಗಿದನು. ರಾಜ ಪುತ್ರನೇ ಹೀಗಾದ ಮೇಲೆ, ರಾಜ್ಯದ

ಗತಿಯೇನು ? ರಾಜನು ಆ ದುಷ್ಟ ಮಗನನ್ನು ಕಾಡಿಗೆ ಅಟ್ಟಿದನು. ಅಂಶುಮಂಜನಿಗೆ ಅಂಶುಮಂತನೆಂಬ ಪುತ್ರ ಜನಿಸಿದ್ದ.

ಸಗರ ಮಹಾರಾಜನಿಗೆ ತನ್ನ ಚಕ್ರವರ್ತಿ ಪದದ ವಿಭವವನ್ನು ಮೆರೆಸಲು ತಾನು ಕಣ್ಣು ಮುಚ್ಚುವ ಮುನ್ನ ಅಶ್ವಮೇಧ ಯಾಗವನ್ನು ಕೈಕೊಳ್ಳುವ ಆಸೆಯಾಯಿತು. ಅವನು ಹಿಮಾಲಯ ಮತ್ತು ವಿಂಧ್ಯ ಪರ್ವತಗಳ ನಡುವಿನ ಆರ್ಯಾವರ್ತದಲ್ಲಿ ಯಾಗವನ್ನು ಕೈಕೊಂಡ. ಯಾಗದ ಕುದುರೆಯ ರಕ್ಷಣೆಗೆ ಅಂಶುಮಂತನು ಹೊರಟ. ಇಂದ್ರನು ಮಾಯಾ ರೂಪ ಧರಿಸಿ, ಕುದುರೆಯನ್ನು ಕದ್ದೊಯ್ದು ಪಾತಾಳ ಲೋಕದಲ್ಲಿ ಕಪಿಲ ಮಹರ್ಷಿಯ ಆಶ್ರಮದಲ್ಲಿ ಒಯ್ದು ಕಟ್ಟಿದ.

ಋತ್ವಿಜರ ಆದೇಶದಂತೆ ಯಜಮಾನನಾದ ಸಗರನು ಅಶ್ವಶೋಧಕ್ಕೆ ತನ್ನ ಅರವತ್ತು ಸಾವಿರ ಮಕ್ಕಳನ್ನು ಕಳಿಸಿದನು. ಅವರು ಭೂಮಿಯನ್ನೆಲ್ಲ ಅಲೆದು ಹುಡುಕಿ, ಕೊನೆಗೆ ಭೂಮಿಯನ್ನು ಅಗೆದು ಪಾತಾಳದಲ್ಲಿ ಹುಡುಕಾಟ ಪ್ರಾರಂಭಿಸಿದರು. ಅಲ್ಲೋಲ ಕಲ್ಲೋಲವಾಯಿತು. ಶಸ್ತ್ರ ಪ್ರಹಾರಕ್ಕೆ ಸಿಕ್ಕ ನಾಗರು ಹಲುಬಿದರು. ದೇವಗಂಧರ್ವರೂ ಬ್ರಹ್ಮನಲ್ಲಿ ದೂರಿದರು. 'ತಡೆಯಿರಿ ಅವರಿಗೆ ಶಾಸ್ತಿಯಾಗುತ್ತದೆ' ಎಂದು ಬ್ರಹ್ಮನು ನುಡಿದನು

ಸಗರ ಪುತ್ರರು ತಮ್ಮ ಶೋಧ ಕಾರ್ಯವನ್ನು ಮುಂದುವರಿಸಿ ಪಾತಾಳದಲ್ಲಿ, ಕಟ್ಟಿ ಹಾಕಿದ ಯಜ್ಞಾಶ್ವವನ್ನು ಕಂಡು ಹರ್ಷಿತರಾದರು. ಬಳಿಯಲ್ಲಿಯೇ ಧ್ಯಾನಮಗ್ನ ತಪಸ್ವಿಯೋರ್ವನನ್ನು ಕಂಡು, 'ಹಾ ಬನ್ನಿ ಅಶ್ವ ಚೋರನು ಇಲ್ಲಿದ್ದಾನೆ' ಎಂದು ಅಬ್ಬರಿಸಿದರು. ಈ ಗಲಭೆಯಿಂದ ತಪಸ್ವಿಯ ಧ್ಯಾನ ಭಂಗವಾಯಿತು. ಅವನು ಕೋಪದಿಂದ ಕಣ್ಣು ತೆರೆದನು. ಅವನು ಮಹಾಋಷಿ ಕಪಿಲ. ಅವನ ಅಗ್ನಿ ನೇತ್ರದ ಉರಿಯಿಂದ ಅರವತ್ತು ಸಾವಿರ ಸಗರ ಪುತ್ರರೂ ಭಸ್ಮವಾದರು.

ಅಂಶುಮಂತನು ತನ್ನ ಚಿಕ್ಕಪ್ಪಂದಿರು ಹೋದ ಹಾದಿಯಲ್ಲಿ ನಡೆದು ಹಾದಿಯಲ್ಲಿ ದಿಗ್ಗಜಗಳನ್ನು ವಿಚಾರಿಸುತ್ತ ನಡೆದನು. ಕೊನೆಗೆ ಪಾತಾಳದಲ್ಲಿ ಕುದುರೆಯನ್ನು ಮತ್ತು ತನ್ನ ಅರವತ್ತು ಸಾವಿರ ಚಿಕ್ಕಪ್ಪಂದಿರ ಭಸ್ಮೀಕೃತ ದೇಹರಾಶಿಯನ್ನೂ ಅವನು ಕಂಡನು. ಪಾಪ ! ಸಗರನ ಗತಿಯೇನು ? ಕುದುರೆ ಸಿಕ್ಕಿತು. ಯಜ್ಞ ಫಲವೂ ಲಭಿಸಿತು. ಆದರೆ ಸತ್ತ ಅರವತ್ತು ಸಹಸ್ರ ಮಕ್ಕಳು ಬರಬಹುದೇ ? 'ಪುತ್ರ ಶೋಕಂ ನಿರಂತರಂ'. ಮಕ್ಕಳ ಚಿಂತೆ ಹೆಚ್ಚಿತು. ಅವರನ್ನು ಬದುಕಿಸಲು ದೇವಲೋಕದ ಗಂಗೆಯನ್ನು ಹರಿಸಬೇಕು. ಇದು ಸಾಧ್ಯವೇ ? ಈ ಚಿಂತೆಯಲ್ಲಿಯೇ ಅವನು ಪ್ರಾಣ ಬಿಟ್ಟನು.

ಸಗರನು ದೊಡ್ಡ ಚಕ್ರವರ್ತಿ. ಎಲ್ಲರೂ ಹಾಡಿ ಹೊಗಳುವಂತೆ ಬಾಳಿದನು. ಆದರೆ, ಅವನ ಪೂರ್ವ ಕರ್ಮದಿಂದ ವಿಧಿಯ ಆಟದಂತೆ ಒಬ್ಬ ಹಿರಿಯ ಮಗ ಉಢಾಫೆಯಾದ. ಉಳಿದ ಅರುವತ್ತು ಸಹಸ್ರ ಮಕ್ಕಳು ಋಷಿ ಶಾಪದಿಂದ ಸುಟ್ಟು ಬೂದಿಯಾದರು. ಅವನ ಹಣೆ ಬರಹ!

ಭಾರ್ಗವ : ಪರಶುರಾಮ

ಪುರಾಣಗಳಲ್ಲಿ ಉಲ್ಲೇಖಿತವಾದ ದಶಾವತಾರಗಳೆಂದರೆ, ಮತ್ಸ್ಯ, ಕೂರ್ಮ, ವರಾಹ,

ನಾರಸಿಂಹ, ವಾಮನ, ಪರಶುರಾಮ, ರಾಮ, ಕೃಷ್ಣ, ಬುದ್ಧ ಮತ್ತು ಕಲ್ಕಿ. ಹೀಗೆ ಪರಶುರಾಮನು, ವಿಷ್ಣುವಿನ ಆರನೆಯ ಅವತಾರ.

ಪರಶುರಾಮನು ಜಮದಗ್ನಿಯ ಮಗ. ಅವನ ತಾಯಿ ರೇಣುಕಾದೇವಿ. ಅವಳೊಮ್ಮೆ ಸ್ನಾನ ಮುಗಿಸಿ ಪರ್ಣಶಾಲೆಗೆ ಹಿಂದಿರುಗುತ್ತಿದ್ದಾಗ, ಚಿತ್ರರಥನೆಂಬ ರಾಜನ ರೂಪ ಕಂಡು ಮೋಹಿತಳಾದಳು. ಮನಸ್ಸಿನಿಂದ ರೇಣುಕೆಯು ಅಪವಿತ್ರಳಾದುದು ಜಮದಗ್ನಿಗೆ ಭಾಸವಾಯಿತು. ಅವರು ಕೋಪಾವಿಷ್ಟರಾಗಿ, ರುಮಣ್ವಂತ, ಸುಷೇಣ, ವಸು, ವಿಶ್ವಾವಸುಗಳೆಂಬ ತನ್ನ ನಾಲ್ವರು ಹಿರಿಯ ಮಕ್ಕಳನ್ನು ಕರೆದು ಆಕೆಯನ್ನು ಕೊಲ್ಲಲು ಆಜ್ಞಾಪಿಸಿದರು. ಅವರಾರೂ ಮಾತೃವಧೆಗೆ ಒಪ್ಪಲಿಲ್ಲ. 'ನೀವು ಪಶುಪಕ್ಷಿಗಳಾಗಿ'ಎಂದು ಜಮದಗ್ನಿಯು ಅವರಿಗೆ ಶಾಪವಿತ್ತನು. ಆಗ ಕೊನೆಯ ಮಗನಾದ ಪರಶುರಾಮನಿಗೆ ಆ ಕಾರ್ಯದ ಹೊಣೆ ಹೊರಿಸಿದನು. ಪರಶುರಾಮನು ತಂದೆಯ ಮಾತನ್ನು ಸಿರಸಾವಹಿಸಿ ತಾಯಿಯ ಕೊಲೆಯನ್ನು ಮಾಡಿದನು. ತನ್ನ ಪಾದಾರವಿಂದಗಳಿಗೆ ವಂದಿಸಿದ ಪುತ್ರನನ್ನು ಕಂಡು ಜಮದಗ್ನಿಗೆ ಅತಿ ಅಭಿಮಾನವೆನಿಸಿತು. ಅವನು, 'ಬೇಕಾದ ವರ ಬೇಡು' ಎಂದನು. ಆಗ ಪರಶುರಾಮನು, 'ನನ್ನ ತಾಯಿ ಬದುಕುಳಿಯಬೇಕು. ನನ್ನ ಅಣ್ಣಂದಿರ ಶಾಪ ವಿಮೋಚನೆಯಾಗಬೇಕು. ನನಗೆ ಮಾತೃ ವಧೆಯ ಪಾಪವಾಗಲಿ, ಸ್ಮರಣೆಯಾಗಲಿ, ಉಳಿಯಬಾರದು' ಎಂದು ವರ ಬೇಡಿದನು. ಅವುಗಳೆಲ್ಲ ಈಡೇರಿದವು.

ಮದ ತುಂಬಿದ್ದ ಸಹಸ್ರಬಾಹು ಕಾರ್ತವೀರ್ಯನು ಒಮ್ಮೆ ಜಮದಗ್ನಿಗಳ ಆಶ್ರಮದಲ್ಲಿ ಯಥೋಚಿತ ಸತ್ಕಾರ ಸ್ವೀಕರಿಸಿ, ಆಶ್ರಮದ ಧೇನುವನ್ನು ಅಪಹರಿಸಿದನು. ಕೋಪಾವಿಷ್ಟನಾದ ಪರಶುರಾಮನು ಕಾರ್ತವೀರ್ಯನ ತಲೆಯನ್ನು ತನ್ನ ಗಂಡು ಗೊಡಲಿಯಿಂದ ಹಾರಿಸಿ, ಅವನನ್ನು ಕೊಂದು ಹಾಕಿದನು. ಒಮ್ಮೆ ಪರಶುರಾಮನು ಆಶ್ರಮದಿಂದ ಹೊರ ಹೋಗಿದ್ದಾಗ, ಕಾರ್ತವೀರ್ಯನ ಮಕ್ಕಳು ಜಮದಗ್ನಿ ಋಷಿಯನ್ನು ಕೊಂದು ಹಾಕಿದರು. ಸನ್ಮಾರ್ಗ ಪ್ರವೃತ್ತಕರಾದ, ಪಾಪರಹಿತರಾದ, ತಂದೆಯ ದುರ್ಮರಣವನ್ನು ಕಂಡು ಪರಶುರಾಮನ ಕೋಪವು ಭುಗಿಲೆದ್ದಿತು. ತನ್ನ ತಂದೆಯ ಮೇಲೆ ಹೇಡಿಗಳಂತೆ ಕೈ ಮಾಡಿದ ಆ ದುಷ್ಟರ ಮೇಲಿನ ಕೋಪವು ಪ್ರಚಂಡ ಸೇಡಾಗಿ ಕಾಣಿಸಿಕೊಂಡಿತು. ಅದಕ್ಕೆ ಕಾರ್ತವೀರ್ಯನ ಮಕ್ಕಳೇ ಪ್ರಥಮ ಬಲಿಯಾದರು. ಅವನ ಕೋಪವು ಅಷ್ಟಕ್ಕೇ ಶಮನವಾಗಲಿಲ್ಲ. ಇಪ್ಪತ್ತೊಂದು ಬಾರಿ ಭೂ ಪ್ರದಕ್ಷಿಣೆ ಮಾಡಿ, ಕ್ಷತ್ರಿಯರನ್ನೆಲ್ಲ ಕೊಂದನು.

ಕ್ಷತ್ರಿಯ ಕುಲವನ್ನು ವಿನಾಶಗೊಳಿಸಿ, ಅವರ ರಕ್ತದಿಂದ ಸಮಂತಪಂಚಕವೆಂಬಲ್ಲಿ ಐದು ರಕ್ತ ಸರೋವರಗಳನ್ನು ಪರಶುರಾಮನು ನಿರ್ಮಿಸಿದನು. ತನ್ನ ತಾತ ರುಚೀಕನ ಮಾತಿನಂತೆ, ಕ್ಷತ್ರಿಯ ವಧೆಯನ್ನು ನಿಲ್ಲಿಸಿ, ಮಹಾಯಜ್ಞವೊಂದನ್ನು ಆರಂಭಿಸಿದ್ದಲ್ಲದೆ, ತಾನು ಗೆದ್ದ ಭೂಮಿಯನ್ನೆಲ್ಲ ಕಶ್ಯಪನಿಗೆ ದಾನ ಮಾಡಿ, ಮಹೇಂದ್ರ ಪರ್ವತದಲ್ಲಿ ತಪಸ್ಸಿಗೆ ಕುಳಿತನು.

ಪರಶುರಾಮರು ಯೋಧರು, ತಪಸ್ವಿಗಳು. ಒಮ್ಮೆ ಅವರಿಗೆ ಅರ್ಘ್ಯಪಾದ್ಯಾದಿ ನೀಡಿ, ದಶರಥನು ಅಧೋಮುಖನಾಗಿ ನಿಂತನು. ಪರಶುರಾಮನು ಅವರತ್ತ ನೋಡದೆ ರಾಮನನ್ನು ಉದ್ದೇಶಿಸಿ, ನೀನು ಜನಕನ ಸಭೆಯಲ್ಲಿ ಶಿವಧನುಸ್ಸನ್ನು ಮುರಿದೆಯೆಂದು ಕೇಳಿದ್ದೇನೆ. ಆದರೆ ಇದು ವಿಷ್ಣುಧನುಸ್ಸು ಇದಕ್ಕೆ ಹೆದೆಯೇರಿಸು ಎಂದನು. ರಾಮನು ವೈಷ್ಣವ ಧನುಸ್ಸನ್ನು ಹಿಡಿದು ಬಾಣ ಹೂಡಲು ಸಿದ್ಧನಾದ. ಪರಶುರಾಮರ ಮುಖ ಬಾಡಿತು.

ಅಂದಿಗೆ ಪರಶುರಾಮನ ಅವತಾರ ಸಮಾಪ್ತಿಯಾಯಿತು. ಪ್ರಾಂಜಲ ಮನಸ್ಸಿನಿಂದ ಪರಶುರಾಮರು ರಾಮನ ಗುಣಗಾನ ಮಾಡಿದರು. ನನ್ನ ತಪಶ್ಶಕ್ತಿಯನ್ನು ನಿನಗೇ ಅರ್ಪಿಸುತ್ತೇನೆ. ನಾನು ಮಹೇಂದ್ರ ಪರ್ವತಕ್ಕೆ ಹೋಗುವೆನೆಂದರು.

ಭಗೀರಥ :

ಈಕ್ಷ್ವಾಕು ಕುಲದ ರಾಜರಲ್ಲಿ ಮರೆಯಲಾರದ ಹೆಸರು ಭಗೀರಥ ಚಕ್ರವರ್ತಿಯದು. ಮಹಾಯಜ್ಞ ನಡೆಸಿದ ಸಗರ, ಅವನ ಹಿರಿಯ ಮಗನ ಮಗ ಅಂಶುಮಂತ, ಅನಂತರ ದಿಲೀಪ, ದಿಲೀಪನ ನಂತರ ಅವನ ಮಗ ರಘು, ಅನಂತರ ಭಗೀರಥ. ಹೀಗೆ ಮಹಾಚಕ್ರವರ್ತಿಗಳೇ ಅಯೋಧ್ಯೆಯನ್ನು ಆಳಿ ಹೋಗಿದ್ದಾರೆ. ಅನ್ಯರಿಗೆ ಅಸಾಧ್ಯವಾದ ಮಹಾಕಾರ್ಯಗಳ ಸಾಧನೆಯ ಸಿದ್ಧಿಯು ಭಗೀರಥನ ವಿಶೇಷತೆ. ಅವನೇನು ಮಾಡಿದ ? ದೇವಲೋಕದ ಗಂಗೆಯನ್ನು ಭೂಲೋಕಕ್ಕೂ ಅಲ್ಲಿಂದ ಪಾತಾಳ ಲೋಕಕ್ಕೂ ತಂದ ಮಹಾಪುರುಷನೀತ.

ಸಗರ ಮಹಾರಾಜನ ಅಶ್ವಮೇಧ ಯಜ್ಞ ಕಾಲಕ್ಕೆ ಯಜ್ಞಾಶ್ವವನ್ನು ಹುಡುಕುತ್ತ ಪಾತಾಳಕ್ಕೂ ಹೋದ ಸಗರನ ಅರುವತ್ತು ಸಾವಿರ ಜನ ಮಕ್ಕಳು ಕಪಿಲ ಮಹರ್ಷಿಯ ಆಶ್ರಮದ ಬಳಿ, ಯಜ್ಞಾಶ್ವವನ್ನು ಕಂಡು ಅವರೇ ಕಳ್ಳರೆಂದು ಭಾವಿಸಿ, ಮುನಿಯ ತಪೋಭಂಗ ಮಾಡಿದರು. ಆಗ ಮುನಿಯು ಕೋಪದಿಂದ ಕಣ್ಣು ತೆರೆದು ಸಗರ ಪುತ್ರರನ್ನು ಕೋಪಾಗ್ನಿಯಿಂದ ದಗ್ಧರನ್ನಾಗಿ ಮಾಡಿದ. ಅವರನ್ನು ಸ್ವರ್ಗಕ್ಕೆ ಕಳಿಸಲು ದೇವಲೋಕದ ಗಂಗೆಯ ಸ್ಪರ್ಶವಾಗಬೇಕಿತ್ತು. ಹಿಂದೆ ಅಗಸ್ತ್ಯ ಮಹರ್ಷಿಯು ಸಮುದ್ರವನ್ನು ಆಪೋಷಣೆ ಮಾಡಿ, ಪೃಥ್ವಿಯಲ್ಲಿ ಜಲಕ್ಷಾಮ ಉಂಟಾಗಿತ್ತು. ಅದರ ನಿವಾರಣೆಗೂ ಗಂಗೆಯು ಇಳಿದು ಬರಬೇಕಿತ್ತು. ಹೀಗಾಗಿ ನೀರಿಗಾಗಿ ಹಾತೊರೆದ ಪೃಥ್ವಿಯ ದಾಹ ತಣಿಸಲು, ಭಗೀರಥನು ಬ್ರಹ್ಮನನ್ನು ಕುರಿತು ಘೋರ ತಪಸ್ಸು ಮಾಡಿದ. ತಪಸ್ಸಿಗೆ ಮೆಚ್ಚಿ ಬ್ರಹ್ಮನು ಪ್ರತ್ಯಕ್ಷನಾದಾಗ, ಅವನಿಂದ ಭಗೀರಥನು ಎರಡು ವರ ಕೇಳಿದನು. ಒಂದನೆಯದಾಗಿ ತನಗೆ ಸಂತಾನ ಪ್ರಾಪ್ತಿ, ಎರಡನೆಯದಾಗಿ ತನ್ನ ಮುತ್ತಾತಂದಿರ ಮೋಕ್ಷಕ್ಕಾಗಿ ಗಂಗೆಯನ್ನು ಪಾತಾಳಕ್ಕೆ ಕಳಿಸುವುದು. ಬ್ರಹ್ಮನು ಇದಕ್ಕೊಪ್ಪಿದನಾದರೂ 'ಗಂಗೆಯು ಭೂಮಿಗೆ ಧುಮ್ಮಿಕ್ಕಿದರೆ ಏನು ಗತಿ ? ಅವಳ ರಭಸವನ್ನು ತಡೆಯುವ ಶಕ್ತಿ ಶಂಕರನಿಗೆ ಮಾತ್ರ ಇದೆ. ಅವನನ್ನು ಒಪ್ಪಿಸಿದಿಯಾದರೆ ಗಂಗೆ ಬರುವಳು' ಎಂದು ಹೇಳಿದನು. ಭಗೀರಥನು ತುದಿಗಾಲಲ್ಲಿ ನಿಂತು ತಪಸ್ಸು ಮಾಡಿ ಶಂಕರನನ್ನು ಒಲಿಸಿಕೊಂಡನು. ಶಂಕರನು 'ಆಗಲಿ ಶೈಲರಾಜ ಸುತೆಯನ್ನು ನನ್ನ ಶಿರಸ್ಸಿನಲ್ಲಿ ಧರಿಸುತ್ತೇನೆ' ಎಂದು ಗಂಗಾಧರನಾಗಲು ಒಪ್ಪಿದನು. ''ತಾಯೀ ಲೋಕಹಿತಕ್ಕಾಗಿ ಭೂಲೋಕಕ್ಕೆ ಇಳಿದು ಬಾ, ಭೂಲೋಕದ ನೀರಡಿಕೆಯನ್ನು ತಣಿಸು. ನನ್ನ ಮುತ್ತಾತಂದಿರಿಗೆ ಪುಣ್ಯಲೋಕ ಕರುಣಿಸು'' ಎಂದು ಭಗೀರಥನು ಗಂಗೆಯನ್ನು ಬೇಡಿಕೊಂಡನು.

ಭಗೀರಥನ ಪ್ರಾರ್ಥನೆಯನ್ನು ಗಂಗೆ ಮನ್ನಿಸಿದಳು. ಶಿವ ಶಿರಸ್ಸಿನ ಮೇಲೆ ಮಹಾರಭಸದೊಡನೆ ಧುಮುಕಿದಳು. ಶಂಕರನು ತನ್ನ ಮಾತಿನಂತೆ ಜಟೆಯನ್ನು ಹರಡಿಕೊಂಡು ನಿಂತ. ಈ ಸ್ಮಶಾನವಾಸಿ ಶಂಕರನು ತನ್ನ ರಭಸವನ್ನು ತಡೆಯಲಾರ, ಎಂದು ಗಂಗೆಗೆ ಅಹಂಭಾವವಿತ್ತು. ಇದನ್ನರಿತ ಶಂಕರನು ಅವಳನ್ನು ತನ್ನ ಜಟೆಯಲ್ಲಿಯೇ ತಡೆಹಿಡಿದನು. ಭಗೀರಥ ಮರಳಿ ಶಂಕರನನ್ನು ಪ್ರಾರ್ಥಿಸಿದ ಮೇಲೆ, ಆಕೆಯನ್ನು ಬಿಂದು ಸರೋವರಕ್ಕೆ ಬಿಟ್ಟನು.

ಅವಳು ಅಲ್ಲಿಂದ ಏಳು ಕವಲುಗಳಾಗಿ ಹರಿದಳು. ಹ್ಲಾದಿನೀ, ಪಾವನೀ, ನಲಿನೀ ಪ್ರವಾಹಗಳು ಪೂರ್ವಕ್ಕೂ, ಸುಚಕ್ಷು, ಸೀತಾ, ಸಿಂಧುಗಳು ಪಶ್ಚಿಮಕ್ಕೂ ಹರಿದಿದೆ, ಅಲಕನಂದಾ ಪ್ರವಾಹವು ಭಗೀರಥನ ಹಿಂದೆ ಹಿಂದೆ ಹರಿಯಿತು.

ಸ್ವರ್ಗದಿಂದ ಇಳಿದು ಬಂದ,ಮತ್ತು ಶಂಕರನ ಜಡೆಯಿಂದ ಹರಿದು ಬಂದ, ಗಂಗೆ ಭೂಲೋಕದಲ್ಲಿ ಪಾಪಹಾರಿ ಎನಿಸಿದಳು. ಶಾಪ ಗ್ರಸ್ತರು ಅವಳಲ್ಲಿ ಮಿಂದು ಪುನೀತರಾದರು. ದೇವತೆಗಳೂ ಋಷಿಗಳೂ ಅವಳನ್ನು ಹಿಂಬಾಲಿಸಿದರು. ಆದರೆ ಹಾದಿಯಲ್ಲಿ ಕಂಟಕವೊಂದು ಕಾದಿತ್ತು. ಜಹ್ನು ಋಷಿಯ ಯಜ್ಞ ಶಾಲೆಯನ್ನು ಮುಳುಗಿಸಿದ್ದಕ್ಕಾಗಿ ಆ ಋಷಿಯು ಅವಳನ್ನು ಆಪೋಷಣ ಮಾಡಿದನು. ಋಷಿಯನ್ನು ದೇವ ಗಂಧರ್ವರು ಸಂಧಿಸಿ, ಗಂಗೆಯನ್ನು ಮಗಳಂತೆ ಕಂಡು, ಅವಳ ತಪ್ಪನ್ನು ಕ್ಷಮಿಸಲು ಪ್ರಾರ್ಥಿಸಿದರು. ಋಷಿ ಅವರ ಪ್ರಾರ್ಥನೆಯನ್ನು ಮನ್ನಿಸಿದನು. ಹೀಗಾಗಿ ಗಂಗೆ ಜಾಹ್ನವಿ ಎಂದೂ ಕರೆಯಲ್ಪಟ್ಟಳು. ಮುಂದೆ ಅವಳು ಭಗೀರಥನ ಹಿಂದೆ ಹಿಂದೆ ಪಾತಾಳ ಲೋಕಕ್ಕೂ ಹರಿದು ಅಲ್ಲಿ ಅದೆಷ್ಟೋ ಸಾವಿರ ವರ್ಷಗಳ ಹಿಂದೆ ಭಸ್ಮವಾದ ಭಗೀರಥನ ಮುತ್ತಾತಂದಿರ ಭಸ್ಮರಾಶಿಯನ್ನು ತೊಯ್ಯಿಸಿ, ಪರಿಶುದ್ಧಗೊಳಿಸಿ ಸದ್ಗತಿಯನ್ನು ಕರುಣಿಸಿದಳು. ಹೀಗೆ ದೇವಲೋಕ, ಭೂಲೋಕ ಮತ್ತು ಪಾತಾಳಲೋಕದಲ್ಲಿ ಹರಿದು ದಣಿದ ಅವಳಿಗೆ ತ್ರಿಪಥಗಾಮಿನಿ ಎಂದೂ ಹೆಸರಾಯಿತು.

ಭಗೀರಥನಿಗೆ ಬ್ರಹ್ಮನು ಪ್ರತ್ಯಕ್ಷನಾಗಿ, ಅವನ ಅವಿಶ್ರಾಂತ ಪ್ರಯತ್ನವನ್ನು ಪ್ರಶಂಸಿಸಿ, ಗಂಗೆಗೆ ಇಂದಿನಿಂದ ಭಾಗೀರಥಿ ಎಂದು ಹೆಸರಾಗಲಿ ಮತ್ತು ಅವಳು ಧರೆಯನ್ನು ಪಾವನಗೊಳಿಸಲಿ ಎಂದು ಹರಸಿದನು.

ಯಯಾತಿ :

ನಹುಷನ ಆರು ಜನ ಮಕ್ಕಳಲ್ಲಿ ಯಯಾತಿಯು ರಾಜನಾಗಿ ದೇವಯಾನಿಯನ್ನೂ, ವೃಷಪರ್ವ ರಾಜನ ಮಗಳಾದ ಶರ್ಮಿಷ್ಠೆಯನ್ನು ವಿವಾಹವಾದನು. ವೃಷಪರ್ವ ರಾಜನ ಪುತ್ರಿಯಾದ ಶರ್ಮಿಷ್ಠೆಗೂ, ಶುಕ್ರಾಚಾರ್ಯರ ಮಗಳಾದ ದೇವಯಾನಿಗೂ ಕಲಹವಾಗಿ ಅವಳಿಂದ ಬಾವಿಗೆ ತಳ್ಳಲ್ಪಟ್ಟ ದೇವಯಾನಿಯನ್ನು ಯಯಾತಿಯು ಒಮ್ಮೆ ಕೈಹಿಡಿದು ಮೇಲಕ್ಕೆತ್ತಿದ್ದನು. ಆಕೆಯು ಯಯಾತಿಯನ್ನು ಕುರಿತು, 'ನೀನೇ ನನ್ನ ಪತಿಯಾಗಬೇಕು' ಎಂದು ಬಲವಂತಪಡಿಸಿ ಒಪ್ಪಿಸಿದಳು. ನಂತರ ತಂದೆಯ ಬಳಿ ಸಮಸ್ತ ವೃತ್ತಾಂತವನ್ನು ತಿಳಿಸಲು, ಶುಕ್ರಾಚಾರ್ಯರು ರಾಜಪುತ್ರಿಯಾದ, ವೃಷಪರ್ವ ರಾಜನ ಮಗಳಾದ, ಶರ್ಮಿಷ್ಠೆಯ ಮೇಲೆ ಕೋಪಗೊಂಡು, ಅವಳ ವಿವಾಹವಾಗುವುದಾದರೆ, ನಾನಿಲ್ಲಿ ಒಂದು ಅರೆ ಕ್ಷಣವೂ ಇರುವುದಿಲ್ಲವೆಂದು ಹೊರಡಲನುವಾದರು. ವೃಷಪರ್ವ ರಾಜನು ಗುರುಗಳ ಕೋಪವು ನಮ್ಮ ಕುಲವನ್ನೇ ನಾಶ ಮಾಡೀತು ; ಎಂದು ಅರಿತು ಶುಕ್ರಾಚಾರ್ಯರಲ್ಲಿ ಬಂದು ಶರಣಾಗತನಾದನು. ಆಗ ಆಚಾರ್ಯರು, ರಾಜಪುತ್ರಿ ಶರ್ಮಿಷ್ಠೆಯು ತಮ್ಮ ಮಗಳಿಗೆ ದಾಸಿಯಾಗಿರಬೇಕೆಂದೂ, ಯಯಾತಿ ರಾಜನನ್ನೇ ಮದುವೆಯಾದರೂ ರಾಜನ ಸಂಪರ್ಕವಿಲ್ಲದೆ, ಸೇವಾವೃತ್ತಿಯಲ್ಲಿರುವಂತೆ ಒಪ್ಪಂದ ಮಾಡಿದ್ದರು.

ಆದರೆ ದೈವ ಯೋಗದಿಂದ, ಶರ್ಮಿಷ್ಠೆಗೂ ಪುತ್ರ ಸಂತಾನವಾದ್ದರಿಂದ

ದೇವಯಾನಿಯು ಕ್ರೋಧದಿಂದ ಅವಳನ್ನು ತಿರಸ್ಕಾರ ಮಾಡಿ, ತಂದೆಯ ಬಳಿ, ಯಯಾತಿಯು ತನಗೆ ವಂಚಿಸಿ, ಶರ್ಮಿಷ್ಠೆಯನ್ನು ಪ್ರೀತಿಸುತ್ತಿದ್ದಾನೆಂದು ತಿಳಿಸಿದಳು. ಅದರಿಂದ ಕುಪಿತರಾದ ಶುಕ್ರಾಚಾರ್ಯರು, ನಿನಗೆ ತಾರುಣ್ಯಾವಸ್ಥೆಯಲ್ಲಿಯೇ ವೃದ್ಧಾಪ್ಯ ಉಂಟಾಗಲೆಂದು ಯಯಾತಿಯನ್ನು ಶಪಿಸಿದರು.

ಯಯಾತಿಯು ಶುಕ್ರಾಚಾರ್ಯರನ್ನು ಕುರಿತು, 'ನಿಮ್ಮ ಮಗಳ ಸುಖಕ್ಕಾಗಿಯಾದರೂ ಈ ಶಾಪದಿಂದ ನನ್ನನ್ನು ಪಾರು ಮಾಡಿರಿ' ಎಂದು ಬೇಡಿದನು. ಶುಕ್ರಾಚಾರ್ಯರು ತಮ್ಮ ಶಾಪದ ಪರಿಣಾಮವನ್ನು ನೆನೆದು, 'ಯಯಾತಿ ರಾಜ ! ನಿನ್ನ ಮುಪ್ಪನ್ನು ಬೇರೆಯವರಿಗೆ ಕೊಟ್ಟು, ಅವರ ಯೌವನವನ್ನು, ವಿನಿಮಯವಾಗಿ ಪಡೆಯುವ ಅವಕಾಶ ನೀಡುತ್ತೇನೆ' ಎಂದರು. ಯಯಾತಿ ರಾಜನು ತನ್ನ ಐವರೂ ಮಕ್ಕಳಲ್ಲಿ ಈ ಕುರಿತು ವಿಚಾರಿಸುತ್ತಾನೆ. ಹಿರಿಯರಾದ ನಾಲ್ವರೂ ಅರಸನ ಬೇಡಿಕೆಗೆ ಒಪ್ಪಲಿಲ್ಲವಾದ್ದರಿಂದ, ಅವನು ಕ್ರೋಧ ತಾಳಿ, ಅವರೆಲ್ಲ ದಸ್ಯುಗಳ ರಾಜರಾಗಲೆಂದು ಶಪಿಸುತ್ತಾನೆ. ಕೊನೆಯ ಮಗನಾದ ಪುರು ಈ ವಿನಿಮಯವನ್ನು ಒಪ್ಪಿಕೊಳ್ಳುತ್ತಾನೆ.

ಯಯಾತಿಯು ತನ್ನ ಮಾತಿಗೆ ಬೆಲೆ ನೀಡಿದ ಪುರುವಿಗೆ ಸಾಮ್ರಾಜ್ಯಾಭಿಷೇಕ ಮಾಡಿ, ಆಶೀರ್ವದಿಸಿದನು. ಯಯಾತಿಯು ಒಂದು ಸಾವಿರ ವರುಷಗಳ ವರೆಗೆ ವಿಷಯ ಸುಖಗಳನ್ನು ಅನುಭವಿಸಿ, ಕಡೆಗೆ ಬೇಸತ್ತು ವೈರಾಗ್ಯ ಪಡೆಯುತ್ತಾನೆ. ಕೊನೆಗೆ ಮಗನಿಗೆ ಯೌವನವನ್ನು ಹಿಂದಕ್ಕೆ ಕೊಟ್ಟು, ತಾನು ಕಾಡಿಗೆ ಹೊರಟು ಹೋಗುತ್ತಾನೆ. ಪುರುವು ತಂದೆಯ ವರವೆಂಬಂತೆ ಮೂರ್ಧಾಭಿಷಿಕ್ತನಾಗುತ್ತಾನೆ. ಅಂದರೆ ತಲೆಯ ಮೇಲೆ ಅಭಿಷೇಕ ಹೊಂದುತ್ತಾನೆ. ಮುಂದೆ ಅವನ ವಂಶದವರಿಗೆಲ್ಲ 'ಪೌರವ' ರೆಂಬ ಅಭಿಮಾನದ ಹೆಸರಾಗುತ್ತದೆ.

ಯಯಾತಿಯ ಚರಿತ್ರೆಯು, ಪುರುಷನ ಭೋಗ ಲಾಲಸೆಯು ಸಂತೃಪ್ತಿಯನ್ನು ನೀಡುವುದಿಲ್ಲವೆಂದೂ, ತಪಸ್ಸು, ಯೋಗ ಸಾಧನೆಗಳೇ ಆನಂದ ಪ್ರಾಪ್ತಿಗೆ ಮಾರ್ಗಗಳೆಂದೂ ತಿಳಿಸುತ್ತದೆ.

ಮಾಂಧಾತೃ : ಯುವನಾಶ್ವ

ಮಾಂಧಾತೃ ಮಹಾರಾಜನ ಮೂಲ ಹೆಸರು ಯುವನಾಶ್ವ. ಇವನು ಇಕ್ಷ್ವಾಕು ಕುಲದ ರಾಜ. ಇವನು ಯಥೇಚ್ಛ ಯಜ್ಞ ಯಾಗಗಳನ್ನು ನೆರವೇರಿಸಿದನು. ಅವನಿಗೆ 'ಮಾಂಧಾತೃ' ಎಂಬ ಹೆಸರು ಬಂದದ್ದು ಹೀಗೆ : ಒಮ್ಮೆ, ಅವನು ಸಂತಾನಾಪೇಕ್ಷೆಯಿಂದ ತಪಸ್ಸು ಮಾಡಲು ಕಾಡು ಸೇರಿದನು. ಒಂದು ರಾತ್ರಿ ದಾಹ ಅತಿಯಾಗಿ ನೀರು ಕುಡಿಯಲು ಭೃಗು ಪುತ್ರನಾದ ಚ್ಯವನನ ಆಶ್ರಮಕ್ಕೆ ಹೋದನು. ಎಲ್ಲರೂ ಮಲಗಿದ್ದರು. ಆಗ ಭಾಂಡೆಯಲ್ಲಿದ್ದ ನೀರನ್ನು ಕುಡಿದನು. ಅದು ಅವನಿಗೆ ಸಂತಾನ ಭಾಗ್ಯ ಕರುಣಿಸುವ ಯಜ್ಞದ ಮಂತ್ರ ಪೂರ್ವ ತೀರ್ಥವಾಗಿತ್ತು. ಆ ಪ್ರಯುಕ್ತ ಗಂಡಸಾದರೂ ಅವನೇ ಗರ್ಭ ಧರಿಸಿದ. ಪ್ರಸೂತಿಯೂ ಆಯಿತು.

ಕೂಸಿಗೆ ಮೊಲೆಯುಣಿಸುವವರಾರು ? ಎಂದು ದೇವತೆಗಳು ಇಂದ್ರನನ್ನು ಕೇಳಿದರು. ಆಗ ಇಂದ್ರನು ತನ್ನ ತೋರು ಬೆರಳನ್ನು ಅದರ ಬಾಯಲ್ಲಿಟ್ಟಾಗ ಕೂಸು ಚೀಪಲಾರಂಭಿಸಿತು. ಆಗ ಇಂದ್ರನು 'ಅಯಂ ಮಾಂ ಧಾಸ್ಯತಿ' ಅಂದರೆ ಈ ಮಗುವು ನನ್ನನ್ನೇ ಕುಡಿಯುತ್ತದೆ

ಎಂದನು.ಅನಂತರ ಕೂಸಿಗೆ ಮಾಂಧಾತೃ ಎಂದು ಹೆಸರಾಯಿತು. ಇಂದ್ರನ ತೋರು ಬೆರಳನ್ನೇ ಚೀಪಿದ ಮಗುವೂ ಕೂಡಲೆ ಹದಿಮೂರು ಗೇಣಿನಷ್ಟು ಬೆಳೆಯಿತು. ಅನತಿ ಕಾಲದಲ್ಲಿ ಸಕಲ ದಿವ್ಯಾಸ್ತ್ರಗಳೂ, ಸಕಲ ವೇದಗಳೂ ಅವನಿಗೆ ಕರಗತವಾದವು. ಅವನು ಯಾರ ಸಹಾಯವಿಲ್ಲದೆ, ರುದ್ರ ಧನುಸ್ಸನ್ನೂ, ಶೃಂಗಬಾಣಗಳನ್ನೂ, ಅಭೇದ್ಯ ಕವಚವನ್ನೂ ಪಡೆದನು. ಸ್ವಯಂ ಇಂದ್ರನೇ ಅವನ ಪಟ್ಟಾಭಿಷೇಕವನ್ನು ನೆರವೇರಿಸಿದನು. ಮಾಂಧಾತೃ ಚಕ್ರವರ್ತಿಯು ತ್ರಿಲೋಕಗಳನ್ನೂ ಜಯಿಸಿ ಪ್ರಖ್ಯಾತನಾದನು. ಅವನಿಗೆ ಇಂದ್ರನ ಅರ್ಧಾಸನದಲ್ಲಿ ಕುಳಿತುಕೊಳ್ಳುವ ಯೋಗವೂ ಪ್ರಾಪ್ತವಾಯಿತು. ಅವನು ಮಾಡಿದ ಧರ್ಮ ಕಾರ್ಯಗಳಿಗೆ ಸಮವಿಲ್ಲ. ಹತ್ತು ಸಾವಿರ ಪದ್ಮ (100 ಕೋಟಿ) ಗೋವುಗಳನ್ನು ಬ್ರಾಹ್ಮಣರಿಗೆ ದಾನವಾಗಿ ಇತ್ತನು. ಅವನು ನೂರು ಅಶ್ವಮೇಧಗಳನ್ನು, ನೂರು ರಾಜಸೂಯ ಯಾಗಗಳನ್ನು ನೆರವೇರಿಸಿದನು. ಅವನು ಸತ್ಯ ಸಂಧನಾಗಿದ್ದ. ಜಿತೇಂದ್ರಿಯನಾಗಿದ್ದ. ನೂರು ಯೋಜನ ಎತ್ತರ, ನೂರು ಯೋಜನ ಉದ್ದ ಮೀನು ರಾಶಿಯನ್ನೂ ಅವನು ದಾನವಿತ್ತನು. ಅವನು ಜಯಿಸಿದ, ಮಹಾರಾಜರೆಂದರೆ, ಜನಮೇಜಯ, ಸುಧನ್ಮಾನ, ಗಯ, ಪೂರು, ಬೃಹದ್ರಥ, ಅಸಿತ, ನಗ. ಏನಾದರೇನು ? ಅವನು ಮರಣವನ್ನು ಗೆಲ್ಲಲಿಲ್ಲ.

ಶಿಬಿ ಚಕ್ರವರ್ತಿ :

ಹಿಂದಕ್ಕೆ ಉಶೀರ ಮಹಾರಾಜನ ಮಗನಾದ ಶಿಬಿಯು ತನ್ನ ಪರಾಕ್ರಮದಿಂದ ಇಡೀ ಪೃಥ್ವಿಯನ್ನೇ ಗೆದ್ದು, ಭೂಲೋಕಕ್ಕೆ ಒಡೆಯನಾಗಿ ಚಕ್ರವರ್ತಿಯಾಗಿ ಮೆರೆದನು. ಇವನು ಮಹಾ ಧರ್ಮಿಷ್ಟನಾಗಿದ್ದು, ಅನೇಕಾನೇಕ ಯಜ್ಞಗಳನ್ನು ಮಾಡಿದನು. ಆ ಕಾಲಕ್ಕೆ ಆಗಮಿಸಿದ ಬ್ರಾಹ್ಮಣರಿಗೆ ಯಥೇಚ್ಛೆ ಭೋಜನ ಮಾಡಿಸಿದನು. ಭೂ, ಗೋ, ಸುವರ್ಣ, ಕನ್ಯಾ, ಅಶ್ವ, ಗಜ, ಆಡು ಮುಂತಾದವುಗಳನ್ನು ಅಸಂಖ್ಯಿ ರೂಪದಲ್ಲಿ ದಾನ ಮಾಡಿದನು. ಹೀಗೆ ಅವನು ಅರ್ಜಿಸಿದ ಪುಣ್ಯಕ್ಕೆ ಲೆಖ್ಖವೇ ಇಲ್ಲ. ಅವನು ಧರ್ಮ, ಜ್ಞಾನ, ವೈರಾಗ್ಯ ಮತ್ತು ಐಶ್ವರ್ಯಗಳಲ್ಲಿ ಸೃಂಜಯಾ ! ನಿನಗಿಂತಲೂ ಎಷ್ಟೋ ಪಟ್ಟು ಮೇಲೆನಿಸಿದ್ದನು. ಅಂಥವನನ್ನು ಕೂಡ ಮೃತ್ಯು ದೇವತೆಯು ಆವರಿಸಿ ಬಿಟ್ಟಳು. ಅವನು ಈಗಲೂ ಸ್ವರ್ಗದಲ್ಲಿ ಸುಖಿಸುತ್ತಿರಬಹುದು. ರಾಜಾ! ಸೃಂಜಯ, ಆದ್ದರಿಂದ ನಿನ್ನ ಮಗನಿಗಾಗಿ ನೀನು ದುಃಖಿಸಬೇಡ. ನಿನಗೆ ಇನ್ನೂ ಅನೇಕ ಮಹಾನುಭಾವರ ಇತಿಹಾಸವನ್ನು ಹೇಳಬಹುದು.

ಕಂ. ಧರೆ ಚಕ್ರವರ್ತಿಗಳಾರು,
ಮೆರೆದ ಹೆಸರಾಂತ ರಾಜರುಗಳು ಹದಿನಾರ್ವರ್,
ನೆರೆಯೋಧರು ಮಹವೀರರು
ಚರಿಸಿದ ಪಥ ದುಃಖಿಮಯವರಸಿ ಕಾಣು, ವೇಮಾ.

ಧರೆಯಲ್ಲಿ ಆರು ಜನ ಚಕ್ರವರ್ತಿಗಳು ಹೆಸರಾಗಿದ್ದಾರೆ. ಅವರೆಂದರೆ, ಹರಿಶ್ಚಂದ್ರ, ನಳ, ಪುತ್ಸ, ಪುರೂರವ, ಸಗರ ಮತ್ತು ಕಾರ್ತವೀರ್ಯ. ಇವರು ಮಹಾವೀರರು. ಕೀರ್ತಿಶಾಲಿಗಳು. ಚಕ್ರವರ್ತಿಗಳು. ಆದರೂ ಅವರ ಬಾಳಿನಲ್ಲಿ ಅದೃಷ್ಟದ ಕೈವಾಡ ಇಷ್ಟೇ ಎಂದು ಹೇಳಲಾಸಲ್ಲ. ಹರಿಶ್ಚಂದ್ರನು ಹೆಂಡಿರು ಮಕ್ಕಳನ್ನು ಮಾರಿಕೊಂಡು ಸ್ಮಶಾನ ಕಾಯ್ದನಲ್ಲವೇ ? ನಳನು ಅಡವಿ

ಪಾಲಾಗಿ ರೂಪಗೇಡಿಯಾಗಿದ್ದ. ಇದೇ ರೀತಿಯಾಗಿ, ಇತರರು ಒಂದಿಲ್ಲೊಂದು ಬಗೆಯಾಗಿ ಬಳಲಿ ಅಸುನೀಗಿದರು. ವೀರನಾದ ಕಾರ್ತವೀರ್ಯನೂ ಪರಶುರಾಮನಿಂದ ವಧಿಸಲ್ಪಟ್ಟನು.

ಇನ್ನು ಮಹಾರಾಜರಾಗಿ ಮೆರೆದ ಗಯ, ಅಂಬರೀಷ, ಶಶಿ ಬಿಂದು, ರುಚೀಕ, ಪೃಥು, ಮರುಧ್ವಜ, ಭರತ, ಸುಹೋತ್ರ, ಶ್ರೀರಾಮ, ದಿಲೀಪ, ಸಗರ, ಭಾರ್ಗವ, ಯಯಾತಿ, ಭಗೀರಥ, ಶಿಬಿ, ಮಾಂಧಾತೃ ಎನ್ನುವ ಹದಿನಾರು ಪ್ರಬಲ ರಾಜರು ಸಹ ವಿಧಿಯ ವಶದಲ್ಲಿ ಸಿಲುಕಿ ಮಡಿದರು. ಜಗತ್ತಿನಲ್ಲಿ ಎಲ್ಲವೂ ಅಶಾಶ್ವತ ಎಂಬುದಕ್ಕೆ ಇವರ ಚರಿತ್ರೆಗಳು ಸ್ಪಷ್ಟ ನಿದರ್ಶನಗಳಲ್ಲವೇ ? ಇನ್ನಾದರೂ ಜನರು ಕರ್ಮ ಗತಿಯನ್ನು ಅರಿತು ಬಾಳಲು ಕಲಿಯಬೇಕು.

ಪುರೂರವ :

ಹೊಂದುತ ಧರೆಯೊಳಗೆ ಹಿಂದೆ ಪುರೂರವನು,
ಧರ್ಮವೇ ಜಯವೆಂದು ಮೊಳಗಿ ಇದ್ದ.
ತನ್ನ ಕಾಲ ಗತಿಯ ತಾನು ಅರಿಯಲಿಲ್ಲ,
ಮದನ ಕೈಗೆ ಸಿಕ್ಕು, ಮರುಗಿದ ವೇಮ.

ಭರತಖಂಡದಲ್ಲಿ ಸುವಿಖ್ಯಾತ ಪ್ರತಿಷ್ಠಾನಪುರದಲ್ಲಿ ಪುರೂರವನೆಂಬ ಸಾರ್ವಭೌಮನು ದಶದಿಕ್ಕುಗಳಲ್ಲಿ ಕೀರ್ತಿಭಾಜನನಾಗಿ ರಾಜ್ಯಭಾರ ಮಾಡುತ್ತಿದ್ದನು. ಅವನು ತನ್ನ ಕರ್ಮವಶದಿಂದ, ತನ್ನ ಆಶ್ರಿತ ರಾಜರ ಬಂಡಾಯದಿಂದಾಗಿ, ತನ್ನ ಹೆಂಡಿರು ಮಕ್ಕಳೊಡನೆ ಮಧ್ಯರಾತ್ರಿಯಲ್ಲಿ ರಹಸ್ಯ ಸುರಂಗ ಮಾರ್ಗದಿಂದ ನಗರವನ್ನು ತೊರೆದು ಅಡವಿ ಸೇರಿದನು. ಅವನ ಹೆಂಡತಿ ಜಯಪ್ರದೆ. ಅನುಪಮ ರೂಪವತಿ ; ಒಳ್ಳೇ ಗುಣವತಿ. ಬಳಲಿದ ದಂಪತಿ ಸಮೀಪದ ಸೋಮಪುರ ಪಟ್ಟಣ ಸೇರಿದರು. ಅಲ್ಲಿ ಕೂಲಿಯವರ ಸ್ನೇಹ ಸಂಪಾದಿಸಿ, ಕೂಲಿಯ ಲೆಖ್ಖ ಬರೆಯುವ ಕರಣಿಕನಾದನು. ಕರ್ಮಫಲಗಳು ಕೇಡಾಗಿದ್ದರೆ ಶನಿಕಾಟ ಎನ್ನುತ್ತಾರೆ. ಶನಿಕಾಟದಿಂದ ಪುರೂರವ ಚಕ್ರವರ್ತಿಯು ಕೂಲಿಕಾರರ ಲೆಕ್ಕಿಗನಾಗಬೇಕಾಯಿತು. ಶನಿಕಾಟ ಇಷ್ಟಕ್ಕೆ ನಿಲ್ಲಲಿಲ್ಲ.

ಪುರೂರವನು ಲೆಕ್ಕಿಗನಾಗಿದ್ದ ದೇವಾಲಯ, ತಟಾಕಗಳ ನಿರ್ಮಾತೃವು ಓರ್ವ ಲೋಭಿಯಾದ ನಾರಾಯಣ ಶೆಟ್ಟಿ. ಮೊದಲು ಬಲು ದೊಡ್ಡ ವ್ಯಾಪಾರಿಯಾದ ಶೆಟ್ಟಿಯು ಶನಿಕಾಟದಿಂದ ಹಾನಿಯನ್ನು ಅನುಭವಿಸತೊಡಗಿದಾಗ, ತನ್ನ ದುರದೃಷ್ಟಕ್ಕೆ ಕಾರಣ ಹುಡುಕಲು ಜ್ಯೋತಿಷಿಗಳ ಬಳಿಗೆ ಹೋದನು. ಅವರು ಅವನ ಲೋಭದಿಂದ ಶನಿಯ ಕಾಟ ಶುರುವಾಗಿದೆ ; ದೇವಾಲಯ, ತಟಾಕಗಳಂಥ ಧರ್ಮ ಕಾರ್ಯ ಮಾಡಿದರೆ ಗ್ರಹಗತಿ ಸುಧಾರಿಸುವುದೆಂದು ನಂಬಿಸಿದ್ದರು. ಹಾಗಾಗಿ ಅವನು ಆ ಕೆಲಸಗಳನ್ನು ಕೈಕೊಂಡಿದ್ದನು.

ಒಂದು ದಿನ ಶೆಟ್ಟಿಯು ಕೂಲಿಕಾರರ ಗುಡಿಸಲುಗಳತ್ತ ಹೋದಾಗ, ಸುಂದರಿಯಾದ ಜಯಪ್ರದೆಯನ್ನು ನೋಡಿ ಮೋಹಿತನಾದ. ತನ್ನ ಕಾರಕೂನನಿಗೆ ಹೇಳಿ ಅವಳು ಆ ವಾರದ ಕೂಲಿಯನ್ನು ಪಡೆಯಲು ತನ್ನ ಮನೆಗೆ ಬರುವಂತೆ ಮಾಡಿದನು. ಇನ್ನೇನು ಅವಳ ಮೇಲೆ ಬಲಾತ್ಕಾರ ಮಾಡುವ ಹೊಂಚು ಹಾಕಿದ್ದನು. ಅಷ್ಟರಲ್ಲಿ ಅವಳು ಶೆಟ್ಟಿಯ ಕಪಟ ಷಡ್ಯಂತ್ರವನ್ನು ಅರಿತು ಸಮೀಪದಲ್ಲಿ ಇರಿಸಿದ್ದ ಪೆಟ್ಟಿಗೆಯಲ್ಲಿ ಕುಳಿತು, ದೇವಿ ಕಾತ್ಯಾಯಿನಿಗೆ ಆ ಪೆಟ್ಟಿಗೆಯ ಬೀಗವು ಏಳು ವರ್ಷಗಳ ವರೆಗೆ ತೆರೆಯದಂತೆ ವರ ಬೇಡಿಕೊಂಡಳು. ಹೆಂಡತಿ ತಿರುಗಿ ಬಾರದಾದ

ಕಾರಣ ಪುರೂರವನು ತನ್ನ ಮಕ್ಕಳೊಡನೆ ದೇವನಗರ ಪಟ್ಟಣದತ್ತ ಹೊರಟನು. ಹಾದಿಯಲ್ಲಿ ನದಿಯನ್ನು ದಾಟಬೇಕಾಗಿತ್ತು. ಅತಿವೃಷ್ಟಿಯಿಂದ ಮಹಾಪೂರ ಬಂದು, ಒಬ್ಬೊಬ್ಬ ಮಗನನ್ನು ಎತ್ತಿಕೊಂಡು ನದಿಯನ್ನು ದಾಟುವ ಪ್ರಯತ್ನದಲ್ಲಿ ಪುರೂರವನು ಪ್ರವಾಹದಲ್ಲಿ ಕೊಚ್ಚಿಕೊಂಡು ಹೋದನು. ಮುಂದೆ ಬಹುದೂರ ಪ್ರವಾಹದಲ್ಲಿ ಕೊಚ್ಚಿ ಹೋಗುವಾಗ ಬೆಸ್ತರು ಬಲೆ ಬೀಸಿ, ಅವನನ್ನು ಬದುಕಿಸಿ ತಮ್ಮೊಡನೆ ತಮ್ಮ ಮೇಕೆಗಳನ್ನು ಕಾಯಲು ಇರಿಸಿಕೊಂಡರು. ಕುರಿ, ಮೇಕೆಗಳನ್ನು ಮೇಯಿಸುತ್ತ ಪುರೂರವನು ದೇವನಗರಿ ಪಟ್ಟಣದ ಬಳಿ ಬಂದಾಗ ಭಯಂಕರ ಮಳೆಯು ಸುರಿಯತೊಡಗಿತು. ಬೇರೆ ದಾರಿ ಕಾಣದೆ ಸಮೀಪದಲ್ಲಿರುವ ಹಾಳು ಮಂಟಪದಲ್ಲಿ ಬೀಡಾರ ಹೂಡಿದನು. ಏನು ವಿಧಿಯ ಆಟವೋ ! ಆ ರಾಜ್ಯದ ಅರಸಿಯ ಆಭರಣಗಳು ಆ ರಾತ್ರಿ ಕಳವಾಗಿ ಹೋಗಿದ್ದವು. ರಾಜ ಭಟರು ಕಳ್ಳನಿಗಾಗಿ ಹುಡುಕಾಟ ಆರಂಭಿಸಿ ಪುರೂರವನು ಮಲಗಿದ ಸ್ಥಾನಕ್ಕೆ ಬಂದು ವಿಚಾರಿಸಿದರು. ತನಗೇನೂ ತಿಳಿಯದು ಎಂದು ಪುರೂರವನು ಹೇಳಿದನಾದರೂ, ರಾಜ ಭಟರು ಶೋಧದ ಕಾಲಕ್ಕೆ ಆಭರಣಗಳ ಗಂಟು ಅವನ ಹಾಸುಗೆಯಲ್ಲಿ ಸಿಕ್ಕಿತು. ನಿಜವಾದ ಕಳ್ಳನು, ಪುರೂರವನು ಮಲಗಿದ ವೇಳೆಯಲ್ಲಿ, ಆ ಗಂಟನ್ನು ತಂದಿರಿಸಿದ್ದನು. ಶನಿಯು ಬೆಂಬತ್ತಿದ ಪುರೂರವನು ಕಳ್ಳನೆನಿಸಿ, ರಾಜಾಜ್ಞೆಯಿಂದ ಅವನ ಒಂದು ಕೈ ಮತ್ತು ಒಂದು ಕಾಲು ಕತ್ತರಿಸಲ್ಪಟ್ಟವು. ಆ ಗಾಯಗಳ ಭಾರಿ ನೋವು ತಾಳಲಾರದೆ ಪುರೂರವನು ಅನ್ನ ಭಕ್ತಿಯಿಂದ ದೇವಿ ಶಾರದೆಯಲ್ಲಿ ಮೊರೆಯಿಟ್ಟನು. ಅವಳು ಮೊಂಡ ಮೂಗಿನ ಹೆಣ್ಣಾಗಿ ಬಂದು, ತಾನು ತಂದ ಎಣ್ಣೆಯನ್ನು ಲೇಪಿಸಿ ಗಾಯಗಳನ್ನು ಶಮನಗೊಳಿಸಿದಳು. ಮತ್ತು ಅವನಿಗೆ ಕೆಲ ವರ್ಷಾ ನಂತರ, ಶನಿಕಾಟ ದೂರವಾಗಿ ಒಳ್ಳೆಯ ದಿನಗಳು ಬರುವುವೆಂದು ಹಾರೈಸಿದಳು.

ದೇವನಗರಿಯಲ್ಲಿ ಧನಪಾಲ ಶೆಟ್ಟಿಯೆಂಬ ಉದಾರಚರಿತನಿದ್ದನು. ಅವನೂ ಮೊದಲು ಶನಿಕಾಟದಿಂದ ಬಳಲಿ, ದಾನ ಧರ್ಮಗಳಲ್ಲಿ ಆಸಕ್ತಿ ವಹಿಸಿದ್ದನು. ಅವನು, ಪುರೂರವನು ಕೈಕಾಲುಗಳಿಲ್ಲದೆ ಬಿದ್ದುಕೊಂಡ ಆ ವಧಾ ಸ್ಥಾನ ಬಳಿ ಹೊರಟಾಗ, ಅಂಗಹೀನನಾಗಿ ಪರಿತಪಿಸುತ್ತಿದ್ದ ಪುರೂರವನನ್ನು ಕಂಡು, ಅನುಕಂಪ ತಾಳಿ, ತನ್ನೊಡನೆ ಕರೆದೊಯ್ದು ಉಪಚರಿಸತೊಡಗಿದನು. ಮಾಡಿದ ಕರ್ಮವು ಕೇಡನ್ನು ತರುವಂತೆ ಒಳಿತನ್ನೂ ತರುವುದೆಂದು ಪುರೂರವನು ತಿಳಿದನು. ಒಂದೆಡೆ ಶಾರಾದಾಂಬೆಯು ಪ್ರಸನ್ನಳಾಗಿ ನಿತ್ಯ ಭೋಜನದ ವ್ಯವಸ್ಥೆಯಾಯಿತು. ಇನ್ನೊಂದೆಡೆಗೆ ಉಪಮಹರ್ಷಿಯ ದರ್ಶನದಿಂದ ತನ್ನ ಶನಿಕಾಟ ದೂರವಾಗುವ ಕಾಲ ದೂರವಿಲ್ಲೆಂದು ತಿಳಿದು ಬಂತು. ಉಪಮಹರ್ಷಿಯು, ಪುರೂರವನ ಪುತ್ರರಿರುವಲ್ಲಿಗೂ ಹೋಗಿ ಸುದ್ದಿ ಮುಟ್ಟಿಸಿದನಲ್ಲದೆ ಜಯಪ್ರದೆಯು ಕುಳಿತ ಪಟ್ಟಿಗೆಯ ಬಳಿ ನಿಂತು ಅವಳಿಗೆ ಕೇಳಿಸುವಂತೆ ನಾರಾಯಣ ಶೆಟ್ಟಿಯ ಬಳಿ ಮಾತನಾಡಿದನು. ಹೀಗೆ ಪುರೂರವನ ಒಳ್ಳೆಯ ದಿನಗಳ ಸಂಕೇತ ಶುರುವಾಯಿತು.

ದೇವನಗರಿಯ ರಾಜಕುಮಾರಿ ಪುಷ್ಪಮಂಜರಿಯು ಕುಂಟನಾದ ಪುರೂರವನನ್ನು ಸ್ವಯಂವರದಲ್ಲಿ ವರಿಸಿದ ಬಗೆಯೂ ಅದೃಷ್ಟಮಯವಾಗಿದೆ. ತನ್ನ ಆಶ್ರಿತನಾದ ಧನಪಾಲ ಶೆಟ್ಟಿಯ ಉಪವನದಲ್ಲಿ ಆನಂದ ಪರವಶನಾಗಿ ಕುಳಿತ ಪುರೂರವನು ನೀಲಾಂಬರಿ ರಾಗವನ್ನು ಅತಿ ಶುಶ್ರಾವ್ಯವಾಗಿ ಆಲಾಪಿಸಿದನು. ಅದನ್ನು ಅಂತಃಪುರದ ಹೊರಾಂಗಣದಲ್ಲಿ ಕುಳಿತ ಪುಷ್ಪಮಂಜರಿಯು ಆಲಿಸಿ ಮನಸೋತಳು. ಈ ಅದ್ವಿತೀಯ ಕಲಾವಿದನೇ ತನ್ನ ಪತಿಯೆಂದು

ಮನದಲ್ಲಿ ನಿರ್ಧರಿಸಿದಳು. ಅವಳು ಸ್ವತಃ ಅನುಪಮ ಸಂಗೀತ ವಿದುಷಿಯಾಗಿದ್ದಳಲ್ಲದೆ, ಈ ಹಿಂದೆ ನಡೆದ ತನ್ನ ಸ್ವಯಂವರದಲ್ಲಿ ಸಂಗೀತ ಕಲೆಯ ನೆಪಮಾತ್ರವನ್ನೇ ವರಿಗಲ್ಲಾಗಿಸಿದ್ದಳು. ರಾಜನು ಮಗಳ ವರಾನ್ವೇಷಣೆಗೆ ಸ್ವಯಂವರವನ್ನು ವ್ಯವಸ್ಥೆಗೊಳಿಸಿದನು. ಈ ಹಿಂದೆ ಆಗಮಿಸಿ, ನಿರಾಶರಾದ ರಾಜರೇ ಇನ್ನೊಮ್ಮೆ ಅದೃಷ್ಟ ಪರೀಕ್ಷೆಗೆ ಬಂದಿದ್ದರು. ರಾಜಕುಮಾರಿಯು ಕೈಯಲ್ಲಿ ಕುಸುಮ ಮಾಲೆ ಹಿಡಿದುಕೊಂಡು ಸ್ವಯಂವರ ಮಂಡಪವನ್ನು ಪ್ರವೇಶಿಸಿದಳು. ಅಲ್ಲಿ ಕುಳಿತ ರಾಜರನ್ನು ನೋಡಿ, ಇವರೆಲ್ಲ ಈಗಾಗಲೇ ತಿರಸ್ಕೃತರಾದವರೇ. ನನ್ನ ಕೈ ಹಿಡಿಯಬೇಕಾದ ಆ ಗಾನ ವಿಶಾರದನು ಕಾಣುತ್ತಿಲ್ಲವಲ್ಲ ! ಎಂದು ಚಿಂತಿಸಿ, ನಿರಾಶಳಾಗಿ ಹೂ ಮಾಲೆಯನ್ನು ಮೇಲಕ್ಕೆ ತೂರಿದಳು. ಅದು ದೇವತೆಗಳ ಸ್ಪರ್ಶದಿಂದ, ಮರಳಿ ಸ್ವಯಂವರದ ಮೂಲೆಯಲ್ಲಿ ಕುಳಿತಿದ್ದ ಕುಂಟನಾದ ಪುರೂರವನ ಕೊರಳಲ್ಲಿ ಬಿದ್ದಿತು. ಎಲ್ಲರಿಗೂ ಅಚ್ಚರಿ ! ಪುಷ್ಪಮಂಜರಿ ಸಂತಸದಿಂದ ಅವನ ಕಾಲಿಗೆರಗಿದಳು.

ತಮ್ಮ ಪುತ್ರಿಯು, ತಾವು ಕಳ್ಳನೆಂದು ನಿರ್ಧರಿಸಿದ್ದ, ಅದರಿಂದ ಕಾಲು ಕತ್ತರಿಸಿ ಕುಂಟನಾದವನನ್ನು ವರಿಸಿದುದನ್ನು ಕಂಡು ರಾಜ ದಂಪತಿ ಮೂರ್ಛೆ ಹೋದರು. ಕೊನೆಗೆ ವಶಿಷ್ಠ ಮಹರ್ಷಿಗಳ ಸಲಹೆಯಂತೆ ಮಗಳನ್ನು ತ್ಯಜಿಸಿದರು. ಪುಷ್ಪಮಂಜರಿಯು ತನ್ನ ತಾಯಿ ತಂದೆಗಳ ನಿರ್ಧಾರಕ್ಕಾಗಿ ದುಃಖಿಸದೆ, 'ಬೇಕು ಎನಲು ಬರದು ; ಬೇಡವೆನಲು ಬಿಡದು ; ಪೂರ್ವ ಕರ್ಮಕಂಟಿ ಫಲವು ಉಂಟು, ಹೃದಯದಲ್ಲಿ ದುಃಖ ಪಡದಿರುವುದೇ ಧರ್ಮ' ಎಂದು ತಿಳಿದು ತನ್ನ ಪತಿಯೊಡನೆ ಕೂಡಿಕೊಂಡಳು. ಅಲ್ಲಿಂದ ಇಬ್ಬರೂ ಆಶ್ರಯದಾತನಾದ ಧನಪಾಲ ಶೆಟ್ಟಿಗೆ ವಿದಾಯ ಹೇಳಿ ಅರಣ್ಯಾಭಿಮುಖವಾಗಿ ಹೊರಟರು.

ಶಾರದಾಂಬೆಯು ನಿತ್ಯ ಊಟೋಪಚಾರ ವ್ಯವಸ್ಥೆ ಮಾಡುತ್ತಿದ್ದಳಲ್ಲದೆ, ತನ್ನ ಸಂಪರ್ಕದಲ್ಲಿ ಬಂದವರೆದುರು ಪುರೂರವನ ಘನತೆಯನ್ನೂ ಮಹಿಮೆಯನ್ನೂ ಬಣ್ಣಿಸುತ್ತಿದ್ದಳು. ಹೀಗಾಗಿ, ಬಹುಜನರು ಕರ್ಣಾಕರ್ಣಿಯಾಗಿ ಈ ಪವಾಡ ಪುರುಷನ ದರ್ಶನಕ್ಕಾಗಿ ಬಂದು ತಮ್ಮ ಸಂಕಷ್ಟ ಪರಿಹಾರ ಪಡೆಯಹತ್ತಿದ್ದರು. ಈ ಮಹಿಮಾವಂತ ಸಿದ್ಧ ಪುರುಷನ ದರ್ಶನ ಪಡೆದು ತಮ್ಮ ಮಗಳನ್ನು ಕುರಿತು ಕೇಳೋಣವೆಂದು ಪುಷ್ಪಮಂಜರಿಯ ತಾಯಿ ತಂದೆಯಂದಿರಾದ ರಾಜ ದಂಪತಿಗಳೂ ಆಗಮಿಸಿ, ತಮ್ಮ ಮಗಳು ಮತ್ತು ಅಳಿಯನನ್ನು ಕಂಡು ಹರ್ಷ ತುಂದಿಲರಾದರು. ತಮ್ಮ ಅಳಿಯನು ಶನಿಕಾಟದಿಂದ ದುರದೃಷ್ಟನಾಗಿದ್ದನೆಂದೂ, ನಿಜವಾಗಿ ಯಾರು ಛಪ್ಪನ್ನಾರು ದೇಶಗಳ ರಾಜರನ್ನು ಅಂಕಿತದಲ್ಲಿರಿಸಿದ್ದನೋ, ಯಾರಿಗೆ ಮೂರ್ತಿತ್ರಯರೂ, ಸರಸ್ವತೀ ದೇವಿಯೂ ಪ್ರಸನ್ನರಾಗಿರುವರೋ, ಅಂಥ ಶ್ರೀ ಶ್ರೀ ಪುರೂರವ ಚಕ್ರವರ್ತಿಯೆಂದು ತಿಳಿದು ಸಂತಸಪಟ್ಟರು.

ಧನಪಾಲ ಶೆಟ್ಟಿಯು ತನ್ನ ಮಿತ್ರನಾದ ಪುರೂರವನ ಭವನದ ಸುತ್ತಲೂ ದೊಡ್ಡ ಪಟ್ಟಣವನ್ನೇ ಕಟ್ಟಿಸಿ ಪುರೂರವನನ್ನು ಅದರ ರಾಜನನ್ನಾಗಿ ಮಾಡಿದನು. ಪುರೂರವನು ಪ್ರತಿಷ್ಠಾನ ಪುರವನ್ನು ತೊರೆದ ಮೇಲೆ ಅವನ ಮಂತ್ರಿಯು ರಾಜನನ್ನು ಹುಡುಕುತ್ತ ಕಡೆಗೆ ಈ ಹೊಸನಗರಕ್ಕೆ ಬಂದು ಸೇರಿದನು. ಮುಂದೆ ದೊರೆಯ ಮಕ್ಕಳೂ ಬಂದು ಸೇರಿದರು. ಪತ್ನಿಯಾದ ಜಯಪ್ರದೆಯನ್ನಿಟ್ಟ ಪೆಟ್ಟಿಗೆಯನ್ನೂ ನಾರಾಯಣ ಸೆಟ್ಟಿಯು ಅಲ್ಲಿಗೆ ತಂದನು. ಏನು ಮಾಡಿದರೂ ತೆರೆಯದ ಆ ಪೆಟ್ಟಿಗೆಯು ಪುರೂರವನನು ಮುಟ್ಟಿದೊಡನೆ ಪವಾಡವಾದಂತೆ ತೆರೆಯಿತು. ಇನ್ನೇನು

ಪುರೂರವನ ಮೊದಲನೆಯ ಹೆಂಡತಿ ಊರ್ವಶಿಯು ಸಹ ಕೊನೆಯ ಕೆಲ ಕಾಲ ಬಂದು ಸೇರಿದಳು. ಅಂತೂ ಧರೆಯಲ್ಲಿ ಹಿಂದೆ ಪುರೂರವನು ಕೀರ್ತಿವಂತನಾಗಿ ಧರ್ಮವೇಜಯವೆಂದು ಧರ್ಮಿಷ್ಟನಾಗಿ ಬಾಳುತ್ತಿದ್ದನು. ದಾನಧರ್ಮದಲ್ಲಿ ಯಾರಿಗೂ ಎರಡನೆಯವನಾಗಲಿಲ್ಲ. ಆದರೂ ಅವನು ತನ್ನ ಕಾಲ ಕರ್ಮಗಳ ಗತಿಯನ್ನು ಅರಿಯನು. ಅರಿಯದೆ, ವಿಧಿವಶನಾಗಿ ಪಡಬಾರದ ಕಷ್ಟ ಸೋಸಿದನು.

ನಳ ಚರಿತ್ರೆ :

ನಳನು ದಮಯಂತಿಯ ನಲ್ಮೆಯಿಂದ ವರಿಸಿ,
ಪುಷ್ಕರನಿಗೆ ಸೋತು, ಭೂಮಿ ತೊರೆದು,
ಭಾರ್ಯೆಯಿಂದ ತಾನು ಬಹಳ ಬಡವನಾಗಿ,
ಅಡವಿ ತಿರುಗಲಿಲ್ವೆ ? ಆಗ ವೇಮ.

ನಳ ಚಕ್ರವರ್ತಿಯು ನಿಷಧ ದೇಶದ ಅರಸು ವೀರಸೇನನ ಮಗ. ವಿದರ್ಭ ನಗರದ ಅರಸು ಭೀಮನೃಪ. ಅವನ ಪುತ್ರಯಾಗದಿಂದ ಪಡೆದ ಪುತ್ರಿಯೇ ಸುಂದರಿ ದಮಯಂತಿ. ಅವಳು ಬಿದಿಗೆಯ ಚಂದ್ರನಂತೆ ಬೆಳೆದು ಲಾವಣ್ಯವತಿಯಾದಳು. ಭೀಮನೃಪನ ಓಲಗದಲ್ಲಿ ಧರಣೀ ಪಾಲಕರ ಚರಿತ್ರೆಯ ಪ್ರಸಂಗದಲ್ಲಿ ಕವಿ ಜನರು ನಳ ಚಕ್ರವರ್ತಿಯ ರೂಪ, ಶೀಲ, ಸೌಂದರ್ಯಗಳನ್ನು ರಮ್ಯವಾಗಿ ಬಣ್ಣಿಸಿದರು. ಅದನ್ನು ಕೇಳಿ, ಕೇಳಿ ಸುದತಿ ದಮಯಂತಿ ಮನಸೋತಳು. ಒಂದು ದಿನ ನಳನ ಸಭೆಗೆ ಬಂದ ಯಾತ್ರಿಕನೊಬ್ಬನು ಸುದ್ದಿ ಸಮಾಚಾರ ಹೇಳುತ್ತ ಭೀಮನೃಪನ ಮಗಳಾದ ದಮಯಂತಿಯ ಸೌಂದರ್ಯವನ್ನು ಬಣ್ಣಿಸಿದನು. ಅದನ್ನು ಕೇಳಿ ನಳ ರಾಜನು ಮನಸೋತನು. ಅನಂತರ ಬೇಟೆಗೆಂದು ಅರಣ್ಯಕ್ಕೆ ಹೋದಾಗ, ದಣಿದು ಮರದಡಿ ವಿಶ್ರಮಿಸುತ್ತಿದ್ದ ಕಾಲದಲ್ಲಿ ರಾಜಹಂಸವನ್ನು ನೋಡಿ, ಅದನ್ನು ಹಿಡಿದುಬಿಟ್ಟನು. ಈ ರಾಜಹಂಸವನ್ನು ಅದರ ಪ್ರಾರ್ಥನೆಯ ಮೇರೆಗೆ ಮುಕ್ತಗೊಳಿಸಿದಾಗ, ಆ ಪಕ್ಷಿಯು ತಾನು ದಮಯಂತಿಯಲ್ಲಿಗೆ ಹೋಗಿ ನಿನ್ನ ಗುಣಗಾನ ಮಾಡಿ ನಿನ್ನನ್ನೇ ವರಿಸುವಂತೆ ಒಪ್ಪಿಸುವೆ ಎಂದು ತಿಳಿಸಿತು. ಮತ್ತು ಅಲ್ಲಿಂದ ವಿದರ್ಭ ನಗರಕ್ಕೆ ಹಾರಿತು. ದಮಯಂತಿಗೆ ನಳನ ಮೌನ ಸಂದೇಶವನ್ನು ಮತ್ತು ನಳ ಮಹಾರಾಜನಿಗೆ ದಮಯಂತಿಯ ಮೌನ ಸಂದೇಶವನ್ನೂ ತಲುಪಿಸಿತು.

ಏತನ್ಮಧ್ಯೆ ನಾರದ ಮಹರ್ಷಿಯು ದೇವೇಂದ್ರನಿಗೆ ಭೂಲೋಕದ ಸಮಾಚಾರದ ವರದಿ ಒಪ್ಪಿಸುತ್ತ ಅನುಪಮ ಸುಂದರಿಯಾದ ದಮಯಂತಿಯ ಸೌಂದರ್ಯವನ್ನು ಬಣ್ಣಿಸಿದನು. ದೇವೇಂದ್ರನು ಮನಸೋತು, ದಮಯಂತಿಯ ಮನ ಒಲಿಸಲು, ಸುರಕನ್ನೆಯರನ್ನು ದೂತರಾಗಿ ಕಳಿಸಿದನು. ಆದರೆ, ಅವರಿಗೆ ದಮಯಂತಿಯು ನೇರವಾಗಿ ತನ್ನ ಮನವು ನಳನಲ್ಲಿ ಒಲಿದಿದೆ. ಇಂದ್ರನಿಗೆ ದೇವಾಂಗನೆಯರಿರುವಾಗ ಇಲ್ಲದ ದುರಾಸೆ ಏಕೆ ? ಎಂದು ಹೇಳಿ ಕಳಿಸಿದಳು. ಕೊನೆಗೆ ದಮಯಂತಿಯ ಸ್ವಯಂವರ ಸಮಾರಂಭದಲ್ಲಿ, ಇಂದ್ರ, ಯಮ, ವರುಣ, ವಾಯು ದೇವತೆಗಳು ನಳನ ರೂಪವನ್ನು ಮಾಯೆಯಿಂದ ಧಾರಣ ಮಾಡಿ ಉಪಸ್ಥಿತರಾದರು. ಇದನ್ನು ವರಾನ್ವೇಷಣೆಗೆ ಬಂದ ದಮಯಂತಿಯು ಕಂಡು, ಇದೇನು ಮಾಯೆ ? ಎಂದು ಮರಳಿ ಹೋದಳು. ಅದನ್ನು ಕಂಡು ಭೀಮ ನೃಪನು ಗಾಬರಿಗೊಂಡು, ಸರಸ್ವತಿಯನ್ನು ಧ್ಯಾನಿಸಿದ. ಅವಳು ಪ್ರತ್ಯಕ್ಷಳಾಗಿ

ವಿಷಯ ತಿಳಿದು, ಇದು ಇಂದ್ರನ ಮಾಯೆ. ಅವನಿಗೇ ಶರಣಾಗಿರಿ ಎಂದಳು. ಇಂದ್ರಾದಿ ದೇವತೆಗಳಿಗೆ ಬೇಡಿಕೊಂಡಾಗ ಅವರು ಕೃಪೆದೋರಿ ತಮ್ಮ ನಿಜ ರೂಪಗಳನ್ನು ತಳೆದರು. ಬಳಿಕ ಇಂದ್ರನು ನಿಜ ನಳ ಭೂಪತಿಯನ್ನು ಕರೆಸಿ, ದಮಯಂತಿಯೊಂದಿಗೆ ವಿವಾಹವಾಗುವಂತೆ ನೋಡಿಕೊಂಡನು.

ಇಂದ್ರಾದಿ ದೇವತೆಗಳು ಸ್ವಯಂವರದಿಂದ ಮರಳುವ ಹಾದಿಯಲ್ಲಿ ಕಲಿಪುರುಷನು ಅವರನ್ನು ಸಂಧಿಸಿ ಎಲ್ಲ ಸಂಗತಿ ತಿಳಿದನು. ದೇವತೆಗಳಿಗಾದ ಮುಖಭಂಗದಿಂದ ರೊಚ್ಚಿಗೆದ್ದು, ತಾನು ದಮಯಂತಿಯನ್ನು ತಂದು ನಿಮಗೆ ಒಪ್ಪಿಸುವೆನೆಂದು ಜಂಭದ ನುಡಿಯಾಡಿದನು. ಅಲ್ಲಿಂದ ವಿದರ್ಭಕ್ಕೆ ಆಗಮಿಸಿ, ಮಾರುವೇಷದಿಂದ ನಳನ ಮಂತ್ರಿಯಾದ ಪುಷ್ಕರನಲ್ಲಿ ಆಸೆ ತುಂಬಿ, ನಳರಾಜನ ಓಲಗಕ್ಕೆ ಪುಷ್ಕರನೊಂದಿಗೆ ಬಂದನು. ಪುಷ್ಕರನು, ತನ್ನೊಂದಿಗೆ ಐತಂದ ಬ್ರಾಹ್ಮಣನನ್ನು ತೋರಿಸುತ್ತ ದೊರೆಯೇ ! ಸೂರ್ಯ ತೇಜಸ್ಸಿಗೆ ಸಮಾನನಾದ ಈ ಬ್ರಾಹ್ಮಣ ನನಗೆ ಲೆತ್ತಗಳನ್ನು ಕಾಣಿಕೆಯಾಗಿ ಕೊಟ್ಟಿದ್ದಾನೆ. ಆದ್ದರಿಂದ ನಾನು ತಮ್ಮೊಂದಿಗೆ ಲೆತ್ತದಾಟವಾಡ ಬಯಸಿದ್ದೇನೆ. ಇದರಲ್ಲಿ ಸೋತವರು ಸಾಮ್ರಾಜ್ಯವನ್ನು ತೊರೆದು ಮಡದಿಯೊಡನೆ ಅರಣ್ಯ ವಾಸಕ್ಕೆ ತೆರಳಬೇಕು. ಕಲಿಪುರುಷನ ಕೈಚಳಕದಿಂದ, ಮಾಯೆಯಿಂದ ದುರಾತ್ಮ ಪುಷ್ಕರನೇ ಗೆದ್ದನು.

ಇನ್ನೇನು ನಳನು ಭಾರ್ಯೆಯನ್ನು ಪಣಕ್ಕೆ ಹಚ್ಚುವವನಿದ್ದ. ಅದು ಕೊನೆ ಗಳಿಗೆಯಲ್ಲಿ ತಪ್ಪಿತು. ಆದರೆ ಹೆಂಡತಿಯೊಂದಿಗೆ ಕಾಡಿಗೆ ಹೊರಟ. ಕೂಳು ನೀರಿಲ್ಲದೆ, ಅಡವಿ ಅಡವಿ ತಿರುಗುತ್ತ ಬೆಂದು ಬಳಲಿದ. ಹೀಗೆ ನಳ ಮಹಾರಾಜನ ಪೂರ್ವ ಕರ್ಮದ ಫಲವಾಗಿ ಪಟ್ಟ ಕಷ್ಟಗಳು ಬಹು ಪರಿ. (ಅವನ ಮುಂದಿನ ಚರಿತ್ರೆಯನ್ನು ಮುಂದಿನ ಪದ್ಯದ ಭಾವಾರ್ಥದಲ್ಲಿ ನೀಡಲಾಗಿದೆ).

ಆ. ಕಾಡೊಳಲೆದು ಮತ್ತೆ ಭೂರಿ ಕಷ್ಟ ಸೋಸಿ,
ರಾಜ್ಯ ಸುಖವ ಪಡೆಯಲಿಲ್ಲವೆ ನಳ ?
ಕಷ್ಟ ನಷ್ಟ ಪಡದೆ, ಸುಖವ ಹೊಂದಲಾರ.
ವಿಶ್ವದಾಭಿರಾಮ ಕೇಳು ವೇಮ.

ಆ. ಕಾನನವನು ಸೇರಿ ಕಡು ಶ್ರಮ ಹೊಂದಲು,
ಆ ನಳ ಪಡೆದ ರಾಜ್ಯ ಅಂತೆ ಮರಳಿ,
ಕಷ್ಟಗಳಿಗೆ ಮುನ್ನ ಕಾಣು ಸುಖಗಳುಂಟು.
ವಿಶ್ವದಾಭಿರಾಮ ಕೇಳು ವೇಮ.

ಅರಣ್ಯ ಪರ್ಯಟನದ ಕಠಿಣ ಜೀವನದಿಂದ ದಮಯಂತಿಯೇಕೆ ಕಷ್ಟಭೋಗಿಸಬೇಕು? ಅದಕ್ಕಾಗಿ 'ತರುಣೀ ನೀನು ನಿನ್ನ ತೌರಿಗೆ ಹೋಗಿ ಸುಖವಾಗಿರು' ಎಂದು ಆಗ್ರಹಿಸಿದನು. ಅದಕ್ಕವಳು ಸರ್ವಥಾ ಒಪ್ಪಲಿಲ್ಲ. ಮುಂದೊಂದು ದಿನ ಅವಳು ವಿಶ್ರಮಿಸಿದಾಗ ನಿದ್ರೆ ಹೋದಳು, ಆ ಸಮಯದಲ್ಲಿ ನಳನು ಅಲ್ಲಿಂದ ದೂರ ಹೋಗಿ ಬಿಟ್ಟನು. ದಮಯಂತಿಯು ಎಚ್ಚೆತ್ತಾಗ ಪತಿ ಇಲ್ಲದುದನ್ನು ಕಂಡು ವಿವ್ಹಲಳಾದಳು. ಆಗ ಅಲ್ಲಿಗೆ ಬಂದ ವ್ಯಾಪಾರಿಗಳ ಗುಂಪಿನೊಡನೆ ಸೇರಿ, ಸಮೀಪದ ಚೈದ್ಯಪುರವನ್ನು ಪ್ರವೇಶಿಸಿದಳು. ಚೈದ್ಯಪುರದರಸಿ ನಿಜವಾಗಿ ದಮಯಂತಿಯ

ತಾಯಿಯ ತಂಗಿಯೇ ಆಗಿದ್ದಳು. ಹಾಗಾಗಿ ಅಲ್ಲಿ ಅವಳಿಗೆ ಒಳ್ಳೆಯ ಆಥಿತ್ಯ ದೊರಕಿತು.

ಇತ್ತ ನಳ ಮಹಾರಾಜನು ಅಡವಿಯಲ್ಲಿ ಸುತ್ತುತ್ತಿರುವಾಗ ದಾವಾನಲವೊಂದು ಭುಗಿಲೆದ್ದು ಅದರಲ್ಲಿ ವನ್ಯಮೃಗಗಳೂ, ಪಕ್ಷಿಗಳೂ ಭಸ್ಮವಾದವು. 'ಅಯ್ಯೋ ನಾನು ಸಾಯುತ್ತೇನೆ, ಉಳಿಸಿ' ಎಂಬ ಚೀತ್ಕಾರ ಕೇಳಿ ಬಂತು. ಅದೊಂದು ಮುನಿ ಶಾಪಗ್ರಸ್ತ ಕಾರ್ಕೋಟಕ. ಅದನ್ನು ಧಗ ಧಗ ಬೆಂಕಿಯಿಂದೆತ್ತಿ ಹೊರತಂದು ಉಪಚರಿಸುತ್ತಿದ್ದ ನಳನ ಕೈಯನ್ನು ಕಚ್ಚಿ ಬಿಟ್ಟಿತು. ಇದರಿಂದ ವಿಷವೇರಿ ನಳನ ದೇಹ ವಿರೂಪಗೊಂಡಿತು. ಅವನು ದೊಡ್ಡ ಹೊಟ್ಟೆಯ,ಗೂನು ಬೆನ್ನಿನ, ಗಂಟು ಮೂಗಿನ, ಜಿಡ್ಡು ದೇಹದ, ಗೊಜ್ಜು ಗೊರಲಿನ, ಗಿಡ್ಡ ರೂಪದ, ಹರಕು ಗಡ್ಡದ ವಿಕೃತ ರೂಪಿಯಾದ. ತನ್ನನ್ನು ತಾನು ನೋಡಿಕೊಂಡ ನಳ ನೃಪನು ಇದೆಲ್ಲ ವಿಧಿ ವಿಲಾಸ ! ಪೂರ್ವ ಜನ್ಮದ ಕರ್ಮಫಲ ! ಎಂದುಕೊಂಡನು. 'ನೃಪನೇ ಚಿಂತಿಸಬೇಡ. ಆದುದೆಲ್ಲ ಒಳಿತೇ ಆಗಿದೆ. ಲೋಕವು ನಿನ್ನನ್ನು ಗುರುತಿಸಬಾರದೆಂದು ಈ ಕುರೂಪ ಬಂದಿದೆ. ನಿನಗೆ ಪೂರ್ವದ ಸುಂದರ ರೂಪವು ಅವಶ್ಯಮೆನಿಸಿದಾಗ, ನಿನ್ನ ಬಟ್ಟೆಗಳನ್ನು ಒಯ್ದ ಆ ಪಕ್ಷಿಗಳನ್ನು ನೆನೆ. ಅವು ಹಿಂತಿರುಗಿಸುವ ಬಟ್ಟೆ ಧರಿಸಿದೊಡನೆ ನಿನ್ನ ರೂಪವು ಬರುವುದು. ನೀನೀಗ ಅಯೋಧ್ಯೆಗೆ ಹೋಗಿ ಋತುಪರ್ಣನಲ್ಲಿ ಕುದುರೆಯ ತರಬೇತುದಾರನಾಗಿ, ಬಾಣಸಿಗನಾಗಿ, ಕೆಲಸಕ್ಕೆ ಸೇರು. ಕಾಲಕ್ರಮದಲ್ಲಿ ನೀನು ದಮಯಂತಿಯನ್ನೂ ಕೂಡುವೆ. ರಾಜ್ಯವನ್ನೂ ಮರಳಿ ಗೆಲ್ಲುವೆ' ಎಂದು ನುಡಿಯಿತು.

ದಮಯಂತಿಯು ಚೈದ್ಯಪುರದಲ್ಲಿ ವಿರಹವೇದನೆಯಲ್ಲಿದ್ದಳು. ವಿಕೃತ ರೂಪ ಹೊಂದಿದ ನಳನು ಅಯೋಧ್ಯೆಗೆ ಋತುಪರ್ಣ ಅರಸನಲ್ಲಿ ಬಾಹುಕ ನಾಮದಿಂದ ಸೇವೆಗೆ ಸೇರಿ ಅವನ ಸಾರಥಿಯೂ ಆದನು. ವಿದರ್ಭ ರಾಜನಾದ ಭೀಮನೃಪನು ದಮಯಂತಿಯನ್ನು ಹುಡುಕಲು ಸುದೇವ ಮೊದಲಾದ ವಿಪ್ರ ಚರರನ್ನು ಕಳಿಸಿದನು. ಅವರು ಚೈದ್ಯಪುರಕ್ಕೆ ಆಗಮಿಸಿ, ಅಲ್ಲಿ ಪಟ್ಟದರಸಿಯ ಪರಿವಾರದಲ್ಲಿ ದಮಯಂತಿಯನ್ನು ಕಂಡರು. ಅವಳು ವಿದರ್ಭದ ದೊರೆಯಾದ ತನ್ನ ತಂದೆಯ ಕುರಿತು, ತನ್ನ ತಾಯಿಯನ್ನು ಕುರಿತು, ಕ್ಷೇಮ ಸಮಾಚಾರವನ್ನು ವಿಚಾರಿಸಿದಳು. ಮುಂದೆ ವಿಪ್ರ ಸುದೇವನು ವಿದರ್ಭಪುರ ತಲುಪಿ ಭೀಮನೃಪನಿಗೆ ದಮಯಂತಿಯ ಶುಭ ಸಮಾಚಾರ ತಿಳಿಸಿದನು. ಭೀಮನೃಪನು ಕೂಡಲೇ ತನ್ನ ಜನರನ್ನು ಕಳಿಸಿ ಸಡಗರದಿಂದ ದಮಯಂತಿಯನ್ನು ಬರಮಾಡಿಕೊಂಡನು.

ಮುಂದೆ ನಳನ ಹುಡುಕಾಟ ಶುರುವಾಯಿತು. ದಮಯಂತಿಯು ವಿಪ್ರ ಚಾರರಿಗೆ ಒಂದು ಸುಳಿವು ನೀಡಿದಳು. ಅದೆಂದರೆ, ತನ್ನ ಪತಿ, ತನ್ನ ತೇಜವನ್ನು ತೊರೆದು, ಪ್ರತಿ ರೂಪದಲ್ಲಿರಬಹುದು. ಅವನನ್ನು ಹುಡುಕುತ್ತ ಶ್ರೇಷ್ಠ ಸಭೆಗಳಲ್ಲಿ ಹೋದಾಗ, ''ಅರಣ್ಯದಲ್ಲಿ ಸತಿಯುಟ್ಟ ಸೀರೆಯಲ್ಲಿ ಅರ್ಧ ಸೀರೆಯನ್ನು ಪಡೆದು, ಅದನ್ನುಟ್ಟು, ನಾರಿಯನ್ನು ತೊರೆದು ಹೋದವರುಂಟೇ ?'' ಎಂದು ಕೂಗುತ್ತ ಸಾಗಿರಿ ಮತ್ತು ಯಾರಾದರೂ ಪ್ರತಿಕ್ರಿಯಿಸಿದರೆ, ನನಗೆ ಬಂದು ತಿಳಿಸಿರಿ, ಎಂದು ಹೇಳಿದಳು. ಹೀಗೆ ಅನೇಕ ಸಭೆಗಳಿಗೆ ಹೋದ ಚರರು ಎಲ್ಲಿಯೂ ಪ್ರತಿಕ್ರಿಯೆ ಕಾಣದೆ, ಕೊನೆಗೆ ಅಯೋಧ್ಯೆಯ ಅರಸ ಋತುಪರ್ಣನ ಓಲಗದಲ್ಲಿ ಅದೇ ವಾಕ್ಯಗಳನ್ನು ಘೋಷಿಸಿದರು. ವಿಪ್ರರ ಘೋಷಮನ್ನು ಕೇಳಿ ಬಾಹುಕ ವೇಷದಲ್ಲಿದ್ದ ನಳನ ಮನವು ಅಳುಕಿತು. ಅವನು ನಸುನಕ್ಕು ಹೀಗೆ ನುಡಿದನು.

ಎಲೈ ವಿಪ್ರ ಚರರೇ ! ನೀವು ಎಲ್ಲಿಂದ ಬಂದಿರಿ ? ಸತಿಯನ್ನು ಅಗಲಿದವನು ಕೀಳು ಪತಿಯೇ ಸರಿ. ಅಯ್ಯೋ ! ಋತುಪರ್ಣ ಓಲಗದಲ್ಲಿ ಅತಿಶಯವಾದ ನುಡಿ ಕೇಳಿದೆವಲ್ಲ ! ಇರಲಿ, ಇದು ಸತಿಗೆ ಆದ ವಂಚನೆಯಲ್ಲ. ನಿಜ ಪತಿಗೆ ಏನೋ ಒಂದು ತೊಂದರೆ ಇರಬೇಕು. ಇದನ್ನು ಕೇಳಿದ ವಿಪ್ರಚರರು ಈ ಕುರೂಪಿಯು ನಳ ಚಕ್ರವರ್ತಿಯೇ ? ಎಂದು ಸಂಶಯಗೊಂಡರೂ, ನಡೆದ ಘಟನೆಯನ್ನು ಯಥಾವತ್ತಾಗಿ ದಮಯಂತಿಗೆ ನಿವೇದಿಸಿದರು. ದಮಯಂತಿ ಆ ಕುರೂಪಿ ಬಾಹುಕನೇ ತನ್ನ ಗಂಡನಿರಬೇಕೆಂದು ಗ್ರಹಿಸಿ, ಸುದೇವನನ್ನು ಮತ್ತೆ ಋತುಪರ್ಣ ರಾಜನ ಅಯೋಧ್ಯೆಗೆ ಕಳಿಸಿದಳು. ಸುದೇವನು ಋತುಪರ್ಣ ರಾಜನಲ್ಲಿ ಬಂದು ವಿವರವನ್ನು ಕೇಳಿದಾಗ, ದಮಯಂತಿಯ ಮರು ಸ್ವಯಂವರದ ಏರ್ಪಾಟಾಗಿದೆ. ನಮ್ಮ ಪರ್ಯಟನದಲ್ಲಿ ರಾಜಾಧಿರಾಜರು ವಿದರ್ಭಪುರದತ್ತ ಸಾಗಿದ್ದಾರೆ. ತಾವೂ ಅತ್ತ ಪಯಣ ಮಾಡಬೇಕು, ಎಂದು ಬಿನ್ನವಿಸಿದರು. ಭೀಮನೃಪನ ಓಲಗಕ್ಕೆ ಋತುಪರ್ಣನೊಡನೆ ಸಾರಥಿ ಬಾಹುಕನೂ ಬಂದಿದ್ದ. ಆದರೆ ದಮಯಂತಿ ಎಷ್ಟೇ ಕಣ್ಣು ಬಿಟ್ಟು ನೋಡಿದರೂ ಬಾಹುಕನು ನಳನೇ ಎಂದು ಗುರುತಿಸಲಾಗಲಿಲ್ಲ. ಕೊನೆಗೆ ತನ್ನ ಸಖಿಯರನ್ನು ಮತ್ತು ಮಕ್ಕಳನ್ನು ಪಾಕಶಾಲೆಗೆ ಕಳಿಸಿದಳು. ಅಲ್ಲಿ ಸುಳಿದಾಡುವ ಮಕ್ಕಳನ್ನು ಬಾಣಸಿಗ ಬಾಹುಕನು ಎತ್ತಿ ಮುದ್ದಾಡಿದುದನ್ನು ಕಣ್ಣಾರೆ ಕಂಡಳು. ಅವನ ಪಾಕ ನೈಪುಣ್ಯವನ್ನು ಸಖಿಯರಿಂದ ಖಚಿತಪಡಿಸಿಕೊಂಡಳು. ಕೊನೆಗೆ ನಳನನ್ನು ಸಮೀಪಿಸಿ, ನಡೆದುದೆಲ್ಲವನ್ನೂ ತಿಳಿಸಿದಳು. ಪ್ರಸ್ತುತ ಸ್ವಯಂವರದ ಉದ್ದೇಶವು ನಳನೃಪನನ್ನು ಕೂಡುವುದಷ್ಟೇ ಆಗಿದೆ, ಎಂದು ಮನಗಾಣಿಸಿದಳು.

ಬಳಿಕ ನಳನು, ತನ್ನ ವಸ್ತ್ರಗಳನ್ನು ತೆಗೆದುಕೊಂಡು ಹೋದ ಪಕ್ಷಿಗಳನ್ನು ನೆನೆದನು. ಅವು ಹಾರಿ ಬಂದು, ತಾವು ಎತ್ತಿ ಒಯ್ದ ವಸ್ತ್ರಗಳನ್ನು ಮರಳಿಸಿದವು. ನಳನು ಅವುಗಳನ್ನು ಧರಿಸಿದೊಡನೆಯೇ ತನ್ನ ಪೂರ್ವದ ತೇಜಸ್ವಿ ರೂಪ ಮರಳಿತು. ಅವನ ಆನಂದಕ್ಕೆ ಪಾರವೇ ಇಲ್ಲವಾಯಿತು. ಅವನು ಮುಂದೆ ಒಂದು ವರ್ಷ ಕಾಲ ಮಾವನ ಮನೆಯಲ್ಲಿ ಸುಖದಿಂದ ಇದ್ದನು.

ಇಲ್ಲಿಂದ ನಳನು ವಿದರ್ಭ, ಚೈದ್ಯ, ಅಯೋಧ್ಯೆ ಅರಸರ ನೆರವಿನಿಂದ, ಆನೆ, ಕುದುರೆ, ರಥ, ಕಾಲಾಳುಗಳ ಚದುರಂಗ ಬಲದೊಡನೆ ನಿಷಧ ದೇಶದ ಮೇಲೆ ದಾಳಿ ಮಾಡಿದನು. ಈ ಅನಿರೀಕ್ಷಿತ ದಾಳಿಯಿಂದ ಎರಡು ಕಡೆಯೂ ಅಪಾರ ನಷ್ಟವಾಯಿತು. ಇತ್ತ ಪುಷ್ಕರನೂ ರೊಚ್ಚಿಗೆದ್ದನು. ಆದರೆ ಅವನು ಜಾಣ ಹಿರಿಯ ಮಂತ್ರಿಯೊಬ್ಬನ ಸಲಹೆಯಂತೆ, ಯುದ್ಧ ಮುಂದುವರಿಸದೆ, ಲೆತ್ತದಾಟದ ಉಪಾಯವನ್ನೇ ಮರಳಿ ಹೂಡುವಲ್ಲಿ ಯಶಸ್ವಿಯಾದನಾದರೂ, ಆಟದಲ್ಲಿ ಸೋತು ಹೋದ. ಆಗ ನಳ ಮಹಾರಾಜನು

ಆ. ಕೊಲ್ಲಲರ್ಹನೆನಿಪ ವೈರಿ ಸಿಕ್ಕನೆಂದು,
ಮುಳ್ಳನಾಡಿಸದಿರು, ಸಿಕ್ಕನೆಂದು
ಒಳ್ಳೆಯದನೆ ಬಗೆದು ಹೋಗೆನುವುದೆ ಸಾವು,
ವಿಶ್ವದಾಭಿರಾಮ ಕೇಳು ವೇಮ.

ಎಂಬ ನೀತಿಯಂತೆ, ಪುಷ್ಕರನಿಗೆ ಹೀಗೆ ನುಡಿದನು. 'ಪುಷ್ಕರ ! ನನಗೆ ಒದಗಿ ಬಂದ ಕಷ್ಟ, ಕಾರ್ಪಣ್ಯಗಳು ಸೋಲು, ಅವಮಾನಗಳು ನನ್ನ ಪೂರ್ವ ಕರ್ಮದ ಫಲ. ಅದಕ್ಕೆ ಯಾರೇನು ಮಾಡಬಲ್ಲರು ? ನೀನು ನಮ್ಮನ್ನು ಓಲೈಸುತ್ತ ನಮ್ಮ ಸೇವೆ ಮಾಡು, ಹೋಗು' ಎಂದು ಹೇಳಿ ಕಳಿಸಿದನು.

ಅನಂತರ ವಿದರ್ಭದಿಂದ ದಮಯಂತಿಯನ್ನೂ, ತನ್ನ ಪುತ್ರರನ್ನೂ ಕರೆಸಿಕೊಂಡು, ವೈಭವೋಪೇತನಾಗಿ ನಿಷಧ ರಾಜ್ಯದಲ್ಲಿ ಅಧಿಪನಾಗಿ ರಾರಾಜಿಸಿದನು.

ಈ ಅಪೂರ್ವ ಕತೆಯಿಂದ ಕಷ್ಟಗಳಿಗೆ ಮುನ್ನ ಸುಖಗಳಿರುತ್ತವೆ ಎಂಬುದನ್ನು ಮತ್ತು ಮಾನವನು ಕಷ್ಟ ನಷ್ಟ ಪಡದೆ ಸುಖ ಹೊಂದಲಾರನೆಂಬ ಸತ್ಯವನ್ನೂ ಮನಗಾಣಬಹುದು.

ಹರಿಶ್ಚಂದ್ರ :

ಆ. ಅರಿಯೆ ಕರ್ಮಗಳಲಿ ಆ ಹರಿಶ್ಚಂದ್ರನು
ಮಡದಿ ಮಗನ ಸಹಿತ ಮಾರಿ ಬಿಟ್ಟು,
ಮೊದಲು ಜಾತಿ ದೂರ ; ಮತ್ತೆ ಕೀಳು ಆದ.
ವಿಶ್ವದಾಭಿರಾಮ ಕೇಳು ವೇಮ.

ಆ. ಅನೃತವಾಡದಿಪ್ಪ ಆ ಹರಿಶ್ಚಂದ್ರನು,
ಮಡದಿ ಮಕ್ಕಳ ಸಹ ಮಾರಿ ತನ್ನ,
ಹೊಲೆಯರಡಿಯೆ ಬಾಳು ಹೊರೆದು ಜೀವಿಸಿದನು.
ವಿಶ್ವದಾಭಿರಾಮ ಕೇಳು ವೇಮ.

ಹರಿಶ್ಚಂದ್ರನು ಅಯೋಧ್ಯೆಯ ಅರಸು. ಅವನಿಗೆ ಅಧಿಕಾರವಿತ್ತು ; ರೂಪವಿತ್ತು; ವಿಪುಲ ಸಂಪತ್ತು ಇತ್ತು. ಮಾನವನನ್ನು ಆಸೆ ಲೋಭಗಳಿಗೆ ತಳ್ಳುವ ಎಲ್ಲವೂ ಇತ್ತು. ಆದರೂ ಅವನು ಮಹಾ ಸತ್ಯವಂತನಾಗಿದ್ದನು. ಉದಾರಿಯಾಗಿದ್ದನು. ವಿವೇಕಿಯೂ ಸಚ್ಚರಿತ್ರನೂ ಆಗಿದ್ದನು. ಅವನಿಗೊಬ್ಬ ರೂಪವತಿಯೂ, ಗುಣವತಿಯೂ ಆದ ಹೆಂಡತಿ ಇದ್ದಳು. ಅವಳ ಹೆಸರು ತಾರಾಮತಿ. ಅವನ ಚಿಕ್ಕ ವಯಸ್ಸಿನ ಮುದ್ದಾದ ಮಗನ ಹೆಸರು ರೋಹಿತಾಶ್ವ.

ಒಮ್ಮೆ ಇಂದ್ರನ ಸಭೆಯಲ್ಲಿ ವಿಶ್ವಾಮಿತ್ರ ವಸಿಷ್ಠ ಮುನಿಗಳು ಕುಶಲ ಸಂಭಾಷಣೆಗಿಳಿದಿದ್ದರು. ದೇವರ್ಷಿ ನಾರದರು ಅಲ್ಲಿಗೆ ಬಂದು ವಾಡಿಕೆಯಂತೆ ಇಂದ್ರನ ಪ್ರಶ್ನೆಗುತ್ತರವಾಗಿ, ಭೂಲೋಕದ ಹರಿಶ್ಚಂದ್ರನ ಸತ್ಯನಿಷ್ಠೆಯನ್ನು ಬಣ್ಣಿಸಿದನು. ಆಗ ವಸಿಷ್ಠ ಮಹರ್ಷಿಗಳು ತಮ್ಮ ಶಿಷ್ಯನಾದ ಹರಿಶ್ಚಂದ್ರನು ನಿಜವಾಗಿಯೂ ಸದ್ಗುಣ ಖಣಿ ಎಂದು ಶ್ಲಾಘಿಸಿದರು. ಈ ಮಾತನ್ನು ಒಪ್ಪದ ವಿಶ್ವಾಮಿತ್ರರು ಹೀಗಿರುವುದು ಅಸಂಭವ. ಪರೀಕ್ಷಿಸುವೆ ; ಎಂದು ಪ್ರತಿಜ್ಞೆಗೆಯ್ದು, ಈ ಪರೀಕ್ಷೆಯಲ್ಲಿ ಹರಿಶ್ಚಂದ್ರನು ಗೆದ್ದರೆ ನನ್ನ ತಪೋ ಬಲವನ್ನು ಅವನಿಗೆ ಧಾರೆ ಎರೆಯುವೆ, ಎಂದು ಪಣ ತೊಟ್ಟರು.

ಹರಿಶ್ಚಂದ್ರನು ಬೇಟೆಗೆ ಹೋದಾಗ,ಅಡವಿಯಲ್ಲಿ ಇಬ್ಬರು ಹೊಲತಿ ಕನ್ನೆಯರು ತಮ್ಮ ಮಧುರ ಗಾನದಿಂದ ಅವನ ಮನ ಸೆಳೆದರು. ರಾಜನು ಅವರನ್ನು ಬರಮಾಡಿಕೊಂಡು, ಅವರಿಗೆ ತನ್ನ ಕೊರಳ ಹಾರವನ್ನು, ಮಂತ್ರಿಯ ಮೂಲಕ ಕೊಡಿಸಿದನು. ಆದರೆ ಆ ಹೊಲತಿಯರು ಅವನೊಂದಿಗೆ ದೇಹ ಸುಖ ಕೋರಿದರು. ಅದರಿಂದ ರಾಜನು ಕುಪಿತನಾದನು. ಅವರನ್ನು ನಿರ್ಲಕ್ಷಿಸಿ ಹೊರಟಾಗ ಹೊಲತಿಯು ಅಡ್ಡಗಟ್ಟಿದಳು. ರಾಜನ ಸೇವಕರು ಅವಳನ್ನು ಎಳೆದು ದಬ್ಬಿದರು.

ಆಗ ವಿಶ್ವಾಮಿತ್ರರು ತಮ್ಮ ಶಿಷ್ಯ ಸಾಂಬನೊಡನೆ ಅಲ್ಲಿಗೆ ಬಂದು, ಸ್ತ್ರೀಯರನ್ನು ದಂಡಿಸುವುದು ಉದಾರ ವ್ಯಕ್ತಿಗೆ ಭೂಷಣವಲ್ಲ, ಎಂದು ಹೇಳಿದರು. ಆಗ ಹರಿಶ್ಚಂದ್ರನು ಪರಿಸ್ಥಿತಿಯನ್ನು ವಿವರಿಸಿದನು. ಬಳಿಕ ವಿಶ್ವಾಮಿತ್ರರು, ಹರಿಶ್ಚಂದ್ರನ ಸೈನಿಕರು ತನ್ನ ಆಶ್ರಮದ ಕಂದ ಮೂಲಗಳನ್ನು ಕಿತ್ತು ತಂದದ್ದಲ್ಲದೆ ತಮ್ಮ ಶಿಷ್ಯನನ್ನು ಥಳಿಸಿದ ಘಟನೆಯನ್ನು ಎತ್ತಿ ಹೇಳಿ ಈ ಅಪರಾಧಗಳ ಪರಿಮಾರ್ಜನೆಗೆ ಸ್ವತಃ ಕಷ್ಟವನ್ನು ಅನುಭವಿಸಬೇಕಾಗುವುದೆಂದು ಹೇಳಿದರು. ಹರಿಶ್ಚಂದ್ರನು ತಮ್ಮ ಅಪ್ಪಣೆಯಂತಾಗಲಿ, ಎಂದು ಶಿರಬಾಗಿದನು. ವಿಶ್ವಾಮಿತ್ರರು, ಆಗ ಆ ಹೊಲತಿಯರನ್ನು ದಂಡಿಸಿದ ಅಪರಾಧಕ್ಕೆ ಅವರು ವಾಸಿಸುವ ತಾಣವನ್ನು ಅವರಿಗೆ ಉಂಬಳಿಯಾಗಿ ನೀಡಬೇಕೆಂದೂ ಮತ್ತು ತಮಗೆ ಸಮಸ್ತ ರಾಜ್ಯವನ್ನು ಧಾರೆಯೆರೆದುಕೊಡಬೇಕೆಂದೂ ಕೇಳಿದರು.

ರಾಜನು ಅಯೋಧ್ಯೆಗೆ ಮರಳಿ ವಿಶ್ವಾಮಿತ್ರ ಮುನಿಗೆ ಸಮಸ್ತ ರಾಜ್ಯವನ್ನು ಸಮರ್ಪಿಸಿ, ದಾನಾನಂತರ ಬ್ರಹ್ಮರ್ಷಿಗೆ ದಕ್ಷಿಣೆಯಾಗಿ ಒಂದು ಸಾವಿರ ವರಹಗಳನ್ನು ಕೊಡಬೇಕಿತ್ತು. ಆ ಧನವನ್ನು ಬೊಕ್ಕಸದಿಂದ ಕೇಳಿ ತರುವಂತೆ ದಾಸಿಗೆ ಹೇಳಿದರು. ಇದನ್ನು ಕೇಳಿ ವಿಶ್ವಾಮಿತ್ರರು, 'ಆಗದಾಗದು, ಸಮಸ್ತ ರಾಜ್ಯವನ್ನು ಅರ್ಪಿಸಿದ ಮೇಲೆ, ಬೊಕ್ಕಸವು ನಮ್ಮದಾಯಿತು. ಕಾರಣ, ದಕ್ಷಿಣಾ ಧನವನ್ನು ಬೇರೆ ಎಲ್ಲಿಂದಾದರೂ ಅರ್ಜಿಸಿ ಒಪ್ಪಿಸು', ಎಂದು ಆಜ್ಞಾಪಿಸಿದರು.

ಹರಿಶ್ಚಂದ್ರನು, 'ಆಗಲಿ ಮಹಾತ್ಮರೇ ! ಹಾಗೆಯೇ ಆಗಲಿ. ಆದರೆ ಧನ ಸಂಪಾದನೆಗೆ ಒಂದು ತಿಂಗಳ ಅವಧಿಯ ಕಾಲಾವಕಾಶವನ್ನು ದಯಪಾಲಿಸಿರಿ' ಎಂದು ಬೇಡಿಕೊಂಡನು. ವಿಶ್ವಾಮಿತ್ರನು 'ಸರಿ, ವಚನವಿತ್ತ ಅವಧಿಯಲ್ಲಿಯೇ ಹಣ ಒಪ್ಪಿಸಬೇಕು' ಎಂದು ಆದೇಶಿಸಿ, ಆ ಹಣ ತರಲು ಸಾಂಬ ಎಂಬ ಶಿಷ್ಯನನ್ನು ಅವರ ಬೆನ್ನು ಹಿಂದೆಯೇ ಕಳಿಸಿದನು.

ಹರಿಶ್ಚಂದ್ರನು, ಹೆಂಡತಿ ತಾರಾಮತಿ ಮತ್ತು ಎಳೆಯ ಮಗು ರೋಹಿತಾಶ್ವನೊಡನೆ, ಅಯೋಧ್ಯೆ ರಾಜ್ಯ ಬಿಟ್ಟು ನೆರೆಯ ಕಾಶೀ ರಾಜ್ಯಕ್ಕೆ ಹೊರಟನು. ವಿಶ್ವಾಮಿತ್ರನ ಶಿಷ್ಯನೂ ಬೆನ್ನು ಹಿಂದೆಯೇ ಬಂದನು. ವಿಶ್ವಾಮಿತ್ರರ ಕಿವಿ ಮಾತಿನಂತೆ ದಾರಿಯಲ್ಲಿ ಅನ್ನ ಪಾನೀಯಗಳ ನೆಪದಿಂದ, ದೇಹ ಶ್ರಮದ ನೆಪದಿಂದ, ಕೊಡಬಾರದ ಕಷ್ಟ ಕೊಟ್ಟು, ಅನ್ನಾನ್ನ ಗತಿಹೀನರನ್ನಾಗಿ ಮಾಡಿ ಬಳಲಿಸಿದನು.

ಕೊನೆಗೆ ಕಾಶಿ ತಲುಪಿದ ಹರಿಶ್ಚಂದ್ರನು ಅವರಿವರನ್ನು ಭಿಟ್ಟಿಯಾಗಿ, ಧನ ಪಡೆಯಲು ಪ್ರಯತ್ನಿಸಿ ಅಯಶಸ್ವಿಯಾದನು. ಕೊನೆಗೆ ತನ್ನನ್ನು ತಾನು ಮಾರಿಕೊಳ್ಳಲು ನಿಶ್ಚಯಿಸಿದಾಗ, ಜನರೆಲ್ಲ ಲಿಲಾವಿನಲ್ಲಿ ಅತಿ ಕಡಿಮೆ ಬೆಲೆ ಕೂಗಿದರು. ಕೊನೆಗೆ ಸ್ಮಶಾನ ಕಾಯುವ ಕಟುಕನೊಬ್ಬನು ಒಂದು ನೂರು ವರಹಕ್ಕೆ ಕೊಂಡುಕೊಂಡನು. ಇದರಿಂದ ನಿರಾಶನಾದ ಹರಿಶ್ಚಂದ್ರನಿಗೆ ದಿಕ್ಕೇ ತೋರದಾಯಿತು. ಇಂಥ ದುರ್ಧರ ಪ್ರಸಂಗದಲ್ಲಿ ವಿಶ್ವಾಮಿತ್ರನು ಬಂದು, 'ನೀನು ನೀಡಿದ ಅವಧಿ ಮುಗಿಯಲು ಒಂದೇ ದಿನ ಉಳಿದಿದೆ. ಈಗಲಾದರೂ ನೀನು ಕೊಟ್ಟ ವಚನ ಪಾಲಿಸಲಾರೆ ಎಂದು ಒಪ್ಪಿಕೋ. ನಿನ್ನ ರಾಜ್ಯವನ್ನು ಮರಳಿ ಪಡೆ' ಎಂದು ಪ್ರಚೋದಿಸಿದನು. 'ಋಷಿವರ್ಯರೇ ಇನ್ನೂ ಒಂದು ದಿನವಿದೆ. ಏನಾದರೂ ಮಾಡುವೆ ; ಸಹನೆ ತಾಳಿರಿ' ಎಂದು ಹರಿಶ್ಚಂದ್ರನು ಪ್ರಾರ್ಥಿಸಿದನು. ತಾರಾಮತಿಯೂ ದನಿಗೂಡಿಸಿದಳು. ತಾರಾಮತಿಯು ತನ್ನನ್ನು, ವಿಶ್ವಾಮಿತ್ರನ ವಿರೋಧದೆದರು, ಮಾರಿಕೊಳ್ಳಲು ನಿರ್ಧರಿಸಿದಳು. ಅವಳನ್ನು ಐದು ನೂರು

ವರಹಗಳಿಗೆ ಕೊಳ್ಳಲು ಸವಾಲು ಬಂದಿತು. ಆದರೆ ಬೇಕಾದ ಹಣ ಒಂದು ಸಾವಿರ ವರಹ. ಕೊನೆಗೆ ಗುಣ ಕರ್ಮಗಳಿಂದ ಬ್ರಾಹ್ಮಣ ವರ್ಣಕ್ಕೇರಿದ ವ್ಯಕ್ತಿಯೊಬ್ಬರು ಬಂದು, 'ನಿಮಗೆ ಅನಿವಾರ್ಯವಾಗಿ ಬೇಕಾದ ಹಣವೆಷ್ಟು ?' ಎಂದು ವಿಚಾರಿಸಿ, ಅಷ್ಟು ಹಣವನ್ನು ನೀಡಿದನು. ಮತ್ತು ಅವಳ ಸಂಗಡ ಮನೆಗೆ ಹೋದನು. ಬ್ರಾಹ್ಮಣನ ಸಮ್ಮತಿ ಪಡೆದು ಮಗ ರೋಹಿತಾಶ್ವನನ್ನೂ ಸಂಗಡ ಕರೆದೊಯ್ದಳು.

ಕೆಲ ದಿನಗಳಾದ ಮೇಲೆ, ಆ ಬ್ರಾಹ್ಮಣನ ಕೋರಿಕೆಯ ಮೇರೆಗೆ ರೋಹಿತಾಶ್ವನು ಸಮಿತ್ತುಗಳನ್ನು (ಅರಳಿ ಮತ್ತು ಮುತ್ತುಗೆಗಳ ಸಣ್ಣ ಕಡ್ಡಿ) ತರಲು ಕಾಡಿಗೆ ಹೋದನು. ಇದನ್ನರಿತ ವಿಶ್ವಾಮಿತ್ರನು, ತನ್ನ ಶಿಷ್ಯ ಸಾಂಬನಿಗೆ ಹಾವು ತಂದು ರೋಹಿತಾಶ್ವನಿಗೆ ಕಡಿಸಲು ಹೇಳಿದನು. ಹಾವು ಕಚ್ಚಿದ ರೋಹಿತಾಶ್ವನು, ಕಳೇವರವಾದನು. ಮಗನ ಶವ ಸಂಸ್ಕಾರ ಮಾಡಲು ತಾರಾಮತಿಯು ಸ್ಮಶಾನಕ್ಕೆ ಬಂದು ದಹನ ಸಂಸ್ಕಾರ ಮಾಡಲು ಉದ್ಯುಕ್ತಳಾದಾಗ, ಸ್ಮಶಾನ ಕಾವಲು ಕೆಲಸದಲ್ಲಿದ್ದ ಹರಿಶ್ಚಂದ್ರನು ಬಂದು ಶವ ಸಂಸ್ಕಾರಕ್ಕೆ ಸಲ್ಲಿಸಬೇಕಾದ ಶುಲ್ಕವನ್ನು ಕೇಳಿದನು. ಅವಳಾರೆಂದು ಅವನಿಗೆ ತಿಳಿದಿರಲಿಲ್ಲ. ತನ್ನಲ್ಲಿ ಹಣವಿಲ್ಲವೆಂದು ಅವಳು ಪ್ರಾರ್ಥಿಸಿದಾಗ, ನಿನ್ನ ಕೊರಳಲ್ಲಿಯ ಮಾಂಗಲ್ಯವನ್ನು ಕೊಟ್ಟು ಶವ ಸಂಸ್ಕಾರ ಮಾಡಬಹುದು. ನಿರುಪಾಯಳಾಗಿ ಹಣ ತರಲು ಬ್ರಾಹ್ಮಣನ ಮನೆಗೆ ಹೋಗಿ, ಬ್ರಾಹ್ಮಣಿಯಿಂದ ಹಣ ಪಡೆಯಲಾಗದೆ, ಹಿಂದಿರುಗುವ ದಾರಿಯಲ್ಲಿ ಬ್ರಾಹ್ಮಣನ ಮಗನೂ ಸತ್ತು ಬಿದ್ದಿರುವುದನ್ನು ಕಂಡು ದುಃಖಿಸುತ್ತ ನಿಂತಳು. ಅಷ್ಟರಲ್ಲಿ ಬ್ರಾಹ್ಮಣ ದಂಪತಿ ಮಗನ ಶೋಧದಲ್ಲಿ ತಮ್ಮಲ್ಲಿ ದಾಸಿಯಾಗಿದ್ದ ತಾರಾಮತಿಯ ಮೇಲೆ ಸಂದೇಹಪಟ್ಟು ಸ್ಮಶಾನದ ಹಾದಿಯಲ್ಲಿ ಸೇನಾಪತಿಯೊಂದಿಗೆ ಬಂದರು. ಸತ್ತ ತಮ್ಮ ಮಗನ ಶವದ ಬಳಿ ತಾರಾಮತಿಯನ್ನು ಕಂಡು, ಅವಳೇ ಕೊಲೆಗಾರ್ತಿಯೆಂದು ನಿಶ್ಚಯಿಸಿ, ಸೇನಾಪತಿಯು ರಾಜನಿಂದ ಅವಳ ವಧೆಗೆ ಆಜ್ಞೆ ತಂದನು. ರಾಜಾಜ್ಞೆಯೊಂದಿಗೆ ಎಲ್ಲರೂ ಸ್ಮಶಾನಕ್ಕೆ ಬಂದು, ಸ್ಮಶಾನದ ಕಾವಲುಗಾರ ಸೇವೆಯಲ್ಲಿದ್ದ ಹರಿಶ್ಚಂದ್ರನಿಗೆ ತಾರಾಮತಿಯ ವಧೆ ಮಾಡಲು ಹೇಳಿದರು. ಅವನು ಹಿಂದು ಮುಂದು ನೋಡಿದನಾದರೂ ಕರ್ತವ್ಯ ಪ್ರಜ್ಞೆಯಿಂದ ಖಡ್ಗವನ್ನು ಮೇಲೆತ್ತಿದನು. ಆಗ ವಿಶ್ವಾಮಿತ್ರರು ಅಲ್ಲಿಗೆ ಬಂದು ಎಲ್ಲವನ್ನೂ ಸಾದ್ಯಂತ ವಿವರಿಸಿ, ಮಗುವು ಮೂರ್ಛೆ ಹೋಗಿದ್ದಾನಷ್ಟೆ ; ಎಂದು ತಿಳಿಸಿ, ಹರಿಶ್ಚಂದ್ರನು ಪರೀಕ್ಷೆಯಲ್ಲಿ ಉತ್ತೀರ್ಣನಾದುದಕ್ಕೆ ಪ್ರಶಂಶಿಸಿದರು. ಅವನಿಗೆ ಅವನ ರಾಜ್ಯವನ್ನು ಮರಳಿಸಿದರು. ಹರಿಶ್ಚಂದ್ರನು ತನ್ನ ಪೂರ್ವ ಕರ್ಮವಶದಿಂದ ಮಡದಿ, ಮಕ್ಕಳನ್ನು ಮಾರಿ ಕಷ್ಟ ಸೋಸಬೇಕಾಯಿತು. ಕ್ಷತ್ರಿಯ ಜಾತಿಯಿಂದ ದೂರವಾಗಿ, ಹೀನ ಜಾತಿಯವರ ಅಡಿಯಾಳಾಗಬೇಕಾಯಿತು. ಇದು ವಿಧಿವಿಲಾಸ !

ಭೈರವ ಅವತಾರ :

ಆ. ಬ್ರಹ್ಮನ ತಲೆ ಕಡಿದು ಪಾರುಗಾಣಿಸಿದೊಡೆ,
ತಡೆದು ರಕ್ಷಿಸಲಿಲ್ಲ ; ತಾವು ಸುರರು.
ಶಿವನ ಕರುಣೆಯಿಂದ ಕೆಟ್ಟು ಹೋಗಬಹುದೆ ?
ವಿಶ್ವದಾಭಿರಾಮ ಕೇಳು ವೇಮ.

ಒಂದು ಸಲ, ಸುಮೇರು ಪರ್ವತದಲ್ಲಿ ದೇವತೆಗಳು ಸಭೆ ಸೇರಿದ್ದರು. ಸೃಷ್ಟಿಕರ್ತನಾದ ಬ್ರಹ್ಮನೇ ಅಧ್ಯಕ್ಷನಾಗಿದ್ದನು. ಚರ್ಚೆಯ ವಿಷಯವು 'ಅವಿನಾಶಿ ತತ್ತ್ವ' ವಾಗಿತ್ತು. ಚರ್ಚೆಯ ಕಾಲಕ್ಕೆ ಬ್ರಹ್ಮ ಮತ್ತು ವಿಷ್ಣುರಲ್ಲಿ ವಾದ-ವಿವಾದ ನಡೆಯಿತು. ವಿಷ್ಣುವಿನ ವಾದ ಹೀಗಿತ್ತು : 'ನಾನು ಸಂಸಾರದ ವೃತ್ತಿ, ನಿವೃತ್ತಿಗಳನ್ನು ಮಾಡುವವನು. ನಾನೇ ಶ್ರೇಷ್ಠ. ನೀನು ನನ್ನ ಆಜ್ಞಾಪಾಲಕನು. ನನ್ನ ಅಪ್ಪಣೆಯಿಂದ ಸೃಷ್ಟಿ ಮಾಡುವೆ. ಹೀಗಿದ್ದರೂ ನನ್ನನ್ನು ಹೀನಾಯವಾಗಿ ಕಾಣುತ್ತಿರುವೆ. ಇದು ಸರಿಯಲ್ಲ' ಎಂದು ಬ್ರಹ್ಮನಿಗೆ ಹೇಳಿದನು. ಆದರೆ ಬ್ರಹ್ಮನು ಇದಕ್ಕೊಪ್ಪಲಿಲ್ಲ. 'ಇಲ್ಲ, ಇಲ್ಲ. ನಾನೊಬ್ಬನೇ ಸಂಸಾರವನ್ನು ಉತ್ಪನ್ನ ಮಾಡುವವನು' ಎಂದು ವಾದಿಸಿದನು. ಈ ವಾದ ವಿವಾದ ಬೆಳೆದಾಗ, ವೇದ ಪುರುಷನು ಮಧ್ಯೆ ಪ್ರವೇಶಿಸಿ, 'ಬ್ರಹ್ಮ ವಿಷ್ಣುಗಳಿರಾ ! ನಿಮ್ಮ ವಾದ ಮಂಡನೆ ಸರಿಯಲ್ಲ. ಏಕೆಂದರೆ ಸರ್ವ ಭೂತಗಳ ನಾಯಕನೂ, ಪರಮ ತತ್ತ್ವನೂ, ಆದ ಪರಮೇಶ್ವರನೇ ಶ್ರೇಷ್ಠನಾಗಿದ್ದಾನೆ' ಎಂದು ಸಾರಿದನು. ಆದರೆ ಅಜ್ಞಾನ ವಶನಾದ ವಿಷ್ಣುವು, 'ಅಯ್ಯೋ ಬಿಡಿ, ಶಿವನು ಸ್ಮಶಾನ ವಾಸಿ. ಚರ್ಮಾಂಬರಧಾರಿ' ಎಂದು ವೇದ ವಾಣಿಯನ್ನು ಉಪೇಕ್ಷಿಸಿದನು. ಹೀಗಾಗಿ ಬ್ರಹ್ಮ ವಿಷ್ಣುಗಳಲ್ಲಿ ವಾದ ಪರಿಹಾರ ಕಾಣಲಿಲ್ಲ.

ಆಗ ಸಭೆಯಲ್ಲಿ ಒಂದು ಜ್ಯೋತಿಯು ಪ್ರಕಟವಾಯಿತು. ಆ ಉಜ್ವಲ ಜ್ವಾಲೆಯು ಬ್ರಹ್ಮನ ಐದನೆಯ ಶಿರವನ್ನು ಸುಡತೊಡಗಿತು. ಆಗ ಅಲ್ಲಿ ಶಿವನು ಪ್ರಕಟವಾದನು. ಆದರೂ ಬ್ರಹ್ಮನು ಅವನನ್ನು ಸ್ತುತಿಸದೆ, ನಿಂದಿಸುತ್ತಿದ್ದನು. ಜ್ಯೋತಿ ಸ್ವರೂಪನಾದ ಭೈರವನಿಗೆ ಪರಶಿವನು, 'ಕಾಲ ಭೈರವ ! ನಿನಗೆ ಕಾಲನೂ ಅಂದರೆ ಯಮನೂ ಹೆದರುವನು. ನೀನು ಭಕ್ತರ ನಾಶ ಮಾಡುವೆಯಾದ್ದರಿಂದ ಪಾಪ ಭಕ್ಷಕನೆಂದು ಹೆಸರಾಗುವೆ. ಮೊದಲು ಈ ಬ್ರಹ್ಮನನ್ನು ಹತೋಟಿಗೆ ತೆಗೆದುಕೊಂಡು ಬಾ' ಎಂದನು. ಕೂಡಲೇ ಭೈರವನು ತನ್ನ ಕಾಲಿನ ಹೆಬ್ಬೆರಳಿನ ಉಗುರಿನಿಂದ ಬ್ರಹ್ಮನ ಒಂದು ಶಿರಸ್ಸನ್ನು ಕತ್ತರಿಸಿ ಬಿಟ್ಟನು. ಅಂದಿನಿಂದ ಪಂಚಮುಖನಾಗಿದ್ದ ಬ್ರಹ್ಮನು ಚತುರ್ಮುಖನಾದನು.

ಭೈರವನ ಪಾದಘಾತದಿಂದ ಬ್ರಹ್ಮನಿಗೆ ಅರಿವು ಉಂಟಾಯಿತು. ವಿಷ್ಣುವೂ ಇದನ್ನೆಲ್ಲ ಕಂಡು ಜ್ಞಾನ ಸಂಪನ್ನನಾದನು. ಬ್ರಹ್ಮ, ವಿಷ್ಣುಗಳಿಬ್ಬರೂ ತಮ್ಮ ಅಹಂ ಭಾವ ತೊರೆದು, ಶಿವನ ಮಹಿಮೆಯನ್ನು ಗುರುತಿಸಿ, ಶಿವನ ಕೃಪೆಗೆ ಪಾತ್ರರಾದರು. ಇಬ್ಬರಿಗೂ ಶಿವನು ಅಭಯ ನೀಡಿದನು.

ಆದ್ದರಿಂದ ವೇಮನ ಯೋಗಿಗಳು ವಿಧಿಯ ಫಲಕ್ಕೆ ದೃಷ್ಟಾಂತವೆಂದು, ಬ್ರಹ್ಮನು ಶಿವನಿಂದೆ ಮಾಡಿ ತನ್ನ ತಲೆಯೊಂದನ್ನು ಕಳೆದುಕೊಂಡನೆಂದೂ, ಆಗ ಯಾವ ದೇವತೆಗಳೂ ಆ ಶಿಕ್ಷೆಯಿಂದ ಬ್ರಹ್ಮನನ್ನು ರಕ್ಷಿಸಲಿಲ್ಲವೆಂದೂ ಹೇಳಿದ್ದಾರೆ. ಶಿವನ ಕರುಣೆಯಿಂದ ಬ್ರಹ್ಮ ವಿಷ್ಣು ಇಬ್ಬರೂ ಪಾರಾದರು. ಶಿವನ ಕರುಣೆ ಪಡೆದರೆ ಕೆಟ್ಟು ಹೋಗಬಹುದೇ ? ಇಲ್ಲ, ಇಲ್ಲ.

ಮೂವರೊಳಗೆ ಹೆಚ್ಚು ಮುನ್ನ ಕಾಣಲಿಲ್ಲ.
ನರಕಗಳಿಗೆ ಹೋಹ ನರರು ಉಂಟು.
ಮೂವರಿಗೆಟುಕದಂಥ ಮೂಲ ಮೂರ್ತಿಯುಂಟು.
ವಿಶ್ವದಾಭಿರಾಮ ಕೇಳು ವೇಮ.

ವಿಧಿಯ ಲೀಲೆ :

ಹರಿಗೆ ದೊರಕಿತಲ್ಲ ; ಸಿರಿಯು ಆಗಲಷ್ಟೆ.
ದೊರಕಿತಲ್ಲ ವಿಷವು ; ಹರಗೆ ಅರಿಯೆ,
ಯಾರಿಗೆಂತೊ ಎನೊ ? ಯಾರು ಅರಿಯಬಹುದು ?
ವಿಶ್ವದಾಭಿರಾಮ ಕೇಳು ವೇಮ.

ಕಶ್ಯಪ ಋಷಿಗೆ ದಿತಿ ಮತ್ತು ಅದಿತಿ ಎಂಬಿಬ್ಬರು ಹೆಂಡಿರು. ಅವರಿಗ ಪ್ರಬಲರಾದ ಬಹುಮಂದಿ ಮಕ್ಕಳಿದ್ದರು. ದಿತಿಯ ಪುತ್ರರು ದೈತ್ಯರೆನಿಸಿದರು. ಅದಿತಿಯ ಮಕ್ಕಳು ದೇವತೆಗಳೆನಿಸಿದರು. ದೈತ್ಯರ ಗುರು ಶುಕ್ರಾಚಾರ್ಯರು. ದೇವತೆಗಳ ಗುರು ಬೃಹಸ್ಪತ್ಯಾಚಾರ್ಯರು. ಅದಿತಿಯ ಮಕ್ಕಳು ಧಾರ್ಮಿಕರು. ''ನಾವು ಮರಣ, ಮುಪ್ಪು ರೋಗ'' – ಈ ಮೂರನ್ನೂ ಜಯಿಸಬೇಕು. ಇದು ಹೇಗೆ ಸಾಧ್ಯ ? ಎಂಬ ಆಲೋಚನೆ ಹುಟ್ಟಿತು. ಆ ಧೀರರು ''ಕ್ಷೀರಸಾಗರವನ್ನು ಕಡೆದು ರಸಾಯನವನ್ನು ತೆಗೆಯಬೇಕು'' ಎಂದು ನಿಶ್ಚಯಿಸಿದರು. ದೈತ್ಯ, ದೇವರಲ್ಲಿ ಸಂಧಿ ಏರ್ಪಟ್ಟಿತು. ವಾಸುಕಿ, ಸರ್ಪ ರಾಜನನ್ನು ಹಗ್ಗವಾಗಿ ಮಾಡಿಕೊಂಡು, ಶಿವನ ನಿವಾಸವಾದ ಮಂದರ ಪರ್ವತವನ್ನು ಕಡೆಗೋಲಾಗಿ ಮಾಡಿಕೊಂಡು ಆ ವೀರರು ಕ್ಷೀರ ಸಮುದ್ರವನ್ನು ಕಡೆಯಲಾರಂಭಿಸಿದರು. ಹೀಗೆ ಸಾವಿರ ವರ್ಷ ಕಳೆಯಿತು. ಹಗ್ಗವಾಗಿದ್ದ ವಾಸುಕಿ ಸರ್ಪವು, ಘರ್ಷಣೆಯನ್ನು ತಡೆಯಲಾರದೆ, ಹೆಡೆಗಳಿಂದ ವಿಷವನ್ನು ಕಕ್ಕುತ್ತ, ಹಲ್ಲುಗಳಿಂದ ಬಂಡೆಗಳನ್ನು ಕಚ್ಚಿತು. ಆಗ ಬೆಂಕಿಯಂತೆ ಉಗ್ರವಾದ ಹಾಲಾಹಲವೆಂಬ ಘೋರ ವಿಷವು ಹೊರಹೊಮ್ಮಿತು. ಅದು ದೇವ, ಅಸುರ ಮತ್ತು ಮನುಷ್ಯರ ಮೂರು ಲೋಕಗಳನ್ನೂ ಸುಡ ಹತ್ತಿತು. ಆಗ ದೇವತೆಗಳು ಮಹಾದೇವನಾದ ಶಂಕರನನ್ನು ಮೊರೆ ಹೊಕ್ಕು 'ತ್ರಾಹಿ, ತ್ರಾಹಿ' ಎಂದು ಪ್ರಾರ್ಥಿಸಿದರು. ಆಗ ಶಂಖಚಕ್ರಧಾರಿಯಾದ ಹರಿಯು ಕಾಣಿಸಿಕೊಂಡು, ರುದ್ರನನ್ನು ಕುರಿತು, ''ದೇವೋತ್ತಮ ! ಸಮುದ್ರ ಮಥನದಲ್ಲಿ ಮೊದಲು ಹುಟ್ಟಿದ್ದು ನಿನಗೆ ಸಲ್ಲಬೇಕು. ಏಕೆಂದರೆ ನೀನು ದೇವತೆಗಳಲ್ಲಿ ಅಗ್ರಗಣ್ಯನು. ಹೇ ಸ್ವಾಮಿ ! ವಿಷವನ್ನು ಸ್ವೀಕರಿಸು'' ಎಂದನು. ದೇವತೆಗಳು ಕಂಗಾಲಾಗಿರುವುದನ್ನು ಕಂಡು ಭಗವಾನ್ ಶಂಕರನು ಘೋರವಾದ ಹಾಲಾಹಲ ವಿಷವನ್ನು ಕುಡಿದನು. ಪಾರ್ವತಿಯು ಪತಿಯ ಕಂಠದ ಮೇಲೆ ಕೈಯಾಡಿಸಿದ್ದರಿಂದ ವಿಷವು ಕಂಠದಲ್ಲಿಯೇ ನಿಂತು ವಿಷಕಂಠನಾದನು. ಸಮುದ್ರ ಮಂಥನವು ಮುಂದುವರಿಯಿತು. ಆದರೆ ಮಂದರ ಪರ್ವತವು ಪಾತಾಳಕ್ಕೆ ಇಳಿದು ಹೋಯಿತು. ದೇವ ಗಂಧರ್ವರು ವಿಷ್ಣುವನ್ನು ಬೇಡಿಕೊಂಡರು. ವಿಷ್ಣುವು ಕೂರ್ಮರೂಪ ಧರಿಸಿ, ಮಂದರ ಗಿರಿಯನ್ನು ಬೆನ್ನ ಮೇಲೇರಿಸಿ ತನ್ನ ಮಾಯಾಶಕ್ತಿಯಿಂದ ಸಮುದ್ರದ ಮೇಲೆ ನಿಂತನು. ತಾನೂ ದೇವತೆಗಳೊಂದಿಗೆ ಸಮುದ್ರವನ್ನು ಕಡೆಯುತ್ತಿದ್ದನು. ಹೀಗೆ ಒಂದು ಸಾವಿರ ವರ್ಷ ಗತಿಸಿದ ಬಳಿಕ ಆಯುರ್ವೇದದ ಅಧಿ ಪುರುಷನಾದ ಧನ್ವಂತರಿ ಉದ್ಭವಿಸಿದನು. ಆ ಮೇಲೆ ಅಪ್ಸರೆಯರು ಉದ್ಭವಿಸಿದರು. ಅವರನ್ನು ದೇವ ದೈತ್ಯರಿಬ್ಬರೂ ಸ್ವೀಕರಿಸಿದ ಕಾರಣ ವೇಶ್ಯೆಯರಾದರು. ಅನಂತರ ವರುಣನ ಕನ್ಯೆ ವಾರುಣಿ ಎಂದು ಖ್ಯಾತಳಾದ ಸುರಾಧಿ ದೇವತೆಯು ಜನಿಸಿದಳು. ದಿತಿ ಪುತ್ರರಾದ ದೈತ್ಯರು ಅವಳನ್ನು ಪರಿಗ್ರಹಿಸಲಿಲ್ಲ ಹಾಗಾಗಿ ಅವರು ಅಸುರರೆನಿಸಿದರು. ಅದಿತಿ ಪುತ್ರರು ಅವಳನ್ನು ಪರಿಗ್ರಹಿಸಿ ಸುರರೆನಿಸಿದರು. ಆ ಬಳಿಕ ಐರಾವತವೆಂಬ ಆನೆ, ಉಚ್ಚೈಃ ಶ್ರವಸ್ಸೆಂಬ ಶ್ರೇಷ್ಠ ಕುದುರೆ, ಕೌಸ್ತುಭ

ಮಣಿ, ಉದ್ಭವಿಸಿದವು. ಆಗ ಮಹಾವಿಷ್ಣುವು ದೇವಾಸುರರನ್ನು ನೋಡಿ, 'ಆನೆ, ಕುದುರೆ, ಆಕಳು ಮತ್ತು ಐದು ವೃಕ್ಷಗಳನ್ನೂ, ಸರ್ವಸ್ವವನ್ನೂ ಕಳೆದುಕೊಂಡ ಇಂದ್ರನಿಗೆ ಕೊಟ್ಟು ಸಮಾಧಾನಪಡಿಸಿರಿ' ಎಂದನು. ಅಸುರರು ಅದಕ್ಕೆ ಸಮ್ಮತಿಸಿ, 'ಇನ್ನು ಮುಂದೆ ಬರುವ ವಸ್ತುವನ್ನು ನೀವು ಸ್ವೀಕರಿಸಿರಿ' ಎಂದರು. ಆಗ ಅದೇ ಸಮುದ್ರದಿಂದ ಲಕ್ಷ್ಮಿಯು ತೋರಿದಳು. ಮಹಾವಿಷ್ಣುವು ಅವಳನ್ನು ಸ್ವೀಕರಿಸಿದನು.

ಹೀಗೆ ಹರಿಗೆ ಅನಾಯಾಸವಾಗಿ ಲಕ್ಷ್ಮಿ ದೊರೆತರೆ, ಹರನಿಗೆ ವಿಷವು ದೊರಕಿತು. ಯಾರಿಗೆ ಏನು ಉಂಟೋ ? ಯಾರು ಬಲ್ಲರು ?

ಅನಂತರ ಸಮುದ್ರರಾಜನು ಧನ್ವಂತರಿಯ ಜೊತೆಗೆ ಅಮೃತ ಕಲಶವನ್ನು ತೆಗೆದುಕೊಂಡು, ವಿಷ್ಣುವನ್ನು ನಮಸ್ಕರಿಸಿ, ಅಮೃತ ಕಲಶವನ್ನು ಕೊಟ್ಟು ಹೊರಟು ಹೋದನು. ಅಸುರರಿಗೆ ವಿಷ್ಣುವಿನ ಬಗೆಗೆ ಸಂಶಯವುಂಟಾಯಿತು. ಆಗ ವಿಷ್ಣು ಬ್ರಹ್ಮರು ಅದೃಶ್ಯರಾದರು. ಓರ್ವ ಸುರ ಸುಂದರಿಯು ಕಾಣಿಸಿಕೊಂಡಳು. ಅವಳು ದೇವಾಸುರರಿಗೆ, ''ಏಕೆ ಕಚ್ಚಾಡುತ್ತೀರಿ ? ಆಹಾರಕ್ಕಾಗಿ ಚಡಪಡಿಸುವ ದೇವತೆಗಳಿಗೆ ಸ್ವಲ್ಪು ಹಂಚಿ, ಕಲಶವನ್ನು ಅಸುರರಿಗೇ ನೀಡುವೆ. ಅಲ್ಲಿಯ ವರೆಗೆ ಅಸುರರು ಕಣ್ಣು ಮುಚ್ಚಿಕೊಂಡಿರಲಿ'', ಎಂದು ನುಡಿದಳು. ದೇವತೆಗಳಲ್ಲಿ ಎಲ್ಲ ಅಮೃತವನ್ನು ಹಂಚಿ, ಖಾಲಿ ಕಲಶವನ್ನು ಇಟ್ಟಳು. ಅಸುರರಿಗೆ ಇದೆಲ್ಲ ವಿಷ್ಣು ಮಾಯೆ ಎಂದು ತಿಳಿದು ಯುದ್ಧಕ್ಕೆ ನಿಂತರು. ಅಮೃತ ಪಾನ ಮಾಡಿದ ದೇವತೆಗಳು ಬಲಿಷ್ಠರಾಗಿದ್ದರಿಂದ ಅಸುರರನ್ನು ಸದೆಬಡಿದರು.

ಕಾಲಗತಿ :

ಕಂ. ಕಾಲಗತಿ ಯಾರಿಗಾದರು
ಪಾಲಿಗೆ ಬಂದೇ ಬರುವುದು, ಸರಿವುದು ವಿರಳಂ.
ಮೇಲೆತ್ತಿ ಗಿರಿಯ ಕೃಷ್ಣನು
ತೇಲನೆ ವಟ ಪತ್ರದಲ್ಲಿ, ತಿಳಿವುದು ವೇಮಾ.

ಗೋಪಾಲಕ ಕೃಷ್ಣನು ಒಂದು ಸಲ ತಾನು ಗೋವುಗಳನ್ನು ಮೇಯಿಸುತ್ತಿದ್ದ ಗೋವರ್ಧನ ಗಿರಿಯ ಶಿಖರವನ್ನೇ ತನ್ನ ಎರಡೂ ಬಾಹುಗಳಿಂದ ಮೇಲೆತ್ತಿ ಧಾರಾಕಾರವಾಗಿ ಸುರಿಯುವ ಮಳೆಯಿಂದ ಗೋವುಗಳನ್ನೂ, ಗೋಪಾಲರನ್ನೂ ರಕ್ಷಿಸಬೇಕಾಯಿತು. ಆ ಕಥೆ ಹೀಗಿದೆ :

ಒಮ್ಮೆ ಗೋಕುಲದಲ್ಲಿ ಇಂದ್ರೋತ್ಸವದ ಸಿದ್ಧತೆ ನಡೆದಿತ್ತು. ಇಂದ್ರೋತ್ಸವವೆಂದರೇನು? ಅದನ್ನೇಕೆ ಆಚರಿಸುತ್ತೀರಿ ? ಎಂದು ಕೃಷ್ಣನು ಪ್ರಶ್ನಿಸಿದನು. ಆಗ ಹಿರಿಯ ಗೋವಳಿಗರು, 'ಇಂದ್ರನು ದೇವತೆಗಳಿಗೆ ಪ್ರಭು. ಅವನ ಅನುಮತಿಗನುಸರಿಸಿ, ಪರ್ಜನ್ಯನು ಮಳೆ ಸುರಿಯುತ್ತಾನೆ. ಅವನ ಅನುಗ್ರಹದಿಂದ ಬಯಲಿನಲ್ಲಿ ಹುಲ್ಲು, ಬೆಳೆಗಳು ಬೆಳೆಯುತ್ತವೆ. ದೇಶಕ್ಕೆ ಕ್ಷಾಮಡಾಮರುಗಳಿಲ್ಲ' ಎಂದರು.

ಆಗ ಕೃಷ್ಣನು, ''ಅಲ್ಲ, ಅಲ್ಲ. ನಾವು ಗೋವಳಿಗರು. ಪಶುಪಾಲನೆ ನಮ್ಮ ಧರ್ಮ.

ಗೋವೇ ನಮ್ಮ ದೇವತೆ. ನಾವು ಪೂಜಿಸಬೇಕಾದುದು ಆಕಳು, ಹುಲ್ಲುಗಾವಲು, ಹಾಗೂ ಪರ್ವತ. ನೀವು ಇಂದ್ರೋತ್ಸವವನ್ನು ನಿಲ್ಲಿಸಿ, ಗೋವರ್ಧನೋತ್ಸವವನ್ನು ಆಚರಿಸಿರಿ. ಗಿರಿ ಪೂಜೆಯೇ ಹರಿಪೂಜೆ'' ಎಂದು ತಿಳಿಸಿ ಹೇಳಿದನು. ಆ ಮೇಲೆ ಗಿರಿ ಪೂಜೆಯು ಮೂರು ದಿನ ವಿಜೃಂಭಣೆಯಿಂದ ನಡೆಯಿತು. ಕೊನೆಯ ದಿನ ದೋಷ ನಿವಾರಕ ಅವಭೃತ ಸ್ನಾನದ ಸಮಯದಲ್ಲಿ ಕೃಷ್ಣನು, ದಿವ್ಯ ರೂಪ ಧಾರಣ ಮಾಡಿ, ದೇವಲೋಕದ ಮಂದಾರ ಕುಸುಮದ ಮಾಲೆ ಧರಿಸಿ, ಎಲ್ಲರಿಗೂ ಪ್ರತ್ಯಕ್ಷನಾಗಿ 'ಇನ್ನು ಮುಂದೆ ಇದೇ ರೀತಿ ಪೂಜೆಯು ಮುಂದುವರಿಯಲಿ' ಎಂದನು. ಗೋಪಾಲಕರು ಗಿರಿ ಪ್ರದಕ್ಷಿಣೆ ಮಾಡಿ ಭಜನೆ ಮಾಡಿದರು.

ಸಂಪ್ರದಾಯದಂತೆ ತನ್ನ ಉತ್ಸವವು ನಡೆಯದಿದ್ದುದನ್ನು ಅರಿತ ಇಂದ್ರನು ಕುಪಿತನಾದನು. ಅವನು ಸುರಿ ಮಳೆ ಸುರಿಯುವಂತೆ ಪರ್ಜನ್ಯನಿಗೆ ಆಜ್ಞಾಪಿಸಿದನು. ಚಂಡಮಾರುತ ಬೀಸುವಂತೆ ವಾಯುದೇವನಿಗೆ ಆಜ್ಞಾಪಿಸಿದನು. ತಾನು ಸ್ವತಃ ಗುಡುಗು ಮಿಂಚುಗಳನ್ನು ಸಿಡಿಸಿದನು. ಗೋಪ ಗೋಪಿಯರು ಕಂಗಾಲಾದರು. ಕೃಷ್ಣಾ ! ನಮ್ಮನ್ನು ಈ ದೈವೀ ಪ್ರಕೋಪದಿಂದ ರಕ್ಷಿಸಲು ಏನಾದರೂ ಮಾಡು, ಎಂದು ಗೋಪ ಗೋಪಿಯರು ಹಸುಗಳು, ಶಿಶುಗಳು ರೋದಿಸಿದಾಗ ಮುಕುಂದನ ಮನಸ್ಸು ಕರಗಿತು.

ಗೋವರ್ಧನ ಗಿರಿಯೇ ತಮ್ಮವರಿಗೆ ರಕ್ಷೆಯಾಗಲೆಂದು ತನ್ನೆರಡು ತೋಳುಗಳಿಂದ ಶಿಖರವನ್ನು ಕೊಡೆಯಂತೆ ಮೇಲೆತ್ತಿ ಹಿಡಿದು, 'ಬನ್ನಿ ಗಿರಿದೇವನು ನಿಮ್ಮನ್ನು ಕಾಪಾಡುತ್ತಾನೆ' ಎಂದು ಕರೆದು ರಕ್ಷಿಸಿದನು. ಕೃಷ್ಣನು ತನ್ನ ಸಂಕಲ್ಪವನ್ನು ನಾಶಮಾಡಿದನೆಂದು ಇಂದ್ರನು ಪಶ್ಚಾತ್ತಾಪಗೊಂಡನು. ಮಳೆ ನಿಂತಿತು. ಬಿರುಗಾಳಿ ನಿಂತಿತು. ಗುಡುಗು ಸಿಡಿಲು ಇಲ್ಲವಾದವು.

ಮಹಿಮಾವಂತನಾದ ಕೃಷ್ಣನು ಹಿಂದೊಮ್ಮೆ ತನ್ನ ಲಘಿಮಾ ಐಶ್ವರ್ಯ ಶಕ್ತಿಯಿಂದ ವಟಪತ್ರದ ಮೇಲೆ ತೇಲಿದ್ದನು. ಇದನ್ನೆಲ್ಲ ನೋಡಿದರೆ, ಒಬ್ಬನ ಮಹಿಮಾ, ಲಘಿಮಾ ಶಕ್ತಿಗಳು ಸೂಕ್ತ ಕಾಲಕ್ಕೆ ಪ್ರಕಟವಾಗುತ್ತವೆ ಎಂಬುದು ಖಚಿತವಾಗುವುದು. ಕಾಲಗತಿಗಳು ಎಲ್ಲರ ಪಾಲಿಗೂ ಬಂದೇ ಬರುತ್ತದೆ. ಕಾಲವು ಪ್ರಶಾಂತವಾಗಿ ಸರಿಯುತ್ತದೆ.

ಕಿರಾತಾರ್ಜುನ ಯುದ್ಧ :

ಆ. ಕಾಲ ಕಂಠನೆದುರು ಘನ ಘೋರ ಕಾದಾಡಿ,
ಅರ್ಜುನನಿಗೆ ವಶವೆ ಆಯ್ತು ಫಲವು.
ಪಾಶುಪತವು ದೊರಕಿ ಹಗೆತನ ಖಿಷಿಯಾಯ್ತು.
ವಿಶ್ವದಾಭಿರಾಮ ಕೇಳು ವೇಮ.

ಪಾಂಡವರಿಗೆ ದಿವ್ಯಾಸ್ತ್ರಗಳ ಅಗತ್ಯ ತೋರಿತು. ಆಗ ಧರ್ಮರಾಜನ ಅಭೀಷ್ಟದ ಮೇರೆಗೆ ಅರ್ಜುನನು ದೇವೇಂದ್ರನ ಬಳಿಗೆ ದಿವ್ಯಾಸ್ತ್ರಗಳನ್ನು ಹೊಂದಲು ಬಯಸಿದನು. ಆಗ ದೇವೇಂದ್ರನು ಮೊದಲು ಮಹೇಶ್ವರನನ್ನು ಪ್ರಸನ್ನಗೊಳಿಸು, ಎಂದು ಹೇಳಿದ ಮೇರೆಗೆ ಅರ್ಜುನನು ಪರಶಿವನನ್ನು ಧ್ಯಾನಿಸಿದನು. ಭಕ್ತಿಗೆ ಸುಲಭವಾಗಿ ಒಲಿಯುವ ಮುಕ್ಕಣ್ಣನು, ಸುಲಭವಾಗಿ ವರ ನೀಡುವ ಮುನ್ನ ಒಂದು ಚಿಕ್ಕ ಪರೀಕ್ಷೆಯನ್ನು ಮಾಡಬಯಸಿದನು.

ಶಿವನು ಮೂಕಾಸುರನನ್ನು ಕರೆಸಿ, ಪಾರ್ಥನು ತಪೋನಿಷ್ಠನಾಗಿರುವ ಪ್ರದೇಶದಲ್ಲಿ

ತಿರುಗಾಡಲು ಅಣತಿ ಇತ್ತನು. ಆ ಮೇರೆಗೆ ಮೂಕಾಸುರನು ಹಂದಿ ವೇಷಧರಿಸಿ ಪಾರ್ಥನ ಎದುರಿನಲ್ಲೇ ಓಡಾಡತೊಡಗಿದನು. ಇತ್ತ ಶಿವನು ರುದ್ರಾಕ್ಷಿ ಮಾಲೆಯನ್ನು ಧರಿಸಿ ಮುತ್ತು ರತ್ನಗಳ ದಂಡೆಯನ್ನು ಮುಡಿದು, ತ್ರಿಶೂಲ ಬಿಲ್ಲುಗಳನ್ನು ಧರಿಸಿ, ಕಿರಾತನಾದನು. ಜಗನ್ಮಾತೆಯು ಕಿರಾತನ ಪತ್ನಿರೂಪ ತಾಳಿ ಆ ಪ್ರದೇಶಕ್ಕೆ ಬಂದರು. ತಪೋಭಂಗ ಮಾಡಿತೆಂದು ಹಂದಿಗೆ ಅತ್ತಣಿಂದ ಅರ್ಜುನನು, ಇತ್ತಣಿಂದ ಕಿರಾತನು ಬಾಣಗಳನ್ನು ಹೊಡೆದರು. ಇಬ್ಬರ ಬಾಣಗಳು ಏಕ ಕಾಲಕ್ಕೆ ಬಡಿದು ಹಂದಿಯು ಪ್ರಾಣ ಬಿಟ್ಟಿತು. ಇಬ್ಬರ ಆಯುಧ ಕೌಶಲವು ವ್ಯರ್ಥವಾಗದು, ಎಂದು ಕಿರಾತಾರ್ಜುನರು, 'ನಾನು ಕೊಂದೆ, ನಾನು ಕೊಂದೆ' ಎಂದು ವಾದಿಸತೊಡಗಿದರು. ಇಬ್ಬರ ವಾದವೂ ಘೋರವಾಯಿತು. 'ನಾನು ಅರಣ್ಯದಲ್ಲಿಯೇ ವಾಸಿಸುವವನು. ಪ್ರಾಣಿಗಳನ್ನು ಬೇಟೆಯಾಡಿ, ಅವುಗಳ ಮಾಂಸ ತಿನ್ನುವವನು. ಮತ್ತು ಅವುಗಳ ಚರ್ಮ ಉಡುವವನು. ನೀವೆಲ್ಲಿಯವರು ?' ಎಂದನು ಕಿರಾತ. 'ನಾನು ಮೊದಲು ಬಿಟ್ಟ ಬಾಣದಿಂದ ಈ ಹಂದಿ ಸತ್ತಿತು. ಆದ್ದರಿಂದ ಈ ಹಂದಿ ನನ್ನದು' ಎಂದನು ಅರ್ಜುನ. ವಾದವು ಬೆಳೆದು ಯುದ್ಧದಲ್ಲಿ ಪರಿಣಮಿಸಿತು. ಸವ್ಯಸಾಚಿಯಾದ ಅರ್ಜುನನು ಬಾಣಗಳ ಸುರಿಮಳೆ ಗೆಯ್ದನು. ಅತ್ತ ಪರಶಿವನು ದಾರಿ ಗಾಣದಾದನು. ಗಾಂಡೀವವು ನಂಜುಂಡನಿಗೆ ಅಂಟದೆ ಹೋಯಿತು. ಅಸ್ತ್ರಗಳೆಲ್ಲವೂ ನಿರ್ವೀರ್ಯವಾದವು. ಧನಂಜಯನು ಬಹಳ ದಣಿದು ಓರ್ವ ಬೇಟೆಗಾರನಿಂದಾಗಿ ರಕ್ತಸಿಕ್ತವಾದ ಶರೀರದೊಂದಿಗೆ ಭೂಮಿಯಲ್ಲಿ ಅಲೆಯಬೇಕಾಯಿತು. ಅರ್ಜುನನು ಕೋಪದಿಂದ ಬಾಣವನ್ನು ಬಿಡಲು ಶಿವನ ಸಿರಸ್ಸು ಅದುರಿತು. ಮೂರು ಲೋಕಗಳೂ ಕಂಪಿಸಿದವು. ಆಗ ಅರ್ಜುನನಿಗೆ ಜ್ಞಾನೋದಯವಾಯಿತು. ಅವರು ಕಿರಾತ ದಂಪತಿಗಳಲ್ಲ. ಅವರು ಗೌರಿ ಮತ್ತು ಈಶ್ವರರೆಂದು ಗುರುತಿಸಿ, ಅವರಿಂದ ತನ್ನಿಂದಾದ ಪ್ರಮಾದಕ್ಕಾಗಿ ಕ್ಷಮಾ ಭಿಕ್ಷೆ ಬೇಡಿದನು. ಆದಿ ಭಿಕ್ಷುವಾದ ಶಿವನು ಕರುಣೆಸಿ, ಅರ್ಜುನನ ಬಿಲ್ಲುವಿದ್ಯೆಯ ನೈಪುಣ್ಯಕ್ಕೆ ಮೆಚ್ಚಿ, ವರ ರೂಪವಾಗಿ ಪಾಶುಪತಾಸ್ತ್ರವನ್ನು ಪ್ರಸಾದ ರೂಪವಾಗಿ ನೀಡಿದನು. ಹೀಗೆ ಹಗೆತನವು ಖುಷಿಯಲ್ಲಿ ಪರಿಣಮಿಸಿತು.

ಮಹಾಭಾರತ –1 :

ಆ. ಪಂಚಮ ವೇದವೆನೆ ಭಾರತವೆ ಎನ್ನುತ
ಸ್ತುತಿಪರೇಕೆ ಜನ ? ಮತಿಯ ತೊರೆದು ?
ಹಿಂಸೆಯರಿತು ನೋಡೆ ಹೇಗೆ ಇಷ್ಟವಿಹುದು ?
ವಿಶ್ವದಾಭಿರಾಮ ಕೇಳು ವೇಮ.

ವೇದಗಳು ನಾಲ್ಕು. ಋಗ್ವೇದ, ಯಜುರ್ವೇದ, ಸಾಮವೇದ ಮತ್ತು ಅಥರ್ವಣ ವೇದ. ಈ ನಾಲ್ಕು ವೇದಗಳಿಗೆ ಸರಿಸಮವಾಗಿ ನಿಲ್ಲಬಲ್ಲ ಧರ್ಮ ಪಾಠವನ್ನು, ನಿರ್ಮಿಸಿದವರು ವ್ಯಾಸ ಮಹರ್ಷಿಗಳು. ಆದರೆ ಮಹಾಭಾರತದಲ್ಲಿ ಆದಿಯಿಂದ ಅಂತ್ಯದ ವರೆಗೆ ಹಿಂಸೆಯೇ ತಾಂಡವವಾಡುತ್ತದೆ. ವೇದಗಳಲ್ಲಿ, ಯಜ್ಞ ಯಾಗಗಳಲ್ಲಿ, ಪ್ರಾಣಿ ಬಲಿಯಿದೆ ನಿಜ. ಆರ್ಯ ದಸ್ಯುಗಳಲ್ಲಿ ಸಂಸ್ಕೃತಿಯ ಘರ್ಷಣೆಯಿದೆ. ಆದರೆ ಮಹಾಭಾರತದ ಚರಿತ್ರೆಯಲ್ಲಿ ಇರುವಂತೆ, ಕುಟುಂಬವೊಂದರ ದಾಯಾದಿ ಮತ್ಸರವೂ, ದೇಶ ದೇಶಗಳ ರಾಜರನ್ನೂ ಪ್ರಜೆಗಳನ್ನೂ ಎದುರು ಬದುರು ನಿಲ್ಲಿಸಿ ಯುದ್ಧಕ್ಕೆ ಆಣಿಗೊಳಿಸುವ ನೀತಿಯಿಲ್ಲ. ಕುರುವಂಶದ ಪಾಂಡುರಾಜನ ಮಕ್ಕಳಾದ

ಪಾಂಡವರು, ಪಾಂಡುವಿನ ಅಣ್ಣ ಧೃತರಾಷ್ಟ್ರನ ತನಯರಾದ ಕೌರವರು ನಿಜವಾಗಿ ಸೋದರ ಸಂಬಂಧಿಗಳು. ಅವರಿಬ್ಬರಿಗೂ ಭೀಷ್ಮ ಪಿತಾಮಹ, ದ್ರೋಣಾಚಾರಿ ಶಸ್ತ್ರ ಗುರು, ಕೃಪಾಚಾರಿ ಶಾಸ್ತ್ರ ಗುರು. ಆದರೂ ಆಸ್ತಿ ಹಂಚಿಕೊಳ್ಳುವಲ್ಲಿ ಕಲಹ. ತುಂಡು ಭೂಮಿಗಾಗಿ ಯುದ್ಧ. ಪರಸ್ಪರರನ್ನು ನಾಶ ಮಾಡುವಲ್ಲಿ ಮೋಸ ವಂಚನೆ, ಹಿಂಸೆಗಳು ವಿಜೃಂಭಿಸುತ್ತವೆ.

ಪಾಂಡವರನ್ನು ಕೊಲ್ಲಲು ದುರ್ಯೋಧನನು ಷಡ್ಯಂತ್ರ ರಚಿಸುತ್ತಾನೆ. ಅರಗಿನ ಮನೆಯಲ್ಲಿಟ್ಟು ಸುಡಬೇಕೆನ್ನುತ್ತಾನೆ. ಕೊನೆಗೆ ಮಾವ ಶಕುನಿಯ ಕುಟಿಲೋಪಾಯದಿಂದ ಲೆತ್ತದಾಟಕ್ಕೆ ಆಹ್ವಾನಿಸಿ ಧರ್ಮರಾಜನನ್ನು ಸೋಲಿಸಿ, ರಾಜ್ಯದ ಅಧಿಕಾರ ಕಿತ್ತುಕೊಂಡು, ಅರಣ್ಯವಾಸಕ್ಕೆ ಕಳಿಸುತ್ತಾನೆ. ಅರಣ್ಯದಲ್ಲಿ ಪರಿಪರಿಯ ಕಷ್ಟ ಸೋಸಿ, ಮರಳಿದ ಬಳಿಕ, ಐದು ಗ್ರಾಮಗಳನ್ನಾದರೂ ಕೊಡಲು ಕೇಳಿದಾಗ ದುರ್ಯೋಧನನು ಒಪ್ಪದೆ ಯುದ್ಧವನ್ನು ಅನಿವಾರ್ಯವಾಗಿಸುತ್ತಾನೆ. ಕೌರವ ಸೇನೆಯಲ್ಲಿ ಹನ್ನೊಂದು ಅಕ್ಷೌಹಿಣಿ ಸೇನೆ, ಪಾಂಡವ ಪಕ್ಷದಲ್ಲಿ ಏಳು ಅಕ್ಷೌಹಿಣಿ ಸೈನ್ಯ ; ಘನಘೋರ ಸಂಗ್ರಾಮವು ಹದಿನೆಂಟು ದಿನ ನಡೆಯುತ್ತದೆ. ಗುರು ಹಿರಿಯರಾದ ಕೃಪ, ದ್ರೋಣ, ಭೀಷ್ಮರೂ ಮಡಿಯುತ್ತಾರೆ. ಪುತ್ರ ಪೌತ್ರರೂ ಮಡಿಯುತ್ತಾರೆ. ಹಿಂಸೆಯ ದವಡೆಗೆ ಎಲ್ಲರೂ ತುತ್ತಾಗುತ್ತಾರೆ.

ಕೌರವರು ದುಷ್ಟ ಇರಾದೆ ಹೊಂದಿದ್ದರು, ನಿಜ. ಆದರೆ ಯುದ್ಧದಲ್ಲಿ ಪಾಂಡವರು ಅನುಸರಿಸಿದ ಮಾರ್ಗವು ಯುದ್ಧ ನೀತಿಯೇ ? ಕೃಷ್ಣನು ಮಾರು ವೇಷದಿಂದ ಕರ್ಣಕವಚ ಕುಂಡಲಗಳನ್ನು ದಾನವಾಗಿ ಪಡೆದ. ಜಯದ್ರಥನನ್ನು ಕೊಲ್ಲುವಲ್ಲಿ ಮಾಯೆಯಿಂದ ಸೂರ್ಯನನ್ನು ಅಡಗಿಸಿದ ; ದ್ರೋಣರನ್ನು ಜಯಿಸುವಲ್ಲಿ ಧರ್ಮರಾಜನು 'ಅಶ್ವತ್ಥಾಮೋ ಹತಃ' ಎಂದು ಘಟ್ಟಿಯಾಗಿ ಕೂಗಿ, 'ನರೋ ವಾ ಗಜೋವಾ' ಎಂದು ಶಂಖಧ್ವನಿಗಳ ಮಧ್ಯೆ ಕೂಗಿದ. ದುರ್ಯೋಧನನನ್ನು ಕೊಲ್ಲುವಾಗ, ಯುದ್ಧ ನೀತಿಗೆ ವಿರುದ್ಧವಾಗಿ ಹೊಕ್ಕಳ ಕೆಳಗೆ ಭೀಮನು ಗದೆಯಿಂದ ಹೊಡೆದ. ಒಂದೇ ಎರಡೇ. ಹಿಂಸೆ, ಮೋಸಗಳು ತುಂಬಿ ತುಳುಕುವ ಭಾರತ ಕತೆಯನ್ನು ಜನರೇಕೆ ಬುದ್ಧಿ ತೊರೆದು ಸ್ತುತಿಸುವರೋ ಕಾಣೆವು. ಜನರಿಗೆ ಹಿಂಸೆಯೇ ಇಷ್ಟವಾಗುವುದೇನು ? ಹಾಗಿದ್ದರೆ ಅದನ್ನು ಪಂಚಮ ವೇದವೆಂದು ಸ್ತುತಿಸುವುದೇಕೆ ?

ಆ. ಹಾದರದ ಕಥೆಯಿದು ಸೋದರರ ವಧೆಯಿದು.
ಪರಿಕಿಸಲುಂಟಿ ಪುಣ್ಯ ಭಾರತವನು ?
ಪಾಪ ಹರಣವಯ್ಯ ! ಬಸವ ಪುರಾಣವೇ !
ವಿಶ್ವದಾಭಿರಾಮ ಕೇಳು ವೇಮ.

ಈ ಮೇಲಿನ ಪದ್ಯದಲ್ಲಿ ಕುರುವಂಶದ ಪಾಂಡವ ಮತ್ತು ಕೌರವರ ಪರಸ್ಪರ ವಧೆಯ ಕುರಿತು, ಘೋರ ಹಿಂಸೆ ಕುರಿತು ವಿವರಿಸಲಾಗಿದೆ. ಈಗ ಭಾರತ ಕಥೆಯಲ್ಲಿಯ ಹಾದರದ ಕಥೆಯನ್ನಿಷ್ಟು ತಿಳಿಯಬೇಕು.

ಮಹಾಭಾರತದ ಗ್ರಂಥಕರ್ತೃವು ವ್ಯಾಸ. ಅವನು ಹೇಗೆ ಜನಿಸಿದ ? ಅಂಬಿಗರ ನಾಯಕ ದಾಶರಾಜನ ದೋಣಿಯನ್ನು ಅವನ ಮಗಳಾದ ಮತ್ಸ್ಯಗಂಧಿಯು ನಡೆಸುತ್ತಿದ್ದ ಸಮಯದಲ್ಲಿ ಪರಾಶರ ಮುನಿ ದೋಣಿ ಏರಿದರು. ಅವರು ನದಿಯ ಮಧ್ಯೆ ಕಾಮಾತುರರಾಗಿ ಮತ್ಸ್ಯಗಂಧಿಯೊಡನೆ ಮೈಥುನ ನಡೆಸಿದರು. ಜನರಾರಿಗೂ ಕಾಣದಂತೆ ಸುತ್ತಲೂ ಮಂಜು

ಕವಿಯುವಂತೆ ಮಾಡಿದರು. ಮೈಥುನದಿಂದಾಗಿ ಮತ್ಸ್ಯಗಂಧವು ತೊಲಗಿ ಸುಗಂಧವುಂಟಾಯಿತು. ಮುಂದೆ ಅವಳು ಸತ್ಯವತಿಯೆನಿಸಿದಳು. ನದಿಯಲ್ಲಿ ಹುಟ್ಟಿದ ನಿಮಿತ್ತ ವ್ಯಾಸನು ದ್ವೈಪಾಯನನೆನಿಸಿದನು. ಯಮುನೆಯ ನೀರು ಕೃಷ್ಣ ವರ್ಣದ್ದು. ಅಂದರೆ ಕಪ್ಪು ಅದರಿಂದ ಅವನು ಕೃಷ್ಣ ದ್ವೈಪಾಯನನಾದನು. ದೊಡ್ಡವನಾದ ಮೇಲೆ ವೇದಗಳನ್ನು ವಿಭಜಿಸಿ ವೇದವ್ಯಾಸನೆನಿಸಿದನು.

ಭೀಷ್ಮನು ಕೌರವ ಪಾಂಡವರಿಗೆ ಪಿತಾಮಹನು. ಅವನ ತಂದೆ ಶಾಂತನು ಮಹಾರಾಜ. ಅವನು ಗಂಗೆಯೊಂದಿಗೆ ವಿವಾಹವಾಗಿ ಭೀಷ್ಮನನ್ನು ಪಡೆದಿದ್ದ. ಭೀಷ್ಮನನ್ನು ಉಳಿಸಿಕೊಂಡ ಪರಿಣಾಮವಾಗಿ ಗಂಗೆಯು ಪೂರ್ವ ಶರ್ಯತ್ತಿನಿಂದ ಶಾಂತನುವನ್ನು ತೊರೆದಿದ್ದಳು. ಶಾಂತನು ಮಹಾರಾಜನು ವನವಿಹಾರಕ್ಕಾಗಿ ಹೋದಾಗ, ದಾಶರಾಜನ ಕನ್ನೆ ಸತ್ಯವತಿಯಲ್ಲಿ ಅನುರಕ್ತನಾದನು. ಕೊನೆಗೆ ಭೀಷ್ಮನೇ ದಾಶರಾಜನಲ್ಲಿ ಹೋಗಿ, ಸತ್ಯವತಿಯನ್ನು ಕರೆತಂದು ತನ್ನ ತಂದೆಗೆ ಲಗ್ನ ಮಾಡಿದನು. ಆ ಸಂದರ್ಭದಲ್ಲಿ ತಾನು ಆಜನ್ಮ ಬ್ರಹ್ಮಚಾರಿಯಾಗಿ-ರುವುದಾಗಿಯೂ ವಚನ ತೊಟ್ಟು ರಾಜ್ಯಾಧಿಕಾರವು ಸತ್ಯವತಿಯ ಸಂತಾನಕ್ಕೇ ಮೀಸಲು ಎಂದು ಪ್ರತಿಜ್ಞೆ ಗೆಯ್ದನು.

ಶಾಂತನು-ಸತ್ಯವತಿಯರಿಗೆ ಇಬ್ಬರು ಮಕ್ಕಳು. ವಿಚಿತ್ರವೀರ್ಯ ಮತ್ತು ಚಿತ್ರಾಂಗದ. ಚಿತ್ರಾಂಗದನು ಮೊದಲೇ ತೀರಿಕೊಂಡ. ವಿಚಿತ್ರವೀರ್ಯನೂ ಸಂತಾನವಿಲ್ಲದೆ ಕಾಲವಾದ. ವಿಚಿತ್ರವೀರ್ಯನ ಸತಿಯರಾದ ಅಂಬಿಕೆ ಅಂಬಾಲಿಕೆಯರಿದ್ದರು. ಅವರಿಂದ ಗಂಡನ ಸೋದರರು 'ನಿಯೋಗ ಪದ್ಧತಿ'ಯಿಂದ ಸಂತಾನ ಪಡೆಯುವುದು ಈಗಿನ ಕಾಲದ ಹಾದರವೆನಿಸಿದ್ದರೂ, ಆಗ ಧರ್ಮನೀತಿಯಾಗಿತ್ತು. ಸತ್ಯವತಿಯು ತನ್ನ ಮಲ ಮಗನಾದ ಭೀಷ್ಮನನ್ನು ಈ ನಿಯೋಗ ಸಂತಾನ ಪಡೆಯಲು ಕೇಳಿದಳು. ಆದರೆ ತನ್ನ ಮುಂಚಿನ ಪ್ರತಿಜ್ಞೆಯನ್ನು ನೆನಪಿಸಿ ತಾನು ಬ್ರಹ್ಮಚಾರಿಯಾಗಿಯೇ ಉಳಿಯುವೆನೆಂದನು. ಹೀಗಾಗಿ, ಶಾಂತನುವಿನ ನಂತರ ಕುರುಸಂತತಿಯ ಮುಂದುವರಿಕೆಗೆ ಅಡ್ಡಿಯಾಗಿತ್ತು. ಆಗ ಸತ್ಯವತಿಯು, ತನ್ನ ಮಗನಾದ ವ್ಯಾಸನು ಆಪತ್ಕಾಲದಲ್ಲಿ ನೆನೆದರೆ ಬರುವೆ ಎಂದು ವಚನ ಕೊಟ್ಟಿದ್ದಾನೆ. ಈಗ ಅವನನ್ನು ನೆನೆಯಲೇ ? ಎಂದು ಕೇಳಿದಳು. ಭೀಷ್ಮನು ಸಮ್ಮತಿಸಿದನು. ಸತ್ಯವತಿಯು ನೆನೆದೊಡನೆಯೇ ದ್ವೈಪಾಯನರು ಆಗಮಿಸಿದರು. ಆಗ ವ್ಯಾಸರನ್ನು ಉದ್ದೇಶಿಸಿ, ಸತ್ಯವತಿಯು ''ಕುರುವಂಶದ ಮುನ್ನಡೆಗಾಗಿ, ಗತಿಸಿದ ವಿಚಿತ್ರವೀರ್ಯನ ಭಾರ್ಯೆಯರಾದ ಅಂಬಿಕೆ, ಅಂಬಾಲಿಕೆಯರಿಂದ ಪುತ್ರರನ್ನು ಪಡೆ. ಕುರುವಂಶದ ಮೇಲೆ ಅಭಿಮಾನವಿಡು. ಭೀಷ್ಮನ ಪ್ರಾರ್ಥನೆಯಂತೆ ಇದು ನನ್ನ ಅಣತಿ ಎಂದು ಭಾವಿಸು'' ಎಂದು ತಾಯಿ ಸತ್ಯವತಿಯು ವಿನಂತಿಸಿದಳು. ವ್ಯಾಸರೂ ಒಪ್ಪಿಕೊಂಡರು. ಹೀಗೆ ವ್ಯಾಸರು ಅಂಬಿಕೆಯಲ್ಲಿ ಧೃತರಾಷ್ಟ್ರನನ್ನೂ, ಅಂಬಾಲಿಕೆಯಲ್ಲಿ ಪಾಂಡುವನ್ನೂ ಪಡೆದದ್ದಲ್ಲದೆ, ಅಂಬಾಲಿಕೆಯ ದಾಸಿಯಲ್ಲಿ ವಿದುರನನ್ನೂ ಪಡೆದರು. ಕುರುವಂಶದ ಮುಂದಿನ ಕುಡಿಗಳೆಲ್ಲ ಈ ಹಾದರದ ಸಂತಾನವೇ ಎಂಬುದು ಎಲ್ಲರಿಗೂ ಗೊತ್ತು.

ಅರ್ಜುನನ ತಂದೆ ತಾಯಿಗಳ ಕಥೆಯಂತೂ ಇನ್ನೂ ವಿಚಿತ್ರ. ವ್ಯಾಸನ ನಿಯೋಗ ಪುತ್ರನಾಗಿ ಜನಿಸಿದ ಪಾಂಡು ರಾಜನಿಗೆ ಇಬ್ಬರು ಹೆಂಡಂದಿರು. ಕುಂತಿ ಮತ್ತು ಮಾದ್ರಿ. ದಾನಶೂರ ಕರ್ಣನು ಕುಂತಿಯ ವಿವಾಹ ಪೂರ್ವದ ಸಂತಾನ. ಹೀಗಾಗಿ ಸಮಾಜಕ್ಕೆ ಹೆದರಿ ಕುಂತಿಯು ಮಗುವನ್ನು ನದಿಯಲ್ಲಿ ತೇಲಿ ಬಿಟ್ಟಳು. ಅದನ್ನೇ ನದಿಯ ಕೆಳಗಡೆ ಸೂತ ದಂಪತಿಗಳು ಎತ್ತಿಕೊಂಡು

ಸಾಕಿದರು. ಹೀಗೆ ವಿವಾಹಪೂರ್ವ ಕುಂತೀ ಪುತ್ರನಾದ ಕರ್ಣ ಮುಂದೆ ಸೂತಪುತ್ರನಾಗಬೇಕಾಯಿತು. ಪಾಂಡವರಿಂದಲೇ ಕೀಳು ಕುಲಜನೆಂದು ಅಮಮಾನಿತನಾಗಬೇಕಾಯಿತು. ವಿವಾಹ ನಂತರ ಹುಟ್ಟಿದ (ಕುಂತಿಯಿಂದ ಹುಟ್ಟಿದ) ಧರ್ಮ, ಭೀಮ, ಅರ್ಜುನರು ಪಾಂಡು-ಕುಂತಿಯರ ತನಯರೇನಲ್ಲ. ದಂಪತಿಗಳಲ್ಲಿ ಸಂಭೋಗ ಕೂಡದೆಂಬ ಶಾಪವಿತ್ತು. ಆದ್ದರಿಂದ ಅವರು ಯಮ, ವಾಯು, ಮತ್ತು ಇಂದ್ರರ ಮಂತ್ರದಿಂದ ಹುಟ್ಟಿದವರೆಂದು ಹೇಳಲಾಗಿದೆ. ಇನ್ನು ಮಾದ್ರಿಯ ಮಕ್ಕಳಾದ ನಕುಲ ಸಹದೇವರು ಅಶ್ವಿನೀ ಕುಮಾರರ ಮಂತ್ರದಿಂದ ಜನಿಸಿದರೆಂದೂ ಹೇಳಲಾಗಿದೆ. ಮಂತ್ರದಿಂದ ಮಾವಿನಕಾಯಿ ಉದುರುವುದಿಲ್ಲ ಎಂದು ಭಾವಿಸುವ ಕಾಲದಲ್ಲಿ ಪುರುಷ ಸಂಭೋಗವಿಲ್ಲದೆ ಗರ್ಭ ನಿಲ್ಲದು. ಪುರುಷನು ಬೀಜ ಊರದಿದ್ದರೆ, ಹೇಗೆ ? ಪುರುಷನು ಪತಿಯಲ್ಲವಾದರೆ, ಪರಪುರುಷನಿರಲೇಬೇಕು. ಇದನ್ನೇ ಹಾದರದ ಸಂತತಿ ಎನ್ನುತ್ತಾರೆ.

ಹಾದರದ ಇನ್ನೊಂದು ಪ್ರಕಾರವೇ ಒಂದು ಕ್ಷೇತ್ರದಲ್ಲಿ ಹಲವರು ಬೀಜ ಊರುವುದು. ದ್ರೌಪದಿ ಇಂಥ ಕ್ಷೇತ್ರ. ಧರ್ಮ, ಭೀಮ, ಅರ್ಜುನ, ನಕುಲ ಸಹದೇವರು ಬೀಜ ಊರುವ ಪುರುಷರು. ದ್ರೌಪದಿಗೆ ಹುಟ್ಟುವ ಮಕ್ಕಳು ಯಾರ ಬೀಜದ ಸಂತಾನವೋ ಯಾರಿಗೆ ಗೊತ್ತು.? ಹಾದರದ ಸಂತಾನ ಎಂದು ಸಾಮಾಜಿಕವಾಗಿ ಕರೆಯಬಹುದಷ್ಟೇ. ಇಷ್ಟೇ ಏಕೆ ? ಅರ್ಜುನ ಯಾದವರ ಮನೆಯ ಹಿರಿಯಣ್ಣ ಬಲರಾಮನಿಗೆ ತಿಳಿಯದಂತೆ ಸುಭದ್ರೆಯನ್ನು ಓಡಿಸಿಕೊಂಡು ಬಂದನು. ಕಾಮರೂಪ ನಾಡಿಗೆ ಹೋದಾಗ ಚಿತ್ರಾಂಗದೆಯೊಂದಿಗೆ ಮೈಥುನ ಕ್ರೀಡೆಗಿಳಿದು ಬಬ್ರುವಾಹನನನ್ನು ಮಗನಾಗಿ ಪಡೆದರೂ ಅವಳನ್ನು ಮುಂದೆ ಪೂರ್ಣ ಮರೆತು, ಬಬ್ರುವಾಹನನೊಂದಿಗೆ ಘೋರ ಯುದ್ಧ ಮಾಡಿದ. ಒಂದೇ ಎರಡೇ ಈ ಅನೈತಿಕ ಸಂಬಂಧಗಳು ! ಇವುಗಳ ಕಥೆಯು ಹಾದರದ ಕಥೆಯೆನಿಸದೇ ? ಇದಕ್ಕೆ ಮುನ್ನ ಭಾರತದಲ್ಲಿಯ ಸೋದರರ ವಧೆಯ ಚಿತ್ರಣವನ್ನು ನೀಡಿದ್ದೇವೆ. ಈ ಹಾದರದ ಕಥೆಯನ್ನೂ, ಸೋದರರ ವಧೆಯ ಕಥೆಯನ್ನೂ ಪುಣ್ಯ ಕಥೆಯೆಂದು ಪರಿಗಣಿಸಬಹುದೇ ?

ಬಸವಣ್ಣನೆಂಬ ಶರಣನು ಹನ್ನೆರಡನೆಯ ಶತಮಾನದಲ್ಲಿ ಜೀವಿಸಿದ್ದನು. ಅವನು ಮರಣಿಸಿದ ನಲವತ್ತು ವರುಷಗಳಲ್ಲಿ ತೆಲುಗಿನಲ್ಲಿ ಪಾಲ್ಕುರಿಕಿ ಸೋಮನಾಥನು ಭಕ್ತಿ ಪುರಸ್ಸರವಾದ ಬಸವ ಪುರಾಣವನ್ನು ರಚಿಸಿದ್ದಾನೆ. ಇದರಲ್ಲಾವ ಹಾದರದ ಕಥೆಯೂ ಇಲ್ಲ ; ಸೋದರರ ವಧೆಯೂ ಇಲ್ಲ. ಇದರಲ್ಲಿ ಭಕ್ತಿಯ ಹೊನಲು ಹರಿದಿದೆ. ಮಹಾಭಾರತವನ್ನು ಓದುವುದಕ್ಕಿಂತ, ಮೂಢ ಭಕ್ತಿಯಿಂದ ಗುಡಿ-ಗುಂಡಾರಗಳಿಗೆ ಹೋಗುವ, ತೀರ್ಥ ಕ್ಷೇತ್ರಗಳಿಗೆ ಹೋಗುವುದನ್ನು ತಿರಸ್ಕರಿಸುವ, ತನ್ನೊಳಗಿನ ಪ್ರಾಣವನ್ನೂ, ಭಾವವನ್ನೂ ದೇವರ ಲಿಂಗವೆಂದು ನಂಬುವ, ಜಾತಿಯ ಮೇಲು ಕೀಳು ಭಾವವಿಲ್ಲದೆ, ಶಕುನ, ಶ್ರಾದ್ಧಗಳ ಕಂದಾಚಾರಕ್ಕೆ ಕಟ್ಟು, ಬೀಳದ ಗ್ರಹಿಕೆಗಳನ್ನು ಎತ್ತಿ ಹಿಡಿಯುವ ಬಸವ ಪುರಾಣವೇ ಭಾರತಕ್ಕಿಂತ ಲೇಸು.

ರಾಮಾಯಣ :

ಕೈಕೆಯಿಂದಾಗಿ ರಾಮನು ಕಾಡು ಸೇರಿ,
ಸೀತೆ ಕಳೆದೊಡನೆ ದಶಕಂಠ ಸೊಕ್ಕಡಗಿಸಿ,
ತಿರುಗಿ ಪಟ್ಟಾಭಿಷಿಕ್ತನಾದ ತೇಜಿಸುತ್ತ,
ವಿಮಲ ರಾಜ ಯೋಗೀಂದ್ರ ವೇಮನಾರ್ಹ.

ಅಯೋಧ್ಯೆಯ ರಾಜನಾದ ದಶರಥನಿಗೆ ಕೌಸಲ್ಯ, ಸುಮಿತ್ರಾ ಮತ್ತು ಕೈಕೇಯಿ ಎಂಬ ಮೂವರು ಹೆಂಡಂದಿರು. ಕಿರಿಯಳಾದ ಕೈಕೇಯಿಯು ಅಪರೂಪ ಸುಂದರಿ. ರಾಜನು ಅವಳಲ್ಲಿ ತುಂಬಾ ಅನುರಕ್ತನಾಗಿದ್ದನು. ಅವಳ ಮಾತಿಗೆ ಎರಡು ಬಗೆಯುತ್ತಿರಲಿಲ್ಲ. ಮೇಲಾಗಿ ಹಿಂದೊಮ್ಮೆ ಯುದ್ಧ ಕಾಲದಲ್ಲಿ ರಥದ ಕೀಲು ಕಳಚಿದಾಗ, ಚಕ್ರವು ಸರಿದು ಉರುಳದಂತೆ ಮಾಡಿದ್ದಳು. ಆಗ ರಾಜನು ನಿನಗೆ ಬೇಕಾದ ಎರಡು ವರಗಳನ್ನು ಕೇಳು, ಎಂದು ವಚನಕೊಟ್ಟಿದ್ದನು. ಈಗೇನೂ ಬೇಡ, ಮುಂದೆ ನೋಡೋಣ, ಎಂದಿದ್ದಳು ಕೈಕೇಯಿ. ಮುಂದೆ ರಾಜನಿಗೆ ಮುಪ್ಪಡರಿತು. ವಸಿಷ್ಠಾದಿ ಮುನಿಗಳ ಸಲಹೆಯಂತೆ ರಾಮನಿಗೆ ಯುವರಾಜ ಪಟ್ಟಾಭಿಷೇಕ ಸಮಾರಂಭ ಏರ್ಪಾಟಾಯಿತು. ಕೈಕೇಯಿಯೂ ಸಂತಸದಿಂದ ಇದ್ದಳು. ಆದರೆ ಅವಳ ತೌರಿನಿಂದ ಅವಳನ್ನು ಹಿಂಬಾಲಿಸಿ ಬಂದ ಮಂಥರೆಯೆಂಬ ಗೂನು ಬೆನ್ನಿನ ದಾಸಿಯು, ರಾಮನು ಯುವರಾಜನಾದರೆ, ಕೈಕೇಯಿಗೆ ಕಷ್ಟವಾಗುವುದೆಂದು ಕೈಕೇಯಿಯಲ್ಲಿ ಅಸೂಯೆಯನ್ನು ಹುಟ್ಟಿಸಿದಳು. ಆಗ ಕೈಕೇಯಿಯು ರಾಜನೆದುರು ತನ್ನ ಮನದ ಇಂಗಿತವನ್ನು ಬಿಚ್ಚಿಡುತ್ತ, ಯುವರಾಜ ಪಟ್ಟ ತನ್ನ ಸ್ವಂತ ಮಗನಾದ ಭರತನಿಗೆ ದೊರೆಯಬೇಕು. ಮತ್ತು ರಾಮನು ಹದಿನಾಲ್ಕು ವರ್ಷ ವನವಾಸಕ್ಕೆ ಹೋಗಬೇಕು ಎಂಬ ಎರಡು ಬೇಡಿಕೆಗಳನ್ನು ಮುಂದಿಟ್ಟಳು. ಮತ್ತು ತನಗೆ ದಶರಥನು ಹಿಂದೆ ನೀಡಿದ ವಚನವನ್ನು ಜ್ಞಾಪಿಸಿದಳು. ಇದನ್ನು ಕೇಳಿ ದಶರಥ ವಿಹ್ವಲನಾದನು, ಮೂರ್ಛೆ ಹೋದನು. ಕೊನೆಗೆ ರಾಮನಿಗೆ ಈ ವಿಷಯ ತಿಳಿದು ತನ್ನ ತಂದೆಯ ಸಂಧಿಗ್ಧತೆಯನ್ನು ಅರಿತು ತಾನೇ ಮುಂದಾಗಿ, ತಮ್ಮನಾದ ಭರತನಿಗೆ ಪಟ್ಟಕಟ್ಟಬೇಕೆಂದೂ ತಾನು ಹದಿನಾಲ್ಕು ವರ್ಷ ವನವಾಸ ಕೈಕೊಳ್ಳುವುದಾಗಿಯೂ ನಿರ್ಧರಿಸಿದನು. ಮತ್ತು ತನ್ನೊಂದಿಗೇ ಕಾಡಿಗೆ ಬರಲು ದುಂಬಾಲು ಬಿದ್ದ ಪತ್ನಿ ಸೀತೆ ಮತ್ತು ತಮ್ಮ ಲಕ್ಷ್ಮಣರೊಂದಿಗೆ ಕಾಡು ಸೇರಿದನು. ದಂಡಕಾರಣ್ಯದಲ್ಲಿ ಅಲೆಯುತ್ತ ಗೋದಾವರಿ ನದಿಯ ಪ್ರದೇಶಕ್ಕೆ ಬಂದು ಅಲ್ಲಿ ಒಂದು ಪರ್ಣ ಶಾಲೆಯನ್ನು ನಿರ್ಮಿಸಿದನು. ಕೆಲ ಕಾಲ ಅಲ್ಲಿ ಜಿಂಕೆ ಮೊದಲಾದ ಪ್ರಾಣಿಗಳನ್ನು ಬೇಟೆಯಾಡುತ್ತ, ಹಣ್ಣು ಹಂಪಲ ತಿನ್ನುತ್ತ, ಉಪಜೀವಿಸುತ್ತಿದ್ದನು. ಆಗ ರಾವಣಾಸುರನ ತಂಗಿ ಶೂರ್ಪಣಖಿ ಎಂಬ ರಕ್ಕಸಿಯು ಅರಣ್ಯದಲ್ಲಿ ಅಲೆದಾಡುವ ರಾಮನ ಸ್ಫುರದ್ರೂಪವನ್ನು ಕಂಡು ಮರುಳಾದಳು ರಾಮ-ಲಕ್ಷ್ಮಣರನ್ನು ಸಂಧಿಸಿ ತನಗೆ ಪ್ರೇಮ ಭಿಕ್ಷೆ ನೀಡಬೇಕೆಂದು ಕೇಳಿದಳು. ರಾಮನು ತನಗೀಗಾಗಲೇ ಮದುವೆಯಾಗಿದೆಯೆಂದೂ ತನ್ನ ಸತಿ ಜೊತೆಗಿರುವಳೆಂದೂ ಹೇಳಿ, ಅವಳನ್ನು ಲಕ್ಷ್ಮಣನತ್ತ ಕಳಿಸಿದನು. ತನಗೆ ದುಂಬಾಲು ಬಿದ್ದ ರಕ್ಕಸಿಯನ್ನು ದೂರಗೊಳಿಸುವ ತನ್ನ ಪ್ರಯತ್ನದಲ್ಲಿ ಕೆರಳಿದ ಲಕ್ಷ್ಮಣನು ಅವಳ ಮೂಗು ಕೊಯ್ದು ಬಿಟ್ಟನು. ಈ ಅವಮಾನದಿಂದ ರೋಷಗೊಂಡ ಶೂರ್ಪಣಖಿಯು ತನ್ನ ಅಣ್ಣ ರಾವಣನಲ್ಲಿಗೆ ಬಂದು ತನಗಾದ ಅವಮಾನ ಕುರಿತು ವಿವರವಾಗಿ ಹೇಳಿ, ರಾವಣನ ಮನ ಕೆರಳಿಸಲು ಸೀತೆಯ ಅನುಪಮ ಸೌಂದರ್ಯವನ್ನು ಬಣ್ಣಿಸಿದಳು. ತಂಗಿಗಾದ ಅವಮಾನವನ್ನೂ ಮತ್ತು ಸೀತೆಯ ಸೌಂದರ್ಯದ ಬಣ್ಣನೆಯನ್ನೂ ಕೇಳಿ ಮಸ್ತನಾದ ರಾವಣಾಸುರನು ಹಂಚಿಕೆ ಹೂಡಿ, ಸನ್ಯಾಸಿಯ ಮಾರು ವೇಷದಿಂದ ಹೋಗಿ, ಭಿಕ್ಷೆಯ ನೆಪದಿಂದ ಸೀತೆಯಿರುವ ಪರ್ಣ ಕುಟೀರಕ್ಕೆ ಹೋಗಿ ಸೀತೆಯನ್ನು ಉಪಾಯವಾಗಿ, ಲಕ್ಷ್ಮಣನು ಕೊರೆದ ಮರ್ಯಾದೆಯ ಮಂತ್ರ ರೇಖೆಯನ್ನು ದಾಟುವಂತೆ ಮಾಡಿದ. ಭಿಕ್ಷೆ ನೀಡಲು ಬಳಿಸಾರಿದ ಸೀತೆಯನ್ನು ತನ್ನ ಬಾಹುಗಳಿಂದ ಸೆಳೆದು, ಮಂತ್ರ ರಥವನ್ನು ಕರೆದು ಅವಳನ್ನು ಅದರಲ್ಲಿ ಕುಳ್ಳಿರಿಸಿಕೊಂಡು ಲಂಕೆಗೆ, ಹಾರಿಹೋದನು. ಮಾಯಾ ಮೃಗದ ಬೇಟೆಯಿಂದ ಮರಳಿದ ರಾಮನು

ಸೀತೆಯನ್ನು ಕಾಣದೆ, ಕಂಗೆಟ್ಟನು. ಅವಳನ್ನು ಹುಡುಕಿಕೊಂಡು, ಕಿಷ್ಕಿಂಧೆಗೆ ಬಂದು ಅಲ್ಲಿ ವಾನರ ರಾಜ ಸುಗ್ರೀವನನ್ನೂ, ಹನುಮಂತ ಮೊದಲಾದ ವೀರರನ್ನೂ ಸೇರಿಕೊಂಡು ರಾವಣನ ನೆಲೆಯನ್ನು ಪತ್ತೆ ಹಚ್ಚಿದನು. ಕೊನೆಗೆ ಲಂಕೆಗೆ ಹೋಗಲು ಸೇತು ಬಂಧನ ನಿರ್ಮಿಸಿ, ಘೋರ ಸಂಗ್ರಾಮ ಹೂಡಿ, ದಶಕಂಠನ ಸೊಕ್ಕನ್ನು ಅಡಗಿಸಿದನು. ಅವನ ವಧೆಯನ್ನು ಮಾಡಿದನು. ಮರಳಿ, ತಿರುಗಿ ಪಟ್ಟಾಭಿಷಿಕ್ತನಾದನು. ಪ್ರಜಾಕಲ್ಯಾಣಾಭಿಲಾಷಿಯಾಗಿ ತೇಜಿಸಿದನು. ಇದು ಮಾನವ ಜೀವನದಲ್ಲಿ ವಿಧಿ ನಡೆಸುವ ಕೈವಾಡಗಳನ್ನು ಸೂಚಿಸುವ ಘಟನೆಗಳಿಗೆ ಒತ್ತು ಕೊಡುವ ರಾಮಾಯಣದ ಸಂಕ್ಷಿಪ್ತರೂಪ. ಮುಂದಿನ ಪದ್ಯಗಳಲ್ಲಿ ಒಂದೊಂದೇ ಮುಖ್ಯ ಘಟನೆಗಳನ್ನು ಕುರಿತು ತಿಳಿಯುವಾ.

ಆ. ದಶರಥನು ರಾಮಗೆ ಧರಣೀಶ ಪಟ್ಟವ,
ಕಟ್ಟ ಬಯಸಿ ತಾನೆ ಕಟ್ಟಿದ ಜಡೆ.
ಬಯಕೆ ನಮ್ಮ ದಷ್ಟೆ ; ಬೇರೆ ದೈವ ಲೀಲೆ.
ವಿಶ್ವದಾಭಿರಾಮ ಕೇಳು ವೇಮ.

ಅಯೋಧ್ಯೆಯ ಅರಸು ದಶರಥನು ತನ್ನ ವೃದ್ಧ ಅವಸ್ಥೆಯನ್ನು ನೆನೆದು ತನ್ನ ಪುತ್ರನಾದ ರಾಮನಿಗೆ ಯುವರಾಜ ಪಟ್ಟವನ್ನು ಕಟ್ಟ ಬಯಸಿದನು. ಎಲ್ಲ ಸಿದ್ಧತೆಗಳೂ ನಡೆದವು. ಇನ್ನೇನು ಪಟ್ಟಾಭಿಷೇಕವು ನಡೆಯಬೇಕೆಂದು ನಿರೀಕ್ಷಿಸುತ್ತಿರುವಾಗ ಅವನ ಕಿರಿಯ ಮಡದಿ ಕೈಕೇಯಿಯು ಅಡ್ಡ ಬಂದಳು. ರಾಜನು ತನಗೆ ಮೊದಲು ನೀಡಿದ್ದ ಎರಡು ವಚನಗಳನ್ನು ನೆನಪಿಸಿ, ಒಂದರ ಪ್ರಕಾರ ಭರತನಿಗೆ ಯುವರಾಜ ಪಟ್ಟಾಭಿಷೇಕವಾಗಬೇಕೆಂದೂ, ಇನ್ನೊಂದರ ಪ್ರಕಾರ ರಾಮನು ಹದಿನಾಲ್ಕು ವರ್ಷ ವನವಾಸಕ್ಕೆ ಹೋಗಬೇಕೆಂದೂ ತನ್ನ ಕೋರಿಕೆಗಳನ್ನು ಮುಂದಿಟ್ಟಳು. ದಶರಥನಿಗೆ ಪೇಚಿಗಿಟ್ಟುಕೊಂಡಿತು. ಇದನ್ನು ಅರಿತ ರಾಮನು ತಾನು ವನವಾಸಕ್ಕೆ ಹೋಗುವುದಾಗಿಯೂ, ಯುವರಾಜನಾಗಿ ಭರತನು ಪಟ್ಟಾಭಿಷಿಕ್ತನಾಗಲೆಂದೂ ತನ್ನ ಇಚ್ಛೆಯನ್ನೂ ವ್ಯಕ್ತಪಡಿಸಿದನು. ಭಗ್ನ ಮನೋರಥನಾದ ದಶರಥನು ನಿರಾಶೆಯಿಂದ ಬೆಂದು ವಿರಕ್ತನಂತೆ ಜಡೆ ಕಟ್ಟಬೇಕಾಯಿತು. ಅವನ ಬಯಕೆಯು ವಿಧಿ ನಿಯಮದಂತೆ ಇರಲಿಲ್ಲ. ವಿಧಿ ನಿಯಮವು ದಶರಥನ ಪೂರ್ವ ಸಂಸ್ಕಾರಗಳ ಫಲದಂತೆ ಘಟನೆಗಳನ್ನು ವಿಧಿಸುತ್ತದೆ. ಹೀಗೆ ಬಯಕೆ ನಮ್ಮದಷ್ಟೆ. ದೈವ ಲೀಲೆಯು ಬೇರೆಯೇ ಇರುತ್ತದೆ. ರಾಮನ ಬಯಕೆಯು ದೈವ ಸಂಕಲ್ಪಕ್ಕೆ ಅನುಗುಣವಾಗಿಯೇ ಇತ್ತು. ಅವನು ಸುಖದಿಂದ ವನವಾಸಕ್ಕೆ ಹೊರಟನು.

ಆ. ಮಡದಿ ಅಡವಿ ಹೊಗಿಸಿ, ಮೃಗದ ಹಿಂದೆ ನಡೆದ.
ರಾಮಚಂದ್ರಗಿಂತ ರಸಿಕನಾರು ?
ಕೆಡುಕು ಕಾಲ ಬರಲು ಕೇಡು ಬುದ್ಧಿ ಬಹುದು.
ವಿಶ್ವದಾಭಿರಾಮ ಕೇಳು ವೇಮ.

ಮಡದಿ ಸೀತೆಯನ್ನು ಅಡವಿಯಲ್ಲಿ ಪರ್ಣ ಶಾಲೆಯಲ್ಲಿ ಬಿಟ್ಟು ರಾಮನು ತಮ್ಮ ಕುಟೀರದ ಬಳಿ ಓಡಾಡುವ ಸ್ವರ್ಣ ಜಿಂಕೆಯನ್ನು ಕಂಡು ಮೋಹಿತಳಾದ ಮಡದಿ ಸೀತೆಯ ಕೋರಿಕೆಯಂತೆ, ಅದನ್ನು ಹಿಡಿದು ತರಲು ಹೋದನು. ಬಂಗಾರದ ಜಿಂಕೆಯು ಭೂಮಿಯಲ್ಲಿ ಇರಬಹುದೋ ಇಲ್ಲವೋ ಎಂದು ವಿವೇಚಿಸುವ ಬುದ್ಧಿಯೂ ಅವನಿಗೆ ಇಲ್ಲವಾಗಿತ್ತು. ಏಕೆಂದರೆ

ಅವನು ಮಡದಿಯ ಮೋಹದಿಂದ ಅಷ್ಟೊಂದು ರಸಿಕನಾಗಿದ್ದನು. ಕೊನೆಗೆ ಬಹುದೂರ ಅಟ್ಟಿಸಿಕೊಂಡು ಹೋಗಿ ಅದನ್ನು ಕೊಂದನು. ಆದರೆ ಅವನ ಅನುಪಸ್ಥಿತಿಯಲ್ಲಿ ವೇಷಧಾರಿ ರಾವಣನಿಂದ ಪತ್ನಿ ಸೀತೆಯ ಅಪಹರಣವೂ ನಡೆಯಿತು. ಅವಳಿಗಾಗಿ ದುಃಖಿತನಾದ ರಾಮನು ದಿಕ್ಕುಗೆಟ್ಟು ಅಲೆದನು. ರಾಮನ ಜೀವನದ ಈ ಘಟನೆಯಿಂದ ಒಂದು ವಿಧಿ ನಿಯಮವು ಸ್ಪಷ್ಟವಾಗುತ್ತದೆ. ಅದೆಂದರೆ, ಕೆಡುಕು ಕಾಲ ಬರಲು, ಕೇಡು ಬುದ್ಧಿಬಹುದು. ರಾಮನಿಗೆ ಪೂರ್ವ ಕರ್ಮದಿಂದಾಗಿ ಕೆಡುಕು ಕಾಲ ಬಂದೋದಗಿತ್ತು. ಹಾಗಾಗಿ ಹೊನ್ನು ಜಿಂಕೆ ಇರಬಹುದೋ ಇಲ್ಲವೋ ಎಂದು ವಿವೇಚಿಸುವ ವಿವೇಕವು ಅಡಗಿ, ಮಡದಿಯ ಮಾತಿನಂತೆ ಮೃಗದ ಹಿಂದೆ ಹೋಗುವ ಕೇಡು ಬುದ್ಧಿ ರಾಮನಿಗೆ ಬಂದಿತು.

ಮಡದಿಯಡವಿ ಹೊಗಿಸಿ ಮುನಿ ಜಿಂಕೆ ಬೆಂಬತ್ತಿದ,
ರಾಮಚಂದ್ರಗಿಂತ ರಸಿಕನಾರು ?
ಭಾಗ್ಯ ತೊಲಗುವ ಕಾಲ ಬುದ್ಧಿ ಅಂತಾಗುವುದು.
ವಿಶ್ವದಾಭಿರಾಮ ಕೇಳು ವೇಮ.

ರಾವಣನ ಮಾವ ಮಾರೀಚನು ಮುನಿಯಾಗಿದ್ದ. ತನ್ನ ದೀರ್ಘ ತಪಸ್ಸಿನ ಸಿದ್ಧಿಯಿಂದ ಕಾಮರೂಪಿಯಾಗಬಲ್ಲವನಾಗಿದ್ದ. ಸೀತೆಯನ್ನು ಅಪಹರಿಸುವ ಸಂಚಿನಲ್ಲಿ ರಾಮನನ್ನು ಅವಳಿಂದ ಅಗಲಿಸಬೇಕಾಗಿತ್ತು. ಈ ಹಂಚಿಕೆಯಲ್ಲಿ ರಾವಣನು ಮಾವನಾದ ಮಾರೀಚನಿಗೆ ದುಂಬಾಲು ಬಿದ್ದು, ಹೊನ್ನು ಜಿಂಕೆಯ ರೂಪ ಧರಿಸಿ, ಮಾಯಾಮೃಗವಾಗಿ ಸೀತೆಯ ಮನ ಸೆಳೆಯುವಂತೆ ಸೂಚಿಸಿದ. ಕೊನೆಗೆ ಬೆನ್ನು ಹತ್ತಿದ ರಾಮನನ್ನು ದೂರ ಅಡವಿಯಲ್ಲಿ ಕರೆದೊಯ್ದು, ರಾಮನ ಬಿಲ್ಲಿನಿಂದ ಪ್ರಾಣ ಬಿಡುವ ಕಾಲಕ್ಕೆ, 'ಓ ಲಕ್ಷ್ಮಣಾ ! ನನ್ನ ಸಹಾಯಕ್ಕೆ ಬಾ' ಎಂದು ರಾಮನ ಧ್ವನಿಯಂತೆ ಧ್ವನಿಮಾಡಿ ಕೂಗಿದ. ಅದನ್ನು ಕೇಳಿದ ಸೀತೆಯು, ತನ್ನ ಕಾವಲಿಗಿದ್ದ ಲಕ್ಷ್ಮಣನನ್ನೂ ಬಲವಂತವಾಗಿ ಧ್ವನಿ ಬಂದ ಕಡೆಗೆ ಕಳಿಸಿದಳು. ಹೋಗುವಾಗ ಲಕ್ಷಣನು ಒಂದು ಮಂತ್ರ ರೇಖೆಯನ್ನು ಕೊರೆದು ಅದನ್ನು ದಾಟಬಾರದೆಂದು ಸೀತೆಗೆ ತಿಳಿಸಿದ. ಆಗ ರಾಮ ಲಕ್ಷ್ಮಣರಿಬ್ಬರೂ ಇರದ ಸಮಯ ನೋಡಿ ರಾವಣನು ಸನ್ಯಾಸಿಯ ವೇಷ ಧರಿಸಿ ಭಿಕ್ಷೆಗೆ ಬಂದು, ಸೀತೆಯಿಂದ ಭಿಕ್ಷೆ ಬೇಡುತ್ತ ಅವಳನ್ನು ಲಕ್ಷ್ಮಣರೇಖೆಯನ್ನೂ ದಾಟಿ ಬಂದು ಭಿಕ್ಷೆ ನೀಡುವಂತೆ ಮನವೊಲಿಸಿದನು. ಹಾಗೆ ಗೆರೆ ದಾಟಿದ ಸೀತೆಯನ್ನು ಎತ್ತಿಕೊಂಡು ಮಂತ್ರರಥದಲ್ಲಿ ಕುಳ್ಳಿರಿಸಿಕೊಂಡು ಲಂಕೆಗೆ ಹಾರಿದನು. ಈ ಘಟನೆಯಿಂದ ವಿಧಿಯ ಆಟದ ಒಂದು ಮಾತು ತಿಳಿಯುತ್ತದೆ. ಅದೆಂದರೆ, ಭಾಗ್ಯ ತೊಲಗುವ ಕಾಲ, ಬುದ್ಧಿ ಅಂತಾಗುವುದು. ರಾಮನ ಪೂರ್ವ ಕರ್ಮ ಫಲಾನುಸಾರ ಸೀತೆಯನ್ನು ಹೊಂದಿ ಸುಖಿಸುವ ಭಾಗ್ಯ ಅವನದಾಗಿತ್ತು. ಆದರೆ ಆ ಭಾಗ್ಯದ ಕಾಲವು ಬೇರೆ ಪೂರ್ವ ಕರ್ಮಗಳಿಂದಾಗಿ ತೊಲಗುವ ಕಾಲ ಬಂದಿತು. ಆಗ ರಾಮನು ಮಡದಿಯ ಮಾತಿಗೆ ಮರುಳಾಗುವ, ಹೊನ್ನು ಜಿಂಕೆಯ ಬೆನ್ನು ಹತ್ತುವ ರಸಿಕನಾದನು.

ಕನಕ ಮೃಗವ ಹಿಡಿದು, ಕಾದು ಕೊಲ್ಲಲಾಗ,
ನರನು ರಾಜ ರಾಜ ನಂಬಿ ನೋಡೆ,
ತರವೆನಿಸದ ಕರ್ಮ ; ತಾನು ಸಾಧಿಸಲಿಲ್ಲ.
ವಿಶ್ವದಾಭಿರಾಮ ಕೇಳು ವೇಮ.

ರಾವಣನ ಮಾವನಾದ ಮಾರೀಚ ಋಷಿಯು ಸಿದ್ಧಿ ಸಂಪನ್ನ ತಪಸ್ವಿಯಾಗಿದ್ದನು. ಅವನು ಕಾಮರೂಪಿ ಸಿದ್ಧಿಯನ್ನು ಕರಗತ ಮಾಡಿಕೊಂಡ ಸಿದ್ಧ ಪುರುಷನು. ಹೀಗಾಗಿ ರಾವಣನ ಒತ್ತಾಯದ ಬೇಡಿಕೆಯ ಮೇರೆಗೆ ಬಂಗಾರ ಬಣ್ಣದ ಜಿಂಕೆಯ ರೂಪ ತಾಳಿ ರಾಮ ಸೀತೆಯರ ಪರ್ಣ ಶಾಲೆಯ ಬಳಿ ಸುತ್ತಾಡುತ್ತ ಸೀತೆಯ ಮನ ಸೆಳೆದನು. ಅದನ್ನು ನೋಡಿದ ಸೀತೆ, ರಾಮನಿಗೆ ದುಂಬಾಲು ಬಿದ್ದು, ಆ ಕನಕ ಮೃಗವನ್ನು ಹಿಡಿದು ತರಲು ದುಂಬಾಲು ಬಿದ್ದಳು. ರಾಮನು ಅದರ ಬೆನ್ನು ಹತ್ತಿ ಅರಣ್ಯದಲ್ಲಿ ಬಹುದೂರ ಹೋಗಿ ಕಾದಾಡಿ ಕೊಂದೇ ಬಿಟ್ಟನು. ಪ್ರಾಣ ಬಿಡುವಾಗ ಆ ಮೃಗವು ತನ್ನ ನಿಜರೂಪ ತಾಳಿತು. ರಾಜಾಧಿರಾಜನಾದರೂ ರಾಮನು ನರನೇ ಆಗಿದ್ದಾನೆ. ಧರ್ಮ ತತ್ತ್ವಗಳಲ್ಲಿ ನಂಬುಗೆ ಇರಿಸಿ ನೋಡಿದರೆ, ಬಂಗಾರದ ಜಿಂಕೆಗೆ ಮೋಹಿಸುವುದಾಗಲಿ, ಅದನ್ನು ಹಿಡಿದು ಕಾದಾಡಿ ಕೊಲ್ಲುವುದಾಗಲಿ, ಮಾನವನಿಗೆ ತರವೆನಿಸದ ಕರ್ಮ. ಹೀಗಾಗಿ ಆ ಕರ್ಮ ಫಲವು ಯಾವ ಒಳಿತನ್ನೂ ಉಂಟು ಮಾಡದು. ಅದರಿಂದ ಮಾನವನು ಏನನ್ನೂ ಸಾಧಿಸಲಾರನು.

ಆ. ಲಕ್ಷ್ಮಿ ನಲಿಯುತಿಪ್ಪ ಲಂಕಾಧಿಪನ ಪುರ,
ಕುಳ್ಳ ಕೋತಿ ಸೇನೆ ; ಕೊಳ್ಳೆಗೀಡು.
ಸಿರಿಯು ಬಪ್ಪ ಕಾಲ ಕಿರಿಯ ಘನನಪ್ಪನು.
ವಿಶ್ವದಾಭಿರಾಮ ಕೇಳು ವೇಮ.

ಲಂಕೆಯು ಲಂಕಾಧಿಪನಾದ ರಾವಣನ ಪುರ. ಅಲ್ಲಿ ಸಿರಿವಂತಿಕೆಗೆ ಬರವಿರಲಿಲ್ಲ. ಲಕ್ಷ್ಮಿ ನಲಿಯುತ್ತಿದ್ದಳು. ಮನೆಗಳೆಲ್ಲ ಚಿನ್ನದ ಮನೆಗಳೇ ಆಗಿದ್ದವು. ಅಲ್ಲಿಗೆ ದೂತನಾಗಿ ಹೋಗಿದ್ದ ಹನುಮಂತನ ಬಾಲಕ್ಕೆ ರಾವಣನ ಜನರು ಬೆಂಕಿ ಹಚ್ಚಿದರು. ಆಗ ಕುಳ್ಳ ಕೋತಿ ಸೇನೆ ಇಡೀ ಪಟ್ಟಣಕ್ಕೆ ಕೊಳ್ಳಿ ಹಚ್ಚಿತು. ಪುರದಲ್ಲಿದ್ದ ಸಿರಿ ಸಂಪತ್ತನ್ನು ದೋಚಿತು. ಈ ಘಟನೆಯಿಂದ ತಿಳಿಯಬೇಕಾದ ವಿಧಿ ನಿಯಮವೆಂದರೆ, ಯಾರಿಗೇ ಆಗಲಿ, ಪೂರ್ವ ಕರ್ಮದಿಂದಾಗಿ ಭಾಗ್ಯದ ಫಲ ಪ್ರಾಪ್ತವಾಗಬಹುದು. ಸಿರಿಯು ಬರುವ ಆ ಕಾಲದಲ್ಲಿ ಕಿರಿಯವನೂ ಘನನೆಸುವನು.

ಆ. ಲಂಕೆ ಹೋಗುವಾಗ ಲಂಕಾಧಿಪ ರಾಜ್ಯ
ಎಂಥದೋ ಕಪಿ ಸೇನೆ ಆಕ್ರಮಿಸಿತು.
ಕೇಡುಗಾಲವಿರಲು ಕೆಡಿಸಲಲ್ಲ ಸಾಕು.
ವಿಶ್ವದಾಭಿರಾಮ ಕೇಳು ವೇಮ.

ಸೀತೆಯನ್ನು ಪಡೆಯಬೇಕೆಂದರೆ ರಾವಣನೊಡನೆ ಯುದ್ಧ ಹೂಡದೆ ರಾಮನಿಗೆ ಗತ್ಯಂತರವಿರಲಿಲ್ಲ. ಅವನೊಡನೆ ಇದ್ದವರು ಕಪಿರಾಜ ಸುಗ್ರೀವ, ಕಪಿವೀರರಾದ ಹನುಮಂತ, ಅಂಗದ ಮುಂತಾದವರ ಆಧಿಪತ್ಯದಲ್ಲಿದ್ದ ಕಪಿ ಸೇನೆ. ಲಂಕೆಯನ್ನು ಗೆಲ್ಲಲು, ಬಲಶಾಲಿ ರಾವಣಾಸುರನನ್ನು ಜಯಿಸಲು ಇಂಥ ಕುಳ್ಳ ಕಪಿ ಸೇನೆ ಸಾಕಾದೀತೇ ? ಇಲ್ಲ. ಆದರೆ, ವಿಧಿ ನಿಯಮದಂತೆ, ರಾವಣನ ಪೂರ್ವ ಕರ್ಮ ಫಲವಾಗಿ ಅವನು ಭಾಗ್ಯ ಹೀನನಾಗುವ ಕಾಲ ಪ್ರಾಪ್ತವಾಗಿತ್ತು. ಹೀಗಾಗಿ ಕೈಬಿಟ್ಟು ಹೋಗುವ ಕಾಲಕ್ಕೆ ಲಂಕಾಧಿಪನ ರಾಜ್ಯವನ್ನು ಎಂಥದೋ ಕ್ಷುದ್ರ ಕಪಿ ಸೇನೆಯು ಆಕ್ರಮಿಸಿತು. ಪರಾಕ್ರಮ ಶಾಲಿಗಳಾದ ರಾಕ್ಷಸರನ್ನು ಯುದ್ಧದಲ್ಲಿ ಸೋಲಿಸಿತು. ರಾಮನ ಬಾಣಕ್ಕೆ ರಾವಣನೂ ಬಲಿಯಾಗಿ ಅಸು ನೀಗಿದನು. ಈ ಘಟನೆಯಿಂದ

ತಿಳಿದುಕೊಳ್ಳಬೇಕಾದ ವಿಧಿ ನಿಯಮವೆಂದರೆ, ತನಗೆ ಕೇಡುಗಾಲ ಇರುವಾಗ ತನ್ನನ್ನು ಕೆಡಿಸಲು ಅಲ್ಪನಾದರೂ ಸಾಕು, ಎಂಬುದಾಗಿದೆ.

ಆ. ಅಂಡಲೆಯುವ ಮನುಜ, ಅತಿ ಧಾರ್ಮಿಕನೆಡೆಯ
ಸೇರಿ, ನೋಳ್ಪ ತನ್ನ ಬಾಳ ಗತಿಯ.
ವಿಭೀಷಣ ರಾಮನ ಮೊರೆಯ ಹೊಕ್ಕ ತೆರದಿ.
ವಿಶ್ವದಾಭಿರಾಮ ಕೇಳು ವೇಮ.

ವಿಭೀಷಣನು ರಾವಣನ ತಮ್ಮ. ರಾವಣನು ಸೀತೆಯನ್ನು ಅಪಹರಿಸಿದುದನ್ನೂ ಮತ್ತು ಅವಳನ್ನು ಅವಳ ಪತಿ ರಾಮನಿಗೆ ಒಪ್ಪಿಸದಿರುವುದನ್ನೂ ವಿರೋಧಿಸಿದನು. ಹೀಗಾಗಿ, ಯುದ್ಧ ಪ್ರಸಂಗದಲ್ಲಿ ರಾಮನಲ್ಲಿಗೆ ಬಂದು ರಾವಣಾಸುರನ ಸೋಲಿಗೆ ಕಾರಣವಾಗಬಹುದಾದ ತಂತ್ರಗಳನ್ನು ತಿಳಿಸಿದನು. ತನಗೆ ಯುದ್ಧದಲ್ಲಿ ನೆರವು ನೀಡಿದನೆಂಬ ನಿಮಿತ್ತ ತಾನು ಜಯಿಸಿದ ಲಂಕೆಯ ರಾಜ್ಯವನ್ನು ರಾಮನು ವಿಭೀಷಣನಿಗೆ ಒಪ್ಪಿಸಿದನು.ಹೀಗೆ ವಿಭೀಷಣನು ರಾಮನ ಮೊರೆ ಹೊಕ್ಕು ತನ್ನ ಭಾಗ್ಯವನ್ನು ಕುದುರಿಸಿಕೊಂಡ ರೀತಿಯಲ್ಲಿ, ಅಂಡಲೆಯುವ ಮನುಷ್ಯನು ಅತಿ ಧಾರ್ಮಿಕನೆಡೆಯಲ್ಲಿ ಸೇರಿ, ತನ್ನ ಬಾಳ ಗತಿಯನ್ನು ಉತ್ತಮ ಪಡಿಸಿಕೊಳ್ಳಲು, ಅವಕಾಶಗಳನ್ನು ನೋಡುತ್ತಾನೆ.

ಮಹಾಭಾರತ-2 :

ಆ. ಕಾಲವಧಿಕವಿದ್ದು ಗತಿಸಿ ಹೋಗದಲ್ಲ !
ಧರ್ಮರಾಜ ದುಡಿದ ತುಚ್ಛ ತಾಣ.
ಕಂಕಭಟ್ಟನೆಂದಕಟಕಟ ! ಏನೆನಲಿ ?
ವಿಶ್ವದಾಭಿರಾಮ ಕೇಳು ವೇಮ.

ದ್ರೌಪದಿಯೊಂದಿಗೆ ಪಂಚ ಪಾಡವರ ಮದುವೆಯಾದ ಮೇಲೆ, ಹಿರಿಯರ ಸಲಹೆಯಂತೆ ಧೃತರಾಷ್ಟ್ರನು ಅವರಿಗೆ ಅರ್ಧ ರಾಜ್ಯವನ್ನು ಒಪ್ಪಿಸಿದನು. ಪಾಂಡವರು ಇಂದ್ರಪ್ರಸ್ಥವೆಂಬ ರಾಜಧಾನಿಯನ್ನು ನಿರ್ಮಿಸಿದರು. ಮತ್ತು ರಾಜಸೂಯ ಯಜ್ಞ ಹೂಡಿದರು. ಭೀಮಾರ್ಜುನರು ದಿಕ್ಕು ದಿಕ್ಕಿಗೆ ಸೈನ್ಯ ಸಮೇತ ಹೋಗಿ ಎಲ್ಲ ರಾಜರನ್ನು ಗೆದ್ದು ಬಂದರು. ಯಾಗದ ಕೊನೆಯಲ್ಲಿ ಮಕ್ಕಳೊಡನೆ ಬಂದು ಭಾಗಿಯಾಗಬೇಕೆಂದು ಧೃತರಾಷ್ಟ್ರನನ್ನೂ ಆಮಂತ್ರಿಸಿದರು. ಯುಧಿಷ್ಠರನಿಗೆ ಚಕ್ರವರ್ತಿ ಬಿರುದನ್ನು ಕೊಟ್ಟು ಅವನ ಸಾರ್ವಭೌಮತ್ವವನ್ನು ಎಲ್ಲರೂ ಒಪ್ಪಿಕೊಂಡರು. ಇದನ್ನೆಲ್ಲ ಕಂಡು ದರ್ಯೋಧನನಿಗೆ ಅಸಹ್ಯವಾದ ಅಸೂಯೆ ಹುಟ್ಟಿತು. ಪಾಂಡವರನ್ನು ಹೇಗಾದರೂ ಸಂಕಟಕ್ಕೀಡು ಮಾಡಬೇಕೆಂದು ಮಾವ ಶಕುನಿಯ ಸಹಕಾರದೊಂದಿಗೆ ಹಂಚಿಕೆ ಹೂಡಿದನು. ಪಾಂಡವರನ್ನು ಪಗಡೆಯಾಟಕ್ಕೆ ಆಹ್ವಾನಿಸಬೇಕೆಂದು ತಂದೆ ಧೃತರಾಷ್ಟ್ರನಿಗೆ ದುಂಬಾಲು ಬಿದ್ದನು. ಯುದ್ಧಿಷ್ಠರನಿಗೂ ಪಗಡೆಯಾಟದಲ್ಲಿ ಬಹಳ ಆಸಕ್ತಿ. ಶಕುನಿ ಮತ್ತವನ ಕಡೆಯವರು ತಮ್ಮ ಕಪಟ ತಂತ್ರಗಳಿಂದ ಪ್ರತಿ ಆಟದಲ್ಲಿಯೂ ಯುಧಿಷ್ಠಿರನನ್ನು ಸೋಲಿಸಿದರು. ಇದು ಎಲ್ಲಿಯ ವರೆಗೆ ಹೋಯಿತೆಂದರೆ ಯುಧಿಷ್ಠಿರನು ತನ್ನ ರಾಜ್ಯ, ಸೋದರರು ಮತ್ತು ಕೊನೆಗೆ ಪತ್ನಿ ದ್ರೌಪದಿಯನ್ನೂ ಪಣಕ್ಕಿಟ್ಟು ಸೋತನು. ಕೌರವರಿಂದ ಬಹಳ ಅಪಹಾಸ್ಯಕ್ಕೀಡಾದನು. ಎಲ್ಲರೂ ಮರುಕಪಟ್ಟರು.

ಕೊನೆಗೆ ಧೃತರಾಷ್ಟ್ರನು ಮಧ್ಯೆ ಪ್ರವೇಶಿಸಿ ಪಾಂಡವರನ್ನು ಬಂಧಮುಕ್ತರನ್ನಾಗಿ ಮಾಡಿ ಇಂದ್ರಪ್ರಸ್ಥಕ್ಕೆ ಮರಳಿ ಹೋಗಲು ಸೂಚಿಸಿದನು. ಆದರೆ, ದುರ್ಯೋಧನನಿಗೆ ಇದರಿಂದ ಸಮಾಧಾನವಾಗಲಿಲ್ಲ. ತನ್ನ ತಂದೆಗೆ ಬೇಡಿಕೊಂಡು ಇನ್ನೊಮ್ಮೆ ಪಾಂಡವರನ್ನು ಪಗಡೆಯಾಟಕ್ಕೆ ಆಹ್ವಾನಿಸಲು ಒಪ್ಪಿಸಿದನು. ಇದರಲ್ಲಿ ಸೋತವರು ಹನ್ನೆರಡು ವರುಷ ವನವಾಸ ಮತ್ತು ಒಂದು ವರುಷ ಅಜ್ಞಾತವಾಸ ಮಾಡಬೇಕೆಂದು ಪಣ ವಿಧಿಸಲಾಯಿತು. ಅಜ್ಞಾತವಾಸದ ಸಮಯದಲ್ಲಿ ಅವರನ್ನು ಕಂಡುಹಿಡಿದರೆ ಮತ್ತೆ ಹನ್ನೆರಡು ವರುಷ ವನವಾಸ ಮಾಡಬೇಕು. ಬಳಿಕ ಅವರು ರಾಜ್ಯ ಪಡೆಯಬಹುದು ಎಂದೂ ನಿರ್ದೇಶಿಸಲಾಯಿತು. ಪಾಂಡವರು ಈ ಬಾರಿಯೂ ಪಗಡೆಯಾಟದಲ್ಲಿ ಸೋತರು. ವನವಾಸಕ್ಕೆ ಹೋದರು. ಗಿರಿ ಗುಹೆಗಳಲ್ಲಿ ವಾಸ ಮಾಡುತ್ತ, ತೀರ್ಥ ಕ್ಷೇತ್ರಗಳನ್ನು ಸಂದರ್ಶಿಸುತ್ತ ದೇಶ ಪರ್ಯಟನ ಮಾಡಿದರು. ಕೊನೆಗೆ ಒಂದು ತಟಾಕದಲ್ಲಿ ನೀರು ಕುಡಿಯಲು ಹೋದಾಗ ಯಕ್ಷನನ್ನು ಸಂಧಿಸಿದರು. ಯಕ್ಷನು ಧರ್ಮ ವಿಷಯವಾಗಿ ಯುಧಿಷ್ಠಿರನು ನೀಡಿದ ಉತ್ತರಗಳಿಂದ ಸುಪ್ರೀತನಾಗಿ, ಹನ್ನೆರಡು ವರುಷ ವನವಾಸದ ಅವಧಿ ಮುಗಿಯುತ್ತ ಬಂದಿದೆ. ಮುಂದಿನ ಅಜ್ಞಾತ ವಾಸದ ಅವಧಿಯಲ್ಲಿ ವಿರಾಟನ ದೇಶದಲ್ಲಿ, ತಮಗೆ ತೋರಿದ ರೀತಿಯಲ್ಲಿ, ಅಜ್ಞಾತ ವಾಸವನ್ನು ಕಳೆಯಬಹುದೆಂದು ಸೂಚಿಸಿದನು.

ಹೀಗೆ ಪಾಂಡವರು ವಿರಾಟನ ಅರಮನೆಯನ್ನು ಸೇರಿ ವಿವಿಧ ವೇಷಗಳಲ್ಲಿ ಉದ್ಯೋಗಕ್ಕೆ ನಿಂತರು. ಭೀಮನು ಅಡುಗೆಯವನಾದ. ಅರ್ಜುನ ಬೃಹನ್ನಳೆಯಾದ. ನಕುಲ ಅಶ್ವಪಾಲಕನಾದ, ಸಹದೇವ ಗೋಪಾಲನಾದ. ದ್ರೌಪದಿಯು ರಾಣೀ ವಾಸದ ಪರಿಚಾರಿಕೆಯಾದಳು. ಯುಧಿಷ್ಠರನು ಬ್ರಾಹ್ಮಣ ವೇಷ ಧರಿಸಿ, ಪಗಡೆಯಾಟದಲ್ಲಿ ನಿಪುಣನೆಂದು ಕಂಕಭಟ್ಟನೆನಿಸಿದ.

ಕೇಡುಗಳು ಬೆನ್ನು ಹತ್ತಿದಾಗ, ಕಾಲವು ಅತಿ ದೀರ್ಘವೆನಿಸುತ್ತದೆ. ಕಾಲವು ಎಷ್ಟೊಂದು ಅಧಿಕವಾಗಿದೆ ? ಬೇಗ ಗತಿಸಿ ಹೋಗದಲ್ಲ ? ಎನಿಸುತ್ತದೆ. ತನ್ನ ಪೂರ್ವ ಕರ್ಮಫಲವಾಗಿ ಧರ್ಮರಾಜನು-ಚಕ್ರವರ್ತಿಯಾಗಿ ಮೆರೆದವನು-ಕಂಕುಭಟ್ಟನಂಥ ಕೀಳು ಸ್ಥಾನದಲ್ಲಿ ದುಡಿಯಬೇಕಾಯಿತು. ಅಯ್ಯಯ್ಯೋ ! ವೇಷಧಾರಿ ಭಟ್ಟನಾಗಬೇಕಾಯಿತು. ಇದಕ್ಕೆ ಎನ್ನೋಣ?

ಆ. ಕಂಕ ಭಟ್ಟನಂತೆ ಕಾಷಾಯವ ಧರಿಸಿದ ;
ದೊರೆ ವಿರಾಟನೆಡೆ ದುಡಿದ ಧರ್ಮ.
ಕಾಲ ಕರ್ಮ ಗತಿಯ ಕಂಡು ಹಿಡಿವರಾರು ?
ವಿಶ್ವದಾಭಿರಾಮ ಕೇಳು ವೇಮ.

ಚಕ್ರವರ್ತಿಯಾಗಿ ಮೆರೆದ ಧರ್ಮರಾಜನು, ಪಗಡೆಯಾಟದ ಜೂಜಾಟದ ಫಲವಾಗಿ ವನವಾಸ ಮತ್ತು ಅಜ್ಞಾತವಾಸಗಳ ಶಿಕ್ಷೆಗೆ ಗುರಿಯಾದನು. ಈ ನಿಮಿತ್ತ ಕಂಕಭಟ್ಟನೆನಿಸಿ ಕಾಷಾಯ ವಸ್ತ್ರ ಧರಿಸಿದ. ದೊರೆ ವಿರಾಟನಲ್ಲಿ ದುಡಿದ. ಇದನ್ನೆಲ್ಲ ನೋಡಿದರೆ, ಕರ್ಮದ ಗತಿಯು ಏನು ? ಅದರ ಫಲವಾಗಿ ಒದಗುವ ಸಂಕಟಕಾರಕ ಕಾಲಗತಿಯು ಏನು ? ಎಂಬುದನ್ನು ಯಾರು ಕಂಡುಹಿಡಿಯುತ್ತಾರೆ ? ಇದನ್ನು ಕಂಡುಕೊಳ್ಳಲು ವಿವೇಕವನ್ನು ಸದಾ ಜಾಗೃತವಾಗಿ ಇರಿಸಿಕೊಳ್ಳಬೇಕು.

ಆ. ವಿಜಯಿ ಪಾರ್ಥ ಬಿಲ್ಲು ಹಿಡಿದ ಕ್ಷಣವೆ ತಾನು
ಕುಜನರೆಲ್ಲರನ್ನು ಕೆಡವಿ ನಿಂತ.
ಭಜನೆ ಮಾಡುವವನು ವಿಜಯ ಪಡೆಯನೇನು ?
ವಿಶ್ವದಾಭಿರಾಮ ಕೇಳು ವೇಮ.

ಒಂದು ವರ್ಷ ಅಜ್ಞಾತವಾಸ ಮುಗಿಸಿ ನಂತರ, ಕೌಂತೇಯರು ಪ್ರಕಟವಾಗುವ ದಿನ ನಿಕಟವಾಯಿತು. ಕೀಚಕನ ವಧೆ ಮುಂತಾದ ಘಟನೆಗಳಿಂದಾಗಿ, ಪಾಂಡವರಿರುವ ಜಾಗೆಯ ಸುಳಿಹು ಕೌರವರಿಗೂ ಕೊಂಡೆಯವರಿಂದ ತಿಳಿಯಿತು. ಇದನ್ನು ಖಚಿತ ಪಡಿಸಿಕೊಳ್ಳಲೆಂದೇ ಅವರು ವಿರಾಟನ ಗೋವುಗಳನ್ನು ಕದ್ದೊಯ್ದರು. ಕಾಳಗಕ್ಕೆ ಕಾಲು ಕೆರೆದರು. ವಿರಾಟ ರಾಯನ ಮಗ ಉತ್ತರನ ಸಾರಥಿಯಾಗಿ ಬೃಹನ್ನಳೆ-ಅರ್ಜುನ-ಯುದ್ಧ ಭೂಮಿಗೆ ತೆರಳಿದ. ಹಾದಿಯಲ್ಲಿ, ಶಮೀ ವೃಕ್ಷಕ್ಕೆ ತಾವು ಮೊದಲು ಕಟ್ಟಿ ಹಾಕಿದ್ದ ಆಯುಧಗಳನ್ನು ತೆಗೆದುಕೊಂಡ. ರಣರಂಗಕ್ಕೆ ತೆರಳಿ ಬಿಲ್ಲು ಹಿಡಿದ. ಕೂಡಲೇ ಕೌರವರ ಕುಜನ ಸೈನ್ಯವನ್ನೆಲ್ಲ ಸೋಲಿಸಿ ನೆಲಕ್ಕೆ ಕೆಡವಿ ನಿಂತನು. ಅರ್ಜುನನು ಸದಾ ಕೃಷ್ಣನ ಧ್ಯಾನದಲ್ಲಿಯೇ ಇರುತ್ತಿದ್ದನು. ಕೃಷ್ಣನನ್ನು ಮಾನಸಿಕವಾಗಿ ಸೇವಿಸುತ್ತಿದ್ದನು. ಅಂದರೆ ಭಜಿಸುತ್ತಿದ್ದನು. ಹೀಗೆ ಪುರುಷೋತ್ತಮನನ್ನು ಭಜಿಸುವವನು ತನ್ನ ಮನಸ್ಸಿನ ಸ್ಥೈರ್ಯ ಕಾಯ್ದುಕೊಂಡು ಧೈರ್ಯದಿಂದ ಹೋರಾಡಿ ವಿಜಯ ಪಡೆಯನೇನು ?

ಆ. ಕುಲ ನೀರು ಗಾಣಿಸಿ, ಗುರುವಧೆಯನೆ ಬಯಸಿ,
ಕೂಗಿದಾನೆಯೆಂದು ಖೊಟ್ಟಿ ಸುಳ್ಳು.
ಧರ್ಮರಾಜ ಹೆಸರು ! ತಾನು ಪಾವನನೆಂತು ?
ವಿಶ್ವದಾಭಿರಾಮ ಕೇಳು ವೇಮ.

ಮಹಾಭಾರತ ಯುದ್ಧದಲ್ಲಿ ದ್ರೋಣ ಪರ್ವದ ಸಮಯ. ದ್ರೋಣನು ಶಸ್ತ್ರಧಾರಿಯಾಗಿರುವ ವರೆಗೆ ಅವನನ್ನು ಎದುರಿಸುವುದು ಕಷ್ಟ ಸಾಧ್ಯವಿತ್ತು. ಕಾರಣ ಸಹಜ ನೀತಿಗೆ ಸರಿದೋರದ, ಆದರೆ ಆಧ್ಯಾತ್ಮಿಕ ನೀತಿಗೆ ಸರಿಹೊಂದುವ, ಶ್ರೀಕೃಷ್ಣನ ಕುಟಿಲ ನೀತಿಗೆ ಯುಧಿಷ್ಠಿರ ತಾಳ ಹಾಕಿದ. ಯುದ್ಧ ಕಾಲದಲ್ಲಿ ದ್ರೋಣನ ಸ್ಥೈರ್ಯ ಕೆಡಿಸಲು, ಅಶ್ವತ್ಥಾಮ ಎಂಬ ಹೆಸರಿನ ಗಜವನ್ನು ಕೊಂದು, ಯುಧಿಷ್ಠಿರನು ಜೋರಾಗಿ "ಅಶ್ವತ್ಥಾಮೋ ಹತಃ" ಎಂದು ಕೂಗಿದನು. ಕೂಡಲೇ ಶಂಖ ನಗಾರಿಗಳನ್ನು ಮೊಳಗಿಸಿ, ಮುಂದಿನ ಶಬ್ದಗಳಾದ "ನರೋ ವಾ ಕುಂಜರೋ ವಾ" (ಅಂದರೆ ನರನೋ ಇಲ್ಲವೆ ಆನೆಯೋ) ಎಂಬುದನ್ನು ಕೇಳದಂತೆ ಮಾಡಿದರು. ಇದು ಕ್ಷತ್ರಿಯ ಕುಲಧರ್ಮಕ್ಕೆ ಎಸಗಿದ ದ್ರೋಹ. ಗುರುವಿಗೆ ಮಾಡಿದ ವಂಚನೆ.

ಯುಧಿಷ್ಠಿರನು, ತಮ್ಮ ಗುರು ದ್ರೋಣಾಚಾರ್ಯರ ವಧೆಯನ್ನು ಬಯಸಿ, ಅವರ ಪುತ್ರನಾದ ಅಶ್ವತ್ಥಾಮ ಕೊಲ್ಲಲ್ಪಟ್ಟ ಎಂಬ ಗ್ರಹಿಕೆ ಬರುವಂತೆ ಆ ಹೆಸರಿನ ಆನೆಯೊಂದನ್ನು ಕೊಂದು ಕೂಗಿದ. ಇದು ಕ್ಷತ್ರಿಯ ಧರ್ಮಕ್ಕೆ ಮಾಡಿದ ದ್ರೋಹ. ಹೀಗೆ ಅವನು ಕುಲವನ್ನು ನೀರು ಕಾಣಿಸಿದ. ಇಂಥ ಕುಲಧರ್ಮ ದ್ರೋಹಿಯಾದ ಯುಧಿಷ್ಠಿರನ ಹೆಸರು ಧರ್ಮರಾಜ ! ಹೀಗಿದ್ದ ಮೇಲೆ ಅವನು ಹೇಗೆ ಪಾವನನೆನಿಸುವನು ? ವಿಧಿಯು ಯಾರಿಂದ ಏನೇನು ಮಾಡಿಸುವುದೋ ಹೇಳಲಾಸಲ್ಲ.

ಆ. ಸರಿಕರಾರು ನಿನ್ನ ಸ್ವಾಧೀನಗೊಳಿಸರು ;
ದೈವವೊಂದು ನಿನಗೆ ತಪ್ಪದಿರಲು.
ಭಾರತ ಕಥೆಯೊಳಗೆ ಪರಮಾರ್ಥವಿದುವೆ.
ವಿಶ್ವದಾಭಿರಾಮ ಕೇಳು ವೇಮ.

ಪಾಂಡವರು ಕೇವಲ ಐದು ಜನ. ಕೌರವರು ನೂರು ಜನ. ಆದರೆ ಪಾಂಡವರಿಗೆ ದೈವ ಪ್ರಜ್ಞೆ ಹೊಂದಿದ ಶ್ರೀಕೃಷ್ಣನ ಬೆಂಬಲವಿತ್ತು. ಅವನ ಸಲಹೆ, ಮಾರ್ಗದರ್ಶನಗಳಿದ್ದವು. ಅವರ ಪೂರ್ವ ಕರ್ಮದಿಂದಾಗಿ ಅವರು ಇಂಥ ದೈವ ಬಲಕ್ಕೆ ಪಾತ್ರರಾಗಿದ್ದರು. ಹೀಗೆ ತಮಗೆ ದೈವ ಬಲವು ತಪ್ಪದೆ ಇರುವಾಗ ಸರಿಕರಾರೂ ತಮ್ಮನ್ನು ಸ್ವಾಧೀನ ಪಡಿಸಿಕೊಳ್ಳಲಾರರು. ಇದುವೇ ಮಹಾಭಾರತ ಕಥೆಯಿಂದ ಅರಿತುಕೊಳ್ಳಬೇಕಾದ ಪರಮಾರ್ಥವಾಗಿದೆ.

ಆ. ಭಾರತ ಹೇಳುತಿಹ ಹಲವು ಧರ್ಮಗಳಲಿ,
ಸತ್ಯ ನಿಷ್ಠೆಗೆ ಸಮ ಸತ್ಯವೊಂದೆ.
ಭೂಮಿ ದಾನದಿಂದ ಭೂರಿ ಕಾಂತಿ ಇಹುದು.
ವಿಶ್ವದಾಭಿರಾಮ ಕೇಳು ವೇಮ.

ಮಹಾಭಾರತವು ಹಲವಾರು ಸ್ತರದ ಜನರಿಗೆ ತಕ್ಕಂತೆ ಹಲವು ಧರ್ಮಗಳನ್ನು ಕುರಿತು ಹೇಳುತ್ತದೆ. ಅಲ್ಲಿ ಕುಟುಂಬ ಪಾಲನ ಧರ್ಮವೂ ಇದೆ. ದಾನ ಧರ್ಮವಿದೆ. ನೀತಿ ಧರ್ಮವಿದೆ. ಮೋಕ್ಷ ಸಾಧನೆಯ ಧರ್ಮವೂ ಇದೆ. ಇವೆಲ್ಲವುಗಳಿಗಿಂತ ಸತ್ಯನಿಷ್ಠೆಗೆ ಸಮನಾದುದು ಸತ್ಯವೊಂದೆ ಎಂಬುದೂ ಇದೆ. ಯಾವುದು ಸತ್ಯ ? 'ಪರ ಹಿತಾರ್ಥಂ ಯಥಾರ್ಥಂ ಸತ್ಯಃ' ಯಾವುದರ ಪ್ರಯೋಜನವು ಪರಹಿತಕ್ಕಾಗಿ ಇದೆಯೋ ಅದೇ ಸತ್ಯ. ಈ ಸತ್ಯದಲ್ಲಿ ನಿಲ್ಲುವುದೇ ಸತ್ಯನಿಷ್ಠೆಯಾಗಿದೆ. ಸತ್ಯದ ಗುರಿ ತಲುಪಲು ಸತ್ಯ ಮಾರ್ಗದಲ್ಲಿ ಸಾಗಬೇಕು. ಗುರಿಯೂ ಸತ್ಯವಾಗಿರಬೇಕು. ಅದನ್ನು ಸಾಧಿಸುವ ಮಾರ್ಗವೂ ಸತ್ಯನಿಷ್ಠವಾಗಿರಬೇಕು. ಇದುವೇ ಭಾರತ ಹೇಳುವ ಧರ್ಮಗಳ ಸಾರ.

ಜೂಜಾಟದಲ್ಲಿ ಸೋತು ಹನ್ನೆರಡು ವರುಷ ವನವಾಸ ಮತ್ತು ಒಂದು ವರುಷ ಅಜ್ಞಾತವಾಸ ಅನುಭವಿಸಬೇಕಾದ ಪಾಂಡವರು ಅಜ್ಞಾತ ವಾಸವೂ ಮುಗಿದ ಬಳಿಕ ತಮ್ಮ ಪಾಲಿನ ಅರ್ಧ ರಾಜ್ಯ ಪಡೆಯಬೇಕಿತ್ತು. ಈ ಕರಾರಿನಂತೆ ಅರ್ಧಪಾಲು ರಾಜ್ಯ ಕೇಳಿ ಧೃತರಾಷ್ಟ್ರನಲ್ಲಿ ನಿಯೋಗ ಕಳಿಸಿದರು. ಅವನು ಮಂತ್ರಿ ವಿದುರನನ್ನೂ, ಹಿರಿಯ ಭೀಷ್ಮರನ್ನೂ ಕೇಳಿದನು. ಎಲ್ಲರೂ ಸಮ್ಮತಿಸಿದರು. ಆದರೆ ದುರ್ಯೋಧನನು ಒಪ್ಪಲಿಲ್ಲ. ಕೃಷ್ಣನ ರಾಯಭಾರವೂ ಫಲಿಸಲಿಲ್ಲ. ಯುದ್ಧ ಅನಿವಾರ್ಯವಾಯಿತು. ಕೊನೆಗೆ ಐದು ಹಳ್ಳಿಗಳನ್ನಾದರೂ ಬಿಟ್ಟುಕೊಡಬೇಕೆಂದು ಕೇಳಿದರು. ಅದಕ್ಕೂ ಒಪ್ಪದೆ, ಬೇಕಾದರೆ ಯುದ್ಧದಲ್ಲಿ ಜಯಿಸಲಿ, ಎಂದು ದುರ್ಯೋಧನನು ಪಟ್ಟು ಹಿಡಿದನು. ಒಣ ಜಂಭ ತೋರಿದನು. ಐದು ಗ್ರಾಮಗಳಷ್ಟಾದರೂ ಭೂಮಿ ದಾನ ಮಾಡಿದ್ದರೆ, ಅದರ ಶೋಭೆಯೇ ವಿಪುಲವಾಗುತ್ತಿತ್ತು. ಆದರೆ ಹಾಗಾಗಲಿಲ್ಲ. ಯುದ್ಧದಲ್ಲಿ ಕೌರವ ಕುಲವೇ ನಾಶವಾಯಿತು. ಇದೆಲ್ಲ ವಿಧಿಯ ಲೀಲೆ. ಅವರವರ ಕರ್ಮಫಲ.

ಶಿವನ ಭಿಕ್ಷೆ :

ಕನಕ ಗಿರಿಯು ತನ್ನ ಕೈಯೊಳಿಪ್ಪ ಅವನು
ಬೆಳ್ಳಿ ಬೆಟ್ಟದಲ್ಲಿ ಬಾಳುತಿಹನು.
ಎತ್ತುತಿಹನು ಭಿಕ್ಷೆ ಏನೆನ್ನ ಬಹುದಿದನು ?
ವಿಶ್ವದಾಭಿರಾಮ ಕೇಳು ವೇಮ.

ಶಿವನು ರಜತಗಿರಿಯಲ್ಲಿ ವಾಸಿಸುತ್ತಿರುವನೆಂದು ಪುರಾಣಗಳು ಹೇಳುತ್ತಿವೆ. ರಜತಗಿರಿ ಎಂದರೆ ಬೆಳ್ಳಿಯ ಬೆಟ್ಟ. ಆ ಗಿರಿಯಲ್ಲಿ ಬೆಳ್ಳಿಯು ಸಾಕಷ್ಟು ಪ್ರಮಾಣದಲ್ಲಿದೆ. ಇನ್ನು ಅವನು ಕನಕ ಗಿರಿಗೂ ಅಧಿಪತಿಯಾಗಿರುವನು. ಕನಕ ಗಿರಿಯೇ ಮೇರು ಪರ್ವತ. ಅದಕ್ಕೆ ಹೊನ್ನ ಬೆಟ್ಟ ಇಲ್ಲವೆ ಹೊಂಬೆಟ್ಟವೆಂದೂ ಕರೆಯುತ್ತಾರೆ.

ಹೀಗೆ ಶಿವನಿಗೆ ಸಂಪತ್ತಿನ ಯಾವ ಕೊರತೆಯೂ ಇಲ್ಲ. ಬೆಳ್ಳಿ ಬಂಗಾರಗಳನ್ನು ತಿನ್ನಲಾರನಾದರೂ, ಅವುಗಳನ್ನೂ ವಿನಿಮಯ ಮಾಡಿ, ಆಹಾರ ಪಡೆಯಬಹುದು. ಆದರೆ ಶಿವನು ಸನ್ಯಾಸಿ ಜೀವನವನ್ನು ಮೆಚ್ಚುತ್ತಾನೆ. 'ಭವತಿ ಭಿಕ್ಷಾಂ ದೇಹಿ' ಎಂದು ಭಕ್ತರ ಮನೆಗೆ ಹೋಗಿ ಭಿಕ್ಷೆ ಬೇಡಿ ಲಭ್ಯವಾದುದರಲ್ಲಿಯೇ ಅವನು ಉಪಜೀವಿಸುತ್ತಾನೆ. ಏಕೆಂದರೆ ಅವನು ಬೋಧಿಸುವ ಸನ್ಯಾಸ ವ್ರತವು ಸರ್ವರಿಗೂ ಸುಲಭ ಸಾಧ್ಯವಾಗಬೇಕಷ್ಟೇ.

ಶಿವನ ಚರಿತ್ರೆಯನ್ನೇ ನೋಡಿದರೆ, ಮಾನವನಿಗೆ ದ್ರವ್ಯ ಸಂಪತ್ತು ತನ್ನದು ಎಂಬ ಅಭಿಮಾನ ಸಲ್ಲದು. 'ತೇನ ತ್ಯಕ್ತೇನ ಭುಂಜೀತಾ'. ಇರುವುದನ್ನು ಭುಂಜಿಸುವುದು ಶ್ರೇಯವಲ್ಲ. ಇರುವುದನ್ನು ತ್ಯಾಗ ಮಾಡಿ, ಭಿಕ್ಷೆ ಎತ್ತಿ ಭುಂಜಿಸುವುದು ಶ್ರೇಯಸ್ಕರವಾಗಿದೆ. ಹೀಗೆ ಶಿವನು ಸರ್ವರಿಗೂ ಆದರ್ಶ ಜೀವನವನ್ನು ಬದುಕುತ್ತಾನೆ. ಇದನ್ನು ಏನೆನ್ನಬಹುದು ?

ಸಾಂಖ್ಯ ಯೋಗ

ವೇಮನ ಯೋಗಿಗಳು ಪ್ರತಿಪಾದಿಸಿರುವುದು ಷಡ್ದರ್ಶಗಳಲ್ಲಿ ಒಂದಾದ ಕಪಿಲ ಮಹರ್ಷಿಗಳ ಸಾಂಖ್ಯ ದರ್ಶನಕ್ಕೆ ಪೂರ್ಣ ಸಂಬಂಧಿಸಿಲ್ಲ. ಕಪಿಲರು ಸರ್ವಶಕ್ತ, ಸರ್ವ ನಿಯಾಮಕ, ಸರ್ವಜ್ಞ ಈಶ್ವರನನ್ನು ಒಪ್ಪಿದ್ದಾರೆ. ಅವನಿಗೆ ಜನ್ಯ ಈಶ್ವರ ಎನ್ನುತ್ತಾರೆ. ಪ್ರತಿ ಜೀವಿಯಲ್ಲಿ ಒಂದು ಆತ್ಮ ಇಲ್ಲವೆ ಪುರುಷನಿರುವನೆಂದೂ ಕಪಿಲರು ಒಪ್ಪಿದ್ದಾರೆ. ಈ ಕಾರಣ, ಪುರುಷರು ಅನೇಕರಿದ್ದಾರೆ. ಅಜಸ್ರರಿದ್ದಾರೆ. ಆದರೆ ಮೂಲ ಪ್ರಕೃತಿ ಒಂದೇ ಆಗಿದೆ. ಹೀಗಾಗಿ ಪ್ರಕೃತಿಯ ಪಾತ್ರವೇ ಪ್ರಧಾನವಾಗಿದೆ. ಆದ್ದರಿಂದ ಕಪಿಲರ ಸಾಂಖ್ಯದಲ್ಲಿ ಪ್ರಕೃತಿಗೆ 'ಪ್ರಧಾನ' ಎಂಬ ಹೆಸರೂ ಇದೆ. ಮುಕ್ತ ಪುರುಷ ಇಲ್ಲವೆ ಆತ್ಮವು ಮುಕ್ತಿಯ ನಂತರ ಜನ್ಯ ಈಶ್ವರನೊಂದಿಗೆ ಲಯವಾಗುವುದಿಲ್ಲ. ಪ್ರತ್ಯೇಕ ಅಸ್ತಿತ್ವವನ್ನು ಕಾಯ್ದುಕೊಳ್ಳುತ್ತಿದೆ. ಈ ಜನ್ಯ ಪುರುಷನೊಂದಿಗೆ ಜೀವ ಮತ್ತು ಜಗತ್ತಿನ ಯಾವ ಸಂಪರ್ಕ ಮತ್ತು ಸಂಬಂಧವಿದೆಯೋ, ಅದನ್ನು ಸ್ಪಷ್ಟವಾಗಿ ಹೇಳುವುದಂತೂ ದೂರವೇ ಉಳಿಯಿತು, ಅವರು ಆ ಕುರಿತು ಸ್ಥೂಲವಾಗಿಯೂ ಹೇಳಿಲ್ಲ.

ವೇಮನರ ತತ್ತ್ವಜ್ಞಾನದಲ್ಲಿ ಪ್ರಕೃತಿಯು ನಿರ್ಗುಣ ಬ್ರಹ್ಮನಲ್ಲಿ ಪುರುಷನಿಗೆ ಅಧೀನವಾದ ಶಕ್ತಿ. ಸಗುಣ ಬ್ರಹ್ಮನಲ್ಲಿ ಸ್ವತಂತ್ರ ಪ್ರಭಾವ ಬೀರಬಲ್ಲದು. ಪುರುಷ ಪ್ರಕೃತಿಯರ ಸಂಪುಟವೇ ಬ್ರಹ್ಮ. ಪರಬ್ರಹ್ಮ ಇಲ್ಲವೇ ಪರಮಾತ್ಮನು ಮುಕ್ತ ಜೀವಾತ್ಮರ ಒಟ್ಟಾರೆ ಹೆಸರು. ಮುಕ್ತಿ ಎಂದರೆ, ಜೀವಾತ್ಮನು ಪರಮಾತ್ಮನಲ್ಲಿ ಒಂದಾಗಿರುವುದು. ಜಲ ಬಿಂದುವು ಜಲಧಿಯಲ್ಲಿ ಸೇರಿ ಹೋದಂತೆ. ಅದಕ್ಕೆ ಮುಕ್ತಿಯ ನಂತರ ಪ್ರತ್ಯೇಕ ಅಸ್ತಿತ್ವವಿರದು.

ಈ ಪೀಠಿಕೆಯ ಬೆಳಕಿನಲ್ಲಿ ವೇಮನ ಯೋಗಿಗಳ ಪದ್ಯಗಳನ್ನು ಅರ್ಥೈಸೋಣ.

ಸೀಸ. ತಮ್ಮ ಯೋಚನೆಗಳಲಿ ತತ್ತ್ವ ಶಿಖಾಮಣಿ
ತಿಳಿಯುವವರೆಲ್ಲ ತತ್ತ್ವವಿದರು.
ಘನವಪ್ಪ ನಿಬಿಡಾಂಧಕಾರದಲಿ
ಜ್ಯೋತಿಯನುವಿಂದ ಕಂಡ ಅವನೆ ಯೋಗಿ.
ಶಿವನೊಳಗೆ ಜೀವನನು, ಜೀವನೊಳಗೆ ಶಿವನಿಪ್ಪ
ಅರಿಯುವವನೆ ಯೋಗಿ ದೃಕ್ಕುಂ.
ಸಾಂಖ್ಯ ಯೋಗದಲ್ಲಿ ಸರ್ವವೂ ಶಿವನೆಂದು
ನಿಶ್ಚಯಿಸಿತಿರುವವನೆ ನಿರ್ಮಲಿಹನು.

ತೇಟಿ. ಇಂಥ ಜಾಡಗಾಣಲು ಅವರೆಷ್ಟಿರಲೇನು ?
ಸ್ಥಿರವಾಗಿ ಶಿವನ ಗ್ರಹಿಸಲು ಸಾಧ್ಯವೇನು ?
ನಿಜವ ಕೋರುತಿಹ ಮಹಿಮರಿಹ ನಿಖಿಲ ಜಗದಿ
ತತ್ತ್ವ ಶಿಖಾಮಣಿ ಅರಿತವ ತಾನೆ ವೇಮ.

ತಮ್ಮ ಯೋಚನೆಗಳಲ್ಲಿ ಶ್ರೇಷ್ಠ ತತ್ತ್ವಗಳನ್ನು ತಿಳಿಯುವವರೆಲ್ಲ ತತ್ತ್ವವಿದರೇ. ಅಂದರೆ

ತತ್ತ್ವ ತಿಳಿದವರೇ. ಅಜ್ಞಾನದ ಕತ್ತಲೆಯು ಗಾಢವಾಗಿ ಮುಸುಕಿದೆ. ಅದರಲ್ಲಿ ಕುಶಲತೆಯಿಂದ ಅರಿವಿನ ಬೆಳಕನ್ನು ಕಂಡವನೇ ಯೋಗಿಯೆನಿಸುತ್ತಾನೆ. ಶಿವನೊಳಗೆ ಜೀವನಿದ್ದಾನೆ. ಜೀವನೊಳಗೆ ಶಿವನಿದ್ದಾನೆ ಎಂದು ಅರಿಯುವವನು ಯೋಗಿ ದೃಷ್ಟಿಯವನು. ಸಾಂಖ್ಯ ಯೋಗದಲ್ಲಿ ಸರ್ವವೂ ಶಿವನೇ ಎಂದು ನಿಶ್ಚಯಿಸಿಕೊಂಡವನು ಎಲ್ಲ ಮಲಗಳಿಂದಲೂ ದೂರನಾದವನು.

ಇಂಥ ಸಿದ್ಧಿಯ ರೀತಿಯನ್ನು ಕಾಣಲು ಅವರು ಎಷ್ಟು ಜನರಿದ್ದರೇನಂತೆ ? ಸ್ಥಿರವಾಗಿ ಶಿವನನ್ನು ಗ್ರಹಿಸಲು ಸಾಧ್ಯವೇ ? ನಿಜವನ್ನು ಕೋರುತ್ತಿರುವಂಥ ಮಹಿಮರಿರುವ ಈ ನಿಖಿಲ ಜಗತ್ತಿನಲ್ಲಿ ತತ್ತ್ವ ಶಿಖಾಮಣಿ ಅರಿತವ ತಾನೊಬ್ಬನೇ.

ಕಂ. ನಾನಾರೆಂಬುದನರಿಯದೆ,
ಮಾನಸದಿ, ಜಗದೊಳು ಮನುಜನಿರುತಿಹನಕಟಾ !
ಕಾಣನು ತನ್ನನು, ಸಕಲವ
ಮಾಣದೆ ಕಂಡರಿವನೆಂತು ? ಮಹಿಯಲಿ, ವೇಮಾ

'ನಾನು ಯಾರು ? ಎಲ್ಲಿಂದ ಬಂದೆನು ? ಹೋಗುವುದು ಎಲ್ಲಿಗೆ ? ಎಂದು ಮನದಲ್ಲಿ ಅರಿಯದೆ ಜಗತ್ತಿನಲ್ಲಿ ಮನುಜರು ಇದ್ದಾರೆ. ಅಯ್ಯೋ ಅವರ ಪಾಡು ಶೋಚನೀಯ. ತನ್ನನ್ನು ಕಾಣನು. ಸಕಲವನ್ನು ತೊರೆಯದೆ, ಮಹಿಯಲ್ಲಿ ತನ್ನನ್ನು ಹೇಗೆ ಕಂಡು ಅರಿಯುತ್ತಾನೆ?

ಕಂ. ನಾನೆನಲು ದೇಹವಲ್ಲವು.
ಮಾನಸದಲಿ ಅರಿಯುತಿಪ್ಪ ಮನುಜ ಕುಲಕ್ಕುಂ.
ಸ್ವಾನುಭವ ಸಿದ್ಧಿ ದೊರಕದು ;
ತಾನಿಹ ಪರಮಾತ್ಮ ಅರಿಯೆ ತರವೇ ವೇಮಾ ?

'ನಾನು' ಎನ್ನಲು ದೇಹವಲ್ಲ. ಆದ್ದರಿಂದ ಮನದ ಮುಖಾಂತರ ಅರಿಯಲೆಳಸುವ ಮನುಜ ಕುಲಕ್ಕೆ ಸ್ವಾನುಭವ ಸಿದ್ಧಿ ದೊರಕದು. ಏಕೆಂದರೆ ತಾನು, ಮಾತು ಮನಂಗಳಿಂದತ್ತತ್ತ ಮೀರಿದ, ಪರಮಾತ್ಮನಿದ್ದಾನೆ. ಹಾಗಾಗಿ ಅವನನ್ನು ಮನದಿಂದ ಅರಿಯಲೆಳಸುವುದು ತರವೇ ?

ಸೀಸ. ಮನಸು ನಿಲ್ಲಿಸಿದವನು ಮತ್ತೆ ಸರ್ವ ಸಮತೆಯಲ್ಲಿ
ಅನುಭವವನು ಕೋರಿ ಅಚಲನಿಹನು.
ನಿಗಮಾಂತ ವೇದ್ಯನಿಹ, ನಿತ್ಯ ಪ್ರಕಾಶನಿಹ,
ಪರಮ ಪೂರ್ಣವ ಕೋರಿ ಪಟ್ಟು ಬಿಡನು.
ಅರಿತು ತಾನು ಇಪ್ಪ, ಪರಬ್ರಹ್ಮವೆಂದು,
ತನ್ನನೆ ತಿಳಿಯುತ ತಿಳಿವು ಬಿಡನು,
ನಿರುತನಾತ್ಮನ ಸ್ತುತಿಸಿ ನಿರ್ಗುಣವನು ಹೊಂದಿ,
ನಿತ್ಯ ಬ್ರಹ್ಮನಿಹ ನಿಯತಿ ಬಿಡನು.

ತೇಟಿ. ಸಗುಣವೆಂದಿಗೂ ತಾ ಕಾಣದೆ, ಸತ್ಯವೆನಲು
ನಿರ್ಗುಣ ಬ್ರಹ್ಮವೇ ಎಂದು ನಿಶ್ಚಯಿಸಿ,

ತಾನು ತನ್ನೊಳಗೆ ಪೂರ್ಣವಾಗಿ ಬಿಡದಿರೆ,
ವಿಮಲ ಗುಣರಾಜ ಯೋಗೀಂದ್ರ ವೇಮನಾರ್ಯ.

ತನ್ನ ತಾನರಿಯಲೆಳಸುವ ಸಾಧಕನು ಮನಸ್ಸನ್ನು ನಿಲ್ಲಿಸಬೇಕು. ಸತ್ವ, ರಜ ಮತ್ತು ತಮ ಗುಣಗಳ ಮಧ್ಯೆ ಭಾರಸಾಮ್ಯವನ್ನು ಕಾಯ್ದುಕೊಂಡು ಸರ್ವ ಸಮತೆಯಲ್ಲಿ ಅನುಭವವನ್ನು ಕೋರಿ ಅಚಲನಾಗಿರಬೇಕು. ಅವನ ಕೋರಿಕೆಯು ವೇದಾಂತವೇದ್ಯನೂ, ನಿತ್ಯ ಪ್ರಕಾಶನೂ ಆದ ಪರಮ ಪೂರ್ಣ ತತ್ತ್ವವನ್ನು ಕುರಿತು ಇದ್ದು, ತನ್ನ ಪಟ್ಟನ್ನು ಬಿಡಕೂಡದು. ತಾನು ಪರಬ್ರಹ್ಮವೇ ಎಂದು ತನ್ನನ್ನೇ ತಿಳಿಯುತ್ತ ಆ ತಿಳಿವನ್ನು ಬಿಡನು. ಯಾವಾಗಲೂ ಆತ್ಮ ತತ್ತ್ವವನ್ನು ಸ್ತುತಿಸಿ, ನಿರ್ಗುಣವನ್ನು ಹೊಂದಿ, ತಾನು ನಿತ್ಯ ಬ್ರಹ್ಮನಿರುವ ನಿಶ್ಚಯವನ್ನು ಬಿಡನು.

ಈ ಅವಸ್ಥೆ ತಲುಪಿದ ಅವನು ಎಂದಿಗೂ ಸಗುಣವನ್ನು ಕಾಣದೆ, ಸತ್ಯವಾಗಿ ನಿರ್ಗುಣ ಬ್ರಹ್ಮವೇ ಎಂದು ನಿಶ್ಚಯಿಸಿ, ತಾನು ತನ್ನೊಳಗೆ ಪರಿಪೂರ್ಣನಾಗಿ ಇರಲು, ವಿಮಲ ಗುಣರಾಜ ಯೋಗೀಂದ್ರನೆನಿಸುತ್ತಾನೆ.

ಹೀಗೆ ತಾನು ಬಂದುದು ನಿರ್ಗುಣ ಬ್ರಹ್ಮದಿಂದ. ಕೊನೆಗೆ ಲೀನವಾಗುವುದೂ ಸಹ ನಿರ್ಗುಣ ಬ್ರಹ್ಮದಲ್ಲಿಯೇ. ನಿರ್ಗುಣ ಬ್ರಹ್ಮದಲ್ಲಿ ಪುರುಷನು ಸ್ವತಂತ್ರನಾಗಿದ್ದಾನೆ. ಅಧೀಶನಾಗಿದ್ದಾನೆ. ಪ್ರಕೃತಿಯು ಪುರುಷನ ಅಂಕೆಯಲ್ಲಿದೆ, ಅಧೀನವಾಗಿದೆ. ಯಾವಾಗ ಪುರುಷನು ತನ್ನ ಲೀಲೆ ವಿನೋದಕ್ಕಾಗಿ ಪ್ರಕೃತಿಯ ವಿಕಾಸಕ್ಕೆ ಸಮ್ಮತಿಸುವನೋ, ಆಗ ನಿರ್ಗುಣ ಬ್ರಹ್ಮನು ಸಗುಣನಾಗುತ್ತಾನೆ. ಮತ್ತು ಪ್ರಕೃತಿಗೆ ತನ್ನ ಮೇಲೆ ಪ್ರಭಾವ ಬೀರಲು ಇಂಬುಗೊಡುತ್ತಾನೆ.

ಕಂ. ಸಗುಣವೆ ಲೋಕಗಳೆಲ್ಲವು ;
ಸಗುಣಂ ತ್ರಿಮೂರ್ತಿ, ತಿಳಿವೊಡೆ ಸಕಲ ಸುರೇಶ್ವರ್
ಸಗುಣವೆ ಜ್ಞಪ್ತಿಗೆ ಮೂಲವು
ಸಗುಣವೆ ನಿರ್ಗುಣಕೆ ದಾರಿಯಪ್ಪುದು ವೇಮಾ

ಅನುಭವ ಕ್ಷೇತ್ರಗಳಾದ ಲೋಕಗಳೆಲ್ಲವೂ ಸಗುಣವೇ ಆಗಿವೆ. ಬ್ರಹ್ಮ, ವಿಷ್ಣು, ಮತ್ತು ಶಿವ ಎಂಬ ಸೃಷ್ಟಿ, ಸ್ಥಿತಿ ಮತ್ತು ಲಯಕರ್ತರಾದ ತ್ರಿಮೂರ್ತಿಗಳೆಂದರೂ ಸಗುಣವೇ. ಸಕಲ ದೇವತೆಗಳ ಅಧಿಪತಿಗಳೂ ಸಗುಣವೇ. ಮಾನವ ಜ್ಞಪ್ತಿಯ ಮೂಲ ಅಂದರೆ ಬೇರು ಸಗುಣವಾಗಿದೆ. ನಿರ್ಗುಣ ತಲುಪಿದಾಗ ಜ್ಞಪ್ತಿ ಉಳಿಯದು. ಅದು ಮನಸ್ಸಿನ ಆಚೆಯ ಸ್ಥಿತಿ. ಸಗುಣವು ನಿರ್ಗುಣಕ್ಕೆ ದಾರಿಯಾಗಿದೆ.

ಆ. ಜಲದಲ್ಲಿಯು ಇಲ್ಲ, ಜಗದಲ್ಲಿಯೂ ಇಲ್ಲ
ನಿಗಮ ವೇದ್ಯವಾದ ನೈಜ ಪದವಿ
ಸಗುಣ ನಿರ್ಗುಣದಲಿ ಸಾಧಿಸಿ ಸಲೆ ಕಾಣು.
ವಿಶ್ವದಾಭಿರಾಮ ಕೇಳು ವೇಮ.

ದೇವರನ್ನು ಅರಸುತ್ತ ತೀರ್ಥಯಾತ್ರೆ ಇಲ್ಲವೆ ಕ್ಷೇತ್ರ ಯಾತ್ರೆ ಕೈಕೊಳ್ಳುವುದು ವ್ಯರ್ಥ. ಏಕೆಂದರೆ ನೀವು ಅರಸುತ್ತಿರುವ ದೇವರು ತೀರ್ಥ ಕುಂಡಗಳಲ್ಲಿಯೂ ಇಲ್ಲ ಮತ್ತು ಕ್ಷೇತ್ರ ಪರ್ವತಗಳಲ್ಲಿಯೂ ಇಲ್ಲ. ನಿಗಮ ವೇದ್ಯವಾದ ನೈಜ ಪದವಿಯು ಅಂದರೆ ಬ್ರಹ್ಮವು ಜಲದಲ್ಲಿಯೂ ಇಲ್ಲ. ಜಗದಲ್ಲಿಯೂ ಇಲ್ಲ. ಅವನನ್ನು ಸಗುಣ ಧ್ಯಾನದಿಂದ ಆರಂಭಿಸಿ

ನಿರ್ಗುಣ ಲಕ್ಷ್ಯವನ್ನು ಸಾಧಿಸಿ ಚೆನ್ನಾಗಿ ಕಾಣಬೇಕು.

ಹಾಗಾದರೆ, ತನ್ನ ಲಕ್ಷ್ಯವಾದ ನಿರ್ಗುಣವನ್ನು ಪಡೆಯುವ ಮಾರ್ಗವಾವುದು ? ಅದರ ವಿವರಗಳೇನು ?

ಗೀತ. ಆತ್ಮವ ತನ್ನೊಳು ಗಮನಿಸಿ, ಅನುದಿನವೂ
ನಿರ್ಗುಣಾತ್ಮಾರ್ಚನೆಯ ಗೆಯ್ದು, ನಿತ್ಯ ಅಮರ
ಪ್ರತ್ಯಗಾತ್ಮನೊಳು ನೆನೆಯೆ ಪ್ರಬಲ ಯೋಗಿ.
ಸಚ್ಚಿದಾನಂದ ಪದದಲ್ಲಿ ಸತ್ಯ ವೇಮ.

ದೇಹ, ಇಂದ್ರಿಯ, ಪ್ರಾಣ, ಅಂತಃಕರಣ ಚತುಷ್ಟಯಗಳನ್ನು ದಾಟಿ ಇರುವ ಆತ್ಮವನ್ನು ತನ್ನಲ್ಲಿ ಗಮನಿಸಿ, ಅನುದಿನವೂ ನಿರ್ಗುಣಾತ್ಮಾರ್ಚನೆಯ ಮಾಡಿ, ಅಂತರಾತ್ಮನಲ್ಲಿ ನೆನೆದರೆ, ಆ ಯೋಗಿಯು ಸಚ್ಚಿದಾನಂದ ಪದದಲ್ಲಿ ಪ್ರಬಲನಾಗುವುದು ಸತ್ಯ.

ಗೀತ. ಎನಿತೊ ವಿದ್ಯೆಗಳ ಕಲಿತರು ಅರಿಯರಲ್ಲ !
ತಾನು ನಿರ್ಗುಣ ; ಜ್ಞಪ್ತಿಯನು ದಾಟಬೇಕು.
'ನಿರ್ಣಯೋ ನಾಸ್ತಿ' ಎನುವುದು ನಿಕಟ ಉಂಟು.
ಗುರುವಿನ ಬೋಧೆಗೆ ಅನ್ಯವು ಸರಿಯೆ ? ವೇಮ.

ವೇದ ವಿದ್ಯೆ, ತಂತ್ರವಿದ್ಯೆ, ಮಂತ್ರವಿದ್ಯೆ, ಯಂತ್ರ ವಿದ್ಯೆ, ಯಕ್ಷಿಣೀ ವಿದ್ಯೆ ಹೀಗೆ ಹಲವಾರು ವಿದ್ಯೆಗಳಿವೆ. ಅದೆಷ್ಟೋ ವಿದ್ಯೆಗಳನ್ನು ಕಲಿತರೂ ತಾನು ನಿರ್ಗುಣ ಎಂಬುದನ್ನು ಅರಿಯರಲ್ಲ ! ಏಕೆಂದರೆ ಅದನ್ನರಿಯಲು ಜ್ಞಪ್ತಿಯನ್ನು ದಾಟಬೇಕು. ಅಲ್ಲಿ 'ನಿರ್ಣಯೋ ನಾಸ್ತಿ' ಹೀಗೇ ಎಂದು ನಿರ್ಣಯಿಸಲಾಗದು, ಎಂಬ ಅರಿವು ನಿಕಟವಾಗಿ ಉಂಟು. ಗುರುವಿನ ಬೋಧೆಯು ಹೀಗಿರುವಾಗ, ಬೇರಾವುದಾದರೂ ಅದಕ್ಕೆ ಸಮನಾಗಿರುವುದೇ?

ಗೀತ. ಸಗುಣ ನಿರ್ಗುಣ ಭೇದಾರ್ಥ ಸಂಶಯವದು,
ಪರಮ ಗುರುವಾಜ್ಞೆಯಿಂದುಳಿದು ಪರಲು ಬಿಡದು.
ಅಗಣಿತವಾದುದು ಮನದೊಳಗೆ ಅಂಟಬೇಕು.
ವಾದಗಳ ಗೆಯ್ಕೆ ಮೆಚ್ಚದು ಮಸುಧೆ ವೇಮ.

ಯಾವುದು ಸಗುಣ ? ಇನ್ನಾವುದು ನಿರ್ಗುಣ ? ಇವುಗಳಲ್ಲಿ ಭೇದವೇನು ? ಇವುಗಳ ಅರ್ಥವೇನು ? ಎಂಬ ಸಂಶಯಗಳೇಳುವುದು ಸಹಜ. ಇದು ಜ್ಞಪ್ತಿ ಮತ್ತು ಜ್ಞಪ್ತಿಯಾಚೆಯ ಸ್ಥಿತಿಗೆ ಸಂಬಂಧಿಸಿರುವುದರಿಂದ ಜಿಜ್ಞಾಸೆಗಳಿಗೆ ವಿದಿತವಾಗದು. ಪರಮ ಗುರುವಿನ ಆಜ್ಞೆಯಿಂದ ಮಾತ್ರ ಈ ಸಂಶಯದ ಪರಲು ಹರಿಯಬಹುದು. ಇದನ್ನು ಅರಿಯಬೇಕಾದರೆ, ಮನದೊಳಗೆ ಅಗಣಿತವಾದುದು, ಅನಂತವಾದುದು, ಅಂಟಬೇಕು. ಇದು ವಾದ ಜಲ್ಪಗಳಿಂದ ನಿರ್ಣಯಿಸುವಂಥದಲ್ಲ. ಹಾಗೆ ಮಾಡುವುದನ್ನು ಮಸುಧೆಯು ಮೆಚ್ಚದು.

ಆ. ಅವನು ಅವನು; ಅವನು ಅವನ ಒಳಗೆ ಉಂಟು,
ಅವನು ಅವನು, ಅವನು ಅವನಲ್ಲ.

ಅವನು ಅವನೆ, ಅವನೆ ಅವನು ಹೋಗು ಬ್ರಹ್ಮ.
ವಿಶ್ವದಾಭಿರಾಮ ಕೇಳು ವೇಮ.

ಸಗುಣ ಬ್ರಹ್ಮನೇ ನಿರ್ಗುಣ ಬ್ರಹ್ಮನು. ಅವರಲ್ಲಾದ ವಸ್ತು ಭೇದವಿಲ್ಲ. ಇರುವದು ಕೇವಲ ಅವಸ್ಥಾಭೇದ. ಸಗುಣ ಬ್ರಹ್ಮನು ನಿರ್ಗುಣ ಬ್ರಹ್ಮದ ಒಳಗೇ ಉಂಟು. ವಸ್ತು ರೂಪದಲ್ಲಿ ಸಗುಣನೆ ನಿರ್ಗುಣನು. ಅವಸ್ಥಾ ದೃಷ್ಟಿಯಿಂದ ಸಗುಣನು ನಿರ್ಗುಣನಲ್ಲ. ಒಟ್ಟಾರೆ ತಿಳಿಯುವುದಾದರೆ ಸಗುಣ ಬ್ರಹ್ಮನೇ ನಿರ್ಗುಣ ಬ್ರಹ್ಮನು. ನಿರ್ಗುಣನು ತಾನೇ ಹೋಗು ಬ್ರಹ್ಮ.

ವಾಚಕರಲ್ಲಿ ಈ ಅರ್ಥ ವಿವರಣೆಯಿಂದ ಸಂದಿಗ್ಧತೆಯುಂಟಾಗಿದ್ದರೆ ಸಾಗರ ಮತ್ತು ಹಿಮ ಬಂಡೆಗಳ ರೂಪಕವನ್ನು ಗಮನಿಸಬೇಕು.

ನಿರ್ಗುಣ ಬ್ರಹ್ಮವನ್ನು ಸಾಗರವೆಂದು ತಿಳಿಯಿರಿ. ಸಗುಣ ಬ್ರಹ್ಮವನ್ನು ಹಿಮ ಬಂಡೆಯೆಂದು ಗ್ರಹಿಸಿರಿ. ಎರಡೂ ನೀರೇ ಅಲ್ಲವೇ ? ಆದ್ದರಿಂದ ಸಾಗರವು ನೀರೇ, ಹಿಮ ಬಂಡೆಯೂ ನೀರೇ. ಇರವಿನ ಸ್ಥಿತಿಯಿಂದ ನೋಡಿದರೆ ಹಿಮಬಂಡೆಯು ಸಾಗರದೊಳಗೇ ಇದೆ. ವಸ್ತು ದೃಷ್ಟಿಯಿಂದ ಸಾಗರವೂ ಹಿಮ ಬಂಡೆಯೂ ಒಂದೇ ಆಗಿವೆ. ಅವಸ್ಥೆಯ ದೃಷ್ಟಿಯಿಂದ ನೋಡಿದರೆ, ಹಿಮ ಬಂಡೆಯು ಶೀತದಿಂದ ಹೆಪ್ಪುಗಟ್ಟಿದೆ. ಆದ್ದರಿಂದ ಹಿಮ ಬಂಡೆಯು ಸಾಗರವಲ್ಲ. ಒಟ್ಟಾರೆ ನೋಡಿದರೆ ಹಿಮ ಬಂಡೆ ಮತ್ತು ಸಾಗರಗಳು ನೀರು ಮಾತ್ರ. ಸಾಗರವೂ ಹಿಮ ಬಂಡೆಯೂ ಜಲಧಿಯಷ್ಟೇ.

ಸೃಷ್ಟಿಯ ಸಂಚಾರ ಧಾರೆ :

'ಪ್ರಕರ್ಷೇಣ ಕರೋತಿ ಇತಿ ಪ್ರಕೃತಿಃ ಇತ್ಯಾಹುಃ' ಅಂದರೆ ಯಾವುದರ ಪ್ರಭಾವದಿಂದ ಏಕವು ಅನೇಕವಾಗುವುದೋ, ಅದು ಪ್ರಕೃತಿ ಎನಿಸುತ್ತದೆ. ಪ್ರಕೃತಿಯು ಮೂರು ಗುಣಗಳಿಂದ ಕೂಡಿರುತ್ತದೆ. ಅವುಗಳೆಂದರೆ ಸತ್ವ, ರಜಸ್, ಮತ್ತು ತಮಸ್. ಗುಣ ಎಂದರೆ ಹಗ್ಗ. ಹಗ್ಗವನ್ನು ಅಂದರೆ ಗುಣವನ್ನು ಯಾವುದಕ್ಕೆ ಕಟ್ಟುವರೋ ಅದು ಗುಣಿ ಇಲ್ಲವೆ ಗೂಟ. ಗೂಟಕ್ಕೆ ಗುಣದಿಂದ ಬಂಧಿಸುವ ಪಶುವೇ ಗುಣವಂತ. ಮಾನಸಾಧ್ಯಾತ್ಮಿಕ ಭಾಷೆಯಲ್ಲಿ ಗುಣ ಎಂದರೇನು ? ಸತ್ವ ಗುಣವೆಂದರೆ ಸುಖ ಸಂಗ ಮತ್ತು ಜ್ಞಾನಸಂಗ. ರಜೋಗುಣವೆಂದರೆ ಲೋಭ ಸಂಗ ಮತ್ತು ಕರ್ಮ ಸಂಗ ಹಾಗೂ ತಮೋಗುಣವೆಂದರೆ ಆಲಸ್ಯ ಸಂಗ ಮತ್ತು ಅಜ್ಞಾನ ಸಂಗ. ಈ ಸಂಗವು ಯಾರಿಗೆ ಆಗುತ್ತದೆ ? ಜೀವಿಗೆ ಈ ಗುಣಗಳ ಸಂಗವಾಗುತ್ತದೆ. ಆದರಿಂದ ಜೀವಿಯು ಅಂದರೆ ಅಣು ಚೈತನ್ಯವು ಗುಣಾನ್ವಿತನಾಗುತ್ತದೆ. ಅಂದರೆ ಪುರುಷನು ಗುಣಾನ್ವಿತನಾಗುತ್ತಾನೆ.

ಆ. ಸುಖಾಸುಖದಲಿ ತಾನು ಸಗುಣವಾಗಿರುತಿರೆ,
ಪ್ರಕೃತಿ ಮದುವೆ ಗೆಯ್ಸು, ಪರವ ಕೆಡಿಸಿ,
ವಿಧಿಗಳ ಹುಟ್ಟಿಸುವ ವಿಧಿಯ ತಾನು ಕಾಣ.
ವಿಶ್ವದಾಭಿರಾಮ ಕೇಳು ವೇಮ.

ತಾನು ಸಗುಣನಾಗಿರುವಾಗ, ಸತ್ವ ಗುಣಾನ್ವಿತನಾದಾಗ, ಸುಖ ಪಡೆಯುತ್ತಾನೆ. ತಮೋ ಗುಣಾನ್ವಿತನಾದಾಗ ಅಸುಖ ಪಡೆಯುತ್ತಾನೆ. ಹೀಗೆ ಅಣು ಚೈತನ್ಯ ಇಲ್ಲವೆ ಅಣು

ಪುರುಷನು ಪ್ರಕೃತಿಯನ್ನು ಮದುವೆಯಾದಾಗ, ಅಂದರೆ ಗುಣಾನ್ವಿತನಾದಾಗ, ಪರಲೋಕವನ್ನು ಕೆಡಿಸುತ್ತಾನೆ. ಹಾಗಾಗಿ ಕರ್ಮಬದ್ಧನಾಗಿ ಸತ್ಕರ್ಮವನ್ನೊ ಇಲ್ಲವೆ ದುಷ್ಕರ್ಮವನ್ನೊ ಮಾಡುತ್ತಾನೆ. ಮತ್ತು ಕರ್ಮಫಲ ಭೋಗಿಸಲು ಬಾಧ್ಯಸ್ಥನಾಗುತ್ತಾನೆ. ಈ ಕರ್ಮಫಲಗಳನ್ನು ವಿಧಿಯು ನಿರ್ಧರಿಸುತ್ತದೆ. ಆದರೆ ಆ ವಿಧಿಯನ್ನು ಕರ್ಮಿಯು ಕಾಣನು.

ತತ್ತ್ವಗಳ ಉತ್ಪತ್ತಿ :

ತತ್ ಅಂದರೆ ಅದು. ತತ್ತ್ವ, ಎಂದರೆ ತತ್‌ದ ಪ್ರಕ್ಷೇಪಣೆ. ಇದಂ ಅಂದರೆ ಇದು. ಅಂದರೆ ಪ್ರತ್ಯಕ್ಷ ಅನುಭವವೇದ್ಯವಾದುದು. ತತ್ ಪ್ರತ್ಯಕ್ಷ ಅನುಭವವೇದ್ಯವಲ್ಲ ಅದು ರಹಸ್ಯವಾದುದು. ಅ-ವಸ್ತು. ತತ್ ಎಂದರೆ ನಿರ್ಗುಣ ಬ್ರಹ್ಮವೇ.

ತತ್ತ್ವಗಳಲ್ಲಿ (ಸಗುಣ ಬ್ರಹ್ಮ) ಆತ್ಮ ಅಂತಃಕರಣ ಚತುಷ್ಟಯ, ಜ್ಞಾನೇಂದ್ರಿಯ ಪಂಚಕ, ಕರ್ಮೇಂದ್ರಿಯ ಪಂಚಕ, ವಿಷಯ ಪಂಚಕ ಮತ್ತು ಭೂತ ಪಂಚಕಗಳೆಂಬ ಪಂಚವಿಂಶತಿ ಅಂದರೆ ಇಪ್ಪತ್ತೈದು ಸೇರಿವೆ. ಇವುಗಳ ಉತ್ಪತ್ತಿಯನ್ನು ಕುರಿತು ಅರಿಯುವಾ :

ಶರೀರದಲ್ಲಿ ಆತ್ಮವು ಅಣು ಪುರುಷ ಇಲ್ಲವೆ ಅಣು ಚೈತನ್ಯವೆನಿಸಿದೆ. ಆತ್ಮನು ಅಂದರೆ ಅಣು ಪುರುಷನು ಮಾನವ ಶರೀರದಲ್ಲಿ ಪ್ರತಿಫಲಿಸಿದ ಪರಮಾತ್ಮನೇ ಆಗಿದ್ದಾನೆ. ಒಬ್ಬ ಸೂರ್ಯನು ಜಲ ತುಂಬಿದ ಅನೇಕ ಪಾತ್ರೆಗಳಲ್ಲಿ ಪ್ರತಿಫಲಿಸುವಂತೆ ಆತ್ಮನು ಅನೇಕ ಶರೀರಗಳಲ್ಲಿ ಪ್ರತಿಫಲಿಸುತ್ತಾನೆ.

ಆ. ಕೂಟವಾಸಿಯಾದ ಗುಣವನೆ ಅತಿಶಯಿಸಿ,
ನೆರಳ ನರಳಿನಂತೆ ನಿಂತಿರುವನು.
ನೀರುಗೊಡದ ಒಳಗೆ ನಿಂತ ಸೂರ್ಯನಂತೆ.
ವಿಶ್ವದಾಭಿರಾಮ ಕೇಳು ವೇಮ.

ಸೂರ್ಯನ ಕಿರಣಗಳು ವಾತಾವರಣದ ಮಾಧ್ಯಮವನ್ನು ಹಾಯ್ದು ಪರಾವರ್ತಿಸುತ್ತವೆ. ಈ ಪರಾವರ್ತಿತ ಕಿರಣಗಳು ಸೂರ್ಯ ಕಿರಣದ ಒಂದು ನೆರಳು. ಈ ಪರಾವರ್ತಿತ ಕಿರಣಗಳು ಪಾತ್ರೆಯಲ್ಲಿ ಜಲ ಮಾಧ್ಯಮದಲ್ಲಿ ಹಾಯ್ದು ಪರಾವರ್ತನೆಗೊಳುತ್ತವೆ. ಇದು ಸೂರ್ಯ ಕಿರಣಗಳ ಎರಡನೆಯ ನೆರಳು. ಈ ಕಿರಣಗಳ ಪಾರದರ್ಶಕವಲ್ಲದ ಪಾತ್ರೆಯ ತಳದಲ್ಲಿ ಹಾಯದೆ ಪ್ರತಿಫಲಿತವಾಗಿ ಸೂರ್ಯನ ಬಿಂಬವು ಅಂದರೆ ಪ್ರತಿಬಿಂಬವು ಕಣ್ಣಿಗೆ ಗೋಚರವಾಗುತ್ತದೆ. ಈ ರೀತಿ ಪರಮಾತ್ಮನು ಪ್ರಕೃತಿಯ ಗುಣಗಳ ಮಾಧ್ಯಮವನ್ನು ಅತಿಶಯಿಸಿ, ಮಾನವನ ಅಗ್ಗಬುದ್ಧಿಯಲ್ಲಿ ಆತ್ಮವಾಗಿ ಪ್ರತಿಫಲಿಸುತ್ತಾನೆ.

ಆ. ಬಿಸಿಲು ಕಾಲ ನಿಶೆಯು ಬೆಸೆದು ಅಡಗಿದಂತೆ,
ತುಂಬುಗೊಡದಿ ನೀರು ನಿಂತಿಹಂತೆ,
ತಿಳಿದುಕೊ ಪರಮಾತ್ಮ ತತ್ತ್ವ ಬಹಳಷ್ಟು,
ವಿಶ್ವದಾಭಿರಾಮ ಕೇಳು ವೇಮ.

ನಿಶೆಯನ್ನು ಪರಮಾತ್ಮ ತತ್ತ್ವಕ್ಕೆ ಉಪಮಿಸಿದರೆ, ನಿಶೆಯು ಯಾವಾಗಲೂ ಇರುತ್ತದೆ.

ಅದು ಇಲ್ಲವೆಂಬುದೇ ಇಲ್ಲ. ಬಿಸಿಲು ಕಾಲ ಬಂದಾಗ ಅದು ಅದರಲ್ಲಿ ಬೆಸೆದು ಅಡಗುತ್ತದೆ. ಬಿಸಿಲು ಅಂದರೆ ಸೂರ್ಯನ ಬೆಳಕು ಇಲ್ಲವಾದಾಗ ನಿಶೆ ವ್ಯಕ್ತವಾಗುತ್ತದೆ. ಕೊಡದಲ್ಲಿ ಆಕಾಶ ತತ್ತ್ವವು ಇದ್ದೇ ಇರುತ್ತದೆ. ಅದರಲ್ಲಿ ನೀರು ತುಂಬಿದಾಗ ಆಕಾಶ ತತ್ತ್ವವು ಜಲ ತತ್ತ್ವದಲ್ಲಿ ಬೆರೆತು ಅಡಗಿದಂತೆ ಕಾಣುತ್ತದೆ. ಈ ರೀತಿ ಪರಮಾತ್ಮ ತತ್ತ್ವವು ಇದ್ದೇ ಇರುತ್ತದೆ. ನಮ್ಮ ಅಜ್ಞಾನದ ಪರದೆ ಮುಸುಕಿದಾಗ ಕಾಣಿಸುವುದಿಲ್ಲ. ಹೀಗೆ ಬಹುವಾಗಿ ಉಪಮಿಸಿ ಪರಮಾತ್ಮ ತತ್ತ್ವವನ್ನು ಚೆನ್ನಾಗಿ ತಿಳಿಯಬೇಕು.

ಆತ್ಮವು ತನ್ನಲ್ಲಿಯೇ ಪರಮಾತ್ಮನ ಪ್ರತಿಬಿಂಬ ರೂಪದಲ್ಲಿ ಇದೆ. ತನಗೆ ಸಾಕ್ಷಿಯಾಗಿ ತನ್ನ ಕರ್ಮಕ್ಕೆ ತಕ್ಕ ಫಲಗಳನ್ನು ವಿಧಿಸುವ ಆತ್ಮನು ಬೇರೆಲ್ಲಿಯೋ ಇರುವನೆಂದು ಅಲ್ಲಿ ಇಲ್ಲಿ ಅಲೆಯಬೇಕಿಲ್ಲ.

ಆ. ತನುವಿನೊಳಗೆ ಆತ್ಮ ತತ್ತ್ವವನು ಅರಿಯದೆ,
ಹೊರಗೆ ಇರುವುದೆಂದು ಹುಡುಕಲಾಗ
ಭಾನುವಿರಲು, ದೀಪ ಬೆಳಗಿ, ಹುಡುಕಬಹುದೆ ?
ವಿಶ್ವದಾಭಿರಾಮ ಕೇಳು ವೇಮ.

ಆತ್ಮ ತತ್ತ್ವವು ತನುವಿನೊಳಗೇ ಇದೆ. ಈ ರಹಸ್ಯವನ್ನು ಅರಿಯದೆ ಶರೀರದ ಹೊರಗೆ ಬೇರೆಲ್ಲಿಯೋ ಇದೆಯೆಂದು ತೀರ್ಥ ಕ್ಷೇತ್ರಗಳಲ್ಲಿ, ಮೂರ್ತಿ ಪ್ರತೀಕಗಳಲ್ಲಿ ಹುಡುಕುವುದೆಂದರೆ, ಎಲ್ಲೆಡೆ ಸೂರ್ಯನು ಪ್ರಕಾಶಿಸುತ್ತಿರುವಾಗ, ಯಾವುದೋ ವಸ್ತುವನ್ನು ಹುಡುಕಲು ದೀಪವನ್ನು ಬೆಳಗಿ ಹುಡುಕಲೆಳಸಿದಂತೆ ಹಾಸ್ಯಾಸ್ಪದವಷ್ಟೇ.

ಆ. ಆತ್ಮದಲ್ಲಿ ದೃಷ್ಟಿ ಅನುವಿನಿಂದ ಕುದುರಿ,
ನಿಶ್ಚಲಾಗಿ, ದೃಷ್ಟಿ ನಿಲಿಸಿದಾಗ,
'ಅವನು' ನೀನೆ ಕಣಾ ! ಅನುಮಾನವೇತಕೆ ?
ವಿಶ್ವದಾಭಿರಾಮ ಕೇಳು ವೇಮ.

ಸಾಧಕನಿಗೆ ಕುಶಲತೆಯಿಂದ ಆತ್ಮನಲ್ಲಿ ದೃಷ್ಟಿ ಕುದುರಿದಾಗ, ಅವನು ಆ ದೃಷ್ಟಿಯನ್ನು ಕದಲಿಸದೆ ನಿಶ್ಚಲವಾಗಿ ನಿಲಿಸಬೇಕು. ಆಗ 'ಅವನು' ಅಂದರೆ ತತ್ ನೀನೇ ಎಂಬುದನ್ನು ಕಾಣು. ಇದರಲ್ಲಿ ಅನುಮಾನವೇಕೆ ?

ಆ. ಪ್ರಾಣವಾತ್ಮವೆನಲು ಪ್ರಾಣೆ ಜೀವಿತಾಯ್ತು
ಜೀವ ಪ್ರಾಣವಾತ್ಮ ಸೇರಿ ಒಂದೆ.
ಕರ್ಮ ಬಂಧಗಳಲಿ ಕಟ್ಟಿ ಇರುವುದಷ್ಟೆ.
ವಿಶ್ವದಾಭಿರಾಮ ಕೇಳು ವೇಮ.

'ಜೀವ್' ಎಂದರೆ ಉಸಿರಾಡಿಸು. ಪ್ರಾಣ ಎಂದರೆ ಉಸಿರು. ಪ್ರಾಣವಾತ್ಮ ಅಂದರೆ ಪ್ರಾಣವೇ ನಾನು ಎಂದರೆ ಪ್ರಾಣಿಯ ಜೀವಿತವಾಗುತ್ತದೆ. ಜೀವಿ, ಪ್ರಾಣ, ಆತ್ಮ ಸೇರಿ ಒಂದೇ. ಅದೇ ಜೀವಾತ್ಮವಾಗಿದೆ. ಜೀವಾತ್ಮನು ಕೇವಲಾತ್ಮನಂತೆ ಕರ್ಮಫಲ ದೂರನಲ್ಲ. ಅವನು ಕರ್ಮಫಲಗಳ ಬಂಧನದಲ್ಲಿ, ಕಟ್ಟಿ ಬಿದ್ದಿರುವನು. ಅವನು ಜೊತೆಗೂಡಿದ ಉಪಾಧಿಯಿಂದ ಹಾಗಾಗುತ್ತದೆ.

ಆ. ತಿಳಿದು ಆತ್ಮದಲ್ಲಿ ದೇದೀಪ್ಯಮಾನನಿರೆ,
ತೇಜದಲ್ಲಿ ಶಿವನ ಥೇಟ ನೋಡಿ,
ಮನಸು ಶಿವನೊಳಿರಿಸಿ ಮಗ್ನರಾಗಿರಯ್ಯ.
ವಿಶ್ವದಾಭಿರಾಮ ಕೇಳು ವೇಮ.

ಅರಿವಿನ ಬೆಳಕಿನಿಂದ ಆತ್ಮದಲ್ಲಿ ಹೊಳೆ ಹೊಳೆಯುತ್ತಿರಲು, ಆ ಆತ್ಮ ತೇಜದಲ್ಲಿ ಮಂಗಳಮಯನಾದ ಶಿವನನ್ನು ಸ್ಫುಟವಾಗಿ ಕಂಡು, ತಮ್ಮ ಮನಸ್ಸನ್ನು ಆ ಮಂಗಳಮಯನಲ್ಲಿ ಇರಿಸಿ, ಅವನ ಕೃಪಾಸಾಗರದಲ್ಲಿ ಮುಳುಗಿ ಹೋಗಿರಯ್ಯ.

ಆತ್ಮವನ್ನು ಅರಿಯುವುದು ಹೇಗೆ ? ಅಗ್ರ ಬುದ್ಧಿಯಲ್ಲಿ ಆತ್ಮವು ಪ್ರತಿಬಿಂಬಿಸುತ್ತದೆ. ಇದರ ವಿಧವಾವುದು ?

ಆ. ಸೂಚಿಕಾಗ್ರದೃಷ್ಟಿ ಸರಣಿಯಿಂದ ಭ್ರೂಮಧ್ಯೆ
ನೋಡಿ, ನೋಡಿ, ಮತ್ತೆ ನೋಡುತಿರಲು,
ಆತ್ಮದ ಬರು ಹೋಗು ಆಗಲೇ ತಿಳಿವುದು
ವಿಶ್ವದಾಭಿರಾಮ ಕೇಳು ವೇಮ.

ಮನಸ್ಸನ್ನು ಎಲ್ಲ ವಿಷಯಗಳಿಂದ ದೂರಗೊಳಿಸಿ, ಶುದ್ಧಮಾಡಿ, ವೃತ್ತಿಗಳೆಲ್ಲವನ್ನು ಏಕಾಗ್ರ ಮಾಡಿ, ಸೂಜಿಯ ಮೊನೆಯಷ್ಟು ಅಂದರೆ ಸೂಜಿಕಾಗ್ರದಷ್ಟು ಸೂಕ್ಷ್ಮ ಬಿಂದುವಿನಲ್ಲಿ ಕೇಂದ್ರೀಕರಿಸಿ ಭೂಮಧ್ಯೆದಲ್ಲಿ ದೇಶ ಬಂಧ ಮಾಡಿ, ಲಕ್ಷ್ಯವನ್ನು ನೋಡಬೇಕು. ಮತ್ತೂ ನೋಡಬೇಕು. ಹೀಗೆ ನೋಡುತ್ತಿದ್ದರೆ ಆತ್ಮವು ಈಗ ಕಾಣುವುದು. ದೃಷ್ಟಿ ಚಲಿಸಿದರೆ ಕಾಣದಾಗುವುದು. ಹೀಗೆ ಆತ್ಮನ ಬರು ಹೋಗುಗಳು ತಿಳಿಯುತ್ತವೆ.

ಆ. ಆತ್ಮ ತೇಜ ಮೂಡಿ, ಅನುವಿಲಿ ಶೋಧಿಸುತ,
ತೇಜ ಆತ್ಮದಲ್ಲಿ ತೇಟ ಪಡಿಸಿ,
ಗಗನ ಮಣ್ಣು ಮಧ್ಯೆ ಗಗನಕಂಟಿ ನೋಡಿ.
ವಿಶ್ವದಾಭಿರಾಮ ಕೇಳು ವೇಮ.

ಆತ್ಮ ಸೂರ್ಯನು ಮೂಡಿದಾಗ, ಅವನನ್ನು ಕುಶಲತೆಯಿಂದ ಶೋಧಿಸುತ್ತ, ತೇಜವನ್ನು ಆತ್ಮದಲ್ಲಿ ಪರಿಶುದ್ಧಗೊಳಿಸಬೇಕು. ಆ ಮೇಲೆ ಗಗನ ಮಣ್ಣು ಮಧ್ಯೆ ಅಂದರೆ ಭ್ರೂಮಧ್ಯೆ ಮತ್ತು ಮೂಲಾಧಾರ ಚಕ್ರಗಳ ಮಧ್ಯೆ, ಹೃದಯಾಕಾಶಕ್ಕೆ ಅಂಟಿಕೊಂಡು ಆ ಪರಿಶುದ್ಧ ತೇಜವನ್ನು ನೋಡಿರಿ.

ಗೀತ. ಅಂತರಾತ್ಮಾನುಭವ ಹೊಂದಿ ಆರ್ಯ ಮತಿ,
ಸಂತತಾರ್ಚನ ಮನದಿ ನಿಷ್ಠೆ ಸಲಿಸಿ ಕೋರಿ,
ಸುತ್ತಿ ಏರಿದವನೆ ಹೋಗು ಶ್ರೇಷ್ಠನಿಹನು.
ಅವನಿಗಾರು ಸಮರು ? ಕಾಣು ಅವನೆ ವೇಮ.

ತನ್ನೊಳಗೆ ಆತ್ಮಾನುಭವವನ್ನು ಹೊಂದಿ, ಸುಸಂಸ್ಕೃತ ಮತಿಯಿಂದ ಯಾವಾಗಲೂ

ಪ್ರಾರ್ಥಿಸುವ ಮನದಲ್ಲಿ ನಿಷ್ಠೆ ಸಲ್ಲಿಸಿ, ತತ್ತ್ವದರ್ಶನಕ್ಕಾಗಿ ಕೋರಿ, ತತ್ತ್ವಶೃಂಗವನ್ನು ಸುತ್ತಿ ಏರಿದವನೇ ಶ್ರೇಷ್ಠನಾಗಿರುವನು. ಅವನಿಗೆ ಅವನೇ ಸಮನು. ಬೇರಾರು ಸಮನಾಗರು. ಇದನ್ನು ತಿಳಿದುಕೋ.

ಕಂ. ಆತ್ಮಾನಾತ್ಮ ವಿವೇಕವು,
ಸ್ವಾತ್ಮಾನುಗತಿಯ ಎಲ್ಲೆಯ ಮೀರಿ ಸ್ವಚ್ಛಂದಂ.
ಆತ್ಮದೊಳಗಿರುವಂಥ ಮ–
ಹಾತ್ಮನ ಪೊಗಳಲು ಅಳವೇ ಹರನಿಗು ? ವೇಮಾ.

ಆತ್ಮವಾವುದು ? ಅನಾತ್ಮವಾವುದು ? ಇವುಗಳನ್ನು ವಿಂಗಡಿಸುವ ವಿವೇಕ ಬುದ್ಧಿಯು, ತನ್ನ ಆತ್ಮವನ್ನು ಅನುಸರಿಸಿದ ಎಲ್ಲೆಯನ್ನು ಮೀರಿ, ತಮ ತಮಗೆ ತಿಳಿದಂತಿದೆ. ಆತ್ಮದೊಳಗೆ ಪರಮಾತ್ಮನಿದ್ದಾನೆ. ಆ ಮಹಾತ್ಮನನ್ನು ಹೊಗಳಲು ಮನೋಹರವಾದ ಸತ್ತೆಗೆ ಅಳವೇ ? ಅದು ಅನಿರ್ವಚನೀಯವಾಗಿದೆ.

ಅಂತಃಕರಣ ಚತುಷ್ಟಯ :

ಬಾಹ್ಯ ಕರಣಗಳು ಇಪ್ಪತ್ತು. ಅಂತಃಕರಣಗಳು ನಾಲ್ಕು, ಇವುಗಳೆಂದರೆ, ಮಹತ್ ತತ್ತ್ವ ಇಲ್ಲವೆ ಬುದ್ಧಿ ತತ್ತ್ವ, ಅಹಂ ತತ್ತ್ವ ಮತ್ತು ಚಿತ್ತ ತತ್ತ್ವ ಹಾಗೂ ಇವು ಮೂರರ ಸಾಮೂಹಿಕ ಹೆಸರಾದ ಮನಸ್ತತ್ತ್ವ.

ಕಂ. ಮನದಲಿ ಬುದ್ಧಿಯು ತೋಚಿತು,
ಮನದಲಹಂಕಾರವಿರುವುದು, ಮನದಲಿ ಚಿತ್ತಂ
ಹೆಣೆಯುತ ನಾಲ್ಕೂ ವಿಧಗಳ
ಎಣಿಸುತ ತನ್ನ ತನುವ ತಿಳಿಯಲಾರ ವೇಮಾ.

ಸಗುಣ ಬ್ರಹ್ಮನು ಸಮ್ಮತಿ ಇತ್ತ ಮೇರೆಗೆ ಪ್ರಕೃತಿಯು ಸಗುಣ ಬ್ರಹ್ಮವನ್ನು ಅಂದರೆ ಅಣು ಚೈತನ್ಯವನ್ನು ಗುಣಾನ್ವಿತಗೊಳಿಸಲು ಆರಂಭಿಸುತ್ತದೆ. ಸತ್ತ್ವದಿಂದ ಗುಣಾನ್ವಿತಗೊಳಿಸಿದಾಗ ಜ್ಞಾನ ಮತ್ತು ಅಸ್ತಿತ್ವದ ಅಭಿಮಾನಿಯಾದ ಬುದ್ಧಿ ತತ್ತ್ವ ಪ್ರಕ್ಷೇಪಿತವಾಗುತ್ತದೆ. ರಜಸ್ಸಿನಿಂದ ಗುಣಾನ್ವಿತಗೊಳಿಸಿದಾಗ ಕರ್ತೃತ್ವಾಭಿಮಾನ ಮತ್ತು ಸ್ವಾಮಿತ್ವಾಭಿಮಾನದ ಅಹಂ ತತ್ತ್ವವು ಪ್ರಕ್ಷೇಪಿತವಾಗುತ್ತದೆ. ಬಳಿಕ ತಮಸ್ಸಿನಿಂದ ಗುಣಾನ್ವಿತವಾದಾಗ ಕಾರ್ಯ – ನಾನು ಭಾವದ ಚಿತ್ತವು ಪ್ರಕ್ಷೇಪಿತವಾಗುತ್ತದೆ. ಇವೆಲ್ಲವುಗಳ ಸಾಮೂಹಿಕ ಹೆಸರೇ ಮನಸ್ಸು. ಸಗುಣ ಬ್ರಹ್ಮನೇ ಉಪಾದಾನ ಕಾರಣನಾಗಿ, ತಾನೇ ತನ್ನ ಇಚ್ಛೆಯಿಂದ ನಿಮಿತ್ತ ಕಾರಣನಾಗಿ ಈ ನಾಲ್ಕು ತತ್ತ್ವಗಳು ಪ್ರಕ್ಷೇಪಿತವಾಗಿವೆ.

ಕಂ. ಮನಸನು, ಬುದ್ಧಿಯ ಮೆರೆಯುತ,
ಘನಮಹ ಅಹಮನು ಕಂಡುಕೊಳ್ಳಬೇಕು ಶೀಘ್ರಂ.
ಮಿನುಗುವ ಅಂತಃಕರಣಂ–
ದೆನಿಸುವ ಮುಖ್ಯವಿಹ ಇದನೆ, ಅರಿವುದು, ವೇಮಾ.

ಮನಸ್ಸನ್ನೂ ಬುದ್ಧಿಯನ್ನೂ ಪ್ರದರ್ಶಿಸುತ್ತ, ಶೀಘ್ರವೇ ಅತಿ ಮುಖ್ಯವಾದ ಗಾಢವಾದ ಅಹಂ ತತ್ತ್ವನನ್ನು ಕಂಡುಕೊಳ್ಳಬೇಕು. ಹೀಗೆ ಅಂತಃಕರಣವೆಂದೆನಿಸಿ ಹೊಳೆಯುವ ಮುಖ್ಯವಾದ ಅಹಮನ್ನು ಅರಿಯಬೇಕು.

ಕಂ. ಚಿತ್ತವ ಬುದ್ಧಿಯ ಮೆರೆಯುತ
ಹತ್ತಿದಹಂಕಾರಗಳನು, ಆತ್ಮದ ಒಳಗೇ
ಮೊತ್ತವ ಗೆಯ್ಯಲು ಅರಿಯದ,
ಮತ್ತರಿಗೆ ಮುಕ್ತಿ ಇಲ್ಲವು, ಮಹಿಯಲಿ, ವೇಮಾ.

ಚಿತ್ತವನ್ನೂ ಬುದ್ಧಿಯನ್ನೂ ಪ್ರದರ್ಶಿಸುತ್ತ, ಅವುಗಳ ಕ್ರಿಯೆಗಳಲ್ಲಿ ಹತ್ತಿದ. ನಾನು ನನ್ನದು ಎಂಬ ಅಹಂ ತತ್ತ್ವವನ್ನು ನಿರ್ಮಲಗೊಳಿಸಿ, ಆತ್ಮದ ಒಳಗೆ ಮೊತ್ತ ಮಾಡಿ ಮನೋಲಯ ಸಾಧಿಸುವುದನ್ನು ಅರಿಯದ, ಅಹಂಕಾರ ಮಮಕಾರಗಳಿಂದ ಮತ್ತರಾದವರಿಗೆ ಮಹಿಯಲ್ಲಿ ಮುಕ್ತಿ ಇಲ್ಲವೆಂದು ಅರಿಯಬೇಕು.

ಪಂಚ ಮಹಾಭೂತಗಳು :

ಸಗುಣ ಬ್ರಹ್ಮನಿಂದ ಸತ್ತ್ವ ಗುಣದ ಅನ್ವಯದಿಂದ ಬುದ್ಧಿ, ಬುದ್ಧಿ ತತ್ತ್ವದ ಮೇಲೆ ರಜೋಗುಣಾನ್ವಯದಿಂದ ಅಹಂ ತತ್ತ್ವವೂ, ಮತ್ತು ಅಹಂ ತತ್ತ್ವದ ಮೇಲೆ ತಮೋಗುಣದ ಅನ್ವಯದಿಂದ ಚಿತ್ತ ತತ್ತ್ವವೂ ಪ್ರಕ್ಷೇಪಿತವಾಗಿವೆ. ಈ ಮೂರು ತತ್ತ್ವಗಳ ಒಟ್ಟಾರೆ ರೂಪವಾದ ಮನಸ್ಸೂ ಪ್ರಕ್ಷೇಪಿತವಾಗಿದೆ.

ಮುಂದೆ ತಮೋಗುಣದ ಅಧಿಕ ಅನ್ವಯದಿಂದ ಆಕಾಶ ತತ್ತ್ವ, ಆಕಾಶ ತತ್ತ್ವದಿಂದ ವಾಯು ತತ್ತ್ವ, ವಾಯುವಿನಿಂದ ಅಗ್ನಿ, ಅಗ್ನಿಯಿಂದ ಜಲ ತತ್ತ್ವಗಳು ಉಂಟಾಗಿವೆ. ಜಲದಿಂದ ಪೃಥಿವಿ ತತ್ತ್ವವಾಗಿದೆ.

ಆ. ಪೃಥಿವಿ, ಅಪ್ಪು ಅಗ್ನಿ ಪುನರುದ್ಭವಿಸುತ
ವಾಯು ವಾಗಸುಗಳು ಒಪ್ಪಗೂಡಿ,
ಪಂಚ ಭೂತವಾಗಿ ಪೊಳೆವ ಲೋಕವಾಯ್ತು.
ವಿಶ್ವದಾಭಿರಾಮ ಕೇಳು ವೇಮ.

ಪೃಥಿವಿ, ಅಪ್, ಅಗ್ನಿ, ವಾಯು ಮತ್ತು ಆಕಾಶ ತತ್ತ್ವಗಳು ಒಪ್ಪಗೂಡಿ ಉದ್ಭವಿಸುತ್ತ, ಸ್ಥೂಲ ಪಂಚ ತತ್ತ್ವಗಳು 'ಭೂತ' ವೆನಿಸಿದವು. ಇವುಗಳು ಸೇರಿ ಭೌತಿಕ ಲೋಕ ಉಂಟಾಯಿತು.

ಕಂ. ತತ್ತಿಯೊಳಗೆ ಆಕಾರವು ;
ಮತ್ತದನು, ನೋಡೆ ನೋಡಲು, ಒಪ್ಪ ವಿನೋದಂ.
ಸತ್ತೆಯ ಸಕಲವನರಿತೊಡೆ,
ಉತ್ಕಟವೆಂತೋ ನೋಡಲು, ಮೇಲ್ಮೈಯು, ವೇಮಾ.

ಬ್ರಹ್ಮ ಅಂಡದೊಳಗೆ ಅಂದರೆ ತತ್ತಿಯೊಳಗೆ ಚಿತ್ತ ತತ್ತ್ವವು ತಮೋಗುಣದ ಉತ್ಕಟ

ಅನ್ವಯದಿಂದ, ಸ್ಥೂಲ ಇಂದ್ರಿಯಕ್ಕೆ ಹೊಳೆಯುವ (ಕಾಶತೇ ಇತಿ ಆಕಾಶಃ) ಆಕಾಶ ತತ್ವವು ಮೊದಲಾಯಿತು. ಇದರ ಅಣುಗಳ ಮಧ್ಯೆ ಪರಸ್ಪರ ಆಕರ್ಷಣೆಯು ಕನಿಷ್ಠವಿದ್ದು, ಅಂತರವು ಗರಿಷ್ಠವಿರುತ್ತದೆ. ಈ ಆಕಾಶ ತತ್ವದಿಂದ ಊರ್ಧ್ವಕ್ಕೆ ನೋಡಲು ಮನಸ್ಸೂ ತರಲವಾಗಿರಬೇಕು. ಆಗ ಅಲ್ಲಿ ಆನಂದ ವಿನೋದಗಳುಂಟು. ಈ ಸತ್ತೆಯ ಸಕಲವನ್ನೂ ಅರಿತರೆ ಆಗ ಎಷ್ಟೋ ಉತ್ಕಟವಾದ ಮೇಲ್ಮೈಯು ನೋಡಲು ಸಿಗುತ್ತದೆ.

ಕಂ. ಆಕಾಶದಲ್ಲಿ ವಾಯುವು
ಸೋಂಕಿ ಮರದೊಳಗ್ನಿಯಂತೆ, ಮಾನಸದಲಿ ತಾ
ನೇಕಾಕಾರನು, ಜಗದಲಿ
ತಾ ಕಾಣುವನಂತೆ ಬೆಳಗಿ ತಾನೇ ವೇಮಾ.

ಆಕಾಶ ತತ್ವವು ಇನ್ನಷ್ಟು ತಮೋ ಗುಣಾನ್ವಿತವಾಗಿ ವಾಯು ತತ್ವವು ಹುಟ್ಟುತ್ತದೆ. ಮರದಲ್ಲಿ ಅಗ್ನಿಯು ಸೋಂಕಿ ಇರುವಂತೆ ಮಾನಸದಲ್ಲಿ ವಾಯು ತತ್ವವು ಪ್ರಾಣಾಃ ಆಗಿ ಸೇರಿ ಏಕಾಕಾರವಾಗಿ, ಜಗದಲ್ಲಿ ತಾನೇ ಬೆಳಗಿ ಕಾಣುತಿಹುದು.

ಕಂ. ವಾಯುವು ಬಯಲೊಳು ಹುಟ್ಟಿರೆ,
ವಾಯುವೆ ಬಯಲಲ್ಲಿ ಅಡಗಿ ಬರುತಲಿ ಇರಲಾ
ವಾಯುವನೆ ಹಿಡಿದು ಕುಂಭಕ
ವಾಯುವಿನೊಳಗೆ ಕಲೆಯುವವ, ವಶ್ಯನು ವೇಮಾ.

ವಾಯುವು ಬಯಲಲ್ಲಿ ಅಂದರೆ ಆಕಾಶದಲ್ಲಿ ಹುಟ್ಟಿದೆ. 'ಆಕಾಶಾತ್ ವಾಯುಃ' ವಾಯುವೇ ಬಯಲಲ್ಲಿ ಅಡಗಿ ಪ್ರಾಣರೂಪದಲ್ಲಿ ಬರುತ್ತಿರಲು, ಪೂರಕದಲ್ಲಿ ಹೀರಿದ ವಾಯುವನ್ನು ಕುಂಭಕ ವಾಯುವಿನಲ್ಲಿ ಒಂದಾಗಿಸಿದರೆ ಅವನಿಗೆ ಎಲ್ಲವೂ ವಶ್ಯವಾಗುತ್ತವೆ.

ಕಂ. ವಾಯುವಿನಲಿ ಹುಟ್ಟಿ , ವಾಯುವಿನಲಿ ಬೆಳೆದು,
ವಾಯುವಿನಲೆ ಮೇಲು ಸರಣಿ ತಿಳಿಯೆ,
ವಾಯುವಿನಲಿ ಪ್ರಾಣವಾಯುವೇ ತತ್ವವು.
ವಿಶ್ವದಾಭಿರಾಮ ಕೇಳು ವೇಮ.

ಸೃಷ್ಟಿ ಕ್ರಮದ ಪ್ರತಿ ಸಂಚರ ಧಾರೆಯಲ್ಲಿ , ಅನುಕೂಲಕರ ಪರಿಸರದಲ್ಲಿ, ಅಣುವು ಸ್ಫೋಟಿಸಿ, ಪ್ರಾಣಾಃ ಹುಟ್ಟುತ್ತವೆ. ಈ ಪ್ರಾಣಾಃ ಎಂದರೆ ಪಂಚ ಪ್ರಾಣಗಳೇ. ಜೀವಿಯು ಉಸಿರಾಡುವ ಸತ್ತೆ. ಈ ಉಸಿರಾಟವೇ ವಾಯುವಿನ ಮೂಲಕ. ಹಾಗಾಗಿ ಯಾವುದು ವಾಯುವಿನಲ್ಲಿ ಹುಟ್ಟಿ, ವಾಯುವಿನಲ್ಲಿ ಬೆಳೆದು, ಪ್ರಾಣ, ಅಪಾನ, ಸಮಾನ, ಉದಾನ ಮತ್ತು ವ್ಯಾನಗಳೆಂಬ ಪಂಚ ವಿಭಾಗ ಹೊಂದಿ ಅವುಗಳಲ್ಲಿ ಮೇಲು ಸರಣಿ ಹೊಂದಿದ ಪ್ರಾಣ ವಾಯುವೇ ತತ್ವವೆನಿಸುತ್ತದೆ.

ಕಂ. ವಾಯುವೆನುವಾ ಅಪಾನವು
ಮಾಯದೆ ಆ ದಾರಿಯಲ್ಲಿ ಮಲವರ್ಜನ ತಾ-
ಗೆಯ್ಯದೆ ಇರುತಿರಲೆಂದಿಗು
ನ್ಯಾಯವು, ದೇಹದಿ ವೀಕ್ಷಿಸೆ, ನಿಪುಣತೆ ವೇಮಾ

ಅಪಾನವೂ ಒಂದು ವಾಯುವೇ. ಅದು ಇಲ್ಲವಾಗದೆ, ಆ ದಾರಿಯಲ್ಲಿ ತನ್ನ ಸಾಮಾನ್ಯ ಕಾರ್ಯವಾದ ಮಲ ವಿಸರ್ಜನೆಯನ್ನು ಮಾಡದೆ, ಎಂದಿಗೂ ಇರುತ್ತಿರಲು, ಅದು ನ್ಯಾಯವು. ಅದೊಂದು ಪರಮ ಸಿದ್ಧಿ. ಇದನ್ನು ಸ್ನೇಹಪರ ದೃಷ್ಟಿಯಿಂದ ವೀಕ್ಷಿಸಿದರೆ, ಅದೇ ನಿಪುಣತೆ ಎನಿಸುವುದು.

ಗುಲಬುರ್ಗಾ ಜಿಲ್ಲೆಯ ಯಾನಗುಂದಿ ಬೆಟ್ಟದ ಮೇಲೆ ಧ್ಯಾನ ತಪಸ್ಸು ಗೆಯ್ಯುವ ಮಾಣಿಕ್ಯಮ್ಮನವರು ಕಳೆದ ಐದು ದಶಕಗಳಿಂದ ಅನ್ನ ನೀರು ಸೇವಿಸದೆ, ಮಲಮೂತ್ರ ವಿಸರ್ಜಿಸದೆ ಬಾಳುತ್ತಿದ್ದಾರೆ. ಉಕ್ತ ಪದ್ಯದಲ್ಲಿ ಸೂಚಿಸಿದ ಸಿದ್ಧಿಗೆ ಅವರೊಂದು ನಿದರ್ಶನವಾಗಿದ್ದಾರೆ.

ಕಂ. ಮನಸು ಅನಿಲಗಳಿರಡರಲಿ,
ಘನವನು ಇನಿತಾದರರಿಯಲು ಬೇಕು, ನೋಡಾ.
ಎನಿತೊ ನಯನ ಮುಚ್ಚಿ ತೆರೆಯೆ,
ಘನವದ ವಿವರಿಸುವ ಮನಸು, ಕಾಣರು ವೇಮಾ.

ಮನಸ್ಸು ಮತ್ತು ಪ್ರಾಣವಾಯುಗಳೆರಡರ ಸ್ಪಂದನಗಳಲ್ಲಿ ಸಾಮರಸ್ಯವಿರುವುದನ್ನೂ, ಒಂದರ ಚಲನೆ ನಿಂತಾಗ ಇನ್ನೊಂದು ಸ್ತಂಭಿಸುವುದನ್ನೂ, ಸ್ವಲ್ಪಾದರೂ ಅರಿಯಬೇಕು. ಇದು ಘನವಾದ ತತ್ತ್ವವಾಗಿದೆ. ಒಂದು ವಿಧದಲ್ಲಿ ಕಣ್ಣು ಮುಚ್ಚಿ ಧ್ಯಾನಿಸಿ ತೆರೆಯಲು, ಘನವಾದ ದಿವ್ಯವಾದ ಅನುಭೂತಿಯನ್ನು ವಿವರಿಸುವ ಮನಸ್ಸು ಅಲ್ಲಿರುವುದನ್ನು ಕಾಣರು.

ಕಂ. ಅನಿಲದೊಳಗೆ ಜನಿಸುತಿಪ್ಪ
ಅನಲದಲಿ ಸಲಲವಾಯಿತು, ಆಗಸದೊಳಗಂ
ಜನಿಸುತಲಿಪ್ಪವು ಕಾಣಾ
ಜನಕನೆ ಇರದಂತಾಗಿಹ, ಚರಿತೆಯ, ವೇಮಾ.

ವಾಯುವಿನಲ್ಲಿ ಜನಿಸುವ ಅಗ್ನಿಯಲ್ಲಿ, ಅಪ್ ತತ್ತ್ವವು ಜನಿಸಿತು. ಇವೆಲ್ಲವೂ ಆಕಾಶ ತತ್ತ್ವದಲ್ಲಿ ಜನಿಸುತ್ತಿರುವವು. ಇವು ಪ್ರಕೃತಿಯ ಕ್ರಿಯೆಗಳಂತೆ ತೋರಿಬರುತ್ತವೆ. ಇವುಗಳ ಉಪಾದಾನ ಕಾರಣನೂ ಮತ್ತು ನಿಮಿತ್ತ ಕಾರಣನೂ ಆದ ಪುರುಷ ತತ್ತ್ವವು ಪ್ರಕೃತಿಯ ಮಾಯೆಯಿಂದ, ಇರದಂತೆ ತೋರುತ್ತದೆ. ಇದುವೇ ಸೃಷ್ಟಿಕ್ರಮ ಚರಿತ್ರೆಯು.

ಕಂ. ಇರುವವು ಗಾಳಿ ನಭಂಗಳು,
ಇರುವುದು ಭೂಮಿಯಲಿ ನೀರು ಇರುತಿಹ ಪರಿಯೋಳ್,
ದರಿ ದಡಗಳು, ಬೇರೊಂದಾ-
ಗಿರುವುದು ಕೊಳ್ಳವು, ತೇಜವಿಹುದೆಲ್ಲೆಡೆ ವೇಮಾ.

ಪಂಚಭೂತಗಳು ನಿಸರ್ಗದಲ್ಲಿ ಇವೆ. ಆಕಾಶವಿದೆ. ಗಾಳಿಯಿದೆ. ಭೂಮಿಯಲ್ಲಿ ನೀರೂ ಇದೆ. ನೀರು ಇರುವಂತೆಯೇ ಅದು ಪ್ರವಹಿಸಲು ಕಣಿವೆಗಳಿವೆ, ಪ್ರವಾಹದ ಇಬ್ಬದಿಗೆ ದಡಗಳಿವೆ. ಇದಲ್ಲದೆ ಕೊಳ್ಳ ಕೊರಕಲುಗಳಿವೆ. ಇನ್ನು ಅಗ್ನಿಯಂತೂ ಎಲ್ಲೆಡೆಗೆ ನಾನಾ ರೂಪದಲ್ಲಿ ಹರಡಿದೆ.

ಆ. ಅನಲ ಕೊಂಚವಿರಲಿ ಕನಲಿ ಉರಿಸುತಿಹುದು.
ಮ್ಲಾನತೆ ಇರದರಿವು ಮನಕೆ ಬಿಡದು.
ತನುವು ಮರೆಯುವವನೆ ತತ್ತ್ವಜ್ಞನಹ ಕಾಣು.
ವಿಶ್ವದಾಭಿರಾಮ ಕೇಳು ವೇಮ.

ಬೆಂಕಿಯು ಸ್ವಲ್ಪವಿದ್ದರೂ ಸಾಕು, ಅದು ಸಿಡಿದೆದ್ದು ಎಲ್ಲವನ್ನೂ ಉರಿಸಿಬಿಡುವುದು. ಅದು ಅಗ್ನಿಯ ಗುಣ. ಅದರಂತೆ ಅರಿವಿನ ಜ್ವಾಲೆಯಿಂದ ಮ್ಲಾನತೆಯೆಲ್ಲ ಉರಿದು ಹೋಗಿ ಪ್ರಸನ್ನವಾದ ಅರಿವು ಮನಕ್ಕೆ ಅಂಟದೆ ಬಿಡದು. ಯಾವನು ತನ್ನ ಅರಿವಿನ ಅಗ್ನಿಯಿಂದ ದೇಹಾತ್ಮ ಭಾವವನ್ನು ಸುಟ್ಟು, ತನುವನ್ನು ಮರೆಯುವನೋ, ಅವನು ತತ್ತ್ವಜ್ಞನಾಗಿದ್ದಾನೆ. ತಿಳಿ.

ಆ. ಮರದ ಒಳಗೆ ಅಗ್ನಿ, ಮರವು ಇರುವುದಲ್ಲ !
ಇರಲು ಅಗ್ನಿ, ಮರವು ಇರುವುದಿಲ್ಲ
ಮರದ ಒಳಗೆ ಅಗ್ನಿ ಮರ್ಯಾದೆ ಸಂಸಾರಿಗೆ.
ವಿಶ್ವದಾಭಿರಾಮ ಕೇಳು ವೇಮ.

ಮರದ ಒಳಗೆ ಅಗ್ನಿ ಇದೆ. ಅದು ಮರಕ್ಕೇನೂ ಧಕ್ಕೆ ಮಾಡದು. ಬೆಂಕಿ ಕಡ್ಡಿಗಳ ಶೋಧವಾಗುವ ಮೊದಲು ಎರಡು ಕಟ್ಟಿಗೆ ತುಂಡುಗಳನ್ನು ಜೋರಾಗಿ ತಿಕ್ಕಿ ಅಗ್ನಿಯನ್ನು ಹೊತ್ತಿಸುತ್ತಿದ್ದರು. ಯಜ್ಞಾಗ್ನಿಯನ್ನು ತಯಾರು ಮಾಡುವಾಗ ಬಳಸುವ ಕಟ್ಟಿಗೆ ತುಂಡುಗಳಲ್ಲಿ ಕೆಳಗಿರುವುದಕ್ಕೆ ಅರಣಿ ಎನ್ನುತ್ತಾರೆ. ಮೇಲೆ ತಿಕ್ಕಲು ಬಳಸುವುದಕ್ಕೆ ಉತ್ತರಾರಣಿ ಎನ್ನುತ್ತಾರೆ. ಹೀಗೆ ಮರದಲ್ಲಿ ಅಗ್ನಿಯಂತೂ ಇದೆ. ಅದು ಯಾರಿಗೂ ಕೆಡುಕಾಗದಂತೆ ತನ್ನ ಮರ್ಯಾದೆಯಲ್ಲಿದೆ. ಅದೇ ಹೊತ್ತಿದ ಅಗ್ನಿಯಲ್ಲಿ ಮರವನ್ನು ಇರಿಸಿದರೆ ಅದು ಸುಟ್ಟು ಹೋಗುತ್ತದೆ. ಈ ರೀತಿ, ಸಂಸಾರಿಯು ಯಾರಿಗೂ ಹಿಂಸೆಯಾಗದಂತೆ, ಮರದೊಳಗಿನ ಬೆಂಕಿಯಂತೆ, ತನ್ನ ಮರ್ಯಾದೆಯನ್ನು ಅಂದರೆ ಹದ್ದುಬಸ್ತನ್ನು ಕಾಯ್ದುಕೊಳ್ಳಬೇಕು.

ಕಂ. ಮರದಲಿ ಬೆಂಕಿಯು ಜನಿಪುದು
ಮರವರಿವುದೇನು ಬೆಂಕಿಯ ? ಮನುಜರೊಳಿಪ್ಪಾ
ಮರದೊಳಿಹ ಅನಲ ಕ್ರಿಯೆ, ಕಾ-
ತರವಡಗಿದ ಯೋಗಿಯನ್ನೆ ಕಾಣರು ವೇಮಾ.

ಮರದಲ್ಲಿ ಬೆಂಕಿಯು ಹುಟ್ಟುತ್ತದೆ. ಆದರೆ ತನ್ನಲ್ಲಿ, ತನ್ನನ್ನೇ ಸುಟ್ಟು ಭಸ್ಮ ಮಾಡುವ, ಬೆಂಕಿ ಇರುವುದನ್ನು ಮರವು ಅರಿಯುವುದೇನು ? ಮಾನವರಲ್ಲಿಯೂ ಅವನ ದೇಹಾತ್ಮ ಬುದ್ಧಿಯನ್ನೇ ಸುಟ್ಟುಬಿಡುವ ಅರಿವಿನ ಅಗ್ನಿಯು, ಮರದೊಳಗಿನ ಅನಲ ಕ್ರಿಯೆಯಂತೆ, ಗುಪ್ತವಾಗಿದೆ. ಕಾತರವಡಗಿದ ಯೋಗಿಯು ಅರಿವಿನ ಅಗ್ನಿಯನ್ನು ಗುಪ್ತವಾಗಿರಿಸಿಕೊಂಡಿದ್ದಾನೆ. ಅವನನ್ನು ಕೆಣಕಿದರೆ ಏನಾದರೂ ಅಪಾಯ ಸಂಭವಿಸೀತು ಎಂಬುದನ್ನು ಜನರು ಕಾಣರು.

ಕಂ. ಉದಕದೊಳಗೆ ತತ್ತ್ವವನ್ನು
ಮುದದಿ ಹುಡುಕಿ ತಾನಾಗುತ, ತಿಳಿವನು ಮನದೋಳ್.
ಉದಕ ತರಹ ತಾ ತತ್ತ್ವವು,
ಅದನರಿಯುವವನು ತತ್ತ್ವಮಯನಪ್ಪ ವೇಮಾ.

ಉದಕವು ಸರ್ವ ಜೀವಾಧಾರಕವಾಗಿದೆ. ಉದಕವು ಬಾಷ್ಪೀಭವನ ಕ್ರಿಯೆಯಿಂದ ಸೂಕ್ಷ್ಮವಾಗಿ ಮೇಲೇರಿ, ಮೇಘವಾಗಿ ಶುದ್ಧವಾದ ಉದಕವು ಮಳೆಯಾಗಿ ಬೀಳುತ್ತದೆ. ಮೇಲಾಗಿ ಉದಕವು ತಾನೇ ಹೊಲಸಿಗೆ ಕಾರಣವೂ ಆಗುತ್ತದೆ. ಆ ಹೊಲಸನ್ನು ತೊಳೆದು ಸ್ವಚ್ಛ ಮಾಡಲೂ ಕಾರಣವಾಗುತ್ತದೆ. ಮಾನವನು ಮನೋಶುದ್ಧಿಯಿಂದ ಮೇಲೇರಿ, ಪುಣ್ಯ ಜೀವಿಯಾಗಿ ಮರು ಹುಟ್ಟು ಪಡೆಯುವಂತೆ ಉಗಿಯಾಗಿ ಮಳೆಯಾಗುವುದು. ಇನ್ನು ವಿಷಯ ಸಂಗೀ ಮನವು ಬಂಧನಕ್ಕೆ ಕಾರಣವಾದರೆ ನಿರ್ವಿಷಯೀ ಮನವು ಮೋಕ್ಷಕ್ಕೆ ಕಾರಣವಾಗುತ್ತದೆ.

ಹೀಗೆ ಉದಕದೊಳಗೆ ಅಡಗಿದ. ತತ್ತ್ವವನ್ನು ಮುದದಿಂದ ಹುಡುಕಿ ಮನದಲ್ಲಿ ತಿಳಿಯುವನು. ಉದಕವು ತತ್ತ್ವವು. ಅದನ್ನು ತಾನು ಸರಿಯಾಗಿ ಅರಿತರೆ ತಾನು ತತ್ತ್ವಮಯನಾಗಿ ಬೆಳಗುತ್ತಾನೆ.

ನೀರು ಹಾಕೆ ಮೊದಲು, ನೀರೆ ಮೊಳಕೆಯಾಯ್ತು.
ಮೊಳಕೆ ವಿಶ್ವವಾಯ್ತು, ಮತ್ತೆ ಬೆಳೆದು.
ನೀರು ವಿಶ್ವವಾದುದ ನೆರೆಗಂಡು ತಿಳಿದುಕೊ.
ವಿಶ್ವದಾಭಿರಾಮ ಕೇಳು ವೇಮ.

ಹಸಿಯಿಲ್ಲದ ಭೂಮಿಯಲ್ಲಿ ಬೀಜ ಊರಿದರೆ ಬೀಜವು ಬೀಜವಾಗಿಯೇ ಉಳಿಯುತ್ತದೆ. ಮೊದಲು ನೀರು ಹಾಕಿ ಹಸಿಮಾಡಿದರೆ ಬೀಜವು ಮೊಳಕೆಯೊಡೆಯುತ್ತದೆ. ಅಂದರೆ ನೀರೇ ಮೊಳಕೆಯಾಗುತ್ತದೆ. ಮೊಳಕೆಯಾದ ಮೇಲೆ ಬೆಳೆದು ದೊಡ್ಡದಾಗಿ ತೆನೆ ಇಲ್ಲವೆ ಫಲವೀಯುತ್ತದೆ. ಆ ಧಾನ್ಯ ಇಲ್ಲವೆ ಫಲವನ್ನು ಸೇವಿಸಿ, ಜೀವಿಗಳು ಬದುಕುತ್ತಾರೆ. ವಿಶ್ವವೆಲ್ಲ ವಿವಿಧ ಸಚರಾಚರ ಜೀವಿಗಳಿಂದ ತುಂಬುತ್ತದೆ. ಮಥಿತಾರ್ಥವೆಂದರೆ ಮೊಳಕೆಯೇ ಮತ್ತೆ ಬೆಳೆದು ವಿಶ್ವವಾಗುತ್ತದೆ. ಹೀಗೆ ನೀರು ವಿಶ್ವವಾದುದನ್ನು ಚೆನ್ನಾಗಿ ಕಂಡು ತಿಳಿದುಕೋ.

ಆ. ಪೃಥಿವಿ ಗುದಕ ಸುರಿಯೆ, ಪೃಥಿವಿ ಮೇಲೆ ಮೊಳಕೆ,
ಮೊಳಕೆ ಪೃಥಿವಿಗಿಳಿಯೆ ತಂದೆ ಮಗನು.
ಧರಣಿ ಜನರಿಗೆಲ್ಲ ತಾಯಿಯೇ ಹೆಂಡತಿಯು.
ವಿಶ್ವದಾಭಿರಾಮ ಕೇಳು ವೇಮ.

ಪೃಥ್ವಿಯ ಮೇಲೆ ಮಳೆಯ ನೀರು ಸುರಿಯಲು ಭೂಗರ್ಭದಲ್ಲಿ ಊರಿದ ಬೀಜಗಳು ಮೊಳಕೆಯೊಡೆದು ಪೃಥ್ವಿಯ ಮೇಲೆ ಬರುತ್ತವೆ. ಇದು ಮಗನನ್ನು ಪ್ರಸವಿಸಿದ ತಾಯಿಯ ಕ್ರಿಯೆ. ಬಳಿಕ ಮೊಳಕೆಯು ತಾಯಿಯ ಪೋಷಣೆಯಿಂದ ಬೆಳೆದು ಪೈರಾಗಿ ಇಲ್ಲವೆ ವೃಕ್ಷವಾಗಿ ಫಲ ನೀಡುತ್ತದೆ. ಬೀಜವನ್ನೂ ಕೊಡುತ್ತದೆ. ಈ ಬೀಜವು ಮೊಳಕೆಯ ಇನ್ನೊಂದು ಅವಸ್ಥೆಯೇ. ಈಗ ಅದು ಮಗುವಲ್ಲ ; ಬೆಳೆದ ತಂದೆ. ಈ ಬೀಜ ಅಂದರೆ ಪೂರ್ವಾವಸ್ಥೆಯ ಮೊಳಕೆಯು ಪೃಥ್ವಿಯ ಗರ್ಭ ಸೇರಿದಾಗ ಅಲ್ಲಿ ಸಂಭೋಗ ಕ್ರಿಯೆಯಂಥ ಕ್ರಿಯೆ ನಡೆದು, ಬೀಜವು ಮತ್ತೆ ಮೊಳಕೆಯಾಗುತ್ತದೆ. ಹೀಗೆ ತಂದೆಯೇ ಮಗನಾಗುತ್ತಾನೆ. ಆದ್ದರಿಂದ ಧರಣಿಯ ಜನರಿಗೆ ತಾಯಿಯೇ ಹೆಂಡತಿ ಎನಿಸುತ್ತಾಳೆ.

ಕಂ. ಜೀವಾಧಾರವು ನೀರೇ,
ಜೀವಾಧಾರವು ಗಾಳಿಯು, ಹೊಳೆಯುತಲಿರಲಾ

ಜೀವಿಗೆ ಬೇಕೊಂದು ತೆರ.
ಈ ವಸ್ತು ಕೋರಲು, ಲಭ್ಯವಿಳೆಯಲಿ, ವೇಮಾ.

ಜೀವಿಗಳಿಗೆ ಬದುಕಲು ನೀರೇ ಆಧಾರವಾಗಿದೆ. ಅದೇ ರೀತಿ ಜೀವಿಸುವುದಕ್ಕೆ ಅಂದರೆ ಉಸಿರಾಡುವುದಕ್ಕೆ ಗಾಳಿಯೇ ಆಧಾರವಾಗಿದೆ. ಈ ಭೂಮಿಯು ಹೊಳೆಯುತ್ತಿರಲು, ಜೀವಿಗೆ ಇವು ಒಂದು ರೀತಿಯಿಂದ ಬೇಕೇ ಬೇಕು. ಈ ಜೀವಾಧಾರದ ವಸ್ತುಗಳನ್ನು ಕೋರಲು ಅವುಗಳಿರಡೂ ಇಳೆಯಲ್ಲಿ ಲಭ್ಯವಿವೆ.

ಆ. ನೀರು ಕ್ಷಾರವಾಯ್ತು ; ಕ್ಷಾರವು ನೀರಾಯ್ತು.
ಕ್ಷಾರವಾದ ನೀರು ಕ್ಷಾರವಾಯ್ತು.
ಕ್ಷಾರದಲ್ಲಿ ನೀರು ಕಡು ರಮ್ಯವಿಪ್ಪುದು.
ವಿಶ್ವದಾಭಿರಾಮ ಕೇಳು ವೇಮ.

ಕ್ಷಾರ ಎಂದರೆ ಉಪ್ಪು. ಸಮುದ್ರದಲ್ಲಿ ನೀರು ಉಪ್ಪುಪ್ಪಾಗಿರುತ್ತದೆ. ಉಪ್ಪು ಕರಗಿ ನೀರಿನಲ್ಲಿ ಸೇರಿ ನೀರಾಗುತ್ತದೆ. ಉಪ್ಪು-ನೀರನ್ನು ಮಡಿಗಳಲ್ಲಿ ತಡೆದು ನಿಲ್ಲಿಸಿ ಬಾಷ್ಪೀಕರಿಸಿದ ಮೇಲೆ ಉಪ್ಪು ಸಿಗುತ್ತದೆ. ಇನ್ನು ಉಪ್ಪಿನಲ್ಲಿ ನೀರು ಇರುವುದು ಬಹಳ ರಮಣೀಯವಾಗಿರುತ್ತದೆ. ಇದನ್ನು ಪಾರಮಾರ್ಥಿಕ ಪ್ರತಿಮೆಯಾಗಿ ಹೀಗೆ ವಿವರಿಸಬಹುದು.

ನೀರು ಎಂದರೆ ಆತ್ಮ ಎಂದು ತಿಳಿಯಿರಿ. ಕ್ಷಾರವೆಂದರೆ ಜೀವ ಇಲ್ಲವೆ ಜೀವಾತ್ಮ ಎಂದು ತಿಳಿಯಿರಿ. ಆತ್ಮವು ಪ್ರಕೃತಿಯಿಂದ ಗುಣಾನ್ವಿತವಾಗಿ ಜೀವವಾಯಿತು. ಪ್ರಕೃತಿಯ ಬಂಧನ ಕಳಚಿದ ಜೀವವು ಆತ್ಮವಾಗುತ್ತದೆ. ಪ್ರಕೃತಿಯಿಂದ ಗುಣಾನ್ವಿತವಾದ ಜೀವಾತ್ಮನು ಅಧಿಕ ಗುಣಾನ್ವಿತವಾಗುತ್ತ ಜೀವ ಸಂತತಿಯೇ ಆಗುತ್ತದೆ. ಜೀವನದಲ್ಲಿ ಆತ್ಮನನ್ನು ಕಾಣುವುದು ಕಡು ರಮ್ಯವಲ್ಲವೆ ?

ಪಂಚ ಮಹಾಭೂತಗಳಲ್ಲಿ ಪೃಥಿವಿಯೇ ಕೊನೆಯದು. 'ಪೃಥಕ್ತ್ವಾತ್ ಪೃಥಿವೀ ಉಚ್ಯತೇ'. ಸಂಚರ ಧಾರೆಯಲ್ಲಿ ಪೃಥಿವಿಯು ಅಂತಿಮ ತತ್ವ. ಇದರ ಅಣು ಅಣುಗಳ ಮಧ್ಯೆ ಆಕರ್ಷಣೆಯೇ ಇಲ್ಲವೆಂದರೂ ಸರಿ. ಅವುಗಳ ಅಂತರ ಬೇಕಾದಷ್ಟು ಆಗಿರಬಲ್ಲದು. ಆದ್ದರಿಂದ ಅದನ್ನು ಒಡೆದು ಪುಡಿಯಾಗಿಸಬಹುದು.

ಕಂ. ಮೃತ್ತಿಕೆಯೇ ತನುವೆನುವುದು ;
ಮೃತ್ತಿಕೆ ದಳವೆತ್ತಿ ನಿಲುವ ಮುನ್ನಿನ ತರುಗಳ್.
ಮೃತ್ತಿಕೆ ಮೂಲವು ಮೂರಕೆ
ಮತ್ತೆ ತೆರನರಿಯರು, ಧರೆ ಮಹಿಮರು, ವೇಮಾ.

ಮೃತ್ತಿಕೆ ಎಂದರೆ ಮಣ್ಣು. ಈ ದೇಹವೆಂದರೂ ಸ್ಥೂಲ ವಸ್ತುವಿನ ನಾತೆಯಿಂದ ಮಣ್ಣೇ ಆಗಿದೆ. ಈ ಮಣ್ಣೇ ದಳವೆತ್ತಿ ಪಲ್ಲವಿಸುವ ಮರವು ಆಗಿದೆ. ಏಕೆಂದರೆ ಸಸಿಯು ಬೆಳೆದು ಮರವಾಗಲು ಬೇಕಾದ ಪೋಷಕಾಂಶಗಳನ್ನು ಮಣ್ಣಿನಿಂದಲೇ ಹೀರುತ್ತದೆ. ಬೀಜ, ಸಸಿ,

ಮರ ಮೂರಕ್ಕೂ ಮಣ್ಣೇ ಮೂಲವಾಗಿದೆ. ಧರೆಯ ಮಹಾತ್ಮರು ಮಣ್ಣನ್ನು ಈ ತರ ವೃದ್ಧಿಗೆ ಮೂಲವೆಂದು ತಿಳಿಯರು.

ಕಂ. ಭೂದೇವಿಯೆನಲು ಮೃತ್ತಿಕೆ,
ಭೂದೇವತೆಗಳು ಕ್ರಮದಿಂ ಹುಟ್ಟಿದವೆನಿತೊ ?
ಆ ದೇವತೆಗಳಿಗೆ ಗೊತ್ತು.
ಆದಿಯನಾವನರ ನರಿಯನೆನುವರು ವೇಮಾ.

ಭೂದೇವಿಯೆಂದರೆ ಮಣ್ಣೇ. ಭೂಮಿಯ ಮೇಲಿನ ವಿವಿಧ ಹೆಸರುಗಳ ದೇವತೆಗಳು ಹೇಗೆ ಹುಟ್ಟಿದವೋ ಏನೋ ? ಆ ದೇವತೆಗಳಿಗೇ ಗೊತ್ತು. ಆದರೆ ಒಂದು ಮಾತು ಮಾತ್ರ ನಿಜ. ಈ ದೇವತೆಗಳನ್ನು ಕಲ್ಪಿಸಿದ ಯಾವನೂ ಆದಿಯನ್ನು ಅರಿಯನು ಎನ್ನುತ್ತಾರೆ. ಬಹು ಸಂಖ್ಯೆ ದೇವತೆಗಳನ್ನು ಕಲ್ಪಿಸಿ ದಂತಕತೆಗಳನ್ನು ಹೆಣೆದ ಪುರಾಣಕರ್ತರಿಗೆ ಸೃಷ್ಟಿಯ ಆದಿಯು ತಿಳಿದಿಲ್ಲ.

ಆ. ಮಣ್ಣಿನೊಳಗೆ ಹುಟ್ಟಿ, ಮಣ್ಣಿನೊಳಗೆ ಬೆಳೆದು,
ಮಣ್ಣು ಕಂಡು ನರರು ಮಗ್ನರಹರು.
ಮಣ್ಣು ಮಣ್ಣು ಸೇರೆ, ಮನವ ನಿಲಿಸನೇಕೆ ?
ವಿಶ್ವದಾಭಿರಾಮ ಕೇಳು ವೇಮ.

ಮಾನವನು ಮಣ್ಣಿನೊಳಗೆ ಅಂದರೆ ಅನ್ನಮಯ ಶರೀರದಿಂದ ಹುಟ್ಟಿ, ಅನ್ನಮಯ ಶರೀರದಲ್ಲಿಯೇ ಬೆಳೆಯುತ್ತಾನೆ. ಈ ಅನ್ನಮಯ ಶರೀರವನ್ನು ಕಂಡು ಅದರ ಚಿಂತೆಯಲ್ಲಿಯೇ ನರರು ಮುಳುಗಿ ಹೋಗುತ್ತಾರೆ. ಕೊನೆಗೊಮ್ಮೆ ಸ್ಥೂಲ ದೇಹವು ಮಣ್ಣು ಸೇರುವುದಾದರೆ, ಸೂಕ್ಷ್ಮ ಮನವು ಸಂಕಲ್ಪ ವಿಕಲ್ಪಗಳಳಿದು, ಸೂಕ್ಷ್ಮದಲ್ಲಿ ಸೇರದೇಕೆ ?

ಆ. ಮಣ್ಣು ತಿನುವುದೆನಲು ಮುಸುಗುಡುವ ಜನರೇ !
ಮಣ್ಣೊಳಗಿನ ಮೇಲ್ಮೈ ಮರೆವುದೇಕೆ ?
ನೀರಿನೊಳಗಿನ ಮೇಲ್ಮೈ ನಿಖಿಲವಾಗಿ ಉಂಟು.
ವಿಶ್ವದಾಭಿರಾಮ ಕೇಳು ವೇಮ.

ಮಣ್ಣು ಸಾಮಾನ್ಯವಾಗಿ ಖಾದ್ಯ ವಸ್ತುವಲ್ಲ. ಬಾಣಂತಿಯರು ಬಯಕೆಯಿಂದ ಹಾಳು ಮಣ್ಣನ್ನು ಸೇವಿಸುತ್ತಿರಬಹುದು. ಆದರೆ ತತ್ತ್ವದ ದೃಷ್ಟಿಯಿಂದ ಅನೇಕ ನಿರ್ಜೀವ ಘನ ಪದಾರ್ಥಗಳು ನಮ್ಮ ದೇಹ ವ್ಯಾಧಿಗಳಿಗೆ ಮದ್ದುಗಳಾಗಿವೆ. ಲೋಹ ಚೂರ್ಣಗಳು ಆಯುರ್ವೇದದಲ್ಲಿ ಪರಿಣಾಮಕಾರಿ ಮದ್ದು ಎನಿಸಿವೆ. ಇನ್ನು ನಿಸರ್ಗ ಚಿಕಿತ್ಸೆಯಲ್ಲಂತೂ ಮಣ್ಣಿನ ಮೇಲ್ಮೈಯು ಬಹಳಷ್ಟು ಸಿದ್ಧವಾಗಿದೆ. ಅದೇ ರೀತಿ ಜಲಪಾನ, ಜಲ ಚಿಕಿತ್ಸೆಗಳು ನೀರಿನ ಮೇಲ್ಮೈಯನ್ನು ಸಾರಿ ಹೇಳುತ್ತಿವೆ.

ಆ. ಇಳೆಯು ಗಗನ ಮಧ್ಯೆ, ಇರುವ ಜನರು ಎಷ್ಟೊ ?
ತಿಳಿಸಲಾರೆ ಇರಲಿ, ತರವೆ ಅದನು ?
ಬದುಕುವವರು ಸತ್ತು ಬೀಳುವವರೆ ಕಾಣು.
ವಿಶ್ವದಾಭಿರಾಮ ಕೇಳು ವೇಮ.

ಇಳಿ ಮತ್ತು ಗಗನಗಳ ಮಧ್ಯೆ ಈ ಭೌತಿಕ ಪ್ರಪಂಚದಲ್ಲಿ ಅದೆಷ್ಟೋ ಜನರು ಇದ್ದಾರೆ. ಈ ಪ್ರಾಪಂಚಿಕ ಜನರ ವೈವಿಧ್ಯತೆಯನ್ನು ತಿಳಿಸಲಾರೆನು. ಹಾಗೆ ತಿಳಿಸುವುದು ತರವೂ ಅಲ್ಲ. ಇಲ್ಲಿ ಬದುಕುವವರು, ಭೌತಿಕ ಸ್ತರವನ್ನು ಮೀರಲಾರದೆ ಮರ್ತ್ಯರಾಗುತ್ತಾರೆ, ಸತ್ತು ಬೀಳುತ್ತಾರೆ.

ಆ. ಪಾದ ಗುದಗಳನ್ನು, ಪರಮ ದೇಹ ಹೊತ್ತು
ದೇಹಿ ಜೀವಗಳನು ತಿಳಿಯೆ ಹೊರುವ.
ಧರಣಿಯೊಳಿವೆರಡನು ತಾನೇಕೆ ಹೊರುವನೊ ?
ವಿಶ್ವದಾಭಿರಾಮ ಕೇಳು ವೇಮ.

ದೇಹಿಯು, ಕರ್ಮೇಂದ್ರಿಯಗಳಾದ ಪಾದ, ಪಾಣಿ, ವಾಕ್, ಗುಹ್ಯ, ಗುದಗಳನ್ನೂ, ಪರಮ ದೇಹವನ್ನೂ, ಹೊತ್ತು ತಿಳಿಯೆ ಜೀವವನ್ನೂ ಹೊರುತ್ತಾನೆ. ಈ ಭೂಮಿಯ ಮೇಲೆ ದೇಹಿಯು ಇವೆರಡನ್ನೂ ತಾನೇಕೆ ಹೊರುವನೋ ?

ಕಂ. ಪಂಚ ಮಹಾಭೂತವಾಗಿ,
ಪಂಚ ಶರೀರಗಳಾಗಿ, ಬ್ರಹ್ಮಾಂಡದೊಳಾ
ಪಂಚಾವಸ್ಥೆಗಳ ದಾಟಿ,
ಸಂಚರಿಸದೆ ಪರಿಪೂರ್ತಿಯ, ಹೊಂದುವ, ವೇಮಾ.

ಸಗುಣ ಬ್ರಹ್ಮನು ಸಂಚರ ಧಾರೆಯಲ್ಲಿ ಆಕಾಶ, ವಾಯು, ಅಗ್ನಿ, ಅಪ್, ಮತ್ತು ಪೃಥಿವಿಗಳೆಂಬ ಪಂಚ ಮಹಾಭೂತವಾಗಿ, ಪ್ರತಿ ಸಂಚರ ಧಾರೆಯಲ್ಲಿ ಸ್ಥೂಲ, ಸೂಕ್ಷ್ಮ, ಕಾರಣ, ಮಹಾಕಾರಣ ಮತ್ತು ತುರ್ಯ ಎಂಬ ಪಂಚ ಶರೀರಗಳಾಗಿ, ಬ್ರಹ್ಮಾಂಡದೊಳಗೆ, ಜಾಗ್ರತ್, ಸ್ವಪ್ನ, ಸುಷುಪ್ತಿ, ತುರ್ಯ ತುರ್ಯಾತೀತ ಎಂಬ ಪಂಚ ಅವಸ್ಥೆಗಳನ್ನು ದಾಟಿ, ಕೊನೆಗೆ ಸಂಚರಿಸದೆ ಅಂದರೆ ಅಚಲನಾಗಿ ಪರಿಪೂರ್ತಿಯನ್ನು ಹೊಂದುತ್ತಾನೆ. ಪೂರ್ಣನಾಗಿ ಹೊಳೆಯುತ್ತಾನೆ.

ಆ. ಪಂಚ ಭೂತ ಮತ್ತೆ ಪರಮ ಇಂದ್ರಿಯಗಳು
ಸಂಚರಿಸುತ ಇರಲು ಜಗತ್ ಉಂಟು.
ಸಂಚರಿಸದೆ ಇರಲು, ಜಗವೆಂತಾಗುವುದು ?
ವಿಶ್ವದಾಭಿರಾಮ ಕೇಳು ವೇಮ.

"ಗಚ್ಛತಿ ಇತಿ ಜಗತ್ ಇತಿ ಉಚ್ಯತೇ". ಅಂದರೆ ಚಲನೆ ಇರುವುದರಿಂದ ಜಗತ್ ಎನಿಸುತ್ತದೆ. ಇಲ್ಲಿ ಚಲಿಸುವುದು ಯಾವುದು ? ಪಂಚ ಭೂತಗಳೇನೂ ಚಲಿಸುವುದಿಲ್ಲ. ಆದರೆ ಅವುಗಳ ಸೂಕ್ಷ್ಮ ಅಂದರೆ ಮಾತ್ರಾರೂಪಗಳಾದ ಶಬ್ದ, ಸ್ಪರ್ಶ, ರೂಪ, ರಸ ಮತ್ತು ಗಂಧಗಳು ಚಲಿಸುತ್ತವೆ. ಪರಮ ಇಂದ್ರಿಯಗಳಾದ ಜ್ಞಾನೇಂದ್ರಿಯಗಳು ವೃತ್ತಿ ಮೂಲಕ ಚಲಿಸುತ್ತವೆ. ಇವುಗಳ ಸಂಚಲನದಿಂದ ಇಂದ್ರಿಯ-ವಿಷಯಗಳ ಸಂಸರ್ಗವಾಗಿ, ವಿಷಯ ವೃತ್ತಿಗಳು ಚಿತ್ತಿನ ಪಟಲದ ಮೇಲೆ ಅಪ್ಪಳಿಸುತ್ತವೆ. ಜಗತ್ತಿನ ವೇದನೆಯಾಗುವುದು. ಈ ಸಂಚಲನವಿಲ್ಲದೆ ಇದ್ದರೆ. ಅಥವಾ ಸಂಚಲನವನ್ನು ನಿರೋಧಿಸಿದರೆ ಜಗತ್ತಿನ ವೇದನೆಯಾಗದು.

ಕಂ. ಭೂತಂಗಳ್ಕಿದು ಇರೆ, ನಿ-
ರ್ಣೀತವಹ ಸುರರೊಳಗೆ ಇನ ಚಂದ್ರರು ಎಂ-
ಬಾ ತೆರನಿಹ ಲೋಕಗಳಲಿ,
ಸ್ಯೂತವಹ ಪ್ರಕೃತಿ ಬ್ರಹ್ಮ, ಸೂಚ್ಯವು ವೇಮಾ.

ಪೃಥಿವಿ, ಅಪ್, ಅಗ್ನಿ, ವಾಯು ಆಕಾಶಗಳೆಂಬ ಐದು ಭೂತಗಳು ಸಂಚರ ಧಾರೆಯಲ್ಲಿ ಪ್ರಕ್ಷೇಪಿತವಾಗಿವೆ. ಇವುಗಳಿಂದಾದ ಭೌತಿಕ ಲೋಕಗಳಲ್ಲಿ ಸೂರ್ಯಲೋಕ ಮತ್ತು ಚಂದ್ರ ಲೋಕಗಳೆಂಬ ನಿರ್ಣೀತವಾದ ಸುರಲೋಕಗಳಿವೆ. ಮಾನವನ ಮರಣಾನಂತರ, ಜೀವಾತ್ಮನು ಲಿಂಗ ದೇಹದೊಡನೆ ಚಂದ್ರ ಲೋಕಕ್ಕೆ ಹೋಗಿ, ವಿಧಿ ಅಣತಿಯಂತೆ ಮರು ಜನ್ಮ ಪಡೆಯಬಹುದು. ಇಲ್ಲವೆ ನೇರವಾಗಿ ಸೂರ್ಯಲೋಕದ ಮೂಲಕ, ಇಹದ ಬಂಧನ ಕಳಚಿದ ಆತ್ಮವು, ಬ್ರಹ್ಮ ಲೋಕಕ್ಕೂ ಹೋಗಬಹುದು. ಅಂತೂ ಪ್ರಕೃತಿ ಮತ್ತು ಬ್ರಹ್ಮರು ಈ ಉಭಯ ಲೋಕಗಳಲ್ಲಿ ಹೆಣೆದುಕೊಂಡಿದ್ದಾರೆ.

ಕಂ. ಭೂತಂಗಳಿಂ ಮೇಲೆ ಕಾಣೆ,
ಖ್ಯಾತನಿಹ ಮೂಲ ಶಕ್ತಿಯಿಹುದೊಂದು, ಹೊಂದಲ್,
ಜ್ಯೋತಿಯ ಒಳಹೊರ ತಾನೇ
ಸ್ಯೂತಿಸಿದ ಜಗಗಳೆಲ್ಲ ಸ್ಪಷ್ಟವು ವೇಮಾ.

ಪಂಚ ಭೂತ ತತ್ವಗಳು ಅನುಕ್ರಮವಾಗಿ ಮೂಲಾಧಾರ, ಸ್ವಾಧಿಷ್ಠಾನ, ಮಣಿ ಪೂರಕ ಅನಾಹತ, ಮತ್ತು ವಿಶುದ್ಧ ಚಕ್ರಗಳಿಗೆ ಸಂಬಂಧಿಸಿವೆ. ಈ ಭೂತ ಶಕ್ತಿಗಳನ್ನು ವಶಪಡಿಸಿಕೊಂಡು ಮೇಲೆ ಭ್ರೂಮಧ್ಯದಲ್ಲಿ ನೋಡಲು ಅಲ್ಲಿ ಸುಖ್ಯಾತವಾದ ಮೂಲ ಶಕ್ತಿಯೊಂದು ಹೊಳೆಯುತ್ತದೆ. ಅದನ್ನು ಹೊಂದಲು, ಆ ಜ್ಯೋತಿ ಶಕ್ತಿಯು, ಒಳ ಹೊರಗೆ ತಾನೇ ಹೆಣೆದ ಲೋಕಗಳು ಸುಸ್ಪಷ್ಟವಾಗುತ್ತವೆ.

ಸಾಧನದಲ್ಲಿ ಯಶಸ್ವಿಯಾದರೆ ಊರ್ಧ್ವ ಲೋಕಗಳು ಸಿದ್ಧಿಸುತ್ತವೆ. ಭ್ರಷ್ಟನಾದರೆ ಅಧೋಲೋಕಕ್ಕಿಳಿಸುತ್ತವೆ.

ಕಂ. ಭೂತಂಗಳ್ಕಿದಾಗಿರುತಿರೆ,
ಖ್ಯಾತವು ಓರ್ವನೆ ದೇಹಿ ಇರುತಿಪ್ಪ ಭುವಿಯೋಳ್,
ಆಂತರ್ಯ ತತ್ವವರಿಯದೆ,
ಸೋತೆಂದಿಗು ಬಾವಿ ಬೀಳುತಿಪ್ಪರು, ಸಲೆಯರಿ ವೇಮಾ.

ಭೂತ ತತ್ವಗಳು ಐದು ಇವೆ. ಓರ್ವ ದೇಹಿ ಇಲ್ಲವೆ ಜೀವನು ಓರ್ವನೇ ಭುವಿಯಲ್ಲಿ ಇರುತ್ತಿದ್ದಾನೆಂಬುದು ಸರ್ವ ವಿದಿತವಿದೆ. ಇವನು ತನ್ನೊಳಗಿನ ಊರ್ಧ್ವ ತತ್ವಗಳನ್ನು ಅರಿಯುತ್ತ ಮೇಲೇರಬೇಕು. ಆದರೆ ಹೀಗೆ ಮಾಡುವುದಕ್ಕೆ ತಪ್ಪಿ, ಆಂತರ್ಯದ ತತ್ವಗಳನ್ನು ಅರಿಯದಿದ್ದರೆ ಸಾಧನದ ಹೋರಾಟದಲ್ಲಿ ಸೋತು, ಅಧೋಲೋಕಕ್ಕೆ ಇಳಿಯುತ್ತಾನೆ. ಅಂದರೆ ಬಾವಿ ಬೀಳುತ್ತಾನೆ.

ಆ. ಪಂಚಭೂತಗಳನು ಪರಿಗಣಿಸಿ ಮನದಲಿ,
ಮಿಂಚಿ ಹೊಂದಬೇಕು ಮೃತ್ಯುಂಜಯನ.

ಅಲ್ಲಿ ತಿಳಿಯುವವನೆ ಅಖಿಲಜ್ಞನಹ ಯೋಗಿ.
ವಿಶ್ವದಾಭಿರಾಮ ಕೇಳು ವೇಮ.

ಪೃಥ್ವಿ, ಅಪ್, ಅಗ್ನಿ, ವಾಯು ಮತ್ತು ಆಕಾಶ ತತ್ತ್ವಗಳನ್ನೂ, ಅವುಗಳ ಶಕ್ತಿಯನ್ನೂ, ಮನದಲ್ಲಿ ಪರಿಗಣಿಸಿ, ಆಯಾ ತತ್ತ್ವಗಳ ಮೇಲೆ ಧ್ಯಾನಿಸಿ, ಅವುಗಳನ್ನು ದಾಟಿ ಮಿಂಚಬೇಕು. ಆಗ ಮೃತ್ಯುವನ್ನು ಜಯಿಸುವ ಮೃತ್ಯುಂಜಯನನ್ನು ಹೊಂದಬಹುದು. ಈ ಮಿಂಚಿದ ಅವಸ್ಥೆಯಲ್ಲಿ ತಿಳಿಯಬಲ್ಲವನು ಅಖಿಲಜ್ಞನಾಗುತ್ತಾನೆ. ಎಲ್ಲವನ್ನೂ ತಿಳಿಯುತ್ತಾನೆ.

ಆ. ಸಕಲ ವಸ್ತುಗಳಲಿ, ಸಂತಸ ತನುಗಳಲ್ಲಿ,
ಉಸಿರಿಗೆಲ್ಲಿ ಪಂಚ ಭೂತಗಳಲಿ,
ಅಡವುಗಳಿಂದಲೇ ಅಂದ ಭೂಷಣ ಗೆಯ್
ವಿಶ್ವದಾಭಿರಾಮ ಕೇಳು ವೇಮ.

ಸಕಲ ವಸ್ತುಗಳಲ್ಲಿ ಭೋಗ ವಿಷಯಗಳಿವೆ. ಅವುಗಳ ಭೋಗದಿಂದ ತನುಗಳಲ್ಲಿ ಸಂತಸವಾಗುತ್ತದೆ. ಪಂಚಭೂತಾತ್ಮಕವಾದ ತನುವಿನಲ್ಲಿ ಉಸಿರು ಸಂಚರಿಸುತ್ತದೆ. ಆಯಾ ತತ್ತ್ವಗಳಿಂದ ಅವವುಗಳಿಗೆ ಅಂದ ಭೂಷಣ ಮಾಡಬೇಕು.

ಭೂತಗಳ ಸೂಕ್ಷ್ಮ ರೂಪವೆಂದರೆ ತನ್ಮಾತ್ರೆಗಳು. ತತ್+ಮಾತ್ರಾ. ತನ್ಮಾತ್ರೆಗಳು ಇಂದ್ರಿಯಗಳ ವಿಷಯಗಳಾಗಿವೆ. ಇಂದ್ರಿಯ ಸಂಸರ್ಗದಿಂದ ಭೂತಗಳ ತನ್ಮಾತ್ರೆಗಳು ಚಿತ್ತಪಟಲದ ಮೇಲೆ ಅಪ್ಪಳಿಸಿ ಭೋಗ ಸಂಸ್ಕಾರ ಉಂಟಾಗುತ್ತದೆ. ಈ ತನ್ಮಾತ್ರೆಗಳೂ ಐದು. ಆಕಾಶ ಭೂತದ ತನ್ಮಾತ್ರೆಯು ಶಬ್ದ, ವಾಯುವಿನ ತನ್ಮಾತ್ರೆಗಳು ಎರಡು : ಶಬ್ದ ಮತ್ತು ಸ್ಪರ್ಶ; ಅಗ್ನಿಯ ತನ್ಮಾತ್ರೆಗಳು ಮೂರು : ಶಬ್ದ, ಸ್ಪರ್ಶ ಮತ್ತು ರೂಪ ; ಅಪ್ಪುವಿನ ತನ್ಮಾತ್ರೆಗಳು ನಾಲ್ಕು : ಶಬ್ದ, ಸ್ಪರ್ಶ, ರೂಪ ಮತ್ತು ರಸ. ಪೃಥ್ವಿಯ ತನ್ಮಾತ್ರೆಗಳು ಶಬ್ದ ಸ್ಪರ್ಶ, ರೂಪ, ರಸ ಮತ್ತು ಗಂಧ. ಹೀಗೆ ಶಬ್ದ, ಸ್ಪರ್ಶ, ರೂಪ, ರಸ ಮತ್ತು ಗಂಧಗಳು ಜ್ಞಾನೇಂದ್ರಿಯಗಳ ಪಂಚ ವಿಷಯಗಳಾಗಿವೆ. ಆಕಾಶ ತರಂಗ ಮಾಧ್ಯಮವು ಶಬ್ದ ತರಂಗಗಳನ್ನಷ್ಟೇ ವಹಿಸುವುದು. ಸೂಕ್ಷ್ಮ ತರಂಗ ಮಾಧ್ಯಮವು ಸ್ಥೂಲ ತರಂಗಗಳನ್ನು ವಹಿಸುವುದಿಲ್ಲ. ಹಾಗಾಗಿ ಆಕಾಶ ತರಂಗ ಮಾಧ್ಯಮದಲ್ಲಿ ಸ್ಪರ್ಶಾದಿ ತರಂಗಗಳು ಹಾಯಲಾರವು.

ಜ್ಞಾನೇಂದ್ರಿಯ ಪಂಚಕ :

ಸೀಸ. ಕವಿಯು ಕೋರ್ವುದು ಒಳ್ಳೆ ಉಲಿಗಳ,
ಮಧುರ ವಚನ ಗುಚ್ಛ ಕೋರ್ವುದು.
ಚರ್ಮ ಕೋರ್ವುದು ಸರಣಿಯಿಂದ ಮತ್ತೆ
ಶೀತ, ಮೃದು ಸಂಸ್ಪರ್ಶವೆಂದಿಗು.
ಕಣ್ಣು ಕೋರ್ವುದು ಕಮನೀಯ ವರ್ಣಗಳ.
ಇಷ್ಟ ರೂಪಗಳ ಒಪ್ಪಿ ನೋಡುವವು.
ನಾಲಗೆ ಕೋರ್ವುದು ನಯದಿಂದ ಸಿಹಿಯ
ಒಗರು, ಕ್ಷಾರ, ಕಹಿಯುಪ್ಪು ಹುಳಿಯ.

ತೇಟ. ಮೂಗು ಕೋರ್ವುದು ಸದ್ಗಂಧ ಮುನ್ನ ಚೊಕ್ಕ,
ಚರ್ಮ ಕಿವಿಗಳು, ಕಣ್ಣುಗಳು ಜಿಹ್ವೆ ಮೂಗು
ನಡೆಯಲೊಂದಾಗಿ ಎಲ್ಲವನು, ನೀಗಿ, ತನ್ನ
ಘಟವ ಕಾಣಲು ಸುಖವೆಲ್ಲ ತನಗೆ ವೇಮ.

ಇಂದ್ರಿಯ ಪಂಚಕಗಳು ಬಾಹ್ಯ ವಸ್ತುಗಳ ಸಂಸರ್ಗ ಹೊಂದಿ, ತಮ್ಮ ತಮ್ಮ ಇಷ್ಟ ವಿಷಯಗಳನ್ನು ಚಿತ್ತ ಪಟಲಕ್ಕೆ ತಲುಪಿಸುತ್ತವೆ. ಎಲ್ಲ ಇಂದ್ರಿಯಗಳು ಸಾಮರಸ್ಯದಿಂದ ಒಂದಾಗಿ ನಡೆದರೆ, ಜೀವಿಯು ತನ್ನ ಘಟವನ್ನು ಅಂದರೆ ದೇಹಾತ್ಮ ಬುದ್ಧಿಯನ್ನು ನೀಗಿ, ತನ್ನನ್ನೇ ತಾನು ಕಾಣಲು ಇಂದ್ರಿಯ ಭೋಗಕ್ಕಿಂತ ಹೆಚ್ಚಿನ ಸುಖ ತನಗೆ ಉಂಟು.

ಕರ್ಮೇಂದ್ರಿಯ ಪಂಚಕ :

ಕರ್ಮೇಂದ್ರಿಯಗಳು ಐದು. ಅವುಗಳೆಂದರೆ ವಾಕ್, ಪಾಣಿ, ಪಾದ, ಗುದ ಮತ್ತು ಗುಹ್ಯ. ಇವು ಐದು ಕರ್ಮೇಂದ್ರಿಯಗಳು, ಇವುಗಳ ಕ್ರಿಯೆಗಳೆಂದರೆ, ಅನುಕ್ರಮವಾಗಿ ವಚನ, ಗ್ರಹಣ, ಚಲನ, ಮಲ ವಿಸರ್ಜನೆ. (ಸಗುಣ ಬ್ರಹ್ಮ) ಆತ್ಮ, ಅಂತಃಕರಣ ಚತುಷ್ಟಯ, ಭೂತ ಪಂಚಕ, ತನ್ಮಾತ್ರ ಪಂಚಕ, ಜ್ಞಾನೇಂದ್ರಿಯ ಪಂಚಕ, ಕರ್ಮೇಂದ್ರಿಯ ಪಂಚಕ. ಹೀಗೆ ಪಂಚವಿಂಶತಿ ಅಂದರೆ ಇಪ್ಪತ್ತೈದು ತತ್ತ್ವಗಳು.

ಸೀಸ ಧರಣಿಯೊಳು ಓದು ಎಲ್ಲ, ಪರಮಾತ್ಮನೊಳು ಆತ್ಮ,
ಐಕ್ಯಗೊಳದಿರೆ ಬ್ರಹ್ಮನಿಗೂ ದೋಷ.
ಪಂಚ ಭೂತಗಳ, ವಿಶೇಷ ಪ್ರಕೃತಿಯು, ತಲೆ ಹಾಕಿ,
ನಿಲುಗಡೆಯರಿಯದವನ ನೆತ್ತಿ ದೋಷ.
ಪಂಚವಿಂಶತಿ ತತ್ತ್ವ ಪದ್ಧತಿ ಇಲ್ಲದೆ
ವೇದಾಂತಿ ನಾನೆನುವಾತಗೊಂದು ದೋಷ.
ಅಂತರಂಗದ ಒಳಗೆ ಅನುಕೂಲವರಿಯದೆ,
ಯೋಗಿ ನಾನೆನುವಾತಗೊಂದು ದೋಷ.

ತೇಟ. ತಾನು ತಾನಾದ ತತ್ತ್ವಗಳಿಗೆ ತಗಲಿಕೊಂಡು,
ಒಳಗೆ ಹೊರಗೆ ಒಂದಾಗಿ ತಿಳಿದು,
ಬ್ರಹ್ಮ ವೇದಗಳು ಗೊತ್ತಿರದ ಪಾಮರರಿಗು
ಹಿಂದೆ ಒಂದು ದೋಷ ; ಹೌದಲ್ಲೊ ಹೇಳು ವೇಮ.

'ಬೃಹತ್ವಾತ್ ಬ್ರಹ್ಮ ; ಬೃಂಹಣತ್ವಾತ್ ಬ್ರಹ್ಮ'. ಅಂದರೆ ತಾನು ಎಣಿಕೆಗೆ ಅಳವಡದಷ್ಟು ಬೃಹತ್ತಾದದ್ದು ಮತ್ತು ಇನ್ನೊಂದನ್ನು ಎಣಿಕೆಗೆ ಬಾರದಷ್ಟು ಬೃಹತ್ತಾಗಿಸುವುದು ಬ್ರಹ್ಮವೆನಿಸುತ್ತದೆ. ಆದ್ದರಿಂದ ಧರಣಿಯಲ್ಲಿ ಏನನ್ನೇ ಅಧ್ಯಯನ ಮಾಡಲಿ, ಆ ಓದಿನಿಂದ ಆತ್ಮವು ಬ್ರಹ್ಮನಲ್ಲಿ ಐಕ್ಯಗೊಳ್ಳದಿದ್ದರೆ, ಅದು ಬ್ರಹ್ಮನಿಗೆ ದೋಷವೆನಿಸುತ್ತದೆ. ತನ್ನ ವಿವೇಕ-ವಿಚಾರ ಮೂಲಕ ಪಂಚ ಭೂತಗಳ ವಿಶೇಷ ಪ್ರಕೃತಿಯ ನಿಲುಗಡೆಯನ್ನು ಅರಿಯದವನ ನೆತ್ತಿ

ದೋಷವೆನಿಸುತ್ತದೆ. ಪಂಚವಿಂಶತಿ ತತ್ತ್ವಗಳ ಪದ್ಧತಿಯನ್ನು ಅರಿಯದೆ, ತಾನು ವೇದಾಂತಿ ಎಂದು ಹೇಳುವವನಿಗೊಂದು ದೋಷ ಆರೋಪಿಸಬಹುದು. ಅದೇ ರೀತಿ ಅಂತರಂಗದಲ್ಲಿ, ಪರಮಾತ್ಮನನ್ನು ಬೆರೆಯಲು ಅನುಕೂಲ ಮಾರ್ಗವನ್ನು ಅರಿಯದೆ 'ನಾನು ಯೋಗಿ' ಎಂದು ಅನ್ನವವನಿಗೂ ಒಂದು ದೋಷ ಆರೋಪಿಸಬಹುದು.

ತಾನೇ ತಾನಾದ ತತ್ತ್ವಗಳಿಗೆ ತಗುಲಿಕೊಂಡು, ಒಳಗೂ ಹೊರಗೂ ಒಂದೇ ಎಂದು ತಿಳಿದು ತಿಳಿದು, ಮುಕ್ತ ಪುರುಷರಾದವರು ಇರಬಹುದು. ಆದರೆ ಅವರಿಗೆ ವೈದಿಕರ ಕಟ್ಟುಪಾಡಿನಿಂದಾಗಿ ಬ್ರಹ್ಮೋಪದೇಶದ ಸಂಸ್ಕಾರವಾಗಿರಲಿಕ್ಕಿಲ್ಲ, ವೇದಾಧ್ಯಯನವಾಗಿರಲಿಕ್ಕಿಲ್ಲ. ಅವರು ಪಾಮರ ಇಲ್ಲವೆ ರೈತಾಪಿ ಜನರೇ ಆಗಿರಬಹುದು. ಇಂಥ ಮಹಾತ್ಮರಿಗೂ ಪಟ್ಟ ಭದ್ರ ಹಿತಾಸಕ್ತಿಗಳು ಕುಲ ದೋಷವನ್ನು ಆರೋಪಿಸಬಹುದು ಅಹುದಲ್ಲವೇ ?

ಕಂ. ವಿಷಯಗಳಲಿ, ಹೊರಳಿ, ಹೊಂದದೆ,
ವಿಷಯಕೆ ಅಂಟದ ಮಹಾ ವಿಧದಲಿ ಧರೆಯೋಳ್
ವಿಷ ಸಂಸಾರವು ಎನ್ನುತ,
ವಿಷಯಗಳಿಲ್ಲವ ಗೆಲುವುದ ವೇಮನನರಿವನ್.

ವಿಷಯಗಳಲ್ಲಿ, ಅಂದರೆ ಪ್ರಪಂಚದ ಭೋಗ ವಿಷಯಗಳಲ್ಲಿ ಹೊರಳಾಡಿದರೂ ಅದರಲ್ಲಿ ಹೊಂದಿಕೊಳ್ಳದೆ, ವಿಷಯಕ್ಕೆ ಅಂಟದ ಮಹಾತ್ಮನ ವಿಧದಲ್ಲಿ ಈ ಭೂಮಿಯಲ್ಲಿ ಸಂಸಾರವು ವಿಷ ಪ್ರಾಯವೇ ಎನ್ನುತ್ತ, ಎಲ್ಲ ವಿಷಯ ಭೋಗಾಸಕ್ತಿಯನ್ನು ಹೇಗೆ ಗೆಲ್ಲಬೇಕೆಂಬುದನ್ನು ವೇಮನನು ಅರಿಯುತ್ತಾನೆ.

ಕಂ. ವಿಷಯವ ಘರ್ಷಿಸಿ ಗ್ರಹಿಸರು,
ವಿಷಯೇಂದ್ರಿಯ ಪರ ದಳವನು ಹೊಡೆದೋಡಿಸಿ ತಾ
ವಿಷಮಾರಿ ಷಟ್ಕವನು, ದು-
ರ್ವಿಷಯಗಳನೆ ಹೊಂದದಿದ್ದುವೇಮನನರಿವನ್.

ಸಾಧಕನು ವಿಷಯಗಳೊಂದಿಗೆ ಘರ್ಷಿಸುತ್ತಾನೆ. ಅವು ಇಂದ್ರಿಯ ಸಂಸರ್ಗದಿಂದ ಒಳ ಸೇರದಂತೆ ಎಚ್ಚರ ವಹಿಸಿ ಅವುಗಳನ್ನು ಗ್ರಹಿಸನು. ವಿಷಯೇಂದ್ರಿಯಗಳಿಗೆ ಅನುಕೂಲವಾಗಿರುವ, ವೃತ್ತಿ ದಳವನ್ನು ಹೋರಾಡಿ, ಹೊಡೆದೋಡಿಸಿ, ತಾನು, ವಿಷಯ ಅರಿಷಟ್ಕವನ್ನು ಅಂದರೆ, ಕಾಮ, ಕ್ರೋಧ, ಲೋಭ, ಮೋಹ, ಮದ ಮತ್ತು ಮತ್ಸರಗಳನ್ನು ಹೊಡೆದು ಓಡಿಸುವನು. ಇನ್ನು ಕೆಟ್ಟ, ವಿಷಯಗಳನ್ನು ಹೊಂದದೆ ಇದ್ದು, ವಿಷಯಾಸಕ್ತಿಯನ್ನು ಹೇಗೆ ಗೆಲ್ಲಬೇಕೆಂಬುದನ್ನು ವೇಮನನು ಅರಿಯುತ್ತಾನೆ.

ಕಂ. ವಿಷಯದಲಿ ಹೊರಳಿ ಹೇಸದೆ,
ವಿಷವಂಟಿದ ಗತಿಯ ನೋಳ್ಪ ವಿಧದಲಿ ಧರೆಯೋಳ್,
ವಿಷ ಸಮ ಮಾಯಾ ಸುಖವದು
ವಿಷಯಗಳಲಿ ಸೇರಿಕೊಳರು, ವೇತ್ತರು, ವೇಮಾ.

ಸಾಧನ ಪೂರ್ವದಲ್ಲಿ ಮಾನವನು ವಿಷಯಗಳಲ್ಲಿ ಹೊರಳಾಡಿಯೂ ಹೇಸುವುದಿಲ್ಲ.

ಆಗ ವಿಷಯ ಭೋಗದಿಂದ ಆಸಕ್ತಿಯು ಹೆಚ್ಚಿ, ವಿಷದಂತೆ ಹಬ್ಬಿ ಎಚ್ಚರ ತಪ್ಪಿಸುತ್ತದೆ. ಹೀಗೆ ವಿಷದಂತೆ ವಿಷಯಾಸಕ್ತಿಯು ಅಂಟಿದ ವಿಧವನ್ನು ಧರೆಯಲ್ಲಿ ಅರಿತುಕೊಂಡು ವಿಷಯ ಸುಖವು ಸುಖಿದಂತೆ ತೋರಿ ದುಃಖಿಕಾರಕವಾಗಿರುವ ವಿಷಸಮ ಮಾಯೆಯೆಂದು, ತಿಳಿದವರು ವಿಷಯಗಳಲ್ಲಿ ಸೇರಿಕೊಳ್ಳುವುದಿಲ್ಲ.

ಕಂ. ವಿಷಯ ತಾಕುತ ಪಡೆಯಲು,
ವಿಷಯೇಂದ್ರಿಯ ಪರವಶಪಹ ವಿಧದಲಿ ಮತ್ತಾ
ವಿಷಮಾರಿ ವರ್ಗಗಳ ಷ-
ಡ್ವಿಷಯಗಳಲಿ ಹೊರಳದಿಹುದ ವೇಮನನರಿವನ್.

ವಿಷಯಗಳ ಸಂಸರ್ಗದಲ್ಲಿ ಬಂದು ವಿಷಯ ಭೋಗವನ್ನು ಪಡೆದಾಗ ಆ ನರನು ವಿಷಯೇಂದ್ರಿಯ ಪರ ವೃತ್ತಿಗೆ ವಶವಾಗುತ್ತಾನೆ. ಇದೇ ವಿಧದಲ್ಲಿ ವಿಷಮವಾದ ಅರಿ ಷಡ್ವರ್ಗಗಳಲ್ಲಿ ಅಂದರೆ ಕಾಮ, ಕ್ರೋಧ, ಲೋಭ, ಮೋಹ, ಮದ ಮತ್ತು ಮತ್ಸರಗಳ ವೃತ್ತಿಗಳಲ್ಲಿ ಹೊರಳದಿರುವುದನ್ನು ವೇಮನನು ಅರಿಯುತ್ತಾನೆ.

ಕಂ. ವಿಷಯಗಳು ತೆರೆಗಳ ರೀತಿ ;
ವಿಷಯಗಳಿಗಂಟದ ಮಹಾತ್ಮ ವಿಧದಿ ಧರೆಯೋಳ್,
ವಿಷ ಸಂಸಾರವು ಎಲ್ಲವು.
ವಿಷಯಗಳೆಲ್ಲವನು ಗೆದ್ದು ವೇಮನನರಿವನ್.

ಸಾಗರದಲ್ಲಿಯ ತೆರೆಗಳಂತೆ ವಿಷಯ ತರಂಗಗಳು ಒಂದರ ಹಿಂದೆ ಒಂದು ಏಳುತ್ತಿರುತ್ತವೆ. ಆದರೆ ಧರೆಯಲ್ಲಿ ವಿಷಯಗಳಿಗೆ ಅಂಟದ ಮಹಾತ್ಮನ ರೀತಿಯಲ್ಲಿ, ಸರ್ವವೂ ವಿಷಪ್ರಾಯ ಸಂಸಾರವೆಂದು ಅರಿತು, ಎಲ್ಲ ವಿಷಯಾಸಕ್ತಿಯನ್ನು ಗೆದ್ದು, ಸತ್ಯವನ್ನು ವೇಮನನು ಅರಿಯುತ್ತಾನೆ.

ಜೀವ ಸೃಷ್ಟಿ :

ಜೀವಿಗಳನ್ನು ಅವರವರ ಹುಟ್ಟಿನ ಮೇರೆಗೆ ನಾಲ್ಕು ಜಾತಿಗಳಾಗಿ ವಿಂಗಡಿಸಬಹುದು. ಅಂಡಜ, ಪಿಂಡಜ, ಉದ್ಭಿಜ ಮತ್ತು ಸ್ವೇದಜ.

ಆ। ಅಂಡದಲ್ಲಿ ಹುಟ್ಟಿ ಅರಳಿದ ಪ್ರಾಣಿ ಕೆಲವು,
ಬುದ್ಬುದದಿ ಹುಟ್ಟಿವೆ ಹುಳುಗಳೆಲ್ಲ.
ಸ್ವೇದದಲ್ಲಿ ಹುಟ್ಟಿದ ಜೀವಿಗಳಿವೆ ಕೆಲವು.
ವಿಶ್ವದಾಭಿರಾಮ ಕೇಳು ವೇಮ.

ವನಸ್ಪತಿ, ಮೊಳಕೆಯೊಡೆಯುವ ಗಿಡಬಳ್ಳಿಗಳು ಉದ್ಭಿಜಗಳಾಗಿವೆ. ಇನ್ನು ಮಾನವ ಮತ್ತಿತರ ಪ್ರಾಣಿಗಳು ಪಿಂಡಜ ಜರಾಯುಜಗಳಾಗಿವೆ. ಬೆವರಿನಲಿ ಹುಟ್ಟಿದ ಜೀವಿಗಳು ಕೆಲವು.

ಆ. ಕನ್ನೆ ವರರು ಸೇರಿ ಕೂಡಿಕೊಳ್ಳಲೊಮ್ಮೆ
ಉಚ್ಚೈಯಲ್ಲಿ ಪಿಂಡ ಉದ್ಭವಿಸಿತು.

ಹೆಚ್ಚು ಕುಲಜನಾರು ? ಹೀನನಾವನುಂಟು ?
ವಿಶ್ವದಾಭಿರಾಮ ಕೇಳು ವೇಮ.

ಮಾನವನ ಹುಟ್ಟು ಹೇಗಾಗುತ್ತದೆ ? ಮಾನವ ಪಿಂಡಜ ಜಾತಿಯ ಪ್ರಾಣಿಯಷ್ಟೇ ಕನ್ನೆ ವರರು ಕಾಮಾಸಕ್ತರಾಗಿ ಸಂತಾನಾಪೇಕ್ಷೆಯಿಂದ ಕೂಡಿ ಸಂಭೋಗಿಸಲು ಉಚ್ಚೈಯಲ್ಲಿ ಪಿಂಡವು ಉದ್ಭವಿಸುತ್ತದೆ. ಅಂದರೆ ವರನ ಜನನೇಂದ್ರಿಯದಿಂದ ವೀರ್ಯವು ಸ್ರವಿಸಿ ಕನ್ನೆಯ ಗರ್ಭದಲ್ಲಿ ಪಿಂಡವಾಗುತ್ತದೆ. ಎಲ್ಲ ಜನ್ಮ ಕ್ರಮವೂ ಇದೇ ಆಗಿದೆ. ಅಂದ ಮೇಲೆ ಜನ್ಮದಿಂದ ಇಲ್ಲವೆ ಜಾತಿಯಿಂದ ಒಬ್ಬನು ಮೇಲು ಕುಲಜನು, ಇನ್ನೊಬ್ಬನು ಹೀನ ಕುಲಜನೆಂತಾಗುವನು? ಇಬ್ಬರೂ ಪಿಂಡಜರೇ.

ಆ. ವರನ ಬಿಂದುವಿಂಗೆ ವನಿತೆ ಗರ್ಭ ಧಾರಣೆ.
ಕಲ್ಲುಪ್ಪಿನಿಂದಲಿ ರಸದ ಉದಯ.
ಬುದ್ಧಿ ತಿಳಿದು ಇರಲು, ಭುವನ ತಿಳಿವುದಲ್ತೆ ?
ವಿಶ್ವದಾಭಿರಾಮ ಕೇಳು ವೇಮ.

ವರನ ಬಿಂದುವಿನ ರಸದಿಂದ ವನಿತೆಯ ಗರ್ಭಕೋಶದಲ್ಲಿ ಶುಕ್ರ-ಶೋಣಿತಗಳು ಕೂಡಿ ಪಿಂಡವು ಉದ್ಭವಿಸುತ್ತದೆ. ಕಲ್ಲುಪ್ಪಿನಂಥ ವೀರ್ಯದಿಂದ ಬಿಂದು ರಸವು ಉದಯಿಸುತ್ತದೆ. ಹುಟ್ಟಿನ ಈ ಸರಳ ಕ್ರಮವನ್ನು ಬುದ್ಧಿಯು ತಿಳಿದಿದ್ದರೆ, ಭುವನವಾಸಿಗಳೆಲ್ಲ ತಿಳಿಯುತ್ತಾರೆ.

ಆ. ಅನ್ನ ರಸದಿಂದಲಿ ಆಯ್ತು ಬಿಂದು ರಸವು,
ಬಿಂದು ರಸದಿಂದಲಿ ಬೀಜವಾಯ್ತು.
ಬಿಂದು ಬೀಜಗಳನು ಭೇದಿಸಿ ನೋಡಿರೋ.
ವಿಶ್ವದಾಭಿರಾಮ ಕೇಳು ವೇಮ.

ನಾವು ಸೇವಿಸುವ ಅನ್ನವು ಜೀರ್ಣಗೊಂಡು ಸಪ್ತ ಧಾತುಗಳಾಗಿ ಮಾರ್ಪಡುತ್ತದೆ. ಈ ಸಪ್ತ ಧಾತುಗಳಲ್ಲಿ ರೇತಸ್ಸೂ ಒಂದು. ಈ ರೇತಸ್ಸುವೇ ವೀರ್ಯವೆನಿಸಿ ಸ್ತ್ರೀಯೋನಿಯಲ್ಲಿ ಶಿಶುವಿನ ಜನನದ ಬೀಜಗಳಾಗಿರುತ್ತವೆ. ಅಂದರೆ ಬಿಂದು ರಸದಿಂದ ಬೀಜವಾಗುತ್ತದೆ. ಬಿಂದು ಯಾವುದು ? ಬೀಜ ಯಾವುದು ? ಇವುಗಳನ್ನು ವಿಂಗಡಿಸಿ ತಿಳಿಯಬೇಕು.

ಆ. ಪಿಂಡ ಅಂಡದಲ್ಲಿ ಬೆಳೆದು ಇರುವಂತಹ,
ತಂದೆ ಬಿಂದು, ನಾದ ಅಂದಗೂಡಿ,
ಅಂಡವಾಗಿ ನಿಲಲು ಅದನೆ ಗರ್ಭವೆಂದ್ರು.
ಅವನಿ ಜನರು ಆಗ, ಅರಿಯೊ ವೇಮ.

ಪಿಂಡಾಂಡದಲ್ಲಿ ಅಂದರೆ ಪ್ರಾಣಿಗಳ ದೇಹದಲ್ಲಿ ಬೆಳೆದು ಇರುವಂಥ ತಂದೆಯ ಬಿಂದುವು ಅಂದರೆ ತಮೋ ಗುಣಾಂಶವು ನಾದವನ್ನು ಅಂದರೆ ಸತ್ವಗುಣಾಂಶವನ್ನು ಒಪ್ಪವಾಗಿ ಕೂಡಿ, ಅಂಡವಾಗಿ ಬೆಳೆಯುತ್ತ ರಜೋ ಗುಣಾಂಶವಾಗಿ ನಿಲ್ಲುನಾಗಿ ಅದನ್ನೇ ಅವನಿ ಜನರು ಗರ್ಭ ಅಂದರೆ ಬಸಿರು ಎನ್ನುತ್ತಾರೆ.

ಅಂತೂ ಪ್ರಾಣಿಯಾಗಿ ಪಿಂಡಜ ಇಲ್ಲವೆ ಜರಾಯುಜನಾಗುತ್ತ ಮಾನವ ಜನ್ಮ ಪಡೆಯಲು ಜೀವನು ಇಳೆಯಲ್ಲಿ ಎಂಭತ್ತು ನಾಲ್ಕು ಲಕ್ಷ ಯೋನಿಗಳನ್ನು ದಾಟಬೇಕು.

ಕಂ. ಎಂಭತ್ತು ನಾಲಕು ಲಕ್ಷ
ಎಂಬಂಥ ಜೀವರಾಶಿಗಳವಿಲವು ಕಡೆಗುಂ
ಸಂಭವಿಪುವ ವಿಧದಿಳೆಯೋಳ್
ಕೊಂಬೂದಿ ಹೇಳುತಿಪ್ಪನು ವೇಮನ ಕಾಣಾ.

ಬ್ರಹ್ಮ ಕಲ್ಪದಲ್ಲಿ ಜೀವಿಯು ಎಂಭತ್ತು ನಾಲ್ಕು ಲಕ್ಷ ಯೋನಿಗಳಲ್ಲಿ ಹಾಯ್ದು ಬಂದಾಗ ಇಳೆಯಲ್ಲಿ ನರ ಜನ್ಮ ಪಡೆಯುತ್ತಾನೆ. ಇದು ಸತ್ಯಸ್ಯ ಸತ್ಯ ಎಂದು ವೇಮನರು ಕೊಂಬೂದಿ ಸಕಲರಿಗೂ ಸಾರಿ ಹೇಳುತ್ತಿದ್ದಾರೆ.

ಸೀಸ. ಯಮನ ಆಜ್ಞೆಯಿಂದ ಅಧಿಕರೆನಿಸುವವರು
ಚಂದ್ರಕಾಂತವ ಸೇರಿ ಜಗದಿ ಮರಳಿ,
ಮೇಘದೊಡನೆ ಬಂದು ಯೋಗದೊಡನೆ ದೃಷ್ಟಿ
ಬಿಂದು ಚೇತನಕೆ ಪೃಥಿವಿ ಗುರಿಯು.
ಸಸ್ಯಾದಿಗಳಿಗೆ ನೀಡಿ ಸಾರವನು ತಿಂದು,
ಇಂದ್ರಿಯಗಳಿಂದ ಅಧಿಕವಾಗಿ.
ತಿಂಗಳು ಋತುಮತಿಯಾಗಿ ನಿಲಿಸಿ ಯೋನಿಯಲ್ಲಿ
ಮುದ್ದೆಗಟ್ಟಿತು ಮಾಂಸ ಮಜ್ಜುಗೂಡಿ.

ತೇಟ. ಪ್ರಾಣಿ ಈ ರೀತಿ ಮಾಸ ಮಾಸಕು ಪ್ರಬಲವಾಗಿ,
ಮೂತ್ರ ಮಲಗಳಲಿ ಕೆಲದಿನ ಮುಳುಗಿಯುಂಟು.
ಹೊರಗೆ ಬಹು ದುಃಖ ಸಂಸಾರ, ಪುಟ್ಟಿ ಕಷ್ಟ,
ಜನನ ಮರಣಗಳ ಎಣಿಸಲಳವೇ ವೇಮ ?

ಯಮಧರ್ಮನ ಆಜ್ಞೆಯ ಮೇರೆಗೆ ಇಳೆಯಲ್ಲಿ ಅಧಿಕರೆನಿಸುವ ಪುಣ್ಯ ಜೀವಿಗಳು ಚಂದ್ರ ಲೋಕವನ್ನು ಸೇರಿ ಮರಳಿ ಜಗತ್ತಿಗೆ ಬರುತ್ತಾರೆ. ಈ ಲಿಂಗ ಶರೀರಗಳು ಮೇಘದೊಡನೆ ಬಂದು, ವಾತಾವರಣದೊಂದಿಗೆ ಸೇರಿ ಉಂಟಾದ ವೃಷ್ಟಿ ಅಂದರೆ ಮಳೆಯ ಬಿಂದುಗಳ ಚಲನೆಗೆ ಪೃಥಿವಿಯು ಗುರಿಯಾಗುತ್ತದೆ. ಸಸ್ಯಾದಿಗಳಿಗೆ ಜಲ ಬಿಂದುಗಳನ್ನು ನೀಡಿ, ಬೆಳೆದ ಸಸ್ಯಾದಿಗಳ ಸಾರವನ್ನು ತಿಂದು, ಜ್ಞಾನೇಂದ್ರಿಯ, ಕರ್ಮೇಂದ್ರಿಯಗಳನ್ನು ಪಡೆದು ಶ್ರೇಷ್ಠನಾಗುತ್ತಾನೆ. ತಿಂಗಳು ತಿಂಗಳೂ ಋತುಮತಿಯಾಗಿ ಯೋನಿಯಲ್ಲಿ ಸ್ರವಿಸಿದ ದ್ರವವು, ಮಾಂಸ ಮಜ್ಜುಗೂಡಿ ಮುದ್ದೆಗಟ್ಟುತ್ತದೆ. ಗರ್ಭಪಿಂಡವಾಗುತ್ತದೆ.

ಈ ರೀತಿ ಪ್ರಾಣಿಯು ಮಾಸ ಮಾಸಕ್ಕೂ ಪ್ರಬಲವಾಗಿ ಮೂತ್ರ ಮಲಗಳಿರುವ ಹೊಟ್ಟೆಯಲ್ಲಿ ಕೆಲ ದಿನ ಜರಾಯು ಸಮೇತ ಮುಳುಗಿರುತ್ತದೆ. ಅಲ್ಲಿಂದ ಪ್ರಸೂತಿ ನಂತರ ಹೊರಬೀಳಲು ಎದುರಾಗುವ ಸಂಸಾರವು ಕಷ್ಟಮಯವಾಗಿರುತ್ತದೆ. ಮುಂದೆ ಕರ್ಮ ಬದ್ಧನಾಗಿ

ಅಗಣಿತ ಜನನ ಮರಣಗಳ ಚಕ್ರದಲ್ಲಿ ಸಿಲುಕುತ್ತಾನೆ.

ತಾಯಿ ಗರ್ಭದಲ್ಲಿ ಶಿಶುವು ಬೆಳೆಯುವ ವಿವರಗಳನ್ನು ಇಲ್ಲಿ ಸಮೀಕ್ಷಿಸುವಾ :

ಸೀಸ. ತಂದೆ ತಾಯಿಯು ಸೇರಿ ತನು ರತಿ ಗೆಯ್ಯುತಾ
ರಾಗ ಕುದುರುತಿಹುದು ರಮ್ಯವಾಗಿ.
ಐದು ದಿನ ಕಳೆಯಲದು, ಆಮ್ಲವ ದಧಿಯಲಿ
ಬೆರಸಿ ಕಲಸಿದಂತೆ, ಬೆಳಗುತಿಹುದು.
ಹತ್ತು ದಿವಸಗಳಲಿ ಮತ್ತೆ ಅಂಡವೇ ಆಯ್ತು.
ಹದಿನೈದರಲ್ಲಿಯೆ ಹೊದರು ತುಂಬಿ,
ತಿಂಗಳೊಂದಕ್ಕೆ ಶಿರಸು ತಾನೇ ಮೂಡುತಿಹುದು.
ಪಾದ ಕರಂಗಳೆರಡು ಪದ್ಧತಿಯಲಿ.
ಮೂರು ತಿಂಗಳಿಗೆ ಮತ್ತೆ ಇನಿತು, ಮತ್ತೆ ನಾಲ್ಕರಲ್ಲಿ
ನಡುವು ಪಾರ್ಶ್ವಗಳು ಮೂಡುತಿಹವು.
ಐದು ತಿಂಗಳ ವಯಕೆ ಅಂಗಾಂಗವಾಗುವವು.
ಆರಕ್ಕೆ ನೇತ್ರಗಳು ಅರಳುತಿಹವು.
ಏಳು ತಿಂಗಳಿಗೆ ಜೀವವಿದ್ದು ಪ್ರಭವಿಸುವುದು.
ಎಂಟು ತಿಂಗಳಿಗೆ ಜ್ಞಾನ ಅಂಟುತಿಹುದು.
ಒಂಭತ್ತು ಮಾಸದಲ್ಲಿ ತಕ್ಕ ಧ್ಯಾನ ಉದಿಸಿ,
ತೊಲಗದೆ, ಹತ್ತು ತಿಂಗಳಲ್ಲಿ ತನ್ನ ಪೂರ್ವ
ದುಃಖದಲ್ಲಿ ಪಿಂಡ ಪರಿಪೂರ್ಣವಾಗಿ, ಜಗದಿ
ಪುಟ್ಟುತಿಹನು ತಾನು ಬುದ್ಧಿ ಮರೆತು.

ತೇಟ ಮಂಚದಲಿ ಬಿದ್ದು ತನ್ನ ಮೂತ್ರ ಮಲಗಳಲ್ಲಿ
ಹೊರಳಾಡುತಿದ್ದು ಮಾಯಾವಿ ಹುಟ್ಟುತಿಹನು.
ಗತಿಗಳ ಹೊಂದಿಹ ಅವರಿಗೆ ಕರುಣೆದೋರಿ
ವ್ಯಥೆಗಳ ತೀರಿಸುವ ವೇಮನ ವಿಶ್ವದಲ್ಲಿ.

ಈ ಪದ್ಯವು ತೀರ ಸರಳವಿದೆ. ಅರ್ಥವು ಸುಸ್ಪಷ್ಟವಿದೆ. ಬೇರೆ ಟೀಕಾರ್ಥ ಬೇಕಿಲ್ಲ ತಾನೇ ?

ಕಂ. ಒಂಭತ್ತು ದ್ವಾರದ ತನು-
ವೆಂಬುದು ನಿಮ್ಮಯ ಸೊತ್ತು ಕುಲ ಪೇಳಲೇಕೆ ?
ನಂಬದಿರು ದೇಹ ನಾನೆನು-
ತಿಂಬುಗೊಡುತರಿ ಬ್ರಹ್ಮವೆ ಅಹಮೆನೆ ವೇಮಾ.

ಎರಡು ಕಿವಿಗಳು, ಎರಡು ಕಣ್ಣುಗಳು, ಎರಡು ಮೂಗಿನ ಹೊರಳಿಗಳು, ಒಂದು ಬಾಯಿ, ಒಂದು ಗುದ ಮತ್ತು ಒಂದು ಗುಹ್ಯ ; ಹೀಗೆ ಒಂಭತ್ತು ದ್ವಾರಗಳುಳ್ಳ ಈ ತನುವು

ನೀನಲ್ಲ, ; ಅದು ನಿನ್ನ ಸೊತ್ತು. ಇದಕ್ಕೆ ಆ ಕುಲಜ, ಈ ಕುಲಜ ಎಂದು ಜಾತಿ ಹೇಳುವುದೇಕೆ? ಈ ದೇಹ ನಾನು ಎಂಬ ವಿಚಾರಕ್ಕೆ ಇಂಬುಗೊಡುತ್ತ ನಂಬಬೇಡ. 'ಅಹಂ ಬ್ರಹ್ಮ ಅಸ್ಮಿ' ನಾನು ಬ್ರಹ್ಮನೇ ಇದ್ದೇನೆ ಎಂಬುದನ್ನು ಅರಿತುಕೋ.

ಜೀವ :

ಜೀವ್ ಎಂದರೆ ಉಸಿರಾಡಿಸು. ಉಸಿರಾಡಿಸುವ ಸತ್ತೆಯೇ ಜೀವಿಯೆನಿಸುತ್ತದೆ. ಉಸಿರಾಡುವ ಮಾನವನೂ ಜೀವಿಯೇ. ಮಾನವ ಶರೀರದಲ್ಲಿ ಪಂಚವಿಂಶತಿ ಅಂದರೆ ಇಪ್ಪತ್ತೈದು ತತ್ತ್ವಗಳಿರುವುದನ್ನು ನೋಡಿದ್ದೇವೆ. ಆದರೆ ಈ ಜೀವವಾವುದು ? 'ಬ್ರಹ್ಮ ಸತ್ಯಂ, ಜಗನ್ಮಿಥ್ಯಾ, ಜೀವೋ ಬ್ರಹ್ಮೈವ ನ ಪರಃ' ಅಂದರೆ ಬ್ರಹ್ಮ ಸತ್ಯವು, ಜಗತ್ತು ಮಿಥ್ಯೆ ಜೀವನು ಬ್ರಹ್ಮನೇ ಬೇರೆಯಲ್ಲ ಎಂಬುದು ಅದ್ವೈತವಾದಿ ಶಂಕರರ ಪ್ರತಿಪಾದನೆ.

ಕಂ. ಜೀವನನರಿಯುವ ವರೆಗೂ
ದೇವನ ಭ್ರಮೆ ಹಿಂಗದು, ನರ ದೇವನನರಿಯಲ್,
ಜೀವವನು ವಿವರಿಸುತಿದ್ದು,
ಭಾವಿಸಿದೊಡೆ ಮುಕ್ತಿ ಬಟ್ಟ ಬಯಲ್ಮೆ ವೇಮಾ.

ಜೀವನನ್ನು ಅರಿಯುವ ವರೆಗೂ ದೇವರನ್ನು ಕುರಿತು ಭ್ರಮೆಯು ಹಿಂಗದು. ನರನು ದೇವನನ್ನು ಅರಿತೊಡನೆ ಜೀವವನ್ನು ವಿವರಿಸಬಲ್ಲನು. ಆಗ ಭಾವ ಜಗತ್ತಿನಲ್ಲಿ ದೇವನನ್ನು ಕಲ್ಪಿಸಿಕೊಂಡರೆ ಮುಕ್ತಿಯು ಬಟ್ಟ ಬಯಲೇ ಎಂದು ತಿಳಿಯತ್ತದೆ.

ಜೀವನು ದೇವನನ್ನು ಅರಿಯುವಲ್ಲಿ ಕೆಲ ಕ್ಲಿಷ್ಟ ಪ್ರಸಂಗಗಳು ಎದುರಾಗುತ್ತಿವೆ.

ಆ. ನಿನ್ನ ನೋಡುತಿರಲು ತನ್ನ ತಾನೆ ಮರೆವ ;
ತನ್ನ ನೋಡುತಿರಲು ನಿನ್ನ ಮರೆವ.
ನಿನ್ನ ತನ್ನನರಿಯೆ, ನರಗೆ ವಿಧವಾವುದು ?
ವಿಶ್ವದಾಭಿರಾಮ ಕೇಳು ವೇಮ.

ಅನುಭವ ಕ್ಷೇತ್ರಗಳು ಮೂರು. ವಸ್ತು ಜಗತ್ತು, ಭಾವ, ಜಗತ್ತು ಮತ್ತು ಆತ್ಮಿಕ ಜಗತ್ತು. ಜೀವಿಯು ಆತ್ಮಿಕ ಜಗತ್ತಿನಲ್ಲಿ ದೇವನನ್ನು ನೋಡುತ್ತಿರುವಾಗ ಅವನು ಭಾವ ಜಗತ್ತಿನಲ್ಲಿ ತನ್ನನ್ನು ತಾನೇ ಮರೆಯುತ್ತಾನೆ. ವಸ್ತು ಜಗತ್ತಿನಲ್ಲಿ ತನ್ನನ್ನು ನೋಡುತ್ತಿದ್ದರೆ ದೇವನನ್ನು ಮರೆಯುತ್ತಾನೆ. ಆದ್ದರಿಂದ ನರನು ತನ್ನನ್ನೂ, ದೇವನನ್ನೂ ಏಕಕಾಲಕ್ಕೆ ನೋಡುವ ವಿಧವಾವುದು ?

ಇಲ್ಲಿ ಭಾವ ಎಂಬ ಶಬ್ದವನ್ನು ಸರಿಯಾಗಿ ತಿಳಿಯಬೇಕು.

''ಶುದ್ಧ ಸತ್ವ ವಿಶೇಷಾದ್ವಾ ಪ್ರೇಮ ಸೂರ್ಯಾಂಶು ಸಾಮ್ಯಭಾಕ್
ರುಚಿಭಿಶ್ಚಿತ್ರಮಾಸ್ಯಣ್ಯ ಕೃದಸಾ ಭಾವ ಉಚ್ಯತೇ''.

ಯಾವುದು ಓರ್ವನನ್ನು ವಿಶೇಷವಾಗಿ ಶುದ್ಧ ಸತ್ವನನ್ನಾಗಿಸುವುದೋ, ಮತ್ತು ಪ್ರೇಮ

ಸೂರ್ಯನು ಬೆಳಗುವಂತೆ ಮಾಡುವುದೋ, ಯಾವುದು ಮನವನ್ನು ಭಕ್ತಿ ಕಿರಣಗಳಿಂದ ಮೃದುವಾಗಿ ಮತ್ತು ಜಾಜ್ವಲ್ಯವಾಗಿ ಮಾಡುವದೋ, ಅದಕ್ಕೆ ಭಾವ ಎನ್ನುತ್ತಾರೆ.

ಆ. ನಿನ್ನ ನೋಡುತಿರಲು ನೆರೆಗಂಡಿತು ತತ್ತ್ವ.
ತನ್ನ ನೋಡುತಿರಲು ತಗಲಿತು ಮಾಯೆ.
ನಿನ್ನನರಿತ ಬಳಿಕ ತನ್ನ ತಾನರಿವನು.
ವಿಶ್ವದಾಭಿರಾಮ ಕೇಳು ವೇಮ.

ವಸ್ತು ಜಗತ್ತಿನಲ್ಲಿ ತನ್ನನ್ನೇ ನೋಡುತ್ತಿದ್ದರೆ, ಮಾಯೆ ತಗುಲಿ ಇದ್ದದ್ದು ಇಲ್ಲವೆನಿಸುತ್ತದೆ. ಆದ್ದರಿಂದ ಆತ್ಮಿಕ ಜಗತ್ತಿಗೇರಿ ನಿನ್ನನ್ನು ನೋಡುತ್ತಿದ್ದರೆ, ತತ್ತ್ವವು ಚೆನ್ನಾಗಿ ತಿಳಿಯುತ್ತದೆ. ಭಾವ ಜಗತ್ತು ಮತ್ತು ವಸ್ತು ಜಗತ್ತಿನಲ್ಲಿಯೂ ನೀನೇ ತುಂಬಿರುವೆಯೆಂದು ತಿಳಿದು ಬರುತ್ತದೆ. ಹೀಗೆ ಜೀವಿಯು ನಿನ್ನನರಿತ ಬಳಿಕ ತನ್ನನ್ನು ತಾನೇ ಅರಿಯುತ್ತಾನೆ.

ಆ. ಭಾವವೆನಲು ಬೇರೆ ಪರದೇಶದಲಿ ಇಲ್ಲ.
ತಾನು ಗೆಯ್ದ ಕಾರ್ಯ ತಗಲಿ ಇಹುದು.
ಭಾವದಲ್ಲಿ ಶಿವನ ಪರಿಕಿಸುತಿರಬೇಕು.
ವಿಶ್ವದಾಭಿರಾಮ ಕೇಳು ವೇಮ.

ಉನ್ನತ ಮನದ ಸಂರಚನೆಯೇ ಭಾವ. ಈ ಭಾವವು ಬೇರೆಲ್ಲಿಯೂ ಇಲ್ಲ. ಅಂದರೆ ತಾನು ಮಾಡಿದ ಕರ್ಮಗಳಿಗೆ ಅಂಟಿ ಇರುತ್ತದೆ. ಶುದ್ಧ ಸತ್ತ್ವಯುತನಾಗಿ ಪ್ರೇಮಪೂರ್ಣ ಭಾವದಲ್ಲಿ ಶಿವನನ್ನು ಚೆನ್ನಾಗಿ ಶೋಧಿಸುತ್ತಿರಬೇಕು.

ಗೀತ. ಭಾವ ನೆಲೆಗೊಂಡ ಪೂರ್ಣವಹ ಪ್ರಜ್ಞೆ ಹೊಂದಿ,
ನಿರ್ವಿಕಾರನಾಗಿ ಉಂಟು ನಿತ್ಯವಾಗಿ.
ಹೊಂದು ಸಂತತ ಭಾವವನು ಹಿಡಿತ ಬಿಡದೆ,
ಸುಕರ ಪದವಿಗೆ ಮಾರ್ಗವದು ಸುಲಭ ವೇಮ.

ಶುದ್ಧ ಸತ್ವಮತ್ತು ಪ್ರೇಮ ಧಾರೆಯ ಭಾವವು ನೆಲೆಗೊಂಡಂಥ ಪೂರ್ಣ ಪ್ರಜ್ಞೆಯನ್ನು ಹೊಂದಿ, ಯಾವುದೇ ವಿಕಾರ ಹೊಂದದೆ ನಿರ್ವಿಕಾರವಾಗಿ, ನಿತ್ಯವಾಗಿ ಸುಂದರ ಪದವಿಯುಂಟು. ಭಾವವನ್ನು ಸತತ ಹೊಂದಿ, ಹಿಡಿದ ಹಿಡಿತ ಬಿಡದಿದ್ದು ಸಾಗಿದರೆ, ಸುಂದರ ಪದವಿ ಪಡೆಯಲು ಮಾರ್ಗ ಸುಲಭವಾಗುತ್ತದೆ.

ಕಂ. ಜೀವಾಧಾರನು ರುದ್ರನು
ಸೇವಾರ್ಚನೆ ಪರನಾಗುತ, ಸ್ಥಿರಮತಿ ಬೆಳಗಲ್,
ಭಾವಾತೀತ ಪರನಾಗಿ,
ಭಾವಿಸು ನೀ ಮನದ ಬಯಲು, ಘನತೆಯು ವೇಮಾ.

ವೇಮನ ಸಾಹಿತ್ಯದಲ್ಲಿ ಶಿವ, ರುದ್ರ, ಬ್ರಹ್ಮ ಇವು ಪರ್ಯಾಯ ಪದಗಳಷ್ಟೇ.

ರುದ್ರನು ಜೀವನಿಗೆ ಆಧಾರವಾಗಿದ್ದಾನೆ. ಅವನ ಸೇವೆ ಗೆಯ್ದು, ಪ್ರಾರ್ಥಿಸುವಲ್ಲಿ

ಆಸಕ್ತಿ ವಹಿಸಿ ಸ್ಥಿರ ಮತಿಯು ಬೆಳಗಲು ಸಾಧಕನು ಭಾವಾತೀತ ಪರನಾಗಬೇಕು. ಭಾವ ಜಗತ್ತಿನಿಂದ ಆತ್ಮಿಕ ಜಗತ್ತಿಗೆ ಏರುಮುಖನಾಗಬೇಕು. ಆಗ ಮನದಲ್ಲಿ ಸಂಕಲ್ಪ ವಿಕಲ್ಪಗಳ ತೆರೆಗಳೇಳದ ಬಯಲನ್ನು ಭಾವಿಸಬೇಕು. ಅದುವೇ ಘನತೆ ಎನ್ನಿಸುತ್ತದೆ.

ಆ. ಜೀವ ವಶದ ರೀತಿ, ಚಿನ್ಮಾತ್ರ ತನು ಮಿಂಚಿ,
ಭಾವ-ಮಮತೆ, ಅಮರಿ ಪಟ್ಟು ಹಿಡಿದು,
ಕೂಡಿ, ಹಂಸ ಮನದಿ, ಕರ್ಮ ಸನ್ಯಾಸಿಯೈ.
ವಿಶ್ವದಾಭಿರಾಮ ಕೇಳು ವೇಮ.

ಜೀವ ಭಾವವು ವಶವರ್ತಿಯಾದ ರೀತಿಯನ್ನು ಸೂಚಿಸುವ, ಅರಿವಿನ ಸೂಕ್ಷ್ಮ ತನುವನ್ನು ದಾಟಿ, ಭಾವವೇ ನಾನೆಂಬ ತಿಳಿವು ಅಂಟಿ, ಅದನ್ನು ಬಿಡದೆ ಹಿಡಿಯಬೇಕು. ಆಗ ಮನದಲ್ಲಿ ಜೀವ ಹಂಸನು ಅಂದರೆ 'ಹಂ ಸೊ' ಮಂತ್ರ ಜಪವು ಕೂಡುತ್ತದೆ. ಆಗ ಮಸ್ತು ಜಗತ್ತಿನಿಂದ ಮೇಲೇರಿ ಭಾವ ಜಗತ್ತಿಗೆ ಸೇರುತ್ತಾನೆ. ಮತ್ತು ಕರ್ಮ ಸನ್ಯಾಸಿಯಾಗುತ್ತಾನೆ. ಅವನಾವ ಕರ್ಮ ಫಲಗಳಿಗೂ ಬದ್ಧನಾಗುವುದಿಲ್ಲ.

ಆ. ಜೀವವೆಲ್ಲಿ ಉಂಟು ? ಭಾವವೆಲ್ಲಿ ಉಂಟು ?
ಕೀಳು ಪುರವು ಎಲ್ಲಿ ಕಲೆತು ಉಂಟು ?
ಒಪ್ಪವಿಪ್ಪ ತಾಣ ಏಕೆ ಅರಿತುಕೊಳರು ?
ವಿಶ್ವದಾಭಿರಾಮ ಕೇಳು ವೇಮ.

ಜೀವ ಚೈತನ್ಯವು ಎಲ್ಲಿದೆ ? ಭಾವ ಸ್ಫುರಣೆಯು ಎಲ್ಲಿ ಉಂಟಾಗುತ್ತದೆ ? ತ್ರಿಗುಣಗಳ ಕೀಳು ಪುರವು ಇವುಗಳೊಂದಿಗೆ ಕಲೆತು ಎಲ್ಲಿ ಇದೆ ? ಇದನ್ನು ವಿವೇಚಿಸಿ, ಲಕ್ಷ್ಯ ಮಸ್ತುವಿನ ದೇಶಬಂಧವನ್ನು ಏಕೆ ಅರಿತುಕೊಳ್ಳರು ?

ಆ. ಜೀವನಕ್ಕಸಾಲಿ ಜಗದೊಳಗೆ ತಿಳಿಯಲು,
ಭಾವವಪ್ಪ ತಾನೆ ಪರಮ ಶಿವನು.
ವಾಯುವೆನಲು ಅವನು ಮಸುಧೆ ಬ್ರಹ್ಮನಲ್ತೆ ?
ವಿಶ್ವದಾಭಿರಾಮ ಕೇಳು ವೇಮ.

ಅಕ್ಕಸಾಲಿಯು ಸ್ವರ್ಣ ಗಟ್ಟಿಯನ್ನು ಬಗೆ ಬಗೆಯ ಆಭರಣಗಳಾಗಿ ಮಾಡುತ್ತಾನೆ. ಆ ರೀತಿ ಜೀವನು ಪರಮ ಶಿವನನ್ನು ಭಿನ್ನ ಭಿನ್ನ ರೂಪಗಳಲ್ಲಿ ಜಗದಲ್ಲಿ ನೋಡುತ್ತಾನೆ. ಹಾಗಾಗಿ ಜೀವನು ಅಕ್ಕಸಾಲಿಯಂತೆ. ಪರಮ ಶಿವನು ತಾನೇ ಭಾವವಾಗಿದ್ದಾನೆ. ಅಂದರೆ ಶುದ್ಧ ಸತ್ವ ಗುಣವೂ ಪ್ರೇಮ ಪ್ರೇರಕನೂ ಆಗಿದ್ದಾನೆ. ಇನ್ನು ಮಸ್ತು ಜಗತ್ತಿನಿಂದ ಭಾವ ಜಗತ್ತಿಗೆ ಜೀವನನ್ನು ಉದ್ದೀಪಿಸುವ ಪ್ರಾಣವಾಯುವು, ಮಸುಧೆಯಲ್ಲಿ, ಎಲ್ಲವನ್ನೂ ಬೃಹತ್ತಾಗಿಸುವ ಬ್ರಹ್ಮವಲ್ಲವೇ ?

ಆ. ಜೀವ ಭಾವವರಿಯೆ, ಕೆಡದೆಂದಿಗು ಮತಿ ;
ದೈವವನ್ನು ಅರಿಯೆ, ತನಗೆ ಬುದ್ಧಿ.
ತೇಜ ಉದಿಸಿದಾಗ ತಿಮಿರ ನಿಲ್ಲದಲ್ಲ ?
ವಿಶ್ವದಾಭಿರಾಮ ಕೇಳು ವೇಮ.

ಜೀವ ಭಾವವನ್ನು ಸರಿಯಾಗಿ ಅರಿತುಕೊಂಡರೆ ಮತಿಯು ಎಂದಿಗೂ ಕೆಡದು. ಜೀವದ ಪ್ರವೃತ್ತಿಗಳೇನು ? ಇತಿ ಮಿತಿಗಳೇನು ? ಅದು ಯಾವ ಮಟ್ಟದ ವರೆಗೆ ತತ್ತ್ವವನ್ನು ಅರಿಯಬಲ್ಲದು ? ಎಂಬುದನ್ನೆಲ್ಲ ಅರಿಯಬೇಕು. ಇನ್ನು ದೈವವನ್ನು ಅರಿತರೆ ತನ್ನ ಬುದ್ಧಿಯು ಲಕ್ಷ್ಯದ ಮೇಲೆ ಕೇಂದ್ರೀಕೃತವಾಗಿ ಮೊನಚಾಗಿರುತ್ತದೆ. ಆತ್ಮ ತೇಜವು ಕೊನೆಗೊಮ್ಮೆ ಮೂಡಿದಾಗ ಅಜ್ಞಾನ ತಿಮಿರವು ನಿಲ್ಲದು.

ಜೀವಿಯಲ್ಲಿ ಭ್ರಮೆಯು ಸೇರಿಕೊಂಡು ಉಂಟು.
ಜೀವ ಭ್ರಮೆಗಳಲಿ ಸಿಕ್ಕನೆಂದೂ.
ಜೀವಿ ಜೀವಿಯಿದ್ದು ಚಿನ್ಮಾತ್ರವದು ಬಯಲು.
ವಿಶ್ವದಾಭಿರಾಮ ಕೇಳು ವೇಮ.

ಜೀವಿಯಲ್ಲಿ ಭ್ರಾಂತಿ ಸೇರಿಕೊಂಡು ಉಂಟು. ಆದರೆ ಜೀವಾತ್ಮನು ಎಂದೂ ಭ್ರಮೆಯಲ್ಲಿ ಸಿಕ್ಕು ಬೀಳನು. ಜೀವಿಯು ಜೀವಿಯಾಗಿಯೇ ಉಳಿಯುತ್ತಾನೆ. ಚಿನ್ಮಾತ್ರವು ಅಂದರೆ ಅರಿವಿನ ಸೂಕ್ಷ್ಮ ಅವಸ್ಥೆಯು ಸಂಕಲ್ಪ ವಿಕಲ್ಪಗಳ ತರಂಗಗಳಿರದ ಬಯಲೇ ಆಗಿದೆ.

ಆ. ಜೀವನಿಳೆಯ ತುಂಬಿ, ಸೃಷ್ಟಿಯೊಳಗೆ ತುಂಬಿ,
ಶಿವನ ಹುಡುಕ ಹೋಹ, ಜೀವನಹಹ !
ಜೀವನೆ ಶಿವನಿಹ ಚಿಹ್ನೆಯನು ತಿಳಿಯದೆ.
ವಿಶ್ವದಾಭಿರಾಮ ಕೇಳು ವೇಮ.

ಇಳೆಯಲ್ಲಿ ಎಲ್ಲೆಡೆ ಜೀವ ತುಂಬಿಕೊಂಡಿದೆ. ಶರೀರಗಳು ಬೇರೆ ಬೇರೆಯಾದರೂ ಜೀವ ಸ್ವರೂಪವು ಒಂದೇ. ಇಳೆಯಲ್ಲಿ ಅಷ್ಟೇ ಏಕೆ ? ಈ ಸೃಷ್ಟಿ ಕ್ರಮದ ಧಾರೆಯಲ್ಲೆಲ್ಲ ವಿಭಿನ್ನ ತತ್ತ್ವಗಳಲ್ಲಿ ಜೀವನು ತುಂಬಿಕೊಂಡಿದ್ದಾನೆ. ಹೀಗಿದ್ದು ಜೀವನು 'ಸರ್ವಂ ಶಿವಮಯಂ ಜಗತ್' ಅಂದರೆ ಈ ಜಗತ್ತೆಲ್ಲವೂ ಶಿವನಿಂದ ತುಂಬಿದೆ, ಎಂಬುದನ್ನು ಅರಿತಿದ್ದಾನೆ. ಹೀಗಿದ್ದೂ ಜೀವಿಯು ಶಿವನನ್ನು ಹುಡುಕಲು ಹೊರಟಿರುವುದು ಅಚ್ಚರಿಯಲ್ಲವೇ ? ಅವನೀಗ ತಿಳಿಯಬೇಕಾದುದು ಇಷ್ಟೇ. ಏನೆಂದರೆ ಜೀವಿಯೇ ಶಿವನಾಗಿದ್ದಾನೆ ಎಂದು. ಜೀವನು ಶಿವನ ಚಿಹ್ನೆಯನ್ನು ತಿಳಿಯದೆ ಅತ್ತಿತ್ತ ಅಲೆಯುತ್ತಿದ್ದಾನೆ.

ಆ. ಆತ್ಮದಲ್ಲಿ ದೃಷ್ಟಿ ಅನುವಿನಿಂದ ಕುದುರಿ,
ನಿಶ್ಚಲಾಗಿ ದೃಷ್ಟಿ ಕುದುರಿದಾಗ,
'ಅವನು' ನೀನೇ ಕಣಾ ! ಅನುಮಾನವೇತಕೆ ?
ವಿಶ್ವದಾಭಿರಾಮ ಕೇಳು ವೇಮ.

ಅನುಕೂಲಿಸಿ ಆತ್ಮದೃಷ್ಟಿ ಕುದುರಿದಾಗ, ನಿಶ್ಚಲವಾದ ದೃಷ್ಟಿ ಅರಳಿದರೆ, ಆ ದೇವನು ನೀನೇ ಕಾಣು. ಅನುಮಾನವೇಕೆ ?

ಆ. ಆತ್ಮ ಬುದ್ಧಿಯಿಂದ ಅಖಿಲವು ತಾನಾದ.
ಜೀವ ಬುದ್ಧಿಯಿಂದ ಜೀವನಾದ.
ಮೋಹ ಬುದ್ಧಿ ಲಯಿಸಿ, ಮೊದಲನೆ ಕಂಡುಕೋ.
ವಿಶ್ವದಾಭಿರಾಮ ಕೇಳು ವೇಮ.

ಸಂಕಲ್ಪ ವಿಕಲ್ಪಗಳನ್ನು ನಿಲ್ಲಿಸಿ, ನಿರ್ಮಲವಾದ ಆತ್ಮ ಬುದ್ಧಿಯಿಂದ ಅಖಿಲವೂ ತಾನಾಗುತ್ತಾನೆ. ಸರ್ವ ಭೂತಾಂತರಾತ್ಮನಾಗುತ್ತಾನೆ. ಯಾವಾಗ ಅನಾತ್ಮ ತತ್ತ್ವಗಳೊಂದಿಗೆ ಅಹಂಕಾರ, ಮಮಕಾರ ಹೊಂದಿ ಜೀವ ಬುದ್ಧಿಯನ್ನು ಹೊಂದುವನೋ, ಆಗ ತಾನು ಜೀವನೆನಿಸುತ್ತಾನೆ. ಜೀವ ಬುದ್ಧಿಗೆ ಕಾರಣವಾದ ವ್ಯಕ್ತಿ, ವಸ್ತು, ವಿಚಾರಗಳಲ್ಲಿ ಉದಿಸಿದ ಮೋಹ ಬುದ್ಧಿಯನ್ನು ಲಯಿಸಿ, ಮೊದಲಿನ ಅವಸ್ಥೆಯನ್ನು ಎಂದರೆ ಆತ್ಮವನ್ನು ಕಂಡುಕೋ.

ಕಂ. ಜೀವನ ತಿಳಿದರೆ, ತನುವೇ
ದೇವನು, ಭ್ರಮೆ ಕಳೆದು, ನರನೆ ದೇವನು, ನೆನೆವೊಲ್,
ಜೀವನು ಎನುವುದ ವಿವರಿಸಿ,
ಭಾವಿಪುದೆ ಮುಕ್ತಿಯು, ಬಟ್ಟಬಯಲ್ಗೆ, ವೇಮಾ.

ಜೀವನನ್ನು ತಿಳಿದು ಕೊಂಡರೆ, ದೇಹಾತ್ಮ ಬುದ್ಧಿಯ ಅಂದರೆ ತನುವೇ ದೇವರು ಎಂಬ ಭ್ರಮೆಯು ಕಳೆದು, ನರನೆ ದೇವನು, ನರ ನರಾಯಣ, ಎಂದು ಗ್ರಹಿಸಿ ಧ್ಯಾನಿಸಬಹುದು. ಆಗ ಜೀವ ಎನ್ನುವುದನ್ನು ವಿವರಿಸಿ, ಶುದ್ಧ ಸತ್ವ ಮತ್ತು ಪ್ರೇಮ ಪೂರ್ಣವಾಗಿ ಭಾವಿಸುವುದೇ ಇಹದ ಬಂಧನದಿಂದ ಮುಕ್ತಿಯೆನಿಸುತ್ತದೆ. ಆಗ ಅಸ್ತಿತ್ವದ ಅರಿವು ಬಟ್ಟಬಯಲನ್ನು ಸೇರುತ್ತದೆ.

ಆ. ತನ್ನೊಳಿರುವ ಜೀವ ತತ್ತ್ವ ತಿಳಿಯದಿರಲು,
ಹೊರಗೆ ಎಂದು ತಿಳಿದು, ಹುಡುಕುತಿಹುದು.
ಭಾನುವರಿಯೆ, ದೀಪ ಪಿಡಿದ ರೀತಿಯಾಯ್ತು.
ವಿಶ್ವದಾಭಿರಾಮ ಕೇಳು ವೇಮ.

ಜೀವ ತತ್ತ್ವವು ತನ್ನೊಳಗೇ ಇದೆ. ಅನಾತ್ಮವು ನಾನು, ಅದು ನನ್ನದು ಎಂದು ಭ್ರಮಿಸಿ ಜೀವ ಭಾವವು ಮೂಡಿದೆ. ವಿವೇಕದಿಂದ ಜೀವ ತತ್ತ್ವವನ್ನು ವಿವೇಚಿಸಿ ತಿಳಿಯದಿರಲು, ಆ ತತ್ತ್ವವು ಹೊರಗೆ ಇದೆಯೆಂದು ತಿಳಿದು, ಜೀವನು ಹುಡುಕುತ್ತಿರುವನು. ಸೂರ್ಯನನ್ನು ಹುಡುಕುವುದಕ್ಕಾಗಿ ದೀಪವನ್ನು ಹಚ್ಚಿ ಹುಡುಕಲಾರಂಭಿಸಿದಂತೆ ತನ್ನಲ್ಲಿರುವ ಆತ್ಮ ಜ್ಯೋತಿಯನ್ನು, ವ್ರತ ನೇಮಗಳನ್ನು ಆಚರಿಸುತ್ತ, ಹೊರಗೆಲ್ಲಿಯೋ ಹುಡುಕುವ ಪ್ರಯತ್ನವಾಗಿದೆ ಈ ಹುಡುಕಾಟ.

ಆ. ಮನೆಯ ಬಿಟ್ಟುಗೊಟ್ಟು ಮೌನವಾಗಿ ಮನಸು,
ಜೀವವುಡುಗುವ ವೇಳೆ ಶಿವನನರಿಯೆ,
ಮನಸು ಸೇವಿಸುತ್ತ, ಮಾಯೆಯಲಿ ಹೊರಳುವ,
ಪಾಪಿ ಜನರಿಗೆಲ್ಲಿ ಪರವು ವೇಮ ?

ಮನೆಯ ಚಿಂತೆಯನ್ನು ಬಿಟ್ಟುಗೊಟ್ಟು, ಮನಸ್ಸಿನಲ್ಲಿ ಯಾವ ವೃತ್ತಿಗಳೂ ಏಳದಂತೆ ನಿಸ್ತರಂಗಗೊಳಿಸಿ, ಆಂತರಿಕ ಮೌನ ಸಾಧಿಸಿ, ಜೀವವು ಅಂದರೆ ಪ್ರಾಣವು ಉಡುಗುವ ವೇಳೆಗಾದರೂ ಶಿವನನ್ನು ಅರಿಯಬೇಕು. ಆದರೆ, ಹೀಗೆ ಮಾಡದೆ, ಚಂಚಲ ಮನಸ್ಸಿನ ಕಾಮನೆ-ಗಳನ್ನು ಪೂರೈಸುತ್ತ, ಮಾಯೆಯಲ್ಲಿ ಹೊರಳುವ ಪಾಪಿ ಜನರಿಗೆ ಪರವು ದೊರೆಯುವುದೆಲ್ಲಿ ?

ಆ. ಜೀವದಲ್ಲಿ ಆತ್ಮ ಸ್ಥಿರತೆಯನು ಕಾಣದೆ,
ತಿರುಗುವನಸ್ಥಿರದ ಗುರಿಯ ನಂಬಿ.

ಸ್ಥಿರವನಸ್ಥಿರ ತಿಳಿಯೆ ಜೀವಿಗಿಹುದು ಮುಕ್ತಿ.
ವಿಶ್ವದಾಭಿರಾಮ ಕೇಳು ವೇಮ.

ಪರಮಾತ್ಮನು ಸರ್ವ ವ್ಯಾಪಿಯಾಗಿದ್ದಾನೆ. ಪರಮಾತ್ಮನೇ ಶರೀರದಲ್ಲಿ ಆತ್ಮವಾಗಿ ಪ್ರತಿಬಿಂಬಿಸುತ್ತಾನೆ. ನೀರಿನ ಪಾತ್ರೆಯಲ್ಲಿ ಸೂರ್ಯನು ಪ್ರತಿಫಲಿಸುವಂತೆ, ಜೀವನಲ್ಲಿ ಪ್ರತಿಫಲಿಸುವ ಆತ್ಮವು ಅಂದರೆ ಪರಮಾತ್ಮ ಬಿಂಬವು ಸ್ಥಿರವಾಗಿರುತ್ತದೆ. ಆದರೆ ಜೀವನು ಆ ಸ್ಥಿರತೆಯನ್ನು ಕಾಣುವುದಿಲ್ಲ. ಹೀಗಾಗಿ ಅವನು ತೀರ್ಥ ಕ್ಷೇತ್ರಗಳಲ್ಲಿ, ಗುಡಿ ಗುಂಡಾರಗಳಲ್ಲಿ ಇರುವ ಅಸ್ಥಿರವನ್ನು ಹುಡುಕುವ ಗುರಿ ಇರಿಸಿಕೊಂಡು ತಿರುಗಾಡುತ್ತಾನೆ. ಯಾವಾಗ ಜೀವಿಗೆ ಯಾವುದು ಸ್ಥಿರ ? ಮತ್ತಾವುದು ಅಸ್ಥಿರ ? ಎಂಬ ತಿಳಿವು ಮೂಡುವುದೋ, ಆಗ ಅವನಿಗೆ ವ್ಯರ್ಥ ಹುಡುಕುವಿಕೆಯಿಂದ ಬಿಡುಗಡೆಯಾಗುತ್ತದೆ.

ಕಂ. ಜೀವಿಯು ಶಾಶ್ವತ ರೂಪವ,
ಭಾವದಲಿ ನಿಲಿಸುತ ಅಂತರ್ಮುಖಿಯಿರಲಾಗಳ್,
ಕೇವಲ ನಿರ್ಗುಣವದಾಯ್ತು.
ಕಾವರವನು ಕಡೆಗೆ ಕೊಚ್ಚಿ ಕಾಣ್ಮೆ ವೇಮ.

ಸತ್ವ, ಶುದ್ಧ ಮತ್ತು ಪ್ರೇಮಪೂರ್ಣ ಭಾವದಲ್ಲಿ ಜೀವಿಯು ಶಾಶ್ವತ ರೂಪವಾದ ಆತ್ಮವನ್ನು ನಿಲ್ಲಿಸುತ್ತ ಅಂತರ್ಮುಖಿಯಾಗಿರಲು, ಕೇವಲ ನಿರ್ಗುಣ ಸ್ಥಿತಿಯು ಪ್ರಾಪ್ತವಾಗುತ್ತದೆ. ಅಹಮಿಕೆಯನ್ನು ಕೊನೆಗೆ ಕೊಚ್ಚಿ ಹಾಕಿ ಆ ನಿರ್ಗುಣ ಪದವನ್ನು ಕಾಣು.

ಆ. ನೀರಿನಲಿ ಹುಟ್ಟಿತು ಕ್ಷಾರವು
ಕ್ಷಾರವು ನೀರಾಯ್ತು, ನೀರು ಕ್ಷಾರವು ಒಂದೇ.
ಈ ರೀತಿ ಶಿವನು ಜೀವನು
ಧಾರುಣಿಯಲಿಹುದ ಮನದಲಿ ಅರಿಯ್ಮೆ, ವೇಮಾ.

ನೀರಿನಲ್ಲಿ ಕ್ಷಾರವು (ಉಪ್ಪು) ಹುಟ್ಟುತ್ತದೆ. ಸಾಗರದ ನೀರನ್ನು ಮಡಿಗಳಲ್ಲಿ ನಿಲ್ಲಿಸಿ, ಬಾಷ್ಪೀಕರಿಸಿ ಉಪ್ಪನ್ನು ತಯ್ಯಾರಿಸುತ್ತಾರೆ. ಮೊದಲು ಬೆಟ್ಟ, ಬಯಲು ಸೀಮೆಯಿಂದ ಹೊಳೆ ಹಳ್ಳಗಳಾಗಿ ಹರಿದು ಬರುವ ನೀರು ಭೂಮಿಯಲ್ಲಿಯ ಲವಣ ಆಮ್ಲಗಳ ಮಿಶ್ರಣವನ್ನು ತನ್ನಲ್ಲಿ ಕರಗಿಸಿಕೊಂಡು ಸಮುದ್ರಕ್ಕೆ ಸೇರುತ್ತದೆ. ಹೀಗೆ ಕ್ಷಾರವು ನೀರಾಗುತ್ತದೆ. ನೀರು ಮತ್ತು ಕ್ಷಾರಗಳು ಒಂದೇ ದ್ರವ ಪದಾರ್ಥಗಳಾಗುತ್ತವೆ. ಅದೇ ರೀತಿ ಶಿವನು ನೀರಾದರೆ ಜೀವನು ಕ್ಷಾರ ಪದಾರ್ಥವಾಗಿ ಧರಣಿಯಲ್ಲಿ ಇರುವುದನ್ನು ಮನದಲ್ಲಿ ಅರಿಯಬೇಕು.

ಆ. ಜೀವಿ ಜೀವಿ ಕೊಲಲು, ಶಿವನ ಕೊಲೆಯೆ ಆಯ್ತು.
ಜೀವನರಸಿ ತಿಳಿಯೆ ಶಿವನೆ ಅಲ್ತೆ ?
ಭಾವದಲಿ ಬೇಗ ಪರಿಕಿಸಿ ನೋಡಿಕೋ.
ವಿಶ್ವದಾಭಿರಾಮ ಕೇಳು ವೇಮ.

ಜೀವಿಯನ್ನು ಆಳ ಚಿಂತನ ಮೂಲಕ ಅಭ್ಯಸಿಸಿದರೆ, ಶುದ್ಧ ಶಿವ ತತ್ವಕ್ಕೆ ಮೋಹ, ಮಮತೆ ಮುತ್ತಿದ ರೂಪವೇ ಜೀವವೆನಿಸುತ್ತದೆ ಎಂಬುದು ತಿಳಿದು ಬರುತ್ತದೆ. ಆದ್ದರಿಂದ

ಜೀವನನ್ನು ಅರಸಿ ತಿಳಿದರೆ ಶಿವನೇ ಅಲ್ಲವೆ ? ಎನಿಸದಿರದು. ಅಂದ ಮೇಲೆ ಜೀವಿಯು ಜೀವಿಯನ್ನು ಕೊಂದರೆ ಶಿವನ ಕೊಲೆಯೇ ಆಗುತ್ತದೆ. ಆದ್ದರಿಂದ ಯಜ್ಞದಲ್ಲಾಗಲಿ, ಬೇರೆಲ್ಲಿಯೇ ಆಗಲಿ ಜೀವ ಹಿಂಸೆ ನಿಷಿದ್ಧ. ಇದನ್ನೆಲ್ಲ ಸತ್ವ ಶುದ್ಧ, ಪ್ರೇಮ ಪೂರ್ಣ ಭಾವದಲ್ಲಿ ವಿಮರ್ಶಿಸಿ ನೋಡಿರಿ.

''ಸಾಂಖ್ಯ ಯೋಗದಲ್ಲಿ ಸರ್ವವೂ ಶಿವನೆಂದು, ನಿಶ್ಚಯಿಸುತ್ತಿರುವವನೆ ನಿರ್ಮಲಿಹನು. ಶಿವನೊಳಗೆ ಜೀವನು, ಜೀವನೊಳಗೆ ಶಿವನಿರುವನು. ಇದನ್ನು ಅರಿಯುವವನೇ ಯೋಗ ದೃಕ್''

ಆ. ಕೇವಲಂತರಾತ್ಮ ಜೀವ ; ನಿಜವಿದೆಂದು
ವ್ಯರ್ಥ ವಾದ ಮಾಡುವವರ ತುಳಿದು,
ತುಳಿದು ಹಿಡಿದು, ಜಿಹ್ವೆ ತುದಿ ಕೊಯ್ಯೆ ಪಾಪವೇ ?
ವಿಶ್ವದಾಭಿರಾಮ ಕೇಳು ವೇಮ.

ಕೇವಲ ಅಂತರಾತ್ಮನು ಪರಮಾತ್ಮನ ಬಿಂಬವಷ್ಟೇ. ಆದರೆ ಜೀವನು ಅನಾತ್ಮ ತತ್ವಗಳ ಮೋಹ ಮಮತೆಗಳಿಗೆ ಜೋತು ಬಿದ್ದ ಸತ್ತೆಯಾಗಿದ್ದಾನೆ. ಈ ಮೋಹ ಮಮತೆಗಳು ಅಳಿಯದೆ, ಅವನು ಅಂತರಾತ್ಮನೆನಿಸನು. ಆದರೆ ಕೆಲವರು ಜೀವನೇ ಕೇವಲ ಅಂತರಾತ್ಮನೆಂದೂ ಜೀವನು ನಿಜವೆಂದೂ ವ್ಯರ್ಥ ವಾದ ಮಾಡುತ್ತಾರೆ. ಅವರನ್ನು ತುಳಿದು ತುಳಿದು ಹಿಡಿದು ಅವರ ನಾಲಗೆಯ ತುದಿಯನ್ನು ಕೊಯ್ಯಬೇಕು. ಹಾಗೆ ಮಾಡಿದರೆ ಪಾಪವೇನಿಲ್ಲ. ವ್ಯರ್ಥ ವಾದವಾದರೂ ನಿಲ್ಲುತ್ತದೆ.

ಆ. ದೂರ ಯೋಚನೆಗೂ ದೂರವಿಹುದು ದೈವ ;
ತನುವು ದೂರವಾಗೆ ತಗುಲಿತಾಗ.
ಜೀವಿ ದೂರ ಗೆಯ್ಮೆ ದೇವ ತಾನಾಗುವ.
ವಿಶ್ವದಾಭಿರಾಮ ಕೇಳು ವೇಮ.

ದೈವವು ಗೂಢವಾಗಿದೆ. ಪ್ರಜ್ಞೆಯ ಅಳವಿಗೆ ಅದು ಮೀರಿದೆ. ಹಾಗಾಗಿ ದೂರ ಯೋಚನೆಗೂ ದೂರವಿಹುದು ದೈವ. ಆದರೆ ಯಾವಾಗ ದೇಹಾತ್ಮ ಬುದ್ಧಿಯು ದೂರವಾಗುವುದೋ, ಆಗ ದೈವದ ಹೊಂಗಿರಣ ಕಾಣ ಹತ್ತುತ್ತಿದೆ. ಅಂತೂ ಅನಾತ್ಮದೊಂದಿಗೆ ಬೆಳೆಸಿಕೊಂಡ ಅಹಂಕಾರ-ಮಮಕಾರಗಳುಳ್ಳ ಜೀವಭಾವವನ್ನು ದೂರ ಮಾಡಿದರೆ ತಾನೇ ದೇವನಾಗುತ್ತಾನೆ.

ಜೀವಾತ್ಮ ಪರಮಾತ್ಮ ಭೇದಾಭೇದಗಳನ್ನು ಕುರಿತು ತಿಳಿಯಪಡಿಸುವ ಕೂಟ ಪದ್ಯವೊಂದು ಇಲ್ಲಿದೆ.

ಆ. ಅವನು[1] ಅವನು[2] ಅಲ್ಲ ; ಅವನ[1] ಒಳಗೆ ಉಂಟು.
ಅವನೆ[2] ಅವನು[1], ಅವನು[1] ಅವನು[2] ಅಲ್ಲ,
ಅವನು[2] ಅವನ[1] ಬೆರೆಯೆ, ಅವನೆ[2] ಹೋಗು ಬ್ರಹ್ಮ.
ವಿಶ್ವದಾಭಿರಾಮ ಕೇಳು ವೇಮ.

ಅವನು[1] ಎಂದರೆ ಪರಮಾತ್ಮ ; ಅವನು[2] ಎಂದರೆ ಜೀವಾತ್ಮ. ಸ್ವರೂಪದಲ್ಲಿ

ಜೀವಾತ್ಮನು ಪರಮಾತ್ಮನಲ್ಲ. ಆದರೆ ಜೀವಾತ್ಮನು ಪರಮಾತ್ಮನೊಳಗೇ ಇದ್ದಾನೆ. ಜೀವಾತ್ಮನು ಅನಾತ್ಮದೊಂದಿಗೆ ಇರುವ ಮಮತೆ ಮೋಹಗಳನ್ನು ತೊರೆದರೆ ನಿರುಪಾಧಿಕನಾದರೆ, ಜೀವಾತ್ಮನೇ ಪರಮಾತ್ಮನು. ಆದರೆ ಎಲ್ಲಿಯವರೆಗೆ ಅನಾತ್ಮದ ಮಮತೆ ಮೋಹಗಳಿವೆಯೋ, ಎಲ್ಲಿಯವರೆಗೆ ಪರಿಚ್ಛಿನ್ನನೋ, ಎಲ್ಲಿಯವರೆಗೆ ಅಪೂರ್ಣನೋ, ಅಲ್ಲಿಯ ವರೆಗೆ ಜೀವಾತ್ಮನು ಪರಮಾತ್ಮನಲ್ಲ. ಆದರೆ ಎಲ್ಲ ಮಮತೆ ಮೋಹಗಳನ್ನು ಕಳಚಿ ಹಾಕಿ ಪರಿಶುದ್ಧನಾಗಿ ಜೀವನು ಪರಮಾತ್ಮನಲ್ಲಿ ಬೆರೆಯಲು, ಆ ಕೂಟವೇ ಬ್ರಹ್ಮವೆನಿಸುತ್ತದೆ.

ಗೀತ ಅಮಲ ಅವ್ಯಯ ಚಿಂತನವು 'ಅಸಿ' ಪದವು.
ಕೋರಿ, ಜೀವೇಶ್ವರೈಕ್ಯವ, ಕೂಡಿಕೊಳಲು,
ಅವಿರತಾಗಿಹುದು ; ಪರಿಪೂರ್ಣ ಅಮರವಯ್ಯ.
ಬರಿಯ ವಾದದಲಿ ಸಿಕ್ಕದಲ್ಲ ; ಬರಿದೆ ವೇಮ.

ತತ್ ತ್ವಮ್ ಅಸಿ ಎಂಬ ಉಪನಿಷತ್ತಿನ ಮಹಾವಾಕ್ಯದ ಅರ್ಥವೆಂದರೆ ಅದೇ ನೀನು ಆಗಿದ್ದೀ ಎಂದು. ಈ ಮಹಾವಾಕ್ಯದ 'ಅಸಿ' ಪದ ಅರ್ಥವೆಂದರೆ, ಅದೇ ನೀನು ಎಂಬ ಚಿಂತನವು ಯಾವುದೇ ಮಲಗಳಿಂದ ದೂರವಾದುದೂ ಬದಲಾಗದುದೂ ಆಗಿದೆ. ಇಲ್ಲಿ ಜೀವ ಈಶ್ವರರ ಐಕ್ಯವನ್ನು ಕೋರಿ ಕೂಡಿಕೊಳ್ಳಲು, ಆ ಕೂಟವು ನಿರಂತರವಾಗಿರುವುದು, ಪರಿಪೂರ್ಣವಾಗಿರುವುದು ; ಅಮರವಾಗಿಹುದು.

ಆ. ಜೀವಿ ಜೀವಿ ಕೊಂದು ಜೀವಿಗಿಕ್ಕುತಿಹರು.
ಜೀವಿಯಿಂದಲೇನು ಕಷ್ಟ, ನಿನಗೆ ?
ಜೀವ ಹಿಂಸಕರಿಗೆ ಸಿಕ್ಕುವುದೇ ಮೋಕ್ಷ ?
ವಿಶ್ವದಾಭಿರಾಮ ಕೇಳು ವೇಮ.

ಕೆಲ ಜೀವಿಗಳು ಇತರ ಕ್ಷುದ್ರ ಜೀವಿಗಳನ್ನು ಬೇರೊಂದು ಜೀವಿಗೆ ಆಹಾರವಾಗಿ ಇಕ್ಕುತಿಹರು. ಜೀವಿಯಲ್ಲಿ ಚೇತನವು ವಿಕಾಸಗೊಂಡಿದೆ. ಅದು ಶಿವನ ಅಂಶವಾಗಿದೆ. ಜೀವಿಗಳಿಂದ ನಿಮಗಾಗುವ ಕಷ್ಟವೇನು ? ವಿಕಸಿಸುವ ಚೈತನ್ಯವನ್ನು ಮೊಟಕುಗೊಳಿಸುವುದೇಕೆ ? ಜೀವ ಹಿಂಸಕರು ಒಂದು ಅರ್ಥದಲ್ಲಿ ಶಿವನ ಹಿಂಸಕರೇ. ಅವರಿಗೆ ಮೋಕ್ಷವು ಸಿಗುವುದೆಂತು ?

ಆ. ಹೊಲಸು ದೇಹದಲ್ಲಿ ಹತ್ತಿಕೊಂಡ ಜೀವಿ,
ಕರ್ಮ ಪಾಶಗಳಲಿ, ಕಟ್ಟಿದಂಥ
ಕರ್ಮ ಜೀವಿಗೆಂತು ಕೊನರುವುದು ಮೋಕ್ಷವು ?
ವಿಶ್ವದಾಭಿರಾಮ ಕೇಳು ವೇಮ.

ಜೀವಿಯ ವಿಕ್ಷೇಪ ಮತ್ತು ಆವರಣೇ ಮಲಗಳು ಹೊಲಸಾದ ಈ ದೇಹಕ್ಕೆ ಹತ್ತಿಕೊಂಡಿವೆ. ಅದರಲ್ಲಿ ನಾನು ನನ್ನದು ಎಂಬ ಮೋಹ ತಾಳಿದೆ. 'ಅಹಂ ಕರ್ತಾ, ಫಲ ಭೋಕ್ತಾ'. ಅಹಂ ಕರ್ಮ ಮಾಡುತ್ತದೆ. ಕರ್ಮ ಪಾಶಕ್ಕೆ ಕಟ್ಟುಬಿದ್ದು ಫಲ ಭೋಗಿಸುತ್ತದೆ ಎಂದು ಅರಿಯಬೇಕು. ಹೀಗೆ ಮಾಡದ ಜೀವಿಯು ಕರ್ಮಪಾಶದಲ್ಲಿ ಸಿಲುಕಿದ್ದಾನೆ. ಹಾಗಾಗಿ ಅವನಿಗೆ ಮೋಕ್ಷವು ಹೀಗೆ ಕೊನರುವುದು?

ಆ. ಜಿಹ್ವೆ ರಸದಿಂದಲಿ ಜೀವ ಪೋಷಣೆಯಿದೆ.
ಬ್ರಹ್ಮವೆಂಬ ರಸವ ಪಡೆಯದಿಹರು.
ರಸವ ಕುಡಿದು ಅಂಥ ರಾಜರು ಸಾಯುವರೇ ?
ವಿಶ್ವದಾಭಿರಾಮ ಕೇಳು ವೇಮ.

ಜಿಹ್ವೆ ರಸದಿಂದ ಅಂದರೆ ಇಂದ್ರಿಯಗಳ ವಿಷಯ ರಸಭೋಗದಿಂದ ಜೀವ ಭಾವ ಪೋಷಣೆಯಾಗುತ್ತದೆ. ಅಂಥ ಜೀವಿಗಳು ವಿಷಯಾಸಕ್ತಿ ತೊರೆದು, ವಸ್ತು ಜಗತ್ತು ಮತ್ತು ಭಾವ ಜಗತ್ತಿನ ಊರ್ಧ್ವಕ್ಕೆ ಸಾಧನ ಮೂಲಕ ನೆಗೆಯಲಾರರು. ಹಾಗಾಗಿ ಬ್ರಹ್ಮ ರಸವನ್ನು ಪಡೆಯರು. ಯಾರು ತಮ್ಮ ದೇಹ ಪುರದ ಎಳೆತ ಸೆಳೆತಗಳನ್ನು ನಿಯಂತ್ರಿಸಬಲ್ಲ ರಾಜರಾಗಿರುವರೋ , ರಾಜಯೋಗಿಯಾಗಿರುವರೋ, ಅವರು ಬ್ರಹ್ಮ ರಸವನ್ನು ಕುಡಿದು ಹೇಗೆ ಸಾಯುತ್ತಾರೆ ? ಅವರು ಅಮೃತರಾಗುತ್ತಾರೆ.

ಆ. ಜೀವ ಭೇದವರಿತು ಸತ್ತು ಹೋದರಲ್ಲ !
ಬ್ರಹ್ಮ ಭಾವ ಹೊಂದಿ ಬಾಳುತಿಹರು.
ನೀರು ಮುತ್ತಾಗಲು ನೀರಾಗಿ ಬದಲದು.
ವಿಶ್ವದಾಭಿರಾಮ ಕೇಳು ವೇಮ.

ನಾನು ಬೇರೆ, ನೀನು ಬೇರೆ, ಅದು ಬೇರೆ ; ಜಾತಿಗಳಲ್ಲಿ ಭೇದವಿದೆ ; ಜೀವ ಬ್ರಹ್ಮರಲ್ಲಿ ಭೇದವಿದೆ ಎಂದು ನಂಬಿದ ಜೀವಾತ್ಮರು ಸತ್ತು ಹೋದರು. ಜನನ ಮರಣ ಚಕ್ರದಲ್ಲಿ ಸಿಲುಕಿದರು. ಎಲ್ಲವೂ ನಿಜವಾಗಿ ಬ್ರಹ್ಮವೇ. 'ಸರ್ವಂ ಖಿಲ್ವದಂ ಬ್ರಹ್ಮ' 'ಬ್ರಹ್ಮ ಮಯಂ ಜಗತ್' ಎಂಬ ಬ್ರಹ್ಮ ಭಾವವನ್ನು ಹೊಂದಿದವರಿಗೆ ಮರಣವಿಲ್ಲ. ಅವರು ತಾವು ತನುವೆಂದು ಎಂದೂ ಭಾವಿಸರು. ದೇಹ ಅಳಿದರೂ ಬ್ರಹ್ಮ ಭಾವದಲ್ಲಿ ಒಂದಾದ ಅವರು ಅಮರರಾಗಿದ್ದಾರೆ. ನೀರು ಸ್ವಾತಿ ಮಳೆಯ ಹನಿಯಾಗಿ ಚಿಪ್ಪು ಮೀನಿನಲ್ಲಿ ಸೇರಿ, ಮುತ್ತಾಗುತ್ತದೆ. ನೀರೇ ಮುತ್ತಾದರೂ ಆ ಮುತ್ತು ಮರಳಿ ನೀರಾಗದು. ಅದೇ ರೀತಿ ಬ್ರಹ್ಮವಾದ ಜೀವಿ ಮತ್ತೆ ಜೀವಿಯಾಗನು.

ಜಗತ್ತು :

ಜಗತ್ತು ಹೇಗೆ ಸೃಷ್ಟಿಯಾಯಿತು ? ಜಗತ್ತಿನ ಸೃಷ್ಟಾ ಯಾರು ? ಸೃಷ್ಟಾನಿಗೂ ಅವನ ಸೃಷ್ಟಿಗೂ ಸಂಬಂಧವೇನು ? ಎಂಬುದನ್ನು ಕುರಿತು ಯೋಗಿ ವೇಮನರ ಪರಿಕಲ್ಪನೆಯನ್ನು ಸಮೀಕ್ಷಿಸೋಣ. ನಮಗೆ ಜಗತ್ತು ವೇದ್ಯವಾಗುವುದು ಹೇಗೆ ?

ಆ. ಪಂಚಭೂತಗಳೂ ಪರಮ ಇಂದ್ರಿಯಗಳು,
ಸಂಚರಿಸುತ ಇರಲು ಜಗತ್ ಉಂಟು.
ಸಂಚರಿಸದೆ ಇರಲು ಜಗವೆಂತಾಗುವುದು ?
ವಿಶ್ವದಾಭಿರಾಮ ಕೇಳು ವೇಮ.

ಪಂಚಭೂತಗಳ ಸೂಕ್ಷ್ಮ ತತ್ತ್ವಗಳಾದ ತನ್ಮಾತ್ರೆಗಳು ಮತ್ತು ಜ್ಞಾನೇಂದ್ರಿಯ ವೃತ್ತಿಗಳು

ಸಂಚರಿಸುತ್ತಿದ್ದರೆ ಚಿತ್ತ ಫಲಕದಲ್ಲಿ ಜಗತ್ತು ವೇದ್ಯವಾಗುವುದು. 'ಗಚ್ಛತಿ ಇತಿ ಜಗತ್' ಅಂದರೆ ಚಲಿಸುವುದರಿಂದ ಜಗತ್ ಎನಿಸುತ್ತದೆ. ತನ್ಮಾತ್ರೆಗಳೂ ಇಂದ್ರಿಯ ವೃತ್ತಿಗಳೂ ಸಂಚರಿಸದಿದ್ದರೆ ಜಗದ ಅರಿವು ಹೇಗಾಗುವುದು ?

ನಮಗೆ ವೇದ್ಯವಾಗದೆ ಜಗತ್ತು ಹೇಗೆ ಸೃಷ್ಟಿಯಾಯಿತು ?

ಆ. ವಿಶ್ವಕರ್ಮ ಬೀಜ ವಿಶ್ವದೊಳಗೆ ಮತ್ತೆ
ಪ್ರಾಣಿಯೆಂಬ ಬಳ್ಳಿ ಪೊಳೆಯುತಿಹುದು.
ಸಾಲು ಬಳ್ಳಿಗಳಳಿಯೆ, ಮೂಲ ಸಾಯದಲ್ಲ !
ವಿಶ್ವದಾಭಿರಾಮ ಕೇಳು ವೇಮ.

ವಿಶ್ವದಲ್ಲಿ ಹರಡಿದ ಪ್ರಾಣಿಗಳೆಂಬ ಬಳ್ಳಿಗಳಿಗೆ ವಿಶ್ವಕರ್ಮನೇ ಬೀಜವಾಗಿದ್ದಾನೆ. ಅದರಿಂದ ಆ ಬಳ್ಳಿಯು ಬೆಳೆದು ಹಬ್ಬುತ್ತಿದೆ. ಬಳ್ಳಿಯ ಸಾಲು ಅಂದರೆ ಪ್ರಾಣಿ ಸಂತತಿಯು ಅಳಿದರೂ ಮೂಲವೇನೂ ಸಾಯದಲ್ಲವೇ ?

ಆ. ವಿಶ್ವಕರ್ಮ ಸೃಷ್ಟಿ ವಿವರವಾಗಿ ಗೆಯ್ಯೆ,
ವಿಶ್ವವೆಲ್ಲ ತೃಪ್ತವಾಗಿ ಉಂಟು.
ವಿಶ್ವಕರ್ಮನಲ್ತೆ ? ವಿಮಲ ವಿರಾಟಾದ.
ವಿಶ್ವದಾಭಿರಾಮ ಕೇಳು ವೇಮ.

ವಿಶ್ವಕರ್ಮನು ಸೃಷ್ಟಿಯನ್ನು ವಿವರವಾಗಿ ಮಾಡಿದನು. ಪಂಚಭೂತಗಳನ್ನು ಸೃಷ್ಟಿಸಿ, ಜೀವಿಗಳಿಗೆ ಅನ್ನ, ನೀರು, ಗಾಳಿ ಸಿಗುವಂತೆ ಮಾಡಿದ. ವನಸ್ಪತಿಗಳನ್ನು ಸೃಷ್ಟಿಸಿದ. ಜಲಚರ, ಭೂಚರ, ಖೇಚರ ಜೀವಿಗಳನ್ನು ಸೃಷ್ಟಿಸಿದ. ಕ್ರಿಮಿ ಕೀಟಗಳನ್ನೂ, ಪರಿಸೃಪಗಳನ್ನೂ, ಪಕ್ಷಿಗಳನ್ನೂ, ಸಸ್ತನ ಪ್ರಾಣಿಗಳನ್ನೂ ವಿವರವಾಗಿ ಸೃಷ್ಟಿಸಿದ. ಆದರಿಂದ ವಿಶ್ವವು ತೃಪ್ತವಾಗಿ ಉಂಟು. ಅವನು ವಿಶ್ವಕರ್ಮನಲ್ಲವೇ ? ಸರ್ವವನ್ನೂ ಒಳಗೊಂಡ ವಿಮಲ ವಿರಾಟ್ ಆದನು.

ಆ. ವಿಶ್ವಕರ್ಮನಿರದ ವಿಶ್ವ ಕಂಡಿರೇನು ?
ವಿಶ್ವಕರ್ಮ ಗೆಯ್ದ ವಿಶ್ವವೆಲ್ಲ.
ವಿಶ್ವಕರ್ಮನಿರದೆ ವಿಶ್ವವೆಂಬುದಿಲ್ಲ.
ವಿಶ್ವದಾಭಿರಾಮ ಕೇಳು ವೇಮ.

ಸೃಷ್ಟಾ ಇರದೆ ಸೃಷ್ಟಿ ಇರಲಾರದು. ಆದ್ದರಿಂದ ವಿಶ್ವಕರ್ಮನಿರದೆ ವಿಶ್ವವು ಕಂಡು ಬರದು. ವಿಶ್ವಕರ್ಮನು ಎಲ್ಲ ವಿಶ್ವವನ್ನೂ ಮಾಡಿದ್ದಾನೆ. ವಿಶ್ವಕರ್ಮನಿರದ ವಿಶ್ವವೆಂಬುದು ಇಲ್ಲ.

ಆ. ಉಣಿಸುತಿರುವವನಾರು ? ಉರವನೆಲ್ಲ ಮರೆಸಿ,
ನಿದ್ರೆ ಹೊಗಿಸುವನಾರು ? ನಿಖಿಲ ಗತಿಯ
ತೋರಿ, ಇಳಿಬದ್ಧರನು ಗೆಯ್ದ, ಸೂಕ್ಷ್ಮರೂಪಿ-
ಯಾ ಮಹದೇವನಲ್ಲವೆ ? ಜಗದಿ ವೇಮ.

ಆ ಮಹಾ ದೇವನಿಗೆ ಜಗದ ಜೀವಿಗಳ ಬಗ್ಗೆ ಅಪಾರ ಪ್ರೀತಿ, ಕರುಣೆ. ಅದರಿಂದಾಗಿ ಅವನು ಮಳೆ ಬೆಳೆಗಳನ್ನು ನೀಡಿ, ಉಣ್ಣಿಸುತ್ತಾನೆ. ಹೊಟ್ಟೆಯ ಹಸಿವನ್ನು ಹಿಂಗಿಸಿ, ಚಿಂತೆಯನ್ನು ಮರೆಸಿ ನಿದ್ರೆ ಹೊಗಿಸುತ್ತಾನೆ. ವಿವಿಧ ಮನೋಗತಿಗಳನ್ನು ತೋರಿ ಜನರನ್ನು ಬದ್ಧರಾಗುವಂತೆ ಮಾಡುತ್ತಾನೆ. ಇದೆಲ್ಲವನ್ನೂ ಜಗದಲ್ಲಿ ಪ್ರೀತಿ ಹೊಂದಿರುವ ಆ ಮಹದೇವನಲ್ಲದೆ ಮತ್ತಾರು ಮಾಡಬಲ್ಲರು ?

ಕಂ. ಈ ಘನ ಸೂತ್ರವನರಿವುದು ;
ಈ ಘಟದಲಿ ಶಿವನು ಸೇರಿ ಇರುತಿರುವಾಗಳ್,
ಈ ಘಟ ಪಟಗಳಿಗೆ ಸಿಗದೆ,
ತಾ ಘನನಾಗಿಯೆ ಆಡುವ ; ತಥ್ಯವು, ವೇಮ.

ಪರಮ ಪುರುಷನು ಈ ವಿಶ್ವವನ್ನು ಸೃಜಿಸಿ, ಪರಿಪಾಲಿಸಿ, ಲಯಗೊಳಿಸುವ ಘನ ಸೂತ್ರವನ್ನು ಅರಿಯಬೇಕು. ಶಿವನು ಚೈತನ್ಯ ಪುರುಷನಾಗಿ ಈ ಘಟದಲ್ಲಿ ಸೇರಿ ಇದ್ದರೂ ಅವನು ಈ ಘಟದಲ್ಲಾಗಲಿ, ಅದಕ್ಕೆ ಹೊದಿಸುವ ಪಟ (ಅರಿವೆ) ದಲ್ಲಾಗಲಿ ಸಿಗದೆ ತಾನು ತಾನಾಗಿ ಘನನಾಗಿ ಆಡುತ್ತಿರುತ್ತಾನೆ.

ಕಂ. ಸಗುಣವೆ ಲೋಕಗಳೆಲ್ಲವು.
ಸಗುಣಂ ತ್ರಿಮೂರ್ತಿ ತಿಳಿದೊಡೆ ಸಕಲ ಸುರೇಶ್ವರ್.
ಸಗುಣವೆ ಜ್ಞಪ್ತಿಗೆ ಮೂಲವು.
ಸಗುಣವೆ ನಿರ್ಗುಣಕೆ ದಾರಿಯಪ್ಪುದು ವೇಮಾ.

ಮಾನವನ ಅನುಭವ ಕ್ಷೇತ್ರಗಳಾದ ಲೋಕಗಳೆಲ್ಲವೂ ಸಗುಣವೇ. ಬ್ರಹ್ಮ, ವಿಷ್ಣು, ಶಿವರೆಂಬ ತ್ರಿಮೂರ್ತಿಗಳೂ ಸಗುಣವೇ. ಸುರರು ಸುರೇಶ್ವರರು ಎನಿಸುವುವರೆಲ್ಲ ಸಗುಣವೇ. ಎಲ್ಲಿ ಜ್ಞಪ್ತಿ ಮೂಡುವುದೋ, ಅಲ್ಲಿಂದ ಎಲ್ಲವೂ ಸಗುಣವೇ. ಸಗುಣವೇ ನಿರ್ಗುಣಕ್ಕೆ ದಾರಿಯಾಗುತ್ತದೆ.

ಕ. ವಿಶ್ವೋತ್ಪತ್ತಿಗೆ ಅಜನೆನೆ,
ವಿಶ್ವವ ರಕ್ಷಿಸುವ ವರ ವಿಷ್ಣುವೆ ಎನುತೀ
ವಿಶ್ವವ ಲಯಿಸುವ ರುದ್ರನು;
ವಿಶ್ವೇಶನಿಗಿಂಥ ನಾಮವಾದವು ವೇಮಾ.

ವಿಶ್ವದ ಸೃಷ್ಟಿ, ಸ್ಥಿತಿ ಮತ್ತು ಲಯಗಳಿಗೂ ಅವುಗಳ ಕಾರಣ ಕರ್ತನಾದ ಸಗುಣ ಬ್ರಹ್ಮನಿಗೂ ಮಧುರ ಸಂಬಂಧವಿದೆ. ವಿಶ್ವೇಶನಾದ ಸಗುಣ ಬ್ರಹ್ಮನು ತಮೋಗುಣಾಧೀಶನಾಗಿ ಅಜ ಇಲ್ಲವೆ ಬ್ರಹ್ಮನೆನಿಸಿ ವಿಶ್ವದ ಉತ್ಪತ್ತಿಗೆ ಅಂದರೆ ಸೃಷ್ಟಿಗೆ ಕಾರಣನಾದನು. ಅವನು ಸಗುಣ ಬ್ರಹ್ಮನ ರಜೋಗುಣಾಧೀಶನಾಗಿ ವಿಷ್ಣುವೆನಿಸಿ ವಿಶ್ವವನ್ನು ರಕ್ಷಿಸುತ್ತಿರುವನು. ಅದರ ಸ್ಥಿತಿಯನ್ನು ಪಾಲಿಸುತ್ತಿರುವನು. ಸಗುಣ ಬ್ರಹ್ಮನು ಸತ್ವ ಗುಣಾಧೀಶನಾಗಿ ಶಿವನೆನಿಸಿ (ರುದ್ರನೆನಿಸಿ) ವಿಶ್ವವನ್ನು ಸ್ಥೂಲ ತತ್ತ್ವದಿಂದ ಸೂಕ್ಷ್ಮ, ಕಾರಣ ತತ್ತ್ವಗಳಲ್ಲಿ ಲಯಿಸುತ್ತಿರುವನು. ಹೀಗೆ ವಿಶ್ವೇಶನಿಗೆ ಬ್ರಹ್ಮ, ವಿಷ್ಣು ಮತ್ತು ರುದ್ರರೆಂದು ನಾಮಗಳಾದವು. ವಿಶ್ವೇಶನು ತ್ರಿಮೂರ್ತಿ ಎನಿಸಿದನು.

ಆ. ಅಖಿಲ ಜೀವಿಗಳನು ಅಜನೆ ಹುಟ್ಟಿಸಿದನು.
ವಿಷ್ಣು ಅವುಗಳನ್ನು ವೃದ್ಧಿಗೊಳಿಪ.
ಶಿವನು ಸಕಲರನ್ನು ಶಿಕ್ಷಿಸುತ್ತಲಿಹನು.
ವಿಶ್ವದಾಭಿರಾಮ ಕೇಳು ವೇಮ.

ಎಲ್ಲ ಜೀವಿಗಳನ್ನು ಅಜನೇ ಅಂದರೆ ಬ್ರಹ್ಮನೇ ಹುಟ್ಟಿಸಿದನು. ಅವುಗಳನ್ನು ಸರ್ವಾನುಸ್ಯೂತ ವಿಷ್ಣುವು ವೃದ್ಧಿಗೊಳಿಸುತ್ತಿರುವನು. ಇನ್ನು ಶಿವನು ನಿವೃತ್ತಿಪರನಾಗಿ ಸಕಲರನ್ನು ಶಿಕ್ಷಿಸುತ್ತಿರುವನು. ಅಂತೂ ಪರಮ ಪುರುಷನು ಜಗತ್ತಿನ ಆಗು ಹೋಗುಗಳನ್ನೂ, ಯೋಗ ಕ್ಷೇಮಗಳನ್ನೂ ತ್ರಿಮೂರ್ತಿಯಾಗಿ ನೋಡಿಕೊಳ್ಳುತ್ತಿದ್ದಾನೆ.

ಕಂ. ತ್ರಿಜಗಂಗಳ ನಿರ್ಮಿಸುತ್ತ,
ತ್ರಿಜಗಗಳಲಿ ಭುಕ್ತಿ, ಮುಕ್ತಿ ತೀರಿಸಿ ನಡೆವನ್.
ಅಜ ಹರಿ ರುದ್ರರ ತಾನೇ
ಭುಜಿಸುತಿರಲು ವಿಶ್ವಕರ್ಮ, ಬ್ರಹ್ಮವು ವೇಮಾ.

ವಿಶ್ವಕರ್ಮನಾದ ಬ್ರಹ್ಮನು ತಾನೇ ಸ್ಥೂಲ, ಸೂಕ್ಷ್ಮ ಮತ್ತು ಕಾರಣ ಎಂಬ ಮೂರು ಜಗಗಳನ್ನು ನಿರ್ಮಿಸುತ್ತ ಆ ಮೂರು ಲೋಕಗಳಲ್ಲಿ ಸೂಕ್ತವಾದ ಭುಕ್ತಿಯ ಅನುಕೂಲ ಕಲ್ಪಿಸಿ, ಸಾಧನ ಮೂಲಕ ಮುಕ್ತಿಯ ದಾರಿ ತೋರಿ, ತನ್ನ ಕಾರ್ಯವನ್ನು ತೀರಿಸಿ ನಡೆಯುತ್ತಾನೆ. ಸೃಷ್ಟಿ, ಸ್ಥಿತಿ, ಲಯ ಕರ್ತರಾದ ಅಜ, ಹರಿ ಮತ್ತು ರುದ್ರರನ್ನು ತಾನೇ ಭುಜಿಸಿ, ಜೀವಿಗಳಿಗೆ ನಿರ್ಗುಣದ ಪದವಿ ತಲುಪಿಸುತ್ತಾನೆ.

ಕಂ. ಭಗವಂತನಾದ ದೇವನು
ಜಗಗಳ ತನ್ನೊಳಗೆ ಬೆಳಿಸಿ, ಜಾಲವ ತೋರ್ಪಂ.
ಮಿಗೆ ಪರಿಯಲಿ ತಾನೆಲ್ಲಡೆ,
ಅಗಣಿತನಾಗಿ ಬೆಳಗುತಿಹನನುವಿನಲಿ ವೇಮಾ.

ಷಡ್ಗುಣ ಸಂಪನ್ನನಾದ, ಭಗವಂತನಾದ ದೇವನು ತನ್ನ ಈಶ್ವರ ಮಹಿಮೆಯಿಂದ ಎಲ್ಲ ಜಗಗಳನ್ನು ತನ್ನೊಳಗೇ ಬೆಳಗುತ್ತ ಜಾಲವನ್ನು ತೋರುತ್ತಾನೆ. ಇನ್ನೂ ಹೆಚ್ಚಾಗಿ, ತಾನೇ ಎಲ್ಲೆಡೆ ಎಣಿಕೆಗೆ ಸಿಗದಷ್ಟು, ಅಪಾರನಾಗಿ, ಅಗಾಧನಾಗಿ ಅನುವಿನಿಂದ ಬೆಳಗುತ್ತಿರುತ್ತಾನೆ.

ಕಂ. ವಿಶ್ವದ ಒಳಹೊರ ತಾನೇ ;
ವಿಶ್ವಾತೀತನು ; ಮೇಣಾ ವಿಶ್ವಂಭರನೈ.
ವಿಶ್ವಗಳಿಗೆ ಬೇರಾಗುತ,
ವಿಶ್ವದೊಳಗೆ ಬೆಳಗುತಿರುವ ಶಾಶ್ವತ ವೇಮಾ.

ವಿಶ್ವಕರ್ಮನಾಗಿ ವಿಶ್ವವನ್ನು ನಿರ್ಮಿಸಿದ ಸಗುಣ ಬ್ರಹ್ಮನು, ವಿಶ್ವದ ಒಳಗೂ ತಾನೇ ಇದ್ದಾನೆ. ವಿಶ್ವದ ಹೊರಗೂ ತಾನೇ ಇದ್ದಾನೆ. ಅವನು ನಿರ್ಗುಣನಾಗಿ ವಿಶ್ವಕ್ಕೆ ಅತೀತನೂ ಆಗಿರುತ್ತಾನೆ. ಅವನು ವಿಶ್ವಂಭರನಾಗಿ ವಿಶ್ವದಲ್ಲೆಲ್ಲ ತುಂಬಿಯೂ ಇದ್ದಾನೆ. ವಿಶ್ವವನ್ನು ಧರಿಸಿಯೂ ಇದ್ದಾನೆ. ಅವನು ತನ್ನ ನಿರ್ಗುಣಾವಸ್ಥೆಯಲ್ಲಿ ವಿಶ್ವಗಳಿಂದ ಬೇರಾಗಿಯೂ ಇರುತ್ತಾನೆ.

ತನ್ನ ಸಗುಣಾವಸ್ಥೆಯಲ್ಲಿ ವಿಶ್ವಗಳಲ್ಲಿ ಶಾಶ್ವತವಾಗಿ ಬೆಳಗುತ್ತಿರುತ್ತಾನೆ.

ಹೀಗೆ ಸಗುಣ ಬ್ರಹ್ಮವೇ ವಿಶ್ವದ ಉಪಾದಾನ ಕಾರಣವೂ ಆಗಿದೆ. ನಿಮಿತ್ತ ಕಾರಣವೂ ಆಗಿದೆ. ಅಪೂರ್ವ ಕಾರಣ ಸಂಬಂಧವನ್ನು ಹೊಂದಿದ ಜಗತ್ತನ್ನು ಉತ್ತರ ಮೀಮಾಂಸಕರಲ್ಲಿ ಪ್ರಸಿದ್ಧರಾದ ಶಂಕರಾಚಾರ್ಯರು ಮಿಥ್ಯೆಯೆಂದು ಹೇಗೆ ಕರೆದರೋ ಕಾಣೆವು. ಅವರ ಪರಿಕಲ್ಪನೆಯಲ್ಲಿ ಜಗತ್ತು ಮಾಯೆಯ ಸೃಷ್ಟಿ. ಮಾಯೆ ಎಂಬ ಕಾಲ್ಪನಿಕ ಸತ್ತೆಯೇ ಎಲ್ಲವನ್ನೂ ಮಾಡಿಸುತ್ತದೆ. ಮಾಯೆಯು ಮಿಥ್ಯಾ ಸ್ವಭಾವಿಯಾಗಿದೆ. ಆದ್ದರಿಂದ ಅದು ವಾಸ್ತವದಲ್ಲಿ ಏನೂ ಅಲ್ಲ. ಅದೇ ಮಾಡುತ್ತಿದೆಯೆಂದು ತೋರುತ್ತದೆ. ಅದರ ಅಸ್ತಿತ್ವವೂ ಮಿಥ್ಯೆಯಾಗಿದೆ. ಅದು 'ಅಘಟನ-ಘಟನ ಪಟೀಯಸೆ' ಅಂದರೆ ಯಾವುದು ಇಲ್ಲವೋ ಅದು ಇದೆಯೆಂದು ತೋರಿಸುತ್ತದೆ. ಅರ್ಥಾತ್ ಆ ಮಾಯೆಯೂ ಸಹ ವಾಸ್ತವದಲ್ಲಿ ಇಲ್ಲ. ಇರುವುದೆಂದರೆ ಬ್ರಹ್ಮವೊಂದೇ. ಇದು ಮಾಯಾವಾದಿಗಳ ಪ್ರತಿಪಾದನೆ.

ಈ ಜಗತ್ತು ಮಿಥ್ಯೆಯೇ ಆಗಿದ್ದರೆ, ಸೃಷ್ಟ ಜಗತ್ತಿಗೆ ಯಾವ ಬೆಲೆಯೂ ಇರುತ್ತಿರಲಿಲ್ಲ. ಸೃಷ್ಟಿಕರ್ತನ ಬೆಲೆಯೂ ಇರುತ್ತಿರಲಿಲ್ಲ. ಒಂದು ವೇಳೆ ಸೃಷ್ಟಿಯೇ ಇರದಿದ್ದರೆ ಸೃಷ್ಟಾನ ಅಸ್ತಿತ್ವವು ಸಹ ಇಲ್ಲವಾಗುತ್ತಿರಲಿಲ್ಲವೇ ? ಈ ಮಾಯಾವಾದದ ಅಸ್ತಿವಾರದ ಮೇಲೆ ಅನಂತರ ರಚಿತವಾದ ಇನ್ನಿತರ ಶಾಸ್ತ್ರಗಳು, ಪ್ರಪಂಚದ ವಿಷಯದಲ್ಲಿ, ಮಾನವ ಮನದಲ್ಲಿ, ನಿರುತ್ಸಾಹವನ್ನೇ ಹುಟ್ಟಿಸಿದವು. ಆದರೆ ಇದೆಲ್ಲ ಶೈವ ಆದರ್ಶಕ್ಕೆ ಪೂರ್ಣ ವಿರೋಧಿಯಾಗಿದೆ.

ಆ. ತಾಯಿಯೊಬ್ಬಳು ಜಗದಿ ತಂದೆಯೊಬ್ಬನಿಹನು.
ಎಲ್ಲ ಲೋಕಗಳಲಿ ಎಣಿಸಿ ನೋಡೆ,
ಸುಳ್ಳು ಅಲ್ಲ ; ಗೌರಿ ಸದಾಶಿವರೆ ಕಾಣು.
ವಿಶ್ವದಾಭಿರಾಮ ಕೇಳು ವೇಮ.

ವಿಶ್ವವೆಲ್ಲಕ್ಕೂ ಓರ್ವ ತಂದೆ ಉಂಟು ; ಮತ್ತು ಓರ್ವ ತಾಯಿಯುಂಟು. ಎಲ್ಲ ಲೋಕಗಳನ್ನು ಪರಿಗಣಿಸಿದರೂ ಅಷ್ಟೇ. ಗೌರಿಯೇ ತಾಯಿ ; ಸದಾಶಿವನೇ ತಂದೆ, ಎಂಬುದೇನೂ ಸುಳ್ಳು ಅಲ್ಲ.

ಆ. ಅವನಿಲೋರ್ವ ಮಗುವು ಅವನ ಪಿತಗೆ ಹುಟ್ಟಿ,
ಅಂತೆಯೇ ಜಗಗಳು ಅಗಣಿತವಾಗಿ.
ತಾಯಿಯಿಂದ ಬೆಳಗೆ ; ಧಾತ್ರಿ ಹಾಗಿಲ್ಲವೇ ।
ವಿಶ್ವದಾಭಿರಾಮ ಕೇಳು ವೇಮ.

ಅವನಿಯಲ್ಲಿ ಓರ್ವ ಮಗುವು ತನ್ನ ತಂದೆಯ ಬೀಜದಿಂದ ಹುಟ್ಟಿ ಬರುತ್ತದೆ. ಅದೇ ರೀತಿ ಜಗಗಳೂ ಶಿವನಿಂದ ಹುಟ್ಟಿ, ಅಗಣಿತವಾಗಿ ಬೆಳೆಯುತ್ತವೆ. ಈ ಬೆಳಿಗೆಯೆಲ್ಲ ತಾಯಿಯಿಂದ. ಈ ಭೂಮಿಯು ಅದೇ ರೀತಿಯಲ್ಲವೇ ?

ಆ. ತಾಯಿ ತಂದೆಯೆನುವ ತತ್ತ್ವವನು ತಿಳಿಯರು.
ಯೋನಿ ಲಿಂಗಗಳಲಿ ಉದ್ಭವಿಸುತ.
ವಿಷ್ಣುವರಿಯೆ ತಾಯಿ, ವಿನುತ ರುದ್ರನು ತಂದೆ.
ವಿಶ್ವದಾಭಿರಾಮ ಕೇಳು ವೇಮ.

ಗುಣಗಳ ಪರಿಗಣನೆಯಿಂದ ತಾಯಿ ತಂದೆ ಎನ್ನುವ ತತ್ತ್ವವನ್ನೇ ತಿಳಿಯರು. ಏಕೆಂದರೆ ಜನರು ಯೋನಿ-ಲಿಂಗಗಳ ಕೂಡಿಕೆಯಿಂದ ಕಾಮದ ಹಸಿವು ಹಿಂಗಿಸುವುದಕ್ಕಾಗಿ ಹುಟ್ಟುತ್ತಾರೆ ; ಅಷ್ಟೇ. ಯಾವುದು ತಾಯಿ ? ಯಾವ ಗುಣವು ಪಾಲನೆ ಪೋಷಣೆ ಮಾಡುವುದೋ ಆ ರಜೋಗುಣವೇ ತಾಯಿ. ವಿಷ್ಣುವೇ ಆ ಗುಣದ ಪ್ರತಿನಿಧಿ. ಯಾವ ಗುಣವು ಶಿಕ್ಷಿಸುವುದೋ, ನಿವೃತ್ತಗೊಳಿಸುವುದೋ ಆ ಸತ್ವ ಗುಣವೇ ತಂದೆ. ಶಿವನೇ ಆ ಗುಣದ ಪ್ರತಿನಿಧಿ.

ಆ. ಮಾಯೆ ಜಗವು ಎಂದು ಮನುಜನರಿಯದಿದ್ದು,
ಮಾಯೆಯೊಳಗೆ ತಾನು ಮಗ್ನನಾದ.
ಮಾಯೆ ತಿಳಿದ ನರನು ಮರ್ಮಜ್ಞನಾಗುವ.
ವಿಶ್ವದಾಭಿರಾಮ ಕೇಳು ವೇಮ.

"ಹೆಣ್ಣು ಮಾಯೆಯಲ್ಲ ; ಹೊನ್ನು ಮಾಯೆಯಲ್ಲ ; ಮಣ್ಣು ಮಾಯೆಯಲ್ಲ ; ಮನದ ಮುಂದಣಾಸೆಯೇ ಮಾಯೆ" ಎಂದು ಅಲ್ಲಮ ಪ್ರಭು ಹೇಳಿದ್ದಾನೆ. ಅದೇ ರೀತಿ, ಜಗತ್ತಿನಲ್ಲಿ ತಳಿಯುವ ಆಸಕ್ತಿಯೇ ಮಾಯೆಯೆಂದು ಮನುಜರು ತಿಳಿಯರು. ಹಾಗಾಗಿ ಮಾಯೆಯೊಳಗೆ ತಾನು ಮುಳುಗಿ ಹೋಗುತ್ತಾನೆ. ಯಾವಾಗ ನರನಿಗೆ ಮಾಯೆಯ ಮಥಿತಾರ್ಥವು ತಿಳಿಯುವುದೋ ಆಗ ಅವನು ಮರ್ಮಜ್ಞನಾಗುತ್ತಾನೆ.

ಆ. ಅಬಬ ! ಇಂದ್ರ ಜಾಲ ಆಯ್ತು ಲೋಕಾದಿಗಳು !
ಮಿಂಚಿ ಒಂದನೊಂದು ಗಗನದಲ್ಲಿ,
ತನ್ನ ತಾನೆ ನೋಡಿ, ತಿಳಿವನು ಮರೆಯುವನು.
ವಿಶ್ವದಾಭಿರಾಮ ಕೇಳು ವೇಮ.

ಈ ಲೋಕಾದಿಗಳೆಲ್ಲ ಸಗುಣ ಕಲ್ಪನೆಯೇ ಸರಿ. ಅವನು ಬೇಕೆನಿಸಿದಾಗ ಪ್ರಕ್ಷೇಪಿತ ಜಗತ್ತನ್ನು ಹಿಂತೆಗೆದುಕೊಂಡು ಲಯ ಮಾಡಬಹುದು. ಹೀಗಾಗಿ ಈ ಲೋಕಗಳೆಲ್ಲ ಇಂದ್ರ ಜಾಲದಂತೆ. ಅವು ಒಂದು ಇನ್ನೊಂದನ್ನು ಮೀರಿ ಅಚ್ಚರಿ ಹುಟ್ಟಿಸುತ್ತಿವೆ. ಆದ್ದರಿಂದ ಸಾಧಕನು ಲೌಕಿಕವನ್ನು ಮೀರಿ ಚಿದಾಕಾಶದಲ್ಲಿ, ಅನ್ಯವೇನನ್ನೂ ನೋಡದೆ, ತನ್ನನ್ನೇ ತಾನು ನೋಡಬೇಕು. ಆಗ ಅವನು ಜ್ಞಪ್ತಿಯನ್ನು ಅಂದರೆ ತಿಳಿವನ್ನು ಮರೆತು ಮುಂದೆ ಹೋಗುವನು.

ಆ. ಅಡಿಗಡಿಗೆ ವಿಚಿತ್ರ ! ಈ ಜಗದ್ಭ್ರಾಂತಿಗಳು !
ಚಂದ್ರ ಕಳೆಯ ದಾಟಿ ಸುಖ್ಮ ಪಡೆದು,
ರಂಧ್ರದಲ್ಲಿ ಸೇರಿ ರಹಿ ಮಿಕ್ಕಿ ಕಾಣು ದೇ-
ವೇಂದ್ರ ಪೂರ್ಣ ಪದವಿ, ಬಿಡದೆ ವೇಮ.

ಈ ಜಗತ್ತಿನ ಭ್ರಾಂತಿಗಳು ಹೆಜ್ಜೆ ಹೆಜ್ಜೆಗೂ ವಿಚಿತ್ರವೆನಿಸುತ್ತವೆ. ಆದ್ದರಿಂದ ಪ್ರಜ್ಞೆಯನ್ನು, ನಿಟಿಲ ದುರ್ಗದ ಚಂದ್ರ ಕಳೆಯನ್ನು ದಾಟಿ, ಅಲ್ಲಿ ಸುಖ್ಮ ಹೊಂದಬೇಕು. ಆಗ ದೃಷ್ಟಿಯನ್ನು ಬ್ರಹ್ಮ ರಂಧ್ರದಲ್ಲಿ ಸೇರಿಸಿ, ಆನಂದವು ಉಕ್ಕೇರಿ, ಬಿಡದೆ, ದೇವೇಂದ್ರ ಪದವಿಯನ್ನು ಕಾಣು.

ಕಂ. ಸಗುಣವೆನಲು ಇಲ್ಲದಿಹುದೆ,
ಸಗುಣವೆನಲದುವೆ ಮೋಹದ ಜಾಲವೆ ಸಕಲಂ.
ಸಗುಣವನು ಮರೆತು ನಿನ್ನೊಳು,
ತಗಲುವುದೆ ನಿರ್ಗುಣ ದಾರಿ ತಿಳಿಯೆಲೊ ವೇಮಾ.

ನಿರ್ಗುಣಾವಸ್ಥೆಯನ್ನು ತಲುಪಿದಾಗ ಸಗುಣವೆನ್ನುವುದೆಲ್ಲವೂ ಇಲ್ಲದಿಹದೆನ್ನಿಸುತ್ತದೆ. ವಸ್ತು, ವ್ಯಕ್ತಿ, ವಿಚಾರಗಳ ಸುತ್ತ ಚಾಚಿದ ಸಕಲ ಮೋಹದ ಜಾಲವೇ ಸಗುಣವೆನಿಸುತ್ತದೆ. ಸಗುಣವನ್ನು ಮರೆತು ನಿನ್ನೊಳಗೆ ತಲುಪುವುದೇ ನಿರ್ಗುಣದ ದಾರಿಯೆಂದು ತಿಳಿದುಕೋ.

ಅಂತೂ ಈ ಜಗತ್ತಿಗೆ ಸಗುಣ ಬ್ರಹ್ಮನು ಉಪಾದಾನ ಕಾರಣನೂ ಮತ್ತು ನಿಮಿತ್ತ ಕಾರಣನೂ ಆಗಿರುವುದರಿಂದ ಜಗತ್ತು ಮಿಥ್ಯವಲ್ಲ. ಸತ್ಯವೇ ಆಗಿದೆ. ಆದರೆ ನಿರ್ಗುಣ ಬ್ರಹ್ಮನು ಜಗತ್ತಿನ ಸೊಡರು ತಟ್ಟದಂತಿರುವುದರಿಂದ, ಅವನು ಯಾವಾಗ ಪ್ರಕೃತಿಯ ಇಂದ್ರಜಾಲಕ್ಕೆ ಸಮ್ಮತಿಸುವುದಿಲ್ಲವೋ, ಆಗ ಸಗುಣ ಬ್ರಹ್ಮವು ಇಲ್ಲವೆನಿಸಿ, ಗುಣಗಳ ಭಾರಸಾಮ್ಯ ಕಾಯ್ದುಕೊಳ್ಳುತ್ತದೆ. ನಿರ್ಗುಣಕ್ಕೆ ದಾರಿಯಾಗುತ್ತದೆ. ಹೀಗಾಗಿ ಜಗತ್ತು ಆಪೇಕ್ಷಿಕ ಸತ್ಯವೆನಿಸುತ್ತದೆ. ಅಂತೂ 'ಬ್ರಹ್ಮ ಸತ್ಯಂ ಜಗದಪಿ ಸತ್ಯಂ ಆಪೇಕ್ಷಿಕಂ' ಎಂದು ಹೇಳಬಹುದು.

ಓಂಕಾರ ವರ್ಣನೆ :

ಓಂಕಾರವು ಮೂರು ಮಾತ್ರೆಗಳನ್ನು ಕೂಡಿದೆ. ಅ-ಉ ಮತ್ತು ಮ. ಅ-ಸೃಷ್ಟಿ ಸೂಚಕವಾದರೆ, ಉ-ಸ್ಥಿತಿ ಸೂಚಕವಾಗಿದೆ. ಮತ್ತು ಮ-ಲಯ ಸೂಚಕವಾಗಿದೆ. ಅ-ಬ್ರಹ್ಮ ಸೂಚಕವಾಗಿದೆ. ಉ-ವಿಷ್ಣು ಸೂಚಕವಾಗಿದೆ. ಮತ್ತು ಮ-ಶಿವ ಸೂಚಕವಾಗಿದೆ.

ಆ. ಏಕಾಕ್ಷರವೆ ಬ್ರಹ್ಮ ; ಏಕಾಕ್ಷರವೆ ವಿಷ್ಣು
ಏಕಾಕ್ಷರಂ ಶಿವನು ಎಣಿಸಿ ನೋಡೆ ;
ಏಕಾಕ್ಷರವ ದಾಟಿ ಏನು ಇಲ್ಲ ಮತ್ತೆ.
ವಿಶ್ವದಾಭಿರಾಮ ಕೇಳು ವೇಮ.

ಏಕಾಕ್ಷರವೇ ಓಂ. ಓಂದಲ್ಲಿಯೇ ಬ್ರಹ್ಮ, ವಿಷ್ಣು ಮತ್ತು ಶಿವರಿದ್ದಾರೆ. ಏಕಾಕ್ಷರವನ್ನು ದಾಟಿದರೆ ಸಗುಣ ಬ್ರಹ್ಮವಿಲ್ಲ. ಜ್ಞಪ್ತಿಯೂ ಇಲ್ಲ. ಹೀಗಾಗಿ ಸಗುಣವಾದುದು ಏನೂ ಇಲ್ಲ.

ಆ. ಕೆಂಪು ವರ್ಣದೊಳಗೆ ನೋಡಿ ಏಕಾಕ್ಷರಿಯ
ಬಿಳಿಯ ವರ್ಣದೊಳಗೆ ಬೆಳಗುತಿದ್ದು,
ಕಪ್ಪು ವರ್ಣದಿಂದ ಗಡನೆ ನಟಿಸಿ ನೋಡು.
ವಿಶ್ವದಾಭಿರಾಮ ಕೇಳು ವೇಮ.

ಏಕಾಕ್ಷರಿಯ ಕೆಂಪು ವರ್ಣವು ರಾಜಸ ಸೂಚಕ ವಿಷ್ಣು. ಅದರ ಸಂಕೇತ ಉ. ಬಿಳಿಯ ವರ್ಣವು ಸತ್ವ ಸೂಚಕ ಶಿವ. ಅದರ ಸಂಕೇತ ಮ. ಕಪ್ಪು ವರ್ಣವು ತಾಮಸ ಸೂಚಕ ಬ್ರಹ್ಮ. ಅದರ ಸಂಕೇತ ಅ.

ಆ. ಪ್ರಣವ ಮಂತ್ರ ಮಹಿಮೆ ಭಾವಿಸಲು ಲಿಂಗವು
ಮೂರು ಮೂರ್ತಿಗಳಲಿ ಮನಸು ಇರಿಸಿ,
ಅವನನರಿತು ಕೊಳಲು ಅನ್ಯರಿಗೆ ಶಕ್ಯವೆ ?
ವಿಶ್ವದಾಭಿರಾಮ ಕೇಳು ವೇಮ.

ಪ್ರಣವ ಮಂತ್ರದ ಮಹಿಮೆ ಏನು ? ಸತ್ವ ಶುದ್ಧನಾಗಿ ಪ್ರೇಮ ಪೂರ್ಣವಾಗಿ ಭಾವಿಸಲು. 'ಲೀಯತೇ ಯಸ್ಮಿನ್, ಗಮ್ಯತೇ ಯಸ್ಮಾತ್ ತಲ್ಲಿಂಗಂ', ಯಾವುದರಲ್ಲಿ ಎಲ್ಲವೂ ಲೀನವಾಗುವುದೋ ಮತ್ತು ಯಾವುದರಿಂದ ಎಲ್ಲವೂ ಉದ್ಗಮಿಸುವುದೋ ಅದೇ ಲಿಂಗ. ಇದುವೇ ಪ್ರಣವ ಮಂತ್ರದ ಮಹಿಮೆ. ಅ-ಉ-ಮ-ಓಂದ ಮಹಿಮೆ. ಬ್ರಹ್ಮ, ವಿಷ್ಣು, ಶಿವರೆಂಬ ಮೂರು ಮೂರ್ತಿಗಳಲ್ಲಿ ಮನಸ್ಸನ್ನು ಇರಿಸಿ ಮೂರರಾಚೆಯ ಲಿಂಗವನ್ನು ಅಂದರೆ ಸಗುಣ ಬ್ರಹ್ಮವನ್ನು ಅರಿತುಕೊಳ್ಳಲು ಯೋಗಿಗಲ್ಲದೆ ಅನ್ಯರಿಗೆ ಶಕ್ಯವೇ ?

ಆ. ಕಮಲ ಭವನು ಗೆಯ್ದ ಕಡು ಸೃಷ್ಟಿಯೆನುವರು.
ಹರಿ ಪಾಲಿಪ ; ಕೊಲುವ ಹರನನುವರು.
ಮೂರ್ತಿಗಳಿಷ್ಟಿರಲು ಮೂಲ ಒಂದೆ ಅಲ್ತೆ ?
ವಿಶ್ವದಾಭಿರಾಮ ಕೇಳು ವೇಮ.

ಬ್ರಹ್ಮನು ಸೃಷ್ಟಿಯನ್ನು ಗೆಯ್ದನು; ವಿಷ್ಣುವು ಪಾಲಿಸುತ್ತಿರುವನು. ಹರನು ಕೊಲುವನು. ಅಂದರೆ ಲಯಗೊಳಿಸುವನೆನ್ನುವರು. ಸೃಷ್ಟಿ, ಸ್ಥಿತಿ ಮತ್ತು ಲಯ ಕಾರ್ಯಗಳಿಗೆ ಪ್ರತ್ಯೇಕ ಇಷ್ಟು ಮೂರ್ತಿಗಳೆನಿಸಿದರೂ ಮೂಲ ಮೂರ್ತಿಯಾದ ಸಗುಣ ಬ್ರಹ್ಮನು ಒಬ್ಬನೇ ಅಲ್ಲವೇ ? ಅವನ ವಾಚಕವೇ ಪ್ರಣವ.

ಪ್ರಣವವು ಹುಟ್ಟುವುದೆಲ್ಲಿ ? ಅದು ಎಂಥ ನಾದವು ? ಅದರ ಶ್ರವಣದಿಂದ ಆಗುವ ಮಹಿಮೆಯೇನು ?

ಆ. ಅಂದವನಾಹತದಿ ಅದನು ಲೇಸು ಕಂಡು,
ಇನ್ನುದಾನ ವಾಯು ಇಚ್ಛಿಸುತ್ತ,
ಕೊನೆಯ ವಾಯುವಿನಲಿ ಕದಲದಿರುವವನು
ಹೇಳಲೇಕೆ ? ಅವನೆ ಹರನು ವೇಮ.

ಏಳು ಚಕ್ರಗಳ ಮಧ್ಯೆ ಇರುವ ಅನಾಹತ ಚಕ್ರದಲ್ಲಿ ಪ್ರಣವ ನಾದವನ್ನು ಲೇಸಾಗಿ ಕಂಡು, ಉದಾನ ವಾಯುವನ್ನು ಇಚ್ಛಿಸುತ್ತ ಇದ್ದರೆ, ಕೊನೆಯ ಸಮಾನ ವಾಯುವಿನಲ್ಲಿ ಕದಲದೆ ಇದ್ದರೆ ಅವನೇ ಹರನು ಎಂದು ಬೇರೆ ಹೇಳಬೇಕೇ ?

ಕಂ. ಧ್ವನಿ ಜನಿಸಲಾಲಿಸುತ್ತ,
ಧ್ವನಿ ಮಧ್ಯದಲ್ಲಿ ಸೇರಿ, ಧ್ವನಿ ತಾನೇ ತಾ-
ನೆನಿಸುತ ತೋರಲು, ತನ ಹೃ-
ದ್ವನಜದಲ್ಲಿ ನೋಡಿ, ಮುಕ್ತಿಯು ವಶವೈ ವೇಮಾ.

ಹೃದ್ಪನಜದಲ್ಲಿ ಅಂದರೆ ಹೃದಯ ಕಮಲದಲ್ಲಿ ಅನಾಹತ ಧ್ವನಿಯು ಜನಿಸಲು ಅದನ್ನೇ ಆಲಿಸುತ್ತ, ಧ್ವನಿ ಮಧ್ಯದಲ್ಲಿ ಸೇರಿ, ಧ್ವನಿಯೇ ತಾನು ಎನ್ನಿಸುತ್ತ ತೋರಲು, ಆಗ ಇಹದ ಬಂಧನದಿಂದ ಮುಕ್ತಿಯು ವಶವಾಗುತ್ತದೆ ನೋಡು.

ಅನಾಹತ ನಾದವನ್ನು ಆಲಿಸುತ್ತ ಹೋಗಬೇಕು. ಅದು ಮುಕ್ತಿಗೆ ದಾರಿಯಾಗುವುದು.

ಕಂ. ನಾದವು ಮುಕ್ತಿಗೆ ದಾರಿಯು,
ಪಾದವ ತಿಳಿದುಕೊಳುವವನು ತಾ ಪರಿಪಕ್ವಂ.
ಭೇದವ ನೀಗುತ ಮನದಲಿ
ವೇದಿಕೆಯ ಸೇರಿ, ಆಲಿಸು, ಕೇಳದೆ ? ವೇಮಾ.

ಹೃತ್ಕಮಲದಲ್ಲಿ ಜನಿಸುವ ಅನಾಹತ ನಾದವು ಮನವನ್ನು ಲಯಗೊಳಿಸಿ, ಮುಕ್ತಿಗೆ ದಾರಿಯಾಗುತ್ತದೆ. ಅದರ ಪಾದವನ್ನು ಅಂದರೆ, ಪ್ರಾರಂಭದ ಸ್ಪಂದನಗಳನ್ನು ತಿಳಿದುಕೊಳ್ಳುವವನು ತಾನು ಪರಿಪಕ್ವತೆ ಪಡೆಯುತ್ತಾನೆ. ಮತ್ತು ಮನದಲ್ಲಿ ತಾನು ಮತ್ತು ಪರಮನು ಎನ್ನುವ ಭೇದವನ್ನು ನೀಗುತ್ತಾನೆ. ಅದನ್ನು ಉದ್ದೀಪ್ತ ಮನದ ವೇದಿಕೆಯನ್ನು ಸೇರಿ ಆಲಿಸು. ಕೇಳಿಸದೇನು? ಕೇಳಿಯೇ ಕೇಳುತ್ತದೆ.

ಆ. ಪ್ರಣವನರಿಯುವನಕ ಭಕ್ತನಾಗಲಾರ.
ಜ್ಯೋತಿ ಕಾಣುವನಕ ಜೋಗಿಯಲ್ಲ.
ನಿತ್ಯವರಿಯುವನಕ ನಿರ್ವಾಣವು ಅಲ್ಲ.
ವಿಶ್ವದಾಭಿರಾಮ ಕೇಳು ವೇಮ.

ಪ್ರಣವ ಮಂತ್ರದ ಮಹಿಮೆಯನ್ನು ಅರಿಯುವ ತನಕ ಸಾಧಕನು ಭಕ್ತನಾಗಲಾರನು. ಪ್ರಣವವನ್ನು ಹೃದಯ ಕಮಲದಲ್ಲಿ ಆಲಿಸುತ್ತ ಮನವನ್ನು ಲಯಗೊಳಿಸಿದಾಗಲೇ ಅವನು ಸ್ವಯವನ್ನು ಮರೆತು ಪರಮನ ಸೇವೆಯಲ್ಲಿ ನಿರತನಾಗುತ್ತಾನೆ ; ಭಕ್ತನಾಗುತ್ತಾನೆ. ಭ್ರೂಮಧ್ಯೆಯಲ್ಲಿ ಲಕ್ಷ್ಯ ಕೇಂದ್ರೀಕರಿಸಿ, ತ್ರಿವೇಣಿ ಸಂಗಮದಲ್ಲಿ ಪ್ರಾಣ ಸಂಚಲನೆಯಿಂದ ದಿವ್ಯವಾದ ಜ್ಯೋತಿ ಪ್ರಕಾಶಿಸಿ, ಜೀವಾತ್ಮ ಪರಮಾತ್ಮರ ಯೋಗವನ್ನು ಸಂಕೇತಿಸುತ್ತದೆ. ಈ ದಿವ್ಯ ಜ್ಯೋತಿ ಕಾಣುವ ವರೆಗೆ ಸಾಧಕನನ್ನು ಯೋಗಿಯೆನ್ನಕೂಡದು. ನಿತ್ಯ ತತ್ತ್ವವನ್ನು ಅರಿಯುವ ವರೆಗೆ ಯಾವನೂ ಮೋಕ್ಷ ಸಂಪನ್ನನಾಗಲಾರನು. ನಿರ್ವಾಣೆಯೆನಿಸನು.

ಆ. ವಿಶ್ವಕರ್ಮ ಗುರುವು ವಿಶ್ವವಖಿಲಕೆಲ್ಲ.
ಪ್ರಣವ ಮಂತ್ರವೊಂದೆ ಪರಮ ಗುರುವು.
ಕರ್ಮಕಾಗ ಗುರುವು ಗಾಯತ್ರಿ ಮಂತ್ರವೆ.
ವಿಶ್ವದಾಭಿರಾಮ ಕೇಳು ವೇಮ.

ಗು ಎಂದರೆ ಅಂಧಕಾರ; ರು-ಅಂದರೆ ನಿವಾರಕ. ಗುರು ಎಂದರೆ ಅಂಧಕಾರ ನಿವಾರಕ. ಸರ್ವ ವಿಶ್ವಕ್ಕೂ ವಿಶ್ವ ನಿರ್ಮಾಪಕ ವಿಶ್ವಕರ್ಮವೇ ಗುರುವು. ಪ್ರಣವ ಮಂತ್ರವು ಅಂದರೆ ಓಂಕಾರ ಮಂತ್ರವು. ಅತ್ಯಂತ ಶ್ರೇಷ್ಠ ಗುರುವಾಗಿದೆ. ಇನ್ನು ಹೆಚ್ಚಾಗಿ ವೈದಿಕರು ತಮ್ಮ ದ್ವಿಜತ್ವದ ಪಾಲನೆಯಲ್ಲಿ ನಿತ್ಯ ಕರ್ಮವಾಗಿ ಪಠಿಸುವ ಋಗ್ವೇದದ ಗಾಯತ್ರಿ ಛಂದಸ್ಸಿನಲ್ಲಿರುವ ಸವಿತೃ

ದೇವತಾ ಸ್ತುತಿ ಮಂತ್ರವು ಕರ್ಮಕ್ಕಾಗಿ ಗುರುವಾಗಿದೆ.

ಅವಸ್ಥಾತ್ರಯ :

ಮನಸ್ಸಿನ ಅವಸ್ಥೆಗಳು ಮೂರು- ಜಾಗ್ರತ, ಸ್ವಪ್ನ ಮತ್ತು ಸುಷುಪ್ತಿ. ಮನಃಶಾಸ್ತ್ರದ ಮೇರೆಗೆ ಇವುಗಳನ್ನು ಚೇತನ, ಅವಚೇತನ ಮತ್ತು ಅಚೇತನ ಎಂದು ಕರೆಯಬಹುದು.

ಆ. ಸುಪ್ತಿ ಜಾಗರಗಳ ನಿದ್ರೆ ಜಾಡ್ಯವುಂಟು.
ಮುತ್ತಿದಂಥ ಮಾಯೆ ಮತ್ತೆ ಕಾಣ.
ಸುಳ್ಳು ಸತ್ಯಗಳನು ಸಲೆ ಕಾಣದಿರುವ,
ಗಡನೆ ಕೆಟ್ಟು ಹೋಹ ಗುಣವು ವೇಮ.

ಸುಪ್ತಿಯ ಅವಸ್ಥೆ ಮತ್ತು ಜಾಗ್ರತ ಅವಸ್ಥೆಗಳ ಮಧ್ಯೆ ನಿದ್ರೆಯ ಜಾಡ್ಯವಿದೆ. ಹೀಗಾಗಿ ಸುಪ್ತಿಯ ಅವಸ್ಥೆಯಲ್ಲಿ ಸರ್ವಜ್ಞತೆಯಿದ್ದರೂ ನಿದ್ರೆಯ ಜಾಡ್ಯ ಅಡ್ಡ ಬರುವುದರಿಂದ ಜಾಗ್ರತ ಅವಸ್ಥೆಯಲ್ಲಿ ಮುತ್ತಿದ ಮಾಯೆಯನ್ನು ಮತ್ತೆ ಕಾಣನು. ಹೀಗಾಗಿ ಯಾವುದು ಸುಳ್ಳು ? ಮತ್ತಾವುದು ಸತ್ಯ ? ಎಂಬುದನ್ನು ಕಾಣದಿರುವನು. ಅವನು ಬೇಗನೆ ಜಾಡ್ಯಾವಸ್ಥೆಯಲ್ಲಿಯೇ ಕಾಲ ಕಳೆದು ಕೆಟ್ಟು ಹೋಗುವನು.

ಆ. ಜಾಗ್ರತೆನಲು ಏನು ? ಜನ್ಮವೆನಲು ಏನು ?
ಜನ್ಮಗಳನು ಅರಿಯೆ ಜಾಗ್ರತಾಯ್ತು.
ಜನ್ಮ ಜಾಗ್ರತೆಗಳ ಸಾಧಿಸಿದೊಡೆ ಮುಕ್ತಿ.
ವಿಶ್ವದಾಭಿರಾಮ ಕೇಳು ವೇಮ.

ಎರಡು ಜಾಗ್ರತಾವಸ್ಥೆಗಳ ನಡುವೆ ಮರಣವೆಂಬ ದೀರ್ಘ ನಿದ್ರೆಯುಂಟು. ಹಾಗಾದರೆ ಜಾಗ್ರತೆನಲು ಏನು ? ಜನ್ಮವೆನಲು ಏನು ? ಜಾಗ್ರತ ಅವಸ್ಥೆಯೆಂದರೆ, ಯಾವಾಗ ಚೇತನ ಮನವು ಆಜ್ಞಾ ನಾಡಿ ಮತ್ತು ಸಂಜ್ಞಾನಾಡಿಗಳ ಮಾಧ್ಯಮದಿಂದ, ಇಂದ್ರಿಯ ಸಮೂಹಗಳ ಸಹಾಯದಿಂದ, ಪಂಚಭೌತಿಕ ಜಗತ್ತಿನಿಂದ, ಭಾವಗಳ ಗ್ರಹಣ, ವರ್ಜನ, ಪ್ರಕ್ಷೇಪ ಮತ್ತು ನಿಕ್ಷೇಪಗಳನ್ನು ಮಾಡುವುದೋ, ಅಥವಾ ಇಂದ್ರಿಯ ವರ್ಜಿತ ಭಾವದಲ್ಲಿ ಇಲ್ಲವೆ ನಾಡೀ ವರ್ಜಿತ ಭಾವದಲ್ಲಿ ಸ್ನಾಯು ಕೋಶಗಳ ಸ್ಪಂದನಗಳನ್ನು ಸ್ಮರಿಸುವುದೋ, ಅದೇ ಆಗಿದೆ. ಇನ್ನು ಜನ್ಮವೆಂದರೆ, ಮರಣಾನಂತರ ಇಲ್ಲವೆ ದೀರ್ಘ ನಿದ್ರಾ ನಂತರ ಮರಳಿ ಜಾಗ್ರತ ಅವಸ್ಥೆ ಪಡೆಯುವದಾಗಿದೆ. ಹೀಗೆ ಜನ್ಮಗಳನ್ನು ಅರಿತರೆ, ಜಾಗ್ರತ ಅವಸ್ಥೆಯಿಂದ ದೀರ್ಘ ನಿದ್ರೆಯ ನಂತರ ಪಡೆಯುವ ಜಾಗ್ರತ ಅವಸ್ಥೆಯೇ ಆಗಿದೆ. ಈಗ ಜನ್ಮ ಜಾಗ್ರತೆಗಳನ್ನು ಸಾಧಿಸುವುದೆಂದರೇನು? ಒಂದು ಜನ್ಮದ ನಂತರ ಧೀರ್ಘ ನಿದ್ರೆಯ ಜಾಡ್ಯವಿರುತ್ತದೆ. ಆದ್ದರಿಂದ ಮರುಜನ್ಮದಲ್ಲಿ ಅದರ ಸ್ಮರಣೆ ಉಳಿದಿರುವುದಿಲ್ಲ. ಯಾವಾಗ ಜೀವ ಮಾನಸವು ಅತ್ಯಧಿಕ ಈಶ್ವರಾನುರಕ್ತಿಯಲ್ಲಿ ತನ್ನ ಸಮಸ್ತ ಅಸ್ತಿತ್ವ ಬೋಧೆಯನ್ನು ಪರಮ ಸತ್ತೆಯ ನಿತ್ಯಾನಂದದಲ್ಲಿ ಸೇರಿಸಿ, ತಾತ್ಕಾಲಿಕ ರೂಪದಲ್ಲಾಗಲಿ, ನಿತ್ಯ ರೂಪದಲ್ಲಾಗಲಿ, ಮಾನಸಿಕ ಸಂಕಲ್ಪ-ವಿಕಲ್ಪಗಳಿಲ್ಲದ ಅವಸ್ಥೆಯನ್ನು ತಲುಪುವುದೋ, ಆ ಪ್ರಜ್ಞಾ ಸ್ಥಿತಿಗೆ ತುರ್ಯಾವಸ್ಥೆ ಎನ್ನುತ್ತಾರೆ. ತುರ್ಯಾವಸ್ಥೆಯ ಕೆಲವರಿಗೆ ಜನ್ಮ ಜಾಗ್ರತೆಗಳ ಅರಿವು ಸಾಧಿಸುತ್ತದೆ. ಅವರಿಗೆ ಮುಕ್ತಿಯುಂಟು.

ಆ. ಜನನ ಮರಣವೆಲ್ಲ ಸ್ವಪ್ನ ನಿದ್ರೆಯಂತೆ,
ಭೂಮಿ ಮೇಲೆ ತೋರ್ಪ ಬಿಸಿಲು ಗುದುರೆ.
ನರನು ಜಗಕಂಟಲು, ನಗುಪಾಟಲಲ್ಲವೆ ?
ವಿಶ್ವದಾಭಿರಾಮ ಕೇಳು ವೇಮ.

ಮಾನವನ ಜನನ ಮತ್ತು ಮರಣಗಳು ಕ್ರಮವಾಗಿ ಸ್ವಪ್ನ ಮತ್ತು ದೀರ್ಘ ನಿದ್ರೆಯಂತಿವೆ. ಈಗ ಸ್ವಪ್ನವೆಂದರೇನು ? ಮತ್ತು ನಿದ್ರೆ ಎಂದರೇನು ? ಸ್ವಪ್ನವೆಂದರೆ ನಿದ್ರೆಯಲ್ಲಿಯೇ ಚಿಂತನೆ ಮಾಡುವುದು. ಈ ಚಿಂತನವೂ ಸಹ, ಭೂತ ಪರಿಸರದ ಚಿಂತನ, ವರ್ತಮಾನ ಪರಿಸರದ ಚಿಂತನ, ಪರಿಸರ ವರ್ಜಿತ ಚಿಂತನ ಮತ್ತು ಉದ್ಭಟ (ವಿಚಿತ್ರ ಕಲ್ಪನೆಯ) ಚಿಂತನ, ಎಂದು ನಾಲ್ಕು ವಿಧ. ಸಪ್ನಾವಸ್ಥೆಯಲ್ಲಿ ವಾಸ್ತವದ ಕಠೋರ ಸಂಸ್ಪರ್ಶವಿರದಿರುವ ಕಾರಣ, ಆ ಕಲ್ಪನೆಗಳು ಸತ್ಯವೆಂದು ತೋರುತ್ತದೆ. ಹೀಗಾಗಿ, ಸ್ವಪ್ನಾವಸ್ಥೆಯಲ್ಲಿ ಅಂದರೆ ನಿದ್ರಿತ ಅವಸ್ಥೆಯಲ್ಲಿ ಕಲ್ಪನೆಗಳಿಂದ ಅವನು ಬಹು ಮಟ್ಟಿಗೆ ಹೊಡೆತದ ಅನುಭವ ಪಡೆಯುತ್ತಾನೆ. ಜಾಗ್ರತ ಅವಸ್ಥೆಯಲ್ಲಿಯೂ ಅವನು ಕಲ್ಪನೆಯನ್ನು ಮಾಡುತ್ತಿರುತ್ತಾನೆ. ಆದರೆ ಅದೆಲ್ಲ ಕಲ್ಪನೆ ಎಂಬ ಅರಿವು ಅವನಿಗಿರುತ್ತದೆ. ಆದರೆ ನಿದ್ರಿತ (ಸ್ವಪ್ನ) ಅವಸ್ಥೆಯಲ್ಲಿ ಕಲ್ಪನೆಯ ಕಾಲಕ್ಕೆ ತಾನು ಕೇವಲ ಕಲ್ಪಿಸುತ್ತಿರುವೆನೆಂಬ ಅರಿವು ಅವನಿಗಿರುವುದಿಲ್ಲ. ಈ ಕಾರಣದಿಂದ ಆ ಕಲ್ಪನೆಯ ಸ್ವಪ್ನವು ಕಠೋರ ವಾಸ್ತವಿಕತೆಯ ರೂಪದಲ್ಲಿ ಎದುರಾಗುತ್ತದೆ.

ಅಂತೂ, ಜನನ ಮರಣಗಳು ಸ್ವಪ್ನ ನಿದ್ರೆಗಳಂತೆ, ಭೂಮಿಯ ಮೇಲೆ ತೋರುವ ಬಿಸಿಲುಗುದುರೆಗಳಂತೆ. ಅನತಿ ದೂರದಲ್ಲಿ ಸೂರ್ಯ ಕಿರಣಗಳ ಪರಾವರ್ತನೆಯಿಂದ ನೀರಿನ ರೂಪ ತೋರುತ್ತದೆ. ಆದರೆ ವಾಸ್ತವದಲ್ಲಿ ನೀರು ಇರುವುದಿಲ್ಲ. ಇದು ಸ್ವಪ್ನ ನಿದ್ರೆಯಂತಲ್ಲವೇ? ಹೀಗೆ ತನಗೆ ಮೋಸಗೊಳಿಸುವ, ತನ್ನ ಇಚ್ಛೆಯನ್ನು ವಂಚಿಸುವ, ಈ ಜಗತ್ತಿಗೆ ನರನು ಅಂಟುವುದು ನಗುಪಾಟಲಲ್ಲವೇ ?

ಆ. ಜನನ ಮರಣಗಳಲಿ, ಸ್ವಪ್ನ ಸುಷುಪ್ತಿಗಳಲಿ,
ಜಗವನೆಲ್ಲ ತುಂಬಿ ಜನರು ಉಂಟು.
ಅವನಿಯಲ್ಲಿ ಜನರು ಅರಿಯಲಾರರಯ್ಯ.
ವಿಶ್ವದಾಭಿರಾಮ ಕೇಳು ವೇಮ.

ಜನರು ತಮ್ಮ ಕರ್ಮ ಮೂಲಕ ಜನಿಸುತ್ತಾರೆ. ತಮ್ಮ ಕರ್ಮ ಫಲ ಭೋಗಿಸಲು ಬೇರೊಂದು ಜನ್ಮ ಪಡೆಯಲು ಮರಣಿಸುತ್ತಾರೆ. ಅವರ ಮನಸ್ಸಿನ ಅವಸ್ಥೆಗಳು ಜಾಗರ, ಸ್ವಪ್ನ, ಮತ್ತು ಸುಷುಪ್ತಿ. ಅವರು ನಿದ್ರಿಸುವಾಗ ಏನೇನೋ ಸ್ವಪ್ನ ಕಾಣುತ್ತಾರೆ. ಅವುಗಳಾವವೂ ವಾಸ್ತವ ಸತ್ಯಗಳಾಗಿರುವುದಿಲ್ಲ. (ಕೇವಲ ತುರ್ಯಾವಸ್ಥೆಯ ಕಲ್ಪನೆಗಳು ವಾಸ್ತವ ಸತ್ಯಗಳಾಗಬಹುದು). ಅಸ್ಥಾತ್ರಯಗಳಿಗೆ ಸೀಮಿತರಾದ ಜನರಷ್ಟೇ ಜಗತ್ತಿನಲ್ಲಿ ತುಂಬಿದ್ದಾರೆ. ಈ ಸ್ಥಿತಿಯು ನಿಷ್ಪ್ರಯೋಜಕ ಎಂಬ ಸತ್ಯವನ್ನು ಅವನಿಯ ಜನರು ಅರಿಯರು. ಮತ್ತು ತುರ್ಯಾವಸ್ಥೆ ಪಡೆಯಲು ಮುಂದಾಗರು.

ಆ. ಕಳೆದ ದಿನ ನೆನೆವುದು ಕನಸಿನರ್ಥವಷ್ಟೆ.
ನಡೆವ ಕಾಲವೆಷ್ಟು ? ನಂಬ ಬೇಡ.
ಕ್ಷಣದೊಳಗಿನ ಬದುಕು ಸಂಸಾರ ಭ್ರಾಂತಿ.
ವಿಶ್ವದಾಭಿರಾಮ ಕೇಳು ವೇಮ.

ಜೀವನು ಸ್ವಪ್ನ ಚಿತ್ತದಲ್ಲಿ ಅನೇಕ ಚಿಂತನೆಗಳನ್ನು ಮಾಡುತ್ತಾನೆ. ಅನೇಕ ದೃಶ್ಯಗಳನ್ನು ಸ್ಮರಿಸುತ್ತಾನೆ. ಆದರೆ ಇವು ಯಾವವೂ ವಾಸ್ತವ ಸತ್ಯವಾಗುವುದಿಲ್ಲ. ಅದೇ ರೀತಿ ಕಳೆದ ದಿನಗಳ ಸುಖದಾಯಕ ಇಲ್ಲವೆ ದುಃಖದಾಯಕ ಘಟನೆಗಳನ್ನು ನೆನೆಯುವುದು ವಾಸ್ತವದಲ್ಲಿ ಅನುಭವಕ್ಕೆ ಸಿಗುವುದಿಲ್ಲ. ಅವುಗಳೆಲ್ಲ ಕನಸಿನಂತೆ ಕಲ್ಪನೆಗಳ ಲೋಕದಲ್ಲಿಯೇ ಉಳಿಯುತ್ತವೆ. ಪ್ರಚಲಿತ ಕಾಲವನ್ನು ಗಮನಿಸಿದರೆ ಸಹ, ಅದು ಸ್ಥಿರವಲ್ಲ. ಕ್ಷಣ ಕ್ಷಣಕ್ಕೆ ಬದಲಾಗುತ್ತಿರುತ್ತದೆ. ಆದ್ದರಿಂದ ಅದನ್ನೂ ನಂಬಬೇಡ. ಈ ಬದುಕು ಕ್ಷಣ ಕ್ಷಣಕ್ಕೂ ಬದಲಾಗುವಂಥದು. ಆದ್ದರಿಂದ ಸಂಸಾರಕ್ಕೆ ಜೋತುಬೀಳುವುದೆಂದರೆ, ಅದು ದೀರ್ಘ ಕಾಲ ಉಳಿಯುವುದೆಂಬ ಭ್ರಾಂತಿಯೇ ಸರಿ.

ಗೀ. ಜನ್ಮ ಮರಣ ಸುಷುಪ್ತಿಯು ಜಗದೊಳಿಲ್ಲ.
ಜರುಗುತಿರುವ ಕಾಲ, ನರಗೆ ಜಂಗಮೆಂದ್ರು,
ಅದನೆ ತಿಳಿದುಕೊಳ್ಳರೀ ಅಜ್ಞರಪ್ಪ
ಭೂ ಪ್ರಜರು, ಬುದ್ಧಿಯಿಲ್ಲದೆ ಹೋಯ್ತು, ವೇಮ.

ಪೂರ್ವ ಕರ್ಮಫಲ ಭೋಗಿಸಲು ಜೀವನು ಜನ್ಮ ತಾಳುತ್ತಾನೆ. ಜಾಗ್ರತ ಅವಸ್ಥೆಯಲ್ಲಿ ಚಿಂತಿಸುತ್ತಾನೆ, ಸ್ಮರಿಸುತ್ತಾನೆ. ತಾನ್ಮಾತ್ರಿಕ ಸ್ಪಂದನಗಳನ್ನು ಸ್ವೀಕರಿಸುತ್ತಾನೆ. ಸಂಜ್ಞಾನಾಡಿಗಳನ್ನೂ ಆಜ್ಞಾ ನಾಡಿಗಳನ್ನೂ ದಣಿಸುತ್ತಾನೆ. ದಣಿದ ಅವುಗಳಿಗೆ ವಿಶ್ರಾಂತಿ ನೀಡಲು ಸುಷುಪ್ತಿ ಸ್ಥಿತಿಗೆ ಹೋಗುತ್ತಾನೆ. ಪ್ರಚಲಿತ ಜನ್ಮದ ಆರಬ್ಧ ಕರ್ಮವು ತೀರಿದರೆ, ಕಾರಣ ಮನದಲ್ಲಿ ದೀರ್ಘ ನಿದ್ರೆ ಹೋಗುತ್ತಾನೆ ಅಂದರೆ ಮರಣವನ್ನು ಅಪ್ಪುತ್ತಾನೆ. ಈ ಚಕ್ರವು ಜಗದೊಳಗೆಲ್ಲ ಜರುಗುತ್ತಿರುವ ಕಾಲದಲ್ಲಿ ಜೀವನಿಗೆ ಅಂದರೆ ನರನಿಗೆ ಜಂಗಮ ಅಂದರೆ ಚಲಿಸುವವನು ಎನ್ನುತ್ತಾರೆ. ಅಂದರೆ ಯಾವುದು ತತ್ ಆಗಿದೆಯೋ, ಅದು ಅಚಲವಾಗಿದೆ. ಸ್ಥಿರವಾಗಿದೆ. ಸ್ಥಾಣುವಾಗಿದೆ. ಶಿವವಾಗಿದೆ. ಇದನ್ನು ಅಜ್ಞರಾದ ಜನರು ಅರಿತುಕೊಳ್ಳರು.

ಆ. ಜನನ ಮರಣ ಇಳೆಯ ಜಂಗಮಗಳು ನೋಡು.
ಜನನಿ ಜನಕ ಇಳೆಯ ಜಲಧಿ ರೀತಿ.
ವಿನುತಿ ಗೆಯ್ದು ಗುರುವ ಬೆನ್ನಿಗಂಟಿ ನೋಡು.
ವಿಶ್ವದಾಭಿರಾಮ ಕೇಳು ವೇಮ.

ಜೀವಿಯು ದೇಹ ಧರಿಸಿ ಇಳೆಗೆ ಆಗಮಿಸುವುದೇ ಜನನ, ಮತ್ತು ಜೀವಿಯು ದೇಹ ತೊರೆದು ಇಳೆಯಿಂದ ನಿಷ್ಕ್ರಮಿಸುವುದೇ ಮರಣ. ಹೀಗಾಗಿ ಜನನ ಮತ್ತು ಮರಣಗಳು ಇಳೆಯ ಜಂಗಮಗಳೆಂದು ತಿಳಿ. ಹೇಗೆ ಇಳೆಯಲ್ಲಿ ಜಲಧಿಯು ಹಳ್ಳ ಹೊಳೆಗಳ ಮೂಲಕ ಮಳೆಯ ಮೂಲಕ ತನ್ನಲ್ಲಿ ಬರುವ ಜಲವನ್ನು ಶೇಖರಿಸಿಟ್ಟು ನಂತರ ಬಾಷ್ಪೀಕರಿಸಿ ಮೇಲೆ ಕಳಿಸಿ,

ಮಳೆಯಾಗಿ ಹಳ್ಳ ಹೊಳೆಗಳ ಮುಖಾಂತರ ಬರುವ ನೀರನ್ನು ಸಂಗ್ರಹಿಸುವುದೋ, ಅದೇ ರೀತಿ, ಜನನಿ ಜನಕರು ಇಳೆಯ ಜೀವರ ಜನನ ಮರಣಗಳನ್ನು ನೋಡುತ್ತಾರೆ. ಆದ್ದರಿಂದ, ಈ ಜಂಗಮಗಳ ವಿಷ ಚಕ್ರದಿಂದ ಮುಕ್ತವಾಗಲು ವಿನಯ ಪೂರ್ವಕ ಮಾರ್ಗದರ್ಶಕ ಗುರುವಿಗೆ ಶರಣಾಗಿ, ಅವನ ಬೆನ್ನಿಗೆ ಬಿದ್ದು ಮಾರ್ಗವನ್ನು ತಿಳಿದುಕೋ.

ನರನು ಜಾಗರದಲಿ ನಟನೆ ಮಾಡುತಿರುವ ;
ನರಗಿಳಿಯಲಿ ಜಾಗರ ವಿರಳ ಕಾಣು.
ನರನು ಜಾಗ್ರತನಿರೆ, ಧರಣಿಲಿ ಪರಮಾತ್ಮ.
ವಿಶ್ವದಾಭಿರಾಮ ಕೇಳು ವೇಮ.

ಜಾಗರ ಎಂದರೆ ಎಚ್ಚರ. ತನ್ಮಾತ್ರೆಗಳ ಸ್ಪಂದನಗಳ ಮೂಲಕ ಇಂದ್ರಿಯ ಸಹಾಯದಿಂದ ಪಾಂಚ ಭೌತಿಕ ಇರವನ್ನು ಅರಿಯುವುದು ಒಂದು ಸ್ತರದ ಜಾಗರ. ಬ್ರಾಹ್ಮೀ ತರಂಗಗಳನ್ನು ಆತ್ಮಿಕ ಜಗತ್ತಿನಲ್ಲಿ ಕೇವಲ ಆನಂದ ರೂಪದಲ್ಲಿ ಗ್ರಹಿಸುವುದು ನೈಜ ಜಾಗರ. ನರನು ನೈಜ ಜಾಗರ ಸ್ಥಿತಿ ತಲುಪದೆ, ಪಾಂಚಭೌತಿಕ ಜಾಗರದಲ್ಲಿದ್ದು ನೈಜ ಜಾಗರದಲ್ಲಿದ್ದಂತೆ ನಟನೆ ಮಾಡುತ್ತಾನೆ. ಇಳೆಯಲ್ಲಿ ಸಮೀಕ್ಷಿಸಿ ನೋಡಿದರೆ ನೈಜ ಜಾಗರ ಪಡೆದ ನರರು ವಿರಳವೆಂದೇ ಹೇಳಬೇಕು. ಒಂದು ವೇಳೆ, ಯಾವನೊಬ್ಬ ನರನು ತುರ್ಯಾವಸ್ಥೆಯ ಜಾಗರ ಪಡೆದರೆ ಅವನು ಧರಣಿಯಲ್ಲಿ ಪರಮಾತ್ಮನೇ ಸರಿ. ಅವನು ಸರ್ವಜ್ಞನೂ, ಸರ್ವ ಶಕ್ತನೂ ಆಗಿರುತ್ತಾನೆ.

ಶಿವೋಪದೇಶದಲ್ಲಿ ಹೀಗೆ ಹೇಳಲಾಗಿದೆ.

ಜಾಗ್ರತ ಸ್ವಪ್ನ ಸುಷುಪ್ತ್ಯಾದಿ ಚೈತನ್ಯಂ ಯದ್ ಪ್ರಕಾಶತೇ.
ತದ್ ಬ್ರಹ್ಮಾಹಮಿತಿ ಜ್ಞಾತ್ವಾ ಸರ್ವಂ ಬಂಧೈಃ ಪ್ರಮುಚ್ಯತೇ.

ಅಂದರೆ ಜಾಗ್ರತ ಸ್ವಪ್ನ ಮತ್ತು ಸುಷುಪ್ತಿ ಮುಂತಾದ ಅವಸ್ಥೆಗಳಲ್ಲಿ ಚೈತನ್ಯವು ಪ್ರಕಾಶವಾಗುತ್ತದೆ. ಅದೇ ಬ್ರಹ್ಮವೆಂದು, ಯಾವನು ಸಾಕ್ಷಾತ್ಕರಿಸಿಕೊಳ್ಳುವನೋ, ಅವನು ಸರ್ವ ಬಂಧನಗಳಿಂದ ಬಿಡುಗಡೆ ಹೊಂದುತ್ತಾನೆ.

ಪಂಚ-ಕೋಶಗಳ ವಿವರ :

ಮಾನವ ಮನವು ಪಂಚಕೋಶಾತ್ಮಕವಾಗಿದೆ. ಈ ಕೋಶಗಳು ಕದಳೀ ಪುಷ್ಪದಂತೆ ಒಂದರೊಳಗೊಂದು ಸೇರಿವೆ. ಇವುಗಳಿಗೆ ಅನ್ನಮಯ ಕೋಶ, ಪ್ರಾಣಮಯ ಕೋಶ, ಮನೋಮಯ ಕೋಶ, ವಿಜ್ಞಾನಮಯ ಕೋಶ, ಆನಂದಮಯ ಕೋಶ ಎಂದು ಹೆಸರಿಸಿದ್ದಾರೆ. ಆತ್ಮನು ಕೋಶಾತೀತನಾಗಿದ್ದಾನೆ.

ಆ. ಐದು ಮನಸು ತಗಲಿ, ಐದು ಮನೆಯೊಳಡಗಿ,
ಐದು ವ್ಯಾಪ್ತಿಗಳನು ಮಣಿಸಲಾರ.
ಐದು ಅಕ್ಷರಗಳನು ಅರಸಿ ಜಪಿಸುತಿರೊ.
ವಿಶ್ವದಾಭಿರಾಮ ಕೇಳು ವೇಮ.

ಈ ಭೂಮಿಯಲ್ಲಿ ತನ್ನ ಜನಕ ಮತ್ತು ಜನನಿಯರ ಶುಕ್ಲ ಹಾಗೂ ಶೋಣಿತಗಳು ಸೇರಿ ತಾಯಿಯ ಗರ್ಭದಲ್ಲಿ ಪಿಂಡವಾಗಿ ಬೆಳೆದು ಹೊರಬಂದ ತನುವೇ ಅನ್ನಮಯ ಕೋಶವೆನಿಸುವುದು. ಇದು ಸ್ಥೂಲ ತನುವಾಗಿದೆ.

ಪ್ರಾಣ, ಅಪಾನ, ಸಮಾನ, ಉದಾನ ಮತ್ತು ವ್ಯಾನಗಳೆಂಬ ಪ್ರಾಣ ಪಂಚಕಗಳಿಂದ ಮತ್ತು ಪಾದ, ಪಾಣಿ, ವಾಕ್, ಗುದ ಮತ್ತು ಗುಹ್ಯವೆಂಬ ಕರ್ಮೇಂದ್ರಿಯ ಪಂಚಕಗಳು ಸೇರಿದುದೇ ಪ್ರಾಣಮಯ ಕೋಶವಾಗಿದೆ.

ಆ. ಪ್ರಾಣವಾತ್ಮವೆನಲು ಪ್ರಾಣೆ ಜೀವಿತಾಯ್ತು.
ಜೀವಿ ಪ್ರಾಣವಾತ್ಮ ಸೇರಿ ಒಂದೆ.
ಕರ್ಮ ಬಂಧಗಳು ಕಟ್ಟಿ ಇರುವುದಷ್ಟೆ.
ವಿಶ್ವದಾಭಿರಾಮ ಕೇಳು ವೇಮ.

ಜೀವಿಯು ಉಸಿರಾಡುವ ವಾಯುವಷ್ಟೇ ಪ್ರಾಣವಲ್ಲ. ಪ್ರತಿ ಸಂಚರ ಧಾರೆಯಲ್ಲಿ ಏಕಾಣು ಜೀವಿಯಲ್ಲಿ ಸಂಚಲನಾ ಶಕ್ತಿಯನ್ನು ಕುದುರಿಸುವ ಶಕ್ತಿಯೇ ಪ್ರಾಣವಾಗಿದೆ. ಪ್ರಾಣ ಶಕ್ತಿಯ ಮಹಿಮೆ ಅಗಾಧವಾಗಿದೆ. ಪ್ರಾಣವು ಶರೀರದಿಂದ ಅಗಲಿದರೂ ನಾಶವಾಗದು. ಪ್ರಳಯವಿರಲು ಪ್ರಾಣ ಹಾನಿಯಿಲ್ಲ. ಪ್ರಳಯ ವಿರಲು ಪರಮಾತ್ಮನ ಸೇರುವ. ಆದರೆ ಪ್ರಾಣ ಶಕ್ತಿಯು ಜೀವಿಯೊಡನೆ ಕರ್ಮ ಬಂಧನದಲ್ಲಿ ಕಟ್ಟಿ ಬಿದ್ದಿದೆಯಷ್ಟೇ.

ಮನವು, ಕರ್ಣ, ಚರ್ಮ, ಕಣ್ಣು, ನಾಲಗೆ ಮತ್ತು ಮೂಗುಗಳೆಂಬ ದ್ವಾರಗಳುಳ್ಳ ಶ್ರವಣೇಂದ್ರಿಯ, ಸ್ಪರ್ಶೇಂದ್ರಿಯ, ಚಕ್ಷುರಿಂದ್ರಿಯ, ರಸನೇಂದ್ರಿಯ ಮತ್ತು ಘ್ರಾಣೇಂದ್ರಿಯಗಳೆಂಬ ಜ್ಞಾನೇಂದ್ರಿಯ ಪಂಚಕದೊಂದಿಗೆ ಸೇರಿ ಮನೋಮಯ ಕೋಶವೆನಿಸುತ್ತದೆ.

ಮನಸಿನೊಳಗೆ ತಿಳಿದು, ಮನಸಿನೊಳಗೆ ಬೆರೆತು,
ಮನಸಿನೊಳಗಿರುವವನ ಮರಳಿ ಸೆಳೆದು,
ಮನಸು ನಿಲಿಸುವವನು ಮರ್ಮಜ್ಞನಹ ಯೋಗಿ.
ವಿಶ್ವದಾಭಿರಾಮ ಕೇಳು ವೇಮ.

ಜ್ಞಾನೇಂದ್ರಿಯ ಸಹಾಯದಿಂದ ತಾನ್ಮಾತ್ರಿಕ ಸ್ಪಂದನಗಳನ್ನು ಸಂಜ್ಞಾ ನಾಡಿಯ ಮೂಲಕ ಸ್ವೀಕರಿಸಿ ಮನಸ್ಸಿನೊಳಗೆ ತಿಳಿದು, ಮನಸ್ಸಿನ ತರಂಗಗಳೊಂದಿಗೆ ಬೆರೆತು, ಮನಸ್ಸಿನೊಳಗೆ ಇರುವ ಜೀವನನ್ನು ಮತ್ತೆ ವೃತ್ತಿಗಳಲ್ಲಿ ಸೇರದಂತೆ ಸೆಳೆದು, ಮನಸ್ಸನ್ನು ವಿಷಯ ವೃತ್ತಿಗಳಿಂದ ದೂರಗೊಳಿಸಿ ಮನಸ್ಸನ್ನು ನಿಲ್ಲಿಸುವುದು, ಮನಸ್ಸಿನ ಮರ್ಮವನ್ನರಿತ, ಯೋಗಿಯ ಕಾರ್ಯವಾಗಿದೆ.

ವಿಜ್ಞಾನಮಯ ಕೋಶವಾವುದೆಂದರೆ, ಬುದ್ಧಿ ಮತ್ತು ಶ್ರವಣೇಂದ್ರಿಯ, ಸ್ಪರ್ಶೇಂದ್ರಿಯ, ಚಕ್ಷುದಿಂದ್ರಿಯ, ರಸನೇಂದ್ರಿಯ ಮತ್ತು ಘ್ರಾಣೇಂದ್ರಿಯಗಳೆಂಬ ಜ್ಞಾನೇಂದ್ರಿಯ ಪಂಚಕಗಳು ಸೇರಿ ಆದದ್ದು.

ಕಂ. ವಿಜ್ಞಾನ ದೃಷ್ಟಿ ಒಳಗಿರೆ,
ಸುಜ್ಞಾನ ತಪವ ಗೆಯ್ಯಲು ಸೂಕ್ಷ್ಮವು ನೀವೇ.

ಅಜ್ಞಾನವ ಅದುಮಿ, ತುಂಬಿರೆ
ಪ್ರಜ್ಞಾನವು, ಬ್ರಹ್ಮ ಪದವಿ ಪ್ರಬಲವು ವೇಮಾ.

ವಿಶೇಷ ಜ್ಞಾನವನ್ನು ಪಡೆಯುವ ದೃಷ್ಟಿಯು ಒಳಗೆ ಇರುವಾಗ, ಸುಜ್ಞಾನ ಹೊಂದಿ ತಪಸ್ಸನ್ನು ಆಚರಿಸಿದರೆ, ಸಾಧಕನು ತನ್ನ ಸ್ಥೂಲ ಭಾವನೆಗಳನ್ನು ಉದ್ದೀಪಿಸಿಕೊಂಡು ಸೂಕ್ಷ್ಮನಾಗುತ್ತಾನೆ. ಆಗ ಅವನು ಅಜ್ಞಾನವನ್ನು ಅದುಮಿ, ಸರಿಸಿ, ತನ್ನಲ್ಲಿ ಪ್ರಜ್ಞಾನವು ತುಂಬಿಕೊಂಡರೆ, ಬ್ರಹ್ಮ ಪದವಿಯು ಪ್ರಬಲವಾಗುವುದು. 'ಪ್ರಜ್ಞಾನಂ ಬ್ರಹ್ಮ ಇತ್ಯಾಹುಃ' ಅಂದರೆ ಪ್ರಜ್ಞಾನವು ಬ್ರಹ್ಮವೆನಿಸುತ್ತದೆ.

ಸತ್, ಚಿತ್, ಆನಂದವು ಆತ್ಮನ ಸ್ವರೂಪ. ಯಾವಾಗ ಅವಿಚ್ಛಿನ್ನವಾದ, ಪೂರ್ಣವಾದ ಈ ಸ್ವರೂಪವು ಜೀವಿಗೆ ಅನ್ವಯಿಸುವುದಿಲ್ಲವೋ, ಆಗ ಅದು ಪರಿಚ್ಛಿನ್ನವಾಗುತ್ತದೆ. ಅಪೂರ್ಣವಾಗುತ್ತದೆ. ಇಂಥ ಜೀವಿಗೆ ಮರ್ಯಾದಿತವಾದ, ಜ್ಞಾನವನ್ನು ವಿಜ್ಞಾನವೆನ್ನುತ್ತಾರೆ. ಸರ್ವವ್ಯಾಪಿ ಆಕಾಶವನ್ನು ಘಟಕ್ಕಾಗಲಿ, ಮಠಕ್ಕಾಗಲಿ ಮರ್ಯಾದಿಸಿದಾಗ ಅದು ಘಟಾಕಾಶ ಇಲ್ಲವೆ ಮಠಾಕಾಶವೆನ್ನಿಸಿಕೊಳ್ಳುವಂತೆ, ವಿಜ್ಞಾನದ ಗ್ರಹಿಕೆ.

ಆನಂದಮಯ ಕೋಶವೆಂದರೇನು ? ಪ್ರಿಯಕರವಾದ ಆಮೋದ ಪ್ರಮೋದಗಳಲ್ಲಿ ಮಗ್ನವಾಗಿ, ಆತ್ಮನನ್ನು ಕುರಿತು ಅಜ್ಞಾನದಿಂದ ಇರುವುದೇ ಆನಂದಮಯ ಕೋಶವೆನಿಸುತ್ತದೆ.

ಆ. ಮೋದ ಪಡುವವನಾರೊ ? ಮೋದಿಸುವವನಾರೊ ?
ಬೀದಿ ಹಿಡಿದು ನೋಡೆ, ಬಟ್ಟೆ ಬಯಲು.
ಸರಣಿ ಜಲ ಘಟದಲಿ ಸೂರ್ಯನಿರುವ ಚಿಂದ.
ವಿಶ್ವದಾಭಿರಾಮ ಕೇಳು ವೇಮ.

ಆನಂದಮಯ ಕೋಶದಲ್ಲಿ ಯಾರು ಮೋದ ಪಡುತ್ತಾರೆ ? ಮೋದಿಸುತ್ತಾರೆ ? ತಿಳಿಯದು. ಅರಿಯುವ ಹಾದಿ ಹಿಡಿದು ನೋಡಿದರೆ, ಎಲ್ಲ ಗುಟ್ಟೂ ಬಟ್ಟೆ ಬಯಲಾಗುತ್ತದೆ. ನೀರು ತುಂಬಿದ ಕೊಡದಲ್ಲಿ ಸೂರ್ಯ ಬಿಂಬವು ಮೂಡಿ ನಿಂತಂತೆ ಸ್ಪಷ್ಟವಾಗುವುದು. ಪರಮಾತ್ಮನು ಪ್ರತಿಬಿಂಬ ರೂಪದಲ್ಲಿ ಅಗ್ಗ್ರಬುದ್ಧಿಯಲ್ಲಿ ಕಾಣುತ್ತಾನೆ.

ಜೀವ ಹಂಸನ ಸಂಚಾರ :

ಮಾನವ ಶರೀರದಲ್ಲಿ ಯೋಗಿಗಳು ಆರು ಚಕ್ರಗಳಿವೆಯೆಂದು ಹೇಳುತ್ತಾರೆ. ಈ ಚಕ್ರಗಳೆಂದರೆ ಜೀವಹಂಸನು ಚಲಿಸುವ ಇಡಾ ಪಿಂಗಳಾ ಮತ್ತು ಸುಷುಮ್ನಾ ನಾಡಿಗಳು ಒಂದನ್ನೊಂದು ದಾಟುವ ಗ್ರಂಥಿಗಳು. ಇವು ಭಾವಲೋಕದ ಸೃಷ್ಟಿಯಾದರೂ ಸಹಸ್ರಾರು ವರ್ಷಗಳಿಂದ ಯೋಗಿಗಳ ಅನುಭವ ಕ್ಷೇತ್ರಗಳಾಗಿವೆ.

ಕಂ. ಆಧಾರವೆಂಬುವುಗಳಾರು ;
ಮೋದದಿ ಅರಳುತಿಹವು ಮುಖ್ಯವಾಗಿಹುದನೇ
ಇಲ್ಲವೆನಲೇಕೆ ತಿಳಿಯದೆ ?
ಸಾಧಕನಾಗುತ ಕಂಡುಕೋ ಸಾಧಿಸಿ, ವೇಮಾ.

ಈ ಷಟ್ಚಕ್ರಗಳಾವವು ? ಅವುಗಳ ಹೆಸರೇನು ? ಅವುಗಳ ಸ್ಥಾನವೆಲ್ಲಿ ? ಅಧಿದೇವತೆಗಳು ಯಾರು ?

ಸೀಸ ಮೊದಲು ಮೂಲಾಧಾರವಿಹುದು ವಿಘ್ನೇಶ್ವರಂ
ಆ ತಾಣ ದೇವಾಳಿ ಅರಳುತಿಹುದು.
ಅದರ ಮೇಲೆ ಮತ್ತೆರಡಂಗುಲ ದಾಟಿ,
ಸ್ವಾದಿಷ್ಟ ಚಕ್ರವದು ಇಹುದು ಬ್ರಹ್ಮ.
ಇದರಿಂದ ಎಂಟು ದೇಹಾಂಗುಲಂತರ
ಮಣಿಪುರ ಚಕ್ರವೈ, ಅಲೆಯುವ ಹರಿ.
ಬಳಿಕ ದಶಾಂಗುಲ ದೂರ, ಅನಾಹುತ
ಒಪ್ಪ ರುದ್ರನಿಹನು ಚೊಕ್ಕವಾಗಿ.

ಗೀತ ಹನ್ನೆರಡು ಅಂಗುಲಂತರ ಮೇಲೆ, ವಿಶುದ್ಧ ;
ಅಲ್ಲಿ ಜೀವನು ; ಹೊಂದುತಾ ಅರಳುತಿಹನು
ಹೊಳೆವ ಮಹಿಮಾತ್ಮನಗ್ನಿಯೈ ಬೆಳಗುತಿಹನು.
ಇಷ್ಟು ಜಾಡನು ತಿಳಿವುದೆ, 'ಅರಿವು' ವೇಮ.

ಗುದ ಸ್ಥಲದಲ್ಲಿ ಮೂಲಾಧಾರ ಚಕ್ರವಿದೆ. ಅಲ್ಲಿ ಅಧಿದೇವತೆ ವಿಘ್ನೇಶ್ವರನು. ಅಲ್ಲಿ ದೈವೀ ಶಕ್ತಿಯು ಅರಳುತ್ತಿದೆ. ಅದರ ಮೇಲೆ ಎರಡು ಅಂಗುಲ ಅಂತರದಲ್ಲಿ ಸ್ವಾದಿಷ್ಠಾನ ಚಕ್ರವಿದೆ. ಅಲ್ಲಿಯ ಅಧಿದೇವತೆಯು ಬ್ರಹ್ಮನು. ಅಲ್ಲಿಂದ ಎಂಟು ಅಂಗುಲ ಮೇಲೆ ನಾಭಿ ಸ್ಥಾನದಲ್ಲಿ ಮಣಿಪೂರಕ ಚಕ್ರವಿದೆ. ಅಲ್ಲಿಯ ಅಧಿದೇವತೆಯು ಹರಿ. ಆ ಮೇಲೆ ಹತ್ತು ಅಂಗುಲ ಮೇಲೆ ಹೃದಯ ಸ್ಥಾನದಲ್ಲಿ ಅನಾಹತ ಚಕ್ರವಿದೆ. ಅಲ್ಲಿಯ ಅಧಿದೇವತೆಯು ಚೊಕ್ಕ ರುದ್ರನಿಹನು. ಅಲ್ಲಿಂದ ಹನ್ನೆರಡು ಅಂಗುಲ ಮೇಲೆ ಕಂಠ ಸ್ಥಾನದಲ್ಲಿ ವಿಶುದ್ಧ ಚಕ್ರವಿದೆ. ಅಲ್ಲಿಯ ಅಧಿದೇವತೆ ಜೀವನಾಗಿದ್ದಾನೆ. ಅಲ್ಲಿಂದ ಹನ್ನೆರಡು ಅಂಗುಲ ಮೇಲೆ ಭ್ರೂಮಧ್ಯೆ ಸ್ಥಾನದಲ್ಲಿ ಮಹಿಮಾನ್ವಿತ ಅಗ್ನಿ ಚಕ್ರ ಇಲ್ಲವೆ ಆಜ್ಞಾ ಚಕ್ರವಿದೆ. ಅಲ್ಲಿ ಅಧಿದೇವತೆ ಗುರುವಾಗಿದ್ದಾನೆ.

ಈ ಆರು ಚಕ್ರಗಳ ಆಚೆಗೆ ಮೂಲ ಶಕ್ತಿಯೊಂದಿದೆ. ಅದುವೇ ಸಹಸ್ರಾರ ಚಕ್ರ. ಇದು ಹೇಗೆ ಸಹಸ್ರಾರ ಚಕ್ರವೆನಿಸುತ್ತದೆ ? ಮೂಲಾಧಾರ, ಸ್ವಾಧಿಷ್ಠಾನ, ಮಣಿಪೂರಕ, ಅನಾಹತ ಮತ್ತು ವಿಶುದ್ಧಿ ಎಂಬ ಐದು ಚಕ್ರಗಳಲ್ಲಿ ಕ್ರಮವಾಗಿ 4, 6, 10, 12, 16 ಹೀಗೆ 48 ಮುಖ್ಯ ವೃತ್ತಿಗಳಿರುತ್ತವೆ. ಇನ್ನು ಆಜ್ಞಾ ಚಕ್ರದ ವೃತ್ತಿಗಳಿರಡು. ಅಪರಾ ಮತ್ತು ಪರಾ. ಐದು ಚಕ್ರಗಳ ವರೆಗೆ ಜೀವ ಭಾವವಿದ್ದು, ಆರನೆಯ ಆಜ್ಞಾ ಚಕ್ರದಲ್ಲಿ ಈಶ ಭಾವವಿರುತ್ತದೆ. ಆದ್ದರಿಂದ ಇಲ್ಲಿಯ ಅಧಿದೇವತೆ ಗುರುವಾಗಿದ್ದಾನೆ. ತನ್ನ ಈಶತ್ವದಿಂದ ಜೀವನನ್ನು ನಿಯಂತ್ರಿಸುವುದರಿಂದ ಇದು ಆಜ್ಞಾ ಚಕ್ರವೆನಿಸಿದೆ. ಅಲ್ಲಿಂದ ಮುಂದೆ ಸಾಧಕನ ಆಧ್ಯಾತ್ಮಿಕ ವಲಯವಾಗಿದೆ. ಹೀಗೆ ಮಾನವನಲ್ಲಿ 50 ವೃತ್ತಿಗಳಿವೆ. ಇವು ಬಾಹ್ಯದಿಂದಲೂ ಉದಿಸುತ್ತಿವೆ. ಮತ್ತು ಆಂತರ್ಯದಿಂದಲೂ ಉದಿಸುತ್ತವೆ. ಮೇಲಾಗಿ ಈ ವೃತ್ತಿಗಳು 4 ದಿಶೆಗಳಿಂದ, 4 ಉಪದಿಶೆಗಳಿಂದ ಮತ್ತು ಊರ್ಧ್ವದಿಂದ ಹಾಗೂ ಅಧದಿಂದ ಬರಬಹುದು. ಹೀಗೆ ದಶ ದಿಕ್ಕುಗಳಿಂದ ಬರಬಹುದು. ಹೀಗಾಗಿ ವೃತ್ತಿ

ಸಮೂಹದಲ್ಲಿ (50×2×10) ಸಹಸ್ರ ವೃತ್ತಿಗಳೆಂದು ಹೇಳುತ್ತಾರೆ. ವೃತ್ತಿಗಳನ್ನು ಯೋಗಿಗಳು ಕಮಲ ದಳಗಳೆಂದು ಕರೆಯುವುದರಿಂದ ಮತ್ತು ಚಕ್ರಗಳನ್ನು ವೃತ್ತಿ ನಿಯಂತ್ರಕಗಳೆಂದು ಕಂಡುಕೊಂಡಿರುವುದರಿಂದ, ಶಿರದ ಮೇಲಿನ ಮಾನಸಿಕ ನಾಡಿ ಕೇಂದ್ರವನ್ನು ಸಹಸ್ರಾರ ಚಕ್ರವೆಂದು ಹೆಸರಿಸಲಾಗಿದೆ.

ಕಂ. ಪುರದಲಿ ಆರರ ಮೇಲಕೆ,
ಪುರದಲಿ ಒಂದು ಮೂಲ ಶಕುತಿಯಿದೆ ಕಾಣಾ.
ಉರದಲಿ ಗುರಿಗಂಡೊಡನೆಯೆ,
ಪರಿಪೂರ್ಣ ಬ್ರಹ್ಮ ರೂಪ ಬಯಲಾಯ್ತು ವೇಮಾ.

ದೇಹವೆಂಬ ಪುರದಲ್ಲಿ ಆರು ಚಕ್ರಗಳ ಮೇಲಕ್ಕೆ ಸಹಸ್ರಾರವೆಂಬ ಮೂಲ ಶಕ್ತಿಯಿದೆ. ಅದನ್ನು ತಿಳಿ. ಎದೆಯಲ್ಲಿ ಧೈರ್ಯದಿಂದ ಗುರಿಯನ್ನು ಕಂಡೊಡನೆಯೇ ಪರಿಪೂರ್ಣ ಬ್ರಹ್ಮ ರೂಪವು ಬಯಲಾಯಿತು.

ಕಂ. ಷಟ್ಚಕ್ರಗಳಿಂದಾಚೆಗೆ
ಷಟ್ಚಿಂತೆ ಬಿಡುತಿರೆ ಮುಕ್ತಿ ; ಷಡ್ಗುಣ ನಿಧಿಯೈ.
ಷಟ್ಭಾಯೆಗಳಲಿ ಹೊಂದುತ,
ಷಟ್ಚಕ್ರಗಳಾಗಿ ಹೊಳೆವ ಷಟ್ಕವು ವೇಮಾ.

ಮೂಲಾಧಾರ, ಸ್ವಾಧಿಷ್ಠಾನ, ಮಣಿಪೂರಕ, ಅನಾಹತ, ವಿಶುದ್ಧಿ ಮತ್ತು ಆಜ್ಞಾ ಎಂಬ ಆರು ಚಕ್ರಗಳಿಂದಾಚೆ ಸಹಸ್ರಾರ ಚಕ್ರವಿದೆ. ಮೂಲಾಧಾರದಿಂದ ಕುಂಡಲಿನಿಯು ಸಹಸ್ರಾರ ತಲುಪಿದಾಗ ಕಾಮ, ಕ್ರೋಧ, ಲೋಭ, ಮೋಹ, ಮದ ಮತ್ತು ಮತ್ಸರಗಳೆಂಬ ಆರೂ ಚಿಂತೆಗಳು ತೊಲಗುತ್ತವೆ. ಅಲ್ಲಿ ಚಿಂತೆಗಳಿಂದ ಮುಕ್ತಿ ದೊರೆಯುತ್ತದೆ. ಆಗ ಸಾಧಕನು, ಸರ್ವಜ್ಞತ್ವ, ಸರ್ವೇಶತ್ವ, ಸರ್ವ ಸೃಷ್ಟ್ಯತ್ವ, ಸರ್ವ ರಕ್ಷಕತ್ವ, ಸರ್ವ ಲಯತ್ವ ಎಂಬ ಷಡ್ಗುಣ ನಿಧಿಯಾಗುತ್ತಾನೆ. ಆಗ ಯೋಗಿಯು ಸ್ವರ್ಣ, ರಕ್ತ, ಪೀತ, ಶ್ವೇತ, ನೀಲ ಮತ್ತು ಮಾಣಿಕ್ಯಗಳೆಂಬ ಷಟ್ಭಾಯೆಗಳಲ್ಲಿ ಶೋಭೆ ಹೊಂದುತ್ತ, ಆರು ಚಕ್ರ ರೂಪದಲ್ಲಿ ನಿಯಂತ್ರಕನಾಗಿರುತ್ತಾನೆ. ಇದುವೇ ಅರಿಯಬೇಕಾದ ಷಟ್ಕವು.

ಅಷ್ಟದಳ ಪದ್ಮ :

ಆಧಾರ ಮೊದಲಾದ ಏಳು ಪದ್ಮಗಳಲ್ಲಿ ನಡುವಿನ ಅಧೋಮುಖದ ಹೃತ್ಪದ್ಮದೊಳಗೆ ಜೀವ ಹಂಸನು ಆಡುತ್ತಾನೆ. ಈ ಅಧೋ ಮುಖೀ ಪದ್ಮದ ದಳಗಳು ಎಂಟು.

ಆ. ಅಷ್ಟದಳಂಗಗಳಲಿ ಆತ್ಮನನು ಸೇವಿಸಿ,
ನಿಷ್ಠೆ ಹೊಂದಿ ಮಿಗಿಲು ನೆನೆದು ತಿಳಿದು,
ದೃಷ್ಟಿಯೊಳಗೆ ದೃಷ್ಟಿ ತತ್ತರಿಸದೆ ನೋಡು.
ವಿಶ್ವದಾಭಿರಾಮ ಕೇಳು ವೇಮ.

ಹೃದಯ ಕಮಲದ ಅಷ್ಟದಳದಲ್ಲಿ ಜೀವ ಹಂಸನು ಚಲಿಸುವಾಗ, ಆತ್ಮನನ್ನು ಸೇವಿಸಿ,

ನಿಷ್ಠೆ ಹೊಂದಬೇಕು. ಇನ್ನೂ ಹೆಚ್ಚಾಗಿ ಧ್ಯಾನಿಸಿ ತಿಳಿದು, ದೃಷ್ಟಿಯಲ್ಲಿ ದೃಷ್ಟಿಯಿರಿಸಿ, ತತ್ತರಿಸದೆ ನೋಡು.

ಈ ಅಷ್ಟದಳಗಳ ಮೇಲೆ ಜೀವ ಹಂಸನು ಚಲಿಸುವಾಗ ಬೇರೆ ಬೇರೆ ಯೋಗಿಗಳ ಅನುಭವವು ಭಿನ್ನವಿರಬಹುದು. ಮಹಲಿಂಗ ರಂಗ ಶಿಷ್ಯರಾದ ಶಂಕರಾನಂದ ಯೋಗೀಶ್ವರರ ಅನುಭವದ ಮೇರೆಗೆ, ಜೀವ ಹಂಸದ ಚಲನೆಯು ಪೂರ್ವದಲ್ಲಿ ಇರುವಾಗ ಪುಣ್ಯಬುದ್ಧಿ, ಆಗ್ನೇಯದಲ್ಲಿ ನಿದ್ರೆ, ದಕ್ಷಿಣದಲ್ಲಿ ಕೋಪ, ನೈಋತ್ಯದಲ್ಲಿ ಪಾಶ, ಪಶ್ಚಿಮದಲ್ಲಿ ಕ್ರೀಡೆ, ವಾಯವ್ಯದಲ್ಲಿ ಗಮನ, ಉತ್ತರದಲ್ಲಿ ಸುರತ ಮತ್ತು ಈಶಾನ್ಯದಲ್ಲಿ ಧರ್ಮ ಗುಣ ಎಂದು ತಿಳಿಸಿದ್ದಾರೆ.

ಕೈವಾರದ ಯೋಗಿ ನಾರೇಯಣ ಕವಿಗಳ ಅನುಭವದ ಮೇರೆಗೆ, ಪೂರ್ವ ದಳವು ಪುಣ್ಯ ಕ್ಷೇತ್ರವಾಗಿದೆ. ಉಳಿದ ಏಳು ದಳಗಳ ಮೇಲೆ ಜೀವ ಹಂಸದ ಚಲನೆಯಾದಾಗ ಒಂದರಲ್ಲಿ ವನಿತೆಯರ ಕೂಟವನ್ನು ಕೋರುತ್ತದೆ. ಒಂದು ದಳದ ಮೇಲೆ ವಾದ ಬುದ್ಧಿಯ ಚಪಲ, ಒಂದರಲ್ಲಿ ಅರ್ಥಲಾಭ ಕೋರಿಕೆ, ಒಂದರಲ್ಲಿ ನಿದ್ರೆ, ಒಂದರಲ್ಲಿ ವಸ್ತ್ರಗಳ ಕೋರಿಕೆ, ಒಂದರಲ್ಲಿ ಸಮೀಚೀನ ಭಕ್ಷಣೆ, ಒಂದರಲ್ಲಿ ವಿರ್ಭಯತೆ, ಒಂದರಲ್ಲಿ ಧನ ಧಾನ್ಯಗಳ ಆಕ್ರಮಣದ ಕೋರಿಕೆ.

ಹುಲಕೋಟಿಯ ಬಳಿ ಬಿಂಕದಕಟ್ಟೆಯ ಗುಡ್ಡದ ಮೇಲೆ ಕಳೆದ ಶತಮಾನದ ಪ್ರಾರಂಭದಲ್ಲಿ ರಾಮಕರಣ ಸ್ವಾಮಿ ಎಂಬ ಸಾಧುಗಳು ಕುಟೀರದಲ್ಲಿ ಆಗೀಗ ನಲವತ್ತು ದಿನಗಳ ಅನುಷ್ಠಾನ ಮಾಡುತ್ತಿದ್ದರು. ಅವರು ತಮ್ಮ ಅನುಭವಗಳನ್ನು ಬರೆದಿದ್ದು ಜೀವ ಹಂಸನ ಚಲನೆಯನ್ನು ನೆನಪಿಸುತ್ತವೆ. ಅವರಿಗೆ ಒಮ್ಮೆ ಬಹು ಬೆಲೆಯ ಬಟ್ಟೆ ಬೇಕೆನ್ನಿಸಿದರೆ, ಒಮ್ಮೆ ಬೀಡಿ ಸಿಗರೇಟುಗಳ ವಿಪರೀತ ವ್ಯಸನವಿರುತ್ತಿತ್ತು. ಒಮ್ಮೆ ಪಕ್ವಾನ್ನಗಳ ಭಕ್ಷಣೆಯ ಚಪಲವಿರುತ್ತಿತ್ತು. ಒಮ್ಮೆ ಯಾರ ಹೆದರಿಕೆಯೂ ಇಲ್ಲದಂತಿರುತ್ತಿದ್ದರು. ಒಮ್ಮೆ ನಿದ್ರೆಯಲ್ಲಿಯೇ ಕಾಲ ತಳ್ಳುತ್ತಿದ್ದರು. ಆ ಕಾಲದಲ್ಲಿ ಅವರ ನಿತ್ಯ ಆಹಾರವು ಮೂರು ಬೊಟ್ಟಿಗೆ ಬರುವಷ್ಟು ಕರಿಕೆಯ ಹುಲ್ಲು ಮಾತ್ರವಾಗಿತ್ತು.

ಆ. ಅಷ್ಟದಳಗಳಿಗೆ ಆಧಾರವಾದಂಥ
ಆದಿ ದೇವನೊಬ್ಬ ಅಖಿಲ ಜಗಕೆ.
ತ್ರಯವ ದಾಟಿದವನೆ ತಾನೆ ಹೋಗು ಬ್ರಹ್ಮ.
ವಿಶ್ವದಾಭಿರಾಮ ಕೇಳು ವೇಮ.

ಹೃದಯ ಕಮಲದ ಮಧ್ಯದಲ್ಲಿ ಅಷ್ಟ ದಳಗಳಿಗೆ ಆಧಾರವಾದಂಥ ಆದಿ ದೇವನೊಬ್ಬನು ಅಖಿಲ ಜಗಕ್ಕೆಲ್ಲ ರಕ್ಷಕನಾಗಿರುವನು. ಅಲ್ಲಿ ಜಾಗ್ರತ ಸ್ವಪ್ನ, ಸುಷುಪ್ತಿ ಅವಸ್ಥೆಗಳನ್ನು ದಾಟಿ, ತುರ್ಯದಲ್ಲಿದ್ದು ಸಂಚಿತ, ಪ್ರಾರಬ್ಧ ಮತ್ತು ಆಗಾಮಿ ಕರ್ಮತ್ರಯವನ್ನು ದಾಟಿದವನೇ ತಾನು ಬ್ರಹ್ಮನೆನಿಸುವನು.

ಆ. ಕೂಡಿ ಹಿಡಿದು ಹಂಸ ಕಳೆಗಂಟಿ ಗಮನಿಸಿ,
ಸದಯ ಹೃದಯದಲ್ಲಿ ಸಂಪಾದಿಸು.
ವಿದಿತವಾದ ಬಯಲು ಬೆನ್ನಿಗಂಟಿಯುಂಟು.
ವಿಶ್ವದಾಭಿರಾಮ ಕೇಳು ವೇಮ.

ಜೀವಾತ್ಮನು ಅಜ್ಞಾನದಿಂದ ಕತ್ತಲೆ ಕವಿದ ಶರೀರದಲ್ಲಿ ಸಿಕ್ಕಿ ಬಿದ್ದಿದ್ದಾನೆ. ಈಗ ಮೂಲಾಧಾರದಲ್ಲಿ ಜಾಗೃತಗೊಂಡ ಹಂಸದ ಕಳೆಗೆ ಅಂಟಿಕೊಂಡು ಅದನ್ನೇ ಗಮನಿಸುತ್ತ ಸದಯ ಹೃದಯದಲ್ಲಿ ಆ ಜ್ಯೋತಿಯನ್ನು ಸಂಪಾದಿಸು. ಆಗ ಸುಪ್ರಸಿದ್ಧನವಾದ, ಚಿಂತಾ ದೂರವಾದ, ಬಯಲು ಬೆನ್ನಿಗಂಟಿ ಇರುತ್ತದೆ.

ಸಾಂಖ್ಯ ಸೂತ್ರ :

ಸಾಂಖ್ಯ ಯೋಗವನ್ನು ಇದುವರೆಗೆ ವಿವರಿಸಿದ್ದೇವೆ. ಸಾಂಖ್ಯ ಸೂತ್ರಾನುಸಾರ ಈ ಶರೀರದಲ್ಲಿ 96 ತತ್ವಗಳಿವೆ. ಈ ತೊಂಭತ್ತಾರು ತತ್ವಗಳಿಂದ ಕೂಡಿದ ಶರೀರವೇ ನಾನೆಂದು ಜೀವನು ಭಾವಿಸಿದ್ದಾನೆ. ಅವಾವುಗಳೆಂದರೆ, ಪಂಚಭೂತಗಳು ಐದು, ಜ್ಞಾನೇಂದ್ರಿಯಗಳು ಐದು, ಕರ್ಮೇಂದ್ರಿಯಗಳು ಐದು, ಪ್ರಾಣಾದಿ ವಾಯುಗಳು ಹತ್ತು, ಚಕ್ರಗಳು ಆರು, ಧಾತುಗಳು ಏಳು, ನಾಡಿಗಳು ಹತ್ತು, ಮಂಡಲಗಳು ಮೂರು, ಈಷಣಾಗಳು ಮೂರು, ಗುಣಗಳು ಮೂರು, ಅವಸ್ಥೆಗಳು ಮೂರು, ತಾಪತ್ರಯಗಳು ಮೂರು, ಕೋಶಗಳು ಐದು, ಇವೆಲ್ಲವೂ ಸೇರಿ ತೊಂಭತ್ತಾರು.

1) ಪಂಚ ಭೂತಗಳು : ಆಕಾಶ, ವಾಯು, ತೇಜಸ್, ಅಪ್ ಮತ್ತು ಪೃಥಿವಿ (ಈಗಾಗಲೇ ವಿವರಿಸಲಾಗಿದೆ).

2) ಪಂಚ ಜ್ಞಾನೇಂದ್ರಿಯ : ಶ್ರವಣೇಂದ್ರಿಯ, ಸ್ಪರ್ಶೇಂದ್ರಿಯ, ಚಕ್ಷುರಿಂದ್ರಿಯ, ರಸವೇಂದ್ರಿಯ ಮತ್ತು ಘ್ರಾಣೇಂದ್ರಿಯ (ಈಗಾಗಲೇ ವಿವರಿಸಲಾಗಿದೆ)

3) ಪಂಚ ಕರ್ಮೇಂದ್ರಿಯ : ವಾಕ್, ಪಾದ, ಪಾಣಿ, ಗುದ ಮತ್ತು ಗುಹ್ಯ (ಈಗಾಗಲೇ ವಿವರಿಸಲಾಗಿದೆ)

4) ಹತ್ತು ಪ್ರಾಣಗಳು : ಪ್ರಾಣ, ಅಪಾನ, ಸಮಾನ, ವ್ಯಾನ, ಉದಾನ (ಈಗಾಗಲೇ ವಿವರಿಸಲಾಗಿದೆ)

   ನಾಗ, ಕೂರ್ಮ, ಕೃಕರ, ದೇವದತ್ತ, ಧನಂಜಯ ಇವು ಬಾಹ್ಯ ಪ್ರಾಣವಾಯುಗಳು.

5) ಚಕ್ರಗಳು ಆರು : ಮೂಲಾಧಾರ, ಸಾಧಿಷ್ಠಾನ, ಮಣಿಪೂರಕ, ಅನಾಹತ, ವಿಶುದ್ಧಿ, ಆಜ್ಞಾ (ಈಗಾಗಲೇ ವಿವರಿಸಲಾಗಿದೆ)

6) ಧಾತುಗಳು ಏಳು : ರಸ, ರುಧಿರ, ಮಾಂಸ, ಮೇಧಸ್ಸು, ಮಜ್ಜೆ, ಅಸ್ಥಿ, ರೇತಸ್ಸು

7) ನಾಡಿಗಳು ಹತ್ತು : ನಾಡಿಗಳಲ್ಲಿ ಹತ್ತು ಮುಖ್ಯ ನಾಡಿಗಳಿವೆ. ಅವುಗಳೆಂದರೆ, ಇಡಾ, ಪಿಂಗಳಾ, ಸುಷುಮ್ನಾ, ಗಾಂಧಾರಿ, ಹಸ್ತಿನಿ, ಪೂಷ, ಆಲಂಬುದ, ಯಶಸ್ವಿನಿ, ಕುರು ಮತ್ತು ಶಂಕಿನಿ.

ಇವುಗಳಲ್ಲಿ ಇಡಾ ಪಿಂಗಳಾ ನಾಡಿಗಳು ಶ್ವಾಸದ ನಾಡಿ ಮತ್ತು ಉಚ್ಛ್ವಾಸದ ನಾಡಿಗಳಾಗಿವೆ. ಇವುಗಳಿಗೆ ಪೂರಕ, ರೇಚಕಗಳೆಂದೂ ಕರೆಯುತ್ತಾರೆ. ಇವೆರಡರ ಮಧ್ಯೆ ಸುಷುಮ್ನಾ ನಾಡಿಯು ಕುಂಭಕ ನಾಡಿಯಾಗಿದೆ.

ಕಂ. ನಾಡೀ ಚಕ್ರವ ನೋಡಲ್,
ನಾಡಿಗಳಿವೆ ದಶ ಮುಖ್ಯವು, ಅವುಗಳ ಒಳಗೇ
ಕೂಡಿವೆ ನಾಸಿಕದೆಡಬಲ
ಜೋಡಿಯು ಇಡ ಪಿಂಗಳೆಂಬುವುಗಳಿವೆ ವೇಮಾ.

ಕಂ. ಇಡ ಪಿಂಗಳ ನಾಡಿಗಳಿಗೆ
ನಡುವೆ ಸುಷುಮ್ನೆಯು ಬೆಳಗುತ ಅಲೆದಾಡುತಿರಲ್
ಕಡು ದುಸ್ತರ ಮನದಿ ಕಾಣೆ
ನಡುವೆಯೆ ಇನ ಚಂದ್ರ ಹರರ ನಗರವು ವೇಮಾ.

8) ಮಂಡಲಗಳು ಮೂರು: ಸೂರ್ಯ ಮಂಡಲ, ಶಶಿ ಮಂಡಲ, ನಕ್ಷತ್ರ ಮಂಡಲ.
ಅನಾಹತ ಚಕ್ರದ ಪ್ರದೇಶವು ಸೂರ್ಯ ಮಂಡಲವೆನಿಸಿದೆ. ಆಜ್ಞಾ ಚಕ್ರದ ಅಂದರೆ ಕಣ್ಣುಗಳ ನಡುವಿನ ಪ್ರದೇಶವು ಶಶಿ ಮಂಡಲವೆನಿಸಿದೆ. ಇನ್ನು ವಿಶುದ್ಧ ಚಕ್ರದ ಪ್ರದೇಶವು ನಕ್ಷತ್ರ ಮಂಡಲವೆನಿಸಿದೆ.

9) ಈಷಣಗಳು ಮೂರು : ದಾರೇಷಣ, ಪುತ್ರೇಷಣ, ವಿತ್ತೇಷಣ (ಈಗಾಗಲೇ ವಿವರಿಸಲಾಗಿದೆ).

10) ಗುಣಗಳು ಮೂರು : ಸತ್ವಗುಣ, ರಜೋಗುಣ, ತಮೋಗುಣ (ಈಗಾಗಲೇ ವಿವರಿಸಲಾಗಿದೆ).

11) ಅವಸ್ಥೆಗಳು ಮೂರು : ಜಾಗ್ರತ, ಸ್ವಪ್ನ, ಸುಷುಪ್ತಿ (ಈಗಾಗಲೇ ವಿವರಿಸಲಾಗಿದೆ).

12) ತಾಪತ್ರಯಗಳು : ಆಧಿ ದೈವಿಕ, ಆಧಿ ಭೌತಿಕ ಮತ್ತು ಆಧ್ಯಾತ್ಮಿಕ.
ಆದಿ ದೈವಿಕ ತಾಪವೆಂದರೆ ಸಿಡಿಲು, ಗುಡುಗು, ಭೂಕಂಪ, ಅತಿವೃಷ್ಟಿ, ಅನಾವೃಷ್ಟಿ, ಬಿರುಗಾಳಿ ಮಹಾಪೂರ ಮುಂತಾದವುಗಳಿಂದಾಗುವ ಹಾನಿಗಳು.
ಆದಿ ಭೌತಿಕ ತಾಪ ಎಂದರೆ ಸರ್ಪ ವೃಶ್ಚಿಕಾದಿಗಳಿಂದ ಉಂಟಾಗುವ ವ್ಯಾಧಿ.
ಆಧ್ಯಾತ್ಮಿಕ ತಾಪವೆಂದರೆ ದೇಹದಿಂದ ಉಂಟಾಗುವ ವ್ಯಾಧಿ.

13) ಕೋಶಗಳು ಐದು : ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನಮಯ ಮತ್ತು ಆನಂದಮಯ (ಈಗಾಗಲೇ ವಿವರಿಸಲಾಗಿದೆ).

ಹೀಗೆ ಶರೀರಕ್ಕೆ ಸಂಬಂಧಿಸಿದ ತೊಂಬತ್ತಾರು ತತ್ತ್ವಗಳ ವಿವೇಚನೆಯು ಸಾಂಖ್ಯ ಯೋಗದಲ್ಲಿ ಸಮಾವೇಶವಾಗುತ್ತದೆ.

ಯೋಗ ಪ್ರಕಾರಗಳು :

ಯೋಗ ಶಬ್ದವು ಯುಜ್ ಎಂಬ ಧಾತುವಿನಿಂದ ನಿಷ್ಪನ್ನವಾಗಿದೆ. ಯುಜ್ ಎಂದರೆ ಕೂಡು ಒಂದಾಗು. ಯಾರು ಯಾರೊಂದಿಗೆ ಬೆರೆಯುವುದು ? ಎಂದರೆ ಜೀವಾತ್ಮನು ಪರಮಾತ್ಮನೊಂದಿಗೆ ಬೆರೆಯುವುದು, ಒಂದಾಗುವುದು ; ಎಂದು ಅರ್ಥ. 'ಸಂಯೋಗೋ

ಯೋಗ ಇತ್ಯುಕ್ತೋ ಜೀವಾತ್ಮ ಪರಮಾತ್ಮನೋಃ'. ಅಂದರೆ ಜೀವಾತ್ಮ ಪರಮಾತ್ಮರು ಒಂದಾಗುವಿಕೆಯೇ ಯೋಗ ಎಂದಿದ್ದಾರೆ. ಯಾಜ್ಞ್ಯ ವಲ್ಕ್ಯರು. 'ಯೋಗ ಹೀನಂ ಕಥಂ ಜ್ಞಾನಂ ಮೋಕ್ಷದಂ ಭುವನೇಶ್ವರಿ' ಅಂದರೆ ಯೋಗ ಜ್ಞಾನವಿಲ್ಲದೆ ಮೋಕ್ಷವು ಹೇಗೆ ದೊರುಕುತ್ತದೆ?'' ಎಂದು ಶಿವನು ತಂತ್ರದಲ್ಲಿ ಹೇಳಿದ್ದಾನೆ.

ಮಹಾಯೋಗಿ ವೇಮನರ ಸಾಹಿತ್ಯದಲ್ಲಿ ಮೂರು ಮುಖ್ಯ ಯೋಗಗಳ ಪರಿಕಲ್ಪನೆಯಿದೆ. ಅವುಗಳೆಂದರೆ ಸಾಂಖ್ಯಯೋಗ, ರಾಜಯೋಗ ಮತ್ತು ಶಿವಯೋಗ. ಕರ್ಮಯೋಗ ಸಾಂಖ್ಯ ಯೋಗಗಳನ್ನು ಕುರಿತು ಈ ಮುನ್ನ ವಿವರಿಸಲಾಗಿದೆ. ರಾಜಯೋಗವನ್ನೂ ಅದರ ಶಾಖೆಗಳನ್ನೂ ಕುರಿತು ಅನಂತರ ವಿವರಿಸುತ್ತೇವೆ. ಈಗ ಶಿವಯೋಗವನ್ನು ಕುರಿತು ಪರಿಶೀಲಿಸುವಾ.

ಕಂ. ಭುವಿ ರಾಜಯೋಗ ಮುಖ್ಯ
ವಿಮಲತರ ಸಾಂಖ್ಯ ಯೋಗವು ಭಾವಜ್ಞರಿಗೈ.
ವಿವರಗಳನೆಲ್ಲ ತಿಳಿಯಲು,
ಶಿವಯೋಗ ಮಹತ್ವವೆಲ್ಲ, ಸಿದ್ಧವು ವೇಮಾ.

ಈ ಭೂಮಿಯಲ್ಲಿ ರಾಜಯೋಗವು ತುಂಬಾ ಮುಖ್ಯವಾದುದು. ಇನ್ನು ಪರಿಶುದ್ಧವಾದ ಸಾಂಖ್ಯಯೋಗವು ಭಾವಜ್ಞರಿಗೆ ಒಪ್ಪುವಂಥಹದಾಗಿದೆ. ಯೋಗದ ಸೂಕ್ಷ್ಮ ವಿವರಗಳನ್ನೆಲ್ಲ ತಿಳಿಯಲು ಶಿವಯೋಗದ ಮಹತ್ವವು ಸರ್ವ ರೀತಿಯಿಂದಲೂ ಸಿದ್ಧವಾಗಿದೆ.

ಶಿವ ಎಂದರೆ ಮಂಗಳ, ಕಲ್ಯಾಣ, ಅನುಗ್ರಹ, ಬ್ರಹ್ಮಾನಂದ ಎಂದು ಅರ್ಥ. ಶಿವ ಎಂದರೆ ಪರಮೇಶ್ವರ, ರುದ್ರ ಎಂದೂ ಅರ್ಥ. ಸತ್ಯಂ, ಶಿವಂ, ಸುಂದರಂ, ಇವು ಪರಮ ಪುರುಷನ ಲಕ್ಷಣಗಳು. ಶಿವಂ, ಅದ್ವೈತಂ ಎಂದು ಉಪನಿಷತ್ತಿನ ವರ್ಣನೆ. ವೇಮನ ಯೋಗಿಗಳು ಶಿವ ಶಬ್ದವನ್ನು ಮೂರು ಸಂದರ್ಭಗಳಲ್ಲಿ ಬಳಸುತ್ತಾರೆ. ಒಂದು ಸಗುಣ ಬ್ರಹ್ಮನ ಸತ್ವಗುಣದ ಪ್ರತಿನಿಧಿಯಾದ ಲಯಕರ್ತ ಶಿವನೆಂದು, ಶಿವನನ್ನು ತ್ರಿಮೂರ್ತಿಗಳಲ್ಲಿ ಒಬ್ಬನನ್ನಾಗಿ ಗುರುತಿಸಿದ್ದಾರೆ. ಎರಡನೆಯದಾಗಿ ಶಿವನನ್ನು ಪರಮ ಪುರುಷನೆಂದೂ ಪರಬ್ರಹ್ಮನೆಂದೂ ಬಳಸಿದ್ದಾರೆ. ಮೂರನೆಯದಾಗಿ ಪೌರಾಣಿಕ ಕತೆಯ ಮೇರೆಗೆ ಪಾರ್ವತಿಯ ಪತಿಯಾಗಿ, ದಕ್ಷ ಬ್ರಹ್ಮನ ಅಳಿಯನಾಗಿ ಬಣ್ಣಿಸಿದ್ದಾರೆ. ಆದರೆ ತಾತ್ವಿಕವಾಗಿ ಶಿವ ಶಬ್ದವನ್ನು ಬ್ರಹ್ಮ ಶಬ್ದದ ಪರ್ಯಾಯವಾಗಿ ಬಳಸಬೇಕೆಂದು ಅವರ ಪ್ರತಿಪಾದನೆ.

ಶಿವಯೋಗದಲ್ಲಿ ನಿರ್ಗುಣ ಬ್ರಹ್ಮದೊಂದಿಗೆ ಒಂದಾಗುವುದೇ ಶಿವಯೋಗವೆನಿಸುತ್ತದೆ. ಶಿವ ಶಬ್ದವನ್ನು ಸತ್ವಗುಣದ ಭಾವದಲ್ಲಿ ಪ್ರಯೋಗಿಸಿದ್ದರೂ ಶಿವಯೋಗವು ನಿರ್ಗುಣ ಲಕ್ಷ್ಯದೊಂದಿಗೆ ಒಂದಾಗುವುದಾಗಿದೆ.

ಆ. ಬ್ರಹ್ಮನನ್ನು ಕೊಂದು, ವಿಷ್ಣುವಲ್ಲಿ ಬೆರೆಸಿ,
ವಿಷ್ಣುವನ್ನು ಕೊಂದು ಶಿವನ ಒಳಗೆ ಬೆರೆಸಿ,
ಶಿವನನ್ನೇ ಕೊಂದು ಶಿವಯೋಗಿಯೆ ಆಗು.
ವಿಶ್ವದಾಭಿರಾಮ ಕೇಳು ವೇಮ.

ತಾಮಸ ಗುಣವನ್ನು ಲಯಗೊಳಿಸಿ ರಾಜಸದಲ್ಲಿ ಸೇರಿ, ರಾಜಸ ಗುಣವನ್ನು ಲಯಗೊಳಿಸಿ, ಸತ್ವದಲ್ಲಿ ಸೇರಿ, ಸತ್ವವನ್ನು ಲಯಗೊಳಿಸಿ, ನಿರ್ಗುಣದಲ್ಲಿ ಸೇರಿ ಶಿವಯೋಗಿಯಾಗಬೇಕು.

ಶಿವನೇ ಬ್ರಹ್ಮನೆಂದು ಶ್ರುತಿಗಳು ಸಾರುತ್ತಿವೆ. ಆದ್ದರಿಂದ ಬ್ರಹ್ಮ ಶಬ್ದದಿಂದ ಸೂಚ್ಯವಾದ ಪರಮ ಪದವೇ ಶಿವ ಶಬ್ದದಿಂದಲೂ ಸೂಚಿತವಾಗುತ್ತದೆ.

ಆ. ಶಿವನು ಬ್ರಹ್ಮವೆಂದು ಶ್ರುತಿಗಳು ನುಡಿಯುತಿವೆ.
ಬೇರೆ ದೈವಗಳನು ಬೆಳಗಿ, ಭಜಿಸಿ,
ಬ್ರಹ್ಮವನು ಕಾಣದೆ ಭ್ರಷ್ಟರಾಗಿ ಹೋದ್ರು.
ವಿಶ್ವದಾಭಿರಾಮ ಕೇಳು ವೇಮ.

ಶಿವನು ಬ್ರಹ್ಮವೆಂದು ಶ್ರುತಿಗಳು ನುಡಿಯುತ್ತಿವೆ. ಆದ್ದರಿಂದ ಶಿವನೆಂದರೂ ಒಂದೇ. ಬ್ರಹ್ಮನೆಂದರೂ ಒಂದೇ. ಈ ಪರಮ ತತ್ತ್ವವನ್ನು ಬಿಟ್ಟು ಅನ್ಯ ಕ್ಷುದ್ರ ದೈವಗಳನ್ನು ಸ್ತುತಿಸಿ, ಭಜಿಸುವುದೆಂದರೆ, ಅವರು ಪರಮ ಪದ ತಲುಪರು. ಅಂತೂ ಬ್ರಹ್ಮವನ್ನು ಕಾಣದೆ ಭ್ರಷ್ಟರಾಗಿ ಹೋಗುತ್ತಾರೆ.

ಬ್ರಹ್ಮವನ್ನೇ ಪ್ರತಿಪಾದಿಸುವ ಉಪನಿಷತ್ತಿನಲ್ಲಿ ಏನು ಹೇಳಿದ್ದಾರೆ ? ಮುಖ್ಯ ಉಪನಿಷತ್ತುಗಳಲ್ಲೊಂದಾದ ಶ್ವೇತಾಶ್ವತರ ಉಪನಿಷತ್ತು. ಹೀಗೆ ಶ್ರುತಪಡಿಸುತ್ತದೆ.

'ಭಾವ ಗ್ರಾಹ್ಯಮ ನೀಡಾಖ್ಯಂ ಭಾವಾಭಾವಕರಂ ಶಿವಮ್
ಕಲಾ ಸರ್ಗ ಕರಂ ದೇವಂ ಯೇ ವಿದುಸ್ತೇ ಜಹುಸ್ತನುಮ್
(ಶ್ವೇತಾಶ್ವತರ ಉಪ. 5-14)

ಅಂದರೆ,

ಅವನನ್ನು ಭಾವದಿಂದ ಮಾತ್ರ ಗ್ರಹಿಸಲು ಸಾಧ್ಯ. ಅವನು ನಿರ್ದೇಹಿ ಮತ್ತು ಸುಂದರನು. ಭಾವ ಅವಸ್ಥೆಯನ್ನೂ, ಅಭಾವ ಅವಸ್ಥೆಯನ್ನೂ ಉಂಟು ಮಾಡುವ ಅವನು ಶಿವನು. ಎಲ್ಲ ಕಲೆಗಳನ್ನು ಸೃಷ್ಟಿ ಮಾಡುವವನು ಅವನೇ. ಆ ದೇವನನ್ನು ಯಾರು ಅರಿಯುವರೋ, ಅವರು ತನು ಭಾವವನ್ನು ಕೊಚ್ಚಿ ಹಾಕುತ್ತಾರೆ.

ಅದೇ ಶ್ವೇತಾಶ್ವೇತರ ಉಪನಿಷತ್ತಿನ ಇನ್ನೊಂದು ಮಂತ್ರವನ್ನು ಗಮನಿಸೋಣ.

ಸೂಕ್ಷ್ಮಾತಿ ಸೂಕ್ಷ್ಮಂ ಸಲಿಲಸ್ಯ ಮಧ್ಯೇ
ವಿಶ್ವಸ್ಯ ಸೃಷ್ಟಾರಮನೇಕ ರೂಪಮ್
ವಿಶ್ವಸ್ಯೈಕಂ ಪರಿವೇಷ್ಟಿತಾರಂ
ಜ್ಞಾತ್ವಾ ಶಿವಂ ಶಾಂತಿಮತ್ಯಂತಮೇತಿ
(ಶ್ವೇತಾಶ್ವತರ ಉಪ. 4-14)

ಅಂದರೆ,

ಯಾವನು ಸೂಕ್ಷ್ಮಾತಿಸೂಕ್ಷ್ಮನೋ, ನೀರಿನ ಮಧ್ಯೆ ವಿಶ್ವವನ್ನು ಸೃಷ್ಟಿಸಿರುವನೋ, ಅಲ್ಲಿ ಅನೇಕ ವಿಶ್ವದ ಅನೇಕ ರೂಪಗಳನ್ನು ತಾನೋರ್ವನೇ ವ್ಯಾಪಿಸಿರುವನೋ, ಆ ಶಿವನನ್ನು ಅರಿತು ಅತ್ಯಂತ ಶಾಂತಿಯನ್ನು ಪಡೆಯಬಹುದು.

ಯೋಗಿ ವೇಮನರು ಶಿವಯೋಗದ ಮೂಲಕ ಬ್ರಹ್ಮ ವಿದ್ಯೆಯನ್ನು ಪ್ರತಿಪಾದಿಸಿದ್ದಾರೆ. ವೀರಶೈವರು ಅಷ್ಟಾವರಣ, ಷಟ್‌ಸ್ಥಲ ಮತ್ತು ಪಂಚಾಚಾರಗಳ ಅನುಸರಣೆಯಿಂದ, ಇಷ್ಟಲಿಂಗದಲ್ಲಿ ದೃಷ್ಟಿಯೋಗವನ್ನು ಗಳಿಸಿ, ಪ್ರಾಣಲಿಂಗಾನುಸಂಧಾನ ಮಾಡಿ ಜ್ಯೋತಿ ದರ್ಶಿಸಿ, ಭಾವಲಿಂಗದಲ್ಲಿ ಬೆರೆತು ಐಕ್ಯವಾಗುವ ಪರಿಯನ್ನೇ ಶಿವಯೋಗವೆನ್ನುತ್ತಾರೆ. ಅವರೇ ಹೇಳುವಂತೆ,

ನ ಭೇದಃ ಶಿವಯೋಗಸ್ಯ ರಾಜಯೋಗಸ್ಯ ತತ್ತ್ವತಃ
ಶಿವಾರ್ಥಿನಾಂ ತಥಾಪ್ಯೇವಂ ಉಕ್ತೇ ಬುದ್ಧೇಃ ಪ್ರವೃದ್ಧಯೇ.

ಶಿವಯೋಗಕ್ಕೂ ರಾಜಯೋಗಕ್ಕೂ ತಾತ್ತ್ವಿಕವಾಗಿ ಯಾವ ಭೇದವೂ ಇಲ್ಲ. ಆದರೂ ಸಹ ಶಿವಾರ್ಥಿಗಳ ಬುದ್ಧಿಯ ಬೆಳವಣಿಗೆಗಾಗಿ ಶಿವಯೋಗವನ್ನು ಹೇಳಲಾಗಿದೆ.

ವೇಮನ ಯೋಗಿಗಳು ಪ್ರತಿಪಾದಿಸುವ ರಾಜಯೋಗವು ಭುವಿಯಲ್ಲಿ ಮುಖ್ಯವಾದುದಾಗಿದೆ. ಎಲ್ಲರೂ ಅನುಸರಿಸಬಹುದಾದ ಯೋಗವಾಗಿದೆ. ಇನ್ನು, ಯೋಗದ ವಿವರಗಳನ್ನು ತಿಳಿದುಕೊಳ್ಳಲು ಶಿವಯೋಗದ ಮಹತ್ವವು ಪ್ರಸಿದ್ಧವಾಗಿದೆ. ಇವರ ಶಿವಯೋಗವು ಬ್ರಹ್ಮವಿದ್ಯೆಯೇ ಆಗಿದೆ. ಆದ್ದರಿಂದ ಅವರು ವೀರಶೈವ ಸಾಧಕರಿಗೆ ಹೀಗೆ ಸಲಹೆ ನೀಡುತ್ತಾರೆ.

ವೀರಶೈವ ನಡತೆ ವಿಧವನರಿತು ಮತ್ತೆ,
ಬ್ರಹ್ಮವಿದ್ಯೆ ಮೀರಿ ಬೆಳಗುತಿರಲು,
ಶೂರ ಹುಲಿಯು ಬಂಟ ಸಿಂಹ ಮರಿಯೆ ಆಯ್ತು.
ವಿಶ್ವದಾಭಿರಾಮ ಕೇಳು ವೇಮ.

ವೀರಶೈವರ ಜಾತಿ ನಿರಸನ ಪದ್ಧತಿ, ಅತಿವರ್ಣಾಶ್ರಮದ ದೃಷ್ಟಿಕೋನ, ಸ್ತ್ರೀಯರಿಗೆ ಧಾರ್ಮಿಕ ಸ್ವಾತಂತ್ರ್ಯ, ಸಹಜ ದಾನ, ಅರವಟ್ಟಿಗೆ ಮಹತ್ವ, ದೇವಾಲಯಗಳನ್ನು ಅಲ್ಲಗಳೆವ ದೃಷ್ಟಿ ಇತ್ಯಾದಿ ಹಲವಾರು ಸಾಮಾಜಿಕ ನಡತೆಗಳು ಒಪ್ಪವಾಗಿವೆ. ಜೊತೆಗೆ ಸ್ಥೂಲ ಲಿಂಗ ಪೂಜೆಯನ್ನು ತ್ಯಜಿಸಿ, ಬ್ರಹ್ಮವಿದ್ಯೆಯೇ ಹೆಚ್ಚಾಗಿ ಆಂತರ್ಯದಲ್ಲಿ ಬೆಳಗಿದರೆ, ವೀರಶೈವದ ಶೂರ ಹುಲಿಯು, ಬಂಟನಾದ, ಮೃಗರಾಜನಾದ, ಸಿಂಹದ ಮರಿಯೇ ಆದೀತು. ಇದು ಯೋಗೀಂದ್ರರ ನಮ್ರ ಸಲಹೆ ಮಾತ್ರ.

ಬಂಡೆಗಲ್ಲು ತಂದು, ಬಂಧಿಸುತ ಕಟ್ಟಲು,
ಲಿಂಗವೇನು ಕಳ್ಳ ಲಂಪಟಾಯ್ತೆ ?
ಆತ್ಮಲಿಂಗವನ್ನು ಅರ್ಚಿಸದಿಹರೇಕೋ ?
ವಿಶ್ವದಾಭಿರಾಮ ಕೇಳು ವೇಮ.

ಬಂಡೆಗಲ್ಲು ನದಿಯ ನೀರಿನ ರಭಸಕ್ಕೆ ಸಿಕ್ಕು ಕಾಲಕ್ರಮೇಣ ಗುಳಿಕ ಶಿಲೆಯಾಗುತ್ತದೆ. ಅದನ್ನು ತಂದು ಮಂತ್ರಿಸಿ ಕೊರಳಲ್ಲಿ ಇಲ್ಲವೆ ತೋಳಿನಲ್ಲಿ ಬಂಧಿಸಿ ಕಟ್ಟಿಕೊಳ್ಳುತ್ತಾರೆ. ಇದನ್ನೇ

ಇಷ್ಟ ಲಿಂಗವೆಂದು ಪೂಜಿಸುತ್ತಾರೆ. ಲಿಂಗವೆಂದರೆ ಸೂಕ್ಷ್ಮ ಕುರುಹು. ಆದರೆ ಬಂಧಿಸಿ ಕಟ್ಟಲು ಲಿಂಗವೇನು ಕಳ್ಳತನ ಮಾಡಿತೇ ? ಆತ್ಮಲಿಂಗವು ತಮ್ಮೊಳಗೇ ಇದೆ ; ಜನರು ಆತ್ಮಲಿಂಗವನ್ನು ಏಕೆ ಅರ್ಚಿಸುವುದಿಲ್ಲವೋ ? ತಿಳಿಯದು.

ಸ್ವರೂಪತಃ ಶಿವನು ರಹಸ್ಯದ ಗರ್ಭದಲ್ಲಿದ್ದಾನೆ, ಗೂಢವಾಗಿದ್ದಾನೆ. ಅವನನ್ನು ಅರಿತುಕೊಂಡು ಸರ್ವಪಾಶಗಳಿಂದ ಬಿಡುಗಡೆ ಹೊಂದಬೇಕು.

ಘೃತಾತ್ ಪರಂ ಮಂಡಮಿವಾತಿ ಸೂಕ್ಷ್ಮಂ
ಜ್ಞಾತ್ವಾ ಶಿವಂ ಸರ್ವಭೂತೇಷು ಗೂಢಮ್
ವಿಶ್ವಸ್ಯೈಕಂ ಪರಿವೇಷ್ಟಿತಾರಂ
ಜ್ಞಾತ್ವಾ ದೇವಂ ಮುಚ್ಯತೇ ಸರ್ವ ಪಾಶೈಃ

ತುಪ್ಪಕ್ಕಿಂತಲು ಶ್ರೇಷ್ಠವಾದ ಸ್ನಿಗ್ಧ ಪದಾರ್ಥದಂತೆ ಅತಿ ಸೂಕ್ಷ್ಮವಾದ ಶಿವ ತತ್ವವು ಸಕಲ ಭೂತಗಳಲ್ಲಿ ಗೂಢವಾಗಿದೆ. ಅದನ್ನು ತಿಳಿಯಬೇಕು. ವಿಶ್ವವನ್ನು ವ್ಯಾಪಿಸಿರುವ ಆ ಏಕ ದೇವನನ್ನು ತಿಳಿದುಕೊಂಡು ಎಲ್ಲ ಪಾಶಗಳಿಂದ ಬಿಡುಗಡೆ ಹೊಂದುತ್ತಾನೆ.

(ಶ್ವೇತಾಶ್ವತರ ಉಪ. 4-16)

ಆ ದೇವನು ವಿಶ್ವಕರ್ಮನು, ಮಹಾತ್ಮನು. ಇವನು ಜನರ ಹೃದಯದಲ್ಲಿ ಯಾವಾಗಲೂ ನೆಲೆಸಿರುವನು. ಇವನು ಉಪದೇಶದಿಂದಲೂ, ವಿವೇಕ ಬುದ್ಧಿಯಿಂದಲೂ, ಅನುಭವದಿಂದಲೂ, ವ್ಯಕ್ತವಾಗುತ್ತಾನೆ. ಇದನ್ನು ಅರಿಯುವವರು ಅಮೃತರಾಗುತ್ತಾರೆ.

(ಶ್ವೇತಾಶ್ವತರ 4-17)

ಅಜ್ಞಾನ ಸರಿದ ಮೇಲೆ, ಹಗಲು ರಾತ್ರಿ ಸತ್ ಅಸತ್ ಇವುಗಳ ಆರೋಪವಿರುವುದಿಲ್ಲ. ಕೇವಲ ಶಿವನೇ ಇರುತ್ತಾನೆ. ಆ ಪರತತ್ತ್ವವು ಅವಿನಾಶಿ. ಸವಿತೃ ಮಂಡಲದ ದೇವತೆಗಳಿಗಿಂತಲೂ ಪವಿತ್ರವಾದುದು. ಅದರಿಂದಲೇ ಪ್ರಾಚೀನ ಜ್ಞಾನವೆಲ್ಲ ಬಂದಿದೆ. (ಶ್ವೇತಾಶ್ವತರ 4-18)

ಪ್ರಮಾಣಗಳು :

ತತ್ತ್ವ ಪ್ರತಿಪಾದನೆಯಲ್ಲಿ ತಮ್ಮ ಪ್ರತಿಪಾದನೆಯನ್ನು ಸಿದ್ಧಪಡಿಸಲು ಕೆಲವೊಂದು ಪ್ರಮಾಣಗಳನ್ನು ಅಂಗೀಕರಿಸುತ್ತಾರೆ. ಪ್ರತ್ಯಕ್ಷ, ಅನುಮಾನ ಮತ್ತು ಆಪ್ತ ವಾಕ್ಯಗಳೆಂಬ ಪ್ರಮಾಣವನ್ನು ಹಲವರು ಒಪ್ಪಿದರೆ ಚಾರ್ವಾಕ ಮತದವರು ಕೇವಲ ಪ್ರತ್ಯಕ್ಷವನ್ನು ಮಾತ್ರ ಒಪ್ಪುತ್ತಾರೆ. ವೇಮನ ಯೋಗಿಗಳು ಮೂರು ಪ್ರಮಾಣಗಳನ್ನು ಒಪ್ಪುತ್ತಾರಲ್ಲದೆ ಅವು ತಮ್ಮ ಪ್ರತಿಪಾದನೆಗೆ ಅನಿವಾರ್ಯವೆಂದೂ ತಿಳಿಯುತ್ತಾರೆ.

ಕಂ. ಶ್ರುತಿ ಯುಕ್ತ್ಯನುಭವವಿಲ್ಲದೆ,
ಮತಿ ಹೀನರು ಆಡುವಂಥ ಮಾತನು ಕೇಳಲ್,
'ಸತ' ವೆಂದು ನಂಬಬಾರದು.
ಅತುಲಿತವಹ ಪೂರ್ಣಪದವಿ, ಎಟುಕದು, ವೇಮಾ.

ಉಪನಿಷತ್ತು, ತಂತ್ರ, ಮುಂತಾದ, ಜ್ಞಾನಿಗಳ, ಯೋಗಿಗಳ, ಕೌಲರ ಅಂತಃಸ್ಫುರಣದ

ಸೂಕ್ತಿಗಳು ಶ್ರುತಿ ಪ್ರಮಾಣವಾಗಬಲ್ಲವು. ನಿರ್ಮಲ ಬುದ್ಧಿಯ ತರ್ಕ ಸರಣಿಗೆ ಹೊಂದುವ ಸೂಕ್ತಿಗಳು ಯುಕ್ತಿ ಪ್ರಮಾಣಗಳು. ಇನ್ನು ಸಾಧಕನ, ಸಿದ್ಧರ ಅನುಭವಗಳು ಸಹ ಪ್ರಮಾಣವೆನಿಸುತ್ತವೆ. ಆದರೆ ಈ ಉಕ್ತ ಪ್ರಮಾಣಗಳ ಆಧಾರವಿಲ್ಲದೆ ಮತಿಹೀನರು ಆಡುವಂಥ ವಾದ, ಜಲ್ಪಗಳಂಥ ಮಾತುಗಳನ್ನು ಕೇಳಿ, ಅದೆಲ್ಲ ಸತ್ಯವೆಂದು ನಂಬಕೂಡದು. ಹಾಗೆ ಮಾಡುವುದರಿಂದ ಅತುಲಿತವಾದ ಅಂದರೆ ಅನುಪಮವಾದ ಪೂರ್ಣ ಪದವಿಯು ಸಾಧಕನಿಗೆ ಎಟುಕಲಾರದು.

ಶಿವಯೋಗ ಎಂದರೆ ಅರಿವು ಶಿವೈಕ್ಯವಾಗುವುದು ಎಂದರೆ ಜೀವವು ಶಿವದಲ್ಲಿ ಒಂದಾಗುವುದು. ಶಿವ ತತ್ತ್ವವನ್ನು ಅರಿತು ಅದರಲ್ಲಿ ಕಲೆತವನೇ ಶಿವಯೋಗಿ. ಅವನು ಇತರರಂತೆ ಜಗದ ವ್ಯಾಪಾರಗಳಲ್ಲಿ ಆಸಕ್ತಿ ವಹಿಸಿ ಕಲೆಯುವುದಿಲ್ಲ.

ಕಂ. ಲಲಿತ ಶಿವತತ್ತ್ವ ಪದದಲಿ,
ಕಲೆತಿಹ ಶಿವಯೋಗಿಯೇಕೆ ಕಲೆಯುವ ಜಗದೋಳ್
ಜಲ ಬಿಂದುವು ಮುತ್ತಾಗಲು,
ಕಲೆಯುವುದೆ ಮತ್ತೆ ನೀರಲಿ, ಕಾಣಾ ವೇಮಾ.

ಸಾಧಕನು ಜ್ಞಾನ ಸಾಧನದಿಂದ, ಸುಂದರವಾದ ಶಿವ ತತ್ತ್ವದಲ್ಲಿ ಕಲೆಯುತ್ತಾನೆ. ಮತ್ತು ಶಿವಯೋಗಿಯಾಗುತ್ತಾನೆ. ಅಂಥ ಶಿವಯೋಗಿಯು ಜಗದ ವಿಷಯ ವ್ಯಾಪಾರದಲ್ಲಿ ಮರಳಿ ಏಕೆ ಕಲೆಯುತ್ತಾನೆ ? ಸ್ವಾತಿ ಋತುವಿನಲ್ಲಿ ಮಳೆ ಸುರಿಯುವ ಕಾಲಕ್ಕೆ ಚಿಪ್ಪು ಮೀನು ದಂಡೆಯ ಮೇಲೆ ಕುಳಿತಿರುತ್ತದೆ. ಯಾವಾಗ ಮಳೆ ಹನಿಯು ಅದರ ಬಾಯಲ್ಲಿ ಬೀಳುವುದೋ ಅದು ಮುಚ್ಚಿಕೊಂಡು ನೀರಿಗಿಳಿಯುತ್ತದೆ. ಕೆಲ ಕಾಲಾನಂತರ ಆ ನೀರ ಹನಿಯು, ಆ ಚಿಪ್ಪು ಮೀನಿನ ಗ್ರಂಥಿ ರಸವು ಸ್ರವಿಸಿ, ಮುತ್ತಾಗುತ್ತದೆ. ಹೀಗೆ ನೀರು ಮುತ್ತಾದರೂ ಅದು ಮರಳಿ ನೀರಾಗದು. ಅದೇ ರೀತಿ ಸಾಧಕನು ಶಿವಯೋಗಿಯಾದ ಮೇಲೆ ಮರಳಿ ಜಗದ ವ್ಯಾಪಾರಗಳಲ್ಲಿ ಆಸಕ್ತಿ ವಹಿಸನು.

ಅಧಿಕಾರ ಲಕ್ಷಣ :

ಶಿವ ತತ್ತ್ವವು ಗೂಢವಾಗಿದೆ, ರಹಸ್ಯವಾಗಿದೆ. ಅದನ್ನು ಅರಿತು ಸಂಪಾದಿಸಲು ಅಧಿಕಾರ ಸಂಪನ್ನನಾಗಿರಬೇಕು. ಇದಕ್ಕಾಗಿ ಸಾಧನ ಚತುಷ್ಟಯಗಳು ಅತಿ ಮುಖ್ಯ. ಅವುಗಳೆಂದರೆ ವಿವೇಕ, ವೈರಾಗ್ಯ, ಶಮಾದಿ ಷಟ್ಕ ಸಂಪತ್ತು ಮತ್ತು ಮುಮುಕ್ಷುತ್ವ.

ಯಾವುದು ಒಳಿತು ? ಯಾವುದು ಕೇಡು ? ಯಾವುದು ಸ್ಥಿರ ? ಯಾವುದು ಅಸ್ಥಿರ ? ಯಾವುದು ಆವಶ್ಯಕ ? ಯಾವುದು ಅನಾವಶ್ಯಕ ? ಎಂಬುದನ್ನು ವಿಶ್ಲೇಷಿಸಿ ಗುರುತಿಸುವುದಕ್ಕೆ ವಿವೇಕವೆನ್ನುತ್ತಾರೆ.

1. ವಿವೇಕ :

ಆ. ವಿವೇಕವೆನಲು ಕೇಳು, ವಿಚಿತ್ರ ಕೊಡಲಿಯಿಂದ,
ಅವಿದ್ಯೆಯೆಂಬ ಅಡವಿ ತರಿದು

ತಿಳಿವು ಎಂಬ ಚೊಕ್ಕ ದೀಪ ಕೈಲಿ ಹಿಡಿದು
ಮುಕ್ತಿ ಕಾಣಬಹುದು, ಮುಂದೆ ವೇಮ.

ವಿವೇಕವೆಂದರೆ ಏನೆಂಬುದನ್ನು ಒಂದು ಪ್ರತಿಮೆಯ ಮೂಲಕ ತಿಳಿಸಿದ್ದಾರೆ. ಅವಿದ್ಯೆ ಎನ್ನುವುದೊಂದು ದಟ್ಟ ಅಡವಿ. ಅದರಲ್ಲಿ ಜೀವನು ಹೊಕ್ಕಿದ್ದಾನೆ. ಅಲ್ಲಿ ಅಂಧಕಾರ ಕವಿದು ಕತ್ತಲೆ ಆವರಿಸಿದೆ. ಅಲ್ಲಿಂದ ಹೊರಬರಲು ದಾರಿ ಕಾಣದಾಗಿದೆ. ಆಗ ಏನು ಮಾಡಬೇಕು ? ಅವಿದ್ಯೆಯೆಂಬ ಅಡವಿಯನ್ನು ವಿವೇಕವೆಂಬ ವಿಚಿತ್ರ ಕೊಡಲಿಯಿಂದ ಕತ್ತರಿಸಿ ಹಾಕಬೇಕು. ಮತ್ತು ತಿಳಿವು ಎಂಬ ಚೊಕ್ಕ ದೀಪವನ್ನು ಕೈಯಲ್ಲಿ ಹಿಡಿದು, ಮುಂದೆ ಮುಕ್ತಿಯ ಮಾರ್ಗವನ್ನು ಕಾಣಬೇಕು.

ಕಂ. ಜಗವರಿಯೆ ಇಂದ್ರಜಾಲವು
ಜಗವೆನಲಾ ಮಾಯೆ ಕಾಣು, ಜನ್ಮಾದಿಗಳ್ಕೆ.
ಭಗವಂತನಾದ ಬ್ರಹ್ಮನು
ನಿಗಮಾಗಮ ನಿರ್ವಿಕಾರ ನಿಪುಣನು ವೇಮಾ.

''ಗಚ್ಛತಿ ಇತಿ ಜಗತ್'' ಎಂದರೆ ಚಲಿಸುವುದಾದ್ದರಿಂದ ಜಗವೆನಿಸುತ್ತದೆ. ಇಲ್ಲಿ ಯಾವುದೂ ಸ್ಥಿರವಾಗಿ ಇರುವುದಿಲ್ಲ ಇದು ಸಗುಣ ಬ್ರಹ್ಮನ ಕಲ್ಪನಾ ಲೋಕ. ಯಾವ ರೀತಿ ಯಕ್ಷಿಣೀ ವಿದ್ಯೆಯ ಐಂದ್ರಜಾಲಿಕನು ತನ್ನ ಮನದಲ್ಲಿ ಕಲ್ಪಿಸುವನೋ, ಆ ರೀತಿ ಜೀವಿಗಳಿಗೆ ಗೋಚರವಾಗುತ್ತದೆ. ಹಾಗಾಗಿ ಇದು ಇಂದ್ರಜಾಲ. ಜಗವೆಂದರೆ ಮಾಯೆ. 'ಯಾ ಮಾ ಸಾ ಮಾಯಾ' ಯಾವುದು ಇದ್ದಂತೆ ಇರುವುದಿಲ್ಲವೋ ಅದು ಮಾಯೆ. ಜನ್ಮಾದಿಗಳೂ ಅಷ್ಟೇ. ಈಗ ಒಂದು ಜನ್ಮವು ಬರುತ್ತದೆ. ನಮಗೆ ಅರಿವಾಗದೆ ಹೊರಟು ಹೋಗುತ್ತದೆ. ಹುಟ್ಟು-ಸಾವು ವಿಧಿವಶ, ಜೀವಿಯ ವಶವಲ್ಲ. ಬ್ರಹ್ಮನು ಭಗವಂತನು. ಷಡ್ಗುಣ ಸಂಪನ್ನನು. ಭಗ ಎಂದರೆ ಜ್ಞಾನ ಐಶ್ವರ್ಯ, ಯಶಸ್ಸು, ಧರ್ಮ, ಸಂಪತ್ತು, ವೈರಾಗ್ಯ. ಇವುಗಳನ್ನು ಹೊಂದಿದವನೇ ಭಗವಂತನು. ಅವನು ನಿಗಮ ಆಗಮಗಳಲ್ಲಿ ತಿಳಿಸಿದ ನಿರ್ವಿಕಾರ ನಿಪುಣನು. ಆದ್ದರಿಂದ ವಿವೇಕಿಯು ಇಂದ್ರಜಾಲದಂಥ ಜಗವನ್ನು ನಂಬದೆ, ನಿರ್ವಿಕಾರವಾದ ಭಗವಂತನನ್ನು ಹೊಂದಬೇಕು.

ಆ. ಅಡವಿ ತಿರುಗಲಿಲ್ಲ, ಆಗಸದೊಳು ಇಲ್ಲ,
ಅವನಿ ತೀರ್ಥಯಾತ್ರೆಯಲ್ಲಿ ಇಲ್ಲ.
ಒಡಲು ಶುದ್ಧಿ ಗೆಯ್ದು ಒಡೆಯನನ್ನು ನೋಡು.
ವಿಶ್ವದಾಭಿರಾಮ ಕೇಳು ವೇಮ.

ಭಗವಂತನನ್ನು ಹೇಗೆ ಹೊಂದಬೇಕು ? ಅವನಿಗಾಗಿ ಅಡವಿ ಕ್ಷೇತ್ರ ತಿರುಗಬೇಕಿಲ್ಲ. ಮೇಲೆ ಆಕಾಶದಲ್ಲಿ ಇರುವನೆಂದು ನೋಡಬೇಕಿಲ್ಲ. ಅವನು ತೀರ್ಥಯಾತ್ರೆಗಳಲ್ಲಿಯೂ ಸಿಕ್ಕನು. ಹಾಗಾದರೆ ಏನು ಮಾಡಬೇಕು ? ದಾರಿಯು ಸುಲಭವಿದೆ. ಒಡಲು ಶುದ್ಧಿಗೊಳಿಸಿ, ಮಲಗಳಿಂದ ದೂರನಾಗಿ, ನಿರ್ಮಲ ಹೃದಯದಿಂದ ಒಡೆಯನನ್ನು ನೋಡು. ಪ್ರಭುವನ್ನು ಕಾಣುವೆ.

ಆ. ಪಡೆದ ಮುನ್ನಿನ ತಮ್ಮ ಬಾಳ ಪಥವರಿಯದೆ,
ಸಕಲ ಸಂಪದಗಳು ಸತ್ಯವೆನುತ,

ಜಲವ ಬಿಟ್ಟು ಮೀನಿನ ಚಿಂದವೇರ್ಪಡಲು, ತುದಿ
ಗತಿಯು ಬೇರೆಯಿರದೆ ಘಟಿಸಿತು ವೇಮ.

ತಮ್ಮ ಪೂರ್ವ ಕರ್ಮ ಫಲವಾಗಿ ಪಡೆದ ಮುಂಚಿನ ಬಾಳಿನ ಹಾದಿಯನ್ನು ಅರಿಯದೆ ಅದರಿಂದ ವಿವೇಕಯುತರಾಗಿ ಪಾಠ ಕಲಿಯದೆ, ತಮಗೆ ಭಾಗ್ಯವಶದಿಂದ ಬಂದ ಸಂಪದಗಳನ್ನೆಲ್ಲ ಸತ್ಯವೆಂದು ನಂಬಿ, ಜನರು ಮೋಸ ಹೋಗುತ್ತಾರೆ. ಆ ಸಂಪದನೆಗಳೆಲ್ಲ ಸ್ಥಿರವಲ್ಲ. ಯಾವಾಗ ಆ ಸಂಪದಗಳು ಇಲ್ಲವಾಗುವವೋ, ಆಗ ಜೀವಿಯು ನೀರು ಬಿಟ್ಟ ಮೀನಿನಂತೆ ಚಡಪಡಿಸುತ್ತಾನೆ. ಸಂಪದಕ್ಕಾಗಿ ಹಪಾಪಿಸುತ್ತಾನೆ. ಆದರೆ ಕೊನೆಯ ಗತಿಯು ಮರಣವಲ್ಲದೆ ಬೇರೇನೂ ಇರದು. ಅದೇ ಘಟಿಸುತ್ತದೆ.

ಕಂ. ನಿತ್ಯವಿರದೀ ಒಡಲಿಂಗೆ,
ನಿತ್ಯವು ದುಃಖ ಪಡುತಿರುವರು, ನಿರುತ ಧರೆಯೋಳ್.
ನಿತ್ಯಾನಂದ ಪದವಿಗೆ,
ನಿತ್ಯವು ದುಃಖ ಪಡದಿರಲು, ಅರಿಯೈ ವೇಮಾ.

ಈ ಒಡಲು ನಿತ್ಯವಲ್ಲ. ಜನ್ಮದೊಂದಿಗೆ ಬರುತ್ತದೆ. ಹಸಿವು, ನೀರಡಿಕೆಗಳಿಂದ ಪರಿತಪಿಸುತ್ತದೆ. ಮರಣದೊಂದಿಗೆ ಹೋಗುತ್ತದೆ. ಇಂಥ ನಿತ್ಯವಿರದ ಒಡಲಿಗಾಗಿ ಜನರು ಯಾವಾಗಲೂ ಧರೆಯಲ್ಲಿ ದುಃಖ ಪಡುತ್ತಿದ್ದಾರೆ. ಆದರೆ ಯಾವ ಪದವಿ ಪಡೆದರೆ ನಿತ್ಯಾನಂದವು ಪ್ರಾಪ್ತವಾಗುವುದೋ, ಅದಕ್ಕಾಗಿ ಸಾಧನೆ ಮಾಡಬೇಕೆಂದು ಅರಿಯರು. ಇದನ್ನು ಅರಿತು ನಿತ್ಯವೂ ದುಃಖ ಪಡದಿರುವುದನ್ನು ಅರಿತುಕೋ, ವಿವೇಕಮೂರ್ತಿಯಾಗು.

ಕಂ. ನರ ಕುಲದಲಿ ತಾ ಹುಟ್ಟಿಯು,
ನರ ಕುಲದಲಿ ತಾ ಬೆಳೆದು, ನರನಾದ ತಾನೇ,
ನರ ಕುಲದಲಿ ಛೀ, ಛೀಯೆನೆ
ಹರಕುಲದಲಿ ತಿರುಗಲಾಗ ಹರನಹ ವೇಮಾ.

ಕುಲಗಳು ಎರಡು. ಒಂದು ನರ ಕುಲ. ಇನ್ನೊಂದು ಹರ ಕುಲ. ನರನು ಮರ್ತ್ಯ ಲೋಕದ ಜೀವಿ. ಹರನು ಅಮರ ಲೋಕದ ಸತ್ತೆ. ಸಾಮಾನ್ಯವಾಗಿ ಎಲ್ಲರೂ ನರ ಕುಲದಲ್ಲಿ ಹುಟ್ಟುತ್ತಾರೆ. ನರಕುಲದಲ್ಲಿ ಬೆಳೆಯುತ್ತಾರೆ. ನರನೇ ಆದ ತಾನು ಬಾಳುತ್ತಿರುವಾಗ, ನರಕುಲದ ಸಹಜೀವಿಗಳು ತನ್ನ ಬಾಳನ್ನು ಕಂಡು ಛೀ ಛೀ ಎನ್ನುತ್ತಾರೆ. ತನಗೂ ಛೀ ಥೂ ಎನಿಸುತ್ತದೆ. ಆಗ ಅವನು ವಿವೇಕಮತಿಯಾಗಿ ನರಕುಲವನ್ನು ತೊರೆದು ಹರ ಕುಲದಲ್ಲಿ, ಸತ್ಸಂಗದಲ್ಲಿ, ತಿರುಗುತ್ತಾನೆ. ಸತ್ಸಂಗದ ಫಲವಾಗಿ ಅವನು ಹರನೇ ಆಗುತ್ತಾನೆ.

ಆ. ತಿಳಿವು ಹೊಂದಿದಂಥ ಸ್ಥಿರವನ್ನು ತಿಳಿಯದೆ,
ತಿರುಗುವಸ್ಥಿರನಾಗಿ ದೇಹಿ ಜಗದಿ.
ತಿರುಗುವುದೇಕೆಂದು ತಿಳಿಯನು ಅಜ್ಞಾನಿ.
ವಿಶ್ವದಾಭಿರಾಮ ಕೇಳು ವೇಮ.

ಯಾವುದು ಸ್ಥಿರವಾಗಿದೆ ? ಸತ್ ತಾನೇ ! ಯಾವುದು ತಿಳಿವು ಹೊಂದಿದೆ ?

ಚಿತ್‌ತಾನೇ. ಈ ಸತ್ ಚಿತ್‌ಗಳನ್ನು ತಿಳಿಯದೆ ದೇಹಧಾರಿ ಜೀವನು ಜಗದಲ್ಲಿ ತಾನು ಅಸ್ಥಿರನಾಗಿ ತಿರುಗುತ್ತಿರುವನು. ತಾನು ತಿರುತ್ತಿರುವುದೇಕೆ ? ಎಂದು ಅಜ್ಞಾನಿ ತಿಳಿಯನು. ತನ್ನಲ್ಲಿಯೇ ಸತ್ತು ಇದೆ. ಚಿತ್ತು ಇದೆ. ಆನಂದವೂ ಇದೆ. ಆ ಸಚ್ಚಿದಾನಂದವನ್ನು ಕಂಡುಕೊಳ್ಳದೆ ಬೇರೆಡೆಗೆ ತಿರುಗುವುದು ಅಜ್ಞಾನವಲ್ಲವೆ ?

ಆ. ಕಾಯವಿಪ್ಪ ಕಾಲ ಕಾಮಾದಿ ಮೆಟ್ಟುತ,
ಹಿಡಿದು ಜ್ಞಾನ ಮಾರ್ಗ ಹೆಣಗಬೇಕು.
ಬಿಟ್ಟು ನಡೆಯೆ ದೇಹ ಬಿದ್ದ ಬಳಿಕವೇನು ?
ವಿಶ್ವದಾಭಿರಾಮ ಕೇಳು ವೇಮ.

ಈ ದೇಹವಿರುವಾಗಲೇ ಆತ್ಮ ಜ್ಞಾನ ಮಾರ್ಗಕ್ಕೆ ಅಡ್ಡಿಯಾಗಿರುವ ಕಾಮ, ಕ್ರೋಧ, ಲೋಭ, ಮೋಹ, ಮದ ಮತ್ತು ಮತ್ಸರಗಳನ್ನು ಮೆಟ್ಟಿ ನಿಗ್ರಹಿಸಬೇಕು. ಮತ್ತು ಆತ್ಮವನ್ನು ಅರಿಯುವ ಜ್ಞಾನ ಮಾರ್ಗ ಸಾಧಿಸಲು ಹೆಣಗಬೇಕು. ದೇಹವಿರುವಾಗ ಹೀಗೆ ಮಾಡದೆ ಇದ್ದರೆ, ದೇಹ ಬಿದ್ದ ಬಳಿಕ ಸಾಧನೆ ಮಾಡಲಾಗದು.

ಆ. ಈಜು ಬಾರದವನು ಏಳುವನು ; ಮುಳುಗುವ,
ಪಾರುಗಾಣ ನದಿಯ, ಬಾರದೀಜು.
ಪರನು ಅಲ್ಲದವನು ಪರಲೋಕ ಹೊಂದುವನೆ ?
ವಿಶ್ವದಾಭಿರಾಮ ಕೇಳು ವೇಮ.

ಜೀವಿಗೆ ಈ ಸಂಸಾರವು ಪಾಲಿಗೆ ಬಂದ ಭವಸಾಗರವು. ಅವನು ಹುಟ್ಟಿದ ಮೇಲೆ ಪೂರ್ವ ಕರ್ಮಗಳ ಫಲಗಳ ಈ ಭವನದಿಯಲ್ಲಿ ಸಿಲುಕುತ್ತಾನೆ. ಅದನ್ನು ದಾಟಬೇಕಾದರೆ ಶಿವಯೋಗ ಸಾಧನೆಯೆಂಬ ಯೋಗ ಸಾಧನೆಯೆಂಬ ಈಜು ಕಲಿತಿರಬೇಕು. ಈಜು ಬಾರದವನು ಈ ನದಿಯಲ್ಲಿ ಹತಾಶನಾಗಿ ಮುಳುಗುತ್ತಾನೆ ; ಏಳುತ್ತಾನೆ. ಅವನು ಈಸು ಬಾರದೆ ಈ ನದಿಯ ದಡ ತಲುಪನು, ಪಾರುಗಾಣನು. ಅವನು ಇಹಪರಗಳನ್ನು ಅರಿತು ಪರದತ್ತ ವಾಲಬೇಕು. ಪರದಲ್ಲಿ ಒಲುಮೆ ಇಲ್ಲದವನು ಪರಲೋಕವನ್ನು ಹೊಂದುವನೇ ?

ಆ. ಮಣ್ಣು ಗಡಿಗೆಯಂತೆ ಮಾಯೆ ಶರೀರವದು
ಸಾವುದೆಂದಾದರು ಸಾಯದಾತ್ಮ.
ಘಟಗಳೆಷ್ಟೊ ಇರಲಿ ; ಗಗನ ಒಂದಲ್ಲವೆ ?
ವಿಶ್ವದಾಭಿರಾಮ ಕೇಳು ವೇಮ.

ಮಾಯದ ಈ ಶರೀರವು ಮಣ್ಣು ಗಡಿಗೆಯಂತೆ. ಅದು ಈಗ ಇರಬಹುದು. ನಾಳೆ ಬಿದ್ದು ಹೋಗಬಹುದು. ಶರೀರವು ಎಂದಾದರೂ ಸಾಯುವಂಥದೇ. ಅದು ವಿನಾಶಿ. ಆದರೆ ಆತ್ಮವು ಸಾಯದು. ಅದು ಅಮರ, ಅವಿನಾಶಿ. ಘಟಗಳು ಎಷ್ಟೇ ಇರಲಿ, ಘಟಾಕಾಶಗಳು ಎಷ್ಟೇ ಎನಿಸಲಿ, ಅವುಗಳೊಳಗೆ ಪರಿಚ್ಛಿನ್ನವಾದಂತೆ ಕಂಡು ಬರುವ, ಅವಿಚ್ಛಿನ್ನ ಗಗನವು ಅಂದರೆ ಆತ್ಮವು ಒಂದೇ ಅಲ್ಲವೇ ? ಅದು ಮಹದಾಕಾಶದಂತೆ.

ಕಂ. ವಿಷಯಗಳಲಿ ಬಹಳ ಹೊರಳದೆ,
ವಿಷಯಗಳಿಗಂಟದೆ, ಮಹಾತ್ಮ ವಿಧದಿ ಧರೆಯೋಳ್
ವಿಷ ಸಂಸಾರಗಳೆನ್ನುವ,
ವಿಷಯಗಳೆಲ್ಲವನು ಗೆಲಲು ವೇಮನನರಿವನ್.

ಜ್ಞಾನೇಂದ್ರಿಯಗಳು ಜಗತ್ತಿನ ಪಂಚ ಮಹಾಭೂತಗಳೊಂದಿಗೆ ಸಂಸರ್ಗ ಹೊಂದಿದಾಗ ಭೂತಗಳ ತನ್ಮಾತ್ರೆಗಳಾದ ಶಬ್ದ, ಸ್ಪರ್ಶ, ರೂಪ, ರಸ ಮತ್ತು ಗಂಧಗಳು ಇಂದ್ರಿಯ ವಿಷಯಗಳಾಗಿ ಚಿತ್ತ ಪಟಲದ ಮೇಲೆ ಅಪ್ಪಳಿಸುತ್ತವೆ. ಮಹಾತ್ಮರಾದವರು ಜಡ ಭೌತ ಜಗತ್ತಿನ ವಿಷಯಗಳಲ್ಲಿ ಆಸಕ್ತರಾಗದೆ ಬಹಳ ಹೊರಳಾಡದೆ, ವಿಷಯಗಳಿಗೆ ಅಂಟದೆ ನಿರಾಸಕ್ತರಾಗಿ ಧರೆಯೊಳಗೆ ಇರುತ್ತಾರೆ. ಅದೇ ರೀತಿ ವಿಷ ಸಮನಾದ ಸಂಸಾರವೆನ್ನುವ ಎಲ್ಲ ವಿಷಯಗಳನ್ನು ಗೆಲ್ಲುವುದು ಹೇಗೆಂದು ವೇಮನ ಯೋಗಿ ಅರಿಯುತ್ತಾರೆ.

ಆ. ಜೀವ ರಾಶಿಯಲ್ಲಿ ಜನಿಸಿ, ಮರಳಿ ಜನಿಸಿ,
ತಲೆಯು ಚಿಟ್ಟು ಹಿಡಿದು, ತಿರಿಗಿ ತಿರಿಗಿ,
ತನುವು ಸತ್ಯವೆಂದು ತಿಳಿಯೆ ನಗುಪಾಟಲು !
ವಿಶ್ವದಾಭಿರಾಮ ಕೇಳು ವೇಮ.

ಬ್ರಹ್ಮ ಕಲ್ಪದಲ್ಲಿ ಎಂಭತ್ತು ನಾಲ್ಕು ಲಕ್ಷ ಜೀವ ರಾಶಿಗಳಲ್ಲಿ ಜೀವಿಯು ಜನಿಸುತ್ತಾನೆ. ಸಾಯುತ್ತಾನೆ. ಮರಳಿ ಜನಿಸುತ್ತಾನೆ. ಕೊನೆಗೆ ಹುಟ್ಟು ಸಾವುಗಳ ಚಕ್ರದಲ್ಲಿನ ತಿರುಗಾಟದಿಂದ ತಲೆ ಚಿಟ್ಟು ಹಿಡಿಯುತ್ತದೆ. ಹೀಗಿದ್ದರೂ, ಪ್ರಚಲಿತ ಶರೀರದಲ್ಲಿರುವ ಜೀವಿಯು ತನ್ನ ತನುವು ಸ್ಥಿರವೆಂದು ತಿಳಿದರೆ, ಅದು ನಗೆಪಾಟಲಾಗುತ್ತದೆ. ವಿವೇಕಶೂನ್ಯತೆ ಎನಿಸುತ್ತದೆ.

ಆ. ಜನಿಸಿ ಸಾಯುವವರು, ಸಾಯದೇ ಇರುವೊಡೆ,
ಹಿಡಿಯದಲ್ಲ ಪೊಡವಿ ಹುಟ್ಟುವವರ.
ಹೊಸತು ನೀರು ಬರಲು, ಹಳೆಯದುಳಿಯುವುದೇ ?
ವಿಶ್ವದಾಭಿರಾಮ ಕೇಳು ವೇಮ.

'ಜಾತಸ್ಯ ಹಿ ಧ್ರುವಂ ಮೃತ್ಯುಃ'. ಹುಟ್ಟಿದವನಿಗೆ ಸಾವು ನಿಶ್ಚಿತ ಎಂದು ಶ್ರುತಿ ಘೋಷಿಸುತ್ತದೆ. ಒಂದು ವೇಳೆ ಹುಟ್ಟಿ ಸಾಯುವವರು ಸಾಯದೇ ಇರುವಂತಾದರೆ, ಈ ಭೂಮಿಯು ಪಶು ಯೋನಿಯಿಂದ ಮಾನವ ಯೋನಿಯಲ್ಲಿ ಹುಟ್ಟುವವರನ್ನು ಹಿಡಿಯಲಾರದು. ಹೇಗೆ ಹೊಸ ನೀರು ಬರುವ ಕಾಲಕ್ಕೆ ಹಳೆಯ ನೀರು ಹರಿದು ಹೋಗಿ, ಇಂಗಿ, ಬಾಷ್ಪೀಭವಿಸಿ ಇಲ್ಲವಾಗುವಂತೆ, ಜನಿಸಿದವರು ಮುಪ್ಪಿನಿಂದ, ರೋಗ ರುಜಿನುಗಳಿಂದ, ಅಪಘಾತದಿಂದ ಸಾಯುತ್ತಾರೆ. ಇದನ್ನರಿತು ಈ ತನು ಅಸ್ಥಿರವೆಂದು ಅರಿತು ಸ್ಥಿರವಾದುದರಲ್ಲಿ ವಿಶ್ವಾಸವಿರಿಸು.

ಆ. ಬದುಕು ಅಸ್ಥಿರೆಂದು ಭಾವಿಸಲು ಆಗದ,
ಬಿರ್ರನೆ ಬೀಗುತಿಹ, ಬೆಪ್ಪ ಜನರು
ಪ್ರಾಣಿಯೆಲ್ಲ ಯಮನ ಬಲಿಯ ಕುರಿಗಳಯ್ಯ !
ವಿಶ್ವದಾಭಿರಾಮ ಕೇಳು ವೇಮ.

ಬದುಕು ಸ್ಥಿರವಲ್ಲ. ಇಂದು ಇದ್ದಂತೆ ನಾಳೆ ಇರದು. ಈಗ ಇದ್ದಂತೆ ಮರುಕ್ಷಣ ಇರದು. ಹೀಗೆ ಸ್ವಂತ ಅನುಭವ ಗೋಚರವಾಗುತ್ತಿದ್ದರೂ ಬದುಕನ್ನು ಅಸ್ಥಿರವೆಂದು ಭಾವಿಸಲಿಕ್ಕೆ ಆಗದೆ, ಬೆಪ್ಪ ಜನರು ತಮ್ಮ ಭಾಗ್ಯವನ್ನು ಕಂಡು ಬಿಗ್ರನೆ ಬೀಗುತ್ತಾರೆ. ಪ್ರಾಣಿಗಳೆಲ್ಲರೂ ಯಮನ ಪಾಲಿನ ಕುರಿಗಳೇ ಎಂದು ಅವರು ಅರಿಯರು. ಯಜ್ಞಗಳಲ್ಲಿ ಕುರಿಗಳನ್ನು ಬಲಿಗೊಡುವಂತೆ, ಯಮನು ಕರ್ಮ ಫಲ ನಿರ್ಣಾಯಕ ಯಜ್ಞದಲ್ಲಿ ಜೀವಿಗಳನ್ನು ಬಲಿ ತೆಗೆದುಕೊಳ್ಳುತ್ತಾನೆ.

ಆ. ಇಹದೊಳಗೆ ಹುಟ್ಟಿ ಇಂಗಿತವನರಿಯದೆ,
ಜನರನರಿತು ನೋಡಿ, ಸ್ಥಾವರವನು
ಜಂಗಮವೆನ್ನುವುದು ಜಗದಿ ಪಾಪ ನೋಡು.
ವಿಶ್ವದಾಭಿರಾಮ ಕೇಳು ವೇಮ.

ಇಹದಲ್ಲಿ ಹುಟ್ಟಿ ಬಂದ ಮೇಲೆ, ಇದು ಮರ್ತ್ಯ ಲೋಕ. ಇಲ್ಲಿ ಹುಟ್ಟಿದವರು ಸಾಯಲೇಬೇಕು. ಇದು ಅನಿವಾರ್ಯ ಎಂಬ ಇಂಗಿತವನ್ನು ಅರಿಯದೆ, ಜನರು ಹುಟ್ಟಿ ಸಾಯುವುದನ್ನಾದರೂ ಕಂಡು ಅರಿಯದೆ, ಸ್ಥಾವರವನ್ನು ಅಂದರೆ ಸ್ಥೂಲ ದೇಹವನ್ನು ಜಂಗಮ ಎನ್ನುವುದು ಪಾಪವಲ್ಲವೇ ?

ಆ. ಅಸ್ಥಿರ ದೇಹವನು ಅರ್ಭಟಿಸುತ ಹೊಂದಿ,
ಸಕಲ ವಿಧಗಳಿಂದ ಸಾಕಿ ಸಲಹಿ,
ಅಗ್ನಿಗಿಡುವರಥವ ! ಅಡವಿ ನರಿಗಿಡುವರು.
ವಿಶ್ವದಾಭಿರಾಮ ಕೇಳು ವೇಮ.

ಈ ದೇಹವು ಸ್ಥಿರವಾದದಲ್ಲ. ಆದರೂ ಇದನ್ನು ಅರ್ಭಟಿಸುತ್ತ ಹೊಂದುತ್ತಾರೆ. ಮಾನವ ದೇಹ ಪಡೆದೆವೆಂದು ಗರ್ವ ಪಡುತ್ತಾರೆ. ಅದನ್ನು ಉಣಿಸಿ, ತಿನಿಸಿ, ಬಟ್ಟೆ ಹೊದಿಸಿ, ಸಕಲ ವಿಧಗಳಿಂದ ಸಾಕಿ ಸಲಹುತ್ತಾರೆ. ಕೊನೆಗೆ ಅದರ ಪಾಡೇನು ? ವೈಷ್ಣವರಾದರೆ ಅಂತ್ಯಕ್ರಿಯೆಯ ನಂತರ ಅಗ್ನಿಗಿಡುತ್ತಾರೆ. ಶೈವರಾದರೆ ಹೂತು ಕುಣಿಯಲ್ಲಿಟ್ಟು ಮಣ್ಣು ಮಾಡುತ್ತಾರೆ. ಕೊನೆಗೆ ಅಡವಿಯ ನರಿಗಳು ಅದನ್ನು ಕೆದರಿ ತೆಗೆದು ಭಕ್ಷಿಸುತ್ತವೆ.

ಆ. ತನುವು ಅಸ್ಥಿರೆಂದು, ಧನವು ಅಸ್ಥಿರೆಂದು,
ತಿಳಿಸುಮನು ತಾನು ತಿಳಿಯಲಾರ.
ಹೇಳಬಹುದು ಕಾರ್ಯಕಾರಿಗೊಳಿಸೆ ಕಷ್ಟ.
ವಿಶ್ವದಾಭಿರಾಮ ಕೇಳು ವೇಮ.

ಕೆಲವು ಪುಸ್ತಕ ಪಂಡಿತರು, ಪ್ರವಚನಕಾರರು ಈ ತನುವು ಅಸ್ಥಿರವಾದುದು, ಅನಿತ್ಯವಾದುದು. ಇದನ್ನು ನಂಬಬೇಡ. ಅದೇ ರೀತಿ, ನೀನು ಭೋಗಿಸುವ ಧನವೂ ಅಸ್ಥಿರವಾದುದು. ಚಂಚಲವಾದುದು. ಅದಕ್ಕಾಗಿ ಹಪಾಪಿಸಬೇಡ, ಎಂದು ಜನರಿಗೆ ತಿಳಿಸಿ ಹೇಳುತ್ತಾರೆ. ಆದರೆ ತಮ್ಮ ಜೀವನದಲ್ಲಿ ಹಾಗೆ ತಿಳಿಯಲಾರನು. ತನ್ನ ದೇಹವನ್ನೇ ನಂಬಿ ಪರತತ್ತ್ವವನ್ನು ಉಪೇಕ್ಷಿಸುತ್ತಾನೆ. ಧನವನ್ನೇ ನಂಬಿ ಲೋಭಿಯಾಗಿರುತ್ತಾರೆ. ಅಂತೂ ಜನರಿಗೆ

ತಿಳಿಸುವವರು ತಾವು ತಿಳಿಯಲಾರದಾಗಿದ್ದಾರೆ. ತತ್ವವನ್ನು ಹೇಳುವುದು ಸುಲಭ. ಆದರೆ ಅದನ್ನು ಜೀವನದಲ್ಲಿ ಆಚರಿಸುವುದು ತುಂಬಾ ಕಷ್ಟ.

ಗೀತ. ಬೂಟಕವು ಹುಟ್ಟಿ ಸಾವುದು ಭೂಮಿಯಲ್ಲಿ,
ನಾಟಕವಾಯಿತು ಬದುಕೆಲ್ಲ ಗುಣಗಳಲ್ಲಿ ;
ಗುರುತಿಸಿ, ಜಾಗೆಯ, ಸೇರಿ ಕಾಣಬೇಕು.
ತೊರೆದು ಮಾತುಗಳ ಪರತತ್ತ್ವವ ತಿಳಿಯೊ ವೇಮ.

ಭೂಮಿಯಲ್ಲಿ ಹುಟ್ಟಿ ಸಾಯುವುದು ಆತ್ಮ ವಂಚನೆಯೇ ಸರಿ. ಹುಟ್ಟಿದ ಮೇಲೆ ಆತ್ಮ ಸಾಕ್ಷಾತ್ಕಾರಕ್ಕಾಗಿ ಸಾಧನೆ ಮಾಡಿ ಅಮರರಾಗಬೇಕು. ಆದರೆ ಬಹು ಜನರು ಹಾಗೆ ಮಾಡುವುದಿಲ್ಲ. ಬದುಕೆಲ್ಲವೂ ತ್ರಿಗುಣಗಳ ಪ್ರಭಾವದಲ್ಲಿ ಸಿಕ್ಕು ಬರೀ ನಾಟಕವಾಯಿತು. ಪರಮ ಪುರುಷನ ಜಾಗೆಯನ್ನು ಗುರುತಿಸಿ, ಸಾಧನ ಮಾಡಿ, ಅವನನ್ನು ಸೇರಿ ಕಾಣಬೇಕು. ಮಾತು ಸಾಕು. ಪರತತ್ತ್ವವನ್ನು ತಿಳಿದುಕೊ.

2. ವೈರಾಗ್ಯ :

ಸಾಧನ ಚತುಷ್ಟಯಗಳಲ್ಲಿ ವಿವೇಕ, ವೈರಾಗ್ಯ, ಷಟ್ಕಸಂಪತ್ತಿ ಮತ್ತು ಮುಮುಕ್ಷುತ್ವಗಳನ್ನು ಸೇರಿಸಲಾಗಿದೆ. ಇವುಗಳಲ್ಲಿ ವೈರಾಗ್ಯವು ತುಂಬಾ ಮಹತ್ವದ್ದಾಗಿದೆ. 'ರಂಜ್' ಎಂದರೆ ಬಣ್ಣ ಬಳಿ ಎಂದರ್ಥ. ರಂಜ್-ರಾಗ. ವಿರಾಗ ಎಂದರೆ ರಾಗವಿಹೀನವಾದುದು, ವೈರಾಗ್ಯ.

ವೈರಾಗ್ಯವೆಂದರೆ, ಮನೆ ಮಾರು ಬಿಟ್ಟು, ಅಡವಿ ಸೇರುವುದೆಂದೇನೂ ಅಲ್ಲ. ಊರು ಅಡವಿಗಳನ್ನು ಸಮನಾಗಿ ಕಾಣುವುದು. ಅನಿಷ್ಟ ಬುದ್ಧಿಯನ್ನು ತ್ಯಜಿಸಿ, ಭೋಗಕ್ಕೆ ಅಂಟದೆ, ಯೋಗಿಯಾಗಬೇಕು.

ಆ. ಸಾಧುಗಳ ಬೋಧೆಯು ಛಾಯೆಯೀವ ಮರವು,
ವಿನಯದಿ ಬಳಿ ಸೇರಿ ವರಿಸಬಹುದು
ಅತ್ತ ಇತ್ತ ಅಲೆಯೆ, ಅದು ಹೋಗದಿದಿಲ್ಲ.
ವಿಶ್ವದಾಭಿರಾಮ ಕೇಳು ವೇಮ.

ಸಾಧುಗಳ ಬೋಧೆಯು ಸಾಂಸಾರಿಕ ತಾಪದಿಂದ ಪರಿತ್ರಾಣ ಪಡೆಯುವಲ್ಲಿ ನೆರಳು ನೀಡುವ ಮರದಂತೆ ಇದೆ. ನಮ್ರತೆಯಿಂದ ಬೋಧೆಯ ಬಳಿ ಸೇರಿ ವರಿಸಬಹುದು. ಹಾಗೆ ಮಾಡದೆ, ಸಾಧುಗಳ ಬೋಧೆಗೆ ಕಿವಿಗೊಡದೆ, ಅತ್ತ ಇತ್ತ ಹೋದರೆ, ಅತ್ತ ಸಾಧುಗಳ ಬೋಧಾಮೃತದಿಂದ ಲಭಿಸುವ ಶಾಂತಿಯುತ ನೆರಳೂ ಸಿಗದು. ಇತ್ತ ಸಾಂಸಾರಿಕ ತಾಪದ ಪರಿಹಾರವೂ ಆಗದು.

ಆ. ಊರು ಸೇರಿಕೊಂಡು ಉಬ್ಬಿ ಸಂತಸಿಸುವ
ಅಡವಿಯಲ್ಲಿ ಮತ್ತೆ ಅಳಲು ಪಡುವ
ಊರು ಅಡವಿಯೆರಡು ಒಂದೆಯಾಗಿ ನೋಳ್ಪ,
ಅರಿತ ನಿಪುಣ ಯೋಗಿ ವೇಮ.

ಸಾಮಾನ್ಯ ಸಾಧಕರು ಊರಿನಲ್ಲಿ ಬಂಧು ಬಾಂಧವರೊಂದಿಗೆ ಸರಸ ಸಲ್ಲಾಪ ನಡೆಸುತ್ತ ಇದ್ದರೆ, ಉಬ್ಬಿ ಸಂತಸ ಪಡುತ್ತಾರೆ. ಅದೇ ಅಡವಿಯಲ್ಲಿ ಏಕಾಂತ ವಾಸದಲ್ಲಿ ಉಳಿದರೆ ಅವರ ಮನದಲ್ಲಿ ಕುಟುಂಬದ ಜನರ ಸರಸ ಸಲ್ಲಾಪಗಳ ಸ್ಮರಣೆ ಕುದುರಿ, ದುಃಖಿಸುತ್ತಾರೆ. ಆದರೆ ತಿಳಿದ ನಿಪುಣ ಯೋಗಿಗೆ ಊರೂ ಒಂದೇ, ಅಡವಿಯು ಒಂದೇ ಆಗಿರುತ್ತದೆ.

ಆ. ಊರಿನೊಳಗೆ ಹುಟ್ಟಿ, ಊರಿನೊಳಗೆ ಬೆಳೆದು,
ಊರಿನೊಳಗೆ ಜ್ಞಾನವಂತನಾಗಿ,
ಊರು ತೊರೆದು ಬಿಟ್ಟು, ಸೇರಲೇಕೆ ಅಡವಿ ?
ವಿಶ್ವದಾಭಿರಾಮ ಕೇಳು ವೇಮ.

ವೈರಾಗ್ಯವೆಂದರೆ, ಮನೆ ಮಾರು ತೊರೆದು, ಅಡವಿ ಸೇರುವುದೆಂದು ಕೆಲವರ ಗ್ರಹಿಕೆ. ಯಾರಿಗೆ ಊರಿನಲ್ಲಿ ಸಾಧನಕ್ಕೆ ಅನುಕೂಲ ವಾತಾವರಣವಿಲ್ಲವೋ, ಅವರು ಚಿಂತನಕ್ಕೆ ಅನುಕೂಲಕರವಾದ ನಿರ್ಜನ ಪ್ರದೇಶವನ್ನು ಆಯ್ಕೆ ಮಾಡಿಕೊಂಡು ಅಡವಿವಾಸ ಮಾಡುತ್ತಾರೆ. ಆದರೆ, ಊರಿನಲ್ಲಿಯೇ ಹುಟ್ಟಿ, ಊರಿನಲ್ಲಿಯೇ ಬೆಳೆದು, ಊರಿನಲ್ಲಿಯೇ ಸತ್ಸಂಗದ ಫಲವಾಗಿ ಜ್ಞಾನವಂತನಾದಾಗ, ಆ ಶಿವಯೋಗಿಯು ಊರು ಬಿಟ್ಟು ಅಡವಿಯನ್ನು ಸೇರುವುದೇಕೆ ?

ಆ. ಹುಣಸೆ ಹಣ್ಣು ರೀತಿ, ಹೊಂದಿ ಹೊಂದದಿಹದಿ,
ಸನ್ಯಾಸಿ ಯೋಗವನು ಸಲಹಬೇಕು.
ಸಂಸಾರಿಯಿಂತಿರಲು ಸನ್ಯಾಸಿಗಿಂದಧಿಕ.
ವಿಶ್ವದಾಭಿರಾಮ ಕೇಳು ವೇಮ.

ಮಾಗಿದ ಹುಣಸೆ ಹಣ್ಣನ್ನು ನೋಡಿರಬಹುದು. ಅದರ ಸಿಪ್ಪೆ ಇಲ್ಲವೆ ತೊಗಟೆಯು ಹಣ್ಣಿನ ತಿಳಲಿಗೆ ಹೊಂದಿದಂತಿದ್ದರೂ ಹೊಂದಿರುವುದಿಲ್ಲ. ಅದೇ ರೀತಿ, ಸನ್ಯಾಸಿಯು ಶಿವಯೋಗಕ್ಕೆ ಹೊಂದಿಕೊಂಡು ಸಂಸಾರಕ್ಕೆ ಹೊಂದಿಕೊಳ್ಳದಿರುತ್ತಾನೆ. ಇನ್ನು ಸಂಸಾರಿಯು ತನ್ನ ಸಂಬಂಧಿಗಳೊಂದಿಗೆ ಹೊಂದಿ ಇದ್ದರೂ ಅವನು ಪ್ರಾಪಂಚಿಕ ವ್ಯವಹಾರಗಳಲ್ಲಿ ಹೊಂದದೆ, ಅಸಕ್ತನಾಗಿ ಇದ್ದರೆ, ಅವನು ಸನ್ಯಾಸಿಗಿಂತ ಅಧಿಕನಾಗಿರುತ್ತಾನೆ.

ಆ. ಹಂಸ ಮಾನಸ ಜಲ ಹತ್ತದಂತೆ ಚಲನೆ,
ಆವ ಕರ್ಮ ಚಯವು ಅಂಟದಂತೆ.
ಯೋಗಿ ಅಲಿವ ಸಕಲ ಭೋಗವೆದುರಿಗಿರಲು.
ವಿಶ್ವದಾಭಿರಾಮ ಕೇಳು ವೇಮ.

ಜೀವ ಹಂಸವು ಮಾನಸ ಜಲ ಹತ್ತದಂತೆ ಚಲಿಸುತ್ತದೆ. ಮನಸ್ಸಿನ ಸಂಕಲ್ಪ-ವಿಕಲ್ಪಗಳಾಗಲೀ, ರಾಗ ದ್ವೇಷಗಳಾಗಲೀ ತನಗೆ ತಟ್ಟಿ ತನ್ನ ಮೇಲೆ ಪ್ರಭಾವ ಬೀರದಂತೆ, ಜೀವ ಹಂಸನ ಚಲನೆ ಇರುತ್ತದೆ. ಯೋಗಿಯಾದ ಜೀವನಿಗೆ ಕರ್ಮದಲ್ಲಿ ಆಸಕ್ತಿ ಇರದು. ಅನುರಾಗ ಇರದು, ಅವನು ವಿರಾಗಿಯಾಗಿರುತ್ತಾನೆ. ಆದ್ದರಿಂದ ಕರ್ಮ ಸಮೂಹದ ಫಲಗಳು ಅವನಿಗೆ ಅಂಟುವುದಿಲ್ಲ. ಸಕಲ ವಿಷಯ ಭೋಗವನ್ನು ಒದಗಿಸುವ ವಸ್ತುಗಳು ತನ್ನೆದುರು ಎಟುಕುವಂತಿದ್ದರೂ ಯೋಗಿಯು ಭೋಗ ಕೂಪದಲ್ಲಿ ಬೀಳದೆ ತನ್ನ ಯೋಗ ಮಾರ್ಗದಲ್ಲಿಯೇ ನಡೆಯುತ್ತಾನೆ.

ಆ. ತನ್ಮಯತ್ವವನ್ನು ತಾನರಿಯದ ನರನು,
ಸೇವೆ ಗೆಯ್ದೊಡಾಗ ಏನು ಉಂಟು ?
ತಮ್ಮ ಕುಂದರಿಯದೆ ತಾನೋದಲು ಬಹಳ,
ಓದಿನ ಫಲವೇನು ? ಒಪ್ಪವಾಗಿ.

ಆ. ಹುಟ್ಟಿದಂದಿನಿಂದ ಪುರುಷನ ಕಾಲದೊಳು
ಪಾಪವರಿಯೆ ಶುದ್ಧ, ಪಶುವು ಅಲ್ಲ.
ಮುದದಿ ಯೋಗಿ ರೀತಿ, ಮನವೊಪ್ಪುವಂತಿದೆ.
ವಿಶ್ವದಾಭಿರಾಮ ಕೇಳು ವೇಮ.

ತತ್ ಮಯತೆಯಲ್ಲಿ ಅಂದರೆ ಪರಮ ಪುರುಷನ ಚಿಂತನೆಯಲ್ಲಿ ಮುಳುಗಿ ಪುರುಷನು ಹುಟ್ಟಿನಿಂದಲೂ ತನ್ನ ಕಾಲದಲ್ಲಿ ತಾನೇ ಗೆಯ್ದ ಪಾಪಗಳನ್ನು ಅರಿತರೆ, ಅವನು ಪಶುವಲ್ಲ. ಪಶುವು ತನ್ನ ಪಾಪಗಳ ಚಿಂತೆ ಮಾಡುವುದಿಲ್ಲ. ತನ್ನ ಪಾಪ ಕರ್ಮಗಳನ್ನೂ ಮತ್ತು ಅವನ್ನು ಮಾಡುವಂತೆ ತನ್ನನ್ನು ಪ್ರೇರೇಪಿಸಿದ ದುಷ್ಟ ಶಕ್ತಿಗಳನ್ನೂ ಅರಿತು ಅವನು ಅವುಗಳಿಂದ ದೂರಾಗಿ ಶುದ್ಧನಾಗುತ್ತಾನೆ. ಆತ್ಮ ಸಂತೋಷದಿಂದ ಈ ಕಾರ್ಯ ಗೆಯ್ಯುವ ಯೋಗಿಯ ರೀತಿಯು ಎಲ್ಲರೂ ಒಪ್ಪುವಂತಿದೆ.

ಆ. ಅರಿವು ಉಳ್ಳ ಅವನು ಇರದೆ ಊರು ಹಿಡಿದು,
ತಿರುಗಲೇಕೆ ? ತನಗೆ ದಿವ್ಯವಿರಲು,
ಹಣ್ಣು ಹಣ್ಣಾಗಲು, ಭಕ್ಷಿಸದೆ ಇರುವನೆ ?
ವಿಶ್ವದಾಭಿರಾಮ ಕೇಳು ವೇಮ.

ಯಾರಿಗೆ ತಾನು ಜೀವನಲ್ಲ. ಶಿವನೇ ಎಂಬ ಅರಿವು ಮೂಡಿದೆಯೋ, ಅವನು, ತಾನಿರುವ ಊರನ್ನು ಬಿಟ್ಟು ತಿರುಗುವುದೇಕೆ ? ತೀರ್ಥ ಕ್ಷೇತ್ರಗಳಿಗೆ ಅಲೆಯುವುದೇಕೆ ? ಗಿರಿ ಗವ್ಹರ ಸೇರುವುದೇಕೆ ? ತನ್ನನ್ನು ಮುತ್ತಿದ ಅಜ್ಞಾನವನ್ನು ಕಳೆದು ತನಗೆ ಸತ್ಯವನ್ನು ಪ್ರಮಾಣಿಸುವ ಪವಿತ್ರತೆಯು ತನ್ನಲ್ಲಿಯೇ ಇರುವಾಗ ಬೇರೆಡೆಗೆ ತಿರುಗುವುದೇಕೆ ? ಪಾಡುಗಾಯಿ ಮಾಗಿ ಹಣ್ಣಾಗಲು ಅದನ್ನು ಭಕ್ಷಿಸುವುದು ಸಹಜ ತಾನೇ ? ಹಾಗೆ ತನ್ನ ಮನಸ್ಸು ಪಕ್ವವಾದಾಗ ಶಿವಾನುಭವವನ್ನು ಆನಂದಿಸುವುದೂ ಸಹಜ.

ಆ. ಉರ್ವಿ ಜನರು ಪರಮ ಯೋಗೀಶ್ವರನ ಕಂಡು,
ತೆಗಳುತಿಹರೆ ಹೊರತು ತಿಳಿಯುತಿಲ್ಲ.
ಅಮೃತ ರುಚಿಯನೆಂತು ಅರಿಯಬಹುದು ಹಸ್ತ ?
ವಿಶ್ವದಾಭಿರಾಮ ಕೇಳು ವೇಮ.

ಯೋಗೀಶ್ವರನು ಪರಮ ವೈರಾಗ್ಯಮೂರ್ತಿ. ಯಾವುದು ಉರ್ವಿ ಜನರಿಗೆ ಆಕರ್ಷಕವೋ ಅದರ ಬಗ್ಗೆ ಯೋಗೀಶ್ವರನು ಉದಾಸೀನನು. ಯಾವುದನ್ನು ಆಚರಿಸಲು ಉರ್ವಿ ಜನರು ಸಂಕೋಚ ಪಡುವರೋ, ಅದರಲ್ಲಿ ಯೋಗಿಯು ಅನುರಕ್ತನು. ಅರ್ಥಾತ್ ಯಾವುದು

ಊರ್ವಿ ಜನರಿಗೆ ರಾತ್ರಿಯೋ, ಅದರಲ್ಲಿ ಯೋಗೀಶ್ವರನು ಎಚ್ಚತ್ತಿರುವನು. ಯಾವುದು ಊರ್ವಿ ಜನರಿಗೆ ಹಗಲಾಗಿದೆಯೋ ಅದು ಯೋಗೀಶ್ವರನಿಗೆ ರಾತ್ರಿಯು. ಹೀಗಾಗಿ, ಊರ್ವಿಯ ಜನರು ಪರಮ ಯೋಗೀಶ್ವರನನ್ನು ಕಂಡು ತೆಗಳುತ್ತಿರುವರೇ ಹೊರತು ತಿಳಿಯುತ್ತಿಲ್ಲ. ಏಕೆಂದರೆ ಯೋಗೀಶ್ವರನ ಮಹಿಮೆಯನ್ನು ಅರಿಯಲು ಸಾಧಕನಿಗೆ ಸಾಧ್ಯವೇ ಹೊರತು ವಿಷಯಾಸಕ್ತಗೆ ಸಾಧ್ಯವಿಲ್ಲ. ಅಮೃತದ ರುಚಿಯನ್ನು ರಸನೇಂದ್ರಿಯವು ಅರಿಯಬಹುದೇ ಹೊರತು ಸ್ಪರ್ಶೇಂದ್ರಿಯವು ತಿಳಿಯದು. ಅಮೃತದ ರುಚಿ ಹಸ್ತಕ್ಕೇನು ತಿಳಿಯುತ್ತದೆ ?

ಗೀತ. ಅತುಲ ವೈರಾಗ್ಯ ಬೋಧನೆಗೆ ಅಂಟಿ ಅರಿತು,
ಸತಿಯ ಮಮತೆಗೆ ಸಿಗದೆ ಸತ್ಯ ತಿಳಿದು,
ಮತಿಯು ಚದುರದೆ ಹರಿಯುವ ಮಾನ್ಯ ರೀತಿ,
ಇದುವೆ ಕುದುರಿದವ ಸಜ್ಜನನು ಇಹದಿ ವೇಮ.

ಮಮತೆ ಮೋಹ, ಅನುರಾಗ ಆಸಕ್ತಿಗಳು ಸತಿಯನ್ನು ಕುರಿತು ಹೆಚ್ಚಾಗಿರುತ್ತವೆ. ಆದರೂ ಅನುಪಮವಾದ ಗುರುವಿನ ವೈರಾಗ್ಯ ಬೋಧನೆಗೆ ಅಂಟಿ, ಅದರ ಮಹಿಮೆಯನ್ನು ಅರಿತು, ಸತಿಯ ಮಮತೆಗೂ ಸಿಕ್ಕದೆ, ಸತ್ಯವಾವುದು ? ಅಸತ್ಯವಾವುದು ? ಎಂಬುದನ್ನು ತಿಳಿದು, ಬುದ್ಧಿಯು ಸತ್ಯದಿಂದ ಚದರದಂತೆ, ಜ್ಞಾನಾರ್ಜನೆಯತ್ತ ಹರಿಯುವುದು ಎಲ್ಲರಿಗೂ ಮಾನ್ಯವೆನಿಸುವ ರೀತಿಯಾಗಿದೆ. ಇಂಥ ಬುದ್ಧಿ ಕೌಶಲವು ಅರಳಿದವನು ಇಹದಲ್ಲಿ ಸಜ್ಜನನೆನಿಸುತ್ತಾನೆ.

ಆ. ತನುವು ತೊರೆದು ತಾನು ತೆರಳುತಿರುವ ವೇಳೆ,
ತನ್ನ ಭಾರ್ಯೆ, ಸುತರು, ತಗಲಿದವರು,
ಒಬ್ಬರೂನು ಬರರು, ಉಸಿರು ಹೊರತು ನೋಡು.
ತನ್ನ ಒಳಿತೆ ಜೊತೆಯು ತನಗೆ ವೇಮ.

ತಾನು ಮೋಹ ಮಮತೆ ತಾಳಿ, ತನ್ನ ಪ್ರಾಣಪ್ರಾಯರೆಂದು ನಂಬಿದ ಭಾರ್ಯೆಯಾಗಲಿ, ಸುತರಾಗಲಿ ಇಲ್ಲವೆ ಬಂಧು ಬಳಗದವರಾಗಲಿ, ಯಾರೂ ತಾನು ದೇಹ ತೊರೆದು ಲಿಂಗ ದೇಹದೊಂದಿಗೆ ಅಗಲಿ ಹೋಗುವಾಗ ಜೀವವು ಪೂರ್ವ ಸಂಸ್ಕಾರಗಳನ್ನೂ, ಪ್ರಾಣ ಶಕ್ತಿಯನ್ನೂ ಹೊಂದಿರುತ್ತದೆ. ಆದ್ದರಿಂದ ತನ್ನ ಜೊತೆಗೆ ಬರುವುದೆಂದರೆ ತಾನು ಗೆಯ್ದ ಒಳಿತು ಮಾತ್ರ.

ಆ. ಭಾರ್ಯೆ ತನ್ನ ಪಾಲಿಗೆ ಭಾರದ ಸಂಕೋಲೆ,
ಚಿಕ್ಕ ಚಿಕ್ಕ ಶಿಶುವು ಚುಚ್ಚು ಮೊಳೆಯು
ಸೆರೆಮನೆಯಾಗುವುದು ಸಂಸಾರ ಅರಿತೊಡೆ.
ವಿಶ್ವದಾಭಿರಾಮ ಕೇಳು ವೇಮ.

ಸಂಕೋಲೆ ಎಂದರೆ ಅಪರಾಧಿಗಳ ಕೈಗೆ ತೊಡಿಸುವ ಬೇಡಿ. ತಾನು ಸ್ವತಂತ್ರನಾಗಿ ಪರಮ ಪುರುಷನನ್ನು ಅರಿಯಲು ಹೋಗುವಾಗ ಮಮತೆ ತೋರಿಸುವ ಭಾರ್ಯೆಯು ತನಗೆ ಭಾರದ ಸಂಕೋಲೆಯಾಗಿ ತನ್ನ ಗತಿಯನ್ನು ತೆಡೆಯುತ್ತಾಳೆ. ಇನ್ನು ಚಿಕ್ಕ ಚಿಕ್ಕ ಶಿಶುಗಳು ತನ್ನನ್ನು ಪೂರ್ಣ ತಡೆಯದಿದ್ದರೂ ತನ್ನ ಸಾಧನ ಪಥದಲ್ಲಿ ಚುಚ್ಚಿದ ಮೊಳೆಗಳಂತೆ,

ಪೀಡಿಸಬಹುದು. ಒಟ್ಟಾರೆ ಸಾಧಕನಿಗೆ ಸಂಸಾರವು ಬಿಡುಗಡೆಗೆ ಅನುವಾಗದ ಸೆರೆಮನೆಯಂತಾಗುತ್ತದೆ.

ಆ. ತನಯ ಮಡದಿ ಮಾಯೆ, ತಮ್ಮ ಅಣ್ಣ ಮಾಯೆ,
ತಾಯಿ ತಂದೆ ಮಾಯೆ, ತಾನು ಮಾಯೆ.
ಅರಿಯಗೊಡದು ಮಾಯೆ, ಅದರ ಮನೆ ಹಾಳಾಗ !
ವಿಶ್ವದಾಭಿರಾಮ ಕೇಳು ವೇಮ.

'ಯಾ ಮಾ ಸಾ ಮಾಯಾ' ಅಂದರೆ ಯಾವುದು ಇಲ್ಲವೋ ಅದು ಮಾಯೆ. ತಾನು ದೇಹ ಬಿಟ್ಟು ತೆರಳುವಾಗ ತನ್ನ ಜೊತೆಗೆ ಯಾರೂ ಇರುವುದಿಲ್ಲ ಮತ್ತು ತಾನು ದೇಹಾತ್ಮ ಬುದ್ಧಿ ಮೀರಿ ನಡೆದಾಗ ಸಹ ತನ್ನ ಜೊತೆಗೆ ಯಾರೂ ಇರರು. ಈ ಅರ್ಥದಲ್ಲಿ ಹೆಂಡಿರು, ಮಕ್ಕಳೂ ಮಾಯೆ, ಅಣ್ಣ ತಮ್ಮಂದಿರೂ ಮಾಯೆ. ಅಷ್ಟೇ ಏಕೆ ? ಹಡೆದ ತಾಯಿ ತಂದೆಯಂದಿರೂ ಮಾಯೆ. ತಾನು ಸಹಿತ, ಇದ್ದು ಇಲ್ಲವಾಗುವ ದೇಹವಾಗಿ, ಮಾಯೆಯೇ ಸರಿ. ಈ ಮಾಯೆಯು ಶಿವನನ್ನು ಅರಿಯಗೊಡದು. ಅದು ಹಾಳಾಗಲಿ.

ಕಂ. ಮಾಯೆಯ ಸಂಸಾರಗಳಲಿ,
ಮಾಯೆಯೊಳಗೆ ತಿರುಗುವ ಮನುಜರು ವಶರೈ.
ಮಾಯೆಯನರಿತಾ ಬಳಿಕವೆ
ಮಾಯೆಯಿಂ ಮುಕ್ತಿಯು ಮಹಿಯೊಳಗೆ ಉಂಟು ವೇಮಾ.

ಈ ಸಂಸಾರದಲ್ಲಿ ಯಾವುದು ಇದೆಯೆಂದು ಭಾವಿಸುತ್ತೇವೆಯೋ ಅದು ಇರದು. ಹಾಗಾಗಿ ಅದು ಬರೀ ಮಾಯೆಯಾಗಿದೆ. ಈ ಮಾಯೆಯ ಸಂಸಾರಗಳಲ್ಲಿ ಮಾಯೆಯೊಳಗೇ ಅಂದರೆ ಮನಸ್ಸಿನ ಭ್ರಾಂತಿಯಲ್ಲಿಯೇ ತಿರುಗುವ ಮನುಷ್ಯರು ಭ್ರಾಂತಿಗೆ ವಶರಾಗುತ್ತಾರೆ. ಯಾವಾಗ ಅವರಿಗೆ ಇದೆಲ್ಲ ಭ್ರಾಂತಿಜನ್ಯವೆಂದು ಅರಿವಾಗುವುದೋ, ಆ ಬಳಿಕವೇ ಅವರಿಗೆ ಈ ಮಹಿಯಲ್ಲಿ ಮಾಯೆಯಿಂದ ಮುಕ್ತಿಯುಂಟು.

ಆ. ತಾನು ತನ್ನದೆನುತ ದಯದಲ್ಲಿ ನುಡಿಯುತ,
ಮೋಹ ವಾರ್ಧಿಯಲ್ಲಿ ಮುಳುಗಿ ನರನು
ಕಾಣಲಾರ, ಮೋಕ್ಷ ಗತಿಯೆಂತು ಸಿದ್ಧಿಪುದು ?
ವಿಶ್ವದಾಭಿರಾಮ ಕೇಳು ವೇಮ.

ಅಹಂಕಾರ, ಮಮಕಾರಗಳಿಗೆ ವಶವರ್ತಿಯಾದ ಮಾನವನು ದಯನೀಯವಾಗಿ ನುಡಿಯುತ್ತ ವನಿತೆಯರತ್ತ ವಾಲುತ್ತ ಮೋಹ ವಾರಿಧಿಯಲ್ಲಿ ಮುಳುಗಿ ಹೋಗಿ ಸರಸವನ್ನು ಕಾಣಲಾರನು. ಅಂಥವನಿಗೆ ಮೋಕ್ಷ ಗತಿಯು ಹೇಗೆ ಸಿದ್ಧಿಸುವುದು ?

ಆ. ಅರಿವಿಗಾಗಿ ತಿರಿಗಿ, ಅರಸಿ ಏಕಾಂತವ,
ಪರಿದಾಡದೆ ಯೋಗ ಪಥವ ಹಿಡಿದು,
ಪರಮ ಕೋರಿ, ಮೀರಿ ಪರಿಪೂರ್ತಿ ಹೊಂದಿರೊ.
ವಿಶ್ವದಾಭಿರಾಮ ಕೇಳು ವೇಮ.

ಶಿವನನ್ನು ಅರಿಯಲು ಶ್ರೇಷ್ಠ ಅರಿವು ಪಡೆಯಲೆಂದು ಸಾಧುಗಳ, ಗುರುಗಳ ಸತ್ಸಂಗ ಪಡೆಯಲು ಅತ್ತಿತ್ತ ತಿರುಗಾಡಿ, ಕೊನೆಗೆ ಶಿವಯೋಗ ಪಥವನ್ನು ಹಿಡಿದು, ಪರಮನನ್ನು ಕೂಡಲು ಕೋರಿ, ಅಪೂರ್ಣತೆಯನ್ನು ಮೀರಿ ಪರಿಪೂರ್ತಿ ಹೊಂದಿರೋ.

ಆ. ಒಡಲು ಗಾಸಿಗೊಳಿಸಿ, ಯೋಗಿ ಎನ್ನುತಿಹರು.
ಮನದ ಕಲ್ಮಷವದು ಮಾಯಗೊಳದೆ,
ಹುತ್ತ ಮೇಲೆ ಹೊಡೆಯೆ ಹಾವು ಸಾಯಬಹುದೆ ?
ವಿಶ್ವದಾಭಿರಾಮ ಕೇಳು ವೇಮ.

ಅನೇಕ ಜನರು ಶಾರೀರಿಕ ವ್ಯಾಯಾಮಗಳನ್ನೇ ಯೋಗವೆನ್ನುತ್ತಾರೆ. ''ಜೀವಾತ್ಮ ಪರಮಾತ್ಮ ಸಂಯೋಗೋ ಯೋಗ ಇತ್ಯುಚ್ಯತೇ''. ಅಂದರೆ ಜೀವಾತ್ಮ ಮತ್ತು ಪರಮಾತ್ಮರ ಬೆರೆಯುವಿಕೆಯನ್ನೇ ಯೋಗವೆನ್ನುತ್ತಾರೆ. ಇದುವೇ ಶಿವ ಜೀವರ ಐಕ್ಯ. ಯಾರ ಮನದಲ್ಲಿ ಕಲ್ಮಷಗಳು ತುಂಬಿವೆಯೋ, ಯಾರು ಆವರಣೇ ಮತ್ತು ವಿಕ್ಷೇಪ ಮಲಗಳಿಂದ ದೂರವಾಗಿಲ್ಲವೋ, ಯಾರು ಕಲ್ಮಷಗಳನ್ನು ಇಲ್ಲವಾಗಿಸಿಕೊಂಡಿಲ್ಲವೋ, ಅಂಥವರು ಪರಿಶುದ್ಧನೂ ಪರಿಪೂರ್ಣನೂ ಆದ ಪರಮನೊಂದಿಗೆ ಹೇಗೆ ಸೇರಬಲ್ಲರು ? ಕಲ್ಮಷಗಳನ್ನು ದೂರಗೊಳಿಸಲು ವಿಶೇಷ ಮನೋಶುದ್ಧಿಯ ಸಾಧನೆ ಮಾಡಬೇಕು. ಹುತ್ತದ ಮೇಲೆ ಹೊಡೆದರೆ, ಒಳಗೆ ಅವಿತುಕೊಂಡ ಹಾವು ಸಾಯುವುದಿಲ್ಲ.

3. ಷಟ್ಕ ಸಂಪತ್ತಿ :

ಮೋಕ್ಷಕ್ಕೆ ಅಧಿಕಾರಿಯಾಗಲು ವಿವೇಕ, ವೈರಾಗ್ಯಗಳೊಂದಿಗೆ ಶಮಾದಿ ಷಟ್ಕ ಸಂಪತ್ತಿಬೇಕು. ಮುಮುಕ್ಷುತ್ವವೂ ಬೇಕು.

ಷಟ್ಕ ಸಂಪತ್ತಿಯೆಂದರೆ, ಶಮ, ದಮೆ, ಉಪರತಿ, ತಿತಿಕ್ಷೆ, ಶ್ರದ್ಧೆ ಮತ್ತು ಸಮಾಧಾನ.

ಸೀಸ. ನೇಮದಲ್ಲಿ ಇರುತ ನೀಡುತ ಚಿತ್ತವನು
ತಾಮಸದೊಳಗಾಗಿ ತಗಲಿ ಹೋದ.
ಬೆಲೆಯುಳ್ಳ ಚಿತ್ತದಲಿ ನಿರ್ಭೀತಿ ಮೂಡುವುದು.
ನಿರ್ಭೀತಿ ಸೌಖ್ಯವನು ನೀರಸೆನಿಸುವುದು.
ಸೌಖ್ಯದೂರ ಗುಣವನು ಸಮನಿಸಿ ಹೊಂದುತ್ತ,
ಶಮೆ ಗುಣಗಳ ಕಂಡು ಶಮತೆ ಹುಟ್ಟಿ,
ಅಂಥ ಶಮತೆ, ವಿಶ್ವವಖಿಲವು ತಾನಾದ
ತಾನೆ ವಿಶ್ವವೆಂಬ ತತ್ತ್ವವಾದ.

ಆ. ತತ್ತ್ವವಿಂದ್ರಿಯಗಳು ನೆಲೆಗಂಡು ಗೆಲುವನು
ತತ್ತ್ವವೇತ್ತನಾಗಿ ತಾನೆ ಇಹನು.
ರಾಜಯೋಗಿಯಾಗಿ ತೇಜದಿಂದ ಇರುವ ;
ಖ್ಯಾತನಿಹನು ಜಗದಿ ಕೇಳು ವೇಮ.

ಸಾಧಕನು ತನ್ನ ನೇಮ ನಿಷ್ಠೆಯನ್ನು ಪಾಲಿಸುತ್ತ ತನ್ನ ಚಿತ್ತವನ್ನು ಆ ಕಡೆಗೆ ನೀಡುತ್ತಾನೆ. ಆಗ ಚಿತ್ತವು ತನ್ನ ಚೈತನ್ಯವನ್ನು ನೀಗಿ ತಾಮಸದೊಳಗಾಗಿ ಯೋಗ ನಿದ್ರೆಗೆ ತಗಲಿ ಹೋಗುತ್ತಾನೆ. ಚಿತ್ತವು ತುಂಬಾ ಬಿಲೆಯುಳ್ಳದ್ದು. ಅದು ಯೋಗ ನಿದ್ರೆಗಿಳಿದಾಗ ಅದಕ್ಕೆ ಇನ್ನೊಂದು ಎದುರು ಇಲ್ಲವಾಗಿ, ಅದು ನಿರ್ಭೀತವಾಗುತ್ತದೆ. ಆ ನಿರ್ಭೀತ ಭಾವದಲ್ಲಿ ಸುಖ ಭೋಗವು ನೀರಸವೆನಿಸುತ್ತದೆ. ಸೌಖ್ಯದ ಬಗೆಗೂ ಉದಾಸೀನವಿರುವ ಭಾವವನ್ನು ಪ್ರಾಪ್ತ ಮಾಡಿಕೊಂಡು ಅದನ್ನು ಹೊಂದುತ್ತ ಶಮ ಗುಣಗಳನ್ನು ಅಂದರೆ ಇಂದ್ರಿಯ ನಿಗ್ರಹದ ಗುಣಗಳಾದ ಶಮ, ಧಮ, ಉಪರತಿ, ತಿತಿಕ್ಷೆಗಳನ್ನು ಕಂಡು ಇಂದ್ರಿಯ ನಿರ್ಲಿಪ್ತತೆಯು ಹುಟ್ಟುತ್ತದೆ. ಅಂಥ ಶಮತೆಯಿಂದ, ಇಂದ್ರಿಯಾತೀತನಾಗಿ, ತನ್ನ ದೇಹಪ್ರಜ್ಞೆಗೆ ಸೀಮಿತಗೊಂಡು ಭಾವವನ್ನು ವಿಶ್ವದತ್ತ ಹೊರಳಿಸಿ, ಅಖಿಲ ವಿಶ್ವವು ತಾನು ಎಂಬ ಭಾವ ಮೊಳೆಯುತ್ತದೆ. ಹೀಗೆ ತಾನೇ ವಿಶ್ವ ಎಂಬ ತತ್ತ್ವವಾಗುತ್ತಾನೆ.

ಇಂದ್ರಿಯ ತತ್ತ್ವಗಳು, ವಿಶ್ವಪ್ರಜ್ಞೆ ಹೊಂದಿ ತಮ್ಮ ಪೂರ್ಣ ವಿಕಾಸದ ವಿಜಯವನ್ನು ಕಂಡು, ಕೊನೆಗೆ ತಾನು ತತ್ತ್ವವೇತ್ತನಾಗಿ ಅಂದರೆ ತತ್ತ್ವಗಳನ್ನು ಅರಿತವನಾಗಿ ಇರುತ್ತಾನೆ. ಇಂಥ ತತ್ತ್ವವೇತ್ತನು ರಾಜಯೋಗಿಯಾಗಿ ತೇಜದಿಂದ ಇರುತ್ತಾನೆ. ಜಗದಲ್ಲಿ ಖ್ಯಾತನಾಗುತ್ತಾನೆ.

4. ಮುಮುಕ್ಷುತ್ವ :

ಇತರ ಪ್ರಾಣಿಗಳಿಗೂ, ಮಾನವರಿಗೂ ಸಮಾನ ಗುಣಗಳೆಂದರೆ, ನಿದ್ರೆ, ಆಹಾರ, ಭಯ, ಮತ್ತು ಮೈಥುನ. ಮಾನವನ ವಿಶೇಷತೆಯೆಂದರೆ ಧರ್ಮ ಸಾಧನೆ. ನರ ಜನ್ಮ ಪಡೆದ ಮೇಲೆ ಧರ್ಮ ಸಾಧನೆ ಮಾಡಿ ಮೋಕ್ಷ ಪಡೆಯದಿದ್ದರೆ ಆ ಜನ್ಮವು ಹಾಳಾದಂತೆ.

ಕಂ. ನರ ಜನ್ಮವ ತಾನೆತ್ತಿಯು,
ಪರಮಾತ್ಮನನರಿಯದಿರಲು, ಪಾಪಾತ್ಮನು ತಾ.
ಬರಿ ದುರಿತ ಕರ್ಮ ಗೆಯ್ದೊಡೆ,
ಮರಳಿ ಅಧೋಗತಿ ಪಡೆವನು, ಅರಿಯೈ ವೇಮಾ.

ಎಂಭತ್ತು ನಾಲ್ಕು ಲಕ್ಷ ಜೀವ ಯೋನಿಗಳಲ್ಲಿ ಹಾಯ್ದು ನರ ಜನ್ಮ ತಲುಪುವುದೇ, ಈ ಜನ್ಮ ಮರಣ ಚಕ್ರದಿಂದ ಪಾರಾಗಿ ಮೋಕ್ಷ ಪಡೆಯಲೆಂದು. ಹಾಗಿದ್ದರೂ, ಧರ್ಮ ಸಾಧನೆ ಮಾಡದೆ ಪರಮಾತ್ಮನನ್ನು ಅರಿತು ಬೆರೆಯದಿದ್ದರೆ ಅಂಥ ನರನು ಪಾಪಾತ್ಮನೆನಿಸುತ್ತಾನೆ. ಅವನು ಧರ್ಮ ಸಾಧನೆಗಿಳಿಯದೇ ಬರೀ ದುರಿತ ಕರ್ಮಗಳನ್ನೇ ಮಾಡಿದರೆ, ಅವನಿಗೆ ಮಾನವ ಯೋನಿಗಿಂತ ಕೀಳು ಯೋನಿಗಳಲ್ಲಿ ಜನ್ಮ ತಳೆಯಬೇಕಾಗುತ್ತದೆ. ಅವನು ಅಧೋಗತಿಯನ್ನು ಪಡೆಯುತ್ತಾನೆ.

ಆ. ಜ್ಞಾನ ನಿಷ್ಠೆ ಹೊಂದಿ, ತನುವ ಮರೆಯುವವನು,
ಕಾಮಿಯಲ್ಲ ಮೋಕ್ಷ ಕಾಮಿಯವನು.
ನಿಯಮ ನಿಷ್ಠೆ ಉಡುಗಿ, ನಿರ್ಗುಣತ್ವ ಹೊಂದು.
ವಿಶ್ವದಾಭಿರಾಮ ಕೇಳು ವೇಮ.

ಯಾರಗೆ ಶಿವಜ್ಞಾನದ ನಿಷ್ಠೆ ಇದೆಯೋ, ಅವನು ಮಸ್ತು ಜಗತ್ತಿನಿಂದ ಭಾವ ಜಗತ್ತಿಗೆ ಏರುತ್ತಾನೆ. ಭಾವವೆಂದರೆ ಶುದ್ಧ ಸತ್ವ ಮತ್ತು ಭಕ್ತಿಯ ಸ್ಫುರಣ. ಹಾಗಾಗಿ, ಅವನ ಪ್ರಜ್ಞೆಯು ಊರ್ಧ್ವ ಲೋಕಕ್ಕೇರಿ, ಅವನು ತನುವನ್ನು ಮರೆಯುತ್ತಾನೆ. ಹೀಗೆ, ಶಿವ ಜ್ಞಾನದ ಆಕರ್ಷಣೆ ಹೊಂದಿದವನು ಕಾಮಿಯಲ್ಲ. ಅಂದರೆ ಭೌತಿಕ ವಸ್ತುಗಳ ಆಕರ್ಷಣೆಯ ಸೆಳವಿನಲ್ಲಿಲ್ಲ. ಅವನು ಮೋಕ್ಷ ಕಾಮಿಯಾಗಿದ್ದಾನೆ. ಅವನು ಮುಮುಕ್ಷುವಾಗಿದ್ದಾನೆ. ಇಂಥ ಮೋಕ್ಷ ಕಾಮಿಯು, ದೇಹಾತ್ಮ ಬುದ್ಧಿಯ ಕರ್ಮಿಗಳನ್ನು ಪಾಲಿಸುವ ನಿಯಮ ನಿಷ್ಠೆಯನ್ನು ಮೀರಿ ನಿರ್ಗುಣತ್ವವನ್ನು ಹೊಂದಬೇಕು.

ಆ. ಆತ್ಮದೊಳಗೆ ಶಿವನ ಅರಿತು ಸಲೆ ಶೋಧಿಸಿ,
ನಿಶ್ಚಲಾಗಿ ಭಕ್ತಿ ನಿಲಿಸಿದವನು
ಸರ್ವ ಮುಕ್ತನಹನು ಸರ್ವ ತಾನಾಗುವ.
ವಿಶ್ವದಾಭಿರಾಮ ಕೇಳು ವೇಮ.

ತನ್ನ ಆತ್ಮದಲ್ಲಿ ಶಿವನು ಇರುವುದನ್ನು ಅರಿತು, ಚೆನ್ನಾಗಿ ಶೋಧಿಸಿ, ಭಕ್ತಿಯನ್ನು ನಿಶ್ಚಲವಾಗಿ ನಿಲ್ಲಿಸಿದವನು, ಎಲ್ಲದರಿಂದ ಮುಕ್ತನಾಗಿರುವನು. ಎಲ್ಲವೂ ತಾನಾಗಿರುವನು. ಸರ್ವ ಭೂತಾಂತರಾತ್ಮ ಆಗಿರುವನು.

ಎಲ್ಲರೂ ಧರ್ಮ ಸಾಧನೆಗೆ ಅಧಿಕಾರಿಗಳಾದ ನರ ಜನ್ಮ ತಳೆದಿದ್ದರೂ ಮೋಕ್ಷ ಪಡೆಯಲು ತಮ್ಮ ದುರಿತ ಕರ್ಮಗಳಿಂದಾಗಿ ಹಲವರು ಅವಕಾಶ ವಂಚಿತರಾಗುತ್ತಾರೆ. ಅವರಿಗೆ ಅವರ ದೋಷಗಳನ್ನು ಎತ್ತಿ ತೋರಿಸಿ ಮಾರ್ಗದರ್ಶನ ಮಾಡುವುದು ಅವಶ್ಯ ತಾನೇ ?

ಕಂ. ಸಾಸಿರ ಗತಿಯಲಿ ಜಲನಿಧಿ
ಯಾ ಸಿಹಿಯನಿಶಂ ಎಲ್ಲೆಡೆ ಮರಳಿಸಲಳವೇ ?
ತಾ ಸುಜ್ಞಾನವ ಕೊರಡಿಗೆ
ಸಾಸಿರ ವಿಧದಿ ತಿಳಿಸೆ ವ್ಯರ್ಥವು ವೇಮಾ.

ಸಾವಿರ ವಿಧದಲ್ಲಿ ಸಂಗ್ರಹವಾದ ಜಲನಿಧಿಯ ಆ ಸಿಹಿಯನ್ನು ಯಾವಾಗಲೂ, ಎಲ್ಲ ಕಡೆಗಳಲ್ಲಿಯೂ ಮರಳಿ ಸಿಹಿಗೊಳಿಸಲು ಶಕ್ಯವೇ ? ಇಲ್ಲ. ಅದೇ ರೀತಿ, ಚಿಗಿಯದಂಥ ಕೊರಡಿನಂತೆ, ಅರಿವು ಕುದುರದ ಮೂಢಮತಿಗೆ ಸಾವಿರ ವಿಧದಲ್ಲಿ ತಿಳಿಸಲೂ ಪ್ರಯೋಜನವಾಗದು.

ಆ. ಹಾಲು ನೀರು ಕ್ರಮವ ಹಂಸ ಅರಿಯುತಿಹುದು.
ನೀರು ಹಾಲ ಕ್ರಮವು ನವಿಲಿಗೇಕೆ ?
ಅಜ್ಞನಿರುವ ಅವನು ಆ ಶಿವನನರಿವನೆ ?
ವಿಶ್ವದಾಭಿರಾಮ ಕೇಳು ವೇಮ.

ಹಂಸ ಪಕ್ಷಿಯ ವಿಶೇಷ ಗುಣವೆಂದರೆ ನೀರು ಹಾಲಿನ ಮಿಶ್ರಣವನ್ನು ಅದರೆದುರು ಇರಿಸಿದರೆ, ಅದು ನೀರನ್ನು ಬಿಟ್ಟು, ಹಾಲನ್ನೇ ಸ್ವೀಕರಿಸುತ್ತದೆ. ಅದೇ ಸುಂದರವಾದ ನವಿಲು ಪಕ್ಷಿಗೆ ಅಂಥ ಗುಣವು ಇಲ್ಲ. ಅದು ನೀರನ್ನೂ ಹಾಲನ್ನೂ ಬೇರ್ಪಡಿಸಿ ಸೇವಿಸಲಾರದು. ಅದೇ

ರೀತಿ, ಶಿವಜ್ಞಾನ ಸಾಧಕನು ತನ್ನೆದುರಿನ ಮತ್ತು ವಿಚಾರಗಳಲ್ಲಿ ಶಿವನನ್ನು ಅರಿಯುವ ವಿಚಾರಗಳಲ್ಲಿ ಮಾತ್ರ ಅಭಿರುಚಿ ಹೊಂದಿ, ಇತರ ವಿಚಾರಗಳಲ್ಲಿ ಅನಾಸಕ್ತನಾಗಿರುತ್ತಾನೆ. ಇತರರು ಹಾಗೆ ಮಾಡಲಾರರು.

ಆ. ತನ್ನ ಮನೆಯ ಒಳಗೆ, ತನ್ನ ಶತ್ರು ಮಿತ್ರ
ತಿಳಿಯಲಾರದವನ ತಿಳಿವದೇಕೆ ?
ತಿಳಿದಿಹ ಮನುಜರಿಗೆ ದಿವ್ಯಾಮೃತವಯ್ಯ !
ವಿಶ್ವದಾಭಿರಾಮ ಕೇಳು ವೇಮ.

ತನ್ನ ಮನೆಯೊಳಗೆ ಯಾರು ಶತ್ರುಗಳು ? ಇನ್ನಾರು ಮಿತ್ರರು ? ಎಂದು ತಿಳಿಯಲಾರದವನ ವಿವೇಕ ಹೀನ ತಿಳಿವು ಏಕೆ ಬೇಕು ? ಅವನು ಮನೆತನದ ಹಿತವನ್ನು ಕಾಪಾಡಲಾರನು. ಅದೇ ರೀತಿ, ತನ್ನ ದೇಹದಲ್ಲಿ ಯಾವ ಗುಣಗಳು ತನ್ನ ಶತ್ರುಗಳು ? ಇನ್ನಾವ ಗುಣಗಳು ತನ್ನ ಮಿತ್ರರು ? ಎಂದು ತಿಳಿದು ನಡೆಯದವನ ತಿಳಿವು ನಿರರ್ಥಕ. ಕಾಮ, ಕ್ರೋಧ, ಲೋಭ, ಮೋಹ, ಮದ ಮತ್ತು ಮತ್ಸರಗಳು ತನ್ನ ಧರ್ಮ ಸಾಧನ ಮಾರ್ಗದಲ್ಲಿ ಅರಿ ಷಡ್ವರ್ಗಳಾಗಿವೆ. ಇನ್ನು ಶಮ, ದಮೆ, ಉಪರತಿ, ತಿತಿಕ್ಷೆ, ಶ್ರದ್ಧೆ ಮತ್ತು ಸಮಾಧಾನಗಳು ಮಿತ್ರಗಳಾಗಿವೆ. ಶತ್ರು ಮತ್ತು ಮಿತ್ರ ಗುಣಗಳನ್ನು ವಿಂಗಡಿಸಿ ತಿಳಿದು ಮಿತ್ರ ವರ್ಗವನ್ನಷ್ಟೇ ಬೆಳೆಸಿಕೊಂಡ ಮನುಷ್ಯರಿಗೆ ಊರ್ಧ್ವ ಲೋಕದಲ್ಲಿ ದಿವ್ಯ ಅಮೃತದ ಸವಿ ಸಿಕ್ಕುತ್ತದೆ.

ಆ. ಪಾಪ ಪುಣ್ಯಗಳನು ಪಶುಪಾಲನರಿವನೆ ?
ಅವನಿ ಪರಮ ಯೋಗಿ ಅರಿಯುತಿಹನು.
ಗುಣವನರಿಯದೆಂತು ಕೂಡಿಸುವುದು ಧಾತು ?
ವಿಶ್ವದಾಭಿರಾಮ ಕೇಳು ವೇಮ.

ಯಾವುದು ಪಾಪ ? ಯಾವುದು ಪುಣ್ಯ ? ಎಂಬುದನ್ನು ದನಗಾಹಿ ಅರಿಯಬಲ್ಲನೇ? ಈ ಭೂಮಿಯ ಮೇಲೆ ವಾಸಿಸುವ ಪರಮಯೋಗಿ ಮಾತ್ರ ಅರಿಯುತ್ತಾನೆ. ಕಲ್ಲು ದೇವರಿಗೆ ಕೈ ಮುಗಿಯುವುದು ಪುಣ್ಯ ಕರ್ಮವೆಂದು ಸಾಮಾನ್ಯ ಜನರು ಭಾವಿಸಿರಬಹುದು. ಪಿತೃಗಳಿಗೆ ಪಿಂಡದಾನ ಮಾಡುವ ಕಾಲಕ್ಕೆ ಏಕಾಕ್ಷಿ ಕಾಗೆಯನ್ನು ಪಿತೃವೆಂದು ಬಗೆದು ಪಿಂಡ ಪ್ರದಾನ ಮಾಡುವುದನ್ನೂ ಸಾಮಾನ್ಯ ವೈದಿಕರು ಪುಣ್ಯ ಕರ್ಮವೆಂದು ಬಗೆದಿರಬಹುದು. ಆದರೆ ಪರಮಯೋಗಿ ಇವೆಲ್ಲ ಶುಷ್ಕ ಆಚಾರವೆಂದು ತಿಳಿದಿರುತ್ತಾನೆ. ಮಿಶ್ರ ಲೋಹವನ್ನು ತಯ್ಯಾರಿಸುವಾಗ ಯಾವ ಧಾತುವಿನ ಗುಣ ಧರ್ಮವೇನೆಂದು ತಿಳಿದು ಲೋಹ ಮಿಶ್ರಣವನ್ನು ಮಾಡಬೇಕಾಗುತ್ತದೆ. ಅದರಂತೆ ಜೀವನದಲ್ಲಿ ಪಾಪಕಾರ್ಯ ಮತ್ತು ಪುಣ್ಯ ಕಾರ್ಯಗಳ ಗುಣವನ್ನು ಅರಿಯಬೇಕಾಗುತ್ತದೆ.

'ಅಷ್ಟಾದಶ ಪುರಾಣೇಷು ವ್ಯಾಸಸ್ಯ ವಚನ ದ್ವಯ
ಪರೋಪಕಾರಃ ಪುಣ್ಯಾಯ ; ಪಾಪಾಯ ಪರಪೀಡನಂ.

ಅಂದರೆ ವ್ಯಾಸಲಿಖಿತ ಹದಿನೆಂಟು ಪುರಾಣಗಳಲ್ಲಿ ಎರಡು ಮಾತುಗಳು ಮುಖ್ಯವಾಗಿವೆ. ಅವುಗಳೆಂದರೆ ಪುಣ್ಯಕ್ಕಾಗಿ ಪರೋಪಕಾರವಿದೆ. ಪಾಪಕ್ಕಾಗಿ ಪರಪೀಡನೆ ಇದೆ.

ಆತ್ಮವನ್ನು ಅರಿಯಲೆಂದು ಜನರು ಆಚರಿಸುವ ವಿಧಿಗಳು ಹೆಚ್ಚಾಗಿ ಪ್ರಾಮಾಣಿಕವಿರದೆ ಡಾಂಭಿಕ ಮಿಥ್ಯಾಚಾರಗಳಾಗಿರುತ್ತವೆ.

ಆ. ನಾಯಿ ಏಕಾಂತವು ; ನೋಡು ಬಕಧ್ಯಾನ,
ಕತ್ತೆ ರಾಗದೆಣಿಕೆ, ಕಪ್ಪೆ ಜಳಕ.
ಆತ್ಮವರಿವ ಭಾವ ಅರಿಯರೇಕೋ ಮನದಿ ?
ವಿಶ್ವದಾಭಿರಾಮ ಕೇಳು ವೇಮ.

ನಾಯಿಯು ಏಕಾಂತದಲ್ಲಿ ಇದ್ದಾಗ ಯಾವುದೋ ಬೇಟೆ ಹಿಡಿಯಲು ಹೊಂಚು ಹಾಕುತ್ತದೆ. ಬಕ ಪಕ್ಷಿಯು ಏಕಾಗ್ರ ಚಿತ್ತದಿಂದ ಏನು ಧ್ಯಾನಿಸುತ್ತದೆ ? ಸರೋವರದಲ್ಲಿಯ ಕ್ಷುದ್ರ ಜಂತುಗಳ ಬರುವಿಕೆಯನ್ನು ಕುರಿತು ಧ್ಯಾನಿಸುತ್ತದೆ. ತಿಂದು ತೇಗಿದ ಕತ್ತೆಯು ತನ್ನ ತೃಪ್ತಿ ಸೂಚಿಸಲು ರಾಗ ಮಾಡುವುದೇ ಹೊರತು ದೇವರ ಸ್ತುತಿ ರಾಗವಲ್ಲ. ನೀರಿನಲ್ಲಿಯೇ ವಾಸಿಸುವ ಕಪ್ಪೆಯು ಹುಳು ಹುಪ್ಪಡಿಗಳನ್ನು ಕಬಳಿಸಲು ಆಗೀಗ ನೀರಿನಲ್ಲಿ ಮುಳುಗು ಹಾಕುತ್ತದೆಯೇ ಹೊರತು ಅದಕ್ಕಾವ ಘನ ಉದ್ದೇಶವಿರದು. ಈ ರೀತಿ, ಪ್ರಪಂಚದ ಚಿಂತೆಯನ್ನು ತಲೆಯಲ್ಲಿ ತುಂಬಿಕೊಂಡ ಗವಿವಾಸಿ ಸಂನ್ಯಾಸಿಯ ಏಕಾಂತದಲ್ಲಿಯ ವಾಸವು ನಾಯಿಯ ಏಕಾಂತದಂತೆ. ಕ್ಷುದ್ರ ವಸ್ತುಪ್ರಾಪ್ತಿಗಾಗಿ ಧ್ಯಾನಿಸುವ ಯೋಗ ಸಾಧಕನ ಧ್ಯಾನವು ಬಕಧ್ಯಾನದಂತಾಗುತ್ತದೆ. ಭಕ್ತಿ ಇಲ್ಲದೆ, ಅರ್ಥವರಿಯದೆ ಮಾಡುವ ವೈದಿಕರ ಸಾಮಗಾನವು ಕತ್ತೆಯ ರಾಗದಂತೆ. ಇನ್ನು ಏನೋ ನೇಮ ವ್ರತವೆಂದು ತೆರೆದ ಬಾವಿ ಕೆರೆಗಳಲ್ಲಿ ಮುಳುಗು ಸ್ನಾನ ಮಾಡುವ ಬ್ರಾಹ್ಮಣನ ಜಳಕವು ಕಪ್ಪೆಯ ಜಳಕದಂತೆ ಅರ್ಥಹೀನವಾಗಿದೆ. ಆದರೆ ಜನರು ಸೂಕ್ಷ್ಮಾತಿ ಸೂಕ್ಷ್ಮವಾದ, ಗುಹ್ಯವಾದ ಆತ್ಮವನ್ನು ಅರಿಯ ಬೇಕಾದರೆ, ಶುದ್ಧ ಸತ್ವ ಗುಣ ಮತ್ತು ಭಕ್ತಿ ರಸ ಪುರಸ್ಸರವಾದ ಭಾವ ಬೇಕು. ಆದರೆ ಡಾಂಭಿಕ, ಭಾವ ಜಡತೆಯಲ್ಲಿ ಸಿಲುಕಿದ ಜನರು ಇದನ್ನೆಲ್ಲ ಅರಿಯರೋ?

ಆ. ಬಂಡೆ ಮೇಲೆ ಒರತೆ ಬಗೆದು ಬಹಳ ತೆಗೆಯೆ,
ಆಯ್ತು ಹೆಚ್ಚು ಕಷ್ಟ, ಆಸೆಯಿಲ್ಲ
ಕೆರೆಯ ತಳದ ಒರತೆ, ಕುಲವನುದ್ಧರಿಪುದು.
ವಿಶ್ವದಾಭಿರಾಮ ಕೇಳು ವೇಮ.

ಜಲಕ್ಷಾಮವಾದಾಗ ಜನರು ನೀರು ಪಡೆಯಲು ಅಲ್ಲಿ ಇಲ್ಲಿ ನೀರಿನ ಸೆಲೆ ಇರುವಲ್ಲಿ ಒರತೆಗಳನ್ನು ತೋಡಿ, ಕುಡಿಯುವ ನೀರು ಪಡೆಯುತ್ತಾರೆ. ಎಲ್ಲಿ ನೀರಿನ ಸೆಲೆಯಿದೆಯೆಂಬುದನ್ನು ತಿಳಿಯದ ಮುಗ್ಧರು ಬಂಡೆ ಇರುವ ಜಾಗದಲ್ಲಿ ಒರತೆಗಾಗಿ ಕಷ್ಟ ಸೋಸಿ, ಕುಣಿ ತೋಡಿದರೆ ಬರಿ ಕಷ್ಟವಾಗುವುದೇ ಹೊರತು ನೀರು ಪಡೆಯುವ ಆಸೆ ಇರದು. ಅದೇ ಕೆರೆಯ ತಳದಲ್ಲಿ ಒರತೆ ತೋಡಿದರೆ ಇಂಗಿದ ನೀರು ಸೆಲೆಯಾಗಿ ಹರಿದು ಬಂದು ಜನಕುಲದ ತೃಷೆ ಹಿಂಗಿಸಿ ಉದ್ಧರಿಸುವುದು.

ಅದೇ ರೀತಿ, ಸಾಂಸಾರಿಕ ತಾಪತ್ರಯಗಳಿಂದ ಶಾಂತಿ ಸಮಾಧಾನಗಳ ಕ್ಷಾಮ ಉಂಟಾದಾಗ, ತ್ರಸ್ತ ಮಾನವನು ದೇವರಿಂದ ಶಾಂತಿ ಕೋರುತ್ತಾನೆ. ಆದರೆ ಮೂಢರಾದ ಜನರು ತಮ್ಮ ಹೃದಯದಲ್ಲಿ ದೇವರನ್ನು ಕಾಣಲು ಹೆಣಗದೆ, ಶಿಲೆಯ ಮೂರ್ತಿಗಳಲ್ಲಿ, ತೀರ್ಥ

ಕ್ಷೇತ್ರಗಳಲ್ಲಿ, ದೇವರಿಗಾಗಿ ಅಲೆಯುತ್ತಾರೆ. ಇದು ಕೆರೆಯ ತಳದಂಥ ಹೃದಯದಲ್ಲಿ ದೇವರನ್ನು ಅರಸಲು ಸಾಧನೆ ಮಾಡದೆ, ಬಂಡೆಗಲ್ಲಿನಂಥ ತೀರ್ಥಗಳಲ್ಲಿ ಮತ್ತು ಶಿಲಾ ಮೂರ್ತಿಗಳಲ್ಲಿ ಅರಸಲು ಶ್ರಮಿಸುತ್ತಾರೆ.

ಆ. ಹಂದಿ ಏನರಿವುದು ಪನ್ನೀರ ವಾಸನೆ ?
ಕತ್ತೆ ಏನರಿವುದು ಗುರುವಿನ ಬೋಧೆ ?
ಮದಗಜೇನರಿವುದು ಮತ್ತೆ ಒಳಿತು-ಕೆಡುಕು ?
ವಿಶ್ವದಾಭಿರಾಮ ಕೇಳು ವೇಮ.

ಆ. ಗಾರ್ದಭೇನರಿವುದು ಗಂಧದ ವಾಸನೆಯ ?
ಸೊಣಗವೇನರಿವುದು ಸರಿಯೊ ತಪ್ಪೊ ?
ಅಲ್ಪನೇನರಿವನು ಹರನೊಲಿವ ವಿರಕ್ತಿ ?
ವಿಶ್ವದಾಭಿರಾಮ ಕೇಳು ವೇಮ.

ಹಂದಿಗೆ ಹೇಸುಗೆಯ ವಾಸನೆ ಹಿಡಿಸುವುದೇ ಹೊರತು ಪರಿಮಳಯುಕ್ತ ಪನ್ನೀರಿನ ವಾಸನೆಯು ತಿಳಿಯದು. ಪಾಪ ಕರ್ಮಗಳ ವಾಸನೆಯುಳ್ಳ ಮನುಷ್ಯನಿಗೆ ಪುಣ್ಯ ಕರ್ಮಗಳ ವಾಸನೆಯು ಸೇರದು. ಕತ್ತೆಯು ಗುರುವಿನ ಬೋಧೆಯನ್ನು ತಿಳಿಯದು. 'ಮುಕ್ತ್ಯಾಕಾಂಕ್ಷಾ ಸದ್ಗುರು ಪ್ರಾಪ್ತಿಃ' ಅಂದರೆ ಮುಕ್ತಿಯ ಆಕಾಂಕ್ಷೆಯಿದ್ದರೆ, ಸದ್ಗುರು ಲಭಿಸುತ್ತಾನೆ. ಅಂದರೆ ಮುಕ್ತಿಯ ಆಕಾಂಕ್ಷೆ ಉಳ್ಳವನು ಸದ್ಗುರುವಿನ ಬೋಧೆಯನ್ನು ಅರಿತು ಆಚರಿಸುತ್ತಾನೆ. ಆದರೆ ಮೂಢನು ಕತ್ತೆಯಂತೆ. ಆನೆಗೆ ಮದವೇರಿದಾಗ ಅದಕ್ಕೆ ಒಳಿತು ಕೆಡುಕು ತಿಳಿಯುವುದಿಲ್ಲ. ತನ್ನ ಮಾವುತನನ್ನೇ ತುಳಿದು ಕೊಲ್ಲುತ್ತದೆ. ಅದೇ ರೀತಿ, ಐಹಿಕ ಭೋಗದ ಮದವೇರಿದ ಮನುಷ್ಯನು ಪಾಪ ಪುಣ್ಯಗಳನ್ನು ಅರಿಯದೆ ವರ್ತಿಸುತ್ತಾನೆ.

ಕತ್ತೆಗೆ ಮೈ ತುಂಬ ಗಂಧ ಬಳಿದರೂ ಅದಕ್ಕೆ ತಿಳಿಯುವುದಿಲ್ಲ. ಅದು ಬೂದಿಯಲ್ಲಿ ಬಿದ್ದು ಹೊರಳಾಡಿ ಸಂತಸ ಪಡುತ್ತದೆ. ಅದೇ ರೀತಿ, ವಿಷಯ ಪ್ರಪಂಚದಲ್ಲಿ ಹೊರಳಾಡುವ ಜೀವಿಗೆ ಆಧ್ಯಾತ್ಮಿಕ ಸಾಧನದಿಂದ ಸಂತೃಪ್ತಿ ಸಿಗದು. ಇನ್ನು ನಾಯಿಗೆ ಯಾವುದು ಸರಿ ? ಯಾವುದು ತಪ್ಪು ? ಎಂದು ಅರಿಯುವ ವಿವೇಕವಿರದು. ಅದು ಮನೆಯಲ್ಲಿ ನುಗ್ಗಿ ಮಡಿಕೆಗಳನ್ನು ಕೆಡವಿ ಹಾಳು ಮಾಡುತ್ತದೆ. ಅದೇ ರೀತಿ, ಆಶೆ ತುಂಬಿದ ಮನುಷ್ಯನು, ಶಾಂತಿದಾಯಕ ಧ್ಯಾನದಲ್ಲಿ ಅಡ್ಡಿ ಆತಂಕ ಉಂಟು ಮಾಡಿ, ಸಜ್ಜುಗೊಂಡ ಮನಸ್ಸನ್ನು ಕೆಡಿಸುತ್ತಾನೆ. ಒಟ್ಟಾರೆ, ಅಲ್ಪ ಬುದ್ಧಿಯ ಮನುಷ್ಯನು ತನ್ನ ಅಲ್ಪ ಕಾಮನೆಗಳಿಗೆ ಬದ್ಧನಾಗಿ, ಯಾವ ವಿರಕ್ತಿ ಭಾವಕ್ಕೆ ಹರನು ಒಲಿಯುವನೋ ಅದನ್ನು ಅರಿಯನು.

ಕಂ. ದೀಪವಿರದಂಥ ಮನೆಯಲಿ,
ರೂಪವನು ತಿಳಿಯಲಾರರು, ರೂಢಿಯ ತಮದೋಳ್.
ದೀಪವಹ ತಿಳಿವು ಹೊಂದಿಯು,
ಪಾಪಗಳ ಹೊಲಸು ಹಾದಿಲಿ, ಬೀಳ್ವರು ವೇಮಾ.

ದೀಪವಿಲ್ಲದ ಮನೆಯಲ್ಲಿ, ರಾತ್ರಿಯ ಕಾಲಕ್ಕೆ ಯಾವುದೊಂದು ವಸ್ತುವಿನ ರೂಪ, ಆಕಾರಗಳನ್ನು ತಿಳಿಯಲಾರರು. ಇದು ಎಲ್ಲರಿಗೂ ರೂಢಿಯ ಅನುಭವವೇ ಆಗಿದೆ. ಆದರೆ ಮಾನವನು ತನ್ನಲ್ಲಿ ಬೆಳಗುತ್ತಿರುವ ಅರಿವಿನ ದೀಪವನ್ನು ಹೊಂದಿಯೂ ಸಹ ಎಚ್ಚತ್ತುಕೊಳ್ಳದೆ, ಪಾಪಗಳ ಹೊಲಸು ಹಾದಿಗೆ ಬೀಳುತ್ತಾನೆ. ಇದು ಸೋಜಿಗ.

ಆ. ಪುರುಷನೆಷ್ಟೋ ಬಾರಿ ಪುಟ್ಟಿದಂದಿನಿಂದ
ಪಾಪ ಚಿಂತೆ ಗೆಯ್ವ ಪಾಪರಾಗಿ.
ಮನದಿ ಕುಂಟ ನಾಯಿ ಮಾಂಸ ತಿಂದ ರೀತಿ.
ವಿಶ್ವದಾಭಿರಾಮ ಕೇಳು ವೇಮ.

ಮಾನವನು ಪೂರ್ವ ಜನ್ಮದಲ್ಲಿ ಪಾಪ ಕಾರ್ಯ ಮಾಡಿದ್ದರೆ, ಆ ಸಂಸ್ಕಾರಗಳು ಅವನಲ್ಲಿ ವಾಸನಾ ರೂಪದಲ್ಲಿ ಉಳಿದಿರುತ್ತವೆ. ಹೀಗಾಗಿ, ಅವನು ಪ್ರಚಲಿತ ಜನ್ಮದಲ್ಲಿ ಎಷ್ಟೋ ಬಾರಿ ಪಾಪ ಕುರಿತು ಚಿಂತನ ಮಾಡುತ್ತಾನೆ. ಈ ವಿಷಯದಲ್ಲಿ ಅವನು ಅಜ್ಞನಾಗಿರುತ್ತಾನೆ. ಕುಂಟ ನಾಯಿಯೊಂದು ತಾನು ಓಡಾಡುವಾಗ ಬೇಟೆ ಹಿಡಿದು ತಿನ್ನುವ ಚಟದ ವಾಸನೆಯಿಂದಾಗಿ, ಈಗ ಕಾಲಿಲ್ಲದೆ ಓಡಾಡದಂತಾಗಿ, ಮನದಲ್ಲಿಯೇ ಮಾಂಸವನ್ನು ತಿಂದಂತೆ, ಪೂರ್ವದಲ್ಲಿ ವಾಸನೆಯುಳ್ಳ ಮನುಷ್ಯನು ಪಾಪ ಚಿಂತೆ ಮಾಡುತ್ತಾನೆ.

ಆ. ಅಂತರಂಗದಲ್ಲಿ ಅಪರಾಧ ಗೆಯ್ದು,
ಒಳ್ಳೆಯವನ ರೀತಿ ಉಂಟು ಮನುಜ.
ಇತರರಿಯದಿರಲು ಈಶ್ವರನು ಅರಿಯನೆ ?
ವಿಶ್ವದಾಭಿರಾಮ ಕೇಳು ವೇಮ.

ಕೆಲವು ಜನರು ಗೋಮುಖ ವಾಘ್ರರಾಗಿರುತ್ತಾರೆ. ಬಾಹ್ಯ ನಡೆ ನುಡಿಯಲ್ಲಿ ಸಜ್ಜನರಂತೆ ನಟಿಸುತ್ತಾರೆ. ಅಂತರಂಗದಲ್ಲಿ ಅಪರಾಧ ಗೆಯ್ದಿರುತ್ತಾರೆ. ಈ ತೆರನಾದ ಮನುಷ್ಯರ ಒಳ ಮನಸ್ಸನ್ನು ಜನರು ಅರಿಯದಿರಬಹುದು. ಆದರೆ ಸರ್ವಂತರ್ಯಾಮಿಯಾದ ಈಶ್ವರನು ಅರಿಯದಿರುವನೇ ? ಹಾಗಾಗಿ, ಅವನು ವಿಧಿಸುವ ಶಿಕ್ಷೆ ಅವರಿಗೆ ತಪ್ಪದು.

ಒಂದು ಸಲ, ಓರ್ವ ಪ್ರತಿಷ್ಠಿತ ವ್ಯಕ್ತಿ ನನ್ನೊಡನೆ, ಒಬ್ಬ ದೇವ ಬಾಲಕಿಯನ್ನು ಕಾಣಲು ಬಂದಿದ್ದರು. ಆ ಬಾಲಕಿಯು ಪೂರ್ವ ಜನ್ಮ ಸುಕೃತದಿಂದ ಸರ್ವಜ್ಞತ್ವ ಹೊಂದಿದ್ದಳು. ಆ ಪ್ರತಿಷ್ಠಿತರು ತಮ್ಮ ತಾಪತ್ರಯ ಕುರಿತು ಹೇಳುತ್ತ, 'ಕೆಲ ಜನರಿಗೆ ನಾನೇನೂ ಅನ್ಯಾಯ ಮಾಡದಿದ್ದರೂ ಅವರು ತಮ್ಮ ವಿರುದ್ಧ ದಂಡನಾರ್ಹ ಕ್ರಮಕ್ಕೆ ಮುಂದಾಗಿ ಪೀಡಿಸುತ್ತಿದ್ದಾರೆ' ಎಂದು ಆತ್ಮಸಂಭಾವಿತರಂತೆ ನುಡಿದರು. ಆಗ ದೇವಬಾಲಿಕೆಯು, 'ನೀವು ದೈಹಿಕವಾಗಿ ಏನನ್ನೂ ಮಾಡಿರಲಿಕ್ಕಿಲ್ಲ ಆದರೆ, ಮನಸ್ಸಿನಲ್ಲಿ ಆ ಜನರ ಬಗ್ಗೆ ಸಾಕಷ್ಟು ಸೇಡಿನ ಭಾವನೆ ಹೊಂದಿರುವುದರಿಂದ ಹೀಗಾಗಿದೆ' ಎಂದು ತಟ್ಟನೆ ನುಡಿದಾಗ ನನ್ನ ಜೊತೆಗಾರರ ಮುಖ ಕಪ್ಪಿಟ್ಟಿತು.

ಮಾನವನಿಗೆ ತಾನು ಬಂದುದೆಲ್ಲಿಂದ ? ಹೋಗುವುದೆಲ್ಲಿಗೆ ? ಎಂಬುದು ತಿಳಿದಿರಬೇಕು.

ಆ. ಆದಿ ತುದಿಯರಿಯದ ಅಲ್ಪನಾದ ದಿನಕೆ
ಬುದ್ಧಿ ಬದಲುಗೊಂಡು ಬಹಳ ಅಲೆತ.
ತರುವ, ತರುವ ತಿರುಗುತಿರುವ ಕೋತಿಯಂತೆ.
ವಿಶ್ವದಾಭಿರಾಮ ಕೇಳು ವೇಮ.

ಮಾನವನ ಆದಿಯು ಯಾವುದು ? ಅವನ ಅಂತ್ಯವಾವುದು ? ಎಂಬುದನ್ನು ಅರಿಯದಿದ್ದುದರಿಂದ ಮಾನವನು ಅಲ್ಪನಾದನು. ಎಲ್ಲಿ ಮನವು ಉದ್ಗಮಿಸುವುದೋ ಅದು ಆದಿ. ಎಲ್ಲಿ ಮನವು ಲಯಿಸುವುದೋ, ಅದು ಅಂತ್ಯ. ಮನದ ಊರ್ಧ್ವದಲ್ಲಿ ಆತ್ಮ ತತ್ತ್ವವಿದೆ. ಅದು ಅನಾದಿ, ಅನಂತ. ಅನಾದಿ, ಅನಂತವಾದ ಎರಡು ಸತ್ತೆಗಳಿರಲಾರವು. ಹಾಗಾಗಿ ಆತ್ಮವು ಪರಮಾತ್ಮನ ಪ್ರತಿಬಿಂಬವಷ್ಟೇ. ಇದುವೇ ಮಾನವನ ಆದಿ. ಅವನು ಸೇರಬೇಕಾದ ಅಂತ್ಯವೂ ಇದುವೇ ಆಗಿದೆ. ಹೀಗೆ ತನ್ನ ಅನಂತ ಇಲ್ಲವೆ ಭೂಮಾ ಸ್ವರೂಪವನ್ನು ಅರಿಯದೆ, ಮಾನವನು ಅಲ್ಪನಾದನು. ಆ ದಿನದಿಂದ ಅವನ ಬುದ್ಧಿಯು ಸರ್ವಜ್ಞತ್ವದಿಂದ ಕಿಂಚಿಜ್ಞತ್ವಕ್ಕೆ ಬದಲಾಯಿತು. ಹೀಗಾಗಿ, ತನ್ನಲ್ಲಿ ದೇವರಿಲ್ಲ. ತಾನು ದೇವರಲ್ಲ, ಎಂದು ಗ್ರಹಿಸಿ, ದೇವರು ಗುಡಿಯ ಶಿಲಾಮೂರ್ತಿಯಲ್ಲಿಯೂ, ತೀರ್ಥದಲ್ಲಿಯೂ ಇರುವನೆಂದು ನಂಬಿ, ಅತ್ತಿತ್ತ ಅಲೆಯತೊಡಗಿದನು. ಇದು ಹೇಗಾಯಿತೆಂದರೆ ಚಂಚಲ ಮನದ ಕೋತಿಯು ಒಂದೆಡೆ ನಿಲ್ಲಲಾರದೆ ಆ ಕೊಂಬೆ ಸರಿ, ಈ ಕೊಂಬೆ ಸರಿ ಎಂದು ಗಿಡದಿಂದ ಗಿಡಕ್ಕೆ ತಿರುಗುವ ಕೋತಿಯಂತಾಗಿದೆ.

ಆ. ಆತ್ಮವರಿಯದೆ ನುತಿಸಿ ಅಷ್ಟಿಷ್ಟು ಮಾಡಲು,
ಅಂಥವರ ಮೆಚ್ಚುವವ ವ್ಯರ್ಥ ನರನು.
ಮೂಗಿರದ ಹೆಣ್ಣನು ಮೂಢ ಮೆಚ್ಚುವನೇ ?
ವಿಶ್ವದಾಭಿರಾಮ ಕೇಳು ವೇಮ.

ಕೆಲವರು ಪಂಡಿತರು, ಸಾಧಕರು ಆತ್ಮವನ್ನು ಅರಿಯುವ ವರೆಗೆ ಹೋಗುವುದಿಲ್ಲ.ಮಧ್ಯದಲ್ಲಿ ಸಿದ್ಧಿ ಸಂಪನ್ನರಾಗಿ ಇಲ್ಲವೆ ವಾಗ್ಝೈಖರಿಯ ನಿಪುಣರಾಗಿ, ಆತ್ಮವನ್ನು ಸ್ತುತಿಸಿ, ಅಷ್ಟು ಇಷ್ಟು ಸಿದ್ಧಿ ಪ್ರದರ್ಶನ ಮಾಡಿದರೆ ಇಲ್ಲವೆ ಆಪಾತ ಮನೋಹರವಾದ ಮಾತುಗಳನ್ನಾಡಿದರೆ, ಅಂಥವರ ಮಾತು ಕೃತಿಗಳನ್ನು ಮೆಚ್ಚುವವನು ಕೇವಲ ಮೂಢ ಮನುಷ್ಯನಷ್ಟೇ. ಆತ್ಮಜ್ಞಾನವೆಂದರೆ ಆತ್ಮವಿದ್ಯೆಯೇ. ಮಾನವನಿಗೆ ಮೂಗಿನಂತೆ ಶೋಭಿಕರ. ಅದಿಲ್ಲದವನನ್ನು ಮೆಚ್ಚುವುದು ಹೇಗೆ ? ಮೂಗು ಇರದ ಹೆಣ್ಣನ್ನು ಮೂಢನೂ ಸಹ ಮೆಚ್ಚುವುದಿಲ್ಲವಲ್ಲವೇ ?

ಯಾರು ಯಾರು ಬ್ರಹ್ಮವಿದ್ಯೆಗೆ ಅಧಿಕಾರಿಗಳಲ್ಲ ? ಎಂದು ತಿಳಿಯುವಾ :

ಕಂ. ಅತಿ ನಿದ್ರಾವಂತರಿಗು-
ನ್ನತ ಪಾನಿಗೆ, ಉಪವಾಸಿಗೆ ಕೋಪಿಗಳಿಗುಂ
ಧೃತಿ ಹೀನನಪಕಾರಿಗೆ
ಜೊತೆಗಿರದೀ ಬ್ರಹ್ಮ ವಿದ್ಯೆ, ಸಾರ್ಯೆ ವೇಮಾ.

ಅತಿಶಯ ನಿದ್ರೆ ಮಾಡುವವನು ತಾಮಸಿಯಾಗಿರುತ್ತಾನೆ. ಉನ್ನತ ಪಾನಿಯೂ ಅತಿ ಮದ್ಯಪಾನಿಯೂ ವಿಷಯಾಸಕ್ತನಾಗಿರುತ್ತಾನೆ. ಸಾಧಕನು ಮಿತಾಹಾರಿಯಾಗಿರಬೇಕೇ ಹೊರತು ಉಪವಾಸವಿದ್ದು ದೇಹವನ್ನು ಕೊರಗಿಸಬಾರದು. ಸಾಧಕನು ಶಾಂತ ಸ್ವಭಾವಿಯಾಗಿರಬೇಕಲ್ಲದೆ ಅತಿ ಶೀಘ್ರ ಕೋಪಿಯಾಗಿರಬಾರದು. ಧೃತಿ ಹೀನನಿಗೆ ಅಂದರೆ ಪ್ರಸನ್ನತೆ ಇಲ್ಲದವನಿಗಾಗಲಿ, ಉಪಕಾರ ಮಾಡಿದವರಿಗೆ ಅಪಕಾರ ಮಾಡುವ ಕೃತಘ್ನನಿಗಾಗಲಿ ಬ್ರಹ್ಮವಿದ್ಯೆಯು ಜೊತೆಗೂಡದು ಎಂದು ಸಾರು.

ಗೀತ. ತುಡುಗುಗಳ್ಳರಿಗೆ ಸಿಗದಂಥ ತೆರನೆ ಆಯ್ತು.
ಬಾಯಿ ಗುಣಿಸುತಿಹ ಮಂತ್ರವು ; ಬಹಳ ನೀಟ.
ಮಾತಿನಲ್ಲಿಯೇ ಪರಮಾತ್ಮ ಮರುಳಗೊಳನು.
ಚಿತ್ತದಿ ಸ್ವಸ್ಥತೆಯು ಇರದಿರೆ ಚೋಗ ವೇಮ.

ಮನಸ್ಸಿನಲ್ಲಿ ಏನನ್ನೋ ಚಿಂತಿಸುತ್ತ ಬಾಯಿ ಗುಣಿಸುತ್ತಿಹ ಮಂತ್ರವು ಮಂತ್ರ ಚೈತನ್ಯವನ್ನು ಉಂಟು ಮಾಡಿ, ಆತ್ಮನತ್ತ ದಾರಿ ಮಾಡಿಕೊಡದು. ಕಳ್ಳರಿಗೆ ತುಡುಗು ಮಾಲು ಸಿಕ್ಕದೆ ಹೋದಂತೆ ಇದಾಗುತ್ತದೆ. ಕಳ್ಳ ಮನಸ್ಸಿಗೆ ಆತ್ಮ ಒಲಿಯನು. ಬರೀ ನೀಟ ಮಾತಿನಲ್ಲಿಯೇ ಪರಮಾತ್ಮನು ಮರುಳುಗೊಳ್ಳನು. ಚಿತ್ತದಲ್ಲಿ ಸ್ಥಿರತೆ ಇರಬೇಕು. ಧ್ಯಾನಿಸುವಾಗ ಚಿತ್ತ ಸ್ಥೈರ್ಯವು ಇಲ್ಲವಾದರೆ, ಬಹಳ ದುರ್ಮಾರ್ಗಗಾಮಿಯಾಗುತ್ತಾನೆ.

ಕಂ. ವಂಚನ ಮನದೊಳಿರುವರಿಗೆ,
ಸಂಚಿತ ಕರ್ಮಗಳು ಬಿಡದೆ, ಸಂದೇಹವಿರಲ್,
ಪಂಚೇಂದ್ರಿಯಲೋಲ ಜನಕೆ,
ಸಿಂಚಿತವಹ ಆತ್ಮ ವಿದ್ಯೆ ಸೇರದು ವೇಮಾ.

ಮನದಲ್ಲಿ ವಂಚಕ ವೃತ್ತಿಯುಳ್ಳವರಿಗೆ, ಅವರ ಪೂರ್ವ ಜನ್ಮದ ಪಾಪ-ಪುಣ್ಯಗಳ ಸಂಚಿತ ಕರ್ಮವು ಬಿಡಲಾರದೆ, ಆತ್ಮದ ಇರವಿನ ಬಗೆಗೆ ಸಂದೇಹಗಳು ಉಳಿದಿರುತ್ತವೆ. ಇನ್ನು ಯಾರು ಪಂಚೇಂದ್ರಿಯ ಲೋಲರಾಗಿ ವಿಷಯ ವಸ್ತುಗಳ ಸಂಸರ್ಗದಲ್ಲಿ ಮುಳುಗಿರುವರೋ, ಅವರಿಗೆ ತಮ್ಮಲ್ಲಿ ಕೂಡಿಬಿದ್ದ ಆತ್ಮವಿದ್ಯೆಯು ಸೇರದಾಗುತ್ತದೆ.

ಆ. ಕುಂಬಾರನಲಿ ಜ್ಞಾನವ,
ತುಂಬಿ ತಿಳಿಸಲೇನು ? ತಿಳಿಯಲಾರನು ನೋಡಾ.
ಶುಂಭನವ ಬೊಮ್ಮ ತಾನಿಹೆ-
ನೆಂಬ ಮದ ಹೊಂದಿ, ಕೆಡುವ, ಸುಧಾರಿಸ, ನೋಡಾ.

ಕುಂಬಾರನು ಮಣ್ಣು ಮುದ್ದೆಯಿಂದ ಅನೇಕ ಆಕಾರದ ಗಡಿಗೆಗಳನ್ನು ಮಾಡುತ್ತಾನೆ. ಬ್ರಹ್ಮನೂ ಉಪಾದಾನ ಕಾರಣನೂ ನಿಮಿತ್ತ ಕಾರಣನೂ ಆಗಿ ಸೃಷ್ಟಿ ಧಾರೆಯನ್ನು ಮಾಡುತ್ತಾನೆ ಎಂದು ಪ್ರವಚನದಲ್ಲಿ ಕೇಳಿದ ಕುಂಬಾರನು, ತಾನೇ ಬ್ರಹ್ಮನೆಂದು ಮದೋನ್ಮತ್ತನಾಗುತ್ತಾನೆ. ಅವನಿಗೆ ಬ್ರಹ್ಮ ಜ್ಞಾನವನ್ನು ಎಷ್ಟೊಂದು ತಿಳಿಸಿ ಹೇಳಿದರೂ ತಿಳಿಯದೆ ತನ್ನ ಮದದಿಂದ ತಾನೇ ಕೆಡುತ್ತಾನೆ.

ಆ. ಮಾತನಾಡೆ ಬೇರೆ, ಮನದ ಕೋರ್ಕೆ ಬೇರೆ.
ಒಡಲು ಗುಣವು ಬೇರೆ, ಯೋಚ್ಛೆ ಬೇರೆ.
ಎಂತು ಬಹುದು ಮುಕ್ತಿ ? ಇಂತು ನಡತೆ ಇರಲು.
ವಿಶ್ವದಾಭಿರಾಮ ಕೇಳು ವೇಮ.

ಸಾಧಕನು ಮುಕ್ತಿ ಪಥದಲ್ಲಿ ಮುಂದುವರಿಯಬೇಕಾದರೆ, ಅವನು ಕಾಯಾ, ವಾಚಾ ಮತ್ತು ಮನಸಾ ಏಕವಾಗಿರಬೇಕು. ನಡೆಯಂತೆ ನುಡಿ ಇರಬೇಕು. ನುಡಿಯಂತೆ ಒಡಲು ಗುಣವಿರಬೇಕು. ಆದರೆ ಯಾವನು ಮಾತನಾಡುವಲ್ಲಿ ಬೇರೆ, ಮನದಲ್ಲಿರಿಸಿಕೊಂಡ ಕೋರಿಕೆಗಳು ಬೇರೆ, ಅವನ ಹೃದಯ ಚಿಂತನೆಗಳು ಬೇರೆ, ಯೋಚನೆಗಳು ಬೇರೆಯಾಗಿರಿಸಿಕೊಂಡಿರುವನೋ,ಇಂಥ ಒಡಕು ಪ್ರವೃತ್ತಿಯ ಮನುಷ್ಯನಿಗೆ ಏಕಾಗ್ರ ಬುದ್ಧಿಯು ಹೇಗೆ ಸಾಧ್ಯವಾಗುವುದು ? ಅವನಿಗೆ ಇಹದ ಬಂಧನಗಳಿಂದ ಬಿಡುಗಡೆ ಹೇಗೆ ಸಾಧ್ಯ ? ತ್ರಿಕರಣ ಶುದ್ಧಿ, ಅನಿವಾರ್ಯ ಅಗತ್ಯ.

ಆ. ಸುರರು ಮೌನವಿಹರು ; ಸರಿಯಾಗಿ ನಡೆವರು.
ಧರ್ಮ ಮಾರ್ಗವೊಂದೆ ತಾರಕವದು.
ಅಂತೆ ಅಲ್ಲದವರು ಅಸುರರಾಗಿ ಕೆಡುಗು.
ವಿಶ್ವದಾಭಿರಾಮ ಕೇಳು ವೇಮ.

ಯಾರು ಸುರರು ? ಯಾರು ಅಸುರರು ? ತಮ್ಮ ಆತ್ಮ ಚಿಂತನದಲ್ಲಿಯೇ ಕಾಲ ಕಳೆಯುತ್ತ ಮನಸ್ಸಿನಲ್ಲಿ ಅನ್ಯ ಸ್ಪಂದನಗಳೇಳದಂತೆ ಮೌನವಾಗಿದ್ದು, ಸರಿಯಾಗಿ ನಡೆವಳಿ ಇರಿಸಿಕೊಂಡವರೇ ಸುರರು. ಅವರಿಗೆ ಧರ್ಮ ಮಾರ್ಗವೊಂದೇ ಪಾರುಗಾಣಿಸುವ ತಾರಕವಾಗಿರುತ್ತದೆ. ಈ ಲಕ್ಷಣಗಳನ್ನು ಹೊಂದಿದ ಶ್ರೀರಾಮಚಂದ್ರನನ್ನು ಸುರನೆನ್ನಬಹುದು. ಅವನು ವರ್ಣದಿಂದ ಕ್ಷತ್ರಿಯನೇ ಇರಬಹುದು. ಅಂತೆ ಇಲ್ಲದವರು ಅಂದರೆ ವಾದ ಜಲ್ಪಗಳಲ್ಲಿ ಕಾಲ ಕಳೆಯುವವರು, ನಡೆ ನುಡಿ ಸರಿಯಾಗಿ ಇಲ್ಲದವರು ಧರ್ಮ ವಿರೋಧಿ ಅಧರ್ಮ ಆಚರಣೆಯವರು ಅಸುರರಾಗಿ ಕೆಡುತ್ತಾರೆ. ಜಾತಿಯಿಂದ ಬ್ರಾಹ್ಮಣ ವರ್ಣದವನಾದರೂ ರಾವಣನು ಅಸುರನೆನಿಸುತ್ತಾನೆ. ಸುರ-ಅಸುರರೆಂಬ ಎಣಿಕೆಯು ಅವರವರ ಗುಣದಿಂದ ಹೊರತು ಜಾತಿಯಿಂದಲ್ಲ.

ಆ. ಗಿಡ್ಡ ಹುಡುಗ ಬಲಿತು ಗಗನಕೆ ಎಗರಿದರೆ,
ಗಿಡದ ತುದಿಯ ಹಣ್ಣು ಕೈಗೆಟುಕುವುದೆ ?
ಪುಸ್ತಕಗಳನೋದೆ, ಹೊಂದುವನೇ ಮೋಕ್ಷ ?
ವಿಶ್ವದಾಭಿರಾಮ ಕೇಳು ವೇಮ.

ಗಿಡ್ಡ ದೇಹದ ಹುಡುಗನೊಬ್ಬನು ಚೆನ್ನಾಗಿ ದೇಹ ಪುಷ್ಟಿ ಹೊಂದಿ, ಆಕಾಶಕ್ಕೇ ಹಾರುವೆನೆಂದು ಮೇಲಕ್ಕೆ ಜಿಗಿದರೆ, ಎಷ್ಟು ಎತ್ತರ ಜಿಗಿದಾನು ? ಅವನಿಗೆ ಗಿಡದ ತುದಿಯ ಹಣ್ಣು ಕೈಗೆಟುಕಬಹುದೆ ? ಅದೇ ರೀತಿ, ಸಾಧನ ಸಂಪತ್ತಿ ಇರದ, ಅಲ್ಪ ಬುದ್ಧಿಯವನು ಬರೀ ವೇದ ಶಾಸ್ತ್ರಗಳ ಅಧ್ಯಯನ ಮಾಡಿ, ಬಹಳ ಪುಸ್ತಕಗಳನ್ನು ಓದಿದ ಮಾತ್ರಕ್ಕೆ ಅವನಿಗೆ ಮೋಕ್ಷ ಲಭಿಸೀತೇ ?

ಧರ್ಮ ಸಾಧನೆ :

ಮನುಷ್ಯನಿಗೂ ಇತರ ಪ್ರಾಣಿಗಳಿಗೂ ನಾಲ್ಕು ಸಮಾನ ಗುಣಗಳಿವೆ. ಅವುಗಳೆಂದರೆ ನಿದ್ರೆ, ಆಹಾರ, ಭಯ, ಮೈಥುನ. ಮನುಷ್ಯನ ವಿಶೇಷ ಗುಣವೆಂದರೆ ಧರ್ಮ ಸಾಧನೆ. ಈ ವಿಶೇಷ ಗುಣದಿಂದಾಗಿ ಮಾನವನು ಪ್ರಾಚೀನ ಕಾಲದಿಂದಲೂ ಶೋಧ ನಡೆಸಿದ್ದಾನೆ.

ಆ. ಕಲಿಯುಗದೊಳು ಮುನ್ನ ಒಕ್ಕಲಿಗರ ಕುಲಕೆ,
ಘನತೆಗಾಗಿ ವೇಮನ ಕೀರ್ತಿ ಇತ್ತ.
ಭುವಿಯ ಸಕಲ ಧರ್ಮ ಸಾರಿ ಹರಡಿದನು.
ವಿಶ್ವದಾಭಿರಾಮ ಕೇಳು ವೇಮ.

ಕಲಿಯುಗದಲ್ಲಿ ಧರ್ಮ ಸಾಧನೆಯ ಮರ್ಮವು, ಸಮಾಜದ ಸಕಲ ಜಾತಿ ವರ್ಗದವರೂ ಋಷಿಗಳಾಗಿ ಮಂತ್ರಗಳನ್ನು ದರ್ಶಿಸಿ, ದ್ರಷ್ಟಾರರಾದರೂ ಸಹ, ಲಿಪಿ ಇಲ್ಲದ ಆ ಪ್ರಾಚೀನ ಕಾಲದಲ್ಲಿ ವೇದಗಳು ಕೇವಲ ಶ್ರವಣದಿಂದ ತಿಳಿಯಬಲ್ಲ ಶ್ರುತಿಗಳಾದವು. ಅವುಗಳನ್ನು ಕಂಠಸ್ಥ ಮಾಡಿದ ಬ್ರಾಹ್ಮಣರು ಅವುಗಳ ಅಧ್ಯಾಪನದ ಹಕ್ಕನ್ನು ತಮ್ಮಲ್ಲಿ ಇರಿಸಿಕೊಂಡರು. ಅಧ್ಯಯನದ ಹಕ್ಕನ್ನು ಸಹ, ಬ್ರಾಹ್ಮಣ, ಕ್ಷತ್ರಿಯ, ವೈಶ್ಯರೆಂಬ ದ್ವಿಜರಿಗೆ ಮೀಸಲಿರಿಸಿದರು. ಮೇಲಾಗಿ ಹೊರಗಿನಿಂದ ಬಂದ ಆರ್ಯರು ಸ್ಥಳೀಯ ಆದಿವಾಸಿಗಳನ್ನು ಶೂದ್ರರೆಂದೂ, ದಾಸರೆಂದೂ ಕರೆದು ಅವರಿಗೆ ವೇದಾಧ್ಯಯನದ ಹಕ್ಕನ್ನು ನೀಡಲಿಲ್ಲ. ಮಂತ್ರ ಶ್ರವಣ ಮಾಡಿದರೆ ಕಿವಿಯಲ್ಲಿ ಸೀಸ ಸುರುವುತ್ತಿದ್ದರು. ವೇದ ಪಾಠ ಮಾಡಿದರೆ ಅವರ ನಾಲಗೆ ಕತ್ತರಿಸಲಿಕ್ಕೂ ಹೇಸುತ್ತಿರಲಿಲ್ಲ. ಹೀಗಾಗಿ, ಆ ಕಾಲದ ಋಷಿ ಮುನಿಗಳು ಬೋಧಿಸಿದ ಧರ್ಮ ಸಾಧನೆಯು ಜನಪದವನ್ನು ತಲುಪದೆ ಹೋಯಿತು. ಇಡೀ ಸ್ತ್ರೀ ವರ್ಗಕ್ಕೂ ವೇದದ ಅಧ್ಯಯನ, ಧರ್ಮ ಸಾಧನೆಯ ಹಕ್ಕನ್ನು ನಿಷೇಧಿಸಿದರು. ಹೀಗಾಗಿ ಧರ್ಮ ಸಾಧನೆಯು ಶೋಷಕರ ಸೊತ್ತಾಗಿ ಉಳಿಯಿತು. ಆದ್ದರಿಂದ, ತನ್ನ ಪೂರ್ವ ಜನ್ಮದ ಸುಕೃತದ ಫಲವಾಗಿ, ಗುರುವಿನ ಅನುಗ್ರಹದಿಂದಾಗಿ, ದೇವರ ಕೃಪೆಯಿಂದಾಗಿ ಧರ್ಮ ಸಾಧನೆಯ ಮರ್ಮವನ್ನು ಅರಿತುಕೊಂಡು, ಅದನ್ನು ಬಿತ್ತರಿಸುವ ಕಾವ್ಯ ಶಕ್ತಿಯನ್ನು ಪಡೆದುಕೊಂಡ ವೇಮನಯೋಗಿ ವರ್ಯರು ಕಲಿಯುಗದಲ್ಲಿ ಮೊದಲು ಒಕ್ಕಲಿಗರ (ಕಾಪು) ಕುಲಕ್ಕೆ ತನ್ನ ಕೀರ್ತಿಯನ್ನು, ಘನತೆಗಾಗಿ ಕೊಟ್ಟನು. ಭುವಿಯಲ್ಲಿಯ ಸಕಲ ಧರ್ಮವನ್ನೂ ಸಾಂಖ್ಯಯೋಗ, ಶಿವಯೋಗ ಮತ್ತು ರಾಜಯೋಗಗಳ ಮೂಲಕ ಹರಡಿದನು.

ಕಂ. ತಾವರೆ ಎಲೆಯಡಿ ನೀರಿರೆ,
ವೇಮನ ಚರಿಸುತಲುಂಟು ಹುಡುಕುತ ಶಿವನಾ.
ಈ ಮಾಯೆ ನಂಬಕೂಡದು.
ಈ ಮಹಿಮೆ ತಿಳಿಯಲಾರನು, ದೇವನು ವೇಮಾ.

ಶಿವನನ್ನು ಹುಡುಕುವುದೇ ಧರ್ಮ ಸಾಧನೆ. ವೇಮನ ಯೋಗಿಯು ಶಿವನನ್ನು ಹುಡುಕುತ್ತ ಈ ಧರೆಯಲ್ಲಿ, ಪ್ರಾಪಂಚಿಕ ವ್ಯಾಮೋಹಗಳಿಗೆ ಅಂಟದೆ, ನೀರಿನಲ್ಲಿಯೇ ಬೆಳೆಯುವ ಕಮಲದ ಎಲೆಯು ನೀರಿಗೆ ಸೋಂಕದಂತೆ ಇರುವ ಹಾಗೆ, ಬಾಳುತ್ತಿದ್ದಾನೆ. ಈ ಪ್ರಪಂಚದ

ಆಸಕ್ತಿ ಮನಸ್ಸಿನ ಭ್ರಾಂತಿ; ಮಾಯೆ. ಈ ಮಾಯೆಯನ್ನು ನಂಬಕೂಡದು, ಈ ಸಾಧನದ ಮಹಿಮೆಯನ್ನು ದೇವನೂ ಸಹ ತಿಳಿಯಲಾರನು. ಪೌರಾಣಿಕ ದೇವತೆಗಳೂ ಈ ಮಾಯೆಗೆ ಸಿಲುಕಿದ್ದಾರೆ. ಏಕೆಂದರೆ ಅವರೆಲ್ಲ ಪುರಾಣ ಕರ್ತರ ಪಾತ್ರ ತಾನೇ ?

ಶ್ರಾದ್ಧ ಕರ್ಮ :

ಪ್ರಾಚೀನ ಮಾನವನು ತನ್ನ ಪಿತೃಗಳಲ್ಲಿ ಮಹಿಮೆಯಿದೆಯೆಂದು ನಂಬುತ್ತಿದ್ದನು. ಮರಣಾನಂತರ, ಜೀವಿಯು ಇರುವನೆಂದೂ ಹೆಚ್ಚಿನ ಶಕ್ತಿವಂತನಾಗಿರುವನೆಂದೂ ನಂಬುತ್ತಿದ್ದರು. ಅವರ ಬಗ್ಗೆ ವಿಶೇಷ ಭಕ್ತಿ ಗೌರವ ತೋರುತ್ತಿದ್ದರು. ತಮ್ಮ ಶ್ರದ್ಧೆಯ ಕುರುಹಾಗಿ, ಸತ್ತ ಹಿರಿಯರಿಗೆ ಶ್ರಾದ್ಧ ಕರ್ಮ ನೆರವೇರಿಸುತ್ತಿದ್ದರು. ಅವರು ಜೀವಂತವಿರುವಾಗ ಮೆಚ್ಚುತ್ತಿದ್ದ ತಿಂಡಿ ತೀರ್ಥಗಳನ್ನು ಪಿಂಡದಾನ ಮಾಡುತ್ತಿದ್ದರು. ವೈದಿಕ ಬ್ರಾಹ್ಮಣರಂತೂ ಆ ದಿನ ತಪ್ಪದೆ ತಮ್ಮ ಪಿತೃಗಳಿಗೆ ಪ್ರೀತಿಯ ಮಾಂಸದಡುಗೆಯನ್ನು ಮಾಡಿ, ತಾವೂ ಸೇವಿಸುತ್ತಿದ್ದರು. ಇನ್ನು ಏಕಾಕ್ಷಿಯಾದ ಕಾಗೆಯ ರೂಪದಲ್ಲಿ ತಮ್ಮ ಪಿತೃವು ಬರುವನೆಂದು ಬಗೆದು ಕಾಗೆಗಳನ್ನು ಕೂಗಿ ಕರೆದು ಪಿಂಡವನ್ನು ಅರ್ಪಿಸುತ್ತಿದ್ದರು.

ಆ. ಪಿತರ ಅನ್ನವೆಂದು ಪ್ರೀತಿಯಿಂದ ಕರೆದು,
ಕಾಗೆಗಳಿಗೆ ಇಡುವ ಕರ್ಮಿಗಳೇ !
ಕಾಗೆಯಲ್ಲಿ ಏನು ? ಘನನಿಗೀಯಬೇಕು.
ವಿಶ್ವದಾಭಿರಾಮ ಕೇಳು ವೇಮ.

ಪಿಂಡಗಳನು ಮಾಡಿ ಪಿತೃವೆಂದು ತಿಳಿದು
ಕಾಗೆಗಳಿಗೆ ಇಡುವ ಕರ್ಮಿಗಳೇ !
ಶಗಣಿ ತಿಂಬ ಕಾಗೆ ಪಿತೃವೆಂತೆನಿಪುದು ?
ವಿಶ್ವದಾಭಿರಾಮ ಕೇಳು ವೇಮ.

ಪಿತೃಗಳು, ಖೇಚರಿಗಳು ; ಅಂದರೆ ಅವರು ಗಗನಗಾಮಿಗಳು ಭೂಚರಿಗಳಲ್ಲ. ಹಾಗಾಗಿ ಅವರು ಭುವಿಯಲ್ಲಿ ಕಾಣಬರುವುದಿಲ್ಲ ಎನ್ನುತ್ತಾರೆ. ಒಂದು ವೇಳೆ, ಅವರು ಕಂಡುಬಂದರೆ, ಅವರನ್ನು ಗೌರವಿಸುವರೇ ? ಹಾಗೆ ನೋಡಿದರೆ, ತಾಯಿ, ತಂದೆ, ಗುರುಗಳು ತಮಗೆ ಹಿರಿಯರೇ. ಅವರು ಭೂಮಿಯಲ್ಲಿ ಇದ್ದರೂ, ಅವರನ್ನು ಬಹುಜನರು ಗೌರವಿಸುವುದಿಲ್ಲವೇಕೆ ?

ಜಗತ್ತಿನ ಅನೇಕ ದೇಶಗಳಲ್ಲಿ ಈ ಪಿತೃ ಪೂಜೆ ಇತ್ತು. ಇಜಿಪ್ತ, ಬೆಬಿಲೋನಿಯಾಗಳಲ್ಲಂತೂ ಪ್ರತಿಯೊಬ್ಬರಿಗೂ ಜೋಡು ಶರೀರಗಳಿರುವವೆಂಬ ನಂಬುಗೆ ಇತ್ತು. ಈ ಶರೀರವು ಸತ್ತರೆ ಅದರ ಜತೆ ಶರೀರವು ಹೊರಗೆ ಹೋಗುತ್ತಿತ್ತು. ಮತ್ತು ಈ ಮೂಲ ಶರೀರವು ಸುಸ್ಥಿರವಾಗಿ ಇರುವ ವರೆಗೆ ಆ ಜತೆ ಶರೀರವೂ ಚೆನ್ನಾಗಿ ಇರುವುದೆಂದು ನಂಬುತ್ತಿದ್ದರು. ಅದರಿಂದಾಗಿಯೇ ಇಜಿಪ್ತಿನಲ್ಲಿ ಕಳೇವರಗಳನ್ನು ಸುರಕ್ಷಿತವಾಗಿರಿಸಲು ದೊಡ್ಡ ದೊಡ್ಡ ಪಿರ್ಯಾಮಿಡ್ಡುಗಳನ್ನು ಕಟ್ಟಿಸುತ್ತಿದ್ದರು. ಮಮ್ಮಿಗಳಿಗೆ ಊಟ ಪಾನೀಯ ಅರ್ಪಿಸುತ್ತಿದ್ದರು.

ಇನ್ನು, ನಿಸರ್ಗ ಶಕ್ತಿಗಳನ್ನು ಪೂಜಿಸುವ ಗ್ರಹಿಕೆಯು ಯಜ್ಞ ಯಾಗಗಳಲ್ಲಿ ಹೆಚ್ಚಾಗಿ

ಕಂಡು ಬರುತ್ತದೆ. ಇಂದ್ರ, ವರುಣ, ಮರುತ್, ಸೋಮ, ಸೂರ್ಯ, ಚಂದ್ರ ಇತ್ಯಾದಿ ನಿಸರ್ಗ ಶಕ್ತಿಗಳಲ್ಲಿ ತನಗಿಲ್ಲದ ವಿಶೇಷ ಶಕ್ತಿಯಿದೆಯೆಂದು ಮಾನವನು ಭಾವಿಸಿದ. ಅವುಗಳಿಗೆ ವ್ಯಕ್ತಿ ರೂಪ ನೀಡಿದ. ನಮ್ಮ ಪ್ರಾಚೀನ ಧರ್ಮ ಗ್ರಂಥಗಳಾದ ವೇದ ವಾಙ್ಮಯದಲ್ಲಿ ಈ ಗ್ರಹಿಕೆಯು ಚೆನ್ನಾಗಿ ಕಂಡು ಬರುತ್ತಿದೆ. ಆದರೆ ಮಾನವನ ಜಿಜ್ಞಾಸೆಯು ಇಷ್ಟಕ್ಕೆ ಸೀಮಿತಗೊಳ್ಳಲಿಲ್ಲ. ಅವನು ಇನ್ನೂ ಆಳಕ್ಕಿಳಿದು ಚಿಂತಿಸತೊಡಗಿದ. ಅವನು ಅನಂತ ಶಕ್ತಿಯನ್ನು ಕುರಿತು, ಅನಂತ ಆನಂದವನ್ನು ಕುರಿತು ಚಿಂತಿಸತೊಡಗಿದೆ.

ಆ. ಋಗ್ಯಜುಸ್ಸನರಿತು ಯೋಗ್ಯತೆ ಇರದಾಗ,
ವಿಪ್ರನೆನಿಸಲೆಂತು ವಿಹಿತವಹುದು ?
ಗಂಡನಿರಲು ಅನ್ಯಗೊಲಿದ ಪತ್ನಿಯಂತೆ.
ವಿಶ್ವದಾಭಿರಾಮ ಕೇಳು ವೇಮ.

ನಿಸರ್ಗ ಶಕ್ತಿಗಳ ಮಹಿಮೆಯನ್ನು ತಿಳಿಸುವ ವೇದಗಳ ಕರ್ಮ ಕಾಂಡವನ್ನು ಅರಿತು ಆಚರಿಸುವ ಮಾನವನು ಆ ಗ್ರಹಿಕೆಯಿಂದ ತೃಪ್ತನಾಗಲಿಲ್ಲ. ಅವನಿಗೆ ಆಳವಾದ ಅನಂತ ಶಕ್ತಿಯೊಂದಿದೆ. ಅದರ ಅನ್ವೇಷಣೆಯೇ ಧರ್ಮಸಾಧನೆ ಎನಿಸಿತು. ವಿಪ್ರನೆನಿಸಲು ಈ ಅನ್ವೇಷಣೆಯ ಅರಿವೇ ನಿಜವಾದ ಯೋಗ್ಯತೆಯು. ಆದ್ದರಿಂದ ಋಗ್ವೇದ ಮತ್ತು ಯಜುರ್ವೇದಗಳ ಋಕ್ಕು (ಮಂತ್ರ) ಗಳನ್ನೂ ಯಜುಸ್ಸು (ಯಜ್ಞಾಚರಣೆಯ ವಿಧಿವಿಧಾನ) ಗಳನ್ನು ಅರಿತು, ಅದನ್ನು ಮೀರಿ ವೇದಾಂತದ ಅನಂತ ಸತ್ತೆಯನ್ನು ಅನ್ವೇಷಿಸುವ ಯೋಗ್ಯತೆಯು ಇರದಾಗ, ಆ ವೇದ ಪಾಠಕನನ್ನು ವಿಪ್ರನೆಂದು ಹೇಗೆ ಕರೆಯುವುದು ? ಅನಂತ ಶಕ್ತಿಯೇ ಗಂಡನಿದ್ದಂತೆ. ಅದರೊಂದಿಗೆ ಕೂಡುವುದೇ ಪತಿವ್ರತಾ ಧರ್ಮ. ಅದನ್ನು ಬಿಟ್ಟು ಕಾಮ್ಯಕರ್ಮದ ಸೆಳೆತಕ್ಕೆ ಮಾರು ಹೋಗಿ, ಯಜ್ಞ ಯಾಗಗಳ ಫಲಾಪೇಕ್ಷೆ ಹೊಂದಿದರೆ, ಅದೆಲ್ಲ ಗಂಡನಿದ್ದರೂ ಅನ್ಯಗೊಲಿವ ಜಾರೆಯ ಚರಿತ್ರೆಯಾಗುವುದಷ್ಟೇ.

ಆ. ವೇದಗಳನು ಓದಿ ವ್ಯರ್ಥ ಜಂಭ ಪಡುವರು.
ಅಧೋಗತಿಗಿಳಿದು ಅಯ್ಯರೆಲ್ಲ.
ಬ್ರಹ್ಮ ಮಹಿಮೆಯರಿತು ಬದುಕುತಿಹುದೆ ಮೇಲು.
ವಿಶ್ವದಾಭಿರಾಮ ಕೇಳು ವೇಮ.

ಇಲ್ಲಿ 'ವೇದ' ಶಬ್ದಕ್ಕೆ ಮಂತ್ರ ಭಾಗ ಮತ್ತು ಬ್ರಾಹ್ಮಣ ಭಾಗಗಳನ್ನೊಳಗೊಂಡ ಕರ್ಮ ಕಾಂಡವೆಂದು ಅರ್ಥ. ಹೀಗೆ ಕರ್ಮ ಕಾಂಡವನ್ನು ಓದಿ ಆಚರಿಸುವವರು ತಾವು ಲೋಕದಲ್ಲಿ ಅಭಿಜಾತ್ಯರು ಎಂದು ಒಣ ಜಂಭ ಪಡುತ್ತಾರೆ. ಹೀಗಾಗಿ ಅನಂತ ಶಕ್ತಿಯ ಅಪಾರ ಆನಂದದಾಯಿಯಾದ ಬ್ರಹ್ಮ ಮಹಿಮೆಯರಿತು ಊರ್ಧ್ವ ಗತಿ ಹಿಡಿಯದೆ, ಇಂದ್ರಿಯ ವಿಷಯಾಸಕ್ತಿಯ ಅಧೋಗತಿಗೆ ಅಯ್ಯರೆಲ್ಲ ಇಳಿದರು. ಆದರೆ ತಿಳಿದು ನೋಡಿದರೆ, ಬ್ರಹ್ಮ ಮಹಿಮೆಯನ್ನು ಅರಿತು ಬದುಕುತ್ತಿರುವುದೇ ಮೇಲು.

ಆ. ಟಿಪ್ಪಣಿಗಳ ಗೆಯ್ದು ತಿಳಿಸಿದ ಮಾತುಗಳ,
ಸಾರುತಿಹವು ಸಕಲ ಸ್ಮೃತಿ ಶ್ರುತಿಗಳು.

ವಿವರಿಸದಿಹರೇಕೆ ವೇದಾಂತ ಸಾರವ ?
ವಿಶ್ವದಾಭಿರಾಮ ಕೇಳು ವೇಮ.,

ಋಷಿ ಮುನಿಗಳು ತಮ್ಮ ಮುಮುಕ್ಷು ಶಿಷ್ಯರಿಗೆ ಬೋಧಿಸಲೆಂದು ಉಪನಿಷತ್ತುಗಳ (ಉಪ+ನಿ+ಸತ್) ರೂಪದಲ್ಲಿ ಟಿಪ್ಪಣಿಗಳನ್ನು ಮಾಡಿ ತಿಳಿಸಿ ಹೇಳಿದ್ದಾರೆ. ಆ ಅಮೃತ ನುಡಿಗಳನ್ನೇ ಎಲ್ಲ ಸ್ಮೃತಿಗಳೂ ಮತ್ತು ಶ್ರುತಿಗಳೂ ಸಾರುತ್ತಿವೆ. ಅದೇ ವೇದಾಂತ ಸಾರವೆನಿಸಿದೆ. ಅದನ್ನೇಕೆ ಜನರಿಗೆ ತಿಳಿಸುತ್ತಿಲ್ಲವೋ ? ತಿಳಿಯದು. ಈ ವಿದ್ಯೆಯನ್ನು ಅರಿಯಲು ಸಮಾಜದ ಮುಕ್ಕಾಲು ಭಾಗದ ಜನರಿಗೆ, ಅಧಿಕಾರವೇ ಇಲ್ಲವೆಂದು ಅವರನ್ನು ವಂಚಿಸಿದರು.

ಆ. ವೇದ ವಿದ್ಯೆಯೆಲ್ಲ ವೇಶ್ಯೆಯಂತೆ ಇಹುದು.
ಭ್ರಮೆ ಹಿಡಿಸಿ ಬಯಲು ಪಡೆಯಗೊಡದು.
ಗುಪ್ತ ವಿದ್ಯೆಯೊಂದೆ ಕುಲ ಕಾಂತೆಯಂತಿದೆ.
ವಿಶ್ವದಾಭಿರಾಮ ಕೇಳು ವೇಮ.

ಕರ್ಮ ಕಾಂಡೀಯ ವೇದವಿದ್ಯೆಯು ಮಾನವನನ್ನು ಅಧೋಗತಿಗಿಳಿಸುವ, ಅವನ ಮನವನ್ನು ವಿಷಯ ಭೋಗಾಸಕ್ತಿಯತ್ತ ಸೆಳೆದೊಯ್ಯುವ ವೇಶ್ಯೆಯಂತಿದೆ. ಚಿದ್ಬಯಲಿನತ್ತ ಹೋಗಬೇಕಾದ ಸಾಧಕನ ಮನಸ್ಸಿಗೆ ವಿಷಯ ಸುಖ ಭೋಗದ ಆಮಿಷವೊಡ್ಡಿ, ಭ್ರಮೆ ಹಿಡಿಸುತ್ತದೆ. ಹಾಗಾಗಿ ಅವನು ಬಯಲು ಪಡೆಯನು. ಯಾವುದು ಗೂಢಾತ್ಮವನ್ನು ಅರಿಯುವ ಗುಪ್ತ ವಿದ್ಯೆಯಾಗಿದೆಯೋ, ಅದು ಕುಲೀನ ಪತ್ನಿಯಂತಿದ್ದು, ಅವನ ಊರ್ಧ್ವಗತಿಗೆ ಎಂದೂ ಅಡ್ಡಬರದು.

ಪ್ರಾಚೀನ ಕಾಲದಿಂದ ಮಾನವನು ತಾನು ಯಾರು ? ಎಂದು ಆಲೋಚಿಸುತ್ತ ಬಂದಿದ್ದಾನೆ. ತನ್ನ ಅಗಣಿತ ಆಶೆಗಳನ್ನು ತಣಿಸುವ ಆ ಶಕ್ತಿ ಮೂಲ ಯಾವುದು ? ಎಂದು ಶೋಧಿಸುತ್ತ ನಾನು ಎಲ್ಲಿಂದ ಬಂದೆನು ? ಎಲ್ಲಿಗೆ ಹೋಗುವೆ ? ಎಂದು ಸಂತತ ಚಿಂತನ ನಡೆದಿದೆ.

ಆ. ಎಲ್ಲಿಂದ ಬಂದೆನು ? ಎಲ್ಲಿ ತಾ ಹೋಗುವೆ ?
ನಿದ್ರೆಯಂತೆ, ಅರಿತು ನಿಲ್ಲಬಹುದೆ ?
ಅಚಲವಾದ ವ್ಯಕ್ತಿ ಅಲ್ಲಿ ಅರಿತುಕೊಳುವ.
ವಿಶ್ವದಾಭಿರಾಮ ಕೇಳು ವೇಮ.

ನಿದ್ರೆಯಲ್ಲಿ ಮನವು ಕ್ರಿಯಾಶೀಲವಾದರೆ, ಅದನ್ನು ಸ್ವಪ್ನ ಚಿತ್ತವೆನ್ನುತ್ತೇವೆ. ಸ್ವಪ್ನ ಚಿತ್ತದಲ್ಲಿ ನಡೆಯುವುದೆಲ್ಲ ಪೂರ್ವ ಸಂಸ್ಕಾರದ ಫಲವಷ್ಟೇ. ಆಗಿನ ಘಟನೆಗಳೆಲ್ಲ ಕಾಲ್ಪನಿಕ. ಅದೇ ರೀತಿ ಯೋಗ ನಿದ್ರೆಯಿಂದ ಪ್ರಪಂಚದ ವ್ಯಾಪಾರಗಳನ್ನು ಪರಿಗಣಿಸಿದರೆ ಜಾಗ್ರದವಸ್ಥೆಯೂ ಒಂದು ಸ್ವಪ್ನದಂತೆ ಭಾಸವಾಗುತ್ತದೆ. ಹೀಗೆ ತಾನು ಎಲ್ಲಿಂದ ಬಂದಿರುವನೋ, ಮತ್ತು ಎಲ್ಲಿಗೆ ಹೋಗುವನೋ, ಆ ಪರಮ ಪದದ-ಜಡವನ್ನು ಕುರಿತು ನಿದ್ರೆಯಂಥ ಮರೆವು ತಾಳಿ-ನಿಜಸ್ಥಿತಿಯಲ್ಲಿ ಅರಿತು ನಿಲ್ಲಬಹುದೇ ? ಅಲ್ಲಿ ನಿಂತ ಅಚಲ ವ್ಯಕ್ತಿಯು ತನ್ನ ಪರಮ ಧಾಮವನ್ನು ಅರಿತುಕೊಳ್ಳುತ್ತಾನೆ.

ತನ್ನ ಆದಿಯನ್ನು ತಿಳಿಯಬಯಸುವ ಮಾನವನು ತಿಳಿವಿನ ಕರಣಗಳಾದ ಜ್ಞಾನೇಂದ್ರಿಯಗಳನ್ನು ಮತ್ತು ಅಂತಃಕರಣಗಳನ್ನು ಬಳಸಿ ನೋಡಿದನು. ತನ್ನ ಆದಿ ಮೂಲವು

ಇಂದ್ರಿಯ ಗೋಚರವಲ್ಲ. ಮನಸ್ಸಿಗೂ ಅತೀತವಾಗಿದೆಯೆಂದು ಅರಿತನಲ್ಲದೆ, ದೇಹ ಭಾನವಿರುವ ವರೆಗೆ ಆ ಪರಮ ಪದವಿಯನ್ನು ತಲುಪಲಾರೆ ; ಎಂದು ಖಚಿತಪಡಿಸಿಕೊಂಡನು.

ಆ. ತಾನು ಹುಟ್ಟಿದ ನೆಲೆ, ತನ್ನ ನೋಡಬಯಸಿ,
ತಾನು ಬುದ್ಧಿ ; ತಿರುಗುವ ಧರಣಿಯಲಿ.
ತಾನು ಹುಟ್ಟಿದ ನೆಲೆ ತತ್ತ್ವ ತಿಳಿಯಬೇಕು.
ವಿಶ್ವದಾಭಿರಾಮ ಕೇಳು ವೇಮ.

ತಾನು ಹುಟ್ಟಿದ ನೆಲೆಯಲ್ಲಿ ತನ್ನನ್ನು ನೋಡಬಯಸಿ, ಬುದ್ಧಿಯೇ ತಾನೆಂದು ಭಾವಿಸಿದ ಜೀವಿಯು, ಬುದ್ಧಿಗೆ ಎಟುಕುವುದನ್ನು ಕಾಣಲು ಧರಣಿಯನ್ನೆಲ್ಲ ತಿರುಗುತ್ತಿದ್ದಾನೆ. ಆದರೆ ತಾನು ಹುಟ್ಟಿದ ನೆಲೆಯು ತತ್+ತ್ವವಾಗಿದೆ. ಇದು ಬುದ್ಧಿಗೆ ಗೋಚರವಾಗದು ; ಎಂದು ತಿಳಿಯಬೇಕು.

ಈಗ ತನ್ನನ್ನು ಅರಿಯಬೇಕಾದರೆ ಬುದ್ಧಿ ಕಾರ್ಯಕ್ಕೆ ಬರದು. ತರ್ಕಕ್ಕೆ ಸಿಕ್ಕದ ತತ್ತ್ವ ಅದಾಗಿದೆ. ತನು ಭಾವವನ್ನೂ ಮೀರಬೇಕು.

ಆ. ತನ್ನನರಿಯುವವನು ತಾನೆ ತಾನಾಗಿಹ.
ತನ್ನನರಿಯುವವನು ತಾನೆ ತಾನು.
ತನುವು ಇಲ್ಲದವನು ತಾನೆ ತಾನಲ್ಲವೆ ?
ವಿಶ್ವದಾಭಿರಾಮ ಕೇಳು ವೇಮ.

ತಾನು ಯಾರೆಂದು ಅನುಸಂಧಾನ ಮಾಡಿ, ತನ್ನನ್ನು ಅರಿಯುವವನು ತಾನೇ ತಾನಾಗಿರುತ್ತಾನೆ. ಅದು ಏಕಮೇವಾದ್ವಿತೀಯಂ. ಯಾವಾಗ ಧ್ಯಾನ ಸಮಾಧಿಯಲ್ಲಿ ತನು ಭಾವವು ಇಲ್ಲವಾಗುವುದೋ, ಆಗ ಇರುವ ಸತ್ತೆಯು ತಾನೇ ತಾನಲ್ಲವೇ ?

ಆ. ತನ್ನ ನರಸಿ ನೋಡೆ, ತಾನೆ ಹೋಗು ಬ್ರಹ್ಮ.
ತತ್ತ್ವವರಿಸಿ ನೋಡೆ, ತಾನೆ ಆತ್ಮ.
ಮಣ್ಣು ಗಗನವಿಲ್ಲ ; ಮಾಯವಿಲ್ಲವಯ್ಯ.
ವಿಶ್ವದಾಭಿರಾಮ ಕೇಳು ವೇಮ.

ತನ್ನನ್ನು ತಾನು ಅರಸಿ ನೋಡಿದಾಗ ಸಕಲವೂ ತನ್ನಲ್ಲಿದೆ, ತಾನು ಸಕಲದಲ್ಲಿಯೂ ಇದ್ದೇನೆ ಎಂಬ ಅಪ್ರಮಾಣ, ಬೃಹತ್ ಸತ್ತೆಯಾದ ಬ್ರಹ್ಮವೇ ತಾನು ಎಂಬುದು ಅನುಭವ ವೇದ್ಯವಾಗುತ್ತದೆ. ಇನ್ನು ತಾನು ಪಂಚಭೂತಗಳಿಂದಾದ ದೇಹವೇ ? ಅಲ್ಲ. ಅಂತಃಕರಣ ಚತುಷ್ಟಯವೇ ? ಅಲ್ಲ. ತಾನು ಇಪ್ಪತ್ತುನಾಲ್ಕು ಅನಾತ್ಮ ತತ್ತ್ವಗಳಲ್ಲ. ತಾನು ಇಪ್ಪತ್ತೈದನೆಯ ಆತ್ಮ ತತ್ತ್ವಮಷ್ಟೇ ; ಎಂಬ ಸತ್ಯ ಗೋಚರವಾಗುತ್ತದೆ. ಇದನ್ನು ಅರಿತ ಮೇಲೆ ಮಣ್ಣು ಗಗನಗಳ ಪ್ರಪಂಚವೂ ಅಲ್ಲ. ಮಾಯೆಯೂ ಅಲ್ಲ ಎಂಬ ಅರಿವು ಮೂಡುತ್ತದೆ.

ಆ. ತಾನೆ ಸಕಲವಿದ್ದು ತನ್ನೊಳು ಸಕಲವಿದೆ.
ತನ್ನೊಳು ಬೆಳಗುವುದ ತಾನು ಅರಿತು,

ಇರುವ ಮಾನವರಿಗೆ ಇಂಪಾಗಿಹುದು ಮುಕ್ತಿ
ವಿಶ್ವದಾಭಿರಾಮ ಕೇಳು ವೇಮ.

ಅನಂತ ಸತ್ತೆಯು ಅಪಾರ ಆನಂದ ನಿಧಿಯೂ ಆಗಿದೆ. ಅತೀಂದ್ರಿಯ ಸ್ಥಿತಿ. ಮನಸ್ಸಿಗೆ ಅಗೋಚರ. ಆದ್ದರಿಂದಲೇ ಹೇಳುತ್ತಾರೆ :

ಅತೀಂದ್ರಿಯ ಅನುಭವ :

ಇಂಥ ಕಣ್ಣಿನಿಂದ ಎಂಥ ಬೊಮ್ಮನರಿವು ?
ನೋಳ್ಪ ಕಣ್ಣು ಬೇರೆ ; ನೋಟ ಬೇರೆ.
ನೋಟ ಒಳಗೆ ತಿರುಗಿ ನೋಡುವುದಲ್ಲವೇ ?
ವಿಶ್ವದಾಭಿರಾಮ ಕೇಳು ವೇಮ.

ಅಹುದು ; ಕಣ್ಣಿನಿಂದ ಬ್ರಹ್ಮನನ್ನು ಅರಿಯಲಿಕ್ಕಾಗದು. ಅದು ಇಂದ್ರಿಯಗಳ ಗ್ರಹಿಕೆಗೆ ಅಳವಡದು. ಅದನ್ನು ನೋಡಲು ಬೇರೆ 'ಒಳಗಣ್ಣು' ಬೇಕು. ನೋಟವನ್ನು ಒಳಗೆ ತಿರುಗಿಸಿ, ಹೃದಯ ಕುಹರದಲ್ಲಿ ಲಕ್ಷ್ಯವಿರಿಸಿ ಧ್ಯಾನಿಸಬೇಕು. ಅಲ್ಲವೇ ?

ಆ. ಕಾಣಲಾರ ಹಣೆಯ ; ಕರ್ಣ ಬೆನ್ನು ಭಾಗ ;
ನೇರಗಾಣಲಾರ ನೆತ್ತಿ ಮೇಲೆ.
ತನ್ನ ಕಾಣಲಾರ ; ತತ್ತ್ವವೇನರಿವನು ?
ವಿಶ್ವದಾಭಿರಾಮ ಕೇಳು ವೇಮ.

ನಮ್ಮ ಜ್ಞಾನೇಂದ್ರಿಯಗಳ ಶಕ್ತಿಯು ತುಂಬಾ ಪರಿಮಿತವಿದೆ. ಮಾನವನು ತನ್ನ ಬಾಹ್ಯ ಕಣ್ಣಿನಿಂದ ತನ್ನ ಸ್ವಂತ ದೇಹದ ಅಂಗ ಭಾಗಗಳನ್ನು ಸಹ ಕಾಣಲರನು. ತನ್ನ ಹಣೆಯನ್ನಾಗಲಿ, ಕಿವಿಯನ್ನಾಗಲಿ, ಬೆನ್ನು ಭಾಗವನ್ನಾಗಲಿ, ನೇರವಾಗಿ ನೆತ್ತಿಯ ಮೇಲು ಭಾಗವನ್ನಾಗಲಿ, ಕಾಣಲಾರನು. ಹೀಗೆ ತನ್ನ ಅಂಗ ಭಾಗಗಳನ್ನೇ ಕಾಣದವನು, ತತ್+ತ್ವವನ್ನು ಹೇಗೆ ಇಂದ್ರಿಯ ಮೂಲಕ ಅರಿಯುತ್ತಾನೆ ?

ಆದರೂ ಕೆಲವರು ಸಾಧಕರು, ತಮ್ಮ ಸಾಧನ ಕಾಲಕ್ಕೆ ಅದು ಕಂಡೆ ; ಇದು ಕಂಡೆ ; ಎಂದು ಹೇಳುತ್ತಾರೆ.

ಆ. ಕಣ್ಣು ಕಂಡಿತೆನಲು ಕರ್ಮಾಧಿಕಾರವು.
ಹಿಂದೆ ಬಿದ್ದು ಕೆಡುವ ಹುಚ್ಚು ಮನುಜ !
ಬಟ್ಟ ಬಯಲು ಮುಕ್ತಿ ; ಪರಿ ಪರಿಯಲಿ ನೋಡು.
ವಿಶ್ವದಾಭಿರಾಮ ಕೇಳು ವೇಮ.

ನಮ್ಮ ಮನಸ್ಸಿನ ಸ್ವಪ್ನಾವಸ್ಥೆಯು ಇಂದ್ರಜಾಲವನ್ನೇ ಸೃಷ್ಟಿಸಬಲ್ಲದು. ನಾವು ದರ್ಶನ ಮಾಡಬೇಕೆಂದ ಕಲ್ಪಿತ ದೇವತಾ ಮೂರ್ತಿಯು, ನಾವು ನೋಡಿದ ಪ್ರತಿಮೆಯ ರೂಪದಲ್ಲಿ, ನಾವು ಧ್ಯಾನಿಸುವ ಧ್ಯಾನ ಶ್ಲೋಕಾನುಸಾರ, ಕೇಂದ್ರೀಕೃತ ಮನದಲ್ಲಿ, ಸ್ವಪ್ನ ಸದೃಶ ಭಂಗಿಯಲ್ಲಿ

ಕಾಣಿಸಿಕೊಳ್ಳಬಹುದು. ಕೆಲವರು ಹೇಳುವಂತೆ, ಆ ಕಂಡ ಮೂರ್ತಿಯು, ಹರಸಿ, ಹೂವು ನೀಡಬಹುದು. ತಾನು ಬಯಸಿದಂತೆ ತನ್ನ ರೋಗಕ್ಕೆ ಮದ್ದನ್ನು ಸೂಚಿಸಬಹುದು. ಇದೆಲ್ಲ ವಿಚಿತ್ರವಾದರೂ ಸತ್ಯ. ತಾನು ಕಂಡದ್ದು ತನ್ನ ಹಿಂದಿನ ಕರ್ಮಾಧಿಕಾರವಷ್ಟೇ. ಚಿತ್ರದಲ್ಲಿ, ಮೂರ್ತಿಯಲ್ಲಿ ಮೊದಲು ಕಂಡುದರ ಕರ್ಮಾಧಿಕಾರವಷ್ಟೇ. ರೋಗದ ಮದ್ದು ಹೇಳುವುದೆಂದರೆ ಸರ್ವಜ್ಞವಾದ ಸುಷುಪ್ತಿ ಅವಸ್ಥೆಯಲ್ಲಿ ನಮ್ಮ ತೀವ್ರ ಬಯಕೆಯಿಂದ ಸ್ಪಂದನಗಳುಂಟಾಗಿ ಮದ್ದು ಯಾವುದೆಂದು ಸೂಚಿತವಾಗುತ್ತದೆ. ಆಗ ಮಾನವನು ಇಂಥ ಸಾಧನಾನುಭವಗಳ ಹಿಂದೆ ಬಿದ್ದು, ತಾನು ಲಕ್ಷ್ಯ ಮುಟ್ಟಿದೆ ; ಎಂದು ಬಗೆದು ಕೆಡುತ್ತಾನೆ. ಪಾಪ ! ಹುಚ್ಚು ಮನುಷ್ಯನಷ್ಟೇ. ನಾವು ಭವ ಬಂಧನದಿಂದ ಮುಕ್ತರಾಗಬೇಕಾದರೆ, ಬಟ್ಟಬಯಲು ತಲುಪಬೇಕು. ಬಟ್ಟ ಬಯಲೆಂದರೆ ಪರಬ್ರಹ್ಮ ಪದವಿಯೆಂಬುದನ್ನು ಪರಿಪರಿಯಲ್ಲಿ ನೋಡಿ ತಿಳಿದುಕೋ.

ಆ. ಮನದಿ ಕಾಣಲಾರ, ಮತ್ತೆ ಬ್ರಹ್ಮ ಮೂರ್ತಿ.
ಮನದಿ ಕಾಣುವವನು ಮಹಿಯೊಳಿಲ್ಲ.
ಹುಡುಕಿ ತನುವಿನೊಳಗೆ ಹರ್ಷದಿಂದರಿವುದು.
ಅವನೆ ಯೋಗಿ ವರನು ಎಂದ್ರು, ವೇಮ.

ಬ್ರಹ್ಮ ಮೂರ್ತಿಯನ್ನು ಮನಸ್ಸಿನ ಕಲ್ಪನೆಯ ಮೂಲಕ ಯಾರೂ ಕಾಣಲಾರರು. ಮನಸ್ಸಿನ ತರ್ಕ ಮೂಲಕವಾಗಲಿ, ಕಲ್ಪನಾ ಶಕ್ತಿಯ ಮೂಲಕವಾಗಲಿ ಯಾರೂ ಮಹಿಯಲ್ಲಿ ಕಾಣಲಾರರು. ತನುವಿನಲ್ಲಿ ಹುಡುಕಿ ಹೃದಯ ಮಂದಿರದಲ್ಲಿ ದರ್ಶಿಸಿ, ಆನಂದ-ತುಂದಿಲರಾಗಬಹುದು.

ಆ. ಮನವ ಒಂದು ತಾಣ ಮಾಣದೆ ನಿಲ್ಲಿಸುತ,
ಬೋಧೆಯುಡುಗುತಿರಲು, ಹೊಂದಿಕಾಯ್ತು.
ನಿಶ್ಚಲತೆಯ ಚೊಕ್ಕ ನಿಲಿಸುವುದೆ ಸಮಾಧಿ.
ವಿಶ್ವದಾಭಿರಾಮ ಕೇಳು ವೇಮ.

ಲಕ್ಷ್ಯ ವಸ್ತುವನ್ನು ಕುರಿತು ದೇಶಬಂಧ ಮಾಡಿ, ಆ ತಾಣದಲ್ಲಿ ಧ್ಯಾನಿಸುತ್ತ ಮನಸ್ಸನ್ನು ಬಿಡದೆ ನಿಲ್ಲಿಸಿ, ದೇಹ ಬೋಧೆ ಉಡುಗುತ್ತಿರಲು ಹೊಂದಿಕೆ ಆಗುತ್ತದೆ. ಹೀಗೆ ಮನವು ನಿಸ್ತರಂಗವಾಗಿ, ನಿಶ್ಚಲವಾದಾಗ, ಆ ನಿಶ್ಚಲತೆಯನ್ನು ಚೊಕ್ಕ ನಿಲ್ಲಿಸುವುದೇ ಸಮಾಧಿಯಾಗಿದೆ.

ವೇಮನ ಯೋಗಿಗಳು ನಿರ್ಗುಣ ಬ್ರಹ್ಮವನ್ನೇ ಪರಮ ಲಕ್ಷ್ಯವಾಗಿ ಗ್ರಹಿಸಿದ್ದಾರೆ. ಸಗುಣ ಬ್ರಹ್ಮವನ್ನು ಸಾಧಕನ ಅನುಕೂಲಕ್ಕಾಗಿ ಒಪ್ಪಿದ್ದಾರೆ.

ಸಗುಣ-ನಿರ್ಗುಣ :

ಆ. ಜಲದಲ್ಲಿಯು ಇಲ್ಲ ; ಜಗದಲ್ಲಿಯು ಇಲ್ಲ.
ನಿಗಮ ವೇದ್ಯವಾದ ನಿತ್ಯ ಪದವಿ.
ಸಗುಣ ನಿರ್ಗುಣದಲಿ ಸಾಧಿಸಿ ಸಲೆ ಕಾಣು.
ವಿಶ್ವದಾಭಿರಾಮ ಕೇಳು ವೇಮ.

ನಿಗಮ ವೇದ್ಯವಾದ ಅಂದರೆ ವೇದಾಂತದಿಂದ ಅರಿಯಬಹುದಾದ, ನಿತ್ಯವಾದ, ಬ್ರಹ್ಮಪದವಿಯು ಜಲದಲ್ಲಿಯೂ ಇಲ್ಲ ; ಜಗದಲ್ಲಿಯೂ ಇಲ್ಲ ಅಂದರೆ ತೀರ್ಥಗಳಲ್ಲಿಯೂ ಇಲ್ಲ ; ಕ್ಷೇತ್ರಗಳಲ್ಲಿಯೂ ಇಲ್ಲ ; ಅದು ನಿನ್ನಲ್ಲಿಯೇ ಇದೆ. ಸಗುಣೋಪಾಸನೆಯಿಂದ ಆರಂಭಿಸಿ ನಿರ್ಗುಣೋಪಾಸನೆಯಲ್ಲಿ ಅನುಸಂಧಾನ ಮಾಡಿ ಆ ಪದವಿಯನ್ನು ಸೇರಬೇಕು.

ಯಾವುದು ಸಗುಣ ? ಇನ್ನಾವುದು ನಿರ್ಗುಣ ? ಇವುಗಳಲ್ಲಾವ ಭೇದವಿದೆ ? ಇದನ್ನು ವಾದ ತರ್ಕಗಳಿಂದ ನಿರ್ಣಯಿಸಲಿಕ್ಕಾಗದು.

ಗೀತ. ಸಗುಣ ನಿರ್ಗುಣ ಭೇದಾರ್ಥ ಸಂಶಯವದು,
ಪರಮ ಗುರುವಾಜ್ಞೆಯಿಂದುಳಿದು ಪರಲು ಬಿಡದು.
ಅಗುಣಿತವಾದುದು ಮನದೊಳಗೆ ಅಂಟಬೇಕು.
ವಾದಗಳ ಗೆಯ್ಯಲು ಮೆಚ್ಚದು ವಸುಧೆ ವೇಮ.

ಸಗುಣ ನಿರ್ಗುಣಗಳಲ್ಲಿರುವ ಭೇದದ ಅರ್ಥವು ಪರಮ ಗುರುವಿನ ಆಜ್ಞೆಯ ಹೊರತು ಅವಗತವಾಗದು. ಅಗಣಿತವಾದ ನಿರ್ಗುಣವು ಮನದಲ್ಲಿ ಅಂಟಬೇಕು. ಈ ಕುರಿತು ಅವರಿವರೊಂದಿಗೆ ವಾದ ಮಾಡಿದರೆ ವಸುಧೆಯ ಸಜ್ಜನರು ಒಪ್ಪರು.

ಆದರೆ ಪ್ರಾಮಾಣಿಕ ಸಾಧಕರಿಗೆ ತಿಳಿವಳಿಕೆ ಕೊಡುವುದಾದರೆ, ಹೀಗೆ ಹೇಳಬಹುದು.

ಕಂ. ಸಗುಣವೆ ಲೋಕಗಳೆಲ್ಲವು.
ಸಗುಣವೆ ತ್ರಿಮೂರ್ತಿ, ತಿಳಿವೊಡೆ ಸಕಲ ಸುರೇಶ್ವರ್.
ಸಗುಣವೆ ಜ್ಞಪ್ತಿಗೆ ಮೂಲವು.
ಸಗುಣವೆ ನಿರ್ಗುಣಕೆ ದಾರಿಯಪ್ಪುದು ವೇಮಾ.

ಅನುಭವ ಕ್ಷೇತ್ರಗಳಾದ ಲೋಕಗಳೆಲ್ಲವೂ ಸಗುಣವೇ. ವಿಶ್ವದ ಸೃಷ್ಟಿ, ಸ್ಥಿತಿ ಮತ್ತು ಲಯಕರ್ತರಾಗಿರುವ ಅಜ, ಹರಿ, ಶಿವರು ಎಂಬ ತ್ರಿಮೂರ್ತಿಗಳೂ ಸಗುಣವೇ. ಕಲ್ಪಿತ ನಾನಾ ಸುರೇಶ್ವರರೂ ಸಗುಣವೇ. ಹೆಚ್ಚೇನು ? ಮಾನವನ ಜ್ಞಪ್ತಿಗೆ ಮೂಲವಾದುದು ಸಗುಣವೇ ಆಗಿದೆ. ಅಂದ ಮೇಲೆ, ಜ್ಞಪ್ತಿಯಿಂದೀಚೆಗೆ ಇರುವುದೆಲ್ಲವೂ ಸಗುಣವೇ ಆಗಿದೆ. ಜ್ಞಪ್ತಿಯಿಂದ ಆಚೆಗೆ ನಿರ್ಗುಣವಿದೆ. ಆದ್ದರಿಂದ ಸಗುಣವೇ ನಿರ್ಗುಣಕೆ ದಾರಿಯಾಗಿದೆ.

ಯಾವುದು ಸಗುಣವಲ್ಲ ? 'ತಾನು', ಸತ್ಯವಾಗಿ ಎಂದೂ ಸಗುಣವಲ್ಲ. ಹಾಗಾದರೆ ತಾನು ಯಾರು ?

ಗೀತ. ಸಗುಣವೆಂದೂ ತಾನಲ್ಲ ಸತ್ಯವಾಗಿ.
ನಿರ್ಗುಣ ಬ್ರಹ್ಮವೆಯೆಂದು ನಿಶ್ಚಯಿಸುತ,
ತಾನು ತನ್ನೊಳು ಪೂರ್ಣಾಗಿ ತಗಲಿ ಇರಲು.
ಅವತೆರಿಸಿದ ಶಿವನೆನುವರು ಅವನ ವೇಮ.

ಸತ್ಯವಾಗಿ 'ತಾನು' ಎಂದೂ ಸಗುಣವಲ್ಲ ; ತಾನು ನಿರ್ಗುಣ ಬ್ರಹ್ಮವೆಂದು ನಿಶ್ಚಯಿಸಬೇಕು. ಬಳಿಕ, ತಾನು ತನ್ನೊಳಗೆ ಪೂರ್ಣವಾಗಿ ತಗಲಿಕೊಂಡು ಇರಲು, ಅಂದರೆ

ನಿರ್ಗುಣ ಬ್ರಹ್ಮ ಪದವಿಯಲ್ಲಿ ತಾನಿರಲು, ಅವನನ್ನು ಪರಮಸ್ಥಿತಿಯಿಂದ ಅವತರಿಸಿದ 'ಶಿವ' ಎನ್ನುತ್ತಾರೆ.

ಪರಮ ಪದವನ್ನು ನಿರ್ಗುಣ ಬ್ರಹ್ಮವೆಂದು ಗ್ರಹಿಸಿದ ಮೇಲೆ, ಆ ಪದವನ್ನು ಸಗುಣ ಬ್ರಹ್ಮನ ಮೂಲಕ ಪಡೆಯಬೇಕಷ್ಟೇ. ಸಗುಣ ಬ್ರಹ್ಮನು ಸಚ್ಚಿದಾನಂದ ಸ್ವರೂಪನು. ಅವನಲ್ಲಿ ಅನಂತ ಅರಿವೂ ಇದೆ. ಅನಂತ ಆನಂದವೂ ಇದೆ. ಜೀವಿಯು ತನ್ನ ಸಾಂತ ಪರಿಮಿತಿಯಿಂದ ಅನಂತದ ಅಪರಿಮಿತದತ್ತ ಸಾಗಬೇಕು. ಅವನು ತನ್ನನ್ನು, ತನ್ನ ಹೆಂಡಿರು, ಮಕ್ಕಳನ್ನು, ಇಷ್ಟ ಬಂಧುಗಳನ್ನಷ್ಟೇ ಪ್ರೀತಿಸಿದರೆ ಸಾಲದು. ಸಕಲ ಜೀವರಾಶಿಯನ್ನು ಪ್ರೀತಿಸಬೇಕು. ತನ್ನನ್ನು ಎಲ್ಲದರಲ್ಲಿಯೂ ಕಾಣಬೇಕು.

ಆ. ತಾನು ಸಕಲವಿದ್ದು ತನ್ನೊಳು ಸಕಲವು.
ತನ್ನ ಒಳಗೆ ಬೆಳಗಿ ತಾನೆ ತಿಳಿದು,
ಇಂಥ ಮಾನವನಿಗೆ ಇಹದು ಒಪ್ಪ ಮುಕ್ತಿ.
ವಿಶ್ವದಾಭಿರಾಮ ಕೇಳು ವೇಮ.

ತಾನು ಪರಮ ತತ್ತ್ವವೆಂದರಿತ ಮೇಲೆ, ತಾನೇ ಸಕಲವೂ ಆಗಿದ್ದಾನೆ. ತನ್ನ ಒಳಗೇ ಸಕಲವೂ ಇದೆ. ತನ್ನ ಒಳಗೆ ತಾನೇ ವಿವಿಧ ರೂಪಗಳಿಂದ ಬೆಳಗಿ, ತಾನೇ ಎಲ್ಲವನ್ನೂ ತಿಳಿದು ಸರ್ವಜ್ಞನೆನಿಸುತ್ತಾನೆ. ಇಂಥ ಮಾನವನಿಗೆ ಸರ್ವ ಬಂಧನಗಳಿಂದ ಒಪ್ಪ ಮುಕ್ತಿ ಇರುತ್ತದೆ.

ಕಂ. ಈ ಘನ ಸೂತ್ರವನರಿವುದು;
ಈ ಘಟದಲಿ ಶಿವನು ಸೇರಿ ಇರುತಿರುವಾಗಳ್.
ಈ ಘಟ ಪಟಗಳಿಗೆ ಸಿಗದೆ,
ತಾ ಘನನಾಗಿಯೆ ಆಡುವ ತಥ್ಯವು ವೇಮಾ.

ಶಿವನು ತಾನೇ ಉಪಾದಾನ ಕಾರಣನಾಗಿ, ನಿಮಿತ್ತ ಕಾರಣನಾಗಿ, ಪ್ರಕೃತಿಯ ಮೂಲಕ ಈ ಘಟ (ದೇಹ) ಸೃಷ್ಟಿಸಿ ಅದರಲ್ಲಿ ಜೀವನಾಗಿ ಇರುತ್ತಿದ್ದಾನೆ. ಹೀಗೆ ಪರಮ ಶಿವ, ಜೀವ ಜಗತ್ತುಗಳನ್ನು ಹೆಣೆಯುವ ಘನ ಸೂತ್ರ (ದಾರ)ವನ್ನು ಅರಿಯಬೇಕು. ಘಟ ಎಂದರೆ ಗಡಿಗೆ. ಪಟ (ಬಟ್ಟೆ) ಎಂದರೆ ಪ್ರಪಂಚ. ಈ ಘಟ ಪಟಗಳಿಗೆ ಸಿಗದೆ ತಾನು ಅವುಗಳಿಂದ ಅತೀತನಾಗಿ ಘನ ಸತ್ತೆಯಾಗಿ ಪರಶಿವನು ಆಡುತ್ತಿದ್ದಾನೆ. ಲೀಲೆ ತೋರುತ್ತಿದ್ದಾನೆ. ಇದು ಸತ್ಯವಾಗಿದೆ ; ತಥ್ಯವಾಗಿದೆ.

ಮಾನವರೆಲ್ಲರೂ ಒಂದೇ ಕುಟುಂಬದ ಸದಸ್ಯರು, ಸಹೋದರರು. ಅವರಲ್ಲಿ ಜಾತಿ ಭೇದ, ಮತ ಭೇದ ಕಲ್ಪಿಸುವುದು ಪಟ್ಟಭದ್ರರ ಕುಹಕತನ. ಎಲ್ಲರ ಗೋತ್ರವೂ ಶಿವಗೋತ್ರವೇ.

ಆ. ಜಾತಿ ಮತವ ತೊರೆದು ಯೋಗಿಯಾಗೆ ಮೇಲು.
ಜಾತಿ ಮುಳುಗಿ ನೀತಿ ಹೇಳಲೇನು ?
ಮತವು ತಿಳಿಯೆ, ಜಾತಿ ಬಿಡಲು ಅಂಜ ಬೇಡ.
ವಿಶ್ವದಾಭಿರಾಮ ಕೇಳು ವೇಮ.

ವಿಶ್ವದ ಸರ್ವರಿಗೂ ಓರ್ವಳೇ ತಾಯಿ. ಓರ್ವನೇ ತಂದೆ ಅವರಾರು ?

ಆ. ತಾಯಿಯೇ ಪಾರ್ವತಿಯು ; ತಂದೆಯೇ ಶಂಭುವು.
ಪ್ರಮಥ ಗಣವು ಅಖಿಲ ಬಂಧು ಬಳಗ.
ತಾನು ಹುಟ್ಟಿದ ಮನೆ ತನಗೆ ಕೈಲಾಸವು.
ವಿಶ್ವದಾಭಿರಾಮ ಕೇಳು ವೇಮ.

ಸರ್ವರಿಗೂ ಪಾರ್ವತಿಯೇ ತಾಯಿಯಾಗಿದ್ದಾಳೆ. ಶಂಭುವು ಬೀಜ ಪ್ರದನಾದ ತಂದೆಯಾಗಿದ್ದಾನೆ. ಶಿವಗಣ ಅಂದರೆ ಶಿವ ಸಂತಾನವೆಲ್ಲ ಬಂಧು ಬಳಗವಾಗಿದೆ. ಶಿವನ ವಾಸ ಭೂಮಿಯು ಕೈಲಾಸ ಪರ್ವತವಾದರೆ, ತಾನು ಹುಟ್ಟಿ ವಾಸಿಸುವ ಮನೆ ತನಗೆ ಕೈಲಾಸವಾಗಿದೆ. ಅಲ್ಲಿ ಆನಂದ ಲಾಸ್ಯವಾಡುತ್ತಿದೆ.

ಆ. ವರ ಬ್ರಹ್ಮಾಂಡದಿ ಪರಿಕಿಸಿ ನೋಡಿದೊಡೆ,
ಕುಲಗಳೆಲ್ಲ ಒಟ್ಟು ಕೂಡಿ ಪುಟ್ಟಿ,
ಸಕಲರೊಂದು ಗೂಡೆ ಸೋದರರೆ ಅಲ್ಲವೇ ?
ವಿಶ್ವದಾಭಿರಾಮ ಕೇಳು ವೇಮ.

ಬ್ರಹ್ಮಾಂಡದಲ್ಲಿ ಪರೀಕ್ಷಿಸಿ ನೋಡಿದರೆ ಎಲ್ಲ ಕುಲಗಳೂ ಕೂಡಿ ಹುಟ್ಟಿದವು. ಹೀಗಾಗಿ ಸರ್ವರೂ ಒಂದು ಗೂಡಿದರೆ, ಒಬ್ಬರಿಗೊಬ್ಬರು ಸೋದರರೇ ಅಲ್ಲವೇ ?

ಆ. ಉರ್ವಿ ವಾಸಿಗೆಲ್ಲ ಒಂದೆ ತಾಟನಿಟ್ಟು,
ಅಳಿಸಿ ಕುಲದ ಭಾವ, ಅರಳಿಸಿ ಸ್ನೇಹ.
ಶಿರದ ಮೇಲೆ ಕರವ ಇರಿಸಿ ಉಣ ಹೇಳಿರೊ.
ವಿಶ್ವದಾಭಿರಾಮ ಕೇಳು ವೇಮ.

ಉರ್ವಿಯಲ್ಲಿ ವಾಸಿಸುವ ಜನರಿಗೆ, ಒಂದೇ ತಾಟನ್ನಿಟ್ಟು , ಅಂದರೆ ಸಹ ಪಂಕ್ತಿ ಭೋಜನವನ್ನು ಏರ್ಪಡಿಸಿ, ಅವರಲ್ಲಿರುವ ಕುಲ ಭಾವವನ್ನು ಅಳಿಸಿ ಹಾಕಬೇಕು. ಮೇಲು-ಕೀಳು ಭಾವವನ್ನು ತೊಡೆಯಬೇಕು. ಅವರಲ್ಲಿ ಪರಸ್ಪರ ಮಧುರ ಭಾವವನ್ನು ಬೆಳೆಸಿ ಸ್ನೇಹವನ್ನು ಅರಳಿಸಬೇಕು. ಹೀಗೆ ಎಲ್ಲರನ್ನೂ ಶಿರದ ಮೇಲೆ ಕೈ ಇರಿಸಿ ಹರಸಿ, ಉಣ್ಣಲು ಹೇಳಿರಿ.

ಮಾನವನು ಅನಂತ ಸತ್ತೆಯಿಂದ ಬಂದಿದ್ದಾನೆ. ಯಾವುದು ಎಲ್ಲಿಂದ ಬಂದಿದೆಯೋ, ಅಲ್ಲಿಯೇ ಲೀನವಾಗಬೇಕು. ಇದು ನಿಯತಿ. ಆದ್ದರಿಂದ ಮಾನವನ ಅಪೇಕ್ಷೆಯು ಅನಂತವಾಗಿದೆ. ಸಾಂತದಿಂದ ಸಂತೃಪ್ತವಾಗದು. ಇಂದ್ರಿಯ ವಿಷಯ ಭೋಗ, ಮನಸ್ಸಿನ ಕಲ್ಪನೆ, ಇತ್ಯಾದಿ ಸಾಂತದಿಂದ ತುಷ್ಟಿ ಪಡೆಯನು. ಹಾಗಾಗಿ ಮಾನವನು ಇವುಗಳನ್ನು ತೊರೆದು, ಅನಂತ ಸತ್ತೆಯನ್ನು ಅರಸಿ ಹೋಗುತ್ತಾನೆ. ಇದುವೇ ಅವನ ಧರ್ಮ ಸಾಧನೆಯಾಗಿದೆ. ಇದು ಅವನ ಧರ್ಮವಾಗಿದೆ.

ಮಾನವನ ನಿತ್ಯ ಸ್ವರೂಪ :-

ಮಾನವನು ಇಂದ್ರಿಯಗಳಿಗೆ ಜೋತು ಬೀಳುತ್ತಾನೆ. ತಾನು ಜೀವಿಸುವ, ಚರಿಸುವ ಈ ಜಗತ್ತು ನಿತ್ಯವೆಂದು ಭಾವಿಸುತ್ತಾನೆ. ಯಾವಾಗ ತನ್ನ ಅನುಭವಕ್ಕೆ ಜಗತ್ತಿನ ಸಂಬಂಧಗಳು

ಅನಿತ್ಯವೆಂದು, ಅಸ್ಥಿರವೆಂದು, ಅರಿವಾಗುವುದೋ, ಆಗ ಅವನು ಆ ಕುರಿತು ಪ್ರಶ್ನಿಸುತ್ತಾನೆ.

ಆ. ಅಬಬ ! ಇಂದ್ರ ಜಾಲ ಆಯ್ತು ಲೋಕಾದಿಗಳು.
ಮಿಂಚಿ ಒಂದನೊಂದ ಗಗನದಲ್ಲಿ.
ತನ್ನ ತಾನೆ ನೋಡಿ, ತಿಳಿವನು ಮರೆಯುವನು.
ವಿಶ್ವದಾಭಿರಾಮ ಕೇಳು ವೇಮ.ಆ.

ಅಡಿಗಡಿಗೆ ವಿಚಿತ್ರ ! ಅಖಿಲ ವಸ್ತುಗಳ
ಭೋಗ ಭಾಗ್ಯಗಳಲ್ಲಿ ಬಿದ್ದು ಉರುಳಿ,
ತಾನೆ ತಿರುಗುತಿರುವ ತನ್ನ ನೆರಳ ಜೊತೆಗೆ.
ವಿಶ್ವದಾಭಿರಾಮ ಕೇಳು ವೇಮ.

ಮಾನವನಿಗೆ ಈ ಜಗತ್ತಿನ ಸಂಬಂಧವಿದೆ. ಇರುವುದೆಂದರೆ ಸಂಬಂಧಿಸಿ ಇರುವುದೇ ಆಗಿದೆ. ಅವನಿಗೆ ವ್ಯಕ್ತಿಗಳೊಂದಿಗೆ, ವಿಚಾರಗಳೊಂದಿಗೆ, ವಸ್ತುಗಳೊಂದಿಗೆ ಸಂಬಂಧವಿದೆ. ಈ ಸಂಬಂಧಗಳಿಂದಾಗುವ ಕ್ರಿಯೆ ಪ್ರತಿಕ್ರಿಯೆಗಳಲ್ಲಿ ಅವನಿಗೆ ಹಲವು ಬಗೆಯ ಅನುಭವಗಳಾಗುತ್ತವೆ. ಅದರಿಂದ ಪಾಠಕಲಿಯುತ್ತಾನೆ. ಮತ್ತೆ ಮರೆಯುತ್ತಾನೆ. ಅನುಭವಕ್ಷೇತ್ರಗಳೇ ಲೋಕಾದಿಗಳೆನಿಸುತ್ತವೆ. ಇವು ಇಂದ್ರಜಾಲದಂತೆ ಈಗ ನಿತ್ಯವೆಂದು ಅನಿಸುತ್ತದೆ. ಆದರೆ ಅನಿತ್ಯಗಳಾಗಿರುತ್ತವೆ. ಹೃದಯಾಕಾಶದಲ್ಲಿ ಒಂದಾದ ಬಳಿಕ, ಒಂದು ಮಿಂಚಿ ಮರೆಯಾಗುತ್ತವೆ. ಈ ವಿಚಿತ್ರ ಅನುಭವಗಳಲ್ಲಿ ತನ್ನನ್ನು ತಾನು ನೋಡಿದರೆ, ಅರಿತುಕೊಳ್ಳುತ್ತಾನೆ. ಮರೆತೂ ಬಿಡುತ್ತಾನೆ.

ಮಾನವನ ಇಂದ್ರಿಯಗಳು ಬಹಿರ್ಮುಖವಾಗಿವೆ. ಹೀಗಾಗಿ ಅವನು ಬಾಹ್ಯದ ಎಲ್ಲ ವಿಷಯ ಭೋಗ-ಭಾಗ್ಯಗಳಲ್ಲಿ ಬಿದ್ದು ಉರುಳಾಡುತ್ತಾನೆ. ತನ್ನ ನೆರಳೇ ಆಗಿರುವ ವಿಷಯಾಸಕ್ತ ದೇಹದೊಡನೆ ತಾನೇ ವಿಷಯಗಳ ಬೇಟೆಗಾಗಿ ತಿರುಗುತ್ತಾನೆ.

ಕಂ. ವಿಷಯದಲಿ ಹೊರಳಿ ಹೇಸದೆ,
ವಿಷಮಂಟಿದ ಗತಿಯ ನೋಳ್ಪ ವಿಧದಲಿ ಧರೆಯೋಳ್
ವಿಷಸಮ ಮಾಯಾ ಸುಖವದು,
ವಿಷಯಗಳಲಿ ಸೇರಿಕೊಳರು ವೇತ್ತರು ವೇಮಾ.

ಮಾನವನು ತನ್ನ ಪೂರ್ವ ಕರ್ಮದಿಂದ ಒಳ್ಳೇ ಭಾಗ್ಯ ಪಡೆದಿರಬಹುದು. ಅವನು ತನ್ನ ಸಹಜ ಪ್ರವೃತ್ತಿಯಿಂದ ಬಹಿರ್ಮುಖವಾದ ಇಂದ್ರಿಯಗಳ ಮುಖಾಂತರ ವಿಷಯ ಸಂಸರ್ಗ ಹೊಂದಿ ವಿಷಯಗಳಲ್ಲಿ ಉರುಳಾಡಿ ಕೂಡಲೇ ಹೇಸಿಕೊಳ್ಳುವುದಿಲ್ಲ. ಇದೆಲ್ಲವೂ ವಿಷಮ ಸ್ಥಿತಿಯೆಂದು, ಈ ಧರೆಯಲ್ಲಿ ವಿಷಯಾಸಕ್ತರ ಗತಿಯನ್ನು ನೋಡುತ್ತಾನೆ. ಕೊನೆಗೆ ಈ ಮಾಯಾ ಸುಖವು ವಿಷ ಸಮವೆಂದು ಅರಿತು, ಆ ವಿಷಯಗಳಲ್ಲಿ, ಸೇರಿಕೊಳ್ಳದೆ, ವೇತ್ತನಾಗಿ, ಸುಜ್ಞನಾಗಿ ಬಾಳುತ್ತಾನೆ.

ಆ. ಮದದ ಕೈಲಿ ಲೋಕ ಮಾಯೆಗಳ ತಿಳಿಯರು.
ಮದದ ಕೈಲಿ, ತನ್ನ ಮರೆಯನೆಂದು.

ಬುದ್ಧಿಗೇಡಿ ಕಾರ್ಯ, ಪರಿಯಲಿ ಕೆಡುತಿಹರು.
ವಿಶ್ವದಾಭಿರಾಮ ಕೇಳು ವೇಮ.

ಧನ ಮದದಿಂದ, ಯೌವನ ಮದದಿಂದ, ಲೋಕ ಮಾಯೆಗಳನ್ನು ತಿಳಿಯರು. ಊರ್ಧ್ವ ಲೋಕವನ್ನು ಸೇರಲು ತನ್ನನ್ನು ಮೀರಿ ಹೋಗಬೇಕು. ದೇಹಭಾನ ಮರೆಯಬೇಕು. ಆದರೆ ಮದದ ಕೈಯಲ್ಲಿ ಸಿಲುಕಿದ ಮಾನವನು ತನ್ನ ದೈಹಿಕ ಭೋಗವನ್ನು ಮರೆಯಲಾರದು. ಇದೆಲ್ಲ ಬುದ್ಧಿಗೇಡಿ ಕಾರ್ಯವೇ ಸರಿ. ಅದರಿಂದ ಪರಿ ಪರಿಯಾಗಿ ಕೆಡುತ್ತಾನೆ.

ಆ. ಜೀವಿಯೊಳಗೆ ಇರುವ ಸ್ಥಿರವನ್ನು ಕಾಣದೆ,
ತಿರುಗುವನಸ್ಥಿರ ತೆರನ ನಂಬಿ,
ಸ್ಥಿರವನಸ್ಥಿರವನು ತಿಳಿಯೆ, ಜೀವಿ ಮುಕ್ತ.
ವಿಶ್ವದಾಭಿರಾಮ ಕೇಳು ವೇಮ.

ಜೀವಿಯೊಳಗೆ ಸ್ಥಿರವೂ ಇದೆ, ಅಸ್ಥಿರವೂ ಇದೆ. ಆತ್ಮವು ಸ್ಥಿರವಾಗಿದೆ. ನಿತ್ಯವಾಗಿದೆ. ಅನಾತ್ಮವು ಅಸ್ಥಿರವಾಗಿದೆ. ಅನಿತ್ಯವಾಗಿದೆ. ಆದರೆ ವಿವೇಕಹೀನ ಮಾನವನು ಅಸ್ಥಿರ ರೀತಿಯನ್ನು ನಂಬಿ, ತೃಪ್ತಿ ಕಾಣದೆ, ಅತ್ತಿತ್ತ ತಿರುಗುತ್ತಾನೆ. ಸ್ಥಿರವಾದುದು ಅನ್ಯತ್ರವಿದೆಯೆಂದು ಬಗೆದು ಹುಡುಕುತ್ತಾನೆ, ಯಾವುದು ಸ್ಥಿರವಾವುದು ? ಅಸ್ಥಿರವಾವುದು ? ಎಂದು ತಿಳಿಯುವುದೋ, ಆಗ ಸ್ಥಿರವಾದ ಆತ್ಮವನ್ನು ನಂಬಿ, ಅದಕ್ಕೆ ಅಂಟಿ ಜೀವನು ಮುಕ್ತನಾಗುತ್ತಾನೆ.

ಆ. ತನುವು ಅಸ್ಥಿರವೆಂದು, ಧನವು ಅಸ್ಥಿರವೆಂದು,
ತಿಳಿವು ಹೊಂದಿ ತನ್ನ ತಿಳಿದುಕೊಂಡು,
ಪಾತ್ರನಪ್ಪ ಯೋಗಿ ಪರಮಾತ್ಮನೇ ಕಾಣು.
ವಿಶ್ವದಾಭಿರಾಮ ಕೇಳು ವೇಮ.

ಮೂಲ ವಸ್ತುವು ಸ್ಥಿರವಾಗಿದೆ. ಅದರ ನೆರಳು ಅಸ್ಥಿರವಾಗಿದೆ. ಆತ್ಮವು ಸ್ಥಿರವಾಗಿದೆ. ಅದರ ನೆರಳಿನಂತಿರುವ ತನುವು ಅಸ್ಥಿರವಾಗದೆ. ಧನವು ಭೌತಿಕ ವಸ್ತು. ಸ್ಥೂಲವಾಗಿದೆ. ಸಾಂತವಾಗಿದೆ. ಹಾಗಾಗಿ ಅದೂ ಅಸ್ಥಿರವಾಗಿದೆ. ಅನುಭವವೂ ಇದನ್ನು ಸಮರ್ಥಿಸುತ್ತದೆ. ಈಗ ಮಾನವನು ತನ್ನ ವಿವೇಕವನ್ನು ಬಳಸಿ, ಈ ಬಗ್ಗೆ ಅರಿವು ಹೊಂದಬೇಕು. ಮತ್ತು ತಾನು ಅಸ್ಥಿರನಲ್ಲ. ಮೂಲ ವಸ್ತುವಾದ ಆತ್ಮನೇ ಎಂದು ತಿಳಿದುಕೊಳ್ಳಬೇಕು. ಆಗ ಅವನು ತನ್ನ ಮೂಲವನ್ನು ಸೇರಲು ಪಾತ್ರನಾಗುತ್ತಾನೆ. ಯೋಗಿಯಾಗುತ್ತಾನೆ. 'ಜೀವಾತ್ಮ' ಪರಮಾತ್ಮ ಸಂಯೋಗೋ ಯೋಗ ಉಚ್ಯತೇ'. ಅವನೂ ಪರಮಾತ್ಮನೇ ಆಗುತ್ತಾನೆ.

ತನಗೆ ಸುಖ ಸಮೃದ್ಧಿ ಇರುವ ಕಾಲಕ್ಕೆ ಸಂತುಷ್ಟನಂತೆ ಕಂಡು ಬಂದರೂ ಒಳಗೊಳಗೆ ಇನ್ನೂ ಬೇಕೆಂಬ ಅಪೇಕ್ಷೆ ಇರುತ್ತದೆ. ಅವನ ಭೋಗವಸ್ತುವನ್ನು ಪೂರೈಸುವ ಕನಕವು ಬರುತ್ತದೆ ಹೋಗುತ್ತದೆ. ಇದನ್ನು ನಂಬಬಹುದೇ ?

ಆ. ಇರುವ ಹಾಗೆ ಇಹುದು ; ಇರದ ಹಾಗೆ ಇಹುದು.
ಮತ್ತೆ ಇರದೆ ಹೋಯ್ತು ಮರಳಿ ಬಂತು.

ಕನಕವೆಲ್ಲಿ ? ನೋಡಿ ಗಾರುಡಿಯಂತಿರುವುದು.
ವಿಶ್ವದಾಭಿರಾಮ ಕೇಳು ವೇಮ.

ಮಾನವನು ಸದಾ ಸುಖವನ್ನು ಬಯಸುತ್ತಾನೆ. ಇಂದ್ರಿಯಗಳು, ವಿಷಯಗಳು ತನಗೆ ಸಂಖ ನೀಡುವವೆಂದು ನಂಬಿದ್ದಾನೆ. ಹಾಗಾಗಿ ಪ್ರಪಂಚದ ಆಚೆಗೆ, ಇಂದ್ರಿಯಗಳ ಆಚೆಗೆ ಏನಿದೆಯೋ, ಆ ಬಗ್ಗೆ ಚಿಂತಿಸುವುದಿಲ್ಲ ? ಅದೆಲ್ಲ ಬರೀ ಬೊಗಳೆ ; ವ್ಯರ್ಥ ಪ್ರಯತ್ನ ಎನ್ನುತ್ತಾನೆ. ಆದರೆ ಅವನ ವಿಷಯ ಭೋಗದ ಮೂಲವಾದ ಕನಕವು ಚಂಚಲವಾಗಿದೆ. ಈಗ ಇದ್ದ ಹಾಗೆ ಕಾಣುತ್ತದೆ. ಮತ್ತೊಂದು ದಿನ ಇಲ್ಲವಾಗುತ್ತದೆ. ಇರದೆ ಹೋಗುತ್ತದೆ. ಆದರೆ ಮತ್ತೆ ಮರಳಿ ಬರುತ್ತದೆ. ಹಾಗಾದರೆ ಕನಕವೆಲ್ಲಿ ? ಎಂದು ಯೋಚಿಸಿದರೆ, ಅದು ಐಂದ್ರಜಾಲಿಕದಂತಿದೆ ಇದ್ದಂತಿದೆ. ಇದೆ, ಎಂದು ಅವಲಂಬಿಸಿ ಬಾಳಿದರೆ ಇಲ್ಲವಾಗುತ್ತದೆ. ಹಾಗಾಗಿ ಸ್ಥಿರವನ್ನು ಶೋಧಿಸುವವನು, ಶಾಶ್ವತ ಸುಖವನ್ನು ಅಪೇಕ್ಷಿಸುವವನು, ಕನಕವನ್ನು ನಂಬಲಾರನು. ಅದು ಒದಗಿಸುವ ಇಂದ್ರಿಯ ಕ್ರಿಯೆಯನ್ನೂ ನಂಬಲಾರನು.

ಆದರೆ, ಇಂದ್ರಿಯ-ವಿಷಯ ಸಂಸರ್ಗದಿಂದ ದೊರೆಯುವ ಸುಖವನ್ನು ನಂಬಿದವನಿಗೆ ಕಡೆಗೆ ಏನಿಲ್ಲವೆಂದರೂ ಮರಣವಂತೂ ನಿಶ್ಚಿತವಿದೆ. ಸಾಯುವವರ ಕಂಡು ಸಾವು ನಿಶ್ಚಿತವೆಂದು ತಿಳಿದುಬರುವುದು.

ಕಂ. ಸಾವರು ಎಲ್ಲರು ಜನಕುಲ.
ಸಾವನಪ್ಪಿದವರ ಪುಣ್ಯ ಕಥೆಗಳನು ಸರ್ವಂ.
ನೀವ್ಮೇಳಿ ಕಂಡು ಮನನಿಸಿ,
ದೇವರಿಗು ತಿಳಿಯದಂತ್ಯವು ಕಾಣಾ ವೇಮಾ.

ಎಲ್ಲ ಜನ ಸಮೂಹವೂ ಸಾವನ್ನು ಅಪ್ಪುತ್ತಾರೆ. ಸಾವಪ್ಪಿದವರ ಕಥೆಗಳನ್ನು ನೀವೂ ಕೇಳುತ್ತೀರಿ. ಮನಗಾಣುತ್ತೀರಿ. ಅಂತ್ಯವು ದೇವರಿಗೂ ತಿಳಿಯದು. ಪರಮಾತ್ಮನ ವಿಶೇಷ ಕೃಪೆಯಿಂದ ಮಾತ್ರ ಅದು ಸಾಧ್ಯ.

ಆ. ಮಳೆಯು ಬರುವ ಅಂದ, ಹರಣ ತೊಲಗುವಂದ,
ತಿಳಿಯಲಾರ ಘನನೆ ಆದೊಡೇನು ?
ತಿಳಿಯಲಾಗ ಕಲಿಯ ಯುಗವು ಉಳಿವುದೆಂತು ?
ವಿಶ್ವದಾಭಿರಾಮ ಕೇಳು ವೇಮ.

ಮಳೆಯು ಬೀಳುವ ರೀತಿಯನ್ನಾಗಲಿ, ಪ್ರಾಣ ಹೋಗುವ ರೀತಿಯನ್ನಾಗಲಿ, ಯಾರೂ ತಿಳಿಯಲಾರರು. ಘನನಾದರೂ ಏನಂತೆ ? ಅವನೂ ತಿಳಿಯನು. ಪರಮಾತ್ಮನ ಕೃಪೆಯಿಂದ ಒಂದೆರಡು ಅಪವಾದಾತ್ಮಕ ಪ್ರಸಂಗಗಳಿರಬಹುದು. ಆ ಮಾತು ಬೇರೆ. ಹರಣ ಹೋಗುವ ಅಂದ ತಿಳಿದರೆ ಕಲಿಯುಗವು ಉಳಿಯುವುದು ಹೇಗೆ ? ಜನರು ಇಚ್ಛಾಮರಣಿಗಳಾದರೆ ಕೃತಯುಗವು ಮರಳೀತು !

ಇಂದ್ರಿಯ ಸುಖದಾಚೆಗೆ, ತನುವಿನ ಭೋಗದಾಚೆಗೆ ಏನಿದೆಯೆಂದು ತಿಳಿಯುವುದರ ಅಗತ್ಯವೇನಿದೆ ಎಂದು ವಾದಿಸುವವರೂ ಸಹ, ಸಾವನ್ನು ಎದುರಿಸಲೇಬೇಕಲ್ಲವೇ ?

ಆ. ಸತ್ತವರನು ಕಂಡು, ಸಾವು ನಿಶ್ಚಿತೆಂದು,
ತತ್ತ್ವ ಮೇಳದಾತ್ಮವು ಸರಿ ಹೊಂದಿ,
ಅದರಿ ಬೆದರದಿರಲು, ಆಯ್ತು ಹೋಗು ಮುಕ್ತಿ.
ವಿಶ್ವದಾಭಿರಾಮ ಕೇಳು ವೇಮ.

ಆದರೆ ಆ ಜನರು ಸತ್ತವರನ್ನು ಕಣ್ಣಾರೆ ಕಂಡ ಮೇಲಾದರೂ ಸಾವು ನಿಶ್ಚಿತ ; ತಪ್ಪಿಸಿಕೊಳ್ಳಲಾಗದು. ಸಾವಿನೊಂದಿಗೆ ತಮ್ಮ ಹಂಚಿಕೆ, ಆಕಾಂಕ್ಷೆಗಳೂ, ಕೋರಿಕೆಗಳೂ ಕೊನೆಗೊಳ್ಳುತ್ತಿವೆ. ಏನು ಮಾಡುವುದು ? ತಾವು ಇದು ವರೆಗೆ ಮಾಡಿದುದು ವ್ಯರ್ಥವಾಗುವುದೇ? ಸಾವಿನಾಚೆಗೆ ಏನಿದೆ ? ತಿಳಿಯುವುದು ಕ್ಷೇಮವಲ್ಲವೇ ? ಎಂದು ವಿಚಾರಿಸುತ್ತಾರೆ. ಆಗ ಅವರಿಗೆ ಇಂದ್ರಿಯಗಳಾಚೆಯ ತತ್ತ್ವ ಮೇಳದ ಅರಿವಾಗುತ್ತದೆ. ಪರಮ ತತ್+ತ್ವವಾದ ಆತ್ಮದ ಗುರುತು ಸಿಕ್ಕು, ಎಲ್ಲವೂ ಸರಿ ಹೊಂದುತ್ತದೆ. ಅಲ್ಲಿ ತನ್ನ ಹೊರತು ಅನ್ಯವನ್ನು ನೋಡದಿರಬೇಕು. ತನಗೆದುರು ಏನೂ ಇಲ್ಲದಾಗ ಭಯವಿರದು. ಹಾಗಾಗಿ ಅದರಿ ಬೆದರದೆ ಇರಬೇಕು. ಹಾಗಾದರೆ ಬಂಧನದಿಂದ ಮುಕ್ತಿಯಾಗುತ್ತದೆ.

ಆ. ನಿಹತಿ ಹುಟ್ಟುಗಳಿಗೆ ನೆಲೆಯು ಇಹವೆಂದರು.
ಕುಹರ ಲೋಕದಲ್ಲಿ ಕೌತುಕೆಲ್ಲಿ ?
ದಹರದಲ್ಲಿ ನೋಡೆ, ತಗಲುತಿಹುದು ತತ್ತ್ವ.
ವಿಶ್ವದಾಭಿರಾಮ ಕೇಳು ವೇಮ.

ಇಹವು ಮರ್ತ್ಯಲೋಕ ತಾನೇ ? ಇಲ್ಲಿ ಜನ್ಮ ತಾಳಿದವರು ಮೃತರಾಗಲೇಬೇಕು. ಆದ್ದರಿಂದ ಇಲ್ಲಿ ಜೀವಿಯು, ಮುಂದೇನು ? ತನ್ನ ಇರವು ಕೊನೆಯಾಯಿತೇ ? ಸಾವಿನ ನಂತರ ಏನೂ ಇಲ್ಲವೇ ? ಅಥವಾ ಏನಾದರೂ ಇದೆಯೋ ? ಎಂದು ಆಲೋಚಿಸುತ್ತಾನೆ. ಹೃದಯ ಗವಿಯಲ್ಲಿಯೂ ಅನುಭವ ಕ್ಷೇತ್ರವಿದೆ. ಆ ಲೋಕದಲ್ಲಿ ಕೌತುಕವೇನೂ ಇಲ್ಲ. ಹೃದಯ ಗವಿಯಲ್ಲಿ ನೋಡಿದರೆ ತತ್+ತ್ವವು ತಗಲುತ್ತದೆ. ಇದನ್ನು ಅಪರೋಕ್ಷವಾಗಿ ಹೊಂದಲು ಸೂಕ್ತ ಸಾಧನ ಬೇಕು.

ಕೆಲವು ಜಡವಾದಿಗಳು ಶುಷ್ಕ ವ್ರತ ನೇಮಗಳೊಂದಿಗೆ, ನೀತಿವಾದವನ್ನೂ ನಿರಾಕರಿಸಿದರು. ಇದು ಚಾರ್ವಾಕ ಮತವೆಂದು ಪ್ರಸಿದ್ಧವಾಗಿದೆ. ಇವರ ಮೇರೆಗೆ ದೇಹವು ಸುಟ್ಟು ಭಸ್ಮವಾದ ಬಳಿಕ ಬರುವುದಿಲ್ಲ.

ಚಾರ್ವಾಕರು ಆಕಾಶ ಭೂತವನ್ನು ಒಪ್ಪಿಲ್ಲ. ಏಕೆಂದರೆ ಅವರ ಮೇರೆಗೆ ಪ್ರತ್ಯಕ್ಷ ಪ್ರಮಾಣವಷ್ಟೇ ಮಾನ್ಯ. ಆಕಾಶವನ್ನು ಶಬ್ದ ತನ್ಮಾತ್ರೆಯ ಮೂಲಕ ಗುರುತಿಸಬೇಕಷ್ಟೇ. ಹಾಗಾಗಿ ಅದು ಮಾನ್ಯವಲ್ಲ. ಇದಲ್ಲದೆ, ಉಳಿದ ನಾಲ್ಕು ಮಹಾಭೂತಗಳಾದ ವಾಯು, ಅಗ್ನಿ, ಅಪ್ ಮತ್ತು ಪೃಥಿವೀಗಳ ಮಿಶ್ರಣದಿಂದ ದೇಹದಲ್ಲಿ ಚೈತನ್ಯವು ಉಂಟಾಗುತ್ತದೆ ಎಂದವರ ಪ್ರತಿಪಾದನೆ. ಕಾಚಿನೊಂದಿಗೆ ಸುಣ್ಣ ಬೆರೆಸಿದರೆ ತುಟಿಗಳಿಗೆ ಕೆಂಪು ವರ್ಣ ಬರುವಂತೆ, ನಾಲ್ಕು ಮಹಾಭೂತಗಳ ಮಿಶ್ರಣದಿಂದ ಚೈತನ್ಯದ ಉತ್ಪತ್ತಿ ಆಗುವುದೆಂದು ಅವರ ಹೇಳಿಕೆ. ಆದರೆ ಕೆಂಪು ಅವುಗಳಲ್ಲಿ ಮೊದಲೇ ಅಡಗಿತ್ತು. ಅವುಗಳ ಮಿಶ್ರಣದಿಂದ ಅದು ವಿಕಸನವಾಯಿತು ; ಎಂದು ಅವರು ತಿಳಿದಿಲ್ಲ. ಹೀಗೆ ದೇಹವನ್ನು ಭಸ್ಮ ಮಾಡಿದ ಮೇಲೆ ಜೀವವೂ ಇಲ್ಲ ; ಏನೂ ಇಲ್ಲ ಎಂದವರ

ವಾದ. ಆದ್ದರಿಂದ ವೇಮನರು ಹೇಳುತ್ತಾರೆ.

ಸಾಕು ಇನ್ನು ಮೇಲೆ ಚಾರ್ವಾಕ ಮತ ರೀತಿ.
ಶಕ್ತಿ ಶೈವವೆಂದು ಚೊಕ್ಕ ನಂಬು.
ಸರಣಿ ಮೀರಿ ಕೆಡುಗು ಚಂಡಾಲ ಸೇವೆಯು.
ವಿಶ್ವದಾಭಿರಾಮ ಕೇಳು ವೇಮ.

ಜನರನ್ನು ತಪ್ಪು ಹಾದಿಗೆಳೆಯುವ ಚಾರ್ವಾಕ ಮತವಾದವು ಇನ್ನು ಸಾಕು. ಅದು ಮಾತಿನ ಜಾಲವಷ್ಟೇ. ಶಕ್ತಿಯು ಶಿವನದೇ ಎಂದು ಚೊಕ್ಕ ನಂಬು. ಆತ್ಮಘ್ನರಾಗಿ ಚಂಡಾಲ ಸೇವೆ ಮಾಡಿದರೆ, ಅಂಥ ವಿಚಾರ ಸರಣಿಯು ತುಂಬಾ ಕೇಡಾದುದು.

ಋಗ್ವೇದದ ಋಷಿಯು ಭಸ್ಮೀಕೃತ ಶರೀರದ ಬಗೆಗೆ ಏನು ಹೇಳುತ್ತಾನೆ, ಗೊತ್ತೇ ? ಅಗ್ನಿಗೆ ವ್ಯಕ್ತಿ ರೂಪ ನೀಡಿ, ''ಓ ! ಅಗ್ನಿ ದೇವನೇ ! ನಿನ್ನ ತೊಳುಗಳಲ್ಲಿ ಅವನನ್ನು ಮೃದುವಾಗಿ ಎತ್ತಿಕೊಂಡು ಹೋಗು. ಅವನಿಗೆ ಪೂರ್ಣ ಶರೀರ ನೀಡು.ತೈಜಸ ಶರೀರ ನೀಡು, ಅವನನ್ನು ಶೋಕರಹಿತವಾದ, ಆನಂದವಾದ ಪಿತೃಗಳ ಲೋಕಕ್ಕೆ ಕರೆದುಕೊಂಡು ಹೋಗು''.

ಮಾನವನು ಯಾವುದು ಸ್ಥಿರ ? ಮತ್ತಾವುದು ಅಸ್ಥಿರ ? ಎಂದು ತಿಳಿಯಬೇಕು. ಯಾವುದು ನಿತ್ಯ ? ಯಾವುದು ಅನಿತ್ಯ ? ಎಂದು ಅರಿಯಬೇಕು.

ಕಾಲ :

ಗೀತ
ಬಾಲ ಪ್ರಾಯದಲ್ಲಿ ಕಾಮವನು ಬಿಡಲು ಇಲ್ಲ.
ಪ್ರೌಢ ವಯಸ್ಸಿಗೆ ಕಾಮವನು ಬಿಡಲು ಇಲ್ಲ.
ಮುದುಕನಾದೊಡೀಗ ಚಿಂತಿಲಿ ಮುಕ್ತಿ ಇಲ್ಲ.
ಸತ್ತು ಸಾಧಿಸುವರೇನೋ ಜಗದಿ ವೇಮ ?

ಕಾಮ ಎಂದರೆ ಎರಡು ಭೌತಿಕ ವಸ್ತುಗಳ ನಡುವಿನ ಆಕರ್ಷಣೆ. ಈ ಆಕರ್ಷಣೆಯು ಬಾಲ ಪ್ರಾಯದಲ್ಲಿ ತಿಂಡಿ ತಿನಿಸು, ಗೊಂಬೆಗಳಿಗಾಗಿ ಇರುತ್ತದೆ. ಪ್ರೌಢ ವಯಸ್ಸಿನಲ್ಲಿ ಹೊನ್ನು, ಹೆಣ್ಣು ಮತ್ತು ಮಣ್ಣಿಗಾಗಿ ಇರುತ್ತದೆ. ಇನ್ನು ಮುದುಕನಾದ ಮೇಲೆ ಸುಖ ಬಡುವ ಇಂದ್ರಿಯಗಳೇ ಬಲಹೀನವಾಗಿರುತ್ತವೆ. ಆದ್ದರಿಂದ ಆಗ ವ್ಯಾಧಿಗ್ರಸ್ತನಾಗಿ, ದಕ್ಕದ ಸುಖಾಪೇಕ್ಷೆಯ ಚಿಂತೆಯನ್ನೇ ಮಾಡುತ್ತಾನೆ. ಹೀಗಾಗಿ, ಭೌತಿಕ ವಸ್ತು ಭೋಗವನ್ನು ಮೀರಿದ ನಿತ್ಯಾನಂದವನ್ನು, ಜಗದಲ್ಲಿ, ಸತ್ತ ಮೇಲೆ ಸಾಧಿಸುವರೇನೋ ?

ಕಂ.
ಕಾಲವ ತಿಳಿಯದೆ ಸೊಂಪಿಲಿ,
ಕಾಲವೆ ಇಲ್ಲವೆನುತ ಇರುವ ಕಾಲದೊಳಗೇ
ಖೂಳನು ತನ್ನನೆ ತಿಳಿಯನು
ಬೀಳುವ ಮುಂಜಾವಿನಲ್ಲಿ, ತಟ್ಟನೆ, ವೇಮಾ.

ಕಾಲವೆಂದರೇನು ? ಎರಡು ಘಟನೆಗಳ ನಡುವಿನ ಮಾನಸಿಕ ಅಂತರದ ಅಳತೆ ತಾನೇ ? ಎಲ್ಲಿ ಮನಸ್ಸು ಇದೆಯೋ, ಅಲ್ಲಿ ಕಾಲವಿದೆ. ಹೀಗಿದ್ದರೂ ತನ್ನ ಐಂದ್ರಿಯ

ಸುಖಭೋಗದಲ್ಲಿ ಮೈಮರೆತು ಸೊಂಪಿನಲ್ಲಿರುತ್ತ, ಕಾಲವೆಂದರೇನೆಂದು ತಿಳಿಯದೆ, ತನಗೆ ಚಿಂತನಮಾಡಲು ಕಾಲವೇ ಇಲ್ಲವೆನ್ನುತ್ತ ಇರುವನು. ಆದರೆ ತನ್ನ ಮನಸ್ಸು ಸಕ್ರಿಯವಾಗಿರುವ ಕಾಲದಲ್ಲಿ ನೀಚ ಮನುಷ್ಯನು ತನ್ನನ್ನು ತಾನು ತಿಳಿಯಲಾರನು. ತನ್ನ ನೈಜ ಸ್ವರೂಪವನ್ನು ಅರಿಯನು. ಹೀಗಾಗಿ, ತಿಳಿದೂ ತಿಳಿದು, ಅಂದರೆ ಹಗಲಿನಲ್ಲಿಯೇ ನಡೆಯುವವನು ಬೀಳುವಂತೆ, ತಟ್ಟನೇ ಬೀಳುತ್ತಾನೆ.

ಪಂಚ ಮಹಾಭೂತಗಳ ಅಣುಗಳು ಸೇರಿ ಈ ಭೌತಿಕ ದೇಹವಾಗಿದೆಯಷ್ಟೇ. ಆದರೆ ಈ ದೇಹದಲ್ಲಿ ಚೈತನ್ಯವಿರುವುದಾದರೆ, ಅದು ಅಣು ಅಣುವಿನಲ್ಲಿಯೂ ಅಡಗಿರಬೇಕು. ಅಡಗಿರುವುದೇ ವಿಕಾಸವಾಗುತ್ತದೆ.

ಆ. ಅಣುವಿನಲ್ಲಿ ಉಂಟು ; ಈ ಜಗತ್ ಎಲ್ಲ.
ಅಣುವು ತನ್ನೊಳಗೆ ಅಡಗಿ ಉಂಟು.
ಮನಸು ನಿಲಿಪ ನರನು ಮತ್ತೆ ಮುಕ್ತಿ ಪಡೆವ.
ವಿಶ್ವದಾಭಿರಾಮ ಕೇಳು ವೇಮ.

ಅಣುಗಳ ಸಮೂಹವೇ ಈ ಜಗತ್ತು. ಬ್ರಹ್ಮಾಂಡವು ಪಿಂಡಾಂಡದಂತಿದೆ. ದೊಡ್ಡ ಆಲದ ಮರವು ಅತಿ ಚಿಕ್ಕ ಆಲದ ಬೀಜದಲ್ಲಿ ಇರುವಂತೆ. ಆ ರೀತಿ, ಈ ಜಗತ್ತು ಅಣುವಿನಲ್ಲಿ ಉಂಟು. ಅದು ಅಡಗಿದೆ ; ಅಷ್ಟೇ. ಮನದ ಸಂಕಲ್ಪ ವಿಕಲ್ಪಗಳಿಂದ ಇದೆಲ್ಲ ವೇದ್ಯವಾಗುತ್ತದೆ. ಆ ಮನಸ್ಸಿನ ಕ್ರಿಯೆಯು ನಿಂತರೆ, ಸೃಷ್ಟಿಯು ನಿಲ್ಲುತ್ತದೆ. ಈ ವಿಷಯದ ಬಂಧನದಿಂದ ಮುಕ್ತಿಯಾಗುತ್ತದೆ.

ಆ. ಸೂಕ್ಷ್ಮ ರೂಪ ಹೊಂದಿ, ಸೂಕ್ಷ್ಮ ರೂಪನೆನಲು,
ಸ್ಥೂಲ ರೂಪ ಹೊಂದಿ, ಸ್ಥೂಲ ರೂಪ.
ಮಾತು ಒಂದೆ ಇದ್ದು ಮರ್ಮ ತಿಳಿಯಿರಯ್ಯ.
ವಿಶ್ವದಾಭಿರಾಮ ಕೇಳು ವೇಮ.

ಮರಣವು ಈ ಸ್ಥೂಲ ದೇಹಕ್ಕೆ ಕೊನೆಯಾಗಬಹುದು.ಆದರೆ ಈ ಸ್ಥೂಲ ದೇಹದ ಆಚೆಗೆ ಸೂಕ್ಷ್ಮವಾದುದು ಏನಾದರೂ ಇದೆಯೇ ? ಅಹುದು ಇದೆ. ಅದೇ ಸೂಕ್ಷ್ಮ ದೇಹ ; ಲಿಂಗ ದೇಹ. ಸ್ಥೂಲ ಇಂದ್ರಿಯಗಳಿಗೆ ವೇದ್ಯವಾಗುವುದು, ಸ್ಥೂಲ ದೇಹ. ಸೂಕ್ಷ್ಮ ಕರಣಗಳಿಗೆ ವೇದ್ಯವಾಗುವುದು ಸೂಕ್ಷ್ಮ ಶರೀರ. ಎಷ್ಟಾದರೂ ಇದೂ ಶರೀರವೇ ತಾನೇ ? ಎಂದು ಹೇಳಿಬಿಟ್ಟರೆ ತೀರಲಿಲ್ಲ. ಅದರ ಹಿಂದಿನ ಮರ್ಮವನ್ನು ಅರಿಯಬೇಕು.

ಈ ಸೂಕ್ಷ್ಮ ಇಲ್ಲವೆ ಲಿಂಗ ಶರೀರವು ಮರಣಾನಂತರ ಮುಂದುವರಿಯುತ್ತದೆ. ಇದರಲ್ಲಿ ಮನಸ್ಸು ಮತ್ತು ಆತ್ಮಗಳು ಇರುತ್ತವೆ. ಇಲ್ಲಿ ಮನಸ್ಸೆಂದರೆ ಮನಸ್ಸನ್ನು ಉಂಟು ಮಾಡುವ ವಾಸನಾ ಬೀಜಗಳು ಮಾತ್ರ. ಇಲ್ಲಿ ಮಾನಸಿಕ ಸುಖದುಃಖಗಳ ಅನುಭವವಿರದು. ಏಕೆಂದರೆ, ಅಂಥ ಅನುಭವ ನೀಡಲು ಭೌತಿಕ ಉಪಕರಣವಾದ ಸಂಜ್ಞಾ ಮತ್ತು ಅಜ್ಞಾ ನಾಡಿಗಳೂ ಇಲ್ಲ. ಮತ್ತು ಮುಖ್ಯವಾಗಿ ಮಸ್ತಿಷ್ಕವೂ ಇಲ್ಲ. ಹೀಗಾಗಿ, ಸೂಕ್ಷ್ಮ ಶರೀರವು ಕರ್ಮಫಲ ಭೋಗಿಸದು. ಅದಕ್ಕಾಗಿ ಅದು ಮತ್ತೆ ಜನ್ಮ ತಾಳಲೇಬೇಕು.

ಆತ್ಮವು ರೂಪರಹಿತವಾಗಿದೆ. ಅದು ನಿರಾಕಾರವಾಗಿದೆ. ಯಾವುದು ರೂಪ ರಹಿತವೂ, ನಿರಾಕಾರವೂ ಆಗಿದೆಯೋ, ಅದು ಅನಂತವಾಗಿರಲೇಬೇಕು. ಲಿಂಗ ದೇಹದ ಇನ್ನೊಂದು ಘಟಕವೇ ಮನಸ್ಸು. ಎಲ್ಲಿ ಕಾಲ ಗಣನೆ ಇದೆಯೋ ಅಲ್ಲಿ ಮನಸ್ಸಿದೆ.

ಕಂ. ಕಾಲವು ಬರಲೆಂದು ಕಾಯ್ದು.
ಮೇಲಾಗುತ ತಾನೊಂದು ತೆರದ ಮಿತಿ-ಮೀರಲ್
ಕಾಲವೆದುರಿಸುವ ಜ್ಞಪ್ತಿಲಿ,
ಲೋಲಾಡದೆ ಶಿವನ ಗೂಡಿ, ವರ್ಧಿಸು ವೇಮಾ.

ಮನಸ್ಸಿನ ಆದಿಯಿಂದಲೇ ಕಾಲಗಣನೆ ಪ್ರಾರಂಭವಾಗುತ್ತದೆ. ಜ್ಞಪ್ತಿಯ ಆಚೆಯ ಸ್ಥಿತಿಯಲ್ಲಿ ಕಾಲವಿಲ್ಲ. ಹೀಗೆ ಸಮಾಧಿಯಲ್ಲಿ ಕಾಲವಿರದು. ಕಾಲವು ಬರಲೆಂದು ಅಂದರೆ ಸಮಾಧಿಯಿಂದ ಪರಾಕ್ ಇಲ್ಲವೆ ಬಹರ್ಮುಖವಾಗುವ ವರೆಗೆ ಕಾಯ್ದು ತಾನು ಒಂದು ತೆರದಲ್ಲಿ ಮೇಲಾಗುತ್ತ ಮಿತಿ ಮೀರಲು, ಕಾಲವನ್ನು ಎದುರಿಸುವ ಜ್ಞಪ್ತಿಯು ಬರುತ್ತದೆ. ಆಗ ಅತ್ತ ಇತ್ತ ಲೋಲಾಡದೆ, ಶಿವನನ್ನು ಕೂಡಿ ವರ್ಧಿಸು.

ಅಂದರೆ ಕಾಲವು ಮನಸ್ಸಿನಲ್ಲಿದೆ ; ಎಂದು ತಿಳಿಯಿತಲ್ಲವೇ ? ದೇಶವೂ ಮನಸ್ಸಿನಲ್ಲಿದೆ. ಅದೇ ರೀತಿ ಕಾರಣ ಬೀಜವೂ ಮನಸ್ಸಿನಲ್ಲಿಯೇ ಇದೆ.

ಆ. ಕಲ್ಪವೆನಲು ಆಯ್ತು ಕಾರಣ ಬೀಜ ತಾ.
ಕಲ್ಪವೆನಲು ಶಿವನ ಕಲ್ಪಿತವದು.
ಅಲ್ಪನೇನು ಅರಿವ ಆನಂದ ಭೋಗವ ?
ವಿಶ್ವದಾಭಿರಾಮ ಕೇಳು ವೇಮ.

ಕಾಲವನ್ನು ಕತ್ತರಿಸುವುದೇ ಕಲ್ಪವಾಗಿದೆ. ಮನೋಧಾರೆಯನ್ನು ಕೊನೆಗಾಣಿಸುವುದು ಕಲ್ಪವು. ಮನೋಧಾರೆಗೆ ಕಾರಣ-ಕಾರ್ಯ ಸಂಬಂಧವಿರುತ್ತದೆ. ಅರ್ಥಾತ್ ಕಾರಣವು ಮನದೊಳಗೇ ಇರುತ್ತದೆ.

ಹೀಗೆ, ಕಾಲ, ದೇಶ ಮತ್ತು ಕಾರಣ ಇಲ್ಲವೆ ನಿಮಿತ್ತಗಳು ಮನದಲ್ಲಿಯೇ ಇವೆ. ಅಂದರೆ, ಮನವು ಅವುಗಳ ಆಚೆಗಿದೆ. ಹಾಗಾಗಿ ಅದು ಅನಂತವಾಗಿದೆ. ಆದರೆ ಎರಡು ಅನಂತಗಳು ಇರುವುದಿಲ್ಲ. ಅನಂತವಾದುದು ಏಕೈಕವಾಗಿದೆ. ಮನವನ್ನು ಹೊಂದಿರುವ ಆತ್ಮವು ಅನಂತವಿದೆ. ಈ ಮೊದಲು ಅನೇಕ ಆತ್ಮಗಳಿರಬಹುದೆಂಬ ಸೂಚನೆಯು ತಪ್ಪು. ಇರುವುದು ಒಂದೇ ಆತ್ಮ. ಒಂದೇ ಆತ್ಮವು ಎಲ್ಲೆಡೆ ಇದೆ. ಅದೇ ಸರ್ವಭೂತಾಂತರಾತ್ಮ, ಪರಮಾತ್ಮ. ಅದುವೇ ನೈಜ ಆತ್ಮ. ಶರೀರದಲ್ಲಿ ಇರುವುದು, ಅದರ ಪ್ರತಿಬಿಂಬ ಮಾತ್ರ. ಹೀಗಾಗಿ ಸರ್ವ ಆತ್ಮನೂ ಅನಂತವಾಗಿದೆ.. ಅದಕ್ಕೆ ಆದಿಯಿಲ್ಲ ; ಅಂತ್ಯವಿಲ್ಲ. ಹಾಗಾಗಿ ಜನನವಿಲ್ಲ ಇಲ್ಲವೆ ಮರಣವಿಲ್ಲ. ಇದುವೇ ತತ್ತ್ವ. ನೈಜ ಮಾನವ.

ನೈಜ ಮಾನವನು ಕಾರ್ಯ ಕಾರಣ ಇಲ್ಲವೆ ನಿಮಿತ್ತದ ಆಚೆಗಿರುವುದರಿಂದ ಅವನು ದೇಶ ಮತ್ತು ಕಾಲಗಳ ಬಂಧನದಿಂದ ಮುಕ್ತನಾಗಿದ್ದಾನೆ. ಆದರೆ ತೋರು ಮನುಷ್ಯನು ಪ್ರತಿಫಲನ ರೂಪನಾಗಿದ್ದು, ದೇಶ, ಕಾಲ ಮತ್ತು ನಿಮಿತ್ತಗಳಿಂದ ಬಂಧಿತನಾಗಿದ್ದಾನೆ.

ಆ. ಕಣ್ಣು ದೃಷ್ಟಿಯಿಂದ ಕಾಣು ವಿಶ್ವವೆಲ್ಲ.
ಕನ್ನಡಿಯಲಿ ತನ್ನ ಕಂಡ ರೀತಿ.
ಆತ್ಮ ತತ್ತ್ವ ಮಾರ್ಗ ಆ ರೀತಿ ಕಾಣೆಲೊ.
ವಿಶ್ವದಾಭಿರಾಮ ಕೇಳು ವೇಮ.

ತನ್ನ ಅನಂತ ಆತ್ಮವೇ ಎಲ್ಲೆಡೆಗೂ ಇದೆ. ಅದನ್ನು ಕನ್ನಡಿಯಲ್ಲಿ ತನ್ನನ್ನು ಕಾಣುವಂತೆ, ತನ್ನ ಪ್ರತಿಬಿಂಬದಂತೆ ಕಾಣು. ಎಲ್ಲೆಡೆಗೂ ಅದೇ ಆತ್ಮದ ಪ್ರತಿಬಿಂಬವನ್ನು ಕಾಣು.

ಆ. ಘಟದ ನೀರಿನಲ್ಲಿ ಗಗನ ಕಾಣಬಹುದು.
ಘಟದಿ ಜಲವಿರದಿರೆ ಗಗನವೆಲ್ಲಿ ?
ಘಟದ ಒಳಗೆ ಜ್ಯೋತಿ ಕ್ರಮದಿಂದ ಕಾಣಿರಿ.
ವಿಶ್ವದಾಭಿರಾಮ ಕೇಳು ವೇಮ.

ಗಡಿಗೆಯ ನೀರಿನಲ್ಲಿ ಗಗನದ ಪ್ರತಿಬಿಂಬವು ಕಾಣುತ್ತದೆ. ಗಡಿಗೆಯಲ್ಲಿ ನೀರೇ ಇಲ್ಲದಿದ್ದರೆ ಗಗನವು ಕಾಣುವುದೆಲ್ಲಿ ? ಹಾಗೆ ಅಗ್ಮ ಬುದ್ಧಿಯಲ್ಲಿ ಪರಮಾತ್ಮನ ಪ್ರತಿಬಿಂಬವಾಗಿ ಆತ್ಮವು ವೇದ್ಯವಾಗುತ್ತದೆ. ಜ್ಯೋತಿಯನ್ನು, ಘಟದೊಳಗೆ ಕ್ರಮದಿಂದ ನೋಡು.

ತನ್ನ ಆತ್ಮವು ಅನಂತವಷ್ಟೇ. ಸರ್ವರಲ್ಲಿ ಪ್ರತಿಫಲಿಸುವ ಆತ್ಮವೂ ಅನಂತವಷ್ಟೇ. ಇರುವ ನೈಜ ಆತ್ಮವು ಏಕೈಕ. ಅದನ್ನೇ ಎಲ್ಲೆಡೆ ನೋಡು.

ಕೆಲವರು ತಮಗೆ ಭೂತದ ಗೊಡವೆ ಬೇಡ ; ಭವಿಷ್ಯದ ಚಿಂತೆ ಬೇಡ. ಈ ದೇಹದ ವಿಚಾರವೂ ಬೇಡ. ಏಕೆಂದರೆ, ಅದು ಬರುತ್ತದೆ, ಮತ್ತೆ ಹೋಗುತ್ತದೆ, ಎನ್ನುತ್ತಾರೆ. ಆಗ ಅವರು ಉನ್ನತ ಆದರ್ಶದತ್ತ ವಾಲುತ್ತಾರೆ. ಈ ದೇಹವೂ ಅಸ್ಥಿರ ; ಮನಸ್ಸೂ ಅಸ್ಥಿರ. ಏಕೆಂದರೆ ಅದು ಸುಖಿಸಿ ಉಬ್ಬುತ್ತದೆ ; ದುಃಖಿಸಿ ಕುಗ್ಗುತ್ತದೆ. ಹಾಗಾದರೆ ನಿತ್ಯವಾದ, ಅಚಲವಾದ ಯಾವುದಿದೆ ? ಅದೇ ಆತ್ಮ. ಚೈತನ್ಯ ನಿತ್ಯವಾಗಿದೆ. ಮನಸ್ಸು ಮತ್ತು ದೇಹಗಳು ಕ್ಷಣ ಕ್ಷಣಕ್ಕೂ ಬದಲಾಗುತ್ತವೆ. ಹಳೆಯ ಕೋಶಗಳು ನಶಿಸಿ ಹೊಸ ಕೋಶಗಳು ಬರುತ್ತವೆ. ಆದರೂ ನಾವು ಇದೇ ನಮ್ಮ ದೇಹ ಎನ್ನುತ್ತೇವೆ. ನದಿಯಲ್ಲಿ ನೀರು ಹೊಸದಾಗಿ ಬಂದು ಹರಿಯುತ್ತಿದ್ದರೂ ಆ ನದಿಯ ನಾಮವೇನೂ ಬದಲಾಗುವುದಿಲ್ಲ. ಹಾಗೆಯೇ ಇದು.

ಕಂ. ನದಿಯುದಕವು ಚಲಿಸುವಂತೆ,
ಮುದದಿ ಮನದಲಿ ತತ್ತ್ವ ಬುದ್ಧಿ ಮಗ್ನನು ಸಕಲಂ.
ತುದಿ ಪದವಿಯಲ್ಲಿ ಘನನಿಹ.
ಉದಧಿ ಪ್ರವೇಶಿಸುವ ಗಂಗೆಯಂತೆ, ವೇಮಾ.

ಮನಸ್ಸಿನಲ್ಲಿ ಸಹ ತತ್ತ್ವ ಬುದ್ಧಿ ಮಗ್ನನಾಗಿ ನವನವೀನ ಅನುಭವಗಳನ್ನು ಹೊಂದುತ್ತಾನೆ. ನದಿಯ ಪ್ರವಾಹದಂತೆ ಮನದ ವಿಕಾಸವು ನಡೆಯುತ್ತದೆ. ಹೊಸತು ಹೊಸತು ಬರುತ್ತಿದೆ. ಸಾಂತವು ನದಿಯ ನೀರಿನಂತೆ ಬದಲಾಗುತ್ತದೆ. ಯಾವುದು ಅನಂತವೋ, ಅದು ಅಚಲವಾಗಿದೆ. ಅದನ್ನು ತಲುಪುವವರೆಗೆ ಚಲನೆ ಇರುತ್ತದೆ. ಚಲನೆ ಆಪೇಕ್ಷಿಕವಾಗಿದೆ. ಸಾಂತದಲ್ಲಿ ಮಾತ್ರ ಇನ್ನೊಂದಕ್ಕೆ ಸಂಬಂಧಿಸಿದಂತೆ ಚಲನೆ ಕಾಣಬಹುದು. ಆದರೆ ಅನಂತವನ್ನು ತಲುಪಿದಾಗ

ಆಪೇಕ್ಷಿಕ (ತುಲನಾತ್ಮಕ) ಚಲನೆಯು ಇಲ್ಲವೆ ಬದಲಾವಣೆಯು ಇರಲಾರದು. ಆದರೆ ಕೊನೆಯ ಹಂತದಲ್ಲಿ ಗಂಗೆಯು ಸಮುದ್ರವನ್ನು ಪ್ರವೇಶಿಸಿದಾಗ ಚಲನೆ ನಿಲ್ಲುತ್ತದೆ. ದೇಹ ಮನಗಳು ಅಂದರೆ ಜೀವ ಭಾವವು ಉಡುಗಿ ಅನಂತವಾದ ಆತ್ಮಭಾವವು ವೇದ್ಯವಾಗುತ್ತದೆ.

ಅನಂತವು ಉದಧಿಯಂತೆ ಅವಿಚ್ಛಿನ್ನವಾಗಿದೆ. ಸಾಂತದಂತೆ ಪರಿಚ್ಛಿನ್ನವಾಗಿಲ್ಲ ; ಪೂರ್ಣವಾಗಿದೆ ; ಅಪೂರ್ಣವಾಗಿಲ್ಲ. ಇದುವೇ ನೈಜ ಮಾನವ. ಇಂಥ ನೈಜ ಮಾನವನು ಬಂಧನ ಮುಕ್ತನು. ಅವನ ಅನುಭವವು ಹೀಗಿದೆ :

ಆ. ತಾನು ಸಕಲವಿರಲು, ತನ್ನೊಳಗೆ ಸಕಲವು.
ತನ್ನ ಒಳಗೆ ಬೆಳಗಿ ತಾನೆ ತಿಳಿದು,
ಇಂಥ ಮಾನವನಿಗೆ ಇಹದು ಒಪ್ಪ ಮುಕ್ತಿ.
ವಿಶ್ವದಾಭಿರಾಮ ಕೇಳು ವೇಮ.

ತಾನು ಸಕಲವಾಗಿ ಇದ್ದಾನೆ. ಸರ್ವ ಭೂತಾಂತರಾತ್ಮನಾಗಿದ್ದಾನೆ. ಸರ್ವರ ಆತ್ಮವೂ ತನ್ನೊಳಗೆ ಇದೆ. ಸಕಲರ ಸುಖದುಃಖಿಗಳೂ, ಒಳಿತು ಕೆಡುಕುಗಳೂ ತನ್ನವೇ. ಹೀಗೆ ತನ್ನ ಒಳಗೆ ತಾನೇ ತಿಳಿದುಕೊಂಡ ಮಾನವನಿಗೆ ಒಪ್ಪ ಮುಕ್ತಿ ಇದೆ.

ದೇಶದಲ್ಲಿ ಯಾರಿಗೆ ನೋವಾದರೂ ಆ ನೋವು ತನಗೇ ಆಗುವುದೇನೋ ಎಂದು ಗಾಂಧೀಜಿಗೆ ಅನಿಸುತ್ತಿತ್ತು. ಎಲ್ಲರಿಗೂ ಬಟ್ಟೆ ದೊರೆಯುವ ವರೆಗೂ ತಾನು ಅರೆ ಬೆತ್ತಲೆ ಇರುವ ಪಣ ತೊಟ್ಟಿದ್ದರು. ಅದರಿಂದಾಗಿ ಅವರು ಮಹಾ ಆತ್ಮರಾಗಿದ್ದರು.

ಅನಂತತೆಯನ್ನು ತಲುಪಿದವರು ಸರ್ವ ವ್ಯಾಪಿಗಳು. ಅವರು ಎಲ್ಲ ಕಾಲುಗಳಿಂದ ನಡೆಯುತ್ತಾರೆ. ಎಲ್ಲ ತುಟಿಗಳಿಂದ ನುಡಿಯುತ್ತಾರೆ. ಎಲ್ಲ ಹೃದಯಗಳಿಂದ ಭಾವಿಸುತ್ತಾರೆ. ಅವರಿಗೆ ಮರಣವಿಲ್ಲ.

ಈ ನೈಜ ಮಾನವನು ಪೂರ್ಣನಾಗಿದ್ದಾನೆ, ಅಖಂಡನಾಗಿದ್ದಾನೆ, ಅನಂತನಾಗಿದ್ದಾನೆ, ನಿತ್ಯನಾಗಿದ್ದಾನೆ. ದೇಹವು ಪೂರ್ಣವೇ? ನಿತ್ಯವೇ ? ಅಲ್ಲ, ಬಾಲ್ಯಾವಸ್ಥೆಯಲ್ಲಿ ಗಡ್ಡ ಮೀಸೆಗಳಿಲ್ಲ. ಯೌವನದಲ್ಲಿ ಗಡ್ಡ ಮೀಸೆಗಳಿವೆ. ಹೀಗಾಗಿ ಬದಲಾಗುತ್ತಾನೆ. ಅದು ನಿತ್ಯವಲ್ಲ.

ತಾನು ಮನವೂ ಅಲ್ಲ. ಕುಡುಕನು ಕುಡಿತವನ್ನು ತ್ಯಜಿಸಿದರೆ ಬದಲಾಗುತ್ತಾನೆ. ಕಳ್ಳನು ಕಳವು ಮಾಡುವುದನ್ನು ಬಿಟ್ಟರೆ ಸಜ್ಜನನಾಗುತ್ತಾನೆ. ಹೀಗೆ, ಮನಸ್ಸು ಬದಲಾಗುತ್ತದೆ. ಅದು ನಿತ್ಯವಲ್ಲ. ಅದು ಸ್ವಪ್ನವೂ ಅಲ್ಲ. ಏಕೆಂದರೆ ತಾನು ಕಾಣುವ ಕನಸುಗಳು ; ಆದರ್ಶಗಳು, ಬದಲಾಗುತ್ತಮೆ.. ಅವು ನಿತ್ಯವಲ್ಲ. ತಾನು ನಿತ್ಯನು. ತಾನು ಪೂರ್ಣನು. ನಾವು ಹೆಚ್ಚು ಹೆಚ್ಚಾಗಿ ಖಂಡ ವಸ್ತುಗಳತ್ತ ವಾಲುತ್ತ ಹೋದಂತೆ, ಅವು ಸಾಂತವಾಗಿದ್ದು, ನಮ್ಮ ಅಂತ್ಯವೂ ಸಮೀಪಿಸುತ್ತದೆ. ಮರಣವು ಸನ್ನಿಹಿತವಾಗುತ್ತದೆ. ಆದ್ದರಿಂದ

ಕಂ. ನಾನೆಲಲು ದೇಹವಲ್ಲವು.
ಮಾನಸದಲಿ ಅರಿಯುತಿಹ ಮನುಜ ಕುಲಕ್ಕುಂ.
ಸ್ವಾನುಭವ ಸಿದ್ಧಿ ದೊರಕದು.
ತಾನಿಹ ಪರಮಾತ್ಮನರಿಯೆ, ತರವೇ ? ವೇಮಾ.

ಅನಂತನೂ, ನಿತ್ಯನೂ ಆದ ತಾನು ಸಾಂತವೂ, ಅನಿತ್ಯವೂ ಆದ ದೇಹವಂತೂ ಅಲ್ಲ. ಹಾಗಾದರೆ ತನ್ನನ್ನು ಮನಸ್ಸಿನಲ್ಲಿ ಅರಿಯದವರಿಗೆ ಹೇಳಬೇಕೆಂದರೆ ಮನವೂ ಅನಿತ್ಯವಾಗಿದೆ. ಅಪೂರ್ಣವಾಗಿದೆ. ಹಾಗಾಗಿ ಮನವೂ ತಾನಲ್ಲ. ಹೀಗೆ ದೇಹ ಮನಗಳಲ್ಲಿ ತನ್ನನ್ನು ಅರಸುವ ಸಾಧಕರಿಗೆ ಸ್ವಾನುಭವ ಸಿದ್ಧಿ ಅಂದರೆ ತನ್ನನ್ನು ತಾನು ಅರಿಯುವ ಸಿದ್ಧಿ ದೊರಕದು. ಏಕೆಂದರೆ ತಾನು ಅನಂತನಾದ ಪರಮಾತ್ಮನೇ ಆಗಿದ್ದು ಅವನನ್ನು ಸಾಂತ ವಸ್ತು-ವಿಚಾರಗಳಲ್ಲಿ ಹುಡುಕಿ ಅರಿಯುವುದು ಸರಿಯೇ ?

ಆ. ತಾನೆನುವುದು ಯಾರು ? ತನ್ನವರಿಹರಾರು ?
ತಿಳಿದು ತಿಳಿಯದಿಹರು, ತುಚ್ಛ ಜನರು.
ತಿಳಿಯಲಾಗ, ರೇಶ್ಮೆ ಹುಳದ ನೀತಿ ಕಣಾ.
ವಿಶ್ವದಾಭಿರಾಮ ಕೇಳು ವೇಮ.

ತಾನು ಎನ್ನುವುದು ಯಾರು ? ಅಖಂಡ, ಅನಂತ, ಪೂರ್ಣಸತ್ತೆಯೇ ತಾನು. ತನ್ನವರಿಹರಾರು ? ತನ್ನ ಜೊತೆಗೆ ಯಾರೂ ಇಲ್ಲ. ಸತ್ತ ಬಳಿಕ ಯಾರಾದರೂ ಬರುವರೇ ? ತನ್ನ ಧರ್ಮ ಮಾತ್ರ ತನ್ನ ಜೊತೆಗೆ ಬರಬಹುದು. ತುಚ್ಛ ಜನರು ಇದನ್ನು ತಿಳಿದೂ ತಿಳಿಯದಂತೆ ಇದ್ದಾರೆ. ರೇಶ್ಮೆಯ ಹುಳವು ತನ್ನ ದೇಹದ ಗ್ರಂಥಿಗಳಿಂದ ಸ್ರವಿಸಿದ ರಸದಿಂದ ತಂತುಗಳನ್ನು ನಿರ್ಮಿಸಿ ತಾನೇ ಆ ತಂತುಗಳಿಂದ ಬಂಧಿತವಾಗುತ್ತದೆ. ಅದೇ ರೀತಿ, ತೋರಿಕೆಯ, ಖಂಡಿತ, ಅಪೂರ್ಣ ಮಾನವನು ತನ್ನ ಮೋಹಾಭಿಮಾನಗಳಿಂದ ಅವರಿವರನ್ನು ತನ್ನವರೆಂದು ನಂಬಿ, ಅವರಲ್ಲಿ ಅನುರಕ್ತನಾಗಿ, ಬಂಧು ಬಾಂಧವರಿಂದ ಬಂಧಿತನಾಗುತ್ತಾನೆ.

ಕಂ. ತಾನಾಗಿಹುದ ಅರಿತು ಸರ್ವವು-,
ತಾನಾಗುವ ; ತಿಳಿದು ಎಲ್ಲ ತತ್ತ್ವ ತಾನೇ.
ತಾನರಿತು ಪರಿಣಮಿಸದೆ,
ಮಾನವನಿಗೆ ಮುಕ್ತಿ ಇಲ್ಲ, ಮಹಿಯಲಿ, ವೇಮಾ.

ನಾನು ಯಾರು ? ಎಂದು ವಿಚಾರಿಸಿದಾಗ, ತಾನು ಅನಂತ, ನಿತ್ಯಪೂರ್ಣನು ಎಂದು ಅರಿಯುತ್ತಾನೆ. ಇದುವೇ ಅಂತರಾತ್ಮ. ಇದೇ ಸರ್ವ ಭೂತಗಳ ಅಂತರಾತ್ಮವೂ ಆಗಿದೆ. ಹೀಗೆ ತನ್ನನ್ನು ಅರಿತು ಸರ್ವವೂ ತಾನಾಗುತ್ತಾನೆ. ತಾನೇ ತತ್+ತ್ವವೆಂದು ತಿಳಿದು ಎಲ್ಲವೂ ತಾನಾಗುತ್ತಾನೆ. ಹೀಗೆ ತಾನು ಅರಿತು ಪರಿಣಮಿಸದಾಗ, ಮಾನವನಿಗೆ ಮುಕ್ತಿ ಇಲ್ಲ. ಅಂದರೆ ಮುಕ್ತನಾಗಬೇಕಾದರೆ, ತಾನೇ ತತ್ತ್ವವೆಂದು ತಿಳಿದು, ಅಪೂರ್ಣತೆಯಿಂದ ಪೂರ್ಣತ್ವಕ್ಕೆ, ಖಂಡದಿಂದ ಅಖಂಡಕ್ಕೆ, ಅನಿತ್ಯದಿಂದ ನಿತ್ಯಕ್ಕೆ ಪರಿಣಮಿಸಬೇಕು.

ಕಂ. ಈ ತನುವಿನಲ್ಲಿ ನೋಡಲು,
ಆ ತನುವಿದಷ್ಟೆ ಎನ್ನುತ ಪ್ರತಿಭಾಸವಾಗಳ್
ಆತುರದಿ ಒಳಗೆ ನೋಡುತ,
ಆತುರದಿ ತಪಸಿಗಳೊಪ್ಪವಿಪ್ಪರು, ವೇಮಾ.

ಈ ತನುವಿನಲ್ಲಿ ಅನಂತ ಸುಖಕ್ಕಾಗಿ ಹುಡುಕಾಡಿದರೆ, ಈ ತನುವೇ ಅಸ್ಥಿರವಾಗಿದೆ. ಇಂದು ಇದ್ದು ನಾಳೆ ಬಿದ್ದು ಹೋಗುತ್ತದೆ ಎಂದು ತಿಳಿಯುತ್ತದೆ. ಆದ್ದರಿಂದ, ತಪಸ್ವಿಗಳು

ಇದನ್ನರಿತು, ಆತುರದಿಂದ ಅನಂತತೆಗಾಗಿ ಆತನ ಒಳಗೆ ನೋಡುತ್ತ ಒಪ್ಪವಾಗಿ ಇದ್ದಾರೆ.

ನಿತ್ಯವೂ ಬದಲಾಗುತ್ತಿರುವ, ಅನಿತ್ಯ ವಸ್ತುಗಳ ಸಂಬಂಧದಲ್ಲಿದ್ದು, ನಿತ್ಯದ ಬಗ್ಗೆ ಅನಂತನ ಬಗೆಗೆ ಚಿಂತಿಸುವುದು ಮೂರ್ಖತನ, ತಿಳಿಗೇಡಿತನವಾಗುತ್ತದೆ. ನೈಜ ಮಾನವನಾಗಬೇಕಾದರೆ ಪೂರ್ಣತ್ವ ಪಡೆಯಬೇಕು. ಸತ್ಯವೂ, ನಿತ್ಯವೂ, ಅನಂತವೂ ಆದುದೇ ಪೂರ್ಣತೆ.

ಪೂರ್ಣತ್ವದಲ್ಲಿ ವಿಕಾಸವೆಂಬುದಿಲ್ಲ. ಅದು ಬದಲಾಗದು. ಅದು ಅಚಲವಾದುದು. ವಿಕಾಸವು ತೋರಿಕೆಯ ಬದ್ಧ ಮನುಷ್ಯನಲ್ಲಿ ಮಾತ್ರ. ಆತ್ಮದಲ್ಲಿ ಅಲ್ಲ. ಆತ್ಮವು ಅನಂತವಾಗಿದೆ. ಅದು ಎಂದೆದೂ ಪೂರ್ಣವಾಗಿದೆ. ಅಲ್ಲಿ ವಿಕಾಸವಾಗಬೇಕಾದುದೇನೂ ಇಲ್ಲ.

ಹಾಗಾದರೆ ಧರ್ಮ ಮತ್ತು ದೇವರ ಬಗ್ಗೆ ವಿಚಾರಗಳು ಹೇಗೆ ಬಂದವು ? ದೇವರು ನಿನ್ನಲ್ಲಿಯೇ ಇದ್ದಾನೆ. ಅವನೇ ಎಲ್ಲವನ್ನೂ ಪ್ರೇರೇಪಿಸುತ್ತಾನೆ. ತಪ್ಪು ಹಾದಿಯಲ್ಲಿರುವವನು ನೀನು. ನಿನ್ನನ್ನು ಪ್ರೇರೇಪಿಸಿ ಸರಿ ಹಾದಿಗೆ ತರುವ ಚೈತನ್ಯವೇ ದೇವರು.

ಆ. ಮನಸು ಕುದುರೆ ಮಾಡಿ ಮಾಯೆಯ ಹತ್ತಿಸುತ,
ಮೋಸಗೊಳಿಪ ಬ್ರಹ್ಮ ಮೂರ್ಖ ಜನರ.
ಬ್ರಹ್ಮ ನಡತೆ ತಿಳಿಯೆ ಬ್ರಹ್ಮಜ್ಞಾನಿ ಬಲ್ಲ.
ವಿಶ್ವದಾಭಿರಾಮ ಕೇಳು ವೇಮ.

ಬ್ರಹ್ಮ ಚೈತನ್ಯವು ರಹಸ್ಯವಾಗಿ ಪ್ರೇರೇಪಿಸುತ್ತದೆ. ಅದು ಜೀವಿಯನ್ನು ಪ್ರೇರೇಪಿಸುತ್ತದೆ. ಆದರೆ ಮನಸ್ಸೆಂಬ ಕುದುರೆಯ ಮೇಲೆ ಮಾಯೆಯನ್ನು ಹತ್ತಿಸುತ್ತದೆ. ಮಾಯೆಯು ವಿದ್ಯಾಗತಿಯಲ್ಲಿಯೂ ಕರೆದೊಯ್ಯಬಹುದು. ಅವಿದ್ಯಾಗತಿಗೂ ನೂಕಬಹುದು. ಇದು ಜೀವಿಯ ದತ್ತ ಸ್ವಾತಂತ್ರ್ಯವನ್ನು ಅನುಸರಿಸುತ್ತದೆ. ಇದನ್ನು ಮೂರ್ಖ ಜನರು ಬ್ರಹ್ಮನ ಮೋಸವೆಂದು ಕರೆದು ಅವಿದ್ಯೆಯತ್ತ ಸಾಗುತ್ತಾರೆ. ಸಜ್ಜನರು ಬ್ರಹ್ಮನ ಅನುಗ್ರಹವೆಂದು ಬಗೆದು ವಿದ್ಯಾ ಮಾರ್ಗದಲ್ಲಿ ಮುಂದುವರಿಯುತ್ತಾರೆ. 'ಸಾ ವಿದ್ಯಾ ಯಾ ವಿಮುಕ್ತಯೇ'. ಅಂದರೆ ಯಾವುದು ವಿಮುಕ್ತಿಗೊಯ್ಯುವುದೋ, ಅದುವೇ ವಿದ್ಯೆ. ಬ್ರಹ್ಮ ಜ್ಞಾನಿಗೆ ಬ್ರಹ್ಮನ ನಡತೆ ತಿಳಿದಿದೆ. ಅವನು ಪರಮನ ಇಚ್ಛೆಗೆ ವಿರೋಧವಾಗಿ ಏನನ್ನೂ ಮಾಡದೆ, ತನ್ನ ಇಚ್ಛೆಯನ್ನು ಪರಮನ ಇಚ್ಛಾನುವರ್ತಿಯಾಗಿಸುತ್ತಾನೆ.

ಜೀವಿಯೊಡನಿರುವ ದೇವನು, ತನ್ನನ್ನು ಅರಸಿ ಒಂದಾಗಲು ಜೀವಿಯನ್ನು ಪ್ರೇರೇಪಿಸುತ್ತಾನೆ. ದೇವನನ್ನು ಕೂಡುವ ನಮ್ಮ ಆತುರ ಒಂದು ಪಟ್ಟಾದರೆ, ಅವನ ಅನುಗ್ರಹವು ಅನೇಕ ಪಟ್ಟು. ದೇವರ ಸೃಷ್ಟಿ ಧಾರೆಯು, ಅವನ ಲೀಲೆಯಂತೆ. ಎಲ್ಲವನ್ನೂ ತನ್ನೊಳಗಿಂದ ಸೃಷ್ಟಿಸುತ್ತಾನೆ. ಮರಳಿ ತನ್ನಲ್ಲಿ ಲಯಗೊಳಿಸುತ್ತಾನೆ. ಈ ಲಯಗೊಳಿಸುವ ಕಾರ್ಯದಲ್ಲಿ ಅನುಗ್ರಹ ನೀಡಿ ಕರುಣಿಸುತ್ತಾನೆ. ಅದಕ್ಕಾಗಿ ಪಾತ್ರಾಪಾತ್ರತೆಯನ್ನು ಪರಿಕಿಸುತ್ತಾನೆ.

ಆ. ಶೋಧದಿಂದ ದೊರೆವ ವೇದಾಂತ ವೇದ್ಯನು.
ಶೋಧಿಸುವವನ ತಾನೆ ಶೋಧಿಸುತಿಹ.
ಶೋಧಿಸಲರಿತಂಥ ಸುಮತಿ ಸೇರುತಿಹನು.
ವಿಶ್ವದಾಭಿರಾಮ ಕೇಳು ವೇಮ.

ವೇದಾಂತ ವೇದ್ಯನು ಅಂದರೆ ಉಪನಿಷತ್ತುಗಳ ಜ್ಞಾನದಿಂದ ವೇದ್ಯನಾಗುವ ಬ್ರಹ್ಮನು ಶೋಧದಿಂದ ದೊರೆಯುತ್ತಾನೆ. ತನ್ನನ್ನು ಶೋಧಿಸುವ ಬ್ರಹ್ಮ ಜಿಜ್ಞಾಸುವನ್ನು ಕಂಡು ಅನುಗ್ರಹಿಸಲೆಂದು ಅವನು ಸೂಕ್ತ ಅಧಿಕಾರಿಗಳನ್ನು ಶೋಧಿಸುತ್ತಿರುವನು. ಅಂತೂ ಬ್ರಹ್ಮನನ್ನು ಶೋಧಿಸಲು ಅರಿತುಕೊಂಡ ಸುಮತಿಯು ವೇದಾಂತ ವೇದ್ಯನನ್ನು ಸೇರುತ್ತಾನೆ.

ಬ್ರಹ್ಮವನ್ನು ಅರಿಯುವ ಸರಿಯಾದ ವಿಧವನ್ನು ಅರಿಯದ, ಮೂಢರು ಅವನ ಶೋಧಕ್ಕಾಗಿ ಗುಡಿ ಗುಂಡಾರಗಳಲ್ಲಿ, ತೀರ್ಥ ಕ್ಷೇತ್ರಗಳಲ್ಲಿ, ಕಲ್ಲು ಲೋಹಗಳಲ್ಲಿ, ಕಟ್ಟಿಗೆ ಪಟಗಳಲ್ಲಿ, ಅರಸುತ್ತ ತಿರುಗುತ್ತಾರೆ. ವ್ರತ ನೇಮಗಳನ್ನು ಆಚರಿಸುತ್ತಾರೆ. ಕಂದಾಚಾರಗಳಿಗೆ, ಭಾವ ಜಡತೆಗಳಿಗೆ ಬಲಿಯಾಗುತ್ತಾರೆ. ಕೊನೆಗೊಮ್ಮೆ ಸರಿಯಾದ ಮಾರ್ಗ ಕಂಡುಕೊಳ್ಳಬಹುದು.

ಅನಂತವು ತಿಳಿವಿನಾಚೆಗೆ ಇದೆ. ಅದು ಮನಸ್ಸಿಗೆ ನಿಲುಕದು, ಬಣ್ಣನೆಗೆ ಸಿಗದು. ಮಾತು ಮನಂಗಳಿಂದತ್ತತ್ತ ಇದೆ. ನಾವು ಹೆಚ್ಚು ಹೆಚ್ಚು ಸೂಕ್ಷ್ಮ ಲೋಕದಲ್ಲಿ ಅನುಸಂಧಾನ ಮಾಡಿದರೆ, ಅದು ಹೆಚ್ಚು ಹೆಚ್ಚು ಹೊಳೆಯುತ್ತದೆ. ಹೊಳೆಯುವುದೇ ಅದರ ಧರ್ಮ. ಆದರೇನು? ಅದನ್ನು ತಿಳಿಯಲಾರೆವು. ನಾವು ಅದನ್ನು ತಿಳಿಯುವ ಪ್ರಯತ್ನವು ವ್ಯರ್ಥವಷ್ಟೇ. ಒಂದು ವೇಳೆ, ಅದು ಜ್ಞಾತವಾಗಿದ್ದರೆ, ಅದರ ರೀತಿಯೇ ಬೇರೆಯಾಗುತ್ತಿತ್ತು. ಏಕೆಂದರೆ ಅದು ನಿತ್ಯ ವಿಷಯೀ ಆಗಿದೆ. ಅದು ಸಾಕ್ಷಿ ಚೈತನ್ಯ. ಅದು ಇನ್ನೊಂದನ್ನು ನೋಡಬಹುದಲ್ಲದೆ, ಇನ್ನೊಂದಕ್ಕೆ ಅದು ವಿಷಯವಾಗದು. ಜ್ಞಾನವು ಸೀಮಿತವಿದೆ. ಜ್ಞಾನವು ವಿಷಯೀಕರಿಸುತ್ತದೆ. ಅಂದರೆ ತಾನು ಗ್ರಹಿಸುವುದನ್ನು ಇಂದ್ರಿಯಕ್ಕೆ ಇಲ್ಲವೆ ಅಂತಃಕರಣಕ್ಕೆ ವಿಷಯವಾಗಿಸುತ್ತದೆ. ಆದರೆ ಈ ಅನಂತ ಚೈತನ್ಯವು ಸರ್ವ ವಸ್ತುಗಳ ವಿಷಯೀ ಆಗಿದೆ. ಅಂದರೆ ಇನ್ನೊಂದರಿಂದ ತಾನು ಗ್ರಾಹ್ಯವಾಗದೆ ಇನ್ನೊಂದರ ಗ್ರಾಹಕವಾಗಿದೆ. ಅದು ಅಖಿಲ ವಿಶ್ವದ ಮತ್ತು ನಿನ್ನ ಆತ್ಮದ ಸಾಕ್ಷಿಯಾಗಿದೆ. ನಾವು ಈ ನಿತ್ಯ ಸಾಕ್ಷಿಯಾಗಿದ್ದೇವೆ. ಜ್ಞಾನವಾದರೋ, ನಿಮ್ನ ಮಟ್ಟದಲ್ಲಿದೆ. ಜ್ಞಾನವು ಪತಿತ ಅವಸ್ಥೆಯಾಗಿದೆ. ಅಂದ ಮೇಲೆ, ಅದು ಹೇಗೆ ಅನಂತ ಚೈತನ್ಯವನ್ನು ವಿಷಯಕರಿಸಬಲ್ಲದು ? ಅಂದರೆ ತಿಳಿಯಬಲ್ಲದು ?

ಬ್ರಹ್ಮಜ್ಞಾನ :

ಚಂ. ತಿಳಿಯಲು ಮೂಲದಲ್ಲಿ ಪರತತ್ತ್ವ , ತಿಳಿವಿಗಳವು ಇಲ್ಲವೈ.
ಬಲುಮೆಯಾಲಾತ್ಮ ಗುಟ್ಟು ಮನದಿ ಭಾವಿಸಿ ಯೋಚಿಸೆ ಬ್ರಹ್ಮ ಕಲ್ಪಮಂ.
ಕುಲಕುವ ಮುಕ್ತಿ ಜೀವರಿಗೆ ಆಗಲಿ, ಆತ್ಮ ನಿಧಾನ ಕೃತ್ಯವೈ.
ಸಲಲಿತ ಶಕ್ತಿ ರೂಪವೆನೆ ಸನ್ಮತಿ ವೇಮನ ಗೆಯ್ದ ಕಲ್ಪಮಂ.

ಪರತತ್ತ್ವವನ್ನು ಮೂಲದಲ್ಲಿ ತಿಳಿಯಬೇಕೆಂದರೆ, ಅದು ತಿಳಿವಿಗೆ ಅಳವಲ್ಲ. ಆದರೂ ಆತ್ಮದ ಗುಟ್ಟನ್ನು ಮನದಲ್ಲಿ ಯೋಚಿಸಿ, ಭಾವಿಸಲು ಅದು ಬ್ರಹ್ಮ ಕಲ್ಪನೆಯೇ ಆಗಿದೆ. ಆನಂದಮಯಿ ಜೀವರಿಗೆ ಆತ್ಮವು ಹೂತು ಇಟ್ಟ ದ್ರವ್ಯದಂತೆ ಇದೆ. ಇದು ಮನೋಹರವಾದ ಶಕ್ತಿ ರೂಪವೇ ಎಂದು ವೇಮನರು ಆ ಕಲ್ಪದ ಪವಿತ್ರ ಗ್ರಹಿಕೆಯನ್ನು ಸನ್ಮತಿ ಮಾಡಿದ್ದಾರೆ.

ಆ. ತಿಳಿವಿಗಳವು ಅಲ್ಲ, ದೈವವಾದ ಬ್ರಹ್ಮ.
ತಿಳಿಯಲಾರ ಬ್ರಹ್ಮ, ದೇವನಿರಲಿ.
ಉಸುಕಿನಲ್ಲಿ ಬಾವಿ, ತೋಡಲಾವ ಶಕ್ತ ?
ವಿಶ್ವದಾಭಿರಾಮ ಕೇಳು ವೇಮ.

ಯಾವುದು ಅನಂತವಾಗಿದೆಯೋ ಅದು ಅಜ್ಞಾತವಾಗಿದೆ. ದೈವವಾದ ಬ್ರಹ್ಮವು ತಿಳಿವಿಗೆ ಅಳವಲ್ಲ. ದೇವನೇ ಆದರೂ, ಯಾರೇ ಆದರೂ, ಬ್ರಹ್ಮವನ್ನು ತಿಳಿಯಲಾರರು. ಏಕೆಂದರೆ ಅದು ತಿಳಿಯುವ ಮನದ ಆಚೆಗಿದೆ. ಉಸುಕಿನಲ್ಲಿ ನೀರಿನ ಸೆಲೆಯಿಲ್ಲ. ಅಲ್ಲಿ ನೀರು ಸಂಗ್ರಹಕ್ಕಾಗಿ ಬಾವಿಯನ್ನು ತೋಡಲು ಯಾರು ಸಮರ್ಥರಾಗಬಹುದು ? ಅದೇ ರೀತಿ, ಬ್ರಹ್ಮದಲ್ಲಿ ಜ್ಞಪ್ತಿಯ ಸೆಲೆಯೇ ಇಲ್ಲ. ಅಲ್ಲಿ ಜ್ಞಾನ ಸಂಚಯವು ಹೇಗೆ ಆಗಬಹುದು ?

ಆ. ತಿಳಿವು ನಿಲಿಸಿ ನೋಡು, ದೀಪ್ತಿಪುದಾ ಕಳೆಯು.
ಕಳೆಯುಡುಗಲು ನೋಡು, ಕಾಣು ಬಯಲು.
ಬಯಲಿಗಂಟಿ ನೋಡು ಬ್ರಹ್ಮ ಕಾಣುತಿಹುದು.
ವಿಶ್ವದಾಭಿರಾಮ ಕೇಳು ವೇಮ.

ಅನಂತತೆಯನ್ನು ತನ್ನ ತಿಳಿವಿನ ವಿಷಯವಾಗಿಸಬೇಕೆಂಬ ಹೆಣಗಾಟ ನಿಷ್ಫಲ. ಆದ್ದರಿಂದ ತಿಳಿವನ್ನು ನಿಲ್ಲಿಸಿ ನೋಡಿದರೆ, ಆತ್ಮ ತೇಜವು ಬೆಳಗುತ್ತದೆ. ಮುಂದೆ ಕಳೆಯು ಉಡುಗುತ್ತದೆ. ಆಗ ಎಲ್ಲವೂ ಬಯಲಾಗಿ ಯಾವ ಸಂಕಲ್ಪ-ವಿಕಲ್ಪಗಳಿಲ್ಲದೆ ಶೂನ್ಯ ಬಯಲಾಗಿ ಕಾಣುತ್ತದೆ. ಈ ಬಯಲಿಗಂಟಿ, ನೋಡಿದರೆ ಯಾವುದು ಬ್ರಹ್ಮವೆನಿಸುವುದೋ, ಅದು ಕಾಣುತ್ತದೆ. ಇದು ಅರಿವಿನಾಚೆಯ ಅನುಭೂತಿ ; ಅಪರೋಕ್ಷಾನುಭೂತಿ.

ಗೀ. ತಿಳಿವಾವುದಿರದೆ, ಭೇದ ತಿಳಿಯದಿದ್ದು,
ಜೋಗುಳದಲ್ಲಿ ಅರ್ಥಿಯಿರೆ ಜೀಕವಾಡು-
ತಿರಲು ಯೋಗೀಂದ್ರನೆನ್ನುತಿರೆ ತಕ್ಕದಾಯ್ತು.
ವೇಮನನೆಂಬ ಯೋಗಿ ವಿನುತನು ವೇಮ.

ಯಾವ ತಿಳಿವೂ ಇರದೆ, ಅದು, ಇದು ಎಂದು ಗುರುತಿಸುವ ಭೇದವೂ ತಿಳಿಯದಿದ್ದು, ನಿರ್ಭೇದ ಸ್ಥಿತಿಯಲ್ಲಿ, ಯೋಗ ನಿದ್ರೆಗಿಳಿಯುವ ಜೋಗುಳದ ಸ್ಥಿತಿಯಲ್ಲಿ, ತಿಳಿಯಲು ಬಯಸಿದ ಅರ್ಥಿಯು ಇರುವಾಗ, ಅವನು ಅದು ಇದೆಂಬ ಭೇದವರಿಯದೆ ಜೀಕವಾಡುತ್ತಿರಲು, ಅವನನ್ನು ಯೋಗೀಂದ್ರ ಎಂದರೆ, ತಕ್ಕದಾಗುತ್ತದೆ. ಹೀಗೆ ಯೋಗೀಂದ್ರನೆನಿಸಿದವರಲ್ಲಿ ವೇಮನ ಯೋಗಿಯು ಪ್ರಸಿದ್ಧನು.

ನೈಜ ಮಾನವನು ಪೂರ್ಣ ಮಾನವನಾಗಿದ್ದಾನೆ. ಅನಂತತೆಯು ಪ್ರತಿಯೋರ್ವನ ನೈಜ ಸ್ವರೂಪವಾಗಿದೆ. ಇದು ತನ್ನನ್ನು ತಾನು ಪ್ರಕಟಪಡಿಸಲು ಬಯಸುತ್ತದೆ. ನೈಜ ಮಾನವನ ಮಾರ್ಗದರ್ಶಕ ಗುಣವೆಂದರೆ, ಮಾನವರನ್ನು, ಅಷ್ಟೇ ಏಕೆ, ಪ್ರಾಣಿಗಳನ್ನು ಕುರಿತು ಸಹ, ದಯೆ ತೋರುವುದು. ದಾನ-ಧರ್ಮ ಮಾಡುವುದು. ಏಕೆಂದರೆ, ಈ ವಿಶ್ವವೆಲ್ಲ ತಾನೇ ಎನ್ನುವುದರ ಅಭಿವ್ಯಕ್ತಿಯೇ ಇದಾಗಿದೆ. ಇಲ್ಲವಾದರೆ ದಾನ ಧರ್ಮಗಳಿಗೆ ಏನರ್ಥ ? ಸರ್ವ ಸಮತೆಯ

ಭಾವನೆಯೇ ಇದರ ಪ್ರೇರಕ ಶಕ್ತಿ.

ಯಾವನು ಪೂರ್ಣ ಮಾನವನಾಗಿರುವನೋ ಅವನೇ ಅನಂತವನ್ನು, ಅಸೀಮವನ್ನು ಅರಿತವ. ಅಂದರೆ ಅವನೇ ಬ್ರಹ್ಮಜ್ಞಾನಿ. ಇಂಥ ಬ್ರಹ್ಮಜ್ಞಾನಿಗೆ ಮಾತ್ರ ಅನ್ಯರ ಆಪತ್ತುಗಳು ತಂತಾನೇ ಅರ್ಥವಾಗುತ್ತವೆ. ಹಾಗಾಗಿ ಅವರಿಗೆ ಸಹಾಯ ಹಸ್ತ ನೀಡುತ್ತಾನೆ.

ಆ. ಕೇಳದರ್ಥವೀವ ತಾನೆ ಬ್ರಹ್ಮಜ್ಞಾನಿ.
ಕೇಳಲರ್ಥವೀವ ತಾನು ತ್ಯಾಗಿ.
ಕೇಳಲೀಯದಾತ ಕೆಡು ಲೋಭಿ ತಾನಿಹ.
ವಿಶ್ವದಾಭಿರಾಮ ಕೇಳು ವೇಮ.

ಆ. ಅರಿ ತನ್ನಾಸ್ತಿಯೆನದೆ, ಅಡ್ಡ ಮಾತನಾಡದೆ,
ಬಯ್ಯದೆ ಮನದೊಳಗೆ ಪರಿತಪಿಸದೆ,
ತನ್ನದಲ್ಲವೆಂದು ತಾ ಕೊಡುದನು ಕೊಂಡು.
ವಿಶ್ವದಾಭಿರಾಮ ಕೇಳು ವೇಮ.

'ಅಲ್ಪ ನಾನು'ವು ನಾನು, ನನ್ನದು ಎಂದು ಮಮತೆ ತಾಳುತ್ತದೆ. ಆದರೆ ಭೂಮಾ ನಾನುವಿನಲ್ಲಿ ಅನಂತತೆಯಲ್ಲಿ, ಆ ಭಾವ ಇರದು. ಪೂರ್ಣ ಮಾನವನು ಪರಮನ ಆಸ್ತಿಯನ್ನು ತನ್ನ ಆಸ್ತಿಯೆಂದು ತಿಳಿಯುವುದಿಲ್ಲ. ದಾನ ನೀಡುವಾಗ ಅಡ್ಡ ತಿಡ್ಡ ಮಾತನಾಡುವುದಿಲ್ಲ. ದರ್ಪ ತೋರಿ ಬಯ್ಯುವುದಿಲ್ಲ. ತನ್ನದನ್ನು ಕೊಡಬೇಕಾಯಿತಲ್ಲ, ಎಂದು ಮನಸ್ಸಿನೊಳಗೆ ಪರಿತಪಿಸುವುದಿಲ್ಲ. ಯಾವುದನ್ನು ನೀಡಬೇಕಾಗಿದೆಯೋ, ಅದು ತನ್ನದಲ್ಲವೆಂದು ತಿಳಿದು, ತಾನು ಕೊಡುವುದನ್ನು ಕೊಡಬೇಕು.

ಆ. ದಾನ ಒಪ್ಪ ಗೆಯ್ಯೆ ದಡವ ಸೇರಬಹುದು.
ಮನವ ನಂಬಿ ಇರಲು, ಮಾಯೆ ಮುಳುಗು.
ಜ್ಞಾನ ಕಳೆಯ ನಂಬಿ ಜಡಿಯೊ ವೈರಿಗಳನು.
ವಿಶ್ವದಾಭಿರಾಮ ಕೇಳು ವೇಮ.

ಸತ್ಪಾತ್ರದಲ್ಲಿ, ತನ್ನದಲ್ಲವೆಂದು ತಿಳಿದು, ದಾನ ಮಾಡಿದರೆ ಅದು ಒಪ್ಪ ದಾನವೆನಿಸುತ್ತದೆ. ಆದರೆ ಮಾಯೆಯಲ್ಲಿ ಮುಳುಗಿದ ಮನವು ನಾನು, ನನ್ನದೆಂಬ ಭ್ರಾಂತಿಯಿಂದ ಸತ್ಪಾತ್ರದಲ್ಲಿ ದಾನವೀಯಲು ಅಡ್ಡಿಪಡಿಸುತ್ತದೆ. ಆದ್ದರಿಂದ ಪೂರ್ಣ ಪ್ರಜ್ಞೆಯ ಕ್ರಿಯೆಗಳಿಗೆ, ವೈರಿಗಳಂತೆ ವಿರೋಧಿಸುವ, ಮೋಹ ಲೋಭಗಳನ್ನು ಜಡಿಯಬೇಕು. ವಿವೇಕ ಜ್ಞಾನದ ಕಳೆಯನ್ನು ನಂಬಬೇಕು.

ನಾನು ನನ್ನದು ಎಂಬ ಸ್ವಾರ್ಥವೇ ಆತಂಕ. ಆದ್ದರಿಂದ ಸ್ವಾರ್ಥ ತ್ಯಾಗವೇ ಪೂರ್ಣ ಮಾನವನ ಅಭಿವ್ಯಕ್ತಿಗೆ ಮೂಲವಾಗಿದೆ.

ಈ ದಾನ ಧರ್ಮ ಕಾರ್ಯಗಳ ಪ್ರಯೋಜನವೇನು ? ಎಂದು ಹಲವರ ಪ್ರಶ್ನೆ. ಯಾವುದೊಂದರ ಪ್ರಯೋಜನವನ್ನು ರೂಪಾಯಿ, ಹಣದ ಮೂಲ್ಯದಿಂದ ನಿರ್ಧರಿಸುವುದು

ಲೋಕ ವ್ಯಾಪಾರದ ದೃಷ್ಟಿ. ಆದರೆ, ಎಷ್ಟು ರೂಪಾಯಿ ಕೊಟ್ಟರೆ ಒಂದು ಪೌಂಡು ಸುಖ ಸಿಕ್ಕಬಹುದು ? ಇಲ್ಲ. ಇದು ಹೀಗಲ್ಲ. ಮಾನವನಿಗೆ ಸುಖ ಬೇಕು. ಅನಂತ ಸುಖ ಬೇಕು. 'ಸುಖಂ ಅನಂತಂ ಆನಂದಂ!' ಅನಂತ ಸುಖವೇ ಆನಂದ. 'ಆನಂದಂ ಬ್ರಹ್ಮ ಇತ್ಯಾಹುಃ' ಆನಂದವೇ ಬ್ರಹ್ಮವಾಗಿದೆ. ಆದ್ದರಿಂದ ಪ್ರಯೋಜನಾರ್ಥಿಗಳು ಸುಖ ಸಂತೋಷಗಳನ್ನು ಬಯಸುತ್ತಾರೆ. ಆದರೆ

ಆ. ಸುಖಿಗಳೆಲ್ಲ ತಿಳಿದು ಸಲೆ ಕಾಣಲು ದುಃಖ.
ಪಾಪ ಪೂರ್ವಕವಿದೆ ; ಪುಣ್ಯವೆಲ್ಲ.
ಕಳ್ಳ ಕೋರಿಕೆ ವಿಧ ಕೊರತೆಗಳಿರುವವಲ !
ವಿಶ್ವದಾಭಿರಾಮ ಕೇಳು ವೇಮ.

ಪ್ರಯೋಜನವಾದಿಗಳು ಎಂಥ ಸುಖ ಬಯುತ್ತಾರೆ ? ವಿಷಯ ಸುಖವನ್ನು ತಾನೇ? ಇದು ಇಂದ್ರಿಯ ಮೂಲಕ ದೊರೆಯುವ ಅನುಕೂಲ ವೇದನೆ. ಆದರೆ ವಿಷಯಾನಂದವು ನಿತ್ಯವಾದುದಲ್ಲ. ಅದು ಕ್ಷಣಿಕ. ಹೀಗಾಗಿ ವಿಷಯ ಭೋಗದ ಕಾಲಕ್ಕೆ ಲಭ್ಯವಾದ ಸುಖವು. ಭೋಗಾನಂತರ ಇಲ್ಲವಾಗುತ್ತದೆ. ಆದರೆ ಭೋಗಾಸಕ್ತಿ ನಶಿಸುವುದಿಲ್ಲ. ಹೀಗಾಗಿ, ದುಃಖವೆನಿಸುತ್ತದೆ. ನಾವು ಪುಣ್ಯವೆನ್ನುವುದು, ಸುಖವೆನ್ನುವುದು, ಇತರರ ಹೊಟ್ಟೆ ಹೊಡೆದು ದೋಚಿದ ವಸ್ತುಗಳ ಭೋಗವನ್ನು. ಈ ವಸ್ತುಗಳನ್ನು ದೋಚುವಾಗ ಪರಪೀಡೆಯನ್ನು ನೀಡುತ್ತೇವೆ. ಪಾಪ ಮಾಡುತ್ತೇವೆ. ಹೀಗೆ, ಪುಣ್ಯವೆಲ್ಲ ಪಾಪಪೂರ್ವಕವಿದೆ. ಮಾನವನಲ್ಲಿ ಕೆಲವು ಕೋರಿಕೆಗಳು, ತೃಪ್ತಿ ಕಾಣದೆ ಕಳ್ಳ ಕೋರಿಕೆಗಳಾಗಿರುತ್ತವೆ. ಈ ತೆರನಾದ ಕಳ್ಳ ಕೋರಿಕೆಗಳೇ ಮಾನವನಿಗೆ ಕೊರತೆಗಳೆನಿಸುತ್ತವೆ. ಇದ್ದುದರಲ್ಲಿ ಸಮಾಧಾನ ಪಡೆಯಲು ಬಿಡುವುದಿಲ್ಲ.

ಆ. ಇಹದಲ್ಲಿ ಸೌಖ್ಯವು ಈಡೇರುತಲಿಲ್ಲ.
ಪರವ ನಂಬಿ ತಾನು ಬದುಕಬಹುದೆ ?
ಮೊದಲು ಇರದ ಸುಖವು ಕೊನೆಗೆ ಬರುವುದೆಂತು ?
ವಿಶ್ವದಾಭಿರಾಮ ಕೇಳು ವೇಮ.

ಪ್ರಯೋಜನವಾದಿಗಳು ತಮ್ಮ ಪ್ರತಿ ಕ್ರಿಯೆಯ ಪ್ರಯೋಜನ ಪಡೆಯಲು ಬಯಸುತ್ತಾರೆ. ಇಹದ ಬಾಳಿನಲ್ಲಿ ಸುಖ ಕಾಣದೆ ನಿರಾಶರಾಗುತ್ತಾರೆ. ಹೀಗಾಗಿ ಪರದ ಬಾಳಿನಲ್ಲಾದರೂ ಸುಖ ಸಿಗುವುದೆಂದು ನಂಬಿ ಬದುಕಬಹುದೇ ? ಸುಖಾನುಭವವು ಸತ್ವ ಗುಣದ ವೇದನೆ. ತಾತ್ಕಾಲಿಕವಿರಲಿ, ನಿತ್ಯವಿರಲಿ, ಸುಖ ಸವಿಯಬೇಕಾದರೆ ಸತ್ವ ಗುಣವನ್ನು ವೃದ್ಧಿಸಿಕೊಳ್ಳಬೇಕು. ಏಕೆಂದರೆ, ಮೊದಲು ಇರದ ಸುಖವು ಕೊನೆಗೆ ಬರುವುದೆಂದು ? ಸತ್ವ ಗುಣವರ್ಧನೆಯಿಂದಲೇ ಪರದಲ್ಲಿಯೂ ದೀರ್ಘ ಸುಖವನ್ನು ಪಡೆಯಬಹುದು.

ಆ. ಸುಖಾಸುಖಿಗಳಲಿ ತಾ ಸಗುಣ ನಾಗಿಯುಂಟು.
ಪ್ರಕೃತಿ ಲಗ್ನವಾಗಿ ಪರಮ ಕೆಡುವ.
ವಿಧಿಗಳ ಹುಟ್ಟಿಸುವ ವಿಧಿಯ ತಾನು ಕಾಣ.
ವಿಶ್ವದಾಭಿರಾಮ ಕೇಳು ವೇಮ.

ನಿರ್ಗುಣನು ಸುಖಾಸುಖಿಗಳಿಗೆ ಅತೀತನಾಗಿ ಉಂಟು. ಸುಖಿವನ್ನಾಗಲಿ, ಅಸುಖಿವನ್ನಾಗಲಿ, ತಿಳಿಯುವವನು ಸಗುಣನೇ, ಸಗುಣನು ತ್ರಿಗುಣಮಯಿ ಪ್ರಕೃತಿಯನ್ನು ಲಗ್ನವಾದ ಪರತತ್ತ್ವವಷ್ಟೇ. ಹಾಗಾಗಿ ಅವನು ಕೆಡುತ್ತಾನೆ. ಗುಣಾಧೀನನಾಗುತ್ತಾನೆ. ಯಾವುದರ ಫಲವು ಏನಾಗಬೇಕೆಂಬ ವಿಧಿಗಳನ್ನು ಹುಟ್ಟಿಸುವ ವಿಧಿಯನ್ನು, ಬ್ರಹ್ಮವನ್ನು, ತಾನು ಅರಿಯನು.

ಗಗನವಮರ ಕಂಡು, ಕಣ್ಣು ಮಧ್ಯೆ ಇರಿಸಿ,
ನಿಲಿಸಿ ನೋಡಿ, ನೋಡಿ, ನಿಲುವುದು ಸುಖಿ.
ಸುಖಿದ ಒಳಗೆ ಮತ್ತೆ ಸೂತ್ರವಿಹುದು ಬ್ರಹ್ಮ.
ವಿಶ್ವದಾಭಿರಾಮ ಕೇಳು ವೇಮ.

ಧ್ಯಾನದಲ್ಲಿ, ಹೃದಯ ಮಧ್ಯೆ ಅಮರವಾದ ಆಕಾಶವನ್ನು ಕಂಡು, ಅದನ್ನು ಒಳಗಣ್ಣಿನ ಮಧ್ಯೆ ಇರಿಸಿ, ನಿಲ್ಲಿಸಿ, ನೋಡುತ್ತ ನೋಡುತ್ತ ಇರಲು ಸುಖಿವು ಸ್ಥಿರವಾಗಿ ನಿಲ್ಲುವುದು. 'ಸುಖಂ ಅನಂತಂ ಆನಂದಂ'. 'ಆನಂದಂ ಬ್ರಹ್ಮ ಇತ್ಯಾಹುಃ'. ಖಂಡ ಸುಖಿವನ್ನು ಪೋಣಿಸುವ ಸೂತ್ರವೇ ಆನಂದವು. ಸುಖಿದ ಮಾಲೆಯೇ ಆನಂದಮಯಿಯಾದ ಬ್ರಹ್ಮವಾಗಿದೆ.

ಅರಿತ ಮನುಜನ ಸುಖಿ ಆವ ಲೋಕದಿಲ್ಲ ?
ಅರಿವು ಅರಿಯಲವಗೆ ಅರಿವೆ ಇಲ್ಲ.
ಅರಿವಿಗೆ ಸಮನರಿವೆ ; ಅರಿವೆ ತತ್ತ್ವವಹುದು.
ವಿಶ್ವದಾಭಿರಾಮ ಕೇಳು ವೇಮ.

ಅರಿತ ಮನುಜನ ಸುಖಿವು ಎಲ್ಲ ಲೋಕಗಳಲ್ಲಿಯೂ ಇದೆ. ಇಹದಲ್ಲಿಯೂ ಇದೆ ; ಪರದಲ್ಲಿಯೂ ಇದೆ. ಆದರೆ, ಇರುವ ಸಮಸ್ಯೆಯೆಂದರೆ, ಅರಿವು ಅರಿಯಲು ಅವನಿಗೆ ಅರಿವೇ ಇಲ್ಲ. ಅರಿವು ಜ್ಞಾತವಲ್ಲ. ಎಲ್ಲಿ ಜ್ಞಾತೃವೂ, ಜ್ಞಾನವೂ, ಜ್ಞೇಯವೂ ಒಂದಾಗಿ ತ್ರಿಪುಟಿ ಏರ್ಪಟ್ಟಿದೆಯೋ, ಆ ಇರವು ಅದು. ಅಲ್ಲಿ ಅರಿಯುವವನು ಯಾರು ? ಏನನ್ನು ಅರಿಯಬಹುದು? ಅನುಪಮ ಸ್ಥಿತಿ. ಅರಿವಿಗೆ ಸಮನಾದುದು ಅರಿವೇ ಆಗಿದೆ. ಅರಿವು ಪರಮ ಧಾಮವಾಗಿದೆ. ತತ್+ತ್ವವಾಗಿದೆ.

ಇನ್ನು ಮುಂದಿನ ಅಂಶವೆಂದರೆ, ಅಜ್ಞಾನವು ಸರ್ವ ದುಃಖಿಗಳ ಜನನಿಯಾಗಿದೆ. ಮೂಲ ಅಜ್ಞಾನವೆಂದರೆ, ಅನಂತವು ತಾನು ಸಾಂತವಾಗಿದ್ದೇನಲ್ಲ ? ಎಂದು ದುಃಖಿಸುತ್ತಿದೆಯೆಂಬ ಗ್ರಹಿಕೆ. ಇದರಿಂದಾಗಿಯೇ, ನಿಜವಾಗಿಯೂ ಪೂರ್ಣರಾದ, ನಿರ್ಮಲರಾದ ಚೈತನ್ಯ ಸ್ವರೂಪರಾದ ನಾವು ಕ್ಷುದ್ರ ಮನವೆಂದು, ಕ್ಷುದ್ರ ದೇಹವೆಂದು ಭಾವಿಸುತ್ತೇವೆ. ಇದುವೇ ಸ್ವಾರ್ಥದ ಮೂಲ. ಕ್ಷುದ್ರತೆಯು ದುಃಖಿ ಜನನಿ. ನಾನು ಬೇರೆ ; ಇನ್ನೊಂದು ಬೇರೆ, ಎಂಬ ಪ್ರತ್ಯೇಕತೆಯು. ಉದ್ಯಮಿಗಳು ತಮ್ಮ ಸ್ವಾರ್ಥಪರ, ಪ್ರತ್ಯೇಕತೆಯ, ಶೋಷಕ ನಿಲುಮೆಯನ್ನು ತ್ಯಜಿಸಿದರೆ, ಜಗತ್ತು ಸ್ವರ್ಗ ಸೀಮೆಯಾಗಬಹುದು. ಇದು ನೈಜ ಮಾನವತೆಯ, ಅನಂತ ಪ್ರಜ್ಞೆಯ ಪರಮೋಪಯೋಗವಾಗಿದೆ.

ಇದನ್ನೆಲ್ಲ ಸಾಧಿಸುವುದು ಸುಲಭವೇ ? ಸಾಧ್ಯವೇ ? ಎಂಬ ಭಯವು ಮೂಡಬಹುದು.

ಆ. ಜಯವ, ಭಯವ ದಾಟಿ, ಹಠವ ಹಿಡಿದು ಇರುತ,
ದಯಕೆ ಪಾತ್ರನಾದ ಧರ್ಮಪರನು.
ನಯವ ಕಾಣು ಗುರುವ ನಂಬಿ ನೆಮ್ಮದಿ ಬೇಡು.
ವಿಶ್ವದಾಭಿರಾಮ ಕೇಳು ವೇಮ.

ಭಯವನ್ನು ದಾಟಿ, ಹಠ ಹಿಡಿದು ಸಾಗಿ ಜಯವನ್ನು ಸಾಧಿಸು. ಆಗ ನೀನು ಧರ್ಮಪರನಾಗಿ ಸ್ವಾರ್ಥ ತ್ಯಾಗಿಯಾಗಿ ದಾನಧರ್ಮಗಳನ್ನು ಮಾಡಲು ಯೋಗ್ಯ ವ್ಯಕ್ತಿಯಾಗುವೆ. ದಯವು ನಿನ್ನಲ್ಲಿ ಸ್ಫುರಿಸುವುದು. ದಯವು ಧರ್ಮಕ್ಕೆ ಮೂಲವಲ್ಲವೇ ? ಆಗ ನಿನ್ನೊಳಗಿನ ಮಾರ್ಗದರ್ಶಕ ಗುರುವನ್ನು ನಂಬಿ, ವಿನಯದಿಂದ ಕಂಡು ನೆಮ್ಮದಿಯನ್ನು ನೀಡೆಂದು ಬೇಡಿಕೋ. ಆಗ ಕರುಣೆ ಸುರಿಯುವುದು.

ಇಂದಿನ ಸಮಾಜದಲ್ಲಿ ಇದೆಲ್ಲ ಸಾಧ್ಯವೇ ? ಏಕೆ ಸಾಧ್ಯವಿಲ್ಲ ? ಸತ್ಯವು ಸಮಾಜಕ್ಕೆ ಋಣಿಯಾಗಿಲ್ಲ. ಪ್ರತಿಯಾಗಿ ಸಮಾಜವೇ ತನ್ನ ಸ್ವಾಸ್ಥ್ಯ ಕಾಪಾಡಿಕೊಳ್ಳಲು ಸತ್ಯ ಧರ್ಮಕ್ಕೆ ಋಣಿಯಾಗಬೇಕಾಗಿದೆ. ಆದ್ದರಿಂದ ದಾನ ಕೊಡುವುದು ಮೇಲು ನಿಜ. ಆದರೆ ದಾನ ಕೊಡುವುದಕ್ಕಿಂತ ಆಶೆ ತೊರೆಯುವುದೇ ಮೇಲು.

ಆ. ದಾನ ಕೊಡುವಕಿಂತ, ಧ್ಯಾನ ಮತ್ತೆ ಮೇಲು.
ಧ್ಯಾನ ಗೆಯ್ವಕಿಂತ, ತಿಳಿವು ಮೇಲು.
ತಿಳಿವಿಗಿಂತ ಆಶೆ ತೊರೆಯುತಿಹುದೆ ಮೇಲು.
ವಿಶ್ವದಾಭಿರಾಮ ಕೇಳು ವೇಮ.

ವೇಮನರು ತಮ್ಮ ನಿತ್ಯ ಧ್ಯಾನ ಮುಗಿಸಿ, ಬಹಿರ್ಮುಖರಾದ ಮೇಲೆ, ಅವರನ್ನು ಸಂದರ್ಶಿಸಲು ಬಂದ ಅನೇಕ ಅಭಿಮಾನಿಗಳಲ್ಲಿ ದಾನಶೀಲನಾದ ಸಿರಿವಂತನೊಬ್ಬನು ಹೀಗೆ ಪ್ರಶ್ನಿಸಿದನು.

''ಸ್ವಾಮಿ ! ದಾನ ಧರ್ಮ ಮಾಡಿ ಪುಣ್ಯಾರ್ಜನೆ ಮಾಡಿದರೆ ಸಾಲದೇ ? ಸ್ವರ್ಗ ಲೋಕಕ್ಕೆ ಹೋಗಿ ಸುಖಿಸಬಹುದಲ್ಲವೇ ? ಈ ಧ್ಯಾನಾದಿಗಳಿಲ್ಲ ಏಕೆ ?'' ಎಂದನು.

''ಒಳ್ಳೆಯ ಪ್ರಶ್ನೆ. ನಿಮಗೆ ಪೂರ್ವ ಸುಕೃತದಿಂದ ಸಂಪತ್ತು ಪ್ರಾಪ್ತವಾಗಿದೆ. ಅದನ್ನು ಸತ್ಪಾತ್ರದಲ್ಲಿ ದಾನ ಮಾಡಿದರೆ ಇನ್ನಷ್ಟು ಪುಣ್ಯಾರ್ಜನೆಯಾಗಿ ಪುಣ್ಯ ಫಲಪ್ರಾಪ್ತವಾಗಬಹುದು. ಅದೂ ಫಲ ನೀಡುತ್ತದೆ. ಆ ಫಲ ಭೋಗಕ್ಕೋಸುಗ ಮತ್ತೆ ಜನ್ಮ ತಳೆಯಬೇಕಷ್ಟೇ''. ಎಂದರು.

''ಹಾಗಾದರೆ ಇದರಿಂದ ಬಿಡುಗಡೆಯೇ ಇಲ್ಲವೇನು ಸ್ವಾಮಿ ?'' ಎಂದು ಮರು ಪ್ರಶ್ನೆ.

''ಇದೆ ದಾನ ಮಾಡಬೇಕು. ದಾನ ಮಾಡುವುದಕ್ಕಿಂತಲೂ ಮೇಲಿನ ಹಂತವೇ ಪರಮಾತ್ಮನ ಧ್ಯಾನ ಮಾಡುವುದು. ಧ್ಯಾನದಿಂದ ಮನಸ್ಸು ಏಕಾಗ್ರವಾಗುತ್ತದೆ. ಅಗ್ರ ಬುದ್ಧಿಯಲ್ಲಿ ಆತ್ಮ ಪ್ರತಿಬಿಂಬಿಸುತ್ತದೆ. ಅನಂತತೆಯ ತಿಳಿವು ಮೂಡುತ್ತದೆ. ಈ ತಿಳಿವಿಗಿಂತ ಮೇಲಾದುದು ಎಂದರೆ, ವಿಷಯ ಭೋಗದ ಆಸೆ ತೊರೆಯುವುದೇ ಆಗಿದೆ. ಆಗ ಅಸಕ್ತ ಮನಸ್ಸಿನಿಂದ ದಾನಧರ್ಮ

ಕ್ರಿಯೆಗಳು ತಂತಾನೇ ನಡೆಯುತ್ತವೆ. ಕರ್ಮ ಬಂಧನದ ಗೊಡವೆ ಇರದು'' ಎಂದರು ಯೋಗಿಗಳು.

ಯಾವ ಸಮಾಜವು ಉಚ್ಚತಮ ಸತ್ಯಗಳನ್ನು ಆಚರಿಸುವುದೋ, ಅದುವೇ ಉತ್ತಮ ಸಮಾಜ. ಆದ್ದರಿಂದ ಸತ್ಯವನ್ನು ಎದುರಿಸುವ ಧೈರ್ಯದ ನಡೆ ಇರಲಿ ; ಬಾಳಿನಲ್ಲಿ ಸತ್ಯಧರ್ಮವನ್ನು ತೋರ್ಪಡಿಸಲಿ. ಅಂಥ ಸಮಾಜವು ಮರಣಕ್ಕೆ ಅಂಜದು. ಛೀ ! ಛೀ ! ಅದು ಸತ್ಯಕ್ಕಾಗಿ, ಸತ್ಯದ ಪಾಲನೆಗಾಗಿ, ಮರಣವನ್ನು ಬರಮಾಡಿಕೊಳ್ಳುತ್ತದೆ. ತನ್ನ ಆತ್ಮವನ್ನು ತಾನು ಅರಿತಾಗ, ಅವನು ಸಕಲರ ದೇಹದಲ್ಲಿ ಇರುವ ಆತ್ಮನೇ ಆಗಿರುತ್ತಾನೆ. ಅವನನ್ನು ಯಾರು ತಾನೇ ಕೊಲ್ಲಬಹುದು ? ಮಹಾತ್ಮ ಗಾಂಧಿ ಇಂಥ ಇರವಿಗೊಂದು ನಿದರ್ಶನವಲ್ಲವೇ? ಈ ಆತ್ಮವನ್ನು ''ಶ್ರೋತವ್ಯಂ, ಮಂಥ್ಯವ್ಯಂ, ನಿದಿಧ್ಯಾಸಿತವ್ಯಂ''.

ಆ. ಸತ್ಯ ಕಂಡರಿವುದೆ ಜ್ಞಾನದರಿವು ಕಣಾ.
ಜ್ಞಾನದರಿವಾದೊಡೆ ಸತ್ಯದರಿವು.
ಜ್ಞಾನ ಸತ್ಯ ಸಮವಾಗಿರೆ ದ್ವಿಜನೆನಿಪ.
ವಿಶ್ವದಾಭಿರಾಮ ಕೇಳು ವೇಮ.

ಋತಂ ಎಂದರೆ ಸತ್ಯ. ಸತ್ಯದ ಇನ್ನೊಂದು ಅರ್ಥವೆಂದರೆ, ''ಪರ ಹಿತಾರ್ಥಂ, ಯಥಾರ್ಥಂ ಸತ್ಯಂ''. ಅಂದರೆ ಯಾವುದರ ಪ್ರಯೋಜನವು ಪರಹಿತವಾಗಿದೆಯೋ, ಅದು ಸತ್ಯವಾಗದೆ. ಈ ಸತ್ಯವನ್ನು ಕಂಡುಕೊಂಡು ಅರಿಯುವುದೇ ಜ್ಞಾನದ ಅರಿವು .ಯಾವಾಗ ಆತ್ಮಜ್ಞಾನದ ಅರಿವಾಗುವುದೋ, ಆಗ ತನ್ನೊಳು ಸಕಲವೆಂಬ ಅರಿವು ಮೊಳೆತು ಸತ್ಯದ ಅರಿವಾಗುತ್ತದೆ. ಜ್ಞಾನವಾಗುತ್ತ ಹೋದಂತೆ ಸತ್ಯದ ಅರಿವೂ ಆದರೆ, ಆ ಜೀವಿಯು ಇಹದಿಂದ ಪರಕ್ಕೆ ಕಾಲಿಟ್ಟ ದ್ವಿಜನೆನಿಸುತ್ತಾನೆ. ತನ್ನ ನಿಜವನ್ನು ಅರಿಯಬಲ್ಲ ಅಧಿಕಾರಿಯಾಗುತ್ತಾನೆ.

ನೀವಾರೂ ಬಲಹೀನರಲ್ಲ ; ಪಾಪಿಗಳಲ್ಲ. ಪ್ರತಿಯಾಗಿ ನೀವು ಅಮೃತ ಪುತ್ರರಾಗಿದ್ದೀರಿ. ಈ ಪ್ರಬಲ, ಸಹಾಯಕಾರಿ, ವಿಚಾರವು ನಿಮ್ಮಲ್ಲಿ ಬಾಲ್ಯದಿಂದಲೇ ಮೊಳೆಯಲಿ. ಇದು ನಿಮ್ಮ ಕಿವಿಗಳಲ್ಲಿ ಅಹೋರಾತ್ರಿ ರಿಂಗಣಿಸಲಿ. ಮರಣ ಬಂದರೂ ನೀವು ಭಯ ಪಡದೆ, 'ಸೋಽಹಂ ಸೋಽಹಂ' ಎನ್ನಿರಿ. ಅನಂತತೆಯ ಶಕ್ತಿ ನಿಮ್ಮದಾಗಲಿ. ಈ ಸಾವ, ಕೆಡುವ ತನುವು ನಾನೆಂಬ ಅಲ್ಪ ಬುದ್ಧಿಯ ಮೂಢ ನಂಬುಗೆಯನ್ನು ತ್ಯಜಿಸಿರಿ. ಗುರಿಯು ದೂರವೆನಿಸಬಹುದು. ಆದರೆ ನೆನಪಿಡಿ. 'ಉತ್ತಿಷ್ಠತ ; ಜಾಗ್ರತ ಪ್ರಾಪ್ಯವರಾನ್ ನಿಬೋಧತ' ಏಳಿ ; ಎದ್ದೇಳಿ ಪಡೆದವರಿಂದ ಬೋಧೆ ಪಡೆಯಿರಿ.

ಸಾಂಖ್ಯಯೋಗ – ತತ್ತ್ವ ನಿರ್ಣಯ

ಒಂದು ಸಂಗತಿಯನ್ನು ಅಕ್ಷರ ಮೂಲಕ ತಿಳಿಸಬಹುದು. ಇಲ್ಲವೆ ಸಂಖ್ಯೆಯ ಮೂಲಕ ಸಾಮಾನ್ಯ ಅಭಿಪ್ರಾಯದಂತೆ ಸಂಖ್ಯೆಯಿಂದ ನಿಷ್ಕರ್ಷಿಸುವುದು ಮೇಲು. ಅಕ್ಷರ ನಿರೂಪಣೆಯು ಭಾಷೆಯ ಅರ್ಥ ವಿವರಣೆಯಲ್ಲಿ ಹೆಚ್ಚು ಕಡಿಮೆಯಾಗಬಹುದು. ಆದರೆ ಸಂಖ್ಯೆಯ ವಿವರಣೆಯು ನಿಷ್ಕರ್ಷವಾಗಿರುತ್ತದೆ.

ಕಂ. ನರಜನ್ಮವ ತಾನೆತ್ತಿಯು
ಪರಮಾತ್ಮನನರಿಯದಿರಲು ಪಾಪಾತ್ಮನಲಾ !
ಬರಿ ದುರಿತ ಕರ್ಮ ಗೆಯ್ದೊಡೆ,
ಮರಳಿ ಅಧೋಗತಿ ಪಡೆವನು, ಅರಿಯೈ, ವೇಮಾ.

ಎಂಭತ್ತು ನಾಲ್ಕು ಜೀವರಾಶಿಗಳಲ್ಲಿ ನರಜನ್ಮವು ಶ್ರೇಷ್ಠವಾದದ್ದು. ನರಜನ್ಮದಲ್ಲಿ ಬುದ್ಧಿತತ್ತ್ವವೂ ವಿಕಾಸವಾಗಿದೆ. ಸಾಧನೆ ಮಾಡಿ, ಅಗ್ಯ ಬುದ್ಧಿಯಲ್ಲಿ ಪರಮಾತ್ಮನನ್ನು ಅರಿಯುವುದು ಈ ಜನ್ಮದ ಉದ್ದೇಶ. ಹಾಗೆ ಮಾಡದವನು ಪಾಪಾತ್ಮನೇ ಸರಿ. ನರಜನ್ಮದಲ್ಲಿ ಬರೇ ದುರಿತ ಕರ್ಮಗಳನ್ನೇ ಮಾಡಿದರೆ, ನರಜನ್ಮವನ್ನು ತುಲುಪುವ ಮುನ್ನ ಹಾಯ್ದು ಬಂದ ನಿಮ್ನ ಮಟ್ಟದ ಜೀವ ಜಂತುಗಳ ಯೋನಿಯಲ್ಲಿ ಹುಟ್ಟುವ ಅಧೋಗತಿಯನ್ನು ಮರಳಿ ಪಡೆವನು. ಇದನ್ನು ತಿಳಿದುಕೊಳ್ಳಬೇಕು.

ಕಂ. ಎಂಭತ್ತು ನಾಲಕು ಲಕ್ಷ
ಎಂಬಂಥ ಜೀವರಾಶಿಗಳಖಿಲವು ಕಡೆಗುಂ.
ಸಂಭವಿಪುವ ವಿಧವಿಳೆಯೋಳ್
ಕೊಂಬೂದಿ ಹೇಳುತಿಪ್ಪನು ವೇಮನ ಕಾಣಾ.

ಕಾಲದ ಗಣನೆಯನ್ನು ಹೀಗೆ ಮಾಡುತ್ತಾರೆ : ಬ್ರಹ್ಮನ ಕಲ್ಪ = 100 ಬ್ರಹ್ಮನ ಸಂವತ್ಸರಗಳು. ಬ್ರಹ್ಮನ ಹಗಲು = 14 ಮನ್ವಂತರ. 1 ಮನ್ವಂತರ = 71 ಮಹಾಯುಗ ; 1 ಮಹಾಯುಗ = 4 ಯುಗಗಳು ; 1 ಮಹಾಯುಗ = 43, 20,000 ಸಂವತ್ಸರಗಳು. (ಇದರಲ್ಲಿ, ಕೃತ, ತ್ರೇತ, ದ್ವಾಪರ, ಕಲಿಯುಗಗಳಿವೆ).

ಇಂಥ ಸುದೀರ್ಘ ಕಾಲಮಾನದಲ್ಲಿ ಜೀವಿಯು ಎಂಭತ್ತುನಾಲ್ಕು ಲಕ್ಷ ಯೋನಿಗಳಲ್ಲಿ ಜನಿಸಬೇಕು. ಇವು ಉದ್ಭಿಜವಿರಬಹುದು., ಪಿಂಡಜವಿರಬಹುದು, ಸ್ವೇದಜವಿರಬಹುದು. ಜರಾಯುಜವಿರಬಹುದು. ಇಂಥ ಎಂಭತ್ತುನಾಲ್ಕು ಲಕ್ಷ ಜೀವರಾಶಿಗಳೆಲ್ಲ ಕೊನೆಗೂ ಸಂಭವಿಸುವ ವಿಧವನ್ನು ವೇಮನರು ಕೊಂಬು ಊದಿ ಸಾರಿ ಹೇಳುತ್ತಿರುವರು ; ಕಾಣಿರಿ.

ಆ. ಅಂಡದಲ್ಲಿ ಹುಟ್ಟಿ ಅರಳಿದ ಪ್ರಾಣಿ ಕೆಲವು.
ಬುದ್ಬುದದಿ ಹುಟ್ಟಿವೆ ಹುಳುಗಳೆಲ್ಲ.
ಸ್ವೇದದಲ್ಲಿ ಹುಟ್ಟಿದ ಜೀವಿಗಳೆವೆ ಕೆಲವು.
ವಿಶ್ವದಾಭಿರಾಮ ಕೇಳು ವೇಮ.

ಎಂಭತ್ತು ನಾಲ್ಕು ಲಕ್ಷ ಜೀವರಾಶಿಗಳು ಹುಟ್ಟುವ ವಿಧವು ಹೀಗಿದೆ. ಕೆಲವು ಪ್ರಾಣಿಗಳು ಅಂಡದಲ್ಲಿ ಹುಟ್ಟುತ್ತವೆ. ಎಲ್ಲ ಹುಳುಗಳು ಬುದ್ಬುದದಲ್ಲಿ ಹುಟ್ಟುತ್ತವೆ. ಕೆಲವು ಜೀವಿಗಳು ಸ್ವೇದದಲ್ಲಿ ಹುಟ್ಟುತ್ತವೆ. ಈ ಜೀವಿಗಳನ್ನು ಖೇಚರಿ, ಭೂಚರಿ, ಜಲಚರಿಗಳೆಂದೂ ಅವು ಚರಿಸುವ ಲೋಕಗಳ ಮೇಲಿಂದ ವಿಭಾಗಿಸಬಹುದು.

ಅನ್ನರಸದಿಂದಲಿ ಆಯ್ತು ಬಂದು ರಸವು.
ಬಿಂದು ರಸದಿಂದಲಿ ಬೀಜವಾಯ್ತು.
ಬಿಂದು ಬೀಜಗಳನು ಭೇದಿಸಿ ನೋಡಿರೋ.
ವಿಶ್ವದಾಭಿರಾಮ ಕೇಳು ವೇಮ.

ನರನು ಹುಟ್ಟುವ ಪ್ರಕ್ರಿಯೆಯನ್ನು ನೋಡೋಣ. ಸೇವಿಸುವ ಅನ್ನದ ರಸದಿಂದ, ಶರೀರದಲ್ಲಿ ರಸ, ರುಧಿರ, ಮಾಂಸ, ಮೇಧಸ್ಸು, ಮಜ್ಜೆ, ಅಸ್ಥಿ, ರೇತಸ್ಸು (ಬಿಂದು) ಎಂಬ ಸಪ್ತ ಧಾತುಗಳು ಹುಟ್ಟುತ್ತವೆ. ರೇತಸ್ಸು ಇಲ್ಲವೆ ಬಿಂದು ರಸದಿಂದ ಬೀಜವು ಆಗುತ್ತದೆ. ಬಿಂದು ರಸದಲ್ಲಿ ಗರ್ಭಕ್ಕೆ ಕಾರಣವಾಗುವ ಬೀಜಗಳಿರುತ್ತವೆ. ಇದನ್ನು ಭೇದಿಸಿ ಸರಿಯಾಗಿ ತಿಳಿದುಕೊಳ್ಳಬೇಕು.

ಆ. ಪಿಂಡ ಅಂಡದಲ್ಲಿ ಬೆಳೆದು ಇರುವಂತಹ,
ತಂದೆ ಬಿಂದು ನಾದ ಅಂದ ಗೂಡಿ.
ಅಂದವಾಗಿ ನಿಲಲು ಅದನೆ ಗರ್ಭವೆಂದ್ರು.
ಅವನಿ ಜನರು ಆಗ ಅರಿಯೋ, ವೇಮ.

ಗುಣ ಪ್ರಪಾತದಿಂದ ಸೃಷ್ಟಿ ತಾನೇ ? ರಜೋಗುಣದಿಂದ ಪಿಂಡವು ಅಂಡದಲ್ಲಿ ಬೆಳೆದು ಇರುವುದು. ತಮೋಗುಣದಿಂದ ತಂದೆಯ ಬಿಂದುವೂ, ಸತ್ತ್ವ ಗುಣದಿಂದ ನಾದವೂ, ಅಂದವಾಗಿ ಕೂಡಿ, ಅಂದವಾಗಿ ನಿಲ್ಲಲು, ಲೋಕದ ಜನರು ಅದನ್ನೇ ಗರ್ಭವೆಂದು ಕರೆಯುತ್ತಾರೆ; ಎಂಬುದನ್ನು ತಿಳಿ.

ಆ. ಕನ್ನೆ ವರರು ಸೇರಿ, ಕೂಡಿಕೊಳ್ಳಲೊಮ್ಮೆ,
ಉಚ್ಚಿಯಲ್ಲಿ ಪಿಂಡ ಉದ್ಭವಿಸಿತು.
ಹೆಚ್ಚು ಕುಲಜನಾರು ? ಹೀನನಾವನುಂಟು ?
ವಿಶ್ವದಾಭಿರಾಮ ಕೇಳುವೇಮ.

ಕನ್ನೆ ಮತ್ತು ವರರು ಸಂತಾನಾಪೇಕ್ಷೆಯಿಂದ ಸೇರಿ ಕೂಡಿಕೊಂಡಾಗ ಉಚ್ಚಿ ಹೊಯ್ಯುವ ಜನನೇಂದ್ರಿಯಗಳಲ್ಲಿ ಪಿಂಡವು ಉದ್ಭವಿಸುತ್ತದೆ. ಇದುವೇ ಮಾನವನ ಜನನ ಕಾರಣ. ಈ ಕಷ್ಟದಾಯಕ ಪ್ರಸೂತಿ ಕ್ರಿಯೆಯಲ್ಲಿ ಸಾಕಷ್ಟು ಶೋಕವಿದೆ. ಆದ್ದರಿಂದ 'ಶೋಚತೇ ಇತಿ ಶೂದ್ರಃ ' ಎನ್ನುತ್ತಾರೆ. ಹೀಗೆ 'ಜನ್ಮನಾ ಜಾಯತೇ ಶೂದ್ರಃ' ಎನ್ನುತ್ತಾರೆ. ಹೀಗಾಗಿ ಹುಟ್ಟಿನಿಂದ ಯಾವನೊಬ್ಬನು ಶ್ರೇಷ್ಠ ಕುಲದವನನಿಸನು. ಬೇರೊಬ್ಬನು ಹೀನ ಕುಲದವನೆನಿಸನು.

ಕಾಸಿ ಕಮ್ಮಾರನಾದ ; ಬೀಸಿ ಮಡಿವಾಳನಾದ. ಹೀಗೆ ಅವರವರು ಕೈಕೊಳ್ಳುವ ಕರ್ಮಗಳ ಪ್ರಕಾರ ಅವರವರ ಜಾತಿಗೆ ಹೆಸರುಗಳು ಅಂಟಿಕೊಳ್ಳುತ್ತವೆ. ಓದಿ ಬ್ರಾಹ್ಮಣನಾದ ;

ಕಾದಿ ಕ್ಷತ್ರಿಯನಾದ ಎಂಬಂತೆ ಅವರವರ ಗುಣಗಳಿಗನುಸರಿಸಿ ಅವರವರ ವರ್ಣಗಳ ಗಣನೆ ಉಂಟು. ಅಂದ ಮೇಲೆ, ಜನ್ಮದಿಂದ ಯಾರೊಬ್ಬರ ಮೇಲು-ಕೀಳಿನ ಎಣಿಕೆಯು ಶೋಷಕ ವರ್ಗದ ಕಲ್ಪನೆಯಷ್ಟೇ.

ಆ. ವರನ ಬಿಂದುವಿಂಗೆ ವನಿತೆ ಗರ್ಭಧಾರಣೆ.
ಕಲ್ಲುಪ್ಪಿನಿಂದಲಿ ರಸದ ಉದಯ.
ಬುದ್ಧಿ ತಿಳಿದು ಇರಲು, ಭುವನ ತಿಳಿವುದಲ್ತೆ ?
ವಿಶ್ವದಾಭಿರಾಮ ಕೇಳು ವೇಮ.

ಸಂಭೋಗ ಕ್ರಿಯೆಯಲ್ಲಿ ಉತ್ಪನ್ನವಾಗುವ ವರನ ಬಿಂದು (ಶುಕ್ರ) ಮತ್ತು ವನಿತೆಯ ಶೋಣಿತಗಳು ಸೇರಿ ಗರ್ಭಧಾರಣೆಯಾಗುತ್ತದೆ. ಕಲ್ಲುಪ್ಪಿನಿಂದ ರಸವು ಉದಯವಾದಂತೆ. ಇದನ್ನು, ಜನ್ಮ ಪ್ರಕ್ರಿಯೆಯನ್ನು ವಿವೇಚಿಸುವ, ಬುದ್ಧಿಯು ತಿಳಿಯುತ್ತದಷ್ಟೇ. ಬುದ್ಧಿಗೆ ಹೊಳೆದ ಬಳಿಕ ಈ ಸತ್ಯವು ಇಡೀ ಭುವನಕ್ಕೆ ತಿಳಿಯುವುದಲ್ಲವೇ ?

ಕಂ. ಅಂಡದೊಳಗೆ ಆಕಾಶವು.
ಕಂಡೊಡೆ ಇಹದೊಪ್ಪವಾಗಿ ವಿಸ್ಫುಟ ತಾನೇ.
ಉಂಟಖಿಲವನು ತಿಳಿದೊಡೆ,
ಅಂಟದೆ ಎಲ್ಲವ ಕಾಣುತ, ವಿಂಬಿಲೊ, ವೇಮಾ.

ಅಂಡದೊಳಗೆ ನಾದ ಉಂಟಾಗುವುದು. ನಾದವು ಆಕಾಶ ತತ್ತ್ವದ ತಾನ್ಮಾತ್ರೆಯಷ್ಟೇ? ಹೀಗೆ ಆಕಾಶವನ್ನು ಕಂಡೊಡನೆ, ಎಲ್ಲವೂ ಅಂದವಾಗಿ, ವಿಸ್ಫುಟವಾಗಿ ತಾನೇ ಉಂಟು. ಆಕಾಶದಿಂದ, ವಾಯು, ವಾಯುವಿನಿಂದ ಅಗ್ನಿ, ಅಗ್ನಿಯಿಂದ ಅಪ್, ಅಪ್‌ನಿಂದ ಪೃಥಿವಿ. ಇವುಗಳ ಪಂಚೀಕರಣದಿಂದ ಶರೀರದ ಎಲ್ಲವೂ ತಿಳಿಯುತ್ತದೆ. ಅಖಿಲವನ್ನು ತಿಳಿದ ಕೂಡಲೇ, ಯಾವೊಂದಕ್ಕೂ ಅಂಟದೆ, ಸಾಕ್ಷಿ ಚೇತನನಾಗಿ ಎಲ್ಲವನ್ನೂ ಕಾಣುತ್ತ, ನಿಸ್ಸಂಗಿಯಾಗಿ ಪ್ರಪಂಚದಲ್ಲಿ ಮಿಂಚಬೇತು.

ಕಂ. ಪಿಂಡವೆ ತಾ ಉದರದಿದ್ದು -
ಕೊಂಡುದ, ಕೆಲವು ದಿನವಾದ ಬಳಿಕುರ್ವಿ ನೆಲೆಯೈ.
ಪಿಂಡವೆ ಜನಿಸುತ್ತಿರುವುದು,
ಪಿಂಡವೆ ಆ ಪ್ರಾಣರಕ್ಷೆ, ಪೃಥಿವಿಲಿ, ವೇಮಾ.

ತಾಯಿಯ ಉದರದಲ್ಲಿ ಇದ್ದುಕೊಂಡ ಪಿಂಡವು, ಕೆಲವು ದಿನಗಳಾದ ಬಳಿಕ, ಅಂದರೆ ನವಮಾಸ ಕಳೆದ ಬಳಿಕ, ಉರ್ವಿಗೆ ಬಿದ್ದು, ಉರ್ವಿಯನ್ನೇ ನೆಲೆ ಮಾಡಿಕೊಳ್ಳುತ್ತದೆ. ಪಿಂಡವೇ ಜನಿಸುತ್ತದೆ. ಪೃಥಿವಿಯಲ್ಲಿ ಪ್ರಾಣ ರಕ್ಷಣೆ ಮಾಡುವುದೂ ಸಹ ಪಿಂಡವೇ.

ಸೀಸ ॥ ಯಮನ ಆಜ್ಞೆಯಿಂದ ಅಧಿಕರೆನಿಸುವಮರು
ಚಂದ್ರಕಾಂತವ ಸೇರಿ ಜವದಿ ಮರಳಿ,
ಮೇಘದೊಡನೆ ಬಂದು, ಯೋಗದೊಡನೆ ವೃಷ್ಟಿ.
ಬಿಂದು ಚೇತನಕೆ ಪೃಥಿವಿ ಗುರಿಯು.

ಸಸ್ಯಾದಿಗಳಿಗೆ ನೀಡಿ, ಸಾರವನ್ನು ತಿಂದು
ಇಂದ್ರಿಯಂಗಳಿಂದ ಅಧಿಕವಾಗಿ,
ತಿಂಗಳು ಋತುಮತಿಯಾಗಿ, ನಿಲಿಸಿ ಯೋನಿಯಲ್ಲಿ,
ಮುದ್ದೆಗಟ್ಟಿತು ಮಾಂಸ ಮಜ್ಜೆಗೂಡಿ.

ತೇಟ ॥ ಪ್ರಾಣ ಈ ರೀತಿ ಮಾಸ ಮಾಸಕು ಪ್ರಬಲವಾಗಿ,
ಮೂತ್ರ ಮಲಗಳಲಿ ಕೆಲದಿನ ಮುಳುಗಿಯುಂಟು.
ಹೊರಗೆ ಬಹು ವಿಧ ಸಂಸಾರ ಪುಟ್ಟಿ ಕಷ್ಟ.
ಜನನ ಮರಣಗಳ ಎಣಿಸಲಳವೇ ವೇಮ ?

ಪುಣ್ಯ ಕರ್ಮ ಮಾಡಿ ಅಧಿಕರೆನಿಸಿಕೊಂಡ ಜೀವಿಗಳು, ತಮ್ಮ ಕರ್ಮ ಫಲದಿಂದ, ಯಮನ ಆಜ್ಞಾನುಸಾರ, ಚಂದ್ರಕಾಂತವೆಂಬ ಪುಣ್ಯ ಲೋಕವನ್ನು ಸೇರುತ್ತಾರೆ. ಪುಣ್ಯಫಲವು ತೀರಿದ ಬಳಿಕ, ಮರಳಿ ಜನರ ಮಧ್ಯೆ ಮರಳುತ್ತಾರೆ. ಈ ಮರುಳುವಿಕೆಯ ಪ್ರಕ್ರಿಯೆಯ ವಿವರ ಹೀಗಿದೆ :

ಮೇಘವು ಸುರಿಸುವ ಮಳೆಯೊಡನೆ ಬಂದು, ಲಿಂಗ ಯೋನಿಗಳ ಕೂಡುವಿಕೆಯಿಂದ ವೃಷ್ಟಿಯಾಗಿ, ಬಿದ್ದು ಚೇತನವು ಪೃಥಿವಿಗಿಳಿಯುತ್ತದೆ. ಸಸ್ಯಾದಿಗಳಲ್ಲಿ ಜೀವ ತುಂಬಿ, ಅವುಗಳ ಸಾರವನ್ನು ತಿಂದು, ಜೀವವು ವಿಕಾಸವಾಗುತ್ತ, ಇಂದ್ರಿಯಂಗಳನ್ನು ಹೊಂದಿ, ಇತರ ಜೀವಿಗಳಿಗಿಂತ ಅಧಿಕವಾಗಿರುತ್ತದೆ. ಬಾಲ್ಯ ಕಳೆದು, ಹೃಷ್ಟ ಪುಷ್ಟ ಅಂಗಗಳನ್ನು ಹೊಂದಿದ ಕನ್ನೆಯು, 'ದೊಡ್ಡವ' ಳಾದಾಗ, ಶರೀರದಲ್ಲಿ ಹುಟ್ಟಿದ ಹೆಚ್ಚುವರಿ ರಸವು ಉಚ್ಚಿಷ್ಟ ರೂಪದಲ್ಲಿ ತಿಂಗಳಿಗೊಮ್ಮೆ ಹೊರಹೋಗುತ್ತದೆ. ಆಗ ಅವಳನ್ನು ನೆರೆತವಳು ; ಋತುಮತಿಯಾದವಳು, ಎನ್ನುತ್ತಾರೆ. ಪುರುಷನೊಡನೆ ಸಂಭೋಗಿಸಿದಾಗ, ಸಕಾಲದಲ್ಲಿ ಬಿಂದು ರಸವು ಯೋನಿಯನ್ನು ಸೇರಿ ಯಾವಾಗ ಗರ್ಭ ನಿಲ್ಲುವುದೋ, ಆಗ ಮುದ್ದೆಗಟ್ಟಿ, ಪಿಂಡವಾಗಿ, ಮಾಂಸ ಮಜ್ಜೆಗಳನ್ನು ಕೂಡಿ, ಬೆಳೆಯುತ್ತದೆ.

ಪ್ರಾಣವು, ಈ ರೀತಿ ತಿಂಗಳು ತಿಂಗಳೂ ಪ್ರಬಲವಾಗಿ, ಗರ್ಭ ದುಃಖವನ್ನು ಅನುಭವಿಸಿ, ಹೊರಗೆ ಬರುತ್ತದೆ. ಹೊರಗೆ ಶಿಶುವಾಗಿ ಮಲಮೂತ್ರಗಳಲ್ಲಿ ಹೊರಳಾಡುತ್ತದೆ. ಮುಂದೆ ಬಾಲ್ಯ, ಯೌವನ, ಮುಪ್ಪುಗಳಲ್ಲಿ ಸಂಸಾರದ ಬಹು ವಿಧ ಕಷ್ಟಗಳನ್ನು ಅನುಭವಿಸುತ್ತದೆ. ಕೊನೆಗೆ ಸಾಯುತ್ತದೆ. ಮರಳಿ ಹುಟ್ಟುತ್ತದೆ. ಈ ಹುಟ್ಟು ಸಾವುಗಳ ಸಂಖ್ಯೆಯು ಎಣಿಕೆಗೆ ಸಿಕ್ಕದು.

ಸೀಸ ॥ ತಂದೆ ತಾಯಿಯು ಸೇರಿ, ತನುರತಿ ಗೆಯ್ಯುತಾ
ರಾಗ ಕುದುರುತಿಹುದು ರಮ್ಯವಾಗಿ.
ಐದು ದಿನ ಕಳೆಯಲದು ಆಮ್ಲದ ದಧಿಯಲಿ,
ಬೆರೆಸಿ ಕಲಿಸಿದಂತೆ ಬೆಳಗುತಿಹುದು.
ಹತ್ತು ವಾರಗಳಲಿ ಮತ್ತೆ ಅಂಡವೇ ಆಯ್ತು ;
ಹದಿನೈದರಲ್ಲಿಯೆ ಹೊದರು ತುಂಬಿ.
ತಿಂಗಳೊಂದಕ್ಕೆ ಶಿರಸು ತಾನೇ ಮೂಡುತಿಹುದು.
ಪಾದ ಕರಂಗಳಿರಡು ಪದ್ಧತಿಯಲಿ.

ಮೂರು ತಿಂಗಳಿಗೆ ಇನಿತು, ಮತ್ತೆ ನಾಲ್ಕರಲ್ಲಿ,
ನಡುವು, ಪಾರ್ಶ್ವಗಳು ಮೂಡುತಿಹವು.
ಐದು ತಿಂಗಳ ವಯಕೆ ಅಂಗಾಂಗವಾಗುವವು.
ಆರಕೆ ನೇತ್ರಗಳು ಅರಳುತಿಹವು.
ಏಳು ತಿಂಗಳಿಗೆ ಜೀವ ಎದ್ದು ಪ್ರಭವಿಸುವುದು.
ಎಂಟು ತಿಂಗಳಿಗೆ ಜ್ಞಾನ ಅಂಟುತಿಹುದು.
ಒಂಭತ್ತು ಮಾಸದಲ್ಲಿ ತಕ್ಕ ಧ್ಯಾನ ಉದಿಸಿ,
ತೊಲಗದೆ, ಹತ್ತು ತಿಂಗಗಲ್ಲಿ ತನ್ನ ಪೂರ್ವ
ದುಃಖಿದಲ್ಲಿ ಪಿಂಡ ಪರಿಪೂರ್ಣನಾಗಿ ಜಗದಿ
ಪುಟ್ಟುತಿಹನು ತಾನು ಬುದ್ಧಿ ಮರೆತು.

ತೇಟ ॥ ಮಂಚದಲಿ ಬಿದ್ದು ತನ್ನ ಮೂತ್ರ ಮಲಗಳಲ್ಲಿ
ಹೊರಳಾಡುತಿದ್ದು ಮಾಯಾವಿ ಹುಟ್ಟುತಿಹಗೆ
ಗತಿಗಳ ಹೊಂದಿಹ ಅವರಿಗೆ ಕರುಣೆದೋರಿ,
ವ್ಯಥೆಗಳ ತೀರಿಸುವ ವೇಮನ ವಿಶ್ವದಲ್ಲಿ.

ತಂದೆ-ತಾಯಿ ಸೇರಿ, ತನುರತಿ ಕ್ರೀಡೆ ಮಾಡುತ್ತಿರುವಾಗ, ಸಂಭೋಗದಲ್ಲಿ ರಮ್ಯವಾಗಿ ರಾಗ ಕುದುರುತ್ತಿರುವುದು. ಆಗ ತಂದೆಯ ಬಿಂದುವು ಯೋನಿಯನ್ನು ಸೇರಿ ಗರ್ಭ ನಿಲ್ಲುತ್ತದೆ. ಐದು ದಿನ ಕಳೆದ ಮೇಲೆ, ಆಮ್ಲವನ್ನು ದಧಿಯಲ್ಲಿ ಕಲೆಸಿದಂತೆ, ಪಿಂಡ ಹೆಪ್ಪುಗಟ್ಟಿ ಬೆಳಗುತ್ತದೆ. ಹತ್ತು ದಿನಗಳಾದ ಬಳಿಕ ಪಿಂಡವು ಅಂಡವಾಗುತ್ತದೆ. ಹದಿನೈದು ದಿನಕ್ಕೆ ಅಂಡದಲ್ಲಿರುವ ಹೊದರು ತುಂಬಿಕೊಳ್ಳುತ್ತದೆ. ತಿಂಗಳಾದ ಮೇಲೆ ಶಿರಸ್ಸು ಮೂಡುತ್ತದೆ. ಕ್ರಮವಾಗಿ, ಕಾಲು ಕೈಗಳು ಮೂರು ತಿಂಗಳಿಗೆ ಮೂಡುತ್ತವೆ. ನಾಲ್ಕು ತಿಂಗಳಿಗೆ ನಡುವೂ, ಬೆನ್ನೂ ಮೂಡುತ್ತವೆ. ಐದು ತಿಂಗಳ ವಯಸ್ಸಿಗೆ ಇತರ ಅಂಗಾಂಗಗಳು ಮೂಡುತ್ತವೆ. ಮುಂದೆ ಆರು ತಿಂಗಳಿಗೆ ಕಣ್ಣುಗಳು ಅರಳುತ್ತವೆ. ಏಳು ತಿಂಗಳಿಗೆ ಜೀವವು ಜಾಗೃತವಾಗಿ ಪ್ರಭವಿಸುತ್ತದೆ. ಎಂಟು ತಿಂಗಳಿಗೆ ಜ್ಞಾನವು ಅಂಟುತ್ತದೆ. ಒಂಭತ್ತು ತಿಂಗಳಿಗೆ ತಕ್ಕ ಧ್ಯಾನವು ಉದಿಸಿ, ತೊಲಗದೆ, ಉಳಿಯುತ್ತದೆ. ಹತ್ತು ತಿಂಗಳಲ್ಲಿ ತನ್ನ ಪೂರ್ವ ದುಃಖಿದಲ್ಲಿ ಬಳಲಿ, ಪಿಂಡವು ಪರಿಪೂರ್ಣವಾಗಿ ಜಗದಲ್ಲಿ ತಾನು ಬುದ್ಧಿ ಮರೆತು ಹುಟ್ಟುತಿಹುದು.

ತಾಯಿಯ ಗರ್ಭದಿಂದ ಪ್ರಸೂತನಾಗಿ ಮಂಚದಲ್ಲಿ ಬಿದ್ದು, ತನ್ನ ಮಲ ಮೂತ್ರಗಳಲ್ಲಿ ಹೊರಳಾಡುತ್ತಿದ್ದು, ಮಾಯೆಯಿಂದ ಹುಟ್ಟುತ್ತಿರುವ ಅವನಿಗೆ, ಹುಟ್ಟು, ಬೆಳಿಗೆ, ಮುಪ್ಪು , ಮರಣಗಳ ಗತಿಗಳನ್ನು ಹೊಂದಿರುವವರಿಗೆ, ಕರುಣೆದೋರಿ, ವ್ಯಥೆಗಳನ್ನು ತೀರಿಸುವ ಮುಕ್ತಿ ಮಾರ್ಗವನ್ನು, ವಿಶ್ವದಲ್ಲಿ, ವೇಮನನು ತೋರಿಸುತ್ತಾನೆ.

ಕಂ. ಒಂಭತ್ತು ದ್ವಾರದ ತನು-
ವೆಂಬುದು ನಿಮ್ಮಯ ಸೊತ್ತು ; ಕುಲ ಪೇಳಲೇಕೈ ?
ನಂಬದಿರು ದೇಹ ನಾನೆನು-
ತಿಂಬುಗೊಡದರಿ, ಬ್ರಹ್ಮವೆ ಅಹಮೆನೆ, ವೇಮಾ.

ಎರಡು ಕಿವಿ, ಎರಡು ಕಣ್ಣು, ಎರಡು ಮೂಗಿನ ಹೊರಳಿಗಳು, ಒಂದು ಬಾಯಿ, ಒಂದು ಗುದ, ಮತ್ತು ಒಂದು ಗುಹ್ಯ. ಹೀಗೆ ಒಂಭತ್ತು ಕಿಂಡಿಗಳುಳ್ಳ ತನುವು ನಿಮ್ಮ ಸೊತ್ತು ಅಷ್ಟೇ. ಅಂದ ಮೇಲೆ, ನನ್ನದು ಆ ಕುಲ, ಈ ಕುಲ ಎಂದು ಹೇಳುವುದೇಕೆ ? ದೇಹ ನಾನು ಎಂಬುದನ್ನು ನಂಬಬೇಡ. ಅಂಥ ಭಾವನೆಗೆ ಇಂಬುಗೊಡಬೇಡ. ನಿಜವಾಗಿ 'ನಾನು' ಬ್ರಹ್ಮನೇ ಆಗಿದೆ. 'ಅಹಂ ಬ್ರಹ್ಮ ಅಸ್ಮಿ' ತಾನೇ ?

ಆ. ನರನೆ ಇರಲಿ, ಬೀಡ ; ನಾರಾಯಣನಿರಲಿ,
ತತ್ತ್ವಬದ್ಧನಿರಲಿ, ಧರಣಿಯರಿಯೆ,
ಮರಣ ಉಂಟು ಎಂದು, ಮನದಿ ನಂಬಬೇಕು.
ವಿಶ್ವದಾಭಿರಾಮ ಕೇಳು ವೇಮ.

ನರನೇ ಇರಲಿ, ನಾರಾಯಣನೇ ಇರಲಿ, ತತ್ತ್ವಬದ್ಧನೇ ಇರಲಿ, ಯಾರೇ ಇರಲಿ, ಧರಣಿಯಲ್ಲಿ, ಎಲ್ಲರಿಗೂ ಗೊತ್ತಿರುವಂತೆ, 'ಜಾತಸ್ಯ ಹಿ ಮರಣಂ ಧ್ರುವಂ' ಅಂದರೆ ಹುಟ್ಟಿದವನಿಗೆ ಮರಣವು ಇದ್ದೇ ಇದೆ. ಅದನ್ನಾರೂ ತಪ್ಪಿಸಲಾರರು ಎಂದು ಎಲ್ಲರೂ ಮನದಲ್ಲಿ ನಂಬಬೇಕು. ಈ ಸತ್ಯವನ್ನು ನಂಬಿಕೊಂಡೇ ಜಗದಲ್ಲಿ ಬಾಳಬೇಕು.

ಕಂ. ಜನನವು ಶಾಶ್ವತವೆಂಬುದ
ನೆನೆವವನಿಗಿಹುದೆಂತು ಮೋಕ್ಷ ಕಾಂಕ್ಷೆಯು ತಾನೈ ?
ಧನವು ಅಶಾಶ್ವತವೆನ್ನುತ,
ಜನನವು ನಶ್ವರವೆಂಬುದ ಸಾರೈ ವೇಮಾ.

ಹುಟ್ಟಿದವನಿಗೆ ಸಾವು ಸುನಿಶ್ಚಿತ ಎಂಬ ಸತ್ಯವು ಸ್ಪಷ್ಟವಾಗಿರುವಾಗ, ಜನನವು ಶಾಶ್ವತ ಎಂದು ನೆನೆಯುವವನು ಅಜ್ಞಾನಿಯಷ್ಟೇ. ಅಂಥವನು ಹುಟ್ಟು ಸಾವುಗಳ ಸಂಸಾರ ಚಕ್ರದಿಂದ ಬಿಡುಗಡೆಯಾಗಬೇಕೆಂಬ ಮೋಕ್ಷಾಕಾಂಕ್ಷೆಯು ಹೇಗಾಗಬಲ್ಲನು ? ಜಗತ್ತಿನಲ್ಲಿ, ಧನವೂ ಅಶಾಶ್ವತ. ಇಂದು ಇದ್ದರೆ ನಾಳೆ ಇರದು ಎಂದು ತಿಳಿದಿರಬೇಕು. ಹಾಗೆ ತಿಳಿದು ಬಾಳಬೇಕು. ಜನನವೂ ನಶ್ವರ. ಹುಟ್ಟಿದುದು ಸಾಯಲೇಬೇಕು ಎಂಬ ಸತ್ಯವನ್ನು ಜಗತ್ತಿಗೆ ಸಾರಿ ಹೇಳಬೇಕು.

ಆ. ಜನನ ಮರಣಗಳಿಗೆ ಸರಿ ಸ್ವತಂತ್ರನಲ್ಲ.
ಮೊದಲು ಕರ್ತನಲ್ಲ ; ತುದಿಗು ಅಲ್ಲ.
ನಡುವೆ ಕರ್ತನೆನಲು ನಗುಪಾಟಲಲ್ಲವೇ ?
ವಿಶ್ವದಾಭಿರಾಮ ಕೇಳು ವೇಮ.

ಜನನ, ಜೀವನ, ಮರಣ ಇವು ಕಾಲ ಚಕ್ರದ ಘಟನೆಗಳು. ಜನಿಸುವುದು ಯಾರ ಕೈಯಲ್ಲಿಯೂ ಇಲ್ಲ. ಸಾಯುವುದೂ ಯಾರ ಕೈಯಲ್ಲಿಯೂ ಇಲ್ಲ. ಹೀಗೆ ಜೀವಿಯು ಜನನ ಮರಣಗಳಿಗೆ ಸರಿ ಸ್ವತಂತ್ರನಲ್ಲ. ಹೀಗೆ ಅವನು ಜೀವನದ ಮೊದಲಿಗೂ ಕರ್ತನಲ್ಲ. ತುದಿಗೂ ಕರ್ತನಲ್ಲ. ಅಂದ ಮೇಲೆ, ನಡುವೆ ಬಾಳಿನಲ್ಲಿ, ನಾನು ಮಾಡುವೆ, ನಾನು ಕರ್ತ ಎಂದರೆ ನಗುಪಾಟಲಾಗುವುದಲ್ಲವೇ ? ಎಲ್ಲವೂ ವಿಧಿಯ ಲೀಲೆ ತಾನೇ ?

ಆ. ಮರಣವೆನುತ ಬೆದರಿ, ಮನದಿ ಕನಲಲೇಕೆ ?
ಮುನ್ನ, ಕಳಿದ ವರುಷ, ನಿನ್ನೆ, ಮಾನ್ನೆ.
ತನುವು ತೊರೆದ ಅವರು ತಮಗಿಂತ ಕಡಿಮೆಯೆ ?
ವಿಶ್ವದಾಭಿರಾಮ ಕೇಳು ವೇಮ.

ಸಾವು ಸುನಿಶ್ಚಿತವಿರುವಾಗ, ಸಾಯುತ್ತೇನೆ, ಸಾಯುತ್ತೇನೆ, ಎಂದು ಮನದಲ್ಲಿ ಕನಲುವುದೇಕೆ ? ಹುಟ್ಟಿದ ಜನರು ಸಾಯಲೇಬೇಕು. ಮುಂಚೆ, ಕಳೆದ ವರುಷಗಳಲ್ಲಿ, ಅಷ್ಟೇಕೆ? ನಿನ್ನೆ ಮೊನ್ನೆ ಸಹ ಅನೇಕರು ತನುವು ತೊರೆದಿದ್ದಾರಷ್ಟೇ ? ತನುವು ತೊರೆದ, ಮನುಷ್ಯರೆಲ್ಲ ತನುವು ತೊರೆದರೆಂಬ ಮಾತ್ರಕ್ಕೆ ಇನ್ನೂ ತನುವಿಗಂಟಿರುವ, ತನಗಿಂತ ಕಡಿಮೆಯವರೇನು ? ಹಾಗೇನಿಲ್ಲ. ಋಷಿ ಮುನಿಗಳೂ ತನು ತೊರೆದಿದ್ದಾರೆ. ರಾಜ ಮಹಾರಾಜರೂ ತನು ತೊರೆದಿದ್ದಾರೆ.

ಆ. ಜನನವೆನಿತೊ ಉಂಟು, ಜಾತಿ ಯಾವುದೇನೊ ?
ಜನನ ಮರಣ ಕುರಿತು ಜಾಡನರಿತು,
ಕೇಳು ; ಕೇಳುತಿದನು ಕಾಣರು ವಿವರಿಸಿ.
ವಿಶ್ವದಾಭಿರಾಮ ಕೇಳು ವೇಮ.

ಹುಟ್ಟಿದವನು ಸಾಯಲೇಬಬೇಕು. ಸತ್ತವನು ಹುಟ್ಟಲೇಬೇಕು. ಇದು ಸಂಸಾರ ಚಕ್ರ. ಆದ್ದರಿಂದ ಇದರ ಜಾಡನ್ನು ತಿಳಿಯಬೇಕು. ಕಾರಣ ವಿಮರ್ಶೆ ಮಾಡಬೇಕು. ಜನನವು ಹೇಗೆ ಆಗುತ್ತದೆ ? ಏಕೆ ಆಗುತ್ತದೆ ? ಯಾವುದು ಜನಿಸುತ್ತದೆ ? ಮನುಷ್ಯನು ಕರ್ಮ ಮಾಡುತ್ತಾನೆ. ಕರ್ಮಕ್ಕೆ ಪ್ರತಿ ಕರ್ಮವು ನಿಯಮ. ಇದನ್ನೇ ಕರ್ಮಫಲ ಎನ್ನುತ್ತಾರೆ. ಮಾಡಿದ ಕರ್ಮದ ಫಲವನ್ನು ಯಾರು ಭೋಗಿಸಬೇಕು ? ಮಾಡಿದವನು ತಾನೇ ? ಕರ್ಮ ಫಲವನ್ನು ಪೂರ್ಣ ಭೋಗಿಸುವ ಮುನ್ನ ಮರಣಿಸಿದರೆ, ಫಲ ಭೋಗವಾಗದ ಕರ್ಮವು ಭೋಕ್ತವಿನ ಅಂದರೆ ಜೀವಿಯ ಮರುಜನ್ಮಕ್ಕೆ ಕಾರಣವಾಗುತ್ತದೆ. ಈ ಕರ್ಮಫಲದ ಗತಿಯು, ತೀವ್ರ, ಮಧ್ಯಮ ಮತ್ತು ಮಂದವಾಗಿರಬಹುದು. ಹಾಗಾಗಿ, ಅದಕ್ಕೆ ಪ್ರಾರಬ್ಧ, ಆಗಾಮಿ, ಸಂಚಿತ ಎಂದು ಹೆಸರು. ಮರುಜನ್ಮದಲ್ಲಿ ಫಲ ಭೋಗಿಸಬೇಕಾದ ಕರ್ಮಗಳಲ್ಲಿ ಪೂರ್ವಜನ್ಮದ ಕರ್ಮಗಳೂ ಇರಬಹುದು, ಪ್ರಚಲಿತ ಜನ್ಮದ ಕರ್ಮಗಳೂ ಇರಬಹುದು. ಅದೆಲ್ಲವೂ ಪ್ರಾರಬ್ಧವೇ. ಇದನ್ನೆಲ್ಲ ತಿಳಿದವರಿಂದ ಪುನರಪಿ ಕೇಳುತ್ತಿದ್ದರೂ, ಇದರ ಪ್ರಕ್ರಿಯೆಯನ್ನು ವಿವರಿಸಿ ಕಾಣರು.

ಗೀ. ಜನ್ಮ ಮರಣ ಸುಷುಪ್ತಿಯು ಜಗದೊಳಿಲ್ಲ.
ಜರುಗುತಿರುವ ಕಾಲ ನರನಿಗೆ ಜಂಗಮೆಂದ್ರು.
ಅದನೆ ತಿಳಿದುಕೊಳ್ಳರೀ ಅಜ್ಞರಪ್ಪ,
ಭೂಪ್ರಜರು, ಬುದ್ಧಿಯಿಲ್ಲದೆ ಹೋಯ್ತು ವೇಮ.

ಗಚ್ಛತಿ ಇತಿ ಜಗತ್. ಹೋಗುವುದಾದ್ದರಿಂದ ಜಗತ್ತೆನಿಸಿದೆ. ಜಗತ್ತಿನಲ್ಲಿ ಜೀವಿಗೆ ಜನನವುಂಟು, ಮರಣವುಂಟು. ಮಧ್ಯೆ ಆಯುಷ್ಯದ ಅರ್ಧ ಕಾಲ ನಿದ್ರೆ (ಸುಷುಪ್ತಿ)ಯೂ ಉಂಟು. ಇವುಗಳೆಲ್ಲ ಜರುಗುತ್ತಿರುವ ಕಾಲದಲ್ಲಿ, ನರನು ಹೋಗಿಬರುವವನು, ಅಂದರೆ ಜಂಗಮನು, ಎಂದು ಅಜ್ಞರಾದ ಭೂಪ್ರಜರು ತಿಳಿದುಕೊಳ್ಳರು. ಅವಿದ್ಯಾ ಮಾಯೆಗೆ ಒಳಗಾದ ಅವರಿಗೆ ಇದನ್ನರಿಯುವ ವಿವೇಕ ಬುದ್ಧಿಯೇ ಇಲ್ಲವಾಗಿ ಹೋಯಿತು.

ಆ. ಜನನ ಮರಣಗಳಲಿ, ಸ್ವಪ್ನ ಸುಷುಪ್ತಿಗಳಲಿ,
ಜಗವನೆಲ್ಲ ತುಂಬಿ ಜನರು ಉಂಟು.
ಅವನಿಯಲ್ಲಿ ಜನರು ಅರಿಯಲಾರರಯ್ಯ !
ವಿಶ್ವದಾಭಿರಾಮ ಕೇಳು ವೇಮ.

ಜಗತ್ತಿನಲ್ಲಿ ಜನರಿಗೆ ಜನನವುಂಟು. ಜನಿಸಿದವರಿಗೆ ಮರಣವೂ ಉಂಟು. ನಡುವೆ ಬಾಳಿನಲ್ಲಿ ಅರ್ಧಕಾಲ ಸ್ವಪ್ನ ಸುಷುಪ್ತಿಗಳಲ್ಲಿ ಕಳೆಯುತ್ತದೆ. ಜಗತ್ತಿನಲ್ಲಿ ಜನರ ಗತಿಯೇ ಇಷ್ಟು.ಇಂಥವರೇ ಜಗತ್ತಿನಲ್ಲಿ ತುಂಬಿದ್ದಾರೆ. ಆದರೂ ಅವರು ಹುಟ್ಟುವುದೇಕೆ ? ಸಾವು ಎಂದರೇನು ? ಹುಟ್ಟು ಸಾವುಗಳ ನಡುವಿನ ಇರವಿನಲ್ಲಿ, ತಾನು ಮಾಡಬೇಕಾದುದೇನು ? ಏನು ಮಾಡಿದರೆ ಈ ಜನನ-ಮರಣ ಚಕ್ರದಿಂದ ಬಿಡುಗಡೆಯಾಗುವುದು ? ಎಂದು ತಿಳಿಯಲಾರರಲ್ಲ !

ಆ. ಜನನ ಮರಣ ಇಳೆಯ ಜಂಗಮಗಳು ನೋಡು.
ಜನನಿ ಜನಕ ಇಳೆಯ ಜಲಧಿ ರೀತಿ.
ವಿನುತ ಗೆಯ್ದು ಗುರುವ ಬಿನ್ನಿಗಂಟಿ ನೋಡು.
ವಿಶ್ವದಾಭಿರಾಮ ಕೇಳು ವೇಮ.

ಜೀವಿಯು ಇಳೆಯಲ್ಲಿ ಜನಿಸುತ್ತಾನೆ. ಕರ್ಮ ಮಾಡುತ್ತಾನೆ. ಮರಣಿಸುತ್ತಾನೆ. ಕರ್ಮ ಫಲ ಭೋಗಿಸಲು ಮತ್ತೆ ಜನಿಸುತ್ತಾನೆ. ಆಯುಸ್ಸು ತೀರಿದಾಗ ಮತ್ತೆ ಮರಣಿಸುತ್ತಾನೆ. ಈ ಜನನ ಮರಣಗಳು ಪುನಃ ಪುನಃ ಘಟಿಸುತ್ತವೆ. ಅವು ಇಳೆಯ ಜಂಗಮಗಳು. ಜಲಧಿಯ ನೀರು ಉಗಿಯಾಗಿ ಮೇಲೇರಿ ಮೋಡವಾಗುತ್ತದೆ. ಮೋಡವು ಘನೀಭವಿಸಿ, ಮಳೆಯಾಗಿ ಸುರಿದು ಹೊಳೆಹಳ್ಳಗಳಾಗಿ ಮತ್ತೆ ಜಲಧಿಯನ್ನು ಸೇರುತ್ತದೆ. ಇದೇ ರೀತಿ, ಜನನಿ ಜನಕರು ಸೇರಿ, ಸಂಭೋಗಿಸಿ, ಮಕ್ಕಳನ್ನು ಹೆರುತ್ತಾರೆ. ಈ ಮಕ್ಕಳು ವಯಸ್ಕರಾಗಿ ಸಂಭೋಗಿಸಿ ತಮ್ಮ ಮಕ್ಕಳನ್ನು ಹೆರುತ್ತಾರೆ. ಹೀಗೆ ಜನನಿ ಜನಕರು ಜಲಧಿಯಂತೆ. ಈ ಚಕ್ರಗತಿಯಿಂದ ಬಿಡುಗಡೆ (ಮುಕ್ತಿ) ಹೊಂದಲು ಗುರುವಿನ ಬಿನ್ನಿಗೆ ಬಿದ್ದು, ಶರಣು ಕೋರಿ, ಸಾಧನ ಮಾರ್ಗವನ್ನು ಅರಿತುಕೋ.

ಗೀ. ಜನ್ಮ ಮರಣಾದ್ಯವಸ್ಥೆಯ ಜಾಡು ಮೀರಿ,
ಮನ್ಮಯವಹ ಪರಿಪೂರ್ತಿ ಮರುಕ ಸೇರಿ,
ತನ್ಮಯಾಕೃತಿ ಹೊಂದುವುದು ತತ್ಪದವ್ಯೆ.
ನಿರ್ವಿಕಾರನಿಗೆ ಇದು ಉಂಟು ; ನೆಲದಿ ವೇಮ.

ಸಂಸಾರ ಚಕ್ರದಲ್ಲಿ ಜೀವನಿಗೆ ಘಟಿಸುವ, ಜನ್ಮ , ಮರಣ, ಜಾಗರ, ಸ್ವಪ್ನ, ಸುಷುಪ್ತಿ ಎಂಬ ಅವಸ್ಥೆಗಳನ್ನು ಅನುಭವಿಸಿ, ಅವುಗಳ ಮರ್ಮವನ್ನು ತಿಳಿದು, ಅವುಗಳು ಒಡ್ಡುವ ಮಾಯೆಯನ್ನು ಮೀರಿ, ತನ್ನಲ್ಲಿ ತಾನಾಗುವ ಪರಿಪೂರ್ಣ ದಯಾಪರತೆಯನ್ನು ಸೇರಿ, ತನ್ಮಯ ಆಕೃತಿಯಾದ ಬಟ್ಟಬಯಲನ್ನು ಹೊಂದುವುದೇ ತತ್ ಪದವಾಗಿದೆ. ನಿರ್ವಿಕಾರನಾದವನಿಗೆ ಈ ಪರಮ ಪದವು, ಇಳೆಯಲ್ಲಿ ಉಂಟು.

ಆ. ಮರಣ ಕಾಲದಲ್ಲಿ ಮನಸು ನಿಲಿಪ ಜ್ಞಾನಿ,
ಪರಮ ಪ್ರತಿಭೆಯಿಂದ ಪಟ್ಟು ಬಿಡನು.

ಬಳಿಕ ಕೋರಿಕೆಗಳಿಗೆ ಅಳುತಿಹನು ಅಜ್ಞಾನಿ.
ವಿಶ್ವದಾಭಿರಾಮ ಕೇಳು ವೇಮ.

ಜೀವನ ಕಾಲದಲ್ಲಿ, ಸೂಕ್ತ ಸಾಧನ ಮಾಡಿ, ವಿಕ್ಷೇಪ ಮತ್ತು ಆವರಣೇ ಮಲಗಳಿಂದ ಚಂಚಲವಾದ ಮನಸ್ಸನ್ನು ಜ್ಞಾನಿಯು ನಿಲ್ಲಿಸುತ್ತಾನೆ. ಹೀಗೆ ಮಾಡುವಾಗ ತಾನು ಹಿಡಿದ ಪಟ್ಟನ್ನು ಪರಮನ ಪ್ರತಿಭೆಯಿಂದ ಎಂದೂ ಬಿಡುವುದಿಲ್ಲ. ಆದರೆ ಅಜ್ಞಾನಿಯು ಮಾತ್ರ ತನಗೆ ಅದು ಬೇಕು; ಇದು ಬೇಕು. ಇನ್ನಷ್ಟು ಬೇಕು ಎಂಬ ಕೋರಿಕೆಗಳನ್ನು ಕನವರಿಸುತ್ತ, ಅಳುತ್ತಾನೆ.

ಆ. ಜನನ ಮರಣವೆಲ್ಲ ಸ್ವಪ್ನ ನಿದ್ರೆಯಂತೆ.
ಭೂಮಿ ಮೇಲೆ ತೋರ್ಪ ಬಿಸಿಲು ಗುದುರೆ.
ನರನು ಜಗಕಂಟಲು ನಗುಪಾಟಲಲ್ಲವೆ ?
ವಿಶ್ವದಾಭಿರಾಮ ಕೇಳು ವೇಮ.

ಮಾನವನು ಜಾಗರ ಅವಸ್ಥೆಯಲ್ಲಿ ಅಂತೂ ಇರುತ್ತಾನೆ. ಅವನಿಗೆ ಸ್ವಪ್ನಾವಸ್ಥೆಯೂ, ನಿದ್ರಾವಸ್ಥೆಯೂ ಬಂದು ಹೋಗುತ್ತವೆ. ಇನ್ನು ದೀರ್ಘ ನಿದ್ರೆಯೇ ಮರಣ. ಅಲ್ಲಿಂದ ಎಚ್ಚರಗೊಳ್ಳುವುದೇ ಜನನ. ಹೀಗೆ ಜನನ ಮರಣಗಳು ಸ್ವಪ್ನ ನಿದ್ರೆಯಂತೆ. ಉರಿಬಿಸಿಲಲ್ಲಿ ಮರಳು ಗಾಡಿನಲ್ಲಿ ನಡೆದು ನಡೆದು, ಬಾಯಾರಿಕೆಯಾಗಿ ತೃಷೆಯ ಬಾಧೆಯಿಂದ ಬಳಲುವ ಪಥಿಕನಿಗೆ, ಅನತಿ ದೂರದಲ್ಲಿ ಸೂರ್ಯ ಪ್ರಕಾಶದ ಪ್ರತಿಫಲನವೇ ಜಲದಂತೆ ಗೋಚರಿಸುತ್ತದೆ. ಆದರೆ, ಅಲ್ಲಿ ನೀರಿರುವುದಿಲ್ಲ. ಇದುವೇ ಬಿಸಿಲುಗುದುರೆ. ಜನನ ಮರಣ ಚಕ್ರದಲ್ಲಿ ಸಿಲುಕಿದ ಬಾಳು ಸಹ ಮಾನವನಿಗೆ ಸುಖ ಭೋಗದ ಆಸೆ ಹುಟ್ಟಿಸುತ್ತದೆ. ಆದರೆ ಅಲ್ಲಿ ಅವನಿಗೆ ಸಂತೃಪ್ತಿ ನೀಡಬಲ್ಲ ಅನಂತ ಸುಖ, ಅಂದರೆ ಆನಂದ, ನೀಡಬಲ್ಲ ಅವಸ್ಥೆ ಇಲ್ಲ. ಅಂದ ಮೇಲೆ, ತನ್ನ ಅನಂತ ಸುಖ ಅರ್ಥಾತ್ ಆನಂದ ಪಡೆಯುವ ಗುರಿ ಹೊಂದಿದ ಮನುಷ್ಯನು ಜಗತ್ತಿಗೆ (ಗಚ್ಛತಿ ಇತಿ ಜಗತ್) ಅಂಟಿಕೊಳ್ಳುವುದು ನಗಪಾಟಲಾಗುವುದಲ್ಲವೇ ?

ಆ. ಅರುಣನುದಯ ಸಂಖ್ಯೆ, ಅಸ್ತಮಾನ ಸಂಖ್ಯೆ,
ಜನನ ಮರಣ ಸಂಖ್ಯೆ, ಜಾತಿ ಸಂಖ್ಯೆ.,
ತಿಳಿದು ಯೋಗಿಯಿದನೆ ಧೀರನಾಗಿರುವನು.
ವಿಶ್ವದಾಭಿರಾಮ ಕೇಳು ವೇಮ.

ಸೂರ್ಯನು ಎಷ್ಟು ಸಲ ಉದಯಿಸುವನು ? ಎಷ್ಟು ಸಲ ಮುಳುಗುವನು ? ಎಂಬ ಸಂಖ್ಯೆಯು ಅಗಣಿತ. ಅದೇ ರೀತಿ, ಜೀವಿಯ ಹುಟ್ಟು ಸಾವುಗಳ ಸಂಖ್ಯೆಯೂ ಅಗಣಿತ. ಜಗತ್ತಿನಲ್ಲಿ ಪ್ರಚಲಿತವಿರುವ ಜಾತಿಗಳ ಸಂಖ್ಯೆಯೂ ಅಗಣಿತ. ಇದನ್ನು ತಿಳಿದು ಯೋಗಿಯು ಜನನ ಮರಣ ಚಕ್ರದಲ್ಲಿ ಸಿಲುಕದೆ, ಜಾತಿಗಳಿಗೆ ಅಂಟದೆ ಧೀರನಾಗಿ ಇರುತ್ತಾನೆ.

ಆ. ನಿಹತಿ ಹುಟ್ಟುಗಳಿಗೆ ನೆಲವಿಹುದೆಂಬರು.
ಕುಹರ ಲೋಕದಲ್ಲಿ, ಕಂಠವೆಲ್ಲಿ ?
ದಹರದಲ್ಲಿ ನೋಡೆ ತಗಲಬಹುದು ತತ್ತ್ವ.
ವಿಶ್ವದಾಭಿರಾಮ ಕೇಳು ವೇಮ.

ಹುಟ್ಟು ಸಾವುಗಳಿಗೆ ಈ ಮರ್ತ್ಯವೇ ನೆಲವೆನ್ನುತ್ತಾರೆ. ಕುಹರ ಲೋಕದಲ್ಲಿ ಅಂದರೆ ಬ್ರಹ್ಮಲೋಕದಲ್ಲಿ ಧ್ವನಿಸಲು ಕಂಠವೆಲ್ಲಿದೆ ? ಆದರೆ ಹೃದಯ ಗುಹೆಯಲ್ಲಿ ನೋಡಿದರೆ, ಎಲ್ಲಿಂದ ಹುಟ್ಟುತ್ತದೆ ? ಮರಣಿಸಿ ಎಲ್ಲಿಗೆ ಹೋಗುತ್ತದೆ ? ಎಂಬುದನ್ನು ಅರಿಯಬಹುದು. ಹೀಗೆ ಸಾಧಕನಿಗೆ ತತ್ತ್ವವು ತಗಲಬಹುದು.

ಆ. ಹುಟ್ಟುವವರು ಯಾರೊ ? ಹುಟ್ಟದವರು ಯಾರೊ ?
ಹುಟ್ಟಿ ಸಾಯುವಂಥ ಪುರುಷರಾರೊ ?
ಹುಟ್ಟಿ ಹುಟ್ಟದಂಥ ಬೋಧೆಯ ಕಾಣಿರೋ.
ವಿಶ್ವದಾಭಿರಾಮ ಕೇಳು ವೇಮ.

ಹುಟ್ಟುವವರು ಯಾರು ? ತಮ್ಮ ತಮ್ಮ ಕರ್ಮ ಬಂಧನಕ್ಕೆ ಸಿಲುಕಿ, ಪ್ರಾರಬ್ಧ ಕರ್ಮಗಳ ಫಲ ಭೋಗಿಸಬೇಕಾದವರು ಹುಟ್ಟುತ್ತಾರೆ. ನಿಷ್ಕಾಮ ಕರ್ಮ ನಿರತರಾಗಿ, ಅನಾಸಕ್ತ ಯೋಗಿಗಳಾಗಿ, ಜ್ಞಾನಿಗಳಾಗಿ ಬದುಕುವವರು ಸಂಸಾರ ಬೀಜವನ್ನು ದಹಿಸಿರುವುದರಿಂದ ಮರಳಿ ಹುಟ್ಟುವುದಿಲ್ಲ. ಇವರೇ ಹುಟ್ಟದವರು. ಇನ್ನು ಪೂರ್ವ ಕರ್ಮ ಫಲ ಭೋಗಿಸಲು ಹುಟ್ಟಿ, ಹುಟ್ಟು ಸಾವುಗಳ ಚಕ್ರದಿಂದ ಮುಕ್ತಿ ಪಡೆಯುವ ಸಾಧನೆ ಮಾಡದ ಅಜ್ಞಾನಿಗಳಾಗಿ ಕೊನೆಗೆ ಸಾಯುವಂಥ ಪುರುಷರೂ ಉಂಟು. ಇಂಥವರು ಯಾರು ? ಎಂದು ಅರಿಯಬೇಕು. ಆದ್ದರಿಂದ ಮಾನವನು ಜಗತ್ತಿನಲ್ಲಿ ಹುಟ್ಟಿದ ಬಳಿಕ, ಸದ್ಗುರುವನ್ನು ಸೇರಿ, ಅವನಿಗೆ ಶರಣಾಗಿ, ಮರಳಿ ಹುಟ್ಟದಿರುವುದು ಹೇಗೆಂಬ ಬೋಧೆಯನ್ನು ಪಡೆಯಬೇಕು. ಸಂಸಾರ ಚಕ್ರದಿಂದ ಪಾರಾಗುವ, ಮುಕ್ತನಾಗುವ, ಪರಿಯನ್ನು ಅರಿತುಕೊಳ್ಳಬೇಕು.

ಆ. ಸಾಯದಿರುವವರಾರೊ ? ಸತ್ತವರಿನ್ನಾರೊ ?
ಕಾಣುವವರು ಯಾರೊ ? ಕಾಣದವರು ?
ಇರುವ, ಸತ್ತ, ಕಂಡ ಒಬ್ಬನ ನೋಡಿರೋ.
ವಿಶ್ವದಾಭಿರಾಮ ಕೇಳು ವೇಮ.

ಸಾಯದಿರುವವರು ಯಾರು ? ಮಾನವನು ಕರ್ಮಗಳನ್ನು ಮಾಡುತ್ತಾನೆ. ವಿಧಿ ನಿಯಮಾನುಸಾರ ನಿಗದಿತ ಆಯುಸ್ಸು ಇರುವ ವರೆಗೆ ಜೀವಿಸುತ್ತಾನೆ. ನಂತರ ಆತ್ಮವು ತನುವನ್ನು ತೊರೆಯುತ್ತದೆ. ಈಗ, ಕೆಲವರು ತಾವು ಆತ್ಮವೆಂದು ದೃಢವಾಗಿ ಭಾವಿಸುತ್ತಾರೆ. ಕೆಲವರು ದೇಹವೇ ತಾವೆಂದು ಭಾವಿಸಿ ಅಂಟಿಕೊಳ್ಳುತ್ತಾರೆ. ಈಗ ಆತ್ಮವು ಸಾಯುವುದಿಲ್ಲ. ದೇಹವು ಸಾಯುತ್ತದೆ. ಆದ್ದರಿಂದ ಆತ್ಮ ಭಾವ ತಾಳಿದವರು ಸಾಯದವರು. ದೇಹಭಾವದವರು ಸಾಯುತ್ತಾರೆ. ಈ ಮರ್ಮವನ್ನು ಕೆಲವರು ಕಾಣುತ್ತಾರೆ. ಕೆಲವರು ತಾಣುವುದಿಲ್ಲ. ಯಾವನೋ ವೇಮನನಂಥ ಒಬ್ಬ ಯೋಗಿಯು ಇರವನ್ನೂ, ಸಾವನ್ನೂ ಕಂಡಿದ್ದಾನೆ. ಅವನ ಬಾಳಿನ ಮರ್ಮವನ್ನು ನೋಡಿ ತಿಳಿಯಿರಿ.

ಆ. ಬದುಕುವವರು ಯಾರೊ ? ಬದುಕದವರು ಯಾರೊ ?
ಬದುಕಿ ಬದುಕದಂಥ ಪ್ರಾಣಿ ಯಾರೊ ?
ಬದುಕು ಇರದ ಬದುಕು ಭೂಮಿಯಳಿದು ಕಾಣಿರೊ.
ವಿಶ್ವದಾಭಿರಾಮ ಕೇಳು ವೇಮ.

ಮಾನವ ಜನ್ಮ ಪಡೆದ ಮೇಲೆ, ಪರಮ ಗುರಿಯಾದ ಸಂಸಾರ ಚಕ್ರದಿಂದ ಮುಕ್ತನಾಗುವ ಗುರಿಯನ್ನು ಸಾಧಿಸಲು ಬದುಕಬೇಕು. ಹಾಗೆ ಸಾಧಿಸುವವರೇ ಬದುಕುವವರು. ಬಹು ಜನರು, ಸರಿಯಾಗಿ ಬದುಕಲಾರದೆ ಕರ್ಮ ಬದ್ಧರಾಗಿ ಸಂಸಾರ ಚಕ್ರಕ್ಕೆ ಸಿಲುಕುತ್ತಾರೆ. ಇವರೇ ಬದುಕದವರು. ಕೆಲವರು ಪುಣ್ಯಕರ್ಮ ಮಾಡಿ, ಪುಣ್ಯ ಲೋಕಗಳಿಗೆ ಹೋಗಿ, ಪುಣ್ಯಫಲ ತೀರಿದ ಬಳಿಕ ಮರಳಿ ಹುಟ್ಟುತ್ತಾರೆ. ಇವರು ಬದುಕಿ ಬದುಕದಂಥ ಪ್ರಾಣಿಗಳು. ಇನ್ನು ಸ್ವರ್ಗಾದಿ ಸುಖಭೋಗದ ಭ್ರಮೆಗಳಿಲ್ಲದೆ, ಬದುಕಿನಲ್ಲಿ ಅನಾಸಕ್ತನಾಗಿ, ನಿಸ್ಸಂಗಿಯಾಗಿ, ಬದುಕು ಇರದ ಬದುಕನ್ನು ಕಂಡುಕೊಳ್ಳಿರಿ.

ಆ. ಕಟ್ಟುವವರು ಯಾರು ? ಕಟ್ಟದವರು ಯಾರು ?
ಕಟ್ಟಿ ಕಟ್ಟದಂಥ ಕರ್ಮಿ ಯಾರು ?
ಗಟ್ಟಿ ಹಿಡಿದು ಲೇಸ, ಕಣ್ಣು ಬಿಟ್ಟು ನೋಡು.
ವಿಶ್ವದಾಭಿರಾಮ ಕೇಳು ವೇಮ.

ಕೆಲವರು ರಚನಾತ್ಮಕ ಕಾರ್ಯ ಮಾಡುತ್ತಾರೆ. ಆದರೆ ಆ ಪುಣ್ಯ ಕರ್ಮ ಮಾಡುವಾಗ, ನಾನು ಮಾಡುತ್ತೇನೆ ಎಂಬ ಅಹಂಕಾರವಿರುತ್ತದೆ. ಅವರು ಕಟ್ಟುವವರು. 'ಅಹಂ ಕರ್ತಾ, ಫಲ ಭೋಕ್ತಾ'. ಅವರು ಫಲ ಭೋಗಕ್ಕೆ ಬಾಧ್ಯಸ್ಥರಾಗುತ್ತಾರೆ. ಇನ್ನು ಕೆಲವರು ಆಲಸ್ಯದಿಂದ ಅಂದರೆ ತಮೋಗುಣದಿಂದ ಏನನ್ನೂ ಮಾಡುವುದಿಲ್ಲ. ಇಲ್ಲವೆ ವಿಧ್ವಂಸಕ ಕರ್ಮ ಮಾಡುತ್ತಾರೆ. ಅವರೇ ಕಟ್ಟದವರು. ಬೇರೆ ಕೆಲವರು ಪುಣ್ಯ ಕರ್ಮ ಮಾಡುತ್ತಾರೆ. ಆದರೆ, ನಾನು ಮಾಡುತ್ತೇನೆ ಎಂಬ ಅಹಂಕಾರವಿಲ್ಲದೆ, ನಾನು ಭಗವಂತನ ಕೈಯೊಳಗಿನ ಉಪಕರಣ ಮಾತ್ರ. ವಿಶ್ವಕರ್ಮನೇ ಮಾಡಿಸುವವನು ; ಎಂದು ತಿಳಿದಿರುತ್ತಾನೆ. ಅವನು ಮಾಡಿದರೂ ಈ ಮಾಳ್ಕೆಯಲ್ಲಿ ತಾನಿರುವುದಿಲ್ಲ. ಅವನೇ ಕಟ್ಟಿ ಕಟ್ಟದಂಥ ಕರ್ಮಿ. ಕರ್ಮಯೋಗಿ. ಹೇಗೆ ಜೀವಿಸುವುದು ಲೇಸು ಎಂಬುದನ್ನು ದೃಢವಾಗಿ ಗ್ರಹಿಸಿ, ಕಣ್ಣು, ಬಿಟ್ಟು ಅಂದರೆ ಅರಿವಿನ ಕಣ್ಣು ತೆರೆದು ನೋಡು.

ಆ. ನೀಡುವವರು ಯಾರೊ ? ನೀಡದವರು ಯಾರೊ ?
ನೀಡಿ ನೀಡದಂಥ ನಿಷ್ಠರಾರೊ ?
ಪಟ್ಟು ಹಿಡಿದು ಇದರ ಗುಟ್ಟು ಭಾವಿಸಿಕೋ.
ವಿಶ್ವದಾಭಿರಾಮ ಕೇಳು ವೇಮ.

ಉಳ್ಳವರು ಇಲ್ಲದವರಿಗೆ ದಾನ ನೀಡುತ್ತಾರೆ. ಪುಣ್ಯ ಭಾಗಿಗಳಾಗುತ್ತಾರೆ. ಆದರೆ, ನಾನು ನೀಡುವ ದಾನಿ, ಎಂಬ ಅಹಮಿಕೆ ಇರುತ್ತದೆ. ಇವರೇ ನೀಡುವವರು. ಇನ್ನು ಕೆಲವು ಲೋಭಿಗಳು ಇದ್ದೂ ನೀಡುವುದಿಲ್ಲ. ಪುಣ್ಯ ಕರ್ಮದಿಂದ ವಂಚಿತರಾಗುತ್ತಾರೆ. ಇವರು ನೀಡದವರು. ಬೇರೆ ಕೆಲವರು, ತಮ್ಮಲ್ಲಿ ಇರುವ ಸಂಪದವೆಲ್ಲ ದೇವರ ಸಂಪತ್ತು. ನಾವು ಕಾವಲುಗಾರರಷ್ಟೇ. ಅವನ ಸಂಪತ್ತನ್ನು ಅವನ ಇಚ್ಛೆಯಂತೆ ಸತ್ಪಾತ್ರದಲ್ಲಿ ದಾನ ಮಾಡಬೇಕಷ್ಟೇ: ಎಂದು ತಿಳಿದು, ದೇವರಲ್ಲಿ ನಿಷ್ಠೆ ಹೊಂದಿ, ನೀಡುತ್ತಾರೆ. ಇವರೇ ನೀಡಿ, ನೀಡದಂಥ ನಿಷ್ಠರು. ಹೀಗೆ ನೀಡಿಯೂ ನೀಡದಂತಿರುವುದುರ ಗುಟ್ಟನ್ನು, ಪಟ್ಟು ಹಿಡಿದು ಭಾವಿಸಿಕೋ.

ಆ. ಇಂಥ ಪದ್ಯ ಪಂಚಕೈಷ್ಯವ ತಿಳಿದೊಡೆ,
ಇಟ್ಟು ಹುಟ್ಟಿ ಕಟ್ಟಿ ಇಳಿಯೊಳಿದ್ದು,

ಸತ್ತು ಸಿದ್ಧರಾಗುತ ಸರ್ವಜ್ಞರಾಗಿ ನಿಲುವ,
ಎಲ್ಲ ಮಹಿಮೆ ನಿನಗೆ ಸಲ್ಲಿಕೆ ವೇಮ.

ಇಂಥ ಪದ್ಯ ಪಂಚಕದ ಉದ್ದೇಶವನ್ನು ತಿಳಿದಾಗ, ಇಳೆಯಲ್ಲಿ ಹುಟ್ಟಿ, ಬದುಕಿನಲ್ಲಿ ಇಟ್ಟು, ಕೊಟ್ಟು, ಕಟ್ಟಿ, ಸಂತೃಪ್ತಿ ಹೊಂದಿ, ಕೊನೆಗೆ ಸಾವು ಹೊಂದಿದರೂ, ಸಿದ್ಧ ಪುರುಷರಾಗಿ, ಸರ್ವಜ್ಞರಾಗಿ ನಿಂತು, ಸಾರ್ಥಕ ಜೀವನ ನಡೆಸಿದ ಎಲ್ಲ ಮಹಿಮೆಯೂ, ವೇಮನ ! ನಿನಗೆ ಸಲ್ಲುವುದು.

ಆ. ಕಾಲ ಚಕ್ರವೆಲ್ಲ ಕನವರಿಪ ಮನಸೆಲ್ಲ.
ಸಾಗಿ ತಿರುಗುತಿಹುದು ಸಂಚರಿಸುತ,
ಚಕ್ರ ಗತಿಯ ಬಿಟ್ಟು, ಸ್ತಂಭಿಸು ಮನ ಸದ್ದು.
ವಿಶ್ವದಾಭಿರಾಮ ಕೇಳು ವೇಮ.

ಅಂದು, ಇಂದು ಮತ್ತು ಮುಂದು, ಅಂದರೆ ಭೂತ, ವರ್ತಮಾನ ಮತ್ತು ಭವಿಷ್ಯತ್ ಕಾಲದಲ್ಲಿ ಮನಸ್ಸು ಏನನ್ನಾದರೂ ಕನವರಿಸುತ್ತದೆ ; ಕೋರುತ್ತದೆ. ಪಂಚಭೂತಗಳು ಪರಮ ಇಂದ್ರಿಯಗಳು ಸಂಚರಿಸುತಿರಲು ಮನಸ್ಸು ಉಂಟು. ವಾಸನಾಬಲದಿಂದ ಸಂಕಲ್ಪ ವಿಕಲ್ಪಗಳು ಉದಿಸಿ, ಮನೋವೃತ್ತಿಗಳು ವಿಷಯ ಭೋಗಕ್ಕಾಗಿ ಸಾಗಿ ತಿರುಗುತಿಹವು. ವಿಷಯಗಳ ತನ್ಮಾತ್ರೆಗಳು ಇಂದ್ರಿಯ ಮೂಲಕ ಒಳಸೇರಿ ಮನದೊಳಗೆ ತದಾಕಾರ ತಾಳಿ, ಚಿತ್ತವು ಉಂಟಾಗುತ್ತದೆ. ಆದ್ದರಿಂದ ಪರಮನನ್ನು ಲಕ್ಷ್ಯವಾಗಿ ಇರಿಸಿಕೊಂಡು ಏಕಾಗ್ರತೆಯನ್ನು ಸಾಧಿಸಿ, ಮನಸ್ಸಿನ ಈ ಚಕ್ರಗತಿಯನ್ನು ತೊರೆದು ಬಿಡು. ಮನಸ್ಸಿನ ಸದ್ದನ್ನು ಸ್ತಂಭಿಸು. ಸ್ಥಿತಪ್ರಜ್ಞನಾಗು.

ಕಂ. ಕಾಲವು ಬರಲೆಂದು ಕಾಯ್ದು,
ಮೇಲಾಗಲು ತಾನೊಂದು ತೆರದಿ ಮಿತಿ ಮೀರಲ್,
ಕಾಲವೆದುರಿಸುವ ಜ್ಞಪ್ತಿಲಿ,
ಲೋಲಾಡದೆ ಶಿವನ ಗೂಡಿ, ವರ್ಧಿಸು ವೇಮಾ.

ಗಡಿಯಾಳದಿಂದ ಗುರುತಿಸುವ ಕಾಲ ಗಣನೆಯು ಎಲ್ಲರಿಗೂ ಗೊತ್ತು. ಇನ್ನೊಂದು, ಕಾಲದ ಮಾನಸಿಕ ಗಣನೆಯೂ ಇದೆ. ಎರಡು ಘಟನೆಗಳನ ನಡುವಿನ ಅವಧಿಯ ಮಾನಸಿಕ ಮಾಪನವು ಮಾನಸಿಕ ಕಾಲವೆನಿಸುತ್ತದೆ. ಈ ಕಾಲವು ಅನುಕೂಲವಾಗಲೆಂದು ಕಾಯ್ದು ಮಾನಸಿಕ ಕ್ಷೋಭೆಗಳನ್ನು ಎದುರಿಸುವಲ್ಲಿ ಮೇಲುಗೈ ಪಡೆದು, ತಾನೊಂದು ರೀತಿಯಲ್ಲಿ ಕಾಲವನ್ನು ಎದುರಿಸುವ ಜ್ಞಪ್ತಿಯಲ್ಲಿ ಮಿತಿಮೀರಿ, ಲೋಲಾಡದೆ, ಪರಮ ಪದವಾದ ಶಿವನನ್ನು ಕೂಡಿ ವರ್ಧಿಸಬೇಕು. ಕಾಲಾತೀತನಾಗಬೇಕು.

ಕಂ. ಕಾಲವ ತಿಳಿಯದೆ ಸೊಂಪಿಲಿ,
ಕಾಲವೆ ಇಲ್ಲವೆನುತ, ಇರುವ ಕಾಲದೊಳಗೇ
ಖೂಳನು ತನ್ನನೆ ತಿಳಿಯನು.
ಬೀಳುವ ಮುಂಜಾವಿನಲ್ಲಿ, ತಟ್ಟನೆ, ವೇಮಾ.

ಕರ್ಮ ಬದ್ಧತೆ ಮುಕ್ತಿಗಳೆಂಬ ಘಟನೆಗಳ ಮಧ್ಯಾವಧಿಯ ಮಾನಸಿಕ ಮಾಪಕವಾದ

ಕಾಲವನ್ನು ತಿಳಿಯದೆ, ಖೂಳನು ಸೊಂಪಿನಿಂದ ಲೋಲಾಡುತ್ತ, ಕಾಲವೇ ಇಲ್ಲವೆನ್ನುತ್ತಾನೆ. ಆದರೆ ಇರುವ ಕಾಲದೊಳಗೆ ತನ್ನನ್ನು ತಾನು ತಿಳಿಯನು. ತಾನು ದೇಹವೋ, ಚಿತ್ತವೋ, ಅಹಮೋ, ಬುದ್ಧಿಯೋ, ಪ್ರಕೃತಿಯೋ ಇಲ್ಲವೆ ಆತ್ಮನೋ, ಎಂದು ಅರಿತುಕೊಳ್ಳುವಲ್ಲಿ ಸಫಲನಾಗನು. ಹೀಗಾಗಿ, ಮುಂಜಾನೆ, ಬ್ರಾಹ್ಮೀಮುಹೂರ್ತದಲ್ಲಿ ಎಚ್ಚತ್ತು, ಆತ್ಮವಿಚಾರ ಮಾಡದೆ, ಹಾಸುಗೆಯಲ್ಲಿ ಬಿದ್ದುಕೊಳ್ಳುತ್ತಾನೆ.

ಹೊತ್ತು ಮೂಡುವ ಸಂಧಿ, ಹೊತ್ತು ನಿಲುವ ಸಂಧಿ,
ಹೊತ್ತು ಮುಳುಗುವ ಸಂಧಿ, ಹೊಂದಿ ನೋಡಿ,
ಹೊತ್ತು ಅರಿಯುವವನೆ ಉತ್ತಮಾದ ಯೋಗಿ.
ವಿಶ್ವದಾಭಿರಾಮ ಕೇಳು ವೇಮ.

ದಿನದಲ್ಲಿ ಚಿತ್ತವೃತ್ತಿಗಳನ್ನು ಶಮನಗೊಳಿಸಲು, ಮನವನ್ನು ಶಾಂತಗೊಳಿಸಿ, ಧ್ಯಾನ ಉಪಾಸನೆಗಳಿಗೆ ಸೂಕ್ತವಾದ ಮೂರು ಸಂಧಿ ಕಾಲಗಳಿವೆ. ರಾತ್ರಿ ಮತ್ತು ಬೆಳಗುಗಳ ಸಂಧಿ ಅಂದರೆ ಹೊತ್ತು ಮೂಡುವ ಸಂಧಿ, ಪೂರ್ವಾಹ್ನ ಮತ್ತು ಅಪರಾಹ್ನಗಳ ಸಂಧಿ ಅಂದರೆ ಹೊತ್ತು ನಿಲ್ಲುವ ಸಂಧಿ, ಇನ್ನು ಹಗಲು ಮತ್ತು ರಾತ್ರಿಯ ಸಂಧಿ ಅಂದರೆ ಹೊತ್ತು ಮುಳುಗುವ ಸಂಧಿ. ಇವುಗಳಲ್ಲಿ ಧ್ಯಾನ ಉಪಾಸನೆ ಮಾಡುವಂತೆ ಜೀವನ ಚರ್ಯೆಯನ್ನು ಹೊಂದಿಸಿಕೊಳ್ಳಬೇಕು. ಈ ರೀತಿ ಹೊತ್ತು ಅರಿಯುವವನೇ ಉತ್ತಮ ಯೋಗಿಯಾಗುತ್ತಾನೆ.

ಆ. ನರನೆ ಇರಲಿ, ಬೇಡ, ನಾರಾಯಣನಿರಲಿ,
ತತ್ತ್ವಬದ್ಧನಿರಲು, ಧರಣಿಯರಿಯೆ,
ಮರಣ ಉಂಟು ಎಂದು, ಮನದಿ ನಂಬಬೇಕು.
ವಿಶ್ವದಾಭಿರಾಮ ಕೇಳು ವೇಮ.

ನರನೇ ಇರಲಿ, ಇಲ್ಲವೆ ನಾರಾಯಣನೇ ಇರಲಿ, ತತ್ತ್ವಕ್ಕೆ ಬದ್ಧನಾದ ಪುರುಷನೇ ಇರಲಿ, ಯಾರೇ ಇರಲಿ, ಅವನಿಗೆ ಧರಣಿಯ ಜನರೆಲ್ಲರೂ ಅರಿತಿರುವಂತೆ, ಮರಣವು ಇದೆ. 'ಜಾತಸ್ಯ ಹಿ ಮರಣಂ ಧ್ರುವಂ' ಅಂದರೆ ಹುಟ್ಟಿದವನಿಗೆ ಈ ಮರ್ತ್ಯ ಲೋಕದಲ್ಲಿ ಮರಣವು ಸುನಿಶ್ಚಿತ. ಸಾವು ತಪ್ಪದೆ ಬಪ್ಪುದು ; ಎಂದು ಮನಸ್ಸಿನಲ್ಲಿ ನಂಬಬೇಕು.

ಆ. ಬಾಲ ಪ್ರಾಯದಲ್ಲಿ ಕಾಮ ಬಿಡಲು ಇಲ್ಲ.
ಪ್ರೌಢ ವಯಸಿಗವ ಕಾಮ ಬಿಡಲು ಇಲ್ಲ.
ಮುದುಕನಾದಡಿಲ್ಲ ಮುಕ್ತಿ ; ಚಿಂತೆಯಲಿ.
ವಿಶ್ವದಾಭಿರಾಮ ಕೇಳು ವೇಮ.

ಮಾನವನು ಷಡ್ವಿಕಾರಗಳಿಗೆ ಒಳಗಾಗುತ್ತಾನೆ. ಹುಟ್ಟು, ಇರವು, ಬೆಳಿಗೆ, ಯೌವನ, ಮುಪ್ಪು ಮತ್ತು ಸಾವು ಎಂಬಿವೇ ಆರು ವಿಕಾರಗಳು. ಬಾಳಿನಲ್ಲಿ ಇಂಥ ವಿಕಾರಗಳಿಗೆ ಒಳಗಾಗುವ ಜೀವಿಯು, ಕಾಮನೆಗಳನ್ನು ಬಿಡುವುದೇ ಇಲ್ಲ. ಭೌತಿಕ ವಸ್ತುಗಳತ್ತಣ ಆಕರ್ಷಣೆಯೇ ಕಾಮ. ಬಾಲ ಪ್ರಾಯದಲ್ಲಿಯೂ ಕಾಮ ಬಿಡುವುದಿಲ್ಲ. ಪ್ರೌಢ ವಯಸ್ಸಿನಲ್ಲಿಯೂ ಕಾಮ ಬಿಡುವುದಿಲ್ಲ. ಬಹಳವಾದರೆ ಕಾಮಿಸುವ ವಸ್ತುಗಳಲ್ಲಿ ಬದಲಾವಣೆಯಾಗಬಹುದಷ್ಟೇ. ಹೀಗೆ, ಕಾಮಿಸಿದ

ವಸ್ತುಗಳನ್ನು ಪಡೆಯುವ ಚಿಂತೆಯಲ್ಲಿಯೇ ಮುಳುಗಿದ ಜೀವಿಗೆ ಚಿಂತೆಯಿಂದ ಮುಕ್ತಿ ಇರದು.

ಆ. ಕಲ್ಪವೆನಲು ಆಯ್ತು, ಕಾರಣ ಬೀಜ ತಾ.
ಕಲ್ಪವೆನಲು ಶಿವನ ಕಲ್ಪಿತವದು.
ಅಲ್ಪನೇನು ಅರಿವ ಆನಂದ ಭೋಗವ ?
ವಿಶ್ವದಾಭಿರಾಮ ಕೇಳು ವೇಮ.

ಸಂಕಲ್ಪ ವಿಕಲ್ಪಗಳು ಮನಸ್ಸಿನ ಕ್ರಿಯೆಗಳು. ಮನದಲ್ಲಿ ಶಿವನನ್ನು ಕೂಡುವ ಸಂಕಲ್ಪ ಮಾಡುವುದೇ ಕಾರಣ ಬೀಜವಾಗುತ್ತದೆ. ಕಾರ್ಯ ಕಾರಣಗಳನ್ನು ವಿಶ್ಲೇಷಿಸುವುದಕ್ಕೆ ಬೀಜ ಹಾಕಿದಂತೆ. ವಿಷಯಗಳು ಕಾರ್ಯವಾದರೆ ಚಿತ್ತವು ಕಾರಣ ; ಚಿತ್ತವು ಕಾರ್ಯವಾದರೆ ಅಹಂ ತತ್ತ್ವವು ಕಾರಣ, ಅಹಂ ತತ್ತ್ವವು ಕಾರ್ಯವಾದರೆ ಮಹತ್ತತ್ತ್ವ ಇಲ್ಲವೆ ಬುದ್ಧಿ ತತ್ತ್ವವು ಕಾರಣ. ಬುದ್ಧಿ ತತ್ತ್ವವು ಕಾರ್ಯವಾದರೆ, ಅದಕ್ಕೆ ಅವ್ಯಕ್ತ ಪ್ರಕೃತಿಯು ಕಾರಣ. ಅವ್ಯಕ್ತ ಪ್ರಕೃತಿಯು ಕಾರ್ಯವಾದರೆ ಪರಮ ಪುರುಷನಾದ ಶಿವನೇ ಕಾರಣ ಬೀಜವಾಗುತ್ತಾನೆ. ಹೀಗೆ ಕಲ್ಪವೆಂದರೆ, ಅದು ಶಿವನ ಕಲ್ಪಿತವೇ. ಶಿವನಲ್ಲಿ ಬೆರೆಯುವ ಶಿವಯೋಗದ ಆನಂದ. ಭೋಗವನ್ನು ಯೋಗಿಯಲ್ಲದೆ, ಅಲ್ಪನೇನು ಅರಿಯಬಲ್ಲನು ?

ಆ. ಆಯು ಸುಧೆಯಕಿಂತ ಅತಿಶಯವಾದಂಥ,
ಕಲ್ಪವರಿಯುವವನು ಕಾರಣಹನು.
ಆಯು ಸೊನ್ನೆಯ ದಿನ ಅಂಧಕಾರ ಹೋಯ್ತು.
ವಿಶ್ವದಾಭಿರಾಮ ಕೇಳು ವೇಮ.

ಆಯುವು ಎಲ್ಲರಿಗೂ ಉಂಟು. ಇರಬೇಕು, ಸುಖಿಸಬೇಕು ಎನ್ನುವ ಎಲ್ಲರಿಗೂ ಆಯುವು ಪ್ರಿಯವಾಗಿರುತ್ತದೆ. ಸುಧೆಯಂತೆ ಮಧುರವಾಗಿರುತ್ತದೆ. ಇಂಥ ಸುಧೆಯಕಿಂತ ಮಧುರವಾದ ಆಯು ಕಲ್ಪವನ್ನು ಅರಿಯುವವನು ಕಾರಣ ಪುರುಷನೇ ಆಗಿದ್ದಾನೆ. ಯಾವಾಗ ಆಯುವು ಅಂದರೆ ಜನನ ಮರಣಗಳು, ಸೊನ್ನೆಯಾಗುವುವೋ, ಆಗ ಅಂಧಕಾರವು ತೊಲಗುತ್ತದೆ. ಜ್ಞಾನ ಜ್ಯೋತಿಯು ಬೆಳಗುತ್ತದೆ.

ಆ. ಆಯು ಉಂಟು ಅಷ್ಟೆ ; ಅವನಿಗೆ ಬರಲು ಹೋಗೆ,
ಪ್ರೀತಿ ಹುಟ್ಟಲಾಗ ಬದುಕಬಹುದು.
ಕಾಯ ನಿಲಿಸಿಕೊಂಡು ಕಲ್ಪವ ಕಾಣಿಭೋ.
ವಿಶ್ವದಾಭಿರಾಮ ಕೇಳು ವೇಮ.

ಆಯುಸ್ಸು ಎಲ್ಲರಿಗೂ ಉಂಟು ತಾನೇ ? ಅವನಿಗೆ ಬರುಹೋಗುಗಳಲ್ಲಿ ಅಂದರೆ ಜನನ ಮರಣಗಳಲ್ಲಿ ಪ್ರೀತಿ ಹುಟ್ಟಿದಾಗ ಬದುಕಬಹುದು. ದೀರ್ಘ ಆಯುಸ್ಸು ಪಡೆಯಬಹುದು. ದೇಹವನ್ನು ಸ್ವಸ್ಥವಾಗಿ, ನಿಲಿಸಿಕೊಂಡು ಕಲ್ಪವನ್ನು ಕಾಣಿರಿ. ಕಾಯಕಲ್ಪ ಚಿಕಿತ್ಸೆಗೆ ಒಳಗಾಗಿರಿ.

ಆ. ತನುವು ತನುವು ಎಂದು ತಪಿಸುತಿಪ್ಪ ಜನರೆ !
ತನುವಸ್ಥಿರವೆಂದು ತಿಳಿಯರೇಕೆ ?
ತನುವು ಕಾಣಬರದೆ ತಿಳಿಯುವುದೆ ಮೋಕ್ಷ ?
ವಿಶ್ವದಾಭಿರಾಮ ಕೇಳು ವೇಮ.

ತನುವು ತನುವು ಎಂದು ಜನರು ತನುವಿಗಾಗಿ ಪರಿತಪಿಸುತ್ತಾರೆ. ತನುವಿಗಾಗಿ ಏನನ್ನಾದರೂ ಮಾಡಲು ಮುಂದಾಗುತ್ತಾರೆ. ಆದರೆ ಎಷ್ಟೇ ಹಪಾಹಪಿಸಿದರೂ ತನುವು ಸ್ಥಿರವಲ್ಲ. ಅದು ಅಸ್ಥಿರವಷ್ಟೇ. ಆಯು ತೀರಿದ ತಕ್ಷಣ ಮರಣಿಸುತ್ತದೆ. ಜನರು ತನುವು ಅಸ್ಥಿರ ಎಂದು ತಿಳಿಯುವುದಿಲ್ಲವೇಕೆ ? ಆದ್ದರಿಂದ ಸ್ಥಿರವಾದ, ಅಮರವಾದ, ಆತ್ಮ ತತ್ತ್ವವನ್ನು ಅರಿಯಲು ಪ್ರಯತ್ನಿಸರೇಕೆ ? ಏನೇ ಆಗಲಿ, ತನುವಿಗೂ ಅದರ ಪಾತ್ರವಿದೆ. 'ಶರೀರಮಾದ್ಯಂ ಖಲು ಧರ್ಮಸಾಧನಂ' ಅಂದರೆ ಧರ್ಮ ಸಾಧನೆಗೆ ಶರೀರವು ಬೇಕೇ ಬೇಕು. ಪುಣ್ಯ ಜೀವಿಗಳಾದ ಸುರರು ಸಹ, ಪುಣ್ಯಾಂಶ ತೀರಿದ ಬಳಿಕ, ಮುಂದಿನ ಸಾಧನೆಗಾಗಿ ಶರೀರ ಧರಿಸಬೇಕಷ್ಟೇ ? ಆದ್ದರಿಂದ, ತನುವು ಕಾಣಬರದೆ ತಿಳಿಯುವುದೇ ಮೋಕ್ಷ ?

ಆ. ಜೀವಿಯೊಳಗಿರುವ ಸ್ಥಿರವನ್ನು ಕಾಣದೆ,
ತಿರುಗುತಿಹನಸ್ಥಿರ ತೆರನ ನಂಬಿ.
ಸ್ಥಿರವನಸ್ಥಿರವನು ತಿಳಿಯೆ ಜೀವಿ ಮುಕ್ತ.
ವಿಶ್ವದಾಭಿರಾಮ ಕೇಳು ವೇಮ.

ಜೀವಿಯಲ್ಲಿ ಪಂಚವಿಂಶತಿ ಅಂದರೆ ಇಪ್ಪತ್ತೈದು ತತ್ತ್ವಗಳಿವೆ. ಇವುಗಳಲ್ಲಿ ಆತ್ಮ ತತ್ತ್ವವು ಒಂದೇ ಸ್ಥಿರವಾದುದು, ಅಮರವಾದುದು. ಉಳಿದವು ಅಸ್ಥಿರ, ಅನಾತ್ಮ. ಆದ್ದರಿಂದ ಜೀವಿಯು ತನ್ನೊಳಗಿನ ಸ್ಥಿರವನ್ನು ಕಂಡುಕೊಳ್ಳದೆ, ಬರೀ ಅಸ್ಥಿರ ತೆರನಾದುದನ್ನು ನಂಬಿ ತಿರುಗುತಿದ್ದಾನೆ. ವಿವೇಕದಿಂದ ಒಳಿತು, ಕೇಡು, ಸ್ಥಿರ, ಅಸ್ಥಿರ ಅರ್ಥಾತ್ ಆತ್ಮ ಅನಾತ್ಮ ಇವುಗಳನ್ನು ವಿಚಾರ ಮಾರ್ಗದಿಂದ, ಯೋಗ ಸಾಧನದಿಂದ, ವಿಶ್ಲೇಷಿಸಿ, ತಿಳಿದುಕೊಂಡರೆ, ಜೀವಿಯು, ಸಂಸಾರ ಬಂಧನದಿಂದ ಮುಕ್ತನಾಗುತ್ತಾನೆ.

ಆ. ತನುವು ಅಸ್ಥಿರೆಂದು, ಧನವು ಅಸ್ಥಿರೆಂದು,
ತಿಳಿವು ಹೊಂದಿ ತನ್ನ ತಿಳಿದುಕೊಂಡು,
ಪಾತ್ರನಪ್ಪ ಯೋಗಿ ಪರಮಾತ್ಮನೇ ಕಾಣು.
ವಿಶ್ವದಾಭಿರಾಮ ಕೇಳು ವೇಮ.

ಯೋಗಿಯು ವಿವೇಕದಿಂದ, ಅನಾತ್ಮವಾದ ತನುವು ಅಸ್ಥಿರವೆಂದೂ, ಅನಾತ್ಮವಾದ ಧನವೂ ಅಸ್ಥಿರವೆಂದೂ ತಿಳಿವು ಹೊಂದುತ್ತಾನೆ. ಹೀಗೆ, ಅನಾತ್ಮವಾದುದಾವುದೂ ತಾನಲ್ಲವೆಂದು ವಿವೇಚಿತಪಡಿಸಿಕೊಂಡು, ಆತ್ಮವೇ ತಾನು (ಅಹಂ ಬ್ರಹ್ಮಾಸ್ಮಿ) ಎಂದು ತನ್ನನ್ನು ತಿಳಿದುಕೊಂಡು, ಜ್ಞಾನ ಭಿಕ್ಷೆಗೆ ಪಾತ್ರನಾದ ಯೋಗಿಯು ಪರಮ ಪದ ತಲುಪಿ, ಪರಮಾತ್ಮನೇ ಆಗುತ್ತಾನೆ. ಇದನ್ನು ಅರಿತುಕೋ.

ಆ. ವೇಳೆ ಎಷ್ಟೆ ಇರಲಿ, ವಿವೇಕವಿರದ ಜೀವಿ.
ಸತ್ತು ಹುಟ್ಟುತಿರುವ ಸಹಜವಾಗಿ,
ಅರಿವು ಮರೆವ ಠಾವ ಅರಿಯೆ ಬ್ರಹ್ಮನಾದ.
ವಿಶ್ವದಾಭಿರಾಮ ಕೇಳು ವೇಮ.

ಎಷ್ಟೇ ಕಾಲ ಬಾಳಿದರೂ ಸಹ, ಸ್ಥಿರ-ಅಸ್ಥಿರ, ಸತ್-ಅಸತ್, ಆತ್ಮ-ಅನಾತ್ಮಗಳನ್ನು

ವಿಶ್ಲೇಷಿಸುವ ವಿವೇಕವಿರದ ಜೀವಿಯು, ಕೊನೆಗೆ ಸಹಜವಾಗಿ ಸತ್ತು ಹುಟ್ಟುತ್ತಿರುತ್ತಾನೆ. ಸಾಧನೆಯಿಂದ ಊರ್ಧ್ವಕ್ಕೇರಿ, ಅರಿವನ್ನೂ ಮರೆಯುವ, ಗುಣಾತೀತ ಭಾವನ್ನು ಅರಿತುಕೊಂಡರೆ, ಅವನೇ ಬ್ರಹ್ಮನಾಗುತ್ತಾನೆ.

ಮೇಲಿನ ಪದ್ಯದ ಪಾಠಾಂತರವು ಇಂತಿದೆ.

ಆ. ಎಷ್ಟೊ ಕಾಲ ಮುನ್ನ ಅರಿವು ಇರದ ಜೀವಿ.
ಸತ್ತು ಹುಟ್ಟುತಿಹನು ಸಹಜವಾಗಿ.
ಅರಿವು ಮರೆವು ಆಗಿ ಅರಿಯನೇ ಬ್ರಹ್ಮವ ?
ವಿಶ್ವದಾಭಿರಾಮ ಕೇಳು ವೇಮ.

ಇದಕ್ಕೆ ಪ್ರತ್ಯೇಕ ಟೀಕಾರ್ಥ ಅವಶ್ಯವಿಲ್ಲವಷ್ಟೇ ?

ಕಂ. ಅರಿವಿನೊಳುದಿಸಿವೆ ತನುಗಳು.
ಬರಿ ಹೊಲಸಿನಲಿ ಕೊಳೆಯುವವು ಸಹಿಸುತಲದನೇ.
ಅರಿವಿಹ ತನುವನು ಹೊಂದಿರೆ,
ಮರುಜನ್ಮ ಬರುವುದು ಎಂತು ? ಮಹಿಯಲಿ, ವೇಮಾ.

ಅರಿವಿನ ಆಚೆಗೆ ನಿರ್ಗುಣ ಬ್ರಹ್ಮವಿದೆ. ನಿರ್ಗುಣ ಬ್ರಹ್ಮವು ಪ್ರಕೃತಿಯಿಂದ ಗುಣಾನ್ವಿತವಾದಾಗ ಸಗುಣ ಬ್ರಹ್ಮವೆನಿಸುತ್ತದೆ. ಸತ್ವ ಗುಣದಿಂದಾಗಿ ಅರಿವು ಮೂಡುತ್ತದೆ. ಈ ಅರಿವಿನ ಮೇಲೆ ಪ್ರಕೃತಿಯ ಕ್ರಮಿಕ ಪ್ರಭಾವದಿಂದ ಕಾರಣ ತನು, ಸೂಕ್ಷ್ಮತನು ಮತ್ತು ಸ್ಥೂಲ ತನುಗಳಾಗುತ್ತವೆ. ಹೀಗೆ ಅರಿವಿನಲ್ಲಿಯೇ ತನುಗಳು ಉದಿಸುತ್ತವೆ. ಮುಂದೆ ಆ ತನುಗಳು ಬರೀ ಹೊಲಸಿನಲ್ಲಿ, ಅದನ್ನೇ ಸಹಿಸುತ್ತ, ಕೊಳೆಯುತ್ತವೆ. ಇದು ತಾಯಿಯ ಗರ್ಭದಲ್ಲಿರುವಾಗಿನಿಂದ ಪ್ರಾರಂಭಿಸಿ, ಮರಣ ಶಯ್ಯೆಯಲ್ಲಿ ಕೊಳೆಯುವ ವರೆಗೂ ಸಾಗುತ್ತದೆ. ಆದರೆ ದೇಹಧಾರಿಯು ತನ್ನ ಅರಿವನ್ನು ಜಾಗ್ರತವಾಗಿರಿಸಿಕೊಂಡು, ಆತ್ಮವಿದನಾಗಿ, ಆತ್ಮರತನಾಗಿದ್ದರೆ. ಅರ್ಥಾತ್ ಅರಿವಿನ ತನುವನ್ನು ಹೊಂದಿದ್ದರೆ, ಅವನಿಗೆ ಮರುಜನ್ಮವು ಹೇಗೆ ಬರುತ್ತದೆ ? ಅದೆಂದಿಗೂ ಬಾರದು.

ಆ. ಇರಲು ನಿರುತ ಅರಿವು, ಇಹಪರಂಗಳಿಲ್ಲ.
ಪ್ರಾಣ ಹಾನಿಯಿಲ್ಲ ಪ್ರಳಯದಲ್ಲಿ,
ಪ್ರಳಯ ಕಾಲವಿರಲು, ಪರಮಾತ್ಮನ ಕಲೆವ.
ವಿಶ್ವದಾಭಿರಾಮ ಕೇಳು ವೇಮ.

ಇಹವನ್ನು ಕುರಿತಾಗಲಿ, ಇಲ್ಲವೆ ಪರವನ್ನು ಕುರಿತಾಗಲಿ ವಿಚಾರಿಸುವಾಗ, ಯಾವಾಗಲೂ ಅರಿವು ಜಾಗ್ರತಾಗಿ ಇದ್ದರೆ, ಆಗ ಪ್ರಳಯವಿದ್ದರೇನಂತೆ ? ಪ್ರಾಣ ಹಾನಿಯಾಗುವುದಿಲ್ಲ. ಪ್ರಳಯ ಕಾಲದಲ್ಲಿ ಆಯಾ ತತ್ತ್ವಗಳು ಅವುಗಳ ಕಾರಣ ತತ್ತ್ವಗಳಲ್ಲಿ ಲಯಿಸುತ್ತವೆ. ಹೀಗೆ ಸ್ಥೂಲ ತನುವು ಪಂಚ ಮಹಾಭೂತಗಳಲ್ಲಿ, ಪ್ರಾಣವು ಪ್ರಾಣವಾಯುವಿನಲ್ಲಿ, ಲಯಿಸುತ್ತವೆ. ಆದರೆ, ಯಾವಾಗಲೂ ತಾನೇ ಆತ್ಮನೆಂದೂ, ಅನಾತ್ಮವು ತಾನಲ್ಲವೆಂಬ ಅರಿವು ಇರುವ ಜ್ಞಾನಿಯು, ಪ್ರಳಯ ಕಾಲದಲ್ಲಿ ತನ್ನ ಅರಿವೇ ಆದ ಪರಮಾತ್ಮನೊಡನೆ ಕಲೆಯುತ್ತಾನೆ.

ಆ. ಅರಿವುಗೇಡಿ ಜೀವಿ ಅನಿತು ಕಾಲವಿರಲು,
ಸತ್ತು ಹುಟ್ಟುತಿಹನು ಸಹಜವಾಗಿ.
ಅರಿವು ಮರೆವು ತಾಣ ಅರಿಯುವುದೇ ಬ್ರಹ್ಮ.
ವಿಶ್ವದಾಭಿರಾಮ ಕೇಳು ವೇಮ.

ತನ್ನನ್ನು ತಾನು ಅರಿಯುವುದೇ ಮಾನವನ ಧ್ಯೇಯ. ತಾನು ದೇಹವಲ್ಲ. ಚಿತ್ತ, ಅಹಮು, ಬುದ್ಧಿಯು ಅಲ್ಲ. ಮೂಲ ಪ್ರಕೃತಿಯಲ್ಲ. ಅರ್ಥಾತ್ ಅನಾತ್ಮವು ತಾನಲ್ಲ. ತಾನು ಆತ್ಮ ಎಂಬ ಅರಿವುಗೂಡಿ ಇರುವವರು ಯೋಗಿಗಳು ; ಜ್ಞಾನಿಗಳು. ಇಂಥ ಅರಿವು ಇಲ್ಲದವರು ಅರಿವುಗೇಡಿಗಳು. ಇಂಥವರು ಎಷ್ಟು ಕಾಲ ಜೀವಿಸಿದರೇನು ? ಕೊನೆಗೆ ಸಹಜವಾಗಿ ಸಾಯುತ್ತಾರೆ ಮತ್ತೆ ಹುಟ್ಟುತ್ತಾರೆ, ಅಷ್ಟೇ. ಜನನ ಮರಣಗಳ ಸಂಸಾರ ಚಕ್ರದಲ್ಲಿ ಸಿಲುಕುತ್ತಾರೆ. ಆದರೆ ಇನ್ನೊಂದು ವಿಲಕ್ಷಣ ಪದವಿದೆ. ಅವನು ಎಲ್ಲವನ್ನೂ ಸಾಧನದಿಂದ ಅರಿಯುತ್ತಾನೆ. ಇನ್ನೂ ಊರ್ಧ್ವಕ್ಕೆ ತಲುಪಿ, ಅರಿವನ್ನೂ ಮರೆತಂತಿರುತ್ತಾನೆ. ಈ ಅರಿವು ಮರೆವು ತಾಣವನ್ನು ಅರಿಯುವುದೇ ಬ್ರಹ್ಮವಾಗಿದೆ.

ಆ. ವಾರಿಧಿಯಲಿ ಹುಟ್ಟಿ, ವಶವೆ ಆಗಬಹುದು.
ಪೂರ್ಣ ದೃಷ್ಟಿಯಲ್ಲಿ ಪ್ರಯತ್ನಿಸುತ.
ಆಗದೆ ಕೆಲಸದರಿವು, ಆಗಲಾರ ಬುಧನು.
ವಿಶ್ವದಾಭಿರಾಮ ಕೇಳು ವೇಮ.

ವಾರಿಧಿಯಲ್ಲಿ ಅಂದರೆ ಸಮುದ್ರದಲ್ಲಿ ಹುಟ್ಟಿದ ಉಗಿಯು ಮೇಘವಾಗಿ, ಮಳೆಯಾಗಿ, ಹೊಳೆ ಹಳ್ಳಗಳಾಗಿ ಮರಳಿ ವಾರಿಧಿಯ ವಶಕ್ಕೇ ಮರಳುತ್ತದೆ. ಅದೇ ರೀತಿ, ಜೀವಿಯು ಸಂಸಾರ ಸಾಗರದಲ್ಲಿ ಹುಟ್ಟಿ, ಕರ್ಮಾನುಸಾರ ಆಯಾ ಲೋಕಗಳಿಗೆ ಹೋಗಿ, ಕರ್ಮಫಲ ತೀರಿದ ಬಳಿಕ ಮರುಜನ್ಮ ತಳೆದು, ಸಂಸಾರ ಸಾಗರದ ವಶವರ್ತಿಯಾಗುತ್ತಾನೆ. ಇದನ್ನೆಲ್ಲ ಪೂರ್ಣ ದೃಷ್ಟಿಯಿಂದ ತಿಳಿದು, ಈ ಜನನ ಮರಣವೆಂಬ ಸಂಸಾರ ಚಕ್ರದಿಂದ ಪಾರಾಗಲು ಪ್ರಯತ್ನಿಸಬೇಕು. ಸಾಧನ ಮಾಡಬೇಕು. ಈ ದಿಶೆಯಲ್ಲಿ ಮಾಡಬೇಕಾದ ಕೆಲಸದ ಅರಿವು ಆಗದೆ ಯಾವನೂ ಬುಧನಾಗಲಾರನು.

ಕಂ. ಮರಣವು ಹತ್ತಿರದಲ್ಲಿದೆ.
ಸ್ಥಿರ ಬುದ್ಧಿಯಲಿ ಪರಮ ಕಾಣೆ, ಲಭ್ಯ ಮೋಕ್ಷಂ.
ಅರಿವುದು ಪುರದಲಿ ಮಿಂಚಲು,
ಪರಮಾರ್ಥವೆ ಬಟ್ಟಬಯಲು, ಮುನ್ನವೆ ವೇಮಾ.

ಹುಟ್ಟಿದವನಿಗೆ ಮರಣವು ನಿಶ್ಚಯ. ಆಯುವು ವಿಧಿ ಕಲ್ಪಿತ. ಜೀವಿಯ ಕಲ್ಪಿತವಲ್ಲ. ಹಾಗಾಗಿ ಅಂತ್ಯವು ಇಂದಾಗಬಹುದು ; ನಾಳೆಯಾಗಬಹುದು ; ಎಂದೂ ಆಗಬಹುದು. ಹೀಗೆ ಮರಣವು ಹತ್ತಿರದಲ್ಲಿ ಇದೆ. ಆದ್ದರಿಂದ ಈ ಜನನ ಮರಣ ಚಕ್ರದಿಂದ ಪಾರಾಗಲು, ಮುಕ್ತನಾಗಲು, ಮೋಕ್ಷ ಪಡೆಯಲು, ಏನು ಮಾಡಬೇಕು ? ಯೋಗ ಸಾಧನೆಯಿಂದಾಗಲಿ, ಜ್ಞಾನ ಸಾಧನೆಯಿಂದಾಗಲಿ, ಸ್ಥಿರಬುದ್ಧಿಯನ್ನು ಹೊಂದಬೇಕು ; ಸ್ಥಿತ ಪ್ರಜ್ಞನಾಗಬೇಕು. ಅಗ್ರ ಬುದ್ಧಿಯಲ್ಲಿ ಪರಮನು ಹೊಳೆಯುತ್ತಾನೆ. ಆಗ ಮೋಕ್ಷ ಲಭಿಸುತ್ತದೆ. ತ್ರಿಪುರದಲ್ಲಿ ಪರಮನು

ಮಿಂಚಿದಾಗ ಅರಿಯಬೇಕು. ಆಗ ಮುನ್ನವೇ ಪರಮಾರ್ಥವು ಬಟ್ಟಬಯಲಾಗುತ್ತದೆ.

ಆ. ಕಾಲು ಮುಂದೆ ಹಳ್ಳ ಕಡೆಗೆ ಈಜದಿರಲು,
ಮೂವರೀಜುವವರು ಮುಳುಗಿರುವರು.
ನರನು ಈಜರಿವೆನೆನೆ ನಗುಪಾಟಲಲ್ಲವೆ ?
ವಿಶ್ವದಾಭಿರಾಮ ಕೇಳು ವೇಮ.

ಭವವೆಂಬ ಪ್ರವಾಹವು ಎದುರಿಗೆ ಕಾಲು ಮುಂದಿನ ಹಳ್ಳದಂತಿದೆ. ಅದನ್ನು ಈಜಿ ಆಚೆಯ ಪರದ ದಡ ತಲುಪಲಾರದೆ, ಅದರಲ್ಲಿ ಮೂರು ಈಜುವವರು ಮುಳುಗಿರುವರು. ತಮ, ರಜಸ್ ಮತ್ತು ಸತ್ವ ಗುಣಗಳ ಪ್ರತಿನಿಧಿಗಳಾದ ಬ್ರಹ್ಮ, ವಿಷ್ಣು, ಶಿವರೇ ಆ ಮೂವರು. ಹೀಗಿರುವಾಗ ತ್ರಿಗುಣಗಳ ಬಂಧನದಲ್ಲಿ ಕಟ್ಟು ಬಿದ್ದ ಮಾನವನು ಈ ಭವದ ಹಳ್ಳವನ್ನು ಈಜುವೆನೆಂದರೆ ನಗುಪಾಟಲೆನಿಸದೇ ? ಅದನ್ನು ಈಜಿ ಆಚೆಯ ದಡ ತಲುಪಬೇಕಾದರೆ, ಸಾಧನ ಬಲದಿಂದ ತ್ರಿಗುಣಾತೀತರಾಗಬೇಕು.

ಮೇಲಿನ ಪದ್ಯದ ಪಾಠಾಂತರವು ಇಂತಿದೆ.

ಆ. ಕಾಲುಮುಂದೆ ಹಳ್ಳ ಕಡೆಗೆ ದಾಟನೀಜಿ
ಮೂವರೀಜುವವರು ಮುಳುಗಿ ಇಹರು.
ಅನ್ಯರೀಜುವರೆನೆ ಆಗದೆ ನಗೆಪಾಟಲು ?
ವಿಶ್ವದಾಭಿರಾಮ ಕೇಳು ವೇಮ.

ಇದಕ್ಕೆ ಪ್ರತ್ಯೇಕ ಟೀಕಾರ್ಥ ಬೇಕಿಲ್ಲ ತಾನೇ ?

ಆ. ತಿರುಗಿ ನರನು ಮರಳಿ ಬರುವನಲ್ಲ !
ಆಗ ಕೂಡ ಎಷ್ಟು ಆಶೆಯಿಲ್ಲ.
ಅಂತರಾತ್ಮ ನಿಲುವ, ಅವನೆ ಅರಿ ಬ್ರಹ್ಮ.
ವಿಶ್ವದಾಭಿರಾಮ ಕೇಳು ವೇಮ.

ಕೆಲವರು ಮುಕ್ತಪುರುಷರು ಸಗುಣ ಬ್ರಹ್ಮನ ಅವಸ್ಥೆಯನ್ನು ತಲುಪುತ್ತಾರೆ. ಅವರು ನಿರ್ಗುಣತ್ವವನ್ನು ಗಳಿಸಿದ ಬಳಿಕ, ಸ್ವ ಇಚ್ಛೆಯಿಂದ ಜನ ಕಲ್ಯಾಣದ ಉದ್ದೇಶದಿಂದ ಪ್ರಕೃತಿಯ ಗುಣಾಧೀನರಾಗುತ್ತಾರೆ. ಇಂಥ ನರನು ತಿರುಗಿ ತಿರುಗಿ ಮರಳಿ ಅವತರಿಸುತ್ತಾನೆ. ಆದರೆ ಅವನಿಗಾವ ಸ್ವಂತದ ಆಸೆಯಿಲ್ಲ. ಅವನ ನಿಲುವು ಅಂತರಾತ್ಮ. ಅವನೇ ತಾರಕ ಬ್ರಹ್ಮವೆಂದು ತಿಳಿ.

ಆ. ಎನಿತೊ ತನುಗಳಿರಲಿ, ಎಡಚಾಗನು ಮೃತ್ಯು.
ಮೃತ್ಯು ಗೆಲ್ಲದಿರಲು, ಮತ್ತೆ ಅರಿಯ.
ಕಳ್ಳ ರೀತಿ ಇರಲು ಕಾಣಬಹುದೆ ಮೋಕ್ಷ ?
ವಶ್ವದಾಭಿರಾಮ ಕೇಳು ವೇಮ.

ತನುವುಗಳು ಎಷ್ಟೇ ಇರಲಿ. ಮೃತ್ಯುವು ತನುವ ಪಡೆಯಲು ಜೀವನಿಗೆ ಎಡಚಾಗನು. ಅಡ್ಡಿಯುಂಟು ಮಾಡನು. ಜನನ ಮರಣಗಳ ಚಕ್ರ ಸಾಗಿಯೇ ಇರುತ್ತದೆ. ಆದ್ದರಿಂದ ಈ

ಚಕ್ರದಿಂದ ಪಾರಾಗಬೇಕಾದರೆ ಮೃತ್ಯುವನ್ನು ಗೆಲ್ಲಬೇಕು. ಅಂದರೆ ಸಾವು ಯಾವುದಕ್ಕೆ ? ಸಾಯದಿರುವುದು ಯಾವುದು ? ಎಂದು ವಿವೇಚಿಸಿ, ಆತ್ಮವು ಅಮರ ಎಂದು ತಿಳಿದು ಆತ್ಮಭಾವ ಹೊಂದಬೇಕು. ಅಮೃತತ್ವ ಪಡೆಯಬೇಕು. ಹೀಗೆ ಮೃತ್ಯುವನ್ನು ಗೆಲ್ಲದಿರಲು ಆತ್ಮವನ್ನು ಅರಿಯಲಾರನು. ಆದ್ದರಿಂದ ಮೃತ್ಯುವಿನೊಂದಿಗೆ ಹೋರದೆ, ಕಳ್ಳನಂತೆ ಅಂದರೆ ಜೀವಗಳ್ಳನಾಗಿ ಉಳಿದರೆ, ಮೋಕ್ಷವು ಕಾಣಬಹುದೇ ?

ಆ. ಸಾಯುವವರ ಕಂಡು, ಸಾಯದೆ ಹುಟ್ಟದೇ
ತತ್ತ್ವವೆಲ್ಲ ಆತ್ಮ ; ತಿಳಿದುಕೊಂಡು,
ಅರಸಿ ನೋಡಿದಂಥ ಅವನೆ ಹೋಗು ಸುಜನ.
ವಿಶ್ವದಭಿರಾಮ ಕೇಳು ವೇಮ.

ನಮ್ಮ ಕಣ್ಣೆನೆದುರೇ ಅನೇಕರು ಸಾಯುತ್ತಾರೆ ; ಮರಳಿ ಹುಟ್ಟುತ್ತಾರೆ. ಇವರ ಸ್ಥಿತಿಗಳನ್ನು ಕಂಡು ವಿವೇಕ ಬುದ್ಧಿ ಹೊಂದಿ, ಸಾಯುವುದು ಅನಾತ್ಮ ; ಸಾಯದುದು, ಅಮರವಾದುದು, ಆತ್ಮ ; ಎಂಬ ತತ್ತ್ವವನ್ನು ತಿಳಿದುಕೊಂಡು ಜನನ-ಮರಣ ಚಕ್ರದಿಂದ ಮುಕ್ತಿ ಪಡೆದು, ಸಾಯದೆ, ಹುಟ್ಟದೆ, ಆತ್ಮವನ್ನು ಅರಸಿ ನೋಡಿದಂಥ ಅವನೇ ಸುಜನನೆನಿಸುತ್ತಾನೆ.

ಆ. ಸತ್ತವರನು ಕಂಡು ಸಾವು ನಿಶ್ಚಿತೆಂದು,
ತತ್ತ್ವ ಮೇಳದಾತ್ಮವು ಸರಿ ಹೊಂದಿ.
ಅದರಿ ಬೆದರದಿರಲು, ಆಯ್ತು ಹೋಗು ಮುಕ್ತಿ.
ವಿಶ್ವದಾಭಿರಾಮ ಕೇಳು ವೇಮ.

ಹುಟ್ಟಿದವರೆಲ್ಲರೂ ಸಾಯುತ್ತಾರೆ. ಸತ್ತವರು, ಸಾಮಾನ್ಯರಿರಬಹುದು, ಸಾಧಕರಿರಬಹುದು, ಸಿದ್ಧರೂ ಇರಬಹುದು. ದೇಹ ಭಾವದಿಂದ ನೋಡಿದರೆ ಅವರೆಲ್ಲರಿಗೆ ಸಾವು ನಿಶ್ಚಿತವಾಗಿದೆ. ತತ್ತ್ವ ಮೇಳದಲ್ಲಿ, ಅನಾತ್ಮ ತತ್ತ್ವಗಳನ್ನು ಹಿಂದುಳಿಸಿ, ಊರ್ಧ್ವ ಲೋಕದಲ್ಲಿ, ಉಚಿತ ಕ್ರಮದಿಂದ, ಸರಿಯಾಗಿ ಆತ್ಮವನ್ನು ಹೊಂದಿ, ಏಕಾಂತದಲ್ಲಿ ಅದ್ವಿತೀಯನಾಗಿ, ಅದರಿಂದ ಭಯ ದೂರನಾಗಿರುತ್ತಾನೆ. ಹೀಗೆ, ಅದರಿ ಬೆದರದಂತೆ, ಸ್ಥೈರ್ಯದಿಂದ ಇದ್ದರೆ ಮುಕ್ತಿಯಾಯ್ತು ಹೋಗು. ಅವನಿಗೆ ಸಾವು , ಮರುಜನ್ಮದ ಚಕ್ರದಿಂದ ಬಿಡುಗಡೆಯಾಗುತ್ತದೆ.

ಮೇಲಿನ ಪದ್ಯದ ಪಾಠಾಂತರವು ಹೀಗಿದೆ.

ಆ. ಸಾಯುವವರ ಕಂಡು ಸಾವು ನಿಶ್ಚಿತೆಂದು,
ತತ್ತ್ವವೆಲ್ಲ ಆತ್ಮ ; ತಿಳಿದುಕೊಂಡು,
ಬೆದರಿ ಅದರದಂತೆ ಬಾಳುವವನೆ ಭಕ್ತ.
ವಿಶ್ವದಾಭಿರಾಮ ಕೇಳು ವೇಮ.

ಇದಕ್ಕೆ ಪ್ರತ್ಯೇಕ ಟೀಕಾರ್ಥ ಅವಶ್ಯವಿಲ್ಲ ತಾನೇ ?

ಆ. ಹರಣ ಸೇರುತಿಹುದು ಇರುವ ಜೀವಿಗಳಿಗೆ
ಹಾನಿ ಇರದೆ ಉಂಟೆ ? ಅರಿಯದಿರಲು.

ಪ್ರಾಣ ಹೋಗೆ, ದೇಹ ಪ್ರಯೋಜನಕೆ ಬರದು.
ವಿಶ್ವದಾಭಿರಾಮ ಕೇಳು ವೇಮ.

ಪಂಚ ಭೂತಗಳ ರಾಜಸಾಂಶಗಳನ್ನೆಲ್ಲ ಒಟ್ಟು ಸೇರಿಸಲು, ಆ ಸಮಷ್ಟಿಯಿಂದ ಪ್ರಾಣವು ಹುಟ್ಟಿ, ಇರುವ ಜೀವಿಗಳಿಗೆ ಸೇರುತ್ತಿರುವುದು. ವೃತ್ತಿ ಭೇದದಿಂದ ಅದು ಐದು ವಿಧವಾಯಿತು. ಹೃದಯದಲ್ಲಿ ಸೇರಿ ಪ್ರಾಣವೆಂದೂ, ಗುದಸ್ಥಾನದಲ್ಲಿ ಸೇರಿ ಅಪಾನವೆಂದೂ, ನಾಭಿ ಸ್ಥಾನದಲ್ಲ ಸೇರಿ ಸಮಾನವೆಂದೂ, ಕಂಠಸ್ಥಾನದಲ್ಲಿ ಸೇರಿ ಉದಾನವೆಂದೂ, ಮಿಕ್ಕ ಎಲ್ಲ ದೇಹದಲ್ಲಿ ಸೇರಿ ವ್ಯಾನವೆಂದೂ ಪಂಚವಿಧವಾಯಿತು. ಇದನ್ನು ಸರಿಯಾಗಿ ಅರಿಯದಿದ್ದರೆ ಜೀವಿಗೆ ಹಾನಿಯಾಗದೆ ಉಂಟೇ ? ಆಯುರ್ವೇದದಲ್ಲಿ, ಯೋಗ ವಿಧಿಗಳಲ್ಲಿ, ಈ ಪ್ರಾಣಗಳ ಸಂಚಲನೆಗೆ ವಿಶೇಷ ಮಹತ್ವವುಂಟು. ಎಲ್ಲ ಇಂದ್ರಿಯಗಳಿಗಿಂತ ಪ್ರಾಣವು ಹೆಚ್ಚು ಮುಖ್ಯ. ಪ್ರಾಣವು ಹೋದರೆ ದೇಹವು ಯಾವುದೇ ಪ್ರಯೋಜನಕ್ಕೆ ಬಾರದು.

ಆ. ತಣಿದು ಪಿಂಡದಲ್ಲಿ ತಗಲಿದ ಮಾನವನು,
ಹುಟ್ಟಬಾರದವನು ಪೊಡವಿಯಲ್ಲಿ.
ಅಂಥ ಹುಟ್ಟಿನವನು ಅವನಿಯೊಳಗೆ ಇಲ್ಲ.
ವಿಶ್ವದಭಿರಾಮ ಕೇಳು ವೇಮ.

ತನ್ನ ಅಂತಿಮ ಗುರಿಯಾದ ಆತ್ಮ ಸಾಕ್ಷಾತ್ಕಾರ ಹೊಂದಿ, ತನ್ನ ಸಿದ್ಧಿಗಾಗಿ ತಣಿದು, ಸ್ವ ಇಚ್ಛೆಯಿಂದ ಜನರ ಕಲ್ಯಾಣಕ್ಕೋಸುಗ, ಪಿಂಡದಲ್ಲಿ ತಗಲಿದ ಮಾನವನು ನಿಜವಾಗಿ ಪೊಡವಿಯಲ್ಲಿ ಹುಟ್ಟಬಾರದವನು. ಆದರೂ ತಾರಕನಾಗಿ, ಪಿಂಡದಲ್ಲಿ ತಗಲಿ ಹುಟ್ಟುತ್ತಾನೆ. ಅಂಥ ವಿರಳ ಹುಟ್ಟಿನವನು ಅವನಿಯಲ್ಲಿ ವಿರಳ. ಇಲ್ಲವೆಂದರೂ ಸರಿಯೇ.

ಆ. ಜೊಳ್ಳು ಹೊಂದಬೇಡ ; ಜವವ ಮೀರಿ ಕಾಣು.
ಆದಿ ಮೂಲವಾದ ಆತ್ಮದರಿವು,
ಹೋರಿ, ಸೇರಿ, ಹೊಂದಿ, ಪೂರ್ಣ ಪಡೆದುಕೊಳಿರೊ.
ವಿಶ್ವದಭಿರಾಮ ಕೇಳು ವೇಮ.

ಜೀವನದಲ್ಲ ಪ್ರಜ್ಞಾನ ಘನವನ್ನೇ ಹೊಂದಬೇಕು. ಅಂಥ ಇಂಥ ಜೊಳ್ಳು ಅನಾತ್ಮ ತತ್ತ್ವವನ್ನು ಹೊಂದಬೇಡ. ಇದಕ್ಕೆ ಸಾವು ಎಂದರೇನು ? ಯಾವುದು ಸಾಯುವುದು ? ಅನಾತ್ಮವು ತಾನೇ? ಯಾವುದು ಸಾಯುವುದಿಲ್ಲ ? ಅದು ಆತ್ಮ ತಾನೇ ? ಈ ಆತ್ಮವು ಆದಿಗೆ ಮೂಲವಾದುದು. ಅಂದರೆ ಅದು ಮನಸ್ಸಿಗೆ ಅತೀತವಾದ ಆದಿ. ಅಂಥ ಆತ್ಮ ಹೊಂದಲು, ಅರಿಷಡ್ವರ್ಗಗಳೊಡನೆ, ಅವಿದ್ಯಾ ಮಾಯೆಯೊಡನೆ ಹೋರಿ, ಸಾಧನ ಬಲದಿಂದ ಆತ್ಮದಲ್ಲಿ ಸೇರಿ, ಪೂರ್ಣತ್ವವನ್ನು ಪಡೆದುಕೊಳ್ಳಬೇಕು.

ಕಂ. ಅನುಭವ ಕೇಳಿಯ ಒಳಗೇ
ತನುವುಗಳು ಮೂರಡಗಿ, ಒಳ ತಥ್ಯವ ಕಾಣಾ.
ಜನನಾಂತರ ಅಮರುತಿರಲು,
ಅನುವಿಲಿ ಬ್ರಹ್ಮವ ಮನದಲಿ, ಕಾಣೆಲೊ, ವೇಮಾ.

ಜೀವನಿಗೆ ಅನೇಕ ಸ್ತರದ ಅನುಭವಗಳಾಗುತ್ತವೆ. ಇವುಗಳಲ್ಲಿ ಸ್ಥೂಲ ತನುವಿನ ಅನುಭವಗಳೂ ಇವೆ. ಸೂಕ್ಷ್ಮ ಮತ್ತು ಕಾರಣ ತನುಗಳ ಅನುಭವಗಳೂ ಇವೆ. ಇವೆಲ್ಲ ಅನುಭವಗಳಲ್ಲಿ ಯಾವ ಅನುಭವವು ಕ್ಷಣಿಕವಾದುದು ? ಯಾವುದು ಸ್ಥಿರವಾದುದ ? ಎಂದು ಅನುಭವಗಳ ಒಳ ತಥ್ಯವನ್ನು ಕಾಣಬೇಕು. ಆತ್ಮಾನುಭವವು ತಥ್ಯವಾದುದಷ್ಟೇ ? ಕರ್ಮ ಫಲ ನಿಮಿತ್ತ ಜನ್ಮಾಂತರಗಳು ಜೀವಿಗೆ ಅಮರುತ್ತಿದ್ದರೆ, ಅವನು ಅಂತರ್ವೀಕ್ಷಣೆಗೆ ತೊಡಗಿ, ಯೋಗ ಸಾಧನೆ ಮಾಡಿ, ಆತ್ಮವಿಚಾರ ಮಾರ್ಗ ಹಿಡಿದು, ಅನುವಿನಿಂದ ಮನದಲ್ಲಿ ಬ್ರಹ್ಮವನ್ನು ಕಾಣಬೇಕು.

ಆ. ಸತ್ತೆ ಸತ್ತೆ ಎಂದು ಸಾವಿಗಂಜೆ ಕೇಡು.
ದೀನ ಜನರ ಹುಚ್ಚು ತಿಳಿಸೆ ಕಠಿಣ.
ಮೃತ್ಯು ಬಂಧವುಂಟು ; ಮತ್ತೆ ಪ್ರಾಣಿಗೆಲ್ಲ.
ವಿಶ್ವದಾಭಿರಾಮ ಕೇಳು ವೇಮ.

ಸತ್ತೆ, ಸತ್ತೆ ಎಂದು ದೀನ ಜನರು ಸಾವಿಗೆ ಅಂಜುತ್ತಾರೆ. ಇಂಥ ಅಂಜಿಕೆ ಕೇಡಿಗೆ ಕಾರಣವಾಗುತ್ತದೆ. ದೀನರಿಗೆ ಇದೊಂದು ರೀತಿಯ ಹುಚ್ಚೇ ಹಿಡಿದಿರುತ್ತದೆ. ಸಾಯುವುದು ಆತ್ಮವಲ್ಲ. ದೇಹ ಮಾತ್ರ. ದೇಹಾತ್ಮ ಬುದ್ಧಿಯನ್ನು ಹೊಂದಿದರೆ, ಮೃತ್ಯು ಬಂಧವುಂಟು. ಹುಟ್ಟಿದ ಪ್ರಾಣಿಗಳಿಗೆಲ್ಲ ಮೃತ್ಯು ಬಂಧವುಂಟು. 'ಜಾತಸ್ಯ ಹಿ ಧ್ರುವೋ ಮೃತ್ಯುಃ' ಆದ್ದರಿಂದ ಆ ಬಗ್ಗೆ ಹೆದರುವುದೇಕೆ ? ಸಾವು ದೇಹಕ್ಕೆ ಮಾತ್ರ. ಆತ್ಮನಿಗಲ್ಲ ; ಎಂದು ಆತ್ಮ ಭಾವ ತಾಳಿ, ದೀನನಾಗದೆ, ಸಾವನ್ನು ಧೈರ್ಯದಿಂದ ಎದುರಿಸಬೇಕು.

ಆ. ಸಕಲ ಶಾಸ್ತ್ರಗಳನು ಸಲೆ ಪಠಿಸಿ ಬರೆದು,
ತಿಳಿದುಕೊಳರು ; ಸಾವು ತಿಳಿಯಲಿಲ್ಲ.
ಸಾವು ತಿಳಿಯದಿರಲು ಸಕಲ ಓದು ಏಕೆ ?
ವಿಶ್ವದಾಭಿರಾಮ ಕೇಳು ವೇಮ.

ಸಕಲ ಶಾಸ್ತ್ರಗಳನ್ನು ಚೆನ್ನಾಗಿ ಪಠಿಸಬಹುದು. ಬರೆಯಲೂಬಹುದು. ಆದರೆ ಅವುಗಳ ಗೂಢಾರ್ಥಗಳನ್ನು, ಇಂಗಿತಾರ್ಥಗಳನ್ನು ತಿಳಿದಕೊಳ್ಳರು. ತಾನು ದೇಹವಲ್ಲ. ತಾನು ಆತ್ಮ ಎಂಬ ಮಥಿತಾರ್ಥವನ್ನು ತಿಳಿದುಕೊಳ್ಳರು. ಹೀಗಾಗಿ ಸಾಯುವುದು ದೇಹ ; ಆತ್ಮವು ಅಮರ ಎಂಬ ಸತ್ಯವನ್ನು ತಿಳಿಯರು. ಹೀಗೆ ಶಾಸ್ತ್ರ ಪಾಠಕರು ಮತ್ತು ಲೇಖಕರು ಸಹ ಸಾವು ತಿಳಿಯಲಿಲ್ಲ. ಸಾವು ದೇಹಕ್ಕೆ ಆತ್ಮಕ್ಕಲ್ಲ. ನಾನು ಆತ್ಮವೇ. ನನಗೆ ಸಾವಿಲ್ಲ ; ಎಂದು ಸಾವನ್ನು ತಿಳಿಯದಿದ್ದರೆ; ಸಕಲ ಓದು ಏತಕ್ಕೆ ?

ಆ. ತಾನು ಹುಟ್ಟಿದ ನೆಲೆ ತನ್ನ ನೋಡಬಯಸಿ,
ತಾನು ಬುದ್ಧಿ; ತಿರುಗುವ ಧರೆಯಲ್ಲಿ.
ತಾನು ಹುಟ್ಟಿದ ನೆಲೆ ತತ್ತ್ವ ತಿಳಿಯಬೇಕು.
ವಿಶ್ವದಾಭಿರಾಮ ಕೇಳು ವೇಮ.

ತಾನು ಹುಟ್ಟಿದ ನೆಲೆ ಯಾವುದು ? ತನ್ನನ್ನು ನೋಡ ಬಯಸಿ, ನಾನು ಯಾರು ? ಎಂದು ಅರಿಯ ಬಯಸಿ, ತಾನು ಬುದ್ಧಿಯೆಂದು ಭ್ರಮಿಸಿ, ಧರೆಯಲ್ಲಿ ತಿರುಗುತ್ತಿರುತ್ತಾನೆ.

ಆದ್ದರಿಂದ ಸಂಸಾರ ಚಕ್ರದಲ್ಲಿ ಸಿಲುಕುತ್ತಾನೆ. ತನ್ನ ನಿಜವಾದ ನೆಲೆ ಸಗುಣ ಬಹ್ಮವೇ. ಅಲ್ಲಿ ಪ್ರಕೃತಿ ಶಕ್ತಿಯಿಂದ ಗುಣಾನ್ವಿತನಾಗಿ, ಸತ್ತ್ವ ಗುಣದಿಂದ ಬುದ್ಧಿ ತತ್ತ್ವ ಉದಿಸಿ, ಅಸ್ತಿತ್ವ ಬೋಧೆಯಾಗುತ್ತದೆ. ರಜೋಗುಣದಿಂದ ಅಹಂ ತತ್ತ್ವ ಉದಿಸಿ, ಕರ್ತೃತ್ವಾಭಿಮಾನ ಉಂಟಾಗುತ್ತದೆ. ತಮೋಗುಣದಿಂದ ಚಿತ್ತ ತತ್ತ್ವ ಉದಿಸಿ, ಕಾರ್ಯ ಬೋಧೆಯುಂಟಾಗುತ್ತದೆ. ಬುದ್ಧಿ, ಅಹಂ ಮತ್ತು ಚಿತ್ತಗಳ ಸಾಮಗ್ರಿಕ ರೂಪವೇ ಮನಸ್. ಮುಂದೆ ತಮೋಗುಣದ ಅಧಿಕ ಪ್ರಪಾತದಿಂದ ಪಂಚ ಭೂತಾದಿಗಳು ಉಂಟಾಗುತ್ತವೆ. ಹೀಗೆ, ತಾನು ಹುಟ್ಟಿದ ನೆಲೆಯು ಬ್ರಹ್ಮವೇ ; ಎಂದು ನಿಶ್ಚಯಿಸಿ ತಿಳಿಯಬೇಕು.

ಆ. ಜನ್ಮ ರಕ್ಷಕ ಲಯವು, ಸಲ್ಲುವುದಿಹಕೆಲ್ಲ,
ಕರ್ತನೆಂದು ವಿಶ್ವಕರ್ಮಗೆಂದ್ರು.
ಹುಟ್ಟಿ ಬೆಳೆದು ಸತ್ತು ಹೋದರಲ್ಲವೇನೊ ?
ವಿಶ್ವದಾಭಿರಾಮ ಕೇಳು ವೇಮ.

ಜನ್ಮ, ರಕ್ಷಕ, ಮತ್ತು ಲಯಗಳು ಅಂದರೆ ಸೃಷ್ಟಿ, ಸ್ಥಿತಿ ಮತ್ತು ಲಯಗಳು ಇಹಕ್ಕೆಲ್ಲ ಸಲ್ಲುವುದು. ವಿಶ್ವಕರ್ಮನೇ ಇದೆಲ್ಲಕ್ಕೂ ಕರ್ತನೆಂದರು. ಸಕಲರೂ ಇಹದಲ್ಲಿ ಹುಟ್ಟುತ್ತಾರೆ, ಬೆಳೆಯುತ್ತಾರೆ ; ಸತ್ತು ಹೋಗುತ್ತಾರೆ. ಅಲ್ಲವೇನು ? ಅಂದರೆ ಸೃಷ್ಟಿ, ಸ್ಥಿತಿ ಮತ್ತು ಲಯಗಳು ಇಹಕ್ಕೆಲ್ಲ ಸಲ್ಲುವವು ಅಲ್ಲವೇ ?

ಕಂ. ಸಾವರು ಎಲ್ಲರು ಜನ ಕುಲ
ಸಾವಪ್ಪಿದವರ ಪುಣ್ಯ ಕಥೆಗಳನು ಸರ್ವಂ,
ನೀವ್ಕೇಳಿ ಕಂಡು, ಮನನಿಸಿ ;
ದೇವರಿಗೂ ತಿಳಿಯದು, ಅಂತ್ಯವು, ತಿಳಿಯೈ, ವೇಮಾ.

ಹುಟ್ಟಿದ ಜನಕುಲವೆಲ್ಲರೂ ಸಾಯುತ್ತಾರೆ. ತಮ್ಮ ಪೂರ್ವ ಕರ್ಮಾನುಸಾರ ಫಲ ಭೋಗಿಸಲೆಂದು ವಿಧಿ ನಿಗದಿಪಡಿಸಿದ ಆಯುಸ್ಸು ಇರುವ ವರೆಗೆ ಬದುಕಬಹುದು. ಇದು ವರೆಗೆ, ಸಾವನ್ನಪ್ಪಿದವರ ಪುಣ್ಯಕಥೆಗಳೆಲ್ಲವನ್ನೂ ನೀವು ಕೇಳಿ, ಕಂಡು ಮನನ ಮಾಡಿರಿ. ಆಗ ನಿಮಗೆ ಸಾವು ಯಾರನ್ನೂ ಬಿಡದು, ಎಂಬ ಸತ್ಯ ಮನದಟ್ಟಾಗುತ್ತದೆ. ಪುಣ್ಯ ಕರ್ಮ ಮಾಡಿ, ಪುಣ್ಯ ಲೋಕಗಳಿಗೆ ಹೋದ ದೇವತೆಗಳೂ ಪುಣ್ಯ ಕ್ಷಯಿಸಿದ ಬಳಿಕ ಅಂತ್ಯ ಕಾಣುವರು. ಮರಳಿ ಭೂಮಿಗೆ ಇಳಿಯುವರು. ದೇವರಿಗೂ ಅಂತ್ಯವು ತಿಳಿಯದೆಂದು ತಿಳಿ.

ಆ. ಮಣ್ಣು ಗಡಿಗೆಯಂತೆ ಮಾಯಾದೀ ಶರೀರ.
ಸಾವುದೇನೆ ಇರಲಿ, ಸಾಯದಾತ್ಮ.
ಘಟಗಳೆಷ್ಟೆ ಇರಲಿ ; ಗಗನ ಒಂದಲ್ಲವೆ ?
ವಿಶ್ವದಭಿರಾಮ ಕೇಳು ವೇಮ.

ಅವಿದ್ಯಾ ಮಾಯೆಯಿಂದ, ಪ್ರಕೃತಿಯ ಗುಣಾನ್ವಯದಿಂದ ಉಂಟಾದ ಈ ಶರೀರವು ಮಣ್ಣಿನ ಗಡಿಗೆಯಂತೆ. ಮಣ್ಣಿನ ಗಡಿಗೆಯು, ಘಟವು, ಒಡೆದು ನಾಶವಾಗಬಹುದು. ಆಕಾರ ಕಳೆದುಕೊಳ್ಳಬಹುದು. ಆದರೆ ಅದರೊಳಗಿರುವ ಆಕಾಶ ತತ್ತ್ವವು ನಾಶವಾಗುವುದಿಲ್ಲ ತಾನೇ ?

ಅದೇ ರೀತಿ, ಸಾಯುವುದು ದೇಹವೇ ಇರಲಿ, ಇನ್ನಾವುದೇ ಅನಾತ್ಮ ತತ್ವವಿರಲಿ ; ಇರಬಹುದು. ಆದರೆ ಆತ್ಮವು ಸಾಯದು. ಅದು ಅಮರ, ನಿತ್ಯ, ಅವಿಚ್ಛಿನ್ನ. ಇನ್ನು ಘಟಗಳು ಅಂದರೆ ಗಡಿಗೆಗಳು, ಎಷ್ಟೇ ಇರಲಿ ; ಅವುಗಳಲ್ಲಿ ಇರುವ ಆಕಾಶವು ಒಂದೇ ಅಲ್ಲವೇ ? ಅದು ಮಹದಾಕಾಶ. ಅದೇ ರೀತಿ ದೇಹಗಳು ಎಷ್ಟೇ ಆದರೂ ಆತ್ಮವು ಒಂದೇ ಆಗಿದೆ.

ಆ. ಎಲ್ಲಿಂದ ಬರುವುದು ? ಎಲ್ಲಿಗೆ ಹೋಗುವುದು ?
ನಿದ್ರೆ ರೀತಿ ; ಮಿನ್ನ ಅರಿತುಕೊಳಲು,
ಆತ್ಮನ ಬರುಹೋಗು ; ಅವನೆ ಶಿವಯೋಗಿಯು.
ವಿಶ್ವದಾಭಿರಾಮ ಕೇಳು ವೇಮ.

ಎಲ್ಲಿಂದ ಬರುವುದು ? ಎಲ್ಲಿಗೆ ಹೋಗುವುದು ? ಎಂಬುದನ್ನು ಅರಿತುಕೊಳ್ಳಬೇಕು. ಜೀವನು ಸಗುಣ ಬ್ರಹ್ಮನಿಂದ ಬರುತ್ತಾನೆ. ಪ್ರಕೃತಿಯ ಗುಣ ಬಂಧನದಿಂದ, ಬುದ್ಧಿ, ಅಹಂ ಮತ್ತು ಚಿತ್ತಗಳಾಗಿ, ಮುಂದುವರಿದು ತಮೋಗುಣದ ಅಧಿಕ ಪ್ರಪಾತದಿಂದ ಪಂಚ ಭೂತಗಳೂ ಉಂಟಾಗುತ್ತವೆ. ಕೊನೆಗೆ ಸಾಧನೆ ಗೆಯ್ದು ಸಗುಣ ಬ್ರಹ್ಮನೆಡೆಗೇ ಹೋಗುತ್ತಾನೆ. ಲೋಕ ಪ್ರಜ್ಞೆಯು ನಿದ್ರೆಯಲ್ಲಿ ಅಡಗಿ, ಎಚ್ಚರವಾದಾಗ ಪೂರ್ವಸ್ಥಿತಿಯೇ ಇರುವಂತೆ ಇದೆಲ್ಲವೆಂದು ಚೆನ್ನಾಗಿ ಅರಿಯಬೇಕು. ಆತ್ಮನ ಬರು ಹೋಗುಗಳು ಸಹ ಇದೇ ರೀತಿ ; ಎಂದು ಅರಿತುಕೊಳ್ಳುವವನೇ ಶಿವಯೋಗಿ.

ಆ. ನಿಹತಿ ಹುಟ್ಟುಗಳಿಗೆ ನೆಲೆಯು ಇಹವೆಂದರು.
ಕುಹರ ಲೋಕದಲ್ಲಿ ಕೌತುಕೆಲ್ಲಿ ?
ದಹರದಲ್ಲಿ ನೋಡಿ, ತಗಲುತಿಹುದು ತತ್ವ.
ವಿಶ್ವದಾಭಿರಾಮ ಕೇಳು ವೇಮ.

ಸಾವು ಹುಟ್ಟುಗಳಿಗೆ ಇಹವೇ ನೆಲೆಯೆನ್ನುತ್ತಾರೆ. ಜೀವಿಯು, ಆಯುಸ್ಸು ನಿಗದಿತವಾಗಿರುವ ವರೆಗೆ ಜೀವಿಸುತ್ತಾನೆ. ನಂತರ ಮರಣಿಸುತ್ತಾನೆ. ಇಹದಲ್ಲಿ ತಾನು ಮಾಡಿದ ಕರ್ಮಗಳಿಂದ ಪಡೆದ ಆರಬ್ಧ ಕರ್ಮಫಲ ಭೋಗಿಸಲು ಮರುಜನ್ಮ ಪಡೆಯುತ್ತಾನೆ. ಪ್ರೀತಿ, ದಯೆ, ಭಕ್ತಿಗಳ ಹೃದಯ ಕುಹರ ಲೋಕದಲ್ಲಿ ಅಂದರೆ ಹೃದಯವಂತಿಕೆಯಲ್ಲಿ ಯಾವುದು ಕೌತುಕವೆನಿಸೀತು ? ಎಲ್ಲವೂ ಸಹಜವಷ್ಟೇ. ಇನ್ನು ಊರ್ಧ್ವ ಲೋಕದಲ್ಲಿ, ಅಂದರೆ ಶಿರದಲ್ಲಿ ನೋಡಿದರೆ, ಸ್ಥೂಲ, ಸೂಕ್ಷ್ಮಗಳನ್ನು ಮೀರಿದ, ಕಾರ್ಯಕಾರಣಗಳ ಎಲ್ಲೆ ದಾಟಿದ ಕಾರಣಾತೀತವಾದ ಆತ್ಮ ತತ್ವವು ತಗಲುತ್ತದೆ.

ಆ. ಜ್ಞಾನ ಭಾವ ಪರಮ ಕಂಡುಕೊಳ್ಳದಿದ್ದು,
ಮನಸು ಅಳಿಸಲಿಲ್ಲ ; ಮಮತೆ ತಗಲಿ ;
ಕರ್ಮ ಮಾಡಿ ಜನ್ಮಗಳನು ಪಡೆವನಿಹದಿ.
ವಿಶ್ವದಾಭಿರಾಮ ಕೇಳು ವೇಮ.

ಸ್ಥೂಲವನ್ನು ತೊರೆದು ಸೂಕ್ಷ್ಮದಲ್ಲಿ ಸೇರುವುದೇ ಜ್ಞಾನ. ಆದ್ದರಿಂದ ಜ್ಞಾನ ಭಾವ ಹೊಂದಿ, ಸೂಕ್ಷ್ಮತಮನಾದ ಪರಮನನ್ನು ಕಂಡುಕೊಳ್ಳಬೇಕು. ಅದರಲ್ಲಿ ಒಂದಾಗಬೇಕು.

ಈ ಸೂಕ್ಷ್ಮತಮ ಪರಮ ತತ್ತ್ವವು ಮನಸ್ಸಿನ ಆಚೆಗಿದೆ. ಅದನ್ನು ಹೊಂದಬೇಕಾದರೆ ಮನಸ್ಸನ್ನು ಅಳಿಸಬೇಕು. ಆದರೆ, ನನ್ನದು ಎಂಬ ಮಮತೆ ತಗಲಿ ಮಾನವನು ಜಡಕ್ಕೆ ಅಂಟುತ್ತಾನೆ. ಹೀಗಾಗಿ ಮನಸ್ಸನ್ನು ಅಳಿಸಲಿಲ್ಲ. ಹೀಗೆ ಅಹಂಕಾರ, ಮಮಕಾರಗಳಿಂದ ಕರ್ಮ ಮಾಡಿ, ಆ ಕರ್ಮಫಲ ಭೋಗಿಸಲು ಇಹದಲ್ಲಿ ಜನ್ಮಾಂತರ ಪಡೆಯುತ್ತಾನೆ.

ಕಂ. ನೀ ಸಾಯಲು ಜತೆಗೆ ಮತ್ತೆ,
ತಾ ಸಾಯುವ ; ಆಗ ಪಂಚ ತತ್ತ್ವಗಳೊಡನೇ.
ಆ ಸ್ವರೂಪನಲ್ಲಿಯೆ,
ತಾ ಸ್ಥಿತನಪ್ಪ, ಜಿತನಾಗಿ ; ತಥ್ಯವು, ವೇಮಾ.

ಜೀವಿಯು ತನುವನ್ನು ತೊರೆದು ಹೋದಾಗ ಅಂದರೆ ನೀನು ಸತ್ತಾಗ, ಜೊತೆಗೆ ಪಂಚಭೂತಗಳೊಂದಿಗೆ ತಾನೂ ಸತ್ತಂತೆ. ಆದರೆ ಜಡ ವಿಷಯಗಳ ಸಂಗದಿಂದ ದೂರವಾಗಿ, ಜಿತೇಂದ್ರಿಯನಾಗಿ ತಾನು ತನ್ನ ಸ್ವರೂಪವಾದ ಆತ್ಮನಲ್ಲಿ ಇದ್ದರೆ, ಅಲ್ಲಿ ಸ್ಥಿತನಾಗಿ ಇರುತ್ತಾನೆ. ಇದು ತಥ್ಯವು. ಅಲ್ಲಿ ಸಾವು ಹುಟ್ಟುಗಳು ಇಲ್ಲ.

ಕಂ. ತನು ಸಂರಕ್ಷಣಕಾಗಿಯೆ,
ಮನದಲಿ ಕಾರ್ಯಗಳ ಮಾಡಿ, ಮನ ತತ್ತ್ವಗಳಂ.
ದಿನ ದಿನ ತಿರುಗುತ ತಿರುಗುತ,
ತನುವಿನಲಿ ಕಾಣಲು ಆತ್ಮ, ತಥ್ಯವು, ವೇಮಾ.

ನಿತ್ಯ ನೈಮಿತ್ತಿಕ, ಪ್ರಾಯಶ್ಚಿತ್ತ ಮತ್ತು ಕಾಮ್ಯಾದಿ ಕರ್ಮಗಳ ಗೊಡವೆಗೆ ಹೋಗದೆ, ಕೇವಲ ತನುವಿನ ಸಂರಕ್ಷಣಕ್ಕಾಗಿ ಮಾತ್ರ ಕಾರ್ಯಗಳನ್ನು ಮಾಡುತ್ತ, ದಿನ ದಿನ ತಿರುಗಾಡುತ್ತ ಮನ ತತ್ತ್ವಗಳಾದ ಬುದ್ಧಿ, ಅಹಂ ಮತ್ತು ಚಿತ್ತಗಳನ್ನು ತನುವಿನಲ್ಲಿ ಇರುವಾಗಲೇ ಅರಿತು ಕಾಣಲು, ಮನದಾಚೆಯ ಆತ್ಮ ತತ್ತ್ವವೂ ತಥ್ಯವಾಗುತ್ತದೆ.

ಗೀ. ಬಿಸಿಲುಗುದುರೆಯ ರೀತಿ ಬಂತು ಜಗವು.
ಉಂಟು ಪರಮಾತ್ಮನಲ್ಲಿಯೆ ಉಬ್ಬಿ ಬಹಳ.
ಮನದೊಳಗೆ ಶೋಧಿಸಿ ನೆಗೆಯಬೇಕು.
ಮಿಥ್ಯೆ ನಂಬದೆ ನೀನದನೆ ಮೀರು ವೇಮ.

ಬಿಸಿಲಿನಲ್ಲಿ ಅಲೆದು, ಬಾಯಾರಿಕೆಯಿಂದ ಬಳಲಿದ ಪಥಿಕನಿಗೆ ಅನತಿ ದೂರದಲ್ಲಿ ಬಿಸಿಲಿನ ಕಿರಣಗಳ ಪ್ರತಿಫಲನವೇ ಜಲವಾಗಿ ತೋರುತ್ತದೆ. ಮುಂದೆ ಹೋಗಿ ನೋಡಿದರೆ ಅಲ್ಲಿ ನೀರಿರದು. ಇನ್ನೂ ಮುಂದೆ ಜಲವಿದ್ದಂತೆ ಕಾಣುತ್ತದೆ. ಇದು ಕೈಗೆಟುಕದ ಬಿಸಿಲುಗುದುರೆಯಂತೆ. ಈ ಜಗತ್ತು ಸಹ, ಭೋಗವಸ್ತುಗಳ ದಾಹವನ್ನು ಹುಟ್ಟಿಸಿ, ಬಿಸಲುಗುದುರೆಯಂತೆ ಹೋಗುತ್ತದೆ. ಇದು ಪರಮಾತ್ಮನಲ್ಲಿಯೇ ಬಹಳ ಉಬ್ಬಿ ಉಂಟು. ಅಲ್ಲಿ ಅನಂತ ಸುಖವಾದ ಆನಂದ ಉಂಟು. ಅದನ್ನು ಪಡೆಯಬೇಕಾದರೆ, ಮಿಥ್ಯವಾದ, ಕ್ಷಣಿಕವಾದ, ಜಗವನ್ನು ನಂಬದೆ, ಮನವನ್ನು ಶೋಧಿಸಿ ನೆಗೆಯಬೇಕು. ಜಡ ಜಗತ್ತನ್ನು ಮೀರಿ ಊರ್ಧ್ವದತ್ತ ನೆಗೆಯಬೇಕು.

ಆ. ಹುಟ್ಟಿನೊಳಗೆ ಚೀನು ಹುಟ್ಟುತಿರುವ ರೀತಿ ;
ಶಿಲೆಗಳಿಂದ ಮಣಿಯು ಹುಟ್ಟಿದಂತೆ.
ಕಾಷ್ಟದೊಳಗೆ ಅಗ್ನಿ ಹುಟ್ಟಿದಂಥ ವಿಧದಿ.
ಹುಟ್ಟಿ ಮೆಟ್ಟಬೇಕು ಪೃಥಿವಿ ವೇಮ.

ಚೀನು ಹುಟ್ಟಿನಿಂದ ಮಧುರವಾದ ಚೀನು ಹುಟ್ಟಿದಂತೆ, ಶಿಲೆಗಳನ್ನು ಶೋಧಿಸಿ ತೆಗೆದಾಗ ಕೆಲವು ಶಿಲೆಗಳಲ್ಲಿ ಅಮೂಲ್ಯ ಲೋಹಗಳೂ, ಮಣಿಯೂ ಹುಟ್ಟಿದಂತೆ, ಕಟ್ಟಿಗೆಯನ್ನು ಅರಣಿ ಉತ್ತರಾರಣಿಗಳನ್ನಾಗಿ ಮಾಡಿ ತಿಕ್ಕಿದಾಗ ಅಗ್ನಿಯು ಹುಟ್ಟಿದಂಥ ವಿಧದಲ್ಲಿ ಜೀವಿಯು ಪೃಥಿವಿಯ ಮೇಲೆ ಹುಟ್ಟಿ, ಆಸುರೀ ಸಂಪತ್ತನ್ನು ಮೆಟ್ಟಿ, ಅವಿದ್ಯಾ ಮಾಯೆಯನ್ನು ಗೆದ್ದು, ತಾನು ಯೋಗಿಯಾಗಬೇಕು ; ಜ್ಞಾನಿಯಾಗಬೇಕು. ಮಧುರ ಚೇನಾಗಬೇಕು. ಅಮೂಲ್ಯ ಮಣಿಯಾಗಬೇಕು ಮತ್ತು ಬಹೂಪಯೋಗಿ ಅಗ್ನಿಯಾಗಬೇಕು.

ಆ. ಹುಟ್ಟುವುದಕೆ ಮೋದ, ಹೊರಡುವದಕೆ ಖೇದ.
ಅಖಿಲರರಿವರಂಥ ಅಲ್ಪ ವಿದ್ಯೆ.
ಸಾಯುವವ ಹುಟ್ಟುವ ಶೀಘ್ರ ಅಳುವೆಯೇನು ?
ವಿಶ್ವದಭಿರಾಮ ಕೇಳು ವೇಮ.

ಸಂಸಾರ ವ್ಯಾಮೋಹದಲ್ಲಿ ಸಿಲುಕಿ, ಜಡ ವಸ್ತುಗಳತ್ತ ಆಸಕ್ತಿ ಹೊಂದಿ, ಬಾಳುವ ಸಂಸಾರವಂದಿಗನಿಗೆ ಹುಟ್ಟುವುದಕ್ಕೆ ಮೋದವೆನಿಸುತ್ತದೆ. ಇಲ್ಲಂದ ಸತ್ತು ಹೋಗುವುದಕ್ಕಾಗಿ ಖೇದವೆನಿಸುತ್ತದೆ. ಅಖಿಲರರಿವಂಥ ಇಂಥ ಜನನ ಮರಣ ಚಕ್ರಕ್ಕೆ ಸಿಲುಕುವ ಬಾಳು ಕೇವಲ ಅಲ್ಪ ವಿದ್ಯೆ. 'ಜಾತಸ್ಯ ಹಿ ಧ್ರುವಂ ಮೃತ್ಯುಃ ಮೃತಸ್ಯ ಚ ಖಿಲು ಜನ್ಮ'. ಹುಟ್ಟಿದವನಿಗೆ ಸಾವು ನಿಶ್ಚಿತ ; ಸತ್ತವನಿಗೆ ಜನ್ಮವು ನಿಶ್ಚಿತ. ಅಂದ ಮೇಲೆ ಸಾಯುವವನು ಹುಟ್ಟುತ್ತಾನೆ. ಆದ್ದರಿಂದ ಸಾವಿಗಾಗಿ, ಏನೋ ಆಗಬಾರದ್ದು ಆಯಿತೆಂದು ಅಳುವುದೇಕೆ ?

ಆ. ಬರುವು ಹೋಗು ಅಡಗಿ, ಪಿಡಿದು ರಾಜ ಮಾರ್ಗ,
ಸ್ವರ್ಗವೆಂಬ ಗುರುತು ಮಾರ್ಗವರಿತು,
ಸೋಂಕಿ, ಮೀರಿ, ಬಯಲು ; ಸೂತ್ರವಲ್ಲವೇನು ?
ವಿಶ್ವದಾಭಿರಾಮ ಕೇಳು ವೇಮ.

ಬರು-ಹೋಗುಗಳು ಅಡಗಿ, ಅಂದರೆ ಜನನ ಮರಣಗಳ ಚಕ್ರದಲ್ಲಿ ಸಿಲುಕದೆ, ರಾಜಮಾರ್ಗವಾದ ಯೋಗ ಮಾರ್ಗವನ್ನು ಹಿಡಿದು ಸಾಧನೆಯಲ್ಲಿ ನಿರತನಾಗಬೇಕು. ಸತ್ಕರ್ಮದಲ್ಲಿ ತೊಡಗಿ, ಸ್ವರ್ಗವೆಂಬ ಪುಣ್ಯ ಲೋಕದ ಗುರುತು ಹಿಡಿದು, ಅಲ್ಲಗೆ ತಲುಪುವ ಮಾರ್ಗವನ್ನು ಅರಿಯಬೇಕು. ಅದನ್ನು ಸೋಂಕಿ, ಅದನ್ನು ಮೀರಿ ನಡೆಯಬೇಕು. ಆಗ ಗುಣಾತೀತವಾದ ಬಯಲು ಲಭಿಸುತ್ತದೆ. ಸ್ವರ್ಗವನ್ನು ತಲುಪಿ, ಮೀರಿ ಹೋಗುವುದು ಬಯಲು ಸೂತ್ರ ಅರ್ಥಾತ್ ಬ್ರಹ್ಮಸೂತ್ರವಲ್ಲವೇನು ?

ಭೂಮಿಯಲ್ಲಿ ಜನನ ಭೂ ಭಾರವೆಲ್ಲವು,
ತನುವಿನಲ್ಲಿ ಜನನ ತತ್ತ್ವವೆಲ್ಲ.

ಶ್ರಮದಲ್ಲಿ ಜನಿಸಿ ಸರ್ವವು ತಾನಾದ.
ವಿಶ್ವದಾಭಿರಾಮ ಕೇಳು ವೇಮ.

ಭೂಮಿಯಲ್ಲಿ ಜನಿಸಿದುದೆಲ್ಲವೂ ಭೂಮಿಗೆ ಭಾರವಾಗುವುದಷ್ಟೇ. ಅದು ಇರುವ ಭೂತಗಳಿಗೆ ಕೂಡಿಕೆಯಾಗುವುದಷ್ಟೇ. ಪ್ರಕೃತಿ ತತ್ತ್ವ, ಬುದ್ಧಿ ತತ್ತ್ವ, ಅಹಂ ತತ್ತ್ವ ಮತ್ತು ಚಿತ್ತ ತತ್ತ್ವಗಳೆಲ್ಲ ತನುವಿನಲ್ಲ ಜನಿಸುತ್ತವೆ. ಇನ್ನು ಶ್ರಮದಲ್ಲಿ ಜನಿಸಿ, ಶ್ರಮಪಟ್ಟು, ಸಾಧನೆ ಮಾಡಿ, ಸಗುಣ ಬ್ರಹ್ಮವನ್ನು ಹೊಂದಿ, ಸರ್ವವೂ ತಾನೇ ಆಗುತ್ತಾನೆ.

ಆ. ಇಹವ ತೊರೆಯೆ ಫಲವು ಇಂಪು ಉಂಟು ಎಂದು,
ಮಹಿಯಲಿ ನುಡಿವವರ ಮತವು ಸುಳ್ಳು.
ಇಹದ ಒಳಗೆ ಪರವು ಇಹುದು ; ಹೊಂದಿ ಕಾಣು.
ವಿಶ್ವದಭಿರಾಮ ಕೇಳು ವೇಮ.

ಇಹದಲ್ಲಿ ಜೀವಿಯು ಗುಣ ಸಂಗಿಯಾಗಿ ಕರ್ಮಕ್ಕೆಳಿಯುತ್ತಾನೆ. ಆದ್ದರಿಂದ ಅವನಿಗೆ ಕರ್ಮ ಬಂಧನವಾಗುತ್ತದೆ. ಮೋಕ್ಷ ದೊರೆಯದು, ಆದ್ದರಿಂದ ಇಹವನ್ನು ತೊರೆಯಬೇಕು, ಅಂದರೆ ತನುವನ್ನು ತ್ಯಜಿಸಬೇಕು. ಆಗ ಮಾತ್ರ ಇಂಪಾದ ಫಲವುಂಟು, ಎನ್ನುತ್ತಾರೆ. ವಿದೇಹ ಮುಕ್ತಿಯುಂಟು ಎಂದು ಮಹಿಯಲ್ಲಿ ಕೆಲವರು ತಮ್ಮ ಮತವನ್ನು ಪ್ರತಿಪಾದಿಸುತ್ತಾರೆ. ಆದರೆ ಈ ಮತವು ಸುಳ್ಳು. ಏಕೆಂದರೆ ಸ್ಥೂಲದಿಂದ ಸೂಕ್ಷ್ಮ , ಸೂಕ್ಷ್ಮತರ, ಸೂಕ್ಷ್ಮತಮ ತತ್ತ್ವಗಳನ್ನು ಹೊಂದಬೇಕಾದರೆ ತನುವಿನ ಮುಖಾಂತರ ಸಾಧನ ಮಾಡಬೇಕು. ಇಹದಲ್ಲಿ ಉಳಿಯಬೇಕು. ಆದ್ದರಿಂದಲೇ 'ಶರೀರಂ ಖಲು ಧರ್ಮ ಸಾಧನಂ' ಎಂದು ಹೇಳುವುದು. ಊರ್ಧ್ವ ಲೋಕದಲ್ಲಿರುವ ಪುಣ್ಯ ಜೀವಿಗಳು ಸಹ, ಪುಣ್ಯಾಂಶ ತೀರಿದ ಬಳಿಕ, ಇಹದಲ್ಲಿ ಹುಟ್ಟಿ, ಸಾಧನೆ ಮಾಡಿ ಮುಕ್ತಿ ಪಡೆಯಬೇಕು. ಅಂದ ಮೇಲೆ ಇಹದಲ್ಲಿಯೇ ಪರವು ಇದೆ. ಅದನ್ನು ಸಾಧನದಿಂದ ಹೊಂದಿ ಕಾಣು.

ಆ. ಕಳೆದ ದಿನ ನೆನೆವುದು ಕನಸಿನರ್ಥವಷ್ಟೆ.
ನಡೆವ ಕಾಲವೆಷ್ಟು ? ನಂಬ ಬೇಡ.
ಕ್ಷಣದಳಗಿನ ಬದುಕು ಸಂಸಾರ ಭ್ರಾಂತಿ.
ವಿಶ್ವದಾಭಿರಾಮ ಕೇಳು ವೇಮ.

ಕಳೆದ ದಿನಗಳೆಲ್ಲವೂ ಕನಸಿನಂತೆ. ಅವುಗಳನ್ನು ನೆನೆಸುವುದು, ಕನಸಿನೊಳಗಿನ ಘಟನೆಗಳನ್ನು ನೆನೆದಂತೆ. ಇನ್ನು ಈಗ ನಡೆಯುವ ಕಾಲವು ಕ್ಷಣಿಕ, ಅನಿಶ್ಚಿತ. ಏನಾದರೂ ಸಾಧಿಸಬೇಕಾದರೆ ಅದನ್ನು ನಂಬಬೇಡ. ಒಳಿತನ್ನು ನಾಳೆಯೆನ್ನದೆ, ಇಂದೆನ್ನದೆ, ಈಗಲೇ ಮಾಡು. ಕಾಲವನ್ನು ನಂಬಬೇಡ. ಬದುಕು ಕ್ಷಣ ಭಂಗುರವಾಗಿದೆ. ಈಗಿರುವುದು ಮರು ಕ್ಷಣದಲ್ಲಿ ಭಂಗವಾಗುತ್ತದೆ. ಮಾನವನು, 'ಸಂ ಸರತಿ ಇತಿ ಸಂಸಾರಃ' ಎಂಬ ಸಂಸಾರದಲ್ಲಿ ಸುಖವಿದೆಯೆಂಬ ಭ್ರಾಂತಿಗೆ ಒಳಗಾಗಿ, ತನ್ನ ಚರಮ ಗುರಿಯಿಂದ ವಿಮುಖನಾಗಿದ್ದಾನೆ.

ಆ. ಜೀವವೆಲ್ಲಿ ಇಹುದೊ ? ಭಾವವಲ್ಲಿ ಇಹುದು.
ಕಾಯ ಪುರದಲ್ಲಯೆ ಕೂಡಿ ಉಂಟು.

ತೊಳಗುತಿರುವವೆರಡು ; ಸ್ಥಳಗಳರಿಯರೇಕೊ ?
ವಿಶ್ವದಾಭಿರಾಮ ಕೇಳು ವೇಮ.

ಜೀವವು ಇರುವಲ್ಲಿ ಭಾವವೂ ಇದೆ. ಪುಣ್ಯ ಜೀವಿಗಳಲ್ಲಿ ಭಕ್ತಿ ಭಾವವುಂಟು. ಸದ್ಭಾವವೂ ಉಂಟು. ದೇಹವೆಂಬ ಪುರದಲ್ಲಿ ಜೀವ-ಭಾವಗಳು ಕೂಡಿಯೇ ಉಂಟು. ಈ ಎರಡು ತೊಳಗುತ್ತಿರುತ್ತವೆ. ಎಲ್ಲಿ ? ಜೀವ, ಭಾವಗಳೆರಡೂ ತೊಳಗುತ್ತಿರುವ ಸ್ಥಳವು ಹೃದಯವು ತಾನೇ ? ಇದನ್ನು ಅರಿಯಬೇಕು. ಭಾವಾತೀತನಾದಾಗ ಪರಮನಲ್ಲಿ ಒಂದಾಗುತ್ತಾನೆ.

ಆ. ಜೀವವಿಪ್ಪ ತಾಣ ಸ್ಥಿರವಾಗಿ ತಿಳಿಯದೆ,
ತಿರುಗುವಸ್ಥಿರವಿಹ ದೇಹದಲ್ಲಿ.
ತಿರುಗಲೇಕೆ ? ಎಂದು ತಿಳಿಯನೆಜ್ಞಾನಿ ತಾ.
ವಿಶ್ವದಭಿರಾಮ ಕೇಳು ವೇಮ.

ಜೀವನು ಸ್ಥಿರವಾಗಿ ಇರುವ ತಾಣವೆಂದರೆ, ಸಗುಣ ಬ್ರಹ್ಮ. ಇದನ್ನು ಸಾಧನೆಯ ಮೂಲಕ ಭಾವ, ಭಾವಾತೀತ ಸ್ತರಗಳನ್ನು ದಾಟಿ ತಲುಪಿ ಹೊಂದಬೇಕು ; ತಿಳಿಯಬೇಕು. ಅದನ್ನು ತಿಳಿಯದೆ, ಅಸ್ಥಿರವಾದ, ನಶ್ವರವಾದ, ಇಂದು ಇದ್ದು ನಾಳೆ ಬಿದ್ದು ಹೋಗುವ ದೇಹದಲ್ಲಿ ಮಾನವನು ಬರುತ್ತಾನೆ ; ಹೋಗುತ್ತಾನೆ. ಹೀಗೆ ತಿರುಗುವುದೇಕೆ ? ಎಂದು ಅಜ್ಞಾನಿಯು ತಿಳಿಯನು.

ಆ. ಇರುವ ಹಾಗೆ ಇಹುದು ; ಇರದ ಹಾಗೆ ಇಹುದು.
ಮತ್ತೆ ಇರದೆ ಹೋಯ್ತು ; ಮರಳಿ ಬಂತು ;
ಕನಕವೆಲ್ಲಿ ನೋಡೆ, ಗಾರುಡಿಯಂತಿರುವುದು.
ವಿಶ್ವದಾಭಿರಾಮ ಕೇಳು ವೇಮ.

ಐಹಿಕ ಸಂಪತ್ತುಗಳಲ್ಲಿ ಕನಕವು ಅತಿ ಪ್ರಿಯಕರವಾದದ್ದು ; ಆಪ್ಯಾಯಮಾನವಾದದ್ದು. ಆದರೆ ಚಂಚಲವಾದದ್ದು. ಅದು ಇಂದು ಇರಬಹುದು. ನಾಳೆ ಇಲ್ಲದಂತಾಗಬಹುದು. ಯಾವುದು ಇಲ್ಲದಂತಾಗುವುದೋ, ಅದು ಮರಳಿ ಬಂದು ಸೇರುತ್ತದೆ. ಗಾರುಡೀ ವಿದ್ಯೆಯ ಪ್ರಯೋಗದಲ್ಲಿ, ಗಾರುಡಿಗನು ಒಂದು ವಸ್ತುವನ್ನು ಮನದಲ್ಲಿ ಕಲ್ಪಿಸಿಕೊಂಡರೆ, ಆ ವಸ್ತವು ಪ್ರೇಕ್ಷಕರಿಗೆ ಇಲ್ಲವಾಗುತ್ತದೆ. ಅದೇ ರೀತಿ, ಕನಕವು ಎಲ್ಲಿ ? ಎಂದು ನೋಡಿದರೆ, ಗಾರುಡಿಯಂತೆ, ಇದ್ದು, ಅನಂತರ ಇಲ್ಲವಾಗುತ್ತದೆ.

ಮನದ ಅವಸ್ಥೆಗಳು :

ಆ. ಸುಪ್ತಿ ಜಾಗರಗಳ ಸಾಲಲಿ ತಾನುಂಟು.
ಹೊತ್ತು ನಿಂತ ಮಾಯೆ ಕಾಣಲಾರ.
ದಿಟಸಟೆಗಳೆರಡನು ತಾನು ಸಲೆಗಾಣದೆ,
ಗಡನೆ ಕೆಟ್ಟು ಹೋಹ ಗುಣವು ವೇಮ.

ಜಾಗರ, ಸ್ವಪ್ನ, ಸುಷುಪ್ತಿ ಅವಸ್ಥೆಗಳ ಸಾಲಿನಲ್ಲಿ ಜೀವಿಯ ಪ್ರಜ್ಞೆಯುಂಟು. ಸ್ಥೂಲ

ದೇಹದಲ್ಲಿ ಪ್ರಜ್ಞೆಯು ಜಾಗ್ರತಾವಸ್ಥೆಯಲ್ಲಿರುತ್ತದೆ. ಅನ್ನಮಯ ಕೋಶವಾಗಿದೆ. ಸೂಕ್ಷ್ಮ ದೇಹದಲ್ಲಿ ಪ್ರಜ್ಞೆಯು ಪ್ರಾಣಮಯ, ಮನೋಮಯ, ವಿಜ್ಞಾನಮಯ ಕೋಶಗಳಲ್ಲಿ ಇರುತ್ತದೆ. ಇನ್ನು ಕಾರಣದಲ್ಲ ಪ್ರಜ್ಞೆಯು ಆನಂದಮಯ ಕೋಶದಲ್ಲಿರುತ್ತದೆ. ಇದು ಸುಪ್ತಿ-ಅವಸ್ಥೆಯಾಗಿದೆ. ಈ ಅವಸ್ಥೆಗಳಿಂದಾಗಿ ಇದ್ದುದನ್ನು ಇಲ್ಲದಂತೆ ಮಾಡುವ ತಾನು ಹೊತ್ತು ನಿಂತ ಮಾಯೆಯನ್ನು ಕಾಣಲಾರನು. ಹೀಗಾಗಿ ಯಾವುದು ದಿಟ ? ಯಾವುದು ಸಟೆ ? ಎಂದು ಕಾಣದೆ, ಶೀಘ್ರವೇ ಕೆಟ್ಟು ಹೋಗುತ್ತಾನೆ. ಇದು ಮಾಯೆಯ ಗುಣವು.

ಮೇಲಿನ ಪದ್ಯದ ಪಾಠಾಂತರವು ಹೀಗಿದೆ :

ಆ. ಸುಪ್ತಿ ಜಾಗರಗಳ ನಿದ್ರೆ ಜಾಡ್ಯವುಂಟು.
ಮುತ್ತಿದಂಥ ಮಾಯ ಮತ್ತೆ ಕಾಣ.
ಸುಳ್ಳು ಸತ್ಯಗಳನು ಸಲೆ ಕಾಣದಿರುವ ;
ಗಡನೆ ಕೆಟ್ಟು ಹೋಹ ಗುಣವು ವೇಮ.

ಇದಕ್ಕೆ ಪ್ರತ್ಯೇಕ ಟೀಕಾರ್ಥದ ಅವಶ್ಯವಿಲ್ಲವಷ್ಟೇ.

ಜಾಗ್ರತೆನಲು ಏನು ? ಜನ್ಮವೆನಲು ಏನು ?
ಜನ್ಮಗಳನು ಅರಿಯೆ ಜಾಗ್ರತಾಯ್ತು.
ಜನ್ಮ ಜಾಗ್ರತೆಗಳ ಸಾಧಿಸಿದೊಡೆ ಮುಕ್ತ.
ವಿಶ್ವದಾಭಿರಾಮ ಕೇಳು ವೇಮ.

ಸ್ಥೂಲ ದೇಹದಲ್ಲ ಅರಿವು ಎಚ್ಚರವಾಗಿದ್ದರೆ, ಜಾಗ್ರತೆ ಎನ್ನುತ್ತಾರೆ. ಇನ್ನು ಸಾವು ಸುದೀರ್ಘ ನಿದ್ರೆಯಂತೆ. ಸಾವಿನಲ್ಲಿ, ಸ್ಥೂಲ ತನುವಿನಿಂದ ಬೇರ್ಪಟ್ಟ ಸೂಕ್ಷ್ಮ ತನುವು, ಪಿತೃಲೋಕದಲ್ಲಿದ್ದು, ತನ್ನ ಪೂರ್ವ ಕರ್ಮಗಳ ಆರಬ್ಧ ಕರ್ಮಫಲ ಭೋಗಿಸಲು, ಜನನಿಯ ಗರ್ಭದಿಂದ ಧರೆಗಿಳಿಯುತ್ತದೆ. ಇದುವೇ ಜನ್ಮ. ಹೀಗೆ ಜನ್ಮ ಜನ್ಮಾಂತರಗಳನ್ನು ಅರಿತುಕೊಳ್ಳುವುದೇ ಅರಿವಿನ ಜಾಗ್ರತೆಯಾಗಿದೆ. ಜನ್ಮದ ಕಾರಣವನ್ನು ಅರಿತು ಮರಣದ ಅವಸ್ಥೆಯನ್ನು ಅನುಭವಿಸಿ, ಜನ್ಮ ಜಾಗ್ರತೆ ನಿಯಂತ್ರಣವನ್ನು ಸಾಧಿಸುವುದೇ ಮುಕ್ತಿಯೆನಿಸುತ್ತದೆ.

ಆ. ನರನು ಜಾಗರದಲಿ ನಟನೆ ಮಾಡುತಿರುವ.
ನರಗಿಳೆಯಲ ಜಾಗರ ವಿರಳ ಕಾಣು.
ನರನು ಜಾಗೃತನಿರೆ, ಧರಣಿಲಿ ಪರಮಾತ್ಮ.
ವಿಶ್ವದಾಭಿರಾಮ ಕೇಳು ವೇಮ.

ನರನು ಜಾಗ್ರತಾವಸ್ಥೆಯಲ್ಲಿ ಪ್ರಾಮಾಣಿಕವಾಗಿ, ತನ್ನನ್ನು ತಾನರಿಯುವ ಪ್ರಯತ್ನ ಮಾಡಬೇಕು. ಆದರೆ ಅವನು ನಿಜವಾಗಿ ಹಾಗೆ ಮಾಡದೆ, ಹಾಗೆ ಮಾಡಿದಂತೆ ನಟಿಸುತ್ತಾನೆ. ಭಕ್ತನಂತೆ ಸೋಗು ಹಾಕುತ್ತಾನೆ. ಯೋಗಿಯಂತೆ ಸೋಗು ಹಾಕುತ್ತಾನೆ. ಹೀಗಾಗಿ ನರನಿಗೆ ಇಳೆಯಲ್ಲಿ ನಿಜವಾದ ಜಾಗೃತ ಅರಿವು ಇರುವುದು ವಿರಳ. ಇದನ್ನು ಕಾಣು. ನರನು ಜಾಗೃತ ಅರಿವು ಹೊಂದಿ ಇದ್ದರೆ, ತಾನು ಯಾರು ? ಎಲ್ಲಿಂದ ಬಂದೆ ? ಎಲ್ಲಿಗ ಹೋಗಬೇಕು ? ಎಂಬ

ಬಗ್ಗೆ ಎಚ್ಚತ್ತ ಅರಿವು ಹೊಂದಿದ್ದರೆ, ಅತ್ತ ಸಾಗಿ ಸಿದ್ಧಿ ಪಡೆಯುತ್ತಾನೆ. ಸಿದ್ಧನಾಗುತ್ತಾನೆ. ಧರಣಿಯಲ್ಲಿ ಅಂಥ ಸಿದ್ಧನೇ ಪರಮಾತ್ಮ ರೂಪನು.

ಆ. ಜನನ ಮರಣಗಳಲಿ, ಸ್ವಪ್ನ ಸುಷುಪ್ತಿಗಳಲಿ,
ಜಗವನೆಲ್ಲ ತುಂಬಿ ಜನರು ಉಂಟು.
ಅವನಿಯಲ್ಲಿ ಜನರು ಅರಿಯಲಾರರಯ್ಯ.
ವಿಶ್ವದಾಭಿರಾಮ ಕೇಳು ವೇಮ.

ಜನರು ಜಗತ್ತಿನಲ್ಲಿ ಹುಟ್ಟುತ್ತಾರೆ, ಸಾಯುತ್ತಾರೆ. ಜನನ ಮರಣ ಚಕ್ರದಲ್ಲ ಸಿಲುಕುತ್ತಾರೆ. ಅವರು ಜಾಗರ, ಸ್ವಪ್ನ, ಸುಷುಪ್ತಿ ಅವಸ್ಥೆಗಳಲ್ಲಿ ಇರುತ್ತ ಬಾಳುತ್ತಾರೆ. ಇಂಥ ಜನರೇ ಜಗತ್ತಿನ ತುಂಬ ಇದ್ದಾರೆ. ಅವರಿಗೆ ಜನಿಸುವುದೇಕೆ ? ಸಾಯುವುದು ಯಾವುದು ? ಎಂಬ ಅರಿವೇ ಇರುವುದಿಲ್ಲ. ನಾವು ಪೂರ್ವ ಜನ್ಮದಲ್ಲಿ ಮಾಡಿದ ಕರ್ಮಗಳಿಂದ ಪ್ರಾರಬ್ಧವಾದ ಕರ್ಮಫಲ ಭೋಗಕ್ಕಾಗಿ ಮರು ಜನ್ಮ ತಾಳುತ್ತೇವೆ. ವಿಧಿ ನಿಯಮದಂತೆ, ಪೂರ್ವ ನಿಗದಿತ ಕಾಲದ ವರೆಗೆ ಜೀವಿಸಿದ್ದೇವೆ. ಮರಣವನ್ನು ಅಪ್ಪಬೇಕು ; ಎಂಬ ಅರಿವು ಅವರಿಗಿಲ್ಲ. ಏನು ಮಾಡಿದರೆ ಜನನ ಮರಣ ಚಕ್ರದಲ್ಲಿ ಸಿಲುಕದೆ, ಸ್ವಪ್ನ, ಸುಷುಪ್ತಿಗಳಲ್ಲಿ ಜೀವನ ಕಳೆಯದೆ ಸದಾ ಜಾಗ್ರತನಾಗಿರಬೇಕು ; ಮುಕ್ತಿ ಹೊಂದಬೇಕು., ಎಂಬುದನ್ನು ಅವನಿಯಲ್ಲಿ ಜನರು ಅರಿಯಲಾರರಲ್ಲ. !

ಕಂ. ಬಯಲಲಿ ಸರ್ವವು ಹುಟ್ಟಿತು,
ಬಯಲಲ್ಲಿಯೆ ಲೀನವಹುದು ಆ ಬ್ರಹ್ಮವೆನಲ್.
ಬಯಲನು ಮನದಲಿ ತಿಳಿವೊಡೆ,
ಬಯಲಿನಲಿ ಮುಕ್ತಿಯು ಬಟ್ಟ ಬಯಲ್ಕೈ, ವೇಮಾ.

ಸಂಕಲ್ಪ ವಿಕಲ್ಪಗಳಿಲ್ಲದ, ವೃತ್ತಿ ನಿಶ್ಯೂನ್ಯವಾದ ಅವಸ್ಥೆಯೇ ಬಯಲು. ತ್ರಿಗುಣಗಳು ಭಾರಸಾಮ್ಯದಲ್ಲಿರುವ ಸಗುಣಾತಸ್ಥೆಯಿದು. ಇದನ್ನು ಸಗುಣ ಬ್ರಹ್ಮನೆನ್ನುತ್ತಾರೆ. ಭಾರ ಸಾಮ್ಯವು ತಪ್ಪಿದಾಗ ಇಲ್ಲಿ ಗುಣಗಳು ವ್ಯಕ್ತವಾಗಿ ಸರ್ವವೂ ಹುಟ್ಟುತ್ತಮೆ. ಭಾರಸಾಮ್ಯವಾದಾಗ, ಸರ್ವವೂ ಲೀನವಾಗುತ್ತದೆ. ಸತ್ತ್ವ ರಜಸ್ ಮತ್ತು ತಮೋ ಗುಣಗಳ ಪ್ರಭಾವದಿಂದ ಸೃಷ್ಟಿಗೊಂಡ ಬುದ್ಧಿ ತತ್ತ್ವ, ಅಹಂ ತತ್ತ್ವ ಮತ್ತು ಚಿತ್ತ ತತ್ತ್ವಗಳ ಸಾಮಾನ್ಯ ಹೆಸರೇ ಮನಸ್ ತತ್ತ್ವ. ಇದು ಬಯಲಿನಿಂದ ಹೊರಹೊಮ್ಮುತ್ತದೆ. ಇಂಥ ಮನದಲ್ಲಿ ನಿಸ್ತರಂಗವಾದ ಬಯಲನ್ನು ತಿಳಿದರೆ, ಮುಕ್ತಿಯು ಬಯಲಿನಲ್ಲಿಯೇ ಬಟ್ಟಬಯಲಾಗುತ್ತದೆ.

ಕಂ. ಬಯಲಾದುದು ಎಷ್ಟೆಂದೆನೆ,
ಬಯಲಿಗೆ, ಬ್ರಹ್ಮಾಂಡಗಳಿಗೆ ಹಿಡಿಸಮಷ್ಟಿಹುದೈ.
ರಯದಲಿ ರವಿಯೆಷ್ಟೆಂದೆನೆ,
ಭಯ ಪಡುವರವನ ನೋಡಲು, ಬಯಲಲಿ, ವೇಮಾ.

ಸೃಷ್ಟಿಯ ಆದಿಯಲ್ಲಿ ಬಯಲಿದೆ. ಅದು ಸಗುಣ ಬ್ರಹ್ಮಸ್ಥಿತಿ. ಇದರ ವಿಸ್ತಾರ ಮತ್ತು ವ್ಯಾಪ್ತಿಯು ಎಷ್ಟು ಎಂದರೆ, ಅದು ಬಯಲಿಗೂ ಮತ್ತು ಬ್ರಹ್ಮಾಂಡಗಳಿಗೂ

ಹಿಡಿಸುವಷ್ಟಿದೆ. ಅದು ನಿರ್ಗುಣ ಬ್ರಹ್ಮವಾಗಿದೆ. ಬ್ರಹ್ಮಾಂಡಗಳಲ್ಲಿ ಅದೆಷ್ಟೋ ಸೂರ್ಯ ಮಂಡಲಗಳಿವೆ. ಈ ರವಿಗಳ ಪ್ರಕಾಶದ ವೇಗವು ಭೂಮಂಡಲದ ರವಿ ಪ್ರಕಾಶದ ಸಾವಿರಪಟ್ಟು ಇದೆ. ಬಯಲಿನಲ್ಲಿ ಈ ಸಾವಿರ ಸೂರ್ಯರ ಪ್ರಖರತೆಯನ್ನು ವೀಕ್ಷಿಸಲು ಸಾಧಕನು ಭಯಪಡುತ್ತಾನೆ. ಸಹಸ್ರ ಸೂರ್ಯರ ಪ್ರಖರತೆಯನ್ನು ಕುರಿತು ಉಪನಿಷತ್ತಿನ ಋಷಿಗಳೂ ಪ್ರಸ್ತಾಪಿಸಿದ್ದಾರೆ.

ಕಂ. ಬೈಲಲಿ ಬಂಧವ ಬೆರೆಸದೆ,
ಪಾಲಿಪ ಪರಮಾತ್ಮನಿಗೇ ವಾಂಛಿತನಪ್ಪಂ.
ಬೈಲಲಿ ಬಂಧವ ಬೆರೆಸಿರೆ,
ಕೈಲಾಸವ ಸೇರಿ, ಮುಕ್ತಿ ನೋಳ್ಪರು ವೇಮಾ.

ಗುಣಾತೀತವಾದ ನಿರ್ಗುಣ ಬಯಲಲ್ಲಿ ಗುಣಗಳಿಂದಾಗುವ ಬಂಧವನ್ನು ಬೆರೆಸದೆ ಇದ್ದರೆ, ಅಂಥ ಯೋಗಿಯು, ಪಾಲಿಸುವ ಪರಮಾತ್ಮನಿಗೆ ಇಷ್ಟವಾಗುತ್ತಾನೆ. ಒಂದು ವೇಳೆ, ಭಾರಸಾಮ್ಯದಲ್ಲಿದ್ದ ಗುಣಗಳ ಭಾರಸಾಮ್ಯವು ತಪ್ಪಿದರೆ, ಮೊದಲು ಸತ್ತ್ವಗುಣ ಪ್ರತೀಕವಾದ ಶಿವನು ತಾಂಡವ ನೃತ್ಯದಲ್ಲಿ ಕ್ರೀಡಿಸುತ್ತಾನೆ. ಹೀಗೆ ಬಯಲಲ್ಲಿ ಬಂಧವನ್ನು ಬೆರೆಸಿದರೆ, ಯೋಗಿಯು ಕೈಲಾಸವನ್ನು ಸೇರಿ, ಗುಣಾಧೀಶನಾಗಿ ಮುಕ್ತಿಯನ್ನು ನೋಡುತ್ತಾನೆ. ಅವನು ಗುಣಾತೀತನಾಗಿ ನಿರ್ಗುಣದಲ್ಲಿ ಸೇರಿ ಮೋಕ್ಷ ಪಡೆಯುವುದು ಇನ್ನೂ ಉಳಿದಿರುತ್ತದೆ.

ಆ. ಬಯಲಿನೊಳಗೆ ಬಯಲು ಪರೀಕ್ಷಿಸಿ ನೋಡಲು,
ಬಯಲು ರೂಪ ಕಂಡು ಪ್ರೀತಿ ಹೊಂದಿ,
ಮಲಿನ ದೇಹದಲ್ಲಿ ಮೋಹ ತೊರೆಯರಲ್ಲ !
ವಿಶ್ವದಾಭಿರಾಮ ಕೇಳು ವೇಮ.

ಸಂಕಲ್ಪ ವಿಕಲ್ಪಗಳಿಲ್ಲದ, ವೃತ್ತಿಗಳೇಳದ, ನಿಶ್ಶೂನ್ಯ ಸ್ಥಿತಿಯೇ ಬಯಲು. ಅಲ್ಲಿ ತ್ರಿಗುಣಗಳು ಭಾರ ಸಾಮ್ಯದಲ್ಲಿರುವುದರಿಂದ ವ್ಯಕ್ತವಾಗುವುದಿಲ್ಲ. ದರ್ಶನದಲ್ಲಿ ಇದನ್ನು ಸಗುಣ ಬ್ರಹ್ಮ ಸ್ವರೂಪವೆನ್ನುತ್ತಾರೆ. ಈ ಬಯಲಿನೊಳಗೆ ಇನ್ನೊಂದು ಬಯಲಿದೆ. ಅದು ನಿರ್ಗುಣ, ಬ್ರಹ್ಮ. ಪರೀಕ್ಷಿಸಿ ನೋಡಿದರೆ, ಇದು ಅನುಭವ ವೇದ್ಯವಾಗುತ್ತದೆ. ಸಾಧಕನು ಈ ಬಯಲಿನಲ್ಲಿರುವಾಗ, ಅಂದರೆ ಸಗುಣ ಬ್ರಹ್ಮಸ್ಥಿತಿಯಿಂದ ನಿಮ್ನ ಸ್ತರಕ್ಕಿಳಿದಾಗ, ದೃಶ್ಯವು ಕಾಣುತ್ತದೆ. ಇದು ಪೂರ್ವ ಸಂಸ್ಕಾರಾನುಸಾರ, ಇಷ್ಟ ದೇವತಾ ಮೂರ್ತಿಯೂ ಆಗಿರಬಹುದು. ಹೀಗೆ ಬಯಲು ರೂಪದಲ್ಲಿ ಪ್ರೀತಿ ಹೊಂದಿ, ಅಂಟಿಕೊಳ್ಳುತ್ತಾರೆ. ದೇಹದ ಆಣವಿಕ, ಮಾಯಿಕ, ಕಾರ್ಮಿಕ ಮಲಗಳ ಮೂಲಕ ಹೀಗಾಗುತ್ತದೆ. ಅಂದ ಮೇಲೆ, ಸಾಧಕರು ಹೀಗಾಗದಂತೆ, ಮಲಿನ ದೇಹದಲ್ಲಿ ಮೋಹ ತೊರೆಯರಲ್ಲ !

ಆ. ವಿಶ್ವಕರ್ಮ, ಸೃಷ್ಟಿ ವಿವರವಾಗಿ ಗೆಯ್ಕೆ.
ವಿಶ್ವವೆಲ್ಲ ತೃಪ್ತವಾಗಿ ಉಂಟು.
ವಿಶ್ವಕರ್ಮನಲ್ತೆ ? ವಿಮಲ ವಿರಾಟಾದ.
ವಿಶ್ವದಾಭಿರಾಮ ಕೇಳು ವೇಮ.

ವಿಶ್ವಕರ್ಮನು, ಅಂತಃಕರಣ ಚತುಷ್ಟಯಗಳನ್ನೂ, ಭೂತ ಪಂಚಕವನ್ನೂ, ಜೀವ ಸಂಕುಲವನ್ನೂ, ಅಂಡಜ, ಪಿಂಡಜ, ಉದ್ಭಿಜ ಮತ್ತು ಜರಾಯುಜಗಳನ್ನೂ ವಿವರವಾಗಿ ಸೃಷ್ಟಿ ಮಾಡಿದಾಗ, ಒಂದು ಇನ್ನೊಂದನ್ನು ಅವಲಂಬಿಸಿ, ಬದುಕಿ, ವಿಶ್ವವೆಲ್ಲ ಉಂಡು ತಿಂದು ತೃಪ್ತವಾಗಿ ಉಂಟು. ಹೀಗೆ ವಿಶ್ವಕರ್ಮನ ವ್ಯಾಪ್ತಿಯು ಎಣೆಕೆಗೆ ನಿಲುಕದಷ್ಟು ವಿರಾಟ್ ಆಗಿದೆ. ವಿಶ್ವಕರ್ಮನು ವಿಮಲ ವಿರಾಟಾದನು.

ಆ. ವಿಶ್ವಕರ್ಮ ಬೀಜ, ವಿಶ್ವದೊಳಗೆ ಮತ್ತೆ
ಪ್ರಾಣಿಯೆಂಬ ಬಳ್ಳಿ ಪೊಳೆಯುತಿಹುದು.
ಸಾಲು ಬಳ್ಳಿಗಳಳಿಯೆ, ಮೂಲ ಸಾಯದಲ್ಲ !
ವಿಶ್ವದಾಭಿರಾಮ ಕೇಳು ವೇಮ.

ಮರ ಹುಟ್ಟಲು ಬೀಜ ಕಾರಣ. ಅದೇ ರೀತಿ, ವಿಶ್ವವೆಂಬ ವೃಕ್ಷಕ್ಕೆ ವಿಶ್ವಕರ್ಮನೇ ಬೀಜವಿದ್ದಂತೆ, ವಿಶ್ವಕರ್ಮ ಬೀಜದಿಂದ ಪ್ರಾಣಿಯೆಂಬ ಬಳ್ಳಿ ಬೆಳೆದು ಹೊಳೆಯುತ್ತಿಹುದು. ಕ್ರಿಮಿ ಕೀಟಗಳು, ಪಕ್ಷಿ, ಪಶು, ಮೃಗ, ಮಾನವ ಇತ್ಯಾದಿ ಪ್ರಾಣಿಯೆಂಬ ಬಳ್ಳಿ. ಈ ಬಳ್ಳಿಗಳ ಸಾಲು ಪ್ರಲಯದಲ್ಲಿ ಅಳಿಯಬಹುದು. ಆದರೆ ಮರು ಸೃಷ್ಟಿಯಾಗಬೇಕಲ್ಲವೇ ? ವಿಶ್ವ ಮುಂದುವರಿಯಬೇಕಲ್ಲವೇ ? ಇದಕ್ಕಾಗಿ ಕಾರಣವಾದ ಪ್ರಾಣಿಬಳ್ಳಿಯ ಮೂಲವಾದ ವಿಶ್ವಕರ್ಮನು ಸಾಯನಲ್ಲ !

ಆ. ಆದಿ ಮೂಲವೇನು ? ಆವುದು ಆಧಾರ ?
ಹೇಳಿ ಹೊಲ್ಲ ಕಣಿಯ, ಹುಡುಕಿ ಸುದ್ದಿ.
ಜೊತೆಯು ಇರದೆ ಒಳಗೆ ಸರಿಗಾಣು ತುಲ್ಯವ.
ವಿಶ್ವದಾಭಿರಾಮ ಕೇಳು ವೇಮ.

ಸತ್ವ ಗುಣದ ಪ್ರಭಾವದಿಂದ ಬುದ್ಧಿ ಅರ್ಥಾತ್ ಮಹತ್ ತತ್ವವೂ, ರಜೋ ಗುಣದ ಪ್ರಭಾವದಿಂದ ಅಹಂ ತತ್ವವೂ ಮತ್ತು ತಮೋ ಗುಣದ ಪ್ರಭಾವದಿಂದ ಚಿತ್ತ ತತ್ವವೂ ಉದ್ಭವಿಸುತ್ತವೆ. ಚಿತ್ತ, ಅಹಂ ಮತ್ತು ಬುದ್ಧಿ ತತ್ವಗಳ ಒಟ್ಟಾರೆ ಹೆಸರೇ ಮನಸ್ತತ್ವ. ಈ ಮನಸ್ಸಿನ ಮೂಲವೇ ಆದಿ. ಇಲ್ಲವೆ ಸಗುಣ ಬ್ರಹ್ಮ. ಹಾಗಾದರೆ ಈ ಆದಿಯ ಮೂಲವೇನು ? ಆದಿಗೆ ಯಾವುದು ಆಧಾರ ? ಅದುವೇ ನಿರ್ಗುಣ ಬ್ರಹ್ಮ. ಆದ್ದರಿಂದ ಸಾಧಕನು ಈ ಸ್ಥಿತಿಯಿಂದ ಮನಸ್ಸನ್ನು ನಿಮ್ನ ಸ್ತರಕ್ಕಿಳಿಸಿ, ದೃಶ್ಯಗಳನ್ನು ಕಂಡು ಸುದ್ದಿ ಹುಡುಕಿ ಕಣಿ ಹೇಳುವುದು ಹೊಲ್ಲ. ನಿರ್ಗುಣದಲ್ಲಿ ಯಾವ ಜೊತೆಯೂ ಇಲ್ಲದೆ, ಏಕಾಂತದಲ್ಲಿ ಇದ್ದು, ನಿನ್ನ ತುಲ್ಯವಾದ ನಿರ್ಗುಣ ಬ್ರಹ್ಮವನ್ನು ಕಾಣು.

ಆ. ಅಲ್ಲಿ ಇಲ್ಲಿ ಎನದೆ, ಅಖಿಲವ ಪರಿಕಿಸಲು,
ವಿಷ್ಣು ಚರಿಸುತಿಹನು ವಿದಿತವಷ್ಟೆ.
ಚಕ್ರ ತಿರುಗುವ ಭೂ ಚಕ್ರದೊಳಗೆ ಮತ್ತೆ
ವಿಶ್ವದಾಭಿರಾಮ ಕೇಳು ವೇಮ.

ಪರವೆನ್ನದೆ, ಇಹವೆನ್ನದೆ ಎಲ್ಲೆಡೆ ಅಖಿಲವನ್ನೂ ಪರೀಕ್ಷಿಸಿ ನೋಡಿದಾಗ ಒಂದು ಸತ್ಯ ತಿಳಿದು ಬರುತ್ತದೆ. ಅದೆಂದರೆ, ಸರ್ವಾನುಸ್ಯೂತವಾದ, ಸರ್ವವ್ಯಾಪ್ತವಾದ ಸತ್ತೆಯೊಂದು

ಎಲ್ಲೆಡೆ ಚರಿಸುತ್ತಿದೆ. ಆ ಸತ್ತೆಯೇ ವಿಷ್ಣು. ಶಿಷ್ಟ ಪರಿಪಾಲನೆಗಾಗಿ, ದುಷ್ಟ ವಿನಾಶಕ್ಕಾಗಿ ಅವನು ಧರ್ಮ ದರ್ಶನವನ್ನು ಮಾಡುತ್ತಾನೆ. ಕಾಲಚಕ್ರವನ್ನು ತಿರುಗಿಸುತ್ತಾನೆ. ಇದೆಲ್ಲ ಸೃಷ್ಟಿ, ಸ್ಥಿತಿ ಮತ್ತು ಲಯಗಳಲ್ಲಿ ಪರಿವರ್ತಿತವಾಗುತ್ತಿರುವ, ಈ ಭೂ ಚಕ್ರದಲ್ಲಿ ಮಾತ್ರ ವಿಷ್ಣುವಿನ ಧರ್ಮ ಸುದರ್ಶನ ಚಕ್ರವು ಸದಾಕಾಲವೂ ತಿರುಗುತ್ತಿರುತ್ತದೆ.

ಆ. ತಾಯಿಯೊಬ್ಬಳು ಜಗದಿ ತಂದೆಯೊಬ್ಬನಿಹನು.
ಎಲ್ಲ ಲೋಕಗಳಲಿ ಎಣಿಸಿ ನೋಡೆ.
ಸುಳ್ಳು ಅಲ್ಲ ; ಗೌರಿ ಕರಕಂಠರೆ ಕಾಣು.
ವಿಶ್ವದಾಭಿರಾಮ ಕೇಳು ವೇಮ.

ಲೋಕ ಎಂದರೆ ಅನುಭವ ಕ್ಷೇತ್ರ. ಭೂಲೋಕ, ಭುವರ್ಲೋಕ, ಸ್ವರ್ಗಲೋಕ, ಮಹರ್ಲೋಕ, ಜನರ್ಲೋಕ, ತಪೋಲೋಕ ಮತ್ತು ಸತ್ಯಲೋಕ ಎಂಬಿವು ಏಳು. ಎಲ್ಲ ಲೋಕಗಳಲ್ಲಿ ಎಣಿಕೆ ಹಾಕಿ ನೋಡಿದರೂ ತಿಳಿದು ಬರುವುದು ಇಷ್ಟೇ. ಅದೆಂದರೆ, ಜಗತ್ತಿನಲ್ಲಿ ಒಬ್ಬಳೇ ತಾಯಿ ಮತ್ತು ಒಬ್ಬನೇ ತಂದೆ ಇರುತ್ತಾರೆ. ಹುಟ್ಟಿದ ಜನರೆಲ್ಲ ಸೋದರರು. ವಸುಧೈವ ಕುಟುಂಬಕಂ ಭಾವ ಬೆಳೆಯಲು, ಸಮತೆಯ ಕಲ್ಪನೆ ಮೂಡಲು, ಇದು ಅಗತ್ಯ. ಸಮಾಜದ ಸರ್ವೋದಯದ ಉದ್ದೇಶಕ್ಕೆ ಇದು ಭೂಮಿಕೆ. ಆ ಒಬ್ಬ ತಾಯಿ ಯಾರು ? ಆ ಒಬ್ಬ ತಂದೆ ಯಾರು ? ಗೌರಿಯೇ ಆ ತಾಯಿ, ಕರಕಂಠನಾದ ಶಿವನೇ ಆ ತಂದೆ. ಇದು ಸುಳ್ಳಲ್ಲ.

ಆ. ತಾಯಿ ತಂದೆಯೆನುವ ತತ್ತ್ವವನು ತಿಳಿಯರು.
ಯೋನಿ ಲಿಂಗಗಳಲಿ ಉದ್ಭವಿಸುತ,
ವಿಷ್ಣುವರಿಯೆ ತಾಯಿ ವಿನುತ ರುದ್ರನು ತಂದೆ.
ವಿಶ್ವದಾಭಿರಾಮ ಕೇಳು ವೇಮ.

ಜೀವಿಗಳು ಯೋನಿ ಲಿಂಗಗಳಲ್ಲಿ ಉದ್ಭವಿಸುತ್ತಾರೆ. ಹೀಗಾಗಿ, ಯೋನಿ ಹೊಂದಿದವಳು ತಾಯಿ, ಲಿಂಗ ಹೊಂದಿದವನು ತಂದೆ ಎಂದಷ್ಟೇ ತಿಳಿಯುತ್ತಾರೆ. ಆದರೆ, ತಾತ್ತ್ವಿಕವಾಗಿ ತಾಯಿ ಯಾರು ? ಮತ್ತು ತಂದೆ ಯಾರು ? ಎಂಬುದನ್ನು ತಿಳಿಯರು. ರಜೋಗುಣವು ಪೋಷಿಸುತ್ತಿದೆಯಾದ್ದರಿಂದ, ಅರಿಯೆ, ವಿಷ್ಣುವೇ ತಾಯಿ. ಸತ್ತ್ವ ಗುಣವು ಶಿಕ್ಷಿಸುತ್ತಿದೆಯಾದ್ದರಿಂದ ವಿನುತ ರುದ್ರನೇ ತಂದೆಯಾಗಿದ್ದಾರೆ.

ಆ. ಅವನಿಲೋರ್ವ ಮಗುವು, ಅವನ ಪಿತಗೆ ಹುಟ್ಟಿ,
ಅಂತೆಯೇ ಜಗಗಳು ಅಗಣಿತಾಗಿ.
ತಾಯಿಯಿಂದ ಬೆಳಿಗೆ ಧಾತ್ರಿ ಹಾಗಿಲ್ಲವೇ ?
ವಿಶ್ವದಾಭಿರಾಮ ಕೇಳು ವೇಮ.

ನಿರ್ಗುಣ ಬ್ರಹ್ಮನೆಂಬ ಪಿತನಿಗೆ ಸಗುಣ ಬ್ರಹ್ಮನೆಂಬ ಮಗನು ಹುಟ್ಟಿದ್ದಾನೆ. ಸಗುಣ ಬ್ರಹ್ಮನೆಂಬ ಪುರುಷನಿಗೆ ಪ್ರಕೃತಿಯೊಂದಿಗೆ ಸಂಯೋಗವಾಗಿ, ಕಾರಣ ಜಗತ್ತು, ಸೂಕ್ಷ್ಮ ಜಗತ್ತು, ಸ್ಥೂಲ ಜಗತ್ತುಗಳು ಅಗಣಿತವಾಗಿ ಬೆಳೆಯುತ್ತವೆ. ತ್ರಿಗುಣಗಳ ಸಂಪುಟವೇ ಪ್ರಕೃತಿ. 'ಪ್ರಕರ್ಷೇಣ ಕರೋತಿ ಇತಿ'. ಬಹುವಾಗಿ ಮಾಡುತ್ತದೆಯಾದ್ದರಿಂದ ಅದಕ್ಕೆ ಪ್ರಕೃತಿ ಎನ್ನುತ್ತಾರೆ. ಪ್ರಕೃತಿ

ಮಾತೆಯಿಂದ ಎಲ್ಲವೂ ಬೆಳೆಯುತ್ತದೆ. ಇದನ್ನೆಲ್ಲ ತಾತ್ತ್ವಿಕವಾಗಿ ಸಮೀಕ್ಷಿಸಿದರೆ, ಧಾತ್ರಿಯೂ ಅದೇ ರೀತಿ ಇದೆಯಲ್ಲವೇ ?

ಆ. ಅವನಿಯೊಳೊಬ್ಬ ಸುತ, ಅರಿಯೆ ಹುಟ್ಟಿನ ಪಿತ.
ಅಂತೆ ಆಳ್ದ ಜಗವ ಅಗಣಿತವಿದ
ತಾಯಿಯಿರದ ಹುಟ್ಟು ಧಾತ್ರಿಯಲಿ ಶಕ್ಯವೆ ?
ವಿಶ್ವದಾಭಿರಾಮ ಕೇಳು ವೇಮ.

ಇಲ್ಲಿ ಸೃಷ್ಟಿಯ ರಹಸ್ಯವನ್ನು ತಿಳಿಸಲಾಗಿದೆ. ನಿರ್ಗುಣ ಬ್ರಹ್ಮನಿಂದ ತಾನೇ ಸಗುಣ ಬ್ರಹ್ಮನ ಉದಯ. ಹೀಗೆ, ಸಗುಣ ಬ್ರಹ್ಮನು ಒಬ್ಬ ಸುತನಿದ್ದಂತೆ. ಅವನ ಮಹಿಮೆಯನ್ನು ಅರಿಯುವುದಾದರೆ, ಅವನಲ್ಲಿ ಭಾರಸಾಮ್ಯದಲ್ಲಿ ಇರುವ ತ್ರಿಗುಣಗಳು, ಆ ಭಾರಸಾಮ್ಯ ತಪ್ಪಿದಾಗ, ಗುಣಾಭಿವ್ಯಕ್ತಿಯಾಗಿ ಸತ್ತ್ವದಿಂದ ನಾದವೂ, ರಜದಿಂದ ಕಳೆಯೂ ಹಾಗೂ ತಮದಿಂದ ಬಿಂದುವೂ ಸೃಷ್ಟಿಯಾಗುತ್ತವೆ. ಮುಂದೆ ಸತ್ತ್ವದಿಂದ ಬುದ್ಧಿ ತತ್ತ್ವವೂ, ರಜದಿಂದ ಅಹಂ ತತ್ತ್ವವೂ ಮತ್ತು ತಮದಿಂದ ಚಿತ್ತ ತತ್ತ್ವವೂ ಸೃಷ್ಟಿಯಾಗುತ್ತವೆ. ತಮೋಗುಣದ ಅಧಿಕ ಪ್ರಪಾತದಿಂದ ಆಕಾಶ, ವಾಯು, ಅಗ್ನಿ, ಅಪ್ ಮತ್ತು ಭೂ ತತ್ತ್ವಗಳು ಉಂಟಾಗಿ ಅಗಣಿತ ವಸ್ತುಗಳ ಜಗವಾಗಿ, ಅದನ್ನು ಆಳಿದ ಸರ್ಗುಣನು, ತಾಯಿಯಿರದೆ ಹುಟ್ಟಿದನು. ಅವನೇ ಸರ್ವವನ್ನು ಆಳುವ ಈಶನಾದ. ಧಾತ್ರಿಯಲ್ಲಿ ಇದು ಶಕ್ಯವೇ ?

ಸಂಖ್ಯಾ ಸೂತ್ರಗಳು :

ಆ. ಕೆಂಪು ವರ್ಣದೊಳಗೆ ನೋಡಿ ಏಕಾಕ್ಷರಿಯ
ಬಿಳಿಯ ವರ್ಣದೊಳಗೆ ಬೆಳಗುತಿದ್ದು,
ಕಪ್ಪು ವರ್ಣದಿಂದ ಗಡನೆ ನಟಿಸಿ ನೋಡು.
ವಿಶ್ವದಾಭಿರಾಮ ಕೇಳು ವೇಮ.

ಏಕಾಕ್ಷರವೆಂದರೆ ಓಂ. ಇದು ಮೂರು ಅಕ್ಷರಗಳಿಂದ ವ್ಯುತ್ಪತ್ತಿಯಾಗಿದೆ. ಅ+ಉ+ಮ. ಅ-ಸತ್ತ್ವ, ಗುಣ ಪ್ರತೀಕ. ಉ-ರಜೋಗುಣ ಪ್ರತೀಕ ಮತ್ತು ಮ-ತಮೋಗುಣ ಪ್ರತೀಕ. ಈ ಗುಣಗಳು ಅನುಕ್ರಮವಾಗಿ ಬಿಳಿಯ, ಕೆಂಪು ಮತ್ತು ಕಪ್ಪು ವರ್ಣಗಳನ್ನು ಸೂಚಿಸುತ್ತವೆ. ಹೀಗೆ ಏಕಾಕ್ಷರಿಯನ್ನು ಕೆಂಪು ವರ್ಣದೊಳಗೆ ನೋಡಬೇಕು. ಬಿಳಿಯ ವರ್ಣದೊಳಗೆ ಅದು ಬೆಳಗುತ್ತದೆ. ಇನ್ನು ಕಪ್ಪು ವರ್ಣದಿಂದ ಸತ್ಯವನ್ನು ಮರೆಮಾಡಿ, ತಾನೇ ನಟಿಸುತ್ತದೆ.

ಆ. ಏಕಾಕ್ಷರವೆ ಬ್ರಹ್ಮ, ಏಕಾಕ್ಷರವೆ ವಿಷ್ಣು
ಏಕಾಕ್ಷರಂ ಶಿವನು, ಎಣಿಸಿ ನೋಡೆ.
ಏಕಾಕ್ಷರವ ದಾಟಿ ಏನು ಇಲ್ಲ ಮತ್ತೆ.
ವಿಶ್ವದಾಭಿರಾಮ ಕೇಳು ವೇಮ.

ಏಕಾಕ್ಷರವೆಂದರೆ ಓಂ. ಇದರ ಪದಚ್ಛೇದವೆಂದರೆ ಅ+ಉ+ಮ. ಅ ಎಂದರೆ ಬ್ರಹ್ಮ, ಉ ಎಂದರೆ ವಿಷ್ಣು, ಮ ಎಂದರೆ ರುದ್ರ, ಶಿವ. ಹೀಗೆ ಏಕಾಕ್ಷರವೆ ಬ್ರಹ್ಮ, ಏಕಾಕ್ಷರವೆ ವಿಷ್ಣು,

ಏಕಾಕ್ಷರವೆ ಶಿವ. ತಮಸ್, ರಜಸ್ ಮತ್ತು ಸತ್ತ್ವ ಗುಣಗಳು ಬ್ರಹ್ಮ, ವಿಷ್ಣು ಶಿವರನ್ನು ಸೂಚಿಸುತ್ತದೆ. ಆದಿಯ ವರೆಗೆ ಎಲ್ಲವೂ ತ್ರಿಗುಣಾತ್ಮಕವಾಗಿದೆ. ಆದ್ದರಿಂದ ಏಕಾಕ್ಷರವನ್ನು ದಾಟಿ ಏನೊಂದೂ ಇಲ್ಲ.

ಆ. ಆದಿ ತುದಿಯು ಇಲ್ಲ ; ಅನುಭವಗಯ್ಯವದು.
ವೇದ ತುಲ್ಯನಾಗಿ ವಿರಾಜಿಪನು.
ವಾದ ಭೇದ ಉಡುಗಿ, ವರಿಸುವ ಶಿವಯೋಗಿ.
ವಿಶ್ವದಾಭಿರಾಮ ಕೇಳು ವೇಮ.

ನಿರ್ಗುಣ ಬ್ರಹ್ಮನಿಗೆ ಆದಿಯೂ ಇಲ್ಲ, ತುದಿಯೂ ಇಲ್ಲ. ಅವನು ಅನಾದಿ, ಅನಂತ. ಇದು ಇಂದ್ರಿಯಗಳಿಗೆ ಅಗೋಚರ ; ಮನಸ್ಸಿಗೆ ಅತೀತ. ಅದು ಕೇವಲ ಅನುಭವಗಮ್ಯವಾಗುವ ಸತ್ತೆ. ಆ ಪರಮ ಸತ್ತೆಯು ವೇದ ತುಲ್ಯವಾಗಿ ಅಂದರೆ ಜ್ಞಾನ ಘನನಾಗಿ ವಿರಾಜಿಸುವನು. ಆ ಪರಮ ಸತ್ತೆಯನ್ನು ದ್ವೈತದೆಂದಾಗಲಿ, ಅದ್ವೈತದೆಂದಾಗಲಿ, ವಿಶಿಷ್ಟಾದ್ವೈತವೆಂದಾಗಲಿ, ಶಕ್ತಿ ವಿಶಿಷ್ಟಾದ್ವೈತವೆಂದಾಗಲಿ, ಬೇರೆ ಏನೊಂದು ಎಂದಾಗಲಿ ಪ್ರತಿಪಾದಿಸುತ್ತ ವಾದ ಹೂಡದೆ, ಜೀವ-ಜೀವರಲ್ಲಾಗಲಿ, ಜೀವ-ಜಡಗಳಲ್ಲಾಗಲಿ, ಜಡ-ಜಡಗಳಲ್ಲಾಗಲಿ, ಜಡ-ಈಶ್ವರರಲ್ಲಾಗಲಿ ಮತ್ತು ಜೀವ ಈಶ್ವರರಲ್ಲಾಲಿ ಭೇದವು ಉಡುಗಿ ಶಿವಯೋಗಿಯು ತನ್ನ ಸಾಧನ ಬಲದಿಂದ ಪರಮ ನಿರ್ಗುಣ ಸತ್ತೆಯನ್ನು ವರಿಸುತ್ತಾನೆ.

ಆ. ಆದಿ ನೋಡುತಿರಲು, ಅಖಿಲವು ತಾನುಂಟು.
ಆದಿ ನೋಡಲಾರಿಗಳವು ಇಹುದು ?
ಆದಿ ಮುಕ್ತಿ ಮಾರ್ಗ ಆತ್ಮದೊಳಗೆ ಉಂಟು.
ವಿಶ್ವದಾಭಿರಾಮ ಕೇಳು ವೇಮ.

ಮನವು ಪ್ರಾರಂಭವಾಗುವ ಮಟ್ಟವೇ. ಆದಿಯಾಗಿದೆ. ಮನವು ತ್ರಿಗುಣಾತ್ಮಕವಷ್ಟೇ. ಆದ್ದರಿಂದ ಭಾರ ಸಾಮ್ಯ ಸ್ಥಿತಿಯಿಂದ ಸಾಮ್ಯ ತಪ್ಪಿ ಗುಣಗಳು ಅಭಿವ್ಯಕ್ತವಾಗುವುದು ಸಗುಣ ಬ್ರಹ್ಮ ಅವಸ್ಥೆಯಿಂದ. ಹೀಗೆ ನೋಡುತ್ತಿದ್ದರೆ, ಗುಣಾನ್ವಿತವಾದುದೆಲ್ಲವೂ ತಾನೇ ಉಂಟು. ಆದರೆ ಈ ಆದಿಯನ್ನು ನೋಡಬೇಕಾದರೆ, ಸಾಧನ ಮೂಲಕ ಗುಣಾತೀತನಾಗಬೇಕು. ಇದು ಯಾರ ಅಳವಿನಲ್ಲಿದೆ ? ಕೇವಲ ವಿರಳ ಯೋಗಿಗಳು ಮಾತ್ರ ಇದಕ್ಕೆ ಸಮರ್ಥರು. ಬಂಧದಿಂದ ಮುಕ್ತವಾಗಲು ಇದುವೇ ಮಾರ್ಗ. ಇದು ಆತ್ಮದಲ್ಲಿ ಇದೆ.

ಆ. ಆದಿ ಏಕವರಿತು, ಅಖಿಲ ಮಾನ ನಿಲಿಸಿ,
ಆದಿ ತೊರೆಯದಿರಲು ಅಭವನುಂಟು.
ಆದಿ ತೊರೆಯುವವನು ಅಂಧಕನ ತೆರನಿಹ.
ವಿಶ್ವದಾಭಿರಾಮ ಕೇಳು ವೇಮ.

ಮನಸ್ಸು ಎಲ್ಲಿ, ಉದಿಸುವುದೋ, ಆ ಉತ್ಪವೇ ಆದಿ. ಇದು ಸ್ಥೂಲ, ಸೂಕ್ಷ್ಮ, ಕಾರಣ ಮನಸ್ಸುಗಳ ಆದಿ. ಈ ಏಕವನ್ನು ಸಾಧನ ಮೂಲಕ ಅರಿಯಬೇಕು. ನಂತರ ಮನದೊಳಕೆಗಳಾದ ಅಖಿಲ ಮಾನವನ್ನು ನಿಲ್ಲಿಸಬೇಕು. ಸ್ಥಿತಪ್ರಜ್ಞನಾಗಬೇಕು. ವಿಕ್ಷೇಪ, ಆವರಣಗಳ

ದೋಷಗಳಿಂದಾಗಿ ಆದಿಯನ್ನು ತೊರೆಯದೆ ಅಲ್ಲಿಯೇ ಉಳಿದರೆ, ಅಭವ ಸತ್ತ್ಯೆಯುಂಟು. ಒಂದು ವೇಳೆ ಮಹಿಮೆ ಸಿದ್ಧಿ ಪ್ರದರ್ಶನಕ್ಕೆಳಿದು ಸಾಧಕನು ಆದಿಯನ್ನು ತೊರೆದರೆ ಅವನು ಆತ್ಮನನ್ನು ಕಾಣದ ಅಂಧಕನ ತೆರನಾಗುವನು.

ಆ. ಒಂದನೊಳಗೆ ಹೊಡೆದು, ಒಂದನೊಳಗೆ ಇರಿಸಿ,
ಒಂದನೊಳಗೆ ನೋಡು, ಒಂದೆ ನೋಟ.
ಒಂದರಲ್ಲಿ ನೋಡೆ, ಒಪ್ಪ ಮುಕ್ತಿಯುದಯ.
ವಿಶ್ವದಾಭಿರಾಮ ಕೇಳು ವೇಮ.

ತ್ರಿಗುಣಗಳಲ್ಲಿ ಅಜ್ಞಾನಸಂಗ ಮತ್ತು ಆಲಸ್ಯ ಸಂಗವುಳ್ಳ ಗುಣವೆಂದರೆ ತಮಸ್ಸು. ಈ ಒಂದನ್ನು ಒಳಗೆ ಹೊಡೆದು ಹಾಕಬೇಕು. ಇನ್ನು ಕರ್ಮಸಂಗ ಮತ್ತು ಲೋಭಸಂಗವುಳ್ಳದ್ದು ರಜಸ್ಸು. ಇದೊಂದನ್ನು ಒಳಗೇ ನಿಗ್ರಹಿಸಬೇಕು. ಇನ್ನು, ಜ್ಞಾನ ಸಂಗ ಮತ್ತು ಸುಖ ಸಂಗವುಳ್ಳದ್ದು ಸತ್ತ್ವಗುಣ. ಇದನ್ನು ಒಳಗೆ ಇರಿಸಿಕೊಂಡು ನೋಡಬೇಕು. ನೋಟವು ಏಕಾಗ್ರವಾಗಿರಲಿ. ಹೀಗೆ ಸತ್ತ್ವ ಒಂದರಲ್ಲಿಯೇ ನೋಡಿದರೆ, ಬರು ಬರುತ್ತ ಜ್ಞಾನ ಸಂಗವೂ ದೂರವಾಗಬಹುದು. ಆಗ ಸಾಧಕನು ತ್ರಿಗುಣಾತೀತನಾಗಿ, ಬಂಧಗಳಿಂದಾಚೆ ಒಪ್ಪವಾದ ಮುಕ್ತಿಯನ್ನು ಪಡೆಯುತ್ತಾನೆ.

ಕಂ. ಚಕ ಚಕ ಒಂದೆರಡೆನ್ನುತ,
ಪ್ರಕಟಿತಮಹ ಲಿಕ್ಕವಿಟ್ಟು ವಿರುತ ಸಾಗಲ್.
ನಿಕರವಹ ಅರಿವು ದಾಟುತ,
ಸಕಲೇಶನ ಕಾಣಲದುವೆ, ಸರಸವು, ವೇಮಾ.

ಚಕ ಚಕನೇ ಓಂ ಎಂಬ ಏಕಾಕ್ಷರವನ್ನೂ ಮತ್ತು 'ಶಿವ' ಎಂಬ ಎರಡು ಅಕ್ಷರಗಳ ಮಂತ್ರವನ್ನೂ ಜಪಿಸುತ್ತ ಸಾಗಬೇಕು. ಪ್ರಾರಂಭದಲ್ಲಿ ಪ್ರಕಟವಾಗಿ ವಾಚಕ ಜಪದ ಲೆಕ್ಕವನ್ನಿಟ್ಟು, 'ಓಂಶಿವ' ಮಂತ್ರವನ್ನು ಉಪಾಂಶುವಾಗಿ, ಮಾನಸಿಕವಾಗಿ ಜಪಿಸುತ್ತ ಊರ್ಧ್ವಕ್ಕೇರಿ ಅಜಪಾ ಜಪದ ವರೆಗೆ ಸಾಗಲು, ಸಾಧಕನು ನಿಕರವಾದ ಅರಿವನ್ನೂ ದಾಟುತ್ತಾನೆ. ಅವನಿಗೆ ದೇಹದ ಪ್ರಜ್ಞೆಯೇ ಉಳಿಯದು. ಆಗ ಸಕಲಕ್ಕೂ ಈಶನಾದ ಮಹೇಶ್ವರನನ್ನು ಕಾಣುತ್ತಾನೆ. ಈ ದಿವ್ಯ ಅನುಭವವು ತುಂಬಾ ಸರಸಕರವಿರುತ್ತದೆ.

ಕಂ. ಅಕ್ಷರ ಪದಕೆ ದಶ ಸಾವಿ–
ರಕ್ಷರಗಳನರಿವುದೇಕೆ ? ಸಲೆ 'ಶಿವ' ಎರಡೇ.
ಅಕ್ಷರದಿ ದುರಿತವಡಗುವುದು
ತತ್‌ಕ್ಷಣವೆ ಪದವಿಯುಂಟು, ತಥ್ಯವು, ವೇಮಾ.

ಜೀವ ಶಿವರ ಮಧ್ಯೆ ಕ್ಷರ ಸತ್ತೆ ಇದೆ ; ಅಕ್ಷರ ಸತ್ತೆ ಇದೆ ; ನಿರಕ್ಷರ ಇಲ್ಲವೆ ಪುರುಷೋತ್ತಮ ಸತ್ತೆಯೂ ಇದೆ. ಪುರುಷೋತ್ತಮ ಸತ್ತೆಯು ನಾಮ ರೂಪಗಳಿಗತೀತ. ಅಕ್ಷರ ಸತ್ತೆಯ ಹತ್ತಾರು ದೇವತೆಗಳನ್ನು ಸಹಸ್ರನಾಮಗಳಿಂದ ಬಣ್ಣಿಸುತ್ತಾರೆ. ಜೀವನದಲ್ಲಿ ಶಿವನಿದ್ದಾನೆ. ಶಿವನಲ್ಲಿ ಸರ್ವವೂ ಇದೆ ಎಂದು ಈ ಸಹಸ್ರನಾಮಗಳು ನಿರೂಪಿಸುತ್ತವೆ. ಆದ್ದರಿಂದ ಹತ್ತಾರು ದೇವತೆಗಳ ಸ್ತುತಿಪರ ಸಹಸ್ರನಾಮಗಳನ್ನು ಅರಿಯುವುದೇಕೆ ? 'ಶಿವ' ಎಂಬ ಎರಡೇ ಅಕ್ಷರ

ಜಪದಿಂದ ಎಲ್ಲ ದುರಿತವು ಅಡಗುತ್ತದೆ. ಪರಮ ಪದವಿಯೂ ತತ್‌ಕ್ಷಣವೇ ಉಂಟು. ಇದು ತಥ್ಯ.

ಕಂ. ಎರಡು ಮೂರಕ್ಷರ ಸಾಧನ
ಪರನಹ, ನಿರ್ವಾತ ದೀಪ ಪದ್ಧತಿ ಮನದೋಳ್.
ಗುರು ದಾಟಿ ಬಯಲು ಸೇರಲು,
ನಿರುಪಮ ಸಾನಂದ ಮೂರ್ತಿ, ನಿತ್ಯನು, ವೇಮಾ.

ಜಪಾನುಷ್ಠಾನ ಮಾಡುವ ಸಾಧಕನಿಗಾಗಿ ಹಲವು ಸಿದ್ಧ ಮಂತ್ರಗಳಿವೆ. ಎರಡು ಅಕ್ಷರಗಳ 'ಶಿವ' ಎಂಬುದು ಒಂದಾದರೆ ಮೂರು ಅಕ್ಷರಗಳ 'ಶ್ರೀರಾಮ' ಇನ್ನೊಂದು. ಈ ಮಂತ್ರಗಳಲ್ಲೊಂದರ ಸಾಧನಪರನು ಮನದಲ್ಲಿ ನಿರ್ವಾತ ದೀಪ ಪದ್ಧತಿಯಂತೆ ಅನುಷ್ಠಾನ ಮಾಡುತ್ತಾನೆ. ಅಂದರೆ, ಗಾಳಿಯಿಲ್ಲದ ತಾಣದಲ್ಲಿ ಅಲುಗದೆ ಇರುವ ದೀಪದಂತೆ ಅವನ ಚಿಜ್ಯೋತಿಯು ವಿಕ್ಷೇಪ ಆವರಣಗಳ ಬಾಧೆಯಿಲ್ಲದೆ, ಪ್ರಜ್ವಲಿಸುತ್ತದೆ. ಆ ಸಾಧಕನು, ಮನವನ್ನು ಉದ್ದೀಪಿಸಿ, ಊರ್ಧ್ವದಲ್ಲಿ ಸಹಸ್ರಾರ ಚಕ್ರದ ಅಡಿಭಾಗವಾದ ಗುರು ಚಕ್ರವನ್ನು ದಾಟಿ, ಗುಣಾತೀತವಾದ ಬಯಲನ್ನು ಸೇರುತ್ತಾನೆ. ಅಲ್ಲಿ ಅವನು ಉಪಮಾತೀತನಾದ, ಆನಂದಮಯ, ನಿತ್ಯ ಮೂರ್ತಿಯಾಗುತ್ತಾನೆ.

ಆ. ಎರಡು, ಎರಡು, ಎರಡು, ಎರಡೆರಡರ ಒಳಗೆ,
ಎರಡು ಮೀರಿದಂಥ ಎಣಿಕೆಯೊಳಿಹ,
ಗುಡ್ಡವೇರಲಿಕ್ಕೆ ಗುರುತು ತಿಳಿಯಲಳವೆ ?
ವಿಶ್ವದಾಭಿರಾಮ ಕೇಳು ವೇಮ.

ಸುಖ ಮತ್ತು ದುಃಖ ಇವು ಎರಡು. ರಾಗ ಮತ್ತು ದ್ವೇಷಗಳು ಎರಡು, ಲಾಭ ಮತ್ತು ಹಾನಿ ಇವು ಎರಡು. ಈ ಎರಡೆರಡರ ಅಂದರೆ ದ್ವಂದ್ವಗಳ ಒಳಗೆ ಎರಡನ್ನು ಮೀರಿದಂಥ, ಅಂದರೆ ದ್ವಂದ್ವಾತೀತವಾದಂಥ ಎಣಿಕೆಯೇ ಸ್ಥಿತಪ್ರಜ್ಞೆ. ಈ ಸ್ಥಿತ ಪ್ರಜ್ಞೆಯು ಮನಸ್ಸಿನ ಊರ್ಧ್ವ ಸ್ತರದಲ್ಲಿ ಸಹಸ್ರಾರದಲ್ಲಿ ಇದೆ. ಅದರ ಗುರುತನ್ನು ತಿಳಿಯಲು ಸಾಮಾನ್ಯರಿಗೆ ಅಳವೇ ?

ಆ. ಎರಡು ಎರಡು ಎರಡು ಎರಡುಗಳನು ಬಿಟ್ಟು,
ಎರಡರಾಚೆಗಿರುವಂಥ ಲಿಕ್ಕ.
ಘಟದ ಒಳಗೆ ನೋಡಿ, ಗುಣಿ ಸುಖದಿ ಇಹನು.
ವಿಶ್ವದಾಭಿರಾಮ ಕೇಳು ವೇಮ.

ಹಿಂಸೆ, ಅಹಿಂಸೆ, ಸತ್ಯ-ಅಸತ್ಯ, ಕ್ರೋಧ-ಶಾಂತಿ, ದಯೆ-ಕ್ರೌರ್ಯ ಎಂಬೀ ದ್ವಂದ್ವ ಭಾವಗಳನ್ನು ಬಿಟ್ಟು, ಎರಡರಾಚೆಗಿರುವಂಥ ದ್ವಂದ್ವಾತೀತ ಸ್ಥಿತಿಯಲ್ಲಿ ಇರುವುದೇ ನಿಜವಾದ ಎಣಿಕೆ. ಯಾವನು ಸದ್ಗುಣಿಯೋ ಅವನು ದೇಹದೊಳಗೆ ಮನದಲ್ಲಿ ನೋಡಿ, ಅರಿತು ಅವುಗಳಿಗೆ ಒಳಗಾಗದೆ ಸುಖದಿಂದ ಸಮತ್ವದಲ್ಲಿ ಇರುತ್ತಾನೆ.

ಆ. ಮೊದಲ ಬ್ರಹ್ಮ, ಮನುವು, ಮೊನೆಯಲೆರಡು ಮಯನು.
ಮೂರು ತ್ವಷ್ಟ, ಶಿಲ್ಪಿ ಮೊನೆಯ ನಾಲ್ಕು
ವಿಶ್ವಕರ್ಮ, ಹಬ್ಬಿ ವಿಶ್ವಜ್ಞನೈದರಲಿ.
ವಿಶ್ವದಾಭಿರಾಮ ಕೇಳು ವೇಮ.

ಮೊದಲು ಬ್ರಹ್ಮನಿಗೆ ಪಂಚಮುಖಿಗಳಿದ್ದವು. ಅವುಗಳಲ್ಲಿ ಮನುವು ಮೊದಲಿನವನು, ಮಯನು ಎರಡನೆಯವನು, ಮೂರನೆಯವನು ತ್ವಷ್ಟು, ನಾಲ್ಕನೆಯವನು ಶಿಲ್ಪಿ, ಐದನೆಯವನು ವಿಶ್ವಜ್ಞನು. ಇವರೆಲ್ಲರಿಗೂ ಸೇರಿ ವಿಶ್ವಕರ್ಮನೆನ್ನುತ್ತಾರೆ.

–ಮೂರು–

ಬ್ರಹ್ಮ, ವಿಷ್ಣು, ಮಹೇಶ್ವರ (ಶಿವ) :

ಜಗತ್ತಿನಲ್ಲಿ ಸೃಷ್ಟಿ, ಸ್ಥಿತಿ, ಲಯಗಳು ನಡೆಯಬೇಕಷ್ಟೇ. ಹುಟ್ಟು, ಬಾಳು, ಸಾವುಗಳನ್ನು ನಿರ್ಣಯಿಸುವ ಸತ್ತೆಗಳಿಗೆ ಶಾಸ್ತ್ರದಲ್ಲಿ ಬ್ರಹ್ಮ, ವಿಷ್ಣು, ಶಿವ ಎಂದು ಕರೆಯುತ್ತಾರೆ. ಸೃಷ್ಟಿಯು ತಮಸ್ಸಿನ ಕ್ರಿಯೆ, ಸ್ಥಿತಿಯು ರಜಸ್ಸಿನ ಕ್ರಿಯೆ. ಲಯವು ಸತ್ತ್ವದ ಕ್ರಿಯೆ. ಯಾವುದರಿಂದ ಈ ಕ್ರಿಯೆಗಳಿಗೆ ಕಟ್ಟಿ ಹಾಕಲ್ಪಡುವರೋ, ಅವೇ ಕ್ರಮವಾಗಿ, ತಮಸ್, ರಜಸ್, ಸತ್ತ್ವ ಎಂಬ ಗುಣಗಳು.

ಆ. ಆದಿಗಾರೊ ಹುಟ್ಟಿ, ಅವನಿಯ ದೊರೆಯಹರು.
ಅವರೆ ಬ್ರಹ್ಮ, ವಿಷ್ಣು, ಪರಶಿವರಲ !
ಕಾಣು ಮಾಯ ಶಕ್ತಿ ಘನ ತೇಜವೆನುವರು.
ವಿಶ್ವದಾಭಿರಾಮ ಕೇಳು ವೇಮ.

ಸೃಷ್ಟಿಯ ಆದಿಯಲ್ಲಿ ಯಾರೋ ಮೂವರು ಹುಟ್ಟಿ ಅವನಿಯನ್ನು ಪೊರೆಯುತ್ತಾರೆ. ಅವರೇ ಬ್ರಹ್ಮ, ವಿಷ್ಣು ಮತ್ತು ಪರಶಿವರು. ಇವರ ಜನನಿಯಾದ ಆದಿ ಶಕ್ತಿಯ ಮಾಯೆಯು ಘನ ತೇಜವುಳ್ಳದ್ದು ಎನ್ನುವರು.

ಆ.. ಮೂಲ ಬ್ರಹ್ಮನಿಂಗೆ ಮೂವರು ಮೂರ್ತಿಗಳು
ಹುಟ್ಟಿ ಕಾಲವೆಲ್ಲ ಪೋಷಿಸುತ್ತ,
ಸತ್ತು ಹುಟ್ಟುತಿಹರು ಜಗದಿ ಮಾಯೆಯಿಂದೆ.
ವಿಶ್ವದಾಭಿರಾಮ ಕೇಳು ವೇಮ.

ಗುಣ ಎಂದರೆ ಹಗ್ಗ. ಗುಣೆ ಎಂದರೆ ಹಗ್ಗವನ್ನು ಕಟ್ಟುವ ಗೂಟ. ಸುಖಕ್ಕೆ ಕಟ್ಟಿ ಹಾಕುವುದು. ಸತ್ತ್ವ. ಕರ್ಮಕ್ಕೆ ಕಟ್ಟಿ ಹಾಕುವುದು ರಜಸ್, ಆಲಸ್ಯಕ್ಕೆ ಕಟ್ಟಿ ಹಾಕುವುದು ತಮಸ್. ಸಗುಣ ಬ್ರಹ್ಮದಲ್ಲಿ ತ್ರಿಗುಣಗಳು ಭಾರ ಸಾಮ್ಯದಲ್ಲಿವೆ. ತ್ರಿಗುಣಗಳು ಅವನಿಗೆ ಹುಟ್ಟಿ ಶಿವ, ವಿಷ್ಣು, ಬ್ರಹ್ಮರೆನಿಸುತ್ತಾರೆ. ಈಗ ಎರಡು ಘಟನೆಗಳ ಅವಧಿಯ ಮಾನಸಿಕ ಅಳತೆಯು ಕಾಲ ಎಂದು ಎಣಿಸಲ್ಪಡುತ್ತದೆ. ಹೀಗಾಗಿ, ಗುಣಾಧೀನರು ಜಗತ್ತಿನಲ್ಲಿ, ಸಾವು, ಜನ್ಮಗಳಲ್ಲಿ ಸುತ್ತುತ್ತಾರೆ.

ಆ. ಕಮಲ ಭವನು ಗೆಯ್ದ ಕಡು ಸೃಷ್ಟಿಯೆನುವರು.
ಹರಿ ಪಾಲಿಪ ; ಕೊಲುವ ಹರನೆನುವರು.
ಮೂರ್ತಿಗಳಿಷ್ಟಿರಲು ಮೂಲ ಒಂದೆ ಅಲ್ತೆ ?
ವಿಶ್ವದಾಭಿರಾಮ ಕೇಳು ವೇಮ.

ಕಮಲ ಭವನಾದ ಬ್ರಹ್ಮನು ಸೃಷ್ಟಿಯನ್ನು ಮಾಡಿದನು ; ಹರಿಯು ಪಾಲಿಸಿದನು. ಮತ್ತು ಹರನು ಕೊಲ್ಲುವನು ; ಎನ್ನುತ್ತಾರೆ. ಮೂರ್ತಿಗಳು ಇಷ್ಟಾದರೂ ಮೂಲವು ಒಂದೇ

ಅಲ್ಲವೇ ? ಅವನೇ ಮೂಲ ಬ್ರಹ್ಮ.

ಆ. ಬ್ರಹ್ಮ ಕೊಂದು ವಿಷ್ಣು ಭಾಗದೊಳಗೆ ಬೆರೆಸಿ,
ವಿಷ್ಣು ಕೊಂದು ಶಿವನ ಒಳಗೆ ಬೆರೆಸಿ,
ಶಿವನ ಕೊಂದು ತಾನು ಶಿವಯೋಗಿಯಾದನು.
ವಿಶ್ವದಾಭಿರಾಮ ಕೇಳು ವೇಮ.

ಇಲ್ಲಿ ಬ್ರಹ್ಮ, ವಿಷ್ಣು, ಶಿವರು ತಮಸ್ಸು, ರಜಸ್ಸು ಮತ್ತು ಸತ್ತ್ವ ಗುಣಗಳ ಪ್ರತಿನಿಧಿಗಳಲ್ಲವೇ ? ಆದ್ದರಿಂದ, ಶಿವಯೋಗಿಯಾಗುವ ಸಾಧಕನು ಬ್ರಹ್ಮನನ್ನು ಕೊಂದು ಅಂದರೆ ತಮೋಗುಣವನ್ನು ಜಯಿಸಿ, ರಜೋಗುಣದಲ್ಲಿ ಅಂದರೆ ವಿಷ್ಣುವಿನಲ್ಲಿ ಬೆರೆಸಬೇಕು. ರಜೋಗುಣವನ್ನು ಜಯಿಸಿ, ಸತ್ತ್ವ ಗುಣದಲ್ಲಿ ಅಂದರೆ ಶಿವನಲ್ಲಿ ಬೆರೆಸಬೇಕು. ಕೊನೆಗೆ ಸತ್ತ್ವ ಗುಣವನ್ನು ಅಂದರೆ ಶಿವನನ್ನೂ ಜಯಿಸಿ, ಗುಣಾತೀತನಾಗಬೇಕು. ಗುಣಾತೀತ ಸ್ಥಿತಿಯೇ ಪರಮ ಪದ ತಾನೇ ? ಅದುವೇ ಶಿವಯೋಗಿಯ ಸ್ಥಿತಿ.

ಆ. ಮೂರು ಗುಣಗಳಲ್ಲಿ ಮುಖ್ಯವಾದ ಗುಣವ,
ತಿಳಿಯಲಾರದವನು ತೊಳಗಲೆಂತು ?
ಭ್ರಮೆಗೆ ಸಿಲುಕುವವನೆ ಬಲು ಹುಚ್ಚನಾಗುವ.
ವಿಶ್ವಭಿರಾಮ ಕೇಳು ವೇಮ.

ಗುಣಗಳು ಮೂರು : ಸತ್ತ್ವ, ರಜಸ್ಸು ಮತ್ತು ತಮಸ್ಸು. ಸತ್ತ್ವ ಗುಣವು ಸುಖಕ್ಕೆ ಜ್ಞಾನಕ್ಕೆ ಕಟ್ಟಿ ಹಾಕುತ್ತದೆ. ರಜೋಗುಣವು ಕರ್ಮಕ್ಕೆ ಲೋಭಕ್ಕೆ ಕಟ್ಟಿ ಹಾಕುತ್ತದೆ. ತಮೋ ಗುಣವು ಅಜ್ಞಾನ ಆಲಸ್ಯಗಳಿಗೆ ಕಟ್ಟಿ ಹಾಕುತ್ತದೆ. ದರ್ಜೆಯಲ್ಲಿ ಇವು ಉತ್ತಮ, ಮಧ್ಯಮ ಮತ್ತು ಅಧಮವಾಗಿರುತ್ತವೆ. ಆದ್ದರಿಂದ ಮೂರು ಗುಣಗಳಲ್ಲಿ ಮುಖ್ಯವೆಂದು ಸತ್ತ್ವ ಗುಣವನ್ನು ತಿಳಿಯಲಾರದವನು ಜಗತ್ತಿನಲ್ಲಿ ತೊಳಗುವುದು ಹೇಗೆ ಸಾಧ್ಯ ? ಇದಕ್ಕಿಂತ ಅದು ಶ್ರೇಷ್ಠ ಎಂದು ಭ್ರಮೆಗೆ ಸಿಲುಕಿ, ಸುಖಸಂಗಿಯಾಗದೆ, ಕರ್ಮಸಂಗಿಯಾಗಿ ಇಲ್ಲವೆ ಆಲಸ್ಯಸಂಗಿಯಾದವನು ಜಗತ್ತಿನಲ್ಲಿ ದೊಡ್ಡ ಹುಚ್ಚನಾಗುತ್ತಾನೆ.

ಆ. ಮೂರು ಗುಣಗಳೊಂದೆ ಮೊದಲಿಗೇ ಇರುವವು.
ಸೇರಿ ಮೂಲವಿಡಿವ ಜ್ಞಾನವಿರದೆ,
ಭ್ರಮೆಗೆ ಸಿಕ್ಕ ಕರ್ಮಿ ಬಲು ಹುಚ್ಚನಾಗನೆ ?
ವಿಶ್ವದಾಭಿರಾಮ ಕೇಳು ವೇಮ.

ಮೂರು ಗುಣಗಳು ಸಗುಣ ಬ್ರಹ್ಮದಲ್ಲಿ ಭಾರಸಾಮ್ಯದಲ್ಲಿ ಮೊದಲೇ ಇರುತ್ತವೆ. ಭಾರಸಾಮ್ಯ ತಪ್ಪಿದಾಗ ಪ್ರಕಟಗೊಳ್ಳುತ್ತವೆ. ಸಾಧಕನು ಬ್ರಹ್ಮವನ್ನು ಸೇರಿ, ಗುಣಗಳ ಮೂಲವನ್ನು ಹಿಡಿಯುವ ಜ್ಞಾನವಿಲ್ಲದೆ, ಕರ್ಮಕಾಂಡದ ವಿಧಿ-ವಿಧಾನಗಳಿಗೆ ಸಿಲುಕುವ ಕರ್ಮಿಯಾಗಿ, ಸರಿಯಾದ ಹಾದಿಯಿಂದ ಭ್ರಮಿಸಿ, ದೊಡ್ಡ ಹುಚ್ಚನಾಗುವುದಿಲ್ಲವೇ ?

ಆ. ೧೦ ಮೂವರಾರು ಎನಲು ಮೂವರೊಳಗೆ ಇಹರು.
ಮೂವರನರಿಯರು ಮೂಢ ಜನರು !

ಮೂಲವು ಮೂವರಿಗೆ ಮುಖ್ಯವಾಗಿ ಉಂಟು.
ವಿಶ್ವದಾಭಿರಾಮ ಕೇಳು ವೇಮ.

ಮೂವರಾರು ? ಎಂದರೆ, ಸತ್ತ್ವ ಪ್ರತಿನಿಧಿಯಾದ ಶಿವ, ರಜಸ್ ಪ್ರತಿನಿಧಿಯಾದ ವಿಷ್ಣು, ಮತ್ತು ತಮಸ್ ಪ್ರತಿನಿಧಿಯಾದ ಬ್ರಹ್ಮ ತಾನೇ ? ಈ ಮೂವರೂ ಒಳಗೇ ಇರುವರು. ಆದರೂ ಮೂಢ ಜನರು ಈ ಮೂವರನ್ನು ಅಂದರೆ ಸುಖಿಸಂಗ, ಕರ್ಮಸಂಗ ಮತ್ತು ಆಲಸ್ಯ ಸಂಗಗಳ ಕಾರಣಗಳನ್ನು ತಿಳಿಯರು. ಮೂವರಿಗೂ ಗುಣಾತೀತವಾದ ನಿರ್ಗುಣ ಬ್ರಹ್ಮನು ಮುಖ್ಯವಾಗಿ ಉಂಟು.

ಆ. ಮೂವರೊಳಗೆ ಹೆಚ್ಚು ಮುನ್ನ ಕಾಣಲಿಲ್ಲ.
ನರಕಗಳಿಗೆ ಹೋಹ ನರರು ಉಂಟು.
ಮೂವರಿಗೆಟುಕದಂಥ ಮೂಲ ಮೂರ್ತಿಯೋರ್ವ.
ವಿಶ್ವದಾಭಿರಾಮ ಕೇಳು ವೇಮ.

ಸತ್ತ್ವ, ರಜಸ್ ಮತ್ತು ತಮಸ್‌ಗಳ ಪ್ರತಿನಿಧಿಗಳಾದ ಶಿವ, ವಿಷ್ಣು ಮತ್ತು ಬ್ರಹ್ಮರಲ್ಲಿ ಯಾರು ಹೆಚ್ಚು ? ಎಂದು ಮೊದಲೇ ಅರಿಯಲಿಲ್ಲ. ಹೀಗಾಗಿ, ಸತ್ತ್ವ ಗುಣದಿಂದ ಸುಖ ಜ್ಞಾನ ಸಂಗಿಯಾಗದೆ, ರಜಸ್ಸಿನಿಂದ ಕರ್ಮಲೋಭ ಸಂಗಿಯಾಗಿಯೋ ಇಲ್ಲವೆ ತಮಸ್ಸಿನಿಂದ ಅಜ್ಞಾನ ಆಲಸ್ಯ ಸಂಗಿಯಾಗಿಯೋ, ಅಧೋಲೋಕಗಳಿಗೆ ಅರ್ಥಾತ್ ನರಕಗಳಿಗೆ ಹೋಗುವ ಜನರು ಉಂಟು. ಆದರೆ, ಮೂವರಿಗೂ ಎಟುಕದ ಗುಣಾತೀತನಾದ ನಿರ್ಗುಣ ಬ್ರಹ್ಮನೋರ್ವನಿದ್ದಾನೆ. ಅದುವೇ ಪರಮ ಪದ.

ಆ. ಮೂವರನ್ನು ಅರಿತು, ಮೂಲವನ್ನು ಅರಿತು,
ಮೂವರ ಮೇಲೊಬ್ಬನ ಮುನ್ನ ಅರಿತು,
ಪರಮ ಜಿಹ್ವೆಯಿಂದ ಪ್ರಸ್ತುತಿ ಗೆಯ್ಯಿರೋ.
ವಿಶ್ವದಾಭಿರಾಮ ಕೇಳು ವೇಮ.

ಸತ್ತ್ವಗುಣ ಪ್ರತಿನಿಧಿಯಾದ ಶಿವನನ್ನೂ, ರಜೋಗುಣದ ಪ್ರತಿನಿಧಿಯಾದ ವಿಷ್ಣುವನ್ನೂ ಮತ್ತು ತಮೋಗುಣ ಪ್ರತಿನಿಧಿಯಾದ ಬ್ರಹ್ಮನನ್ನೂ ಅರಿತು, ಈ ಮೂವರ ಮೂಲವಾದ ಸಗುಣ ಬ್ರಹ್ಮವನ್ನು ಅರಿತು, ಮೂವರ ಮೇಲೋಬ್ಬನಾದ ನಿರ್ಗುಣ ಬ್ರಹ್ಮನನ್ನು ಮುನ್ನ ಅರಿತು, ಅವನ ದಿವ್ಯ ಮಹಿಮೆಯನ್ನು ಪರಮ ಜಿಹ್ವೆಯಿಂದ ಪ್ರಸ್ತುತಿ ಗೆಯ್ಯಿರಿ.

ಆ. ಅಖಿಲ ಜೀವಿಗಳನು ಅಜನೆ ಹುಟ್ಟಿಸಿದನು.
ವಿಷ್ಣು ಅವುಗಳನ್ನು ವೃದ್ಧಿಗೊಳಿಪ.
ಶಿವನು ಸಕಲರನ್ನು ಶಿಕ್ಷಿಸುತ್ತಲಿಹನು.
ವಿಶ್ವದಾಭಿರಾಮ ಕೇಳು ವೇಮ.

ಜೀವ-ಜಗತ್ತಿನ ಸೃಷ್ಟಿ, ಸ್ಥಿತಿ ಮತ್ತು ಲಯಗಳಿಗೆ ಕಾರಣಕರ್ತರಾಗಿ ಬ್ರಹ್ಮ, ವಿಷ್ಣು ಮತ್ತು ಶಿವರಿದ್ದಾರೆ. ಅಖಿಲ ಜೀವಿಗಳನ್ನು ಬ್ರಹ್ಮನು ಹುಟ್ಟಿಸುತ್ತಾನೆ. ವಿಷ್ಣುವು ಪಾಲಿಸುತ್ತಾನೆ. ಶಿವನು ಸಕಲರನ್ನು ಶಿಕ್ಷಿಸುತ್ತಲಿದ್ದಾನೆ.

ಆ. ಪ್ರಣವ ಮಂತ್ರ ಮಹಿಮೆ ಭಾವಿಸಲು ಲಿಂಗವ್ಯ.
ಮೂರು ಮೂರ್ತಿಗಳಲಿ ಮನಸು ಇರಿಸಿ,
ಅವನ ಅರಿತುಕೊಳಲು ಅನ್ಯರಿಗೆ ಶಕ್ಯವೆ ?
ವಿಶ್ವದಾಭಿರಾಮ ಕೇಳು ವೇಮ.

ಪ್ರಣವ ಮಂತ್ರವೆಂದರೆ ಓಂ, ಅ+ಉ+ಮ. ಅ-ಸತ್ತ್ವಗುಣ ಸೂಚಕ. ಉ-ರಜೋಗುಣ ಸೂಚಕ ಮತ್ತು ಮ-ತಮೋಗುಣ ಸೂಚಕ. ಸತ್ತ್ವ, ರಜಸ್ ಮತ್ತು ತಮಸ್ ಗುಣಗಳು ಭಾರಸಾಮ್ಯ ಸ್ಥಿತಿಯಲ್ಲಿ ಸಗುಣ ಬ್ರಹ್ಮನಲ್ಲಿ ಉಂಟು. ಹೀಗೆ, ಪ್ರಣವ ಮಂತ್ರದ ಮಹಿಮೆಯೆಂದರೆ ಸಗುಣ ಬ್ರಹ್ಮನ ಲಿಂಗ (ಕುರುಹು) ವೇ ಆಗಿದೆ. ಬ್ರಹ್ಮ ವಿಷ್ಣು, ಶಿವರಲ್ಲಿ ಮನವನ್ನು ಇರಿಸಿ, ಪ್ರಣವ ಮಂತ್ರದ ಲಕ್ಷ್ಯವಾದ ಬ್ರಹ್ಮವನ್ನು ಅರಿತುಕೊಳ್ಳಲು ಯೋಗಿಗಲ್ಲದೆ, ಬೇರೆಯವರಿಗೆ ಶಕ್ಯವೇ ?

ಕಂ. ಹರಿ, ವಿಧಿ, ಸುರಮುನಿಯಾದಿಗೆ
ನಿರುತದಿ ಸಿಕ್ಕು, ಜನಿಸಿದ ಬಳಿಕ, ಮೇಲ್ಮೆ ಕೆಡುತಾ
ಜರೆ ಮರಣಗಳನು ಹೊಂದುತ,
ಸರಣಿಯ ವರ್ತನೆ ಮಾಯಾ ವಾಸನೆ ವೇಮಾ.

ಹರಿ, ಬ್ರಹ್ಮ, ಸುರರು, ಮುನಿಗಳು ನಿತ್ಯವೂ ಆದಿಯ ಅಳವಿಗೆ ಸಿಕ್ಕು ಜನಿಸುತ್ತಾರೆ. ಬಳಿಕ ಮೇಲ್ಮೆಯು ಕೆಡುತ್ತ ಕೊನೆಗೆ ತಮೋಗುಣ ಪ್ರಪಾತದಿಂದ ಮುಪ್ಪು ಮರಣಗಳನ್ನು ಹೊಂದುತ್ತಾರೆ. ಈ ಹುಟ್ಟು ಸಾವುಗಳ ಸರಣಿಯ ವರ್ತನೆಯು ಮಾಯಾ ವಾಸನೆಯ ಸಂಸ್ಕಾರಗಳ ಪರಿಣಾಮವಾಗಿದೆ.

ಕಂ. ತ್ರಿಜಗಂಗಳ ನಿರ್ಮಿಸುತ್ತ,
ತ್ರಿಜಗಗಳಲಿ ಭುಕ್ತಿ ಮುಕ್ತಿ ತೀರಿಸಿ ನಡೆವನ್.
ಅಜ, ಹರಿ, ರುದ್ರರ, ತಾನೇ
ಭುಜಿಸುತಿರಲು, ವಿಶ್ವಕರ್ಮ ಬ್ರಹ್ಮವು ವೇಮಾ.

ಭೂ (ಆದದ್ದು), ಭುವಃ (ಆಗುತ್ತಿರುವುದು) ಮತ್ತು ಸ್ವಃ (ಅವ್ಯಕ್ತ) ಎಂಬ ಮೂರು ಜಗತ್ತುಗಳಲ್ಲಿ ಆಭೋಗವನ್ನು ಭುಜಿಸಿ, ಅಲ್ಲಿಂದ ಬಿಡುಗಡೆ ಹೊಂದಿ ನಡೆಯುತ್ತಾನೆ. ಅಜ, ಹರಿ, ರುದ್ರರನ್ನು ಅಂದರೆ ತಮಸ್ಸು, ರಜಸ್ಸು ಮತ್ತು ಸತ್ತ್ವಗಳನ್ನು ತನ್ನಲ್ಲಿ ಲಯಗೊಳಿಸಿಕೊಳ್ಳುತ್ತಾನೆ. ಆ ಸತ್ತೆಯೇ ವಿಶ್ವಕರ್ಮ ಬ್ರಹ್ಮವಾಗಿದೆ.

ಆ. ಮೂರು ಲೋಕಗಳಲಿ ಮನವನೊಂದು ಮಾಡಿ,
ಆರು ಲೋಕಗಳನು ಹೊಂದಿಸಿಟ್ಟು,
ಸ್ಥಿರವಾಗಿರುವಂಥ ಶಿವಮೂರ್ತಿಯೆ ಗುರುವ್ಯ.
ವಿಶ್ವದಾಭಿರಾಮ ಕೇಳು ವೇಮ.

ಲೋಕ ಎಂದರೆ ಅನುಭವ ಕ್ಷೇತ್ರ. ಸ್ಥೂಲ, ಸೂಕ್ಷ್ಮ ಮತ್ತು ಕಾರಣಗಳೆಂಬ ಮೂರು ಲೋಕಗಳಲ್ಲಿ ಮನಸ್ಸನ್ನು ಒಂದು ಮಾಡಿ, ಭೂಲೋಕ, ಭುವರ್ಲೋಕ, ಸ್ವರ್ಲೋಕ, ಜನರ್ಲೋಕ, ಮಹರ್ಲೋಕ ಮತ್ತು ಸತ್ಯ ಲೋಕಗಳೆಂಬ ಆರು ಲೋಕಗಳನ್ನು ಸರಿಯಾಗಿ

ಮೇಳವಿಸಿ, ಸ್ಥಿತಪ್ರಜ್ಞನಾಗಿ, ಸ್ಥಿರವಾಗಿರುವಂಥ ಶಿವಮೂರ್ತಿಯೇ ಗುರುವು.

ಮೂರುಗಳ ಗ್ರಹಿಸಿ, ಮೂರನು ವಿಸರ್ಜಿಸಿ
ಮೂರು ಮೂರು ಮೂಟೆ ಮೂಟೆ ರೋಸಿ,
ಮೂರು, ಮೂರು ಮೂರು ಮೂಟೆಯೇ ತತ್ತ್ವವು.
ವಿಶ್ವದಾಭಿರಾಮ ಕೇಳು ವೇಮ.

ಇಲ್ಲಿ ಪ್ರತಿಯೊಂದು ಪದದ ಅರ್ಥವನ್ನು ತಿಳಿಯುವುದು ಅಗತ್ಯವಾಗಿದೆ.

ಮೂರುಗಳ ಗ್ರಹಿಸಿ – ಸತ್ ಚಿತ್ ಮತ್ತು ಆನಂದ (ಸಚ್ಚಿದಾನಂದ) ಎಂಬ ಮೂರನ್ನು ಗ್ರಹಿಸಿ,

ಮೂರನು ವಿಸರ್ಜಿಸಿ – ತಮಸ್ಸು, ರಜಸ್ಸು, ಮತ್ತು ಕೊನೆಗೆ ಸತ್ತ್ವವನ್ನೂ ತೊರೆಯುತ್ತ

ಮೂರು – ದಾರೇಷಣ, ವಿತ್ತೇಷಣ ಮತ್ತು ಪುತ್ರೇಷಣ ಎಂಬ ಭೌತಿಕ ಈಷಣ ತ್ರಯಗಳನ್ನು

ಮೂರು – ಜಾಗ್ರತ, ಸ್ವಪ್ನ ಮತ್ತು ಸುಷುಪ್ತಿ ಎಂಬ ಮಾನಸದ ಅವಸ್ಥಾ ತ್ರಯಗಳನ್ನು

ಮೂಟೆ – ಈ ಎಲ್ಲವುಗಳನ್ನು ಒಟ್ಟು ಮೂಟೆ ಮಾಡಿ.

ಮೂಟೆ ರೋಸಿ – ಅವುಗಳ ಯಾವತ್ತೂ ಮೊತ್ತಕ್ಕೇ ಬೇಸರಗೊಂಡು

ಮೂರು – ಇಚ್ಛಾ, ಜ್ಞಾನ, ಕ್ರಿಯಾ ಶಕ್ತಿಗಳೆಂಬ ಪರದ ಶಕ್ತಿತ್ರಯಗಳನ್ನು ಹೊಂದುವ ಮೂಲಕ

ಮೂರು – ನಾದ, ಕಳೆ ಬಿಂದುಗಳೆಂಬ ಸೃಷ್ಟಿಯ ಪ್ರಥಮ ಹಂತದ ಅನುಭಾವ ಹೊಂದುವ ಮೂಲಕ.

ಮೂರು – ಸಗುಣ ಬ್ರಹ್ಮ ,ತಾರಕ ಬ್ರಹ್ಮ, ನಿರ್ಗುಣ ಬ್ರಹ್ಮ ಎಂಬ ಗುಣಾಧೀಶ, ಸಗುಣ ನಿರ್ಗುಣಗಳ ಕೊಂಡಿ ಮತ್ತು ಗುಣಾತೀತ ಅವಸ್ಥೆಗಳು.

ಮೂಟೆಯೇ ತತ್ತ್ವವು – ಇವೆಲ್ಲವುಗಳ ಒಟ್ಟಾರೆ ಗ್ರಹಿಕೆಯೇ ತತ್+ತ್ವ=ತತ್ತ್ವ.

ಇಷ್ಟು ಚಿಂತೆಯೇಕೆ ? ಏಕಾಂತ ಬುದ್ಧಿಯಿಂ,
ಹರಿ ಹರಾದಿಗಳಲಿ ಆಶೆ ಉಡುಗಿ,
ಶಾಂತ ಬುದ್ಧಿ ಹೊಂದಿ, ಸಂಪಾದಿಸು ಸುಖವ.
ವಿಶ್ವದಾಭಿರಾಮ ಕೇಳು ವೇಮ.

ಗುಣಗಳ ಪ್ರಭಾವದಿಂದಾಗಿ, ಸುಖಿಸಂಗ, ಲೋಭಸಂಗ, ಅಜ್ಞಾನ ಸಂಗಗಳಿಂದಾಗಿ ಪ್ರಪಂಚದ ಆಗು-ಹೋಗುಗಳಿಗೆ ಕಟ್ಟಿಬಿದ್ದು, ಇಷ್ಟೊಂದು ಚಿಂತೆ ಮಾಡುವುದೇತಕ್ಕೆ ? (ಅಜ) ಹರಿ, ಹರಾದಿಗಳಲ್ಲಿ (ತಮಸ್ಸು) ರಜಸ್ಸು, ಸತ್ತ್ವ ಮೊದಲಾದ ಗುಣಗಳಲ್ಲಿ ಆಸೆ ಬಿಟ್ಟು, ಅಂದರೆ ಲೋಭಿಯಾಗದೆ, ತಿಳಿಯಬೇಕೆಂಬ ಕಾತರವಿಲ್ಲದೆ, ಮನಸ್ಸನ್ನು ಶಾಂತಗೊಳಿಸು. ಶಾಂತ ಬುದ್ಧಿಯಿಂದ ಸುಖವನ್ನು ಸಂಪಾದಿಸು.

ಮೇಲಿನ ಪದ್ಯದ ಪಾಠಾಂತರವು ಹೀಗಿದೆ.

ಆ. ಇಷ್ಟು ದುಗುಡವೇಕೆ ? ಏಕಾಂತ ಮತಿಯಿಂದ,
ಹರಿ ಹರಾದಿಗಳಲಿ ಆಶೆಯುಡಿಗಿ.
ಶಾಂತ ಬುದ್ಧಿ ಇರಲು ಸಲೆಗೂಡುವುರು ಸುಖ.
ವಿಶ್ವದಾಭಿರಾಮ ಕೇಳು ವೇಮ.

ಇದಕ್ಕೆ ವಿರಣೆಯ ಅಗತ್ಯವಿಲ್ಲ ತಾನೇ ?

ಆ. ಹರಿಹರಾದಿಗಳಲಿ ಹರಿದು ಹಾಕಿ ಆಶೆ,
ಶಾಂತ ಬುದ್ಧಿಗೂಡಿ, ಸಗುಣದಲ್ಲಿ,
ಚಿಂತೆ ತೊಡೆದು, ಚಿನ್ಮಯವನು ಹೊಂದು.
ವಿಶ್ವದಾಭಿರಾಮ ಕೇಳು ವೇಮ.

ಇರುವ ಸುಖ ಸಾಲದು ; ಇನ್ನೂ ಬೇಕು, ಅದಕ್ಕಾಗಿ ಹೆಚ್ಚು ಹೆಚ್ಚು ಕರ್ಮ ಮಾಡಬೇಕು ಎಂಬ ರಾಜಸ ವೃತ್ತಿಯನ್ನು ಮತ್ತು ಸುಖಿಸಬೇಕು ; ಇನ್ನೂ ತಿಳಿಯಬೇಕೆಂಬ ಸಾತ್ತ್ವಿಕ ವೃತ್ತಿಯನ್ನು ಅರ್ಥಾತ್ ಹರಿ ಹರರಲ್ಲಿ ಆಶೆಯನ್ನು, ಹರಿದು ಹಾಕಿ, ಗುಣಕ್ಷೋಭೆಯನ್ನು ತೊಡೆದು, ಶಾಂತ ಬುದ್ಧಿ ಹೊಂದಿ, ಸಗುಣದಲ್ಲಿ ಚಿಂತೆಯನ್ನು ತೊಡೆದು ಹಾಕಿ, ಅರಿವಿನಲ್ಲಿ ಮುಳುಗು. ಅಂದರೆ ಚಿನ್ಮಯವನ್ನು ಹೊಂದು.

ಕಂ. ಹರಿವಿಧಿ ಸುರಮುನಿಗಳಾದಿ,
ಮೆರೆದನು; ಜನ್ಮಿಸಿದ ಬಳಿಕ ಮೇಲ್ಮೆಯು ಕೆಡುತಾ
ಜರೆ ಹೊಂದಿ ಮರಣ ಹೊಂದುತ,
ಇರುತಿಹ ಪರಿಯದುವೆ ಕರ್ಮವಾಸನೆ ವೇಮಾ.

ಹರಿ, ಬ್ರಹ್ಮ, ಸುರರು, ಮುನಿಗಳು ಮೊದಲಾದವರು ಮೆರೆದರು. ಜನ್ಮಿಸಿದ ಬಳಿಕ ಗುಣಗಳ ಪ್ರಭಾವಕ್ಕೆ ಒಳಗಾಗಿ ಬರಬರುತ್ತ ತಮೋಗುಣದ ಪ್ರಪಾತಕ್ಕೆ ಸಿಲುಕಿ ಮುಪ್ಪು ಮರಣಗಳನ್ನು ಹೊಂದುತ್ತ ಇರುವ ಆ ಪರಿಯೇ ಕರ್ಮವಾಸನೆಯಾಗದೆ.

ಆ. ವಿಷ್ಣುವಿಂಗೆ ದೋಷ, ವೃಷಭಾಂಕಗೆ ದೋಷ,
ಬ್ರಹ್ಮನಿಗೆ ದೋಷ ಬಹಳ ಕಾಣು.
ವೇಮನಿಗೊಂದು ದೋಷ, ಬಡಿಸೆ ತಿನನು, ಹೇಳು.
ವಿಶ್ವದಾಭಿರಾಮ ಕೇಳು ವೇಮ.

ವಿಷ್ಣು, ತನ್ನ ಪತ್ನಿ ರುಕ್ಮಿಣಿಯು, ಭೃಗು ಮಹರ್ಷಿಯ ಪ್ರಸಂಗದಿಂದ ಸಿಟ್ಟಾಗಿ ಭೂಲೋಕಕ್ಕೆ ಹೋದಾಗ, ಪತ್ನಿ ವ್ಯಾಮೋಹ ದೋಷದಿಂದ ಹಸಿವೆ-ನೀರಡಿಕೆಗಳಿಂದ ಬಳಲುತ್ತ ಅಲೆದ. ಶಿವನು ತನ್ನ ದೋಷದಿಂದ ಕನಕ ಬೆಟ್ಟವು ಕೈಯಲ್ಲಿದ್ದರೂ, ಭಿಕ್ಷುಕನಾಗಿ ಅಲೆದ. ಇನ್ನು ತಾನೇ ಎಲ್ಲರಿಗಿಂತ ಅಧಿಕನೆಂಬ ಗ್ರಹಿಕೆಯ ದೋಷದಿಂದಾಗಿ ತಲೆಯನ್ನೇ ಬಲಿಗೊಡಬೇಕಾಯಿತು ಬ್ರಹ್ಮ. ಆದರೆ, ಭೋಗ ವಿಷಯಗಳು ಎದುರಿಗಿದ್ದರೂ ಭೋಗಿಸದ

ದೋಷವು ವಿರಾಗಿ ವೇಮನನಿಗೆ ಅಂಟಿದೆಯಲ್ಲವೇ ?

ಆ. ಈಶನಿಗೆ ಈಯಲು ಇನಿತಾದರು ದೋಷ ;
ಬ್ರಹ್ಮಗೇನೋ ತಕ್ಕ ಭೂರಿ ದೋಷ.
ವಿಷ್ಣು ದೇವನಿಗಿದು ವಿಪರೀತವಿಹ ದೋಷ.
ವಿಶ್ವದಾಭಿರಾಮ ಕೇಳು ವೇಮ.

ಶಿವನು ಸ್ವಭಾವತಃ ದೋಷ ದೂರನಾದರೂ ತನ್ನ ಪತ್ನಿ ಸತಿದೇವಿಯು ದಕ್ಷಯಜ್ಞದಲ್ಲಿ, ಶಿವನಿಗಾದ ಅವಮಾನವನ್ನು ಸಹಿಸದೆ ಯಜ್ಞಕುಂಡದಲ್ಲಿ ಹಾರಿ ಪ್ರಾಣ ತೊರೆದಳು. ಬಳಿಕ ಶಿವನು ಸತಿಯ ವಿರಹದಿಂದ ಬಹಳ ಪರಿತಪಿಸಿದನು. ಹೀಗೆ ಸತಿಯಲ್ಲಿ ಅನುರಕ್ತನಾದುದು ಒಂದು ದೋಷವೇ ಸರಿ.

ಒಮ್ಮೆ ಬ್ರಹ್ಮ, ವಿಷ್ಣುರಲ್ಲಿ, ಸುಮೇರು ಪರ್ವತದಲ್ಲಿ ನಡೆದ ದೇವತೆಗಳ ಸಭೆಯಲ್ಲಿ ಸೃಷ್ಟಿ ಕಾರ್ಯದಲ್ಲಿ ಯಾರದು ಪರಮಾಧಿಕಾರ ಎಂಬ ವಿಷಯ ಕುರಿತು ವಾದ ನಡೆಯಿತು. ಈ ಕಾಲಕ್ಕೆ ವೇದ ಪುರುಷನು ಪ್ರಕಟನಾಗಿ, ಬ್ರಹ್ಮ, ವಿಷ್ಣುಗಳೇ, ಪರಮೇಶ್ವರನೇ ಸರ್ವ ಶ್ರೇಷ್ಠ ಎಂದು ತಿಳಿಸಿದನು. ಮತ್ತು ಆಗ ಸಭೆಯಲ್ಲಿ ಒಂದು ಜ್ಯೋತಿ ಪ್ರಕಟವಾಯಿತು. ಆ ಜ್ಯೋತಿಯು ಬ್ರಹ್ಮನ ಐದನೆಯ ಶಿರದ ಮೇಲೆ ಕುಳಿತಿತು. ಆದರೂ ಅಹಂಭಾವದಿಂದ ಬ್ರಹ್ಮನು ಶಿವನಿಂದೆಯನ್ನು ನಿಲ್ಲಿಸಲಿಲ್ಲ. ಆಗ ಶಿವನು ಜ್ಯೋತಿ ರೂಪದ ಭೈರವನಿಗೆ, 'ನೀನು ಕಾಲ ಭೈರವ. ಬ್ರಹ್ಮನಿಗೆ ಪಾಠ ಕಲಿಸು' ಎಂದು ಆಣತಿಯಿತ್ತನು. ಆ ಕೂಡಲೇ ಭೈರವನು ತನ್ನ ಕಾಲಿನ ಹೆಬ್ಬೆರಳಿನಿಂದ ಬ್ರಹ್ಮನ ಒಂದು ಶಿರಸ್ಸನ್ನು ಕತ್ತರಿಸಿದನು. ಅಂದಿನಿಂದ ಪಂಚಮುಖನಾಗಿದ್ದ ಬ್ರಹ್ಮನು ಶಿವನಿಂದೆಯ ದೋಷದಿಂದ ಚತುರ್ಮುಖನಾದನು.

ಹಿರಣ್ಯಕಶಪುವನ್ನು ತನ್ನ ನಖಗಳಿಂದ ಕೊಂದ ನರಸಿಂಹನು ಬೇಗ ಶಾಂತವಾಗಲಿಲ್ಲ. ಅವನನ್ನು ಶಾಂತಗೊಳಿಸಲು ಶಿವನು ವೀರಭದ್ರನನ್ನು ಕಳಿಸಿದನು. ಆದರೆ ನರಸಿಂಹನು ಅಹಂಭಾವದಿಂದ ವೀರಭದ್ರನ ಬಿನ್ನಹವನ್ನು ಉಪೇಕ್ಷಿಸಿದನು ಮತ್ತು ಅವನ ಮೇಲೆ ಎರಗಿದನು. ಆಗ ವೀರಭದ್ರನು ಅದೃಶ್ಯನಾಗಿ, ಮರಳಿ ಸಾವಿರ ಭುಜಗಳನ್ನೂ, ಜಡೆಯನ್ನೂ ಹೊಂದಿ ಪ್ರಕಟವಾದನು. ತನ್ನ ತೋಳುಗಳಿಂದ ನರಸಿಂಹನನ್ನು ಗಟ್ಟಿಯಾಗಿ ಹಿಡಿದು ಮೇಲಕ್ಕೆತ್ತಿ ವೃಷಭನ ಕಾಲ ಬುಡಕ್ಕೆ ಹಾಕಿದನು. ಆಗ ಎಲ್ಲರೂ ಬೆದರಿ, ಶಿವನಲ್ಲಿ ಪ್ರಾರ್ಥನೆ ಸಲ್ಲಿಸಿದರು. ನರಸಿಂಹನಿಗೂ ವೀರಭದ್ರನಾರೆಂದು ತಿಳಿದು, ಅವನು ಶಿವಸ್ತುತಿಯನ್ನು ಆರಂಭಿಸಿದನು. ಆಗ ಶಿವನು, ಎಂಟು ಕಾಲಿನ ಪಕ್ಷಿಯಾದ ಶರಭಾವತಾರ ತಾಳಿ, ನರಸಿಂಹನ ದೇಹವನ್ನುಒಂದು ಗಿರಿ ಶಿಖರಕ್ಕೊಯ್ದು ನರಸಿಂಹನ ಚರ್ಮವನ್ನು ತನ್ನ ಉಡುಗೆ ಮಾಡಿಕೊಂಡು, ಅವನ ಶಿರವನ್ನು ಕೊರಳಲ್ಲಿ ಧರಿಸಿದನು. ಹೀಗೆ ವಿಷ್ಣುವಿನ ದೋಷ ಪರಿಹಾರವಾಯಿತು.

ಆ. ಹಲವು ಕಡೆಗುಂಟು, ಹಲವು ಕೆಂಪಗುಂಟು;
ಹಲವು ಬಿಳ್ಪಗುಂಟು ; ಜಲ ನೈದಿಲೆ.
ಒಂದೆ ರೀತಿ ಇರದ ಒಪ್ಪ ಕಾರಣೇನು ?
ವಿಶ್ವದಾಭಿರಾಮ ಕೇಳು ವೇಮ.

ಜಲ ನೈದಿಲೆಗಳು ಮೂರು ಬಣ್ಣಗಳಲ್ಲಿರುತ್ತವೆ. ಹಲವು ಕಪ್ಪಗುಂಟು ; ಹಲವು ಕೆಂಪಗುಂಟು, ಹಲವು ಬಿಳ್ಪಗುಂಟು. ಇವುಗಳು ಒಂದೇ ರೀತಿ ಇರದ ಕಾರಣವೇನು ? ಆಯಾ ನೈದಿಲೆಯ ಬೀಜದಲ್ಲಿಯೇ ಬೇರೆ ಬೇರೆ ಸಂಸ್ಕಾರಗಳಿರುತ್ತವೆ. ಸಂಸ್ಕಾರಕ್ಕೆ ತಕ್ಕಂತೆ ಬಣ್ಣಗಳಿರುತ್ತವೆ. ಮನುಷ್ಯರಲ್ಲಿಯೂ ಒಂದೊಂದು ಗುಣ ಪ್ರಧಾನರಾದವರು ಉಂಟು. ಒಬ್ಬನಲ್ಲಿ ತಮೋಗುಣವು ಪ್ರಧಾನವಿರಬಹುದು. ಇನ್ನೊಬ್ಬನಲ್ಲಿ ರಜೋಗುಣವು ಪ್ರಧಾನವಿರಬಹುದು. ಬೇರೊಬ್ಬನಲ್ಲಿ ಸತ್ತ್ವಗುಣವು ಪ್ರಧಾನವಿರಬಹುದು. ತಮೋಗುಣದ ವರ್ಣ ಕಪ್ಪು, ರಜೋ ಗುಣದ ವರ್ಣ ಕೆಂಪು ಮತ್ತು ಸತ್ತ್ವ ಗುಣದ ವರ್ಣ ಬಿಳಿದು. ಕೆಲವು ಉನ್ನತ ಸಾಧನ ಸಿದ್ದರು. ಬೇರೆ ಬೇರೆ ಜನರನ್ನು ನೋಡಿದಾಗ, ಅವರಿಗೆ ಕೆಂಪು ಇಲ್ಲವೆ ಬಿಳಿಯ ವರ್ಣಗಳ ಪ್ರಭಾವಳಿಯು ಅವರ ಸುತ್ತಲೂ ಕಾಣುತ್ತದೆ. ಈ ವರ್ಣಗಳು ಆಯಾ ಮನುಷ್ಯರ ಸಂಸ್ಕಾರಗಳ ಸೂಚಿಯಾಗಿವೆ.

ಕಂ. ಆರಿಹ ಮೂರಿಹ ಕಿಂಡಿಯ,
ಆರೈಸಿ ಮುಚ್ಚುವನಲಿ ತೇಜ ಹೊಳೆವುದ್ಕೆ.
ಚಾರುಮತಿವಂತ ಪುರುಷನು
ಸೇರುವ ಮೋಕ್ಷದ ಹಾದಿಯ, ಸಿದ್ಧವು, ವೇಮಾ.

ಎರಡು ಕಣ್ಣು, ಎರಡು ಕಿವಿ, ಎರಡು ಮೂಗಿನ ಹೊರಳಿಗಳು ಎಂಬ ಆರು. ಒಂದು ಬಾಯಿ, ಒಂದು ಗುದ ಮತ್ತು ಒಂದು ಗುಹ್ಯ ಅಂದರೆ ಉಪಸ್ಥ ಎಂಬ ಮೂರು. ಹೀಗೆ ದೇಹದಲ್ಲಿ (6+3) ಕಿಂಡಿಗಳಿವೆ. ಇವುಗಳನ್ನು ಮುಚ್ಚಿ ಮುಚ್ಚಿ ಷಣ್ಮುಖೀ ಮುದ್ರೆಯಲ್ಲಿ ಆಸೀನನಾಗಿ, ಸಾಧನ ಮಾಡಿದರೆ, ಅವನಲ್ಲಿ ತೇಜವು ಹೊಳೆಯುತ್ತದೆ. ಇಂಥ ಚಿನ್ನಿಗ ಮತಿವಂತ ಪುರುಷರು ಮೋಕ್ಷದ ಹಾದಿಯನ್ನು ಸೇರುವರು. ಇದು ಅನುಭವದಿಂದ ಸಿದ್ಧವಾಗಿದೆ.

-ನಾಲ್ಕು-

ಕಂ. ನಾಲಕು ಬೀದಿಯ ಮಧ್ಯದಿ,
ಮೇಲಕೆ ಬ್ರಹ್ಮವು ಇರೆ, ಜಾಗ್ರತೆಯೊಡಗೂಡಲ್
ಮೇಳವಿಸುತ ಗುರು ಮೂಲಕ,
ಆಲಿಸು ; ಸಾಧ್ಯವ ಹೊಂದುವವನಾಗು, ವೇಮ.

ಬ್ರಹ್ಮರಂಧ್ರವು ನಾಲ್ಕು ಬೀದಿಗಳ ಚೌಕದಲ್ಲಿರುವ ರಂಧ್ರವಾಗಿದೆ. ಇಲ್ಲಿಂದ ಮೇಲೆ ಸಹಸ್ರಾರ ಚಕ್ರವಿದೆ. ಅದರ ಕೆಳಭಾಗಕ್ಕೆ ಗುರುಚಕ್ರವೆಂದು ಯೋಗ ಸಾಧಕರು ಗ್ರಹಿಸುತ್ತಾರೆ. ಗುರುವಿನ ಮೇಲೆ ಧಾರಣ ಧ್ಯಾನ ಮಾಡುವಾಗ, ಈ ಗುರು ಚಕ್ರದಲ್ಲಿ ಮನವನ್ನು ಏಕಾಗ್ರಗೊಳಿಸುತ್ತಾರೆ. ಹೀಗೆ ಪರಬ್ರಹ್ಮವನ್ನು ತಲುಪುವಾಗ ಗುರು ಮೂಲಕ ತಲುಪಬೇಕಾಗುತ್ತದೆ. ಆಗ ಪ್ರಣವವನ್ನು ಆಲಿಸು. ಮತ್ತು ಸಾಧನ ಮೂಲಕ ಸಾಧ್ಯವನ್ನು ಹೊಂದುವವನಾಗು.

ಕಂ. ನಾಲ್ವರು ಕಳ್ಳರ ಹಿಡಿಯುತ,
ಕಲಿತನದಿ ಹೋರಿ, ಮುವ್ವರ ಸರಿಯಹನೋರ್ವಂ.
ಸಲೆಯೊಪ್ಪಿಕೊಳ್ಳಲವನನು,
ಇಳೆಯಲಿ, ಅರಿವಿನ ಸತ್ಫಲವಾಗಿದೆ, ವೇಮಾ.

ಅರಿವಿನ ನಾಲ್ಕು ಅವಸ್ಥೆಗಳಿವೆ : ಜಾಗರ, ಸ್ವಪ್ನ, ಸುಷುಪ್ತಿ ಮತ್ತು ತುರೀಯ. ಇವು ಅರಿವಿಗೆ ಕಣ್ಣು ಮುಚ್ಚಾಲೆಯ ಆಟಗಾರರಂತಿವೆ ; ಕಳ್ಳರಂತಿವೆ. ಸಾಧಕನು ಇವುಗಳನ್ನು ಗ್ರಹಿಸಿ ಕಲಿತನದಿಂದ ಹೋರಾಡಬೇಕು. ಆಗ ಜಾಗರ, ಸ್ವಪ್ನ ಮತ್ತು ಸುಷುಪ್ತಿಗಳಿಗೆ ಸರಿಸಮವಾದ (ಚತುರೀಯ) ತುರೀಯ ಅವಸ್ಥೆಯೊಂದು ಅರಿವಿಗೆ ಬರುತ್ತದೆ. ಈ ಅವಸ್ಥೆಯನ್ನು ಚೆನ್ನಾಗಿ ಒಪ್ಪಿಕೊಂಡು ನಡೆಯುವುದೇ ಇಳೆಯಲ್ಲಿ ಅರಿವಿನ ಸತ್ಫಲವಾಗಿದೆ.

ಗಟ್ಟಿಗ ನಾಲ್ವರು, ಏಳ್ವರ, ಖಂಡವ ಕೊಚ್ಚುತ, ತಿಳಿವು ಇಲ್ಲದೇ,
ಕೊಟ್ಟೀಟು ಮೂರು ಮನೆಯವರಿಗೆ, ವರಿಸಲು ಮುಕ್ತಿ ದೊರೆವುದೇ ?
ಬೊಟ್ಟು ಹಣೆಯಲಿರಿಸಿ, ಭುಜಕೆ, ದೇಹಕೆ, ಬೂದಿ ಬಳಿಯುವುದೆಲ್ಲಂ
ಒಟ್ಟು ಚಿಹ್ನೆ ಭೂ ಪ್ರಜರಿಗೆ, ಒಪ್ಪ ಮೋದ, ವೇಮ ನೃಪಾಲ ಶೇಖರಾ.

ಅಜ್ಞಾನವು ಮನಸ್ಸಿನ ವಿಕ್ಷೇಪದಿಂದ ಆಗಿರಬಹುದು ಇಲ್ಲವೆ ಆವರಣೇ ಮಲದಿಂದ ಆಗಿರಬಹುದು. ವಿಕ್ಷೇಪದಿಂದ ಅಂದರೆ ಮನವನ್ನು ಬಾಹ್ಯ ವಿಷಯಗಳತ್ತ ಹರಿಬಿಟ್ಟಾಗ, ವಿಕ್ಷಿಪ್ತ, ವಿಶ್ಲಿಷ್ಟ, ವಿಕ್ಷುಬ್ಧ ಮತ್ತು ಮೂಢ ಎಂಬ ನಾಲ್ಕು ದೋಷಗಳಾಗುತ್ತವೆ. ಇನ್ನು ಮನವು ಊರ್ಧ್ವವಾಗದೆ, ಉದಾತ್ತವಾಗದೆ ಉಳಿಯುವುದಕ್ಕೆ ಅದನ್ನು ಮುತ್ತಿದ, ಆವರಿಸಿದ ದುಃಖ, ಜನ್ಮ, ಕರ್ಮ, ಅಭಿಮಾನ, ಅವಿವೇಕ, ಅಜ್ಞಾನ ಮತ್ತು ಮಾಯೆಗಳೆಂಬ ಏಳು ಆವರಣಗಳೇ ಕಾರಣವಾಗಿವೆ.

ಸಾಧಕನು ವಿಕ್ಷೇಪದ ನಾಲ್ಕನ್ನೂ ಮತ್ತು ಆವರಣದ ಏಳು ಮಲಗಳನ್ನೂ ಖಂಡಿತವಾಗಿ ಕೊಚ್ಚುತ್ತ, ತನ್ನನ್ನು ದೇಹ ವ್ಯಾಪಾರಕ್ಕೆ ಕಟ್ಟಿ ಹಾಕುವ ತಮಸ್ಸು, ರಜಸ್ಸು ಮತ್ತು ಸತ್ವ ಗುಣ (ಹಗ್ಗ) ಗಳನ್ನು ಹರಿದು ಹಾಕಬೇಕು. ಅಂದರೆ ಅವರಿಗೆ ಏಟು ಕೊಡಬೇಕು. ಹೀಗೆ ಮಾಡದೆ, ವಿಕ್ಷೇಪ, ಆವರಣ ದೋಷಗಳನ್ನು ವರಿಸಿದರೆ, ಒಪ್ಪಿದರೆ, ಮುಕ್ತಿ ದೊರೆಯುವುದೇನು? ಬರೀ ಹಣೆಗೆ ಬೊಟ್ಟು ಇಟ್ಟು, ಭುಜಕ್ಕೆ ಮತ್ತು ದೇಹಕ್ಕೆ ಬೂದಿ ಬಳಿಯುವ ಬಾಹ್ಯ ಸಂಕೇತಗಳಿಂದ ಯಾವ ಪ್ರಯೋಜನವೂ ಇಲ್ಲ. ಹೆಚ್ಚೆಂದರೆ ಈ ಚಿಹ್ನೆಗಳೆಲ್ಲ ಭೂಮಿಯ ಪ್ರಜೆಗಳಿಗೆ ಒಪ್ಪ ಮೋದ ನೀಡಬಲ್ಲವಷ್ಟೇ.

-ಐದು-

ಆ. ಐದು ಮನಸು ತಗಲಿ, ಐದು ಮನೆಯೊಳಡಗಿ,
ಐದು ವ್ಯಾಪ್ತಿಗಳನು ಮಣಿಸಲಾರ.
ಐದು ಅಕ್ಷರಗಳನು ಅರಸಿ ಜಪಿಸುತಿರೋ.
ವಿಶ್ವದಾಭಿರಾಮ ಕೇಳು ವೇಮ.

ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನಮಯ ಮತ್ತು ಆನಂದಮಯ ಎಂಬ ಸ್ತರಗಳಲ್ಲಿ ಮನಸ್ಸು ಐದು ಮನೆಗಳಲ್ಲಿ, ಅಂದರೆ ಕೋಶಗಳಲ್ಲಿ ಅಡಗಿದೆ. ಈ ಐದು ಸ್ತರಗಳಲ್ಲಿ ಮನಸ್ಸಿನ ಕ್ರಿಯೆಗಳು ವ್ಯಾಪಿಸಿವೆ. ಈ ಮನೋ ವ್ಯಾಪ್ತಿಯನ್ನು ಮಣಿಸುವುದು ಕಷ್ಟಸಾಧ್ಯ. ಆದ್ದರಿಂದ, ಈ ವ್ಯಾಪ್ತ ಮನಸ್ಸನ್ನು ನಿಗ್ರಹಿಸಬೇಕೆಂದರೆ ಮನಸ್ಸನ್ನು ಜಪ ತಪಗಳಿಂದ ಏಕಾಗ್ರಗೊಳಿಸಬೇಕಷ್ಟೇ. ಇದಕ್ಕಾಗಿ ಐದು ಅಕ್ಷರಗಳನ್ನು ಅಂದರೆ ಪಂಚಾಕ್ಷರೀ ಮಂತ್ರವನ್ನು

ಅರಸಿ, ಜಪಿಸುತ್ತಿರಬೇಕು.

ಇದರ ರೂಪಾಂತರ ಪದ್ಯ ಹೀಗಿದೆ.

ಆ. ಐದು ಮನಸಿಗೆ ತಗುಲಿ, ಐದನು ತಾ ಹಿಡಿದು,
ಐದರ ವ್ಯಾಪ್ತಿಯ ಅರಿಯಲಾರ.
ಐದು ಅಕ್ಷರಗಳ ಆಯ್ದು ಜಪಿಸಬೇಕು.
ವಿಶ್ವದಾಭಿರಾಮ ಕೇಳು ವೇಮ.

ಜೀವಿಯು ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನಮಯ ಮತ್ತು ಆನಂದಮಯ ಎಂಬ ಐದು ಕೋಶಗಳಲ್ಲಿ ಅಡಗಿದ ಮನಸ್ಸಿಗೆ ತಗಲಿದ್ದಾನೆ. ಅವನು ಸಾಧನ ಬಲದಿಂದ ಮನದ ಐದೂ ಸ್ತರಗಳನ್ನು ಹಿಡಿದು ನಿಗ್ರಹಿಸಬೇಕು. ಆದರೆ ಅವನು ಈ ಐದರ ವ್ಯಾಪ್ತಿಯನ್ನು ಅರಿಯಲಾರನು. ಅದ್ದರಿಂದ ಮನೋ ನಿಗ್ರಹಕ್ಕೆ ಅನುಕೂಲಿಸುವಂತೆ, ಐದು ಅಕ್ಷರಗಳ ಅಂದರೆ ಪಂಚಾಕ್ಷರೀ ಸಿದ್ಧ ಮಂತ್ರವನ್ನು ಆಯ್ದುಕೊಂಡು ಜಪಿಸಬೇಕು.

ಆ. ಪಂಚ ಶತ್ರುವರಿತು, ಪಂಚ ಶರನ ಗೆಲಿದು,
ಪಂಚ ವರ್ಣಗಳನು ಪಠಣ ಮಾಡಿ,
ಪಂಚ ಮುಖಿವು ಆಗಿ, ಭವ ಸಂಜ್ಞೆಯುಳ್ಳವನ,
ಬಳಿಗೆ ಸೇರುವವನೆ ಬ್ರಹ್ಮ, ವೇಮ.

ಪಂಚ ಶತ್ರುಗಳನ್ನು, ಅಂದರೆ ಕಾಮ, ಕ್ರೋಧ, ಲೋಭ, ಮೋಹ, ಮದ-ಮತ್ಸರಗಳನ್ನು ಅರಿತು, ಪಂಚ ಶರನ ಅಂದರೆ ಮನ್ಮಥನನ್ನು ಗೆದ್ದು, ನ ಮಃ ಶಿ ವಾ ಯ ಎಂಬ ಪಂಚ ವರ್ಣಗಳನ್ನು ನ್ಯಾಸಪೂರ್ವಕ ಪಠಣ ಮಾಡಿ, ಸದ್ಯೋಜಾತ, ವಾಮದೇವ, ಅಘೋರ, ತತ್ಪುರುಷ, ಈಶಾನ ಎಂಬ ಪಂಚಮುಖನು ಆಗಿ, ಭವ ಸಂಜ್ಞೆಯುಳ್ಳವನ ಬಳಿ ಸೇರುವವನೇ ಬ್ರಹ್ಮನಾಗುತ್ತಾನೆ.

ಆ. ಐದು ವರ್ಣಗಳಲಿ ಅಖಿಲವನು ತಿಳಿದೊಡೆ,
ಐದರಲ್ಲಿ ಮುಕ್ತಿ ಅಂಟಿ ಇಹುದು.
ಐದರೊಳಗೆ ಇರಲು ಅವನೆ ಹೋಗಖಿಲವು.
ವಿಶ್ವದಾಭಿರಾಮ ಕೇಳು ವೇಮ.

ಐದು ಅಕ್ಷರಗಳಲ್ಲಿ ಅಂದರೆ ನಮಃಶಿವಾಯ ಎಂಬ ಪಂಚಾಕ್ಷರೀ ಮಂತ್ರದ ಕ್ರಮವಾದ ಪಠಣೆಯಿಂದ ಮನವನ್ನು ಉದ್ದೀಪಿಸಿ, ಪರಮ ಪದವನ್ನು ತಲುಪಿದಾಗ ಅಖಿಲವನ್ನು ತಿಳಿಯುತ್ತಾನೆ. ಐದರಲ್ಲಿಯೇ ಶ್ರುತಿಗೊಂಡ ಮನಸ್ಸು ನಿರ್ವಿಷಯಿಯಾಗಿ, ಬಂಧನಗಳಿಂದ ದೂರಾಗಿ, ಮುಕ್ತಿಗೆ ಅಂಟಿ ಇರುತ್ತದೆ. ಹೀಗೆ ಐದರೊಳಗೆ ತನ್ಮಯನಾಗಿ ಇದ್ದರೆ, ಅವನೇ ಅಖಿಲವಾಗುತ್ತಾನೆ. ಸರ್ವಾತ್ಮನಾಗುತ್ತಾನೆ.

ಆ. ಪಂಚ ವರ್ಣವರಿಯೆ, ಪರಮನನ್ನು ಅರಿವ.
ಪರವನರಿಯೆ ನಿತ್ಯ ಪ್ರಜ್ವಲಿಪನು.

ಪ್ರಜ್ವಲಿಸುವ ಅವನೆ ಪರಮಾತ್ಮನಪ್ಪನು.
ವಿಶ್ವದಾಭಿರಾಮ ಕೇಳು ವೇಮ.

ಭಾವಾತೀತನೂ, ತ್ರಿಗುಣಾತೀತನೂ, ಚತುರ್ವಿಂಶತಿ ತತ್ತ್ವಗಳಾಚೆ ಇರುವ ಸತ್ತೆಯೇ ಪರಮನು. ನಮಃಶಿವಾಯ ಎಂಬ ಪಂಚವರ್ಣಗಳ ಮಂತ್ರ ಧ್ಯಾನದಿಂದ ಚರಮ ಧ್ಯೇಯವನ್ನು ಅರಿತರೆ, ಪರಮ ತತ್ತ್ವವನ್ನು ಅರಿಯುತ್ತಾನೆ. ಪರಮನನ್ನು ಅರಿತೊಡನೆ ಸಾಧಕನು ನಿತ್ಯವೂ ಪ್ರಜ್ವಲಿಸುತ್ತಾನೆ. ಕಾಂತಿಯುತನಾಗುತ್ತಾನೆ. ಹೀಗೆ ನಿತ್ಯವೂ ಪ್ರಜ್ವಲಿಸುವ ಆ ಪುರುಷನೇ ಪರಮಾತ್ಮನಾಗುವನು.

ಆ. ಪಂಚ ವರ್ಣಗಳ ಆನಂದವರಿತೊಡೆ,
ಅಲ್ಲಿ ಹೊಂದಿ ಮುಕ್ತ ; ಅರಳುತಿಹನು.
ಐದರೊಳಗೆ ತಿಳಿಯೆ, ಅದುವೆ ಹೋಗು ಬ್ರಹ್ಮ.
ವಿಶ್ವದಾಭಿರಾಮ ಕೇಳು ವೇಮ.

ನಮಃ ಶಿವಾಯ ಎಂಬ ಪಂಚ ವರ್ಣಗಳ ಪಠಣದಿಂದ ಮಂತ್ರ ಚೈತನ್ಯವುಂಟಾಗಿ, ಮನಸ್ಸು ಏಕಾಗ್ರಗೊಂಡು ಭಾವಾತೀತವಾಗುತ್ತದೆ. ಅಲ್ಲಿ ಅನಂತ ಸುಖ, ಅಂದರೆ ಆನಂದವನ್ನು ಅರಿತು ತನ್ಮಯವಾಗುತ್ತದೆ. ಆಗ ಮನಸ್ಸು ಮುಕ್ತವಾಗಿ ಅರಳುತ್ತದೆ. ಹೀಗೆ, ಐದು ಅಕ್ಷರಗಳ ಮಂತ್ರದ ಅಂತರಾರ್ಥವನ್ನೂ, ಲಕ್ಷ್ಯ ವಸ್ತುವನ್ನೂ ತಿಳಿದರೆ, ಅದುವೇ ಬ್ರಹ್ಮವಿರುತ್ತದೆ.

ಆ. ಪಂಚ ಮುಖಿಗಳಲ್ಲಿ ಪಂಚಾಕ್ಷರಿ ಜನಿಸಿತು.
ಪಂಚ ವರ್ಣಗಳಲಿ ಪ್ರಬಲ ಜಗವು.
ಪಂಚ ಮುಖಿನ ಮೀರಿ ಪ್ರಸ್ತುತಿ ಗೆಯ್ಯಿರೋ.
ವಿಶ್ವದಾಭಿರಾಮ ಕೇಳು ವೇಮ.

ಶಿವ ಎಂದರೆ ಮಂಗಳಕರ. ಅವನಿಗೆ ಸದ್ಯೋಜಾತ, ವಾಮದೇವ, ಅಘೋರ, ತತ್ಪುರುಷ, ಈಶಾನ ಎಂಬ ಪಂಚಮುಖಿಗಳಿವೆ. ಈ ಮುಖಿಗಳಿಂದ ನ ಮಃ ಶಿ ವಾ ಯ ಎಂಬ ಪಂಚಾಕ್ಷರಿ ಜನಿಸಿತು. ಪಂಚ ವರ್ಣಗಳಲ್ಲಿ ಜಗತ್ತು ಪ್ರಬಲಿಸಿದೆ. ಪಂಚಮುಖಿನಾದ ಶಿವನನ್ನು ಹೆಚ್ಚಾಗಿ ಪ್ರಸ್ತುತಿ ಮಾಡಿರಯ್ಯ.

ಕಂ. ಪಂಚಾಕ್ಷರಿ ಬೀಜಂಗಳ,
ಅಂಚಿತವಾಗಿ ಅರಿಯುವನೆ ಅಖಿಲಜ್ಞನಿಹನ್ಯೆ.
ವಂಚನವರಿಯದ, ಕುವಲಯ
ಸಂಚಾರ ಮಾಳ್ಪ ಆತನು, ಶಂಭುವು, ವೇಮಾ.

(ಅಂಚಿತ = ಸ್ಪಷ್ಟವಾಗಿ. ಕುವಲಯ = ಭೂಮಿ)

ಪಂಚಾಕ್ಷರಿ ಮಂತ್ರವೆಂದರೆ ನಮಃ ಶಿವಾಯ. ಈ ಅಕ್ಷರಗಳು ಬೀಜಾಕ್ಷರಗಳು. ಕ್ರಮವಾಗಿ ಅಂಗ ನ್ಯಾಸ ಹಿಡಿದು ಪಠಣ ಮಾಡಿದರೆ ಮಂತ್ರ ಚೈತನ್ಯ ಉಂಟಾಗುತ್ತದೆ. ಆದ್ದರಿಂದ ಇವು ಬೀಜಾಕ್ಷರಗಳು. ಇವುಗಳನ್ನು ಸ್ಪಷ್ಟವಾಗಿ ಅರಿಯುವವನು ಸರ್ವಜ್ಞನಾಗುತ್ತಾನೆ. ಯಾವ ವಂಚನೆ ಇಲ್ಲದೆ ಈ ಭೂಮಿಯಲ್ಲಿ ಸಂಚಾರ ಮಾಡುವವನು ಶಂಭುವೇ ಸರಿ.

ಆ. ಐದು ಅಕ್ಷರಗಳ ಅಂಗವನು ತಿಳಿದೊಡೆ,
ಐದರಲ್ಲಿ ಮುಕ್ತಿ ಅಂದವುಂಟು.
ಐದರೊಳಗೆ ಇಪ್ಪ ಅವನೆ ಹೋಗು ಬ್ರಹ್ಮ.
ವಿಶ್ವದಾಭಿರಾಮ ಕೇಳು ವೇಮ.

ಐದು ಅಕ್ಷರಗಳ ಅಂದರೆ ನಮಃ ಶಿವಾಯಗಳ ಪಠಣೆಯನ್ನು ಅಂಗ ನ್ಯಾಸ ಮೂಲಕ ಮಾಡಬೇಕು. 'ನ' ಅನ್ನು ಮೂಲಾಧಾರ ಚಕ್ರದ ಮೇಲೆ ನ್ಯಾಸವಿರಿಸಿ, 'ಮಃ', 'ಶಿ' 'ವಾ' 'ಯ' ಗಳನ್ನು ಕ್ರಮವಾಗಿ, ಸ್ವಾಧಿಷ್ಠಾನ ಮಣಿಪೂರಕ, ಅನಾಹತ ಮತ್ತು ವಿಶುದ್ಧ ಚಕ್ರಗಳ ಮೇಲೆ ನ್ಯಾಸವಿರಿಸಿ ಪಠಿಸಬೇಕು. ಸರಿಯಾಗಿ ಪಠಣ ಮಾಡಿ ಮಂತ್ರ ಚೈತನ್ಯ ಪಡೆದರೆ ಮನಸ್ಸು ಏಕಾಗ್ರವಾಗಿ ಬಂಧಗಳಿಂದ ಮುಕ್ತವಾಗುವುದು. ಹೀಗೆ ಐದರಲ್ಲಿ ಮುಕ್ತಿಯು ಅಂದವಾಗಿ ಉಂಟು. ಐದರಲ್ಲಿ ಇರುವ ಪಂಚಮುಖಿನಾದ ಶಿವನೇ ಬ್ರಹ್ಮನಾಗಿದ್ದಾನೆ.

ಈ ಮೇಲಿನ ಪದ್ಯದ ಪಾಠಾಂತರವು ಇಂತಿದೆ :

ಆ. ಐದು ಅಕ್ಷರಗಳ ಅಂಗಗಳನು ತಿಳಿದು,
ಐದರಲ್ಲಿ ಮುಕ್ತಿ ಅಮರವುಂಟು.
ಐದರೊಳಗೆ ಇರುವ ಅವನನು ತಿಳಿದುಕೋ.
ವಿಶ್ವದಾಭಿರಾಮ ಕೇಳು ವೇಮ.

ನಮಃ ಶಿವಾಯ ಇವು ಐದು ಅಕ್ಷರಗಳು. ಇವುಗಳ ಅಂಗ ನ್ಯಾಸಗಳು ಹೀಗೆ :

ನ → ಮೂಲಾಧಾರ ಚಕ್ರ
ಮಃ → ಸ್ವಾಧಿಷ್ಠಾನ ಚಕ್ರ
ಶಿ → ಮಣಿಪೂರಕ ಚಕ್ರ
ವಾ → ಅನಾಹತ ಚಕ್ರ
ಯ → ವಿಶುದ್ಧಿ ಚಕ್ರ

ಹೀಗೆ ಅವುಗಳನ್ನು ತಿಳಿದರೆ, ಈ ಐದರಲ್ಲಿಯೇ ಮುಕ್ತಿಯು ಅಮರವಾಗಿದೆ. ಐದರೊಳಗೆ ಇರುವ ಅವನನ್ನು ತಿಳಿದುಕೋ.

-ಆರು-

ಆ. ಆರುಗಳನು ಕಡಿದು, ಹರಿಯ ಮೇಲೆ ಧ್ಯಾನ
ನಿಲಿಸಿ, ನಿಶ್ಚಯದಿಂದ ನೆಗೆದು, ಆತ್ಮ.
ಗತಿಯನರಿಯುತಿಹನು ಘನನೆ ಆದ ಯೋಗಿ.
ವಿಶ್ವದಾಭಿರಾಮ ಕೇಳು ವೇಮ.

ಕಾಮ, ಕ್ರೋಧ, ಲೋಭ, ಮೋಹ, ಮದ ಮತ್ತು ಮತ್ಸರ ಎಂಬ ಆರು ಮನಸ್ಸಿನ ವೈರಿಗಳನ್ನು ಕಡಿದು, ಹರಿಯ ಮೇಲೆ ಧ್ಯಾನ ನಿಲಿಸಬೇಕು. ಪೂರ್ವ ಸಂಸ್ಕಾರದಿಂದ ಅತ್ತಿತ್ತ ಹರಿಯುವ ಮನಸ್ಸನ್ನು ನಿಶ್ಚಯ ವೃತ್ತಿಯಿಂದ ಏಕಾಗ್ರಗೊಳಿಸಿ, ಊರ್ಧ್ವಕ್ಕೆ ನೆಗೆಯಬೇಕು.

ಹೀಗೆ, ಸಾಧಕನಾದ ಘಟ ಯೋಗಿಯು ಆತ್ಮಗತಿಯನ್ನು ಅರಿಯುತ್ತಾನೆ.

ಆ. ಆರುಗಳನು ಸೇರೆ, ಅತ್ಯಂತ ದುಃಖಿವು
ಏಳುಗಳನು ಕೂಡೆ, ಎಷ್ಟೊ ಅಳಲು.
ಬೇಗವಿದರ ಸಂಗ ಬಿಡುವುದೆ ಯೋಗವದು.
ವಿಶ್ವದಾಭಿರಾ ಕೇಳು ವೇಮ.

ಕಾಮ, ಕ್ರೋಧ, ಲೋಭ, ಮೋಹ, ಮದ ಮತ್ತು ಮತ್ಸರಗಳೆಂಬ ಆರನ್ನು ಸಾಧಕ ಜೀವಿಯ ಅರಿಷಡ್ವರ್ಗಗಳೆಂದೇ ಗುರುತಿಸಲಾಗಿದೆ. ಈ ಆರನ್ನು ಸೇರಿದರೆ, ಅತ್ಯಂತ ದುಃಖಿ ಉಂಟಾಗುವುದು. ಇನ್ನು, ಮನದ ಆವರಣೇ ದೋಷಗಳಾದ, ದುಃಖ, ಜನ್ಮ, ಕರ್ಮ, ಅಭಿಮಾನ, ಅವಿವೇಕ, ಅಜ್ಞಾನ ಮತ್ತು ಮಾಯೆಗಳೆಂಬ ಏಳು ದೋಷಗಳನ್ನು ಕೂಡಿಕೊಂಡರೆ, ಎಷ್ಟೋ ಅಳಲು ಉಂಟಾಗುವುದು. ಈ ಮೇಲಿನ ಆರರ ಮತ್ತು ಏಳರ ಸಂಗವನ್ನು ಆದಷ್ಟು ಬೇಗ ಬಿಡುವುದೇ ಯೋಗವಾಗಿದೆ. ಏಕೆಂದರೆ ಹಾಗೆ ಬಿಟ್ಟಿದ್ದೇ ಆದರೆ, ಮನಸ್ಸು ಊರ್ಧ್ವಕ್ಕೆ ನೆಗೆದು ಪರಮನಲ್ಲಿ ನೆಲೆಸಿ, ಜೀವ ಪರಮರ ಯೋಗವಾಗುತ್ತದೆ.

ಆ. ಆರು ಮೂರು ಕಟ್ಟಿ ಅಳಲು ಹೊಂದದಿರುತ,
ಹೋರಿ ಗುಣವ ಮೆಟ್ಟಿ ಹೆಚ್ಚು ದೃಢದಿ,
ತೇರು ಶಿಖಿರ ಹತ್ತಿ ತಿಳಿವು ತಲುಪಿ ಕಾಣು.
ವಿಶ್ವದಾಭಿರಾಮ ಕೇಳು ವೇಮ.

ಎರಡು ಕಣ್ಣುಗಳು, ಎರಡು ಕಿವಿಗಳು, ಎರಡು ಮೂಗಿನ ಹೊರಳೆಗಳು ಎಂಬ ಆರು ಮತ್ತು ಒಂದು ಬಾಯಿ, ಒಂದು ಗುದ, ಒಂದು ಗುಹ್ಯ ಎಂಬ ಮೂರು, ಹೀಗೆ ಒಂಭತ್ತು ದೇಹದ ರಂಧ್ರಗಳನ್ನು ಕಟ್ಟಿ, ಅಂದರೆ ಷಣ್ಮುಖೀ ಮುದ್ರೆಯಲ್ಲಿ ಆಸೀನನಾಗಿ, ಯಾವ ಅಳಲನ್ನೂ ಹೊಂದದೆ ಇದ್ದು, ಸಾಧನದಲ್ಲಿ ಎದುರಾಗುವ ತಮಸ್ಸು, ರಜಸ್ಸು ಮತ್ತು ಸತ್ತ್ವ ಗುಣಗಳನ್ನು ಹೋರಾಡಿ ಮೆಟ್ಟಿ, ಹೆಚ್ಚು ದೃಢತೆಯಿಂದ, ಷಟ್ಚಕ್ರಗಳ ಮೂಲಕ ಸಾಗುವ ಸುಷುಮ್ನಾ ನಾಳವೆಂಬ ತೇರಿನ ಶಿಖರವಾದ ಸಹಸ್ರಾರವನ್ನು ಹತ್ತಿ, ಸರ್ವಜ್ಞತ್ವದ ತಿಳಿವನ್ನು ತಲುಪಬೇಕು ಮತ್ತು ತಿಳಿವಿನಿಂದ ಪರಬ್ರಹ್ಮವನ್ನು ಕಾಣಬೇಕು.

ಆ. ಆರು ಆರುಗಳಿಗೆ ಆಧಾರವನು ಗೆಯ್ದು,
ಒಂಟಿ ಕಂಬ ಸಿಡಿಯ ಒಲಿದು ನಿಲಿಸಿ,
ಮನೆಗೆ ಒಬ್ಬ ಗಂಡ ಮತ್ತೆ ಆಯ್ದುಕೊಳ್ಳು.
ವಿಶ್ವದಾಭಿರಾಮ ಕೇಳು ವೇಮ.

ಮೂಲಾಧಾರ ಚಕ್ರದಲ್ಲಿ ವಿಘ್ನೇಶ್ವರ, ಸ್ವಾದಿಷ್ಟ ಚಕ್ರದಲ್ಲಿ ಬ್ರಹ್ಮ, ಮಣಿಪುರ ಚಕ್ರದಲ್ಲಿ ಹರಿ, ಅನಾಹತ ಚಕ್ರದಲ್ಲಿ ರುದ್ರ, ವಿಶುದ್ಧ ಚಕ್ರದಲ್ಲಿ ಅಗ್ನಿ ಹೀಗೆ ಆರು ಆರುಗಳಿಗೆ ಆಧಾರವನ್ನು ಮೂಲದಲ್ಲಿಯೇ ಗೆಯ್ದು, ಅಲ್ಲಿಂದ ಸುಷುಮ್ನಾ ನಾಳವನ್ನು ಕಂಬವನ್ನಾಗಿ ನಿಲ್ಲಿಸಿಕೊಂಡು, ಸುಪ್ತ ಅರಿವು ಊರ್ಧ್ವಕ್ಕೆ ಏರಬೇಕು. ಇದು ಸಿಡಿಯ ಕಂಬ. ಏಕೆಂದರೆ ಸುಪ್ತ ಶಕ್ತಿಯು, ಏರಿದಂತೆ ಇದರ ಮೂಲಕ ಸಿಡಿದು ಪ್ರಕಟವಾಗುತ್ತದೆ. ಈ ಕುಂಡಲಿನೀ ಯೋಗ

ಶಕ್ತಿಯನ್ನು ನಿಯಂತ್ರಿಸುವ, ಕಂಬವನ್ನು, ಆಧಾರಮಾಡಿಕೊಂಡ, ಮನೆಯ ಗಂಡನು, ಅಂದರೆ ನಿಯಂತ್ರಕನು, ಮೇಲೆ ಸಹಸ್ರಾರದಲ್ಲಿ ನೆಲೆಸಿದ್ದಾನೆ. ಶರಣು ಹೊಂದಲು ಅವನನ್ನು ಆಯ್ದುಕೋ.

ಆ. ಷಡರವಿಂದಗಳನು ಸಾಧ್ಯವಾಗಿ ಮಾಡಿ,
ಕುಂಡಲಿನಿಯ ಶಕ್ತಿ ಸಲೆ ಕುದುರಿಸಿ,
ಮನಸು ನಿಲಿಸುವವನು ಮತ್ತೆ ದ್ವಿಜನಹನು.
ವಿಶ್ವದಾಭಿರಾಮ ಕೇಳು ವೇಮ.

ಯೋಗ ಚಕ್ರಗಳಿಗೆ ಅರವಿಂದ ಅರ್ಥಾತ್ ಕಮಲ ಎಂದೂ ಕರೆಯುತ್ತಾರೆ. ಮೂಲಾಧಾರ, ಸ್ವಾಧಿಷ್ಠಾನ, ಮಣಿಪೂರಕ, ಅನಾಹತ, ವಿಶುದ್ಧಿ ಮತ್ತು ಆಜ್ಞಾ ಎಂಬ ಷಟ್ (ಆರು) ಅರವಿಂದಗಳಿವೆ. ಅವುಗಳ ಮೇಲೆ ಸಾಧಕನು ನ್ಯಾಸವಿರಿಸಿ ಮಂತ್ರಧ್ಯಾನ ಮಾಡುವುದರಿಂದ ಬೇರೆ ಬೇರೆ ವೃತ್ತಿಗಳು ಪ್ರಭಾವಿತವಾಗುತ್ತವೆ. ಈ ವೃತ್ತಿಗಳಿಗೆ ದಳಗಳೆನ್ನುತ್ತಾರೆ. ಸಾಧನೆಯಿಂದ ಈ ವೃತ್ತಿಗಳ ನಿಯಂತ್ರಣವನ್ನು ಸಾಧ್ಯ ಮಾಡಿಕೊಂಡು ಕುಂಡಲಿನೀ ಶಕ್ತಿಯನ್ನು ಜಾಗ್ರತಗೊಳಿಸಿ ಅರ್ಥಾತ್ ಕುದುರಿಸಿ, ಮನಸ್ಸನ್ನು ನಿಲ್ಲಿಸುವವನು ದ್ವಿಜನಹುದು. ಅಧ್ಯಾತ್ಮದಲ್ಲಿ ಅವನು ಮರು ಹುಟ್ಟು ಪಡೆಯುತ್ತಾನೆ.

-ಏಳು-

ಆ. ಏಳು ಅಕ್ಷರಗಳಲಿ ಆನಂದ ಹೊಂದುತ,
ಅಲ್ಲಿ ಇಲ್ಲಿ ಮುಕ್ತಿ ಅರಳಿ ಉಂಟು.
ಅಲ್ಲಿ ಇಲ್ಲಿ ತಿಳಿಯೆ ಅವನೆ ಹೋಗು ಬ್ರಹ್ಮ.
ವಿಶ್ವದಾಭಿರಾಮ ಕೇಳು ವೇಮ.

ನಮೋ ನಾರಾಯಣಾಯ ಎಂಬ ಏಳು ಅಕ್ಷರಗಳ ಸಿದ್ಧಮಂತ್ರವನ್ನು ವಿಧಿ ಬದ್ಧವಾಗಿ, ದೇಶ ಬಂಧ, ನ್ಯಾಸಗಳಿಗಳಿಗನುಸಾರ ಜಪಧ್ಯಾನ ಮಾಡಿ, ಮನಸ್ಸನ್ನು ಏಕಾಗ್ರಗೊಳಿಸಿ, ಉದ್ದೀಪಿಸಿ, ಆನಂದ ಹೊಂದುತ್ತ, ಪರದಲ್ಲಿಯೂ, ಇಹದಲ್ಲಿಯೂ ಮನಸ್ಸಿನ ಮುಕ್ತಿಯು ಅರಳುವುದು. ಅಂದರೆ ಮನಸ್ಸು ಬಂಧಗಳಿಂದ ಬಿಡುಗಡೆ ಹೊಂದುವುದು. ಹೀಗೆ ಪರದಲ್ಲಿಯೂ ಮತ್ತು ಇಹದಲ್ಲಿಯೂ ಸರ್ವವನ್ನೂ ತಿಳಿದರೆ, ಅವನೇ ಹೋಗು ಬ್ರಹ್ಮ.

ಆ. ಏಳು ಮಾರ್ಗಗಳನು ಏಕಾಂತದಲಿ ಸೇರಿ,
ಆಡಿ, ಪಾಡಿ, ಮುಕ್ತಿ ಕೂಡಿ ಬೇಡಿ,
ಜಾಡಿನೊಳಗೆ ಬಯಲು ಸಾಧಿಸಿ ಕಾಣಿರೋ.
ವಿಶ್ವದಾಭಿರಾಮ ಕೇಳು ವೇಮ.

ಲೋಕವೆಂದರೆ ಅನುಭವ ಕ್ಷೇತ್ರಗಳು. ಮನಸಿನ ಲೋಕಗಳು ಏಳು: ಭೂಲೋಕ, ಭುವರ್ಲೋಕ, ಸ್ವರ್ಲೋಕ, ಜನರ್ಲೋಕ, ಮಹರ್ಲೋಕ, ಸತ್ಯಲೋಕ ಮತ್ತು ಬ್ರಹ್ಮಲೋಕ. ಈ ಏಳು ಲೋಕಗಳಲ್ಲಿ ಅನುಭವಿಸುವ ಮಾರ್ಗಗಳನ್ನು ಏಕಾಂತದಲ್ಲಿ ಸೇರಿ, ಆನಂದ ಹೊಂದಿ

ಆಡಿ, ಮಹಿಮೆ ಕಂಡು ಹಾಡಿ, ಬಂಧ ಹರಿದು ಮುಕ್ತಿಕೂಡಿ, ಈ ಪರಮ ಪದದಲ್ಲಿ ನಿತ್ಯ ಉಳಿಸು ಎಂದು ಬೇಡಿ, ಈ ಜಾಡಿನೊಳಗೇ ಗುಣಾತೀತ, ಭಾವಾತೀತ ಬಯಲನ್ನು ಸಾಧಿಸಿ ಕಾಣಬೇಕು.

ಆ. ಈಶ್ವರನ ತಿಳಿಯಲು ಏಳು ಪಾಲು ಗೆಯ್ದು,
ತನ್ನ ಮೂರ್ತಿಯಲ್ಲಿ ಧಾರೆಯೆರೆದು,
ನಿತ್ಯ ಕರ್ಮಗಳನು ನಿಲಿಸುವ ನೆರೆ ಯೋಗಿ.
ವಿಶ್ವದಾಭಿರಾಮ ಕೇಳು ವೇಮ.

ಈಶ್ವರನನ್ನು ತಿಳಿಯುವುದು ಹೇಗೆ ? ವಿಶ್ವ ರೂಪ ತಳೆದು ಅದನ್ನು ನಿಯಂತ್ರಿಸುವ ಸತ್ತೆಯೇ ಈಶ್ವರ. ಆಕಾಶ, ವಾಯು, ಅಗ್ನಿ, ಅಪ್ ಮತ್ತು ಪೃಥಿವಿ, ಸೂರ್ಯ ಮತ್ತು ಚಂದ್ರ ಹೀಗೆ ಈಶ್ವರನ ಮೂರ್ತ ರೂಪವನ್ನು ತಿಳಿಯಲು ಏಳು ಪಾಲು ಮಾಡಬೇಕು. ತನ್ನ ಮೂರ್ತ ರೂಪವಾದ ದೇಹದಲ್ಲಿ ಧಾರೆಯೆರೆಯಬೇಕು. ಹೀಗೆ ತಾನು ಈಶ್ವರನಲ್ಲಿ ಒಂದಾಗಿ ನಿತ್ಯ ಕರ್ಮಗಳನ್ನು ಯೋಗಿಯು ನಿಲ್ಲಿಸುತ್ತಾನೆ. ಏಕೆಂದರೆ ತಾನು ಈಶ್ವರನೊಂದಿಗೆ ಐಕ್ಯವಾದಾಗ ಪೂಜ್ಯ-ಪೂಜಕ, ಸೇವ್ಯ-ಸೇವಕ ಭಾವವು ಉಡುಗುತ್ತದೆ.

ಆ. ಎಂಟು ಅಕ್ಷರಗಳಲಿ ಏರ್ಪಡುವುದನರಿತು,
ಕೇಳಿ ಕಂಡು ಬರದೆ, ಕುಳಿತಿರುವನು.
ತನುವ ಮರೆತು ತಿಳಿಯೆ, ತತ್ತ್ವಜ್ಞನಾಗುವ.
ವಿಶ್ವದಾಭಿರಾಮ ಕೇಳು ವೇಮ.

ಓಂ ನಮೋ ನಾರಾಯಣಾಯ ಎಂಬ ಅಕ್ಷರಗಳ ಸಿದ್ಧ ಮಂತ್ರವನ್ನು ಅಂಗನ್ಯಾಸ ಮೂಲಕ ಜಪಿಸಿ, ಮನದ ಏಕಾಗ್ರತೆ ಹಾಗೂ ಉದ್ದೀಪನವು ಏರ್ಪಡುವುದನ್ನು ಅರಿತು, ಯಾವ ಶಬ್ದವನ್ನೂ ಕೇಳದೆ, ಯಾವ ದೃಶ್ಯವೂ ಕಂಡು ಬರದೆ ಇಂದ್ರಿಯಾತೀತನಾಗಿ ಕುಳಿತಿರುವ ಸಾಧಕನು, ತನುವನ್ನೇ ಮರೆತು, ಆತ್ಮ ತತ್ತ್ವವನ್ನು ತಿಳಿಯಲು ತತ್ತ್ವಜ್ಞನಾಗುತ್ತಾನೆ.

ಈ ಮೇಲಿನ ಪದ್ಯದ ಪಾಠಾಂತರವು ಹೀಗಿದೆ.

ಆ. ಎಂಟು ಅಕ್ಷರಗಳ ಏರ್ಪಡಿಸಿ ಅರಿಯುತ,
ಕೇಳಿ ಕಾಣದಿದ್ದು ಬೆಳಗುವವನು.
ತನುವ ಮರೆತು ತಿಳಿಯೆ ತತ್ತ್ವಾತ್ಮನಹನಲ !
ವಿಶ್ವದಾಭಿರಾಮ ಕೇಳು ವೇಮ.

ಇದಕ್ಕೆ ಪ್ರತ್ಯೇಕ ವಿವರಣೆ ಬೇಡ ತಾನೇ ?

ಆ. ಅಚರ ಚರ ಸಮೂಹ ಅಂಗ ಲಿಂಗಗಳಾ
ಸರಣಿ ತಿಳಿಯದಂಥ ಶೈವವೇಕೆ ?
ಅಷ್ಟ ತನುವೊಳಿಪ್ಪ ಹರನನರಿಯರಲ್ಲ !
ವಿಶ್ವದಾಭಿರಾಮ ಕೇಳು ವೇಮ.

ಅಚರವು ಅಂಗ ; ಚರವು ಲಿಂಗ. ಶೈವ ಮಾರ್ಗವೆಂದರೆ ಜ್ಞಾನಮಾರ್ಗ. ಅಂದ ಮೇಲೆ ಅಚರ ಮತ್ತೆ ಚರ ಸಮೂಹದಲ್ಲಿ ಯಾವುದು ಅಂಗ ? ಮತ್ತು ಯಾವುದು ಲಿಂಗ ? ಎಂಬ ಸರಣಿಯನ್ನು ತಿಳಿಯದಂಥ ಶೈವ ಮತವೇಕೆ ? ಸಚರಾಚರದಲ್ಲಿ ಹರನು ವ್ಯಾಪಿಸಿ ಇದ್ದಾನೆ. ಭೂ, ಜಲ, ಅಗ್ನಿ, ವಾಯು ಮತ್ತು ಆಕಾಶ ಹಾಗೂ ಮನಸ್ಸು, ಸೂರ್ಯ ಮತ್ತು ಚಂದ್ರ ತತ್ತ್ವ ಎಂಬ ಅಷ್ಟ ತನುಗಳಲ್ಲಿ ಇರುವ ಹರನನ್ನು ಅರಿಯರಲ್ಲ ? ಸರ್ವಂ ಶಿವ ಮಯಂ ಜಗತ್'. ಜಗತ್ತಿನ ಸರ್ವವೂ ಶಿವಮಯವಾಗಿದೆಯಲ್ಲವೆ ?

-ಬಹು ತತ್ತ್ವ-

ಕಂ. ಎರಡು ದಶವಾರನೆ ತತ್ತ್ವವ
ಅರಿಯುತ ಜೀವಾತ್ಮ ನೆಲೆಯೊಳಾ ಪರಮಾತ್ಮನ್
ಇರವನು ಹೊಂದುತ ಗುರುಪದ-
ವರಿಯುತ, ಗುರುವೆಂದೆಣಿಸುತ, ಇಪ್ಪುದು ವೇಮಾ.

ಜೀವ ಆತ್ಮರಲ್ಲಿ ಪಂಚವಿಂಶತಿ ಅಂದರೆ ಇಪ್ಪತ್ತೈದು ತತ್ತ್ವಗಳನ್ನು ಗುರುತಿಸುತ್ತಾರೆ. ಆತ್ಮವನ್ನು ಜೀವಕ್ಕೆ ಅನ್ವಯಿಸಿ ವಾಚಿಸಿದಾಗ ಜೀವಾತ್ಮನೆನ್ನುತ್ತಾರೆ. ಸಮಷ್ಟಿಗೆ ಅನ್ವಯಿಸಿ ವಾಚಿಸುವಾಗ ಸರ್ವಾತ್ಮ ಇಲ್ಲವೆ ಪರಮಾತ್ಮನೆನ್ನುತ್ತಾರೆ. ಹೀಗೆ ಪರಮಾತ್ಮನು ಇಪ್ಪತ್ತಾರನೇ (ಎರಡು ದಶವು + ಆರನೇ) ತತ್ತ್ವವೆಂದು ಎಣಿಸುತ್ತಾರೆ. ಹೀಗೆ ಜೀವಾತ್ಮನ ನೆಲೆಯೊಳು ಪರಮಾತ್ಮನು ಇರುತ್ತಾನೆ. ಅವನನ್ನು ಹೊಂದುತ್ತ, ಗುರುಪದವನ್ನು ಅರಿಯುತ್ತ, ಆ ಪರಮಾತ್ಮನೇ ಗುರುವು ಎಂದು ಎಣಿಸುತ್ತ ಇರಬೇಕು.

ಆ. ಐದು ಐದು ಎಂಟು ಆರು ಎಲ್ಲ ಒಂದೆ.
ಹಡಗದಲ್ಲಿ ಉಂಟು ಅಡಗಿ, ಆಚೆ.
ಹಡಗದಲ್ಲಿ ನಡೆವ ಒಡೆಯನಯ್ಯ ತತ್ತ್ವ.
ವಿಶ್ವದಾಭಿರಾಮ ಕೇಳು ವೇಮ.

ಐದು - ಶಬ್ದ, ಸ್ಪರ್ಶ, ರೂಪ, ರಸ ಮತ್ತು ಗಂಧಗಳೆಂಬ ಪಂಚ ತನ್ಮಾತ್ರೆಗಳು.
ಐದು - ವಾಕ್, ಪಾಣಿ, ಪಾದ, ಗುದ ಮತ್ತು ಗುಹ್ಯಗಳೆಂಬ ಪಂಚ ಕರ್ಮೇಂದ್ರಿಯಗಳು.
ಎಂಟು - ಭೂ, ಜಲ, ಅಗ್ನಿ, ವಾಯು ಮತ್ತು ಆಕಾಶ ಹಾಗೂ ಚಿತ್ತ, ಅಹಂ ಮತ್ತು ಬುದ್ಧಿ ಎಂಬ ಅಷ್ಟ ತನುಗಳು.
ಆರು - ಕರ್ಣ, ತ್ವಕ್, ನಯನ, ನಾಸಿಕ, ರಸನ ಎಂಬ ಪಂಚ ಜ್ಞಾನೇಂದ್ರಿಯಗಳು ಮತ್ತು ಮನಸ್ಸು.

ಹೀಗೆ ಈ ಐದು, ಐದು, ಎಂಟು ಮತ್ತು ಆರು ಇವೆಲ್ಲವೂ ಒಂದೇ ಜೀವನ ನೌಕೆಯಲ್ಲಿ ಅಡಗಿ ಇವೆ. ಇವುಗಳಾಚೆಗೆ ಇರುವ, ಹಡಗದಲ್ಲಿ ನಡೆಯುವ ಒಡೆಯನೇ ತತ್ತ್ವವಾಗಿದೆ.

ಆ. ಐದು, ಐದು, ಆರು, ಎಂಟು ಮತ್ತೆ ಒಂದು,
ನಾವಿನೊಳಗೆ ಉಂಟು ನಡುವೆ ಕಂಭ.

ತಿರುಗೆ, ನಾವನೇರೆ, ತಾನೆ ತತ್ತ್ವಕೊಡೆಯ.
ವಿಶ್ವದಾಭಿರಾಮ ಕೇಳು ವೇಮ.

ಐದು ಕರ್ಮೇಂದ್ರಿಯಗಳು – ವಾಕ್, ಪಾಣಿ, ಪಾದ, ಗುದ ಮತ್ತು ಗುಹ್ಯ.

ಐದು ತನ್ಮಾತ್ರಯಗಳು – ಶಬ್ದ, ಸ್ಪರ್ಶ, ರೂಪ, ರಸ ಮತ್ತು ಗಂಧ.

ಆರು ಐದು ಜ್ಞಾನೇಂದ್ರಿಯಗಳು ಮತ್ತು ಮನಸ್ಸು. ಶ್ರವಣೇಂದ್ರಿಯ, ತ್ವಗಿಂದ್ರಿಯ, ಚಕ್ಷುರಿಂದ್ರಿಯ ರಸನೇಂದ್ರಿಯ, ಘ್ರಾಣೇಂದ್ರಿಯ ಮತ್ತು ಮನಸ್ಸು

ಎಂಟು (ಭೂತ ಪಂಚಕ + ಅಂತಃಕರಣಗಳು) ಆಕಾಶ, ವಾಯು, ಅಗ್ನಿ, ಅಪ್, ಪೃಥಿವಿ ಮತ್ತು ಚಿತ್ತತತ್ತ್ವ, ಅಹಂ ತತ್ತ್ವ ಮತ್ತು ಬುದ್ಧಿ ತತ್ತ್ವ.

ಒಂದು – ಆತ್ಮ.

ದೇಹವೆಂಬ ನಾವಿನೊಳಗೆ ಈ ಇಪ್ಪತ್ತೈದು ತತ್ತ್ವಗಳು ಉಂಟು. ಇಲ್ಲಿ ಸುಷುಮ್ನಾ ನಾಳವೆಂಬ ನಡುಗಂಬವೂ ಇದೆ. ಈ ನಾವನ್ನು ಏರುವುದೆಂದರೆ, ನಿಮ್ನತಮ ತತ್ತ್ವಗಳಿಂದ ಉರ್ಧ್ವತಮ ತತ್ತ್ವದ ವರೆಗೆ ಸಾಧನದಿಂದ ಮನಸ್ಸು ಏರುವುದಾಗಿದೆ. ಆಗ ಸಾಧಕನು ತತ್ತ್ವಗಳಿಗೆ ಒಡೆಯನಾಗುತ್ತಾನೆ.

ಆ. ಐದು, ಐದು, ಆರು, ಎಂಟು ಮತ್ತೆ ಒಂದು
ನಾವೆಯೊಳಗೆ ಇದ್ದು, ನೀಗಿ ಮರೆಯೆ,
ನಾವೆ ಹತ್ತಿ ತಿರುಗಿ, ನೋಡಲದುವೆ ತತ್ತ್ವ.
ವಿಶ್ವದಾಭಿರಾಮ ಕೇಳು ವೇಮ.

ಐದು + ಐದು + ಆರು + ಎಂಟು = ಇಪ್ಪತ್ತುನಾಲ್ಕು + ಒಂದು. ಹೀಗೆ ಇವು ಪಂಚವಿಂಶತಿ ತತ್ತ್ವಗಳು. (ಇವುಗಳ ಹೆಸರುಗಳನ್ನು ಮೇಲಿನ ಪದ್ಯದ ಟೀಕಾರ್ಥದಲ್ಲಿ ನೀಡಿದ್ದೇವೆ). ಇವು ಭವಸಾಗರದಲ್ಲಿ ತೇಲುವ ಜೀವನ ನೌಕೆಯಲ್ಲಿರುವ ಜೀವನಲ್ಲಿ ಅಡಗಿ ಇವೆ. ಸಾಧನದಿಂದ ಇವುಗಳ ಮರೆಯನ್ನು ನೀಗಿ, ನಾವೆಯನ್ನು ಹತ್ತಿ ತಿರುಗಿದರೆ, ದಡ ಸೇರಬಹುದು. ಅಲ್ಲಿ ಕಾಣುವುದೇ ತತ್ತ್ವ. ಈ ಪಯಣವು ನಿಮ್ನ ಮಟ್ಟದಿಂದ ಊರ್ಧ್ವ ಮಟ್ಟದತ್ತ ಇದೆ.

ಆ. ಏಳು ಎರಡು ತಿನಲು ಇಳೆಯಲಿ ನಿಲ್ಲುವನು.
ಏಳು ಮೂರು ತಿನಲು, ಇಳೆ ಬೆಳಗಿತು.
ಏಳು ನರನು ತಿಳಿದು, ಯೋಗಿಯಾಗಬೇಕು.
ವಿಶ್ವದಾಭಿರಾಮ ಕೇಳು ವೇಮ.

ತನು ವ್ಯಸನ, ಮನೋ ವ್ಯಸನ, ಧನ ವ್ಯಸನ, ರಾಜ್ಯ ವ್ಯಸನ, ವಿಶ್ವ ವ್ಯಸನ, ಉತ್ಸಾಹ ವ್ಯಸನ ಮತ್ತು ಸೇವಕ ವ್ಯಸನಗಳಿಂಬ ಏಳು ವ್ಯಸನಗಳನ್ನೂ, ಜೀವ, ಈಶ್ವರ ಎಂಬೆರಡನ್ನೂ ತಿಂದರೆ ಅಂದರೆ ಅರಗಿಸಿಕೊಂಡರೆ ಇಳೆಯಲ್ಲಿ ನಿಲ್ಲುವನು. ಅಜ್ಞಾನ, ಆವರಣ, ವಿಕ್ಷೇಪ, ಪರೋಕ್ಷ ಜ್ಞಾನ, ಅಪರೋಕ್ಷ ಜ್ಞಾನ, ಶೋಕ ನಿವೃತ್ತಿ, ನಿರಂಕುಶ ತೃಪ್ತಿ ಎಂಬ ಏಳು ಅವಸ್ಥೆಗಳನ್ನೂ, ಜಾಗ್ರತ ಸ್ವಪ್ನ ಮತ್ತು ಸುಷುಪ್ತಿ ಎಂಬ ಮೂರನ್ನೂ ತಿಂದರೆ ಅಂದರೆ

ಅನುಭವಿಸಿದರೆ, ಇಳೆಯು ಬೆಳಗುತ್ತದೆ. ಸುಖೇಚ್ಛೆ, ಆತ್ಮವಿಚಾರ, ನಿಸ್ಸಂಗ, ವಾಸನಾಕ್ಷಯ, ಆನಂದ, ತುರ್ಯ ಮತ್ತು ತುರ್ಯಾತೀತ ಎಂಬ ಏಳು ಜ್ಞಾನ ಭೂಮಿಕೆಗಳನ್ನು ತಿಳಿದು ನರನು ಯೋಗಿಯಾಗಬೇಕು.

ಆ. ಏಳು, ಐದು, ಆರು, ಎಂಟು, ಒಂಭತ್ತು
ಯಾವ ಕಟ್ಟು ಉಂಟೊ ? ಎಂತೊ ತಿರುಗಿ ?
ಬಾಡಿ ಬಾಡಿದಂತೆ ಬಾಡದಿಹುದಾವುದೊ ?
ವಿಶ್ವದಾಭಿರಾಮ ಕೇಳು ವೇಮ.

ಏಳು – ದುಃಖ, ಜನ್ಮಕರ್ಮ, ಅಭಿಮಾನ, ಅವಿವೇಕ, ಅಜ್ಞಾನ ಮತ್ತು ಮಾಯೆಯೆಂಬ ಸಪ್ತ ಆವರಣೇ ಮಲಗಳು ಮನಸ್ಸಿಗೆ ಇವೆ.

ಐದು – ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನಮಯ, ಆನಂದಮಯ ಎಂಬ ಪಂಚಕೋಶಗಳು.

ಆರು – ಕಾಮ, ಕ್ರೋಧ, ಲೋಭ, ಮೋಹ, ಮದ ಮತ್ತು ಮತ್ಸರಗಳೆಂಬ ಅರಿಷಡ್ವರ್ಗಗಳು.

ಎಂಟು – ಭೂಮಿ, ಜಲ, ಅಗ್ನಿ, ವಾಯು, ಆಕಾಶ, ಚಿತ್ತ, ಅಹಂ, ಬುದ್ಧಿ

ಹೀಗೆ ಯಾವ ಕಟ್ಟುಗಳು ಉಂಟೋ ? ಎಂತೋ ? ಅವುಗಳನ್ನು ಅರಿಯುತ್ತ ತಿರುಗಿ, ದೇಹದ ಕಾಂತಿಯು ಬಾಡುತ್ತಲಿದೆ. ಮನದ ಕಾಂತಿಯು ಬಾಡದಂತೆಯೂ ಇದೆ. ಬಾಡದಿಹುದು ಯಾವುದೋ, ಅದುವೇ ಆತ್ಮ ತತ್ತ್ವವಾಗಿದೆ.

ಆ. ಷೋಡಶಾಕ್ಷರಗಳ ಶೋಧಿಸಿ ಮನದೆಣಿಸಿ,
ಗೂಢ ಭಾವ ಹೊಂದಿ, ಗಟ್ಟಿ ಹಿಡಿದು,
ಹೊಳೆವಚ್ಚರಿ ಮುಕ್ತಿ ಹೊಂದಿ, ಗಗನ ನೋಡು.
ವಿಶ್ವದಾಭಿರಾಮ ಕೇಳು ವೇಮ.

ಹರೇ ರಾಮ ಹರೇ ರಾಮ ರಾಮ ರಾಮ ಹರೇ ಹರೇ ಎಂಬ ಷೋಡಶ ಅಕ್ಷರಗಳ ಸಿದ್ಧ ಮಂತ್ರವನ್ನು ಪರಿಶುದ್ಧ ಮನದಿಂದ ಜಪಿಸಿದರೆ, ಮನದಾಳದಲ್ಲಿ ಗೂಢ ಭಾವ ಹೊಂದಬಹುದು. ಹೀಗೆ ಉನ್ನತ ಭಾವಗಮ್ಯ ಪರಮ ಪದವನ್ನು ಗಟ್ಟಿಯಾಗಿ ಹಿಡಿದುಕೊಂಡು, ಇರಬೇಕು. ಆಗ ಹೊಳೆಯುವ ಆಶ್ಚರ್ಯಕರವಾದ ಮುಕ್ತಿಯನ್ನು ಹೊಂದಬೇಕು. ಅಲ್ಲಿ ಚಿದಾಕಾಶವನ್ನು ಅರ್ಥಾತ್ ಗಗನವನ್ನು ನೋಡಬಹುದು.

ಕಂ. ಮೂವತ್ತೆರಡಕ್ಷರಗಳು
ಓವಿ ತಿಳಿಯುತಿರೆ, ಮುಪ್ಪುರಿಗೊಂಡಿಹ ಮೂಲಂ.
ತೀವ್ರವೆ ಕಡೆಗಾಗುವನವ
ಒಪ್ಪ ನುಡಿವೆ ಮಹಿಮೆ ನಿನಗೆ ತಪ್ಪದು ವೇಮಾ.

ಹರೇ ರಾಮ ಹರೇ ರಾಮ ರಾಮ ಹರೇ ಹರೇ, ಕೃಷ್ಣ ಹರೇ ಕೃಷ್ಣ ಕೃಷ್ಣ ಕೃಷ್ಣ

ಹರೇ ಹರೇ. ಎಂಬ ಮೂವತ್ತೆರಡು ಅಕ್ಷರಗಳ ಸಿದ್ಧಮಂತ್ರವನ್ನು ಚೆನ್ನಾಗಿ ತಿಳಿಯುತ್ತಿದ್ದರೆ, ಮೂಲಮಂತ್ರವು ಹರಿ, ರಾಮ ಮತ್ತು ಕೃಷ್ಣ ಮೂರು ಧ್ಯಾನ ಮೂರ್ತಿಗಳ ಸ್ಮೃತಿಯಲ್ಲಿ ಮುಳುಗಿಹೋಳ್ಳುತ್ತದೆ. ಅಂಥ ಸಾಧಕನು ಶೀಘ್ರವೇ ಸಾಧನೆಯ ಕಡೆಯ ಹಂತದ ಸಾಧ್ಯವನ್ನು ಪಡೆದು ಮುಕ್ತನಾಗುವನು. ಇದನ್ನು ಸಾಧಿಸಿದ ನಿನಗೆ ಮಹಿಮೆ ತಪ್ಪದು, ಎಂದು ಒಪ್ಪವಾಗಿ ನುಡಿವೆನು.

ಕಂ. ಮನದಲಿ ಬುದ್ಧಿಯು ತೋಚಿತು ;
ಮನದಲಹಂಕಾರವಿರುವುದು ; ಮನದಲಿ ಚಿತ್ತಂ.
ಹೆಣೆಯುತ ನಾಲ್ಕೂ ವಿಧಗಳ,
ಎಣಿಸುತ ತನ್ನ ತನುವ ತಿಳಿಯಲಾರ ವೇಮಾ.

ಅಣು ಚೈತನ್ಯದ ಮೇಲೆ ಪ್ರಕೃತಿಯ ಸತ್ತ್ವ ಗುಣದ ಪ್ರಭಾವದಿಂದ ಬುದ್ಧಿ ತತ್ತ್ವವು ಉಂಟಾಗುತ್ತದೆ. ಬುದ್ಧಿ ತತ್ತ್ವದ ಮೇಲೆ ರಜೋಗಣದ ಪ್ರಭಾವದಿಂದ ಅಹಂ ತತ್ತ್ವ ಉಂಟಾಗುತ್ತದೆ. ಅಹಂ ತತ್ತ್ವದ ಮೇಲೆ ತಮೋಗುಣದ ಪ್ರಭಾವದಿಂದ ಚಿತ್ತ ತತ್ತ್ವವುಂಟಾಗತ್ತದೆ. ಬುದ್ಧಿ, ಅಹಂ ಮತ್ತು ಚಿತ್ತಗಳ ಸಾಮೂಹಿಕ ಹೆಸರೇ ಮನ ಎಂದಿದೆ. ಇವುಗಳಿಗೆ ಅಂತಃಕರಣವೆನ್ನುತ್ತಾರೆ. ಈ ನಾಲ್ಕು ವಿಧದ ಅಂಶಗಳನ್ನು ಹೆಣೆಯುತ್ತಿದ್ದರೂ ತನ್ನ ತನುವು ಪಂಚವಿಂಶತಿ ಅಂದರೆ ಇಪ್ಪತ್ತೈದು ತತ್ತ್ವಗಳಿಂದ ಆಗಿದೆಯೆಂಬುದನ್ನು ಮತ್ತು ಇವುಗಳಲ್ಲಿ ಒಂದು ಆತ್ಮ ತತ್ತ್ವ; ಉಳಿದವು ಅನಾತ್ಮ ತತ್ತ್ವಗಳೆಂದೂ ತಿಳಿಯಲಾರದವನಾಗಿದ್ದಾನೆ.

ಕಂ. ಚಿತ್ತವ, ಬುದ್ಧಿಯ ಮೆರೆಯುತ,
ಹತ್ತಿದಹಂಕಾರಗಳನು, ಆತ್ಮದ ಒಳಗೇ
ಮೊತ್ತವ ಗೆಯ್ಯಲು ಅರಿಯದ,
ಮತ್ತರಿಗೆ ಮುಕ್ತಿಯಿಲ್ಲವು, ಮಹಿಯಲಿ, ವೇಮಾ.

ಪ್ರಾಕೃತ ಸತ್ತೆಗಳ ಸಮೂಹದ ನಿಯಾಮಕ ಸತ್ತೆಯೇ ಪ್ರಕೃತಿ. ಇದು ಸ್ವಭಾವ ಇಲ್ಲವೆ ಗುಣವಲ್ಲ. ಆದರೆ ಇದು ಆತ್ಮದ ಧರ್ಮ ; ಆತ್ಮನನ್ನು ಗುಣಾನ್ವಿತಗೊಳಿಸುವ ಶಕ್ತಿ. ಈ ಶಕ್ತಿಯು ಆತ್ಮನೊಂದಿಗೆ ಅವಿನಾಭಾವ ಸಂಬಂಧ ಹೊಂದಿದೆ. ಆತ್ಮನು ಪ್ರಕೃತಿ ಪ್ರಭಾವದಿಂದ, ಗುಣಾನ್ವಿತನಾದಾಗ, ಸತ್ತ್ವಗುಣದಿಂದ ಬುದ್ಧಿ ತತ್ತ್ವ ಉಂಟಾಗುತ್ತದೆ. ಬುದ್ಧಿ ತತ್ತ್ವವು ರಜೋಗುಣದಿಂದ ಗುಣಾನ್ವಿತವಾದಾಗ ಅಹಂ ತತ್ತ್ವವು ಉಂಟಾಗುತ್ತದೆ. ಅಹಂ ತತ್ತ್ವವು ತಮೋ ಗುಣದಿಂದ ಗುಣಾನ್ವಿತವಾದಾಗ ಚಿತ್ತ ತತ್ತ್ವವು ಉಂಟಾಗುತ್ತದೆ. ಇವೆಲ್ಲ ಅಂತಃಕರಣ ತತ್ತ್ವಗಳ ಮೊತ್ತವನ್ನು ಆತ್ಮದೊಳಗೇ ಅಡಗಿಸಬೇಕೆಂದರೆ ಗುಣಾತೀತನಾಗಬೇಕು. ಹೀಗೆ, ಸಾಧಿಸದ ಮತ್ತರಿಗೆ ಮಹಿಯಲ್ಲಿ ಮುಕ್ತಿಯಿಲ್ಲ.

ಕಂ. ಮನಸನು, ಬುದ್ಧಿಯ ಮೆರೆಯುತ
ಘನತರ ಅಹಮನು ಕಂಡುಕೊಳ್ಳಬೇಕು ಶೀಘ್ರಂ.
ಮಿನುಗುವ ಅಂತಃಕರಣಂ-
ದೆನಿಸುವ ಮುಖ್ಯವಿಹ ಇದನೆ, ಅರಿವುದು ವೇಮಾ.

ಮಿನುಗುವ ಅಂತಃಕರಣವೆಂದರೆ, ಚಿತ್ತ ತತ್ತ್ವ, ಅಹಂ ತತ್ತ್ವ ಮತ್ತು ಬುದ್ಧಿ ತತ್ತ್ವ ಮತ್ತು ಇವುಗಳ ಸಾಮೂಹಿಕ ರೂಪವಾದ ಮನಸ್ಸು. ಈ ಅಂತಃಕರಣಗಳಲ್ಲಿ ಬುದ್ಧಿಯನ್ನು ಮನವನ್ನು, ಮೆರೆಯುತ್ತ, ಅಂತಃಕರಣಗಳಲ್ಲಿ ಮುಖ್ಯವಾದ ಅಹಮನ್ನು ಕಂಡುಕೊಳ್ಳಬೇಕು. 'ನಾನು ಇದ್ದೇನೆ' ಎಂಬ ಅಸ್ತಿತ್ವ ಬೋಧೆಯು ಬುದ್ಧಿ ತತ್ತ್ವದಿಂದ ಆಗುತ್ತದೆ. ಬುದ್ಧಿ ತತ್ತ್ವ ರಜೋಗುಣದಿಂದ ಗುಣಾನ್ವಿತವಾಗಿ ಕರ್ತೃತ್ವಾಭಿಮಾನವು ಮೂಡುತ್ತದೆ. ಇದು ತಮೋಗುಣದಿಂದ ಗುಣಾನ್ವಿತವಾಗಿ ಚಿತ್ತ ತತ್ತ್ವ ಉಂಟಾಗುತ್ತದೆ. ಅಹಂ ತತ್ತ್ವದ ಪ್ರಭಾವದಿಂದ ಚಿತ್ತವು ರೂಪಧಾರಣ ಮಾಡುತ್ತದೆ. ಅಂತಃಕರಣಗಳಲ್ಲಿ ಮುಖ್ಯವೆಂದೆನಿಸುವ ಅಹಮನ್ನು ಸರಿಯಾಗಿ ಅರಿಯಬೇಕು.

ಈ ಮೇಲಿನ ಪದ್ಯದ ರೂಪಾಂತರವು ಇಂತಿದೆ :

ಕಂ. ಮನದಲಿ ಬುದ್ಧಿಯು ಮತ್ತಾ
ಘನತರಹಂಕಾರವ ಕಾಣುತ, ಗಡಬಡಿಸುತಾ,
ಕೊನರಿದ ಅಂತಃಕರಣವು
ಎನಲಾ ಮುತ್ತಾಯ್ತು, ಅದನೆ ಅರಿವುದು, ವೇಮಾ.

ಈ ಪದ್ಯಕ್ಕೆ ಪ್ರತ್ಯೇಕ ಟೀಕಾರ್ಥವು ಬೇಡಲ್ಲವೇ ?

ಕಂ. ಪಂಚ ಮಹಾಭೂತವಾಗಿ,
ಪಂಚ ಶರೀರಗಳಾಗಿ ಬ್ರಹ್ಮಾಂಡದೋಳ್
ಪಂಚಾವಸ್ಥೆಗಳ ದಾಟಿ,
ಸಂಚರಿಸದೆ ಪರಿಪೂರ್ತಿಯ, ಹೊಂದುವ, ವೇಮಾ.

ಚಿತ್ತ ತತ್ತ್ವದ ಮೇಲೆ ಪ್ರಕೃತಿಯ ತಮೋಗುಣದ ಅಧಿಕ ಪ್ರಭಾವದಿಂದ, ಕ್ರಮವಾಗಿ ಆಕಾಶ, ವಾಯು, ಅಗ್ನಿ, ಅಪ್ ಮತ್ತು ಪೃಥಿವಿಗಳೆಂಬ ಪಂಚ ಮಹಾಭೂತಗಳು ಉಂಟಾಗುತ್ತವೆ. ಬ್ರಹ್ಮಾಂಡದಲ್ಲಿ ಜೀವನಿಗೆ ಪಂಚ ಭೂತಗಳ ಅನ್ನಮಯ ಕೋಶದಿಂದಾದ ಸ್ಥೂಲ ದೇಹವೂ, ಪ್ರಾಣಮಯ, ಮನೋಮಯ, ಮತ್ತು ವಿಜ್ಞಾನಮಯ ಕೋಶಗಳಿಂದಾದ ಸೂಕ್ಷ್ಮ ದೇಹವೂ, ಆನಂದಮಯ ಕೋಶದಿಂದಾದ ಕಾರಣ ದೇಹವಲ್ಲದೆ ಕೋಶಾತೀತವಾದ ಮಹಾಕಾರಣ ಮತ್ತು ತುರೀಯವೆಂಬ ಐದು ದೇಹಗಳಾಗುತ್ತವೆ. ಜೀವನಿಗೆ ಜಾಗ್ರತ, ಸ್ವಪ್ನ, ಸುಷುಪ್ತಿ ಎಂಬ ಸಹಜ ಅವಸ್ಥೆಗಳು, ತುರೀಯವೆಂಬ ಸಾಧನ ಸಿದ್ಧ ಅವಸ್ಥೆಯೂ, ಮತ್ತು ವಿರಳ ಉಪಲಬ್ಧಿಯಾದ ತುರ್ಯಾತೀತ ಅವಸ್ಥೆಯು, ಹೀಗೆ ಪಂಚ ಅವಸ್ಥೆಗಳು ಉಂಟು. ಇವುಗಳನ್ನು ದಾಟಿ, ಅತ್ತ ಇತ್ತ ಸಂಚರಿಸದೆ, ಪರಿಪೂರ್ತಿಯನ್ನು ಹೊಂದು.

ಆ. ಪಂಚಭೂತ ಮತ್ತೆ ಪರಮ ಇಂದ್ರಿಯಗಳು.
ಸಂಚರಿಸುತ ಇರಲು, ಜಗತ್ ಉಂಟು.
ಸಂಚರಿಸದೆ ಇರಲು, ಜಗವೆಂತಾಗುವುದು ?
ವಿಶ್ವದಾಭಿರಾಮ ಕೇಳು ವೇಮ.

ಪಂಚ ಭೂತಗಳು ಇಂದ್ರಿಯ ವಿಷಯಗಳು. ಇಂದ್ರಿಯ ವೃತ್ತಿಗಳು ವಿಷಯಗಳಿಂದ

ತನ್ಮಾತ್ರೆಗಳನ್ನು ಕೊಂಡೊಯ್ದು ಚಿತ್ತ ಪಟಲದ ಮೇಲೆ ತದಾಕಾರ ಮೂಡಿಸುತ್ತವೆ. ಹೀಗೆ ಇಂದ್ರಿಯ ವೃತ್ತಿ ಮತ್ತು ಭೂತ ತನ್ಮಾತ್ರೆಗಳ ಸಂಚಾರದಿಂದ ಚಿತ್ತವು ಬಾಹ್ಯ ವಸ್ತುಗಳ ರೂಪ ತಾಳಿದಾಗ ಜಗತ್ತು ಉಂಟಾಗುತ್ತದೆ. ಇಂಥ ಸಂಚಾರವೇ ಇಲ್ಲವಾದಾಗ ಅಂದರೆ ಇಂದ್ರಿಯ ವ್ಯಾಪಾರಗಳನ್ನು ಮತ್ತು ಚಿತ್ತ ವೃತ್ತಿಗಳನ್ನು ನಿಗ್ರಹಿಸಿದರೆ ಜಗವು ಆಗುವುದೆಂತು ?

ಕಂ. ಭೂತಂಗಳಿಂ ಮೇಲೆ ಕಾಣೆ,
ಖ್ಯಾತವಿಹ ಮೂಲ ಶಕ್ತಿಯಿಹುದೊಂದು, ಹೊಂದಲ್,
ಜ್ಯೋತಿಯ ಒಳಹೊರ ತಾನೇ
ಸ್ಫೂತಿಸಿದ ಜಗಗಳೆಲ್ಲ, ಸ್ಪಷ್ಟವು ವೇಮಾ.

ಆತ್ಮವು ಪ್ರಕೃತಿಯ ಪ್ರಭಾವದಿಂದ ಗುಣಾನ್ವಿತವಾಗಿ, ಸತ್ವ ಗುಣದಿಂದ ಬುದ್ಧಿ ತತ್ವವು ಉಂಟಾಗುತ್ತದೆ. ಬುದ್ಧಿ ತತ್ವದ ಮೇಲೆ ರಜೋಗುಣ ಪ್ರಭಾವದಿಂದ ಅಹಂ ತತ್ವವಾಗುತ್ತದೆ. ಮುಂದೆ ಅಹಂ ತತ್ವದ ಮೇಲೆ ತಮೋಗುಣದ ಪ್ರಭಾವದಿಂದ ಚಿತ್ತ ತತ್ವವಾಗುತ್ತದೆ. ಚಿತ್ತ ತತ್ವದ ಮೇಲೆ ಅಧಿಕ ತಮೋಗುಣ ಪ್ರಭಾವದಿಂದ ಕ್ರಮವಾಗಿ ಆಕಾಶ, ವಾಯು, ಅಗ್ನಿ, ಅಪ್ ಮತ್ತು ಪೃಥಿವೀ ಎಂಬ ಪಂಚ ಮಹಾಭೂತ ತತ್ವಗಳಾಗುತ್ತವೆ. ಈ ಭೂತ ತತ್ವಗಳಿಂದ ಊರ್ಧ್ವದಲ್ಲಿ ಅಂತಃಕರಣ ತತ್ವಗಳನ್ನು ದಾಟಿ, ಯಾವುದರ ಅರಿವಿನ ಬೆಳಕಿನಿಂದ ಎಲ್ಲವನ್ನು ಅರಿಯಬೆಹೋ, ಆ ಆತ್ಮಜ್ಯೋತಿಯು ಒಂದಿರುವುದು ಕಂಡು ಬರತ್ತದೆ. ಆ ಆತ್ಮ ಜ್ಯೋತಿಯ ಒಳ ಹೊರಗೆ ಅದುವೇ ಸ್ಫೂತಿಸಿದ ಅಂದರೆ ಹೆಣೆದ ಸ್ಥೂಲ, ಸೂಕ್ಷ್ಮ ಮತ್ತು ಕಾರಣಾದಿ ಜಗಗಳೆಲ್ಲವೂ ಸ್ಪಷ್ಟವಾಗುತ್ತವೆ.

ಕಂ. ಭೂತಗಳೈದಾಗಿರುತಿರೆ,
ಖ್ಯಾತವು ಓರ್ವನೆ ದೇಹಿ, ಇರುತಿಪ್ಪ ಭುವಿಯೋಳ್.
ಆಂತರ್ಯ ತತ್ವವರಿಯದೆ,
ಸೋತೆಂದಿಗು ಬಾವಿ ಬೀಳುತಿಪ್ಪರು, ಸಲೆಯರಿ, ವೇಮ.

ಭೂತಗಳು, ಆಕಾಶ, ವಾಯು, ಅಗ್ನಿ, ಅಪ್ ಮತ್ತು ಪೃಥಿವಿ ಎಂದು ಐದಿವೆ. ಇವುಗಳನ್ನು ಹೊಂದಿದಂಥ ದೇಹಿಯು ಅಂದರೆ ಜೀವನು ಒಬ್ಬನೇ ಇದ್ದಾನೆ ; ಎಂಬುದು ಭುವಿಯಲ್ಲಿ ಸುವಿಖ್ಯಾತವಿದೆ. ಆ ಜೀವಿಯು ತನ್ನೊಳಗೆ ಚಿತ್ತ, ಅಹಂ, ಬುದ್ಧಿ ಮತ್ತು ಮನಸ್ಸು ಹಾಗೂ ಆತ್ಮ ಎಂಬ ಆಂತರ್ಯದ ತತ್ವಗಳನ್ನು ಸಾಧನೆಯ ಮೂಲಕ, ಸ್ವಾನುಭವ ಮೂಲಕ ಸರಿಯಾಗಿ ಅರಿತುಕೊಳ್ಳುವಲ್ಲಿ ಸೋತರೆ, ಅಂಥವನು ಎಂದೆಂದಿಗೂ ಊರ್ಧ್ವ ಲೋಕಕ್ಕೇರದೆ, ಅಧೋಲೋಕಕ್ಕೆ ಇಳಿಯುತ್ತಾನೆ. ಅಂದರೆ ಬಾವಿ ಬೀಳುತ್ತಾನೆ. ಚೆನ್ನಾಗಿ ಇದನ್ನು ಅರಿ.

ಕಂ. ಭೂತಂಗಳೈದು ಇರೆ, ನಿ-
ರ್ಜೀತವಹ ಸುರರೊಳಗೆ ಇನ ಚಂದ್ರರು ಎಂ-
ಬಾ ತರೆನಿಹ ಲೋಕಗಳಲಿ
ಸ್ಫೂತವಹ ಪ್ರಕೃತಿ, ಬ್ರಹ್ಮ, ಸೂಚ್ಯವು, ವೇಮಾ.

ಆಕಾಶ, ವಾಯು, ಅಗ್ನಿ, ಅಪ್ ಮತ್ತು ಪೃಥಿವಿ ಎಂಬ ಐದು ಭೂತಗಳು ಇವೆಯಷ್ಟೇ.

ಇವೆಲ್ಲವೂ ದೇವತೆಗಳೇ. ನಿರ್ಜೀತವಾಗಿರುವ ಸುರರೊಳಗೆ, ಸೂರ್ಯಲೋಕ ಮತ್ತು ಚಂದ್ರಲೋಕ ಎಂಬ ತೆರನಾದ ಲೋಕಗಳು ಉಂಟು. ಪುಣ್ಯ ಜೀವಿಗಳು ಚಂದ್ರಲೋಕ ತಲುಪಿ, ಪುಣ್ಯ ತೀರಿದ ಬಳಿಕ ಮರಳಿ ಬರುತ್ತಾರೆ. ಜ್ಞಾನಿಗಳು ಸೂರ್ಯ ಲೋಕಕ್ಕೆ ಹೋಗಿ ಅಲ್ಲಿಂದ ಬ್ರಹ್ಮಲೋಕಕ್ಕೆ ಹೋಗುತ್ತಾರೆ, ಮರಳುವುದಿಲ್ಲ. ಸೂರ್ಯಲೋಕ, ಚಂದ್ರಲೋಕಗಳಲ್ಲಿ ಸ್ಯೂತವಾಗಿರುವ, ಅಂದರೆ ಸಂಬಂಧಿಸಿರುವ, ಪ್ರಕೃತಿ ಶಕ್ತಿಯೂ ಇದೆ ; ಬ್ರಹ್ಮವೂ ಇದೆ ; ಎನ್ನುವುದನ್ನು ಆ ಲೋಕಗಳು ಸೂಚಿಸುತ್ತಿವೆ. ಹೀಗೆ ಬ್ರಹ್ಮವು ಸೂಚ್ಯವಾಗಿ ಇದೆ.

ಆ. ಪಂಚ ಭೂತಗಳನು ಪರಿಗಣಿಸಿ ಮನದಲಿ,
ಮಿಂಚಿ ಹೊಂದಬೇಕು ಮೃತ್ಯುಂಜಯನ.
ಅಲ್ಲಿ ತಿಳಿಯುವವನೆ ಅಖಿಲಜ್ಞನಹ ಯೋಗಿ.
ವಿಶ್ವದಾಭಿರಾಮ ಕೇಳು ವೇಮ.

ಪಂಚಭೂತಗಳನ್ನು ಮನದಲ್ಲಿ ಪರಿಗಣಿಸಬೇಕು. ಚಿತ್ತ, ಅಹಂ, ಬುದ್ಧಿ ತತ್ತ್ವಗಳ ಸಾಮೂಹಿಕ ಹೆಸರೇ ಮನ ತಾನೇ ? ಪಂಚಭೂತಗಳು, ಅವುಗಳ ಪಂಚ ತನ್ಮಾತ್ರೆಗಳ ರೂಪದಲ್ಲಿ ಕ್ರಿಯಾನ್ವಿತವಾಗಿವೆ. ಅಹಮ್ಮಿನ ಕರ್ತೃತ್ವ ಬೋಧೆಯಲ್ಲಿ ಪಂಚ ಕರ್ಮೇಂದ್ರಿಯಗಳು ಮತ್ತು ಪಂಚ ಪ್ರಾಣೇಂದ್ರಿಯಗಳು ಕ್ರಿಯಾನ್ವಿತವಾಗಿವೆ. ಇನ್ನು ಬುದ್ಧಿಯ ಅಸ್ತಿತ್ವ ಬೋಧೆಯಲ್ಲಿ ಪಂಚ ಜ್ಞಾನೇಂದ್ರಿಯಗಳು ಕ್ರಿಯಾನ್ವಿತವಾಗಿವೆ. ಇವೆಲ್ಲವೂ ಮನದಲ್ಲಿ ಇವೆ. ಹೀಗೆ ಭೂತಾದಿಗಳನ್ನು ಮನದಲ್ಲಿ ಪರಿಗಣಿಸಿ ಮಿಂಚಬೇಕು. ಅವುಗಳಾಚೆ ಮೃತ್ಯುಂಜಯನಾದ ಆತ್ಮ ತತ್ತ್ವವಿದೆ. ಅಲ್ಲಿ ಅವನನ್ನುತಿಳಿಯುವವನೇ ಸರ್ವಜ್ಞನಾದ ಯೋಗಿಯಾಗುತ್ತಾನೆ.

ಆ. ಪಂಚತತ್ತ್ವಗಳಿಗೆ ಬ್ರಹ್ಮಗೊಂದು ದೋಷ.
ಅವರ ತಂದೆ ನೆತ್ತಿ ಒಗೆದ ದೋಷ.
ಅಂತರಂಗವೆಲ್ಲ ಆದಿಶಕ್ತಿಯರಿವಳು.
ವಿಶ್ವದಾಭಿರಾಮ ಕೇಳು ವೇಮ.

ನಿರ್ಗುಣ ಬ್ರಹ್ಮನಿಂದ ಐದು ತತ್ + ತ್ವಗಳು ಪರಿಣಮಿಸಿದವು. ಅವುಗಳೆಂದರೆ ಸಗುಣ ಬ್ರಹ್ಮ, ಮಹತ್ ತತ್ತ್ವ, ಅಹಂ ತತ್ತ್ವ, ಚಿತ್ ತತ್ತ್ವ, ಮತ್ತು ಇವುಗಳ ಸಾಮೂಹಿಕ ಹೆಸರಾದ ಮನಸ್ ತತ್ತ್ವ. ಇವುಗಳಲ್ಲಿ ಗುಣಾನ್ವಯವಾಗುವುದು ಬ್ರಹ್ಮನ ದೋಷವಾಗಿದೆ. ಈ ಪಂಚ ತತ್ತ್ವಗಳಿಗೆ ತಂದೆಯಾದ ನಿರ್ಗುಣ ಬ್ರಹ್ಮನಿಗೆ ನೆತ್ತಿಯಾದ ಅರಿವು ಹುಟ್ಟಿಸುವುದೇ ದೋಷವೆನಿಸುತ್ತದೆ. ಇದೆಲ್ಲದರ ಅಂತರಂಗವನ್ನು ಆದಿಶಕ್ತಿಯು ಮಾತ್ರ ಅರಿಯುತ್ತಾಳೆ.

ಆ. ಸಕಲ ವಸ್ತುಗಳಲಿ, ಸಂತತ ತನುಗಳಲಿ,
ಉಸಿರಿಗೆಲ್ಲಿ ಪಂಚ ಭೂತಗಳಲಿ,
ಅವವುಗಳಿಂದ ಸಲೆ ಅಂದ ಭೂಷಣ ಗೆಯ್
ವಿಶ್ವದಾಭಿರಾಮ ಕೇಳು ವೇಮ.

ಕೆಲವು ಅಚರ ವಸ್ತುಗಳಿವೆ. ಅವುಗಳಲ್ಲಿ ಜೀವವು ಸುಪ್ತವಿದೆ. ಕೆಲವು ಸಚರ ತನುಗಳಿವೆ. ಅವುಗಳಲ್ಲಿ ಪ್ರಕಟಿತ ಜೀವವಿದೆ. ಆದ್ದರಿಂದ ಉಸಿರಾಡುತ್ತವೆ. ಇನ್ನು ಪಂಚ

ಭೂತಗಳಲ್ಲಿ ತನುವಿಗೆ ಸಂಬಂಧಿಸಿದ ಜೀವಾಂಶಗಳುಂಟು. ಅಂದರೆ ಆಕಾಶ ತತ್ತ್ವಕ್ಕೆ ಸಂಬಂಧಿಸಿದ, ಕಾಮ, ಕ್ರೋಧ, ಲೋಭ, ಮೋಹ ಮತ್ತು ಭಯ ; ವಾಯು ತತ್ತ್ವಕ್ಕೆ ಸಂಬಂಧಿಸಿದ ಚಲನ, ವಲನ, ಧಾವನ, ಪ್ರಸಾರಣ, ಮತ್ತು ಆಕುಂಚನ ಕ್ರಿಯಾಂಶಗಳು ಉಂಟು. ತೇಜ ತತ್ತ್ವಕ್ಕೆ ಸಂಬಂಧಿಸಿದ ಕ್ಷುಧಾ, ತೃಷಾ, ಆಲಸ್ಯ, ನಿದ್ರಾ, ಕಾಂತಿ ಎಂಬ ಶರೀರದ ಅನುಭವಗಳುಂಟು. ಹಾಗೂ ಅಪ್ ತತ್ತ್ವಕ್ಕೆ ಸಂಬಂಧಿಸಿದ ಶುಕ್ರ, ಶೋಣಿತ, ಲಾಲಾರಸ, ಮೂತ್ರ, ಸ್ವೇದಗಳೆಂಬ ಶರೀರದಲ್ಲಿ ಉತ್ಪತ್ತಿಯಾಗುವ ಪದಾರ್ಥಗಳುಂಟು. ಕೊನೆಯದಾಗಿ ಪೃಥಿವೀ ತತ್ತ್ವಕ್ಕೆ ಸಂಬಂಧಿಸಿದ ಅಸ್ಥಿ, ಮಾಂಸ, ತ್ವಚೆ, ನಾಡಿ ಮತ್ತು ರೋಮಗಳೆಂಬ ಶರೀರದ ಅಂಗಗಳುಂಟು. ಸಕಲ ವಸ್ತುಗಳಲ್ಲಿ, ಯಾವಾಗಲೂ ತನುಗಳಲ್ಲಿ ಉಸಿರಿಗೆ ಎಲ್ಲಿ ಸ್ಥಾನವಿರಬೇಕು ? ಪಂಚಭೂತಗಳಿಗೆ ಸಂಬಂಧಿಸಿದ ಜೀವನಾಂಶಗಳಲ್ಲಿ ಯಾವುದು ಹೇಗಿರಬೇಕು ? ಎಷ್ಟಿರಬೇಕು ? ಎಂಬುದನ್ನು ಅರಿತು, ಅಂದವಾಗಿ ಹೊಂದಿಸಿ, ಭೂಷಣವಾಗುವಂತೆ ಮಾಡು. ಏಕೆಂದರೆ, 'ಶರೀರಂ ಖಲು ಧರ್ಮ ಸಾಧನಂ' ಅಲ್ಲವೇ ?

ಆ. ತತ್ತಿಯೊಳಗೆ ಆಕಾಶವು ;
ಮತ್ತದನು ನೋಡೆ ನೋಡಲು, ಒಪ್ಪ ವಿನೋದಂ.
ಸತ್ತೆಯ ಸಕಲವನರಿತೊಡೆ,
ಉತ್ಕಟವೆಂತೋ ನೋಡಲು, ಮೇಲ್ಮೈಯು, ವೇಮಾ.

ಬ್ರಹ್ಮ ಅಂಡ (ತತ್ತಿ) ದೊಳಗೆ ಆಕಾಶವಿದೆ. ಪಿಂಡ ಅಂಡದೊಳಗೂ ಆಕಾಶವಿದೆ. ಅದನ್ನು ನೋಡುತ್ತ, ನೋಡುತ್ತ ಇರಲು, ಬೇರೆ ಬೇರೆ ಭೂತಾದಿಗಳು, ಮಸ್ತಗಳು ಉಂಟಾಗುವ ವಿನೋದವು ಒಪ್ಪವಾಗಿ ತೋರುತ್ತದೆ. ಪಿಂಡಾಂಡದಲ್ಲಿ ನೋಡು-ನೋಡುತ್ತಿದ್ದಂತೆ, ಪಿಂಡವು ಬೆಳೆದು, ತಲೆ, ಅಂಗಾಂಗಳಾಗುವುದು ಒಪ್ಪ ವಿನೋದಕರವಾಗುತ್ತದೆ. ಹೀಗೆ ಆತ್ಮಸತ್ತೆಯ ಸಕಲ ಪರಿಣಾಮಗಳನ್ನು ಅರಿತರೆ, ಇದೆಲ್ಲವೂ ಆತ್ಮನ ಉತ್ಕಟ ಮೇಲ್ಮೈಯಾಗಿ ತಿಳಿದುಬರುತ್ತದೆ.

ಕಂ. ಆಕಾಶದಲ್ಲಿ ವಾಯುವು
ಸೋಂಕಿ, ಮರದೊಳಗ್ನಿಯಂತೆ, ಮಾನಸದಲಿ ತಾ-
ನೇಕಾಕಾರನು ; ಜಗದಲಿ
ತಾ ಕಾಣುವನಂತೆ ಬೆಳಗಿ, ತಾನೇ, ವೇಮಾ.

ಆಕಾಶದಲ್ಲಿ ವಾಯುವು ಸೋಂಕಿದಂತೆ, ಮರದಲ್ಲಿ ಅಗ್ನಿಯು ಅಡಗಿರುವಂತೆ, ಮಾನಸದಲ್ಲಿ ಆತ್ಮನು ತಾನು ಏಕಾಕಾರನಾಗಿದ್ದಾನೆ. ಆಕಾಶದಲ್ಲಿ ವಾಯುವು ಹುಟ್ಟುತ್ತದೆ. ಸ್ಪರ್ಶಿಸಿ ಅದನ್ನು ಅರಿಯಬಹುದು. ಮರದಲ್ಲಿ ಅಗ್ನಿಯಿದೆ. ಆದರೆ ಘರ್ಷಿಸಿ ಅದನ್ನು ಕಾಣಬಹುದು. ಮಾನಸದಲ್ಲಿ 'ನಾನು ಇದ್ದೇನೆ' ಎಂಬ ಅಸ್ತಿತ್ವ ಬೋಧೆಯಿಂದ ಬುದ್ಧಿಯಾಗಿಯೂ, 'ನಾನು ಕರ್ಮ ಮಾಡುತ್ತೇನೆ' ಎಂಬ ಕರ್ತೃತ್ವ ಬೋಧೆಯಿಂದ ಅಹಂ ಆಗಿಯೂ ಮತ್ತು ವಿಷಯ ತನ್ಮಾತ್ರೆಗಳಿಂದ ವಸ್ತುವಿನ ತದಾಕಾರ ತಾಳಿ, 'ನಾನು ಕಾರ್ಯವಾಗಿದ್ದೇನೆ' ಎಂಬ ಕಾರ್ಯ ಬೋಧೆಯಿಂದ ಚಿತ್ತವಾಗಿಯೂ ನಾನು, ಅರ್ಥಾತ್ ಆತ್ಮವು ಏಕಾಕಾರವಾಗಿದೆ. ಹೀಗೆ ವ್ಯಾಪ್ತನಾಗಿ, ಗುಪ್ತನಾಗಿ, ಸರ್ವಾನುಸ್ಯೂತನಾಗಿ, ಜಗತ್ತಿನಲ್ಲಿ ತಾನೇ ಬೆಳಗಿ ಕಾಣುತ್ತಾನೆ.

ಅನಿಲದೊಳಗ ಜನಿಸುತಿಪ್ಪ
ಅನಲದಲಿ ಸಲಿಲವಾಯಿತು, ಆಗಸದೊಳಗಂ.
ಜನಿಸುತಲಿಪ್ಪವು ಕಾಣಾ.
ಜನಕನೆ ಇರದಂತಾಗಿಹ, ಚರಿತೆಯ, ವೇಮಾ.

ಆಕಾಶವು ಒಂದು ಭೂತ ತತ್ತ್ವ. ಏಕೆಂದರೆ ಅದನ್ನು ಅದರ ತನ್ಮಾತ್ರೆಯಾದ ಶಬ್ದ ಮೂಲಕ ಕರ್ಣೇಂದ್ರಿಯದಿಂದ ಅರಿಯಬಹುದು. ಆಕಾಶದಿಂದ ಅನಿಲವು ಜನಿಸುತ್ತದೆ. ಅದರ ತನ್ಮಾತ್ರೆಗಳು ಶಬ್ದ ಮತ್ತು ಸ್ಪರ್ಶ. ಅದನ್ನು ಕರ್ಣದಿಂದಲೂ ತಿಳಿಯಬಹುದು. ಅನಿಲದೊಳಗೆ ಅನಲ ಜನಿಸುತ್ತದೆ. ಅದರ ತನ್ಮಾತ್ರೆಗಳು ಮೂರು. ಶಬ್ದ, ಸ್ಪರ್ಶಗಳಲ್ಲದೆ ಅದಕ್ಕೆ ವಿಶೇಷವಾದ ರೂಪ. ಅನಲದಲ್ಲ ಸಲಿಲವಾಗುತ್ತದೆ. ಅದರ ತನ್ಮತ್ರೆಗಳು ನಾಲ್ಕು : ಶಬ್ದ, ಸ್ಪರ್ಶ, ರೂಪ ಮತ್ತು ವಿಶೇಷವಾಗಿ ರಸ. ಅದನ್ನು ಕರ್ಣದಿಂದ, ತ್ವಕ್ಕಿನಿಂದ, ಚಕ್ಷುಸ್ಸಿನಿಂದ ಮತ್ತು ವಿಶೇಷವಾಗಿ ಜಿಹ್ವೆಯಿಂದ ತಿಳಿಯಬಹುದು. ಇನ್ನು ಸಲಿಲದಿಂದ ಪೃಥಿವಿಯಾಯಿತು. ಅದನ್ನು ಶಬ್ದ, ಸ್ಪರ್ಶ, ರೂಪ, ರಸಗಳಲ್ಲದೆ ವಿಶೇಷವಾಗಿ ಗಂಧದಿಂದ ತಿಳಿಯಬಹುದು. ಇವೆಲ್ಲ ಎದುರಿಗಿದ್ದರೂ ಇವುಗಳ ಮೂಲ ತಂದೆಯು ಆತ್ಮ ಇಲ್ಲವೆ ಸಗುಣ ಬ್ರಹ್ಮನೆಂಬ ಅರಿವೇ ಇಲ್ಲದಂತಾಗಿರುವ ಚರಿತೆಯನ್ನು ಕಾಣಬೇಕು. ಅವನನ್ನು ಅರಿಯಲು ಮುಂದಾಗಬೇಕು.

ಈ ಮೇಲಿನ ಪದ್ಯದ ಪಾಠಾಂತರವು ಹೀಗಿದೆ :

ಕಂ. ಅನಿಲದಲಿ ಚಲಿಸುವಂತಹ
ಅನಲದಲಿ ಸಲಿಲವಾಯಿತು; ಆಕಾಶದೊಳೀ
ಜನನವು ತಾ ಕಾಣುತಲಿದೆ ;
ಜನಕನು ಇರದಂಥ ಮಾಯೆ, ಚರಿತವು, ವೇಮಾ.

ಆಕಾಶ ತತ್ತ್ವದೊಳಗೆ ಅನಿಲವೂ, ಅನಿಲದಲ್ಲ ಅನಲವೂ, ಅನಲದಲ್ಲಿ ಸಲಿಲವೂ ಜನಿಸಿದವು. (ಸಲಿಲದಲ್ಲಿ ಪೃಥಿವಿಯೂ ಜನಿಸಿದೆ). ಈ ಎಲ್ಲ ಪಂಚ ಮಹಾಭೂತ ತತ್ತ್ವಗಳು ಸ್ಥೂಲ ಇಂದ್ರಿಯಗಳ ಮೂಲಕ ವೇದ್ಯವಾಗುತ್ತವೆ. ಆದರೆ ಇವುಗಳ ಜನಕನು ಸ್ಥೂಲ ಇಂದ್ರಿಯಗಳಿಗೆ ವೇದ್ಯನಾಗುವುದಿಲ್ಲ. ಸೂಕ್ಷ್ಮ ಲೋಕದಲ್ಲಿಯೂ ಅವನಿಲ್ಲ. ಅವನು ಕಾರಣ ಲೋಕದಲ್ಲಿದ್ದಾನೆ. ಎಲ್ಲಕ್ಕೂ ಕಾರಣವಾಗಿದ್ದಾನೆ. ಇದ್ದೂ ಇಲ್ಲದಂತಿರುವುದು ಮಾಯೆಯಷ್ಟೇ. ಹೀಗೆ ಇವುಗಳ ಜನಕನಾದ ಆತ್ಮನು ಇದ್ದೂ, ಸ್ಥೂಲ ಲೋಕದಲ್ಲಿ ಪ್ರತ್ಯಕ್ಷ ಇಲ್ಲದಂತಾಗಿ ಮಾಯೆಯೆನಿಸುವುನಲ್ಲವೇ ?

ಕಂ. ಇರುವವು ಗಾಳಿ ನಭಂಗಳು ;
ಇರುವುದು ಭೂಮಿಯು ನೀರು ಇರುತಿಹ ಪರಿಯೋಳ್ ;
ದರಿ ದಡಗಳು, ಬೇರೊಂದಾ-
ಗಿರುವುದು ಕೊಳ್ಳವು, ತೇಜವಿಹುದೆಲ್ಲೆಡೆ ವೇಮಾ.

ಈ ಜಗತ್ತಿನಲ್ಲ ಆಕಾಶವು (ನಭ) ಇದೆ. ವಾಯುವೂ (ಗಾಳಿ) ಇದೆ. ಎಲ್ಲೆಡೆ ಅಗ್ನಿಯೂ (ತೇಜ) ಇದೆ. ಅಪ್ (ನೀರು) ಇದೆ ; ಪೃಥಿವಿಯೂ (ಭೂಮಿ) ಇದೆ. ಇವೆಲ್ಲ

ಇರುವ ಪರಿಯಲ್ಲಿ ನೀರು ಹರಿಯಲು ದರಿಗಳಿವೆ, ದಡಗಳಿವೆ. ಬೇರೆ ಕೊಳ್ಳವೂ ಇದೆ. ಇದೇ ಸ್ಥೂಲ ಜಗತ್ತಿನ ರೂಪವಾಗಿದೆ.

ಆ. ಮಣ್ಣು ಗಗನ ಕೂಡಿ ಮಹಿಮೇಲೊಂದು ಕೋಟಿ,
ಕೊಂಬು ಹೊಂದಿರುವುದು ಕೊನೆಯ ಮೀರಿ.
ದೀಪವಿರದ ಬೆಳಕು ತೇಜಿಸುತ್ತ ಉಂಟು.
ವಿಶ್ವದಾಭಿರಾಮ ಕೇಳು ವೇಮ.

ದೇಹದಲ್ಲ ಯೋಗಿಗಳ ಗ್ರಹಿಕೆಯಂತೆ, ಆರು ಚಕ್ರಗಳಿವೆ. ಅವುಗಳೆಂದರೆ ಮೂಲಾಧಾರ, ಸ್ವಾಧಿಷ್ಠಾನ, ಮಣಿಪೂರಕ, ಅನಾಹತ, ವಿಶುದ್ಧ ಮತ್ತು ಆಜ್ಞಾ. ಈ ಚಕ್ರಗಳ ಸ್ಥಾನಗಳು ಅನುಕ್ರಮವಾಗಿ, (1) ನಾಸಿಕಕ್ಕೆ ಕಾರಣವಾದ ಗಂಧ ತನ್ಮಾತ್ರೆಯ **ಪೃಥಿವಿಗೆ** ಸಂಬಂಧಿಸಿದ ಗುದ, (2) ರಸನೆಗೆ ಕಾರಣವಾದ ರಸ ತನ್ಮಾತ್ರೆಯ **ಅಪ್‌ಗೆ** ಸಂಬಂಧಿಸಿದ ಲಿಂಗ, (3) ನೇತ್ರಕ್ಕೆ ಕಾರಣವಾದ ರೂಪ ತನ್ಮಾತ್ರೆಯ **ಅಗ್ನಿಗೆ** ಸಂಬಂಧಿಸಿದ ನಾಭಿ, (4) ತ್ವಕ್ಕಿಗೆ ಕಾರಣವಾದ ಸ್ಪರ್ಶ ತನ್ಮಾತ್ರೆಯ **ವಾಯುವಿಗೆ** ಸಂಬಂಧಿಸಿದ ಕಂಠ, (5) ಶ್ರೋತ್ರಕ್ಕೆ ಕಾರಣವಾದ ಶಬ್ದ ತನ್ಮಾತ್ರೆಯ **ಆಕಾಶಕ್ಕೆ** ಸಂಬಂಧಿಸಿದ ಕಂಠ. ಹೀಗೆ ಮಣ್ಣು ಗಗನ ಕೂಡಿದ ಮಹಿಯ ಮೇಲೆ ನೇತ್ರ ಸ್ಥಾನದಲ್ಲಿ ಆಜ್ಞಾ ಚಕ್ರವೆಂಬ ಕೋಟಿ ಇದೆ. ನಾಸಿಕವೇ ಆ ಕೋಟಿಯ ಕೊನೆಯನ್ನು ಮೀರಿದ ಕೊಂಬು. ಈ ಕೋಟಿಯಲ್ಲಿ ಬಾಹ್ಯ ಜಡ ದೀಪವಾವುದೂ ಇಲ್ಲ. ಚಿಜ್ಯೋತಿಯೇ ಅಲ್ಲಿ ತೇಜಿಸುತ್ತ ಇದೆ.

ಆ. ಉಳ್ಳುದನ್ನೆ ಅರಿತು, ಊಹೆಯನು ವರ್ಧಿಸಿ,
ಮಣ್ಣು ಗಗನ ಮಧ್ಯೆ ಮತ್ತೆ ಇಲ್ಲ,
ಅರಿಯುವವನೆ ಪರಮನರಿತವನೆ ಆಗುವ.
ವಿಶ್ವದಾಭಿರಾಮ ಕೇಳು ವೇಮ.

ಸ್ಥೂಲ ಪ್ರಪಂಚದಲ್ಲಿ ಇರುವುದೆಲ್ಲವನ್ನೂ ಅರಿತುಕೊಂಡು, ಮಣ್ಣು ಗಗನಗಳ ಮಧ್ಯೆ ಭೂತ ಪ್ರಪಂಚದಲ್ಲಿ ಮತ್ತೇನೂ ಇಲ್ಲವೆಂದು ಖಚಿತಪಡಿಸಿಕೊಂಡು ಊಹೆಯನ್ನು ವರ್ಧಿಸಿ, ಸೂಕ್ಷ್ಮ ಲೋಕದಲ್ಲಿ ಅನುಸಂಧಾನ ಮಾಡುತ್ತ, ಕೊನೆಗೆ ಕಾರಣ ಲೋಕದಲ್ಲಿ ಆತ್ಮದೊಂದಿಗೆ ಕೂಡಿ, ತನ್ನನ್ನು ತಾನು ಅರಿಯುವವನು ಪರಮನನ್ನು ಅರಿತವನಾಗುವ. ಆತ್ಮ ಸಾಕ್ಷಾತ್ಕಾರ ಹೊಂದಿದವನಾಗುವ ; ಬ್ರಹ್ಮವಿದನಾಗುವ.

ಆ. ವಾಯುವಿನಲಿ ಹುಟ್ಟಿ, ವಾಯುವಿನಲಿ ಬೆಳೆದು,
ವಾಯುನಲ್ಲಿ ಮೇಲು ಸರಣಿ ತಿಳಿಯೆ,
ವಾಯುನಲ್ಲಿ ಪ್ರಾಣ ವಾಯುವೇ ತತ್ತ್ವವ.
ವಿಶ್ವದಾಭಿರಾಮ ಕೇಳು ವೇಮ.

ಪ್ರಾಣವು ಅತಿ ಮುಖ್ಯವಾದದ್ದು. ಅದು ದೇಹದಿಂದ ತೊಲಗಿದರೆ ಉಳಿದ ಅಂಗಾಂಗಳು ಕಾರ್ಯ ಮಾಡವು. ಶರೀರವೂ ಬಿದ್ದು ಕೊಳೆತು ಹೋಗುತ್ತದೆ. ಈ ಪ್ರಾಣವು ವಾಯುವಿನಲ್ಲಿಯೇ ಹುಟ್ಟುತ್ತದೆ. ವಾಯುವಿನಲ್ಲಯೇ ಬೆಳೆಯುತ್ತದೆ. ಶರೀರದಲ್ಲಿ ವಾಯುವು ಪಂಚ ವಿಧದಲ್ಲಿದೆ.

ಶರೀರದ ಸರ್ವ ಸ್ಥಾನದಲ್ಲಿರುವ ವ್ಯಾನ, ನಾಭಿ ಸ್ಥಾನದಲ್ಲಿರುವ ಸಮಾನ, ಕಂಠ ಸ್ಥಾನದಲ್ಲಿರುವ ಉದಾನ, ಹೃದಯ ಸ್ಥನದಲ್ಲಿರುವ ಪ್ರಾಣ ಮತ್ತು ಗುದ ಸ್ಥಾನದಲ್ಲಿರುವ ಅಪಾನ. ಇವುಗಳಿಗೆ ಒಟ್ಟಾರೆ ಪ್ರಾಣಾಃ ಎನ್ನುತ್ತಾರೆ. ಇದಲ್ಲದೆ ಐದು ಉಪಪ್ರಾಣಗಳೂ ದೇಹದಲ್ಲಿ ಬೇರೆ ಬೇರೆ ಕಾರ್ಯಗಳಲ್ಲಿ ತೊಡಗಿರುತ್ತವೆ. ಅವುಗಳೆಂದರ ನಾಗ, ಕೂರ್ಮ, ಕೃಕರ, ದೇವದತ್ತ ಮತ್ತು ಧನಂಜಯ. ಹೀಗೆ ವಾಯುವಿನಲ್ಲಿ ಮೇಲು ಸರಣಿಯನ್ನು ತಿಳಿದರೆ, ಪ್ರಾಣವಾಯುವೇ ತತ್ತ್ವವೆನಿಸುತ್ತದೆ.

ವಾಯುವು ಬಯಲೊಳು ಹುಟ್ಟಿರೆ,
ವಾಯುವೆ ಬಯಲಲ್ಲಿ ಅಡಗಿ ಬರುತಲಿ ಇರಲಾ
ವಾಯುವನೆ ಹಿಡಿದು ಕುಂಭಕ
ವಾಯುವಿನೊಳಗೆ ಕಲೆಯುವವ, ಮಶ್ಯನು, ವೇಮಾ.

ವಾಯುವು ಬಯಲಲ್ಲಿ ಅಂದರೆ ಆಕಾಶ ತತ್ತ್ವದಲ್ಲಿ ಹುಟ್ಟಿದೆ. ಮತ್ತು ಪ್ರಾಣಾಯಾಮ ಕಾಲಕ್ಕೆ ಉಸಿರಾಡುವಾಗ ವಾಯುವೇ ಬಯಲಲ್ಲಿ ಅಡಗಿ ಬರುತ್ತಿರಲು, ಆ ವಾಯುವನ್ನೇ ಹಿಡಿದು ಬಾಹ್ಯದಲ್ಲಿ ನಿಲ್ಲಿಸಿ ಬಾಹ್ಯ ಕುಂಭಕ ಮಾಡಬಹುದು ಮತ್ತು ಆಂತರ್ಯದಲ್ಲಿ ನಿಲ್ಲಿಸಿ ಅಂತಃ ಕುಂಭಕವನ್ನು ಮಾಡಬಹುದು. ಹೀಗೆ ಬಾಹ್ಯದಲ್ಲಿ ಇಲ್ಲವೆ ಆಂತರ್ಯದಲ್ಲಿ ವಾಯುವನ್ನು ಹಿಡಿದ ಕುಂಭಕ ವಾಯುವಿನೊಡನೆ ಸೇರಿಸುವವಗೆ ಸಿದ್ಧಿಯು ವಶವಾಗುವುದು.

ವಾಯುವೆನುವಾ ಅಪಾನವು
ಮಾಯದೆ ಆ ದಾರಿಯಲ್ಲಿ ಮಲವರ್ಜನ ತಾ
ಗೆಯ್ಯದೆ ಇರುತಿರಲೆಂದಿಗು
ನ್ಯಾಯವು ನೇಹದಿ ವೀಕ್ಷಿಸೆ, ನಿಪುಣತೆ, ವೇಮಾ.

ಪಂಚ ಪ್ರಾಣಗಳಲ್ಲಿ ಅಪಾನ ವಾಯುವ ಮಲವಿಸರ್ಜನೆಯ ಕಾರ್ಯಕ್ಕೆ ಸಹಾಯಕಾರಿಯಾಗಿದೆ. ಆದರೆ ಯೋಗ ಕ್ರಿಯೆಗಳಲ್ಲಿ, ಷಣ್ಮುಖೀ ಮುದ್ರೆಯಲ್ಲಿ ನವ ದ್ವಾರಗಳನ್ನೂ ಮುಚ್ಚುವ ಕ್ರಿಯೆಯಿದೆ. ಆಗ ಮಲವಿಸರ್ಜನೆಯನ್ನೂ ಮಾಡದಂತೆ ನಿಗ್ರಹಿಸಬೇಕಾಗುತ್ತದೆ. ಅದನ್ನು ನಿಪುಣತೆಯಿಂದ ಸಾಧಿಸಬೇಕು. ಪ್ರಕೃತಿಯೊಂದಿಗೆ ಮಿತ್ರತ್ವ ಸಾಧಿಸಿ, ಆ ಕ್ರಿಯೆಯಲ್ಲಿ ಯಶಸ್ವಿಯಾಗಬೇಕು.

ಆ. ಪ್ರಾಣವಾಯ್ತು ಗಾಳಿ, ಬ್ರಹ್ಮಾಂಡವದು ದೇಹ,
ಮಿತ್ರ, ಚಂದ್ರ ಶಿಖಿಯು ನೇತ್ರ ಚಯವು.
ಮತ್ತೆ ದೇವನಿನ್ನು ಮಹಿಯ ಮೇಲೆ ಇಹನೆ ?
ವಿಶ್ವದಾಭಿರಾಮ ಕೇಳು ವೇಮ.

ಇಡೀ ಬ್ರಹ್ಮಾಂಡವೇ ದೇಹವಾಗಿ, ಅದರಲ್ಲಿ ಚಲಿಸುವ ಗಾಳಿಯೇ ಪ್ರಾಣವಾಯಿತು. ಅವನಿಗೆ ಸೂರ್ಯ, ಚಂದ್ರ ಮತ್ತು ಅಗ್ನಿಯು ಮೂರು ಕಣ್ಣುಗಳಾಗಿವೆ. ಇದುವೇ ಸಗುಣ ಬ್ರಹ್ಮನ ಸ್ಥೂಲ ವಿರಾಟ್ ರೂಪ. ಇಂಥ ರೂಪವನ್ನು ಹೊರತುಪಡಿಸಿ, ಮಹಿಯ ಮೇಲೆ ಇನ್ನು ಬೇರೆ ದೇವನಿರುವನೇ ?

ಕಂ. ಮನಸು ಅನಿಲಗಳಿರಡರಲಿ,
ಘನವನು ಇನಿತಾದರರಿಯಲು ಬೇಕು ನೋಡಾ.
ಎನಿತೊ ನಯನ ಮುಚ್ಚಿ ತೆರೆಯೆ,
ಘನವದ ವಿವರಿಸುವ ಮನಸು, ಕಾಣರು ವೇಮಾ.

ಮನಸ್ಸು ಮತ್ತು ಅನಿಲ ಇವೆರಡರಲ್ಲಿ ಹೊಂದಿಕೆ ಮಾಡಿ ಇನಿತಾದರೂ ಘನವನ್ನು ಅರಿಯಬೇಕು. ನಯನಗಳನ್ನು ತೆರೆದಾಗ ಬಾಹ್ಯ ವಿಷಯಗಳ ತನ್ಮಾತ್ರೆಗಳು ಇಂದ್ರಿಯ ಮೂಲಕ ಒಳಸೇರಿ ವಿಷಯ ವಸ್ತುವಿನ ತದಾಕಾರ ತಾಳಿ, ಚಿತ್ತಪಟಲದಲ್ಲಿ ಆ ವಿಷಯ ವಸ್ತುವನ್ನು ನಿರ್ಮಿಸುತ್ತವೆ. ಹೀಗೆ ಮನಸ್ಸು ವಿಕ್ಷೇಪವಾಗುತ್ತದೆ. ಮನಸ್ಸು ಶುದ್ಧವಾಗಲು ಈ ನಯನ ವ್ಯಾಪಾರ ನಿಲ್ಲಬೇಕು. ಇದಕ್ಕಾಗಿ ಯೋಗ ಮುದ್ರೆಗಳನ್ನು ಮಾಡಬೇಕು. ಅನಿಮಿಷ ನೇತ್ರರಾಗಬೇಕು ಎಂದು ವಿಧಿಸಲಾಗಿದೆ. ಹೀಗೆ ಇನಿತಾದರೂ ಘನವನ್ನು ಅರಿಯಬೇಕು. ಹೀಗೆ ಮಾಡದೆ ಎಷ್ಟೋ ಬಾರಿ ಮುಚ್ಚಿ ತೆರೆದರೂ, ಆ ಘನವನ್ನು ವಿವರಿಸುವ ಮನಸ್ಸನ್ನು ಕಾಣರು.

ಆ. ಅನಲ ಕೊಂಚವಿರಲಿ, ಕನಲಿ ಉರಿಸುತಿಹುದು
ಮ್ಲಾನತೆ ಇರದರಿವು ಮನಕೆ ಬಿಡದು.
ತನುವು ಮರೆಯುವವನೆ ತತ್ವಜ್ಞನಹ ಕಾಣು.
ವಿಶ್ವದಾಭಿರಾಮ ಕೇಳು ವೇಮ.

ಅನಲವ (ಅಗ್ನಿ) ಕೊಂಚವಿದ್ದರೂ, ತೇಜಗೊಂಡು, ಉರಿಸುತ್ತ ಇರುವುದು. ತೇಜಸ್ಸು ಇರುವವರೆಗೂ ಅರಿವು ಮಂಕಾಗದು, ಮ್ಲಾನವಾಗದು, ಮಬ್ಬಾಗದು. ಇಂಥ ಉಜ್ವಲವಾದ ಅರಿವು ಮನಸ್ಸಿನಲ್ಲಿ ಇಲ್ಲದೆ ಹೋಗದು. ಇಂಥ ಜ್ವಲಂತ ಅರಿವು ಹೊಂದಿ, ಊರ್ಧ್ವ ಸ್ತರಕ್ಕೇರಿ, ತನ್ನ ತನುವನ್ನು ಮರೆಯುವವನು ಪರಮ ತತ್ವವನ್ನು ತಿಳಿಯುವನು. ಅಂಥವನು ತತ್ವಜ್ಞನಾಗುತ್ತಾನೆ.

ಕಂ. ಜೀವಾಧಾರವು ನೀರೇ.
ಜೀವಾಧಾರವು ಗಾಳಿಯು ಹೊಳೆಯುತಲಿರಲಾ
ಜೀವಿಗೆ ಬೇಕೊಂದೇ ತೆರ
ಈ ವಸ್ತು ಕೋರಲು ಲಭ್ಯ, ಇಳೆಯಲಿ, ವೇಮಾ.

ಜೀವಕ್ಕೆ ಆಧಾರವಾದುದು ನೀರೇ. ಜೀವಿಗಳಲ್ಲಿ ಜಲಚರಗಳಿಗಂತೂ ಸರಿಯೇ. ಅಂತೆಯೇ ಭೂಚರರಿಗೂ ನೀರು ಬೇಕು. ಖೇಚರರಿಗೂ ಬೇಕು. ಜೀವಿಸುವ ಪ್ರಾಣಿ, ಪಕ್ಷಿ, ಕ್ರಿಮಿ, ಕೀಟಗಳಿಗೂ ನೀರು ಬೇಕು. ಅಚರ ಜೀವಿಗಳಾದ ವನಸ್ಪತಿಗಳಿಗೂ ನೀರು ಬೇಕು. ಅದೇ ರೀತಿ ಜೀವಿಗಳಿಗೆ ವಾಯುವೂ ಜೀವಾಧಾರವಾಗಿದೆ. 'ಜೀವ್' ಎಂದರೆ ಉಸಿರಾಡಿಸುವುದು. ಮೇಲೆ ಹೇಳಿದ ಸಕಲ ಸಚರ, ಅಚರ ಜೀವಿಗಳಿಗೆಲ್ಲ ವಾಯುವು ಜೀವಾಧಾರವಾಗಿದೆ. ಹೀಗೆ ಜೀವಿಗೆ ನೀರು, ವಾಯುಗಳು, ಒಂದೇ ತೆರನಾಗಿ ಅಂದರೆ ಜೀವಾಧಾರವಾಗಿ ಬೇಕೆಂಬುದು ತಿಳಿಯುತ್ತಿರಲು ಆ ಜೀವಿಯು ಈ ವಸ್ತುಗಳನ್ನು ಕೋರಲು, ಪರಮಾತ್ಮನ ಕೃಪೆಯಿಂದ ಅವು ಇಲ್ಲಿ ಲಭ್ಯವಿವೆ.

ಕಂ. ಉದಕದೊಳಗೆ ತತ್ವವನ್ನು
ಮುದದಿ ಹುಡುಕಿ ತಾನಾಗುತ ತಿಳಿದವನು ಮನದೋಳ್.

ಉದಕ ತರಹ ತಾ ತತ್ತ್ವವು.
ಅದನರಿಯುವವನು ತತ್ತ್ವಮಯನಪ್ಪ ವೇಮಾ.

ದೇಹದಲ್ಲಿ ಶೋಣಿತ (ರಕ್ತ), ಶುಕ್ರ (ವೀರ್ಯ), ಮೂತ್ರ ಮತ್ತು ಸ್ವೇದ (ಬೆವರು), ಲಾಲಾರಸ (ಜೊಲ್ಲು) ಎಂಬ ಪಂಚ ಧಾತುಗಳು. ಉದಕ ಅಂದರೆ ಅಪ್ ತತ್ತ್ವದಲ್ಲಿ ಸೇರುತ್ತವೆ. ಉದಕ ಮತ್ತು ಪೃಥಿವಿ ಅಂಶಗಳೇ ರಕ್ತ ; ಉದಕ ಮತ್ತು ಉದಕ ಅಂಶಗಳೇ ಶುಕ್ಲ, ಉದಕ ಮತ್ತು ಅಗ್ನಿ ಅಂಶಗಳೇ ಮೂತ್ರ, ಉದಕ ಮತ್ತು ವಾಯುವಿನ ಅಂಶಗಳೇ ಬೆವರು, ಉದಕ ಮತ್ತು ಆಕಾಶದ ಅಂಶಗಳೇ ಜೊಲ್ಲು. ಇದು ಉದಕದ ಪಂಚೀಕರಣ. ಶುಕ್ರ ಶೋಣಿತಗಳಿಂದ ತಾನು ಜನಿಸುತ್ತಾನೆ. ಲಾಲಾರಸದಿಂದ ಅನ್ನವನ್ನು ಜೀರ್ಣಿಸಿಕೊಂಡು ಬದುಕುತ್ತಾನೆ. ಮೂತ್ರ ಮತ್ತು ಬೆವರುಗಳನ್ನು ಉಚ್ಚಿಷ್ಟವಾಗಿ ವಿಸರ್ಜಿಸುತ್ತಾನೆ. ಹೀಗೆ ಉದಕದೊಳಗೆ ಮುದದಿಂದ ತತ್ತ್ವವನ್ನು ಹುಡುಕಿ, ತಾನಾಗುತ್ತ ಮನದಲ್ಲಿ ತಿಳಿಯುತ್ತಾನೆ. ಹೀಗೆ ಉದಕದ ರೀತಿಯಲ್ಲಿಯೇ ತಾನು ದೇಹದ ಅಂತಃಕರಣಗಳಿಗೆ, ಇಂದ್ರಿಯಾದಿಗಳಿಗೆ, ಭೂತಗಳಿಗೆ ಕಾರಣನಾದ ತತ್ತ್ವವು. ಹೀಗೆ ಅದನ್ನು ಅರಿಯುವವನು ತತ್ತ್ವಮಯನಾಗುತ್ತಾನೆ.

ಆ. ನೀರು ಮೊದಲು ಹಾಕೆ, ನೀರೆ ಮೊಳಕೆಯಾಯ್ತು.
ಮೊಳಕೆ ವಿಶ್ವವಾಯ್ತು ಮತ್ತೆ ಬೆಳೆದು.
ನೀರು ವಿಶ್ವವಾದುದ ನೆರೆಗಂಡು ತಿಳಿದುಕೋ.
ವಿಶ್ವದಾಭಿರಾಮ ಕೇಳು ವೇಮ.

ಬೀಜಕ್ಕೆ ಮೊದಲು ನೀರು ಹಾಕಿದಾಗ, ಅದು ನೀರನ್ನು ಹೀರಿಕೊಂಡು ಮೊಳಕೆಯಾಗುತ್ತದೆ. ನೀರಿಲ್ಲದಿದ್ದರೆ ಬೀಜ ರೂಪದಲ್ಲಿಯೇ ಉಳಿಯುತ್ತಿತ್ತು. ಹೀಗೆ, ಮೊಳಕೆಯೊಡೆಯಲು ನೀರೇ ಕಾರಣ. ನೀರೇ ಮೊಳಕೆಯಾಗುತ್ತದೆ. ಮೊಳಕೆಗೆ ನೀರು ಎರೆದಾಗ ಬೆಳೆದು ವೃಕ್ಷವಾಗುತ್ತದೆ. ಸಸ್ಯ ಶ್ಯಾಮಲವಾಗುತ್ತದೆ. ನೀರಿನ ಅಂಶಗಳಾದ ಶುಕ್ರ ಶೋಣಿತಗಳಿಂದ ಜನಿಸಿದ ಪಿಂಡವು ಬೆಳೆದು ವಿವಿಧ ಪ್ರಾಣಿ ಸಂಕುಲವಾಗುತ್ತದೆ. ನೀರಿನಿಂದ ಅಂದರೆ ಅಪ್ ತತ್ತ್ವದಿಂದ ಪೃಥಿವೀ ತತ್ತ್ವವಾಗುತ್ತದೆ. ಹೀಗೆ ನೀರು ವಿಶ್ವವಾಗುತ್ತದೆ. ಇದನ್ನು ಚೆನ್ನಾಗಿ ತಿಳಿದುಕೊಳ್ಳಬೇಕು.

ಆ. ನೀರು ಕ್ಷಾರವಾಯ್ತು, ಕ್ಷಾರವು ನೀರಾಯ್ತು ;
ಕ್ಷಾರವಾದ ನೀರು ಕ್ಷಾರವಾಯ್ತು.
ಕ್ಷಾರದಲ್ಲಿ ನೀರು ಕಡು ರಮ್ಯವಿಪ್ಪುದು.
ವಿಶ್ವದಾಭಿರಾಮ ಕೇಳು ವೇಮ.

ಮೇಘದಿಂದ ಬಿದ್ದ ಮಳೆ ಹನಿಗಳು ಭೂವಿಯ ಮೇಲೆ ಬಿದ್ದು, ಹೊಳೆಯಾಗಿ ಹರಿದು, ಭೂಮಿಯ ಲವಣಗಳು ಸೇರಿ ಕ್ಷಾರವಾಗುತ್ತದೆ, ಸಾಗರವನ್ನು ಸೇರುತ್ತದೆ. ಸಾಗರದ ನೀರಿನಿಂದ ಕ್ಷಾರವನ್ನು ತಯಾರಿಸುತ್ತಾರೆ. ಹೀಗೆ ನೀರು ಕ್ಷಾರವಾಗುತ್ತದೆ. ಇನ್ನು ಕ್ಷಾರವು ತೊಯ್ದರೆ, ಕರಗಿ ನೀರಾಗುತ್ತದೆ. ಕ್ಷಾರವಾದ ಸಾಗರದ ನೀರು ದಡದ ಮಡಿಗಳಲ್ಲಿ ನಿಂತು ಭಾಷ್ಪೀಭವಿಸಿ, ಕ್ಷಾರ (ಉಪ್ಪು) ವು ಹುಟ್ಟುತ್ತದೆ. ಕ್ಷಾರಗೂಡಿದ ಸಾಗರದ ನೀರು ಅಪಾರವಾಗಿ, ಅಗಾಧವಾಗಿ, ಕಣ್ಣಿಗೆ ಕಡು ರಮ್ಯವಾಗಿ ಇರುತ್ತದೆ.

ಆ. ಪೃಥಿವಿಗುದಕ ಸುರಿಯೆ, ಪೃಥಿವಿ ಮೇಲೆ ಮೊಳಕೆ.
ಮೊಳಕೆ ಪೃಥಿವಿಗಿಳಿಯೆ, ತಂದೆ ಮಗನು.
ಧರಣಿ ಜನರಿಗೆಲ್ಲ ತಾಯಿಯೇ ಹೆಂಡತಿಯು.
ವಿಶ್ವದಾಭಿರಾಮ ಕೇಳು ವೇಮ.

ಬೀಜ ಬಿತ್ತಿದ ಭೂಮಿಗೆ ಉದಕವನ್ನು ಸುರಿಯಲು, ಅದು ಮೊಳಕೆಯೊಡೆದು ಪೃಥಿವಿಯ ಮೇಲೆ ಬರುತ್ತದೆ. ಇದು ಉದಕಾಂಶದಿಂದ ತಾನೇ ? ಹೀಗೆ ಉದಕವು ತಂದೆಯಾದರೆ, ಮೊಳಕೆಯು ಮಗನಂತೆ ಆಗುತ್ತದೆ. ಇನ್ನು, ಮೇಲೆ ಬಂದ ಮೊಳಕೆಯು ಪೋಷಣೆಗಾಗಿ ತನ್ನ ಮೂಲವನ್ನು (ಬೇರನ್ನು) ಹರಡಿ ಪೃಥಿವಿಗಿಳಿದರೆ, ಪೃಥಿವಿಯೇ ರಕ್ಷಿಸುವ ತಾಯಿಯಾಗುತ್ತದೆ. ನೀರು ಪೋಷಕನಾದ ಪತಿಯಾಗುತ್ತದೆ. ಹೀಗೆ ಧರಣಿಯು ಜನರಿಗೆ ಬೀಜವನ್ನು ಗರ್ಭದಲ್ಲಿರಿಸಿಕೊಂಡು ಮೊಳಕೆಯಾಗಿಸಿ ಪ್ರಸೂತಿಸುವ ತಾಯಿಯೂ ಅಹದು ಮತ್ತು ನೀರಿನಿಂದ ಪೋಷಕಾಂಶಗಳನ್ನು ಪಡೆದು ಹದಗೊಂಡು, ಮೊಳಕೆಯ ಬೇರುಗಳು ಪೃಥಿವಿಗಿಳಿದು ಸುಖಭೋಗ ಪಡೆಯುವುದರಿಂದ ಭೋಗ ವಸ್ತುವಾದ ಹೆಂಡತಿಯೂ ಅಹುದು. ಹೀಗೆ ಧರಣಿಯ ಜನರಿಗೆಲ್ಲ ತಾಯಿಯೇ ಹೆಂಡತಿಯು ಎನಿಸುತ್ತಿದೆ.

ಕಂ. ಭೂದೇವಿಯೆನಲು ಮೃತ್ತಿಕೆ,
ಭೂದೇವತೆಗಳು, ಕ್ರಮದಿಂ ಹುಟ್ಟಿದವೆನಿತೋ ?
ಆ ದೇವತೆಗಳಿಗೆ ಗೊತ್ತು ;
ಆದಿಯನಾವನರರಿಯೆನೆನುವರು ವೇಮಾ.

ಭೂದೇವಿ ಎನ್ನಲು ಮೃತ್ತಿಕೆಯೇ ಆಗಿವೆ. ಪೃಥಿವೀ ತತ್ತ್ವದ ಒಂದು ಭಾಗವು ಆಕಾಶ ತತ್ತ್ವದ ನಾಲ್ಕು ಭಾಗಗಳೊಂದಿಗೆ ಸೇರಿ ವಾಕ್ ಇಂದ್ರಿಯವಾಯಿತು. ಅದನ್ನು ನಿಯಂತ್ರಿಸುವ ಅಧಿದೇವತೆಯು ಅಗ್ನಿ. ಪೃಥಿವಿ ತತ್ತ್ವದ ಒಂದು ಭಾಗವು ವಾಯು ತತ್ತ್ವದ ನಾಲ್ಕು ಭಾಗಗಳೊಂದಿಗೆ ಸೇರಿ ಪ್ರಾಣ ಇಂದ್ರಿಯವಾಯಿತು. ಅದರ ಅಧಿದೇವತೆಯು ಇಂದ್ರ. ಪೃಥಿವಿ ತತ್ತ್ವದ ಒಂದು ಭಾಗವು ಅಗ್ನಿ ತತ್ತ್ವದ ನಾಲ್ಕು ಭಾಗಗಳೊಂದಿಗೆ ಸೇರಿ, ಪಾದ ಇಂದ್ರಿಯವಾಯಿತು. ಇದರ ಅಧಿದೇವತೆಯು ಉಪೇಂದ್ರ. ಇದೇ ರೀತಿ, ಪೃಥ್ವಿ ತತ್ತ್ವದ ಒಂದು ಭಾಗವು ಅಪ್ ತತ್ತ್ವ ನಾಲ್ಕು ಭಾಗಗಳೊಂದಿಗೆ ಸೇರಿ ಗುಹ್ಯ ಇಂದ್ರಿಯವಾಯಿತು. ಇದರ ಅಧಿದೇವತೆಯು ಪ್ರಜಾಪತಿ. ಕೊನೆಯದಾಗಿ, ಪೃಥಿವಿ ತತ್ತ್ವದ ಒಂದು ಭಾಗವು ಪೃಥಿವಿ ತತ್ತ್ವದ ನಾಲ್ಕು ಭಾಗಗಳೊಂದಿಗೆ ಸೇರಿ, ಗುದ ಇಂದ್ರಿಯಯವಾಯಿತು. ಅದರ ಅಧಿದೇವತೆ ಮೃತ್ಯು. ಈ ಭೂದೇವತೆಗಳು ಕ್ರಮವಾಗಿ ಎಷ್ಟೋ ಹುಟ್ಟಿದವು. ಅದೆಲ್ಲ ಆ ದೇವತೆಗಳಿಗೇ ಗೊತ್ತು. ಆದರೆ, ಇವೆಲ್ಲವುಗಳ ಆದಿಯನ್ನು ಯಾರೂ ಅರಿಯರು ಎನ್ನುತ್ತಾರೆ.

ಕಂ. ಮೃತ್ತಿಕೆಯೇ ತನುವೆನುವುದು ;
ಮೃತ್ತಿಕೆ ದಳವೆತ್ತಿ ನಿಲುವ ಮುನ್ನಿನ ತರುಗಳ್
ಮೃತ್ತಿಕೆ ಮೂಲವು ಮೂರಕೆ
ಮತ್ತೀ, ತೆರನರಿಯರು ಧರೆ, ಮಹಿಮರು ವೇಮಾ.

ಮೃತ್ತಿಕೆಯೇ ತನುವೆನ್ನುವುದು. ಏಕೆಂದರೆ, ಮರಣಿಸಿದ ಬಳಿಕ ದಹಿಸಿ ಇಲ್ಲವೆ ದಫನ ಮಾಡಿ ಮಣ್ಣುಗೂಡಿಸುವರಷ್ಟೇ. ತರುಗಳು ದಳವೆತ್ತಿ ನಿಲ್ಲುವ ಮುನ್ನ ಮೃತ್ತಿಕೆಯಾಗಿದ್ದವು. ಅಂಡಜ, ಪಿಂಡಜ ಮತ್ತು ಬುದ್ಬುದಗಳೆಂಬ ಮೂರು ಜಾತಿಯ ಜೀವಿಗಳಿಗೂ ಮೃತ್ತಿಕೆಯೇ ಮೂಲವಾಗಿದೆ. ಜಗತ್ತಿನಲ್ಲಿ ಮಹಿಮರಾದವರು ಸಹ ಈ ತೆರನಾದ ಮೃತ್ತಿಕೆಯ ಮಹಿಮೆಯನ್ನು ಅರಿಯರು.

ಆ. ಮಣ್ಣಿನೊಳಗೆ ಹುಟ್ಟಿ, ಮಣ್ಣಿನೊಳಗೆ ಬೆಳೆದು,
ಮಣ್ಣು ಕಂಡು ನರರು ಮಗ್ನರಹರು.
ಮಣ್ಣು ಮಣ್ಣು ಸೇರೆ, ಮನವ ನಿಲಿಸನೇಕೆ ?
ವಿಶ್ವದಾಭಿರಾಮ ಕೇಳು ವೇಮ.

ಜೀವಿಗಳು ಮಣ್ಣಿನೊಳಗೇ ಹುಟ್ಟುತ್ತಾರೆ. ಮಣ್ಣು ಇಲ್ಲವೆ ಮಣ್ಣಿನ ಹುಟ್ಟುವಳಿಯನ್ನು ತಿಂದು ಬೆಳೆಯುತ್ತಾರೆ. ಅದರಿಂದ ಜನರು ಮಣ್ಣು ಕಂಡು ಆಸಕ್ತಿ ಹೊಂದಿ ಅದರಲ್ಲಿಯೇ ಮಗ್ನರಾಗುತ್ತಾರೆ. ಕೊನೆಗೆ ಮೃಣ್ಮಯವಾದ ತನುವು ಮಣ್ಣನ್ನು ಸೇರುತ್ತದೆ ಅಂದ ಮೇಲೆ, ಸೂಕ್ಷ್ಮವಾದ ಮನವನ್ನು ನಿಲ್ಲಿಸಿ, ಊರ್ಧ್ವತರ ಮತ್ತು ಊರ್ಧ್ವತಮ ಸೂಕ್ಷ್ಮ ಮತ್ತು ಕಾರಣ ತತ್ತ್ವಗಳಲ್ಲಿ ಸೇರುವಂತೆ ಸಾಧನ ಮಾಡದೆ ಇರುವನೇಕೋ ?

ಆ. ಮಣ್ಣು ತಿನುವುದೆನಲು, ಮುಸುಗುಡುವ ಜನರೇ !
ಮಣ್ಣೊಳಗಿನ ಮೇಲ್ಮೆ ಮರೆವುದೇಕೆ ?
ನೀರಿನೊಳಗಿನ ಮೇಲ್ಮೆ ನಿಖಿಲವಾಗಿ ಉಂಟು.
ವಿಶ್ವದಾಭಿರಾಮ ಕೇಳು ವೇಮ..

ಮಣ್ಣು ತಿನ್ನುವುದೆಂದರೆ ಕೋಪಿಸಿ ಬುಸುಗುಡುವ ಜನರೇ ! ಕೇಳಿರಿ. ಮಣ್ಣಿನೊಳಗೆ ಅನೇಕ ಶರೀರ ಪೋಷಕ ಖನಿಜ ದ್ರವ್ಯಗಳಿವೆ, ಔಷಧಿಗಳಿವೆ. ಮಣ್ಣಿನ ಹುಟ್ಟುವಳಿಗಳಿಗಂತೂ ಲೆಕ್ಕವೇ ಇಲ್ಲ. ಬಗೆ ಬಗೆಯ ಹಣ್ಣು ಹಂಪಲಗಳು, ವಿವಿಧ ದವಸ ಧಾನ್ಯಗಳು, ತರಕಾರಿಗಳು ಇತ್ಯಾದಿ. ಹೀಗಿರಲು ಮಣ್ಣಿನೊಳಗಿನ ಮೇಲ್ಮೈಯನ್ನು ಮರೆಯುವುದೇಕೆ ? ನೀರಂತೂ ಜೀವಿಗಳ ಜೀವಾಧಾರವಾಗಿದೆ. ಖೇಚರಿ, ಜಲಚರಿ ಜೀವಿಗಳಿಗೆಲ್ಲ ನೀರು ಬೇಕೇ ಬೇಕು. ಉದ್ಭಿಜಗಳಾದ ವನಸ್ಪತಿಗಳಿಗೂ ನೀರು ಬೇಕು. ಹೀಗೆ ನೀರಿನೊಳಗಿನ ಮೇಲ್ಮೈಯು ನಿಖಿಲವಾಗಿ ಉಂಟು.

ಆ. ಇಳೆಯು ಗಗನ ಮಧ್ಯೆ ಇರುವ ಜನರು ಎಷ್ಟೋ ?
ತಿಳಿಸಲಾರೆ ಇರಲಿ, ತರವೆ ಅದನು ?
ಬದುಕುವವರು ಸತ್ತು ಬೀಳುವವರೆ ಕಾಣು.
ವಿಶ್ವದಾಭಿರಾಮ ಕೇಳು ವೇಮ.

ಇಳೆ, ಜಲ, ಅಗ್ನಿ, ವಾಯು ಮತ್ತು ಗಗನಗಳಿರುವ ಪಂಚ ಭೌತಿಕ ಜಗತ್ತಿನಲ್ಲಿ ಇರುವ ಜನರು ಎಷ್ಟೋ ? ಲೆಕ್ಕಕ್ಕೆ ಸಿಕ್ಕದು. ಅದೇನೇ ಇರಲಿ, ಅದನ್ನು ತಿಳಿಯಲಾರೆವು. ಅಂಥ ಸಾಹಸ ಮಾಡುವುದು ತರವೇ ? ಇಲ್ಲಿ ಹುಟ್ಟಿ ಬದುಕುವವರು ವಿಧಿ ನಿಗದಿತ ಸಮಯಕ್ಕೆ ಸತ್ತು ಹೋಗುವವರೇ ಆಗಿದ್ದಾರೆ. ಏಕೆಂದರೆ, ಅವರಲ್ಲಿ ಬಹುತೇಕ ಜನರು ದೇಹಾತ್ಮ ಬುದ್ಧಿಯವರೇ

ಆಗಿರುತ್ತಾರೆ. ಹೀಗಾಗಿ, ಅಮರವಾದ ಆತ್ಮ ತತ್ತ್ವವನ್ನು ತಲುಪುವ ಸಾಧನೆಯನ್ನು ಮಾಡುವುದಿಲ್ಲ.

ಆ. ಪಾದ ಪಾಯುಗಳನು, ಪರಮ ದೇಹ ಹೊತ್ತು.,
ದೇಹಿ ಜೀವಿಗಳನು ತಿಳಿಯೆ ಹೊರುವ.
ಧರಣಿಯೊಳಿವೆರಡನು ತಾನೇಕೆ ಹೊರುವನೊ ?
ವಿಶ್ವದಾಭಿರಾಮ ಕೇಳು ವೇಮ.

ದೇಹಿಯು, ಕರ್ಮೇಂದ್ರಿಯಗಳಾದ ಪಾದ, ಪಾಣಿ, ವಾಕ್, ಗುಹ್ಯ, ಗುದ (ಪಾಯು)ಗಳನ್ನು ಒಳಗೊಂಡ ದೇಹವನ್ನು ಹೊರುತ್ತಾನೆ. ದೇಹಿಯು ಜೀವಿಗಳನ್ನೂ ಹೊರುತ್ತಾನೆ. ಧರಣಿಯಲ್ಲಿ ಜೀವಿಯು ಕರ್ಮೇಂದ್ರಿಯಗಳನ್ನೂ, ಜೀವಿಯನ್ನೂ ತಾನೇಕೆ ಹೊರುತ್ತಾನೆ ?

ಆ. ತತ್ತ್ವ ತಾ ಹುಡುಕಲು, ತಾನೆ ಹೋಗು ಜೀವ.
ತತ್ತ್ವವರಸಿ ನೋಡೆ, ತಾನೆ ಆತ್ಮ.
ಮಣ್ಣು ಗಗನವಿಲ್ಲ, ಮಾಯೆಯೆನುವುದಿಲ್ಲ.
ವಿಶ್ವದಾಭಿರಾಮ ಕೇಳು ವೇಮ.

(ತತ್+ತ್ವ) ತತ್ತ್ವವನ್ನು ತಾನು ಹುಡುಕುತ್ತಿದ್ದರೆ, ತಾನು ಇನ್ನೂ ತತ್ತ್ವವನ್ನು ತಲುಪದ ಸಾಧಕನಾಗಿಯೇ ಇರುತ್ತಾನೆ. ಆಗ ತಾನೇ ಜೀವನೆನಿಸುತ್ತಾನೆ. ಇನ್ನು ತತ್ತ್ವವನ್ನು ಅರಸಿ ನೋಡಿದ ಬಳಿಕ, ಸಾಕ್ಷಾತ್ಕಾರ ಪಡೆದ ಬಳಿಕ, ತಾನೇ ಆತ್ಮನೆನಿಸುತ್ತಾನೆ. ಒಮ್ಮೆ ಆತ್ಮದ ಉಪಲಬ್ಧಿಯಾಯಿತೆಂದರೆ ತೀರಿತು. ಅವನಿಗೆ ಮಣ್ಣು ಗಗನಗಳೆಂಬ ಪಂಚ ಭೂತಾದಿ ಜಡ ಪ್ರಪಂಚದ ಗೊಡವೆಯೂ ಇಲ್ಲ. ಈಗ ಇದ್ದು ಮತ್ತೆ ಇಲ್ಲವೆನಿಸುವ ಮಾಯೆಯ ಗೊಡವೆಯೂ ಇಲ್ಲ. ಎಲ್ಲವೂ ನಿಜವಾಗಿರುತ್ತದೆ. ಸತ್ಯವಾಗಿರುತ್ತದೆ.

ಆ. ತನುವಿನೊಳಗೆ ಆತ್ಮ ತತ್ತ್ವವನು ಅರಿಯದೆ,
ಹೊರಗೆ ಇರುವುದೆಂದು ಹುಡುಕಲಾಗ,
ಭಾನುವಿರಲು ದೀಪ ಬೆಳಗಿ ಹುಡುಕಬಹುದೆ ?
ವಿಶ್ವದಾಭಿರಾಮ ಕೇಳು ವೇಮ.

ಸ್ಥೂಲ ತನು, ಸೂಕ್ಷ್ಮ ತನು ಮತ್ತು ಕಾರಣ ತನು ಎಂದು ತರತಮ ಭಾವದಿಂದ ವಿಶ್ಲೇಷಿಸುವುದುಂಟು. ಯಾವುದು ಕಾರ್ಯಕಾರಣಗಳಿಗೆ ಅತೀತವಾಗಿದೆಯೋ, ಆ ಕಾರಣಾತೀತವೇ ಆತ್ಮ. ಆದರೆ ಜನರು ತನುವಿನೊಳಗೆ ಈ ಆತ್ಮವಿರುವುದನ್ನು ಅರಿಯುವುದಿಲ್ಲ. ಆತ್ಮವು ಬೇರೆಲ್ಲಿಯೋ ಇರುವದೆಂದು ಭ್ರಮಿಸಿ ಹುಡುಕುತ್ತಾರೆ. ಇದು ಹೇಗೆಂದರೆ, ಸೂರ್ಯನು ಪ್ರಖರವಾಗಿ ಪ್ರಕಾಶಿಸುತ್ತಿರುವಾಗ, ಯಾವುದೊಂದು ವಸ್ತುವನ್ನು, ಆ ಪ್ರಕಾಶದಲ್ಲಿ ಹುಡುಕದೆ, ಕೈ ದೀಪ ಹೊತ್ತಿಸಿ ಅದರ ಬೆಳಕಿನಲ್ಲಿ ಹುಡುಕಿದಂತೆ.

ಆ. ಅಷ್ಟ ತನುಗಳಿಂಗೆ ಆದಿ ತುಂಬಿಕೊಂಡ ;
ಆದಿ ಶಕ್ತಿಗೂಡಿ ಅಭವನಾದ.
ಭಯವು ಇಲ್ಲದಿಹನು ಬ್ರಹ್ಮನಹ ಯೋಗಿ.
ವಿಶ್ವದಾಭಿರಾಮ ಕೇಳು ವೇಮ.

ಪಂಚ ಮಹಾಭೂತ ತತ್ತ್ವಗಳು, ಚಿತ್ತ ತತ್ತ್ವ, ಅಹಂ ತತ್ತ್ವ ಮತ್ತು ಬುದ್ಧಿ ತತ್ತ್ವಗಳಿಗೆ ಆದಿಯಾದ ಮೂಲ ಪ್ರಕೃತಿಯು ತುಂಬಿಕೊಂಡಿದೆ. ಇದುವೇ ಭವ. ಈ ಆದಿ ಶಕ್ತಿಯನ್ನು ಕೂಡಿ, ಅಭವನಾಗಿದೆ. ಈ ಅಭವನೇ ನಿರ್ಗುಣ ಬ್ರಹ್ಮ ತಾನೇ ? ನಿರ್ಗುಣ ಬ್ರಹ್ಮವು ಕೇವಲವಿದೆ. ಅದಕ್ಕೆ ಎದುರು ಬೇರೇನಿಲ್ಲ. ಅದು ಅದ್ವೀತಿಯ. ಎದುರು ಇಲ್ಲದಾಗ ಭಯವೆಲ್ಲಿ ಬಂತು ? ಹೀಗೆ ಬ್ರಹ್ಮಜ್ಞನಾದ ಯೋಗಿಯು ಭಯ ಇಲ್ಲದವನಾಗಿದ್ದಾನೆ.

ಆ. ಅಣುವಿನಲ್ಲಿ ಉಂಟು ಅಖಿಲ ಜಗತ್ ಎಲ್ಲ.
ಅಣುವು ತನ್ನೊಳಗೆ ಅಡಗಿ ಉಂಟು.
ಮನಸು ನಿಲಿಪ ನರನು ಮತ್ತೆ ಮುಕ್ತಿ ಪಡೆವ.
ವಿಶ್ವದಾಭಿರಾಮ ಕೇಳು ವೇಮ.

ಈಗ ವೈಜ್ಞಾನಿಕವಾಗಿಯೂ ಸಿದ್ಧವಾಗಿರುವಂತೆ, ಅಣುವಿನಲ್ಲಿ ಪ್ರೊಟೊನ್, ನ್ಯೂಟ್ರೊನ್, ಇಲೆಕ್ಟ್ರಾನಗಳು ಸಂತತ ಚಲನೆಯಲ್ಲಿರುತ್ತವೆ. ಅದೇ ರೀತಿ, 'ಗಚ್ಛತಿ ಇತಿ ಜಗತ್' ಅಂದರೆ ಚಲಿಸುತ್ತದೆಯಾದ್ದರಿಂದ ಜಗತ್ತೆನ್ನಿಸಿದೆ. ಹೀಗೆ ಒಂದು ಕೇಂದ್ರದ ಸುತ್ತ ಎಲ್ಲವೂ ಸುತ್ತುವುದು, ಅಣು ಮತ್ತು ಜಗತ್ತುಗಳಲ್ಲಿ ಸಾಮಾನ್ಯವಾಗಿದೆ. ಆದ್ದರಿಂದ ಎಲ್ಲ ಜಗತ್ತು ಅಣುವಿನಲ್ಲಿ ಉಂಟು. ಇನ್ನು ಅಣು ತನ್ನೊಳಗೇ ಅಡಗಿಯುಂಟು, ಈ ಸೃಷ್ಟಿ ರಹಸ್ಯವನ್ನು ಅರಿತು, ಚಲಿಸುವ ಮನಸ್ಸನ್ನು ನಿಲ್ಲಿಸುವುದೇ ಜಗದ್ ವ್ಯಾಪಾರದಿಂದ ಮುಕ್ತಿ ಇಲ್ಲವೆ ಬಿಡುಗಡೆ.

ಆ. ಸ್ಥೂಲ ಕಣ್ಣು ಗುಡ್ಡೆ, ಸೂಕ್ಷ್ಮ ಕಣ್ಣು ಪಾಪೆ.
ಕಣ್ಣು ಪಾಪೆಯುಂಟು ಕಾರಣಾಗಿ.
ಕಾರಣದಲಿ ಬ್ರಹ್ಮ ಕಳೆಯನರಿಯಬೇಕು.
ವಿಶ್ವದಾಭಿರಾಮ ಕೇಳು ವೇಮ.

ಜಗತ್ತಿನಲ್ಲಿ ನಡೆಯುವ ಪ್ರತಿಯೊಂದು ಕಾರ್ಯಕ್ಕೂ ಕಾರಣವೊಂದು ಇದ್ದೇ ಇರುತ್ತದೆ. ಹೀಗೆ ವಿಶ್ಲೇಷಿಸುತ್ತ ಹೋದರೆ ಮೂಲ ಕಾರಣವನ್ನು ತಲುಪಬಹುದು. ಇದನ್ನು ದೃಕ್ ದೃಶ್ಯ ನ್ಯಾಯದಿಂದ ತಿಳಿಯಬಹುದು. ಅಂದರೆ ಸ್ಥೂಲ ಕಣ್ಣು ಗುಡ್ಡೆ ದೃಶ್ಯವಾದರೆ, ಅದನ್ನು ನೋಡುವ ಸೂಕ್ಷ್ಮವಾದ ಕಣ್ಣು ಪಾಪೆಯು ದೃಕ್ ಆಗುತ್ತದೆ. ಅದಕ್ಕೆ ಕಾರಣವೆನ್ನಬಹುದು. ಹೀಗೆ ಇಂದ್ರಿಯಗಳು ಕಾರ್ಯವಾದರೆ ಚಿತ್ತವು ಕಾರಣ, ಚಿತ್ತವು ಕಾರ್ಯವಾದರೆ, ಅಹಂ ತತ್ತ್ವವು ಕಾರಣ, ಅಹಂ ತತ್ತ್ವವು ಕಾರ್ಯವಾದರೆ, ಬುದ್ಧಿ ತತ್ತ್ವವು ಕಾರಣ, ಬುದ್ಧಿ ತತ್ತ್ವವು ಕಾರ್ಯವಾದರೆ, ಅಗ್ರ್ಯ ಬುದ್ಧಿಯಲ್ಲಿ ಹೊಳಪೆಯುವ ಬ್ರಹ್ಮವು ಕಾರಣವೆನಿಸುತ್ತದೆ. ಮುಂದೆ ಕಾರ್ಯ ಕಾರಣ ನ್ಯಾಯವು ಅನ್ವಯವಾಗದು. ಏಕೆಂದರೆ ಬ್ರಹ್ಮವು ಕಾರಣಾತೀತವಿದೆ.

ಇದೇ ಭಾವದ ಮುಂದಿನ ಪದ್ಯವನ್ನು ನೋಡಿರಿ.

ಆ. ಸ್ಥೂಲವೆನಲು ಗುಡ್ಡೆ, ಸೂಕ್ಷ್ಮವೆನಲು ಪಾಪೆ,
ಪಾಪೆಯೊಳಗೆ ಜ್ಯೋತಿ ಪರಮ ಪದವು.

ನಾಳೆ ನಾಡಿದಿರಲು ನಿನ್ನ ಮನದಿ ನೋಡು.
ವಿಶ್ವದಾಭಿರಾಮ ಕೇಳು ವೇಮ.

ಮೇಲಿನ ಪದ್ಯದಲ್ಲಿ ತಿಳಿಸಿದಂತೆ, ಸೂಕ್ಷ್ಮ ಪಾಪೆಯು ದೃಕ್ ಆದರೆ ಸ್ಥೂಲ ಗುಡ್ಡೆಯು ದೃಶ್ಯವೆನಿಸುತ್ತದೆ. ಪಾಪೆಯಿಂದ ನೋಡಬೇಕಾದರೆ, ಜ್ಯೋತಿಯ ಬೆಳಕು ಬೇಕಲ್ಲವೇ? ಜ್ಯೋತಿಯು ಒಂದು ಮಟ್ಟದಲ್ಲಿ ಚಿತ್ತವಾಗಿಬಹುದು. ಮುಂದಿನ ಮಟ್ಟದಲ್ಲಿ ಅಹಂ ಮತ್ತು ಮಹತ್ ಇಲ್ಲವೆ ಬುದ್ಧಿಯಾಗಿಬಹುದು. ಅಂತಿಮವಾಗಿ ಜ್ಯೋತಿಯು ಪರಮ ಪದವಾದ ಪರಂಜ್ಯೋತಿಯಾಗುತ್ತದೆ. ಈ ಪರಮ ಪದವೇ ಆತ್ಮ ಜ್ಯೋತಿ. ನಾಳೆ ನಾಡಿದ್ದು ಎಂದು ಕಾಲ ಕಳೆಯದೆ ನಿನ್ನ ಮನದಲ್ಲಿ ಸಾಧನೆ ಮಾಡಿ, ಪರಂಜ್ಯೋತಿಯನ್ನು ನೋಡು.

ಆ. ಸೂಕ್ಷ್ಮ ರೂಪ ಹೊಂದಿ, ಸೂಕ್ಷ್ಮ ರೂಪವೆನಲು,
ಸ್ಥೂಲ ರೂಪ ಹೊಂದಿ ಸ್ಥೂಲ ರೂಪ ವೆನಲು,
ಮಾತು ಒಂದೆ ಇದ್ದು, ಮರ್ಮ ತಿಳಿಯಿರಯ್ಯ.
ವಿಶ್ವದಾಭಿರಾಮ ಕೇಳು ವೇಮ.

ಸಾಧನದಿಂದ ಮನಸ್ಸನ್ನು ಸೂಕ್ಷ್ಮಗೊಳಿಸಿದಂತೆಲ್ಲ, ಸೂಕ್ಷ್ಮ ವಸ್ತುಗಳ ಅರಿವಾಗುತ್ತವೆ. ಅಂದರೆ ವಸ್ತುವಿನ ಸೂಕ್ಷ್ಮ ರೂಪ ಗೋಚರಿಸುತ್ತದೆ. ಮನಸ್ಸು ಸ್ಥೂಲವಿರುವಾಗ ಸ್ಥೂಲ ರೂಪಗಳು ಗೋಚರಿಸುತ್ತವೆ. ಅಂದರೆ ಅದೇ ವಸ್ತುವು ಮೊದಲು ಸ್ಥೂಲವಾಗಿ ಗೋಚರಿಸಿದರೆ, ಬಳಿಕ ಸೂಕ್ಷ್ಮವಾಗಿ ಗೋಚರಿಸುತ್ತದೆ. ಕೊನೆಗೆ ಸೂಕ್ಷ್ಮತಮ ಆತ್ಮ ದೃಷ್ಟಿಯಿಂದ ನೋಡಿದರೆ, ಎಲ್ಲವೂ ಆತ್ಮವಾಗಿ ಕಾಣುತ್ತದೆ. ಮಾತು ಒಂದೇ ; ಮರ್ಮ ತಿಳಿಯಬೇಕು.

ಆ. ತತ್ತ್ವವರಿಯುವವನು ದೈವವರಿಯುತಿಹನು.
ಸರ್ವ ಸಾರಗಳನು ಸದೆ ಬಡಿಯುವ.
ನುಂಗುವವನು ಬಾಳಿ, ನುಂಗಬಹುದೆ ವಿಷವ ?
ವಿಶ್ವದಾಭಿರಾಮ ಕೇಳು ವೇಮ.

ತತ್+ತ್ವ = ತತ್ತ್ವ. ತತ್ತ್ವವನ್ನು ಅರಿಯುವವನು ತತ್ ಅನ್ನು ಅರಿಯುತ್ತಾನೆ. ಮಹತ್ ಅಥವಾ ಬುದ್ಧಿ ತತ್ತ್ವ, ಅಹಂ ತತ್ತ್ವ, ಚಿತ್ತ ತತ್ತ್ವ, ಪಂಚ ಮಹಾಭೂತ ತತ್ತ್ವಗಳು ; ಹೀಗೆ ತತ್ತ್ವಗಳನ್ನು ಅರಿಯುವವನು ದೈವವನ್ನು ಅರಿಯುತ್ತಾನೆ. ಇಂದ್ರಿಯಛಗಳನ್ನು ಸೆಳೆಯುವ ಸರ್ವ ಸಾರಗಳನ್ನು ಸದೆಬಡಿಯುತ್ತಾನೆ. ತತ್ ನಮಗೆ ಬೇಕಾದ ಬಾಳೇ ಹಣ್ಣು. ಅದನ್ನು ಬಿಟ್ಟು ವಿಷಯಾಸಕ್ತಿಯ ಸಾರದಂಥ ವಿಷವನ್ನು ನುಂಗಬಹುಹುದೇ ?

ಆ. ಮೊಸರಿನಲ್ಲಿ ತುಪ್ಪ, ಮರದ ಒಳಗೆ ಅಗ್ನಿ,
ಸರ್ವ ಸುಮಗಳಲ್ಲಿ ಸೌರಭಗಳು.
ಎಳ್ಳಿನೆಣ್ಣೆಯಂತೆ ಹೊಳೆಯುತಿಪ್ಪುದಾತ್ಮ.
ವಿಶ್ವದಾಭಿರಾಮ ಕೇಳು ವೇಮ.

ಆತ್ಮವು ಗುಪ್ತವಾಗಿದೆ. ಆತ್ಮವನ್ನು ಅರಿಯುವ ವಿದ್ಯೆಗೆ ಗುಪ್ತವಿದ್ಯೆ ಎನ್ನುತ್ತಾರೆ. ಅದು ಎಲ್ಲೆಡೆ ಇದ್ದರೂ ಹೊರಗಣ್ಣಿಗೆ ಕಾಣದು. ಇಂದ್ರಿಯಗಳಿಗೆ ಅಗೋಚರ. ಮನಕ್ಕೆ ಸಿಕ್ಕದು.

ಆದರೆ ಇದನ್ನು ಹೇಗೆ ವಿವರಿಸುವುದು ? ಮೊಸರಿನಲ್ಲಿ ತುಪ್ಪವಿರುವುದು ಕಾಣುವುದಿಲ್ಲ. ಮೊಸರನ್ನು ಕಡೆದು ಬೆಣ್ಣೆ ತೆಗೆದು, ಬೆಣ್ಣೆಯನ್ನು ಕಾಯಿಸಬೇಕು. ಆಗ ತುಪ್ಪವು ಗೋಚರವಾಗುತ್ತದೆ. ಅದೇ ರೀತಿ, ಮರದೊಳಗೆ ಅಗ್ನಿ ಇದೆ. ಅದು ಮೇಲು ನೋಟಕ್ಕೆ ಕಾಣದು. ಒಂದು ಮರದ ತುಂಡನ್ನು ಅರಣಿಯಾಗಿಸಿ, ಇನ್ನೊಂದನ್ನು ಉತ್ತರಾರಣಿಯಾಗಿಸಿ, ಉಜ್ಜಿದರೆ ಘರ್ಷಣೆಯಿಂದ ಅಗ್ನಿ ಉತ್ಪನ್ನವಾಗುತ್ತದೆ. ಬೆಂಕಿ ಕಡ್ಡಿಗಳು ಬರುವ ಮೊದಲು ಜನರು ಹೀಗೆಯೇ ಅಗ್ನಿಯನ್ನು ತಯಾರಿಸಿ ಮನೆ ಬಳಕೆಗೆ ಉಪಯೋಗಿಸುತ್ತಿದ್ದರು. ಸರ್ವ ಸುಮಗಳಲ್ಲಿ ಸೌರಭವು ಅಡಗಿದೆ. ಅದು ಪುಷ್ಪವು ಪ್ರಫುಲ್ಲಿತವಾಗಿ ಅರಳಿದ ಬಳಿಕ, ಗಾಳಿ ಬೀಸಿದಾಗ ಸುತ್ತಲೂ ಹರಡುತ್ತದೆ. ಇನ್ನು ಎಳ್ಳಿನಲ್ಲಿ ಎಣ್ಣೆ ಇರುತ್ತದೆ. ಅದು ಆ ಅವಸ್ಥೆಯಲ್ಲಿ ಕಾಣಬರದು. ಎಳ್ಳನ್ನು ಗಾಣಕ್ಕೆ ಹಾಕಿ ತಿರುವಿದಾಗ ಎಣ್ಣೆಯು ಹೊರಬೀಳುತ್ತದೆ. ಹೀಗೆ ಮೊಸರಿನಲ್ಲಿಯ ತುಪ್ಪ, ಮರದೊಳಗಿನ ಬೆಂಕಿ, ಸುಮದೊಳಗಿನ ಸೌರಭ ಹಾಗೂ ಎಳ್ಳಿನೊಳಗಿನ ಎಣ್ಣೆಗಳು ಕೆಲವೊಂದು ಪ್ರಕ್ರಿಯೆಗಳ ಮೂಲಕ ತೋರುವಂತೆ, ಗುಪ್ತವಾದ ಆತ್ಮವು ಸಾಧನೆಯ ಬಳಿಕ ಗೋಚರಿಸುತ್ತದೆ.

ಆ. ಹಸು ಕೆಚ್ಚಲು ಹಿಂಡಿ, ಹಾಲು ಕಾಯಿಸಿಟ್ಟು,
ಹೆಪ್ಪುಗಟ್ಟಿ, ಮೊಸರು ಹೆಸರು ಬಂತು.
ನವನೀತವಿಪ್ಪಂತೆ ನಮ್ಮೊಳುಂಟು ಪರವು.
ವಿಶ್ವದಾಭಿರಾಮ ಕೇಳು ವೇಮ.

ಈ ಮೊದಲಿನ ಪದ್ಯದಲ್ಲಿ ಮೊಸರಿನಲ್ಲಿ ತುಪ್ಪವಿರುವಂತೆ ಆತ್ಮನ ಅಸ್ತಿತ್ವವನ್ನು ತಿಳಿಸಲಾಗಿದೆ. ಈ ತುಪ್ಪದ ಪೂರ್ವ ರೂಪವಾದ ಬೆಣ್ಣೆಯನ್ನು ಕಾಣಬೇಕಾದರೆ, ಅನುಸರಿಸಬೇಕಾದ ಪೂರ್ವ ಕ್ರಮಗಳನ್ನು ಕುರಿತು ಹೇಳಿದ್ದಾರೆ. ಹಸುವಿನ ಕೆಚ್ಚಲನ್ನು ಹಿಂಡಿ, ಹಾಲು ಪಡೆಯಬೇಕು. ಹಾಲನ್ನು ಕಾಯಿಸಿ ಅದರಲ್ಲಿ ಅನಿಷ್ಟ ಕ್ರಿಮಿಗಳನ್ನು ನಾಶಗೊಳಿಸಬೇಕು. ಅದಕ್ಕೆ ಹೆಪ್ಪು ಹಾಕಿ ಗಟ್ಟಿಗೊಳಿಸಬೇಕು. ಆಗ ಅದಕ್ಕೆ ಮೊಸರು ಎಂಬ ಹೆಸರು ಬರುತ್ತದೆ. ಮೊಸರನ್ನು ಕಡೆಗೋಲಿನಿಂದ ಕಡೆದು ಮಜ್ಜಿಗೆಯ ಮೇಲೆ ತೇಲುವ ನವನೀತವನ್ನು ಪಡೆಯಬೇಕು. ಅದೇ ರೀತಿ, ಹಸುಗಳಂತಿರುವ ಮಾನವ ಪ್ರಾಣಿಗಳು ತಮ್ಮೊಳಗಿರುವ ಆತ್ಮನನ್ನು ಪಡೆಯಲು, ಸ್ಥೂಲ ಪ್ರಪಂಚವನ್ನು ದಾಟಿ, ಸೂಕ್ಷ್ಮ ತತ್ತ್ವಗಳನ್ನು ಶೋಧಿಸಿ, ಕಾರಣ ತತ್ತ್ವದಲ್ಲಿಯ ಪರವನ್ನು ಪ್ರಾಪ್ತಿ ಮಾಡಿಕೊಳ್ಳಬೇಕು.

ಆ. ಮಹ್ನಿ ಲೋಹಗಳಲಿ, ವೃಕ್ಷವು ಶಿಲೆಯಲ್ಲಿ,
ಪಟವು ಗೋಡೆಗಳಲಿ ಪೊಳಿವ ಉಸುಕು.
ತರುವಿಗಂಟಿದಂತೆ ದೇಹದಲ್ಲಿ ಜೀವಿ.
ವಿಶ್ವದಾಭಿರಾಮ ಕೇಳು ವೇಮ.

ಮಹ್ನಿಯಲ್ಲಿ (ಬೆಂಕಿಯಲ್ಲಿ) ಲೋಹವನ್ನು ಕಾಯಿಸಿದರೆ, ಅದು ಕಾಯ್ದು ನಿಗಿ ನಿಗಿ ಕೆಂಡವಾದರೂ ತನ್ನ ರೂಪವನ್ನು ಕಾಯ್ದುಕೊಳ್ಳುತ್ತದೆ. ಕೆಲವು ವೃಕ್ಷಗಳು, ಶಿಲೆಯಲ್ಲಿಯೇ ಹುಟ್ಟಿ ಬೆಳೆಯುತ್ತವೆ. ಪಟವು ಗೋಡೆಗೆ ಆತು, ತೂಗಾಡುತ್ತದೆ. ಅದೇ ರೀತಿ, ಹೊಳೆಯುವ ಉಸುಕು ತರುಗಳಿಗೆ ಅಂಟಿಕೊಂಡು ಇರುತ್ತದೆ. ಅವುಗಳನ್ನು ಸ್ವಲ್ಪು ಶ್ರಮಹಿಸಿದರೆ ಒಂದರಿಂದ ಇನ್ನೊಂದನ್ನು ಬೇರ್ಪಡಿಸಲೂಬಹುದು. ಅದೇ ರೀತಿಯಲ್ಲಿ ದೇಹದಲ್ಲಿ ಜೀವಿಯಿದ್ದಾನೆ. ಸ್ವಲ್ಪು ಸಾಧನೆ ಮಾಡಿ ಜೀವ ಭಾವವನ್ನು ಅಳಿಸಿ, ಆತ್ಮಭಾವ ಹೊಂದಬಹುದು.

ಆ. ತನ್ನ ತಾ ಹುಡುಕಲು, ತಾನೆ ಹೋಗು ಜೀವ.
ತತ್ತ್ವ ವರಸಿ ನೋಡೆ, ತಾನೆ ಆತ್ಮ.
ಮಣ್ಣು ಗಗನವಿಲ್ಲ ; ಮಾಯೆಯೆನುವುದಿಲ್ಲ.
ವಿಶ್ವದಾಭಿರಾಮ ಕೇಳು ವೇಮ.

ಸಾಧನೆ ಮಾಡದೆ, ತಾನು ಯಾರು ? ಎಂದು ಹುಡುಕಿದರೆ, ತಾನೇ ಜೀವನೆನಿಸುತ್ತಾನೆ. ಇನ್ನು ಯೌಗಿಕ ಸಾಧನೆ ಮಾಡಿ, ಆತ್ಮ ವಿಚಾರ ಮಾರ್ಗದಲ್ಲಿ ಚಿಂತನೆಗಿಳಿದು ತತ್ತ್ವವನ್ನು ಅರಸಿ ನೋಡಿದರೆ ತಾನು, ಸ್ಥೂಲ ದೇಹವಲ್ಲ ; ಸೂಕ್ಷ್ಮ ಮನವೂ ಅಲ್ಲ ; ಕಾರಣವೂ ಅಲ್ಲ ; ಕಾರಣಾತೀತವಾದ ಆತ್ಮವೇ ತಾನು ಎಂದು ತಿಳಿಯುತ್ತಾನೆ. ಆತ್ಮವನ್ನು ಅರಿತ, ಆತ್ಮ ಜ್ಞಾನಿಗೆ ಸ್ಥೂಲ ಪಂಚಭೌತಿಕ ಗೊಡವೆಯೂ ಇಲ್ಲ. ಇದ್ದೂ ಇಲ್ಲವೆನಿಸುವ ಮಾಯೆಯೂ ಇಲ್ಲ.

ಆ. ಮಾನಸ ಜಲ ಹತ್ತದಂತೆ ಹಂಸ ಚಲನೆ ;
ಅಂತೆ ಕರ್ಮವೇನು ಅಂಟದಂತೆ.
ಯೋಗಿ ನಡೆವ ಸಕಲ ಭೋಗವೆದುರಿಗಿರಲು.
ವಿಶ್ವದಾಭಿರಾಮ ಕೇಳು ವೇಮ.

ಇಲ್ಲಿ ಸಂಸಾರಗಳ ಮಧ್ಯದಲ್ಲಿರುವ ಯೋಗಿಗೆ ಒಂದು ಮಾನವನ್ನು, ಎಲ್ಲೆಯನ್ನು, ವಿಧಿಸಲಾಗಿದೆ. ಭೋಗವು ಎದುರಿಗಿದ್ದರೂ ಅವನು ಭೋಗಾಸಕ್ತಿಯ ಜಲ ಅಂಟದಂತೆ ಬಾಳಬೇಕು. ಕರ್ಮ ಸಂಗವಾಗದಂತೆ ವರ್ತಿಸಬೇಕು.

ಈಗ ಮರ ಮತ್ತು ಅಗ್ನಿಯ ರೂಪಕವನ್ನು ತಿಳಿಯೋಣ.

ಆ. ಮರದಲ್ಲಿ ಅಗ್ನಿಯು ಮತ್ತಡಗಿರಬಹುದು ;
ಅಗ್ನಿಯಲ್ಲಿ ಮರವು ಅಡಗಬಹುದೆ ?
ಮರದ ಬೆಂಕಿಯಂತೆ ಮಾನ ಸಂಸಾರಿಗೆ.
ವಿಶ್ವದಾಭಿರಾಮ ಕೇಳು ವೇಮ.

ಇಲ್ಲಿ ಮರವೆಂದರೆ ಯೋಗಿ. ಬೆಂಕಿ ಎಂದರೆ ಪ್ರಪಂಚ ಭೋಗಾಸಕ್ತಿ. ಭೋಗಾಸಕ್ತಿಯು ಪ್ರಕಟವಾಗದೆ, ನಿಗ್ರಹಿತ ರೂಪದಲ್ಲಿ ಇರಬೇಕಲ್ಲದೆ, ಯೋಗಿಯೇ ಭೋಗಾಸಕ್ತಿಯಲ್ಲಿ ಮುಳುಗಬಾರದು. ಭೋಗಾಸಕ್ತಿಯಲ್ಲಿ ಬಿದ್ದು ದಹಿಸದಂತೆ ಬಾಳುವುದೇ ಮಾನ. ಮರ್ಯಾದೆ ಎಲ್ಲೆ. ಅಂದರೆ ಯೋಗಿಯಾದ ಸಂಸಾರಸ್ಥನು, ಭೋಗಾಸಕ್ತಿಯಿಂದ ಮಾನಸಿಕವಾಗಿ ಎಷ್ಟು ದೂರ ಚಲಿಸಬಲ್ಲನೆಂಬುದರ ಅಳತೆ. ಇದೇ ಭಾವದ ಇನ್ನೊಂದು ಪದ್ಯವು ಹೀಗಿದೆ.

ಆ. ಮರದ ಒಳಗೆ ಅಗ್ನಿ, ಮರವು ಇರುವದಲ್ಲ !
ಇರಲು ಅಗ್ನಿ ಮರವು ಇರುವುದಿಲ್ಲ.
ಮರದ ಒಳಗೆ ಅಗ್ನಿ ಮರ್ಯಾದೆ ಸಂಸಾರಿಗೆ.
ವಿಶ್ವದಾಭಿರಾಮ ಕೇಳು ವೇಮ.

ಯೋಗಿಯಲ್ಲಿ ಸಂಸಾರದ ಭೋಗಾಸಕ್ತಿಯು ಸಂಯಮಿತವಿದ್ದರೂ ಯೋಗಿಯು

ಇರಬಲ್ಲನು. ಆದರೆ ಭೋಗಾಸಕ್ತಿಯೇ ಅಟ್ಟಹಾಸವಾಡುತ್ತಿದ್ದರೆ ಯೋಗಿಯಾಗಿ ಸಂಸಾರಿಯು ಇರಲಾರನು. ಹೀಗೆ ಭೋಗಾಸಕ್ತಿಯು ಯಾವ ಮಿತಿಯಲ್ಲಿ ಇರಬೇಕೆಂಬುದೇ ಸಂಸಾರಿ ಯೋಗಿಗೆ ಮರ್ಯಾದೆಯಾಗಿದೆ.

ಇದೇ ಭಾವದ ಮತ್ತೊಂದು ಪದ್ಯವೂ ಇದೆ :

ಆ. ಮರದ ಒಳಗೆ ಅಗ್ನಿ ಮತ್ತೆ ಇರಲು ಬಹುದು.
ಅಗ್ನಿಯುಳ್ಳ ಮರಕೆ ಅಳಿವು ಇಲ್ಲ.
ಮರದ ಒಳಗಿನಗ್ನಿ ಮರ್ಯಾದೆ ಸಂಸಾರಿಗೆ.
ವಿಶ್ವದಾಭಿರಾಮ ಕೇಳು ವೇಮ.

ಸಂಸಾರಿ ಯೋಗಿಯ ಸ್ವಾಧೀನದಲ್ಲಿ ಅವನ ಭೋಗೇಚ್ಛೆಯು ಇರಬಹುದು. ಸಂಯತ ಭೋಗೇಚ್ಛೆಯುಳ್ಳ ಸಂಸಾರಿ-ಯೋಗಿಗೆ ಅಳಿವಿಲ್ಲ. ತನ್ನ ಸ್ವಾಧೀನದೊಳಗಿರುವ ಭೋಗೇಚ್ಛೆಯೇ ಸಂಸಾರಿಗೆ ಮರ್ಯಾದೆ ಇಲ್ಲವೆ ಮಿತಿಯಾಗಿದೆ.

ಕಂ. ಮರದಲಿ ಹುಟ್ಟುವುದನನಲ,
ಮರವನರಿತೊಡೆಯನಲವಿಹುದು ಮನುಜನೊಳಗೇ
ಮರದಲಿ ಅನಲದ ರೀತಿಯೆ
ಇರುಳಡಗಿದ ಯೋಗಿ ಯಾರು ? ಕಾಣಾ ವೇಮಾ.

ಮರದಲ್ಲಿ ಅಗ್ನಿಯು ಹುಟ್ಟುವುದು. ಇದನ್ನು ವೈಜ್ಞಾನಿಕವಾಗಿ ಅರಿತುಕೊಂಡರೆ, ಅಗ್ನಿಯು ಮನುಜರೊಳಗೂ ಇರುವುದು ತಿಳಿಯತ್ತದೆ. ಮರದ ಒಂದು ತುಂಡನ್ನು ಅರಣಿಯನ್ನಾಗಿಸಿ ಇನ್ನೊಂದು ತುಂಡನ್ನು ಉತ್ತರಾರಣಿಯನ್ನಾಗಿ ಮಾಡಿ ತಿಕ್ಕಿದರೆ ಅಗ್ನಿಯು ಹುಟ್ಟುತ್ತದೆ. ಆ ರೀತಿಯಲ್ಲಿಯೇ ತಮೋ ಗುಣವನ್ನು ರಜಸ್ ಮತ್ತು ಸತ್ತ್ವ ಗುಣಗಳಿಂದ ತಿಕ್ಕಿ ಸಾಧನೆ ಮಾಡಿ, ಇರುಳನ್ನು ಅಂದರೆ ಅಜ್ಞಾನವನ್ನು ಅಡಗಿಸಿದ ಯೋಗಿ ಯಾರು ? ಎಂದು ಕಾಣಬೇಕು.

ಮೇಲಿನ ಪದ್ಯದ ರೂಪಾಂತರವಲ್ಲದಿದ್ದರೂ, ಅದೇ ಭಾವದ ಕೆಳಗಿನ ಪದ್ಯ ನೋಡುವಾ :

ಕಂ. ಮರದಲಿ ಬೆಂಕಿಯು ಜನಿಪುದು.
ಮರವರಿವುದೇನು ಬೆಂಕಿಯ ? ಮನುಜರೊಳಿಪ್ಪಾ.
ಮರದೊಳಿಹ ಅನಲ ಕ್ರಿಯೆ, ಕಾ
ತರವಡಗಿದ ಯೋಗಿಯನ್ನೆ ಕಾಣರು ವೇಮಾ.

ಮರದಲ್ಲಿ ಬೆಂಕಿಯು ಜನಿಸುತ್ತದೆ. ಆದರೆ ಇದು ಘಟಿಸುವುದೆಂತು ? ಒಂದು ತುಂಡನ್ನು ಇನ್ನೊಂದರಿಂದ ತಿಕ್ಕಿ ತಿಕ್ಕಿದಾಗ ಮಾತ್ರ ತಾನೇ ? ಆದರೆ ತನ್ನೊಳಗೆ ಅಗ್ನಿ ಇರುವುದನ್ನು ಮರವು ತಿಳಿಯುವುದೇ ? ಅದೇ ರೀತಿ, ಮನುಜರೊಳಿಹ ಆತ್ಮ ಜ್ಯೋತಿಯನ್ನು, ಸ್ಥೂಲ ಮತ್ತು

ಸೂಕ್ಷ್ಮ ತತ್ತ್ವಗಳ ಘರ್ಷಣೆಯಿಂದ ಸಾಧಿಸಿ ಕಾಣಬೇಕು. ಇಂಥ ಸಾಧನೆಯಿಂದ ಸಿದ್ಧಿ ಪಡೆದ ಕಾತರವಡಗಿದ ಯೋಗಿಯನ್ನು ಕಾಣರು.

ಮರದ ರೂಪಕವನ್ನು ಬೇರೊಂದು ಅರ್ಥದಲ್ಲಿ ವಿವರಿಸಿದ ಈ ಪದ್ಯ ನೋಡುವಾ:

ಆ. ಮರಕೆ ಬೆಂಕಿ ಹಚ್ಚಿ ಮಹಿಯೊಳೋರ್ವ ಜಾಣ ,
ಹೆಣಗುತಲೆಯುತಿಹನು ; ಹೊಂದಿಕೊಳುತ.
ಸುಟ್ಟು ಹೋದ ಮರವು ಸಲೆ ರಮ್ಯವಿಪ್ಪುದು.
ವಿಶ್ವದಾಭಿರಾಮ ಕೇಳು ವೇಮ.

ಸಂಸಾರವು ಒಂದು ಮರ. ಜ್ಞಾನವೇ ಬೆಂಕಿ. ಮಹಿಯಲ್ಲಿ ಓರ್ವ ಜಾಣನು ಮರಕ್ಕೆ ಬೆಂಕಿ ಹಚ್ಚಿ, ಹೆಣಗುತ್ತ, ಹೊಂದಿಕೊಳ್ಳುತ್ತ, ಅಲೆಯುತ್ತಿರುವನು. ''ಆತ್ಮ ಮೋಕ್ಷಾರ್ಥಂ ಜಗತ್ ಹಿತಾಯ ಚ' ಎಂಬುದು, ಅವನ ಬಾಳಿನ ಸೂತ್ರ. ಮರವು ಸಟ್ಟು ಹೋದರೂ ಅದಕ್ಕೊಂದು ಆಕಾರವಿರುವಂತೆ ಭೋಗೇಚ್ಛೆಯು ದಗ್ಧವಾಗಿದ್ದರೂ ಯೋಗಿಯು ಸಂಸಾರದಲ್ಲಿ ಅನಾಸಕ್ತಿಯಿಂದ ಬಾಳುತ್ತಿರುತ್ತಾನೆ. ಅವನ ಮನವು ಭೋಗದ ಆಕರ್ಷಣೆ ಇಲ್ಲವೆ, ಅದರಿಂದಾಗಿ ಕ್ಷೋಭೆಯಿಲ್ಲದೆ, ಬಹಳ ರಮ್ಯವಾಗಿರುತ್ತದೆ. ಸುಟ್ಟು ಹೋದ ಮರವು ರಮ್ಯವಾಗಿರುತ್ತದೆ ಎಂಬುದರ ಮಥಿತಾರ್ಥ.

ಆ. ಬೀಜವಿಲ್ಲದಂಥ ವೃಕ್ಷವೊಂದು ಹುಟ್ಟಿ,
ಫಲವು, ಹೂವು, ಮೊದಲ ಪತ್ರಿಯಿಲ್ಲ.
ಸ್ವಾದವಿಲ್ಲ ನೋಡಿ, ಸೇವಿಸಲು ಒಳ್ಳಿತು.
ವಿಶ್ವದಾಭಿರಾಮ ಕೇಳುವ ವೇಮ.

ಸೃಷ್ಟಿಯನ್ನು ವಿವರಿಸುವಾಗ ಸಾಂಖ್ಯರು ಕಾರ್ಯ ಕಾರಣ ಸಿದ್ಧಾಂತವನ್ನು ಅನ್ವಯಿಸಿ ವಿವರಿಸುತ್ತಾರೆ. ಇದನ್ನು ಸಾಮಾನ್ಯವಾಗಿ 'ಬೀಜ ವೃಕ್ಷ ನ್ಯಾಯ' ವೆಂದು ಕರೆಯುತ್ತಾರೆ. ಇಲ್ಲಿ ಬೀಜವು ಮೊದಲೋ ? ವೃಕ್ಷವು ಮೊದಲೋ ? ಎಂಬ ಪ್ರಶ್ನೆಯಿದೆ.

ನಿರ್ಗುಣ ಬ್ರಹ್ಮ ಇಲ್ಲವೆ ಅಭವವು ನಿರ್ಬೀಜ ಸ್ಥಿತಿ. ಕಾರ್ಯ ಕಾರಣಕ್ಕೆ ಅತೀತವಾದದ್ದು. ಅದರಿಂದ ಸ್ವ ಇಚ್ಛೆಯಿಂದ ಸಗುಣ ಬ್ರಹ್ಮವು ಉದಯಿಸುತ್ತದೆ. ಪ್ರಕೃತಿ ಶಕ್ತಿಯಿಂದ ಗುಣಾನ್ವಿತವಾಗಿ ಅಂತಃಕರಣ ತತ್ತ್ವಗಳು, ಹುಟ್ಟುತ್ತವೆ. ಹೀಗೆ ಭವವೆಂಬ ವೃಕ್ಷವು ಭೂತ ತತ್ತ್ವಗಳು ಬೆಳೆಯುತ್ತವೆ. ಸಾಮಾನ್ಯ ಜೀವಿಗಳ ಸಂಬಂಧದಲ್ಲಿ ಈ ವೃಕ್ಷಕ್ಕೆ ವಿಷಯಾಸಕ್ತಿಯೆಂಬ ಪತ್ರಿಗಳುಂಟು. ಸಂಸ್ಕಾರಗಳೆಂಬ ವಾಸನೆಯೂ ಉಂಟು. ಕರ್ಮಫಲವೂ ಉಂಟು. ಇವುಗಳನ್ನು ಭೋಗಿಸುವ ಅನುರಕ್ತಿಯೂ ಉಂಟು. ಆದರೆ ಮುಕ್ತ ಪುರುಷನ ಸಂಬಂಧದಲ್ಲಿ ಈ ವೃಕ್ಷದ ಮೊದಲ ಎಲೆಗಳಾದ ವಿಷಯಗಳ ಸಂಬಂಧವೂ ಇಲ್ಲ. ಅವನಲ್ಲಿ ಅಹಂ ಇಲ್ಲವಾಗಿರುವುದರಿಂದ ಸಂಸ್ಕಾರದ ವಾಸನೆಯನ್ನು ತರುವ ಹೂವುಗಳೂ ಇಲ್ಲ. ನಿಷ್ಕಾಮ ಸೇವೆ ಮಾಡುವುದರಿಂದ ಕರ್ಮ ಫಲವೂ ಇಲ್ಲ. ರಾಗಭೋಗಾಸಕ್ತಿ ಇಲ್ಲದುದರಿಂದ ಸ್ವಾದವೂ ಇಲ್ಲ. ಆದರೂ ಈ ವೃಕ್ಷದ ಹುಟ್ಟುವಳಿಗಳು ಸೇವಿಸಲು ಒಳ್ಳಿತು. ಅಂದರೆ ಇಂಥ ಜೀವನವು ಒಳ್ಳೆಯದು.

ಮೇಲಿನ ಪದ್ಯದ ಪಾಠಾಂತರವು ಹೀಗಿದೆ.

ಆ. ಬೀಜವಿಲ್ಲದಂಥ ವೃಕ್ಷವೊಂದು ಹುಟ್ಟಿ,
ಫಲವು, ಹೂವು, ಮೊದಲ ಪತ್ರಿ ಇಲ್ಲ.
ಸ್ವಾದವಿಲ್ಲ ನೋಡು ಊಟ ಪಾಟ ಕಡಿಮೆ.
ವಿಶ್ವದಾಭಿರಾಮ ಕೇಳು ವೇಮ.

ಈ ಪದ್ಯದ ಮೂರನೆಯ ಸಾಲಿನಲ್ಲಿ, 'ಸ್ವಾದವಿಲ್ಲ ನೋಡು ಊಟ ಪಾಟ ಕಡಿಮೆ' ಎಂದಿದೆ. ಸ್ವಾದವಿಲ್ಲ ಎಂದರೆ ಅತ್ತ ಆಸಕ್ತಿಯಿಲ್ಲ ; ಅಭಿರುಚಿಯಿಲ್ಲ ಎಂದು ಅರ್ಥ. ಊಟ ಪಾಟ ಕಡಿಮೆ ಎಂದರೆ ಭೋಗಾಸಕ್ತಿಯು ಕನಿಷ್ಠ ಎಂದು ಅರ್ಥ.

ಆ. ಮರವು ಮೊದಲೆ ಇಲ್ಲ ; ಮೆರೆವ ಕೊಂಬೆ ನಾಲ್ಕು,
ಬಟ್ಟೆ ಬಯಲು ಮರವು ಫಲವು ಉಂಟು.
ಜನರೆ ಇಲ್ಲ ತಿನಲು ಸಿಹಿಯಾಗಿದೆ ಬಹಳ.
ವಿಶ್ವದಾಭಿರಾಮ ಕೇಳು ವೇಮ.

ನಿರ್ಗುಣ ಬ್ರಹ್ಮವು ಅನಾದಿ. ಅಭವಸ್ಥಿತಿ. ಅಲ್ಲಿ ಸಂಸಾರ ವೃಕ್ಷದ ಮಾತೇ ಇಲ್ಲ. ಅಂದರೆ ಮೊದಲೇ ಇಲ್ಲ. ಈಗ ಮುಕ್ತಾವಸ್ಥೆಗೆ ಸಾಲೋಕ್ಯ, ಸಾಮೀಪ್ಯ, ಸಾರೂಪ್ಯ ಮತ್ತು ಸಾಯುಜ್ಯ ಎಂಬ ನಾಲ್ಕು ಶಾಖೆಗಳಿವೆ ; ಮೆರೆವ ನಾಲ್ಕು ರೆಂಬೆಗಳಿವೆ. ಬಟ್ಟೆ ಬಯಲೇ ಮರವು. ಆನಂದವೇ ಫಲವು. ಈ ಫಲವು ಬಹಳ ಸಿಹಿಯಾಗಿದೆ. ಆದರೆ ಅದನ್ನು ಅನುಭವಿಸಲು, ಅಂದರೆ ತಿನ್ನಲು, ಜನರೇ ಇಲ್ಲ. ಆ ಮಟ್ಟಕ್ಕೆ ತಲುಪುವ ಸಾಧಕರು ತೀರ ವಿರಳ.

ಆ. ಗಿಡದೊಳಗೆ ಬೀಜ ಹುಟ್ಟಿತು.
ಗಿಡ ಬೀಜದಲಿ ಜನಿಪ ನೇಹ ಸುವಿಖ್ಯಾತಂ.
ಗಿಡವು ಬೀಜವು ಎರಡೂ
ಒಡನೆ ಜನಿಪುದರಿಯೆ, ಕೀರ್ತಿ, ಭುವಿಯಲಿ, ವೇಮಾ.

ಬೀಜ ವೃಕ್ಷ ನ್ಯಾಯವು ಸೃಷ್ಟಿ ಪ್ರಕ್ರಿಯೆಯನ್ನು ವಿವರಿಸುವಲ್ಲಿ ಸುವಿಖ್ಯಾತವಾಗಿದೆ. ಗಿಡವು ಬೆಳೆದು, ಹೂವು ಹಣ್ಣುಗಳನ್ನು ಹೊಂದಿ ಬೀಜವನ್ನು ಹುಟ್ಟಿಸುತ್ತದೆ. ಇನ್ನು ಬೀಜವು ಜಲ ಹೀರಿ, ಮೊಳಕೆಯೊಡೆದು, ದಳ ಬಿಟ್ಟು, ಟಿಸಿಲೊಡೆದು ಗಿಡವಾಗಿ ಬೆಳೆಯುತ್ತದೆ. ಹೀಗೆ, ಬೀಜ ವೃಕ್ಷಗಳ ಸ್ನೇಹವು ಸರ್ವವಿದಿತವಾಗಿದೆ. ಇನ್ನು, ಒಂದು ವಿಲಕ್ಷಣ ಸ್ಥಿತಿಯಿದೆ. ಅಲ್ಲಿ ಗಿಡವು ಬೀಜಗಳೆರಡೂ ಒಡನೆ ಜನಿಸುತ್ತವೆ. ಅಂದರೆ ಸಗುಣ ಬ್ರಹ್ಮ ಮತ್ತು ನಿರ್ಗುಣ ಬ್ರಹ್ಮಗಳು ಎರಡೂ ಒಡನೇ ಜನಿಸುತ್ತವೆ. ಇದನ್ನು ಅರಿತರೆ, ಭೂಮಿಯಲ್ಲಿ ಕೀರ್ತಿ ಉಂಟಾಗುತ್ತದೆ.

ಆ. ವೃಕ್ಷದಲ್ಲಿ ಹುಟ್ಟಿ ವಿಪುಲವಾಗಿ ಕಾಯಿ,
ತನ್ನ ಕಾಂತಿಯೊಡನೆ ತೊಳಗಿ ಹಣ್ಣು.
ಹಣ್ಣು ತಿಂದು ಕಾಯಿ ವರ್ಗವನು ತಿಳಿಯಿರಿ.
ವಿಶ್ವದಾಭಿರಾಮ ಕೇಳು ವೇಮ.

ಶರೀರವೆಂಬ ವೃಕ್ಷದಲ್ಲಿ ಯೋಗ ಸಾಧನೆಯ ಮೂಲಕ ಬ್ರಹ್ಮಾನಂದ ಉಪಲಬ್ಧಿಯೆಂಬ ಫಲ ಪ್ರಾಪ್ತಿಯೇ ಬಾಳಿನ ಅಂತಿಮ ಗುರಿ. ಈ ಹಣ್ಣು ಲಭಿಸುವ ಮುನ್ನ ಮನದ ಉನ್ನತ ಸ್ತರಗಳಲ್ಲಿ, ಅಣಿಮ, ಮಹಿಮ, ಗರಿಮ, ಲಘಿಮ, ಪ್ರಾಪ್ತಿ, ಪ್ರಾಕಾಮ್ಯ, ಈಶತ್ವ, ವಶಿತ್ವ ಎಂಬ ಅಷ್ಟ ಐಶ್ವರ್ಯ ಸಿದ್ಧಿಗಳೂ, ಇಂದ್ರಜಾಲ ವಿದ್ಯೆ ಎಂಬ ವಿಪುಲ ಕಾಯಿಗಳು ಉಂಟಾಗುತ್ತವೆ. ಇವುಗಳನ್ನು ತಿನ್ನದೆ ತನ್ನ ಕಾಂತಿಯೊಡನೆ ಬೆಳಗಿದಾಗ ಬ್ರಹ್ಮಾನಂದವೆಂಬ ಹಣ್ಣು ಪಕ್ವವಾಗುತ್ತದೆ. ಇದನ್ನು ಸವಿದು ತಿಂದು ಕಾಯಿಗಳ ವರ್ಗವಾವುದು? ಎಂಬುದನ್ನು ತಿಳಿಯಿರಿ.

ಇದು ಮೇಲಿನ ಪದ್ಯದ ರೂಪಾಂತರವಷ್ಟೇ.

ಆ. ವೃಕ್ಷದಲ್ಲಿ ಹುಟ್ಟಿ ವಿಪುಲವಾಯ್ತು ಕಾಯಿ.
ಪರಮ ಕಾಂತಿಯುಕ್ತ ಪಕ್ವ ಹಣ್ಣು.
ಹಣ್ಣು ತಿನುತ ಕಾಯಿ ಬಣ್ಣ ತಿಳಿದುಕೊಳಿರಿ
ವಿಶ್ವದಾಭಿರಾಮ ಕೆಳು ವೇಮ.

ಈ ಪದ್ಯಕ್ಕೆ ಪ್ರತ್ಯೇಕ ಟೀಕಾರ್ಥ ಅವಶ್ಯವಿಲ್ಲವಷ್ಟೇ.

ಆ. ವೃಕ್ಷ ಹುಟ್ಟುವ ನೆಲೆ, ವಿಪುಲವಾಗಿ ಕಾಯಿ.
ಕತ್ತಿಯಿಂದ ಜಗದಿ ಕೊಚ್ಚಿದಂತೆ.
ಹಣ್ಣು ತಿನದೆ ಕಾಯಿ ವರ್ಗವನು ಅರಿಯಿರಿ.
ವಿಶ್ವದಾಭಿರಾಮ ಕೇಳು ವೇಮ.

ದೇಹವು ಹುಟ್ಟುವ ನೆಲೆಯಲ್ಲಿಯೇ ಅದರ ಫಲ ಸ್ವರೂಪವಾಗಿ ಪುತ್ರ ಸಂತತಿಯೂ ವಿಪುಲವಾಗಿರುತ್ತದೆ. ಈ ಪುತ್ರ ಸಂಸತಿಯ ಮೋಹಕ್ಕೆ ಕಟ್ಟು ಬಿದ್ದು ಪುತ್ರೇಷಣವುಂಟಾಗುತ್ತದೆ. ಅದಕ್ಕೆ ಸಂಬಂಧಿಸಿದ ದಾರೇಷಣ, ವಿತ್ತೇಷಣಗಳೂ ಉಂಟಾಗುತ್ತವೆ. ಜಾಣನಾದವನು ಈ ಈಷಣಗಳೆಂಬ ಕಾಯಿಗಳಿಗೆ ಮೋಹಿಸದೆ, ಜ್ಞಾನವೆಂಬ ಖಡ್ಗದಿಂದ ಅವುಗಳನ್ನು ತರಿದು ಹಾಕಬೇಕು. ಆ ಈಷಣ ತ್ರಯಗಳೆಂಬ ಕಾಯಿಗಳನ್ನು ಅಟ್ಟು ಉಣ್ಣದೆ ಅವು ಪುತ್ರೇಷಣವೋ, ದಾರೇಷಣವೋ, ವಿತ್ತೇಷಣವೋ ಎಂಬ ಕಾಯಿಗಳ ವರ್ಗವನ್ನು ಅರಿಯಬೇಕು.

ಆ. ಮೊದಲ ತರುವಿನಲ್ಲಿ ಮೂರು ಕೊಂಬೆ ಹುಟ್ಟಿ,
ಚಿಗುರು ಒಡೆದು, ಬೆಳೆದು, ಎಲೆಗಳಾಗಿ
ಹೂವು, ಮಿಡಿಯು ಹಣ್ಣು, ಭುವನವ ತುಂಬಿಹುದು.
ವಿಶ್ವದಾಭಿರಾಮ ಕೇಳು ವೇಮ.

ಅವ್ಯಕ್ತದಲ್ಲಿ ಮೂಲ ಹೊಂದಿದ ಮೊದಲ ಸಂಸಾರ ತರುವಿನಲ್ಲಿ ಸತ್ತ್ವ, ರಜಸ್ ಮತ್ತು ತಮಸ್ ಎಂಬ ಪ್ರಕೃತಿಯ ಮೂರು ರೆಂಬೆಗಳು ಹುಟ್ಟಿ, ಸತ್ತ್ವದಿಂದ ಬುದ್ಧಿ ತತ್ತ್ವವೂ, ರಜಸ್ಸಿನಿಂದ ಅಹಂ ತತ್ತ್ವವೂ ಮತ್ತು ತಮಸ್ಸಿನಿಂದ ಚಿತ್ತ ತತ್ತ್ವವೂ ಉಂಟಾಗಿವೆ. ಚಿತ್ತ ತತ್ತ್ವದ ಮೇಲೆ ತಮೋಗುಣದ ಅಧಿಕ ಪ್ರಪಾತದಿಂದ ಭೂತ ಪಂಚಕ ಹುಟ್ಟಿವೆ. ಇವುಗಳ ತನ್ಮಾತ್ರೆಗಳೇ ವಿಷಯಗಳೆಂಬ ಎಲೆಗಳು. ಹೀಗೆ ಕೊಂಬೆಗಳು ಚಿಗುರೊಡೆದು ಬೆಳೆದು ಎಲೆಗಳಾಗಿವೆ. ಈ

ತರುವಿನಲ್ಲಿ ಸಂಸ್ಕಾರ ವಾಸನೆಯ ಹೂವು, ಕಾಮ್ಯ ಕರ್ಮವೆಂಬ ಮಿಡಿಯು ಮತ್ತು ಕರ್ಮಫಲವೆಂಬ ಹಣ್ಣು ಭುವನವನ್ನೇ ತುಂಬಿವೆ.

ಆ. ಎಲೆಯ ಹಿಂದೆಯಷ್ಟೆ ಅಖಿಲ ಲೋಕವುಂಟು.
ಕೊಂಬೆ ಕಾಣಲಾರ, ಬ್ರಹ್ಮನಿರಲು,
ಕೊಂಬೆ ಕಂಡುಬರಲು ಕೊಂಡಾಡದಿರುವರೆ ?
ವಿಶ್ವದಾಭಿರಾಮ ಕೇಳು ವೇಮ.

ಇದೊಂದು ಊರ್ಧ್ವ ಮೂಲವುಳ್ಳ ಸಂಸಾರವೃಕ್ಷ. ಇದರ ತುದಿ ಕೆಳಗಿದೆ. ಅಲ್ಲಿಯೇ ಇದರ ವಿಷಯಗಳೆಂಬ ಎಲೆಗಳಿವೆ. ಎಲೆಯ ಹಿಂದೆಯಷ್ಟೇ. ಅನುಭವ ಕ್ಷೇತ್ರಗಳಾದ ಎಲ್ಲ ಲೋಕಗಳಿವೆ. ಈ ಲೋಕಗಳಲ್ಲಿರುವವ ಬ್ರಹ್ಮವೇ ಆದರೂ ಇದರ ಕೊಂಬೆಯನ್ನು ಕಾಣಲಾರನು. ಏಕೆಂದರೆ ಕೊಂಬೆಗಳು ಮೇಲೆ ಸೂಕ್ಷ್ಮ ಲೋಕದಲ್ಲಿವೆ. ಯಾರಾದರೂ ಸಾಧನಾ ಬಲದಿಂದ ಕೊಂಬೆಯನ್ನು ಕಂಡರೆ, ಅವರು ದರ್ಶನಾನುಭವವನ್ನು ಕೊಂಡಾಡದೆ ಇರುವರೇನು ?

ಮೇಲಿನ ಪದ್ಯದ ಪಾಠಾಂತರವು ಹೀಗಿದೆ :

ಎಲೆಯ ಅಡಿಗೆ ಇಹವು ಎಲ್ಲ ಅನ್ಯ ಲೋಕ.
ಬೊಡ್ಡೆ ಕಾಣಲಿಲ್ಲ ಬ್ರಹ್ಮನಿರಲಿ.
ಬೊಡ್ಡೆ ಕಂಡ ಬಳಿಕ ಬಣ್ಣಿಸಲ್ಕೆ ಸಾಧ್ಯ.
ವಿಶ್ವದಾಭಿರಾಮ ಕೇಳು ವೇಮ.

ಇದಕ್ಕೆ ಪ್ರತ್ಯೇಕ ಟೀಕಾರ್ಥ ಬೇಕಿಲ್ಲವಷ್ಟೇ ?

ಆ. ಎಲೆಯು ಇರದ ಕೊಂಬೆ ಎಲ್ಲ ಗಗನ ತುಂಬಿ,
ತರುವಿನಾದಿ ತುದಿಯು ಧರೆಯೊಳಿಲ್ಲ.
ಏಕವಾದ ಫಲವೆ ಎಲ್ಲ ತುಂಬಿ ಉಂಟು.
ವಿಶ್ವದಾಭಿರಾಮ ಕೇಳು ವೇಮ.

ನಿರ್ಗುಣ ಬ್ರಹ್ಮದಲ್ಲಿ ಮೂಲ (ಬೇರು) ಉಳ್ಳ, ಸಚ್ಚಿದಾನಂದವೆಂಬ ಕೊಂಬೆಯು ಚಿದ್ಗಗನವನ್ನೆಲ್ಲ ತುಂಬಿದೆ. ಈ ವೃಕ್ಷಕ್ಕೆ ಚಿಕ್ಕ ಟೊಂಗೆಗಳಾಗಲಿ, ವಿಷಯಗಳೆಂಬ ಎಲೆಗಳಾಗಲಿ ಇಲ್ಲ. ಈ ತರುವಿನ ಆದಿಯೂ ಧರೆಯೊಳಗಿಲ್ಲ ; ತುದಿಯೂ ಧರೆಯೊಳಗಿಲ್ಲ. ಆದರೆ ಅದರ ಫಲವು ಏಕವಿದೆ. ಅದುವೇ ಬ್ರಹ್ಮಾನಂದ. ಅದು ಎಲ್ಲೆಡೆಗೆ ತುಂಬಿ ಉಂಟು.

ಆ. ಎಲೆಯ ಕಾಣಬಹುದು ಹರಿಹರಾದಿಯೆಲ್ಲ.
ಕೊಂಬೆ ಕಾಣಲಿಲ್ಲ ಕೋರಿ ನೋಡೆ.
ಕೊಂಬೆ ಕಾಣಬರಲು, ಕೊಂಡಾಡುತಲಿಹರು.
ವಿಶ್ವದಾಭಿರಾಮ ಕೇಳು ವೇಮ.

ಊರ್ಧ್ವ ಮೂಲವುಳ್ಳ ಅಶ್ವತ್ಥ ವೃಕ್ಷದ ತ್ರಿಗುಣಗಳೆಂಬ ಕೊಂಬೆಗಳು ಸೂಕ್ಷ್ಮ ಲೋಕದಲ್ಲಿವೆ. ಟಿಸಿಲು ಎಲೆಗಳು ಸ್ಥೂಲ ಲೋಕದಲ್ಲಿವೆಯಷ್ಟೇ. ಹರಿ ಹರಾದಿ ದೇವತೆಗಳಿಲ್ಲರೂ ಎಲೆಗಳನ್ನು ಕಾಣಬಹುದಷ್ಟೇ. ಆದರೆ ಸೂಕ್ಷ್ಮ ಲೋಕದಲ್ಲಿರುವ ಕೊಂಬೆಗಳನ್ನು ನೋಡಬೇಕೆಂಬ ಕೋರಿಕೆಯನ್ನು ಹೊಂದಿ ನೋಡಿದರೂ ಕಾಣಲಿಲ್ಲ. ಏಕೆಂದರೆ ಕೋರಿಕೆಗಳಿರುವ ವರೆಗೆ ಸ್ಥೂಲ ಲೋಕದಲ್ಲಿಯೇ ಉಳಿಯುತ್ತಾರೆ. ಕೋರಿಕೆಯನ್ನು ಮೀರಿ, ಸಾಧನೆ ಮಾಡಿದಾಗ ಸೂಕ್ಷ್ಮ ಸ್ತರಕ್ಕೇರಿ, ಕೊಂಬೆ ಕಾಣಬಹುದು. ಅದು ಕಂಡೊಡನೆ ಅದನ್ನು ಕೊಂಡಾಡದೆ ಇರಲಾರರು.

ಆ. ಎಲೆಯ ಸೊಬಗಿನಲುಂಟು ಎಲ್ಲ ಲೋಕಂಗಳು,
ಕೊಂಬೆ ಕಾಣಲಿಲ್ಲ ಬ್ರಹ್ಮ ಕೂಡ.
ಕೊಂಬೆ ಕಾಣಬರಲು ಕೊಂಡಾಡುತಲಿಹರು.
ವಿಶ್ವದಾಭಿರಾಮ ಕೇಳು ವೇಮ.

ಈ ಪದ್ಯವೂ ಮೇಲಿನ ಪದ್ಯದ ಪಾಠಾಂತರದಂತಿದೆ.

ಊರ್ಧ್ವ ಮೂಲವುಳ್ಳ ಅಶ್ವತ್ಥ ವೃಕ್ಷದ ತ್ರಿಗುಣಗಳೆಂಬ ಕೊಂಬೆಗಳು ಸೂಕ್ಷ್ಮ ಲೋಕದಲ್ಲಿವೆ. ಟಿಸಿಲು, ಎಲೆಗಳು ಅಂದರೆ ವಿಷಯಾದಿಗಳು ಸ್ಥೂಲ ಲೋಕದಲ್ಲಿವೆ. ಎಲೆಯ ಸೊಬಗಿನಲ್ಲಿಯೇ ಅಂದರೆ ವಿಷಯ ಭೋಗದ ಸೊಬಗಿನಲ್ಲಿಯೇ ಎಲ್ಲ ಅನುಭವ ಕ್ಷೇತ್ರಗಳು ಅಂದರೆ ಲೋಕಗಳು ಉಂಟು. ತಮೋಗುಣದ ದೇವತೆಯಾದ ಬ್ರಹ್ಮನು ಕೂಡ ಸೂಕ್ಷ್ಮ ಲೋಕದಲ್ಲಿರುವ ಕೊಂಬೆಗಳನ್ನು ಕಾಣಲಿಲ್ಲ. ಇನ್ನು ಯಾರು ಸಾಧನ ಮೂಲಕ ಮನವನ್ನು ಸ್ಥೂಲ ಸ್ತರದಿಂದ ಸೂಕ್ಷ್ಮ ಸ್ತರಕ್ಕೆ ಉದ್ದೀಪಿಸಿಕೊಳ್ಳುವರೋ, ಅವರು ಕೊಂಬೆಯನ್ನು ಕಾಣುವರು. ಕೊಂಬೆ ಕಾಣಬರಲು ಕೊಂಡಾಡುತ್ತಿರುವರು.

ಆ. ಹುಣಸೆ ಮರವ ನೋಡಿ, ಹುಣಸೆ ಹೂವ ನೋಡಿ,
ನಿಂಬೆ ಹಣ್ಣು ಹಣ್ಣು ನಿಮಿಷದಲ್ಲಿ !
ಕಾಂತಿ ಕೆಡುವ ಮುನ್ನ ಕದಲದದನೆ ತಿನ್ನು.
ವಿಶ್ವದಾಭಿರಾಮ ಕೇಳು ವೇಮ.

ಹುಣಸೆ ಮರವನ್ನು ನೋಡಿ, ಹುಣಸೆ ಹೂವನ್ನು ನೋಡಿರಿ. ಅದರಲ್ಲಿ ಹುಳಿಯ ಮಧುರತೆಯು ವಿಕಾಸವಾಗುತ್ತದೆ. ಇಂಥ ಹುಣಸೆ ಹೂವಿನಿಂದ ಹುಣಸೆ ಹಣ್ಣು ಆಗಬೇಕು. ಆದರೆ, ಅಲ್ಲಿ ಯೋಗ ಶಕ್ತಿಯಿಂದ, ರಸವಿದ್ಯೆಯಿಂದ, ನಿಮಿಷದಲ್ಲಿ ನಿಂಬೆ ಹಣ್ಣು ಆಗಿದೆ. ಇದು ಕಾಂತಿಯುತವಾಗಿದೆ. ಈ ಕಾಂತಿಯು ಕೆಡುವ ಮುನ್ನವೇ ಕದಲದೇ ಅದನ್ನು ತಿನ್ನು.

ಆ. ಧಾನ್ಯದಲ್ಲಿ ಹುಟ್ಟುತಿಹುದು ಅನ್ನವೆಲ್ಲ.
ಮರದಲ್ಲಿ ಫಲವು ಮಡಗಿರುವುದು.
ಸೊಡರು ಗಾಳಿ ಹಿಡಿದು ಶೋಧಿಸಲು ಮುಕ್ತಿಯು.
ವಿಶ್ವದಾಭಿರಾಮ ಕೇಳು ವೇಮ.

ಅನ್ನವೆಲ್ಲವೂ ಧಾನ್ಯದಲ್ಲಿ ಹುಟ್ಟುತ್ತಿರುವುದು. ಧಾನ್ಯವನ್ನು ಬೀಸಿ, ಹಿಟ್ಟು ಮಾಡಿ ರೊಟ್ಟಿ, ಚಪಾತಿ, ಪೂರಿ ಮಾಡಬಹುದು. ಕುದಿಸಿ, ಮುದ್ದೆ ಮಾಡಬಹುದು. ದ್ವಿದಳ ಧಾನ್ಯವನ್ನು ನೆನೆಸಿ ಇಲ್ಲವೆ ಕುದಿಸಿ ತಿನ್ನಬಹುದು. ಹೀಗೆ ಎಲ್ಲ ಅನ್ನವೂ ಧಾನ್ಯದಲ್ಲಿ ಹುಟ್ಟುತ್ತದೆ. ಮರದಲ್ಲಿ ಹೂವು, ಮಿಡಿ, ಕಾಯಿ ಹುಟ್ಟಿ ಹಣ್ಣೂ ಉಂಟಾಗುತ್ತದೆ. ಇದೇ ರೀತಿ, ಸ್ಪರ್ಶಿಸುವ ಸೊಡರು ಗಾಳಿಯನ್ನು ಹಿಡಿದು, ಪ್ರಾಣಾಯಾಮ ಮೂಲಕ, ಮನಸ್ಸಿನ ಮೇಲೆ ಆಗುವ ಪರಿಣಾಮಗಳನ್ನು ಶೋಧಿಸಲು ವೃತ್ತಿ ಸಮೂಹಗಳು ಕಳೆದು, ಮುಕ್ತಿ ಲಭಿಸುತ್ತದೆ.

ಆ. ಮೊದಲು ಹೊಯ್ದ ನೀರು ಮತ್ತೆ ಬೀಜ ಸೇರಿ,
ಮೊದಲು ಹರಿದು ಬೇಗ ಮೊಳಕೆ ಎತ್ತಿ,
ಮೊಳಕೆ ನೆಲದಿ ಬೆಳೆದು, ಮೆರೆಯುವ ಮರವಾಯ್ತು.
ವಿಶ್ವದಾಭಿರಾಮ ಕೇಳು ವೇಮ.

ಬಿತ್ತಿದ ಬೀಜವು ಮೊಳೆತು, ಬೆಳೆದು ಮರವಾಗುವ ಕ್ರಮವನ್ನು ತಿಳಿಯಿರಿ. ಮೊದಲು ಹೊಯ್ದ ನೀರು ಮತ್ತೆ ಬೀಜ ಸೇರುತ್ತದೆ. ಆ ನೀರು ಮೊದಲು ಹರಿದು ಬೀಜವು ಬೇಗ ಮೊಳೆತು, ಮೊಳಕೆಯಾಗುತ್ತದೆ. ಮೊಳಕೆಯು ನೆಲದಲ್ಲಿ ಬೆಳೆದು, ಕೆಳಗೆ ಬೇರು ಬಿಟ್ಟು, ಮೇಲೆ ಕಾಂಡ ತೂರಿ ಬೆಳೆಯುತ್ತ ರೆಂಬೆ ಕೊಂಬೆಗಳಾಗಿ, ಎಲೆಗಳಾಗಿ ವಿಕಸಿಸಿ ಮರವಾಗುತ್ತದೆ. ಅದೇ ರೀತಿ, ಗುರುವು ಶಿಷ್ಯನಿಗೆ ಬೀಜ ಮಂತ್ರವನ್ನು ಬೋಧಿಸಿ, ಕರುಣೆಯ ಪೋಷಣೆ ನೀಡಿ, ಕೃಪೆಯ ನೀರು ಹನಿಸುತ್ತಾನೆ. ಹಾಗಾಗಿ, ಅವನು ಊರಿದ ಬೀಜ ಮಂತ್ರವೆಂಬ ಮುಕ್ತಿಯ ಬೀಜವು, ಮಂತ್ರ ಚೈತನ್ಯವಾಗಿ ಮೊಳೆತು, ಮೋಕ್ಷಾಪೇಕ್ಷೆಯ ಕೊಂಬೆ ಬೆಳೆದು, ಸಂತೃಪ್ತಿ ಸದಾನಂದ ಫಲ ನೀಡುವ ಮುಕ್ತಿಯ ಮರವಾಗಿ ಬೆಳೆಯುತ್ತದೆ.

ಮೇಲಿನ ಪದ್ಯದ ಪಾಠಾಂತರವು ಇಂತಿದೆ :

ಆ. ಮೊದಲು ಸುರಿದ ನೀರು ಮುನ್ನ ಬೀಜ ತಲುಪಿ,
ಮೊದಲ ಬೀಜ ರಾಶಿ ಮೊಳಕೆಯಾಯ್ತು.
ಮೊಳಕೆಯೊಡೆದು ಬೆಳೆದು ಮರವಾಗಿ ಬೆಳಗಿತು.
ವಿಶ್ವದಾಭಿರಾಮ ಕೇಳು ವೇಮ.

ಈ ಪದ್ಯಕ್ಕೆ ಪ್ರತ್ಯೇಕ ಟೀಕಾರ್ಥದ ಅಗತ್ಯವಿಲ್ಲವಷ್ಟೇ.

ಗಿಡದ ಮೊದಲ ಹಾಲು, ಶಿವನ ಕಣ್ಣು ತೆರೆಸಿ,
ಗಿಡವು ಮೊದಲು ಚಿಗುರಿ, ಶಿವನನೊಲಿಸಿ.
ಮರದ ಹಾಗೆ ಇರುವ, ಮರಣ ಇರುವುದೆಲ್ಲಿ ?
ವಿಶ್ವದಾಭಿರಾಮ ಕೇಳು ವೇಮ.

ಗಿಡದಲ್ಲಿ ಹರಿಯುವ ಜೀವ ರಸವು ಶಿವನ ಕಣ್ಣು ತೆರೆಸಿ ಅಂದರೆ ಶಿವನ ಕೃಪೆಗೆ ಪಾತ್ರವಾಗಿ, ಶಿವನನ್ನು ಒಲಿಸಿ, ಗಿಡವು ಮೊದಲು ಚಿಗುರುತ್ತದೆ. ದೊಡ್ಡದಾಗಿ

ಬೆಳೆದು ಮರವಾಗುತ್ತದೆ. ಮರದ ಹಾಗೆ ಶಿವನ ಕೃಪೆ ಪಡೆದು ಜನಿಸಿ, ಶಿವನ ಒಲುಮೆಯಿಂದ ಬೆಳೆದು, ಮರದ ಹಾಗೆ 'ಪರೋಪಕಾರಾರ್ಥಮಿದಂ ಶರೀರಂ' ಎಂಬ ಧ್ಯೇಯ ನಂಬಿ ಜೀವಿಸಿದರೆ, ಶಿವೈಕ್ಯ ಪಡೆಯುತ್ತಾನೆ ; ಮೃತ್ಯುಂಜಯನಾಗುತ್ತಾನೆ. ಅಂಥವನಿಗೆ ಮರಣವೆಲ್ಲಿದೆ ?

ಅಂತೂ ಸಂಖ್ಯೆ ಎಂದರೆ ಖಚಿತತೆ ಇರುತ್ತದೆ. ಭಾಷೆಯಲ್ಲಿ ಆ ಖಚಿತತೆ ಇರದು. ಹೀಗೆ ತತ್ತ್ವಜ್ಞಾನ ವಿವೇಚನೆಯಲ್ಲಿ ಖಚಿತತೆಯನ್ನು ಬಿಂಬಿಸುವ ವಿವರಣೆಗಳೆಲ್ಲ ಸಾಂಖ್ಯಯೋಗದಲ್ಲಿ ಸಮಾವೇಶವಾಗಿವೆ. ಒಂದರಿಂದ ಮೂವತ್ತೆರಡು ಅಕ್ಷರಗಳ ಮಂತ್ರಗಳನ್ನೂ ಇದರಲ್ಲಿ ಸೇರಿಸಿದ್ದೇವೆ. ಜನ್ಮ ಕ್ರಿಯೆಯ ವಿವರವೂ ಇದರಲ್ಲಿದೆ. ಇದು ಕಪಿಲ ಮಹರ್ಷಿಗಳು ಬೋಧಿಸಿದ ಸಾಂಖ್ಯಯೋಗವಲ್ಲವಾದರೂ, ಆ ಜಾಡನ್ನು ಹಿಡಿದು ಸಾಗಿದ ಯೋಗಿ ವೇಮನರು ಪ್ರತಿಪಾದಿಸಿದ ಸಾಂಖ್ಯಯೋಗವಾಗಿದೆ. ಇದನ್ನು ಯೋಗಿ ವೇಮನರ ದೃಷ್ಟಿಯಲ್ಲಿ ಅರಿಯೋಣ.

ಭಕ್ತಿಯೋಗ

ಭಜ್ ಧಾತುವಿನಿಂದ (ಭಜ್+ಕ್ತಿನ್) ಭಕ್ತಿ ಶಬ್ದದ ವ್ಯುತ್ಪತ್ತಿಯಾಗಿದೆ. ಭಜ ಎಂದರೆ, ಸೇವಿಸು, ಸತ್ಕರಿಸು, ಪೂಜಿಸು. ಯೋಗ ಎಂದರೆ ಜೋಡಣೆ. ಅದರ ವ್ಯಾಖ್ಯೆ ಹೀಗೆ : 'ಜೀವಾತ್ಮ ಪರಮಾತ್ಮ ಸಂಯೋಗೋ, ಯೋಗ ಇತ್ಯುಚ್ಯತೇ' ಅಂದರೆ ಜೀವಾತ್ಮ ಪರಮಾತ್ಮರ ಸಮ್ಮಿಳನವೇ ಯೋಗವೆನಿಸುತ್ತದೆ. ಭಕ್ತಿ ಮಾಡುವಲ್ಲಿ ಸೇವ್ಯನಾರು ? ಸೇವಕನಾರು ? ಪೂಜ್ಯನಾರು ? ಪೂಜಕನಾರು ? ಸೇವಾ ವಿಧಾನವಾವುದು ? ಪೂಜಾ ವಿಧಾನವಾವುದು ? ಎಂಬುದನ್ನು ತಿಳಿಯಬೇಕು. ಶ್ವೇತಾ ಶ್ವೇತರ ಉಪನಿಷತ್ತಿನಲ್ಲಿ ಸೇವ್ಯ ತತ್ತ್ವದ ಒಂದು ಕಲ್ಪನೆಯನ್ನು ಋಷಿ ನೀಡಿದ್ದಾನೆ :

''ಅವನು ವಿಶ್ವದ ಆತ್ಮ. ಅವನೇ ಅಮೃತ. ಈ ಪ್ರಪಂಚಕ್ಕೆ ಈಶ್ವರ. ಅವನು ಸರ್ವ ವ್ಯಾಪಿ. ಸರ್ವಜ್ಞ, ಜಗದ್ರಕ್ಷಕ, ನಿತ್ಯ ಪ್ರಭು. ಅವನನ್ನು ಬಿಟ್ಟರೆ ಮತ್ತೆ ಯಾರೂ ಈ ಜಗತ್ತನ್ನು ಅಷ್ಟೇ ಸಾಮರ್ಥ್ಯದಿಂದ ಎಂದೆಂದಿಗೂ ಆಳಲಾರರು. (ಶ್ವೇ. ಉ. VI-7)

ಸೇವ್ಯನಾರು ?

ಆ. ವಿಶ್ವ ನಡೆಸುವವನು ವಿಶ್ವೇಶ್ವರನಿರಲು,
ಪ್ರಭುವು ನಾನು ಎಂದು ಹೇಳಲೇಕೆ ?
ವನದೊಳಿರುವ ಕೋತಿ ವಸುಧೆ ನಡೆಸಬಹುದೆ ?
ವಿಶ್ವದಾಭಿರಾಮ ಕೇಳು ವೇಮ.

ವಿಶ್ವೇಶ್ವರನೇ ವಿಶ್ವವನ್ನು ನಡೆಸುತ್ತಾನೆ. ಅಂದ ಮೇಲೆ ಮುಕ್ತ ಪುರುಷನಾಗಲಿ, ಬೇರೆ ಯಾರೇ ಆಗಲಿ, ನಾನು ವಿಶ್ವವನ್ನು ನಡೆಸುತ್ತೇನೆ ಎಂದು ಹೇಳುವುದೇಕೆ ? ತನ್ನ ಮನಸ್ಸಿನ ಮೇಲೆ ತನಗೇ ನಿಯಂತ್ರಣವಿಲ್ಲದ ವನದೊಳಗಿನ ಕೋತಿಯು ವಸುಧೆಯನ್ನು ನಡೆಸಬಹುದೇ ? ಆಗದು. ಈ ವಿಶ್ವೇಶ್ವರನು ಎಲ್ಲಿದ್ದಾನೆ ? ಹೇಗಿದ್ದಾನೆ ?

ಆ. ವಿಶ್ವದ ಒಳಹೊರ ತಾನೇ
ವಿಶ್ವಾತೀತನು ; ಮೇಣಾ ವಿಶ್ವಂಭರವೈ.
ವಿಶ್ವಗಳಿಗೆ ಬೇರಾಗುತ,
ವಿಶ್ವದೊಳಗೆ ಬೆಳಗುತಿರುವ ಶಾಶ್ವತ ವೇಮಾ.

ವಿಶ್ವೇಶ್ವರನು ವಿಶ್ವದ ಒಳಗೂ ಇದ್ದಾನೆ. ವಿಶ್ವದ ಹೊರಗೂ ಇದ್ದಾನೆ. ಅವನು ಗುಣಾತೀತನಾಗಿರುವುದರಿಂದ ತ್ರೈಗುಣ್ಯಮಯಿಯಾದ ಪ್ರಕೃತಿಯ ಈ ವಿಶ್ವಕ್ಕೆ ಅತೀತನಾಗಿದ್ದಾನೆ. ಅವನು ಒಂದನ್ನು ಇನ್ನೊಂದರೊಂದಿಗೆ ಹೆಣೆದು ಸರ್ವಾನುಸ್ಯೂತನೆನಿಸಿದ್ದಾನೆ. ಅವನು ಎಲ್ಲರೊಳಗಿದ್ದು ನಿಯಂತ್ರಿಸುವ ಸರ್ವಾಂತರ್ಯಾಮಿಯಾಗಿ ವಿಶ್ವಂಭರನಾಗಿದ್ದಾನೆ. ಅವನು ನಿರ್ಗುಣನಾಗಿ ವಿಶ್ವಗಳಿಗೆ ಬೇರಾಗಿದ್ದು ಸಗುಣನಾಗಿ ವಿಶ್ವದೊಳಗೆ ಶಾಶ್ವತವಾಗಿ ಬೆಳಗುತ್ತಾನೆ.

ಆ. ವಿಶ್ವಕರ್ಮ ಮಹಿಮೆ ಕೇಳಲದು ವಿಚಿತ್ರ !
ವಿಶ್ವಕರ್ಮ ಮಹಿಮೆ ಶಾಶ್ವತವದು.
ವಿಶ್ವಕರ್ಮನಿರದೆ ವಿಶ್ವ ನಿಲುವುದೇನು ?
ವಿಶ್ವದಾಭಿರಾಮ ಕೇಳು ವೇಮು.

ವಿಶ್ವಕರ್ಮನ ಮಹಿಮೆ ಕಾಣುವುದು ದುಸ್ತರ ; ಕೇಳಲು ವಿಚಿತ್ರ. ಆ ಮಹಿಮೆಯು ಕಾಲಾಬಾಧಿತವಲ್ಲ, ಶಾಶ್ವತವಾದುದು. ಅಂಥ ವಿಶ್ವಕರ್ಮನಿರದ ವಿಶ್ವವು ನಿಲ್ಲುವುದೇನು ? ಎಂದಿಗೂ ಇಲ್ಲ.

ಈಗ ಯೋಗಿಯೊಬ್ಬನು ಭಕ್ತಿಯೋಗದಿಂದ ಮೋಕ್ಷ ಪಡೆಯುವನೆಂದು ತಿಳಿಯಿರಿ. ಆಗ ಅವನು ತಾನು ಸಂಯೋಗ ಹೊಂದಿದ ಸತ್ತೆಯ ಅನಂತ ಶಕ್ತಿ ಮತ್ತು ಜ್ಞಾನಗಳು ಮುಕ್ತ ಪುರುಷನಿಗೂ ಲಭ್ಯವಾಗುತ್ತವೆ. ಆದರೆ ಮುಕ್ತ ಪುರುಷರು ಸಂಪಾದಿಸುವ ಶಕ್ತಿಗಳಲ್ಲಿ ಪರಮಾತ್ಮನ ವಿಶೇಷ ಶಕ್ತಿಯಾದ ಸೃಷ್ಟಿ ಶಕ್ತಿಯೂ ಒಳಗೊಳ್ಳುವುದೇ ? ಪರಮಾತ್ಮನನ್ನು ಭಗವಾನನೆಂದು ಕರೆಯುತ್ತೇವೆ.

ಕಂ. ಭಗವಂತನಾದ ದೇವನು
ಜಗಗಳ ತನ್ನೊಳಗೆ ಬೆಳಿಸಿ, ಜಾಲವ ತೋರ್ಪಂ.
ಮಿಗೆ ಪರಿಯಲಿ ತಾನೆಲ್ಲಿಡೆ ;
ಅಗಣಿತನಾಗಿ ಬೆಳಗುತಿಹನನುವಿನಲಿ ವೇಮಾ.

ಈ ದೇವನು ಭಗವಂತನಾಗಿದ್ದಾನೆ. ಹಾಗೆಂದರೇನು ? ದರ್ಶನ ಶಾಸ್ತ್ರಗಳ ಮೇರೆಗೆ ಭಗವಾನನೆಂದರೆ, ಷಡ್ಗುಣ ಸಂಪನ್ನನು. ಆ ಷಟ್ (ಆರು) ಗುಣಗಳಾವವು. ? ಐಶ್ವರ್ಯ, ವೀರ್ಯ, ಯಶ, ಶ್ರೀ, ಜ್ಞಾನ ಮತ್ತು ವೈರಾಗ್ಯ. ಈ ಆರು ಗುಣಗಳ ಒಟ್ಟಾರೆ ಹೆಸರು ಭಗ. ಇವುಗಳನ್ನು ಹೊಂದಿದವನು ಭಗವಾನ. ಇಲ್ಲಿ ಮೊದಲನೆಯ ಗುಣವಾದ ಐಶ್ವರ್ಯ ಎಂದರೆ ಈಶ್ವರನಿಗೆ ಸಂಬಂಧಿಸಿದ ಐಶ್ವರ್ಯ ಸಿದ್ಧಿಗಳು. ಇವು ಎಂಟು : ಅಣಿಮಾ, ಗರಿಮಾ, ಲಘಿಮಾ, ಪ್ರಕಾಮ್ಯ, ಕಾಮ್ಯ, ಈಶತ್ವ, ವಶಿತ್ವ (ಅಂತರ್ಯಾಮಿತ್ವ). ನಾವು ಓರ್ವನನ್ನು ಭಗವಾನ ಎನ್ನಬೇಕಾದರೆ ಈ ಎಲ್ಲ ಗುಣಗಳೂ ಇರಬೇಕು. ಈ ಎಲ್ಲ ಸಿದ್ಧಿಗಳೂ ಪ್ರಕಟವಾಗಿರಲಿ, ಇಲ್ಲವೆ ಅಪ್ರಕಟವಾಗಿರಲಿ, ಇರಲೇ ಬೇಕು. ಭಗವಂತನಾದ ದೇವನು ತನ್ನೊಳಗೆ ಈ ಜಗಗಳನ್ನು ಬೆಳೆಸಿದ್ದಾನೆ. ಭೂಲೋಕ, ಭುವರ್ಲೋಕ, ಸುವರ್ಲೋಕ, ಮಹರ್ಲೋಕ, ತಪೋಲೋಕ ಮತ್ತು ಸತ್ಯಲೋಕಗಳೆಂಬ ಜಗಜ್ಜಾಲವನ್ನು ತೋರ್ಪಡಿಸಿದ್ದಾನೆ. ಮೇಲಾಗಿ, ವಿಶೇಷ ರೀತಿಯಲ್ಲಿ ತಾನು ಎಲ್ಲೆಡೆಗೆ, ಲೆಕ್ಕ ಮಾಡಲು ಬಾರದ ಶೋಭೆಯಿಂದ, ಅನುಕೂಲಿಸಿ ಬೆಳಗುತ್ತಿರುವನು.

ಆ. ವಿಶ್ವಕರ್ಮನಿರದೆ ವಿಶ್ವವೆಂಬುದಿರದು.
ವಿಶ್ವಕರ್ಮ ಗೆಯ್ದ ವಿದ್ಯೆಯಿಲ್ಲ.
ವಿಶ್ವಕರ್ಮ ಹೀನ ವಿಶ್ವವೆಲ್ಲ ಹಾಳು.
ವಿಶ್ವದಾಭಿರಾಮ ಕೇಳು ವೇಮ.

ವಿಶ್ವವನ್ನು ಸೃಷ್ಟಿಸಿದವನೇ ವಿಶ್ವಕರ್ಮ. ಅವನು ಇಲ್ಲದೆ ವಿಶ್ವವೆಂಬುದು ಇರದು. ಏಕೆಂದರೆ, ವಿಶ್ವಕ್ಕೆ ಅವನೇ ಉಪಾದಾನ ಕಾರಣನೂ, ನಿಮಿತ್ತ ಕಾರಣನೂ ಆಗಿದ್ದಾನೆ. ಕುಂಭಕಾರ

ಇಲ್ಲವೆ ಕುಂಬಾರನಿಲ್ಲದೆ ಕುಂಭವೆಲ್ಲಿ ? ವಿಶ್ವವನ್ನು ಸೃಷ್ಟಿಸುವ ಎಲ್ಲ ವಿದ್ಯೆಯನ್ನು ವಿಶ್ವಕರ್ಮನೇ ಮಾಡಿದ್ದಾನೆ. ಅಂದ ಮೇಲೆ ವಿಶ್ವಕರ್ಮನಿಲ್ಲದೆ, ಸೃಷ್ಟಿಸುವ ವಿದ್ಯೆಯಿಲ್ಲದೆ, ವಿಶ್ವವೆಲ್ಲ ಹಾಳು ಸುರಿಯತ್ತಿತ್ತು.

ಆ. ವಿಶ್ವಕರ್ಮ ಹೆಸರು, ವಿಶ್ವದೇವನೆನಲು,
ಪುಣ್ಯ ಕಾರ್ಯ ವಿಧದಿ ಪೂಜೆ ಗೆಯ್ದು,
ನಂಬಿಕೊಳ್ಳದವರು ನರಕದಿ ಬೀಳರೇ ?
ವಿಶ್ವದಾಭಿರಾಮ ಕೇಳು ವೇಮ.

ಆದ್ದರಿಂದ ವಿಶ್ವದೇವನೆಂದರೆ ವಿಶ್ವಕರ್ಮನೇ. ಅದೇ ಅವನ ಹೆಸರು. ಅವನನ್ನು ಶ್ರದ್ಧಾ ಭಕ್ತಿಗಳಿಂದ ಪೂಜಿಸಬೇಕು, ಗೌರವಿಸಬೇಕು. ಏಕೆಂದರೆ ಮಾನವರಿಗೆ ವಾಸಿಸಲು ಎಲ್ಲ ಅನುಕೂಲತೆಗಳನ್ನು ಒದಗಿಸಿ ಈ ವಿಶ್ವವನ್ನು ನಿರ್ಮಿಸಿರುವವನ ಧ್ರುವ ಸ್ಮರಣೆಯು ಪುಣ್ಯ ಕಾರ್ಯವೇ ಆಗಿದೆ. ಆ ವಿಧದಲ್ಲಿ ನಡೆಯಬೇಕು. ಈ ಸತ್ಯವನ್ನು ಯಾರು ನಂಬುವುದಿಲ್ಲವೋ, ಅವರು ಪಾಪಾತ್ಮರು ; ನರಕದಲ್ಲಿ ಬೀಳುತ್ತಾರೆ.

ಆ. ವಿಶ್ವನಾಥನಲ್ಲಿ ವಿಪ್ರ ಜನತೆಯಲ್ಲಿ
ವಿಭುವಿನಲ್ಲಿ ವೇದ ವಿಧಗಳಲ್ಲಿ,
ಭಕ್ತಿ ಇಲ್ಲದವನು ಪಾಪಾತ್ಮ ಜಗದೊಳು
ವಿಶ್ವದಾಭಿರಾಮ ಕೇಳು ವೇಮ.

ವಿಶ್ವವನ್ನು ಪಾಲಿಸುವ ವಿಶ್ವನಾಥನಲ್ಲಿ, ಆಂತರ್ಯದ ವಿದ್ಯೆಯನ್ನರಿತ ವಿಪ್ರ ಜನತೆಯಲ್ಲಿ, ವಿಭುವಿನಲ್ಲಿ (ಅಂದರೆ ಯಾವುದು ವಿವಿಧಂ ಭವತಿ ಇತಿ ವಿಭುಃ. ಅಂದರೆ ಆ ಬ್ರಹ್ಮಾಸ್ತಂಬ ಪರ್ಯಂತ ಅರ್ಥಾತ್ ಬ್ರಹ್ಮದಿಂದ ಮೊದಲು ಮಾಡಿ, ಹುಲ್ಲು ಗದ್ದೆಯ ವರೆಗೆ) ವೇದ ಇಲ್ಲವೆ ಜ್ಞಾನವು ಸ್ಫುರಣಗೊಂಡ ವಿಧದಲ್ಲಿ ಭಕ್ತಿ ಇಲ್ಲದವನು ಜಗತ್ತಿನಲ್ಲಿ ಪಾಪಾತ್ಮನೆನಿಸುತ್ತಾನೆ.

''ಅವನು ವಿಶ್ವದ ಆತ್ಮ. ಅವನೇ ಅಮೃತ. ಅವನೇ ಈ ಪ್ರಪಂಚಕ್ಕೆ ಈಶ್ವರ. ಅವನು ಸರ್ವವ್ಯಾಪಿ ಸರ್ವಜ್ಞ. ಜಗತ್ ರಕ್ಷಕ, ನಿತ್ಯಪ್ರಭು. ಅವನನ್ನು ಬಿಟ್ಟರೆ ಮತ್ತೆ ಯಾರೂ ಈ ಜಗತ್ತನ್ನು ಅಷ್ಟು ಸಾಮರ್ಥ್ಯದಿಂದ ಎಂದೆಂದೂ ಆಳರು''. (ಶ್ವೇತಾಶ್ವತರ ಉಪ. VI-17)

ವಿಶ್ವ ನಡೆಸುವವನು ವಿಶ್ವೇಶ್ವರನೇ. ಅವನೇ ಸರ್ವ ನಿಯಂತ್ರಕನಾದ ಈಶ್ವರ. ಅವನೇ ಜಗದ್ರಕ್ಷಕ. ಅವನೇ ಜಗತ್ತನ್ನು ಸರಿಯಾಗಿ ನಡೆಸುವ ಪ್ರಭು.

ಆ. ವಿಶ್ವಕರ್ಮ ಬೀಜ ; ವಿಶ್ವದ ಒಳಗೆಲ್ಲ
ಪ್ರಾಣಿಯೆಂಬ ಗಿಡವು ಬೆಳಗುತಿಹುದು.
ಸಾಲು ಮರಗಳಳಿಯೆ ಮೂಲ ಸಾಯದಲ್ಲ ?
ವಿಶ್ವದಾಭಿರಾಮ ಕೇಳು ವೇಮ.

ವಿಶ್ವಕರ್ಮನೇ ಬೀಜ ಪ್ರಾಯನಾಗಿದ್ದಾನೆ. ಪ್ರಾಣಿ ಸಂತತಿಯು ವಿಶ್ವದ ಒಳಗೆಲ್ಲ

ಬೆಳಗುತ್ತಿದೆ. ಜೀವಿಗಳಿಗೆ ಹುಟ್ಟು ಸಾವುಗಳುಂಟು. ಆದರೆ ಮೂಲವಾದ ವಿಶ್ವಕರ್ಮನು ಅಮೃತನು. ಹಾಗಾದರೆ ವಿಶ್ವವೆಂದರೆ ಏನು ?

ಆ. ವಿಶ್ವವೆನಲು ಏನು ? ವಿವರಿಸಿ ನೋಡಲು,
ವಿಶ್ವವೈದು ವಿಧದಿ ವಿಶ್ರುತ ಬೆಳಗಿ,
ವಿಶ್ವವ ಮನದೊಳಗೆ ವೀಕ್ಷಿಪನು ವಿಬುಧನು.
ವಿಶ್ವದಾಭಿರಾಮ ಕೇಳು ವೇಮ.

ವಿಶ್ವ ವಿಶ್ವ ಎಂದರೆ ಏನು ? ಇದನ್ನು ವಿವರವಾಗಿ ನೋಡಲು, ವಿಶ್ವಕರ್ಮನಿಂದ ಸೃಷ್ಟಿಗೊಂಡ ಪೃಥ್ವಿ, ಅಪ್, ಅಗ್ನಿ, ವಾಯು ಮತ್ತು ಆಕಾಶಗಳೆಂಬ ಪಂಚ ಮಹಾಭೂತಗಳು ಭೌತಿಕ ವಿಶ್ವವಾಗಿದೆ. ಹೀಗೆ ವಿಶ್ವವು ಪ್ರಪಂಚವಾಗಿ ಐದು ವಿಧದಿಂದ ವಿಶ್ರುತವಾಗಿ ಬೆಳಗಿದೆ. ವಿಶೇಷ ಜ್ಞಾನರು. ಈ ವಿಶ್ವವನ್ನೂ ತಮ್ಮ ಮನದಲ್ಲಿ ವೀಕ್ಷಿಸುತ್ತಾರೆ.

ವಿಶ್ವಕರ್ಮನೇ ವಿಶ್ವಕ್ಕೆ ನಿಮಿತ್ತ ಕಾರಣನೂ ಆಹುದು, ಉಪಾದಾನ ಕಾರಣನೂ ಆಹುದು. ಅವನಿಲ್ಲದೆ ವಿಶ್ವವೆಂಬುದೇ ಇರದು.

ಆ. ವಿಶ್ವಕರ್ಮನಿರದ ವಿಶ್ವ ಕಂಡಿರೇನು ?
ವಿಶ್ವ ಕರ್ಮ ಗೆಯ್ದ ವಿಶ್ವವೆಲ್ಲ.
ವಿಶ್ವಕರ್ಮನಿರದೆ ವಿಶ್ವವೆಂಬುದಿಲ್ಲ.
ವಿಶ್ವದಾಭಿರಾಮ ಕೇಳು ವೇಮ.

ಗಡಿಗೆ, ಮುಚ್ಚಳ, ಹೂಜಿ ಇತ್ಯಾದಿ ವಿವಿಧ ಆಕಾರದ ಪಾತ್ರೆಗಳಾಗಲು ಎರಡು ಕಾರಣಗಳು ಬೇಕು. ಒಂದು ಉಪಾದಾನ ಕಾರಣ ; ಇನ್ನೊಂದು ನಿಮಿತ್ತ ಕಾರಣ. ಮಣ್ಣಿನ ಮುದ್ದೆಗೆ ಉಪಾದಾನ ಕಾರಣವೆನ್ನುತ್ತಾರೆ ಮತ್ತು ಕುಂಬಾರನಿಗೆ ನಿಮಿತ್ತ ಕಾರಣನೆನ್ನುತ್ತಾರೆ. ಕೊರಳ ಸರ, ಪಾಟಲಿ, ಕಿವಿಯ ಓಲೆ, ಮೂಗು ನತ್ತು ಎಂಬಿತ್ಯಾದಿ ವಿವಿಧ ಬಗೆಯ ಆಭರಣ ರೂಪಗಳಿಗೆ ಹೇಗೆ ಬಂಗಾರವು ಉಪಾದಾನ ಕಾರಣವೋ, ಮತ್ತು ಅವುಗಳನ್ನು ತಯ್ಯಾರಿಸುವ ಅಕ್ಕಸಾಲಿಗನು ಹೇಗೆ ನಿಮಿತ್ತ ಕಾರಣನೋ, ಆ ರೀತಿ ವಿಶ್ವಕರ್ಮನು ವಿಶ್ವದ ಮೂಲ ದ್ರವ್ಯಗಳ ಸೃಷ್ಟಿಗೆ ಉಪಾದಾನ ಕಾರಣನೂ ಮತ್ತು ಅವುಗಳ ಸೃಷ್ಟಿಗೆ ನಿಮಿತ್ತ ಕಾರಣನೂ ಆಗಿದ್ದಾನೆ. ಹೀಗಾಗಿ, ವಿಶ್ವಕರ್ಮನಿರದ ವಿಶ್ವವನ್ನು ಯಾರೂ ಕಾಣಲಾರರು. ಈ ವಿಶ್ವವೇ ಅವನ ಸೃಷ್ಟಿ ಸಂಚರವನ್ನು ಘೋಷಿಸುವ ಮುದ್ರಿಕೆಯಾಗಿದೆ. ಆ ಮುದ್ರಿಕೆಯ ಹಿಂದಿನ ಅಧಿಕಾರವೂ ಅವನದೇ ಆಗಿದೆ. ಹೀಗೆ ವಿಶ್ವಕರ್ಮನ ಅಧಿಕಾರದ ಮುದ್ರೆಯೇ ಈ ವಿಶ್ವವಾಗಿದೆ.

ಆ. ಮುದ್ರೆಯಿಂದ ಹಿಡಿದು ಮೊದಲ ತಿಳಿಯಲಿಲ್ಲ.
ವಿಶ್ವಕರ್ಮ ಹಿಡಿದು ಬಿಡಲಾರನು.
ವಿಶ್ವಕರ್ಮನ ತೆಗಳೆ, ವಿಕೃತ ಮತಿಯು ಅಷ್ಟೆ.
ವಿಶ್ವದಾಭಿರಾಮ ಕೇಳು ವೇಮ.

ವಿಶ್ವಕರ್ಮನಿಗೆ ಅನಂತ ಶಕ್ತಿಯಿದೆ. ಅಗಾಧ ಜ್ಞಾನವಿದೆ. ಅವನಿಗಿರುವ ಅಪಾರ ಅಧಿಕಾರದ ಮುದ್ರೆಯೇ ನಮಗೆ ಕಾಣುವ ವಿಶ್ವ. ಆದರೆ ಮಾನವನು ಈ ಅದ್ಭುತ ಮುದ್ರೆಯಿಂದ

ಮೊದಲು ತಿಳಿಯಲಿಲ್ಲ. ವಿಶ್ವಕರ್ಮನು ಎಲ್ಲಿದ್ದಾನೆ ? ಎಲ್ಲವೂ ಪ್ರಕೃತಿಯಿಂದ ತಾನೇ ಆಗಿದೆ, ಎನ್ನುತ್ತಾನೆ. ಆದರೆ ವಿಶ್ವಕರ್ಮನು ಒಮ್ಮೆ ಹಿಡಿದರೆ ಬಿಡಲಾರನು. ಅವನೇ ಸೃಷ್ಟಿ, ಸ್ಥಿತಿ ಮತ್ತು ಲಯಗಳಿಗೆ ಕಾರಣ ಕರ್ತನು. ಅಂಥ ಮಹಿಮಾ ಘನನನ್ನು ಕೇವಲ ವಿಕೃತ ಮತಿಗಳು ಇಲ್ಲವೆ ಬುದ್ಧಿಗೆಟ್ಟವರು ಮಾತ್ರ ತೆಗಳಬಹುದು.

ಆ. ಮುದ್ರೆಯೆಲ್ಲ ಸೋಸಿ ಮುದದಿ ಮೆರೆವರಬಬ !
ಭದ್ರವಾದ ಮನಸು ಬೆಳಗದಿದ್ದು,
ವಿಕೃತ ಚೇಷ್ಟೆಯಾಯ್ತು ; ವಿವರಿಸಲು ಮುದ್ರೆಯು.
ವಿಶ್ವದಾಭಿರಾಮ ಕೇಳು ವೇಮ.

ಈ ವಿಶ್ವವು ವಿಶ್ವಕರ್ಮನ ಅಧಿಕಾರ ಮತ್ತು ಜ್ಞಾನಗಳ ಮುದ್ರೆಯಾಗಿದೆ. ಇದನ್ನು ಶೋಧಿಸಿ, ಅನ್ವೇಷಿಸಿ, ಅಬ್ಬಾ ! ಮುದದಿಂದ ಮೆರೆಯುತ್ತಿದ್ದಾರೆ. ಆದರೆ ಇದರ ಹಿಂದಿನ ರಹಸ್ಯವನ್ನು ಮನಸ್ಸಿನಲ್ಲಿ ಕಂಡುಕೊಂಡು ಮನವನ್ನು ಬೆಳಗಿಸದವರಾಗಿದ್ದಾರೆ. ಅದಕ್ಕೆ ಬೇಕಾದ ಭದ್ರವಾದ ಮನಸ್ಸನ್ನೂ ಹೊಂದಲಾರದಾಗಿದ್ದಾರೆ. ಹೀಗಾಗಿ ಈ ಮುದ್ರೆಯನ್ನು ವಿವರಿಸಲು ಆಗದೆ ಏನೇನೋ ಊಹಿಸುವುದು ಕೇವಲ ವಿಕೃತ ಚೇಷ್ಟೆಯಾಗಿದೆ.

ಆ. ಬ್ರಹ್ಮ ಬ್ರಹ್ಮವೆನಲು, ಬ್ರಹ್ಮವೆಂಥದಯ್ಯ ?
ಬಯಸಿ ತಿಳಿದು ನೋಡೆ ಬಳಿಗೆ ಇಹುದು.
ಮುದ್ರೆಯೊಳಗೆ ಇರುವ ಮುದ್ರಿಕೆಯ ಕಾಣರು.
ವಿಶ್ವದಾಭಿರಾಮ ಕೇಳು ವೇಮ.

ಸಗುಣ ಬ್ರಹ್ಮವೆಂದರೆ ಏನು ? ಅದು ಹೇಗಿದೆ ? ಇದನ್ನು ತಿಳಿಯಲು ಬಯಸಿ ಅನ್ವೇಷಿಸಿದರೆ, ಅದು ನಮ್ಮ ಬಳಿಯಲ್ಲಿಯೇ ಇದೆ. ನಮ್ಮ ಸುತ್ತು ಮುತ್ತು, ಮೇಲೆ ಕೆಳಗೆ ಇದೆ. ಅದೇ ವಿಶ್ವವೆಂಬ ಮುದ್ರೆ. ಅದರಲ್ಲಿಯೇ ಬ್ರಹ್ಮನ ಮುದ್ರಿಕೆ (Seal) ಇದೆ.

ವಿಶ್ವಕರ್ಮನು ವಿಶ್ವವನ್ನು ಸೃಷ್ಟಿಸಿ ಕೈ ತೊಳೆಯಲಿಲ್ಲ. ಜೀವಿಗಳ ರಕ್ಷಣೆಯ ಭಾರವೂ ಅವನದೇ ಆಗಿದೆ.

ಆ. ವಿಶ್ವಕರ್ಮನಿರದೆ ವಿಶ್ವ ಮತ್ತೆ ಇಲ್ಲ.
ಉಣಲು ಊಟವಿಲ್ಲ, ಉಡುಗೆಯಿಲ್ಲ.
ವಿಶ್ವಮಯನೆ ಆದ ವಿಭುವ ತಿಳಿಯರೇಕೋ ?
ವಿಶ್ವದಾಭಿರಾಮ ಕೇಳು ವೇಮ.

ವಿಶ್ವಕರ್ಮನಿಲ್ಲದ ವಿಶ್ವವು ಮತ್ತೆ ಇಲ್ಲ. ಸೃಷ್ಟಿ ಸಂಚರ ಧಾರೆಯಲ್ಲಿ ಏನೊಂದನ್ನು ಸೃಜಿಸುವ ಮುನ್ನ, ಅದನ್ನು ಪೋಷಿಸುವ ದ್ರವ್ಯಗಳನ್ನು ಸೃಜಿಸುತ್ತಾನೆ. ವನಸ್ಪತಿಗಳನ್ನು ಸೃಜಿಸುವ ಮುನ್ನ ಮಣ್ಣು, ನೀರು, ಗಾಳಿಗಳನ್ನು ಸೃಜಿಸುತ್ತಾನೆ. ಮಾನವ ಜೀವಿಗಳನ್ನು ಸೃಜಿಸುವ ಮುನ್ನ ಅವರಿಗೆ ಉಣ್ಣಲು ಆಹಾರವನ್ನೂ, ಉಡಲು ಬಟ್ಟೆಯನ್ನೂ ಸೃಜಿಸುವ ವಿದ್ಯೆ ಪ್ರದಾನ ಮಾಡುತ್ತಾನೆ. ಅವನು ಆಬ್ರಹ್ಮಸ್ತಂಭಪರ್ಯಂತ ಎಲ್ಲವೂ ಆದ ವಿಭುವಾಗಿ, ವಿಶ್ವಮಯನಾಗಿದ್ದಾನೆ. ಜನರು ಇದನ್ನೇಕೆ ಅರಿಯಲೊಲ್ಲರೋ ?

ಆ. ಉಣಿಸುತಿರುವನಾರು ? ಉರವನೆಲ್ಲ ಮರೆಸಿ,
ನಿದ್ರೆ ಹೊಗಿಸುವನಾರು ? ನಿಖಿಲ ಗತಿಯ,
ತೋರಿ, ಇಳಿಬದ್ಧರನು ಗೆಯ್ವ, ಸೂಕ್ಷ್ಮರೂಪಿ-
ಯಾ ಮಹದೇವನೈ ? ಜಗದಿ ವೇಮ.

ವಿಶ್ವಕರ್ಮನೇ ಆ ಮಹಾದೇವನು. ಅವನು ತಾನು ಸೃಷ್ಟಿಸಿದ ಜೀವ ಜಂತುಗಳಿಗಾಗಿ ಏನೆಲ್ಲ ಮಾಡುತ್ತಿದ್ದಾನೆ ? ಮಳೆ ಬೆಳೆ ನೀಡಿ ಪ್ರಾಣಿ ಕೋಟಿಗೆಲ್ಲ ಉಣ್ಣಿಸುತ್ತಿದ್ದಾನೆ. ಉರವನೆಲ್ಲ ಮರೆಸಿ, ಅಂದರೆ ಹಸಿವೆ ನೀರಡಿಕೆಗಳನ್ನು ಮರೆಸಿ, ಇಲ್ಲವೆ ತಣಿಸಿ, ನಿದ್ರೆ ಹೋಗುವಂತೆ ಮಾಡುತ್ತಾನೆ. ಅವನು ಮಾನವರಿಗೆ ಊರ್ಧ್ವ ಗತಿಯನ್ನು ತೋರುತ್ತಾನೆ. ಅಧೋಗತಿಯಲ್ಲಿ ಸಾಗಲೂ ಬಿಡುತ್ತಾನೆ. ಮಾನವನ ಇಂದ್ರಿಯಗಳನ್ನು ಹೊರಮುಖ ಮಾಡಿ ವಿಷಯ ಭೋಗದ ಅನುರಕ್ತಿಯನ್ನು ಹುಟ್ಟಿಸುತ್ತಾನೆ. ಈ ಜಗತ್ತಿನಲ್ಲಿ ಹೊರಗಣ್ಣಿಗೆ ಕಾಣದ ಆದರೆ ಅಗ್ರ್ಯ ಬುದ್ಧಿಗೆ ವೇದ್ಯನಾಗುವ ಸೂಕ್ಷ್ಮ ರೂಪಿಯು ಆ ಮಹಾದೇವನೇ ಆಗಿದ್ದಾನೆ.

ಆ. ವಿಶ್ವಕರ್ಮ ಪೂಜೆ ವಿಪುಲ ಮನದಿ ಗೆಯ್ಯೆ,
ವಿಶ್ವ ಜನನ ಮಯೀ ವಾಸವಾಯ್ತು.
ವಿಶ್ವಕರ್ಮ ಆದಿ ವಿಮಲ ವಿರಾಟನೇ.
ವಿಶ್ವದಾಭಿರಾಮ ಕೇಳು ವೇಮ.

ವಿಶ್ವಕರ್ಮನ ಪೂಜೆಯನ್ನು ಮುದಿತ ಮನಸ್ಸಿನಿಂದ ಮಾಡಬೇಕು. ಆಗ ವಿಶ್ವ ಜನನವು ಎಲ್ಲೆಡೆ ತುಂಬಿ ಸರ್ವತ್ರ ವಾಸವಾಗುತ್ತದೆ. ವಿಶ್ವಕರ್ಮನು ಆದಿ ವಿಮಲ ವಿರಾಟನಾಗಿದ್ದಾನೆ. ಅಂದರೆ ಅವನಲ್ಲಿ ಪರಾಶಕ್ತಿ ಆದಿ ಶಕ್ತಿ (ಸ್ವಾಭಾವಕೀ), ಇಚ್ಛಾಶಕ್ತಿ, ಜ್ಞಾನ ಶಕ್ತಿ ಮತ್ತು ಕ್ರಿಯಾಶಕ್ತಿಗಳಿವೆ. ಆದ್ದರಿಂದ ಅವನನ್ನು ಆದಿ, ವಿಮಲ ವಿರಾಟ ಎಂದು ಹೇಳುತ್ತಾರೆ.

''ಅವನು ತಾನಾಗಿ ಏನನ್ನೂ ಪಡೆಯಬೇಕಿಲ್ಲ. ಅವನಿಗೆ ಯಾವ ಕಾರಣಗಳೂ ಇಲ್ಲ (ಅವನು ಅಕರ್ತಾ ಆಗಿದ್ದಾನೆ). ಅವನಿಗೆ ಸರಿಸಮನಾಗಲಿ, ಅವನಿಗಿಂತ ಅಧಿಕನಾಗಲಿ ಯಾರೂ ಇಲ್ಲ. ಅವನ ಪರಾಶಕ್ತಿ ಹಲವು ವಿಧವಾಗಿದೆ. ಜ್ಞಾನ, ಬಲ, ಕ್ರಿಯೆಗಳು ಅವನ ಸ್ವಭಾವವಾಗಿದೆ. (ಶ್ವೇತಾ ಉ. VI-8)

''ಲೋಕದಲ್ಲಿ ಅವನಿಗೆ ಯಾರೂ ಒಡೆಯರಿಲ್ಲ. ಅವನ ಮೇಲೆ ಯಾರಿಗೂ ಸ್ವಾಧೀನವಿಲ್ಲ. ಅವನನ್ನು ಯಾವ ಆಕಾರವೂ ವ್ಯಕ್ತಪಡಿಸಲಾರದು. ಅವನೇ ಎಲ್ಲಕ್ಕೂ ಕಾರಣ, ಜೀವನಕ್ಕೆ ಒಡೆಯ; ಅವನನ್ನು ಯಾರೂ ಸೃಷ್ಟಿಸಲಿಲ್ಲ. ಅವನನ್ನು ಯಾರೂ ಆಳುವುದಿಲ್ಲ''.
(ಶ್ವೇತಾ ಉ. VI-9)

ಗೀತ. ವಿಶ್ವ ರೂಪವ ಮನದೊಳಗೆ ವೀಕ್ಷಿಸುತ್ತ
ಹೃಸ್ವವನೊಪ್ಪವಹ ಬುದ್ಧಿಯಲಿ ಹೊಂದಿ ಹಿಡಿದು.
ಸ್ವಸ್ವರೂಪವ ಕಾಣುತ ಸಜ್ಜನನಿಹ.
ವಿಶ್ವದಾಭಿರಾಮ ಕೇಳು ವೇಮ.

ವಿಶ್ವಕರ್ಮನು, 'ಅಣೋರಣೀಯಾನ್ ಮಹತೋ ಮಹಿಯಾನ್'. ಅಂದರೆ

ಅಣುವಿಗಿಂತಲೂ ಚಿಕ್ಕವನಾಗಿದ್ದಾನೆ. ಮಹತ್ತಿಗಿಂತಲೂ ಮಹತ್ತಾಗಿದ್ದಾನೆ. ಹೀಗೆ ವಿಶ್ವರೂಪವನ್ನು ಮನದೊಳಗೆ ವೀಕ್ಷಿಸುತ್ತ, ಒಪ್ಪವಹ ಬುದ್ಧಿಯಲ್ಲಿ ಹ್ರಸ್ವವನ್ನು, ಅಣುವನ್ನು, ಹೊಂದಿ, ತನ್ನ ಸ್ವ ಸ್ವರೂಪವು ಏನೆಂದು ಸಜ್ಜನನು ಕಾಣುತ್ತಾನೆ.

ಆ. ವಿಶ್ವ ಮೂಲದಲ್ಲಿ ವಿಶ್ವ ಭಾವ ಹೊಂದಿ,
ಪಕ್ವವುಂಟು ಕ್ಷೇತ್ರ ; ಬಟ್ಟ ಬಯಲು,
ಫಲವು ಎಂಬ ಕ್ಷೇತ್ರ ಭಾವ ತಿಳಿಯರಯ್ಯ.
ವಿಶ್ವದಾಭಿರಾಮ ಕೇಳು ವೇಮ.

ಈಗ ವಿಶ್ವ ಭಾವ, ಕ್ಷೇತ್ರ ಭಾವಗಳನ್ನು ಕುರಿತು ತಿಳಿಯೋಣ. ಮಾನಸಾಧ್ಯಾತ್ಮಿಕ ಪ್ರಕ್ರಿಯೆಯ ಅವಧಿಯಲ್ಲಿ ಮನದಲ್ಲಿ ಮೂಡುವ ವಿಚಾರಗಳಿಗೆ ಭಾವ ಎನ್ನುತ್ತಾರೆ. ಬ್ರಾಹ್ಮೀ ಮನದ ವಿಚಾರಗಳಿಲ್ಲವೂ ಭಾವಗಳೇ ಸರಿ. ಕಾರ್ಯ ಪ್ರಪಂಚದಲ್ಲಿ ಅಭಿವ್ಯಕ್ತವಾಗುವ ಭಾವವನ್ನೇ ಭಾವಾದರ್ಶ ಎನ್ನುತ್ತೇವೆ. ಹೀಗೆ ಭಾವಾದರ್ಶವು ಎಂದೂ ಜೀವನದ ಆಧ್ಯಾತ್ಮಿಕ ಮುಖವನ್ನು ಹೊಂದದೆ ಇರದು. ಹೀಗೆ ವಿಶ್ವಮೂಲದಲ್ಲಿ ವಿಶ್ವಭಾವ ಅಂದರೆ ವಿಶ್ವವನ್ನು ಕುರಿತು ಬ್ರಾಹ್ಮೀ ಕಲ್ಪನೆಯನ್ನು ಹೊಂದಿ ಇದ್ದರೆ, ಕ್ಷೇತ್ರವು ಪಕ್ವನಾಗಿ ಉಂಟು. ಕ್ಷೇತ್ರ ಕ್ಷೇತ್ರಜ್ಞರ ಸಂಬಂಧವೂ ಸ್ಫುಟವಾಗಿರುತ್ತದೆ. ಈ ಕ್ಷೇತ್ರವು ಅನುಭಾವಿಯ ಅನುಭವದಲ್ಲಿ ಬಟ್ಟ ಬಯಲಲ್ಲದೆ ಬೇರೇನೂ ಇರದು. ಹೀಗೆ ಕ್ಷೇತ್ರ ಕ್ಷೇತ್ರಜ್ಞರ ಸಂಬಂಧದ ಅರಿವೇ ಕ್ಷೇತ್ರ ಭಾವವಾಗಿದೆ. ಇದುವೇ ಅನ್ವೇಷಣೆಯ ಫಲ ಸ್ವರೂಪವಾಗಿದೆ. ಇದನ್ನು ಎಲ್ಲರೂ ತಿಳಿಯಬೇಕು.

ಈಗ ಕ್ಷೇತ್ರವಾವುದು ? ಕ್ಷೇತ್ರಜ್ಞನಾರು ? ನಾವು ಉತ್ತಿ, ಬಿತ್ತಿ, ಯಾವುದರಲ್ಲಿ ಫಲ ಪಡೆಯುತ್ತೇವೆಯೋ, ಅದುವೇ ಕ್ಷೇತ್ರ, ಹೊಲ, ಗದ್ದೆ. ಅದನ್ನು ಮಾಡುವಂತೆ ನಿರ್ದೇಶಿಸುವವನೇ ಕ್ಷೇತ್ರಜ್ಞ. ಶರೀರಾದಿ ಉಪಾಧಿಗಳಿಂದ ಕೂಡಿದ ದೇವನೇ ಜೀವನೆನಿಸುತ್ತಾನೆ. ಉಪಾಧಿಗಳೇ ಕ್ಷೇತ್ರ. ಉಪಾಧಿ ರಹಿತವಾದ 'ಜ್ಞ' ಸತ್ತೆಯೇ ದೇವ. ಈ ದೇವನಾರು ? ಎಲ್ಲಿ ಇದ್ದಾನೆ ? ಏನು ಮಾಡುತ್ತಾನೆ?

ಆ. ದೇವನೆನಲು ಬೇರೆ ದೇಶದಲ್ಲಿ ಇಹನೆ ?
ದೇಹಿಯೊಡನೆ ಸತತ ದೇಹದಲ್ಲಿ.
ಹತ್ತಿ ವಾಹನಗಳ ಹೊಡೆದುಕೊಂಡು ಹೋಹ.
ವಿಶ್ವದಾಭಿರಾಮ ಕೇಳು ವೇಮ.

ದಿವ್ ಅಂದರೆ ಬೆಳಗು. ಅದರಿಂದ ದೇವ ಶಬ್ದದ ವ್ಯುತ್ಪತ್ತಿಯಾಗಿದೆ. ಚತುರ್ವಿಂಶತಿ ತತ್ತ್ವಗಳೇ ಅನಾತ್ಮ. ಅರ್ಥಾತ್ ಕ್ಷೇತ್ರ. ಅದು ಬೇಕು, ಇದು ಬೇಕು, ದೇಹಿ, ದೇಹಿ ಎಂದು ಕೇಳುವ ಸೋಪಾಧಿಕ ಆತ್ಮನೇ ಜೀವ. ಈ ಅನಾತ್ಮ ತತ್ತ್ವವಾದ ದೇಹದೊಳಗೆ ಇಪ್ಪತ್ತೈದನೆಯ ತತ್ತ್ವವಾದ ಆತ್ಮನಿದ್ದಾನೆ. ಹೀಗೆ ದೇವನೆಂದರೆ ಬೇರಾವ ಅನ್ಯ ದೇಶದಲ್ಲಿ ಇಲ್ಲ. ಅವನು ಜೀವಿಯೊಡನೆ ಸತತ ದೇಹದಲ್ಲಿಯೇ ಇರುತ್ತಾನೆ. ಅವನು ಇಂದ್ರಿಯ ಮನಸ್ಸುಗಳ ವಾಹನವನ್ನು ಹತ್ತಿ ಹೊಡೆದುಕೊಂಡು ಹೋಗುತ್ತಾನೆ.

ವಿಶ್ವಕರ್ಮನೇ ವಿಶ್ವೇಶನು. ವಿಶ್ವೇಶನಿಗೆ ಬೇರೆ ಬೇರೆ ಕಾರ್ಯಗಳುಂಟು. ಆ ಕಾರ್ಯಗಳಿಗೆ ಅನುಸರಿಸಿ ಅವನಿಗೆ ಬೇರೆ ಬೇರೆ ಹೆಸರುಗಳೂ ಉಂಟು. ಒಬ್ಬ ವ್ಯಕ್ತಿಯು

ನಾಟ್ಯ ಶಾಲೆಯಲ್ಲಿ ನಟನಾಗಿ, ಚಿತ್ರ ಶಾಲೆಯಲ್ಲಿ ಚಿತ್ರಗಾರನಾಗಿ ಮತ್ತು ಗಾಯನ ಶಾಲೆಯಲ್ಲಿ ಗಾಯಕನಾಗಿ ಹೆಸರು ಪಡೆದು ಆಯಾ ಕಲೆಗಳನ್ನು ಪ್ರದರ್ಶಿಸುವ ಕಲಾವಿದನೆನಿಸುತ್ತಾನೆ. ಅದೇ ರೀತಿ ವಿಶ್ವೇಶನು.

ಆ. ವಿಶ್ವೋತ್ಪತ್ತಿಗೆ ಅಜನೆನೆ,
ವಿಶ್ವವ ರಕ್ಷಿಪನು ಚೊಕ್ಕ ವಿಷ್ಣುವೆನೆ ಮತ್ತಾ
ವಿಶ್ವವ ಲಯಿಸುವ ಹರನೆನೆ,
ವಿಶ್ವೇಶನಿಗಿಷ್ಟು ಹೆಸರು, ವಿನುತವು ವೇಮಾ.

ವಿಶ್ವದ ಸೃಷ್ಟಿ, ಸ್ಥಿತಿ ಮತ್ತು ಲಯಗಳು ವಿಶ್ವೇಶನ ಲೀಲೆಯಾಗಿವೆ. ವಿಶ್ವೋತ್ಪತ್ತಿ ಮಾಡುವಾಗ ಅವನು ಅಜನೆನಿಸುತ್ತಾನೆ. ಏಕೆಂದರೆ ಅವನು ಹುಟ್ಟುವುದಿಲ್ಲ. ಆದರೆ ಪ್ರಕೃತಿಯ ನೆರವಿನಿಂದ, ಗುಣ ಸಂಘಾತದಿಂದ ವಿಶ್ವವು ಹುಟ್ಟುವಂತೆ ಮಾಡುತ್ತಾನೆ. ಅವನು ವಿಶ್ವವನ್ನು ರಕ್ಷಿಸುವಾಗ ಚೊಕ್ಕ ವಿಷ್ಣುವೆನಿಸುತ್ತಾನೆ. ಏಕೆಂದರೆ ವಿಷ್ಣುವು ಸರ್ವ ವ್ಯಾಪ್ತ ಸತ್ತೆ ಮತ್ತು ಒಂದನ್ನೊಂದು ಹೆಣೆಯುವ ಸರ್ವಾನು ಸ್ಯೂತ ಸತ್ತೆ. ಇನ್ನು ಸ್ಥೂಲದಿಂದ ಸೂಕ್ಷ್ಮ ಸ್ತರದಲ್ಲಿ ಸೇರುವುದು ಲಯ. ಹೀಗೆ ಹರನು ಸೃಷ್ಟಿಗೊಂಡ ವಿಶ್ವವನ್ನು ಸೂಕ್ತ ಕಾಲದಲ್ಲಿ ಲಯಗೊಳಿಸುತ್ತಾನೆ. ಹೀಗೆ ವಿಶ್ವೇಶನಿಗೆ ಬ್ರಹ್ಮ, ವಿಷ್ಣು ಮತ್ತು ಹರ ಎಂಬ ಮೂರು ನಾಮಗಳಾಗಿವೆ.

ಆ. ವಿಶ್ವಕರ್ಮ ಸೃಷ್ಟಿ ವಿವರವಾಗಿ ಗೆಯ್ಯೆ ,
ವಿಶ್ವವೆಲ್ಲ ತೃಪ್ತವಾಗಿ ಉಂಟು.
ವಿಶ್ವಕರ್ಮನಲ್ತೆ ವಿಮಲ ವಿರಾಟಾದ ?
ವಿಶ್ವದಾಭಿರಾಮ ಕೇಳು ವೇಮ.

ವಿಶ್ವಕರ್ಮನು ವಿವರವಾಗಿ ಸೃಷ್ಟಿಯನ್ನು ಗೆಯ್ದನು. ಅವನು ಸೃಷ್ಟಿಯ ಸಂಚರ ಧಾರೆಯಲ್ಲಿ ಸತ್ತ್ವ ಗುಣ ಪ್ರಭಾವದಿಂದ ಮಹತ್ ಅಂದರೆ ಬುದ್ಧಿ ತತ್ತ್ವವನ್ನೂ, ಬುದ್ಧಿ ತತ್ತ್ವದ ಮೇಲೆ ರಜೋಗುಣದ ಪ್ರಭಾವದಿಂದ ಅಹಂ ತತ್ತ್ವವನ್ನೂ, ಅಹಂ ತತ್ತ್ವದ ಮೇಲೆ ತಮೋಗುಣದ ಪ್ರಭಾವದಿಂದ ಚಿತ್ತ ತತ್ತ್ವವನ್ನೂ ಸೃಜಿಸಿದನು. ಚಿತ್ತ ತತ್ತ್ವ, ಅಹಂ ತತ್ತ್ವ ಮತ್ತು ಬುದ್ಧಿ ತತ್ತ್ವಗಳ ಸಾಮೂಹಿಕ ಹೆಸರೇ ಮನಸ್ತತ್ವ. ಚಿತ್ತ ತತ್ತ್ವದ ಮೇಲೆ ಅಧಿಕ ತಮೋಗುಣದ ಪ್ರಭಾವದಿಂದ ಪಂಚ ಭೂತಗಳಾಗಿವೆ. ಈ ಪಂಚ ಭೂತಗಳಿಂದ ಪ್ರ-ಪಂಚವಾಗಿದೆ. ಇದೇ ವಿಶ್ವ. ಇಲ್ಲಿ ಒಂದು ಇನ್ನೊಂದರೊಂದಿಗೆ ಸಂಬಂಧ ಹೊಂದಿದ್ದು, ವಿಶ್ವವೆಲ್ಲ ತೃಪ್ತವಾಗಿ ಉಂಟು. ಹೀಗೆ ತಾನೇ ಎಲ್ಲಕ್ಕೂ ಪ್ರಭುವಾಗಿ, ವಿಮಲನಾಗಿ ವಿಶ್ವಕರ್ಮನು ವಿರಾಟನಾಗಿದ್ದಾನೆ. ಅವನಿಗೆ ಬೇರಾವ ಒಡೆಯನೂ ಇಲ್ಲ.

ವಿಶ್ವೇಶನು ಮೂರು ಹೆಸರುಗಳಿಂದ ಮೂರು ಕಾರ್ಯ ಮಾಡುತ್ತಾನೆ.

ಆ. ಅಖಿಲ ಜೀವಿಗಳನು ಅಜನೆ ಹುಟ್ಟಿಸಿದನು.
ವಿಷ್ಣು ಅವುಗಳನ್ನು ವೃದ್ಧಿಗೊಳಿಪ,
ಶಿವನು ಸಕಲರನ್ನು ಶಿಕ್ಷಿಸುತ್ತಲಿಹನು.
ವಿಶ್ವದಾಭಿರಾಮ ಕೇಳು ವೇಮ.

ಎಲ್ಲ ಜೀವಿಗಳನ್ನು ಹುಟ್ಟಿಸಿದವನು ಅಜನೇ. ವಿಷ್ಣುವು ಅವುಗಳನ್ನು ವೃದ್ಧಿಗೊಳಿಸುತ್ತಾನೆ. ಇನ್ನು ಮಂಗಳಮಯನೂ, ಕಲ್ಯಾಣಮೂರ್ತಿಯೂ ಆದ ಶಿವನು ಎಲ್ಲರನ್ನೂ ಕಾಲ ಕಾಲಕ್ಕೆ ಶಿಕ್ಷಿಸಿ ಹಾದಿ, ತೋರುತ್ತಿರುತ್ತಾನೆ.

ಬ್ರಹ್ಮ, ವಿಷ್ಣು, ಶಿವರು ತಮಸ್, ರಜಸ್ ಮತ್ತು ಸತ್ತ್ವ ಎಂಬೀ ಮೂರು ಗುಣಗಳ ಪ್ರತಿನಿಧಿಗಳು.

ಆ. ಕಮಲ ಭವನು ಗೆಯ್ದ ಕಡು ಸೃಷ್ಟಿ ಎನುವರು.
ಹರಿ ಪಾಲಿಪ ; ಕೊಲುವ ಹರನೆನುವರು.
ಮೂರ್ತಿಗಳಿಷ್ಟಿರಲು ಮೂಲ ಒಂದೆ ಅಲ್ತೆ ?
ವಿಶ್ವದಾಭಿರಾಮ ಕೇಳು ವೇಮ.

ಕಮಲ ಭವ ಎಂದರೆ ಬ್ರಹ್ಮ ತಾನೇ ? ಅವನು ಅಜ. ಕಡು ಸೃಷ್ಟಿಯನ್ನು ಮಾಡಿದನೆನ್ನುವರು. ಅದನ್ನು ಹರಿ ಪಾಲಿಸುತ್ತಾನೆ ಮತ್ತು ಹರನು ಕೊಲ್ಲುತ್ತಾನೆ. ಅರ್ಥಾತ್ ಸೂಕ್ಷ್ಮದಲ್ಲಿ ಲಯಿಸುತ್ತಾನೆ ಎನ್ನುತ್ತಾರೆ. ಹೀಗೆ ವಿಶ್ವೇಶನಿಗೆ ತನ್ನನ್ನು ಪ್ರಕಟಪಡಿಸಲು ಮೂರು ಮೂರ್ತಿ ರೂಪಗಳಿದ್ದರೂ ಅವುಗಳ ಹಿಂದಿನ ಮೂಲವು ಒಂದೇ ಅಲ್ಲವೇ ?

ಆ. ಮೂರು ಗುಣಗಳಲ್ಲಿ ಮುಖ್ಯವಾದ ಗುಣವ,
ತಿಳಿಯಲಾರದವನು ತೊಳಗಲೆಂತು ?
ಭ್ರಮೆಗೆ ಸಿಲುಕುವವನೆ ಬಲು ಹುಚ್ಚನಾಗುವ.
ವಿಶ್ವದಾಭಿರಾಮ ಕೇಳು ವೇಮ.

ಗುಣಗಳು ಮೂರು. ಗುಣ ಎಂದರೆ ಹಗ್ಗ. ಹೇಗೆ ಪಶುವನ್ನು ಪಾಶದಿಂದ ಬಂಧಿಸಿ ಗುಣಿ ಇಲ್ಲವೆ ಗೂಟಕ್ಕೆ ಕಟ್ಟುವರೋ, ಹಾಗೆ, ಅಜ್ಞಾನ ಮತ್ತು ಆಲಸ್ಯ ವೃತ್ತಿಗಳಿಗೆ ಯಾವುದು ಬಂಧಿಸುವುದೋ, ಅದುವೇ ತಮೋಗುಣ. ಕರ್ಮ ಸಂಗ ಮತ್ತು ಲೋಭ ಸಂಗಗಳಿಂದ ಸ್ವಲ್ಪು ಚೇತನವುಂಟಾಗುತ್ತದೆ. ಸಕ್ರಿಯನಾಗುತ್ತಾನೆ. ಇದು ರಜೋಗುಣ. ರಜಸ್ ಎಂದರೆ ಧೂಳೀ ಕಣ. ಧೂಳಿ ಕಣಗಳು ಅತ್ತಿತ್ತ ಚಲಿಸುತ್ತವೆ. ಅದಿದನ್ನು ಕೊಂಡೊಯ್ಯುತ್ತವೆ. ಇನ್ನು ಕೊನೆಯದಾಗಿ ಜ್ಞಾನ ಸಂಗ ಮತ್ತು ಸುಖಸಂಗ ಯಾವುದರಿಂದ ಅಂಟುವುದೋ, ಅದೇ ಸತ್ತ್ವ ಗುಣ. ಈ ಮೂರು ಗುಣಗಳಲ್ಲಿ ಮುಖ್ಯವಾದ ಗುಣವಾವುದು ? ಸತ್ತ್ವ ಗುಣ ತಾನೇ ? ಅದನ್ನೇ ತಿಳಿಯದಿದ್ದರೆ ಅವನು ವಿಶ್ವದಲ್ಲಿ ಹೇಗೆ ತೊಳಗಿ ಬೆಳಗಬಲ್ಲನು ? ಅದನ್ನು ತಿಳಿಯದೆ ಆಲಸಿಯಾಗಿ ಅಜ್ಞಾನಿಯಾದರೆ, ಕರ್ಮಿಯಾಗಿ ಲೋಭಿಯಾದರೆ, ದಾರಿ ತಪ್ಪಿ ಭ್ರಮೆಗೆ ಸಿಲಕುತ್ತಾನೆ. ಬಹಳ ಹುಚ್ಚನಾಗುತ್ತಾನೆ.

ಹಾಗಾದರೆ ಸಾಧಕನು ಏನು ಮಾಡಬೇಕು ?

ಆ. ಬ್ರಹ್ಮ ಕೊಂದು, ವಿಷ್ಣು ಭಾಗದೊಳಗೆ ಬೆರೆಸಿ,
ವಿಷ್ಣು ಕೊಂದು ಶಿವನ ಒಳಗೆ ಬೆರೆಸಿ,
ಶಿವನ ಕೊಂದು ತಾನು ಶಿವಯೋಗಿಯಾದನು.
ವಿಶ್ವದಾಭಿರಾಮ ಕೇಳು ವೇಮ.

ಈ ಮೊದಲು ವಿವರಿಸಿದಂತೆ ಬ್ರಹ್ಮವೆಂದರೆ ತಮೋ ಗುಣದ ಪ್ರತಿನಿಧಿ. ಆದ್ದರಿಂದ ಬ್ರಹ್ಮವನ್ನು ಕೊಂದು ಅಂದರೆ ತಮೋಗುಣವನ್ನು ಅತಿಕ್ರಮಿಸಿ ವಿಷ್ಣು ಭಾಗದಲ್ಲಿ ಬೆರೆಸಬೇಕು. ಅಂದರೆ ರಜೋಗುಣದಲ್ಲಿ ರೂಪಾಂತರಿಸಬೇಕು. ಆಮೇಲೆ ವಿಷ್ಣುವನ್ನು ಕೊಂದು ಶಿವನೊಳಗೆ ಬೆರೆಸಬೇಕು. ಅಂದರೆ ರಜೋಗುಣವನ್ನು ಅತಿಕ್ರಮಿಸಿ ಸತ್ತ್ವ ಗುಣದಲ್ಲಿ ನಿಲ್ಲಬೇಕು. ಕೊನೆಯ ಹಂತದಲ್ಲಿ ಶಿವನನ್ನು ಕೊಂದು ಶಿವಯೋಗಿಯಾಗಬೇಕು. ಅಂದರೆ ಸತ್ತ್ವ ಗುಣವನ್ನೂ ಮೀರಿ ಗುಣಾತೀತನಾದ ಶಿವಯೋಗಿಯಾಗಬೇಕು. ಇದುವೇ ವೇಮನ ಯೋಗಿ ತಲುಪಿದ ಹಂತ. ಹಾಗಾಗಿ ಅವರು ನಿರ್ಗುಣ ಬ್ರಹ್ಮ ಸಾಧನೆಯನ್ನು ಪ್ರತಿಪಾದಿಸುತ್ತಾರೆ.

ಆ. ಮೂರು ಗುಣಗಳೊಂದೆ ಮೊದಲಿಗೇ ಇರುವವು.
ಸೇರಿ ಮೂಲವಿಡಿವ ಜ್ಞಾನವಿರದೆ,
ಭ್ರಮೆಗೆ ಸಿಕ್ಕ ಕರ್ಮಿ ಬಲು ಹುಚ್ಚನಾಗನೆ ?
ವಿಶ್ವದಾಭಿರಾಮ ಕೇಳು ವೇಮ.

ಪ್ರಕರ್ಷೇಣ ಕರೋತಿ ಇತಿ ಪ್ರಕೃತಿಃ. ಅಂದರೆ ಒಂದನ್ನು ಬಹುವಾಗಿ ಮಾಡುವದೇ ಪ್ರಕೃತಿ. ಸತ್ತ್ವ, ರಜಸ್ಸು ಮತ್ತು ತಮಸ್ಸು ಎಂಬೀ ತ್ರಿಗುಣಗಳ ಸಾಮೂಹಿಕ ಹೆಸರೇ ಪ್ರಕೃತಿ. ಅಭಿವ್ಯಕ್ತವಾಗುವ ಮುನ್ನ ಮೂಲ ಪ್ರಕೃತಿಯಲ್ಲಿ ಮೂರು ಗುಣಗಳು ಭಾರ ಸಾಮ್ಯದಲ್ಲಿರುತ್ತವೆ. ಈ ಸ್ಥಿತಿಯನ್ನು ಯೋಗಿಯು ಸೇರಿ, ಮೂಲವನ್ನು ಹಿಡಿವ ಜ್ಞಾನ ಹೊಂದಬೇಕು. ಆ ಜ್ಞಾನ ಪಡೆಯದಿದ್ದರೆ ಭ್ರಮೆಗೆ ಸಿಲುಕಿ, ದಾರಿ ಕಾಣದ ಹುಚ್ಚನಂತಾಗುತ್ತಾನೆ.

ಈ ಮೂವರು ಯಾರು ? ಅವರು ಎಲ್ಲಿಹರು ? ಎಂಬ ಪ್ರಶ್ನೆ ಏಳುತ್ತದೆ.

ಆ. ಮೂವರಾರು ಎನಲು ಮೂವರೊಳಗೆ ಇಹರು.
ಮೂವರನರಿಯರಲ ಮೂಢ ಜನರು !
ಮೂಲವು ಮೂವರಿಗೆ ಮುಖ್ಯವಾಗಿ ಉಂಟು.
ವಿಶ್ವದಾಭಿರಾಮ ಕೇಳು ವೇಮ.

ವಿಶ್ವೇಶನು ಗುಣಾಧೀಶನು. ಸತ್ತ್ವ, ರಜಸ್ ಮತ್ತು ತಮೋ ಗುಣಗಳನ್ನು ಅಧೀನ ಪಡಿಸಿಕೊಂಡ ಅರಿವಿನ ಸ್ವರೂಪರಾದ ಬ್ರಹ್ಮ, ವಿಷ್ಣು ಮತ್ತು ಶಿವರು ಬೇರೆಲ್ಲಿಯೂ ಇರದೆ ಪುರದಲ್ಲಿಯೇ ಇರುತ್ತಾರೆ. ಪುರೇ ಶೇತೇ ಇತಿ ಪುರುಷಃ. ಅವರು ಉತ್ತಮ ಪುರುಷ ; ಅಕ್ಷರ ಪುರುಷ ಮತ್ತು ಕ್ಷರ ಪುರುಷರಾಗಿ ನಮ್ಮೊಳಗೇ ಇದ್ದಾರೆ. ಆದರೆ ಮೂಢ ಜನರು ಪಾಪ ! ಈ ಮೂವರನ್ನು ಅರಿಯರಲ್ಲ ! ಈ ಮೂವರಿಗೂ ಮೂಲವಾದ ನಿರಕ್ಷರ ಪುರುಷನು ಅಂದರೆ ನಿರ್ಗುಣ ಬ್ರಹ್ಮವು ಮುಖ್ಯವಾಗಿ ಉಂಟು.

ಆದ್ದರಿಂದ ಸಾಧಕನು ಮಾಡಬೇಕಾದುದೇನು ?

ಆ. ಮೂವರನ್ನು ಅರಿತು, ಮೂಲವನ್ನು ಅರಿತು.
ಮೂವರ ಮೇಲೊಬ್ಬನ ಮುನ್ನ ಅರಿತು.
ಪರಮ ಜಿಹ್ವೆಯಿಂದ ಪ್ರಸ್ತುತಿ ಗೆಯ್ಯಿರೋ.
ವಿಶ್ವದಾಭಿರಾಮ ಕೇಳು ವೇಮ.

ತಮೋಗುಣಾನ್ವಿತ ಪುರುಷನಾದ ಬ್ರಹ್ಮನನ್ನು, ರಜೋಗುಣಾನ್ವಿತ ಪುರುಷನಾದ ವಿಷ್ಣುವನ್ನು ಮತ್ತು ಸತ್ತ್ವ ಗುಣಾನ್ವಿತ ಪುರುಷನಾದ ಶಿವನನ್ನೂ ಅರಿತುಕೊಂಡು, ಮೂವರ ಮೂಲವಾದ ಪರಶಿವನನ್ನು ಇಲ್ಲವೆ ಸಗುಣ ಬ್ರಹ್ಮವನ್ನು ಅರಿತು, ಬಳಿಕ ಸಾಧನೆಯನ್ನು ಮುಂದುವರಿಸಿ ಮೂವರಿಗೂ ಮೇಲಿರುವ ಮೂಲ ಪ್ರಕೃತಿಯಿಂದ ಗುಣಾನ್ವಿತನಾಗದ ನಿರ್ಗುಣ ಬ್ರಹ್ಮವನ್ನೂ ಮೊದಲು ಅರಿತುಕೊಂಡು ಅವನ ಮಹಿಮೆಯನ್ನು ಪರಮ ಜಿಹ್ವೆಯಿಂದ ಪ್ರಸ್ತುತಿ ಗೆಯ್ಯಿರಿ. ಅಂಥ ಅನುಪಮ ಸತ್ತೆಯ ಬಹುವಾದ ಸ್ತುತಿಯೇ ಜಿಹ್ವೆಗೆ ಪರಮ ಪವಿತ್ರ ಕಾರ್ಯ.

ಆ. ಇಷ್ಟು ಚಿಂತೆಯೇಕೆ ? ಏಕಾಂತ ಬುದ್ಧಿಯಿಂ.
ಹರಿ ಹರಾದಿಗಳಲಿ, ಆಸೆ ಉಡುಗಿ,
ಶಾಂತ ಬುದ್ಧಿ ಹೊಂದಿ, ಸಂಪಾದಿಸು ಸುಖಿವ.
ವಿಶ್ವದಾಭಿರಾಮ ಕೇಳು ವೇಮ.

ವೈದಿಕ ಯಜ್ಞಾದಿಗಳು ತ್ರೈಗುಣ್ಯಾತ್ಮಕ ಕರ್ಮಗಳಾಗಿವೆ. ಕರ್ಮಕಾಂಡವೆಲ್ಲ ಕೇವಲ ತ್ರೈಗುಣ್ಯ ವಿಷಯವೇ ಆಗಿದೆ. ಆದ್ದರಿಂದ ಕೃಷ್ಣನ ಉಪದೇಶವು ಗೀತೆಯಲ್ಲಿ ಹೀಗಿದೆ.

''ತ್ರೈಗುಣ್ಯ ವಿಷಯವನ್ನು ಕುರಿತು ವೇದಗಳು ಹೇಳುತ್ತವೆ. ಆದುದರಿಂದ ನೀನು ತ್ರೈಗುಣ್ಯ ರಹಿತನೂ, ದ್ವಂದ್ವವಿಲ್ಲದವನೂ ಸದಾ ಸತ್ತ್ವ ಗುಣವುಳ್ಳವನೂ, ಯೋಗ ಕ್ಷೇಮವಿಲ್ಲದವನೂ ಆತ್ಮವಂತನೂ ಆಗು''. (ಭಗ. 2-45)

ಆದ್ದರಿಂದ ವೇಮನ ಯೋಗಿ ಹೇಳುತ್ತಾರೆ. ನಿನಗೆ ಕರ್ಮದಲ್ಲಾಗಲಿ, ಕರ್ಮ ಫಲವಾದ ಸ್ವರ್ಗಾದಿ ಸುಖ ಪಡೆಯುವುದರಲ್ಲಾಗಲಿ ಇಷ್ಟು ಚಿಂತೆಯೇಕೆ ? ನೀನು ಧ್ಯಾನ ಕಾಲಕ್ಕೆ ಬುದ್ಧಿಯಲ್ಲಿ ಏನನ್ನೂ ತಾರದೆ ಏಕಾಂತದಲ್ಲಿರಿಸಿ, ಹರಿ ಹರಾದಿಗಳಲ್ಲಿ ಅಂದರೆ ಅಹಂಕಾರ, ಮಮಕಾರಗಳು ಆಶ್ರಯ ನೀಡುವ ಕರ್ತೃತ್ವಾಭಿಮಾನ ಮತ್ತು ಸ್ವಾಮಿತ್ವಾಭಿಮಾನಗಳಲ್ಲಿ ಮತ್ತು ಜ್ಞಾನ ಸುಖ ಸಂಗಗಳಲ್ಲಿ ಆಸೆಯು ಉಡುಗಿ ಅಗ್ರ್ಯ ಬುದ್ಧಿಯಲ್ಲಿ ಯಾವುದೇ ಸ್ಪಂದನಗಳೇಳದಂತೆ ಶಾಂತವಾಗಿರಿಸಿ, ನಿತ್ಯ ಸುಖವನ್ನು ಅಂದರೆ ಅನಂತ ಸುಖವಾದ ಆನಂದವನ್ನು ಪಡೆ. 'ಸುಖಂ ಅನಂತಂ ಆನಂದಂ'.

ಭಕ್ತಿಯು ದ್ವಿವಿಧ :

ಭಕ್ತಿಯಲ್ಲಿ ಎರಡು ಪ್ರಕಾರಗಳುಂಟು. ಒಂದು ಗೌಣೀ ಇಲ್ಲವೆ ಸಗುಣ. ಇನ್ನೊಂದು ಪರಾಭಕ್ತಿ ಇಲ್ಲವೆ ನಿರ್ಗುಣೀ ಭಕ್ತಿ. ಸಗುಣೀ ಇಲ್ಲವೆ ಗೌಣೀ ಭಕ್ತಿಯು ಪರಾಭಕ್ತಿಗೆ ಪೂರ್ವ ಸಿದ್ಧತೆಯಾಗಿದೆ.

ಆ. ಜಗದಲ್ಲಿಯು ಇಲ್ಲ ಜಲದಲ್ಲಿಯು ಇಲ್ಲ.
ನಿಗಮ ವೇದ್ಯವಾದ ನಿತ್ಯ ಪದವಿ.
ಸಗುಣ ನಿರ್ಗುಣದೊಳು ಸಾಧಿಸಿ ಸಲೆ ಕಾಣು.
ವಿಶ್ವದಾಭಿರಾಮ ಕೇಳು ವೇಮ.

ಮಾನವನು ಏನನ್ನು ಸಾಧಿಸಬೇಕು ? ನಿಗಮ ವೇದ್ಯವಾದ ನಿತ್ಯ ಪದವಿಯನ್ನು ತಾನೇ ? ನಿಗಮ ಎಂದರೇನು ? ಪಾರ್ವತಿಯು ಜನರ ಸೌಕರ್ಯಕ್ಕಾಗಿ, ಅವರ ಮನದಲ್ಲಿ ಯಾವ ಪ್ರಶ್ನೆಗಳು ಏಳಬಹುದೋ, ಅಂಥ ಪ್ರಶ್ನೆಗಳನ್ನು ಶಿವನಿಗೆ ಕೇಳುತ್ತಿದ್ದಳು. ಪಾರ್ವತಿಯು ಕೇಳುತ್ತಿದ್ದ, ಜ್ಞಾನಾತ್ಮಕ ಮತ್ತು ಪರಿಪ್ರಶ್ನಾತ್ಮಕ, ಪ್ರಶ್ನೆಗಳಿಗೆ 'ನಿಗಮ' ಎನ್ನುತ್ತಿದ್ದರು. ಮತ್ತು ಶಿವನು ನೀಡುವ ಉತ್ತರಗಳಿಗೆ 'ಆಗಮ' ಎನ್ನುತ್ತಾರೆ. ಹೀಗೆ ನಿಗಮ ವೇದ್ಯವಾದ ನಿತ್ಯ ಪದವಿಯು ನಿಗಮಾಗಮಗಳ ಮೂಲಕ ಹೊರಹೊಮ್ಮಿದ ನಿರ್ಗುಣ ಪದವಿಯೇ ಆಗಿದೆ. ಇದನ್ನು ಎಲ್ಲಿ ಪಡೆಯಬಹುದು ? ಕ್ಷೇತ್ರ ಯಾತ್ರೆಯಲ್ಲಿಯೂ ಅಲ್ಲ ; ತೀರ್ಥ ಯಾತ್ರೆಯಲ್ಲಿಯೂ ಅಲ್ಲ. ತನ್ನ ಹೃದಯದಲ್ಲಿರುವ ದೇವನನ್ನು ಹುಡುಕುತ್ತ ಅತ್ತ ಇತ್ತ ಅಲೆಯಬೇಕಿಲ್ಲ. ಇದನ್ನು ಸಾಧಿಸಲು ಎರಡು ಮಾರ್ಗಗಳಿವೆ. ಒಂದು ಸಗುಣೋಪಾಸನೆ, ಇನ್ನೊಂದು ನಿರ್ಗುಣೋಪಾಸನೆ.

ಆಗಮ ಶಬ್ದದ ವ್ಯುತ್ಪತ್ತಿ ಹೀಗಿದೆ.

''ಆಗತಂ ಶಿವ ವಕ್ತ್ರೇಭ್ಯೋ ಗತಂ ಯಂಚ ಗಿರಿಜಾ ಶ್ರುತೌ.
ಮತಂ ಚ ವಾಸುದೇವಸ್ಯ ತಸ್ಮಾತ್ ಆಗಮ ಉಚ್ಯತೇ''. ಅಂದರೆ

ಶಿವನ ಮುಖದಿಂದ ಹೊರಟಿತು. ಪಾರ್ವತಿಯ ಕಿವಿಯ ವರೆಗೆ ತಲುಪಿತು. ಈ ಮತವು ವಾಸುದೇವನ (ಕೃಷ್ಣನ) ಮತವೂ ಆಗಿತ್ತು. ಆದ್ದರಿಂದ ಇದಕ್ಕೆ ಆಗಮ ಎನ್ನುತ್ತಾರೆ.

ಆ. ಭಕ್ತಿಯುಳ್ಳ ಎಡೆಗೆ ಪರಮೇಶ್ವರನುಂಟು.
ಭಕ್ತಿ ಇಲ್ಲದೆಡೆಗೆ ಪಾಪವುಂಟು.
ಭಕ್ತಿ ಹೊಂದಿದವನು ಪರಮಾತ್ಮನಾಗುವ.
ವಿಶ್ವದಾಭಿರಾಮ ಕೇಳು ವೇಮ.

ಪೂಜ್ಯ-ಪೂಜಕ, ಸೇವ್ಯ ಸೇವಕರನ್ನು ಒಂದಾಗಿಸುವುದೇ ಭಕ್ತಿಯಾಗಿದೆ. ಪರಮೇಶ್ವರನು ಸರ್ವರಿಗೂ ಪೂಜ್ಯನು ; ಸೇವ್ಯನು. ಅವನನ್ನು ಪೂಜಿಸುವ ಇಲ್ಲವೆ ಗೌರವಿಸುವ ಸಾಧಕನಲ್ಲಿ ಭಕ್ತಿಯ ಚಿಲುಮೆಯಿದೆ. ಇದರಿಂದಲೇ ಆ ಸಾಧಕನು ಕೊನೆಗೆ ಪರಮೇಶ್ವರನಲ್ಲಿ ಒಂದಾಗುತ್ತಾನೆ. ಇದೇ ಭಕ್ತಿಯೋಗ. ಪರಮೇಶ್ವರನ ಸಕಲ ಐಶ್ವರ್ಯ ಅಂದರೆ ಈಶ್ವರೀಯ ಸಂಪತ್ತು ಸಾಧಕನಿಗೆ ಸಿದ್ಧಿಸುತ್ತದೆ. ಹೀಗೆ ಭಕ್ತಿಯುಳ್ಳ ಎಡೆಗೆ ಪರಮೇಶ್ವರನು ಇರುತ್ತಾನೆ. ಎಲ್ಲಿ ಭಕ್ತಿ ಇಲ್ಲವೋ, ಎಲ್ಲಿ ಬರೀ ಡಂಭಾಚಾರ, ನಾಟಕೀಯತೆ, ಆಡಂಬರಗಳಷ್ಟೇ ಉಂಟೋ, ಅಲ್ಲಿ ಪಾಪವಿರುತ್ತದೆ. ಆ ಮಾರ್ಗವು ಅಧೋಗತಿಗೆ ತಳ್ಳುತ್ತದೆ. ಯಾರು ಭಕ್ತಿಯನ್ನು ಹೊಂದಿ, ಪರಮಾತ್ಮನ ಪೂರ್ಣ ಕೃಪೆಗೆ ಪಾತ್ರನಾಗುವನೋ, ಪರಮಾತ್ಮನ ಅಂಶವನ್ನು ತನ್ನಲ್ಲಿ ಕಂಡುಕೊಳ್ಳುವನೋ ಅವನು ಪರಮಾತ್ಮನೇ ಆಗುತ್ತಾನೆ.

ಅಷ್ಟ ವಿಧ ಭಕ್ತಿ :

ಭಕ್ತಿಯು ಎಂಟು ಪ್ರಕಾರದ್ದಿದೆ. ಎರಡು ಪ್ರಕಾರದ ತಾಮಸಿಕ ಭಕ್ತಿ, ಎರಡು ಪ್ರಕಾರದ ರಾಜಸಿಕ ಭಕ್ತಿ, ಎರಡು ಪ್ರಕಾರದ ಸಾತ್ವಿಕ ಭಕ್ತಿ, ಮತ್ತು ಜ್ಞಾನಮಿಶ್ರ ಭಕ್ತಿ ಮತ್ತು ಕೊನೆಯದಾಗಿ ಕೇವಲ ಭಕ್ತಿ. ಈ ಅಷ್ಟಾವಿಧ ಭಕ್ತಿಗಳಲ್ಲಿ ಕೇವಲ ಭಕ್ತಿಯೇ ಶ್ರೇಷ್ಠವಾದುದು. ಯಾವ ಭಕ್ತಿಯೂ

ಇಲ್ಲದಿರುವುದಕ್ಕಿಂತ ಯಾವುದಾದರೂ ಭಕ್ತಿ ಇರುವುದೇ ಮೇಲು. ಕಾರಣವೆಂದರೆ ಆ ಜನರ ಚಿತ್ತ ವೃತ್ತಿಯು ಒಂದು ವಿಶೇಷ ಧಾರಾ ಪ್ರವಾಹದಲ್ಲಿ ನಿಯಂತ್ರಿತವಾಗಿರುತ್ತದೆ.

ಗರುಡ ಪುರಾಣದಲ್ಲಿ ಹೀಗೆ ಹೇಳಿದ್ದಾರೆ.

''ಅಷ್ಟಾ ವಿಧಾ ಹ್ಯೇಷಾ ಭಕ್ತಿರ್ಯಸ್ಮಿನ್ ಮ್ಲೇಚ್ಛೇ s ಪಿವರ್ತತೇ
ಸ ವಿಪ್ರೇಂದ್ರೋ ಮುನಿಃ ಶ್ರೀಮಾನ್ ಸ ಯತಿಃ ಸ ಚ ಪಂಡಿತಃ' ಅಂದರೆ,

ಈ ಅಷ್ಟ ವಿಧ ಭಕ್ತಿಗಳೊಳಗಿಂದ ಯಾವುದಾದರೊಂದು ಭಕ್ತಿಯು ಕುಸಂಸ್ಕಾರಗಳಿಂದ ಆವೃತವಾದ ಮೇಚ್ಛನಲ್ಲಿರುವುದಾದರೂ, ಅವನನ್ನು ಬ್ರಾಹ್ಮಣ ಶ್ರೇಷ್ಠ ಮುನಿ, ಸರ್ವಶ್ರೇಯುಕ್ತ ಸನ್ಯಾಸಿ ಇಲ್ಲವೆ ಪಂಡಿತ ಇವರೊಂದಿಗೆ ಸರಿದೂರೆಯಾಗಿ ಎಣಿಸಲಾಗುವುದು.

ಮಹಾಭಕ್ತರಾದ ಚೈತನ್ಯ ಮಹಾಪ್ರಭು ಹೀಗೆ ಹೇಳಿದ್ದಾರೆ.

''ಚಂಡಾಲೋ s ಪಿ ದ್ವಿಜ ಶ್ರೇಷ್ಠಃ ಹರಿ ಭಕ್ತಿ ಪರಾಯಣಃ
ಹರಿ ಭಕ್ತಿ ವಿಹೀನಶ್ಚ ವಿಪ್ರೋಪಿ ಶ್ವಪಚಾಧಮಃ'. ಅಂದರೆ,

ಹರಿಭಕ್ತಿ ಪರಾಯಣನಾಗಿದ್ದರೆ, ಅವನು ಚಂಡಾಲನಾಗಿದ್ದರೂ ದ್ವಿಜ ಶ್ರೇಷ್ಠನೇ ಸರಿ. ಆದರೆ ವಿಪ್ರನಾಗಿದ್ದರೂ ಒಬ್ಬನು ಹರಿಭಕ್ತಿ ವಿಹೀನನಾಗಿದ್ದರೆ, ಅವನು ನಾಯಿ ತಿನ್ನುವವನಿಗಿಂತಲೂ ಅಧಮನೆನಿಸುತ್ತಾನೆ.

ಭಕ್ತಿ ಸಾಧನೆಗೋಸ್ಕರ ಅಧಿಕಾರ ಭೇದವೇನೂ ಇಲ್ಲ. ಮಾನವ ಶರೀರವನ್ನು ಪಡೆದಿದ್ದರೆ ಸಾಕು. ಅವನು ಈ ಸಾಧನೆಯ ಅಧಿಕಾರಿಯಾಗುತ್ತಾನೆ.

ನಾರದ ಮಹರ್ಷಿಗಳು ಹೀಗೆ ಹೇಳುತ್ತಾರೆ.

'ನಾಸ್ತಿ ಜಾತಿ ವಿದ್ಯಾ ರೂಪ ಕುಲ ಕ್ರಿಯಾದಿ ಭೇದಃ' ಎಂದರೆ

ಭಕ್ತಿಯೋಗ ಸಾಧನೆಗೆ ಜಾತಿ ಭೇದವಾಗಲಿ, ವಿದ್ಯಾ ಭೇದವಾಗಲಿ, ರೂಪ ಭೇದವಾಗಲಿ, ಕುಲ ಭೇದವಾಗಲಿ ಇಲ್ಲವೆ ಕ್ರಿಯಾ ಭೇದವಾಗಲಿ ಇಲ್ಲ.

ಅದರಿಂದಾಗಿಯೇ ವೇಮನ ಯೋಗಿಗಳು ಹೀಗೆ ಹಾಡಿದ್ದಾರೆ.

ಆ. ಮಾದರವನೆ ಇರಲಿ ಮತ್ತೆ ಆತ್ಮ ಮೇಲೆ
ಮನಸು ನಿಲಿಸಿದೊಡನೆ ಮಾದಿಗಲ್ಲ.
ಮನಸು ನಿಲಿಸದವನೆ ಮಹಿಯ ಮೇಲೆ ಹೊಲೆಯ.
ವಿಶ್ವದಾಭಿರಾಮ ಕೇಳು ವೇಮ.

ಬ್ರಾಹ್ಮಣರ ಸ್ಮೃತಿ ಶಾಸ್ತ್ರಗಳಲ್ಲಿ ಮಾದರು, ಹೊಲೆಯರು, ಚಂಡಾಲರನ್ನು ಅಸ್ಪಶ್ಯರೆಂದು ಸಾರಿದ್ದಾರೆ. ಶೂದ್ರರಿಗೂ ಸಹ ವೇದಾಧ್ಯಯನದ ಅಧಿಕಾರವಿಲ್ಲದಾಗ ಇನ್ನು ಮಾದಿಗರಿಗೆ ಆ ಅಧಿಕಾರವನ್ನು ಹೇಗೆ ದಯಪಾಲಿಸಿಯಾರು ? ಆದರೆ ತನ್ನ ಆತ್ಮದ ಮೇಲೆ ಲಕ್ಷ್ಯವಿರಿಸಿ ಧ್ಯಾನ ಮಾಡಿ ಮನವನ್ನು ನಿಲ್ಲಿಸಿದವನು ಮಾದಿಗನೆನಿಸನು. ಆದರೆ ತನ್ನ ಆತ್ಮದ

ಮೇಲೆ ಮನವನ್ನು ನಿಲಿಸಲಾರದವನು ವಿಪ್ರ ವರ್ಣದವನಾದರೂ ಮಹಿಯ ಮೇಲೆ ಹೊಲೆಯನೇ.

ಆ. ನೋಡಿ ಮಾದರವನ ನಿಂದಿಸುತಿಹರೇಕೆ ?
ಯೋಗ್ಯವಿರದ ಮಾತು ಯಾಕೆ ನುಡಿವೆ ?
ಅವನ ಒಳಗೆ ನುಡಿವ, ಅವನ ಕುಲವದೇನು ?
ವಿಶ್ವದಾಭಿರಾಮ ಕೇಳು ವೇಮ.

ಮಾದರವನನ್ನು ನೋಡಿ ಹದುಳದಿಂದ ಅಯ್ಯಾ ! ಬಾರಯ್ಯ ! ಎಂದು ನುಡಿಯರು. ಪ್ರತಿಯಾಗಿ ತಿರಸ್ಕಾರದಿಂದ ಎಲವೋ, ಬಾರೆಲೋ ಎಂದು ನಿಂದಿಸಿ ನುಡಿಯವರು. ಯೋಗ್ಯವಾದ ಮಾತನ್ನು ಆಡದೆ ಯೋಗ್ಯವಿರದ ಮಾತನ್ನು ನುಡಿವರು. ಹೀಗೇಕೆ ? ಯಾರೊಬ್ಬರನ್ನು ಸಂಧಿಸಿದಾಗ ನಾವು ಸಂಧಿಸುವುದು ಅವನೊಳಗಿರುವ ಆತ್ಮನನ್ನು ತಾನೇ ? ಆ ಆತ್ಮನ ಕುಲವು ಯಾವುದು ? ಸರ್ವ ಭೂತಾಂತರಾತ್ಮನಾದ ಪರಮಾತ್ಮನ ಕುಲ ತಾನೇ ?

ಆ. ನೋಡಿ ಮಾದರವನ ನಿಂದಿಸುವುದು ಏಕೆ ?
ಪಾಡು ಇರದ ಮಾತು ಆಡುವರಲ !
ಅವನೊಳಿಹುದು 'ಶಬ್ದ' ಅದರ ಕುಲವದೇನು ?
ವಿಶ್ವದಾಭಿರಾಮ ಕೇಳು ವೇಮ.

ಮಾದರವನನ್ನು ನೋಡಿ, 'ಎಲೇ ಅರಿಷ್ಟ ಬಡ್ಡೀ ಮಗನೇ ! ಎದುರಿಗೆ ಬಂದಿಯಾ?' ಎಂದು ನಿಂದಿಸುತ್ತಾರೆ. ಅವನನ್ನು ಕಂಡು ಪಾಡು ಅಲ್ಲದ ಅವಾಚ್ಯ ಮಾತುಗಳನ್ನು ಆಡುತ್ತಾರೆ. ಆದರೆ ಅವನಲ್ಲಿ ಅನಾಹತ 'ಓಂ' ಶಬ್ದ ನುಡಿಯುತ್ತಿದೆ. ಅದು ಪ್ರಣವ ನಾದ. ಆತ್ಮದ ಧ್ವನಿ. ಅದರ ಕುಲವು ಯಾವುದು ?

ಆ. ಪ್ರಣವನರಿಯುವನಕ ಭಕ್ತನಾಗಲಾರ.
ಜ್ಯೋತಿ ಕಾಣದನಕ ಜೋಗಿಯಲ್ಲ.
ನಿತ್ಯವರಿಯುವನಕ ನಿರ್ವಾಣವು ಅಲ್ಲ.
ವಿಶ್ವದಾಭಿರಾಮ ಕೇಳು ವೇಮ.

ವಿಶ್ವದ ಸಕಲ ಮಾತಿನ ಧ್ವನ್ಯಾತ್ಮರ ಮೂಲವು ಪ್ರಣವ. ಅಂದರೆ ಓಂ ಆಗಿದೆ. 'ಪ್ರಣವಃ ಸರ್ವ ವಾಙ್ಮಯಃ'. ವಿಶ್ವದ ರೂಪಾಂತರದ ಇಲ್ಲವೆ ಅವಸ್ಥಾಂತರದ ಕ್ರಮವು ಯಾವ ಸತ್ತೆಯಿಂದ ಉತ್ಪನ್ನಿತವಾಗುವುದೋ ಅದು ಓಮ್ ಧ್ವನಿಯಿಂದ ಪ್ರತಿನಿಧಿತವಾಗಿದೆ. ಏಕೆಂದರೆ ಅದರ ರಕ್ಷೆಯಲ್ಲಿ ಸೃಷ್ಟಿ, ಸ್ಥಿತಿ ಮತ್ತು ಲಯಗಳ ಶಕ್ತಿಗಳು ಅಡಗಿವೆ. ಸೃಷ್ಟಿಯ ಧ್ವನ್ಯಾತ್ಮಕ ಮೂಲವು 'ಅ' ಆಗಿದೆ. ಸೃಷ್ಟಿಯ ಹಂತದಲ್ಲಿ ಬ್ರಹ್ಮಾಂಡದಲ್ಲಿ ಕ್ಷೋಭೆಯುಂಟಾಗುತ್ತದೆ. ಎಲ್ಲಿ ಕ್ಷೋಭೆಯುಂಟಾಗುವುದೋ, ಅಲ್ಲಿ ಗತಿ ಇದೆ. ತರಂಗಗಳಿವೆ. ತೈಜಸ ತರಂಗಗಳಿವೆ. ಧ್ವನ್ಯಾತ್ಮಕ ತರಂಗಗಳಿವೆ. ಪರಮ ಪುರುಷನು ಏನನ್ನಾದರೂ ಸೃಜಿಸಲು ಇಚ್ಛಿಸಿದಾಗ ಬ್ರಹ್ಮಾಂಡದಲ್ಲಿ ಉಂಟಾದ ಕ್ಷೋಭೆಯನ್ನು 'ಅ' ಧ್ವನಿಯಿಂದ ಪ್ರತಿನಿಧಿಸಲಾಗುವುದು. ಆ ಮುಂದಿನ ಹಂತದಲ್ಲಿ ಅವನು ಜೀವಿಗಳನ್ನು ಕಾಯ್ದುಕೊಳ್ಳಬೇಕಾಗುತ್ತದೆ. ಹೀಗೆ ಬ್ರಹ್ಮಾಂಡದ ಸಂರಚನೆಯಲ್ಲಿ ಸ್ಥಿತಿ ಕಾಯ್ದುಕೊಳ್ಳುವ ಇಚ್ಛೆಯನ್ನು ಪ್ರತಿನಿಧಿಸುವ ಇನ್ನೊಂದು ಕ್ಷೋಭೆಯುಂಟಾಗುತ್ತದೆ. ಮತ್ತು ಅದನ್ನು 'ಉ'

ಧ್ವನಿಯಿಂದ ಪ್ರತಿನಿಧಿಸುತ್ತಾರೆ. ಇನ್ನು ಯಾವ ಬಿಂದುವಿನಿಂದ ಅಂತ್ಯದತ್ತ ಮುನ್ನಡೆ ಪ್ರಾರಂಭವಾಗುವುದೋ, ಅದನ್ನು 'ಮ' ಧ್ವನಿ ಪ್ರತಿನಿಧಿಸುತ್ತದೆ. ಹೀಗೆ ಅ+ಉ=ಓ+ಮ್ – ಓಮ್. ಅಉಮ ಧ್ವನಿ ಸಮೂಹವೆಂದಾಯಿತು. ಮತ್ತು ಅಉಮದ ಕಕ್ಷೆಯಲ್ಲಿಯೇ ಜಗತ್ತಿನ ಸರ್ವ ಕ್ರಿಯೆಗಳೂ ಬರುತ್ತವೆ. 'ಅಉಮ'ವು ಪರಮ ಪುರುಷನ ಲೌಕಿಕ ಅಭಿವ್ಯಕ್ತಿ. ಪರಮ ಪುರುಷನ ಜಾಗತಿಕ ಮಾತನ್ನು 'ಅಉಮ' ಪ್ರತಿನಿಧಿಸುತ್ತದೆ.

ಹೀಗೆ ಭಕ್ತಿಭಾವದ ಪಕ್ವ ಸ್ಥಿತಿಯಲ್ಲಿ ಹೃದಯದಲ್ಲಿ ಅನಾಹತ ಓಂಕಾರ ಪ್ರಣವವನ್ನು ಅರಿಯದವನು ಭಕ್ತನಾಗಲಾರನು. ನಾದಾನುಸಂಧಾನದೊಂದಿಗೆ ತೇಜಾನುಸಂಧಾನವೂ ಇರಲೇಬೇಕಷ್ಟೇ. ಹೀಗೆ ಹೃದಯದಲ್ಲಿ ಬೆಳಗುವ ಜ್ಯೋತಿಯನ್ನು ಕಾಣದೆ ಯಾರೂ ಯೋಗಿಯಾಗರು. ಚಿತ್ತವು ಚಿನ್ನಾಗಿ ಸಮಾಧಾನ ಹೊಂದಿದಾಗ, ಮತ್ತು ಜ್ಞಾನ ಲಾಭವಾಗಿದ್ದಾಗ ಸರಿಯಾದ ರೀತಿಯಲ್ಲಿ ಧರ್ಮವನ್ನು ತಿಳಿದುಕೊಳ್ಳುವುದೇ ನಿರ್ವಾಣ ಸ್ಥಿತಿ. ಹೀಗೆ ನಿತ್ಯಾನಂದವನ್ನು ಅರಿಯದೆ ಯಾವನೂ ನಿರ್ವಾಣಿಯಾಗಲಾರ. ಕೋರಿಕೆ ರಹಿತವಾದ ಈ ಪದವಿ ತಲುಪಲು ಯಾವ ಜಾತಿ, ಕುಲ ಭೇದಗಳು ಅಡ್ಡಿಪಡಿಸವು.

ಭಕ್ತಿ ಸಾಧನೆಯ ಕಾಲದಲ್ಲಿ ಮಾನವನು ತನ್ನ ಸಂಸ್ಕಾರಗಳ ಭಾವವನ್ನೇ ಹಿಡಿದು ಮುಂದುವರಿಯುತ್ತಾನೆ. ಅವನು ತನ್ನಿಂದಲೇ ನಿಜ ಸುಖವನ್ನು ಪಡೆಯುತ್ತಾನೆ. ಆದರೂ ಈ ಪ್ರಕಾರದ ಸಂಸ್ಕಾರ ಭಾವಾತ್ಮಕ ಸಾಧನೆಯು ಎಂದೆಂದಿಗೂ ಸಾಧಕನನ್ನು ವಿಶುದ್ಧ ಬ್ರಾಹ್ಮೀ ಭಾವದಲ್ಲಿ ಪ್ರತಿಷ್ಠಿಸಲಾರದು.

''ಭಕ್ತಿ ಯೋಗೋ ಬಹುವಿಧೈರ್ಮಾರ್ಗೈಃ ಭಾವಿನಿ ಭಾವ್ಯತೇ,
ಸ್ವಭಾವ ಗುಣ ಮಾರ್ಗೇಣ ಪುಂಸಾಂ ಭಾವೋ ವಿಭಿದ್ಯತೇ'' ಅಂದರೆ

ಭಕ್ತಿಯೋಗದ ವಿಧಿ ಮತ್ತು ಪ್ರಕಾರಗಳು ಅನೇಕ. ಮಾನವನು ತನ್ನ ಸ್ವಭಾವಕ್ಕೆ ಅನುಸರಿಸಿ, ವಿಭಿನ್ನ ಮಾರ್ಗಗಳಿಂದ ಭಕ್ತಿ ಸಾಧನೆಯನ್ನು ಮಾಡುತ್ತಾನೆ.

ತಾಮಸಿಕ ಸಾಧನೆ :

ಸಂಸ್ಕಾರವು ತನ್ನ ಸಂಸ್ಕಾರಗತ ಭಾವದಿಂದ ತಮೋಗುಣಿಯಾಗಿದೆ. ಏಕೆಂದರೆ ಸಂಸ್ಕಾರಗಳು 'ಪುನರಪಿ ಜನನಂ, ಪುನರಪಿ ಮರಣಂ. ಪುನರಪಿ ಜನನೀ ಜಠರೇ ಶಯನಂ' ದಲ್ಲಿ ಫಲಿಸುವ ಕರ್ಮಫಲಗಳೇ ಆಗಿವೆ. ಆದರೆ ಕೆಲವೊಮ್ಮೆ ಮಾಡಿದ ಕರ್ಮಗಳಿಗೆ ಅನುಸಾರವಾಗಿ ಕೆಲವೊಮ್ಮೆ ರಜ ಪ್ರಧಾನ ಮತ್ತೆ ಕೆಲವೊಮ್ಮೆ ಸತ್ವ ಪ್ರಧಾನವಾಗಿರುತ್ತವೆ. ಯಾವಾಗ ಸಾಧಕನು ರಜೋಗುಣ ಇಲ್ಲವೆ ಸತ್ವ ಗುಣದ ಪ್ರಕಾಶದತ್ತ ಹೋಗಿ, ತನ್ನ ತಮೋಗುಣೀ ಸತ್ತೆಯನ್ನು ತಾಮಸಿಕತೆಯಲ್ಲಿ ಮುಳುಗಿಸಿ, ಭಕ್ತಿ ಸಾಧನೆಯನ್ನು ಮಾಡುವನೋ, ಆಗ ಅವನಿಗೆ ತಾಮಸಿಕ ಸಾಧಕನೆನ್ನುತ್ತಾರೆ.

''ಅಭಿಸಂಧಾಯ ಯೋ ಹಿಂಸಾಮ್ ದಂಭಂ ಮಾತ್ಸರ್ಯಮೇವ ವಾ
ಸಂರಂಭೀ ಭಿನ್ನ ದೃಕ್ ಭಾವೋ ಮಯಿ ಕಾರ್ಯಾತ್ ಸ ತಾಮಸಃ'' ಅಂದರೆ

ಯಾವ ವ್ಯಕ್ತಿಯು ಹಿಂಸೆ, ದಂಭ ಇಲ್ಲವೆ ಮಾತ್ಸರ್ಯಕ್ಕೆ ವಶವರ್ತಿಯಾಗಿ, ಪರಮ ರಸಕ್ಕೆ ಬದಲಾಗಿ ವಿಷಯ ರಸದ ಸಾಧನೆ ಮಾಡುವನೋ, ಅವನು ತಾಮಸಿಕ ಸಾಧಕನು.

ಆ. ಮತ್ತ ಚಿತ್ತದವನು ಮರ್ಮವನು ಅರಿಯದೆ,
ಚಿತ್ತ ಚಪಲ ಹೊಂದಿ ಜಗದಿ ಕೆಡುವ.
ಭಕ್ತಿ ಇಲ್ಲದವನು ಪರಮಾತ್ಮನನರಿವನೆ ?
ವಿಶ್ವದಾಭಿರಾಮ ಕೇಳು ವೇಮ.

ಪತ್ರಿ ಏರಿಸಿ, ಕಾಯಿ ಒಡೆದು ಸುಖಭೋಗ ಕೋರುವವರು, ಹುಂಡಿಯಲ್ಲಿ ಕಳವು ಇಲ್ಲವೆ ಕಳ್ಳ ಪೇಟೆಯ ಹಣ ಸುರುವಿ ತಮ್ಮ ಹೇವ ಪಂಥಗಳಿಗೆ ಹರಕೆ ಹೊರುವವರು ಇಂಥ ತಾಮಸಿಕರೇ ಆಗಿದ್ದಾರೆ.

ಈ ತಾಮಸಿಕ ಸಾಧಕರಲ್ಲಿಯೂ ಸಹ ಕೆಲವರು, ತಮ್ಮ ಸ್ಥೂಲ ಅಭೀಷ್ಟ-ಸಿದ್ಧಿಯ ನಂತರವೂ ತಮ್ಮ ಇಷ್ಟವನ್ನು ಮರೆಯದಂಥ ಹಲ ಕೆಲವರನ್ನು ಕಾಣಬಹುದು. ಅಂದ ಮೇಲೆ, ಇವರಲ್ಲಿ ರಾಜಸಿರ ಮತ್ತು ಸಾತ್ವಿಕ ಪ್ರವೃತ್ತಿಗಳು ಪ್ರಚ್ಛನ್ನ ಭಾವದಲ್ಲಿವೆಯೆಂದು ಒಪ್ಪಲೇಬೇಕು.

ಆ. ಜಪವ, ಬಾಹ್ಯ ಪೂಜೆ ಸಾಕೆನಿಸುವರೆ ಮಾಡಿ,
ಕಪಟ ಬಿಡದೆ ಇರಲು, ಕಷ್ಟ ಜನಕೆ.
ಮುಕ್ತಿ ಹೊಂದದಿದ್ದು ಮುಳುಗಿದರು ತಮದೊಳು.
ವಿಶ್ವದಾಭಿರಾಮ ಕೇಳು ವೇಮ.

ಇಂಥ ದಾಂಭಿಕ, ಕಪಟಾಚಾರದ ತಾಮಸಿಕ ಭಕ್ತರು ಬಹುವಾಗಿ ವಿಪ್ರ, ಪೂಜಾರಿ, ಪುರೋಹಿತರಲ್ಲಿ ಕಾಣ ಬರುತ್ತಾರೆ. ಇವರೇ ಮಡಿ ಮಡಿಯೆಂದು ಅಡಿಗಡಿಗೆ ಹಾರುವ ಹಾರುವರು.

ರಾಜಸಿಕ ಸಾಧನೆ :

ಹೊರ ಜಗತ್ತಿನಲ್ಲಿ ಯಾವುದೊಂದು ವಿಶೇಷ ವಸ್ತುವಿನ ಪ್ರಾಪ್ತಿಗಾಗಿ ಸಾಧನೆ ಗೆಯ್ಯುವವನು ರಾಜಸಿಕ ಸಾಧಕನೆನಿಸುತ್ತಾನೆ. ರಾಜಸಿಕ ಸಾಧಕನ ವೈಶಿಷ್ಟ್ಯವೆಂದರೆ, ಅವನ ದೃಷ್ಟಿಯು ತನ್ನ ಸ್ವಾರ್ಥವನ್ನು ಪೂರ್ತಿಗೊಳಿಸುಕೊಳ್ಳುವಲ್ಲಿಯೇ ಮಗ್ನವಾಗಿರುತ್ತದೆಯಲ್ಲದೆ, ಇತರರಿಗೆ ಹಾನಿ ಮಾಡುತ್ತದೆ.

''ವಿಷಯಾನಭಿಸಂದಾಯ ಯಶ ಐಶ್ವರ್ಯಮೇವ ವಾ
ಅರ್ಚಾದಾವರ್ಚಯೇದ್ ಯೋ ಮಾಂ ಪೃಥಗ್ಭಾವಃ ಸ ರಾಜಸಃ''. -ಭಾಗವತ

ಅಂದರೆ, ವಿಷಯ, ಯಶ ಮತ್ತು ಐಶ್ವರ್ಯಗಳ ಪ್ರಾಪ್ತಿಗೋಸುಗ ಪುಷ್ಪ, ಬಿಲ್ವಪತ್ರೆ ಇತ್ಯಾದಿಗಳ ಮೂಲಕ ಈಶ್ವರನ ಸ್ಥೂಲ ಅರ್ಚನೆಯನ್ನು ಮಾಡುವವರು, ನಿಜವಾಗಿ ವಿಷಯವನ್ನೇ ಬಯಸುತ್ತಾರಲ್ಲದೆ ಈಶ್ವರನನ್ನಲ್ಲ. ಅವರು ರಾಜಸಿಕ ಸಾಧಕರು. ಈ ರಾಜಸಿಕ ಸಾಧಕರಲ್ಲಿ ಸಹ ಹಲ ಕೆಲವರು ಪರಬ್ರಹ್ಮವನ್ನು ಮರೆಯುವುದಿಲ್ಲ. ಅವರು ರಾಜಸಿಕ ಸಾಧಕರಾಗಿದ್ದರೂ ಅವರಲ್ಲಿ ಸಾತ್ವಿಕ ಭಾವವು ಯಥೇಷ್ಟವಾಗಿರುತ್ತದೆ.

ಆ. ಕಾಮಿಯಲ್ಲದವನು ಕವಿಯಲ್ಲ ರವಿಯಲ್ಲ.
ಕಾಮಿಯಿರದೆ ಮೋಕ್ಷ ಕಾಮಿಯಲ್ಲ.
ಕಾಮಿಯಾದ ಅವನೆ, ಕವಿಯು, ರವಿಯು ಅಹುದು.
ವಿಶ್ವದಾಭಿರಾಮ ಕೇಳು ವೇಮ.

ಸಾಧಕನಿಗೆ ಏನನ್ನಾದರೂ ಪಡೆಯಬೇಕೆಂಬ ಬಯಕೆ ಇರಬೇಕು. ಆ ಕಾಮನೆಯಿಂದಲೇ ಅವನು ಕವಿಯಾಗುತ್ತಾನೆ ; ರವಿಯಾಗುತ್ತಾನೆ. ಕಾಮನೆಯೇ ಇರದಿದ್ದರೆ, ಜಡಮತಿಯಾಗಿದ್ದರೆ ಅವನು ಸ್ಥೂಲದಲ್ಲಿ ಬೆಳಗುವ ರವಿಯೂ ಆಗಲಾರ ; ಸೂಕ್ಷ್ಮ ಭಾವಲೋಕದಲ್ಲಿ ಶೋಭಿಸುವ ಕವಿಯೂ ಆಗಲಾರ. ಮೋಕ್ಷ ಕಾಮನೆಯೂ ಸಹ ಕಾಮನೆಯ ಒಂದು ಮುಖ ತಾನೇ ?

ಆ. ಅಡಿಗಡಿಗೆ ವಿಚಿತ್ರ ಅಖಿಲ ವಸ್ತುಗಳತಿ.
ಭೋಗ ಭಾಗ್ಯಗಳಲಿ ಬಿದ್ದು ಉರುಳಿ,
ತಾನೆ ತಿರುಗುತಿರುವ ತನ್ನ ನೆರಳ ಜೊತೆಗೆ.
ವಿಶ್ವದಾಭಿರಾಮ ಕೇಳು ವೇಮ.

ಈ ದೇಹವು ತನ್ನ ನೆರಳು ಮಾತ್ರ. ತನ್ನನ್ನು ನೆರಳು ಅನುಸರಿಸುವುದೆಂಬುದನ್ನು ಅರಿಯದೆ ತಾನೇ ಭ್ರಮಿಸಿ, ನೆರಳನ್ನು ಅನುಸರಿಸುತ್ತಿದ್ದಾನೆ. ತೀರ್ಥ ಕ್ಷೇತ್ರಗಳು, ಅಖಿಲ ವಸ್ತುಗಳು ಅಡಿಗಡಿಗೆ ಅತಿ ವಿಚಿತ್ರವಾಗಿ ಕಾಣುತ್ತವೆ. ಹೀಗಾಗಿ ಸಾಧಕನು ಭೋಗ ಭಾಗ್ಯಗಳಲ್ಲಿ ಬಿದ್ದು ಉರುಳಾಡುತ್ತಾನೆ.

ಆ. ಯಂತ್ರ ತಂತ್ರ ವಿದ್ಯೆಯ ಯಾಚಕ ಜನ ಗಣವು,
ಮಂತ್ರ ವಿದ್ಯೆಗಂಟಿ, ಮಹಿಮೆಯೇನು ?
ಬೆಳುದಿಂಗಳು ಬಯಲು ಒಳಗೆ ಹರಡಬೇಕು.
ವಿಶ್ವದಾಭಿರಾಮ ಕೇಳು ವೇಮ.

ಯಂತ್ರ ತಂತ್ರ ವಿದ್ಯೆಯು ಉನ್ನತ ವಿದ್ಯೆಯೇನಲ್ಲ. ರಾಜಸಿಕ ಸಾಧಕರು ಭೋಗ ಭಾಗ್ಯದಾಸೆಗೆ ಯಂತ್ರ ವಿದ್ಯೆಗೆ, ತಂತ್ರ ವಿದ್ಯೆಗೆ ಮಾರು ಹೋಗುತ್ತಾರೆ. ಕೆಲವರು ಮಂತ್ರ ವಿದ್ಯೆಗೆ ಅಂಟಿ ಮಂತ್ರ ಮಹಿಮೆಯಿಂದ ಅಲ್ಪ ಸಿದ್ಧಿ ಸಂಪನ್ನರಾಗಬಹುದು. ಆದರೆ, ಯಾವುದು ಪರಮ ಪದ ? ದಿವ್ಯ ಬೆಳದಿಂಗಳು ಚಿದಾಕಾಶದಲ್ಲಿ ಅಂದರೆ ಚಿದ್ ಬಯಲಿನೊಳಗೆ ಹರಡಬೇಕು. ಅದು ರಾಜಸಿಕ ಸಾಧನೆಯಿಂದ ಈಡೇರದು.

ಆ. ಶಕ್ತಿ ಮಹಿಮೆ ಸೋಂಕಿ ಕೆಡುತಿಹರು ಪುರುಷರು.
ಮುಕ್ತಿ ಮಹಿಮೆ ತೊರೆದು, ಮೂಢರಾಗಿ.
ಆದಿ ಶಕ್ತಿ ಕೂಡ ಅನ್ಯಾಯದಿ ಹೋದಳು.
ವಿಶ್ವದಾಭಿರಾಮ ಕೇಳು ವೇಮ.

'ಶಿವ ಶಕ್ತ್ಯಾತ್ಮಕಂ ಬ್ರಹ್ಮ', ಶಕ್ತಿಯುಕ್ತ ಶಿವನೇ ಬ್ರಹ್ಮವಾಗಿದೆ. ಶಕ್ತಿಯು ಶಿವನ ಶಕ್ತಿಯೇ ಆಗಿದೆ. ಅಂದ ಮೇಲೆ ಶಿವನನ್ನು ಅಂದರೆ ಮಂಗಳಕರನನ್ನು, ಕಲ್ಯಾಣಕಾರಿಯನ್ನು ಒಲಿಸಿಕೊಂಡರೆ ಅದರೊಡನೆ ಶಕ್ತಿ ಬಂದೇ ಬರುತ್ತದೆ. ಆದರೆ ಕೆಲವು ಸಾಧಕರು ಸಿದ್ಧಿ

ಸಂಪಾದನೆಯ ಆತುರತೆಯಲ್ಲಿ ಶಕ್ತಿ ಸಂಪಾದನೆಗೆ ವಾಲುತ್ತಾರೆ. ಅಂಥವರು ಶಕ್ತಿ ಮಹಿಮೆ ಸೋಂಕಿ ಕೆಡುತ್ತಾರೆ. ಶಿವನನ್ನೇ ಉಪೇಕ್ಷಿಸುತ್ತಾರೆ. ಅವರು ಶಕ್ತಿಗೆ ಒಲಿದು ಮೂಢರಾಗಿ ಮುಕ್ತಿಯ ಮಹಿಮೆಯನ್ನೇ ತೊರೆಯುತ್ತಾರೆ. ಹೀಗೆ ಅಭವನೊಡನೆ ಇರಬೇಕಾದ ಆದಿ ಶಕ್ತಿಯೂ ಸಹ, ರಾಜಸಿಕ ಸಾಧಕರ ಕಾತುರಕ್ಕೆ ಒಲಿದು ಅನ್ಯಾಯದ ಮಾಟ, ಮದ್ದುಗಳ ಪ್ರದರ್ಶನಕ್ಕೆ ಸಿಕ್ಕು ಹೋದಳು.

ಆ. ಇಂದ್ರ ಲೋಕವಿರಲಿ, ಚಂದ್ರ ಲೋಕವಿರಲಿ,
ಅಲ್ಲಿ ನೋಡಬಹುದು ಅಂದವಾಗಿ.
ನಂದಿ ಮೇಲೆ ಏರಿ ನಯವಾಗಿ ನೋಡಿಕೊ.
ವಿಶ್ವದಾಭಿರಾಮ ಕೇಳು ವೇಮ.

ಬೇರೆ ಬೇರೆ ಸಾಧನೆಯ ಹಂತಗಳಲ್ಲಿ ಮನಸ್ಸು ಉನ್ನತೋನ್ನತ ಸ್ತರಗಳನ್ನು ತಲುಪುತ್ತದೆ. ವಿಭಿನ್ನ ಅನುಭವಗಳನ್ನು ಪಡೆಯುತ್ತಾರೆ. ಈ ಅನುಭವ ಕ್ಷೇತ್ರಗಳೇ ಲೋಕಗಳು. ಚಿತ್ರವಿಚಿತ್ರ ದೃಶ್ಯಾವಳಿಗಳ ಅನುಭವ ನೀಡುವ ಇಂದ್ರ ಲೋಕವಿರಲಿ, ಮನಸ್ಸನ್ನು ನಿಲ್ಲಿಸಿದ ಚಿದ್ಬಯಲಿನ ಚಂದ್ರ ಕಳೆಯೇ ಇರಲಿ, ಅಲ್ಲಿ ಅಂದವಾಗಿ ನೋಡಬಹುದು. ಆದರೆ ಮೊದಲು ನಂದಿ ಮೇಲೆ ಏರಿ ಅಂದರೆ ಆನಂದ ಶಿಖರ ತಲುಪಿ, ನಂದಿ ವಾಹನ ಶಿವನಾಗಿ, ನಯವಾಗಿ ಏನೆಲ್ಲವನ್ನು ಕಾಣು.

ಆ. ದೇಹ ಗುಣವನೆಲ್ಲ ತಿಳಿದಿಹ ಶಿವಯೋಗಿ.
ಮೋಹದಲ್ಲಿ ಸಿಕ್ಕು ಮೋಸ ಹೋಹ.
ಇಂದ್ರ ಜಾಲದಲ್ಲಿ ಏಕೆ ಸಿಕ್ಕುತಿಹರೋ ?
ವಿಶ್ವದಾಭಿರಾಮ ಕೇಳು ವೇಮ.

ಜನರನ್ನು ಆಕರ್ಷಿಸುವ ಪವಾಡ ಸದೃಶ ಘಟನೆಗಳನ್ನು ಪ್ರದರ್ಶಿಸುವುದು ಒಂದು ಬಗೆಯ ಇಂದ್ರಜಾಲವೇ ಆಗಿದೆ. ಉನ್ನತ ಸ್ತರದ ಮಾನಸ ಶಕ್ತಿಯನ್ನು ನಿಮ್ನ ಸ್ತರದಲ್ಲಿ ಅಭಿವ್ಯಕ್ತಿಸಿದಾಗ, ನಿಮ್ನ ಮನಸ್ಸಿಗೆ ಅವು ಅಲೌಕಿಕ ಘಟನೆಗಳೆನಿಸುತ್ತವೆ. ಶಿವಯೋಗಿಗೆ ಈ ದೇಹದ ಎಲ್ಲ ಗುಣಗಳ ಅರಿವಿದೆ. ಆದರೂ ಕೆಲವೊಮ್ಮೆ ಕೀರ್ತಿ ಪಡೆಯುವ, ಗೌರವ ಪಡೆಯುವ, ಮೋಹದಲ್ಲಿ ಸಿಕ್ಕು ಮೋಸ ಹೋಗುವುದುಂಟು. ಅವನೇಕೆ ಇಂದ್ರಜಾಲದಲ್ಲಿ ಸಿಕ್ಕು ಮೋಸ ಹೋಗುವುನೋ ?

ಈ ರಾಜಸಿಕ ಸಾಧಕರಲ್ಲಿ ಸಹ, ಹಲ ಕೆಲವರು ಪರಬ್ರಹ್ಮವನ್ನು ಮರೆಯುವುದಿಲ್ಲ. ಅವರು ರಾಜಸಿಕ ಸಾಧಕರಾಗಿದ್ದರೂ ಸಹ, ಅವರಲ್ಲಿ ಸಾತ್ತ್ವಿಕ ಭಾವವು ಯಥೇಷ್ಟವಾಗಿ ಇರುತ್ತದೆ.

ಸಾತ್ತ್ವಿಕ ಸಾಧನೆ :

''ಕರ್ಮ ಸಂಹಾರಮುದ್ದಿಶ್ಯ ಪರಸ್ಮಿನ್ ವಾ ತದರ್ಪಣಮ್
ಯಜೇದ್ ಯಷ್ಟವ್ಯಮಿತಿ ವಾ ಪೃಥಗ್ ಭಾವಃ ಸಃ ಸಾತ್ತ್ವಿಕಃ''

ನಮ್ಮ ಕರ್ಮವು ಕ್ಷಯಿಸಲಿ ; ಹೇ ಭಗವಂತ ! ನಮ್ಮನ್ನು ಕರ್ಮದಿಂದ ಬಿಡುಗಡೆ ಮಾಡು ಎಂಬ ಉದ್ದೇಶವನ್ನು ಇರಿಸಿಕೊಂಡು ಈಶ್ವರನ ಆರಾಧನೆಯನ್ನು ಮಾಡುವುದು ನಮ್ಮ

ಕರ್ತವ್ಯವಷ್ಟೇ ? ಎಂಬ ಬೇರೆ ಭಾವವನ್ನು ಹೊಂದಿ ಸಾಧನೆ ಮಾಡುವವರು ಸಾತ್ತ್ವಿಕರಾಗಿದ್ದಾರೆ. ''ನಮಗಿನ್ನು ವಯಸ್ಸಾಯಿತು ಈಶ್ವರನ ಪೂಜೆಯನ್ನು, ಸ್ತುತಿ ಪಾಠವನ್ನು ಮಾಡದಿದ್ದರೆ ಜನರು ಏನೆಂದಾರು ?'' ಎಂದು ತಿಳಿದವರು ಬೇರೆ ಹಲವರು. ಆದರೆ ಪರಮಾತ್ಮನ ಪ್ರಾಪ್ತಿಯು ಅವರ ಉದ್ದೇಶವಾಗಿಲ್ಲ. ಆದ್ದರಿಂದ ಈ ಸಾತ್ವಿಕ ಸಾಧನೆಯನ್ನು ಸಹ ಶ್ರೇಷ್ಠ ಸಾಧನೆಯೆಂದು ಹೇಳಲಾರೆವು.

ಆ. ದೇವ ಪೂಜೆ ಗೆಯ್ಯೆ ದಿವ್ಯ ಭೋಗ ಉಂಟು.
ತತ್ತ್ವವರಿಯುವವನು ದೈವ ಸಮನು.
ಏನು ಇರದ ನರಗೆ ಯಾವ ಗತಿಯು ಇಲ್ಲ.
ವಿಶ್ವದಾಭಿರಾಮ ಕೇಳು ವೇಮ.

ಖಂಡ ಸತ್ತೆಗಳನ್ನೇ ದೇವರೆಂದು ತಿಳಿದು ಪೂಜೆ ಸಲ್ಲಿಸುವುದರಿಂದ ಪರಮ ಮುಕ್ತಿ ದೊರೆಯದಿದ್ದರೂ ದಿವ್ಯ ಭೋಗವಂತೂ ದೊರೆಯುತ್ತದೆ. ಪೂಜಕಾರಿ ಇಲ್ಲವೆ ಪೂಜಾರಿಯನ್ನು ಐಹಿಕ ಸುಖಭೋಗಗಳತ್ತ ಸೆಳೆಯುತ್ತದೆ. ಆದರೆ ತತ್ತ್ವವನ್ನೇ ಅರಿತರೆ ಅವನೇ ದೈವ ಸಮನಾಗುತ್ತಾನೆ. ಪೂಜ್ಯ ಪೂಜಕ ಯೋಗವಾಗುತ್ತದೆ. ಆದರೆ ತತ್ತ್ವವನ್ನೂ ಅರಿಯಲಾರದ ಅಜ್ಞಾನಿಗೆ, ಪೂಜಾದಿ ಮಾಡಲಾರದ ಆಲಸಿಗೆ, ಯಾವ ಗತಿಯೂ ಇರದು. ಸಾತ್ತ್ವಿಕ, ರಾಜಸಿಕ ಮತ್ತು ತಾಮಸಿಕ ಭಕ್ತಿಗಳೆಂಬ ಮೂರು ಭಕ್ತಿ ಪ್ರಕಾರಗಳನ್ನು ಗೌಣ ಭಕ್ತಿ ಎನ್ನುತ್ತಾರೆ. ಪರಮ ಬ್ರಹ್ಮನನ್ನು ಹೊರತುಪಡಿಸಿ, ಬೇರಾವ ಲಕ್ಷ್ಯವನ್ನೂ ಇರಿಸಿಕೊಳ್ಳದ ಭಕ್ತಿಗೆ ಮುಖ್ಯಾ ಭಕ್ತಿ ಎನ್ನುತ್ತಾರೆ. ಅಲ್ಲಿ ಸಾಧಕನು ಗುಣಾತೀತನಾಗಿರುತ್ತಾನೆ. ಆ ನಿರ್ಗುಣ ಭಕ್ತಿಯು ಸಾಧನೆಯಲ್ಲಿ ನಿರತವಾಗಿರತ್ತದೆ.

ನಿರ್ಗುಣ ಭಕ್ತಿ :

ತನ್ನ ಪ್ರಾಣಗಳ ಪ್ರೇರಣೆಯಿಂದ ತನ್ನನ್ನು ಪರಬ್ರಹ್ಮನತ್ತ ಕೊಂಡೊಯ್ಯುವುದನ್ನು ಹೊರತು ಪಡಿಸಿ, ಬೇರಾವ ಉದ್ದೇಶವೂ ಸಾಧಕನಲ್ಲಿ ಇರುವುದಿಲ್ಲ. ''ನೀನೇಕೆ ಅವನನ್ನು ಪ್ರೀತಿಸುವೆ? ಅವನಲ್ಲೇಕೆ ಭಕ್ತಿ ಹೊಂದಿರುವೆ ?'' ಎಂದು ಯಾರಾದರೂ ಕೇಳಿದರೆ, 'ನಾವೇಕೆ ಪ್ರೀತಿಸುತ್ತಿದ್ದೇವೆ ? ಎಂಬುದನ್ನು ನಾವು ಅರಿಯೆವು. ಅವನನ್ನು ಪ್ರೀತಿಸುವುದು ಹಿತಕರವೆನಿಸುತ್ತದೆ. ಆದ್ದರಿಂದ ಪ್ರೀತಿಸುತ್ತೇವೆ. ನಾವು ಅವನನ್ನು ಪ್ರೀತಿಸದೆ ಇರಬಲ್ಲೆವೇ ? ಅವನು ನಮ್ಮ ಪ್ರಾಣಗಳ ಪ್ರಾಣನು'' ಎಂದು ಯಾರು ಹೇಳುವರೋ, ಅವರ ಈ ತರದ ಭಕ್ತಿಯನ್ನು ನಿರ್ಗುಣ ಭಕ್ತಿಯೆಂದು ಹೇಳುತ್ತಾರೆ.

ಗೀತ. ನಿರ್ಗುಣಾಂಶದಲಿ ಸಲೆ ಮನವನರಿತು ಮೀರಿ,
ಸ್ವರ್ಗವೆನ್ನುತ ಇರುತಿರೆ ಶಾಶ್ವತವದು.
ಭರ್ಗನಾದ ತಾನು ಬ್ರಾಹ್ಮಣಗೆ ಬ್ರಾಹ್ಮಣಹನು.
ದುರ್ಗುಣ ಭ್ರಮೆಗಳ ಕೊಚ್ಚುತ ನೀಗು ವೇಮ.

ಮನವು ತಮಸ್, ರಜಸ್ ಇಲ್ಲವೆ ಸತ್ತ್ವ ಗುಣದಿಂದ ಪ್ರಭಾವಿತವಾಗಿರುತ್ತದೆ. ಇಂಥ ಮನವನ್ನು ನಿರ್ಗುಣಾಂಶದಲ್ಲಿ ಅರಿತು ಅದನ್ನು ಮೀರಬೇಕು. ಆಗ ಸ್ವರ್ಗ ಅಂದರೆ ತನ್ನಲ್ಲಿ ತಾನು ಸೇರುವುದು ಇದ್ದರೆ ಅದು ಶಾಶ್ವತವಾಗಿರುತ್ತದೆ. ತಾನು ಭರ್ಗನು; ಅಂದರೆ

ಶಿವನು ; ಪರಂ ಜ್ಯೋತಿಯು. ಅಷ್ಟೇಕೆ ಬ್ರಹ್ಮವಿದನಿಗೂ ತಾನು ಬ್ರಹ್ಮಣನೆನಿಸುತ್ತಾನೆ. ಆದ್ದರಿಂದ ಎಲ್ಲ ನಿರ್ಗುಣಗಳ ಭ್ರಮೆಯನ್ನು ನೀಗು ; ಮುಂದೆ ಸಾಗು.

ಗೀತ. ಮತಿ ಹಿತವಾದಂಥ ನಿರ್ಗುಣ ಮರ್ಮವರಿತು,
ಸತತ ಅಭ್ಯಾಸ ಯುಕ್ತಿಯಲಿ ಸೇರಿಕೊಂಡು,
ಅತುಲಿತಾನಂದ ಸಂಪೂರ್ಣ ಆಗಿ ಉಂಟು.
ವಿಮಲ ಗುಣರಾಜ ಯೋಗೀಂದ್ರ ವೇಮನಾರ್ಯ.

ನಿರ್ಗುಣ ಪದವಿಯೇ ಏಕೆ ? ಏಕೆಂದರೆ ಅದು ಮತಿಗೆ ಹಿತಕರವಾಗಿದೆ. ಅದರ ಈ ಮರ್ಮವನ್ನು ಅರಿತು, ಅದರ ಅಭ್ಯಾಸ ಯುಕ್ತಿಯಲ್ಲಿ ಸತತ ಸೇರಿಕೊಂಡರೆ, ಅನುಪಮ ಆನಂದವೇ ಸಂಪೂರ್ಣವಾಗಿ ಉಂಟು. ಇಂಥ ಸ್ಥಿತಿಯನ್ನು ಕುರಿತು ಆಲಿಸು.

ಗೀತ. ತ್ರಿಗುಣ ಭಾವವನ್ನೆ ಮೀರಿ ತಿರುಗುವವನು,
ಜಗದ ಮೇಲಾಸಿಸದೆ ತಾ ಬ್ರಹ್ಮ ಯಂತ್ರದಲ್ಲಿ.
ಬೂದಿ ಮುತ್ತಿದ ಬೆಂಕಿ ತೆರ ಬಾಳುತಿಹನು.
ವಿಮಲ ಗುಣ ರಾಜ ಯೋಗೀಂದ್ರ ವೇಮನಾರ್ಯ.

ನಿಜವಾದ ನಿರ್ಗುಣೇ ಸಾಧಕನಿಗೆ ಅಜ್ಞಾನ, ಆಲಸ್ಯಗಳ ಸಂಗವಿಲ್ಲ ; ಲೋಭ ಕರ್ಮಗಳ ಸಂಗವೂ ಇಲ್ಲ. ಕೊನೆಗೆ ಅವನು ಜ್ಞಾನ, ಸುಖಗಳ ಸಂಗವನ್ನೂ ತೊರೆಯುತ್ತಾನೆ. ಹೀಗೆ ತ್ರಿಗುಣ ಭಾವವನ್ನು ಮೀರಿ ತಿರುಗುತ್ತಾನೆ. ಅವನು ಈ ಬ್ರಹ್ಮ ಯಂತ್ರದಲ್ಲಿ, ಜಗತ್ತಿನ ಮೇಲಾವ ಆಸೆಯನ್ನೂ ಹೊಂದದೆ, ಬೂದಿ ಮುಚ್ಚಿದ ಕೆಂಡದಂತೆ, ಬಾಳುತ್ತಿದ್ದಾನೆ. ಅವನಲ್ಲಿ ನಿಜ ಅರಿವಿನ ಜ್ಯೋತಿ ಈಗಾಗಲೇ ಬೆಳಗುತ್ತಿದೆ. ಆದರೆ ಅವನು ಅದರ ಮಹಿಮೆಯನ್ನು ಹೆಚ್ಚಾಗಿ ಪ್ರಕಟಪಡಿಸನು. ಅವನು ಗುಣಾಧೀನನಲ್ಲ. ಆದರೆ ಗುಣಾಧೀಶನು. ಗುಣರಾಜನು. ಯೋಗೀಂದ್ರನು.

ನಿರ್ಗುಣೋಪಾಸನೆಯ ವಿಧಿ ವಿಧಾನಗಳನ್ನು ಅರಿತು ಜ್ಞಾನಮಿಶ್ರಿತ ಭಕ್ತಿಯಿಂದ ಮುಂದುವರಿಯಬೇಕು.

ಗೀತ. ಆತ್ಮವ ತನ್ನೊಳು ಗಮನಿಸಿ ಅನುದಿನವೂ
ನಿರ್ಗುಣಾತ್ಮಾರ್ಚನೆಯ ಗೆಯ್ದು, ನಿತ್ಯ ಅಮರ
ಪ್ರತ್ಯಗಾತ್ಮನೊಳು ನೆನೆಯಲು ಪ್ರಬಲ ಯೋಗಿ.
ಸಚ್ಚಿದಾನಂದ ಪದದಲ್ಲಿ ಸತ್ಯ ವೇಮ.

ಅನುದಿನವೂ ತನ್ನಲ್ಲಿ ಇರುವ ಆತ್ಮವನ್ನು ಗಮನಿಸಬೇಕು. ಹೇಗೆ ? ಯಾವುದು ಅನಾತ್ಮವೋ, ಯಾವುದು ಚತುರ್ವಿಂಶತಿ ತತ್ತ್ವವೆನಿಸಿ ಅನಾತ್ಮವಾಗಿದೆಯೋ, ಅದನ್ನು ನೇತಿಗಳೆಯುತ್ತ, ಹೋಗಿ ಆತ್ಮತತ್ತ್ವವನ್ನು ಗಮನಿಸಬೇಕು. ಅಲ್ಲಿ ಅಗ್ರ್ಯ ಬುದ್ಧಿಯಿಂದ ನಿರ್ಗುಣ ಆತ್ಮದ ಅರ್ಚನೆಯನ್ನು ಮಾಡಬೇಕು. ಅಂದರೆ ಆತ್ಮವನ್ನು ಪ್ರೀತಿಗಾಗಿ ಪ್ರೀತಿಸಬೇಕು. ಪ್ರೀತಿಸದೆ ಇರಲು ಸಾಧ್ಯವಿಲ್ಲದಾಗಿ ಪ್ರೀತಿಸಬೇಕು. ಅರ್ಚಿಸಬೇಕು. ಆಗ ಆತ್ಮವು ನಿತ್ಯವೂ, ಅಮರವೂ, ಎಂದು ತಿಳಿಯುತ್ತದೆ. ಈಗ ಯಾವುದು ಪ್ರತ್ಯಕ್ ಅಂದರೆ ತೀರ ನಿಕಟವಾದ ಒಳಗಿರುವ ಆತ್ಮವಾಗಿದೆಯೋ, ಅದನ್ನು ನೆನೆಯುತ್ತಿದ್ದರೆ, ಸಾಧಕನು

ಸತ್, ಚಿತ್, ಆನಂದ ಪದದಲ್ಲಿ ಸತ್ಯವಾಗಿ ಇರಬಲ್ಲನು.

ಕಂ. ಅನುವಿಲಿ ನಿರ್ಗುಣ ರೂಢಿಸಿ,
ತನಗಾವುದು ತೋಚದೆಂದು, ತತ್ತ್ವವರಿಯದೇ,
ಮನಸಾಂತರಂಗದಲ್ಲಿಯೆ,
ವಿನಯದಿ ಬಯಲನು ಸೇರುತ ಬೆಳಗೈ ವೇಮ.

ಮೇಲಿನ ಪದ್ಯದಲ್ಲಿ ಸೂಚಿಸಿದಂತೆ, ಅನುದಿನವೂ ನಿರ್ಗುಣ ಅರ್ಚನೆಯನ್ನು ರೂಢಿಗೊಳಿಸಬೇಕು. ಹೀಗೆ ತಾನು ಜ್ಞಪ್ತಿಯ ಆಚೆಗೆ ಸರಿಯಬೇಕು. ತನಗೆ ಏನೂ ತೋಚದು ; ತತ್ತ್ವವನ್ನೂ ನಾನರಿಯೆನು. ದೇವಾ ! ನೀನೇ ಹಾದಿ ತೋರಿಸು ; ಎಂದು ಅಂತರಂಗದಲ್ಲಿ ಮನನ ಮಾಡುತ್ತ ಅತಿ ವಿನಯದಿಂದ ಮನಸ್ಸಿನ ಆಚೆಗಿರುವ ಚಿದ್ಬಯಲನ್ನು ಸೇರಿ ಬೆಳಗು.

ಗೀತ. ಗಗನ ಗೋಚರ ನಿರ್ಗುಣ ಗಮ್ಯ ಸೋಸಿ,
ತಮವ ಮೀರಿದ ಧ್ಯಾನದಲಿ ತತ್ಪರಾಗಿ,
ತ್ವರಿತವಾಗಿಯೆ ಮೋಕ್ಷದ ದಾರಿಯಲ್ಲಿ
ತಲುಪಿ ನಿರ್ಮಲ ಸುಜ್ಞಾನ, ತೊಳಗು ವೇಮಾ.

ಚಿದ್ಬಯಲಿನಲ್ಲಿ ಗೋಚರಿಸುವಂಥ ನಿರ್ಗುಣವನ್ನು ತಲುಪುವ ಹಂತವನ್ನು ಶೋಧಿಸಿ, ಅದರ ಧ್ಯಾನದಲ್ಲಿ ತತ್ಪರನಾಗಬೇಕು. ಅಜ್ಞಾನ ಆಲಸ್ಯಗಳ ತಮವನ್ನು ಮೀರಬೇಕು. ಆಗ ಬೇಗ ಬೇಗನೇ ಮೋಕ್ಷದ ದಾರಿಯಲ್ಲಿ ತಲುಪಬಹುದು. ಗುಣಗಳ ಬಂಧನವನ್ನು ಕಳಚಬಹುದು. ಅಲ್ಲಿ ಭರ್ಗನಾಗಿ ತೊಳಗು .

ಗೀತ. ಎನಿತೊ ವಿದ್ಯೆಗಳ ಕಲಿತರು ಅರಿಯಲಿಲ್ಲ.
ತಾನು ನಿರ್ಗುಣ ಜ್ಞಪ್ತಿಯನು ತಾಕಬೇಕು.
'ನಿರ್ಣಯೋ ನಾಸ್ತಿ' ಎನುವುದು ನೀಟವಾಯ್ತು.
ಗುರುವಿನ ಬೋಧೆಗೆ ಅನ್ಯವು ಸಾಟಿಯೆ ? ವೇಮ.

ಹಲವಾರು ವಿದ್ಯೆಗಳಿವೆ. ಯಂತ್ರವಿದ್ಯೆ ಇದೆ ; ತಂತ್ರ ವಿದ್ಯೆ ಇದೆ. ಮಂತ್ರ ವಿದ್ಯೆಯೂ ಇದೆ. ಇವುಗಳನ್ನು ಕಲಿತರೂ ಆತ್ಮವನ್ನು ಅರಿಯುವ ವಿದ್ಯೆ ಕಲಿತಂತಾಗದು. ಬ್ರಹ್ಮ ವಿದ್ಯೆ ಬುದ್ಧಿಗತವಾಗದು. ಆದ್ದರಿಂದ ಸಾಧಕನು ತನ್ನ ನಿರ್ಗುಣ ಜ್ಞಪ್ತಿಯನ್ನು ತಾಕಬೇಕು. ಆಗ 'ಇನ್ನು ನಿರ್ಣಯ' ಮಾಡಲಾರೆ ; ನೀನೇ ಮಾರ್ಗದರ್ಶನ ಮಾಡು ; ಎಂದು ಶರಣಾಗುತ್ತಾನೆ. ಗುರುವು ಬೋಧಿಸುವುದೂ ಇದನ್ನೇ. ಗುರುವು ಹೇಳುತ್ತಾನೆ. ಅಂದ ಮೇಲೆ ಗುರುವಿನ ಬೋಧೆಗೆ ಬೇರಾವುದೂ ಸಾಟಿಯಾಗಲಾರದು.

ಸಾಧಕನು ಪಿಂಡಾಂಡದಲ್ಲಿ ಅಕ್ಷಯವನ್ನು ಅಂದರೆ ಅವಿನಾಶಿಯೂ, ನಿತ್ಯವೂ ಆದ ಆತ್ಮವನ್ನು ಕಂಡು ಹೆಚ್ಚು ಹೆಚ್ಚು ಗಾಢವಾಗಬೇಕು. ಆಗ ಅಮರ ಗುಣವಿಕಾರದ ಅನುಭವವಾಗುತ್ತದೆ. ಯಾವುದು ಅಕ್ಷಯವೋ, ಅದು ಉಳಿಯುತ್ತದೆ. ಇತರವೆಲ್ಲ ಕ್ಷಯಿಸುತ್ತದೆ.

ಆ. ಅಕ್ಷಯವೆನುವುದು ಬಳಿಯ ಅಂಡದೊಳಗೆ ಬೆಳೆಸಿ,
ಅಮರ ಗುಣ ವಿಕಾರ ಅನುಭವಿಸುತ,

ಅಕ್ಷಯವನು ಅಂಟಿ, ಅಕ್ಷಯವೇ ಉಂಟು.
ವಿಶ್ವದಾಭಿರಾಮ ಕೇಳು ವೇಮ.

ಹೀಗೆ ಅವಿನಾಶಿ ತತ್ತ್ವಕ್ಕೆ ಅಂಟಿದರೆ, ಅವನಿಗೆ ಅವನಾಶಿ ಆತ್ಮದಲ್ಲಿಯೇ ರತಿಯುಂಟು.

ಸೀಸ. ಮನಸು ನಿಲ್ಲಿಸಿದವನು ಮತ್ತೆ ಸರ್ವ ಸಮತೆಯಲ್ಲಿ,
ಅನುಭವವನು ಕೋರಿ ಅಚಲನಿಹನು.
ನಿಗಮಾಂತ ವೇದ್ಯನಿಹ ನಿತ್ಯ ಪ್ರಕಾಶನಿಹ,
ಪರಮ ಪೂರ್ಣವ ಕೋರಿ ಪಟ್ಟು ಬಿಡನು.
ಅರಿತು ತಾನು ಇಪ್ಪ ಪರಮ ಬ್ರಹ್ಮವೆಂದು
ತನ್ನನೆ ತಿಳಿಯುತ ತಿಳಿವು ಬಿಡನು.
ನಿರುತವಾತ್ಮನ ಸ್ತುತಿಸಿ ನಿರ್ಗುಣವನು ಹೊಂದಿ,
ನಿತ್ಯ ಬ್ರಹ್ಮನಿಹ ನಿಯತಿ ಬಿಡನು.

ತೇಟ. ಸಗುಣವೆಂದಿಗೂ ತಾ ಕಾಣದೆ, ಸತ್ಯವೆನಲು,
ನಿರ್ಗುಣ ಬ್ರಹ್ಮವೇ ಎಂದು ನಿಶ್ಚಯಿಸುತ,
ತಾನು ತನ್ನೊಳಗೆ ಪೂರ್ಣವಾಗಿ ತೊರೆಯದಿಹನು.
ವಿಮಲ ಗುಣರಾಜ ಯೋಗೀಂದ್ರ ವೇಮನಾರ್ಯ.

ನಿರ್ಗುಣೋಪಾಸನೆಯ ಪರಮ ಪದವನ್ನು ತಲುಪುವ ಅನುಭವವನ್ನು ಈ ಪದ್ಯದಲ್ಲಿ ಬಣ್ಣಿಸಲಾಗಿದೆ. ಸಾಧಕನು ಮೊದಲು ನಿರ್ಗುಣದ ಮೇಲೆ ಲಕ್ಷ್ಯವಿರಿಸಿ ಮನಸ್ಸನ್ನು ನಿಲ್ಲಿಸುತ್ತಾನೆ. ಬಳಿಕ ತ್ರಿಗುಣಗಳನ್ನು ಭಾರಸಾಮ್ಯದಲ್ಲಿರಿಸಿ, ಸರ್ವ ಸಮತೆಯಲ್ಲಿ ಇರಿಸಿ, ಅಚಲನಾಗಿ ದಿವ್ಯ ಅನುಭವವನ್ನು ಕೋರುತ್ತಾನೆ. ಆಗ ಅವನು ಹಿಂದಕ್ಕೆ ಸರಿಯದೆ, ಪರಮ ಪೂರ್ಣವನ್ನೇ ಕೋರುತ್ತಾನೆ. ತನ್ನ ಪಟ್ಟನ್ನು ಬಿಟ್ಟುಗೊಡುವುದಿಲ್ಲ. ಈ ಪದವೇ ಪರಮ ಬ್ರಹ್ಮಪದವಿಯೆಂದು ಅವನಿಗೆ ಅರಿವಾಗುತ್ತದೆ. ಆಗ ತನ್ನ ನಿಜ ನಾನುವನ್ನೇ ತಿಳಿಯುತ್ತ ಆ ತಿಳಿವನ್ನು ಬಿಡನು. ಆಗ ಅವನಿಗೆ ಆತ್ಮದ ಮಹಿಮೆ ಅರಿವಾಗುತ್ತದೆ. ಆದ್ದರಿಂದ ಆತ್ಮವನ್ನು ಸ್ತುತಿಸುತ್ತ ನಿರ್ಗುಣ ಪದವಿಯನ್ನು ಹೊಂದುತ್ತಾನೆ. ಮತ್ತು ನಿತ್ಯ ಬ್ರಹ್ಮನಿದ್ದು ಆ ಭಾಗ್ಯವನ್ನು ಬಿಡುವುದಿಲ್ಲ.

ಈ ನಿರ್ಗುಣದ ಅನುಭವವಾದಾಗ ಅವನು ಎಂದೂ ಸಗುಣವನ್ನು ಕಾಣನು. ಸತ್ಯವಾಗಿ ಇದು ನಿರ್ಗುಣ ಬ್ರಹ್ಮವೇ ಎಂದು ನಿಶ್ಚಯಿಸುತ್ತ, ತಾನು ತನ್ನೊಳಗೆ ಪೂರ್ಣವಾಗಿ ತನ್ಮಯನಾಗಿರುತ್ತಾನೆ. ಇವನೇ ವಿಮಲ ಗುಣರಾಜನಾದ ಯೋಗೀಂದ್ರನಾದ ವೇಮನಾರ್ಯನು.

ಗೀತ. ನಿತ್ಯ ಸತ್ಯ ನಿರಾಮಯ ನಿರ್ಗುಣವದು.
ಮೃತ್ಯುಸಮ ದೃಷ್ಟಿಯೊಳಗೆಣಿಸಿ ಮೀರದಿದ್ದು,
ಭೃತ್ಯು ಭೃತ್ಯಾನುರಾಗವೈ ; ಭೃಕುಟಿಗಂಟಿ,
ನೃತ್ಯ ಮಾಡುತ ಇರುವುದೇ ನಿಯತಿ ವೇಮ.

ಆ ನಿರ್ಗುಣವು ನಿತ್ಯವಾಗಿದೆ ; ಸತ್ಯವಾಗಿದೆ, ಆರೋಗ್ಯ ಪೂರ್ಣವಾಗಿದೆ. ಅದನ್ನು ಮೃತ್ಯು ಸಮ ದೃಷ್ಟಿಯೊಳಗೆ ಎಣಿಸಬೇಕು. ಅಂದರೆ ಹೇಗೆ ಮೃತ್ಯುವಿಗೆ ಈ ದೇಹದ ಪರಿವೆಯಿರುವುದಿಲ್ಲವೋ, ಪ್ರಪಂಚದ ಪರಿವೆ ಇರುವುದಿಲ್ಲವೋ, ಹಾಗೆ ಎಣಿಸಬೇಕು. ಮತ್ತು ಈ ದೃಷ್ಟಿಯನ್ನು ಅತಿಕ್ರಮಿಸದಿದ್ದು, ತಾನು ಭೃಕುಟಿ ಗಂಟಿ, ಭೃತ್ಯುಭಾವ ತಳೆಯಬೇಕು. ಮತ್ತು ತನ್ನ ಅಪೂರ್ಣತೆಯನ್ನು ಪೂರ್ಣಗೊಳಿಸಿಕೊಳ್ಳಲು ಅನುರಾಗ ಹೊಂದಿರಬೇಕು. ಹೀಗೆ ಯಾವ ಚಿಂತೆಯಿಲ್ಲದೆ ಆನಂದದಿಂದ ನಲಿದಾಡಬೇಕು. ನೃತ್ಯ ಮಾಡಬೇಕು. ಹೀಗಿರುವುದೇ ಭಾಗ್ಯ ! ಮಹಾಭಾಗ್ಯ !!

ಗೀತ. ಸಗುಣವೆಂದೂ ತಾನಲ್ಲ ಸತ್ಯವಾಗಿ,
ನಿರ್ಗುಣ ಬ್ರಹ್ಮವೆಯೆಂದು ನಿಶ್ಚಯದಿಂ.
ತಾನು ತನ್ನೊಳಗೆ ಪೂರ್ಣಾಗಿ ತಗಲಿ ಇರಲು,
ಅವತರಿಸಿದ ಶಿವನೆನುವರು ಅವನ ವೇಮ.

ಈ ಮುಂಚಿನ ಸೀಸ ಪದ್ಯದಲ್ಲಿ ತಿಳಿಸಿದಂತೆ, ಸತ್ಯವಾಗಿ ತಾನೆಂದೂ ಸಗುಣನಲ್ಲ. ತಾನು ನಿರ್ಗುಣ ಬ್ರಹ್ಮವೇ ಎಂದು ನಿಶ್ಚಯಿಸಬೇಕು. ಬಳಿಕ ತಾನು ತನ್ನೊಳಗೇ ಪೂರ್ಣವಾಗಿ ತಗಲಿಕೊಂಡು ಇರಬೇಕು. ಆಗ ಅಂಥ ಸಿದ್ಧ ಯೋಗಿಯನ್ನು ಅವತರಿಸಿದ ಶಿವನೆನ್ನುತ್ತಾರೆ.

ಗೀತ. ಸಗುಣ ನಿರ್ಗುಣ ಭೇದಾರ್ಥ ಸಂಶಯವದು,
ಪರಮ ಗುರವಾಜ್ಞೆಯನ್ನುಳಿದು ಪರಲು ಬಿಡದು.
ಅಗಣಿತವಾದುದು ಮನದೊಳಗೆ ಅಂಟಬೇಕು.
ವಾದಗಳ ಗೆಯ್ಕೆ, ಮೆಚ್ಚದು, ಮಸುಧೆ ವೇಮ.

ಸಗುಣ ನಿರ್ಗುಣಗಳಲ್ಲಿ ಭೇದವಿದೆ ; ಸರಿ. ಈ ಭೇದದ ಅರ್ಥವನ್ನು ವಿವರಿಸುವಲ್ಲಿ ಸ್ವಲ್ಪು ಸಂಶಯವೂ ತಲೆದೋರಬಹುದು. ನಿಜ. ಆದರೆ ಇದೆಲ್ಲದರ ನಿವಾರಣೆಗೆ ಉಪಾಯವೇನು? ಪರಮ ಗುರುವಿನ ಆಜ್ಞೆಯನ್ನು ಹೊರತುಪಡಿಸಿದರೆ ಈ ಸಂಶಯದ ಪರಲು ಬಿಡಲಾರದು. ಅಗಣಿತವಾದುದು, ಅನಂತವಾದುದು, ಆ ಬ್ರಹ್ಮವೇ. ಅದು ಮನದೊಳಗೆ ಅಂಟಬೇಕು. ಮನವು ತದಾಕಾರ ತಾಳಬೇಕು. ನಿಸ್ತರಂಗವಾಗಬೇಕು. ಆಗ ತರಂಗಾಯಿತ ಮನದ ಸ್ಥಿತಿ ಸಗುಣವೆಂದೂ, ನಿಸ್ತರಂಗ ಮನದ ಸ್ಥಿತಿ ನಿರ್ಗುಣವೆಂದೂ ಸ್ಫುಟವಾಗಿ ವೇದ್ಯವಾಗುತ್ತದೆ. ಇದು ಸ್ವಾನುಭವ ಸಿದ್ಧಿ. ಇದು ಹೀಗೆ, ಹಾಗೆ ಎಂದು ಶಬ್ದಾಡಂಬರದಿಂದ ವಾದ ಮಾಡಿದರೆ ಮಸುಧೆಯು ಮೆಚ್ಚದು.

ಆ. ಅವನು ಅವನು ; ಅವನು ಅವನೊಳಗೆ ಉಂಟು,
ಅವನು ಅವನು ; ಅವನು ಅವನು ಅಲ್ಲ.
ಅವನು ಅವನೆ ; ಅವನೆ ಅವನು ಹೋಗು ಬ್ರಹ್ಮ.
ವಿಶ್ವದಾಭಿರಾಮ ಕೇಳು ವೇಮ.

ಇದೊಂದು ಬೆಡಗಿನ ಪದದಂತಿದೆ. ತೆಲಗು ಪಂಡಿತ ರಾಳ್ಲಪಲ್ಲಿ ಅನಂತ ಕೃಷ್ಣಶರ್ಮರಿಗೆ ಇದು ಅರ್ಥವಾಗಲಿಲ್ಲ. ಹಾಗಾಗಿ ಅವರು ಮಹಾಯೋಗಿಯನ್ನು ಕುರಿತು ಏನೇನೋ ಗಳಪಿದ್ದಾರೆ.

ಅವನು, ಅವನನು → ಅಹುದು ಅವನು ನಿರ್ಗುಣ ಬ್ರಹ್ಮನು ; ಅವನು ಚೈತನ್ಯ ಸ್ವರೂಪನು. ಅವನು ಸಗುಣ ಬ್ರಹ್ಮನು. ಒಂದು ಸಾಗರದ ಜಲಧಿಯಾದರೆ, ಇನ್ನೊಂದು ನೀರೇ ಹೆಪ್ಪು ಗಟ್ಟಿದ ಹಿಮಬಂಡೆ.

ಅವನು ಅವನೊಳಗೇ ಉಂಟು → ಸಗುಣ ಬ್ರಹ್ಮನು ನಿರ್ಗುಣ ಬ್ರಹ್ಮದೊಳಗೇ ಉಂಟು. ಅಹುದು ಹಿಮಗಡ್ಡೆಯು ಜಲಧಿಯೊಳಗೇ ಇದೆ.

ಅವನು ಅವನು → ಹೇಗೆಂದರೆ ಜಲಧಿಯೂ ನೀರೇ. ಹಿಮಗಡ್ಡೆಯೂ ನೀರೇ.

ಅವನು ಅವನು ಅಲ್ಲ → ಹೇಗೆಂದರೆ ಜಲಧಿಯ ನೀರು ಶೀತದಿಂದ ಹೆಪ್ಪು ಗಟ್ಟಿಲ್ಲ. ಹಿಮ ಬಂಡೆಯ ನೀರು ಶೀತದಿಂದ ಹೆಪ್ಪುಗಟ್ಟಿದೆ. ಅಂದರೆ ನಿರ್ಗುಣವು ಪ್ರಕೃತಿಯಿಂದ ಬಾಧಿತವಾಗಿಲ್ಲ. ಸಗುಣವು ಪ್ರಕೃತಿಯಿಂದ ಗುಣಾನ್ವಿತವಾಗಿದೆ. ಹಿಮಗಡ್ಡೆಯು ಜಲಧಾರೆಯಲ್ಲ.

ಅವನು ಅವನೇ → ಒಂದು ಶೀತದಿಂದ ಹೆಪ್ಪುಗಟ್ಟಿದೆ. ಇನ್ನೊಂದು ಶೀತದಿಂದ ಹೆಪ್ಪುಗಟ್ಟಿಲ್ಲ. ಅಂದರೆ ನಿರ್ಗುಣ ಬ್ರಹ್ಮವು ಪ್ರಕೃತಿಯಿಂದ ಗುಣಾನ್ವಿತವಾಗಿಲ್ಲ. ಸಗುಣ ಬ್ರಹ್ಮವು ಪ್ರಕೃತಿಯಿಂದ ಗುಣಾನ್ವಿತವಾಗಿದೆ. ಈ ಗುಣಾನ್ವಯವನ್ನು ಬದಿಗಿರಿಸಿದರೆ ಅವನು ಅವನೆ. ನಿರ್ಗುಣ ಬ್ರಹ್ಮನು ಸಗುಣ ಬ್ರಹ್ಮನೆ.

ಅವನೇ ಅವನು ಹೋಗು ಬ್ರಹ್ಮ → ಉಭಯ ತಾಪಿ, ಬ್ರಹ್ಮದ ಚೈತನ್ಯದ ಸ್ವರೂಪಗಳೇ.

ಕಂ. ಸಗುಣವೆ ಲೋಕಗಳೆಲ್ಲವು.
ಸಗುಣಂ ತ್ರಿಮೂರ್ತಿ, ತಿಳಿವೊಡೆ ಸಕಲ ಸುರೇಶ್ವರ್.
ಸಗುಣವೆ ಜ್ಞಪ್ತಿಗೆ ಮೂಲವು.
ಸಗುಣವೆ ನಿರ್ಗುಣಕೆ ದಾರಿಯಪ್ಪುದು ವೇಮಾ.

ಲೋಕ ಎಂದರೆ ಅನುಭವ ಕ್ಷೇತ್ರ. ಮನಸ್ಸಿನ ವಿವಿಧ ಸ್ತರಗಳಲ್ಲಿ ವಿಭಿನ್ನ ಅನುಭವಗಳಾಗುತ್ತವೆ. ಮನದ ಅಧೋಗತಿಯಲ್ಲಿ ಭೂತ ಪ್ರೇತಗಳ ದರ್ಶನವಾಗುತ್ತದೆ. ಆದರೆ ಭೂತ ಪ್ರೇತಗಳು ಸತ್ಯವಲ್ಲ. ಅದೆಲ್ಲ ಬರಿಯ ಭ್ರಾಂತಿ. ಇಲ್ಲದ ವಸ್ತುವನ್ನು ಭೀತ ಜನ್ಯ ಮನಸ್ಸು, ಭ್ರಾಂತಿ ಮೂಲಕ ಕಾಣುವುದು ಧನಾತ್ಮಿಕ ಭ್ರಾಂತಿ ದರ್ಶನವಾದರೆ, ಇರುವ ವಸ್ತುವನ್ನು ಕಾಣದಿರುವುದು ಋಣಾತ್ಮಿಕ ಭ್ರಾಂತಿ ದರ್ಶನವಾಗಿರುತ್ತದೆ. ಆದರೆ ನಾವು ಕೆಲವೊಮ್ಮೆ ತೈಜಸ ದೇಹಗಳನ್ನು ಕಾಣುತ್ತೇವೆ. ಇವುಗಳೇನೂ ಭೂತ ಪ್ರೇತಗಳಲ್ಲ. ಪಾಂಚ ಭೌತಿಕ ದೇಹಗಳಿಗೆ ಅನ್ನ ಪಾನೀಯಗಳು ಬೇಕೇ ಬೇಕು. ಆದರೆ ಕೇವಲ ಅಗ್ನಿ, ವಾಯು ಮತ್ತು ಆಕಾಶ ತತ್ತ್ವಗಳಿಂದಾದ ಸತ್ತೆಗಳೂ ಇರುವುದುಂಟು. ಇವುಗಳಿಗೆ ತೈಜಸ (Laminous) ದೇಹ ಎನ್ನುತ್ತಾರೆ. ನಮಗೆ ತಿಳಿದ ಮೇರೆಗೆ ಮಹಾ ಚಿಂತಕ ಜಿಡ್ಡು ಕೃಷ್ಣಮೂರ್ತಿಯವರು, ತಮ್ಮ ಋಷಿ ವ್ಯಾಲಿ ಸ್ಕೂಲಿನ

ನಿವೇಶನದ ಬಳಿ, ಇಂಥ ತೈಜಸ ದೇಹಗಳ ಹಿಂಡನ್ನು ಹಲವು ಬಾರಿ ಕಂಡ ಬಗ್ಗೆ ಪ್ರಸ್ತಾಪಿಸಿದ್ದಾರೆ. ಬೆಂಗಳೂರಿನ ಕೈಲಾಸಾಶ್ರಮ ಸಂಸ್ಥಾನದ ಪೀಠಾಧಿಪತಿ ಶ್ರೀ ತಿರುಚಿ ಮಹಾಸ್ವಾಮಿಗಳು ಹುಲಕೋಟಿಯಲ್ಲಿ ತಮ್ಮ ಆಶ್ರಮ ಶಾಖೆಯನ್ನು ಸ್ಥಾಪಿಸುವ ಮುನ್ನ ತೈಜಸ ದೇಹಿಗಳ ವ್ಯೂಹವನ್ನು ನೋಡಿಯೇ ಆ ನಿವೇಶನವನ್ನು ಆಯ್ಕೆ ಮಾಡಿದ್ದಾರೆ. ಇಲ್ಲಿ ನೆನಪಿಡಬೇಕಾದ ಅಂಶವೊಂದಿದೆ. ತೈಜಸ ದೇಹಗಳಿಗೆ ನರಕೋಶಗಳಿರುವುದಿಲ್ಲ, ನರಜಾಲವಿರುವುದಿಲ್ಲ, ಮಸ್ತಿಷ್ಕವೂ ಇರುವುದಿಲ್ಲ, ಏಕೆಂದರೆ ಇವುಗಳಿಲ್ಲವೂ ಭೌತಿಕವಾಗಿವೆ. ಹೀಗಾಗಿ ತೈಜಸ ದೇಹಗಳು ಮರ್ತ್ಯ ಮಾನವ ದೇಹಗಳಂತೆ ಸರಿಯಾಗಿ ಕೆಲಸ ಮಾಡಲಾರವು. ಜಿಜ್ಞಾಸುಗಳ ಕುತೂಹಲ ತಣಿಸಲು ಶ್ರೀಶ್ರೀ ಆನಂದ ಮೂರ್ತಿಯವರು ಏಳು ಪ್ರಕಾರದ ತೈಜಸ ದೇಹಗಳನ್ನು ಪಟ್ಟಿ ಮಾಡಿದ್ದಾರೆ. ಅವುಗಳೆಂದರೆ: ಯಕ್ಷ, ಸಿದ್ಧ, ಗಂಧರ್ವ, ಕಿನ್ನರ, ವಿದ್ಯಾಧರ, ಪ್ರಕೃತಿ ಲೀನ, ವಿದೇಹಲೀನ. ಆಯಾ ಸತ್ತೆಗಳ ಮನಸ್ತಾತ್ವಿಕ ಮಟ್ಟವನ್ನು ಆಧರಿಸಿ ಈ ವಿಭಜನೆಯನ್ನು ಮಾಡಲಾಗಿದೆ. ಈ ತೈಜಸ ದೇಹಿಗಳ ವಿವಿಧ ವರ್ಗಗಳನ್ನು ಅವರವರ ಮನಸ್ತಾತ್ವಿಕ ಮಟ್ಟವನ್ನಾಧರಿಸಿ ಮಾಡುತ್ತಾರೆ. ಇವುಗಳನ್ನು ಕುರಿತು ಅನಂತರ ಭೂತ ಪ್ರೇತಗಳ ವಿವರಣೆಯ ಕಾಲಕ್ಕೆ ವಿವರವಾಗಿ ಚರ್ಚಿಸೋಣ.

ಅನುಭವ ಕ್ಷೇತ್ರಗಳಾದ ಲೋಕಗಳೆಲ್ಲವೂ ಸಗುಣವೇ. ಅದು ಭೂಲೋಕವಿರಬಹುದು. ಭುವರ್ಲೋಕ, ಸುವರ್ಲೋಕ, ಮಹರ್ಲೋಕ, ಜನರ್ಲೋಕ, ತಪೋಲೋಕ ಇಲ್ಲವೆ ಸತ್ಯಲೋಕವೇ ಇರಬಹುದು. ಬ್ರಹ್ಮ, ವಿಷ್ಣು, ಶಿವರೆಂಬ ತ್ರಿಮೂರ್ತಿಗಳಾಗಲಿ, ಇಲ್ಲವೆ ಅಗ್ನಿ, ವಾಯು, ವರುಣ, ಇಂದ್ರ, ಸೋಮ, ಸೂರ್ಯ ಇತ್ಯಾದಿ ಸುರೇಶ್ವರರಾಗಲಿ ಸಗುಣವೇ. ಮಾನವನ ಜ್ಞಪ್ತಿಗೆ ಯಾವುದು ಮೂಲವೋ ಅದು ಸಹ ಸಗುಣವೇ. ಅಲ್ಲಿಂದಲೇ ಮನಸ್ಸು ಉದಿಸುತ್ತದೆ. ಅಂತೂ ನಿರ್ಗುಣ ತಲುಪಬೇಕಾದರೆ ಸಗುಣವೇ ದಾರಿಯೆನ್ನಿಸುವುದು. ಆದ್ದರಿಂದ ಸಗುಣೋಪಾಸನೆಯಿಂದ ಆರಂಭಿಸಿ ನಿರ್ಗುಣೋಪಾಸನೆಯ ದಾರಿಯನ್ನು ಕಂಡುಕೊಳ್ಳಬೇಕು.

ಹಾಗಾದರೆ ನಿರ್ಗುಣದ ದಾರಿ ಯಾವುದು ? ಅದನ್ನು ಹೇಗೆ ಗುರುತಿಸಬೇಕು ?

ಕಂ. ಸಗುಣವೆನಲು ಇಲ್ಲದಿಹುದೆ
ನಿರ್ಗುಣವೆನಲದುವೆ ಮೋಹದ ಜಾಲವೆ ಸಕಲಂ.
ಸಗುಣವನು ಮರೆತು ನಿನ್ನೊಳು,
ತಲುಪುವುದೆ ನಿರ್ಗುಣದ ದಾರಿ, ತಿಳಿಯೆಲೊ, ವೇಮಾ.

ಸಗುಣವು ವ್ಯಾವಹಾರಿಕ ಜಗತ್ತಿನಲ್ಲಿ ಮೋಹಪರವಶನಾದವನಿಗೆ ಇದ್ದಂತೆ ತೋರಬಹುದು. ಅವನಿಗೆ ಸಗುಣವು ಪ್ರಾತಿಭಾಸಿಕ ಜಗತ್ತಿನಲ್ಲಿಯೂ ಅನುಭವಕ್ಕೆ ಬರಬಹುದು. ಏಕೆಂದರೆ ಅಲ್ಲಿ ನಮ್ಮ ಮನದ ಕಲ್ಪನೆಗಳೇ ಪ್ರತಿಭಾಸವಾಗುತ್ತವೆ. ಆದರೆ ಪಾರಮಾರ್ಥಿಕ ಜಗತ್ತಿನಲ್ಲಿ ಸಗುಣವೆಂಬುದು ಇಲ್ಲವೇ ಇಲ್ಲ. ಏಕೆಂದರೆ ಅಲ್ಲಿ ಯಾವುದೇ ವಸ್ತುವನ್ನು ಕುರಿತು ಮೋಹವಿಲ್ಲ. ಸಗುಣವೆನ್ನುವ ಸಕಲವೂ ಮೋಹದ ಜಾಲವೇ ಆಗಿದೆ. ಯಾವಾಗ ಸಾಧಕನು ಸಗುಣವನ್ನು ಮರೆತು ಅಂದರೆ ಸಾಧಕನು ಸಕಲ ಭೌತಿಕ ದ್ರವ್ಯಗಳನ್ನೂ ಮನದಲ್ಲಿ ಪ್ರತಿಭಾಸಿಸುವ ಕಿರಣಗಳನ್ನು ಪೂರ್ಣ ಮರೆತು, ತನ್ನಲ್ಲಿಯೇ ಅಂದರೆ ತನ್ನ ನೈಜ ಸ್ವರೂಪದಲ್ಲಿಯೇ ತಗಲುವನೋ, ಆಗ ಕಾಣುವ ದಾರಿಯೇ ನಿರ್ಗುಣದ ದಾರಿಯೆಂದು ತಿಳಿ.

ಸಗುಣವನಾತ್ಮದೊಳಗೆ ಸನ್ನುತಿ ಗೆಯ್ಯದೆ ಭಕ್ತಿ ನಿಲ್ವುದೇ ?
ಜಗದಲಿ ಇಂಥವರಿಗೆಲ್ಲ ಸಜ್ಜನ ಸಂಗತಿ ಬಾರದಿಪ್ಪುದೇ ?
ಸಗುಣವ ಮೀರುವ ಮನದಿ ಸಂಚಿತ ಚಿಂತನ ಮಾಡದಿದ್ದೊಡೇ ?
ಅಗಣಿತವಾದ ಮೋಕ್ಷ ಪದ ಅಪ್ಪುಪೊಡಾವ ಗತಿಯಹುದು ವೇಮನಾ?

ಭಕ್ತಿ ಸಾಧನೆಯನ್ನು ಸಗುಣ ನಿರ್ಗುಣವನ್ನು ಸಾಧಿಸಿ ಸಲೆ ಕಾಣು ; ಎಂದು ವೇಮನ ಯೋಗಿ ಹೇಳಿದ್ದಾರೆ. ಹೀಗೆ ಆತ್ಮದೊಳಗೆ ಅಂದರೆ ತನ್ನ ಆಂತರ್ಯದಲ್ಲಿ ಸಗುಣದ ಶ್ಲಾಘನೆಯನ್ನು ಮಾಡದಿದ್ದರೆ, ಭಕ್ತಿಯು ಹೇಗೆ ದೃಢವಾಗುತ್ತದೆ ? ಹೀಗೆ ಸಗುಣದ ಶ್ಲಾಘನೆ ಮಾಡುವವರಿಗೆಲ್ಲ ಸಜ್ಜನ ಸಂಗವು ಬಂದೇ ಬರುತ್ತದೆ. ಈ ಭಕ್ತರು ಸಾಧನದಲ್ಲಿ ಮುಂದುವರಿದು ಸಗುಣವನ್ನು ಮೀರಬೇಕು. ಬಳಿಕ ನಿರ್ಗುಣದ ಚಿಂತನವನ್ನೇ ಒಂದಕ್ಕೊಂದು ಸೇರಿಸುತ್ತ ಮಾಡಬೇಕು. ಆಗ ಅಗಣಿತವಾದ, ಅನಂತವಾದ, ಮೋಕ್ಷ ಪದವನ್ನು ಹೊಂದಲಿಕ್ಕೆ ಯಾವ ಗತಿ ಇರಬಲ್ಲದು ? ಮೋಕ್ಷ ಪದ ಸಿಕ್ಕೇ ಸಿಕ್ಕುತ್ತದೆ.

ಆ. ಜಂಗಮಾಖ್ಯ ಭಕ್ತಿ ಸಂಧಿ ಬೇರೆ ಇಲ್ಲ.
ಸಗುಣ ಭಾವವಿದುವೆ ಶಾಸ್ತ್ರ ವಿಧಿಯು.
ನಿರ್ಗುಣವನು ಬಿಟ್ಟು ನೆರವೇರದು ಯೋಗ.
ವಿಶ್ವದಾಭಿರಾಮ ಕೇಳು ವೇಮ.

ಚೈತನ್ಯಶೀಲ ಭಕ್ತಿಯ ಸಂಧಿಯು ಎಲ್ಲಿದೆ ? ಅದು ಸಗುಣ ಭಾವದಲ್ಲಿಯೇ ಹೊರತು ಬೇರೆಲ್ಲಿಯೂ ಇಲ್ಲ. ಶಾಸ್ತ್ರದ ವಿಧಿಯು ಅದೇ ರೀತಿ ಇದೆ. 'ಜೀವಾತ್ಮ ಪರಮಾತ್ಮ ಸಂಯೋಗೋ ಯೋಗ ಇತ್ಯುಚ್ಯತೇ'. ಆದ್ದರಿಂದ ನಿರ್ಗುಣವನ್ನು ಬಿಟ್ಟು ಯೋಗವು ಸಾಧಿಸದು. ಏಕೆಂದರೆ, ಪರಮಾತ್ಮನು ನಿರ್ಗುಣನಾಗಿದ್ದಾನೆ.

ವೈಧೀ ಭಕ್ತಿ :

ತಾಮಸಿಕ, ರಾಜಸಿಕ ಮತ್ತು ಸಾತ್ವಿಕ ಎಂಬ ಇವು ತ್ರಿವಿಧ ವೈಧೀ ಭಕ್ತಿ ಪ್ರಕಾರಗಳಾಗಿವೆ.

ಯತ್ರ ರಾಗಾನವಾಪ್ತತ್ವಾತ್ ಪ್ರವೃತ್ತಿ ರೂಪ ಜಾಯತೇ.
ಶಾಸನೇನೈವ ಶಾಸ್ತ್ರಸ್ಯ ಸಾ ವೈಧೀ ಭಕ್ತಿರುಚ್ಯತೇ. ಅಂದರೆ

ಎಲ್ಲಿ ಅನುರಾಗವೇ ಪ್ರವೃತ್ತಿ ರೂಪವನ್ನು ತಾಳುವುದೋ ಮತ್ತು ಶಾಸ್ತ್ರಗಳ ಶಾಸನವು ಹಾಗಿರುವುದೋ, ಅದು ವರೆಗೆ ಅದು ವೈಧೀ ಭಕ್ತಿ ಎನ್ನಿಸುತ್ತದೆ.

ಇನ್ನೂ ಸ್ಪಷ್ಟವಾಗಿ ಹೇಳುವುದಾದರೆ, ಎಲ್ಲಿಯ ತನಕ ಈಶ್ವರನನ್ನು ಕುರಿತು ಏಕಾಂತಿಕ ಭಕ್ತಿ ಇರುವುದಿಲ್ಲವೋ, ಆದರೆ ಜನರೆದುರು ಪ್ರದರ್ಶಿಸುವ ಉದ್ದೇಶವಿರುವುದೋ, ಎಲ್ಲಿಯ ತನಕ ಶರಣಿಯಿಂದ ನೆಲ ಸಾರಿಸುವ, ಗಂಗಾಜಲ ಪ್ರೋಕ್ಷಿಸುವ, ವ್ರತಗಳು ಊರ್ಜಿತವಿರುವವೋ, ಎಲ್ಲಿಯ ತನಕ ವಿಗ್ರಹಗಳಿಗೆ ರಾಜವೇಷ ಇಲ್ಲವೆ ಬಾಲಕ ವೇಷ ತೊಡಿಸಿ ಸಿಂಗರಿಸುವರೋ, ಎಲ್ಲಿಯ ತನಕ ಮಂತ್ರ, ಪುಷ್ಪ, ಬಿಲ್ವ, ಪತ್ರೆ ಇತ್ಯಾದಿಗಳನ್ನು ಅರ್ಪಿಸುತ್ತ ಸಾಗುವರೋ,

ಎಲ್ಲಿಯ ವರೆಗೆ ಬಾಹ್ಯ ವಿಧಿ ನಿಷೇಧಗಳ ಆವರಣದಲ್ಲಿ ಭಕ್ತಿ ಸಾಧನ ಸಾಗುವುದೋ, ಅಲ್ಲಿಯ ತನಕ ಅದಕ್ಕೆ ವೈಧೀ ಭಕ್ತಿ ಎನ್ನುತ್ತಾರೆ.

ಪ್ರತೀಕ ಪೂಜೆ–ಪ್ರತಿಮಾ ಪೂಜೆ :

ಭಕ್ತಿಯೋಗ ಸಾಧನೆಯಲ್ಲಿ ಇಷ್ಟ ದೈವದ ಪೂಜೆ ಮುಖ್ಯವಾಗಿದೆ. ಸಾಧನೆಯು ಪೂಜ್ಯ ಪೂಜಕ ಭಾವದಿಂದ ಪ್ರಾರಂಭವಾಗುತ್ತದೆ. ಪೂಜ್ಯವು ಯಾವುದು ? ಪ್ರತೀಕವಿರಬಹುದು ಇಲ್ಲವೆ ಪ್ರತಿಮೆ ಇರಬಹುದು. ಪ್ರತೀಕ ಮೂಲಕ ದೇವರ ಪೂಜೆ ಯಾವುದು ? 'ಅಬ್ರಹ್ಮಣಿ ಬ್ರಹ್ಮದೃಷ್ಟ್ಯಾನುಸಂಧಾನಂ' ಅಂದರೆ, ಯಾವುದು ಬ್ರಹ್ಮವಲ್ಲವೋ, ಅದನ್ನು ಬ್ರಹ್ಮವೆಂದು ಗ್ರಹಿಸಿ, ಅದರೊಂದಿಗೆ ಭಕ್ತಿಯಿಂದ ಮನಸ್ಸನ್ನು ಜೋಡಿಸುವುದಾಗಿದೆ. ಇನ್ನೊಂದು ಅರ್ಥವೆಂದರೆ ಆಂತರಿಕವಾಗಿ ಮನಸ್ಸನ್ನು ಬ್ರಹ್ಮವೆಂದು ಪೂಜಿಸುವುದು ಮತ್ತು ಬಾಹ್ಯಿಕವಾಗಿ, ದೇವತೆಗಳಿಗೆ ಸಂಬಂಧಿಸಿದಂತೆ ಆಕಾಶವನ್ನು ಬ್ರಹ್ಮವೆಂದು ಪೂಜಿಸುವುದು. ಹೀಗೆ ಮನಸ್ಸು ಆಂತರಿಕ ಪ್ರತೀಕವಾಗಿದೆ. ಮತ್ತು ಆಕಾಶವು ಬಾಹ್ಯಿಕ ಪ್ರತೀಕವಾಗಿದೆ.

ಆ. ಮನಸ್ಸಿನಲ್ಲಿ ಮುಕ್ತಿ ಮಡಗಿಕೊಂಡಿರುತಿರೆ,
ಮನಸು ಅರಿಯಲಿಲ್ಲ ; ಮನುಜರೆಲ್ಲ
ಮನಸು ದಣಿಸಲಿಲ್ಲ ಮಾಯವಾದರಲ್ಲ !
ವಿಶ್ವದಾಭಿರಾಮ ಕೇಳು ವೇಮ.

ಆ. ಮನಸು ಮುಕ್ತಿಯೆಂದು ವನವನರಿಯರಯ್ಯ.
ಮನಸಿನಂತೆ ನಡೆದು ಮಾಯವಾಗಿ.
ಮನಸು ಶುದ್ಧವಾಗೆ, ಮರ್ಮವರಿವ ಯೋಗಿ.
ವಿಶ್ವದಾಭಿರಾಮ ಕೇಳು ವೇಮ.

ಸಂಕಲ್ಪ ವಿಕಲ್ಪಗಳೇ ಮಾನಸ ತರಂಗಗಳು. ತರಂಗಾಯಿತ ಅವಸ್ಥೆಯೇ ಮನಸ್ಸು ಎನಿಸುತ್ತದೆ. ನಿಸ್ತರಂಗ ಅವಸ್ಥೆಯೇ ಮುಕ್ತಿ. ಬ್ರಹ್ಮವನ್ನು ಅರಿಯಲು ಅಲ್ಲಿ ಇಲ್ಲಿ ಅಲೆಯಬೇಕಿಲ್ಲ. ಮುಕ್ತಿ ಮನಸ್ಸಿನಲ್ಲಿಯೇ ಮಡಗಿದೆ. ಮನಸ್ಸನ್ನು ಅರಿತರೆ ಸಾಕು. ಅದರ ಅಸ್ತಿತ್ವ ಅಭಾವಗಳನ್ನು ತಿಳಿದರೆ ಸಾಕು. ಆದರೆ ಮಾನವನು ಮನಸ್ಸನ್ನು ಅರಿಯದೆ, ಮನದ ಚಟುವಟಿಕೆಯನ್ನು ಅಂಕೆಯಲ್ಲಿರಿಸಿಕೊಳ್ಳದೆ, ಮಾಯವಾಗಿ ಹೋಗುತ್ತಾನೆ. ಭಕ್ತಿ ಭಾವದಿಂದ ಮನಸ್ಸನ್ನು ಭಗವಂತನತ್ತ ತಿರುಗಿಸಿ, ಮನಸ್ಸನ್ನು ಮಣಿಸದೆ, ಮನ ಬಂದಂತೆ ವಿಷಯಗಳತ್ತ ಸಾಗಿ, ಜನರು ಸತ್ತು ಹೋಗುತ್ತಾರೆ. ಮನಸ್ಸು ಆವರಣೇ ಹಾಗೂ ವಿಕ್ಷೇಪ ಮಲಗಳಿಂದ ಶುದ್ಧವಾದರೆ, ಬಂಧನದಿಂದ ಮುಕ್ತಿಯಾಗುವುದು ಹೇಗೆಂಬ ಮರ್ಮವನ್ನು ಯೋಗೀಯು ತಿಳಿಯುತ್ತಾನೆ. ಪೂಜ್ಯ ಪೂಜಕ ಒಂದಾಗುವುದೇ ಯೋಗ.

'ಮನ ಏವ ಕಾರಣಂ ಬಂಧ ಮೋಕ್ಷಯೋಃ'

ಬಂಧ ಮೋಕ್ಷಗಳಿಗೆ ಮನಸ್ಸೇ ಕಾರಣ. ವಿಷಯ ಸಂಗವೇ ಬಂಧ. ವಿಷಯ ದೂರವಾಗುವುದೇ ಮೋಕ್ಷವಾಗಿದೆ.

ಆಂತರಿಕ ಪ್ರತೀಕವೆಂದು ಮನಸ್ಸನ್ನು ಪೂಜಿಸಿದರೆ, ಬಾಹ್ಯ ಪ್ರತೀಕವೆಂದು ಆಕಾಶವನ್ನು ಪೂಜಿಸಬೇಕು ಎಂದು ಶಂಕರರು ಹೇಳುತ್ತಾರೆ. ಇದು ಇಂದ್ರ ವರುಣಾದಿ ದೇವತೆಗಳಿಗೆ ಸಂಬಂಧಿಸಿದಂತೆ. ಆದರೆ,

ಬಯಲು ಬ್ರಹ್ಮವೆಂದು ಭಾಷ್ಯಗೆಯ್ಯುತಿಹರು.
ಬಯಲು ತಾನದೆಂತು ಬ್ರಹ್ಮವಹುದು ?
ಬ್ರಹ್ಮವಾದ ಬಯಲು ಭಾವದಲ್ಲಿ ಇರದೆ ?
ವಿಶ್ವದಾಭಿರಾಮ ಕೇಳು ವೇಮ.

ಬಯಲು ಅಂದರೆ ಆಕಾಶವು ಬ್ರಹ್ಮವೆಂದು ಭಾಷ್ಯಕಾರರು ಪ್ರತಿಪಾದಿಸುತ್ತಾರೆ. ಆದರೆ ಸ್ಥೂಲ ದ್ರವ್ಯವಾದ ಆಕಾಶವು ಹೇಗೆ ಬ್ರಹ್ಮವಾದೀತು ? ಬ್ರಹ್ಮವಾದ ಬಯಲು ಅಂದರೆ ಚಿದಾಕಾಶವು ಭಾವದಲ್ಲಿ ಇರುವುದಿಲ್ಲವೇ ?

ಹಾಗಾದರೆ ಭಾವವೆಂದರೇನು ? ಮಾನವನು ಮನದ ಉಚ್ಚ ವಿಭಾಗದಲ್ಲಿ ಯಾವ ಸಂರಚನೆಯನ್ನು ನಿರ್ಮಿಸಿಟ್ಟಿರುವನೋ, ಆ ಸಂರಚನೆಯು ಚಿಂತನದ ವ್ಯಾವಹಾರಿಕ ಅಂಶವನ್ನು ಪ್ರೇರೇಪಿಸುತ್ತದೆ. ಆ ಸಂರಚನೆಯೇ ಮಾನವನ ವ್ಯಕ್ತಿತ್ವವನ್ನು ನಿರ್ಮಿಸುತ್ತದೆ. ಆ ಸಂರಚನೆಗೆ ಭಾವ ಎನ್ನುತ್ತಾರೆ.

'ಶುದ್ಧ ಸತ್ತ್ವ ವಿಶೇಷಾದ್ವಾ ಪ್ರೇಮ ಸೂರ್ಯಾಂಶೂ ಸಾಮ್ಯ ಭಾಕ್',

ರುಚಿಭಿಶ್ಚಿತ್ತ ಮಾಸೃಣ್ಯ ಕೃದಸೌ ಭಾವ ಉಚ್ಯತೇ', ಅಂದರೆ,

ಯಾವುದು ಓರ್ವನನ್ನು ವಿಶೇಷವಾಗಿ ಶುದ್ಧ ಸತ್ವನನ್ನಾಗಿಸುವುದೋ, ಮತ್ತು ಪ್ರೇಮ ಸೂರ್ಯನು ಬೆಳಗುವಂತೆ ಮಾಡುವುದೋ, ಯಾವುದು ಮನಸನ್ನು ಭಕ್ತಿ ಕಿರಣಗಳಿಂದ ಮೃದುವಾಗಿ ಮತ್ತು ಜಾಜ್ವಲ್ಯವಾಗಿ ಮಾಡುವುದೋ, ಅದಕ್ಕೆ ಭಾವ ಎನ್ನುತ್ತಾರೆ.

ಪ್ರತೀಕ ಶಬ್ದದ ಅರ್ಥವೆಂದರೆ ಅದರತ್ತ ಹೋಗುವುದು, ಎಂದು. ಪ್ರತೀಕವನ್ನು ಪೂಜಿಸುವುದೆಂದರೆ, ಬ್ರಹ್ಮವಲ್ಲದ ಆದರೆ ಅಧಿಕಾಧಿಕ ರೀತಿಗಳಲ್ಲಿ ಬ್ರಹ್ಮನಂತಿರುವ ಬೇರೊಂದನ್ನು ಪೂಜಿಸುವುದಾಗಿದೆ.

ಆ. ಬ್ರಹ್ಮ ಅಂಡ ದೇಹ, ಪ್ರಾಣವುಂಟು ಗಾಳಿ,
ಕಣ್ಣು ಚಂದ್ರ ರವಿಯು, ಗೌರವಿಪರು.
ಇದಕ್ಕಿಂತ ಬ್ರಹ್ಮ ಎಲ್ಲಿ ಇರಲುಬಹುದು ?
ವಿಶ್ವದಾಭಿರಾಮ ಕೇಳು ವೇಮ.

ಯಾವುದರ ದೇಹವು ಬ್ರಹ್ಮಾಂಡವಾಗಿದೆಯೋ, ಯಾವುದರ ಪ್ರಾಣವು ಗಾಳಿಯಾಗಿದೆಯೋ, ಯಾವುದರ ಕಣ್ಣುಗಳು ಚಂದ್ರ ಮತ್ತು ರವಿಯಾಗಿವೆಯೋ, ಅದೇ ಬ್ರಹ್ಮ. ಅದನ್ನೇ ಗೌರವಿಸುತ್ತಾರೆ ; ಪೂಜಿಸುತ್ತಾರೆ, ಇದಕ್ಕಿಂತ ಬೇರೆಯಾದ ಬ್ರಹ್ಮವು ಎಲ್ಲಿ ಇರಬಹುದು? ಇದುವೇ ಸಗುಣ ಬ್ರಹ್ಮ. ಇದುವೇ ಬ್ರಹ್ಮದ ಪ್ರತೀಕ.

ಆ. ಬ್ರಹ್ಮ ಬ್ರಹ್ಮವೆನಲು ಬ್ರಹ್ಮವೆಂತದಯ್ಯ ?
ಬಯಸಿ ತಿಳಿದು ನೋಡೆ, ಬಳಿಗೆ ಇಹುದು.
ಮುದ್ರೆಯೊಳಗೆ ಇರುವ ಮುದ್ರಿಕೆಯ ಕಾಣರು.
ವಿಶ್ವದಾಭಿರಾಮ ಕೇಳು ವೇಮ.

ಈ ಪ್ರಪಂಚವು ಬ್ರಹ್ಮನಿಂದ, ಗುಣಗಳ ಕ್ರಮಿಕ ಪ್ರಭಾವದಿಂದ ಪರಿಣಮಿಸಿದೆ ; ಪ್ರಕ್ಷೇಪಿತವಾಗಿದೆ. ಹಾಗಾಗಿ ಇದು ಬ್ರಹ್ಮನ ಮುದ್ರೆಯಾಗಿದೆ. ಒಂದು ರಬ್ಬರಿನ ಮುದ್ರೆ ಇಲ್ಲವೆ ಸಿಕ್ಕಾ ಗುರುತಿನಿಂದ ಹೇಗೆ ಸರಕಾರದ ಅಧಿಕಾರವನ್ನೂ ಪ್ರಭುತ್ವವನ್ನೂ, ತಿಳಿಯಬಹುದೋ, ಹಾಗೆ ಈ ವಿಶ್ವವನ್ನು ನೋಡಿ ವಿಶ್ವಕರ್ಮನ ಹಿರಿಮೆಯನ್ನೂ, ಗರಿಮೆಯನ್ನೂ, ವಿಭುತ್ವವನ್ನೂ ಅರಿಯಬಹುದು. ವಿಶ್ವವೆಂಬ ಮುದ್ರೆಯೊಳಗಿರುವ ಮುದ್ರಕೆಯೇ ಬ್ರಹ್ಮ. ಆದ್ದರಿಂದ 'ಬ್ರಹ್ಮ ಬ್ರಹ್ಮ' ಎಂದರೆ ಎಂಥದಿರಬಹುದು ? ಅದನ್ನು ಅರಿಯುವ ಅಭೀಷ್ಟೆಯಿಂದ ಅಂತರ್ಮುಖಿಯಾಗಿ ನೋಡಿದರೆ, ಅದು ಬಳಿಯಲ್ಲಿಯೇ ಇರುವುದು. ಅದು ಆತ್ಮನೇ ಆಗಿರುವುದು.

ಆ. ಬ್ರಹ್ಮವಾದಿಗಳೆಲ್ಲ ಬ್ರಹ್ಮವೆನ್ನುತಿಹರು.
ಒಲಿದು, ತಿಳಿದು, ನೋಡೆ ಬಳಿಗೆ ಇಹುದು.
ಮುಂದೆ ಇರುವಂಥ ಮುದ್ರಿಕೆಯ ಕಾಣರು.
ವಿಶ್ವದಾಭಿರಾಮ ಕೇಳು ವೇಮ.

ಬ್ರಹ್ಮವಾದಿಗಳು ಬ್ರಹ್ಮ ಬ್ರಹ್ಮ ಎನ್ನುತ್ತಿರುವರು ! 'ಸರ್ವಂ ಬ್ರಹ್ಮ ಮಯಂ ಜಗತ್' ಎನ್ನುತ್ತಾರೆ. ಹಾಗಾದರೆ ಬ್ರಹ್ಮ ಎಂದರೆ ಏನು ? ಅದನ್ನು ಗುರುತಿಸುವುದು ಹೇಗೆ ? ಬ್ರಹ್ಮನತ್ತ ಒಲಿದು, ತಿಳಿದು ನೋಡಿದರೆ, ಬ್ರಹ್ಮವು ಬಳಿಯಲ್ಲಿಯೇ ಇದೆ, ಎಂದು ಗೊತ್ತಾಗುವುದು. ಅದು ಒಳಗೂ ಇದೆ, ಹೊರಗೂ ಇದೆ. ಬಳಿಯಲ್ಲಿಯೂ ಇದೆ. ದೂರದಲ್ಲಿಯೂ ಇದೆ. ಅಷ್ಟೇಕೆ ? ನಮ್ಮ ಮುಂದೆಯೇ ಇರುವ ಜಗತ್ತನ್ನು, ನಾಮ ರೂಪಗಳನ್ನು ಬಿಟ್ಟು ನೋಡಿದರೆ, ಅದು ಸಗುಣ ಬ್ರಹ್ಮನ ಮುದ್ರಿಕೆಯೇ ಆಗಿರುತ್ತದೆ.

ಮನಸ್ಸನ್ನು ಭಾವ ಮತ್ತು ಮಹಾಭಾವಗಳ ಸ್ಥಿತಿಗೆ ಏರಿಸಬಲ್ಲ ಭಕ್ತನಿಗೆ, ಊರ್ಧ್ವ ಲೋಕಗಳ ಅನುಭವವಾಗುತ್ತದೆ. ಅವನು ಪೂಜಕ ಭಾವವನ್ನು ಮೀರಿ ಪೂಜ್ಯ ಸ್ಥಿತಿಗೇರುವ ಹಾದಿಯಲ್ಲಿ ಅನೇಕ ಅನುಭವ ಕ್ಷೇತ್ರಗಳನ್ನು ದಾಟಬಹುದು. ಯಕ್ಷ, ಗಂಧರ್ವ, ವಿದ್ಯಾಧರ, ಕಿನ್ನರ ಲೋಕಗಳೂ, ಪಿತೃ ಲೋಕ ಮತ್ತು ದೇವ ಲೋಕಗಳೂ ಅನುಭವಕ್ಕೆ ಬರಬಹುದು, ಈ ಅನುಭಾವದ ಗತಿಯಲ್ಲಿ.

ಆ. ಖೇಚರರು ಭುವಿಯಲಿ ಕಾಣದಿಹರೆನುವರು.
ಕಂಡು ಬಂದರೇನು ಗೌರವಿಪರೆ ?
ತಾಯಿ, ತಂದೆ, ಗುರುವು ತತ್ಸಮರಾಗರೇ ?
ವಿಶ್ವದಾಭಿರಾಮ ಕೇಳು ವೇಮ.

ಜೀವಿಗಳಲ್ಲಿ ಅವು ಚರಿಸುವ ದೇಶಗಳ ಮೇಲಿಂದ ಭೂಚರ, ಜಲಚರ ಮತ್ತು ಖೇಚರ ಎಂದು ವಿಂಗಡಿಸಲಾಗಿದೆ. ಪಕ್ಷಿಗಳು ಖೇಚರ ವರ್ಗದಲ್ಲಿ ಸೇರುತ್ತವೆ. ಆದರೆ ಕೆಲವು

ಸಿದ್ಧ ಯೋಗಿಗಳು ತಮ್ಮ ಯೋಗ ಶಕ್ತಿಯಿಂದ ಗಗನಗಾಮಿಗಳಾಗಿರುವ ದೃಷ್ಟಾಂತಗಳುಂಟು. ಆದರೆ ಪದ್ಯದಲ್ಲಿ ಸೂಚಿಸಿದ ಖೇಚರಿಗಳು ನಿತ್ಯ ಖೇಚರಿಗಳು. ಮನುಷ್ಯನು ಮರಣಿಸಿದ ಬಳಿಕ ಅವನ ಸೂಕ್ಷ್ಮ ಇಲ್ಲವೆ ಲಿಂಗ ಶರೀರವು ಅಂದರೆ ಪ್ರಾಣ, ಮನಸ್ಸಿನೊಂದಿಗೆ ಯುಕ್ತವಾದ ಜೀವಾತ್ಮವು ತನ್ನ ಸಾಧನೆಗೆ ತಕ್ಕ ಸೂಕ್ಷ್ಮ, ಸೂಕ್ಷ್ಮತರ ಲೋಕಗಳಲ್ಲಿ ಚರಿಸುತ್ತದೆ. ಅದು ಪಿತೃ ಲೋಕದಲ್ಲಿರಬಹುದು, ದೇವ ಲೋಕದಲ್ಲಿರಬಹುದು, ಅಂತಿಮವಾಗಿ ಬ್ರಹ್ಮ ಲೋಕದಲ್ಲಿ ಪರಮಾತ್ಮನೊಂದಿಗೆ ಲೀನವಾಗಬಹುದು. ಈಗ ಬ್ರಹ್ಮನಲ್ಲದ ಆದರೆ ಬ್ರಹ್ಮನಿಗೆ ಸಮೀಪವಾದ ಬೇರೊಂದನ್ನು ಉಪಾಸಿಸುವುದು ಪ್ರತೀಕೋಪಾಸನೆಯೆನಿಸುತ್ತದೆ.

ಈ ಪಿತೃ ಇಲ್ಲವೆ ದೇವತೆಗಳು ಸೂಕ್ಷ್ಮ ಶರೀರಗಳು. ಅಂದರೆ ಅವರ ಶರೀರವು ಸ್ಥೂಲ ಧಾತಗಳಾದ ಭೂ ತತ್ತ್ವ ಇಲ್ಲವೆ ಜಲ ತತ್ತ್ವವನ್ನು ಹೊಂದಿರುವುದಿಲ್ಲ. ಆದರೆ ಆಕಾಶ, ವಾಯು ಮತ್ತು ಅಗ್ನಿ ತತ್ತ್ವಗಳನ್ನು ಮಾತ್ರ ಹೊಂದಿರುತ್ತವೆ. ಹಾಗಾಗಿ, ಅವು ಭೂಲೋಕದಲ್ಲಿ ಕಾಣಬರುವುದಿಲ್ಲ. ಖೇಚರರು ಭುವಿಯಲ್ಲಿ ಕಾಣದಿಹರು ಎನ್ನುತ್ತಾರೆ. ಅದಕ್ಕಾಗಿ ಹಳಹಳಿಸುತ್ತಾರೆ. ಅವರ ಬಗೆಗೆ ನಿಜವಾದ ಭಕ್ತಿ, ಶ್ರದ್ಧೆಗಳಿದ್ದರೆ, ಅವರು ಕಂಡು ಬಂದರೆ ಗೌರವಿಸುತ್ತಿದ್ದರೇ ? ಆದರೆ ನಿಜ ಸ್ಥಿತಿ ಹಾಗಿಲ್ಲ. ಏಕೆಂದರೆ ಪಿತೃಗಳಿಗೆ ಸಮ ಸಮರಾದ, ದೇವತೆಗಳಿಗೆ ಸಮರಾದ ತಾಯಿ, ತಂದೆ ಮತ್ತು ಗುರುವು ಭೂಲೋಕದಲ್ಲಿ ಇರುವರಲ್ಲ ? ಅವರನ್ನು ಗೌರವಿಸುವರೇನು ? 'ಮಾತೃ ದೇವೋ ಭವ', 'ಪಿತೃ ದೇವೋ ಭವ','ಆಚಾರ್ಯ ದೇವೋ ಭವ' ಎಂದು ಶ್ರುತಿ ಸಾರುತ್ತಿದೆಯಲ್ಲವೇ ?

ಆ. ಪಿತರ ಅನ್ನವೆಂದು ಪ್ರೀತಿಯಿಂದ ಕರೆದು,
ಕಾಗೆಗಳಿಗೆ ಇಡುವ ಕರ್ಮಿಗಳೇ !
ಕಾಗೆಯಲ್ಲಿ ಏನು ? ಘನರಿಗೀಯಬೇಕು.
ವಿಶ್ವದಾಭಿರಾಮ ಕೇಳು ವೇಮ.

ಆ. ಪಿಂಡಗಳನು ಮಾಡಿ, ಪಿತೃವೆಂದು ತಿಳಿದು,
ಕಾಗೆಗಳಿಗೆ ಇಡುವ ಕರ್ಮಗಳೇ !
ಶಗಣಿ ತಿಂಬ ಕಾಗೆ ಪಿತೃವೆಂತಪ್ಪದು ?
ವಿಶ್ವದಾಭಿರಾಮ ಕೇಳು ವೇಮ.

ದೇವ ಪಿತೃಗಳನ್ನು ಕುರಿತು ಶ್ರದ್ಧೆ ಉಳ್ಳವರು ದೇವಯಜ್ಞ, ಪಿತೃಯಜ್ಞಗಳನ್ನು ಆಚರಿಸುತ್ತಾರೆ. ಪಿತೃಗಳು ಸೂಕ್ಷ್ಮ ಶರೀರಿಗಳೆಂದು ತಿಳಿದಿದ್ದರೂ ಶ್ರಾದ್ಧದ ಆಚರಣೆಯನ್ನು ಪಿಂಡ ಮಾಡಿ ಅರ್ಪಿಸುತ್ತಾರೆ. ಆದರೆ ಆ ಪಿಂಡ ಸೇವಿಸಲು ಪಿತೃಗಳಿಗೆ ಸ್ಥೂಲ ಶರೀರವೇನೂ ಇರದು. ಅದಕ್ಕಾಗಿ ವಿಕಾಕ್ಷಿಯಾದ ಕಾಗೆಯನ್ನು ಕರೆದು ತಿನಿಸುತ್ತಾರೆ. ಶ್ರದ್ಧೆ ತಾಳಲು ಪಿತೃ ಸದೃಶವಾದ ಗುಣವು ಕಾಗೆಯಲ್ಲಿ ಏನಿದೆ ? ಅದು ಎಷ್ಟಾದರೂ ಶಗಣಿ ತಿನ್ನುವ ಕಾಗೆ ಮಾತ್ರ. ಅದು ಹೇಗೆ ಪಿತೃವೆನಿಸಬಲ್ಲದು ? ಪಿತೃಗಳ ಬಗೆಗೆ ನಿಜವಾದ ಶ್ರದ್ಧೆಯಿದ್ದರೆ, ಪಿತರಾನ್ನವನ್ನು ಕಾಗೆಗಳಿಗೆ ಈಯದೆ ಘನರಿಗೀಯಬೇಕು.

ಇನ್ನು ದೇವ ಯಜ್ಞದ ವಿಚಾರ.

ಆ. ದೇವ ಪೂಜೆ ಗೆಯ್ಯೆ ದಿವ್ಯ ಭೋಗವುಂಟು ;
ತತ್ತ್ವವರಿಯುವವನು ದೈವ ಸಮನು.
ಏನು ಇರದ ನರಗೆ ಯಾವ ಗತಿಯು ಇಲ್ಲ.
ವಿಶ್ವದಾಭಿರಾಮ ಕೇಳು ವೇಮ.

ಮನಸ್ಸನ್ನು ಸ್ಥೂಲ ಪ್ರಪಂಚದಿಂದ ಸೂಕ್ಷ್ಮ ಲೋಕಕ್ಕೆ ಎತ್ತರಿಸುವುದು, ಉದ್ದೀಪಿಸುವುದು, ದಿವ್ಯ ಭೋಗವನ್ನು ಉಂಟು ಮಾಡುತ್ತದೆ. ದೇವತೆ ಸೂಕ್ಷ್ಮ ಲೋಕದಲ್ಲಿ ಇರುವನಷ್ಟೇ. ಆದ್ದರಿಂದ ದೇವ ಪೂಜೆ ಮಾಡಿದರೆ ದಿವ್ಯ ಭೋಗವುಂಟು. ಯಾರು ಪೂಜ್ಯ ಪೂಜಕ, ಉಪಾಸ್ಯ-ಉಪಾಸಕ ಸ್ತರದಿಂದ ಜ್ಞೇಯ-ಜ್ಞಾತೃವಿನ ಸ್ತರಕ್ಕೇರಿ ಆಯಾ ತತ್ತ್ವಗಳನ್ನು ಅರಿಯುವರೋ, ಅಂಥ ತತ್ತ್ವವಿದರು. ದೈವ ಸಮರೇ ಆಗುತ್ತಾರೆ. 'ಯದ್ಭಾವಂ ತದ್ಭವತಿ'. 'ಆತ್ಮವಿದಃ ಆತ್ಮೈವ ಭವತಿ'. 'ಬ್ರಹ್ಮ ವಿದಃ ಬ್ರಹ್ಮೈವ ಭವತಿ'. ಇನ್ನು ದೇವ ಪೂಜೆಯನ್ನೂ ಮಾಡದ, ತತ್ತ್ವದ ಜಿಜ್ಞಾಸುವೂ ಅಲ್ಲದ, ಏನೂ ಇರದ ನರನಿಗೆ ಯಾವ ಗತಿಯೂ ಇರದು. ಅವನು ಜಡನಾಗಿ ಇದ್ದಲ್ಲಿಯೇ ಕೊಳೆಯುತ್ತಾನೆ.

ಆ. ಪೂಜೆ ಮಾಡಿ ಮಾಡಿ ಪೂಜಾರಿ ತಾನಾದ.
ಪೂಜ್ಯ ವಸ್ತುವೆನಲು ಭುವಿಯ ಒಳಗೆ
ಎಲ್ಲಿ ಪೂಜೆ ಗೆಯ್ವುದೆಲ್ಲ ದಿಶೆಯೊಳಷ್ಟೆ ?
ವಿಶ್ವದಾಭಿರಾಮ ಕೇಳು ವೇಮ.

ದೇವರ ಸ್ವರೂಪವನ್ನೇ ಅರಿಯದೆ, ಏನನ್ನೋ ದೇವರೆಂದು ತಪ್ಪು ಗ್ರಹಿಸಿ, ಪೂಜೆ ಮಾಡಿ ಮಾಡಿ, ಪೂಜಾ ಅರಿಯೇ ಆದನು. ಭುವಿಯ ಒಳಗೆ ಪೂಜ್ಯ ವಸ್ತುವು ಎಲ್ಲಿದೆಯೆಂದಾದರೂ ತಿಳಿಯಬೇಡವೇ ? ಇಲ್ಲವಾದರೆ ಎಲ್ಲಿ ಪೂಜೆ ಮಾಡುವುದು ? ಎಲ್ಲ ದಿಶೆಯಲ್ಲಿ ದೇವನಿದ್ದಾನೆ. ಸರ್ವ ಭೂತಾಂತರಾತ್ಮ ಆಗಿದ್ದಾನೆ. ಅವನನ್ನು ಎಲ್ಲ ದಿಶೆಗಳಲ್ಲಿ ಇರುವನೆಂದು ಗ್ರಹಿಸಿ ಪೂಜಿಸಬೇಕಷ್ಟೇ.

ನಿಜವಾಗಿ ಭಕ್ತಿ ಎಂದರೇನು ? ಸ್ವಾಮಿ ವಿವೇಕಾನಂದರ ಅಭಿಮತದ ಮೇರೆಗೆ ಈಶ್ವರನನ್ನು ಕೇವಲ ಅವನನ್ನು ಮಾತ್ರ, ಪೂಜಿಸುವುದು ಭಕ್ತಿ. ಅವನನ್ನು ಹೊರತುಪಡಿಸಿ, ದೇವ, ಪಿತೃ ಇಲ್ಲವೆ ಇನ್ನಾವ ಸತ್ತೆಯನ್ನು ಪೂಜಿಸುವುದು ಭಕ್ತಿಯಲ್ಲ. ಬೇರೆ ಬೇರೆ ದೇವತೆಗಳ ಬೇರೆ ಬೇರೆ ವಿಧದ ಪೂಜೆಯು ಕೇವಲ ಮತಾಚಾರದ ಕರ್ಮವಾಗಬಹುದು. ಅದರಿಂದ ಪೂಜಕನಿಗೆ ದಿವ್ಯ ಭೋಗದ ರೂಪದಲ್ಲಿ ವಿಶೇಷ ಪ್ರತಿಫಲ ದೊರೆಯಬಹುದು. ಆದರೆ ಅದರಿಂದ ಭಕ್ತಿಯೂ ಉದಿಸದು, ಮುಕ್ತಿಯ ದಾರಿಯೂ ಸಿಗದು.

ಶೈವ ಧರ್ಮದಲ್ಲಿ, ಒಂದು ಪ್ರಕಾರವಾದ ವೀರಶೈವವು ಜೀವನನ್ನು ಅಂಗವೆಂದೂ ಬ್ರಹ್ಮನನ್ನು ಲಿಂಗವೆಂದೂ ಕರೆಯುತ್ತಾರೆ. ಭಾವವನ್ನು ಲಿಂಗದ ಪ್ರತೀಕವೆಂದು ಬಗೆದು ಭಾವ ಲಿಂಗದ ಪೂಜೆಗಿಳಿಯುತ್ತಾರೆ. ಪ್ರಾಣವನ್ನು ಲಿಂಗದ ಪ್ರತೀಕವೆಂದು ಗ್ರಹಿಸಿ ಪ್ರಾಣಲಿಂಗದ ಪೂಜೆ ಮಾಡುತ್ತಾರೆ. ಇವೆರಡೂ ಸೂಕ್ಷ್ಮ ಸ್ತರದ ಉಪಾಸನೆಗಳೇ ಸರಿ. ಆದರೆ ಸಾಮಾನ್ಯವಾಗಿ ಶಿಲೆಯ ಹರಳನ್ನು ಲಿಂಗವೆಂದು, ಅದೂ ಇಷ್ಟ ಲಿಂಗವೆಂದು ಪೂಜಿಸುತ್ತಾರೆ. ಈ ಕಲ್ಲು

ಹರಳಿನ ಸ್ಥೂಲ ಪ್ರತೀಕವನ್ನು ಲಿಂಗವೆಂದು ತಿಳಿಯುತ್ತಾರೆ.

ಆ. ಬಂಡೆಗಲ್ಲು ತಂದು ಬಂಧಿಸುತ ಕಟ್ಟಲು,
ಲಿಂಗವೇನು ಕಳ್ಳ ಲಂಪಟಾಯ್ತೆ ?
ಆತ್ಮಲಿಂಗವನ್ನು ಅರ್ಚಿಸದಿಹರೇಕೊ ?
ವಿಶ್ವದಾಭಿರಾಮ ಕೇಳು ವೇಮ.

ಬಾಹ್ಯ ವಸ್ತು ಇಲ್ಲವೆ ದೀಪ ಶಿಖೆಯ ಮೇಲೆ ದೃಷ್ಟಿಯನ್ನು ಕೇಂದ್ರೀಕರಿಸಿ, ದೃಷ್ಟಿ ಯೋಗದ ಮೂಲಕ ಮನಸ್ಸನ್ನು ಕೇಂದ್ರೀಕರಿಸುವ ಅಭ್ಯಾಸಕ್ಕೆ ಸಾಧನವಾಗುವುದು. ತೀರ್ಥ ಇಲ್ಲವೆ ಕ್ಷೇತ್ರ ಸ್ಥಳಗಳಿಂದ ಕಲ್ಲು ಹರಳುಗಳನ್ನು ತಂದು ಮಂತ್ರೀಕರಿಸಿ, ಕಂತಿ ಮಾಡಿ, ಶಿವದಾರದಿಂದ ಕೊರಳಲ್ಲಿ ಇಲ್ಲವೆ ರಟ್ಟೆಯಲ್ಲಿ ಕಟ್ಟಿಕೊಳ್ಳುವ ಕಲ್ಲು ಹರಳಿಗೆ ಇಷ್ಟ ಲಿಂಗನೆನ್ನುತ್ತಾರೆ. ಈ ಸ್ಥೂಲ ವಸ್ತುವನ್ನೂ ಲಿಂಗದ ಪ್ರತೀಕವೆಂದು ಎಣಿಸುತ್ತಾರೆ.

ಇಷ್ಟಲಿಂಗಾರ್ಚನೆಯಲ್ಲಿ ಆಸಕ್ತಿ ಇಲ್ಲದವರಿಗೆ, ಸೂಕ್ಷ್ಮ ಮನವನ್ನು ಸ್ಥೂಲ ವಸ್ತುಗಳ ಮೇಲೆ ಕೇಂದ್ರೀಕರಿಸಿ, ಪಡೆಯುವ ಮನಸ್ಸಿನ ನಿಮ್ನ ಶಕ್ತಿಗಳನ್ನು ಬಯಸದವರಿಗೆ, ಇಷ್ಟಲಿಂಗ ಧಾರಣೆಯು ಸರಿಬಾರದು. ಆದ್ದರಿಂದ, ಅವರು ಹೇಳುತ್ತಾರೆ ; ಬಂಡೆಗಲ್ಲಿನ ಹರಳನ್ನು ತಂದು ದಾರದಿಂದ ಬಂಧಿಸಿ ಕಟ್ಟಬೇಕಾದರೆ ಆ ಲಿಂಗವೇನು ಕಳ್ಳನೇ ? ಶಿಕ್ಷಾರ್ಹವಾದ ಲಂಪಟನೇ ? ಈ ಜನರು ಇದೆಲ್ಲ ದುಂಡುಸುತ್ತುವ ಬದಲು, ಆತ್ಮದಲ್ಲಿಯೇ ಇರುವ ಲಿಂಗವನ್ನು ಏಕೆ ಅರ್ಚಿಸುವುದಿಲ್ಲವೋ ಕಾಣೆವು.

ಇಷ್ಟಲಿಂಗವನ್ನು ಅಂದರೆ ಕಲ್ಲು ಹರಳನ್ನು ಲಿಂಗದ ಪ್ರತೀಕವೆಂದು ಉಪಾಸಿಸುವ ಬದಲು, ಜೀವವನ್ನು ಲಿಂಗದ ಪ್ರತೀಕವೆಂದು ಪೂಜಿಸುವುದು ಅರ್ಥಪೂರ್ಣವಾಗಿದೆ.

ಆ. ಜೀವ ಲಿಂಗ ಪೂಜೆ ಜನರು ಮಾಡತಿರಲು,
ಶಿಲೆಯ ರೂಪ ಕುರಿತು ಚಿಂತೆಯುಂಟೆ ?
ಸಿಹಿ ಮಧು ಸೇವಿಸಲು, ಕಹಿಯು ರುಚಿಸುವುದೇ ?
ವಿಶ್ವದಾಭಿರಾಮ ಕೇಳು ವೇಮ.

ಜೀವದಲ್ಲಿಯೇ ಲಿಂಗದ ಪ್ರತೀಕವಿದೆಂದು ತಿಳಿದು ಜನರು ಜೀವ ಲಿಂಗ ಪೂಜೆಯನ್ನು ಮಾಡುತ್ತಿರುವಾಗ ಜಡವಾದ ಶಿಲೆಯನ್ನು ಲಿಂಗದ ಪ್ರತೀಕವೆಂದು ಗ್ರಹಿಸಿ ಪೂಜಿಸುವುದೇಕೆ ? ಶಿಲೆಯ ರೂಪ ಕುರಿತು ಚಿಂತೆಯೇಕೆ ? ಜೀವ ಲಿಂಗವು ಸಿಹಿಯಾದ ಮಧುವಿನಂತೆ. ಅದನ್ನು ಸೇವಿಸಲು ಅನುಕೂಲವು ಲಭ್ಯವಿರುವಾಗ, ಕಹಿಯಾದ ರುಚಿಯಂತಿರುವ ಜಡ ಶಿಲೆಯ ಉಪಾಸನೆಯು ಹೇಗ ರುಚಿಸುವುದು ?

ಇದು ತುಂಬಾ ಸೂಕ್ಷ್ಮವಾದ ವಿಚಾರ. ಈ ವಿಷಯದಲ್ಲಿ ವಾದ ವಿವಾದವು ಇದ್ದೇ ಇದೆ. ಮೂಲತಃ ಯೋಗಿಗಳಾದ ಸೊನ್ನಲಿಗೆಯ ಸಿದ್ಧರಾಮೇಶ್ವರರು ಇಷ್ಟಲಿಂಗ ಧಾರಣೆಯನ್ನು ವಿರೋಧಿಸಿದರೂ, ಅಂತಿಮವಾಗಿ 'ಯದ್ಯದಾಚರತಿ ಶ್ರೇಷ್ಠಃ ತತ್ತದೇವ ಇತರೇ ಜನಾಃ' ಅಂದರೆ ಶ್ರೇಷ್ಠ ಜನರು ಹೇಗೆ ಆಚರಿಸುತ್ತಾರೆಯೋ, ಹಾಗೆಯೇ ಇತರ ಸಾಮಾನ್ಯರು ಆಚರಿಸುತ್ತಾರೆ, ಎಂಬ ಪ್ರತಿಪಾದನೆಗೆ ಒಪ್ಪಿ ಇಷ್ಟಲಿಂಗ ಧಾರಣೆಯನ್ನು ಒಪ್ಪಿದ್ದಾರೆ. ಲೆಕ್ಕಿಗುಂಡಿ ಅಂದರೆ

ಲಕ್ಕುಂಡಿ ಪಟ್ಟಣದ ಅಜಗಣ್ಣನು ಉನ್ನತ ಶ್ರೇಣಿಯ ಶರಣನಾಗಿದ್ದರೂ, ಇಷ್ಟಲಿಂಗ ಉಪಾಸನೆಯನ್ನು ಒಪ್ಪಲಿಲ್ಲ. ಇತ್ತೀಚಿನ ದೃಷ್ಟಾಂತ ನೀಡುವುದಾದರೆ, ಆಜನ್ಮ ಲಿಂಗವಂತರಾದ ಹುಬ್ಬಳ್ಳಿಯ ಶ್ರೀ ಸಿದ್ಧಾರೂಢ ಸ್ವಾಮಿಗಳು ಇಷ್ಟಲಿಂಗವನ್ನು ತ್ಯಜಿಸಿದರಷ್ಟೇ ಅಲ್ಲ ; ಅದ್ವೈತ ವೇದಾಂತವನ್ನು ಒಪ್ಪಿ ಪ್ರಚುರಪಡಿಸಿದರು. ಬಳ್ಳಾರಿ ಜಿಲ್ಲೆಯ ಚೀಳ್ಳಗುರ್ಕಿಯಲ್ಲಿ ತಮ್ಮ ಕೊನೆಯ ದಿನಗಳನ್ನು ಕಳೆದ 'ಎರ್ರಿ' ತಾತನ ಕೊರಳಲ್ಲಿ ಓರ್ವ ವೀರಶೈವ ಮಠಾಧಿಪತಿ ಇಷ್ಟಲಿಂಗವನ್ನು ಕಟ್ಟಿ ಹೋದ ಹಲವು ತಿಂಗಳ ನಂತರ ತಾತನವರ ಶಿಷ್ಯನೋರ್ವ ಅದನ್ನು ತೆಗೆದು ಹಾಕಿದ. ತಾತನವರು ಆ ಕುರಿತು ತುಂಬಾ ಉದಾಸೀನರಾಗಿದ್ದರು. ಗುಲಬುರ್ಗ ಜಿಲ್ಲೆಯ ಗಡಿಯ ಹಳ್ಳಿಯಾದ ಯಾನಗುಂದಿಯಲ್ಲಿ ವಾಸಿಸುವ, ನಾಲ್ಕು ದಶಕಗಳಿಂದ ಅನ್ನಾಹಾರ ಸೇವಿಸದ ಯೋಗಿಣಿಯಾದ ಮಾಣಿಕಮ್ಮನವರನ್ನು ನಾನು ವಿಚಾರಿಸಿದಾಗ, ತಾವು ಆತ್ಮವನ್ನಲ್ಲದೆ ಯಾವುದೇ ವಿಗ್ರಹವನ್ನಾಗಲಿ ಪ್ರತೀಕವನ್ನಾಗಲಿ ಪೂಜಿಸುವುದಿಲ್ಲವೆಂದು ಹೇಳಿದರು. ಯೋಗದ ಬಗೆಗೆ, ವೀರಶೈವದ ಬಗೆಗೆ ಅಧಿಕಾರ ವಾಣಿಯಿಂದ ದೇಶ ವಿದೇಶಗಳಲ್ಲಿ ಪ್ರಸಾರ ಮಾಡಿದ ಯೋಗಿಗಳೊಬ್ಬರು ತಮ್ಮ ಕೊನೆಯ ದಿನಗಳಲ್ಲಿ ಇಷ್ಟಲಿಂಗವನ್ನು ತೊರೆದು, ತಮ್ಮ ಪ್ರಾಮಾಣಿಕತೆಯನ್ನು ಮೆರೆದರೆಂದು ತಿಳಿದಿದೆ.

ಭಗವಾನ ಬುದ್ಧನು ಬೋಧಿಸಿದ ಸುಧಾರಕ ತತ್ತ್ವಗಳನ್ನು ಜಗಜ್ಯೋತಿ ಬಸವಣ್ಣನವರೂ ಬೋಧಿಸಿದ್ದಾರೆ. ಜಾತಿಯ ಮೇಲು-ಕೀಳು ಭಾವನೆಯನ್ನು ಖಂಡಿಸಿದ್ದಾರೆ. ಮೂರ್ತಿ ಪೂಜೆಯನ್ನು ತಿರಸ್ಕರಿಸಿದ್ದಾರೆ. ಮಾಂಸ ಭಕ್ಷಣೆಯನ್ನು ನಿಷೇಧಿಸಿದ್ದಾರೆ. ಸ್ತ್ರೀಯರಿಗೂ ಧಾರ್ಮಿಕ ಸಮಾನತೆಯನ್ನು ಪುರಸ್ಕರಿಸಿದ್ದಾರೆ. ಇವೆಲ್ಲ ವೇಮನ ಯೋಗಿಗಳಿಗೆ ಮೆಚ್ಚುಗೆಯಾದ ಸಂಗತಿಗಳೇ. ಆದ್ದರಿಂದ ಅವರು ಹಿಂಸೆ ಹಾದರಗಳನ್ನು ಎತ್ತಿ ಹಿಡಿಯುವ ವ್ಯಾಸರ ಮಹಾಭಾರತಕ್ಕಿಂತಲೂ ನೀತಿ ಬೋಧಕ ಪಾಲ್ಕುರುಕಿ ಸೋಮನಾಥನ ಬಸವ ಪುರಾಣವೇ ಮೇಲೆಂದು ಹೇಳಿದ್ದಾರೆ. ಆದ್ದರಿಂದ ಅವರ ನಮ್ರ ಸೂಚನೆ ಹೀಗಿದೆ.

ಆ. ವೀರಶೈವ ಧರ್ಮ ವಿಭವವರಿತ ಜನರು,
ಮತ್ತೆ ಬ್ರಹ್ಮ ವಿದ್ಯೆ ಮನದೊಳಿಡಲು,
ಗುಡುಗುವ ಹುಲಿಗೆ ಮರಿ ಸಿಂಹ ರಕ್ಷಣೆಯಂತೆ.
ವಿಶ್ವದಾಭಿರಾಮ ಕೇಳು ವೇಮ.

ಆ. ವೀರ ಶೈವವೆಂಬ ವಿಭವವ ಕೈ ಹಿಡಿದು.
ಬ್ರಹ್ಮ ವಿದ್ಯೆ ಮೀರಿ ಬೆಳಗುತಿರಲು,
ಊರಿಗೆ ಮೃಗರಾಜ ಹೋದ ಚಿಂದವಾಯ್ತು.
ವಿಶ್ವದಾಭಿರಾಮ ಕೇಳು ವೇಮ.

ಸಮಾಜ ಸುಧಾರಣೆಯ ನೀತಿ ತತ್ತ್ವಗಳೊಂದಿಗೆ ಅಂತರಂಗ ಶ್ರೇಯಸ್ಸಿಗಾಗಿ ಉಪನಿಷತ್ತು ಬೋಧಿಸುವ ಬ್ರಹ್ಮ ವಿದ್ಯೆಯನ್ನೂ ಅಳವಡಿಸಿಕೊಂಡರೆ, ಗುಡುಗುವ ಹುಲಿಗೆ ಮರಿ ಸಿಂಹದ ರಕ್ಷಣೆಯೊದಗಿದಂತೆ.

ಈ ನಿಟ್ಟಿನಲ್ಲಿ ನಿಜಗುಣ ಶಿವಯೋಗಿಗಳು ಸಾಕಷ್ಟು ಪ್ರಯತ್ನಿಸಿದ್ದಾರೆ. ಸುಶಿಕ್ಷಿತ,

ಸುಸಂಸ್ಕೃತ ವೀರಶೈವರು ನಿಜಗುಣರ ಗ್ರಂಥಗಳ ಮೂಲಕ ವೇದಾಂತ ತತ್ತ್ವಗಳ ಅಧ್ಯಯನ ಮಾಡುತ್ತಿದ್ದಾರೆ. ಪೂಜ್ಯರಾದ ಶ್ರೀ ಸಿದ್ಧಾರೂಢರು ಮತ್ತು ಗರಗದ ಶ್ರೀ ಮಡಿವಾಳೇಶ್ವರರು ಉಪನಿಷತ್ತುಗಳ ಅಧ್ಯಯನದೊಂದಿಗೆ ಶ್ರೀ ನಿಜಗುಣರ ಗ್ರಂಥರತ್ನಗಳ ಅಧ್ಯಯನಕ್ಕೂ ಪ್ರೋತ್ಸಾಹ ನೀಡಿದ್ದಾರೆ. ನಾಡಿನಲ್ಲಿ ಯೋಗಿ ವೇಮನರು ಸೂಚಿಸಿದ ರೀತಿಯಲ್ಲಿ ಧರ್ಮ ನೀತಿಗಳು ಪಾಲಿಸಲ್ಪಡುತ್ತಿವೆ.

ಬೇರೆ ಬೇರೆ ಮತಗಳಿಗೆ ಅಭಿಮಾನಕ್ಕೆ ಜೋತು ಬಿದ್ದು ಜನರು ಲಾಂಛನಾದಿ ಭೇದಗಳನ್ನು ಪ್ರದರ್ಶಿಸುತ್ತ ಜನರಲ್ಲಿ, ಅರಿತೋ ಅರಿಯದೆಯೋ, ಒಡಕು ಹುಟ್ಟಿಸುತ್ತಾರೆ.

ಆ. ಮತವು ಭೇದವೆಲ್ಲ ಮಾಯೆ, ಸಂಸಾರವೆ.
ದಾರಿ ತಿಳಿಯಲಾರ ತಮವ ಹೊಂದಿ.
ದಾರಿ ತಿಳಿಯುವವನೆ ಧನ್ಯನಾದನಲ್ಲ !
ವಿಶ್ವದಾಭಿರಾಮ ಕೇಳು ವೇಮ.

ಬೇರೆ ಬೇರೆ ಮತಗಳಿಗೆ ಸೇರಿದ ಜನರು ತಮ್ಮ ತಮ್ಮ ಮತಗಳ ಅಂಧಾಭಿಮಾನದಿಂದ ಬೇರೆ ಬೇರೆ ಹೆಸರಿನಲ್ಲಿ ದೇವರನ್ನು ಪೂಜಿಸುತ್ತಾರೆ. ತಮ್ಮ ಗುರುತಿಗಾಗಿ ಲಾಂಛನಗಳನ್ನು ಧರಿಸುತ್ತಾರೆ. ಉಡುಪುಗಳನ್ನು ತೊಡುತ್ತಾರೆ. ಇವುಗಳೆಲ್ಲ ಕೇವಲ ಮಾಯೆ. ಇವೆಲ್ಲ ಅಭೇದ ತತ್ತ್ವಕ್ಕೆ ಎಡಚಾಗುವ, ಜನನ ಮರಣದ ಸಂಸಾರ ಚಕ್ರದಲ್ಲಿ ಸಿಲುಕಿಸುವ ಸಂಗತಿಗಳಷ್ಟೇ. ಮುಕ್ತಿಯ ಸಾಧನಗಳಂತೂ ಅಲ್ಲ. ಹೀಗಾಗಿ ಮತೀಯ ದುರಭಿಮಾನಿಯು ತಮಸ್ಸನ್ನು ಹೊಂದಿ, ಮುಕ್ತಿಯ ದಾರಿಯನ್ನು ತಿಳಿಯನು. ಯಾರಿಗೆ ಅಭೇದತ್ವದ ದಾರಿ ತಿಳಿಯುವುದೋ, ಅವನು ಧನ್ಯನಾಗುವನು. ಮುಕ್ತಿ ಪಡೆಯುವನು.

ಆ. ಮತಗಳಿಷ್ಟೆ ಇರಲಿ ; ನಿತ್ಯವಾವುದಿಲ್ಲ.
ನಿತ್ಯ ಕರ್ಮವಾಯ್ತು ನಿಖಿಲ ಜಗದಿ.
ಅಖಿಲ ಮತಗಳಲ್ಲಿ ಅರಿಯೆ ಒಂದು ಇಲ್ಲ.
ವಿಶ್ವದಾಭಿರಾಮ ಕೇಳು ವೇಮ.

ಮತಗಳು ಅದೆಷ್ಟೋ ಇವೆ. ಶೈವ, ವೈಷ್ಣವ, ಶಾಕ್ತ, ಗಾಣಪತ್ಯ, ಕೌಮಾರ, ಸೌರ ಎಂಬ ಷಣ್ಮತಗಳಿವೆ. ಕಾಪಾಲಿಕ, ಸಿಕ್ಖ, ಬೌದ್ಧ, ಜೈನ, ಇಸ್ಲಾಂ, ಕ್ರೈಸ್ತ ಇತ್ಯಾದಿ ಮತಗಳಿವೆ. ಅವುಗಳ ಅನುಷ್ಠಾನದಲ್ಲಿ ಭೇದಗಳಿವೆ. ದೇವರ ಸ್ವರೂಪ ಗ್ರಹಿಕೆಯಲ್ಲಿ ಅಂತರವಿದೆ. ಆದರೆ, ಈ ಮತಗಳು, ಜನರ ಗ್ರಹಿಕೆಗಳು ಬದಲಾದಂತೆ ಬದಲಾಗುತ್ತವೆ. ಅವು ಯಾವವೂ ನಿತ್ಯವಲ್ಲ. ಆದರೆ ದುರದೃಷ್ಟವೆಂದರೆ, ಅವುಗಳಿಗೆ ಸೇರಿದ ಜನರು ಆ ಮತಗಳ ಆಚರಣೆಯಲ್ಲಿ ಮಾಡುವ ನಿತ್ಯ ಕರ್ಮಗಳು ಸಂಪ್ರದಾಯವಾಗಿ ಮುಂದುವರಿಯುತ್ತವೆ. ನಿಖಿಲ ಜಗದಲ್ಲಿ ಕಂದಾಚಾರಗಳಾಗುತ್ತವೆ. ತಾವು ಆಚರಿಸುವ ಕರ್ಮಗಳ ಹಿಂದೆ ಏನಾದರೂ ಮರ್ಮ ಇದೆಯೇ? ಎಂಬ ವಿವೇತನೆಯೂ ಇಲ್ಲದೆ ಮೂಢ ನಂಬುಗೆಗಳಿಗೆ ಬಲಿಯಾಗುತ್ತಾರೆ. ಹಾಗಾಗಿ, ಜಗತ್ತಿನಲ್ಲಿ ಸಾವಿರಾರು ಮತಗಳು ಮೂಡಿವೆ. ಆದರೆ ಅವುಗಳಾವವೂ ಉಳಿದಿಲ್ಲ.

ಇಲ್ಲಿ ಒಂದು ಸಂಗತಿಯನ್ನು ಸರಿಯಾಗಿ ನೆನಪಿನಲ್ಲಿಡಬೇಕು. ಕೆಲವು ಪ್ರಸಂಗಗಳಲ್ಲಿ

ಬ್ರಹ್ಮವನ್ನು ಕುರಿತು ಇರುವ ಉನ್ನತ ತಾತ್ತ್ವಿಕ ಭಾವನೆಗಳನ್ನು ಪ್ರತೀಕೋಪಾಸನೆಯ ಮಟ್ಟಕ್ಕೆ ಇಳಿಸಲಾಗುತ್ತದೆ ಮತ್ತು ಪ್ರತೀಕವನ್ನೇ ಪೂಜಕನ ಆತ್ಮವೆಂದೂ ಇಲ್ಲವೆ ಅಂತರ್ಯಾಮಿಯೆಂದೂ (ಅಂತರ್ ಸ್ಥಿತ್ವಾ ಯಮಯತೇ ಇತಿ ; ಅಂದರೆ ಒಳಗಿದ್ದುಕೊಂಡ ನಿಯಂತ್ರಿಸುವವನು) ಗ್ರಹಿಸಿ, ಪೂಜಕನು ದಾರಿ ತಪ್ಪುತ್ತಾನೆ. ಏಕೆಂದರೆ ಯಾವ ಪ್ರತೀಕವೂ ಪೂಜಕನ ಆತ್ಮವಾಗಲಾರದು.

ಆ. ಬ್ರಹ್ಮ ತಿಳಿಯದಯ್ಯ ; ಭಾವಕಂಟಿ ಇರಲು,
ತನುವ ಗುಡಿಯ ಮಾಡಿ, ತನ್ನ ನಿಲಿಸಿ,
ಲೋಕ ಬುದ್ಧಿ ಬಿಟ್ಟು ಒಳನೋಟದಿ ನೋಡು.
ವಿಶ್ವದಾಭಿರಾಮ ಕೇಳು ವೇಮ.

ಭಾವಕ್ಕೆ ಅಂಟಿಕೊಂಡಿದ್ದರೆ ಬ್ರಹ್ಮವು ತಿಳಿಯದು. ಆದ್ದರಿಂದ ತನುವನ್ನೇ ಗುಡಿಯನ್ನಾಗಿ ಮಾಡಿ ತನ್ನನ್ನು ಅಂದರೆ ಆತ್ಮವನ್ನು ಅಲ್ಲಿ ನಿಲ್ಲಿಸಬೇಕು. ಹೃದಯ ಗರ್ಭದಲ್ಲಿ ಆತ್ಮವನ್ನು ಪ್ರತಿಷ್ಠಾಪಿಸಿ ಪೂಜೆ ಸಲ್ಲಿಸಿದರೆ, ಬ್ರಹ್ಮವನ್ನರಿಯುವ ಪೂರ್ವ ಸಿದ್ಧತೆಯಾಗುತ್ತದೆ. ಇದಕ್ಕಾಗಿ ಮೊದಲು ಲೋಕ ಬುದ್ಧಿಯನ್ನು ತ್ಯಜಿಸಬೇಕು. ಬೇಡಿ ಪಡೆಯುವ ವ್ಯವಹಾರ ಬುದ್ಧಿಯನ್ನು ಬಿಡಬೇಕು. ನಿಜವಾದ ಭಕ್ತನು ತನ್ನ ಮನಸ್ಸನ್ನು ಬ್ರಹ್ಮನಲ್ಲಿ ಸಮರ್ಪಿಸುತ್ತಾನೆ. ಅವನು ಆ ಮನದಲ್ಲಿ ಐಹಿಕ ಬೇಡಿಕೆಗಳಿಗೆ ಹೇಗೆ ಇಂಬುಗೊಡುತ್ತಾನೆ ? ಬಾಹ್ಯ ನೋಟವನ್ನು ಬಿಟ್ಟು ಒಳನೋಟದಿಂದ ನೋಡಬೇಕು.

ಗೀತ. ಎದುರು ಕಾಣುವುದು ; ಅದನು ಎಣಿಸಬೇಡ.
ಮನದಿ ಗುರುತನೆ ಹೊಂದಿಹುದು ಮಾನ್ಯವಹುದು.
ಸದಯ ಹೃದಯತೆ ಸಾಕ್ಷಿಯಾಗಿ ಸಮೀಕ್ಷಿಸು.
ಹೃದಯ ರಂಜಕವಾದಾಗ ಹೇಳು ವೇಮ.

ಪೂರ್ವ ಸಿದ್ಧತೆಯಾದ ಬಳಿಕ, ಎದುರು ಕಾಣುವ ಪ್ರತೀಕವನ್ನು ಎಣಿಸಬೇಡ. ಆಗ ಬ್ರಹ್ಮನ ಅನಂತತೆಯನ್ನೂ ಅಪಾರ ಮಹಿಮೆಯನ್ನೂ ಮನದಲ್ಲಿಯೇ ಹೊಂದಿ ಇರುವುದು ಮಾನ್ಯವಾಗಿದೆ. ಕೋಮಲವಾದ ಹೃದಯವಂತಿಕೆಯೇ ಸಾಕ್ಷಿಯಾಗಿದ್ದು, ಬ್ರಹ್ಮಾನುಭೂತಿಯನ್ನು ಸಮೀಕ್ಷಿಸು. ಯಾವಾಗ ಹೃದಯವು ಬ್ರಹ್ಮದಲ್ಲಿ ಅನುರಾಗ ಹೊಂದುವುದೋ, ಆಗ ನಿನ್ನ ಬ್ರಹ್ಮಾನುಭವವನ್ನು ಕುರಿತು ಹೇಳು.

ಈಗ ಕೆಲವು ಸಂದರ್ಭಗಳಲ್ಲಿ ಬ್ರಹ್ಮವೇ ಪೂಜಕನ ಪೂಜ್ಯ ಲಕ್ಷ್ಯವಾಗಿರುತ್ತದೆ ಮತ್ತು ಪ್ರತೀಕವು ಕೇವಲ ಬ್ರಹ್ಮದ ಸೂಚಕವಾಗಿ ಇರುತ್ತದೆ. ಅಂದರೆ ಪ್ರತೀಕದ ಮುಖಾಂತರ ಸರ್ವಶಕ್ತ ಬ್ರಹ್ಮನನ್ನೇ ಪೂಜಿಸಲಾಗುವುದು. ಪ್ರತೀಕವನ್ನೇ ಸರ್ವ ಕಾರಣ ಕರ್ತನಾದ ಬ್ರಹ್ಮನೆಂದು ಪರಿಭಾವಿಸಲಾಗುತ್ತದೆ. ಆಗ ನಡೆಯುವ ಪೂಜೆಯು ನಿಜವಾಗಿ ಕಲ್ಯಾಣಕಾರಿಯಾಗಿರುತ್ತದೆ. ಅಷ್ಟೇ ಏಕೆ ? ಅದು ಸಕಲ ಮಾನವ ಕುಲಕ್ಕೆ ಪ್ರಾಥಮಿಕ ಇಲ್ಲವೆ ಪೂರ್ವ ಸಿದ್ಧತೆಯ ಹಂತದಲ್ಲಿ ಅತ್ಯವಶ್ಯವೂ ಆಗಿರುತ್ತದೆ.

ಆ. ಇಂದ್ರ ಲೋಕವಿರಲಿ ; ಚಂದ್ರ ಲೋಕವಿರಲಿ ;
ಅಲ್ಲಿ ನೋಡಬಹುದು ಅಂದವಾಗಿ.

ನಂದಿ ಮೇಲೆ ಏರಿ ನಯವಾಗಿ ನೋಡಿಕೊ.
ವಿಶ್ವದಾಭಿರಾಮ ಕೇಳು ವೇಮ.

ಆ. ಇಂದ್ರ ಲೋಕವೆನಲು ಇಂದ್ರ ಜಾಲವೆನಲು,
ಇಂದ್ರ ಪದವಿಯೆನಲು ಇಷ್ಟು ಒಂದೆ.
ಕಲಿಯುಗದೊಳು ಜನರು ಕಾಣರು ಭ್ರಮೆಯಲ್ಲಿ.
ವಿಶ್ವದಾಭಿರಾಮ ಕೇಳು ವೇಮ.

ಆ. ಭಾನು ಸೋಮ ವಹ್ನಿ ಭವಲೋಚನದ ಮನದಿ
ತಲುಪದಿರಲು ಫಲವು ತನಗೆ ಇಲ್ಲ.
ಇಹಪರಗಳಿಗೆ ಮಹೇಶ್ವರ ತಾನುಂಟು.
ವಿಶ್ವದಾಭಿರಾಮ ಕೇಳು ವೇಮ.

ಇಂದ್ರನಾಗಲಿ, ಚಂದ್ರನಾಗಲಿ, ಭಾನುವಾಗಲಿ, ಅಗ್ನಿಯಾಗಲಿ ದೇವತೆಗಳಾಗಿವೆ. ಸಾಧಕನ ಮನಸ್ಸು ಊರ್ಧ್ವ ಸ್ತರಕ್ಕೇರಿದಂತೆಲ್ಲ ಬೇರೆ ಬೇರೆ ಲೋಕಗಳನ್ನು ಅನುಭವಿಸುತ್ತದೆ. ಇಂಥ ಲೋಕಗಳಲ್ಲಿ ಯಕ್ಷ, ಕಿನ್ನರ, ಗಂಧರ್ವ, ವಿದ್ಯಾಧರ ಲೋಕಗಳಂತೆ ದೇವ ಲೋಕವೂ ಒಂದು. ಅಲ್ಲಿಗೆ ತಲುಪಿ ಇಂದ್ರಾದಿ ದೇವತೆಗಳನ್ನು ಪೂಜಿಸಬಹುದು. ಈ ದೇವತಾ ಶಕ್ತಿಗಳನ್ನು ಸರ್ವ ಶಕ್ತನಾದ ಬ್ರಹ್ಮನ ಪ್ರತೀಕಗಳೆಂದು ಗ್ರಹಿಸಿ, ಇವುಗಳ ಮುಖಾಂತರ ಬ್ರಹ್ಮವನ್ನೇ ಧ್ಯಾನಿಸಿದರೆ ಮಂಗಳಕರವೇ ಸರಿ. ಆ ಸ್ತರವನ್ನು ತಲುಪಿ, ಅಲ್ಲಿ ಲಭಿಸುವ ಆನಂದವನ್ನು ಪಡೆದು, ನಂದಿ ದುರ್ಗವನ್ನು ಏರಿ ನಯವಾಗಿ ಒಳನೋಟದಿಂದ ಬ್ರಹ್ಮವನ್ನು ನೋಡು. ಈ ಇಂದ್ರಲೋಕ, ಇಂದ್ರಜಾಲ, ಇಂದ್ರ ಪದವಿಯೆಂದರೆ ಎಲ್ಲವೂ ಒಂದೇ. ಎಲ್ಲವೂ ಮನಸ್ಸಿನ ಉನ್ನತ ಸ್ತರವೇ. ಆದರೆ ಪಾಪ ಭರಿತ ಕಲಿಯುಗದಲ್ಲಿ ಜನರು ಯಾವು ಯಾವುದನ್ನೋ ದೇವಲೋಕವೆಂದು ಭ್ರಮಿಸಿ ಸತ್ಯವನ್ನು ಕಾಣದಾಗಿದ್ದಾರೆ. ಯಾರು ಸೂರ್ಯ, ಚಂದ್ರ ಮತ್ತು ಅಗ್ನಿಗಳು ಕಣ್ಣಾಗಿರುವ ಮುಕ್ಕಣ್ಣ ಶಿವನನ್ನು ಮನದಲ್ಲಿ ತಲುಪದಿದ್ದರೆ ತನಗೆ ಫಲವು ಇಲ್ಲ. ಏಕೆಂದರೆ ಇಹ ಪರಗಳೆಲ್ಲಕ್ಕೂ ತಾನೇ ಮಹೇಶ್ವರನಾಗಿ ಮುಕ್ಕಣ್ಣನುಂಟು.

ಈ ಪೂಜಕನು ಸ್ಪಷ್ಟವಾಗಿ ತಿಳಿಯಬೇಕಾದುದೆಂದರೆ, ಯಾವುದೇ ದೇವತೆಯನ್ನಾಗಲಿ ಇಲ್ಲವೆ ವಿಭೂತಿ ಪುರುಷನನ್ನಾಗಲಿ, ಸರ್ವೇಶ್ವರನೆಂದು ಪೂಜಿಸಿದರೆ, ಅಂಥ ಪೂಜೆಯು ಕೇವಲ ಧರ್ಮಾಚಾರದ ಕರ್ಮವಾಗುತ್ತದೆ. ಅದು ವಿದ್ಯೆ ಇಲ್ಲವೆ ವಿಜ್ಞಾನದಂತೆ ಆಯಾ ವಿದ್ಯೆಗೆ ಸಂಬಂಧಿಸಿದ ಫಲವನ್ನು ನಮಗೆ ನೀಡುತ್ತದೆ. ಆದರೆ ದೇವತೆಗಳನ್ನು ಇಲ್ಲವೆ ಇತರ ಉನ್ನತ ಜೀವಿಗಳನ್ನು ಬ್ರಹ್ಮನೆಂದೇ ಗ್ರಹಿಸಿ ಪೂಜಿಸಿದರೆ, ಆಗ ಸಗುಣ ಬ್ರಹ್ಮ ಇಲ್ಲವೆ ಈಶ್ವರನನ್ನು ಪೂಜಿಸಿದ ಫಲವು ದೊರಕುತ್ತದೆ. ಆದ್ದರಿಂದ ಉಪನಿಷತ್ತುಗಳಲ್ಲಿ ಬೇರೆ ಬೇರೆ ದೇವತೆಗಳನ್ನು ಉದ್ದೀಪಿಸಿ, ಅವುಗಳಿಗೆ ಬ್ರಹ್ಮಭಾವವನ್ನು ಆರೋಪಿಸಿ ಉಪಾಸಿಸುವುದು ಕಂಡುಬರುತ್ತದೆ.

'ಫಲಂ ಆದಿತ್ಯಾದಿ ಉಪಸನೇಷು ಬ್ರಹ್ಮೈವ ದಾಸ್ಯಾತಿ ಸರ್ವಾಧ್ಯಕ್ಷತ್ವಾತ್' ಅಂದರೆ, ಬ್ರಹ್ಮನು ಸರ್ವರ ನಿಯಂತ್ರಕನಾದುದರಿಂದ, ಆದಿತ್ಯ ಮೊದಲಾದ ದೇವತೆಗಳನ್ನು ಉಪಾಸಿಸಿದರೂ

ಬ್ರಹ್ಮನೇ ಫಲವನ್ನು ನೀಡುತ್ತಾನೆ.

ಪ್ರತಿಮಾ ಪೂಜೆ :

ಮೂಢ ಜನರು ಭಕ್ತಿಯ ಆಚಾರವೆಂದು ಮೂರ್ತಿ ಪೂಜೆಗಿಳಿಯುತ್ತಾರೆ. ಶ್ರುತಿಗಳಲ್ಲಿ ಸ್ಪಷ್ಟವಾಗಿ 'ನ ತಸ್ಯ ಪ್ರತಿಮಾ ಅಸ್ತಿ' ಎಂದು ಘೋಷಿಸಲಾಗಿದೆ. ಮೇಲಾಗಿ ಶಾಸ್ತ್ರದಲ್ಲಿ,

ಉತ್ತಮೋ ಬ್ರಹ್ಮ ಸದ್ಭಾವೋ,
ಮಧ್ಯಮಾ ಧ್ಯಾನ ಧಾರಣಾ.
ಜಪಿಸ್ತುತಿಯಧಮಾ ಚ
ಮೂರ್ತಿ ಪೂಜಾ ಅದಮಾಧಮಾ. ಎಂದು ಸಾರಲಾಗಿದೆ.

ಅಂದರೆ ಜೀವನು ಬ್ರಹ್ಮ ಸದ್ಭಾವ ಹೊಂದುವುದೇ ಅತ್ಯುತ್ತಮ. ಆದರೆ ಧಾರಣ ಧ್ಯಾನಗಳನ್ನು ಅಭ್ಯಸಿಸುವುದು ಮಧ್ಯಮ ತರಗತಿಯ ಮಾರ್ಗವಾಗಿದೆ. ಇನ್ನು ಬ್ರಹ್ಮನ ಮಹಿಮೆಯನ್ನು ಅರಿತು ಸ್ತುತಿಸುವುದು, ಬ್ರಹ್ಮನನ್ನು ಕುರಿತು ಮಂತ್ರಗಳನ್ನು ಜಪಿಸುವುದು ಮತ್ತು ಸ್ತುತಿಸುವುದು ಅಧಮ ಆಚಾರಗಳಾಗಿವೆ. ಇನ್ನು ಬಾಹ್ಯದ ಮೂರ್ತಿ ಪೂಜೆಯಂತೂ ಅಧಮಾಧಮವಾಗಿದೆ.

ಆ. ಗುಡಿಯ ದೇವರೆಂದು ಗುರುತು ನಿಲಿಸಿದವನು
ಹಿರಿಯ ಹಾರುವೆಂದು ಗೊಣಗಲೇಕೆ ?
ಮೂಢ ಜನಕೆ ಮೊದಲು ಮಾರ್ಗ ತೋರಿರಯ್ಯ.
ವಿಶ್ವದಾಭಿರಾಮ ಕೇಳು ವೇಮ.

ಪೂಜಕರು ಯಾವುದನ್ನು ಪೂಜ್ಯವೆಂದು ಗ್ರಹಿಸಬೇಕೆಂದು ತಿಳಿದಿರುವುದಿಲ್ಲ. ಏಕೆಂದರೆ ಅವರು ಮೂಢರಾಗಿರುತ್ತಾರೆ. ಅವರನ್ನು ಮೂರ್ತಿ ಪೂಜೆಯ ಪ್ರತಿಪಾದಕರು ತಮ್ಮ ಹೊಟ್ಟೆ ಹೊರೆಯಲು ಇಲ್ಲದ ಆಸೆ ತೋರಿಸಿ ಶೋಷಿಸುತ್ತಾರೆ. ಆದ್ದರಿಂದ ಗುಡಿಯ ದೇವರೆಂದು ಮೂರ್ತಿಯ ಗುರುತು ನಿಲ್ಲಿಸಿದವರು ಹಿರಿಯ ಹಾರುವರು ಎಂದು ಅವರನ್ನೇಕೆ ನಿಂದಿಸುತ್ತೀರಿ? ಮೊದಲು ಮೂಢ ಜನಕ್ಕೆ ದೇವರ ಸ್ವರೂಪವೇನು ? ದೇವರ ಉಪಾಸನೆಯ ವಿಧಾನವಾವುದು? ಮಾನಸಿಕ ಪೂಜೆಯೇ ಮುಂದಿನ ಹಂತಕ್ಕೆ ಪೂರ್ವ ಪೀಠಿಕೆ ; ಎಂದು ತಿಳಿಸಿ ಹೇಳು.

ಹೀಗೆ ದೇವ ಪೂಜೆಯ ಅಧಮಾಧಮ ವಿಧಾನವು ಸಹ ಪಾಪವೇನಲ್ಲ. ಆದ್ದರಿಂದ ಅವನಿಗೆ ತಿಳಿಸಿ ಹೇಳಿ ಜಪ ಸ್ತುತಿಯ ಮಟ್ಟವನ್ನಾದರೂ ತಲುಪಲು ಹೇಳಬೇಕು. ಧಾರಣ ಧ್ಯಾನದ ಹಂತಕ್ಕೇರಲು ಮನವೊಲಿಸಬೇಕು. ಇನ್ನು ಬ್ರಹ್ಮ ಸದ್ಭಾವ ಸ್ಥಿತಿಗೆ ಅಧಿಕಾರಿಯಾದವನು ತಾನೇ ಏರುತ್ತಾನೆ.

ಆ. ಶಿವನು ಎಲ್ಲೆಡೆಯಲ್ಲಿ ಸಾಕ್ಷಿ ನುಡಿಯುತಿರಲು,
ಇಲ್ಲ ಇಲ್ಲೆಂಬ ನುಡಿ ಸಾಧನೇಕೆ ?
ಗಗನ ಸನ್ನಿಧಿಯಲ್ಲಿ ಗುರಿಯ ಹಿಡಿದು ನೋಡು.
ವಿಶ್ವದಾಭಿರಾಮ ಕೇಳು ವೇಮ.

'ಸರ್ವಂ ಶಿವಮಯಂ ಜಗತ್'. ಅಂದರೆ ಜಗವೆಲ್ಲವೂ ಶಿವನಿಂದ ತುಂಬಿದೆ. ಅವನು

ನಮ್ಮ ಒಳ ಹೊರಗಿನ ಎಲ್ಲ ವ್ಯಾಪಾರಗಳನ್ನು ಈಕ್ಷಿಸುತ್ತ ಸಾಕ್ಷಿಯಾಗಿದ್ದಾನೆ. ಅಂಥ ಶಿವನು 'ಅಲ್ಲಿ ಇಲ್ಲ ; ಇಲ್ಲಿ ಇಲ್ಲ' ಎಂದು ವಾದಿಸಿ ಸಾಧಿಸುವುದೇಕೆ ? ಗಗನ ಸನ್ನಿಧಿಯಲ್ಲಿ, ಅಂದರೆ ಹೃದಯಾಕಾಶದಲ್ಲಿ ಗುರಿಯನ್ನು ಹಿಡಿದು ಅಂತರ್ವೀಕ್ಷಣೆ ಮಾಡು.

ದೇವರು ಅಮೂರ್ತ, ನಿರಾಕಾರ. ಅವನನ್ನು ಮೂರ್ತೀಭವಿಸುವುದು ವಿವೇಕ ಸಮ್ಮತವೇ ? ಮನಸ್ಸಿಗೆ ಅತೀತವಾದ ದೇವರನ್ನು ಮನಸ್ಸನ್ನು ಕೇಂದ್ರೀಕರಿಸಿ ಕೊನೆಗೆ ಶೂನ್ಯಗೊಳಿಸುವ ಮೂಲಕ ಅರಿಯಬೇಕಲ್ಲದೆ ಸ್ಥೂಲ ರೂಪದತ್ತ ಮನಸ್ಸನ್ನು ತಿರುಗಿಸಿ, ಅದನ್ನು ಇನ್ನಷ್ಟು ಸ್ಥೂಲಗೊಳಿಸುವುದು, ಯಾವ ನೀತಿ ?

ಆ. ಊರ್ಧ್ವ ಲೋಕದಲ್ಲಿ ಉಚಿತ ಕ್ರಮದಿಂದ
ರೂಪವೇನು ಇರದ ರೀತಿಯಲ್ಲಿ,
ಪರಮ ಯೋಗಿ ನೋಳ್ಪ, ಪರಮಾತ್ಮನಿರವನು.
ವಿಶ್ವದಾಭಿರಾಮ ಕೇಳು ವೇಮ.

ದೇವರ ಸ್ವರೂಪವನ್ನು ಕುರಿತು, ಹಾಗೂ ಅವನನ್ನು ಕಾಣುವ ವಿಧಾನವನ್ನು ಕುರಿತು ವೇಮನ ಯೋಗೀಂದ್ರರು ಸ್ಪಷ್ಟವಾಗಿ ತಿಳಿಸಿದ್ದಾರೆ. ದೇವರಿಗೆ ರೂಪವಿಲ್ಲ. ಅವನನ್ನು ಸ್ಥೂಲ ಪ್ರಪಂಚದಲ್ಲಿ ಬಾಹ್ಯ ಪೂಜೆಯ ಮುಖಾಂತರ ನೋಡಲಾಗದು. ಕಾರಣ ಅವನನ್ನು ಊರ್ಧ್ವ ಲೋಕದಲ್ಲಿ, ಉಚಿತ ಕ್ರಮದಿಂದ ಪರಮ ಯೋಗಿಯು ಪರಮಾತ್ಮನನ್ನು ಕಾಣುತ್ತಾನೆ.

ಇಂಥ ಯೋಗಿಗಳ ಮಾರ್ಗವು ಸಾಮಾನ್ಯ ಜನರಿಗೆ ಸಾಧ್ಯವೇ ? ಆದ್ದರಿಂದ ನಾವು ಇಂದ್ರಿಯಗಳ ಮೂಲಕ ಪ್ರತಿಮೆಯನ್ನು ಪೂಜಿಸಲು ಹೆಣಗುತ್ತೇವೆ. ಮನಸ್ಸಿನಿಂದ ರೂಪವನ್ನು ಕಲ್ಪಿಸುತ್ತೇವೆ. ಯಾವುದು ಮೂರ್ತವಲ್ಲವೋ ಅದನ್ನು ಮೂರ್ತಗೊಳಿಸುತ್ತೇವೆ.

ಮನಸಾ ಕಲ್ಪಿತಾ ಮೂರ್ತಿಃ ನೃಣಾ ಚೇನ್ಮೋಕ್ಷ ಸಾಧನೀ.
ಸ್ವಪ್ನ ಲಬ್ಧೇನ ರಾಜ್ಯೇನ ರಾಜಾ ನ ಮಾನವಸ್ತಥಾ. ಅಂದರೆ,

ಮಾನವ ಮನಸ್ಸಿನಿಂದ ಕಲ್ಪಿಸಿಕೊಂಡ ಮೂರ್ತಿಯು, ಹೇಗೆ ಮೋಕ್ಷಸಾಧನವಾಗಬಲ್ಲದು ? ಹೇಗೆಂದರೆ ಕನಸಿನಲ್ಲಿ ಒಬ್ಬನಿಗೆ ರಾಜ್ಯ ಲಭಿಸಿದರೆ, ಅವನು ರಾಜನಾಗಬಲ್ಲನೇ ?

ಮಾನವನ ಕಲ್ಪನೆಯು, ಬಾಹ್ಯ ಪಾಂಚ ಭೌತಿಕ ಜಗತ್ತಿನ ಮೂಲಕ ದೊರಕಿದ ಉಪಾದಾನಗಳ ಪ್ರತಿಫಲವಾಗಿದೆ. ಈ ಪಾಂಚ ಭೌತಿಕ ಜಗತ್ತಿನ ಒಳಗೆ ಯಾವ ವಸ್ತುಗಳು ಇರುವುದಿಲ್ಲವೋ, ಅವುಗಳ ಚಿಂತನೆಯನ್ನು ಮಾನವನು ಮಾಡಲಾರನು. ಸಾಮಾನ್ಯ ಮಾನವನು ದೇವರ ಕಲ್ಪನೆಗೆ ತೊಡುಗುವುದು ಭಯ ಇಲ್ಲವೆ ಲೋಭದಿಂದ. ಹಾಗಾಗಿ ಅವನು ದೇವರ ಮೂಲ ಸ್ವರೂಪವನ್ನು ಕಲ್ಪಿಸಿಕೊಳ್ಳಲಾರನು. ದೇವರ ಸ್ವರೂಪವನ್ನು ಅರಿಯಬೇಕಾದರೆ ಅವನು ಮನವನ್ನು ಇಲ್ಲವಾಗಿಸುವತ್ತ ಸಾಧನೆ ಮಾಡಬೇಕು. ಆದ್ದರಿಂದ ಮನಸ್ಸಿನಿಂದ ಕಲ್ಪಿತವಾದ ಮೂರ್ತಿಯು ಮೋಕ್ಷಸಾಧನವಾಗದು.

ಆ. ಮಣ್ಣು ಲೋಹಗಳಲಿ, ಮರ ಶಿಲಾದಿಗಳಲಿ,
ಪಟಗೋಡೆಗಳಲಿ ಪ್ರತಿಮೆಗಳಲಿ,

ತನ್ನ ನೆನಪು ಕೊಡಲು ತವಕಿಸನು ಪರಮಾತ್ಮ.
ವಿಶ್ವದಾಭಿರಾಮ ಕೇಳು ವೇಮ.

ಮಾನವನು ಪರಮಾತ್ಮನನ್ನು ನೆನೆಯಬೇಕಾದರೆ, ಮಣ್ಣು, ಲೋಹ, ಮರ, ಶಿಲೆಗಳಿಂದ ಮಾಡಿದ ಮೂರ್ತಿಗಳ ಅಗತ್ಯವಿಲ್ಲ. ಗೋಡೆಗಳಲ್ಲಿ ತೂಗು ಹಾಕುವ ಚಿತ್ರಪಟಗಳ ಅಗತ್ಯವಿಲ್ಲ. ಏಕೆಂದರೆ, ಹಾಗೆ ಕಾಣಿಸಿಕೊಳ್ಳಲು ಪರಮಾತ್ಮನೇ ತವಕಿಸುವುದಿಲ್ಲ. ತಂತ್ರ ಶಾಸ್ತ್ರದಲ್ಲಿಯೂ ಇದನ್ನೇ ಹೇಳಿದ್ದಾರೆ.

'ಮೃಚ್ಛಿಲಾ ಧಾತು ದಾರವಾದಿ ಮೂರ್ತಾವೀಶ್ವರೌ ಬದ್ಧಯೋ
ಕ್ಲಿಶ್ಯಂತಸ್ತಪಸಾ ಜಾನಂ ವಿನಾ ಮೋಕ್ಷಂ ನ ಯಾಂತಿ ತೇ' ಅಂದರೆ,

ಈಶ್ವರನು ಮಣ್ಣು, ಶಿಲೆ, ಧಾತು ಮತ್ತು ಕಟ್ಟಿಗೆಗಳಿಂದ ಮಾಡಿದ ಮೂರ್ತಿಗಳಲ್ಲಿ ಇರುವನೆಂದು ತಿಳಿದಿರುವವರು, ತಪದಿಂದ ತಮ್ಮ ದೇಹಗಳನ್ನು ವ್ಯರ್ಥವಾಗಿ ಕ್ಲೇಶಕ್ಕೀಡು ಮಾಡುತ್ತಾರೆ. ಆದರೆ ಅವರೆಂದೂ ಮೋಕ್ಷ, ಪಡೆಯರು.

ವಿಷ್ಣು ಪುರಾಣದಲ್ಲಿ,

'ಕಾಷ್ಠ ಲೋಹೇಷು ಮೂರ್ಖಾಣಾಂ ; ಪಂಡಿತಾನಾಂ ಹೃದಯೇಷು ತಿಷ್ಠತಿ' ಅಂದರೆ,

ಮೂರ್ಖರ ದೇವರು ಕಟ್ಟಿಗೆ ಲೋಹಗಳಲ್ಲಿ ಇರುತ್ತಾನೆ, ಆದರೆ ಪಂಡಿತರ ದೇವರು ಹೃದಯದಲ್ಲಿಯೇ ಇರುತ್ತಾನೆ. ಸೂತ ಸಂಹಿತೆಯಲ್ಲಿ ಹೀಗೆ ಹೇಳಿದ್ದಾರೆ :

ತೀರ್ಥೇ ದಾನೇ, ತಪೋ ಯಜ್ಞೇ ಕಾಷ್ಠೇ ಪಾಷಾಣಕೇ ಸದಾ
ಶಿವಂ ಪಶ್ಯತಿ ಮೂಢಾತ್ಮಾ ಶಿವೋ ದೇಹೇ ಪ್ರತಿಷ್ಠಿತಃ. ಅಂದರೆ,

ತೀರ್ಥದಲ್ಲೂ, ದಾನದಲ್ಲೂ, ತಪಸ್ಸಿನಲ್ಲೂ, ಯಜ್ಞದಲ್ಲೂ, ಮರದಲ್ಲೂ, ಕಲ್ಲಿನಲ್ಲೂ,ಮೂಢರು ಶಿವನನ್ನು ನೋಡುತ್ತಾರೆ. ಆದರೆ ಶಿವನು ದೇಹದಲ್ಲಿಯೇ ಇರುತ್ತಾನೆ. ಅದರಿಂದಾಗಿಯೇ ವೇಮನ ಯೋಗಿಗಳು

ಆ. ಶಿಲೆಯ ನೋಡಿ ನರರು ಶಿವನೆಂದು ಭಾವಿಪರು.
ಶಿಲೆಯು ಶಿಲೆಯೆ ಹೊರತ ಶಿವನು ಅಲ್ಲ.
ತನ್ನೊಳಿರುವ ಶಿವನ ತಾನು ತಿಳಿಯನೇಕೊ ?
ವಿಶ್ವದಾಭಿರಾಮ ಕೇಳು ವೇಮ.

ಆ. ಶಿವನು ಇರುವನೆಂದು ಶಿಲೆಗಳಿಗೆ ಮಣಿವಿರಿ.
ಮೂರ್ಖ ಜೀವಿಗಳೇ ! ಮೋಹ ಬಿಡಿರಿ.
ಜೀವಿಯಲ್ಲಿ ಹೊರತು ಶಿಲೆಗಳಲೇನುಂಟು ?
ವಿಶ್ವದಾಭಿರಾಮ ಕೇಳು ವೇಮ.

ನಾವು ಪರಮಾತ್ಮನನ್ನು ಮೌಲಿಕ ಚಿಂತನೆಯಿಂದ ಮಾತ್ರ ಸಮೀಪಿಸಬಹುದು. ಆದರೆ ಮನಸ್ಸು ಕಲ್ಪಿಸುವುದೆಲ್ಲವೂ ಬಾಹ್ಯ ಪ್ರಾಪಂಚಿಕ ವಸ್ತುಗಳನ್ನು. ಪರಮಾತ್ಮನೊಬ್ಬನೇ ಮೌಲಿಕ

ಚಿಂತನೆ ಮಾಡಬಲ್ಲನು. ಆದ್ದರಿಂದ ಮನಸ್ಸಿನಿಂದ ಕಲ್ಪಿತವಾದ ಮೂರ್ತಿಪೂಜೆಯು ಇಷ್ಟವಲ್ಲ.

ದೇವ ಗುಡಿಗಳಲ್ಲಿ, ತೀರ್ಥ ಕ್ಷೇತ್ರಗಳಲಿ,
ಮೂಲವರಿಯದಿರಲು ಮುಕ್ತಿಯಿಲ್ಲ.
ಆತ್ಮ ಮೂಲವರಿಯದೆ ಅವನೆಂತು ತಿಳಿವನು ?
ವಿಶ್ವದಾಭಿರಾಮ ಕೇಳು ವೇಮ.

ಯೋಗ ವಾಸಿಷ್ಠದಲ್ಲಿ ಹೀಗೆ ಹೇಳಿದ್ದಾರೆ :

'ಅಂತಸ್ತಮಾತ್ಮಾನಮಜಂ ನ ದೃಷ್ಟ್ವಾ,
ಭ್ರಮಂತಿ ಮೂಢಾ ಗಿರಿ ಗಹ್ವರೇಷು' ಅಂದರೆ

ಅಜ್ಞಾನಿಗಳು ಒಳಗಿರುವ ಆತ್ಮವನ್ನು ಕಾಣದೆ, ಬೆಟ್ಟಗಳಲ್ಲೂ, ಗುಡ್ಡ-ಗುಹೆಗಳಲ್ಲೂ ತಿರುಗುತ್ತಾರೆ. ಈ ಬಗ್ಗೆ ವೇಮನ ಯೋಗಿಗಳು ಹೀಗೆ ಹೇಳುತ್ತಾರೆ.

ಆ. ನದಿ ತೀರವ ಕುರಿತು, ನಡು ಕಾನನ ಕುರಿತು,
ಗುಡ್ಡ ಕಲ್ಲು ಕುರಿತು ಗೊಡವೆಯೇಕೆ ?
ಮನಸಿನಲ್ಲಿ ಶಿವನು ಮಡಗಿಹುದನರಿಯರು.
ವಿಶ್ವದಾಭಿರಾಮ ಕೇಳು ವೇಮ.

ಸೂತ ಸಂಹಿತೆಯಲ್ಲಿ ಹೀಗೆ ಹೇಳಲಾಗಿದೆ.

'ಶಿವಮಾತ್ಮನಿ ಪಶ್ಯಂತಿ ಪ್ರತಿಮಾಸು ನ ಯೋಗಿನಃ
ಅಜ್ಞಾನಿನಾಂ ಭಾವನಾರ್ಥಾಯ ಪ್ರತಿಮಾಃ ಪರಿಕಲ್ಪಿತಾಃ' ಅಂದರೆ,

ಯೋಗಿಗಳು ಶಿವನನ್ನು ತಮ್ಮ ಆತ್ಮದೊಳಗೇ ನೋಡುತ್ತಾರೆ. ಪ್ರತಿಮೆಗಳಲ್ಲಿ ನೋಡುವುದಿಲ್ಲ. ಆದರೆ ಅಜ್ಞಾನಿಗಳ ಭಾವನೆಗೋಸ್ಕರ ಪ್ರತಿಮೆಗಳನ್ನು ಕಲ್ಪಿಸಲಾಗಿದೆಯಷ್ಟೇ.

ಆದ್ದರಿಂದ ವೇಮನ ಯೋಗಿಗಳು ಹೀಗೆ ಹಾಡಿದ್ದಾರೆ.

ತೇ. ಶಿಲೆ, ಪ್ರತಿಮೆಗೈದು ಕತ್ತಲೆಡೆಯೊಳಿಟ್ಟು,
ಶರಣೆನ್ನಬಾರದು ಮೂಢ ಮನುಜ !
ಹೃದಯದೊಳಗೆ ಇರುವ ಬ್ರಹ್ಮನ ತಿಳಿದು ನಡೆ.
ವಿಶ್ವದಾಭಿರಾಮ ಕೇಳು ವೇಮ.

ಬಂಗಾಲದ ಓರ್ವ ಭಕ್ತ ಕವಿ ರಾಮ ಪ್ರಸಾದನು ರಚಿಸಿದ ಪದ್ಯದ ಕನ್ನಡಾನುವಾದವು ಹೀಗಿದೆ.

ನಾನಾ ರತ್ನವ ನೀಡುತ ಜಗವನು
ಅಂದಾಗಿಸುವಳು ಆ ನಮ್ಮಮ್ಮನು.
ಉಡುಪನು ಅವಳಿಗೆ ಉಡಿಸುವ ಈ ಛಲ,
ಈ ಭ್ರಮೆ ಬಿಡು ಬಿಡು ; ಇರಬಹುದೆ ಫಲ ?

ವೇಮನ ಯೋಗಿಗಳು ಈ ಭಾವನೆಯನ್ನು ಹೀಗೆ ವ್ಯಕ್ತಪಡಿಸಿದ್ದಾರೆ.

ಆ. ಕಲ್ಲುಬೊಮ್ಮಗೇಕೆ ಕೆಲ ಬಣ್ಣದ ವಸ್ತ್ರ ?
ಗುಡಿ ಗೋಪುರವೆಲ್ಲ ಕಂಭ ಮತ್ತೆ ?
ಬಟ್ಟೆ, ಅನ್ನ ತಾನು ಬಯಸುತಿಹನೆ ದೇವ ?
ವಿಶ್ವದಾಭಿರಾಮ ಕೇಳು ವೇಮ.

ಆ. ರೂಪುಗೊಳಿಸೆ ಕಲ್ಲು, ರಾಜರೂ ಮಣಿವರು.
ವರ್ಣ ಬಳಿಯಲದಕೆ ವೈಭವವದು.
ಕರ್ತನಾವನೆಂದು ಕಾಣರು ಮೂರ್ಖ ಜನ.
ವಿಶ್ವದಾಭಿರಾಮ ಕೇಳು ವೇಮ.

ಜನರಿಗೆ ಅವರವರ ಸಂಸ್ಕಾರಕ್ಕೆಗೆ ತಕ್ಕಂತೆ, ಅವರವರ ಬೌದ್ಧಿಕ ಸ್ತರಕ್ಕೆ ತಕ್ಕಂತೆ, ದೇವರ ಗ್ರಹಿಕೆಯು ಬೇರೆ ಬೇರೆಯಾಗಿರುತ್ತದೆ. ಉತ್ತರ ಗೀತೆಯಲ್ಲಿ ಹೀಗೆ ಹೇಳಿದ್ದಾರೆ.

'ಅಗ್ನಿರ್ದೇವೋ ದ್ವಿಜಾತೀನಾಂ, ಮುನೀನಾಂ ಹೃದಿ ದೈವತಂ.
ಪ್ರತಿಮಾಸ್ವಲ್ಪ ಬುದ್ಧೀನಾಂ ಸರ್ವತ್ರ ವಿದಿತಾತ್ಮನಾಂ'. ಅಂದರೆ

ದ್ವಿಜರಿಗೆ ಅಗ್ನಿಯು ದೇವರು, ಮುನಿಗಳಿಗೆ ಹೃದಯದಲ್ಲಿ ದೇವರು, ಅಲ್ಪ ಬುದ್ಧಿಯವರಿಗೆ ಪ್ರತಿಮೆಗಳಲ್ಲಿಯೇ ದೇವರು. ಆದರೆ ಆತ್ಮವನ್ನು ತಿಳಿದವರಿಗೆ ಎಲ್ಲೆಡೆಗೆ ದೇವರು ಭಾಸಿಸುತ್ತಾನೆ.

ಆ. ಕವಿಯ ಗೂಡು ಗೈದು ಕೂಗಿದನು ವೇಮನ.
ಬಟ್ಟ ಬಯಲೊಳುಂಟು ಬ್ರಹ್ಮವೆಂದು.
ಹೊಳೆಯೆ ಬುದ್ಧಿಗದನೆ ಹೊಂದಿ ಸುಖಿಸಬಹುದು.
ವಿಶ್ವದಾಭಿರಾಮ ಕೇಳು ವೇಮ.

'ಬಯಲು' ಇದೊಂದು ವಿಶೇಷ ಪದ. ವೀರಶೈವ ಸಾಹಿತ್ಯದಲ್ಲಿಯೂ ಈ ಪದದ ಬಳಕೆಯುಂಟು. ಮಲಯಾಳಿ ಯೋಗಿಗಳೂ ಇದನ್ನು ವಿಪುಲವಾಗಿ ಬಳಿಸಿದ್ದಾರೆ. ರೂಢಾರ್ಥದಲ್ಲಿ ಬಯಲು ಎಂದರೆ ಆಕಾಶ. ಆಕಾಶವು ವ್ಯಾಪ್ತಿಯಲ್ಲಿ ಅನಂತ. ಭೂತಗಳಲ್ಲಿ ಗರಿಷ್ಠ ಸೂಕ್ಷ್ಮತೆಯುಳ್ಳದ್ದು. ಉಪನಿಷತ್ತುಗಳಲ್ಲಿ ಆಕಾಶವನ್ನು ಬ್ರಹ್ಮದ ಪ್ರತೀಕವಾಗಿ ಉಪಾಸಿಸಲು ಬೋಧಿಸಿದ್ದಾರೆ. ವೇಮನ ಯೋಗಿಗಳು ಈ ಶಬ್ದದ ಅರ್ಥವನ್ನು ಇನ್ನಷ್ಟು ಹಿಗ್ಗಿಸಿ, 'ಬಯಲು ಬ್ರಹ್ಮವೆನ್ನುತಿಹರು ; ಬಯಲು ತಾನದೆಂತು ಬ್ರಹ್ಮವಹುದು ? ಬ್ರಹ್ಮವಾದ ಬಯಲು ಭಾವದಲ್ಲಿ ಇರದೆ ?' ಎಂದು ಅರ್ಥೈಸಿದ್ದಾರೆ. ಆಕಾಶ ಶಬ್ದವನ್ನು ಬಾಹ್ಯದ ಸ್ಥೂಲ ಆಕಾಶವೆಂದು ತಿಳಿಯುವಂತೆ, ಹೃದಯಾಕಾಶ ಮತ್ತು ಚಿದಾಕಾಶ ಎಂದೂ ತಿಳಿಯಬಹುದು. ಹೀಗೆ ಮನಸ್ಸಿನ ಸಂಕಲ್ಪ ವಿಕಲ್ಪಗಳ ತರಂಗಾಯಿತ ಅವಸ್ಥೆಯನ್ನು ದಾಟಿದ, ಅರಿವು ತಾನೇ ತಾನಾದ ಚಿದಾಕಾಶವೆಂದೂ ಮತ್ತು ಬ್ರಹ್ಮಭಾವ ಕುದುರುವ ಹೃದಯಾಕಾಶವನ್ನೂ ಬಯಲು ಎನ್ನಬಹುದು. ಬಯಲಿನೊಳಗಿನ ಬಯಲು ಅಂದರೆ ಇನ್ನೂ ಹೆಚ್ಚು ಆಂತರ್ಯದ ಅವಸ್ಥೆಯನ್ನು ಬಟ್ಟ ಬಯಲು ಎನ್ನುತ್ತಾರೆ.

ಬ್ರಹ್ಮವು ಇಂದ್ರಿಯಂಗಳಿಂದತ್ತ, ಮಾತು ಮನಂಗಳಿಂದತ್ತ, ಬಟ್ಟ ಬಯಲಿನಲ್ಲಿ ಉಂಟು ; ಎಂದು ವೇಮನ ಯೋಗಿಯು ಜನರ ಕಿವಿಗಳ ಗೂಡಿನಲ್ಲಿ ಘಂಟಾ ಘೋಷವಾಗಿ ಕೂಗಿ ಹೇಳುತ್ತಾರೆ. ಮಾನವನು ಏಕಾಗ್ರತೆಯಿಂದ ಧ್ಯಾನಿಸಿ, ತನ್ನ ಅಗ್ಮ್ಯ ಬುದ್ಧಿಗೆ ಬ್ರಹ್ಮವು ಹೊಳೆದರೆ, ಅವನು ಧನ್ಯನು. ಅದನ್ನು ಹೊಂದಿ ಬ್ರಹ್ಮಾನಂದದಲ್ಲಿ ಸುಖಿಸಬಲ್ಲನು.

ಆ. ಹೃದಯದಲ್ಲಿ ಶಿವನು ಇರುವುದನು ಅರಿಯದೆ,
ಎರಗಲೇಕೆ ಶಿಲೆಗೆ ಎತ್ತಿ ಕೈಯ ?
ಅಂಧ ಕನ್ನಡಿಯನು ಅರಸಿ ನೋಡಿದಂತೆ.
ವಿಶ್ವದಾಭಿರಾಮ ಕೇಳು ವೇಮ.

ಶಿವನು ಹೃದಯದಲ್ಲಿಯೇ ಇದ್ದಾನೆ. ವಿಷ್ಣು ಪುರಾಣವೂ ದೇವರು ಹೃದಯದಲ್ಲಿಯೇ ಇರುವನೆಂದು ಘೋಷಿಸುತ್ತದೆ. ದೇವರನ್ನು ಪೂಜಿಸಬೇಕಾದರೆ ದೇವರ ಸ್ವರೂಪ ಕುರಿತು ತಿಳಿದಿರಬೇಕು. ದೇವರು ಹೃದಯದಲ್ಲಿ ಇರುವನೆಂದು ತಿಳಿಯದೆ ಶಿಲೆಯಲ್ಲಿ ದೇವರಿರುವನೆಂದು ತಿಳಿದು, ಅದಕ್ಕೆ ಕೈಗಳನ್ನೆತ್ತಿ ನಮಸ್ಕರಿಸಲೇಕೆ ? ದೇವರ ವ್ಯಾಖ್ಯೆಯಾದರೂ ಏನು ? ದೇವರು ಒಂದು ವರ್ತುಲದಂತೆ. ಅದರ ಕೇಂದ್ರ ಬಿಂದುವು ಎಲ್ಲೆಡೆಗೆ ಇದೆ. ಆದರೆ ಅದರ ಪರಿಘವು ಎಲ್ಲಿಯೂ ಇಲ್ಲ. ಅಂದರೆ ಅನಂತವಾಗಿದೆ. ಪ್ರತಿ ಹೃದಯವೂ ಆ ಪರಮಾತ್ಮನ ಕೇಂದ್ರ ಬಿಂದುವೇ. ಹೀಗಿದ್ದರೂ, ಶಿಲೆಗಳಿಗೆ ಎರಗುವುದೆಂದರೆ, ವಸ್ತುವು ಎಲ್ಲಿದೆಯೆಂದು ಗೊತ್ತಿಲ್ಲ ; ವಸ್ತುವು ಹೇಗಿದೆಯೆಂದೂ ಗೊತ್ತಿಲ್ಲದ ಕುರುಡನೊಬ್ಬನು ಕನ್ನಡಿಯನ್ನು ಹುಡುಕುವಂತೆ ಹಾಸ್ಯಾಸ್ಪದವಾಗುತ್ತದೆ.

'ಆರ್ಯ ಸಮಾಜ' ದ ಸಂಸ್ಥಾಪಕರೂ, ವೇದಗಳ ಪ್ರಕಾಂಡ ಪಂಡಿತರೂ ಆದ ದಯಾನಂದ ಸರಸ್ವತಿಯವರು ವೇದಗಳಲ್ಲಿ ಮೂರ್ತಿ ಪೂಜೆಯ ಪ್ರಸ್ತಾಪವೇ ಇಲ್ಲವೆಂದು ಘಂಟಾಘೋಷವಾಗಿ ಸಾರಿದ್ದಾರೆ. ಮುಂದೆ ಧರ್ಮದ ಅವನತಿಯು ಆರಂಭವಾಗಿ ಪುರಾಣ ಕಾಲದಲ್ಲಿ ವಿವಿಧ ದೇವತಾ ಮೂರ್ತಿಗಳ ಕಲ್ಪನೆಗೆ ಮೊದಲಾಯಿತು. ಸೂಕ್ಷ್ಮ ತತ್ತ್ವಗಳನ್ನು ಸ್ಥೂಲ ಮನಸ್ಕರಿಗೆ ಮುಟ್ಟಿಸುವ ಉಪಾಯವಿದೆಂದು ನೆಪ ಹೇಳಲಾಯಿತು. ಮುಂದೆ ಶೋಷಕ ವರ್ಗದ ವಿಪ್ರ ಪುರೋಹಿತರು ಕ್ಷತ್ರಿಯ ರಾಜರ ನೆರವಿನಿಂದ ಗುಡಿ-ಗುಂಡಾರಗಳನ್ನು ಕಟ್ಟಿಸಿಕೊಂಡು, ಅಲ್ಲಿ ತಾವು ಅರ್ಚಕ ಪೂಜಾರಿಗಳೆಂದು ಪಟ್ಟ ಭದ್ರರಾದರು. ಜನರಿಗೆ ತಿಳಿಯದ ಭಾಷೆಯಲ್ಲಿ ಮಂತ್ರ ಪಠಣ ಮಾಡಿ, ಜನರನ್ನು ಶೋಷಿಸಲಾರಂಭಿಸಿದರು.

ಕಂ. ಬೂಟಕವು ಪುರಾಣ ಕಥನ,
ವಾಟವು ಅಲ್ಲಯ್ಯ ; ಪರಮನಿಂದಗಲಿಸುವಾ
ಕೂಟವ ಸೇರದೆ, ಪೂರ್ಣದ
ನೋಟವು ಯಾರಿಗೆ ವಶವ್ಮೆ ? ನಿಜದಲಿ ವೇಮಾ.

ಪುರಾಣ ಕಥನವು ಮೋಸಗಾರಿಕೆಯಾಗಿದೆ. ಉನ್ನತೋನ್ನತ ತತ್ತ್ವಗಳನ್ನು ವಿವರಿಸುತ್ತೇವೆಂದು ನೆಪ ಹೇಳಿ ದೇವತೆಗಳಲ್ಲಿ ಕೋಪ, ಮತ್ಸರ, ಕಾಮ ಇತ್ಯಾದಿ ತುಂಬಿ ಜನರನ್ನು ತಪ್ಪು ಮಾರ್ಗಕ್ಕೆ ಒಯ್ಯುವ ಪುರಾಣಗಳು ಪರಮನತ್ತ ಸಾಗುವ ಹಾದಿಯಲ್ಲ, ಆದ್ದರಿಂದ,

ಪರಮನಿಂದ ಅಗಲಿಸುವ ಪೌರಾಣಿಕರ ಕೂಟವನ್ನು ಸೇರಬೇಡ. ನಿಜವಾಗಿ ಪೂರ್ಣ ತತ್ತ್ವವಾದ ಬ್ರಹ್ಮನ ನೋಟವು ಯಾರಿಗೆ ತಾನೇ ವಶವಾಗಬಹುದು ? ಅದನ್ನು ನೋಡುವುದೆಂದರೆ, ಅರಿಯುವುದೆಂದರೆ ತನ್ನನ್ನು ತಾನು ಅದಕ್ಕೆ ಅರ್ಪಿಸಿಕೊಳ್ಳಬೇಕಷ್ಟೇ.

ಪುರಾಣವು ಪುಂಡರ ಗೋಷ್ಠಿ ಎಂದು ಅಲ್ಲಮ ಪ್ರಭುವೂ ಸಾರಿದ್ದಾರೆ.

ಮುಂದೆ ರಾಜಕೀಯ ಶೋಷಕರೂ, ಧಾರ್ಮಿಕ ಶೋಷಕರೂ ಒಂದಾಗಿ ಗುಡಿ ಗೋಪುರಗಳ ನಿರ್ಮಾಣಕ್ಕೆ ಮುಂದಾದರು. ಮೂರ್ತಿಗೆ ಪ್ರಾಣ ಪ್ರತಿಷ್ಠಾಪನೆ ಮಾಡುವ ನೆಪದಲ್ಲಿ ಮೂಢ ಭಕ್ತರಿಂದ ಹೇರಳ ದ್ರವ್ಯ ಶೇಖರಿಸಿ, ಗರ್ಭ ಗುಡಿಗಳಲ್ಲಿ ಹುಗಿದಿಡತೊಡಗಿದರು. ಈ ಅಪಾರ ಸಂಪತ್ತನ್ನು ಯುದ್ಧ ಕಾಲದಲ್ಲಿ ಅಗೆದು ತೆಗೆದು ರಾಜಕಾರ್ಯಗಳಿಗೆ ಬಳಸಿಕೊಳ್ಳತೊಡಗಿದರು.

ಆ. ಅಗಿದ ಮೇಲೆ ಮಣ್ಣು, ಹುಗಿದ ಬಂಡೆ ತಲೆಯು,
ಹುಟ್ಟಲಾರದವನ ಬುಡಕೆ ತೊಡುಗೆ.
ಗಟ್ಟಿಯಾದ ಮೂಟೆ ಕನಕ ಹುಟ್ಟದೇನು ?
ವಿಶ್ವದಾಭಿರಾಮ ಕೇಳು ವೇಮ.

ಮೂರ್ತಿ ಪ್ರತಿಷ್ಠಾಪನೆ ಮಾಡುವಾಗ ಮಣ್ಣು ಅಗಿದು ಮೇಲೆತ್ತಿ ಪಾಯ ತೋಡುತ್ತಾರೆ. ಅದರಲ್ಲಿ ಬಂಡೆಗಲ್ಲಿನಲ್ಲಿ ಕಟೆದ ಮೂರ್ತಿಯನ್ನು ನಿಲ್ಲಿಸುತ್ತಾರೆ. ಕಟೆಯದ ಬಂಡೆಗಲ್ಲಿನ ಭಾಗವು ಮಣ್ಣಿನಲ್ಲಿ ಮುಚ್ಚುತ್ತದೆ. ಕಟೆದ ಮೂರ್ತಿಯ ಭಾಗವು ಬಂಡೆಗಲ್ಲಿನ ತಲೆಯಂತೆ ಮೇಲೆ ಕಾಣುತ್ತದೆ. ಹೀಗೆ ಮೂರ್ತಿಯನ್ನು ಪ್ರತಿಷ್ಠಾಪಿಸುವ ಮುನ್ನ, ಬೆಳ್ಳಿ ಬಂಗಾರದ ತೊಡುಗೆಗಳನ್ನು ಅಡಿಯಲ್ಲಿ ಸಮರ್ಪಿಸುತ್ತಾರೆ. ಹೀಗೆ ಅಜನ (ಬ್ರಹ್ಮನ) ಅಂದರೆ ಹುಟ್ಟಲಾರದವನ ಬುಡದಲ್ಲಿ ತೊಡುಗೆಗಳೂ, ಗಟ್ಟಿಯಾದ ಕನಕದ ಮೂಟೆಯೂ, ಮುಂದೊಮ್ಮೆ ಅಗಿದಾಗ ಹುಟ್ಟವೇನು ?

ಈಗ ಪ್ರಾಣ ಪ್ರತಿಷ್ಠಾಪನೆಯನ್ನು ಕರಿತು, ಸ್ವಲ್ಪು ತಿಳಿಯುವಾ. ''ಎಲ್ಲ ಪ್ರತಿಮೆಗಳು ಜೀವ ಹೀನ. ಅವು ಮೂಕವಾಗಿವೆ. ನನಗಿದು ಗೊತ್ತಾಗಿದೆ. ಏಕೆಂದರೆ, ನಾನು ಅವುಗಳೆದುರು ಕೂಗಿ ಕೋರಿದ್ದೇನೆ'' ಎಂದ ಸಂತ ಕಬೀರರ ಅನುಭವ ಕಥನ. ಈ ಬಗ್ಗೆ ವೇಮನ ಯೋಗಿಗಳ ಪದ್ಯಗಳತ್ತ ಗಮನಿಸುವಾ :

ಆ. ಭೂಮಿಯಲ್ಲಿ ಮತ್ತೆ ಪ್ರಾಣ ಪ್ರತಿಷ್ಠಿಪರು.
ನೀಡೆ ಪ್ರಾಣ, ಪ್ರತಿಮೆ ನುಡಿಯಬಹುದೆ ?
ಮೊದಲಿನವನ ದೃಷ್ಟಿ ಮೂರ್ತಿವಂತನಾಗೆ.
ವಿಶ್ವದಾಭಿರಾಮ ಕೇಳು ವೇಮ.

ಭೂಮಿಯಲ್ಲಿ ಭೂಸುರರೆಂದು ಭೀಗುವ ಪುರೋಹಿತರು ಮೂರ್ತಿಯನ್ನು ನಿಲ್ಲಿಸಿ ಪ್ರಾಣ ಪ್ರತಿಷ್ಠೆ ಮಾಡುವೆವೆನ್ನುತ್ತಾರೆ. ನಿರ್ಜೀವವಾದ ಪ್ರತಿಮೆಯಲ್ಲಿ ಪ್ರಾಣ ಮಂತ್ರ ಪಠಿಸಿದರೆ ಅದು ನುಡಿಯಬಹುದೇ ? ಶಿಲೆಯು ಮೊದಲಿನವನ ಅಂದರೆ ಅಭವನ ಸೃಷ್ಟಿಯಷ್ಟೇ. ಅದಕ್ಕೆ ಮೂರ್ತಿ ರೂಪವನ್ನು ಕೊಟ್ಟಂತಾಗಿದೆ. ಆದರೆ ಅದು ಜಡವೇ.

ಆ. ಪ್ರಾಣ ಪ್ರತಿಷ್ಠೆಯು ಪ್ರಪಂಚವೇ ಹೊರತು,
ಬೇರೆಯಲ್ಲ ; ಜಗದಿ ಪರಿಕಿಸಿದೊಡೆ,
ಪ್ರಾಣ ಪ್ರತಿಷ್ಠೆಯಿಂ ಪ್ರತಿಮೆ ನುಡಿವುದೇನು ?
ವಿಶ್ವದಾಭಿರಾಮ ಕೇಳು ವೇಮ.

ಸರಿಯಾಗಿ ಸಮೀಕ್ಷಿಸಿ ನೋಡಿದರೆ, ಪ್ರಾಣ ಪ್ರತಿಷ್ಠೆಯ ವಿಧಿ ಕರ್ಮಗಳು ಪಂಚ ಭೂತಗಳಿಗೆ ಸಂಬಂಧಿಸಿದ ಪ್ರಪಂಚವಲ್ಲದೆ ಬೇರಲ್ಲ. ಪ್ರಾಣದ ಉಪಾಧಿಯಿಂದ, ಅಚಲನಾದ ಆತ್ಮನು ಜೀವನೆನಿಸುತ್ತಾನೆ ; ನಿಜ. ಆದರೆ ಪ್ರಾಣ ವಿಯೋಗವಾದ ಶರೀರವು ಜಡವಾಗುತ್ತದೆ. ಈಗ ಜಡವಾದ ಶಿಲೆಯಲ್ಲಿ ಪ್ರಾಣವನ್ನು ತುಂಬಿ ಉಸಿರಾಡುವಂತೆ ಮಾಡಲಾಗದು. ಏಕೆಂದರೆ ಪ್ರಾಣವನ್ನು ಧರಿಸುವ ಆತ್ಮವೂ ಬೇಕು. ಆದ್ದರಿಂದ ಪ್ರಾಣ ಪ್ರತಿಷ್ಠೆಯಿಂದ ಪ್ರತಿಮೆಯು ನುಡಿಯುವುದೇನು ? ಎಂದು ಕೇಳಬಹುದು.

ಆ. ಬೆಟ್ಟ ಕಲ್ಲಿನಿಂದ ಬಯಕೆ ಕೋರಲೇಕೆ ?
ಕಟ್ಟಿದ ಗುಡಿಗಳಲಿ ಕರುಬಲೇಕೆ ?
ಬಿಡಲಾರದ ಶಿವನು ಪ್ರಾಣಿಗಳಲ್ಲಿಹನು.
ವಿಶ್ವದಾಭಿರಾಮ ಕೇಳು ವೇಮ.

ಶಿವ ಇಲ್ಲವೆ ಆತ್ಮನು ಕೋಶಾತ್ಮಕನಾಗಿದ್ದಾನೆ. ಅವನನ್ನು ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನಮಯ ಮತ್ತು ಆನಂದಮಯ ಕೋಶಗಳು ಮುಚ್ಚಿವೆ. ಹೀಗೆ ಅವನಿಂದ ಅಗಲಿ ಜೀವಿಸಲಾರೆವು. ಅಂತೂ ಬಿಡಲಾರದಂಥ ಶಿವನು ಪ್ರಾಣಿಗಳಲ್ಲಿ ಇರುವನು. ಅಂದ ಮೇಲೆ ಬೆಟ್ಟ ಕಲ್ಲುಗಳಿಂದ ಕಟೆದು ಮಾಡಿದ ಮೂರ್ತಿಗಳಿಗೆ ಬೇಡಿಕೊಂಡು ಬಯಕೆಯನ್ನು ತೀರಿಸಿಕೊಳ್ಳುವುದೇಕೆ ? ಆ ಮೂರ್ತಿಗಳಿಗೆ ಕಟ್ಟಿದ ಗುಡಿಗಳಲ್ಲಿ ಕರುಬುವುದೇಕೆ ? ತಳಮಳ ಪಡುವುದೇಕೆ ?

ಹೆಚ್ಚಾಗಿ, ದೇವತಾ ಮೂರ್ತಿಗಳನ್ನು, ಲೋಹಗಳನ್ನು ಕರಗಿಸಿ, ಅಚ್ಚಿನಲ್ಲಿ ಎರಕ ಹೊಯ್ದು ತಯ್ಯಾರಿಸುತ್ತಾರೆ. ಇಲ್ಲವೆ ಕಾಂತ ಶಿಲೆಗಳನ್ನು ಕಟೆದು ಮಾಡಬಹುದು. ಅಲ್ಪ ಕಾಲೀನ ಉದ್ದೇಶಗಳಿಗಾಗಿ ಮಣ್ಣಿನ ಮೂರ್ತಿಗಳನ್ನು ಮಾಡಬಹುದು. ಗಣಪತಿ, ಕಾಳಿ, ಕಾಮ ಇತ್ಯಾದಿ. ಇನ್ನು ಕಟ್ಟಿಗೆಯ ಮೂರ್ತಿಗಳೂ ಉಂಟು. ಸಾಮಾನ್ಯವಾಗಿ ಕಾಣ ಬರುವ ಲೋಹದ ಮತ್ತು ಶಿಲಾ ಮೂರ್ತಿಗಳನ್ನು ತಯ್ಯಾರಿಸುವ ವಿಧಿ ವಿಧಾನಗಳನ್ನು ಕುರಿತು ಅರಿಯುವಾ :

ಆ. ಮೇಣ ಒತ್ತಿ ಬರೆದು ಮತ್ತೆ ರೂಪ ಮಾಡಿ,
ತಾಮ್ರ, ಕರಗಿಸಿಟ್ಟು ತತ್ರ ಸುರುವಿ,
ಮನುಜರೆಲ್ಲ ಕೂಡಿ ಮತ್ತೆ ದೇವನೆಂದ್ರು.
ವಿಶ್ವದಾಭಿರಾಮ ಕೇಳು ವೇಮ.

ವೇಮನ ಯೋಗಿ ತೀರ ಚಿಕ್ಕ ವಯಸ್ಸಿನಲ್ಲಿಯೇ ಪಿತೃ ವಿಯೋಗ ಹೊಂದಿದ್ದರು. ಕ್ರಿ. ಶ. 1380 ರಿಂದ ಕ್ರಿ. ಶ. 1400 ರ ವರೆಗೆ ಕೊಂಡವೀಡು ರಾಜ್ಯವಾಳಿದ ಕೊಮರುಗಿರಿರೆಡ್ಡಿ ಊರ್ಫ ಕುಮಾರಗಿರಿ ರೆಡ್ಡಿಯವರು ದಾಯಾದಿ ಮತ್ಸರಕ್ಕೆ ಬಲಿಯಾಗಿ ಮತ್ತು ಸಂಸ್ಕೃತ ಸಾಹಿತ್ಯ

ಹಾಗೂ ಕಲೋಪಾಸನೆಯ ವಿಶೇಷ ಆಸಕ್ತಿಯಿಂದ ಮೂರ್ತಿ ತಯ್ಯಾರಿಸುವ ಕಲಾ ಶಾಲೆಯನ್ನು, ಸಹ ನಡೆಸುತ್ತಿದ್ದರು. ವೇಮನರು ಕಿಶೋರಾವಸ್ಥೆಯಲ್ಲಿರುವಾಗ ತಂದೆ ಕಾಲವಾಗಿದ್ದರೂ ಸಹ ಕಲಾ ಶಾಲೆ ಇನ್ನೂ ಇತ್ತು. ಇಲ್ಲಿ ವಿಶ್ವಕರ್ಮ ಕುಲದವರು ಕಲಾಕಾರರಾಗಿದ್ದರು. ಹೀಗೆ ಬಾಲ ವೇಮನರಿಗೆ ಮೂರ್ತಿ ತಯ್ಯಾರಿಕೆಯ ವಿಧಿ ವಿಧಾನಗಳ ಪೂರ್ಣ ಪರಿಚಯವಾಗಿತ್ತು.

ಲೋಹದ ಮೂರ್ತಿಗಳನ್ನು ಮಾಡುವ ವಿಧಾನವನ್ನು ಕೆಲವರು ನೋಡಿರಬಹುದು.

ಆ. ಮಣ್ಣು ಎತ್ತಿ ಹಾಕಿ ಮತ್ತೆ ರೂಪಗೊಳಿಸಿ,
ಗುಂಡಿ ತುಂಬಿ ಹೂಳಿ ಗುರುತು ನಿಲಿಸಿ,
ಮನುಜರೆಲ್ಲ ಕೂಡಿ ಮತ್ತೆ ದೇವನೆಂದ್ರು.
ವಿಶ್ವದಾಭಿರಾಮ ಕೇಳು ವೇಮ.

ಮಣ್ಣು ಎತ್ತಿ ಹಾಕಿ, ಅಚ್ಚು ಕುಣಿಗಳನ್ನು ಸಿದ್ಧಗೊಳಿಸಿ, ಅದರಲ್ಲಿ ಇಷ್ಟ ಮೂರ್ತಿಯ ರೂಪವನ್ನು ತೀಡಿ, ಬಳಿಕ ಕಾಯಿಸಿದ ಲೋಹದ ದ್ರವವನ್ನು ಅದರಲ್ಲಿ ತುಂಬಿ, ಕೆಲ ಕಾಲ ಬಿಡಬೇಕು. ಬಳಿಕ ಲೋಹದ ಮೂರ್ತಿ ಸಿದ್ಧವಾಗುತ್ತದೆ. ಅದಕ್ಕೆ ಮುಂದೆ ಜನರೆಲ್ಲ ದೇವರು ಎನ್ನುತ್ತಾರೆ.

ಬೇರೆ ಬೇರೆ ಶಿಲೆಗಳಿಂದ ಮೂರ್ತಿಗಳನ್ನು ಕಟೆಯುವುದು ಎಲ್ಲರಿಗೂ ತಿಳಿದ ವಿಷಯವೇ. ಅದನ್ನು ಶಿಲ್ಪಿಯು ಕಾಲು ಬೆರಳಿನಿಂದ ಒತ್ತಿ ಹಿಡಿದು, ಉಳಿ, ಚಾಣಗಳಿಂದ ಕಟೆದು ಮೂರ್ತಿ ರೂಪ ನೀಡುತ್ತಾನೆ.

ಆ. ಗಟ್ಟಿ ಕಲ್ಲು ತಂದು, ಕಾಲು ಬೆರಳಿನಿಂದ,
ಒತ್ತಿ ಉಳಿಯ ಬಳಸಿ, ಗಾಸಿಗೊಳಿಸಿ,
ಬಂಡೆಗಲ್ಲಿಗೆರಗುತಿಪ್ಪನೆಂಥ ಮೂರ್ಖ.
ವಿಶ್ವದಾಭಿರಾಮ ಕೇಳು ವೇಮ.

ಕಲ್ಲು ದಿನ್ನೆಯ ದಿಂಡು ಗಲ್ಲುಗಳಿಂದ ಗುಡಿಯನ್ನು ನಿರ್ಮಿಸಿ, ಅದರಲ್ಲಿ ಕಾಂತ ಶಿಲೆಯ ಮೂರ್ತಿ ಕಟೆದಿರಿಸಿ ಪೂಜಿಸಿದರೆ ಪುಣ್ಯ ಬರುವುದೇ ? ಪುಣ್ಯವೆಂದರೆ ಪರೋಪಕಾರ. ದೇವರ ಸಂತಾನವಾದ ಸಕಲ ಜೀವಿಗಳಿಗೆ ಉಪಕಾರ ಮಾಡುವುದು ಪುಣ್ಯ.

ಆ. ಕಲ್ಲು ದಿನ್ನೆಯಿಂದ ಕಟ್ಟಿ ಗುಡಿಯ ಮತ್ತೆ,
ಬೇರೆ ಶಿಲೆಯ ಕೊರೆದು, ವಿಗ್ರಹೆಂದು,
ಪೂಜೆ ಮಾಡಿದಾಗ ಪುಣ್ಯ ಬರುವುದೇನು ?
ವಿಶ್ವದಾಭಿರಾಮ ಕೇಳು ವೇಮ.

ಐಹಿಕ ಎಳೆತ ಸೆಳೆತಗಳಿಂದ ಮನಸ್ಸನ್ನು ಮುಕ್ತಗೊಳಿಸಬೇಕಾದರೆ, ಸ್ಥೂಲ ವಸ್ತುಗಳತ್ತ ಮನಸ್ಸನ್ನು ಹರಿಸಬಾರದು. ದೇವರು, ತಾನು ಇರುವಲ್ಲಿ ಅಂದರೆ ತನ್ನ ಆತ್ಮದಲ್ಲಿಯೇ ಇದ್ದಾನೆ. ಅವನನ್ನು ಹುಡುಕುತ್ತ ಅಲ್ಲಿ ಇಲ್ಲಿ ತಿರುಗುವುದು ಮೂರ್ಖತನ.

ಆ. ಬಂಡೆ ಪೂಜೆ ಗೆಯ್ದು, ಬಹಳ ರಾಜ್ಯ ತಿರುಗಿ,
ಕಾಣಲಾರ ಮುಕ್ತಿ ಕಾಂತೆಯನ್ನು
ತಾನು ಇರುವ ತಾಣ ದೈವವೇನಿಲ್ಲವೆ ?
ವಿಶ್ವದಾಭಿರಾಮ ಕೇಳು ವೇಮ.

'ಯದ್ಭಾವಂ ತದ್ಭವತಿ'. ಅಂದರೆ ಹೇಗೆ ಭಾವಿಸುವನೋ, ಹಾಗೆ ಆಗುತ್ತಾರೆ. ಶಿಲೆಯ ದೇವತೆಗಳನ್ನು ಸ್ಥಿರವಾಗಿ ರೂಪಿಸಿ, ಪೂಜಿಸಿ, ಮನುಜರೆಲ್ಲರೂ ಮಣ್ಣು ಪಾಲಾದರು. ಸತ್ತು ಹೋದರು. ಮಣ್ಣು ಮತ್ತು ಶಿಲೆ ಒಂದೇ ತಾನೇ ? ಕಲ್ಲು ಪಾಲಾದರು ಎನ್ನಬಹುದು. ಆದ್ದರಿಂದ ದೇವರನ್ನು ಮನದೊಳಗೆ, ಮನವನ್ನು ಶುದ್ಧಗೊಳಿಸುವ ಮೂಲಕ, ಅರಿಯಬೇಕು.

ಆ. ಸಂಗಮರಮರಿ ಶಿಲೆ ತಂದು ಗುಡಿ ಕಟ್ಟಿ,
ಹೊಳಿವ ಶಿಲೆಗೆ ಹರಕೆ ಸಲಿಸಲೇಕೆ ?
ಶಿಲೆಯ ಸೇವೆಯಿಂದ ಫಲವೇನು ಬಪ್ಪುದು ?
ವಿಶ್ವದಾಭಿರಾಮ ಕೇಳು ವೇಮ.

ಮಧ್ಯ ಯುಗದಲ್ಲಿ ವಿವಿಧ ದೇವ ದೇವತೆಗಳನ್ನು ಕುರಿತು, ಅನೇಕ ಪುರಾಣಗಳನ್ನು ರಚಿಸಿದರು. ಈ ಪುರಾಣ ಕರ್ತರಲ್ಲಿ ವ್ಯಾಸದೇವನೇ ಅಗ್ರಗಣ್ಯ. ಈ ವಿಷಯದಲ್ಲಿ ಅವನು ಸಹ, ತನ್ನ ತಪ್ಪನ್ನು ಅರಿತು, ಕೆಳಗಿನಂತೆ ಕ್ಷಮೆ ಕೋರಿದ್ದಾನೆ.

ರೂಪಂ ರೂಪವಿವರ್ಜಿತಸ್ಯ ಭವತೋ ಯದ್ಧ್ಯಾನೇನ ವರ್ಣಿತಮ್
ಸ್ತುತ್ಯಾ ನಿರ್ವಚನೀಯತಾಖಿಲೋ ಗುರೋ ದೂರೀ ಕೃತಾ ಯನ್ಮಯಾ
ವ್ಯಾಪಿತ್ವಂ ನಿರಾಕೃತಂ ಭಗವತೋ ಯತ್ತೀರ್ಥ ಯಾತ್ರಾದಿ ನಾ
ಕ್ಷಂತವ್ಯಂ ಜಗದೀಶೋ ತದ್ವಿಕಲತಾ ದೋಷತ್ರಯಂ ಮೃತ್‌ಕೃತಮ್.

ಅಂದರೆ, (1) ನೀನು ಧ್ಯಾನ ಮಾತ್ರದಿಂದ ಪಡೆಯಬೇಕಾದವನಾಗಿದ್ದರೂ ಸಹ, ರೂಪವರ್ಜಿತನಾದ ನಿನಗೆ ನಾನು ರೂಪವನ್ನು ಆರೋಪಿಸಿದೆ.

(2) ನೀನು ಅನಿರ್ವಚನೀಯನಾಗಿದ್ದರೂ ಸಹ, ನಾನು ಸ್ತುತಿ ವಚನಗಳಿಂದ ನಿನ್ನನ್ನು ಸೀಮಿತಗೊಳಿಸಲು ಯತ್ನಿಸಿದೆ.

(3) ನೀನು ಸರ್ವ ವ್ಯಾಪ್ತನಾಗಿದ್ದರೂ ಸಹ, ನಾನು ನಿನ್ನನ್ನು ಹಲ ಕೆಲವು ತೀರ್ಥ ಕ್ಷೇತ್ರಗಳಲ್ಲಿ ಹಿಡಿದಿಡುವ ಪ್ರಯತ್ನ ಮಾಡಿದೆ.

ಎಲ್ಮೆ ಜಗದೀಶ ! ನನ್ನ ಈ ಮೂರು ದೋಷಗಳನ್ನು ಕ್ಷಮಿಸು.

ಈ ಸಂಬಂಧದಲ್ಲಿ ವೇಮನ ಯೋಗಿಗಳ ವಿಚಾರವನ್ನು ಕೆಲವು ಪದ್ಯಗಳ ಮೂಲಕ ಅರಿಯುವಾ :

(1) ಆ. ಬಯಲು ರೂಪ ; ರೂಪವ ಬಯಲಾಗಿ ಮಾಡಿ,
ಬಯಲು ರೂಪ ಬಟ್ಟ ಬಯಲು ಮಾಡಿ,

ಬಯಲಿನೊಳಗೆ ಇಹನ ಭಾವಿಸಲು ತತ್ತ್ವವು.
ವಿಶ್ವದಾಭಿರಾಮ ಕೇಳು ವೇಮ.

ಚಿದಾಕಾಶವು ಬಯಲು. ಅದನ್ನೇ ಧ್ಯಾನ ಮಾಡುವವನು ರೂಪವಾಗಿ ವೀಕ್ಷಿಸಿ, ಮುಂದೆ ತನು ಭಾವವನ್ನು ಮೀರಿ, ವೀಕ್ಷಿಸುವ ರೂಪವನ್ನು ಬಯಲಾಗಿ ಮಾಡಿ, ಬಯಲು ರೂಪವನ್ನು ಬಟ್ಟ ಬಯಲು ಮಾಡಿ, ಧ್ಯಾತೃ, ಧ್ಯೇಯ ಮತ್ತು ಧ್ಯಾನಗಳ ತ್ರಿಪುಟಿಯು ಒಂದಾಗಬೇಕು. ಆಗ ಬಯಲಿನಲ್ಲಿ ಇರುವವನನ್ನು ಭಾವ ಮೂಲಕ ತಲುಪುವುದೇ ತತ್ತ್ವವಾಗಿದೆ.

ಕಂ. ಧ್ಯಾನಿಸಲು ತತ್ತ್ವವೆನಿಪುದೆ ?
ಧ್ಯಾನಿಸದೆ ತಾ ಸುಮ್ಮನಿರಲು ತತ್ತ್ವವೆನಿಪುದೆ ?
ಧ್ಯಾನಿಪ, ಧ್ಯಾನಿಸದೆರಡನು
ಧ್ಯಾನಿಸುತ ಇದ್ದರಾಗಳೆ, ತತ್ತ್ವವು ವೇಮಾ.

ಧ್ಯಾತೃವು ಇರುವಾಗ ಧ್ಯಾನಿಸುವುದು ಇರಬಲ್ಲದು. ಧ್ಯಾನಿಸದೆ ತಾನು ಸುಮ್ಮನಿರಲು ತತ್ತ್ವ ತಲುಪಬಹುದೇ ? ಇಲ್ಲ. ಹಾಗಾದಾರೆ ತತ್ತ್ವ ತಲುಪಬೇಕಾದರೆ ಏನು ಮಾಡಬೇಕು ? ಧ್ಯಾನಿಸುವ ಮತ್ತು ಧ್ಯಾನಿಸದಿರುವ ಎರಡನ್ನೂ ಕುರಿತು ಧ್ಯಾನಿಸುತ್ತ ಇದ್ದರೆ, ಆಗ ತತ್ತ್ವವೆನಿಸುತ್ತದೆ. ಇದನ್ನೇ ಬೇರೊಂದು ಬಗೆಯಾಗಿ ಹೇಳುವುದಾದರೆ, "Meditation is, where meditator is not". ಅಂದರೆ ಧ್ಯಾತೃವು ಇಲ್ಲದೆಡೆ ಧ್ಯಾನವಿರುತ್ತದೆ.

ಆ. ಆಕೃತಿಯರಿತೊಡೆ ನಿರಾಕೃತಿಯೆ ಆಯ್ತು.
ಆಕೃತಿಯೆ ಆಯ್ತು ಆ ನಿರಾಕೃತಿ ತಾ–
ನಿಂಥ ಕೇಡೆರಡಿರದ ನವ ರೂಪವೆ ಉಂಟು..
ವಿಶ್ವದಾಭಿರಾಮ ಕೇಳು ವೇಮ.

ದೇವರ ಸಗುಣ ರೂಪವನ್ನು ಧ್ಯಾನಿಸುತ್ತ ಇದ್ದರೆ, ಆ ಸಗುಣ ರೂಪವು ಅಡಗಿ ನಿರ್ಗುಣವೂ ಅನುಭವಕ್ಕೆ ವೇದ್ಯವಾಗುತ್ತದೆ. ನಿರ್ಗುಣವನ್ನು ಧ್ಯಾನಿಸುತ್ತ ಇದ್ದರೆ, ಮನಸ್ಸು ಉದಿಸಿ, ಸಗುಣವು ತೋರತೊಡಗುತ್ತದೆ. ಮುಂದೆ ಆ ನಿರ್ಗುಣವೆ ತೋರುವ ಅಡಗುವ ಎರಡು ಕೇಡಿಲ್ಲದ ನಿತ್ಯವಾದ ನವ ರೂಪವಾಗಿ ಸಹಜ ಸಮಾಧಿಯಲ್ಲಿ ಉಳಿಯುತ್ತದೆ.

(2) ಸ್ತುತಿ ಮಚನ :

ಆ. ವಿಶ್ವ ನಡೆಸುವವನು ವಿಶ್ವೇಶ್ವರನಿರಲು
ಪ್ರಭುವು ನಾನು ಎಂದು ಪೇಳಲೇಕೆ ?
ವನದೊಳಗಿಹ ಕೋತಿ ವಸುಧೆ ನಡೆಸಬಹುದೆ ?
ವಿಶ್ವದಾಭಿರಾಮ ಕೇಳು ವೇಮ.

'ಈಶತೇ ಇತಿ ಈಶ್ವರಃ'. ನಿಯಂತ್ರಿಸುವನಾದ್ದರಿಂದ ಈಶ್ವರನೆನಿಸಿದ್ದಾನೆ. ಅವನು ವಿಶ್ವವನ್ನು ನಡೆಸುವುದರಿಂದ ವಿಶ್ವೇಶ್ವರನಾಗಿದ್ದಾನೆ. ಅವನೇ ವಿಶ್ವದ ಪ್ರಭುವಾಗಿದ್ದಾನೆ. ಅಂದ ಮೇಲೆ, ಯಾವನೊಬ್ಬ ನರ ಪ್ರಾಣಿಯು 'ನಾನು ಪ್ರಭು' ಎಂದು ಹೇಳುವುದೇಕೆ ? ಅದು

ಸರಿಯೆನಿಸದು. ಅಡವಿಯೊಳಗಿರುವ ಮಂಗವೊಂದು ಅವನಿಯನ್ನು ನಡೆಸುತ್ತೇನೆಂದರೆ ಹೇಗೆ ಹಾಸ್ಯಾಸ್ಪದವಾಗುವುದೋ, ಅದೇ ರೀತಿ ಯಾವನೊಬ್ಬ ನರನು ಪ್ರಭುವು ತಾನು ಎಂದು ಬೀಗುವುದೂ ಹಾಸ್ಯಾಸ್ಪದ.

ಕಂ. ಭಗವಂತನಾದ ದೇವನು
ಜಗಗಳ ತನ್ನೊಳಗೆ ಬೆಳಿಸಿ ಜಾಲವ ತೋರ್ಪಂ.
ಮಿಗೆ ಪರಿಯಲಿ ತಾನೆಲ್ಲಿಡೆ,
ಅಗಣಿತನಾಗಿ ಬೆಳಗುತಿಹನನುವಿನಲಿ, ವೇಮಾ.

ಭಗವಂತನು ಯಾರು ? ಭಗವನ್ನು ಹೊಂದಿದವನು. ಭಗವಂತ ಎಂದರೇನು ? ಜ್ಞಾನ, ಶಕ್ತಿ, ಬಲ, ವೀರ್ಯ ಮತ್ತು ತೇಜಸ್ಸು ಮುಂತಾದ ಈಶ್ವರೀಯ ಷಡ್ಗುಣೈಶ್ವರ್ಯಗಳನ್ನು ಹೊಂದಿದವನು. ಇಂಥ ಭಗವಂತನಾದ ದೇವನು ಜಗಗಳನ್ನು ತನ್ನೊಳಗೆ ಬೆಳಿಸಿ ಜಗಗಳ ಜಾಲವನ್ನು ತೋರಿಸುತ್ತಾನೆ. ಅವನೇ ಎಲ್ಲ ಸೃಷ್ಟಿಗೂ ಉಪಾದಾನ ಕಾರಣನಾಗಿದ್ದಾನೆ. ಮತ್ತು ನಿಮಿತ್ತ ಕಾರಣನೂ ಆಗಿದ್ದಾನೆ. ಇದಲ್ಲದೆ ತಾನು ಬಹು ಪರಿಯಲ್ಲಿ, ಲೆಕ್ಕಕ್ಕೆ ಸಿಗದಷ್ಟು ಬಗೆಯಲ್ಲಿ, ಅನುಕೂಲಿಸಿ ಹೊಳೆಯುತ್ತಿದ್ದಾನೆ.

ಕಂ. ವಿಶ್ವದ ಒಳ ಹೊರ ತಾನೇ
ವಿಶ್ವಾತೀತನು ; ಮೇಣಾ ವಿಶ್ವಂಭರನೈ.
ವಿಶ್ವಗಳಿಗೆ ಬೇರಾಗುತ,
ವಿಶ್ವದೊಳಗೆ ಬೆಳಗುತಿರುವ, ಶಾಶ್ವತ ವೇಮಾ.

'ಸರ್ವಂ ಬ್ರಹ್ಮಮಯಂ ಜಗತ್'. ಅಂದರೆ ಜಗವೆಲ್ಲವೂ ಬ್ರಹ್ಮನಿಂದ ತುಂಬಿದೆ. 'ಸರ್ವಂ ಖಲ್ವಿದಂ ಬ್ರಹ್ಮ'. ಇದೆಲ್ಲವೂ ನಿಜವಾಗಿ ಬ್ರಹ್ಮವೇ ಆಗಿದೆ. ಆ ಬ್ರಹ್ಮವು ವಿಶ್ವದ ಒಳಗೂ ಇದೆ ; ವಿಶ್ವದ ಹೊರಗೂ ಇದೆ. ಇದು ಅದರ ವ್ಯಾಪ್ತಿ. ಇನ್ನು ಅದರ ಸೂಕ್ಷ್ಮತೆಯು ವಿಶ್ವಾತೀತವಾಗಿದೆ. ಸರ್ವವನ್ನೂ ಹೆಣೆಯುವ ಅಂದರೆ ಸರ್ವಾನುಸ್ಯೂತವಾಗಿರುವ ಅದು ವಿಶ್ವಂಭರನಾಗಿ ಅಂದರೆ ವಿಶ್ವದೊಳಗೆ ತುಂಬಕೊಂಡು ಇದೆ. ಅದು ಸ್ವರೂಪದಲ್ಲಿ ಕ್ಷರವೂ (ನಾಶವಾಗುವುದು) ಅಲ್ಲ. ಅಕ್ಷರವೂ (ಅವಿನಾಶಿಯೂ) ಅಲ್ಲ. ನಿರಕ್ಷರವಾಗಿದೆ. ಹೀಗೆ ವಿಶ್ವದ ಒಳ ಹೊರಗೆ ಇದ್ದು, ವಿಶ್ವಾತೀತವೂ ಆಗಿರುವ ಬ್ರಹ್ಮವು ವಿಶ್ವಗಳಿಗೆ ಬೇರಾಗಿ ಇದ್ದು ವಿಶ್ವದೊಳಗೆ ಶಾಶ್ವತವಾಗಿ ಬೆಳಗುತ್ತಿರುವನು.

(3) ತೀರ್ಥಯಾತ್ರೆ :

ಆ. ಅಡವಿ ತಿರುಗಲಿಲ್ಲ ; ಆಗಸದಲಿ ಇಲ್ಲ.
ಅವನಿ ತೀರ್ಥಯಾತ್ರೆಯಲ್ಲೂ ಇಲ್ಲ.
ಒಡಲು ಶುದ್ಧ ಗೆಯ್ದು, ಒಡೆಯನನ್ನು ನೋಡು.
ವಿಶ್ವದಾಭಿರಾಮ ಕೇಳು ವೇಮ.

ತನ್ನ ಮೊರೆಯನ್ನು ಕೇಳುವ ದೇವರು ಎಲ್ಲಿದ್ದಾನೆ ? ಎಂದು ತಿಳಿಯದೆ, ಪುಣ್ಯ

ಕ್ಷೇತ್ರಗಳೆಂದು ಅಡವಿ ಅಡವಿ ತಿರುಗಿ ಹುಡುಕಾಡಿದರೂ ಸಿಗಲಾರನು. ಆಕಾಶದಲ್ಲಿ ಇರುವನೆಂದು ಕಲ್ಪಿಸಿ ಕಾಣಬಯಸಿದರೂ ಸಿಗನು. ಇನ್ನು ಅವನಿಯಲ್ಲಿ ತೀರ್ಥ ಯಾತ್ರೆ ಕೈಕೊಂಡು ಅರಸಿದರೂ ಸಿಗನು. ಹಾಗಾದರೆ ಏನು ಮಾಡಬೇಕು ? ವ್ಯಾಸರಂತೆ ಕ್ಷಮೆ ಬೇಡಿಕೊಂಡು, ನಿನ್ನ ಹೃದಯವನ್ನು ನಿರ್ಮಲ ಮಾಡಿಕೊಂಡು, ಆವರಣೇ ಮಲವಾಗಲಿ, ವಿಕ್ಷೇಪ ಮಲವಾಗಲಿ ಉಳಿಯದಂತಿರಿಸಿ, ಒಡೆಯನನ್ನು ನೋಡಬಹುದು. ಇದೇ ಸರಿಯಾದ ದಾರಿ.

ಆ. ತೀರ್ಥ ಯಾತ್ರೆಯೆಂದು ತಿರುಗಲು ಹೋಗುವವ,
ಪಾಮರಷ್ಟೆ ಹೊರತು, ಭಕ್ತನಹನೆ ?
ತೀರ್ಥಯಾತ್ರೆಯಿಂದ ದಿವ್ಯನಾಗಬಹುದೆ ?
ವಿಶ್ವದಾಭಿರಾಮ ಕೇಳು ವೇಮ.

ಆ. ಯಾತ್ರೆ ಹೋಗಿರುವವ ಎಷ್ಟು ದಿನ ತಿರುಗಲು,
ಕೆಡುವನಷ್ಟೆ ಮುಕ್ತಿ ಕುದುರದವಗೆ
ಮನಸು ನಿಲಿಸುವವನೆ ಮಹನೀಯ ಮೂರ್ತಿಯ.
ವಿಶ್ವದಾಭಿರಾಮ ಕೇಳು ವೇಮ.

ಪರಮಾತ್ಮನನ್ನು ಧ್ಯಾನದಿಂದ ಪಡೆಯಬೇಕಲ್ಲದೆ ಅವನಿಗೆ ಬಗೆಬಗೆಯ ರೂಪ ಕಲ್ಪಿಸಕೂಡದು. ಅವನು ಅನಿರ್ವಚನೀಯ ; ಆದ್ದರಿಂದ ಅವನನ್ನು ಸ್ತುತಿಸಿ, ತಂಬೂರಿ ಮೀಟಿದರೆ, ತಾಳ ಬಾರಿಸಿದರೆ ಸಾಲದು. ತನ್ನೊಳಗೆ ತಾನು ಅರಿಯಬೇಕು. ಅವನು ಹೃದಯ ವಾಸಿಯಾಗಿರುವುದರಿಂದ ಹೃದಯವನ್ನು ಶುದ್ಧಗೊಳಿಸಿ ಒಡೆಯನನ್ನು ನೋಡಬೇಕು. ತಾವು ಮಾಡಿದ ಅಪರಾಧಕ್ಕೆ ವ್ಯಾಸರು ಸೂಚಿಸಿದ ಪರಿಹಾರಗಳಿವು.

ಇನ್ನೊಂದು ಬಹುಶ್ರುತ ಶಾಸ್ತ್ರ ವಾಕ್ಯವು ಹೀಗಿದೆ :

ಉತ್ತಮೋ ಬ್ರಹ್ಮ ಸದ್ಭಾವೋ,
ಮಧ್ಯಮಾ ಧ್ಯಾನ ಧಾರಣಾ.
ಜಪ ಸ್ತುತಿಯಧಮಾ ಚ
ಮೂರ್ತಿ ಪೂಜಾ ಅಧಮಾಧಮಾ.

ಅಂದರೆ ಸತ್ ಭಾವವನ್ನು ಹೊಂದುವುದು ಉತ್ತಮ. ಬ್ರಹ್ಮವನ್ನು ಲಕ್ಷ್ಯ ವಸ್ತುವನ್ನಾಗಿಸಿ ಧಾರಣ ಮಾಡುವುದು ಮತ್ತು ಆ ಕುರಿತು ಧ್ಯಾನ ಮಾಡುವುದು ಮಧ್ಯಮ ಹಂತದ ಸಾಧನವಾಗಿದೆ. ಇನ್ನು ಇಷ್ಟದ ನಾಮವನ್ನು ಜಪಿಸಿವುದು ಮತ್ತು ಆ ನಾಮದಿಂದ ಗುರುತಿಸುವ ದೇವತಾ ಮೂರ್ತಿಯ ಮಹಿಮೆಯನ್ನು ಸ್ತುತಿಸುವುದು ಅಧಮ ಹಂತವಾಗಿದೆ. ಮತ್ತು ಮನಸ್ಸಿನಿಂದ ಯಾರೋ ಕಲ್ಪಿಸಿದ ದೇವತಾ ಮೂರ್ತಿಯನ್ನು, ಲೋಹ ಕರಗಿಸಿ ಎರಕ ಹೊಯ್ದು, ಶಿಲೆಯನ್ನು ಕಟಿದು ರೂಪಗೊಳಿಸಿ ಇಲ್ಲವೆ ಕಟ್ಟಿಗೆಯನ್ನು ಕೆತ್ತಿ ಆಕಾರ ಕೊಟ್ಟು ಇಲ್ಲವೆ ಮಣ್ಣಿನ ಮುದ್ದೆಯನ್ನು ತಿದ್ದಿ ತೀಡಿ, ಎದುರಿಟ್ಟು ಪೂಜಿಸುವುದಂತೂ ಅಧಮಾಧಮ ಹಂತವಾಗಿದೆ. ಈ ಕುರಿತು ವೇಮನ ಯೋಗಿಗಳು ಏನು ಹೇಳುತ್ತಾರೆ ?

(1) ಬ್ರಹ್ಮ ಸದ್ಭಾವ :

ಆ. ಸುಮ್ಮನಿದ್ದು ತಿಳಿಯೆ, ಉತ್ತಮ ಯೋಗವದು.
ಮನಸು ಒಲಿಸಿ ಕೊಳಲು ಮಧ್ಯಮವದು.
ಆಸನಾದಿ ವಿಧಿಯು ಅಧಮಯೋಗ ಕಣಾ.
ವಿಶ್ವದಾಭಿರಾಮ ಕೇಳು ವೇಮ.

(2) ಧ್ಯಾನ-ಧಾರಣಾ :

ಆ. ಅಂತರಿಕ್ಷದಲ್ಲಿ ಅಮರಿದಂಥ ಲಿಂಗ
ಧ್ಯಾನ ಮಾಡಬೇಕು ; ತಿಳಿಯಲಾತ್ಮ.
ಅಚ್ಚರಿಯೊಳಚ್ಚರಿ ! ಅಹುದು ಬೆನ್ನು ಬಿಡದೆ.
ವಿಶ್ವದಾಭಿರಾ ಕೇಳು ವೇಮ.

ಆತ್ಮವನ್ನು ತಿಳಿಯಬೇಕಾದರೆ ಚಿದಾಕಾಶದಲ್ಲಿ ಒಪ್ಪುವಂಥ ಬ್ರಹ್ಮ ಸಂಕೇತವನ್ನು ಕುರಿತು ಧ್ಯಾನ ಮಾಡಬೇಕು. ಆಗ ಆಗುವ ಅನುಭವಗಳು ಆಶ್ಚರ್ಯದ ಮೇಲೆ ಆಶ್ಚರ್ಯವನ್ನು, ಬೆನ್ನ ಬಿಡದೆ, ಉಂಟು ಮಾಡುತ್ತವೆ.

(3) ಜಪ-ಸ್ತುತಿ :

ಆ. ನೂರೆಂಟು ಮಣಿಗಳು ; ನೇಮ ಪುಣ್ಯವಾದಿ
ಇರುವ ಜೀವಿಗಳಿಗೆ ಇಲ್ಲ ಲೆಕ್ಕ !
ಕೆಟ್ಟ ನೀರು ನದಿಗೆ ಕೂಡಿದಂಥ ರೀತಿ
ವಿಶ್ವದಾಭಿರಾಮ ಕೇಳು ವೇಮ.

ಜಪ ಎಂದರೆ ದೇವರ ನಾಮವನ್ನು ಜಪಿಸುವುದು. ಜಪವು ನಾಲ್ಕು ವಿಧ. ಒಂದನೆಯದು ವೈಖರೀ ಅಂದರೆ ಸ್ವರವು ತುಟಿಯ ಆಚೆಗೆ ಬಂದು ಕಿವಿಗೆ ಕೇಳಿಸುವುದು. ಎರಡನೆಯದು ಉಪಾಂಶು. ಅಂದರೆ ತುಟಿಯವರೆಗೆ ಮಾತ್ರ ಸ್ವರದ ಚಲನೆ. ಮೂರನೆಯದು ಮಾನಸ ಜಪ ಅಂದರೆ ಮನಸ್ಸಿನಲ್ಲಿಯೇ ನಾಮ ಪಠಿಸುವುದು. ನಾಲ್ಕನೆಯದೇ ಅಜಪಾ ಜಪ. ಬಾಹ್ಯದಲ್ಲಿ ಜಪದ ಕ್ರಿಯೆಯ ಕುರುಹು ಗೊತ್ತಾಗದಿದ್ದರೂ, ಅನಾಹತ ನಾದದೊಂದಿಗೆ ನಾಮ ಪಠಣವು ಶ್ರುತಿಗೂಡಿ ತಂತಾನೇ ನಡೆಯುತ್ತದೆ. ವೈಖರೀ ಇಲ್ಲವೆ ಉಪಾಂಶು ಜಪ ಮಾಡುವಾಗ ತುಳಸಿ ಇಲ್ಲವೆ ರುದ್ರಾಕ್ಷಿ ಮಣಿಗಳನ್ನು ಸಾಮಾನ್ಯವಾಗಿ ಬಳಸುತ್ತಾರೆ. ಕೆಲವರು ವಿಶೇಷ ಉದ್ದೇಶಗಳಿಗಾಗಿ ಹವಳ ಇಲ್ಲವೆ ಮುತ್ತುಗಳನ್ನೂ ಮಣಿಮಾಲೆಯಲ್ಲಿ ಬಳಸುತ್ತಾರೆ. ಈ ಮಣಿಗಳು ಸಾಮಾನ್ಯವಾಗಿ ಒಂದು ನೂರಾ ಎಂಟು ಇರುತ್ತವೆ. ಏಕೆ ? ನಾಮ ಜಪವು ಶ್ವಾಸ ಉಚ್ಛ್ವಾಸದೊಂದಿಗೆ ಮೇಳವಿಸಬೇಕಷ್ಟೇ. ನಮ್ಮ ಉಸಿರಾಟವು ಸಾಮಾನ್ಯವಾಗಿ ಒಂದು ನಿಮಿಷಕ್ಕೆ (ಮಿನಿಟಿಗೆ) ಹದಿನೈದು ಸಲ ಆಗುತ್ತದೆ. ಅಂದರೆ ಒಂದು ಘಂಟೆಗೆ (15×60) 900 ಸಲ ಆಯಿತು. ಒಂದು ಹಗಲಿನಲ್ಲಿ (900×12) 10800 ಸಲ ಆಗುತ್ತದೆ. ಹೀಗೆ ಒಂದು ಹಗಲಿನಲ್ಲಿ ಒಂದು ನೂರು ಮಣಿ ಮಾಲೆಯನ್ನು ತಿರುಗಿಸಿದರೆ, ಇಡೀ ದಿನ ಜಪ ಮಾಡಿದಂತೆ.

ಹೀಗೆ ನೂರಾ ಎಂಟು ಮಣಿಗಳಿರುವ ಮಾಲೆಯಿಂದ ಜಪವನ್ನು ನೇಮವೆಂದು

ಮಾಡುವ, ಪುಣ್ಯ ಕರ್ಮಗಳಾಗಿ ಇರುವ ಜೀವಿಗಳಿಗೆ ಲೆಕ್ಕವಿಲ್ಲ. ಇವರು ಇತರತ್ರ ಮನಸ್ಸು ಹರಿಸದೆ ಇದ್ದರೆ ಮನಸ್ಸು ಆ ಮಟ್ಟಿಗೆ ಶುದ್ಧವಾಗಿರಬಹುದು. ಕೆಟ್ಟ ನೀರು ನದಿಗೆ ಹರಿದು ಬಂದು ಕೂಡಿಕೊಂಡಾಗ ಸ್ವಯಂ ಸ್ವಚ್ಛಗೊಳಿಸುವ ನದಿ ನೀರಿನ ವೇಗದಿಂದ ಮಲಿನತೆಯು ಸ್ವಚ್ಛವಾಗುವಂತೆ, ಜಪ ಸ್ರೋತದಿಂದ ಮನದಲ್ಲಿ ನುಸುಳಿದ ಮಲಿನತೆಯು ನಿರ್ಮೂಲವಾಗುತ್ತದೆ.

ಸ್ತುತಿ :

ಆ. ಬೊಂಬೆಯಾಟದವನು ಬೊಂಬೆಯಾಡಿಸುವನು.
ಧರಣಿ ಜನರ ನೋಟದೆಲ್ಲೆ ಮೀರಿ.
ತಾನು ಮರೆಯೊಳಿದ್ದು ದೈವವನಾಡಿಸುವ.
ವಿಶ್ವದಾಭಿರಾಮ ಕೇಳು ವೇಮ.

ಪರಮಾತ್ಮನು ಇಂದ್ರಿಯಗಳಿಗೆ ಗೋಚರನಲ್ಲ. ಮನಸ್ಸಿಗೂ ಗೋಚರನಲ್ಲ. ಹೀಗೆ ಅವನು ಅವ್ಯಕ್ತನಾಗಿದ್ದು, ಕೇವಲ ಸಾಕ್ಷಿಯಾಗಿದ್ದಾನೆ. ಹೀಗಿದ್ದುಕೊಂಡು ವಿಧಿ ನಿಯಮಾನುಸಾರ ದೈವದ ಕ್ರಿಯೆಗಳು ನಡೆಯುವಂತೆ ನೋಡಿಕೊಳ್ಳುತ್ತಾನೆ. ಅವನ ಲೀಲೆಗೆ ಬೊಂಬೆಯಾಟವನ್ನು ಹೋಲಿಸಬಹುದು. ಸೂತ್ರಧಾರ ಮರೆಯಲ್ಲಿ ಕುಳಿತು ಸೂತ್ರವನ್ನು ಅಂದರೆ ದಾರವನ್ನು ಎಳೆದು ಬಿಡುವ ಮೂಲಕ ಬೊಂಬೆಯ ಅಂಗಾಂಗಗಳ ಚಲನೆಯನ್ನು ಪ್ರದರ್ಶಿಸುತ್ತಾನೆ. ಆದರೆ ತಾನು ಮಾತ್ರ ಪ್ರೇಕ್ಷಕರಿಂದ ಮರೆಯಾಗಿರುತ್ತಾನೆ.

ಮೂರ್ತಿ ಪೂಜೆ :

ಇನ್ನು ಮೂರ್ತಿ ಪೂಜೆಯನ್ನು ಕುರಿತು ವೇಮನ ಯೋಗಿಗಳ ನಿಲುಮೆಯನ್ನು ಈಗಾಗಲೇ ಸಾಕಷ್ಟು ಪದ್ಯಗಳ ಮೂಲಕ ತಿಳಿಸಿದ್ದೇವೆ.

ಆ. ಕಲ್ಲು ಬಸವನಿಗತಿ ರಂಗು ಪೂಜಾರ್ಚನ.
ಉಳುವ ಬಸವ ಕಂಡು ಉಗಿಯುತಿಹರು.
ಬಸವ ಭಕುತರೆಷ್ಟು ಪಾಪಿಯರಿತು ನೋಡು.
ವಿಶ್ವದಾಭಿರಾಮ ಕೇಳು ವೇಮ.

ಬಸವ ಎಂದರೆ ವೃಷಭ. ವೃಷಭವು ಶಿವನ ವಾಹನ. ಬಸವ ನಂದಿ ಎನಿಸಿದೆ. ಆ ನಂದಿಯು ಮಂಗಳಮಯ ಶಿವನಿಗೆ ಅಭಿಮುಖವಾಗಿರುತ್ತದೆ. ಆನಂದಮಯ ಕೋಶದ ಆಚೆಗೆ ಮಂಗಳಮಯ ಶಿವ ಸನ್ನಿಧಿಯಷ್ಟೇ. ಈ ತಾತ್ತ್ವಿಕ ವಿಚಾರವನ್ನು ಮೂರ್ತಗೊಳಿಸಿ ದೇವಾಲಯಗಳಲ್ಲಿ ಈಶ್ವರ ಲಿಂಗದೆದುರು ನಂದಿ ವಿಗ್ರಹವನ್ನು ನಿಲ್ಲಿಸುತ್ತಾರೆ. ಈ ನಂದಿ ಇಲ್ಲವೆ ಬಸವನನ್ನು ರಂಗು ರಂಗಾಗಿ ಪೂಜಿಸುತ್ತಾರೆ, ಅರ್ಚಿಸುತ್ತಾರೆ. ಆದರೆ ಸಜೀವ, ಹೊಲ ಉಳಲು ಹೂಡುವ ಬಸವನನ್ನು ಉಗಿಯುತ್ತಾರೆ. ಗುದ್ದುತ್ತಾರೆ. ಇದನ್ನು ಕಂಡರೆ ಬಸವ ಭಕ್ತರು ಎಂಥ ಪಾಪಿಗಳು ! ಎನಿಸುವುದಿಲ್ಲವೇ ?

ಆ. ಗಿರಿಯು ಹಿರಿಯ ಮಾವ ಗಿರಿ ಕುವರಿ ವರಸತಿ.
ಗಿರಿಯೆ ನೀರ ಬಿಲ್ಲು ; ಗಿರಿಯೆ ಗೇಹ.

ಗಿರಿಯಂಥ ದೊರೆಯು ಗುಂಡುಗಲ್ಲಾದನೆ ?
ವಿಶ್ವದಾಭಿರಾಮ ಕೇಳು ವೇಮ.

ಪರ್ವತ ರಾಜನು ಶಿವನ ಹಿರಿಯ ಮಾವನೆಂದು ಪುರಾಣಗಳ ಕಲ್ಪನೆ. ಪರ್ವತ ರಾಜನ ಮಗಳಾದ ಪಾರ್ವತಿಯು ಶಿವನ ಮಡದಿ. ಶಿವನಿಗೆ ಮೇರು ಪರ್ವತವೇ ವೀರ ಬಿಲ್ಲೆನಿಸಿತು. ಅವನಿಗೆ ವಾಸಕ್ಕೆ ಮನೆಯಾಗಿ ಕೈಲಾಸ ಪರ್ವತವು ಹೆಸರಿಸಲ್ಪಟ್ಟಿತು. ಅಂತೂ ಅರುಣಾಚಲವೇ ಶಿವನೆನಿಸಿತು. ಕೊನೆಗೆ ಗಿರಿಯಂಥ ದೊರೆಯು ಮೂಢ ಭಕ್ತರ ಕಲ್ಪನೆಯಲ್ಲಿ ಗ್ರಾಮ ಲಿಂಗವೂ ಇಷ್ಟಲಿಂಗವೂ ಆಯಿತು. ಮೂರ್ತಿ ಪೂಜೆಗೆ ತೊಡಗುವವರು ಆ ಸರ್ವ ವ್ಯಾಪ್ತನಾದ, ಸರ್ವಶಕ್ತನಾದ, ಸರ್ವಜ್ಞನಾದ, ಕಲ್ಯಾಣಕರಿಯಾದ ಮಂಗಳಮಯನಾದ, ಮಹಾದೇವನಾದ ಶಿವನನ್ನು ತಿಳಿಯುವಲ್ಲಿ ಇಂಥ ಮೂರ್ತಿ ಕಲ್ಪನೆಗಳು ಹೇಗೆ ಸಹಾಯ ಮಾಡಬಲ್ಲವು ?

ಪ್ರತೀಕ ಇಲ್ಲವೆ ಪ್ರತಿಮಾ ಪೂಜೆಯನ್ನು ಕುರಿತು, ಸ್ವಾಮಿ ವಿವೇಕಾನಂದರು ಏನು ಹೇಳುತ್ತಾರೆ ? ''ಪ್ರತೀಕದ ಪೂಜೆಗೆ ಸಂಬಂಧಿಸಿದ ವಿಚಾರಗಳೇ ಪ್ರತಿಮಾ ಪೂಜೆಗೂ ಅನ್ವಯಿಸುತ್ತವೆ. ಅಂದರೆ, ಪ್ರತಿಮೆಯು ಯಾವುದೊಂದು ದೇವತೆ ಇಲ್ಲವೆ ಸಂತನದಾಗಿದ್ದರೆ, ಅದರ ಪೂಜೆಯು ಭಕ್ತಿಯ ಪರಿಣಾಮವಲ್ಲ. ಹಾಗಾಗಿ ಅದು ಮುಕ್ತಿಗೂ ಕರೆದೊಯ್ಯದು. ಪ್ರಪಂಚದ ಪ್ರಮುಖ ಧರ್ಮಗಳಾದ ವೇದಾಂತ ಧರ್ಮ ಮತ್ತು ಬೌದ್ಧ ಧರ್ಮಗಳು ಮತ್ತು ಕೆಲವು ಕ್ರೈಸ್ತ ಶಾಖೆಗಳು ವಿಗ್ರಹಗಳನ್ನು ಮುಕ್ತವಾಗಿ ಬಳಸುತ್ತಿವೆ. ಆದರೆ ಮಹಮ್ಮದೀಯ ಮತ್ತು ಪ್ರೊಟೆಸ್ಟಂಟ ಧರ್ಮಗಳೆರಡು ಮಾತ್ರ ಇಂಥ (ಮೂರ್ತಿ ಪೂಜೆಯ) ನೆರವನ್ನು ತಿರಸ್ಕರಿಸುತ್ತಿವೆ. ಆದರೂ ಮಹಮ್ಮದೀಯರು ತಮ್ಮ ವೀರರ ಮತ್ತು ಹುತಾತ್ಮರ ಗೋರಿಗಳನ್ನು ಪ್ರತಿಮೆಗಳಂತೆಯೇ ಭಾವಿಸುತ್ತಾರೆ. ಮತ್ತು ಪ್ರೊಟೆಸ್ಟಂಟರು ವರ್ಷದಿಂದ ವರ್ಷಕ್ಕೆ ಅಧ್ಯಾತ್ಮದಿಂದ ದೂರ ದೂರ ಸರಿಯುತ್ತ ಯಾವ ಹಂತ ತಲುಪಿಸಿರುವರೆಂದರೆ ಕೆಲವು ಅಗ್ರಗಾಮಿ ಪ್ರೊಟೆಸ್ಟಂಟರು ಮತ್ತು ಅಗಸ್ಟ ಕಾಮ್ಟೆ ಅಂದರೆ ಅಜ್ಞೇಯತಾವಾದಿಗಳಲ್ಲಿ (ದೇವರ ವಿಷಯದಲ್ಲಿ ಏನನ್ನೇ ಆಗಲಿ ಖಚಿತವಾಗಿ ತಿಳಿಯಲು ಸಾಧ್ಯವಿಲ್ಲವೆಂಬ ನಂಬುಗೆಯುಳ್ಳವರು) ಅಂತರವೇ ಉಳಿದಿಲ್ಲ. ಅವರು ಕೇವಲ ನೀತಿವಾದವನ್ನು ಬೋಧಿಸುತ್ತಾರೆ. ಇನ್ನು ಕ್ರೈಸ್ತ ಮತ್ತು ಮಹಮ್ಮದೀಯ ಧರ್ಮಗಳಲ್ಲಿ ಮೂರ್ತಿ ಪೂಜೆಯೇನಾದರೂ ಉಳಿದಿದ್ದರೆ, ಅದು ಪ್ರತೀಕ ಇಲ್ಲವೆ ಪ್ರತಿಮೆಗಳನ್ನೇ ನೇರವಾಗಿ ಪೂಜಿಸುವ ಪ್ರಕಾರದಲ್ಲಿಯೇ ಹೊರತು ದೇವರ ದೃಷ್ಟಿ ಸೌಕರ್ಯ ರೂಪದಲ್ಲಿ ಅಲ್ಲ. ಆದ್ದರಿಂದ ಅದು ಹೆಚ್ಚಿಂದರೆ, ವ್ರತ ನೇಮಗಳ ಕರ್ಮದ ರೂಪವೇ ಹೊರತು ಅದರಿಂದ ಭಕ್ತಿಯೂ ಕುದುರದು, ಮುಕ್ತಿಯೂ ಲಭಿಸದು. ಇಂಥ ಮೂರ್ತಿ ಪೂಜೆಯ ಪ್ರಕಾರಗಳಲ್ಲಿ ಜೀವಿಯ ನಿಷ್ಠೆಯು ಈಶ್ವರನಿಗಿಂತಲೂ ಇತರ ವಸ್ತುಗಳಿಗೆ ಸಂಬಂಧಿಸಿರುತ್ತದೆ. ಆದ್ದರಿಂದ ಪ್ರತಿಮೆ ಇಲ್ಲವೆ, ಗೋರಿ, ಇಲ್ಲವೆ ಮಂದಿರಗಳ ಬಳಕೆಯು ಜಡದ ಮೂರ್ತಿ ಪೂಜೆಯೆನಿಸುವುದೇ ಹೊರತು ಬೇರೇನಲ್ಲ. ಶ್ರುತಿಗಳಲ್ಲಿ ಪ್ರಸ್ತಾಪಿತವಾದ ಪ್ರತೀಕಗಳೊಂದಿಗೆ ಪುರಾಣಗಳಲ್ಲಿ ಮತ್ತು ತಂತ್ರಗಳಲ್ಲಿ ಇನ್ನೂ ಬೇರೆ ಬೇರೆ ವಿಧದ ಪ್ರತೀಕಗಳಿವೆ. ಈ ಬಗೆಯ ಪ್ರತೀಕ ಪೂಜೆಯಲ್ಲಿ ಪಿತೃ ಪೂಜೆ ಮತ್ತು ದೇವತಾ ಪೂಜೆಗಳ ವಿವಿಧ ಪ್ರಕಾರಗಳನ್ನು ಸೇರಿಸಬಹುದು''.

ಪಿತೃ ಪೂಜೆ ಮತ್ತು ದೇವತಾ ಪೂಜೆಯ ಇತಿಮಿತಿಯನ್ನು ಕುರಿತು ಹಲವು ಪದ್ಯಗಳನ್ನು ಈಗಾಗಲೇ ಪ್ರಸ್ತಾಪಿಸಲಾಗಿದೆ. ಭಕ್ತಿಗೂ ಈ ವಿಧದ ಪೂಜೆಗೂ ಸಂಬಂಧವಿದೆಯೇ ? ಹೇಗೆ ?

ಎಂಬ ಬಗ್ಗೆ ಸ್ವಾಮಿ ವಿವೇಕಾನಂದರ ಅಭಿಮತವನ್ನು ಇನ್ನಷ್ಟು ಅರಿಯುವಾ :

"ಈ ಈಶ್ವರನನ್ನು (ಸಗುಣ ಬ್ರಹ್ಮವನ್ನು), ಕೇವಲ ಅವನನ್ನು ಮಾತ್ರ ಪೂಜಿಸುವುದು ಭಕ್ತಿ ಎನಿಸುತ್ತದೆ. ಆದರೆ ದೇವತಾ, ಪಿತೃ ಇಲ್ಲವೆ ಇನ್ನಾವ ಸತ್ತೆಯನ್ನು ಪೂಜಿಸುವುದು ಭಕ್ತಿಯೆನಿಸದು. ವಿವಿಧ ದೇವತೆಗಳ ವಿವಿಧ ಪ್ರಕಾರದ ಪೂಜೆಯನ್ನು ವ್ರತ ಕರ್ಮಗಳಲ್ಲಿ ಎಣಿಸಬಹುದಷ್ಟೇ. ಇದು ಪೂಜಕನಿಗೆ ದಿವ್ಯ ಭೋಗದ ರೂಪದಲ್ಲಿ ಫಲ ನೀಡಬಹುದಷ್ಟೇ ಹೊರತು ಭಕ್ತಿಯನ್ನೀಯದು, ಮುಕ್ತಿಗೆ ಕರೆದೊಯ್ಯದು. ಇಲ್ಲಿ ಒಂದು ವಿಷಯವನ್ನು ಕುರಿತು ಬಹಳ ಎಚ್ಚರಿಕೆಯಿಂದಿರಬೇಕು. ಅದೆಂದರೆ, ಕೆಲವು ಪ್ರಸಂಗಗಳಲ್ಲಿ ಅತ್ಯುನ್ನತ ತತ್ತ್ವಾದರ್ಶವಾದ ಪರಬ್ರಹ್ಮವನ್ನು, ಪ್ರತೀಕ ಪೂಜೆಯ ನೆಪದಲ್ಲಿ, ಪ್ರತೀಕದ ಮಟ್ಟಕ್ಕೆ ಇಳಿಸಬಹುದಾಗಿದೆ. ಮತ್ತು ಪ್ರತೀಕವನ್ನೇ ಪೂಜಕನ ಆತ್ಮವೆಂದೋ ಇಲ್ಲವೆ ಅಂತರ್ಯಾಮಿನ್ ಎಂದೋ ಗ್ರಹಿಸಲಾಗುತ್ತದೆ. ಆಗ ಪೂಜಕನು ಪೂರ್ಣವಾಗಿ ಹಾದಿ ತಪ್ಪುತ್ತಾನೆ. ಏಕೆಂದರೆ ಯಾವ ಪ್ರತೀಕವೂ ನಿಜವಾಗಿ ಪೂಜಕನ ಆತ್ಮವಾಗದು".

ಆ. ದೇವ ಪೂಜೆ ಗೆಯ್ಕೆ ದಿವ್ಯ ಭೋಗವುಂಟು.
ತತ್ತ್ವವರಿಯುವವನು ದೈವ ಸಮನು.
ಏನು ಇರದ ನರಗೆ ಯಾರ ಗತಿಯು ಇಲ್ಲ.
ವಿಶ್ವದಾಭಿರಾಮ ಕೇಳು ವೇಮ.

ಇಷ್ಟ-ನಿಷ್ಠೆ :

ಭಕ್ತನಾದವನು ನೆನಪಿನಲ್ಲಿಡಬೇಕಾದ ಸಂಗತಿಯೊಂದಿದೆ. ಮತಗಳು, ಅನೇಕವಿರುವಂತೆ ಗ್ರಹಿಕೆಗಳೂ ಅನೇಕವಾಗುತ್ತವೆ. 'ಏಕಂ ಸತ್ ವಿಪ್ರಾಃ ಬಹುಧಾ ವದಂತಿ'. ಇರುವ ಸತ್ಯವು ಒಂದೇ. ಆದರೆ ಪಂಡಿತರು ಅದನ್ನು ಬಹುವಾಗಿ ಹೇಳುತ್ತಾರೆ.

ಆ. ಟೀಕೆ ಬರೆಯುವಂಥನೇಕ ಹಿರಿಯರೆಲ್ಲ,
ಲೋಕಕೆ ಹೇಳಿದರು ; ಏಕ ದೇವ.
ಕಾಗೆಯಂಥ ಜನರು ಕಾಣರಿದರ ಭಾವ.
ವಿಶ್ವದಾಭಿರಾಮ ಕೇಳು ವೇಮ.

ಶ್ರುತಿಗಳಲ್ಲಿ ದೇವರು ಒಬ್ಬನೇ ಎಂದು ಹೇಳಲಾಗಿದೆ. ಅದನ್ನೇ ಶ್ರುತಿಗಳಿಗೆ ಭಾಷ್ಯ ಬರೆದ ಹಿರಿಯರೂ ಎತ್ತಿ ಹೇಳಿದ್ದಾರೆ. ಆದರೆ ಕಾಗೆಯು ತನ್ನ ಬಳಗವನ್ನು ಸೇರಿಸುವಂತೆ, ಜನ ಮಂದೆಯನ್ನು ಕೂಡಿಸುವ ಜನರು ಈ ಏಕದೇವನ ಗ್ರಹಿಕೆಯ ಹಿಂದಿನ ಭಾವವನ್ನು ಕಾಣದಾಗಿದ್ದಾರೆ.

ಆ. ಏಕಂ ಬ್ರಹ್ಮವು ನಿತ್ಯವು.
ವೈಕಲ್ಪಿತವಾದಂತಹ ಮಸ್ತುಗಳೆಲ್ಲಂ.
ಏಕತ್ವದೊಳಗೆ ಅರಿತೊಡೆ,
ಶೋಕವಿರದಂಥ ಮುಕ್ತಿಯು, ಸುಲಭವು, ವೇಮಾ.

ಬ್ರಹ್ಮವು ಏಕಮೇವಾದ್ವಿತೀಯವಾಗಿದೆ. ಅದು ಅಜವಾಗಿದೆ. ಅಮರವಾಗಿದೆ. ನಿತ್ಯವಾಗಿದೆ. ಇಚ್ಛಾನುಸಾರ ಗ್ರಹಿಸುವ ಎಲ್ಲ ವಸ್ತುಗಳು ಏಕದಲ್ಲಿಯೇ ಅಡಗಿವೆಯೆಂದು ಅರಿತರೆ, ಪ್ರಪಂಚದ ಜಂಜಡದಿಂದ ಮುಕ್ತಿಯು ಸುಲಭವೂ ಆಗಿದೆ. ಶೋಕರಹಿತವೂ ಆಗಿರುತ್ತದೆ.

ಆ. ಓದನೋದಲೇಕೆ ? ಸನ್ಯಾಸವು ಏಕೆ ?
ಷಣ್ಮತದಲಿ ಸಿಕ್ಕು ಸಾಯಲೇಕೆ ?
ಹರನ ಭಜನೆ ಗೆಯ್ದು, ಆತ್ಮದಿಹುದನು ತಿಳಿ.
ವಿಶ್ವದಾಭಿರಾಮ ಕೇಳು ವೇಮ.

ಓದಬೇಕು. ಓದಿನರ್ಥ ತಿಳಿದು ಓದಬೇಕು. ಅರ್ಥ ತಿಳಿಯದೆ ಬರೀ ಗಿಳಿಯೋದು ಓದುವುದೇಕೆ ? ಸನ್ಯಾಸಿಯಾಗಬೇಕು. ಸರ್ವವನ್ನೂ ಪರಮಾತ್ಮನಲ್ಲಿ ನ್ಯಾಸವಿಡಬೇಕು. ಹಾಗೆ ಮಾಡದೆ ಬರೀ ವೇಷ ಭೂಷಣದಿಂದ ಮೆರೆಯುತ್ತ ತಾನು ಹೆಚ್ಚಿನವನೆಂಬ ಗರ್ವ ತುಂಬಿದ ಸನ್ಯಾಸವು ಏಕೆ ? ವೇದವನ್ನು ಮನ್ನಿಸುವ ಆರು ಮತಗಳುಂಟು. ಅವುಗಳೆಂದರೆ, ಶೈವ, ವೈಷ್ಣವ, ಶಕ್ತಿ, ಗಾಣಪತ್ಯ, ಕೌಮಾರ ಮತ್ತು ಸೌರ. ಈ ಮತಗಳಲ್ಲಿ ಆಯಾ ದೇವತೆಯೇ ಪರಮನೆಂದು ಗ್ರಹಿಸುತ್ತಾರೆ. ಹಾಗಾಗಿ ಭಕ್ತನು ಯಾವ ಏಕ ದೇವನನ್ನು ಉಪಾಸಿಸಬೇಕು ? ಎಂಬ ಗೊಂದಲದಲ್ಲಿ ಬೀಳುತ್ತಾನೆ. ಆದ್ದರಿಂದ ಷಣ್ಮತದಲ್ಲಿ ಸಿಲುಕಿ ಸಾಯುವುದೇಕೆ ? ಮನಸ್ಸನ್ನು ಹರಣ ಮಾಡುವ ಹರನ ಭಜನೆಯನ್ನು ಅಂದರೆ ಸೇವೆಯನ್ನು ಮಾಡಿ, ಆತ್ಮದಲ್ಲಿರುವ ಚೈತನ್ಯವನ್ನು ತಿಳಿ.

ಆ. ದರ್ಶನಗಳೊಳು ಸಲೆ ಷಣ್ಮತಂಗಳೊಳಗೆ,
ಧರೆಯ ವರ್ಣಾಶ್ರಮ ಬಿಡದೆಂದಿಗು.
ಬರಿದೆ ತಿರುಗುವನು ಧರೆಯೊಳಜ್ಞಾನಿ.
ವಿಶ್ವದಾಭಿರಾಮ ಕೇಳು ವೇಮ.

ವೈದಿಕ ದರ್ಶನಗಳು ಆರು. ಕಪಿಲದ ಸಾಂಖ್ಯ, ಪತಂಜಲಿಯ ಯೋಗ, ಗೌತಮರ ನ್ಯಾಯ, ಕಣಾದರ ವೈಶೇಷಿಕ, ಜೈಮಿನಿಯ ಪೂರ್ವ ಮೀಮಾಂಸೆ, ಬಾದರಾಯಣ ವ್ಯಾಸರ ಉತ್ತರ ಮೀಮಾಂಸೆ. ವೈದಿಕ ಮತಗಳ ಸಂಖ್ಯೆಯೂ ಆರು. ಅವುಗಳೆಂದರೆ ಶೈವ, ವೈಷ್ಣವ, ಶಾಕ್ತ, ಗಾಣಪತ್ಯ, ಕೌಮಾರ ಹಾಗೂ ಸೌರ. ಧರೆಯಲ್ಲಿ ಜೀವನದಲ್ಲಿ ಪಾಲಿಸುವ ಆಶ್ರಮಗಳು ನಾಲ್ಕು. ಅವುಗಳೆಂದರೆ ಬ್ರಹ್ಮಚರ್ಯೆ, ಗೃಹಸ್ಥ, ವಾನಪ್ರಸ್ಥ ಮತ್ತು ಸನ್ಯಾಸ. ಇವುಗಳಲ್ಲಿ ಸಾಕಷ್ಟು ಭೇದಗಳಿವೆ. ಯಾವನೊಬ್ಬನು ಇವುಗಳನ್ನು ಬಿಡದೆ ಇಲ್ಲವೆ ಅತಿಶಯಿಸದೆ ಆತ್ಮ ಜ್ಞಾನವನ್ನು ಪಡೆಯನು. ಆತ್ಮಜ್ಞಾನಿಯಾದ ಸದ್ಗುರುವು ದೊರೆತ ಮೇಲೆ ಇವುಗಳನ್ನು ಬಿಡದೆ ಇದ್ದರೆ ಅವನು ಅಜ್ಞಾನಿಯೇ ಸರಿ.

ಏಕೆಂದರೆ ಆರು ಸಾವಿರ ವರ್ಷ ಮೊದಲು ಆರ್ಯರು ಭಾರತದಲ್ಲಿ ಬರಹತ್ತಿದ್ದರು. ಬೇರೆ ಬೇರೆ ಗುಂಪುಗಳಲ್ಲಿ ಬೇರೆ ಬೇರೆ ಪ್ರದೇಶಗಳಿಂದ ಬರಹತ್ತಿದ್ದರು. ಅವರಲ್ಲಿ ಯಾವುದೇ ವಿಧಿಬದ್ಧವಾದ ಧರ್ಮ ಬೋಧೆಯಾಗಲಿ, ಇಲ್ಲವೆ ಧರ್ಮ ಚೇತನವಾಗಲಿ ಇಲ್ಲವೆ ಧರ್ಮ ಏಷಣವಾಗಲಿ ಇರಲಿಲ್ಲ. ಒಬ್ಬೊಬ್ಬ ಋಷಿಯು ಒಂದೊಂದು ರೀತಿಯ ಮಾತನಾಡಿದ್ದನಷ್ಟೇ.

ವೇದಾಃ ವಿಭಿನ್ನಃ ಸ್ಮೃತಿಯೋವಿಭಿನ್ನಃ
ನೈಕಃ ಮುನಿರ್ಯಸ್ಯ ಮತಂ ನ ಭಿನ್ನಂ. ಅಂದರೆ,

ವೇದಗಳು ವಿಭಿನ್ನವಾಗಿದ್ದವು. ಸ್ಮೃತಿಗಳೂ ವಿಭಿನ್ನವಾಗಿದ್ದವು. ತಮ್ಮ ತಮ್ಮ ಮತಗಳಲ್ಲಿ ಭಿನ್ನತೆಯಿಲ್ಲದ ಋಷಿ ಮುನಿಗಳಾರೂ ಇರಲಿಲ್ಲ.

ಆದ್ದರಿಂದ, ತನ್ನ ಸದ್ಗುರುವಿನ ಬೋಧೆಯನ್ನು ಮಾತ್ರ ಶ್ರದ್ಧೆ ವಹಿಸಿ ಅನುಸರಿಸಬೇಕು. ಇನ್ನು ಪ್ರಾಪಂಚಕರಿಗೆ ಅನ್ವಯಿಸಬಹುದಾದ ಆಶ್ರಮ ಧರ್ಮವು ಅತ್ಯಾಶ್ರಮಿಗಳಾದ ಜ್ಞಾನಿಗಳಿಗೆ ಅನ್ವಯಿಸುವುದಿಲ್ಲ.

ಆ. ಹಸುಗಳಂದ ಬೇರೆ ಹಾಲು ಎಲ್ಲ ಒಂದೆ.
ಪುಷ್ಪ ಜಾತಿ ಬೇರೆ ಪೂಜೆಯೊಂದೆ.
ದರ್ಶನಗಳು ಬೇರೆ, ದೈವವೆಂಬುದೊಂದೆ.
ವಿಶ್ವದಾಭಿರಾಮ ಕೇಳು ವೇಮ.

ಆ. ಮತವು ಭೇದವೆಲ್ಲ ಮಾಯೆ ಸಂಸಾರವು.
ದಾರಿ ತಿಳಿಯಲಾರ ತಮವ ಹೊಂದಿ.
ದಾರಿ ತಿಳಿಯುವವನೆ ಧನ್ಯನಾದನಲ್ಲ.
ವಿಶ್ವದಾಭಿರಾಮ ಕೇಳು ವೇಮ.

ಸತ್ ಒಂದೇ. ವೇದ ಪಾಠಕರು ಬಹುವಾಗಿ ಹೇಳುತ್ತಾರೆ. ಅವರವರ ಮತಗಳಲ್ಲಿ ಭೇದವಿದೆ. ಇದೆಲ್ಲ ಸಂಸಾರದ ಮಾಯೆಯಂತೆ ತೋರಿಕೆಯಲ್ಲಿದೆ. ಜ್ಞಾನಿಗೆ ಯಾವ ಭೇದವೂ ಇಲ್ಲ. ಅಜ್ಞಾನಾಂಧಕಾರದಲ್ಲಿ ಉಳಿದರೆ ದಾರಿ ಕಾಣದು. ಯಾರು ಏಕದ ದಾರಿಯನ್ನು ತಿಳಿಯುವನೋ ಅವನು ಧನ್ಯನಾಗುತ್ತಾನೆ.

ಆ. ಮತಗಳಿಷ್ಟೆ ಇರಲಿ ; ನಿತ್ಯವಾವುದಿಲ್ಲ.
ನಿತ್ಯ ಕರ್ಮವಾಯ್ತು, ನಿಖಿಲ ಜಗದಿ.
ಅಖಿಲ ಮತಗಳಲ್ಲಿ ಅರಿಯೆ ಒಂದು ಇಲ್ಲ.
ವಿಶ್ವದಾಭಿರಾಮ ಕೇಳು ವೇಮ.

ಎಷ್ಟೋ ಋಷಿ ಮುನಿಗಳು ಕಾಲ ಕಾಲಕ್ಕೆ ತಮ್ಮ ತಮ್ಮ ಮತಗಳನ್ನು ಮಂಡಿಸಿದ್ದಾರೆ. ಆದರೆ ಯಾವ ಮತವೂ ನಿತ್ಯವಾಗಿ ಉಳಿದಿಲ್ಲ. ನಿತ್ಯವಾಗಿ ಉಳಿದಿರುವುದೆಂದರೆ ಆಯಾ ಮತದ ಪೂಜಾವಿಧಿ, ಕಂದಾಚಾರ, ಕರ್ಮಗಳಷ್ಟೇ. ಜಗತ್ತಿನಲ್ಲಿ ಎಲ್ಲಿ ನೋಡಿದರೂ ಇದೇ ಹಾಡು. ಎಲ್ಲ ಮತಗಳಲ್ಲಿ ಕೆಲವು ನಶಿಸಿ ಹೋಗಿವೆ. ಕೆಲವು ಮಾರ್ಪಾಟಾಗಿವೆ. ತಿಳಿದು ನೋಡಿದರೆ, ಮೂಲ ಸ್ವರೂಪದಲ್ಲಿ ಯಾವೊಂದೂ ಉಳಿದಿಲ್ಲ.

ಕಂ. ಮೊದಲು ಬಿಡದೆ ತನ್ನ ಮತವ,
ತುದಿಗಾವ ಮತವೆ ಇದ್ದರು, ದೂಷಿಸದಿರುತಾ
ಕದಲದೆ, ಕೋರಿಕೆ ಕೋರದೆ,
ಮುದದಿಂದ ಚರಿಸುತ್ತಿಪ್ಪನು, ಮುಕ್ತನು, ವೇಮಾ.

ಸದ್ಗುರುವು ಬೋಧಿಸಿದ ಮತವನ್ನೇ ಸ್ವೀಕರಿಸಿ, ಆ ತನ್ನ ಮತವನ್ನು ಬಿಡದೆ, ಕೊನೆಗೆ ಯಾವುದೇ ಮತದ ಸಂಪರ್ಕ ಬಂದರೂ ಅದನ್ನು ದೂಷಿಸಬೇಕಾಗಿಲ್ಲ. ಬೇರೆಯವರೂ ತಮ್ಮ ತಮ್ಮ ಮನಸ್ಸಿನ ಸ್ತರಗಳಿಗೆ ತಕ್ಕಂತೆ ನಡೆಯುತ್ತಾರಷ್ಟೇ. ಬಹಳವಾದರೆ ಅವರಿಗೆ ತಿಳಿ ಹೇಳಬಹುದು. ತಾನು ಅನ್ಯರನ್ನು ಕಂಡು ಮನಸ್ಸಿನಲ್ಲಿ ಕದಲಬಾರದು. ದೇವರಲ್ಲಿ ಶರಣಾಗಿ ಮನಸ್ಸಿನ ಕೋರಿಕೆಗಳನ್ನು ಸಲ್ಲಿಸಬಾರದು. ಪ್ರಪಂಚದ ವಸ್ತುಗಳ ವಿಚಾರವನ್ನೇ ಮನಸ್ಸಿನಲ್ಲಿ ತರಕೂಡದು. ಪೂರ್ವ ಕರ್ಮಾನುಸಾರ ಪ್ರಾಪ್ತಿ ಇರುವುದು ಲಭಿಸುತ್ತದೆ. ಇಲ್ಲದುದು ಲಭಿಸದು. ಇದನ್ನು ತಿಳಿದು ಮುದದಿಂದ ಬಾಳುವವನೇ ಧನ್ಯನೆನಿಸುತ್ತಾನೆ.

ಜಗತ್ತನ್ನೆಲ್ಲ ಆಳವಾಗಿ ಪ್ರೀತಿಸುವ, ಸಕಲದ ಬಗೆಗೆ ಸಹಾನುಭೂತಿ ಹೊಂದಿದ ಜನರು ಎಲ್ಲಿಡೆ ತುಂಬಿರುವರೇನು ? ಇಲ್ಲ. ಇಂಥ ಜನರು ಅತಿ ವಿರಳ ; ತುಂಬಾ ಅಪರೂಪ, ಆದರೂ ಸಹ, ಬಹು ಸಂಖ್ಯೆಯ ಮಾನವ ಜೀವಿಗಳನ್ನು, ಪ್ರೇಮದ ಆಳ ಮತ್ತು ವಿಸ್ತಾರದ ಆಯಾಮಗಳಲ್ಲಿ ತರಬೇತುಗೊಳಿಸುವುದು ಕಾರ್ಯಸಾಧುವಾಗಿದೆ. ಇದನ್ನು ಇಷ್ಟ ನಿಷ್ಠೆಯನ್ನು ಬೋಧಿಸುವ ಮೂಲಕ ಅಂದರೆ ಸ್ವೀಕೃತ ಆದರ್ಶ ಕುರಿತು ಅಚಲ ಭಕ್ತಿಯ ಬೋಧನೆಯ ಮೂಲಕ ಸಾಧಿಸಬಹುದು.

ಒಳ್ಳೆಯ ಸಜ್ಜನರು ಜಗತ್ತಿನಲ್ಲಿ ಸಿಗುವುದು ದುರ್ಲಭ. ಕಾನನದಲ್ಲಿ ಅನೇಕ ಜಾತಿಯ ಮರಗಳಿದ್ದರೂ ಗಂಧದ ಮರಗಳಿರುವುದು ಕಡಿಮೆ. ಕರ್ನಾಟಕದ ಅರಣ್ಯಗಳಲ್ಲಿ ಮಾತ್ರ ಗಂಧದ ಮರಗಳು ಇರುತ್ತವೆ. ಒಂದು ಗಂಧದ ಮರವಿದ್ದರೂ ಆ ಕಾಡಿನ ಮೂಲ್ಯ ಹೆಚ್ಚಾಗುತ್ತದೆ.

ಆ. ಕುಲದ ಒಳಗೆ ಯೋಗ್ಯ ಗುಣವಂತನಿರ್ದೊಡೆ,
ಕುಲವು ಶೋಭಿಸುವುದು ಗುಣಗಳಿಂದ.
ಕಾನನದಿ ಮೆರೆಯುವ ಗಂಧದ ಗಿಡದಂತೆ.
ವಿಶ್ವದಾಭಿರಾಮ ಕೇಳು ವೇಮ.

ಇನ್ನು ಅನೇಕ ಜನರು ಭಕ್ತರೆಂದು ಹೇಳುತ್ತ ತಮ್ಮ ತಮ್ಮ ಸ್ವಾರ್ಥ ಸಾಧಿಸಿಕೊಳ್ಳುವವರಿರುತ್ತಾರೆ. ಅವರಲ್ಲಿ 'ಸರ್ವೇ ಜನಾಃ ಸುಖಿನೋ ಭವಂತು. ಸರ್ವೇ ಸಂತು ನಿರಾಮಯಾಃ' ಅಂದರೆ ಸರ್ವರೂ ಸುಖಿಗಳಾಗಲಿ ; ಸರ್ವರೂ ಆರೋಗ್ಯವಂತರಾಗಲಿ, ಎಂದು ಹಾರೈಸುವ ಪುಣ್ಯ ಜೀವಿಗಳಿರುವುದು ವಿರಳ. ಅವರು ಕಾನನದಲ್ಲಿಯ ಗಂಧದ ಮರಗಳಂತೆ.

ಆ. ಉಪ್ಪು ಕಪ್ಪುರಗಳಿಗೆ ಒಂದೆ ಹೋಲಿಕೆಯಿದೆ.
ನೋಡೆ ನೋಡೆ ರುಚಿಯ ಜಾಡು ಬೇರೆ.
ಪುರುಷರಲ್ಲಿ ಪುಣ್ಯ ಪುರುಷ ಬೇರೆಯಷ್ಟೆ.
ವಿಶ್ವದಾಭಿರಾಮ ಕೇಳು ವೇಮ.

ಪ್ರತಿಯೋರ್ವ ಸಚ್ಛಿಷ್ಯನಿಗೆ ಗುರುವು ಅವನವನ ಸಂಸ್ಕಾರಗಳಿಗೆ ಸರಿ ಹೊಂದುವ ದೇವರ ನಾಮವನ್ನು ಉಪದೇಶಿಸುತ್ತಾರೆ. ನಾಮಗಳ ಅಕ್ಷರಗಳು ಭಿನ್ನವಾದರೂ ಅವುಗಳ ಮಥಿತ ಅರ್ಥವು ಒಂದೇ ಆಗಿರುತ್ತದೆ. ಮಾಧವ ಎಂದರೆ ಪ್ರಕೃತಿಯ ಗಂಡ. ಶ್ರೀಪತಿ ಅಂದರೂ ಪ್ರಕೃತಿಯ ಗಂಡ. ಅದೇ ರೀತಿ ಉಮಾಪತಿ, ಪಾರ್ವತಿರಮಣ ಇತ್ಯಾದಿ.

ಕಂ. ಶ್ರೀಯದುಮಾಪತಿಯಾದ
ಸ್ವಾಮಿಗೆ ದಾಸನು ಎಂದುಸುರಿ, ಜಗವು ಹೊಗಳಲ್,
ವೇಮನನೆಂಬಾ ಧೀರನು.
ನೇಮದಿ ಹೇಳಿದನು ಇಂತು, ನಿಜವಿದು ವೇಮಾ.

ಇಲ್ಲಿ ಉಮಾಪತಿಯೆಂದು ಶಿವನನ್ನು ಕರೆಯಲಾಗಿದೆ. ಈ ಉಮೆಯು ಯಾರು ? ರಾಮಾಯಣದಲ್ಲಿ ವಿಶ್ವಾಮಿತ್ರನು ರಾಮನಿಗೆ ಹೇಳಿದ ಕಥೆಯ ಪ್ರಕಾರ, ನಾನಾ ಧಾತುಗಳಿಗೆ ಖಣಿಯಾದ ಹಿಮವಂತನೆಂಬ ಪರ್ವತರಾಜನಿದ್ದಾನೆ. ಮೇನಕೆ ಎಂಬ ಮೇರು ಪುತ್ರಿಯು ಅವನ ಪತ್ನಿ. ಅವನಿಗೆ ಇಬ್ಬರು ಪರಮ ಸುಂದರಿಯರಾದ ಹೆಣ್ಣು ಮಕ್ಕಳು. ಹಿರಿಯ ಮಗಳು ಗಂಗೆ. ಎರಡನೆಯ ಮಗಳು ಉಮೆ. ಒಂದು ಸಲ ದೇವತೆಗಳು ದೇವ ಕಾರ್ಯಕ್ಕಾಗಿ ಗಂಗೆಯನ್ನು ಸಮರ್ಪಿಸಬೇಕೆಂದು ಬೇಡಿಕೊಂಡರು. ಹಿಮವಂತನು ಲೋಕಪಾವನೆಯಾದ ಈ ತನಯಳನ್ನು ತ್ರಿಲೋಕಹಿತಕ್ಕಾಗಿ ಸಮರ್ಪಿಸಿದನು. ಇವಳು, ಸ್ವೇಚ್ಛೆಯಿಂದ, ಯಾವ ಮಾರ್ಗದಲ್ಲಾದರೂ ಸಂಚರಿಸಲು ಸಮರ್ಥಳು. ದೇವತೆಗಳು ತಾವು ಕೃತಾರ್ಥರಾದೆವೆಂದು ಭಾವಿಸಿ, ಮೂರು ಲೋಕಗಳ ಹಿತಕ್ಕಾಗಿ ಗಂಗೆಯನ್ನು ಕರೆದುಕೊಂಡು ಹೋದರು. ಹಿಮವಂತನ ಇನ್ನೊಬ್ಬ ಮಗಳಾದ ಉಮೆಯು, ಶಿವನನ್ನು ಕುರಿತು ಉಗ್ರವಾದ ತಪಸ್ಸನ್ನಾಚರಿಸಿದಳು. ಕಡೆಗೆ ಹಿಮವಂತನು ಆ ಉಮಾದೇವಿಯನ್ನು ಮಹಾ ಮಹಿಮನಾದ ಶಿವನಿಗೆ ಕೊಟ್ಟು ವಿವಾಹ ಮಾಡಿದನು. ಉಮೆಯು ಸರ್ವ ಲೋಕ ನಮಸ್ಕೃತೆಯಾದಳು. ಮಹಾ ತೇಜಸ್ವಿಯಾದ ನೀಲಕಂಠನು ಉಮಾದೇವಿಯನ್ನು ಮದುವೆಯಾದ ಮೇಲೆ ಅವಳೊಡನೆ ಕ್ರೀಡಿಸಲಾರಂಭಿಸಿದನು. ಅನಂತರ ನೂರು ದಿವ್ಯ ವರುಷಗಳು ಕಳೆದು ಹೋದವು. ಉಮಾ ದೇವಿಯಲ್ಲಿ ಪುತ್ರನು ಜನಿಸಲಿಲ್ಲ. ಬ್ರಹ್ಮಾದಿ ದೇವತೆಗಳಿಗೆ 'ಈ ಮಹಾದೇವನಿಂದ ಹುಟ್ಟುವ ತೇಜಸ್ಸನ್ನು ಯಾರು ಸಹಿಸಿಕೊಂಡಾರು ?' ಎಂಬ ದೊಡ್ಡ ಚಿಂತೆ ಉತ್ಪನ್ನವಾಯಿತು. ಅವರೆಲ್ಲರೂ ಹೋಗಿ ಶಿವನಿಗೆ ನಮಸ್ಕರಿಸಿ, ''ದೇವ ದೇವ, ಮಹಾದೇವ ನೀನು ಲೋಕಹಿತಕ್ಕಾಗಿ ಉದ್ಯುಕ್ತನಾಗಿದ್ದೀಯೆ. ನಾವು, ದೇವತೆಗಳು, ನಿನ್ನ ಕಾಲಿಗೆ ಬಿದ್ದಿದ್ದೇವೆ. ಪ್ರಸನ್ನನಾಗು. ನಿನ್ನ ತೇಜಸ್ಸನ್ನು ಧರಿಸಲು ಈ ಲೋಕದಲ್ಲಿ ಯಾರಿಗೂ ಸಾಮರ್ಥ್ಯವಿಲ್ಲ. ನೀನು ದೇವಿಯೊಡನೆ ವೇದ ಪ್ರಸಿದ್ಧವಾದ ತಪಶ್ಚರ್ಣೆಯಲ್ಲಿ ನಿರತನಾಗು. ತ್ರಿಲೋಕ ಹಿತಕ್ಕಾಗಿ ತೇಜಸ್ಸನ್ನು ತೇಜೋಮಯವಾದ ನಿನ್ನ ದೇಹದಲ್ಲಿಯೇ ಧರಿಸು. ಈ ಲೋಕಗಳನ್ನು ರಕ್ಷಿಸು. ಲೋಕವೇ ಇಲ್ಲದಂತೆ ಮಾಡಬೇಡ''. ಎಂದು ಪ್ರಾರ್ಥಿಸಿದರು. ಅವರ ಪ್ರಾರ್ಥನೆಗೆ ಪರಮೇಶ್ವರನು 'ಅಸ್ತು' ಎಂದನು. ದೇವತೆಗಳನ್ನುದ್ದೇಶಿಸಿ ''ಎಲೈ ದೇವತೆಗಳೇ ! ನನ್ನ ತೇಜಸ್ಸನ್ನು ನನ್ನಲ್ಲಿಯೇ ಧರಿಸುತ್ತೇನೆ. ಉಮೆಯೂ ಸಹಕರಿಸುವಳು. ನೀವು, ಪೃಥ್ವಿ ಎಲ್ಲರೂ ಶಾಂತಿಯಿಂದ ಇರಿ. ಆದರೆ ಈಗಾಗಲೇ ಸ್ಖಲಿತವಾದ ನನ್ನ ತೇಜಸ್ಸಿನ ಅಂಶವನ್ನು ಧರಿಸತಕ್ಕವರಾರು ? ಹೇಳಿರಿ'', ಎಂದು ಕೇಳಿದನು. ಆಗ ದೇವತೆಗಳು ''ಅದನ್ನು ಪೃಥ್ವಿಯು ಧರಿಸುವಳು'' ಎಂದರು. ಆಗ ಮಹಾಬಲಶಾಲಿಯಾದ ಸುರಪತಿಯು ತನ್ನ ತೇಜಸ್ಸಿನ ಅಂಶವನ್ನು ವಿಸರ್ಜಿಸಿದನು. ಅದು ಪರ್ವತಾರಣ್ಯ ಸಹಿತವಾಗಿ ಸಮಸ್ತ ಪೃಥಿವಿಯನ್ನು ವ್ಯಾಪಿಸಿತು. ಪೃಥ್ವಿಯು ಅದನ್ನು ತಡೆದುಕೊಳ್ಳಲಾರಳು ಎಂಬ ಭಯದಿಂದ ದೇವತೆಗಳು ಅಗ್ನಿಯನ್ನು ಕರೆದು, 'ನೀನು ವಾಯುವಿನೊಡನೆ ಸೇರಿ ರುದ್ರನ ಈ ಮಹಾ ತೇಜಸ್ಸನ್ನು ಧರಿಸು' ಎಂದರು. ಅಗ್ನಿಯಂತೆಯೂ, ಆದಿತ್ಯನಂತೆಯೂ ಪ್ರಜ್ವಲಿಸುತ್ತಿದ್ದ ಆ ತೇಜಸ್ಸನ್ನು ಅಗ್ನಿಯು ಧರಿಸಲಾಗಿ ಆ ತೇಜೋಭಾಗವು ಶ್ವೇತ ಪರ್ವತವಾಯಿತು. ಅದರ

ಮಹಿಮೆಯಿಂದ ಸಮೀಪದಲ್ಲಿ ಒಂದು ದಿವ್ಯವಾದ ಶರವಣವು ಅಂದರೆ ದರ್ಭೆಯ ವನವು ಉತ್ಪನ್ನವಾಯಿತು. ಆ ಶರವಣದಲ್ಲಿ ಪರಮ ತೇಜಸ್ವಿಯಾದ ಕಾರ್ತಿಕೇಯನು (ಅಗ್ನಿಯು ಸ್ವಲ್ಪ ಕಾಲ ಧರಿಸಿದ್ದರಿಂದ ಅಗ್ನಿ ಸಂಭವ ; ಕೃತ್ತಿಕೆಯರು ಪೋಷಿಸಿದ್ದರಿಂದ ಕಾರ್ತಿಕೇಯ) ಶಿವನ ತೇಜಸ್ಸಿನಿಂದ ಉದ್ಭವಿಸಿದನು. ಅನಂತರ ದೇವತೆಗಳೂ ಋಷಿಗಳೂ ಸಂಪ್ರೀತರಾಗಿ ಉಮಾ ಮಹೇಶ್ವರರನ್ನು ಸ್ತೋತ್ರ ಮಾಡಿದರು. ಆದರೆ ಶೈಲ ಸುತೆಗೆ ಮಾತ್ರ ರೋಷ ಹುಟ್ಟಿತು. ಅವಳ ಕಣ್ಣುಗಳು ಕೆಂಪಗಾದವು. ಅವಳು ಕೈಯಲ್ಲಿ ನೀರನ್ನು ತೆಗೆದುಕೊಂಡು, ''ದೇವತೆಗಳೇ ನಾನು ಪುತ್ರಾರ್ಥಿಯಾಗಿರುವಾಗ ನೀವು ನನಗೆ ವಿಘ್ನ ಮಾಡಿದಿರಿ. ಇದರ ಫಲವನ್ನು ಅನುಭವಿಸಿರಿ. ನಿಮ್ಮ ಹೆಂಡತಿಯರಲ್ಲಿ ನಿಮಗೆ ಸಂತಾನವಾಗದೆ ಹೋಗಲಿ. ಇಂದಿನಿಂದ ನಿಮ್ಮ ಪತ್ನಿಯರು ಬಂಜೆಯರಾಗಲಿ'' ಎಂದು ಅವರನ್ನು ಶಪಿಸಿಬಿಟ್ಟಳು. ಅನಂತರ ಭೂದೇವಿಯ ಕಡೆಗೆ ತಿರುಗಿ, 'ಎಲೈ ಪೃಥ್ವೀ, ನೀನು ನಾನಾ ರೂಪಳಾಗಿ ನಾನಾ ಜನರಿಗೆ ಹೆಂಡತಿಯಾಗು. ದುರ್ಬುದ್ಧಿಯವಳೇ! ನನಗೆ ಪುತ್ರನು ಜನಿಸುವುದು ನಿನಗೆ ಇಷ್ಟವಾಗಲಿಲ್ಲ ಅದರಿಂದ ನಿನ್ನ ಮೇಲೆ ನನಗೆ ಕ್ರೋಧವುಂಟಾಗಿದೆ. ಪುತ್ರನಿಂದ ದೊರೆಯಬೇಕಾದ ಸುಖವು ನಿನಗೆ ದೊರೆಯದೆ ಹೋಗಲಿ' ಎಂದು ಶಪಿಸಿದಳು. ದೇವತೆಗಳೆಲ್ಲರೂ ದುಃಖಿತರಾದರು. ಪರಮೇಶ್ವರನು ಅವರನ್ನು ನೋಡಿ ಪಶ್ಚಿಮ ದಿಕ್ಕಿಗೆ ಹೊರಟನು. ಅಲ್ಲಿ ಹಿಮಾಲಯದ ಉತ್ತರ ಪಾರ್ಶ್ವದಲ್ಲಿದ್ದ ಒಂದು ಶಿಖರದಲ್ಲಿ ಶೈಲ ಪುತ್ರಿಯೊಂದಿಗೆ ತಪೋನಿಷ್ಠನಾದನು.

ಈಗ ಮೇಲಿನ ಪದ್ಯದ ಭಾವಾರ್ಥ ನೋಡುವಾ.

ವೇಮನನೆಂಬ ಧೀರನು ಶ್ರೀ ಉಮಾಪತಿಯಾದ ಸ್ವಾಮಿಗೆ ದಾಸನಾಗಿದ್ದಾನೆ, ಎಂದು ಜಗತ್ತಿನ ಜನರು ಹೊಗಳುತ್ತಿದ್ದಾರೆ. ಅಂಥ ವೇಮನ ಹೀಗೆ ಹೇಳಿದನು. ಇದು ನಿಜವಾಗಿದೆ.

ತಾಯಿಯೇ ಪಾರ್ವತಿಯು, ತಂದೆಯೇ ಶಂಭುವು.
ಪ್ರಮಥ ಗಣವು ಅಖಿಲ ಬಂಧು ಬಳಗ.
ತಾನು ಹುಟ್ಟಿದ ಮನೆ ತನಗೆ ಕೈಲಾಸವು.
ವಿಶ್ವದಾಭಿರಾಮ ಕೇಳು ವೇಮ.

ಲೋಕದ ಜನರೆಲ್ಲ ಶಿವನ ಸಂತಾನವೇ. ಎಲ್ಲರೂ ಶಿವನ ಗೋತ್ರದವರೇ. ಪಾರ್ವತಿಯೇ ಎಲ್ಲರಿಗೂ ತಾಯಿ. ಶಂಭುವೇ ಎಲ್ಲರಿಗೂ ತಂದೆ. ಬಂಧು ಬಳಗವೆಲ್ಲ ಶಿವನ ಶಿಷ್ಯರಾದ ಪ್ರಮಥ ಗಣವೇ. ತಾನು ಹುಟ್ಟಿದ ಮನೆಯೇ ಕೈಲಾಸ. ಆದ್ದರಿಂದ ಜಾತಿ ಭೇದವಾಗಲಿ, ಮೇಲು ಕೀಳು ಭಾವನೆಯಾಗಲಿ, ತ್ಯಾಜ್ಯ.

ಶಿವನ ಮಂತ್ರವದು ಶ್ರೀ ಹರಿಯ ಮಂತ್ರವು
ತಿಳಿದು ತಿಳಿಯದಿಹರು ತುಚ್ಛ ಜನರು.
ದೇವರನೆ ಮರೆತರು, ತಮ್ಮ ದೇಹ ನಂಬಿ.
ವಿಶ್ವದಾಭಿರಾಮ ಕೇಳು ವೇಮ.

'ಮಂತ್ರವು ನಮಃ ಶಿವಾಯ' ಎಂದಿರಲಿ, 'ಹರಿ ಓಂ ತತ್ಸತ್' ಎಂದಿರಲಿ, ಎರಡೂ ಒಂದೇ. ಎರಡರ ಲಕ್ಷ್ಯ ವಸ್ತುವು ಆ ಏಕದೇವನೇ ಆಗಿದ್ದಾನೆ. ಅಂದ ಮೇಲೆ ಶಿವನ ಮಂತ್ರವೇ

ಶ್ರೀ ಹರಿಯ ಮಂತ್ರವಾಯಿತಲ್ಲವೇ ? ತುಚ್ಛ ಜನರು ಇದನ್ನು ತಿಳಿದರೂ ತಿಳಿಯದಂತೆ ವರ್ತಿಸುತ್ತಾರೆ. ತಮ್ಮ ದೇಹವನ್ನು ನಂಬಿ, ತಾವು ಅಂಟಿಕೊಂಡ ಮತಗಳಿಗೆ ಜೋತು ಬಿದ್ದು, ಏಕ ದೇವನನ್ನೇ ಮರೆಯುತ್ತಾರೆ.

ಸಾರಿ ರಾಮ ಭಕ್ತ ; ಶಿಲೆ ಬೊಂಬೆಗೆ ಮಣಿದು,
ಭಜನೆ ಗೆಯ್ವುದೇಕೆ ? ಭಕ್ತಿಯಿರದೆ.
ಭಕ್ತಿ ನಿಲಿಸಿದವನು ಭಜನೆಯ ಗೆಯ್ಯುವನೆ ?
ವಿಶ್ವದಾಭಿರಾಮ ಕೇಳು ವೇಮ.

ರಾಮ ಎಂದರೆ ರಮಯತೇ ಇತಿ. ಆದರೆ ಆತ್ಮದಲ್ಲಿ ರಮಿಸುವವನೇ ಆತ್ಮಾರಾಮನು. ದಶರಥನ ಮಗನ ಹೆಸರೂ ರಾಮ. ಆದರೆ ರಾಮ ಮಂತ್ರವು ಅತಿ ಪ್ರಾಚೀನವಾದದ್ದು. ಶಿವನೇ ಪಾರ್ವತಿಗೆ ರಾಮ ಮಂತ್ರ ಬೋಧಿಸಿದನೆಂದೂ ಪುರಾಣಗಳು ಹೇಳುತ್ತಿವೆ. ಅಂದ ಮೇಲೆ ಶಿವನ ಕಾಲದಲ್ಲಿಯೂ ರಾಮ ಮಂತ್ರವು ತಾರಕ ಮಂತ್ರವಾಗಿತ್ತೆಂದು ತಿಳಿಯುತ್ತದೆ. ಇತಿಹಾಸ ಗ್ರಂಥಗಳನ್ನು ಆಧರಿಸಿ, 'ರಾವಣಸ್ಯ ಮರಣಂ ರಾಮಃ' ಎಂದು ಶಬ್ದದ ವ್ಯುತ್ಪತ್ತಿಯನ್ನು ಕೆಲವರು ಮಾಡುತ್ತಾರೆ.

ಭಕ್ತನಾರು ? ಭಜ್+ಕ್ತಿನ್ ⟶ ಭಕ್ತಿ. ಭಕ್ತಿಯೆಂದರೆ ಭಗವಂತನ ಸೇವೆ. ಭಕ್ತಿ ಹೊಂದಿದವನು ಭಕ್ತ. ಭಕ್ತಿ ಹೊಂದಿದವನು ಪರಮಾತ್ಮನಾಗುವನು.

ಈಗ ಪದ್ಯಾರ್ಥಕ್ಕೆ ಬರುವಾ.

ಒಬ್ಬನು ರಾಮ ಭಕ್ತನೆಂದು ಸಾರಿ, ಅಂದರೆ ಆತ್ಮಾರಾಮನೇ ತಾನೆಂದು ಸಾರಿದರೆ ಅವನು ಪರಮಾತ್ಮನೇ ಆಗಿರಬೇಕು. ಕೊನೆಗೆ ತನ್ನ ನೈಜ ಸ್ವರೂಪವು ಆತ್ಮಾರಾಮನೆಂದೇ ಅರಿತಿರಬೇಕು. ಅಂಥವರು ಶಿಲೆಯ ಮೂರ್ತಿಯನ್ನು ನಿಲ್ಲಿಸಿ ಅದರೆದುರು ಮಣಿಯನು. ಭಕ್ತಿ ಇಲ್ಲದೆಡೆಗೆ ಪಾಪವುಂಟು. ಭಕ್ತಿ ಇಲ್ಲದವನು ಭಜನೆಯನ್ನಾದರೂ ಮಾಡುವುದೇಕೆ ? ಯಾರಲ್ಲಿ ಭಕ್ತಿಯು ಅಚಲವಾಗಿ ನಿಂತಿದೆಯೋ, ಅವನಲ್ಲಿ ಪರಮೇಶ್ವರನುಂಟು. ಹೀಗೆ ಭಕ್ತಿ ನಿಲಿಸಿದವನು ಭಜನೆಯನ್ನು ಮಾಡುವನೇ ? 'ಪ್ರಾರ್ಥನಾ ಅರ್ಚನಾ ಭ್ರಮ ಮೂಲಮ್' ಪ್ರಾರ್ಥನೆ, ಅರ್ಚನೆಗಳಿಗೆ ಭ್ರಮೆಯೇ ಮೂಲವಾಗಿದೆ.

ಈಗ ಒಂದು ಸಂಗತಿಯನ್ನು ಸ್ಪಷ್ಟವಾಗಿ ಅರಿಯಬೇಕು. ಯೋಗಿ ವೇಮನರ ಇಷ್ಟ ದೈವವು ಉಮಾಪತಿ. ಅವರ ನಿಷ್ಠೆ ಉಮಾಪತಿಗೆ. ಆದರೆ ಯಾರು ತಮ್ಮ ಇಷ್ಟ ದೇವತೆಯೆಂದು ಹರಿಯನ್ನು ಆಯ್ಕೆ ಮಾಡಿಕೊಂಡಿರುವರೋ, ಅವರು ಹರಿಗೆ ನಿಷ್ಠರಾಗಿರಬಹುದು. ನಾರಾಯಣ ಎಂದು ಆಯ್ಕೆ ಮಾಡಿಕೊಂಡವರು, ನಾರಾಯಣನಿಗೆ ನಿಷ್ಠರಾಗಿರಬಹುದು. ಆದರೆ ಈ ಇಷ್ಟದ ಆಯ್ಕೆಯಲ್ಲಿ ಪಾಲಿಸಬೇಕಾದ ಎರಡು ಅಂಶಗಳಿವೆ. ಒಂದು : ಅದು ಏಕದೇವನ ಪ್ರತೀಕವಾಗಿರಬೇಕು. ಮತ್ತು ಎರಡು ; ಅದು ಸದ್ಗುರುವಿನಿಂದ ಉಪದಿಷ್ಟವಾಗಿರಬೇಕು.

ಈಗ ಸ್ವಾಮಿ ವಿವೇಕಾನಂದರು ಈ ಕುರಿತು ಏನು ಹೇಳುತ್ತಾರೆ ? ''ಪ್ರತಿಯೊಂದು ಧರ್ಮದ ಪ್ರತಿಯೊಂದು ಶಾಖೆಯೂ ತನ್ನ ಒಂದು ಇಷ್ಟವನ್ನು ಮಾನವತೆಯ ಎದುರು ನಿಲ್ಲಿಸುತ್ತದೆ. ಆದರೆ ಸನಾತನವಾದ ವೇದಾಂತ ಧರ್ಮವು ಮಾತ್ರ ಮಾನವತೆಯೆದುರು ಆಂತರ್ಯದ ದೇವ

ಮಂದಿರ ಪ್ರವೇಶಿಸಲು ಅನಂತ ಸಂಖ್ಯೆಯ ಬಾಗಿಲುಗಳನ್ನು ತೆರೆಯುತ್ತದೆ. ಮತ್ತು ಮಾನವತೆಯೆದುರು ಅಗಣಿತ ಇಷ್ಟಗಳ ಸರಣಿಯನ್ನು ಇರಿಸುತ್ತದೆ. ಆದರೆ ಅವೆಲ್ಲವುಗಳಲ್ಲಿ ಆ ಏಕದೇವನ ಅಭಿವ್ಯಕ್ತಿ ಇರುತ್ತದೆ. ವೇದಾಂತವು ದಯಾಪೂರ್ಣ ಕಾಳಜಿಯೊಂದಿಗೆ ಅಭೀಪ್ಸುಗಳಾದ ಸ್ತ್ರೀ ಪುರುಷರಿಗೆ ಮಾನವ ಜೀವನದ ವಾಸ್ತವತೆಯ ಬಂಡೆಗಲ್ಲಿನಲ್ಲಿ, ಪೂರ್ವದ ಮತ್ತು ಪ್ರಚಲಿತ, ಮಹಾ ಪುರುಷರು ಇಲ್ಲವೆ ಅವತಾರಿ ಪುರುಷರು ಕಟೆದು ಸಜ್ಜುಗೊಳಿಸಿದ ಅಸಂಖ್ಯೆ ಪಥಗಳನ್ನು ಸೂಚಿಸುತ್ತದೆ. ಮತ್ತು ತನ್ನ ಚಾಚಿದ ಕೈಗಳಿಂದ ಸರ್ವರನ್ನೂ, ಮತ್ತು ಮುಂದೆ ಬರುವವರನ್ನೂ-ಸತ್ಯದ ನಿಜ ಧಾಮಕ್ಕೆ, ಕೃಪೆಯ ಸಾಗರಕ್ಕೆ ಬರಮಾಡಿಕೊಳ್ಳುತ್ತದೆ. ಅಲ್ಲಿಗೆ ಮಾಯಾ ಜಾಲದಿಂದ ಮುಕ್ತಿ ಪಡೆದ ಮಾನವ ಜೀವಿಗಳು, ಪರಿಪೂರ್ಣ ಸ್ವಾತಂತ್ರ್ಯದೊಂದಿಗೆ ಮತ್ತು ನಿತ್ಯಾನಂದದೊಂದಿಗೆ, ತಮ್ಮನ್ನು ಒಯ್ಯಬಹುದಾಗಿದೆ".

ಗುರುವು ಉಪದೇಶಿಸಿದ ಮತದಲ್ಲಿ ನಿಷ್ಠೆ ತಾಳಬೇಕು. ಬಳಿಕ ಅನ್ಯ ಮತಗಳನ್ನು ದೂಷಿಸಬಾರದು. ಮೂಢ ನಂಬುಗೆ, ಕಂದಾಚಾರ, ಜಾತಿಯ ಮೇಲು-ಕೀಳು ಭಾವನೆ, ಜನರಲ್ಲಿ ಭೇದ ಭಾವ ಹುಟ್ಟಿಸುವ ಬಾಹ್ಯ ಲಾಂಛನದ ಧಾರಣೆ ಇತ್ಯಾದಿ ಯಾವ ಮತಗಳಲ್ಲಿಯೇ ಇರಲಿ, ಅವು ಅನವಶ್ಯಕವಷ್ಟೇ ಅಲ್ಲ ; ಸತ್ಯ ಸಾಕ್ಷಾತ್ಕಾರಕ್ಕೆ ಆತಂಕಗಳು. ಅವುಗಳನ್ನು ಖಂಡಿಸುವುದು ನಿಜವಾದ ಸತ್ಯ ಶೋಧಕನ ಧರ್ಮ.

ಆ. ಜಾತಿ ಮತವ ತೊರೆದು ಯೋಗಿಯಾಗೆ ಮೇಲು ;
ಜಾತಿ ಮುಳುಗಿ ನೀತಿ ಹೇಳಲೇನು ?
ಮತವು ತಿಳಿಯೆ ಜಾತಿ ಬಿಡಲು ಅಂಜ ಬೇಡ.
ವಿಶ್ವದಾಭಿರಾಮ ಕೇಳು ವೇಮ.

ಪೂಜಕ ಪೂಜ್ಯ ಭಾವಗಳು ಒಂದಾಗುವುದೇ ಭಕ್ತಿಯೋಗ. ಯೋಗಿಯಾದವನು ಜಾತಿ ಮತ್ತು ಮತಗಳನ್ನು ತೊರೆದು ಅವುಗಳಿಗೆ ಅತೀತನಾಗಬೇಕು. ಇನ್ನು ನೀತಿ ಬೋಧಕನಿದ್ದರೂ ಸಹ, ಕನಿಷ್ಠ ಜಾತಿಯ ಕೂಪದಲ್ಲಿ ಮುಳುಗಿರಬಾರದು. ಸರ್ವ ಮಾನ್ಯವಾದ, ಸರ್ವ ಜನರಿಗೆ ಸುಖವನ್ನು ತರುವ ನೀತಿಯನ್ನು ಬೋಧಿಸಬೇಕು. ಇನ್ನು ಭಕ್ತಿ ಯೋಗಿಯಾಗುವ ಮುನ್ನ ಗುರುವು ತನಗೆ ಉಪದೇಶಿಸಿದ ಮತದ ಪಥವನ್ನು ಅನುಸರಿಸುತ್ತ ತನ್ನ ಮತವನ್ನು ತಿಳಿಯಬೇಕು. ಆಗ ಜಾತಿಯನ್ನು ಬಿಡಲು ಅಂಜಕೂಡದು. ತಾನು ಯೋಗಿಯಾದ ಮೇಲೆ ಎಲ್ಲ ಮತಗಳೂ ಅದೇ ಗುರಿ ತಲುಪಲಿವೆಯೆಂದು ತಿಳಿದು ಮತದ ಅಂಟನ್ನು ತೊಡೆಯಬೇಕು.

ಭಕ್ತಿ ಮಾರ್ಗದಲ್ಲಿ ಕಾಲಿರಿಸಿದಾಗ ಸದ್ಗುರುವಿನ ಸಮಾಗಮವಾಗುವ ವರೆಗೆ, ಉಪದೇಶ ದೊರೆಯುವವರೆಗೆ ಮನಸ್ಸು ವಿವಿಧ ಮತಗಳ ಬೋಧೆಗಳತ್ತ, ಕೆಲವು ನಿಷಿದ್ಧ ಗುರುಗಳ ಚಮತ್ಕಾರ, ಪವಾಡಗಳತ್ತ, ಹರಿಯುತ್ತದೆ. ಆಗ ತುಂಬಾ ಎಚ್ಚರಿಕೆಯಿಂದಿರಬೇಕು. ಏನೇ ಆಕರ್ಷಣೆಗಳು ಇರಲಿ, ಮನಸ್ಸನ್ನು ಚಂಚಲಗೊಳಿಸಿ ಹರಿಬಿಡದೆ, ಏಕನಿಷ್ಠೆ ಅಂದರೆ ಏಕ ಆದರ್ಶದಲ್ಲಿ ಭಕ್ತಿ ಹೊಂದುವುದು ತುಂಬಾ ಅವಶ್ಯ.

ಆ. ಭಕ್ತಿ ನಾಮ ಬೇರೆ, ಭಕ್ತಿಯೆಲ್ಲ ಒಂದೆ,
ಶೈವ ನಾಮ ಬೇಕೆ ಶೈವವೊಂದೆ.

ವೇದ ಶಾಸ್ತ್ರ ಬೇರೆ, ವೇದ್ಯವಿಹುದು ಒಂದೆ,
ವಿಶ್ವದಾಭಿರಾಮ ಕೇಳು ವೇಮ.

ಭಕ್ತರ ಭಕ್ತಿ ಭಾವವು ಬೇರೆ ಬೇರೆಯಾಗಿರುತ್ತದೆ. ಕೀರ್ತನ, ಸ್ಮರಣ, ಪಾದ ಸೇವನೆ, ಅರ್ಚನೆ, ವಂದನ, ದಾಸ್ಯ, ಸಖ್ಯ ಆತ್ಮ ನಿವೇದನ ಹೀಗೆ ಭಕ್ತಿಯು ನವವಿಧವಾಗಿದೆ. ಆದರೆ ವಿಧಗಳಲ್ಲಿ ಹೊರ ಹೊಮ್ಮುವ ಭಕ್ತಿ ಭಾವವು ಒಂದೇ ಆಗಿದೆ. ಶೈವ ನಾಮ ಬೇರೆ ಇರಬಹುದು. ಕಾಶ್ಮೀರ ಶೈವವಿರಬಹುದು, ಪಾಶುಪತ ಶೈವವಿರಬಹುದು. ಲಕುಲೀಶ ಶೈವವಿರಬಹುದು. ಕಾಪಾಲಿಕ ಶೈವವಿರಬಹುದು. ವೀರಶೈವವಿರಬಹುದು. ಆದರೆ ಶಿವನ ಕುರಿತು ನಿಷ್ಠೆ ಇವೆಲ್ಲವುಗಳಲ್ಲಿ ಒಂದೇ ಆಗಿರುತ್ತದೆ. ವೇದ, ಶಾಸ್ತ್ರ ಬೇರೆಯಾಗಿರಬಹುದು. ಋಕ್, ಯಜುಸ್, ಸಾಮ ಮತ್ತು ಅಥರ್ವ ವೇದಗಳಿರಬಹುದು. ಮನುಧರ್ಮಶಾಸ್ತ್ರ, ಪರಾಶರ ಧರ್ಮಶಾಸ್ತ್ರ ಇತ್ಯಾದಿ ಶಾಸ್ತ್ರಗಳಿರಬಹುದು. ಆದರೆ ಅವುಗಳಲ್ಲಿ ವೇದ್ಯವಾದದ್ದು ಏಕದೇಮ ತತ್ತ್ವವೊಂದೇ.

ಹೀಗೆ ಭಕ್ತಿಯೋಗಿಯು, ಜೀವನದಲ್ಲಿ ತನ್ನ ಇಷ್ಟ ದೇವವೇ ಸಕಲ ಮತೀಯರಲ್ಲಿ, ಅನೇಕಾನೇಕ ಹೆಸರುಗಳಿಂದ ಪೂಜಿಸಲ್ಪಡುತ್ತದೆಯೆಂದು ಅರಿಯುತ್ತಾನೆ.

ಭಕ್ತಿಯ ವಿಧಾನ ಮತ್ತು ರೀತಿ :

ಭಕ್ತಿ ಸಾಧನೆಯಲ್ಲಿ ಆಹಾರ ಶುದ್ಧಿಯು ತುಂಬಾ ಮಹತ್ವದ್ದಾಗಿದೆ. ಖಾದ್ಯ ಮತ್ತು ಪೇಯ ಆಹಾರವು ಶುದ್ಧವಾಗಿದ್ದರೆ ನಮ್ಮ ಆಂತರ್ಯ ಇಂದ್ರಿಯಗಳು ಪರಿಶುದ್ಧವಿರುತ್ತವೆ. ಆಂತರಿಕ ಇಂದ್ರಿಯಗಳು ಪರಿಶುದ್ಧವಾದರೆ ನಮ್ಮ ಮನಸ್ಸು ಮತ್ತು ಸ್ಮೃತಿಗಳು ಸ್ಥಿರವಾಗುತ್ತವೆ.

ಆಹಾರವನ್ನು ಅಶುದ್ಧಗೊಳಿಸುವ ಐದು ದೋಷಗಳಿವೆ. ಅವು ಯಾವವು ? ಒಂದನೆಯದಾಗಿ ಅರ್ಥ ಅಂದರೆ ಆಹಾರ ಗಳಿಕೆಯ ವಿಧಾನ. ಆಹಾರವನ್ನು ನೀವು ಭ್ರಷ್ಟ ರೀತಿಯ ಗಳಿಕೆಯಿಂದ ಪಡೆದಿದ್ದರೆ, ಇಲ್ಲವೆ ಇತರರನ್ನು ಹಿಂಸಿಸಿ ಪಡೆದಿದ್ದರೆ, ಕಳ್ಳನಿಂದ ಇಲ್ಲವೆ ಕ್ರೂರ ರಾಜನಿಂದ ಪಡೆದಿದ್ದರೆ, ಅದು ಅಶುದ್ಧವಾಗುತ್ತದೆ. ಅಪ್ರಾಮಾಣಿಕವಾಗಿ ಸಂಪಾದಿಸಿದ ಆಹಾರವು ಕೀಳು ವಿಚಾರಗಳಿಗೆ ಇಂಬುಗೊಡುತ್ತದೆ.

ಆ. ಹಕ್ಕಿ ಜಾತಿ ಹಿಡಿದು ಹೆಚ್ಚು ಹಿಂಸೆ ಗೆಯ್ದು,
ಹೊಟ್ಟೆ ತುಂಬ ಕಾಳು ಹಾಕಿ ತುರುಕಿ,
ಅಟ್ಟು ತಿನ್ನುವವನು ಅವನಿ ಚಂಡಾಲನು.
ವಿಶ್ವದಾಭಿರಾಮ ಕೇಳು ವೇಮ.

ಕೂಳಿಗಾಗಿ ಪಕ್ಷಿ ಹಿಂಸೆ ಮಾಡುವುದು ಕೇಡು. ಪಕ್ಷಿಯನ್ನು ಹಿಡಿದು ಹಿಂಸಿಸಿ, ಅದರ ಹೊಟ್ಟೆ ತುಂಬ ಕಾಳು ತಿನಿಸಿ, ಅದನ್ನು ಬೇಯಿಸಿ ತಿನ್ನುವವನು ಯಾವನಿದ್ದರೂ ಅವನು ಕಟುಕನೇ ಸರಿ. ಇದು ಅತ್ಯಂತ ಅಶುದ್ಧ ಆಹಾರ.

ಆ. ಹಿಂಸೆ ಗೆಯ್ದಿಹುದೆ ಮುಖ್ಯ ಧರ್ಮವಯ್ಯ.
ಪ್ರಾಣಿ ಕೊಂದು ತಿನ್ನುವವನಿಗಿಂತ,
ಸತ್ತ ಪಶುವ ತಿಂಬ ಚಂಡಾಲನೇ ಮೇಲು.
ವಿಶ್ವದಾಭಿರಾಮ ಕೇಳು ವೇಮ.

ನಾವು ಸೇವಿಸುವ ಆಹಾರವು ನಮ್ಮ ಇಂದ್ರಿಯಗಳನ್ನು ಪೋಷಿಸುತ್ತದೆ. ಅದನ್ನು ಸಂಪಾದಿಸುವ ವಿಧಾನವು ಮನಸ್ಸಿನ ಮೇಲೆ ಪರಿಣಾಮ ಬೀರುತ್ತದೆ. ಆದ್ದರಿಂದ ಹಿಂಸೆ ಮಾಡದಿರುವುದೇ ಮುಖ್ಯ ಧರ್ಮವಾಗಿದೆ. ಈ ದೃಷ್ಟಿಯಿಂದ ನೋಡಿದರೆ, ಕೊಂದು ತಿನ್ನುವವನಿಗಿಂತ ಸತ್ತ ಪಶುವನ್ನು ತಿನ್ನುವ ಚಂಡಾಲನೇ ಮೇಲು.

ಆ. ಜೀವಿ ಜೀವಿ ಕೊಂದು ಜೀವಿಗಾಗಿ ಇರಿಸಿ,
ಜೀವಿ ತಾನು ಬಲಿತು ಬೆಳಗುತಿರುವ.
ಜೀವ ಹಿಂಸಕರಿಗೆ ಸಿಕ್ಕುವುದೇ ಮೋಕ್ಷ ?
ವಿಶ್ವದಾಭಿರಾಮ ಕೇಳು ವೇಮ.

ಯಜ್ಞ-ಯಾಗಗಳಲ್ಲಿ ಬಲಿ ಪಶುವನ್ನು ಆಹುತಿ ಕೊಡುತ್ತಾರೆ. ಬ್ರಹ್ಮವನ್ನು ಬ್ರಹ್ಮನಿಗೆ ಆಹುತಿ ಕೊಡುತ್ತೇವೆಂದು ಮಂತ್ರ ಹೇಳುತ್ತ ಬಲಿ ಪಶುವಿಗೆ ಅಜ (ಹುಟ್ಟು ಇಲ್ಲದ ಬ್ರಹ್ಮ) ಎಂದು ಹೆಸರಿಟ್ಟು ಜೀವ ಹಿಂಸೆ ಮಾಡಿ, ಅದರ ಸವಿ ಮಾಂಸವನ್ನು ಯಜ್ಞ ಶೇಷವೆಂದು ಕರೆದು ತಮ್ಮ ನಾಲಗೆ ರುಚಿ ಸಂತೃಪ್ತಗೊಳಿಸುತ್ತಾರೆ. ಹೀಗೆ ಯಾಜಕನು ಜೀವ ಹಿಂಸೆ ಮಾಡಿ ತಾನೇ ದಷ್ಟ ಪುಷ್ಟವಾಗಿ ಬೆಳೆಯುತ್ತಿರುವನು. ಇಂಥ ಜೀವ ಹಿಂಸಕರಿಗೆ ಎಂದಾದರೂ ಮೋಕ್ಷವು ದೊರಕಬಹುದೇ ? ಇಲ್ಲ ಇಲ್ಲ.

ಮುಂದೆ ಬೌದ್ಧ ಮತ್ತು ಜೈನ ಧರ್ಮಗಳ ಅಹಿಂಸೆಯ ಪ್ರಭಾವದಿಂದ ಯಜ್ಞ ಯಾಗಗಳಲ್ಲಿ ಪಶುಬಲಿ ಕಡಿಮೆಯಾಗಿದ್ದರೂ ಮಂತ್ರಗಳು ಹಾಗೆಯೇ ಉಳಿದಿವೆ. ಜೀವಂತ ಪಶು ಬಲಿಯ ಸ್ಥಾನದಲ್ಲಿ ಕಣಕದ ಪಶುಗಳ ಆಕೃತಿಯನ್ನು ಬಳಸುತ್ತಾರೆ. ಆದರೆ ಕೆಲವು ನಿಮ್ನ ವರ್ಗಗಳಲ್ಲಿ ದೇವತೆಗಳ ಹೆಸರಿನಲ್ಲಿ ಕೋಣ, ಕುರಿ, ಕೋಳಿಗಳ ಬಲಿ ಕೊಡುವುದು ಇನ್ನೂ ಸಾಗಿದೆ. ಈ ಪದ್ಧತಿಯು ನಾಡಿನ ಕಾಯದೆಯಿಂದ ಪ್ರತಿಬಂಧಿತವಾಗಿದ್ದರೂ ಕದ್ದು ಮುಚ್ಚಿ ನಡೆಯುತ್ತದೆ.

ಆ. ನೊಸಲು ಭಕ್ತನಹುದು ನಾಲಗೆ ತೋಳನದು.
ಚಿತ್ತ ಭೂತದಂತೆ ಚಲಿಸುವವನು.
ನೋಡಿದೆ ಶಿವನೆನೆ ನಾಚುಗೆ ಎನಿಸದೇ ?
ವಿಶ್ವದಾಭಿರಾಮ ಕೇಳು ವೇಮ.

ಕೆಲವು ಕಾಪಾಲಿಕ ಶೈವರು, ಮತ್ತು ವಾಮಾಚಾರಿ ತಾಂತ್ರಿಕರು ಶಿವನ ಉಪಾಕರೆಂದು ಹೇಳುತ್ತ ಹಣೆಗೆ ವಿಭೂತಿ ಲಾಂಛನವನ್ನು ಬಳಿಯುತ್ತಾರೆ. ಹೀಗೆ ನೊಸಲು ಭಕ್ತರಾಗುತ್ತಾರೆ. ಆದರೆ ಅವನ ನಾಲಗೆಯು ತೋಳನ ನಾಲಗೆಯ ಸಂಸ್ಕಾರ ಹೊಂದಿರುತ್ತದೆ. ಮೇಕೆಯ ಮಾಂಸದ ಚಪಲ ಅದಕ್ಕೆ. ಇಂಥ ತಥಾ ಕಥಿತ ಶೈವ ಭಕ್ತರು, ಜನರಿಗೆ ಶಿವನನ್ನು ಕಂಡಿದ್ದೇವೆ, ಎಂದು ಹೇಳುತ್ತಾರೆ. ಹೀಗೆ ಹೇಳಲು ಅವರಿಗೆ ನಾಚುಗೆ ಎನ್ನಿಸಬೇಡವೇ ? ಏಕೆಂದರೆ ನಿಜವಾದ ಭಕ್ತನು ಜೀವ ಹಿಂಸೆ ಮಾಡನು.

ಹಿಂಸೆಯ ಸೋಂಕಿಲ್ಲದೆ ಆಹಾರ ಹೇಗಿರಬೇಕು ? ಅದು ಸಮತೂಕದ ಆಹಾರವಾಗಿರಬೇಕು. ಅದರಲ್ಲಿ ಪಿಷ್ಟಮಯ ಪದಾರ್ಥಗಳು, ಪ್ರೋಟೀನು, ಸ್ನಿಗ್ಧ ಪದಾರ್ಥಗಳು,

ವಿಟ್ಯಾಮಿನ್ ಇಲ್ಲವೆ ಅನ್ನಾಂಶಗಳು ಸರಿಯಾದ ಪ್ರಮಾಣದಲ್ಲಿ ಇರಬೇಕು. ಊಟವೆಂದರಂತೂ ರೊಟ್ಟಿ, ಅನ್ನ ಸಾಮಾನ್ಯ ತಾನೇ ? ಅದರಲ್ಲಿ ಸಾರು ಬೇಕು. ಬೇಳೆಕಾಳಿನ ಪಲ್ಯವೂ ಬೇಕು. ತುಪ್ಪವೂ ಬೇಕು.

ಆ. ತುಪ್ಪವಿರದ ಊಟ ತೃಣದ ಪರಿಯ ಕಸವು.
ಸಾರು ಇರದ ಊಟ ಶ್ವಾನ ಯೋಗ್ಯ.
ಪ್ರೀತಿಯಿರದ ಊಟ ಪಿಂಡಕಿಟ್ಟ ಊಟ.
ವಿಶ್ವದಾಭಿರಾಮ ಕೇಳು ವೇಮ.

ಆ. ಉಪ್ಪು ಇರದ ಸಾರು ಒಪ್ಪದು ರುಚಿಸುವಗೆ.
ಬೇಳೆ ಇರದ ಊಟ ಫಲವಿಹೀನ.
ಸಾಲವಿಲ್ಲದವನು ಸಂಪನ್ನರೊಳಧಿಕ.
ವಿಶ್ವದಾಭಿರಾಮ ಕೇಳು ವೇಮ.

ಊಟ ತಿಂಡಿಗಾಗಿ ಸಾಲ ಮಾಡಕೂಡದು. ಅನ್ನದೊಂದಿಗೆ ಸ್ವಲ್ಪು ಸಾರು ಇದ್ದರೆ ಸಾಕು. ಅದು ರುಚಿಸುವವನಿಗೆ ಒಪ್ಪವಾಗಿರುತ್ತದೆ. ದೇಹಕ್ಕೆ ಪುಷ್ಟಿ ಕೊಡುವ ಬೇಳೆಯ ಪಲ್ಯವಂತೂ ಆರೋಗ್ಯ ಫಲವೀಯುತ್ತದೆ.

ದುಡಿದು ಉಣ್ಣಬೇಕು :

ಆ. ಕಚ್ಚ ಅಕ್ಕಿ ಬೇಳೆ ಗೃಹದಲ್ಲಿ ಇರುತಿರೆ,
ಕೂಳು ಅಟ್ಟು ತಿನಲು ಕಷ್ಟವೇನು ?
ಹೊಟ್ಟೆ ತುಂಬಲಿಕ್ಕೆ ಕಷ್ಟ ಪಡದಿರಲೆಂತು ?
ವಿಶ್ವದಾಭಿರಾಮ ಕೇಳು ವೇಮ.

ಶ್ರಮ ಜೀವಿಯಾದ ಬಡವನ ಮನೆಯಲ್ಲಿಯೂ ಕಚ್ಚ ಅಕ್ಕಿ ಇರುತ್ತದೆ. ಬೇಳೆ ಕಾಳುಗಳಿರುತ್ತವೆ. ಹೀಗಿರುವಾಗ ಅಕ್ಕಿ ಬೇಯಿಸಿ, ಅನ್ನ ಮಾಡಿ, ಬೇಳೆಯಿಂದ ಪಲ್ಯವನ್ನೋ, ಸಾರನ್ನೋ ಅಟ್ಟು ತಿನ್ನಲು ಕಷ್ಟವೇನು ? ಹೊಲದಲ್ಲಿ ಹಕ್ಕರಿಕೆ ಇತ್ಯಾದಿ ತೊಪ್ಪಲು ಸಿಗುತ್ತದೆ. ಆದರೆ ಇವನ್ನೆಲ್ಲ ಸೇರಿಸಿ ರುಚಿಯಾಗಿ ಅಡುಗೆ ಮಾಡುವ ಕಷ್ಟ ಕೈಕೊಳ್ಳದಿದ್ದರೆ, ಹೊಟ್ಟೆ ತುಂಬುವುದಾದರೂ ಹೇಗೆ ?

ಬೆವರು ಸುರಿಯುವಂತೆ, ಬಹಳ ಕಷ್ಟಪಟ್ಟು,
ದುಡಿಮೆ ಗೆಯ್ದು ಕೂಳು ತಿನ್ನಬೇಕು.
ತಾಯಿ ತಂದೆ ಗಳಿಕೆ ತಾನು ತಿನಲು ಹೊಲ್ಲ.
ವಿಶ್ವದಾಭಿರಾಮ ಕೇಳು ವೇಮ.

ಒಬ್ಬ ಮನುಷ್ಯನು ಆಗರ್ಭ ಶ್ರೀಮಂತನಾಗಿ ಹುಟ್ಟಿರಬಹುದು. ಅದು ಪೂರ್ವ ಜನ್ಮದ ಪುಣ್ಯದ ಫಲ. ಆದರೆ ತಾಯಿ ತಂದೆಯ ಗಳಿಕೆಯಿಂದಲೇ ತಾನು ಹೊಟ್ಟೆ ಹೊರೆಯುವದು

ತಕ್ಕದ್ದಲ್ಲ. ತಾನೂ ಮನಸ್ಸನ್ನು ದಣಿಸಬೇಕು. ಮೈ ಬೆವರು ಬರುವಂತೆ ದುಡಿಯಬೇಕು. ಹೀಗೆ ದುಡಿಮೆ ಮಾಡಿ ಊಟ ಮಾಡಬೇಕು. ಇದು ಆರೋಗ್ಯಕ್ಕೂ ಒಳ್ಳೆಯದು. ಮಧುಮೇಹಾದಿ ರೋಗಗಳಿಗೂ ಸೂಕ್ತ ಮದ್ದು.

ಹುಲ್ಲು ಪಶುವಿಗಾಯ್ತು ; ಹಾವಿಗಾಯ್ತು ಗಾಳಿ,
ಮಣ್ಣು ಎರೆ ಹುಳಕಿತ್ತು ಮರೆತ ರೀತಿ,
ಅಂತೆ ಜಗದ ಜನಕೆ ಅನ್ನವಾಯಿತಷ್ಟೆ.
ವಿಶ್ವದಾಭಿರಾಮ ಕೇಳು ವೇಮ.

ಹುಟ್ಟಿನಿಂದ ದೇವರು ಹುಲ್ಲು ಮೇಯಿಸುತ್ತಾನೆಯೆ ? ಎಂದು ದೇವರ ಕರುಣೆಯಲ್ಲಿ ವಿಶ್ವಾಸವಿರಿಸಿದ ಮನುಷ್ಯನು ಹೇಳುತ್ತಾನೆ. ದೇವರು ಆಯಾ ಜೀವಿಗೆ ತಕ್ಕ ಆಹಾರವನ್ನು ಸೃಷ್ಟಿಸಿದ ಮೇಲೆಯೇ ಆ ಜೀವಿಗಳು ಜನಿಸುತ್ತವೆ. ಹೇಗೆಂದರೆ, ಮಾನವನಿಗೆ ಆಗಿಬರದ ಹುಲ್ಲು ಪಶುವಿಗೆ ಆಹಾರವಾಗುತ್ತದೆ. ಎಲ್ಲಿಯೋ ಒಬ್ಬಿಬ್ಬರು ಮಾನವರು ಕೇವಲ ಗಾಳಿಯನ್ನು ಮಾತ್ರ ಸೇವಿಸಿ ಬದುಕಿರಬಹುದು (ಗುಲಬುರ್ಗ ಜಿಲ್ಲೆಯ ಯಾನಗುಂದಿಯ ಮಾಣಿಕಮ್ಮನಂತೆ) ಹಾವು ಮಾತ್ರ ಕಪ್ಪೆ ತಿನ್ನುವುದಾದರೂ, ಗಾಳಿಯನ್ನೇ ತಿಂದು ಜೀವಿಸುತ್ತದೆ. ಎರೆ ಹುಳುವು ಮಣ್ಣನ್ನು ತಿಂದೇ ಜೀವಿಸುತ್ತದೆ. ಹೀಗೆ ಹಲವು ಜಂತುಗಳಿಗೆ ನೀರನ್ನೇ ಆಹಾರವಾಗಿ ನೀಡಿದ್ದಾನೆ. ಜಗತ್ತಿನ ಜನರಿಗೆ ಅನ್ನವನ್ನೇ ಆಹಾರವಾಗಿ ಒದಗಿಸಿದ್ದಾನೆ.

ಹಬ್ಬ ಹರಿದಿನಗಳಲ್ಲಿ ಸ್ವಾಧಿಷ್ಟ ಭೋಜನ ಇಷ್ಟವಾಗಬಹುದು. ಆಗ

ಪಾಯಸ, ವಡೆ, ಸಾರು, ಪರಮಾನ್ನವಾದಿ,
ಹೋಳಿಗೆ, ಮೆತ್ತನ್ನ ಹೂರ್ಣ ಕಡಬು,
ನಾಲಗೆಯ ವಿಕಾಸ ! ನವನೀತ ಬೆರೆಯಲು.
ವಿಶ್ವದಾಭಿರಾಮ ಕೇಳು ವೇಮ.

ಸಿಹಿಯಾದ ಪಾಯಸವನ್ನೂ, ಹೋಳಿಗೆಯನ್ನೂ, ಮೆತ್ತನ್ನ ಹೂರಣ ಕಡಬುಗಳನ್ನೂ ಮಾಡಬಹುದು. ಸಿಹಿಯೊಂದಿಗೆ ಕಾರದ ವಡೆಗಳನ್ನು ಜೋಡಿಸಿ, ಪರಮಾನ್ನದೊಂದಿಗೆ ಸಾರು ಜೋಡಿಸಿ ಭುಜಿಸಿದರೆ ನಾಲಗೆಯ ರುಚಿಯ ವಿಲಾಸವು ಹೇಳತೀರದು! ಇನ್ನು ತುಪ್ಪ ಸೇರಿಸಿದರಂತೂ ಆ ಊಟದ ರುಚಿಯೇ ರುಚಿ !

ಅಡಲು ಬಂದರಾಗ ಅಡುಗೆ ಅಮೃತವಹುದು.
ಕಣ್ಣಿಗಿಂಪು ಆಗಿ ಕಾಣುತಿಹುದು.
ಒಡಲ ತಿನಿಸು ತಿಂಡಿ ಕಡು ಕಷ್ಟ ಕಡಿಗಾಗಿ.
ವಿಶ್ವದಾಭಿರಾಮ ಕೇಳು ವೇಮ.

ಪಾಕ ಶಾಸ್ತ್ರವೂ ಒಂದು ವಿದ್ಯೆ. ಉಪ್ಪು ಎಷ್ಟು ? ಹುಳಿ ಎಷ್ಟು ? ಖಾರವೆಷ್ಟು ? ಯಾವುದನ್ನು ಎಷ್ಟು ಬೇಯಿಸಬೇಕು ? ಎಲ್ಲವೂ ಅಡುಗೆ ಮಾಡುವವರಿಗೆ ತಿಳಿದಿರಬೇಕು. ಹೀಗೆ ಅಡಲು ಬಂದರೆ ಅಡುಗೆಯು ಅಮೃತದಷ್ಟು ಮಧುರವಾಗಿರುತ್ತದೆ. ಕಣ್ಣಿಗೆ ಇಂಪಾಗಿಯೂ ಕಾಣಬಹುದು. ಆದರೆ ಅಡುಗೆ ಮಾಡುವವಳು ಋತುಮತಿಯಾದರೆ ಅಂದರೆ ಕಡೆಗಾದರೆ

ಅಡುಗೆ ಮಾಡುವರಾರು ? ಆಗ ಹೊಟ್ಟೆಗೆ ಇಷ್ಟವಾದ ತಿಂಡಿ ತಿನಿಸು ಸಿಕ್ಕುವುದೂ ಕಡು ಕಷ್ಟವಾಗುತ್ತದೆ.

ಸರಿಯಾಗಿ ಅಡುಗೆ ಮಾಡಲು ಬಾರದಿದ್ದರೆ, ಆ ಅಡುಗೆಯು ಅಮೃತವೆನಿಸುವ ಬದಲು ವಿಷವೆನಿಸುತ್ತದೆ. ಕಣ್ಣಿನಿಂದ ನೋಡಲೂ ಗಿಂಜು ಗಿಂಚಾಗಿರುತ್ತದೆ. ಅಂದರೆ ವಿಷಯುಕ್ತ ರುಚಿಯಾಗುತ್ತದೆ. ತಿನ್ನಲೂ ಸಹ ಕಂಟಕವಾಗಿರುವುದು. ಆರೋಗ್ಯಕ್ಕೂ ಹಾನಿಕಾರಕವಾಗಿ ಗಂಡಾಂತರಕಾರಿಯಾಗಬಹುದು.

ಹದುಳವಿರದೆ ತಿನಿಸು, ಹಬ್ಬದೂಟ ಕೇಡು ;
ಭಕ್ತಿಯಿರದ ಪೂಜೆ ಪೂರ್ಣ ಕೇಡು.
ಓಜೆಗೆಟ್ಟ ಹೆಣ್ಣಿಗೆ ಡೋಲು ಕಲಿಸೆ ಕೇಡು.
ವಿಶ್ವದಾಭಿರಾಮ ಕೇಳು ವೇಮ.

ಓಜೆಗೆಡು = ರೀತಿಗೆಡು ಡೋಲು = ಭೇರಿ, ಒಂದು ಚರ್ಮವಾದ್ಯ.

ಊಟಕ್ಕೆ ಕರೆಯುವಾಗ ಪ್ರೀತಿಯಿರಬೇಕು. ಊಟಕ್ಕೆ ಬಡಿಸುವಾಗ ಪ್ರೀತಿಯಿರಬೇಕು. ಇಲ್ಲವಾದರೆ ಪ್ರೀತಿಯಿರದ ಹಬ್ಬದೂಟವೂ ಕೇಡಾಗುತ್ತದೆ. ಪಿಂಡದೂಟದಂತೆ ಆಗುತ್ತದೆ. ಪೂಜಕನು ಪೂಜಿಸುವಾಗ ಭಕ್ತಿಯುಕ್ತನಾಗಿರಬೇಕು. ಸೇವಾ ಭಾವದಿಂದ ಪ್ರೇರಿತನಾಗಿರಬೇಕು. ಇಲ್ಲವಾದರೆ ಆ ಪೂಜೆಯಲ್ಲಿ ಕೇಡಾಗುತ್ತದೆ. ಇನ್ನು ರೀತಿ ಕ್ರಮ ತಪ್ಪಿದ ಹುಡುಗಿಗೆ ಡೋಲು ಬಾರಿಸಲು ಕಲಿಸಿದರೆ ಸುಸ್ವರ ನುಡಿಯದು. ಆ ಕಲಿಸುವಿಕೆಯು ಕೇಡಾಗುತ್ತದೆ.

ಪ್ರೀತಿಯಿರದ ಊಟ ಪಿಂಡಕಟ್ಟಿ ಊಟ. ಅಂದರೆ ಶ್ರಾದ್ಧ ಕರ್ಮದಲ್ಲಿ ಅತಿಥಿಗಳನ್ನು ಕರೆಯುವಾಗ ಮಿತ್ರರನ್ನು ಕರೆಯಕೂಡದು.

ಶ್ರಾದ್ಧ ದೂಟಕ್ಕೆ ಮಿತ್ರರನ್ನು ಕರೆದು ಅವರಿಗೆ ಊಟ ಮಾಡಿಸಬಾರದು. ಬೇರೆ ದ್ರವ್ಯಗಳಿಂದ ಅವರ ಸ್ನೇಹವನ್ನು ಸಂಪಾದಿಸಬೇಕು. ಮಿತ್ರರೂ ಶತ್ರುವೂ ಅಲ್ಲದ ಬ್ರಾಹ್ಮಣನನ್ನು ಶ್ರಾದ್ಧದಲ್ಲಿ ಊಟ ಮಾಡಿಸಬೇಕು. (ಮನುಸ್ಮೃತಿ. 6-138)

ಶ್ರಾದ್ಧದ ಮೂಲಕ ಸ್ನೇಹ ಸಂಪಾದಿಸಿಕೊಳ್ಳಲಿಚ್ಛಿಸುವ ದ್ವಿಜಾಧಮನು ಮೋಹವಶೀಭೂತನಾಗಿ ಇಹಪರಗಳಲ್ಲಿ ಪತನ ಹೊಂದುತ್ತಾನೆ. (ಮನುಸ್ಮೃತಿ. 6-140)

ಸ್ನೇಹಿತರಾದಂಥ ಬಹಳ ಜನ ಬ್ರಾಹ್ಮಣರು ಒಟ್ಟಿಗೆ ಸೇರಿ ನಡೆಸುವ ಶ್ರಾದ್ಧ ಭೋಜನವು ನಿಂದ್ಯವಾದುದರಿಂದ, ಪೈಶಾಚೀ ಕೃತ್ಯವೆಂದು ಜರೆಯಲ್ಪಡುತ್ತದೆ. ಕುರುಡು ಆಕಳು ಕೊಟ್ಟಿಗೆಯಲ್ಲೇ ಬಿದ್ದಿರುವಂತೆ. ಇಂಥ ಶ್ರಾದ್ಧವು ಯಾವೊಂದು ಫಲವನ್ನು ಕೊಡದೆ ವ್ಯರ್ಥವಾಗುತ್ತದೆ. (ಮನುಸ್ಮೃತಿ. 6-141)

ಕೂಳಿಗಾಗಿ ಪ್ರಾಣಿಯನ್ನು ಕೊಂದು ಮಾಂಸ ಭಕ್ಷಿಸುವುದು ನಿಷಿದ್ಧ. ಸತ್ತ ಪ್ರಾಣಿಯ ಮಾಂಸ ತಿನ್ನುವುದು ಸರಿಯಲ್ಲವಾದರೂ ಕ್ಷಮಾರ್ಹ ಎಂದು ವೇಮನ ಯೋಗಿಗಳು ಹೇಳುತ್ತಾರೆ. ಆದರೆ ಬ್ರಾಹ್ಮಣರಿಗೆ ಮಾನ್ಯವಾದ ಮನು ಧರ್ಮ ಶಾಸ್ತ್ರದಲ್ಲಿ ಮಾಂಸವು ಬ್ರಾಹ್ಮಣರಿಗೆ ಬೇಕೇ ಬೇಕು. ಅದು ರುಚಿಯಾಗಿರಬೇಕು. ಶುಚಿಯಾಗಿರಬೇಕು.

''ಭಕ್ಷ್ಯಗಳು, ಭೋಜ್ಯಗಳು (ಪಾಯಸ ಉಂಡೆ ಇತ್ಯಾದಿ) ವಿವಿಧ ಗಡ್ಡೆಗಳು, ಹಣ್ಣುಗಳು, ರುಚಿ, ಶುಚಿಯಾದ ಮಾಂಸದ ಪದಾರ್ಥಗಳು, ಸುವಾಸನೆಯುಳ್ಳ ಮಧುರ ಪಾನಕಗಳು, ಇವನ್ನೆಲ್ಲ ತಂದು ನೆಲದ ಮೇಲೆಯೇ ಇಡಬೇಕು''. (ಮನುಸ್ಮೃತಿ. 6-227)

''ಇವನ್ನೆಲ್ಲ ಬ್ರಾಹ್ಮಣರ ಬಳಿಗೆ ಮೆಲ್ಲ ಮೆಲ್ಲನೆ ಜಾಗ್ರತೆಯಾಗಿ ತಂದು ಇಟ್ಟು, ಸಮಾಧಾನ ಚಿತ್ತನಾಗಿ ಆಯಾ ಪದಾರ್ಥಗಳ ಬಗ್ಗೆ ಹೇಳುತ್ತ ಅವುಗಳನ್ನೆಲ್ಲ ಬ್ರಾಹ್ಮಣರಿಗೆ ಉಣಬಡಿಸಬೇಕು''. (ಮನು ಸ್ಮೃತಿ 6-228)

ಋಷಿ ಮುನಿಗಳೂ ಮಾಂಸ ಸೇವಿಸುತ್ತಿದ್ದರು. ಋತ್ವಿಕ್ಕುಗಳು ಪುರೋಹಿತರೂ ಪಶಬಲಿಯ ರೂಪದಲ್ಲಿ ಹೇರಳವಾಗಿ ಮಾಂಸ ಸೇವಿಸುತ್ತಿದ್ದರು. ರಾಮಾಯಣದ ಮೇರೆಗೆ ಶ್ರೀರಾಮನು ಎಳೆ ಚಿಗರೆಯ ಹೃದಯ ಭಾಗವನ್ನು ಅತಿಯಾಗಿ ಮೆಚ್ಚುತ್ತಿದ್ದನಂತೆ. ಆದರೆ ವೇಮನ ಯೋಗಿಗಳಿಗೆ ವೈದಿಕರ ಜಾತಿಯ ಮೇಲು ಕೀಳು ಭಾವನೆಯು ಹೇಯವೆನಿಸಿದಂತೆ, ಮಾಂಸ ಭಕ್ಷಣೆಯೂ ಹೇಯವೆನಿಸಿತ್ತು.

''ಋಷಿ ಮುನಿಗಳ ಆಹಾರವಾದ ನೀವಾರ (ಕಾಡು ಭತ್ತ ಇತ್ಯಾದಿ) ವೆಂಬ ಆಹಾರ ಧಾನ್ಯಗಳು, ಹಾಲು, ಸೋಮ ರಸ (ನಿಶೆ ಬರಿಸುವ ಪೇಯ) ಶುದ್ಧ ಮಾಂಸ, ಭೂಮಿಯಲ್ಲಿ ಹುಟ್ಟುವ ಸೈಂಧಲವಣವೆಂಬ ಉಪ್ಪು ಇವುಗಳನ್ನು ಹವಿಸ್ಸುಗಳೆಂದು ಹೇಳುತ್ತಾರೆ''.

(ಮನು ಸ್ಮೃತಿ 6-257)

ಯಾವ ಯಾವ ಪ್ರಾಣಿಯ ಮಾಂಸದಿಂದ ಪಿತೃಗಳು ಎಷ್ಟೆಷ್ಟು ಕಾಲ ತೃಪ್ತಿಯಿಂದಿರುತ್ತಾರೆ ? ಎಂಬುದನ್ನು ಮನುವು ಹೀಗೆ ತಿಳಿಸುತ್ತಾನೆ.

''ಮೀನಿನ ಮಾಂಸದಿಂದ ಎರಡು ತಿಂಗಳು, ಜಿಂಕೆಯ ಮಾಸಂದಿಂದ ಮೂರು ತಿಂಗಳು, ಕುರಿಯ ಮಾಂಸದಿಂದ ನಾಲ್ಕು ತಿಂಗಳು, ಪಕ್ಷಿಯ ಮಾಂಸದಿಂದ ಐದು ತಿಂಗಳು ಹೀಗೆ ಪಿತೃಗಳು ತೃಪ್ತಯಿಂದಿರುತ್ತಾರೆ''.

''ಆಡಿನ ಮಾಂಸದಿಂದ ಆರು ತಿಂಗಳು, ಚಿತ್ರ ಮೃಗದ ಮಾಂಸದಿಂದ ಏಳು ತಿಂಗಳು, ಕೃಷ್ಣ ಮೃಗದ ಮಾಂಸದಿಂದ ಎಂಟು ತಿಂಗಳು, ಸಾರಂಗದ ಮಾಂಸದಿಂದ ಒಂಭತ್ತು ತಿಂಗಳು ಹೀಗೆ ಪಿತೃಗಳು ತೃಪ್ತಿಯಿಂದ ಇರುತ್ತಾರೆ''.

''ಕಾಡು ಹಂದಿ, ಕಾಡು ಕೋಣಗಳ ಮಾಂಸದಿಂದ ಹತ್ತು ತಿಂಗಳು, ಮೊಲ ಮತ್ತು ಆಮೆಗಳ ಮಾಂಸದಿಂದ ಹನ್ನೊಂದು ತಿಂಗಳು ಪಿತೃಗಳು ತೃಪ್ತಿಯಿಂದ ಇರುತ್ತಾರೆ''.

''ಗೋವಿನ ಹಾಲಿನಿಂದ ಹಾಗೂ ಅದರ ಪಾಯಸದಿಂದ ಒಂದು ವರ್ಷ ಪರ್ಯಂತ ತೃಪ್ತಿಯಿಂದ ಇರುತ್ತಾರೆ. ಖಡ್ಗಮೃಗದ ಮಾಂಸದಿಂದ ಹನ್ನೆರಡು ವರ್ಷ ತೃಪ್ತಿಯಿಂದ ಇರುತ್ತಾರೆ''.

''ಕಾಲಶಾಕವೆಂಬ ಶಾಕ (ಕಾಯಿಪಲ್ಯ), ಮಹಾಶಲ್ಕವೆಂಬ ಮೀನುಗಳು, ಖಡ್ಗಮೃಗಗಳು, ಲೋಹಮೃಗದ ಮಾಂಸ, ಚೇನು, ನಿವಾರಾದಿ (ಕಾಡಿನಲ್ಲಿ ಬೆಳೆಯುವ ಸಾಮೆ ಅಕ್ಕಿ) ಮುನಿಗಳ ಆಹಾರ ಧಾನ್ಯಗಳು-ಇವು ಅನಂತ ಫಲವನ್ನು ಕೊಡುವ ಪಿತೃ ಶ್ರಾದ್ಧ ಪದಾರ್ಥಗಳಾಗಿವೆ''.

ಆಹಾರ ಶುದ್ಧಿಯ ವಿಚಾರದಲ್ಲಿ ಮಾಂಸಾಹಾರವು ಏಕೆ ಅಶುದ್ಧ ? ಎಂಬ ವಿಷಯದಲ್ಲಿ ಯೋಗಿ ವೇಮನರ ಅಭಿಮತವು ಸುಸ್ಪಷ್ಟವಾಗಿದೆ. ಧರ್ಮಾಚರಣೆಯಲ್ಲಿ ಹಿಂಸೆ ನಿಷಿದ್ಧ. ಮಾಂಸ ಭಕ್ಷಣೆಯು ಹಿಂಸೆಯನ್ನು ಒಳಗೊಳ್ಳುವುದರಿಂದ ಅದು ಅಶುದ್ಧವೆನಿಸುತ್ತದೆ. ಕಳವು ಮತ್ತು ಕ್ರೌರ್ಯಗಳು ನಿಷಿದ್ಧ ವೃತ್ತಿಗಳಾಗಿವೆ. ಆದ್ದರಿಂದ ಕಳ್ಳನಿಂದ ಇಲ್ಲವೆ ಕ್ರೂರ ರಾಜನು ಒದಗಿಸಿದ ಆಹಾರವು ಅಶುದ್ಧವೆನಿಸುತ್ತದೆ.

ಆಹಾರದಲ್ಲಿ ಎರಡನೆಯ ದೋಷವೆಂದರೆ ನಿಮಿತ್ತ ದೋಷ. ಅಂದರೆ ಅಡುಗೆಯವನು ಒಳ್ಳೆ ನೀತಿವಂತನಾಗಿರಬೇಕು. ಊಟಕ್ಕೆ ಆಮಂತ್ರಿಸುವವನೂ ಪ್ರೇಮಮಯಿಯಾಗಿರಬೇಕು. ಅದಕ್ಕಾಗಿಯೇ ವೇಮನರು ಹಾಡಿದ್ದಾರೆ. ''ಅಡಲು ಬಂದರಾಗ ಅಡುಗೆ ಅಮೃತವಹುದು''. ''ಅಡಲು ತಪ್ಪಿದಾಗ ಅಡುಗೆ ವಿಷವೇ ಆಯ್ತು''. ''ಪ್ರೀತಿಯಿರದ ಊಟ ಪಿಂಡಕಿಟ್ಟ ಊಟ''.

ಆಹಾರದಲ್ಲಿಯ ಮೂರನೆಯ ದೋಷವೆಂದರೆ ಸ್ಥಾನ ದೋಷ. ಅಡುಗೆ ಮಾಡುವ ಜಾಗವು ಪ್ರಶಾಂತ ತರಂಗಗಳಿಂದ ಕೂಡಿರಬೇಕು. ಸತತ ಕಾದಾಟ, ಜಗಳ, ಪ್ರಕ್ಷುಬ್ಧವಾದ ವಿವಾದಗಳು ಅಲ್ಲಿ ನಡೆಯಕೂಡದು. ಆದ್ದರಿಂದ ಶೌಚಾಲಯ, ಆಸ್ಪತ್ರೆ, ನ್ಯಾಯಾಲಯ, ಯುದ್ಧಭೂಮಿ ಮತ್ತು ಶವಾಗಾರಗಳ ಬಳಿ ಅಡುಗೆ ಮಾಡಬಾರದು.

ಆಹಾರದಲ್ಲಿಯ ನಾಲ್ಕನೆಯ ದೋಷವೆಂದರೆ, ಜಾತಿ ದೋಷ. ಇಲ್ಲಿ ಜಾತಿ ಎಂದರೆ ಮನುಷ್ಯರ ಜಾತಿಯಲ್ಲ. ಆಹಾರದ ವರ್ಗೀಕರಣ. ಕೆಲವು ಆಹಾರ ಪದಾರ್ಥಗಳು ಸಾತ್ವಿಕ ಗುಣವನ್ನು ಪ್ರಚೋದಿಸಿದರೆ, ಬೇರೆ ಕೆಲವು ರಾಜಸ ಗುಣಗಳನ್ನೂ ಮತ್ತು ಕೆಲವು ತಾಮಸ ಗುಣಗಳನ್ನು ಪ್ರಚೋದಿಸುತ್ತಿವೆ. ಹಾಲು, ತುಪ್ಪ, ಅಕ್ಕಿ, ಹಿಟ್ಟು, ಹೆಸರುಕಾಳು ಇತ್ಯಾದಿ ಸಾತ್ವಿಕ ಆಹಾರಗಳೆನಿಸುತ್ತವೆ. ಹುಳಿ, ಉಪ್ಪು ಮಸಾಲೆ ಸಾಮಾನುಗಳು ರಾಜಸಿಕವೆನಿಸುತ್ತವೆ. ಇನ್ನು ಮಾಂಸ, ತತ್ತಿ, ಬಳ್ಳೊಳ್ಳಿ, ನೀರುಳ್ಳಿಗಳು ತಾಮಸಿಕವೆನಿಸುತ್ತವೆ. ಸಾತ್ವಿಕ ಆಹಾರವು ಸ್ವಭಾವತಃ ಉದ್ದೀಪನಗೊಳಿಸುತ್ತದೆ. ರಾಜಸಿಕ ಆಹಾರವು ಮಾನವನನ್ನು ಜಡತ್ವದತ್ತ ತಳ್ಳಿ ಸ್ವಾರ್ಥಿ ಜೀವಿಯನ್ನಾಗಿಸುತ್ತದೆ. ಇನ್ನು ತಾಮಸಿಕ ಆಹಾರವು ಮಾನವನಲ್ಲಿ ಅಸುರತ್ವವು ಪುಟಿಯುವಂತೆ ಮಾಡುತ್ತದೆ.

ಉಪ್ಪು ಇರದ ಸಾರು ಒಪ್ಪದು ರುಚಿಸುವಗೆ ;
ಬೇಳೆ ಇರದ ಊಟ ಫಲವಿಹೀನ.
ಸಾಲವಿಲ್ಲದವನು ಸಂಪನ್ನರೊಳಧಿಕ.
ವಿಶ್ವದಾಭಿರಾಮ ಕೇಳು ವೇಮ.

ಹೀಗೆ ಅನ್ನ ಸಾರು, ಬೇಳೆ ಇದ್ದರೆ ಸಾಕು. ಊಟವು ಸಾತ್ವಿಕವೂ ಆಗಿರುತ್ತದೆ. ಪೌಷ್ಟಿಕವೂ ಆಗಿರುತ್ತದೆ.

ಆಹಾರದಲ್ಲಿಯ ಐದನೆಯ ದೋಷವೆಂದರೆ ಸಂಸ್ಕಾರ ದೋಷ. ನೀವು ಪರಿಶುದ್ಧವಾದ ಅಡುಗೆಯ ಸಾಮಗ್ರಿಗಳನ್ನು ಬಳಸಿದರೂ ಸಹ, ಆಹಾರ ಸಾಮಗ್ರಿ ಪರಸ್ಪರ ವಿರೋಧಿ ಗುಣ ಹೊಂದಿರಬಾರದು. ಅತಿಶಯವಾಗಿ ಬೇಯಿಸಬಾರದು. ಹೆಚ್ಚು ಕರಿಯಬಾರದು. ಇನ್ನು ತಂಗುಳ ಅನ್ನವು ದೇಹಾರೋಗ್ಯವನ್ನು ಕೆಡಿಸುವುದಲ್ಲದೆ, ವ್ಯಕ್ತಿಯ ಮಾನಸಿಕ ಮತ್ತು ಆಧ್ಯಾತ್ಮಿಕ

ಸ್ವಾಸ್ಥ್ಯವನ್ನೂ ಕೆಡಿಸುತ್ತದೆ.

ಅಡಲು ತಪ್ಪಲಾಗ ಅಡುಗೆ ವಿಷವೆ ಆಯ್ತು.
ಕಣ್ಣಿನಿಂದ ನೋಡೆ ಕಣ್ಣಿಗಿಂಜು.
ಕಂಟಕಿಹುದು ತಿನಲು, ಗಂಡಾಂತರ ಬಹುದು.
ವಿಶ್ವದಾಭಿರಾಮ ಕೇಳು ವೇಮ.

ಅಡಲು ಬರದಿದ್ದರೆ ಅತಿಶಯವಾಗಿ ಬೇಯಿಸಿರಬಹುದು, ಇಲ್ಲವೆ ಅತಿಶಯವಾಗಿ ಕರಿದಿರಬಹುದು. ಹೀಗೆ ಮಾಡಿದರೆ ಅನ್ನದ ರುಚಿಯೂ ಕೆಡುತ್ತದೆ. ಆರೋಗ್ಯಕ್ಕೂ ಹಿತಕಾರಿಯಾಗದು.

ಎಂಥ ಕ್ಷಾಮವಿರಲಿ ; ಎಂಜಲಿಕ್ಕಬೇಡ.
ಪರರಿಗಿಕ್ಕು ಧರ್ಮ ಪರರ ನೋಡಿ.
ಭೂಮಿ ಮೇಲೆಂಜಲು ಪತ್ರೋಳಿ ತೆರ ಕೆಡುವ.
ವಿಶ್ವದಾಭಿರಾಮ ಕೇಳು ವೇಮ.

ಬರಗಾಲವಿರಲಿ, ದುರ್ಧರ ಪ್ರಸಂಗವಿರಲಿ, ಊಟ ಮಾಡಿದ ಉಚ್ಛಿಷ್ಟವನ್ನು ಅಂದರೆ ಎಂಜಲನ್ನು ಯಾರಿಗೂ ನೀಡಕೂಡದು. ಹಾಗೆ ಮಾಡಿದವನು ತಾನು ಉಂಡು ಒಗೆದ ಪತ್ರೋಳೀಯಂತೆ ಭೂಮಿಯಲ್ಲಿ ಜನರಿಂದ ಜಿಪುಣನೆಂದು ಉಗಿಸಿಕೊಂಡು ಕೆಡುತ್ತಾನೆ.

ಧಾಂದೋಗ್ಯ ಉಪನಿಷತ್ತು ಹೇಳುವಂತೆ, ''ಆಹಾರವು ಶುದ್ಧವಿದ್ದರೆ, ಸತ್ತ್ವ ಗುಣವು ಶುದ್ಧವಾಗುತ್ತದೆ ಮತ್ತು ಸ್ಮೃತಿಯು ನಿಶ್ಚಲವಾಗುತ್ತದೆ''. ಆಹಾರದ ವಿಷಯದಲ್ಲಿ, ಭಕ್ತನ ಕಾಳಜಿಯು ತುಂಬಾ ಪ್ರಾಣಪ್ರಾಯವಾಗಿದೆ. ಕೆಲವು ಮತಗಳಲ್ಲಿ ಆಹಾರದ ವಿಷಯದಲ್ಲಿ ದುಂದು ವೆಚ್ಚ ಮಾಡುವುದೂ ಇದೆಯಲ್ಲದೆ ಆಹಾರದ ವಿಷಯದಲ್ಲಿ ಮಹಾ ಸತ್ಯವೂ ಅಡಗಿದೆ.

ಅನ್ನದಾನ :

ಉಣ್ಣುವ ಬಾನದೊಳು ಇನಿತು ದೈವಕಿಡಲು,
ಪುಣ್ಯ ಲೋಕಕವನು ಹೋಗುತಿಪ್ಪ.
ಅನ್ನದಾನಕಿಂತ ಮಿನ್ನ ದಾನವಿಲ್ಲ.
ವಿಶ್ವದಾಭಿರಾಮ ಕೇಳು ವೇಮ.

ಅನ್ನವಿಡುವಕಿಂತ ಮಿನ್ನ ದಾನವಿಲ್ಲ.
ಏನು ಗೆಯ್ದೊಡೇನು ಎಣಿಕೆಯಿಲ್ಲ.
ಅನ್ನವೆಷ್ಟು ಜೀವ ಆಧಾರವಪ್ಪದು !
ವಿಶ್ವದಾಭಿರಾಮ ಕೇಳು ವೇಮ.

ದಾನದಲ್ಲಿ ಅನ್ನ ದಾನವತಿ ದೊಡ್ಡದು.
ಗಾನದಲ್ಲಿ ಸಾಮ ಗಾನ ಹೆಚ್ಚು.

ಧ್ಯಾನದಲ್ಲಿ ಶಿವ ಧ್ಯಾನವೇ ಶ್ರೇಷ್ಠವು.
ವಿಶ್ವದಾಭಿರಾಮ ಕೇಳು ವೇಮ.

ಸಕಲ ಜೀವಾತ್ಮರಿಗೆ ಲೇಸನ್ನೇ ಬಯಸುವ ಭಕ್ತನು, ತಾನು ಉಣ್ಣುವ ಹಾಗೂ ಪರರಿಗೆ ಉಣಬಡಿಸುವ ಆಹಾರದ ವಿಷಯದಲ್ಲಿ ತುಂಬಾ ಎಚ್ಚರಮಹಿಸುತ್ತಾನೆ. ಕೆಲವು ಆಹಾರ ಪದಾರ್ಥಗಳು ಸಾತ್ವಿಕವಿರುತ್ತವೆ. ಕೆಲವು ರಾಜಸಿಕವಿರುತ್ತವೆ. ಕೆಲವು ತಾಮಸಿಕವಿರುತ್ತವೆ. ಸಾಂಖ್ಯ ತತ್ತ್ವಜ್ಞಾನದ ಮೇರೆಗೆ, ಸತ್ತ್ವ, ರಜಸ್ ಮತ್ತು ತಮಸ್ ಗುಣಗಳು ಭಾರ ಸಾಮ್ಯದಲ್ಲಿದ್ದರೆ, ಪ್ರಕೃತಿಯೆನಿಸುತ್ತದೆ. ಆದರೆ ಅವು ವಿಷಮ ಸ್ಥಿತಿಯಲ್ಲಿದ್ದರೆ, ವಿಕ್ಷುಬ್ಧ ಸ್ಥಿತಿಯಲ್ಲಿದ್ದರೆ, ವಿಶ್ವವಾಗುತ್ತವೆ. ಹೀಗೆ ಈ ತ್ರಿಗುಣಗಳು ಪ್ರಕೃತಿಯ ದ್ರವ್ಯಗಳೂ ಆಹುದು. ಅವುಗಳ ಗುಣವೂ ಆಹುದು. ಇನ್ನು ಸತ್ತ್ವ ಗುಣದ ಅಧಿಕ ಪ್ರಭಾವವು ಆಧ್ಯಾತ್ಮಿಕ ಅಭಿವೃದ್ಧಿಗಾಗಿ ತೀರ ಆವಶ್ಯಕ. ಆದ್ದರಿಂದ ಆಹಾರ ರೂಪದಲ್ಲಿ ನಾವು ಸೇವಿಸುವ ಜೀನಸುಗಳು ನಮ್ಮ ದೇಹದಲ್ಲಿ ಸೇರಿ ನಮ್ಮ ಮಾನಸಿಕ ಸಂರಚನೆಯನ್ನು ರೂಪಿಸುತ್ತವೆ. ಅದರಿಂದಾಗಿ ನಾವು ಸೇವಿಸುವ ಆಹಾರ ಕುರಿತು ವಿಶೇಷ ಕಾಳಜಿ ತಗೆದುಕೊಳ್ಳಬೇಕಾದುದು ತೀರ ಅಗತ್ಯ.

ಈ ಬಗೆಯ ತಿನ್ನುವ ಆಹಾರದ ಗುಣಾತ್ಮಕ ವಿಂಗಡಣೆಯು ಒಂದು ಬಗೆಯಾದರೆ, ಅದಕ್ಕಿಂತ ಮುಖ್ಯವಾದುದು ಇನ್ನೊಂದಿದೆ. ಇಲ್ಲಿ ಆಹಾರವೆಂದರೆ ನಾವು ಒಳಗೆ ಏನನ್ನು ಸ್ವೀಕರಿಸುವೆವೋ ಅದು ಆಹಾರ. ಜೀವಿಯ ಭೋಗಕ್ಕಾಗಿ ನಾವು ಶಬ್ದ ಇತ್ಯಾದಿ ಸಂವೇದನೆಗಳನ್ನು ಒಳಕ್ಕೆ ಸ್ವೀಕರಿಸುತ್ತೇವೆ. ಈ ಐಂದ್ರಿಯ ಗ್ರಹಿಕೆಗಳ ಮುಖಾಂತರ ಪಡೆಯುವ ಜ್ಞಾನದ ಶುದ್ಧಿಯೇ 'ಆಹಾರ ಶುದ್ಧಿ'ಯಾಗಿದೆ. ಆದ್ದರಿಂದ ಆಹಾರ ಶುದ್ಧಿಯೆಂದರೆ, ರಾಗ, ದ್ವೇಷ, ಭ್ರಾಂತಿ ಇತ್ಯಾದಿ ದೋಷಗಳು ಅಂಟದಂತೆ ಐಂದ್ರಿಯ ಸಂವೇದನೆಯ ಜ್ಞಾನವನ್ನು ಸಂಪಾದಿಸುವುದೇ 'ಆಹಾರ ಶುದ್ಧಿ'ಯಾಗಿದೆ. ಆದ್ದರಿಂದ ಇಂಥ ಪರಿಶುದ್ಧಿಗೊಂಡ ಆಹಾರ ಇಲ್ಲವೆ ಜ್ಞಾನದಿಂದ, ಅದನ್ನು ಹೊಂದುವವನು ಅಂದರೆ ಆಂತರಿಕ ಅಂಗವು, ಪರಿಶುದ್ಧವಾಗುತ್ತದೆ. ಹೀಗೆ ಸತ್ತ್ವವು ಪರಿಶುದ್ಧವಾಗುವುದರಿಂದ ಶ್ರುತಿಯಲ್ಲಿ ನಿರ್ದೇಶಿತವಾದ ಅನಂತ ಪರಮನ ಧ್ರುವ ಸ್ಮೃತಿಯು ಉಂಟಾಗುತ್ತದೆ.

ಸೂಕ್ಷ್ಮ ಉಪಾಸನೆ :

ಸೂಕ್ಷ್ಮ ರೂಪ ಹೊಂದಿ ಸೂಕ್ಷ್ಮ ರೂಪವೆನಲು
ಸ್ಥೂಲ ರೂಪ ಹೊಂದಿ ಸ್ಥೂಲ ರೂಪ.
ಮಾತು ಒಂದೆ ಇದ್ದು ಮರ್ಮ ತಿಳಿಯಿರಯ್ಯ.
ವಿಶ್ವದಾಭಿರಾಮ ಕೇಳು ವೇಮ.

ಆಹಾರ ಶುದ್ಧಿಯು ಬೇಕು. ಸ್ಥೂಲ ಅನ್ನ ಶುದ್ಧಿಯು ಸ್ಥೂಲವಾದ ಅನ್ನಮಯ ಕೋಶಕ್ಕಾಗಿ ಬೇಕು. ಸೂಕ್ಷ್ಮ ಚಿಂತನೆ ಸಂವೇದನೆಗಳ ಶುದ್ಧಿಯು ಸೂಕ್ಷ್ಮವಾದ ಮನೋಮಯ ಕೋಶಕ್ಕೆಬೇಕು. ಹೀಗೆ ಸ್ಥೂಲ ಮತ್ತು ಸೂಕ್ಷ್ಮ ಶರೀರಗಳಿಗೆ ಶುದ್ಧ ಆಹಾರ ಒದಗಿಸಿ, ಆತ್ಮದತ್ತ ನೆಗೆಯಬೇಕು. ಹೀಗೆ ಸ್ಥೂಲ, ಸೂಕ್ಷ್ಮಗಳ ವಿಚಾರದಲ್ಲಿ ಮಾತು ಒಂದೇ ಇದ್ದು, ಅಲ್ಲಿಯ ಮರ್ಮವನ್ನು ಅರಿಯಬೇಕು.

ಮನಸ್ಸು ಅರ್ಥಾತ್ ಸೂಕ್ಷ್ಮ ಶರೀರದ ಯುಕ್ತಿ ಪೂರ್ಣ ನಿರ್ವಹಣೆ ಮತ್ತು ನಿಯಂತ್ರಣವು ಮಾಂಸ ಖಂಡದ ಸ್ಥೂಲ ಶರೀರದ ನಿಯಂತ್ರಣಕ್ಕಿಂತ ಉನ್ನತ ಕ್ರಿಯೆಗಳಾಗಿವೆಯೆಂಬಲ್ಲಿ ಸಂದೇಹವೇ ಇಲ್ಲ. ಆದರೆ ಸೂಕ್ಷ್ಮ ಶರೀರದ ನಿಯಂತ್ರಣ ಸಾಧಿಸುವ ಮುನ್ನ ಸ್ಥೂಲ ಶರೀರದ ನಿಯಂತ್ರಣವು ಅನಿವಾರ್ಯ ಅಗತ್ಯವಾಗಿದೆ.

ಆಹಾರ ಶುದ್ಧಿಯ ನೆಪದಲ್ಲಿ ಜಾತಿಯ ಮೇಲು ಕೀಳು ಭಾವನೆಯನ್ನು ಪ್ರಚೋದಿಸುತ್ತ, ಬಡ ಜನತೆಯ ಶೋಷಣೆ ಮಾಡುವುದು ನೀಚತನವಾಗಿದೆ. ಇದೇ ನೆಪದಲ್ಲಿ ಕಂದಾಚಾರವನ್ನೂ, ಶೀಲವಂತಿಕೆಯನ್ನೂ ಬೆಳೆಸುವುದು ಮೂರ್ಖತನ. ಆಹಾರ ಶುದ್ಧಿಯ ಹೆಸರಿನಲ್ಲಿ ಆಚರಿಸುವ ಇಂಥ ಎಂಜಿಲು, ಶೀಲವಂತಿಕೆಯ ದಂಭಾಚಾರವು ಜ್ಞಾನವೂ ಅಲ್ಲ ; ಭಕ್ತಿಯೂ ಅಲ್ಲ ; ಕರ್ಮವೂ ಅಲ್ಲ. ಅದು ಒಂದು ಬಗೆಯ ಮಾನಸಿಕ ಹುಚ್ಚು. ಇಂಥ ಭಾವ ಜಡತೆ ಅಂಟಿದವರು ಬ್ರಹ್ಮ ಲೋಕಕ್ಕೆ ಹೋಗುವ ಬದಲು, ಹುಚ್ಚಾಸ್ಪತ್ರೆಗೆ ಹೋಗುತ್ತಾರೆ.

ಮೇಲು ಕೀಳು :

ಹೊಲೆಯನ ಮೇಲು ಗುಣ ಒಳಿತು ಆಗಿ ಇಹುದು.
ಹೊಲೆಯ ಕೂಳು ತಿನುವ ಮನುಜನಷ್ಟೆ ?
ಗುಣವು ಮೇಲು ಅಷ್ಟೆ. ಕುಲಕೆ ಯಾವ ಮೇಲ್ಮೆ ?
ವಿಶ್ವದಾಭಿರಾಮ ಕೇಳು ವೇಮ.

ಆಹಾರ ಶುದ್ಧಿಯ ಮೂಲ ಉದ್ದೇಶವೇನು ? ಮನಸ್ಸನ್ನು ಶುದ್ಧಗೊಳಿಸಿ ಬ್ರಹ್ಮನತ್ತ ಹೊರಳಿಸುವುದು ತಾನೇ ?

ರಾಮ ನಾಮ ಪಠಣ ಗೆಯ್ದು ವಾಲ್ಮೀಕಿ
ಜಗದಿ ಬೇಡ ತಾನು ಬ್ರಾಹ್ಮಣಾದ.
ಕುಲವು, ಘನವು ಅಲ್ಲ ; ಗುಣವೆ ಘನವೆನ್ನಿರೊ.
ವಿಶ್ವದಾಭಿರಾಮ ಕೇಳು ವೇಮ.

ಬೇಡರ ಕುಲದಲ್ಲಿ ಹುಟ್ಟಿ ಹಿಂಸೆ, ದರೋಡೆ ವೃತ್ತಿಗಿಳಿದಿದ್ದ ವಾಲ್ಮೀಕಿ, ನಾರದ ಮಹರ್ಷಿಗಳ ಉಪದೇಶದಿಂದ ರಾಮ ಪಠಣ ಗೆಯ್ದು, ಬ್ರಹ್ಮಾನುಭೂತಿ ಪಡೆದು ಬ್ರಾಹ್ಮಣನೆನಿಸಿದ. ಐತಿಹಾಸಿಕ ಪುರುಷನಾದ, ಕ್ಷತ್ರಿಯ ರಾಜ ರಾಮನ ಜೀವನವನ್ನು ಆಧರಿಸಿ ನೀತಿ ಬೋಧಿಸುವ ರಾಮಾಯಣವೆಂಬ ಪುರಾಣವನ್ನು ಬರೆದನು. ಅವನಲ್ಲಾದ ಗುಣದ ಉದ್ದೀಪನೆಯು ಮುಖ್ಯ. ಕುಲವು ಘನವಲ್ಲ ; ಗುಣವು ಘನವೆನ್ನಿರೋ.

''ಜನ್ಮನಾ ಜಾಯತೇ ಶೂದ್ರಃ, ಸಂಸ್ಕಾರಾತ್ ದ್ವಿಜ ಉಚ್ಯತೇ''. ಅಂದರೆ ಎಲ್ಲರೂ ಜನ್ಮದಿಂದ ಶೂದ್ರರೇ. ಒಳ್ಳೇ ಸಂಸ್ಕಾರ ಹೊಂದಿ ಅಧ್ಯಾತ್ಮದಲ್ಲಿ ಮನ ತೊಡಗಿಸಿ, ಎರಡನೆಯ ಜನ್ಮ ಪಡೆಯುತ್ತಾರೆ. ದ್ವಿಜರೆನಿಸುತ್ತಾರೆ.

ಧರೆಯ ಶೂದ್ರನಾದುದರಿಯರು ಮೊದಲಿಗೇ
ಮನಸು 'ಅವನ' ಮೇಲೆ ಮರಳಿ ತಿರುಗಿ,

ಭಜಿಸೆ ದ್ವಿಜರಾಗರೆ ಬಹಳ ಕೋಟಿಗಟ್ಟಲೆ ?
ವಿಶ್ವದಾಭಿರಾಮ ಕೇಳು ವೇಮ.

ಮಾನವರಾರೂ ಅಯೋನಿಜರೇನಲ್ಲ. ಎಲ್ಲರೂ, ಗಂಡೇ ಆಗಲಿ, ಹೆಣ್ಣೇ ಆಗಲಿ, ಹೊಲೆಯುಳ್ಳ ಯೋನಿಯಿಂದಲೇ ಜನಿಸಿದ್ದಾರೆ. ಮತ್ತು ಜನಿಸುವಾಗ ಗರ್ಭದಿಂದ ಪ್ರಸೂತವಾದಾಗ ಶಿಶು ಅಳುತ್ತದೆ. 'ಶೋಚತಿ ಇತಿ ಶೂದ್ರಃ' ಎಂದು ಆಚಾರ್ಯ ಶಂಕರರೇ ವ್ಯಾಖ್ಯಾನಿಸಿದ್ದಾರೆ. ಆದ್ದರಿಂದ ಧರೆಯಲ್ಲಿ ಜನಿಸಿದವರೆಲ್ಲರೂ ಮೊದಲಿಗೆ ಶೂದ್ರರಾಗಿರುವದನ್ನು ಮೇಲು ಕೀಳಿನ ಭಾವನೆಯ ಅಂಧಾಭಿಮಾನಿಗಳು ಅರಿಯರು. ಯಾವಾಗ ತಮ್ಮ ಮನಸ್ಸು ಒಳ್ಳೆಯ ಸಂಸ್ಕಾರ ಹೊಂದಿ, 'ಅವನ' ಅಂದರೆ ಆ ಬ್ರಹ್ಮನ ಕಡೆಗೆ ತಿರುಗುವುದೋ, ಆಗ ಅವನಿಗೆ ಪರದಲ್ಲಿ ಎರಡನೆಯ ಜನ್ಮವಾದಂತೆ. ಅವನು ದ್ವಿಜನೆನಿಸುತ್ತಾನೆ. ಬ್ರಹ್ಮನನ್ನು ಭಜಿಸುತ್ತಾನೆ. ಕೋಟಿಗಟ್ಟಲೆ ಜನರು ಹೀಗೆ ದ್ವಿಜರಾಗುತ್ತಾರೆ.

ಸಮಾಜದ ಸುವ್ಯವಸ್ಥೆಗಾಗಿ ವರ್ಣ ವ್ಯವಸ್ಥೆಯು ಕಲ್ಪಿತವಾಯಿತು. ಜನನದಿಂದ ಜಾತಿಯು ಅಂಟುತ್ತದೆ. ಆಯಾ ವ್ಯಕ್ತಿಯ ಗುಣ ಮತ್ತು ಕರ್ಮಗಳಿಂದ ಅವನ ವರ್ಣವೂ ನಿರ್ಣಯಿಸಲ್ಪಡಬೇಕು. ಇದನ್ನೇ ಕೃಷ್ಣನು ಗೀತೆಯಲ್ಲಿ 'ಚಾತುರ್ವರ್ಣ್ಯಂ ಮಾಯಾ ಸೃಷ್ಟ ಗುಣಕರ್ಮ ವಿಭಾಗಶಃ'. ಅಂದರೆ ಅವರವರ ಗುಣ ಮತ್ತು ಕರ್ಮಗಳ ಮೇರೆಗೆ ನಾಲ್ಕು ವರ್ಣಗಳನ್ನು ಸೃಜಿಸಿದ್ದೇನೆ ; ಎಂದು ಹೇಳಿದ್ದಾನೆ. ಸತ್ತ್ವ ಗುಣದ ಪ್ರಾಬಲ್ಯವಿದ್ದವರು ಬ್ರಾಹ್ಮಣರು. ರಜೋಗುಣ ಇಲ್ಲವೆ ಕ್ಷಾತ್ರ ಗುಣ ಪ್ರಬಲವಾಗಿದ್ದವರು ಕ್ಷತ್ರಿಯರು. ರಜೋಗುಣ ಮತ್ತು ತಮೋಗುಣಗಳು ಮಿಶ್ರವಾಗಿದ್ದವರು ವೈಶ್ಯ ಹಾಗೂ ತಮೋಗುಣ ಪ್ರಾಬಲ್ಯವಿದ್ದವರು ಶೂದ್ರರು.

'ಶೋಚತಿ ಇತಿ ಶೂದ್ರಃ' ಎಂಬ ವ್ಯಾಖ್ಯಾನುಸಾರ ಅಳುತ್ತ ಜನಿಸುವರೆಲ್ಲರೂ ಶೂದ್ರರೇ ಸರಿ.

ಶೂದ್ರರಲ್ಲಿ ಹುಟ್ಟಿ, ಶೂದ್ರರನು ನಿಂದಿಸಿ,
ದ್ವಿಜನು ಎಂಬ ಹೆಸರು ನಿಜವ ಮಾಡಿ,
ಮನಸು ನಿಲಿಸದಿರಲು ಮನದಿ ಅಧಿಕ ಶೂದ್ರ.
ವಿಶ್ವದಾಭಿರಾಮ ಕೇಳು ವೇಮ.

ವ್ಯಾಸನು ಅಂಬಿಗಳ ಮಗನು. ಅವನ ತಂದೆ ಪರಾಶರನು ಸೂಳೆಯ ಮಗನು. ಹೀಗೆ ಶೂದ್ರರಲ್ಲಿ ಹುಟ್ಟಿದ ವ್ಯಾಸನು. ಶೂದ್ರರಲ್ಲಿ ಹುಟ್ಟಿ, ಮಹಾಭಾರತದಲ್ಲಿ ಶೂದ್ರರನ್ನೇ ನಿಂದಿಸಿದ ವ್ಯಾಸನು ತನ್ನನ್ನು ದ್ವಿಜನೆಂದುಕೊಳ್ಳಬಹುದು. ಏಕೆಂದರೆ ಅವನು ಮನಸ್ಸು ನಿಲ್ಲಿಸಿ ಮೇಲೇರಿದ್ದನು. ಪಾಂಡು, ಧೃತರಾಷ್ಟ್ರರನ್ನು ನಿಯೋಗ ಪುತ್ರರನ್ನಾಗಿ ಕ್ಷತ್ರಿಯ ಕನ್ನೆಯರಲ್ಲಿ ಮತ್ತು ವಿದುರರನ್ನು ಓರ್ವ ದಾಸಿಯಲ್ಲಿ ಹುಟ್ಟಿಸಿದ್ದನು. ಆದರೆ ಇಂದು ಕೋಟ್ಯಾನು ಕೋಟಿ ಜನರು ಮನಸ್ಸು ನಿಲ್ಲಿಸದೆ, ಕೊರಳಲ್ಲಿ ದಾರ ಬಿಗಿದು ತಾವು ದ್ವಿಜರೆಂದು ಬೀಗುತ್ತಾರೆ. ಮನಸು ನಿಲಿಸದಿರಲು ಮನದಲ್ಲಿ ಅಧಿಕ ಶೂದ್ರನೇ ಸರಿ.

ಮಾದಿಗಳಾದ ಅರುಂಧತಿಯನ್ನು ಮದುವೆಯಾದ ಮಾದಿಗನಾಗಿದ್ದ ವಶಿಷ್ಠ ಮಹರ್ಷಿಯು ಸಾಧನೆಯ ಸಿದ್ಧಿಯಿಂದ ಮನೋಶುದ್ಧಿ ಹೊಂದಿ ಬ್ರಾಹ್ಮಣನೆನಿಸಿದ. ಶ್ರೀರಾಮನ

ವರ ಗುರುವಾದನು. ಬೇಡನಾದ ವಾಲ್ಮೀಕಿ, ರಾಮನಾಮ ಪಠಣದಿಂದ ಮನಸ್ಸನ್ನು ನಿಲ್ಲಿಸಿ ಮಹರ್ಷಿಯಾದ. ಶ್ರೀಮದ್ರಾಮಾಯಣವನ್ನು ರಚಿಸಿದ. ಕ್ಷತ್ರಿಯ ಅರಸನಾದ ವಿಶ್ವಾಮಿತ್ರನು ರಚಿಸಿದ ಸವಿತೃ ದೇವತೆಯ ಸ್ತುತಿಯಾದ ಗಾಯತ್ರಿ ಛಂದಸ್ಸಿನಲ್ಲಿರುವ 'ಓಂ ಭೂರ್ಭುವಸ್ಸುಃ ಓಂ ತತ್ಸವಿತುರ್ವರೇಣ್ಯಂ ಭರ್ಗೋದೇವಸ್ಯ ಧಿಯೋ ಯೋನಃ ಪ್ರಚೋದಯಾತ್' ಎಂಬ ಮಂತ್ರವನ್ನು ತ್ರಿಕಾಲ ಸಂಧ್ಯೆಗಳಲ್ಲಿ ಪಠಿಸುವ, ಜನಿವಾರ ಕಟ್ಟುವ ಸಂಸ್ಕಾರ ಹೊಂದಿದ ತಥಾಕಥಿತ ದ್ವಿಜರು ವರ್ಣದ ಸರಿಯಾದ ಇಂಗಿತವನ್ನು ತಿಳಿಯಬೇಡವೇ ?

ಮಾದರವನೆ ಇರಲಿ ಮತ್ತೆ ಆತ್ಮ ಮೇಲೆ,
ಮನಸು ನಿಲಿಸಿದೊಡನೆ ಮಾದಿಗಲ್ಲ.
ಮನಸು ನಿಲಿಸದವನೆ ಮಹಿಯ ಮೇಲೆ ಹೊಲೆಯ.
ವಿಶ್ವದಾಭಿರಾಮ ಕೇಳು ವೇಮ.

ಮಾದರು ಸತ್ತ ಪಶುಗಳನ್ನು ಎತ್ತಿ ಒಯ್ಯುತ್ತಾರೆ. ಅವುಗಳ ಮಾಂಸವನ್ನು ಭಕ್ಷಿಸುತ್ತಾರೆ. ಅವರು ಜೀವ ಹಿಂಸೆಯನ್ನೇನೂ ಮಾಡುವುದಿಲ್ಲ. ಆದರೂ ಸಮಾಜವು ಅವರನ್ನು ನಿಕೃಷ್ಟವಾಗಿ ನೋಡುತ್ತಿದೆ. ಆದರೆ ಮಾದರ ಕುಲದಲ್ಲಿ ಜನಿಸಿದ್ದರೂ ಅಧ್ಯಾತ್ಮ ಸಾಧನೆ ಮಾಡಿ ಮನ ನಿಲ್ಲಿಸಿದೊಡನೆ ಅವನು ಸತ್ವ ಗುಣವನ್ನೂ ದಾಟಿ ಹೋಗಬಹುದು. ಆಗ ಅವನು ಮಾದಿಗನಲ್ಲ. ಬ್ರಹ್ಮರ್ಷಿ ವಸಿಷ್ಠರ ಕುಲದ ಬ್ರಾಹ್ಮಣನಾಗುತ್ತಾನೆ. ಹಾಗೆ ನೋಡಿದರೆ ಮನಸ್ಸನ್ನು ನಿಲ್ಲಿಸಲಾರದ, ತಥಾಕಥಿತ ಹಾರುವನು, ಮಹಿಯ ಮೇಲೆ ಜೀವಿಸಿರುವ ಹೊಲೆಯನಷ್ಟೇ.

ಪಲ್ಯ ಗಡ್ಡೆ ತಿನುವ ಪಶುಗಳನ್ನು ಕಡಿದು,
ಮನುಜರುಣಲು ಜಗದಿ ಮಾದಿಗರಲ !
ಮಂದಿ ಮಲವ ತಿನುವ, ಹಂದಿ ಕೋಳಿ ಭುಜಿಪ
ಜನರ ಕುಲವದೇನೂ ? ಜಗದಿ ವೇಮ.

ಆಹಾರ ಶುದ್ಧಿಯ ದೃಷ್ಟಿಯಿಂದ ನೋಡಿದರೆ, ಕಾಯಿಪಲ್ಯ, ಹುಲ್ಲು, ಗಡ್ಡೆಗಳನ್ನು ತಿನ್ನುವ ಸಾಕು ಪ್ರಾಣಿಗಳು 'ಪಾಲನಾತ್ ಪಾಶನಾತ್ ಇತಿ ಪಶುಃ'. ಅಂದರೆ ಕಟ್ಟಿ ಮೇಯಿಸುವುದರಿಂದ ಪಶುವೆನಿಸಿಕೊಳ್ಳುತ್ತದೆ. ಸತ್ತ ಮೇಲೆ ಜೀವ ಹಿಂಸೆ ಮಾಡದೆ ತಿನ್ನುವ ಮನುಷ್ಯರನ್ನು ಜಗತ್ತಿನಲ್ಲಿ ಮಾದಿಗ ಎಂದು ಕರೆದು ಹೀನವಾಗಿ ನೋಡುತ್ತಾರೆ. ಆದರೆ ಜನರ ಮಲವನ್ನು ತಿನ್ನುವ ಹಂದಿ ಕೋಳಿಗಳನ್ನು ಕೊಂದು ತಿನ್ನುವ ಜನರ ಕುಲವು ಜಗತ್ತಿನಲ್ಲಿ ಮೇಲಾದುದೇನು ?

ಜಾತಿ ಬ್ರಾಹ್ಮಣರು ಮನು ಸ್ಮೃತಿಯನ್ನು ನಿಷ್ಠೆಯಿಂದ ಪಾಲಿಸುತ್ತಾರೆ. ಅದರಲ್ಲಿ, ಅವರಿಗೆ ಯೋಗ್ಯವೆನಿಸುವ ಧರ್ಮ ಸೂತ್ರಗಳನ್ನು ಲೇಖಿಸಿದ್ದಾರೆ. ಹವಿಸ್ಸು ಎಂದರೆ ಯಜ್ಞದ ಅಗ್ನಿಯಲ್ಲಿ ಹಾಕುವ ತುಪ್ಪ ಇತ್ಯಾದಿ.

''ಋಷಿ ಮುನಿಗಳ ಆಹಾರಗಳಾದ ನಿವಾರವೆಂಬ ಆಹಾರ ಧಾನ್ಯಗಳು, ಹಾಲು, ಸೋಮರಸ, (ಮಾದಕ ಪೇಯ) ಶುದ್ಧ ಮಾಂಸ, ಭೂಮಿಯಲ್ಲಿ ಹುಟ್ಟುವ ಸೈಂಧಲವಣವೆಂಬ ಉಪ್ಪು ಇವುಗಳನ್ನು ಹವ್ಯಿಸ್ಸುಗಳೆಂದು ಹೇಳುತ್ತಾರೆ''. (ಮನು ಸ್ಮೃತಿ 3-257)

''ವಿಧಿ ಪ್ರಕಾರವಾಗಿ ಪಿಂಡ ಪ್ರದಾನವನ್ನು ಮಾಡಿದ ಬಳಿಕ, ಪಿತೃಗಳಿಗೆ ಪ್ರಾರ್ಥಿಸಿಕೊಂಡ ನಂತರ, ಆ ಪಿಂಡಗಳನ್ನು ವಿಪ್ರರಿಗಾಗಲಿ, ಗೋವುಗಳಿಗಾಗಲಿ, ಆಡಿಗಾಗಲಿ ತಿನ್ನಲು ಕೊಡಬೇಕು ಅಥವಾ ಅಗ್ನಿಯಲ್ಲಾಗಲಿ, ನೀರಲ್ಲಾಗಲಿ ಹಾಕಬೇಕು''.

(ಮನು ಸ್ಮೃತಿ 3-260)

''ಎಳ್ಳು, ಭತ್ತ, ಜವೆಗೋದಿ, ಉದ್ದು, ನೀರು, ಗಡ್ಡೆ, ಹಣ್ಣುಗಳು ಇವುಗಳಲ್ಲಿ ಯಾವುದೇ ಒಂದನ್ನು ವಿಧಿವತ್ತಾಗಿ ಹವಿಸ್ಸಾಗಿ ಶ್ರದ್ಧೆಯಿಂದ ನೀಡಿದರೆ ಪಿತೃಗಳು (ಕೇವಲ) ಒಂದು ತಿಂಗಳ ವರೆಗೆ ತೃಪ್ತಿಯಿಂದ ಇರುತ್ತಾರೆ''. (ಮನು ಸ್ಮೃತಿ 3-267)

''ಮೀನಿನ ಮಾಂಸದಿಂದ ಎರಡು ತಿಂಗಳು, ಜಿಂಕೆಯ ಮಾಂಸದಿಂದ ಮೂರು ತಿಂಗಳು, ಕುರಿಯ ಮಾಂಸದಿಂದ ನಾಲ್ಕು ತಿಂಗಳು, ಪಕ್ಷಿಯ ಮಾಂಸದಿಂದ ಐದು ತಿಂಗಳು ಹೀಗೆ ಪಿತೃಗಳು ತೃಪ್ತಿಯಿಂದಿರುತ್ತಾರೆ''. (ಮನು ಸ್ಮೃತಿ 3-268)

''ಆಡಿನ ಮಾಂಸದಿಂದ ಆರು ತಿಂಗಳು, ಚಿರತೆ ಮಾಂಸದಿಂದ ಏಳು ತಿಂಗಳು, ಕೃಷ್ಣಮೃಗದ ಮಾಂಸದಿಂದ ಎಂಟು ತಿಂಗಳು, ಸಾರಂಗದ ಮಾಂಸದಿಂದ ಒಂಭತ್ತು ತಿಂಗಳು ಹೀಗೆ ಪಿತೃಗಳು ತೃಪ್ತಿಯಿಂದಿರುತ್ತಾರೆ''. (ಮನು ಸ್ಮೃತಿ 3-299)

''ಕಾಡು ಹಂದಿ, ಕಾಡು ಕೋಣಗಳ ಮಾಂಸದಿಂದ ಹತ್ತು ತಿಂಗಳು, ಮೊಲ ಮತ್ತು ಆಮೆಗಳ ಮಾಂಸದಿಂದ ಹನ್ನೊಂದು ತಿಂಗಳು ಪಿತೃಗಳು ತೃಪ್ತಿಯಿಂದ ಇರುತ್ತಾರೆ''.

(ಮನು ಸ್ಮೃತಿ 3-270)

''ಗೋವಿನ ಹಾಲಿನಿಂದ ಹಾಗೂ ಅದರ ಪಾಯಸದಿಂದ ಒಂದು ವರ್ಷ ಪರ್ಯಂತ ತೃಪ್ತಿಯಿಂದ ಇರುತ್ತಾರೆ. ಖಡ್ಗ ಮೃಗದ ಮಾಂಸ (ಗಂಡಕದ ಮಾಂಸ) ದಿಂದ ಹನ್ನೆರಡು ವರ್ಷ ತೃಪ್ತಿಯಿಂದಿರುತ್ತಾರೆ''. (ಮನು ಸ್ಮೃತಿ 3-271)

''ಕಾಲ ಶಾಕವೆಂಬ ಕಾಯಿಪಲ್ಯ, ಮಹಾಶಲ್ಯವೆಂಬ ಮೀನುಗಳು, ಖಡ್ಗಮೃಗ ಮತ್ತು ಲೋಹ ಮೃಗಗಳ ಮಾಂಸ, ಜೇನು, ನಿವಾರಾದಿ (ಕಾಡಿನಲ್ಲಿ ಬೆಳೆಯುವ ಸಾಮೆ ಅಕ್ಕಿ ಇತ್ಯಾದಿ) ಮುನಿಗಳ ಆಹಾರ ಧಾನ್ಯಗಳು. ಇವು ಅನಂತ ಫಲವನ್ನು ಕೊಡುವ ನಿತ್ಯ ಶ್ರಾದ್ಧ ಪದಾರ್ಥಗಳಾಗಿವೆ''. (ಮನು ಸ್ಮೃತಿ 3-272)

ಹೀಗೆ ಬ್ರಾಹ್ಮಣರು ಬಹಳಷ್ಟು ಮಾಂಸಾಹಾರಿಗಳಾಗಿದ್ದರು. ಬೌದ್ಧ ಮತ್ತು ಜೈನ ಧರ್ಮಗಳ ಪ್ರಭಾವದಿಂದ ಯಜ್ಞ ಯಾಗಗಳಲ್ಲಿ, ಶ್ರಾದ್ಧಗಳಲ್ಲಿ ಜೀವ ಹಿಂಸೆ ಕಡಿಮೆಯಾಯಿತೇನೋ ನಿಜ. ಆದರೆ ಇದು ಭಾರತದಲ್ಲಿರುವ ಒಂದು ನೂರಾ ಹದಿನಾರು ಶಾಖೆಗಳಲ್ಲಿ ಹರಿದು ಹೋಗಿರುವ ಜಾತಿ-ಬ್ರಾಹ್ಮಣರು ಧಾರ್ಮಿಕ ವಿಧಿಗಳಲ್ಲಿ ಜೀವ ಹಿಂಸೆ ನಿಲ್ಲಿಸಿದ್ದರೂ ಕಣಕದ ಪ್ರತಿಮೆಗಳನ್ನು ಮಾಡಿ ಅವೇ ಮಂತ್ರ ಪಠಿಸುತ್ತಾರೆ. ಇದಲ್ಲದೆ, ಸಾರಸ್ವತ, ಬಂಗಾಳೀ, ಕೇರಳೀಯ ಬ್ರಾಹ್ಮಣರು ಮಾಂಸ ಭಕ್ಷಣೆಯನ್ನೂ, ಪಶುಬಲಿಯನ್ನೂ ಯಥಾವತ್ತಾಗಿ ಮುಂದುವರಿಸಿದ್ದಾರೆ.

ಆಹಾರ ಶುದ್ಧಿಯು ಮನೋಶುದ್ಧಿಯ ಆರಂಭದ ಮೆಟ್ಟಿಲು. ಮನೋವಿಕಾರಗಳನ್ನು

ಸರಿಯಾಗಿ ನಿಯಂತ್ರಿಸಬೇಕು. ಬಾಹ್ಯದತ್ತ ಹರಿಯದಂತೆ ನಮ್ಮ ಇಂದ್ರಿಯಗಳನ್ನು ನಿಗ್ರಹಿಸುವುದು, ಅವುಗಳನ್ನು ಶುದ್ಧ ಇಚ್ಛಾ ಶಕ್ತಿಗೆ ಅಂಕಿತಗೊಳಿಸುವುದು ಧಾರ್ಮಿಕ ಸಂಸ್ಕೃತಿಯಲ್ಲಿ ಕೇಂದ್ರೀಯ ಮೂಲ್ಯವಾಗಿದೆ.

ಆಸೆ :

ಏರುತಿಪ್ಪ ಆಶೆ ಎರಡು ಪಟ್ಟು ಆಗೆ,
ದಿಕ್ಕುಗೆಟ್ಟು ನರನು ತಿರುಗುತಿಹನು.
ಸೊಣಗನಂಥ ಆಸೆ ಸೇರಿಕೊಳಲು ಬಿಡದು.
ವಿಶ್ವದಾಭಿರಾಮ ಕೇಳು ವೇಮ.

ಆಹಾರ ಶುದ್ಧಿಯಿಂದ ಮನೋಶುದ್ಧಿಯಾಗುತ್ತದೆ. ಮನದ ಶುದ್ಧಿಯೆಂದರೇನು ? ಮನವು ಏಕಾಗ್ರಗೊಂಡು ಲಕ್ಷ್ಯ ಮಸ್ತುವಾದ ಆತ್ಮದಲ್ಲಿ ಕೇಂದ್ರೀಕೃತವಾಗಲು ಮನಸ್ಸಿನ ವಿಕಾರಗಳು ಅರಿಗಳಂತೆ ಅಡ್ಡ ಬರುತ್ತವೆ. ಮನೋಶುದ್ಧಿಯಿಂದ ಈ ವೈರಿಗಳನ್ನು ಜಯಿಸಬೇಕು.

ಕಂ. ಅರಿಷಡ್ವರ್ಗಗಳಿಂದಲಿ,
ನರರೆಲ್ಲರು ಸಿಕ್ಕು, ಸೊಕ್ಕಿ ನಿಜವ ಹಿಡಿಯದೇ.
ಸರಿಯುತಿಹರು, ಜೀರ್ಣಿಸದೆ
ಮರೆಯಾಗಿಹುದು, ಬ್ರಹ್ಮವು ಎನುವರು, ವೇಮಾ.

ಅರಿಷಡ್ವರ್ಗಗಳಾವವು ? ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರ. ಇವು ಆರು ವೈರಿ ವರ್ಗಗಳು. ಮಾನವ ಮನಸ್ಸು ಇವುಗಳ ಸೆಳೆತದಲ್ಲಿ ಸಿಲುಕಿ, ಇವುಗಳ ಪ್ರಭಾವದಿಂದ ಸೊಕ್ಕಿ, ಸತ್ಯದ ಹಾದಿಯನ್ನು ಹಿಡಿಯದೆ, ನಿಜದ ಮಹಿಮೆಯನ್ನು ಜೀರ್ಣಿಸಿಕೊಳ್ಳದೆ ನಿಜದಿಂದ ಸರಿಯುತ್ತಿರುವುದು. ತಮ್ಮ ಅಹಮಿನ ಬಲೆಯನ್ನು ಸೊಕ್ಕಿನಿಂದ ದಪ್ಪವಾಗಿಸಿಕೊಂಡು, ಬ್ರಹ್ಮನೇ ಮರೆಯಾಗಿರುವನು ಎಂದು ಹೇಳುತ್ತಾರೆ.

ಈ ಅರಿಷಡ್ವರ್ಗಗಳಲ್ಲಿ ಆಸೆಯು ತುಂಬಾ ಪ್ರಬಲ ವೈರಿ. ಅದರಿಂದ ಹೆಚ್ಚಾಗಿ ಮನುಷ್ಯನು ದಿಕ್ಕು ಗೆಟ್ಟು ತಿರುಗುತ್ತಾನೆ. ನಾಯಿಯಂತೆ ಆಸೆ ಬೆಂಬತ್ತಿ ಆತ್ಮದೊಂದಿಗೆ ಸೇರಿಕೊಳ್ಳಲು ಬಿಡುವುದಿಲ್ಲ.

ಆ. ಆಸೆಗಿಂತ ದುಃಖ ಅತಿಶಯಾಗಿ ಉಂಟು.
ನೋಟ ನಿಲಿಸದಿರಲು ನೆಮ್ಮದಿಲ್ಲ.
ಮನಸು ನಿಲಿಸದಿರಲು ಮತ್ತೆ ಮುಕ್ತಿ ಇಲ್ಲ.
ವಿಶ್ವದಾಭಿರಾಮ ಕೇಳು ವೇಮ.

ವಿಷಯಗಳ ಸಂಗ ಹೊಂದಿ, ಅವುಗಳನ್ನು ಭೋಗಿಸಬೇಕೆಂಬ ಆಸೆಯಾಗುತ್ತದೆ. ಆ ಬಯಕೆ ಈಡೇರದಿದ್ದರೆ, ಕ್ರೋಧ ಉಂಟಾಗುತ್ತದೆ. ಅದರಿಂದ ಅತಿಶಯ ದುಃಖವು ಒತ್ತರಿಸುತ್ತದೆ. ಆದ್ದರಿಂದ ವಿಷಯಗಳತ್ತ ನೋಡಲೇಬಾರದು. ನೋಟವನ್ನು ನಿಲ್ಲಿಸದಿದ್ದರೆ ಮನಸ್ಸಿಗೆ ನೆಮ್ಮದಿ ದೊರೆಯದು. ಇನ್ನು ಮನಸ್ಸನ್ನು ನಿಲ್ಲಿಸದಿದ್ದರೆ, ಐಹಿಕ ಆಮಿಷಗಳಿಂದ ಮುಕ್ತಿ ದೊರೆಯದು.

ಇಲಿಯ ಹಿಡಿಯೆ ಬೆಕ್ಕು ಇಷ್ಟಪೂರ್ತಿಯಹುದೆ ?
ಕೋಳಿ ಹಿಡಿಯೆ ಸಿದ್ಧಗೊಳ್ಳುತಿಹುದು.
ಮಮತೆ ತೊರೆಯದನಕ ಮೋಕ್ಷ ದೊರೆವುದೆಂತು ?
ವಿಶ್ವದಾಭಿರಾಮ ಕೇಳು ವೇಮ.

ಮನುಷ್ಯನ ಆಸೆಗೆ ಮಿತಿಯಿಲ್ಲ. ಮೃಗಗಳಾಗಲಿ, ಪಶುಗಳಾಗಲಿ, ಪಕ್ಷಿಗಳಾಗಲಿ, ತಮ್ಮ ಹಸಿವೆ ಹಿಂಗಿಸುವಷ್ಟೇ ಆಹಾರ ಅರ್ಜಿಸಿ ತೃಪ್ತವಾಗುತ್ತವೆ. ಆದರೆ ಅಹಂಕಾರ ಮತ್ತು ಮಮತೆಯುಳ್ಳ ಮನುಷ್ಯನು ಇಷ್ಟು ದೊರೆತರೆ ಇನ್ನಷ್ಟು ಇರಲೆಂದು ಹಲುಬುತ್ತಾನೆ. ಮಾನವನ ಸಹವಾಸದಿಂದ ಬೆಕ್ಕಿಗೂ ಚಟ ಅಂಟಿದೆಯೇನೋ ? ಬೆಕ್ಕು ತನ್ನ ಹಸಿವೆಯನ್ನು ಹಿಂಗಿಸಲು ಇಲಿಯನ್ನು ಹಿಡಿಯುತ್ತದೆ. ಆ ಕೂಡಲೇ ಅದು ಕೋಳಿಯ ಮರಿಯನ್ನು ಕಂಡರೆ ಅದನ್ನೂ ಹಿಡಿಯಲು ಸಿದ್ಧವಾಗುತ್ತದೆ. ಅದು ತನ್ನ ಆಹಾರದ ಸಂಚಯ ವೃತ್ತಿಗೆ ತೊಡಗುತ್ತದೆ. ತನ್ನದು ಇಷ್ಟಾದರೆ ಸಾಲದು ; ಇನ್ನಷ್ಟು ಬೇಕು ; ಎಂದು ಹಪಾಪಿಸುತ್ತದೆ. ಆದ್ದರಿಂದ ನಾನು, ನನ್ನದು ಎಂಬ ಅಭಿಮಾನದಿಂದ ಸಂಚಯ ಪ್ರವೃತ್ತಿ ತೊರೆಯದೆ, ಇಹದ ಬಂಧನದಿಂದ ಬಿಡುಗಡೆ, ಮೋಕ್ಷ ದೊರೆಯುವುದೆಂತು ?

ಆ. ಆಸೆಯೆಂಬ ಲತೆಯ ನಾಶಗೊಳಿಸದನಕ,
ಮೋಹ ಜಲಧಿಯಲ್ಲಿ ಮುಳುಗುತಿಹರು.
ಕಾಶಿವಾಸಿಯೇನು ? ಕಾಣಲಾರ ಮೋಕ್ಷ.
ವಿಶ್ವದಾಭಿರಾಮ ಕೇಳು ವೇಮ.

ನೀರಿನ ಮಡುವಿನಲ್ಲಿ, ಹೊಂಡಗಳಲ್ಲಿ ಅಂತರಗಂಗೆಯೆಂಬ ಬಳ್ಳಿ ಬೆಳೆದಿರುತ್ತದೆ. ಅದು ಈಜಲು ನೀರಿಗಿಳಿದವರ ಕಾಲಿಗೆ ತೊಡಕುಬಿದ್ದು ಅವರನ್ನು ಮುಳುಗಿಸಬಹುದು. ಅದೇ ರೀತಿ, ಮೋಹ ಜಲಧಿಯಲ್ಲಿ ಜೀವಿಸಲು ಇಳಿದ ಜೀವಿಯು ಆಸೆಯೆಂಬ ಬಳ್ಳಿಗೆ ಕಾಲ್ತೊಡಕಿ ನಾಶವಾಗಬಹುದು. ಹೀಗಾಗಬಾರದಿದ್ದರೆ ಆ ಆಸೆಯೆಂಬ ಲತೆಯನ್ನು ನಾಶಗೊಳಿಸಬೇಕು.

ಕೋಪ :

ಕಾಮನೆ ಅಂದರೆ ಆಸೆಯು ಆತ್ಮಮುಖೀ ಪಥದಲ್ಲಿ ಸಾಗುವ ಸಾಧಕನಿಗೆ ವೈರಿಯಾಗಿರುವಂತೆ, ಕ್ರೋಧವೂ ವೈರಿಯಾಗಿ ಅಡ್ಡಿ ಮಾಡುತ್ತದೆ.

ಕಾಮ ಮತ್ತು ಕ್ರೋಧಗಳು, ಜೀವಿಯ ಇಚ್ಛೆಯಿರಲಿ ಬಿಡಲಿ, ಅವನನ್ನು ಬಲಾತ್ಕಾರದಿಂದ ನಿಯಂತ್ರಿಸುತ್ತವೆ. ಮತ್ತು ಅವನು ಅಸ್ವತಂತ್ರನಾಗಿ ಪಾಪವನ್ನು ಆಚರಿಸುವಂತೆ ಪ್ರೇರಿಸುತ್ತವೆ ಎಂದು ಶ್ರೀ ಕೃಷ್ಣನು ಹೇಳುತ್ತಾನೆ :

"ಇದು ಕಾಮವು. ಇದು ಕ್ರೋಧವು. ರಜೋಗುಣದಿಂದ ಹುಟ್ಟಿದ್ದು. ಇದು ಸರ್ವ ಗ್ರಾಸಿ. ಮಹಾಪಾಪಿ. ಇದನ್ನು ಇಲ್ಲಿ ಸಂಸಾರದಲ್ಲಿ ಶತ್ರುವೆಂದು ತಿಳಿ". (ಭಗವದ್ಗೀತ 3-37)

ಕೋಪದಿಂದ ನರಕ ಕೂಪವನು ಸೇರುವ.
ಕೋಪದಿಂದ ಮಿಗಿಲು ತಾಪವಿಹುದು.

ಕೋಪ ನಿಗ್ರಹಿಸಲು ಕೋರಿಕೆ ಫಲಿಸುವುದು.
ವಿಶ್ವದಾಭಿರಾಮ ಕೇಳು ವೇಮ.

ಕೋಪ ವೃತ್ತಿಯಿಂದ ಮಲಿನವಾದ ಚಿತ್ತವನ್ನು ಶುದ್ಧಿ ಮಾಡಬೇಕು. ಇದು ಸಂಸಾರದಲ್ಲಿ ಶತ್ರುವಾಗಿದೆ. ಮನುಷ್ಯನು ತನ್ನ ಸಹಜ ವಾಸನೆಯಿಂದ ವಿಷಯಗಳ ಸಂಗ ಮಾಡುತ್ತಾನೆ. ಅದರಿಂದ ವಿಷಯಗಳ ಭೋಗದ ಬಯಕೆ ಉಂಟಾಗುತ್ತದೆ. ಈ ಕಾಮನೆಯು ಈಡೇರಿದಾಗ ಕ್ರೋಧ ಉಂಟಾಗುತ್ತದೆ. ಈ ಕ್ರೋಧದಿಂದ ಮಾನವನು ದುಃಖಿಗಳ ಕೂಪದಲ್ಲಿ ಬೀಳುತ್ತಾನೆ. ಅದರಿಂದ ಮಿಗಿಲಾಗಿ ತಾಪವುಂಟು. ಏನಾದರೂ ಮಾಡಿ ಕೋಪವನ್ನು ನಿಗ್ರಹಿಸಬೇಕು ಹೇಗೆ ? ಕೋಪಕ್ಕೆ ಕಾರಣವಾದ ಕಾಮವನ್ನು ತೊರೆಯಬೇಕು. ಕಾಮಕ್ಕೆ ಕಾರಣವಾದ ವಿಷಯ ಸಂಗವನ್ನು ತೊರೆಯಬೇಕು. ಹೀಗೆ ಮನಸ್ಸನ್ನು ಶುದ್ಧಗೊಳಿಸಬೇಕು. ಆಗ ಕೋಪ ನಿಗ್ರಹ ಸಾಧ್ಯ. ಕೋಪ ನಿಗ್ರಹವಾದರೆ, ಮನಸ್ಸು ಶುದ್ಧವಾಗಿ ಮನದ ಕೋರಿಕೆಯಾದ ಊರ್ಧ್ವ ಗತಿಯು ಫಲಿಸುತ್ತದೆ.

ಇದನ್ನೇ ಇನ್ನೊಂದು ಪದ್ಯದಲ್ಲಿ ವಿವರವಾಗಿ ಹೇಳಿದ್ದಾರೆ.

ಅನವರತ ಘೃಣೆ ತೊರೆದು, ಅನಲವನು ಆರಿಸಿ,
ಗೋಟಿ ಬಿಗಿದು ಕಟ್ಟಿ ಕೋಪ ಮೆಟ್ಟಿ,
ಆಸೆ ಬಿಡುವ ಅವನು ಆಗುವನು ಯೋಗಿಯು.
ವಿಶ್ವದಾಭಿರಾಮ ಕೇಳು ವೇಮ.

ಯಾವಾಗಲೂ ಸುತ್ತು ಮುತ್ತಿನ ವಿಷಯಗಳಲ್ಲಿ ಹೇಸಿಕೊಂಡು, ಘೃಣೆ ತಾಳಿ, ನಿಂದೆ ತಿರಸ್ಕಾರಗಳಿಗಿಳಿಯದೆ, ಸರ್ವವನ್ನೂ ಶಿವಮಯವೆಂದು ಪ್ರೀತಿಸಬೇಕು. ಆಗ ಘೃಣೆಯನ್ನು ತೊರೆಯಬಹುದು. ಒಬ್ಬ ಯುವತಿ ಏಕಾಂತದಲ್ಲಿ ಭೆಟ್ಟಿಯಾದಾಗ, ಅವಳು ತನ್ನನ್ನು ತನ್ನ ಶೀಲವನ್ನು ಕೆಡಿಸುವ ಪಾಪಿಯೆಂದು ಘೃಣೆ ತಾಳದೆ, ತಿರಸ್ಕಾರ ಭಾವದಿಂದ ನೋಡದೆ, ನಿನ್ನ ಒಡ ಹುಟ್ಟಿದ ಸೋದರಿಯಂತೆ ಕಾಣು. ನಿನ್ನ ತಾಯಿಯಂತೆ ಕಾಣು. ನಿನ್ನ ಗುರುವಿನಂತೆ ಕಾಣು. ಆಗ ಅದೇ ಯುವತಿಯನ್ನು ಕುರಿತು ಘೃಣೆಯ ಬದಲು ಪ್ರೀತಿ ಹುಟ್ಟುತ್ತದೆ. ಇಂಥ ನಿರ್ಮಲ ಪ್ರೇಮ ಉದಿಸಿದಾಗ ಮೊದಲು ಕಾಮೋದ್ರೇಕದಿಂದ ಭುಗಿಲೆದ್ದ ಕಾಮಜ್ವಾಲೆ ಅಂದರೆ ಅನಲವು ಆರುತ್ತದೆ. ಆಗ ಇಂದ್ರಿಯ ಉದ್ರೇಕವೂ ಶಮನವಾಗುತ್ತದೆ. ಆದಕ್ಕೆ ಅನುಕೂಲವಾಗಲು ಕಚ್ಚೆಯನ್ನು ಬಿಗಿದು ಕಟ್ಟಬೇಕು. ಹೀಗೆ ಮಾಡಿದಾಗ ಭೋಗೇಚ್ಛೆ ತೃಪ್ತಿಯಾಗಲಿಲ್ಲೆಂಬ ಕಾರಣದಿಂದ ಕೋಪವು ಉಂಟಾಗದು. ಹೀಗೆ ಸರಿಯಾದ ತಿಳಿವಳಿಕೆಯಿಂದ ವಿಷಯ ಭೋಗದ ಆಸೆಯನ್ನು ಬಿಡುವವನೇ ಮುಂದೆ ಮನೋಶುದ್ಧಿ ಹೊಂದಿ ಯೋಗಿಯಾಗುತ್ತಾನೆ.

ಕೆಟ್ಟ ಹಸಿವಿನಿಂದ, ಕಾಮ ಜ್ವಾಲೆಯಿಂದ,
ಕ್ರೋಧದಗ್ನಿಯಿಂದ ಕುಟಿಲ ಪಡದೆ,
ಒಂದೆ ಮನಸಿನಿಂದ ಇದ್ದೊಡಿಹುದು ಮುಕ್ತಿ.
ವಿಶ್ವದಾಭಿರಾಮ ಕೇಳು ವೇಮ.

ಹಸಿವು ಎರಡು ಬಗೆ. ದೇಹದ ಹಸಿವು ಮತ್ತು ಮಾನಸಿಕ ಹಸಿವು. ರಾಜಸ ಮತ್ತು

ತಾಮಸ ಆಹಾರ ಪದಾರ್ಥ ಸೇವನೆಯಿಂದ ಉಂಟಾದ ಹಸಿವು ಕೆಟ್ಟ ಹಸಿವು. ಇಂದ್ರಿಯಗಳು ಕೆಟ್ಟ ವಿಷಯಗಳ ಭೋಗಕ್ಕಾಗಿ ಹಪಾಹಪಿಸುವುದು ಕೆಟ್ಟ ಮಾನಸಿಕ ಹಸಿವು. ಇಂಥ ಕೆಟ್ಟ ಹಸಿವು ಇರುವಾಗಲೂ ಸಹ, ಆ ಕೆಟ್ಟ ವಿಷಯಗಳ ಭೋಗದ ಕಾಮ ಜ್ವಾಲೆ ಎದ್ದಾಗಲೂ ಸಹ, ಇನ್ನೂ ಮುಂದೆ ಕಾಮನೆಯು ಕೈಗೂಡಲಿಲ್ಲ ; ಎಂಬ ಕ್ರೋಧವು ಅಗ್ನಿ ರೂಪದಿಂದ ಮನಸ್ಸಿಗೆ ತಾಪ ನೀಡುವಾಗಲೂ ಸಹ, ಕುಟಿಲ ಪಡದೆ ಅಂದರೆ ಅಪ್ರಾಮಾಣಿಕನಾಗದೆ, ಸಭ್ಯನಂತೆ ಸೋಗು ಹಾಕಿ ಆತ್ಮ ವಂಚಕನಾಗದೆ, ಮನಸ್ಸಿನಲ್ಲಿ ಕ್ಷೋಭೆಗೊಳ್ಳದೆ, ಒಂದೇ ಮನಸ್ಸಿನಿಂದ ಇದ್ದರೆ ಅವನಿಗೆ ಸಾಂಸಾರಿಕ ತಾಪಗಳಿಂದ ಮುಕ್ತಿಯಾಗುತ್ತದೆ. ಇಲ್ಲಿ ವಿಕಾರವಶನಾಗದೆ ಶುದ್ಧ ಮನಸ್ಸನ್ನು ಹೊಂದುವುದು ಮುಖ್ಯ.

ಲೋಭ :

ಮಾನಸಿಕ ಆಹಾರ ಶುದ್ಧಿಯಲ್ಲಿ ತುಂಬಾ ಸುಲಭವಾಗಿರಬೇಕಾದ ಲೋಭ ದೂರನಾಗಿರುವ ವೃತ್ತಿಯು ರಜೋಗುಣದಿಂದಾಗಿ ತುಂಬಾ ಕ್ಲಷ್ಟಕರವಾಗಿ. ಅಹಂ ಹೆಚ್ಚು ವಿಕಾಸವಾಗದ ಪ್ರಾಣಿಗಳಲ್ಲಿ ಲೋಭ ಗುಣವು ಹೆಚ್ಚು ಪ್ರಬಲವಾಗಿರುವುದಿಲ್ಲ. ಆದ್ದರಿಂದ ಕ್ರೂರ ಮೃಗಗಳೂ ಸಹ ತಮ್ಮ ಹಸಿವೆ ಹಿಂಗಿಸುವಷ್ಟು ಅಂದಂದಿನ ಅಗತ್ಯಕ್ಕಾಗಿ ಬೇಟೆಯಾಡುತ್ತದೆಯೇ ಹೊರತು ಆಹಾರವನ್ನು ಸಂಚಯಿಸುವುದಿಲ್ಲ.

ಸ್ವಂತ ಉಣ್ಣಲಾರ ; ಸಂಪದಕಾಪ್ತರನು
ಸೇರಿಸಿಕೊಳದವನು ಶುದ್ಧ ಪಶುವು.
ಬೆಳೆದ ಭೂಮಿಯಲ್ಲಿ ಬೆದರು ನಿಂತ ರೀತಿ.
ವಿಶ್ವದಾಭಿರಾಮ ಕೇಳು ವೇಮ.

ಬಾಳು, ಬಾಳಗೊಡು. ಇದು ಒಳ್ಳೆಯ ಜೀವನದ ನೀತಿ. ಆದರೆ ಲೋಭಿಯು ಜಿಪ್ಪಣತನದಿಂದ ತಾನೂ ಉಣ್ಣುವುದಿಲ್ಲ. ಅನ್ಯರಿಗೂ ಉಣ್ಣ ಗೊಡುವುದಿಲ್ಲ. ತನ್ನಲ್ಲಿ ಕೂಡಿಬಿದ್ದ ಸಂಪತ್ತನ್ನು ಭೋಗಿಸಲು ಆಪ್ತರನ್ನೂ ಸೇರಿಸಿಕೊಳ್ಳುವುದಿಲ್ಲ. ಗೋದಲೆಯಲ್ಲಿಯ ನಾಯಿಯು ತಾನೂ ತಿನ್ನದು, ದನಗಳಿಗೂ ತಿನ್ನಗೊಡದು. ಹೊಲದಲ್ಲಿ ಪಶ ಪಕ್ಷಿಗಳಾಗಲಿ ದನ-ಕರುಗಳಾಗಲಿ ಮೇಯಲು ನುಗ್ಗಬಾರದೆಂದು ನಿಲ್ಲಿಸಿದ ಬೆದರು ಬೊಂಬೆಯಂತೆ, ಲೋಭಿಯ ಇರವು.

ಧನವ ಕೂಡಿ ಹಾಕಿ, ಧರ್ಮವನು ಮಾಡದೆ,
ಬಚ್ಚಿಡುವ, ತಿನ್ನದೆ ಬರಿದೆ ಹೋಯ್ತು.
ಜೇನು ಹುಳುವು ಕೂಡಿಸಿಟ್ಟು ಪರಗೀಯದೆ ?
ವಿಶ್ವದಾಭಿರಾಮ ಕೇಳು ವೇಮ.

ತನ್ನ ಪೂರ್ವ ಸುಕೃತದ ಫಲವಾಗಿ ಒಬ್ಬನು ಕೈಕೊಂಡ ಕಾರ್ಯಗಳೆಲ್ಲ ಸಫಲವಾಗಿ ಹಣವು ಕೂಡಿಬೀಳುತ್ತದೆ. ಹೀಗೆ ಧನವನ್ನು ಕೂಡಿ ಹಾಕುವ ಲೋಭಿಯು ರಜೋಗುಣದಿಂದ ಸ್ವಾಮಿತ್ವಾಭಿಮಾನ ಹೊಂದಿ ಗರ್ವ ಪಡುತ್ತಾನೆ. ಆದರೆ ಇಲ್ಲದವರಿಗೆ, ಅಗತ್ಯವಿರುವ ಬಡವರಿಗೆ ನೆರವು ನೀಡುವುದಿಲ್ಲ. ದಾನ ಧರ್ಮ ಕಾರ್ಯ ಮಾಡುವುದಿಲ್ಲ. ಹೆಚ್ಚಾದ ಧನವನ್ನು ತಗ್ಗು ತೋಡಿ ಬಚ್ಚಿ ಇರಿಸುತ್ತಾನೆ. ತಾನೂ ಭೋಗಿಸದೆ ಅದೆಲ್ಲ ವ್ಯರ್ಥವಾಗಿ ಹೋಗುತ್ತದೆ. ಜೇನು

ಹುಳುವು ಅಲೆದಾಡಿ ಹೂವುಗಳಿಂದ ಮಕರಂದವನ್ನು ಹೀರಿ ಹೀರಿ ತಂದು ಹುಟ್ಟಿನಲ್ಲಿ ಶೇಖರಿಸುತ್ತದೆ. ತಾನೇನೂ ತಿನ್ನುವುದಿಲ್ಲ. ಕೊನೆಗೆ ಯಾವನೋ ಒಬ್ಬನು ನೊಣಗಳನ್ನು ಓಡಿಸಿ ಜೇನು ಬಿಡಿಸಿಕೊಂಡು ತಿನ್ನುತ್ತಾನೆ. ಲೋಭಿಯ ಧನದ ಗತಿಯೂ ಇದೇ ರೀತಿಯಾಗುತ್ತದೆ.

ಮೊದಲು ಆಸೆ ಬೆಳೆಸಿ ತುದಿಗೆ ಇಲ್ಲವೆನಲು,
ಪರಮ ಲೋಭಿಯೇನು ? ಪಾಪವದುವೆ.
ಬೆಂದ ಉಸಿರು ಸೋಂಕಿ ಬಳಲಿ ನಶಿಸುತಿಹನು.
ವಿಶ್ವದಾಭಿರಾಮ ಕೇಳು ವೇಮ.

ಒಬ್ಬನಲ್ಲಿ ಸಾಕಷ್ಟು ಹಣವಿದೆಯೆಂದು ಅರಿತು ತೀವ್ರ ಕಷ್ಟದಲ್ಲಿರುವ ಓರ್ವ ಆರ್ತನು ಸಹಾಯಕ್ಕಾಗಿ ಕೈ ಚಾಚುತ್ತಾನೆ. ಅವನು ಸತ್ಪಾತ್ರನೂ ಆಗಿರುತ್ತಾನೆ. ಆದರೆ ಧನಿಕನು ಉದಾರ ಚರಿತನಲ್ಲ. ಆದರೆ ಪರಮ ಲೋಭಿಯಾಗಿರುತ್ತಾನೆ. ಹಾಗಾಗಿ ಆರ್ತನಿಗೆ ಸಹಾಯ ನೀಡುತ್ತೇನೆಂದು ಆಸೆ ಹುಟ್ಟಿಸಿ ಆಗ ಬಾ, ಈಗ ಬಾ, ಎಂದು ಕಳಿಸುತ್ತಾನೆ. ಕೊನೆಗೆ ಕುಂಟು ನೆಪ ಒಡ್ಡಿ 'ಇಲ್ಲ' ಎನ್ನುತ್ತಾನೆ. ಇಂಥವನು ಪರಮ ಲೋಭಿಯಷ್ಟೇ ಅಲ್ಲ ; ಪಾಪಿಯೂ ಆಗುತ್ತಾನೆ. ಏಕೆಂದರೆ ಪರಪೀಡನೆಯೇ ಪಾಪವೆನಿಸುತ್ತದೆ. ನಿರಾಸೆಗೊಂಡ ಆರ್ತನ ಬೆಂದ ಉಸಿರು ಸೋಂಕಿ, ಪರಮ ಲೋಭಿಯು ಬಳಲುತ್ತಾನೆ. ಕೊನೆಗೆ ತನ್ನ ಇಂಥ ಪಾಪ ಕರ್ಮಗಳ ಫಲವಾಗಿ ನಾಶ ಹೊಂದುತ್ತಾನೆ.

ಕಂಡು ಕಾಣಲಾರ, ಕದಲಿಸಲಾರ ತುಟಿ,
ಆಲಿಸಾಲಿಸದಿಹ ಅಚ್ಚರಿಯಿದು !
ಸಂಪದವಿರುವವನ ಸನ್ನಿಪಾತಕವಿದು.
ವಿಶ್ವದಾಭಿರಾಮ ಕೇಳು ವೇಮ.

ರಾಜಸಿಕ ಆಹಾರ ಸೇವನೆಯಿಂದ – ಭೌತಿಕವಿರಲಿ, ಮಾನಸಿಕವಿರಲಿ, ಒಬ್ಬನ ನಡೆ ನುಡಿಗಳೇ ಬದಲಾಗುತ್ತವೆ. ಸಂಪತ್ತು ಇರುವ ಲೋಭಿಯು ತನ್ನನ್ನು ಬೇಡಲು ಬಂದವನನ್ನು ಕಂಡು ಕಂಡೂ ಕಾಣದವನಂತೆ ಇರುತ್ತಾನೆ. 'ಏನು ಬಂದಿರಿ ?' ಎಂದು ಸೌಜನ್ಯದ ನುಡಿಯನ್ನೂ ಆಡದೆ, ತುಟಿ ಕದಲಿಸದೆ ಬಿಮ್ಮನೆ ಬಿಗಿದು ಕುಳಿತಿರುತ್ತಾನೆ. ಆರ್ತನು ತಾನೇ ತನ್ನ ಸಂಕಷ್ಟಗಳನ್ನು ಕುರಿತು ಗೋಗರೆದರೂ ಆಲಿಸಿಯೂ ಆಲಿಸದಂತಿರುತ್ತಾನೆ. ಈ ನಡೆ ನುಡಿಯು ಅಚ್ಚರಿ ಹುಟ್ಟಿಸುವುದಲ್ಲವೇ ? ಸಂಪತ್ತು ಉಳ್ಳವರಿಗೆ ಬಡಿದ ಸನ್ನಿಪಾತ ರೋಗವಿದು. ಸನ್ನಿಪಾತ ರೋಗಿಯ ಬಾಹ್ಯ ಇಂದ್ರಿಯ ದ್ವಾರಗಳು ಸರಿಯಾಗಿರುತ್ತವೆ. ಆದರೆ ಬಾಹ್ಯ ಸಂಜ್ಞೆಯನ್ನು ಮಿದುಳಿಗೆ ಮುಟ್ಟಿಸುವ ಸಂಜ್ಞಾ ತಂತುಗಳು ದೋಷಯುಕ್ತವಾಗಿ ಅವನಿಗೆ ಪ್ರತಿಕ್ರಿಯಿಸಲಾಗುವುದಿಲ್ಲ.

ಹಸುವು ಅಲ್ಲ ನಾಯಿ, ಹುಲಿಯು ಅಲ್ಲ ಮೊಲವು.
ಅತಿ ದೊಡ್ಡ ಸೊಳ್ಳೆಯು ಆನೆಯಲ್ಲ.
ಲೋಭಿ ದಾತನಲ್ಲ ; ಲೋಕದೊಳೆಂದಿಗೂ.
ವಿಶ್ವದಾಭಿರಾಮ ಕೇಳು ವೇಮ.

ನಾಯಿಯು ನಾಯಿಯೇ. ಅದೆಂದೂ ಪರರಿಗೆ ಹಾಲು ಕರೆಯುವ ಸಭ್ಯ ಆಕಳಿನ ಸ್ವಭಾವ ಹೊಂದದು. ಮೊಲವು ಪುಟ್ಟ, ಪುಕ್ಕ ಪ್ರಾಣಿ. ಅದೆಂದೂ ಹುಲಿಯಂತೆ ಧೀರ, ಪರಾಕ್ರಮಿಯಾಗದು. ಇನ್ನು ಸೊಳ್ಳೆಯೊಂದು ಎಷ್ಟು ದೊಡ್ಡದಾಗಿ ಬೆಳೆದರೂ, ಆನೆಯಂಥ ಬೃಹದಾಕಾರ ತಾಳಲಾರದು. ಅದೇ ರೀತಿ, ರಾಜಸ ಗುಣದ ಲೋಭಿಯು ಏನೇ ಇರಲಿ, ಎಷ್ಟೇ ಬಡಿವಾರ ಕೊಚ್ಚಲಿ, ಸ್ವಾರ್ಥ ಸಂಕುಚಿತ ಮತಿಯೇ ಇರುತ್ತಾನೆ. ಅವನೆಂದೂ ಉದಾರ ಚರಿತನೂ, ಪರೋಪಕಾರಿಯೂ ಆಗಿ ಲೋಕದಲ್ಲಿ ಬಾಳನು. ಅವನು ಧಾರ್ಮಿಕನಾಗಬೇಕಾದರೆ ಲೋಭ ಗುಣವನ್ನು ತೊಡೆಯಬೇಕು. ರಾಜಸ ಗುಣಗದಿಂದ ಸಾತ್ತ್ವಿಕ ಗುಣದ ಸ್ತರಕ್ಕೆ ಸ್ವಭಾವವನ್ನು ಉದ್ದೀಪಿಸಿಕೊಳ್ಳಬೇಕು. ಭೌತಿಕ ಮತ್ತು ಮಾನಸಿಕ ಆಹಾರ ಶುದ್ಧಿಯನ್ನು ಪಾಲಿಸಬೇಕು.

ಮೋಹ :

ಮೋಹ → ಮುಹ್ಯತಿ → ಮುಚ್ಯತಿ. ಮೋಹವೆಂದರೆ ಮುಚ್ಚಳ. ಸತ್ಯ ಕಾಣದಂತೆ ಬುದ್ಧಿಗೆ ಹೊದಿಸಿದ ಮುಚ್ಚಳವೇ ಮೋಹ.

ಅನ್ನಕಿನಿತು ಗತಿಗಾಣದೆ ಕುಳಿತ ನರನು,
ಕನ್ನೆ ಕಂಡು ಮೋಹಕೆ ಸಿಲುಕುತಿಹನು.
ಧಗಿಸುವಗ್ನಿ ಕಂಡ ಪತಂಗದಂತಯ್ಯ.
ವಿಶ್ವದಾಭಿರಾಮ ಕೇಳು ವೇಮ.

ಒಬ್ಬ ಮನುಷ್ಯನಿಗೆ ಹೊಟ್ಟೆ ತುಂಬ ಅನ್ನ ಸಂಪಾದಿಸಲೂ ಗತಿಯಿಲ್ಲದಾಗಲೂ ಸಹ, ಆಹಾರ ಶುದ್ಧಿ ಇಲ್ಲವಾಗಿ, ಇಂದ್ರಿಯ ಭೋಗ ಚಿಂತೆಯನ್ನು ಮಾಡುತ್ತಾನೆ. ಕಾಮಾಸಕ್ತಿ ಕುದುರುತ್ತದೆ. ಅವನು ಕನ್ನೆಯನ್ನು ನೋಡಿದಾಗ, ತಂಗಿ ಇಲ್ಲವೆ ಅಕ್ಕ ಎಂದು ತಿಳಿಯನು. ಅವನ ಬುದ್ಧಿಗೆ ಕಾಮದ ಮೋಹ ಅಂದರೆ ಮುಸುಕು ಕವಿಯುತ್ತದೆ. ಇದರಿಂದ ಒಳಗೆ ಕಾಮಾಗ್ನಿ ಭುಗಿಲ್ಲೆಂದು ಜ್ವಲಿಸಿ ಭೋಗದಾಸೆಗೆ ಬಿದ್ದು ನಾಶವಾಗುತ್ತಾನೆ. ದೀಪದ ಹುಳು, ಅಂದರೆ ಪತಂಗವು ಪ್ರಜ್ವಲಿಸುವ ದೀಪವನ್ನು ಕಂಡು ಆಕರ್ಷಿತವಾಗಿ ಅದರ ತೀರ ನಿಕಟಕ್ಕೆ ಹೋಗಿ ಸುಟ್ಟುಕೊಂಡು ಸಾಯುವುದಿಲ್ಲವೇ ? ಹಾಗೆ ಈ ಮೋಹಾನ್ವಿತ ವ್ಯಕ್ತಿಯ ಪಾಡು.

ಆ. ಇನಿಯಳ ಮೊಲೆ ಕಂಡು ಇಂತು ಅಂತು ನೋಡಿ,
ಮೋಹವಡರಿ ಬುದ್ಧಿ ಮೋಸ ಹೋಯ್ತು.
ನಾರಿ ಬಯಸದವನು ನೋಡೆ ಸಿಗನು ಜಗದಿ.
ವಿಶ್ವದಾಭಿರಾಮ ಕೇಳು ವೇಮ.

ಪುರುಷ ದೇಹದಲ್ಲಿ ಇಲ್ಲದ ಕೆಲ ಅಂಗಾಂಗಗಳು ಸ್ತ್ರೀ ದೇಹದಲ್ಲಿ ಕಾಣಬರುತ್ತವೆ. ಇವುಗಳೆಂದರೆ ಯೋನಿ ಮತ್ತು ಉಬ್ಬಿದ ಮೊಲೆಗಳು. ಇದರಿಂದಾಗಿ ಪುರುಷನು ಇವುಗಳ ಬಗೆಗೆ ಕುತೂಹಲ ತಾಳುತ್ತಾನೆ. ಅವುಗಳ ನೋಟ ಮಾತ್ರದಿಂದಲೇ ಕಾಮೋದ್ರೇಕಿತನಾಗುತ್ತಾನೆ. ಪ್ರಿಯೆಯ ಮೊಲೆಗಳನ್ನು ಕಂಡಾಗ ಹಾಗೆ ಹೀಗೆ ಎನ್ನಿಸುತ್ತದೆ. ತಾನು ಬಾಲ್ಯದಲ್ಲಿ ಚಪ್ಪರಿಸಿದ ತಾಯಿ ಮೊಲೆಗಳಂತೆಯೇ ಇವುಗಳಿದ್ದು ಕೇವಲ ಮಾಂಸದ ಮುದ್ದೆಗಳಾಗಿದ್ದರೂ ಬುದ್ಧಿಗೆ ಕಾಮದ ಮೋಹ ಪರದೆ ಬೀಳುತ್ತದೆ. ಇದರಿಂದ ಸಹಜವಾಗಿ ನಾರಿಯ ಭೋಗ ಬಯಸುತ್ತಾನೆ. ನಾರಿಯನ್ನು

ಬಯಸದವನು ಜಗತ್ತಿನಲ್ಲಿ ನೋಡಲೂ ಸಿಗಲಾರನು. ಇದು ಮಾನಸಿಕ ಅಶುದ್ಧ ಆಹಾರದ ಪರಿಣಾಮವಷ್ಟೇ.

ಮದ :

ಮಾನವನಲ್ಲಿ ಮದವು ಅರಿಷಡ್ವರ್ಗಗಳಲ್ಲಿ ಒಂದು. ಮದಗಳಲ್ಲಿ ಅಷ್ಟ ವಿಧಗಳುಂಟು: ಅನ್ನಮದ, ಕುಲಮದ, ಶೀಲಮದ, ಧನಮದ, ರೂಪಮದ, ಯೌವನಮದ, ವಿದ್ಯಾಮದ, ರಾಜ್ಯಮದ .

ಅನ್ನಮದ :

ಆ. ಅನ್ನ ಅಧಿಕವಾಗೆ ಅರಿಯೆ ಮೃತ್ಯು ನಿಜವು
ಅನ್ನ ಜೀರ್ಣಿಸದಿರೆ ಆತ್ಮ ನೋವು.
ಸಾವು ; ಬದುಕಿಗೂಟ ಸಾಲದೇಕೆ ಸತತ.
ವಿಶ್ವದಾಭಿರಾಮ ಕೇಳು ವೇಮ.

ಆಹಾರ ಶುದ್ಧಿಯೆಂದರೆ, ಸಾತ್ವಿಕ ಆಹಾರ ಸೇವಿಸಬೇಕು. ಅದನ್ನೂ ಹಿತಮಿತವಾದ ಪ್ರಮಾಣದಲ್ಲಿ ಸೇವಿಸಬೇಕು. ಮಿತಿ ಮೀರಿದರೆ ಅನ್ನ ಮದವು ಉಂಟಾಗುತ್ತದೆ. ಸಾವಿಗೂ ಕಾರಣವಾಗಬಹುದು. ಉಂಡ ಅನ್ನವು ಜಠರದಲ್ಲಿ ಜೀರ್ಣಿಸಬೇಕು. ಅದಕ್ಕೆ ತಕ್ಕ ಶಾರೀರಿಕ ಶ್ರಮ ಮಾಡಬೇಕು. ಅಜೀರ್ಣವಾದರೆ ರೋಗ ರುಜಿನುಗಳು ಸೇರಿ ತನುಗೇ ನೋವು ಉಂಟಾಗುತ್ತದೆ. ಸಾವು ಬದುಕಿನ ಬಾಳಿಗೆ ಯಾವಾಗಲೂ ಊಟ ಸಾಕಲ್ಲವೇ ? ಸಾವು ಬದುಕಿನ ಆಚೆ ಹೋಗಲು ಊಟವಷ್ಟೇ ಸಾಲದು. ಧರ್ಮ ಸಾಧನೆಯೂ ಬೇಕು.. ಮಾನವನು ಬದುಕುವುದಕ್ಕಾಗಿ ಊಟ ಮಾಡಬೇಕೇ ಹೊರತು, ಊಟ ಮಾಡಲೆಂದೇ ಬದುಕಬಾರದು.

''ಆಹಾರ ವಿಹಾರಗಳಲ್ಲಿ ಮಿತವಾಗಿರುವವನ, ಕರ್ಮದಲ್ಲಿ ಮಿತವಾದ ವ್ಯಾಪಾರವುಳ್ಳವನ ಮತ್ತು ನಿದ್ರೆ ಎಚ್ಚರಗಳಲ್ಲಿ ಮಿತವಾಗಿರುವವನ ಯೋಗವು ದುಃಖ ನಾಶಕವಾಗಿರುತ್ತದೆ'' ಎಂದು ಶ್ರೀ ಕೃಷ್ಣನು ಗೀತೆಯಲ್ಲಿ ಹೇಳಿದ್ದಾನೆ. (ಭಗ. 6-16)

ಕುಲಮದ :

ಆ. ಬರಿದೆ ಹೋಯ್ತು ಕುಲವು, ಬಿರುದು ನುಂಗಿ ಕುಲವು,
ಎಲ್ಲ ಜೀವರನುಭವಿಪರು ಕುಲವ.
ಇಂಥ ಕುಲವ ಸತತ, ಇಹಪರಂಗಳಲ್ಲಿ
ಹಿಡಿದು ಕೊಂಡ ಜನಕೆ ಹರಿಮೆ ವೇಮ.

ಒಬ್ಬನು ವಶಿಷ್ಠನ ಕುಲದವನೆಂದು ಬೀಗುತ್ತಾನೆ. ಇನ್ನೊಬ್ಬನು ವಿಶ್ವಾಮಿತ್ರನ ಕುಲದವನೆಂದು ಬೀಗುತ್ತಾನೆ. ಮಾದಿಗನಾಗಿ ಜನಿಸಿ ಬ್ರಹ್ಮಕುಲದವನಾದ ವಶಿಷ್ಠನೂ ಶ್ರೇಷ್ಠನೇ. ಕ್ಷತ್ರಿಯನಾಗಿ ಹುಟ್ಟಿ ಬ್ರಹ್ಮ ಕುಲ ಸೇರಿದ ವಿಶ್ವಾಮಿತ್ರನೂ ಶ್ರೇಷ್ಠನೇ. ಆದರೆ ಬರ ಬರುತ್ತ ಬ್ರಹ್ಮವನ್ನೇ ಅರಿಯದವರು ಬ್ರಾಹ್ಮಣರೆಂದುಕೊಂಡು ಕುಲ ಮದದಿಂದ ಬೀಗುತ್ತಾರೆ. ಹೀಗೆ ಕುಲವು ವ್ಯರ್ಥವಾಗಿ ಹೋಯಿತು. ಈ ತಥಾಕಥಿತ ಕುಲಾಭಿಮಾನವು ಬ್ರಹ್ಮರ್ಷಿಗಳಿಂಬ ಗೋತ್ರ ಪಿತರ ಬಿರುದನ್ನೇ ನುಂಗಿ ಹಾಕಿದೆ. ಎಲ್ಲ ಜೀವಿಗಳು ಸಾಧನ ಸಿದ್ಧಿಯಿಂದ ಬ್ರಹ್ಮ ಕುಲವನ್ನು

ಸೇರಿ, ಅನುಭವಿಸುತ್ತಾರೆ. ಇಂಥ ಶ್ರೇಷ್ಠ, ಪವಿತ್ರ ಬ್ರಹ್ಮಕುಲವನ್ನು ಇಹದಲ್ಲಿಯೂ, ಪರದಲ್ಲಿಯೂ ಹಿಡಿದುಕೊಂಡ ಜನರಿಗೆ ಹಿರಿಮೆಯುಂಟು.

ಆ. ಕುಲವ ಕೈಲಿ ಹಿಡಿದು ಗುಂಪೆ ಹಾಕಲೇಕೆ ?
ಮಡಿಯ ಗೆಯ್ದ ಜಾಗೆ ಬೀಜ ಮೊಳಕೆ.
ಏಕೆ ಕುಲವು ಇನ್ನು ? ಎತ್ತಣ ದ್ವಿಜನಯ್ಯ ?
ವಿಶ್ವದಾಭಿರಾಮ ಕೇಳು ವೇಮ.

ವೃಕ್ಷವನ್ನು ಬೆಳೆಸುವವನು ಮಣ್ಣಿನ ಗುಂಪೆ ಹಾಕಿ ಬೀಜ ಊರಿ ತೊಯ್ಯಿಸುವುದಿಲ್ಲ. ಆದರೆ ಮಣ್ಣನ್ನು ಹರಡಿ ಮಡಿಯನ್ನು ಮಾಡುತ್ತಾನೆ. ಮತ್ತು ಅದರಲ್ಲಿ ಬೀಜ ಊರುತ್ತಾನೆ. ಆಗ ನೀರುಣಿಸಿದರೆ ಬೀಜವು ಮೊಳಕೆಯೊಡೆಯುತ್ತದೆ. ಅದೇ ರೀತಿ ಜ್ಞಾನ ವೃಕ್ಷವು ಬೀಜದಿಂದ ಬೆಳೆಯಬೇಕಾದರೆ, ಅದಕ್ಕೆ ಕುಲದ ದುರಭಿಮಾನದ ಮಣ್ಣಿನ ಗುಂಪೆ ಹಾಕದೆ, ಉದಾತ್ತ ವಿಚಾರಗಳ ಧಾರೆಯನ್ನು ಹಿಡಿದಿಡುವ ಉತ್ತಮ ಸಂಸ್ಕಾರಗಳ ಮಡಿಯನ್ನು ಸಿದ್ಧಪಡಿಸಬೇಕು. ಇದನ್ನು ಅರಿತರೆ ಇನ್ನು ಕುಲದ ದುರಭಿಮಾನವೇಕೆ ಬೇಕು ? ದಾರ ಕೊರಳ ಸುತ್ತಿ ದ್ವಿಜನೆಂದುಕೊಳ್ಳುವವನು ಎಲ್ಲಿಯವನು ? ಎನಿಸುತ್ತದೆ.

ಆ. ಜಾತಿಯೊಳಗೆ ಮೇಲು ಜಾತಿ, ಕೀಳು ಎಲ್ಲಿ ?
ನಿಜವರಿಯದೆ ತಿರುಗಲೇನು ಫಲವು ?
ಮಿಗಿಲು ಕಣಾ ಕುಲವು ; ಮನುಜನಿದನು ಅರಿಯೆ,
ವಿಶ್ವದಾಭಿರಾಮ ಕೇಳು ವೇಮ.

ಕೆಲವರು ಮಾನವರಲ್ಲಿ ಮೇಲು ಕೀಳು ಸ್ತರಗಳು ಅವರವರ ಗುಣಗಳನ್ನು ಆಧರಿಸಿರುತ್ತವೆ. ಸಮಾಜದಲ್ಲಿ ಹೆಚ್ಚು ಕಡಿಮೆ ಆದರ ಗೌರವಗಳು ಅವರವರ ಗುಣಗಳಿಗನುಸಾರವಾಗಿ ಇರಬೇಕು. ಜನರು ಮನವಾರೆ ಒಪ್ಪಿ ತೋರುವ ಪ್ರಕ್ರಿಯೆಯಿದು. ಆದರೆ ಕುಲದ ದುರಭಿಮಾನಿಗಳು ಜಾತಿಗಳಲ್ಲಿ ಮೇಲು ಕೀಳು ಭಾವನೆಯನ್ನು ಹುಟ್ಟಿಸಿ, ಉಚ್ಚ ಸ್ತರ ಯಾವುದು ? ನೀಚ ಸ್ತರ ಯಾವುದು ? ಎಂಬ ಸತ್ಯದ ಅರಿವೇ ಇಲ್ಲದೆ, ಎದೆಯುಬ್ಬಿಸಿ ತಿರುಗಿದರೆ ಫಲವೇನು ? ಇದನ್ನು ಸರಿಯಾಗಿ ಅರಿತ ಮನುಜನ ಕುಲವೇ ಮಿಗಿಲೆಂದು ಕಾಣು.

ಆ. ಗುರುವಿನ ವಿಧಿಯಿಂದ ಕುಲವೆ ಹಾಳು ಆಯ್ತು.
ಸ್ತ್ರೀಯ ನಡತೆಯಿಂದ ಸಿಗ್ಗು ಹೋಯ್ತು.
ಮಲಿನ ಗುಂಡಿಯಿಂದ ಮಹಿಯೆ ಕೆಟ್ಟು ಹೋಯ್ತು.
ವಿಶ್ವದಾಭಿರಾಮ ಕೇಳು ವೇಮ.

ಗುರುಗಳಲ್ಲಿ ಅನೇಕ ವರ್ಗಗಳುಂಟು. ಸೂಚಕ ಗುರು, ದೀಕ್ಷಾ ಗುರು, ಮೋಕ್ಷ ಗುರು ಮತ್ತು ನಿಷಿದ್ಧ ಗುರು ಎಂಬಿತ್ಯಾದಿ ಶ್ರೇಣಿಯ ಗುರುಗಳುಂಟು. ಆತ್ಮ ಸಾಕ್ಷಾತ್ಕಾರ ಹೊಂದಿ ಇತರರಿಗೆ ಮಾರ್ಗದರ್ಶಕನಾಗುವ ತಾರಕ ಸದ್ಗುರುವು ಕರುಣಾ ಮೂರ್ತಿಯಾಗಿದ್ದರೂ ಕುಲದ ದುರಭಿಮಾನಿಗಳು ಅವನ ಕರುಣಾಮೃತವನ್ನು ಸವಿಯಲು ಪಾತ್ರರಾಗುವುದಿಲ್ಲ. ಜನತೆಯು ತಮ್ಮ ಕುಲಾಭಿಮಾನದಿಂದ ಹೆಚ್ಚಾಗಿ ನಿಷಿದ್ಧ ಶ್ರೇಣಿಯ ಕುಲ ಗುರುಗಳನ್ನೇ ವರಿಸುತ್ತಾರೆ. ಇತ್ತ ಆ ಕುಲ ಗುರುಗಳು ತಮ್ಮ ಶಿಷ್ಯರ ರಾಜಕೀಯ ಆಮಿಷವನ್ನು ಪೂರೈಸುವ ಸಲುವಾಗಿ

ತಮ್ಮ ಕುಲದವರ ಸಂಖ್ಯೆಯನ್ನು ಹಿಗ್ಗಿಸಲು ಉದ್ಯುಕ್ತರಾಗುತ್ತಾರೆ. ಶ್ರೇಯೋ ಮಾರ್ಗದ ಬದಲು ಪ್ರೇಯೋ ಮಾರ್ಗದತ್ತ ದಾರಿ ತೋರಿಸುತ್ತಾರೆ. ಹೀಗೆ ಗುರುಗಳ ಪ್ರೇಯದ ವಿಧಿ ಕರ್ಮಗಳಿಂದ ಕುಲವು ಹಾಳಾಗುತ್ತದೆ. ವಿಧವಾ ವಿವಾಹ ಇತ್ಯಾದಿ ನಿಷೇಧಿಸಿದ ವಿಪ್ರ ವರ್ಗವು ಅಂಥ ಸ್ತ್ರೀಯರೊಂದಿಗೆ ಕಳ್ಳ ಸಂಬಂಧ ಕುದುರಿಸುತ್ತಾರೆ. ಆ ಸ್ತ್ರೀಯರು ಕಾಮ ತೃಪ್ತಿಗಾಗಿ ಪೂಜಾರಿ ಪುರೋಹಿತರಿಗಾಗಿ, ಇನ್ನಿತರ ಧನಿಕರಿಗಾಗಿ ತಮ್ಮ ಶೀಲದಿಂದ ಜಾರಿ, ನಡತೆಗೆಟ್ಟ ನಡತೆಗೇಡಿಗಳಾಗುತ್ತಾರೆ. ಭೂಮಿಯ ಮೇಲೆ ಅಲ್ಲಲ್ಲಿ ಕೊಳಚೆ ಗುಂಡಿಗಳು ಹೆಚ್ಚಾಗಿ ಭೂಮಿಯ ವಾತಾವರಣವೇ ಕೆಡುವಂತೆ ಈ ನಾಚಿಕೆಗೇಡಿ ಸ್ತ್ರೀಯ ನಡತೆಯಿಂದಾಗಿ ಸಮಾಜ ಭೂಮಿಕೆ ಕೆಟ್ಟು ಹೋಗುತ್ತದೆ.

ಶೀಲ ಮದ :

ಆಹಾರ ಶುದ್ಧಿಯಿಂದ ಮನೋಶುದ್ಧಿಯಾಗುತ್ತದೆ. ಮನೋಶುದ್ಧಿಯಿಂದ ಸಾತ್ವಿಕ ಸಂಸ್ಕಾರಗಳು ಮೂಡುತ್ತವೆ. ಸಾತ್ವಿಕ ಸಂಸ್ಕಾರಗಳಿಂದ ಶ್ರೆಯೋ ಮಾರ್ಗದತ್ತ ನಡೆದು ಬ್ರಹ್ಮ ಜ್ಞಾನ ಪಡೆಯಬೇಕು. ಆದರೆ ಶೀಲದ ಅರ್ಥವನ್ನೆ ಅಪಾರ್ಥಗೊಳಿಸಿ, ಅದನ್ನು ಜಾತಿಯ ಮೇಲು ಕೀಳಿನ ಭಾವನೆಯನ್ನು ಬೆಳೆಸುವ ಭೂಮಿಯನ್ನಾಗಿ ಮಾಡಿಕೊಳ್ಳಲಾಗಿದೆ. ಮಡಿ, ಎಂಜಲು, ಎಂದು ಭಾವ ಜಡತೆಗೆ ಜೋತು ಬಿದ್ದು, ತಾವು ಶೀಲವಂತರೆಂದು ಬೀಗುವ ಶೀಲ ಮದಕ್ಕೆ ಈಡಾಗಿದ್ದಾರೆ.

ಆ. ಮೈಲಿ ಮೈಲಿ ಎಂದು ಮತ್ತೆ ಜಲ ಮುಳುಗರೆ ?
ಮೈಲಿಯೊಳಗೆ ತನುವು ಮಹಿಯೊಳಾಯ್ತು.
ಮೈಲಿ ಇರುವ ಜಾಗ ಮನುಜ ಹುಟ್ಟುತಿಹನು.
ವಿಶ್ವದಾಭಿರಾಮ ಕೇಳು ವೇಮ.

ಹೊಲೆ ಮೈಲಿಗೆ ಎಂದು ಶ್ವಾನಗಳಿಗೆ ಮತ್ತು ಕೆಲ ಜನವರ್ಗಕ್ಕೆ ಆರೋಪಿಸಿ, ಅವರನ್ನು ಊರ ಹೊರಗೆ ವಾಸಿಸಲು ಒತ್ತಾಯಿಸಿ ಅವರನ್ನು ಅಂತೇವಾಸಿಗಳನ್ನಾಗಿಸಿದರು. ಅಂತ್ಯಜರೆಂದು ಕರೆದರು. ಅವರು ಮುಟ್ಟಬಾರದವರು, ಅಸ್ಪೃಶ್ಯರು ಎಂದು ಮೂದಲಿಸಿದರು. ಅವರ ನೆರಳು ಕೂಡ ಮಡಿವಂತ ಹಾರುವನ ಮೇಲೆ ಬೀಳಬಾರದು, ಎಂದು ನಿಯಮ ವಿಧಿಸಿದರು. ಮೈಲಿಗೆ, ಮೈಲಿಗೆ ಎಂದು ಬಡ ಬಡಿಸುತ್ತ, ತಾವು ಅಸ್ಪೃಶ್ಯ ಎಂದು ಕರೆದವರ ಸ್ಪರ್ಶವಾದರೆ, ಆ ಅಸ್ಪೃಶ್ಯನ ಇಲ್ಲವೆ ನಾಯಿಗಳ ನೆರಳು ತಮ್ಮ ಮೇಲೆ ಬಿದ್ದರೆ ಸಾಕು, ನೀರು ಮುಳುಗಿ ಮಡಿ ಮಾಡಿಕೊಳ್ಳುತ್ತಾರೆ. ಆದರೆ ಈ ದೇಹದ ಜನ್ಮ ಸ್ಥಾನವೇ ಸ್ತ್ರೀಯ ಯೋನಿ. ಅದುವೇ ಮೈಲಿಗೆಯ ಕೂಪ. ಅದರಿಂದ ರಜಸ್ವಲೆಯಾದಾಗ ಮುಟ್ಟಾದವಳು ಎನ್ನುತ್ತಾರೆ. ಆಗ ಸಂಭೋಗವು ದೇಹ ಸ್ವಾಸ್ಥ್ಯ ದೃಷ್ಟಿಯಿಂದ ನಿಷಿದ್ಧವಾದುದರಿಂದ ರಜಸ್ವಲೆಯಾದಾಗ ಮೂರು ದಿನ ಮುಟ್ಟಬಾರದವಳು ಎಂದು ವಿಧಿಸಿದ್ದಾರೆ. ಇದೆಲ್ಲ ತಿಳಿದಿದ್ದರೂ ಕೆಲ ಜಾತಿಯವರನ್ನು ಕೀಳು ಎಂದು ಆರೋಪಿಸಿ, ಅವರನ್ನು ಅಸ್ಪೃಶ್ಯರೆಂದು ಹೀಗಳೆದು ಅವರ ನೆರಳೂ ತಮ್ಮ ಮೇಲೆ ಬೀಳದಿರಲೆಂದು ಹಾರುತ್ತ ಅಲೆಯುವವರು ಶೀಲಮದದ ಶೀಲವಂತ ಹಾರುವರೆನಿಸಿದ್ದಾರೆ. ಆದ್ದರಿಂದ ಇಂಥ ಕಂದಾಚಾರಗಳಿಂದ ಬಿಡುಗಡೆ ಹೊಂದಲು ಮನಸ್ಸಿಗೆ ಶುದ್ಧ ಆಹಾರ ಅಂದರೆ ವಿಚಾರ ಒದಗಿಸಬೇಕು.

ಆ. ಮುಟ್ಟಿನೊಳಗೆ ಹುಟ್ಟಿ, ಮುಟ್ಟಿನೊಳಗೆ ಬೆಳೆದು,
ವ್ಯರ್ಥ ತೀರ್ಥ ಗೆಯ್ಯುವವರೆ ಒಟ್ಟು,
ಮುಟ್ಟು ನೀರಿನೊಳಗೆ ಮುಳುಗೆ ಹೋಗುವುದೇ ?
ವಿಶ್ವದಾಭಿರಾಮ ಕೇಳು ವೇಮ.

ಮುಟ್ಟು ಅಂದರೆ ಹೊಲೆ ಇರುವ ಯೋನಿಯಿಂದ ಹುಟ್ಟಿ, ಮುಟ್ಟು ಅಂದರೆ ಮಲವಿರುವ ಗರ್ಭದೊಳಗೆ ಬೆಳೆದು, ನಾಯಿಯ ನೆರಳೋ, ಅಂತ್ಯಜನ ನೆರಳೋ ಬಿದ್ದಿತೆಂದು, ಸ್ಪರ್ಶವಾಯಿತೆಂದು, ಅದರಿಂದ ಮಲೀನವಾದೆಯೆಂದು ಭ್ರಮಿಸಿ ಒಟ್ಟು ವ್ಯರ್ಥವಾಗಿ ತೀರ್ಥ ಯಾತ್ರೆ ಗೆಯ್ಯುವವರೇ, ನೀರಿನೊಳಗೆ ಮುಳುಗಿದರೆ ಮುಟ್ಟು ಹೋಗುವುದೇ ? ಮನದ ಮೇಲು ಕೀಳಿನ ಭೇದ ಭಾವನೆ, ಮುಟ್ಟು, ಮಡಿಗಳ ವಿಕ್ಷಿಪ್ತ ಭಾವನೆ ಹೋಗಬೇಕಾದರೆ, ಸಕಲ ಭೂತಾಂತರಾತ್ಮನಾಗಿ ಆ ಭಗವಂತನಿದ್ದಾನೆಂದು ಅರಿಯಬೇಕು.

ಇಂಥ ಮೂರ್ಖರಾದ ಶೀಲವಂತರಿಗೆ ಗೀತೆಯಲ್ಲಿ ಸರಿಯಾಗಿ ಮೇಲು ಕೀಳು ದೃಷ್ಟಿ ತಳೆಯುವುದು ತರವಲ್ಲವೆಂದು ತಿಳಿಸಿದ್ದಾನೆ, ಕೃಷ್ಣ.

''ವಿದ್ಯಾ ವಿನಯಗಳಿಂದ ಕೂಡಿದ ಬ್ರಾಹ್ಮಣ, ಗೋವು, ಆನೆ, ನಾಯಿ ಮತ್ತು ನಾಯಿಯ ಮಾಂಸವನ್ನು ತಿನ್ನುವವನು – ಇವರೆಲ್ಲರಲ್ಲಿ ಜ್ಞಾನಿಗಳು ಸಮದರ್ಶಿಗಳಾಗಿರುವರು''. (ಗೀತೆ 5-18).

ಗದಗ ಜಿಲ್ಲೆಯ ಬಿಂಕದಕಟ್ಟಿ ಮತ್ತು ಹರ್ಲಾಪುರಗಳಲ್ಲಿ ವಾಸವಾಗಿದ್ದ ರಾಮಕರಣ ಸ್ವಾಮಿಗಳೆಂಬ ಜ್ಞಾನಿಗಳು ತಾವು ಊಟ ಮಾಡುವಾಗ ಅದೇ ತಾಟಿನಲ್ಲಿ ನಾಯಿಯನ್ನೂ ಕರೆದುಕೊಂಡು ಊಟ ಮಾಡುತ್ತಿದ್ದರಂತೆ. ಇವರೊಬ್ಬ ದೊಡ್ಡ ತಪಸ್ವಿಗಳಾಗಿದ್ದರು.

ಕಾಶೀ ಕ್ಷೇತ್ರದಲ್ಲಿ ಆಚಾರ್ಯ ಶಂಕರರು ಸ್ನಾನ ಮಾಡಿ ಮಡಿಯಾಗಿ ಬರುವ ಹಾದಿಯಲ್ಲಿ ಚಂಡಾಲನೊಬ್ಬನು ಹಾದಿಯಲ್ಲಿ ಎದುರು ಬಂದರು. ಆಗ ಶಂಕರರು ಮೈಲಿಗೆಯಾದೀತೆಂದು ಆ ಚಂಡಾಲನನ್ನು ಹಾದಿಯಿಂದ ಅಡ್ಡ ದೂರ ಸರಿಯಲು ಹೇಳಿದರು. (ಚಂಡಾಲ ಜಾತಿ ಶೂದ್ರನಿಂದ ಬ್ರಾಹ್ಮಣಿಗೆ ಹುಟ್ಟಿದವರ ಜಾತಿ) ಆಗ ಆ ಚಂಡಾಲನು ಏಕೆ ಎಂದು ಪ್ರಶ್ನಿಸಿದನು. 'ನಾನು ಬ್ರಾಹ್ಮಣ. ಮಡಿಯಲ್ಲಿದ್ದೇನೆ. ನೀನು ಚಂಡಾಲನು. ನಿನ್ನ ಸ್ಪರ್ಶ ನನ್ನ ಆಚಾರದಲ್ಲಿ ನಿಷಿದ್ಧ. ನಿನ್ನ ನೆರಳೂ ಬೀಳಕೂಡದು ನನ್ನ ಮೇಲೆ' ಎಂದರು. ಆಗ ಆ ಚಂಡಾಲನು 'ನೀನು ದೇಹವೇ ? ಆತ್ಮವೇ?' ಎಂದು ಕೇಳಿದನು. ಜ್ಞಾನ ಸಾಧಕರಾದ ಶಂಕರರು'ಅಹಂ ಬ್ರಾಹ್ಮಸ್ಮಿ'ಎಂದರು. 'ಹಾಗಾದರೆ ಬ್ರಹ್ಮನಿಗೆ, ಆತ್ಮನಿಗೆ, ಮುಟ್ಟು ಮಡಿಗಳಿವೆಯೇ ?' ಎಂದು ಪ್ರಶ್ನಿಸಿದನು. ಆಚಾರ್ಯರ ನಾಲಗೆ ಒಣಗಿತು. ಅರಿವಿನ ಕಣ್ಣು ತೆರೆಯಿತು.'ಅವನೇ ಬ್ರಹ್ಮ ಜ್ಞಾನಿ' ಎಂದು ಅರಿತು ಅವನ ಪಾದಗಳಿಗೆ ನಮಿಸಿದರು.

ಆ. ಹೊಲೆಯನ ಮುಟ್ಟಿದೊಡನೆ ನೀರೊಳು ಮುಳುಗುವರು.
ಮನುಜ ಪೂರ್ವ ಕರ್ಮದಿಂದ ಹೊಲೆಯ.
ಏಕೆ ತಿಳಿಯಲೊಲ್ಲರೀ ನರ ಪಶುಗಳಿದ ?
ವಿಶ್ವದಾಭಿರಾಮ ಕೇಳು ವೇಮ.

ಮಾನವನು ಪೂರ್ವ ಜನ್ಮದಲ್ಲಿ ಕುಲದ ದುರಭಿಮಾನ ತಾಳಿ ಇತರರನ್ನು ಹೀನರೆಂದು ಹೀಯಾಳಿಸಿ ಅವಮಾನಗೊಳಿಸಿದ ಪಾಪ ಮಾಡಿದ್ದರಿಂದಲೇ ಆ ಕರ್ಮದ ಫಲವಾಗಿ ಈ ಜನ್ಮದಲ್ಲಿ ಅಂಥ ನಿಂದೆ ಅವಮಾನಕ್ಕೊಳಗಾಗಬೇಕಾಗಿದೆ. ಹೊಲೆಯನೆನಿಸಬೇಕಾಗಿದೆ. ಈ ಮೇಲು ಕೀಳಿನ ಭೇದ ಬುದ್ಧಿಗೆ ಕೊನೆ ಹೇಳಬೇಕು. ಮೇಲು ಕುಲದ ದುರಭಿಮಾನಿಗಳೇ ! ನೀವು ಇಂದು ಯಾರನ್ನು ಹೀಯಾಳಿಸುವಿರೋ, ಅದೇ ಸ್ಥಿತಿ ನಿಮಗೆ ಮುಂದಿನ ಜನ್ಮದಲ್ಲಿ ನಿಶ್ಚಯವಾಗಿ ಬರುತ್ತದೆ. ಹಾಗಾಗಬಾರದಿದ್ದರೆ ಅವನನ್ನು ನಿಮ್ಮ ಸಮನಾಗಿ ತಿಳಿಯಿರಿ. ಇದೇ ಶ್ರೀಕೃಷ್ಣನು ಬೋಧಿಸಿದ ಜ್ಞಾನಿಯ ದೃಷ್ಟಿ. ಇದನ್ನು ನರ ಪಶುಗಳಾದ ಹಾರುವರು ಏಕೆ ತಿಳಿಯಲೊಲ್ಲರೋ?

ಮಾಂಸ ಭಕ್ಷಣ ಮಾಡುವರೆಂದೋ, ಜೀವ ಹಿಂಸೆ ಮಾಡದೆ ಸತ್ತ ಪ್ರಾಣಿಯ ಮಾಂಸ ಭಕ್ಷಣೆ ಮಾಡುವರೆಂದೋ, ಹಾರುವರು ಮಾದಿಗರನ್ನು ಹೇಯವಾಗಿ ಕಾಣುತ್ತಾರೆ. ಅಸ್ಪೃಶ್ಯರೆಂದು ಬಗೆಯುತ್ತಾರೆ.

ಈಗ ಬ್ರಾಹ್ಮಣರ ಪವಿತ್ರ ಧರ್ಮ ಸ್ಮೃತಿ ಗ್ರಂಥ ಮನುಸ್ಮೃತಿಯಲ್ಲಿ ಮಾಂಸ ಭಕ್ಷಣೆಯನ್ನು ಕುರಿತು ಏನು ಹೇಳಿದೆಯೆಂಬುದನ್ನು ಈ ಮುನ್ನ ಅಹಿಂಸೆ ಶೀರ್ಷಿಕೆಯಲ್ಲಿ ಸ್ವಲ್ಪು ಚರ್ಚಿಸಿದ್ದೇವೆ. ಈಗ ಶೀಲವಂತಿಕೆಯ ದೃಷ್ಟಿಯಿಂದ ಸ್ವಲ್ಪು ವಿವೇಚಿಸೋಣ.

''ಬ್ರಾಹ್ಮಣರಿಗೆ ಅಪೇಕ್ಷೆಯುಂಟಾದಾಗ ಯಜ್ಞವಿಧಿಗಳಲ್ಲಿ ಮಂತ್ರ ಜಲದಿಂದ ಪ್ರೋಕ್ಷಿತವಾದ ಮಾಂಸವನ್ನು ಹಾಗೂ ಶಾಸ್ತ್ರವಿಧಿಗಳಲ್ಲಿ ಹೇಳಲಾದ ರೀತಿಯಿಂದ ಶ್ರಾದ್ಧದೂಟದಲ್ಲಿಯ ಮಾಂಸವನ್ನು ಹಾಗೂ ಆಹಾರ ಸಿಗದೆ ಪ್ರಾಣ ಸಂಕಟ ಉಂಟಾದಾಗ ಅನಿವಾರ್ಯವಾಗಿ ಮಾಂಸವನ್ನು ತಿನ್ನಬಹುದು''. (ಮ.ಸ್ಮೃ. 5-27)

ಇಂಥ ಆಪತ್ಕಾಲದಲ್ಲಿ ಅನಿವಾರ್ಯವಾಗಿ ವಿಶ್ವಾಮಿತ್ರನು ನಾಯಿಯ ಮಾಂಸವನ್ನು ತಿಂದನಂತೆ. ಮತ್ತೊಬ್ಬ ಮುನಿಯು ತಾಮಸ ಆಹಾರವಾದ ಉದ್ದನ್ನು, ಅದೂ ಚಂಡಾಲನಿಂದ ಪಡೆದು ತಿಂದನೆಂದು ಉಲ್ಲೇಖವಿದೆ.

''ಈ ಜಗತ್ತಿನಲ್ಲಿರುವ ಸಮಸ್ತ ಸ್ಥಾವರ, ಜಂಗಮ ಜೀವ ಜಂತುಗಳನ್ನು, ಚರಾಚರ ವಸ್ತುಗಳನ್ನೂ ತಿನ್ನಲಿಕ್ಕೆಂದೇ ಪರಮಾತ್ಮನು ಸೃಷ್ಟಿಸಿದ್ದಾನೆ''. (ಮ.ಸ್ಮೃ. 5-28)

''ಚಲಿಸುವ ಪಶು ಪ್ರಾಣಿಗಳಿಗೆ ಚಲಿಸದಿರುವ ಹುಲ್ಲು ಸಸ್ಯಗಳು ಆಹಾರಗಳು.
ಕೋರೆ ದಾಡಿಗಳಿರುವ ಸಿಂಹ, ಹುಲಿಗಳಿಗೆ ಕೋರೆದಾಡಿಗಳಿರದ ಜಿಂಕೆ ಇತ್ಯಾದಿಗಳು ಆಹಾರಗಳು.
ಕೈಗಳಿರುವ ಮನುಷ್ಯರಿಗೆ ಕೈಗಳಿಲ್ಲದ ಪಶು ಪ್ರಾಣಿಗಳು ಆಹಾರಗಳು ಹಾಗೂ
ಕ್ರೂರವಾದ ಮತ್ತು ಶೂರವಾದ ಪ್ರಾಣಿಗಳಿಗೆ ಸಾಧುವಾದ, ಭೀರುವಾದ ಪ್ರಾಣಿಗಳು ಆಹಾರಗಳು''.

(ಮ.ಸ್ಮೃ. 5-26)

''ಪ್ರತಿದಿನವೂ ತಿನ್ನಲಿಕ್ಕೆ ಯೋಗ್ಯವಾದ ಪ್ರಾಣಿಗಳನ್ನೇ ಕೊಂದು ತಿಂದರೆ, ಅದು ಅಪರಾಧವಲ್ಲ. ಏಕಂದರೆ ತಿನ್ನುವವರನ್ನೂ, ಪ್ರಾಣಿಗಳನ್ನೂ ಭಗವಂತನೇ ಸೃಷ್ಟಿಸಿರುತ್ತಾನೆ''.

(ಮ.ಸ್ಮೃ. 5-30)

''ಯಜ್ಞಕ್ಕಾಗಿ ಪಶುವನ್ನು ಕೊಂದು, ಮಾಡಿದ ಮಾಂಸ ಭಕ್ಷಣವು ''ದೈವಿಕ ರೀತಿ'' ಎಂದು ಹೇಳಲ್ಪಟ್ಟಿದೆ. ಇದರ ಹೊರತು ಅನ್ಯ ಸಂದರ್ಭದಲ್ಲಿ ಮಾಡುವ ಅಕಾರಣ ಪಶುವಧೆ ಮತ್ತು ಮಾಂಸಭಕ್ಷಣವು ''ರಾಕ್ಷಸ ನೀತಿ'' ಎಂದು ಹೇಳಲ್ಪಟ್ಟಿದೆ''. (ಮ.ಸ್ಮೃ. 5-31)

''ತಾನಾಗಿ (ಪೇಟೆಯಿಂದ ಮಾಂಸವನ್ನು) ಕೊಂಡು ತಂದು, ಅಥವಾ ತಾನಾಗಿ ಪಶುವನ್ನು ಕೊಂದು ತಂದು, ಅಥವಾ ಇನ್ನೊಬ್ಬನಿಂದ ಬೇಡಿ ಪಡೆದು ತಂದು, ಆ ಮಾಂಸದಿಂದ ದೇವ ಪಿತೃ ಕಾರ್ಯಗಳನ್ನು ಮಾಡಿ ತಿಂದರೆ, ಆ ಮಾಂಸ ಭಕ್ಷಣವು ದೋಷಯುಕ್ತವಲ್ಲ''.
(ಮ.ಸ್ಮೃ. 5-32)

''ದೇವ ಪಿತೃ ಕಾರ್ಯಗಳಲ್ಲಿ ಶಾಸ್ತ್ರ ವಿಧಿಯಂತೆ ಮಾಂಸವನ್ನು ಯಾವನು ತಿನ್ನುವದಿಲ್ಲವೋ, ಅವನು ಸತ್ತ ನಂತರ ಇಪ್ಪತ್ತೊಂದು ಜನ್ಮ ಪಶುವಾಗಿ ಹುಟ್ಟುತ್ತಾನೆ''.
(ಮ.ಸ್ಮೃ. 5-35)

''ಯಜ್ಞ ಹಾಗೂ ಶ್ರಾದ್ಧಗಳ ಸಂದರ್ಭಗಳನ್ನು ಬಿಟ್ಟು, ಉಳಿದ ಸಂದರ್ಭಗಳಲ್ಲಿ ವ್ಯರ್ಥವಾಗಿ ಪ್ರಾಣಿ ಹಿಂಸೆ ಮಾಡುವವನು ತಾನು ಸತ್ತ ಮೇಲೆ, ಅವನು ಕೊಂದ ಪ್ರಾಣಿಯ ರೋಮಗಳಷ್ಟು ಸಂಖ್ಯೆಯಲ್ಲಿ ವಧಿಸಲ್ಪಡುತ್ತಾನೆ''. (ಮ.ಸ್ಮೃ. 5-36)

''ಯಜ್ಞಗಳಿಗೆಂದೇ ಪರಮಾತ್ಮನು ಈ ಪಶುಗಳನ್ನು ಸೃಷ್ಟಿ ಮಾಡಿದ್ದಾನೆ. ಈ ಎಲ್ಲವೂ ಯಜ್ಞದ ಆಚರಣೆಗೆಂದೇ ಇದೆ. ಆದ್ದರಿಂದ ಯಜ್ಞದಲ್ಲಿ ಮಾಡುವ ಪಶು ವಧೆಯು ಪಾಪವಲ್ಲ''.
(ಮ.ಸ್ಮೃ. 5-39)

''ಹೀಗೆ ಯಜ್ಞ, ಶ್ರಾದ್ಧ ಹಾಗೂ ಮಧು ಪರ್ಕ (ಅತಿರ್ಥಿಗಳು ಮತ್ತು ಗೌರವಾನ್ವಿತರು ಬಂದಾಗ ಕೊಡುವ ಪೇಯಾದಿ) ಮುಂತಾದ ಕಾರ್ಯಗಳಿಗಾಗಿ ಮಾತ್ರ ವೇದ ತಿಳಿದ ಬ್ರಾಹ್ಮಣನು ಪಶುವನ್ನು ಕೊಂದರೆ, ತನ್ನ ಜತೆಗೆ ಆ ಪಶುವಿಗೂ ಉತ್ತಮ ಗತಿಯನ್ನು ಉಂಟು ಮಾಡುತ್ತಾನೆ''.
(ಮ.ಸ್ಮೃ. 5-42)

''ಮಾಂಸ ಭಕ್ಷಣದಲ್ಲಿ, ಮದ್ಯಪಾನದಲ್ಲಿ ಹಾಗೂ ಮೈಥುನದಲ್ಲಿ ದೋಷವಿಲ್ಲ, ಏಕೆಂದರೆ ಇದು ಮನುಷ್ಯರಿಗೆ ಸ್ವಾಭಾವಿಕವಾದುದು. ಹಾಗೂ ಸಹಜ ಪ್ರವೃತ್ತಿಗಿಂತ ನಿವೃತ್ತಿಯು ಮಹಾ ಫಲದಾಯಕವಾದದ್ದು''. (ಮ.ಸ್ಮೃ. 5-36)

ಆ. ಸೋಮಲತಾ ರಸವ ಪಾವಿನಳತೆಯಷ್ಟು,
ಸೇವಿಸಿ ಮೇಣದನ್ನೆ ಸಾರವೆನ್ನುತಿಹರು.
ಕ್ರತು ಫಲಗಳೇನು ಕಂಠಗತವಾದವೆ ?
ವಿಶ್ವದಾಭಿರಾಮ ಕೇಳು ವೇಮ.

ಎಂದು ವೇಮನ ಯೋಗಿಗಳು ವೇದದಲ್ಲಿ ಅನುಮತಿಸಿದ ಮದ್ಯಪಾನದ ವಿರುದ್ಧ ವ್ಯಂಗ್ಯೋಕ್ತಿ ಆಡಿದ್ದಾರೆ.

ಅಥರ್ವ ವೇದದಲ್ಲಿ ಹೀಗೆ ಹೇಳಲಾಗಿದೆ : ''ಹತ್ತು ತಲೆ ಹಾಗೂ ಹತ್ತು ಮುಖಗಳನ್ನು ಹೊತ್ತು, ಬ್ರಾಹ್ಮಣನು ಪ್ರಪ್ರಥಮವಾಗಿ ಹುಟ್ಟಿದನು. ಅವನು ಸೋಮರಸ ಪಾನ ಮಾಡಿದನು. ವಿಷವನ್ನು ಶಕ್ತಿಹೀನ ಮಾಡಿದನು''.

ಈ ಮೇಲೆ ಉಲ್ಲೇಖಿಸಿದ ಬ್ರಾಹ್ಮಣರ ಮದ್ಯ ಸೇವನೆ, ಮಾಂಸ ಭಕ್ಷಣೆ ಮತ್ತು ಮೈಥುನಗಳನ್ನು ಖಂಡಿಸಿ, ವೇಮನರು ಹೀಗೆ ಹಾಡಿದ್ದಾರೆ :

ಆ. ಸೋಮಯಾಜಿಯೆಂದು ಸೊಂಪಿನ ವೇಷದವ
ಮಲಿನ ಮಾಂಸ ಪಾಕ ಮಾಡಿ ತಿನುವ.
ಮತ್ತೆ ದ್ವಿಜನೆನಲು ಮೆರೆವನೆಂತು ತಾನು ?
ವಿಶ್ವದಾಭಿರಾಮ ಕೇಳು ವೇಮ.

ಆ. 'ಎಂಬರು' ಮತ ವೇಷ ಧರಿಸಿ ಮಾಂಸ ಬಗಿದು,
ಅನ್ಯ ಹೆಸರು ಹೊತ್ತು, ಮದ್ಯ ಕುಡಿದು,
ರಕ್ತ ಮಾಂಸ ತೊರೆದು ರತಿ ಸುಖದಿ ಕೆಡುವರು.
ವಿಶ್ವದಾಭಿರಾಮ ಕೇಳು ವೇಮ.

ಆ. ಹೆಂಡ ಮಡಿಕೆ ಮೈಗೆ ಬಹಳ ಬೂದಿ ಬಳಿಯೆ,
ಆ ಕಂಪು ವಾಸನೆ ಅಡಗಬಹುದೆ ?
ದಾರ ಕತ್ತಿಗೆ ಬಿಗಿಯೆ ದ್ವಿಜನು ತಾನದೆಂತು ?
ವಿಶ್ವದಾಭಿರಾಮ ಕೇಳು ವೇಮ.

ಈ ಮೊದಲು ಉಲ್ಲೇಖಿಸಿದ ಮನುಸ್ಮೃತಿಯ ಪದ್ಯದಲ್ಲಿ ಮಾಂಸ ಭಕ್ಷಣೆಯಲ್ಲಿ, ಮದ್ಯಪಾನದಲ್ಲಿ ಮತ್ತು ಮೈಥುನದಲ್ಲಿ ದೋಷವಿಲ್ಲ. ಏಕೆಂದರೆ ಇವು ಮನುಷ್ಯರಿಗೆ ಸ್ವಾಭಾವಿಕವಾಗಿವೆ, ಎಂದು ಹೇಳಿದ್ದಾರೆ. ಹೀಗೆ ಹೇಳುವುದಕ್ಕೆ ಕಾರಣವಿದೆ. ಏಕೆಂದರೆ ವೈದಿಕ ಯಜ್ಞ ಯಾಗಗಳಲ್ಲಿ ಈ ತೆರನಾದ ಆಚರಣೆಯಿದೆ. ಅದನ್ನೇ ವೇಮನರು ಬಲವಾಗಿ ಖಂಡಿಸಿದ್ದಾರೆ.

ಸೋಮ ಯಜ್ಞ ಆಚರಿಸುವವನು ಸೋಮಯಾಜಿ. ಈ ಯಜ್ಞದ ಆಚರಣೆಯಲ್ಲಿ ಬಗೆ ಬಗೆಯ ಸೊಂಪಿನ ವೇಷ ಧರಿಸುತ್ತಾರೆ. ತಮ್ಮ ನಿಜ ರೂಪ ತಿಳಿಯಬಾರದೆಂದು ಮುಖವಾಡ ಧರಿಸುತ್ತಾರೆ. ದುಶ್ಶಾಸನ, ಕೀಚಕ, ಕಂಸ ಇತ್ಯಾದಿ 'ಎಂಬರು' ಮತವೇಷ ಧರಿಸುತ್ತಾರೆ. ಬೇರೆ ಮುಖವಾಡ ಧರಿಸಿ ಬೇರೆ ವ್ಯಕ್ತಿಗಳಾದೆವೆಂದು ಭಾವಿಸಿ, ರಕ್ತ ಮಾಂಸ ಸಂಬಂಧ ತೊರೆದು, ಅಕ್ಕ, ತಂಗಿ, ಅತ್ತಿಗೆ, ಅತ್ತೆ ಹೀಗೆ ವನಿತೆಯರೊಡನೆ ರತಿ ಸಂಭೋಗಕ್ಕಿಳಿಯುತ್ತಾರೆ. ಇದಕ್ಕೂ ಮುನ್ನ ಕೆಟ್ಟ ಮಾಂಸವನ್ನು ಪಾಕ ಮಾಡಿ ತಿನ್ನುತ್ತಾರೆ. ಮನಸಾರೆ ಮದ್ಯ ಸೇವಿಸುತ್ತಾರೆ. ಹೆಂಡದ ಮಡಿಕೆಯ ಮೇಲೆ ಬಹಳ ಬೂದಿ ಬಳಿದು ಪೂಜಿಸುವ ನಾಟಕ ಆಡುತ್ತಾರೆ. ಹಾಗೆ ಮಾಡಿದರೆ ಆ ಹೆಂಡದ ಕಂಪು ವಾಸನೆ ಅಡಗುವುದೇನು ? ಅದರ ಮಾದಕತೆ ಕುಗ್ಗುವುದೇನು ? ಇಷ್ಟೆಲ್ಲ ಆಚಾರ ಮಾಡಿ, ಪುರದಲ್ಲಿ ಜನ್ಮ ತಳೆದೆನು, ದ್ವಿಜನಾದೆನು. ಎಂದು ಕೊರಳಲ್ಲಿ ದಾರ (ಜನಿವಾರ-ಯಜ್ಞೋಪವೀತ) ಬಿಗಿಯಲು ಅವನೆಂತು ದ್ವಿಜನಾಗುತ್ತಾನೆ ?

ಆ. ಹೆತ್ತ ಪುತ್ರನಾಸೆ ಹೇಮದ ಮೇಲಾಸೆ,
ಸ್ತ್ರೀಯ ಮೇಲಿನಾಸೆ ಚಿತ್ತ ಭ್ರಾಂತಿ !
ಭ್ರಮೆಯ ಬಿಡದಿರಲು ಬ್ರಹ್ಮವನ್ನು ಕಾಣ.
ವಿಶ್ವದಾಭಿರಾಮ ಕೇಳು ವೇಮ.

ಆ. ಜಿಹ್ವೆ ರುಚಿಯ ಕೋರಿ ಜೀವಿಸಿರುವ ತನಕ,
ಸತಿಯ ಪತಿಯ ಕೋರಿ ಸುತರ, ಧನವ,
ಅಗ್ನಿಹೋತ್ರಿ ನೋಡು ಅವನೆಲ್ಲ ಕೋರುವ.
ವಿಶ್ವದಾಭಿರಾಮ ಕೇಳು ವೇಮ.

ಸುಖವನ್ನು ಅರಸುವ ಮಾನವನು ಅನಂತ ಸುಖದ ಹಂಬಲ ಹೊಂದಿರುತ್ತಾನೆ. 'ಸುಖಂ ಅನಂತಂ ಆನಂದಂ'. ಅನಂತ ಸುಖವೇ ಆನಂದ. 'ಆನಂದಂ ಬ್ರಹ್ಮ ಇತ್ಯಾಹುಃ' ಆನಂದವನ್ನೇ ಬ್ರಹ್ಮವೆನ್ನುತ್ತಾರೆ. ಬ್ರಹ್ಮವನ್ನು ಪಡೆಯಲು ಶ್ರೇಯೋಮಾರ್ಗಕ್ಕಿಳಿಯಬೇಕು. ಆದರೆ ಬಹಿರ್ಮುಖವಾದ ಇಂದ್ರಿಯಗಳ ಸೆಳವಿಗೆ ಸಿಕ್ಕು ಮಾನವನು ಶ್ರೇಯೋ ಮಾರ್ಗದಿಂದ ಭ್ರಮಿಸಿ ಪ್ರೇಯೋ ಮಾರ್ಗಕ್ಕೆ ಅಂಟುತ್ತಾನೆ. ಹೀಗೆ ಸುಖವು ಪುತ್ರರಲ್ಲಿ ಹೇಮದಲ್ಲಿ, ಸ್ತ್ರೀ ಸಂಗದಲ್ಲಿ ದೊರೆಯುವುದೆಂಬ ಭ್ರಾಂತಿಗೆ ಸಿಲುಕುತ್ತಾನೆ.

ಅಗ್ನಿಹೋತ್ರಿಯು ಅಂದರೆ ಯಜ್ಞಾಗ್ನಿಯನ್ನು ಉರಿಸುವವನು, ಈಷಣತ್ರಯಗಳನ್ನು ಅಂದರೆ ದಾರೇಷಣ, ಪುತ್ರೇಷಣ, ವಿತ್ತೇಷಣಗಳ ಪೂರ್ತಿಯನ್ನು ಕೋರುತ್ತಾನೆ. ಮೇಲೆ ತಾನು ಜೀವಿಸಿರುವ ತನಕ ನಾಲಗೆ ರುಚಿಯನ್ನೂ ಕೋರುತ್ತಾನೆ. ಹೀಗೆ ಎಲ್ಲ ಐಹಿಕ ಸುಖವನ್ನೂ ಕೋರುತ್ತಾನೆ.

ಇಲ್ಲಿ ಛಾಂದೋಗ್ಯ, ಮುಂಡಕ ಮತ್ತು ಬೃಹದಾರಣ್ಯಕ ಉಪನಿಷತ್ತುಗಳು ಏನು, ಹೇಳುತ್ತಿವೆ ಎಂಬುದನ್ನು ನೋಡುವಾ:

ವಿಧಿ ಪೂರ್ವಕ ಯಜ್ಞವನ್ನು ಆಚರಿಸಿ, ಯಜ್ಞ ಶೇಷವಾದ ಮಾಂಸಾದಿ ಸೇವಿಸಿದ ನಂತರ, ''ಅಗ್ನಿಯ ಹಿಂದೆ ಚರ್ಮದ ಮೇಲಾಗಲಿ, ನೆಲದ ಮೇಲಾಗಲಿ, ವಾಜ್ಮನಸ್ಸುಗಳನ್ನು ಸಂಯಮಿಸಿ, ಮಲಗುತ್ತಾನೆ. ಅವನು ಸ್ವಪ್ನದಲ್ಲಿ ಸ್ತ್ರೀಯನ್ನು ನೋಡಿದರೆ, ಕರ್ಮವು ಸಮೃದ್ಧವಾಯಿತು ; ಎಂದು ಅರಿತುಕೊಳ್ಳಬೇಕು''. (ಛಾಂದೋಗ್ಯ 5-2-8)

''ಚೆನ್ನಾಗಿ ಜ್ವಲಿಸುತ್ತಿರುವ ಅಗ್ನಿಯಲ್ಲಿ ಉರಿಯು ಯಾವಾಗ ಏಳುವುದೋ ಆಗ, ಆಜ್ಯ ಭಾಗಗಳ ಮಧ್ಯದಲ್ಲಿ ಆಹುತಿಯನ್ನು ಪ್ರಾಣ ಬಲಿ ಇತ್ಯಾದಿ ಕೊಡಬೇಕು''.

(ಮುಂಡಕ ಉಪ. 1-2-2)

''ಸ್ತ್ರೀಯೇ ಅಗ್ನಿಯು. ಅವಳ ಉಪಸ್ಥವೇ ಸಮಿತ್ತು (ಹುಲ್ಲು). ಲೋಮಗಳೇ ಹೊಗೆ. ಯೋನಿಯೇ ಜ್ವಾಲೆ. ಅಭಿನಂದವೇ (ಆನಂದವೇ) ಕೆಂಡ. ಆ ಅಗ್ನಿಯಲ್ಲಿ ದೇವತೆಗಳು ರೇತಸ್ಸನ್ನು ಹೋಮ ಮಾಡುತ್ತಾರೆ. ಆ ಆಹುತಿಯಿಂದ ಪುರುಷನು ಜನಿಸುತ್ತಾನೆ''.

(ಬೃಹದಾರಣ್ಯಕ ಉಪ 6-2-23)

''ನನಗೆ ಪಂಡಿತನೂ, ವಿಖ್ಯಾತನೂ, ವಿದ್ವತ್ಸಭೆಗಳಿಗೆ ಹೋಗುವವನೂ, ರಮಣೀಯವಾದ ಮಾತನ್ನುಡುವವನೂ, ಎಲ್ಲ ದೇವತೆಗಳನ್ನು ಅರಿತಿರುವವನೂ ಆದ ಪುತ್ರನು ಹುಟ್ಟಬೇಕು. ಪೂರ್ಣಾಯಸ್ಸನ್ನು ಪಡೆಯಬೇಕು ಎಂದು ಬಯಸುವವನು, ಹೋರಿಯ ಮಾಂಸದ ಅಥವಾ ಎತ್ತಿನ ಮಾಂಸದ ಅನ್ನವನ್ನು ಮಾಡಿಸಿ, ತುಪ್ಪದೊಂದಿಗೆ ತನ್ನ ಪತ್ನಿಯ ಜೊತೆಗೆ ತಿನ್ನಬೇಕು. ಆಗ, ಅವರಿಬ್ಬರೂ ಅಂತಹ ಪುತ್ರನನ್ನು ಪಡೆಯಲು ಸಮರ್ಥರಾಗುವರು''.

(ಬೃಹ. ಉಪ)

ಶೀಲ ಕಾಯ್ದುಕೊಳ್ಳುವುದು ಮುಖ್ಯ. ಉತ್ತಮ ಸಂಸ್ಕಾರಗಳು ಒಟ್ಟುಗೂಡಿ ಶೀಲ ನಿರ್ಮಾಣವಾಗುತ್ತದೆ. ಉತ್ತಮ ಸಂಸ್ಕಾರಗಳು ಉತ್ತಮ ಕರ್ಮಗಳಿಂದ, ಉದಾತ್ತ ಚಿಂತನೆಯಿಂದ ಉಂಟಾಗುತ್ತವೆ. ಇದಕ್ಕಾಗಿ ಅನ್ನ ಶುದ್ಧಿ ಇರಬೇಕು. ಮಾನಸಿಕ ಆಹಾರದ ಶುದ್ಧಿಯೂ ಇರಬೇಕು.

ಬ್ರಾಹ್ಮಣನಿಗೆ ನಮಿಸೆ ಬಹಳ ಹರಸುತಿರುವ,
ಆತ್ಮಶುದ್ಧಿ ಹೊಂದಿ ಆತನಿರಲು,
ಹೊಂದದಿರಲು ಅವನು, ಹಾಳು ಕಂಠ ಶೋಷ.
ವಿಶ್ವದಾಭಿರಾಮ ಕೇಳು ವೇಮ.

ಗುಣ ಕರ್ಮದಿಂದ, ವಾಲ್ಮೀಕಿಯಂತೆ, ವಶಿಷ್ಟನಂತೆ, ವಿಶ್ವಾಮಿತ್ರನಂತೆ ವರ್ಣಸ್ತರಗಳನ್ನೇರಿ ಬ್ರಾಹ್ಮಣನಾಗಬೇಕು. ಇದು ಆತ್ಮ ಶುದ್ಧಿಯಿಂದ ಮಾತ್ರ ಸಾಧ್ಯ. ಅಂಥ ಬ್ರಾಹ್ಮಣರು ಜನರನ್ನು ಹರಸಿದರೆ ಜನ ಕಲ್ಯಾಣವಾಗುತ್ತದೆ. ಆತ್ಮ ಶುದ್ಧಿ ಹೊಂದದವನು ಹರಸಿದರೆ ಅದೆಲ್ಲ ಕಂಠ ಶೋಷಣೆಯಷ್ಟೇ.

ಬ್ರಹ್ಮ ಘನತೆ ಕೇಡು ಬ್ರಾಹ್ಮಣರಾ ದೊಡ್ಡ
ಬ್ರಹ್ಮನಿಂದ ಹುಟ್ಟಿ ಬೆಳೆದರೆನಲು,
ಬ್ರಹ್ಮವೇತ್ತ ಬೇಕು ಬ್ರಾಹ್ಮಣನೆನಿಸುವೊಡೆ.
ವಿಶ್ವದಾಭಿರಾಮ ಕೇಳು ವೇಮ.

ಬ್ರಹ್ಮನಿಂದ ಹುಟ್ಟಿ ಬಂದವರೆಂದು ಕೆಲವು ಋಷಿಗಳೂ, ಋಷಿಗಳ ಗೋತ್ರದವರೆಂದು ವಿಶೇಷ ಬುಡಕಟ್ಟಿನ ಆರ್ಯರೂ ತಾವು ಬ್ರಹ್ಮ ಸಂತತಿಯವರಾದುದರಿಂದ ಜಾತಿಯಿಂದ ಬ್ರಾಹ್ಮಣರೆಂದು ಹೇಳಿಕೊಳ್ಳುವುದು ಬ್ರಹ್ಮ ಘನತೆಗೇ ಕೇಡು ಬಗೆದಂತೆ. 'ಬ್ರಹ್ಮಂ ವಿಜಾನಾತಿ ಇತಿ ಬ್ರಾಹ್ಮಣಃ' ಅಂದರೆ ಬ್ರಾಹ್ಮಣನೆನಿಸಬೇಕಾದರೆ ಬ್ರಹ್ಮವನ್ನು ಅರಿತಿರಬೇಕು. ಬ್ರಹ್ಮವೇತ್ತನಾಗಿರಬೇಕು.

ಬ್ರಾಹ್ಮಣನು ತನ್ನ ಆತ್ಮ ತೇಜವನ್ನು ಐಹಿಕ ಫಲ ಭೋಗಗಳಿಗಾಗಿ ಬಳಸಬಾರದು. ಅವನು ತನ್ನ ಮನಸ್ಸಿನ ಸ್ತರದಿಂದ ಕೆಳಗಿಳಿದು ಜನರಿಗೆ ಕೌತುಕ ಹುಟ್ಟಿಸುವ ಪವಾಡ ಕ್ರಿಯೆಗಳಲ್ಲಿ ರಂಜಿಸಬಾರದು. ಮಾಟ ಮದ್ದುಗಳಂಥ ಅಭಿಚಾರ ಕರ್ಮಗಳಂತೂ ನಿಷಿದ್ಧವೇ.

ಆ. ಉತ್ತಮೋತ್ತಮನಾದ ಉಚಿತಜ್ಞನೆ ಮೇಲು.
ಮಹಿಮೆ ತೋರುವವನು ಮಧ್ಯಮನಿಹ.
ವೇಷಧಾರಿಯುದರ ಪೋಷಿಸುವವನಧಮ.
ವಿಶ್ವದಾಭಿರಾಮ ಕೇಳು ವೇಮ.

ಉಚಿತವಾವುದು ಯಾವುದು ? ಅನುಚಿತವಾದುದು ಯಾವುದು ? ಇದನ್ನು ತಿಳಿದು ವಿವೇಕ ಪ್ರಜ್ಞೆಯಿಂದ ವರ್ತಿಸುವವನು ಉತ್ತಮೋತ್ತಮ. ಇನ್ನು ಸಾಧನ ಬಲದಿಂದ ಸಂಪಾದಿಸಿದ ಮನಸ್ಸಿನ ಊರ್ಧ್ವ, ಸ್ತರವನ್ನು ಜನರ ಮೇಲೆ ಛಾಪು ಬೀರಲು ನಿಮ್ನ ಸ್ತರಕ್ಕಿಳಿಸಿ ಸಿದ್ಧಿ ಪ್ರದರ್ಶನ ಮಾಡುವವನು, ಯಕ್ಷಿಣೀ ವಿದ್ಯೆಯವನಂತೆ, ಮಾಟ ಮದ್ದು ಮಾಡುವವನಂತೆ,

ಮಧ್ಯಮನೆನಿಸುತ್ತಾನೆ. ಇನ್ನು ಕೇವಲ ಉದರಂಭರಣಕ್ಕಾಗಿ, ಹಲವಾರು ಲಾಂಛನ ಧರಿಸಿ, ವೇಷ ಭೂಷಣ ಧರಿಸಿ ತಿರುಗುವವನು ಅಧಮನು.

ಆದರೆ, ಮನಸ್ಮೃತಿಯಲ್ಲಿ ವ್ಯಕ್ತವಾದ ವಿಚಾರವೇ ಬೇರೆ.

''ಬ್ರಾಹ್ಮಣನು ಅಥರ್ವವೇದದ ಅಭಿಚಾರ ಕರ್ಮ (ಇತರರನ್ನು ಕೊಲ್ಲಲು ಇಲ್ಲವೆ ಇತರರಿಗೆ ಕೇಡು ಬಗೆಯಲು ಮಂತ್ರ ಪಠಿಸುವುದು) ಸಾಧಕವಾದ ಅಂಗಿರಸ ಮಂತ್ರಗಳನ್ನು ವಿಚಾರ ಮಾಡದೆ ಪ್ರಯೋಗಿಸಬೇಕು. ಈ ಅಭಿಚಾರ ಮಂತ್ರೋಚ್ಚಾರಣವೇ ಬ್ರಾಹ್ಮಣನ ಶಸ್ತ್ರವು. ಈ ಅಭಿಚಾರ ಮಂತ್ರದಿಂದಲೇ ಬ್ರಾಹ್ಮಣನು ವೈರಿಗಳನ್ನು ಕೊಲ್ಲತಕ್ಕದ್ದು''.

(ಮನು ಸ್ಮೃತಿ 11-33)

''ಬ್ರಾಹ್ಮಣ ಶಕ್ತಿ ಹಾಗೂ ರಾಜಶಕ್ತಿ ಇವುಗಳಲ್ಲಿ ಬ್ರಾಹ್ಮಣ ಶಕ್ತಿಯೇ ಶ್ರೇಷ್ಠವಾದದ್ದು. ಆದ್ದರಿಂದ ಬ್ರಾಹ್ಮಣನು ತನ್ನ ಸಾಮರ್ಥ್ಯದಿಂದಲೇ ಅಪರಾಧಿಗಳನ್ನು ಹಾಗೂ ವೈರಿಗಳನ್ನು ನಿಗ್ರಹಿಸಬೇಕು''. (ಮ. ಸ್ಮೃ. 11-32)

ಬ್ರಹ್ಮ ಜ್ಞಾನಿಯಾದವನು ಬ್ರಾಹ್ಮಣನು. ಬ್ರಾಹ್ಮಣನಿಗೆ ರೋಷವಿರುವುದಿಲ್ಲ. ಯಾರೊಂದಿಗೂ ವೈರ ಇರುವುದಿಲ್ಲ. ಸ್ತುತಿ ನಿಂದೆಗಳಿಗೆ ಅತೀತನಾಗಿರುತ್ತಾನೆ. ಆದರೆ ಅಧರ್ಮದ ವಿರುದ್ಧ, ಅನ್ಯಾಯದ ವಿರುದ್ಧ ಅವನ ಬ್ರಹ್ಮ ತೇಜಸ್ಸು ತಾನೇ ಕಾರ್ಯ ಮಾಡುತ್ತದೆ.

ಆ. ತನ್ನ ಹೊಡೆದು ಬಡಿದು, ತಲೆ ಮರೆಸಿ ನಿಲ್ಲಲು,
ದೂಷಣೆ ಗೆಯ್ಯುವುದು ದೊಡ್ಡ ಪಾಪ.
ಅಖಿಲರನು ದಂಡಿಸೆ ಅಖಿಲೇಶನಿರನೇ ?
ವಿಶ್ವದಾಭಿರಾಮ ಕೇಳು ವೇಮ.

ಉನ್ನತೋನ್ನತ ಯೋಗ ಸಾಧನೆಯಿಂದ ಬ್ರಹ್ಮಜ್ಞಾನ ಹೊಂದಿದ ಮಹಾಯೋಗಿ ವೇಮನರು, ತಮ್ಮ ಮಹಿಮೆಯನ್ನು ಅರಿಯಲಾರದೆ, ತಪ್ಪಾಗಿ ಗ್ರಹಿಸಿ, ಹೊಡೆದು ಬಡಿಯಲು, ಅದು ಮಹಾಪಾಪವಾಗಿದ್ದರೂ ತಾವು ಪರಮಾತ್ಮನನ್ನು ಚಿಂತಿಸುತ್ತಿದ್ದರು. ಆ ಪಾಪಿಗಳನ್ನು ದಂಡಿಸಲು ಅಖಿಲೇಶನಿಲ್ಲವೇ ? ಎಂದು ಹೇಳುತ್ತಿದ್ದರು. ಆಗ ವಿಧಿನಿಯಮಾನುಸಾರ ಪಾಪಿಗಳಿಗೆ ದಂಡನೆಯಾಗುತ್ತಿತ್ತು.

ಕಂ. ಹೊಡೆಯಲು ಬಡಿಯಲು ಕಾಣಾ
ಜಡಿದು, ಬಿಗಿದು ಕಟ್ಟಿ, ಕಾಣು, ಕಿರಿ ಕಿರಿ ಗೆಯ್ವರ್
ಹಿಡಿದರಸಿದರೆನ್ನುತಿರಲು,
ದೃಢ ಮನದಿ ಶಿವನ ನೆನೆಯದೆ ತೀರದು ವೇಮಾ.

ಜ್ಞಾನವಂತನನ್ನು ಕರ್ಮಸಂಬಂಧ್ದರು ಸಾಮಾನ್ಯವಾಗಿ ತಿಳಿಯುವುದಿಲ್ಲ. ಬಹಳ ಸಲ, ತುರಿಯಾತೀತ ಸ್ಥಿತಿಯಲ್ಲಿರುವ ಅವನನ್ನು ಹುಚ್ಚನೆಂದೇ ಭಾವಿಸುತ್ತಾರೆ. ಹೀಗಾಗಿ, ಮೂರ್ಖರು ಜ್ಞಾನವಂತನನ್ನು ಹೊಡೆದರೆ, ಬಡಿದರೆ, ಜಡಿದು ಹಿಡಿದು ಕಟ್ಟಿ, ಕಿರಿ ಕಿರಿ ಮಾಡುತ್ತಾರೆ. ಆದರೆ ಆ ಜ್ಞಾನಿಯು ದೃಢ ಮನದಿಂದ ಶಿವನನ್ನು ನೆನೆಯುತ್ತಾನೆ. ಅಷ್ಟೇ

ತೀರಿತು. ಅಂಥ ಉದಾಸೀನ ಭಾವದಿಂದ, ಅದ್ಭುತ ತಿತಿಕ್ಷೆ ತೋರಿದ ಆ ಜ್ಞಾನಿಯ ಮಹಿಮೆಯನ್ನು ಮುಂದೆ ಜನ ಅರಿಯುತ್ತಾರೆ.

ಆ. ಬಯ್ದು ಹೊಡೆದರೆಂದು, ಬಳಿಕ ಮಾತು ತೊರೆದು,
ಬಾಯಿ ಮುಚ್ಚಿ ಇರಲು, ಭೂಮಿ ಮೇಲೆ.
ಪರಮಾತ್ಮನಾಗುವ ಬಣ್ಣಿಸಲು ಶಕ್ಯವೆ ?
ವಿಶ್ವದಾಭಿರಾಮ ಕೇಳು ವೇಮ.

ತಿತಿಕ್ಷೆಯೆಂದರೆ ಅವಮಾನ, ನೋವುಗಳನ್ನು ತಾಳಿಕೊಳ್ಳುವ ಶಕ್ತಿ. ನಿಜವಾದ ಬ್ರಹ್ಮವಿದನು ಬಯ್ದು ಹೊಡೆದರೆಂದು ಮೂರ್ಖರ ಕೂಡ ಗುದ್ದಾಡುವುದಿಲ್ಲ, ಬಯ್ದಾಡುವುದಿಲ್ಲ. ಅವನು ಮಾತೇ ಆಡದೆ ಮೌನವಾಗಿರುತ್ತಾನೆ. ಬಾಯಿ ಮುಚ್ಚಿಕೊಂಡಿರುತ್ತಾನೆ. ಅಂಥ ಪರಮ ಜ್ಞಾನಿಯು ಭೂಮಿಯ ಮೇಲೆ ಸರ್ವರಿಗೂ ಸಮ್ಮತವಾದ ಪರಮಾತ್ಮನಾಗುತ್ತಾನೆ. ಈ ಪವಾಡ ಸದೃಶ ಮಹಿಮೆಯನ್ನು ಬಣ್ಣಿಸಲು ಶಕ್ಯವೇ ?

"ಧಿಗ್ಬಲಂ ಕ್ಷತ್ರಿಯ ಬಲಂ ; ಬ್ರಹ್ಮ ತೇಜೋ ಬಲಂ ಬಲಂ, ಏಕೈಕ ದಂಡೇನ ಸರ್ವಾಸ್ತ್ರಾಣಿ ಹತಾನಿ ಮೇ" ಅಂದರೆ, ಕ್ಷತ್ರಿಯ ಬಲಕ್ಕೆ ಧಿಕ್ಕಾರವಿರಲಿ, ಬ್ರಹ್ಮ ತೇಜದ ಬಲವೇ ಬಲವು ; ಒಂದೇ ಒಂದು ಬ್ರಹ್ಮ ದಂಡದಿಂದ ನನ್ನ ಅಸ್ತ್ರಗಳೆಲ್ಲವೂ ನಾಶವಾದವು, ಎಂದು ಕೌಶಿಕ ರಾಜನು ವಸಿಷ್ಠರ ಮಹಿಮೆಯನ್ನು ಕಂಡರಿತು ನುಡಿದನು. ಅದರಿಂದ ಪ್ರೇರಿತನಾಗಿ ಸ್ಮೃತಿಕಾರನು ಮೇಲಿನ ಬ್ರಾಹ್ಮಣ ಬಲ ಕುರಿತ ಮಂತ್ರವನ್ನು ರಚಿಸಿರಬಹುದು. ಆದರೆ ಇಲ್ಲಿ ಮುಖ್ಯವಾಗಿ ನೆನಪಿಡಬೇಕಾದ ಮಾತೆಂದರೆ, ಬ್ರಹ್ಮರ್ಷಿಯಾಗಿದ್ದರೂ. ಅವರಿಗೆ ಯಾರ ಮೇಲೂ ಕೋಪ ಉಂಟಾಗುತ್ತಿರಲಿಲ್ಲ ; ಯಾರ ವಿರುದ್ಧವೂ ವೈರ ಭಾವವು ಏಳುತ್ತಿರಲಿಲ್ಲ. ಕೌಶಿಕ ರಾಜನು ಶಿವನಿಂದ ವರ ರೂಪವಾಗಿ ಪಡೆದ ಆಗ್ನೇಯಾಸ್ತ್ರ ಮತ್ತು ಬ್ರಹ್ಮಾಸ್ತ್ರಗಳು ಶಕ್ತಿ ಹೀನವಾದುದು, ವಸಿಷ್ಠರ ಬ್ರಹ್ಮ ದಂಡದ ಮಹಿಮೆಯಿಂದ. ಈ ಬ್ರಹ್ಮ ದಂಡದಲ್ಲಿ ಬ್ರಹ್ಮ ತೇಜಸ್ಸು ಮನೆ ಮಾಡಿತ್ತು. ಇದು ಕೇವಲ ಅಧರ್ಮದ ವಿರುದ್ಧ ಉಪಯೋಗವಾಗುವ ಮಹಾಶಕ್ತಿ. ಆದರೆ ಸ್ಮೃತಿಕಾರ ಮನುವು ಹೇಳುವುದು ಬ್ರಾಹ್ಮಣನ ಅಭಿಚಾರ ಕರ್ಮ (ಅಂದರೆ ಮಾಟ ಮದ್ದು, ಭಾನುಮತಿ) ಗಳ ಮೂಲಕ ವೈರಿಗಳ ಸಂಹಾರ ಮಾಡಬೇಕೆಂದು. ಹೀಗೆ ಮಾಡುವುದು ವೈಶಾಚಿಕ ವಿದ್ಯೆಯೇ ಹೊರತು ಬ್ರಹ್ಮ ವಿದ್ಯೆಯೆನಿಸದು.

ಇರಲಿ, ಈಗ ಉಲ್ಲೇಖಿಸಿದ ಕೌಶಿಕನ ಮಾತಿನ ಸಂದರ್ಭವನ್ನೂ ಅನಂತರದ ಘಟನೆಗಳನ್ನೂ ಕುರಿತು ಸ್ವಲ್ಪು ತಿಳಿಯುವುದು ಕ್ರಮಪ್ರಾಪ್ತ.

ಬ್ರಹ್ಮರ್ಷಿ ವಿಶ್ವಾಮಿತ್ರರು, ಪವಿತ್ರ ಗಾಯತ್ರಿ ಮಂತ್ರ ದೃಷ್ಟಾ. ಋಗ್ವೇದದ ಈ ಮಂತ್ರದ ಛಂದಸ್ಸು ಗಾಯತ್ರಿ. ಇದರ ದೇವತೆ ಸವಿತೃ. ದೃಷ್ಟಾ ಆದ ಋಷಿ ವಿಶ್ವಾಮಿತ್ರ. ಬ್ರಾಹ್ಮಣರಲ್ಲಿ ವಿಶ್ವಾಮಿತ್ರ ಗೋತ್ರಜರೂ ಉಂಟು.

ಕೌಶಿಕನು ಜನ್ಮತಃ ಕ್ಷತ್ರಿಯನು. ದೊಡ್ಡ ರಾಜನು. ಬ್ರಹ್ಮರ್ಷಿಯಾಗಿ ವಿಶ್ವಾಮಿತ್ರನೆಂಬ ಹೆಸರು ಪಡೆದ ಮಹಾತ್ಮನೇ ಈತನು. ಒಮ್ಮೆ ದಾರಿತಪ್ಪಿ ಕಾಡಿನಲ್ಲಿ ಅಲೆಯುವಾಗ ವಸಿಷ್ಠ ಮಹರ್ಷಿಗಳ ಆಶ್ರಮಕ್ಕೆ ಬಂದನು. ಜೊತೆಗೆ ಅದೆಷ್ಟೋ ಸಾವಿರ ಸೈನಿಕರಿದ್ದರು. ಅತಿಥಿ ದೇವೋ

ಭವ ಎಂದು ಮಹರ್ಷಿ ಬಂದ ರಾಜ ಪರಿವಾರಕ್ಕೆಲ್ಲ ಕ್ಷಣಾರ್ಧದಲ್ಲಿ, ಬೇಡ ಬೇಡವೆಂದರೂ, ಸುಗ್ರಾಸ ಭೋಜನ ಸತ್ಕಾರ ಏರ್ಪಡಿಸದ. ಕೌಶಿಕನು ತಿಂದು ತೇಗಿದನಾದರೂ ಈ ಕೌತುಕಕ್ಕೆ ಋಷಿಯೊಡನಿರುವ 'ಶಬಲೆ' ಧೇನುವೇ ಕಾರಣವೆಂದು ವಿಚಾರಣಾ ನಂತರ ತಿಳಿದುಕೊಂಡನು. ಅದನ್ನು ಪಡೆಯಲು ಸಾಮ, ದಾನ, ಭೇದ ಉಪಾಯಗಳನ್ನು ಮಾಡಿ ವಿಫಲನಾದಾಗ ಕೊನೆಯಾಗಿ, ದಂಡೋಪಯೋಗಕ್ಕೂ ಸಿದ್ಧನಾದನು. ಶಬಲೆಯನ್ನು ಹಿಂಸಿಸಿ ಒಯ್ಯಬೇಕೆಂದು ಸೈನಿಕರಿಗೆ ಆಜ್ಞಾಪಿಸಿದಾಗ ಶಬಲೆಯ ಮೈಯಿಂದ ಸೃಷ್ಟಿಗೊಂಡ ವೀರರು ಕೌಶಿಕನ ಸೈನಿಕರನ್ನು ಸದೆಬಡಿದರು. ಕೌಶಿಕನ ಮಕ್ಕಳು ವಸಿಷ್ಠ ಮಹರ್ಷಿಯ ಮೇಲೆ ಕೈ ಮಾಡಲು ಹೋದಾಗ ಸುಟ್ಟು ಭಸ್ಮವಾದರು. ಕೌಶಿಕನಿಗೆ ತೀರಾ ಅಪಮಾನವಾಯಿತು. ಒಬ್ಬ ಬಡ ಹಾರುವ ಮತ್ತು ಒಂದು ಯಃಕಶ್ಚಿತ ಹಸು ತನ್ನ ಮಕ್ಕಳನ್ನೂ ಮತ್ತು ಮಹಾ ಸೈನ್ಯವನ್ನೂ ನಾಶ ಮಾಡಿತಲ್ಲ ! ಎಂದು ಕೋಪದಿಂದ ಕೆಂಡವಾದನು.

ಕೌಶಿಕನು ಧನುರ್ವೇದದ ಅನುಗ್ರಹ ಪಡೆಯಲು ಶಿವನನ್ನು ಕುರಿತು ಘೋರ ತಪಸ್ಸಿಗೆ ಅಣಿಯಾದನು. ಇವನ ತಪಸ್ಸಿಗೆ ಮೆಚ್ಚಿದ ಶಿವನು ವರ ನೀಡಿ, 'ದೇವ, ದಾನವ, ಗಂಧರ್ವ, ಋಷಿ, ಯಕ್ಷ, ರಾಕ್ಷಸರೆಲ್ಲರೂ ಪ್ರಯೋಗಿಸುವ ಅಸ್ತ್ರ ಶಸ್ತ್ರಗಳಿಗೆ ನೀನೀಗ ಅಧಿಕಾರಿಯಾಗಿರುವೆ' ಎಂದನು. ಅವನು ಬೋಳಿ ಶಂಕರ ತಾನೇ ? ಕೌಶಿಕ ರಾಜನು, ನೇರವಾಗಿ ವಸಿಷ್ಠರ ಆಶ್ರಮಕ್ಕೆ ಬಂದು ಅವರ ಮೇಲೆ, ಮಂತ್ರ ಮುಖೇನ ಆಗ್ನೇಯಾಸ್ತ್ರವನ್ನು ಪ್ರಯೋಗಿಸಿ, ''ಎಲೈ ವಸಿಷ್ಠರೇ ! ಇಗೋ ಕೊಳ್ಳಿ. ಇದು ನಾನು ಹೊಸದಾಗಿ ಸಂಪಾದಿಸಿದ ಆಗ್ನೇಯಾಸ್ತ್ರ. ಇದನ್ನು ಹೇಗೆ ನಿವಾರಿಸಿಕೊಳ್ಳುವಿರೋ, ನೋಡೋಣ'' ಎಂದನು. ವಸಿಷ್ಠರು ಶಾಂತರಾಗಿಯೇ ಇದ್ದರು. ತಮ್ಮ ಕೈಯಲ್ಲಿದ್ದ ಬ್ರಹ್ಮದಂಡವನ್ನು ನೆಲಕ್ಕೆ ಊರಿದ್ದರಷ್ಟೇ. ಆಗ್ನೇಯಾಸ್ತ್ರವು ಉಗುಳಿದ ಬೆಂಕಿಯು ವಸಿಷ್ಠರ ಬಳಿ ಬಂದೊಡನೆ ಶಾಂತವಾಯಿತು. ವಿಶ್ವದಲ್ಲಿಯೇ ಅಜೇಯವಾದ ಬ್ರಹ್ಮಾಸ್ತ್ರವನ್ನೇ ಪ್ರಯೋಗಿಸಿದ. ಬ್ರಹ್ಮಾಸ್ತ್ರವೂ ವಸಿಷ್ಠರೆದುರು ತಣ್ಣಗಾಯಿತು. ಆಗ ಶೌನಕನು ನುಡಿದ ನುಡಿಯೇ 'ಧಿಕ್ಬಲಂ ಕ್ಷತ್ರಿಯ ಬಲಂ ; ಬ್ರಹ್ಮ ಬಲಂ ಹಿ ಬಲಂ' ಎಂದು. ಬಳಿಕ ವಿಶ್ವಾಮಿತ್ರನು, ಶಿವನೇ ನನಗೆ ಮೋಸ ಮಾಡಿದನೇನೋ ಎಂದು ಭಾವಿಸಿ ಬ್ರಹ್ಮರ್ಷಿಯಾಗಲು ಬ್ರಹ್ಮನನ್ನು ಕುರಿತು ಉಗ್ರ ತಪಸ್ಸು ಮಾಡಿದನು. ಬ್ರಹ್ಮನು ಕೊನೆಗೆ ಮೆಚ್ಚಿ 'ಕೌಶಿಕ ! ಮೇಲೇಳು, ನೀನು ರಾಜರ್ಷಿಯಾಗಿದ್ದೀಯೆ. ನೀನೀಗ ವಿಶ್ವಾಮಿತ್ರ' ಎಂದು ಹೇಳಿ ಅಂತರ್ಧಾನನಾದನು.

ಇದಾದ ಬಳಿಕ, ಸೂರ್ಯವಂಶದ ರಾಜನಾದ ತ್ರಿಶಂಕುವಿಗೆ ಸಶರೀರಿಯಾಗಿ ಸ್ವರ್ಗಕ್ಕೆ ಹೋಗಬೇಕೆಂಬ ಆಸೆಯಾಯಿತು. ಗುರು ವಸಿಷ್ಠರಲ್ಲಿ ಹೋಗಿ ಕೇಳಿ ಕೊಂಡಾಗ ಅವರು ನೀನು ಅದಕ್ಕೆ ಯೋಗ್ಯನಲ್ಲ. ಯೋಗ್ಯ ಕ್ಷತ್ರಿಯನಂತೆ ಬಾಳು ; ಎಂದು ತಿಳಿ ಹೇಳಿ ಕಳಿಸಿದರು. ಅಸಂತುಷ್ಟನಾದ ತ್ರಿಶಂಕು ರಾಜನು ವಸಿಷ್ಠರ ಮಕ್ಕಳಲ್ಲಿ ತನ್ನ ಅಭಿಲಾಷೆಯನ್ನು ವ್ಯಕ್ತಪಡಿಸಿದನು. ಅವರು ಸಹ ಆ ಉಸಾಬರಿ ಬೇಡ ಹೋಗು ಎಂದರು. ನೀವಿಲ್ಲದಿದ್ದರೆ, ನಿಮ್ಮ ತಂದೆಯಿಲ್ಲದಿದ್ದರೆ, ಬೇರೆ ಯಾರಿಂದಾದರೂ ಸರಿ, ಅಂತಹ ಯಜ್ಞ ಆಚರಿಸುತ್ತೇನೆ ; ಎಂದು ಹಠ ತೊಟ್ಟನು. ಆಗ ವಸಿಷ್ಠ ಪುತ್ರರು ಅವನಿಗೆ ಚಂಡಾಲನಾಗು, ಎಂದು ಶಾಪವಿತ್ತರು. ತ್ರಿಶಂಕು ರಾಜನು ಚಂಡಾಲನಾದನು. ರಾಜ್ಯ ಹೋಯಿತು. ಅವನ ಪೀತಾಂಬರವು ಕೊಳಕು ಬಟ್ಟೆಯಾಗಿತ್ತು. ಮುಖದ ಮೇಲೆ ಪ್ರೇತ ಕಳೆ ಬಂದಿತು. ಹೀಗಾಗಿ ಅವನು ಹಗಲೆಲ್ಲ ಗುಹೆಯಲ್ಲಿ ಇದ್ದು ರಾತ್ರಿ ರಾಜರ್ಷಿ ವಿಶ್ವಾಮಿತ್ರರ ಆಶ್ರಮಕ್ಕೆ ಬಂದು ತನ್ನ ಕರುಣ ಕತೆಯನ್ನು ಹೇಳಿಕೊಂಡನು. ಹೃದಯ

ಕರಗಿದ ವಿಶ್ವಾಮಿತ್ರರು ಅವನನ್ನು ಸಶರೀರ ಸ್ವರ್ಗಕ್ಕೆ ಕಳಿಸುವುದಾಗಿ ಭರವಸೆ ಇತ್ತರು. ತ್ರಿಶಂಕುವನ್ನು ಸ್ವರ್ಗಕ್ಕೆ ಸಶರೀರ ಕಳಿಸುವ ಯಜ್ಞೋಪಚಾರಗಳನ್ನು ಆಚರಿಸಿದರು. ಇತರ ಋಷಿಗಳಿಗೆ ಆಮಂತ್ರಣ ಕಳಿಸಿದರು. ಆದರೆ ವಸಿಷ್ಠ ಪುತ್ರರು ಬರಲಿಲ್ಲ. ಅಷ್ಟೇ ಅಲ್ಲ "ಚಂಡಾಲ ಯಜ್ಞ ಕರ್ತ್ರ ; ಕ್ಷತ್ರಿಯ ಋತ್ವಿಜ" ಎಂದು ನಗೆಯಾಡಿದರು. ಇದು ವಿಶ್ವಾಮಿತ್ರರ ಕಿವಿಗೆ ಬಿದ್ದು ಅವರು ಕುಪಿತರಾಗಿ ವಸಿಷ್ಠ ಪುತ್ರರು ಉರಿದು ಬೂದಿಯಾಗಲಿ ಎಂದು ಶಾಪವಿತ್ತರು.

ಇತ್ತ ಯಾಗ ಶಾಲೆಯಲ್ಲಿ ದೇವತೆಗಳಿಗೆ ಹವಿಸ್ಸನ್ನು ಅರ್ಪಿಸಲು ಪಠಿಸಿದ ಮಂತ್ರಗಳನ್ನು ಕೇಳಿಯೂ ಕೇಳದವರಂತೆ ದೇವತೆಗಳು ತೆಪ್ಪಗಿದ್ದರು. ಆ ವಿಶ್ವಾಮಿತ್ರರು 'ತ್ರಿಶಂಕು, ದೇವತೆಗಳು ಹವಿಸ್ಸನ್ನು ಸ್ವೀಕರಿಸದಿದ್ದರೇನಾಯಿತು ? ನಾನು ಆಜ್ಞಾಪಿಸುತ್ತೇನೆ, ಸ್ವರ್ಗಕ್ಕೆ ನಡೆ' ಎಂದರು. ದೇವಲೋಕದ ಮೆಟ್ಟಿಲು ಹತ್ತಿ, ಚಂಡಾಲನಾದರೂ, ತ್ರಿಶಂಕು ಸ್ವರ್ಗದತ್ತ ಸಾಗಿದ. ಆಗ ದೇವರಾಜನಾದ ಇಂದ್ರನು ಸಿಟ್ಟಿಗೆದ್ದು, ಗುರು ಶಾಪಗ್ರಸ್ತ ಚಂಡಾಲನು ತ್ರಿಶಂಕು ! 'ನಡೆಯಾಚೆಗೆ' ಎಂದು ತಳ್ಳಿಬಿಟ್ಟ. ಹೀಗೆ ತ್ರಿಶಂಕುವು, ಕಾಲುಗಳು ಮೇಲಾಗಿ ಶಿರವು ಕೆಳಗಾಗಿ, ಕೆಳಗೆ ಬೀಳಹತ್ತಿದನು. ಆಗ ಅವನು 'ವಿಶ್ವಾಮಿತ್ರರೇ ! ಕಾಪಾಡಿ. ತ್ರಾಹಿ, ತ್ರಾಹಿ ಸತ್ತೆ' ಎಂದು ಗೋಳಿಟ್ಟನು. ಆಗ ವಿಶ್ವಾಮಿತ್ರರು ತ್ರಿಶಂಕುವಿಗೆ ಅಭಯವಿತ್ತು ಅಂತರಿಕ್ಷದಲ್ಲಿಯೇ ಪ್ರತಿ ಸ್ವರ್ಗ ನಿರ್ಮಿಸಿದರು. ಈ ಪವಾಡ ಸದೃಶ ಸಿದ್ಧಿ ಪ್ರದರ್ಶನದಿಂದ ವಿಶ್ವಾಮಿತ್ರರ ತಪಸ್ಸಿದ್ಧಿಯು ಖಾಲಿಯಾಯಿತು.

ಅದರಿಂದಾಗಿ ಬ್ರಹ್ಮರ್ಷಿಯಾಗುವ ಹಂಬಲದಿಂದ ರಾಜರ್ಷಿ ವಿಶ್ವಾಮಿತ್ರರು ಘೋರ ತಪಸ್ಸಿಗಿಳಿದರು. ಧರ್ಮಾತ್ಮ ವಿಶ್ವಾಮಿತ್ರರ ತಪಸ್ಸು ಪುಷ್ಕರ ತೀರ್ಥದಲ್ಲಿ ಒಂದು ಸಾವಿರ ವರ್ಷ ಕಾಲ ಅವ್ಯಾಹತವಾಗಿ ಸಾಗಿತು. ಬ್ರಹ್ಮನು ಪ್ರತ್ಯಕ್ಷನಾಗಿ, 'ನೀನು ಪೂರ್ಣ ಋಷಿಯಾಗಿರುವೆ' ಎಂದು ಹೇಳಿ ಅಂತರ್ಧಾನನಾದ. ಆದರೆ ಬ್ರಹ್ಮರ್ಷಿಯಾಗುವ ಅಭೀಷ್ಟ ಪೂರ್ತಿಯಾಗಲಿಲ್ಲ. ಹೀಗಾಗಿ ಅವರು ಮತ್ತೊಂದು ಸುತ್ತಿನ ತಪಸ್ಸಿಗೆ ಅಣಿಯಾದರು. ಆದರೆ ದೇವತೆಗಳು ಭೀತರಾಗಿ, ಇವರ ತಪೋಭಂಗ ಮಾಡಲು ಮೇನಕೆ ಎಂಬ ಅಪ್ರತಿಮ ದೇವ ಕನ್ನೆಯನ್ನು ಪುಷ್ಕರ ತೀರ್ಥದಲ್ಲಿ ಸ್ನಾನಕ್ಕೆ ಹೋಗಿ ಋಷಿಗಳ ಮನವನ್ನು ವಿಕ್ಷುಬ್ಧಗೊಳಿಸಲು ಕಳಿಸಿದರು. ಆ ರೀತಿ ಆಗಮಿಸಿದ ಮೇನಕೆ ತನ್ನ ಒನಪು ಒಯ್ಯಾರಗಳಿಂದ ವಿಶ್ವಾಮಿತ್ರರ ಮನ ಸೆಳೆದಳು. ಅವರು ಕಾಮ ಮೋಹಿತರಾಗಿ ತನ್ನೊಡನೆ ಇರಲು ಆಕೆಯನ್ನು ಆಹ್ವಾನಿಸಿದರು.

ಆ. ಎಂಥ ಯೋಗಿಯೇನು ? ಎಳಸಿ ಮನ್ಮಥ ಸ್ಥಿತಿ,
ಸವಿಯ ಬಲ್ಲೆನೆಂದು, ಸೃಷ್ಟಿ ಕಾಣೆ.
ಯೋಗವೆಲ್ಲ ಮರೆತು ಜೋಗಿ ಪಾಡು ಪಡುವ.
ವಿಶ್ವದಾಭಿರಾಮ ಕೇಳು ವೇಮ.

ಆ. ಮಂತ್ರವೆಲ್ಲ ಮರೆತು, ಮಧುರ ಅಧರ ಕೋರಿ,
ಬಹಳ ನೀತಿಗೆಟ್ಟು, ಬಿಂಕ ಬಿಡನು.
ಯುವತಿ ಕಂಡು ಪರಮ ಯೋಗವನೆ ಮರೆವನು.
ವಿಶ್ವದಾಭಿರಾಮ ಕೇಳು ವೇಮ.

ಆ. ಅಧರ ಸುಧೆಯ ಕಂಡು, ಅಖಿಲವನು ಮರೆವನು.
ತರುಣಿ ರೂಪ ಕಂಡು ತನ್ನ ಮರೆವ.
ಮಾತುಗಳನಾಲಿಸಿ, ಮರೆಯುವನು ಯೋಗವ.
ವಿಶ್ವದಾಭಿರಾಮ ಕೇಳು ವೇಮ.

ಆ. ಮರುಳನಾದೊಡೇನು ? ಮಾರು ವೇಷಿಯೇನು ?
ರೋಗಿಯೇನು ? ಪರಮ ಯೋಗಿಯೇನು ?
ನಾರಿ ನೋಡಿದೊಡನೆ ಚಿತ್ತ ಕದಡದೇನು ?
ವಿಶ್ವದಾಭಿರಾಮ ಕೇಳು ವೇಮ.

ಬ್ರಹ್ಮರ್ಷಿ ಪದವಿ ಪ್ರಾಪ್ತಿಗಾಗಿ ಉಗ್ರ ತಪಸ್ಸಿಗಿಳಿದ ಪರಮಯೋಗಿ ರಾಜರ್ಷಿ ವಿಶ್ವಾಮಿತ್ರರಿಗೂ ಮೇನಕೆಯಂಥ ಅಪರೂಪದ ಸುಂದರ ಕನ್ನೆಯನ್ನು, ಅದೂ ಸ್ನಾನ ಭಂಗಿಯಲ್ಲಿ, ಕಂಡು ಸಹಜವಾಗಿ ಕಾಮೋದ್ರೇಕವಾಯಿತು. ತಮ್ಮೊಡನೆ ಇರಲು ಆಹ್ವಾನಿಸಿದರು. ಅವಳಿಗೆ ತಾನು ಬಂದ ಕಾರ್ಯ ಈಡೇರಿತೆಂದು ಬಹಳ ಸಂತೋಷವಾಗಿ ಕೂಡಲೇ ಒಪ್ಪಿದಳು. ವಿಶ್ವಾಮಿತ್ರರೊಂದಿಗೆ ಹತ್ತು ವರ್ಷ ಬಾಳಿದಳು. ಈ ಕಾಲದಲ್ಲಿ ಪ್ರೇಮಿಗಳು ಶಕುಂತಲೆಯನ್ನು ಮಗಳಾಗಿ ಪಡೆದರು.

ವನದೊಳಗೆ ತಿರುಗುವ ವರ ಮೌನಿಯಾದರು,
ಮನಸು ಕುದುರುತಿಹುದು, ಮಮತೆಯಿಂದ.
ಕೆಡುವೆನೆಂಬ ಮೂರ್ಖ ಕೆಡುವುದೇನು ಲೆಕ್ಕ ?
ವಿಶ್ವದಾಭಿರಾಮ ಕೇಳು ವೇಮ.

ವಿಶ್ವಾಮಿತ್ರ ರಾಜರ್ಷಿಗೆ ಹತ್ತು ವರ್ಷಗಳ ಬಳಿಕ ಎಚ್ಚರವಾಯಿತು. ತಮ್ಮ ಕೃತ್ಯದ ಬಗೆಗೆ ನಾಚುಗೆಯಾಯಿತು. ತಮ್ಮ ತಪೋ ಭಂಗಕ್ಕೆ ಹೊಂಚು ಹಾಕಿದ ದೇವತೆಗಳ ಬಗೆಗೆ ಕೋಪ ಉಂಟಾಯಿತು. ಮೇನಕೆಯನ್ನು ತಮ್ಮ ತಪಸ್ಸಿನ ಗುರಿಯನ್ನು ತಿಳಿಸಿ, ಕಳಿಸಿಕೊಟ್ಟರು.

ಮೇನಕೆಯ ಕಾಟದಿಂದ ವಿಶ್ವಾಮಿತ್ರರು ಕಾಮನನ್ನು ಗೆಲ್ಲಲೆಂದೇ ಒಂದು ಸಾವಿರ ವರ್ಷ ತಪಸ್ಸನ್ನಾಚರಿಸಿದರು. ದೇವತೆಗಳು ಭಯಪಟ್ಟು ಬ್ರಹ್ಮನ ಸಮೀಪಕ್ಕೆ ಹೋಗಿ, ವಿಶ್ವಾಮಿತ್ರನಿಗೆ ಮಹರ್ಷಿ ಪದವಿ ನೀಡಲು ವಿನಂತಿಸಿದರು. ಬ್ರಹ್ಮ ಒಪ್ಪಿಕೊಂಡ. ಅದರಂತೆ ವಿಶ್ವಾಮಿತ್ರರಿಗೆ ತಿಳಿಸಿದ. ಆದರೆ ವಿಶ್ವಾಮಿತ್ರರು 'ವಿಷಾದವೂ ಇಲ್ಲದ, ಸಂತೋಷವೂ ಇಲ್ಲದ, ಸ್ಥಿತಿಯಲ್ಲಿ ನನ್ನನ್ನು 'ಬ್ರಹ್ಮರ್ಷಿ' ಎಂದು ಕರೆದರೆ ಮಾತ್ರ ನಾನು ಜಿತೇಂದ್ರಿಯನೆಂದು ತಿಳಿದುಕೊಳ್ಳುತ್ತೇನೆ' ಎಂದರು. ಆಗ ಬ್ರಹ್ಮನು ನೀನು ಇನ್ನೂ ಆ ಮಟ್ಟ ಮುಟ್ಟಿಲ್ಲ. ಪ್ರಯತ್ನ ಮಾಡು ; ಎಂದು ಹೇಳಿ ಅಂತರ್ಧಾನನಾದನು. ಅನಂತರ ವಿಶ್ವಾಮಿತ್ರ, ಊರ್ಧ್ವ ಬಾಹುಗಳಾಗಿ, ವಾಯುವನ್ನೇ ಭಕ್ಷಿಸುತ್ತ, ಪಂಚಾಗ್ನಿ ಮಧ್ಯದಲ್ಲಿ, ಕೊರೆಯುವ ನೀರಿನೊಳಗೆ ನಿಂತು ಒಂದು ಸಾವಿರ ವರ್ಷ ತಪಸ್ಸನ್ನಾಚರಿದರು. ಇವರ ಘೋರ ತಪಸ್ಸನ್ನು ಕೆಡಿಸಲು ಇಂದ್ರನು ರಂಭೆಯನ್ನೇ ಕಳಿಸಿದನು. ರಂಭೆಯು ವಿಶ್ವಾಮಿತ್ರರ ಕೋಪಕ್ಕೆ ಅಂಜಿ ಹಿಂದೆ ಮುಂದೆ ನೋಡಿದಾಗ, ಇಂದ್ರ, ಮನ್ಮಥರೂ ಅವಳೊಡನೆ ಬರಲು ಒಪ್ಪಿದರು. ಇಂದ್ರನು ಕೋಗಿಲೆಯಾಗಿ ಹಾಡುವುದು, ಮನ್ಮಥನು

ಋಷಿಯ ಮನಸ್ಸನ್ನು ಆಕ್ರಮಿಸುವುದು ; ರಂಭೆ ಗಾನ ಮಾಡುತ್ತ ಹಾವಭಾವ ಪ್ರದರ್ಶಿಸುವುದು; ಎಂದು ಏರ್ಪಡಿಸಲಾಯಿತು. ಕೋಗಿಲೆಯ ಹಾಡು ಇಂಪಾಗಿ ಕೇಳಿಸಿದಾಗ, ವಿಶ್ವಾಮಿತ್ರರ ಮನಸ್ಸು ಉಲ್ಲಾಸಗೊಂಡಿತು. ಎದುರಿಗೆ ರಂಭೆ ಕಂಡಳು. ಯೋಗ ದೃಷ್ಟಿಯಿಂದ ನೋಡಿದಾಗ ದೇವತೆಗಳ ಹೂಟವಿದೆಲ್ಲ, ಎಂದು ತಿಳಿದು ಬಂತು. ಆಗ ವಿಶ್ವಾಮಿತ್ರರು ಕೋಪಗೊಂಡು 'ರಂಭೆ', ಕಲ್ಲಾಗಿ ಹೋಗು' ಎಂದು ಶಪಿಸಿದರು. ಹೀಗೆ ವಿಶ್ವಾಮಿತ್ರರು ಕೋಪಗೊಂಡು ತಮ್ಮ ಮನಸ್ಸಿನ ಸ್ಥಿಮಿತ ಕಳೆದುಕೊಂಡರು. ಇಂದ್ರನ ಹಂಚಿಕೆ ಫಲಿಸಿತು. ಅವನೂ ಮನ್ಮಥನೂ ಅಲ್ಲಿಂದ ಜಾರಿದರು.

ರಾಜರ್ಷಿ ವಿಶ್ವಾಮಿತ್ರರಿಗೆ ತಮ್ಮ ಬಗೆಗೆ ತಮಗೇ ನಾಚುಗೆಯೆನಿಸಿತು. ಮತ್ತೆ ತಪಸ್ಸನ್ನಾಚರಿಸಲು ಅಣಿಯಾದರು. ಉಸಿರನ್ನು ನಿರ್ಬಂಧಿಸಿ ಸಾವಿರ ವರ್ಷ ತಪಸ್ಸನ್ನಾಚರಿಸಿದರು. ಅವರ ಉಗ್ರ ತಪಸ್ಸಿನಿಂದ ಭೂಲೋಕ, ದೇವಲೋಕಗಳಲ್ಲಿ ಅಲ್ಲೋಲ ಕಲ್ಲೋಲವಾಯಿತು. ದೇವತೆಗಳು ಭೀತರಾಗಿ ಬ್ರಹ್ಮದೇವನೊಂದಿಗೆ ವಿಶ್ವಾಮಿತ್ರರಲ್ಲಿ ಬಂದು, 'ವಿಶ್ವಾಮಿತ್ರ ! ನೀನು ಬ್ರಾಹ್ಮಣ್ಯವನ್ನು ಪಡೆದಿರುವಿ. ನೀನೀಗ ಬ್ರಹ್ಮರ್ಷಿ, ನೀನು ದೀರ್ಘಾಯುಷಿಯಾಗು. ನಿನಗೆ ಮಂಗಳವಾಗಲಿ'; ಎಂದು ಹರಸಿದನು. ಆಗ ಹರ್ಷಿತರಾದ ವಿಶ್ವಾಮಿತ್ರರು, 'ನನಗೆ ಬ್ರಹ್ಮರ್ಷಿ ಪದವಿಯೂ, ದೀರ್ಘಾಯುಷ್ಯವೂ ಲಭಿಸಿರುವುದಾದರೆ, ಓಂಕಾರ ನಾದವು ಅನಾಹತ ಚಕ್ರದಲ್ಲಿ ಮೊಳಗಬೇಕು. ವಷಟ್ ಕಾರ ಅಂದರೆ ಯಜ್ಞದಲ್ಲಿ ದೇವತೆಗಳಿಗೆ ಹವಿಸ್ಸನ್ನು ಅರ್ಪಿಸುವಾಗ ಉಚ್ಚರಿಸುವ ಮಂತ್ರವು ವಶವಾಗಬೇಕು. ವೇದಗಳು ನನಗೆ ಒಲಿಯಬೇಕು. ಧನುರ್ವಿದ್ಯೆ ಬ್ರಹ್ಮವಿದ್ಯೆಗಳಲ್ಲಿ ನಿಷ್ಣಾತರಾದ ವಸಿಷ್ಠರು ನನ್ನನ್ನು ಬ್ರಹ್ಮರ್ಷಿಗಳು ಎಂದು ಕರೆಯಬೇಕು. ಆಗ ಮಾತ್ರ ನನಗೆ ಒಪ್ಪಿಗೆ' ಎಂದರು. ಹಾಗೆಯೇ ಆಯಿತು. ಆಗ ವಸಿಷ್ಠರೇ ಬಂದು ''ವಿಶ್ವಾಮಿತ್ರರೇ ! ನೀವು ಬ್ರಹ್ಮರ್ಷಿಗಳಾಗಿದ್ದೀರಿ ಸಂದೇಹವಿಲ್ಲ. ನಿಮ್ಮ ಇಷ್ಟಾರ್ಥವೆಲ್ಲ ನೆರವೇರುವುದು'' ಎಂದು ಹೇಳಿ ಅವರ ಸಖ್ಯ ಬೆಳೆಸಿದರು. ಅನಂತರ ವಿಶ್ವಾಮಿತ್ರರು ವಸಿಷ್ಠರನ್ನು ಪೂಜಿಸಿ ಗೌರವಿಸಿದರು. ಅದೆಷ್ಟು ಅಡೆತಡೆಗಳಿದ್ದರೂ ಅವುಗಳನ್ನೆಲ್ಲ ದಾಟಿ, ಯಶಸ್ಸನ್ನು ಸಾಧಿಸಿದ ವಿಶ್ವಾಮಿತ್ರರಂಥಹ ಬ್ರಹ್ಮರ್ಷಿಗಳು ಶ್ರೀರಾಮನಂತಹ ಕ್ಷತ್ರಿಯನಿಗೆ ಗುರುಗಳಾದರು, ಎಂತಹ ಭಾಗ್ಯ !

ವೇಮನೆಂಬ ಯೋಗಿ ವಾಸಿಸಿದ ಲೋಕದಿ,
ಪೂಜೆ ಸಲಿಸಿರವಗೆ ಪುಣ್ಯ ಪುರುಷರೆ !
ಸಲಿಸಿದಷ್ಟು ಪೂಜೆ ಸೌಖ್ಯ ಭಾಗ್ಯ ಲಭ್ಯ.
ವಿಶ್ವದಾಭಿರಾಮ ಕೇಳು ವೇಮ.

ಜನ್ಮಾಂತರದಲ್ಲಿ ಗಳಿಸಿದ ಪುಣ್ಯಫಲವಾಗಿ ಮಾನವ ಜನ್ಮ ಪ್ರಾಪ್ತವಾಗುತ್ತದೆ. 'ಜನ್ಮನಾ ಜಾಯತೇ ಶೂದ್ರಃ'. ಮಾನವ ಯೋನಿಯಲ್ಲಿ ಜನಿಸಿದವರೆಲ್ಲರೂ ಶೂದ್ರರಾಗಿ ಹುಟ್ಟುತ್ತಾರೆ. ಎಲ್ಲರ ಹುಟ್ಟೂ 'ಮುಟ್ಟಿನ' ಯೋನಿಯಿಂದಲೇ. ತನ್ನ ಸಾಧನದಿಂದ ಗುರೂಪದೇಶದಿಂದ ಉತ್ತಮ ಸಂಸ್ಕಾರ ಹೊಂದಿ ಪರದಲ್ಲಿ ಪ್ರವೇಶಿಸಿ ದ್ವಿಜನಾಗಬೇಕು. ದಾರವನ್ನು ಕೊರಳಲ್ಲಿ ಕಟ್ಟಿ ದ್ವಿಜನೆಂದುಕೊಳ್ಳುವುದಲ್ಲ. ವೇದ ಜ್ಞಾನವನ್ನು ಅರಿಯುವ ಅಂತರ್ದೃಷ್ಟಿ, ಬೆಳೆಯಿಸಿಕೊಂಡು ಆ ವೇದ ಪಾಠದಿಂದ ವಿಪ್ರನೆನಿಸಬೇಕು. ಇಷ್ಟೆಲ್ಲ ಮಹತ್ ಸಾಧನೆಯನ್ನು ಮಾಡುವಾಗ ಎಡರು ತೊಡರು ಬರುವುದು ಸ್ವಾಭಾವಿಕ. ಅವುಗಳನ್ನು ದಾಟಿ

ಬ್ರಹ್ಮವನ್ನು ಅರಿಯಬೇಕು. ಆಗ ವಿಶ್ವಾಮಿತ್ರರಂತೆ, ವಸಿಷ್ಠರಂತೆ ಬ್ರಾಹ್ಮಣರಾಗಬಹುದು.

ಆ. ಬ್ರಾಹ್ಮಣರಿಗೆ ಸಕಲ ಭಾಗ್ಯ ನೀಡಬಹುದು.
ಗೌರವವೀಯಬಹುದು ; ಕೂಡಬಹುದು.
ಜ್ಞಾನ ತಿಳಿಸಿ ಜನರ ಸೇರಿಸಲು ದಡಕೆ.
ವಿಶ್ವದಾಭಿರಾಮ ಕೇಳು ವೇಮ.

ತಮ್ಮ ಶೀಲ ಕಾಯ್ದುಕೊಂಡು ಉನ್ನತ ಸ್ತರದಲ್ಲಿರುವ ಬ್ರಾಹ್ಮಣನಿಗೆ ಏನೆಲ್ಲ ಭೋಗ ಭಾಗ್ಯಗಳನ್ನು ನೀಡಬಹುದು. ಗೌರವ ನೀಡಬಹುದು. ಅವನನ್ನು ಪೂಜಿಸಬಹುದು. ಅವರನ್ನು ಕೂಡಿ ಅವರ ಸತ್ಸಂಗದಲಿ ಕಾಲ ಕಳೆಯಬಹುದು. ಅವನು ಜ್ಞಾನವನ್ನು ನೀಡಿ ಜನರನ್ನು ಇಹದ ಈ ದಡದಿಂದ ಪರದ ಆ ದಡಕ್ಕೆ ಮುಟ್ಟಿಸುವ ದೇಶಿಕನಾಗಿದ್ದರೆ.

ಆ. ಎಂಜಿಲೆಂಜಿಲೆನುತ ನಿಮ್ಮ ಬಾಯಿಯಿಂದ
ವೇದಗಳನೋದುವ ವಿಭ್ರಮಿತರೆ !
ಅರಿತು ನೋಡಲದನೆ ಎಂಜಿಲಾಗದೇನು ?
ವಿಶ್ವದಾಭಿರಾಮ ಕೇಳು ವೇಮ.

ಯಾರ ನಾಲಗೆ ತಟ್ಟಿದರೂ ಎಂಜಲಾಯಿತು, ಎಂದು ಹಾರಾಡುವ ವೈದಿಕರೇ, ನೀವು ಬಾಯಿಯಿಂದಲೇ ವೇದ ಓದುವಿರಲ್ಲವೇ ? ಆಗ ವೇದವು ಎಂಜಲಾಗದೇನು ? ನಿಮ್ಮ ಬಾಯಿಯಿಂದ ಹೊರ ಬೀಳುವ ವೇದ ಮಂತ್ರೋಚ್ಚಾರವು ಎಂಜಿಲಾಗದೇನು ? ಹಾಗಾದರೆ, ವಿಭ್ರಮಿತರೇ, ಅರಿತು ನೋಡಿದರೆ, ನಿಮ್ಮ ಗೃಹಿಕೆಯ ಮೇರೆಗೆ ಇದೆಲ್ಲ ಎಂಜಿಲಾಗುವುದಿಲ್ಲವೇ?

ಶೀಲವಂತಿಕೆಯನ್ನು ಕುರಿತು ಮನು ಸ್ಮೃತಿಯಲ್ಲಿ ಏನು ಹೇಳಿದ್ದಾರೆ ತಿಳಿಯವಾ.

''ಬ್ರಾಹ್ಮಣರು ಶ್ರಾದ್ಧ ಭೋಜನ ಮಾಡುತ್ತಿರುವಾಗ ಅವರನ್ನು ಚಂಡಾಲನು, ಹಂದಿಯು, ಕೋಳಿಯು, ನಾಯಿಯು, ಮುಟ್ಟಾದವಳು, ಹಾಗೂ ನಪುಂಸಕನು ನೋಡಕೂಡದು''.
(ಮ.ಸ್ಮೃ. 3-239)

''ಹಂದಿಯು ಮೂಸುವುದರಿಂದ, ಕೋಳಿಯ ರೆಕ್ಕೆಗಳ ಗಾಳಿ ತಟ್ಟುವುದರಿಂದ, ನಾಯಿಯು ನೋಡುವುದರಿಂದ, ಶೂದ್ರನ ಸ್ಪರ್ಶದಿಂದ ಬ್ರಾಹ್ಮಣ ಭೋಜನವು ಹಾಳಾಗಿ ಹೋಗುತ್ತದೆ''. (ಮ. ಸ್ಮೃ.3-249)

''ಶ್ರಾದ್ಧ ಭೋಜನವು ಮುಗಿದ ಬಳಿಕ ಉಚ್ಛಿಷ್ಠ (ಅಂದರೆ ಎಂಜಲನ್ನು ಇಲ್ಲವೆ ಉಳಿದ ಅನ್ನವನ್ನು) ಯಾವನು ಕೊಡುತ್ತಾನೋ, ಆ ಮೂಢನು ತಲೆ ಕೆಳಗಾಗಿ ಕಾಲ ಸೂತ್ರವೆಂಬ ನರಕವನ್ನು ಹೊಂದುತ್ತಾನೆ''. (ಮ.ಸ್ಮೃ. 4-239)

ಗೀತ ಬಿಳಿಯ ನಾಯಿಗಳೆಂಜಿಲವೆ ಬಹಳವಾಯ್ತು.
ಪಕ್ಕ ವೇಶ್ಯೆಯೆಂಜಿಲು ಪ್ರಾಪ್ತವಾಯ್ತು.
ಭ್ರಷ್ಟರೆಂಜಿಲು ಅಂತ್ಯಕೆ ಶ್ರೇಷ್ಠವಾಯ್ತು.
ನಿಷ್ಠೆಯಿರುವರೆಂಜಿಲೆ ನಿಂದ್ಯ ವೇಮ.

ಆರ್ಯರು ಪಶ್ಚಿಮ ಶೀತ ಪ್ರದೇಶದಿಂದ ಬಂದವರಾದುದರಿಂದ ಅನುವಂಶಿಕವಾಗಿ ಬಿಳಿಯ ಚರ್ಮ ಹೊಂದಿರುತ್ತಾರೆ. ಜ್ಞಾನಿಯ ದೃಷ್ಟಿಯಲ್ಲಿ ಬ್ರಾಹ್ಮಣ ಮತ್ತು ನಾಯಿ ಮತ್ತು ನಾಯಿಯ ಮಾಂಸ ತಿನ್ನುವವರು ಸಮಾನರಾದುದುರಿಂದ ಆರ್ಯರನ್ನು ಬಿಳಿಯ ನಾಯಿಗಳೆನ್ನಬಹುದು. ಇಂಥ ಬಿಳಿಯ ನಾಯಿಗಳ ಎಂಜಿಲು ಬಹಳವಾಯಿತು. ಅಧ್ಯಾಪನ ಅಧಿಕಾರ ಪಡೆದ ಅವರ ಬಾಯಿಯಿಂದ ಎಂಜಿಲಾದ ಮಂತ್ರ ಶ್ರವಣ ಮಾಡಬೇಕು. ಬ್ರಾಹ್ಮಣ ಪೂಜಾರಿ ಮೂಸಿದ ನೈವೇದ್ಯವನ್ನು ದೇವರಿಗೆ ಅರ್ಪಿಸಬೇಕು. ವಿಪ್ರನು ಉಂಡ ಬಳಿಕ ಉಚ್ಛಿಷ್ಟವನ್ನು ಇತರರು ಉಣ್ಣಬೇಕು. ಹೀಗೆ ಬಿಳಿ ನಾಯಿಗಳ ಎಂಜಿಲು ಬಹಳವಾಯಿತು. ಹಗಲು ಮುಟ್ಟು, ಮಡಿ ಆಚರಿಸುವ ಬ್ರಾಹ್ಮಣ ಪೂಜಾರಿ-ಪುರೋಹಿತರು ರಾತ್ರಿ ವೇಶ್ಯೆಯರ ಸಂಗ ಬಯಸುತ್ತಾರೆ. ಅವರನ್ನು ಪಕ್ಕಕ್ಕೆ ಕರೆದುಕೊಳ್ಳುತ್ತಾರೆ. ಅವರ ಅಧರಾಮೃತ ಸವಿಯುತ್ತಾರೆ. ಹೀಗೆ ಪಕ್ಕ ವೇಶ್ಯೆಯರ ಎಂಜಿಲು ಪ್ರಾಪ್ತವಾಗುತ್ತದೆ. ಹೀಗೆ ಧರ್ಮ ಭ್ರಷ್ಟರಾದ ಬ್ರಾಹ್ಮಣರ ಎಂಜಿಲೇ ಶ್ರೇಷ್ಠವೆನಿಸಿ, ಧರ್ಮ ನಿಷ್ಠೆಯಿಂದ ಆಚರಿಸುವ ಶೂದ್ರರ ಎಂಜಿಲು ನಿಂದ್ಯವೆನಿಸುತ್ತದೆ.

ಧನ ಮದ :

ಅಷ್ಟ ಮದಗಳಲ್ಲಿ ಧನದ ಮದವು ತುಂಬಾ ಪ್ರಭಾವಪೂರ್ಣವಾಗಿದೆ. ಪರಮಾತ್ಮನಲ್ಲಿ ಭಕ್ತಿ ಕುದುರಲು ಅನುವು ಮಾಡಿಕೊಡದು. ಪರಮಾತ್ಮನ ಸಂತತಿಯಾದ ದೈವದ ಸೇವೆ ಮಾಡಲೂ ಬಿಡದು. ಗರ ಹೊಡೆದವರ ನುಡಿಸಬಹುದು ; ಸಿರಿಗರ ಹೊಡೆದರೆ ನುಡಿಸಲಾಗದು. ಅಂದರೆ ದೆವ್ವ ಹಿಡಿದವರನ್ನು ನುಡಿಸಲೂ ಬಹುದು; ಆದರೆ ಸಿರಿಯ ದೆವ್ವ ಬಡಿದವರನ್ನು ನುಡಿಸಲಾಗದು.

೨. ಕಂಡು ಕಾಣಲಾರ ; ತುಟಿ ಕದಲಿಸಲಾರ.
ಕೇಳಿ ಕೇಳದಂತಿಹ ಕಡು ವಿಸ್ಮಯವು !
ಸಂಪದವಿರುವನ ಸನ್ನಿಪಾತಕವಿದು !
ವಿಶ್ವದಾಭಿರಾಮ ಕೇಳು ವೇಮ.

ಸಿರಿಗರ ಹೊಡೆದವನು, ತನ್ನ ಕಣ್ಣೆದುರು ಏನಾದರೂ ನಿಂತಿದ್ದರೂ ತಮಗೆ ಕಾಣದಂತೆ ನಟಿಸುತ್ತಾನೆ. ಮಾತು ಆಡಿದರೆ, ಏನಾದರೂ ಕೊಡಬೇಕಾದೀತೆಂದು ತುಟಿಯನ್ನು ಕದಲಿಸಲಾರನು. ಸಹಾಯ ಬೇಡಲು ಬಂದ ಆರ್ತನ ಕೋರಿಕೆಯನ್ನು ಕಿವಿಯಾರೆ ಕೇಳಿಯೂ ಕೇಳದಂತಿರುತ್ತಾನೆ. ಇದೆಲ್ಲ ಅಚ್ಚರಿಯಲ್ಲವೇ ? ಸಂಪತ್ತಿರುವವನ ಮದವು ಹೀಗೆ ಮಾಡಿಸುತ್ತದೆ. ಇದು ಅವನ ಸನ್ನಿಪಾತಕವು ಅಂದರೆ ಇಂದ್ರಿಯ ದ್ವಾರಗಳು ಸ್ವೀಕರಿಸಿದ ಸಂವೇದನೆಗಳನ್ನು ಮಿದುಳಿಗೆ ಒಯ್ಯುವ ಸಂಜ್ಞಾನಾಳಗಳಲ್ಲಿ ದೋಷವುಂಟಾಗಿ ಮಿದುಳು, ಮನಸ್ಸು, ಬುದ್ಧಿಗಳು ಪ್ರತಿಕ್ರಿಯಿಸುವುದಿಲ್ಲ. ಇದು ಸಂಜ್ಞಾಪಾತ ರೋಗ.

೮. ಧನದ ಮದವು ತಂಬಿ ದೈವವನು ಕಾಣರು;
ಕುಟಿಲ ಭಾವವುಳ್ಳ ಕ್ರೂರ ಜನರು.
ಮದವು ಮೀರಿದಾಗ ಮನ್ನಣೆಯು ಉಳಿಯದು.
ವಿಶ್ವದಾಭಿರಾಮ ಕೇಳು ವೇಮ.

ಒಬ್ಬನಿಗೆ ಪೂರ್ವ ಸುಕೃತದಿಂದ ಹೇರಳ ಧನ ಸಂಚಯವಾಗಿರಬಹುದು. ಹೀಗೆ

ಸಂಚಯವಾದ ಧನಕ್ಕೆ ನಿಜವಾಗಿ ದೈವವೇ ಒಡೆಯ. ತಾನು ವಿಶ್ವಸ್ಥನಷ್ಟೇ. ಇದನ್ನು ಅರಿಯದೇ, ತಾನೇ ಗಳಿಸಿದವನೆಂದು ಅಹಂಕಾರ ತಾಳಿ, ಆ ಧನದ ಮೇಲೆ ಸ್ವಾಮಿತ್ವಾಭಿಮಾನ ಹೊಂದಿ ಮಮಕಾರ ಹೊಂದಿ, ಧನದ ಮದ ತುಂಬಿ ದೈವವನ್ನೇ ಕಾಣುವುದಿಲ್ಲ. ಇಂಥ ಮದೋನ್ಮತ್ತ ಜನರು ವಕ್ರಭಾವ ಹೊಂದಿ ಮಾರ್ದವತೆ ನೀಗಿಕೊಂಡ ಕ್ರೂರಾಗುತ್ತಾರೆ. ಮದವು ಅತಿಶಯವಾದಾಗ, ಸಮಾಜದ ಗುರು ಹಿರಿಯರನ್ನು ಕುರಿತು, ಸಾಮಾಜಿಕ ಹೊಣೆಯನ್ನು ಕುರಿತು ಮನ್ನಣೆಯು ಉಳಿಯದು.

ಆ. ಸಂತತ ಧನಾಕಾಂಕ್ಷೆ ಸೇರಿ ತನ್ನನರಿಯ.
ಕಣ್ಣು ಕಾಣದಲ್ಲ ! ಗರ್ವದಲ್ಲಿ.
ಪುಟ್ಟಿ ಕೆಡುವನಂತೆ ; ಬುದ್ಧಿ ಹೀನನವನು.
ಬೇಡ ಹೋಗೆ ಕಷ್ಟ ; ಬರಿದೆ ವೇಮ.

ಹೆಂಡ ಕುಡಿಯುವನಿಗೆ ಇಷ್ಟು ಕುಡಿದರೆ ಇನ್ನಷ್ಟು ಬೇಕೆಂಬ ಅತಿದಾಹ ಹುಟ್ಟುವಂತ, ಧನ ಗಳಿಸುವವನಿಗೆ ಇನ್ನಷ್ಟು ಮತ್ತಷ್ಟು ಗಳಿಸಬೇಕೆಂಬ ಮಹಾದಾಕಾಂಕ್ಷೆ ಸತತ ಸೇರುತ್ತದೆ. ಹೀಗಾಗಿ, ಅವನ ಜೀವನವು ಐಹಿಕದತ್ತ ಧಾವಿಸುವುದೇ ಹೊರತು, ಆತ್ಮಮುಖಿಯಾಗುವುದಿಲ್ಲ. ಹೀಗಾಗಿ ಅವನು ತಾನು ಯಾರು ? ಎಲ್ಲಿಂದ ಬಂದೆ ? ಎನ್ನುವುದನ್ನು ಅರಿಯನು. ಅವನು ತನ್ನ ಸಂಪದ್ಬಲದಿಂದ ಏನನ್ನಾದರೂ ಸಾಧಿಸಬಲ್ಲೆ, ಎಂದು ಗರ್ವ ತಾಳಿ, ಅವನ ಒಳಗಣ್ಣಂತೂ ತೆರೆಯದು. ಇನ್ನು ಹೊರಗಣ್ಣು ಸಹ, ಹೊಣೆಗಾರಿಕೆಯನ್ನು ಕುರಿತು ಕಾಣದು. ಮಾನವನಾಗಿ ಹುಟ್ಟಿ ಪುರುಷಾರ್ಥಗಳನ್ನು ಸಾಧಿಸದೆ, ಅವನು ಕೆಟ್ಟು ಹೋಗುವನು. ಅವನಿಗೆ ಏನು ಮಾಡಬೇಕು ? ಏನು ಮಾಡಕೂಡದು ? ಎಂಬ ಬುದ್ಧಿಯೇ ಕುದುರದು. ಅವನು ಬುದ್ಧಿಹೀನನೇ ಸರಿ. ಅಂಥವನನ್ನು ಯಾವುದೊಂದು ಸತ್ಕಾರ್ಯಕ್ಕೆ ನೆರವು ನೀಡೆಂದು ಕೇಳಹೋಗುವುದು, ವ್ಯರ್ಥವಷ್ಟೇ.

ಆ. ಚಂಚಲಮತಿಯಧಿಕ ಕಾಂಚನ ಪಡೆದೊಡನೆ,
ದೊಡ್ಡ ಜನಕಸಡ್ಡೆ ತೋರ್ಪ ಸತತ.
ಕೀಳು ಜಾತಿ ನಾಯಿ, ಮೇಲು ಕುಲವರಿವುದೆ ?
ವಿಶ್ವದಾಭಿರಾಮ ಕೇಳು ವೇಮ.

ಸಿರಿಯು ಮೊದಲೇ ಚಂಚಲೆ ಎನಿಸಿದ್ದಾಳೆ. ಇನ್ನು ಬೇರೆ ವೃತ್ತಿಗಳಿಂದ ಚಂಚಲ ಮತಿಯಾದವನಲ್ಲಿ ಅಧಿಕ ಕಾಂಚನ ಪಡೆದೊಡನೆ, ಮಂಗನಿಗೆ ಸೆರೆ ಕುಡಿಸಿದಂತಾಗುತ್ತದೆ. ಅವನ ಮನಸ್ಸು ಬಹಳ ಚಂಚಲವಾಗಿ ದೊಡ್ಡ ಜನರಲ್ಲಿ ಹೇಗೆ ನಡೆದುಕೊಳ್ಳಬೇಕು ? ಆಡಿದ ಮಾತಿನಂತೆ ಹೇಗೆ ನಡೆಯಬೇಕು ? ಎಂಬುದನ್ನು ಅನುಸರಿಸದೆ ದೊಡ್ಡವರಿಗೆ ಅಸಡ್ಡೆ ತೋರುತ್ತಾನೆ. ಬೀದಿ ಬೀದಿ ಅಲೆಯುವ ಬಿಡಾಡಿ ನಾಯಿಯು, ಒಡೆಯನನ್ನು ನಂಬಿ, ನಿಷ್ಠೆ ಹೊಂದಿರುವ ಮೇಲು ಕುಲದ ನಾಯಿಯ ಸ್ವಭಾವವನ್ನು ಹೊಂದದು. ಅದರಂತೆಯೇ ಚಂಚಲಮತಿಯ ಬಾಳು.

ಸಮಾಜವೂ ಸಹ, ಗರ್ವಿಷ್ಠ ಧನಿಕನ ಗರ್ವ ಕುಗ್ಗಿಸದೆ ಇನ್ನಷ್ಟು ಪೊಸಲಾಯಿಸುತ್ತಿದೆ.

ಆ. ದೆಶೆಯು ತಿರುಗಲವನ ಬಂಧು ತಮಗೆಂಬರು.
ದೆಶೆಗೆಡಲು ರಕ್ತದಿ, ಅವನೆ ಕೀಳು.
ದೆಶೆ ತಿಳಿದೊಡೆ ಧನದ ದೆಶೆಯೊಂದೆ ಕಾಣಿಭೊ !
ವಿಶ್ವದಾಭಿರಾಮ ಕೇಳು ವೇಮ.

ಕೆಡುವವನನ್ನು ಇನ್ನಷ್ಟು ಕೆಡಿಸುವ ಜನರೇ ಸಮಾಜದಲ್ಲಿ ತುಂಬಿರುತ್ತಾರೆ. ಜನರು ವ್ಯಕ್ತಿಗಳನ್ನು, ಅವರು ಸಂಪಾದಿಸುವ ಗುಣಗಳಿಂದ ಅಳೆಯದೆ, ಅವರು ಸಂಪಾದಿಸುವ ಹಣದ ಮೇಲಿಂದ ಅಳೆಯುತ್ತಾರೆ. ಒಬ್ಬನಿಗೆ ಅದೃಷ್ಟ ವಶಾತ್ ದೆಶೆಯು ತಿರುಗಿದರೆ, ಎಲ್ಲರೂ ಅವನು ತಮ್ಮ ಬಂಧು ಬಳಗದವನೆಂದು ಹೇಳಿಕೊಳ್ಳುತ್ತಾರೆ. ಅವನ ಸುತ್ತುಮುತ್ತು ಸುಳಿಯುತ್ತಾರೆ ಅವನ ವಂದಿ ಮಾಗಧರಾಗುತ್ತಾರೆ. ಯಾವಾಗ ಅವನ ದೆಶೆಯು ಕೆಡುವುದೋ, ಆಗ ಅವನು ಕೀಳು ಕುಲದವನು ; ನಮಗೆ ರಕ್ತ ಸಂಬಂಧಿಯೇನೂ ಅಲ್ಲ ಎನ್ನುತ್ತಾರೆ. ಹೀಗೆ ದೆಶೆಯೆಂದರೆ ಮಾನವನ ಒಳ್ಳೆ ಗುಣವರ್ಧನೆಯಾಗಲಿ, ಅಧ್ಯಾತ್ಮಿಕ ಪ್ರಗತಿಯಾಗಲಿ ಜನರ ಲೆಕ್ಕದಲ್ಲಿ ಇರದೆ, ಧನದ ದೆಶೆಯೊಂದೆ ಇರುವುದು.

ಆ. ದುಡ್ಡು ಉಳ್ಳ ನರನ ಗಿಡ್ಡ ಹುಣ್ಣು ಕೂಡ,
ಪೊಡವಿಯೊಳಗೆ ದೊಡ್ಡ ಸುದ್ದಿಯಹುದು.
ಬಡವನ ಮನೆ ಮದುವೆ ಬಗೆಗೆ ಕೇಳರಾರು.
ವಿಶ್ವದಾಭಿರಾಮ ಕೇಳು ವೇಮ.

ಪೂರ್ವದ ಪುಣ್ಯ ಕರ್ಮದಿಂದ ಪ್ರಸ್ತುತ ಜನ್ಮದಲ್ಲಿ ಸಂಪತ್ತು ಸಂಚಯವಾಗುವುದೆಂಬ ಕಾರಣ ತಿಳಿದು, ದುಡ್ಡುಳ್ಳವನು, ಈಗ ಎಂಥ ಹೀನ ಕಾರ್ಯನಿರತನಿರಲಿ, ಅವನನ್ನು ಪುಣ್ಯ ಜೀವಿಯೆಂದೇ ಎಣಿಸುತ್ತಾರೆ ಜನ. ಅವನಿಗೆ ಚಿಕ್ಕ ಬೇನೆಯಾದರೂ ಎಲ್ಲರೂ ಮಾತನಾಡತೊಡಗುತ್ತಾರೆ. ಅವನಿಗೆ ಸಣ್ಣ ಹುಣ್ಣಾದರೂ ಪೊಡವಿಯಲ್ಲಿ ದೊಡ್ಡ ಸುದ್ದಿಯೇ ಆಗುತ್ತದೆ. ಪಾಪ ! ಬಡವನ ಮನೆಯಲ್ಲಿ ಸಂತಸದ ಮದುವೆ ಸಮಾರಂಭ ನಡೆದರೂ ಜನರು ಅತ್ತ ನೋಡುವುದಿಲ್ಲ, ಆ ಕುರಿತು ಕೇಳುವುದೂ ಇಲ್ಲ.

ಆ. ಕನಕವುಳ್ಳವನಿಗೆ ಕಾಣಿಕೆಯೀಯುವುದು
ಬಾವಿ ನೀರು ನದಿಗೆ ಬಿಟ್ಟ ಹಾಗೆ.
ನಿಂಬೆಗೆ ಅತಿ ರಾಶಿ ನೀರು ಸುರುವಿದಂತೆ.
ವಿಶ್ವದಾಭಿರಾಮ ಕೇಳು ವೇಮ.

ತಗ್ಗು ಇದ್ದಲ್ಲಿಯೇ ನೀರು ನಿಲ್ಲುವಂತೆ, ಸಂಪತ್ತು ಹೊಂದಿದವನಲ್ಲಿಯೇ ಸಂಪತ್ತು ಕೂಡಿ ಬೀಳುತ್ತದೆ. ಹಾಗಾಗಿ ಕನಕವುಳ್ಳ ಮನುಷ್ಯನಿಗೆ ಎಲ್ಲರೂ ಅಭಿಮಾನದಿಂದ ಕಾಣಿಕೆ ನೀಡುತ್ತಾರೆ. ಹೀಗೆ ಮಾಡಿದರೆ ಕಾಣಿಕೆ ನೀಡುವವನ, ಬಾವಿಯ ನೀರಿನಂತೆ ಪರಿಮಿತವಾದ, ಸಂಪತ್ತು ಬರಿದಾಗುತ್ತ, ನದಿಯ ನೀರಿನಂತೆ ಅಕ್ಷಯವಾಗಿರುವ ಕನಕವುಳ್ಳವನ ಸಂಪತ್ತನ್ನು ಸೇರುತ್ತದೆ. ನಿಂಬೆ ಗಿಡಕ್ಕೆ ಹೆಚ್ಚು ನೀರು ಬೇಕಿಲ್ಲ. ಆದರೂ ರಾಶಿ ನೀರು ಸುರುವಿದಂತೆ, ಹಣ ಬೇಕಾಗದವನಿಗೆ ಹಣ ತಂದು ಸುರುವಿದಂತೆ ಆಗುತ್ತದೆ.

ಆ. ವಿತ್ತ ಓರ್ವಗಿತ್ತು ವಿತರಣ ಗುಣವನ್ನು
ಮತ್ತೆ ಓರ್ವಗಿತ್ತು ಮಂದಿ ಕೆಡಿಪ,
ಬ್ರಹ್ಮ ಕೆಲಸವೆಲ್ಲ ಬರಿಯ ಹಾಳು ಕೆಲಸ.
ವಿಶ್ವದಾಭಿರಾಮ ಕೇಳು ವೇಮ.

ಅವರವರ ಪೂರ್ವ ಕರ್ಮದ ಫಲಗಳ ಕಾರಣವನ್ನರಿಯದ ನಮಗೆ ವಿಧಿಯಾಟವೂ ವಿಚಿತ್ರವೆನಿಸುತ್ತದೆ. ಒಬ್ಬನಲ್ಲಿ ವಿತ್ತ ಎಂದರೆ ಸಂಪದವು ಸಂಗ್ರಹವಾಗುತ್ತದೆ. ಆದರೆ ಅವನು ಲೋಭಿಯಾಗಿರುತ್ತಾನೆ. ಸಂಚಯವಾದ ಸಂಪತ್ತನ್ನು ಸತ್ಪಾತ್ರರಲ್ಲಿ ಹಂಚುವ, ವಿತರಿಸುವ ಗುಣವಿರುವುದಿಲ್ಲ. ಇನ್ನೊಬ್ಬನು ದಾನ ಧರ್ಮಮಾಡಿ ಮನೋಶುದ್ಧಿ ಮಾಡಿಕೊಳ್ಳಬೇಕೆನ್ನುತ್ತಾನೆ. ಅಧ್ಯಾತ್ಮಿಕ ಸಾಧನೆಗೆ ಅಣಿಯಾಗಬೇಕೆನ್ನುತ್ತಾನೆ. ಇಂಥ ವಿತರಣ ಗುಣವಂತನಿಗೆ ವಿತ್ತ ಪ್ರಾಪ್ತಿಯಿರದು. ಹೀಗೆ ವಿಧಿಯ ಆಟದಿಂದ ಮಂದಿಯ ಹಂಚಿಕೆ ಹಾಳಾಗುತ್ತದೆ. ತಾನೊಂದು ಬಗೆದರೆ ದೈವದ ಬಗೆ ಇನ್ನೊಂದು. ಹೀಗೆ ಹೊರಗಣ್ಣಿನಿಂದ ನೋಡಿದರೆ ಬ್ರಹ್ಮನ ಕೆಲಸವೆಲ್ಲ ಬರೀ ಹಾಳು ಕೆಲಸವೆನಿಸುತ್ತದೆ. ಆದರೆ ಸಂಬಂಧಿಸಿದ ವ್ಯಕ್ತಿಗಳ ಜೀವನದಲ್ಲಿ ಮಾಡಿದ ಕರ್ಮಕ್ಕೆ ಶಿಕ್ಷೆಯಾಗಿ ತಕ್ಕ ಪಾಠ ದೊರೆಯುತ್ತದೆ.

ಆ. ಬ್ರಾಹ್ಮಣರು ಎನುವರು ಬ್ರಹ್ಮತ್ವ ಮನದಿಲ್ಲ.
ಬ್ರಾಹ್ಮವದುವು ಏಕೆ ? ಬ್ರಾಹ್ಮಣಂತೆ !
ಬೊಂಬೆಯಂತೆ ತಾನು ದಿಂಬಿಗೊರಗಿ ಕುಳಿತ.
ವಿಶ್ವದಾಭಿರಾಮ ಕೇಳು ವೇಮ.

ತಪಸ್ಸಿನಿಂದ, ಜ್ಞಾನಾರ್ಜನೆಯಿಂದ ವಸಿಷ್ಠ, ವಿಶ್ವಾಮಿತ್ರರಂತೆ ಬ್ರಹ್ಮತ್ವಕ್ಕೇರಿದ್ದರೆ ಸರಿ. ಆದರೆ ಗೋತ್ರ ಪಿತನ ಹೆಸರು ಹೇಳಿಕೊಂಡು, 'ಜನ್ಮನಾ ಜಾಯತೇ ಶೂದ್ರಃ' ಎಂದಿದ್ದರೂ, ಮನದಲ್ಲಿ ಬ್ರಹ್ಮತ್ವವಿಲ್ಲದಿದ್ದರೂ ಬ್ರಾಹ್ಮಣ ಎಂದುಕೊಳ್ಳುವರು. ಬ್ರಾಹ್ಮಣ ಅಂದರೆ ಬ್ರಹ್ಮತ್ವವು ಇರುವುದೇಕೆ ? ಬ್ರಾಹ್ಮಣನಾಗಲೆಂದೇ ತಾನೇ ? ಅದು ಇಲ್ಲದೆ ಬ್ರಾಹ್ಮಣನೆಂದುಕೊಳ್ಳುವ ತಪಕ. ಹೀಗೆ ಜನ್ಮದಿಂದ ಶೂದ್ರನಾಗಿದ್ದರೂ, ಬ್ರಾಹ್ಮಣನೆಂದು ನಟಿಸುತ್ತ, ಆ ನಿಮಿತ್ತ ಅನಾಯಾಸ ಸಂಪತ್ತು ಗಳಿಸಿ, ಗರ್ವದಿಂದ ಬೊಂಬೆಯಂತೆ ದಿಂಬಿಗೆ ಒರಗಿ ಕೂಡುವನು.

ಹಾಗಾದರೆ ಬ್ರಾಹ್ಮಣನೆಂದುಕೊಂಡರೆ ಸಂಪತ್ತಿನ ಸಂಚಯ ಹೇಗೆ ಸಾಧ್ಯ ?

''ಧನಾರ್ಜನೆ ಮಾಡುವ ಶಕ್ತಿ ಸಾಮರ್ಥ್ಯಗಳಿದ್ದರೂ ಶೂದ್ರನು ಧನವನ್ನು ಗಳಿಸಬಾರದು. ಹಣ ಸಂಪಾದನೆ ಮಾಡಿದರೆ, ಶೂದ್ರನು ಬ್ರಾಹ್ಮಣರನ್ನು ಕಡೆಗಣಿಸುತ್ತಾನೆ''.
(ಮ. ಸ್ಮೃ. 10-129)

''ಶೂದ್ರನು ತನ್ನ ಜೀವನ ನಿರ್ವಹಣೆಗಾಗಿ ಕ್ಷತ್ರಿಯನನ್ನು ಹಾಗೂ ವೈಶ್ಯನನ್ನು ಸೇವಿಸಿ ಬದುಕಬಹುದು''. (ಮ. ಸ್ಮೃ. 10-121)

''ಇಹಪರಗಳಲ್ಲಿ ಶ್ರೇಯಸ್ಸನ್ನು ಬಯಸುವ ಶೂದ್ರನು ಬ್ರಾಹ್ಮಣರ ಸೇವೆಯನ್ನೇ ಮಾಡಬೇಕು. ಬ್ರಾಹ್ಮಣ ಕೈಂಕರ್ಯವೇ ಈ ಶೂದ್ರನಿಗೆ ಸಾರ್ಥಕತೆಯು''. (ಮ.ಸ್ಮೃ.10-122)

''ಬ್ರಾಹ್ಮಣ ಸೇವೆಯೇ ಶೂದ್ರನ ವಿಶಿಷ್ಟ ಕರ್ತವ್ಯವಾಗಿದೆ. ಅವನು ಬೇರೆ

ಕಾರ್ಯಗಳನ್ನು ಮಾಡಿದರೆ ಅದರಿಂದ ಅವನಿಗೆ ಯಾವ ಫಲವೂ ಸಿಗುವುದಿಲ್ಲ''.
(ಮ. ಸ್ಮೃ. 10-123)

''ಕೆಲಸ ಮಾಡುವ ಶೂದ್ರನಿಗೆ (ಬ್ರಾಹ್ಮಣನ) ಉಚ್ಛಿಷ್ಟ ಅನ್ನವನ್ನೂ, ಹಳೆಯ ಬಟ್ಟೆಯನ್ನೂ, ಕೇರಿ ಹಸನು ಮಾಡಿಕೊಂಡ ನಂತರ ಉಳಿದ ಧಾನ್ಯಗಳನ್ನೂ ಕೊಡಬೇಕು''.
(ಮ. ಸ್ಮೃ 10-125)

''ಶೂದ್ರನಿಗೆ ಬುದ್ಧಿ ಹೇಳಬಾರದು. ಯಜ್ಞದ ಹವಿಸ್ಸಿನ ಶೇಷವನ್ನು ಅಂದರೆ ಎಂಜಿಲನ್ನು ಸಹ ಕೊಡಬಾರದು. ಧರ್ಮೋಪದೇಶ ಮಾಡಬಾರದು.. ವ್ರತಾಚಾರಣೆಯನ್ನು ಹೇಳಿ ಕೊಡಬಾರದು'' (ಮ. ಸ್ಮೃ. 4-80)

''ಶೂದ್ರನಿಗೆ ಧರ್ಮೋಪದೇಶ ಮಾಡುವವನು, ವ್ರತಾಚರಣೆಗಳನ್ನು ಹೇಳಿ ಕೊಡುವವನು, ಆ ಶೂದ್ರನ ಜೊತೆಗೆ ಸೇರಿ, ತಾನೂ ಸಹಿತ, 'ಅಸಂವೃತ' ನರಕದಲ್ಲಿ ಮುಳುಗುತ್ತಾನೆ''. (ಮ. ಸ್ಮೃ. 4-81)

ಬ್ರಾಹ್ಮಣರು ರಚಿಸಿಕೊಂಡ ಮನುಸ್ಮೃತಿಯ ಮೇರೆಗೆ ವೇಮನರು ಶೂದ್ರರು. ಅವರ ತಂದೆ ಕೊಂಡವೀಡು ರಾಜ್ಯದ ರಾಜನಾಗಿದ್ದನು. ಮನುಸ್ಮೃತಿಯ ಪ್ರಕಾರ, ಬ್ರಾಹ್ಮಣರು,

''ಶೂದ್ರ ರಾಜನ ರಾಜ್ಯದಲ್ಲಿ, ಅಧರ್ಮಿಗಳಿರುವ ಪ್ರದೇಶದಲ್ಲಿ, ವೇದ ವಿರೋಧಿಗಳಾದ ಪಾಷಂಡಿಗಳ ಪ್ರಾಂತದಲ್ಲಿ, ಅಂತ್ಯಜರ ಸನಿಹದಲ್ಲಿ ವಾಸ ಮಾಡಬಾರದು''.
(ಮ. ಸ್ಮೃ. 4-61)

ಶೂದ್ರತ್ವವು ದೋಷವಲ್ಲ. ಏಕೆಂದರೆ ಎಲ್ಲರೂ ಜನ್ಮದಿಂದಲೇ ಶೂದ್ರರು (ಜನ್ಮನಾ ಜಾಯತೇ ಶೂದ್ರಃ) ಜಾತ ಶೂದ್ರನು ಸಂಸ್ಕಾರ ಪಡೆದು ದ್ವಿಜನೆನಿಸಬೇಕು. ವೇದ ಓದಿ ವಿಪ್ರನಾಗಬೇಕು. ಆದ್ದರಿಂದ ಸಮಾಜದ ಮುಕ್ಕಾಲು ಪಾಲು ಜನರನ್ನು ಸಂಸ್ಕಾರಕ್ಕೆ ಅಧಿಕಾರವಿಲ್ಲದವರೆಂದು ಸಾರಿ, ಹಾರುವರು ಘೋರ ಪಾಪ ಮಾಡಿದ್ದಾರೆ. ಆ ಜನರು ವೈದಿಕ ಧರ್ಮದಿಂದ ಸಿಡಿದು ಹೋಗಿದ್ದಾರೆ, ಹೋಗುತ್ತಿದ್ದಾರೆ. ಇವರ ಸಂಖ್ಯೆ ಕೋಟಿ ಕೋಟಿ. ಭಾರತ,ಬಂಗ್ಲಾದೇಶ ಮತ್ತು ಪಾಕಿಸ್ತಾನಗಳ ಮುಸ್ಲಿಂ, ಕ್ರೈಸ್ತರು ಇವರೇ. ಭಾರತೀಯ ಸಂವಿಧಾನ ಶಿಲ್ಪಿಗಳು ಬಹ್ವಂಶ ದೋಷಗಳನ್ನು ತಿದ್ದಿದ್ದಾರೆ ನಿಜ. ಆದರೆ ಧಾರ್ಮಿಕ ವಿಷಯಗಳಲ್ಲಿ ಇನ್ನೂ ಸಾಕಷ್ಟು ಬದಲಾವಣೆಯಾಗಬೇಕು. ಶೋಷಣೆಗೆ ಮತ್ತು ಮೇಲು ಕೀಳು ಭಾವನೆಗೆ ಇಂಬುಗೊಡುವ ಗುಡಿ ಗುಂಡಾರಗಳಿಗೆ ಮಠಮಾನ್ಯಗಳಿಗೆ ಸರಕಾರೀ ಮನ್ನಣೆ ಇಲ್ಲವಾಗಬೇಕಾಗಿದೆ.

ಶೂದ್ರರಿಗೆ ಸಂಸ್ಕಾರ ಪಡೆಯುವ, ಮಂತ್ರೋಪದೇಶ ಪಡೆಯುವ, ವೇದದ ಅಧ್ಯಯನ ಮಾಡುವ ಸ್ವಾತಂತ್ರ್ಯವನ್ನು ನಿರಾಕರಿಸಿದ ಹಾರುವರು ಸಮಾಜದ ಮುಕ್ಕಾಲು ಪಾಲು ಜನರಿಗೆ, ಮೂಗಿಗೆ ತುಪ್ಪ ಸವರಿ ತೆಪ್ಪಗಿರಿಸಲು ಮತ್ತು ಅವರನ್ನು ತಮ್ಮ ಊಳಿಗಕ್ಕೆ ಬಳಸಿಕೊಳ್ಳಲು ಹೀಗೆ ಬರೆದುಕೊಂಡಿದ್ದಾರೆ.

''ಧರ್ಮ ಸಂಪಾದನೆ ಮಾಡಲು ಬಯಸುವ ಶೂದ್ರರು ಸಜ್ಜನರ ಸೇವೆ ಮಾಡುತ್ತ ತಮ್ಮ ಜಾತಿ ವಿಹಿತ ಕರ್ತವ್ಯದಲ್ಲಿ ತೊಡಗಿದರೆ, ಅವರಿಗೆ ಮಂತ್ರೋಪದೇಶವಿಲ್ಲದಿದ್ದರೂ ಯಶಸ್ಸು ಉಂಟಾಗುತ್ತದೆ. ಹಾಗೂ ಪುಣ್ಯ ಬರುತ್ತದೆ''. (ಮ. ಸ್ಮೃ. 10-127)

ಆ. ಕುಲದ ಮೇಲ್ಮೆಯುಳ್ಳ, ಗೋತ್ರ ಮೇಲ್ಮೆಯುಳ್ಳ,
ಜಾಣ್ಮೆಯಿಂದ ಜಂಭ ಪಡುವ ಜನರು,
ಐಶ್ವರ್ಯವಂತರ ಅಡುಗೆಯವನ ಸುತರೆ.
ವಿಶ್ವದಾಭಿರಾಮ ಕೇಳು ವೇಮ.

ತಮ್ಮ ಕುಲದ ಮೇಲ್ಮೆಯನ್ನೂ, ಗೋತ್ರದ ಮೇಲ್ಮೆಯನ್ನೂ, ತಮ್ಮ ಜಾಣ್ಮೆಯ ಮೇಲ್ಮೆಯನ್ನೂ ಹೇಳಿಕೊಂಡು ಬ್ರಾಹ್ಮಣರು ಜಂಭ ಪಡುತ್ತಾರೆ. ಅವರಿಗೆ ಧನದ ಬೆಂಬಲವಿಲ್ಲದಿದ್ದರೆ, ಅವರ ಜಂಭದ ಬಲೂನು ಹರಿಯುತ್ತಿತ್ತು. ಆದರೆ ಅವರ ತಂದೆಯು ಐಶ್ವರ್ಯವಂತ ಅಡುಗೆ ಭಟ್ಟನಾಗಿರುತ್ತಾನೆ. ಹೀಗೆ ಅವರು ಧನದ ಮದ ಹೊಂದಿರುತ್ತಾರೆ.

ರೂಪ ಮದ :

ಹೆಣ್ಣು ರೂಪವತಿಯಾಗಿರಬೇಕು, ಗುಣವತಿಯಾಗಿರಬೇಕು. ಗಂಡು ವಿದ್ಯಾವಂತನಾಗಿರಬೇಕ, ಧೀರನಾಗಿರಬೇಕು ಎಂದು ಗುರು ಹಿರಿಯರು ಹೇಳುತ್ತಾರೆ. ಇದಕ್ಕೆ ವಿಪರೀತವಾಗಿದ್ದರೆ ಕೇಡು.

ಆ. ಮದನನಂಥ ಪತಿಯು, ಮುದದ ಬಾಳಿರಲೇನು ?
ನೀತಿಗೇಡಿ ಜಾತಿ ಗುಣ ತೊರೆಯಳೆ ?
ಹಾಲು ಕುಡಿವ ನಾಯಿ ಹೊಲಸಿಗೆ ಹೋಗದೇ ?
ವಿಶ್ವದಾಭಿರಾಮ ಕೇಳು ವೇಮ.

ಪತಿಯು ಕಾಮನಂತೆ ಸುಂದರನಾಗಿರಬಹುದು, ಬಾಳುವೆಯೂ ಮುದ ನೀಡುತ್ತಿರಬಹುದು. ಆದರೆ ಜಾರೆ ಗುಣವುಳ್ಳ ನೀತಿಗೇಡಿ ಹೆಣ್ಣು ತನ್ನ ಜಾರತನವನ್ನು ತೊರೆಯುವಳೇನು ? ನಾಯಿಗೆ ಮನೆಯಲ್ಲಿ ಪ್ರೀತಿಯಿಂದ ಹಾಲು ಕುಡಿಸಬಹುದು. ಬಿಸ್ಕೀಟು ತಿನ್ನಿಸಬಹುದು. ಆದರೆ ಅದು ತನ್ನ ಸ್ವಭಾವದಂತೆ ಹೇಸಿಗೆ ತಿನ್ನಲು ಹೋಗದಿರುವುದೇ ?

ಆ. ಜಾರ ಪುರುಷನಲ್ಲಿ ಸದ್ಭಕ್ತಿ ಸಲಿಸುತ,
ಪತಿಗೆ ನಿತ್ಯವಾಗಿ ಪ್ರೀತಿ ಭಂಗಿ.
ಪರವ ಪಡೆಯೆ ಯೋಗಿ ಪಡುವ ದೇಹ ಕಷ್ಟ.
ವಿಶ್ವದಾಭಿರಾಮ ಕೇಳು ವೇಮ.

ಸತಿಯು ಪತಿವ್ರತೆಯಾಗಿರಬೇಕು. ತನ್ನ ಪತಿಯಲ್ಲೇ ದೇವರೆಂದು ಭಯ ಭಕ್ತಿ ತೋರಬೇಕು. ಆದರೆ ಜಾರೆಯಾದವಳು ತನ್ನ ರೂಪಮದದಿಂದ, ವಿವೇಕ ಹೀನಳಾಗಿ, ತನ್ನ ಗಾಡಿ ಮೋಡಿಯಿಂದ, ಒನಪು ಒಯ್ಯಾರಗಳಿಂದ ಅನ್ಯ ಜಾರ ಪುರುಷರನ್ನು ಆಕರ್ಷಿಸಿ, ಅವನಲ್ಲಿ ಸದ್ಭಕ್ತಿ ತೋರುತ್ತಾಳೆ. ಇಂಥ ಸತಿಯ ಪತಿಗೆ ನಿತ್ಯವೂ ಸತಿಯ ಪ್ರೀತಿ ಭಂಗವಾಗುತ್ತದೆ. ಈ ಪತಿಯನ್ನು ಯೋಗಿಯ ಜೀವನಕ್ಕೆ ಹೊಂದಿಸಲಾಗಿದೆ. ಯೋಗಿಯು ನಿತ್ಯವೂ ಪರಮಾತ್ಮನಲ್ಲಿ ಸದ್ಭಕ್ತಿ ತೋರಬೇಕು. ಆದರೆ ಅವನ ಮನಸ್ಸು ಚಂಚಲವಾಗಿ ಐಹಿಕ ವಿಷಯಗಳಲ್ಲಿ ಅನುರಕ್ತವಾಗಿ, ಪರಮನಲ್ಲಿ ಭಕ್ತಿಗೆ ಭಂಗವಾಗುತ್ತದೆ. ಹೀಗೆ ಯೋಗಿಯು ಐಹಿಕ ಭೋಗ ಹೊಂದಲು ವ್ಯರ್ಥವಾಗಿ ದೇಹನಷ್ಟ ಸೋಸುತ್ತಾನೆ.

ಆ. ಚೊಕ್ಕವಾಗಿರುವನ ಅಕ್ಕರೆಯಿಂದ ನೋಡಿ,
ತಕ್ಕನಲ್ಲವೆನಿಪ ತನ್ನ ಗಂಡ.
ಜಾರ ಬುದ್ಧಿಯಷ್ಟೆ ; ಒರೆಯ ಬುದ್ಧಿಯಲ್ಲ.
ವಿಶ್ವದಾಭಿರಾಮ ಕೇಳು ವೇಮ.

ರೂಪವು ಮನಸ್ಸನ್ನು ಸೆಳೆಯುತ್ತದೆ. ತನ್ನ ಶರೀರದ ರೂಪವು ಅಹಂಕಾರವನ್ನು ಹುಟ್ಟಿಸುತ್ತದೆ. ಅನ್ಯರಲ್ಲಿ ರೂಪ ಕಂಡರೆ ಅವರನ್ನು ತನ್ನವರನ್ನಾಗಿಸಿಕೊಳ್ಳಬೇಕೆಂಬ ಮಮಕಾರವು ಹುಟ್ಟುತ್ತದೆ. ಈ ಅಹಂಕಾರ, ಮಮಕಾರಗಳೇ ರೂಪ ಮದಗಳಾಗಿವೆ. ಚೊಕ್ಕವಾಗಿರುವ ಪರಪುರುಷನನ್ನು ಅಕ್ಕರೆಯಿಂದ ನೋಡಿದಾಗ ತನ್ನ ಗಂಡನೇ ತನಗೆ ತಕ್ಕವನಾಗಿಲ್ಲವೆನ್ನಿಸುತ್ತದೆ. ಇಂಥ ಹೆಣ್ಣಿನಲ್ಲಿ ಒಳಿತು-ಕೆಡುಕು ನಿರ್ಧರಿಸುವ, ಒರೆಗೆ ಹಚ್ಚಿ ನಿರ್ಧರಿಸುವ, ವಿವೇಕ ಬುದ್ಧಿ ಇರುವುದಿಲ್ಲ. ತನ್ನ ದೈಹಿಕ ಸುಖ ಪಡೆಯುವ ಜಾರೆಯ ಬುದ್ಧಿ ಇರುತ್ತದೆ.

ಆ. ಮದ್ದು ಹಾಕಿ ಪತಿಗೆ ಮರೆಸಿ, ವಿಟನ ಬೆರೆವ,
ಸುಂದರಾಂಗಿ ಕೆಟ್ಟ ಸುದತಿ ನೋಡು.
ಹಂದಿಗೆ ಕೆಸರು ಮೆಚ್ಚು ; ಪನ್ನೀರು ಮೆಚ್ಚದು.
ವಿಶ್ವದಾಭಿರಾಮ ಕೇಳು ವೇಮ.

ಹೆಣ್ಣು ಸುಂದರಾಂಗಿಯಾಗಿರಬಹುದು ; ಸುಂದರ ದಂತಪಕ್ತಿ ಹೊಂದಿ ರೂಪವತಿಯಾಗಿರಬಹುದು. ಆದರೆ ಶೀಲಗೆಟ್ಟಿದ್ದರೆ, ತನ್ನ ವಿಟನೊಂದಿಗೆ ಬೆರೆಯಲು ಅನುಕೂಲವಾಗಲೆಂದು ಗಂಡನಿಗೆ ಮರೆವು ಬರಿಸುವ ಮದ್ದನ್ನು ಹಾಕುತ್ತಾಳೆ. ಇದು ಬಹು ಜನರು ಬಳಸುವ ತಂತ್ರ. ಹಂದಿ ಪನ್ನೀರನ್ನು ಅಂದರೆ ಪರಿಮಳವುಳ್ಳ ತಂಪು ನೀರನ್ನು ಮೆಚ್ಚುವುದಿಲ್ಲ. ಆದರೆ ಕೆಸರನ್ನು ಮೆಚ್ಚುತ್ತದೆ. ಜಾರೆಯ ಸ್ವಭಾವವೂ ಇದೇ ರೀತಿ.

ಆದ್ದರಿಂದ ಹೆಣ್ಣಿನ ರೂಪ ಕಂಡು ಮರುಳಾಗದಿರಲು ವೇಮನ ಯೋಗಿ ಸೂಚಿಸುತ್ತಾರೆ.

ಆ. ನಾರಿಯಂದ ಕಂಡು, ಮರುಳನಾಗಬೇಡ.
ವನಿತೆಗೆಂದೆಂದೂ ಒಳಿತು ಗುಣವು.
ಜಾರೆಗೇನು ರೂಪು ತಾನು ಇರದಿಹುದೇ ?
ವಿಶ್ವದಾಭಿರಾಮ ಕೇಳು ವೇಮ.

ನಾರಿ ರೂಪವತಿಯಾಗಿರಬೇಕು ; ಗುಣವತಿಯಾಗಿರಬೇಕು, ಎಂದು ಹೇಳುತ್ತಾರೆ. ಇವೆರಡು ಇದ್ದರೆ ಬಹಳ ಒಳ್ಳೆಯದು. ಇವೆರಡರಲ್ಲಿ ಒಂದನ್ನು ಆಯ್ದುಕೊಳ್ಳುವುದಾದರೆ ಒಳ್ಳೆಯ ಗುಣವೇ ಮೇಲು. ಏಕೆಂದರೆ, ಜಾರೆಗೂ ಆಕರ್ಷಕ ರೂಪವು ಇರುವುದಲ್ಲವೇ ? ಆದ್ದರಿಂದ ಕೇವಲ ನಾರಿಯ ಅಂದ ಚೆಂದ ನೋಡಿ ಮರುಳಾಗಬಾರದು.

ಯೌವನ ಮದ :

ಮಾನವನ ಸಾಮಾನ್ಯ ಅವಸ್ಥೆಗಳು ನಾಲ್ಕು. ಬಾಲ್ಯ, ಯೌವನ, ಮುಪ್ಪು ಮತ್ತು

ಸಾವು. ಬಾಲ್ಯಾವಸ್ಥೆಯಲ್ಲಿ ಮುಖ್ಯವಾಗಿ ವಿದ್ಯಾಭ್ಯಾಸ, ವೃತ್ತಿ ತರಬೇತಿ ಶಿಕ್ಷಣಗಳನ್ನು ಕಲಿಯಬೇಕು. ಯೌವನದಲ್ಲಿ ಲಗ್ನವಾಗಿ ಗೃಹಸ್ಥ ಜೀವನ ಮಾಡಬೇಕು. ಮುಪ್ಪಿನ ಅವಸ್ಥೆಯಲ್ಲಿ ಸಾಂಸಾರಿಕ ಹೊಣೆಗಾರಿಕೆಯನ್ನು ವಯಸ್ಕ ಮಕ್ಕಳಿಗೆ ಒಪ್ಪಿಸಿ ಅಧ್ಯಾತ್ಮ ಸಾಧನೆಯಲ್ಲಿ ಕಾಲ ಕಳೆಯಬೇಕು. ಕೊನೆಗೆ ಮರಣವು ನಿಶ್ಚಿತ ಕಾಲಕ್ಕೆ ಘಟಿಸುತ್ತದೆ. ಈ ಅವಸ್ಥೆಯಲ್ಲಿ ಸೂಕ್ತ ಕಾಲದಲ್ಲಿ ತನ್ನ ಮನಸ್ಸಿನ ಪಕ್ವತೆಗನುಸಾರ ಸನ್ಯಾಸ ಸ್ವೀಕರಿಸಬಹುದು. ವೈದಿಕರು ಚತುರಾಶ್ರಮಗಳನ್ನು ಅನುಸರಿಸುತ್ತಾರೆ. ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥ ಮತ್ತು ಸನ್ಯಾಸ.

ಯೌವನದಲ್ಲಿ ಗಂಡು ಹೆಣ್ಣಿನ ದೇಹಗಳಲ್ಲಿ ವಿವಿಧ ಗ್ರಂಥಿಗಳ ಬೆಳವಣಿಗೆಯಾಗುತ್ತದೆ. ಗಂಡಸಿಗೆ ಗಡ್ಡಮೀಸೆ ಬೆಳೆದರೆ, ಹೆಂಗಸಿಗೆ ಮೊಲೆಗಳು ಬೆಳೆಯುತ್ತವೆ. ಹೆಣ್ಣು ಋತುಮತಿಯಾಗುತ್ತಾಳೆ. ಇಬ್ಬರಲ್ಲಿ ಕಾಮಾಸಕ್ತಿ ಕುದುರಿ ಕಾಮಕ್ರೀಡೆಗೆ ಸಿದ್ಧವಾಗುತ್ತಾರೆ.

ಕಂ. ಯೌವನ ವೆನ್ನಲು ಏನೋ ?
ಯೌವನ ಕೌಮಾರವೆನಲಾವಸ್ಥೆ ಎಂತೋ ?
ಅವಸ್ಥೆಯ ವಾರ್ಧಿಕ್ಯವೆ
ಭಾವಿಸಿ ಮನದಲಿ, ಚಿಂತಿಸು ತಪ್ಪದೆ ವೇಮಾ.

ಯೌವನದಲ್ಲಿ ಕಾಮ ಮದ ತುಂಬಿ ಮನಸ್ಸು ಎಂತಿರುವುದೋ ಏನೋ ? ಅದೇ ರೀತಿ, ಯೌವನದಲ್ಲಿ ಪ್ರಾಪಂಚಿಕ ಭೋಗದತ್ತ ಮನ ಧಾವಿಸಿದರೆ, ಕೌಮಾರಾವಸ್ಥೆಯಲ್ಲಿ ನಿರಪರಾಧಿ ಮನಸ್ಸು ಧರ್ಮವನ್ನು ತಿಳಿಯದು. ಆದ್ದರಿಂದ ಮುಪ್ಪಿನ ಅವಸ್ಥೆಯಲ್ಲಿಯಾದರೂ ತಪ್ಪದೆ ಪರಮಾತ್ಮನ ಚಿಂತನೆ ಮಾಡಬೇಕು.

ಆ. ಮುದ್ದು ಯುವತಿಗೇಕೆ ಮುದುಕ ಗಂಡ ? ಮನದಿ,
ವಶಕೆ ಬರಳು, ವಿಟನ ಬಲೆಗೆ ಸಿಕ್ಕು.
ಹುಚ್ಚು ಮೂಢ ಜನಕೆ ಹೆಚ್ಚು ಶಾಸ್ತ್ರವೇಕೆ ?
ವಿಶ್ವದಾಭಿರಾಮ ಕೇಳು ವೇಮ.

ಯೌವನ ಸಂಪತ್ತಿನವಳು ಯುವತಿ ತಾನೇ ? ಅದು ಮುದ್ದಾಗಿರುವವಳಿಗೆ ಮುದುಕ ಗಂಡನನ್ನು ಜೋಡಿಸಿದರೆ ಅದು ಅವಳಿಗೆ ದಂಡ ವಿಧಿಸಿದಂತೆಯೇ ಸರಿ. ಅವಳು ಯೌವನ ಮದದ ಕಾಮ ತೃಪ್ತಿಗಾಗಿ ವಿಟನ ಬಲೆಗೆ ಸಿಗುತ್ತಾಳೆ. ತನ್ನ ಮನಸ್ಸಿನಿಂದ ಗಂಡನ ವಶಕ್ಕೆ ಬರಳು. ಮುದ್ದು ಯುವತಿಗೆ ಮುದುಕ ಗಂಡನು ಹೇಗೆ ಹಿಡಿಸುವುದಿಲ್ಲವೋ, ಅದೇ ರೀತಿ ಹುಚ್ಚು ಮೂಢ ಜನರಿಗೆ ಹೆಚ್ಚು ಶಾಸ್ತ್ರವೂ ಹಿಡಿಸುವುದಿಲ್ಲ.

ಆ. ಯೌವನದೊಳು ನೋಡೆ, ಎಷ್ಟು ಅರಿವೆ ಇಲ್ಲ.
ಯೌವನವದೆಂದೂ ಎಷ್ಟೊ ಹೆಚ್ಚು.
ಯೌವನದೊಳು ತನಗೆ ಎಲ್ಲ ಅಂದ ಚೆಂದ.
ವಿಶ್ವದಾಭಿರಾಮ ಕೇಳು ವೇಮ.

ಯೌವನ ಮದವಿರುವಾಗ ಅರಿವಿಗೆ ಮುಸುಕು ಬಿದ್ದಿರುತ್ತದೆ. ಆಗ ಹಿತ ಅಹಿತ ನೋಡಲು ಅರಿವೇ ಇರುವುದಿಲ್ಲ. ಯೌವನವು ಕಾಮೋನ್ಮತ್ತ ಅವಸ್ಥೆಯು. ಅರಿವುಗೇಡಿ ಸ್ಥಿತಿಯು.

ಅದು ಯೌವನವಿರುವವರೆಗೂ ಇರುತ್ತದೆ. ಎಷ್ಟೋ ಹೆಚ್ಚಿಚ್ಚು ಆಗುತ್ತದೆ. ಯೌವನದಲ್ಲಿ ತನಗೆ ಎಲ್ಲವೂ ಅಂದ ಚೆಂದವಾಗಿ ಕಾಣುತ್ತವೆ. ಕೆಡುಕು ಅರಿಯುವ ವಿವೇಕವೇ ಇರದು.

ಆ. ಬಾಲ್ಯದಲ್ಲಿ ನೀನು ಬಹಳ ವಿಧದಿ ಹಿಡಿದು,
ಸವಿದು ಚಪ್ಪರಿಸಿದ ಸ್ತನಕ್ಕಾಗಿ,
ಮೋಹವಿನಿತು ಏಕೆ ? ಮೂಢಾತ್ಮ ತಿಳಿದುಕೊ.
ವಿಶ್ವದಾಭಿರಾಮ ಕೇಳು ವೇಮ.

ಯೌವನದಲ್ಲಿ ಸ್ತ್ರೀಯ ಮೊಲೆಗಳನ್ನು ನೋಡಿ ಮೋಹ ಮುಕುರುತ್ತಿದೆ. ತನ್ನ ತಾಯಿಯ ಮೊಲೆಗಳನ್ನು ತಾನೇ ಬಾಯಿಯಿಂದ ಚೀಪಿ, ಕೈಯಿಂದ ಬಹಳ ವಿಧವಾಗಿ ಹಿಡಿದು ಚಪ್ಪರಿಸಿಲ್ಲವೇ ? ಮೂಢಾತ್ಮ ! ಸ್ತನಗಳ ಬಗ್ಗೆ ಚೆನ್ನಾಗಿ ಅರಿತುಕೊಂಡು, ಈಗ ಮೋಹ ಹುಟ್ಟಿರುವುದು ನಿನ್ನ ಯೌವನ ಮದದಿಂದಾಗಿ, ಎಂದು ಅರಿತುಕೋ.

ಆ. ಮದನ ಬಿಲ್ಲಿನಂಬು ಬಡಿದು ಘಾಸಿಗೊಂಡು,
ಪೃಥಿವಿಯಾಗಸ ಮಧ್ಯೆ ಮಿಡುಕಬಹುದೆ ?
ಮದುವೆ ಹೆಂಡತಿಯನು ಬಿಟ್ಟು ಇರುವುದೆಂತು ?
ವಿಶ್ವದಾಭಿರಾಮ ಕೇಳು ವೇಮ.

ಆ. ವಿಕೃತ ಮತಿಗೆ ಏಕೆ ? ವೇದ ಶಾಸ್ತ್ರಗಳು !
ಮುದ್ದುಗುವರಿಗೇಕೆ ? ಮುದುಕ ಗಂಡ.
ಸಿಡುಕ ಗಂಡನ ಮನೆ ಸಂಸಾರವೇತಕೆ ?
ವಿಶ್ವದಾಭಿರಾಮ ಕೇಳು ವೇಮ.

ಮಳೆಯ ಹನಿಗಳಿಂದ ಪರಾವರ್ತಿತವಾದ ಮತ್ತು ಪ್ರತಿಫಲಿತವಾದ ಬಣ್ಣದ ಕಮಾನಿನಂತೆ ಕಾಣುವ ವಿದ್ಯುಲ್ಲತೆಯ ಕಮಾನು ಕಾಮನಬಿಲ್ಲು ಎನಿಸುತ್ತದೆ. ಏಕೆಂದರೆ ಇದರ ನೋಟವು ಕಾಮ ಪ್ರಚೋದನೆ ಮಾಡುತ್ತದೆ. ಇದನ್ನು ನೋಡಿ ಅದು ಅಂಬು ಬಡಿದಂತಾಗಿ ಘಾಸಿಗೊಂಡು ಪೃಥಿವಿ ಆಕಾಶಗಳ ಮಧ್ಯೆ ಉದ್ರೇಕಿತವಾಗಿ ಮಿಡುಕಬಹುದೇ ? ತನ್ನ ಮನೆಯಲ್ಲಿ ಬೇಕಾದಾಗ ಭೋಗಿಸಬಲ್ಲ ಹೆಂಡತಿಯಿರುವಾಗ ಕಾಮನ ಬಿಲ್ಲಿನಂತೆ, ಕಂಡರೂ ಲಭ್ಯವಾಗದ ಪರವನಿತೆಯರಿಗಾಗಿ ಮಿಡುಕುವುದೇಕೆ ?

ಬುದ್ಧಿಗೇಡಿಯಾದವನಿಗೆ ತಿಳಿವಳಿಕೆ ನೀಡುವ ವೇದ ಮಂತ್ರಗಳೂ, ವೇದಗಳಿಗೆ ಅನುಸರಿಸಿ ನಡೆಯಬೇಕೆಂದು ವಿಧಿಸುವ ಶಾಸ್ತ್ರಗಳೂ ಏನು ಉಪಯೋಗ ? ಅದೇ ರೀತಿ, ಮುದ್ದಾ ಕೌಮಾರಾವಸ್ಥೆಯಲ್ಲಿ ಕಾಮದ ಮೊಳಕೆಯೊಡೆಯುತ್ತಿರುವ ಯುವತಿಗೆ ಕಾಮಾಸಕ್ತಿಯೇ ಹಿಂಗಿದ ಮುದುಕ ಗಂಡನು ಯಾವ ಪ್ರಯೋಜನಕ್ಕೂ ಬಾರನು. ತನಗೆ ದೇಹ ತೃಪ್ತಿ ನೀಡದೆ, ಮಾತು ಮಾತಿಗೆ ಸಿಡುಕುತನ ತೋರಿಸುವ ಗಂಡನ ಮನೆಯಲ್ಲಿ ಸಂಸಾರವೇತಕ್ಕೆ ?

ಆ. ಹೂವು ಮೊಲೆಗಳಿರಲು ಹೆಚ್ಚು ಹಣವೀವರು.
ಕಾಣೆ, ಮೂಡುವ ಮೊಲೆಗೆ ಕೋಟಿಯೀವ.

ಜೋತಾಡುವ ಮೊಲೆಯು ಬೇತಾಳಕು ಬೇಡ.
ವಿಶ್ವದಾಭಿರಾಮ ಕೇಳು ವೇಮ.

ಹೆಣ್ಣಿನ ಅಂದ ಚೆಂದಗಳು ಅವಳ ಯೌವನದಲ್ಲಿಯೇ ಗರಿಷ್ಠವಾಗಿರುತ್ತವೆ. ಅವಳ ಎದೆಯ ಉಬ್ಬು ಆಕರ್ಷಣೆಯ ಕೇಂದ್ರ. ಹೂವಿನಂತೆ ಅರಳುವ ಮೊಲೆಗಳಿಗೆ ಹೆಚ್ಚು ಹಣವೀಯುತ್ತಾರೆ. ಮೊಲೆಗಳು ಸ್ಫುಟವಾಗಿ ಮೂಡತೊಡಗಿದ್ದರೆ, ಅವಳಿಗೆ ವಿಟನು ಕೋಟಿ ರೂಪಾಯಿಗಳನ್ನಾದರೂ ಕೊಡುತ್ತಾನೆ. ಆದರೆ ಯಾವಳಿಗೆ ಮುಪ್ಪಡರಿ, ಮೊಲೆಗಳು ಜೋತಾಡುತ್ತಿರುವವೋ, ಅವಳು ಯಾರಿಗೂ ಬೇಡ. ಬೇತಾಳಕ್ಕೂ ಬೇಡ.

ವಿದ್ಯಾ ಮದ :

ಆ. ವೇದಗಳನು ಓದಿ ಒಣ ಜಂಭ ಪಡುವರು.
ಅಧೋಗತಿಗಿಳಿದರು ಅಯ್ಯರೆಲ್ಲ.
ಬ್ರಹ್ಮ ಮಹಿಮೆಯರಿತು ಬದುಕುತಿಹುದು ಮೇಲು.
ವಿಶ್ವದಾಭಿರಾಮ ಕೇಳು ವೇಮ.

ವೈದಿಕರು ವೇದಗಳ ಅಧ್ಯಾಪನದ ವಿಶೇಷ ಅಧಿಕಾರವನ್ನು ತಮ್ಮಲ್ಲಿಯೇ ಇರಿಸಿಕೊಂಡರು. ವೇದಗಳ ಅಧ್ಯಯನದ ಹಕ್ಕನ್ನು ಕ್ಷತ್ರಿಯರಿಗೂ ಮತ್ತು ವೈಶ್ಯರಿಗೂ ತಮ್ಮೊಂದಿಗೆ ನೀಡಿದರು. ಶೂದ್ರರಿಗೆ ಅಧ್ಯಾಪನದ ಹಕ್ಕು ಇಲ್ಲ. ಅಧ್ಯಯನದ ಹಕ್ಕೂ ಇಲ್ಲ. ಇನ್ನು ವೇದ ಪಾಠವನ್ನು ಕೇಳುವಂತೆಯೂ ಇಲ್ಲ. ಅವರೇನಾದರೂ ಕೇಳಿದರೆ ಅವರ ಕಿವಿಗಳಲ್ಲಿ ಸೀಸ ಕರಗಿಸಿ ಹೊಯ್ಯುವಂತೆ, ಪಠಿಸಿದರೆ ಅವರ ನಾಲಗೆ ಸೀಳುವಂತೆ ರಾಜಾಜ್ಞೆ ಹೊರಡಿಸುತ್ತಿದ್ದರು. ಹೀಗೆ ಮಾಡಿ, ತಾವಷ್ಟೇ ವೇದಗಳನ್ನು ಓದಿ, ತಾವು ಮುಕ್ತಿಗೆ ಅರ್ಹರೆಂದು ಒಣ ಜಂಭ ಪಡುತ್ತಾರೆ. ಹೀಗೆ ಎಲ್ಲ ಆರ್ಯರು ಬಹು ಜನರನ್ನು ಧರ್ಮ ಮಾರ್ಗದಿಂದ ವಂಚಿಸಿ, ಅಧೋಗತಿಗಿಳಿದರು. ನಿಜವಾಗಿ ಬ್ರಹ್ಮ ಮಹಿಮೆ ಎಂದರೆ 'ಬೃಹತ್ವಾತ್ ಬೃಂಹಣತ್ವಾತ್ ಬ್ರಹ್ಮ' ಅಂದರೆ ಅಳತೆಗೆ ಮೀರಿ ದೊಡ್ಡದಾಗಿರುವ ಮತ್ತು ಇನ್ನೊಂದನ್ನು ಅಳತೆಗೆ ಮೀರಿ ದೊಡ್ಡದಾಗಿಸುವುದೇ ಬ್ರಹ್ಮ. ಇಂಥ ಬ್ರಹ್ಮ ಮಹಿಮೆಯರಿತು ಬದುಕುತ್ತಿರುವುದೇ ಮೇಲು.

ಆ. ಎಷ್ಟೊ ಓದನೋದಿ ಸರ್ವಜ್ಞನಾಗಿದ್ದು,
ಬ್ರಹ್ಮ ವಿದ್ಯೆಯೆಲ್ಲ ಬಹಳ ಕೆಡಿಸಿ,
ಯುವತಿ ಕಂಡ ಬಳಿಕ ಯೋಗ ಮರೆವ ಮೂಢ.
ವಿಶ್ವದಾಭಿರಾಮ ಕೇಳು ವೇಮ.

ಒಬ್ಬನು ಸಾಕಷ್ಟು ಓದಿರುತ್ತಾನೆ. ನಾಲ್ಕು ವೇದಗಳನ್ನು ಓದಿ ಚತುರ್ವೇದಿ-ಯೆನಿಸುತ್ತಾನೆ. ಚೌಬೆ ಎನಿಸುತ್ತಾನೆ. ಇಲ್ಲವೆ ಮೂರು ವೇದಗಳನ್ನು ಓದಿ ತ್ರಿವೇದಿ ಇಲ್ಲವೆ ತ್ರಿವಾರಿ ಎನಿಸುತ್ತಾನೆ. ಮೂರು ವೇದಗಳನ್ನು ಪಾಠ ಮಾಡುತ್ತ ತ್ರಿಪಾಠಿ ಎನಿಸುತ್ತಾನೆ. ಎರಡು ವೇದಗಳನ್ನೂ ಓದಿ ದ್ವಿವೇದಿ ಇಲ್ಲವೆ ದುಬೆ ಎನಿಸುತ್ತಾನೆ. ಒಂದು ವೇದವನ್ನು ಓದಿ ಪಾಂಡೇಯ ಇಲ್ಲವೆ ಪಾಂಡೆ ಎನಿಸುತ್ತಾನೆ. ವೇದಾಂಗಗಳನ್ನೂ, ಶಾಸ್ತ್ರ, ಇತಿಹಾಸ ಪುರಾಣಗಳನ್ನೂ ಓದಿ ಜನರ ಕಣ್ಣಲ್ಲಿ ಸರ್ವಜ್ಞನೆನಿಸುತ್ತಾನೆ. ಆದರೆ ಬ್ರಹ್ಮ ವಿದ್ಯೆಯು ಓದಿನಲ್ಲಿ ಇಲ್ಲ. ಶಾಸ್ತ್ರದಲ್ಲಿಯೂ

ಇಲ್ಲ. ತಾನು ನಿತ್ಯ ಮಾಡುವ ಆತ್ಮ ಸಾಧನೆಯಲ್ಲಿ, ಶಿವಾನುಭವದಲ್ಲಿ ಬ್ರಹ್ಮವಿದ್ಯೆಯಿದೆ. ಆದರೆ ತಥಾ ಕಥಿತ ಸರ್ವಜ್ಞನು, ಜನರಲ್ಲಿ ಮೇಲು ಕೀಳು ಬಗೆದು, ಕುಲಾಭಿಮಾನ ಹೊಂದಿ, ಜನರನ್ನೂ ಧಾರ್ಮಿಕವಾಗಿ, ಆರ್ಥಿಕವಾಗಿ ಶೈಕ್ಷಣಿಕವಾಗಿ ಶೋಷಿಸಿ, ಬ್ರಹ್ಮ ವಿದ್ಯೆಯನ್ನು ಕೆಡಿಸುತ್ತಾನೆ. ಅವನ ಕಲುಷಿತ ಮನಸ್ಸು ಸರ್ವಭೂತಾಂತರಾತ್ಮನಲ್ಲಿ ಲೀನಗೊಳ್ಳದೆ, ಐಂದ್ರಿಯ ಭೋಗದ ದಾಹ ಹೊಂದಿ ಯುವತಿ ಕಂಡ ಬಳಿಕ ಯೋಗವನ್ನೇ ಮರೆಯುತ್ತಾನೆ.

ಆ. ತರದ ಓದನೋದೆ, ತರ್ಕವಾದವಷ್ಟೆ
ದಿವ್ಯ ಜ್ಞಾನದಲ್ಲಿ ದೃಷ್ಟಿಯಿಲ್ಲ.
ರೇಶ್ಮೆಯ ಹುಳುವಿನಾ ರೀತಿ ಕೆಟ್ಟು ಹೋಹಂ.
ವಿಶ್ವದಾಭಿರಾಮ ಕೇಳು ವೇಮ.

ವೇದದ ಮಂತ್ರ ಸಂಹಿತೆ ಓದುತ್ತಾನೆ. ಕರ್ಮಕಾಂಡ ಓದುತ್ತಾನೆ. ಸ್ಮೃತಿಗಳನ್ನು ಓದುತ್ತಾನೆ. ಜ್ಯೋತಿಷ್ಯವನ್ನು ಓದುತ್ತಾನೆ. ವ್ಯಾಕರಣ, ಛಂದಸ್ಸುಗಳನ್ನು ಓದುತ್ತಾನೆ. ಹೀಗೆ ತರತರದ ವಿದ್ಯೆಗಳನ್ನು ಕುರಿತು ಓದುತ್ತಾನೆ. ಆದರೆ ಅದೆಲ್ಲ ಅವನನ್ನು ಆತ್ಮ ಸಂಭಾವಿತನನ್ನಾಗಿ ಮಾಡುತ್ತದೆ. ಅವರ ದೃಷ್ಟಿಯ ದಿವ್ಯ ಜ್ಞಾನವಲ್ಲಿ ಇಲ್ಲ. ದಿವ್ಯ ಜ್ಞಾನವು ಓದಿನಲ್ಲಿಯಾಗಲಿ, ವಾದದಲ್ಲಿಯಾಗಲಿ ಇಲ್ಲ. ಇಂಥವನು ತನ್ನ ವಿದ್ಯಾಮದದಿಂದ, ತಾನೇ ತನ್ನ ಸುತ್ತಲೂ ಅನಿಷ್ಟ ಸಂಬಂಧಗಳನ್ನು ಹೊಂದಿ ಅಭಿಮಾನ ಪಡುತ್ತ, ಆಸಕ್ತಿಯಿಂದ ಬಂಧಿತನಾಗುತ್ತಾನೆ. ರೇಶ್ಮೆ ಹುಳು ತನ್ನ ಸುತ್ತ ರೇಶ್ಮೆಯನ್ನು ಸುತ್ತಿಕೊಂಡು ಬದ್ಧವಾದಂತೆ ಇವನೂ ಬದ್ಧನಾಗುತ್ತಾನೆ.

ಆ. ಓದುಗ ಮತಿಗಿಂತ ಸಾಧಕ ಮತಿ ಮೇಲು,
ವೇದದಲ್ಲು ಇಲ್ಲ ; ವಾದದಲ್ಲು.
ಒಡಲು ಶುದ್ಧಿ ಗೆಯ್ದು, ಒಡೆಯನನ್ನು ನೋಡು.
ವಿಶ್ವದಾಭಿರಾಮ ಕೇಳು ವೇಮ.

ವಿವಿಧ ಗ್ರಂಥಗಳನ್ನು ಓದುವುದರಿಂದ ಬ್ರಹ್ಮಜ್ಞಾನ ಪಡೆಯಲಾರರು. ಏಕೆಂದರೆ ಬ್ರಹ್ಮಜ್ಞಾನವನ್ನು ಅರಿಯಲು ಮನಸ್ಸನ್ನು ಶುದ್ಧಗೊಳಿಸಬೇಕು. ಕೊನೆಗೆ ಹೊಯ್ದಾಡುವ ಮನಸ್ಸನ್ನು ನಿಲ್ಲಿಸಬೇಕು. ಮನಸ್ಸು ಅನಂತವಾಗಬೇಕು. ಅಪಾರವಾಗಬೇಕು. ಆಗ ಬ್ರಹ್ಮದಲ್ಲಿ ಒಂದಾಗಬೇಕು. ಆದ್ದರಿಂದ ಓದುಗ ಮತಿಗಿಂತ ಸಾಧಕಮತಿ ಮೇಲು. ಏಕೆಂದರೆ ಬ್ರಹ್ಮಾನುಭೂತಿಯು ವೇದ ಪಾಠದಲ್ಲೂ ಇಲ್ಲ. ಓದಿದ ಸಿದ್ಧಾಂತಗಳನ್ನು ಚರ್ಚೆ, ವಾದ ಜಲ್ಪ, ವಿತಂಡಗಳ ಮೂಲಕ ಪ್ರಬಲವಾಗಿ ಮಂಡಿಸಿ ವಿಜಯ ಪಡೆಯುವಲ್ಲಿಯೂ ಇಲ್ಲ. ಹಾಗಾದರೆ ಬ್ರಹ್ಮವನ್ನು ಪಡೆಯುವುದು ಹೇಗೆ ? ಒಡಲು ಶುದ್ಧಿಗೊಳಿಸಿ, ಒಡೆಯನನ್ನು ನೋಡು. ಅಂದರೆ ಒಡಲಲ್ಲಿ ತುಂಬಿರುವ ಕಾಮ ಕ್ರೋಧಾದಿ ವೈರಿಗಳನ್ನು ಮೆಟ್ಟಿ, ಆವರಣೇ, ವಿಕ್ಷೇಪ ಮಲಗಳನ್ನು ದೂರಗೊಳಿಸಿ ಬ್ರಹ್ಮನನ್ನು ಕಾಡಬೇಕು.

ಇದನ್ನು ಮುಂಡಕ ಉಪನಿಷತ್ತು ಹೀಗೆ ಹೇಳಿದೆ :

"ಈ ಆತ್ಮನು ಪ್ರವಚನದಿಂದ ಲಭ್ಯನಲ್ಲ. ಕುಶಾಗ್ರ ಬುದ್ಧಿ ಶಕ್ತಿಯಿಂದಲೂ ಲಭ್ಯನಲ್ಲ ಬಹು ಶ್ರವಣದಿಂದಲೂ ಲಭ್ಯನಲ್ಲ. ಯಾವ ಪರಮಾತ್ಮನನ್ನು ಇವನು ಪಡೆಯಲು

ಇಚ್ಛಿಸುತ್ತಾನೋ. ಆ ಇಚ್ಛೆಯಿಂದಲೇ ಅವನು ಲಭ್ಯನು. ಅವನಿಗೆ ಈ ಆತ್ಮನು ತನ್ನ ತನುವನ್ನು ಪ್ರಕಾಶಪಡಿಸುತ್ತಾನೆ''. (ಮುಂಡಕ ಉಪ 3-2-3)

ಆತ್ಮ ಸೂಕ್ಷ್ಮವಿರಲು ಆನಂದವರಿಯದೆ,
ಅದನು ತೊರೆದು, ಓದಿ ಅಲ್ಲಿ ಮಗ್ನ.
ಅತಿ ರಹಸ್ಯವೆಲ್ಲ ಆ ಯೋಗಿ ಅರಿವನು.
ವಿಶ್ವದಾಭಿರಾಮ ಕೇಳು ವೇಮ.

ಆತ್ಮವು ಸೂಕ್ಷ್ಮವಾಗಿದೆ. ಅದನ್ನು ಇಂದ್ರಿಯಗಳಿಂದ ಗ್ರಹಿಸಲಾಗದು. ಅದು ಅತಿ ಸೂಕ್ಷ್ಮವಾಗಿದೆ. ಅದನ್ನು ಮನಸ್ಸು ಸಮೀಪಿಸಬಹುದೇ ಹೊರತು ಅನುಭವಿಸಲಾರದು. ಅದು ಆನಂದ ಸ್ವರೂಪವಾಗಿವೆ. ಅದನ್ನು ಅರಿಯುವುದನ್ನು ಬಿಟ್ಟು ಮನುಷ್ಯನು, ಅದನ್ನು ಕುರಿತು ಓದುತ್ತಾನೆ. ಓದಿನಲ್ಲಿಯೇ ಮುಳುಗಿ ಹೋಗುತ್ತಾನೆ. ಓದಿನಾಚೆ ಆತ್ಮವಿದೆಯೆಂದು ತಿಳಿಯದೆ, ವಿದ್ಯಾಮದದಿಂದ ಮತ್ತನಾಗುತ್ತಾನೆ. ಆತ್ಮ ರಹಸ್ಯವನ್ನು ಆತ್ಮೈಕ್ಯ ಹೊಂದಿದ ಯೋಗಿ ಮಾತ್ರ ಅರಿಯುತ್ತಾನೆ.

ಓದನೆಷ್ಟು ಓದಲೇನು ಅರಿಯದ ನರ ?
ಓದುತಿಪ್ಪ ಕಾಲ ಒಪ್ಪ ಸುಗುಣಿ.
ಫನವೆನಿಸದೆ ಕಪ್ಪೆ ಕಮಲವೇರಿದಾಗ ?
ವಿಶ್ವದಾಭಿರಾಮ ಕೇಳು ವೇಮ.

ಲಿಪಿಯ ಆವಿಷ್ಕಾರವಾಗುವ ಮುನ್ನ ವೇದದ ಓದು ಇರಲಿಲ್ಲ. ವೇದ ಮಂತ್ರಗಳನ್ನು ಅಷ್ಟಷ್ಟು ಶಾಖೆಗಳಾಗಿ ವಿಭಜಿಸಿಕೊಂಡು ಕಂಠಪಾಠ ಮಾಡುತ್ತಿದ್ದರು. ಈ ಕಂಠ ಮಾಡುವವರಿಗೆ ಮಂತ್ರಗಳ ಅರ್ಥ ತಿಳಿಯುತ್ತಿರಲಿಲ್ಲ. ಇವರಿಂದ ಕೇಳಿ ಪ್ರಮಚಿಸುವವರು ಇರುತ್ತಿದ್ದರು. ಇವರು ಕಂಠಪಾಠ ಮಾಡುವವರನ್ನು ಹುರಿದುಂಬಿಸಲು, 'ಆವೃತಿಃ ಸರ್ವ ಶಾಸ್ತ್ರಾಣಾಂ ಭೋದಾದಪಿ ಗರೀಯಸಿ'. ಎಂದರೆ ಸಕಲ ಶಾಸ್ತ್ರಗಳನ್ನು ಭೋದಿಸುವುದಕ್ಕಿಂತಲೂ ವೇದಗಳನ್ನು ಕಂಠಪಾಠ ಮಾಡುವುದೇ ಶ್ರೇಷ್ಠವಾದದ್ದು ಎನ್ನುತ್ತಿದ್ದರು. ಆದ್ದರಿಂದ ಅರ್ಥವರಿಯದೆ ಎಷ್ಟೇ ಓದಿದ ಮನುಷ್ಯನು, ವೇದ ಪಾಠ ಮಾಡುವ ಕಾಲ, ಜನರ ಕಣ್ಣಿಗೆ ಒಪ್ಪ ಸುಗುಣಿಯಂತೆ ತೋರುತ್ತಿದ್ದ. ಅಷ್ಟರಿಂದಲೇ ಅವನೂ ಸಹ ಮತ್ತನಾಗುತ್ತಿದ್ದ. ಆದರೆ ಆದು ಹೇಗಾಗುವುದೆಂದರೆ, ನೀರಲ್ಲಿ ಜಂತು ತಿನ್ನುವ ಕಪ್ಪೆಯು ಕೆಲ ಕಾಲ ಕಮಲದ ಪುಷ್ಪವನ್ನೇರಿ ಕುಳಿತು ಡೌಲು ತೋರಿಸಿದಂತೆ.

ತನ್ನ ತಿಳಿಯದಿರಲು ತಕ್ಕ ವೇದ ಹುಚ್ಚು,
ಸರ್ವ ಸಂಪದಗಳು ಸಪ್ಪೆ ಹುಚ್ಚು.
ಆರು ಶಾಸ್ತ್ರ ಮತ್ತು ಪುರಾಣಗಳು ಬರಿಯ
ಗೋಳು ಎಂದು ಜಗದಿ ಹೇಳು ವೇಮ.

''ನಾನು ಯಾರು ?'' ಎಂದು ತಿಳಿಯಲೆಂದೇ ಹಾದಿ ತೋರಲು ವೇದಗಳೂ, ಸ್ಮೃತಿಗಳೂ, ಶಾಸ್ತ್ರಗಳೂ ಪುರಾಣಗಳೂ, ಇವೆ. ಆದರೆ ಇವುಗಳಿಂದ ತನ್ನನ್ನು ತಿಳಿಯಲಾರನಾದರೆ, ಋಕ್, ಯಜುರ್, ಸಾಮ ಮತ್ತು ಅಥರ್ವ ವೇದಗಳಿಗೆ ಜೋತು ಬೀಳುವುದು ಹುಚ್ಚು. ವಿದ್ಯಾ

ಸಂಪದ, ರಾಜ್ಯ ಸಂಪದ ಇತ್ಯಾದಿ ಸರ್ವ ಸಂಪದಗಳೂ ತನ್ನನ್ನು ತಾನು ತಿಳಿಯದಿದ್ದರೆ, ಸಪ್ಪೆ ಎನಿಸುತ್ತವೆ. ಅವಗಳನ್ನು ಕುರಿತು ಅಭಿಮಾನ ಪಡುವುದು ಹುಚ್ಚು ಎನಿಸುತ್ತದೆ. ಇನ್ನು ಶಿಕ್ಷಾ, ಕಲ್ಪ, ವ್ಯಾಕರಣ, ನಿರುಕ್ತ, ಛಂದಸ್ಸು, ಜ್ಯೋತಿಷಗಳೆಂಬ ಷಟ್ ಶಾಸ್ತ್ರಗಳೂ ಮತ್ತು ವ್ಯಾಸ ಲಿಖಿತ ಹದಿನೆಂಟು ಪುರಾಣಗಳೂ ಬರೀ ಗೋಳು ಎಂದು ಜನರಿಗೆ ಹೇಳು. ತನ್ನನ್ನು ತಾನು ಅರಿಯುವುದೇ ನಿಜವಾದ ವಿದ್ಯೆ. 'ಸಾ ವಿದ್ಯಾ ಯಾ ವಿಮುಕ್ತಯೇ', ಅಂದರೆ ಯಾವುದು ಇಹದ ಬಂಧನದಿಂದ ವಿಮುಕ್ತಗೊಳಿಸುವುದೋ, ಅದೇ ವಿದ್ಯೆಯೆನಿಸುತ್ತದೆ.

ರಾಜ್ಯ ಮದ :

ಅಷ್ಟ ಮದಗಳಲ್ಲಿ ರಾಜ್ಯ ಮದವೂ ಒಂದು. ಇಂದು ರಾಜ ಪದವಿಯು ಭಾರತದಲ್ಲಿ ಇಲ್ಲವಾಗಿದ್ದರೂ ರಾಜಕೀಯ ಆಡಳಿತದಂತೂ ಇದೆ. ಹಿಂದಿನಂತೆ ಆನುವಂಶಿಕ ಸತ್ತೆ ಉಳಿದಿಲ್ಲ. ಬಲವಂತನ ಸತ್ತೆಯೂ ನಿಂತಿದೆ. ಆದರೆ ಜನಪ್ರತಿನಿಧಿಗಳ ಆಡಳಿತ ಶುರುವಾಗಿದೆ. ಪ್ರಧಾನ ಮಂತ್ರಿಗಳೂ, ಮುಖ್ಯಿ ಮಂತ್ರಿಗಳೂ,ರಾಜ್ಯಪಾಲರೂ, ಸಚಿವರೂ ರಾಜ್ಯಮದ ಹೊಂದುತ್ತಾರೆ.

ವಿಶ್ವ ನಡೆಸುವವನು ವಿಶ್ವೇಶ್ವರನಿರಲು,
ಪ್ರಭುವು ನಾನು ಎಂದು ಪೇಳಲೇಕೆ ?
ವನದೊಳಗಿಹ ಕೋತಿ ಮಸುಧೆ ನಡೆಸಬಹುದೆ ?
ವಿಶ್ವದಾಭಿರಾಮ ಕೇಳು ವೇಮ.

ವಿಶ್ವವನ್ನು ನಡೆಸುವವನು ವಿಶ್ವೇಶ್ವರನಾಗಿದ್ದಾನೆ. 'ಈಶತೇ ಇತಿ ಈಶಃ' ಆಳುವನಾದ್ದರಿಂದ ಅರಸನು. ಅವನು ರಾಟ್ ಅಂದರೆ ರಾಜನು. ಅವನೇ ಪ್ರಭು. ಈ ವಿಶ್ವದ ಸೃಷ್ಟಿಕರ್ತನೂ ಅವನೇ. ಕಾಪಾಡುವ ಪ್ರಭುವೂ ಅವನೇ. ಹೀಗೆ ಇರುವಾಗ ಯಾವನೋ ಒಬ್ಬ ಹುಲು ಮಾನವನು ನಾನು ಪ್ರಭುವು ಎಂದು ಹೇಳುವುದು ಸರಿಯಾದೀತೇ ? ಮಂಗನ ಮನಸ್ಸು ಚಂಚಲ. ತನ್ನ ಮನವೇ ತನ್ನ ಸ್ವಾಧೀನದಲ್ಲಿ ಇರದು. ಅಂಥ ವನದಲ್ಲಿಯ ಮಂಗವೊಂದು ತಾನು ಮಸುಧೆಯನ್ನು ಆಳಬಹುದೇ ? ಆಗದಾಗದು.

ರಾಜ ಪದವಿ ಕೋರಿ ರಾಜ್ಯ ಭಾರದಲ್ಲಿ,
ಕೆಡುವನು ಇಹ ಪರದಿ ಕೆಚ್ಚು ಇರದೆ.
ನೀರ ಮೇಲೆ ಗುಂಡು ನಿಲ್ಲುವುದೆ ಮುಳುಗದೆ ?
ವಿಶ್ವದಾಭಿರಾಮ ಕೇಳು ವೇಮ.

ರಾಜ ಪದವಿ ಪಡೆದರೆ ಅಧಿಕಾರ ಸಂಪನ್ನನಾಗುವೆನೆಂದು ಅದನ್ನು ಪಡೆಯಲು ಏನೇನೋ ಹೊಂಚು ಹಾಕುತ್ತಾನೆ. ತಂದೆಯನ್ನು ಕಂಸನಂತೆ ಸೆರೆಮನೆಯಲ್ಲಿ ಇರಿಸುತ್ತಾನೆ. ರಾಜ್ಯಭಾರ ನಡೆಸುವಲ್ಲಿಯೂ ಎಡವಿ ಕೆಡುತ್ತಾನೆ. ಇಹದಲ್ಲಿಯೂ ಕೆಚ್ಚು ಇರದು. ಪರದಲ್ಲಿಯೂ ಇರದು. ಅವನು ರಾಜ್ಯ ಮದದಲ್ಲಿ ಉಬ್ಬಿದ ಅಹಂಕಾರಿಯಾಗಿರುತ್ತಾನೆ. ನೀರ ಮೇಲೆ ಗುಂಡು ತೇಲದು. ಕೂಡಲೇ ಮುಳುಗುತ್ತದೆ. ಅದೇ ರೀತಿ, ಅಹಂಕಾರಿಯು ರಾಜ್ಯಭಾರವನ್ನು ಹೊರಲಾರದೆ ಮುಳುಗಿ ಹೋಗುತ್ತಾನೆ.

ಬಹಳ ಜನರ ಇರಿದು, ಬಡವರನ್ನು ವಧಿಸಿ,
ಸುಲಿದು, ಕೊಳ್ಳೆ ಹೊಡೆದು, ಹೊಟ್ಟೆ ಹೊರೆದು,
ಎತ್ತ ಕಡೆಗೆ ಹೋದರೇನು ? ಯಮನು ಬೆನ್ನು ಬಿಡನು.
ವಿಶ್ವದಾಭಿರಾಮ ಕೇಳು ವೇಮ.

ರಾಜನು ಅಸಮರ್ಥನಾದರೆ, ಬಲವಂತ ಪುಂಡರ ರಾಜ್ಯವಾಗುತ್ತದೆ. ಅವರು ಸಿಕ್ಕ ಸಿಕ್ಕ ಜನರನ್ನು ಇರಿಯುತ್ತಾರೆ. ಬಡವರನ್ನು ವಧಿಸುತ್ತಾರೆ. ಹಾದಿ ಹೋಕರನ್ನು ಸುಲಿದು, ಕೊಳ್ಳೆ ಹೊಡೆಯುತ್ತಾರೆ. ಇದೇ ಅವರ ಹೊಟ್ಟೆ ಹೊರೆಯುವ ಕಾಯಕವಾಗುತ್ತದೆ. ಅವರು ಅರಾಜಕ ಸ್ಥಿತಿಯ ದುರ್ಲಾಭ ಪಡೆದಿರಬಹುದು. ಆದರೆ ಅಧರ್ಮಿಗಳಾಗಿ, ಹೀನ ಕಾರ್ಯ ಮಾಡಿ ಎಲ್ಲಿ ಹೋದರೇನು ? ಯಮನು ಅವರ ಬೆನ್ನು ಬಿಡನು. ಸಾವು ಅವರ ಬೆನ್ನು ಹತ್ತುತ್ತದೆ.

ದಶರಥನು ರಾಮಗೆ ಧರಣೀಶ ಪಟ್ಟವ,
ಕಟ್ಟ ಬಯಸಿ ತಾನೆ ಕಟ್ಟಿದ ಜಡೆ.
ಬಯಕೆ ನಮ್ಮದಷ್ಟೆ ; ಬೇರೆ ದೈವ ಲೀಲೆ !
ವಿಶ್ವದಾಭಿರಾಮ ಕೇಳು ವೇಮ.

ದಶರಥನು ಶ್ರೀರಾಮನ ತಂದೆ. ಇಕ್ಷ್ವಾಕು ಕುಲದ ಪ್ರಸಿದ್ಧ ಚಕ್ರವರ್ತಿ. ಕುಲಗುರು ವಸಿಷ್ಠಾದಿಗಳ ಸಲಹೆಯಂತೆ ಜ್ಯೇಷ್ಠ ಪುತ್ರ ಶ್ರೀರಾಮನಿಗೆ ಯುವರಾಜ ಪಟ್ಟವನ್ನು ಕಟ್ಟಲು ಬಯಸಿದನು. ಎಲ್ಲ ಸಿದ್ಧತೆಗಳೂ ನಡೆದವು. ಆದರೆ ಇತ್ತ ಯಃಕಶ್ಚಿತ ದಾಸಿ ಮಂಥರೆಯು ಕುಟಿಲೋಪಾಯದಿಂದ ಚಿಕ್ಕ ರಾಣಿ ಕೈಕೇಯಿಯ ಕಿವಿ ಚುಚ್ಚಿದಳು. ಆಗ ಕೈಕೇಯಿಯು ತನಗೆ ಹಿಂದೆ ದಶರಥನು ನೀಡಿದ ಎರಡು ವರಗಳ ನೆನಪು ಮಾಡಿಕೊಟ್ಟು, ಒಂದು ವರದಿಂದ ರಾಮನಿಗೆ ಹದಿನಾಲ್ಕು ವರುಷ ವನವಾಸವಾಗಬೇಕೆಂದೂ, ಎರಡನೆಯ ವರದಿಂದ ಭರತನಿಗೆ ಯುವರಾಜ ಪಟ್ಟವಾಗಬೇಕೆಂದೂ ಬೇಡಿದಳು. ಹೀಗಾಗಿ ದಶರಥನ ಬಯಕೆಗಳೆಲ್ಲ ಮಣ್ಣುಗೂಡಿದವು. ಅವನು ಎಲ್ಲವನ್ನೂ ತ್ಯಜಿಸಿ ಜಡೆ ಕಟ್ಟುವಂತಾಯಿತು. ಹೀಗೆ ಎಂಥ ರಾಜನೇ ಇರಲಿ ; ಏನೇ ಬಯಕೆ ಇಟ್ಟುಕೊಳ್ಳಲಿ, ನಡೆಯುವುದು ಮಾತ್ರ ದೈವ ಲೀಲೆಯಂತೆ. ಏಕೆಂದರೆ ಅವನೇ ವಿಶ್ವದ ಪ್ರಭು ತಾನೇ?

ಆ. ಪ್ರಭುವು ಕೋತಿ ಎನಿಸೆ, ಮಂತ್ರಿ ಹಂದಿ ಎನಿಪ ;
ಯೋಧರೆಲ್ಲ ಪಕ್ಷಿ, ಸೇನೆ ಪಶುವು,
ಆನೆ ಕುದುರೆ ತಾವು ಆಗಿ ಬೆಕ್ಕು ಇಲಿಯು.
ವಿಶ್ವದಾಭಿರಾಮ ಕೇಳು ವೇಮ.

ಆಡಳಿತದ ಬಂಧುರತೆಯು ರಾಜ್ಯದ ವರಿಷ್ಠನನ್ನೇ ಅವಲಂಬಿಸಿರುತ್ತದೆ. ಪ್ರಭುವಾದವನು ರಾಜ್ಯಮದವೇರಿ ಇತರ ವ್ಯಸನಗಳಿಗೆ ಬಲಿಯಾದರೆ, ಕೋತಿಯಂತಾಗುತ್ತಾನೆ. ಆಗ ಮಂತ್ರಿಯು ಭ್ರಷ್ಟನಾಗಿ ಲಂಚ ರುಷುವತ್ತು ಇತ್ಯಾದಿ ಮಲ ಭಕ್ಷಿಸುವ ಹಂದಿಯಾಗುತ್ತಾನೆ. ಯೋಧರು ಧೀರರಾಗಿ ಕಾದದೆ, ಬೆದರಿದ ಪಕ್ಷಿಗಳಂತೆ ರಣರಂಗದಿಂದ ಕಾಲ್ತೆಗೆಯುತ್ತಾರೆ. ಇನ್ನು ಯೋಧರ ಬೆಂಬಲಕ್ಕಿರುವ ಸೇನೆಯು ಏನು ಮಾಡಲೂ ತಿಳಿಯದೆ, ಪಾಲಕರಾದ ಯೋಧರೇ

ಇಲ್ಲದೆ, ಪಶುಗಳಾಗುತ್ತಾರೆ. ಇಷ್ಟೆಲ್ಲ ಮಾನವ ಬಲವೇ ಕುಸಿದು ಹೋದಾಗ ಯಾವ ಮಾವುತ, ಸವಾರರಿಲ್ಲದೆ, ಸೇನೆಯೊಂದಿಗೆ ಇರುವ ಆನೆ, ಕುದುರೆಗಳು ಯುದ್ಧದಲ್ಲಿ ಉಪಯೋಗಕ್ಕೆ ಬಾರದ ಬೆಕ್ಕು ಇಲಿಗಳಂತೆ ಆಗುತ್ತವೆ.

ಆ. ಆಗೀಗ ಸುಳ್ಳಾಡಿ ಅವನಿಪತಿ ಮನೆಯಲಿ,
ಬಾರಿ ಬಾರಿ ಲಕ್ಷ್ಮಿ ಬಿಟ್ಟು ಹೋಹಳು.
ಒಡೆದ ಮಡಿಕೆಯೊಳಗೆ ಹಿಡಿದಿಡಬಹುದೆ ನೀರು ?
ವಿಶ್ವದಾಭಿರಾಮ ಕೇಳು ವೇಮ.

ರಾಜನು ಸತ್ಯಸಂಧನಾಗಿರಬೇಕು. ಹೀಗಿರದೆ ಅವನು ಸುಳ್ಳು ವಂಚಕನೆಂದು ತಿಳಿದರೆ, ರಾಜ್ಯಲಕ್ಷ್ಮಿಯು ಅವನನ್ನು ತೊರೆದು ಹೋಗುವಳು. ರಾಜನು ಸುಳ್ಳು ವಂಚನೆಗೆ ಇಂಬುಗೊಟ್ಟರೆ, ಮಂತ್ರಿಗಳು, ಸೇನಾಪತಿಗಳು, ರಾಜ ಪರಿವಾರದವರು, ಅದೇ ಸ್ವಭಾವವನ್ನು ಬೆಳೆಸಿಕೊಳ್ಳುತ್ತಾರೆ. ಆಗ ರಾಜ್ಯದ ಆಡಳಿತ ಕುಸಿದು, ರಾಜ್ಯಲಕ್ಷ್ಮಿಯು ಅಲ್ಲಿಂದ ಬಿಟ್ಟು ಹೋಗುತ್ತಾಳೆ. ಒಡೆದ ಮಡಿಕೆಯಲ್ಲಿ ನೀರು ನಿಲ್ಲಲಾರದಷ್ಟೇ. ಅದೇ ರೀತಿ, ಸುಳ್ಳು ವಂಚಕರ ಮಧ್ಯ ರಾಜ್ಯಲಕ್ಷ್ಮಿ ವಾಸಿಸಳು.

ಆ. ಅಧಿಕ ರಾಜನೊಬ್ಬ ಅಲ್ಪನ ಕೈಹಿಡಿಯೆ,
ಅವನ ನುಡಿಗೆ ಅವನಿ ಸೈಗುಡುವುದು.
ಹರದನೊಪ್ಪಿದೊಡನೆ ಕವಡೆ ನಾಣ್ಯವಹುದು.
ವಿಶ್ವದಾಭಿರಾಮ ಕೇಳು ವೇಮ.

ರಾಜನು ಜನರ ಭಾವನೆಗಳಿಗೆ ಮನ್ನಣೆ ಕೊಡಬೇಕು. ರಾಜ್ಯ ಮದದಿಂದ ತನ್ನ ಮನಬಂದಂತೆ ವರ್ತಿಸಕೂಡರು. ತನ್ನ ಅಧಿಕಾರದ ಮುದ್ರೆ ಬಿದ್ದುದೆಲ್ಲ ಮಾನ್ಯವಾಗುವುದೆಂದು ತಿಳಿದು, ತಾನು ಸಖ್ಯ ಬೆಳೆಸಿದವರನ್ನು ಜನರು ಒಪ್ಪುವರೆಂದು ತಿಳಿದು, ಅವನು ಅಲ್ಪರನ್ನು ಕೈಹಿಡಿಯಬಾರದು. ಅದರಿಂದ ಮುಂದೆ ಅವನಿಗೇ ಕೇಡು ಬರಬಹುದು. ಕವಡೆಯಂಥ ಮೂಲ್ಯ ಹೀನ ವಸ್ತುಗಳನ್ನು ನಾಣ್ಯಗಳೆಂದು ಚಲಾಯಿಸಿದರೆ, ಅವನ ರಾಜ್ಯದ ವ್ಯಾಪಾರಿ ಒಪ್ಪಿದರೆ ವ್ಯವಹಾರ ನಡೆಯಬಹುದು. ಆದರೆ ಅವನ ರಾಜ್ಯದ ಹೊರಗೆ ಆ ಕವಡೆಗೆ ಕಿಮ್ಮತ್ತು ಇರದು.

ಆ. ಮಂಗ ಮರಿಯ ತಂದು ಮತ್ತೆ ಪಟ್ಟಗಟ್ಟಿ,
ಬೆಟ್ಟಿ ಮುಸುವ ಸೇರಿ ಬೇಡುವಂತೆ.
ನೀತಿ ಹೀನನ ಬಳಿ ನಿರ್ಭಾಗ್ಯನಿಹ ಪರಿ.
ವಿಶ್ವದಾಭಿರಾಮ ಕೇಳು ವೇಮ.

ಆ. ಎಷ್ಟು ಸೇವೆ ಗೆಯ್ದು, ಏನು ಪಾಡು ಪಡಲು,
ಪ್ರಭು ಗಣವ ನಂಬ ಬೇಡಿರಣ್ಣ.
ಹಾವಿನ ಸ್ನೇಹ ಬೇಡ ಹತ್ತು ಸಾವಿರಕೂ.
ವಿಶ್ವದಾಭಿರಾಮ ಕೇಳು ವೇಮ.

ಪ್ರಭು ಚಿತ್ತ ಹೀಗೆಯೇ ಎಂದು ಹೇಳಲಾಸಲ್ಲ. ಅವನು ಸ್ವಂತ ಮನಸ್ಸಿನಂತೆ ವರ್ತಿಸದೆ,

ಮಂತ್ರಿಗಳ ಮಾತಿನಂತೆ, ಗುಪ್ತಚಾರರ ಮಾತಿನಂತೆ, ಚಾಡಿಖೋರರ ಮಾತಿನಂತೆ ವರ್ತಿಸುತ್ತಾನೆ. ಹಾಗಾಗಿ ಒಬ್ಬನು ರಾಜಗಣದ ಸೇವೆ ಮಾಡಿ, ಅವರು ತನ್ನ ಮೇಲೆ ಕೃಪೆ ಮಾಡುವರೆಂದು ನಂಬಬಾರದು. ಏಕೆಂದರೆ, ಬೇರೆಯವರು ಅನ್ಯಥಾ ಅವನ ಕಿವಿಯೂದಬಹುದು. ಹೇಗೆ ಹಲವು ಸಲ ಹಾವಾಡಿಗನನ್ನೇ ಹಾವು ಕಚ್ಚುವಂತೆ, ಪ್ರಭು ಗಣದ ಸಾಮೀಪ್ಯವೂ ಸಹ ಅಪಾಯಕಾರಿ.

ಆ. ಪ್ರಜರು ಗೆಯ್ದ ತಪ್ಪು ಪ್ರಭುವಿಗೆ ಬರುವುದು.
ಪ್ರಭುವಿನೊಳಿತಿಲಿ ಪ್ರಜೆಗೆ ಅರ್ಧ.
ಪ್ರಭುವು ಗೆಯ್ದ ತಪ್ಪು ಪ್ರಜೆಗೆ ಬಾರದೇಕೆ ?
ವಿಶ್ವದಾಭಿರಾಮ ಕೇಳು ವೇಮ.

ಧರ್ಮ ಸ್ಮೃತಿಗಳ ಪ್ರಕಾರ ಪ್ರಜರು ಮಾಡಿದ ತಪ್ಪು ಪ್ರಭುವಿಗೂ ಬರುತ್ತದೆ. ಆದ್ದರಿಂದ ಪ್ರಭುವಾದವನು ಪ್ರಜೆಗಳು ತಪ್ಪು ಮಾಡದಂತೆ ನೋಡಿಕೊಳ್ಳಬೇಕು. ಅವರನ್ನು ತಪ್ಪು ಮಾಡದಂತೆ ನಿರ್ಬಂಧಿಸಬೇಕು. ತಪ್ಪು ಮಾಡಿದರೆ ಶಿಕ್ಷಿಸಬೇಕು. ಇನ್ನು ಪ್ರಭುವು ಒಳಿತು ಮಾಡಿದರೆ ಅದರಲ್ಲಿ ಅರ್ಧ ಪಾಲು ಪುಣ್ಯವು ಪ್ರಜೆಗಳಿಗೂ ಲಭಿಸುತ್ತದೆ. ಆದರೆ ಪ್ರಭುವು ತಪ್ಪು ಮಾಡಿದರೆ ಅದರ ಪಾಪ ಫಲ ಪ್ರಜೆಗಳಿಗೆ ಬರುವುದಿಲ್ಲವೇ ? ಇದು ವೇಮನ ಯೋಗಿಗಳ ಪ್ರಶ್ನೆ. ಏಕೆಂದರೆ ತಪ್ಪು ಮಾಡಿದ ಪ್ರಜೆಗಳನ್ನು ದಂಡಿಸುವ ಅಧಿಕಾರವನ್ನು ರಾಜನು ಹೊಂದಿರುವಾಗ ತಪ್ಪು ಮಾಡಿದ ರಾಜನನ್ನು ದಂಡಿಸುವ ಅಧಿಕಾರ ಪ್ರಜೆಗಳಿಗೆ ಇರಬೇಡವೇ ? ಪ್ರಜಾಸತ್ತೆಯಲ್ಲಿ ಚುನಾವಣೆಗಳಲ್ಲಿ ಈ ಅಧಿಕಾರವಿದೆ.

ಪ್ರಜೆಗಳು ಗೆಯ್ಯುವ ಪುಣ್ಯ ಪಾಪಗಳಲ್ಲಿ ಅರಸನ ಪಾಲು ಏನೆಂಬ ಬಗ್ಗೆ ಮನುವು ಹೀಗೆ ಹೇಳಿದ್ದಾನೆ.

''ಪ್ರಜೆಗಳನ್ನು ಸರ್ವ ಪ್ರಕಾರದಿಂದ ರಕ್ಷಿಸುವ ರಾಜನಿಗೆ ಪ್ರಜೆಗಳು ಮಾಡಿದ ಪುಣ್ಯದಲ್ಲಿ ಆರನೆಯ ಒಂದಂಶವು ಲಭಿಸುತ್ತದೆ. ಆದರೆ ಪ್ರಜೆಗಳನ್ನು ರಕ್ಷಿಸದೆ ಇರುವ ರಾಜನಿಗೆ ಪ್ರಜೆಗಳ ಪಾಪದ ಆರನೆಯ ಒಂದಂಶವು ಸಿಗುತ್ತದೆ''. (ಮ. ಸ್ಮೃ. 8-304)

''ಶಾಸ್ತ್ರ ಮರ್ಯಾದೆಯನ್ನು ಮೀರಿದವನೂ, ನಾಸ್ತಿಕನೂ, ಪ್ರಜಾಪೀಡಕನೂ, ಪ್ರಜೆಗಳನ್ನು ರಕ್ಷಿಸದವನೂ, ಬರಿ ತೆರಿಗೆ ವಿಧಿಸಿ, ಸ್ವಾರ್ಥದಲ್ಲಿ ತಾನೇ ಸುಖ ಪಡುವವನೂ ಆದ ರಾಜನು ಅಧೋಗತಿಯನ್ನು ಹೊಂದುತ್ತಾನೆ''. (ಮ. ಸ್ಮೃ. 8-309)

ಹೀಗೆ ಪ್ರಜೆಗಳ ಪಾಪ ಪುಣ್ಯಗಳಲ್ಲಿ ರಾಜನಿಗೆ ಪಾಲಿದೆ. ಆದರೆ ರಾಜನ ಪಾಪಗಳಿಂದ ಅವನ ಅಧೋಗತಿಯಾಗುವುದೇ ಹೊರತು, ಅದರಲ್ಲಿ ಪ್ರಜೆಗಳ ಪಾಲಿಲ್ಲ. ಹೀಗೆ ಪ್ರಜೆಗಳಿಗೆ ರಾಜನ ಮೇಲೆ ಯಾವ ನಿಯಂತ್ರಣವೂ ಇಲ್ಲದೆ ಅವನು ಸ್ವರಾಟ್ ಆಗಿರುತ್ತಾನೆ. ರಾಜನು ಪ್ರತ್ಯಕ್ಷ ದೇವತೆಯೆಂದು ಕೆಲವರೂ, ರಾಜನು ತಪ್ಪು ಮಾಡುವುದಿಲ್ಲ ಎಂದು ಕೆಲವರೂ ಗ್ರಹಿಸಿದ್ದರು.

ಮತ್ಸರ :

ಬೇರೆಯವರ ಸೌಖ್ಯ ಕಂಡು ಕರುಬುವುದು ಮತ್ಸರವಾಗಿದೆ. ಇದುವೇ ಹೊಟ್ಟೆ ಕಿಚ್ಚು, ಅನ್ಯರ ಉತ್ಕರ್ಷ ಕಂಡು ತಾನೇಕೆ ಹೊಟ್ಟೆಕಿಚ್ಚು ಪಡಬೇಕು ? ಅನ್ಯರನ್ನು ಸುಡಲೆಂದು

ತನ್ನಲ್ಲಿಯೇ ಹೊಟ್ಟೆಕಿಚ್ಚು ತಾಳಿದರೆ, ತನ್ನ ಉದರದೊಳಗಿನ ಕಿಚ್ಚು ತನ್ನ ಸುಡುವುದಲ್ಲದೆ ಅವರ ಸುಖ ಸಾಧನಗಳನ್ನೂ ಸುಡಬಹುದು ?

ಆ. ಮದವು ಮತ್ಸರಾದಿ ಮಮಕಾರವೆನ್ನುವ
ವ್ಯಸನಗಳ ದಹಿಸಿ ವೇಗವಾಗಿ,
ಪರರಿಗುಪಕರಿಸಲು ಪರ ನಂಬುವ ಯೋಗಿ.
ವಿಶ್ವದಾಭಿರಾಮ ಕೇಳು ವೇಮ.

ತನ್ನಲ್ಲಿ ಸಂಪದವು ಅತಿಶಯವಾಗಿ ಸಂಚಯವಾದರೆ ಮದವು ಉಂಟಾಗುವುದು. ತನ್ನಲ್ಲಿ ಇಲ್ಲದ ವಸ್ತುವು ಅನ್ಯರಲ್ಲಿ ಇರುವುದನ್ನು ಕಂಡಾಗ ಅವರ ಅನುಕೂಲಗಳನ್ನು ಕಂಡು ಮತ್ಸರ ಉಂಟಾಗಾವುದು. ಇದು ನಾನು, ನನ್ನದು ಎನ್ನುವ ಮಮಕಾರದ ಪರಿಣಾಮವೇ ಸರಿ. ಮಮಕಾರದಿಂದ ಉಂಟಾಗುವ ತನು ವ್ಯಸನ, ಮನೋ ವ್ಯಸನ, ಧನ ವ್ಯಸನ, ರಾಜ್ಯ ವ್ಯಸನ, ವಿಶ್ವ ವ್ಯಸನ, ಉತ್ಸಾಹ ವ್ಯಸನ, ಸೇವಕ ವ್ಯಸನಗಳೆಂಬ ಸಪ್ತ ವ್ಯಸನಗಳನ್ನು ಮೇಲೆ ಹೇಳಿದ ಅಷ್ಟಮದಗಳನ್ನೂ ಸುಟ್ಟು ಹಾಕಿ, ತನ್ನಲ್ಲಿರುವ ಭೌತಿಕ ಮತ್ತು ಆಧಿಭೌತಿಕ ಸಂಪತ್ತನ್ನು ಪರರಿಗೆ ನೀಡಿ ಉಪಕರಿಸುವವನೇ ಪರವನ್ನು ನಂಬಿದ ಯೋಗಿಯೆನಿಸುತ್ತಾನೆ.

ಗೀತ. ಕಾನನವನು ಹೊಕ್ಕು ತಿರುಗುತ ಕೂಡಬೇಡ.
ಹೆಣಗಿ ಮದ ಮತ್ಸರಾಳಿಯ ಹೂಳಿ ಬಿಟ್ಟು.
ಮೌನಿ ನಿಜ ಕೇಳಿಯನು ಸೇರಿ ಮಾನ್ಯನಿರಿಯೊ.
ಧ್ಯಾನ ಧಾರಣ ಯೋಗವನೆ ಬಾಳು ವೇಮ.

ಸಾಧಕನಾದ ಮೇಲೆ, ಮನೆ ಮಾರು ತೊರೆದು ಕಾನನ ಸೇರಿ, ಕಂದ ಮೂಲ ತಿನ್ನುತ್ತ ಸುಮ್ಮನೆ ಕುಳಿತುಕೊಳ್ಳಬೇಡ. ಅಲ್ಲಿಯ ವಿವಿಕ್ತ ಅಂದರೆ ನಿರ್ಜನ ಪ್ರದೇಶದಲ್ಲಿ ಅಂತರ್ವೀಕ್ಷಣೆಗೆ ತೊಡಗಿ, ನಿನ್ನಲ್ಲಿರುವ ಅಹಂಕಾರ ಮಮಕಾರಗಳ ಮೂಲವನ್ನು ಕಂಡುಕೊಂಡು, ಅವುಗಳನ್ನು ಆಧರಿಸಿ ಉದ್ಭವಿಸುವ ಮದ ಮತ್ಸರಾದಿ ಸಮೂಹವನ್ನು ಹೆಣಗಿ ಹೂಳಬೇಕು. ಬಾಯಿಯಿಂದ ಮೌನವಾದಂತೆ ಮನಸ್ಸಿನಿಂದಲೂ ಮೌನವಾಗಿ ನಿಜ ಕೇಳಿಯನ್ನು ಸೇರಲು ಅಂದರೆ ಆತ್ಮಾನುಭೂತಿಯ ಆನಂದದಲ್ಲಿ ಸೇರಲು ಆಗ ಮಾನ್ಯನೆನಿಸುತ್ತಾನೆ. ಹೀಗೆ ಮನಸ್ಸನ್ನು ಅಹಂಕಾರ ಮಮಕಾರಗಳ ಮಲಗಳಿಂದ ಶುದ್ಧಗೊಳಿಸಿ ಪರಮನನ್ನು ಶುದ್ಧ ಮನದಲ್ಲಿ ಧಾರಣ ಮಾಡಿ, ಅಗ್ರ್ಯ ಬುದ್ಧಿಯಿಂದ ಧ್ಯಾನ ಮಾಡುತ್ತ ಪರವನ್ನು ಸೇರಿ ಒಂದಾಗುವ ಯೋಗವನ್ನೇ ಬಾಳು.

ಹೊಟ್ಟೆ ಕಿಚ್ಚಿನವನ ಹತ್ತಿರ ಮಾತಾಡೆ,
ದೊಡ್ಡ ಮರ್ಮಗಳನು ತಿಳಿಸೆ ಹೊಲ್ಲ.
ಹೆಸರು, ಹಾದಿ ತಿಳಿಸೆ, ಹರಡುಮವು ಊರೆಲ್ಲ
ವಿಶ್ವದಾಭಿರಾಮ ಕೇಳು ವೇಮ.

ಯೋಗ ಸಾಧನದಲ್ಲಿ ಮನವು ಉನ್ನತ ಸ್ಥಿತಿಗೇರಿದಾಗ, ಹಲವು ಸಿದ್ಧಿಗಳು ಪ್ರಾಪ್ತವಾಗುವುದು ಸಹಜ. ಈ ಸಾಧನ ಸಿದ್ಧಿಗಳ ದೊಡ್ಡ ಮರ್ಮವನ್ನು ಹೊಟ್ಟೆ ಕಿಚ್ಚಿನ ನೀಚ ಜನರ ಹತ್ತಿರ ಮಾತಾಡುವುದು ಸರಿಯಲ್ಲ. ಏಕೆಂದರೆ ಅವರಿಗೆ ಸಂಪಾದಿಸಲಾಗದ ಅಲೌಕಿಕ

ಸಂಪತ್ತು ಇದಾದುದರಿಂದ ಅದನ್ನೆಲ್ಲ ಕೇಳಿ ಹೊಟ್ಟೆಕಿಚ್ಚಿನಿಂದ ಕರುಬುತ್ತಾರಷ್ಟೇ. ಅವರೆದುರು ನಿನ್ನ ಹೆಸರನ್ನಾಗಲಿ, ಮತಪಂಥವನ್ನಾಗಲಿ ತಿಳಿಸಿದರೆ, ಊರೆಲ್ಲ ಹರಡುತ್ತಾರೆ. ಸುದ್ದಿ ಮಾಡುತ್ತಾರೆ. ಅದರಿಂದ ಅವರಿಗೂ ಲಾಭವಾಗದು. ನಿನಗೂ ಪ್ರಯೋಜನವಾಗದು.

ನಿಜವನಾಡುವವನ ನಿಂದಿಸುವುದು ಜಗವು.
ನಿಜವನಾಡಬಾರದು ನೀಚರೊಡನೆ.
ನಿಜ ಮಹಾತ್ಮರೊಡನೆ ನಿಜವನಾಡಬೇಕು.
ವಿಶ್ವದಾಭಿರಾಮ ಕೇಳು ವೇಮ.

ನಿಜವನ್ನು ಆಡುವ ಸರ್ವಜ್ಞನಾದ ಯೋಗಿಯನ್ನು ಕಂಡು ಕರ್ಮ ಸಂಬಂದ್ಧರಾದ ಪ್ರಾಪಾಂಚಿಕ ಜನರು, ಅವನ ಮಾತಿನ ಇಂಗಿತವನ್ನು ಅರಿಯದೆ, ನಿಂದಿಸುವುದೇ ಹೆಚ್ಚು. ಆದ್ದರಿಂದ ನೀಚ ಜನರೊಡನೆ ಅಂದರೆ ಪ್ರೇಯೋ ಮಾರ್ಗಕ್ಕಂಟಿದ ಜನರೊಡನೆ ಇರುವ ಸತ್ಯವನ್ನು, ಘಟಿಸಲಿರುವ ಘಟನೆಗಳ ಭವಿಷ್ಯವನ್ನು ಕುರಿತು ನಿಜವನ್ನು ಹೇಳಬಾರದು. ಆದರೆ ನಿಜ ಮಹಾತ್ಮರನ್ನು ಸಂಧಿಸಿದಾಗ ಅವರಿಗೆ ನಿಜವನ್ನೇ ಹೇಳಬೇಕು. ಸಾಧನೆ ಸಿದ್ಧಿಗಳ ಕುರಿತು ಸಮಾಲೋಚಿಸಬೇಕು.

ಕಂಡು ಜ್ಞಾನವಂತನ ಕರ್ಮ ಸಂಬದ್ಧರು,
ಹುಚ್ಚನೆನ್ನುತಿಹರು ಪ್ರಕೃತಿ ಬಿಡದೆ.
ಹುಚ್ಚಿರದೆ ಪ್ರಕೃತಿ ಹುಡುಕಲು ಸಿಗುವುದೇ ?
ವಿಶ್ವದಾಭಿರಾಮ ಕೇಳು ವೇಮ.

ಜ್ಞಾನಿಗೆ ಅಹಂಕಾರ, ಮಮಕಾರಗಳಿರುವುದಿಲ್ಲ. ಏನನ್ನಾದರೂ ಪಡೆದಿದ್ದೇನೆಂಬ ಮದವೂ ಇರದು. ಬೇರೊಬ್ಬನು ಪಡೆದಿದ್ದಾರಲ್ಲ ಎಂಬ ಮತ್ಸರವೂ ಇರದು. ಅವನು ಬ್ರಾಹ್ಮಣ, ಆನೆ, ಕುದುರೆ, ಆಕಳು, ನಾಯಿ ಮತ್ತು ನಾಯಿಯ ಮಾಂಸ ತಿನ್ನುವ ಜೀವರನ್ನು ಸಮನಾಗಿ ಕಾಣುತ್ತಾನೆ. ಅವನ ಪ್ರತಿಕ್ರಿಯೆಗಳು ವಿಚಿತ್ರವಾಗಿರುತ್ತವೆ. ಹೀಗಾಗಿ ಪ್ರಾಪಂಚಿಕರು ಪ್ರಕೃತಿಯ ತ್ರಿಗುಣಗಳನ್ನು ಬಿಡದೆ, ತ್ರೈಗುಣ್ಯವನ್ನು ತೊರೆದ ಜ್ಞಾನವಂತನನ್ನೇ ಹುಚ್ಚ ಎನ್ನುತ್ತಾರೆ. ಆದರೆ ಪರಮನಿಗಾಗಿ ದಿವ್ಯ ಹುಚ್ಚು ಹಿಡಿಯದೆ, ಶ್ರೀ ರಾಮಕೃಷ್ಣರಾಗದೆ, ರಮಣ ಮಹರ್ಷಿಯಾಗದೆ, ಹುಬ್ಬಳ್ಳಿಯ ಸಿದ್ಧಾರೂಢರಾಗದೆ, ಚೀಳ್ಳಗುರ್ಕಿಯ ಎರ್ರಿ ತಾತನಾಗದೆ, ಪ್ರಕೃತಿಯಲ್ಲಿಯೇ ಹುಡುಕಿದರೆ ಪರಮ ತತ್ತ್ವವು ಸಿಗುವುದೇನು ?

ಆಚಾರ :

ಆಚಾರವೆಂದರೆ ಅಂತಃಶುದ್ಧಿ ಮತ್ತು ಬಹಿರ್ಶುದ್ಧಿ, ನಾವು ಇದುವರೆಗೆ ಆಹಾರ ಶುದ್ಧಿ ಮತ್ತು ಮಾನಸಿಕ ಶುದ್ಧಿಗಳನ್ನು ಕುರಿತು ಸಾಕಷ್ಟು ವಿವೇಚಿಸಿದ್ದೇವೆ. ಈಗ ದೇಹ ಶೌಚ ಕುರಿತು ಸ್ವಲ್ಪು ತಿಳಿಯುವಾ :

ಆ. ನೀರು ಮುಳುಗುವವನು ನಿರ್ಮಲಾತ್ಮನಲ್ಲ.
ಪೂರ್ಣವಾದ ಮುಕ್ತಿ ಹೊಂದಲಾರ.

ನೀರುಗೋಳಿ ನಿರುತ ನೀರೊಳು ಮುಳುಗದೇ ?
ವಿಶ್ವದಾಭಿರಾಮ ಕೇಳು ವೇಮ.

ಎಲ್ಲಿ ನೀರು ಮುಳುಗಬೇಕು ? ನೀರು ಮುಳುಗುವುದರಿಂದ ನಿರ್ಮಲಾತ್ಮನಾಗುವನೇ? ಇಲ್ಲ. ನಿರ್ಮಲಾತ್ಮನಾಗಬೇಕಾದರೆ ಅಂತಃಶುದ್ಧಿಯಾಗಬೇಕು. ನೀರು ಮುಳುಗು ಹಾಕುವ ಬಾಹ್ಯ ಆಚಾರದಿಂದ ಯಾವನೂ ಮುಕ್ತಿಯನ್ನು ಹೊಂದಲಾರನು. ಹಾಗಿದ್ದರೆ ನೀರು ಗೋಳಿಗಳು ಸದಾ ನೀರಿನಲ್ಲಿ ಮುಳುಗುತ್ತವೆ. ಅವುಗಳಿಗೆ ಮುಕ್ತಿಯಾದೀತೇ ? ಅವುಗಳ ಮುಳುಗು, ಜಂತುಗಳನ್ನು ಹಿಡಿಯುವ ಉದ್ದೇಶದಿಂದ ಮಾತ್ರ.

''ಅನ್ಯರು ಕಟ್ಟಿಸಿದ ಕೆರೆ ಬಾವಿಗಳಲ್ಲಿಳಿದು ಎಂದಿಗೂ ಸ್ನಾನ ಮಾಡಬಾರದು. ಅಂಥವನಿಗೆ ಆ ಕೆರೆ ಕಟ್ಟಿಸಿದವನು ಮಾಡಿದ ಪಾಪವು ಅಂಟಿಕೊಳ್ಳುತ್ತದೆ''. (ಮ.ಸ್ಮೃ. 4-201)

ಹಾಗಾದರೆ ಎಲ್ಲಿ ಸ್ನಾನ ಮಾಡಬೇಕು ?

''ನದಿಗಳಲ್ಲಿ, ದೇವಾಲಯಗಳ ಸರೋವರಗಳಲ್ಲಿ, ಪ್ರಕೃತಿ ನಿರ್ಮಿತ ಕೆರೆಗಳಲ್ಲಿ, ಹಳ್ಳಗಳಲ್ಲಿ, ಕೊಳ್ಳಗಳಲ್ಲಿ, ಜಲಧಾರೆಗಳಲ್ಲಿ ನಿತ್ಯವೂ ಸ್ನಾನ ಮಾಡಬೇಕು''. (ಮ.ಸ್ಮೃ. 4-203)

ಆ. ಗಂಗೆ ಸ್ನಾನ ಮಾಡಿ ಘನರೆನಿಸಿದವರೆಲ್ಲ,
ಭಂಗ ಪಡುವರಧಿಕ ಬಾಧೆ ಹೊಂದಿ.
ಗಂಗೆ ನೀರಿಗಿಂತ ಗಯೆ ತೀರ್ಥಕಿಂತ,
ಎಣೆಸೆ, ಬೇವಿನ ರಸ ಗಣ್ಯ ವೇಮ.

ಗಂಗೆಯು ಪಾಪನಾಶಿನಿಯೆಂದೂ, ಶಿವನ ಜಡೆಯಿಂದ, ಹರಿಯ ಅಡಿಯಿಂದ, ಧರೆಗೆ ಇಳಿದು ಬಂದಳೆಂದೂ ಏನೇನೋ ಪುರಾಣಗಳಲ್ಲಿ ಹೇಳಲಾಗಿದೆ. ಆದರೆ ಇತ್ತೀಚೆಗೆ ಗಂಗೆಯ ನೀರು ಜಲಮಾಲಿನ್ಯದ ದೃಷ್ಟಿಯಿಂದ ತುಂಬಾ ಮಾರಕವಾಗಿದೆ. ತಿರುಪತಿಯ ಕಲ್ಯಾಣಿಯಲ್ಲಿಯ ಜಲದ ಹಣೆಬರೆಹವೂ ಬೇರೇನಿಲ್ಲ. ಅಂದ ಮೇಲೆ, ಗಂಗೆ ಸ್ನಾನ ಮಾಡಿ ಘನರಾದೆವೆಂದು ಗರ್ವಪಡುವವರು ಅದರ ಮಲಿನತೆಯಿಂದ ಹೆಚ್ಚು ಬಾಧೆ ಪಡುತ್ತಾರೆ. ಅದೇ ಬೇವಿನ ರಸವು ಅನೇಕ ಚರ್ಮರೋಗಗಳಿಗೆ ರಾಮಬಾಣವಾಗಿದೆ. 'ನೀಮ' ಸ್ನಾನದ ಸಾಬೂನೂ ಈಗ ಜನಪ್ರಿಯವಾಗಿದೆ. ಹೀಗೆ ಗಂಗೆಯ ನೀರಿಗಿಂತ, ಗಯೆಯ ತೀರ್ಥಕ್ಕಿಂತ ಬೇವಿನ ರಸವೇ ಪಾಪನಾಶಕವಾಗಿದೆ.

ಆ. ಮೂಗುದಾರ ಜಗ್ಗಿ ಮಲಿನ ಹೋಗುವಂತೆ,
ಮಡದ ಜಲದಿ ನಿಂತು ಮತ್ತ ತಿಕ್ಕಿ,
ತೊಗಟೆ ತೊಳೆದರಾಗ ದೊರಕಬಹುದೆ ಮೋಕ್ಷ ?
ವಿಶ್ವದಾಭಿರಾಮ ಕೇಳು ವೇ.

ಶಾಸ್ತ್ರಗಳಲ್ಲಿ ಕೊಟ್ಟ ಸ್ನಾನದ ವಿಧಿಯನ್ನು ಅನುಸರಿಸಿ, ಜಲದ ಮಡುವಿನಲ್ಲಿ ನಿಂತು ತನ್ನ ಜನಿವಾರವನ್ನು ಮೂಗಿನ ಮೇಲಿನಿಂದ ಜಗ್ಗಿ ಜಗ್ಗಿ ತೊಳೆಯುತ್ತ, ಮಲಿನ ಹೋಗುವಂತೆ ಮತ್ತೆ ಮತ್ತೆ ತಿಕ್ಕಿ ಮೈಯ ಹೊಲಸು ಹೋಗುವಂತೆ ತಿಕ್ಕಿದರೆ, ಬಾಹ್ಯ ಶೌಚವಾಗಬಹುದು.

ಆದರೆ, ಮೋಕ್ಷ ಪ್ರಾಪ್ತಿಗಾಗಿ ಈ ಸ್ನಾನ ವ್ರತ ಕೈಕೊಂಡಿದ್ದೇವೆಂದು ಬಡಬಡಿಸಿದರೆ, ಅವರಿಗೆಂದಾದರೂ ಮೋಕ್ಷ ಸಿಕ್ಕಬಹುದೇ ? ಮೋಕ್ಷ ಸಿಗುವುದಿರಲಿ, ಮೋಕ್ಷ ಪ್ರಾಪ್ತಿಯ ಪೂರ್ವ ಸಿದ್ಧತೆಗೂ ಸಹ ಅಂತಃ ಶೌಚ ಅನಿವಾರ್ಯ.

ಆ. ನೀರು ಸುರಿದು ತೊಳೆದು ನಿತ್ಯ ಶೋಧಿಸುತ್ತ.
ಕೂಳು ಹಾಕಿ ಮೇಲೆ ಕಟ್ಟಿ ಬಟ್ಟೆ.
ಏನು ಪಾಡು ಪಡುವ ಈ ಶರೀರಕಾಗಿ ?
ವಿಶ್ವದಾಭಿರಾಮ ಕೇಳು ವೇಮ.

ಬಾಹ್ಯ ಶೌಚವು ಬೇಕು. ದೇಹದ ಸ್ವಾಸ್ಥ್ಯ ಕಾಯ್ದುಕೊಳ್ಳಲು ಅದು ಅವಶ್ಯವಾಗಿದೆ. ಅದಕ್ಕಾಗಿ ನೀರು ಸುರಿದುಕೊಳ್ಳಬೇಕು. ತಿಕ್ಕಿ ತೊಳೆದುಕೊಳ್ಳಬೇಕು. ದಿನಾಲು ಶುದ್ಧ ಮಾಡಿಕೊಳ್ಳಬೇಕು. ಆದರೆ ಇದನ್ನು ವ್ರತವೆಂದೋ, ಪುಣ್ಯ ಸಂಪಾದಿಸುವ ಸಾಧನವೆಂದೋ, ನೆಪಕ್ಕೆ ಮಾತ್ರ ಸ್ನಾನ ಮಾಡಿಕೊಳ್ಳಬಾರದು. ಅನಂತರ ಹಸಿದ ಹೊಟ್ಟೆಗೆ ಮಿತವಾದ ಶುದ್ಧ ಆಹಾರ ಸೇವನೆ ಮಾಡಬೇಕು. ಸ್ವಚ್ಛವಾದ ಬಟ್ಟೆಗಳನ್ನು ಧರಿಸಬೇಕು. ಮಾನವನು ಈ ಶರೀರಕ್ಕಾಗಿ ಎಷ್ಟೊಂದು ತೊಂದರೆ ತೆಗೆದುಕೊಳ್ಳುತ್ತಾನೆ ? ಏಕೆಂದರೆ ಈ ಶರೀರವು ನಿಜವಾಗಿ ಧರ್ಮ ಸಾಧನವಾಗಿದೆ. 'ಶರೀರರಂ ಖಲು ಧರ್ಮ ಸಾಧನಂ'. ಏಕೆಂದರೆ ಮರಣಾ ನಂತರ ಪಡೆಯುವ ಸೂಕ್ಷ್ಮ ಇಲ್ಲವೆ ಲಿಂಗ ಶರೀರದಲ್ಲಿರುವಾಗ, ಧರ್ಮ ಸಾಧನೆ ಮಾಡಲು ಬರುವಂತಿಲ್ಲ.

ಆ. ಶುದ್ಧ ಸ್ನಾನ ಗೆಯ್ದು ದಾನ ವೀಯದನಕ,
ನೀರು ಮುಳುಗೆ ಬಂದ ಭಾಗ್ಯವೇನು ?
ನೀರು ಗೋಳಿ ನೀರಿನೊಳಗೆ ಮುಳುಗದೇನು ?
ವಿಶ್ವದಾಭಿರಾಮ ಕೇಳು ವೇಮ.

ನೀರಿನಿಂದ ಮೈ ತೊಳೆಯುವುದು ಬಾಹ್ಯ ಶೌಚ ; ದಾನ ಧರ್ಮ ಮಾಡುವುದು ಅಂತಃ ಶೌಚ. ಪರದ ದಾರಿ ಹಿಡಿಯಲು ಎರಡೂ ಅವಶ್ಯ. ಅಂತರಂಗ ಶೌಚವಿಲ್ಲದೆ ಬರೀ ಬಾಹ್ಯ ಶೌಚವಿದ್ದರೆ ಅದು ಶುದ್ಧ ಆಚಾರವಾಗದೆ ದಂಭಾಚಾರವೆನಿಸುತ್ತದೆ. ಆದ್ದರಿಂದ ಮನೋಶುದ್ಧಿಯಾಗದೆ ಬರೀ ನೀರು ಮುಳುಗಿದರೆ ಬರುವ ಭಾಗ್ಯವೇನು ? ಹಾಗಿದ್ದರೆ ನೀರುಗೋಳಿ ನಿತ್ಯವೂ ನೀರಿನಲ್ಲಿ ಮುಳುಗುವುದಲ್ಲವೇ ?

ಆ. ನೀರು ಮುಳುಗಲೇನು ? ನಿಧಿಯ ಹೂಳಲೇನು ?
ಮನದಿ ಗುಡಿಯೆಡೆ ಕರ ಮುಗಿದರೇನು ?
ಕಪಟ, ದೋಷ ಒಡಲು ತುಂಬಿಕೊಂಡು ಇರಲು.
ವಿಶ್ವದಾಭಿರಾಮ ಕೇಳು ವೇಮ.

ಬಾಹ್ಯ ಶುದ್ಧಿಯೆಂದು ನೀರು ಮುಳುಗಿ ಸ್ನಾನ ಮಾಡಬಹುದು. ದಾನವೆಂದು, ಆಪತ್ಕಾಲದಲ್ಲಿ ರಾಜನು ದೈವಕ್ಕಾಗಿ ಬಳಸಲೆಂದು, ಗರ್ಭಗುಡಿಯಲ್ಲಿ ನಿಧಿಯನ್ನೂ ಹೂಳಬಹುದು. ಮೇಲಾಗಿ ಗುಡಿಯತ್ತ ಕೈ ಮುಗಿದು ಭಕ್ತಿಯನ್ನು ತೋರಬಹುದು. ಆದರೆ ಇವುಗಳೆಲ್ಲ ಬಹಿರಂಗದ ಕ್ರಿಯೆಗಳಷ್ಟೇ. ಆದರೆ ಮಲವು ಅಂತರಂಗದಲ್ಲಿ ತುಂಬಿರುವುದು.

ಕಪಟ ಹಂಚಿಕೆ, ದೋಷಪೂರ್ಣ ವಿಚಾರಗಳು ಒಡಲಿನಲ್ಲಿ ತುಂಬಿ ಇರುವಾಗ ಅವುಗಳನ್ನು ಅದುಮಿ ನಿರ್ಮೂಲ ಮಾಡದೆ ಇದ್ದರೆ ಮನೋಶುದ್ಧಿ ಹೇಗೆ ಸಾಧ್ಯ ?

ಆ. ಶುದ್ಧ ಸ್ನಾನ ಮಾಡಿ, ಪಟ್ಟಿ ನಾಮ ಬಳಿದು,
ನೀರು-ಕಾವಿ ಪಂಜೆ ನಿರಿಗೆಗಟ್ಟಿ,
ನೃತ್ಯಗಾತಿ ಕಾಣೆ ನಿಖಿಲ ವ್ರತ ಮರೆವರು.
ವಿಶ್ವದಾಭಿರಾಮ ಕೇಳು ವೇಮ.

ವೇಮನರ ಕಾಲದಲ್ಲಿ ದೇವದಾಸಿ ಪದ್ಧತಿ ಹೆಚ್ಚು ರೂಢಿಯಲ್ಲಿತ್ತು. ದೇವಾಲಯಗಳಲ್ಲಿ ದೇವ ಪೂಜೆಯ ಕಾಲಕ್ಕೆ ದೇವ ದಾಸಿಯರ ನೃತ್ಯ ಸಂಗೀತಗಳು ನಡೆಯುತ್ತಿದ್ದವು. ತಿರುಪತಿ ಮುಂತಾದ ದೇಮಸ್ಥಾನಗಳಲ್ಲಿ ಶ್ರೀ ವೈಷ್ಣವ ಪೂಜಾರಿ ಪುರೋಹಿತರು ಇದ್ದರು. ಅವರು ತಮ್ಮ ಸಂಪ್ರದಾಯದ ಮೇರೆಗೆ ಶುದ್ಧ ಸ್ನಾನ ಮಾಡಿ ಬಾಹ್ಯ ಶೌಚವನ್ನು ಆಚರಿಸುತ್ತಿದ್ದಾರೆ. ಮೇಲೆ ತಮ್ಮ ಮತದ ಚಿಹ್ನೆಯಾದ ಪಟ್ಟಿ ನಾಮವನ್ನು ಹಣೆಯಲ್ಲಿ ಬಳಿಯುತ್ತಿದ್ದರು. ತಾವು ಮಡಿಯಲ್ಲಿ ಇರುವಾಗ ಬಳಸಲೆಂದೇ ನಿಗದಿಪಡಿಸಿದ ಕಾವಿಯ ನೀರು ಪಂಜೆಯನ್ನು ನೀಟಾಗಿ ನಿರಿಗೆಗಟ್ಟಿ ಉಡುತ್ತಿದ್ದರು. ಇದನ್ನು ವ್ರತವೆಂಬಂತೆ ಮಾಡುತ್ತಿದ್ದರು. ಆದರೆ ಅಂತರಂಗ ಶುದ್ಧಿಯೇನೂ ಇರಲಿಲ್ಲ. ಹೀಗಾಗಿ, ನೃತ್ಯಗಾತಿ ದೇವದಾಸಿಯನ್ನು ನೋಡಿದೊಡನೆ ತಮ್ಮ ವ್ರತವನ್ನೆಲ್ಲ ಮರೆತು ರತಿ ಸುಖವನ್ನು ಬಯಸಿ ಅವಳ ಬೆನ್ನು ಹತ್ತುತ್ತಾರೆ.

ಆ. ಕುಕ್ಕರ ಏಕಾಂತ, ಕೊಕ್ಕರೆಯ ಧ್ಯಾನ ;
ಕತ್ತೆ ರಾಗ, ಮತ್ತೆ ಕಪ್ಪೆ ಮುಳುಗು.
ಆತ್ಮವರಿವ ಭಾವ ಕಂಡುಕೊಳ್ಳರೇಕೊ ?
ವಿಶ್ವದಾಭಿರಾಮ ಕೇಳು ವೇಮ.

ಡಾಂಭಿಕ ವ್ರತ ನೇಮಗಳು, ತಾನು ಧಾರ್ಮಿಕನೆಂಬ ಅಹಂಭಾವವನ್ನು ಬೆಳೆಸುತ್ತವೆಯೇ ಹೊರತು ಮನೋಶುದ್ಧಿಯನ್ನು ಮಾಡವು. ಊರ್ಧ್ವಗತಿಗೆ ಕರೆದೊಯ್ಯವು. ನಾಯಿಯು ತನ್ನ ಬೇಟೆಯನ್ನು ಲಕ್ಷಿಸಿ, ಒಂದೇ ಕಡೆ ಜಪ್ಪಿಸಿ ಕುಳಿತಂತೆ ಏನನ್ನಾದರೂ ಬಯಸಿ ಏಕಾಂತವಾಸ ಮಾಡುವವನ ಸ್ಥಿತಿಯಾಗಿದೆ. ಕೊಕ್ಕರೆಯು ಸರೋವರದ ದಂಡೆಯಲ್ಲಿ ಜಲ ಜಂತುಗಳನ್ನು ಹಿಡಿಯಲು ತನ್ನ ಮನವನ್ನು ಕೇಂದ್ರೀಕರಿಸಿ ಧ್ಯಾನ ಮಾಡುತ್ತದೆ. ಆ ರೀತಿ, ಯಾವುದೋ ಸಿದ್ಧಿಯನ್ನು ಆಶಿಸಿ, ಮಾಡುವವನ ಧ್ಯಾನವಾಗಿದೆ. ಕತ್ತೆಯು ಬೂದಿಯಂಥ ಮಲಿನ ವಸ್ತುಗಳಲ್ಲಿ ಹೊರಳಾಡುವಾಗ ಖುಷಿಪಟ್ಟು ರಾಗ ಎಳೆಯುತ್ತದೆ. ಡಾಂಭಿಕನೊಬ್ಬನು ಭಕ್ತಿ ಕುದುರದೆ, ಮೋಜಿಗಾಗಿ ದೇವರ ನಾಮ ಹೇಳುವುದು ಕತ್ತೆಯ ರಾಗದಂತಾಗುತ್ತದೆ. ಇನ್ನು ಕಪ್ಪೆಯು ಕಮಲ ಪತ್ರದ ಮೇಲೆ ಇಲ್ಲವೆ ಕಮಲ ಪುಷ್ಪದಲ್ಲಿ ಕುಳಿತು, ಕೆಳಗೆ ಯಾವುದಾದರೂ ಜಲಜಂತು ಕಂಡರೆ ಅದನ್ನು ಕಬಳಿಸಲು ನೀರು ಮುಳುಗುತ್ತದೆ. ಅದೇ ರೀತಿ ಏನೋ ಹೇತುವಿನಿಂದ ಸ್ನಾನ ವ್ರತ ಕೈಕೊಂಡು ನೀರು ಮುಳುಗಿದರೆ ಅದೆಲ್ಲ ಕಪ್ಪೆಯ ಮುಳುಗಿನಂತೆ. ಇಂಥ ತೋರಿಕೆಯ ಆಚಾರ ಶೀಲರು ಶುದ್ಧ ಆಚಾರದಿಂದ, ಸೂಕ್ಷ್ಮ ವಿವೇಚನೆಯಿಂದ, ಏಕಾಗ್ರತೆ ಸಾಧಿಸಿ ಆತ್ಮವನ್ನು ಅರಿಯಲಾರದವರಾಗಿದ್ದಾರೆ. ಇವರು ಹೀಗೇಕೆ ವರ್ತಿಸುವರೋ ಕಾಣೆವು.

ನಾವು ಇದುವರೆಗೆ ಆಹಾರದ ಬಾಹ್ಯ ಶುದ್ಧಿ ಮತ್ತು ಅಂತಃ ಶುದ್ಧಿಗಳನ್ನು ಕುರಿತು ವಿವರಿಸಿದೆವು. ಇದನ್ನೇ ಉಪ ಸಂಹರಿಸುವುದಾದರೆ, ಆಹಾರವನ್ನು ಅನ್ನಾಹಾರವೆಂದೂ, ವಿಚಾರಗಳ ಆಹಾರವೆಂದೂ ಪರಿಗಣಿಸಬಹುದು. ಅನ್ನಾಹಾರ ವಿಷಯದಲ್ಲಿ ಶಾಸ್ತ್ರಗಳು ಮೂರು ಪ್ರಕಾರದ ಅನ್ನವನ್ನು ನಿಷೇಧಿಸಿವೆ.

1) ಒಂದನೆಯದಾಗಿ, ತನ್ನ ಸ್ವಭಾವದಿಂದಲೇ ದೋಷಪೂರ್ಣವಾದವು. ಉದಾ : ಬಳ್ಳೊಳ್ಳಿ, ಈರುಳ್ಳಿ ಇವುಗಳನ್ನು ಹೆಚ್ಚಾಗಿ ತಿಂದರೆ, ಮನೋ ವಿಕಾರಗಳು ಉಂಟಾಗುತ್ತವೆ. ಅವನು ಅನೈತಿಕ ಶೀಲ ಹೊಂದುತ್ತಾನೆ.

2) ಎರಡನೆಯದಾಗಿ, ಹೊರಗಿನ ಅಶುದ್ಧಿಯಿಂದ ಕೊಳೆತ ಇಲ್ಲವೆ ಮಲಿನವಾದ ಆಹಾರ. ನಾವು ತಿನ್ನುವ ಖಾದ್ಯ ವಸ್ತುಗಳನ್ನು ಸ್ವಚ್ಛ ಮತ್ತು ಸುರಕ್ಷಿತ ಜಾಗೆಯಲ್ಲಿ ಇರಿಸಬೇಕು.

3) ಮೂರನೆಯದಾಗಿ, ದುಷ್ಟ ಮನುಷ್ಯನು ಮುಟ್ಟಿದ ಆಹಾರವನ್ನು ತಿನ್ನಬಾರದು. ಏಕೆಂದರೆ ಇಂಥ ಜನರು ಮುಟ್ಟಿದ ಆಹಾರದಿಂದ ನಮ್ಮಲ್ಲಿ ಕೆಟ್ಟ ವಿಚಾರಗಳೇಳಬಹುದು. ಒಬ್ಬನು ಬ್ರಾಹ್ಮಣನ ಮಗನೇ ಆಗಿರಲಿ, ಅವನು ದುಷ್ಟನೂ, ನೀತಗೆಟ್ಟವನೂ ಆಗಿದ್ದರೆ ಅವನು ಕೈಯಿಂದ ಮುಟ್ಟಿದ ಅನ್ನವನ್ನು ತಿನ್ನಬಾರದು.

ಈಗ ಆಚರಣೆಗಳ ಹಿಂದಿನ ಮನೋಭಾವವು ಹೋಗಿದೆ. ಈಗ ಉಳಿದುಕೊಂಡಿರುವುದೆಂದರೆ ನಾವು ಒಬ್ಬ ಅತೀವ ವಿದ್ವಾಂಸನಾಗಿರಲಿ, ಪವಿತ್ರ ಪುರುಷನಾಗಿರಲಿ, ಅವನು ಉನ್ನತ ಜಾತಿಯವನಾಗಿರದಿದ್ದರೆ ಅವನು ಮುಟ್ಟಿದ ಅನ್ನವನ್ನು ತಿನ್ನಬಾರದಂತೆ.

ಜಾತಿ ಬ್ರಾಹ್ಮಣರು ಅನುಸರಿಸುವ ಮನುಸ್ಮೃತಿಯ ಮೇರೆಗೆ ಯಾರ ಮನೆಯಲ್ಲಿ ಉಣ್ಣಬಾರದು, ಎಂದು ತಿಳಿಸುವ ಹತ್ತಾರು ಪದ್ಯಗಳನ್ನು ಬರೆದಿದ್ದಾರೆ. ಇಲ್ಲಿ ಕೆಲ ಪದ್ಯಗಳನ್ನು ನೋಡೋಣ.

''ಕಮ್ಮಾರ, ಬೇಡ, ರಂಗವೇದಿಕೆಯನ್ನು ಸಜ್ಜು ಮಾಡುವವರು, ಬಂಗಾರದ ಕೆಲಸ ಮಾಡುವ ಪತ್ತಾರ, ಬಿದಿರಿನ ಕೆಲಸ ಮಾಡುವವ, ಶಸ್ತ್ರಾಸ್ತ್ರ ಮಾರುವವನು,- ಈ ಎಲ್ಲರ ಮನೆಯ ಅನ್ನ ಉಣ್ಣಬಾರದು''. (ಮ.ಸ್ಮೃ. 4-215)

''ವೈದ್ಯನ ಮನೆಯ ಅನ್ನವು ಕೀವಿಗೆ ಸಮಾನ ; ಜಾರಿಣಿಯ ಅನ್ನವು ರೇತಸ್ಸಿಗೆ ಸಮಾನ ; ಬಡ್ಡಿಯ ಹಣದಿಂದ ಜೀವಿಸುವವನ ಅನ್ನವು ಮಲಕ್ಕೆ ಸಮಾನ. ಇವುಗಳನ್ನು ಉಣ್ಣಬಾರದು''. (ಮ. ಸ್ಮೃ. 4-220)

''ದ್ವಿಜನು, ಶ್ರಾದ್ಧ ಕರ್ಮಗಳನ್ನು ಆಚರಿಸದಿರುವಂಥ ಶೂದ್ರನ ಮನೆಯ ಅನ್ನವನ್ನು ಉಣ್ಣಬಾರದು. ಅನಿವಾರ್ಯ ಸಂದರ್ಭದಲ್ಲಿ ಮಾತ್ರ ಶೂದ್ರನಿಂದ ಒಂದು ರಾತ್ರಿಗೆ ಸಾಕಾಗುವಷ್ಟು ಧಾನ್ಯ ಪಡೆಯಬಹುದು''. (ಮ. ಸ್ಮೃ. 4-223)

ವೇಮನ ಯೋಗಿಗಳು ಇಂಥ ಶೀಲವಂತಿಕೆ, ಎಂಜಲು, ಉಚ್ಛಿಷ್ಟ, ಜಾತಿಯ ಮೇಲು ಕೀಳು ಭಾವನೆಗಳನ್ನು ಹೀಗಳೆಯುತ್ತಾರೆ. ಅವರು ವ್ಯಕ್ತಿಯ ಗುಣಕ್ಕೆ ಮನ್ನಣೆ ನೀಡುವರೇ ಹೊರತು ಜಾತಿ ಕುಲಗಳಿಗಲ್ಲ.

ಕಂ. ಮರ್ತ್ಯದಲಿ, ಅರ್ಚಕರೆನಲು,
ಮರ್ತ್ಯರೆ ; ತಮ್ಮನೆ ತಿಳಿಯದೆ ಮನಸೀ ಅಲೆವರ್.
ವ್ಯರ್ಥವು ವಿಪ್ರರು ಪೇಳ್ವುದು ;
ಶ್ರದ್ಧೆಯಲ್ಲವೆ-ಯಾರಿಗಿರಲಿ, ಚರಿತವು ವೇಮಾ.

ಅರ್ಚಕರೇ ಇರಲಿ, ಪುರೋಹಿತರೇ ಇರಲಿ, ಮರ್ತ್ಯ ಲೋಕದಲ್ಲಿ ಹುಟ್ಟಿದವರೆಲ್ಲರೂ ಮರ್ತ್ಯರೇ. ಮರಣಿಸುವವರೇ. ಇವರು ತಮ್ಮನ್ನು, ತಮ್ಮ 'ನಿಜ ನಾನು' ವನ್ನು ತಿಳಿಯದೆ ಮನ ಬಂದಂತೆ ಅಲೆಯುತ್ತಾರೆ. ಶಿಲೆಯ ಮೂರ್ತಿಯನ್ನು ಅರ್ಚಿಸಿ, ಸ್ವರ್ಗಕ್ಕೆ ಹೋಗುತ್ತೇವೆಂದು ತಿಳಿಯುತ್ತಾರೆ. ಅವರಿಗೆ ಸತ್ಯ ತಿಳಿಯದು. ಅವರು ಜನರೆದುರು ಹೇಳುವುದೆಲ್ಲ ವ್ಯರ್ಥವು. ಪರಮಾತ್ಮನಲ್ಲಿ ಶ್ರದ್ಧೆಯು, ಯಾರಿಗೇ ಇರಲಿ, ಅದು ಉತ್ತಮ ನಡೆಯಾಗಿದೆ.

ಆ. ಧರೆಯ ಶೂದ್ರನಾದುದರಿಯರು ಮೊದಲಿಗೇ,
ಮನಸು 'ಅವನ' ಮೇಲೆ ಮರಳಿ ತಿರುಗಿ,
ಭಜಿಸೆ, ದ್ವಿಜರಾಗರೆ ಬಹಳ ಕೋಟಿಗಟ್ಲೆ ?
ವಿಶ್ವದಾಭಿರಾಮ ಕೇಳು ವೇಮ.

ಆಹಾರ ಶುದ್ಧಿ, ಮಡಿ ಮೈಲಿಗೆ ವಿಷಯಗಳಲ್ಲಿ ಶೂದ್ರರನ್ನು ನಿಕೃಷ್ಟವಾಗಿ ಕಾಣುವ ಹಾರುವರು, ಧರೆಯಲ್ಲಿ ಎಲ್ಲರೂ ಶೂದ್ರರಾಗಿ ಜನಿಸಿದುದನ್ನು ಅರಿಯರೇನೋ ? ''ಜನ್ಮನಾ ಜಾಯತೇ ಶೂದ್ರಃ, ಸಂಸ್ಕಾರಾತ್ ದ್ವಿಜ ಉಚ್ಯತೇ''. ಅಂದರೆ ಎಲ್ಲರೂ ಜನ್ಮತಃ ಶೂದ್ರರಾಗಿ ಹುಟ್ಟುತ್ತಾರೆ. ಸಂಸ್ಕಾರ ಹೊಂದಿ, ಪರದಲ್ಲಿ ಎರಡನೆಯ ಜನ್ಮ ಹೊಂದಿ ದ್ವಿಜರೆನಿಸುತ್ತಾರೆ. ಶೂದ್ರರಾಗಿ ಜನಿಸಿದವರು ಆ ಪರಮಾತ್ಮನ ಮೇಲೆ ಮರಳಿ ಮನ ತಿರುಗಿ ಭಜಿಸಿದರೆ, ದ್ವಿಜರಾಗುತ್ತಾರೆ. ಹೀಗೆ ಕೋಟ್ಯಂತರ ಮಂದಿ ದ್ವಿಜರಾಗಿದ್ದಾರೆ. ವಸಿಷ್ಠ ವಾಲ್ಮೀಕಿಗಳು ಉತ್ತಮ ನಿದರ್ಶನವಾಗಿದ್ದಾರೆ.

ಆ. ಶೂದ್ರರಲ್ಲಿ ಹುಟ್ಟಿ ಶೂದ್ರರನು ನಿರದಿಸಿ,
ದ್ವಿಜನು ಎಂಬ ಹೆಸರು ನಿಜವ ಮಾಡಿ,
ಮನಸು ನಿಲಿಸದಿರಲು ಮನದಿ ಅಧಿಕ ಶೂದ್ರ.
ವಿಶ್ವದಾಭಿರಾಮ ಕೇಳು ವೇಮ.

ಹುಟ್ಟಿನಿಂದ ಜಾತಿಯ ಮೇಲುಕೀಳು ಭಾವನೆಯನ್ನು ಕಲ್ಪಿಸುವ ಸ್ಮೃತಿಕಾರನ ಬರೆಹದ ಮೇರೆಗೆ ಸ್ತ್ರೀಗೆ ಸಂಸ್ಕಾರ ಪಡೆಯುವ ಹಕ್ಕು ಇಲ್ಲ. ಹಾಗಾಗಿ ಅವಳು ಶೂದ್ರಳು. ಜನ್ಮದಿಂದ ಎಲ್ಲರೂ ಶೂದ್ರರೇ. ಹೀಗೆ ಶೂದ್ರರಲ್ಲಿ ಹುಟ್ಟಿ, ಶೂದ್ರರನ್ನು ನಿಂದಿಸುತ್ತ, ಮನೋಶುದ್ಧಿಯ ಮತ್ತು ಊರ್ಧ್ವಗತಿಯಲ್ಲಿ ಸಾಗುವ ಯಾವುದೇ ಸಂಸ್ಕಾರ ಹೊಂದದೆ, ಕೊರಳಲ್ಲಿ ದಾರ ಸುತ್ತಿ ತಾನು 'ದ್ವಿಜನು' ಎಂದು ಸಾಧಿಸುತ್ತ 'ದ್ವಿಜ' ಶಬ್ದವನ್ನೇ ನಿಜಮಾಡಿ, ಮನಸ್ಸನ್ನು ನಿಲ್ಲಿಸದಿರಲು, ಅವನಿಗೆ ಏನೆನ್ನಬೇಕು ? ಕೆಲವರನ್ನು ಕಲಿಯದ ಮೂರ್ಖರೆಂದರೆ ಇಂಥವರನ್ನು ಕಲಿತ ಮೂರ್ಖರೆನ್ನಬೇಕಷ್ಟೇ ? ದುಃಖ ಸುಖಗಳನ್ನು ಮೀರಬೇಕಾದರೆ ಮನಸ್ಸನ್ನು ನಿಲ್ಲಿಸಲೇಬೇಕು. ಮನವನ್ನು ನಿಲ್ಲಿಸದಿದ್ದರೆ ಮೂರೆಳೆಯ ದಾರ ಸುತ್ತಿದರೂ ಮನದಲ್ಲಿ ಅಧಿಕ ಶೂದ್ರನೇ ಇರುತ್ತಾನೆ. 'ಶೋಚತಿ ಇತಿ ಶೂದ್ರಃ'.

ಆ. ಶೂದ್ರ ಶೂದ್ರರೆನುತ ಶೂದ್ರರ ಬಯ್ದಾಡಿ,
ಶೂದ್ರ ಕುಲವು ತನ್ನ ಸುತ್ತಲಿರುತ,
ಮನಸು ಶುದ್ಧಿಯಿರದೆ ಮತ್ತೆ ದ್ವಿಜನು ಎಂತು ?
ವಿಶ್ವದಾಭಿರಾಮ ಕೇಳು ವೇಮ.

ಅವನು ಶೂದ್ರ, ಇವನು ಶೂದ್ರ ಎಂದು ತಮಗೆ ಬೇಡಾದವರನ್ನು ಶೂದ್ರರೆಂದು ಕರೆದು, ಅವರಿಗೆ ಸಮಾಜದಲ್ಲಿ ಅಧ್ಯಯನ, ಆಸ್ತಿ ಸಂಪಾದನೆಯ ಹಕ್ಕಿನಿಂದ ವಂಚಿಸಿ, ಶೋಷಣೆ ಮಾಡಿ, ಶೂದ್ರರನ್ನು ಬಯ್ದಾಡಿ, ತನ್ನ ಸುತ್ತುಮುತ್ತು ಶೂದ್ರ ಪರಿಸರವನ್ನೇ ಹಾರುವನು ನಿರ್ಮಿಸಿದ್ದಾನೆ. ಇಂಥವನ ಮನಸ್ಸು ಶುದ್ಧವಾಗಿ, ಜಾತಿಯಿಂದ ಮೇಲು ಕೀಳು ಎಣಿಸದೆ, ಶ್ರೀಕೃಷ್ಣನು ಹೇಳುವಂತೆ, ವಿದ್ಯಾವಿನಯಶಾಲಿ ಬ್ರಾಹ್ಮಣ, ಗೋವು, ಆನೆ, ನಾಯಿ ಮತ್ತು ನಾಯಿಯ ಮಾಂಸವನ್ನು ತಿನ್ನುವವನನ್ನು ಸಮಾನವೆಂದು ತಿಳಿಯುವ ಜ್ಞಾನ ಪಡೆಯದೆ ದ್ವಿಜನೆಂತಾಗುವನು?

ಗೀ. ಒಬ್ಬರೆಂಜಿಲು ಬಾಯಲಿ ಒಪ್ಪ ನುಡಿಯೆ,
ತಾರಕ ಬ್ರಹ್ಮವು ಇಳೆಯಲಿ ತೊಳಗಿತಷ್ಟೆ–
ಎನಿಬರೊ ಪುನರಪಿ ಅದನೇ ಎಂಜಿಲೆನರೆ ?
ಎಂಜಿಲು ಎನಲೇಕೆ ಇನ್ನು ವೇಮ ?

ಬಾಯಲ್ಲಿ ಒಪ್ಪವಾಗಿ ತಾರಕ ಮಂತ್ರವನ್ನು ಒಬ್ಬನು ನುಡಿದು ಉಪದೇಶಿಸಲು, ತಾರಕ ಬ್ರಹ್ಮವು ಇಳೆಯಲ್ಲಿ ತೊಳಗಿ ಅನೇಕರ ಬಾಳನ್ನು ಉದ್ದೀಪಿಸಿತಷ್ಟೇ ? ಆದರೂ ಅದರ ಮಹಿಮೆಯನ್ನರಿಯದ ಅನೇಕರು ಅದನ್ನು ಎಂಜಿಲು ಎನ್ನುವರಲ್ಲವೇ ? ಇದನ್ನು ತಿಳಿದು, ಸಮದೃಷ್ಟಿಯ ಮಹಿಮೆಯನ್ನು ಅರಿಯಲಾರದ ಹಲವು ಹಾರುವರು ಇನ್ನು ಮೇಲಾದರೂ ಎಂಜಿಲೆಂಜಿಲು ಎನ್ನುವುದೇಕೆ ?

ಕೆಲವರು ಮಸ್ತುವನ್ನು ಮುಟ್ಟಿದರೆ ಎಂಜಿಲು, ಕೆಲವರು ಮೂಸಿದರೆ ಎಂಜಿಲು, ಕೆಲವರ ನೆರಳು ಬಿದ್ದರೂ ಅದು ಎಂಜಿಲು ಎಂದು ಮನು ಸ್ಮೃತಿಯಲ್ಲಿ ಸುದೀರ್ಘವಾಗಿ ಬರೆದಿದ್ದಾರೆ. ದೇವರಿಗೆ ಸಲ್ಲಿಸುವ ಪಕ್ವಾನ್ನಗಳ ನೈವೇದ್ಯದ ವಾಸನೆಯನ್ನು ಅನೇಕರು ಮೂಸುವುದರಿಂದ ಆ ನೈವೇದ್ಯವು ಎಂಜಿಲಾಗುವುದಲ್ಲವೇ ? ಬಾಹ್ಯ ಶುದ್ಧಿಯನ್ನು ಕುರಿತು ಸ್ವಾಮಿ ವಿವೇಕಾನಂದರ ವಿಚಾರಗಳನ್ನಿಲ್ಲ ಪರಿಕಿಸೋಣ.

''ಈ ಹಳೆಯ ನಿಯಮಗಳ ಪೂರ್ಣ ತಿರಸ್ಕಾರವು ಮಿಠಾಯಿ ಅಂಗಡಿಗಳಲ್ಲಿ ಕಂಡು ಬರುತ್ತದೆ. ಅಲ್ಲಿ ನೀವು ಕಣ್ಣಾಡಿಸಿದರೆ, ಮೀಠಾಯಿಗಳ ಸುತ್ತ ನೊಣಗಳು ಮುಕುರುವುದನ್ನು ಕಾಣುತ್ತೀರಿ ಮತ್ತು ಎಲ್ಲ ಸಿಹಿ ತಿಂಡಿಗಳ ಮೇಲೆ, ರಸ್ತೆಯ ಧೂಳು ಅಡರುತ್ತದೆ. ಇದಲ್ಲದೆ ಮೀಠಾಯಿ ಮಾರುವವನ ಉಡುಪು ಸಹ ಸ್ವಚ್ಛವೂ ಇರುವುದಿಲ್ಲ. ಚೆನ್ನಾಗಿಯೂ ಇರುವುದಿಲ್ಲ. ಮಿಠಾಯಿ ಅಂಗಡಿಗಳಲ್ಲಿ ಸಿಹಿ ತಿಂಡಿಗಳನ್ನು ಗಾಜಿನ ಪೆಟ್ಟಿಗೆಯಲ್ಲಿ ಇಡದಿದ್ದರೆ ಕೊಳ್ಳುವುದಿಲ್ಲ, ಎಂದು ಗಿರಾಕಿಗಳೇ ಒತ್ತಾಯಿಸಬೇಕು. ಇದರಿಂದ ಕಾಲರಾ ಮತ್ತಿತರ ರೋಗಗಳು ಹರಡದಂತೆ ಆರೋಗ್ಯ ರಕ್ಷಣೆಯು ಸಾಧ್ಯವಾಗುತ್ತದೆ. ನಾವು ಸುಧಾರಿಸಬೇಕು. ಆದರೆ ಸುಧಾರಿಸುವ ಬದಲು ನಾವು ಹಿಂದಕ್ಕೆ ಹೋಗುತ್ತಿದ್ದೇವೆ. ನೀರಿನಲ್ಲಿ ಉಗುಳಕೂಡದೆಂದು ಮನುವು ಹೇಳುತ್ತಾನೆ.

ಆದರೆ ನಾವು ನದಿಗಳಲ್ಲಿ ಎಲ್ಲ ಹೊಲಸನ್ನೂ ಚೆಲ್ಲುತ್ತೇವೆ. ಇವೆಲ್ಲ ಸಂಗತಿಗಳನ್ನು ಮನದಂದು, ಬಾಹ್ಯ ಶುದ್ಧಿಯು ಅತ್ಯಂತ ಅವಶ್ಯವೆಂದು ಕಂಡುಕೊಳ್ಳುತ್ತೇವೆ. ಶಾಸ್ತ್ರಕಾರರಿಗೂ ಇದೆಲ್ಲ ತಿಳಿದಿತ್ತು. ಆದರೆ ಇಂದು ಆಹಾರ ಶುದ್ಧಿಯ ನಿಜವಾದ ಅರ್ಥವು ಮಾಯವಾಗಿ ಕೇವಲ ಶಬ್ದ ಮಾತ್ರ ಉಳಿದಿದೆ. ನಮ್ಮ ಸ್ವಜಾತಿಯವರೇ ಕಳ್ಳರೂ, ಕುಡುಕರೂ, ಅಪರಾಧಿಗಳೂ ಆಗಿರಬಹುದು. ಆದರೆ ಒಬ್ಬ ಒಳ್ಳೆಯ, ಘನವಂತ ಮನುಷ್ಯನು, ತನ್ನಂತೆಯೇ ಮರ್ಯಾದೆಯುಳ್ಳ ಕೆಳಗಿನ ಜಾತಿಯವನಲ್ಲಿ ಊಟ ಮಾಡಿದರೆ, ಅವನನ್ನು ಜಾತಿ ಬಾಹಿರನನ್ನಾಗಿ ಘೋಷಿಸುತ್ತಾರೆ. ಮತ್ತು ಅವನನ್ನು ಕಡೆತನಕ ಜಾತಿಯಿಂದ ಬಹಿಷ್ಕರಿಸುತ್ತಾರೆ. ಇದು ನಮ್ಮ ದೇಶದ ದೊಡ್ಡ ಶಾಪ. ಆದ್ದರಿಂದ ಎಲ್ಲರೂ ಸರಿಯಾಗಿ ಅರಿತುಕೊಳ್ಳಬೇಕಾದ ಸಂಗತಿಯೆಂದರೆ, ಪಾಪಿಗಳ ಸಂಪರ್ಕದಲ್ಲಿ ಬರುವುದರಿಂದ ಪಾಪಾಚರಣೆ ಘಟಿಸುತ್ತದೆ ಮತ್ತು ಒಳ್ಳೆಯ ಜನರ ಸಂಪರ್ಕದಲ್ಲಿ ಬರುವುದರಿಂದ ಘನತೆಯು ಬರುತ್ತದೆ. ಆದ್ದರಿಂದ ದುಷ್ಪರಿಂದ ದೂರವಿರುವುದೇ ಬಾಹ್ಯ ಶುದ್ಧಿಯಾಗಿದೆ''.

ಆ. ಗುಣವಿಹೀನನನ್ನು ಗೃಹದಿ ಸೇರಿಸಿದೊಡೆ,
ಹಾನಿಯುಂಟು, ಯಾವನಾದರೇನು ?
ಹೊಟ್ಟೆ ಸೇರಿದ ನೊಣ ಹಾಗೆ ಹೀಗಳುಕದೆ ?
ವಿಶ್ವದಾಭಿರಾಮ ಕೇಳು ವೇಮ.

ಗುಣವಿಹೀನರ ಸಂಪರ್ಕ, ಸಹವಾಸಗಳು ತರವಲ್ಲ. ಗುಣವಿಹೀನರ ಮನೆಯ ಸಂಪರ್ಕವನ್ನು ತಾನು ಹೊಂದಬಾರದು. ಗುಣವಿಹೀನನನ್ನು ತನ್ನ ಮನೆಯಲ್ಲಿಯೂ ಸೇರಿಸಿಕೊಳ್ಳಬಾರದು. ಏಕೆಂದರೆ ಅವನು ಯಾರೇ ಇರಲಿ, ಬಂಧು ಬಳಗದವನಿರಲಿ, ಇಷ್ಟಮಿತ್ರನೆಂದು ನಟಿಸುವವನಿರಲಿ, ಅವನ ಸಂಪರ್ಕದಿಂದ ಹಾನಿಯುಂಟು. ಹೊಟ್ಟೆಯಲ್ಲಿ ಅಪ್ಪಿತಪ್ಪಿ ನೊಣವು ಸೇರಿದರೆ, ಹಾಗೆ ಹೀಗೆ ಗೋಳಾಡಿಸದೆ ಇದ್ದೀತೇ ?

ಆ. 'ಮುಟ್ಟು ಮುಟ್ಟು' ಎನುತ ಮುಟ್ಟ ಬೇಡೆನುವಿರಿ.
ಮುಟ್ಟಿಗೆ ಪಥವೇನು ? ಮೂಲವೇನು ?
ನವ ಬಿಲದಲಿ ಹೊಲೆಯು ನರರೆಲ್ಲರಿಗುಂಟು.
ಹುಟ್ಟಿನಲಿ ಹುಟ್ಟಿತು, ಮುಟ್ಟು ವೇಮಾ.

ಬಾಹ್ಯ ಶುದ್ಧಿಯ ಹೆಸರಿನಲ್ಲಿ ಮುಟ್ಟುಮಡಿ ಎಂಬ ಕಂದಾಚಾರವನ್ನು ಕಲ್ಪಿಸಿ ಜಾತಿ ಬ್ರಾಹ್ಮಣರು ಹಾರುವರೆನಿಸಿದ್ದಾರೆ. ತಾವು ಮಡಿಯಲ್ಲಿ ಇದ್ದೇವೆಂದು ಭಾವಿಸಿದ ಹಾರುವರು, ಕೆಲ ವಸ್ತುಗಳನ್ನು, ಕೆಲವು ಪ್ರಾಣಿಗಳನ್ನು ಅಷ್ಟೇ ಏಕೆ ? ಶೂದ್ರರನ್ನೂ ಮುಟ್ಟೀವೆಂದು ಅತ್ತ ಇತ್ತ ಹಾರುತ್ತ ನಡೆಯುತ್ತಾರೆ. ಹಾಗಾದರೆ ಮುಟ್ಟು ಹೇಗೆ ಬರುತ್ತದೆ ? ಅದರ ಮೂಲವೇನು? ಎಂಬುದನ್ನು ತಿಳಿಯಬೇಕಲ್ಲವೇ ? ಮಾನವ ದೇಹದಲ್ಲಿಯ ಹೊಲೆಯು, ಉಪಸ್ಥ ಮೂಲಕ ಮೂತ್ರವಾಗಿ, ಗುದದ್ವಾರ ಮೂಲಕ ಮಲವಾಗಿ, ಬಾಯಿಯ ಮೂಲಕ ಉಗುಳಾಗಿ, ವಾಂತಿಯಾಗಿ, ಎರಡು ಮೂಗಿನ ಹೊರಳಿಗಳ ಮೂಲಕ ಸಿಂಬಳವಾಗಿ, ಎರಡು ಕಣ್ಣುಗಳ ಮೂಲಕ ಪಿಚ್ಚು ಮತ್ತು ನೀರಾಗಿ, ಎರಡು ಕಿವಿಗಳ ಮೂಲಕ ಕೀವಾಗಿ ಹೀಗೆ ನವಬಿಲಗಳ ಮೂಲಕ ಹೊರ ಹೋಗುತ್ತದೆ. ಹೀಗೆ ಹೊರಹೋಗುವುದೇ ಮುಟ್ಟು. ಇದು ಎಲ್ಲ ಜನರಿಗೂ ಇದೆ. ಇನ್ನು ಮಾನವನು ಹೊಲೆ ಇಲ್ಲವೆ ಮುಟ್ಟಿನ ಕೂಪವಾದ ಸ್ತ್ರೀ ಯೋನಿಯಲ್ಲಿಯೇ

ಹುಟ್ಟುತ್ತಾನೆ. ಹೀಗೆ ಮುಟ್ಟು ಹುಟ್ಟಿನಿಂದಲೇ ಅಂಟುತ್ತದೆ.

ಅಂತಃ ಶುದ್ಧಿಯು ತುಂಬಾ ಕಠಿಣ ಕ್ರಿಯೆಯಾಗಿದೆ. ಅದು ಸತ್ಯ ನುಡಿಯುವುದರಲ್ಲಿ, ಬಡವರ ಸೇವೆ ಮಾಡುವುದರಲ್ಲಿ, ಮತ್ತು ಆರ್ತರಿಗೆ ನೆರವು ನೀಡುವುದರಲ್ಲಿ ಅಡಗಿದೆ. ನಾವು ಯಾವಾಗಲೂ ಸತ್ಯವನ್ನು ನುಡಿಯುತ್ತಿದ್ದೇವೆಯೇ ?

ಆ. ಸತ್ಯವನ್ನು ಬಿಡದೆ ಸಾಹಸವನು ತೋರಿ,
ಬಂಟ ಪಂಥ ಧರಿಸು ಭಕ್ತಿಯಿಂದ.
ಕರ್ಮ ಜೀವಿ ತಾನು ಕಾಣಲಾರನಲ್ಲ ?
ವಿಶ್ವದಾಭಿರಾಮ ಕೇಳು ವೇಮ.

ಪರಮಾತ್ಮನಲ್ಲಿ ಭಕ್ತಿ ಇರಿಸಿ, ನಿರ್ಭೀತನಾಗಬೇಕು. ಆಗ ಇದ್ದುದನ್ನು ಇದ್ದಂತೆ ನುಡಿಯಲು ಶಕ್ತನಾಗುತ್ತಾನೆ. ಆಗ ಅವನು ಸತ್ಯವನ್ನು ಬಿಡದೆ, ಸಾಹಸವನ್ನು ತೋರಿ ಬಂಟರ ಹಾದಿಯಲ್ಲಿ ಸಾಗಬಹುದು. ಆದರೆ ಅಂಥ ಇಂಥ ಕ್ಷುದ್ರ ಫಲದಾಸೆಗೆ ಬಿದ್ದು ಕರ್ಮಗಳ ಜಾಲದಲ್ಲಿ ಸಿಲುಕಿಕೊಂಡ ಜೀವಿಯು ಮೋಕ್ಷದ ಹಾದಿಯನ್ನು ಕಾಣಲಾರನು.

ಆ. ಋತವನೃತವರಿಯಲು ಯಾರಿಗೇನು ಅಳವೆ ?
ಸ್ಥಿತಿಯ ಗತಿಯ ತಿಳಿಯೆ ಸ್ಫುಟವೆ ಆಯ್ತು.
ಕೇಳಿದಷ್ಟರಿಂದ ಹೇಳ ಹೋಗೆ ಸಲ್ಲ.
ವಿಶ್ವದಾಭಿರಾಮ ಕೇಳು ವೇಮ.

ಋತವು ಯಾವುದು ? ಅನೃತವು ಯಾವುದು ? ಇದನ್ನು ಅರಿಯುವುದು ಯಾರಿಗೆ ಸಾಧ್ಯ ? ಋತವೆಂದರೆ ಎಲ್ಲಕ್ಕೂ ಆಧಾರವಾದ ಪ್ರಕೃತಿ ನಿಯಮ ; ವಿಶ್ವಕ್ರಮ. ಸೂರ್ಯೋದಯ, ದಿನ ರಾತ್ರಿಗಳ ವಿಂಗಡಣೆ, ಋತುಚಕ್ರ, ಮಳೆಬೆಳೆ, ಪ್ರಾಣ ಕ್ರಿಯೆ, ನದಿಗಳು ಹರಿಯುವ ಬಗೆ, ಜನನ ಮರಣ ಮುಂತಾಗಿ ಎಲ್ಲವೂ ಋತದ ಅಭಿವ್ಯಕ್ತಿಗಳೇ. ನಿಸರ್ಗದಲ್ಲಿ ಎಲ್ಲೆಲ್ಲೂ ಋತವೇ ಕಾಣುವುದು. ಮನುಷ್ಯನ ಧರ್ಮವೆಂಬ ಕಲ್ಪನೆಗೆ ಅಡಿಗಲ್ಲು ಋತವೇ. ಅದೇ ಸತ್ಯವೆಂದು ತೋರಿಕೊಳ್ಳುವುದು. ನೀತಿ ಸಂಹಿತೆಯೆಂದರೆ ಋತದ ಅಂಶವೇ. ದೌರ್ಜನ್ಯ, ಏರು ಪೇರು, ಮೇಲು ಕೀಳು, ಮೋಸ ವಂಚನೆ ಇವೆಲ್ಲ ಅನೃತಗಳು ದುಃಖಕ್ಕೆ ಕಾರಣವಾಗುವುದು ಅನೃತ. ಎಂದರೆ ಋತವಲ್ಲದ್ದು. ಹೀಗೆ ಋತ ಮತ್ತು ಅನೃತಗಳನ್ನು ಅರಿಯಲು ಯಾರು ಸಮರ್ಥರು ? ಯಾವುದು ಈಗ ಏನಿದೆ ? ಮುಂದೆ ಏನಾಗುವುದು ? ಅಂದರೆ ಅದರ ಸ್ಥಿತಿಯೇನು ? ಗತಿಯೇನು ? ಎಂಬುದನ್ನು ತಿಳಿದರೆ, ಎಲ್ಲವೂ ಸ್ಪಷ್ಟವಾಗುವುದು. ಸತ್ಯವಾವುದು ? ಅಸತ್ಯವಾವುದು? ಸ್ಫುಟವಾಗುತ್ತದೆ. ಆದ್ದರಿಂದ ಒಬ್ಬನು ಒಂದು ಸಂಗತಿಯ ಬಗ್ಗೆ ಒರ್ವ ವ್ಯಕ್ತಿಯ ಬಗೆಗೆ, ಒಂದು ವಿಚಾರ ಪ್ರಣಾಲಿಯ ಬಗೆಗೆ ಬೇರೊಬ್ಬನಿಂದ ಏನನ್ನಾದರೂ ಕೇಳಿರಬಹುದು. ಆದರೆ ಆ ಇನ್ನೊಬ್ಬನು ಅದರ ಆಂಶಿಕ ಮಾಹಿತಿ ನೀಡಬಹುದು. ಇಲ್ಲವೆ ಆ ಕಾಲದ ಅವಸ್ಥೆಯನ್ನು ತಿಳಿಸಿರಬಹುದು. ಆದರೆ ಅದೇ ಋತವಲ್ಲ. ಆದ್ದರಿಂದ ಕೇಳಿದ ಸಂಗತಿಯನ್ನು ಸಮೀಕ್ಷಿಸಬೇಕು. ಕೇಳಿದ್ದನ್ನೇ ಹೇಳ ಹೋಗುವುದು ಸರಿಯಲ್ಲ.

ಆ. ನಿಜವ ಸುಳ್ಳನೆರಡು ನೀಲಕಂಠನರಿವ ;
ನೀರಿನಾಳವರಿತು ನಿಜವ ಕಾಣು.

ತನಯ ಜನ್ಮ ತಾಯಿ ತಾನೆ ಅರಿಯುತಿಹಳು.
ವಿಶ್ವದಾಭಿರಾಮ ಕೇಳು ವೇಮ.

ಪುರಾಣ ಕತೆಯ ಮೇರೆಗೆ ದೇವ-ದಾನವರು ಅಮೃತ ಪಡೆಯಲು ಕ್ಷೀರ ಸಮುದ್ರ ಮಥನಕ್ಕೆ ತೊಡಗಿದಾಗ ಕಡೆಗೋಲಾದ ಮೇರು ಪರ್ವತಕ್ಕೆ ಹಗ್ಗವಾಗಿ ಸುತ್ತಿದ ವಾಸುಕೀ ಸರ್ಪದ ಬಾಯಿಯಿಂದ ಹಾಲಾಹಲ ವಿಷವು ಸ್ರವಿಸಿ, ಹಾಹಾಕಾರವೇ ಎದ್ದಿತು. ಆಗ ದಾನವರ ಮೊರೆಯನ್ನು ಕೇಳಿ ಶಿವನು ಆ ವಿನಾಶಕಾರಿ ವಿಷವನ್ನು ಕುಡಿದನು. ಆ ವಿಷವು ಅವನ ಕಂಠದಲ್ಲಿ ನಿಂತು ಅವನು ನೀಲಕಂಠನೆನಿಸಿದನು.

ಇಂಥ ನೀಲಕಂಠನು ಮಾತ್ರ, ಯಾವುದು ಸುಳ್ಳು?, ಮತ್ತಾವುದು ಸತ್ಯ?, ಎಂಬುದನ್ನು ಅರಿಯಬಲ್ಲನು. ನೀರಿನ ಮಡುವು ನೋಡಲು ಒಂದೇ ಪಾತಳಿಯಲ್ಲಿದ್ದಂತೆ ಕಾಣುವುದು. ಆದರೆ ಅದರ ಆಳವನ್ನು ಬೇರಾವ ವಿಧದಿಂದರಾದರೂ ತಿಳಿದುಕೊಂಡರೆ ಅದರಲ್ಲಿ ಕಾಲಿಡುವುದು ಸುರಕ್ಷಿತವೋ ಇಲ್ಲವೆ ಅಪಾಯಕಾರಿಯೋ ಎಂಬುದು ತಿಳಿಯುತ್ತದೆ. ಆದ್ದರಿಂದ ನೀರಿನಾಳವರಿತು ನಿಜವನ್ನು ಕಾಣಬೇಕು. ಪತಿವ್ರತೆಯು ಪತಿಯ ವೀರ್ಯದಿಂದ ಗರ್ಭ ಧರಿಸಿದಳೆಂದು ಹೇಳಬಹುದು. ಪತಿ ಇಲ್ಲದವಳಾಗಲಿ, ಜಾರೆಯಾಗಲಿ, ಯಾರ ವೀರ್ಯ ಧರಿಸಿ ಗರ್ಭ ಧರಿಸಿದಳೆಂದು ಅನ್ಯರು ಹೇಳಲಾರರು. ತಾಯಿಯಾದವಳಿಗೇ ಅದೆಲ್ಲ ತಿಳಿಯುತ್ತದಷ್ಟೇ ? ಹೀಗೆ ಸೃಷ್ಟಿಯಲ್ಲಿ ಸತ್ಯವನ್ನು ಸೃಷ್ಟಿಕರ್ತನು ಮಾತ್ರ ಅರಿಯಬಲ್ಲನು.

ಆ. ಮತವೆಂತಿರಲೇನು ? ಮಂತ್ರವಾವುದೇನು ?
ಸತ್ಯವಿನಿತು ಇರದೆ ಜಾಡ್ಯ ಬಿಡದು.
ಸತ್ಯವನೇ ತಿಳಿಯೆ, ಜಗದಿ ದ್ವಿಜನಪ್ಪ.
ವಿಶ್ವದಾಭಿರಾಮ ಕೇಳು ವೇಮ.

"ವೇದಾಃ ವಿಭಿನ್ನಃ ಸ್ಮೃತಿಯೋವಿಭಿನ್ನಃ ॥ ನೈಕಃ ಮುನಿರ್ಯಸ್ಯ ಮತಂ ನ ವಿಭಿನ್ನಂ ॥".

ಅಂದರೆ ವೇದಗಳು ವಿಭಿನ್ನವಾಗಿವೆ, ಸ್ಮೃತಿಗಳೂ ವಿಭಿನ್ನವಾಗಿವೆ. ಅಷ್ಟೇ ಏಕೆ ? ಮತಗಳಲ್ಲಿ ವಿಭಿನ್ನತೆ ಇರದ ಯಾವೋಬ್ಬ ಮುನಿಯೂ ಇಲ್ಲ"

ಆದ್ದರಿಂದ ಆರ್ಷ ಮತವು ಹೇಗಿದ್ದರೇನು ? ಉಪದೇಶಿಸಿದ ಮಂತ್ರವು ಯಾವುದಾದರೇನು ? ನಾವು ತಲುಪಬೇಕಾದ ಸತ್ಯವು ಇನಿತಾದರೂ ಇರದೆ ಮನೋಜಾಡ್ಯವು ಬಿಡದು. ಅಜ್ಞಾನವು ಅಳಿಯದು. ಯಾವನು ಈ ಸತ್ಯವನ್ನು, ಋತವನ್ನು ತಿಳಿಯುತ್ತಾನೋ ಅವನೇ ಈ ಮಿಥ್ಯ ಸಂಸಾರದಿಂದ ಪಾರಾಗಿ ಊರ್ಧ್ವ ಇಲ್ಲವೆ ಪರಲೋಕದಲ್ಲಿ ಎರಡನೆಯ ಜನ್ಮ ಪಡೆದು ದ್ವಿಜನೆನಿಸುತ್ತಾನೆ.

ಆ. ತಿಳಿಯದಿಪ್ಪ ಜನಕೆ ತಪ್ಪನೆಲ್ಲ ತಿಳಿಸಿ,
ಸರಿಯ ಹೇಳುತಿಹರು ಸಾಧು ಜನರು.
ಒದ್ದರೆ ದುರ್ಜನರು ತಪ್ಪೆಂದೆಣಿಸುವರು.
ವಿಶ್ವದಾಭಿರಾಮ ಕೇಳು ವೇಮ.

ಭೌತಿಕ ಸಂಪದವಿಲ್ಲದಿರುವುದು ಬಡತನವಾದಂತೆ, ಮಾನಸಿಕ ಸಂಪದವಿಲ್ಲದಿರುವುದು ದಡ್ಡತನವಾಗಿದೆ. ದಡ್ಡರಿಗೆ ಯಾವುದು ಸರಿ ? ಯಾವುದು ? ತಪ್ಪು ? ಎಂದು ತಿಳಿಯುವುದಿಲ್ಲ. ಅವರು ಸರಿ ತಪ್ಪುಗಳನ್ನು ವಿಂಗಡಿಸಿ ತಿಳಿಯದ ತಿಳಿಗೇಡಿಗಳಾಗಿರುತ್ತಾರೆ. ಅಂಥ ಜನರಿಗೆ ಎಲ್ಲ ತಪ್ಪುಗಳನ್ನೂ ಎತ್ತಿ ತೋರಿಸಿ ಸಾಧು ಜನರು ಸರಿಯಾದುದನ್ನು ಹೇಳುತ್ತಾರೆ. ಆ ದುರ್ಜನರಿಗೆ ಬುದ್ಧಿಯ ಮಾತಿನಿಂದ ತಿಳಿಯದಿದ್ದರೆ ಒದ್ದು ಹೇಳಬೇಕಾಗುತ್ತದೆ. ಆದರೆ, ಅಹಂಕಾರಿಗಳಾದ ಅವರು ಒದೆತದ ಇಂಗಿತವನ್ನು ಅರಿಯದೆ, ಒದೆಯುವುದೇ ತಪ್ಪು ಎಂದು ಪರಿಗಣಿಸುತ್ತಾರೆ.

ಆ. ಬಡವನನರಿಯದಂಥ ಒಡೆತನವದು ಏಕೆ ?
ಪೋಷಿಸದಿರೆ ಬಂಧು ಭಾವವೇಕೆ ?
ವ್ಯಾಧಿ ತಿಳಿಯದಿಪ್ಪ ವೈದ್ಯ ಮತ್ತೆ ಏಕೆ ?
ವಿಶ್ವದಾಭಿರಾಮ ಕೇಳು ವೇಮ.

ಸರ್ವರೂ ಶಿವನ ಸಂತಾನ. ಸರ್ವರ ಸಮಾನ ಗತಿಯೇ ಸಮಾಜ. ಭಕ್ತನಿಗೆ ಸಮದೃಷ್ಟಿ ಇರಬೇಕು. ಅಂದ ಮೇಲೆ, ಹಲವರು ಬಡವರಾಗಿ ಕೂಳು ಇರದೆ, ಕುಡಿಯಲಿರದೆ, ಬಳಲುತ್ತಿರುವುದನ್ನೂ, ಅದರ ನಿವಾರಣೋಪಾಯಗಳನ್ನೂ, ಅರಿಯದೆ ತಾನು ಆಸ್ತಿಯ ಒಡೆಯನಾಗಿ ಇಲ್ಲವೆ ನಾಡಿನ ಒಡೆಯನಾಗಿ ಇದ್ದರೆ ಪ್ರಯೋಜನವೇನು ? ಕುಟುಂಬದಲ್ಲಿಯ ಬಂಧುಗಳನ್ನೂ, ಸಮಾಜದ ಬಳಗವನ್ನೂ, ತನಗೆ ಸಂಪದವಿದ್ದಾಗ ಪೋಷಿಸದಿದ್ದರೆ, ತನ್ನ ಬಂಧು ಭಾವಕ್ಕೆ ಏನು ಅರ್ಥವಿದೆ ? ತನ್ನಲ್ಲಿ ಬಂದ ರೋಗಿಯ ಚಿಕಿತ್ಸೆ ಮಾಡಿ ಅವನ ವ್ಯಾಧಿಯನ್ನು ತಿಳಿಯದಂಥ ವೈದ್ಯನಿದ್ದು ಏನು ಪ್ರಯೋಜನ ? ಭಕ್ತನಾದವನು ತನ್ನ ನೆರೆಹೊರೆಯವರ ಆಪತ್ತಿನಲ್ಲಿ ಅವರಿಗೆ ನೆರವು ನೀಡಬೇಕು.

ಹಸಿಯಲು ನಶಿಸುವುವು ಆಚಾರ ವಿಧಿಗಳು.
ನಿಶೆಯೊಳು ನಶಿಸುವುದು ಚಿತ್ತ ಶುದ್ಧಿ.
ಗರ್ಭಧರಿಸೆ ಇಲ್ಲ ; ಗರ್ವ ಗಡಸು ಎಲ್ಲ.
ವಿಶ್ವದಾಭಿರಾಮ ಕೇಳು ವೇಮ.

ಯಾರನ್ನೂ ಹಸಿವೆಯಿಂದ ಬಳಲುವಂತೆ ಮಾಡಬಾರದು. ಎಲ್ಲರೂ ಬ್ರಹ್ಮ ಸಂತತಿ. ಆದ್ದರಿಂದ ಸೋದರರು. ಅವರು ಹಸಿವೆಯಿಂದ ಬಳಲುವುದನ್ನು ಹೇಗೆ ನೋಡುವುದು ? ಮೇಲಾಗಿ ಹಸಿವೆಯಿಂದ ಆಚಾರ ವಿಧಿಗಳೂ ನಶಿಸುತ್ತವೆ. ನಿಶೆಯಾದೊಡನೆ ಚಿತ್ತ ಶುದ್ಧಿ ನಶಿಸಿ ರತಿಕ್ರೀಡೆಗಿಳಿಯುವಂತೆ, ಹಸಿವಾದೊಡೆ, ಮಡಿ ಮೈಲಿಗೆಯ ಆಚಾರ ವಿಧಿಯೂ ನಿಶೆಯಾದೊಡನೆ, ಕುಲಗೋತ್ರಗಳ ಬಡಿವಾರವೂ ನಶಿಸುವಂತೆ, ಹೆಣ್ಣು ಮಗಳು ಗರ್ಭಧರಿಸಿ ಬಸಿರಾದರೆ ಅವಳ ಗರ್ವ ಗಡಸು ಎಲ್ಲವೂ ನಶಿಸುತ್ತವೆ.

''ಧರ್ಮಾಧರ್ಮಗಳನ್ನು ವಿಂಗಡಿಸಿ ತಿಳಿಯಬಲ್ಲ ವಾಮದೇವನು ಹಸಿವಿನಿಂದ ಕಂಗಾಲಾದಾಗ, ಪ್ರಾಣ ಉಳಿಸಿಕೊಳ್ಳಲು, ನಾಯಿಯ ಮಾಂಸವನ್ನು ಇಚ್ಛಿಸಿದನು. ಅವನಿಗೆ ದೋಷವೂ ಅಂಟಲಿಲ್ಲ''. (ಮ. ಸ್ಮೃ. 10-106)

''ಧರ್ಮಾಧರ್ಮಗಳನ್ನು ಚೆನ್ನಾಗಿ ಬಲ್ಲ ವಿಶ್ವಾಮಿತ್ರನು, ಹಸಿವೆಯಿಂದ ತಲ್ಲಣಿಸಿ,

ನಾಯಿಯ ಸೊಂಟದ ಮಾಂಸವನ್ನು ಚಂಡಾಲನಿಂದ ತೆಗೆದುಕೊಂಡು ತಿನ್ನಲು ಮುಂದಾದನು''.
(ಮ. ಸ್ಮೃ. 108)

''ಹಸಿವೆಯಿಂದ ಪೀಡಿತನಾಗಿ ಭರದ್ವಾಜ ಋಷಿಯು ಮಗನೊಂದಿಗೆ, ನಿರ್ಜನ ಅಡವಿಯಲ್ಲಿ ವಾಸಿಸುತ್ತಿರುವಾಗ, ಆ ಹಸಿವಿನ ಸಂಕಟವನ್ನು ನೀಗಲು ವೃಧು ಎಂಬ ಬಡಗಿಯ ಆಕಳುಗಳನ್ನು ಭಕ್ಷಿಸಲು ಸ್ವೀಕರಿಸಿದನು''. (ಮ. ಸ್ಮೃ. 10-107)

ಚಂ. ಅರಿ ಕ್ಷಾಮ ಡಾಮರಗಳು ಕರ ಕಷ್ಟವೆಂಬುದಾಯುವಿರಲ್.
ಗರಿಮೆಯ ಜೀವ ರಾಶಿಗೆ ಗಟ್ಟಿಯಾಗುಂಟೆ ಆಯುವು ತಾ ?
ಮರಳಿ ವಕ ವಕವೆನಲೇಕೆ ? ಧರೆಯೊಳಿಲ್ಲೆನಲೇಕ ? ಮೂಢರೇ !
ಅರಿಯೆ ದಯಾಳುವಾದ ಪರಮಾತ್ಮನೋರ್ವನೆ ದಿಕ್ಕು ವೇಮನಾ.

ಈ ಜಗತ್ತಿನಲ್ಲಿ ಬರಗಾಲ ಬರಬಹುದು, ಭಯಂಕರ ರೋಗ ರುಜಿನಗಳು ಹರಡಬಹುದು, ದೈವಿಕ ತಾಪದ ಅಟ್ಟಹಾಸ ನಡೆಯಬಹುದು. ಇವೆಲ್ಲವೂ ಕಡು ಕಷ್ಟ ದಾಯಿಗಳೆಂದು ಅರಿ. ಇವೆಲ್ಲ ಕಷ್ಟಗಳನ್ನು ಸಹಿಸಿಕೊಂಡು ಬಾಳಲು ಈ ಮಹಾ ಜೀವ ರಾಶಿಗೆ ಆಯುಷ್ಯವೇನು ದೃಢವಾಗಿರುವುದೇ ? ಇದನ್ನು ತಿಳಿದು ಪುನಃ ಪುನಃ ವಕ ವಕ ಎಂದು ಪರಿತಪಿಸುವುದೇಕೆ ? ಧರೆಯಲ್ಲಿ ಪ್ರಾಣ ಹಿಡಿದು ಬಾಳಲು ಅದಿಲ್ಲ ; ಇದಿಲ್ಲ ಎನ್ನುವುದೇಕೆ ? ಮೂಢರೇ ! ಎಲ್ಲರನ್ನೂ ವಿಪತ್ತಿನಿಂದ ಕಾಪಾಡುವವನು ಆ ದಯಾಮೂರ್ತಿ ಪರಮಾತ್ಮನೋರ್ವನೇ. ಅವನೇ ಎಲ್ಲರ ಮಾರ್ಗದರ್ಶಿ. ದಿಕ್ಕು, ತೋರುತ್ತಾನೆ. ಬಡವರಿಗೆ ನೆರವಾಗುವ, ಪರಮಾತ್ಮನ ಈ ಕಾರ್ಯದಲ್ಲಿ ಭಕ್ತನು ತಾನೂ ಕೈಗೂಡಬೇಕು.

ಆರ್ತರಿಗೆ ನೆರವು :

ಸಂಪತ್ತಿಗೆ ಅದನ್ನು ಸೃಷ್ಟಿ ಮಾಡಿದ ಪರಮಾತ್ಮನೇ ನಿಜವಾದ ಒಡೆಯನು. ಮಾನವನು ಅದರ ವಿಶ್ವಸ್ಥ ಮಾತ್ರ. ಹೀಗೆ ಇರುವ ಸತ್ಯವನ್ನು ನೆರೆ ನಂಬಿ ನಡೆದರೆ, ಲೋಕವು ನೆಮ್ಮದಿಯಿಂದ ಇರಬಲ್ಲದು.

ಕಂ. ನೀಡುತ್ತಿರುವವರ ಸಂಪದ
ಈಡಾಗದೆ ? ಎಂದಾದರು ಕುಂಠಿತವಹುದೇ ?
ನೋಡೊರತೆ ಜಲ ಹೊಡೆದಂತೆ,
ಕೂಡಿ ಸೇರುತಿಹುದು ; ತೀರದ ವಿಧವದು, ವೇಮಾ.

ಒಬ್ಬನಲ್ಲಿ ಪೂರ್ವ ಪುಣ್ಯವಶಾತ್ ಕೈಕೊಂಡ ಕಾರ್ಯಗಳೆಲ್ಲ ಫಲಿಸಿ ಧನಸಂಚಯವಾಗಿರಬಹುದು. ಇದು ಭೂಮಿಯ ಕೆಳಸ್ತರದಲ್ಲಿ ಒಸರುವ ನೀರಿನ ಸೆಲೆಯಂತೆ. ಇದನ್ನು ಸತ್ಪಾತ್ರದಲ್ಲಿ ನೀಡಿದರೆ ಸತ್ಕಾರ್ಯಗಳಲ್ಲಿ ವಿನಿಯೋಗಿಸಿದರೆ, ಎಂದಾದರೂ ಕುಂಠಿತವಾಗುವುದೇ ? ಕಡಿಮೆಯಾಗುವುದೇ ? ಹಾಗಾಗದು. ಏಕೆಂದರೆ ಒರತೆಯ ಜಲವನ್ನು ಹಸನು ಮಾಡಲೆಂದು, ಕುಡಿಯಲೆಂದು ಎಷ್ಟೊಂದು ಬಳಸಿದರೂ ಸೆಲೆಯ ನೀರು ಬಂದು ಸೇರುವುದನ್ನು ನೋಡಿರಿ. ಇದು ತೀರದ ವಿಧವಾಗಿದೆ. ಆದ್ದರಿಂದ ಭಕ್ತನು ಸತ್ಪಾತ್ರದಲ್ಲಿ ನೀಡುತ್ತ

ಸಂಪತ್ತಿನ ಸದ್ವಿನಿಯೋಗ ಮಾಡಬೇಕು.

ಆ. ತಾವೆ ಬಂದು ಕೊಡಲು ತಮಗೆ ಅದುವೆ ಉಂಟು.
ಕೇಳಲೀಯೆ, ತಮಗೆ ಕೇಳಿದಷ್ಟು.
ಕೇಳಲೀಯದಾತಗೆಂದು ಇಲ್ಲವೇನು.
ವಿಶ್ವದಾಭಿರಾಮ ಕೇಳು ವೇಮ.

ಅನೇಕ ಲೋಕ ಕಲ್ಯಾಣಕಾರಿ ಕಾರ್ಯಗಳಿರುತ್ತವೆ. ಧನಿಕನು ಪರಮಾತ್ಮನ ಸೇವೆಯೆಂದು, ಪರಮಾತ್ಮನೇ ತನಗೆ ಪುಣ್ಯ ಫಲವಾಗಿ ನೀಡಿರುವ ಸಂಪತ್ತನ್ನು, ಇವುಗಳಿಗಾಗಿ ತಾನೇ ತಂದು ಕೊಡಬೇಕು. ಶಾಲೆ ಕಟ್ಟಿಸಬಹುದು, ಧರ್ಮಶಾಲೆ, ಕೆರೆ ಕಟ್ಟಿಸಬಹುದು. ರಸ್ತೆಯ ಪಕ್ಕದ ಗಿಡ ನೆಡಬಹುದು. ಹಾಗೆ ಮಾಡಿದರೆ ಅಂಥ ಪುಣ್ಯ ಕಾರ್ಯಗಳ ಫಲವು ತಮಗೇ ಲಭ್ಯವಾಗುತ್ತದೆ. ಕೆಲವು ಆರ್ತರು, ತಮ್ಮ ಆಪತ್ಕಾಲದಲ್ಲಿ ಬಂದು ನೆರವು ಕೋರಬಹುದು. ಆಗ ಸತ್ಪಾತ್ರದಲ್ಲಿ ಇತ್ತರೆ ತಮಗೆ ಕೇಳಿದಷ್ಟು ಸೌಖ್ಯ ಪ್ರಾಪ್ತವಾಗುತ್ತದೆ. ಇನ್ನು ಕೆಲವು ಲೋಭಿಗಳಿರುತ್ತಾರೆ. ಅವರಲ್ಲಿ ಪೂರ್ವ ಕರ್ಮಫಲ ರೂಪದಲ್ಲಿ ಸಂಪತ್ತಿನ ಸಂಚಯವಾಗಿರುತ್ತದೆ. ನಿಜ. ಆದರೆ ಅವರು ಅದರ ಸರಿಯಾದ ವಿತರಣ ಮಾಡುವುದಿಲ್ಲ. ಅವರನ್ನು ಕೇಳಿದರೂ ನೆರವು ನೀಡುವುದಿಲ್ಲ. ಇಂಥ ಲೋಭಿಗಳಿಗೆ ಯಾವ ಪುಣ್ಯ ಫಲವೂ ಇರದು.

ಆ. ಕೇಳದರ್ಥವೀವ ತಾನೆ ಬ್ರಹ್ಮಜ್ಞಾನಿ.
ಕೇಳಲರ್ಥವೀವ ತಾನೆ ತ್ಯಾಗಿ.
ಕೇಳಲೀಯದಾತ ಇನ್ನು ಮಹಾ ಲೋಭಿ.
ವಿಶ್ವದಾಭಿರಾಮ ಕೇಳು ವೇಮ.

ಈ ಜಗತ್ತಿನ ಸೃಷ್ಟಿಕರ್ತನು ಬ್ರಹ್ಮನೇ. ಆದ್ದರಿಂದ ಮಾನವನ ಸ್ಥಾವರ ಜಂಗಮ ಆಸ್ತಿಯೆಲ್ಲವೂ ಅವನಿಗೇ ಸೇರಿದ್ದು. ಆದ್ದರಿಂದ ಸಂತತಿಗೆ ಅದು ನ್ಯಾಯವಾಗಿ ಸೇರಬೇಕು. ಇದನ್ನು ಬ್ರಹ್ಮ ಜ್ಞಾನಿಯು ತಿಳಿದಿರುತ್ತಾನೆ. ಆದ್ದರಿಂದ ಅವನಿಗೆ ಯಾರಿಗೆ ಅರ್ಥದ ಪ್ರಯೋಜನವಿದೆ ? ಎಂದು ತಿಳಿದಿರುತ್ತದೆ. ಅವನನ್ನಾರೂ ಬಂದು ಕೇಳಬೇಕಿಲ್ಲ. ಆದ್ದರಿಂದ ಕೇಳದರ್ಥವೀವ ತಾನೆ ಬ್ರಹ್ಮಜ್ಞಾನಿ. ಇನ್ನು ಕೆಲವು ಆರ್ತರು ತಮ್ಮ ಆಪತ್ತನ್ನು ತೋಡಿಕೊಂಡು ಆರ್ಥಿಕ ನೆರವಿಗಾಗಿ ಕೈಚಾಚುತ್ತಾರೆ. ಹೀಗೆ ಕೇಳಿದಮರಿಗೆ ಅರ್ಥವೀಯುವಮನು ತನಗೆ ಸಂಬಂಧಿಸಿದ ಅರ್ಥವನ್ನು ಅವರಲ್ಲಿ ಹಂಚಿಕೊಳ್ಳುತ್ತೇನೆಂದೂ, ತಾನು ತನ್ನ ಸ್ವತ್ತನ್ನು ತ್ಯಾಗ ಮಾಡುತ್ತೇನೆಂದೂ ಭಾವಿಸುತ್ತಾನೆ. ಆದ್ದರಿಂದ ಕೇಳಲರ್ಥವೀಯುವಮನು ತ್ಯಾಗಿ ಎನಿಸುತ್ತಾನೆ. ಇನ್ನೂ ಕೆಲವರು ಧನಿಕರಿರುತ್ತಾರೆ. ತಮ್ಮ ಪೂರ್ವ ಸುಕೃತದಿಂದ ಅರ್ಜಿಸಿದ ಸಂಪತ್ತನ್ನು ಆರ್ತರು ಕೇಳಿಕೊಂಡರೂ ಈಯದವನು ಮಹಾ ಲೋಭಿಯೇ ಸೈ.

ಆ. ಅರಿ ತನ್ನಾಸ್ತಿಯೆನದೆ ಅಡ್ಡ ಮಾತಾಡದೆ,
ಬಯ್ಯದೆ ಮನದೊಳಗೆ ಪರಿತಪಿಸದೆ,
ತನ್ನದಲ್ಲವೆಂದು ತಾ ಕೊಡುವುದನು ಕೊಡು.
ವಿಶ್ವದಾಭಿರಾಮ ಕೇಳು ವೇಮ.

ತನ್ನ ಆಸ್ತಿ ಪಾಸ್ತಿಯೆಲ್ಲವೂ ಪರಮಾತ್ಮನ ಸೃಷ್ಟಿ. ಅವೆಲ್ಲ ಸಮಾಜಕ್ಕೆ ಮೀಸಲು.

ತಾನೊಬ್ಬ ವಿಶ್ವಸ್ಥ. ಹೀಗೆ ತಾನು ಹೊಂದಿದ ಆಸ್ತಿಯು ತನ್ನದಲ್ಲವೆಂದು ತಿಳಿದು, ಯಾರಾದರೂ ಕೇಳಿದರೆ, ಅವರಿಗೆ ಹಾಗೆ ಹೀಗೆ ಅಡ್ಡ ಮಾತಾಡದೆ, ಕೇಳಲು ಬಂದುದಕ್ಕಾಗಿ ಬಯ್ದಾಡದೆ, ತನ್ನ ಆಸ್ತಿಯಲ್ಲಿ ಹಂಚಬೇಕಾಯಿತಲ್ಲ ? ಎಂದ ಪರಿತಪಿಸದೆ ತಾನು ಕೊಡಬಹುದಾದುದನ್ನು ತನ್ನದಲ್ಲವೆಂದೇ ತಿಳಿದು ಕೊಡಬೇಕು. ಇದುವೇ ನಿಜವಾದ ಭಕ್ತನ ದಾನ ಗುಣ.

ದಾನ ಒಪ್ಪ ಗೆಯ್ಮೆ ದಡವ ಸೇರಬಹುದು.
ಮನವ ನಂಬಿ ಇರಲು, ಮಾಯೆ ಮುಳುಗು.
ಜ್ಞಾನ ಕಳೆಯ ನಂಬಿ ಜಡಿಯೊ ವೈರಿಗಳನು.
ವಿಶ್ವದಾಭಿರಾಮ ಕೇಳು ವೇಮ.

ದೈವಿಕ ಸಂಪತ್ತನ್ನು ದೈವಕ್ಕೆ ಸಮರ್ಪಿಸುವ, ಋಣ ಮುಕ್ತನಾಗುವ, ದೃಷ್ಟಿಯಿಂದ, ದಾನ ಮಾಡಿದರೆ ಅದು ಒಪ್ಪ ದಾನವೆನಿಸುತ್ತದೆ. ಆಗ ಮನಸ್ಸು ಶುದ್ಧವಾಗುತ್ತದೆ. ಅದರಿಂದ ಭವ ಸಾಗರವನ್ನು ಈಜಿ ದಡ ಸೇರಬಹುದು. ಹಾಗೆ ಮಾಡದೆ 'ನಾನು ನನ್ನದು' ಎಂದು ಮಮತೆಯಿಂದ ಎಲ್ಲವನ್ನೂ ತನಗಾಗಿಯೇ ಇರಿಸಿಕೊಳ್ಳುವ ಮನವನ್ನು ನಂಬಿ ಇದ್ದರೆ ಎಲ್ಲವೂ ವ್ಯರ್ಥವಾಗುತ್ತದೆ. ಇಂದು ಇದ್ದು ನಾಳೆ ಇಲ್ಲವಾಗುವ ಮಾಯೆಯಲ್ಲಿ ಮುಳುಗಿದಂತಾಗುತ್ತದೆ. ಆದ್ದರಿಂದ ಆತ್ಮ ಜ್ಞಾನದ ಕಳೆಯನ್ನು ನಂಬಿ, ಕಾಮ, ಲೋಭ, ಮೋಹಗಳೆಂಬ ವೈರಿಗಳನ್ನು ಜಡಿ. ಹೊಡೆದು ಹಾಕು.

ಸುಳ್ಳು ಸತ್ಯ ಗೆಯ್ದು, ಶುಷ್ಕ ಭಾವ ಹೊಂದಿ,
ಬಯ್ದು ಬೊಗಳುತಿಹಗೆ ಭಕ್ತಿಯಿಲ್ಲ.
ಮಾಟ ಮಾಯದವನು ಮಹಿಮಾತ್ಮ ಸಮನೇ ?
ವಿಶ್ವದಾಭಿರಾಮ ಕೇಳು ವೇಮ.

ಜನರು ಓರ್ವ ಸಿರಿವಂತನಲ್ಲಿ ಹೋಗಿ, ತಮ್ಮ ಕಾರ್ಯ ಸಾಧಿಸಿಕೊಳ್ಳಲು ಅವನನ್ನು ಇಂದ್ರ ಚಂದ್ರ ಎಂದು ಸುಳ್ಳು ಸುಳ್ಳೇ ಹೊಗಳುತ್ತಾರೆ. ಅವರಲ್ಲಿ ಪ್ರೀತಿಯಾಗಲಿ, ಗೌರವವಾಗಲಿ ಇರದೆ, ಕೇವಲ ಶುಷ್ಕ ಭಾವವಿರುತ್ತದೆ. ಇತ್ತ ಧನಿಕನು ಬಡವರ ಶೋಷಕನಾಗಿರುತ್ತಾನೆ. ಅವನಲ್ಲಿ ಭಕ್ತಿಯ ಲವಲೇಶವೂ ಇರುವುದಿಲ್ಲ. ಮಾಟ ಮಾಯ ಮಾಡುವ ಗಾರುಡಿಗನು ತೋರಿಕೆಯಲ್ಲಿ ಏನೇನನ್ನೋ ಸೃಷ್ಟಿಸಿ ತೋರುತ್ತಾನೆ. ಆದರೆ ಅವಾವುದೂ ಸತ್ಯವಿರುವುದಿಲ್ಲ. ಇಂಥವನು ಮಹಿಮಾತ್ಮನಿಗೆ ಸಮನಿರುವನೇ ? ಇದರಿಂದಾಗಿಯೇ ಒಂದು ಮಾತು ಪ್ರಚಲಿತವಿದೆ. ಏನೆಂದರೆ, ಅಂತರಂಗ ಶುದ್ಧಿ ಮಾಡಿಕೊಂಡವನು ಹನ್ನೆರಡು ವರ್ಷ ಪರ್ಯಂತ, ಮಲಿನ ವಿಚಾರ ಮಾಡದೆ ಇದ್ದರೆ ನುಡಿಯು ಸತ್ಯವಾಗುತ್ತದೆ.

ಬಾಹ್ಯ ಪೂಜೆಯ ಬಗ್ಗೆ ಈ ಮೊದಲು ಸಾಕಷ್ಟು ಚರ್ಚಿಸಿದ್ದೇವೆ. 'ಮೂರ್ತಿ ಪೂಜಾ ಅಧಮಾಧಮಾ' ಎಂದು ಶಾಸ್ತ್ರದಲ್ಲಿ ಹೇಳಲಾಗಿದೆ. ವೇದವನ್ನಷ್ಟೇ ನಂಬಿದ 'ಆರ್ಯ ಸಮಾಜ'ದವರೂ ಮೂರ್ತಿ ಪೂಜೆಯನ್ನು ಮನ್ನಿಸುವುದಿಲ್ಲ. ಮಹಮ್ಮದೀಯರು, ಪ್ರೊಟೆಸ್ಟೆಂಟ್ ಕ್ರೈಸ್ತರು, ಯಹೂದ್ಯರು ಮೂರ್ತಿ ಪೂಜೆಯನ್ನು ಖಂಡಿಸುತ್ತಾರೆ. ಜೈನ ಬೌದ್ಧರಂತೂ ದೇವತೆಗಳನ್ನೇ ಮನ್ನಿಸುವುದಿಲ್ಲ. ಆಧುನಿಕ ಮತಗಳಾದ ಸಿಖ್ಖರು, ವೀರಶೈವರು ಮೂರ್ತಿ ಪೂಜೆಯ ವಿರೋಧಿಗಳು. ಆದರೆ ಮೂರ್ತಿ ಪೂಜಕನು ವಾದವನ್ನೇನೂ ಮಾಡುವುದಿಲ್ಲ. ಅವನ

ಮಾನಸಿಕ ಮಟ್ಟ ಅಷ್ಟೇ ಇದೆ. ಆದ್ದರಿಂದ ತಿಳಿದ ಜನರು ಅವರಿಗೆ ಬುದ್ಧಿ ಹೇಳಿ, ದೇವರ ಸ್ವರೂಪ ಕುರಿತು ತಿಳಿಸಿ ಹೇಳಬೇಕು. ಪೂಜಾರಿ ಪುರೋಹಿತರು ಅವರನ್ನು ಶೋಷಿಸುವ ಕುತಂತ್ರವನ್ನೂ ಬಯಲು ಮಾಡಬೇಕು.

ಗುಡಿಯು, ದೇವರೆಂದು ಗುರುತು ನಿಲಿಸಿದವರು
ಕೀಳು ಹಾರುವೆಂದು ಗೊಣಗಲೇಕೆ ?
ಮೂಢ ಜನಕೆ ಮೊದಲು ಮಾರ್ಗ ತೋರಿರಯ್ಯ.
ವಿಶ್ವದಾಭಿರಾಮ ಕೇಳು ವೇಮ.

'ದೇಹೋ ದೇವಾಲಯಃ, ಜೀವ ಏವ ಸದಾಶಿವಃ' ಎಂದು ಶಾಸ್ತ್ರಗಳು ಸಾರುತ್ತಿದ್ದರೂ ತನ್ನ ಅಂತರಾತ್ಮನನ್ನು, ಸರ್ವವನ್ನು ಬೆಳಗುವ ದೇವನೆಂದು ತಿಳಿದು ಉಪಾಸಿಸದೆ, ಮಾನವನನ್ನು ಬಹಿರ್ಮುಖನನ್ನಾಗಿಸಿ ಗುಡಿ, ದೇವರು, ಎಂದು ಗುರುತು ನಿಲ್ಲಿಸಿ ತೋರಿಸಿದವರು ಕೀಳು ಹಾರುವರು, ಎಂದು ಹಾರುವರ ಶೋಷಕ ಪ್ರವೃತ್ತಿಯನ್ನು ಕುರಿತು ಗೊಣಗುವುದೇಕೆ ? ಯಾರಿಗೆ ಸತ್ಯದ ಅರಿವು ಮೂಡಿದೆಯೋ, ಅವರು ಮೂಢ ಜನರಿಗೆ ಮೊದಲು ದೇವರನ್ನು ಕಾಣುವ ಮಾರ್ಗವನ್ನು ತೋರಿಸಬೇಕು. ಸ್ವಾಭಾವಿಕವಾಗಿ ಬಹಿರ್ಮುಖವಾದ ಇಂದ್ರಿಯಗಳನ್ನು ಅಂತರ್ಮುಖಗೊಳಿಸುವ ಸೂಕ್ತ ಸಾಧನವನ್ನು ಹೇಳಿಕೊಡಬೇಕು.

ದೇವ ಪೂಜೆಗೆಯ್ಯೆ, ದಿವ್ಯ ಭೋಗವುಂಟು.
ತತ್ತ್ವವರಿಯುವವನು ದೈವ ಸಮನು.
ಏನು ಇರದ ನರಗೆ ಯಾವ ಗತಿಯು ಇಲ್ಲ.
ವಿಶ್ವದಾಭಿರಾಮ ಕೇಳು ವೇಮ.

ಬಾಹ್ಯ ದೇವ ಪೂಜೆಯಿಂದ ಮನಸ್ಸಿನ ಮೇಲಾವ ಪರಿಣಾಮವಾಗುವುದಿಲ್ಲವೆಂದೇನೂ ಅಲ್ಲ. ಮೂರ್ತಿಪೂಜೆಯ ವಿಧಾನವನ್ನು ಅನುಸರಿಸಿ, ತಮ್ಮ ಮನವನ್ನು ಕೇಂದ್ರೀಕರಿಸಿ, ತಮ್ಮ ಚಿತ್ತವು ಆ ಮೂರ್ತಿಯ ಆಕೃತಿ ತಾಳಬಹುದು. 'ಕಣ್ಣು ಕಂಡಿತೆನಲು ಕರ್ಮಾಧಿಕಾರವು. ಹಿಂದೆ ಬಿದ್ದು ಕೆಡುವ ಹುಚ್ಚು ಮನುಜ. ಆಂತರಿಕವಾಗಿ ಇಷ್ಟ ದೇವತಾ ಮೂರ್ತಿಯನ್ನು ಕಂಡವರು ಉಂಟು'. ಆ ಮಟ್ಟದ ಮನವು ಹಲವು ಪವಾಡ ಸದೃಶ ಸಂಗತಿಗಳನ್ನು ಪ್ರದರ್ಶಿಸಬಹುದು. ಹೀಗೆ ದೇವ ಪೂಜೆಯಿಂದ ದಿವ್ಯ ಭೋಗವುಂಟು. ನಂತರದ ಅವಸ್ಥೆಯೇ ತತ್ತ್ವವನ್ನು ಅರಿಯುವುದು. ದೇವ ಪೂಜಕರಾದ ಶ್ರೀ ರಾಮಕೃಷ್ಣರಿಗೆ ತತ್ತ್ವ ಬೋಧಕರಾದ ತೋತಾಪುರಿ ಬಾಬಾ ಗುರುವಾಗಿ ಲಭಿಸಿದಂತೆ, ಈ ತತ್ತ್ವ ಬೋಧಕರು ಇಂದ್ರಿಯ, ಮನಸ್ಸುಗಳಾಚೆಯ ಆತ್ಮ ತತ್ತ್ವವನ್ನು ವಿಂಗಡಿಸಿ ಬೋಧಿಸುತ್ತಾರೆ. ಹೀಗೆ ತತ್+ತ್ವವನ್ನು ಅರಿಯುವವನು ದೈವನೇ ಆಗುತ್ತಾನೆ. ಆದರೆ ದೇವ ಪೂಜೆಯನ್ನೂ ಮಾಡದೆ ತತ್ತ್ವಗಳನ್ನು ಅರಿಯದೆ ಇರುವವನಿಗೆ ಯಾವ ಊರ್ಧ್ವ ಗತಿಯೂ ಇರದು.

ಇದುವರೆಗೆ ನೀಡಿದ ಬಾಹ್ಯ ಶುದ್ಧಿ ಮತ್ತು ಅಂತಃ ಶುದ್ಧಿಗಳ ಪ್ರಸ್ತಾವನೆಯನ್ನು ಸ್ವಾಮಿ ವಿವೇಕಾನಂದರ ವಿಮರ್ಶಾತ್ಮಕ ದೃಷ್ಟಿಯಲ್ಲಿ ನೋಡುವಾ : ''ಕೆಲವು ಜನರು ಸಂಪತ್ತನ್ನು ಅರ್ಜಿಸಲು ದೇವ ಪೂಜೆ ಮಾಡುತ್ತಾರೆ. ಇತರರು ಪುತ್ರ ಪ್ರಾಪ್ತಿ ಕೋರುತ್ತಾರೆ. ಮತ್ತು ಅವರು ತಮ್ಮನ್ನು ಭಾಗವತರೆಂದೋ ಭಕ್ತರೆಂದೋ ತಿಳಿಯುತ್ತಾರೆ. ಆದರೆ ಇದು ಭಕ್ತಿಯಲ್ಲ. ಮತ್ತು

ಅವರು ನಿಜವಾದ ಭಾಗವತರಲ್ಲ. ತಾನು ಬಂಗಾರವನ್ನು ಮಾಡುವೆನೆಂದು ಹೇಳುವ ಓರ್ವ ಸಾಧುವು ಬಂದರೆ ಅವರೆಲ್ಲರೂ ಅವನೆಡೆಗೆ ಧಾವಿಸುತ್ತಾರೆ. ಆದರೂ ತಮ್ಮನ್ನು ಭಾಗವತರೆಂದೇ ತಿಳಿದುಕೊಳ್ಳುತ್ತಾರೆ. ನಾವು ಸಂತಾನ ಪಡೆಯುವ ಇಚ್ಛೆಯಿಂದ ದೇವರನ್ನು ಪೂಜಿಸಿದರೆ ಅದು ಭಕ್ತಿಯಲ್ಲ. ಧನಿಕರಾಗಬೇಕೆಂದು ಇಚ್ಛಿಸಿ ಪೂಜೆ ಸಲ್ಲಿಸಿದರೂ ಅದು ಭಕ್ತಿಯಲ್ಲ. ಅಷ್ಟೇ ಏಕೆ? ಸ್ವರ್ಗ ಪಡೆಯಬೇಕೆಂಬ ಇಚ್ಛೆಯಿದ್ದರೂ ಅದು ಭಕ್ತಿಯಲ್ಲ. ಇದಲ್ಲದೆ ಯಾವನೊಬ್ಬನು ನರಕದ ಚಿತ್ರಹಿಂಸೆಯಿಂದ ಪಾರುಗಾಣಬೇಕೆಂಬ ಆಶೆಯಿಂದ ಪೂಜೆ ಮಾಡಿದರೂ ಅದು ಭಕ್ತಿಯಲ್ಲ".

ಭಯ ಇಲ್ಲವೆ ಲೋಭದ ನಿಮಿತ್ತ ಭಕ್ತಿ ಹುಟ್ಟುವುದಿಲ್ಲ. ನಿಜವಾದ ಭಕ್ತನು ಪ್ರಾರ್ಥಿಸುವುದೇನೆಂದರೆ, "ಓ ದೇವರೇ ! ನಾನು ಸುಂದರಳಾದ ಸತಿಯನ್ನು ಬೇಡುವುದಿಲ್ಲ. ನಾನು ಜ್ಞಾನವನ್ನಾಗಲಿ ಮುಕ್ತಿಯನ್ನಾಗಲಿ ಬೇಡುವುದಿಲ್ಲ. ನಾನು ನೂರಾರು ಸಲ ಹುಟ್ಟಲಿ, ಸಾಯಲಿ, ನಿನ್ನ ಸೇವೆಯಲ್ಲಿ ಸದಾ ನಿರತನಾಗಿರಲಿ, ಎಂಬುದೇ ನನ್ನ ಮಹದಾಸೆ". ಈ ಹಂತದಲ್ಲಿ ಮತ್ತು ಯಾವಾಗ ಮಾನವನು ಪ್ರತಿಯೊಂದರಲ್ಲಿ ದೇವರನ್ನೂ ಮತ್ತು ದೇವರಲ್ಲಿ ಪ್ರತಿಯೊಂದನ್ನೂ ಕಾಣುವನೋ, ಆಗ ಅವನು ಪೂರ್ಣ ಭಕ್ತಿಯನ್ನು ಹೊಂದುತ್ತಾನೆ. ಅನಂತರವೇ ಅವನು ಬ್ರಹ್ಮದಿಂದ ಮೊದಲು ಮಾಡಿ, ಸೂಕ್ಷ್ಮಾತಿ ಸೂಕ್ಷ್ಮ ಜೀವಿಯ ಪರ್ಯಂತ ಪ್ರತಿಯೊಂದರಲ್ಲಿಯೂ ವಿಷ್ಣುವು ಅವತರಿಸಿದ್ದಾನೆ, ಎಂದು ತಿಳಿಯುತ್ತಾನೆ. ಆಗ ಮಾತ್ರ ಅವನು ದೇವರಿಲ್ಲದ ಏನೊಂದೂ ಇರದು, ಎಂದು ಸಂವೇದಿಸುವುತ್ತಾನೆ. ಆಗ ಮಾತ್ರ ಅವನು ತನ್ನನ್ನು ಸಕಲ ಭೂತಗಳಲ್ಲಿ ಅತಿ ಕ್ಷುದ್ರನೆಂದೂ ಭಾವಿಸಿಕೊಂಡು ನಿಜವಾದ ಭಕ್ತನ ಭಾವದಿಂದ ದೇವರನ್ನು ಪೂಜಿಸುತ್ತಾನೆ. ಆ ಬಳಿಕ ಅವನು ತೀರ್ಥ ಕ್ಷೇತ್ರಗಳನ್ನೂ ಮತ್ತು ಸಕಲ ಬಾಹ್ಯ ಪೂಜಾ ವಿಧಾನಗಳನ್ನೂ ತ್ಯಜಿಸಿ, ಮುಂದೆ ಸಾಗುತ್ತಾನೆ. ಅವನು ಪ್ರತಿಯೋರ್ವ ಮಾನವನನ್ನೂ ಪೂರ್ಣ ದೇಗುಲವನ್ನಾಗಿ ಕಾಣುತ್ತಾನೆ.

ಆ. ತಾಯಿಯೇ ಪಾರ್ವತಿಯು, ತಂದೆಯೇ ಶಂಭುವು.
ಪ್ರಮಥ ಗಣವು ಅಖಿಲ ಬಂಧು ಬಳಗ.
ತಾನು ಹುಟ್ಟಿದ ಮನೆ ತನಗೆ ಕೈಲಾಸವು.
ವಿಶ್ವದಾಭಿರಾಮ ಕೇಳು ವೇಮ.

ಶಾಸ್ತ್ರಗಳಲ್ಲಿ ಭಕ್ತಿಯನ್ನು ಅನೇಕ ವಿಧವಾಗಿ ಬಣ್ಣಿಸಿದ್ದಾರೆ. ತಾಯಿಯನ್ನು ಪಾರ್ವತಿಯೆಂದೂ, ತಂದೆಯನ್ನು ವರಶಂಭುವೆಂದೂ, ಅಖಿಲ ಬಂಧು ಬಳಗದವರನ್ನು ಶಿವನ ಭಕ್ತ ಗಣವೆಂದೂ ಭಾವಿಸುತ್ತಾರೆ. ತಾನು ಹುಟ್ಟಿದ ಮನೆಯೇ ತನಗೆ ಕೈಲಾಸವೆಂದೂ ತಿಳಿಸುತ್ತಾರೆ.

ತ್ವಮೇವ ಮಾತಾ, ಪಿತಾ ತ್ವಮೇವ
ತ್ವಮೇವ ಬಂಧುಃ ಸಖಾ ತ್ವಮೇವ.
ತ್ವಮೇವ ಸರ್ವಂ ಮಮ ದೇವ ದೇವ. ಅಂದರೆ,

ದೇವ ದೇವಾ ! ನೀನೇ ನನ್ನ ತಾಯಿ, ನೀನೇ ನನ್ನ ತಂದೆ, ನೀನೇ ನನ್ನ ಬಂಧು, ನೀನೇ ನನ್ನ ಗೆಳೆಯನು, ನೀನೇ ನನ್ನ ಸರ್ವಸ್ವವು. ನಮ್ಮಲ್ಲಿರುವ ಭಕ್ತಿ ಭಾವವನ್ನು ದೃಢಪಡಿಸಲೋಸುಗವೇ ಈ ಎಲ್ಲ ಸಂಬಂಧಗಳನ್ನು ಪರಿಭಾವಿಸುತ್ತಾರೆ. ಇದರಿಂದ ದೇವರು

ನಮಗೆ ಅಧಿಕಾಧಿಕ ಸಮೀಪವಾಗುತ್ತಾನೆ, ಪ್ರೇಮ ಸ್ವರೂಪನಾಗುತ್ತಾನೆ. ಇಲ್ಲಿ ಈ ಸಂಬಂಧಗಳು ಭಕ್ತನ ಪ್ರೀತಿಯ ಪ್ರೀತಿ ಸಂಕೇತಗಳಾಗಿರುತ್ತವೆ.

ಕಂ. ಮೊದಲಿಗಿಹ ಮಾತೃ ದೇವತೆ,
ತದನಂತರ ಜನಕನು ಇರುವ ; ಪರಿಕಿಸುತಿರಲ್
ಕುದುರಿದ ಸದಮಲ ಗುರುವೇ
ತುದಿ ದೈವವು ; ಪರರು ಬೇರೆ ತೋರರು, ವೇಮಾ.

ಹಡೆದ ತಾಯಿಯೇ ಮೊದಲು ದೇವತೆಯಾಗಿರುವಳು. ಆ ಬಳಿಕ ಚೆನ್ನಾಗಿ ನೋಡಿಕೊಳ್ಳುವ ತಂದೆಯು ದೇವತೆಯೆನಿಸುತ್ತಾನೆ. ಬಳಿಕ ಒಳ್ಳೆಯ ನಿರ್ಮಲನಾದ ಗುರುವು ಕೊನೆಗೆ ದೈವವಾಗುತ್ತಾನೆ. ಇದನ್ನು ಬಿಟ್ಟು ಬೇರೆ ಯಾರೂ ಏನನ್ನೂ ತೋರಿಸಲಾರರು. ದೇವರಲ್ಲಿ ಭಕ್ತನ ಶ್ರದ್ಧೆ ವಿಶ್ವಾಸಗಳನ್ನೂ, ಆದರ ಪ್ರೇಮಗಳನ್ನೂ ಈ ಸಂಬಂಧಗಳು ಸೂಚಿಸುತ್ತವೆ.

ಜಗತ್ತಿನಲ್ಲಿ ಅನೇಕ ಜನರು ಎಷ್ಟೆಂದು ಭಾವುಕರಾಗಿರುತ್ತಾರೆಂದರೆ, ದೇವರನ್ನೂ ಕುರಿತು ಓದಿದೊಡನೆ ಇಲ್ಲವೆ ಕೇಳಿದೊಡನೆ ಆನಂದಾಶ್ರುಗಳನ್ನು ಸುರಿಸುತ್ತಾರೆ. ಇಂಥವರು ನೈಜ ಭಕ್ತರಾಗಿರುತ್ತಾರೆ.

ಮಾನವನು ಮನದ ಉಚ್ಚ ಸ್ತರದಲ್ಲಿ ನಿರ್ಮಿಸಿದ ಸಂರಚನೆಯು ಅವನ ವ್ಯಕ್ತಿತ್ವವನ್ನು ರೂಪಿಸುತ್ತದೆ. ಆ ಸಂರಚನೆಗೇ ಭಾವ ಎನ್ನುತ್ತಾರೆ. ಇದು ಮನವನ್ನು ಭಕ್ತಿ ಕಿರಣಗಳಿಂದ ಮೃದುವಾಗಿ ಮತ್ತು ಜಾಜ್ವಲ್ಯವಾಗಿ ಮಾಡುತ್ತದೆ.

ಭಾವ :

ಆ. ಭಾವವೆನಲು ಬೇರೆ ಪರದೇಶದೊಳಿಲ್ಲ.
ಅವರು ಗೆಯ್ದ ಕಾರ್ಯ ಆತು ಉಂಟು.
ಭಾವದಲ್ಲಿ ಶಿವನ ಭಾವಿಸಿ ನೀನಿಹುದು.
ವಿಶ್ವದಾಭಿರಾಮ ಕೇಳು ವೇಮ.

ಭಾವವೆಂದರೇನು ? ಭಾವಲೋಕವೆಂದರೇನು ? ತನ್ನ ವ್ಯಕ್ತಿತ್ವವನ್ನು ರೂಪಿಸುವ ಮನದ ಸಂರಚನೆಯೇ ಭಾವವಾಗಿದೆ. ಇದು ಬೇರೆಲ್ಲಿಯೋ ಪರದೇಶದಲ್ಲಿ ಇಲ್ಲ. ತಾನು ಗೆಯ್ದ ಭಕ್ತಿಪರ ಕ್ರಿಯೆಗೆ ಆತುಕೊಂಡೇ ಇರುತ್ತದೆ. ಅದನ್ನು ಆಧರಿಸಿಯೇ ಇರುತ್ತದೆ. ಈ ಭಾವದಲ್ಲಿ ಶಿವನನ್ನು ಅಂದರೆ ಪರಮ ಚೈತನ್ಯವನ್ನು ಭಾವಿಸಿ ನೀನು ಇರಬೇಕು.

ಗೀ. ಭಾವ ನೆಲೆಗೊಂಡ ಪೂರ್ಣವಹ ಪ್ರಜ್ಞೆ ಹೊಂದಿ,
ನಿರ್ವಿಕಾರವಾಗಿ ತಾನುಂಟು ನಿತ್ಯವಾಗಿ.
ಹೊಂದು ಸಂತತ ಭಾವವನು ಹಿಡಿತ ಬಿಡದೆ,
ಸುಕರ ಪದವಿಗೆ ಮಾರ್ಗವದು ಸುಲಭ ವೇಮ.

ಭಕ್ತಿಯ ಕಿರಣಗಳು ಸ್ಫುರಿಸುವ ಉಚ್ಚ ಸ್ತರದ ಮಾನಸ ಸಂರಚನೆಯಾದ ಭಾವವು ಪೂರ್ಣ ತುಂಬಿದ ಪ್ರಜ್ಞೆಯನ್ನು ಹೊಂದಿ ಯಾವ ಮನೋವಿಕಾರಗಳೂ ಇಲ್ಲದೆ ತಾನು ನಿತ್ಯವಾಗಿ

ಭಕ್ತನು ಇರುತ್ತಾನೆ. ತಾನು ಗ್ರಹಿಸಿದ ತತ್ವಾರ್ಥದ ಇಲ್ಲವೆ ಗುರುಮೂರ್ತಿಯ ಭಾವದ ಹಿಡಿತವನ್ನು ಯಾವಾಗಲೂ ಬಿಡದೆ, ಅದನ್ನು ಹೊಂದು. ಆ ಸುಂದರ ಪದವಿ ತಲುಪಲು ಇದುವೇ ಸುಲಭವಾದ ಮಾರ್ಗವಾಗಿದೆ.

ಕಂ. ಭಾವಿಸಲು ಲಿಂಗವಿರುವುದು.
ಭಾವಿಸಲು ಲೋಕದಲ್ಲಿ ಬ್ರಹ್ಮವೆನುವುದು.
ಓವಿ ತಿಳಿವ ವಿಧವರಿಯದೆ,
ಈ ವಿಧದಲಿ ನರರು ಕೆಡುವರಿಳೆಯಲಿ ವೇಮಾ.

ಭಕ್ತಿ ಕಿರಣಗಳು ಸ್ಫುರಿಸುವ ಮನದ ಸಂರಚನೆಯಲ್ಲಿ ಭಾವಿಸಲು, ಬ್ರಹ್ಮ ಸ್ವರೂಪದ ಲಿಂಗ ಅಂದರೆ ಕುರುಹು ಇರುವುದು. ಅದೇ ರೀತಿ ಭಾವಿಸಲು ಲೋಕದಲ್ಲಿ ಸಗುಣ ಬ್ರಹ್ಮದ ವಿರಾಟ ರೂಪವಿರುವುದು. ಅದನ್ನು ಲಕ್ಷ್ಯವಾಗಿರಿಸಿಕೊಂಡು ಧ್ಯಾನಿಸಿ ತಿಳಿಯುವ ವಿಧವನ್ನು ಅರಿಯದ ನರರು ಸಲ್ಲದ ಕರ್ಮ ಜಾಲದಲ್ಲಿ ಸಿಕ್ಕು ಕೆಡುತ್ತಾರೆ.

ಧಾರ್ಮಿಕ ಬೆಳವಣಿಗೆಯ ಪ್ರಾರಂಭಿಕ ಹಂತದಲ್ಲಿ ಮಾನವನು ದೇವರನ್ನು ತನ್ನ ಒಡೆಯನೆಂದೂ ಮತ್ತು ತಾನು ಅವನ ಸೇವಕನೆಂದೂ ತಿಳಿಯುತ್ತಾನೆ.

ಪೂಜೆ ಮಾಡಿ ಮಾಡಿ ಪೂಜಾರಿ ತಾನಾದ ;
ಪೂಜ್ಯ ವಸ್ತುವೆನಲು ಭುವಿಯ ಒಳಗೆ
ಎಲ್ಲಿ ಪೂಜಿಸುವುದು ? ಎಲ್ಲ ದಿಶೆಯೊಳಷ್ಟೆ.
ವಿಶ್ವದಾಭಿರಾಮ ಕೇಳು ವೇಮ.

ಪ್ರಾರಂಭದಲ್ಲಿ ಪೂಜ್ಯ-ಪೂಜಕ ಭಾವವಿರುತ್ತದೆ. ಭಕ್ತನು ಬರೀ ಬಾಹ್ಯ ಪೂಜೆಗೆ ಅಂಟಿದರೆ ಪೂಜೆ ಮಾಡಿ ಮಾಡಿ ತಾನು ಪೂಜಾರಿ ಅಂದರೆ ಪೂಜಾಕಾರಿನ್ ಆಗುವನಷ್ಟೇ. ಪೂಜ್ಯ ವಸ್ತುವು ಯಾವುದು ? ಬ್ರಹ್ಮವೇ ಪೂಜ್ಯ ವಸ್ತು. ಬ್ರಹ್ಮನನ್ನು ಎಲ್ಲಿ ಪೂಜಿಸುವುದು ? ಹೃದಯದಲ್ಲಿ ತಾನೇ? ಭೂಮಿಯ ಮೇಲೆ ಎಲ್ಲಿ ಪೂಜಿಸುವುದು ? 'ಸರ್ವಂ ಖಲ್ವಿದಂ ಬ್ರಹ್ಮ'. ಅಂದರೆ ಇದೆಲ್ಲವೂ ನಿಜವಾಗಿ ಬ್ರಹ್ಮವೇ ಆಗಿದೆ. ಅದು ಎಲ್ಲೆಡೆಗೆ ತುಂಬಿಕೊಂಡಿದೆ. 'ಸರ್ವಂ ಬ್ರಹ್ಮಮಯಂ ಜಗತ್'. ಆದ್ದರಿಂದ ಎಲ್ಲ ದಿಶೆಗಳಲ್ಲಿ ಬ್ರಹ್ಮನಿರುವನೆಂದು ಭಾವಿಸಿ ಪೂಜಿಸಬೇಕು.

ಗೀತ. ಊಟವನೆ ಮಾಡಿಸಿ ದೇಹವನು ಒಟ್ಟು ಮರೆತು
ನಿದ್ರೆ ಹೋಗಲು ಹಚ್ಚುವ ನಿಖಿಲ ಗತಿಯ.
ಸೂಚಿಸಿಳೆ ಬದ್ಧರಾಗಿಸುವ ಸೂಕ್ಷ್ಮ ರೂಪ
ಆ ಮಹದೇವನಿಹನಲ್ತೆ ? ನೋಡು ವೇಮ.

ದೇವರು ತನ್ನ ನಿತ್ಯದ ಅಗತ್ಯಗಳನ್ನು ಒದಗಿಸುವ ಮಹಾದೇವನಾಗಿದ್ದಾನೆ. ಅವನು ಋತುಮಾನಕ್ಕೆ ಸರಿಯಾಗಿ ಮಳೆ ಬರಿಸಿ, ಬೆಳೆ ಬೆಳೆಸಿ, ನಮಗೆ ಆಹಾರ ಒದಗಿಸಿ ಊಟ ಮಾಡಿಸುತ್ತಾನೆ. ಅಹೋ ರಾತ್ರಿಗಳನ್ನು ಉಂಟು ಮಾಡಿ, ದೇಹದ ದಣಿವು ಮರೆಸಿ ನಿದ್ರೆ ಹೋಗಿ ವಿಶ್ರಾಂತಿ ಒದಗಿಸುತ್ತಾರೆ. ನಿವೃತ್ತಿಯವರಿಗೆ ಪರಾ ಗತಿಯನ್ನೂ, ಪ್ರವೃತ್ತಿಯವರಿಗೆ

ಅಪರಾಗತಿಯನ್ನು ಸೂಚಿಸಿ ಇಳೆಗೆ ಬದ್ಧರಾಗುವಂತೆ ಮಾಡುತ್ತಾನೆ. ತಾನು ಸೂಕ್ಷ್ಮ ರೂಪನಾಗಿದ್ದು ಇಂದ್ರಿಯ ಮನಗಳಿಗೆ ಅಗೋಚರನಾಗಿರುತ್ತಾನೆ. ಅವನೇ ಮಹಾದೇವನಲ್ಲವೇ ? ತಿಳಿ.

ವಿಶ್ವ ಕರ್ಮ ಮಹಿಮೆ ಕೇಳಲದು ವಿಚಿತ್ರ !
ವಿಶ್ವಕರ್ಮ ಮಹಿಮೆ ಶಾಶ್ವತವದು.
ವಿಶ್ವಕರ್ಮನಿರದೆ ವಿಶ್ವ ನಿಲುವುದೇನು ?
ವಿಶ್ವದಾಭಿರಾಮ ಕೇಳು ವೇಮ.

ವಿಶ್ವಕರ್ಮನಾದ ಭಗವಂತನು ಸರ್ವಶಕ್ತನು, ಸರ್ವಜ್ಞನು, ಸರ್ವಂತರ್ಯಾಮಿಯು. ಅವನ ಕರುಣೆಯಿರದೆ ಮರದೆಲೆಯೂ ಅಲುಗದು. ಅವನ ಮಹಿಮೆಯು ಅಗಾಧ ; ಅಪಾರ. ಕೇಳಿದರೆ ವಿಚಿತ್ರವೆನಿಸುತ್ತದೆ. ಅವನ ಅಪ್ಪಣೆ ಇಲ್ಲದೆ, ಸೂರ್ಯನಾಗಲಿ, ಚಂದ್ರನಾಗಲಿ, ಗ್ರಹ ನಕ್ಷತ್ರಗಳಾಗಲಿ, ಚಲಿಸಲಾರವು. ವಿಶ್ವಕರ್ಮನ ಮಹಿಮೆಯು ಶಾಶ್ವತವಾಗಿದೆ ; ಋತವಾಗಿದೆ. ಆ ವಿಚಿತ್ರ, ಅದ್ಭುತ ಮಹಿಮೆಯುಳ್ಳ ವಿಶ್ವಕರ್ಮನು ಸತ್ ಆಗಿದ್ದಾನೆ. ಅವನು ವಿಶ್ವದ ಸೃಷ್ಟಿಗಿಂತ ಮೊದಲು ಇದ್ದ. ಈಗಲೂ ಇದ್ದಾನೆ. ಕಲ್ಪಾಂತ್ಯದ ನಂತರ ಮರು ಸೃಷ್ಟಿಯಾದ ಮೇಲೂ ಇರುವನು. ಹಾಗೆ ಹೇಳುವುದಾದರೆ ಅವನಿಲ್ಲದ ವಿಶ್ವವೇ ಇರದು.

ಇದನ್ನೇ ಮುಂಡಕ ಉಪನಿಷತ್ತು ಹೀಗೆ ಬಣ್ಣಿಸುತ್ತದೆ.

"ಯಾವನು ಸರ್ವಜ್ಞನೋ, ಸರ್ವವಿದನೋ, ಯಾವನಿಗೆ ಭೂಮಿಯ ಮಹಿಮೆಯೆಲ್ಲಾ ಸೇರಿದೆಯೋ, ಈ ಆತ್ಮನು ದಿವ್ಯವಾದ ಬ್ರಹ್ಮಪುರದ ಆಕಾಶದಲ್ಲಿ ಪ್ರತಿಷ್ಠಿತನಾಗಿರುತ್ತಾನೆ".

(ಮುಂಡಕ ಉಪ. 2-2-7)

"ಅವನಿಲ್ಲದೆ ಸೂರ್ಯನಾಗಲಿ, ಚಂದ್ರನಾಗಲಿ, ನಕ್ಷತ್ರಗಳಾಗಲಿ, ಪ್ರಕಾಶಿಸುವುದಿಲ್ಲ. ಈ ವಿಶ್ವವೂ ಪ್ರಕಾಶಿಸುವುದಿಲ್ಲ. ಅಂದ ಮೇಲೆ ಈ ಅಗ್ನಿಯ ಮಾತೇನು ? ಸತ್ಯವೆಂದರೆ ಪ್ರಕಾಶಿಸುತ್ತಿರುವ ಅವನನ್ನು ಅನುಸರಿಸಿ, ಸರ್ವವೂ ಪ್ರಕಾಶಿಸುತ್ತಿವೆ. (ಇನ್ನೂ ಸರಿಯಾಗಿ ಹೇಳುವುದಾದರೆ) ಅವನ ಪ್ರಕಾಶದಿಂದಲೇ ಇವೆಲ್ಲವೂ ಪ್ರಕಾಶಿಸುತ್ತವೆ".

(ಮುಂಡಕ ಉಪ. 2-2-11)

ಪರಮಾತ್ಮನು ನೇರವಾಗಿ ಶಾಪವನ್ನಾಗಲಿ, ವರವನ್ನಾಗಲಿ ನೀಡುವುದಿಲ್ಲ ನಿಜ, ಆದರೆ ಶಾಪಾನುಗ್ರಹ ಶಕ್ತಿಯು ಸಗುಣ ಬ್ರಹ್ಮನಿಗೆ. ವಿಧಿ ನಿಯಮಾನುಸಾರ ಕರ್ಮ ಫಲ ನೀಡುವ ಮೂಲಕ ಶಾಪಾನುಗ್ರಹ ಕ್ರಿಯೆಯು ನಡೆಯುತ್ತದೆ.

ಕೆಡುಕನನ್ನು ಹೆಚ್ಚು ಕೆಡಿಸುತಿಹುದು ದೈವ.
ಅಡ್ಡಿಪಡಿಸುತಿಹುದು ಆಪದಿರಲು ,
ಕಡ್ಡಿ ಪೀಕು ಕಂಡು ರೆಡ್ಡಿ ತಾ ಮೆಚ್ಚುವನೆ ?
ವಿಶ್ವದಾಭಿರಾಮ ಕೇಳು ವೇಮ.

ಮಾನವನ ಒಳಿತು ಕೇಡುಗಳಿಗೆ ಮಾನವನೇ ನೇರ ಕಾರಣ. ಆದರೂ ಮಾನವನ ಕರ್ಮಫಲ ನಿರ್ಧಾರವು ದೇವರ ವಿಧಿ ನಿಯಮದಂತೆ ನಡೆಯುವುದರಿಂದ, ವಿಧಾತನ ಕೈಯಲ್ಲಿ

ಮಾನವನ ಆಗು ಹೋಗುಗಳಿವೆಯೆಂದು ಹೇಳಬಹುದು. ಮಾನವನು ತನಗಿರುವ ದತ್ತ ಸ್ವಾತಂತ್ರ್ಯವನ್ನು ದುರುಪಯೋಗಪಡಿಸಿಕೊಂಡು ಕೇಡು ಮಾರ್ಗಕ್ಕಿಳಿದರೆ ಆ ಕರ್ಮ ಫಲವು ಸಹ ಕೇಡೇ ಆಗುತ್ತದೆ. ಈ ಫಲ ಭೋಗವು ಈ ಜನ್ಮದಲ್ಲಿ ತೀರದಿದ್ದರೆ, ಆರಬ್ಧವಾದ ಅದನ್ನು ಭೋಗಿಸಲೆಂದೇ ಮುಂದಿನ ಜನ್ಮ ಪಡೆಯಬೇಕಾಗುತ್ತದೆ. ಹೀಗಾಗುವುದು ಅವನ ಕೇಡಿಗೆ ಶಿಕ್ಷೆ ನೀಡಲೆಂದೇ. ಅದರಿಂದ ಅವನು ಬುದ್ಧಿ ಕಲಿಯಬಹುದು. ಇದು ದೇವರ ಇಚ್ಛೆ. ಈ ಕೇಡಿನ ಮೊತ್ತವು ಆಪತ್ತಿನ ಸ್ಥಿತಿ ತಂದರೆ, ಮುಂದಿನ ಕೇಡು ಆಗದಂತೆ ದೈವವು ಅಡ್ಡಿಪಡಿಸುತ್ತದೆ. ಜಮೀನುದಾರ ರೆಡ್ಡಿಯು ತನ್ನ ಹೊಲದಲ್ಲಿಯ ಪೀಕು ರೋಗದಿಂದಾಗಲಿ ಇಲ್ಲವೆ ಮೇಲ್ವಚಾರಣೆಯ ಕೊರತೆಯಿಂದಾಗಲಿ, ಕಡ್ಡಿಯಾಗುವುದನ್ನು ಬಯಸನು. ಅದೇ ರೀತಿ, ಭಗವಂತ.

ಕರ್ಮಫಲಗಳಿಲ್ಲ ಕಪಟವೆಂದು ತಿಳಿದು,
ಧರ್ಮ ಫಲಗಳಿಲ್ಲ ತಗಲುತಿಹವು.
ಧರ್ಮ ಮರ್ಮಗಳನು ದಾಟುವುದೇ ಮುಕ್ತಿ.
ವಿಶ್ವದಾಭಿರಾಮ ಕೇಳು ವೇಮ.

ಆತ್ಮವೇನೂ ಕರ್ಮ ಮಾಡುವುದಿಲ್ಲ. 'ಅಹಂ ಕರ್ತಾ ಫಲ ಭೋಕ್ತಾ'. ಅಹಂ ಮಾಡುತ್ತದೆ ಮತ್ತು ಫಲವನ್ನು ಭೋಗಿಸುತ್ತದೆ. ಆದರೆ ಸ್ವಂತ ಭೋಗದಾಸೆಯಿಂದ ಮಾಡುವ ಈ ಕರ್ಮಗಳ ಫಲಗಳು ಐಹಿಕ ಸುಖ ದುಃಖಗಳಿಗೆ ಕಟ್ಟಿ ಹಾಕುತ್ತವೆ. ಅವುಗಳ ಫಲಗಳು ವಿಧಿಯ ನಿಯಮಾನುಸಾರ ಘಟಿಸುವವೇ ಹೊರತು ಕರ್ತಾನ ಇಚ್ಛೆಯಂತಲ್ಲ. ತಾನೊಂದು ಬಗೆದರೆ ದೈವದ ಬಗೆ ಬೇರೊಂದಾಗಿರುತ್ತದೆ. ಹೀಗೆ ಕರ್ಮಫಲಗಳು ತನ್ನ ಇಚ್ಛೆಗೆ ಕಪಟವೆನಿಸುತ್ತವೆ. ಆಗ ಮನುಷ್ಯನು ಪಾಠ ಕಲಿತು ಧರ್ಮಾಚರಣೆಗೆ ನಿಲ್ಲುತ್ತಾನೆ. ದಾನ ಧರ್ಮ ಮಾಡುತ್ತಾನೆ. ಧರ್ಮ ಶಾಲೆ ಕಟ್ಟಿಸುತ್ತಾನೆ. ಅರವಟ್ಟಿಗೆ ಇರಿಸುತ್ತಾನೆ. ಕೆರೆಗಳನ್ನು ನಿರ್ಮಿಸುತ್ತಾನೆ. ಆದರೆ ನಾನು ಮಾಡುತ್ತೇನೆ. ನಾನು ಮಾಡಿಸುತ್ತೇನೆ, ಎಂಬ ಅಹಂ ಹೋಗಿರುವುದಿಲ್ಲ. ಹೀಗಾಗಿ ಧರ್ಮ ಫಲವಾಗಿ ನಾನು ಪುಣ್ಯವಂತ ಎಂದು ಉಬ್ಬಿ ಸುಖಿಪಡುತ್ತಾನೆ. ಕರ್ಮದ ದುಃಖ ಹೋದರೂ ಧರ್ಮದ ಸುಖ ತಗಲುತ್ತದೆ. ಮತ್ತು ಅಹಂಕಾರವು ಸೂಕ್ಷ್ಮವಾಗಿ ಮುಂದಿನ ಗತಿಗೆ ತಡೆಯಾಗುತ್ತದೆ. ಇದುವೇ ಧರ್ಮದ ಮರ್ಮ. ಇದನ್ನು ಅರಿತು ದಾಟುವುದೇ ಮುಕ್ತಿಯಾಗಿದೆ.

ಕಂ. ಸ್ಥಾವರಗಳ ಭಕ್ಷಿಸುವರು.
ಭಾವಿಸುವೊಡೆ ಜಂಗಮಗಳು ಬಹುವಿಧ ರುಚಿಗಳ್.
ಆ ವಿಧ ಸಕಲ ಪ್ರಾಣಿಯು.
ತಾವೇ ತಮ್ಮನು ತಿನ್ನುತಲಿರುವವು ವೇಮಾ.

ದೇವರು ವನಸ್ಪತಿಗಳನ್ನು ಸೃಷ್ಟಿಸುವ ಮುನ್ನ ನೆಲ ಜಲಗಳನ್ನು ಸೃಷ್ಟಿಸಿದನು. ತೇಜ, ವಾಯುಗಳಂತೂ ಮೊದಲೇ ಸೃಷ್ಟಿಯಾಗಿದ್ದವು. ಜೀವ ಜಂತುಗಳು ನೆಲದಲ್ಲಿ, ನೀರಿನಲ್ಲಿ ಆಹಾರ ಪಡೆದು ಜೀವಿಸಿದವು. ವನಸ್ಪತಿಗಳೂ ಭೂಮಿ ನೀರು, ಹವೆ ಸೇವಿಸಿ ಬೆಳೆದವು. ವನಸ್ಪತಿಗಳನ್ನು ಸೇವಿಸುವ ಚಿಗರೆ ಮೊದಲಾದ ಪ್ರಾಣಿಗಳ ಸೃಷ್ಟಿಯಾಯಿತು. ಪ್ರಾಣಿಗಳು ಜಂಗಮ ಜೀವಿಗಳು ತಾನೇ ? ಇವುಗಳ ಮಾಂಸವೂ ಬಹುರುಚಿಕರವಾಗಿರುತ್ತದೆ. ಚಿಕ್ಕ, ದುರ್ಬಲ ಪ್ರಾಣಿಗಳನ್ನು

ತಿಂದು ಜೀವಿಸುವ ಕ್ರೂರ ಮೃಗಾದಿಗಳು ಮತ್ತು ಆ ಜಾತಿಯ ಬೆಕ್ಕು, ನಾಯಿ, ತೋಳ ಮುಂತಾದ ಜಾತಿಯ ಪ್ರಾಣಿಗಳು ಸೃಷ್ಟವಾದವು. ಈ ವಿಧದಲ್ಲಿ ಎಲ್ಲ ಪ್ರಾಣಿ ವರ್ಗವು ತಮ್ಮನ್ನು ತಾವೇ – ಅಂದರೆ ದೊಡ್ಡವು ಚಿಕ್ಕವನ್ನು ತಿನ್ನುತ್ತಿರುವವು. ದೊಡ್ಡ ಮೀನು ಚಿಕ್ಕ ಮೀನನ್ನು ನುಂಗುವಂತೆ, ಬಾವುಗ ಬೆಕ್ಕು ಬೆಕ್ಕಿನ ಮರಿಗಳನ್ನು ತಿನ್ನುವಂತೆ, ಹೀಗೆ ದೇವರು ಜೀವಿಗಳ ಮೇಲಿನ ಪ್ರೀತಿಯಿಂದಲೇ ಒಂದು ಜೀವಿಯ ಆಹಾರವಾಗಿ ಇನ್ನೊಂದು ಜೀವಿಯನ್ನು ಸೃಜಿಸಿದ್ದಾನೆ. ಒಂದು ಹುಲಿಯು ಎಮ್ಮೆಯನ್ನು ಕೊಂದರೆ, ಅದಕ್ಕೆ ಕಾರಣವಿದೆ. ಅದೆಂದರೆ ಅದು ತಾನು ಹಸಿದಿರಬೇಕು ಇಲ್ಲವೆ ತನ್ನ ಮರಿಗಳು ಹಸಿದಿರಬೇಕು.

ದೇವರು ಪ್ರೇಮ ಸ್ವರೂಪನಾಗಿದ್ದಾನೆ. ಅವನು ಪ್ರತಿಯೊಂದರಲ್ಲಿ ಇರುತ್ತಾನೆ. ಅರಿತೋ ಅರಿಯದೋ, ಪ್ರತಿಯೊಬ್ಬನೂ ದೇವರತ್ತ ಆಕರ್ಷಿತನಾಗುತ್ತಾನೆ.

ಕಂ. ಹೆಂಡತಿಯೆನೆ ಆತ್ಮ ಕಣಾ.
ಹೆಂಡತಿಯೆನೆ ತಾಯಿ ಕಣಾ ಅರಿತೊಡೆ ಮನದೊಳ್.
ಹೆಂಡತಿ ತಾಯಿಯೆನಲಾರು
ಕಂಡರಿಯಬೇಕಿದನೆ, ತಪ್ಪದಂತೆ ವೇಮಾ.

ಒಬ್ಬನು ಹೆಂಡತಿಯನ್ನು ಏಕೆ ಪ್ರೀತಿಸುತ್ತಾನೆ ? ಭೋಗ ಪಡೆಯುವೆಂದು ಕಾಮಿಸಬಹುದು. ಆದರೆ ಪ್ರೀತಿಸುವುದೇಕೆ ? ಅವಳು ಆತ್ಮ ಸ್ವರೂಪಳಾಗಿರುವಳೆಂದು ತಾನೇ ? ಭಗವಂತನು ಸರ್ವ ಭೂತಾಂತರಾತ್ಮ ಆಗಿದ್ದಾನೆ. ಹೆಂಡತಿಯಲ್ಲಿಯೂ ಭಗವಂತನು ಇದ್ದಾನೆ. ಮನದಲ್ಲಿ ಅರಿತು ವಿವೇಚಿಸಿ ನೋಡಿದರೆ ಹೆಂಡತಿಯು ತಾಯಿಯ ವಾತ್ಸಲ್ಯವನ್ನೂ ಹೊಂದಿರುವಳಲ್ಲ. ತಾನೇ ಮಗನಾಗಿ ಜನಿಸಿದಾಗ ತಾಯಿಯೂ ಆಗುತ್ತಾಳೆ. ಆದ್ದರಿಂದ ಯಾರಾದರೂ ಹೆಂಡತಿಯನ್ನು ತಾಯಿಯೆಂದು ತಿಳಿಸಿದರೆ ಈ ಸತ್ಯವನ್ನು ತಪ್ಪದೆ ಕಂಡು ಅರಿಯಬೇಕು.

ಕಂ. ಸೂತ್ರವಾವುದರಸಿ ನೋಡೆ,
ಸೂತ್ರ ಸ್ತ್ರೀಯದೆನಿವುದೇ ಸಿದ್ಧವಿಹುದಲಾ !
ಸೂತ್ರವೆನೆ ಸ್ತ್ರೀ ಸೂತ್ರವೆ.
ಸೂತ್ರವದ ತಿಳಿಯುವಾತನೆ ನಾಥನು ವೇಮಾ.

ಸೂತ್ರವೆಂದರೆ ಎಳೆ. ಬ್ರಹ್ಮ ಸೂತ್ರವೆಂದರೆ ಯಾವುದನ್ನು ಹಿಡಿದು ಬ್ರಹ್ಮವನ್ನು ಅರಿಯುವ ವರೆಗೆ ಸಾಗಬಹುದೋ ಅದು. ಹೀಗೆ ಮಾನವ ಜೀವನದಲ್ಲಿ ಹುಟ್ಟು, ಬದುಕು, ಮರು ಹುಟ್ಟುಗಳಿಗೆ ಸೂತ್ರವಾಗಿರುವುದೇ ಸ್ತ್ರೀ ಸೂತ್ರ. ಅವಳು ತಾಯಿಯಾಗಿ ಮಾನವನಿಗೆ ಜನ್ಮ ನೀಡುತ್ತಾಳೆ. ಬಾಲ್ಯದಲ್ಲಿ ಮೊಲೆಯುಣಿಸಿ ಪೋಷಿಸುತ್ತಾಳೆ. ಯೌವನದಲ್ಲಿ ಸ್ತ್ರೀಯೇ ಹೆಂಡತಿಯಾಗಿ ರತಿ ಸುಖ ನೀಡುತ್ತಾಳೆ. ಪುರುಷನ ವೀರ್ಯವನ್ನು ಗರ್ಭದಲ್ಲಿ ಧರಿಸಿ, ಮಗುವನ್ನು ಹೆರುತ್ತಾಳೆ. ಹೀಗೆ ಮಾನವನ ವಿವಿಧ ಅವಸ್ಥೆಗಳನ್ನು ಪೋಣಿಸುವ ಸೂತ್ರವೇ ಸ್ತ್ರೀಯಾಗಿದ್ದಾಳೆ. ಮಾನವನ ಬಾಳಿನಲ್ಲಿ ವಿವಿಧ ಅವಸ್ಥೆಗಳನ್ನು ಪೋಣಿಸುವ ಸ್ತ್ರೀ ಸೂತ್ರವನ್ನು ತಿಳಿದು ವರ್ತಿಸುವವನೇ ನಾಥನೆನಿಸುತ್ತಾನೆ. 'ಪಾಲಯತಿ ಇತಿ' ಅಂದರೆ ಪಾಲಿಸುವವನಾದ್ದರಿಂದ ಪತಿ ಎನಿಸುತ್ತಾನೆ. ಸ್ತ್ರೀ ಪ್ರೇಮ ವಾತ್ಸಲ್ಯಗಳ ಕಣಿ. ಅವಳು ಜನನ ಮತ್ತು ಪಾಲನೆಗಳ ದೇವತೆ. ಪ್ರೀತಿಯಿಂದ ಸೃಷ್ಟಿ, ಸ್ಥಿತಿ ಮಾಡುವ ದೇವರ ಕಾರ್ಯವನ್ನೇ ಅವಳೂ ಮಾಡುತ್ತಾಳೆ. ಈ ಸೂತ್ರವನ್ನು

ಹಿಡಿದು ಸಾಗಿ ದೇವರನ್ನು ಅರಿಯಬಹುದು.

ನಾವು ಸೃಷ್ಟಿಕರ್ತನೆಂದೂ, ಸ್ಥಿತಿ ಪಾಲಕನೆಂದೂ ದೇವರನ್ನು ಗೌರವಿಸುತ್ತೇವೆ. ಬಾಹ್ಯ ಪೂಜೆಗಿಳಿಯುತ್ತೇವೆ ನಿಜ. ಎಲ್ಲ ವಸ್ತುಗಳಲ್ಲಿ ಬ್ರಹ್ಮನನ್ನು ಮತ್ತು ಬ್ರಹ್ಮನಲ್ಲಿ ಎಲ್ಲ ವಸ್ತುಗಳನ್ನು ಕಂಡು ಅವನು ಪ್ರೇಮ ಮೂರ್ತಿಯೆಂದು ಅರಿಯುತ್ತೇವೆ. ಆ ಬಳಿಕ ತಾನೇ ಪರಮ ಭಕ್ತಿಯನ್ನು ಸಂಪಾದಿಸಬಹುದು.

ನಿಜದರಿವು :

ಆ. ತಾನೆ ಸಕಲವಿದ್ದು, ತನ್ನೊಳು ಸಕಲವಿದೆ.
ತನ್ನೊಳು ಬೆಳಗುವುದ ತಾನು ಅರಿತು,
ಇರುವ ಮಾನವರಿಗೆ ಇಂಪಾಗಿಹುದು ಮುಕ್ತಿ.
ವಿಶ್ವದಾಭಿರಾಮ ಕೇಳು ವೇಮ.

ಆ. ತನ್ನನರಸಿ ನೋಡೆ, ತಾನೆ ಹೋಗು ಬ್ರಹ್ಮ.
ತತ್ತ್ವವರಸಿ ನೋಡೆ ತಾನೆ ಆತ್ಮ.
ಮಣ್ಣು ಗಗನವಿಲ್ಲ ; ಮಾಯೆ ಮತ್ತೆ ಇಲ್ಲ.
ವಿಶ್ವದಾಭಿರಾಮ ಕೇಳು ವೇಮ.

ಭಕ್ತನು ಪ್ರೇಮ ಸ್ವರೂಪನು. ಎರಡು ವಸ್ತುಗಳ ದಿವ್ಯ ಆಕರ್ಷಣೆಯೇ ಪ್ರೇಮ. ಹೀಗೆ ತಾನು ಪ್ರೀತಿಸುವ ಎಲ್ಲವೂ ತಾನೇ. ತನ್ನೊಳಗೆ ಎಲ್ಲವೂ ಇದೆ. ತನ್ನೊಳಗೆ ಪ್ರೇಮ ಜ್ಯೋತಿ ಬೆಳಗುತ್ತಿದೆ. ದಿವ್ ಅಂದರೆ ಬೆಳಗುವುದು, ದೇವ. ಈ ದೇವರನ್ನು ತಾನು ಅರಿತು ಇರುವ ಮಾನವನಿಗೆ ಮುಕ್ತಿಯು ಇಂಪಾಗಿರುವುದು.

ತನ್ನೊಳಗೆ ತಾನೇ ನೋಡಿಕೊಂಡರೆ, ಆ ಅಂತರ್ವೀಕ್ಷಣೆಯಿಂದ ತಾನೇ ಬ್ರಹ್ಮನೆನಿಸುತ್ತಾನೆ. ತತ್ತ್ವಗಳನ್ನು ದೇಹ, ಇಂದ್ರಿಯ, ಚಿತ್ತ, ಅಹಂ, ಬುದ್ಧಿ, ಮನಸ್ಸುಗಳನ್ನು ಅರಿಯುತ್ತ ಹೋದರೆ ತಾನೇ ಆಚೆಯ ಆತ್ಮ ತತ್ತ್ವವೆಂದು ಖಚಿತವಾಗುತ್ತದೆ. ಆಗ ಮಣ್ಣು-ಗಗನಗಳ ಈ ಪ್ರಪಂಚವೆಲ್ಲಿ ? ಪ್ರಪಂಚವೆಂಬುದು ಭ್ರಾಂತಿ ! ಮಾಯೆ. ಇದನ್ನು ಉತ್ಸರ್ಗ ಎನ್ನುತ್ತಾರೆ. ಉತ್ಸರ್ಗವನ್ನು ಅಪವಾದ ಮಾಡಿದರೆ ಅದೇ ಬ್ರಹ್ಮವೆನಿಸುತ್ತದೆ.

ನಿಜವಾದ ಭಕ್ತನಾಗಲು ಬೇಕಾದ ಪೂರ್ವ ಸಿದ್ಧತೆಗಳನ್ನು ಇದುವರೆಗೆ ಚರ್ಚಿಸಿದ್ದೇವೆ. ಆದರೆ ಈ ವಿಷಯದಲ್ಲಿ ನೆನಪಿಡಬೇಕಾದ ಮಾತೊಂದಿದೆ. ಅದೆಂದರೆ, "ಈ ಆತ್ಮನು ಬಲಹೀನನಿಗೆ ಲಭ್ಯನಲ್ಲ. ಪ್ರಮಾದದಿಂದಾಗಲಿ, ಸಂನ್ಯಾಸವಿಲ್ಲದ ತಪಸ್ಸಿನಿಂದಾಗಲಿ ಲಭ್ಯನಲ್ಲ. ಆದರೆ ಸಾಧನೆಗಳಿಂದ ಯಾವ ವಿದ್ವಾಂಸನು ಪ್ರಯತ್ನಿಸುವನೋ, ಅವನ ಆತ್ಮವು ಬ್ರಹ್ಮ ಧಾಮವನ್ನು ಪ್ರವೇಶಿಸುವುದು". (ಮುಂಡಕ ಉಪ. 3-2-4)

ಆ. ಸಾಕು ಸಾಕಿಳೆಯಲಿ ಜನನ ಮರಣಂಗಳು.
ಮೇಲು ಅಲ್ಲ, ಮಾಯೆ ಮುಸುಕು ಹಾಕೆ,

ಬಾಳು ; ಅಲಸದಿಳೆಯಲಿ ಭಕ್ತಿಯಿಂದ ಜಡಿದು
ವಿಶ್ವದಾಭಿರಾಮ ಕೇಳು ವೇಮ.

ಮನದ ಆಸೆ ಆಮಿಷಗಳಿಗೆ ಬಲಿಯಾಗಿ ಸಂಸಾರದಲ್ಲಿ ಬಿದ್ದು ಜನನ ಮರಣಗಳನ್ನು ಪುನರಪಿ ಇಳೆಯಲ್ಲಿ ಅನುಭವಿಸುವುದು ಇನ್ನು ಸಾಕಪ್ಪಾ ಸಾಕು; ಎಂದು ಜಿಗುಪ್ಸೆ ಹುಟ್ಟಬೇಕು. ಹೊನ್ನು, ಹೆಣ್ಣು ಮತ್ತು ಮಣ್ಣುಗಳ ಆಸೆಯ ಮುಸುಕನ್ನು ಹಾಕಿ, ಮಾಯೆಗೆ ಅಂಟುವುದು ಮೇಲು ಅಲ್ಲ. ಅದು ಊರ್ಧ್ವ ಗತಿಗೆ ಹೋಗಗೊಡದು. ಭಕ್ತಿಯಿಂದ ಆಲಸ್ಯವನ್ನು ತೊಡೆದು, ಬೇಸರಗೊಳ್ಳದೆ ಬಾಳು. ಧೀರನಾಗಿ ಮುಂದಾಗು.

ಆ. ಈಜು ಬಾರದವನು ಏಳುವನು, ಮುಳುಗುವ ;
ಪಾರುಗಾಣ ನದಿಯ ; ಬಾರದೀಸು.
ಪರನು ಅಲ್ಲದವನು ಪರಲೋಕ ಹೊಂದುವನೆ ?
ವಿಶ್ವದಾಭಿರಾಮ ಕೇಳು ವೇಮ.

ಭವಸಾಗರದಲ್ಲಿ ದಡ ತಲುಪಬೇಕಾದರೆ ಈಜಲೇಬೇಕು. ಈಜು ಬಾರದಿದ್ದರೆ, ಏಳುತ್ತಾನೆ. ಮುಳುಗುತ್ತಾನೆ. ಕೊನೆಗೊಮ್ಮೆ ಮುಳುಗಿಯೇ ಹೋಗಬಹುದು. ಈಜು ಬರದೆ ನದಿಯ ಪಾರವನ್ನು ಅಂದರೆ ದಡವನ್ನು ಕಾಣುವನೆಂತು ? ಯಾರು ಪರನಲ್ಲವೋ, ಅಂದರೆ ಶ್ರೇಷ್ಠನಲ್ಲವೋ, ಅವನು ಪರಲೋಕವನ್ನು ಅಂದರೆ ದೇವಲೋಕವನ್ನು ಹೊಂದಲಾರನು.

ಇಲ್ಲಿ ಒಂದು ಜನಪ್ರಿಯ ಕತೆ ಪ್ರಸ್ತುತವಾಗಿದೆ. ಒಬ್ಬ ವೇದಶಾಸ್ತ್ರ ಪಂಡಿತನು ನದಿಯನ್ನು ದಾಟಬೇಕಿತ್ತು. ಹಾಗಾಗಿ ಅವನು ನಾವೆಯನ್ನೇರಿದ. ಹೊಳೆಯು ತುಂಬಿ ಹರಿಯುತಿತ್ತು. ಮಾರ್ಗದಲ್ಲಿ, ವಾಚಾಳಿಯಾದ ಪಂಡಿತನು ಅಂಬಿಗನನ್ನು ಕುರಿತು, ''ನಿನಗೆ ನಾಲ್ಕು ವೇದಗಳು ಗೊತ್ತೇ ?'' ಎಂದು ಕೇಳಿದನು. ಅಂಬಿಗನು ''ಇಲ್ಲ ಸ್ವಾಮಿ !'' ಎಂದನು. ಹಾಗಾದರೆ ''ನಿನ್ನ ಅರ್ಧ ಜೀವನ ಹಾಳು'' ಎಂದ. ಹೋಗಲಿ ಶಾಸ್ತ್ರಗಳು ತಿಳಿದಿವೆಯೇ ? ಎಂದನು. ''ಅದೂ ಇಲ್ಲ'' ಎಂದನು. ಹಾಗಾದರೆ ''ನಿನ್ನ ಮುಕ್ಕಾಲು ಜೀವನ ಹಾಳು'' ಎಂದನು. ''ಕೊನೆಗೆ ಪುರಾಣಗಳಾದರೂ ತಿಳಿದಿವೆಯೇ ?'' ಎಂದನು. ಅಂಬಿಗನು ಅದಕ್ಕೂ ಇಲ್ಲವೆಂದು ಗೋಣು ಅಲ್ಲಾಡಿಸಿದನು. ಸ್ವಲ್ಪ ಸಮಯದ ಬಳಿಕ ದೊಡ್ಡ ತೆರೆಯೊಂದು ಬಂದು ಅಪ್ಪಳಿಸಿ ನಾವೆ ಅರ್ಧ ಮುಳುಗ ಹತ್ತಿತು. ಆಗ ಅಂಬಿಗನು 'ಪಂಡಿತರೆ ! ನಿಮಗೆ ಈಜು ಬರುತ್ತಿದೆಯೇ ?' ಎಂದು ಕೇಳಿದನು. ಪಂಡಿತನು ಇಲ್ಲವೆಂದು ತಲೆ ಅಲ್ಲಾಡಿಸಿದನು. ಹಾಗಾದರೆ ನಿಮ್ಮ ಇಡೀ ಜೀವನ ಹಾಳಾದಂತೆ ಎಂದು ಮರುಗಿದನು ಅಂಬಿಗ.

ಇದೇ ಆಶಯದ ಇನ್ನೊಂದು ಪದ್ಯವನ್ನು ಗಮನಿಸುವಾ.

ಕಂ. ಈಜಲು ಬಲ್ಲಾತನಿರಲು,
ಈ ಜಗದಿ ಆಳ ಭಾವಿಲಿ ಬೀಳುತಲಿಹನೇ ?
ಈಜಲು ಕಲಿಸುವ ಯೋಗವ,
ಕೈ ಚಲಿಸದಿರಲು ಏನನು ಮಾಳ್ಪುದು ? ವೇಮಾ.

ಭವವು ಪೂರ್ವಕರ್ಮ ಫಲವು. ಮರ್ತ್ಯದಲ್ಲಿ ಹುಟ್ಟುವುದೆಂದರೆ ಭವಸಾಗರದಲ್ಲಿ

ಬಿದ್ದಂತೆಯೇ. ಇಲ್ಲಿಂದ ಮುಕ್ತಿಯ ದಡ ತಲುಪಬೇಕಾದರೆ ಈಜು ಬಲ್ಲಾತನಾಗಿರಬೇಕು. ಅಂಥ ಈಜುಗಾರನು ಈ ಜಗತ್ತಿನಲ್ಲಿ ಸಂಸಾರದ ಆಳ ಭಾವಿಯಲ್ಲಿ ಬೀಳುವನೇ ? ಇಲ್ಲ. ತಿರುಗಣಿ ಮಡುವಿನಲ್ಲಿ ಸಿಲುಕುವನೇ ? ಇಲ್ಲ. ಭವಸಾಗರದಲ್ಲಿ ಈಜು ಬಾರದವರಿದ್ದರೇನಂತೆ? ಯೋಗವು ಈಜಲು ಕಲಿಸುವುದು. ಈಜಬೇಕು ; ಇದ್ದು ಜಯಿಸಬೇಕು. ಆದರೆ , ಕಲಿಯುವವನು ಸರಿಯಾಗಿ ಅಭ್ಯಾಸ ಮಾಡಬೇಕು. ಯೋಗ ಪ್ರಕ್ರಿಯೆಗಳನ್ನು ಆಚರಿಸಬೇಕು. ಈಜು ಕಲಿಯುವವನು ಕೈಗಳನ್ನು ಚಲಿಸಬೇಕಷ್ಟೇ. ಕೈಗಳನ್ನೂ ಚಲಿಸದಿದ್ದರೆ ಏನು ಮಾಡುವುದು ? ಸಾಧನೆ ಮಾಡದಿದ್ದರೆ ಯೋಗಾಭ್ಯಾಸ ಹೇಗೆ ಸಾಧ್ಯ ?

ಆತ್ಮವನ್ನು ಅರಿಯಬೇಕಾದರೆ,ದೇಹ ಬಲವೂ ಬೇಕು ; ಮನೋಬಲವೂ ಬೇಕು. ಆಗ ಮಾತ್ರ ಸರಿಯಾದ ಆಚರಣೆ ಸಾಧ್ಯ. ಇಲ್ಲವಾದರೆ, ಈ ಆತ್ಮವನ್ನು ಬಲಹೀನನು ಹೊಂದಲಾರನು. ಪ್ರಮಾದಗಳಿಂದ ಪಡೆಯಲಾರನು. ದೇಹ ಬಲ, ಮನೋಬಲವಿರುವಾಗಲೇ ಸಾಧನ ನಿರತನಾಗಬೇಕು.

ಅಂಗವೆಲ್ಲ ಸಡಲಿ, ಅಂತೆ ಹಲ್ಲು ಉದುರಿ,
ತನುವು ಮುಪ್ಪಿನಿಂದ ತೀವ್ರ ಒಣಗಿ,
ಮಫ್ಪು ಅಡರಿದರೂ ಮೋಹ ಬಿಡದು ಮತ್ತೆ.
ವಿಶ್ವದಾಭಿರಾಮ ಕೇಳು ವೇಮ.

ಭಕ್ತಿ ಸಾಧನ ಗೆಯ್ಯಲು ಅಂಗಗಳು ಸದೃಢವಾಗಿರಬೇಕು. ಅಂಗಾಂಗಳು ದೋಷ ದೂರವಿರಬೇಕು. ಕಿವಿಯೇ ಕೇಳದಿದ್ದರೆ ಧರ್ಮ ಪ್ರವಚನವನ್ನು ಕೇಳುವುದು ಹೇಗೆ ? ಕಣ್ಣು ಕಾಣದಿದ್ದರೆ, ಬ್ರಹ್ಮನ ಕೊಡುಗೆಯಾದ ಸೌಂದರ್ಯವನ್ನು ಸವಿಯುವುದು ಹೇಗೆ ? ಹಲ್ಲು ಉದುರಿದರೆ, ಮಂತ್ರದ ಉಚ್ಚಾರಣೆಯೂ ಸರಿಯಾಗಿ ಆಗದು. ಯೌವನದಲ್ಲಿ ಚೈತನ್ಯದಿಂದ ನಳನಳಿಸುತ್ತಿದ್ದ ತನುವು ಮುಪ್ಪಿನಲ್ಲಿ ತೀವ್ರ ಒಣಗಿ ಯಾವುದೇ ಸೇವೆಯನ್ನು ಮಾಡಲಾರದು. 'ಅಯಂ ಶರೀರಂ ಖಲು ಧರ್ಮ ಸಾಧನಂ''. ಈ ಶರೀರವು ಧರ್ಮ ಸಾಧನೆಗಾಗಿ ಇದೆ. ಆದರೆ ಮುಪ್ಪಿನಿಂದ ಒಣಗಿ ಬಲಹೀನವಾಗಿ ಸೇವೆಗೆ ಉಪಯೋಗವಾಗದು. ಮೇಲಾಗಿ ಮೊದಲಿನಿಂದ ಧರ್ಮ ಸಾಧನೆ ಮಾಡಲು ತಪ್ಪಿದರೆ, ಹೆಂಡಿರು-ಮಕ್ಕಳ, ಆಸ್ತಿ ಪಾಸ್ತಿಗಳ ಮೋಹವೂ ಬಿಡುವುದಿಲ್ಲ.

ಕೆಲವರು ದೇಹ ದಂಡನೆಯ ತಪವು ಮುಕ್ತಿಗೆ ದಾರಿಯೆಂದು ತಿಳಿದಿರುತ್ತಾರೆ. ಆದರೆ, ಅನ್ನ ಬಿಟ್ಟು, ನೀರು ಬಿಟ್ಟು, ಒಂಟಿಗಾಲಿನಿಂದ ನಿಂತು, ತೋಳು ಎತ್ತಿ ನಿಂತು ಉಗ್ರ ತಪಸ್ಸು ಮಾಡಿದರೆ ತತ್ತ್ವವನ್ನು ಅರಿಯಬಹುದೇ ?

ಕಲಿಯುಗದೊಳು ಹುಟ್ಟಿ ಕಡೆಯ ಗುರಿ ತಲುಪದೆ,
ಒಡಲು ಬಡವ ಮಾಡಿ ಉಗ್ರ ತಪವ,
ತಾವು ಗೆಯ್ದರೆಷ್ಟು ? ತತ್ತ್ವವರಿಯಬಹುದೆ ?
ವಿಶ್ವದಾಭಿರಾಮ ಕೇಳು ವೇಮ.

ಕಲಿಯುಗವು ಪಾಪದ ಯುಗವು. ಇಲ್ಲಿ ಜನಿಸಿದ ಮೇಲೆ ಸೂಕ್ತ ಸಾಧನ ಮಾಡಿ

ಗುರಿಯನ್ನು ತಲುಪಬೇಕು. ಇದಕ್ಕಾಗಿ ಮನೆ ಮಾರು ತೊರೆಯಬೇಕೇ ? ಇಲ್ಲ. ಮನಸ್ಸು, ಮನೆ ಮಾರು ನನ್ನದೆಂಬ ಅಂಟು ತೊರೆದರೆ ಸಾಕು. ಗುರಿ ತಲುಪಲು ಉಗ್ರ ತಪಸ್ಸು ಮಾಡಿ, ಉಪವಾಸ ಮಾಡಿ ಒಡಲನ್ನು ಬಡವಪಾಗಿಸಬೇಕೇ ? ಇಲ್ಲ. (ಯೋಗಿ ವೇಮನ ಗೌತಮ ಬುದ್ಧ ಮುಂತಾದ ಮಹಾತ್ಮರ ಜೀವನದಿಂದ ಇದು ನಿರರ್ಥಕ ಎಂದು ಸಿದ್ಧವಾಗಿದೆ) ಒಡಲನ್ನು ಬಡವ ಮಾಡಿದರೆ ಬಲಹೀನನಾಗುತ್ತಾನೆ. ಬಲಹೀನನಿಗೆ ಆತ್ಮವು ಲಭ್ಯವಾಗದು. ಅವನು ತತ್ತ್ವವನ್ನು ಅರಿಯುವುದು ಹೇಗೆ ?

ಕಂ. ಸರ್ವವು ತಾನದ ತಿಳಿಯಲು,
ನಿರ್ವಾಣಿಗೆ ಮುಕುತಿಯು ವಶವಾಗದೆ ಇಹುದೇ ?
ಉರ್ವಿಯನೆಲ್ಲ ತಿರುಗಿ ತಾ
ಪರ್ವತ, ಬಿಲ ಜಲಧಿಗಳಲಿ, ಬೀಳುವ ವೇಮಾ.

ಆತ್ಮವು ಸರ್ವತ್ರ ಇದೆ. ತಾನು ನಿಜದಲ್ಲಿ ಆತ್ಮವಾಗಿದ್ದಾನೆ. ಆದ್ದರಿಂದ ಸರ್ವವೂ ತಾನು. ಅದನ್ನು ಅರಿತರೆ, ನಿವೃತ್ತಿ ಪರನಿಗೆ, ಕೋರಿಕೆಯಿಲ್ಲದ ನಿರ್ವಾಣಿಗೆ, ಮುಕ್ತಿಯು ವಶವಾಗದೆ ಇರುವುದೇನು ? ಈ ಅರಿವು ಆಗುವ ಮುನ್ನ ಅವನು ದೇವರನ್ನು ಅರಸುತ್ತ ಭೂಮಿಯನ್ನೆಲ್ಲ ತಿರುಗುತ್ತಾನೆ. ಪರ್ವತಗಳಿಗೆ, ಗವಿಗಳಿಗೆ, ತೀರ್ಥಗಳಿಗೆ ಹೋಗಿ ಅಜ್ಞಾನ ಕೂಪದಲ್ಲಿ ಬೀಳುತ್ತಾನೆ.

ಆ. ಪರ್ವತ ವನವಾಸಿ ಪರಿಣಾಮ ವರ್ತನ
ಕೂಪವಾಸಿಯೆಂತು ಕಾರುಹು ಹಿಡಿವ ?
ಬ್ರಹ್ಮನಿಷ್ಠ ಪರಿ ಪ್ರಾಕೃತನರಿಯುವನೆ ?
ವಿಶ್ವದಾಭಿರಾಮ ಕೇಳು ವೇಮ.

ಇಂದು ಊರು-ಕೇರಿಯಲ್ಲಿ ವಾಸಿಯಾದವನು ನಾಳೆ ಪರ್ವತ-ವನಗಳಲ್ಲಿ ವಾಸವಾಗಿರಬಹುದು. ಎರಡೂ ತಾಣಗಳು ಜಡವೇ. ಆದರೂ ಪರಿಣಾಮ ವರ್ತನೆ ಇರಬಹುದು. ಇಂಥ ಜಡದ ಕೂಪದಲ್ಲಿ ವಾಸಿಯಾಗಿರುವವನು, ಕಾರ್ಣಾತೀತ ಬ್ರಹ್ಮದ ಕುರುಹನ್ನು ಹೇಗೆ ಗ್ರಹಿಸಬಲ್ಲನು ? ಗೃಹವಾಸಿಯಿರಲಿ, ಗುಹೆ ವಾಸಿಯಿರಲಿ, ಮನಸ್ಸು ಪ್ರಕೃತಿ ಮಾಯೆಯಲ್ಲಿ ಮುಳುಗಿರುತ್ತದೆ. ಬ್ರಹ್ಮ ನಿಷ್ಠನಾದರೋ, ಪ್ರಕೃತಿಯ ಗುಣಗಳಿಗೆ ಅತೀತನಾಗಿ ಗುಣಾತೀತನಿರುತ್ತಾನೆ. ಅಂದ ಮೇಲೆ, ಬ್ರಹ್ಮನಿಷ್ಠನ ಪರಿಯನ್ನು ಪ್ರಾಕೃತನು ಹೇಗೆ ಅರಿಯಬಲ್ಲನು?

ಹೀಗೆ ವೈರಾಗ್ಯವು, ಸಾಮಾನ್ಯರು ತಿಳಿದಿರುವಂತೆ, ಮನೆ, ಮಡದಿ, ಮಕ್ಕಳನ್ನು ತೊರೆದು ಅಗಲುವುದರಲ್ಲಿರದೆ ಅವರನ್ನು ಕುರಿತು ಮಮತೆಯ ಹಿಡಿತವನ್ನು ಸಡಿಲಿಸಿ ಕೊನೆಗೆ ಹಿಡಿತವನ್ನು ಮನಸ್ಸಿನಿಂದ ತೊಡೆಯುವುದರಲ್ಲಿದೆ. ದುಃಖಿತ ದುರ್ಬಲನು ಯಾವುದೇ ಯೋಗವನ್ನು ಅಭ್ಯಸಿಸಲು ಉದ್ಯುಕ್ತನಾದಾಗ ಕೆಲವು ಅಪರಿಹಾರ್ಯ ಕಷ್ಟಗಳಿಗೆ ಈಡಾಗುತ್ತಾನೆ. ಇಲ್ಲವೆ ಅವರ ಮನೋ ಸ್ಥೈರ್ಯವು ಕುಂದಬಹುದು. ಇನ್ನು ಸ್ವೇಚ್ಛೆಯಿಂದ ಶರೀರವನ್ನು ಬಲಗುಂದಿಸುವುದಂತೂ, ಆಧ್ಯಾತ್ಮಿಕ ಸಾಕ್ಷಾತ್ಕಾರದ ವಿಧಾನವಂತೂ ಅಲ್ಲ.

ಆ. ಸುಮ್ಮನಿದ್ದು ತಿಳಿಯೆ ಉತ್ತಮ ಯೋಗವದು,
ಮನಸು ಒಲಿಸಿಕೊಳಲು ಮಧ್ಯಮವದು.

ಆಸನಾದಿ ವಿಧಿಯು ಅಧಮ ಯೋಗ ಕಣಾ.
ವಿಶ್ವದಾಭಿರಾಮ ಕೇಳು ವೇಮ.

'ಜೀವಾತ್ಮ ಪರಮಾತ್ಮ ಸಂಯೋಗೋ ಯೋಗ ಇತ್ಯುಚ್ಯತೇ'. ಅಂದರೆ ಜೀವಾತ್ಮ ಮತ್ತು ಪರಮಾತ್ಮರು ಒಂದಾಗುವುದೇ ಯೋಗವಾಗಿದೆ. ಭಕ್ತಿಯೋಗದಲ್ಲಿ ಭಕ್ತನು ಭಗವಂತನೊಡನೆ ಒಂದಾಗತ್ತಾನೆ. ಪೂಜಕನು ಪೂಜ್ಯನಲ್ಲಿ, ಉಪಾಸಕನು ಉಪಾಸ್ಯದಲ್ಲಿ ಒಂದಾಗುತ್ತಾರೆ. ಮಾತು ಮನಂಗಳಿಂದತ್ತ ಮೀರಿದ ಪರಮಾತ್ಮನನ್ನು ಸೇರಿ ಒಂದಾಗಲು ಇರುವ ಸಾಧನಗಳಲ್ಲಿ ಸುಮ್ಮನಿದ್ದು ತಿಳಿಯುವುದು ಉತ್ತಮ ಮಾರ್ಗವಾಗಿದೆ. ಇನ್ನು ಆತ್ಮಕ್ಕೆ ಅತಿ ನಿಕಟವಾದ ತತ್ತ್ವವೇ ಬುದ್ಧಿ ತತ್ತ್ವವು. ಮನಸ್ಸು ಅತ್ತಿತ್ತ ಹರಿಯದಂತೆ ಒಲಿಸಿಕೊಂಡು ಆತ್ಮ ಸ್ವರೂಪ ಅವಸ್ಥೆ ತಲುಪುವಂತೆ ಮಾಡುವುದು ಮಧ್ಯಮ ಅವಸ್ಥೆಯು. ಆಸನ ಮತ್ತಿತರ ಕ್ರಿಯೆಗಳು ದೇಹವನ್ನು ಸ್ವಸ್ಥಗೊಳಿಸಲು ಪ್ರಯೋಜನಕಾರಿ. ಸ್ವಸ್ಥ ಮನಸ್ಸು ಸ್ವಸ್ಥ ದೇಹದಲ್ಲಿ ಇರುತ್ತದೆ. ಸ್ವಸ್ಥ ಮನಸ್ಸು ಏಕಾಗ್ರಗೊಳ್ಳಬಲ್ಲದು. ಏಕಾಗ್ರತೆಯಿಂದ ಲಕ್ಷ್ಯವನ್ನು ದರ್ಶಿಸಬಹುದು. ಹೀಗೆ ಆಸನಾದಿ ವಿಧಿಯು ಯೋಗಕ್ಕೆ ದೂರದ ಸಂಬಂಧ ಹೊಂದಿದೆ. ಆದ್ದರಿಂದ ಅದು ಅಧಮ ಯೋಗವೆನಿಸಿದೆ.

ಊರು, ಕಾಡು, ತಿರುಗಿ ಇರುವುದನು ಕಾಣದೆ,
ಹೋರಿ, ಗುರು ಕಾಣದೆ, ಹೊಂದಿಕೊಳದೆ,
ಗೊಂದಲವನು ಕಾಣು ; ಗಡಬಡಿಸಲೇತಕೆ ?
ವಿಶ್ವದಾಭಿರಾಮ ಕೇಳು ವೇಮ.

ಆತ್ಮವನ್ನು ಸಾಕ್ಷಾತ್ಕರಿಸಿಕೊಳ್ಳಲು ವೈರಾಗ್ಯ ಬೇಕು. ವೈರಾಗ್ಯವೆಂದರೆ ಮನೆ ಮಾರು ತೊರೆದು, ಹೆಂಡಿರು ಮಕ್ಕಳನ್ನು ತೊರೆದು ಊರೂರು, ಕಾಡು ತಿರುಗಬೇಕು ಎಂಬ ಭಾವನೆಯಿದೆ. ಆತ್ಮವು ತನ್ನೊಳಗೇ ಇದೆ. ಅದನ್ನು ಅರಿಯುವ ವಿಧಾನ ತಿಳಿಯದೆ ಊರು ಕಾಡು ತಿರುಗಿ ಇದ್ದುದನ್ನೇ ಕಾಣರು. ಅದಕ್ಕಾಗಿ ಕಷ್ಟ ಕಾರ್ಪಣ್ಯಗಳನ್ನು ಜಯಿಸಲು ಹೋರಾಡುತ್ತಾರೆ. ಹಾದಿ ತೋರುವ ಗುರುವನ್ನೂ ಕಾಣದಿರಬಹುದು. ಕಂಡರೂ ಅವರ ನಿಯಮ ನಿಬಂಧನೆಗಳೊಂದಿಗೆ ಹೊಂದಿಕೊಳ್ಳದಿರಬಹುದು. ಆಗ ಮನದಲ್ಲಿ ಗೊಂದಲವೇಳುತ್ತದೆ. ಆಗ ಬಡಬಡಿಸುವುದೇಕೆ ? ಕಾರಣಗಳನ್ನು ತಿಳಿದು ಆತ್ಮವನ್ನು ಅರಿತಕೊಳ್ಳಬೇಕು.

ಗುಹೆಯೊಳಗೆ ಸೇರಿ ಗುರುವರಸುವಾಗ,
ಕ್ರೂರ ಮೃಗವದೊಂದು ಕೊಸರಿ ಬರಲು,
ಮುಕ್ತಿ ದಾರಿ ತಾನೆ ಮುಂದಾಗಿ ತೋರಿತು.
ವಿಶ್ವದಾಭಿರಾಮ ಕೇಳು ವೇಮ.

ಸಾಧಕನು ವಿರಾಗಿಯಾಗಿ ಮನೆಮಾರು ತೊರೆದು, ತಪಸ್ಸು ಮಾಡಲೆಂದು ಗುಹೆ ಸೇರುತ್ತಾನೆ. ತಪಸ್ಸಿನಿಂದ ಮನೋಶುದ್ಧಿಯಾಗಬಹುದು. ಆದರೆ ಗುರುವಾದವನು ತಪೋನಿರತನೇನಲ್ಲ. ಆದರೆ ಗುಹೆಗಳಲ್ಲಿ ಗುರುಗಳು ವಾಸಿಸುವರೆಂದು ತಿಳಿದು ಗುಹೆಯನ್ನು ಸೇರಿ ಗುರುವನ್ನು ಅರಸುವಾಗ, ಗುರುವು ಸಂಧಿಸದೆ, ಕ್ರೂರ ಮೃಗವು ಕೊಸರಿ ಬಂದು ಕೊಲ್ಲುತ್ತದೆ.

ಅಂತೂ ಪ್ರಾಣವು ದೇಹದಿಂದ ದೂರವಾಗುತ್ತದೆ. ಹೀಗೆ ಮುಕ್ತ್ಯಾಕಾಂಕ್ಷೆಯಿಂದ ಸದ್ಗುರು ಶೋಧದಲ್ಲಿದ್ದಾಗ ಕ್ರೂರ ಮೃಗವು ಮುಂದಾಗಿಯೇ ತಥಾಕಥಿತ ಮುಕ್ತಿಯನ್ನು ತೋರುತ್ತದೆ.

ಭಕ್ತನು ಗಂಭೀರ ಸ್ವಭಾವದವನಿರಬೇಕೆಂದೂ ಜೋಲು ಮುಖದವನಿರಬೇಕೆಂದೂ ಜನರು ತಿಳಿಯುತ್ತಾರೆ. ಹಾಗೇನೂ ಇಲ್ಲ. ಪ್ರಸನ್ನವದನನಾಗಿರಬೇಕು. ಹಾಸ್ಯ ಪ್ರವೃತ್ತಿಯವನಿರಬೇಕು. ಅವನ ಬರೆಹದಲ್ಲಿ ತಿಳಿ ಹಾಸ್ಯ ಸೂಸುತ್ತಿರಬೇಕು. ಮೇಲಿನ ಪದ್ಯವು ಅದಕ್ಕೊಂದು ನಿದರ್ಶನ.

ಗೀತ

ಗುಹೆಗಳ ಹದಿ ಸಾವಿರ ಹೊಗಲು ಗುಣವಳಿಯದು.
ನಿರುತ ಗುರುಭಕ್ತಿಯು ಬೇಕು, ನಿಖಿಲ ಕುರಿತು.
ಮಹಿಯಲಿ ಪರತತ್ತ್ವ ಭಾವವು ಮಧುರವಿಹುದು.
ಅದನು ಸಾಧಿಸುವುದಕೆ ಹೆಣಗು ಅರಿತು ವೇಮಾ.

ಗೃಹದಲ್ಲಿ ವಾಸವಾದರೇನು ? ಗುಹೆಯಲ್ಲಿ ವಾಸವಾದರೇನು ? ಕಾಮೋಪಭೋಗ ಪ್ರವೃತ್ತಿಯ ಶಮನವು ಮುಖ್ಯವಾದದ್ದು. ತಪ ಮಾಡಲೆಂದು ಗುಹೆಗೆ ಹೋಗಿ, ಮೊದಲಿನ ರಜಸ್ತಮೋ ಗುಣಗಳನ್ನೇ ಮನದಲ್ಲಿ ಎಣಿಕೆ ಹಾಕಿದರೆ, ಆ ಗುಣಗಳು ಅಳಿಯುವವೇ ? ಗುಣವು ಅಳಿಯಬೇಕಾದರೆ, ಗುರೂಪದೇಶ ಬೇಕು. ನಿಜವಾದ ಗುರುಭಕ್ತಿ ಬೇಕು. ಗುರು ಬೋಧೆಯಂತೆ ಅನುಷ್ಠಾನ ಮಾಡಿ ಎಲ್ಲವನ್ನೂ ಕಲಿಯಬೇಕು. ದೇವರನ್ನು ನಾವು ಪ್ರೀತಿಸಿದರೆ, ದೇವರು ನಮ್ಮನ್ನು ಪ್ರೀತಿಸುತ್ತಾನೆ. ಹೀಗೆ ಮಹಿಯಲ್ಲಿ ಪರತತ್ತ್ವ ಭಾವವು ಮಧುರವಾಗಿದೆ. 'ಮಲಗಿ ಪರಮಾದರದಿ ಪಾಡಲು, ಕುಳಿತು ಕೇಳುವ, ಕುಳಿತರೆ ನಿಲುವ, ನಿಂತರೆ ನಲಿವ ; ನಲಿದರೆ ಒಲಿವೆ' ಎನ್ನುವ ಮಧುರ ಪ್ರೇಮವದು. ಅದನ್ನು ಅರಿತು, ಸಾಧಿಸುವುದಕ್ಕಾಗಿ ಹೆಣಗಬೇಕು.

ಭಕ್ತನು ಪ್ರಸನ್ನನಾಗಿರಬೇಕು, ನಗುಮುಖದವನಾಗಿರಬೇಕು. ಆದರೆ ಹಗುರ ಮಾತಿನವನೂ ಇರಕೂಡದು. ಖೊಳ್ಳೆಂದು ನಗುವವನೂ ಆಗಿರಕೂಡದು. ಮಾತು ಕೋಗಿಲೆ ಕೂಜನದಂತೆ ಧ್ವನಿಸಬೇಕು. ಮುತ್ತಿನ ಹಾರದಂತೆ ಹೆಣೆದಿರಬೇಕು.

ಕೋಗಿಲೆ ವನದಲಿ ಕು...ಹೂ, ಹಾಡುವಂತೆ,
ನುರಿತ ಜನರ ಭಾವ ನಡೆಯು ನುಡಿಯು.
ಕಾಗೆ ಕೂಗಿನಂತೆ ಕಲುಷಾತ್ಮನ ವಚನ.
ವಿಶ್ವದಾಭಿರಾಮ ಕೇಳು ವೇಮ.

ಅಲ್ಪನಾಡುತಿಪ್ಪ ಆಡಂಬರದ ನುಡಿ,
ಒಳ್ಳೆಯವನಾಡುವ ಮಧುರ ನುಡಿಯ.
ಕಂಚು ಮೊಳಗುವಂತೆ ಕನಕ ಮೊಳಗುವುದೇ ?
ವಿಶ್ವದಾಭಿರಾಮ ಕೇಳು ವೇಮ.

ಪರಾಭಕ್ತಿ

ವೈರಾಗ್ಯದ ಸಿದ್ಧತೆ :

ನಾವು ಇದುವರೆಗೆ ಭಕ್ತಿಯ ಸಿದ್ಧತೆಯನ್ನು ಕುರಿತು ಚರ್ಚಿಸಿದೆವು. ಈಗ ಪರಾಭಕ್ತಿ ಅಂದರೆ ಪರಮ ಭಕ್ತಿಯನ್ನು ಕುರಿತು ಆಲೋಚಿಸುವಾ :

ತನು ಇಂದ್ರಿಯ ಮನಗಳನ್ನು ಶಿವನಿಗರ್ಪಿಸಿ, ತಾನು ಬೇರೆ, ಶಿವನು ಬೇರೆ ಎನ್ನದೆ ಚಿತ್ ಬಯಲಿನಲ್ಲಿ ಸೊಗಯಿಸುವ ಭಕ್ತಿ ಮಾಡುವುದೇ ನಿರ್ಗುಣೀ ಭಕ್ತಿಯಾಗಿದೆ. ಇದು ಭಕ್ತಿಯ ಅಂತಿಮ ಅವಸ್ಥೆಯಾಗಿದೆ. ಈ ಅವಸ್ಥೆಯನ್ನು ತಲುಪಬೇಕಾದರೆ ಹಲವಾರು ಪೂರ್ವ ಸಿದ್ಧತೆಗಳು ಬೇಕು. ಈ ಪರಮ ನಿರ್ಗುಣ ಭಕ್ತಿಯ ಆಚರಣೆಯಲ್ಲಿ ಅವಶ್ಯವೆನಿಸುವ ಪೂರ್ವ ಸಿದ್ಧತೆಗಳಾವವು ? ಇಂಥ ಪೂರ್ವಸಿದ್ಧತೆಗಳು ಮನಸ್ಸಿನ ಶುದ್ಧೀಕರಣಕ್ಕೆ ಮರ್ಯಾದಿತವಾಗಿವೆ. ಅನಾತ್ಮದ ಉಪಾಧಿ ಹೊಂದಿದ ಜೀವನಿಗೂ ಸಂಬಂಧಿಸಿವೆ. ಆದರೆ ಅವುಗಳಿಂದ ಆತ್ಮನ ಸಾಕ್ಷಾತ್ಕಾರವು ಅಸಾಧ್ಯ. ಅದಕ್ಕೆ ನಿರ್ಗುಣೀ ಭಕ್ತಿಯನ್ನೇ ಹೊಂದಬೇಕು. ನಾಮ ಜಪ, ಆಚಾರ-ವಿಧಿ, ಪ್ರತೀಕೋಪಾಸನೆ ಇತ್ಯಾದಿಗಳೆಲ್ಲ ಮನೋಶುದ್ಧಿಯ ಸಾಧನೆಗಳೇ ಆಗಿವೆ.

ಕಿಲುಬುಗಟ್ಟಿದಂಥ ತಾಮ್ರಕುಂಟು ಬೆಲೆಯು.
ಕಿಲುಬುಗಟ್ಟಿ ತಾಮ್ರ ಕಿಲ್ಲಬೆಲೆಯು.
ಹುಳಿಯು ಇರದೆ ತಾಮ್ರ ಕಿಲುಬು ಹೋಹುದೆಂತು ?
ವಿಶ್ವದಾಭಿರಾಮ ಕೇಳು ವೇಮ.

ಮನಸ್ಸು ತಾಮ್ರದಂತೆ. ತಾಮ್ರ ಶುದ್ಧವಿದ್ದರೆ ಅದನ್ನು ರಸವಿದ್ಯೆಯಿಂದ ಸ್ವರ್ಣವಾಗಿಸಬಹುದು. ಆದ್ದರಿಂದ ಕಿಲುಬುಗಟ್ಟಿದ ತಾಮ್ರಕ್ಕೆ ಬೆಲೆಯುಂಟು. ಒಂದು ವೇಳೆ, ತಾಮ್ರವು ಕಿಲುಬುಗಟ್ಟಿದರೆ ಅದಕ್ಕೆ ಬೆಲೆ ಬಾರದು. ತಾಮ್ರದ ಕಿಲುಬು ಹೋಗಬೇಕಾದರೆ ಏನು ಮಾಡಬೇಕು ? ಹುಳಿಯಿಂದ ಚೆನ್ನಾಗಿ ತಿಕ್ಕಬೇಕು. ಅದೇ ರೀತಿ, ವಿಷಯಗಳ ಕಿಲುಬು ಅಂಟಿದ ಮನವನ್ನು ನಾಮ ಜಪ, ಸದಾಚಾರ, ಪ್ರತೀಕ ಪೂಜೆಗಳ ಮೂಲಕ ನಿರ್ಮಲಗೊಳಿಸಬೇಕು.

ಸೊಪ್ಪು ಅಡುವ ಮುನ್ನ ಸೇರಿದ ಕಸವೆಲ್ಲ,
ಅರಿತುಕೊಂಡು ಮುಂಚೆ ಆರಿಸುತಿರು.
ತಾಣ ತಪ್ಪಿದ ಬಳಿಕ ಧರ್ಮವು ಹುಟ್ಟುವುದೆ ?
ವಿಶ್ವದಾಭಿರಾಮ ಕೇಳು ವೇಮ.

ಅಡುಗೆ ಮಾಡುವವರಿಗೆಲ್ಲ ಚೆನ್ನಾಗಿ ತಿಳಿದ ವಿಷಯವೆಂದರೆ, ಸೊಪ್ಪು ಅಡುವ ಮೊದಲು ಅದರಲ್ಲಿ ಸೇರಿದ ಎಲ್ಲ ಕಸಕಡ್ಡಿಗಳನ್ನು ಆರಿಸಿ ತೆಗೆಯಬೇಕು. ಇಲ್ಲವಾದರೆ, ಅದೂ ಅಡುಗೆಯಲ್ಲಿ ಸೇರಿ ಹೊಟ್ಟೆ ಸೇರುತ್ತದೆ. ಮತ್ತು ಸ್ವಾಸ್ಥ್ಯ ಕೆಡಿಸುತ್ತದೆ. ಹೀಗೆ ಮನಸ್ಸಿನಲ್ಲಿ ಸೇರಿದ ಕ್ರೋಧ, ಕಾಮಾದಿಗಳನ್ನೂ, ಭಯ ಶಂಕೆಗಳನ್ನೂ ಕಳೆದುಕೊಂಡು ಮನವನ್ನು ಧ್ಯಾನಕ್ಕೆ ಸಜ್ಜುಗೊಳಿಸಬೇಕು. ತಾಣ ತಪ್ಪಿದ ಬಳಿಕ ಧರ್ಮವು ಹುಟ್ಟಲಾರದು.

ಭಕ್ತಿ ಸಂಪಾದನೆಯ ಪೂರ್ವ ಸಿದ್ಧತೆಯಿಂದ ಮನೋಶುದ್ಧಿಯನ್ನು ಸಾಧಿಸುವ ವಿಧಾನಗಳನೇಕ.

ಆ. ಕಲಕಿದಂಥ ಮನದಿ ಕುದುರಿದ ಗುಣಗಳನು
ತೊಡೆದು ಕಡಿದು ಬೇಗ ತವಕ ಹಿಂಗಿ,
ಸತತವಾಗಿ ಬುದ್ಧಿ ಶುದ್ಧವಿಡಲು ಮುಕ್ತಿ.
ವಿಶ್ವದಾಭಿರಾಮ ಕೇಳು ವೇಮ.

ರಾಜಸ ಗುಣದಿಂದ ಕರ್ಮಸಂಗವಾಗುತ್ತದೆ. ಲೋಭಸಂಗವಾಗುತ್ತದೆ. ಇದರಿಂದ ಮನಸ್ಸು ಕಲಕಿದಂತಾಗುವುದು. ಕಲಕಿದ ಮನದಲ್ಲಿ ರಾಜಸ ಮತ್ತು ತಾಮಸ ಗುಣಗಳು ಕುದುರುತ್ತವೆ. ಅವುಗಳನ್ನು ತೊಡೆದು, ಕಡಿದು ಹಾಕಿ, ಕಾಮೋಪಭೋಗಗಳ ತವಕವು ಹಿಂಗಿ, ಬುದ್ಧಿಯನ್ನು ಎಲ್ಲ ಮನೋವಿಕಾರಗಳಿಂದ ಸತತವಾಗಿ ಶುದ್ಧವಿಡಬೇಕು. ಆಗ ಮನವು ನಿಸ್ತರಂಗವಾಗಿ ಆತ್ಮವತ್ ಆಗುತ್ತದೆ. ಅದುವೇ ಎಲ್ಲ ಐಹಿಕ ವಿಕ್ಷೋಭಗಳಿಂದ ಮುಕ್ತಿ ಎನಿಸುತ್ತದೆ.

ಆ. ಸೋಸಿ ಸುಖ ದುಃಖವ, ಸೇರಿ ಒಳಗೆ, ಮೀರಿ,
ತಾನು ತಾನಹ ತತ್ತ್ವ ತಾಕಿ ತಾಕಿ,
ಇಂತಿರದೆ ಇದ್ದೊಡೆ ಎಂತು ಕಡೆಗಾಣುವ ?
ವಿಶ್ವದಾಭಿರಾಮ ಕೇಳು ವೇಮ.

ಬಹಿರ್ಮುಖವಾದ ಇಂದ್ರಿಯಗಳು ವಿಷಯ ಸಂಸರ್ಗ ಹೊಂದಿ ಸಂವೇದನೆ ಹೊಂದುತ್ತವೆ. 'ಅನುಕೂಲ ವೇದನೀಯಂ ಸುಖಂ ; ಪ್ರತಿಕೂಲ ವೇದನೀಯಂ ದುಃಖಂ'. ಅಂದರೆ ನಮ್ಮ ಇಚ್ಛೆಗೆ ಅನುಕೂಲವಾದ ವೇದನೆಯೆಂದರೆ ಸುಖವೆನಿಸುತ್ತದೆ. ಪ್ರತಿಕೂಲವೇದನೆಯಾದರೆ ದುಃಖವೆನಿಸುತ್ತದೆ. ಇವುಗಳನ್ನು ವಿವೇಕದ ಜರಡಿಯಲ್ಲಿ ಸೋಸಿ, ದುಃಖಿವನ್ನು ತೆಗೆದು ಸುಖಿವನ್ನು ಉಳಿಸಿಕೊಳ್ಳಬೇಕು. ಬಳಿಕ ಸುಖಿವೂ ಊರ್ಧ್ವ ಗಮನಕ್ಕೆ ಅಡ್ಡಿಯೇ ಎಂದು ಅರಿತು ಅದನ್ನು ಸಾಣೆಸಬೇಕು. ಹೀಗೆ ಬಾಹ್ಯ ಸುಖ ದುಃಖ ವೇದನೆಯನ್ನು ದಾಟಿ, ಆಂತರ್ಯವನ್ನು ಸೇರಬೇಕು. ಅಲ್ಲಿ ಹೆಚ್ಚಾಗಿ ಮಗ್ನನಾಗಿ, ತಾನು ತಾನೇ ಆದ ತತ್+ತ್ವವನ್ನು ತಾಕಿ ತಾಕುತ್ತಿರಬೇಕು. 'ತತ್ ತ್ವಮ್ ಅಸಿ' ಎಂದು ಸಾಕ್ಷಾತ್ಕರಿಸಿಕೊಳ್ಳಬೇಕು. ಹೀಗೆ ಇರದೆ ಹೋದರೆ ಭವ ಸಾಗರದಿಂದ ಕಡೆಗಾಣುವುದು ಹೇಗೆ ?

ಆ. ಅದುಮಿ ಮನಸು ನಿಲಿಸಿ ಆನಂದ ಕೇಳಿಯಲಿ
ಬ್ರಹ್ಮಮಯದ ಮುಕ್ತಿ ಪಡೆಯೆ ಕೋರಿ,
ಜಿಹ್ವೆ ರುಚಿಗಳಿಂದ ಜೀವಿ ಕೆಡುವನಲ್ಲ !
ವಿಶ್ವದಾಭಿರಾಮ ಕೇಳು ವೇಮ.

ಸುಖ ದುಃಖಿಗಳನ್ನು ಅನುಭವಿಸುವ ಮನಸ್ಸನ್ನು ಅದುಮಿ, ಊರ್ಧ್ವ ಸ್ತರಕ್ಕೇರಿ ಅಲ್ಲಿ ಆನಂದ ಕೇಳಿಯಲ್ಲಿ, ಅಂದರೆ ಆಟದಲ್ಲಿ ಬ್ರಹ್ಮಮಯವಾದ ಮುಕ್ತಿಯನ್ನು ಕೋರಿ ಪಡೆಯಬೇಕು. ಆದರೆ ಬಾಹ್ಯ ಇಂದ್ರಿಯಗಳ ಅಪೇಕ್ಷೆಗೆ ಸಿಲುಕಿ, ಉದಾಹರಣೆಗೆ ಜಿಹ್ವೆಯ

ರುಚಿಗೆ ಒಲಿದು ಜೀವಿಯು ಕೆಡುವನಲ್ಲವೇ ? ಯಾಜಕನು ಯಜ್ಞ ಶೇಷವಾದ ಮಾಂಸದ ರುಚಿಗೆ, ಪೂಜಾರಿಯು ದೇವದಾಸಿಯ ಅಧರ ರುಚಿಗೆ ಬಿದ್ದು ಕೆಡುವನಲ್ಲವೇ ?

ಸುಖಗಳೆಲ್ಲ ತಿಳಿದು ಸಲೆ ಕಾಣಲು ದುಃಖ.
ಪಾಪ ಪೂರ್ವಕವಿದೆ ಪುಣ್ಯವೆಲ್ಲ.
ಕಳ್ಳ ಕೋರಿಕೆ ವಿಧ ಕೊರತೆಗಳಿರುವವಲ !
ವಿಶ್ವದಾಭಿರಾಮ ಕೇಳು ವೇಮ.

ಮೊದಲಿನ ಪದ್ಯದಲ್ಲಿ ಸುಖವೆಂದರೇನು ? ದುಃಖವೆಂದರೇನು ? ಎಂಬುದನ್ನು ತಿಳಿದೆವು. ಈಗ ಸುಖಕ್ಕೂ ದುಃಖಕ್ಕೂ ಸಂಬಂಧವೇನು ? ಎಂಬುದನ್ನು ತಿಳಿಯೋಣ. ಸುಖ ದುಃಖಗಳು ಒಂದೇ ನಾಣ್ಯದ ಎರಡು ಬದಿಗಳೆಂದು ಕೆಲವರು ಹೇಳುತ್ತಾರೆ. ಎಲ್ಲ ಸುಖಗಳೂ, ಸರಿಯಾಗಿ ತಿಳಿದು ನೋಡಿದರೆ, ದುಃಖವೇ ಎಂದು ಯೋಗಿ ವೇಮನರ ಮತ. ಇದಲ್ಲದೆ ಸುಖವೀಯುವ ಪುಣ್ಯವೆಲ್ಲ ದುಃಖ ವೀಯುವ ಪಾಪ ಪೂರ್ವಕವಾಗಿಯೇ ಇದೆ. ಹೇಗೆಂದರೆ ದೇವಾಲಯಗಳಲ್ಲಿ ಹುಂಡಿಗೆ ಹಾಕುವ ಹಣವನ್ನು ಆ ಧನಿಕನು ಕಳ್ಳಪೇಟೆಯಿಂದಾಗಲಿ, ಕಲಬೆರಕೆ ವ್ಯಾಪಾರದಿಂದಾಗಲಿ, ಕರತಪ್ಪಿಸುವಿಕೆಯಿಂದಾಗಲಿ, ಜೂಜು ಖೋರತನದಿಂದಾಗಲಿ, ಇನ್ನಾವುದೋ ಪಾಪಕೃತ್ಯವನ್ನು ಮಾಡಿ ಗಳಿಸಿರುತ್ತಾನೆ.. ಇನ್ನು ನಮ್ಮ ಜೀವನದಲ್ಲಿ ಕೊರತೆ ಎಂದರೇನು ? ಮಾನವನು ಸುತ್ತು ಮುತ್ತು ನೋಡಿ ತನ್ನಲ್ಲಿ ಇಲ್ಲದ್ದು ಬೇರೆಯವರಲ್ಲಿ ಇರುವುದನ್ನು ಕಂಡಾಗ ತನಗೆ ಅದರ ಕೊರತೆಯಿದೆಯೆಂದು ಭಾವಿಸುತ್ತಾನೆ. ಹೀಗೆ ಮನಸ್ಸಿನೊಳಗಿನ ಕೋರಿಕೆಗಳೇ ಕೊರತೆ ಎನಿಸುತ್ತವೆ.

ಚಿತ್ತವೆಂಬ ಬೇರು ಶಿಥಿಲವಾಗಲಾಗ,
ಶಕ್ತಿಯೆಂಬ ಮರವು ಸೊಟ್ಟಗಾಯ್ತು.
ಕೋರ್ಕೆಯೆಂಬ ದೊಡ್ಡ ಶಾಖೆಗಳುದಿಸವೇ ?
ವಿಶ್ವದಾಭಿರಾಮ ಕೇಳು ವೇಮ.

ಸಗುಣ ಬ್ರಹ್ಮದ ಮೇಲೆ ಸತ್ತ್ವ ಗುಣದ ಅನ್ವಯದಿಂದ ಬುದ್ಧಿ ತತ್ತ್ವವೂ, ರಜೋಗುಣದ ಅನ್ವಯದಿಂದ ಅಹಂ ತತ್ತ್ವವೂ ಮತ್ತು ತಮೋ ಗುಣದ ಅನ್ವಯದಿಂದ ಚಿತ್ತ ತತ್ತ್ವವೂ ನಿರ್ಮಾಣವಾಗುತ್ತವೆ. ಚಿತ್ತ ತತ್ತ್ವವು ಇಂದ್ರಿಯ ವಿಷಯ ಸಂಸರ್ಗದಿಂದ ಫಲಿಸುವ ವೃತ್ತಿಗಳನ್ನು ಸಂಗ್ರಹಿಸುತ್ತದೆ. ಮತ್ತು ತನ್ನಲ್ಲಿ ಸಂಕಲಿತ ಪೂರ್ವ ವೃತ್ತಿಗಳನ್ನು ಹೊಂದಿರುತ್ತದೆ. ಇದರ ಬೇರು ಶಿಥಿಲಗೊಂಡಾಗ ಚಿತ್ತ ಶಕ್ತಿಯೆಂಬ ಮರವು ಬಾಗುತ್ತದೆ, ಸೊಟ್ಟಗಾಗುತ್ತದೆ. ದೇವರನ್ನು ತದೇಕ ಚಿತ್ತನಾಗಿ ಉಪಾಸಿಸದಿದ್ದರೆ, ಚಿತ್ತದ ಮರಕ್ಕೆ ಕೋರಿಕೆಗಳೆಂಬ ದೊಡ್ಡ ಶಾಖೆಗಳು ಬೆಳೆಯುತ್ತವೆ.

ಚಿತ್ತ ಶುದ್ಧಿ ಹೊಂದಿ ಗೆಯ್ದ ಪುಣ್ಯ ಕಾರ್ಯ
ಕೊಂಚವಾದರೇನು ? ಕ್ಷುಲ್ಲಕಲ್ಲ.
ಆಲದ ಮರವೆಷ್ಟು ? ಅದರ ಬೀಜವೆಷ್ಟು ?
ವಿಶ್ವದಾಭಿರಾಮ ಕೇಳು ವೇಮ.

ರಜೋಗುಣವು ಕರ್ಮ ಸಂಗವಾಗಿದೆ. ಕರ್ಮ ಸಂಗವಿರುವಾಗ ಕರ್ತಾನು ಪಾಪ

ಕರ್ಮವನ್ನಾಗಲಿ ಇಲ್ಲವೆ ಪುಣ್ಯ ಕರ್ಮವನ್ನಾಗಲಿ ಮಾಡಿಯೇ ಮಾಡುತ್ತಾನೆ. ಕರ್ತೃತ್ವಾಭಿಮಾನವೂ ಇರುತ್ತದೆ. 'ಅಹಂ ಕರ್ತಾ ಫಲ ಭೋಕ್ತಾ'. 'ನಾನು' ಮಾಡುತ್ತದೆ, ಫಲವನ್ನು ಭೋಗಿಸುತ್ತದೆ. ಫಲ ಭೋಗದಿಂದ ದೂರವಿರಬೇಕಾದರೆ, ಆಸಕ್ತಿ ತೊರೆಯಬೇಕು. ಅಂದರೆ ಚಿತ್ತ ಶುದ್ಧಿ ಹೊಂದಬೇಕು. ಚಿತ್ತ ಶುದ್ಧಿಯಿಂದ ಮಾಡಿದ ಪುಣ್ಯ ಕಾರ್ಯ ಕೊಂಚವಾದರೇನು ? ಅದು ಕ್ಷುಲ್ಲಕವಲ್ಲ. ಮನಸ್ಸಿನ ಊರ್ಧ್ವಗತಿಗೆ ತಕ್ಕ ಅಡಿಪಾಯವಾಗುತ್ತಿದೆ. ಆಲದ ಬೀಜವು ಎಷ್ಟೊಂದು ಚಿಕ್ಕಾದಾಗಿರುವುದಿಲ್ಲವೇ ? ಆದರೆ ಅದರಿಂದ ಬೆಳೆಯುವ ಆಲದ ಮರವು ಎಷ್ಟೊಂದು ಬೃಹತ್ತಾಗಿರುತ್ತದಲ್ಲವೇ ?

ಆ. ಉದಕದಲ್ಲಿ ಪಾಚಿ ಉಂಟು ನೋಡಿರಯ್ಯ ;
ಮನದೊಳಿರುವ ಮಾಯೆ ಮುಚ್ಚಿ ಇಹುದು.
ಸದನದಲ್ಲಿ ಬ್ರಹ್ಮ ಸಾಕ್ಷಿ ಎಂದು ಎಣಿಸು.
ವಿಶ್ವದಾಭಿರಾಮ ಕೇಳು ವೇಮ.

ನೀರಿನ ಮಡುವಿನಲ್ಲಿ ಪಾಚಿ ಬೆಳೆದು ನೀರಿನ ಆಳವನ್ನೇ ಮುಚ್ಚಿರುತ್ತದೆ. ಆ ರೀತಿ ಮನದೊಳಗೆ ಮಾಯೆ ಇಲ್ಲವೆ ಭ್ರಾಂತಿಯೆಂಬ ಪಾಚಿ ಬೆಳೆದು ಸತ್ಯವನ್ನೇ ಮುಚ್ಚಿರುವುದು. ತೋರಿಕೆಯ ಜಗತ್ತು ಉತ್ಸರ್ಗ. ಅಂದರೆ ಉತ್ಸದಿಂದ ಬಂದಿರುವುದು. ಆದರೆ ಉತ್ಸವಲ್ಲ. ಉತ್ಸರ್ಗವನ್ನು ಅಪವಾದ ಮಾಡಿ ಉತ್ಸ ಅಂದರೆ ಸತ್ಯವನ್ನು, ಬ್ರಹ್ಮವನ್ನು ಕಾಣಬೇಕು. ಬ್ರಹ್ಮನು ಸದನದಲ್ಲಿ ಸಾಕ್ಷಿಯಾಗಿ ಇದ್ದಾನೆ. ನಾವು ನೋಡದಿರಬಹುದು. ಆದರೆ ಅವನು ಎಲ್ಲದಕ್ಕೂ ಸಾಕ್ಷಿಯಾಗಿದ್ದಾನೆ.

ಆ. ಮರ್ಮವಿದನು ಅಷ್ಟೆ ; ಮರ್ಮ ಕಾಣಲಾರ.
ಕರ್ಮಜೀವಿಯಷ್ಟೆ ; ಕಾಣಲಾರ.
ನೀರಿಗಿಳಿಯದಾಳ ನಿಜವ ತಿಳಿಯುವನೇ ?
ವಿಶ್ವದಾಭಿರಾಮ ಕೇಳು ವೇಮ.

ಮರ್ಮವಿದನು, ಬ್ರಹ್ಮವು ತೋರಿಕೆಯಲ್ಲಿ ಇಲ್ಲ. ರಹಸ್ಯವಾಗಿದೆಯೆಂದು ತಿಳಿಯುತ್ತಾನೆ. ಆದರೆ ಮರ್ಮವನ್ನು ಕಾಣಲಾರನು. ಏಕೆಂದರೆ ಅದು ಇಂದ್ರಿಯಗಳಿಗೆ ಅಗೋಚರವಾಗಿದೆ. ಅದೇ ರೀತಿ, ಕರ್ಮ ಜೀವಿಯು ದೇಹೇಂದ್ರಿಯ ಮೂಲಕ ಕರ್ಮ ಮಾಡುತ್ತಾನೆ. ಬ್ರಹ್ಮವು ಸೂಕ್ಷ್ಮಾತಿಸೂಕ್ಷ್ಮವಾದುದರಿಂದ ಅವನೂ ಕಾಣಲಾರ. ಹಾಗಾದರೆ ಬ್ರಹ್ಮವನ್ನು ತಿಳಿಯುವುದೆಂತು? ತೋರಿಕೆಯಲ್ಲಿ ನೀರು ಮಡದಲ್ಲಿ ಸಮಪಾತಳಿಯಲ್ಲಿ ಇರುವಂತೆ ತೋರಿದರೂ ಸಹ, ಅದರಲ್ಲಿ ಕಾಲಿರಿಸಿ ಇಳಿಯದೆ ನಿಜವಾದ ಆಳ ತಿಳಿಯದು. ಅದೇ ರೀತಿ, ಮರ್ಮವಿದನು ಅನುಭವದ ಆಳಕ್ಕೆ ಇಳಿದಾಗ ಬ್ರಹ್ಮವು ಅಪಾರವೆಂದೂ, ಅಗಾಧವೆಂದೂ ಅರಿಯುತ್ತಾನೆ.

ಗೀತ. ದೇಹ ಸಂಕಟದಲಿ ದಂಡಿಸಿ ದೂರ ಮಾಡಿ,
ಮೋಹ ದೃಷ್ಟಿ ತೊರೆದು, ಮೂಲವರಿತು,
ಊಹೆಯೊಂದನಿರಿಸಿ, ಬಾಣ ಊರ್ಧ್ವ ಬಿಟ್ಟು
ಸ್ನೇಹವರಿಯೆ ಪರಮ ಯೋಗ ಸಿದ್ಧಿ ವೇಮ.

ಆತ್ಮನು ದೇಹದ ಉಪಾಧಿಯಿಂದ ಜೀವನೆನಿಸಿದ್ದಾನೆ. ದೇಹದ ಮೇಲಿನ ಸ್ವಾಮಿತ್ವಾಭಿಮಾನ ಇರುವ ವರೆಗೆ ಜೀವ ಭಾವವೇ ಇರುತ್ತದೆ. ದೇಹ ಭಾವವನ್ನು ತ್ಯಜಿಸುವುದು ಬಹಳ ಸಂಕಟದಾಯಕ. ಆದರೂ ಅದನ್ನು ದಂಡಿಸಿ, ದೂರ ಮಾಡಿ, ಅದರ ಮೇಲಿನ ಮೋಹವನ್ನೆಲ್ಲ ತೊರೆಯಬೇಕು. ಮೋಹವೆಂದರೆ ಮುಚ್ಚಳ ತಾನೇ ? ಅದರ ಹಿಂದಿನ ಸತ್ಯದ ಮೂಲವನ್ನು ಅರಿತುಕೊಂಡು ಊಹೆಯಿಂದ ಲಕ್ಷ್ಯ ವಸ್ತುವಿನತ್ತ ಧ್ಯಾನ ಮಂತ್ರದ ಬಾಣವನ್ನು ಬಿಡಬೇಕು. ಆಗ ತಲುಪಿದ ಬ್ರಹ್ಮಧಾಮದಲ್ಲಿ ಸ್ನೇಹದಿಂದ, ಸಹೃದಯತೆಯಿಂದ ಇರುವುದನ್ನು ಅರಿತರೆ ಯೋಗ ಸಿದ್ಧಿಯಾಗುತ್ತದೆ.

ಆ. ಪತನೊಳ್ಳುತಿರುವ ಪಕ್ವ ಫಲಗಳನ್ನು
ಹಿಡಿದು ತಿನ್ನುವವನು ಹಸಿರು ಕಾಯ್ಗಿ,
ಆಸೆ ಪಡುವ ರೀತಿ, ಐಹಿಕವು ಇಪ್ಪುದು,
ವಿಶ್ವದಾಭಿರಾಮ ಕೇಳು ವೇಮ.

ಮನಸ್ಸಿನ ಎರಡು ಗತಿಗಳುಂಟು. ಒಂದು ಐಹಿಕ, ಇನ್ನೊಂದು ಪಾರಮಾರ್ಥಿಕ. ಪಾರಮಾರ್ಥಿಕ ಪಕ್ವ ಫಲದಂತಿದೆ. ಐಹಿಕವು ಹಸುಗಾಯಿಯಂತಿದೆ. ಶ್ರೇಯೋ ಮಾರ್ಗದಲ್ಲಿ ಪಕ್ವವಾದ ಮನಸ್ಸು ಸಂಸಾರ ವೃಕ್ಷದಿಂದ ವೈರಾಗ್ಯ ಹೊಂದಿ ಬೀಳುತ್ತಿರುವಾಗ, ಅದನ್ನು ಹಿಡಿದು ಆನಂದವನ್ನು ಅನುಭವಿಸಬೇಕು. ಹಾಗೆ ಮಾಡದೆ, ಐಹಿಕ ಸುಖಿಭೋಗಕ್ಕಾಗಿ ಆಸೆಪಡುವ ಮನಸ್ಸು ಸಂಸಾರ ವೃಕ್ಷಕ್ಕೆ ದೃಢವಾಗಿ ಅಂಟಿಕೊಂಡು ಹಸಿರು ಕಾಯಿಗೆ ಆಸೆ ಪಟ್ಟಂತೆ ಆಗುತ್ತದೆ.

ಆ. ಕೊಡದಷ್ಟು ಹಾಲೊಳು ಕೊಂಚ ಹೆಪ್ಪು ಹಾಕೆ,
ಘಮಘಮ ವಾಸನೆಯು ಕುದುರುತಿಹುದು.
ಹೆಪ್ಪು ಹಾಕದಿರಲು, ಹೋಗುತಿಹುದು ಕೆಟ್ಟು.
ವಿಶ್ವದಾಭಿರಾಮ ಕೇಳು ವೇಮ.

ಪಶುವಿನ ಹಾಲು ಒಳ್ಳೆಯದೇ. ಅದು ಅಲ್ಪ ಕಾಲ ಮಾತ್ರ. ಹೆಚ್ಚು ಕಾಲವಾದರೆ ಕೆಟ್ಟು ಹೋಗುತ್ತದೆ. ಅದಕ್ಕೆ ಸ್ವಲ್ಪು ಹೆಪ್ಪು ಹಾಕಿದರೆ, ಅದು ಘಮ ಘಮಿಸುವ ಮೊಸರಾಗುತ್ತದೆ. ಮೊಸರನ್ನು ನೆರಳಿನಲ್ಲಿ ಇರಿಸಿದರೆ ಇನ್ನೂ ಗಟ್ಟಿಯಾಗಿ ಹೆಚ್ಚು ರುಚಿಯಾಗುತ್ತದೆ. ಹಾಗೆ ಪ್ರೇಯೋ ಮಾರ್ಗದಲ್ಲಿ ಅಲ್ಪ ಕಾಲ ಮನಸ್ಸು ಚೆನ್ನಾಗಿಯೇ ಇರುತ್ತದೆ. ಅದಕ್ಕೆ ಸಂಸ್ಕಾರ ನೀಡಿದರೆ ಇನ್ನಷ್ಟು ಕಾಲ ಪುಣ್ಯ ಕರ್ಮಗಳಲ್ಲಿ ನಿರತನಾಗಬಹುದು.

ಆ. ನವನೀತ ಕಾಯಿಸಿ, ನೆರಳಿನಲ್ಲಿರಿಸಲು,
ಮತ್ತೆ ಗಟ್ಟಿಯಾದ ಮೊಸರಿನಂತೆ,
ಹೋರಿ ಹೋರಿ ಮನಸು, ಹೋಗದಂತೆ ಕಟ್ಟು.
ವಿಶ್ವದಾಭಿರಾಮ ಕೇಳು ವೇಮ.

ಮೊಸರನ್ನು ಕಡೆದರೆ ಬೆಣ್ಣೆ ಬರುತ್ತದೆ. ಅದನ್ನು ಇನ್ನಷ್ಟು ಕಾಲ ಇಟ್ಟು ಬಳಸಬಹುದು. ಬೆಣ್ಣೆಯನ್ನು ಕಾಯಿಸಿ ತುಪ್ಪ ಇಲ್ಲವೆ ನವನೀತವನ್ನು ಸಿದ್ಧಪಡಿಸಿದರೆ ಅದು ದೀರ್ಘ ಕಾಲ ಬಾಳುತ್ತದೆ. ಅದನ್ನು ಕಾಯಿಸಿದರೆ ದ್ರವವಾಗುತ್ತದೆ. ನೆರಳಿನಲ್ಲಿ ಇರಿಸಿದರೆ ಮೊಸರಿನಂತೆ

ಗಟ್ಟಿಯಾಗುತ್ತದೆ. ಅದೇ ರೀತಿ ; ಮನಸ್ಸು ಸಂಸ್ಕಾರದಿಂದ ನವನೀತವಾದರೆ, ಅದನ್ನು ಸಂಸಾರ ವ್ಯಾಪಾರದಲ್ಲಿ ಹರಿಬಿಟ್ಟರೂ, ನೀರು ಅಂಟದ ಕಮಲ ಪತ್ರದಂತೆ; ಆ ಮನಕ್ಕೆ ಸಂಸಾರ ಜಲದ ಸೊಡರು ಅಂಟದು. ಅದನ್ನು ಜನ ನಿಬಿಡದಿಂದ ದೂರವಿರಿಸಿದರೆ, ಅಂದರೆ ನೆರಳಿನಲ್ಲಿ ಇರಿಸಿದರೆ, ಅದು ಮೊಸರಿನಂತೆ ಗಟ್ಟಿಯಾಗುತ್ತದೆ. ಹೀಗೆ, ಮನಸ್ಸು ಹೋರಿ ಹೋರಿ ದ್ರವೀ ಭೂತವಾದರೂ ಆಗೀಗ ಧ್ಯಾನ ಸಮಾಧಿಗಳ ನೆರಳಿನಲ್ಲಿ ಇರಿಸಿ ಘನೀಭವಿಸುವಂತೆ ಮಾಡಬೇಕು.

ಆ. ಪೈರು ನೆಡುವ ರೈತ ಫಲವ ಪಡೆಯುತಿಹನು.
ಪೈರು ನೆಡದವನಿಗೆ ಫಲವು ಎಂತು ?
ಪೈರು ನೆಡುತಿರಲತಿ ಸೌಖ್ಯ ಸೊಗಸು ಕಣಾ.
ವಿಶ್ವದಾಭಿರಾಮ ಕೇಳು ವೇಮ.

ಮಾನವ ಮನಸ್ಸು ಸಾಗುವಳಿ ಕ್ಷೇತ್ರದಂತೆ. ಅದನ್ನು ಚೆನ್ನಾಗಿ ಸಾಗುವಳಿ ಮಾಡಿ ಸಸಿಗಳನ್ನು ನೆಟ್ಟರೆ, ನಂತರ ವೃಕ್ಷವಾಗಿ ಬೆಳೆದು ಫಲವನ್ನು ನೀಡುತ್ತದೆ. ಅದೇ ರೀತಿ ಮನವೆಂಬ ಕ್ಷೇತ್ರವನ್ನು ವಿವಿಧ ಸಂಸ್ಕಾರಗಳ ಮೂಲಕ ಸಾಗುವಳಿ ಮಾಡಿ, ಭಕ್ತಿಯ ಸಸಿಯನ್ನು ನೆಟ್ಟರೆ ಮುಕ್ತಿಯೆಂಬ ಫಲವು ದೊರೆಯುತ್ತದೆ. ಸಸಿಯನ್ನು ನೆಡದೆ ಇದ್ದರೆ, ಫಲವು ಹೇಗೆ ದೊರಕೀತು? ಭಕ್ತಿಯ ಪೈರನ್ನು ನೆಡುತ್ತಿದ್ದರೆ, ಆನಂದ, ಸೌಖ್ಯ ಸೊಬಗು ಕಾಣು.

ಆ. ಆತ್ಮ ಶುದ್ಧಿಯಿರದೆ ಆಚಾರವದೇಕೆ ?
ಮಡಿಕೆ ಶುದ್ಧಿಯಿರದೆ ಅಡುಗೆಯೇಕೆ ?
ಚಿತ್ತ ಶುದ್ಧಿಯಿರದೆ ಶಿವನ ಪೂಜೆಯೇಕೆ ?
ವಿಶ್ವದಾಭಿರಾಮ ಕೇಳು ವೇಮ.

ಆತ್ಮ ಎಂದರೆ ತಾನು. ತಾನು ಶುದ್ಧಿ ಹೊಂದದೆ ಇತರರಿಗೆ ಪಾಲಿಸುವ ಆಚಾರ ವಿಧಿಯನ್ನು ವಿಧಿಸುವುದೇಕೆ ? ಮಡಿಕೆಯನ್ನು ಶುದ್ಧಗೊಳಿಸದಿದ್ದರೆ, ಅಡುಗೆಯಲ್ಲಿಯೇ ಮಲವು ಸೇರಿಕೊಳ್ಳುತ್ತದೆ. ಆದ್ದರಿಂದ ಮಡಿಕೆಯನ್ನು ಶುದ್ಧಿಗೊಳಿಸದೆ ಅಡುಗೆ ಮಾಡುವುದೇಕೆ ? ಅದೇ ರೀತಿ, ಚಿತ್ತ ಶುದ್ಧಿಯಿರದೆ ಶಿವನ ಪೂಜೆಯೇಕೆ ? ಶಿವನ ಪೂಜೆಗಿಂತ ಮೊದಲು ಚಿತ್ತದಲ್ಲಿಯ ಮಲಗಳನ್ನು ನಿರ್ಮೂಲ ಮಾಡಬೇಕು.

ಆ. ಹಾಲು ನೀರು ಕ್ರಮವ ಹಂಸ ಅರಿಯುತಿಹುದು.
ನೀರು ಹಾಲ ಕ್ರಮವು ನವಿಲಿಗೇಕೆ ?
ಅಜ್ಞನಿರುವ ಅವನು ಆ ಶಿವನನರಿಯುವನೆ ?
ವಿಶ್ವದಾಭಿರಾಮ ಕೇಳು ವೇಮ.

ಹಾಲು ನೀರು ಕೂಡಿಸಿ ಇರಿಸಿದರೆ ಹಂಸ ಪಕ್ಷಿಯು ತನ್ನ ವಿಶೇಷ ಕುಶಲತೆಯಿಂದ ನೀರನ್ನು ಬಿಟ್ಟು, ಬರೀ ಹಾಲನ್ನೇ ಹೀರುತ್ತದೆ. ಆದರೆ ಇಂಥ ಹಾಲು ನೀರನ್ನು ಬೇರ್ಪಡಿಸುವ ವಿಶ್ಲೇಷಕ ಗುಣವು ನವಿಲಿಗಿರದು. ಅದೇ ರೀತಿ, ಪ್ರೇಯಸ್ಸು ಮತ್ತು ಶ್ರೇಯಸ್ಸುಗಳಲ್ಲಿ ಪ್ರೇಯಸ್ಸನ್ನು ತೊರೆದು ಕೇವಲ ಶ್ರೇಯಸ್ಸನ್ನೇ ಆಯ್ದುಕೊಳ್ಳಬಲ್ಲವನು ಜಾಗ್ರತ ಅರಿವಿನ ಭಕ್ತ ಮಾತ್ರ. ಅಜ್ಞನು ಸಂಸಾರವನ್ನು ಬಿಟ್ಟು ಆ ಶಿವನನ್ನು ಹೇಗೆ ಅರಿಯಬಲ್ಲನು ?

ಆ. ತಾಮಸದ ಕಾರ್ಯವು ವಿಷಮವಾರಿಗೇನು ?
ತಾಮಸ ಗುಣವಳಿಯೆ, ತಾವೆ ಸುಜನ.
ತಾಮಸ ನಂಬುವವರು ಧರೆಯ ಮೂಢರಷ್ಟೆ.
ವಿಶ್ವದಾಭಿರಾಮ ಕೇಳು ವೇಮ.

ತಮೋ ಗುಣವೆಂದರೆ ಅಜ್ಞಾನ ಸಂಗ ; ಆಲಸ್ಯ ಸಂಗ. ತಮೋಗುಣದಿಂದ ಮಾಡಿದ ಕಾರ್ಯವು ಸಹಜವಾಗಿ ವಿಷಮವಾಗಿರುತ್ತದೆ. ಅದರಿಂದ ಮನುಷ್ಯನು ಕುಜನನಾಗುತ್ತಾನೆ. ಶುದ್ಧ ಶ್ರವಣದಿಂದ, ಸಾಧನದಿಂದ ತಾಮಸ ಗುಣವು ಅಳಿದರೆ, ಸತ್ವ, ರಜೋಗುಣಗಳು ಉಳಿಯುತ್ತವೆ. ಅವುಗಳಿಂದ ಪ್ರೇರಿತನಾದವನು ಸುಜನನೆನಿಸುತ್ತಾನೆ. ಧರೆಯಲ್ಲಿ ಜನರು ತಿಳಿದವರಿರಬಹುದು. ತಿಳಿಯದಿರಬಹುದು. ಆದರೆ ತಿಳಿಸಿದರೂ ತಿಳಿದುಕೊಳ್ಳದವರು ಮೂಢರಷ್ಟೇ. ಇವರೇ ತಾಮಸವನ್ನು, ದೆವ್ವ ಭೂತಗಳನ್ನು ನಂಬುವವರು.

ಕಂ. ಅತಿ ನಿದ್ರಾವಂತರಿಗು–
ನ್ನತ ಪಾನಿಗೆ, ಉಪವಾಸಿಗತಿ ಕೋಪಿಗಳಿಗುಂ.
ಧೃತಿ ಹೀನನಿಗಪಕಾರಿಗೆ
ಜೊತೆಗಿರದೀ ಬ್ರಹ್ಮವಿದ್ಯೆ, ಸಾರ್ಯೆ, ವೇಮಾ.

ತಾಮಸ ಗುಣದವನು ಅತಿಯಾಗಿ ನಿದ್ರೆ ಮಾಡುತ್ತಾನೆ. ಬಹಳ ಮಾದಕ ಪೇಯ ಸೇವಿಸುತ್ತಾನೆ. ದೇಹ ದಂಡಿಸಲು ಉಪವಾಸವಿದ್ದು ಕೂಡಿ ಬಿದ್ದ ನೆಂಪನ್ನೇ ಜೀರ್ಣಿಸುತ್ತಾನೆ. ಅವನು ಅತಿ ಕಾಮನೆ ಹೊಂದಿ ತೃಪ್ತನಾಗದೆ ಕೋಪಿಷ್ಟನಾಗುತ್ತಾನೆ. ಅವನು ಯಾವುದಕ್ಕೂ ಅಂಟಿಕೊಳ್ಳದ ಚಂಚಲ ಸ್ವಭಾವದ ಧೃತಿಹೀನನು. ಬೇರೆಯವರಿಗೆ ಉಪಕಾರಿಯಾಗುವ ಬದಲು ಅಪಕಾರಿಯಾಗುತ್ತಾನೆ. ಇಂಥ ತಾಮಸ ವೃತ್ತಿಯವನ ಜೊತೆಗೆ ಬ್ರಹ್ಮವಿದ್ಯೆಯು ಇರದು. ಇದನ್ನು ಸಾರಿ ಹೇಳು.

ಆ. ಬಾಲ್ಯದಲ್ಲಿ ಸ್ವಾಮಿ ಭಕ್ತಿ ಇಲ್ಲದಿರಲು,
ಯೌವನದೊಳು ಹರನ ಯೋಚಿಸರಲ !
ವಾರ್ಧಿಕ್ಯ ಹೊಂದಲು ವರ್ಣಿಸದೆ ಇರುವರು.
ವಿಶ್ವದಾಭಿರಾಮ ಕೇಳು ವೇಮ.

ತನ್ನನ್ನೂ, ವಿಶ್ವವನ್ನೂ ಸೃಷ್ಟಿ ಮಾಡಿದವನೇ ತನಗೂ ಸ್ವಾಮಿ ; ಸರ್ವರಿಗೂ ಸ್ವಾಮಿ. ಆ ವಿಶ್ವಕರ್ಮನಲ್ಲಿ ಬಾಲ್ಯದಿಂದಲೂ ಭಕ್ತಿ ಅಂದರೆ ಪೂಜ್ಯ ಭಾವನೆ ಇಲ್ಲದಿದ್ದರೆ, ಇಂದ್ರಿಯ ವ್ಯಾಪಾರಗಳಲ್ಲಿ ಬಹಿರ್ಮುಖವಾಗಿ ಹರಿಯುವ ಮನಸ್ಸು ಹರನನ್ನು ಕುರಿತು ಯೋಚಿಸುವುದೇ ಇಲ್ಲ. ಅಂಥವರು ಮುಪ್ಪು ಅಡರಿದಾಗ, ಹಿಂದಿನ ನೆನಪುಗಳನ್ನೇ ಕನವರಿಸುತ್ತ ಹರನ ಮಹಿಮೆಯನ್ನು ವರ್ಣಿಸದೆ ಹೋಗುವರು. ಹಿರಿಯರಾದ ಇಂಥವರ ಮಾತಿಗೆ ಬೆಲೆ ಕೊಡುವ ಕಿರಿಯರು ಸಹ ಭಕ್ತಿ ಭಾವ ತಾಳದೆ ಪ್ರೇಯೋ ಮಾರ್ಗ ಹಿಡಿಯುತ್ತಾರೆ.

ಕಂ. ಕೇಳಿದ, ಕಂಡುದ, ಕೋರುವ,
ಕಂಡಾ ಕಾಂತೆಯ, ಗೂಳಿ ತೆರ ಕೂಡೆ ಕೋರ್ಪಂ.

ಕಾಣುತ ಪ್ರೇಮದಿ ಹೊರಳುವ,
ಘನತರ ಮೋಹವದು ಕೇಡು ಕಾಣಾ ವೇಮಾ.

ಮಾನವನು ಕುಟುಂಬ ಜೀವಿ ; ಸಮಾಜ ಜೀವಿ. ಅವನು ಇಹದಲ್ಲಿ ಬಾಳುವುದೆಂದರೆ, ವಸ್ತು, ವ್ಯಕ್ತಿ ಇಲ್ಲವೆ ವಿಚಾರಗಳೊಂದಿಗೆ ಸಂಬಂಧ ಹೊಂದಿಯೇ ಬಾಳುತ್ತಾನೆ. ನೆರೆ ಹೊರೆಯವರಿಂದ ಏನನ್ನಾದರೂ ಕೇಳಬಹುದು ; ತನ್ನ ಸುತ್ತು ಮುತ್ತಲಿನ ಜನ ಜೀವನವನ್ನು ಕಣ್ಣಾರೆ ಕಾಣಬಹುದು. ಅವರು ಅನುಭವಿಸುವ ಐಹಿಕ ಸುಖವನ್ನು ಕೋರುತ್ತಾನೆ. ಇಂಥ ಮನುಷ್ಯನು ಹೆಂಡತಿಯನ್ನು ಪಡೆದಾಗ, ಅವಳು ಕೇವಲ ಭೋಗ ವಸ್ತುವೆಂದು ಗ್ರಹಿಸಿ ಗೂಳಿಯು ಬೆದೆ ಬಂದ ಹಸುವಿನತ್ತ ಕೂಡಲು ಕೋರುವಂತೆ, ತಾನೂ ಕಾಮ ಪಿಪಾಸುವಾಗುತ್ತಾನೆ. ಅವಳನ್ನು ಕಂಡೊಡನೆ ಬಿಗಿದಪ್ಪಿ ಪ್ರೇಮದಿಂದ ಹೊರಳಾಡುತ್ತಾನೆ. ಇದು ಘನತರವಾದ ಮೋಹವಷ್ಟೇ. ಇದು ತುಂಬಾ ಕೇಡು.

ಕಂ. ದೀಪವಿರದಂಥ ಮನೆಯಲಿ,
ರೂಪವನು ತಿಳಿಯಲಾರರು, ರೂಢಿಯು, ತಮದೋಳ್.
ದೀಪವಹ ತಿಳಿವು ಹೊಂದಿಯು,
ಪಾಪಗಳ ಹೊಲಸು ಹಾದಿಲಿ ಬೀಳ್ವರು ವೇಮಾ.

ಯಾವ ಮನೆಯಲ್ಲಿ ದೀಪವು ಉರಿಯುವುದಿಲ್ಲವೋ, ಆ ಮನೆಯಲ್ಲಿ ಕತ್ತಲು ಆವರಿಸಿರುತ್ತದೆ. ಆದ್ದರಿಂದ ಕಣ್ಣಿಗೆ ಏನೂ ಕಾಣದು. ಹಾಗಾಗಿ ಯಾವುದೇ ವಸ್ತುವಿನ, ವ್ಯಕ್ತಿಗಳ ರೂಪಗಳೂ ತಮದಲ್ಲಿ ತಿಳಿದುಬಾರವೆಂಬುದು ರೂಢಿ. ಆದರೆ ಮಾನವನಿಗೆ ಪುಣ್ಯ ಪಾಪಗಳನ್ನು ವಿಂಗಡಿಸಿ ತಿಳಿಯಲು ತಿಳಿವೇ ದೀಪವಾಗುತ್ತದೆ. ಅಂಥ ತಿಳಿವನ್ನು ಹೊಂದಿಯೂ ಜನರು ಪಾಪಗಳ ಹೊಲಸು ಹಾದಿಯಲ್ಲಿ ಬೀಳುತ್ತಾರೆ.

ಮಿಥ್ಯಾಚಾರ :

ಆ. ಪುರುಷನೆಷ್ಟೊ ಬಾರಿ ಪುಟ್ಟಿದಂದಿನಿಂದ
ಪಾಪ ಚಿಂತೆ ಗೈವ ಪಾಮರಾಗಿ.
ಮನದಿ ಕುಂಟ ನಾಯಿ ಮಾಂಸ ತಿಂದ ರೀತಿ.
ವಿಶ್ವದಾಭಿರಾಮ ಕೇಳು ವೇಮ.

ಮನುಷ್ಯನು ಅಹಂನಿಂದ ಕರ್ಮ ಮಾಡುತ್ತಾನೆ. ಆದರೆ ಕರ್ಮವನ್ನು ಇಂದ್ರಿಯಗಳ ಮೂಲಕ ಬಾಹ್ಯದಲ್ಲಿ ಮಾಡಬಹುದು. ಇಲ್ಲವೆ ಮನದ ಚಿಂತನೆಯ ಮೂಲಕ ಮಾಡಬಹುದು. ಪುರುಷರು, ಹುಟ್ಟಿನಿಂದ ಎಷ್ಟೋ ಸಲ, ಪಾಮರನಾಗಿ ಮಿಥ್ಯಿಚಾರಿಯಾಗಿ ಪಾಪ ಚಿಂತೆಯನ್ನು ಮನದೊಳಗೇ ಮಾಡುತ್ತಾನೆ. ಇದು ಹೇಗಾಗುವುದೆಂದರೆ ಬೇಟೆಯಾಡಲಾರದ ಕುಂಟ ನಾಯಿ. ತನ್ನ ಮನಸ್ಸಿನಲ್ಲಿಯೇ ಮಾಂಸ ತಿನ್ನುವ ಹಾಗಾಗುತ್ತದೆ.

ಆ. ಅಂತರಂಗದಲ್ಲಿ ಅಪರಾಧವ ಗೆಯ್ದು,
ಒಳ್ಳೆಯವನ ರೀತಿ ಉಂಟು ಮನುಜ.

ಇತರರರಿಯದಿರಲು ಈಶ್ವರನರಿಯನೇ ?
ವಿಶ್ವದಾಭಿರಾಮ ಕೇಳು ವೇಮ.

ನಾನು ಒಬ್ಬ ಹಿರಿಯ ಮಂತ್ರಿಯೊಡನೆ ದಿವ್ಯ ಜ್ಞಾನ ಪಡೆದ ಕಿಶೋರಿಯ ದರ್ಶನಕ್ಕೆ ಹೋಗಿದ್ದೆ. ತಾವು ಯಾರಿಗೂ ಅನ್ಯಾಯ ಮಾಡಿರದಿದ್ದರೂ ಅನೇಕರು ತಮ್ಮ ವಿರುದ್ಧ ಕಾರ್ಯ ತತ್ಪರರಾಗಿದ್ದಾರೆ, ಎಂದು ತಮ್ಮ ಅಳಲನ್ನು ತೋಡಿಕೊಂಡರು. ಆಗ ಆ ಕಿಶೋರಿ ಮುಗುಳ್ನಗುತ್ತ ನೀವು ಮನಸ್ಸಿನಲ್ಲಿ ಆ ಜನರ ವಿರುದ್ಧ ಸಾಕಷ್ಟು ಚಿಂತನೆ ಮಾಡಿರುತ್ತೀರಿ, ಎಂದಳು. ಆಗ ಮಂತ್ರಿಗಳ ಮುಖ ಕಪ್ಪಿಟ್ಟಿತು.

ಅನೇಕ ಜನರು ಅಂತರಂಗದಲ್ಲಿ ಎಷ್ಟೋ ಅಪರಾಧಗಳನ್ನು ಮಾಡುತ್ತಾರೆ. ಹೊರಗೆ ಒಳ್ಳೆಯವರಂತೆ ನಟಿಸುತ್ತಾರೆ. ಇವರನ್ನು ಗೋಮುಖ ವ್ಯಾಘ್ರರೆನ್ನುತ್ತಾರೆ. ಇಂಥವರ ಮನಸ್ಸಿನ ಹೂರಣವನ್ನು ಇತರ ಜನರು ಅರಿಯದಿರಬಹುದು. ಆದರೆ ಸರ್ವಜ್ಞನಾದ ಈಶ್ವರನು ಅರಿಯದೆ, ಇರುವನೇ ? ಆದ್ದರಿಂದ ಈ ಐಶ್ವರ್ಯ ಸಿದ್ಧಿ ಪಡೆದ ಸಿದ್ಧರು ಇದನ್ನೆಲ್ಲ ತಿಳಿಯುತ್ತಾರೆ.

ಗೀತ. ತುಡುಗಗಳ್ಳರಿಗೆ ಸಿಗದೆ ಹೋದಂಥ ತೆರನೆ ಆಯ್ತು.
ಬಾಯಿ ಗುಣಿಸುತಿಹ ಮಂತ್ರವು ಬಹಳ ನೀಟು.
ಮಾತಿನಲ್ಲಿಯೇ ಪರಮಾತ್ಮ ಮರುಕಗೊಳನು.
ಚಿತ್ತದಲಿ ಸ್ವಸ್ಥತೆಯು ಇರದಿರೆ ಚರಟ ವೇಮ.

ಒಬ್ಬನು ಮನಸ್ಸಿನಲ್ಲಿ ಏನೇನೋ ಗೇನಿಸುತ್ತ, ಬಾಯಲ್ಲಿ ಬಹಳ ನೀಟವಾಗಿ ಮಂತ್ರವನ್ನು ಗುಣುಗುಣಿಸುತ್ತ ಇರಬಹುದು. ಇದು ತುಡುಗು ಮಾಡಲು ಮನೆ ಹೊಕ್ಕಂಥ ಕಳ್ಳರಿಗೆ, ಬಯಸಿದ ವಸ್ತುವು ಸಿಕ್ಕದಂತೆ ಆಗುತ್ತದೆ. ಪರಮಾತ್ಮನು ಒಲಿಯಬೇಕಾದರೆ ಮನಸ್ಸು ಪರಿಶುದ್ಧವಾಗಿರಬೇಕು. ಬರಿ ಮಾತಿನಲ್ಲಿ ಡೌಲು ತೋರಿಸಿದರೆ, ಮಂತ್ರ ಪಠಣದಲ್ಲಿ ನೀಟವಾಗಿದ್ದರೆ, ಪರಮಾತ್ಮನ ಕರುಣೆ ಸಿಗದು. ಅವನು ಮರುಕಗೊಳ್ಳನು. ಚಿತ್ತವು ನಿರ್ಮಲವಾಗಿರಬೇಕು. ಚಂಚಲವಾಗಿರದೆ ಸ್ವಸ್ಥವಾಗಿರಬೇಕು. ಇಲ್ಲದಿದ್ದರೆ ಎಲ್ಲವೂ ಹಾಳು.

ಆ. ನಾಯಿ ಏಕಾಂತವು ನೋಡು ಬಕಧ್ಯಾನ ;
ಕತ್ತೆ ರಾಗದೊಳಿಕೆ ಕಪ್ಪೆ ಜಳಕ.
ಆತ್ಮವರಿವ ಭಾವ ಅರಿಯರೇಕೊ ಮನದಿ ?
ವಿಶ್ವದಾಭಿರಾಮ ಕೇಳು ವೇಮ.

ಭಕ್ತಿ ಮಾರ್ಗದಲ್ಲಿ ಪ್ರಾಮಾಣಿಕತೆಗೆ ಹೆಚ್ಚಿನ ಮಹತ್ವವಿದೆ. ಬೇಟೆಯ ಉದ್ದೇಶದಿಂದ ಏಕಾಂತದಲ್ಲಿ ಜಪ್ಪಿಸಿ ಕುಳಿತ ನಾಯಿಯಂತೆ, ಏನೊಂದು ಸಿದ್ಧಿ ಪಡೆಯಬೇಕೆಂದು ಗಿರಿ ಗುಹೆಗಳನ್ನು ಸೇರಿ ಏಕಾಂತದಲ್ಲಿ ಇರುವುದಾಗಲಿ, ನೀರಿನಲ್ಲಿರುವ ಹುಳು ಹುಪ್ಪಡಿಗಳ ಮೇಲೆ ಕಣ್ಣಿಟ್ಟು ಕುಳಿತ ಬಕಪಕ್ಷಿಯ ಧ್ಯಾನವಾಗಲಿ, ಹೊಲಸು ಬೂದಿಯ ಗುಂಪೆಯಲ್ಲಿ ಹೊರಳಾಡಿ ಸ್ವರ ತೆಗೆಯುವ ಕಪ್ಪೆಯ ರಾಗವಾಗಲಿ, ಭಕ್ತಿಯ ಅಭಿವ್ಯಕ್ತಿಯಾಗದು. ಕಪ್ಪೆಯು ಕಮಲದ ಎಲೆಯ ಮೇಲೆ ಕುಳಿತಿದ್ದರೂ, ಆಗೀಗ ಹುಳು ಹುಪ್ಪಡಿ ಹಿಡಿಯುವ ಆಸೆಯಿಂದ ನೀರು ಮುಳುಗುತ್ತದೆ. ಅದೇ ರೀತಿ, ಸಮಾಜದಲ್ಲಿ ಇತರ ಜನರ ಬಗೆಗೆ ಕುತ್ಸಿತ ವಿಚಾರಗಳನ್ನು ಮೆಲುಕು ಹಾಕುತ್ತ

ಹಾರುವನು ನೀರು ಮುಳುಗುವುದನ್ನು ಪರಮಾತ್ಮನು ಮೆಚ್ಚನು. ಹೀಗೆಲ್ಲ ಮಿಥ್ಯಾಚಾರಗಳಲ್ಲಿ ಮಗ್ನರಾದ ಜನರು ನಿರ್ಮಲ ಭಾವದಿಂದ ಆತ್ಮವನ್ನು ಅರಿಯುವ ಹಾದಿಯನ್ನು ಏಕೆ ಅರಿಯುವುದಿಲ್ಲವೋ ? ಕಾಣೆವು.

ಕಂ. ವಂಚನ ಮನದೊಳಿರುವರಿಗೆ,
ಸಂಚಿತ ಕರ್ಮಗಳು ಬಿಡದೆ ಸಂದೇಹವಿರಲ್
ಪಂಚೇಂದ್ರಿಯ ಲೋಲ ಜನಕೆ,
ಸಂಚಿತವಹ ಆತ್ಮ ವಿದ್ಯೆ ಸೇರದು ವೇಮಾ.

'ಬಹು ಜನರು ತ್ರಿಕರಣ ಶುದ್ಧರಿರುವುದಿಲ್ಲ. ಅವರಲ್ಲಿ ಬಹು ಮಂದಿ ಮಾತನಾಡೆ ಬೇರೆ, ಮನದ ಕೋರ್ಕೆ ಬೇರೆ, ಒಡಲು ಗುಣವು ಬೇರೆ ; ಯೋಚನೆ ಬೇರೆ' ಆಗಿ, ಒಡಕು ಪ್ರವೃತ್ತಿಯವರಾಗಿರುತ್ತಾರೆ. ಅವರು ಮನದಲ್ಲಿ ವಂಚಕರಾಗಿರುತ್ತಾರೆ. ಅವರ ಕರ್ಮಗಳು ಫಲ ನೀಡಲು ಕೂಡಿಬಿದ್ದಿರುತ್ತವೆ. ಸಂಚಿತ ಕರ್ಮಗಳು ಬಿಡಲಾರವು. ಅಂಥವರ ಮನಸ್ಸಿನಲ್ಲಿ ತಾನು ಇಚ್ಛಿಸಿದ ಫಲವು ದೊರೆಯುವುದೋ, ಇಲ್ಲವೆ ಪೂರ್ವ ಕರ್ಮದಿಂದಾಗಲಿ ತನಗಿಷ್ಟವಲ್ಲದ ಫಲ ಲಭಿಸುವುದೋ, ಎಂಬ ಸಂದೇಹಗಳು ಬಲವಾಗಿರುತ್ತವೆ. ಇಂಥ ಜನರು ಹೆಚ್ಚಾಗಿ ವಿಷಯಾಸಕ್ತರಾಗಿದ್ದು ಪಂಚೇಂದ್ರಿಯಲೋಲರಾಗಿರುತ್ತಾರೆ. ಇಂಥ ಜನರಿಗೆ ಆತ್ಮವಿದ್ಯೆಯನ್ನು ಕಲೆ ಹಾಕುವುದೇ ಸೇರದು.

ಭಕ್ತಿ ಮಾರ್ಗದಲ್ಲಿ ಅಂತರಂಗ ಶುದ್ಧಿ, ಬಹಿರಂಗ ಶುದ್ಧಿಗಳೆರಡೂ ಅತಿ ಮುಖ್ಯ. ಕೇವಲ ಬಹಿರಂಗ ಶುದ್ಧಿಯ ನಾಟಕವಾದರೆ ಅದು ಕಂದಾಚಾರವೆನಿಸುತ್ತದೆ. ಕರ್ಮೇಂದ್ರಿಯಗಳನ್ನು ನಿಗ್ರಹಿಸಿ ಜ್ಞಾನೇಂದ್ರಿಯಗಳನ್ನು ಸ್ವೇಚ್ಛೆಯಿಂದ ಹರಿಬಿಟ್ಟರೆ ಮಿಥ್ಯಾಚಾರವಾಗುತ್ತದೆ. ಇಲ್ಲಿ ವಿಶೇಷ ಎಚ್ಚರಿಕೆ ತುಂಬಾ ಅಗತ್ಯ.

ವೈರಾಗ್ಯ :

ಯೋಗವೆಂದರೇನು ? ಜೀವಾತ್ಮ ಪರಮಾತ್ಮರ ಸಂಯೋಗವೇ ಯೋಗ. ಆತ್ಮ ಇಲ್ಲವೆ ಪರಮಾತ್ಮವು ಪರಿಶುದ್ಧವಾದ ತತ್ತ್ವ. ಜೀವಾತ್ಮವು ದೇಹೇಂದ್ರಿಯ ಮನಸ್ಸುಗಳ ಉಪಾಧಿ ಹೊಂದಿದ ಆತ್ಮ. ದೇಹೇಂದ್ರಿಯ ಮನಸ್ಸುಗಳು ತಮ್ಮ ಸ್ವಭಾವಕ್ಕನುಗುಣವಾಗಿ ವಿಷಯ ಸಂಸರ್ಗ ಹೊಂದಿ ಮಲಿನವಾಗಿರುತ್ತವೆ. ಮನಸ್ಸು ಸಂಚಿತ ಕರ್ಮಗಳ ಸಂಸ್ಕಾರಗಳನ್ನು ಹೊಂದಿರುತ್ತದೆ. ಇವುಗಳನ್ನು ಸೋಸಿ ತೆಗೆಯುವುದೇ ಶುದ್ಧಿ. ಇದನ್ನು ವಿವೇಕದಿಂದ ಕಂಡುಕೊಳ್ಳಬೇಕು. ವೈರಾಗ್ಯದಿಂದ ಸಾಧಿಸಬೇಕು.

ಯೋಗವು ಯಾವುದೇ ಇರಲಿ, ಕರ್ಮ ಯೋಗವೇ ಇರಲಿ, ಭಕ್ತಿಯೋಗವೇ ಇರಲಿ, (ಜ್ಞಾನ) ಶಿವಯೋಗವೇ ಇರಲಿ, ವೈರಾಗ್ಯದ ಮಹತ್ವ ಸಾಕಷ್ಟಿದೆ. ವೇಮನ ಯೋಗಿಗಳು ಹೆಸರಿಸಿರುವ ಸಾಂಖ್ಯಯೋಗ, ಶಿವಯೋಗ, ರಾಜಯೋಗ ಮತ್ತು ಭಕ್ತಿಯೋಗಗಳಲ್ಲಿಯೂ ವೈರಾಗ್ಯದ ಮಹತ್ವ ತುಂಬಾ ಇದೆ.

ಗೀತ. ಅತುಲ ವೈರಾಗ್ಯ ಬೋಧನೆಗೆ ಅಂಟಿ ಅರಿತು,
ಸತಿಯ ಮಮತೆಗೆ ಸಿಗದಿದ್ದು ಸತ್ಯ ತಿಳಿದು,

ಮತಿಯು ಚದುರದೆ ಹರಿಯುವ ಮಾನ್ಯ ರೀತಿ,
ಇದುವೆ ಕುದುರಿದವ ಸಜ್ಜನನು ಇಹದಿ ವೇಮಾ.

ಪ್ರಾಮಾಣಿಕ ಸಾಧಕನಿಗೆ ಗುರುವು ವೈರಾಗ್ಯವನ್ನು ಉಪದೇಶಿಸುತ್ತಾನೆ. ಇಂಥ ಬೋಧೆಯು ಅನುಪಮ. ಅಂಥ ಅತುಲ ವೈರಾಗ್ಯ ಬೋಧೆಗೆ ಶ್ರದ್ಧೆಯಿಂದ ಅಂಟಿ, ಅದರ ಇಂಗಿತವನ್ನು ಚೆನ್ನಾಗಿ ಅರಿತುಕೊಳ್ಳಬೇಕು. ಅವನು ಮಮತೆಯನ್ನು ಪೂರ್ಣ ಬಿಡಬೇಕು. ಸತ್ಯವಾಗಿ ಸತಿಯ ಮಮತೆಗೂ ಸಿಕ್ಕು ಬೀಳ ಕೂಡದು. ಮಮತೆಗೆ ಸಿಗದ ಮನಸ್ಸು ಎಲ್ಲಿ ಹರಿದರೇನು ? ಅವನ ಮತಿಯು ಕೆಡಲಾರದು. ಅಂಥವನೇ ಮಾನ್ಯನೆನಿಸುತ್ತಾನೆ. ಇಂಥ ವಿರಳ ಸ್ಥಿತಿ ಕುದುರಿದವನು ಇಹದಲ್ಲಿ ಸಜ್ಜನನಾಗಿದ್ದಾನೆ.

ರಂಜ್ ಎಂದರೆ ಬಣ್ಣ ಬಳಿ ಎಂದರ್ಥ. ರಂಜ್ → ರಾಗ. ರಾಗ ವಿಹೀನವಾದುದು ವಿರಾಗ. ವಿರಾಗದ ಸ್ಥಿತಿಯೇ ವೈರಾಗ್ಯ.

ಊರು ಸೇರಿಕೊಂಡು ಉಬ್ಬಿ ಸಂತಸಬಡುವ ;
ಅಡವಿಯಲ್ಲಿ ಮಾತ್ರ ಅಳಲುಬಡುವ.
ಊರು ಅಡವಿಯೆರಡು ಒಂದೆಯಾಗಿ ನೋಳ್ಪ.
ಅರಿತ ನಿಪುಣ ಯೋಗಿ ಆತ ವೇಮ.

ಸಾಮಾನ್ಯವಾಗಿ ವೈರಾಗ್ಯವೆಂದರೆ ಮನೆ ಮಾರು ತೊರೆದು, ಊರು ಕೇರಿ ತೊರೆದು ಅಡವಿ ಸೇರುವುದೆಂದು ತಿಳಿಯಲಾಗುತ್ತದೆ. ಅಡವಿ ಸೇರಿ ಮನೆಮಾರಿನ ಚಿಂತೆಯನ್ನೇ ಮೆಲುಕು ಹಾಕುತ್ತಾರೆ. ಇದು ಸರಿಯಲ್ಲ. ವೈರಾಗ್ಯವೆಂದರೆ ಊರು ಕೇರಿ ಉಬ್ಬಿ ಬಿಟ್ಟು ಸೇರುವುದೂ ಅಲ್ಲ. ಅಡವಿಯಲ್ಲಿ ಕುಳಿತು ಮನೆಯ ಚಿಂತೆಯಿಂದ ಅಳುವುದೂ ಅಲ್ಲ, ಆದರೆ ವೇಮನರಂತೆ ನಿಪುಣ ಯೋಗಿಯಾದವರಿಗೆ ಊರಿನ ವಾಸ ಮತ್ತು ಅಡವಿಯ ವಾಸ ಸಮಾನವಾಗಿರುತ್ತವೆ. ಅವರು ಮನಸ್ಸಿನ ಮಮತೆಯನ್ನು ಪೂರ್ಣ ಬಿಟ್ಟಿರುತ್ತಾರೆ.

ಹುಣಸೆ ಹಣ್ಣ ರೀತಿ ಹೊಂದಿ ಹೊಂದದಿಹದಿ,
ಸನ್ಯಾಸಿ ಯೋಗವನು ಸಲಹಬೇಕು.
ಸಂಸಾರಿಯಿಂತಿರಲು ಸನ್ಯಾಸಿಗಿಂದಧಿಕ.
ವಿಶ್ವದಾಭಿರಾಮ ಕೇಳು ವೇಮ.

ಗಿಡದಲ್ಲಿಯ ಹುಣಸೆ ಹಣ್ಣನ್ನೂ ಎಲ್ಲರೂ ನೋಡಿರಬಹುದು. ಅದರ ಸಿಪ್ಪೆಯು ಕಾಯಿಯಿರುವಾಗ ತಿಳಲಿಗೆ ಗಾಢವಾಗಿ ಅಂಟಿಕೊಂಡಿರುತ್ತದೆ. ಹಣ್ಣು ಪಕ್ವವಾದಂತೆ ಸಿಪ್ಪೆಯು ತಿಳಲಿನಿಂದ ಪೂರ್ಣ ಬೇರೆಯಾಗಿರುತ್ತದೆ. ಹೀಗೆ ಯೋಗಿಯಾದವನು ಹುಣಸೆ ಹಣ್ಣಿನಂತೆ ಸಂಸಾರವೆಂಬ ತಿಳಲಿಗೆ ಅಂಟಿ ಅಂಟದಂತಿರಬೇಕು.

ಹಂಸ ಮಾನಸ ಜಲ ಹತ್ತದಂತೆ ಚಲನೆ,
ಆವ ಕರ್ಮ ಚಯವು ಅಂಟದಂತೆ,
ಯೋಗಿ ಅಲೆವ ಸಕಲ ಭೋಗವದುರಿಗಿರಲು.
ವಿಶ್ವದಾಭಿರಾಮ ಕೇಳು ವೇಮ.

ಯೋಗಿಯ ನಡೆವಳಿಕೆಗೆ ಜನಪ್ರಿಯ ಪ್ರತಿಮೆಯೆಂದರೆ, ಸರೋವರದಲ್ಲಿಯ ಹಂಸದ ಚಲನೆ. ಹಂಸವು ಸರೋವರದಲ್ಲಿ ಚಲಿಸುತ್ತಿದ್ದರೂ ನೀರು ಅದರ ಮೈಗೆ ತಾಕದಂತೆ ಎಚ್ಚರವಹಿಸುತ್ತದೆ, ಹಾಗೆಯೇ ಯೋಗಿಯೂ ಸಹ ಸಂಸಾರದ ಕರ್ಮಗಳ ಲೇಪವು ತಟ್ಟದಂತೆ, ಮಾನಸಿಕ ಜಲ ಎಂದರೆ ಮನೋವೃತ್ತಿಗಳು ತಟ್ಟದಂತೆ, ಎಲ್ಲ ಭೋಗಗಳು ಎದುರಿಗಿದ್ದರೂ, ಅವುಗಳ ಲೇಪ ತಟ್ಟದಂತೆ ಬಾಳುತ್ತಾನೆ.

ಕರ್ಮಯೋಗಿಯ ವೈರಾಗ್ಯವು ತನ್ನ ಸರ್ವ ಕರ್ಮಗಳ ಫಲತ್ಯಾಗ ಮಾಡುವಲ್ಲಿಯೇ ಇದೆ. ಅವನು ತನ್ನ ಕರ್ಮದ ಫಲವನ್ನು ಕುರಿತು ಆಸಕ್ತನಾಗಿರುವುದಿಲ್ಲ. ಅವನು ಇಹದಲ್ಲಾಗಲಿ, ಪರದಲ್ಲಾಗಲಿ, ಬಹುಮಾನವನ್ನೆನೂ ಬಯಸುವುದಿಲ್ಲ. ಹೀಗೆ ಅವನು ಐಹಿಕ ಭೋಗದಾಸೆಗೂ ಒಳಗಾಗುವುದಿಲ್ಲ. ಆಮುಷ್ಮಿಕ ಭೋಗದಾಸೆಯನ್ನೂ ಕಲ್ಪಿಸಿಕೊಳ್ಳುವುದಿಲ್ಲ.

ಆ. ಬದುಕು ಎಲ್ಲ ಮಾಯೆ, ಭವ ಬಂಧವು ಮಾಯೆ.
ತಿಳಿವು ಮಾಯೆ ತನ್ನ ತಿಳಿಯದಿಹುದು.
ಮಾಯೆ ತಿಳಿಯುವವನು ಮರ್ಮಜ್ಞನಹ ಯೋಗಿ.
ವಿಶ್ವದಾಭಿರಾಮ ಕೇಳು ವೇಮ.

ಮಾಯೆ ಎಂದರೇನು ? 'ಯಾ ಮಾ ಸಾ ಮಾಯಾ'. ಅಂದರೆ ಯಾವುದು ಇಲ್ಲವೋ ಅದು ಮಾಯೆ. ಬದುಕು ಎಲ್ಲ ಮಾಯೆ. ಅಂದರೆ ಬದುಕು ಇಲ್ಲವೇನು? ಭವ ಬಂಧವೂ ಇದೆ. ಆದರೆ ದೇಹೇಂದ್ರಿಯ ಮನಸ್ಸುಗಳ ವ್ಯಾಪಾರದಲ್ಲಿ, ಇದೆ. ಪಾರಮಾರ್ಥದಲ್ಲಿ ಇಲ್ಲ. ಆಗ ಇವು ಆಪೇಕ್ಷಿಕ ಸತ್ಯಗಳೆನಿಸುತ್ತವೆ. 'ಬ್ರಹ್ಮ ಸತ್ಯಂ ಜಗದಪಿ ಸತ್ಯಂ ಆಪೇಕ್ಷಿಕಂ'. ಅಲ್ಲಮ ಪ್ರಭು ದೇವರ ಮಾತೂ ಅರ್ಥಪೂರ್ಣವಾಗಿದೆ. ''ಹೆಣ್ಣು ಮಾಯೆಯೆಂಬರು, ಹೊನ್ನು ಮಾಯೆಯಂಬರು, ಮಣ್ಣು ಮಾಯೆಯೆಂಬರು. ಹೆಣ್ಣು ಮಾಯೆಯಲ್ಲ, ಹೊನ್ನು ಮಾಯೆಯಲ್ಲ, ಮಣ್ಣು ಮಾಯೆಯಲ್ಲ. ಮನದ ಮುಂದಣಾಸೆಯೇ ಮಾಯೆ''. ಪರಮಾರ್ಥದಲ್ಲಿ ಈ ಆಸೆ ಇರದು. ಹಾಗಾಗಿ ಮಾಯೆ ಇರದು. ಮಲಿನ ಮನಸ್ಸಿನಿಂದ ವ್ಯಕ್ತಿ ವಿಚಾರ ಮತ್ತು ವಸ್ತುಗಳನ್ನು ತಿಳಿಯುವುದು ಮಾಯೆಯೇ. ಅದೇ ರೀತಿ, ತಾನು ಯಾರು ? ಎಂದು ತನ್ನ ನಿಜ ಸ್ವರೂಪವನ್ನು ತಿಳಿಯದಿರುವುದೇ ಮಾಯೆಯಾಗಿದೆ. ಪಾರಮಾರ್ಥಿಕ ದೃಷ್ಟಿಯಿಂದ ನೋಡಿದಾಗ ಮಾತ್ರ ಈ ಮಾಯೆಯ ಹೂರಣ ತಿಳಿಯುತ್ತದೆ. ಹೀಗೆ ತಿಳಿದವನೇ ಮರ್ಮಜ್ಞನಾದ ಯೋಗಿಯೆನಿಸುತ್ತಾನೆ.

ಆ. ಇದುವೆ ಪರಮವೆಂದು ಇಷ್ಟು ತೋಚಿ ಸಾಕು.
ಮನಸು ಚದರುವ ಕೋರಿಕೆ ಮೆಟ್ಟಿ ಹಾಕಿ,
ಸುಧೆಯ ಕುಡಿಯುವವನು ಸುತ್ತಿ ಸಾಯುತಿಹನೆ ?
ವಿಶ್ವದಾಭಿರಾಮ ಕೇಳು ವೇಮ.

ವಿವೇಕ ಬುದ್ಧಿಯಿಂದ ಸಮೀಕ್ಷಿಸಿದಾಗ ಯಾವುದು ಶ್ರೇಯೋ ಮಾರ್ಗ ? ಯಾವುದು ಪ್ರೇಯೋ ಮಾರ್ಗ ?, ಯಾವುದು ಪರಮ ? ಮತ್ತಾವುದು ಅಪರ ? ಎಂಬುದು ಗೊತ್ತಾದರೆ ಸಾಕು. ಪ್ರೇಯೋ ಮಾರ್ಗದಲ್ಲಿ ಹರಿಯುವ ಮನಸ್ಸನ್ನು ಮೆಟ್ಟಿ ಹಾಕಿ, ಅದನ್ನು ಪರಮನಲ್ಲಿ ನಿಶ್ಚಲವಾಗಿ'ನಿಲ್ಲಿಸಿ, ಆನಂದದ ಸುಧೆಯನ್ನು ಕುಡಿಯುವವನು, ದೇವರನ್ನು ಹುಡುಕುತ್ತಾ ಅಲ್ಲಿ ಇಲ್ಲಿ ಸುತ್ತಿ ಸಾಯುವನೇನು ?

ಚ. ಇಲ್ಲಿ ತಾಯ್ತಂದೆಯಣ್ಣ ತಮ್ಮರು ತಾತ ಬಂಧುಗಳೇತಕೋ ?
ಇಲ್ಲ ಮರಳಿ ಜನ್ಮ ; ಸದ್ಗುರು ಮರ್ಮ ಭಾವವ ಸೇರಿಕೋ.
ಹುಲ್ಲು ಕೂಡ ಬರದು ಹಿಂದೆ, ಪೊಡವಿ ದಾಟುವ ವೇಳೆಯೋಳ್.
ಸುಳ್ಳು ಭ್ರಾಂತಿಯ ಬಿಟ್ಟು ವೇಮನ ಕಾರಣಂಗಳ ಕಾಣಿರೋ.

ಇಲ್ಲಿ ಪ್ರಚಲಿತ ಜನ್ಮದ ತಾಯಿ ತಂದೆ, ಅಣ್ಣ ತಮ್ಮ, ಅಜ್ಜಿ ತಾತ ಇವರನ್ನು ಕುರಿತು ಮಮತೆಯೆ ಆಸಕ್ತಿ ಹೆಚ್ಚಿಗಿರುತ್ತದೆ. ಇದೆಲ್ಲ ಏಕೆ ? ನಿನಗೆ ಈಗಾಗಲೀ ಅದೆಷ್ಟೋ ಜನ್ಮಗಳಾಗಿವೆ. ಸದ್ಗುರುವಿನ ಉಪದೇಶದ ಮರ್ಮವನ್ನು ಅನುಸರಿಸಿದರೆ ಮರಳಿ ಜನ್ಮವಾಗದೆಯೂ ಇರಬಹುದು. ಅಂದ ಮೇಲೆ ಇಂಥ ದೇಹ ಸಂಬಂಧಗಳ ಮಾತೇಕೆ ? ಸತ್ಯವೆಂದರೆ, ನೀನು ಈ ಪೊಡವಿಯನ್ನು ಬಿಟ್ಟು ಹೋಗುವಾಗ ಒಂದು ಹುಲ್ಲು ಕಡ್ಡಿಯೂ ಸಹ ನಿನ್ನ ಹಿಂದೆ ಬಾರದು. ಆದ್ದರಿಂದ, ಇದು ನನ್ನದು, ಇವರು ನನ್ನವರು ಎನ್ನುವ ಸುಳ್ಳು ಭ್ರಾಂತಿಯನ್ನು ಬಿಟ್ಟು ಕಾರಣ ಜಗತ್ತಿನಲ್ಲಿ ಸಾಗಿರಿ.

ಅ. ಅಸ್ಥಿರ ದೇಹವನು ಅರ್ಥಟಿಸುತ ಹೊಂದಿ ;
ಸಕಲ ವಿಧಗಳಿಂದ ಸಾಕಿ ಸಲಹಿ,
ಅಗ್ನಿಗಿಡುವರಲ್ಲ ; ಅಡವಿ ನರಿಗಿಡುವರು.
ವಿಶ್ವದಾಭಿರಾಮ ಕೇಳು ವೇಮ.

ಆಮುಷ್ಮಿಕ ವೈರಾಗ್ಯ :

ಐಹಿಕ ಸುಖಭೋಗಗಳ ವೈರಾಗ್ಯವನ್ನು ಕುರಿತು ಸ್ವಲ್ಪು ತಿಳಿದೆವು. ಆದರೆ ವೈರಾಗ್ಯವು ಆಮುಷ್ಮಿಕವೂ ಆಗಿದೆ. ಆಮುಷ್ಮಿಕವೆಂದರೇನು ? ಪಾರಲೌಕಿಕ ಸುಖಾಪೇಕ್ಷೆಗಳ ತ್ಯಾಗ. ಇಲ್ಲಿ ಪುಣ್ಯ ಕರ್ಮ ಮಾಡಿದ ದೇಹಿಯು ಮರಣಾನಂತರ ಇಲ್ಲಿಯೇ ನಾಶವಾಗುತ್ತದೆ. ಕೆಲವರು ಕಳೇವರವನ್ನು ಸುಡುತ್ತಾರೆ. ಬೇರೆಯವರು ಹುಗಿಯುತ್ತಾರೆ. ಹುಗಿದ ದೇಹವನ್ನು ನರಿಗಳು ಕೆದರಿ ಎಬ್ಬಿಸಿ ತಿನ್ನುತ್ತವೆ, ಆದರೆ, ಜೀವ, ಮನಸ್ಸುಗಳ ಗತಿಯೇನು ? ಮನಸ್ಸು ತನ್ನ ಸಂಸ್ಕಾರಗಳೊಂದಿಗೆ ಜೀವಾತ್ಮನಿಗೆ ಮಾನಸಿಕ ಶರೀರ ಒದಗಿಸುತ್ತದೆ. ಇದನ್ನು ಲಿಂಗ ದೇಹವೆಂದೂ ಕರೆಯುತ್ತಾರೆ. ಮರಣಾವಸ್ಥೆಯಲ್ಲಿ ತಾನು ಪಡೆದ ಸೂಕ್ಷ್ಮತೆಯ ಸ್ತರಕ್ಕನುಗುಣವಾಗಿ ಲಿಂಗ ಶರೀರವು ಅಂತರಿಕ್ಷದ ಆಯಾ ಸ್ತರದಲ್ಲಿ ವಿಹರಿಸುತ್ತದೆ. ಈ ಲಿಂಗ ಶರೀರದಲ್ಲಿ ಭೌತಿಕ ಸ್ನಾಯು ಕೋಶಗಳಾಗಲಿ, ಸ್ನಾಯು ತಂತುಗಳಾಗಲಿ ಇಲ್ಲವೆ ಮಸ್ತಿಷ್ಕವಾಗಲಿ ಇರದು. ನಾವು ಸುಖ ಅನುಭವಿಸಲು ಇಲ್ಲವೆ ದುಃಖ ಅನುಭವಿಸಲು ಈ ಭಾವ ಗ್ರಾಹೀ ಸಂರಚನೆಯು ಬೇಕೇ ಬೇಕು. ಆದ್ದರಿಂದ ಲಿಂಗದೇಹದಲ್ಲಿ ಸುಖ ಬೋಧವಾಗಲಿ, ದುಃಖಬೋಧವಾಗಲಿ ಇಲ್ಲ. ಆದ್ದರಿಂದ 'ಆನಂದ ಸೂತ್ರ'ದಲ್ಲಿ 'ನ ಸ್ವರ್ಗೋ ನ ರಸಾತಲಃ' ಎಂದು ಹೇಳಿದ್ದಾರೆ. ಅಂದರೆ ಸ್ವರ್ಗ ಮತ್ತು ನರಕಗಳೆಂಬ ಹೆಸರಿನ ಯಾವವೂ ಇಲ್ಲ. ಯಾವಾಗ ಮನುಷ್ಯನು ಸತ್ಕರ್ಮ ಮಾಡುವನೋ ಇಲ್ಲವೆ ಅದರ ಫಲ ಭೋಗಿಸುವನೋ, ಆಗ ಅವನಿಗೆ ಆಗುವ ಅನುಭವವೇ ಸ್ವರ್ಗ ಎಂಬ ಹೆಸರಿನಿಂದ ಸೂಚಿತವಾಗಿದೆ. ಮತ್ತು ಯಾವಾಗ ಅವನು ಕುಕರ್ಮ ಮಾಡುವನೋ ಇಲ್ಲವೆ ಅದರ ಫಲ ಭೋಗಿಸುವನೋ, ಆಗ ಅವನಿಗೆ ಆಗುವ ಅನುಭವವೇ ನರಕ ಎನಿಸುತ್ತದೆ.

ಆದರೆ ಈ ಅನುಭವವಾಗುವುದು ಈ ಮರ್ತ್ಯ ಲೋಕದಲ್ಲಿ ಜನ್ಮ ತಳೆದ ಮೇಲೆ ಮಾತ್ರ. ಈ ಮಾತನ್ನು ಎಲ್ಲರೂ ಒಪ್ಪಿದ್ದಾರೆ. ಮುಕ್ತಿಗಾಣಲು ಪುಣ್ಯ ಜೀವಿ ದೇವತೆಗಳೂ ಪುಣ್ಯ ತೀರಿದ ಬಳಿಕ ಈ ಮರ್ತ್ಯಕ್ಕೆ ಮರಳಬೇಕೆಂದು ಅವರು ಪ್ರತಿಪಾದಿಸುತ್ತಾರೆ.

ಆ. ಪಡೆದು ಚಿತ್ತ ಶುದ್ಧಿ ಪುಣ್ಯ ಕಾರ್ಯ ಗೆಯ್ಯೆ.
ಕೊಂಚವಾದರೇನು ಕೀಳು ಅಲ್ಲ.
ಮರದ ಬೀಜ ಗಾತ್ರ ಮತ್ತೆ ಇರುವುದೆಷ್ಟು ?
ವಿಶ್ವದಾಭಿರಾಮ ಕೇಳು ವೇಮ.

ನಾವು ಮೇಲೆ ಪ್ರಸ್ತಾಪಿಸಿದ ಲಿಂಗ ಶರೀರವು ಪ್ರಾಣ ಮತ್ತು ಮಾನಸ ಸಂಸ್ಕಾರಗಳ ಉಪಾಧಿಯಿಂದ ಇರುವ ಜೀವಾತ್ಮವನ್ನು ಸೂಚಿಸುತ್ತದೆ. ಈ ಸಂಸ್ಕಾರಗಳು ಸುಸಂಸ್ಕಾರಗಳೋ ಇಲ್ಲವೆ ಕುಸಂಸ್ಕಾರಗಳೋ ? ಎಂಬುದು ಮಹತ್ವಪೂರ್ಣವಾಗಿದೆ. ಏಕೆಂದರೆ ಮರುಜನ್ಮದಲ್ಲಿ ಪಡೆಯುವ ಸುಖ ದುಃಖಗಳಿಗೆ ಅವು ಕಾರಣವಾಗುತ್ತವೆ.

ಆದ್ದರಿಂದ ಚಿತ್ತ ಶುದ್ಧಿ ಪಡೆದು ಪುಣ್ಯ ಕಾರ್ಯ ಮಾಡಲು, ಅದು ಗಾತ್ರದಲ್ಲಿ ಎಷ್ಟೇ ಕೊಂಚವಾದರೂ ಕೀಳಂತೂ ಅಲ್ಲ. ಏಕೆಂದರೆ, ಬೃಹತ್ತಾದ ಆಲದ ಮರಕ್ಕೆ ಕಾರಣವಾದ ಬೀಜದ ಗಾತ್ರವು ಅತಿ ಚಿಕ್ಕದಲ್ಲವೇ ?

ಕಂ. ನರ ಜನ್ಮವ ತಾನೆತ್ತಿಯು,
ಪರಮಾತ್ಮನನರಿಯದಿರಲು ಪಾಪಾತ್ಮನಲಾ,
ಬರಿ ದುರಿತ ಕರ್ಮ ಗೆಯ್ದೊಡೆ.
ಮರಳಿ ಅಧೋಗತಿ ಪಡೆವನು, ಅರಿಯೈ, ವೇಮಾ.

ಜೀವನು ಸೃಷ್ಟಿ ಸಂಚರದಲ್ಲಿ ಎಂಭತ್ತು ನಾಲ್ಕು ಲಕ್ಷ ಜೀವರಾಶಿಗಳನ್ನು ದಾಟಿ, ಜನನ ಮರಣಗಳನ್ನು ಅನುಭವಿಸಿ, ಈ ಮಾನವ ಜನ್ಮವನ್ನು ಪಡೆಯುವುದೇ ಒಂದು ಸುಸಂಧಿ. ಹುಟ್ಟಿ ಸಾಯುವ ಈ ಸಂಸಾರ ಚಕ್ರದಿಂದ ಬಿಡುಗಡೆ ಇಲ್ಲವೆ ಮುಕ್ತಿ ಪಡೆಯುವುದೇ ಅವನ ಅಂತಿಮ ಗುರಿ. ಆದ್ದರಿಂದ, ನರಜನ್ಮವನ್ನು ಎತ್ತಿಯೂ ಪರಮಾತ್ಮನನ್ನು ಅರಿಯದಿದ್ದರೆ, ಅವನು ಪಾಪಾತ್ಮನೇ ಸರಿ. ಚಿತ್ತ ಶುದ್ಧಿ ಹೊಂದಿ ಪುಣ್ಯ ಕರ್ಮ ಮಾಡದೆ, ಬರೀ ದುರಿತ ಕರ್ಮಗಳನ್ನೇ ಮಾಡುತ್ತಿದ್ದರೆ, ಮುಕ್ತಿಯ ಊರ್ಧ್ವ ಗತಿಯ ಮಾತಂತೂ ದೂರವೇ ಉಳಿಯಿತು; ಪ್ರತಿಯಾಗಿ ಅಧೋಗತಿ ಪಡೆಯುತ್ತಾನೆ. ಪಶುಯೋನಿಗಳಲ್ಲಿ ಜನಿಸಬೇಕಾಗುತ್ತದೆ.

ಭರತ ಮುನಿಯು ತನ್ನ ಆಶ್ರಮದಲ್ಲಿರುವ ಚಿಗರಿ ಮರಿಯ ಮೇಲೆ ವಿಶೇಷ ಮಮತೆ ತಾಳಿ ಪ್ರಾಣಬಿಟ್ಟ ಕಾರಣ, ತಾನು ಚಿಗರೆಯಾಗಿ ಜನಿಸಿದನೆಂದೂ, ಅನಂತರ ಮುಂದಿನ ಜನ್ಮದಲ್ಲಿ ಜಡಭರತನಾದನೆಂದೂ ಕತೆಯಿದೆ.

ಕಂ. ದುರ್ಗತಿ ಸ್ವರ್ಗಗಳೆನ್ನುವ
ದುರ್ಗತಿಗಳ ದಾಟಿ, ಹೃದಯ ದುರ್ಗವ ಸೇರಲ್.
ಸ್ವರ್ಗವೆ ಸೇರ್ವುದೆ ದುರ್ಗತಿ.
ನಿರ್ಗುಣದೊಳ್ಕೆಕ್ಕಗೊಳುವುದೆ, ನಿಜಮೈ ವೇಮಾ.

ಸುಖಭೋಗವನ್ನು ಎರಡು ಬಗೆಯಾಗಿ ಭಾವಿಸುತ್ತಾರೆ. ಒಂದು ಐಹಿಕ ಸುಖ, ಇನ್ನೊಂದು ಸ್ವರ್ಗ ಸುಖ. ಐಹಿಕ ಸುಖವು ಸಾಂತ ವಿಷಯ ಭೋಗದಿಂದ ಲಭಿಸುವುದರಿಂದ ಅದು ನಿತ್ಯ ಸುಖವಾಗದು. ಅಂಥ ಸುಖದ ಬೆನ್ನಿಗೆ ದುಃಖವಿದ್ದೇ ಇರುವುದು. ಹೀಗಾಗಿ ಅದು ನಿತ್ಯ ಸುಖದ ದೃಷ್ಟಿಯಿಂದ ದುರ್ಗತಿಯೆನಿಸುವುದು. ಇನ್ನು ಸ್ವರ್ಗ ಸುಖವು ಕೇವಲ ಕಾಲ್ಪನಿಕ. ಸ್ವರ್ಗವೂ ಇರದು. ಲಿಂಗ ಶರೀರದಲ್ಲಿ ಸುಖ ಅನುಭವಿಸುವ ಸಂರಚನೆಯೂ ಇರದು. ಹೀಗಾಗಿ ಸ್ವರ್ಗ ಗತಿಯೂ ದುರ್ಗತಿಯೇ ಸರಿ. ಈ ಉಭಯ ದುರ್ಗುಣಗಳನ್ನು ದಾಟಿ, ಆನಂದ ಚಿಲುಮೆಯಿರುವ ಹೃದಯ ದುರ್ಗವನ್ನು ಸೇರಿದಾಗ, ಸ್ವರ್ಗ ಸೇರುವುದೂ ದುರ್ಗತಿಯೆನಿಸುತ್ತದೆ. ಆದರೆ ಮುಂದಿನ ಸತ್ಕದ ದಾರಿ ಯಾವುದು ? ನಿರ್ಗುಣದೊಳಗೆ ಐಕ್ಯಗೊಳ್ಳುವುದೇ ಆ ದಾರಿಯಾಗಿದೆ.

ಕಂ. ಇಹಪರ ಸೌಖ್ಯವನೊಲ್ಲದೆ,
ದಹರದಲಿ ಗುರಿಯಿರಿಸಿ ದತ್ತವಾದೊಡಾಗಳ್,
ಕುಹರದೊಳಹೊರಗು ಬಯಲಲಿ
ಮಹದಾಕಾಶದಲಿ ಸೇರು, ಮಹಿಯಲಿ, ವೇಮಾ.

ಭಕ್ತನ ಪರಮ ಗುರಿಯು ಇಹದ ಸೌಖ್ಯದ ಬಯಕೆಯೂ ಅಲ್ಲ ; ಪರದ ಸೌಖ್ಯದ ಬಯಕೆಯೂ ಅಲ್ಲ. ಇಹಪರ ಸೌಖ್ಯಗಳನ್ನು ಒಲ್ಲದೆ, ದಹರದಲ್ಲಿ ಅಂದರೆ ಹೃದಯ ಗುಹೆಯಲ್ಲಿ ಲಕ್ಷವಿರಿಸಿ, ತನ್ನನ್ನು ತಾನು ಸಮರ್ಪಿಸಿಕೊಳ್ಳಬೇಕು. ತನ್ಮಯನಾಗಿ ತನ್ನನ್ನು ತಾನು ಮರೆಯಬೇಕು. ಆಗ ಬ್ರಹ್ಮ ರಂಧ್ರದ ಒಳಗೂ ಹೊರಗೂ ವ್ಯಾಪಿಸಿರುವ ಮಹದಾಕಾಶವನ್ನು ಸೇರಿ ಮಹಿಯಲ್ಲಿ ಬಾಳು.

ಹೀಗೆ ನಾವು ಯೋಗ ಸಾಧನದ ಮೂಲ ಸಾಧನವಾದ ಐಹಿಕ ಆಮುಷ್ಮಿಕ ವೈರಾಗ್ಯವನ್ನು ಹೊಂದಿ ಮುಂದಾಗಬೇಕು. ಇದುವರೆಗೆ ಸುದೀರ್ಘವಾಗಿ ವಿವೇಚಿಸಿದಂತೆ ಕರ್ಮಯೋಗಿಯು ಕರ್ಮ ಫಲಗಳಲ್ಲಿ ಆಸಕ್ತಿಯನ್ನು ಪೂರ್ಣ ತೊರೆಯುತ್ತಾನೆ. ಅವನು ಇಹದಲ್ಲಾಗಲಿ, ಪರದಲ್ಲಾಗಲಿ, ಯಾವುದೇ ವರ ಪಡೆಯಲು ಬಯಸುವುದಿಲ್ಲ. ಇನ್ನು ರಾಜಯೋಗಿಯ ಮೇರೆಗೆ ಇಡೀ ಪ್ರಕೃತಿಯು ಜೀವಾತ್ಮನ ಅನುಭವಕ್ಕೋಸ್ಕರವೇ ಇದೆ. ಮತ್ತು ಜೀವನ ಸಕಲ ಅನುಭವಗಳ ಪರಿಣಾಮವೆಂದರೆ, ತಾನು ಪ್ರಕೃತಿಯಿಂದ ಎಂದೆಂದಿಗೂ ಭಿನ್ನ ಎಂದು ಅರಿಯುವುದೇ ಆಗಿದೆ. ತಾನು ಎಂದಿಗೂ ಚೈತನ್ಯವೇ ಹೊರತು ಜಡವಲ್ಲ ಎಂದು ಮಾನವ ಜೀವಿಯು ಅರಿಯಬೇಕು. ಸಾಕ್ಷಾತ್ಕರಿಸಿಕೊಳ್ಳಬೇಕು. ಜಡದೊಂದಿಗಿನ ತನ್ನ ಸಂಬಂಧವು ಕೆಲವು ಕಾಲ ಮಾತ್ರ. ಹೀಗೆ ರಾಜಯೋಗಿಯು ಪ್ರಕೃತಿಯೊಂದಿಗಿನ ತನ್ನ ಅನುಭವಗಳ ಮೂಲಕ ವೈರಾಗ್ಯದ ಪಾಠವನ್ನು ಕಲಿಯುತ್ತಾನೆ.

ಆ. ನೀರ ಮೇಲೆ ಗುಳ್ಳೆ ನಿಂತುಕೊಳ್ಳಬಹುದೆ ?
ಅಲೆಯು ಬೇಗ ಬಂದು ಅಪ್ಪಳಿಪುದು.
ಬೀಳ್ವ ಘಟದ ಮೇಲೆ ಭ್ರಾಂತಿ ಪಡುವುದೇಕೆ ?
ವಿಶ್ವದಾಭಿರಾಮ ಕೇಳು ವೇಮ.

ಸರೋವರದ ಅಲೆಗಳ ಹೊಯ್ದಾಟಕ್ಕೆ ನೀರಿನ ಮೇಲೆ ಹವೆಯನ್ನು ಆವರಿಸಿ

ಗುಳ್ಳೆಯೊಂದು ಕಾಣಿಸಬಹುದು. ಆದರೆ ಎಷ್ಟು ಹೊತ್ತು ಇರಬಲ್ಲದು ? ಬೇರೊಂದು ಅಲೆಯು ಬಂದು ಅಪ್ಪಳಿಸಿದರೆ ಒಡೆದು ಹೋಗುತ್ತದೆ. ಅದೇ ರೀತಿ, ಜನನಾಂತರ ಈ ದೇಹವೆಂಬ ಘಟವು ಉಸಿರು ತುಂಬಿ ನಿಲ್ಲುತ್ತದೆ. ಎಷ್ಟು ಕಾಲ ? ಮರಣವೆಂಬ ಅಲೆಯು ಅಪ್ಪಳಿಸುವ ವರೆಗೆ. ಹೀಗೆ ಬಿದ್ದು ಹೋಗುವ ಈ ಘಟದ ಮೇಲೆ ಮಮತೆ ಹೊಂದಿ, ಭ್ರಾಂತಿ ಪಡುವುದೇಕೆ? ಇದನ್ನು ಅರಿಯುವುದೇ ವೈರಾಗ್ಯ.

ಆ. ಮಣ್ಣು ಗಡಿಗೆಯಂತೆ ಮಾಯೆ ಶರೀರವಿದು.
ಸಾವುದೆಂದಾದರು ಸಾಯದಾತ್ಮ.
ಘಟಗಳೆಷ್ಟೊ ಇರಲಿ ಗಗನ ಒಂದಲ್ಲವೆ ?
ವಿಶ್ವದಾಭಿರಾಮ ಕೇಳು ವೇಮ.

ಮಣ್ಣಿನ ಗಡಿಗೆಯು ಎಷ್ಟು ದಿನ ಬಾಳೀತು ? ಒಂದು ದಿನ ಬಿದ್ದು ಒಡೆದು ಹೋಗುತ್ತದೆ. ಅದು ಇರುವಾಗ ನಮ್ಮೊಂದಿಗೆ ದೀರ್ಘಕಾಲ ಇರುವುದೇನೋ ಎಂಬ ಭ್ರಾಂತಿ ಹುಟ್ಟಿಸುತ್ತಿದೆ. ಅದೇ ರೀತಿ ಶರೀರವೂ ಸದಾ ನಮ್ಮೊಂದಿಗೆ ಇರುವದೆಂಬ ಭ್ರಾಂತಿ ಹುಟ್ಟಿಸುತ್ತದೆ, ಇದೇ ಮಾಯೆ. ಈ ಶರೀರವು ಒಂದು ದಿನ ಸಾಯುತ್ತದೆ. ಆದರೆ ಆತ್ಮವು ಸಾಯುವುದಿಲ್ಲ. ಅದು ಅಮರ. ಆಗ ಜೀವನಿಗೆ ತಾನು ಜಡ ಶರೀರವಲ್ಲ. ಅದಕ್ಕಿಂತ ಭಿನ್ನ ಎಂಬ ಅರಿವಾಗುತ್ತದೆ. ಘಟಗಳು ಎಷ್ಟೇ ಇರಬಹುದು. ಅವುಗಳಿಂದ ಪರಿಚ್ಛಿನ್ನವಾದ ಆಕಾಶಕ್ಕೆ ಜೀವಾತ್ಮ ಎನ್ನಬಹುದಾದರೂ ಅದು ಎಲ್ಲೆಡೆ ವ್ಯಾಪಿಸಿದ ಮಹಾಕಾಶವೇ ಅಲ್ಲವೇ ?

ಜ್ಞಾನ ಯೋಗಿಯು ವೈರಾಗ್ಯ ವಿಧಾನಗಳಲ್ಲಿ ಅತ್ಯಂತ ಕಠಿಣವಾದ ಹಂತವನ್ನು ದಾಟಬೇಕಾಗುತ್ತದೆ. ಏಕೆಂದರೆ ಅವನು ಪ್ರಾರಂಭದಲ್ಲಿಯೇ ಸದೃಢವಾಗಿರುವ ಪ್ರಕೃತಿಯನ್ನು ಭ್ರಾಂತಿಯೆಂದು ತಿಳಿಯಬೇಕಾಗುತ್ತದೆ. ಪ್ರಕೃತಿಯಲ್ಲಿಯ ಶಕ್ತಿಯ ಸರ್ವ ಪ್ರಕಾರದ ಅಭಿವ್ಯಕ್ತಿಯೂ ಜೀವಾತ್ಮನಿಗೆ ಸಂಬಂಧಿಸಿದೆಯೇ ಹೊರತು ಪ್ರಕೃತಿಗಲ್ಲ ಎಂದು ಅವನು ತಿಳಿಯಬೇಕಾಗುತ್ತದೆ. ಇದು ಮಾಯಾವಾದಿಗಳ ಪ್ರತಿಪಾದನೆಯಷ್ಟೇ. ಇಲ್ಲಿ ಮಹಾಯೋಗಿ ವೇಮನರು ಮಾಯಾವಾದಿಗಳೊಂದಿಗೆ ಸಹಮತ ಹೊಂದಿಲ್ಲ. ಅವರು ಸೃಷ್ಟಿಯ ಸಂಚರ ಕ್ರಮದಲ್ಲಿ ಪರಿಣಾಮವಾದವನ್ನು ಒಪ್ಪಿದ್ದಾರೆ. ಬ್ರಹ್ಮನು ಸತ್ಯ ಅರ್ಥಾತ್ ಅಪರಿಣಾಮೀ ಆಗಿದ್ದಾನೆ. ಬ್ರಹ್ಮ ದೇಹದಲ್ಲಿ ಕಾಣಬರುವ ಪರಿಣತಿಯು, ಪ್ರಕೃತಿಯ ಪ್ರಭಾವದಿಂದ ದೇಶ, ಕಾಲ, ಪಾತ್ರ ಎಂಬ ಮೂರರಲ್ಲಿಯೂ ಕಾಣಬರುವುದು. ಅದನ್ನು ಶಾಶ್ವತ ಸತ್ಯವೆಂದು ಹೇಳಲಾರೆವು. ಅದನ್ನು ಆಪೇಕ್ಷಿಕ ಸತ್ಯವೆಂದು ಹೇಳಬಲ್ಲೆವು. ಏಕೆಂದರೆ ದೇಶ, ಕಾಲ, ಪಾತ್ರಗಳೆಂಬ ತ್ರಿದಂಡಗಳ ಆಪೇಕ್ಷಿಕತೆಯ ಮೇಲೆ, ಅವುಗಳ ಅಂತಿಮ ಪರಿಣಾಮವು ನಿಂತಿದೆ. ವ್ಯಷ್ಟಿ ಸತ್ತೆಯಲ್ಲಿಯೂ ಇದು ಅನ್ವಯಿಸುತ್ತದೆ. ಒಂದು ಆಪೇಕ್ಷಿಕ ಸತ್ತೆಯ ಬಳಿ ಇನ್ನೊಂದು ಆಪೇಕ್ಷಿಕ ಸತ್ತೆಯು ಪಾರಮಾರ್ಥಿಕ ಸತ್ಯ ರೂಪದಲ್ಲಿ ಗೋಚರಿಸುತ್ತದೆ. ಆದ್ದರಿಂದ ಪರಿಣಾಮಯುಕ್ತ ಜೀವನ ಬಳಿ ಪರಿಣಾಮಯುಕ್ತ ಜಗತ್ತು ಸಹ ಸತ್ಯ ರೂಪದಲ್ಲಿ ಕಾಣುತ್ತದೆ.

ಈಗ ಜ್ಞಾನ ಯೋಗಿಯು ಅರ್ಥಾತ್ ಶಿವಯೋಗಿಯು 'ಸರ್ವಂ ಶಿವಮಯಂ ಜಗತ್' ಎಂದು ತಿಳಿಯುತ್ತಾನೆ. ಸರ್ವ ಜ್ಞಾನ ಮತ್ತು ಸರ್ವ ಅನುಭವಗಳು ಜೀವಾತ್ಮನಲ್ಲಿವೆ. ಪ್ರಕೃತಿಯಲ್ಲಿಲ್ಲ, ಎಂದು ಅವನು ತಿಳಿಯುತ್ತಾನೆ. ಹೀಗೆ ಅವನು ಬೌದ್ಧಿಕವಾಗಿ ಮನಗಾಣುವ

ಮೂಲಕ ಕೂಡಲೇ ಪ್ರಕೃತಿಯಯೊಂದಿಗಿನ ತನ್ನೆಲ್ಲ ಬಂಧನವನ್ನು ಕಡಿದುಕೊಳ್ಳುತ್ತಾನೆ. ಮತ್ತು ಪ್ರಕೃತಿಗೆ ಸಂಬಂಧಿಸಿದ ಎಲ್ಲವೂ ಹೊರಟು ಹೋಗುತ್ತದೆ. ಇಲ್ಲವಾಗುತ್ತದೆ. ಅವನು ಏಕಾಂಗಿಯಾಗಿ ನಿಲ್ಲುತ್ತಾನೆ.

ಮಡಿಯುವವರು ಯಾರು ? ಮಡಿಯದವರು ಯಾರು ?
ಪಾಡು ಬಿಟ್ಟು ನೋಡೆ ; ಬಟ್ಟ ಬಯಲು,
ಜಲ ಘಟದೊಳಗೆ ಸಲೆ ಸೂರ್ಯನಿಪ್ಪ ರೀತಿ !
ವಿಶ್ವದಾಭಿರಾಮ ಕೇಳು ವೇಮ.

ಯಾರು ಮಡಿಯುವವರು ? ಯಾರು ತಮ್ಮನ್ನು ದೇಹದೊಂದಿಗೆ ಒಂದಾಗಿಸಿ-ಕೊಂಡಿರುವರೋ, ದೇಹಾತ್ಮ ಬುದ್ಧಿ ಹೊಂದಿರುವರೋ ಅವರು. ದೇಹದ ಮರಣವನ್ನು ತಮ್ಮ ಮರಣವೆಂದು ಭಾವಿಸುತ್ತಾರೆ. ಆದರೆ ಯಾರು ತಾವು ದೇಹವಲ್ಲ ; ಆತ್ಮ ಎಂದು ತಿಳಿದಿರುತ್ತಾರೋ, ಅವರು ಮಡಿಯದವರು. ಜನನ ಮರಣಗಳನ್ನು ನೋಡಿ ನೋಡಿ, ದೇಹ ಬೇರೆ, ಆತ್ಮ ಬೇರೆ ಎಂದು ಬೌದ್ಧಿಕವಾಗಿ ಮನಗಾಣುತ್ತಾರೆ. ಬುದ್ಧಿಯು ಪಕ್ವ ಅವಸ್ಥೆಗೆ ಬರುವವರೆಗೆ ಕಾಯ್ದು ನೋಡಿದರೆ ಎಲ್ಲವೂ ಬಟ್ಟ ಬಯಲೆನಿಸುತ್ತದೆ. ನೀರಿನ ಗಡಿಗೆಯಲ್ಲಿ ಸೂರ್ಯನು ಪ್ರತಿಬಿಂಬಿಸಿದಾಗ ಸೂರ್ಯನು ಬೇರೆ ಇದ್ದರೂ, ಘಟದಲ್ಲಿ ಇದ್ದಂತೆ ಕಾಣುವಂತೆ, ಆತ್ಮವು ಬೇರೆಯಾಗಿದ್ದರೂ ದೇಹದಲ್ಲಿ ಇರುವಂತೆ ತೋರುತ್ತದೆ.

ತನ್ನ ಹಡೆದ ಅವರು, ತಾವು ಹಡೆದ ಅವರು,
ಸಾವುದೆಲ್ಲ ತಮಗೆ ಸಾಕ್ಷಿಯಲ್ತೆ ?
ಬದುಕು ಸಕಲ ತಮಗೆ ಬ್ರಹ್ಮ ಸಂಕಲ್ಪವೈ.
ವಿಶ್ವದಾಭಿರಾಮ ಕೇಳು ವೇಮ.

ಜ್ಞಾನಿಯು ತನ್ನೆದುರು ಕಾಣುವ ಜನನ ಮರಣಗಳಿಂದ ಮಹಾ ಸತ್ಯವನ್ನು ಕಂಡರಿಯುತ್ತಾನೆ. ತನ್ನನ್ನು ಹಡೆದವರು ಸಾಯುತ್ತಾರೆ. ತಾವೇ ಹಡೆದವರೂ ಅಲ್ಪಾಯುಷಿಗಳಾಗಿ ಸಾಯುವುದುಂಟು. ಇಂಥ ಸಾವುಗಳೆಲ್ಲ ದೇಹದ ಅನಿತ್ಯತೆಗೆ ಸಾಕ್ಷಿಯಾಗಿಲ್ಲವೇ ? ಆತ್ಮವೊಂದೇ ಅವಿನಾಶಿ. ಅದು ಅಮರ. ಬದುಕು ಎಲ್ಲವೂ ಕೇವಲ ಬ್ರಹ್ಮ ಸಂಕಲ್ಪವಾಗಿ ಇರುತ್ತದೆ. ಎಲ್ಲವೂ ವಿಧಿಯಾಟ. ಆದ್ದರಿಂದ ಇಹದ ಬಾಳಿನಲ್ಲಿ ವೈರಾಗ್ಯ ತಾಳಿ ಬ್ರಹ್ಮನಲ್ಲಿ ಒಂದಾಗುವುದೊಂದೇ ಪರಿಹಾರ.

ಗೀತ. ಬೂಟಕವು ಹುಟ್ಟಿ ಸಾವುದು ಭೂಮಿಯಲ್ಲಿ
ನಾಟಕವಾಯಿತು ಬದುಕೆಲ್ಲ ಗುಣಗಳಲ್ಲಿ.
ಗುರುತಿಸಿ ಜಾಗೆಯ ಸೇರುತ ಕಾಣಬೇಕು.
ತೊರೆದು ಮಾತುಗಳ ಪರತತ್ವ ತಿಳಿಯೊ ವೇಮ.

ವಿವೇಕ ಬುದ್ಧಿಯಿಂದ ವಿವೇಚಿಸುವ ಜ್ಞಾನಿಗೆ ಹುಟ್ಟುವುದೂ, ಸಾಯುವುದೂ ಮರಳಿ ಹುಟ್ಟಲೆಂದೇ ಸಾಯುವುದೂ ಒಂದು ಬಗೆಯ ಬೂಟಕತನ ಇಲ್ಲವೆ ಆತ್ಮವಂಚನೆ ಎನಿಸುತ್ತದೆ. ಭೂಮಿಯ ಮೇಲಿನ ಬದುಕೆಲ್ಲವೂ ಪ್ರಕೃತಿಯ ತ್ರಿಗುಣಗಳ ನಾಟಕದಂತಾಗುವುದು. ಇದೆಲ್ಲವನ್ನೂ

ಗುರುತು ಮಾಡಿಕೊಂಡು ತಾನು ಇದರಿಂದ ಪಾರಾಗುವ ಜಾಗೆಯನ್ನು ಅಂದರೆ ಆತ್ಮ ಧಾಮವನ್ನು ಸೇರಿ ತನ್ನ ಸ್ವರೂಪವನ್ನು ಕಾಣಬೇಕು. ಮಾತು, ಚರ್ಚೆ, ವಾದಗಳಿಂದ ಪ್ರಯೋಜನವಿಲ್ಲ. ಪರತತ್ತ್ವವನ್ನು ತಿಳಿಯಬೇಕು.

ಕಂ. ಜಗವರಿಯೆ ಇಂದ್ರ ಜಾಲವು.
ಜಗವೆನಲಾ ಮಾಯೆ ಕಾಣು ಜನ್ಮಾದಿಗಳ್ಕೆ.
ಭಗವಂತನಾದ ಬ್ರಹ್ಮನು.
ನಿಗಮಾಗಮ ನಿರ್ವಿಕಾರ ನಿಪುಣನು, ವೇಮಾ.

ಇದ್ದುದನ್ನು ಇಲ್ಲದಂತೆ ತೋರುವುದು ಋಣಾತ್ಮಕ ದೃಷ್ಟಿ ಭ್ರಾಂತಿ, (negative hallucination) ಮತ್ತು ಇಲ್ಲದ್ದನ್ನು ಇದ್ದಂತೆ ತೋರುವುದು ಧನಾತ್ಮಕ ದೃಷ್ಟಿ ಭ್ರಾಂತಿ. ಇದನ್ನು ಇಂದ್ರಜಾಲವೆನ್ನುತ್ತಾರೆ. ಈ ಕಲೆಗೆ ಐಂದ್ರಜಾಲಿಕ ವಿದ್ಯೆ ಎನ್ನುತ್ತಾರೆ. ಈ ಜಗತ್ತು ಸತ್ಯವಲ್ಲ. ಆದರೆ ಪರಮಾತ್ಮನು ನಮಗೆ ಸತ್ಯವೆಂಬಂತೆ ತೋರುತ್ತಾನೆ. ಈ ಜಗತ್ತು ಮಾಯೆ. ಅದೇ ರೀತಿ ಜನ್ಮಾದಿಗಳೂ ಮಾಯೆ ಇದನ್ನು ಕಂಡುಕೋ. ಈ ಐಂದ್ರಜಾಲಿಕನು ಬೇರೆ ಯಾರೂ ಅಲ್ಲ. ಅವನೇ ಬ್ರಹ್ಮ. ಅವನು ಭಗವಂತ, ಅವನು ಐಶ್ವರ್ಯ ಕಾಂತಿ ತೇಜಸ್ಸು. ಧೈರ್ಯ, ಈಶತ್ವ, ವಶಿತ್ವಗಳನ್ನು ಹೊಂದಿದ್ದಾನೆ. ಸೃಷ್ಟಿ, ಸ್ಥಿತಿ, ಲಯಗಳಿಗೆ ಕಾರಣಕರ್ತನಾದ ಅವನು ಏನೆಲ್ಲ ಮಾಡಬಲ್ಲನು. ಅವನು ನಿಗಮಾಗಮ ನಿಪುಣನು ಮತ್ತು ನಿರ್ವಿಕಾರನೂ ಆಗಿದ್ದಾನೆ.

ಇಲ್ಲಿ ನಿಗಮಾಗಮ ಎಂದರೇನು? ತಂತ್ರ ಶಾಸ್ತ್ರವನ್ನು ಹಕ್ಕಿಗೆ ಹೋಲಿಸಿದ್ದಾರೆ. ತಂತ್ರವೆಂಬ ಹಕ್ಕಿಗೆ ರೆಕ್ಕೆಗಳಿರಡು. ಒಂದು ಆಗಮ, ಇನ್ನೊಂದು ನಿಗಮ. ದೇವರ ನಾಮ ಜಪ, ಧ್ಯಾನ ಮಾಡುವವರ ಅರ್ಹತೆಗಳೇನು ? ಎಂದು ಪಾರ್ವತಿಯು ಕೇಳುವ ಪರಿಪ್ರಶ್ನೆಗಳೇ ನಿಯಮವೆನಿಸುತ್ತವೆ. ಅವುಗಳಿಗೆ ಶಿವನು ನೀಡುವ ಬೌದ್ಧಿಕ ಮತ್ತು ಕ್ರಿಯಾತ್ಮಕ ಉತ್ತರಗಳು ಆಗಮ ಎನಿಸುತ್ತವೆ.

ಆಗತಂ ಶಿವವಕ್ತ್ರೇಭ್ಯೊ ಗತಂಚ ಗಿರಿಜಾ ಶ್ರುತಾ
ಮತಂ ಚ ವಾಸುದೇವಸ್ಯ ತಸ್ಮಾತ್ ಆಗಮ ಉಚ್ಯತೇ. ಅಂದರೆ

ಶಿವನ ಮುಖದಿಂದ ಬಂದು ಗಿರಿಜೆಗೆ ಕೇಳಿಸಿದ, ಮತ್ತು ಭೂಮಿಯ ರಕ್ಷಕನಾದ ವಾಸುದೇವನಿಗೂ ಸಮ್ಮತವಾದ ಉತ್ತರವೇ ಆಗಮ ಎನ್ನಿಸುತ್ತದೆ.

ಯಕ್ಷಿಣಿಗಾರನ ಮನದ ಕಲ್ಪನೆಯೇ ಅವನು ರೇಖಿಸಿದ ಮಂಡಲದೊಳಗೆ ಕುಳಿತ ಪ್ರೇಕ್ಷಕರ ಅನುಭವವಾಗುವಂತೆ, ಶಿವನ ಸಂಕಲ್ಪವೇ ಜೀವಿಗಳ ಅನುಭವವಾಗುತ್ತದೆ. ಹೀಗೆ ಅರಿತ ಜ್ಞಾನಿಯು ಇದೆಲ್ಲ ಸತ್ಯವಲ್ಲವೆಂದು ತಿಳಿದು ವೈರಾಗ್ಯ ತಾಳುತ್ತಾನೆ.

ಕಂ. ಮಾಯೆಯು ಸಂಸಾರವಿದ್ಯೆ.
ಮಾಯೆಯೊಳಗೇ ತಿರುಗುತಿಹರು ಮನುಜರು ಒಳಗೇ.
ಮಾಯೆಯ ತಿಳಿದೊಡೆ, ಕೊನೆಯಲಿ,
ಮಾಯೆಯೊಳಿಂದ ಮುಕುತಿಯಿದೆ, ಮಹಿಯಲಿ ವೇಮಾ.

'ಸಂ ಸರತಿ ಇತಿ ಸಂಸಾರಃ' ಅಂದರೆ (ಜನನ ಮರಣ ಚಕ್ರದಲ್ಲಿ) ಸುತ್ತುವರಿಯುವುದೇ

ಸಂಸಾರವೆನಿಸುತ್ತದೆ. ಈ ಸಂಸಾರವು ಸತ್ಯವಲ್ಲ. ಇದು ಬರೀ ಮಾಯೆ. ಅರಿವು ಮೂಡಿದಾಗ ಜನನ ಮರಣಗಳಿಲ್ಲ. ಮಾಯೆ ಮುಸುಕಿದಾಗ, ಭ್ರಾಂತಿ ಇರುವಾಗ, ಮರಣವೂ ಇದೆ. ಜನನವೂ ಇದೆ. ಹೀಗೆ ಮನುಜರು ಜನನ ಮರಣ ಚಕ್ರದ ಮಾಯೆಯಲ್ಲಿ ತಿರುಗುತ್ತಿರುತ್ತಾರೆ. ಯಾವಾಗ ಅವರಿಗೆ ತಾವು ದೇಹವಲ್ಲ. ಚೈತನ್ಯವಾದ ಆತ್ಮವೆಂದು ಅರಿವಾಗುವುದೋ, ಆಗ ಮಾಯೆಯನ್ನು ತಿಳಿಯುತ್ತಾರೆ. ಮತ್ತು ಮಾಯೆಯಿಂದ ಮಹಿಯಲ್ಲಿ ಮುಕ್ತಿಯನ್ನು ಹೊಂದುತ್ತಾರೆ.

ಆ. ಗತ ಕಾಲವೆಲ್ಲ ಕನಸಿನಂತೆ ಮಾತ್ರ.
ನಡೆದ ಕಾರ್ಯವನ್ನು ನಂಬಬೇಡ.
ಕ್ಷಣದೊಳಿರುವ ಬಾಳು ಸಂಸಾರ ವಿಭ್ರಾಂತಿ !
ವಿಶ್ವದಾಭಿರಾಮ ಕೇಳು ವೇಮ.

ಕಾಲದಲ್ಲಿ ಮೂರು ಭಾಗ ಮಾಡುತ್ತಾರೆ. ನಡೆದು ಹೋದದು ಭೂತಕಾಲ. ಈಗ ನಡೆಯುತ್ತಿರುವುದು ವರ್ತಮಾನ ಕಾಲ. ಮುಂದೆ ನಡೆಯುವುದು, ಭವಿಷ್ಯತ್ ಕಾಲ. ಇಬ್ಬರ ಸಂಭಾಷಣೆಯನ್ನೇ ತೆಗೆದುಕೊಳ್ಳಿರಿ. ಒಬ್ಬನು ಹೇಳಿ ಮುಗಿಸುತ್ತಾನೆ. ಆಗ ಅವನಿಗದು ಭೂತ ಕಾಲವಾಯಿತು. ಇನ್ನು ಕೇಳುವವನಿಗದು ಭವಿಷ್ಯ ಕಾಲದ ಸಂಗತಿಯಾಗುತ್ತದೆ. ಹೀಗೆ ವರ್ತಮಾನಕ್ಕೆ ಅಷ್ಟು ಮಹತ್ವವೇ ಇಲ್ಲ. ಗತ ಕಾಲದ ಘಟನೆಗಳೆಲ್ಲ ಕನಸಿನಂತೆ. ಎಚ್ಚರಾದವನು ತನ್ನ ಅರೆನಿದ್ದೆಯಲ್ಲಿ ಕಂಡ ಕನಸಿನ ಘಟನೆಗಳನ್ನು ಸ್ಮರಿಸಿಕೊಳ್ಳುವಂತೆ, ಇವನೂ ಸಹ ಗತಕಾಲದ ಸಂಗತಿಗಳನ್ನು ನೆನಪಿಸಿಕೊಳ್ಳುತ್ತಾನೆ. ಈಗ ಏನು ನಡೆಯುವುದೋ, ಅದು ಸಹ ನಾಳೆ ಗತ ಕಾಲದ ಕನಸೇ ಆಗುತ್ತದೆ. ಆದ್ದರಿಂದ ಅದನ್ನೂ ನಂಬಬೇಡ. ಹೀಗೆ ಭೂತ ಭವಿಷ್ಯಗಳ ಕ್ಷಣದೊಳಗಿನ ಬದುಕು ಸಂಸಾರವಾಗಿದೆ. ಇದೇನೂ ಸತ್ಯವಲ್ಲ ಬರೀ ವಿಭ್ರಾಂತಿ.

ಕಂ. ಪಾತಕ ಸಂಸಾರಾರ್ಣವ,
ಈ ತೆರದಲಿ ದಾಟಿ ನೀವು, ಎಚ್ಚರದಿ ಇರಲ್,
ಚೇತನ ಮೂರ್ತಿಯ, ಮನದಲಿ
ಖ್ಯಾತಿಯ ನೆನೆದೊಡಾಯ್ತು, ಘನಮತಿ, ವೇಮಾ.

ಮಾನವನಿಗೆ ಇರುವ ಗತಿಗಳೆರಡು. ಒಂದು ಶ್ರೇಯೋ ಮಾರ್ಗದ ಊರ್ಧ್ವಗತಿ. ಇನ್ನೊಂದು ಪ್ರೇಯೋ ಮಾರ್ಗದ ಅಧೋಗತಿ. ಅಧೋಗತಿಯೆಂದರೆ ಪತನ ; ಹೀಗೆ ಪಾತಕ ಸಂಸಾರವೆಂಬ ಸಮುದ್ರದಲ್ಲಿ ಬೀಳುವುದು ಪಾತಕವೇ ಆಗಿದೆ. ಇದನ್ನು ನೀವು ವಿವೇಕ ವೈರಾಗ್ಯಗಳಿಂದ, ಗುರೂಪದೇಶದಂತೆ ನಡೆದು ದಾಟಬೇಕು. ಬಳಿಕ ಎಚ್ಚರದಲ್ಲಿದ್ದು, ಮನದಲ್ಲಿ ಚೇತನ ಮೂರ್ತಿಯ ಖ್ಯಾತಿಯನ್ನು ಅಂದರೆ ಆತ್ಮ ಮಹಿಮೆಯನ್ನು ನನೆದೊಡೆ ಮತಿ ಘನವಾಗುತ್ತದೆ. ಚಂಚಲತೆಯು ಅಳಿಯುತ್ತದೆ.

ಮೂಢಾತ್ಮರಾದ ಮನುಜರು,
ಗೂಢವನರಿಯದಿರಲು ಗುರಿಗಾಣಲು ಅಳವೇ ?
ಗಾಢಾಂಧಕಾರ ತೊಲಗಿಸಿ
ರೂಢಿಗೊಳಿಸಿ ಸೇರಿ ಉಂಟು; ರೂಢವು ವೇಮಾ.

ಮೂಢರಲ್ಲಿ ಎರಡು ವಿಧ. ಕಲಿಯದ ಮೂಢರು ಒಂದು ವಿಧವಾದರೆ, ಕಲಿತ ಮೂಢರು. ಇನ್ನೊಂದು ವಿಧ. ವೇದಾಂತ ಶಾಸ್ತ್ರ, ನಿಗಮಾಗಮಗಳನ್ನು ಕಲಿಯದ ಮೂಢರು ಒಂದೆಡೆ ಇದ್ದರೆ, ಓದಿಯೂ ಅದರಂತೆ ಆಚರಿಸದ ಮೂಢ ಪಂಡಿತರು ಇನ್ನೊಂದೆಡೆ. ಹೀಗೆ ಮೂಢಾತ್ಮರಾದ ಜನರು ಗೂಢ ವಿದ್ಯೆಯನ್ನು ಅಂದರೆ ಬ್ರಹ್ಮ ವಿದ್ಯೆಯನ್ನು ಅರಿಯದಿದ್ದರೆ, ಬ್ರಹ್ಮನಾಗುವ ಗುರಿಯನ್ನು ತಲುಪಲು ಸಾಧ್ಯವೇ ? 'ಬ್ರಹ್ಮ ವಿದಃ ಬ್ರಹ್ಮೈವ ಭವತಿ' ಯಾವನು ಬ್ರಹ್ಮವನ್ನು ಅರಿಯುವನೋ, ಅವನು ಬ್ರಹ್ಮವೇ ಆಗುವನು. ಬ್ರಹ್ಮಕ್ಕಿಂತ ಬೇರೆಯಾಗಿದ್ದು ಬ್ರಹ್ಮವನ್ನು ಅರಿಯಲಾಗದು. ಬ್ರಹ್ಮವನ್ನು ಅರಸುವ ಮಾನವನು ಗಾಢ ಅಂಧಕಾರದಲ್ಲಿ ಹಾದಿ ಹುಡುಕುವವನಂತೆ ಇರಬಹುದು. ಅವನಿಗೆ ಅಂಧಕಾರ ನಿವಾರಕನಾದ ಗುರುವು ದಾರಿ ದೀಪವಾಗುತ್ತಾನೆ. ಹೀಗೆ ಅಂಧಕಾರವನ್ನು ತೊಲಗಿಸಿ ಊರ್ಧ್ವ ಮಾರ್ಗ ಹಿಡಿಯುವುದು ರೂಢವೇ ಆಗಿದೆ.

ಆ. ಜಂತು ರಾಶಿಗಳಲಿ, ಜನಿಸುತ, ಜನಿಸುತ್ತ
ದಿಮ್ಮು ಹಿಡಿದ ರೀತಿ ತಿರುಗಿ ತಿರುಗಿ,
ತನುವನಿತ್ಯವೆನುತ ತಿಳಿದು ನೆನೆಯದಿಹರೆ ?
ವಿಶ್ವದಾಭಿರಾಮ ಕೇಳು ವೇಮ.

ಮಾನವನು ಕರ್ಮ ಜಾಲದಲ್ಲಿ ಸಿಲುಕಿ ಮಾಡಿದ ಕರ್ಮದ ಫಲವಾಗಿ ರಾಶಿ ರಾಶಿ ಜಂತು ಯೋನಿಗಳಲ್ಲಿ ಜನಿಸಿ ಮತ್ತೆ ಜನಿಸಿ ತಲೆಗೆ ಮಂಕು ಹಿಡಿದವನಂತೆ, ತಾನು ಕಾಣಬೇಕಾದ ದೇವರು ಅಲ್ಲಿ ಇಲ್ಲಿ ಇರುವನೆಂದು ಭ್ರಮಿಸಿ ತಿರುಗಿ ತಿರುಗಿ ಬೇಸರಿಯುತ್ತಾನೆ. ಈ ತನ್ನ ಅನುಭವಗಳಿಂದ ಅವನು ಅರಿಯಬೇಕಾದದ್ದು ತಾನು ನಂಬಿದ ತನುವು ಅನಿತ್ಯ. ತಾನು ತನುವಲ್ಲ. ಆದರೆ ನಿತ್ಯವಾದ ಆತ್ಮ ಎಂದು.

ಎಲ್ಲ ಪ್ರಕಾರದ ವೈರಾಗ್ಯಗಳನ್ನು ಅಭ್ಯಸಿಸಿದೆವು. ಇವುಗಳಲ್ಲಿ ಭಕ್ತಿ ಯೋಗಿಯ ವೈರಾಗ್ಯವೇ ತೀರ ಸಹಜವಾದದ್ದೆಂದು ಕಾಣದಿರದು. ಇದರಲ್ಲಿ ಏನನ್ನೂ ಬಿಟ್ಟು ಕೊಡುವಂತಿಲ್ಲ. ಯಾವ ಸಂಬಂಧವನ್ನೂ ಹರಿದು ಹಾಕುವಂತಿಲ್ಲ. ಯಾರನ್ನೂ ನೋಯಿಸಿ ದೂರ ಹೋಗುವುದಲ್ಲ. ಭಕ್ತನ ವೈರಾಗ್ಯವು ತೀರ ಸಹಜವಿದೆ ; ಸರಳವಿದೆ. ನಮ್ಮ ಸುತ್ತಲಿನ ಸಹಜ ಕ್ರಿಯೆಯಂತಿದೆ.

ಕಂ. ಬೀಜವು ಸಿಪ್ಪೆಯು ತಮ್ಮೊಳು,
ಆ ಜನ್ಮ ಜೊತೆ ಜನಿಸಿ ಸಿಪ್ಪೆ ಹೋಹ ತೆರದಿಂ.
ನೈಜ ಸುಜ್ಞಾನಿಗೆ ಕರ್ಮವು
ತೇಜದಿ ತೊರೆದೋಡುತಿಹುದು, ಅನುವಿಲಿ, ವೇಮಾ.

ಬೀಜವು ವೃಕ್ಷವಾಗುತ್ತದೆ. ಹುಣಸೆ ಹಣ್ಣಿನಂತೆ, ಮಾವಿನ ಹಣ್ಣಿನಂತೆ, ಸೇಂಗಾ ಕಾಯಿಯಂತೆ, ಬೀಜವೂ ಸಿಪ್ಪೆಯೂ ಕೂಡಿ ಜನಿಸುತ್ತವೆ. ಕೂಡಿ ಜನಿಸಿದ್ದರೂ ಸಿಪ್ಪೆ ಒಂದು ಹಂತದಲ್ಲಿ ಹುಣಸೆ ಸಿಪ್ಪೆಯಂತೆ ಬೀಜದಿಂದ ಅಗಲಿ ಹೋಗುತ್ತದೆ. ಅದೇ ರೀತಿ, ಸುಜ್ಞಾನಿಗೆ ತಾನು ಪಡೆದ ಜ್ಞಾನವೇ ಬ್ರಹ್ಮಾನುಭೂತಿಗೆ ಬೀಜವಾಗಿದೆ. ಅವನ ಕರ್ಮವು ಮೇಲಿನ ಸಿಪ್ಪೆಯಂತೆ. ಅದು ಬೇಗನೆ ತೊರೆದು ಹೋಗುತ್ತದೆ.

ನಾವು ಈ ಮುನ್ನ ಪ್ರತೀಕ ಪೂಜೆ, ಪ್ರತಿಮಾ ಪೂಜೆ, ಭಕ್ತಿ ಸಾಧನದ ಪೂರ್ವ ಸಿದ್ಧತೆಗಳಾದ ಆಹಾರ ಶುದ್ಧಿ, ಮನೋಶುದ್ಧಿಗಳನ್ನು ಕುರಿತು ಸಾಕಷ್ಟು ಚರ್ಚಿಸಿದ್ದೇವೆ. ಕೊನೆಗೆ ಪರಾಭಕ್ತಿಯ ಸಾಧನೆಯಲ್ಲಿ ವೈರಾಗ್ಯದ ಪಾತ್ರವನ್ನೂ ಕುರಿತು ಆಲೋಚಿಸಿದ್ದೇವೆ. ಈಗ ಜ್ಞಾನ ಮಿಶ್ರ ಭಕ್ತಿ, ಕೇವಲ ಭಕ್ತಿ, ರಾಗಾತ್ಮಿಕ ಭಕ್ತಿ ಸಾಧನೆಗಳನ್ನು ಕುರಿತು ಗಮನ ಹರಿಸೋಣ.

ಜ್ಞಾನ ಮಿಶ್ರ ಭಕ್ತಿ :

ಒಂದು ವೇಳೆ, ಸಾಧಕನು ತನ್ನ ಅಭೀಷ್ಟ ಸಿದ್ಧಿಯ ನಂತರವೂ ಪರಮ ಬ್ರಹ್ಮನನ್ನು ಮರೆಯದಿದ್ದಾಗ, ಸಾವಕಾಶವಾಗಿ ಅವನ ಮನದಲ್ಲಿ ಪರಾಜ್ಞಾನವು ಉದಯಿಸುತ್ತದೆ. ಈ ಭಕ್ತಿಗೆ ಐಶ್ವರ್ಯ ಜ್ಞಾನಮಿಶ್ರ ಭಕ್ತಿ ಎನ್ನುತ್ತಾರೆ. ಇದೂ ಸಹ ನಿರ್ಗುಣ ಭಕ್ತಿಯೇ. ಆದರೆ ಇಲ್ಲಿ ಪ್ರಚ್ಛನ್ನ ಭಾವದಿಂದ ಐಶ್ವರ್ಯ ಇಲ್ಲವೆ ಜ್ಞಾನಗಳ ಅಹಂಕಾರವಿರುವ ಕಾರಣ ಪರಮ ಪದದ ಪ್ರಾಪ್ತಿಯಾಗದು.

ತಾನೆ ತತ್ತ್ವವೆಂದು ತನ್ನನರಿಯದಿರಲು,
ಮಾಯೆ ತತ್ತ್ವವೆಂದು ಮರುಗುತಿರುವ.
ಧರ್ಮ ಕರ್ಮಗಳನು ತಾ ತೊರೆಯೆ ತತ್ತ್ವವು.
ವಿಶ್ವದಾಭಿರಾಮ ಕೇಳು ವೇಮ.

ತಾನೇ ತತ್ತ್ವವಾಗಿದ್ದಾನೆ. ಆದರೆ ಅದನ್ನು ಅರಿಯದೆ, ಮಾಯೆ ತತ್ತ್ವವೆಂದು ಮರುಗುತಿಹನು. ಮಾಯಾ ಶಕ್ತಿಯನ್ನು ಒಲಿಸಿಕೊಂಡು ಸಿದ್ಧಿ ಸಂಪನ್ನನಾಗಿ ಮರುಗುತ್ತಿರುವನು. ತನ್ನ ಐಶ್ವರ್ಯ ಸಿದ್ಧಿಗಳನ್ನು ಕುರಿತು ಅವನು ಅಭಿಮಾನ ಪಡುತ್ತಿದ್ದರೂ ತಾನು ಕೊನೆಯದನ್ನು ಪಡೆಯಲಿಲ್ಲವೆಂಬ ಅಳುಕು ಇದ್ದೇ ಇರುತ್ತದೆ. ಇದುವೇ ಜ್ಞಾನ ಮಿಶ್ರ ಸಾಧನೆ. ಈಗ ಅವನು ಮಾಡಬೇಕಾದುದು ಇಷ್ಟೇ. ತಾನು ಆಚರಿಸುವ ವ್ರತ ಕರ್ಮಗಳನ್ನು ನಿಲ್ಲಿಸಬೇಕು. ಪುಣ್ಯ ಕರ್ಮಗಳೆಂದು ಗ್ರಹಿಸಿದವುಗಳನ್ನೂ ದಾಟಬೇಕು. ಆಗ ತಾನೇ ತತ್ತ್ವವಾಗುತ್ತಾನೆ.

ತನ್ನ ತಿಳಿಯದಂಥ ದೈವಜ್ಞರಿಹರೇನು ?
ನಿನ್ನ ತಿಳಿಯದಿರಲು ನಿಲ್ಲಬಹುದೆ ?
ಧರ್ಮ ಕರ್ಮಗಳನು ತಾ ತೊರೆಯೆ ತತ್ತ್ವವು.
ವಿಶ್ವದಾಭಿರಾಮ ಕೇಳು ವೇಮ.

ದೈವಜ್ಞರೆಂದರೆ ದೈವವನ್ನು ತಿಳಿದವರು. ದೈವಜ್ಞರಿಗೆ ತಾನು ಯಾರೆಂಬುದು ತಿಳಿದಿರಲೇಬೇಕು. ತನ್ನ ತಿಳಿಯದಂಥ ದೈವಜ್ಞರಿರುವರೇನು ? ಇಲ್ಲ ; ಇಲ್ಲ ದೇವಾ ! ನೀನು ನಿತ್ಯ ಸತ್ಯ. ನಿನ್ನನ್ನು ಅರಿಯದಿದ್ದರೆ ನಿತ್ಯ ಕಾಲ ನಿಲ್ಲಬಹುದೇ ? ಇಲ್ಲ. ಅವರು ಮಾಯೆಯ ಮಂಜಿನಿಂದ ಅರಿವಿನ ದೃಷ್ಟಿ ಕಳೆದುಕೊಂಡಿದ್ದಾರೆ. ಅವರು ಈ ಮಾಯೆಯನ್ನು ಅರಿಯಲೇಬೇಕು. ಮಾಯೆಯನ್ನು ಅರಿಯದಿದ್ದರೆ ಮಣ್ಣು ಪಾಲು ಆಗುವರಷ್ಟೇ. ಅವರು ಆತ್ಮವಿದರಾಗದೆ ದೇಹಾತ್ಮ ಬುದ್ಧಿ ಹೊಂದಿ ಮರ್ತ್ಯರಾಗುತ್ತಾರಷ್ಟೇ.

ನೀರ ಮೇಲೆ ಬಿದ್ದ ನಿಗಿಗೆಂಡವಿದ್ದಲು,
ಕೆಂಡದ ಮೇಲೆ ಜಲ ಕಾಯಲಿಡಲು.

ಕಾಯ್ದು ಸುಡುತಲಿಹುದು, ಕಡು ಚೋದ್ಯವಲ್ಲವೆ ?
ವಿಶ್ವದಾಭಿರಾಮ ಕೇಳು ವೇಮ.

ಅ+ಆ ≠ ಆ+ಅ

ರಸಾಯನ ಶಾಸ್ತ್ರದಲ್ಲಿ ಒಂದು ಸೂತ್ರವಿದೆ. ಅದೆಂದರೆ ಒಂದು ವಸ್ತುವನ್ನು ಇಂತಿಷ್ಟು ಪ್ರಮಾಣದಲ್ಲಿ ಇನ್ನೊಂದು ವಸ್ತುವಿನೊಡನೆ ಬೆರೆಸಿದರೆ ಯಾವ ಸಂಯುಕ್ತ ಫಲವು ಬರುವುದೋ, ಆ ಫಲವು ಅವೇ ಎರಡು ವಸ್ತುಗಳನ್ನು ವ್ಯತಿರಿಕ್ತ ಪ್ರಮಾಣದಲ್ಲಿ ಬೆರೆಸಿದರೆ ಉಂಟಾಗದು. ಈ ನೀರು ಮತ್ತು ನಿಗಿ ಕೆಂಡವನ್ನೇ ನೋಡಿರಿ. ನಿಗಿ ನಿಗಿ ಕೆಂಡದ ಮೇಲೆ ನೀರು ಸುರಿದರೆ, ಕೆಂಡವು ಆರಿ ಇದ್ದಿಲಾಗುತ್ತದೆ. ಆದರೆ ಅದೇ ನೀರನ್ನು ಪಾತ್ರೆಯಲ್ಲಿ ಹಾಕಿ ಅದೇ ಕೆಂಡದ ಮೇಲೆ ಇರಿಸಿದರೆ, ನೀರು ಕಾಯ್ದು ಹೊಯ್ದಾಡುತ್ತಿದೆ. ಈ ರೀತಿ ಪ್ರಾರಂಭಿಕ ಸಾಧನೆಯ ಅವಸ್ಥೆಯಲ್ಲಿರುವ ಸಾಧಕನು ದುಸ್ಸಂಗದಲ್ಲಿ ಸಿಲುಕಿದರೆ ಕೆಟ್ಟು ಹೋಗುತ್ತಾನೆ. ಆದರೆ ಸಾಧನೆಯಲ್ಲಿ ಬಲಿತ ಮೇಲೆ, ಅವನ ಸಂಗದಲ್ಲಿ ಬಂದ ದುರ್ಜನರು ಸಜ್ಜನರಾಗುತ್ತಾರೆ. ಇದೆಲ್ಲ ಬಹಳ ಸೋಜಿಗವಲ್ಲವೇ ?

ಮನ ನಿಲುಗಡೆ ಗೆಯ್ದು, ಮರಳಿ ಅದನೆ ಜಯಿಸಿ,
ಮಾಯೆ ಕೃತಿಗೆ ಸಿಕ್ಕು ಮರ್ದಿಸುತ್ತ,
ಹೆಚ್ಚು ಮಾತನಾಡೆ, ಸಿಕ್ಕುವುದೇ ಮಾಯೆ ?
ವಿಶ್ವದಾಭಿರಾಮ ಕೇಳು ವೇಮ.

ಸಾಧನದಲ್ಲಿ ವಿದ್ಯಾ ಸಾಧನವೂ ಇದೆ ; ಅವಿದ್ಯಾ ಸಾಧನವೂ ಇದೆ. 'ಸಾ ವಿದ್ಯಾ ಯಾ ವಿಮುಕ್ತಿಯೇ' ಅಂದರೆ ಯಾವುದು ಇಹದ ಬಂಧನಗಳಿಂದ ವಿಮುಕ್ತಿಗೊಳಿಸುವುದೋ, ಅದು ವಿದ್ಯೆ. ಯಾವುದು ವಿದ್ಯೆ ಅಲ್ಲವೋ ಅದು ಅವಿದ್ಯೆ. ಉಭಯ ಸಾಧನಗಳಲ್ಲಿಯೂ ಲಕ್ಷ್ಯವು ಬೇರೆ ಬೇರೆ. ಆದರೆ ಎರಡರಲ್ಲಿಯೂ ಮನಸ್ಸಿನ ನಿಲುಗಡೆ ಮುಖ್ಯ ಮತ್ತು ಅದನ್ನು ಜಯಿಸುವುದೂ ಅಗತ್ಯ. ಆದರೆ ಅವಿದ್ಯೆ ಸಾಧನದಲ್ಲಿ ಮಾಯೆಯ ಕೃತಿಗೆ ಸಿಕ್ಕು ಅಂದರೆ ಮಾಟ ಮದ್ದುಗಳಿಗೆ ವಶವರ್ತಿಯಾಗಿ ಸಿದ್ಧಿಯ ಹಂಬಲದಲ್ಲಿ ಚೈತನ್ಯ ಶಕ್ತಿಯನ್ನು ನಾಶ ಮಾಡುತ್ತ ಬಹಳ ಮಾತನಾಡಿದರೆ ಮಾಯೆಯನ್ನು ಹಿಡಿತದಲ್ಲಿ ಇರಿಸಿಕೊಳ್ಳಬಹುದೇ ?

ಓದಿನಲ್ಲಿ ಇಲ್ಲ, ಶಾಸ್ತ್ರಗಳಲಿ ಇಲ್ಲ.
ವಾದಗಳಲಿ, ದೈವ ಭೇದಗಳಲಿ.
ಬಯಲಿನಲ್ಲಿ ಮುಕ್ತಿ ಪರಿಕಿಸಿ ನೋಡಿರೋ.
ವಿಶ್ವದಾಭಿರಾಮ ಕೇಳು ವೇಮ.

ಕೆಲವರು ಹೇಳುವಂತೆ ವೇದ ಪಾಠದಲ್ಲಾಗಲಿ, ಶಾಸ್ತ್ರ ಪಾಠದಲ್ಲಾಗಲಿ ಮುಕ್ತಿ ಲಭಿಸದು. ಅದೇ ರೀತಿ, ಒಂದು ಹಂತಕ್ಕೆ ಅಂಟಿಕೊಂಡು ನಾಡಿನಾದ್ಯಂತ ಪರ್ಯಟನ ಮಾಡುತ್ತ ಪಂಡಿತರೊಂದಿಗೆ ವಾದ ಮಾಡಿ, ಯಾವುದೋ ದೇವತೆಯು ಶ್ರೇಷ್ಠವೆಂದು ಘೋಷಿಸುತ್ತ, ದೈವ ಭೇದ ಮಾಡಿ, ಅಲೆದರೆ ಮುಕ್ತಿಯಿಲ್ಲ. ಹಾಗಾದರೆ ಮುಕ್ತಿ ಎಲ್ಲಿದೆ ? ಮನಸ್ಸಿನ ಸಂಕಲ್ಪ ವಿಕಲ್ಪಗಳನ್ನು ನಿಲ್ಲಿಸು. ಮನವನ್ನು ನಿರ್ಮಲಗೊಳಿಸು. ಶೂನ್ಯ ಸಂಪಾದನೆ ಮಾಡು. ಆ

ಬಯಲಿನಲ್ಲಿ ಮಾನವನು ಮುಕ್ತಿ ಕಾಣುವುದು. ಇದನ್ನು ಚೆನ್ನಾಗಿ ತಿಳಿದುಕೊಂಡು ನೋಡಿರಿ.

ಅಮೃತ ಸಾಧನದಲಿ ಅಖಿಲರು ಬಲಯುತರು.
ಅಮೃತ ಚೊಕ್ಕ ನೋಡಿ ಅಂಟಲಿಲ್ಲ.
ಅಮೃತವು ವಿಷವಾಯ್ತು, ಅದೇನು ವಿಚಿತ್ರವು ?
ವಿಶ್ವದಾಭಿರಾಮ ಕೇಳು ವೇಮ.

ಪುರಾಣ ಕಥಾನುಸಾರ, ಅಮೃತ ಪಡೆಯಲು ದೇವರು ದಾನವರು ಕ್ಷೀರ ಸಮುದ್ರ ಮಥಿಸಲು ಅಣಿಯಾದರು. ಇಬ್ಬರೂ ಬಲಯುತರೇ. ಮಂದಾರ ಪರ್ವತವನ್ನು ಕಡೆಗೋಲು ಮಾಡಿಕೊಂಡು ವಾಸುಕಿ ಸರ್ಪವನ್ನು ಕಡೆಯುವ ಹಗ್ಗವನ್ನಾಗಿಸಿಕೊಂಡರು. ಈ ಪ್ರಕ್ರಿಯೆಯಲ್ಲಿ ವಾಸುಕಿ ವಿಷಕಾರಿತು. ಎಲ್ಲವೂ ಹಾಲಾಹಲಮಯವಾಯಿತು. ಎಲ್ಲರೂ ಭೀತರಾಗಿ ಓಡಿ ಹೋದರು. ಇನ್ನೂ ಮುಂದೆ ಸಾಧನ ಮಾಡಿ ಅಮೃತ ಪಡೆಯಬೇಕಿತ್ತು. ಆದರೆ ಅವರೆಲ್ಲ ಆ ಹೊತ್ತಿನಲ್ಲಿ ಅದಕ್ಕೆ ಅಂಟಲಿಲ್ಲ. ಇದೆಲ್ಲ ವಿಚಿತ್ರವಲ್ಲವೇ ? ಈ ಕಥೆಯು ಏನನ್ನು ಸೂಚಿಸುತ್ತದೆ? ಅಮೃತ ಪದವಿಯನ್ನು ಪಡೆಯುವ ಹಾದಿಯಲ್ಲಿ, ಅಷ್ಟ ಐಶ್ವರ್ಯ ಸಿದ್ಧಿಗಳೆಂಬ ಸಾಧನ ಮಾರ್ಗದಲ್ಲಿ ವಿಪತ್ಕಾರಿ ಸಂಪದಗಳು ಬರುತ್ತವೆ. ಹೀಗಾಗಿ, ಸಿದ್ಧಿಯ ಮೋಹಕ್ಕೆ ಬಲಿಯಾಗಿ ಅವುಗಳನ್ನು ಪ್ರದರ್ಶಿಸುತ್ತ ಅಮೃತ ಸಾಧನವನ್ನೇ ಅರ್ಧಕ್ಕೆ ಸಾಧಕನು ನಿಲ್ಲಿಸುವುದುಂಟು.

ಆ. ಬೇವಿನ ಬೀಜದೆಣ್ಣೆ ಬಾಹ್ಯಕೆ ತೆಗೆದು ಬಿಡಲು,
ಬೇವು ವಿಷವೆ ಎಂದು ಬೊಗಳುತಿಹರು.
ಬೀಜ ಬೀಜವಿರಲು ಬೇವು ಕಹಿ ಎಂತಾಯ್ತು ?
ವಿಶ್ವದಾಭಿರಾಮ ಕೇಳು ವೇಮ.

ಯಾವುದು ಎಲ್ಲಿ ಇರಬೇಕೋ ಅಲ್ಲಿದ್ದರೆ ಚೆನ್ನ. ಸಾಧನದ ಉಚ್ಚ ಸ್ತರದಲ್ಲಿ ಸಂಪಾದಿತ ಅಷ್ಟ ಐಶ್ವರ್ಯ ಸಿದ್ಧಿಗಳನ್ನು ಬಾಹ್ಯದಲ್ಲಿ ಪ್ರದರ್ಶಿಸದೆ ಇದ್ದರೆ, ಸಾಧಕ, ಸಿದ್ಧನ ಮಹಿಮೆ ಘನವಾಗಿರುತ್ತದೆ. ಹೊರತು, ಜನ ಮೆಚ್ಚುಗೆ ಪಡೆಯಲು, ತನ್ನ ಹೆಚ್ಚುಗಾರಿಕೆ ಪ್ರದರ್ಶಿಸಲು ಬಳಸಿದರೆ ಅದೆಲ್ಲ ಮುಂದಿನ ಸಾಧನ ಪ್ರಕ್ರಿಯೆಗೆ ಆತಂಕಕಾರಿಯಾಗುತ್ತದೆ. ಹೇಗೆಂದರೆ ಬೇವಿನ ಬೀಜವು ಬೀಜವಾಗಿಯೇ ಇದ್ದರೆ, ಅದು ವೃಕ್ಷವಾಗಿ ಬೆಳೆಯಬಹುದು. ಆದರೆ ಬೇವಿನ ಬೀಜವನ್ನು ಅರೆದು ಎಣ್ಣೆ ತೆಗೆದು ನೋಡಿದರೆ, ಅಬ್ಬಾ ! ಬೇವು ವಿಷವಾಗಿದೆ. ಎಂದು ಬೊಗಳುತ್ತಾರೆ.

ಗೀತ. ಮೌನಿ ನಿಜ ಕೇಳಿಯೊಳಗೆ ನಿಜ ಮನವ ನೂಕಿ,
ಆವರಿಸಿದೊಡನೆ ಪರಿಪೂರ್ತಿ ಆಂತು ಇರುವ.
ಅವನ ಭಕ್ತಿಗೆ ಸಾಟಿಯಹುದೆ ಅವನಿಯಲ್ಲಿ ?
ಡಾಂಭಿಕವಾದ ನಡೆಗಿರದು ಇಂಬು ವೇಮ.

ಬಾಯಿಯಿಂದ ಮಾತನಾಡದಿದ್ದರೆ, ಅಂದರೆ ವೈಖರೀ ಹಂತದಲ್ಲಿ ವ್ಯಕ್ತಪಡಿಸದಿದ್ದರೆ ರೂಢಿಯಲ್ಲಿ ಮೌನವೆನ್ನುತ್ತಾರೆ. ಆದರೆ ಅಂತರಂಗದಲ್ಲಿ ಯಾವುದೇ ವಿಚಾರ ತರಂಗಗಳು ಏಳದಿದ್ದರೆ ಅದು ಪರಾ, ಪಶ್ಯತಿ ಮಧ್ಯಯೀ ವೈಖರಿಯಲ್ಲಿ ಮೂಲ ಹಂತ. ಈ ಹಂತದ

ಮೌನಿಯು ತನ್ನ ನಿಜ ಕೇಳಿಯಲ್ಲಿ ಅಂದರೆ ಪ್ರಣವ ನಾದದಲ್ಲಿ ತನ್ನ ಮನವನ್ನು ನೂಕಬೇಕು. ಆಗ 'ನಿಜ ಕೇಳಿ' ಯು ಆವರಿಸುತ್ತದೆ. ಅದನ್ನೇ ಪೂರ್ಣವಾಗಿ ಹೊಂದಿ ಇರುತ್ತಾನೆ. ಇಂಥ ಏಕಾಂತಿಕ ಸಾಧಕನ ಭಕ್ತಿಗೆ ಧರೆಯಲ್ಲಿ ಸಾಟಿ ಇರುವುದೇ ? ಧರೆಯಲ್ಲಿ ಹೆಚ್ಚು ಸಾಧನೆಯಲ್ಲಿ ಡಾಂಭಿಕ ನಡೆಗೆ ಇಂಬು ಇರದು.

ಆ. ಜೀವ ವಶದ ರೀತಿ ಚಿನ್ಮಾತ್ರ ತನು ಮಿಂಚಿ,
ಭಾವ ಮಮತೆ ಅಮರಿ, ಪಟ್ಟು ಹಿಡಿದು.
ಕೂಡೆ ಹಂಸ ಮನದಿ ಕರ್ಮ ಸನ್ಯಾಸಿಯೈ.
ವಿಶ್ವದಾಭಿರಾಮ ಕೇಳು ವೇಮ.

ದೇಹೇಂದ್ರಿಯ ಮನಗಳ ಉಪಾಧಿಯಿಂದ ಆತ್ಮವು ಜೀವವೆನಿಸುತ್ತದೆ. ದೇಹೇಂದ್ರಿಯ ಮನಗಳಲ್ಲಿ ಆತ್ಮ ಬುದ್ಧಿಯು ಉಡುಗುತ್ತ ಸಾಗಿದಂತೆ, ಜೀವನು ಆತ್ಮವಶವಾಗುತ್ತಾನೆ. ಅಂದರೆ ಚಿನ್ಮಾತ್ರನು ತನುವನ್ನು ಮೀರುತ್ತಾನೆ. ಯಾವುದು ಓರ್ವನನ್ನು, ವಿಶೇಷವಾಗಿ ಶುದ್ಧ ಸತ್ವನನ್ನಾಗಿಸುವುದೋ, ಯಾವುದು ಮನವನ್ನು ತಾನು ಹಿಡಿದ ಹಿಡಿತವನ್ನು ಬಿಡುವುದಿಲ್ಲ.ವೋಆಗ ಮನದಲ್ಲಿ, 'ಹಂ.....ಸೋ' ಜೀವ ಹಂಸವನ್ನು ಕೂಡಿಕೊಂಡರೆ ಮುಂದೆ ಕರ್ಮದ ಪರಲು ತಪ್ಪುತ್ತದೆ. ಕರ್ಮ ಸನ್ಯಾಸವಾಗುತ್ತದೆ.

ಕೇವಲ ಭಕ್ತಿ :

ಕೆಲವು ಸಾಧಕರು ಯಾವುದೇ ಸಗುಣ ಭಕ್ತಿಯ ಸಾಧನೆಯನ್ನು ಮಾಡದೆ, ನಿರ್ಗುಣ ಭಕ್ತಿಯ ಅಮೃತತ್ವವನ್ನು ಆಸ್ವಾದಿಸುತ್ತಾರೆ. ಅಂಥವರ ಮನದಲ್ಲಿ 'ನಾನೇನು ಪಡೆದಿದ್ದೇನೆ ?' 'ಪಡೆಯುವ ಇಚ್ಛೆಯಾದರೂ ಏಕಿದೆ ?' ಎಂಬ ಹಲವು ಪ್ರಶ್ನೇಗಳೇಳುವ ಅನುವೂ ಇರದು. ಇದುವೇ ಭಕ್ತಿಯ ಅಂತಿಮ ಅವಸ್ಥೆ, ಇದುವೇ ಭಕ್ತಿಯ ಪರಮ ಪರಿಣತಿ. ಧ್ಯೇಯದೊಂದಿಗೆ ಅಭೇದ ಜ್ಞಾನವು ಇರುವುದರಿಂದ ಕೇವಲ ಒಂದೇ ಸತ್ತೆಯು ಉಳಿಯುತ್ತದೆ. ಇದರಿಂದಾಗಿ ಇದಕ್ಕೆ ಕೇವಲ ಭಕ್ತಿ ಎನ್ನುತ್ತಾರೆ. ಆ ಪದವಿಗೆ ಕೈವಲ್ಯ ಪದವಿ ಎನ್ನುತ್ತಾರೆ.

ಕಂ. ಮುಕ್ಕೋಣ ಶಿಖರದಲಿ ಗುರಿ
ದಕ್ಕಲು, ಪರಿಪೂರ್ತಿ ಹೊಂದಿ, ಧೈರ್ಯವ ಬಿಡದೇ.
ಸೊಕ್ಕಿಯು ಸೋಲದೆ ಇರುವೊಡೆ,
ನಿಕ್ಕಿಯು ಕೈವಲ್ಯವು ತಾ ನಿಜವೈ, ವೇಮಾ.

ಪ್ರಕೃತಿಯು ತ್ರಿಗುಣಗಳ ಸಂಪುಟ. ಸತ್ವ, ರಜಸ್ ಮತ್ತು ತಮಸ್ ಗುಣಗಳನ್ನು ತ್ರಿಭುಜಗಳಾಗಿ ರೇಖಿಸಿ ಶಿಖರವನ್ನು ಊರ್ಧ್ವಮುಖವಾಗಿ ಚಿತ್ರಿಸಿದರೆ ನಿವೃತ್ತಿ ಮಾರ್ಗವೆನ್ನುತ್ತಾರೆ. ಅಧೋಮುಖವಾಗಿ ಚಿತ್ರಿಸಿದರೆ ಪ್ರವೃತ್ತಿಮಾರ್ಗವೆನ್ನುತ್ತಾರೆ. ಏಕೆಂದರೆ ಊರ್ಧ್ವಸ್ತರದಲ್ಲಿ ವೃತ್ತಿಗಳು ಕಡಿಮೆಯಾಗುತ್ತ ಹೋಗುತ್ತವೆ. ಕೆಳಗಿನ ಸ್ತರದಲ್ಲಿ ಚಿತ್ತ ವೃತ್ತಿಗಳು ಬಹುವಾಗುತ್ತ ಹೋಗುತ್ತವೆ. ಯಾವಾಗ ಮುಕ್ಕೋಣ ಶಿಖರದಲ್ಲಿ ಸಾಧಕನು ಗುರಿಯನ್ನು, ಅಂದರೆ ನಿವೃತ್ತ ಸ್ಥಿತಿಯನ್ನು ಹೊಂದುವನೋ, ಆಗ ಧೈರ್ಯ ಬಿಡದೆ ಪರಿಪೂರ್ಣವಾಗಿ ನಿಸ್ತರಂಗ ಮನ ಹೊಂದಿ, ಇಷ್ಟ ಸಾಧನೆಯಲ್ಲಿ ಸೃಷ್ಟಿ ಪಡೆದು ಗರ್ವ ಪಡುತ್ತಾನೆ. ಆದರೆ ಯಾವುದೇ ಆಕರ್ಷಕ ಸಿದ್ಧಿಗಳಿಗೆ

ಸೋಲುವುದಿಲ್ಲ. ಹೀಗೆ ಇದ್ದರೆ, ಅಂಥ ಸಾಧಕನಿಗೆ ಕೈವಲ್ಯ ಪದವು ನಿಜವಾಗಿ ಕೈಗೂಡುತ್ತದೆ.

'ಕೇವಲ ಭಕ್ತಿ'ಯು ಘರ್ಷಣೆ, ತಿಕ್ಕಾಟ ಇಲ್ಲವೆ ಪ್ರಯತ್ನ ಪ್ರಯಾಸಗಳ ಮೂಲಕ ಆಗುವುದಿಲ್ಲ. ಯಾರಲ್ಲಿ ಮಹತ್ತಿನ ಕೃಪೆ ಇಲ್ಲವೆ ಭಾಗವತ ಕೃಪೆಯು ಎಳ್ಳು ಕಾಳಿನಷ್ಟಾದರೂ ಇಲ್ಲವೋ, ಅವರ ಚಿದಾಕಾಶದಲ್ಲಿ ಈ ಕೇವಲ ಭಕ್ತಿಯು ಸ್ಫುರಿಸುವ ಸಂಭವವೇ ಇಲ್ಲ.

'ಮಹತ್ ಕೃಪಯೈವ ಭಗವತ್ ಕೃಪಾ ಲೇಶಾದ್ವಾ'.

ಆ. ಬೆಳೆದು ಬಹಳ ಮನದಿ ಬಗೆಯ ಮಿಂಚಲು ಗುರುತು,
ರೂಪ ಭ್ರಮೆಯಡಗಿ ರೂಢಿಗೊಳದೆ,
ಕೇಡಿ ಪುರವ ಸೇರಿ, ಕಷ್ಟ ಪಡಲು ಸಲ್ಲ.
ವಿಶ್ವದಾಭಿರಾಮ ಕೇಳು ವೇಮ.

ಇರುವ ತತ್ತ್ವವೊಂದೇ. ಅದಕ್ಕೆ ರೂಪವಾವುದೂ ಇಲ್ಲ. ರೂಪವೂ ಒಂದು ತರಂಗ ತಾನೇ ? ಆತ್ಮವು ನಿಸ್ತರಂಗವಾಗಿದೆ. ಭಕ್ತಿ ಸಾಧಕನ ಮನದಲ್ಲಿ ಬಹಳವಾಗಿ ಬೆಳೆದು ಹಲವಾರು ಗುರುತುಗಳು ಮಿಂಚುತ್ತವೆ. ಈ ರೂಪಗಳ ಭ್ರಮೆಯನ್ನು ಅಡಗಿಸಿ, ರೂಪಾತೀತ ಸ್ಥಿತಿಯನ್ನು ರೂಢಗೊಳಿಸಬೇಕು. ಮತ್ತು ಕೇಡಿಯಾದ ತ್ರಿಗುಣಗಳ ಪುರವನ್ನು ಸೇರಿ ರೂಪಾದಿಗಳಿಗೆ ಅಂಟುತ್ತ ಕಷ್ಟ ಪಡುವುದೇಕೆ ?

ಆ. ಅಂತರಂಗದಲ್ಲಿ ಅನುವಿಲಿ ಶೋಧಿಸುತ,
ತಿಳಿದು ತಿಳಿದು ಮುಕ್ತಿ ತನಗೆ ಆಯ್ತು.
ಬಾಹ್ಯ ರಂಗದಲ್ಲಿ ಭಾವಿಸಲು ತಿಳಿವುದೆ ?
ವಿಶ್ವದಾಭಿರಾಮ ಕೇಳು ವೇಮ.

ದೇವರು ಹೃದಯಸ್ಥನಾಗಿದ್ದಾನೆ. ಅವನನ್ನು ಅಂತರಂಗದಲ್ಲಿಯೇ ಅನುಕೂಲಿಸಿ ಶೋಧಿಸುತ್ತ ತಿಳಿದುಕೊಳ್ಳುತ್ತ ಹೋಗಬೇಕು. ತಿಳಿದು ತಿಳಿದು ಭಗವತ್ ಕೃಪೆಯಿಂದ ತನಗೆ ಮುಕ್ತಿ ದೊರೆಯುತ್ತದೆ. ಹೀಗೆ ಮಾಡದೆ, ಬಹಿರಂಗದಲ್ಲಿ, ಗುಡಿ ಗುಂಡಾರಗಳಲ್ಲಿಯೋ, ತೀರ್ಥ ಕ್ಷೇತ್ರಗಳಲ್ಲಿಯೋ, ಆಕಾಶದಲ್ಲಿಯೋ ದೇವರು ಇರುವನೆಂದು ಭಾವಿಸಲು, ಎಂದಾದರೂ ದೇವನನ್ನು ತಿಳಿಯಬಹುದೇ ?

ಆ. ಮುದದಿ ಇಂದ್ರಿಯಗಳ ಮೊದಲು ನಿಲಿಸದಿದ್ದು,
ಸವೆದು ಹೋಹ ವೇಳೆ ಸನ್ಯಾಸಿಯು !
ಆತ್ಮ ಶುದ್ಧಿಯಿರದೆ ಅಂಟುವುದೆ ಮೋಕ್ಷ ?
ವಿಶ್ವದಾಭಿರಾಮ ಕೇಳು ವೇಮ.

ಮಾನವನ ಇಂದ್ರಿಯಗಳು ಸ್ವಭಾವತಃ ಬಹಿರ್ಮುಖವಾಗಿವೆ. ಅವು ದೇಹವೆಂಬ ರಥಕ್ಕೆ ಹೂಡಿದ ಕುದುರೆಗಳು. ಮಾರ್ಗದಲ್ಲಿ ಚಲಿಸಬೇಕಾದ ಅವುಗಳ ಸೆಳೆತವು ಬಾಹ್ಯ ವಿಷಯಗಳೆಂಬ ಹುಲ್ಲಿನತ್ತ ಇರುತ್ತದೆ. ಕಣ್ಣು ರೂಪದತ್ತ ಸೆಳೆಯಲ್ಪಡುತ್ತದೆ, ಕಿವಿ ಶಬ್ದಗಳತ್ತ, ಚರ್ಮವು ಸ್ಪರ್ಶದತ್ತ, ನಾಲಗೆಯು ರುಚಿಯತ್ತ ಮತ್ತು ನಾಸಿಕವು ಗಂಧದತ್ತ ಸೆಳೆಯಲ್ಪಡುತ್ತವೆ.

ಹೀಗಾಗಿ ನಿರ್ವಿಷಯವಾಗಿ ಶುದ್ಧವಾಗಬೇಕಾದ ಮನಸ್ಸು ಮಲಿನವಾಗುತ್ತದೆ. ಈ ಸ್ವಾಭಾವಿಕ ವ್ಯಾಪಾರವನ್ನು ತಡೆಯುವ ಚೈತನ್ಯ ಶಕ್ತಿ ಮುಪ್ಪು ಅಡರಿದಂತೆಲ್ಲ ಹ್ರಾಸವಾಗುತ್ತದೆ. ಆಗ ಕಣ್ಣು ಸರಿಯಾಗಿ ಕಾಣವು ; ಕಿವಿಗಳು ಸರಿಯಾಗಿ ಕೇಳವು. ಹೀಗೆ ದೇಹೇಂದ್ರಿಯಗಳು ಮುಪ್ಪಿನಿಂದ ಸವೆದು ಹೋಗುವ ವೇಳೆ ಸನ್ಯಾಸಿಯಾದರೇನು ಫಲ ? ಇಂಥ ಮಲಗಳು ಅಂಟದಂತೆ ಆತ್ಮವು ಶುದ್ಧವಾಗಿರಬೇಕು. ಅಂದರೆ ಮಾತ್ರ ಮೋಕ್ಷವು ಅಂಟಬಹುದು.

ಗೀತ. ಆತ್ಮ ತೇಜವನು ಗಮನಿಸಿ ಅಭಿನುತಿಸುತ,
ಕೀಲಕ ಬ್ರಹ್ಮ ತನ್ಮಯ ಕೇಳಿ ಮುಳುಗಿ,
ನಿತ್ಯ ಪರಿಪೂರ್ಣ ಹೊಂದುತ ನಿರತಿಶಯದಿ,
ಸತ್ಯ ಸಂಪನ್ನರಿಗಿದು ಸಾಧ್ಯ ವೇಮ.

ಒಬ್ಬನಲ್ಲಿ ಆತ್ಮ ತೇಜವು ಸ್ಫುಟವಾಗಿದೆಯೆಂಬುದು ಅವನನ್ನು ನೋಡಿದೊಡನೆ ಗೊತ್ತಾಗುತ್ತದೆ. ಅವನ ಪ್ರಸನ್ನ ವದನ, ಪ್ರಾಸಾದಿಕ ವಾಣಿ, ಅಸಾಮಾನ್ಯ ಚರಿತೆಗಳು ಅವನ ಆತ್ಮ ತೇಜವನ್ನು ಸಾರಿ ಹೇಳುತ್ತಿವೆ. ಅದನ್ನು ಗಮನಿಸಬೇಕು. ಹೊಗಳಬೇಕು. ಅವನು ಪರಮ ಪದ ತಲುಪಲು, ಬ್ರಹ್ಮ ತನ್ಮಯ ಕೇಳಿಯು ಬಾಗಿಲು ಚಿಲಕದಂತಿದೆ. ಅವನು ಆ ಧ್ವನಿಯಲ್ಲಿ ಮುಳುಗಬೇಕು. ಇದು ಯಾರಿಗೆ ಸಾಧ್ಯ ? ನಿತ್ಯ ಪರಿಪೂರ್ಣತೆಯನ್ನು ಹೊಂದುತ್ತ, ಕ್ಷುದ್ರವಾದುದನ್ನೂ, ಖಂಡವಾದುದನ್ನೂ ಅತಿಶಯಿಸುತ್ತ ಬಾಳಿದ ಸತ್ಯ ಸಂಪನ್ನರಿಗೆ ಮಾತ್ರ ಇದು ಸಾಧ್ಯ. ಇಂಥ ಭಗವದನುಗ್ರಹಕ್ಕೆ ಪಾತ್ರರಾದ ಭಕ್ತರಿಗೆ ಇದು ಸಾಧ್ಯ.

ಆ. ಎಲೆಯ ಕಾಣಬಹುದು ; ಇರಲಿ ಹರಿಹರಾದಿ
ಕೊಂಬೆ ಕಾಣಲಿಲ್ಲ, ಕೋರಿ ನೋಡೆ.
ಕೊಂಬೆ ಕಾಣದಿರಲು, ಕೊಂಡಾಡದೆ ಇಹರು.
ವಿಶ್ವದಾಭಿರಾಮ ಕೇಳು ವೇಮ.

ಹರಿ ಹರಾದಿ ಎಂದರೆ ರಜೋಗುಣ, ಸತ್ತ್ವಗುಣ ಮೊದಲಾದವುಗಳನ್ನೂ ಹೊಂದಿ ಸಾಧನ ಮಾಡಿದರೆ, ವಿಷಯಗಳನ್ನು ಇಲ್ಲವೆ ತ್ರೈಗುಣ್ಯ ತಿಳಿಸುವ ವೇದಗಳನ್ನು ಕಾಣಬಹುದು. ಆದರೆ ಗುಣಗಳನ್ನು ಹೊಂದಿದ ವೈಧೀ ಭಕ್ತಿ ಸಾಧನೆಯಿಂದ ವಿಷಯಗಳ ಹಿಂದಿರುವ ಪ್ರಕೃತಿಯ ಶಾಖೆಗಳನ್ನು ಕಾಣಲಿಲ್ಲ. ಮೂಲವನ್ನು ಕಾಣಬೇಕೆಂದು ಎಷ್ಟೇ ಪ್ರಯತ್ನ ಮಾಡಿದರೂ ಅದು ಸಾಧ್ಯವಾಗದು. ಯಾವಾಗ ಕೊಂಬೆಯನ್ನು ಕಾಣುವುದಿಲ್ಲವೋ, ಆಗ ಅವರು ಮೂಲದ ಮಹಿಮೆಯನ್ನು ಕೊಂಡಾಡದೆ ಇರುವರು.

ಆ. ಮೊದಲ ತರುವಿನಲ್ಲಿ ಮೂರು ಕೊಂಬೆ ಹುಟ್ಟಿ,
ಚಿಗುರಿ ಕೊನೆಗೆ ಬಳ್ಳಿ ಎಲೆಗಳಾಗಿ,
ಹೂವು ಮಿಡಿಯು ಹಣ್ಣು, ಭುವನದಲಿ ತುಂಬಿವೆ.
ವಿಶ್ವದಾಭಿರಾಮ ಕೇಳು ವೇಮ.

ಸಂಸಾರ ವೃಕ್ಷವು ಬ್ರಹ್ಮದಲ್ಲಿಯೇ ಹುಟ್ಟುತ್ತದೆ. ಆ ವೃಕ್ಷಕ್ಕೆ ಸತ್ವ, ರಜಸ್ ಮತ್ತು ತಮಸ್ ಎಂಬ ಮೂರು ಕೊಂಬೆಗಳಿವೆ. ಇವುಗಳೇ ಗುಣಾನ್ವಿತವಾಗಿ ಬುದ್ಧಿ ತತ್ತ್ವ, ಅಹಂ ತತ್ತ್ವ

ಮತ್ತು ಚಿತ್ತ ತತ್ತ್ವಗಳಾಗಿವೆ. ಚಿತ್ತ ತತ್ತ್ವ, ಅಹಂ ತತ್ತ್ವ ಮತ್ತು ಬುದ್ಧಿ ತತ್ತ್ವಗಳ ಒಟ್ಟಾರೆ ಹೆಸರೇ ಮನಸ್ತತ್ತ್ವ. ಚಿತ್ತ ತತ್ತ್ವದ ಮೇಲೆ ಅಧಿಕ ತಮೋಗುಣದ ಪ್ರಭಾವದಿಂದ, ಪಂಚ ತನ್ಮಾತ್ರೆಗಳು, ಪಂಚ ಮಹಾಭೂತಗಳು, ವಿಶ್ವದಲ್ಲಿರುವ ಸಕಲ ಭೋಗ ವಸ್ತುಗಳು ಸೃಷ್ಟವಾಗಿವೆ. ಇವುಗಳನ್ನೇ ಬಳ್ಳಿ, ಎಲೆ, ಹೂವು, ಮಿಡಿ, ಹಣ್ಣು ಎಂದು ಭುವನದಲ್ಲಿ ತುಂಬಿದ ಸಕಲ ಪದಾರ್ಥಗಳೆಂದು ತಿಳಿಯಬೇಕು.

ಎಲೆ, ಅಡಿಕೆ ಮತ್ತು ಸುಣ್ಣ ಎಂಬೀ ಮೂರು ವಸ್ತುಗಳ ಬಣ್ಣವು ಮೂರು ವಿಧ. ಅವುಗಳು ಸಮ ಪ್ರಮಾಣದಲ್ಲಿ ಬೆರೆತಾಗ ಆ ಮೂರೂ ವಸ್ತುಗಳಲ್ಲಿ ಮೊದಲು ಸ್ಫುಟವಾಗಿ ತೋರಿ ಬರದ ಕೆಂಪು ಬಣ್ಣವು ವ್ಯಕ್ತವಾಗುತ್ತದೆ. ಆ ರೀತಿ, ಸತ್ತ್ವ, ರಜಸ್ ಮತ್ತು ತಮಸ್ ಎಂಬ ಮೂರು ಗುಣಗಳು ಭಾರಸಾಮ್ಯದಲ್ಲಿ ಇದ್ದರೆ, ಗುಣಾತೀತ ಅವಸ್ಥೆಯು ತೋರುತ್ತದೆ. ಆ ಗುಣಾತೀತ ಸತ್ತೆಯೇ ಪರಮಾತ್ಮನಾಗಿದ್ದಾನೆ. ಆದ್ದರಿಂದ ತ್ರಿಗುಣಗಳು ಸೋಂಕಿ, ಪರಮಾತ್ಮನು ಶೋಭಿಸುತ್ತಾನೆ.

ಆ. ಹಾಲಿನಲ್ಲಿ ಹುಳಿಯ ಲೀಲೆಯಿಂದ ಬೆರೆಸೆ,
ಒಡೆಯುತಿಹುದು ಆಗ, ಒಟ್ಟು ತಾನೆ.
ತಿಳಿಯೊ ಮನಸಿನೊಳಗೆ ತೇಟ ದಿವ್ಯ ತತ್ತ್ವ.
ವಿಶ್ವದಾಭಿರಾಮ ಕೇಳು ವೇಮ.

ಹಾಲು ಹಾಗೆಯೇ ಇಟ್ಟರೆ ಕೆಟ್ಟು ಹೋಗುತ್ತದೆ. ಅದೇ ಲೀಲೆಯಿಂದ ಸ್ವಲ್ಪು ಹುಳಿಯನ್ನು ಬೆರೆಸಿದರೆ ಒಡೆದು ಮೊಸರಾಗುತ್ತದೆ. ಮುಂದೆ ಏನೇನೋ ಆಗುತ್ತದೆ. ಅದೇ ರೀತಿ, ಮನಸ್ಸಿನಲ್ಲಿ ಪರಮನ ಧ್ರುವ ಸ್ಮೃತಿಯನ್ನು ಲೀಲೆಯಿಂದ ಬೆರೆಸಿದರೆ ಮನವು ಇಲ್ಲವಾಗಿ ತೇಟ ದಿವ್ಯ ತತ್ತ್ವವು ಆವರ್ಭವಿಸುತ್ತದೆ.

ಹಾಲು, ಮೊಸರು, ಬೆಣ್ಣೆ, ಪಾಯಸಾನ್ನ, ತುಪ್ಪ
ರೂಪವೆಷ್ಟಾದರು ನೋಡೆ ಹಾಲೆ.
ಹಾಲಿನಂಥ ಕುಲದ ಬ್ರಹ್ಮವನೆ ಕಾಣರು.
ವಿಶ್ವದಾಭಿರಾಮ ಕೇಳು ವೇಮ.

ಬ್ರಹ್ಮವು ಹಾಲಿನಂತೆ ಶುದ್ಧ ಸತ್ತೆ. ಬ್ರಹ್ಮನಲ್ಲಿ ಪ್ರಕೃತಿಯ ಗುಣಗಳ ಅನ್ವಯದಿಂದ ಅಂತಃಕರಣಗಳೂ, ಪಂಚಭೂತ ತತ್ತ್ವಗಳೂ ಉಂಟಾಗುವಂತೆ ಹಾಲಿಗೆ ಹಾಕಿದ ಹುಳಿಯಿಂದ ಅಂದರೆ ಹೆಪ್ಪಿನಿಂದ ಹಾಲು ರಾಸಾಯನಿಕವಾಗಿ ಬದಲಾಗಿ ಮೊಸರಾಗುತ್ತದೆ. ಮೊಸರನ್ನು ಕಡೆಗೋಲಿನಿಂದ ಮಥಿಸಿದರೆ, ಬೆಣ್ಣೆ ಬರುತ್ತದೆ. ಬೆಣ್ಣೆಯನ್ನು ಕಾಯಿಸಿದಾಗ ಘಮಘಮಿಸುವ ತುಪ್ಪ ಬರುತ್ತದೆ. ಹಾಲಿನಿಂದಲೇ ಮಧುರ ಪಾಯಸಾನ್ನವೂ ಸಿದ್ಧವಾಗುತ್ತದೆ. ಹೀಗೆ ಮೊಸರು, ಬೆಣ್ಣೆ ತುಪ್ಪ ಇತ್ಯಾದಿ ರೂಪ ಧಾರಣ ಮಾಡಿದುದು ಮೂಲದಲ್ಲಿ ಹಾಲೇ ಆಗಿದೆ. ಅದೇ ರೀತಿ, ಪ್ರಕೃತಿಯ ಪ್ರಭಾವದಿಂದ ಅನೇಕ ರೂಪ ಧಾರಣ ಮಾಡಿದರೂ ಬ್ರಹ್ಮನು ಹಾಲಿನ ಕುಲದವನೇ ಎಂಬುದನ್ನು ಕಾಣರು.

ಬಯಸಿದೊಡವೆ ಬೇರೆ ; ಬಂಗಾರವು ಒಂದೆ.
ಪರಿಕಿಸೆ ಘಟ ಬೇರೆ ; ಹರಣವೊಂದು.

ಹಲವು ತಿಂಡಿ ಬೇರೆ ; ಹಸಿವು ಅರಿಯಲೊಂದೆ.
ವಿಶ್ವದಾಭಿರಾಮ ಕೇಳು ವೇಮ.

ಒಬ್ಬನು ಐಹಿಕ ಭೋಗ ಭಾಗ್ಯಗಳನ್ನು ಬಯಸಬಹುದು. ಇಲ್ಲವೆ ಮಾನಸಿಕ ಭಾವಾದರ್ಶಗಳನ್ನು ಬಯಸಬಹುದು. ಇಲ್ಲವೆ ಏಕಾಂತಿಕ ಮೌನವನ್ನೇ ಬಯಸಬಹುದು. ಏನನ್ನೇ ಬಯಸಲಿ, ಬ್ರಹ್ಮವೇ ಆಯಾ ರೂಪದಲ್ಲಿ ಪ್ರಸ್ತುತವಾಗುವುದು. ಬೇರೆ ಬೇರೆ ಆಕಾರದ ಆಭರಣಗಳನ್ನು ಬಯಸಿದರೂ ಅವೆಲ್ಲವುಗಳಿಗೆ ಉಪಾದಾನ ಕಾರಣವಾಗಿ ಬಂಗಾರವೇ ಇದೆ. ಒಬ್ಬನು ಜನ್ಮ ಜನ್ಮಾಂತರದಲ್ಲಿ ಬೇರೆ ಬೇರೆ ಫಲಗಳನ್ನು ಪಡೆಯಬಹುದು. ಆದರೆ ಅವುಗಳಲ್ಲಿ ಸಂಚರಿಸುವ ಪ್ರಾಣ ಮಾತ್ರ ಒಂದೇ ಆಗಿದೆ. ತನ್ನ ಬಯಕೆಯಂತೆ ಬೇರೆ ಬೇರೆ ತಿಂಡಿಗಳನ್ನು ಪಡೆಯಬಹುದು. ಆದರೆ ಅವುಗಳು ಹಿಂಗಿಸುವ ಹಸಿವೆಯು ಒಂದೇ ಆಗಿದೆ. ಅದೇ ರೀತಿ, ತನ್ನ ತನ್ನ ಅಧಿಕಾರಕ್ಕೆ ತಕ್ಕ ಬೇರೆ ಬೇರೆ ಸಾಧನ ಪದ್ಧತಿಗಳನ್ನು ಅನುಸರಿಸಿದರೂ ಸಹ, ತಲುಪಬೇಕಾದ ಲಕ್ಷ್ಯ ವಸ್ತುವು ಬ್ರಹ್ಮವೇ ಆಗಿದೆ.

ಕಷ್ಟವಿಹುದು ಮನಸು ಕಾಂಕ್ಷಿಸುವ ಯೋಗಿಗೆ,
ಜ್ಞಾನ ದೀಪ ಶಿಖೆಯು ತಾನು ಇಂಪು.
ಕಾಣಬಹುದು ಆತ್ಮ ಕ್ರಮವಾಗಿ ಜ್ಞಪ್ತಿಯಲಿ,
ವಿಶ್ವದಾಭಿರಾಮ ಕೇಳು ವೇಮ.

ಯೋಗಿಯ ಮನಸ್ಸು ಮುಕ್ತಿಗಾಗಿ ಆಕಾಂಕ್ಷಿಸುತ್ತದೆ. ಆಗ ಅವನಿಗೆ ಮುಂದೇನು ? ಎಂದು ತಿಳಿಯದೆ ಕಷ್ಟವೆನಿಸುವುದು. ಮಾರ್ಗದರ್ಶನಕ್ಕಾಗಿ ತಡಕಾಡುತ್ತಾನೆ.

ಆ. ಹಾನಿಯುಂಟಾಗದು. ಹರನ ಮನದಿ ನೆನೆಯೆ,
ಅವಗೆ ಲಭ್ಯ ಪರಮ ಅವನಿಯಲ್ಲಿ
ಹಿಡಿದ ನಿಷ್ಠೆ ಬಿಡದೆ ಹೊಂದುತಿಹುದು ಶ್ರೇಯ.
ವಿಶ್ವದಾಭಿರಾಮ ಕೇಳು ವೇಮ.

ಹರನು ಮಹಾದೇವನು. ನಮ್ಮ ಮನವನ್ನು ನಮಗರಿವಿಲ್ಲದಂತೆಯೇ ಕೊಂಡೊಯ್ಯುತ್ತಾನೆ. ಅವನು ಅನಂತನು. ಹೀಗೆ ಭಕ್ತನು ಮಹಿಮ್ನ-ಕ್ಷುದ್ರ ಭಾವದಿಂದ ಹರನನ್ನು ಮನದಲ್ಲಿ ನೆನೆಯಲು ಅವನಿಗಾವ ಹಾನಿಯಂತೂ ಇರದು. ಅವನಿಗೆ ಅವನಿಯಲ್ಲಿ ಪರಮ ಪದವು ಲಭ್ಯವಾಗುತ್ತದೆ. ಹರನನ್ನು ಕುರಿತು ಹಿಡಿದ ನಿಷ್ಠೆಯನ್ನು ಬಿಡದೆ, ಅವನನ್ನು ಹೊಂದುತಿಹುದು ಶ್ರೇಯಸ್ಕರವಾಗಿದೆ.

ಕಂ. ಭಕ್ತಿಗೆ ಮೂಲವು ಜ್ಞಾನವೆ.
ರಕ್ತಿಯಲಿ ಗುರು ಬಳಿ ಸಾರಿ ಉನ್ನತಿ ಪಡೆಯಲ್,
ಮುಕ್ತಿಯಲರಿವೇ ತೋಚಲು,
ಮುಕ್ತಿಗೆ ನಿಲಯವಹ ದಾರಿ, ತೋರ್ಪುದು ವೇಮಾ.

ಜ್ಞಾನ ಸಾಧನೆಯಲ್ಲಿ ಸಾಧಕನ 'ಜ್ಞ' ಸತ್ತೆಯಂತೂ ಇರುತ್ತದೆ. ಇದರಿಂದ ನಾನು ತಿಳಿದಿದ್ದೇನೆ. ಎಂಬ ಸಾತ್ವಿಕ ಅಹಂ ಉಳಿದುಕೊಂಡಿರುತ್ತದೆ. ಕೇವಲ ಭಕ್ತಿಯಲ್ಲಾದರೋ,

ಸಂಪೂರ್ಣ ಶರಣಾಗತಿಯು ಏರ್ಪಟ್ಟು, ಜ್ಞಾನವೇ ಭಕ್ತಿಗೆ ಮೂಲವೆನಿಸುತ್ತದೆ. ಇಂಥ ಬೃಹತ್ತಿನ ಸ್ವರೂಪ ಜ್ಞಾನ ಉಂಟಾದಾಗ, ಮಾರ್ಗದರ್ಶಕನಾದ ಗುರುವಿನ ಬಳಿಗೆ ಹೋಗಿ ಉನ್ನತಿ ಪಡೆಯುತ್ತಾನೆ. ಆಗ ಗುರುಕೃಪೆಯಿಂದ ಮುಕ್ತಿಯಲ್ಲಿ ಅರಿವೇ ತೋರಲು, ಮುಕ್ತಿ ನಿಲಯಕ್ಕೆ ದಾರಿಯು ಕಂಡು ಬರುತ್ತದೆ.

ಶ್ವಾನ ತೊಗಲು ತಂದು, ತಾನು ಗೊಂಬೆ ಮಾಡಿ,
ಆಡಿದಂತೆ ಮಾಡಿ ಅಂತೆ ಒಗೆವ.
ತನ್ನ ತಿರುಗಿಸುವನ ತಾನು ಕಾಣನೇಕೆ ?
ವಿಶ್ವದಾಭಿರಾಮ ಕೇಳು ವೇಮ.

ಕುಶಲ ಕರ್ಮಿಯು ನಾಯಿಯು ಚರ್ಮ ಸುಲಿದು ಅದರಲ್ಲಿ ಹಲವು ಪದಾರ್ಥಗಳನ್ನು ತುಂಬಿ, ಹೃಷ್ಟ, ಪುಷ್ಟವಾಗಿ ಕಾಣುವ ಬೊಂಬೆಯಾಗಿ ಮಾಡುತ್ತಾನೆ. ಅದರೊಂದಿಗೆ ಆಟವಾಡಿ ಬಾಲ್ಯ ಚಪಲ ತೀರಿಸಿಕೊಂಡು, ಅತ್ತ ಒಗೆಯುತ್ತಾನೆ. ಅದೇ ರೀತಿ ಪರಮಾತ್ಮನು ಜೀವನಿಗೆ ಮರು ಜನ್ಮದಲ್ಲಿ ತೊಗಲಿನ ದೇಹವನ್ನು ನೀಡಿ, ತನ್ನ ವಿಧಿಗನುಸಾರ ಆಟವಾಡಿಸುತ್ತಾನೆ. ನಿರ್ದಿಷ್ಟ ಆಯು ತೀರಿದ ಬಳಿಕ ಅತ್ತ ಬಿಸುಟುತ್ತಾನೆ. ಹೀಗೆ ತನ್ನನ್ನು ದೇಹ ದೇಹಾಂತರಗಳಲ್ಲಿ ತಿರುಗಿಸುವವನನ್ನು ತಾನು ಏಕೆ ಕಾಣನು ?

ಕೆಳಗೆ ಹೊಯ್ವ ಹಾಲು, ಕಾಸಿ ಪಕ್ವಗೊಳಿಸಿ,
ವ್ಯರ್ಥಗೊಳಿಸಲೇಕೆ ಕುಡಿಯಿರಯ್ಯ !
ತಿಳಿವು ಎಷ್ಟೆ ಇರಲಿ ; ಥೇಟ ನೋಳ್ಪರಾರೊ ?
ವಿಶ್ವದಾಭಿರಾಮ ಕೇಳು ವೇಮ.

ಹಾಲನ್ನು ಕಾಯಿಸಿದರೆ ಅದು ಪಕ್ವಗೊಳುತ್ತದೆ ; ಮಧುರವಾಗುತ್ತದೆ. ಇಂಥ ಹಾಲು ಹಾಗೇ ಬಿಟ್ಟರೆ ಉಕ್ಕು ಬಂದು ಕೆಳಕ್ಕೆ ಸುರಿಯಲೂಬಹುದು. ಹೀಗೆ ಅದನ್ನು ವ್ಯರ್ಥಗೊಳಿಸುವುದೇಕೆ? ಅದನ್ನು ಕುಡಿಯಿರಿ. ಅದೇ ರೀತಿ, ಸಾಧನೆಯ ಉನ್ನತ ಸ್ತರದಲ್ಲಿ ಮನದ ಮಹಿಮೆಯು ಸಿದ್ಧಿಯ ರೂಪದಲ್ಲಿ ಉಕ್ಕು ಬಂದಾಂತಾಗಬಹುದು. ಮತ್ತು ಮನದ ಶಕ್ತಿಯು ಅಹಂಭಾವದ ಹೆಚ್ಚಳಕ್ಕಾಗಿ ವ್ಯರ್ಥ ದುರ್ಬಳಕೆಯಾಗಬಹುದು. ಅದನ್ನು ಮುಂದಿನ ಉನ್ನತ ಸಾಧನಕ್ಕಾಗಿ ಬಳಸಿಕೊಳ್ಳಬೇಕು. ಹೀಗೆ ಮಾನವನಿಗೆ ಎಷ್ಟೋ ತಿಳಿವು ಇರಬಹುದು. ಗುರುಗಳೂ ತಿಳಿಸಿ ಹೇಳುತ್ತಿರಬಹುದು. ಆದರೆ ಸಿದ್ಧ ಪುರುಷರು ತಮ್ಮ ಘನತೆಯ ಗುಣಗಳ ದೋಷವನ್ನು ನೋಡಿ ನಡೆಯಬೇಕಲ್ಲವೇ ?

ಅರಿವು ಪರಿಗಣಿಸುತ, ಅರಿತರಿತುಕೊಳುವ.
ಪರಮ ತಾಕಿ ನೋಡಿ, ಪಟ್ಟು ಹಿಡಿವ.
ಗುರಿಯ ಬಯಲು ಸೇರಿ, ಗುಣ ರಹಿತನಾಗನೆ ?
ವಿಶ್ವದಾಭಿರಾಮ ಕೇಳ ವೇಮ.

ಭಕ್ತಿಗೆ ಜ್ಞಾನವು ಮೂಲ ತಾನೇ ? ಭಕ್ತಿಯಿಂದ, ಅದೂ ಕೇವಲ ಭಕ್ತಿ ಸಾಧನದಿಂದ, ಊರ್ಧ್ವಸ್ತರಕ್ಕೇರಿ, ಅಲ್ಲಿಯ ಜ್ಞಾನಾನುಭವವನ್ನು ಪರಿಗಣಿಸುತ್ತ, ಇನ್ನಷ್ಟು, ಮತ್ತಷ್ಟು

ಅರಿತುಕೊಳ್ಳುತ್ತಾನೆ. ಕೊನೆಗೆ ಪರಮ ಪದವನ್ನು ತಾಕಿ ನೋಡಿ, ಆ ಏಕಾಂತಿಕ ದಿವ್ಯಾನುಭವದ ಪಟ್ಟು ಹಿಡಿಯುವನು. ಅಲ್ಲಿಂದ ಕದಲದೆ, ಆನಂದ ಮಗ್ನನಾಗಿದ್ದು, ತನ್ನ ಗುರಿಯಾದ ಚಿದಾಕಾಶವನ್ನು, ಬಯಲನ್ನು ಸೇರಿ, ಗುಣರಹಿತನಾಗನೇ ?

ಕಲ್ಮಷವು ಹೋಗದೆ ಕಾಣಲಾರೆ ಎಂದೂ,
ರೂಪವಾರಿಗೇನು ? ರೂಢಿಯಷ್ಟೆ.
ತಾಮಸವುಡುಗಿದರೆ, ತಾನೆ ಬಹುದು ಜ್ಞಾನ.
ವಿಶ್ವದಾಭಿರಾಮ ಕೇಳು ವೇಮ.

ಕಲ್ಮಷವು ಹೃದಯ ಕಲ್ಮಷವಿರಬಹುದು, ಮನಸ್ಸಿನ ಕಲ್ಮಷವಿರಬಹುದು. ಲಕ್ಷ್ಯ ವಸ್ತುವನ್ನು ಕಾಣುವ ಮುನ್ನ ಕಲ್ಮಷವು ಹೋಗದೆ ಕಾಣಲಾರೆ. ಸಾಧನ ಸಮಯದಲ್ಲಿ ಮನಸ್ಸು ಸಂಕಲ್ಪಿಸಿದ, ಸಂಕಲ್ಪಿಸುತ್ತ ರೂಢಿಗೊಂಡ, ರೂಪಗಳು ಕಣ್ಣಿನೆದುರು ಬರಬಹುದು. ನಿಮ್ಮ ಸಾಧಕನಿಗೆ ಮಿನ್ನ ಸೆಂಪದವೆನಿಸುವ ಈ ರೂಪ ದರ್ಶನವು, ಉನ್ನತ ಸಾಧನದಲ್ಲಿ 'ಕೇವಲ ಭಕ್ತಿ' ಸಾಧನದಲ್ಲಿ ಕಲ್ಮಷವೆನಿಸಬಹುದು. ಯಾವಾಗಾ ಅಜ್ಞಾನ ಸಂಗಿಯಾದ ತಾಮಸ ಗುಣವು ಉಡುಗುವುದೋ, ಆಗ ಜ್ಞಾನವು ತಾನೇ ಬರುತ್ತದೆ. ಇದುವೇ ಕೇವಲ ಭಕ್ತಿಯ ಪೂರ್ವಾವಸ್ಥೆ.

ಕಣ್ಣು ಕಂಡಿತೆನಲು ಕರ್ಮಾಧಿಕಾರವು.
ಹಿಂದೆ ಬಿದ್ದು ಕೆಡುವ ಹುಚ್ಚು ಮನುಜ.
ಬಟ್ಟೆ ಬಯಲು ಬ್ರಹ್ಮ, ಪರಿಪರಿಯಲಿ ನೋಡು.
ವಿಶ್ವದಾಭಿರಾಮ ಕೇಳು ವೇಮ.

ಭಕ್ತಿ ಸಾಧಕನಿಗೆ ಪರಮ ಲಕ್ಷ್ಯ ವಸ್ತುವಿನ ಸಂಪಾದನೆಗೆ ಪೂರ್ವದಲ್ಲಿ, ಮನವನ್ನು ಕೇಂದ್ರೀಕರಿಸಲು ಸಹಾಯವಾಗಲು, ದೇವತಾ ಮೂರ್ತಿಯನ್ನೋ, ಇಲ್ಲವೆ ಗುರುಮೂರ್ತಿಯನ್ನೋ, ಗುರುಚಕ್ರದಲ್ಲಿ ಧ್ಯಾನಿಸಲು ಹೇಳುವುದುಂಟು. ಇದೇ ಅವನ ಸಾಧನ ಕಾಲಕ್ಕೆ ಒಳಗಣ್ಣಿನೆದುರು ಕಾಣಬರುತ್ತದೆ. ಇದು ಅವನ ರೂಢಿಯ ಕರ್ಮದಿಂದ ಬಂದ ಅಧಿಕಾರವಷ್ಟೇ. ಅದನ್ನು ದಾಟಿ ಹೋಗಲು ಅವನಿಗೆ ಕಷ್ಟ ಸಾಧ್ಯ. ಏಕೆಂದರೆ ಆ ಅವಸ್ಥೆಯಲ್ಲಿ ಆನಂದವೂ ಉಂಟು ; ಕೇಲವರಿಗೆ ಐಶ್ವರ್ಯ ಸಿದ್ಧಿಗಳೂ ಉಂಟು. ಹೀಗಾಗಿ ಅವರು ಅದರ ಹಿಂದೆ ಬಿದ್ದು ಕೆಡುತ್ತಾರೆ. ಅದೇ ಮನುಷ್ಯನ ಮತೀಯ ಹುಚ್ಚು. ಹಾಗಾದರೆ ಪರಮ ಲಕ್ಷ್ಯವಾದ ಬ್ರಹ್ಮವಾವುದು ? ಅದನ್ನು ತಲುಪಿದಾಗ ಆಗುವ ಅನುಭವವೇನು ? ಬ್ರಹ್ಮವು ಬಟ್ಟೆ ಬಯಲು. ನಿಶ್ಯೂನ್ಯ ಅವಸ್ಥೆ. ಅಲ್ಲಾವ ರೂಪವಿಲ್ಲ.

ಊರ್ಧ್ವ ಲೋಕದಲ್ಲಿ ಉಚಿತ ಕ್ರಮದಿಂದ,
ರೂಪವೇನು ಇರದ ರೀತಿಯಲ್ಲಿ.
ಪರಮ ಯೋಗಿ ನೋಳ್ಪ ಪರಮಾತ್ಮನಿರವನು.
ವಿಶ್ವದಾಭಿರಾಮ ಕೇಳು ವೇಮ.

ಮಹಾಯೋಗಿ ವೇಮನರ ಸ್ವಾನುಭವವು ಇಲ್ಲಿ ಎಲ್ಲವನ್ನೂ ವಿಶದೀಕರಿಸತ್ತದೆ. ಪರಮಯೋಗಿಯು ಸಾಧನದಿಂದ ಊರ್ಧ್ವ ಲೋಕಕ್ಕೆ ಏರುತ್ತಾನೆ. ಮನಸ್ಸು ಸೂಕ್ಷ್ಮತರವಾಗಿ,

ಸೂಕ್ಷ್ಮತಮವಾಗುತ್ತದೆ. ಆಗ ಅವನು ಉಚಿತ ಕ್ರಮದಿಂದ, ರೂಪವೇನೂ ಇರದ ರೀತಿಯಲ್ಲಿ ಪರಮಾತ್ಮನ ಇರವನ್ನು ಕಾಣುತ್ತಾನೆ. ಧನ್ಯನಾಗುತ್ತಾನೆ.

ಸ್ವಾಮಿ ವಿವೇಕಾನಂದರ ಗುರುಗಳಾಗಿದ್ದ ದಕ್ಷಿಣೇಶ್ವರದ ಕಾಳಿ ಗುಡಿಯಲ್ಲಿ ಕಾಳಿಯ ಪೂಜಾರಿಯಾಗಿದ್ದ ಶ್ರೀರಾಮಕೃಷ್ಣರು ಭಾವ, ಮಹಾಭಾವ ಹೊಂದುವ ಭಕ್ತರಾಗಿದ್ದರು. ಅವರಿಗೆ ತಂತ್ರ ಸಾಧನೆಯಲ್ಲಿ ತರಬೇತಿ ಕೊಡಲು ತಂತ್ರಿಕ ಬ್ರಾಹ್ಮಣಿಯೊಬ್ಬಳು ಬಹಳ ಶ್ರಮಿಸಿ ಅವರಲ್ಲಿದ್ದ ಅಷ್ಟಿಷ್ಟು ಜಾತಿ ಅಭಿಮಾನದ ಶೇಷವಾಗಿದ್ದ ಜನಿವಾರ ಧಾರಣೆಯನ್ನು ಸಾಧನೆಯ ಕಾಲಕ್ಕೆ ಕೂಡದೆಂದು ಬಿಡಿಸಿದಳು. ಸ್ಮಶಾನದಲ್ಲಿ ಪೂಜೆ ಮಾಡ ಹಚ್ಚಿ ಭಯ ದೂರರನ್ನಾಗಿ ಮಾಡಿದಳು. ಅವರ ಅವಸ್ಥೆಯು ಹುಚ್ಚು ತನವಲ್ಲವೆಂದೂ, ಭಕ್ತಿಯ ಪರಾಕಾಷ್ಠೆಯೆಂದೂ ಬಿಂಬಿಸಿದಳು. ತಂತ್ರದ ತೀವ್ರ ಸಾಧನೆಯಾದ ವಾಮಾಚರದ ಪಂಚಮಕಾರಕ್ಕೂ ಪ್ರಚೋಸಿದಳು. ಉತ್ತಮ ಶಿಷ್ಯರಾದ ರಾಮಕೃಷ್ಣರು ತಮ್ಮ ಗುರುವಿನ ಅಣತಿಯನ್ನು ಶಿರಸಾ ಹೊತ್ತು ಪಾಲಿಸಿದರು.

ಶ್ರೀ ರಾಮಕೃಷ್ಣರು ಎಷ್ಟೇ ಮುಂದುವರಿದಿದ್ದರೂ ಕೇವಲ ಭಕ್ತಿಸಂಪನ್ನರಾಗಿರಲಿಲ್ಲ. ಅವರ ಆ ಅವಸ್ಥೆಯಲ್ಲಿ ಅದ್ವೈತಿ ಗುರುವಿನ ಅಗತ್ಯವಿತ್ತು. ಪರಮಾತ್ಮನ ಪ್ರೇರಣೆಯಂತೆ, ಓರ್ವ ತೋತಾಪುರಿ ಬಾಬಾ ಎಂಬ ನಗ್ನ ಸನ್ಯಾಸಿಯು ದಕ್ಷಿಣೇಶ್ವರಕ್ಕೆ ಬಂದನು. ಕೇವಲ ಭಕ್ತಿ ಸಾಧನದ ಹಂಬಲದಲ್ಲಿದ್ದ ಶ್ರೀ ರಾಮಕೃಷ್ಣರು ಈ ನಗ್ನ ಸನ್ಯಾಸಿಗೆ ಶರಣಾದರು. ಅವರಿಂದ ದೀಕ್ಷೆ ಪಡೆದರು. ಶ್ರೀ ರಾಮಕೃಷ್ಣರಿಗೆ ಕರ್ಮಾಧಿಕಾರವಾಗಿ ಒಳಗಣ್ಣಿಗೆ ಕಾಣಬರುತ್ತಿದ್ದ ಕಾಳಿ ಮೂರ್ತಿಯನ್ನು ಅಡಗಿಸಲು ತೋತಾಪುರಿ ಬಾಬಾ ಪಟ್ಟ ಶ್ರಮ ಅಲ್ಪವೇನಲ್ಲ.

ಕಂ. ನಿರ್ವಾತ ಕಳೆಯ ಉಪಮೆಯು,
ಸರ್ವಾತ್ಮನ ಮನದಿ ನೋಡಿ ಸಾರವ ಕಾಣಲ್
ನಿರ್ವೇದವಾಯ್ತು, ದುರ್ಗತಿ.
ಗರ್ವ ನಶಿಸಿ ಪರಮ ಲಭ್ಯ ಅಲ್ಲವೆ ? ವೇಮಾ.

ಬಯಲಲ್ಲಿ ಇರಿಸಿದ ದೀಪದ ಕಳೆಯು ಗಾಳಿ ಇರುವಾಗ ಅಲುಗಾಡುತ್ತದೆ. ಗಾಳಿ ಇಲ್ಲದಾಗ ಅಚಲವಾಗಿರುತ್ತದೆ. ಅದೇ ರೀತಿ, ನಿಸ್ತರಂಗ ಮನದಲ್ಲಿ ಅಚಲವೆಂದು ಅನುಭವ ವೇದ್ಯವಾಗುವ ಆತ್ಮ ತತ್ವಕ್ಕೆ ನಿರ್ವಾತ ಕಳೆಯ ದೀಪಕಳೆಯು ಉಪಮೆಯಾಗಿದೆ. ಈ ಆತ್ಮವು ಅಖಂಡವಾಗಿದೆ. ವ್ಯಷ್ಟಿಗಳಲ್ಲಿರುವ ಆತ್ಮವು ಸಮಷ್ಟಿಯಲ್ಲಿಯೂ ಇದೆ. ಘಟಾಕಾಶವೇ ಮಠಾಕಾಶವೆನಿಸುತ್ತದೆ. ಮಠಾಕಾಶವೇ ಬೃಹದಾಕಾಶವಾಗಿದೆ. ಅಂತೂ ಆತ್ಮವು ಸರ್ವಾತ್ಮವಾಗಿದೆ. ಇದನ್ನು ನೋಡಿ, ಇದರ ಸಾರವನ್ನು ಕಂಡರೆ, ಆಗ ದುರ್ಗತಿಯಾದ ದೇಹಾತ್ಮ ಬುದ್ಧಿಯು ತಿರಸ್ಕೃತವಾಗುತ್ತದೆ. ಮತ್ತು ನಿರ್ವೇದವಾಗುತ್ತದೆ. ನಾವು ಎಂಬ ಗರ್ವವು ನಶಿಸಿ, ಪರಮಾತ್ಮ ಜ್ಞಾನವು ಲಭ್ಯವಾಗುವುದಿಲ್ಲವೇ ?

ಆ. ಹೃದಯದಲ್ಲಿ ಶಿವನು ಇರುವುದನು ಅರಿಯದೆ,
ಎರಗಲೇಕೆ ಶಿಲೆಗೆ ಎತ್ತಿ ಕೈಯ ?
ಅಂಧನು ಕನ್ನಡಿಯ ಅರಸಿ ನೋಡಿದಂತೆ.
ವಿಶ್ವದಾಭಿರಾಮ ಕೇಳು ವೇಮ.

ದೇವರು ಎಲ್ಲಿ ಇದ್ದಾನೆ ? ಎಂಬುದನ್ನು ವಿಷ್ಣು ಪುರಾಣವು ಚೆನ್ನಾಗಿ ಘೋಷಿಸಿದೆ. ಅದು ಹೇಳುವಂತೆ, 'ಹೃದಯೇಷು ಚ ಪಂಡಿತಾನಾಂ'. ಅಂದರೆ ತಿಳಿದ ಪಂಡಿತರಿಗೆ ದೇವರು ಹೃದಯದಲ್ಲಿಯೇ ಇದ್ದಾನೆ. ಇದನ್ನೇ ವೇಮನ ಯೋಗಿಗಳು, ಹೃದಯದಲ್ಲಿ ಶಿವನು ಇರುವುದನ್ನು ಅರಿಯದೆ, ಎಂದು ಹೇಳಿದ್ದಾರೆ. 'ಕಾಷ್ಟ ಲೋಹೇಷು ಮೂರ್ಖಾಣಾಂ' ಅಂದರೆ ಮೂರ್ಖರು ಶಿಲೆ, ಕಟ್ಟಿಗೆ ಲೋಹದ ಮೂರ್ತಿಗಳಲ್ಲಿ ದೇವರನ್ನು ಕಾಣುತ್ತಾರೆ, ಎಂದೂ ವಿಷ್ಣು ಪುರಾಣ ಹೇಳುತ್ತದೆ. ಅದನ್ನೇ ವೇಮನ ಯೋಗಿಗಳು, ಕೈಯನೆತ್ತಿ ಶಿಲೆಗೆ ಎರಗಲೇಕೆ ? ಎಂದು ಹೇಳಿದ್ದಾರೆ. ಇದೆಲ್ಲ ಹೇಗಾಗುವುದೆಂದರೆ, ಕುರುಡನಿಗೆ ತನ್ನ ರೂಪ ಹೇಗಿದೆಯೆಂಬುದೇ ಗೊತ್ತಿಲ್ಲ. ಮೇಲಾಗಿ ತನ್ನನ್ನು ಕಾಣಲು ಕನ್ನಡಿಯನ್ನು ಹುಡುಕುವಂತೆ ಆಗುತ್ತದೆ. ಅಂದರೆ ಮೂಢನಿಗೆ ತನ್ನ ಸ್ವರೂಪವೇ ತಿಳಿಯದು. ಆ ದೈವೀ ಸ್ವರೂಪವನನ್ನು ಕಾಣಲು ಮೂರ್ತಿ ಪೂಜೆಗೆ ತಡಕಾಡುತ್ತಾನಷ್ಟೇ.

ಆ. ಅಕ್ಷರಾದಿ ಹಿಂದೆ, ಅಡವಿಯಾದಿ ಹಿಂದೆ,
ಬೆಟ್ಟ ಕಲ್ಲು ಗೋಳು ಪಡುವುದೇಕೆ ?
ಹೃದಯದಲ್ಲಿ ಶಿವನು ಹಾಯಾಗಿಹುದರಿಯರೆ ?
ವಿಶ್ವದಾಭಿರಾಮ ಕೇಳು ವೇಮ.

ವೇದಗಳನ್ನೋದಿ, ಶಾಸ್ತ್ರಗಳನ್ನೋದಿ, ಶಿವನನ್ನು ಪಡೆಯಲಾರನು. ಅಡವಿ ಅಡವಿ ತಿರುಗಿ, ಬೆಟ್ಟ ಕಲ್ಲು ತುಳಿದು ತಪಸ್ಸು ಮಾಡುತ್ತೇವೆಂದು ಗೋಳು ಪಡುವುದೆಲ್ಲ ಏಕೆ ? ನಿಮಗೆ ಆ ಮಹಿಮಾವಂತನಾದ ಶಿವನ ಕೃಪೆಯಾಗಬೇಕಷ್ಟೇ ? ಹಾಗಾದರೆ ಎಲ್ಲಿಗೂ ಹೋಗುವುದು ಬೇಡ. ಹೃದಯದಲ್ಲಿಯೇ ಶಿವನು ಹಾಯಾಗಿ ಇರುವುದನ್ನು ಅರಿಯಿರಿ.

ಆ. ಕಾಶಿಗೆ ಹೋಹೆನೆಂದು ಕೊನೆಗೆ ಹೆಣಗಲೇಕೆ ?
ತೀರ್ಥ ಕ್ಷೇತ್ರ ಕುರಿತು ಚಿಂತೆಯೇಕೆ ?
ದೋಷಕಾರಿಗೆಂತು ದೊರಕಬಹುದು ಕಾಶಿ ?
ವಿಶ್ವದಾಭಿರಾಮ ಕೇಳು ವೇಮ.

ಕಾಶೀ ಕ್ಷೇತ್ರಕ್ಕೆ ಹೋಗಿ ಪುಣ್ಯಾರ್ಜನೆ ಮಾಡುವೆವೆಂದು ಕೊನೆಗೆ ಹೆಣಗುವುದೇಕೆ ? ತೀರ್ಥ ಕ್ಷೇತ್ರಗಳಲ್ಲಿ ದೇವರಿರುವನೆಂಬ ಚಿಂತೆಯೇಕೆ ? ಹೃದಯದಲ್ಲಿರುವ ದೇವನು ತನ್ನ ಕಲ್ಮಷವನ್ನು ಶುದ್ಧಗೊಳಿಸಿದರೆ ಅಲ್ಲಿಯೇ ಹೊಳೆಯುತ್ತಾನೆ. ಇದನ್ನು ಬಿಟ್ಟು ತಾನು ದೋಷಕಾರಿ ಇದ್ದರೆ, ಅವನು ಎಲ್ಲಿ ಇದ್ದರೇನು ? ಎಲ್ಲಿಗೆ ಹೋದರೇನು ? ಅವನಿಗೆ ದೇವರ ಪ್ರಕಾಶವು ದೊರಕುವುದೇ ? ಕಾಶಿ ದೊರಕುವುದೇ ?

ಆ. ಕಶಕಮಖಿಲಗಳಿಗೆ, ನಡುನಾಳದೊಳಗಿಹ,
ಬೆಳ್ಳಿ ಚುಕ್ಕೆಯಂತೆ, ಬೆಳಗೆ ದಿಕ್ಕು,
ಬೆಳಕಿಗಿಂತ ದಿಕ್ಕು ಬೇರೆ ಯಾರು ಉಂಟು ?
ವಿಶ್ವದಾಭಿರಾಮ ಕೇಳು ವೇಮ.

ರಾಡಿ ನೀರನ್ನು ಸ್ವಚ್ಛಗೊಳಿಸಲು ಕಶಕ ಬೀಜವನ್ನು ಬಳಸುತ್ತಾರೆ. ಹೀಗೆ ಏನನ್ನೇ ತಿಳಿಗೊಳಿಸಲು ಕಶಕ ಬೀಜ ಬೇಕು. ಇನ್ನು ಇಡಾ ಮತ್ತು ಪಿಂಗಳಾ ನಾಡಿಗಳ ನಡು ನಾಳವಾದ

ಸುಷಮ್ನಾದಲ್ಲಿ ಪ್ರಕಾಶವು ತೋರಲು ಅದು ಸಾಧಕನಿಗೆ ದಾರಿ ತೋರುತ್ತದೆ. ಹೇಗೆ ಅಪರಿಚಿತ ಹಾದಿಕಾರನಿಗೆ ರಾತ್ರಿಯಲ್ಲಿ ಆಕಾಶದಲ್ಲಿ ಮೂಡಿದ ಬೆಳ್ಳಿ ಚುಕ್ಕಿಯು ಹಾದಿ ತೋರುವುದೋ, ಹಾಗೆ. ದಿವ್ ಎಂದರೆ ಬೆಳಕು ತಾನೇ ? ಬೆಳಕಿಗಿಂತ ದಿಕ್ಕು ತೋರುವವರು ಬೇರೆ ಯಾರು ಇರುವರು ?

ಕೇವಲ ಭಕ್ತಿಯು ಘರ್ಷಣೆ ತಿಕ್ಕಾಟ, ಪ್ರಯತ್ನ ಪ್ರಯಾಸಗಳ ಮೂಲಕ ಆಗುವುದಿಲ್ಲ. ಯಾರಲ್ಲಿ ಮಹತ್ತಿನ ಕೃಪೆ ಇಲ್ಲವೆ ಭಾಗವತ ಕೃಪೆಯು ಎಳ್ಳು ಕಾಳಿನಷ್ಟಾದರೂ ಇಲ್ಲವೋ, ಅವರ ಚಿದಾಕಾಶದಲ್ಲಿ ಈ ಕೇವಲ ಭಕ್ತಿಯು ಸ್ಫುರಿಸುವ ಸಂಭವವೇ ಇಲ್ಲ.

'ಮಹತ್ ಕೃಪೆಯೈವ ಭಗವದ್ ಕೃಪಾ ಲೇಶಾದ್ವಾ'. ಅಂದರೆ ಮಹತ್ ಕೃಪೆಯಿಂದಾಗಲಿ ಇಲ್ಲವೆ ಸ್ವಲ್ಪವಾದರೂ ಭಗವದ್ ಕೃಪೆಯಿಂದಾಗಲಿ, ಕೇವಲ ಭಕ್ತಿ ಸ್ಫುರಿಸುತ್ತದೆ.

ಕೇವಲ ಭಕ್ತಿಯು ಎಲ್ಲ ಪ್ರಕಾರದ ಗೌಣೀ ಭಕ್ತಿಗಳಿಗಿಂತ ಊರ್ಧ್ವ ಸ್ಥಾನದಲ್ಲಿದೆ. ಆದ್ದರಿಂದ ಇದನ್ನು ಮುಖ್ಯ ಭಕ್ತಿ ಎಂದು ಕರೆಯುತ್ತಾರೆ. ಸಾಧಕನು ಗೌಣ ಭಕ್ತಿಯ ಸಾಧನೆಯಲ್ಲಿ ಎಷ್ಟೇ ಮುಂದುವರಿದಿರಲೊಲ್ಲನೇಕೆ ? ಆದರೂ ಅವನಲ್ಲಿ ಒಂದು ಬಗೆಯ ಸೇವ್ಯ-ಸೇವಕ ಭಾವ ಇಲ್ಲವೆ ಬೃಹತ್ ಕ್ಷುದ್ರರ ಭಾವವು ಕೊನೆಯ ವರೆಗೆ ಉಳಿದುಕೊಂಡಿರುತ್ತದೆ. ಇದೇ ಭಾವಕ್ಕೆ ಶಾಸ್ತ್ರದಲ್ಲಿ ಮಹಿಮ್ನ ಜ್ಞಾನವೆನ್ನುತ್ತಾರೆ. ಸಾಧಕನಲ್ಲಿ ಮಹಿಮ್ನ ಜ್ಞಾನವಿದ್ದರೂ, ಅವನು ಬೃಹತ್ತಿನಲ್ಲಿ ಲೀನವಾಗಲು ಸಂಕೋಚಪಡುತ್ತಾನೆ.

ರಾಗಾತ್ಮಿಕ ಭಕ್ತಿ :

ಕೇವಲ ಭಕ್ತಿಯು ನಿರ್ಗುಣ ಭಕ್ತಿಯಾಗಿದೆ. ಇದರಲ್ಲಿ ಸಾಧಕನು ತನ್ನ ಧ್ಯೇಯವನ್ನು ಪ್ರಾಣದ ಪ್ರಾಣವೆಂದೂ, ಆತ್ಮದ ಆತ್ಮವೆಂದೂ ತಿಳಿದು, ಪ್ರಾಣದ ಆವೇಶದಿಂದ ಪರಮನ ಸಾನ್ನಿಧ್ಯದತ್ತ ಧಾವಿಸುತ್ತಾನೆ. ಸೇವ್ಯ-ಸೇವಕ ಇಲ್ಲವೆ ಬೃಹತ್-ಕ್ಷುದ್ರ ಭಾವನೆಯನ್ನು ಬರಿಸಲು ಇಲ್ಲವೆ ಅಲ್ಲಿಗೆ ತಲುಪಿಸಲು, ಅಲ್ಲಿ ಸಾಧಕನಿಗೆ ಉಪಯುಕ್ತ ಅವಕಾಶ ಇರುವುದಿಲ್ಲ. ಅಲ್ಲಿ ಸಾಧಕನು ತನ್ನನ್ನು ರಾಮದಾಸ ಎಂದು ತಿಳಿಯುವುದಿಲ್ಲ. ಪ್ರತಿಯಾಗಿ ರಾಮಸ್ವರೂಪನೆಂದು ತಿಳಿಯುತ್ತಾನೆ. ರಾಮನನ್ನು ಪ್ರೀತಿಸುವುದು ಹಿತಕರವೆನಿಸುತ್ತದೆ. ಪ್ರೀತಿಸದೆ ಇರಲಾರನು. ಆದ್ದರಿಂದ ಪ್ರೀತಿಸುತ್ತಾನೆ. ಈ ಪ್ರಕಾರ ಅವನಲ್ಲಿ ಒಂದೇ ಭಾವವು ಇರುತ್ತದೆ.

'ಇಷ್ಟೇ ಸ್ವಾರಸಿಕೀ ರಾಗಃ ಪರಮಾವಿಷ್ಟತಾ ಭವೇತ್
ತನ್ಮಯೀ ಯಾ ಭವೇತ್ ಭಕ್ತಿ ಸಾಽತ್ರ ರಾಗಾತ್ಮಿಕೋಂದಿತಾ' ಅಂದರೆ,

ಇಷ್ಟದಲ್ಲಿ ತನ್ನ ಒಲುಮೆಯೇ ರಾಗವಾಗಿದೆ. ಅದುವೇ ಪರಮನಲ್ಲಿ ಪ್ರವೇಶಿಸುತ್ತದೆ. ಯಾರ ಭಕ್ತಿಯು ಈ ಭಾವದಲ್ಲಿ ಮುಳುಗುವುದೋ, ಅಲ್ಲಿಯ ಭಕ್ತಿಯು ರಾಗಾತ್ಮಿಕವಾಗಿ ಉದಿಸುತ್ತದೆ. ರಾಗಾತ್ಮಿಕ ಭಕ್ತಿಯ ಪ್ರಾರಂಭಿಕ ಅವಸ್ಥೆಯನ್ನು ರಾಗಾನುಗಾ ಭಕ್ತಿ ಎನ್ನುತ್ತಾರೆ.

'ರಾಗಾತ್ಮಿಕಾಮನುಸೃತಾ ಯಾ ಸಾ ರಾಗಾನುಗೋಚ್ಯತೇ' ಅಂದರೆ

ಯಾವುದು ರಾಗಾತ್ಮಿಕವನ್ನು ಅನುಸರಿಸುವುದೋ, ಅದಕ್ಕೆ ರಾಗಾನುಗಾ ಎಂದು

ಕರೆಯುತ್ತಾರೆ. ರಾಗಾನುಗಾ ಭಕ್ತಿಯು ಸಾಧಕನ ಮನಸನ್ನು ರಾಗಾತ್ಮಿಕ ರೂಪದಲ್ಲಿ ಸಂಯೋಜಿಸಿ, ಉಪಯುಕ್ತವನ್ನಾಗಿಸುತ್ತದೆ.

ಮಹಾಯೋಗಿ ವೇಮನರು ಬೋಧಿಸುವ ಭಕ್ತಿ ಸಾಧನೆಯಲ್ಲಿ ವೈಧೀ ಭಕ್ತಿಗೂ ಸ್ಥಾನವಿಲ್ಲ. ಜ್ಞಾನ ಮಿಶ್ರಿತ ಭಕ್ತಿಗೂ ಸ್ಥಾನವಿಲ್ಲ. ಇಲ್ಲಿ ಕೇವಲ ಭಕ್ತಿ ಮತ್ತು ನಿರ್ಗುಣ ಭಕ್ತಿಗೆ ವಿಶೇಷ ಸ್ಥಾನವಿದೆ.

ಕಂ. ಏಕ ಪದವನು, ಮನದಿರಿಸಿ
ಪ್ರಕಟಿತವಹ ಗುಟ್ಟನರಿತು ಪರಿಕಿಸಿದಾಗಳ್,
ಸಕಲವಿರುವ ಶ್ರುತ್ಯರ್ಥವು
ನಿಕಟಾಗಿಹುದಿಲ್ಲಿ ರಹಸ್ಯ ನಿಲಯ ವೇಮಾ.

ಮನದಲ್ಲಿ ಒಂದೇ 'ಓಂ' ಪದವನ್ನು ಇರಿಸಿಕೊಂಡು, ಅದು ಹೇಗೆ ಪ್ರಕಟವಾಗುತ್ತದೆ? ಎಂಬ ಗುಟ್ಟನ್ನು ಪರಿಕಿಸಿದಾಗ, ಅದು ಅನಾಹತ ಚಕ್ರದಲ್ಲಿ ಅನಾಹತ ನಾದವಾಗಿ ಪ್ರಕಟಗೊಳ್ಳುತ್ತದೆ, ಎಂಬ ಗುಟ್ಟು ಪರಿಕಿಸಿದ ನಂತರ, ವೇದ್ಯವಾಗುವುದು. ಇಲ್ಲಿ ಅ-ಉ-ಮ ಅಂದರೆ ಸೃಷ್ಟಿ, ಸ್ಥಿಥಿ ಮತ್ತು ಲಯಗಳ ಶ್ರುತಿಯ ಅರ್ಥವೆಲ್ಲವೂ ನಿಕಟವಾಗಿರುವುದು. ಇದುವೇ ರಹಸ್ಯ ನಿಲಯವು.

ಆ. ಕಾಯ ಪಣತೆ ಮಾಡಿ, ಗುಣವ ಬತ್ತಿ ಮಾಡಿ,
ತಮ್ಮ ಕರ್ಮ ಕುಲವ, ತೈಲ ಮಾಡಿ,
ಮೂಲವೊಂದೆ ಜ್ಯೋತಿ ಮುಟ್ಟಿ ನೋಡಿದಾಗ.
ವಿಶ್ವದಾಭಿರಾಮ ಕೇಳು ವೇಮ.

ಕೇವಲ ಭಕ್ತಿಯ ಪ್ರಕ್ರಿಯೆಯನ್ನು, ಜ್ವಲಿಸುವ ಬತ್ತಿಯ ಮೂಲಕ ಬಣ್ಣಿಸಿದ್ದಾರೆ. ದೇಹವೇ ಒಂದು ಪಣತಿ. ಮಾನವನಲ್ಲಿರುವ ತ್ರಿಗುಣಗಳೇ ಬತ್ತಿ. ಬತ್ತಿಯ ಮುಖಾಂತರ ಜ್ವಲಿಸುವ ತೈಲವೆಂದರೆ ತಮ್ಮ ತಮ್ಮ ಕರ್ಮಗಳ ಸಮೂಹ. ಇಂಥ ಸಾಧನದಲ್ಲಿ ಸಾಧಕನು ತಲುಪಿ ನೋಡಿದಾಗ ಮೂಲದಲ್ಲಿ ಒಂದೇ ಜ್ಯೋತಿ ಬೆಳಗುತ್ತದೆ. ಅದೇ ಆತ್ಮ ಜ್ಯೋತಿ.

ಆ. ಕಾಗೆ ಇರುವ ಗೂಡು ಕೋಗಿಲೆಗಾದಂತೆ,
ಭ್ರಮರದಿಂದ ಕೀಟಕವಹ ರೀತಿ.
ಕೇಳಿ ಸತ್ಯ ಮುಕ್ತಿ ; ಕೆಡುತಿರುವ ನರನಲ !
ವಿಶ್ವದಾಭಿರಾಮ ಕೇಳು ವೇಮ.

ಕಾಗೆ ಗೂಡು ಕಟ್ಟುತ್ತದೆ. ಆಗ ಜಾಣ ಕೋಗಿಲೆಯು ಬಂದು ಅಲ್ಲಿ ತನ್ನ ತತ್ತಿ ಇಡುತ್ತದೆ. ಭಗವದ್ ಕೃಪೆಯಿಂದ ಏನೂ ನಡೆಯಬಹುದು. ಕಾಗೆ ಕಟ್ಟಿದ ಗೂಡಿನಲ್ಲಿ ಕೋಗಿಲೆ ತತ್ತಿಯನ್ನು ಇಡುತ್ತದೆ. ಕಾಗೆಯು ಆ ತತ್ತಿಗಳಿಗೆ ಕಾವು ಕೊಟ್ಟು ಮರಿಗಳು ಹೊರಬರುವಂತೆ ಮಾಡುತ್ತದೆ. ಚಿಕ್ಕಂದಿನಲ್ಲಿ ಹಾರಾಡಲು ಬರುವ ತನಕ ಆಹಾರದ ಗುಟುಕು ನೀಡುತ್ತದೆ. ಇತ್ತ ಕೀಟದ ಸುತ್ತ ಭ್ರಮರವೊಂದು ಹಾರಾಡುತ್ತದೆ. ತನಗೆ ಬಾರದ ಹಾರಾಟ ಕಂಡು ಕೀಟವು ಬೆದರುತ್ತದೆ. ಅದರ ಗ್ರಂಥಿಗಳಿಂದ ರಸ ಸ್ರವಿಸುತ್ತದೆ. ಮುಂದೆ ಅದಕ್ಕೆ ರೆಕ್ಕೆ ಮೂಡಿ ಅದೂ ಸಹ

ಭ್ರಮರವೇ ಆಗುತ್ತದೆ. ಈ ಸತ್ಯ ಘಟನೆಗಳ ಅರಿವು ಭಕ್ತಿ ಸಾಧಕನಿಗಿದೆ. ಏಕೆಂದರೆ, ಇವು ನಿತ್ಯ ಸತ್ಯ ಘಟನೆಗಳೇ ಆಗಿವೆ. ಮಾನವನು ಪರಮಾತ್ಮನ ಅನಂತ ಶಕ್ತಿಯನ್ನೂ, ಅಪಾರ ಜ್ಞಾನವನ್ನೂ ಅರಿತು ಮಹಿಮ್ನಾ ಜ್ಞಾನ ಪಡೆದಿರುತ್ತಾನೆ. ಆ ಮಹಿಮಾವಂತನಲ್ಲಿ ಏಕರಸವಾಗಿ ಹೋಗದೆ ಕೇವಲ ಕ್ಷುದ್ರನಾಗಿ ಉಳಿಯುತ್ತಾನೆ. ಹೀಗೆ ಮಾನವನು ಕೆಡುತ್ತಿರುವನಲ್ಲವೇ ?

ಆ. ಬೊಂಬೆಯಾಟದವನು ಬೊಂಬೆಯಾಡಿಸುತಿಹನು,
ಧರಣಿ ಜನರ ನೋಟದೆಲ್ಲೆ ಮೀರಿ.
ತಾನು ಮರೆಯೊಳಿದ್ದು, ದೈವವಾಡಿಸುವನು.
ವಿಶ್ವದಾಭಿರಾಮ ಕೇಳು ವೇಮ.

ದೇವನ ಸ್ವರೂಪವೇನು ? ಅವನ ಲೀಲೆ ಎಂಥದು ? ಜಗತ್ತನ್ನು ಅವನು ನಡೆಸುತ್ತಿರುವ ಬಗೆಯು ಯಾವುದು ? ಎಂಬ ಮಹಿಮ್ನ ಜ್ಞಾನ ಸಾಧಕನಲ್ಲಿದೆ. ಜಗದ ಜೀವಿಗಳೆಲ್ಲ ಬೊಂಬೆಗಳಾದರೆ, ಜಗದೀಶನು ಬೊಬೆಯಾಟದವನು. ಎಲ್ಲ ಜೀವಗಳೂ ಆ ಸೂತ್ರಧಾರನು ಆಡಿಸುವ ಬೊಂಬೆಗಳು. ತಾನು ಯಾರಿಗೂ ಕಾಣದೆ ಅಂತರ್ಯಾಮಿನ್. ಅಂದರೆ ಅಂತರ್ ಸ್ಥಿತ್ವಾ ಯಮಯತೇ ಇತಿ, ಅಂತರ್ಯಾಮಿನ್. ಒಳಗಿದ್ದುಕೊಂಡೇ ನಿಯಂತ್ರಿಸುವನು. ತಾನು ಮರೆಯೊಳಿದ್ದು ದೈವವನ್ನು ಆಡಿಸುತ್ತಾನೆ.

ಆ. ಕೊಡೆಯು ತಾನೀವುದು, ಕಡು ಸುಖಿಕರ ನೆರಳು.
ಶಾಸ್ತ್ರವರಿಯೆ ತನಗೆ ಶುದ್ಧ ಜ್ಞಾನ.
ತಂದೆ ಇಪ್ಪವರಿಗೆ ರಕ್ಷಣೆ ತಪ್ಪದೆಂದು.
ವಿಶ್ವದಾಭಿರಾಮ ಕೇಳು ವೇಮ.

ಬಳಲಿ ಬೆಂಡಾದ ಪಥಿಕನಿಗೆ ತಲೆಯ ಮೇಲೆ ಕೊಡೆ ಹಿಡಿದುಕೊಂಡರೆ, ಸುಖಿಕರ ನೆರಳು ನೀಡುತ್ತದೆ. ಮನಸ್ಸಿಗೆ ಶಾಂತಿ ದೊರೆಯುತ್ತದೆ. ಅದೇ ರೀತಿ, ತಾನು ಅರಸುವ ಪರಮಾತ್ಮನನ್ನು ಕುರಿತು, ಸ್ವಲ್ಪಾದರೂ ತಿಳಿಯಬೇಕೆಂಬ ಕಾತುರ ಉಂಟಾದರೆ, ಅವನನ್ನು ಕುರಿತು ಶಾಬ್ದಿಕ ಜ್ಞಾನವನ್ನಾದರೂ, ನೈಜ ಜ್ಞಾನದ ನೆರಳನ್ನಾದರೂ ಶಾಸ್ತ್ರಗಳನ್ನು ಅರಿತು ಪಡೆಯಬಹುದು. ಅಲ್ಲಿ ಬೇರೆಯವರು ತಾವು ಕಂಡುದನ್ನು ಅಭೀಪ್ಸುಗಳಿಗೆ ಕೇಳಿಸುತ್ತಾರೆಷ್ಟೇ. ಯಾವ ರೀತಿ ತಂದೆಯು ಮಗನನ್ನು ಸಂಕಟದಿಂದ ಪಾರು ಮಾಡುತ್ತಾನೋ, ಇಷ್ಟಗಳನ್ನು ಪೂರೈಸುತ್ತಾನೋ, ಆಪತ್ತಿನಲ್ಲಿ ರಕ್ಷೆ ನೀಡುತ್ತಾನೋ, ಅದೇ ರೀತಿ, ಪರಮಾತ್ಮನಲ್ಲಿ ಭಕ್ತಿ ಶ್ರದ್ಧೆ ಹೊಂದಿದ ಭಕ್ತನಿಗೆ ಪರಮಾತ್ಮನು ತಂದೆಯಂತೆ ವರ್ತಿಸುತ್ತಾನೆ.

ಆ. ತಾಯಿಯೇ ಪಾರ್ವತಿ ; ತಂದೆಯೇ ಶಂಭುವು.
ಪ್ರಮಥ ಗಣವು ಅಖಿಲ ಬಂಧು ಬಳಗ.
ತಾನು ಹುಟ್ಟಿದ ಮನೆ, ತನಗೆ ಕೈಲಾಸವು.
ವಿಶ್ವದಾಭಿರಾಮ ಕೇಳು ವೇಮ.

ನಿಜವಾದ ಭಕ್ತನಿಗೆ, ಪರಮಾತ್ಮನಲ್ಲಿ ಅನುರಾಗವಿದ್ದೇ ಇರುತ್ತದೆ. ಅವನಿಗೆ ಸರ್ವರ ತಾಯಿಯಾದ ಪಾರ್ವತಿಯೇ ತನ್ನ ತಾಯಿ ಎನಿಸುತ್ತಾಳೆ. ಸರ್ವರ ತಂದೆಯಾದ ಶಂಭುವೇ ತನ್ನ

ತಂದೆಯೆನಿಸುತ್ತಾನೆ. ಅವರ ಭದ್ರ ಪೋಷಣೆಯೇ ತನ್ನ ಶ್ರೀ ರಕ್ಷ ಎನಿಸುತ್ತದೆ. ತನ್ನ ಬಂಧು ಬಳಗದವರೆಲ್ಲ, ಶಿವನ ಪ್ರಮಥ ಗಣವೆನಿಸುತ್ತಾರೆ. ಇನ್ನು ತಾನು ಹುಟ್ಟಿದ ಮನೆಯೇ ತನಗೆ ಕೈಲಾಸವೆನಿಸುತ್ತದೆ. ಏಕೆಂದರೆ, ಶಿವನು ತನ್ನ ಹೃದಯವಾಸಿ ತಾನೇ ?

ಆ. ತತ್ತ್ವವರಿತಿರುವವ ದೈವವರಿಯುತಿಹನು.
ಸರ್ವ ಕಾಮಗಳನು ಸಾವ ಹೊಡೆವ.
ಬಾಳಿ ನುಂಗುವವನು, ವಿಷವ ನುಂಗಬಹುದೆ ?
ವಿಶ್ವದಾಭಿರಾಮ ಕೇಳು ವೇಮ.

ಯಾರಿಗೆ ತತ್ತ್ವ ಜ್ಞಾನವಾಗುವುದೋ, ಅವನು ಪರಮ ತತ್ತ್ವವಾದ ದೈವವನ್ನೂ ಅರಿಯುತ್ತಾನೆ. ಅಂಥವನಿಗೆ ಆತ್ಮ ಸಾಕ್ಷಾತ್ಕಾರದ ಕಾಮನೆಯಲ್ಲದೆ ಬೇರಾವ ಕಾಮನೆಗಳೂ ಇರವು. ಅವನು ಆಪ್ತ ಕಾಮನಾಗಿರುತ್ತಾನೆ. ಅವನು ಸರ್ವ ಕಾಮನೆಗಳನ್ನು ಇಲ್ಲವಾಗಿಸಿ ಕೇವಲ ಮೋಕ್ಷಕಾಮಿಯಾಗಿರುತ್ತಾನೆ. ಅವನು ಕೇವಲ ಆತ್ಮ ಸಾಕ್ಷಾತ್ಕಾರದ ಅತುಲ ಆನಂದವೆಂಬ ಬಾಳಿ ನುಂಗುವವನು. ಅವನೇಕೆ ಸಂಸಾರದ ಗೊಂದಲದಲ್ಲಿ ಸಿಲುಕಿ ಅಲ್ಲಿಯ ವಿಷವನ್ನೇಕೆ ಉಣ್ಣಬಯಸುತ್ತಾನೆ ?

ಆ. ಶಿವನ ಮೇಲೆ ಮನಸು ಸ್ಥಿರವಾಗಿ ಇದ್ದರೆ,
ಹೌದು, ಮೋಕ್ಷ ಪಡೆವ, ಹೌದು ಅವನು.
ಶಿವನ ಮೇಲೆ ಮನಸು ಸರಿಯೆ, ಇರುವೆಯಷ್ಟು,
ಇರದೆ ಇರಲು ಮುಕ್ತಿ ಇರದು ವೇಮ.

ಭಕ್ತಿಯ ಉಪಾಸನೆಯಲ್ಲಿ ಇಷ್ಟದ ಧ್ಯವ ಸ್ಮೃತಿ ಅಗತ್ಯ. ಮನಸ್ಸು ಸ್ಥಿರವಾಗಿ ಶಿವನ ಮೇಲಿದ್ದರೆ, ಅಂಥ ಭಕ್ತನು ಮಾತ್ರ ಕೊನೆಗೆ ಶಿವನನ್ನು ಕೂಡಿ, ಮೋಕ್ಷ ಪಡೆಯುತ್ತಾನೆ. ಹಾಗಾದರೆ, ಶಿವನ ಮೇಲಿಂದ ಮನಸ್ಸು, ಇರುವೆಯಷ್ಟಾದರೂ, ಅಂದರೆ ಅತಿ ಕಡಿಮೆಯಾದರೂ ಅತ್ತ ಇತ್ತ ಸರಿದರೆ, ಅವನಿಗೆ ಮುಕ್ತಿ ಇರದು.

ಆ. ಈಶ್ವರನ ನೆನೆಯಲು ಏಳು ಭಾಗ ಮಾಡಿ,
ತನ್ನ ಮೂರ್ತಿಯೆಲ್ಲ ತ್ಯಜಿಸಿ ಬಿಟ್ಟು,
ನಿತ್ಯ ಕರ್ಮಗಳನು ನಿಲಿಸುವ ನೆರೆಯೋಗಿ.
ವಿಶ್ವದಾಭಿರಾಮ ಕೇಳು ವೇಮ.

ಈಶ್ವರನನ್ನು ಸದಾ ನೆನೆಯಬೇಕು. ತನ್ನ ಮನಸ್ಸು ಯಾವುದೇ ಸ್ತರದಲ್ಲಿರಲಿ ಸ್ಮೃತಿಯು ಮಾತ್ರ ನಿರಂತರವಾಗಿರಬೇಕು. ಸುಖೇಚ್ಛೆಯಲ್ಲಿ, ಆತ್ಮವಿಚಾರ ಕಾಲಕ್ಕೆ, ನಿಸ್ಸಂಗಿಯಾಗಿರುವಾಗ, ವಾಸನಾಕ್ಷಯವಿರುವಾಗ, ಆನಂದಲೋಲನಾಗಿರುವಾಗ, ತುರ್ಯಾವಸ್ಥೆಯಲ್ಲಿ, ಅಷ್ಟೇ ಏಕೆ ? ತುರ್ಯಾತೀತ ಅವಸ್ಥೆಯಲ್ಲಿ ಹೀಗೆ ಸಪ್ತ ಅವಸ್ಥೆಗಳಲ್ಲಿಯೂ ಈಶ್ವರನ ಧ್ಯಾನ ಮಾಡಬೇಕು.

ಮೂರು ವೇಳೆಯಲ್ಲಿ ಮುದದಿ ಶಿವನ ಆತ್ಮ
ಪೂಜೆ ಮಾಡುವವನು ಪುಣ್ಯ ಮೂರ್ತಿ.

ಪೂಜೆಯಿರದೆ ಮೋಕ್ಷ ಭೋಗವು ದೊರಕುವುದೆ ?
ವಿಶ್ವದಾಭಿರಾಮ ಕೇಳು ವೇಮ.

ಶಿವನು ಆತ್ಮ ರೂಪಿಯಾಗಿದ್ದಾನೆ. ಶಿವನ ಅಂದರೆ ಆತ್ಮಪೂಜೆಯನ್ನು ತ್ರಿಕಾಲ ಸಂಧ್ಯೆಗಳಲ್ಲಿ ಅಂದರೆ ಪ್ರಾತಃ ಸಂಧ್ಯೆ, ಮಧ್ಯಾಹ್ನ ಸಂಧ್ಯೆ ಮತ್ತು ಸಾಯಂ ಸಂಧ್ಯೆಗಳಲ್ಲಿ ಮಾಡುವವನು ಪುಣ್ಯ ಮೂರ್ತಿ. ಪೂಜೆಯೆಂದರೆ ಸನ್ಮಾನ, ಗೌರವಿಸುವಿಕೆ ತಾನೇ ? ಪೂಜೆ ಮಾಡುವವನಿಗೆ ಮೋಕ್ಷದಿಂದ ಪ್ರಾಪ್ತವಾಗುವ ಆನಂದ ಭೋಗವುಂಟು.

ಆ. ಅಖಿಲ ಜಾಡು ತೊರೆದ ಆನಂದ ಕಾಮಿಯು,
ನಿನ್ನ ನಂಬಲಾಗ ನಿಷ್ಠೆಯಿಂದ,
ನಿನ್ನ ನಂಬೆ ಮುಕ್ತಿ ನಿಶ್ಚಯ ನಿನ್ನಾಣೆ.
ವಿಶ್ವದಾಭಿರಾಮ ಕೇಳು ವೇಮ.

'ಸುಖಂ ಅನಂತಂ ಆನಂದಂ'. ಅಂದರೆ ಅನಂತವಾದ ಸುಖವೇ ಆನಂದ. 'ಆನಂದಂ ಬ್ರಹ್ಮ ಇತ್ಯಾಹುಃ'. ಅಂದರೆ ಆನಂದವನ್ನೇ ಬ್ರಹ್ಮವೆನ್ನುತ್ತಾರೆ. ಆನಂದ ಪಡೆಯಲು, ನಿಷ್ಠೆಯಿಂದ ನಿನ್ನನ್ನು ನಂಬುವುದನ್ನುಳಿದು, ಬೇರೆಲ್ಲ ರೀತಿಗಳನ್ನು ತೊರೆದು, ನಿನ್ನನ್ನೇ ಅಚಲವಾಗಿ ನಂಬಿದರೆ, ನಿಶ್ಚಯವಾಗಿಯೂ ಮುಕ್ತಿಯುಂಟು; ನಿನ್ನಾಣೆಗೂ ಇದು ಸತ್ಯ.

ಆ. ಅಖಿಲ ಕೊರತೆ ತೀರಿ, ಅತಿಶಯ ಕಾಮಿಯಾಗಿ,
ನಿನ್ನ ನಂಬೆ ಪೂರ್ಣ ನಿಷ್ಠೆಯಿಂದ.
ನಿನ್ನ ನೆನೆಯೆ ಮುಕ್ತಿ ನಿಶ್ಚಯಾಗಿ ಉಂಟು.
ವಿಶ್ವದಾಭಿರಾಮ ಕೇಳು ವೇಮ.

ಕಳ್ಳ ಕೋರಿಕೆಗಳೇ ಕೊರತೆ ತಾನೇ ? ಇಂಥ ಕೊರತೆಗಳೆಲ್ಲ ತೀರಿದ ಮೇಲೆ ಯಾವುದರ ಕಾಮನೆ ? ಸಾಂತ ವಸ್ತುಗಳ ಕೋರಿಕೆಯು ಕೊರತೆ ಎನಿಸುತ್ತದೆ. ಆದರೆ ಆಪ್ತ ಕಾಮಿಯ ಅತಿಶಯ ಕಾಮನೆಯೊಂದಿರುತ್ತದೆ. ಅದೇ ಅನಂತದ ಕಾಮನೆ. ಅನಂತ ಸತ್ಯವು ಪರಮಾತ್ಮನೊಬ್ಬನೇ. ಆದ್ದರಿಂದ ಅವನ ಮಹಿಮೆಯನ್ನು ಪೂರ್ಣ ನಂಬಿ ಅವನನ್ನೇ ಸದಾ ನೆನೆಯಬೇಕು. ಆಗ ಮುಕ್ತಿಯು ನಿಶ್ಚಯವಾಗಿಯೂ ಆಗುವುದು.

ಕಂ. ಭಾವಾಭಾವಕೆ ಅಂಟದೆ,
ಸೇವಿಸುವನು ಬಟ್ಟ ಬಯಲು, ಸ್ಥಿರ ಮತಿಯೊಳಗೇ,
ಕೇವಲ ಶಿವನ ಧ್ಯಾನವ,
ಸ್ಥಾವರವನು ಕಂಡ ಅವನೆ, ಧನ್ಯನು ವೇಮಾ.

ಭಕ್ತಿ ಸಾಧನದಲ್ಲಿ ಭಾವದ ಮಹತ್ವವು ಹೆಚ್ಚಿನದಾಗಿದೆ. ಈಗ ಭಾವವೆಂದರೇನು ? ಯಾವುದರಿಂದ ಚಿತ್ತವು ಶುದ್ಧವಾಗುವುದೋ ಮತ್ತು ಸತ್ವ, ಗುಣ ಪ್ರಧಾನವಾಗುವುದೋ, ಯಾವುದರ ಮೂಲಕ ಪ್ರೇಮ ಜ್ಯೋತಿಯು ದಶದಿಕ್ಕುಗಳನ್ನು ತೊಳಗಿ ಬೆಳಗುವುದೋ, ಯಾವುದರ ಮೂಲಕ ಈಶ್ವರನನ್ನು ಕುರಿತು ರುಚಿ ಇಲ್ಲವೆ ಅನುರಕ್ತಿಯು ಉಗ್ರಭಾವದಿಂದ ಪ್ರಕಟವಾಗುವುದೋ, ಮತ್ತು ಯಾವುದರಿಂದ ಚಿತ್ತವು ಏಕತ್ವವನ್ನು ಗಳಿಸಿಕೊಳ್ಳುವುದೋ ,ಅದಕ್ಕೆ

ಭಾವವೆನ್ನುತ್ತಾರೆ. ಇದನ್ನು ವೈಷ್ಣವ ದರ್ಶನದಲ್ಲಿ ಹ್ಲಾದಿನೀ ಶಕ್ತಿ ಎನ್ನುತ್ತಾರೆ. ಈ ಭಾವ ಸ್ಥಿತಿಯನ್ನು ಮೀರಿದ ಅವಸ್ಥೆಯೇ ಅಭಾವ ಸ್ಥಿತಿಯಾಗಿದೆ.

'ಕೇವಲ ಭಕ್ತಿ' ಸಾಧಕನು ಭಾವ ಅಭಾವಗಳಿಗೆ ಅಂಟದೆ, ಸ್ಥಿರಮತಿಯಿಂದ ಬಟ್ಟ ಬಯಲನ್ನು ಸೇವಿಸುತ್ತಾನೆ. ಅವನು ಸ್ಥಾಣುವಿನಂತೆ ಅಚಲವಾದ, ಕೇವಲ ಶಿವನ ಧ್ಯಾನದ ಸ್ಥಾವರವನ್ನು ಕಾಣುತ್ತಾನೆ. ಅಂಥ ನಿಶ್ಚಲ ಮನದ ಯೋಗಿಯೇ ಧನ್ಯನು.

ಆ. ಅಚಲ ತತ್ತ್ವವೆಲ್ಲ ಅನುಭವ ವೇದ್ಯವದು.
ಸಮೀಕ್ಷಿಸಿ ಹೇಳರು ಸೂಕ್ಷ್ಮಮತಿಯ.
ಮನಕೆ ತೋಚುವುದದು, ಮರ್ಮ ತಿಳಿಸಲೆಂತು ?
ವಿಶ್ವದಾಭಿರಾಮ ಕೇಳು ವೇಮ.

ಆತ್ಮ ತತ್ತ್ವವು ಅನಂತವಾಗಿದೆ. ಪೂರ್ಣ ಚೈತನ್ಯಮಯವಾಗಿದೆ. ಅದು ಎಲ್ಲೆಡೆಗೂ ವಿಕವಾಗಿದೆ.ಚಲನೆಯು ಸಾಪೇಕ್ಷವಿದೆ ; ಗತಿಶೀಲವಿದೆ. ಅನಂತವನ್ನು ಯಾವುದರೊಂದಿಗೆ ಸಂಬಂಧಿಸಿ ನೋಡಬೇಕು ? ಅಂಥ ಇನ್ನೊಂದು ಇರಲಾರದು. ಈ ದೃಷ್ಟಿಯಿಂದ ಅದು ಅಚಲ ತತ್ತ್ವವಿಸುತ್ತದೆ. ತರಂಗಾಯಿತ ಮನಸ್ಸಿಗೆ ಅದು ಅನುಭವವೇದ್ಯವಾಗುತ್ತದೆ. ಅದನ್ನು, ಅಂದರೆ ಅನುಭವಿಸುವ ಸೂಕ್ಷ್ಮಮತಿಯನ್ನು ಸಮೀಕ್ಷಿಸಿ ಹೇಳಲಾರರು. ಹೀಗೆ ಮನಕ್ಕೆ ತೋಚಿದರೂ ಅದನ್ನು ಉಪಮಿಸಬಹುದಾದ ಶಬ್ದಗಳಿಲ್ಲ. ಹಾಗಾಗಿ ಅದರ ಮರ್ಮವನ್ನು ಹೇಗೆ ತಿಳಿಸುವುದು? ಅದು ನಿರ್ವಾಣ ಸ್ಥಿತಿಯಾಗಿದೆ.

ಆ. ಭಾವವೆನಲು ಬೇರೆ ಪರದೇಶದೊಳಿಲ್ಲ.
ಅವರು ಗೆಯ್ದ ಕಾರ್ಯ ಆತು ಉಂಟು.
ಭಾವದಲ್ಲಿ ಶಿವನ ಭಾವಿಸಿ ನೀನಿಹುದು.
ವಿಶ್ವದಾಭಿರಾಮ ಕೇಳು ವೇಮ.

ಭಾವವೆಂದರೆ ಚಿತ್ತ ಶುದ್ಧಿ. ಸತ್ತ್ವ ಗುಣ ಪ್ರದೀಪ್ತಿ. ಪ್ರೇಮ ಜ್ಯೋತಿಯ ಬೆಳಕು. ಭಕ್ತಿಯಿಂದ ಉದಿಸಿದ ಮಾರ್ದವತೆ. ಈ ಸ್ಥಿತಿಯು ಬೇರೆ ಎಲ್ಲಿಯೋ ಇಲ್ಲ. ಇದೆಲ್ಲ ಭಕ್ತನು ತನ್ನ ನಿತ್ಯ ಸಾಧನೆಯಿಂದ, ಭಕ್ತಿ ಆರಾಧನೆಗಳಿಂದ ಅರ್ಜಿಸಿದ ಸ್ಥಿತಿ. ಚೈತನ್ಯಾತ್ಮಕವಾದ, ಪರಿಶುದ್ಧವಾದ, ಶಿವತತ್ತ್ವವನ್ನು ಭಾವದಲ್ಲಿ ಪರಿಭಾವಿಸಿ ನೀನು ಇರಬೇಕು.

ಗೀತ. ಭಾವ ನೆಲೆಗೊಂಡ ಪೂರ್ಣವಹ ಪ್ರಜ್ಞೆ ಹೊಂದಿ,
ನಿರ್ವಿಕಾರನಾಗಿ ತಾನುಂಟು, ನಿತ್ಯವಾಗಿ.
ಹೊಂದು ಸಂತತ ಭಾವವನು ಹಿಡಿತ ಬಿಡದೆ,
ಸುಕರ ಪದವಿಗೆ ಮಾರ್ಗವು ಸುಲಭ ವೇಮ.

ಭಕ್ತಿ ಸಾಧನದಿಂದ ಚಿತ್ತ ಶುದ್ಧಿಯಾಗಿ, ಸತ್ತ್ವ ಪೂರ್ಣವಾಗಿ, ಭಕ್ತಿಯಿಂದ ಮಾರ್ದವವಾಗಿ, ಭಾವವು ನೆಲೆಗೊಂಡ ಪ್ರಜ್ಞೆಯನ್ನು ಹೊಂದಬೇಕು. ಮನದಲ್ಲಿ ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರಗಳೆಂಬ ವಿಕಾರಗಳಿಲ್ಲದೆ, ನಿರ್ವಿಕಾರನಾಗಿ ಇರುತ್ತಾನೆ. ಅಂಥ ಭಕ್ತನು, ನಿತ್ಯವೂ ಹಿಡಿತ ಜಡದೆ ಸತತ ಭಾವವನ್ನು ಹೊಂದಬೇಕು. ಇದರಿಂದ ಮಂಗಳಕರವಾದ

ಪದವಿಗೆ ಹೋಗಲು ಮಾರ್ಗವು ಸುಲಭ.

ಆ. ಭಾವನೆಯಲಿ ತಿಳಿದು, ಬ್ರಹ್ಮ ರಂಧ್ರದೊಳಗೆ,
ಕರ್ತನಾಗಿ ನಿಲುವ ಕರ್ತನೋರ್ವ.
ಸೇವೆ ಗೆಯ್ಯಲೀವ ಶಿವನು ಮುಕ್ತಿ ಭುಕ್ತಿ.
ವಿಶ್ವದಾಭಿರಾಮ ಕೇಳು ವೇಮ.

ಬ್ರಹ್ಮ ರಂಧ್ರವು ಯೋಗಿಗಳು ಬಳಸುವ ಪದ. ಶಿರಸ್ಸಿನ ಮಧ್ಯ ಭಾಗದಲ್ಲಿ ಸುಷುಮ್ನಾ ನಾಳವು ತಲುಪುವ ಬಿಂದುವಿಗೆ ಬ್ರಹ್ಮರಂಧ್ರವೆನ್ನುತ್ತಾರೆ. ಇದನ್ನು ಭಾವನೆಯಲ್ಲಿಯೇ ತಿಳಿಯಲು ಸಾಧ್ಯ. ಅಲ್ಲಿರುವ ಚೈತನ್ಯ ಶಕ್ತಿಯು ಸರ್ವಕ್ಕೂ ಕಾರಣಕರ್ತನಾಗಿ ಉಂಟು. ಅವನೊಬ್ಬನೇ ಸೃಷ್ಟಿಕರ್ತ, ರಕ್ಷಣಕರ್ತ ಮತ್ತು ಲಯಕರ್ತ. ಭಕ್ತನು ಮಾಡಬೇಕಾದುದು ಅವನ ಸೇವೆಯನ್ನು ; ಅವನ ಪೂಜೆಯನ್ನು. ಎಲ್ಲ ಜೀವಿಗಳ ಆತ್ಮದಲ್ಲಿಯೂ ಇರುವ ಅವನ ಆರಾಧನೆಯನ್ನು. ಹೀಗೆ ಸೇವೆ ಗೆಯ್ಯುವ ಭಕ್ತನಿಗೆ ಆ ಶಿವನು ಇಹದಲ್ಲಿ ಭುಕ್ತಿಯನ್ನು ಓದಗಿಸುತ್ತಾನೆ. ಭೋಗ ಭಾಗ್ಯಗಳನ್ನು ನೀಡುತ್ತಾನೆ. ಪರದಲ್ಲಿ ಮುಕ್ತಿಯೀಯುತ್ತಾನೆ.

ಕಂ. ಭಾವಿಸುತ ನೋಡುತಿದ್ದೊಡೆ,
ತಾವೆ ಸಕಲ ತುಂಬಿಕೊಂಡ ನಿಲುಮೆಯೊಳಗಲಾ !
ಈ ವಸುಧೆಯಚ್ಚರಿ ತೋರ್ಪ
ಆವ ಶಬುದವೊ, ಅದ ದಾಟಿ, ರಾಜಿಸು ವೇಮಾ.

ಶುದ್ಧ ಸತ್ವರಾಗಿ, ಭಕ್ತಿ ಸ್ಫುರಿಸಿ, ಭಾವಿಸುತ್ತ ತಮ್ಮನ್ನು ತಾವು ನೋಡುತ್ತಿದ್ದರೆ, ಆತ್ಮ ವೀಕ್ಷಣೆ ಮಾಡುತ್ತಿದ್ದರೆ, ತಾವೇ ಸಕಲವನ್ನೂ ತುಂಬಿಕೊಂಡ ನಿಲುಮೆಯೊಳಗೆ ಒಳಗಣ್ಣಿಗೆ ಕಂಡುಬರುತ್ತಾರೆ. ಈಗ ಇನ್ನೊಂದು ಅಚ್ಚರಿ ಕಾಯ್ದಿದೆ. ಅದೆಂದರೆ, ಮಹಾಭಾವದಲ್ಲಿ ಯಾವ ಅನಾಹತ ಪ್ರಣವ ನಾದವನ್ನು ಕೇಳುತ್ತಿರುವನೋ, ಜ್ಞಪ್ತಿ ಮೀರಿದ ತನ್ನ ಅಮಸ್ಥೆಯಲ್ಲಿ, ಅದನ್ನೂ ದಾಟಿ ಬೆಳಗುತ್ತಾನೆ.

ಕಂ. ಭಾವಿಸಲು ಲಿಂಗವಿರುವುದು ;
ಭಾವಿಸಲು ಲೋಕದಲ್ಲಿ ಬ್ರಹ್ಮವೆನುವುದಂ.
ಓವಿ ತಿಳಿವ ವಿಧವರಿಯದೆ,
ಈ ವಿಧದಲಿ ನರರು ಕೆಡುವರಿಳೆಯಲಿ, ವೇಮಾ.

ಶುದ್ಧ ಸತ್ವರಾಗಿ, ಭಕ್ತಿ ಕಿರಣ ಸೂಸಿ, ಭಾವಿಸಿದರೆ ಅಲ್ಲಿ ಶಿವನ ಗುರುತು ಇರುತ್ತದೆ. ಲೋಕದಲ್ಲಿ ಭಾವಿಸಿದರೆ ಎಲ್ಲವೂ ಶಿವಮಯವಾಗಿ ಅಂದರೆ ಬ್ರಹ್ಮಮಯವಾಗಿ ತೋರುತ್ತದೆ. ಜನರು ಇದೆಲ್ಲವನ್ನೂ ಪ್ರೀತಿಯಿಂದ ತಿಳಿಯುವ ವಿಧವನ್ನು ಅರಿಯರು. ಹೀಗಾಗಿ ಅವರು ಬ್ರಹ್ಮವನ್ನು ಅರಿಯದೆ ಕೆಡುತ್ತಾರೆ.

ಕಂ. ಜೀವಾಧಾರನು ರುದ್ರನು,
ಸೇವಾರ್ಚನ ಪರನಾಗುತ್ತ ಸ್ಥಿರಮತಿ ಬೆಳಗಲ್,

ಭಾವಾತೀತ ಪರನಾಗೆ,
ಭಾವಿಸು ನೀ ಮನದಿ ಬಯಲು, ಘನತೆಯು ವೇಮಾ.

ರುದ್ರನು ಲಯಕರ್ತನು. ಆಯುವು ಮುಗಿದೊಡನೆ ರುದ್ರನೇ, ಜೀವನು ಒಂದು ದೇಹದಿಂದ ಇನ್ನೊಂದು ದೇಹಕ್ಕೆ ಹೋಗುವಂತೆ, ಇಲ್ಲವೆ ಸ್ಥೂಲದಿಂದ ಸೂಕ್ಷ್ಮದಲ್ಲಿ ಲಯಗೊಳ್ಳುವಂತೆ ಮಾಡುತ್ತಾನೆ. ಆ ಜೀವಾಧಾರನಾದ ರುದ್ರನ ಸೇವೆ, ಅರ್ಚನಪರನಾಗಿ, ಅವನ ಮಾನಸ ಪೂಜೆಯಲ್ಲಿ ನಿರತನಾದರೆ ಸ್ಥಿರಮತಿ ಬೆಳಗುತ್ತದೆ. ಆಗ ಉಪಾಸಕನು ತನ್ನನ್ನೇ ತಾನು ಮರೆಯುತ್ತಾನೆ. ಭಾವಾತೀತ ಪರನಾಗುತ್ತಾನೆ. ಈಗ ಮನದ ಬಯಲಿನ, ಅಂದರೆ ನಿಶ್ಶೂನ್ಯ ಮನದ ಘನತೆಯನ್ನು ನೀನು ಪರಿಭಾವಿಸು. ಅದೇ ಪರಮ ಪದ.

ಆ. ಹಗಲು ರಾತ್ರಿ ನೋಡು ; ಭಾವವನ್ನೆ ಒಳಗೆ,
ತಾನು, ನಾನು ಎನುವ ತಿಳಿವು ಮರೆತು,
ಇರುವ ಅಂಥ ಅವನೆ, ಇಪ್ಪ ಉತ್ತಮ ಯೋಗಿ.
ವಿಶ್ವದಾಭಿರಾಮ ಕೇಳು ವೇಮ.

ಹಗಲೂ ರಾತ್ರಿ, ತನ್ನೊಳಗೆ ಶುದ್ಧ ಚಿತ್ತದಿಂದ, ಸತ್ವಪೂರ್ಣವಾಗಿ ಭಕ್ತಿ ಕಿರಣಗಳಿಂದ ಮಾರ್ದವತೆ ಸೂಸುತ್ತ ಲಕ್ಷವನ್ನು ಈಕ್ಷಿಸು. ಆಗ ತನ್ಮಯನಾಗಿ ದೇಹ ಭಾನವು ಇರಕೂಡದು. ಎಂದರೆ ತಾನು ಬೇರೆ, ಲಕ್ಷ ವಸ್ತುವು ಬೇರೆ ಎಂಬ ತಿಳಿವು ಮರೆಯಬೇಕು. ಹೀಗೆ ಇರುವವನೇ ಉತ್ತಮ ಯೋಗಿಯೆನಿಸುತ್ತಾನೆ.

ಆ. ಮನನ ವೃತ್ತಿಯಲ್ಲಿ , ಮಹಿಮೆಯನರಿಯುತ,
ಮನಸ್ಸಿನಲ್ಲೆ ಪೂಜೆ ಮಹಿಮೆ ಕಂಡು,
ಮಾಣದಿರುವ ಅವನು ಮರ್ಮಜ್ಞನಹ ಯೋಗಿ.
ವಿಶ್ವದಾಭಿರಾಮ ಕೇಳು ವೇಮ.

ಮನಸ್ಸಿನಲ್ಲಿ ಶಿವನ ಮಹಿಮೆಯನ್ನು ನೆನೆಯುವುದಾಗಲಿ, ಶಿವನ ಮೇಲ್ಮೈಯನ್ನು ಕೊಂಡಾಡುವಲ್ಲಾಗಲಿ, ಮಹಿಮ್ನ ಜ್ಞಾನ ಉಂಟಾಗುತ್ತದೆ. ಶಿವನು ಬೃಹತ್ ಶಕ್ತಿ, ತಾನು ಕ್ಷುದ್ರ ಎಂಬ ಅನಿಸಿಕೆಯು ಬರಬಹುದು., ಹೀಗೆ ಶಿವನ ಪೂಜೆಯ ಅಂದರೆ ಗೌರವಿಸುವದರ ಮಹಿಮೆಯನ್ನು ಕಂಡು ತನ್ನನ್ನು ಕ್ಷುದ್ರನೆಂದುಕೊಳ್ಳುವುದು ಬೇಡ. ತಾನೂ ಶಿವಸ್ವರೂಪನೇ ಎಂಬ ಭಾವ ತಾಳಿ, ಪೂಜೆಗಿಳಿಯದಿರುವ ಅವನು, ಶಿವತತ್ವದ ಮರ್ಮವನ್ನು ಅರಿತವನೆನಿಸುತ್ತಾನೆ.

ಕಂ. ಚಿತ್ತಾರದ ಪ್ರತಿಮೆಯಂತೆ,
ಚಿತ್ತವನು ಹಿಡಿದು ಹೊರಳಿಸಿ, ಚಿರತರ ಮತಿಯೋಳ್.
ಚಿತ್ತವನರಿತಿಹ ಅವನೇ
ಉತ್ತಮ ಸುಜ್ಞಾನಿಯೆಂಬರು, ಇಹದಲಿ, ವೇಮಾ.

ಅಹಂ ತತ್ವದ ಮೇಲೆ ತಮೋಗುಣವು ಗುಣಾನ್ವಿವಾಗಿ ಪರಿಣಮಿಸುವ ಮನಸ್ಸಿನ ಭಾಗವೇ ಚಿತ್ತ ತತ್ವವಾಗಿದೆ. ಇದರ ಮೇಲೆ ತಮೋಗುಣದ ಅಧಿಕ ಅನ್ವಯದಿಂದ ಪಂಚ ಮಹಾಭೂತಗಳೂ, ಪಂಚ ವಿಷಯಗಳೂ ಪರಿಣಮಿಸುತ್ತವೆ. ಮಾನವನ ಜ್ಞಾನೇಂದ್ರಿಯಗಳು

ಈ ವಿಷಯಗಳ ಸಂಸರ್ಗದಿಂದ ಚಿತ್ರ ವಿಚಿತ್ರ ಭೋಗವೃತ್ತಿಗಳನ್ನು ಚಿತ್ತಕ್ಕೆ ತಲುಪಿಸಿ, ಎಲ್ಲವೂ ಚಿತ್ತಾರದ ಪ್ರತಿಮೆಯಂತೆ ತೋರುತ್ತದೆ. ಈ ಚಿತ್ತವನ್ನು ಹಿಡಿದು, ವಿವಿಧ ದಿಕ್ಕಿನಲ್ಲಿ, ವೃತ್ತಿಗಳನ್ನು ಹರಡಿ, ಬೇರೆ ಬೇರೆ ಪಾರ್ಶ್ವಗಳಿಂದ ಸ್ಥಿರವಾದ ಮತಿಯಲ್ಲಿ ಎಲ್ಲವನ್ನೂ ಕಂಡು, ಆ ಮೂಲಕ ಚಿತ್ತವನ್ನು ಯಾವನು ಅರಿಯುವನೋ, ಅವನನ್ನೇ ಇಳೆಯಲ್ಲಿ ಉತ್ತಮ ಸುಜ್ಞಾನಿ ಎನ್ನುತ್ತಾರೆ.

ಆ. ಅಗ್ನಿ ಶಿಖೆಗಳಲ್ಲಿ ಅಮರವು ಮಮಕಾರ,
ಅಭವ ಮೇಲೆ ಧ್ಯಾನ ಅಮರಗೊಳಿಸಿ,
ಆಹುತಿಯಾದ ಬಳಿಕ ಆ ಹರನನರ್ಚಿಸು.
ವಿಶ್ವದಾಭಿರಾಮ ಕೇಳು ವೇಮ.

ಚೈತನ್ಯದ ಅಗ್ನಿ ಶಿಖೆಗಳಲ್ಲಿ ಮಮಕಾರವು ಅಮರವೇ ಸರಿ. ಅದು ಅಲ್ಪ 'ನಾನು' ವಿರುವಾಗ ಸಾಂತ ವಸ್ತುಗಳ ಬಗೆಗೆ ಇರುತ್ತದೆ. ಭೂಮಾ 'ನಾನು' ವಿರುವಾಗ, ಪ್ರತ್ಯೇಕವಾಗಿ ಉಳಿಯದಿದ್ದರೂ ಭೂಮಾದೊಂದಿಗೆ ಅಡಗಿ ಹೋಗಿರುತ್ತದೆ. ಹೀಗೆ ಅದನ್ನು ಅಮರ-ವೆನ್ನಬಹುದು. ಈ ಅಮರ ಮಮಕಾರದಿಂದ ಅಭವನ ಮೇಲೆ, ಧ್ಯಾನವನ್ನು ಅಮರಗೊಳಿಸಿ, ಅದರಲ್ಲಿ ತನ್ನ ಮನವು ಆಹುತಿಯಾದ ಮೇಲೆ, ಆ ಮನವನ್ನು ಕದ್ದೊಯ್ದ ಹರನನ್ನು ಅರ್ಚಿಸಬೇಕು.

ಆ. ಕೃಪೆ ಬಿಟ್ಟು, ಮನಸು ಕಾಂಕ್ಷಿಸದು ಏನನು,
ಜ್ಞಾನ ತಪವ ತೊರೆದು ಕದಲ ಬೇಡ,
ಕುದುರಿ, ಆತ್ಮ, ಬಯಲ ಗಗನಕಂಟಿ ಇರುವ.
ವಿಶ್ವದಾಭಿರಾಮ ಕೇಳು ವೇಮ.

'ಕೇವಲ ಭಕ್ತಿ' ಸಾಧಕನ ಸೂತ್ರವೆಂದರೆ, ಏನೇ ಆಗಲಿ 'ಮಹತ್ ಕೃಪಯೈವ, ಭಗವದ್ ಕೃಪ ಲೇಶಾದ್ವಾ'. ಹೀಗೆ ಅವನ ಮನಸ್ಸು ಕೃಪೆಯನ್ನು ಬಿಟ್ಟು ಬೇರೇನನ್ನೂ ಆಕಾಂಕ್ಷಿಸದು. ಅವನ ತಪವೆಲ್ಲವೂ ಆ ಪರಮಾತ್ಮನ ಜ್ಞಾನ ಸಂಪಾದನೆಗಾಗಿಯೇ ಇರುತ್ತದೆ. ಆದ್ದರಿಂದ, ಆ ಜ್ಞಾನ ತಪವನ್ನು ತೊರೆದು ಕದಲಬೇಡ. ಅಂಥ ಇಂಥ ಮಧ್ಯಾಂತರ ಆಕರ್ಷಣೆಗಳಿಂದ ಮೋಸ ಹೋಗಬೇಡ. ಭಾವವು ಆತ್ಮದ ಬಯಲಿಗೆ ಅಂದರೆ ಗಗನಕ್ಕೆ ಅಂಟಬೇಕು.

ಕಂ. ಜವ ದಾಟನೇಕೆ ? ಗುರಿಯಿರೆ,
ಭವಹರವಹ ಭಕ್ತಿ ಹೊಂದಿ ಪರಿಪಕ್ವವಲಾ !
ಧ್ರುವವಿದೆ ಬಯಲು ಸೇರುತ,
ಶಿವ ತನ್ಮಯ ಚಿನ್ಮಯವದು, ಪ್ರಾಪ್ತಿಯು, ವೇಮಾ.

ಜೀವನದಲ್ಲಿ ಗುರಿ ಇರಿಸಿಕೊಂಡಿದ್ದರೆ, ಅಂಥ ಸಾಧಕನು ಭವಹರವಾದಂಥ ಭಕ್ತಿಯನ್ನು ಹೊಂದಿ ಪರಿಪಕ್ವನಾಗಿರಲು, ಮರಣವನ್ನು ದಾಟನೇಕೆ ? ಇಂಥ ಉದಾತ್ತ ಗುರಿಯಿದ್ದರೆ, ನಿಶ್ಶೂನ್ಯ ಬಯಲು ಸೇರುವುದು ಸುನಿಶ್ಚಿತವಿದೆ. ಅಲ್ಲಿ ಶಿವದಲ್ಲಿ ತನ್ಮಯನಾಗಬಹುದು. ಶಿವಸ್ವರೂಪವನ್ನು ಅರಿತು ಚಿನ್ಮಯನೂ ಆಗುವುದು, ಸಾಧ್ಯವಿದೆ. ಈ ಪರಮ ಪದವಿ ಪ್ರಾಪ್ತವಾಗುತ್ತದೆ.

ಕಂ. ಪರಿಪಕ್ವವಿಪ್ಪ ಶಿಷ್ಯನು
ಉರದಲ್ಲಿಯ ಬಯಲು ಕಂಡು, ಹೋರುತ ಮೀರಲ್.
ಪರಿಪೂರ್ಣಕಂಟಿ ಸೇರುವ ;
ಗುರುವು ಪರಬ್ರಹ್ಮವಪ್ಪ, ಗುಣನಿಧಿ, ವೇಮಾ.

ಸರ್ವರಿಗೂ ಪರಬ್ರಹ್ಮನೇ ಗುರುವಾಗಿ ಮಾರ್ಗದರ್ಶನ ಮಾಡುತ್ತಾನೆ. ಪರಬ್ರಹ್ಮನ ಅರಿವೇ ಮಾನವ ರೂಪಿ ಗುರುವಿನಲ್ಲಿ ಪ್ರಾದುರ್ಭವಿಸಿ ಮಾರ್ಗದರ್ಶನ ಮಾಡುತ್ತದೆ, ಎಂದೂ ಹೇಳಬಹುದು. ಶಿಷ್ಯನು ಪರಿಪಕ್ವನಾಗಿದ್ದರೆ, ತನ್ನ ಹೃದಯದಲ್ಲಿ ಬಯಲನ್ನು ಕಾಣುತ್ತಾನೆ. ಮತ್ತು ಅಲ್ಲಿ ಹೋರುತ್ತ ಬಯಲನ್ನೂ ದಾಟಿ, ಬಟ್ಟ ಬಯಲನ್ನು ಸೇರುತ್ತಾನೆ. ಇದುವೇ ಪರಿಪೂರ್ಣ ಪದವಿ ಇದನ್ನು ತಲುಪಿಸುವವನೇ ಗುರುವು. ಅವನು ಗುಣನಿಧಿ. ಅವನು ಪರಬ್ರಹ್ಮ.

ಗೀತ. ಅಂತರಾತ್ಮಾನುಭವ ಹೊಂದಿ, ಆರ್ಯ ಮತಿಲಿ,
ಸಂತತಾರ್ಚನ ಮನದಿ ನಿಷ್ಠೆ ಸಲಿಸಿ ಕೋರಿ,
ಸುತ್ತಿ, ಏರಿದವನೆ ಹೋಗು ಶ್ರೇಷ್ಠವಿಹನು.
ಅವನಿಗಾರು ಸಮರು ? ಅವಗೆ ಕಾಣು ಅವನೆ ವೇಮಾ.

ಶ್ರೇಷ್ಠ ಬುದ್ಧಿಯಿಂದ ಆಂತರ್ಯದಲ್ಲಿ ಆತ್ಮಾನುಭವವನ್ನು ಹೊಂದಿ, ಯಾವಾಗಲೂ ಭಕ್ತಿ ಪೂರ್ವಕ ಗೌರವಿಸುವ ಮನದಲ್ಲಿ ಆತ್ಮನಿಷ್ಠೆ ಹೊಂದಿ, ಆತ್ಮ ಸಾಕ್ಷಾತ್ಕಾರ ಕೋರಿ, ತತ್ತ್ವದಿಂದ ತತ್ತ್ವಕ್ಕೆ ಏರಿದವನೇ ಶ್ರೇಷ್ಠನೆನಿಸುತ್ತಾನೆ. ಅವನಿಗೆ ಬೇರಾರೂ ಸಮನಾಗರು. ಅವನಿಗೆ ಅವನೇ ಸಮನು.

ಕಂ. ಪಂಥವ ಬಿಡುವುದೆ ನೆಮ್ಮದಿ.
ಚಿಂತನದಲಿ ಗುರುತು ತಿಳಿದು, ಚಿನ್ಮಯನಪ್ಪನ್.
ಎಂಥ ವಿಚಿತ್ರ ! ಮನದಡಗಿ,
ಇಂಥದು ಎನ್ನುತ ಹೇಳದೆ, ಅರಿವುದು, ವೇಮಾ.

ಸತ್ಯ ಸಾಕ್ಷಾತ್ಕಾರದ ಹಾದಿ ಇದೇ ಎಂದೂ ಯಾರೂ ಗೆರೆ ಕೊರೆದು ಹೇಳಲಾರರು. (Truth is a pathless land) ಆದ್ದರಿಂದ ಅದನ್ನು ಜ್ಞಾನ ಮಾರ್ಗದಿಂದಲೇ ಪಡೆಯಬೇಕು, ಭಕ್ತಿ ಮಾರ್ಗದಿಂದಲೇ ಪಡೆಯಬೇಕು, ಕರ್ಮಯೋಗದಿಂದಲೇ ಪಡೆಯಬೇಕು; ಯೋಗ ಇಲ್ಲವೆ ಧ್ಯಾನ ಮಾರ್ಗದಿಂದಲೇ ಪಡೆಯಬೇಕು ಎಂಬ ಕಟ್ಟುಪಾಡು ವಿಧಿಸುವುದು ಸಲ್ಲ. ಆದ್ದರಿಂದ ಯಾವುದೇ ಮಾರ್ಗಕ್ಕಂಟದೆ, ಪಂಥವನ್ನು ಬಿಡುವುದೇ ನೆಮ್ಮದಿ ನೀಡುತ್ತದೆ. ಆದರೆ ಸಾಧಕನು, ವ್ರತ ನೇಮಗಳನ್ನು, ತಪಗಳನ್ನು ತೊರೆದು ಕೇವಲ ಆತ್ಮ ಚಿಂತನದಲ್ಲಿ ಪರಮ ತತ್ತ್ವದ ಗುರುತು ತಿಳಿದು, ಆ ಅರಿವಿನಲ್ಲಿಯೇ ಮುಳುಗಿ ಹೋಗಬೇಕು. ಚಿನ್ಮಯವಾಗಬೇಕು. ಮನದಲ್ಲಿ ಏನೆಂಥ ವಿಚಿತ್ರಗಳು ಅಡಗಿರಬಹುದು ? ಅವು ಹಾಗೆ ; ಹೀಗೆ ; ಎಂದು ಹೇಳದೆ, ಆತ್ಮವನ್ನು ಅರಿಯಬೇಕು.

ಆ. ದೇಹ ಸಂಕಟದಲಿ ತೆಗೆದು ತೆರೆಯ ಕಂಡು.
ಮೋಹ ದೃಷ್ಟಿ ಬಿಟ್ಟು, ಮೂಲವರಿತು,

ಊಹೆಯೊಂದ ಚಾಚಿ, ಆ ಹೃದಯ ಸಂಧಿಸಿ,
ಸ್ನೇಹವರಿಯೆ, ಯೋಗ ಸಿದ್ಧಿ ವೇಮ.

ದೇಹವು ಸ್ವಾಭಾವಿಕವಾಗಿ ಬಾಹ್ಯ ವಿಷಯಗಳನ್ನು ಭೋಗಿಸುತ್ತದೆ. ಅದನ್ನು ಅಲ್ಲಿಂದ ತೆಗೆಯಬೇಕಾದರೆ ಸ್ವಲ್ಪು ಸಂಕಟವಾಗುತ್ತದೆ, ನಿಜ. ಅದು ಬಾಹ್ಯದಲ್ಲಿಯ ವಿಷಯಗಳನ್ನು ಭೋಗಿಸುವುದರಲ್ಲಿ ಅನುರಕ್ತವಾಗುವುದರಿಂದ ಅದಕ್ಕೆ ಅವುಗಳಲ್ಲಿ ಮೋಹ ಹುಟ್ಟುವುದು ಸಹಜ. ಸಾಧಕನು ಮೋಹ ದೃಷ್ಟಿಯನ್ನು ಬಿಟ್ಟು, ತೆರೆಯನ್ನು ಕಂಡು, ಸರಿಸಿ, ತನ್ನ ಊಹೆಯಿಂದ ಅರಿವನ್ನು ಚಾಚಿ ಆ ಹೃದಯದಲ್ಲಿ ಧ್ಯೇಯ ವಸ್ತುವನ್ನು ಸಂಧಿಸಬೇಕು. ಅಲ್ಲಿ ಅದರೊಂದಿಗೆ ಸ್ನೇಹ ಕುದುರಿಸಿ ಅರಿತರೆ ಯೋಗ ಸಿದ್ಧಿಯಾಗುವುದು.

ಆ. ಅನುವು ಮೀರಿ ಮನದಿ ಆನಂದ ಹೊಂದುವ
ನರನು ! ಪರನು ಅಲ್ಲ ; ಸ್ಥಿರನು ಕಾಣು.
ಮನಸು ನಿಲಿಸದಿರಲು ಮತ್ತೆ ಮುಕ್ತಿ ಇಲ್ಲ.
ವಿಶ್ವದಾಭಿರಾಮ ಕೇಳು ವೇಮ.

ತನಗೆ ಎಷ್ಟು ಅನುಕೂಲವೋ, ಅದಕ್ಕಿಂತ ಹೆಚ್ಚು ಆನಂದವನ್ನು ಮನದಲ್ಲಿ ಹೊಂದುವ ಬಯಕೆಯುಳ್ಳವನು ನರನು. ಅವನು ಕೇವಲ ಇಹವನ್ನು ಮೀರಿದ ಪರನಷ್ಟೇ ಅಲ್ಲ ; ಅವನು ಇಹದಲ್ಲಿಯೂ ಪರದಲ್ಲಿಯೂ ಬದಲಾವಣೆ ಹೊಂದಿದ ಸ್ಥಿರ ತತ್ತ್ವವಾಗಿದ್ದಾನೆ. ಇದರ ಇಂಗಿತವೆಂದರೆ, ಅವನು ಹೊಯ್ದಾಡುವ ಮನಸ್ಸನ್ನು ನಿಲ್ಲಿಸಿದವನು. ಮನಸ್ಸು ನಿಲ್ಲಸದೆ ಮುಕ್ತಿ ಇಲ್ಲ.

ಆ. ಕೆಟ್ಟ ಮಾನಸರಿಗೆ ಕಾಣ ಬರುವುದಿಲ್ಲ.
ಮೇಘದೊಳಗೆ ಭಾನು ಮುಚ್ಚಿದಂತೆ.
ತೇಟ ನೀರು, ಪುಣ್ಯ ದೇಹದಂತೆ ಇಹುದು.
ವಿಶ್ವದಾಭಿರಾಮ ಕೇಳು ವೇಮ.

ಯಾರ ಮನಸ್ಸು ಸಂಕಲ್ಪ-ವಿಕಲ್ಪಗಳಿಂದ ತಂರಗಾಯಿತವಾಗಿರುವುದೋ, ಯಾರ ಮನಸ್ಸು ಆವರಣೇ ಇಲ್ಲವೆ ವಿಕ್ಷೇಪ ಮಲಗಳಿಂದ ಮಲಿನವಾಗಿ ಕೆಟ್ಟಿರುವುದೋ, ಅವರಿಗೆ ಪರಿಶುದ್ಧವಾದ ನಿಶ್ಚಲವಾದ ಆತ್ಮವು ಕಾಣಬರುವುದಿಲ್ಲ ಸೂರ್ಯನು ಪ್ರಕಾಶಮಾನವಾಗಿ ಬೆಳಗುತ್ತಿದ್ದಾಗ ಮೇಘವೊಂದು ಅಡ್ಡ ಬಂದರೆ, ಸೂರ್ಯನು ನೋಡುವವನಿಗೆ ಮೋಡದಿಂದ ಮುಚ್ಚಿ ಮರೆಯಾಗುತ್ತಾನೆ. ಆ ರೀತಿ ಕೆಟ್ಟ ಮನಸ್ಸಿನವರಿಗೆ ಆತ್ಮನು ಕಾಣುವುದಿಲ್ಲ. ಸ್ವಚ್ಛವಾದ ನೀರಿನಲ್ಲಿ ಸೂರ್ಯನು ಪ್ರತಿಫಲಿಸುವಂತೆ ಪುಣ್ಯಮಯ ದೇಹದಲ್ಲಿ ಆತ್ಮನು ಪ್ರತಿಫಲಿಸುತ್ತಾನೆ.

ಆ. ಆದಿಯೊಂದ ತಿಳಿದು, ಆದಿ ಮನದಿ ನಿಲಿಸಿ,
ಆದಿ ಬಿಡದೆ ಇರಲು ಅಭವನಾದ.
ಆದಿ ಬಿಡುವ ಅವನು ಅಂಧನಂಥ ರೀತಿ.
ವಿಶ್ವದಾಭಿರಾಮ ಕೇಳು ವೇಮ.

ಆದಿ ಯಾವುದು ? ಸೃಷ್ಟಿಯ ಮೂಲ ಬಿಂದುವೇ ಆದಿ. ಮಾನವ ಉದಿಸುವ

ಬಿಂದುವಿಗೂ ಆದಿ ಎನ್ನುತ್ತಾರೆ. ಸಾಧಕನು ತತ್ತ್ವಗ್ರಹಣ ಮಾಡುತ್ತ ತನ್ನ ಮೂಲಕ್ಕೂ ತಲುಪಬಹುದು. ಅದುವೇ ಜ್ಞಪ್ತಿಯ ಆದಿ. ಈ ಆದಿಯ ಸ್ಥಿತಿಯನ್ನು ತಲುಪಿ ಅದನ್ನು ಮನದಲ್ಲಿ ನಿಲ್ಲಿಸಬೇಕು. ಯಾವ ಚಪಲದಿಂದಾದರೂ ಆದಿಯನ್ನು ಬಿಡಬಾರದು. ಹಾಗಿದ್ದರೆ ಅವನಲ್ಲಿ ಭವದ ಜಂಜಡವು ಉದಿಸದು. ಅವನನ್ನು ಅಭವನೆನ್ನಬಹುದು. ಏನಾದರೂ ಚಪಲದಿಂದ ಅವನು ಆದಿಯನ್ನು ಬಿಟ್ಟು ಕೆಳಕ್ಕೆ ಸರಿದರೆ, ಅವನಿಗೆ ಅಭವನ ಪರಮ ಪದವು ಕಾಣಿಸಿಗದು. ಅವನು ಜ್ಞಾನ ಗುರುಡನಾಗುತ್ತಾನೆ.

ಆ. ತಾನು ಇರುವ ಗೃಹದಿ ತಕ್ಕ ಶತ್ರು ಮಿತ್ರ,
ತಿಳಿವು ಇಲ್ಲದವನ ತಿಳಿವು ಏಕೆ ?
ತಿಳಿದು ಚೊಕ್ಕಗೊಳಿಸೆ ದಿವ್ಯಾಮೃತ ನೋಡು.
ವಿಶ್ವದಾಭಿರಾಮ ಕೇಳು ವೇಮ.

ತಾನು ಇರುವ ಗೃಹದಲ್ಲಿ ಅಂದರೆ ತನ್ನ ಮನೆಯೆಂಬ ದೇಹದಲ್ಲಿ ಇರುವಾಗ ಮಿತ್ರರಾರು ? ಶತ್ರುಗಳಾರು ? ಷಡ್ರಿಪುಗಳೆಂದು ಸರ್ವವಿದಿತವಾದ ಕಾಮ ಕ್ರೋಧಾದಿಗಳಂತೂ ಶತ್ರುಗಳೆಂದು ಸರ್ವವೇದ್ಯ. ಇನ್ನು ಅಭಯ, ಸತ್ತ್ವ ಸಂಶುದ್ಧಿ, ದಾನ, ಸರಳತೆ, ಅಹಿಂಸೆ, ಸತ್ಯ, ತ್ಯಾಗ, ಮೃದುಸ್ವಭಾವ, ತೇಜಸ್ಸು, ಕ್ಷಮೆ, ಧೈರ್ಯ, ಶೌಚಾದಿ ಮಿತ್ರವರ್ಗ೦. ಇವುಗಳನ್ನು ಸರಿಯಾಗಿ ತಿಳಿಯದವನ ತಿಳಿವು ಯಾವ ಪ್ರಯೋಜನಕ್ಕೆ ಬಂದೀತು ? ಯಾವಾಗ ಸಾಧಕನು ಈ ಶತ್ರು-ಮಿತ್ರ ಗುಣಗಳನ್ನು ತಿಳಿದುಕೊಳ್ಳುವನೋ ಮತ್ತು ಮಿತ್ರ ಗುಣಗಳನ್ನು ಅಳವಡಿಸಿಕೊಳ್ಳುವನೋ, ಆಗ ಅವನಲ್ಲಿ ದಿವ್ಯ ಅಮೃತ ಸ್ಫುರಿಸುವುದು.

ಆ. ಮಲಿನ ತೊಗಲಿಗೆಲ್ಲ, ಮೂಲ ಮನದ ಚಿಂತೆ,
ನರಕ, ಮಬ್ಬು, ಮೋಸ, ನೀಗಿ, ತಿಕ್ಕಿ,
ಪರವ ಕೋರಿದಾಗ ಬಯಲಾಯ್ತು ಬೆಡಗು.
ವಿಶ್ವದಾಭಿರಾಮ ಕೇಳು ವೇಮ.

ಮಾನವನ ದೇಹವನ್ನು ಕವಿಗಳು ತೊಗಲಿನ ಚೀಲವೆನ್ನುತ್ತಾರೆ. ಇದು ಭೌತಿಕ ಜಡ ಪದಾರ್ಥವಷ್ಟೇ. ಇದು ಮಲಿನವಾಗುವುದನ್ನು ಎಲ್ಲರೂ ಬಲ್ಲರು. ಆಯಾಸವಾದರೆ ಬೆವರು ಬರುತ್ತದೆ. ಶೀತವಾದರೆ ಸಿಂಬಳ ಸುರಿಯುತ್ತದೆ. ದುಃಖವಾದರೆ ಕಣ್ಣು ನೀರೊಡೆಯುತ್ತದೆ. ಕಿವಿಯಲ್ಲಿ ಕೀವು ಸೋರಬಹುದು. ಬಾಯಿಯಿಂದ ವಾಂತಿಯಾಗುತ್ತದೆ. ಗುದದಿಂದ ಮಲವೂ ಗುಹ್ಯದಿಂದ ಮೂತ್ರವೂ ಹೊರಬರುತ್ತವೆ. ಹೀಗೆ ನರಕ (ಮಲ) ಮಬ್ಬು ಇತ್ಯಾದಿಗಳು ನವದ್ವಾರ ಮೂಲಕ ದೇಹ ತೊಗಲನ್ನಂತೂ ಮಲಿನಗೊಳಿಸುತ್ತವೆ. ಇದಕ್ಕೆ ಮನದ ಚಿಂತೆಯೇ ಮೂಲ ಕಾರಣವಾಗಿದೆ. ಮನಸ್ಸು ಚಿಂತೆ ಮಾಡದೆ, ಶಾಂತವಿರುವಾಗ ಮಾತ್ರ ಪರವನ್ನು ಕೋರಬಲ್ಲದು. ಆಗ ಹೊಲಸು, ಆಯಾಸ, ಮಬ್ಬು ಎಲ್ಲವೂ ನೀಗುತ್ತವೆ. ತೊಗಲನ್ನು ತಿಕ್ಕಿ ಸ್ವಚ್ಛ ಮಾಡಿದರೆ, ಬಾಹ್ಯ ಶೌಚವೂ ಆಗುತ್ತದೆ. ಹೀಗೆ ಪರವನ್ನು ಕೋರಿದಾಗ ಪರದ ಬೆಡಗು ಬಯಲಾಗುತ್ತದೆ.

ಆ. ಅರಿವು ಉಳ್ಳವನಿಗೆ ಅರಿವು ಮಾತ್ರ ಉಂಟು.
ಅರಿವು ಇಲ್ಲದವಗೆ ಅರಿವೆ ಇಲ್ಲ.

ಅರಿವು ಇಲ್ಲದರಿವು ಅರಿಯುವುದೇ ತತ್ತ್ವ.
ವಿಶ್ವದಾಭಿರಾಮ ಕೇಳು ವೇಮ.

ಅರಿವು ಎರಡು ವಿಧ. ದೇಹ ಕುರಿತ ಅರಿವು ಒಂದಾದರೆ, ಆತ್ಮ ಕುರಿತ ಅರಿವು ಇನ್ನೊಂದು. ಆತ್ಮ ಕುರಿತ ಅರಿವು ಉಳ್ಳವರಿಗೆ ಕೇವಲ ಅರಿವು ಮಾತ್ರ ಇರುತ್ತದೆ. ದೇಹದ ಭಾನವಿರಲೇಬೇಕೆಂದಿಲ್ಲ. ಆದರೆ ದೇಹದ ಅರಿವು ಇಲ್ಲದವರಿಗೆ ಆತ್ಮದ ಅರಿವೂ ಇಲ್ಲದಿರಬಹುದು. ಅವನಿಗೆ ಒಟ್ಟಾರೆ ಅರಿವು ಇಲ್ಲ. ಆದರೆ ಸಾಧನದಲ್ಲಿ ಮುಖ್ಯವಾದುದೆಂದರೆ, ಅರಿವು ಇಲ್ಲದ ಅರಿವು ; ಅಂದರೆ ದೇಹದ ಅರಿವು ಇಲ್ಲದಾಗಿನ ಆತ್ಮದ ಅರಿವು. ಇದನ್ನು ಅರಿತುಕೊಳ್ಳುವುದೇ ತತ್ತ್ವವೆನಿಸುತ್ತದೆ.

ಆ. ಎಲೆಗಳಲ್ಲಿ ಓದಿ ಎನಿತು ಅರಿಯದಿದ್ದು,
ಏಕ ; ಅಮರ ಯುಕ್ತಿ ಅರಿಯಬೇಕು.
ತಾಕಿ ಪೂರ್ತಿಯಾಗಿ ತನ್ಮಯತೆಯ ಹೊಂದು.
ವಿಶ್ವದಾಭಿರಾಮ ಕೇಳು ವೇಮ.

ಬರೆಯುವ ಕಾಗದಗಳ ಆವಿಷ್ಕಾರವಾಗುವ ಮೊದಲು, ಭೂಜಕ ವೃಕ್ಷದ ಎಲೆಗಳ ಮೇಲೆ ಪವಿತ್ರ ಗ್ರಂಥಗಳನ್ನು ಕಂಠದಿಂದ ಬರೆಯುತ್ತಿದ್ದರು. ಶ್ರುತಿಗಳ ಅಧ್ಯಯನಕ್ಕೆ ತಾವಷ್ಟೇ ಅಧಿಕಾರಿಗಳೆಂದು ಬೀಗುವವರು, ಈ ಎಲೆಗಳ ಪೋಥಿಯನ್ನು ಓದಿ, ಸಾಧನದ ಸೊಡರು ಇಲ್ಲವಾಗಿ, ಎನಿತೂ ಅರಿಯದಿದ್ದರು. ಆದ್ದರಿಂದ ಇವುಗಳನ್ನು ಅರಿಯಲು ಸಿದ್ಧ ಗುರುವಿನ ಬಳಿ ಸಾಧನ ಮಾಡುವ ಯುಕ್ತಿಯನ್ನು ಅರಿಯಬೇಕು. ಆಗ ಲಕ್ಷ್ಯ ವಸ್ತುವನ್ನು ಪೂರ್ಣವಾಗಿ ತಾಕಿ ಅದರಲ್ಲಿಯೇ ತನ್ಮಯತೆಯನ್ನು ಹೊಂದಬೇಕು.

ಮೋದಪಡುವನಾರೊ ? ಮೋದಿಸುವವನಾರೊ ?
ಪಾಡು ಪಟ್ಟು ನೋಡೆ ಬಟ್ಟ ಬಯಲು.
ಕ್ರಮದಿ ನೀರುಗೊಂಡದಿ ಕಾಣುವೆಯದ ಚೆಂದ !
ವಿಶ್ವದಾಭಿರಾಮ ಕೇಳು ವೇಮ.

ಕೆಲವರು ದ್ವೈತ ಸಾಧಕರಿರಬಹುದು. ಇನ್ನು ಕೆಲವರು ಅದ್ವೈತ ಸಾಧಕರಿರಬಹುದು. ದ್ವೈತಿಗಳು ದ್ವೈತ ಸಾಧಕರು, ಇಷ್ಟ ದೈವವನ್ನು ಸಾಕಾರ ರೂಪದಲ್ಲಿ ಪೂಜಿಸುತ್ತಾರೆ. ಅವರು ಪರಮ ಪದವೆಂದು ಆ ದೈವದ ಸನ್ನಿಧಿಯಲ್ಲಿ ಇರಬಯಸುತ್ತಾರೆ. ಹೀಗೆ ಜೀವವು ನಿತ್ಯವೆಂದು ಗ್ರಹಿಸಿದ ಅವರಿಗೆ ಪರಮನ ಸನ್ನಿಧಿಯಲ್ಲಿ ಮೋದ ಪಡುವ ಅವಕಾಶವುಂಟು. ಇನ್ನು ಅದ್ವೈತ ಸಾಧಕರು ನಿರಾಕಾರ ಪರಮಾತ್ಮನನ್ನು ಧ್ಯಾನಿಸುತ್ತ ತಮ್ಮನ್ನು ತಾವು ನೀಗಿಕೊಳ್ಳುತ್ತಾರೆ. ಅವರು ಮೋದಿಸುವ ಚಪಲ ಹೊಂದಿರುವುದಿಲ್ಲ. ಚೆನ್ನಾಗಿ ಪಕ್ವ ಸ್ಥಿತಿಯಲ್ಲಿ ನೋಡಿದರೆ, ಎಲ್ಲವೂ ಬಟ್ಟ ಬಯಲೆಂದು ಅರಿವಾಗುತ್ತದೆ. ಸೂರ್ಯ, ನೀರುಗೊಡದಲ್ಲಿ ಪ್ರತಿಬಿಂಬಿಸಿ ತೋರುವಂತೆ ಪರಮಾತ್ಮನು ಕ್ರಮದಿಂದ ಅಗ್ಗ ಬುದ್ಧಿಯಲ್ಲಿ ಪ್ರತಿಬಿಂಬಿಸುತ್ತಾನೆ.

ಜೇನು ಕಿಂಡಿ ನೋಡೆ, ಜೇನು ನೊಣಕೆ ಗೊತ್ತು.
ಸುಮ ರಸವನು ನೋಡೆ ಭ್ರಮರಕರಿವು.

ಪರಮ ಯೋಗಿ ನೋಡೆ ಭಕ್ತನರಿಯುತಿಹನು.
ವಿಶ್ವದಾಭಿರಾಮ ಕೇಳು ವೇಮ.

ಜೇನು ಹುಟ್ಟನ್ನು ನೋಡಿದರೆ, ಅದರ ಸುತ್ತಲೂ ಜೇನು ನೊಣಗಳು ಮುಕುರಿಯತ್ತವೆ. ಮಕರಂದವನ್ನು ಹೀರಿಕೊಂಡು ಬಂದ ನೊಣವು ಒಳಗೆ ಹೇಗೆ ಹೋಗುವುದೆಂದೇ ತಿಳಿಯುವುದಿಲ್ಲ. ಆದರೆ, ತಾನು ಹೀರಿ ತಂದ ಮಕರಂದವನ್ನು ಹುಟ್ಟಿನಲ್ಲಿ ಹೇಗೆ ಸೇರಿಸಬೇಕೆಂಬುದು ಆ ನೊಣಕ್ಕೆ ಗೊತ್ತು. ಅದೇ ರೀತಿ, ಸುಮ ರಸವನ್ನು ನೋಡಿ, ಭ್ರಮರ ಎಂದರೆ ಜೇನ್ನೊಣಕ್ಕೆ ಕೂಡಲೇ ಅರಿವಾಗುತ್ತದೆ. ಅದನ್ನು ಹೀರಿಕೊಳ್ಳುತ್ತದೆ. ಅದೇ ರೀತಿ, ಕೃಪಾ ಸಿಂಧುವಾದ ಯೋಗಿಯನ್ನು ಅರಸುತ್ತ ಕೃಪೆಗೆ ಅಧಿಕಾರಿಯಾದ ಭಕ್ತನು ತಾನೇ ಬಂದು ಯೋಗಿಯ ಮಹಿಮೆಯನ್ನು ಅರಿಯುತ್ತಾನೆ.

ಅವ್ಯಕ್ತೋಪಾಸನೆ :

ಉಪಾಸನೆಯಲ್ಲಿ ಎರಡು ವಿಧ. ಕೆಲವರು ಸಾಕಾರ ಗುಣನಿಧಿಯನ್ನು ಶ್ರದ್ಧೆಯಿಂದ ಉಪಾಸಿಸುತ್ತಾರೆ. ಬೇರೆ ಕೆಲವರು ಅವ್ಯಕ್ತವಾದ ಅಕ್ಷರವನ್ನು ಉಪಾಸಿಸುತ್ತಾರೆ. ಇವರಲ್ಲಿ ಭಕ್ತಿಯೋಗವನ್ನು ಅತಿಶಯವಾಗಿ ತಿಳಿದವರು ಯಾರು ? ಎಂದು ಗೀತೆಯಲ್ಲಿ ಅರ್ಜುನನು ಶ್ರೀ ಕೃಷ್ಣನನ್ನು ಕೇಳುತ್ತಾನೆ.

ಈ ಪ್ರಶ್ನೆಗೆ ಶ್ರೀ ಕೃಷ್ಣನು ನೀಡುವ ಉತ್ತರವು ಮಾರ್ಮಿಕವಾಗಿದೆ. ಅವನು ಹೀಗೆ ಹೇಳುತ್ತಾನೆ. "ಯಾರು ನನ್ನಲ್ಲಿ ಮನಸ್ಸನ್ನು ನಿಲ್ಲಿಸಿ, ನಿತ್ಯಯುಕ್ತವಾಗಿ, ಪರಮಶ್ರದ್ಧೆಯಿಂದ ಕೂಡಿದವರಾಗಿ, ನನ್ನನ್ನು ಉಪಾಸನೆ ಮಾಡುತ್ತಾರೆಯೋ, ಅವರು ಯುಕ್ತತಮರೆಂದು ನನ್ನ ಮತ".
(ಭಗ. 12-2)

ಶಿವ ತತ್ತ್ವದಲ್ಲಿ ಮಹಿಮೆಯನ್ನು ಕಾಣುವ ವೇಮನರು ಶಿವನಲ್ಲಿ ಪರಮ ಶ್ರದ್ಧೆ ತಾಳಿ ಉಪಾಸಿಸಲು ಬೋಧಿಸುತ್ತಾರೆ. ಶಿವ ಇಲ್ಲವೆ ಕೃಷ್ಣ, ಎರಡೂ ತಾರಕ ಬ್ರಹ್ಮ ತತ್ತ್ವಗಳೇ. ಈ ಸಗುಣೋಪಾಸನೆಯಿಂದ ನಿರ್ಗುಣಕ್ಕೆ ದಾರಿ ಹಿಡಿಯಬೇಕೆಂದು ಅವರ ದಿವ್ಯ ಬೋಧೆ.

"ಇಂದ್ರಿಯ ಸಮುದಾಯವನ್ನು ನಿಗ್ರಹಿಸಿಕೊಂಡು, ಎಲ್ಲ ಕಾಲದಲ್ಲಿಯೂ ಸಮಬುದ್ಧಿಯುಳ್ಳವರೂ, ಸರ್ವ ಪ್ರಾಣಿಗಳ ಹಿತದಲ್ಲಿ ನಿರತರೂ ಆದ ಯಾರು ನಿರ್ದೇಶಿಸಲು ಅಶಕ್ಯವೂ, ಅವ್ಯಕ್ತವೂ, ಸರ್ವವ್ಯಾಪಿಯೂ, ಚಿಂತಿಸಲು ಅಶಕ್ಯವೂ, ಕೂಟಸ್ಥವೂ ಅಚಲವೂ ಶಾಶ್ವತವೂ ಆದ ಅಕ್ಷರವನ್ನು ಉಪಾಸನೆ ಮಾಡುವರೋ, ಅವರು ನನ್ನನ್ನೇ ಹೊಂದುತ್ತಾರೆ".
(ಭಗ. 12-3 ಮತ್ತು 4)

ಬ್ರಹ್ಮನ ಸಗುಣ ರೂಪವಾವುದು ? ಅದು ಇಂದ್ರಿಯ ಗೋಚರವಾಗಬಹುದು. ಇಲ್ಲವೆ ಮನಸ್ಸಿನ ಕಲ್ಪನೆಗೆ ಒಳಗಾಗಬಹುದು. ಗುಣಮಹಿಮೆಯಿಂದ ವ್ಯಕ್ತವಾಗಬಹುದು.

ಆ. ಬ್ರಹ್ಮ ಘಟವು ದೇಹ, ಪ್ರಾಣವೆನಲು ಗಾಳಿ,
ನೇಸರ ಶಶಿ ವಹ್ನಿ ನೇತ್ರ ತ್ರಯವು
ಮತ್ತೆ ಬ್ರಹ್ಮವೆನಲು ಮಹಿಯ ಮೇಲೆ ಇಹುದೆ ?
ವಿಶ್ವದಾಭಿರಾಮ ಕೇಳು ವೇಮ.

ಈಗ ಪ್ರತಿಮೆ ಇಂದ್ರಿಯ ಗೋಚರವಾಗುವ ರೂಪವೇ ಸರಿ.

ಕಂ. ಭಗವಂತನಾದ ದೇವನು,
ಜಗಗಳ ತನ್ನೊಳಗೆ ಬೆಳೆಸಿ ಜಾಲವ ತೋರ್ಪಂ.
ಮಿಗೆ ಪರಿಯಲಿ ತಾನೆಲ್ಲೆಡೆ,
ಅಗಣಿತನಾಗಿ ಬೆಳಗುತಿಹನನುವಿನಲಿ, ವೇಮಾ.

ಇಲ್ಲಿ ದೇವರನ್ನು ಭಗವಂತನೆಂದು ಬಣ್ಣಿಸಲಾಗಿದೆ. ಯಾರು ಜ್ಞಾನ, ಐಶ್ವರ್ಯ, ಶಕ್ತಿ, ಬಲ, ವೀರ್ಯ, ತೇಜಸ್ಸುಗಳಿಂದ ಯಾವಾಗಲೂ ಸನ್ನಿಹಿತ ಆಗಿರುವವನೋ ಅವನೇ ಭಗವಂತನು. ಅವನು ತನ್ನೊಳಗೆ ಜಗಗಳನ್ನು ಬೆಳೆಸಿ ಜಾಲವನ್ನು ತೋರುತ್ತಾನೆ. ಮೇಲಾಗಿ ತಾನು ಎಲ್ಲೆಡೆಗೂ ಅಗಣಿತನಾಗಿ ಬೆಳಗುತ್ತಿರುವನು.

ಕಂ. ವಿಶ್ವದ ಒಳಹೊರ ತಾನೇ.
ವಿಶ್ವಾತೀತನು ; ಮೇಣಾ ವಿಶ್ವಂಭರನ್ಯೆ.
ವಿಶ್ವಗಳಿಗೆ ಬೇರಾಗುತ,
ವಿಶ್ವದೊಳಗೆ ಬೆಳಗುತಿರುವ ಶಾಶ್ವತ ವೇಮಾ.

ತಾನೇ ಚೈತನ್ಯ ಸ್ವರೂಪದಿಂದ ವಿಶ್ವದ ಒಳಗೂ ಹೊರಗೂ ಇದ್ದಾನೆ. ವಿಶ್ವಾತೀತನೂ ಆಗಿದ್ದಾನೆ. ಸಾಲದೆ ವಿಶ್ವವನ್ನು ತುಂಬಿಕೊಂಡಿದ್ದಾನೆ ; ಮತ್ತು ಅದನ್ನು ಪೋಷಿಸುತ್ತಾನೆ. ವಿಶ್ವವು ವ್ಯಕ್ತ ಪ್ರಕಟಣೆ. ಆದರೆ ದೇವನು ವಿಶ್ವದಿಂದ ಬೇರಾಗಿಯೂ ಶುದ್ಧ ಚೈತನ್ಯನಾಗಿಯೂ ಇದ್ದಾನೆ. ಹೀಗೆ ಶಾಶ್ವತನಾಗಿ ವಿಶ್ವದೊಳಗೆ ಬೆಳಗುವುದರಿಂದ ದೇವ ಎನಿಸಿದ್ದಾನೆ.

ಕಂ. ವಿಶ್ವೋತ್ಪತ್ತಿಗೆ ಅಜನೆನೆ,
ವಿಶ್ವವ ರಕ್ಷಿಪನು ಚೊಕ್ಕ ವಿಷ್ಣುವಿರೆ ಮತ್ತಾ
ವಿಶ್ವವ ಅಳಿಸುವ ಹರನೆನೆ,
ವಿಶ್ವೇಶನಿಗಿಷ್ಟು ಹೆಸರು ವಿನುತವು , ವೇಮಾ.

ಸ್ವಸ್ವರೂಪದಲ್ಲಿ ನಿರ್ಗುಣನಾಗಿ, ಆ ಕಾರಣ ಅಕರ್ತಾ ಆಗಿರುವ ಪರಮಾತ್ಮನು ತ್ರಿಗುಣ ಸ್ವರೂಪವಾದ ತನ್ನ ಮೂಲ ಪ್ರಕೃತಿಯನ್ನು ವಶಪಡಿಸಿಕೊಂಡು, ತನ್ನ ತಮೋಗುಣದಿಂದ ಸೃಷ್ಟಿ ಕರ್ತನಾಗಿ ವಿಶ್ವವನ್ನು ಉತ್ಪತ್ತಿ ಮಾಡುತ್ತಾನೆ. ಅಜನೆನಿಸುತ್ತಾನೆ. ರಜೋಗುಣದಿಂದ ವಿಷ್ಣುವೆನಿಸಿ, ವಿಶ್ವವನ್ನು ರಕ್ಷಿಸುತ್ತಾನೆ. ಸತ್ವ ಗುಣದಿಂದ, ಸ್ಥೂಲವನ್ನು ಸೂಕ್ಷ್ಮದಲ್ಲಿ ಲಯಗೊಳಿಸುವ ಹರನೆನಿಸಿ, ವಿಶ್ವವನ್ನು ಅಳಿಸುತ್ತಾನೆ. ತನ್ನ ಪ್ರಕೃತಿಯ ನಿಮಿತ್ತ ವಿಶ್ವೇಶನಿಗೆ ಮೂರು ಹೆಸರಾಗಿವೆ.

ಮೇಲಿನ ಪದ್ಯಗಳಲ್ಲಿ ಪರಮಾತ್ಮನ ಸಗುಣ ರೂಪವನ್ನು ತಿಳಿಸಲಾಗಿದೆ. ಇದು ಅವನ ವಿಶ್ವರೂಪ. ಇದನ್ನು ಪರಮ ಭಕ್ತಿಯಿಂದ ಉಪಾಸಿಸುವವರು ಯುಕ್ತತಮರೇ ಸರಿ.

ಪರಮಾತ್ಮನ ಅವ್ಯಕ್ತ ಅಕ್ಷರ ಉಪಾಸನೆಯನ್ನು ಕುರಿತು ವೇಮನರು ಹೀಗೆ ಹೇಳಿದ್ದಾರೆ.

ಕಂ. ನಿಖಿಲಾಕಾರನು ಆತನು,
ನಿಖಿಲಾತ್ಮನು ಸರ್ವಸಾಕ್ಷಿ, ನಿಜದಲಿ ತಾನೇ.
ನಿಖಿಲದ ಒಳಗೇ ನೋಡಲು,
ನಿಖಿಲಾಗಿ ಉಂಟು ತಾನೇ, ನಿಜವಿದು, ವೇಮಾ.

ಯಾವುದಕ್ಕೆ ಬಂಧನಗಳಿಲ್ಲವೋ, ಯಾವುದು ಬಾಧಾ ರಹಿತವಾಗಿದೆಯೋ, ಅದಕ್ಕೆ ನಿಖಿಲ ಇಲ್ಲವೆ ಅಖಿಲ ಎಂದು ಕರೆಯುತ್ತಾರೆ. ನಿಖಿಲ ಎಂದರೆ ವ್ಯರ್ಥವಲ್ಲದ, ಬರಡಾದುದಲ್ಲದ, ಎಂದರ್ಥ. ಆ ದೇವನು ನಿಖಿಲಾಕಾರನು; ನಿಖಿಲಾತ್ಮನು. ಸರ್ವಸಾಕ್ಷಿಯು. ನಿಜದಲ್ಲಿ ತಾನೇ ತಾನಾಗಿದ್ದಾನೆ. ನಿಖಿಲದ ಒಳಗೆ ನೋಡಲು, ತಾನೇ ನಿಖಿಲಾಗಿ ಉಂಟು. ಇದು ನಿಜವಾಗಿದೆ.

ಕಂ. ಅಖಿಲಾಕಾರನನಂತನು,
ಸಕಲಾತ್ಮಕತೆಯಲ್ಲಿ ಸರ್ವ ಸಾಕ್ಷಿಯು ತಾನೇ.
ನಿಖಿಲವದು ನಿರ್ವಿಕಾರವು,
ನಿಕರವೆ ಬ್ರಹ್ಮವು ಎನುವುದು, ನಿಜವೈ, ವೇಮಾ.

ಅಹುದು ಅವನು ಅಖಿಲ ಆಕಾರನು. ಅವನ ಆಕಾರಕ್ಕೆ ಯಾವುದೇ ಬಂಧನವಿಲ್ಲ ; ಯಾವುದೇ ಬಾಧೆಯಿಲ್ಲ. ಅವನು ಸಕಲದ ಆತ್ಮನಾಗಿದ್ದಾನೆ. ಅದರಿಂದಾಗಿ ಸರ್ವ ಸಾಕ್ಷಿಯಾಗಿ ತಾನೇ ಇದ್ದಾನೆ. ನಿಖಿಲವಾದ ಅವನಲ್ಲಿ ಯಾವ ವಿಕಾರಗಳೂ ಇರವು. ನಿಜವಾಗಿ ಬ್ರಹ್ಮವೆನ್ನುವುದು ಸಕಲದ ಸಾರವಾಗಿದೆ.

ಕಂ. ಯಾರಿಗು ದಕ್ಕದ ಚಿನ್ಮಯ
ದಾರಿಗೆ ಹೊಂದುತಿಹ ಅರಿವು, ತನ್ನೊಳು ತಾನೈ.
ಹೋರುತ ಮೇಲೆ ಬರುತಿಹನು,
ಬಾರಿ ಬಾರಿಗೆ ಸಮನಿಸಿ ನೋಡೆಲೊ ವೇಮಾ.

ಚಿನ್ಮಯ ದಾರಿಯು ಅಂದರೆ ಅರಿವಿನ ದಾರಿಯು ಯಾರಿಗೂ ಸಹಜವಾಗಿ ದಕ್ಕದು. ನಿಜದ ಅರಿವು ತನ್ನೊಳಗೆ ತಾನೇ ಚಿನ್ಮಯ ದಾರಿಗೆ ಹೊಂದಿಕೊಳ್ಳುತ್ತದೆ. ಆ ಬಗೆಯ ಅರಿವು ಹೊಂದಿದ ಸಾಧಕನು, ಶತ್ರು ವರ್ಗದೊಂದಿಗೆ ಹೋರುತ್ತ ಮೇಲು ಮೇಲಕ್ಕೆ ಬರುತ್ತಿರುತ್ತಾನೆ. ಈ ಸ್ತರದಲ್ಲಿ ಬಾರಿ ಬಾರಿಗೆ ಸಮತ್ವ ಹೊಂದಿ ಲಕ್ಷ್ಯ ವಸ್ತುವನ್ನು ನೋಡಬೇಕು.

ಕಂ. ಅತಿ ಸೂಕ್ಷ್ಮ ದೃಷ್ಟಿಯ ಒಳಗೆ,
ಮತಿಗಿಂಪಾಗಿ ಶಿವನ ಕುರಿತು ತಾನಿರಲೋರ್ವಂ
ವ್ರತಿಯಿರದೆ ಮೋಕ್ಷವದಾಯ್ತು,
ಸತತವು ನಿರ್ವಾಣ ಪದವಿ, ಸಾಕ್ಷ್ಯವು, ವೇಮಾ.

ತನ್ನ ಅಂತರ್ದೃಷ್ಟಿಯು ಅತಿ ಸೂಕ್ಷ್ಮವಾಗಿರಬೇಕು. ತನ್ನ ಮತಿಗೆ ಇಂಪಾಗಿ, ಶಿವನನ್ನು ಲಕ್ಷ್ಯವಾಗಿರಿಸಿಕೊಂಡು, ತಾನು ಏಕಾಂತದಲ್ಲಿ ಓರ್ವನೇ ಇರಲು, ಅವನಾವ ವ್ರತಾದಿಗಳನ್ನು ಕೈಕೊಂಡಿರದಿದ್ದರೂ ಮೋಕ್ಷವಾಗುತ್ತದೆ. ಅವನಿಗೆ ಚಿತ್ತವು ಚೆನ್ನಾಗಿ ಸಮಾಧಾನ ಹೊಂದಿ ಜ್ಞಾನ ಲಾಭವಾಗುವ ನಿರ್ವಾಣ ಪದವಿ. ಅಂದರೆ ಕೋರಿಕೆಗಳಿಲ್ಲದ ಪದವಿ ಪ್ರಾಪ್ತವಾಗುತ್ತದೆ.

ಇದೇ ಅವನು ತಲುಪಿದ ಪದವಿಗೆ ಸಾಕ್ಷ್ಯವಾಗುತ್ತದೆ.

ಆ. ಆತ್ಮ ತೇಜ ಹೊಂದಿ ಅನುಭವಿಪುದೆ ಮುಕ್ತಿ.
ಆತ್ಮ ತತ್ತ್ವವರಿತ ಅವನೆ ಯೋಗಿ.
ಅರಿತು ಮರೆತೊಡಾಗ, ಏಕವಾಗಿ ತೋರ್ಕು.
ವಿಶ್ವದಾಭಿರಾಮ ಕೇಳು ವೇಮ.

ಸಾಧಕನು ಅನಾತ್ಮ ತತ್ತ್ವಗಳನ್ನು ಅಂದರೆ ದೇಹೇಂದ್ರಿಯ ಮನಸ್ಸುಗಳನ್ನು ದಾಟಿ, ಆತ್ಮ ತತ್ತ್ವವನ್ನು ತಲುಪಿ, ಅಲ್ಲಿಯ ತೇಜ ಹೊಂದಿ ಅನುಭವಿಸುತ್ತಿದ್ದರೆ, ಅದೇ ಮುಕ್ತಿ. ಆತ್ಮವೇ ಪರಮಾತ್ಮದ ಅಂಶ ತಾನೇ ? 'ಜೀವಾತ್ಮ ಪರಮಾತ್ಮ ಸಂಯೋಗೋ, ಯೋಗ ಇತ್ಯುಚ್ಯತೇ'. ಆದ್ದರಿಂದ ಆತ್ಮ ತತ್ತ್ವವನ್ನು ತಿಳಿದವನೇ ಯೋಗಿ ಎನಿಸುತ್ತಾನೆ. ಆತ್ಮವಿದನಾಗಿ ಆತ್ಮದಲ್ಲಿ ರಮಿಸುತ್ತ, ಅನಾತ್ಮವನ್ನು ಮರೆತಾಗ ಎಲ್ಲವೂ ಏಕವಾಗಿ ತೋರುತ್ತದೆ. ಅದ್ವೈತವೆನಿಸುತ್ತದೆ.

ಅರಿತು ಮರೆಯಬೇಕು. ಇದೊಂದು ಅತಿ ಸೂಕ್ಷ್ಮ ಪ್ರಕ್ರಿಯೆ. ಏನನ್ನು ಅರಿಯಬೇಕು? ಮತ್ತೇನನ್ನು ಮರೆಯಬೇಕು ? ಎಂದು ವಿಶ್ಲೇಷಿಸಿದರೆ, ಆತ್ಮವನ್ನು ಅರಿಯಬೇಕು ; ಅನಾತ್ಮವನ್ನು ಮರೆಯಬೇಕು, ಎಂದು ಹೊಳೆಯುತ್ತದೆ.

ಆ. ಉತ್ತಮ ಶಿವಯೋಗಿ ಊಹಿಸಿ ಮನದಾಟ,
ಸತ್ತ್ವದಲ್ಲಿ ಹೋರಿ ಸರಿದು ಕೊಳದೆ,
ಹೊಂದಿ ಮರೆತು ಇಹನು ಪೂರ್ಣ ಭಾವದಲ್ಲಿ.
ವಿಶ್ವದಾಭಿರಾಮ ಕೇಳು ವೇಮ.

ಉತ್ತಮ ಶಿವಯೋಗ ಸಾಧಕನು, ತನ್ನ ಮನದಲ್ಲಿ ಶಿವಧಾಮವಾದ ಆತ್ಮ ತತ್ತ್ವವನ್ನು ಕುರಿತು ಊಹಿಸುತ್ತಾನೆ. ಅಲ್ಲಿ ಪೂರ್ಣ ನಿರ್ಮಲತೆ ಇದೆ, ಎಂದೂ ಊಹಿಸುತ್ತಾನೆ. ಹಾಗಾಗಿ ಅವನು ಸಂಕಲ್ಪ ವಿಕಲ್ಪಾದಿಗಳ ತರಂಗಗಳಿರುವ ಮನವನ್ನು ದಾಟಿ, ಅರಿವಿನ ಸೀಮೆಯನ್ನು ವಿಸ್ತರಿಸುತ್ತ, ಅದನ್ನು ವಿರೋಧಿಸುವ ಶತ್ರು ಗುಣಗಳೊಡನೆ ಹೋರಾಡುತ್ತ, ಆ ಹೋರಾಟದಿಂದ ಅತ್ತ ಇತ್ತ ಸರಿಯದೆ, ಆತ್ಮವನ್ನು ಕೊನೆಗೆ ಹೊಂದುತ್ತಾನೆ. ಮುಂದೆ ಮೊದಲಿನ ದೇಹಾತ್ಮಭಾವವನ್ನು ಮರೆಯುತ್ತಾನೆ. ಮತ್ತು ಯಾವುದೇ ಸ್ತರದಲ್ಲಿರಲಿ ಪೂರ್ಣ ಭಾವದಿಂದ, ಅಖಂಡ ಭಾವದಿಂದ, ಇರುತ್ತಾನೆ.

ಆ. ದಟ್ಟ ಇರುಳು ಬಿಟ್ಟು, ತನು ಮರೆತು ಅನುವಿಲಿ,
ಪರಮನಲ್ಲಿ ಮನಸು ಭದ್ರ ಪಡಿಸಿ,
ಗರಿಮೆ ಹೊಂದಿದಂಥ ಘನನು ಎಲ್ಲು ಇಲ್ಲ.
ವಿಶ್ವದಾಭಿರಾಮ ಕೇಳು ವೇಮ.

ದೇಹಾತ್ಮ ಬುದ್ಧಿ ಇರುವಾಗ ಆತ್ಮ ಕುರಿತು ಯಾವ ಅರಿವೂ ಮಿಂಚುವುದಿಲ್ಲ. ಆಗ ಸಾಧಕನು ತನ್ನ ಸಾಧನೆಯ ಬಲದಿಂದ, ಅನುಕೂಲಿಸಿ ತನುವನ್ನು ಮರೆಯಬೇಕು. ಈ ರೀತಿ, ದಟ್ಟ ಇರುಳನ್ನು ಬಿಡಬಲ್ಲನು. ಅವನ ಮುಂದಿನ ಹೆಚ್ಚೆಯೇ ಮನಸ್ಸನ್ನು, ಅತ್ತ ಇತ್ತ ಹರಿಯದಂತೆ

ನಿಲ್ಲಿಸಿ, ಪರಮನಲ್ಲಿ ಭದ್ರ ಪಡಿಸುವುದಾಗದೆ. ಇದೊಂದು ಗರಿಮೆ. ಮಹಾನ್ನತೆ. ಇಂಥ ಗರಿಮೆ ಹೊಂದಿದಂಥ ಘನನು ಎಲ್ಲೂ ಇಲ್ಲ. ಅಂದರೆ ಇಂಥವರು ಅತಿ ವಿರಳ.

ಆ. ಗಾಳಿಯಿರದ ದೀಪ ಕಳೆ ಸ್ಥಿರತೆಯಂತೆ,
ಅಲೆ, ತಿರುಗಣಿಯಿರದ ಜಲಧಿಯಂತೆ,
ನಿಶ್ಚರಾತ್ಮನಾಗು ನಿರ್ವಿಕಾರದಿಂದ.
ವಿಶ್ವದಾಭಿರಾಮ ಕೇಳು ವೇಮ.

ಗಾಳಿಯಿರುವಾಗ ದೀಪದ ಕಳೆಯು ಅಲುಗಾಡುತ್ತದೆ. ಗಾಳಿ ಇಲ್ಲದಾಗ ಸ್ಥಿರವಾಗಿ ಇರುತ್ತದೆ. ಹರಿಯುವ ಹೊಳೆಯ ಮಡುವಿನಲ್ಲಿ ರಭಸದಿಂದ ಹರಿಯಬೇಕಾದ ನೀರು ದಿಕ್ಕು ಬದಲಿಸುತ್ತ ಒಂದೇ ತಾಣದಲ್ಲಿ ತಿರುಗುತ್ತ ತಿರುಗಣಿ ಮಡುವಾಗುತ್ತದೆ. ಇಂಥ ತಿರುಗಣಿ ಮಡುವಿರದ ಜಲಧಿಯು ಪ್ರಶಾಂತವಿರುತ್ತದೆ. ಅದೇ ರೀತಿ, ಸಂಕಲ್ಪ ವಿಕಲ್ಪಗಳಿಂದ ಮನವು ವಿಕಾರವಾಗುತ್ತದೆ. ಸಂಕಲ್ಪ ವಿಕಲ್ಪಗಳಿಲ್ಲದ ಮನವು ನಿರ್ವಿಕಾರವಾಗುತ್ತದೆ. ಆದ್ದರಿಂದ ಸಾಧಕನು, ತನ್ನ ಮನವನ್ನು ಗಾಳಿಯಿಲ್ಲದಾಗಿನ ದೀಪದ ಕಳೆಯಂತೆ, ಮತ್ತು ತಿರುಗಣಿ ಇಲ್ಲದ ಜಲಧಿಯಂತೆ ಅಲುಗಾಡದೆ, ತಿರುಗದೆ, ನಿರ್ವಿಕಾರದಿಂದಿರುವಂತೆ ನೋಡಿಕೊಳ್ಳಬೇಕು.

ಗೀತ. ಇರವ ಕಂಡುಕೊಂಡು, ಪರಮ ಅರ್ಥ ಕೋರಿ,
ಪರಮ ನಿರ್ಗುಣ ಬಯಲಿಗೆ ಹರಿದು, ನಿಂತು.
ತನ್ಮಯವನು ಮನದಿ ನಿಲಿಪ ತಕ್ಕ ಯೋಗಿ,
ಶಾಶ್ವತ ಸುಖವನು ಹೊಂದುವ ನಿತ್ಯ ವೇಮ.

ತನ್ನ ಮನಸ್ಸಿನ ಇರವನ್ನು, ಅಂದರೆ ಇರುವ ಸ್ಥಿತಿಯನ್ನು ತಿಳಿದುಕೊಂಡು ಇನ್ನೂ ಊರ್ಧ್ವಕ್ಕೆ ಹೋಗುವ ಪರಮಾರ್ಥವನ್ನು ಕೋರಬೇಕು. ಆಗ ಮನಸ್ಸು ನಿಶ್ಶೂನ್ಯವಾಗುತ್ತದೆ. ಅಲ್ಲಿ ತನ್ಮಯನಾಗಿ, ತಕ್ಕ ಯೋಗಿಯು ಮನದಲ್ಲಿ ತನ್ಮಯತೆಯನ್ನು ನಿಲ್ಲಿಸುವನು. ಏಕೆಂದರೆ ಮನವು ಅಳಿದು ಪರಮ ನಿರ್ಗುಣ ಬಯಲು ಸೇರಿ ನಿಂತಿರುತ್ತದೆ. ಅಲ್ಲಿ ತಾವೆಂದೂ ಪಡೆಯದ ಶಾಶ್ವತ, ನಿತ್ಯ ಸುಖವನ್ನು ಹೊಂದುತ್ತಾನೆ.

ಈಗ ಅವನಿಗೆ ಆತ್ಮವೆಂದರೇನು ? ಆತ್ಮರತಿ ಎಂದರೇನು ? ಸ್ವಾನುಭವವೆಂದರೇನು? ಎಂಬುದೆಲ್ಲ ಚೆನ್ನಾಗಿ ತಿಳಿಯುತ್ತದೆ.

ಬ್ರಹ್ಮ ಜ್ಞಾನವನ್ನು ಭಕ್ತಿಯೋಗಿ ಸಾಕ್ಷಾತ್ಕರಿಸುವುದು ತುಂಬಾ ಸಂತಸಕರ.

ಆ. ತಿಳಿವು ನಿಲಿಸಿ ನೋಡು ; ದೀಪ್ತಿಪುದಾ ಕಳೆಯು.
ಕಳೆಯುಡುಗಲು ನೋಡಿ, ಕಾಣು ಬಯಲು.
ಬಯಲಿಗಂಟಿ ನೋಡು, ಬ್ರಹ್ಮ ಕಾಣುತಿಹುದು.
ವಿಶ್ವದಾಭಿರಾಮ ಕೇಳು ವೇಮ.

ಬ್ರಹ್ಮ ಸಾಕ್ಷಾತ್ಕಾರದ ಉಚಿತ ಕ್ರಮವನ್ನು ಈ ಪದ್ಯದಲ್ಲಿ ವಿವರಿಸಿದ್ದಾರೆ. ಸಾಧಕನು, ಸಂಕಲ್ಪ, ವಿಕಲ್ಪಗಳನ್ನು ಅಡಗಿಸುತ್ತ, ವಿಚಾರ ತರಂಗಗಳನ್ನು ನಿಲ್ಲಿಸುತ್ತ, ತಿಳಿವನ್ನೇ ನಿಲ್ಲಿಸಿ,

ಮನದ ಆದಿಯನ್ನು ನೋಡುತ್ತಾನೆ. ಆಗ ಕಳೆಯೊಂದು ದೀಪ್ತಿಸುತ್ತದೆ. ಕಳೆ ಉಡುಗುವ ಮುನ್ನ ನಿಶ್ಯೂನ್ಯದಲ್ಲಿ ಬಯಲು ಕಾಣುತ್ತದೆ. ಆ ಬಯಲಿಗಂಟಿ ಇನ್ನೂ ಮುಂದೆ ವೀಕ್ಷಿಸಿದರೆ ವೇದ್ಯವಾಗುವುದೇ ಬ್ರಹ್ಮ.

ಆ. ಊರ್ಧ್ವ ಲೋಕದಲ್ಲಿ ಉಚಿತ ಕ್ರಮದಿಂದ
ರೂಪವೇನು ಇರದ ರೀತಿಯಲ್ಲಿ,
ಪರಮ ಯೋಗಿ ನೋಳ್ಪ ಪರಮಾತ್ಮನಿರವನು.
ವಿಶ್ವದಾಭಿರಾಮ ಕೇಳು ವೇಮ.

ಮೇಲಿನ ಪದ್ಯದಲ್ಲಿ ಉಚಿತ ಕ್ರಮವನ್ನು ವಿವರಿಸಲಾಗಿದೆ. ಊರ್ಧ್ವ ಲೋಕದಲ್ಲಿ ಅಂದರೆ ಚಿತ್ತ ಅಹಮುಗಳನ್ನು ದಾಟಿದ, ಅಗ್ಯ ಬುದ್ಧಿಯಿಂದ, ಮೇಲಿನ ಉಚಿತ ಕ್ರಮದಿಂದ, ವೀಕ್ಷಿಸಬೇಕು. ಆಗ ಪರಮ ಯೋಗಿಗೆ ಪರಮಾತ್ಮನ ಇರವು, ರೂಪವಾವುದೂ ಇಲ್ಲದ ರೀತಿಯಲ್ಲಿ, ಕಾಣುತ್ತದೆ.

ಆ. ನಿದ್ರೆಯೊಳಗೆ ನಿದ್ರೆ ನಿಜವಾಗಿ ತಿಳಿದೊಡೆ,
ಭದ್ರವಾದ ಮಿಗಿಲು ಬ್ರಹ್ಮ ವಿದ್ಯೆ.
ನಿದ್ರೆ ತಿಳಿಯುವವನು ನಿರ್ಮಲ ಯೋಗಿಯೈ.
ವಿಶ್ವದಾಭಿರಾಮ ಕೇಳು ವೇಮ.

ಸಾಮಾನ್ಯ ಮಾನವನಿಗೆ ಮನಸ್ಸಿನ ಮೂರು ಅವಸ್ಥೆಗಳು ತಿಳಿದಿರುತ್ತವೆ. ಅವುಗಳೆಂದರೆ ಜಾಗ್ರತ, ಸ್ವಪ್ನ, ಸುಷುಪ್ತಿ ಇಲ್ಲವೆ ನಿದ್ರೆ. ಒಂದು ಅವಸ್ಥೆ ಇರುವಾಗ ಇನ್ನೊಂದು ಅವಸ್ಥೆ ಇರದು. ಜಾಗ್ರತ ಇಲ್ಲವೆ ಚೇತನ ಮನವು ನಿಷ್ಕ್ರಿಯವಾದಾಗ, ಸ್ವಪ್ನ ಇಲ್ಲವೆ ಅವಚೇತನ ಮನವಿರಬಹುದು. ಜಾಗ್ರತ ಮತ್ತು ಸ್ವಪ್ನಗಳಿರಡೂ ಇಲ್ಲದಾಗ, ನಿದ್ರೆ ಇಲ್ಲವೆ ಅಚೇತನ ಅವಸ್ಥೆ ಇರಬಹುದು. ನಿದ್ರಾವಸ್ಥೆಯಲ್ಲಿ ಜಾಗ್ರತವು ಅವೇದ್ಯವಾದರೂ ಸಹ ತನ್ನ ಅಸ್ತಿತ್ವದ ಅರಿವು ಇರುತ್ತದೆ. ಆದರೆ ಆಗ ಇಂದ್ರಿಯಾದಿ ವ್ಯಾಪಾರವು ನಿಂತಿರುತ್ತದೆ. ಹೀಗಾಗಿ ಬಾಹ್ಯ ಸಂಪರ್ಕವಿರುವುದಿಲ್ಲ. ಮನಸ್ಸು ಸುಪ್ತವಿರುತ್ತದೆ. ಇಂಥ ನಿದ್ರೆಯಲ್ಲಿ ಜ್ಞಪ್ತಿಯನ್ನೂ ಮೀರಿ, ಹೋದರೆ, ಆ ಸ್ಥಿಯನ್ನು ನಿದ್ರೆಯಲ್ಲಿಯ ನಿದ್ರೆ ಎನ್ನಬಹುದು. ಅಂತೂ ನಿದ್ರೆಯ ಅವಸ್ಥೆಯನ್ನು ಅರಿಯಬಲ್ಲವನೇ ನಿರ್ಮಲ ಯೋಗಿ ಎನಿಸುತ್ತಾನೆ.

ಆ. ಸ್ವಾನುಭೂತಿಯಲ್ಲಿ ಶಾಸ್ತ್ರ ವಾಸನೆಯಲಿ,
ಸಂಶಯಗಳು ಇರವು ಸಾಧಕನಲಿ.
ಬೆಳಗು ದೀಪದಂತೆ ಹೊಳೆವುದು ಚಿತ್ಸ್ವರೂಪ.
ವಿಶ್ವದಾಭಿರಾಮ ಕೇಳು ವೇಮ.

ಸ್ವಾನುಭೂತಿಯಲ್ಲಿ ಪ್ರತ್ಯಕ್ಷ ಅನುಭವವಾಗುತ್ತದೆ. ಇನ್ನು ಶಾಸ್ತ್ರ ವಾಸನೆಯಿಂದ ಪರೋಕ್ಷ ಅನುಭವವಾಗುತ್ತದೆ. ಉಭಯ ಮೂಲಗಳಿಂದ ಅರಿತುಕೊಳ್ಳುವ ಸಾಧಕನಿಗೆ ಅನುಭವ ಪ್ರಮಾಣ ಮತ್ತು ಶ್ರುತಿ ಪ್ರಮಾಣಗಳಿರಡೂ ಲಭ್ಯವಾಗಿ ಪ್ರಮೇಯ ಕುರಿತು ಸಂಶಯಗಳು ಇರಲಾರವು. ದೀಪವು ಬೆಳಗಿದರೆ ಅದರ ಸುತ್ತುಮುತ್ತು ಕತ್ತಲೆಯು ಹೇಗೆ ಇರಲಾರದೋ,

ಹಾಗೆ ಚಿತ್ ಅಂದರೆ ಅರಿವಿನ ಸ್ವರೂಪವು ಬೆಳಗಿದರೆ ಅಜ್ಞಾನಾಂಧಕಾರವು ಉಳಿಯದು.

ಸ್ವಾನುಭವವನ್ನು ಸಾಧಕನು ಇತರರೊಂದಿಗೆ ಹಂಚಿಕೊಳ್ಳಬೇಕೋ ? ಬೇಡವೋ ? ಎಂಬ ಪ್ರಶ್ನೆ ಯೋಗಿಗಳಲ್ಲಿ ಚರ್ವಿತ ಚರ್ವಣವಾಗುತ್ತಿರುವ ವಿಷಯ ಕೆಲವರು ಹೇಳದೆ ಮೌನವಾಗಿರುತ್ತಾರೆ. ಬೇರೆ ಕೆಲವರು ಸಿದ್ಧ ಪುರುಷರು ಹೇಳಬೇಕು, ಎನ್ನುತ್ತಾರೆ.

ಆ. ಮಾತನಾಡಬುಹುದು ಮರ್ಮ ತಿಳಿದ ಬಳಿಕ ;
ಗರಿಮೆ ಅಲ್ಪತನದ ಗಣನೆಯೇಕೆ ?
ಬಾಲನ ಕೈದೀಪ ಬೆಳಗದೆ ಬೃಹದಾಗಿ ?
ವಿಶ್ವದಾಭಿರಾಮ ಕೇಳು ವೇಮ.

ಪರಮಾತ್ಮನು ರಹಸ್ಯ ಗರ್ಭದಲ್ಲಿದ್ದಾನೆ. ಪರಮಾತ್ಮನು ಪಂಚಕೋಶಗಳಲ್ಲಿ ಅಡಗಿದ್ದಾನೆ. ಅನ್ನಮಯ ಕೋಶವನ್ನು ಪ್ರಾಣಮಯ ಕೋಶವು ಆವರಿಸಿದೆ. ಮನೋಮಯ ಕೋಶವು ಪ್ರಾಣಮಯ ಕೋಶವನ್ನು ಆವರಿಸಿದೆ. ವಿಜ್ಞಾನವಯವು ಪ್ರಾಣಮಯ ಕೋಶವನ್ನು ಆವರಿಸಿದೆ. ಆನಂದಮಯವು ವಿಜ್ಞಾನಮಯ ಕೋಶವನ್ನು ಆವರಿಸಿದೆ. ಕೋಶಾತೀತ ಅವಸ್ಥೆಯಲ್ಲಿ ಪರಮಾತ್ಮನಿದ್ದಾನೆ. ಈ ಕೋಶಗಳನ್ನು ದಾಟುವ ಮರ್ಮವು ತಿಳಿದ ಬಳಿಕ, ಪರಮಾತ್ಮನ ಸಾಕ್ಷಾತ್ಕಾರ ಕುರಿತು ಮಾತನಾಡಬಹುದು. ಸ್ವಾನುಭವವನ್ನು ತಿಳಿಸುವಲ್ಲಿ ಗರಿಮೆಯೇನು ಬಂತು ? ಅಲ್ಪತನವೇನು ಬಂತು ? ಅವುಗಳ ಗಣನೆಯೇಕೆ ? ದೀಪವನ್ನು ಬಾಲಕನು ಹಿಡಿದರೇನು ? ವೃದ್ಧನು ಹಿಡಿದರೇನು ? ಅದು ಬೃಹದಾಗಿ ಬೆಳಗುವುದಲ್ಲವೇ ?

ಆ. ಮನಸು ಗುಪ್ತವಿರಿಸಿ, ಮಾನ್ಯ ವಿಬುಧರುಂಟು.
ತಾವು ನುಡಿಯದಿರಲು ಧರ್ಮವೆಂದ್ರು.
ಬಿಡದೆ ನುಡಿಯುತಿರಲು, ಕೆಡದೆ ? ಇರುವ ತತ್ತ್ವ ?
ವಿಶ್ವದಾಭಿರಾಮ ಕೇಳು ವೇಮ.

ಮಾನ್ಯ ವಿಬುಧರು, ವಿಶೇಷವಾಗಿ ಗುಪ್ತವಾಗಿ ತಿಳಿದುಕೊಂಡಿದ್ದರೂ, ತಮ್ಮ ಜನರಿಗೆ ಅರ್ಥವಾಗುವುದಿಲ್ಲವೆಂದೋ, ಇಲ್ಲವೆ ಅಭೀಪ್ಸೆ ಇಲ್ಲವೆಂದೋ ಗ್ರಹಿಸಿ, ತಾವು ತಮ್ಮ ಮನಸ್ಸಿನ ಅನುಭವಗಳನ್ನು ಗುಪ್ತವಾಗಿ ಇರಿಸುತ್ತಾರೆ. ತಾವು ತಮ್ಮ ಸ್ವಾನುಭವ ಕುರಿತು ವಿವರಿಸಿ ನುಡಿಯುವುದರಿಂದ ಸುತ್ತಲಿನ ತಾಮಸಿಕ ಜನರಿಗೆ ಪ್ರಯೋಜನವಿಲ್ಲ. ಅವರು ಸುಮ್ಮನೇ ಹಾಸ್ಯ ಮಾಡುತ್ತಾರೆ. ಆದ್ದರಿಂದ ಆ ಕುರಿತು ನುಡಿಯದಿರುವುದೇ ತಮ್ಮ ಧರ್ಮವೆನ್ನುತ್ತಾರೆ. ಏಕೆಂದರೆ, ಬಿಟ್ಟೂ ಬಿಡದೆ ತತ್ತ್ವವನ್ನು ಹೇಳುತ್ತ ಹೋದರೆ, ಆ ತತ್ತ್ವವು ಕೆಡದೆ ಇರುವುದೇ ? ಎಂದು ಶ್ರಾವಕರಲ್ಲಿ ಅಧಿಕಾರಿಗಳನ್ನು ಹುಡುಕುತ್ತಾರೆ.

ಆದರೆ ವೇಮನ ಯೋಗಿಗಳ ನಿಲುಮೆ ಸ್ವಲ್ಪು ಭಿನ್ನ

ಆ. ನಿಜವು ತಿಳಿದ ಬಳಿಕ ಸುಜನರಾ ನಿಜವನೆ,
ಪೇಳುತಿರುವಷ್ಟೆ ಪರರಿಗಾಗಿ.
ಬಚ್ಚಿಡುವುದು ಬೇಡ ; ಬೇರೆ ಹೇಳೆ ಹೊಲ್ಲ.
ವಿಶ್ವದಾಭಿರಾಮ ಕೇಳು ವೇಮ.

ಮಹತ್ ಕೃಪೆಯಿಂದ ಇಲ್ಲವೆ ಕೊಂಚವಾದರೂ ಭಗವಂತನ ಕೃಪೆಯಿಂದ ಕೇವಲ ಭಕ್ತಿ ಸಾಧಕನಿಗೆ ನಿಜವು ತಿಳಿದರೆ, ಆ ಬಳಿಕ ಸುಜನರು, ಆ ನಿಜವನ್ನು ಪರರಿಗಾಗಿ ಪೇಳುತ್ತಿರುವರಲ್ಲವೇ ? ಹಾಗೆ ಅನುಭವಕ್ಕೆ ಬಂದ ಸತ್ಯವನ್ನು ಬಚ್ಚಿಡುವುದು ಬೇಡ. ಇಲ್ಲವೆ ತಿಳಿದಿದ್ದನ್ನು ತಿರುಚಿ ಬೇರೆ ಹೇಳುವುದೂ ಹೊಲ್ಲ.

ತಿಳಿದ ಸತ್ಯವನ್ನು ಪರರ ಮಾರ್ಗದರ್ಶನಕ್ಕಾಗಿ ಸುಜನರು ಪೇಳುತ್ತಿರುವರು. ಆದರೆ ಕೆಲವರು ಜಾತಿ, ಕುಲ ಇಲ್ಲವೆ ವರ್ಣದ ಅಭಿಮಾನದಿಂದ ಅಧಿಕಾರಿ ವರ್ಗವನ್ನು ಗ್ರಹಿಸಿ ಇತರರಿಂದ ಆ ಸತ್ಯವನ್ನು ಬಿಚ್ಚಿಡುತ್ತಾರೆ. ದೊಡ್ಡ ಪಂಡಿತರೆಂದೂ, ಆಚಾರ್ಯರೆಂದೂ ನೆಗೆಳ್ತೆವೆತ್ತ ಶಂಕರಾಚಾರ್ಯರು ಜಾತಿ ಭೇದವನ್ನು ಎಷ್ಟೊಂದು ಎತ್ತಿ ಹಿಡಿದಿದ್ದಾರೆಂಬುದನ್ನು ಇಲ್ಲಿ ನೋಡಿರಿ.

" ಈ ಕಾರಣಕ್ಕಾಗಿ ಶೂದ್ರನಿಗೆ ಬ್ರಹ್ಮ ಜ್ಞಾನಕ್ಕೆ ಅಧಿಕಾರವಿಲ್ಲ. ಏಕೆಂದರೆ, ವೇದವನ್ನು ಕೇಳುವುದಕ್ಕೂ, ಅಧ್ಯಯನ ಮಾಡುವುದಕ್ಕೂ, ಸ್ಮೃತಿಯಿಂದ ಅವನಿಗೆ ಪ್ರತಿಷೇಧವಿದೆ. ಸ್ಮೃತಿಯು ವೇದ ಶ್ರವಣವನ್ನೂ ವೇದದ ಅಧ್ಯಯನವನ್ನೂ, ಅದರ ಅರ್ಥಜ್ಞಾನವನ್ನೂ, ಅನುಷ್ಠಾನವನ್ನೂ ಶೂದ್ರನಿಗೆ ಪ್ರತಿಷೇಧಿಸುತ್ತದೆ. ಶ್ರವಣದಿಂದ ಪ್ರತಿ ನಿಷೇಧವು ಹೀಗಿದೆ. 'ಅವನು ವೇದವಾಕ್ಯವನ್ನು ಕೇಳಿದನೆಂದರೆ, ಅವನ ಕಿವಿಗಳಲ್ಲಿ ಅರಗನ್ನೂ, ಶೀಸನ್ನೂ ತುಂಬಬೇಕು'. ಶೂದ್ರನು ಪಾದ. (ಪುರುಷ ಸೂಕ್ತಾನುಸಾರ) ಇದು ಸ್ಮಶಾನಮೆ. ಆದ್ದರಿಂದ ಶೂದ್ರನ ಹತ್ತಿರ ಅಧ್ಯಯನ ಮಾಡಬಾರದು. ಅದರಿಂದಲೇ ಅಧ್ಯಯನ ಪ್ರತಿಷೇಧವೂ ಆಯಿತು. ಏಕೆಂದರೆ, ಯಾವನ ಹತ್ತಿರ ಅಧ್ಯಯನ ಕೂಡ ಮಾಡಲಾಗದೋ, ಅವನೇ ಸ್ವತಃ ಶ್ರುತಿಯ ಅಧ್ಯಯನವನ್ನು ಹೇಗೆ ಮಾಡಬಲ್ಲನು ? ಇದಲ್ಲದೆ ಅವನು ವೇದೋಚ್ಚಾರಣೆ ಮಾಡಿದರೆ, ಅವನ ನಾಲಗೆಯನ್ನು ಕಡಿದೊಗೆಯಬೇಕು. ವೇದ ಮಂತ್ರದ ಧಾರಣ ಮಾಡಿದರೆ, ಅವನ ಕೊಲೆ ಮಾಡಬೇಕು, ಎಂದೂ ಹೇಳಿದೆ. ಈ ಕಾರಣಕ್ಕಾಗಿ ಅವನು ವೇದದ ಅರ್ಥಜ್ಞಾನವನ್ನೂ, ಅನುಷ್ಠಾನವನ್ನೂ ಮಾಡಕೂಡದು, ಎಂದು ಸಿದ್ಧವಾಗುತ್ತದೆ. ಶೂದ್ರನಿಗೆ ಮತಿಯನ್ನು (ಜ್ಞಾನವನ್ನು) ಕೊಡಲೇಬಾರದು". -(ಬ್ರಹ್ಮಸೂತ್ರ ಶಾಂಕರ ಭಾಷ್ಯ ಅ 1-3-38)

ಶಂಕರಾಚಾರ್ಯರು ಶೂದ್ರರನ್ನು ಹತ್ತಿಕ್ಕಲು ಎತ್ತಿಕೊಂಡ ಆಧಾರವಾದ ಗೌತಮ ಧರ್ಮ ಸೂತ್ರ ಮೊದಲಾದವುಗಳು ಗುಪ್ತ ರಾಜರ ಸಮಕಾಲದಲ್ಲಿ ರಚಿತವಾದ ಗ್ರಂಥಗಳು, ಎಂದರೆ ಸಮುದ್ರ ಗುಪ್ತನಿಂದ ಶಂಕರಾಚಾರ್ಯರ ವರೆಗೆ (ಅಂದರೆ ಕ್ರಿ. ಶ. 4 ನೆಯ ಶತಮಾನದಿಂದ ಕ್ರಿ. ಶ. 9 ನೆಯ ಶತಮಾನದ ವರೆಗೆ) ನಮ್ಮ ಬ್ರಾಹ್ಮಣ ಪೂರ್ವಜರು ಶೂದ್ರರನ್ನು ಹತ್ತಿಕ್ಕಿ ತಮ್ಮ ವರ್ಚಸ್ಸನ್ನು ಭದ್ರಗೊಳಿಸಲು ಅವ್ಯಾಹತವಾಗಿ ಪ್ರಯತ್ನಿಸಿದ್ದಾರೆ. ಅದೇ ಮುಂದುವರಿಯಿತಷ್ಟೇ.

ಶಂಕರಾಯಾರ್ಚರು ಬ್ರಹ್ಮ ಸೂತ್ರ ಭಾಷ್ಯದಲ್ಲಿ ವ್ಯಕ್ತಪಡಿಸಿದ, ಶೂದ್ರರನ್ನು ಹತ್ತಿಕ್ಕುವ ಕಠೋರ ಧ್ವನಿಯನ್ನು ಮಾರ್ದವಗೊಳಿಸಲು, ವಿದ್ವಾನ್ ಎನ್ ರಂಗನಾಥ ಶರ್ಮಾರು ತಮ್ಮ 'ಶ್ರೀ ಶಂಕರ ಸೂಕ್ತಿ ಮಣಿ ಹಾರಃ' ಗ್ರಂಥದಲ್ಲಿ ಸಾಕಷ್ಟು ತಿಣಿಕಿದ್ದಾರೆ.

ಇತ್ತ ತೆಲುಗಿನ ಲಕ್ಷಣ ಗ್ರಂಥವಾದ 'ಅಪ್ಪ ಕವೀಯಮು' ಕೃತಿಯಲ್ಲಿ ಲೇಖಕನಾದ ವಿಪ್ರನು,'ಶೂದ್ರನ ಕಾವ್ಯವನ್ನು ಓದದಿರಿ' ತಿರಸ್ಕರಿಸಬಹುದೆಂದು ಹೇಳಿದ್ದಾರೆ.

ವೇಮನ ಯೋಗಿವರ್ಯರಿಗೆ ಜನರ ಅಜ್ಞಾನದ ಅರಿವಿರಲಿಲ್ಲವೆಂದಲ್ಲ. ಅವರು ಏನೇ ಆಗಿರಲೊಲ್ಲರೇಕೆ ? ಅವರನ್ನು ಉದ್ಧರಿಸುವ ಉದಾತ್ತ ಮತಿ ಅವರದಾಗಿತ್ತು.

ಆ. ಕಂಡು ಜ್ಞಾನವಂತನ ಕರ್ಮ ಸಂಬಂದ್ಧರು
ಹುಚ್ಚನೆನ್ನುತಿಹರು ಪ್ರಕೃತಿ ಬಿಡದೆ.
ಹುಚ್ಚಿರದೆ, ಪ್ರಕೃತಿ ಹುಡುಕಲು ಸಿಗುವುದೇ ?
ವಿಶ್ವದಾಭಿರಾಮ ಕೇಳು ವೇಮ.

ಯಜ್ಞ ಯಾಗಗಳ ವ್ರತ ನೇಮಗಳ ಕರ್ಮ ಸಂಬಂದ್ಧರು ಪರಾ ಜ್ಞಾನವನ್ನು ಪಡೆದ ಮಹತ್ಮನನ್ನು ಕಂಡು, ತಮ್ಮ ತ್ರೈಗುಣ್ಯಾತ್ಮಕ ಪ್ರಕೃತಿ ಪೂಜೆಯನ್ನು ಬಿಡದೆ, ಜ್ಞಾನವಂತನಿಗೆ ಹುಚ್ಚನೆನ್ನುತ್ತಿದ್ದಾರೆ. ವೇದಗಳನ್ನೋದಿ ಜ್ಞಾನ ಪ್ರಾಪ್ತವಾಗಲಿಲ್ಲ. ಭಗವದ್ ಕೃಪೆಯಿಂದ ಜಾನ ಸಂಪಾದನೆಗಾಗಿ ವೇದ ರಚಿತವಾಯಿತು, ಎಂಬುದನ್ನು ತಿಳಿಯಲಿಲ್ಲ. ಪರಮಾತ್ಮನನ್ನು ಅರಿಯುವ ಹುಚ್ಚು ಇರದೆ, ಪ್ರಕೃತಿಯನ್ನು ಹುಡುಕಲು, ಪರಮ ತತ್ತ್ವವು ಸಿಗುವುದೇ ? ಎಂದು ಯೋಗಿಯ ಪ್ರಶ್ನೆ.

ಮಹಾಯೋಗಿಗೆ ಯಾರಲ್ಲಿ ಏನು ಹೇಳಬೆಕೆಂಬುದೂ ಸ್ವಾನುಭವ ಮೂಲಕ ತಿಳಿದಿದೆ. ಆದ್ದರಿಂದ ಅವರು ಹೀಗೆ ಹೇಳುತ್ತಾರೆ.

ಆ. ನಿಜವನಾಡುವವನ ನಿಂದಿಸುದು ಜಗವು ;
ನಿಜವಾಡಬಾರದು ನೀಚರೊಡನೆ.
ನಿಜ ಮಹಾತ್ಮರೊಡನೆ ನಿಜವನಾಡಬೇಕು.
ವಿಶ್ವದಾಭಿರಾಮ ಕೇಳು ವೇಮ.

ಜ್ಞಾನಿಗಳು ತಾವು ಕಂಡ ಸತ್ಯವನ್ನು ಯಥಾವತ್ತಾಗಿ ಆಡಿದರೆ ನಿಂದಿಸುವುದು ಜನಮಂದೆ. ಇದು ಯೋಗಿಗಳ ಸ್ವಾನುಭವ. ಆದ್ದರಿಂದ ಅವರು ಒಂದು ನಿರ್ಣಯಕ್ಕೆ ಬಂದರು. ಅದೆಂದರೆ, ಜನರಲ್ಲಿ, ಜಾತಿ ಜಾತಿಗಳಲ್ಲಿ ಬೇಧಮೆಣಿಸದೆ, ಅವರವರ ಗುಣಗಳಿಂದ ಭೇದವಿರುತ್ತದೆ. ಕೆಲವರು ಸಜ್ಜನರಾಗಿರುತ್ತಾರೆ. ಕೆಲವರು ನೀಚರಾಗಿರುತ್ತಾರೆ. ಆದ್ದರಿಂದ ನೀಚರೊಡನೆ ನಿಜವಾಡಬಾರದು ಎಂದು ಉಪದೇಶಿಸುತ್ತಾರೆ. ನಿಜ ಮಹ್ಮಾತರೊಡನೆ ನಿಜವನ್ನೇ ಆಡಬೇಕು.

ಆ. ಆತ್ಮವುಳ್ಳ ಅವನು ಅನುದಿನವೂ ನೋಡಿ,
'ಅವನ' ಮಹಿಮೆಯಂತೆ ಅವನ ತಿಳಿಯೆ,
ಅವನೆ ಸಜ್ಜನನಿಹ ಅವನಿಯಲ್ಲಿ ಮತ್ತೆ.
ವಿಶ್ವದಾಭಿರಾಮ ಕೇಳು ವೇಮ.

ಸಕಲ ಜೀವರಲ್ಲಿಯೂ ಆತ್ಮವು ಇದ್ದೇ ಇದೆ. ಕೆಲವರು ಅರಿತಿರಬಹುದು. ಬೇರೆ ಕೆಲವರು ಇನ್ನು ದೇಹಾತ್ಮಬುದ್ಧಿ ಹೊಂದಿರಬಹುದು. ಭಕ್ತನು, ಅನುದಿನವೂ ಆತ್ಮಧ್ಯಾನ ಮಾಡಿ, 'ಅವನ' ಅಂದರೆ ಭಗವಂತನ ಕೃಪೆಯಿಂದ ಆ ಆತ್ಮವನ್ನು ತಿಳಿದರೆ ತೀರಿತು. ಈ ಅವನಿಯಲ್ಲಿ ಅಂಥ ಆತ್ಮವಿದನೇ ಸಜ್ಜನನೆನಿಸುತ್ತಾರೆ.

ಹೀಗೆ ಆತ್ಮವನ್ನು ತಿಳಿದವರು ಸಜ್ಜನರು, ಸಾಧುಗಳು. ಅವರ ಸಂಗವೇ ಸತ್ಸಂಗ. ಸತ್ಸಂಗದಿಂದ ಬಹು ಫಲವುಂಟು

ಗೀತ. ಸಾಧು ಸಾಂಗತ್ಯ ಕುದುರುತ, ಶಾಂತಿಗಮರಿ,
ಶಾಂತಿಗಮರಲು ಚಿತ್ತವು ಶಕ್ತವಹುದು.
ಶಕ್ತವಾದಂಥ ಮನದಲಿ ಶೋಭೆ ಪರವು.
ಪರವ ಕಂಡೊಡೆ ಶಿವ ತಾನು ಪೊಳೆವ ವೇಮ.

ಸಾಧುಗಳ ಸಹವಾಸದಿಂದ, ಸಾಧುಗಳೊಂದಿಗೆ ಹೊಂದಿಕೊಂಡು ಹೋಗುವುದರಿಂದ, ಸಾಧಕನಿಗೆ ಮನದ ಕ್ಷೋಭೆ ಉಡುಗಿ ಶಾಂತಿ ದೊರೆಯುತ್ತದೆ. ಶಾಂತಿ ಅಮರಿದಾಗ ಚಿತ್ತವು ಆತ್ಮರತಿಗೆ ಶಕ್ತವಾಗುತ್ತದೆ. ಶಕ್ತವಾದ ಮನಕ್ಕೆ ಇಹದ ಜಂಜಡ ತೊರೆದು ಪರದಲ್ಲಿ ಅನುರಕ್ತವಾಗುವುದೇ ಶೋಭೆ. ಪರವನ್ನು ಕಾಣುವುದೆಂದರೆ, ಮಂಗಳಕರನೂ, ಕಲ್ಯಾಣಮಯಿಯೂ ಆದ ಶಿವನು ಹೊಳೆಯುತ್ತಾನೆ.

ಶಿವ ದರ್ಶನ ಪಡೆದ ಮಹಾತ್ಮರು ಯಾವಾಗಲೂ ಉಂಟು. ಸೂರ್ಯನ ಪ್ರಕಾಶ, ಚಂದ್ರನ ಸೊಬಗು ಪ್ರತಿಯೊರ್ವನ ಮುಖದಲ್ಲಿಯ ಪ್ರಸನ್ನತೆ, ಎಲ್ಲವೂ ಅವನ ಮಹಿಮೆಯೇ ಎಂದವರು ತಿಳಿಯುತ್ತಾರೆ.

ಆ. ಉಂಟು ಉಂಟು ಜ್ಞಾನಿ ಯುಗ ಯಗಾದಿ ಕಳೆಯೆ,
ಪ್ರಾಣಹಾನಿಯಿಲ್ಲ ಪ್ರಳಯವಿರಲು :
ಪ್ರಳಯವಿರಲು ಮತ್ತೆ ಪರಮಾತ್ಮನ ಸೇರುವ.
ವಿಶ್ವದಾಭಿರಾಮ ಕೇಳು ವೇಮ.

ಧೂರ್ತ ವಿಪ್ರರು, ತಮ್ಮ ಜಾತಿಯ ಮೇಲ್ಮೈಯನ್ನು ಕಾಪಾಡಲು ಏನೇ ಸಂಚು ಮಾಡಿದರೂ, ಜ್ಞಾನಿಗಳು ಯುಗ ಯುಗ ಕಳೆದರೂ ಇದ್ದೇ ಇದ್ದಾರೆ. ಜಗತ್ತಿನ ಸೃಷ್ಟಿ, ಪ್ರಳಯಗಳಂತೂ ಬ್ರಹ್ಮ ಕಲ್ಪದಲ್ಲಿ ನಡೆಯಬೇಕು. ಆಗ ಪ್ರಳಯ ಕಾಲದಲ್ಲಿ ಪ್ರಾಣವೇನೂ ಹಾನಿಯಾಗುವುದಿಲ್ಲ. ಅತಿ ಹೆಚ್ಚೆಂದರೆ ಪ್ರಳಯವಿದ್ದಾಗ ಪ್ರಾಣವು ಪರಮಾತ್ಮನಲ್ಲಿ ಲಯ ಹೊಂದುತ್ತಿದೆ. ಕಲ್ಪಾಂತದ ನಂತರ ಮರು ಸೃಷ್ಟಿಯಾದಾಗ ಪ್ರಾಣವು ಸಕ್ರಿಯವಾಗುತ್ತದೆ.

ಆ. ತನ್ನ ತಿಳಿಯದಂಥ ದೈವಜ್ಞರಿಹರೇನು ?
ನಿನ್ನ ತಿಳಿಯದಿರಲು ನಿಲ್ಲಬಹುದೆ ?
ಮಾಯ ತಿಳಿಯದಿರಲು ಮಣ್ಣು ಪಾಲು ಅಷ್ಟೆ !
ವಿಶ್ವದಾಭಿರಾಮ ಕೇಳು ವೇಮ.

ತಾನು ವ್ಯಷ್ಟಿ ; ದೈವವು ಸಮಷ್ಟಿ. ದೈವಜ್ಞನಿಗೆ ಸಮಷ್ಟಿ ಜ್ಞಾನವಿದೆ. ಅಂದ ಮೇಲೆ, ಅವನಿಗೆ ಸರ್ವವೂ ವೇದ್ಯವಿರಬೇಕು. ಆದ್ದರಿಂದ ತನ್ನನ್ನು ತಿಳಿಯದಂಥ ದೈವಜ್ಞರಿರಲಾರರು. ಪರಮಾತ್ಮನನ್ನು ಅರಿತವನು ಮಾತ್ರ ನಿತ್ಯನು, ಅಮರನು. ಅವನನ್ನು ತಿಳಿಯದಿದ್ದರೆ ಇಲ್ಲಿ ಸ್ಥಿರವಾಗಿ ನಿಲ್ಲಬಲ್ಲನೇ ? ಮಾಯೆಯು ನಮ್ಮ ಮನದೆದುರು ಮಂಜು ಹರಡಿದೆ. ಭ್ರಾಂತಿ ಹುಟ್ಟಿಸಿದೆ. ಹಾಗಾಗಿ ತನ್ನನ್ನು ತಿಳಿಯದಾಗಿದ್ದಾನೆ ; ಪರಮಾತ್ಮನನ್ನೂ ತಿಳಿಯದಾಗಿದ್ದಾನೆ. ಸತ್ಯದ ತಿಳಿವಿಗೆ ಅಡ್ಡಿಪಡಿಸುವ ಮಾಯೆಯನ್ನು ತಿಳಿಯದಿದ್ದರೆ, ತಿಳಿದು ಹೊರಬರದಿದ್ದರೆ, ಎಲ್ಲವೂ ಮಣ್ಣು ಪಾಲಾಗುವುದಷ್ಟೇ. ವ್ಯರ್ಥವಾಗುವುದಷ್ಟೇ.

ಆ. ತಾನೇ ತತ್ತ್ವವಿರುವ ; ತನ್ನನರಿಯದಿರಲು,
ಮಾಯೆ ತತ್ತ್ವವೆಂದು ಮರುಗುತಿರುವ.
ಅಧಮ ಕರ್ಮಗಳನು ತಾ ತೊರೆಯೆ ತತ್ತ್ವವು.
ವಿಶ್ವದಾಭಿರಾಮ ಕೇಳು ವೇಮ.

ಸ್ವರೂಪತಃ ತಾನೇ ನಿಜವಾಗಿ ತತ್+ತ್ವವಾಗಿದ್ದಾನೆ. ಆದರೆ ತನ್ನ ನಿಜಸ್ವರೂಪವನ್ನು ಅರಿಯದಿರುವಾಗ, ದೇಹಾತ್ಮ ಬುದ್ಧಿ ಉದಿಸಿ, ಮಾಯೆಯಿಂದ ಉಂಟಾದುದು ತತ್ತ್ವವೆಂದು ತಿಳಿದು, ಅದು ವಿನಾಶವಾಗುವುದಲ್ಲ ! ಎಂದು ಮರುಗುತ್ತಿರುತ್ತಾನೆ. ಧರ್ಮ ಎಂದರೆ ಪುಣ್ಯ ಕರ್ಮಗಳನ್ನೂ, ಕರ್ಮ ಎಂದರೆ ತ್ರೈಗುಣ್ಯಾತ್ಮಕ ಕರ್ಮಗಳನ್ನೂ ತಾನು ತೊರೆದರೆ ಆ ಕರ್ಮ ಸನ್ಯಾಸದಿಂದ ತತ್ತ್ವವು ಗೋಚರಿಸುತ್ತದೆ.

ಭಕ್ತಿ ಭಾವದ ಅಭಿವ್ಯಕ್ತಿ :

ಮಾನವನು ತನ್ನ ಅಜ್ಞಾನದ ಮೂಲಕ ಬಹು ಬಗೆಯ ಕಂದಾಚಾರಗಳಿಗೆ ಜೋತು ಬಿದ್ದು ತನ್ನ ಭಾವಾಭಿವ್ಯಕ್ತಿ ಪ್ರಕಟಿಸುತ್ತಾನೆ.

ತಾನು ಪೂಜಿಸುವ ಸತ್ತೆ ಯಾರು ? ಎಂದು ಬಹು ಜನರು ತಿಳಿದಿದ್ದರೂ, ಅದು ಪರಮ ತತ್ತ್ವವೇ ? ಅಲ್ಲವೆ ? ಎಂದು ತಿಳಿಯರು.

ಆ. ಕವಿಯ ಗೂಡು ಗೆಯ್ದು ಕೂಗಿದನು ವೇಮನ.
ಬಟ್ಟೆ ಬಯಲೊಳುಂಟು, ಬ್ರಹ್ಮವೆಂದು.
ಹೊಳೆಯೆ ಬುದ್ಧಿಗದನೆ ಹೊಂದಿ ಸುಖಿಸಬಹುದು.
ವಿಶ್ವದಾಭಿರಾಮ ಕೇಳು ವೇಮ.

ತಾನು ಅರಿಯಲೆಳಸುವ, ಪೂಜಿಸುವ, ಗೌರವಿಸುವ, ಸೇವಿಸುವ ಸತ್ತೆ ಯಾವುದು ? ಅದುವೇ ಪರಬ್ರಹ್ಮ. ಅದರ ಸ್ವರೂಪವೇನು ? ಬಟ್ಟೆ ಬಯಲು. ಅಂದರೆ ಬಯಲಿನಲ್ಲಿಯ ಬಯಲು. ನಿಸ್ತರಂಗ ಮನವೇ ಬಯಲು ಇಲ್ಲವೆ ಶೂನ್ಯ. ಅದರಲ್ಲಿ ನಿಶ್ಶೂನ್ಯ ಬಯಲು, ಬಟ್ಟೆ ಬಯಲೆನಿಸುತ್ತದೆ. ಅಲ್ಲಿ ಆನಂದವಿದೆ. ಅದು ಸಾಧನದಿಂದ, ಮಹತ್ ಕೃಪೆಯಿಂದ, ಸ್ವಲ್ಪವಾದರಿರಲಿ, ಭಗವದ್ ಕೃಪೆಯಿಂದ ಹೊಳೆದರೆ, ಅದನ್ನು ಹೊಂದಿ ಸುಖಿಸಬಹುದು.

ಆ. ಕ್ಷಿತಿಯಲಿ ಸತಿಗೊಪ್ಪ ಶೃಂಗಾರಗಳಿದ್ದು,
ವಿಭುವಿನ ಕರುಣೆಯಿರದೆ ಒಪ್ಪದೆಂದು.
ನಿನ್ನ ಕೃಪೆಯು ಇರದೆ ನೇರದರಿವು ಇಲ್ಲ.
ವಿಶ್ವದಾಭಿರಾಮ ಕೇಳು ವೇಮ.

ಈ ಭೂಮಿಯಲ್ಲಿ ಸತಿಯಾದವಳಿಗೆ ಬಹು ಬಗೆಯ ಶೃಂಗಾರ ಸಾಧನಗಳಿರಬಹುದು. ಆದರೆ ಅವಳ ಸ್ವಾಮಿಯ ಕರುಣೆ ಇಲ್ಲದಿದ್ದರೆ ಯಾವುದೂ ಒಪ್ಪವಾಗದು. ಅದೇ ರೀತಿ, ಮಾನವನಿಗೆ ಎಲ್ಲ ಸಿರಿ ಸಂಪತ್ತು ಇರಬಹುದು. ಆದರೆ ಬ್ರಹ್ಮಾದಿ ಸ್ಥಾವರದ ವರೆಗೆ ಎಲ್ಲವೂ ಆಗಿರುವ ವಿಭುವಿನ ಕರುಣೆ ಇಲ್ಲದೆ ಒಪ್ಪದು. ನಿಜವಾಗಿ ನೋಡಿದರೆ ವಿಭುವಿನ ಕೃಪೆಯು ಇಲ್ಲವಾದರೆ, ಅಪರೋಕ್ಷ ಜ್ಞಾನವೂ ಆಗದು.

ವಿಶ್ವನಾಥನಲ್ಲಿ, ವಿಪ್ರ ಜನತೆಯಲ್ಲಿ,
ವಿಭುವಿನಲ್ಲಿ ವೇದ ವಿಧಗಳಲ್ಲಿ,
ಭಕ್ತಿ ಇಲ್ಲದವನು ಪಾಪಾತ್ಮ ಜಗದಲಿ.
ವಿಶ್ವದಾಭಿರಾಮ ಕೇಳು ವೇಮ.

ವಿಶ್ವನಾಥನಲ್ಲಿ, ಪೂಜ್ಯ ಪೂಜಕ ಭಕ್ತಿ ಬೇಕು ; ವಿಪ್ರ ಜನತೆಯಲ್ಲಿ ಸಖ್ಯಭಾವ ಬೇಕು. ವಿಭುವಿನಲ್ಲಿ ಸೇವ್ಯ-ಸೇವಕ ಭಾವ ಬೇಕು, ವೇದ ವಿಧಿಗಳಲ್ಲಿ ಅಧ್ಯಾಪಕ ವಿದ್ಯಾರ್ಥಿ ಭಾವ ಬೇಕು. ಪ್ರತಿಯೊಂದರಲ್ಲಿಯೂ ಒಂದಿಲ್ಲೊಂದು ಬಗೆಯ ಭಕ್ತಿ ಭಾವವಿರಬೇಕು. ಹಾಗಿಲ್ಲದವನು ಜಗತ್ತಿನಲ್ಲಿ ಪಾಪಾತ್ಮನೆನಿಸುತ್ತಾನೆ.

ಗೀತ. ಊಟವನೆ ಮಾಡಿಸಿ ದೇಹವನು ಒಟ್ಟು ಮರೆತು,
ನಿದ್ರೆ ಹೋಗಲು ಹುಚ್ಚುವ, ನಿಖಿಲ ಗತಿಗಳ.
ಸೂಚಿಸಿಳಿಬದ್ಧರಾಗಿಸುವ, ಸೂಕ್ಷ್ಮರೂಪ,
ನಾ ಮಹದೇವನಲ್ತೆ ? ನೋಡು ; ವೇಮ.

ಆ ಮಹಾದೇವನು ಸೂಕ್ಷ್ಮ ರೂಪಿಯಾಗಿದ್ದಾನೆ. ಅವನು ಬ್ರಹ್ಮನೆನಿಸಿ ವಿಶ್ವೋತ್ಪತ್ತಿ ಮಾಡುತ್ತಾನೆ. ವಿಷ್ಣುವೆನಿಸಿ ವಿಶ್ವದ ರಕ್ಷಣೆ ಮಾಡುತ್ತಾನೆ. ಮತ್ತು ಶಿವನಾಗಿ ವಿಶ್ವದ ಲಯಕರ್ತನಾಗುತ್ತಾನೆ. ವಿಶ್ವದ ರಕ್ಷಣೆಯಲ್ಲಿ ಮಳೆ ಸುರಿಸಿ, ಬೆಳೆ ಬೆಳೆಸ,ಜೀವ ಜಂತುಗಳನ್ನು ಸೃಷ್ಟಿಸಿ ಊಟವನ್ನು ಮಾಡಿಸುತ್ತಾನೆ. ಹೊಟ್ಟೆ ತುಂಬಿದ ಮೇಲೆ, ದೇಹವನ್ನು ಮರೆಸಿ, ನಿದ್ರೆ ಹೋಗಲು ಹಚ್ಚುತ್ತಾನೆ. ವ್ಯರ್ಥವಲ್ಲದ ಅನೇಕ ಗತಿಗಳನ್ನು ಸೂಚಿಸಿ ಮಾನವನನ್ನು ಇಳಿಗೆ ಬದ್ಧನನ್ನಾಗಿಸುತ್ತಾನೆ.

ಆ. ಶಿವನು ಎಲ್ಲೆಡೆಯಲಿ ಸಾಕ್ಷಿ ನುಡಿಯುತಿರಲು,
ಇಲ್ಲ ಇಲ್ಲೆಂಬ ನುಡಿ ಸಾಧನೇಕೆ ?
ಗಗನ ಸನ್ನಿಧಿಯಲ್ಲಿ ಗುರಿಯ ಹಿಡಿದು ನೋಡು.
ವಿಶ್ವದಾಭಿರಾಮ ಕೇಳು ವೇಮ.

ಒಂದು ಘಟನೆ ಕುರಿತು ಸಾಕ್ಷಿ ನುಡಿಯಬೇಕಾದರೆ, ಸಾಕ್ಷಿಯು ಅಲ್ಲಿರಬೇಕಷ್ಟೇ? ಶಿವನು ಎಲ್ಲೆಡೆಗೆ ಇರುತ್ತಾನೆ. ಆದ್ದರಿಂದ ಅವನು ಸರ್ವಸಾಕ್ಷಿ ಎನಿಸಿದ್ದಾನೆ. ಅವನು ಸಾಧಕನಿಗೆ ಕಾಣದಿರಬಹುದು. ಆದ್ದರಿಂದ ಅಷ್ಟಕ್ಕೆ ಅವನು ಇಲ್ಲ ಎಂದು ಸಾಧಿಸುವುದೇಕೆ ? ಅವನನ್ನು ಕಾಣಬೇಕಾದರೆ, ಹೃದಯಾಕಾಶದಲ್ಲಿ ಗುರಿಯಿರಿಸಿ ಅವನ ಸನ್ನಿಧಿಯ ಅನುಭವವನ್ನು ಪಡೆ.

ಆ. ಶಿಲೆಯ ನೋಡಿ ನರರು, ಶಿವನೆಂದು ಭಾವಿಪರು,
ಶಿಲೆಯು ಶಿಲೆಯೆ ಹೊರತು, ಶಿವನು ಅಲ್ಲ.
ತನ್ನೊಳಿರುವ ಶಿವನ ತಾನು ಅರಿಯನೇಕೊ ?
ವಿಶ್ವದಾಭಿರಾಮ ಕೇಳು ವೇಮ.

ನರರಿಗೆ ಶಿವನೆಂದರೆ ಯಾರು ತಿಳಿದಿರುವುದಿಲ್ಲ. 'ಸರ್ವಂ ಶಿವಮಯಂ ಜಗತ್'

ಬ್ರಹ್ಮದಿಂದ ಸ್ಥಾವರ ಪರ್ಯಂತ ಆಗಿರುವುದೆಲ್ಲವೂ ಶಿವನೇ. ಕೇಳಿ ತಿಳಿದಿರಬಹುದು. ಅಷ್ಟು ಮಾತ್ರಕ್ಕೆ ಶಿಲೆಯ ಮೂರ್ತಿಯನ್ನು ನೋಡಿ ಶಿವನೆಂದು ಭಾವಿಸುತ್ತಾರೆ. ಆದರೆ ಶಿಲೆಯು ಜಡವಸ್ತು.. ಅದರಲ್ಲಿ ಚೈತನ್ಯವು ಸುಪ್ತವಾಗಿದೆಯಷ್ಟೇ. ನಾವು ಶಿವನೆಂದು ಭಾವಿಸಬೇಕಾಗುದುದು ಚೈತನ್ಯ ರೂಪವನ್ನು. ಆ ಚೈತನ್ಯ ರೂಪ ಶಿವನು ತನ್ನೊಳಗೇ ಇದ್ದಾನೆ. ಸರ್ವ ಜೀವಾತ್ಮರ ಆತ್ಮವಾಗಿಯೂ ಇದ್ದಾನೆ. ಅವನನ್ನು ಏಕೆ ಅರಿಯುವದಿಲ್ಲವೋ ?

ಆ. ತನ್ನ ಆತ್ಮದಲ್ಲಿ ದೈವವು ಇರುವಾಗ,
ತೀರ್ಥಯಾತ್ರೆಗಿಳಿಯ ತಿರುಗುವ ನರ !
ಗಂಧ ಕಡ್ಡಿಗಳನು ಹೊತ್ತ ಕತ್ತೆ ಚೆಂದ.
ವಿಶ್ವದಾಭಿರಾಮ ಕೇಳು ವೇಮ.

ದೇವರಲ್ಲಿ ಹರಕೆ ಹೊರಲು, ಪುಣ್ಯ ಅರ್ಜಿಸಲು, ಜನರು ತೀರ್ಥಯಾತ್ರೆ ಕೈಕೊಳ್ಳುತ್ತಾರೆ. ತೀರ್ಥ ಕ್ಷೇತ್ರಗಳಲ್ಲಿ ದೇವರು ಇರುವನೆಂದು ಅವರ ನಂಬುಗೆ. ತೀರ್ಥ ಕ್ಷೇತ್ರಗಳಲ್ಲಿ ಕೆಲವು ಮಹಾತ್ಮರ ಸತ್ಸಂಗ ದೊರೆಯಬಹುದು. ಮಹತ್ ಕೃಪೆಯಿಂದ ಮನವು ಊರ್ಧ್ವ ಗತಿ ಪಡೆಯಬಹುದು. ಆದರೆ ದೇವರು ಇರುವನೆಂದು ಹೋಗುವುದು ಮೂಢತನ. ಏಕೆಂದರೆ, ದೇವರು ತನ್ನ ಆತ್ಮದಲ್ಲಿಯೇ ಇದ್ದಾನೆ. ಹೀಗೆ ತನ್ನೊಳಗೆ ದೇವರನ್ನಿರಿಸಿಕೊಂಡು ಅಲ್ಲಿ ಇಲ್ಲಿ ದೇವ ಸನ್ನಿಧಿಗಾಗಿ ತಿರುಗಾಡುವುದು, ಗಂಧದ ಕಡ್ಡಿಯನ್ನು ಬೆನ್ನ ಮೇಲೆ ಹೊತ್ತಿದ್ದರೂ, ಅದನ್ನು ಅರಿಯದೆ ತಿರುಗುವ ಕತ್ತೆಯಂತೆ ಆಗುತ್ತದೆ.

ಷೋಡಶೋಪಚಾರ, ಶೂನ್ಯ ಪ್ರಚಾರಗಳು,
ಭಕ್ತಿ ಇರದ ಹಾಡು ಫಲವು ಉಂಟೆ ?
ನಿಕ್ಕಿಯಾದ ಭಕ್ತಿ, ಚೊಕ್ಕ ಮಣಿಯೆ ಸಾಕು.
ವಿಶ್ವದಾಭಿರಾಮ ಕೇಳು ವೇಮ.

ಅರ್ಘ್ಯ, ಸ್ನಾನ, ಪತ್ರಿ, ಪುಷ್ಪ, ನೈವೇದ್ಯ, ಆರತಿ, ಪ್ರದಕ್ಷಿಣೆ ಹೀಗೆ ಹದಿನಾರು ಉಪಚಾರಗಳಿಂದ ಮೂರ್ತಿಯ ಪೂಜೆ ಸಲ್ಲಿಸುತ್ತಾರೆ. ಇದೆಲ್ಲ ಅರ್ಥವಿಲ್ಲದ ಪ್ರಚಾರವಷ್ಟೇ. ಪೂಜೆಯೆಂದರೆ ಭಕ್ತನು ತನ್ನ ಮನಸ್ಸಿನಲ್ಲಿ ಪರಮಾತ್ಮನಿಗೆ ಸಲ್ಲಿಸುವ ಗೌರವವಾಗಿದೆ. ಅವನಿಗೆ ಸಲ್ಲಿಸುವ ಗೌರವವೆಂದರೆ ಅವನಂತೆಯೇ ಆಗುವುದು. ಪೂಜ್ಯ ಪೂಜಕ ಒಂದಾಗುವುದು. ಭಕ್ತಿ ಇಲ್ಲವೆ ಕೇವಲ ರಾಗ ತಾಳ ಮೇಳವಿಸಿ ಹಾಡಿದರೆ ಜನಮನ ರಂಜಿಸಬಹುದು. ಆದರೆ ಪರಮಾತ್ಮನಲ್ಲಿ ಭಕ್ತಿ ಭಾವ ಕುದುರುವುದೇ ? ನಿಕ್ಕಿಯಾದ ಭಕ್ತಿ ಇದ್ದರೆ, ರಾಗಾಲಾಪನೆಯೂ ಬೇಡ, ಷೋಡಶೋಪಚಾರವೂ ಬೇಡ. ನಮ್ರತೆಯಿಂದ ಸ್ವಲ್ಪು ಮಣಿದರೆ ಸಾಕು.

ಆ. ನಿಯಮಗಳ ನಿಪುಣ ; ನೇಮಗಳ ಪಾಲಿಪ,
ಷೋಡಶೋಪಚಾರ ಸೂಕ್ತಿಗಳನು,
ಮಾಡಿ, ಶಿವನ ಸತತ ಸೇವಿಸುತ್ತ ಇರುವ.
ವಿಶ್ವದಾಭಿರಾಮ ಕೇಳು ವೇಮ.

ಭಕ್ತಿಯಿಲ್ಲದೆ ರಾಗಾಲಾಪನೆ ಮಾಡುತ್ತ ಷೋಡಶೋಪಚಾರದ ಶೂನ್ಯ

ಪ್ರಚಾರದಲ್ಲಿಯೇ ಪೂಜೆ ಸಲ್ಲಿಸುವುದರಿಂದಂತೂ ಫಲವಿಲ್ಲ. ಕೆಲವರು ಸತತ ಶಿವನ ಪೂಜೆಯನ್ನು ಮಾಡುತ್ತಾರೆ. ಜೊತೆ ಜೊತೆಗೆ ನಿಯಮ ಪಾಲನೆಯಲ್ಲಿಯೂ ನಿಪುಣರಾಗಿರುತ್ತಾರೆ. ವ್ರತ ನೇಮಗಳನ್ನು ಪಾಲಿಸುತ್ತಾರೆ. ಷೋಡಶೋಪಚಾರ ಸೂಕ್ತಿಗನುಸಾರ ಪೂಜಿಸುತ್ತಾರೆ. ಇಂಥವರ ವಿಧವು ಪ್ರಶಂಸನೀಯವಲ್ಲದಿದ್ದರೂ ಸಹಾನುಭೂತಿಪರವಿದೆ.

ಆ. ಪೂಜೆ ಮಾಡಿ ಮಾಡಿ ಪೂಜಾರಿ ತಾನಾದ.
ಪೂಜ್ಯ ವಸ್ತುವೆನಲು ಭುವಿಯ ಒಳಗೆ.
ಎಲ್ಲಿ ಪೂಜೆ ಗೆಯ್ವುದೆಲ್ಲ ದಿಶೆಯೊಳಷ್ಟೆ.
ವಿಶ್ವದಾಭಿರಾಮ ಕೇಳು ವೇಮ.

ಇನ್ನೂ ಕೆಲವರಿರುತ್ತಾರೆ. ಅವರು ಪೂಜೆ ಮಾಡಿ ಮಾಡಿ ಪೂಜಾಕಾರಿನ್ ಅಂದರೆ ಪೂಜಾರಿಗಳೇ ಆಗುತ್ತಾರೆ. ಪೂಜೆಯಿಲ್ಲದೆ ಅವರು ಇರಲಾರರು. ಅವರು ಪೂಜ್ಯ ವಸ್ತುವನ್ನು ಎಲ್ಲಿ ಲಕ್ಷಿಸುವುದು ? ಧ್ಯಾನದ ಹಂತವನ್ನು ಇನ್ನೂ ತಲುಪದ ಅವರು, ಪರಮಾತ್ಮನನ್ನೂ, ಪತ್ರಿ ಪುಷ್ಪವಿಲ್ಲದೆ, ಭಕ್ತಿ ಭಾವದಿಂದ ಧ್ಯಾನಿಸಬೇಕು.

ಆ. ದೇವ ಪೂಜೆ ಗೆಯ್ಯೆ, ದಿವ್ಯ ಭೋಗವುಂಟು.
ತತ್ತ್ವವರಿಯುವವನು ದೈವ ಸಮನು.
ಏನು ಇರದ ನರಗೆ ಯಾವ ಗತಿಯು ಇಲ್ಲ.
ವಿಶ್ವದಾಭಿರಾಮ ಕೇಳು ವೇಮ.

ದೇವ ಪೂಜೆ ಅರ್ಥಾತ್ ಸೇವೆ ಮಾಡಿದರೆ ದಿವ್ಯಭೋಗವಿದೆ. ಏಕೆ ? ಪೂಜಿಸುವ ಶಿಲೆ ಇಲ್ಲವೆ ಲೋಹದ ಮೂರ್ತಿಯೇನೂ ವರ ಕೊಡುವುದಿಲ್ಲ. ಆದರೆ ಪೂಜಕನ ಭಕ್ತಿ ಭಾವದಿಂದ ಮನಸ್ಸಿನ ಶಕ್ತಿ ಕುದುರಿ, ಅದರ ಫಲವಾಗಿ ಪಡೆದುದನ್ನು ವರವಾಗಿ ಗ್ರಹಿಸಬಹುದು. ಧ್ಯಾನ ಮಾರ್ಗದಲ್ಲಿ ಈ ವರ, ತಂತಾನೇ ಪ್ರಾಪ್ತವಾಗುತ್ತದೆ. ದಿವ್ಯ ಭೋಗದ ಕೋರಿಕೆಯನ್ನು ಪರಾಭಕ್ತಿಯೆಂದು ಯಾರೂ ಕರೆದಿಲ್ಲ. ಆದರೆ ತತ್ತ್ವಗಳನ್ನು ಅರಿಯುವವನು ಅಂದರೆ ಇಂದ್ರಿಯ, ಚಿತ್ತ, ಅಹಂ, ಬುದ್ಧಿ ಇತ್ಯಾದಿ ಅನಾತ್ಮ ತತ್ತ್ವಗಳನ್ನು ಕೊನೆಗೆ ಆತ್ಮ ತತ್ತ್ವವನ್ನೂ ಯಾರು ಅರಿಯುತ್ತಾರೋ, ಅವರು ಅದೇ ತತ್ತ್ವವಾಗುತ್ತಾರೆ. 'ಆತ್ಮವಿದಃ ಆತ್ಮೈವ ಭವತಿ'. ಅಂದರೆ ಆತ್ಮವನ್ನು ಅರಿತವನು ಆತ್ಮವೇ ಆಗುತ್ತಾನೆ. ಹೀಗೆ ತತ್ತ್ವವಿದನು ದೈವ ಸಮನೆನಿಸುತ್ತಾನೆ. ಇನ್ನೊಂದು ಅಧಮ ವರ್ಗವೂ ಇದೆ. ಅವರು ಪೂಜೆಯನ್ನೂ ಮಾಡುವುದಿಲ್ಲ. ತತ್ತ್ವವನ್ನೂ ತಿಳಿಯುವುದಿಲ್ಲ. ಅವರು ನೀತಿವಾದಿಗಳಿರಬಹುದು. ಅವರಿಗೆ ಊರ್ಧ್ವ ಗತಿಯೂ ಇಲ್ಲ. ಅಧೋಗತಿಯೂ ಇಲ್ಲ. ಯಾವ ಗತಿಯೂ ಇಲ್ಲ.

'ತ್ವಮೇವ ಮಾತಾ, ಪಿತಾ ತ್ವಮೇವ
ತ್ವಮೇವ ಬಂಧುಃ ಸಖಾ ತ್ವಮೇವ.
ತ್ವಮೇವ ವಿದ್ಯಾ ದ್ರವಿಣಂ ತ್ವಮೇವ
ತ್ವಮೇವ ಸರ್ವಂ ಮಮ ದೇವ ದೇವ !'.

'ಸರ್ವಂ ಶಿವಮಯಂ ಜಗತ್'. ಜಗವೆಲ್ಲವೂ ಶಿವನಿಂದ ತುಂಬಿದೆ, ಎಂದು ನಿಜವಾದ ಭಕ್ತನ ಅನಿಸಿಕೆ, ಜಗತ್ತು ಮಿಥ್ಯೆ ಎಂದು ಪ್ರತಿಪಾದಿಸುವ ಮಾಯಾವಾದಿಗಳೂ ಸಹ, ತಮ್ಮ

ಭ್ರಾಂತಿ ಕಳೆದ ಮೇಲೆ, ಅದನ್ನು ಬ್ರಹ್ಮವೆಂದೇ ಅರಿಯುತ್ತಾರೆ. ಅದರಿಂದ ಶಿವಮಯವಾಗಿ ಸರ್ವವನ್ನೂ ಕಾಣುವ ಭಕ್ತನು, 'ದೇವ ದೇವಾ ! ಮಹಾದೇವಾ ! ನೀನೇ ತಾಯಿ, ನೀನೇ ತಂದೆ, ನೀನೇ ಬಂಧು, ನೀನೇ ಗೆಳೆಯ, ನೀನೇ ನನ್ನನ್ನು ಮುಕ್ತಗೊಳಿಸುವ ವಿದ್ಯಾನಿಧಿ, ನೀನೇ ನನಗೆ ಭುಕ್ತಿ ನೀಡುವ ದೈವ ಸಂಪತ್ತು' ಎಂದು ಭಜಿಸುತ್ತಾನೆ.

ಇದೇ ಭಾವವನ್ನು ವೇಮನ ಯೋಗಿಗಳು ಹೀಗೆ ವ್ಯಕ್ತ ಪಡಿಸಿದ್ದಾರೆ.

ಆ. ತಾಯಿಯೇ ಪಾರ್ವತಿಯು ; ತಂದೆಯೇ ಶಂಭುವು.
ಪ್ರಮಥ ಗಣವು ಅಖಿಲ ಬಂಧು ಬಳಗ.
ತಾನು ಹುಟ್ಟಿದ ಮನೆ ತನಗೆ ಕೈಲಾಸವು.
ವಿಶ್ವದಾಭಿರಾಮ ಕೇಳು ವೇಮ.

ಪಾರ್ವತಿಯು ತನ್ನ ತಾಯಿ, ಶಂಭುವಾದ ಶಿವನೇ ತನ್ನ ತಂದೆ. ಶಿವನ ಪ್ರಮಥ ಗಣವೇ ಅಖಿಲ ಬಂಧು ಬಳಗ. ಇನ್ನು ತಾನು ಹುಟ್ಟಿ ವಾಸಿಸುವ ಮನೆಯೇ ತನಗೆ ಕೈಲಾಸವು. ಯೋಗಿಯು ಶಿವ ಸ್ವರೂಪನು ತಾನೇ ?

ಸತಿಯನ್ನು ಭೋಗ್ಯ ವಸ್ತು ಎಂದು ತಿಳಿಸುವುದರಿಂದ ಮೋಹ ಉದಿಸುತ್ತದೆ. ಸರ್ವರಲ್ಲಿಯೂ ಆತ್ಮನಿರುವನೆಂದೂ ಆ ಅಂತರಾತ್ಮನೇ ಪರಮಾತ್ಮನೆಂದೂ ಅರಿತ ಮೇಲೆ ಹೆಂಡತಿಯನ್ನೂ ಇತರ ಸಂಬಂಧಿಗಳನ್ನೂ ಆತ್ಮವೆಂದು ತಿಳಿದರೆ ಮೋಹವೆಲ್ಲಿ ?

ಕಂ. ಹೆಂಡತಿಯೆನೆ ಆತ್ಮ ಕಣಾ !
ಹೆಂಡತಿಯೆನೆ ತಾಯಿ ಕಣಾ ! ಅರಿತೊಡೆ ಮನದೋಳ್
ಹೆಂಡತಿಯ ತಾಯಿಯೆನಲಾರು
ಕಂಡರಿಯಬೇಕಿದನೆ ತಪ್ಪದಂತೆ ವೇಮಾ.

ಘಟದಲ್ಲಿಯ ಆಕಾಶವೂ, ಮಠದಲ್ಲಿಯ ಆಕಾಶವೂ ಒಂದೇ. ಅದೇ ರೀತಿ ತನ್ನೊಳಗಿರುವ ಆತ್ಮವೂ ಹೆಂಡತಿಯೊಳಗಿರುವ ಆತ್ಮವೂ ಒಂದೇ. ಕೇವಲ ಬೇರೆ ಬೇರೆ ದೇಹಗಳ ಉಪಾಧಿಯಿಂದ ಬೇರಾಗಿ ತೋರುತ್ತವೆ. ಆದ್ದರಿಂದ ತನ್ನ ನೈಜ ಸ್ವರೂಪವು ಹೇಗೆ ಆತ್ಮವೋ, ಅದೇ ರೀತಿ ಹೆಂಡತಿಯ ನೈಜ ಸ್ವರೂಪವು ಆತ್ಮವೆ. ಇನ್ನು ತಾಯಿಯ ನೈಜ ಸ್ವರೂಪವೂ ಆತ್ಮವೇ ಸರಿ. ಮೇಲಾಗಿ, ತಾನೇ ಮಗನಾಗಿ ಜನಿಸಿದಾಗ, ಹೆಂಡತಿಯು ತನ್ನನ್ನು ಪೋಷಿಸುವ ತಾಯಿಯಾಗುತ್ತಾಳೆ. ಅಂದ ಮೇಲೆ ಹೆಂಡತಿಯೇ, ಸ್ವರೂಪದ ದೃಷ್ಟಿಯಿಂದ, ಪೋಷಕಳ ದೃಷ್ಟಿಯಿಂದ, ತಾಯಿಯೆನಿಸುತ್ತಾಳೆ. ಇದನ್ನು ತಪ್ಪದಂತೆ ಕಂಡರಿತು ವ್ಯವಹರಿಸಬೇಕು.

ಕಂ. ಸೂತ್ರವಾವುದರಸಿ ನೋಡೆ,
ಸೂತ್ರ ಸ್ತ್ರೀಯದೆನುವುದೇ ಸಿದ್ಧವಿಹುದಲಾ !
ಸೂತ್ರವೆನೆ ಸ್ತ್ರೀ ಸೂತ್ರವೆ.
ಸೂತ್ರವದ ತಿಳಿಯುವಾತನೆ, ನಾಥನು, ವೇಮಾ.

ಹೂವಿನ ಹಾರದಲ್ಲಿ ಹೂವುಗಳನ್ನು ಪೋಣಿಸುವ ದಾರಕ್ಕೆ ಸೂತ್ರವೆನ್ನುತ್ತಾರೆ. ಹಾಗಾದರೆ ಜೀವ ಜೀವರನ್ನು ಪೋಣಿಸುವ ಸೂತ್ರ ಯಾವುದು ? ಅರಸಿ ನೋಡಿದರೆ, ಸ್ತ್ರೀಯು

ಸೂತ್ರವೆನ್ನುವದು ಸಿದ್ಧವಾಗುತ್ತದೆ. ಏಕೆಂದರೆ, ಗಂಡನಿಗೆ ಹೆಂಡತಿಯಾಗಿ ಸ್ತ್ರೀ ಗರ್ಭಧರಿಸುತ್ತಾಳೆ. ಮಗುವಿಗೆ ತಾಯಿಯಾಗಿ ಪೋಷಿಸುತ್ತಾಳೆ. ಸಂಬಂಧವನ್ನು ಹೆಣೆಯುವ ಸೂತ್ರವೆಂದರೆ, ಸ್ತ್ರೀ ಸೂತ್ರವೇ ಎಂದು ಗೊತ್ತಾಗುತ್ತದೆ. ಯಾರು ಇದನ್ನು ತಿಳಿಯುವರೋ, ಅವರೇ ನಾಥ ಎನಿಸುತ್ತಾರೆ.

ಕಂ. ಅಮ್ಮ ಕಣಾ ! ಭಾರ್ಯೆಯೆನಲು
ಅಮ್ಮ ಭಾರ್ಯೆ ಕಾಣು ; ಆ ಈರ್ವರಿಗುಂ.
ಈ ಮಹಿಯಲಿ ಭೇದಂಗಳ
ನೆಮ್ಮದಿಯಿಂದರಿಯುವವನೆ ನಿಪುಣನು ವೇಮಾ.

ತಂದೆಯೇ ಮಗನಾಗಿ ಜನಿಸುವನೆಂದು ಹೇಳುತ್ತಾರೆ. ಇದು ಮನಸ್ಸಿನ ಮತ್ತು ಪ್ರಾಣದ ವಿಚಾರದಲ್ಲಿ ಸ್ವೀಕಾರಾರ್ಹವಿರಲಿಕ್ಕಿಲ್ಲ. ಆದರೆ ಭೌತಿಕ ದೇಹದ ವಿಚಾರದಲ್ಲಂತೂ ಸರಿಯಾಗಿದೆ. ತಂದೆಯೇ ಬೀಜ ಪ್ರದನಾದ ಪುರುಷ. ತಾಯಿ ಪೋಷಣೆಯ ಕ್ಷೇತ್ರ. ಆದ್ದರಿಂದ ಅಮ್ಮನು ತಂದೆಯ ಬೀಜವನ್ನು ಪೋಷಿಸಿ ಪ್ರಸೂತಿ ಮಾಡುತ್ತಾಳೆ. ಮುಂದೆ ತಾನು ಯುವಕನಾಗಿ ಊರುವ ಬೀಜವನ್ನು ಹೆಂಡತಿಯು ಕ್ಷೇತ್ರವಾಗಿ ಸ್ವೀಕರಿಸಿ ಪೋಷಿಸುತ್ತಾಳೆ. ತಾನೇ ತನ್ನ ಮಗನಾಗಿ ಹುಟ್ಟುವನೆಂದು ದೇಹದ ಮಟ್ಟಿಗೆ ಹೇಳಬಹುದು. ಹೀಗೆ ಭಾರ್ಯೆಯೆಂದರೆ ಅಮ್ಮ ಎನ್ನಬಹುದು. ಆದರೆ ಅಮ್ಮ ಮತ್ತು ಭಾರ್ಯೆಯರಿಗೆ ಈ ಮಹಿಯಲ್ಲಿ ಭೇದವಿರುವುದಲ್ಲಿ ? ಪೋಷಿಸುವವಳು ಅಮ್ಮನು. ತನ್ನಿಂದ ಪೋಷಿಸಲ್ಪಡುವವಳು ಭಾರ್ಯೆ. ಇದನ್ನು ಸರಿಯಾಗಿ ನೆಮ್ಮದಿಯಿಂದ ತಿಳಿಯುವವನೇ ನಿಪುಣನೆನಿಸುತ್ತಾನೆ.

ಆ. ದೇಹವಾರ ಸೊತ್ತು ? ಪೋಷಿಸೆ ಹಲಬಾರಿ.
ಪ್ರಾಣವಾರ ಸೊತ್ತು ? ಭಕ್ತಿ ಗೆಯ್ಮೆ ?
ಧನವು ಯಾರ ಸೊತ್ತು ? ಧರ್ಮ ತನ್ನ ಸೊತ್ತು.
ವಿಶ್ವದಾಭಿರಾಮ ಕೇಳು ವೇಮ.

ಈ ದೇಹವು ನಾನಲ್ಲ. ಈ ದೇಹವು ನನ್ನದಲ್ಲ. ಇದು ಪರಮಾತ್ಮನು ತನಗೆ ಜೋಡಿಸಿದ ಉಪಾಧಿ. ಅದನ್ನು ಹಲಬಾರಿ ಪೋಷಿಸುವುದೇಕೆ ? ಅದು ಪರಮಾತ್ಮನ ದೇಣಿಗೆಯೆಂದು ; ಮೇಲಾಗಿ ಅದು ನಿಜವಾಗಿ ಧರ್ಮ ಸಾಧನವಾಗುವುದೆಂದು. ಪ್ರಾಣವು ಯಾರ ಸೊತ್ತು ? ಅದು ದೇಹದಿಂದ ದೇಹಕ್ಕೆ ತನ್ನೊಂದಿಗೆ ಇರುವುದಾದರೂ ಅದು ಪರಮಾತ್ಮನು ಜೋಡಿಸಿದ ಉಪಾಧಿ. ಅದನ್ನು ಕುರಿತು ಭಕ್ತಿ ಮಾಡಬೇಕಿಲ್ಲ. ಅದೇ ರೀತಿ, ಧನವಂತೂ ಬಲು ಚಂಚಲ. ಈಗ ಇರಬಹುದು ; ನಾಳೆ ಇರಲಿಕ್ಕಿಲ್ಲ. ಅದಕ್ಕೆ ಅಂಟುವುದು ವ್ಯರ್ಥ. ತನ್ನ ಸೊತ್ತೆಂದರೆ ಕೇವಲ ಧರ್ಮ ಮಾತ್ರ. ಮಾನವನಾಗಿ ತಾನು ಲಕ್ಷಿಸಬೇಕಾದುದು ಕೇವಲ ಧರ್ಮ ಮಾತ್ರ. ಸತ್ತ ಮೇಲೆ ತನ್ನೊಂದಿಗೆ ಬರುವುದು ಧರ್ಮ ಮಾತ್ರ.

ಆ. ಉಳ್ಳ ಮನುಜ ತಾನು ಉಪಕಾರಿಯಿರದಿರೆ,
ಕಣ್ಣು ಕಾಣದೆ ಮದ ತುಂಬಿದ ಜಡ.
ದೀನನಿರಲು ತನಗೆ ದಿಕ್ಕು ತೋರ್ಪರಾರು ?
ವಿಶ್ವದಾಭಿರಾಮ ಕೇಳು ವೇಮ.

ಸಿರಿಯು ಸ್ವಭಾವತಃ ಚಂಚಲ. ಒಂದೆಡೆಯಲ್ಲಿ ನಿಲ್ಲದು. ಆದ್ದರಿಂದ ಸಿರಿ ಉಳ್ಳ ಮನುಜನು. ತಾನು ಉಪಕಾರಿಯಾಗಿರಬೇಕು. ಅಂದರೆ ವಿಧಿ ತನ್ನ ದೈನ್ಯತೆಯಲ್ಲಿ ನೆರವು ಒದಗಿಸುತ್ತದೆ. ಹಾಗೆ ಮಾಡದೆ ಸಿರಿಗರ ಬಡಿದಂತೆ ಸಿರಿ ಇರುವಾಗ ಮದವೇರಿ ಕಣ್ಣು ಕಾಣದ ಜಡನಾದರೇನು ? ಚಂಚಲವಾದ ಸಿರಿ ತೊಲಗಲು ತಾನು ದೀನನೆನಿಸುತ್ತಾನೆ. ಯಾರಿಗೂ ಉಪಕಾರಿಯಾಗದ ತನಗೆ ಯಾರೂ ಉಪಕಾರ ಮಾಡರು.

ತಾನು ಬೆತ್ತಲೆಯಾಗಿ ಭೂಮಿಗೆ ಬರುತ್ತಾನೆ. ಬೆತ್ತಲೆಯಾಗಿಯೇ ಇಲ್ಲಿಂದ ಮರಣಿಸಿ ತೆರಳುತ್ತಾನೆ. ಹೀಗಾಗಿ, ಇಲ್ಲಿ ತಾನು ಪಡೆದುದೆಲ್ಲವೂ ಪರಮಾತ್ಮನು ತನ್ನನ್ನು ವಿಶ್ವಸ್ಥನಾಗಿ ತನ್ನಲ್ಲಿ ಇರಿಸಿದ ಸೊತ್ತು ಮಾತ್ರ. ಇದನ್ನರಿಯಬೇಕು.

ಆ. ಅರಿ ತನ್ನಾಸ್ತಿಯೆನದೆ ಅಡ್ಡ ಮಾತನಾಡದೆ,
ಬಯ್ಯದೆ ಮನದೊಳಗೆ ಪರಿತಪಿಸದೆ,
ತನ್ನದಲ್ಲವೆಂದು ತಾ ಕೊಡುವುದನು ಕೊಡು.
ವಿಶ್ವದಾಭಿರಾಮ ಕೇಳು ವೇಮ.

ತನ್ನಲ್ಲಿ ಸಂಚಯವಾದ ಸಂಪದವು ತನ್ನದೇನೂ ಅಲ್ಲ. ತನ್ನ ಕರ್ಮಗಳಿಗೆ ಫಲ ಬೇಡುವ ಅಧಿಕಾರ ತನಗೇನೂ ಇಲ್ಲ. ಏಕೆಂದರೆ ಎಲ್ಲವೂ ವಿಧಿ ನಿಯಮಾನುಸಾರ ನಡೆಯುತ್ತದೆ. ಆದ್ದರಿಂದ, ತನ್ನಲ್ಲಿ ಯಾರಾದರೂ ಬಂದು ಬೇಡಲಿ, ಬೇಡದಿರಲಿ, ಬೇಡುವವರನ್ನು ಬಯ್ಯದೆ, ತನ್ನಲ್ಲಿದ್ದ ಸಂಪದವು, ಕೊಟ್ಟರೆ ಕ್ಷಯಿಸುವದಿಲ್ಲ, ಎಂದು ಪರಿತಪಿಸದೆ, ತಾನು ನೀಡುವ ಸಂಪದವು ತನ್ನದೇನೂ ಅಲ್ಲ, ಅದು ದೈವದ್ದು ಎಂದು ತಿಳಿದು ತಾನು ಕೊಡುವುದನ್ನು ಕೊಡಬೇಕು. ಇದು ಧರ್ಮವೆನಿಸುತ್ತದೆ.

ಆ. ಪರರಿಗುಪಕರಿಸಲು, ಪರರ ಸೊತ್ತು ಪರಗೆ,
ಮರಳಿ ನೀಡಲಾಗ ಪರಮ ಪ್ರಾಪ್ತಿ.
ಪರಮಕಿಂತ ಸೊತ್ತು ಪಾವನವಹುದೇನು ?
ವಿಶ್ವದಾಭಿರಾಮ ಕೇಳು ವೇಮ.

'ಪರೋಪಕಾರಃ ಪುಣ್ಯಾಯ, ಪಾಪಾಯ ಪರಪೀಡನಂ' ಎಂದು ವ್ಯಾಸೋಕ್ತಿಯುಂಟು. ಹೀಗೆ ಪರರಿಗೆ ಉಪಕಾರ ಗೆಯ್ಯಲು ಅಂದರೆ ಪರರ ಸೊತ್ತನ್ನು ಪರರಿಗೆ ನೀಡಿದಾಗ, ತನಗೆ ಪರಮ ಪ್ರಾಪ್ತಿಯಾಗುತ್ತದೆ. ಧರ್ಮ ಸಂಚಯವಾಗುತ್ತದೆ. ಅದರಿಂದ ಪರಮನ ನಿಕಟಕ್ಕೆ ಹೋಗಬಹುದು. ಹೀಗಿರುವಾಗ, ಪರಮಕ್ಕಿಂತ ಆ ಸೊತ್ತು ಪಾಪನವೇ ?

ಆ. ಉಣ್ಣುವ ಬಾನದೊಳು ಇನಿತು ದೈವಕಿಡಲು,
ಪುಣ್ಯ ಲೋಕಕವನು ಹೋಗುತಿಪ್ಪ.
ಅನ್ನದಾನಕಿಂತ ಮಿನ್ನ ದಾನವಿಲ್ಲ.
ವಿಶ್ವದಾಭಿರಾಮ ಕೇಳು ವೇಮ.

'ಉಣ್ಣು, ಉಣಗೊಡು', 'ಬಾಳು, ಬಾಳಗೊಡು' ಇದು ಅತಿ ಉದಾತ್ತ ಧ್ಯೇಯವಾಗಿದೆ. ತಾನು ಬಾನವನ್ನೇ ಉಣ್ಣಲೊಲ್ಲನೇಕೆ ? ಅದರಲ್ಲಿ ಕೆಲ ಭಾಗವನ್ನು ದೈವಕ್ಕಾಗಿ,

ಅಂದರೆ ಹಸಿದು ಬಂದ, ಅತಿಥಿಗಳಿಗಾಗಿ, ಭಿಕ್ಷುಕರಿಗಾಗಿ ತೆಗೆದಿರಿಸಬೇಕು. ದೇವರು ಈ ರೀತಿಯಲ್ಲಿ ಬರುವನಷ್ಟೇ. ಅಂಥವರಿಗೆ ತೆಗೆದಿರಿಸುವ ಬಾನವೇ ದೇವರ ನೈವೇದ್ಯವಾಗುತ್ತದೆ. ಅವರಿಗೆ ಅರ್ಪಿಸಿ ಉಳಿದ ಶೇಷ ಅನ್ನವು ದೇವರ ಪ್ರಸಾದವೆನಿಸುತ್ತದೆ. ಹೀಗೆ ಧರ್ಮ ಕಾರ್ಯ ಮಾಡಿ ಅವನು ಪುಣ್ಯ ಲೋಕಕ್ಕೆ ಹೋಗುತ್ತಾನೆ. ಅನ್ನದಾನಕ್ಕಿಂತ ಮಿನ್ನವಾದ ದಾನವಾವುದೂ ಇಲ್ಲ.

ಕಂ. ನೀಡುತ್ತಿರುವರ ಸಂಪದ
ಈಡಾಗದೆ, ಎಂದಾದರು ಕುಂಠಿತವಹುದೇ ?
ನೋಡೊರತೆ ಜಲ ಹೊಡೆದಂತೆಯೆ,
ಕೂಡಿ ಸೇರುತಿಹುದು, ತೀರದ ವಿಧವದು, ವೇಮಾ.

'ಒಂದು ಪಾವಿನ ಅನ್ನವ ಸಾವಿರ ಮಂದಿಗುಣಿಸಿದವನೆ' ಎಂದು ಮಹಾವಿಭೂತಿ ಪುರುಷರ ಸ್ತುತಿ ಪದ್ಯಗಳಲ್ಲಿ ಹಾಡುತ್ತಾರೆ. ಚರಿತ್ರೆಗಳಲ್ಲಿ ಪರಿಸುತ್ತಾರೆ. ಏಕೆಂದರೆ, ಭಕ್ತಿಭಾವದಿಂದ ತಮ್ಮಲ್ಲಿ ಸಂಚಯವಾದ ಸಂಪದವನ್ನು ನೀಡುತ್ತಿದ್ದರೆ, ಅದು ಸತ್ಪಾತ್ರಿ ಆರ್ತರಿಗೆ ಸಾಕಷ್ಟಾಗದೆ, ಎಂದಾದರೂ ಕುಂಠಿತವಾಗಬಹುದೇ ? ಪುರಾಣಗಳಲ್ಲಿ ಬಣ್ಣಿಸಿರುವ ಅಕ್ಷಯ ಪಾತ್ರೆಗಳ ಪ್ರಸ್ತಾಪವು ಇದನ್ನೇ ಸೂಚಿಸುತ್ತದೆ. ಇದಕ್ಕೆ ನೀರಿನ ಒರತೆಯ ದೃಷ್ಟಾಂತವನ್ನು ನೋಡಬಹುದು. ಬತ್ತಿದ ಹೊಳೆಯ ಪಾತ್ರದಲ್ಲಿ ತೋಡಿದ ಒರತೆಯ ನೀರು ಹೊಡೆದಂತೆಲ್ಲ ಸೆಲೆಗಳಿಂದ ಹೊಸ ನೀರು ಬಂದು ಸೇರಿಕೊಳ್ಳುತ್ತದೆ. ಅದೇ ರೀತಿ, ನೀಡುವ ದಾನಿಯ ಸಂಪದವೂ ತೀರದ ವಿಧವಾಗಿದೆ.

ಆ. ಕೇಳದರ್ಥವೀವ, ತಾನೆ ಬ್ರಹ್ಮಜ್ಞಾನಿ.
ಕೇಳಲರ್ಥವೀವ, ತಾನೆ ತ್ಯಾಗಿ.
ಕೇಳಲೀಯದಾತ, ಇನ್ನು ಮಹಾ ಲೋಭಿ.
ವಿಶ್ವದಾಭಿರಾಮ ಕೇಳು ವೇಮ.

'ಸರ್ವಂ ಖಲು ಬ್ರಹ್ಮ'. ನಿಜವಾಗಿ ಎಲ್ಲವೂ ಬ್ರಹ್ಮವಾಗಿದೆ. ಭಗವಂತನು 'ಸರ್ವ ಭೂತಾಂತರಾತ್ಮ' ಅಂದರೆ ಸರ್ವ ಜೀವಿಗಳ ಒಳಗಿರುವ ಆತ್ಮನೇ ಆಗಿದ್ದಾನೆ. ಅಂದ ಮೇಲೆ, ತಾನು ಯಾರಿಗೆ ನೀಡುತ್ತಾನೋ, ಅವನು ಬ್ರಹ್ಮನೇ ಸರಿ. ಇನ್ನು ಕೇಳದೆ ಅರ್ಥವೀಯುವುದೇಕೆ? ಏಕೆಂದರೆ ಒಬ್ಬನಲ್ಲಿ ದೈವದ ಸಂಪದವೇ ಸಂಚಿತವಾಗಿರುತ್ತದೆ. ಅದನ್ನು, ಸತ್ಪಾತ್ರವನ್ನು ನೋಡಿ ನಾವೇ ಹಂಚಬೇಕು. ಆದ್ದರಿಂದ ಯಾರೂ ತಮ್ಮನ್ನು ಆರ್ತರಾಗಿ ಕೇಳದಿದ್ದರೂ, ತಾವೇ ಮುಂದಾಗಿ ಅರ್ಥವನ್ನು ನೀಡುತ್ತಾರೆ. ಅಂಥವನೇ ಬ್ರಹ್ಮಜ್ಞಾನಿ. ಇನ್ನು ಕೆಲವರು ಉದಾರಿಗಳು ಕೇಳಿದಾಗ ಅರ್ಥವನ್ನು ನೀಡುತ್ತಾರೆ. ಅಂದರೆ ಮನದಲ್ಲಿ ತಮ್ಮ ಧನ ಸಂಚಯವು ಕ್ಷೀಣಿಸಿತು, ಎಂಬ ಭಾವವಿರುತ್ತದೆ. ಇಂಥ ನೀಡುವವರು ತ್ಯಾಗಿಗಳೆನಿಸುತ್ತಾರೆ. ಕೆಲವು ಜನರು ತಮ್ಮಲ್ಲಿ ಕೂಡಿಬಿದ್ದ ದುಡ್ಡು ತಮ್ಮದೇ. ಅದನ್ನು ಉಪಭೋಗಿಸಲು ಅಧಿಕಾರಿಗಳು ತಾವು ಮಾತ್ರ ; ಎನ್ನುವ ಮಹಾಲೋಭಿಗಳೂ ಇದ್ದಾರೆ.

ಆ. ಸತ್ಯವನ್ನು ಬಿಡದೆ ಸಾಹಸವನು ತೋರಿ,
ಬಂಟ ಪಂಥ ಧರಿಸು, ಭಕ್ತಿಯಿಂದ.
ಕರ್ಮ ಜೀವಿ ತಾನು ಕಾಣಲಾರನಲ್ಲ ?
ವಿಶ್ವದಾಭಿರಾಮ ಕೇಳು ವೇಮ.

ಸತ್ಯ ವ್ರತವು ತುಂಬಾ ಕಷ್ಟಕರ. ಅದು ಅಲಗಿನ ಮೊನೆಯ ಮೇಲೆ ನಡೆಯುವಂತಿದೆ ಎಂದು ಶ್ರುತಿಗಳೂ ಹೇಳುತ್ತವೆ. ಆದ್ದರಿಂದ ಬಂಟ ಪಥವನ್ನು ಹಿಡಿದು, ಸಾಹಸವನ್ನು ತೋರಿ, ಸತ್ಯವನ್ನು ಬಿಡಕೂಡದು. ಇದಕ್ಕೆ ಭಕ್ತಿ ಬೇಕೇ ಬೇಕು. ಆದರೆ, ತ್ರೈಗುಣ್ಯಾತ್ಮಕ ಯಜ್ಞ ಯಾಗಗಳು, ವ್ರತ ನೇಮಗಳು ಇತ್ಯಾದಿಗಳಿಗೆ ಅಂಟಿಕೊಂಡ ಕರ್ಮ ಜೀವಿಗಳು, ಇದನ್ನೆಲ್ಲ ಕಂಡರಿಯರು.

ಅಲ್ಪ ಸುಖವನೆಲ್ಲ ಆಶಿಸುತ್ತ ಮನುಜ,
ಬಹಳ ದುಃಖದಿಂದ ಬಾಧೆ ಪಡುವ.
ಪರ ಸುಖವನು ಹೊಂದಿ, ಬದಕಲರಿಯರಲ್ಲ !
ವಿಶ್ವದಾಭಿರಾಮ ಕೇಳು ವೇಮ.

ಮನುಷ್ಯನ ಇಂದ್ರಿಯಗಳು ಸ್ವಭಾವತಃ ಬಹಿರ್ಮುಖವಾಗಿವೆ. ಅವು ವೃತ್ತಿಗಳನ್ನು ವಿಷಯಗಳತ್ತ ಕಳಿಸಿ, ವಿಷಯ ಸಂಸರ್ಗದಿಂದ ಸುಖಭೋಗ ಪಡೆಯುತ್ತವೆ. ಈ ವಿಷಯ ವಸ್ತುಗಳು ಸಾಂತವಾಗಿವೆ. ಆದರೆ ಮಾನವನ ಸುಖದ ದಾಹವು ಅನಂತವಾಗಿದೆ. ಹಾಗಾಗಿ ಅಲ್ಪ ಸುಖವನ್ನು ಪಡೆದರೂ ಮನುಷ್ಯನು ಸಂತೃಪ್ತನಾಗದೆ, ಇನ್ನಷ್ಟು ತೃಪ್ತಿ ಪಡೆಯಲಿಲ್ಲವಲ್ಲ ! ಎಂದು ಬಹಳ ದುಃಖದಿಂದ ಬಾಧೆ ಪಡುತ್ತಾನೆ. ಇದನ್ನು ಅರಿತು ಅನುಭವಿಸಿದ ಮೇಲಾದರೂ, ಅಲ್ಪ ಸುಖದ ಕಡೆಗೆ ಗಮನವಿರಿಸದೆ ಪರ ಸುಖವನ್ನು ಹೊಂದಿ ಬದುಕಲು ಅರಿಯರಲ್ಲ ! ಇದೇ ಸೋಜಿಗ.

ಸುರಿವ ಮಳೆಗೆ ಅಂಜಿ ಸರ್ರನೋಡುತಿಹರು.
ಸುಡುವ ಬಿಸಿಲೊಳಿಹರು ಸಹಿಸಿ ಉರಿಯ.
ಭುವಿಯ ಜನರು ಒಳಿತು ಬಯಸರೇಕೊ ತಾವು ?
ವಿಶ್ವದಾಭಿರಾಮ ಕೇಳು ವೇಮ.

ಭೂಮಿಯಲ್ಲಿ ವಾಸಿಸುವ ಮರ್ತ್ಯರಿಗೆ ಯಾವುದು ಒಳಿತು ? ಇನ್ನಾವುದು ಕೇಡು ? ಎಂದು ತಿಳಿಯದು. ಏಕೆಂದರೆ, ದಾರಿ ನಡೆದು ಆಯಾಸವಾದಾಗ ತಲೆಗೆ ತಂಪೆರಚುವ ತುಂತುರು ಮಳೆ ಹನಿಸಿದರೂ ಸಾಕು. ಜನರು ಓಡಿ ಹೋಗುತ್ತಾರೆ. ಆದರೆ ತಲೆ ಸುಡುವ ಉರಿ ಬಿಸಿಲನ್ನೂ ಸಹಿಸಿ ದಾರಿ ತುಳಿಯುತ್ತಿರುತ್ತಾರೆ. ಅಂದ ಮೇಲೆ ಜನರಿಗೆ ಒಳಿತು ಕೇಡಿನ ವೇದನೆಯಾಗುವುದಿಲ್ಲವೆಂದಾಯಿತಲ್ಲವೇ ?

ಇಂದ್ರಿಯಂಗಳಿಂದ ಇಷ್ಟು ನುಗ್ಗಲಾಗಿ
ಹುಡುಕಲೇಕೆ ಶಿವನ ಹುಚ್ಚು ಮನುಜ ?
ಇಂದ್ರಿಯಗಳ ತೊರೆದು ಈಶನನ್ನು ಕಾಣು.
ವಿಶ್ವದಾಭಿರಾಮ ಕೇಳು ವೇಮ.

ಮಾನವನ ಇಂದ್ರಿಯಗಳು ಬಹಿರ್ಮುಖವಾಗಿರುತ್ತವೆ. ಏನನ್ನಾದರೂ ಅರಿಯಬೇಕಾದರೆ, ಅನುಭವಿಸಬೇಕಾದರೆ ಅವನು ಬಾಹ್ಯವಸ್ತುಗಳಲ್ಲಿ ವಿಷಯ ಸಂಸರ್ಗ ಹೊಂದುತ್ತಾನೆ. ಆಯಾಸ ಪಡುತ್ತಾನೆ. ಆದರೆ ಪರಮಾತ್ಮನೇನೂ ವಿಷಯ ವಸ್ತುವಲ್ಲ. ಅವನು ವಿಷಯಗಳನ್ನು ಅರಿಯುವ ವಿಷಯೀ ಆಗಿದ್ದಾನೆ. ಅವನು ಸಾಕ್ಷೀ ಚೇತನನಾಗಿದ್ದಾನೆ. ಆದ್ದರಿಂದ

ಅವನನ್ನು ಹೇಗೆ ಹುಡುಕುವುದು ? ಸರ್ವಥಾ ಇಂದ್ರಿಯಗಳ ಮೂಲಕವಲ್ಲ. ಅವನನ್ನು ಬಾಹ್ಯ ಇಂದ್ರಿಯವಾದ ಕಿವಿ ಕೇಳದು. ಒಳಗಿವಿ ಅಂದರೆ ಅರಿವಿನ ಕಿವಿ ಅನಾಹತ ನಾದವನ್ನು ಪ್ರಕಟವಾಗಿ ಹೃದಯದಲ್ಲಿ ಕೇಳುತ್ತದೆ. ಬಾಹ್ಯ ಸ್ಪರ್ಶದಿಂದ ಅವನ ಮೃದುತ್ವ ತಿಳಿಯದು. ಆದರೆ ಭಕ್ತಿಯ ಸ್ಫುರಣೆಯಿಂದ ಮಾರ್ದವತೆ ಉಂಟಾಗಿ ಕೂದಲು ನಿಮಿರಿ ನಿಲ್ಲುತ್ತವೆ. ಹೊರಗಣ್ಣು ಅವನನ್ನು ನೋಡದು. ಏಕೆಂದರೆ ಅವನು ರೂಪಿಲ್ಲದ ಚೆಲುವನು. ನಾಲಗೆಯು ಅವನ ರಸ ರುಚಿಸದು. ಏಕೆಂದರೆ ಅವನು ಹ್ಲಾದಿನೀ ರಸದ ಸ್ರಾವಕನು. ಘ್ರಾಣೇಂದ್ರಿಯವು ಬಾಹ್ಯದಲ್ಲಿ ಅವನನ್ನು ಆಘ್ರಾಣಿಸದು. ಏಕೆಂದರೆ ಅವನ ಸುಗಂಧವು ಆಂತರ್ಯದಿಂದ ಸ್ರವಿಸುತ್ತದೆ. ಆದ್ದರಿಂದ, ಎಲೈ ಹುಚ್ಚು ಮನುಷ್ಯನೇ ? ಪರಮಾತ್ಮನನ್ನು ಭಕ್ತಿಯ ಮೂಲಕ ಹುಡುಕು. ಇಂದ್ರಿಯಾತೀತನಾಗಿ ಹುಡುಕು.

ಆ. ಸೋಂಕಿ ಪರುಷ, ಲೋಹ ಸ್ವರ್ಣವಾದ ರೀತಿ,
ಕಪ್ಪುರಕೆ ಜ್ಯೋತಿ ಕಲೆಯುವಂತೆ.
ಹೂವಿನಲ್ಲಿ ಗಂಧ ಹೊಂದಿಕೊಂಡ ರೀತಿ.
ವಿಶ್ವದಾಭಿರಾಮ ಕೇಳು ವೇಮ.

ಪರುಷ ಮಣಿ ಅಂದರೆ ಸ್ಪರ್ಶಮಣಿಯೆಂಬುದಿದೆ. ಅದನ್ನು ಸ್ಪರ್ಶಿಸಿದ ನಿಮ್ನ ಲೋಹ ವಸ್ತುಗಳೆಲ್ಲವೂ ಸ್ವರ್ಣವಾಗುತ್ತವಂತೆ. ಆ ರೀತಿ, ನಿಸ್ತರಂಗವಾದ ಮನವು ಪರಮಾತ್ಮನ ಅವಸ್ಥೆಯನ್ನು ತಲುಪಿದಾಗ, ಸಾಧಕನೂ ಪರಮಾತ್ಮನೇ ಆಗುತ್ತಾನೆ. ಅದೇ ರೀತಿ, ಕಪ್ಪುರವು ಜ್ಯೋತಿಯೊಂದಿಗೆ ಕಲೆತಾಗ, ತನ್ನನ್ನು ಇಲ್ಲವಾಗಿಸಿ ಜ್ಯೋತಿಯೇ ಆಗುವಂತೆ, ಜೀವಾತ್ಮನು ಪರಮಾತ್ಮನಲ್ಲಿ ಲಯಿಸಿ ಪರಮಾತ್ಮನೇ ಆಗುತ್ತಾನೆ. ಹೂವಿನಲ್ಲಿ ಗಂಧವು ಅವಿನಾಭಾವಿಯಾಗಿ ಹೊಂದಿಕೊಂಡಿರುತ್ತದೆ. ಅದೇ ರೀತಿ, ಅರಳಿದ ಪುಷ್ಪದಂತಿರುವ ಭಕ್ತಿಯಿಂದ ಅರಳಿದ ಹೃದಯದಲ್ಲಿ, ಪುಷ್ಪದಲ್ಲಿಯ ಗಂಧದಂತೆ, ಪರಮಾತ್ಮನ ದಿವ್ಯಗಂಧವು ಸೂಸುತ್ತದೆ.

ಕಂ. ಧನ, ದಾರಾ, ಪುತ್ರೇಷಣ,
ಎನುವಂಥ ಘನಮಹ ಲೋಕವಾಂಛೆಯ ತಿಳಿಯಲ್.
ಮನುಜರೊಡನೆ ಸೇರನೆಂದು,
ಅನುದಿನ ಪರಮನ ನೆನೆವನು, ಮಹಿಯಲಿ, ವೇಮಾ.

ಮನುಷ್ಯನಿಗೆ ಇಹದಲ್ಲಿ ಮೂರು ಮುಖ್ಯ ಬಯಕೆ ಅಂದರೆ ಈಷಣಗಳಿವೆ. ಅವೇ, ಸಂಪತ್ತು, ಸತಿ ಮತ್ತು ಸುತ. ಇವು ಮಾನವನನ್ನು ಲೋಕಾಯತನನ್ನಾಗಿಸುವ ಪ್ರಬಲ ಅಪೇಕ್ಷೆಗಳೆಂದು ಅವನಿಗೆ ತಿಳಿದೊಡನೆ, ಅವನು ಇತರ ಮನುಷ್ಯರೊಡನೆ ಸೇರಬಯಸುವುದಿಲ್ಲ. ಏಕೆಂದರೆ ಹಾಗೆ ಮಾಡಿದರೆ ಈ ಅಪೇಕ್ಷೆಗಳು ವರ್ಧಿಸುತ್ತವೆ. ಆದ್ದರಿಂದ ಅವನು ಇವುಗಳನ್ನು ಗೆಲ್ಲಲು ಮಹಿಯಲ್ಲಿ ಅನುದಿನವೂ ಪರಮನನ್ನು ನೆನೆಯುತ್ತಾನೆ.

ಆ. ಕೆಟ್ಟ ಹಸಿವಿನಿಂದ, ಕಾಮ ಜ್ವಾಲೆಯಿಂದ,
ಕ್ರೋಧದಗ್ನಿಯಿಂದ, ಕುಟಿಲ ಪಡದೆ,
ಒಂದೆ ಮನಸಿನಿಂದ ಇದ್ದೊಡಿಹುದು ಮುಕ್ತಿ.
ವಿಶ್ವದಾಭಿರಾಮ ಕೇಳು ವೇಮ.

ಹಸಿವು ಬಹಳ ಕೆಟ್ಟದ್ದು. ಹಸಿವಾದಾಗ ಬಾಯಿ ಚಪಲವೂ ಉಂಟಾಗಿ, ಮಾಂಸ ಭಕ್ಷಣೆಗೆಂದು ಯಜ್ಞಯಾಗಗಳನ್ನು ಹುಟ್ಟಿಸಿದಂತೆ, ಅಸಂಖ್ಯ ಪೂಜಾ ಸಮಾರಂಭ ಪ್ರಸ್ತಗಳನ್ನು ಕಲ್ಪಿಸಿದೆ. ಕಾಮ ಜ್ವಾಲೆಯು ಮಾನವನಲ್ಲಿ ವಿಧವೆಯರನ್ನು ವಿಧವೆಯಾಗಿ ಮುಂದುವರಿಸುವ, ಹರೆಯದ ಸ್ತ್ರೀಯನ್ನು ದೇವದಾಸಿಯಾಗಿಸುವ, ವೇಶ್ಯಾ ವರ್ಗಕ್ಕೆ ರಾಜಮನ್ನಣೆ ನೀಡುವ, ಅಧರ್ಮವು ಧರ್ಮದಂತೆ ನಡೆದು ಹೋಗಿದೆ. ತನ್ನೊಳಗೆ ಕಾಮ ತೃಪ್ತಿಯಾಗದಾಗ ಸಹಜವಾಗಿ ಕ್ರೋಧದ ಕಿಡಿ ಏಳುತ್ತದೆ. ಈ ಕ್ರೋಧದಗ್ನಿ ಬಾಧಿಸದಂತೆ, ವಕ್ರವಾಗದಂತೆ, ಒಂದೇ ತೆರನಾದ ಮನಸ್ಸಿನಿಂದ ಇದ್ದರೆ ಮುಕ್ತಿಯಾಗುತ್ತದೆ.

ಆ. ಪಟುತ್ವವಹ ಬುದ್ಧಿ ಪರಿಕಿಸಿ ನೋಡುವುದು,
ಕುಟಿಲ ಗುಣಗಳನ್ನು ಕೆಳಗೆ ತುಳಿದು.
ಪಟುತರದಿಂ ನೋಡು ಪಟಲ ಚುಚ್ಚಿ ಹರಿವ.
ವಿಶ್ವದಾಭಿರಾಮ ಕೇಳು ವೇಮ.

ಚತುರ ಬುದ್ಧಿಯಿಂದ ಪರೀಕ್ಷಿಸಿ ನೋಡಿದರೆ, ಅಪ್ರಾಮಾಣಿಕ ಗುಣಗಳಾವವು ಎಂದು ತಿಳಿದು ಬರುತ್ತದೆ. ಅವುಗಳನ್ನು ಕೆಳಗೆ ತುಳಿಯಬೇಕು. ಬಳಿಕ ಬುದ್ಧಿಗೆ ಕವಿದ ಮೋಹದ ಪರದೆಯನ್ನು ಚುರುಕುತನದಿಂದ ಚುಚ್ಚಿ ಹರಿಯಬೇಕು. ಅಂದರೆ ಆತ್ಮ ದರ್ಶನಕ್ಕೆ ಅನುಕೂಲವಾಗುತ್ತದೆ.

ಆ. ಅಡವಿ ತಿರುಗಲಿಲ್ಲ, ಆಗಸದೊಳು ಇಲ್ಲ.
ಅವನಿ ತೀರ್ಥಯಾತ್ರೆಯಲ್ಲಿ ಇಲ್ಲ,
ಒಡಲು ಶುದ್ಧಿ ಗೆಯ್ದು ಒಡೆಯನನ್ನು ಕಾಣು.
ವಿಶ್ವದಾಭಿರಾಮ ಕೇಳು ವೇಮ.

ದೇವರನ್ನು ಎಲ್ಲಿ ಕಾಣಬಹುದು ? ಅವನನ್ನು ಕಾಣಲು ಅಡವಿಗೆ ಹೋಗಿ ತಪಸ್ಸು ಮಾಡಬೇಕಿಲ್ಲ. ಅವನು ಎಲ್ಲಿಯೂ ಮೇಲೆ ಅಂತರೀಕ್ಷದಲ್ಲಿಯೋ, ಆಕಾಶದಲ್ಲಿಯೋ ಸಿಕ್ಕುವಂಥವನಲ್ಲ. ಅವನನ್ನು ಕಾಣಲು ತೀರ್ಥ ತೀರ್ಥಗಳನ್ನು ಅಲೆದು ಯಾತ್ರೆ ಮಾಡಬೇಕಿಲ್ಲ. ಅವನು ನಿಮ್ಮೊಳಗೇ ದರ್ಶನವೀಯುತ್ತಾನೆ. ಆದರೆ, ಕವಿದ ಮಂಜನ್ನು ಸರಿಸಬೇಕು. ಮನಸ್ಸಿನ ಕನ್ನಡಿಯನ್ನು ಮುಸುಕಿದ ಧೂಳನ್ನು ಕೊಡವಬೇಕು. ಮನವನ್ನು ಶುದ್ಧಗೊಳಿಸಿ ಒಡೆಯನನ್ನು ಕಾಣಬೇಕು.

ಕಂ. ಯೋಗವು ಕಷ್ಟವೆ ಆದರು,
ರಾಗ ದ್ವೇಷಗಳು ಮೀರಿ ರಂಜಿಸಿ ಮನದೋಳ್.
ಭೋಗವ ಹೊಂದುತಲಿಪ್ಪದು.
ರೋಗವು ಸಂಸಾರವೆಂದಿಗೂ ತ್ಯಾಜ್ಯ ವೇಮ.

ಸಾಧಕನೆದುರು ಎರಡು ಮಾರ್ಗಗಳಿವೆ. ಒಂದು ಅವ್ಯಕ್ತವೂ ಅಕ್ಷರವೂ ಆದುದನ್ನು ಪಡೆಯುವ ಯೋಗ. ಇನ್ನೊಂದು ತಾಜ್ಯವಾದ, ನಿಂದ್ಯವಾದ, ಸಂಸಾರದಲ್ಲಿ ಸಿಲುಕುವುದು. ಯೋಗ ಮಾರ್ಗವು ಕಷ್ಟಕರವಾಗಿದೆ, ನಿಜ. ಆದರೆ, ವಿಷಯಗಳನ್ನು ಕುರಿತು, ಇಷ್ಟವಾದುದರಲ್ಲಿ ರಾಗ ಮತ್ತು ಅನಿಷ್ಟವಾದುದರಲ್ಲಿ ದ್ವೇಷಗಳು ಮನದಲ್ಲಿ ಅತಿಯಾಗಿ ರಂಜಿಸಿ, ಅವುಗಳ

ಭೋಗ ಹೊಂದುವುದು ಒಂದು ರೀತಿಯ ರೋಗವಿದ್ದಂತೆ. ಅಂಥ ಸಂಸಾರವು ಎಂದಿಗೂ ತ್ಯಾಜ್ಯವಾಗಿದೆ.

ಆ. ಅಡ್ಡ ದಾರಿ ಬಿಟ್ಟು ಆಗಬೇಕು ಯೋಗಿ.
ಭೋಗಕಂಟಿ ಯುಕ್ತಿ ಬಳಸಬೇಡ.
ಸದ್ಗುಣವನು ಮೊದಲು ಸವಿದು ರುಚಿಯ ನೋಡು,
ವಿಶ್ವದಾಭಿರಾಮ ಕೇಳು ವೇಮ.

ಯೋಗಿಯ ದಾರಿ ನಿರ್ಮಲವಾದುದು. ಅಲ್ಲಿ ವಿಷಯ ಭೋಗೇಚ್ಛೆಯ, ಸಂಕಲ್ಪಗಳ, ರಾಗದ್ವೇಷಗಳ ಮಲವೇನಿಲ್ಲ. ಅವೆಲ್ಲ ಅಡ್ಡದಾರಿಯ ಅಡ್ಡಿ ಆತಂಕಗಳು. ಆದ್ದರಿಂದ ಅಡ್ಡದಾರಿಯನ್ನು ಬಿಟ್ಟು ಯೋಗಿಯಾಗಬೇಕು. ಆದರೆ ಒಂದು ಮಾತು ಲಕ್ಷ್ಯದಲ್ಲಿರಲಿ. ನೀನು ವಿಷಯ ಭೋಗದಲ್ಲಿ ನಿರತನಾಗಿ ಅದನ್ನು ಸಮರ್ಥಿಸಿಕೊಳ್ಳಲು, ಯುಕ್ತಿ, ತರ್ಕಗಳನ್ನು ಬಳಸಬೇಡ. ಅದು ಮೂರ್ಖತನವೆನಿಸುತ್ತದೆ. ಮೊದಲು ಸದ್ಗುಣವನ್ನು ಅಳವಡಿಸಿಕೊಂಡು, ಆ ಸನ್ನಡೆಯ ರುಚಿಯನ್ನು ಸವಿದು ನೋಡು.

ಆ. ಆಸೆಗಳನು ಕಡಿದು, ಅಗ್ನಿಯನು ಆರಿಸಿ,
ಕಟ್ಟಿ ಬಗಿದು ಚಡ್ಡಿ, ಕೋಪ ತಗ್ಗಿ,
ಆಸೆ ಬಿಟ್ಟು ಇರುವ ಅವನೆ ಯೋಗಿ ನಿಷ್ಠ.
ವಿಶ್ವದಾಭಿರಾಮ ಕೇಳು ವೇಮ.

ಯೋಗದಲ್ಲಿ ನಿಷ್ಠೆ ಇರುವವನು, ಆಸೆಗಳನ್ನು ಕಡಿದೊಗೆಯಬೇಕು. ಎಲ್ಲದರಲ್ಲಿಯೂ ಅವನು ಉದಾಸೀನನಾಗಿರಬೇಕು. ಅವನಲ್ಲಿ ತೃಷ್ಣೆಯ ಅಗ್ನಿಯು ಆರಿರಬೇಕು. ಅವನು ಚಡ್ಡಿಯನ್ನು ಬಿಗಿದು ಕಟ್ಟಿ ಇಂದ್ರಿಯ ನಿಗ್ರಹ ಮಾಡುತ್ತಿರಬೇಕು. ಮೇಲಾಗಿ ತನ್ನ ಆಸೆಗಳು ಪೂರೈಸದಾಗ ಉಂಟಾಗುವ ಕೋಪವನ್ನೂ ತಗ್ಗಿಸಿಕೊಂಡವನಿರಬೇಕು. ಹೀಗೆ ಯಾರು ಆಸೆಗಳನ್ನು ತೊರೆದಿರುವರೋ, ಆತ್ಮ ತೃಪ್ತರೋ, ಅವರು ಮಾತ್ರ ಯೋಗ ನಿಷ್ಠರು.

ಕಂ. ಶ್ರೀ ರಾಮ ಎಂಬ ಮಂತ್ರವು
ತಾರಕವೆಂದರಿತು ಮನದಿ ಧ್ಯಾನಿಪರಿರಲ್,
ಸಾರವ ಕುಡಿಯುತಿಹ ನರರು,
ಸೇರುವರು ಪರಮ ಪದವಿಯ, ಸನಿಹದಿ, ವೇಮಾ.

'ಮನನಾತ್ ತ್ರಾಯತೇ ಇತಿ ಮಂತ್ರಃ ಇತ್ಯುಚ್ಯತೇ'. ಅಂದರೆ ಯಾವುದು ಮನನ ಮಾಡುವ ಮೂಲಕ ಭವದಿಂದ ಪಾರು ಮಾಡುವುದೋ ಅದು ಭವ ತಾರಕ ಮಂತ್ರವೆನಿಸುತ್ತದೆ. ಇಂಥ ಕೆಲವು ಸಿದ್ಧ ಮಂತ್ರಗಳಲ್ಲಿ 'ಶ್ರೀರಾಮ' ಮಂತ್ರವೂ ಒಂದು. ಅದು ರಕ್ಷಿಸುವುದೆಂದು ಮನದಲ್ಲಿಯೇ ಧ್ಯಾನಿಸುವ ನರರು, ಅದರಿಂದ ಒಸರುವ ಭಕ್ತಿ ರಸವನ್ನು ಕುಡಿಯುತ್ತಾರೆ. ಮತ್ತು ಮಸ್ತಿಗೇರಿ, ಸನಿಹದಲ್ಲಿಯೇ ಪರಮ ಪದವಿಯನ್ನು ಸೇರುತ್ತಾರೆ.

ಪ್ರಣವ ಮಂತ್ರ ಮಹಿಮೆ ಭಾವಿಸಲು ಲಿಂಗವು,
ಮೂರು ಮೂರ್ತಿಗಳಲಿ ಮನಸು ಇರಿಸಿ,

ಅವನನರಿತುಕೊಳಲು ಅನ್ಯರಿಗೆ ಶಕ್ಯವೇ ?
ವಿಶ್ವದಾಭಿರಾಮ ಕೇಳು ವೇಮ.

'ಪ್ರಣವನರಿಯದಕ ಭಕ್ತನಾಗಲಾರ'. ನಿಜ. ಅನಾಹತ ಚಕ್ರದಲ್ಲಿ ಅನಾಹತ ನಾದವಾಗಿ ಪ್ರಣವ ಮಂತ್ರ ಧ್ವನಿಸುವ ಅವಸ್ಥೆ ಮುಟ್ಟುವ ವರೆಗೆ ಸಾಧಕನನ್ನು ನಿಷ್ಠ ಭಕ್ತನೆನ್ನಲಾಗದು. ಆ ಪ್ರಣವ ಮಂತ್ರದ ಮಹಿಮೆ ಘನವಾಗಿದೆ. ಅದು ಅಉಮ ಅಕ್ಷರಗಳ ಸಂಪ್ರಟವಾಗಿದೆ. ಅ+ಉ=ಓ, ಓ+ಮ್. ಓಂ, ಅ ಎಂದರೆ ಸೃಷ್ಟಿಕರ್ತ ಬ್ರಹ್ಮನ ಲಿಂಗ. ಉ ಎಂದರೆ ರಕ್ಷಣ ಕರ್ತನಾದ ವಿಷ್ಣುವಿನ ಲಿಂಗ. ಮ ಎಂದರೆ ಲಯಕರ್ತನಾದ ಶಿವನ ಲಿಂಗ. ಹೀಗೆ ತ್ರಿಮೂರ್ತಿಗಳಲ್ಲಿ ಮನವನ್ನು ಇರಿಸಿ, ಮಂತ್ರ ಮಹಿಮೆಯನ್ನು ಪರಿಭಾವಿಸಲು ಅದು ಪರಮೇಶ್ವರನ ಲಿಂಗವನಿಸುತ್ತದೆ. ಅವನನ್ನು ಹೇಗೆ ಅರಿತುಕೊಳ್ಳುವುದು ? ಅವನು ಸ್ವಯಂ ಜ್ಯೋತಿ. ಅಂದರೆ ತಾನೇ ತನ್ನನ್ನು ಅರಿತುಕೊಳ್ಳುವವನು. ಅಂದರೆ ಅವನನ್ನು ತಿಳಿಯುವವನು ಅವನೇ ಆಗಬೇಕು. ಒಂದು ಸಕ್ಕರೆಯ ಗೊಂಬೆಯು ಸಾಗರವನ್ನು ಅಳೆಯುವುದೆಂದರೇನು ? ತನ್ನನ್ನು ಸಾಗರದಲ್ಲಿ ಕರಗಿಸಿಕೊಂಡು ಸಾಗರವಾಗುವುದು.

ಆ. ಪಂಚವರ್ಣವರಿಯೆ ಪರಮನನ್ನು ಅರಿವ,
ಪರಮನರಿಯೆ ನಿತ್ಯ ಪ್ರಜ್ವಲಿಪನು.
ಪ್ರಜ್ವಲಿಸುವ ಅವನೆ ಪರಮಾತ್ಮನಪ್ಪನು.
ವಿಶ್ವದಾಭಿರಾಮ ಕೇಳು ವೇಮ.

ಪಂಚ ವರ್ಣಗಳ ಮಂತ್ರವೇ ಪಂಚಾಕ್ಷರೀ ಮಂತ್ರವು. ಯಾವುದು ಅಕ್ಷರ ? ಕ್ಷರ ಇಲ್ಲವೆ ನಾಶವಿಲ್ಲದ್ದು, ಅಕ್ಷರ. ಅಕ್ಷರವು ಧ್ವನ್ಯಾತ್ಮಕವಿರುತ್ತದೆ. ಧ್ವನಿ ಇರುವಲ್ಲಿ ವರ್ಣ ಇಲ್ಲವೆ ಬಣ್ಣವಿರಲೇ ಬೇಕು. ಬೇರೆ ಬೇರೆ ವರ್ಣಗಳ ತರಂಗಗಳು ಬೇರೆ ಬೇರೆ. ಇದನ್ನು ಭೌತ ಶಾಸ್ತ್ರದ ಪ್ರಯೋಗ ಶಾಲೆಯಲ್ಲಿ ನೋಡಬಹುದು. ಹೀಗೆ ಪಂಚ ವರ್ಣಗಳ ತರಂಗಗಳನ್ನು ಅರಿತರೆ ಪರಮನನ್ನು ಅರಿತಂತೆ. ಯಾವಾಗ ಸಾಧಕನು ಪರಮನನ್ನು ಅರಿಯುವನೋ, ಆಗ ಅವನು ಪ್ರಜ್ವಲಿಸುತ್ತಾನೆ. ಅವನ ಮುಖದಲ್ಲಿ ಕಳೆ ಬರುತ್ತದೆ. ಧ್ವನಿ ಮಧುರವಾಗುತ್ತದೆ. ಯಾವನು ಪ್ರಜ್ವಲಿಸುವನೋ, ಅವನೇ ಪರಮಾತ್ಮನೆನಿಸುತ್ತಾನೆ.

ಇನ್ನೂ ಒಂದು ಸಿದ್ಧ ಮಂತ್ರವಿದೆ. ಅದರಲ್ಲಿ ಅಕ್ಷರಗಳು ಎಂಟು. ಅವನ ಲಿಂಗವೂ ಅನಾಹತ ಪ್ರಣವವೇ. ಅದು ಬಾಹ್ಯದ ಶಬ್ದವೇನಲ್ಲ. ಅದು ಹೃದಯಲ್ಲಿ ಮೊಳಗುತ್ತಿರುವ, ಬಾರಿಸದೆ ಧ್ವನಿಸುವ, ಅನಾಹತ ಶಬ್ದ. ಅದನ್ನು ಕೇಳಬಹುದು ಒಳಗಿವಿಯಿಂದ. ಆದರೆ ಧ್ವನಿಗೆ ಕಾರಣವಾಗಿ ಯಾವುದೂ ಕಾಣಬರದು.

ಆ. ಎಂಟು ಅಕ್ಷರಗಳಲಿ ಏರ್ಪಡುವುದನರಿತು,
ಕೇಳಿ, ಕಂಡು ಬರದೆ, ಬೆಳಗುವ.
ತನುವ ಮರೆತು ತಿಳಿಯೆ ತತ್ತ್ವಜ್ಞನಪ್ಪನು.
ವಿಶ್ವದಾಭಿರಾಮ ಕೇಳು ವೇಮ.

ಎಂಟು ಅಕ್ಷರಗಳ ಸಿದ್ಧ ಮಂತ್ರವೂ ಇದೆ. ಅದೇ 'ಓಂ ನಮೋ ನಾರಾಯಣಾಯ'

ಇನ್ನೊಂದು ಜನಜನಿತ ಸಿದ್ಧ ಮಂತ್ರವೆಂದರೆ, 'ಓಂ ನಮೋ ವಾಸುದೇವಾಯ'. ಈ ಅಷ್ಟಾಕ್ಷರೀ ಮಂತ್ರ ಮನನದಿಂದ, ಪ್ರಣವ ನಾದವೆನಿಸುವ ಓಂಕಾರವು ಒಳಗಿವಿಗೆ ಕೇಳಿ ಬಂದು ಪರಮಾತ್ಮನ ಲಿಂಗವೆನಿಸುತ್ತದೆ. ಆದರೆ ಪರಮಾತ್ಮನ ರೂಪವೇನೂ ಕಾಣಬರದು. ಹೀಗೆ ಪರಮಾತ್ಮನ ಕುರುಹು ಬೆಳಗುತ್ತದೆ. ಆಗ ಸಾಧಕನು ತನುವನ್ನು ಮರೆಯುತ್ತಾನೆ ಮತ್ತು ಮುಂದೆ ತತ್ತ್ವವನ್ನು ತಿಳಿಯುತ್ತಾನೆ.

ಏಳು ಅಕ್ಷರಗಳಲಿ ಆನಂದ ಹೊಂದುತ,
ಅಲ್ಲಿ ಇಲ್ಲಿ ಮುಕ್ತಿ ಅರಳಿ ಉಂಟು.
ಅಲ್ಲಿ ಇಲ್ಲಿ ತಿಳಿಯೆ, ಅವನೆ ಹೋಗು ಬ್ರಹ್ಮ.
ವಿಶ್ವದಾಭಿರಾಮ ಕೇಳು ವೇಮ.

'ನಮೋ ನಾರಾಯಣಾಯ' ಎಂಬ ಏಳು ಅಕ್ಷರಗಳ ಸಿದ್ಧ ಮಂತ್ರವೂ ಇದೆ. ನಾರ ಎಂದರೆ ಭಕ್ತಿ. ಅಯ ಎಂದರೆ ಮಾರ್ಗ. ಭಕ್ತಿಗೆ ಮಾರ್ಗವಾದವನೇ ನಾರಾಯಣನು. ಅವನ ಮಹಿಮೆಗೆ ಬೆರಗಾಗಿ ಭಕ್ತನು ಮಣಿಯುತ್ತಾನೆ. ಏಳು ಅಕ್ಷರಗಳ ಈ ಸಿದ್ಧ ಮಂತ್ರದಲ್ಲಿ ಸಾಧಕನು ಆನಂದವನ್ನು ಹೊಂದುತ್ತಾನೆ. 'ಆನಂದಂ ಬ್ರಹ್ಮ ಇತ್ಯಾಹುಃ' ಆನಂದವೆಂದರೆ ಬ್ರಹ್ಮವೆನ್ನುತ್ತಾರೆ. ಹೀಗೆ ಸಪ್ತಾಕ್ಷರೀ ಮಂತ್ರ ಮಹಿಮೆಯಿಂದ ಇಹದಲಿ ಮತ್ತು ಪರದಲ್ಲಿ ಮುಕ್ತಿಯು ಅರಳಿ ಉಂಟು. ನಾರಾಯಣನನ್ನು ಇಲ್ಲಿ ಮತ್ತು ಅಲ್ಲಿ ಎಂದರೆ ಎಲ್ಲೆಲ್ಲಿಯೂ ತಿಳಿದರೆ, ಅವನೇ ಬ್ರಹ್ಮನಾಗುತ್ತಾನೆ.

ಕಂ. ಮೂವತ್ತೆರಡಕ್ಷರಗಳ
ಓದಿ ತಿಳಿಯುತಿರೆ, ಮುಪ್ಪುರಿಗೊಂಡಿಹ ಮೂಲಂ.
ತೀವ್ರ ಕಡೆಗಾಗುವನವ,
ಒಪ್ಪ ನುಡಿವೆ ; ಮಹಿಮೆ ನಿನಗೆ ತಪ್ಪದು ವೇಮಾ.

ಇತ್ತೀಚೆಗೆ ಜಗತ್ತಿನಾದ್ಯಂತ ಪ್ರಚುರಗೊಂಡ, ಮೂವತ್ತೆರಡು ಅಕ್ಷರಗಳನ್ನುಳ್ಳ ಸಿದ್ಧ ಮಂತ್ರವೂ

'ಹರೇ ರಾಮ ಹರೇ ರಾಮ, ರಾಮ ರಾಮ ಹರೇ ಹರೇ,
ಹರೇ ಕೃಷ್ಣ ಹರೇ ಕೃಷ್ಣ, ಕೃಷ್ಣ ಕೃಷ್ಣ ಹರೇ ಹರೇ' ಎಂಬ

ಮೂವತ್ತೆರಡು ಅಕ್ಷರಗಳನ್ನುಳ್ಳ ಮಂತ್ರವಿದೆ. ಇದರಲ್ಲಿ ಭಕ್ತಿ ಭಾವವಿದೆ, ಮಂತ್ರ ಚೈತನ್ಯವಿದೆ. ಮನನ ಮಾಡುವವರ ಮನ ಮುದಗೊಳಿಸುವ ಅಗಾಧ ಶಕ್ತಿಯಿದೆ. ಹೀಗೆ ಯಾರು ಈ ಮಂತ್ರಾರ್ಥವನ್ನು ಚೆನ್ನಾಗಿ ತಿಳಿಯುವರೋ, ಅವರ ಮನವು ಮುಪ್ಪುರಿಗೊಂಡು ಮೂಲ ತತ್ತ್ವದಲ್ಲಿ ಲಯಿಸುತ್ತದೆ. ಅಂಥ ಮಂತ್ರವನ್ನು ಒಪ್ಪವಾಗಿ ನುಡಿದರೆ, ತೀವ್ರವೇ ಭವದಿಂದ ಕಡೆಗಾಗುವನು. ವೇಮನಾ ! ಇದರ ಮಹಿಮೆ ನಿನಗೆ ತಪ್ಪದೆ ಬರುತ್ತದೆ.

ಕೊನೆಯದಾಗಿ, ಇನ್ನೊಂದು ಸಿದ್ಧ ಮಂತ್ರ ಕುರಿತು ವಿವೇಚಿಸುವಾ.

ಕಂ. ಆರೆರಡಕ್ಷರ ಜಪದಲಿ,
ಹೋರಾಡಲು ಮುಕ್ತಿಯುಂಟು, ಯತ್ನಿಸುತಿಪ್ಪರ್.
ಮಾರು ನುಡಿಯದೆ, ಮನದೊಳಗೆ
ಹೋರಿ ತಾವೇ ಪಡೆದಿಹರು ಪೂರ್ಣವ ವೇಮಾ.

ಆರೆರಡು ಅಂದರೆ ಹನ್ನೆರಡು ಅಕ್ಷರದ ಮಂತ್ರವೂ ಸಿದ್ಧ ಮಂತ್ರವೆನಿಸಿದೆ. ಅದೆಂದರೆ 'ಶ್ರೀ ರಾಮ ಜೈ ರಾಮ ; ಜಯ ಜಯ ರಾಮ'. ಈ ದ್ವಾದಶ ಅಕ್ಷರದ ಮಂತ್ರವನ್ನು ಜಪಿಸುತ್ತ ಮನದ ಅವಗುಣದೊಂದಿಗೆ ಹೋರಾಡುತ್ತ ಯತ್ನಿಸುತ್ತಿದ್ದರೆ, ಸಾಧಕನಿಗೆ ಯುಕ್ತಿಯುಂಟು. ಇಂಥ ಸಾಧಕರು ಹಾಗೆ ಹೀಗೆ ಎಂದು ಮಾರು ನುಡಿಯದೆ, ಮನದಲ್ಲಿಯೇ ಸತ್ತ್ವ ಶುದ್ಧಿಗಾಗಿ ಹೋರಿ, ಕೋನೆಗೆ ತಾವೇ ಪೂರ್ಣವನ್ನು ಪಡೆಯುತ್ತಾರೆ.

ಕಂ. ಅಕ್ಷರ ಪುಟಕಾರಂಭಿಸಿ,
ಲಕ್ಷಗಳನೋದುವುದೇತಕೆ ? ಲಲಿತವದು ಪ್ರ-
ತ್ಯಕ್ಷ ವಹುದು 'ಶಿವ' ಎಂಬೆರ-
ಡಕ್ಷರಗಳು, ಮನಕ್ಕೆ ಶುದ್ಧಿ, ನಿಕ್ಕಿಯು ವೇಮಾ.

ಪರಮಾತ್ಮನನ್ನು ಅರಿಯಲು ಅಕ್ಷರ ಪುಟಗಳನ್ನಾಗಲಿ, ಗ್ರಂಥದ ಸಂಪುಟಗಳನ್ನಾಗಲಿ ಲಕ್ಷಗಟ್ಟಲೆ ಅಕ್ಷರಗಳನ್ನಾಗಲಿ ಓದುವುದೇತಕ್ಕೆ ? ಅದರ ಅಗತ್ಯವಿಲ್ಲ. ಸಿದ್ಧ ಪುರುಷರ ಪ್ರತ್ಯಕ್ಷ ಅನುಭವವೇ ತಿಳಿಸುವಂತೆ, 'ಶಿವ' ಎಂಬ ಎರಡು ಅಕ್ಷರಗಳು ಸಾಕು. ಅವು ಮಂಗಳಕಾರಿಯಾಗಿವೆ. ಕಲ್ಯಾಣಕಾರಿಯಾಗಿವೆ. ಅವುಗಳ ನಿತ್ಯಪಠಣೆಯಿಂದ ಮನದ ಶುದ್ಧಿಯು ನಿಖಿರವಾಗಿ ಆಗುತ್ತದೆ.

ಶಿವನ ಪೂಜೆಯಿಂದ ಅಣಿಮಾದಿ ಅಷ್ಟೈಶ್ವರ್ಯಗಳೂ, ಅತುಲ ಮಹಿಮೆಗಳೂ ಭಕ್ತನಿಗೆ ಪ್ರಾಪ್ತವಾಗುತ್ತವೆ.

ಗೀತ. ಖಂಡ ಪರಶುವಿನ ಪೂಜಿಸೆ, ದಾಂಡಿಗ ವಿ-
ಭೂತಿಯೀವನು ; ಅದರಿಂ, ನೀತಿ ಹೊಂದಿ,
ಶಿವನ ಪ್ರಾರ್ಥಿಸುತಿರಲು, ಅನುಭವವ ಹೊಂದಿ,
ಗೆಯ್ವನೈಶ್ವರ್ಯವೀವುದರಿಂದ ಘನತೆ ವೇಮ.

ಖಂಡ ಪರಶು ಎಂದರೆ ಶಮ. ಶಿವನ ಪೂಜೆಯನ್ನು ಮಾಡಿದರೆ ಅಂದರೆ ಸೇವೆಯನ್ನು ಮಾಡಿದರೆ ಅವನು ಅಷ್ಟೈಶ್ವರ್ಯಾದಿ ಭಾರಿ ಭಾರಿ ವಿಭೂತಿಯನ್ನು, ಐಶ್ವರ್ಯವನ್ನು ದಯಪಾಲಿಸುತ್ತಾನೆ. ಅದರಿಂದ ಭಕ್ತನು ನೀತಿ ಮಾರ್ಗವನ್ನು ಹೊಂದಿ, ಶಿವನನ್ನು ಪ್ರಾರ್ಥಿಸುತ್ತಿರುತ್ತಾನೆ. ಆಗ ಅವನಿಗೆ ಅನೇಕ ದಿವ್ಯಾತಿದಿವ್ಯ ಅನುಭವಗಳಾಗುತ್ತವೆ. ಶಿವನು ತನಗೆ ಈಶ್ವರತ್ವ ಗುಣಗಳನ್ನು ಉದ್ದೀಪಿಸುವುದರಿಂದ ಶಿವನನ್ನು ಹೆಚ್ಚಾಗಿ ಪ್ರಾರ್ಥಿಸುತ್ತಾನೆ. ಇದುವೇ ಘನತೆಯನ್ನು ನೀಡುತ್ತದೆ.

ಆ. ಅರಿವಿನ ಶಿವಪೂಜೆ ಬರಿದಲ್ಲವೆಂದೂ ;
ಮೊದಲು ಹಿಡಿದ ಪಟ್ಟು, ಬದಲಿಸದಿರು.

ಮೊದಲ ಬಿಟ್ಟು ಗೋಡೆ ತುದಿ ಕಟ್ಟಲುಳಿವುದೆ ?
ವಿಶ್ವದಾಭಿರಾಮ ಕೇಳು ವೇಮ.

ಶಿವಪೂಜೆಯನ್ನು ಮೂಢ ಭಕ್ತಿಯಿಂದ ಮಾಡುವವರೂ ಇದ್ದಾರೆ. ಜ್ಞಾನ ಭಕ್ತಿಯಿಂದ ಮಾಡುವವರೂ ಇದ್ದಾರೆ. ಅರಿವಿನ ಶಿವ ಪೂಜೆಯಲ್ಲಿ ಮೂರ್ತಿ ಪೂಜೆಗಾಗಲಿ, ಪತ್ರ ಪುಷ್ಪಗಳಿಗಾಗಲಿ ಸ್ಥಾನವಿಲ್ಲ. ಅರಿವಿನ ಶಿವ ಪೂಜೆಯಲ್ಲಿ, ಶಿವನ ಸ್ವರೂಪವನ್ನು ರೂಹಿಲ್ಲದ ಬೆಲುವನಂತೆ, ನಿಶ್ಯೂನ್ಯ ಬಯಲಿನಂತೆ ಕಾಣಬೇಕು. ಇದಕ್ಕಾಗಿ ಮನವನ್ನು ಶುದ್ಧಗೊಳಿಸಬೇಕು. ನಿಸ್ತರಂಗಗೊಳಿಸಬೇಕು. ಹೀಗೆ ಮಾಡುತ್ತ ಹೋಗುವುದು ವ್ಯರ್ಥವೇನೂ ಅಲ್ಲ. ಈ ದಿಶೆಯಲ್ಲಿ ಮೊದಲು ಹಿಡಿದ ಪಟ್ಟನ್ನು ಬದಲಿಸಬೇಡ. ಏಕೆಂದರೆ, ಯಾರೇ ಆಗಲಿ, ಗೋಡೆಯನ್ನು ಕಟ್ಟುವಾಗ, ಮೊದಲು ಅಡಿಪಾಯ ಬಿಟ್ಟು ತುದಿಗೆ ಕಟ್ಟುವರೇನು ? ಇಲ್ಲವಲ್ಲ.

ಆ. ಶಿವನ ಕರುಣೆ ಇರದೆ ಜವದಾಟಿ ಕಾಣರು !
ಆದಿ ಮೂಲವಾದ ಆತ್ಮ ಗೌಪ್ಯ.
ಹೋಗಿ, ಸೇರಿ, ಹೊಂದಿ, ಪೂರ್ಣವ ಹೊಂದಿರೋ.
ವಿಶ್ವದಾಭಿರಾಮ ಕೇಳು ವೇಮ.

ಭಕ್ತನ ಪರಮ ಅಭೀಪ್ಸೆ ಫಲಿಸಬೇಕಾದರೆ, 'ಮಹತ್ ಕೃಪಯೈವ ; ಭಗವದ್ ಕೃಪ ಲೇಶಾದ್ವಾ' ಎಂದು ಹೇಳುತ್ತಾರೆ. ಶಿವನ ಕರುಣೆ ಇರದೆ ಮರದೆಲೆಯೂ ಅಲುಗದು, ಎಂದೂ ಹೇಳುತ್ತಾರೆ. ಅಂದ ಮೇಲೆ ಶಿವನ ಕರುಣೆ ಇಲ್ಲದೆ ಯಮನನ್ನು ದಾಟಿ, ಮೃತ್ಯುಂಜಯನನ್ನು ಕಾಣರು. ಆತ್ಮವು ಆದಿಗೇ ಮೂಲವಾಗಿದೆ. ಅಂದರೆ ಅದು ಮನಸ್ಸು ಉದಿಸುವ ಮುನ್ನಿನ ಸತ್ತೆಯಾಗಿದೆ. ಮೇಲಾಗಿ ಅದು ಪಂಚ ಕೋಶಗಳಿಂದ ಮುಚ್ಚಿ ಗೌಪ್ಯವಾಗಿದೆ. ಇದನ್ನು ಪೂರ್ಣವಾಗಿ ಹೊಂದಬೇಕಾದರೆ, ಅರಿಷಡ್ವರ್ಗಗಳೊಡನೆ ಹೋರಾಡಬೇಕು. ಪರಿಶುದ್ಧರಾಗಿ, ಪರಂಧಾಮವನ್ನು ಸೇರಬೇಕು. ಮತ್ತು ಆತ್ಮದ ನಿಶ್ಯೂನ್ಯ ಬಯಲಲ್ಲಿ ಹೊಂದಬೇಕು. ಆಗ ಮಾತ್ರ ಅಖಂಡವನ್ನು, ಪೂರ್ಣವನ್ನು ಹೊಂದಬಹುದು.

ಅರಸಿ ಧೈರ್ಯ ಮಾಡಿ, ಅತಿಶಯ ಕಾಮಿಯಿರೆ,
ನಿನ್ನ ನಂಬಿ ನಿಷ್ಠೆ ನೆಗೆಯುತಿಹುದು.
ನಿನ್ನ ಪೂಜಿಸೆ ಭಕ್ತಿ ನಿಶ್ಚಯಾಗಿ ಉಂಟು.
ವಿಶ್ವದಾಭಿರಾಮ ಕೇಳು ವೇಮ.

ಒಬ್ಬನು ಅಲ್ಪ ಕಾಮಿಯಾಗಿರಬಹುದು. ಒಬ್ಬನು ಅನಂತ ಇಲ್ಲವೆ ಅತಿಶಯ ಕಾಮಿಯಾಗಿರಬಹುದು. ಅಲ್ಪ ಕಾಮಿಯು ಸಾಂತವಸ್ತುವನ್ನು ಬಯಸುತ್ತಾನೆ. ಆದರೆ ಭೋಗಿಸಿದಷ್ಟೂ ತೃಷ್ಣೆಯು ಹೆಚ್ಚುತ್ತದೆ. ಏಕೆಂದರೆ ಒಳಗಿನ ದಾಹವು ಅತಿಶಯವಿರುತ್ತದೆ. ಹಾಗಾಗಿ ಅದು ಅನಂತವನ್ನು ಕಾಮಿಸುತ್ತದೆ. ಹೀಗಾಗಿ ಅವನು ಅನಂತ ಪರಮಾತ್ಮನನ್ನು ನಂಬಿ, ಅವನ ನಿಷ್ಠೆಯು ಪರಮನಲ್ಲಿಯೇ ನೆಲೆಗೊಳ್ಳಲು ನಿಶ್ಚಯವಾಗಿಯೂ ಭಕ್ತಿ ಕುದುರುತ್ತ ಉಂಟು.

ಶಿವನ ನಂಬಿದ ಹೃದಯ ಶುದ್ಧಾಂತರಂಗನು,
ಕಾಲ ಕರ್ಮಗಳನು ಕೆಳಗೆ ತುಳಿದು,

ಮೇಲು ಪೂರ್ಣ ಪದವಿ ಮೆಚ್ಚುವ ಶಿವಯೋಗಿ.
ವಿಶ್ವದಾಭಿರಾಮ ಕೇಳು ವೇಮ.

ಅಂತರಂಗದಲ್ಲಿ ಶುದ್ಧವಾದ ಹೃದಯ ಹೊಂದಿದ, ಶಿವನನ್ನು ನಂಬಿದ ಶಿವಯೋಗಿಗಳೂ ಇರುತ್ತಾರೆ. ಅವರು ದೇಶ, ಕಾಲ ನಿಮಿತ್ತಗಳ ಅಂಕಿತಕ್ಕೆ ಒಳಪಡರು.. ಕರ್ಮಗಳ ಜಾಲದಲ್ಲಿ ಸಿಕ್ಕು ಬೀಳರು, ಕಾಲ ಕರ್ಮಗಳನ್ನು ಕೆಳಗೆ ತುಳಿದು, ಊರ್ಧ್ವದ ಪೂರ್ಣ ಪದವಿಯನ್ನು ಮೆಚ್ಚುತ್ತಾರೆ.

ಗೀ. ಅಂತರಾತ್ಮಾನುಭವ ಹೊಂದಿ ಆರ್ಯ ಮತಿಲಿ,
ಸಂತತಾರ್ಚನ ಮನದಿ ನಿಷ್ಠೆ ಸಲಿಸಿ ಕೋರಿ,
ಸುತ್ತಿ ಏರಿದವನೆ ಹೋಗು, ಶ್ರೇಷ್ಠನಿಹನು.
ಅವನಿಗಾರು ಸಮರು ? ಅವನೆ ಕಾಣು ವೇಮಾ.

ಆತ್ಮವು ಆಕಾಶದಂತೆ ಬೃಹತ್ತಾಗಿದೆ. ಘಟದೊಳಗೂ ಇದೆ ; ಎಲ್ಲೆಡೆಗೂ ಇದೆ. ಘಟದೊಳಗೆ ಇರುವ ಅಂಶಕ್ಕೆ ಘಟಾಕಾಶವೆನ್ನುತ್ತೇವೆ. ಎಲ್ಲೆಡೆಗೆ ಇರುವಾಗ ಬೃಹದಾಕಾಶವೆನ್ನುತ್ತೇವೆ. ಅದೇ ರೀತಿ, ದೇಹದಲ್ಲಿ ಇರುವ ಆತ್ಮಕ್ಕೆ ಅಂತರಾತ್ಮ ಎನ್ನುತ್ತೇವೆ. ಎಲ್ಲೆಡೆ ಇರುವ ಆತ್ಮಕ್ಕೆ ಪರಮಾತ್ಮ ಎನ್ನುತ್ತೇವೆ. ಶ್ರೇಷ್ಠವಾದ ಬುದ್ಧಿಯಿಂದ ಅಂತರಾತ್ಮನ ಅನುಭವವನ್ನು ಹೊಂದಿ, ಮನದಲ್ಲಿ ಯಾವಾಗಲೂ ಅರ್ಚನ ಮಾಡಿ, ಆ ಅಂತರಾತ್ಮನಲ್ಲಿ ನಿಷ್ಠೆಯನ್ನು ಸಲ್ಲಿಸಿ, ಅವನಲ್ಲಿ ಒಂದಾಗಲು ಕೋರಿ, ಜೀವ ಹಂಸವು ಮೂಲಾಧಾರದಿಂದ ಉದಿಸಿ, ಒಂದೊಂದೇ ಚಕ್ರವನ್ನು ಸುತ್ತುತ್ತ ಏರಿದವನೇ ಶ್ರೇಷ್ಠನಾಗಿದ್ದಾನೆ. ಅಂಥ ಸಿದ್ಧ ಯೋಗಿಗೆ ಯಾರು ಸಮವೆನ್ನೋಣ ? ಅವನಿಗೆ ಅವನೇ ಸಮ ; ಕಾಣು.

ಯೋಗಿಯ ಅಂತಿಮ ಅವಸ್ಥೆ :

ಆ. ದಾಟಿ ಬಂದು ನದಿಯೆ ದಡ ತಲುಪಿದ ಪುರುಷ,
ನಾವೆಯನಿಚ್ಛಿಸದೆ ನಡೆಯುವಂತೆ.
ಯೋಗ ಪುರುಷಗೇಕೆ ಒಡಲು ಚಿಂತೆಯೆಲ್ಲ ?
ವಿಶ್ವದಾಭಿರಾಮ ಕೇಳು ವೇಮ.

ಜೀವಾತ್ಮನು ಪರಮಾತ್ಮನಲ್ಲಿ ಸೇರಿ ಒಂದಾಗುವುದಕ್ಕೆ ಯೋಗವೆನ್ನುತ್ತಾರೆ. ಪರಮಾತ್ಮನಿಗೆ ದೇಹಾತ್ಮ ಬುದ್ಧಿಯಿಲ್ಲ. ಅವನು ನಿಸ್ಸಂಗನು, ಪರಿಶುದ್ಧನು. ಸಾಧಕನು ಭವವೆಂಬ ನದಿಯನ್ನು ದಾಟಿ ದಡವನ್ನು ತಲುಪಿದ ನಂತರ, ಅವನು ಅಲೆದಾಡಲು ನಾವೆಯನ್ನು ಇಚ್ಛಿಸುವುದಿಲ್ಲ. ಯೋಗಿಗೆ ಹಸಿವೆ ನೀರಡಿಕೆಗಳ ಬಾಧೆ ಇರದು. ರಾಗ ದ್ವೇಷಾದಿ ದ್ವಂದ್ವಗಳಿರವು. ಆದ್ದರಿಂದ ಯೋಗಿಯಾದವನಿಗೆ ಒಡಲು ಚಿಂತೆಯೆಲ್ಲ ಏಕೆ ? ಆಹಾರ ಪಾನೀಯಗಳು ಹೇಗೋ ದೊರೆಯುತ್ತವ. ಅವುಗಳ ಚಿಂತೆ ಅವನಿಗೆ ಬೇಡ.

ಆ. ಒಡವೆ ಸಿಗುವ ತನಕ ಒಪ್ಪಬೆಳಕು ಬೇಕು.
ಒಡವೆ ಸಿಕ್ಕ ಬಳಿಕ ಗೊಡವೆಯೇಕೆ ?

ದೇವರಾದ ಬಳಿಕ ದೇಹದ ತೊಡಕೇಕೆ ?
ವಿಶ್ವದಾಭಿರಾಮ ಕೇಳು ವೇಮ.

ಕತ್ತಲು ಕವಿದಾಗ ಒಂದು ಒಡವೆಯನ್ನು ಹುಡುಕಬೇಕಾದರೆ, ಅದು ಎಲ್ಲಿದೆ ? ಹೇಗಿದೆ ? ಎಂದು ತೋರಲು ಸರಿಯಾದ ಬೆಳಕು ಬೇಕು. ಆದರೆ ಒಡವೆಯು ಸಿಕ್ಕ ಬಳಿಕ ಆ ಬೆಳಕಿನ ಅಗತ್ಯ ಇರದು. ಅದರ ಗೊಡವೆಯೇ ಇರದು. ಅದೇ ರೀತಿ ದೇವರನ್ನು ಹುಡುಕುವ ಭಕ್ತನಿಗೆ ದಾರಿ ತೋರುವ ದೀಪವಾಗಿ, ಗುರು ಬೇಕಾದಂತೆ, ಧರ್ಮ ಸಾಧನ ಉಪಕರಣವಾಗಿ ದೇಹವೂ ಬೇಕು. ಆದರೆ ದೇವರಾದ ಬಳಿಕ ದೇಹದ ತೊಡಕು ಏಕೆ ? 'ಆತ್ಮವಿದಃ ಆತ್ಮೈವ ಭವತಿ'. ಆತ್ಮವರಿತವನು ಆತ್ಮವೇ ಆಗುತ್ತಾನೆ. ಆತ್ಮವಿದನಿಗೆ ದೇಹದ ತೊಡಕು ಏಕೆ ?

ಆ. ವರಿಸಿ ಹುಡುಕೆ ಸಿಗುವ ವೇದಾಂತ ವೇದ್ಯನು.
ಹುಡುಕುವವನ ತಾನೆ ಹುಡುಕುತಿಹನು.
ಹುಡುಕಲರಿತ ಅಂಥ ಕಡು ಜ್ಞಾನಿಗಳಿಹರೆ ?
ವಿಶ್ವದಾಭಿರಾಮ ಕೇಳು ವೇಮ.

ವೇದಾಂತವೇದ್ಯನು, ಬ್ರಹ್ಮ ಅರ್ಥಾತ್ ಆತ್ಮ. ವಿಭಿನ್ನ ಕೋಶಗಳಿಂದ ಆಚ್ಛಾದಿತನಾದ ಅವನನ್ನು ವರಿಸಿ ಹುಡುಕಲು ಸಿಕ್ಕುತ್ತಾನೆ. ಮೇಲಾಗಿ ತನ್ನನ್ನು ಹುಡುಕುವವನನ್ನು ತಾನೇ ಹುಡುಕುತ್ತಿರುವನು. ಅವನನ್ನು ತತ್ತ್ವಶಃ ಹುಡುಕಲು ಅರಿತಂಥ ಕಡು ಜ್ಞಾನಿಗಳು ಇರುವರೇ ?

ಮುಂಡಕೆ ಉಪನಿಷತ್ತು ಸಹ ಇದೇ ರೀತಿ ಹೇಳಿದೆ.

''ಈ ಆತ್ಮನು ಪ್ರವಚನದಿಂದ ಲಭ್ಯನಲ್ಲ.ಮೇಧಾಶಕ್ತಿಯಿಂದಲೂ, ಬಹು ಶ್ರವಣದಿಂದಲೂ, ಲಭ್ಯನಲ್ಲ. ಯಾವ ಪರಮಾತ್ಮನನ್ನು ಇವನು ಪಡೆಯಲು ಇಚ್ಛಿಸುತ್ತಾನೆಯೋ, ಆ ಇಚ್ಛೆಯಿಂದಲೇ ಅವನು ಲಭ್ಯನು. ಅವನಿಗೆ ಈ ಆತ್ಮನು ತನ್ನ ತನುವನ್ನು ಪ್ರಕಾಶಪಡಿಸುತ್ತಾನೆ''.

ಆ. ಹಗಲು ಹೊತ್ತಿನಲ್ಲಿ ಹೋಯಿತೆಲ್ಲಿ ರಾತ್ರಿ ?
ನೀರು ತುಂಬುಗೊಡದಿ ನಿಂತ ಹಾಗೆ.
ತಿಳಿಯೋ ಪರಮಾತ್ಮ ತತ್ತ್ವಗಳನು ಬಹಳ.
ವಿಶ್ವದಾಭಿರಾಮ ಕೇಳು ವೇಮ.

ಹಗಲು ರಾತ್ರಿ ಎಂಬೆರಡು ಭಿನ್ನ ವಸ್ತುಗಳೇನಲ್ಲ. ಹಗಲಿನ ಅಭಾವವೇ ರಾತ್ರಿ. ಹಗಲು ಇರುವಾಗ ರಾತ್ರಿಯು ಇರದು. ಅದೇ ರೀತಿ, ನೀರು ಮತ್ತು ಬರಿಗೊಡ. ನೀರು ಇಲ್ಲದಾಗ ಬರಿಗೊಡವುಂಟು. ನೀರು ಇರುವಾಗ ಬರಿಗೊಡವಿರದು, ಅದೇ ರೀತಿ, ಪರಮಾತ್ಮ ತತ್ತ್ವವು ಇರುವಾಗ ಪ್ರಕೃತಿ ತತ್ತ್ವವು ಇರದು. ಪರಮಾತ್ಮ ತತ್ತ್ವವು ಇಲ್ಲದಾಗ ಪ್ರಕೃತಿ ತತ್ತ್ವವು ಇರುವದಷ್ಟೇ.

ಸೀಸ. ಹೊರಗಿರುವ ಸಕಲವೂ ಹೊಳೆಯುತ ಬೆಳಗುತಿಹುದು.
ಕಡೆ ಮೂಲೆಯಲಿದ್ದೇ ಕಾಣುತಿರುವೆ.

ವಿಶ್ವ ತುಂಬಿ ಇರುವ ಕೇಳದಾ ಗಾನವನು
ಹೊರಗಡೆಗಿದ್ದೇ ಕೇಳಿಸಿ ಕೊಳುವೆ.
ಎಟುಕದೆ ನೀರೂರಿತು ; ಮಾಗಿದ ಹಣ್ಣನು
ಇರುವ ಜಾಗೆಯಲ್ಲಿಯೇ ಪಡೆದಿರುವೆ.
ಸಿಕ್ಕದದು ಜಗದಲ್ಲಿ ಸಿಕ್ಕಿರಲು ಕೊನೆಗೆ,
ಕೊನೆಗಿರುತಲೇ ಅಡಗಿಸಿಕೊಂಡಿರುವೆ.

ತೇಟ. ಗುಳಕ ಶಿಲೆಗಳಲಿ ಮಣಿಗಳನು ಆಯ್ದುಕೊಳುವೆ.
ಘೋರ ವಿಷದಲಿ ಅಮೃತವನು ಕಂಡುಕೊಳುವೆ.
ಕಾರ್ಗತ್ತಲೆಯಲಿ ಕಾಂತಿಯನು ಕಾಣುತಿರುವೆ.
ಪರಮ ಯೋಗೀಂದ್ರ ! ವೇಮ ಭೂಪಾಲ ಚಂದ್ರ !

ಹೊರಗಿರುವ ಎಲ್ಲವೂ ಹೊಳೆಯುತ್ತದೆ ; ಬೆಳಗುತ್ತಿದೆ. ಅದನ ಕೃಪಾಕಟಾಕ್ಷದಿಂದ ಅಂದರೆ ದಯಾಪೂರ್ಣನಾಗಿ ನೋಡುತ್ತಿರುವೆ. ಪ್ರಣವ ನಾದವು ಅ ಉ ಮ ಅಂದರೆ ಓಂಕಾರವಾಗಿ ಸೃಷ್ಟಿ, ಸ್ಥಿತಿ ಲಯಗಳ ಮೂಲಕ ಧ್ವನಿಸುತ್ತಿದೆ. ಅದು ಎಲ್ಲರಿಗೂ ಕೇಳಿ ಬರುವುದಿಲ್ಲ. ಅದನ್ನು ನೀನು ಭಕ್ತಿ ತುಂದಿಲನಾಗಿ, ಭಾವ ಪುಳಕಿತನಾಗಿ ಕೇಳಿಸಿಕ್ಕೊಳ್ಳುವೆ. ಸಾಮಾನ್ಯವಾಗಿ ಎಲ್ಲರೂ ಅಪೇಕ್ಷಿಸುವ, ಆದರೆ ಸಾಮಾನ್ಯವಾಗಿ ಸಿಕ್ಕದ ಸಾಧನೆಯ ಪಕ್ವ ಫಲವನ್ನು ನೀನು ಇರುವ ಜಾಗದಲ್ಲಿಯೇ ಅಚಲನಾಗಿದ್ದು ಪಡೆದುಕೊಂಡಿರುವೆ. ಸಾಮಾನ್ಯವಾಗಿ ಜಗದಲ್ಲಿ ಸಿಗದಿರುವ ಗುಹ್ಯಾತ್ ಗುಹ್ಯವಾದ ಆತ್ಮ ತತ್ತ್ವವು ಕೊನೆಗೆ ಸಿಕ್ಕಾಗ, ನೀನು ಕೊನೆಗೆ ಇರುತ್ತಲೇ ಅದರ ಮಹಿಮೆಯನ್ನೂ ನಿನ್ನೊಳಗೆ ಅಡಗಿಸಿಕೊಂಡಿರುವೆ. ಅದರ ಮಹಿಮೆಯ ಪ್ರದರ್ಶನಕ್ಕೆ ಇಳಿದಿಲ್ಲ.

ಸಣ್ಣ ಸಣ್ಣ ಕಲ್ಲು ಗುಂಡುಗಳಲ್ಲಿ ಕೆಲವು ಅಮೂಲ್ಯ ಮಣಿಗಳೂ ಇರುತ್ತವೆ. ಅದೇ ರೀತಿ, ಪುರುಷನಲ್ಲಿ ಪುಣ್ಯ ಪುರುಷರೂ ಇರುತ್ತಾರೆ. ಅವರನ್ನು ನೀನು ಆಯ್ದುಕೊಳ್ಳುವೆ. ಕೆಲವು ಜನರ ಸಂಗವೇ ವಿಷಪ್ರಾಯವಾಗಿದ್ದರೂ ನೀನು ಅವರ ಸಂಗ ಮಾಡಿ ಅವರಲ್ಲಿಯೂ ಪ್ರೇಮತ್ವವನ್ನು ಕಂಡುಕೊಳ್ಳುವೆ. ಅಹುದು ; ಜನರಿಗೆ ಕಾರ್ಗತ್ತಲೆ ಎನಿಸಿದಲ್ಲಿ ನಿನಗೆ ಹೊಳೆಯುವ ಕಾಂತಿ ಕಂಡು ಬರುತ್ತದೆ. ಅದೇ ನಿನ್ನ ಪರಮ ಪದದ ಮಹಿಮೆ ! ಪರಮ ಯೋಗೀಂದ್ರ ನೀನು. ವೇಮನಾ ! ಭೂಪಾಲ ಚಂದ್ರ ನೀನು.

ಭಗವದ್ಗೀತೆಯಲ್ಲಿ ಶ್ರೀಕೃಷ್ಣನೂ ಇದೇ ಆಶಯದ ಮಾತನ್ನು ಹೇಳಿದ್ದಾನೆ.

''ಎಲ್ಲಾ ಪ್ರಾಣಿಗಳಿಗೆ ಯಾವುದು ರಾತ್ರಿಯೋ, ಅದರಲ್ಲಿ ಜಿತೇಂದ್ರಿಯನು ಎಚ್ಚತ್ತಿರುತ್ತಾನೆ. ಯಾವುದರಲ್ಲಿ ಪ್ರಾಣಿಗಳು ಎಚ್ಚತ್ತಿರುವವೋ, ಅದು ಪರಮಾರ್ಥವನ್ನು ನೋಡುತ್ತಿರುವ ಮುನಿಗೆ ರಾತ್ರಿಯು''.

ಆ. ಕಲುಷಗಳನು ಎಲ್ಲ ಖಂಡಿಸಿ, ಗತಿಯರಿತು,
ಚಿದಾನಂದ ಪಟ್ಟ ಅಭಿಷಿಕ್ತನು,

ಅವನ ಎಣಿಸಲಳವೆ ? ಅಬಬ ! ಅವನಿಯಲ್ಲಿ,
ಪರಶಿವೆಂದು ಅವನ ಪೇಳು ವೇಮ.

ತನ್ನಲ್ಲಿ ಅನೇಕ ಕಲುಷಗಳಿರಬಹುದು. ಅವೆಲ್ಲವುಗಳನ್ನು ಖಂಡಿಸಬೇಕು. ಕೊಚ್ಚಿ ಹಾಕಬೇಕು. ಮುಂದೆ ಪರಶುದ್ಧನಾಗಿ ಊರ್ಧ್ವಗತಿಯನ್ನು ಅರಿತು, ಚಿದಾನಂದ ಪಟ್ಟಕ್ಕೆ ಅಂದರೆ, ಬ್ರಹ್ಮನ ಸ್ವರೂಪವೇ ಆದ ಚಿತ್ (ಅರಿವು) ಆನಂದ ಅಭಿಷಿಕ್ತನಾಗಬೇಕು. ಅವನನ್ನು ಹಾಗೆ, ಹೀಗೆ ಎಂದು ಎಣಿಸಲಿಕ್ಕೆ, ಅಳೆಯಲಿಕ್ಕೆ ಯಾರಿಗಾದರೂ ಅವನಿಯಲ್ಲಿ ಸಾಧ್ಯವೇ ? ಅಬಬ! ಏನಾಶ್ಚರ್ಯ ! ಅವನನ್ನೇ ಪರಶಿವ ಎಂದು ಹೇಳು.

ಗೀತ. ತಾಮಸಕಂಟಿದ ಬುದ್ಧಿಯನು ದಹಿಸಿ ಹಾಕಿ,
ನಿಯಮ ನಿಷ್ಠೆಗಳ ಮನದಲಿ ನೀರಗೊಳಿಸಿ,
ಕಾಮ ವರ್ಗವನು ಜಯಿಸಿದೊಡೆ ಕಂಡು ಮುಕ್ತಿ.
ಆ ಮಹಾತ್ಮನನು ಸೇವಿಸಲು ಆಯ್ತು ವೇಮಾ.

ಅಜ್ಞಾನ ಸಂಗ ಮತ್ತು ಆಲಸ್ಯ ಸಂಗವಿರುವುದೇ ತಾಮಸ ಗುಣ. ಈ ತಾಮಸ ಗುಣಕ್ಕೆ ಅಂಟಿದ ಮನುಷ್ಯನು ಕುಜನನಿರುತ್ತಾನೆ. ಕೇಡಿ ಇರುತ್ತಾನೆ. ಇಂಥ ಬುದ್ಧಿಯನ್ನು ಜ್ಞಾನದಗ್ನಿಯಿಂದ ದಹಿಸಿ, ಕಂದಾಚಾರಗಳಿಂದ ನಿಯಮ ನಿಷ್ಠೆಗಳ ವಕ್ರತೆಯನ್ನು ನೇರಗೊಳಿಸಿ, ಮನದ ಅನಿಷ್ಟ ಕಾಮ ವರ್ಗವನ್ನು ಜಯಿಸಬೇಕು. ಆಗ ಮುಕ್ತಿ ಎಂದರೇನೆಂಬುದನ್ನು ಒಳಗಣ್ಣು ಕಂಡರಿಯುತ್ತದೆ. ಅಂಥ ತತ್ತ್ವವನ್ನು ಸೇವಿಸಬೇಕು ; ಪೂಜಿಸಬೇಕು. ಅಷ್ಟಾದರೆ ತೀರಿತು.

ಆ. ಕೇಳಿದವನಿಗಿಂತ ಕಾಣುವವನು ಅಧಿಕ.
ಕಾಣುವವನಿಗಿಂತ ಕೂಡಿರುವನು.
ಉನ್ನತೋನ್ನತಾಗಿ ಉರ್ವಿಯಲಿ ಬಾಳು.
ವಿಶ್ವದಾಭಿರಾಮ ಕೇಳು ವೇಮ.

ಬ್ರಹ್ಮ ವಿದ್ಯೆಯು ಗುಹ್ಯಾತ್ ಗುಹ್ಯವಿದೆ. ಅದನ್ನು ಅರಿತವರು ಅತಿ ವಿರಳ. ಬ್ರಹ್ಮವಿದರಿಂದ ಕೆಲವರು ಅವರ ಅನುಭವ ಕುರಿತು ಕೇಳಿರಬಹುದು. ಆದರೆ ಹೇಳುವವನ ಭಾವ ಒಂದಾದರೆ ಕೇಳುವವನ ಭಾವ ಬೇರೊಂದಾಗಿರುತ್ತದೆ. ಆದ್ದರಿಂದ ಕೇಳಿದವನಿಗಿಂತ ಕಾಣುವವನು ಅಧಿಕನೆನಿಸುತ್ತಾನೆ. ಕಾಣುವವನು ಅಗ್ಯಬುದ್ಧಿಯಿಂದ ತನ್ನಲ್ಲಿ ಹೊಳೆಯುವ ಬ್ರಹ್ಮದ ಪ್ರತಿಬಿಂಬವನ್ನು ಕಂಡಿರಬಹುದು. ಆದರೆ ಇದನ್ನೂ ಮೀರಿದ ಇನ್ನೊಂದು ಸ್ಥಿತಿಯಿದೆ. ಅದೇ ಕೂಡಿಕೊಂಡ ಯೋಗಿಯ ಸ್ಥಿತಿ. ಇದುವೇ ಉನ್ನತೋನ್ನತವಾದ ಯೋಗ ಸ್ಥಿತಿ. ಹೀಗಿದ್ದುಕೊಂಡು ಜಗತ್ತಿನಲ್ಲಿ ಬಾಳು.

ಪರಮ ಪದ :

ಆ. ನಿಜದ ರೀತಿಯರಿತು, ನಿರ್ಗುಣತ್ವ ಹೊಂದಿ,
ನುಡಿಯೊಳಿರುವ ಅರ್ಥ ನೇರ ತಿಳಿದು,
ಪೇಳದಿರುವವನೆ ಪರಮಾತ್ಮನಾಗುವ.
ವಿಶ್ವದಾಭಿರಾಮ ಕೇಳು ವೇಮ.

ಸತ್ಯ ಜ್ಞಾನವಾಗುವುದೂ ಕ್ವಚಿತ್ತಾಗಿ. ನಿಜ ರೀತಿಯರಿತರೆ ನಿರ್ಗುಣತ್ವವನ್ನು ಹೊಂದುತ್ತಾನೆ. ಅವನ ಭಾವ ಪರಿಶುದ್ಧವಿರುವುದರಿಂದ ನುಡಿಯೊಳಗಿನ ಅರ್ಥವನ್ನು ನೇರವಾಗಿ ತಿಳಿಯುತ್ತಾನೆ. ಆದರೆ ಅದನ್ನು ಅದೇ ಭಾವಶುದ್ಧಿಯಿಲ್ಲದವರಿಗೆ ಹೇಳಿದರೆ ಅಪಾರ್ಥವಾದೀತೆಂದು ಹೇಳದಿರುವವನೇ ಪರಮಾತ್ಮನೆನಿಸುತ್ತಾನೆ.

ಆ. ತಿಳಿಯೆನೆನ್ನುವವನು ತಿರೆಯೊಳು ಕಡು ಜಾಣ.
ತಿಳಿದೆನೆನ್ನುವವನು ತಿಳಿಯನೆಂದು,
ಮೌನವಾಗಿರುವವ ಮಹಿಮೋತ್ತಮನಿಹನು.
ವಿಶ್ವದಾಭಿರಾಮ ಕೇಳು ವೇಮ.

ಅಗ್ಯ ಬುದ್ಧಿಯಲ್ಲಿ ಬ್ರಹ್ಮವು ಪ್ರತಿಬಿಂಬಿಸಿರಬಹುದು. ಆದರೆ ಬ್ರಹ್ಮದ ಅಪಾರತೆ ಎಷ್ಟು ಮಹತ್ತಾಗಿದೆ, ಎಂದರೆ, ಅದನ್ನು ತಿಳಿದಷ್ಟೂ ತಿಳಿಯುವುದು ಇನ್ನೂ ಇರುತ್ತದೆ. ಆದ್ದರಿಂದ ತಿಳಿಯನೆನ್ನುವ ಯೋಗಿಯು ತಿರೆಯಲ್ಲಿ ಕಡು ಜಾಣನೆನಿಸುತ್ತಾನೆ. ತಿಳಿದೆನೆನ್ನುವನು ಎಂದೂ ಪೂರ್ಣವಾಗಿ ತಿಳಿಯಲಾರನು. ಅವನು ವಿದ್ಯಾ ಅಹಮ್ಮಿನಿಂದ ಹಾಗೆ ಹೇಳಬಹುದಷ್ಟೇ. ಏಕೆಂದರೆ ಬ್ರಹ್ಮವು ತಿಳಿವಿನ ಅಂದರೆ ಜ್ಞಪ್ತಿಯ ಸ್ಥಿತಿಯನ್ನು ಮೀರಿ ಇದೆ. ಆದ್ದರಿಂದ ಮೌನವಾಗಿರುವವನು ಮಹಿಮರಲ್ಲಿಯೇ ಉತ್ತಮನಾಗಿರುತ್ತಾನೆ.

ಕೇನೋಪನಿಷತ್ತಿನಲ್ಲಿ ಗುರು ಶಿಷ್ಯ ಸಂವಾದದಲ್ಲಿ ಈ ವಿಷಯದ ಉಲ್ಲೇಖವಿದೆ.

"ನಾನು ಚೆನ್ನಾಗಿ ಅರಿತುಕೊಂಡಿರುವೆನು ಎಂದು ಭಾವಿಸುವುದಿಲ್ಲ. ಅರಿತುಕೊಂಡಿಲ್ಲ ಎಂತಲೂ, ಭಾವಿಸುವುದಿಲ್ಲ ಅರಿತೂ ಇದ್ದೇನೆ. 'ಅರಿತುಕೊಂಡಿರುವೆನೆಂದು ಭಾವಿಸುವುದಿಲ್ಲ. ಅಂತೂ ಇದ್ದೇನೆ', ಎಂದು ನಮ್ಮಲ್ಲಿ ಯಾರು ಬಲ್ಲರೋ, ಅವರೇ ಬಲ್ಲರು".

ಆ. ಅರಿವನರಿಯದಿರುವ ಅರಿವಿಗೇನೆನಬಹುದು ?
ಅರಿವು ಇಲ್ಲದವನು ಅರಿಯಲಾರ.
ಅರಿವು ಇರದ ಅರಿವು ಅರಿಯುವುದೇ ತತ್ತ್ವ.
ವಿಶ್ವದಾಭಿರಾಮ ಕೇಳು ವೇಮ.

ಜ್ಞ ಸತ್ತೆಯೇ ಅರಿವು. ಇದು ಮನಸ್ಸಿನ ಆದಿಬಿಂದು. ಇಲ್ಲಿಂದ ಆಚೆಗೆ ಇರುವುದನ್ನು ಮನಸ್ಸಿನಿಂದ ಅರಿಯಲಾಗದು. ಏಕೆಂದರೆ ಅಲ್ಲಿ ಸಂಕಲ್ಪ ವಿಕಲ್ಪಾತ್ಮಕ ಮನಸ್ಸು ಇರುವುದಿಲ್ಲ. ಜ್ಞ ಸತ್ತೆಯ ಈಚೆಗಿರುವುದನ್ನು ಅರಿಯಬಹುದು. ಇದನ್ನೂ ಅರಿಯದಿದ್ದರೆ, ಆಗ ಅರಿವಿಗೆ ಏನೆನ್ನಬಹುದು ? ಅರಿವುಗೇಡಿಯಂತೂ ಅರಿಯಲಾರನು ನಿಜ. ಆದರೆ ದೇಹದ ಭಾನವು ಇಲ್ಲದಾಗ ಸಾಧಕನು, ಜ್ಞ ಬಿಂದುವಿನ ಆಚೆಗೆ ಹೋಗಿರುತ್ತಾನೆ. ಅದೂ ಒಂದು ದಿವ್ಯ ಅನುಭೂತಿಯೇ ಸರಿ. ಇಂಥ ಅರಿವು ಇರದ ಅರಿವನ್ನು ಅರಿಯುವುದೇ ತತ್ತ್ವವೆನಿಸುತ್ತದೆ.

ಕೇನೋಪನಿಷತ್ತಿನಲ್ಲಿ ಈ ಕ್ಲಿಷ್ಟ ಸ್ವಾನುಭವವನ್ನು ವಿವರಿಸಿ ಹೀಗೆ ಹೇಳಿದ್ದಾರೆ :

"ಯಾರ ಮತಿಗೆ ಇದು ಹೊಳೆಯಲಾರದೋ, ಅವನಿಗಿದು ತಿಳಿದಿದೆ. ಯಾರ ಮತಿಗೆ ಹೊಳೆದಿದೆ ಎನಿಸಿದೆಯೋ ಅವನಿಗೆ ತಿಳಿದಿಲ್ಲ.. ಯಾವನು ವಿಶೇಷವಾಗಿ ತಿಳಿದಿರುವೆನೆಂದು

ತಿಳಿದಿರುವನೋ, ಅವನಿಗಿದು ತಿಳಿದಿಲ್ಲ. ಮತ್ತು ಯಾವನ ಬುದ್ಧಿ ಗ್ರಹಿಸಿದೆಯೆನ್ನುವನೋ ಅವನಿಗೆ ಇದು ತಿಳಿದಿಲ್ಲ''. (ಕೇನ ಉಪ. 2-3)

ಏಕೆಂದರೆ ಬ್ರಹ್ಮವು ಮತಿಯನ್ನು ದಾಟಿ ಇದೆ. ಅಗ್ಯ ಬುದ್ಧಿಯಿಂದ ಅದನ್ನು ಊಹಿಸಬಹುದೇ ಹೊರತು ಗ್ರಹಿಸಲಿಕ್ಕಾಗದು.

ಆ. ಘಟವು ಒಡೆದು ಉಂಟು ; ಘನವು ಬೆಳ್ಳಗುಂಟು.
ಮನಸು ಸ್ವಚ್ಛವುಂಟು, ಮಾತೆ ಇಲ್ಲ.
ಇದರ ಮರ್ಮವರಿಯೆ ಯಾರಿಗಳವು ಇಹುದು ?
ವಿಶ್ವದಾಭಿರಾಮ ಕೇಳು ವೇಮ.

ದಾರ್ಶನಿಕ ಭಾಷೆಯಲ್ಲಿ 'ಘಟ' ಎಂದರೆ ದೇಹ. ದೇಹವು ಒಡೆದಾಗ ಅಂದರೆ ದೇಹ ಭಾವವು ಇಲ್ಲದಾಗ, ದೇಹವು ಇಲ್ಲವೆನಿಸುತ್ತದೆ. ದೇಹಾತೀತ ಪ್ರಜ್ಞೆಯಲ್ಲಿ ತತ್+ತ್ವವು ಪರಮ ನಿರುಪಾಧಿಕ ಸತ್ತೆಯಾಗಿ ತೋರುತ್ತದೆ. ಅದು ಗುಣಾತೀತವಾಗಿದೆ. ಆದ್ದರಿಂದ ಅವರ್ಣವಾಗಿದೆ. ಇಲ್ಲವೆ ಬೆಳ್ಳಗಿದೆ. ಆಗ ಮನಸ್ಸಿನಲ್ಲಿ ಸಂಕಲ್ಪ ವಿಕಲ್ಪಗಳಿರವು. ಮನಸ್ಸು ನಿಸ್ತರಂಗವಿರುತ್ತದೆ. ಹಾಗಾಗಿ ಮಾತೇ ಇಲ್ಲದೆ ಮಹಾ ಮೌನವಿರುತ್ತದೆ. ಇದು ಪರಮ ಧಾಮದ ಅವಸ್ಥೆ. ಇದನ್ನು ಅರಿಯಲು ಯಾರಿಗೆ ಸಾಮರ್ಥ್ಯವಿದೆ ?

ಆ. ಅವನ ಕಂಡು ನೋಡು ; ಅವನು ಕಾಣಲಾರ.
ಅವನು ಇರದ ಅವನು ; ಅವನ ಕಾಣು.
ಅವನು ಇರುವ ಅವನು, ಅವನೆ ತಾ ಯೋಗಿಯು.
ವಿಶ್ವದಾಭಿರಾಮ ಕೇಳು ವೇಮ.

ಇದು ವೇಮನ ಯೋಗಿಗಳ ಕೂಟ ವೇಂದಾಂತ ಪದ್ಯಗಳಲ್ಲೊಂದು. ಇಂಥ ನೂರಾರು ಪದ್ಯಗಳಿವೆ. ಇವುಗಳ ಅರ್ಥವು ಇದೇ ಎಂದೂ, ಇಲ್ಲವೆ ಇದಷ್ಟೇ ಎಂದೂ ಹೇಳಲಾಗದು. ಕೆಲವು ಮಂದ ಮತಿಗಳಿಗೆ ಅರ್ಥವಾಗದೆ ಹೋಗಬಹುದು. ಇನ್ನು ಕೆಲವು ವಿಕ್ಷಿಪ್ತ ಮತಿಗಳಿಗೆ ವಿಪರೀತ ಅರ್ಥವಾಗುವುದೂ ಉಂಟು. ಕನ್ನಡ ಸಾಹಿತ್ಯಕೋವಿದರು ಇಂಥ ಪದ್ಯಗಳನ್ನು ಬೆಡಗಿನ ಪದ್ಯಗಳೆಂದು ಕರೆದಿದ್ದಾರೆ.

ಅವನ ಕಂಡು ನೋಡು.....ಅವನು ಜೀವಾತ್ಮನು. ಅಂದರೆ ದೇಹೇಂದ್ರಿಯ ಮನಸಾದಿಗಳಿಂದ ಸೋಪಾಧಿಕನಾದ ಆತ್ಮನು. ಇಲ್ಲಿ ಅವನು ಕಾಣುತ್ತಾನೆ. ಆದರೆ ಅವನು ಎಂದರೆ ಪರಮಾತ್ಮನು ಕಾಣಲಾರನು. ಈಗ ಬಾಹ್ಯ ವ್ಯಾಪಾರ ನಡೆಸಿ, ಇಂದ್ರಿಯ ವ್ಯಾಪಾರದಲ್ಲಿಯೂ ಅವನನ್ನು ಅಂದರೆ ಪರಮಾತ್ಮನನ್ನೂ ಕಾಣದೆ, ಅಂತರ್ಮುಖಿಯಾಗಿ, ಜ್ಞಪ್ತಿ ಇರುವ ವರೆಗೆ, ಅಂದರೆ ಅಸ್ತಿತ್ವ ಭಾವವು ಇರುವ ವರೆಗೆ ಸಾಧನದಲ್ಲಿ ಮುಂದುವರಿಯುತ್ತಾನೆ. ಇಲ್ಲಿಗೆ ಮಾತು ಮೂಕವಾಗುತ್ತದೆ. ಮನಸ್ಸು ನಿಲ್ಲುತ್ತದೆ. ಆತ್ಮಾನುಸಂಧಾನವು ಮುಂದುವರಿಯುತ್ತದೆ. ಆದರೆ ದೇಹಾತ್ಮಭಾವವು ಅಂದರೆ ಜೀವ ಭಾವವು ನಿಲ್ಲುತ್ತದೆ. ಇದು ಅವನು ಇರದ ಅವನು. ಅಂದರೆ ಜೀವಾತ್ಮ ಭಾವವಿರದ ಪರಮಾತ್ಮ ಭಾವವು. ಈಗ ಅವನನ್ನು, ಪರಮಾತ್ಮನನ್ನು, ಕಂಡಕೋ. ಅವನು ಅಗ್ಯ ಬುದ್ಧಿಯಲ್ಲಿ

ಪ್ರತಿಬಿಂಬಿಸುತ್ತಾನೆ. ನಿರ್ವಾಣ ಪದ ಪ್ರಾಪ್ತವಾಗುತ್ತದೆ. ಅವನನ್ನು ಅರಿತು ಅವನೇ ಆಗಿ ಬ್ರಾಹ್ಮೀ ಭೂತನಾಗುತ್ತಾನೆ. ಜೀವನ್ಮುಕ್ತನಾಗುತ್ತಾನೆ. ಆಗ ಅವನು ಇರುವ ಅವನು ಅಂದರೆ ನಿಜವಾಗಿ ಪರಮಾತ್ಮನಾಗಿರುವ ಆದರೆ ತೋರಿಕೆಯಲ್ಲ ಮೊದಲು ಜೀವಾತ್ಮನೆನಿಸಿದವನು, ಜೀವಾತ್ಮ ಪರಮಾತ್ಮ ಸಂಯೋಗದಿಂದ, ತಾನು ಯೋಗಿಯಾಗುತ್ತಾನೆ.

ಆ. ಮೊದಲು ಮರವಾಗಿದೆ, ತುದಿಗೆ ಪಕ್ಷಿಯು ಇಲ್ಲ.
ಬಾಯಿ ಇಲ್ಲ ; ಹಣ್ಣು ಆರು ಉಂಟು.
ಜೀವವೊಂದು ಇಲ್ಲ ; ಜೀವಿಗಳ ಕೊಲುವುದು !
ವಿಶ್ವದಾಭಿರಾಮ ಕೇಳು ವೇಮ.

ಇಲ್ಲಿ ಮಾನವ ಮತ್ತು ಕಾಲಗಳ ಪರಸ್ಪರ ಸಂಬಂಧಗಳನ್ನು ಕುರಿತು ಹೇಳಲಾಗಿದೆ. ಕಾಲಾನುಕ್ರಮದಲ್ಲಿ ಸಂಸ್ಕಾರ ಬೀಜದಿಂದ ಜೀವಿಯು ಬೆಳೆದು ದೊಡ್ಡ ಮರದಂತೆ ಬೆಳೆಯುತ್ತಾನೆ. ಕಾಲವು ಪಕ್ಷಿಯಂತೆ ಹಾರುವುದಾದರೂ ಪಕ್ಷಿಯಂತೂ ಅಲ್ಲ. ಅದಕ್ಕೆ ಸೇವಿಸಲು ಇಲ್ಲವೆ ನುಡಿಯಲು ಬಾಯಿಯೂ ಇಲ್ಲ. ಕಾಲದ ಪರಿಣಾಮದಿಂದ ಮಾನವನಲ್ಲಿ ಆರು ವಿಕಾರಗಳಾಗುತ್ತವೆ. ಇವೇ ಆರು ಫಲ ಇಲ್ಲವೆ ಹಣ್ಣುಗಳು. ಅವುಗಳೆಂದರೆ ಜನ್ಮ, ಬಾಲ್ಯ, ಕಿಶೋರ, ಯೌವನ, ವೃದ್ಧಾಪ್ಯ ಮತ್ತು ಮರಣ. ಕಾಲಕ್ಕೆ ಜೀವವೇನೂ ಇಲ್ಲ. ನಿಜ. ಆದರೆ ಕಾಲದ ದವಡೆಗೆ ಸಿಲುಕಿ ಜೀವಿಗಳು ಸಾಯುತ್ತವೆ.

ಗೀತ. ಸಚ್ಚಿದಾನಂದವಹ ಬ್ಲಪ್ತಿ ಸರಣಿ ಸೇರಿ,
ಮೆಚ್ಚಿ ಚಿನ್ಮಾತ್ರವಹ ಶಕ್ತಿ ಮೈ ಮರೆತು,
ನಿಶ್ಚಲತೆಯುಳ್ಳವನೆ ಹೋಗು ನಿತ್ಯ ಯೋಗಿ.
ನಿಶ್ಚಲಾತ್ಮನ ಶಿವನೆನ್ನು ನಿರುತು ವೇಮ.

ಸತ್ (ಇರವು) ಚಿತ್ (ಅರಿವು) ಮತ್ತು ಆನಂದ (ನಲಿವು) ಇವು ಮೂರು ಬ್ರಹ್ಮನ ಸ್ವರೂಪಗಳು. ಯಾವ ಬ್ಲಪ್ತಿಯಲ್ಲಿ ಇವು ಇರುವವೋ, ಆ ಹಾದಿಯನ್ನು ಸೇರಿ, ಅರಿವು ತಾನೇ ತಾನಾಗಿರುವ ಶಕ್ತಿಯನ್ನು ಮೆಚ್ಚಿಕೊಂಡು, ದೇಹ ಭಾವವನ್ನು ಮರೆತು ನಿಶ್ಚಲತೆ ಮರೆತು ನಿಶ್ಚಲತೆ ಹೊಂದಿದವನೇ ನಿತ್ಯ ಯೋಗಿಯಾಗಿದ್ದಾನೆ. ಆ ನಿಶ್ಚಲಾತ್ಮನನ್ನು ಯಾವಾಗಲೂ ಶಿವ ಎನ್ನು, ಹೋಗು.

ಗೀತ. ಮತಿ ಹಿತವಾಗಿ ನಿರ್ಗುಣ ಬ್ರಹ್ಮವರಿತು,
ಸತತವಭ್ಯಾಸ ಯುಕ್ತಿಯಲಿ, ಸಂಚರಿಸುತ,
ಅತುಲಿತಾನಂದ ಸಂಪೂರ್ಣ ಅರಿತು ಇಹುದು.
ಪರಶಿವನೆಂಬ ಭಾವವನು, ಅರಿತು ವೇಮ.

ಮತಿಯನ್ನು ಪರಿಶುದ್ಧಗೊಳಿಸಿ, ನಿರ್ಗುಣ ಬ್ರಹ್ಮಭಾವಕ್ಕೆ ಸಮಾಂತರ ತರಂಗಗಳನ್ನು ಹೊಂದಲು ಹಿತವಾಗಿರಿಸಿ, ಅದನ್ನು ಅರಿತು, ಅಚಲವಾಗಿರಲಿ ಇಲ್ಲವೆ ಸಂಚರಿಸುತ್ತ ಇರಲಿ, ಸತತ ಅಭ್ಯಾಸ ವೃತ್ತಿಯಲ್ಲಿ ಇರಬೇಕು. ಆಗ ಅತುಲಿತವಾದ, ಅಂದರೆ ತುಲನೆ ಮಾಡಲಾಗದ ಆನಂದವನ್ನು ಸಂಪೂರ್ಣ ಅರಿತಿರುವುದು, ಪರಶಿವ ಭಾವವೇ ಎಂದು ಅರಿತುಕೋ.

ಆ. ಪರಚಿಂತೆಯದೇಕೆ ? ಪೇಚಾಟಗಳೇಕೆ ?
ಅವನಿ ಮರೆತು ಅಂಟಿ ಅರಗಿನಂತೆ,
ಸತತ ಆತ್ಮದಲ್ಲಿ ಸರಸಾಟವಾಡೆಲೊ.
ವಿಶ್ವದಾಭಿರಾಮ ಕೇಳು ವೇಮ.

ಆತ್ಮದಲ್ಲಿ ಒಂದಾಗುವ, ಚಿಂತೆಯನ್ನುಳಿದು ಬೇರೆ ಚಿಂತೆಗಳೇಕೆ ? ಬೇರೆ ಹೆಣಗಾಟ, ಪರದಾಟ, ಪೇಚಾಟಗಳು ಏತಕ್ಕೆ ? ನೀನು ಸಾಧಿಸಬೇಕಾದುದು ಇಷ್ಟೇ. ಅವನಿಯನ್ನು ಮರೆ. ಅಂದರೆ ಅವನಿಗೆ, ಅಲ್ಲಿಯ ವಿಷಯ ಭೋಗಗಳಿಗೆ, ಸೆಳೆಯುವ ದೇಹಾತ್ಮ ಬುದ್ಧಿಯನ್ನು ಮರೆ. ಆತ್ಮ ಭಾವಕ್ಕೆ ಅರಗಿನಂತೆ ಅಂಟು. ಹೀಗೆ ಆತ್ಮರತನಾಗಿ, ಸತತ ಆತ್ಮಭಾವದಲ್ಲಿ ಸರಸಾಟವಾಡು.

ಮರವ ಸುಟ್ಟು ಹಾಕಿ, ಮಹಿಯಳೊಬ್ಬ ಜಾಣ.
ಶ್ರಮಿಸಿ ತಿರುಗುತಿರುವ ತನುವ ಹೊಂದಿ.
ಸುಟ್ಟು ಹೋದ ಮರವು ಸಲೆ ರಮ್ಯವಪ್ಪುದು.
ವಿಶ್ವದಾಭಿರಾಮ ಕೇಳು ವೇಮ.

ಸಂಸಾರವನ್ನು ಮರಕ್ಕೆ ಹೋಲಿಸುತ್ತಾರೆ. ಇದರಲ್ಲಿ ಸಂಸ್ಕಾರಗಳೆಂಬ ಬೀಜಗಳುಂಟು. ವಾಸನೆಯೆಂಬ ಹೂವಿನ ಗಂಧವುಂಟು. ಕರ್ಮಫಲಗಳೆಂಬ ಹಣ್ಣು ಕಾಯಿಗಳುಂಟು. ಇಂಥ ಮರವನ್ನು ಮಹಿಯಲ್ಲಿ ಒಬ್ಬ ಜಾಣನು ಸುಟ್ಟು ಹಾಕುತ್ತಾನೆ. ಹಾಗಾಗಿ ಸಂಸ್ಕಾರ ಸಂಚಯವಾಗುವುದಿಲ್ಲ. ಪುಷ್ಪ ಫಲಗಳು ಫಲಿಸುವುದಿಲ್ಲ. ಇಂಥ ಜಾಣನು ತನುವನ್ನು ಹೊಂದಿ ಅಲ್ಲಲ್ಲಿ ಶ್ರಮಿಸಿ ತಿರುಗುತ್ತಾನೆ. ಸುಟ್ಟು ಹೋದ ಮರವು ಪತ್ರಿ ಫಲ ರಹಿತವಾದರೂ ತೋರಿಕೆಗೆ ಅಂದವಾಗಿರುತ್ತದೆ. ರಮಣೀಯವಾಗಿರುತ್ತದೆ.

ಎತ್ತು ಎರಡು ತಿನಲು, ಇಹದಲಿ ಸ್ತಂಭಿಸುವ,
ಎತ್ತು ಮೂರು ತಿನಲು ಇಹವ ಬಿಡುವ.
ಎತ್ತು ತಿಳಿದ ಮನುಜ, ಏರ್ಪಡುವ ಯೋಗಿಯು.
ವಿಶ್ವದಾಭಿರಾಮ ಕೇಳು ವೇಮ.

ಎತ್ತುಗಳನ್ನು ಗುಣಗಳಿಗೆ ಹೋಲಿಸಬಹುದು. ತಮಸ್ ಮತ್ತು ರಜಸ್ ಎಂಬೆರಡು ಎತ್ತುಗಳನ್ನು ಹೂಡಿದ ಬಂಡಿ ಇಹದಲ್ಲಿ ಸಾಗುತ್ತದೆ. ಇಲ್ಲಿಯ ದ್ವಂದ್ವಗಳಿಗೆ ಸರಿಯಾಗುತ್ತದೆ. ಆ ಎರಡೆತ್ತುಗಳನ್ನು ತಿಂದು ಹಾಕಿದರೆ ಅಂದರೆ ಲಯಿಸಿದರೆ, ಬಾಳಿನ ಬಂಡಿಯು ನಿಲ್ಲುತ್ತದೆ. ಸ್ತಂಭಿಸುತ್ತದೆ. ಅಂದರೆ ಸೃಷ್ಟಿಗೆ ನಿಮಿತ್ತವಾದ ತಮೋಗುಣವನ್ನೂ ಮತ್ತು ಸ್ಥಿತಿಗೆ ನಿಮಿತ್ತವಾದ ರಜೋಗುಣವನ್ನೂ ಸಾಧನೆಯ ಮೂಲಕ ಅತಿಶಯಿಸಿದರೆ, ಐಹಿಕ ಪ್ರವೃತ್ತಿಯು ನಿಲ್ಲುತ್ತದೆ. ಇನ್ನು ಮೂರನೆಯ ಎತ್ತಾದ ಸತ್ತ್ವ ಗುಣವನ್ನು ತಿಂದರೆ, ಅಂದರೆ ನಿರ್ಗುಣತ್ವದಲ್ಲಿ ಲಯಿಸಿದರೆ, ಅವನು ಇಹವನ್ನು ತೊರೆಯಬೇಕಾಗುತ್ತದೆ. ಮತ್ತು ನಿರ್ಗುಣ ಬ್ರಹ್ಮದಲ್ಲಿ ಲಯಿಸುತ್ತಾನೆ. ಗುಣಗಳನ್ನು ಸರಿಯಾಗಿ ತಿಳಿದು ಅವುಗಳನ್ನು ಅತಿಶಯಿಸುವವನು ಯೋಗಿಯೆನಿಸುತ್ತಾನೆ.

ಭಕ್ತಿಯೋಗ ಅಧ್ಯಾಯವನ್ನು ಇನ್ನೊಂದು ಕೂಟ ಪದ್ಯವನ್ನು ಉದ್ಧರಿಸಿ ಮುಗಿಸೋಣ.

ಸೀಸ. ಮಹಿಯೊಳೊಂದು ನೊಣವು ಮತ್ತೆ ಗುಂಯ್ಗುಡುತಿದ್ದು,
ಮಂಚವನೆ ನುಂಗಿದ ಮಹಿಮೆಯೇನು ?
ಮಾನುಷವಂತನಾಗಿ ಮಹಿ ಮೇಲೆ ಬಾಲಕನು
ಮರವ ಮೆಲುಕಾಡಿಸಿದುದ ಮರೆಯಬಹುದೆ ?
ಅಲ್ಪ ನೊಣಗಳು ಗಿರಿಯ ಗಟ್ಟಿ ಹಿಡಿದು ತಾವು,
ಪರಮ ಗತಿ ಪಡೆವ ಬಲವದೇನು ?
ಪಂಚ ವರ್ಣದ ಶುಕ ಪಂಚಕಗಳು ಸೇರಿ,
ಪರ್ವತವನೆ ತಿನುವ ಬಲವದೇನು ?

ತೇಟಿ. ಕುರಿಯ ದೊಡ್ಡಿಯ ಬಳಿ, ಗಿಡ-ಗಂಟೆ ಜಾಜಿ
ಅರಳಿ ಹೂ ಬಿಡುವಂಥ ವಿಧವದೇನು ?
ಅರಿಯಲರಿತಂಥ ಸರ್ವಜ್ಞರಾದವರು.
ವಿವರಿಸಿ ನುಡಿಯುವ ಪದಗಳ ಕೇಳು ವೇಮ.

ಮಹಿಯಳೊಂದು ನೊಣವು.....ಜೀವನನ್ನು ಮಲಗಿದಂತೆ ಬಿಂಬಿಸಲಾಗಿದೆ. ಏಕೆಂದರೆ ಅರಿವು ಸುಪ್ತವಾಗಿದೆ. ನಾದಾನುಸಂಧಾನ ಮತ್ತು ತೇಜಾನುಸಂಧಾನಗಳ ಮೂಲಕ ಮುನ್ನಡೆಯುವ ಸಾಧಕನಿಗೆ ಅನಾಹತ ನಾದವು ಕೇಳಿಸುತ್ತದೆ. ಇದೊಂದು ಗುಂಯ್ಗುಡುವ ಭೃಂಗಿ ನಾದದಂತೆ. ಆ ನಾದದಲ್ಲಿ ತನ್ಮಯನಾದ ಸಾಧಕನು ಮೈಮರೆಯುತ್ತಾನೆ. ತಾನಿರುವ ಲೋಕವೆಂಬ ಮಂಚವನ್ನೇ ಆ ನಾದವು ನುಂಗಿತೇನೋ ಎನಿಸುತ್ತದೆ.

ಮಾನುಷವಂತನಾಗಿ.....ಮನುಜನು ಮನೀಷಿಯು. ಮನನದ ಕ್ರಿಯೆಯಿಂದಲೇ ಅವನು ಮಾನುಷವಂತನೆನಿಸಿದ್ದಾನೆ. ಈ ಪ್ರಪಂಚದಲ್ಲಿ ಸಂಸಾರ ವೃಕ್ಷವೆಂಬ ದೊಡ್ಡ ಮರವೇ ಇದೆ. ಈ ಸಂಸಾರದ ಆಗ-ಹೋಗುಗಳನ್ನು ಅರಿತು, ಅದರಿಂದ ಹೊರಬೀಳುವವನು ಮನನಶೀಲ ಮಾನವ. ಅವನೊಬ್ಬ ಅಲ್ಪ ಜೀವಿ. ಸಂಸಾರ ವೃಕ್ಷಕ್ಕೆ ಹೋಲಿಸಿದರಂತೂ ಇನ್ನೂ ಚಿಕ್ಕ ಬಾಲಕ. ಆದರೂ ತನ್ನ ಮನನ ಮೂಲಕ, ಮಂತ್ರ ಚೈತನ್ಯ ಮೂಲಕ, ಸಂಸಾರದ ಕಾರಣ ಮತ್ತು ಅದರಿಂದ ಪಾರಾಗುವ ಬಗೆ ಮುಂತಾದವುಗಳನ್ನು ಮೆಲುಕಾಡಿಸುತ್ತಾನೆ. ಅಂದರೆ ಮನನ ಮಾಡಿ, ಅದನ್ನು ನಾಶಪಡಿಸುತ್ತಾನೆ.

ಅಲ್ಪ ನೊಣಗಳು.....ಈ ಪರಮನ ಮನನ ಮೂಲಕ ಮೇಲೇರಿದ ಅರಿವು ತುತ್ತ ತುದಿ ಮುಟ್ಟುತ್ತದೆ. ಅರಿವು ಏರಬೇಕಾದ ಗಿರಿಶಿಖರವೇ ಸಹಸ್ರಾರ ಚಕ್ರ. ಜೀವಿಗಳೆಂಬ ನೊಣಗಳು ಅನಾಹತ ನಾದದ ಗುಂಯ್ಗುಡುವಿಕೆಯ ಮೂಲಕ ಗಿರಿಯನ್ನೇರಿ ಪರಮ ಪದವನ್ನು ಹೊಂದುತ್ತವೆ.

ಪಂಚ ವರ್ಣದ ಶುಕ.....ಈ ಪರಮ ಪದವನ್ನು ದಾಟುವ ಮುನ್ನ, ಬಣ್ಣ ಬಣ್ಣದ ಮುತ್ತು ರತ್ನಗಳ ಪ್ರಭೆಯೂ, ಶಕ್ತಿಗಳ ಬಣ್ಣಗಳು ತೋರುತ್ತವೆ. ಬಹುವರ್ಣ, ಮಹಾಪ್ರಭೆಯ ಪೆಂಪಿನಲ್ಲಿ ಈ ಮಹಾಗಿರಿಯ ಚ್ಛಿಪ್ತಿಯೇ ಉಳಿಯದು. ಪಂಚಾಕ್ಷರಿ ನುಡಿಯುವ ಶುಕಪಂಚಕವು ಪರ್ವತವನ್ನೇ ಇಲ್ಲವೆನಿಸುತ್ತದೆ.

ಕುರಿಯ ದೊಡ್ಡಿಯ ಬಳಿ.....ಉನ್ನತೋನ್ನತ ಅವಸ್ಥೆಯ ತೃಷ್ಣೆಯ ಲವಲೇಶವೂ ಇರದು. ಹಾಗಾಗಿ ಭೋಗದ ದಾಹ ಹಿಂಗುತ್ತದೆ. ಭೋಗ ದಾಹ ಹಿಂಗಿದಾಗ, ಕುರಿ ದೊಡ್ಡಿಯ ಬಳಿ ಯಾವ ಲತಾ ಗುಲ್ಮಗಳಿದ್ದರೇನು ? ಕುರಿಗಳು ಮುಟ್ಟವು. ಅಲ್ಲಿ ಆ ಗಿಡವು ಬೆಳೆಯುತ್ತದೆ. ಮೊಗ್ಗೆ ಬಿಟ್ಟು, ಹೂವರಳಿ, ಪಲ್ಲವಿಸುತ್ತದೆ. ಹೀಗೆ ಭೋಗ ವಿದೂರನಾದ ಜೀವಿಯು, ತನ್ನಲ್ಲಿ ಹುದುಗಿರಬಹುದಾದ ಶಕ್ತಿಯು, ಪೂರ್ಣವಾಗಿ ಅರಳುವುದಕ್ಕೆ ಇಂಬುಗೊಡುತ್ತಾನೆ. ತ್ಯಾಗ ಮೂಲಕ ಭೋಗಿಸುತ್ತಾನೆ. ಈ ಪರಮ ರಹಸ್ಯವನ್ನು ತಿಳಿಯುವವರೇ ಸರ್ವಜ್ಞರು. ಇಂಥ ಸರ್ವಜ್ಞರು ತಮ್ಮ ಇರವನ್ನು ಪರಿಪರಿಯಿಂದ ಪರಿಚಯಿಸುವ ಪದಗಳನ್ನು ಕೇಳಿ ಸಾಧಕನು ಅರಿತುಕೊಳ್ಳಬೇಕು.

ಕೊನೆಯ ಮಾತು :

ನಾವು ಇದುವರೆಗೆ ಭಕ್ತಿಯನ್ನು ಕುರಿತು ವೇಮನ ಯೋಗಿಗಳ ಪದ್ಯಗಳಿಂದ ಹೆಕ್ಕಿ ವಿವರಿಸಿದ್ದೇವೆ. ಭಕ್ತಿಯ ಪೂರ್ವ ಸಿದ್ಧತೆಗಳಾದ ಆಹಾರ ಶುದ್ಧಿ, ಮನೋಶುದ್ಧಿಗಳನ್ನು ಕುರಿತು ವಿವರವಾಗಿ ವಿವೇಚಿಸಿದ್ದೇವೆ. ಮುಂದೆ ಭಕ್ತಿ ಮಾರ್ಗದಲ್ಲಿ ಸಾಧಕನು ಆಚರಿಸುವ ವಿಧಾನಗಳಲ್ಲಿ ಯಾವುದು ಪುರಸ್ಕಾರ ಯೋಗ್ಯ ? ಮತ್ತಾವುದು ತಿರಸ್ಕಾರಾರ್ಹ ಎಂಬುದನ್ನೂ ಚರ್ಚಿಸಿದ್ದೇವೆ.

ಭಕ್ತಿಯ ಪ್ರಕಾರಗಳಲ್ಲಿ ವೈಧೀ ಭಕ್ತಿ, ಸಗುಣ ಭಕ್ತಿ, ನಿರ್ಗುಣ ಭಕ್ತಿ, ರಾಗಾತ್ಮಿಕ ಭಕ್ತಿ, ಕೇವಲ ಭಕ್ತಿಗಳನ್ನು ಕುರಿತು ಚರ್ಚಿಸಿದ್ದೇವೆ. ನಿರ್ಗುಣ ಭಕ್ತಿ, ಕೇವಲ ಭಕ್ತಿ ವಿಧಾನಗಳು. ಪರಾ ಭಕ್ತಿಗಳೇ ಎಂದು ತಿಳಿಸಿದ್ದೇವೆ. ಈಗ ಈ ಪರಾ ಭಕ್ತಿಗೂ ಜ್ಞಾನ ಮಾರ್ಗಕ್ಕೂ ಅಷ್ಟೊಂದು ಅಂತರವಿಲ್ಲವೆಂದೂ, ತಿಳಿಯಬೇಕಾಗಿದೆ. ಜ್ಞಾನ ಮಾರ್ಗದ ಪ್ರತಿಪಾದಕರಾದ ಆದಿ ಶಂಕರಾಚಾರ್ಯರು, ತಾವೇ 'ಮೋಕ್ಷ ಕಾರಣ ಸಾಮಗ್ರ್ಯಾಮ್ ಭಕ್ತಿರೇವ ಗರೀಯಸಿ' ಅಂದರೆ ಮೋಕ್ಷಕಾರಣ ಸಾಮಗ್ರಿಗಳಲ್ಲಿ ಭಕ್ತಿಯೇ ಶ್ರೇಷ್ಠವಾಗಿದೆ, ಎಂದು ಘೋಷಿಸಿದ್ದಾರೆ.

ಎಲೆಗಳಲ್ಲಿ ಓದಿ ಎನಿತು ಅರಿಯದಿದ್ದು,
ಏಕ ಅಮರ ಯುಕ್ತಿ ಅರಿಯಬೇಕು.
ತಾಕಿ ಪೂರ್ತಿಯಾಗಿ ತನ್ಮಯತೆಯ ಹೊಂದು.
ವಿಶ್ವದಾಭರಾಮ ಕೇಳು ವೇಮ.

ಪ್ರಾಚೀನ ಕಾಲದಲ್ಲಿ ಭೂಜ ಎಲೆಗಳಲ್ಲಿ ಪವಿತ್ರ, ಗ್ರಂಥಗಳನ್ನು ಲೇಖಿಸುತ್ತಿದ್ದರು. ಅಧ್ಯಯನ ಶೀಲರು ಅವನ್ನು ಓದಿ, ಪಾಠ ಮಾಡುತ್ತಿದ್ದರು. ಆದರೆ, ಪಾಠದಿಂದಾಗಲಿ, ಅದನ್ನು ಕುರಿತ ಪ್ರವಚನದಿಂದಾಗಲಿ, ಎಷ್ಟೆಷ್ಟೋ ರಹಸ್ಯಾರ್ಥಗಳನ್ನು ಅರಿಯದೆ ಹೋಗುತ್ತಿದ್ದರು. ಆಗ ಅವರಿಗೆ ಬೇಕಾದುದು, ಸದ್ಗುರುವನ್ನು ಸಂಧಿಸಿ, ಒಂದು ಅಮರ ಯುಕ್ತಿಯನ್ನು ಅರಿಯುವುದು. ಅದುವೇ ಕೇವಲ ಭಕ್ತಿ. ಪರಮಾತ್ಮನ ಚಿಂತನ. ಆ ಪರಮ ತತ್ತ್ವವನ್ನು, ಭಕ್ತಿಯಿಂದ ತಲುಪಿ ಅದರಲ್ಲಿ ಪೂರ್ತಿಯಾಗಿ ತನ್ಮಯನಾಗಬೇಕು. ಮುಳಗೇಳಬೇಕು.

ಸಾಧನೆಯ ಚರಮಾವಸ್ಥೆಯಲ್ಲಿ ಭಕ್ತಿಯೋಗ, ಜ್ಞಾನಯೋಗ ಇಲ್ಲವೆ ಕರ್ಮಯೋಗಗಳು ಬೇರೆ ಬೇರೆಯಲ್ಲ. ವೇಮನ ಯೋಗೀಂದ್ರರು ಹೆಸರಿಸಿರುವ ಸಾಂಖ್ಯಯೋಗ, ಶಿವ (ಜ್ಞಾನ) ಯೋಗ ಮತ್ತು ಭಕ್ತಿಗಳ ಫಲಗಳು ಭಿನ್ನ ಭಿನ್ನವೇನಲ್ಲ. ಹಾದಿಯಲ್ಲಿ

ಹಳ್ಳವೆನಿಸಿದರೂ ಕೊನೆಯಲ್ಲಿ ಸಾಗರ ತಾನೇ. ಆಧ್ಯಾತ್ಮ ಸಾಧನೆಯಲ್ಲಿ ಪರಮ ಪದ ತಲುಪಿದಾಗ, ಪರಮನೆಡೆಗೆ ಸಾಗುವ ಪಂಥಗಳು ವಿವಿಧ, ಆದರೆ ಗಮ್ಯ, ಪರಮಾತ್ಮನೋರ್ವನೇ ಎಂಬ ನಿರ್ಣಯಕ್ಕೆ ಬರುತ್ತೇವೆ.

ನವವಿಧ ಭಕ್ತಿ :

ಭಕ್ತಿಯಲ್ಲಿ ಒಂಭತ್ತು ವಿಧಗಳಿಂದು ಗುರುತಿಸಿದ್ದಾರೆ. ಈ ವಿಧಗಳೆಂದರೆ (1) ಸ್ಮರಣ ಭಕ್ತಿ. ಪ್ರಹ್ಲಾದನು ಸ್ಮರಣೆ ಮಾಡಿ ಭಗವಂತನನ್ನು ಒಲಿಸಿಕೊಂಡನೆಂದು ಹೇಳುತ್ತಾರೆ. (2) ಕೀರ್ತನ ಭಕ್ತಿ. ನಾರದರು ಕೀರ್ತನ ಮಾಡುವುದರಿಂದ, ಗಾನ ಮಾಡುವುದರಿಂದ, ಪರಮಾತ್ಮನನ್ನು ಒಲಿಸಿಕೊಂಡರಂತೆ. (3) ಶ್ರವಣ ಭಕ್ತಿ. ಪರೀಕ್ಷಿತ ರಾಜನಿಗೆ ಶ್ರವಣ ಮೂಲಕ ಭಗವಂತನ ಕೃಪೆಯಾಯಿತೆಂದು ಹೇಳುತ್ತಾರೆ. (4) ಪಾದ ಸೇವನ ಭಕ್ತಿ. ಲಕ್ಷ್ಮೀ ದೇವಿಗೆ ವಿಷ್ಣುವಿನ ಪಾದಸೇವನೆಯಿಂದ ಅವನು ಒಲಿದನೆನ್ನುತ್ತಾರೆ. (5) ಅರ್ಚನ ಭಕ್ತಿ. ರಘು ವಂಶದ ನೆಗಳ್ತೆವೆತ್ತ ಪೃಥು ರಾಜನಿಗೆ ಅರ್ಚನ ಮೂಲಕ ಪರಮಾತ್ಮನ ಕೃಪೆ ಲಭಿಸಿತಂತೆ. (6) ವಂದನ ಭಕ್ತಿ. ಅಕ್ರೂರನು ನಿತ್ಯ ವಂದನೆ ಸಲ್ಲಿಸಿ, ಕೃಷ್ಣನನ್ನು ಒಲಿಸಿಕೊಂಡನು. (7) ದಾಸ್ಯ ಭಕ್ತಿ. ಹನುಮಂತನು ತನ್ನ ಪ್ರಭು ಶ್ರೀರಾಮನ ದಾಸ್ಯತ್ವದಿಂದ ಪರಮಪದ ಪಡೆದನು. ಹನುಮಂತನನ್ನು ವಾಯುಸುತನೆಂದೂ ತಿಳಿಯುತ್ತಾರೆ. ಆಚಾರ್ಯತ್ರಯರಲ್ಲಿ ಒಬ್ಬರಾದ, ದ್ವೈತವಾದಿ ಮಧ್ವರು ತಾವು ಹನುಮಂತನ ಅವತಾರವೆಂದುಕೊಳ್ಳುವಲ್ಲಿ ಅಭಿಮಾನ ಪಡುತ್ತಾರೆ. (8) ಸಖ್ಯಭಕ್ತಿ. ಪಾರ್ಥನು ಶ್ರೀ ಕೃಷ್ಣನ ಅಳಿಯ. ಸಖ. ಶ್ರೀಕೃಷ್ಣನ ಉಪದೇಶದಂತೆ ನಡೆಯುವವನು. (9) ಕೊನೆಯದು ಆತ್ಮ ನಿವೇದನಾ ಭಕ್ತಿ. ಬಲಿ ಚಕ್ರವರ್ತಿಯದು. ಅವನ ಭಕ್ತಿಯನ್ನು ಯಾಚಿಸಲು ಬಂದ ಪರಮಾತ್ಮನಿಗೆ ಆತ್ಮನಿವೇದನ ಮಾಡಲೂ ಹಿಂಜರಿಯಲಿಲ್ಲ. ತಮ್ಮನ್ನೇ ತಾವು ದಾನವಾಗಿ ನೀಡುವುದಕ್ಕೆ ಬಲಿದಾನವೆಂದೇ ಕರೆಯುತ್ತಾರೆ.

ಆ. ಭಕ್ತಿ ನಾಮ ಬೇರೆ, ಭಕ್ತಿಯೆಲ್ಲ ಒಂದೆ.
ಶೈವ ನಾಮ ಬೇರೆ, ಶೈವವೊಂದೆ.
ವೇದಶಾಸ್ತ್ರ ಬೇರೆ, ವೇದವಿಹುದು ಒಂದೆ.
ವಿಶ್ವದಾಭಿರಾಮ ಕೇಳು ವೇಮ.

ಭಕ್ತಿಯ ಅಭಿವ್ಯಕ್ತಿಗೆ ಮೇಲೆ ಹೇಳಿದ ವಿವಿಧ ಹೆಸರುಗಳನ್ನು ಕೊಟ್ಟಿದ್ದರೂ ಮೂಲದಲ್ಲಿರುವ ಭಕ್ತಿ ಭಾವವೆಲ್ಲವೂ ಒಂದೇ ಬಗೆಯದಾಗಿದೆ. ಶೈವ ಮಾರ್ಗಗಳು ಬಹು ಬಗೆ. ಅವುಗಳಲ್ಲಿ ಮುಖ್ಯವಾಗಿ ಶಿವಾದ್ವೈತವು (ತಿಕ ಪದ್ಧತಿ) ಕಾಶ್ಮೀರದಲ್ಲಿ ಪ್ರವರ್ತಿತವಾಗಿದ್ದು ಉತ್ತರ ಭಾರತದಲ್ಲಿ ವ್ಯಾಪಿಸಿದೆ. ಪಾಶುಪತ ಶೈವವು ಗುಜರಾತಿನಲ್ಲಿ ಆಚರಣೆಯಲ್ಲಿದೆ. ಶೈವ ಮತವು ಬಂಗಾಳದಲ್ಲಿದೆ. ಶೈವ ಸಿದ್ಧಾಂತವು ತಮಿಳುನಾಡಿನಲ್ಲಿದೆ. ಇನ್ನು ವೀರಶೈವ ಮತವು ಕರ್ನಾಟಕದಲ್ಲಿ ವಿಶೇಷವಾಗಿದ್ದು ಆಂಧ್ರದಲ್ಲೂ ಹಬ್ಬಿದೆ. ಹೀಗೆ ಶೈವ ನಾಮವು ಬೇರೆ ಬೇರೆಯಾದರೂ, ಶೈವವು ಒಂದೇ ಆಗಿದೆ. ಆದಿ ಶಂಕರಾಚಾರ್ಯರು ತಮ್ಮ ಕಾಲದಲ್ಲಿ ಪ್ರಚಲಿತವಿದ್ದ ಇನ್ನೂರು ಇಪ್ಪತ್ತು ಅವೈದಿಕ ಮತಗಳನ್ನು ಪರಿಷ್ಕರಿಸಿ, ಪುರಸ್ಕರಿಸಿದ ಷಣ್ಮತಗಳಲ್ಲಿ ಲಿಂಗಧಾರಣೆ ಇಲ್ಲದ ಶೈವ ಮತವೂ ಒಂದು.

ವೇದ ಶಾಸ್ತ್ರಗಳು ಬೇರೆ ಬೇರೆ ಇರಬಹುದು. ವೇದಗಳೆಂದರೆ ನಾಲ್ಕು : ಋಗ್ವೇದ, ಯಜುರ್ವೇದ, ಸಾಮವೇದ ಮತ್ತು ಅಥರ್ವಣ ವೇದ. ಷಟ್ ಶಾಸ್ತ್ರಗಳೆಂದರೆ ಶಿಕ್ಷೆ, ವ್ಯಾಕರಣ, ಛಂದಸ್ಸು, ನಿರುಕ್ತ, ಮೀಮಾಂಸ ಮತ್ತು ಜ್ಯೋತಿಷ್ಯ. ಹೀಗೆ ನಾಲ್ಕು ವೇದಗಳು ಮತ್ತು ಆರು ಶಾಸ್ತ್ರಗಳು ಉಂಟು. ಆದರೆ ಮೂಲದಲ್ಲಿ ಒಂದೇ ವೇದವಿತ್ತು. ನಂತರ ಲಿಪಿಯ ಆವಿಷ್ಕಾರವಾದ ಮೇಲೆ, ಅವುಗಳನ್ನು ಲೇಖಿಸುವ ವ್ಯಾಸ ಮೊದಲಾದವರು ಅವುಗಳನ್ನು ವಿಭಜಿಸಿ ಲಿಪಿ ಬದ್ಧಗೊಳಿಸಿದರು.

ಕಂ. ಭಕ್ತಿಗೆ ಮೂಲವು ಜ್ಞಾನವೇ,
ರಕ್ತಿಯಲಿ ಗುರು ಬಳಿ ಸಾರಿ, ಉನ್ನತಿ ಪಡೆಯಲ್,
ಮುಕ್ತಿಯಲರಿವೇ ತೋಚಲು,
ಮುಕ್ತಿಗೆ ನಿಲಯವಹ ದಾರಿ ತೋರ್ಪುದು ವೇಮಾ.

'ಮೋಕ್ಷ ಸಾಧನ ಸಾಮಗ್ಯಾಮ್ ಭಕ್ತಿರೇವ ಗರಿಷ್ಯತಿ'. ಜ್ಞಾನ ಮಾರ್ಗದ ಪ್ರಚಂಡ ಪ್ರತಿಪಾದಕರಾದ ಆದಿ ಶಂಕರಾಚಾರ್ಯರೇ ಸಾರಿದ್ದಾರೆ. ಜ್ಞಾನ ಮಾರ್ಗದಿಂದ ಮೋಕ್ಷವು ದೊರೆಯಬಹುದು. ಇಲ್ಲವೆ ದೊರೆಯದಿರಲೂಬಹುದು. ಆದರೆ ಭಕ್ತಿಯಿಂದತೂ ಮೋಕ್ಷ ಲಭ್ಯ.

ಭಕ್ತಿಗೆ ಜ್ಞಾನವೇ ಮೂಲವಾಗಿದೆ. ಆ ಮೂಲ ಅಂದರೆ ಬೊಡ್ಡಿಯೇ ಕವಲೊಡೆದು ಪಲ್ಲವಿಸಿ, ಪುಷ್ಪಿಸಿ ಫಲವೀಯುತ್ತದೆ. ಸಾಧಕನು ಆತ್ಮಾನುರಕ್ತಿಯಲ್ಲಿ, ಬಾಹ್ಯ ಗುರುವಿನ ಬಳಿಗೆ ಹೋಗಿ ಇಲ್ಲವೆ ಆಂತರ್ಯದಲ್ಲಿ, ಜೀವಹಂಸನನ್ನು ಗುರು ಚಕ್ರದಲ್ಲಿ ಸೇರಿಸಿ, ಉನ್ನತಿಯನ್ನು ಪಡೆಯುತ್ತಾನೆ. ಆಗ ಸಾಧಕನಿಗೆ ಭವಬಂಧನದಿಂದ ಮುಕ್ತಿಯಾಗಿ, ತನ್ನರಿವೇ ತನಗೆ ಗುರುವಾಗಿ ತೋರುತ್ತದೆ. ಆಗ ನಿತ್ಯ ಮುಕ್ತಿಗೆ ನಿಲಯದ ದಾರಿಯನ್ನು ತೋರುತ್ತದೆ.

ಗೀತ. ಮೌನಿ ನಿಜ ಕೇಳಿಯೊಳಗೆ ನಿಜ ಮನಸನು ನೂಕಿ,
ಆಮರಿದೊಡನೆ ಪರಿಪೂರ್ತಿ ಅರಿತು ಇರುವ.
ಅವನ ಭಕ್ತಿಗೆ ಸಾಟಿಯಹುದೆ ? ಅವನಿಯಲ್ಲಿ
ಡಾಂಭಿಕವಾದ ನಡೆಗಿರದು ಇಂಬು ವೇಮ.

ಬ್ರಹ್ಮವನ್ನು ಕಾಣಲಾರೆವು. ಏಕೆಂದರೆ ಅಲ್ಲಿ ಕಣ್ಣು ಹೋಗುವುದಿಲ್ಲ. ಅದನ್ನು ತಿಳಿಸಲಾರೆವು. ಏಕೆಂದರೆ ತಿಳಿಸಲು ವಾಕ್ ಅಲ್ಲಿ ಹೋಗಲಾರದು. ಹಾಗಾಗಿ ಅವನು ಬ್ರಹ್ಮವನ್ನು ಕುರಿತು ಮೌನಿಯಾಗಲೇಬೇಕಾಗುತ್ತದೆ. ಆದರೆ ಬ್ರಹ್ಮದ ಲಿಂಗವಾಗಿ, ಪ್ರಣವನಾದವು ಮೊಳಗುತ್ತದೆ. ಆ ವಿನೋದದಲ್ಲಿ ತನ್ನ ಮನಸ್ಸನ್ನು ನೂಕಿ, ಅದು ಆವರಿಸಿದೊಡನೆ ಪರಿಪೂರ್ಣವಾಗಿ ಬ್ರಹ್ಮನ ಇರವನ್ನು ಅರಿಯಬೇಕು. ಹೀಗೆ ಭಕ್ತಿ ಭಾವದಿಂದ ಸಾಧಿಸಿದವನಿಗೆ ಯಾರು ಸಮವಾಗಬಹುದು ? ಯಾರೂ ಅವನಿಗೆ ಸಾಟಿಯಾಗರು. ಆದ್ದರಿಂದ ನಾನು ಬ್ರಹ್ಮವನ್ನು ಕಂಡಿದ್ದೇನೆ, ಎಂದು ನುಡಿಯುತ್ತ ಜಂಭದ ಕೋಳಿಯಂತಿರುವವನ ನಡೆಗೆ ಯಾವ ಇಂಬೂ ಇರದು.

ಈ ವಿಷಯದಲ್ಲಿ ಕೇನೋಪನಿಷತ್ತಿನ ಋಷಿ ಹೀಗೆ ಹೇಳುತ್ತಾನೆ.

''ಅಲ್ಲಿಗೆ ಕಣ್ಣು ಹೋಗುವುದಿಲ್ಲ. ವಾಕ್ಕು ಹೋಗುವುದಿಲ್ಲ. ಮನಸ್ಸು ಹೋಗುವುದಿಲ್ಲ. ನಾವು ಅರಿಯೆವು ; ಇದನ್ನು ಶಿಷ್ಯರಿಗೆ ಹೇಗೆ ತಿಳಿಸಬೇಕೋ ? ಅರಿಯೆವು''. (ಕೇನ.ಉಪ. 1-3)

''ಯಾವುದು ಮಾತಿನಿಂದ ವ್ಯಕ್ತವಾಗುವುದಿಲ್ಲವೋ, ಯಾವುದರಂದ ಮಾತು ವ್ಯಕ್ತವಾಗುವುದೋ, ಅದನ್ನು ನೀನು ಬ್ರಹ್ಮವೆಂದು ತಿಳಿ. ನೀನು ಇದು ಎಂದು ಯಾವುದನ್ನು ಉಪಾಸನೆ ಮಾಡುತ್ತೀಯೋ, ಅದು ಇದಲ್ಲ''. (ಕೇನ ಉಪ. 1--5)

ಆತ್ಮನು ರಹಸ್ಯ ಗರ್ಭದಲ್ಲಿ ಹೇಗಿದ್ದಾನೆ ?

ಆ. ಮೊಸರಿನಲ್ಲಿ ತುಪ್ಪ, ಮರದ ಒಳಗೆ ಅಗ್ನಿ,
ಸರ್ವ ಸುಮಗಳಲಿ ಸೌರಭಗಳು.
ಎಳ್ಳಿನಲ್ಲಿ, ಎಣ್ಣೆಯಂತೆ, ಹೊಳೆವುದಾತ್ಮ.
ವಿಶ್ವದಾಭಿರಾಮ ಕೇಳು ವೇಮ.

ಮೊಸರಿನಲ್ಲಿ ತುಪ್ಪವಿದೆ ನಿಜ. ಆದರೆ ಮೊಸರನ್ನು ಕಡೆದು ಬಂದ ಬೆಣ್ಣೆಯನ್ನು ಕಾಯಿಸಿದರೆ ತುಪ್ಪ ಲಭ್ಯವಾಗುವುದು. ಮರದ ಒಳಗೆ ಅಗ್ನಿಯಿದೆ. ಆದರೆ ಒಂದು ಕೊರಡನ್ನು ಅರಣಿಯಾಗಿಯೂ ಇನ್ನೊಂದನ್ನು ಉತ್ತರಾರಣಿಯಾಗಿಯೂ ಘರ್ಷಿಸಿದಾಗ ಅಗ್ನಿ ತೋರಿಬರುತ್ತದೆ. ಎಲ್ಲ ಹೂವುಗಳಲ್ಲಿ ಸುರಭಿಯಿದೆ. ಹೂವು ಅರಳಿದಾಗ ಅದನ್ನು ಅಘ್ರಾಣಿಸಬೇಕು. ಆಗ ಸುಗಂಧವು ವೇದ್ಯವಾಗುತ್ತದೆ. ಎಳ್ಳಿನಲ್ಲಿ ಎಣ್ಣೆ ಇದೆ. ಅದು ಕಾಣುವುದಿಲ್ಲ. ಎಳ್ಳನ್ನು ಗಾಣದಲ್ಲಿ ಅರೆದಾಗ ಎಣ್ಣೆ ಹೊರಬರುತ್ತದೆ. ಹೀಗೆ ಆತ್ಮವಿದೆ. ಆದರೆ ಇಂದ್ರಿಯಗಳಿಗೆ ಅಗೋಚರ. ಮನಸ್ಸಿಗೂ ಅಗ್ರಾಹ್ಯ. ಅದನ್ನು ಅರಿಯಲು ಸ್ವಚ್ಛ ಮನಬೇಕು. ಇದು ಗುಣಗಳ ಘರ್ಷಣೆಯಿಂದ ಸಾಧ್ಯ.

ಇದೇ ಪರಿಯಾಗಿ ಉಪನಿಷತ್ತಿನ ಋಷಿಯೂ ಹೇಳುತ್ತಾನೆ.

''ಎಳ್ಳಿನಲ್ಲಿರುವ ಎಣ್ಣೆಯಂತೆ, ಮೊಸರಿನಲ್ಲಿರುವ ಬೆಣ್ಣೆಯಂತೆ, (ಒಣಗಿದ) ನದಿ ತಳದಲ್ಲಿರುವ ನೀರಿನಂತೆ, ಅರಣಿ (ಕಟ್ಟಿಗೆ) ಯಲ್ಲಿರುವ ಬೆಂಕಿಯಂತೆ, ಯಾವನು ಇವನನ್ನು ಸತ್ಯದಿಂದಲೂ, ತಪಸ್ಸಿನಿಂದಲೂ ಪುನಃ ಪುನಃ ನೋಡುತ್ತಿರುವನೋ ಅವನಿಂದಲೇ ಈ ಆತ್ಮನು ತನ್ನಲ್ಲಿಯೇ ಗ್ರಹಿಸಲ್ಪಡುತ್ತಾನೆ''. (ಶ್ವೇತಾಶ್ವತರ ಉಪ. 1-15)

''ಸರ್ವವ್ಯಾಪಿಯಾದ ಆತ್ಮನು ಮೊಸರಿನಲ್ಲಿ ಬೆಣ್ಣೆ ಇರುವಂತೆ ಇರುವನು. ಆತ್ಮವಿದ್ಯೆಗೆ ಅಂದರೆ ಆತ್ಮವನ್ನು ಅರಿಯುವುದಕ್ಕೆ ತಪಸ್ಸೇ ಮೂಲ. ಇದೇ ಬ್ರಹ್ಮನು, ಉಪನಿಷತ್ ಬೋಧಿಸುವ ಪರಮ ತತ್ತ್ವವು. ಹೌದು. ಇದೇ ಬ್ರಹ್ಮವು ಉಪನಿಷತ್ತು ಬೋಧಿಸುವ ಪರಮ ತತ್ತ್ವವು. (ಶ್ವೇತಾಶ್ವತರ 1-16)

ನಿಜವಾಗಿ ಭಕ್ತಿರಿಗೋಸ್ಕರ ಬ್ರಹ್ಮನು ಪ್ರಿಯನಾಗಿದ್ದಾನೆ. ಆದ್ದರಿಂದ ಬ್ರಹ್ಮವಾಚಕವಾದ ಸರ್ವ ಮಸ್ತುಗಳು, ಸರ್ವ ಸತ್ತೆಗಳು, ಅವನಿಗೆ ಪ್ರಿಯವಾಗಿವೆ.

ಆ. ತಾಯಿ ತಂದೆಗಳಲಿ ದಾರಿದ್ರ್ಯ ಯುತರಲಿ,
ನಂಬಿಕೊಂಡ ಬಡವ ನರರಲ್ಲಿಯು.
ಪ್ರಭುಗಳಲಿ ಬಹಳ ಭಯ ಭಕ್ತಿಯಿರಿಸು,
ವಿಶ್ವದಾಭಿರಾಮ ಕೇಳು ವೇಮ.

ನಿಜವಾದ ಭಕ್ತನು ಜಗತ್ತನ್ನು ಪ್ರೀತಿಸುತ್ತಾನೆ. ಸಮಾಜವನ್ನು ಪ್ರೀತಿಸುತ್ತಾನೆ. ತಾಯಿ ತಂದೆಗಳನ್ನು, ದಾರಿದ್ರ್ಯಯುತರನ್ನು, ನಂಬಿಕೊಂಡ ಜನರನ್ನು, ಪ್ರಭುಗಳನ್ನು ಭಯ ಭಕ್ತಿಯಿಂದ, ಎಲ್ಲಿ ತಪ್ಪುವೆನೋ ಎಂಬ ಭಯ, ಮತ್ತು ಅವರೆಲ್ಲ ಬ್ರಹ್ಮನ ಸಂತತಿ ಎಂಬ ಭಕ್ತಿ, ಇವುಗಳಿಂದ ಕಾಣುತ್ತಾನೆ.

ಏಕೆಂದರೆ ಭಕ್ತನು ಲೀಲಾಮಯ ಪ್ರಪಂಚವನ್ನು, ಅದರ ಪ್ರತಿಯೊಂದು ವಿಕಾಸವನ್ನು ಒಂದೇ ಅಖಂಡ ರಸದಲ್ಲಿ ಓತಪ್ರೋತ ಭಾವದಿಂದ ನೋಡುತ್ತಾನೆ. ಏಕೆಂದರೆ ಬ್ರಹ್ಮನು ರಸ ಸತ್ತೆಯಾಗಿದ್ದಾನೆ. ಹಾಗಾಗಿ ಭಕ್ತನು ರಸಿಕನಾಗಿದ್ದಾನೆ. 'ರಸೋ ವೈ ಸಃ' ಎಂದು ಶ್ರುತಿ ಸಾರುತ್ತದೆ. ಈ ಪರಮ ರಸವನ್ನು ಸವಿಯುವವನೇ ರಸಿಕನು.

''ಅತ್ಮಸ್ಥಿತಂ ಶಿವಂ ತ್ಯಕ್ತಾ ಬಹಿಸ್ಥಂ ಚ ಸಮರ್ಥೇತ.
ಹಸ್ತಸ್ಥಂ ಪಿಂಡಮುತ್ಸೃಜ್ಯ ಭ್ರಮತಿ ಜೀವಿತಾಶಯಾ'' ಅಂದರೆ

ತಮ್ಮೊಳಗೆ, ತಮ್ಮ ಗುಹೆಯಲ್ಲಿ ಅಡಗಿರುವ ಶಿವನನ್ನು ಬಿಟ್ಟು, ಹೊರಗೆ ಪರಮಪುರುಷನನ್ನು ಹುಡುಕುತ್ತ ಹೋಗುವವರ ಅವಸ್ಥೆಯು ಯಾವ ರೀತಿಯಾಗುವುದೆಂದರೆ, ಕೈಯಲ್ಲಿರುವ ಅನ್ನವನ್ನು ಚೆಲ್ಲಿ, ಬೇರೆಯವರ ಬಾಗಿಲೆದುರು ನಿಂತು 'ಅನ್ನಂ ದೇಹಿ' ಎಂದು ಭಿಕ್ಷೆಗಾಗಿ ಅಲೆದಂತೆ.

ಇದನ್ನೇ ವೇಮನ ಯೋಗಿಗಳು ಸುಂದರವಾಗಿ ಹೀಗೆ ಹೇಳಿದ್ದಾರೆ.

ಆ. ಕರದಲ್ಲಿಯೆ ತಾವು ಗಂಗಾಧರನ ಹಿಡಿದು,
ತೀರ್ಥಗಳಿಗೆ ಹೋಗಿ ತಿರುಗುತಿಹರು.
ಬೆಣ್ಣೆ ಹಿಡಿದು ತುಪ್ಪ ಹುಡುಕುವ ತೆರ.
ವಿಶ್ವದಾಭಿರಾಮ ಕೇಳು ವೇಮ.

ತನ್ನ ಮುಡಿಯಲ್ಲಿ, ಗಂಗೆಯನ್ನು ಧರಿಸಿದ ಗಂಗಾಧರ ಶಿವನನ್ನು ಕರದಲ್ಲಿ ಇಲ್ಲವೆ ಹೃದಯದಲ್ಲಿ ಹಿಡಿದು, ಅದನ್ನು ಮರೆತು, ಅವನನ್ನೇ ಹುಡುಕಲು ತೀರ್ಥಗಳಿಗೆ ಮೂಢರು ತಿರುಗುತ್ತಿರುತ್ತಾರೆ. ತಮ್ಮ ಬಳಿ ಬೆಣ್ಣೆ ಇರುವಾಗ, ತುಪ್ಪಕ್ಕಾಗಿ ಅಲ್ಲಲ್ಲಿ ಹುಡುಕಿದ ರೀತಿ ಇದಾಗಿದೆ.

ಆದ್ದರಿಂದ ಭಕ್ತಿ ಸಾಧಕರೇ ! ಪರಬ್ರಹ್ಮನಲ್ಲಿ ಭಕ್ತಿ ಇರಿಸಿ, ಅವನ ಪರಧಾಮವಾದ ಆತ್ಮವನ್ನು ಅರಿತು, ಆತ್ಮವೇ ಪರಮಾತ್ಮವೆಂದು ಶ್ರುತಿ, ಅನುಭವ, ಆಪ್ತವಾಕ್ಯಗಳ ಪ್ರಮಾಣಗಳಿಂದ ಪ್ರಮಾಣೀಕರಿಸಿಕೊಂಡು, ಜೀವ ಭಾವವನ್ನು ಶಿವಭಾವದಲ್ಲಿ ಏಕವಾಗಿಸಿರಿ. ಸಾಮರಸ್ಯದ ಬಾಳು ಜೀವಿಸಿರಿ.

ಓಂ ಶಾಂತಿಃ ಶಾಂತಿಃ ಶಾಂತಿಃ



ಪದ್ಯಗಳ ಅಕಾರಾದಿ ಅನುಕ್ರಮಣಿಕೆ

ಪದ್ಯ	ಪುಟ
ಅ	
ಅಂಗವೆಲ್ಲ ಸಡಲಿ	506
ಅಂಡದಲ್ಲಿ ಹುಟ್ಟಿ	207,
	292
ಅಂಡದೊಳಗೆ ಆಕಾಶ	294
ಅಂಡಲೆಯುವ ಮನುಜ	181
ಅಂತರಂಗದಲ್ಲಿ	260,
	517,
	534
ಅಂತರಾತ್ಮಾನುಭವ	193,
	551,
	581
ಅಂತರಿಕ್ಷದಲ್ಲಿ	420
ಅಂಧ ಕಷ್ಟದ ಬದುಕು	126
ಅಂಧ ಸದ್ಬೋಧ ಮರ್ಮವ	34
ಅಂದವನಾಹತದಿ	226
ಅಕ್ಷಯೆನುವುದು ಬಳಿಯ	391
ಅಕ್ಷರ ಪದಕೆ ದಶ	326
ಅಕ್ಷರ ಪುಟಕಾರಂಭಿಸಿ	579
ಅಕ್ಷರಾದಿ ಹಿಂದೆ	541
ಅಕ್ಷರಾತ್ಮಕದಲಿ	56
ಅಖಿಲ ಕೊರತೆ ತೀರಿ	546
ಅಖಿಲ ಜಾಡು ತೊರೆದು	546
ಅಖಿಲ ಜೀವಿಗಳನು	75,
	222,
	330,
	378
ಅಖಿಲಾಕಾರನನಂತನು	557
ಅಗಿದ ಮೇಲೆ ಮಣ್ಣು	413
ಅಗ್ನಿ ಶಿಖೆಗಳಲಿ	550
ಅಚರ ಚರ ಸಮೂಹ	342
ಅಚಲ ತತ್ವವೆಲ್ಲ	547
ಅಡಲು ತಪ್ಪಲಾಗ	438
ಅಡಲು ಬಂದರಾಗ	434
ಅಡವಿ ತಿರುಗಲಿಲ್ಲ	48,
	244,
	418,
	575
ಅಡಗಡಿಗೆ ವಿಚಿತ್ರ	224,
	274,
	387
ಅಡ್ಡದಾರಿ ಬಿಟ್ಟು	576
ಅಣುವಿನಲ್ಲಿ ಇಪ್ಪ	279
ಅಣುವಿನಲ್ಲಿ ಉಂಟು	279,
	359
ಅತ್ತ ಇತ್ತ ನೋಡೆ	51
ಅತಿ ನಿದ್ರಾವಂತರಿಗು	261,
	516
ಅತಿ ಸೂಕ್ಷ್ಮದೃಷ್ಟಿಯ ಒಳಗೆ	557
ಅತುಲ ವೈರಾಗ್ಯ	519,
	252
ಅದುಮಿ ಮನಸು ನಿಲಿಸಿ	511
ಅಧರ ಸುಧೆಯ ಕಂಡು	463
ಅಧಿಕ ರಾಜನೊಬ್ಬ	480
ಅನಲ ಕೊಂಚವಿರಲಿ	198,
	354
ಅನವರತ ಘೃಣೆ ತೊರೆದು	446
ಅನಿಲದಲಿ ಚಲಿಸುತಿಹ	351
ಅನಿಲದೊಳಗೆ ಜನಿಸುತಿಪ್ಪ	197,351

ಪದ್ಯ	ಪುಟ
ಅನುತನುತಿರೆ ರಾಗ	64
ಅನುಭವ ಕೇಳಿಯ ಒಳಗೇ	198, 311
ಅನುವಿಲಿ ನಿರ್ಗುಣ ರೂಢಿಸಿ	391
ಅನುವು ಮೀರಿ ಮನಕೆ	552
ಅನ್ಯತವಾಡದಿಪ್ಪ	64, 166
ಅನ್ನ ಅಧಿಕವಾಗೆ	450
ಅನ್ನಕಿನಿತು ಗತಿಗಾಣದೆ	449
ಅನ್ನ ರಸದಿಂದಲಿ ಆಯ್ತು	186, 293
ಅನ್ನವಿಡುವಕಿಂತ	438
ಅಬಬ ! ಇಂದ್ರಜಾಲ	224, 274
ಅಮಲ ಅವ್ಯಯ ಚಿಂತನವು	218
ಅಮೃತ ಸಾಧನದಲಿ	531
ಅಮ್ಮ ಕಣಾ ಭಾರ್ಯೆಯೆನಲು	570
ಅರಸಿ ಧೈರ್ಯ ಮಾಡಿ	580
ಅರಸಿ ನೋಡಿದೊಡನೆ	55
ಅರಿಕ್ಪಾಮಡಾಮರಗಳು	494
ಅರಿತ ಮನುಜನ ಸುಖ	289
ಅರಿತೊಡೆ ಸುಖ ಹೊಂದಿ	131
ಅರಿ ತನ್ನಾಸ್ತಿಯೆನದೆ	287, 495, 571
ಅರಿಯೆ ಕರ್ಮಗಳಲಿ	166
ಅರಿಯೆ ದೋಚುವವನು	40
ಅರಿವನರಿಯದಿರುವ	585
ಅರಿವಿನ ಶಿವಪೂಜೆ	579
ಅರಿಯೆ ಉಳ್ಳವನಿಗೆ	553
ಅರಿವನೊಳುದಿಸಿವೆ	307
ಅರಿವಿಗಾಗಿ ತಿರಿಗಿ	253, 274
ಅರಿವಿನ ಶಿವಪೂಜೆ	579
ಅರಿವು ಗೇಡಿ ಜೀವಿ	308
ಅರಿವು ಉಳ್ಳ ಅವನು	40, 251
ಅರಿವು ಉಳಳವನಿಗೆ	553
ಅರಿವು ಪರಿಗಣಿಸುತ	538
ಅರಿಷಡ್ವರ್ಗಗಳಿಂದಲು	444
ಅರುಣನುದಯ ಸಂಖ್ಯೆ	300
ಅಲ್ಪ ಸುಖವನೆಲ್ಲ	573
ಅಲ್ಪನಾಡುತಿಪ್ಪ	509
ಅಲ್ಲಿ ಇಲ್ಲಿ ಎನದೆ	322
ಅಳವಿಗೆಟುಕದ ಪದ	15
ಅವನ ಕಂಡು ನೋಡು	586
ಅವನು ಅವನು ಅವನು	189, 393
ಅವನು ಅವನು ಅಲ್ಲ	217
ಅವನಿಲೋರ್ವ ಮಗುವ	239, 223, 323
ಅವನಿಯೊಳೊಬ್ಬ ಸುತ	324
ಅಷ್ಟ ತನುಗಳಿಂಗೆ	358
ಅಷ್ಟದಳಗಳಿಗೆ ಆಧಾರ	236
ಅಷ್ಟದಳಂಗಳಲಿ	235
ಅಸ್ಥಿರ ದೇಹವನು	248, 522
ಅಹಮು ಮೀರಲಾರ	60

ಆ

ಆಕಾಶದಲ್ಲಿ ವಾಯುವು	196, 350
ಆಕೃತಿಯರಿತೊಡೆ	417

ಪದ್ಯ	ಪುಟ
ಆಗಬೇಕು ಯೋಗಿ	90
ಆಗೀಗ ಸುಳ್ಳಾಡಿ	480
ಆಗುತಿಪ್ಪ ಕಾರ್ಯ	129
ಆಗುವುದನರಿಯರು	125
ಆತ್ಮ ತೇಜ ಮೂಡಿ	193
ಆತ್ಮ ತೇಜವನು ಗಮನಿಸಿ	535
ಆತ್ಮ ತೇಜ ಹೊಂದಿ	558
ಆತ್ಮದಲ್ಲಿ ದೃಷ್ಟಿ	192,214
ಆತ್ಮದೊಳಗೆ ಶಿವನ	256
ಆತ್ಮ ಬುದ್ಧಿಯಿಂದ	214
ಆತ್ಮಾನಾತ್ಮ ಬುದ್ಧಿಯಿಂದ	194
ಆತ್ಮ ವರಿಯದೆ ನುತಿಸಿ	261
ಆತ್ಮವ ತನ್ನೊಳು ಗಮನಿಸಿ	189,
	390
ಆತ್ಮವುಳ್ಳ ಅದನು	563
ಆತ್ಮ ಶುದ್ಧಿಯಿರದೆ	305,
	515
ಆತ್ಮ ಸೂಕ್ಷ್ಮವಿರಲು	477
ಆದಿ ಏಕವರಿತು	327
ಆದಿಗಾರೂ ಹುಟ್ಟಿ	328
ಆದಿ ತುದಿಯರಿಯದ	261
ಆದಿ ತುದಿಯು ಇಲ್ಲ	325
ಆದಿ ನೋಡುತಿರಲು	325
ಆದಿ ಮೂಲವೇನು	322
ಆದಿಯೊಂದ ತಿಳಿದು	552
ಆಧಾರವೆಂಬುವುಗಳಾರು	233
ಆಯು ಸುಧೆಯಕಿಂತ	305
ಆಯು ಉಂಟು ಅಷ್ಟೆ	305
ಆಡುಗಳನು ಕಡಿದು	339
ಆರ್ಯರಾದ ಜನರು	42
ಆರಿಹ, ಮೂರಿಹ ಕಿಂಡಿಯ	335
ಆರುಗಳನು ಸೇರೆ	340

ಪದ್ಯ	ಪುಟ
ಆರು ಮೂರು ಕಟ್ಟಿ	340
ಆರು ಆರುಗಳಿಗೆ	340
ಆರೆರಡಕ್ಷರ ಜಪದಲ್ಲಿ	579
ಆಸೆಗಳನು ಕಡಿದು	576
ಆಸೆಗಿಂತ ದುಃಖ	444
ಆಸೆಯೆಂಬ ಲತೆಯ	46,
	445

ಇ

ಪದ್ಯ	ಪುಟ
ಇಂದ್ರ ಲೋಕವಿರಲಿ	388
	406
ಇಂದ್ರ ಲೋಕವೆನಲು	406
ಇಂದ್ರಿಯಂಗಳಿಂದ	573
ಇಂಥ ಕಣ್ಣಿನಿಂದ	269
ಇಂಥ ಪದ್ಯ ಪುಂಚ	302
ಇಡ ಪಿಂಗಳ ನಾಡಿಗಳಿಗೆ	238
ಇತರಾಪೇಕ್ಷೆಗಳಳಿದೊಡೆ	27
ಇದು ನನಗೆ ಸಾಲದೆನ್ನುತ	75
ಇದು ತನಗೆ ಸಾಕು ಎನಿಸಲ್	95
ಇದುವೆ ಪರಮವೆಂದು	521
ಇದ್ದವನಂತೆ ಇರು	126
ಇನಿಯಳ ಮೊಲೆ ಕಂಡು	449
ಇರಲು ನಿರುತ ಅರಿವು	307
ಇರುವವು ಗಾಳಿ ನಭಂಗಳು	97,
	357
ಇರುವ ಹಾಗೆ ಇಹುದು	275,
	318
ಇಲಿಯ ಹಿಡಿಯೆ ಬೆಕ್ಕು	445
ಇಲ್ಲಿ ತಾಯ್ತಂದೆಯರು	522
ಇಳೆಯು ಗಗನ ಮಧ್ಯೆ	201,
	357
ಇಷ್ಟು ಚಿಂತೆಯೇಕೆ	332,381

ಪದ್ಯ	ಪುಟ
ಇಷ್ಟು ದುಗುಡವೇಕೆ	333
ಇಹದಲಿ ಎನಿತೆನಿತು	48
ಇಹದಲ್ಲಿ ಸೌಖ್ಯವು	288
ಇಹದೊಳಗೆ ಗುರುವಿಗೆ	49
ಇಹದೊಳಗೆ ಹುಟ್ಟಿ	248
ಇಹಪರ ಸೌಖ್ಯ	524
ಇಹವ ತೊರೆಯೆ ಫಲವು	317
ಈ	
ಈ ಕಪಟ ನಾಟಕವನ್ನು	44
ಈ ಘನ ಸೂತ್ರವನರಿವುದು	221, 272,
ಈಜಬಹುದು ನೇರ	53
ಈಜು ಬಾರದವನು	246, 505
ಈಜಲು ಬಲ್ಲಾತನಿರಲು	505
ಈ ತನುವಿನಲ್ಲಿ	283
ಈಯದವನ ಕೈಲಿ	137
ಈ ಲೋಕ ಚಿಹ್ನೆಯೆಲ್ಲವು	36
ಈಶನಿಗೆ ಈಯಲು	334
ಈಶ್ವರನ ತಿಳಿಯಲು	342
ಈಶ್ವರನ ನೆನೆಯಲು	545
ಉ	
ಉಂಟು ಉಂಟು ಜ್ಞಾನಿ	65, 564
ಉಚಿತವಂತನಿರಲಿ	88
ಉಚಿತಾಹಾರಂಗಳಿಂದ	30
ಉಣಿಸುತಿರುವವನಾರು	220, 376
ಉಣ್ಣುವ ಬಾನದೊಳು	438, 571
ಉತ್ತಮ ಜ್ಞಾನ ನಿಲಿಯದಂತೆ	26
ಉತ್ತಮರ ಉದರದ	78
ಉತ್ತಮೋತ್ತಮನಿಹ	38
ಉತ್ತಮೋತ್ತಮವಾದ	458
ಉತ್ತಮ ಶಿವಯೋಗಿ	558
ಉದಕದೊಳಗೆ ತತ್ತ್ವವನ್ನು	198, 354
ಉದಕದಲ್ಲಿ ಪಾಚಿ	318, 513
ಉಪಮೆಯಿಂದ ಗುರುವ	29
ಉಪ್ಪು ಇರದ ಸಾರು	433
ಉಪ್ಪು ಕಪ್ಪುರಗಳಿಗೆ	426
ಉಬ್ಬಿ ಗುರುವ ಬೇಡಿ	19
ಉರ್ವಿ ಜನರು ಪರಮ	251, 10
ಉರ್ವಿ ವಾಸಿಗೆಲ್ಲ	273
ಉಳ್ಳ ಮನುಜ ತಾನು	570
ಉಳ್ಳುದನ್ನೆ ಅರಿತು	352
ಉಸಿರು ಹೋಹ ಮುನ್ನ	59
ಎಷ್ಟೊ ತಪವ ಗೆಯ್ಮೆ	115
ಊ	
ಊಟವನು ಮಾಡಿಸಿ	80, 566
ಊರಿನೊಳಗೆ ಹುಟ್ಟಿ	500, 250
ಊರು ಕಾಡು ತಿರುಗಿ	72, 508
ಊರು ಸೇರಿಕೊಂಡು	249, 520
ಊರ್ಜಿತಾನಂದ ಪರಿಪೂರ್ಣ	31, 72

ಪದ್ಯ	ಪುಟ
ಊಟವನೆ ಮಾಡಿಸಿ	566
ಊರ್ಧ್ವ ಲೋಕದಲ್ಲಿ	408, 539, 560
ಊಳಿಗವನು ಮಾಡಿ	18
ಋ, ೠ	
ಋಗ್ಯಜುಸ್ಸನರಿತು	266
ಋತವನ್ಯತವರಿಯಲು	491
ಎ	
ಎಂಟು ಅಕ್ಷರಗಳ ಏರ್ಪಡಿಸಿ	342
ಎಂಟು ಅಕ್ಷರಗಳಲಿ	342
ಎಂಟು ಅಕ್ಷರಗಳ	
ಎಂಥವನೋ ತಾನು	114
ಎಂಜಿಲೆಂಬಿಲೆನುತ	465
ಎಂಥ ಕ್ಷಾಮವಿರಲಿ	438
ಎಂಥ ಯೋಗಿಯೇನು	462
ಎಂಬರು ವೇಷ ಧರಿಸಿ	456
ಎಂಭತ್ತು ನಾಲ್ಕು ಲಕ್ಷ	209, 292
ಎಡೆಬಿಡದೆ ಗುರುವನು	17
ಎತ್ತು ಎರಡು ತಿನಲು	588
ಎದುರು ಕಾಣುವುದ	405
ಎನಿತೊ ತನುಗಳಿರಲು	309
ಎದುರು ಕಾಣುವುದು	405
ಎದುರು ಸಿರಿಯ ಕಂಡು	134
ಎನಿತೊ ತನುಗಳಿರಲು	343
ಎನಿತೊ ವಿದ್ಯೆಗಳ ಕಲಿತರು	189, 391
ಎರಡು ದಶವಾರನೆ	343
ಎರಡು ಮೂರಕ್ಷರ	327
ಎರಡು, ಎರಡು, ಎರಡು	327
ಎರಡು ಎರಡು ಎರಡುಗಳನು	327
ಎಲೆಗಳಲ್ಲಿ ಓದಿ	554, 590
ಎಲೆ ಮೇಲಿನ ಬರೆಹ	133
ಎಲೆಯ ಅಡಿಗೆ ಇಹವು	367
ಎಲೆಯ ಕಾಣಬಹುದು	367, 535
ಎಲೆಯ ಹಿಂದೆಯಷ್ಟೆ	367
ಎಲೆಯು ಇರದ ಕೊಂಬೆ	367
ಎಲ್ಲಿಂದ ಬರುವುದು	314
ಎಲ್ಲಿಂದ ಬಂದೆನು	267
ಎಷ್ಟೊ ಕಾಲ ಮುನ್ನ	307
ಎಲೆಯ ಸೊಬಗಿನಲುಂಟು	368
ಎಷ್ಟೊ ತಪವ ಗೆಯ್ಮೆ	115
ಎಷ್ಟೊ ಫಲಗಳುಂಟು	118
ಎಷ್ಟೊ ವೇದ ನೋದಿ	475
ಎಷ್ಟೊ ವೇಷಗಳಿಗೆ	60
ಎಷ್ಟೊ ಸೇವೆ ಗೆಯ್ದು	480
ಏ	
ಏಕಪದವನು ಮನದಿರಿಸಿ	543
ಏಕಂ ಬ್ರಹ್ಮವು	423
ಏಕಾಕ್ಷರವೆ ಬ್ರಹ್ಮ	225, 324
ಏರುತಿಪ್ಪ ಆಸೆ	444
ಏಳು ಅಕ್ಷರಗಳಲಿ	341, 578
ಏಳು ಎರಡು ತಿನಲು	344
ಏಳು, ಐದು ಆರು	345
ಏಳು ಮಾರ್ಗಗಳನು	341

ಪದ್ಯ	ಪುಟ
ಐ	
ಐದು ಅಕ್ಷರಗಳ ಅಂಗವನು	339
ಐದು ಅಕ್ಷರಗಳನು ತಿಳಿದು	339
ಐದು ಐದು ಎಂಟು	344
ಐದು ಐದು ಆರು	343
ಐದು ಐದು, ಆರು, ಎಂಟು	543
ಐದು ಮನಸಿಗೆ ತಗುಲಿ	337
ಐದು ಮನಸು ತಗಲಿ	231, 336
ಐದು ವರ್ಣಗಳಲಿ	337
ಒ	
ಒಂದನೊಳಗೆ	326
ಒಂದಾದ ದಂಪತಿ	84
ಒಂದು ತೊಗಲು ತಂದು	138
ಒಂಭತ್ತು ದ್ವಾರದ ತನು	210, 296
ಒಡಲು ಗಾಸಿಗೊಳಿಸಿ	254
ಒಡವೆಯಿಪ್ಪ ತಾಣ	51
ಒಡವೆ ಸಿಗುವ ತನಕ	581
ಒಪ್ಪಗಾಣು ಮುಕ್ತಿ	25
ಒಪ್ಪು ತಪ್ಪರಿಯದ	86
ಒಬ್ಬನ ಕೀಳು ಬೇರೊ	118
ಒಬ್ಬರೆಂಜಲು ಬಾಯಲಿ	489
ಒಲಿಸಿ ಒಲಿಸಿ ಗುರುವ	54
ಓ	
ಓದನೆಷ್ಟು ಓದಲೇನು	477
ಓದನೋದಲೇಕೆ	424
ಓದಿನಲ್ಲಿ ಇಲ್ಲ	331, 531
ಓದುಗ ಮತಿಗಿಂತ	476
ಓದು ಬಾರದಿರಲು	55
ಓರ್ವ ತಾಯಿಯುದರ	78
ಔ	
ಅಂ–ಅಃ	
ಕ	
ಕಂಕಭಟ್ಟನಂತೆ	182
ಕಂಡು ಕಾಣಲಾರ	448, 466
ಕಂಡು ಜ್ಞಾನವಂತನ	483, 563
ಕಂದನು ಬೆಳೆದು ಹಿರಿಯರಿಗೆ	96
ಕಚ್ಚಿ ಅಕ್ಕಿ ಬೇಳೆ	433
ಕಟ್ಟಿಕೊಟ್ಟರೆ ಸಿಕ್ಕದು	35
ಕಟ್ಟುವವರು ಯಾರೊ	302
ಕಣ್ಣು ಕಂಡಿತೆನಲು	269, 539
ಕಣ್ಣು ದೃಷ್ಟಿಯಿಂದ	281
ಕನಕ ಗಿರಿಯು ತನ್ನ	185
ಕನಕ ಮೃಗವು ಭುವಿಲಿ	9
ಕನಕ ಮೃಗವ ಹಿಡಿದು	179
ಕನಕವುಳ್ಳವನಿಗೆ ಕಾಣಿಕೆ	468
ಕನ್ನೆವರರು ಸೇರಿ	207, 293
ಕಪಟವುಡುಗಿ ಗುರುವಿಗೊಪ್ಪ	26
ಕಮಲ ಭವನು ಗೆಯ್ದ	226, 328, 379
ಕರ್ಮ ಗುಣಗಳಿಲ್ಲ	91, 111

ಪದ್ಯ	ಪುಟ
ಕರ್ಮ ಫಲಗಳೆಲ್ಲ	104,
	111,
	502
ಕರ್ಮದಲ್ಲಿ ಹುಟ್ಟಿ	112
ಕರ್ಮದ ನಿವೃತ್ತಿಯಾಗಲ್	92
	123
ಕರ್ಮವು ಜ್ಞಾನಿಗೆ ದೂರವು	124
ಕರ್ಮಾಕರ್ಮಕ್ಕೋಸುಗ	122
ಕರ್ಮಾಕರ್ಮಗಳಳಿಯದ	92
ಕರದಲ್ಲಿಯೆ ತಾವು	594
ಕಲಕಿದಂಥ ಮನದಿ	77,
	511
ಕಲಿಯುಗದೊಳು ಮುನ್ನ	11,
	264
ಕಲಿಯುಗದೊಳು ಹುಟ್ಟಿ	506
ಕಲುಷಗಳನು ಎಲ್ಲ	583
	62
ಕಲುಷವೆಲ್ಲ ತಿಳಿಯೆ	75
ಕಲ್ಪವೆನಲು ಆಯ್ತು	280,
	305
ಕಲ್ಮಷವು ಹೋಗದೆ	539
ಕಲ್ಲು ದಿನ್ನೆಯಿಂದ	415
ಕಲ್ಲು ಪಡುವಲಕ್ಕೆ	11
ಕಲ್ಲು ಬಸವನಿಗತಿ	421
ಕಲ್ಲುಬೊಮ್ಮಗೇಕೆ	411
ಕಳೆದ ದಿನ ನೆನೆವುದು	230,
	317
ಕಳ್ಳ ಗುರು ಕಟ್ಟುವನೆಲ್ಲ	38
ಕಳ್ಳ ಗುರು ಕಟ್ಟುವ	88
ಕಸ್ತುರಿಯನು ನೋಡೆ	42,572
ಕಶಕಮಖಿಲಗಳಿಗೆ	541
ಕಷ್ಟವಿಹುದು ಮನಸು	537

ಪದ್ಯ	ಪುಟ
ಕಾಗುಣಿತ ಬೋಧಿಪ	41
ಕಾಗೆ ಇರುವ ಗೂಡು	68
	543
ಕಾಗೆ ಗೂಡಿನಲ್ಲಿ	68
ಕಾಡೊಳಲೆದು ಮತ್ತೆ	163
ಕಾಣದು ಆ ಪರ ತತ್ತ್ವವು	57
ಕಾಣಲಾರ ಹಣೆಯ	269
ಕಾಣು ಇಹುದ ತಿಂದು	58
ಕಾನನವನು ಸೇರಿ	99
	163
ಕಾಮಿಯಲ್ಲದವನು	387
ಕಾಯದಿಪ್ಪ ಕಾಲ	246
ಕಾಯ ಪಣತೆ ಮಾಡಿ	543
ಕಾಲಕಂಠನೆದುರು	72,
	99,
	153
ಕಾಲಗತಿ ಯಾರಿಗಾದರೂ	171
ಕಾಲ ಚಕ್ರವೆಲ್ಲ	303
ಕಾಲವಧಿಕವಿದ್ದು	181
ಕಾಲವಶದಿ ಸಿಲುಕಿ	138
ಕಾಲವ ತಿಳಿಯದ ಸೊಂಪಲಿ	278,
	303
ಕಾಲವು ಬರಲೆಂದು	280,
	303
ಕಾಶಿಗೆ ಹೋಹೆನೆಂದು	541
ಕಿವಿಯು ಕೋರ್ವುದು	204
ಕಾಲು ಮುಂದೆ ಹಳ್ಳ	309
ಕಿವಿಯ ಗೂಡು ಗೆಯ್ದು	411,
	565
ಕಿಲುಬು ಗಟ್ಟಿದಂಥ	510
ಕುಕ್ಕರ ವಿಕಾಂತ	486
ಕುರಿ ಹತ್ತು ಸಾವಿರ	46

ಪದ್ಯ	ಪುಟ
ಕುಲದ ಒಳಗೆ ಯೋಗ್ಯ	420
ಕುಲದ ಮೇಲ್ಮೆಯುಳ್ಳ	471
ಕುಲ ನೀರು ಗಾಣಿಸಿ	183
ಕುಲವ ಕೈಲಿ ಹಿಡಿದು	451
ಕುಂಬಾರನಲಿ ಜ್ಞಾನವ	262
ಕೂಟ ವಾಸಿಯಾದ	191
ಕೂಡಿ ಹಿಡಿದು ಹಂಸ	236
ಕೃಪೆ ಬಿಟ್ಟು ಮನಸು	550
ಕೆಟ್ಟ ಹಸಿವಿನಿಂದ	446, 574
ಕೆಟ್ಟ ಮಾನಸರಿಗೆ	552
ಕೆಡುಕನನ್ನು ಹೆಚ್ಚು	136, 117, 501
ಕೆಡುಕು ಗುಣಗಳೆಲ್ಲ	49
ಕೆಂಪು ವರ್ಣದೊಳಗೆ	225 324
ಕೆರವಿನೊಳಗೆ ಕಲ್ಲು	96
ಕೆಳಗೆ ಹೊಯ್ವ ಹಾಲು	538
ಕೇಡಿ ಗುಣಗಳೆಲ್ಲ	17
ಕೇಡು ಬಂದಿತೆಂದು	106, 135
ಕೇಳದರ್ಥವೀವ	287, 495, 572
ಕೇಳಿದವನಿಗಿಂತ	584
ಕೇಳಿದ ಕಂಡುದ ಕೋರುವ	516
ಕೇವಲಂತರಾತ್ಮ	217
ಕೈಕೆಯಿಂದಾಗಿ ರಾಮನು	176
ಕೊಡದಷ್ಟು ಹಾಲೊಳು	514
ಕೊಡೆಯು ತಾನೀವುದು	544
ಕೊಲ್ಲಲರ್ಹನೆನಿಪ	165
ಕೋಗಿಲೆ ವನದಲಿ	509
ಕೋಪದಿಂದ ನರಕ	445
ಕೋರಿ ಮನದಿ ಸೇವೆ	46
ಕ್ಷಿತಿಯಲಿ ಸತಿಗೊಪ್ಪ	565

ಖ

ಖಂಡಪರಶುವಿನ ಪೂಜಪ	579
ಖೇಚರರು ಭುವಿಯಲಿ	399

ಗ

ಗಂಗೆ ಸ್ನಾನ ಮಾಡಿ	484
ಗಂಧ ಕಡ್ಡಿಗೆಂತು	140
ಗಗನ ಗೋಚರ ನಿರ್ಗುಣ	391
ಗಗನವಮರ ಕಂಡು	289
ಗಟ್ಟಿ ಕಲ್ಲು ತಂದು	415
ಗತ ಕಾಲವೆಲ್ಲ	528
ಗಟ್ಟಿಗ ನಾಲ್ವರು	336
ಗಯನಂಬರೀಷ ಘನ	143
ಗಾಳಿ ಗಾಳಿ ಬೆರೆತು	66
ಗಾರ್ದಭೇನರಿವುದು	259
ಗಾಳಿಯಿರದ ದೀಪ	557
ಗಿಡದೊಳಗೆ ಬೀಜ	365
ಗಿಡದ ಮೊದಲ ಹಾಲು	369
ಗಿಡ್ಡ ಹುಡುಗ ಬಲಿತು	263
ಗಿರಿಯು ಹಿರಿಯ ಮಾವ	421
ಗುಡಿಯ ದೇವರೆಂದು	100, 407, 497
ಗುಣವತಿಯಿರೆ ಯುವತಿ	85
ಗುಣವಂತಂ ಕಾಂತೆ	85
ಗುಣವಿಹೀನನನ್ನು	490
ಗುಣಿಗೆ ಜ್ಞಾನ ಮಹಿಮೆ	89

ಪದ್ಯ	ಪುಟ
ಗುರಿಗಾಣದಿದ್ದು ಮರ್ತ್ಯರು	36
ಗುರು ಚರಣವ ಹಿಡಿದು	64
ಗುರು ಪರಂಪರೆಯೀ ವಿದ್ಯೆ	24
ಗುರುತು ಕಂಡು ಹೇಳಿ	65
ಗುರು ಬೃಹಸ್ಪತಿಯು	43
ಗುರುಬೋಧೆ ತಿಳಿಯದೆ	21
ಗುರುಭಕ್ತಿಯೊಳು ಮುಟ್ಟಿ	26
ಗುರುವಿನ ವಿಧಿಯಿಂದ	451
ಗುರುವ ಸೇವೆ ಗೆಯ್ದು	47
ಗುರುವಿನ ಶಿಕ್ಷೆಯಿರದೆ	17
ಗುರುವಿನೊಲುಮೆ ಪಡೆದು	24
ಗರುವಿನೊಡನೆ ಹೊಂದಿ	46
ಗುರುವರನ ನಿಂದಿಸುತ	61
ಗುರುವು ಇರದೆ ವಿದ್ಯೆ	16
ಗುರುವು ಕಶಕ ಬೀಜ	70
ಗುರುವು ದೊರೆಯಲಾಗ	44
ಗುರುವು ಪರಮ ಗುರುವಿನ	44
ಗುರುವು ಬರುತಲಿರಲು	59
ಗುರುವು ಶಿಷ್ಯರೆನಲು	71
ಗುರುವು ಹೇಳಿದ ವಿದ್ಯೆ	16
ಗುರುವೆ ತಾನಾಗುವ	16
ಗುರುವೆನಲಾ ಪರಮಾತ್ಮನು	13
ಗುರುವೆನ್ನಲು ಆದ್ಯಂತನು	14
ಗುರುವೆನೆ ಧೇನುವು	14
ಗುರೂಪದೇಶ ಯುಕ್ತಿಗಳ	21
ಗುಹೆಗಳ ಹದಿಸಾವಿರ	73, 509
ಗುಹೆಯ ಒಳಗೆ ಸೇರಿ	72
ಗುಹೆಯೊಳಗೆ ಸೇರಿ	508
ಗೂಬೆ ಹೊಕ್ಕ ಮನೆಯ	120

ಪದ್ಯ	ಪುಟ
ಘ, ಙ	
ಘಟದ ನೀರಿನಲ್ಲಿ	281
ಘಟವು ಒಡೆದು ಉಂಟು	386
ಚ	
ಚಂಚಲ ಮತಿಯಧಿಕ	407
ಚಕ ಚಕ ಒಂದೆರಡೆನ್ನುತ	326
ಚರ್ಚೆ ಮೀರಿದ ಜ್ಞಾನವನು	28
ಚಿತ್ತವ ಬುದ್ಧಿಯ ಮೆರೆಯುತ	195, 346
ಚಿತ್ತವೆಂಬ ಬೇರು	512
ಚಿತ್ತ ಶುದ್ಧಿ ಹೊಂದಿ	512
ಚಿತ್ತಾರದ ಪ್ರತಿಮೆಯಂತೆ	549
ಚಿಪ್ಪಿನಲ್ಲಿ ಬಿದ್ದ	137
ಚಿಮ್ಮಿ ನುಗಿಸಿ ಅರಿವ	29
ಚೊಕ್ಕವಾಗಿರುವನ	42, 472
ಛ	
ಛಾತ್ರ ಧರ್ಮವರಿತು	59
ಜ	
ಜಗದಲಿ ಗುರು ಉದಯಿಸಿರೆ	14
ಜಂಗಮಾಖ್ಯ ಭಕ್ತಿ	396
ಜಂತು ರಾಶಿಗಳಲಿ	529
ಜಗದಲ್ಲಿಯು ಇಲ್ಲ	381
ಜಗವರಿಯೆ ಇಂದ್ರ ಜಾಲವು	244, 527
ಜನನ ಮರಣ ಇಳಿಯ	230, 299
ಜನನ ಮರಣ ಕಾಲ	128

ಪದ್ಯ	ಪುಟ	ಪದ್ಯ	ಪುಟ
ಜನನ ಮರಣಗಳಲಿ	299,	ಜಿಹ್ವೆ ರಸದಿಂದಲಿ	219
	106,	ಜಿಹ್ವೆ ರುಚಿಯ ಕೋರಿ	457
	229,	ಜೀವದಲ್ಲಿ ಆತ್ಮ	215
	320	ಜೀವನಕ್ಕಸಾಲಿ	213,
ಜನನ ಮರಣವೆಲ್ಲ	229		279
	300	ಜೀವನ ತಿಳಿದರೆ ತನುವೇ	215
ಜನನ ಮರಣ ಗಳಿಗೆ	297	ಜೀವನನರಿಯುವ ವರೆಗೂ	211
ಜನನವು ಶಾಶ್ವತ	297	ಜೀವನಿಳೆಯ ತುಂಬಿ	214
ಜನನ ವೆನಿತು ಆಯ್ತು	107	ಜೀವ ಪೂಜೆ ಮಾಡಿ	101
ಜನನ ವೆನಿತು ಉಂಟು	298	ಜೀವ ಭಾವವರಿಯೆ	213
ಜನಿಸಿ ಸಾಯುವವರು	247	ಜೀವ ಭೇದವರಿತು	219
ಜನ್ಮ ಕಳೆದು ಬೇರೆ	69,	ಜೀವ ರಾಶಿಯಲ್ಲಿ	247
	91	ಜೀವ ಲಿಂಗ ಪೂಜೆ	402
	110	ಜೀವ ವಶದ ರೀತಿ	533
ಜನ್ಮಗಳೆಷ್ಟೊ	110		105
ಜನ್ಮ ಪೂರ್ವದಲ್ಲಿ	120		213
ಜನ್ಮ ಮರಣಾದ್ಯವಸ್ಥೆಯ	299	ಜೀವಾಧಾರನು ರುದ್ರನು	212,
ಜನ್ಮ ರಕ್ಷಕ ಲಯವು	313		548
ಜನ್ಮ ಮರಣ ಸುಷುಪ್ತಿಯು	230,	ಜೀವಧಾರವು ನೀರೇ	199,
	298		354
ಜನ್ಮ ಸಾಫಲ್ಯವನು	38	ಜೀವವೆಲ್ಲಿ ಇಹುದೊ	317
ಜಲದಲ್ಲಿಯ ಇಲ್ಲ	188	ಜೀವವೆಲ್ಲಿ ಉಂಟು	219
ಜಪವ ಬಾಹ್ಯ ಪೂಜೆ	386	ಜೀವಿ ಜೀವಿ ಕೊಲಲು	216
ಜಯವ ಭಯವ ದಾಟಿ	290	ಜೀವಿ, ಜೀವಿ, ಕೊಂದು	218,
ಜವ ದಾಟನೇಕೆ	550		432
ಜಾಗ್ರತೆನಲು ಏನು	228	ಜೀವಿಯಲಿ ಭ್ರಮೆಯ	214
	319	ಜೀವಿಯು ಶಾಶ್ವತ	216
ಜಾತಿ ಮತವ ತೊರೆದು	99	ಜೀವಿಯೊಳಗಿರುವ	275,
	272		306
	430	ಜೀವ ವಿಪ್ಪ ತಾಣ	318
ಜಾತಿಯೊಳಗೆ ಮೇಲು	451	ಜ್ಞಾತನಾದವನನು	89
ಜಾರ ಪುರುಷನಲ್ಲಿ	471	ಜ್ಞಾನ ನಿಷ್ಠೆ ಹೊಂದಿ	255

ಪದ್ಯ	ಪುಟ
ಜ್ಞಾನ ಭಾವ ಪರಮ	314
ಜ್ಞಾನವೆನಲು ಗುರುವು	13
ಜ್ಞಾನಿಗೆ ಕರ್ಮವು ಏತಕೆ	124
ಜ್ಞಾನಿಯೆಂದು ತಿಳಿದು	87
ಜೀನು ಕಿಂಡಿ ನೋಡೆ	554
ಜೊಳ್ಳು ಮಾತನಾಡಿ	42
ಜೊಳ್ಳು ಹೊಂದಬೇಡ	311
ಝ, ಜ	

ಟ	
ಟಿಪ್ಪಣಿಗಳ ಗೆಯ್ದು	266
ಟೀಕೆ ಬರೆಯುವಂಥ	423
ಠ	
ಠೀವಿ ಹೆಚ್ಚು ಹೊಂದಿ	87
ಡ, ಢ, ಣ	

ತ	
ತಂತ್ರ ಮಂತ್ರಗಳನು	22
	101
ತಂತ್ರವಾದವೆನಿತೊ	103
ತಂದೆ ತಾಯಿಯು ಸೇರಿ	210,
	295
ತಡವ ಮಾಡದೆ ಗುರು ಸೇವೆ	20
ತಣಿದು ಪಿಂಡದಲ್ಲಿ	311
ತತ್ತಿಯೊಳಗೆ ಆಕಾಶವು	195
	350
ತತ್ತ್ವ ತಾ ಹುಡುಕಲು	358

ಪದ್ಯ	ಪುಟ
ತತ್ತ್ವವರಿತಿರುವವ	545
ತತ್ತ್ವವರಿಯುವವನು	360
ತನಗಾವಾಗ ಸುಭಿಕ್ಷವು	132
ತನಗೆ ಪ್ರಾಪ್ತಿಯಿಲ್ಲ	136
ತನಯ ಮಡದಿ ಮಾಯೆ	253
ತನುವಿನೊಳಗೆ ಆತ್ಮ	192,
	305,
	358
ತನುವು, ತನುವು ಎಂದು	210,
	305
ತನುವು ಅಸ್ಥಿರೆಂದು	248
	275
	306
ತನುವ ತೊರೆದು ತಾನು	252
ತನುವಿನೊಳಗೆ ಆತ್ಮ	358
ತನು ಸಂರಕ್ಷಣಕಾಗಿಯೆ	315
ತನ್ನ ಅಣ್ಣ ತಮ್ಮ	119
ತಾನು ತನ್ನದೆನುತ	253
ತನ್ನ ಆತ್ಮದಲ್ಲಿ	567
ತನ್ನ ಕರ್ಮದಿಂದ	107
ತನ್ನ ತಾ ಹುಡುಕಲು	362
ತನ್ನ ತಿಳಿಯದಿರಲು	477
ತನ್ನ ತಿಳಿಯದಂಥ	530
	564
ತನ್ನನರಸಿ ನೋಡೆ	268,
	504
ತನ್ನನರಿಯುವವನು	268
ತನ್ನ ಪ್ರಾಪ್ತಿ ತನಗಿರಲು	80,
	117
ತನ್ನ ಮನಸಿನಿಂದ	141
ತನ್ನ ಹಡೆದ ಅವರು	526
ತನ್ನ ಹೆತ್ತು ಹೊತ್ತ	98

ಪದ್ಯ	ಪುಟ	ಪದ್ಯ	ಪುಟ
ತನ್ನ ಹೊಡೆದು ಬಡಿದು	459	ತಾಯಿ ತಂದೆಯೆನುವ	223,
ತನ್ನೊಳು ಸರ್ವವಿರುತಿರೆ	105		323
ತನ್ನೊಳಿರುವ ಜೀವ ತತ್ತ್ವ	215	ತಾಯಿಯೇ ದೇವರು	569
ತನ್ಮಯತ್ವವನ್ನು	251	ತಾಯಿಯೇ ಪಾರ್ವತಿಯು	83,
ತಪ್ಪನೆಣಿಸುವವನು	63		273,
ತಮ್ಮ ಯೋಚನೆಗಳಲಿ	186		428,
ತಲೆ ತಾಕಿದೊಡನೆ	139		498,
ತರದ ಓದನೋದಿ	476		544,
ತಳವಾರನೆ ಇರಲಿ	61		569
ತವುಡು ತರಲು ಹೋಗೆ	139	ತಾಯಿಯೊಬ್ಬಳು ಜಗದಿ	323
ತಾನು ಇರುವ ಗೃಹದಿ	553		223
ತಾನು ಜನ್ಮವೆತ್ತ	115	ತಾವರೆ ಎಲೆಯಡಿ ನೀರಿರೆ	264
ತಾನು ವಿಮಲನಿರಲು	54	ತಾವು ಮಾಡಿದ ಪಾಪ	60
ತಾನೆ ತತ್ತ್ವವಿರುವ	565	ತಾವೆ ಬಂದು ಕೊಡಲು	495
	530	ತಾವೆ ಒಲಿದು ಕೊಡಲು	94
ತಾನೆ ತತ್ತ್ವವೆಂದು	530	ತಿರುಗಿ ನರನ ಮರಳಿ	309
ತಾನು ತನ್ನದೆನುತ	253	ತಿಳಿದು ಆತ್ಮದಲ್ಲಿ	193
ತಾನೆ ಸಕಲವಿದ್ದು	272,	ತಿಳಿದು ಬಂದ ಮಾಯೆ	43
	504	ತಾಳಿಯ ದಿಪ್ಪ ಜನಕೆ	492
ತಾನು ಸಕಲವಿರಲು	282	ತಿಳಿಯಲು ಮೂಲದಲ್ಲಿ	285
ತಾನು ಹುಟ್ಟಿದ ನೆಲೆ	268	ತಿಳಿಯೆನೆನ್ನುವವನು	88,
ತಾನು ಹುಟ್ಟಿದ ನೆಲೆ	312		585
ತಾನಾಗಿಹುದ ಅರಿತು	283	ತಿಳಿವು ನಿಲಿಸಿ ನೋಡು	559
ತಾನೆನುವುದು ಯಾರು	283		286
ತಾಮಸದ ಕಾರ್ಯವು	516	ತಿಳಿವಾವುದಿರದೆ	286
ತಾಮಸಕಂಟಿದ	584	ತಿಳಿವಿಗಳವು ಅಲ್ಲ	286
ತಾಯಿಗೆದುರಿಪ್ಪುದು	86	ತಿಳಿವಿಗಾಗಿ ತಿಳಿದು	64
ತಾಯಿ ತಂದೆ ತಿಳಿಯೆ	45,	ತಿಳಿವು ಹೊಂದಿದಂಥ	245
	83	ತಿಳಿಸು ಅಯ್ಯ ಎಂದು	18
ತಾಯಿ ತಂದೆಗಳಲಿ ದಾರಿದ್ರ್ಯ	83,	ತಿಳಿಸುವವರು ಯಾರೊ	69
	593	ತ್ರಿಗುಣ ಭಾವವನ್ನು	390
ತಾಯಿ ತಂದೆಯರಲಿ ದಯೆ	60,97	ತ್ರಿಜಗಂಗಳ ನಿರ್ಮಿಸುತ್ತ	222,331

ಪದ್ಯ	ಪುಟ
ತೀರ್ಥ ಯಾತ್ರೆಯೆಂದು	419
ತುಡುಗುಗಳ್ಳರಿಗೆ	262, 518
ತುಪ್ಪವಿರದ ಊಟ	433
ತೃಪ್ತಿ ತುಂಬಿ ಗುರುವ	27
ಥ	

ದ	
ದಟ್ಟಿ, ಇರುಳು ಬಿಟ್ಟು,	558
ದಶರಥನು ರಾಮಗೆ	178, 479
ದರ್ಶನಗಳೊಳ	424
ದಾಟಿ ಬಂದು ನದಿಯ	581
ದಾನ ಒಪ್ಪ ಗೆಯ್ಮೆ	287, 496
ದಾನ ಕೊಡುವಕಿಂತ	290
ದಾನದಲ್ಲಿ ಅನ್ನ	438
ದಾನ ಧರ್ಮಗಳನು	88
ದಿನಗಳ ಸುಮ್ಮನೆ ಕಳೆಯದೆ	45
ದಿವ್ಯ ಪರ ತತ್ತ್ವದಲಿ	32
ದಿವ್ಯವಾದಂಥ ಪರಶಿವನ	30
ದೀಪವಿರದಂಥ ಮನೆಯಲಿ	259, 517
ದುಡ್ಡು ಉಳ್ಳ ನರನ	468
ದುರ್ಗತಿ ಸ್ವರ್ಗಗಳೆನ್ನುವ	523
ದುರಿತಗಳನೆಲ್ಲ	30
ದೂರ ಯೋಚನೆಗೂ	217
ದೆಸೆಯು ತಿರುಗಲವನ	468
ದೇವ ಗುಡಿಗಳಲ್ಲಿ	377, 410
ದೇವನೆನಲು ಬೇರೆ	82
ದೇವ ಪೂಜೆ ಗೆಯ್ಮೆ	389, 423, 497, 100, 401, 568
ದೇಶ ವೇಷಗಳನು	56
ದೇಹ ಆತ್ಮಗಳು ಬೇರೆಂದು	31
ದೇಹ ಗುಣವನೆಲ್ಲ	388
ದೇಹ ವಾತ್ಮ ರೂಪ	15
ದೇಹವಾರ ಸೊತ್ತು	570
ದೇಹ ಸಂಕಟದಲಿ	513, 551
ಧ	
ಧನದ ಮದವು ತುಂಬಿ	466
ಧನದಾರಾ ಪುತ್ರೇಷಣಾ	81, 574
ಧನದಾರಾ ಕೂಡಿ ಹಾಕಿ	447
ಧನವ ಕೂಡಿ ಹಾಕಿ	447
ಧನವು ಇರದ ಬಡವ	134
ಧರ್ಮ ಕರ್ಮಗಳನು	122, 91
ಧರ್ಮ ಸತ್ಯಗಳನು	142
ಧರಣಿಯೊಳು ಓದು ಎಲ್ಲ	205
ಧರೆ ಚಕ್ರವರ್ತಿಗಳಾರು	158
ಧರೆಯ ಜನರಿಗೆಲ್ಲ	50
ಧರರೆಯಲ್ಲಿ ಸಾವಿರ	94
ಧರೆಯ ಶೂದ್ರನಾದುದರಿಯರು	440, 488
ಧಾನ್ಯದಲ್ಲಿ ಹುಟ್ಟು,	368

ಪದ್ಯ	ಪುಟ
ಧ್ಯಾನಿಸಲು ತತ್ತ್ವವೆನಿಪುದೆ	417
ಧ್ವನಿ ಜನಿಸಲಾಲಿಸುತ್ತ	226
ನ	
ನದಿ ತೀರದ ಕುರಿತು	410
ನದಿಯುದಕವು ಚಲಿಸುವಂತೆ	281
ನರ ಕುಲದಲಿ ತಾ	245
ನರ ಜನ್ಮವ ತಾನೆತ್ತಿಯು	523, 93, 120, 292, 255
ನರನು ಜಾಗರದಲಿ	231
	319
ನರನೆ ಇರಲಿ ಬೇಡ	297
	304
ನರನೆನೆ ಪರಮಾತ್ಮ	43
ನರರು ಈ ಪೊಡದಿಯಲಿ	55
ನಳನು ದಮಯಂತಿಯ	162
ನವನೀತ ಕಾಯಿಸಿ	514
ನಾಟುತ ಗುರುವರ ಮಂತ್ರವ	27
ನಾಡೀ ಚಕ್ರವ ನೋಡಲ್	238
ನಾದವು ಮುಕ್ತಿಗೆ ದಾರಿಯು	227
ನಾನಾರೆಂಬುದನರಿಯದೆ	187
ನಾನಾರತ್ನವನೀಡುತ	410
ನಾನೆನಲು ದೇಹವಲ್ಲವು	187, 282
ನಾಯಿ ಏಕಾಂತವು	258, 518
ನಾರಿಯಂದ ಕಂಡು	472
ನಾಲಕು ಬೀದಿಯ ಮಧದ	335
ನಾಲ್ವರು ಕಳ್ಳರ ಹಿಡಿಯುತ	335

ಪದ್ಯ	ಪುಟ
ನಿಂದಿಸುತ ಭ್ರಮೆ ಹೊದದೆ	34
ನಿಖಿಲಾಕಾರನು ಆತನು	557
ನಿಜಗುರು ಲಕ್ಷ್ಯವನಿರಿಸುತ	23
ನಿಜದ ರೀತಿಯರಿತು	87, 584
ನಿಜವ ಸುಳ್ಳನೆರೆದು	491
ನಿಜವನಾಡುವವನ	57, 483, 563
ನಿಜವು ತಿಳಿದ ಬಳಿಕ	561
ನಿತ್ಯವಿರದೀ ಒಡಲಿಂಗೆ	245
ನಿತ್ಯ ಸತ್ಯ ನಿರಾಮಯ	392
ನಿತ್ಯಾನಂದ ವಿವೇಕವು	33
ನಿದ್ರೆಯೊಳಗೆ ನಿದ್ರೆ	560
ನಿನ ನೀನರಿವುದಕಾಗಿಯೆ	71
ನಿನ್ನ ನೋಡುತಿರಲು ತನ್ನ	211
ನಿನ್ನ ನೋಡುತಿರಲು ನೆರೆ	212
ನಿರ್ವಾತ ಕಳೆಯು ಉಪಮೆಯು	540
ನಿರ್ಗುಣಾಂಶದಲಿ	389
ನಿಯಮಗಳ ನಿಪುಣ	567
ನಿಹತಿ ಹುಟ್ಟುಗಳಿಗೆ	276, 300, 314
ನೀಡುತ್ತಿರುವರ ಸಂಪದ	494
	572
ನೀಡುವವರು ಯಾರೊ	302
ನೀರ ಮೇಲೆ ಗುಳ್ಳೆ	524
ನೀರ ಮೇಲೆ ಬಿದ್ದ	530
ನೀರಿನಲ್ಲಿ ಹುಟ್ಟಿತು ಕ್ಷಾರವು	216
ನೀರು ಕ್ಷಾರವಾಯ್ತು	200, 355
ನೀರು ಮುಳುಗಲೇನು	485

ಪದ್ಯ	ಪುಟ
ನೀರು ನುಳುಗುವವನು	483
ನೀರು ಸುರಿದು ತೊಳೆದು	485
ನೀರು ಸ್ನಾನ ಗೆಯ್ದು	485
ನೀರು ಮೊದಲು ಹಾಕೆ	199, 355
ನೀವು ಇರುವ ಜಾಗ	52
ನೀ ಸಾಯಲು ಜತೆಗೆ	315
ನೂರೆಂಟು ಮಣಿಗಳು	420
ನೇಮದಲ್ಲಿ ಇರುತ	254
ನೊಸಲು ಬರೆಯುವವನು	133
ನೊಸಲು ಭಕ್ತನಹುದು	432
ನೋಟ ದೀಪ ಮಾಡಿ	37
ನೋಡಲೇಕೆ ವೇದ	53
ನೋಡಿ ಮಾದರವನ	384
ನೋಡುವ ವರೆಗೇ ಸಾಧನ	37

ಪ

ಪದ್ಯ	ಪುಟ
ಪಂಚ ತತ್ತ್ವಗಳಿಗೆ	349
ಪಂಚ ಭೂತಗಳನು ಪರಿಗಣಿಸುತ	203, 349
ಪಂಚ ಭೂತಗಳನು ಪರಮ	219
ಪಂಚ ಭೂತ ಮತ್ತೆ	202, 347
ಪಂಚಮ ವೇದವೆನೆ	93, 173
ಪಂಚ ಮಹಾ ಭೂತವಾಗಿ	202, 347
ಪಂಚ ಮುಖಿಗಳಲ್ಲಿ	338
ಪಂಚ ವರ್ಣಗಳ ಆನಂದ	338
ಪಂಚ ವರ್ಣವರಿಯೆ	337, 577
ಪಂಚಾಕ್ಷರಿ ಬೀಜಂಗಳ	338
ಪಂಚ ಶತ್ರುವರಿತು	337
ಪಂಥವ ಬಿಡುವುದೆ	557
ಪಟುತ್ವವಹ ಬುದ್ಧಿ	575
ಪಡೆದ ಮುನ್ನಿನ ತಮ್ಮ	244
ಪಡೆದು ಚಿತ್ತ ಶುದ್ಧಿ	523
ಪತನಗೊಳ್ಳುತಿರುವ	514
ಪತಿಯ ಮೇಲೆ ಭಕ್ತಿ	97
ಪರ್ವತ ವನವಾಸಿ	507
ಪರಚಿಂತೆಯೇಕೆ	588
ಪರದೇಶಿಕ ಚರಣಂಗಳ	37
ಪರನಾರೀ ದೂರನಿಹ	84
ಪರಪುಟ್ಟನು ಕಾಗೆ	62
ಪರಮ ಗುರುವರ ಮಂತ್ರ	23
ಪರಮಾತ್ಮನ ವಿವರಿಸಲ್ಕೆ	48
ಪರರನು ನೀನೆಂದರಿತೊಡೆ	95
ಪರರಿಗುಪಕರಿಸಲು	105, 571
ಪರಸತಿ ಗಮನವು	98
ಪರ್ವತ ವನವಾಸ	507
ಪರಿಪಕ್ವವಿಪ್ಪ	561
ಪರುಷವಿನಿತು ಸೋಂಕಿ	69
ಪಲ್ಯ ಗಡ್ಡೆ ತಿನುವ	442
ಪಾಡಲ್ಲವೊ ಜಗದಿ	98
ಪಾತಕ ಸಂಸಾರಾರ್ಣವ	528
ಪಾದ ಗುದಗಳನ್ನು	202
ಪಾದ ಪಾಯುಗಳನು	358
ಪಾಪ ಪುಣ್ಯಗಳನು	257
ಪಾಪವೇನು ಅನ್ಯ	116
ಪಾಯಸ ವಡೆ ಸಾರು	434
ಪಿಂಡ ಅಂಡದಲ್ಲಿ	208, 393
ಪಿಂಡಗಳನು ಮಾಡಿ	265, 400

ಪದ್ಯ	ಪುಟ
ಪಿಂಡವಾಗಿ ತಾಯಿ	113
ಪಿಂಡವೆ ತಾ ಉದರದಿದ್ದು	294
ಪಿಡಿದ ಕೊಂಬೆ ಬಿಡದೆ	50
ಪಿತರ ಅನ್ನವೆಂದು	265
	400
ಪುನುಗು ಬೆಕ್ಕಿಗೇಕೆ	140
ಪುರದಲಿ ಆರರ ಮೇಲಕೆ	235
ಪುರುಷನೆಷ್ಟೊ ಬಾರಿ	260
	517
ಪುರುಷಗೆಂಥ ಗತಿಯು	75
ಪೂಜೆ ಮಾಡಿ ಮಾಡಿ	401,
	510,
	568
ಪೂರ್ವ ವಾಸನೆಯಿಹ	89
ಪೂರ್ವ ಜನ್ಮದಲ್ಲಿ	108
ಪ್ರಜರು ಗೆಯ್ದ ಪಾಪ	481
ಪೃಥಿವಿ ಅಪ್ಪು ಅಗ್ನಿ	195
ಪೃಥಿವಿಗುದಕ ಸುರಿಯೆ	199
	356
ಪೈರು ನೆಡುವ ಮುನ್ನ ರೈತ	575
ಪೈರು ನೆಡುವ ರೈತ	515
ಪ್ರಣವನರಿಯುವನಕ	227,
	354,
	384
ಪ್ರಣವ ಮಂತ್ರ ಮಹಿಮೆ	226,
	331,
	576
ಪ್ರಭುವು ಕೋತಿ ಎನಿಸೆ	479
ಪ್ರಳಯ ಕಾಲದಲ್ಲಿ	127
ಪ್ರಾಣ ಪ್ರತಿಷ್ಠೆಯು	414
ಪ್ರಾಣವಾತ್ಮವೆನಲು	121,
	192,

ಪದ್ಯ	ಪುಟ
	232
ಪ್ರಾಣವಾಯ್ತು ಗಾಳಿ	232,
	353
ಪ್ರಾಪ್ತಿ ಇರುವ ತಾಣ	80
	117

ಫ

ಫಲವಿರದ ಕಾರ್ಯ	118

ಬ

ಬಂಡೆಗಲ್ಲು ತಂದು	241,
	402
ಬಂಡೆ ಪೂಜೆ ಗೆಯ್ದು	416
ಬಂಡೆ ಮೇಲೆ ಒರತೆ	258
ಬಡವನನರಿಯದಂಥ	493
ಬದುಕು ಅಸ್ಥಿರೆಂದು	247
ಬದುಕು ಎಲ್ಲ ಮಾಯೆ	521
ಬದುಕುವವರು ಯಾರೊ	301
ಬದ್ಧ, ಮುಕ್ತರು, ಉಭಯರ	78
ಬಯಲಲಿ ಸರ್ವವು	320
ಬಯಲಾದುದು ಎಷ್ಟೆಂದೆನೆ	320
ಬಯಲಿನೊಳಗೆ ಬಯಲು	321
ಬಯಲು ಬ್ರಹ್ಮವೆಂದು	398
ಬಯಲು ರೂಪ, ರೂಪ	416
ಬಯಸಿದೊಡವೆ ಬೇರೆ	536
ಬಯ್ದು ಹೊಡೆದರೆಂದು	460
ಬರದುದ ಕೋರಲು ಬಾರದು	104
	109
ಬರಿದೆ ಹೋಯ್ತು ಕುಲವು	450
ಬರುವು ಹೋಗು ಅಡಗಿ	316
ಬರುವುದೆ ಹೋಗುವುದು ಮತ್ತೆ	112
ಬಳಿ ಸಾರಿ ಸಾಗರ ಗಮನ	33

ಪದ್ಯ	ಪುಟ
ಬಹಳ ಜನರ ಇರಿದು	82
	479
ಬಾಲ ಪ್ರಾಯದಲ್ಲಿ	278
	304
ಬಾಲ್ಯದಲ್ಲಿ ನೀನು	474
ಬಾಲ್ಯದಲ್ಲಿ ಸ್ವಾಮಿ	516
ಬಿನ್ನವಿಸುತಲಿ ಸದ್ಗುರುವ	34
ಬಿಳಿಯ ನಾಯಿಗಳೆಂಜಿಲು	465
ಬಿಸಿಲು ಕಾಲ ನಿಶೆಯು	191
ಬಿಸಿಲು ಗುದುರೆಯ ರೀತಿ	315
ಬೀಜಲ್ಲದಂಥ ವೃಕ್ಷ	364
ಬೀಜವಿಲ್ಲದಂಥ ವೃಕ್ಷವೊಂದು	365
ಬೀಜವು ಸಿಪ್ಪೆಯು	529
ಬೂಟಕವು ಪುರಾಣ	412
ಬೂಟಕವು ಹುಟ್ಟಿ ಸಾವುದು	35,
	249,
	526
ಬೆಟ್ಟ ಕಲ್ಲಿನಿಂದ	414
ಬೆನ್ನಿಗಂಟಿ ಇರುವ	45
ಬೆವರು ಸುರಿಯುವಂತೆ	433
ಬೆಳೆದು ಬಹಳ ಮನದಿ	534
ಬೇಕು ಎನಲು ಬರದು	104,
	109
	404
ಬೇಡವೆನಲು ಬಿಡದು	129
ಬೇವಿನ ಬೀಜದೆಣ್ಣೆ	532
ಬೈಲಲಿ ಬಂಧವ ಬೆರೆಸದೆ	321
ಬೊಂಬೆಯಾಟದವನು	421,
	544
ಬ್ರಹ್ಮ ಅಂಡ ದೇಹ	398
ಬ್ರಹ್ಮ ಕೊಂದು ವಿಷ್ಣು	329,
	379
ಬ್ರಹ್ಮ ಘನತೆ ಕೇಡು	458
ಬ್ರಹ್ಮ ಘಟವು ದೇಹ	79
	555
ಬ್ರಹ್ಮ ತಿಳಿಯದಯ್ಯ	405
ಬ್ರಹ್ಮನ ತಲೆ ಕಡಿದು	99
	168
ಬ್ರಹ್ಮನನ್ನು ಕೊಂದು	239
ಬ್ರಹ್ಮನಿರುವ ತಾಣ	52
ಬ್ರಹ್ಮ ಬ್ರಹ್ಮವೆನಲು	375,
	399
ಬ್ರಹ್ಮಾಂಡವೆನ್ನಲು ಪಟ್ಟಣವು	53
ಬ್ರಾಹ್ಮಣನಿಗೆ ನಮಿಸೆ	458
ಬ್ರಾಹ್ಮಣರಿಗೆ ಸಕಲ	465
ಬ್ರಾಹ್ಮಣರು ಎನುವರು	469
ಬ್ರಾಹ್ಮಣಾದರೇನು	125
ಬ್ರಾಹ್ಮಣನೆನಲು ಏನು	11

ಭ

ಭಕ್ತಿಗೆ ಜ್ಞಾನವೆ ಮೂಲವು	537
ಭಕ್ತಿಗೆ ಮೂಲವು ಜ್ಞಾನವೆ	592
ಭಕ್ತಿ ನಾಮ ಬೇರೆ	591
	430
ಭಕ್ತಿಯುಳ್ಳ ಎಡೆಗೆ	382
ಭಗವಂತನಾದ ದೇವನು	222,
	372,
	413,
	556
ಭವವು ಪೂರ್ವ ಕರ್ಮಫಲವು	103
	108
ಭಾಗ್ಯಹೀನನಿಹಗೆ	134
ಭಾನು ಸೋಮ ವಹ್ನಿ	406
ಭಾರ್ಯೆ ತನ್ನ ಪಾಲಿಗೆ	252

ಪದ್ಯ	ಪುಟ
ಭಾರತ ಹೇಳುತಿಹ	184
ಭಾವವೆನಲು ತಿಳಿಯೆ	548
ಭಾವ ನೆಲೆಗೊಂಡ	212, 547
ಭಾವವೆನಲು ಬೇರೆ	212, 547
ಭಾವಾಭಾವನೆ	546
ಭಾವಿಸುತ ನೋಡುತಿದ್ದೊಡೆ	548
ಭಾವಿಸಲು ಲಿಂಗವಿರುವುದು	519, 548
ಭುವಿಯಲ್ಲಿ ಜನನ	316 317
ಭುವಿ ರಾಜಯೋಗ ಮುಖ್ಯ	239 vii
ಭೂತಗಳಿಂ ಮೇಲೆ	348 203
ಭೂತಗಳ್ಕೈದಾಗಿರುತಿರೆ	203, 348
ಭೂತಂಗಳ್ಕೈದು ಇರೆ ನಿ	203, 348
ಭೂದೇವಿಯೆನಲು ಮೃತ್ತಿಕೆ	201, 356
ಭೂಮಿಯಲ್ಲಿ ಜನನ	316
ಭೂಮಿಯಲ್ಲಿ ಮತ್ತೆ	413
ಭೋಗಗಳಿಗಾಸೆ ಪಡದೆ	81

ಮ

ಪದ್ಯ	ಪುಟ
ಮಂಗ ಮರಿಯ ತಂದು	480
ಮಂತ್ರ ತಂತ್ರ ಯುಕ್ತರು	103
ಮಂತ್ರವೆಲ್ಲ ಮರೆತು	462
ಮಂತ್ರ ವಿದ್ಯೆಯೆಲ್ಲ	102
ಮಂತ್ರವು ಸದ್ಗುರು ಚಿಂತನ	22
	101
ಮಗುವಾಗಿರುವಾಗ	114
ಮಠದೊಳಿಹ ಯೋಗಿ	54
ಮಡದಿ ಅಡವಿ ಹೊಗಿಸಿ	178
ಮಡದಿ, ಮಕ್ಕಳು ವಿತ್ತ	121
ಮಡದಿಯಡವಿ ಹೊಗಿಸಿ	179
ಮಡದಿಯನು ಮಣಿಸದೆ	96
ಮಡಿಯುವವರು ಯಾರು	526
ಮಣ್ಣೆನೊಳಗೆ ಹುಟ್ಟಿ	201, 357
ಮಣ್ಣು ಗಗನ ಕೂಡಿ	352
ಮಣ್ಣು ಗಡಿಗೆಯಂತೆ	246 525 313
ಮಣ್ಣು ಎತ್ತಿ ಹಾಕಿ	415
ಮಣ್ಣು ತಿನುವುದೆನಲು	201, 357
ಮಣ್ಣು ಲೋಹಗಳಲಿ	408
ಮತಗಳೆಷ್ಟೆ ಇರಲಿ	425 404, 425
ಮತವೆಂತಿರಲೇನು	491
ಮತಿ ಹಿತವಾಗಿ ನಿರ್ಗುಣ	587
ಮತಿ ಹಿತವಾದಂಥ	390
ಮತವು ಭೇದವೆಲ್ಲ	404
ಮತ್ತ ಚಿತ್ತದವನು	386
ಮದವು ಮತ್ಸರಾದಿ	482
ಮದನ ಬಿಲ್ಲಿನಂಬು	474
ಮದದ ಕೈಲಿ ಲೋಕ	274
ಮದದೊಳಿಂದ ಉಂಟು	47
ಮದ್ಯ ವಸ್ತು ಬೇಡಿ	82
ಮದನನಂಥ ಪತಿಯು	471

ಪದ್ಯ	ಪುಟ
ಮದ್ದು ಹಾಕಿ ಪತಿಗೆ	472
ಮನದಲಿ ಬುದ್ಧಿಯು ತೋಚಿತ	194
	346
ಮನದಲಿ ಬುದ್ಧಿಯು ಮತ್ತು	347
ಮನದಿ ಕಾಣಲಾರ	270
ಮನವ ಒಂದು ತಾಣ	270
ಮನವ ಒಂದು ತಾಣ	270
ಮನನ ವೃತ್ತಿಯಲ್ಲಿ	549
ಮನ ನಿಲುಗಡೆ ಗೆಯ್ದು	531
ಮನಸನು ಬುದ್ಧಿಯ ಮೆರೆಯುತ	194
	346
ಮನಸಿನೊಳಗೆ ತಿಳಿದು	232
ಮನಿಸಿನಲ್ಲಿ ಮುಕ್ತಿ	397
ಮನಸು ಅನಿಲಗಳಿರಡರಲಿ	197,
	354
ಮನಸು ಕುದುರೆ ಮಾಡಿ	284
ಮನಸು ಗುಪ್ತವಿರಿಸಿ	561
ಮನಸು ನಿಲ್ಲಿಸಿದವನು	187,
	392
ಮನಸು ಮುಕ್ತಿ	397
ಮನೆಯ ಬಿಟ್ಟುಗೊಟ್ಟು	215
ಮರ್ತ್ಯದಲಿ ಅರ್ಚಕರ	488
ಮರ್ಮವಿದನು ಅಷ್ಟೆ	513
ಮರಕೆ ಬೆಂಕಿ ಹಚ್ಚಿ	364
ಮರದ ಒಳಗೆ ಅಗ್ನಿ	198
	362
	363
ಮರದಲಿ ಬೆಂಕಿಯು ಜನಿಪುದು	198
ಮರದ ಒಳಗೆ ಅಗ್ನಿಮತ್ತೆ	363
ಮರದಲಿ ಹುಟ್ಟುವುದನಲ	363
ಮರಣವು ಹತ್ತಿರದಲ್ಲಿದೆ	308
ಮರಣ ವೆನುತ ಬೆದರಿ	398
ಮರಣ ಕಾಲದಲ್ಲಿ	299
ಮರದಲ್ಲಿ ಅಗ್ನಿಯು	362
ಮರವ ಸುಟ್ಟು ಹಾಕಿ	380
ಮರವು ಮೊದಲೆ ಇಲ್ಲ	363
ಮಳೆಯು ಬರುವ ಅಂದ	276
ಮಲಿನ ತೊಗಲಿಗೆಲ್ಲ	553
ಮಹಿಯೊಳಿಂದನೋದ	
ಮಾತನಾಡಬಹುದು	561
ಮಾತು ಎಲ್ಲ ಸುಳ್ಳು	81
ಮಾತನಾಡಿ ಬೇರೆ	263
ಮಾತು ಉಡುಗುವನಕ	102
ಮಾದರವನೆ ಇರಲಿ	383,
	442
ಮಾನಸ ಜಲ ಹತ್ತದಂತೆ	382
ಮಾಯಾ ಮೂಲದ ಕೆಲವರ	39
ಮಾಯೆ ಜಗವು ಎಂದು	224
ಮಾಯೆ ಸಂಸ್ಕಾರಗಳಲಿ	253
ಮಾಯೆಯು ಸಂಸಾರ ವಿದ್ಯಾ	527
ಮರುಳನಾದೊಡೇನು	463
ಮಿಥ್ಯ ತಿಳಿವಿನಿಂದ	40
ಮುಂಚಿನ ಜ್ಞಾನವೆಲ್ಲ	112
ಮುಕ್ಕೋಣ ಶಿಖರದಲಿ	533
ಮುಕ್ತಿಗಾಣದಂಥ	50
ಮುದ್ದು ಯುವತಿಗೇಕೆ	473
ಮುದ್ರೆಯಿಂದ ಹಿಡಿದು	374
ಮುದ್ರೆಯೆಲ್ಲ ಸೋಸಿ	375
ಮುದ್ರೆ ವೇಷಧರಿಸಿ	136
ಮುಕ್ಕೋಣ ಶಿಖರದಲಿ	533
ಮುಟ್ಟಿನೊಳಗೆ ಹುಟ್ಟಿ	453
ಮುಟ್ಟು ಮುಟ್ಟು ಎನುತ	490
ಮುದದಿ ಇಂದ್ರಿಯಗಳ	534
ಉದ್ರೆಯಿಂದ ಹಿಡಿದು	514

ಪದ್ಯ	ಪುಟ
ಮುದ್ರೆಯೆಲ್ಲ ಸೋಸಿ	375
ಮೂಗು ದಾರ ಜಗ್ಗಿ	484
ಮೂಢಾತ್ಮರಾದ ಮನುಜಗೆ	528
ಮೂರುಗಳ ಗ್ರಹಿಸಿ	332
ಮೂರು ಗುಣಗಳಲ್ಲಿ	329, 379
ಮೂರು ಗುಣಗಳೊಂದೆ	329, 339, 380
ಮೂರು ಲೋಕಗಳಲಿ	331
ಮೂರು ವೇಳೆಯಲ್ಲಿ	545
ಮೂಲ ಬ್ರಹ್ಮನಿಂದ	328
ಮೂವತ್ತೆರಡಕ್ಷರಗಳ	578
ಮೂವರಾರು ಎನಲು	329, 380
ಮೂವರನ್ನು ಅರಿತು	380
	329
ಮೂವರೊಳಗೆ ಹೆಚ್ಚು	169
	329
ಮೃತ್ತಿಕೆಯೇ ತನುವೆನುವುದು	200
	356
ಮೇಣ ಒತ್ತಿ ಬರೆದು	414
ಮೇವು ಹುಲ್ಲು ತಿನುವ	11
ಮೈಲಿ ಮೈಲಿ ಎಂದು	452
ಮೊಟ್ಟೆ ಬಂದು ಮರಿಯ	58
ಮೊದಲ ತರುವಿನಲ್ಲಿ	535, 366
ಮೊದಲ ಬ್ರಹ್ಮ ಮನುವು	327
ಮೊದಲಿಗಿಹ ಮಾತೃ ದೇವತೆ	499
ಮೊದಲು ಆಸೆ ಬೆಳೆಸಿ	448
ಮೊದಲು ಹೊಯ್ದು ನೀರು	369
ಮೊದಲು ಸುರಿದ ನೀರು	369

ಪದ್ಯ	ಪುಟ
ಮೊದಲು ಬಿಡದೆ ತನ್ನ	99, 425
ಮೊದಲು ಮರವಾಗಿದೆ	587
ಮೊದಲು ಮೂಲಾಧಾರ	234
ಮೊಸರಿನಲ್ಲಿ ತುಪ್ಪ	360
	593
ಮೋದಗಳ ಗುರುವಿನ	67
ಮೋದ ಪಡುವವನಾರೊ	233, 554
ಮೋಹ ಜಲಧಿಯಲ್ಲಿ	48, 410
ಮೌನಿ ನಿಜ ಕೇಳಿಯೊಳಗೆ	587
	592

ಯ

ಪದ್ಯ	ಪುಟ
ಯಂತ್ರ ತಂತ್ರ ವಿದ್ಯೆಯ	387
ಯಮನ ಆಜ್ಞೆಯಿಂದ	209
	294
ಯಜ್ಞ ಕ್ರತುವ ಗೆಯ್ಮೆ	77
ಯಾರಿಗು ದಕ್ಕದ ಚಿನ್ಮಯ	557
ಯಾರಿರಲಜ್ಞಾನ ತಿಮಿರವ	28
ಯಾತ್ರೆ ಹೋಗಿರುವವ	419
ಯಾವುದಿರಲಿ ಪಾಪ	31
ಯೋಗವು ಕಷ್ಟವೆ ಆದರು	575
ಯೌವನದೊಳು ನೋಡೆ	473
ಯೌವನವೆನ್ನಲು	473

ರ

ಪದ್ಯ	ಪುಟ
ರಾಜ ಪದವಿ ಕೋರಿ	478
ರಾಮ ನಾಮ ಪಠಣ	440
ರೂಢಿಯಿಂದ ಭಕ್ತಿ	39
ರೂಪು ಗೊಳಿಸೆ ಕಲ್ಲು	411,477

ಪದ್ಯ	ಪುಟ
ಲ	
ಲಂಕೆ ಹೋಗುವಾಗ	180
ಲಕ್ಷ್ಮಿ ನಲಿಯುತಿಪ್ಪ	180
ಲಲಿತ ಶಿವತತ್ತ್ವ	243
ಲೋಕಗಳಿಗೆ ಗುರುವು	70
ಲೋಭ ಮೋಹದಿಂದ	132
ವ	
ವಂಚನ ಮನದೊಳಿರುವರಿಗೆ	262, 519
ವಕ್ಷದೊಳು ಗುರುವ	71
ವನದೊಳಗೆ ತಿರುಗುವ	463
ವರನ ಬಿಂದುವಿಂಗೆ	208
	294
ವರ ಬ್ರಹ್ಮಾಂಡದಿ	208, 273
	294
ವರಿಸಿ ಹುಡುಕೆ ಸಿಗುವ	582
ವಹ್ನಿ ಲೋಹಗಳಲಿ	361
ವಾಕ್ಕಿನಲಿ ಗುರುವು	70
ವಾಯುವಿನಲಿ ಹುಟ್ಟಿ	196
	352
ವಾಯುವು ಬಯಲೊಳು ಹುಟ್ಟಿರೆ	196
	353
ವಾಯುವೆನುವಾ ಅಪಾನವು	353
	196
ವಾರಿಧಿಯಲಿ ಹುಟ್ಟಿ	308
ವಿಜ್ಞಾನ ದೃಷ್ಟಿ ಒಳಗಿರೆ	232
ವಿಜಯ ಪಾರ್ಥ ಬಿಲ್ಲು	183
ವಿಧಿ ಬೆನ್ನಿಗಿರಲು	128
ವಿಧಿಕೃತಗಳಲ್ಲಿ ಸರ್ವವು	129
ವಿಧಿಕೃತದೊಳಗಡಗಿದೆ	130
ವಿತ್ತ ಓರ್ವಗಿತ್ತು	137, 469
ವಿಪ್ರವರರು ಮುಹೂರ್ತ	141
ವಿವೇಕವೆನಲು ಕೇಳು	243
ವೀರರಾದೊಡಿಲ್ಲಿ	114
ವೀರಶೈವ ನಡತೆ	241
ವೀರಶೈವ ಧರ್ಮ	403
ವೀರಶೈವವೆಂಬ	403
ವಿಶ್ವಕರ್ಮ ಗುರುವು	227
ವಿಶ್ವಕರ್ಮನಿರದೆ	220, 372, 374, 375
ವಿಶ್ವಕರ್ಮ ಪೂಜೆ	376
ವಿಶ್ವರ್ಮ ಬೀಜ	220, 373
ವಿಶ್ವಕರ್ಮ ಮಹಿಮೆ	372, 501
ವಿಶ್ವ ಮೂಲದಲ್ಲಿ	377
ವಿಶ್ವಕರ್ಮ ಸೃಷ್ಟಿ	220, 321, 378
ವಿಶ್ವ ನಡೆಸುವವನು	371, 418, 478
ವಿಶ್ವಕರ್ಮ ಹೆಸರು	372
ವಿಶ್ವನಾಥನಲ್ಲಿ	373, 566
ವಿಶ್ವವೆನಲು ಏನು	374
ವಿಶ್ವ ರೂಪವ ಮನದೊಳಗೆ	376
ವಿಶ್ವದ ಒಳ ಹೊರ	79,

ಪದ್ಯ	ಪುಟ
	222,
	377,
	556
ವಿಶ್ವೋತ್ಪತ್ತಿಗೆ ಅಜನೆನೆ	79,
	221,
	378
ವಿಶ್ವಾಸಕ್ಕೆ ತಕ್ಕ	94
ವಿಷಯಗಳು ತೆರೆಗಳ ರೀತಿ	207
ವಿಷಯಗಳಲಿ ಹೊರಳಿ	206
ವಿಷಯ ತಾಕುತ	207
ವಿಷಯದಲಿ ಹೊರಳಿ	206,
	274
ವಿಷಯವ ಘರ್ಷಿಸಿ	206
ವಿಷಯಗಳಲಿ ಬಹಳ	207
ವಿಷ್ಣುವಿಂಗೆ ದೋಷ	333
ವಿಕೃತ ಮತಿಗೆ ಏಕೆ	474
ವೃಕ್ಷದಲ್ಲಿ ಹುಟ್ಟಿ	365
ವೃಕ್ಷ ಹುಟ್ಟವ ನೆಲೆ	366
ವೇದಗಳನು ಓದಿ	266,
	475
ವೇದ ವಿದ್ಯೆಯೆಲ್ಲ	267
ವೇದಾಂತ ಸಾರ ಗುಣ	39
ವೇಮನೆಂಬ ಯೋಗಿ	464
ವೇಳೆ ಎಷ್ಟೆ ಇರಲಿ	306
ವ್ಯಾಧಿ ಬಂದ ಕಾಲ	63
ವ್ಯಾಪಿಸಿ ಇರುತಿಹ ಲೋಕವ	25

ಶ

ಪದ್ಯ	ಪುಟ
ಶಕ್ತಿ ಮಹಿಮೆ ಸೋಂಕಿ	387
ಶನಿಗೆ ಸಾಲದೆಂದು	116
ಶಾಂತ ಮನಸ್ಸಿನವ	15
ಶ್ವಾನ ತೊಗಲು ತಂದು	538
ಶಿಲೆಯ ನೋಡಿ ನರರು	409
	566
ಶಿಲೆ ಪ್ರತಿಮೆ ಮಾಡಿ	410
ಶಿವನ ಕರುಣೆ ಇರದೆ	580
ಶಿವನ ನಂಬಿದ ಹೃದಯ	580
ಶಿವನ ಮಂತ್ರವದು	428
ಶಿವನ ಮೇಲೆ ಮನಸು	545
ಶಿವನು ಎಲ್ಲೆಡೆಯಲ್ಲಿ	407,
	566
ಶಿವನು ಬ್ರಹ್ಮವೆಂದು	240
ಶಿವನು ಇರುವನೆಂದು	409
ಶಿವ ಪ್ರತಿಮೆ ಗೆಯ್ದು	410
ಶಿಷ್ಯ ಧರ್ಮವರಿತು	63
ಶಿಷ್ಯವರ್ಗಕೆಲ್ಲ	40
ಶಿಷ್ಯವರ್ಗಕೆಲ್ಲ ಶಿವರೂಪ	41
ಶುದ್ಧ ನೀರು ಸುರಿಯೆ	49,
	119
ಶುದ್ಧ ಪರಿಪೂರ್ಣ ದೃಷ್ಟಿಯಲಿ	33
	36
ಶುದ್ಧ ಸ್ನಾನ ಮಾಡಿ	486
ಶುಭದ ಶಕುನ ನಂಬಿ	141
ಶೂದ್ರರಲ್ಲಿ ಹುಟ್ಟಿ	441
	488
ಶೂದ್ರ ಶೂದ್ರರೆನುತ	488
ಶೇಖರಿಸಿದ ಧನಕೆ	135
ಶೋಧದಿಂದ ದೊರೆವ	284
ಶ್ರೀ ರಾಮ ಎಂಬ ಮಂತ್ರವು	576
ಶ್ರೀ ಯದುಮಾಪತಿ	427
ಶ್ರುತಿ ಯುಕ್ತ್ಯನುಭವ	242
ಶ್ವಾನ ತೊಗಲು ತಂದು	538

ಪದ್ಯ	ಪುಟ
ಷ	
ಷಟ್ಚಕ್ರಗಳಿಂದಾಚೆಗೆ	235
ಷಡರವಿಂದಗಳನು	341
ಷೋಡಶೋಪಚಾರ	567
ಸ	
ಸಂಗಮರಮರಿ ಶಿಲೆ	416
ಸಂತತ ಧನಾಕಾಂಕ್ಷೆ	467
ಸಕಲ ಮಸ್ತುಗಳಲಿ	204, 312, 349
ಸಕಲ ಯಜ್ಞಗಳಲಿ	10
ಸಕಲ ಶಾಸ್ತ್ರಗಳನು	312
ಸಗರಯುರ್ವಿರಾಜ	152
ಸಗರ ಮಹಾರಾಜ	152
ಸಗುಣ ನಿರ್ಗುಣ ಭೇದಾರ್ಥ	189, 271, 393
ಸಗುಣವನಾತ್ಮದೊಳು	
ಸಗುಣವೆನಲು ಇಲ್ಲದಿಹುದೆ	224, 395
ಸಗುಣವನಾತ್ಮದೊಳಗೆ	396
ಸಗುಣವೆಂದಿಗೂ ತಾ ಕಾಣದೆ	392
ಸಗುಣವೆಂದೂ ತಾನಲ್ಲ	393
ಸಗುಣವೆ ಲೋಕಗಳೆಲ್ಲವು	188, 221, 394
ಸತಿಯ ಮಾತು ಕೇಳಿ	86
ಸತಿಯಾಗಿ ಸತಿಯ ಬೇಡಲು	85
ಸತಿಯೆನೆ ಸುಖ ಸೌಖ್ಯ	96
ಸಚ್ಚಿದಾನಂದಮಹ ಜ್ಞಪ್ತಿ	587
ಸತ್ತವರನು ಕಂಡು	276, 310
ಸತ್ತೆ ಸತ್ತೆ ಎಂದು	312
ಸತ್ಯ ಕಂಡರಿವುದೆ	291
ಸತ್ಯವನ್ನು ಬಿಡದೆ	491, 572
ಸದ್ಗುರು ಸುಜ್ಞಾನದಲ್ಲಿ	28
ಸರಿಕಾರರು ನಿನ್ನ	184
ಸರ್ವವು ಕಾನದ ತಿಳಿಯಲು	507
ಸಾಕು ಇನ್ನು ಮೇಲೆ	278
ಸಾಕು ಸಾಕಿಳೆಯಲಿ	504
ಸಾದೃಶ ಪಡೆದವನು	65
ಸಾಧನಗಳಿರದೆ	20
ಸಾಧುಗಳ ಬೋಧೆಯು	249
ಸಾಧು ಚರಿತೆಯುಳ್ಳ	97
ಸಾಧು ಜನಗಳನ್ನು	88
ಸಾಧು ಸಾಂಗತ್ಯ	
ಸಾಯದಿರುವವರಾರೊ	301
ಸಾಯುವವರ ಕಂಡು ಸಾಯದೆ	310
ಸಾರಿ ರಾಮ ಭಕ್ತ	429
ಸಾವರು ಎಲ್ಲರು ಜನಕುಲ	276, 313
ಸಾವಿರ ಕ್ರತುಗಳ ಮಾಡೆ	32
ಸಾಸಿರ ಗತಿಯಲಿ	256
ಸಾಹಸದಿಂದರಲಿ, ಸತ್ಯ	51
ಸಿಡಿಲನು ಅಂಗೈಲಿ	76, 288
ಸುಖಿಗಳೆಲ್ಲ ತಿಳಿದು	76, 572
ಸುಖಾ ಸುಖದಲಿ ತಾನು	131, 190
ಸುಖಿ ಸುಖದಿಂದ ನಾನು	143

ಪದ್ಯ	ಪುಟ
ಸುಖಾಸುಖಗಳಲಿ ತಾ	76
	288
	150
ಸುಗುಣವಂತೆ ಕಾಂತೆ	85
ಸುಪ್ತಿ ಜಾಗರಗಳ	228,
	318
ಸುಮ್ಮನಿದ್ದು ತಿಳಿಯೆ	507
ಸುರರು ಮೌನವಿಹರು	263
ಸುರಿವ ಮಳೆಗೆ ಅಂಜಿ	573
ಸುಳ್ಳು ಸತ್ಯ ಗೆಯ್ದು	87,
	496
ಸೂಕ್ಷ್ಮ ರೂಪ ಹೊಂದಿ	279,
	360,
	386,
	439
ಸ್ಥೂಲ ಕಣ್ಣುಗುಡ್ಡೆ	359
ಸ್ಥೂಲವೆನಲು ಗುಡ್ಡೆ	359
ಸೂತ್ರ ರೂಪ ಹೊಂದಿ	503
ಸೂಚಿಕಾಗ ದೃಷ್ಟಿ	193
ಸೇವೆ ಗೆಯ್ದು ಗುರುವ	19
ಸೋಂಕಿ ಪುರುಷ ಲೋಹ	573
ಸೋಂಕಿ ಪರುಷ ಸ್ವರ್ಣ	69
ಸೋಂಕಿ ಸುಖ ದುಃಖಿವ	511
ಸೋತು ಹೋಗಿ ಗುರುವ	18
ಸೋಮಯಾಜಿಯೆಂಬ	456
ಸೋಮಲತಾ ರಸವ	455
ಸೋಸಿ ಸುಖ ದುಃಖಿವ	77
ಸೌಖ್ಯವರಿಯುವಂತೆ	131
ಸ್ಥಾವರಗಳ ಭಕ್ಷಿಸುವರು	502
ಸ್ತನ ಕುಡಿವ ಶಿಶುವು	113
ಸ್ವಂತ ಉಣ್ಣಲಾರ	447
ಸ್ವಾನುಭೂತಿಯಲ್ಲಿ	560

ಹ

ಪದ್ಯ	ಪುಟ
ಹಂಸ ಮಾನಸ ಜಲ	90,
	250,
	510
ಹಂದಿ ಈಯುತಿಹುದು	259
	522
ಹಂದಿ ಏನರಿವುದು	259
ಹಡೆದ ತಾಯಿ ತಂದೆ	84
ಹಕ್ಕಿ ಜಾತಿ ಹಿಡಿದು	431
ಹಗಲು ರಾತ್ರಿ ನೋಡು	549
ಹಗಲು ಹೊತ್ತಿನಲ್ಲಿ	582
ಹದುಳವಿರದೆ ತಿನಿಸು	435
ಹರಣ ಸೇರುತಿಹುದು	310
ಹರಿಗೆ ದೊರಕಿತಲ್ಲ	32,
	170
ಹರಿವಿಧಿ ಕಾಣುತ ಕೇಳೆಯ	84
ಹರಿವಿಧಿ ಸುರಮುನಿ	331
ಹರಿಹರಾದಿಗಳಲಿ	333
ಹರುಷ ಭೋಗವ	32
ಹಲವು ನುಡಿಯ ಕೇಳಿ	333
ಹಲವು ಕಠ್ಯಗುಂಟು	334
ಹಲ್ಲಿ ನುಡಿಯ ಕೇಳಿ	333
ಹಸಿಯಲು ನಶಿಸುವವು	493
ಹಸು ಕೆಚ್ಚಲು ಹಿಂಡಿ	361
ಹಸುಗಳಂದ ಬೀರೆ	425
ಹಸುವು ಅಲ್ಲ ನಾಯಿ	448
ಹಾದರದ ಕಥೆಯಿದು	174
ಹಾನಿಯುಂಟಾಗದು	537
ಹಾಯಾಗಿರೆ ಇಹದಿ	74
ಹಾಲ ಹಕ್ಕಿ ಶಕುನ	142
ಹಾಲಿನಲ್ಲಿ ಹುಳಿಯ	536

ಪದ್ಯ	ಪುಟ
ಹಾಲು ಕುಡಿದೊಡಾಗ	29
ಹಾಲು ಗೂಡಿ ನೀರು	65
ಹಾಲು ನೀರು ಕ್ರಮವ	256, 515
ಹಾಲು ಮೊಸರು ಬೆಣ್ಣೆ	536
ಹಿಂದಾಗಿ ಹೋದುದು ಏನು	104, 110
ಹಿಂಸೆ ಗೆಯ್ಯದಿಹುದೆ	93, 431
ಹೀನರೆಷ್ಟು ವಿದ್ಯೆ	92
ಹುಟ್ಟಿನೊಳಗೆ ಜೀನು	316
ಹುಟ್ಟಿದಂದಿನಿಂದ	251
ಹುಟ್ಟುವವರು ಯಾರೊ	301
ಹುಟ್ಟುವುದಕೆ ಮೋದ	316
ಹುಣಸೆ ಮರವ ನೋಡಿ	368
ಹುಣಸೆ ಹಣ್ಣು ರೀತಿ	250, 510
ಹುಲ್ಲು ಪಶುವಿಗಾಯ್ತು	434
ಹೂವು ಮೊಲೆಗಳಿರಲು	474
ಹೃದಯದಲ್ಲಿ ಶಿವನು	412, 540
ಹೆಂಡತಿಯೆನೆ ಆತ್ಮ	82 503 569
ಹೆಂಡ ಮಡಿಕೆ ಮೈಗೆ	456
ಹೆತ್ತ ಪುತ್ರನಾಸೆ	456
ಹೆದೆಯೇರಿಸಿ ರೂಪವ	24
ಹೊಂದುತ ಧರೆಯೊಳಗೆ	159
ಹೊಟ್ಟೆಕಿಚ್ಚಿನವನು	482
ಹೊಡೆಯಲು ಬಡಿಯಲು	459
ಹೊತ್ತು ಮೂಡುವ ಸಂಧಿ	304
ಹೊರಗಿರುವ ಸಕಲವೂ	582
ಹೊಲಸು ದೇಹದಲ್ಲಿ	218
ಹೊಲೆಯನ ಮುಟ್ಟಿದೊಡೆ	453
ಹೊಲೆಯನ ಮೇಲು ಗುಣ	440

ಳ, ಕ್ಷ, ಜ್ಞ

ಗ್ರಂಥ ಋಣ

ಗ್ರಂಥದ ಹೆಸರು	ಲೇಖಕ	ಪ್ರಕಾಶಕರು
1. ವೇಮನ ವಿಶ್ವಗೀತೆ	ಎಸ್. ಆರ್. ಪಾಟೀಲ	ಮಹಾಯೋಗಿ ವೇಮನ ಪೀಠ ಕ.ವಿ.ವಿ. ಧಾರವಾಡ
2. ಉಪನಿಷತ್ ಭಾವಧಾರೆ	ಸೋಮನಾಥಾನಂದ	ಶ್ರೀ ರಾಮಕೃಷ್ಣಾಶ್ರಮ ಮೈಸೂರ-20
3. ಶ್ರೀಮದ್ ಭಗವದ್ಗೀತಾ	ಸ್ವಾಮಿ ಆದಿದೇವಾನಂದ	- ಸದರ -
4. ನಮಃ ಶಿವಾಯ ಶಾಂತಾಯ	ಶ್ರೀ ಶ್ರೀ ಆನಂದ ಮೂರ್ತಿ	ಆನಂದ ಮಾರ್ಗ ಪ್ರಚಾರ ಸಂಘ (ರಜಿ) ಆನಂದನಗರ, ಪ. ಬಂಗಾಲ
5. ಮಹಾಭಾರತ	ಜಿ. ಎನ್. ಕಮಲದಾನಿ	ಚೇತನ ವಿಠಲ ಪ್ರಕಾಶನ ಬೆಂಗಳೂರು
6. ಕೈವಲ್ಯ ನವನೀತವು	ಶ್ರೀ ಶಂಕರಾನಂದ ಯೋಗೀಶ್ವರ	ಟಿ. ಎನ್. ಕೃಷ್ಣಯ್ಯ ಶೆಠಿ ಆ್ಯಂಡ ಸನ್ಸ ಚಿಕ್ಕಪೇಟೆ, ಬೆಂಗಳೂರು
7. ಮಹಾಯೋಗಿ ವೇಮನ	ಎಸ್. ಆರ್. ಪಾಟೀಲ	ವೇಮನ ಗ್ರಂಥ ಮಾಲಾ ಹುಲಕೋಟಿ-582 205
8. ಭಾಗವತ ರಸಾಯನ	ಎಸ್. ವ್ಹಿ. ನಾಗರತ್ನಮ್ಮ	ಪ್ರಸಾದ್ ಪಬ್ಲಿಕೇಶನ್ಸ ಬೆಂಗಳೂರು-28
9. Complete works of Swami Vivekanand	Vivekananda	Advait Ashrama, Himalaya
10. ಅವರಿವರು ಕಂಡಂತೆ : ವೇಮನ	ಎಸ್. ಆರ್. ಪಾಟೀಲ	ವೇಮನ ಗ್ರಂಥ ಮಾಲಾ ಹುಲಕೋಟಿ-582 205

	ಗ್ರಂಥದ ಹೆಸರು	ಲೇಖಕ	ಪ್ರಕಾಶಕರು
11	ಆನಂದ ವಚನಾಮೃತ-5	ಶ್ರೀ ಶ್ರೀ ಆನಂದ ಮೂರ್ತಿ	ಆ.ಮಾ.ಪ್ರ. ಸಂಘ (ರಜಿ) ಆನಂದನಗರ ಪ. ಬಂಗಾಲ
12.	ಆನಂದ ವಚನಾಮೃತ-20	- ಸದರ -	- ಸದರ -
13.	ಆನಂದ ಸೂತ್ರಮ್	- ಸದರ -	- ಸದರ -
14.	ಶಿವ ಪುರಾಣ	ಮೃತ್ಯುಂಜಯ	ಶ್ರೀ ಗಣೇಶ ಪ್ರಕಾಶನ ಬೆಂಗಳೂರು-53
15.	ಶ್ರೀ ವಾಲ್ಮೀಕಿ ರಾಮಾಯಣಮ್	ವಿದ್ವಾನ್ ವಿನ್. ರಂಗನಾಥ ಶರ್ಮಾ	ರಾಮಾಯಣ ಪ್ರಕಾಶನ ಸಮಿತಿ, ಬೆಂಗಳೂರು
16.	ರಾಮಾಯಣ ಕಥಾಮಾಲಾ	ಕಾ. ಶ್ರೀ ನಾಗರಾಜ	ಸಾಹಿತ್ಯ ಸಿಂಧು ಪ್ರಕಾಶನ, ಬೆಂಗಳೂರು
17.	ಭಗವಾನ ಬುದ್ಧ	ಧರ್ಮಾನಂದ ಕೋಸಂಬೀ (ಅನು. ಆದ್ಯ ರಂಗಾಚಾರ್ಯ)	ಸಾಹಿತ್ಯ ಅಕಾಡಮಿ ನ್ಯೂ ಡಿಲ್ಲಿ
18.	ಮನುಸ್ಮೃತಿ	ಅನು : ಶೇಷ ನವರತ್ನ ಎಂ.ವಿ.	ಸಮಾಜ ಪುಸ್ತಕಾಲಯ ಶಿವಾಜಿ ಬೀದಿ, ಧಾರವಾಡ-1
19.	ನಳ ಚರಿತ್ರೆ	ಕನಕದಾಸರು	ವಿದ್ಯಾನಿಧಿ ಪ್ರಕಾಶನ, ಗದಗ

ಬಿ.ಎ - 444 / 500 ಪ್ರತಿಗಳು/05



ನಾಡು ಮೆಚ್ಚಿದ ಜನನಾಯಕ ದಿ. ಕೆ. ಎಚ್. ಪಾಟೀಲರ ಒಡಹುಟ್ಟಿದ ತಮ್ಮ ಎಸ್. ಆರ್. ಪಾಟೀಲರು ವೃತ್ತಿಯಿಂದ ಅಭಿಯಂತರು. ನಿವೃತ್ತ ಅಧೀಕ್ಷಕ ಅಭಿಯಂತರು. ಪ್ರವೃತ್ತಿಯಿಂದ ಲೇಖಕರು, ಚಿಂತಕರು. ಆಧ್ಯಾತ್ಮಿಕ ಹಸಿವನ್ನು ಬಾಲ್ಯದಿಂದಲೇ ಬೆಳೆಸಿಕೊಂಡವರು. ನಾಡಿನ ಶ್ರೇಷ್ಠ ಸಾಧು ಸಂತರ, ಸಿದ್ಧಿ ಪುರುಷರ, ಪುಣ್ಯ ಪುರುಷರ ಒಡನಾಟವಿಟ್ಟುಕೊಂಡವರು. ಆಧ್ಯಾತ್ಮಿಕ ಚಿಂತನೆಗಾಗಿ "ಪ್ರಜ್ಞಾನೋದಯ" ಆಶ್ರಮವನ್ನು ಸಂಸ್ಥಾಪಿಸಿದ ಆಧ್ಯಾತ್ಮಿಕ ಹರಿಕಾರರು. ೧೯೬೬ರಲ್ಲಿಯೇ ಆನಂದಮಾರ್ಗದ ಯೋಗ ಸಾಧನೆಯ ದೀಕ್ಷೆ ಪಡೆದವರು. ಆನಂದಮಾರ್ಗದ ಶಿಲ್ಪಿ ಪ್ರಭಾತ ರಂಜನ ಸರಕಾರ ಅವರೊಂದಿಗೆ ನೇರ ಸಂಪರ್ಕ ವಿರಿಸಿಕೊಂಡಿದ್ದ ಪಾಟೀಲರು ಸರಕಾರ ಅವರು ಬರೆದ ೩೪ ಗ್ರಂಥಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಡಾ. ಭಾತ್ಸಾ ಅವರ ಪ್ರಖ್ಯಾತ ಅರ್ಥಶಾಸ್ತ್ರ ಗ್ರಂಥವನ್ನು ಕನ್ನಡಕ್ಕೆ ತರ್ಜುಮೆ ಮಾಡಿದ್ದಾರೆ.

ತೆಲುಗು ಭಾಷಿಕ ಪ್ರದೇಶದ ದಾರ್ಶನಿಕ ಕವಿ "ವೇಮನ"ರು ಪಾಟೀಲರ ಹೃದಯಕ್ಕೆ ಹತ್ತಿರವಾದರು. ಅದಕ್ಕಾಗಿ ತೆಲುಗು ಭಾಷೆ ಕಲಿತರು. ತೆಲುಗು ಭಾಷಿಕರ ಒಡನಾಟವಿಟ್ಟುಕೊಂಡರು. ವೇಮನರ ಕುರಿತು ಎಲ್ಲ ಆಂಗ್ಲ ಆವೃತ್ತಿಗಳ ಆಳ ಅಧ್ಯಯನ ಮಾಡಿದರು. ಶರಣ ಸಾಹಿತ್ಯದಲ್ಲಿ ಮಿಂದರು. ಸರ್ವಜ್ಞನನ್ನು ವೇಮನರ ಜೊತೆಗೆ ತುಲನೆ ಮಾಡಿ ನೋಡಿದರು. ಈ ಮಧ್ಯೆ ಪರಮ ಪೂಜ್ಯ ಶ್ರೀ ತಿರುಚ್ಚಿ ಮಹಾಸ್ವಾಮಿಗಳನ್ನು ಕುರಿತು ಪುಸ್ತಕಗಳನ್ನು ಪ್ರಕಟಿಸಿದರು. ವೇಮನರು ತೋರಿದ ಆಧ್ಯಾತ್ಮಿಕ ಪ್ರಪಂಚವು ಎಸ್. ಆರ್. ಪಾಟೀಲರನ್ನು ಪೂರ್ಣ ಆವರಿಸಿತು. ಅದಕ್ಕಾಗಿ ವೇಮನರ ಗ್ರಂಥ ಮಾಲೆ ಮೂಲಕ ಹತ್ತಾರು ಪುಸ್ತಕಗಳನ್ನು ಪ್ರಕಟಿಸಿರುವ ಎಸ್. ಆರ್. ಪಾಟೀಲರು ಕನ್ನಡ ನಾಡಿಗೆ ಅತ್ಯಂತ ಸಮರ್ಥವಾಗಿ "ವೇಮನರ ದರ್ಶನ"ವನ್ನು ಮಾಡಿಸಿದ್ದಾರೆ.

ಕರ್ನಾಟಕ ವಿಶ್ವವಿದ್ಯಾಲಯ ಮುದ್ರಣಾಲಯ, ಧಾರವಾಡ